ಇತಿಹಾಸ ದರ್ಶನ

ಸಂಪುಟ ೧೯/೨೦೦೪

KARNATAKA ITIHASA ACADEMY
कर्नाटक इतिहास अकादमि



ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೧೯/೨೦೦೪

ಸೆಪ್ಟೆಂಬರ್ ೨೦೦೩ರ ೧೩, ೧೪ ಮತ್ತು ೧೫ರಂದು ಬಾದಾಮಿಯ ಶ್ರೀ ವಿಶ್ವಚೇತನ ಸಂಸ್ಥೆಯ ಆಶ್ರಯದಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ ಹದಿನೇಳನೆಯ ಸಮ್ಮೇಳನದಲ್ಲಿ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಕಲನ

ಸಂಪಾದಕರು

ಎಂ.ಜಿ. ನಾಗರಾಜ್

ಡಾ|| ಪಿ.ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA

The Volume of the Scholarly papers presented and the General body Proceedings of the Seventeen Annual Conference of **The Karnataka Ithihasa Academy** (Regd.,) held at Badami, Bagalakote District on 13th, 14th & 15th September 2003

Volume 19, Septmber - 2004

Pages : **400 + lviii**

Edited by : **M. G. Nagaraj**
Dr. P. V. Krishna murthy

Published by : Karnataka Itihasa Academy (Regd.)
Gokhale Institute of Public Affairs Premises
Basavanagudi Road, Narasimharaja Colony
Bangalore - 560 019

Price : **Rs. 200/-**

ಬೆಲೆ : ರೂ. ೨೦೦/-

ಪುಟಗಳು : ೪೦೦ + lviii

ಪ್ರಬಂಧಕಾರರ ಗಮನಕ್ಕೆ

*ಈ ಸಂಪುಟದ ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ **ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆ.** ಅವು ಅಕಾದೆಮಿಯ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲ. ಕರ್ನಾಟಕ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲುವ ಬರಹಗಳಿಗೆ 'ಇತಿಹಾಸ ದರ್ಶನ' ಮೀಸಲಾಗಿದೆ. ಲೇಖನಗಳು **ಹಸ್ತಲಿಖಿತ ೧೦** ಪುಟಗಳ ಪರಿಮಿತಿಯಲ್ಲಿ ಇರುವುದು ಸೂಕ್ತ. ಲೇಖನಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಬೆರಳಚ್ಚು ಮಾಡಿಸಿದ್ದರೆ ಅಗತ್ಯವಿರುವೆಡೆ ತಿದ್ದುಪಡಿ ಮಾಡಿರಬೇಕು. ಅಡಿಟಿಪ್ಪಣಿಗಳನ್ನು, ಗ್ರಂಥಲೇಖನಾಧಾರ ವಿವರಗಳನ್ನು ಈಗಾಗಲೇ ಸಂಶೋಧನ ಬರಹಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಕ್ರಮದಲ್ಲಿ ನೀಡುವುದು ಉತ್ತಮ. ಲೇಖನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಕಳುಹಿಸುವಲ್ಲಿ, ಚಿತ್ರದ ಹಿಂಬದಿಯಲ್ಲಿ ಚಿತ್ರದ ಶೀರ್ಷಿಕೆ ಮತ್ತು ಲೇಖಕರ ಹೆಸರನ್ನು ಬರೆಯಬೇಕು. ಬರೆಯದೆ ಹೋದರೆ ಚಿತ್ರಗಳ ಪ್ರಕಟಣೆ ಕಷ್ಟವಾಗುತ್ತದೆ. ಈಗಿನ ೧೮ನೇ ಸಮ್ಮೇಳನದಲ್ಲಿ ಮಂಡಿತ ಪ್ರಬಂಧಗಳನ್ನು ಅನಿವಾರ್ಯ ಕಾರಣಗಳಿಂದ ಅಲ್ಲಿಯೇ ಕೊಡಲಾಗದಿರುವ ಅಕಾದೆಮಿಯ ಸದಸ್ಯ ಲೇಖಕರು, ದಯಮಾಡಿ ತಮ್ಮ ಪೂರ್ಣ ವಿಳಾಸದೊಡನೆ ಸಮ್ಮೇಳನ ಮುಗಿದ ಎರಡು ತಿಂಗಳ ಒಳಗಾಗಿ, **ಸಂಪಾದಕರು, ಇತಿಹಾಸ ದರ್ಶನ,** ಬೆಂಗಳೂರು-೫೬೦ ೦೧೯, ಈ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ. ಹಾಗೆಯೇ ಲೇಖನಗಳಲ್ಲಿ ಲೇಖಕರು ತಮ್ಮ ಈಚಿನ ಸರಿಯಾದ ವಿಳಾಸವನ್ನು ದಾಖಲಿಸಲು ದಯವಿಟ್ಟು ಮರೆಯಬಾರದೆಂದು ಪ್ರಾರ್ಥಿಸಿದೆ. ಸಮ್ಮೇಳನದಲ್ಲಿ ಮಂಡಿಸಿದ ಲೇಖನಗಳನ್ನು ಬೇರೆಡೆ ಪ್ರಕಟ ಮಾಡಿದ್ದರೆ ಅಥವಾ ಬೇರೆಡೆ ಪ್ರಕಟನೆಗೆ ಕಳುಹಿಸಿದ್ದರೆ ದಯವಿಟ್ಟು ತಿಳಿಸಬೇಕೆಂದು ವಿನಂತಿ. ಮಂಡಿತ ಪ್ರಬಂಧಗಳು ಮೊದಲಿಗೆ ಅಕಾದೆಮಿಗೆ ಮೀಸಲು ಕಾಣಿಕೆ ಅಲ್ಲವೆ !*

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮
ದೂರವಾಣಿ : ೨೬೬೧೩೧೨೩, ೨೬೬೧೮೭೫೨

ಅಕಾದೆಮಿಯ ಅಧ್ಯಕ್ಷರ ನುಡಿ

ಇತಿಹಾಸ ಅಕಾದೆಮಿಯ ಎರಡು ನಕ್ಷತ್ರಗಳು ಈ ವರ್ಷ ಉದುರಿಹೋದುವು. ಒಂದು ನಮಗೆ ಧ್ರುವ ನಕ್ಷತ್ರದಂತಿದ್ದ ಅಕಾದೆಮಿಯ ಪ್ರಥಮಾಧ್ಯಕ್ಷ ಡಾ॥ ಜಿ.ಎಸ್. ದೀಕ್ಷಿತರು. ಇನ್ನೊಂದು ನಮ್ಮ ಸಂಸ್ಥೆಗೆ ಆರಂಭದಿಂದಲೂ ದುಡಿಯುತ್ತಿದ್ದ ಕಾರ್ಯದರ್ಶಿ, ಉಪಾಧ್ಯಕ್ಷ ಮುಂತಾದ ಜವಾಬ್ದಾರಿ ಸ್ಥಾನದಲ್ಲಿದ್ದ ಸತತ ಅಧ್ಯಯನಶೀಲರಾಗಿದ್ದ ಡಾ॥ ಎಚ್.ಆರ್. ರಘುನಾಥಭಟ್ಟರು. ಈ ಉದುರಿದ ನಕ್ಷತ್ರಗಳಿಗೆ ಕಂಬನಿ ದುಂಬಿದ ಕಣ್ಣುಗಳಿಂದ ತರ್ಪಣ ನೀಡುತ್ತ, ಅವರ ಅಗಲಿಕೆಯಿಂದ ಬರಿದಾದ ಸ್ಥಾನವನ್ನು ತುಂಬಲು ಅಷ್ಟೆ ಹುಮ್ಮಸ್ಸಿನಿಂದ ಎಳೆಯ ಪೀಳಿಗೆಯ ನಮ್ಮ ವಿದ್ವಾಂಸರು ಮುಂದಾಗಬೇಕು. ಈ ಇಬ್ಬರು ದಿವಂಗತ ವಿದ್ವಾಂಸರಿಗೆ ವೈಯಕ್ತಿಕ ಲಾಭ ಇಲ್ಲವೇ ಪ್ರತಿಷ್ಠೆಗಳ ಭಾವನೆ ಎಳ್ಳಷ್ಟೂ ಇರಲಿಲ್ಲವೆಂದು ಮತ್ತೊಮ್ಮೆ ನೆನೆಯಬೇಕು.

ಕರ್ನಾಟಕದ ಇತಿಹಾಸವನ್ನು ಒಂದು ಅಖಂಡ ಪಠ್ಯಕ್ರಮವಾಗಿ ಇದ್ದುದನ್ನು ಕೈಬಿಡುವ ನಿರ್ಣಯವನ್ನು ರಾಜ್ಯ ಪ.ಪೂ. ಮಂಡಳಿ ಕೈಕೊಂಡದ್ದು ತೀರ ಆಘಾತಕಾರಿ ವಿಷಯ. ಎಲ್ಲ ವಿಧದ ಖಂಡನೆ, ಪ್ರತಿಭಟನೆಗಳನ್ನೂ ಗಮನಿಸದೆ ಮಾಡಿದ ಈ ಬದಲಾವಣೆ ಪ್ರಜಾತಂತ್ರ ವಿರೋಧಿ ಹಾಗೂ ಕರ್ನಾಟಕದ ಇತಿಹಾಸ ಅಧ್ಯಯನಕ್ಕೆ ಮಾಡಿದ ಉಗ್ರ ಅಪಚಾರ. ಪಠ್ಯಪುಸ್ತಕ ಮತ್ತು 'ಗೈಡ್' ಬರೆಯುವವರಿಗೆ ಮಾತ್ರ ಇದರಿಂದ ಲಾಭವಾಗಿದೆ. ನಾಡಿನ ಇತಿಹಾಸವನ್ನು ಅಖಂಡ ದೃಷ್ಟಿಯಿಂದ ಸತತವಾಗಿ ಅಧ್ಯಯನ ಮಾಡುವ ನಿಜವಾದ ವಿದ್ವಾಂಸರಿಗೆ ಇದರಿಂದ ಘಾಸಿಯಾಗಿದೆ. ಅವರಲ್ಲಿ ನಿರುತ್ಸಾಹ ಮೂಡಿಸಿದೆ.

'ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಎಲ್ಲೆಡೆ ಉತ್ಸಾಹದಿಂದ ಆಚರಿಸಿದ ವರದಿಗಳು ಬಂದಿವೆ. ಇತಿಹಾಸ ಪ್ರೇಮಿಗಳ ಬಳಗವನ್ನು ವಿಸ್ತರಿಸಲು ಇದೊಂದು ಮುಖ್ಯವಿಧಾನ. ಇದನ್ನು ಸದಾ ನಾವೆಲ್ಲ ಗಮನವಿರಿಸಿ ನಡೆಸೋಣ.

-ಸೂರ್ಯನಾಥ ಕಾಮತ್

ಸಂಪಾದಕೀಯ

ಮಲೆನಾಡ ಹಸಿರು ಮೈಸಿರಿಯ ಹೊನ್ನಿನ ನೆಲೆ ಹೊನ್ನಾಳಿ. ಗುರುಪರಂಪರೆಯ ಸಾಂಪ್ರದಾಯಿಕ ನಂಬುಗೆಯಲ್ಲಿ ಹೊನ್ನಾಳಿ-ಬೃಹಚ್ಛಿಲಾಮಠದ ಶ್ರೀ ಜ॥ ಜಡೆಯಶಂಕರ ಶಿವಾಚಾರ್ಯರು ಬಿದರಳ್ಳಿಯ ತುಂಗಭದ್ರೆಯ ತಟದಲ್ಲಿದ್ದ ಒಣಗಿದ ಅರಳಿಮರವನ್ನು ಚಿಗುರಿಸಿ ಚಿನ್ನದ ನಾಣ್ಯವನ್ನು ಉದುರಿಸಿದ ಕಾರಣ ಆ ನೆಲೆ 'ಹೊನ್ನರಳಿಯ ನೆಲೆ' ಎನಿಸಿತು. ಮುಂದೆ 'ಹೊನ್ನಾಳಿ' ಆಯಿತು ಎಂದಿದೆ. ಇದೊಂದು ರೀತಿ ಇತಿಹಾಸದ ವ್ಯಕ್ತಿಗಳೊಡನೆ ಕೋದುಕೊಂಡ ನವಬಗೆಯ ಸ್ಥಳ ಪುರಾಣ.

ಇತಿಹಾಸದ ಹಿನ್ನೆಲೆಯಲ್ಲಿ ಹೇಳಿದರೆ ಹೊನ್ನಾಳಿ ಕ್ರಿ.ಶ. ೧೦೫೫ರ ಕಲ್ಯಾಣಿ ಚಾಲುಕ್ಯರ ತ್ರೈಲೋಕ್ಯ ಮಲ್ಲದೇವನ ಹಿರಿಯ ಮಹಾರಾಣಿ ಹೊಯ್ಸಳ ದೇವಿಯ ಆಳ್ವಿಕೆ ಸೂಚಿತ ಶಾಸನದಲ್ಲಿ, ಕ್ರಿ.ಶ. ೧೦೬೪ರ ಹೊನ್ನಾಳಿ ಮಲ್ಲಿಕಾರ್ಜುನ ದೇಗುಲ ಶಾಸನಗಳಲ್ಲಿ 'ಒನ್ನಾಳಿ' ಎಂಬ ಗ್ರಾಮೀಣ ಶೈಲಿಯ ಹೆಸರಿನಲ್ಲಿ ನಮೂದುಗೊಂಡಿದೆ. ಹೊನ್ನು ಅಥವಾ ನಿಧಿ ಸಿಕ್ಕಿದ ಸ್ಥಳಗಳಲ್ಲಿ ಕೆಲವೆಡೆ ಒನಕುಂಬಿ (ಧನಕುಂಬಿ-ವನಕುಂಬಿ) ಎಂಬ ಸ್ಥಳ ಗುಡ್ಡನಾಮಗಳಿರುವಲ್ಲಿ (ರಾಮನಗರದ ರಾಮದೇವರಬೆಟ್ಟ) ನಿಧಿ ಸಂಬಂಧದ ನೆಲೆಯಾಗಿ ಆ ಸ್ಥಳನಾಮಗಳು ರೂಪುಗೊಂಡಿರುವಂತೆ ಕಾಣುತ್ತದೆ. ಗುರುಗಳ ಮಣಿಹವೂ ವನಸಿರಿಯನ್ನು ಒಣಗಿದ ನೆಲದಲ್ಲಿ ಬೆಳೆಸಿ, ಆರ್ಥಿಕ ಸಂಪನ್ಮೂಲವೊಂದನ್ನು ಬಹುಶಃ ರೂಪಿಸಿದ ಕಾರಣ ಅದು ಜನರ ಬಾಯಲ್ಲಿ ಪವಾಡ ಸ್ವರೂಪದ ಚಿನ್ನದ ಮಣಿಗಳ ಧಾರೆ ಆದಂತೆ ಕಂಡಿತು. ಹೊನ್ನ + ಆಳಿ - ಚಿನ್ನದ ರಾಶಿ - ಒನ್ನ + ಆಳಿ ಆಗಿರಬಹುದೆ ?

ಬೇಟೆಗೆ ಬಂದ ಪಾಳೆಗಾರನೊಬ್ಬನಿಗೆ ಹೊಂಬಣ್ಣದ ಎರಳೆ ತನ್ನ ಕಾಲಿನಿಂದ ಕೆರೆದು ತೋರಿದ ಜಾಗದಲ್ಲಿ ಅಗಸ್ತ್ಯಮುನಿ ಪ್ರತಿಷ್ಠಿತ ಮಲ್ಲಿಕಾರ್ಜುನ ಲಿಂಗ ಕಂಡುಬರಲಾಗಿ ಹೊನ್ನ ಎರಳೆ ತೋರಿದ ಈ ಪವಿತ್ರ ತಾಣವು ಹೊನ್ನೆರಳೆ, - ಹೊನ್ನಾಳಿ ಆಯಿತೆಂಬ ದಂತಕತೆಯೂ ಇದೆ.

'ಒನ' (ವನ) ಎಂದಾಗ ಕಾಡು; 'ಆಳಿ' ಎಂದಾಗ, ದುಂಡು, ಸಮೂಹ ಎಂಬ ಅರ್ಥವೂ ನಿಘಂಟುವಿನಿಂದ ತಿಳಿಯುವಲ್ಲಿ, ಸುತ್ತು ಕಾಡಿನ ಪ್ರದೇಶ, ಎಂಬ ಸಸ್ಯವಾಚಿ (ಕಬ್ಬಲಸಿಗೆ ಮರಗಳ ಕಾರಣ !) ನಿಷತ್ತಿಯೂ ಈ ಊರಿಗೆ ಅನ್ವಯವಾಗಿರಬಹುದು. ೧೭ನೇ ಶತಮಾನದ ಪತ್ರಗಳಲ್ಲಿ 'ಸುವರ್ಣಪುರ'ವೆಂದೂ ಈ ಊರು ಕರೆಸಿಕೊಂಡಿದೆ.

ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ಸೇವುಣರು, ಪಾಂಡ್ಯರು, ಸಿಂಧರು, ವಿಜಯನಗರದರಸರು, ಬೆಳಗುತ್ತಿ ಅರಸರು, ಕೆಳದಿ ಅರಸರು, ಮೈಸೂರರಸರು, ಸಂತೆಬೆನ್ನೂರು ಹಾಗು ಬಸವಾಪಟ್ಟಣದ ಪಾಳೆಪಟ್ಟಿನವರು, ಬಿಜಾಪುರದ ಸುಲ್ತಾನರು, ನವಾಬರು ಮತ್ತು ಹೈದರಾಲಿ ಮುಂತಾದವರ ಆಳಿಕೆಗಿದ್ದ ಪ್ರದೇಶದೊಳಗಾದ ಪಾರಂಪರಿಕ ಸತ್ವದ ಊರು ಹೊನ್ನಾಳಿ. ಇಲ್ಲಿಯ ಹಿರೇಕಲ್ಮಠದಲ್ಲಿರುವ ಶಿವಲಿಂಗ ಹೊತ್ತಿರುವ ಕೊರಳಿನಿಂದ ಮಂಡಿವರೆಗಿನ ದೀರ್ಘಾಯತ ಹಾರ ಧರಿಸಿದ ಎಡಪಾದ ಪಾರ್ಶ್ವೋದಯ ಸ್ಥಾನಕ ಸಮಭಂಗದ ಕಾಷ್ಠಶಿಲ್ಪವೊಂದು (ಶಿವಭೂತಗಣವೆಂದು ಇಲ್ಲಿನವರ ವಾಡಿಕೆ) ಭಾರಶಿವರ ಸಂಪ್ರದಾಯದ ಸಂಕೇತ ಶಿಲ್ಪವಾಗಿ ಪಾರಂಪರಿಕ ಪಳೆಯುಳಿಕೆಯಾಗಿ ಇಲ್ಲಿರುವುದು ಕ್ರಿ.ಶ. ೨ನೇ ಶತಮಾನದ ಇಲ್ಲಿದ್ದ ಶೈವ ಪರಂಪರೆಯ ಕುರುಹೆನ್ನುವಂತಿದೆ. ತಾಳಗುಂದದ ಪ್ರಣವೇಶ್ವರನೇ ಶಾತವಾಹನರಿಂದ ಪೂಜಿತನಲ್ಲವೆ ?

ಇದೆಲ್ಲ ಇತಿಹಾಸದ ನಿಷ್ಪತ್ತಿಯ ಚಿಂತನೆ. ಯಾವುದೇ ಇತಿಹಾಸವೂ ನಿಷ್ಕ್ರಿಯ ಇಡುಗಂಟಲ್ಲ, ವರ್ತಮಾನದ ಹೂಡಿಕೆಗೆ ಸಜ್ಜುಗೊಳ್ಳಬೇಕಾದ ಸಕ್ರಿಯ ಮೊತ್ತ, ಭವಿಷ್ಯತ್ತಿನ ಸದ್ಬಳಕೆಗೆ ಅನುಕೂಲಕರವಾಗಬೇಕಾದ ವಿಕಸನ ನಿಧಿ. ಇತಿಹಾಸವು ಜನ ಬದುಕಿನ ಮೇಲೆ ಪರಿಣಾಮ ಬೀರುವಂಥ ಜೀವಂತ ಘಟನೆಗಳ ಸ್ವರೂಪ ಎಂದು ಅರ್ಥೈಸಿಕೊಂಡಾಗ ಇತಿ + ಹ + ಆಸ > ನಿಜವಾಗಿ ನಡೆದ ವಿಷಯದ ವಿವರಣೆ ಎಂಬ ಮಿತಿಯನ್ನು ಮೀರಿ ಹೆಚ್ಚಿನ ಅರ್ಥವ್ಯಾಪ್ತಿಯನ್ನು ಹೊಂದಿದಂತಾಗುತ್ತದೆ; 'ಜೀವನದ ಸುಖ, ದುಃಖಗಳನ್ನು ಮುಂದಿನ ಪೀಳಿಗೆಯವರ ಪ್ರಯೋಜನಾರ್ಥವಾಗಿ ವಿವರಿಸುವ ವಾಸ್ತವಿಕ ಚರಿತ್ರೆ (ಎನ್. ಅಂತರಂಗಾಚಾರ್: ಸಾಹಿತ್ಯ ಭಾರತೀ) ಎಂಬ ನಿಲುವಿಗೂ ಮೀರಿ ಹೇಳಿದಂತಾಗುತ್ತದೆ. ಕಾರಣ, ಭೂತ, ವರ್ತಮಾನ, ಭವಿಷ್ಯತ್ತಿಗೂ ಆದ ಸಂಚಲನ ಸಕ್ರಿಯೆ ಅದಾಗಿದೆ. ಹೀಗಾಗಿ ಅದು ಕೇವಲ ವರದಿಯ ಆರ್ಥಿಕ ಸರಕಲ್ಲ. ಮನಮುಟ್ಟುವಂತೆ ಹೇಳಬೇಕಾದ ವಾಸ್ತವಿಕ ಘಟನೆಗಳ ತ್ರಿಕಾಲ (ಯುಗ ಯುಗಗಳ) ಮಂಡನೆಯ ಸೊಲ್ಲು, ಅಂದಾಗಲೇ ಬಳಕೆ ಇಲ್ಲದ ಕಥಾಸರಿತ್ಸಾಗರವಾಗದೆ, ಜೀವಧ್ವನಿಗಳ, ಜೀವನಧ್ವನಿಗಳ ಚೈತನ್ಯ ಪ್ರತಿಮಾ ಪ್ರಭುವಾಗಿ ನಮ್ಮನ್ನು ಪ್ರಭಾವಿಸಬಲ್ಲುದು.

ಇತಿಹಾಸವಿರಲಿ, ವಿಜ್ಞಾನವಿರಲಿ, ಅಲ್ಲಿನ ಶೋಧಗಳಲ್ಲಿ ಹೊಸತೊಂದು ಉಕ್ಕಿದರೆ, ಹೊಸ ಚಿಂತನೆಯನ್ನು ನೀಡಿದರೆ, ಹೊಸ ವ್ಯಾಖ್ಯಾನಕ್ಕೆ ಎಡೆಯಾದರೆ ಅದೂ ಒಂದು ಸೃಜನಶೀಲತೆಯ ಅಂಕಣವೇ ಆಗಬಲ್ಲುದು. ಬರೀ ಕಲ್ಪನೆಯಾಗಿ ಅನುಭವಗಮ್ಯ-ಅನುಭವಾತೀತವೆಂದರೂ-ವಾಗದಿದ್ದರೆ ಯಾವ ಪ್ರಕಾರದಲ್ಲಿಯೂ ಅದು ಮೌಲ್ಯಗೊಳ್ಳುವುದಿಲ್ಲ. ಅಂತೇ 'ಸೃಜನಶೀಲತೆ'ಯನ್ನು ಸಕಲ ಪ್ರಕಾರದಲ್ಲಿ ಸೂಕ್ತವಾಗಿ ಅರ್ಥಸಮನ್ವಯ ಮಾಡಬೇಕು. ಈ ದೃಷ್ಟಿಯಿಂದ ನಮ್ಮ ಅಕಾದೆಮಿಯ ಸದಸ್ಯರು ಶ್ರದ್ಧೆಯಿಂದ ಹೊಸ ಹಾದಿಯಲ್ಲಿ ನಡೆಯುತ್ತಿದ್ದಾರೆ ಎಂದೆನಿಸುತ್ತದೆ.

ಇಂದು ಬೃಹತ್ ಶಿಲಾಮಠವೆಂದು ಖ್ಯಾತಿಗೊಂಡಿರುವ ನೂರಮುವತ್ತಾರು ಕಂಬಗಳ-ನೂರಾಎಂಟು ಅಂಕಣದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಕೃತ ಹೊನ್ನಾಳಿಯ ಹಿರೇಕಲ್ಮಠದ ಆಶ್ರಯದಲ್ಲಿ ಇದೇ ೨೦೦೪ರ ಸೆಪ್ಟೆಂಬರ್ ೨೪ ರಿಂದ ೨೬ರವರೆಗೆ (ಶಾಲಿವಾಹನ ಶಕ ೧೯೨೬ನೇ ತಾರಣನಾಮ ಸಂವತ್ಸರ ನಿಜಶ್ರಾವಣ-ಭಾದ್ರಪದ ಶುದ್ಧ ಏಕಾದಶಿ, ದ್ವಾದಶಿ, ತ್ರಯೋದಶಿ-ಶುಕ್ರವಾರ, ಶನಿವಾರ, ಭಾನುವಾರ) ಕರ್ನಾಟಕ ಇತಿಹಾಸ ಅಕಾದೆಮಿಯ ೧೮ನೇ ವಾರ್ಷಿಕ ಸಮ್ಮೇಳನವು ನಡೆಯುತ್ತಿದೆ; ಆನಂದಪುರದ ಶ್ರೀ ಮುರುಘಾಮಠಾಧ್ಯಕ್ಷರಾಗಿದ್ದ ಲಿಂ॥ ಶ್ರೀ ಮ.ನಿ.ಪ್ರ. ಗುರುಬಸವ ಶಿವಯೋಗಿಗಳ ಕರ್ತೃ ಗದ್ದುಗೆ ಹಾಗು ಶ್ರೀ ಗಿರಿರಾಜ ಸೂರ್ಯಸಿಂಹಾಸನ ಶಾಖಾ ಸಂಸ್ಥಾನ ಹಿರಿಯ ಕಲ್ಮಠದ ಕರ್ತೃ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರ ಕ್ರಿಯಾ ಸಮಾಧಿಯು ಈ ಹಿರೇಕಲ್ಮಠದಲ್ಲಿದ್ದು ಗುರು-ವಿರಕ್ತರ ಸಂಗಮ ಸಂಕೇತದ ಸಮನ್ವಯ ನೆಲೆ ಇಲ್ಲಿದೆ. ಹೀಗಾಗಿ ಗುರುಸಾನಿಧ್ಯ ; ಇತಿಹಾಸದ ವಿವೇಚನೆಗಳ, ವೈದುಷ್ಯಗಳ, ಹೊಸ ಶೋಧಗಳ ಸಮ್ಮಿಲನ ಸಾನ್ನಿಧ್ಯ ಇಲ್ಲಿ ಸಂಘಟಿಸಿದೆ.

ಈ ಹೊನ್ನಾಳಿಯಲ್ಲಿ ಕೆಳದಿ ಅರಸರು ಕಟ್ಟಿಸಿದ ಕೋಟೆ, ಆಂಗ್ಲರೆದುರು ಹೋರಾಡಿದಂಥ ಲಾಹೋರ್ ಮೂಲದ ನವಾಬರು ಇಲ್ಲಿ ಆಳ್ವಿಕೆ ನಡೆಸಿ ಕಟ್ಟಿಸಿರುವ ಅರಮನೆ, ಹಾಗು ಮಠದ ಮಸೀದಿ, ಮಾಹೇಶ್ವರಿ ಹಬ್ಬ, ಮೈಲಾರೇಶ್ವರ ಸರಪಳಿ ಪವಾಡ, ಪಾಂಡುರಂಗನ ದುಂಡಿ ಉತ್ಸವ, ಹಳದಮ್ಮ ದೇಗುಲದ ನವರಾತ್ರಿ ಪೂಜೆ, ಹಿರೇಕಲ್ಮಠದ ಶಮೀ ಪೂಜೆ, ಕಾರ್ತೀಕದ ಕದಲಿ, ಅಚನಿ ಪೂಜೆ, ಕೆಂಚಮಾ ದೇಗುಲದ ಶಿವರಾತ್ರಿ ೧೦೧ ಪೂಜೆ, ಸ್ವಾತಂತ್ರ್ಯ ಸ್ಮಾರಕ ಸ್ತಂಭದ ಪ್ರತಿಷ್ಠೆ, ನೆರೆಯ ಹೊನ್ನತೆವ್ವನ ಗುಡ್ಡದ ತಪ್ಪಲಿನ ಗ್ರಾಮದೇವತೆ ಹೊನ್ನೇಶ್ವರಿ-ಇತ್ಯಾದಿಗಳು ಹೊನ್ನಾಳಿಯ ಸಾಂಸ್ಕೃತಿಕ-ಜಾನಪದ, ಹಾಗು ಆಧುನಿಕ ಸಂಕೇತಗಳಾಗಿ ಇತಿಹಾಸ ಪರಂಪರೆಯ ಸ್ಪರ್ಶಗಳನ್ನು ಹೊಂದಿವೆ.

ಈ ಹಿನ್ನೆಲೆಯ ತಾಣದಲ್ಲಿ ನಮ್ಮ ಅಕಾದೆಮಿಯ ಸದಸ್ಯರು ತಮ್ಮ ಇತಿಹಾಸದ ಒಲವನ್ನು ವಿವಿಧ ಬಗೆಯಲ್ಲಿ ಹಂಚಿಕೊಳ್ಳುತ್ತಿದ್ದಾರೆ, ಕಂಡ ಶೋಧಗಳನ್ನು ಮುಂದಿಡುತ್ತಿದ್ದಾರೆ, ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಕಳೆದ ಬಾರಿ ಬಾದಾಮಿಯಲ್ಲಿ ನಡೆದ ಅಕಾದೆಮಿಯ ೧೭ನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿತವಾದ ೮೮ ಪ್ರಬಂಧಗಳು ಈ ಬಾರಿ **ಇತಿಹಾಸ ದರ್ಶನದ** ೧೯ನೇ ಸಂಪುಟದಲ್ಲಿ ಪ್ರಕಟವಾಗಿವೆ. ಈ ಪ್ರಬಂಧಗಳಲ್ಲಿ ಹೊಸ ಶೋಧಗಳ ಕುರಿತ ತೀವ್ರಾಸಕ್ತಿ, ಸ್ಥಳ ಪರಿಚಯಕ್ಕೆ ತೊಡಗಿ ಆಳವಾಗಿ ಅಭ್ಯಾಸ ಮಾಡಬೇಕೆನ್ನುವ ಕಾಳಜಿ, ಇತಿಹಾಸದ ಆಧುನಿಕ ದೃಷ್ಟಿಕೋನಗಳು, (Microstudy) - ಘಟಕ ಸೂಕ್ಷ್ಮಾಧ್ಯಯನಗಳು ಸಾಂಸ್ಕೃತಿಕ-ಸಾಹಿತ್ಯಕ ಸಂಕೇತಗಳ ಆಕರಯುಕ್ತ ಅಧ್ಯಯನದ ಪ್ರಯತ್ನಗಳು ಕೆಲವು ಇತಿಮಿತಿಗಳ ನಡುವೆಯೂ ಎದ್ದು ಕಾಣುತ್ತವೆ.

ಇದು ಯಾರಿಗೂ ಮುದ ಕೊಡುವ ಸಂಗತಿ. ಇಂಥ ಸದ್ ಪ್ರಯತ್ನಗಳಲ್ಲಿ ಸಕ್ರಿಯರಾಗಿರುವ ನಮ್ಮ ಮಾನ್ಯ ಸದಸ್ಯರು ಮಂಡಿತ ಪ್ರಬಂಧಗಳನ್ನು ನಮ್ಮ ಕೋರಿಕೆಯಂತೆ ಸಕಾಲಕ್ಕೆ ಕಳುಹಿಸದಿದ್ದರೆ ಪ್ರಕಟಣೆಯ ಪರಿವಿಡಿಯ ಅನುಕ್ರಮಣಿಕೆಯಲ್ಲಿ ಏರುಪೇರಾಗುತ್ತದೆ. ಇದನ್ನು ಮಾನ್ಯ ಸದಸ್ಯರು ಗಮನಿಸಿ ಸಹಕರಿಸುವರೆಂಬ ಆಶಯ ನಮ್ಮದು.

ಕೆಳದಿಯ ಇತಿಹಾಸದ ವಿವಿಧ ಮುಖಗಳನ್ನು ಪ್ರಸಿದ್ಧಿಗೊಳಿಸಿರುವ ಖ್ಯಾತ ಇತಿಹಾಸಕಾರ ಕೆಳದಿ ಗುಂಡಾಜೋಯಿಸ್ ಅವರು ಈ ಬಾರಿಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಗೊಂಡಿರುವುದಕ್ಕೆ ಹಾಗು ಶಾಸನ, ಸಂಶೋಧನ ಸಾಹಿತ್ಯ, ವಿದ್ವತ್ ಮಾಸಿಕದ ಸಂಪಾದನ ಕಾರ್ಯದಲ್ಲಿ ಅವಿರತ ತೊಡಗಿಕೊಂಡಿರುವ, ಹೊಸ ಶೋಧಗಳಲ್ಲಿ ನಿಖರ ವಿವೇಚನೆಯತ್ತ ಸಾಗುವ ತರುಣ ವಿದ್ವಾಂಸ ಡಾ. ಬಿ. ರಾಜಶೇಖರಪ್ಪ ಅವರಿಗೆ ಡಾ. ಬಾ.ರಾ. ಗೋಪಾಲ್ ದತ್ತಿ ಪ್ರಶಸ್ತಿಯು ಒದಗಿದುದಕ್ಕೆ ಅಭಿನಂದನೆಗಳು. ಹೊಸದಾಗಿ ಪಿ.ಎಚ್.ಡಿ. ಪಡೆದು ಅಕಾದೆಮಿಯಿಂದ ಸನ್ಮಾನಿತರಾಗುತ್ತಿರುವ ಅಕಾದೆಮಿ ಸದಸ್ಯರಿಗೆ ಅಭಿಮಾನಗಳು. ಸಂಪುಟವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ್‌ಕುಮಾರ್, ಮ್ಯಾನೇಜರ್ ಶ್ರೀ ಕೃಷ್ಣಮೂರ್ತಿ, ಡಿಟಿಪಿ ಸಿಬ್ಬಂದಿ ವರ್ಗದ ಶ್ರೀ ಎಸ್. ಮಂಜುನಾಥ್, ಕುಮಾರಿ ಯು. ವಾಣಿ, ಪಿ. ಎಸ್. ಸುಬ್ರಮಣಿ ಹಾಗೂ ಸಿಬ್ಬಂದಿ ವರ್ಗದವರಿಗೂ ನಮ್ಮ ಕೃತಜ್ಞತೆಗಳು.

ಬೆಂಗಳೂರು : **೨೦.೯.೨೦೦೪**
ತಾರಣ ಸಂವತ್ಸರ, ನಿಜಶ್ರಾವಣ-ಭಾದ್ರಪದ
ಷಷ್ಠಿ (ಸೂರ್ಯ ಷಷ್ಠೀ), ಅನೂರಾಧ ನಕ್ಷತ್ರ, ಸೋಮವಾರ


ಎಂ.ಜಿ. ನಾಗರಾಜ್
ಡಾ. ಪಿ.ವಿ. ಕೃಷ್ಣಮೂರ್ತಿ

ಸ್ಮರಣೆ



ಡಾ। ಜಿ. ಎಸ್. ದೀಕ್ಷಿತ್
(ಚಿತ್ರಕೃಪೆ : ಜಿ. ಎಸ್. ಜಿ.)

ಡಾ. ಜಿ. ಎಸ್. ದೀಕ್ಷಿತ್ ಅವರು ಕರ್ನಾಟಕ ಇತಿಹಾಸ ಅಕಾದೆಮಿಯು ಪ್ರಾರಂಭವಾಗಲು ಮುಖ್ಯ ಕಾರಣಕರ್ತರು. ಅಕಾದೆಮಿಯು ೧೯೮೬ರಲ್ಲಿ ಆರಂಭವಾದಾಗಲಿಂದ ಅಧ್ಯಕ್ಷರಾಗಿ, ೧೦ನೆಯ ವಾರ್ಷಿಕ ಸಮ್ಮೇಳನಾಧ್ಯಕ್ಷರಾಗಿ (೧೯೯೬), ೧೯೯೬ ರಿಂದ ಆಜೀವ ಗೌರವಾಧ್ಯಕ್ಷರಾಗಿ ಅಕಾದೆಮಿಯ ಸರ್ವಸದಸ್ಯರಿಗೆಲ್ಲ ಮಾರ್ಗದರ್ಶಕ ಸ್ಫೂರ್ತಿ ಕೇಂದ್ರವಾಗಿದ್ದರು. ಅವರದೊಂದು ಸಾರ್ಥಕ ನಿಸ್ವಾರ್ಥ ಬದುಕು. ಅವರ ಪೂರ್ವಿಕರು ಮಹಾರಾಷ್ಟ್ರರಿಂದ ವಲಸೆ ಬಂದ ಸ್ಮಾರ್ತದೇಶಸ್ಥ ವೈದಿಕ ಮನೆತನದ ವಿದ್ವಾಂಸ 'ಅಪ್ಪಯ್ಯ ದೀಕ್ಷಿತ'ರು. ಅವರಿಂದ ಮೂರನೇ ತಲೆಮಾರು ಗಿರಿ ದೀಕ್ಷಿತರು. ಅವರದು 'ಗಿರಿ' ಮನೆತನದ ಹೆಸರಾದರೂ, 'ದೀಕ್ಷಿತ್' ಎಂಬ ಉಪಾಧಿಯಲ್ಲಿಯೆ ಹರಿಹರದಲ್ಲಿ ಬೆಳೆದು ಬಂದ ಮನೆತನವಾಯಿತು. ಈ ಪರಂಪರೆಯಲ್ಲಿ ಬಂದ ರಾಮಾದೀಕ್ಷಿತರ ಮೂವರು ಪುತ್ರರಲ್ಲಿ ಕೊನೆಯವರೇ ಪ್ರೊ॥ ಶ್ರೀಧರ್ ದೀಕ್ಷಿತರು : ಜಿ. ಎಸ್. ದೀಕ್ಷಿತ್, ೧೦.೧೧.೧೯೧೧ರಲ್ಲಿ ಜನಿಸಿದವರು. ಹರಿಹರ, ದಾವಣಗೆರೆ, ಮೈಸೂರು ಮುಂತಾದ ಕಡೆ ಅವರ ಓದು ಸಾಗಿಬಂತು. ಕೆ. ಶ್ರೀನಿವಾಸಚಾರ್ಲು, ನಾ. ಕಸ್ತೂರಿ, ಪ್ರೊ॥ ಎಸ್.ವಿ. ವೆಂಕಟೇಶ್ವರ್, ಡಾ. ಎಂ. ಎಚ್. ಕೃಷ್ಣ, ಡಾ. ಬಿ.ಎ. ಸಾಲತೊರೆ ಅವರುಗಳೆಲ್ಲ ದೀಕ್ಷಿತರನ್ನು ರೂಪಿಸಿದ ಗುರುಗಳು. ಇತಿಹಾಸ : ಅವರ ಪ್ರವೃತ್ತಿಗನುಗುಣವಾಗಿ, ಓದು, ವೃತ್ತಿ, ವಿದ್ವತ್ತು ಮಾರ್ಗದರ್ಶನ ಹಾಗು ಒಳನೋಟಗಳ ಅಂಕಣವಾಗಿತ್ತು. ಪ್ರಾಧ್ಯಾಪಕರಾಗಿ ತಮ್ಮ ಶಿಷ್ಯವೃಂದದಲ್ಲಿ ಡಾ. ಸೂರ್ಯನಾಥಕಾಮತ್, ಡಾ. ಸದ್ಯೋಜಾತ ಸ್ವಾಮೀಜಿ, ಡಾ. ಜ್ಯೋತ್ಸ್ನಾ ಕಾಮತ್, ಡಾ. ಎಚ್. ರಘುನಾಥಭಟ್ ಮುಂತಾದವರನ್ನು ರೂಪಿಸಿದವರಾಗಿದ್ದಾರೆ. ಇವರೆಲ್ಲ ನಾಡಿನ ಶ್ರೇಷ್ಠ ಇತಿಹಾಸಕಾರರಾಗಿ ಬಹುಮುಖಿ ಪ್ರತಿಭೆಯ ಮುಂಚೂಣಿಯ ವಿದ್ವಾಂಸರೂ ಆಗಿದ್ದಾರೆ.



ಪ್ರೊ॥ ದೀಕ್ಷಿತರಿಗೆ ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಕರ್ನಾಟಕ ಹಿಸ್ಟರಿ ಕಾಂಗ್ರೆಸ್, ಆಂಧ್ರಪ್ರದೇಶ ಹಿಸ್ಟರಿ ಕಾಂಗ್ರೆಸ್, ಕಲ್ಕತ್ತದ ಹಿಸ್ಟಾರಿಕಲ್ ಸ್ಟಡೀಸ್ ಸಂಸ್ಥೆ ಹಾಗು ಕರ್ನಾಟಕ ಇತಿಹಾಸ ಅಕಾದೆಮಿ ಇತ್ಯಾದಿ ಪ್ರತಿಷ್ಠಿತ ಇತಿಹಾಸ ಸಂಸ್ಥೆಗಳ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ ಅರಸಿಬಂದಿತು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಮಂಡ್ಯ) ಗೌರವ ಸನ್ಮಾನವು ಅರ್ಪಿತವಾಯಿತು. ಹೀಗೆಯೇ ಅವರ ವಿದ್ವತ್ಪ್ರತಿಭೆಗೆ ಸಂದ ಗೌರವ ಸನ್ಮಾನಗಳು ಎಷ್ಟೋ. ಇಂಥ ಗಂಭೀರ ಪರಿಸರದ ನಡುವೆಯೂ ಸರಸ ಪ್ರವೃತ್ತಿ, ಮೃದುಭಾಷೆ, ಸ್ನೇಹಪರತೆ, ಗುಣಗ್ರಾಹ್ಯತೆ, ಮಾತಿನ ಚಾತುರ್ಯ ಹಾಗು ಸಂವಹನವನ್ನು ಹೊಂದಿದ್ದಂಥ ವರ್ಚಸ್ವಿ ವ್ಯಕ್ತಿತ್ವ ಅವರದಾಗಿತ್ತು ಅನ್ಯರಲ್ಲಿನ ವಿದ್ವತ್ತನ್ನು ಗೌರವಿಸುವ, ಕಿರಿಯ ವಿದ್ವಾಂಸರನ್ನು ಉತ್ತೇಜಿಸಿ ಬೆಳಕಿಗೆ ತರುವ ಹಾಗು ಅನುಗುಣ ವಲಯಗಳಿಗೆ ಅಂಥವರನ್ನು ಪರಿಚಯಿಸುವ ಉದಾರ ಗುಣ ಅವರ ಬದುಕಿನ ಭಾಗವಾಗಿತ್ತು. ಹಾಗಾಗಿ ತಾವು ಏರಿದ ಎತ್ತರದಲ್ಲಿ ಜೊತೆಯವರನ್ನು ಕೈ ಹಿಡಿದುಕೊಂಡು ಹೋದರು. ಅವರ ಸಂಪಾದಿತ ಕೃತಿಗಳಲ್ಲಿ 'ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ಮಿಡೀವಲ್ ಕರ್ನಾಟಕ',* ಸ್ಟಡೀಸ್ ಇನ್ ಕೆಳದಿ ಹಿಸ್ಟರಿ, ಸ್ಟಡೀಸ್ ಇನ್ ಅರ್ಲಿ ವಿಜಯನಗರ ಹಿಸ್ಟರಿ, ಟ್ಯಾಂಕ್ ಇರಿಗೇಷನ್ ಇನ್ ಕರ್ನಾಟಕ ಮುಂತಾದವು ಸಂಪಾದನ ಕ್ಷೇತ್ರಕ್ಕೆ ವಿದ್ವತ್ ದೇಣಿಗೆಗಳಾಗಿವೆ. ಮಧ್ಯಕಾಲೀನ ಕರ್ನಾಟಕ, ಕೆಳದಿ ಹಾಗು ವಿಜಯನಗರದ ಆಡಳಿತ, ಇತಿಹಾಸ, ಶಿಲ್ಪ, ಶಾಸನ ಇತ್ಯಾದಿಗಳ ಆಕರಗಳನ್ನು ಬಳಸಿ ಮಂಡಿಸಿರುವ ಪ್ರಬಂಧಗಳಲ್ಲಿವೆ. ಕೆರೆಗಳ ಇತಿಹಾಸದ ಮೇಲಂತೂ ಬಹು ಅಧಿಕೃತ ಆಕರಗಳೊಡನೆ, ವಿದ್ವತ್ ವ್ಯಾಖ್ಯಾನಗಳನ್ನು ದೀಕ್ಷಿತ್ ಅವರು ನೀಡಿದ್ದಾರೆ. ಪ್ರಾಚೀನತೆಯ ಆಳವನ್ನು ಕೆದಕಿ ಕೆರೆಗಳ ಸಾಂಸ್ಕೃತಿಕ ಪರಂಪರೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಇವನ್ನು ಅಧ್ಯಯನ ಮಾಡುವವರಿಗೆ ಒಂದು ಹೊಸ ಆಯಾಮದ ದರ್ಶನ ಒದಗುತ್ತದೆ. ಸಂಪಾದನೆಯ ಗುರಿಯೇ ಅದು.

ಇಂಥ ದೀಕ್ಷಿತರೊಡನೆಯ ಸಹವಾಸ ವಿದ್ವತ್ ಸಹವಾಸ, ಸಜ್ಜನಿಕೆಯ ಸಾಂಸ್ಕೃತಿಕ ಸಹವಾಸವಾಗಿತ್ತು. ಅವರ ಶ್ರೀಮತಿಯವರೂ ಇದಕ್ಕೆ ಪೋಷಕವಾಗಿ ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದರು. ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸಭೆಯು, ಅವರ ಅಧ್ಯಕ್ಷತೆಯಲ್ಲಿ ಮಲ್ಲೇಶ್ವರದ ಕೈಲಾಸ್ ಅಪಾರ್ಟ್‌ಮೆಂಟ್‌ನ ಅವರಿದ್ದ ನೆಲೆಯಲ್ಲಿ, ನಡೆಯುವಾಗ್ಗೆ, ಆ ಸಭೆಯಲ್ಲಿ ಪಾಲ್ಗೊಳ್ಳುವುದೇ ವಿದ್ವತ್ ಪರಿಸರದ ಖುಷಿ ಎನಿಸುತ್ತಿತ್ತು. ಅಕಾದೆಮಿಯ ವ್ಯಾವಹಾರಿಕ ಚಲನೆಗಳೂ ಸುಗಮವಾಗಿ ಅಲ್ಲಿ ಮಂಡಿತವಾಗುತ್ತಿದ್ದುವು. ೯೪ರ ಇಳಿವಯಸ್ಸಿನಲ್ಲಿ ಸಕ್ರಿಯವಾಗಿ ವಿದ್ವಾನ್ ಪ್ರಬಂಧವನ್ನು ಮಂಡಿಸುತ್ತಿದ್ದ ಅವರ ಕ್ರಿಯಾಶೀಲತೆ ನಮ್ಮೆಲ್ಲರಿಗೂ ಒಂದು ಐತಿಹಾಸಿಕ ಸ್ಫೂರ್ತಿ. ಕಳೆದ ಬಾದಾಮಿಯ ಸಮ್ಮೇಳನದಲ್ಲಿ 'ಐಯ್ಯಾವೊಳೆ ಐನೂರು' ಮೇಲೆ ಮಂಡಿಸಿದ ಪ್ರಬಂಧವೇ ಅವರ ಭೌತಿಕ






(ಚಿತ್ರ ೧. ಹನ್ನೆರಡನೆಯ ವಾರ್ಷಿಕ ಸಮ್ಮೇಳನದಲ್ಲಿ , ಡಾ। ಸೂರ್ಯನಾಥಕಾಮತ್, ಪ್ರೊ. ಎನ್. ಬಸವಾರಾಧ್ಯ, ಡಾ। ಎಸ್. ನಾಗರಾಜು, ಮಾನ್ಯ ಶ್ರೀ ಡಿ. ಬಿ. ಕಲ್ಮಣಕರ್ ಅವರೊಡನೆ ಡಾ। ಜಿ. ಎಸ್. ದೀಕ್ಷಿತ್

ಚಿತ್ರ ೨. ದಾವಣಗೆರೆ ಜಿಲ್ಲೆ ಹರಪನಹಳ್ಳಿಯಲ್ಲಿ ೧೩ನೇ ವಾರ್ಷಿಕ ಸಮ್ಮೇಳನದಲ್ಲಿ ಡಾ। ಚನ್ನಕ್ಕ ಪಾವಟೆಯವರ ಕೃತಿ ಬಿಡುಗಡೆ ಮಾಡುತ್ತಿರುವ ಡಾ। ಜಿ. ಎಸ್. ದೀಕ್ಷಿತ್)

ಜೀವನದ ಕೊನೆಯ ಪ್ರಬಂಧ. ೨೬.೭.೨೦೦೮ರಂದು ಅವರು ಕಾಲಗರ್ಭಕ್ಕೆ ಸಂದುಹೋದರೂ ಇತಿಹಾಸದ ಜೀನುಗಳನ್ನು (ಇತಿಹಾಸ ವಂಶವಾಹಿ ಕಣಗಳು), 'ವಂಶಭೂತ'ರಾಗಿ ನಮಗಿಟ್ಟು, ಸ್ಮರಣ ಚಿರಂತನರಾಗಿದ್ದಾರೆ. ಅವರಿಗೆ ಹೀಗೆ ಶ್ರದ್ಧಾಂಜಲಿಯನ್ನು 'ಇತಿಹಾಸ ದರ್ಶನ'ವು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅರ್ಪಿಸುತ್ತಿದೆ.


ಡಾ. ಎಚ್. ಆರ್. ರಘುನಾಥ್‌ಭಟ್ಟರು ಅಕಾದೆಮಿಯ, ಕಾರ್ಯದರ್ಶಿ ಹಾಗು ಉಪಾಧ್ಯಕ್ಷರಲ್ಲೊಬ್ಬರಾಗಿ ಸೇವೆ ಸಲ್ಲಿಸಿದವರು. ತರುಣ ವಿದ್ವಾಂಸರಾಗಿ, ಶಾಸನ ತಜ್ಞರಾಗಿ, ಇತಿಹಾಸ ಶಿಲ್ಪ, ಜಾನಪದ, ಕಲೆ ಇತ್ಯಾದಿ ಪ್ರಕಾರಗಳಲ್ಲಿ ಪ್ರತಿಭಾವಂತರಾಗಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದವರು. ಯಾವುದೇ, ಯಾರದೇ ಉಪನ್ಯಾಸ, ಪ್ರಬಂಧ ಮಂಡನೆಯ ವಿಷಯಗಳಲ್ಲಿನ ಸೂಕ್ತ ವಿಷಯಗಳನ್ನು ದಾಖಲಿಸಿಕೊಳ್ಳುವ ವಿದ್ಯಾ ವಿಷಯದಾಹಿ ಆಗಿದ್ದರು. ಅವರ ಕೃತಿ 'ವಿದೇಶಗಳಲ್ಲಿ ಗಣಪತಿ', 'ಕರ್ನಾಟಕ ಶಾಸನ ಕಲೆ', ನಮ್ಮ ವಿದ್ವತ್ ಪ್ರಪಂಚಕ್ಕೆ ವಿಶೇಷ ಕೃತಿಗಳ ಕೊಡುಗೆ ಎನಿಸಿವೆ. ವಿಶ್ವವ್ಯಾಪಿ ಗಣೇಶನ ವಿವರ ಕುತೂಹಲಕಾರಿ ಆಗಿದೆ. ಗಣಪತಿಯ ವಿಗ್ರಹ ಸೌಂದರ್ಯದ ವಿಶೇಷವನ್ನು ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಗಣಪತಿಯ ಕಲ್ಪನೆ ಹಾಗು ಶಬ್ದೋತ್ಪತ್ತಿಗಳನ್ನು ಸರಳವಾಗಿ ವಿವರಿಸಿದ್ದಾರೆ. ಜೈನ ಹಾಗು ಬೌದ್ಧರಲ್ಲಿಯ ಗ್ರಂಥಗಳಿಂದಲೂ ಗಣಪತಿಯ ಸಾಂಕೇತಿಕ ಅರ್ಥವನ್ನು ಹೆಕ್ಕಿ ಹೇಳಿದ್ದಾರೆ. ಶ್ರೀಲಂಕಾದಿಂದ ಹಿಡಿದು ಮಂಗೋಲಿಯವರೆಗಿನ ಹದಿನೈದು ಹೊರದೇಶಗಳಲ್ಲಿಯ ಗಣಪತಿಯ ಪ್ರಾಚಲಿತ್ಯವನ್ನು ಹೇಳಿದ್ದಾರೆ. ರೇಖಾಚಿತ್ರ, ಛಾಯಾಚಿತ್ರಗಳ ಮೂಲಕ ಸಚಿತ್ರ ಮಂಡನೆಯಲ್ಲಿ ಜಾವಾದ ಗಣೇಶ ಭೈರವಮೂರ್ತಿ, ಕಂಬುಜದ ಗಣೇಶ, ಬೋರ್ನಿಯೊ ಗಣೇಶ, ಆಫ್ಘಾನಿಸ್ತಾನ ಹಾಗು ನೇಪಾಳದ ಗಣೇಶ ಚಿತ್ರಗಳನ್ನು ವಿವರ ಸಹಿತವಾಗಿ ಮಂಡಿಸಿದ್ದಾರೆ. ಹೀಗೆ 'ಗಣಪತಿ'ಯ ವೈವಿಧ್ಯಮಯ ಸಂಕೇತಗಳನ್ನು ಪದರು ಪದರಾಗಿ ಬಿಡಿಸಿ ಹೇಳಿರುವ ಬಗೆ ಮನನೀಯವಾಗಿದೆ. ಈ ಕೃತಿಯು-ಕಲೆಯ ಭಾವದಿಂದ ಗಂಭೀರ ವಿಷಯದಾಸ್ವಾದನೆಯ ಪರಿಕ್ರಮವನ್ನು ತಿಳಿಸಿದೆ. ಇಂಥ ವ್ಯಕ್ತಿತ್ವದ ರಘುನಾಥಭಟ್ಟರು ೯.೧.೨೦೦೮ರಂದು ಇನ್ನಿಲ್ಲವಾದರು. ಅವರಿಗೂ 'ಇತಿಹಾಸ ದರ್ಶನ'ವು ತನ್ನ ನೆನಪುಗಳೊಡನೆ ಶ್ರದ್ಧಾಂಜಲಿಯನ್ನು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅರ್ಪಿಸುತ್ತಿದೆ.



ಬಾದಾಮಿಯ ಸಮ್ಮೇಳನದಲ್ಲಿ 'ಚಾಲುಕ್ಯ ದರ್ಶನ'ದ ವೀಕ್ಷಣೆಯಲ್ಲಿ ಡಾ। ಅ. ಸುಂದರ ಅವರೊಡನೆ
* ಮಧ್ಯದಲ್ಲಿ ಡಾ। ಎಚ್. ಆರ್. ರಘುನಾಥಭಟ್

-ಸಂಪಾದಕರು

ಬಾಗಲಕೋಟೆ ಜಿಲ್ಲೆ, ಬಾದಾಮಿಯಲ್ಲಿ ನಡೆದ ಹದಿನೇಳನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರು



ಡಾ। ಸಿಂದಗಿ ರಾಜಶೇಖರ




ಕೈ|| ಕೆ. ಅಭಿಶಂಕರ್ ಅವರ ಸ್ಮರಣಾರ್ಥ ಸಮ್ಮೇಳನಾಧ್ಯಕ್ಷರಿಗೆ ನೀಡುವ ನೆನಪಿನ ಶಿಲ್ಪ ಕಾಣಿಕೆ.
ಪ್ರತಿವರ್ಷ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನಾಧ್ಯಕ್ಷರಿಗೆ ಈ ಕಾಣಿಕೆ ನೀಡಲು
ಶ್ರೀಮತಿ ವಿಶಾಲಾಕ್ಷಿ ಅಭಿಶಂಕರ್ ಅವರು ಪುದುವಟ್ಟು ಇಟ್ಟಿದ್ದಾರೆ.
(ಶಿಲ್ಪ ಕಲಾವಿದೆ : ಶ್ರೀಮತಿ ಕನಕಮೂರ್ತಿ)



೧೭ನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿದ
ಪೂಜ್ಯ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿಯವರು

ಡಾ|| ಬಾ. ರಾ. ಗೋಪಾಲ್ ದತ್ತಿ ಪ್ರಶಸ್ತಿ ಸನ್ಮಾನಿತರು



ಡಾ. ಕೆ.ವಿ. ರಮೇಶ್
ವೃಷ ಸಂವತ್ಸರ
ಶಕ ವರ್ಷ : ೧೯೨೩ ; ಕ್ರಿ.ಶ. ೨೦೦೧



ಡಾ. ಶ್ರೀನಿವಾಸ ರಿತ್ತಿ
ಚಿತ್ರಭಾನು ಸಂವತ್ಸರ
ಶಕವರ್ಷ : ೧೯೨೪ ; ಕ್ರಿ.ಶ. ೨೦೦೨



ಡಾ. ದೇವರಕೊಂಡಾರೆಡ್ಡಿ
ಸ್ವಭಾನು ಸಂವತ್ಸರ
ಶಕ ವರ್ಷ : ೧೯೨೫ ; ಕ್ರಿ.ಶ. ೨೦೦೩



ಡಾ. ಬಿ. ರಾಜಶೇಖರಪ್ಪ
ತಾರಣ ಸಂವತ್ಸರ
ಶಕವರ್ಷ : ೧೯೨೬ : ಕ್ರಿ.ಶ. ೨೦೦೪



ಶ್ರೀ ರಾಮಕೃಷ್ಣ-ವಿವೇಕಾನಂದಾಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ನಿರ್ಭಯಾನಂದ ಸ್ವಾಮೀಜಿಯವರಿಂದ ಅಕಾದೆಮಿಯ ೧೭ನೇ ವಾರ್ಷಿಕ ಸಮ್ಮೇಳನದ ಉದ್ಘಾಟನೆ

ಚಿತ್ರದಲ್ಲಿ ಸಮ್ಮೇಳನಾಧ್ಯಕ್ಷ ಡಾ. ಎಸ್. ರಾಜಶೇಖರ, ಬಾದಾಮಿ ಕ್ಷೇತ್ರದ ಶಾಸಕ ಶ್ರೀ ಬಿ.ಬಿ. ಚಿಮ್ಮನಕಟ್ಟಿ, ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಛೇರ್‌ಮನ್ ಶ್ರೀ ಎ.ಸಿ. ಪಟ್ಟಣದ, ಡಾ. ಜೆ.ಎಸ್. ದೀಕ್ಷಿತ್, ಡಾ. ಸೂರ್ಯನಾಥ ಕಾಮತ್ ಮುಂತಾದವರು



ಸಮ್ಮೇಳನಾಧ್ಯಕ್ಷ ಡಾ. ಎಸ್. ರಾಜಶೇಖರ ಅವರಿಗೆ ಪೂಜ್ಯ ಶ್ರೀ ನಿರ್ಭಯಾನಂದ ಸ್ವಾಮೀಜಿಯವರಿಂದ ಸಮ್ಮೇಳನದ ನೆನಪಿನ ಶಿಲ್ಪಕಾಣಿಕೆಯ ನೀಡಿಕೆ. ಚಿತ್ರದಲ್ಲಿ ಶಾಸಕ ಶ್ರೀ ಬಿ.ಬಿ. ಚಿಮ್ಮನಕಟ್ಟಿ, ಬಾದಾಮಿಯ ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಚೇರ್‌ಮನ್ ಶ್ರೀ ಎ.ಸಿ. ಪಟ್ಟಣದ ಮುಂತಾದವರು



ಸಮ್ಮೇಳನಾಧ್ಯಕ್ಷ ಡಾ. ಎಸ್. ರಾಜಶೇಖರ ಅವರ ಭಾಷಣ




ಸಮ್ಮೇಳನದಲ್ಲಿ ವ್ಯವಸ್ಥೆಗೊಂಡಿದ್ದ ಕಲಾವಿದರ 'ಚಾಲುಕ್ಯ ದರ್ಶನ'ದ ವೀಕ್ಷಣೆಯಲ್ಲಿ ಡಾ. ಅ. ಸುಂದರ ಡಾ. ಎಚ್.ಆರ್. ರಘುನಾಥಭಟ್ ಮುಂತಾದವರು

ಸಮ್ಮೇಳನದ ಗೋಷ್ಠಿಯಲ್ಲಿ ವಿದ್ವಾಂಸರಿಂದ ಪ್ರಬಂಧ ಮಂಡನೆ



ಅಕಾದೆಮಿ ಆಜೀವ ಗೌರವಾಧ್ಯಕ್ಷ ಡಾ|| ಜಿ.ಎಸ್. ದೀಕ್ಷಿತ್ ಅವರಿಂದ ಪ್ರಬಂಧ ಮಂಡನೆ
ಅಧ್ಯಕ್ಷತೆ : ಡಾ. ರು.ಮ. ಷಡಕ್ಷರಯ್ಯ



ಗೋಷ್ಠಿ ಅಧ್ಯಕ್ಷತೆ : ಡಾ. ಕೆ.ಆರ್. ಗಣೇಶ್



ಗೋಷ್ಠಿ ಅಧ್ಯಕ್ಷತೆ
ಡಾ. ಎಸ್.ಕೆ. ಜೋಶಿ



ಸರ್ಕಾರಿ ಪದವಿ ಪೂರ್ವ ಕಾಲೇಜು ಹೊನ್ನಾಳಿ : 'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮದ ಉದ್ಘಾಟನೆ.

ಚಿತ್ರದಲ್ಲಿ ಸರ್ವಶ್ರೀ ಎ.ಜಿ. ಕೃಷ್ಣಪ್ಪ, ಸಿದ್ಧಯ್ಯ ಹಿರೇ
ಸಂಚಾಲಕ ಸಿದ್ದಪ್ಪ, ಜಯದೇವಪ್ಪ ಜೈನಕೇರಿ
ಎಂ. ಶಿವಶಂಕರಯ್ಯ ಹಿರೇಮಠ ಮುಂತಾದವರು



ಸಮ್ಮೇಳನದ ಗೋಷ್ಠಿಯಲ್ಲಿ
ಶ್ರೋತೃ ವೃಂದ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,)

ಬೆಂಗಳೂರು

ಕಾರ್ಯಕಾರಿ ಸಮಿತಿ

(ದಿನಾಂಕ ೨೩.೯.೨೦೦೭ರಲ್ಲಿ ಆಯ್ಕೆಯಾದವರು)

ಆಜೀವ ಗೌರವ ಅಧ್ಯಕ್ಷರು

ಪ್ರೊ।। ಜಿ.ಎಸ್. ದೀಕ್ಷಿತ್ (೨೫-೭-೨೦೦೮ರವರೆಗೆ)

ಅಧ್ಯಕ್ಷರು

ಡಾ।। ಸೂರ್ಯನಾಥ ಕಾಮತ್

ಉಪಾಧ್ಯಕ್ಷರು

ಶ್ರೀ ಎಂ.ಜಿ. ನಾಗರಾಜ್

ಡಾ।। ಎಚ್.ಆರ್. ರಘುನಾಥಭಟ್ (೮-೧-೨೦೦೮ರವರಗೆ)

ಪ್ರಧಾನ ಕಾರ್ಯದರ್ಶಿ

ಡಾ।। ಎಚ್.ಎಸ್. ಗೋಪಾಲರಾವ್

ಕಾರ್ಯದರ್ಶಿ

ಡಾ।। ಕೆ. ವಸಂತಲಕ್ಷ್ಮಿ

ಡಾ।। ಚೆನ್ನಕ್ಕ ಪಾವಟೆ

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು

ಸದಸ್ಯರು

ಪ್ರೊ।। ಲಕ್ಷ್ಮಣ್ ತೆಲಗಾವಿ, ಹಂಪಿ

ಡಾ। ದೇವರಕೊಂಡಾರೆಡ್ಡಿ, ಹಂಪಿ

ಡಾ।। ಶೀಲಾಕಾಂತ ಪತ್ತಾರ, ಬಾದಾಮಿ

ಶ್ರೀ ಅಮರೇಶ್ ಯತಗಲ್, ಗುರುಗುಂಟಾ

ಶ್ರೀ ಎಂ.ಕೆ. ದುರುಗಪ್ಪ, ಕನಕಗಿರಿ

ಶ್ರೀಮತಿ ಸ್ಮಿತಾ ಸುರೇಬಾನಕರ, ಬೆಳಗಾಂ

ಡಾ।। ಡಿ.ಎನ್. ಯೋಗೀಶ್ವರಪ್ಪ, ತುಮಕೂರು

ಡಾ।। ಕೆಳದಿ ವೆಂಕಟೇಶ್ ಜೋಯಿಸ್, ಕೆಳದಿ

ಶ್ರೀ ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ

ಶ್ರೀ ಗುರುಮೂರ್ತಿ ಪೆಂಡಕೂರು, ಹಗರಿಬೊಮ್ಮನಹಳ್ಳಿ







ಶ್ರೀ ಎಂ. ಶಿವಶಂಕರಯ್ಯ, ಹೊನ್ನಾಳಿ







ಡಾ।। ಎಚ್.ಎಸ್. ಉಷಾರಾಣಿ, ಮೈಸೂರು

ಡಾ।। ಎಚ್. ಚಂದ್ರಶೇಖರ್, ಬೆಂಗಳೂರು

ಪರಿವಿಡಿ

ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೧.	೧೫-೧೭ ಮೇ ೧೯೮೭	ಬೆಂಗಳೂರು	*ಕರ್ನಾಟಕ ಇತಿಹಾಸ ಅಕಾದೆಮಿ*	ಡಾ|| ಎಂ. ಚಿದಾನಂದಮೂರ್ತಿ	
೨.	೨೩-೨೪ ಅಕ್ಟೋಬರ್ ೧೯೮೮	ತುಮಕೂರು	*ಸಿದ್ಧಗಂಗಾಕ್ಷೇತ್ರ : ಡಾ| ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು*	ಡಾ|| ಜಿ. ಎಸ್. ಗಾಯಿ	
೩.	೧೦-೧೧ ಜೂನ್ ೧೯೮೯	ಗದಗ	*ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ*	ಡಾ|| ಶ್ರೀನಿವಾಸ ರಿತ್ತಿ	
೪.	೨೧-೨೨ ಜುಲೈ ೧೯೯೦	ದಾವಣಗೆರೆ	*ಡಾ|| ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ*	ಡಾ|| ಎಸ್. ಆರ್. ರಾವ್	
೫.	೧೨-೧೪ ಜುಲೈ ೧೯೯೧	ಚಿತ್ರದುರ್ಗ	*ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ*	ಡಾ|| ಬಾ. ರಾ. ಗೋಪಾಲ್	
೬.	೧೧-೧೩ ಜುಲೈ ೧೯೯೨	ರಾಯಚೂರು	*ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ ರಾಯಚೂರು*	ಡಾ|| ಕೆ. ವಿ. ರಮೇಶ್	
೭.	೨೩-೨೫ ಜುಲೈ ೧೯೯೩	ಮೈಸೂರು	*ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ, ಮೈಸೂರು*	ಡಾ|| ಅ. ಸುಂದರ	
೮.	೯-೧೦ ಜುಲೈ ೧೯೯೪	ಸೊಂಡೂರು	*ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ, ಸೊಂಡೂರು*	ಡಾ|| ಎಂ. ಎಂ. ಕಲಬುರ್ಗಿ	

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೯.	೯-೧೧ ಸೆಪ್ಟೆಂಬರ್ ೧೯೯೫	ಬೆಳಗಾವಿ	ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ, ಬೆಳಗಾವಿ	ಡಾ|| ಎ.ವಿ. ನರಸಿಂಹಮೂರ್ತಿ	
೧೦.	೭-೯ ಜೂನ್ ೧೯೯೬	ಧಾರವಾಡ	ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ ಧಾರವಾಡ	ಡಾ|| ಜಿ. ಎಸ್. ದೀಕ್ಷಿತ್	
೧೧.	೨೫-೨೭ ಅಕ್ಟೋಬರ್ ೧೯೯೭	ಸಿರಸಿ	ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸಿರಸಿ	ಪ್ರೊ|| ಕೆ. ಅಭಿಶಂಕರ್	
೧೨.	೧೪-೧೬ ನವೆಂಬರ್ ೧೯೯೮	ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ	ಡಾ|| ಎಸ್. ನಾಗರಾಜು	
೧೩.	೧೧-೧೩ ಜೂನ್ ೧೯೯೯	ಹರಪನಹಳ್ಳಿ	ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ. ಬಾ. ಸದಾಶಿವಪ್ಪ, ಸ್ವಾಗತ ಸಮಿತಿ, ಹರಪನಹಳ್ಳಿ	ಡಾ|| ಶ್ರೀನಿವಾಸ ಹಾವನೂರ	
೧೪.	೮-೧೦ ಜುಲೈ ೨೦೦೦	ಹಂಪಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ	ಶ್ರೀ ಸಿ. ಟಿ. ಎಂ. ಕೊಟ್ರಯ್ಯ	
೧೫.	೧೩-೧೫ ಅಕ್ಟೋಬರ್ ೨೦೦೧	ಉಡುಪಿ	ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಪೇಜಾವರ ಮಠಾಧೀಶರು, ಉಡುಪಿ	ಡಾ|| ಜ್ಯೋತ್ಸ್ನಾ ಕಾಮತ್	
೧೬.	೨೨-೨೪ ಸೆಪ್ಟೆಂಬರ್ ೨೦೦೨	ಶ್ರೀ ರಾಮಚಂದ್ರಾಪುರ ಮಠ ಹೊಸನಗರ	ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು	ಡಾ. ಎ.ಕೆ. ಶಾಸ್ತ್ರಿ	
೧೭.	೧೩-೧೫ ಸೆಪ್ಟೆಂಬರ್ ೨೦೦೩	ಬಾದಾಮಿ	ವಿಶ್ವಚೇತನ ಸಂಸ್ಥೆ ಬಾದಾಮಿ	ಡಾ. ಎಸ್. ರಾಜಶೇಖರ್	

ಕರ್ನಾಟಕ ಇತಿಹಾಸ ಅಕಾದೆಮಿಯ ಹದಿನೇಳನೆಯ ವಾರ್ಷಿಕ ಸಮ್ಮೇಳನ

ಬಾದಾಮಿ ದಿನಾಂಕ ೧೩-೧೫ ಸೆಪ್ಟೆಂಬರ್ ೨೦೦೩

ಸಮ್ಮೇಳನಾಧ್ಯಕ್ಷರು : ಡಾ. ಸಿಂದಗಿ ರಾಜಶೇಖರ*

ಅಧ್ಯಕ್ಷರ ಭಾಷಣ

ಕರ್ನಾಟಕ ಇತಿಹಾಸ ಅಕಾದೆಮಿಯ ಹದಿನೇಳನೆಯ ವಾರ್ಷಿಕ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ಅಕಾದೆಮಿಯ ಪದಾಧಿಕಾರಿಗಳಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಜಗತ್ ಪ್ರಸಿದ್ಧ ಚಲುಕ್ಯ ಕಲೆಯ ತವರೂರಾದ ಬಾದಾಮಿಯಲ್ಲಿ ಈ ಸಮ್ಮೇಳನ ನಡೆಯುತ್ತಿರುವುದು ನನಗೆ ಹೆಚ್ಚಿನ ಸಂತೋಷ ತಂದಿದೆ. ಏಕೆಂದರೆ ಸುಮಾರು ೩೫ ವರ್ಷಗಳಿಗೂ ಮೇಲ್ಪಟ್ಟು ನಾನು ಹೆಚ್ಚಾಗಿ ಚಲುಕ್ಯ ಕಲೆಯ ಅಭ್ಯಾಸಕ್ಕಾಗಿ ತೊಡಗಿಸಿ ಕೊಂಡವನು ಎನ್ನುವ ಕಾರಣಕ್ಕಾಗಿ. ಕರ್ನಾಟಕ ಇತಿಹಾಸ ಅಕಾದೆಮಿಯ ಪರವಾಗಿ ಈ ಸಮ್ಮೇಳನವನ್ನು ನಡೆಸುತ್ತಿರುವ ಬಾದಾಮಿಯ ವಿಶ್ವಚೇತನ ಬಳಗದವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕ ಇತಿಹಾಸ ಅಕಾದೆಮಿಯ ೧೭ನೆಯ ವಾರ್ಷಿಕ ಸಮ್ಮೇಳನವು ಬಾದಾಮಿಯಲ್ಲಿಯೇ ಜರುಗುತ್ತಿರುವ ಈ ಸಂದರ್ಭದಲ್ಲಿ ನನ್ನ ಭಾಷಣದಲ್ಲಿ ಬಾದಾಮಿ ಚಲುಕ್ಯ ವಾಸ್ತುಶಿಲ್ಪದ ಬಗ್ಗೆ ನಮ್ಮ ಗಮನವನ್ನು ಕೇಂದ್ರೀಕರಿಸಲು ಪ್ರಯತ್ನಿಸುವುದು ಸಮಂಜಸವೆಂದು ನಂಬಿದ್ದೇನೆ.

ಬಾದಾಮಿ ಮತ್ತು ಐಹೊಳೆ ಗುಹಾದೇವಾಲಯಗಳ ಕಾಲಾನು ಕ್ರಮಣಿಕೆ

ಜೇಮ್ಸ ಬರ್ಜೆಸ್‌ನು ಬೆಳಗಾವಿ ಮತ್ತು ಕಲಾದಗಿ ಜಿಲ್ಲೆಗಳಲ್ಲಿ ನಡೆಸಿದ ಪ್ರಥಮ ಕ್ಷೇತ್ರಕಾರ್ಯ ವರದಿಯನ್ನು ೧೮೭೪ ರಲ್ಲಿ ಪ್ರಸಿದ್ಧಿಸಿದಾಗಿನಿಂದ, ವಿದ್ವಾಂಸರು ಚಲುಕ್ಯ ವಾಸ್ತುಶಿಲ್ಪದ ಬಗ್ಗೆ ಅಧಿಕವಾದ ಆಸ್ಥೆಯನ್ನು ತಳೆಯುತ್ತ ಬಂದಿದ್ದು, ೧೮೭೪ ರಿಂದೀಚೆಗೆ ಈ ಬಗ್ಗೆ ಹಲವಾರು ಗ್ರಂಥಗಳು ಮತ್ತು ಸಂಶೋಧನಾ ಮಹಾಪ್ರಬಂಧಗಳು ಪ್ರಕಟಗೊಂಡಿದ್ದು, ಅವುಗಳಲ್ಲಿ ಕೆಲವು ದಾಖಲು ರೂಪದಲ್ಲಿದ್ದರೆ, ಕೆಲವು ಸಂಶೋಧನಾತ್ಮಕವಾಗಿವೆ. ಇನ್ನು ಕೆಲವು ಭಾರತೀಯ ವಾಸ್ತು ಶಿಲ್ಪದ ಬಗೆಗಿನ ಕೃತಿಗಳಲ್ಲಿ ಒಂದು ಸಾಂದರ್ಭಿಕ ಭಾಗವಾಗಿ ಚಲುಕ್ಯ ವಾಸ್ತುಶಿಲ್ಪದ ವಿಶ್ಲೇಷಣಾತ್ಮಕ ಸ್ಥೂಲ ಪರಿಚಯವನ್ನು ಹೊಂದಿವೆ. ಇವುಗಳಲ್ಲಿ ಚಲುಕ್ಯ ವಾಸ್ತು ಮತ್ತು ಶಿಲ್ಪಕಲೆಗೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಎತ್ತಿಕೊಂಡು ಕೆಲವಕ್ಕೆ ನಿರ್ಧಾರಾತ್ಮಕ ಪರಿಹಾರಗಳನ್ನು ಹೇಳಿದ್ದರೆ, ಇನ್ನು ಕೆಲವು ಸಮಸ್ಯೆಗಳಿಗೆ ಉತ್ತರವನ್ನು ಕಾಣುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ನನ್ನ ಈ ಭಾಷಣದಲ್ಲಿ ಚಲುಕ್ಯ ವಾಸ್ತುಶಿಲ್ಪದ ಕುರಿತು ಇರುವ ಕೆಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಿದ್ದೇನೆ.

ಬಾದಾಮಿ ಚಲುಕ್ಯ ವಾಸ್ತುಕಲೆಯ ಅಧ್ಯಯನ ಕೈಗೊಂಡಾಗ ಎದುರಾಗುವ ಹಲವು ಸಮಸ್ಯೆಗಳಲ್ಲಿ ಪ್ರಮುಖವಾದದ್ದು ಬಾದಾಮಿ ಮತ್ತು ಐಹೊಳೆಯ ಗುಹಾಲಯಗಳ ಹಾಗೂ ಕಟ್ಟಡ ಶೈಲಿಯ ದೇವಾಲಯಗಳ ಕಾಲನಿರ್ಣಯದ ವಿಚಾರ. ೧, ೨, ೩ ಮತ್ತು ೪ ಎಂಬ ಕ್ರಮದಲ್ಲಿ ಗುರುತಿಸಲ್ಪಟ್ಟವು. ಈಗ ಪ್ರಚಲಿತವಾಗಿರುವಂತೆ ಬಾದಾಮಿಯಲ್ಲಿ ಗುಹಾಲಯಗಳು ಇದೇ ಕ್ರಮದಲ್ಲಿ ಕೊರೆಯಲ್ಪಟ್ಟವು ಎಂಬುದು ಜೇಮ್ಸ್ ಬರ್ಜೆಸ್‌ನು ಮೊದಲು ಭಾವಿಸಿಕೊಂಡಿದ್ದರೂ, ನಂತರದಲ್ಲಿ ತನ್ನ ಅಭಿಪ್ರಾಯವನ್ನು ಪರಾಮರ್ಶಿಸಿ, ಈಗ ೩ನೆಯದೆಂದು ಗುರುತಿಸಲ್ಪಟ್ಟಿರುವ ಗುಹಾಲಯವು ಮೊದಲಿನದೆಂದೂ, ನಂತರದಲ್ಲಿ ೧, ೨ ಮತ್ತು ೪ನೆಯ ಗುಹಾಲಯಗಳು ಕೊರೆಯಲ್ಪಟ್ಟವು ಎಂಬ ನಿರ್ಣಯಕ್ಕೆ ಬಂದನು.[೧]

ಆರ್. ಡಿ. ಬ್ಯಾನರ್ಜಿಯವರು ಕೂಡ ಬರ್ಜೆಸ್‌ನ ಮೇಲಿನ ಅಭಿಪ್ರಾಯವನ್ನೇ ಪುರಸ್ಕರಿದ್ದಾರೆ.[೨] ಗ್ಯಾರಿಟಾರ ಅವರು ಮಾತ್ರ ಈ ಗುಹಾ ದೇಗುಲಗಳು ಈಗಿರುವ ಕ್ರಮಾಂಕದಲ್ಲಿಯೇ ನಿರ್ಮಿತವಾಗಿವೆ ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ. ಆದರೆ ಇತ್ತೀಚೆಗೆ ಕರೋಲ್ ರ್‍ಯಾಡಕ್ಲಿಫ್‌ಳು ಈ ಗುಹಾದೇಗುಲಗಳ ಕಾಲಾನುಕ್ರಮಣಿಕೆಯ ಬಗ್ಗೆ ವಿಶ್ಲೇಷಿಸುತ್ತ ಈಗ ೪ನೆಯದು ಎನಿಸಿರುವ ಜೈನ ಗುಹಾದೇಗುಲವೇ ಮೊದಲು ಕೊರೆಯಲ್ಪಟ್ಟು ತದನಂತರದಲ್ಲಿ ಕ್ರಮವಾಗಿ ೧, ೨ ಮತ್ತು ೩ನೆಯ ಗುಹಾ ದೇಗುಲಗಳು ಕೊರೊಯಲ್ಪಟ್ಟವು ಎಂದು ಅಭಿಪ್ರಾಯಪಟ್ಟಿದ್ದಾಳೆ.[೩]

ಅದೇರೀತಿ ಐಹೊಳೆಯ ಗುಹಾದೇಗುಲಗಳ ಬಗ್ಗೆ ಬರ್ಜೆಸ್‌ನು ಬರೆಯುತ್ತ ಇವು ಬಾದಾಮಿಯ ಗುಹಾ ದೇಗುಲಗಳಿಗಿಂತಲೂ ಹಳೆಯವು ಎಂದೂ ಬಹುಶಃ ಕ್ರಿ.ಶ. ೫೦೦-೫೫೦ ರ ಅವಧಿಯಲ್ಲಿ ಕೊರೆಯಲ್ಪಟ್ಟಿರಬೇಕು ಎಂದು ತಿಳಿಸಿದ್ದಾನೆ.[೪] ಗ್ಯಾರಿಟಾರ ಮತ್ತು ರ್‍ಯಾಡಕ್ಲಿಫ್ ಇವರೂ ಸಹ ಐಹೊಳೆಯ ಗುಹಾದೇಗುಲಗಳು (ರಾವಣಪಡಿ ಮತ್ತು ಮೀನಬಸದಿ) ಬಾದಾಮಿಯ ಗುಹಾದೇಗುಲಗಳಿಗಿಂತಲೂ ಹಳೆಯವು ಎಂಬ ಬರ್ಜೆಸ್‌ನ ಅಭಿಪ್ರಾಯವನ್ನು ಪುರಸ್ಕರಿಸಿದ್ದಾರೆ. ಗ್ಯಾರಿಟಾರ್‌ನ ಅಭಿಪ್ರಾಯದಲ್ಲಿ ಐಹೊಳೆಯ ಎರಡೂ ಗುಹಾದೇಗುಲಗಳು

* ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕ್ರಿ. ಶ. ೫೫೦-೫೬೦ರ ದಶಕದಲ್ಲಿ, ಬದಾಮಿಯ ೧ ಮತ್ತು ೨ನೆಯ ಗುಹಾದೇಗುಲಗಳು ಕ್ರಿ.ಶ. ೫೬೦-೫೭೦ರ ದಶಕದಲ್ಲಿ, ೩ ಮತ್ತು ೪ನೆಯವು ಕ್ರಿ.ಶ ೫೭೦-೫೮೦ರ ದಶಕದಲ್ಲಿ ಕೊರೆಯಲ್ಪಟ್ಟಿವೆ.[೫] ಆದರೆ ರ್‍ಯಾಡ್‌ಕ್ಲಿಫ್‌ಳು ಹೇಳಿರುವಂತೆ ಅನುಕ್ರಮವಾಗಿ ಐಹೊಳೆಯ ಮೀನಬಸದಿ ಕ್ರಿ.ಶ. ೫೪೫-೫೫೦; ರಾವಣಪಡಿ ಕ್ರಿ.ಶ. ೫೪೫-೫೫೫ರ ದಶಕದಲ್ಲಿ ಕೊರೆಯಲ್ಪಟ್ಟಿವೆ. ಬಾದಾಮಿಯ ನಾಲ್ಕನೆಯ ಗುಹಾದೇಗುಲ ಕ್ರಿ.ಶ. ೫೪೫-೫೫೦ರಲ್ಲಿ, ಒಂದನೆಯ ಗುಹಾದೇಗುಲವು ಕ್ರಿ.ಶ. ೫೫೦-೫೫೫ರಲ್ಲಿ ಕೊರೆಯಲ್ಪಟ್ಟಿವೆ.[೬] ಈಗಿನ ೩ನೆಯ ಕ್ರಮಾಂಕದ ವಿಷ್ಣು ಗುಹಾದೇಗುಲವು ಕ್ರಿ. ಶ. ೫೭೮ ರಲ್ಲಿ ಕೊರೆಯಲ್ಪಟ್ಟಿತು ಎಂದು ಆ ಗುಹಾದೇಗುಲದಲ್ಲಿರುವ ಶಾಸನವು ಸ್ಪಷ್ಟಪಡಿಸುತ್ತದೆ.

ಹೀಗೆ ಈ ಗುಹಾದೇಗುಲಗಳ ಕಾಲನಿರ್ಣಯವು ಹಲವು ಭಿನ್ನಾಭಿಪ್ರಾಯಗಳಿಗೆ ಅನುವು ಮಾಡಿಕೊಟ್ಟಿದೆ. ಆದರೆ ಸೂಕ್ಷ್ಮವಾಗಿ ಅವುಗಳ ವಾಸ್ತುವಿನ ಬೇರೆ ಬೇರೆ ಅಂಶಗಳು ಮತ್ತು ಶಿಲ್ಪಗಳ ಕೆತ್ತನೆಯ ವಿವರಗಳನ್ನು ತೌಲನಿಕವಾಗಿ ವಿಶ್ಲೇಷಿಸಿದಾಗ ಈ ಗುಹಾದೇಗುಲಗಳ ಕಾಲಾನುಕ್ರಮಣಿಕೆಯನ್ನು ಸರಳವಾಗಿ ನಿರ್ಣಯಿಸಬಹುದು.

ವಾಸ್ತು ಅಂಶಗಳು

ಈ ಗುಹಾದೇಗುಲಗಳ ತಳವಿನ್ಯಾಸ, ಮುಖಭಾಗ, ಕಂಬ, ಬೋದಿಗೆ, ಸೂರು, ದ್ವಾರಪಾಲರ ಸ್ಥಾನ, ನಿಧಿಗಳು, ಗರ್ಭಗೃಹ ದ್ವಾರದ ಅಲಂಕಾರ ಕೆತ್ತನೆ, ಶಿಲ್ಪಗಳ ಭವ್ಯತೆ, ಆಕಾರ, ಸ್ಥೂಲತೆ, ಬಾಗಿಲ ಕವಾಟಗಳ ಮೇಲಿರುವ ಅಲಂಕಾರಿಕ ಕೆತ್ತನೆ ಇವುಗಳೆಲ್ಲ ಬದಾಮಿಯ ಈ ಗುಹಾದೇಗುಲದ ಪ್ರಚಲಿತ ಕ್ರಮದಲ್ಲಿಯೇ ಕೊರೆಯಲ್ಪಟ್ಟಿವೆ ಎನ್ನುವುದಕ್ಕೆ ಸಾಕಷ್ಟು ಸ್ಪಷ್ಟ ಆಧಾರಗಳನ್ನು ಒದಗಿಸುತ್ತವೆ.

೧, ೨ ಮತ್ತು ೩ ನೆಯ ಗುಹಾದೇಗುಲಗಳಲ್ಲಿ ತೆರೆದ ಮೊಗಸಾಲೆ, ಕಂಬಗಳುಳ್ಳ ಸಭಾಮಂಟಪ ಹಾಗೂ ಸಭಾಮಂಟಪದ ನೆಲಗಟ್ಟಿಗಿಂತಲೂ ಎತ್ತರದಲ್ಲಿರುವ ಗರ್ಭಗೃಹಗಳನ್ನು ಕಾಣುತ್ತೇವೆ. ನಾಲ್ಕನೆಯದಾದ ಜೈನ ಗುಹಾದೇಗುಲದ ಸಭಾಮಂಟಪದಲ್ಲಿ ಕಂಬಗಳಿಲ್ಲ. ಮೊದಲನೆಯ ಶೈವ ಗುಹಾದೇಗುಲದಲ್ಲಿ ಮುಖ್ಯ ಗುಹೆಗೆ ಹೊಂದಿಕೊಂಡಂತೆ ಹೊರ ಭಾಗದಲ್ಲಿ ಪೂರ್ವಾಭಿಮುಖವಾಗಿ ಮಹಿಷಮರ್ಧಿನಿಯ ಶಿಲ್ಪವನ್ನೊಳಗೊಂಡ ಕೋಣೆಯೊಂದನ್ನು ಕೊರೆಯಲಾಗಿದೆ.

೧, ೨ ಮತ್ತು ೪ನೆಯ ಗುಹಾದೇಗುಲಗಳ ಮುಖಭಾಗದಲ್ಲಿ ನಾಲ್ಕು ಪೂರ್ಣಕಂಬಗಳು ಮತ್ತು ಆಚೀಚೆ ಅರ್ಧಕಂಭಗಳಿವೆ. ೩ನೆಯ ಗುಹಾಲಯ ವಿಶಾಲವಾಗಿದ್ದು ಆರು ಕಂಬಗಳ ಮುಖಭಾಗವನ್ನು ಹೊಂದಿದೆ.

ಮೊದಲನೆಯ ಶೈವ ಗುಹಾದೇಗುಲದಲ್ಲಿ ಮೊಗಸಾಲೆಯಲ್ಲಿ ಚಂದ್ರಶಿಲೆಯಿಲ್ಲ. ಆದರೆ ಎರಡನೆಯ ಮತ್ತು ಮೂರನೆಯ ವಿಷ್ಣು ದೇಗುಲಗಳು ಚಂದ್ರಶಿಲೆಯನ್ನು ಹೊಂದಿವೆ.

ಮೊದಲನೆಯ ಶೈವ ದೇಗುಲದಲ್ಲಿ ಕಂಬಗಳನ್ನು ಎಡದಿಂದ ಬಲಕ್ಕೆ ಸಾಲಾಗಿ ಕೊರೆಯಲಾಗಿದೆ. ಎರಡನೆಯದರಲ್ಲಿ ಕಂಬಗಳು ಒಂದರ ಹಿಂದೆ ಒಂದರಂತೆ ಕೊರೆಯಲಾಗಿದೆ. ಮೂರನೆಯ ವಿಷ್ಣು ದೇಗುಲದಲ್ಲಿ ಮೊಗಸಾಲೆಯ ಈ ಕಂಬಗಳನ್ನು ಈ ಎರಡೂ ರೀತಿಯಲ್ಲಿ ಕೊರೆಯಲಾಗಿದೆ. ಮತ್ತು ಗರ್ಭಗೃಹದ ಮುಂದೆ ಅಷ್ಟದಿಕ್ಪಾಲಕರನ್ನು ಕೆತ್ತುವುದಕ್ಕೆ ಅನುಕೂಲವಾಗುವಂತೆ ವಿಶಾಲವಾದ ಮೆಲ್ಗಂಡನ್ನು ಸೃಷ್ಟಿಸಲಾಗಿದೆ.

ಮೊದಲನೆಯ ಗುಹಾದೇಗುಲದಲ್ಲಿ ಕಂಬಗಳ ಬೋದಿಗೆಗಳಿಗೆ ಆತುಕೊಂಡಂತೆ ಯಾವುದೇ ಶಿಲ್ಪಗಳಿಲ್ಲ. ಎರಡನೆಯ ಮತ್ತು ನಾಲ್ಕನೆಯ ದೇಗುಲಗಳಲ್ಲಿ ಬೋದಿಗೆಗಳಿಗೆ ಆತುಕೊಂಡಂತೆ ಕೊಂಬುಳ್ಳ ಸಿಂಹಗಳನ್ನು ಕೆತ್ತಲಾಗಿದೆ. ಮೂರನೆಯ ದೇಗುಲದಲ್ಲಿ ಬೋದಿಗೆ ಶಿಲ್ಪಗಳನ್ನು ಅಳವಡಿಸಲಾಗಿದೆ. ಮೊದಲನೆಯ ಶೈವ ಗುಹಾಲಯದ ಸೂರು ಸಾದಾ ಮತ್ತು ನಿರಾಲಂಕಾರವಾಗಿದೆ. ಎರಡನೆಯ ಗುಹಾಲಯದ ಸೂರು ಹಲವು ಚೌಕಗಳಿಂದೊಡಗೂಡಿದ್ದು ಮೂಲತಃ ಆ ಚೌಕಗಳಲ್ಲಿ ಬಣ್ಣದ ವಿನ್ಯಾಸಗಳಿದ್ದ ಕುರುಹುಗಳಿವೆ. ಇದರ ಸೂರನ್ನು ಮುಂಭಾಗದ ಕಂಭಗಳ ಬೋದಿಗೆಗಳಿಗೆ ಆತುಕೊಂಡಿರುವ ಕೊಂಬಿನ ಸಿಂಹಗಳು ಎತ್ತಿ ಹಿಡಿದಂತೆ ಕಂಡರಿಸಲಾಗಿದೆ. (ಈ ರೀತಿ ಸೂರಿನಲ್ಲಿ ಚೌಕಗಳು ಮತ್ತು ಸೂರನ್ನು ಬೋದಿಗೆಯ ಸಿಂಹಗಳು ಎತ್ತಿ ಹಿಡಿದಂತೆ ತೋರಿಸಿರುವುದು. ಮೊದಲನೆಯ ಗುಹಾಲಯದಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಇದು ಕಾಲಕ್ರಮದಲ್ಲಿ ನಂತರದ ಬೆಳವಣಿಗೆ ಎನ್ನುವುದು ಸುಸ್ಪಷ್ಟ)

ಮೂರನೆಯ ವಿಷ್ಣು ಗುಹಾದೇಗುಲದ ಸೂರು ಹೆಚ್ಚು ಅಲಂಕಾರಿಕವಾಗಿದೆ. ಅದನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ. ಒಂದು ಭಾಗದಲ್ಲಿ ಚೌಕಾಕಾರದ ಪೆಟ್ಟಿಗೆಗಳನ್ನು ಕಂಡರಿಸಿದ್ದರೆ, ಇನ್ನೊಂದು ಭಾಗದಲ್ಲಿ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಮಧ್ಯದಲ್ಲಿ ಹಾರುತ್ತಿರುವ ಭಂಗಿಯಲ್ಲಿರುವ ಬೃಹದಾಕಾರದ ಗರುಡನ ಶಿಲ್ಪವನ್ನು ಕೆತ್ತಲಾಗಿದೆ. ಸೂರಿನ ಒಳಭಾಗಕ್ಕೆ ಆಸರೆಯಾಗಿ ಬೆನ್ನಮೇಲೆ ಸಿಂಹಗಳು ನಿಂತಂತೆ ಕಂಡರಿಸಲಾಗಿದೆ. ನಾಲ್ಕನೆಯ ಜೈನ ಗುಹಾಲಯದ ಸೂರನ್ನು ಕೊಂಬುಳ್ಳ ಸಿಂಹಗಳು ಎತ್ತಿ ಹಿಡಿದಿವೆ.

ಮೊಗಸಾಲೆಗಳ ಗೋಡೆಗಳನ್ನು ಪರಿಶೀಲಿಸಿದಾಗ ಮೊದಲಿನ ಎರಡು ಗುಹಾಲಯಗಳ ಎಡಬಲ ಗೋಡೆಗಳ ಮೇಲೆ ಹರಿಹರ, ಅರ್ಧನಾರೀಶ್ವರ, ತ್ರಿವಿಕ್ರಮ ಮತ್ತು ವರಾಹಗಳ

ಬೃಹದಾಕಾರದ ಆಕೃತಿಗಳನ್ನು ಕಂಡರಿಸಲಾಗಿದೆ. ಮೂರನೆಯ ಗುಹಾಲಯದಲ್ಲಿ ಎಡ ಮತ್ತು ಬಲಬದಿಯ ಗೋಡೆಗಳಲ್ಲದೆ, ಮೊಗಸಾಲೆ ಮತ್ತು ಸಭಾಮಂಟಪಗಳನ್ನು ಬೇರ್ಪಡಿಸುವ ಹಿಂಗೋಡೆಗಳ ಮೇಲೂ ಸಹ ಬೃಹತ್ ಶಿಲ್ಪಗಳನ್ನು ಕೆತ್ತಲಾಗಿದೆ. ಎಡಬಲದ ಗೋಡೆಗಳ ಮೇಲೆ ಅನಂತನ ಮೇಲೆ ಆಸೀನನಾದ ವಿಷ್ಣು ಮತ್ತು ನರಸಿಂಹ ಮೂರ್ತಿಗಳನ್ನು ಕಾಣಬಹುದು.

ಅದೇ ರೀತಿ ಮೊದಲಿನ ಮೂರು ಗುಹಾದೇಗುಲಗಳ ಮೊಗಸಾಲೆಗಳ ಒಳಮಾಳಿಗೆಗಳನ್ನು ವೀಕ್ಷಿಸಿದಾಗ, ಒಳಮಾಳಿಗೆಯ ಅಲಂಕಾರಿಕೆಯು ಹೆಚ್ಚುತ್ತಿರುವುದನ್ನು ಕಾಣುತ್ತೇವೆ. ಮೊದಲನೆಯ ಶೈವ ದೇಗುಲದಲ್ಲಿ ಒಳಮಾಳಿಗೆಯಲ್ಲಿ ನಾಗರಾಜ, ಹಾರಾಡುತ್ತಿರುವ ಗಂಧರ್ವರು ಮತ್ತು ಕಮಲದಾಕಾರದ ಪದಕಗಳನ್ನು ಕಾಣುತ್ತೇವೆ. ಎರಡನೆಯ ಗುಹಾಲಯದ ಒಳಮಾಳಿಗೆಯು ಐದು ಚೌಕಾಕಾರದ ಶಿಲ್ಪಗಳನ್ನು ಹೊಂದಿದ್ದು, ಅವುಗಳಲ್ಲಿ ಸ್ವಸ್ತಿಕ್, ಕಮಲ, ಮತ್ಸ್ಯಚಕ್ರ, ಗಂಧರ್ವರು ಮತ್ತು ಗರುಡವಾಹನ ವಿಷ್ಣುವನ್ನು ವಿವರವಾಗಿ ಕೆತ್ತಲಾಗಿದೆ. ಮೂರನೆಯ ವಿಷ್ಣು ಗುಹಾಲಯದ ಒಳಮಾಳಿಗೆಯಲ್ಲಿ ಏಳು ಮೇಲ್ಗಂಡಗಳಿದ್ದು ಪ್ರತಿಯೊಂದನ್ನು ಇನ್ನೂ ಹೆಚ್ಚು ವಿವರವಾಗಿ ಅಲಂಕಾರಿಕವಾಗಿ ಕೊರೆಯಲಾಗಿದೆ. ಆರರಲ್ಲಿ ಕುಬೇರ, ಇಂದ್ರ, ಶಿವಪಾರ್ವತಿ, ವಿಷ್ಣು, ಬ್ರಹ್ಮ ಮತ್ತು ವರುಣರನ್ನು ಕಂಡರಿಸಲಾಗಿದ್ದರೆ, ಏಳನೆಯದರಲ್ಲಿ ಶಿಲ್ಪದ ಬದಲು ವರ್ಣಚಿತ್ರವನ್ನು ಬಿಡಿಸಲಾಗಿದೆ.

ಮೊದಲನೆಯ ಶೈವ ಗುಹಾಲಯದ ಸಭಾಮಂಟಪದ ಪ್ರವೇಶವನ್ನು ಹಲವು ಶಾಖೆಯ ಚೌಕಟ್ಟಾದ ದ್ವಾರದ ರೂಪದಲ್ಲಿ ನಿರ್ಮಿಸಲಾಗಿದ್ದು, ಅದರಲ್ಲಿ ಹೂದಳಗಳು, ಅರ್ಧಕಂಬಗಳು, ವಜ್ರದಾಕಾರದ ಕೆತ್ತನೆ, ಮಣಿಸರಗಳು ಮತ್ತು ಮೇಲೆ ಇರುವ ಅಡ್ಡತೊಲೆಯ ಹೂದಳಗಳು, ಚೈತ್ಯಗಳುಳ್ಳ ಮುಂಚಾಚು, ಗಂಧರ್ವರು, ಸಿಂಹಮುಖ ಮತ್ತು ಮಧ್ಯಭಾಗದಲ್ಲಿ ಶಿವಲಿಂಗ ಹೀಗೆ ಹಲವು ಆಕೃತಿಗಳನ್ನು ಕೆತ್ತಲಾಗಿದೆ. ದ್ವಾರಶಾಖೆಗಳಲ್ಲಿ ಕೈಯಲ್ಲಿ ಕಮಲವನ್ನು ಹಿಡಿದ ಅಪ್ಸರೆಯೊಬ್ಬಳು ಗಣದೊಂದಿಗೆ ಇರುವುದನ್ನು ಕಾಣುತ್ತೇವೆ.

ಎರಡನೆಯ ಗುಹಾಲಯದ ಇಂಥದೇ ಪ್ರವೇಶದ್ವಾರವನ್ನು ಇನ್ನೂ ಹೆಚ್ಚು ಅಲಂಕಾರಿವಾಗಿ ಕೊರೆಯಲಾಗಿದ್ದು, ಈ ಅಲಂಕಾರಗಳು ಮೇಲಿನ ಅಡ್ಡತೊಲೆಯಲ್ಲಿಯೂ ಮೂಡಿಸಲ್ಪಟ್ಟಿವೆ. ಆಚೆ ಈಚೆಯ ತೋಳುಗಳ ಮೇಲೆ ಅಪ್ಸರೆಯ ಬದಲು ಮಿಥುನ ದಂಪತಿಗಳನ್ನು ಕೊರೆಯಲಾಗಿದೆ.

ಈ ಗುಹಾದೇಗುಲಗಳ ಮೊಗಸಾಲೆಯ ತೊಲೆಗಳ ಮೇಲಿನ ಅಲಂಕರಣೆಯ ವೈವಿಧ್ಯತೆಯಲ್ಲಿ ಕ್ರಮೇಣ ಹೆಚ್ಚಳವಾಗಿರುವದನ್ನೂ ಕಾಣುತ್ತೇವೆ. ಶೈವ ಗುಹಾಲಯದ ಮುಖಭಾಗದ ಹಿಂದಿನ ತೊಲೆಯ ಮೇಲ್ಭಾಗದಲ್ಲಿ ಮಾತ್ರ ಶಿವಪಾರ್ವತಿಯರ ವಿವಾಹ ಕುರಿತಂತೆ ಚಿಕಣಿ ಶಿಲ್ಪಗಳಿವೆ. ಎರಡನೇ ಗುಹಾಲಯದ ಮೊಗಸಾಲೆಯ ಹಿಂದಿನ ಮತ್ತು ಸಭಾಮಂಟಪದ ಮುಂಭಾಗದ ಎರಡೂ ತೊಲೆಗಳ ಮೇಲೆ ಇಂಥ ಚಿಕಣಿ ಶಿಲ್ಪಗಳಿವೆ. ಮೂರನೆಯ ಗುಹಾಲಯದ ಮೊಗಸಾಲೆಯ ನಾಲ್ಕೂ ನಿಟ್ಟಿನ ತೊಲೆಗಳ ಮೇಲೆ ಕಥಾನಕ ಶಿಲ್ಪಗಳನ್ನು ಕಂಡರಿಸಲಾಗಿದೆ.

ಇದೇ ರೀತಿ ಈ ಗುಹಾಲಯಗಳ ಗರ್ಭಗೃಹಗಳ ಬಾಗಿಲು ಚೌಕಟ್ಟುಗಳನ್ನು ಪರಿಶೀಲಿಸಿದಾಗ ಸಾದಾ, ನಿರಾಲಂಕಾರದಿಂದ ಆರಂಭಗೊಂಡು ಸೂಕ್ಷ್ಮ ಕೆತ್ತನೆಯವರೆಗೂ ಸಾಗಿದ್ದನ್ನು ಕಾಣಬಹುದು.

ಮೊದಲನೆಯ ಶೈವ ಗುಹಾಲಯದ ದ್ವಾರದಲ್ಲಿ ಲಲಾಟಬಿಂಬವಿಲ್ಲದ ಮತ್ತು ನಿರಾಲಂಕಾರವುಳ್ಳ ಕವಾಟವನ್ನು ಹೊಂದಿದೆ. ಎರಡನೆಯ ಗುಹಾಲಯದ ಗರ್ಭಗೃಹದ ದ್ವಾರದ ಚೌಕಟ್ಟಿನಲ್ಲಿ ಹೂಬಳ್ಳಿ, ಅರ್ಧಕಂಭ, ಹಗ್ಗದ ಕೆತ್ತನೆಗಳಿವೆ. ಕೆಳಭಾಗದಲ್ಲಿ ಕಮಲ ಹಿಡಿದಿರುವ ಅಪ್ಸರೆ ಮತ್ತು ದ್ವಾರಪಾಲಕರನ್ನು ಕಂಡರಿಸಲಾಗಿದೆ. ಬಾಗಿಲ ಕವಾಟದಲ್ಲಿ ಶಾಲಾ ಮತ್ತು ನಾಗರ ಶೈಲಿಯ ಶಿಖರಗಳ ಮಾದರಿಗಳನ್ನು ಕೊರೆಯಲಾಗಿದೆ. ಮೂರನೆಯ ವೈಷ್ಣವ ಗುಹಾಲಯದ ಗರ್ಭಗೃಹದ ದ್ವಾರವು ಏಳು ಶಾಖೆಗಳನ್ನು ಹೊಂದಿದ್ದು ವಿವಿಧ ಮತ್ತು ಸೂಕ್ಷ್ಮ ಕೆತ್ತನೆಯ ಅಲಂಕಾರಗಳನ್ನು ಒಳಗೊಂಡಿದೆ. ಕೆಳಭಾಗದಲ್ಲಿ ದೇವದಂಪತಿಗಳ ಮೂರ್ತಿಗಳಿವೆ. ಅಲ್ಲದೆ ಗರ್ಭಗೃಹದ ಆಚೀಚೆ ದೊಡ್ಡ ಪ್ರಮಾಣದ ದ್ವಾರಪಾಲಕರ ಮೂರ್ತಿಗಳಿವೆ. ಬಾಗಿಲು ಕವಾಟದ ಮೇಲೆ ಶಾಲಾ ಮತ್ತು ಕೂಟ ಶೈಲಿಯ ಶಿಖರವುಳ್ಳ ದೇವಾಲಯಗಳ ಮಾದರಿಗಳನ್ನು ಕೆತ್ತಲಾಗಿದೆ. ನಾಲ್ಕನೆಯ ಜೈನ ಗುಹಾಲಯದ ಗರ್ಭಗೃಹದ ದ್ವಾರವು ಕೆಳಭಾಗದಲ್ಲಿ ದ್ವಾರಪಾಲಕರ ಆಕೃತಿಗಳನ್ನು ಹಾಗೂ ಕವಾಟದಲ್ಲಿ ಚೈತ್ಯಗಳನ್ನು ಕಂಡರಿಸಿದ್ದನ್ನು ಕಾಣುತ್ತೇವೆ.

ಇನ್ನೊಂದು ವಿಶೇಷವೆಂದರೆ ಮೊದಲನೆಯ ಮತ್ತು ಎರಡನೆಯ ಗುಹಾದೇಗುಲಗಳಲ್ಲಿ ಶಂಖ ಮಾತ್ತು ಪದ್ಮನಿಧಿ ಯಕ್ಷರನ್ನು ಗರ್ಭಗೃಹದ ದ್ವಾರದ ಪಕ್ಕದಲ್ಲಿರುವ ಅರ್ಧಕಂಬಗಳ ಮೇಲೆ ಕೆತ್ತಿದ್ದರೆ, ಮೂರನೆಯ ಗುಹಾದೇಗುಲದ ಈ ಸ್ಥಳಗಳಲ್ಲಿ ಯಕ್ಷರನ್ನು ಪತ್ನಿ ಸಮೇತರಾಗಿರುವಂತೆ ಕಂಡರಿಸಿರುವುದನ್ನು ಕಾಣತ್ತೇವೆ.

ಮೇಲ್ಕಾಣಿಸಿದ ಈ ಲಕ್ಷಣಗಳನ್ನು ತೌಲನಿಕವಾಗಿ ವಿಶ್ಲೇಷಿಸಿದಾಗ, ಮೊದಲನೆಯ ಶೈವ ಗುಹಾಲಯದಿಂದ ಆರಂಭಗೊಂಡು ಎರಡನೆಯ ಸಣ್ಣ ವೈಷ್ಣವ ಗುಹಾಲಯ ಮತ್ತು ಮೂರನೆಯ ದೊಡ್ಡ ವೈಷ್ಣವ ಗುಹಾಲಯದವರೆಗೆ ಗುಹಾದೇಗುಲಗಳ

ಅಲಂಕಾರಿಕ ಕೆತ್ತನೆಯಲ್ಲಿ ಹೆಚ್ಚೆಚ್ಚು ಸೂಕ್ಷ್ಮತೆ ಮತ್ತು ಹೊಸ ಹೊಸ ಅವಿಷ್ಕಾರಗಳನ್ನು ರೂಢಿಸಿಕೊಂಡದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಶೈವ ಗುಹಾಲಯವು ಮೊದಲು, ಎರಡನೆಯ ಗುಹಾಲಯವು ನಂತರ ಮತ್ತು ಮೂರನೆಯದಾಗಿ ವೈಷ್ಣವ ಗುಹಾಲಯವು ಕ್ರಿ. ಶ. ೫೭೮ ರಲ್ಲಿ ಕೊರೆಯಲ್ಪಟ್ಟವು ಎಂದು ನಿರ್ಣಯಿಸಬಹುದು.

ಐಹೊಳೆಯ ಮೀನಬಸದಿ ಮತ್ತು ರಾವಣಪಡಿ ಗುಹಾ ದೇಗುಲಗಳನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ, ಮೀನ ಬಸದಿಯಲ್ಲಿ ಕಾಣುವ ಗೊಮ್ಮಟ ಮೂರ್ತಿಯ ಕೆತ್ತನೆಯಲ್ಲಿ ಲಾಕ್ಷಣಿಕ ವೈಶಿಷ್ಟ್ಯ ಕಾಣವುದಿಲ್ಲ. ಬಹುಶಃ ಅಗ ಈ ಮೂರ್ತಿ ಶಿಲ್ಪದ ಶಾಸ್ತ್ರೋಕ್ತ ನಿರ್ದಿಷ್ಟ ರೂಪ ಲಕ್ಷಣಗಳು ಪೂರ್ಣ ವಿಕಾಸ ಗೊಂಡಿರಲಿಕ್ಕಿಲ್ಲ. ಆದರೆ ಬದಾಮಿಯ ನಾಲ್ಕನೆಯ ಜೈನ ಗುಹಾಲಯದ ಗೊಮ್ಮಟಮೂರ್ತಿಯ ಕೆತ್ತನೆಯಲ್ಲಿ ಲಾಕ್ಷಣಿಕ ಗುಣಗಳನ್ನು (ಎರಡೂ ಬದಿಗೆ ಹುತ್ತ, ಕಾಲಮೇಲೆ ಹಬ್ಬಿರುವ ಬಳ್ಳಿಗಳು ಮತ್ತು ಸರ್ಪಗಳು) ಕಾಣುತ್ತೇವೆ. ಅದೇ ರೀತಿ ಮೀನಬಸದಿಯಲ್ಲಿರುವ ಪಾರ್ಶ್ವನಾಥ ಶಿಲ್ಪವನ್ನೂ ಪರಾಮರ್ಶಿಸಿದಾಗ ಬದಾಮಿಯ ಜೈನ ಗುಹಾಲಯವನ್ನು ಕೊರೆದಾಗ ವಿವಿಧ ಮೂರ್ತಿಲಕ್ಷಣಗಳನ್ನು ನಿರ್ದಿಷ್ಟಗೊಳಿಸಿದ ಶಿಲ್ಪಶಾಸ್ತ್ರವು ಆಗಲೇ ವಿಕಾಸಗೊಂಡಿರಬೇಕೆನ್ನುವುದು ಸ್ಪಷ್ಟ ವಾಗುತ್ತದೆ. ನಾಲ್ಕನೆಯ ಗುಹಾದೇಗುಲವು ಆರನೆಯ ಶತಮಾನದ ಅಂತ್ಯಭಾಗದಲ್ಲಿ ಅಂದರೆ ಕ್ರಿ. ಶ. ೫೭೮ ನೇ ವರ್ಷದ ಅನಂತರವೇ ಸಿದ್ಧವಾಗಿರಬೇಕು. ಹಾಗೂ ಐಹೊಳೆಯ ಮೀನ ಬಸದಿ ಆರನೆಯ ಶತಮಾದ ಪೂರ್ವಾರ್ಧದಲ್ಲಿಯೆ ಅಂದರೆ ಬದಾಮಿಯ ಮೊದಲನೆಯ ಗುಹಾಲಯದ ಕಾಲದ ಪೂರ್ವ ದಲ್ಲಿಯೆ ಕೊರೆಯಲ್ಪಟ್ಟಿರಬೇಕು.

ರಾವಣಪಡಿ ಗುಹಾಲಯವು ಬದಾಮಿ ಚಲುಕ್ಯರ ಕಾಲದಲ್ಲಿ ಕೊರೆಯಲ್ಪಟ್ಟ ಕೊನೆಯ ಗುಹಾದೇಗುಲವಾಗಿದ್ದು, ೭ನೆಯ ಶತಮಾನದ ಅಂತ್ಯ ಭಾಗದಲ್ಲಿ ಅಥವಾ ೭ನೆಯ ಶತಮಾನದ ಆರಂಭದಲ್ಲಿ ಸಿದ್ಧಗೊಂಡಿರಬೇಕು. ಯಾಕೆಂದರೆ ಈ ರಾವಣಪಡಿ ಗುಹಾಲಯವು ಪೂರ್ಣವಿಕಸಿತ ತಳವಿನ್ಯಾಸವನ್ನು ಹೊಂದಿದ್ದು, ಗರ್ಭಗೃಹ, ಅಂತರಾಳ, ಸಭಾಗೃಹಗಳೊಂದಿಗೆ ಎರಡೂ ಬದಿಗಳಲ್ಲಿ ಒಂದೊಂದು ಕೋಣೆಯನ್ನೂ ಹೊಂದಿದೆ. ಈ ಗುಹಾದೇಗುಲದ ಎದುರಿಗೆ ನಂದಿಕಟ್ಟೆ ಮತ್ತು ಅದರ ಹಿಂದೆ ಧ್ವಜಸ್ತಂಭ ಸಹ ಇವೆ. ಇವು ರಾಜಪ್ರಭುತ್ವದ ಪುನರ್ಸ್ಥಾಪನೆಯ ಕಾಲದ ದೇವಾಲಯಗಳ ಲಕ್ಷಣಗಳಾಗಿವೆ. ಈ ರಾವಣಪಡಿ ಗುಹಾಲಯದಲ್ಲಿರುವ ವರಾಹಮೂರ್ತಿಯು ನಿರ್ದಿಷ್ಟ ಲಕ್ಷಣ ಗಳನ್ನು ಹೊಂದಿದ್ದು, ಭೂದೇವಿಯು ವರಾಹಮೂರ್ತಿಯು ಎಡಭುಜದ ಮೇಲ್ಗಡೆ ಕುಳಿತಿರುವಂತೆ ತೋರಿಸಲಾಗಿದೆ.

ಬದಾಮಿಯ ಎರಡು ಮತ್ತು ಮೂರನೆಯ ಗುಹಾಲಯ ಗಳಲ್ಲಿ ಕಾಣುವ ವರಾಹಮೂರ್ತಿಯ ಕೆತ್ತನೆಗಳನ್ನು ಇದರೊಂದಿಗೆ ಹೋಲಿಸಿದಾಗ, ಕಾಲಕ್ರಮದಲ್ಲಿ ಮೂರ್ತಿ ಲಕ್ಷಣಗಳು ನಿರ್ದಿಷ್ಟಗೊಳ್ಳುತ್ತಿರುವುದನ್ನು ಸಹ ಗಮನಿಸಬಹುದು.

ಮೂರ್ತಿಶಿಲ್ಪಗಳನ್ನು ಅಭ್ಯಸಿಸುವ ಮೂಲಕವೂ ಸಹ ಈ ಗುಹಾಲಯಗಳ ಕಾಲನಿರ್ಣಯಕ್ಕೆ ಸಾಕ್ಷ್ಯಾಧಾರಗಳನ್ನು ಕಂಡುಕೊಳ್ಳಬಹುದು ಎಂಬುದಕ್ಕೆ ಇದೊಂದು ಸೂಕ್ತ ಉದಾಹರಣೆ ಎನ್ನಬಹುದು. ಎರಡನೆಯ ಗುಹಾದೇಗುಲ ವರಾಹಮೂರ್ತಿಯ ಉಬ್ಬು ಶಿಲ್ಪದಲ್ಲಿ ಆತನ ಕೆಳಗಿನ ಎಡಗೈಯಲ್ಲಿ ಕಮಲದ ಹೂವಿದ್ದು ಅದರ ಮೇಲೆ ಭೂದೇವಿಯು ನಿಂತಿರುವಂತೆ ಕೆತ್ತಲಾಗಿದೆ ಹಾಗೂ ಅವಳು ಬಲಗೈಯನ್ನು ವರಾಹನ ಮುಖದ ಮೇಲಿಟ್ಟಿದ್ದಾಳೆ. ಮೂರನೆಯ ಗುಹಾದೇಗುಲದಲ್ಲಿ ವರಾಹ ಮೂರ್ತಿಯ ಕೆಳ ಎಡಗೈ ಸ್ವಲ್ಪ ಮೇಲಕ್ಕೆ ಸೊಂಟದೆತ್ತರದಲ್ಲಿ ಇದ್ದು ಆ ಕೈಯಲ್ಲಿ ಇರುವ ಪದ್ಮದ ಮೇಲೆ ಭೂದೇವಿ ನಿಂತು ತನ್ನ ಬಲಗೈಯನ್ನು ವರಾಹಮೂರ್ತಿಯ ಎಡಭುಜದ ಮೇಲೆ ಇಟ್ಟಿರುವಂತೆ ಕಂಡರಿಸಲಾಗಿದೆ. ಇನ್ನು ರಾವಣಪಡಿ ಗುಹಾದೇಗುಲದಲ್ಲಿರುವ ವರಾಹಮೂರ್ತಿಯ ಉಬ್ಬುಶಿಲ್ಪವು ಭೂದೇವಿಯನ್ನು ಕಂಡರಿಸುವ ವಿನ್ಯಾಸದಲ್ಲಿ ಇನ್ನೂ ಹೆಚ್ಚು ವಿಕಾಸಗೊಂಡಿದೆ ಎನ್ನಬಹುದು. ಇಲ್ಲಿ ಭೂದೇವಿಯು ಪದ್ಮ ಪೀಠಸ್ಥಳಾಗಿರದೇ ವರಾಹಮೂರ್ತಿಯ ಎಡಭುಜದ ಮೇಲೆ ಕುಳಿತಿರುವಂತೆ ತೋರಿಸಲಾಗಿದೆ. ಐಹೊಳೆಯ ಶತಮಾನದ ದುರ್ಗದೇವಾಲಯದಲ್ಲಿ ಈ ಬಗೆಯ ವರಾಹ ಶಿಲ್ಪವನ್ನು ಕಾಣಬಹುದು. ಮುಂದೆ ರಾಷ್ಟ್ರಕೂಟ, ಕಲ್ಯಾಣ ಚಲುಕ್ಯ, ಹೊಯ್ಸಳ ಮತ್ತು ವಿಜಯನಗರ ಅರಸರ ಕಾಲದ ದೇವಾಲಯಗಳಲ್ಲಿ ಸಹ ಇದೆ ರೀತಿ ಭೂದೇವಿಯು ಕುಳಿತಿರುವ ಲಕ್ಷಣಗಳುಳ್ಳ ವರಾಹ ಮೂರ್ತಿ ಶಿಲ್ಪಗಳನ್ನು ಕಾಣಬಹುದು.

ಹೀಗೆ ಮೂರ್ತಿಶಿಲ್ಪದ ಲಕ್ಷಣಗಳು ವಿಕಾಸವಾಗುತ್ತ ಪ್ರಮಾಣೀಕೃತವಾಗುವುದನ್ನು ಮತ್ತು ಈ ಮೂರ್ತಿಶಿಲ್ಪದ ಲಕ್ಷಣಗಳನ್ನು ಸೂಕ್ಷ್ಮವಾಗಿ ಅಭ್ಯಸಿಸುವ ಮೂಲಕ ಕಾಲನಿರ್ಣಯ ಮಾಡುವುದು ಸಾಧ್ಯ ಎನ್ನುವುದಕ್ಕೆ ಇನ್ನೂ ಒಂದು ಉದಾಹರಣೆಯನ್ನು ನಾನಿಲ್ಲಿ ನೀಡಬಯಸುತ್ತೇನೆ.

ಬಾದಾಮಿ ಚಲುಕ್ಯರಿಗಿಂತಲೂ ಪೂರ್ವದಲ್ಲಿ ಕದಂಬರ ಕಾಲದ ಮಹಿಷಾಸುರಮರ್ದಿನಿ ಉಬ್ಬುಶಿಲ್ಪಗಳಲ್ಲಿ ದೇವಿಯು ಕೋಣನ ರೂಪದ ರಾಕ್ಷಸನನ್ನು ಬಾಲದಿಂದ ಎತ್ತಿ ಹಿಡಿದು ತ್ರಿಶೂಲದ ಹಿಂಭಾಗದಿಂದ ಕೊಲ್ಲುವ ರೀತಿಯಲ್ಲಿ ತೋರಿಸಲಾಗಿದೆ. ಇದೇ ರೂಪದ ಮಹಿಷಮರ್ದಿನಿಯನ್ನು ಬಾದಾಮಿಯ ಮೊದಲನೆಯ (ಶೈವ) ಗುಹಾಲಯದ ಹೊರಭಾಗದ ಕೋಣೆಯಲ್ಲಿ ನಾವು ಕಾಣುತ್ತೇವೆ. ಆದರೆ ರಾವಣಪಡಿಯಲ್ಲಿರುವ ಮಹಿಷ

ಮರ್ದಿನಿ ಉಬ್ಬುಶಿಲ್ಪದಲ್ಲಿ ದೇವಿಯು ಕೋಣನ ರೂಪದ ರಾಕ್ಷಸನ ಬೆನ್ನ ಮೇಲೆ ಎಡಗಾಲನ್ನಿಟ್ಟು ಅದರ ಮೂತಿಯನ್ನು ಎಡಗೈಯಿಂದ ಅದುಮಿ ಹಿಡಿದು ತ್ರಿಶೂಲದ ಹಿಂಭಾಗದಿಂದ ತಿವಿದು ಕೊಲ್ಲುವ ರೀತಿಯಲ್ಲಿ ತೋರಿಸಲಾಗಿದೆ. ಮುಂದೆ ಪಟ್ಟದಕಲ್ಲಿನ ವಿರೂಪಕ್ಷ ದೇವಾಲಯ (ಕ್ರಿ.ಶ. ೭೪೦)ದಲ್ಲಿರುವ ಮಹಿಷಮರ್ದಿನಿಯ ಮೂರ್ತಿಯನ್ನು ಕೆತ್ತುವಾಗ ರಾಕ್ಷಸನನ್ನು ಮಾನವ ರೂಪದಲ್ಲಿ ನಿರೂಪಿಸಲಾಗಿದೆ. ನಂತರದ ಅವಧಿಯಲ್ಲಿ ಮಹಿಷಮರ್ದಿನಿಯ ಶಿಲ್ಪಗಳನ್ನು ಕೆತ್ತುವಾಗ ರಾಕ್ಷಸನು ಕೋಣನ ರೂಪದಿಂದ ಮಾನವ ರೂಪದಲ್ಲಿ ಪ್ರಕಟವಾಗುತ್ತಿರುವಂತೆ ತೋರಿಸಲಾಗಿದೆ.

೨. ದ್ರಾವಿಡ ಶೈಲಿಯ ದೇವಾಲಯಗಳು

ಈ ಸಂದರ್ಭದಲ್ಲಿ ಬಾದಾಮಿ ಚಲುಕ್ಯರ ಕಾಲದಲ್ಲಿ ದ್ರಾವಿಡ ಪದ್ಧತಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳ ಮೂಲದ ಕುರಿತು ತಮ್ಮ ಗಮನ ಸೆಳೆಯಬಯಸುತ್ತೇನೆ. ಈ ದಿಶೆಯಲ್ಲಿ ಹಲವಾರು ಇತಿಹಾಸಜ್ಞರು ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. ಹೆನ್ರಿ ಕಜಿನ್ಸ (೧೯೨೬) ರಿಂದ ಹಿಡಿದು ಎ.ಕೆ. ಕುಮಾರಸ್ವಾಮಿ, ಬೆಂಝಾಮಿನ್ ರೊಲ್ಯಾಂಡ್ ಮತ್ತಿತರರು ಪಟ್ಟದಕಲ್ಲಿನಲ್ಲಿರುವ ವಿರೂಪಾಕ್ಷ ದೇವಾಲಯವನ್ನು ಚಲುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯನ ಹಿರಿಯ ರಾಣಿ ಲೋಕಮಹಾದೇವಿಯು ಕಂಚಿಯಲ್ಲಿರುವ ಕೈಲಾಸನಾಥ ದೇವಾಲಯದಿಂದ ಸ್ಫೂರ್ತಿ ಗೊಂಡು ಪಲ್ಲವ ದೇಶದ ವಾಸ್ತು ಶಿಲ್ಪಿಯ ಸಹಾಯಪಡೆದು ಕಟ್ಟಿಸಿದವಳೆಂದು ಮತ್ತು ಈ ವಿರೂಪಾಕ್ಷ ದೇವಾಲಯದಿಂದ ಆರಂಭಗೊಂಡಂತೆ ಪಲ್ಲವರ ದ್ರಾವಿಡ ಶೈಲಿ ಮುಂದೆ ಇಡೀ ಕರ್ನಾಟಕದಲ್ಲಿ ಬೆಳೆದು ಬಂದಿತೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಬಗೆಯ ಅಭಿಪ್ರಾಯಕ್ಕೆ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ದಲ್ಲಿರುವ ಶಿಲಾಶಾಸನದ ತೆಂಕಣದಿಸೆಯ ಸೂತ್ರಧಾರ ಸರ್ವಸಿದ್ಧಿ ಆಚಾರ್ಯ ಈ ದೇವಾಲಯದ ವಾಸ್ತುಶಿಲ್ಪಿ ಎಂದು ದಾಖಲಾಗಿರು ವುದನ್ನು ವಿದ್ವಾಂಸರು ಅವನು ದಕ್ಷಿಣ ದಿಕ್ಕಿನ ಪಲ್ಲವ ರಾಜ್ಯದಿಂದ ಬಂದ ವಾಸ್ತುಶಿಲ್ಪಿ ಎಂದು ಅರ್ಥೈಸಿರುವುದು ಕಾರಣವಾಗಿದೆ. ಆದರೆ ಇದು ತಪ್ಪು ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಈ ವಿರೂಪಾಕ್ಷ ದೇವಾಲಯ ನಿರ್ಮಾಣದ ಮುಖ್ಯ ಸೂತ್ರಧಾರಿಗಳು ಗುಂಡ ಅನಿವಾರಿತ ಮತ್ತು ಸರ್ವಸಿದ್ಧಿ ಆಚಾರಿಗಳು. ಇವರು ಚಲುಕ್ಯರ ಪ್ರಮುಖ ವಾಸ್ತುಶಿಲ್ಪಿಗಳು. ಹಾಗೆಯೇ ಪಟ್ಟದಕಲ್ಲಿನಲ್ಲಿರುವ ರೇಖಾನಾಗರ ಶೈಲಿಯಲ್ಲಿ ಕಟ್ಟಲ್ಪಟ್ಟಿರುವ ಪಾಪನಾಥ ದೇವಾಲಯದ ವಾಸ್ತುಶಿಲ್ಪಿ ರೇವಡಿ ಓವಜ್ಜನು ಈ ದೇವಾಲಯದ ದಕ್ಷಿಣ ದಿಕ್ಕಿನ ಭಾಗವನ್ನು ಕಟ್ಟಿದ್ದಾಗಿಯೂ (ತೆಂಕಣ ದಿಸೆಮಾಡಿದೋನ್) ಅವನ್ನು ಸರ್ವಸಿದ್ಧಿ ಆಚಾರಿಯ ಶಿಷ್ಯನೆಂದೂ ಅದೇ ದೇವಾಲಯದ ಶಿಲಾಶಾಸನದಲ್ಲಿ ದಾಖಲಿಸಲಾಗಿದೆ. ಪಲ್ಲವರ ನಾಡಿನ ಯಾವ ದೇವಾಲಯಗಳೂ ರೇಖಾನಾಗರ ಶೈಲಿಯಲ್ಲಿ ಕಟ್ಟಲ್ಪಟ್ಟಿಲ್ಲ. ಹೀಗಿರುವಾಗ, ಪಲ್ಲವ ನಾಡಿನ ಸ್ಥಪತಿಗಳು ದ್ರಾವಿಡ ಶೈಲಿಯನ್ನು ಹೊರತುಪಡಿಸಿ ಬೇರಾವುದೇ ಶೈಲಿ (ರೇಖಾನಾಗರ)ಯಲ್ಲಿ ನಿಷ್ಣಾತರಾಗಿದ್ದರೆಂದು ಹೇಳುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ಆ ನಾಡಿನ ಸ್ಥಪತಿಯೊಬ್ಬನು ಇಲ್ಲಿಗೆ ಬಂದು ತನ್ನ ಶಿಷ್ಯರಿಗೆ ರೇಖಾನಾಗರ ಶೈಲಿಯನ್ನು ಕಲಿಸಿದನು ಎನ್ನುವುದು ನಂಬಲಸಾಧ್ಯ. ಸರ್ವಸಿದ್ಧಿ ಆಚಾರಿ ಪಲ್ಲವ ನಾಡಿನಿಂದ ಬಂದವನೆಂದು ಅರ್ಥೈಸುವದು ತಪ್ಪಾಗುತ್ತದೆ. ಅಲ್ಲದೆ ಐಹೊಳೆ, ಬಾದಾಮಿ, ಪಟ್ಟದಕಲ್ಲು ಮತ್ತು ಮಹಾಕೂಟದಲ್ಲಿ ರೇಖಾನಾಗರ, ದ್ರಾವಿಡ ಮತ್ತು ಕದಂಬನಾಗರ ಈ ಎಲ್ಲಾ ಶೈಲಿಗಳಲ್ಲಿ ನಿಷ್ಣಾತರಾದ ಸ್ಥಪತಿಗಳು ವಾಸವಾಗಿದ್ದರು ಎಂಬುದು ನಿರ್ವಿವಾದದ ಅಂಶ ವಾಗಿದೆ.

ಈ ಸಂದರ್ಭದಲ್ಲಿ ಈ ದ್ರಾವಿಡ ಶೈಲಿಯ ಉಗಮ ಎಲ್ಲಿ ಎಂಬುದನ್ನು ನಾವು ವಿಶ್ಲೇಷಿಸಬೇಕಾಗುತ್ತದೆ. ಮತ್ತು ಪ್ರಾಚೀನವಾಗಿ ದ್ರಾವಿಡ ಶೈಲಿಯ ಉಗಮ ಎಲ್ಲಿ ಎಂಬುದನ್ನು ನಾವು ವಿಶ್ಲೇಷಿಸ ಬೇಕಾಗುತ್ತದೆ. ಮತ್ತು ಪ್ರಾಚೀನವಾಗಿ ದ್ರಾವಿಡ ಶೈಲಿಯ ದೇವಾಲಯ ಎಲ್ಲಿ ಕಟ್ಟಲ್ಪಟ್ಟಿತು? ಅದು ಪಲ್ಲವ ನಾಡಿನಲ್ಲಿತ್ತೇ? ಅಥವಾ ಬಾದಾಮಿ ಚಲುಕ್ಯರ ರಾಜ್ಯದಲ್ಲಿತ್ತೇ?

ಈ ದ್ರಾವಿಡ ಶೈಲಿ ಪಲ್ಲವರ ನಾಡಿನಿಂದ ಚಲುಕ್ಯ ರಾಜ್ಯಕ್ಕೆ ಆಮದಾಯಿತೆ? ಹಾಗಿದ್ದರೆ ಈ ಪ್ರಭಾವ ಹೇಗೆ, ಎಂದು ಉಂಟಾಯಿತು? ಅಥವಾ ;

ಈ ದ್ರಾವಿಡ ಶೈಲಿ ಚಲುಕ್ಯರ ನಾಡಿನಲ್ಲಿಯೇ ಉಗಮ ಗೊಂಡಿತೆ? ಹಾಗಿದ್ದರೆ ಎಲ್ಲಿ, ಎಂದು ಆರಂಭಗೊಂಡಿತು? ಮತ್ತು ಇಲ್ಲಿಂದ ಪಲ್ಲವ ರಾಜ್ಯಕ್ಕೆ ಹೇಗೆ ಮತ್ತು ಯಾರ ಮೂಲಕ ಪ್ರಸಾರಗೊಂಡಿತು?

ಮೊದಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕಂಡುಕೊಳ್ಳಲು ಅನುಕೂಲವಾಗುವ ಆಧಾರಗಳನ್ನು ನೀಡಬಹುದಾದ ಯಾವುದೇ ಪ್ರಾಚೀನ ದೇವಾಲಯ ಅಥವಾ ಅವಶೇಷಗಳು ದೊರಕುತ್ತವೆಯೇ?

ಇಂಥ ಹಲವಾರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳ ಬೇಕಾಗುತ್ತದೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಬಹಳ ಕಷ್ಟಪಡ ಬೇಕಾಗಿಲ್ಲ. ಹಲವಾರು ವಾಸ್ತುವಾಂಶಗಳನ್ನು ನಾವು ಗಮನಿಸಿದರೆ ಸಾಕು.

ಪಲ್ಲವ ರಾಜ್ಯದಲ್ಲಿ ನಿರ್ಮಿತವಾದ ಮೊಟ್ಟಮೊದಲಿನ ದ್ರಾವಿಡ ಶೈಲಿಯ ದೇವಾಲಯಗಳೆಂದರೆ ಮಹಾಬಲಿಪುರದಲ್ಲಿರುವ

ಏಕಶಿಲಾರಥಗಳಾದ ಧರ್ಮರಾಜರಥ, ಭೀಮರಥ, ಅರ್ಜುನರಥ, ಸಹದೇವ ರಥ, ದ್ರೌಪದಿರಥ ಇತ್ಯಾದಿ. ಈ ರಥಗಳು ಪಲ್ಲವ ದೊರೆ ಮೊದಲನೆಯ ನರಸಿಂಹವರ್ಮನ ಕಾಲದಲ್ಲಿ ಅಂದರೆ ಕ್ರಿ. ಶ. ಏಳನೆಯ ಶತಮಾವದ ಮಧ್ಯಕಾಲದಲ್ಲಿ ಕೊರೆಯಲ್ಪಟ್ಟವು ಎನ್ನುವುದು ನಿರ್ವಿವಾದ. ದ್ರಾವಿಡ ಶೈಲಿಯಲ್ಲಿ ಮೊಟ್ಟ ಮೊದಲು ಪಲ್ಲವರಿಂದ ಕಟ್ಟಲ್ಪಟ್ಟ ದೇವಾಲಯ ಕೂಡ ಮಹಾಬಲಿಪುರದ ಕಡಲತೀರದ ದೇವಾಲಯ. ಇದು ಪಲ್ಲವ ಅರಸು ಇಮ್ಮಡಿ ನರಸಿಂಹವರ್ಮ ರಾಜಸಿಂಹ (ಕ್ರಿ.ಶ. ೭೦೦-೭೨೮)ನ ಕಾಲದಲ್ಲಿ ಕಟ್ಟಲ್ಪಟ್ಟಿದೆ. ಕಂಚಿಯ ಕೈಲಾಸನಾಥ ದೇವಾಲಯವನ್ನೂ ಕೂಡ ಇವನೇ ಕಟ್ಟಿಸಿದ್ದಾನೆ.

ಅಂದರೆ ಪಲ್ಲವ ರಾಜ್ಯದಲ್ಲಿ ದ್ರಾವಿಡ ಶೈಲಿಯಲ್ಲಿ ಕೊರೆಯಲ್ಪಟ್ಟ ಮೊಟ್ಟ ಮೊದಲಿನ ಏಕಶಿಲಾ ದೇಗುಲಗಳು ಏಳನೆಯ ಶತಮಾನಕ್ಕೆ ಸಂಬಂಧಿಸಿದ್ದರೆ, ಈ ಶೈಲಿಯಲ್ಲಿ ಕಟ್ಟಲ್ಪಟ್ಟ ಮೊಟ್ಟ ಮೊದಲಿನ ಕಟ್ಟಡ ಶೈಲಿಯ ದೇವಾಲಯವು ಎಂಟನೆಯ ಶತಮಾನದ ಆರಂಭಕಾಲಕ್ಕೆ ಸಂಬಂಧಿಸಿದೆ. ಮಂಡಗಪಟ್ಟುವಿನಲ್ಲಿರುವ ಕ್ರಿ. ಶ. ೭ನೆಯ ಶತಮಾನದ ಆರಂಭದಲ್ಲಿ ಮೊದಲನೆ ಮಹೇಂದ್ರವರ್ಮ ಕೊರೆಯಿಸಿದ್ದ ಗುಹಾದೇವಾಲಯವು ಪಲ್ಲವ ರಾಜ್ಯದಲ್ಲಿರುವ ಗುಹಾದೇಗುಲ ಗಳಲ್ಲಿ ಪ್ರಾಚೀನವಾದುದಾಗಿದೆ.

ಗುಹಾದೇಗುಲಗಳ ಮತ್ತು ಕಟ್ಟಡ ಶೈಲಿಯ ದೇವಾಲಯಗಳ ದೃಷ್ಟಿಯಿಂದ ಕ್ರಿ. ಶ. ೫೫೦ರ ನಂತರದಲ್ಲಿ ಬದಾಮಿ ಚಲುಕ್ಯರ ದಕ್ಷಿಣ ಭಾರತದಲ್ಲಿ ಪ್ರಭುತ್ವ ಸಾಧಿಸಿದ ಕಾಲ ಮುಖ್ಯವಾಗುತ್ತದೆ. ಕ್ರಿ. ಶ. ೫೩೦ರಿಂದ ೬೧೦ರ ಅವಧಿಗಾಗಲೇ ಬಾದಾಮಿ ಮತ್ತು ಐಹೊಳೆಗಳಲ್ಲಿ ಗುಹಾದೇಗುಲಗಳು ಕೊರೆಯಲ್ಪಟ್ಟಿದ್ದವು. ಪಲ್ಲವರು ಗುಹಾಲಯಗಳನ್ನು ಕೊರೆಯುವದನ್ನು ಆರಂಭಿಸುವ ಕಾಲಕ್ಕಾಗಲೇ ಚಲುಕ್ಯರು ಈ ಗುಹಾಲಯಗಳ ವಾಸ್ತುಶೈಲಿಯನ್ನು ಬಿಟ್ಟುಕೊಟ್ಟು ಕಟ್ಟಡ ದೇವಾಲಯಗಳ ವಾಸ್ತು ಶೈಲಿಯನ್ನು ರೂಢಿಯಲ್ಲಿ ತಂದಿದ್ದರು. ಕ್ರಿ. ಶ ೫೯೭ರಲ್ಲಿ ಮಂಗಳೇಶನು ಪಟ್ಟಕ್ಕೆ ಬರುವ ಪೂರ್ವದಲ್ಲಿಯೇ ಮಹಾಕೂಟದಲ್ಲಿರುವ ಬಾಣಂತಿ ಗುಡಿ ಮತ್ತು ಮಕುಟೇಶ್ವರ ದೇವಾಲಯಗಳನ್ನು ದ್ರಾವಿಡ ಶೈಲಿಯಲ್ಲಿ ಕಟ್ಟಿ ಮುಗಿಸಲಾಗಿತ್ತು. ಅಲ್ಲದೇ ಕ್ರಿ. ಶ. ೫೯೭ ರಿಂದ ೬೩೫ರ ಅವಧಿಯಲ್ಲಿ ದ್ರಾವಿಡ ಶೈಲಿಯಲ್ಲಿ ಇನ್ನೂ ಕೆಲವು ದೇವಾಲಯಗಳು ನಿರ್ಮಾಣ ಗೊಂಡಿದ್ದನ್ನು ಗಮನಿಸಬಹುದು. ಬಾದಾಮಿಯಲ್ಲಿರುವ ಮೇಗಣ ಮತ್ತು ಕೆಳಗಣ ಶಿವಾಲಯಗಳು ಹಾಗೂ ಐಹೊಳೆಯಲ್ಲಿ ರಾವಣಪಡಿಯ ಹತ್ತಿರದ ಸಣ್ಣ ದೇವಾಲಯ ಮತ್ತು ಕ್ರಿ. ಶ. ೬೩೫ ರಲ್ಲಿ ಕಟ್ಟಲ್ಪಟ್ಟ ಮೇಗುತಿ ದೇವಾಲಯುಗಳನ್ನು ಉದಾಹರಿಸಬಹುದು.

ಈ ಸಂದರ್ಭದಲ್ಲಿ ಕ್ರಿ. ಶ. ೬೪೨ ರಲ್ಲಿ ಪಲ್ಲವ ಅರಸು ಮೊದಲನೆ ನರಸಿಂಹವರ್ಮನು ಬಾದಾಮಿಯ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಿದ್ದು ಮತ್ತು ಅದರಿಂದಾದ ಪರಿಣಾಮವನ್ನು ನಾವು ಚರ್ಚಿಸಬೇಕಾಗುತ್ತದೆ. ಕ್ರಿ.ಶ. ೬೫೫ ರಲ್ಲಿ ಮೊದಲನೆಯ ವಿಕ್ರಮಾದಿತ್ಯನು ಚಾಲುಕ್ಯ ಪ್ರಭುತ್ವವನ್ನು ಪುನರ್ ಸ್ಥಾಪಿಸುವವರೆಗೆ ೧೩ ವರ್ಷಗಳ ಕಾಲ ಈ ನಾಡು ಪಲ್ಲವರ ಪ್ರಭಾವಕ್ಕೊಳಗಾಗಿತ್ತು. ಅದಕ್ಕೂ ಮೊದಲೇ ಮಹಾಕೂಟ, ಐಹೊಳೆ ಮತ್ತು ಬಾದಾಮಿಗಳಲ್ಲಿ ದ್ರಾವಿಡ ಶೈಲಿಯಲ್ಲಿ ಕಟ್ಟಲ್ಪಟ್ಟ ದೇವಾಲಯಗಳು ಅಸ್ತಿತ್ವದಲ್ಲಿದ್ದವು ಎನ್ನುವುದು ಮುಖ್ಯ.

ಚಲುಕ್ಯ ನಾಡಿನಲ್ಲಿ ಕ್ರಿ.ಶ. ೬೨೫ರ ಹೊತ್ತಿಗಾಗಲೇ ಅಸ್ತಿತ್ವದಲ್ಲಿದ್ದ ಈ ದ್ರಾವಿಡ ಶೈಲಿ ದೇವಾಲಯಗಳ ಕಾಲಾವಧಿಯನ್ನು ಮಹಾಬಲಿಪುರಂದಲ್ಲಿರುವ ಏಕಶಿಲಾರಥಗಳು ಮತ್ತು ಕಡಲತೀರದ ದೇವಾಲಯಗಳ ಕಾಲಾವಧಿ (ಏಳನೆಯ ಶತಮಾನದ ಮಧ್ಯಕಾಲ ಮತ್ತು ಎಂಟನೆಯ ಶತಮಾನದ ಆರಂಭಕಾಲ) ಯೊಂದಿಗೆ ತೂಗಿ ನೋಡಿದಾಗ ಸುಸ್ಪಷ್ಟವಾಗುವ ಅಂಶವೆಂದರೆ ಚಲುಕ್ಯ ನಾಡಿನ ಸ್ಥಪತಿಗಳು ದ್ರಾವಿಡ ಶೈಲಿಯಲ್ಲಿ ದೇವಾಲಯಗಳನ್ನು ಕಟ್ಟುವದನ್ನು ಪಲ್ಲವ ಸ್ಥಪತಿಗಳಿಗಿಂತಲೂ ಒಂದು ಶತಮಾನದಷ್ಟು ಮೊದಲೇ ಆರಂಭಿಸಿದ್ದರು ಎನ್ನುವುದು ಮತ್ತು ಚಲುಕ್ಯರ ನಾಡಿನ ವಾಸ್ತು ಶಾಸ್ತ್ರಜ್ಞರು ಮತ್ತು ಶಿಲ್ಪಿಗಳು ದ್ರಾವಿಡ ಮತ್ತು ರೇಖಾನಾಗರ ಶೈಲಿಗಳೆರಡರಲ್ಲಿಯೂ ನಿಷ್ಣಾತರಾಗಿದ್ದರು ಎನ್ನುವುದು. ಬಾದಾಮಿಯ ಎರಡನೆಯ ಗುಹಾದೇಗುಲದ ಗರ್ಭಗೃಹದ ದ್ವಾರದ ಮೇಲಿನ ಕವಾಟಪಟ್ಟಿಯಲ್ಲಿ ಶಾಲಾ ಮತ್ತು ರೇಖಾನಾಗರ ಶೈಲಿಯ ಶಿಖರಗಳ ಮಾದರಿಗಳನ್ನು ಕೆತ್ತಿರುವುದು; ಮೂರನೆಯ ಗುಹಾದೇಗುಲದ ಗರ್ಭಗೃಹದ ದ್ವಾರದ ಮೇಲಿನ ಕವಾಟ ಪಟ್ಟಿಯಲ್ಲಿ ಶಾಲಾ ಮತ್ತು ಕೂಟ ಶೈಲಿಯ ಶಿಖರಗಳ ಮಾದರಿಗಳನ್ನು ಕೊರೆಯಲಾಗಿರುವುದು ಹಾಗೂ ಐಹೊಳೆ ಯಲ್ಲಿರುವ ಬೌದ್ಧ ಚೈತ್ಯಾಲಯದ ಮೇಲಂತಸ್ತಿನ ಗರ್ಭಗುಡಿಯ ದ್ವಾರದ ಕವಾಟಿನ ಮೇಲೆ ಕೂಟ ಮತ್ತು ಶಾಲಾ ಶೈಲಿಯ ಇಡೀ ದೇವಾಲಯದ ಮಾದರಿಗಳನ್ನೇ ಕೆತ್ತಲಾಗಿರುವುದನ್ನು ಆಧಾರವಾಗಿ ಕೊಡಬಹುದು. ಇವೆಲ್ಲ ಕ್ರಿ.ಶ. ೫೭೮ರ ಕಾಲಾವಧಿಗಿಂತಲೂ ಮುಂಚೆಯೇ ಕಂಡರಿಸಲಾಗಿತ್ತು ಎನ್ನುವುದನ್ನು ನೆನಪಿಡಬೇಕು.

ಹೀಗೆ ದ್ರಾವಿಡ ಶೈಲಿಯ ಶಿಖರ ಮತ್ತು ದೇವಾಲಯಗಳ ಮಾದರಿಗಳನ್ನು ಮೊದಲು ಬರಿಯ ಅಲಂಕಾರಕ್ಕಾಗಿ ಕೊರೆದವರಲ್ಲಿ ಹಾಗೂ ನಂತರ ಪೂರ್ಣಪ್ರಮಾಣದ ದೇವಾಲಯಗಳನ್ನಾಗಿ ಕಟ್ಟಿದವರಲ್ಲಿ ಬಾದಾಮಿ ಚಲುಕ್ಯರೆ ಮೊದಲಿಗರು. ಬಾಣಂತಿ ಗುಡಿ, ಮಕುಟೇಶ್ವರ, ಮೇಗಣ ಮತ್ತು ಕೆಳಗಣ ಶಿವಾಲಯ ಮತ್ತು ಐಹೊಳೆಯ ಮೇಗತಿ ದೇವಾಲಯಗಳನ್ನು ಸಾಕ್ಷಿಯಾಗಿ ಕೊಡಬಹುದು.

ಕ್ರಿ. ಶ. ೬೪೨ರಲ್ಲಿ ಪಲ್ಲವ ಅರಸರು ಬದಾಮಿಯ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದ ಮೇಲೆ, ಚಲುಕ್ಯ ಸ್ಥಪತಿಗಳು ಇಲ್ಲಿ ಆರಂಭಿಸಿದ ದ್ರಾವಿಡ ಶೈಲಿಯಲ್ಲಿ ಕಟ್ಟಲಾದ ದೇವಾಲಯಗಳನ್ನು ನೋಡಿ ಮೆಚ್ಚಿಕೊಂಡು ನಂತರ ಮಹಾಬಲಿಪುರಂನ ಏಕಶಿಲಾ ರಥಗಳನ್ನು ಮತ್ತು ಕಡಲತೀರದ ದೇವಾಲಯವನ್ನು ನಿರ್ಮಿಸುವಾಗ ಈ ದ್ರಾವಿಡ ಶೈಲಿಯನ್ನು ತಮ್ಮ ನಾಡಿನಲ್ಲಿಯೂ ಬಳಸಿಕೊಂಡರು. ಅರ್ಥಾತ್ ದ್ರಾವಿಡ ಶಾಲಿಯ ವಾಸ್ತುಶಿಲ್ಪ ಪದ್ಧತಿಯು ಚಲುಕ್ಯರ ನಾಡಿನಲ್ಲಿ ಆರಂಭಗೊಂಡು ಇಲ್ಲಿಂದ ಪಲ್ಲವರ ನಾಡಿಗೆ ವಲಸೆ ಹೋಯಿತು ಎಂಬುದು ನಿರ್ವಿವಾದ.

ಈ ಸಂದರ್ಭದಲ್ಲಿ ಬಾದಾಮಿ ಚಲುಕ್ಯರ ಕಾಲದಲ್ಲಿ ಆರಂಭಗೊಂಡ ರೇಖಾನಾಗರ ಶೈಲಿಯ ದೇವಾಲಯಗಳನ್ನು ಪರಾಮರ್ಶಿಸಬೇಕು. ಈ ಶೈಲಿಯ ದೇವಾಲಯಗಳಲ್ಲಿ ಐಹೊಳೆಯಲ್ಲಿಯ ಹುಚ್ಚಿಮಲ್ಲಿ, ಹುಚ್ಚಪ್ಪಯ್ಯ ಮತ್ತು ತಾರಪ್ಪ ದೇವಾಲಯಗಳು; ಮಹಾಕೂಟದ ವಿಷ್ಣು ಪುಷ್ಕರಣಿಯ ಅಂಚಿನಲ್ಲಿರುವ ಚಿಕ್ಕ ದೇವಾಯಲಗಳು; ಪಟ್ಟದಕಲ್ಲಿನಲ್ಲಿರುವ ಗಳಗನಾಥ, ಕಾಶಿ ವಿಶ್ವೇಶ್ವರ ಮತ್ತು ಪಾಪನಾಥ ದೇವಾಲಯಗಳು, ಸಿದ್ದನಕೊಳ್ಳದಲ್ಲಿರುವ ದೇವಾಲಯ; ಆಲಂಪುರನಲ್ಲಿರುವ ವೀರಬ್ರಹ್ಮ, ಬಾಲಬ್ರಹ್ಮ, ಸ್ವರ್ಗಬ್ರಹ್ಮ ಮುಂತಾದ ದೇವಾಲಯ ಗಳನ್ನು ನೋಡಬಹುದುಯ. ಇವುಗಳಲ್ಲಿ ಮೊಟ್ಟ ಮೊದಲನೆಯ ರೇಖಾನಾಗರ ಶೈಲಿಯ ದೇವಾಲಯ ಯಾವುದು ಎನ್ನುವದರ ಬಗ್ಗೆ ಭಿನ್ನಾಭಿಪ್ರಾಯಗಳುಂಟು. ಆದರೆ ಕ್ರಿ.ಶ. ೭ನೇ ಶತಮಾನದ ಆರಂಭದ ವರ್ಷಗಳ ಅವಧಿಯ ಹುಚ್ಚಿಮಲ್ಲಿ ದೇವಸ್ಥಾನವೇ ಅತಿ ಪೂರ್ವದ ಉದಾಹರಣೆ ಎನ್ನಲು ಸಾಕಷ್ಟು ಸಾಕ್ಷಾಧಾರಗಳಿವೆ.

ಇಲ್ಲಿಯವರೆಗೂ ಈ ರೇಖಾನಾಗರ ಶೈಲಿಯನ್ನು ಚಲುಕ್ಯ ನಾಡಿನ ಸ್ಥಪತಿಗಳು ಸ್ವೀಕಾರ ಮಾಡಿರುವುದಕ್ಕೆ ಯಾವ ಪ್ರಭಾವ ಕಾರಣವಾಯಿತು ಎಂಬ ಬಗ್ಗೆ ಅಷ್ಟೊಂದು ಸಂಶೋಧನೆ ನಡೆದಿಲ್ಲ. ಬಹುಶಃ ಓಸಿಯಾದಲ್ಲಿರುವ ದೇವಾಲಯಗಳ ಪ್ರಭಾವದಿಂದ ಈ ವಾಸ್ತುಶೈಲಿ ಇಲ್ಲಿ ರೂಢಿಯಲ್ಲಿ ಬಂದಿರಬೇಕು ಎಂಬ ಅಭಿಪ್ರಾಯವೊಂದಿದೆ. ಈ ವಿಷಯದಲ್ಲಿ ಆಳವಾದ ಸಂಶೋಧನೆ ಮತ್ತು ವಿಶ್ಲೇಷಣಾತ್ಮಕ ಅಧ್ಯಯನದ ಅಗತ್ಯವಿದೆ. ಓರಿಸ್ಸಾ ಪ್ರಾಂತದಲ್ಲಿ ರೇಖಾನಾಗರ ಶೈಲಿಯಲ್ಲಿ ಕಟ್ಟಿದ ಕ್ರಿ.ಶ. ೭೫೦ರ ಪರಶುರಾಮೇಶ್ವರ ದೇವಸ್ಥಾನವೇ ಮೊದಲನೆಯದಾಗಿದೆ. ಆದ್ದರಿಂದ ವಿಶೇಷವಾಗಿ ಆಲಂಪುರದಲ್ಲಿ ಬಾದಾಮಿ ಚಲುಕ್ಯರ ಕಾಲದ ಸ್ಥಪತಿಗಳು ಕಟ್ಟಿದ ರೇಖಾನಾಗರ ಶೈಲಿಯ ದೇವಾಲಯ ಗಳು ಓರಿಸ್ಸಾ ಪ್ರಾಂತದ ಕಳಿಂಗ ವಾಸ್ತುಶಿಲ್ಪದ ಮೇಲೆ ಬೀರಿದ ಪ್ರಭಾವದ ಬಗ್ಗೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂದು ನನ್ನ ಅನಿಸಿಕೆ.

ಬಾದಾಮಿ ಚಲುಕ್ಯರ ವಾಸ್ತುಶಿಲ್ಪದ ಅಧ್ಯಯನ ಸಂದರ್ಭ ದಲ್ಲಿ ಈ ಕೆಳಗಿನ ಕೆಲವು ಅಂಶಗಳ ಕೂಲಂಕಷ ವಿಶ್ಲೇಷಣೆ ಅವಶ್ಯವೆನಿಸುತ್ತದೆ.

೧. ಮೂರನೆಯ ಗುಹಾದೇಗುಲದಲ್ಲಿರುವ ಗೋಡೆಗಳ ಮೇಲಿರುವ ಉಬ್ಬುಶಿಲ್ಪಗಳಲ್ಲಿ ಕೆಲವಾದರೂ ಪಲ್ಲವ ಪ್ರಭುತ್ವ ಕಾಲದಲ್ಲಿ ಪಲ್ಲವ ನಾಡಿನ ಶಿಲ್ಪಿಗಳಿಂದ ಕಂಡರಿಸಲ್ಪಟ್ಟಿವೆಯೆ?

೨. ಕೆಲ ಇತಿಹಾಸಜ್ಞರು ಸೂಚಿಸುವಂತೆ ನೆತ್ತಿಯ ಮೇಲೆ ಕಮಲದ ಹೂ ಹೊತ್ತಿರುವ ನರಸಿಂಹನ ಉಬ್ಬುಶಿಲ್ಪವು ಸೂಚ್ಯವಾಗಿ ಚಲುಕ್ಯ ಅರಸ ಮೊದಲನೆ ಕೀರ್ತಿವರ್ಮನನ್ನು ಪ್ರತಿನಿಧಿಸುತ್ತಿದೆಯೇ?

೩. ಬಾದಾಮಿ ಚಲುಕ್ಯ ಮತ್ತು ಪಲ್ಲವರ ವಾಸ್ತುಶಿಲ್ಪ ಪರಂಪರೆಗಳು ಪರಸ್ಪರವಾಗಿ ಬೀರಿರುವ ಪ್ರಭಾವ ಎಂಥದು?

೪. ಗೋವಾ ಪ್ರಾಂತದಲ್ಲಿ ಕಂಡು ಬಂದಿರುವ ಕದಂಬರ ಕಾಲದ ಗುಹಾಲಯಗಳ ವಾಸ್ತುಶಿಲ್ಪವು ಬಾದಾಮಿ ಚಲುಕ್ಯರ ಗುಹಾಲಯಗಳ ಕಂಡರಿಕೆಯಲ್ಲಿ ಪ್ರಭಾವ ಬೀರಿದೆಯೇ?

ಸ್ಥೂಲವಾಗಿ ಪರಿಶೀಲಿಸಿದಾಗ-ಮೂರನೆಯ ಗುಹಾಲಯ ದಲ್ಲಿಯ ಯಾವ ಕೆತ್ತನೆಯೂ ಪಲ್ಲವ ಶಿಲ್ಪಿಗಳಿಂದ ಕೆತ್ತಲ್ಪಟ್ಟಿಲ್ಲ. ತಲೆಯ ಮೇಲೆ ಕಮಲವನ್ನು ಹೊತ್ತಿರುವ ನರಸಿಂಹ ಆಕೃತಿಯು ಈ ಮೊದಲು ಗೊತ್ತಿದ್ದುದೇ ಆಗಿದ್ದು ಹೊಸದೇನಲ್ಲ; ಹಾಗೂ ಇದು ಕೀರ್ತಿವರ್ಮನನ್ನು ಸಾಂಕೇತಿಕವಾಗಿ ಪ್ರತಿನಿಧಿಸುವುದಿಲ್ಲ. ಯಾಕೆಂದರೆ ಮೊದಲನೆಯ ಗುಹಾಲಯದಲ್ಲಿಯೇ ಒಂದು ಕಂಬದ ಮೇಲೆ ಇಂಥ ಕಮಲವನ್ನು ಹೊತ್ತ ನರಸಿಂಹನನ್ನು ಕೆತ್ತಲಾಗಿದೆ. ಗೋವಾ ಪ್ರಾಂತದಲ್ಲಿ ನೋರ್ವಾ ಎಂಬಲ್ಲಿರುವ ಗುಹಾದೇಗುಲದ ಗರ್ಭಗುಡಿಯಲ್ಲಿರುವ ಶಿವಲಿಂಗವು ಕತ್ತಿನ ಸುತ್ತ ತುಂಬುಗೂದಲು ಇರುವ ಸಿಂಹದ ಆಕಾರವನ್ನು ಹೊಂದಿದ್ದು, ತಲೆಯ ಮೇಲೆ ಕಮಲದ ಹೂವಿದೆ. ಕದಂಬರ ಕಾಲದ ಈ ಶಿಲ್ಪವನ್ನು ಬಾದಾಮಿಯ ಗುಹಾಲಯಗಳಲ್ಲಿ ಕಾಣುವ ನರಸಿಂಹ ಶಿಲ್ಪವನ್ನು ಕೆತ್ತುವಲ್ಲಿ ತನ್ನ ಪ್ರಭಾವ ಬೀರಿರಬೇಕು. ನೋರ್ವಾ ಮತ್ತು ಅರವೇಲಂಗಳಲ್ಲಿಯ ಹಿಂದೂ ಗುಹಾದೇಗುಲಗಳು ಬಾದಾಮಿಯ ಗುಹಾದೇಗುಲಗಳಿಗಿಂತ ಒಂದು ಶತಮಾನ ಹಿಂದಿನವೆಂಬುದನ್ನು ಮರೆಯಲಾಗದು.

ರ್‍ಯಾಡ್‌ಕ್ಲಿಫ್‌ಳು ಈ ನರಸಿಂಹ ಶಿಲ್ಪಗಳ ಬಗ್ಗೆ ಬರೆಯುವಾಗ ಇವು ಯಾವುವೂ ಪಲ್ಲವ ಶಿಲ್ಪಿಗಳಿಂದ ಕೆತ್ತಲ್ಪಟ್ಟವು ಅಲ್ಲ ಎಂದು ತಿಳಿಸುತ್ತಾಳೆ. ಅದಕ್ಕೆ ಅವಳು ಎರಡು ರೀತಿಯ ವಿವರಣೆ ಕೊಡುತ್ತಾಳೆ.

೧. ಬದಾಮಿ ಚಲುಕ್ಯರನ್ನು ಸೋಲಿಸಿ ಪಲ್ಲವರು ಅವರ ಸಾಮ್ರಾಜ್ಯವನ್ನು ಆಕ್ರಮಿಸಿದ್ದರೂ ಅವರು ಬಾದಾಮಿಯಲ್ಲಿ

ವಾಸ್ತುವ್ಯ ಮಾಡಲಿಲ್ಲ. ಹೀಗಾಗಿ ಪಲ್ಲವ ಶಿಲ್ಪಿಗಳು ಇಲ್ಲಿ ಕೆತ್ತನೆಯ ಕಾರ್ಯ ಕೈಕೊಳ್ಳುವ ಪ್ರಮೇಯ ಒದಗಿ ಬರಲಿಲ್ಲ.

೨. ಒಂದು ವೇಳೆ ಪಲ್ಲವ ಶಿಲ್ಪಿಗಳು ಕೆತ್ತನೆಯನ್ನು ಕೈ ಕೊಂಡಿದ್ದರೆ, ಚಲುಕ್ಯರು ತಮ್ಮ ಆಧಿಪತ್ಯವನ್ನು ಪುನಃ ಸ್ಥಾಪಿಸಿದ ಮೇಲೆ ಅಂಥ ಪಲ್ಲವ ಸೃಷ್ಟಿಯನ್ನು ನಾಶಮಾಡುತ್ತಿದ್ದರು. ಯಾಕೆಂದರೆ ಆ ಕೆತ್ತನೆಯು ಪಲ್ಲವ ಅರಸು ಮೊದಲನೆ ನರಸಿಂಹ ವರ್ಮನ ಕೈಯಲ್ಲಿ ಚಲುಕ್ಯರು ಸೋತುಹೋದ ಅವಮಾನವನ್ನು ಮತ್ತೆ ಮತ್ತೆ ನೆನಪಿಸುವಂತಾಗುತ್ತಿತ್ತು.

ಆದರೆ ಈ ವಿವರಣೆಯನ್ನು ಒಪ್ಪುವುದು ಅಸಾಧ್ಯ. ಯಾಕೆಂದರೆ ಬಾದಾಮಿಯಲ್ಲಿ ಪಲ್ಲವರು ಆಳಿದ್ದನ್ನು ಮತ್ತು ಮೊದಲನೆಯ ನರಸಿಂಹವರ್ಮನನ್ನು ವಾತಾಪಿಗೊಂಡ ಎಂದು ವರ್ಣಿಸುವ ಶಾಸನವೊಂದು ಬಾದಾಮಿಯಲ್ಲಿ ದೊರೆಯುತ್ತದೆ. ಚಲುಕ್ಯರು ತಮ್ಮ ರಾಜ್ಯವನ್ನು ತಿರುಗಿ ಪಡೆದುಕೊಂಡ ಮೇಲೆ ಈ ಶಿಲಾಶಾಸನವನ್ನು ನಾಶ ಮಾಡಬಹುದಿತ್ತು. ಅದೇ ರೀತಿ ಕಂಚಿಯ ಕೈಲಾಸನಾಥ ದೇವಾಲಯದಲ್ಲಿ ಇರುವ ಚಲುಕ್ಯ ಅರಸು ಇಮ್ಮಡಿ ವಿಕ್ರಮಾದಿತ್ಯನ ಶಿಲಾಶಾಸನವನ್ನು ಪಲ್ಲವ ಅರಸರೂ ನಾಶಪಡಿಸಲಿಲ್ಲ. ಇದರಿಂದ ಈ ಎರಡು ರಾಜಮನೆತನಗಳವರು ಈ ಘಟನೆಗಳನ್ನು ಅವಮಾನಕರವೆಂದು ತಿಳಿಯದೇ ಐತಿಹಾಸಿಕ ವಾಸ್ತವಗಳೆಂದು ಪರಿಗಣಿಸಿ ಗೌರವಿಸಿದರು ಎನ್ನುವದು ತಿಳಿದು ಬರುತ್ತದೆ.

೩. ಬಾದಾಮಿ ಚಲುಕ್ಯ ಮತ್ತು ಪಲ್ಲವ ವಾಸ್ತುಶಿಲ್ಪಗಳ ಪರಸ್ಪರ ಪ್ರಭಾವ, ಪರಿಣಾಮ ಮತ್ತು ಕೊಡುಕೊಳ್ಳುವಿಕೆ

ಬಾದಾಮಿ ಚಲುಕ್ಯ ಮತ್ತು ಪಲ್ಲವರು ಕೂಡಿಯೇ ದೇಗುಲಗಳ ಒಟ್ಟು ವಾಸ್ತು ಮತ್ತು ಶಿಲ್ಪಕಲೆಯ ಬೆಳವಣಿಗೆ ಮತ್ತು ಲಾಕ್ಷಣಿಕ ಪ್ರಮಾಣೀಕರಣಕ್ಕೆ ಬಹುದೊಡ್ಡ ಕಾಣಿಕೆ ನೀಡಿದ್ದಾರೆ. ತಮ್ಮ ತಮ್ಮ ರಾಜ್ಯದ ಸೀಮೆಗಳಲ್ಲಿ ಗುಹಾಲಯಗಳನ್ನು ಕಂಡರಿಸುವ ಮತ್ತು ದೇವಾಲಯಗಳನ್ನು ಕಟ್ಟುವ ಕಾರ್ಯಕ್ಕೆ ಸಕ್ರಿಯ ಪ್ರೋತ್ಸಾಹ ನೀಡಿದ್ದಾರೆ. ಎರಡೂ ರಾಜ್ಯಗಳ ಮಧ್ಯೆ ಪ್ರಭುತ್ವಕ್ಕಾಗಿ ಘರ್ಷಣೆ ಮತ್ತು ಯುದ್ಧಗಳು ಮತ್ತೆ ಮತ್ತೆ ನಡೆಯುವುದು ಸಾಮಾನ್ಯವಾಗಿದ್ದರೂ, ಅದು ಎರಡೂ ಜನಪದಗಳ ಮಧ್ಯೆ ಸಂಪರ್ಕ ಸೇತುವೆಯೂ ಆಗಿ ಬೆಳೆಯಿತೆನ್ನುವುದು ನಿರ್ವಿವಾದ. ಹೀಗಾಗಿ ಎರಡೂ ಜನಪದಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಕಟ್ಟುವ ದೇವಾಲಯಗಳ ವಾಸ್ತುಶಿಲ್ಪ ಶೈಲಿಯ ಮೇಲೆ ಪರಸ್ಪರ ಪ್ರಭಾವ ಬೀರಿರುವುದನ್ನು ಗುರುತಿಸ ಬಹುದು.

೧. ಬಾದಾಮಿಯ ಪ್ರದೇಶದ ಮೇಲೆ ಪಲ್ಲವರು ಪ್ರಭುತ್ವ ಸಾಧಿಸಿದ ಪರಿಣಾಮವಾಗಿ ಮಹಾಬಲಿಪುರಂನಲ್ಲಿ ದ್ರಾವಿಡ ಶೈಲಿಯ ಗುಹಾಲಯಗಳು ಮತ್ತು ದೇವಾಲಯಗಳು ನಿರ್ಮಾಣಗೊಂಡವು. ಮತ್ತು ಪಲ್ಲವ ನಾಡಿನ ಇತರೆಡೆಯೂ ಅದು ವಿಜೃಂಭಿಸಿ ಪ್ರಭಾವಕ್ಕೆ ಪ್ರಮಾಣ ವನ್ನೊದಗಿಸುತ್ತದೆ.

೨. ಬಾದಾಮಿಯ ಜೈನ ಗುಹಾಲಯದ ಮುಖಭಾಗದ ಕಂಬಗಳು ಸಿಂಹದ ಬೆನ್ನಮೇಲೆ ಆಧರಿತವಾಗಿವೆ. ಪಲ್ಲವ ಅರಸು ಮೊದಲನೆಯ ನರಸಿಂಹವರ್ಮ ಮತ್ತು ಆತನ ನಂತರದ ಅರಸರು ಇವುಗಳಿಂದ ಪ್ರಭಾವಿತಗೊಂಡು ಪಲ್ಲವ ನಾಡಿನ ನಂತರದ ಎಲ್ಲಾ ದೇವಾಲಯಗಳಲ್ಲಿ ಇದೇ ಮಾದರಿಯ ಕಂಬಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಮೊದಲನೆ ನರಸಿಂಹವರ್ಮನ ಕಾಲದ ಮಹಾಬಲಿಪುರಂನ ವರಾಹಮಂಟಪ, ಪುಲಿಪುಡಾರ ಮಂಟಪಗಳಲ್ಲಿನ ಕಂಬಗಳನ್ನು ಉದಾಹರಿಸಬಹುದು. ಅನಂತರ ಕಟ್ಟಲ್ಪಟ್ಟ ದೇವಾಲಯಗಳಲ್ಲಿಯೂ ಈ ಪದ್ಧತಿ ಮುಂದುವರಿದಿರು ವದನ್ನು ಕಂಚಿಯಲ್ಲಿರುವ ಕೈಲಾಸನಾಥ ದೇವಸ್ಥಾನ ಮೊದಲಾದವುಗಳಲ್ಲಿ ಕಾಣಬಹುದು.

೩. ಮೊದಲನೆಯ ಮಹೇಂದ್ರವರ್ಮನ ಕಾಲದಲ್ಲಿ ಕೆತ್ತಲ್ಪಟ್ಟ ಮಹಾಬಲಿಪುರಂನ ಗುಹಾಲಯಗಳು ಮತ್ತು ಲಲಿತಾಂಕುರ, ಸಾಲುವನಕುಪ್ಪಂ, ಅತಿರಣಚುಡ ಗುಹಾಲಯಗಳಲ್ಲಿ ಕಾಣುವ ತರಂಗ ಬೋದಿಗೆಗಳು ಸಹ ಚಲುಕ್ಯ ನಾಡಿನ ವಾಸ್ತುಶಿಲ್ಪದ ಪ್ರಭಾವದಿಂದಲೇ ಮೂಡಿ ಬಂದವುಗಳಾಗಿವೆ.

೪. ಪಲ್ಲವ ನಾಡಿನಲ್ಲಿ ಕೊರೆಯಲ್ಪಟ್ಟ ಗುಹಾಲಯಗಳ ಕಂಬಗಳ ಮೇಲೆ ಕಾಣುವ (ಮಕರ, ಕುದುರೆ, ಕಮಲ, ಪಕ್ಷಿಮಾನವ ಮತ್ತು ಬಳ್ಳಿಗಳಿಂದ ಒಡಗೂಡಿದ) ಪದಕಾಲಂಕಾರಗಳು ಸಹ ಚಲುಕ್ಯ ನಾಡಿನ ವಾಸ್ತುಶಿಲ್ಪದ ಕೊಡುಗೆಗಳಾಗಿವೆ.

೫. ಪಲ್ಲವ ನಾಡಿನ ದೇವಾಲಯಗಳಲ್ಲಿ ಕಂಡುಬರುವ ತ್ರಿವಿಕ್ರಮ, ಗಣೇಶ ಮತ್ತು ಗಜಲಕ್ಷ್ಮಿ ಉಬ್ಬುಶಿಲ್ಪಗಳು ಸಹ ಚಲುಕ್ಯ ಶೈಲಿಯ ಕೊಡುಗೆಗಳು. ಯಾಕೆಂದರೆ ಈ ಪಲ್ಲವ ದೇವಾಲಯಗಳೆಲ್ಲವೂ ಕ್ರಿ.ಶ. ೬೪೨ ರ ನಂತರ ಕಟ್ಟಲ್ಪಟ್ಟಿವೆ. ಇವೆಲ್ಲಾ ಶಿಲ್ಪಗಳು ಬಾದಾಮಿಯ ಗುಹಾಲಯಗಳಲ್ಲಿ ಕಾಣಸಿಗುತ್ತವೆ.

ಇದೇ ರೀತಿ ಚಲುಕ್ಯ ನಾಡಿನ ದೇವಸ್ಥಾನಗಳ ಶಿಲ್ಪಗಳ ಮೇಲೆ ಪಲ್ಲವ ಶೈಲಿಯ ಪ್ರಭಾವವೂ ಸಾಕಷ್ಟಾಗಿರುವದನ್ನು ಈ ಕೆಳಗಿನವುಗಳಲ್ಲಿ ಗುರುತಿಸಬಹುದು.

೧. ದೇವಾಲಯಗಳಲ್ಲಿ ಪರಿವಾರ ದೇವತೆಗಳಿಗೂ ಪೂಜಾಸ್ಥಾನ ಕಲ್ಪಿಸಿದ್ದು.

೨. ಪಟ್ಟದಕಲ್ಲಿನಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿರುವ ಮಹಿಷಾಸುರನೊಂದಿಗೆ ಕಾದಾಡುತ್ತಿರುವ ಮಹಿಷ

ಮರ್ದಿನಿ ಶಿಲ್ಪ (ಇದು ಬಹಳಷ್ಟು ಮಟ್ಟಿಗೆ ಪಲ್ಲವ ಶೈಲಿ ಯಿಂದ ಪ್ರಭಾವಿತವಾಗಿದೆ.)

೩. ಪಟ್ಟದಕಲ್ಲಿನಲ್ಲಿನ ವಿರೂಪಾಕ್ಷ ದೇವಸ್ಥಾನದಲ್ಲಿ ಭಕ್ತನೊಬ್ಬನು ತನ್ನ ತಲೆಯನ್ನೇ ದುರ್ಗದೇವಿಗೆ ಅರ್ಪಿಸುತ್ತಿರುವ ಶಿಲ್ಪ.

೪. ಪಟ್ಟದ ಕಲ್ಲಿನಲ್ಲಿರುವ ಕಾಶಿವಿಶ್ವೇಶ್ವರ ದೇವಾಲಯದಲ್ಲಿರುವ ಸೋಮಸ್ಕಂದನ ಶಿಲ್ಪ ಅಲ್ಲದೇ

೫. ಪಟ್ಟದಕಲ್ಲಿನ ಹಲವಾರು ದೇವಸ್ಥಾನಗಳಲ್ಲಿ ಕಂಡುಬರುವ ಕೋರೆಹಲ್ಲುಗಳನ್ನು ಹೊಂದಿ ಹೆದರಿಕೆಯನ್ನುಂಟು ಮಾಡುವ ಮುಖಭಾವ ಹೊಂದಿರುವ ಬೃಹದಾಕಾರದ ದ್ವಾರ ಪಾಲಕರು.

ಬಾದಾಮಿ ಚಲುಕ್ಯರ ಲನೆಯ ಶತಮಾನದಲ್ಲಿ ಕಂಡರಿಸಿದ ದ್ವಾರಪಾಲ ಮೂರ್ತಿಗಳ ಭಂಗಿಯಲ್ಲಿಯೂ, ಮುಖಭಾವದಲ್ಲಿ ಯೂ, ಪಲ್ಲವರ ದ್ವಾರಪಾಲ ಮೂರ್ತಿಗಳ ಪ್ರಭಾವವನ್ನು ಅಲ್ಲಗಳೆಯಲಾಗುವುದಿಲ್ಲ. ಪಟ್ಟದಕಲ್ಲಿನ ವಿರೂಪಾಕ್ಷ, ಪಾಪನಾಥ ಮುಂತಾದ ದೇವಾಲಯಗಳ ದ್ವಾರಪಾಲಕರು ಕೋರೆಹಲ್ಲು ಗಳುಳ್ಳವರು ಹಾಗೂ ಬಹಳ ಭಾರವಾದ ಗದೆಯನ್ನು ಕಾಲುಗಳ ನಡುವೆ ಇಲ್ಲವೇ ಅಡ್ಡಗಾಲಿಟ್ಟುಕೊಂಡು ಗದೆಯನ್ನು ಮುಂದಿರಿಸಿ ಕೊಂಡಿದ್ದಾರೆ. ಇಂತಹ ದ್ವಾರಪಾಲ ಶಿಲ್ಪಗಳು ಪಲ್ಲವ ದೇವಾಲ ಯಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುತ್ತದೆ. ಹೀಗೆ ಕೋರೆ ಹಲ್ಲುಗಳೂ, ವ್ಯಗ್ರವಾದ ದೃಷ್ಟಿಯೂ ಇರುವ ದ್ವಾರಪಾಲರ ಶಿಲ್ಪಗಳು ಬಾದಾಮಿ ಚಲುಕ್ಯರ ನಂತರವೂ, ವಿಜಯನಗರದ ಕಾಲದ ಕೊನೆಯವರೆಗೂ ಮುಂದುವರೆದವು.

ಆದರೆ ಮಹಿಷನೊಂದಿಗೆ ಹೋರಾಡುತ್ತಿರುವ ಮಹಿಷ ಮರ್ದಿನಿಯ ಶಿಲ್ಪ ಹಾಗೂ ದೇವಿಗೆ ತಲೆಯನ್ನೇ ಕಾಣಿಕೆಯಾಗಿ ಅರ್ಪಿಸುತ್ತಿರುವ ಶಿಲ್ಪಗಳು ಚಲುಕ್ಯರ ಇಲ್ಲವೇ ಅನಂತರ ಕಾಲದ ದೇವಾಲಯಗಳಲ್ಲಿ ಕಾಣಸಿಗುವುದಿಲ್ಲ. ಹೀಗಾಗಿ ಈ ಎರಡೂ ಪಲ್ಲವ ಪ್ರಭಾವಿತ ಶಿಲ್ಪಗಳು ಬಿಡಿಘಟನೆಯ ಉದಾಹರಣೆಯೆಂದೇ ಪರಿಗಣಿಸಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಆಳವಾದ ಅಧ್ಯಯನದ ಅವಶ್ಯಕತೆ ಇದೆ ಎಂದು ಸೂಚಿಸಬಯಸುತ್ತೇನೆ.

೪. ಐಹೊಳೆಯ ವಣಿಕ್ ಸಂಘ (ಅಯ್ಯಾವೊಳೆ ಐನೂರ್ವರು)

ಈ ಸಂದರ್ಭದಲ್ಲಿ ನಾನು ಇನ್ನೂ ಒಂದು ಮಹತ್ವದ ವಿಷಯವನ್ನು ಪ್ರಸ್ತಾಪಿಸಬಯಸುತ್ತೇನೆ. ಅದೆಂದರೆ ಐಹೊಳೆಯ ವಣಿಕ್ ಸಂಘವನ್ನು ಕುರಿತದ್ದು. ಹಲವಾರು ಶಾಸನಗಳಲ್ಲಿ ಈ ವಣಿಕ್ ಸಂಘವು ಐಹೊಳೆಯಲ್ಲಿಯೇ ನೆಲೆಯೂರಿ ವ್ಯಾಪಾರ ವೃತ್ತಿಯಲ್ಲಿ ಸುಸಂಘಟಿತವಾಗಿ ತೊಡಗಿಕೊಂಡಿತ್ತು ಎಂದು ದಾಖಲಾಗಿರುತ್ತದೆ. ಆದ್ದರಿಂದ ಐವತ್ತಕ್ಕೂ ಮಿಕ್ಕಿ ಬಾದಾಮಿ ಚಲುಕ್ಯರ ಕಾಲದ ದೇವಸ್ಥಾನಗಳನ್ನು ಹೊಂದಿದ್ದ ಐಹೊಳೆಯಲ್ಲಿ ಈ ದೇವಸ್ಥಾನಗಳನ್ನು ಕಟ್ಟಿಸುವ ಕಾರ್ಯದಲ್ಲಿ ಈ ವಣಿಕ್ ಸಂಘವೂ ಸಕ್ರಿಯವಾಗಿ ತೊಡಗಿಸಿಕೊಂಡಿರಲೇಬೇಕು. ಹಾಗಿದ್ದ ಪಕ್ಷದಲ್ಲಿ ಈ ವಣಿಕ್‌ಸಂಘದ ಮುಖ್ಯ ಕಛೇರಿಯಾಗಿದ್ದ ಕಟ್ಟಡವು ಯಾವುದಿರಬಹುದು? ಈ ಕುತೂಹಲದ ಪ್ರಶ್ನೆಗೆ ತೃಪ್ತಿಕರವಾದ ಉತ್ತರವೆಂದರೆ ಲಾಡಖಾನ ದೇವಾಲಯ. ಪರ್ಸಿ ಬ್ರೌನ್‌ನ ದೃಷ್ಟಿಯಲ್ಲಿ ಈ ದೇವಾಲಯವು ಯಾವುದೇ ಧಾರ್ಮಿಕ ವಿಧಿ-ವಿಧಾನಗಳನ್ನೂ ನಡೆಸಲು ಅನುಕೂಲಕರವಾಗಿರಲಿಲ್ಲ. ಪೂಜೆ, ಪುನಸ್ಕಾರ ಇತ್ಯಾದಿಗಳಿಗಾಗಿಯೇ ಈ ದೇವಾಲಯವನ್ನು ಕಟ್ಟಲಾಗಿದ್ದರೂ ಆ ಆಶಯಕ್ಕೆ ಇದು ಯಾವ ರೀತಿಯಿಂದಲೂ ಯೋಗ್ಯವಾಗಿದ್ದಿಲ್ಲ ಎಂದು ಹೇಳುತ್ತಾ ಈ ಕಟ್ಟಡ ಸಾರ್ವಜನಿಕ ಸಭಾಗೃಹವನ್ನು ಹೋಲುತ್ತದೆ ಎಂದಿದ್ದಾನೆ.

ಈ ದೃಷ್ಟಿಯಿಂದ ಲಾಡಖಾನ ದೇವಾಲಯದ ಕಟ್ಟಡವನ್ನು ಪರೀಕ್ಷಿಸಿದರೆ ಅದು ೧೫x೧೫ ಚದುರ ಮೀಟರ್ ಅಳತೆಯ ದೊಡ್ಡ ಸಭಾಗೃಹವಾಗಿದ್ದು ಸುತ್ತಲಿನ ಗೋಡೆಗಳಲ್ಲಿ ದೊಡ್ಡ ಜಾಲಂದ್ರಗಳಿವೆ ಮತ್ತು ಒಟ್ಟು ಹದಿನಾರು ಕಂಬಗಳ ಮೇಲೆ ಅದರ ಮಾಳಿಗೆ ನಿಂತಿದೆ. ಹಿಂದಿನ ಗೋಡೆಗೆ ತಾಗಿದಂತೆ ಗರ್ಭಗೃಹವನ್ನು ಕಟ್ಟಲಾಗಿದ್ದು ಇದು ಮತ್ತು ಮಾಳಿಗೆಯ ಮೇಲಿರುವ ಇನ್ನೊಂದು ಗರ್ಭಗೃಹಗಳು ನಂತರದಲ್ಲಿ ಕಟ್ಟಲ್ಪಟ್ಟಿವೆ.



(ಅ) ಯಾಕೆಂದರೆ ಈ ಗರ್ಭಗೃಹದ ಗೋಡೆಗಳು ಸಭಾಗೃಹದ ಹಿಂದಿನ ಗೋಡೆಯೊಂದಿಗೆ ಅಖಂಡವಾಗಿಲ್ಲ.

(ಬ) ಅವು ಈ ಹಿಂಗೋಡೆಯ ಅರ್ಧಕಂಭಗಳನ್ನು ಮರೆ ಮಾಡುತ್ತವೆ. ಗರ್ಭಗೃಹವನ್ನು ಕಟ್ಟುವ ಆಶಯ ಮೊದಲೇ ಇದ್ದರೆ ಈ ಹಿಂಗೋಡೆಯಲ್ಲಿ ಅರ್ಧಕಂಬಗಳನ್ನು ನಿರ್ಮಿಸುತ್ತಲೇ ಇರಲಿಲ್ಲ.

(ಕ) ಇದೂ ಅಲ್ಲದೆ ಗರ್ಭಗೃಹದ ದ್ವಾರದಲ್ಲಿರುವ ಮೂರ್ತಿಗಳ ಕೆತ್ತನೆ ಮುಖಮಂಟಪದ ಕಂಭಗಳ ಮೇಲೆ ಕಂಡರಿಸಿರುವ ಮೂರ್ತಿಗಳಿಗಿಂತ ಸಂಪೂರ್ಣ ಭಿನ್ನ ಶೈಲಿಯಲ್ಲಿವೆ.

ಲಾಡ್‌ಖಾನ ದೇವಾಲಯವು ಮೊದಲು ಈ ವಣಿಕ್ ಸಂಘದ ಸಾರ್ವಜನಿಕ ಸಭಾಗೃಹವಾಗಿತ್ತು ಎನ್ನುವ ಅಭಿಪ್ರಾಯದ ಸಮರ್ಥನೆಗೆ ಹತ್ತಿರದ ಇನ್ನೊಂದು ದೇವಾಲಯವಾದ ಗೌಡರ ಗುಡಿಯ ಪೂರಕವಾಗಿ ನಿಲ್ಲುತ್ತದೆ. ಇದರಲ್ಲಿ ದುರ್ಗಾಭಗವತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಈಗ ಅಲ್ಲಿ ಯಾವುದೇ ಮೂರ್ತಿ ಇರದಿದ್ದರೂ ಗರ್ಭಗೃಹದ ದ್ವಾರದ ಮೇಲಿನ ಕವಾಟ ಪಟ್ಟಿಯ ಮಧ್ಯಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಕೆತ್ತಿರುವದನ್ನು ಗಮನಿಸದರೆ - ಈ ದೇವಾಲಯವನ್ನು ಯಾವುದೋ ಸ್ತ್ರೀ ದೇವತೆಯನ್ನು ಪ್ರತಿಷ್ಠಾಪಿಸಲು ಕಟ್ಟಲಾಗಿತ್ತು ಎಂದು ಹೇಳಬಹುದು. ಅಲ್ಲದೆ ಈ ದೇವಾಲಯದ ಒಂದು ತೊಲೆಯ ಮೇಲೆ ಕೆತ್ತಲಾದ ಶಿಲಾಶಾಸನದಲ್ಲಿ ಈ ಗುಡಿಯ ಅಧಿದೇವತೆ-ದುರ್ಗಾಭಗವತಿಯ ಸೇವಾರ್ಥ ಕೊಟ್ಟಿರುವ ದತ್ತಿಯ ದಾಖಲೆ ಯಿದೆ. ದುರ್ಗಾಭಗವತಿಯು ಐಹೊಳೆಯ ವಣಿಕ್ ಸಂಘದ ರಕ್ಷಕ ದೇವತೆಯಾಗಿದ್ದುದು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಶಾಸನಗಳಲ್ಲಿ ಅಯ್ಯಾವೊಳೆ ಐನೂರ್ವರನ್ನು "ಭಗವತೀದೇವೀಲಬ್ಧ ವರಪ್ರಸಾದರು" "ಭಗವತಿಯ ಮಕ್ಕಳು" ಎಂದು ಉಲ್ಲೇಖಿಸಿರುವುದು ಗಮನಾರ್ಹ ಹಾಗೂ ಈ ಸಂಗತಿ ಈಗಿನ ಗೌಡರ ಗುಡಿ ಮೂಲ ಅಯ್ಯಾವೊಳೆ ಐನೂರ್ವರ ಆರಾಧ್ಯ ದೇವತೆಯಾದ ಭಗವತೀದೇವಿಯ ಆಲಯವಾಗಿತ್ತೆಂದು ಖಚಿತವಾಗಿ ಹೇಳಬಹುದು. ಅದರಂತೆಯೇ ಲಾಡ್‌ಖಾನ ಕಟ್ಟಡವು ಈ ವಣಿಕ್ ಸಂಘದ ಸಾರ್ವಜನಿಕ ಸಭಾಗೃಹವಾಗಿತ್ತು ಎನ್ನುವದು ಖಚಿತವಾಗುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಫರ್ಗ್ಯೂಸನ್ ಮತ್ತು ಬರ್ಜೆಸ್., ೧೯೧೦, "ಹಿಸ್ಟರಿ ಆಫ್ ಇಂಡಿಯನ್ ಆ್ಯಂಡ್ ಈಸ್ಟರ್ನ ಆರ್ಕಿಟೆಕ್ಚರ್", ಲಂಡನ, ಪು. ೧೨೧.

೨. ಆರ್. ಡಿ. ಬ್ಯಾನರ್ಜಿ., ೧೯೨೮, "ಬಾಸ್ ರಿಲಿಫ್ಸ್ ಅಫ್ ಬಾದಾಮಿ", ಕಲ್ಕತ್ತಾ, ಪು. ೨.

೩. ಕರೋಲ್ ಎಲಿಜೆಬೆತ್ ರ್‍ಯಾಡ್‌ಕ್ಲಿಫ್., "ಅರ್ಲಿ ಚಾಲುಕ್ಯ ಸ್ಕಲ್ಪಚರ್", (ಅಪ್ರಕಟಿತ ಮಹಾಪ್ರಬಂಧ, ನ್ಯೂಯೂರ್ಕ್ ವಿಶ್ವವಿದ್ಯಾಲಯ, ೧೯೮೧) ಪು. ೩೩.

೪. ಫರ್ಗ್ಯೂಸನ್ ಮತ್ತು ಬರ್ಜೆಸ್, ಅದೇ, ಪು. ೧೨೧.

೫. ಗ್ಯಾರಿಟಾರ್, ೧೯೬೯, ದಿ ಆರ್ಕಿಟೆಕ್ಚರ್ ಆಫ್ ದಿ ಅರ್ಲಿ ವೆಸ್ಟರ್ನ್ ಚಾಲುಕ್ಯಾಸ್, ಲಾಸ್‌ಎಂಜಲೀಸ್, ಪು. ೩೪೯.

೬. ಕರೋಲ್ ಎಲಿಜೆಬೆತ್ ರ್‍ಯಾಡ್ ಕ್ಲಿಫ್, ಅದೇ, ಪು. ೫೬೫-೫೬೬.

೭. *"ಎಪಿಗ್ರಾಫಿಯಾ ಇಂಡಿಕಾ"*, XIX, ಪು. ೩೫- ೩೯.

೮. *"ಸೌಥ್ ಇಂಡಿಯನ್ ಇನ್ಸ್ ಕ್ರಿಪ್ಶನ್ಸ್"*, IX - Pt. I, ನಂ. ೧೩೯.

೧೭ನೆಯ ಸಮ್ಮೇಳನಾಧ್ಯಕ್ಷ ಡಾ. ಎಸ್. ರಾಜಶೇಖರ ಅವರ ಬದುಕು-ಬರೆಹ

NAME : Dr. S. Rajasekhara

DATE OF BIRTH : 13th march 1944

BIRTH PLACE : Bellary (Karnataka, India)

EDUCATION : B.A. (St. Joseph's College, Bangalore) 1963.

M.A. (Karnataka University, Dharwad) I Class 1965.

Dip. in Epigraphy (Karnataka University, Dharwad) I Class 1965.

Ph.D. (Karnataka University, Dharwad) 1976 for **"A Study of Aihole Temples".**

POSITIONS :

As Professor Since 1994 -	PG Dept. of Studies in History & Archaeology Karnatak University, Dharwad.
As Reader (1984-1994)	PG Dept. of Studies in History & Archaeology, Karnatak University, Dharwad.
As Lecturer (1973-1984)	PG Dept. of Studies in History & Archaeology, Karnatak University, Dharwad.
As Lecturer	(1967-1973) Karnatak Arts College, Dharwad.

SPECIALISATION :

1. Art History.
2. South Indian History

ADMINISTRATIVE EXPERIENCE :

1. **Registrar,** Karnatak University, Dharwad, 1st November, 1997 to 22nd July, 2001.

2. **Registrar** (Evaluation), Karnataka University, Dharwad. 19th April, 1997 to 31st Oct, 1997.

3. **Discharged the duties of Vice-Chanceller,** Karnatak University, Dharwad from 15-11-1999 to 23-11-1999 from 29-07-2000 to 13-08-2000 and from 22-04-2001 to 26-04-2001 and 13-08-2001 during the absence of the Vice-Chanceller

4. **Dean,** Faculty of Social Science Karnatak University, Dharwad.

5. **Chairman,** Dept of History & Archaeology. Karnatak University, Dharwad

6. **Chairman,** Department Council, Karnatak University, Dharwad.

7. **Chairman,** Board of Studies, Karnatak University, Dharwad.

ASSOCIATED WITH MANY OF THE UNIVERSITIES AS :

Member, Board of Studies
Member, Faculty of Arts
Member, Board of Appointments etc.

RESOURCE PERSON : Academic Staff Colleges of
Karnatak University; Dharwad
Bangalore University, Bangalore
University of Mysore. Mysore.

JOINT EDITOR : Journal of Karnatak University (Social Science)

RESEARCH PROJECTS (COMPLETED) :

1. Pre-Vijayanagara Temples at Hampi
2. Vijayanagara Temples at Hampi
3. Rastrakuta Temples in Karnataka
4. Hoysalas : A Chronological Study
5. Early Chalukya Inscriptions

ONGOING RESEARCH PROJECTS

Early Chalukya Art (A Comprehensive Study of Chalukya Temples in karnataka and Andhra Pradesh)

RESEARCH GUIDANCE :

1. No. of Students Awarded	Ph.D.	:	Six
2. No. of Students who have submitted Thesis for Evaluation	Ph.D	:	One
3. No. of Students Working for Ph.D.		:	Seven

PRESENT POSITION : Professor,
PG Dept. of Studies in History & Archaeology,
Karnatak University, Dharwad.

MEMBERSHIP : Life Member, South Indian History Congress
Life Member, Epigraphical Society of India, Mysore
Life Member, Karnataka Ithihasa Akademi, Bangalore
Life Member, Karnataka History Congress.

HONOURS : Awarded Karnataka Sahitya Akademi Award in 1988.

OTHER DISTINCTIONS : As Project Officer in the S.S. Wodeyar "One Man Commission" for the establishment of the Kannada University at Hampi in 1986.

Sectional President -XXV Session of Andhra Pradesh History Congress at Hyderabad in January, 2001.

General Secretary, Karnataka History Congress (1997-1998).

General President, Karnataka Itihasa Akademi, 17^{th} Congress, September, 13-15, 2003 at Badami.

Presidential Address (Sectional) of the Session on "History and Heritage of Bijapur" in the 64th Akila Bharata Sahithya Sammelana at Mudhol (June 1995).

RESEARCH PUBLICATIONS

I. BOOKS :

1. Holalgundi Paintings : S.Sujatha, Dharwad, 1982
2. Masterpieces of Vijayanagara Art, Taraporevala, Bombay, 1983
3. Karnataka Architecture, Sujatha Publications, Dharwad,1985
4. Early Chalukya Art at Aihole, Vikas, New Delhi, 1985.
5. Jain Bronzes in the Kannada Research Institute Museum, Kannada Research Institute, karnatak University, Dharwad, 1985 (with I.K. pattar as co-author)
6. The Map Approach to Vijayangara History, Sujatha Publications, Dharwad, 1985.
7. Karnataka Vastu Silpa Mattu Chitrakale, Sujatha Publications, Dharwad, 1987 (in Kannada) (Awarded the Karnataka Sahitya Akademi Award in 1988)
8. Rashtrakuta Art in Karnataka, Sujatha Publications, Dharwad, 1991.
9. The Ramachandra Temple at Vijayanagara, Manohar and American Institute of Indian Studies, New Delhi, 1991 (with Dallapiccola Anna L, John M.Fritz and George Michell as co-authors)
10. Dakshina Bharatada Vastusilpakke Badami Chalukyara Koduge, University of Mysore, Mysore 1996.

II. AS ASSOCIATE EDITOR :

Archaeological Survey of Mysore Annual Report,1906-1909, 1910-1911 and 1912, Karnatak University, Dharwad.

III. RESEARCH PAPERS :

1. " Sasanapada Suchi", Karnataka Bharati Vol.2, No.1 No.4, No.2, 1969-71
2. "Kottitone", Karnataka Bharati, Vol.5, No.1, 1972
3. "Identification of Early Chalukya Temples at Aihole" , Srikanthika, Mysore,1973.
4. "Vijayanagara Kalada Kappagallu Gramada Devalaya", Karnataka Bharati, Vol.5 No. 4, 1974.
5. "Temples at Kurugodu", Journal of Karnatak University, Social Sciences, Vol X, 1974.
6. "Hoysala-Samgamara Sambandha", Karnataka Bharati, Vol.6, No.4, 1974.

7. "Mysore Pradesada Aprakatita Sasanagala Samikshe hagu Prakatita Sasanagala Suchi", Karnataka Bharathi, Vol.7, No.3 to Vol 8, No.4, 1974-1976 (with S.Settar as co-author)

8. "Kurugodina Ujvalarayanagudi", Karnataka Bharati, Vol.7, No.3 1975.

9. "Megudiaya Hinde Iruva Kelavu Sasanagalu". Karnataka Bharati, Vol 7, No.3, 1975.

10. "A Unique Parsavantha Panel at Aihole", All India Oriental Conference, Twenty eighth Session, 1976 Summaries of Papers, Dharwad, 1976.

11. "Painted Inscriptions at Kurugodu", All India Oriental Conference, Twenty-eigth Session, 1976, Summaries of Papers, Dharwad, 1976.

12. "Surya Sculptures at Aihole", Archaeological Studies, Vol. II 1977.

13. "Vijayanagara Kalada Ghatanavali Suchi, Karnataka Bharati, Vol.9. NO.4, 1977.

14. "Nitturina Asoka Sila Sasanagalu", Karnataka Bharati, Vol.10, No.1, 1977 (with S.Settar as Co-author).

15. "The Date of the Lad Khan", Journal of Karnatak University, Social Sciences, vol.XIV, 1978.

16. 'Kolagallu', Karnataka Bharati, Vol.11, No.4, 1979.

17. "Sarvasiddhi Acharya Pallava Rajyadavane?", Vajradipti, Karnatak College Diamond Jubilee colume, Dharwad, 1978.

18. "Agrahara Nilagunda", Karnataka Bharati, Vol. 11, No.4, 1979.

19. "Rashtrakuta Hero-stones: A Study", Memorial Stones of India, Karnatak University, Dharwad. 1981.

20. Karnatakadalli Gommata Murthi Silpa", Belvola, Dr. R.C. Hiremath Felicitation Volume, Dharwad, 1982.

21. "Makers of Sravana Belgola", March of Karnataka, Feb. 1981, Bangalore.

22. "Hampeya Utkhananadalli Doreta Vigraha Puranaradasarde?, Sudha, 1st July, 1979, Bangalore.

23. "Chalukya Devalayagalu", Chalukyasri, Badami, 1982.

24. "Sogala Someswara Devalaya", Beluvala, Dr. Betageri Krishnasarma Felicitation volume, Dharwad, 1982.

25. "Vijayakalyana Nagariya Vastusilpa mattu Chitrakale", Vijaya Kalyana, Ed. S.S. Bhusanoormath.

26. "Early Chalukya Scribes, Architects and Sculptors" Dr. N. Venkataramanayya Commemoration Volume, Government of Andhra Pradesh, Hyderabad, 1986.

27. "Bellary Jilleyalli Doreta Prathama Hoysala Tamra Sasana" Karnataka Bharati Vol.No. 19.

28. "Hampeya Krishnadevarayana Apurva Vigraha" Ithihasa Darsana, Vol.2, No.I, 1987.

29. "Sri Guru Annadanisvara Mahasvamigalvaru Nirmisida Mathagala vastusaili" Halakere Sri Annadana Mahasvamigalavara Satamanotsava Smarana Sanchike. 1989 (with B.V. Mallapur as co-author).

30. "Inscriptions at Vijayanagara", Vijayanagara-City and Empire New Currents of Research, Ed, Anna Libera Dallapiccola, Stuttgart, 1985.

31. "Vijayanagara Studies: A Bibliography" Vijayanagara-City and Empire-New Currents of Research, Ed,. Anna Libera Dallapiccola, Stuttgart, 1985.

32. "Hampeya Virupaksha Devalaya Samuha: Kalanukramada Adhyayana", Ithihasa Darshana Vol. 4. 1989.

33. "Sangamas and Virasaivism", Early Vijayanagara: Studies in its History and Culture, Ed. G.S. Dikshit, Bangalore, 1988.

34. "A Unique Rashtrakuta Basadi in Naregal", Proceedings Volume of Eleventh Annual Session of South Indian History Congress, Calicut, 1991.

35. "Usha Parinayada Varna Chitragalu", Samsodhana, Dr. M. Chidanandamurti Felicitation Volume, Ed. Lakshman Telgavi, Bangalore, 1991.

36. "Sangamaru Mattu Virasaiva Dharma", Sangama Kalada Vijayanagara: Adara Ithihasa mattu Samskritigala Adyayana Ed.G.S. Dikshit, Bangalore, 1991.

37. "Dharwada Zilleya Devalayagalu", Lakkundi Utsava 1992, Souvenir, (Eds) M.C. Bhadrapur and M.D. Nayak, Dharwad 1992.

38. "A Note on Rayavachakamu and Sri Krishnadevarayana Dinachari, Sri Venkatesvara Oriental Journal. Vol XXXV, Pts. 1-2, January -December, 1992, pp. 119-124.

39. "Indian Art and National Integration", Art Education and National Integration, Ed. G. Ramesh, New Delhi, 1993, pp. 15-20.

40. "The Date of the Paintings at Hampi", Sri Nagabhinandanam (Dr. M.S. Nagaraja Rao Festschrift), Eds. L.K. Srinivasan and S. Nagaraju, Vol-II Bangalore, 1995, pp.441-446.

41. "Chalukya Vastusaili" Nayakaratna (Jananayak Sri B.K. Gudadina Abhinandana Grantha), Ed.B.S. Shethe, Bijapur.

42. "Attimabbe Kalada Jaina Vastusilpa", Baraha Bagina, Dr. Ham.Pa. Na Shashtyabdi Gourava Grantha", (Chief Editor) Prof. H.V. Nagesh, Shimoga, 1996, pp.270-276.

43. "Vijayanagara Sculptures", Gouravam Recent Researches in Indology, Prof.B.K. Gururaja Rao Felicitation Volume, Eds, K.V. Ramesh, V. Shivananda, M.D. Sampath, L.N. Swamy, New delhi, 1996, pp-302-306.

44. "Tirupatiyalliruva Krishnadevaraya mattu Avana Raniyara Kanchina Vigrahagalu Ondu Tippani", Vijayanagara Adhyayana- Vol. 1, (Papers Presented in Hampi Utsava, 1995. (Eds) Dr. D.V. Devaraja and Dr. Chanabasappa S. Patil, Mysore, 1996, pp.30-31.

45. "Sri Krishnadevarayana Dinachari mattu Rayavachakamu-Ondu Tippani", Ithihasa Darsana, Vol. 11 Bangalore-1996.

46. "Chitrakale mattu Silpa", Chitrakale mattu Puraka Kshetragalu, (Ed) S.C. Patil, Dharwad, 1996.

47. Naragunda Parisarada Vastusilpa mattu Chitrakale", Murughasri, Chitradurga.

48. Chapters on Early Chalukya Art, Rashtrakuta Art, Kalyana Chalukya Art and Hoysala Art in History of Karnataka, Vols. 1 & 2 Published by Kannada University, Hampi, 1997.

49. "Dharwada Jilleya Kelavu Visishta Devalayagalu", Arivu, Ed.H.R. Raghunath Bhat, Dharwad, 1996, pp.11-13.

50. "Kale mattu Vastusilpa", General Editor: B. Shaikh Ali, Editor:A, Sundara, Karnataka Charitre, (640 AD to 1336 AD) Kamalapura, 1997 Chapter XII, PP.241-277.

51. "Gommata Jina Vigraha Parampare", Ratnasri, Ed. S. Vimala Sumatikumar, Tumkur, 1999, pp 315-327.

CONFERENCES AND SEMINARS (SELECT)

1. South Indian History Congress, VII Session at Madras, Jan. 1987

2. Karnataka Ithihasa Akademi, II Annual Congress at Tumkur, 23rd-24th October, 1988.

   Presented the Paper "Virupaksha Temple Complex - A Chronological Study".

3. South Indian History Congress, Xth Session at Rajapalayam January 19th Presented the Paper "Somesvara Temple at Sogal".

4. National Seminar on "Art of Indian Asia: International Affinities and Inter-regional variations in Cave Temples" Tamil University, Tanjavur, 27th-29th December, 1990. Presented the Paper "Early Chalukya Temples: A study in Architecture".

5. Dharwad District III Kannada Sahitya Sammelana at Nargund, 16th January, 1991. Presented the Paper "Naragundada Vastusilpa mattu Chitrakale".

6. South India History Congress, XI Session at Calicut, 1-3 February, 19. Pesented the Paper "A Unique Rastrakuta Basadi at Naregal".

7. National Seminar on "Art Education and National Integration" Kakatiya University, Warangal, 21st 22nd February, 1991. Presented the Paper Indian Art & National Integration".

8. National Seminar on "The Historiography of South India", Karnataka University, Dharwad, 8th-10th March, 1991. Presented the Paper "Writings on Karnataka Art".

9. Karnataka Ithihasa Akademi, V Annual Congress at Chitradurga, July, 1991.

10. Karnataka Ithihasa Akademi, VI annual Congress at Raichur, 11th-13th July, 1992.

11. International Seminar on "Memorial Stones in India", Karnatak University, Dharwad and South Asia Institute New Delhi. Presented the Paper " Rastrakuta Hero Stones : A Study".

12. Seminar on History and Culture of Satavahanas, Karnatak University, Dharwad 27th-28th March, 1993. Presented the Paper "Satavahana Architecture", (in Kannada).

13. Seminar on History and Culture of Chalukyas of Badami, KRI, Karnataka University, Dharwad, 18th-19th March, 1994. Presented the Paper "Early Chalukya Architecture" (in Kannada).

14. Seminar on Jaina Culture and Heritage, Mahamastakabhisheka Samiti, Sravana Belogola and Karnatak University Post-graduate Centre, Belgaum, 15-11-1993. Presented the paper "Gommata Jina Vigraha Parampare" (in Kannada).

15. Seminar on Jaina Culture and Heritage, Karnatak University, Dharwad, 29th-30th November, 1993. Presented the Paper "Attimabbe Kalada Jaina Vastusilpa" (in Kannada).

16. National Seminar on Recent Researches in the Archaeology of Karnataka, Director of Archaeology & Museums, Government of Karnataka, Mysore and Department of Ancient Indian History and Archaeology, Mysore University, Mysore, 30th-31st May 1995. Presented the Paper "Rashtrakuta Temples in Karnataka".

17. Sixty fourth Akhila Bharata Kannada Sahitya Sammelana Mudhol, 3rd-5th June, 1995. Presented the paper" Vijapur Jileleya Samskritika Parampare" (in Kannada) as the Presidential Address of the Session on "History and Heritage of Bijapur".

18. Karnataka Ithihasa Akademi, X Annual Session at Dharwad.

19. Seminar on Painting and Allied Disciplines, organised by School of Art, Dharwad, September 29th October 1st, 1995. Presented the paper "Painting and Sculpture".

20. Workshop on Recent Researches and Methodology, organised by Karnataka Ithihasa

Akademi at Bangalore on 8th-9th December, 1995. Presented the paper on "Recent Studies on Architecture and Sculpture".

21. Seminar on Less Known Monuments of Bijapur District, organised by Navraspur Festival Committee, Government of Karnataka and Karnataka University Post Graduate Centre, Bijapur on 6-2-1996. Presented the paper "Temple Construction Activities at Aihole, Pattadakal, Badami and other places during Post-Early Chalukya Period.

22. Karnataka Ithihasa Akademy, Session at Tumkur (1989)

23. Seminar on the Historiography of South India, organised by Dept. of History and Archaeology, Karnatak University, Dharwad on 10-3-1991. Presented the paper " Critiques on Karnataka Art".

24. Karnataka Ithihasa Akademy, V Session at Chitradurga (12-7-1991 to 14-7-1991)

25. Seminar on Finer Arts, organised by Sri Sidheswara Kala Mandir, Bijapur, 7-3-1994, and Presented a Paper on " Art and Architecture under Chalukyas of Badami. ("Badami Chalukyas Vastu Silpa kale").

26. Seminar on Art, organised by Kala Mandala, Dharwad (26-2-1995 to 1-3-1995), presented a Paper on "Karnataka Sculptures".

27. Karnataka Ithihasa Akademy, IX Session at Belgaum (9-9-1995 to 11-9-1995).

28. National Seminar on Migrations, Caste and Professions in Medieval Andhra, March 2-3-1996, Andhra University, Visakapatnam, Presented the paper: " Virupaksha Temple at Pattadkal-Did Pallava Artists Build it"?

29. Seminar of Vijayanagara, organised by Directorate of Archaeology and Museums, Government of Karnataka at Hampi on 26th-27th November, 1995. Presented the Paper "Rayavachakamu and Sri Krishnadevarayana Dinachari".

30. UGC Seminar on Gopuras of South India, Tamil University, Tanjavur, 15th-16th March, 1996. Presented the Paper "Gopuras in Karnataka".

31. North Karnataka Artists Conference, organised by Kala Mandala, Dharwad, on 1-4-1996.

SPECIAL LECTURES

1. S. Srikanthayya Memorial Lecture on 6-2-1990 in the Mythic Socity, Bangalore on "Rastrakuta Monuments in Karnataka".

2. Smt. Jayalakshmmanni Memorial Lecture, Mysore University, Mysore in January, 1996. "Dakshina Bharatada Vastusilpakke Badami Chalukyara Koduge".

3. Endowment Lecture on "Chalukyas of Badami and South Indian Architecture", under the Joint auspices of Dharwad District Kannada Sahitya Parishat and Kannada and Culture Association, KIMS on 17.3.1997.

ಡಾ|| ಬಾ. ರಾ. ಗೋಪಾಲ್ ಪ್ರಶಸ್ತಿ ಪುರಸ್ಕೃತರು
ಡಾ. ದೇವರಕೊಂಡಾರೆಡ್ಡಿ ಅವರ ವಿಶೇಷ ಉಪನ್ಯಾಸ

ಉತ್ತರ ಕರ್ನಾಟಕ ಶಾಸನ ಶೋಧನೆ

ಇತಿಹಾಸ ಅಕಾದೆಮಿಯ ೧೭ನೆಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರೆ, ಸಭೆಯಲ್ಲಿರುವ ಹಿರಿಯ ವಿದ್ವಾಂಸರೆ ಹಾಗೂ ಕಿರಿಯ ವಿದ್ವಾಂಸರೆ, ಡಾ|| ಬಾ. ರಾ. ಗೋಪಾಲ್ ಅವರ ಹೆಸರಿನಲ್ಲಿ ಇಟ್ಟಿರುವ ಪ್ರಶಸ್ತಿಯನ್ನು ನನಗೆ ನೀಡಿ ಗೌರವಿಸಿದುದಕ್ಕಾಗಿ ತಮಗೆ ನಾನು ಮೊದಲು ಆಭಾರಿಯಾಗಿದ್ದೇನೆ. ಈ ಪ್ರಶಸ್ತಿ ನನ್ನೊಬ್ಬನಿಗೆ ಬಂದದ್ದಲ್ಲ. ಈ ಮೂಲಕ ನನ್ನಂತಹ ಶಾಸನ ಪ್ರಿಯರಿಗೆ ದೊರೆತ ಪ್ರಶಸ್ತಿ ಇದಾಗಿರುತ್ತದೆ. ಈ ಪ್ರಶಸ್ತಿಯ ಭಾಗವಾಗಿ ಡಾ|| ಬಾ. ರಾ. ಗೋಪಾಲ್ ಅವರ ನೆನಪಿನ ದತ್ತಿ ಉಪನ್ಯಾಸಕನಾಗಿ ಈ ಉಪನ್ಯಾಸವನ್ನು ನೀಡುತ್ತಿದ್ದೇನೆ.

ಈ ಉಪನ್ಯಾಸದಲ್ಲಿ ನಾನು ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಶಾಸನ ಶೋಧನೆ ಎಂಬ ವಿಷಯ ಕುರಿತು ಮಾತನಾಡಲಿಚ್ಛಿಸುತ್ತೇನೆ. ಉತ್ತರ ಕರ್ನಾಟಕವೆಂದು ಕರೆದು ಕರ್ನಾಟಕವನ್ನು ಎರಡು ಭಾಗ ಮಾಡುತ್ತಿದ್ದೇನೆಂದು ಭಾವಿಸಬಾರದು.

೧೭೯೧ರಲ್ಲಿ ಅಲೆಕ್ಸಾಂಡರ್ ಮ್ಯಾಕ್ಲಿಯೋಡ್ ಎಂಬುವವನು ಕಂಚಿಯಲ್ಲಿ ದೊರೆತ ಶಾಸನವೊಂದನ್ನು ಓದುವುದರ ಮೂಲಕ ಅದನ್ನು ಕರ್ನಾಟಕ ಶಾಸನವೆಂದು ಕರೆದ. ಈ ಮೂಲಕ ದಕ್ಷಿಣದ ಶಾಸನಾಭ್ಯಾಸಕ್ಕೆ ಆತ ಅಡಿಗಲ್ಲನ್ನಿರಿಸುತ್ತಾನೆ. ಈ ಶಾಸನ ನಂದಿನಾಗರಿಯಲ್ಲಿದ್ದು ವಿಜಯನಗರ ಕಾಲದ ಶಾಸನವಾಗಿರುತ್ತದೆ. ಈಗಿನ ಉತ್ತರ-ದಕ್ಷಿಣ ಆರ್ಕಾಟ್ ಮತ್ತು ಕಂಚಿ ಪ್ರದೇಶವನ್ನು ಕರ್ನಾಟಿಕ ಎಂದೇ ಗುರುತಿಸುತ್ತಿದ್ದರು. ಈ ಪ್ರದೇಶದಲ್ಲಿ ಬ್ರಿಟಿಷರು ನಡೆಸಿದ ಯುದ್ಧಗಳನ್ನು ಕರ್ನಾಟಿಕ್ ವಾರ್ಸ್ ಎಂದು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಕಂಚಿಯ ಶಾಸನವನ್ನು 'ಕರ್ನಾಟಕ ಶಾಸನ' ವೆಂದು ಮ್ಯಾಕ್ಲಿಯೋಡ್ ಕರೆದ.

ವಾಸ್ತವವಾಗಿ ಕರ್ನಾಟಕದಲ್ಲಿ ಶಾಸನ ಶೋಧನೆ ವ್ಯವಸ್ಥಿತ ವಾಗಿ ಆರಂಭವಾದದ್ದು ಟೀಪುವಿನ ಮರಣಾನಂತರ. ಟೀಪು ಸತ್ತ ಮೇಲೆ ಅವನ ಆಳ್ವಿಕೆಯ ಪ್ರದೇಶದ ಕೃಷಿ ಮತ್ತು ಆರ್ಥಿಕ ಚಟುವಟಿಕೆಗಳು ಮತ್ತು ಭೂಮಾಪನ ವ್ಯವಸ್ಥೆಯನ್ನು ಮಾಡಲು ಬ್ರಿಟಿಷರು ಬುಕಾನನ್ ಮತ್ತು ಮೆಕಂಜಿ ಎಂಬುವವರನ್ನು ನೇಮಿಸುತ್ತಾರೆ. ಬುಕಾನನ್ ಮುಖ್ಯವಾಗಿ ಕರ್ನಾಟಕದ ಕೃಷಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಕಲೆ ಹಾಕಿದ. ಆದರೆ ಮೆಕಂಜಿ ಭೂಮಾಪನದ ಜೊತೆಗೆ ತಾನು ವಾಸ್ತವ್ಯ ಮಾಡುತ್ತಿದ್ದ ಸ್ಥಳದಲ್ಲಿನ ಶಾಸನ, ಐತಿಹ್ಯ, ಕೈಫಿಯತ್ತು, ಹಸ್ತಪ್ರತಿ ಮುಂತಾದವನ್ನು ಕಲೆ ಹಾಕುತ್ತಿದ್ದ. ಅನೇಕ ಶಾಸನಗಳ ಅಕ್ಷರಗಳನ್ನು ತದ್ವತ್ತಾಗಿ ಬರೆದುಕೊಳ್ಳುತ್ತಿದ್ದ. ಹೀಗಾಗಿ ಅವನು ಶಾಸನ ಸಂಗ್ರಹದ ಪಿತಾಮಹನಾಗುತ್ತಾನೆ. ಇವನಿಗೆ ಸಹಾಯಕರಾಗಿ ಮಲೆಯೂರಿನ ದೇವಚಂದ್ರ ಪಂಡಿತ ಮತ್ತು ಕವಲ್ಲಿ ವೆಂಕಟಬೋರೈಯ ಎಂಬ ದೇಶೀಯ ವಿದ್ವಾಂಸರು ಸಹಾಯಕವಾಗುತ್ತಾರೆ. ಕ್ರಿ.ಶ. ೧೮೩೬-೧೮೩೮ ಭಾರತದ ಶಾಸನ ಇತಿಹಾಸದಲ್ಲಿ ಮಹತ್ವದ ಕಾಲಘಟ್ಟ ಲ್ಯಾಸನ್ ಎಂಬುವವನು ಗ್ರೀಕ್ ಮತ್ತು ಬ್ರಾಹ್ಮಿಲಿಪಿ ಯಲ್ಲಿದ್ದ ನಾಣ್ಯಗಳ ಶಾಸನವನ್ನು ಓದಿದ. ಮುಂದಿನ ವರ್ಷ ಜೇಮ್ಸ್ ಪ್ರಿನ್ಸೆಪ್‌ನು ಬ್ರಾಹ್ಮಿ ಶಾಸನಗಳನ್ನು ಪೂರ್ಣವಾಗಿ ಓದಿದ. ಇಲ್ಲಿಂದಾಚೆಗೆ ಭಾರತೀಯ ಶಾಸನ ಇತಿಹಾಸಕ್ಕೆ ಒಂದು ಹೊಸ ಆಯಾಮ ಬಂತು. ಇದೇ ಮಾತು ಕರ್ನಾಟಕಕ್ಕೂ ಅನ್ವಯಿಸುತ್ತದೆ.

ಟೀಪೂ ಪತನದೊಂದಿಗೆ ಕರ್ನಾಟಕಕ್ಕೆ ದೊಡ್ಡ ಆಘಾತವೂ ಆಯಿತು. ಅದೆಂದರೆ ವಿಶಾಲ ಕರ್ನಾಟಕವು ವಿಚ್ಛಿದ್ರ ಕರ್ನಾಟಕ ವಾಯಿತು. ಕರ್ನಾಟಕವನ್ನು ಸುತ್ತಲ ಶಕ್ತಿಗಳು ಅಕ್ಷರಶಃ ಕಿತ್ತು ಹಂಚಿಕೊಂಡವು. ಆಗ ಛಿದ್ರವಾದ ಕರ್ನಾಟಕವು ಆಯಾ ಆಡಳಿತ ಪ್ರಭಾವಕ್ಕೆ ಸಿಕ್ಕಿ ಅಲ್ಲಿನ ಆಡಳಿತಗಾರರ ಮನೋಭಾವವನ್ನೇ ಬೆಳೆಸಿಕೊಂಡವು. ಶಾಸನಾಭ್ಯಾಸವೂ ಇದಕ್ಕೆ ಹೊರತಾಗಲಿಲ್ಲ.

ಹಳೆಯ ಮೈಸೂರು ಪ್ರಾಂತ್ಯದಲ್ಲಿ ಹಿಂದಿನ ಅರಸೊತ್ತಿಗೆಯ ರಾಜರ ಜೊತೆಗೆ ಬ್ರಿಟಿಷ್ ಅಧಿಕಾರಿಗಳೂ ಆಡಳಿತದಲ್ಲಿ ಸೇರಿಕೊಂಡರು. ಇವರಲ್ಲಿ ಬೆಂಜಮಿನ್ ಲೂಯಿರೈಸ್ ಎಂಬು ವವರೂ ಒಬ್ಬರು. ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಈತ ಮೇಜರ್ ಡಿಕ್ಸನ್ ಎಂಬುವವನು ಆವರೆಗೆ ಸಂಪಾದಿಸಿದ್ದ ಶಾಸನ ಪ್ರತಿಗಳು ಜೊತೆಗೆ ತಾನೂ ಸಂಗ್ರಹಿಸಿದ್ದ ಶಾಸನ ಪ್ರತಿಗಳ ಪಾಠವನ್ನು ಓದಿ 'Mysore inscriptions' ಎಂಬ ಕೃತಿಯನ್ನು ಹೊರತಂದ (೧೮೭೯). ಮುಂದೆ ೧೮೮೫ರಲ್ಲಿ ರೈಸರಿಗೆ ಹೊಸದಾಗಿ ಆರಂಭವಾಗಿದ್ದ ಪುರಾತತ್ವ ಇಲಾಖೆಯ ಜವಾಬ್ದಾರಿಯೂ ಸಿಕ್ಕಿತು. ಇಂತಹ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡ ರೈಸರು 'ಎಪಿಗ್ರಾಫಿಯಾ ಕರ್ನಾಟಿಕಾ' ಎಂಬ ಮಾಲಿಕೆಯಲ್ಲಿ ಶಾಸನ ಸಂಪುಟಗಳನ್ನು ಹೊರತಂದರು. ಈ ಸಂಪುಟಗಳಲ್ಲಿ ಇವರು ಶಾಸನಗಳನ್ನು ಜಿಲ್ಲಾವಾರು, ತಾಲೂಕು ವಾರು ಹಾಗೂ ಹೋಬಳಿವಾರಾಗಿ ವಿಂಗಡಿಸಿದ್ದಾರೆ. ಕೊಡಗನ್ನು

ಸೇರಿದಂತೆ ೧೨ ಸಂಪುಟಗಳಲ್ಲಿ ಈ ಪ್ರದೇಶದ ಶಾಸನಗಳನ್ನು ಸಂಗ್ರಹಿಸಿದರು. ಶಾಸನದ ಪಾಠವನ್ನು ರೋಮನ್ ಲಿಪಿಯಲ್ಲಿ ಲಿಪ್ಯಂತರ ನೀಡಿ ಅದರ ಅನುವಾದವನ್ನು ನೀಡಿರುತ್ತಾರೆ. ಮುಂದೆ ಕನ್ನಡ ಪಾಠವನ್ನು ನೀಡಿರುತ್ತಾರೆ. ಅನೇಕ ಕಡೆ ಶಾಸನದ ಶಾಪಾಶಯದಲ್ಲಿ ಕೆಟ್ಟ ಪದಗಳು ಬಂದಾಗ ಆ ಭಾಗವನ್ನು ಬಿಟ್ಟಿರುವುದೂ ವುಂಟು. ಈ ಸಂಪುಟಗಳಿಂದ ದಕ್ಷಿಣ ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ ಚರಿತ್ರೆಗೆ ಹೆಚ್ಚಿನ ಮಾಹಿತಿ ದೊರಕುವಂತಾಯಿತು. ರೈಸರ ಈ ಶ್ರಮದಿಂದ ದಕ್ಷಿಣ ಕರ್ನಾಟಕದಲ್ಲಿ ಶಾಸನಗಳ ಬಗ್ಗೆ ಪೂರ್ಣವಾಗಿಯಲ್ಲದಿದ್ದರೂ ಸ್ವಲ್ಪಮಟ್ಟಿಗೆ ಜಾಗೃತಿ ವುಂಟಾಗಿದೆ. ಇವರ ಕಾರ್ಯವನ್ನು ಮುಂದೆ ಆರ್. ನರಸಿಂಹಾಚಾರ್, ಎಂ. ಎಚ್. ಕೃಷ್ಣ, ಶೇಷಾದ್ರಿಯವರು ಮುಂದುವರಿಸಿದರು.

ಈಗ ಮುಂಬೈ ಕರ್ನಾಟಕವೆಂದು ಕರೆಯುವ ವಾಯುವ್ಯ ಕರ್ನಾಟಕ ಪ್ರದೇಶದ ಶಾಸನ ಶೋಧನೆಯ ಕಡೆಗೆ ಬರೋಣ. ಈ ಪ್ರದೇಶದ ಸರ್ ವಾಲ್ಟರ್ ಇಲಿಯಟ್ಟನಿಂದ ಆರಂಭವಾಗುತ್ತದೆ. ಕಿತ್ತೂರ ಕಾಳಗದಲ್ಲಿ ಈತ ಚೆನ್ನಮ್ಮನಿಗೆ ಸೆರೆಸಿಕ್ಕಿದ್ದ. ಈತ ಬಿಡುಗಡೆಯಾದ ಮೇಲೆ ಮುಂಬೈ ಕರ್ನಾಟಕದಲ್ಲಿ ಕನ್ನಡ ಶಾಲೆಗಳ ಸ್ಥಾಪನೆಗೆ ಇವನು ಕಾರಣನಾಗುತ್ತಾನೆ. ಧಾರವಾಡ, ಸೋಂದೆ ಮೊದಲಾದ ಕಡೆಯ ಶಾಸನಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ 'ಹಿಂದೂ ಇನ್ಸ್‌ಕ್ರಿಪ್ಷನ್ಸ್' ಎಂಬ ದೀರ್ಘ ಲೇಖನವನ್ನು ಬರೆದ. ಈ ಲೇಖನವು ಮುಂದಿನ ಅನೇಕ ಶಾಸನ ಸಂಶೋಧಕರಿಗೆ ಮಾರ್ಗದರ್ಶಿಯಾಗುತ್ತದೆ.

ಮುಂಬೈ ಕರ್ನಾಟಕದಲ್ಲಿನ ಶಾಸನಗಳ ಬಗ್ಗೆ ಹೆಚ್ಚಿನ ಕೆಲಸ ಮಾಡಿದವರಲ್ಲಿ ಇನ್ನೋರ್ವ ಪ್ರಮುಖ ವ್ಯಕ್ತಿಯೆಂದರೆ ಜೆ.ಎಫ್. ಫ್ಲೀಟ್ ಅವರು, ಇವರು ರೈಸರಂತೆ ಪ್ರತ್ಯೇಕ ಜಿಲ್ಲಾ ಶಾಸನ ಸಂಪುಟಗಳನ್ನು ತರಲಿಲ್ಲ. ಆದರೆ ಲಭ್ಯವಾದ ಶಾಸನಗಳನ್ನು ವಿಸ್ತೃತವಾದ ಟಿಪ್ಪಣಿ ಮತ್ತು ಚರ್ಚೆಯೊಂದಿಗೆ ಪ್ರಕಟಿಸಿರುತ್ತಾರೆ. ಜರ್ನಲ್ ಆಫ್ ಬಾಂಬೆ ಬ್ರಾಂಚ್ ಆಫ್ ರಾಯಲ್ ಏಷಿಯಾಟಿಕ್ ಸೊಸೈಟಿಯಲ್ಲಿ ಶಾಸನಗಳ ಬರವಣಿಗೆಯನ್ನು ಆರಂಭಿಸಿ (೧೮೭೦) ಮುಂದೆ ಇಂಡಿಯನ್ ಆಂಟಿಕ್ವೆರಿ, ಎಫಿಗ್ರಾಫಿಯಾ ಇಂಡಿಕಾ ಮುಂತಾದ ಸಂಪುಟಗಳಲ್ಲಿ ಇವರು ತಮ್ಮ ಬರವಣಿಗೆಯನ್ನು ವಿಸ್ತರಿಸುತ್ತಾರೆ. ಇಂಡಿಯನ್ ಆಂಟಿಕ್ವೆರಿಯಲ್ಲಿ ಆವರೆಗೆ ಪ್ರಕಟವಾಗಿದ್ದ ಶಾಸನಗಳನ್ನು ಒಟ್ಟುಗೂಡಿಸಿ 'Some Sanskrit pali and Halakannada Inscriptions' ಎಂಬ ಕೃತಿಯನ್ನು ೧೮೭೮ರಲ್ಲಿ ಪ್ರಕಟಿಸಿದರು. ರೈಸರಂತೆ ಫ್ಲೀಟರು ಶಾಸನಗಳ ಸಂಗ್ರಹಕ್ಕಾಗಿ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡವರಲ್ಲ. ಕರ್ನಾಟಕವೇ ಅಲ್ಲದೆ ಭಾರತದ ಬೇರೆಡೆಯ ಶಾಸನಗಳನ್ನು ಇವರು ಸಂಪಾದಿಸಿರುತ್ತಾರೆ. ಫ್ಲೀಟರು ವಾಯುವ್ಯ ಕರ್ನಾಟಕದ ಅನೇಕ ಶಾಸನಗಳನ್ನು ಮೊದಲು ಬೆಳಕಿಗೆ ಹಚ್ಚಿದ್ದಲ್ಲದೆ ಶಾಸನಾಧ್ಯಯನಕ್ಕೆ ಭದ್ರವಾದ ತಳಹದಿ ಹಾಕಿದವರಾಗಿದ್ದಾರೆ.

ವಾಯುವ್ಯ ಕರ್ನಾಟಕದಲ್ಲಿ ಫ್ಲೀಟರ ನಂತರ ಬಹು ಕಾಲದವರೆಗೆ ಹೇಳಿಕೊಳ್ಳುವಂತಹ ಶಾಸನ ಶೋಧಕರು ಬರಲಿಲ್ಲ. ಕೆಲವರು ಅಲ್ಲೊಂದು ಇಲ್ಲೊಂದು ಶಾಸನಗಳನ್ನು ಹುಡುಕಿ ಪ್ರಕಟಿಸಿದ್ದಾರೆಯೇ ಹೊರತು ಎದ್ದು ಕಾಣುವಂತಹ ಶಾಸನ ಶೋಧನೆ ಮಾಡಲಿಲ್ಲ. ಕೆ.ಜಿ. ಕುಂದಣಗಾರ್ ಅವರು Inscriptions in Northeren Karnataka Kolhapur state ಎಂಬ ಶಾಸನ ಸಂಗ್ರಹವನ್ನು ಹೊರತಂದರು. ಮುಂದೆ ಆರ್.ಎಸ್. ಪಂಚಮುಖಿಯವರು Karnatak Inscriptions ಎಂಬ ಮಾಲಿಕೆಯನ್ನು ಆರಂಭಿಸಿ ಆ ಭಾಗದಲ್ಲಿ ದೊರೆತ ಶಾಸನಗಳನ್ನು ಪ್ರಕಟಿಸಿರುತ್ತಾರೆ. ಇವರು 'ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್' ಮಾದರಿಯನ್ನು ಅನುಸರಿಸಿರುವುದರಿಂದ ಕಾಲಾನುಕ್ರಮಣಿಕೆಯಲ್ಲಿ ಶಾಸನ ಪಾಠಗಳನ್ನು ನೀಡಲಾಗಿದೆ. ಇದೇ ಕಾರ್ಯವನ್ನು ಮುಂದೆ ಎ.ಎಂ. ಅಣ್ಣಿಗೇರಿ, ಡಾ|| ಬಾ.ರಾ. ಗೋಪಾಲ್ ಅವರು ಮುಂದುವರಿಸಿ ಆರನೆಯ ಸಂಪುಟದವರೆಗೆ ಅವನ್ನು ಪ್ರಕಟಿಸಿದರು.

ಎನ್. ಲಕ್ಷ್ಮೀನಾರಾಯಣರಾವ್, ಪಿ.ಬಿ. ದೇಸಾಯಿ ಮತ್ತು ಜಿ.ಎಸ್. ಗಾಯಿಯವರು ಈ ಭಾಗದ ಶಾಸನಗಳನ್ನು ಕ್ರೋಡೀಕರಿಸಿ South Indian Inscriptions ಮಾಲಿಕೆಯಲ್ಲಿ 'ಬಾಂಬೆ ಕರ್ನಾಟಕ್ ಇನ್ಸ್‌ಕ್ರಿಪ್ಷನ್ಸ್' ಎಂಬ ಶಿರೋನಾಮೆಯಲ್ಲಿ ೧೧, ೧೫, ೧೮ ಮತ್ತು ೨೦ನೆಯ ಸಂಪುಟಗಳಲ್ಲಿ ಪ್ರಕಟಿಸಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಈ ಸಂಪುಟಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಶಾಸನಗಳನ್ನು ಪುನರ್ಮುದ್ರಿಸದೆ ಪ್ರಕಟವಾಗಿರುವ ಆಕರವನ್ನು ಸೂಚಿಸಿ ಮುಂದೆ ಹೋಗಿರುತ್ತಾರೆ. ಈ ಪ್ರದೇಶದ ಬಹುತೇಕ ಶಾಸನಗಳು ಈ ಸಂಪುಟಗಳಲ್ಲಿ ಕಾಲಾನುಕ್ರಮಣಿಕೆಯಲ್ಲಿ ಮುದ್ರಣವಾಗಿವೆ.

ಈ ತಲೆಮಾರು ಕಳೆದ ಮೇಲೆ ಇತ್ತೀಚಿನ ತಲೆಮಾರಿನಲ್ಲಿ ಡಾ|| ಕಲಬುರ್ಗಿ, ಡಾ. ಚೆನ್ನಕ್ಕ, ಡಾ|| ಶ್ರೀನಿವಾಸರಿತ್ತಿ, ರಘುನಾಥಭಟ್ ಮುಂತಾದವರು ಅನೇಕ ಶಾಸನಗಳನ್ನು ಪ್ರಕಟಿಸಿರುತ್ತಾರೆ. ಡಾ|| ಕಲಬುರ್ಗಿಯವರು 'ಧಾರವಾಡ ತಾಲೂಕಿನ ಶಾಸನಗಳು' ಎಂಬ ಶೀರ್ಷಿಕೆಯಡಿ ಧಾರವಾಡ ತಾಲೂಕಿನ ಶಾಸನಗಳನ್ನು ರೈಸರ ಸಂಪಾದನೆಯ ರೀತಿಯಲ್ಲಿ ಮಾಡಲು ಪ್ರಯತ್ನಿಸಿದ್ದಾರೆ.

ಹೈದರಾಬಾದು ಕರ್ನಾಟಕ ಅಥವಾ ಈಶಾನ್ಯ ಕರ್ನಾಟಕದಲ್ಲಿ ಶಾಸನಗಳ ಅಧ್ಯಯನ ತೀರಾ ಕಡಿಮೆಯೆಂದರೆ ಅತಿಶಯೋಕ್ತಿಯಲ್ಲ. ಇಲ್ಲಿಯೂ ಮೆಕಂಜಿ ತನ್ನ ಭೂಮಾಪನ ಕಾಲದಲ್ಲಿ ಅನೇಕ

ಶಾಸನಗಳನ್ನು ಗುರುತಿಸುತ್ತಾರೆ. ಅವನ ನಂತರ ಫ್ಲೀಟರು ಈ ಪ್ರದೇಶದ ಕೆಲವು ಶಾಸನಗಳನ್ನು ಗುರುತಿಸುತ್ತಾರೆ. ಮುಂದೆ ಬಹುಕಾಲ ಈ ಪ್ರದೇಶದ ಶಾಸನಗಳ ಸಂಗ್ರಹವಾಗಲೀ ಪ್ರಕಟಣಾ ಕಾರ್ಯವಾಗಲೀ ನಡೆಯಲಿಲ್ಲ ಮಂದೆ 'ಹೈದರಾಬಾದ್ ಆರ್ಕ್ಯಾಲಾಜಿಕಲ್ ಸೀರಿಸ್' ಪ್ರಕಟವಾದ ಮೇಲೆ ಆ ಮಾಲಿಕೆಯಲ್ಲಿ ಈ ಪ್ರದೇಶದ ಅನೇಕ ಶಾಸನಗಳು ಪ್ರಕಟವಾದವು. ೧೯೨೮, ೧೯೩೫ರಲ್ಲಿ ಹೊರಬಂದ ಕನ್ನಡ ಶಾಸನಗಳನ್ನು ಸಿ.ಆರ್. ಕೃಷ್ಣಮಾಚಾರ್ಲು ಅವರು ಪ್ರಕಟಿಸಿದ್ದಾರೆ. ಇದೇ ಮಾಲಿಕೆಯಲ್ಲಿ ೧೮ನೆಯ ಸಂಪುಟವನ್ನು ಪಿ.ಬಿ. ದೇಸಾಯಿಯವರು ಪ್ರಕಟಿಸಿರುತ್ತಾರೆ. ಮುಂದೆ ಹೈದರಾಬಾದ್ ಆರ್ಕ್ಯಾಲಾಜಿಕಲ್ ಸೀರಿಸ್ ಹೋಗಿ ಆಂಧ್ರಪ್ರದೇಶ್ ಆರ್ಕ್ಯಾಲಾಜಿಕಲ್ ಸೀರಿಸ್ ಆರಂಭವಾದಾಗ ಪಿ. ಬಿ. ದೇಸಾಯಿಯವರು (೧೯೫೮) ಪಿ. ಶ್ರೀನಿವಾಸಾಚಾರ್ಲು ಅವರೊಂದಿಗೆ ಸೇರಿ ಸಂಪಾದಿಸಿದ 'Kannada Inscriptions of Andhra Pradesh' ಎಂಬ ಶಾಸನ ಸಂಪುಟ ೧೯೬೧ರಲ್ಲಿ ಪ್ರಕಟವಾಗುತ್ತದೆ. ೧೯೬೨ ರಲ್ಲಿ ಇದೇ ಮಾಲಿಕೆಯ ೯ನೆಯ ಪುಸ್ತಕವನ್ನೂ ಪಿ.ಬಿ. ದೇಸಾಯಿಯವರೇ ಪ್ರಕಟಿಸುತ್ತಾರೆ. ಈ ದೇಸಾಯಿಯವರು ಶಾಸನ ಸಂಪದ ಎಂಬ ಹೆಸರಿನಲ್ಲಿ ಅಂದಿನ ಕೊಪ್ಪಳ ಜಿಲ್ಲೆಯ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದರು. ಹೀಗೆ ಪ್ರಕಟಿಸುವಾಗ ಜಿಲ್ಲಾವಾರು, ತಾಲೂಕುವಾರು ಶಾಸನಗಳ ವಿಂಗಡಣೆ ಮಾಡಿರಲಿಲ್ಲ; ಕಾಲಾನುಕ್ರಮಣಿಕೆಯಲ್ಲಿ ಪ್ರಕಟಿಸಿದ್ದರು. ಮೆಕಂಜಿಯವರು ಸಂಪಾದಿಸಿದ್ದ ಶಾಸನ ಪಾಠಗಳನ್ನು ಡಾ. ಶಿವಾನಂದ ಅವರು ಸಂಗ್ರಹಿಸಿ 'ಹೈದರಾಬಾದು ಕರ್ನಾಟಕದ ಕನ್ನಡ ಶಿಲಾಶಾಸನಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಈ ದೆಸೆಯಲ್ಲಿ ಇತ್ತೀಚಿನ ಪ್ರಯತ್ನವೆಂದರೆ ಶ್ರೀಮತಿ ಹನುಮಾಕ್ಷಿಗೋಗಿ ಮತ್ತು ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗದ್ದು. ಹನುಮಾಕ್ಷಿ ಗೋಗಿಯವರು ಸುರಪುರದ ಶಾಸನಗಳು, ಗುಲ್ಬರ್ಗಾ ಜಿಲ್ಲೆಯ ಶಾಸನಗಳು ಹಾಗೂ ಇತ್ತೀಚೆಗೆ ಬಿಡುಗಡೆಯಾದ ಅನುಶಾಸನ ಎಂಬ ಶಾಸನ ಕೃತಿಗಳು ಈ ಭಾಗದ ಶಾಸನಗಳ ಪ್ರಕಟಣೆಯಲ್ಲಿ ಮೈಲಿಗಲ್ಲು ಎನ್ನಬಹುದು. ಐ. ಕೆ. ಶರ್ಮ ಅವರು ಸನ್ನತಿಯಲ್ಲಿ ದೊರೆತ ಶಾಸನಗಳನ್ನು ಒಂದೆಡೆ ತಂದಿದ್ದಾರೆ.

ಈಶಾನ್ಯ ಕರ್ನಾಟಕ ಭಾಗದಲ್ಲಿ ಶಾಸನ ಸಂಗ್ರಹದಲ್ಲೂ ಈ ಭಾಗಗಳು ಹಿಂದುಳಿದಿರಲು ಕಾರಣವೇನೆಂಬ ಬಗ್ಗೆ ಚಿಂತನ ನಡೆಸುವುದು ಸೂಕ್ತ. ಕನ್ನಡಿಗರಲ್ಲದ ಜನರ ಕೈಕೆಳಗೆ ಆಡಳಿತಾತ್ಮಕ ವಾಗಿ ಸಿಕ್ಕಿಹಾಕಿಕೊಂಡು ತಮ್ಮತನವನ್ನು ಕಳೆದುಕೊಂಡದ್ದು ಒಂದು ಕಾರಣವಾದರೆ ಈ ಪ್ರದೇಶದ ಶಾಸನ ಕ್ಷೇತ್ರವು ಸಾಮಾನ್ಯ ಅಥವಾ ಉತ್ಸಾಹಿಗಳಿಗೆ ದೂರವಾದದ್ದು ಇನ್ನೊಂದು ಕಾರಣ. ಈ ಭಾಗದ ಗ್ರಾಮೀಣ ಪ್ರದೇಶದ ವಿದ್ಯಾವಂತರೂ ಶಾಸನಗಳ ಬಗ್ಗೆ ಅಸಡ್ಡೆ ಅಥವಾ ಮೌಢ್ಯವನ್ನೇ ಪ್ರದರ್ಶಿಸುತ್ತಾರೆ. ಅನೇಕ ಶಾಸನಗಳನ್ನು ದೇವಾಲಯದ ಗೋಡೆ, ತಳಪಾಯ ಮುಂತಾದ ಕಡೆ ಹಾಕಿ ಮುಚ್ಚುವುದು ನಡೆಯುತ್ತಿದೆ. ಇತ್ತೀಚೆಗೆ ಆಂಧ್ರ ಮೂಲದ ನಿಧಿಶೋಧಕರ ಧಾಳಿಗೆ ತುತ್ತಾಗುತ್ತಿವೆ. ಈ ಭಾಗದ ವಿಶ್ವವಿದ್ಯಾಲಯಗಳೂ ಈ ಬಗ್ಗೆ ಸೀಮಿತಕ್ಕೆ ಒಳಗಾಗಿವೆಯೆಂದರೆ ತಪ್ಪಲ್ಲ. ಶಾಸನಸಂಗ್ರಹಕ್ಕೆ ಬುದ್ಧಿಬಲದ ಜೊತೆಗೆ ಮನೋಬಲ ಹಾಗೂ ದೈಹಿಕ ಬಲದ ಅವಶ್ಯಕತೆಯೂ ಇದೆ. ಈ ಮೂರೂ ಬಲಗಳನ್ನು ಹೊಂದಿಲ್ಲದ ಉತ್ಸಾಹಿಗಳ ಕೊರತೆಯಿಂದ ಈ ಪ್ರದೇಶದ ಶಾಸನ ಕ್ಷೇತ್ರ ಸೊರಗುತ್ತಿದೆ. ಶಾಸನ ಪ್ರತಿ ತೆಗೆಯಲು ಹೋದಾಗ ಅನೇಕ ಗ್ರಾಮಗಳನ್ನು ಶಾಸನ ಪ್ರತಿ ತೆಗೆಯಲೂ ಬಿಡದಂತಹ ಪರಿಸ್ಥಿತಿ ಇದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಸ್ಥಾಪನೆಯಾದ ಮೇಲೆ ೧೯೯೫ರಲ್ಲಿ ಶಾಸನಶಾಸ್ತ್ರ ವಿಭಾಗವು ನನ್ನ ನೇತೃತ್ವದಲ್ಲಿ ಆರಂಭವಾಯಿತು. ಕರ್ನಾಟಕದ ಬೇರೆ ಯಾವ ವಿಶ್ವವಿದ್ಯಾಲಯದಲ್ಲಿಯೂ ಶಾಸನಕ್ಕೇ ಮೀಸಲಾದ ವಿಭಾಗವಿಲ್ಲ. ೧೯೯೬ರಲ್ಲಿ ಈ ವಿಭಾಗವು ಹೆಚ್ಚಿನ ಸಿಬ್ಬಂದಿಯನ್ನು ಇದಕ್ಕೆ ನೇಮಕ ಮಾಡಿಕೊಳ್ಳಲಾಯಿತು. ಈ ಸಮಯದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಪ್ರಗತಿಯಲ್ಲಿದ್ದಂತೆ ಉತ್ತರ ಕರ್ನಾಟಕದಲ್ಲಿಯೂ ಶಾಸನ ಅಧ್ಯಯನ ನಡೆಸಬೇಕೆಂಬ ಉತ್ಕಟವಾದ ಆಸೆಯಿಂದ ಶಾಸನಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯವನ್ನು ಕೈಗೊಳ್ಳಲಾಯಿತು. ೧೯೯೭ರಲ್ಲಿ ಈ ಯೋಜನೆಯ ಅಂಗವಾಗಿ ಬಳ್ಳಾರಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು. ನನ್ನ ನೇತೃತ್ವದಲ್ಲಿ ಈ ಕಾರ್ಯ ಆರಂಭವಾಗಿ ೧೯೯೮-೯೯ರಲ್ಲಿ ಈ ಸಂಪುಟದ ಪ್ರಕಟಣೆಯಾಯಿತು. ಬೇರೆ ಬೇರೆ ಕಡೆಗಳಲ್ಲಿ ಚುದುರಿ ಹೋಗಿದ್ದ ಹಾಗೂ ಇನ್ನು ಅನುಪಲಬ್ಧವಿದ್ದ ಶಾಸನಗಳನ್ನು ಸಂಗ್ರಹಿಸಿ ಅಪೂರ್ಣವಾಗಿ ಪ್ರಕಟವಾಗಿದ್ದ ಶಾಸನಗಳನ್ನು ಮತ್ತೊಮ್ಮೆ ಪರಿಷ್ಕರಿಸಿ ಈ ಸಂಪುಟವನ್ನು ಪ್ರಕಟಿಸಲಾಯ್ತು. ಈ ಸಂಪುಟಕ್ಕೆ ಮಾದರಿಯಾಗಿ ಈಗಾಗಲೇ ಪ್ರಕಟವಾಗಿದ್ದ ರೈಸರ ಎಪಿಗ್ರಾಫಿಯಾ ಕರ್ನಾಟಿಕಾ ಮತ್ತು SII ಸಂಪುಟಗಳನ್ನು ಮಾದರಿಯಾಗಿ ಇಟ್ಟುಕೊಂಡು ಶಾಸನದ ಮೂಲ ಪಾಠದ ಜೊತೆಗೆ ಸಾಮಾನ್ಯರಿಗೆ ಅನುಕೂಲವಾಗಲೆಂದು ಕನ್ನಡದಲ್ಲಿ ಸಾರಾಂಶವನ್ನೂ ಕನ್ನಡೇತರರಿಗೆ ಅನುಕೂಲವಾಗಲೆಂದು ಅದೇ ಸಾರಾಂಶದ ಇಂಗ್ಲೀಷ್ ಅನುವಾದವನ್ನೂ ನೀಡಲಾಗಿದೆ.

ಶಾಸನ ದೊರೆತ ಗ್ರಾಮ, ಸ್ಥಳದ ಜೊತೆಗೆ ಈಗಾಗಲೇ ಮುದ್ರಿತವಾಗಿದ್ದರೆ ಅದರ ಆಕರವನ್ನೂ ತಿಳಿಸಲಾಗಿದೆ. ಈ

ಸಂಪುಟಗಳಲ್ಲಿ ನನ್ನ ಸಂಪಾದಕತ್ವದ ಜೊತೆಯಲ್ಲಿ ಡಾ|| ಕೆ.ಜಿ. ಭಟ್ ಸೂರಿ, ಡಾ|| ಕಲವೀರಮನ್ನಾಚಾರ್ ಮತ್ತು ಡಾ| ಡಿ.ವಿ. ಪರಮಶಿವಮೂರ್ತಿ ಎಂಬುವವರು ದುಡಿದಿದ್ದಾರೆ.

ಈ ಶಾಸನಗಳ ಸಂಗ್ರಹದ ಸಂಪುಟಗಳಿಗೆ 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ' ಎಂಬ ಹೆಸರನ್ನು ನೀಡಲಾಗಿದೆ. ವಾಸ್ತವವಾಗಿ ಈ ಹೆಸರನ್ನು ಸೂಚಿಸಿದವರು ಡಾ|| ಎಸ್. ನಾಗರಾಜು ಅವರು ಈ ಸಂಪುಟಗಳಲ್ಲಿ ಶಾಸನಗಳನ್ನು ಜಿಲ್ಲಾವಾರು, ತಾಲೂಕುವಾರು ಗ್ರಾಮವಾರಾಗಿ ವಿಂಗಡಿಸಿ ಪ್ರಕಟಿಸಲಾಗಿದೆ.

ಮೇಲೆ ಉಲ್ಲೇಖವಾಗಿರುವ 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ' ಮಾಲಿಕೆಯಲ್ಲಿ ಈಗಾಗಲೇ ಬಳ್ಳಾರಿ ಜಿಲ್ಲೆ, ಕೊಪ್ಪಳ ಜಿಲ್ಲೆ ರಾಯಚೂರು ಜಿಲ್ಲೆಯ ಶಾಸನಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಹಂಪಿಯ ಸಂಪುಟವನ್ನು ಬಳ್ಳಾರಿಯಿಂದ ಪ್ರತ್ಯೇಕಿಸಿ ಬೇರೆ ಸಂಪುಟವಾಗಿ ತರಲಾಗಿದೆ. ಈ ಸಂಪುಟಗಳನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗದವರೇ ಮಾಡಿದ್ದಾರೆ. ಈ ಸಂಪುಟಗಳಲ್ಲದೆ ಹೊರನಾಡಿನ ಕನ್ನಡ ಶಾಸನಗಳನ್ನು ಒಂದೆಡೆ ತರುವ ಉದ್ದೇಶದಿಂದ ತಮಿಳುನಾಡಿನ ಕನ್ನಡ ಶಾಸನಗಳ ಸಂಗ್ರಹವನ್ನು ಡಾ|| ಬಾ.ರಾ. ಗೋಪಾಲ್, ಡಾ|| ಎಚ್. ಎಸ್. ಗೋಪಾಲರಾವ್ ಮತ್ತು ಪಿ. ವಿ. ಕೃಷ್ಣಮೂರ್ತಿಯವರೂ, ಆಂಧ್ರಪ್ರದೇಶದ ಕನ್ನಡ ಶಾಸನಗಳನ್ನು ಡಾ|| ಆರ್. ಶೇಷಶಾಸ್ತ್ರಿ, ಡಾ|| ಕೆ. ಆರ್. ಗಣೇಶ್ ಅವರೂ, ಮಹಾರಾಷ್ಟ್ರದ ಕನ್ನಡ ಶಾಸನಗಳನ್ನು ಡಾ|| ಉಪಾಧ್ಯ ಮತ್ತು ದೇವರಕೊಂಡಾರೆಡ್ಡಿಯವರೂ ತಂದಿರುತ್ತಾರೆ. ಇವಲ್ಲದೆ ಅಂದಿನ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡು ~~ಇವರಿಂದ~~ ಖುದ್ದೂಸಿಯವರಿಂದ ಕರ್ನಾಟಕದ ಪರ್ಷಿಯನ್ ಅರಾಬಿಕ್ ಮತ್ತು ಉರ್ದು ಶಾಸನಗಳೂ ಮುದ್ರಿತವಾಗಿದೆ. ಈಶಾನ್ಯ ಕರ್ನಾಟಕದ ಉಳಿದ ಜಿಲ್ಲೆಗಳಾದ ಬೀದರ್ ಜಿಲ್ಲೆಯ ಶಾಸನಗಳನ್ನು ಈಗಾಗಲೇ ಶ್ರೀಮತಿ ಹನುಮಾಕ್ಷಿ ಗೋಗಿಯವರು ಸಿದ್ಧಪಡಿಸಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಶಾಸನಗಳ ಸಂಪಾದನೆಯ ಹೊಣೆಯನ್ನೂ ಅವರೇ ಹೊತ್ತಿದ್ದಾರೆ. ವಾಯುವ್ಯ ಕರ್ನಾಟಕದ ಜಿಲ್ಲೆಗಳಾದ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಶಾಸನಗಳ ಕ್ಷೇತ್ರ ಕಾರ್ಯ ಮುಗಿದು ಬಾಗಲಕೋಟೆ ಜಿಲ್ಲೆಯ ಸಂಪುಟವು ಮುದ್ರಣದ ವಿವಿಧ ಹಂತದಲ್ಲಿದೆ. ಕರಾವಳಿ ಕರ್ನಾಟಕದ ಜಿಲ್ಲೆಗಳಾದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಶಾಸನ ಸಂಪುಟಗಳು ಡಾ|| ಕೆ. ವಿ. ರಮೇಶ್ ಮತ್ತು ಡಾ|| ಪಿ. ಎನ್. ನರಸಿಂಹಮೂರ್ತಿ ಅವರಿಂದ ಸಂಪಾದಿತವಾಗುತ್ತಿವೆ. ಈ ಸಂಪುಟಗಳೆಲ್ಲವೂ ಪ್ರಕಟವಾದಾಗ ಕರ್ನಾಟಕದ ಶಾಸನಗಳ ಸಮಗ್ರ ಚಿತ್ರಣ ಸ್ಪಷ್ಟವಾಗಿ ಸಿಗುತ್ತದೆ.

ಮಾನ್ಯರೆ, ಈಗ ಶಾಸನಗಳ ಸಂಪಾದನೆ ಮತ್ತು ಪ್ರಕಟಣೆ ಯಂತಹ ಕಾರ್ಯಗಳಿಗೆ ಯುವಪೀಳಿಗೆ ಮುಂದಾಗುತ್ತಿರುವುದು ಸಂತಸದ ವಿಷಯ. ನನ್ನ ಅನಿಸಿಕೆಯ ಪ್ರಕಾರ ಮೊದಲು ಶಾಸನ ಪಾಠಪ್ರಕಟಣೆ ನಂತರ ವಿಶ್ಲೇಷಣೆ | ಉತ್ತರ ಕರ್ನಾಟಕದಲ್ಲಿ ಈಗಾಗಲೇ ನೀರಾವರಿ ಯೋಜನೆಗಳು ತ್ವರಿತಗತಿಯಿಂದ ಸಾಗುತ್ತಿದ್ದು ಅಳಿದುಳಿದಿರುವ ಶಾಸನಗಳನ್ನು ನಾಳೆಯೆನ್ನದೆ ಇಂದೇ ರಕ್ಷಿಸಬೇಕಾದದ್ದು ನಮ್ಮ ಕರ್ತವ್ಯ. ಇಲ್ಲವಾದಲ್ಲಿ ಅನೇಕ ಶಾಸನಗಳು ಶಾಶ್ವತವಾಗಿ ನಾಶವಾಗುವ ಭಯವಿದೆ. ನಾನು ಇದುವರೆವಿಗೆ ಶಾಸನ ಪಾಠವಿರುವ ಶಾಸನಗಳ ಬಗ್ಗೆ ಮಾತ ನಾಡಿದೆ. ಆದರೆ ಶಾಸನ ಪಾಠವಿಲ್ಲದ ಅಪರೂಪದ ಶಾಸನ ಶಿಲ್ಪಗಳಿರುವವನ್ನೂ ಇಂದು ಗುರುತಿಸಿ ರಕ್ಷಿಸಬೇಕಾಗಿದೆ. ಇದಕ್ಕಾಗಿ ಇತಿಹಾಸ ಅಕಾದೆಮಿ, ಕನ್ನಡ ಸಾಹಿತ್ಯ ಪರಿಷತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆ ಮುಂತಾದವು ಶಾಸನಾಭ್ಯಾಸ ಯುವ ಪೀಳಿಗೆಗೆ ನೀಡುತ್ತಿರುವ ಪ್ರೋತ್ಸಾಹ ಸ್ಮರಣೀಯವಾದದು. ಇವಲ್ಲದೆ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಮುಂತಾದವು ಯುವ ಪೀಳಿಗೆಗೆ ಕಮ್ಮಟಗಳನ್ನು ನಡೆಸುವ ಮೂಲಕ ಶಾಸನಗಳ ರಕ್ಷಣೆಗೆ ಮುಂದಾಗಬೇಕಿದೆ.

ಉತ್ತರ ಕರ್ನಾಟಕದಲ್ಲಿ ಶಾಸನಾಧರಿತ ಸಾಂಸ್ಕೃತಿಕ ಚರಿತ್ರೆ ಕುಂಠಿತಗೊಂಡಿರಲು ಕಾರಣ ಶಾಸನಗಳು ಒಂದೆಡೆ ಲಭ್ಯವಾಗದಿರುವುದು. ಕೊಪ್ಪಳ ಜಿಲ್ಲೆಯ ಶಾಸನ ಸಂಪುಟ ಪ್ರಕಟವಾದಾಗ ಅದನ್ನು ಕುರಿತು ಸಂಶೋಧನೆ ಮಾಡಲು ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ಮಾಡಲು ಅನೇಕ ವಿಷಯಗಳ ಮೇಲೆ ನೋಂದಾವಣೆಯಾಗಿವೆ. ಇದು ಶಾಸನಗಳು ಒಂದೆಡೆ ಲಭ್ಯವಾದರೆ ಅದರ ಸಾಂಸ್ಕೃತಿಕ ಅಧ್ಯಯನದ ಪರಿಣಾಮವನ್ನು ಸೂಚಿಸುತ್ತಿದೆ.

ಇದಲ್ಲದೆ ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ನಡೆದ ಕಲ್ಯಾಣದ ಕ್ರಾಂತಿಯ ಬಗೆಗೆ ಎಲ್ಲ ಶಾಸನಗಳು ಪ್ರಕಟವಾದಾಗ ಹೆಚ್ಚಿನ ಅಥವಾ ನಿಜವಾದ ಕಾರಣಗಳು ಲಭ್ಯವಾಗುವ ಸಾಧ್ಯತೆಯಿದೆ. ಈಗ ಸಾಮಾನ್ಯರೂ ಶಾಸನಗಳ ಬಗ್ಗೆ ಲೇಖನ ಬರೆಯಲು 'ಇತಿಹಾಸ ದರ್ಶನ' ಸಂಪುಟದಂತಹ ಮಾಧ್ಯಮವಿದೆ. ಈಗ ತಾನೇ ಹಂಪಿಯ ಶಾಸನಶಾಸ್ತ್ರ ವಿಭಾಗವು ಶಾಸನಾಧ್ಯಯನ ಎಂಬ ನಿಯತಕಾಲಿಕೆಯನ್ನು ಹೊರತಂದಿದ್ದು ಅಲ್ಲಿಯೂ ಶಾಸನಾಸಕ್ತರು ತಮ್ಮ ಲೇಖನಗಳನ್ನು ನೀಡಬಹುದಾಗಿದೆ. ಈ ಹಿಂದೆ ಇಂತಹ ಸವಲತ್ತುಗಳು ಸೀಮಿತವಾಗಿದ್ದವು. ಶಾಸನಾಸಕ್ತರಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಶಾಸನಶಾಸ್ತ್ರ ವಿಷಯದಲ್ಲಿ ದೂರ ಶಿಕ್ಷಣವನ್ನೂ ಆರಂಭಿಸಿದೆ.

ಕರ್ನಾಟಕದ ಶಾಸನಗಳು ಭಾರತದ ಉಳಿದ ಪ್ರದೇಶಗಳ

ಶಾಸನಗಳಿಗಿಂತ ಹೆಚ್ಚಿಗೆ ದೇಶೀಯ ಹಾಗೂ ವಿದೇಶೀಯ ವಿದ್ವಾಂಸರ ಗಮನಸೆಳೆದಿದೆ. ಇದಕ್ಕೆ ಕಾರಣ ಇಲ್ಲಿನ ಶಾಸನಗಳ ವೈವಿಧ್ಯತೆ. UNESCO Courier ಎಂಬ ನಿಯತಕಾಲಿಕೆಯಲ್ಲಿ ಪ್ರಪಂಚದ ಲಿಪಿಗಳ ಪರಿಚಯ ನೀಡುವಾಗ ಭಾರತದ ನಾಗರಿ ಮತ್ತು ಹೊಯ್ಸಳರ ಕಾಲದ ಕನ್ನಡ ಶಾಸನವೊಂದನ್ನು ಉದಾಹರಿಸಿರುತ್ತಾರೆ. ಇಂತಹ ಉದಾಹರಣೆಗಳು ಎಷ್ಟೊ ಇವೆ. ಇಂತಹ ವೈವಿಧ್ಯಮಯ ವಾದ ಶಾಸನಗಳನ್ನು ಹೊಂದಿರುವ ನಾವು ಹೆಮ್ಮೆ ಪಡಬೇಕಾಗಿದೆ.

ಈ ಸಮಯದಲ್ಲಿ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ಹಂಪೆಯ ಶಾಸನಗಳ ಸಾರಾಂಶವನ್ನು ಒಂದೆಡೆ ಸಂಗ್ರಹಿಸಿ ನೀಡಿದ ದಿವಂಗತ ಡಾ. ಸಿ. ಎಸ್. ಪಾಟೀಲ್ ಅವರನ್ನು ಹಾಗೂಉತ್ತರ ಕರ್ನಾಟಕದ ಅನೇಕ ಶಾಸನಗಳನ್ನು ಸಂಗ್ರಹಿಸಿದ ಡಾ. ಆರ್. ಎನ್. ಗುರುವ ಅವರನ್ನು ನೆನಪಿಸಿಕೊಳ್ಳುವುದು ಸೂಕ್ತ.

ಸನ್ಮಾನ್ಯರೆ, ಇದುವರೆವಿಗೆ ತಾಳ್ಮೆಯಿಂದ ನನ್ನ ಕೆಲವು ಮಾತುಗಳನ್ನು ಆಲಿಸಿದ್ದೀರಿ. ಈ ದಿನದ ಬಾ.ರಾ. ಗೋಪಾಲ್ ಅವರ ಹೆಸರಿನಲ್ಲಿಟ್ಟಿರುವ ಪ್ರಶಸ್ತಿಗೆ ನಾನು ಅರ್ಹನಾಗಲು ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಗ್ಯಾಜೆಟಿಯರ್, ಕರ್ನಾಟಕ ಇತಿಹಾಸ ಅಕಾದೆಮಿ ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ಮೂರು ಸಂಸ್ಥೆಗಳು ಕಾರಣ. ಇವುಗಳಲ್ಲಿ ದುಡಿದು ನನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದೇನೆ. ಹಾಗೆಯೇ ಈ ಕ್ಷೇತ್ರದಲ್ಲಿ ದುಡಿಯುಲು ಅವಕಾಶ ರೂಪಿಸಿಕೊಟ್ಟ ಮುಖ್ಯವಾಗಿ ಜಿ. ನಾರಾಯಣ, ಡಾ|| ಸೂರ್ಯನಾಥ ಕಾಮತ್, ಡಾ|| ಆರ್. ಶೇಷಶಾಸ್ತ್ರಿ, ಡಾ|| ಎಂ. ಎಂ. ಕಲಬುರ್ಗಿ, ಡಾ. ಎಚ್.ಜಿ. ಲಕ್ಕಪ್ಪಗೌಡ, ಡಾ|| ಕೆ.ವಿ. ನಾರಾಯಣ ಹಾಗು ನಿಮ್ಮಂತಹ ಮಿತ್ರರು ಕಾರಣರಾಗಿದ್ದೀರಿ. ನಿಮ್ಮೆಲ್ಲರಿಗೆ ವ್ಯಕ್ತಿಗತವಾಗಿ ನಾನು ನಮನಗಳನ್ನು ಸಲ್ಲಿಸುತ್ತಿದ್ದೇನೆ.


ಜೈ ಕರ್ನಾಟಕ

ಪ್ರೊ. ಲಕ್ಷ್ಮಣ್ ತೆಲಗಾವಿ*

ಬೆಳಗಟ್ಟ ಗ್ರಾಮ ಪರಿಸರದ ಎದ್ದುಲುಬಂಡೆಯ ಬಯಲುಬಂಡೆ ರೇಖಾಕೃತಿಗಳು

೧. ನಿವೇಶನದ ನೆಲೆ

ಚಿತ್ರದುರ್ಗ ತಾಲ್ಲೂಕು, ತುರುವನೂರು ಹೋಬಳಿಗೆ ಸೇರಿದ ಬೆಳಗಟ್ಟಗ್ರಾಮವು ಚಿತ್ರದುರ್ಗದ ಈಶಾನ್ಯಕ್ಕೆ ಚಿತ್ರದುರ್ಗ ತುರವನೂರು ಮಾರ್ಗದಲ್ಲಿ ೧೧ ಕಿ.ಮೀ. ಅಂತರದಲ್ಲಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಎದ್ದುಲುಬಂಡೆ ನೆಲಸಿರುವುದು ಬೆಳಗಟ್ಟಗ್ರಾಮಕ್ಕೆ ೧ ಕಿ.ಮೀ. ಹಿಂದೆಯೇ ಮುಖ್ಯಮಾರ್ಗದ ಎಡಬದಿ(ಪಶ್ಚಿಮದ ಬದಿ)ಯಲ್ಲಿ, ರಸ್ತೆಯಿಂದ ಸುಮಾರು ೨೫೦ಮೀಟರ್ ದೂರದಲ್ಲಿ. ಈ ಎದ್ದುಲುಬಂಡೆಯೆಂಬುದೊಂದು ವಿಶಾಲವಾದ ಮಟ್ಟಿ ಅಥವಾ ಗುಡ್ಡ; ತೀರಾ ಎತ್ತರದ್ದಲ್ಲದ ಒಂದು ದೊಡ್ಡ ದಿಬ್ಬ. ವಾಸ್ತವದಲ್ಲಿ, ಇದೊಂದು ಒಂಟಿ ಗುಡ್ಡ. ಇದರ ವಿನಾ ಇಲ್ಲಿ ನಾಲ್ಕುದಿಕ್ಕುಗಳಲ್ಲಿ ೧-೨ ಕಿ.ಮಿ. ಗಳ ವರೆಗೆ ಇಂಥಾ ಯಾವುದೇ ಗುಡ್ಡ/ಮಟ್ಟಿ ಕಂಡುಬರುವುದಿಲ್ಲ.



ಎದ್ದುಲುಬಂಡೆಗುಡ್ಡ ನಿವೇಶನ ಮತ್ತು ಇತರ ಪ್ರಾಕ್ಚಾರಿತ್ರಿಕ ಎಡೆಗಳು

ಎದ್ದುಲುಬಂಡೆ ಹಬ್ಬಿರುವದು ಉತ್ತರ-ದಕ್ಷಿಣವಾಗಿ. ಈ ಗುಡ್ಡದ ಮಟ್ಟ ಪೂರ್ವ-ಪಶ್ಚಿಮವಾಗಿ ಏರುತ್ತಾ ನಡೆದಿದೆ. ಪೂರ್ವದ ಬುಡದಲ್ಲಿ ತೀರಾ ಎತ್ತರದ್ದಲ್ಲದ ಶಿಲಾಸಮೂಹವಿದೆ. ಮಧ್ಯದಲ್ಲಿ ತಕ್ಕಮಟ್ಟಿನ ಚಪ್ಪಟೆ ಪ್ರದೇಶವಿದ್ದು, ಇದರ ಎರಡೂ ಬದಿಗಳು ಇಳಿಜಾರಾಗಿದೆ. ಪಶ್ಚಿಮದಿಕ್ಕಿನ ಭಾಗವು ತೀರಾ ಎತ್ತರದ್ದಾಗಿದ್ದು, ಇದೇ ಇಲ್ಲಿಯ ಕೇಂದ್ರ ಶೃಂಗ ಅಥವಾ ಶಿಖರ. ಮಧ್ಯದ ಚಪ್ಪಟೆ ಪ್ರದೇಶದಲ್ಲಿ ನಿಂತು ನೋಡಿದರೆ ಇದು ಕುಳ್ಳಾದ ಶಿಖರದಂತೆ ಕಾಣುತ್ತದೆ. ಭೂಮಟ್ಟದಿಂದ ಇದರ ಎತ್ತರ ಕನಿಷ್ಠ ೩೦ ಮೀಟರ್. ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಿವಿಧ ಬಗೆಯ ರೇಖಾಕೃತಿಗಳಿದ್ದು, ರೇಖಾಕೃತಿಗಳ ಭಂಡಾರದಂತಿದೆ. ಈ ಗುಡ್ಡದ ಹಿಂಭಾಗವು ದೂರದಿಂದ ಸಾಧಾರಣ ಇಳಿಜಾರಿನಂತೆ ಕಂಡುಬಂದರೂ, ಮೇಲಿನಿಂದ ಕೆಳಕ್ಕೆ ಸುಲಭದಲ್ಲಿ ಇಳಿಯಲಾಗದಷ್ಟು ಕಡಿದಾಗಿದೆ. ಎದ್ದುಲುಬಂಡೆ-ಗುಡ್ಡ ಪ್ರದೇಶದ ಒಟ್ಟು ವಿಸ್ತೀರ್ಣ ಸುಮಾರು ಒಂದು ನೂರು ಎಕರೆ. ಬೃಹತ್ ಬಂಡೆರಹಿತ ಎದ್ದುಲುಬಂಡೆ ದೂರನೋಟಕ್ಕೆ ಸಾಮಾನ್ಯ ಮಟ್ಟಿಯೆಂದು ಕಂಡುಬಂದರೂ ಇದು ತನ್ನಲ್ಲಿ ಹುದುಗಿಸಿಕೊಂಡಿರುವ ಕಲಾಸಂಪತ್ತು ವಿಸ್ಮಯವನ್ನುಂಟು ಮಾಡುವಂಥದ್ದು.

ಸ್ಥಳೀಯರು ಈ ಮಟ್ಟಿಯನ್ನು ಗುರುತಿಸುವುದು ಎದ್ದುಲುಬಂಡೆಯಂತಲೇ. 'ಎದ್ದುಲುಬಂಡೆ'ಯೆಂಬುದು ತೆಲುಗು ಮೂಲದ ಹೆಸರು. ಕನ್ನಡದಲ್ಲಿ ಇದಕ್ಕಿರುವ ಅರ್ಥ **'ಎತ್ತುಗಳ ಬಂಡೆ (ಗುಡ್ಡ)'**. ಬೆಳಗಟ್ಟ ಮತ್ತು ಈ ಪ್ರದೇಶದ ಇತರ ಗ್ರಾಮಗಳಲ್ಲಿ ಹಿಂದಿನಿಂದಲೂ ತೆಲುಗುಭಾಷೆಯನ್ನಾಡುವ ಮ್ಯಾಸಬೇಡ, ರೆಡ್ಡಿ ಮೊದಲಾದ ಸಮುದಾಯಗಳವರು ಅಧಿಕವಾಗಿರುವುದೇ ಈ ಗುಡ್ಡಕ್ಕೆ ತೆಲುಗು ಹೆಸರು ಬರಲು ಕಾರಣ. ಈ ಗುಡ್ಡವು ಹೆಚ್ಚಾಗಿ ಪ್ರಾಣಿವರ್ಗಕ್ಕೆ ಸಂಬಂಧಿಸಿದ ರೇಖಾಕೃತಿಗಳಿಂದ ಕೂಡಿರುವುದರಿಂದ, ಸ್ವಾಭಾವಿಕವಾಗಿಯೇ ಇದನ್ನು **'ಎತ್ತುಗಳಗುಡ್ಡ'**ವೆಂಬ ಅನ್ವರ್ಥನಾಮದಿಂದ ಕರೆಯಲಾಗಿದೆ. ಕರ್ನಾಟಕದಲ್ಲಿ



ಎದ್ದುಲುಬಂಡೆ ದೂರನೋಟ

* ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ಈಗಾಗಲೇ ವರದಿಯಾಗಿರುವ ಎಮ್ಮೆಗುಡ್ಡ (ಕಲ್ಲೂರು, ರಾಯಚೂರು ಜಿಲ್ಲೆ) ಮತ್ತು ಗೊಂಬಿಗುಡ್ಡಗಳಂತೆಯೇ ಇದೀಗ ಬೆಳಗಟ್ಟಗ್ರಾಮ ಪರಿಸರದ ಎದ್ದುಲುಬಂಡೆಯೂ ಪತ್ತೆಯಾಗಿರುವುದು ಗಮನಾರ್ಹ. ಚಿತ್ರದುರ್ಗ ಜಿಲ್ಲೆಯ ಮಟ್ಟಿಗೆ, ರೇಖಾಕೃತಿಗಳ ಸಮೂಹವುಳ್ಳ ಇಂಥಾ ಗುಡ್ಡವಾಗಲಿ, ಅದಕ್ಕೆ ಇಂಥ ಹೆಸರನ್ನು ಆರೋಪಿಸಿರುವುದಾಗಲಿ ಈವರೆಗೆ ವರದಿಯಾಗಿರಲಿಲ್ಲ. ಈಗ ಮೊದಲಬಾರಿಗೆ ಇಂಥಾ ನಿವೇಶನ ಕುರಿತು ಈ ಪ್ರಬಂಧದಲ್ಲಿ ಕೆಲವು ಪ್ರಾಥಮಿಕ ವಿವರಗಳನ್ನು ಮಂಡಿಸಲಾಗಿದೆ.

೨. ಶಿಲಾವರ್ಗ

ಜಗಲೂರು, ಬೆಳಗಟ್ಟ ಮತ್ತು ಕೂನಬೇವು ಪ್ರದೇಶಗಳಲ್ಲಿ ಹಾಸುಗಲ್ಲುಗಳಾಗಿ ಉಪಯುಕ್ತವಾಗಿರುವ ಹಲಗೆಯಂಥಾ ಸ್ಲೇಟ್‌ಶಿಲೆ ಮತ್ತು ಫಿಲ್ಲೈಟ್‌ಗಳನ್ನು ತೆಗೆಯಲಾಗುತ್ತಿರುವುದನ್ನು ಚಿತ್ರದುರ್ಗ ತಾಲ್ಲೂಕಿನ ಭೂವಿಜ್ಞಾನ ಕುರಿತ ಅಧ್ಯಯನಗಳು ತಿಳಿಸುತ್ತವೆ. ಶೇಲ್ ಎನ್ನುವುದು ಜೇಡಿಮಣ್ಣು. ಇದು ಒತ್ತಡದಿಂದ ಶಿಲೆಯಾಗುತ್ತದೆ. ಶೇಲ್ ಶಿಲೆಯ ಮೇಲೆ ಹೆಚ್ಚು ಪ್ರಮಾಣದಲ್ಲಿ ಒತ್ತಡವುಂಟಾದಾಗ ಪಿಲ್ಲೈಟ್‌ಶಿಲೆಯಾಗುವುದನ್ನು, ಇದು ಶೇಲ್‌ಸ್ಲೇಟ್ ಎಂಬ ಶಿಲೆಯ ಅಸ್ತಿತ್ವಕ್ಕೆ ಕಾರಣವಾಗುವುದನ್ನು, ಸ್ಲೇಟ್‌ಗಿಂತಲೂ ಫಿಲ್ಲೈಟ್‌ಗೆ ಹೆಚ್ಚು ಹೊಳಪಿರುವುದನ್ನು, ಮೈಕಾ ಅಭ್ರಕದ ಸೂಕ್ಷ್ಮ ತುಣುಕುಗಳಿಂದ ಕೂಡಿರುವುದರಿಂದ ಈ ಶಿಲೆಗೆ ರೇಷ್ಮೆಯ ಹೊಳಪು ಬಂದಿರುವುದನ್ನು ಈ ಅಧ್ಯಯನಗಳು ದೃಢಪಡಿಸುತ್ತವೆ. ಸಾಗರದ ತಳದಲ್ಲಿ ರೂಪಿತ ವಾಗಿ ಭೂಚಲನೆಯಿಂದ ಮೇಲೆದ್ದು ಬಂದ ಜಲಜಶಿಲೆಗಳ ವಲಯವಾಗಿ ಚಿತ್ರದುರ್ಗ ಸಮೀಪದ ಗುಡ್ಡದರಂಗವ್ವನಹಳ್ಳಿ ಪರಿಸರವನ್ನು ಗುರುತಿಸಲಾಗಿದ್ದು, ಈ ಜಲಜಶಿಲೆಗಳು ರೂಪಾಂತರವಾಗಿ

ಎದ್ದುಲುಬಂಡೆ -ಮೇಲ್ಭಾಗ



ವ್ಯಾಪಕವಾಗಿ ಹಬ್ಬಿರುವ ಹಲವು ವಿಧದ ಶಿಲೆಗಳ ದರ್ಶನವಾಗುತ್ತದೆ. ಜಲಜಶಿಲಾವರ್ಗಕ್ಕೆ ಸೇರಿದ ನೊರಜುಶಿಲೆ (ಬ್ರೆಷಿಯಾ), ಪೆಂಟಿಶಿಲೆ (ಕಂಗ್ಲಾಮರೇಟ್ಸ್), ಮರಳುಶಿಲೆ (ಸ್ಯಾಂಡ್‌ಸ್ಟೋನ್ಸ್) ಜೇಡುಶಿಲೆ (ಶೇಲ್ಸ್) ಮತ್ತು ಸುಣ್ಣಶಿಲೆ (ಲೈಮ್‌ಸ್ಟೋನ್)ಗಳ ಮಿಶ್ರಣದ ಶಿಲಾರಾಶಿ ಇಲ್ಲಿಯದು. ಕೊರೆಚಿತ್ರಗಳು ಕಂಡುಬಂದಿರುವುದು ಇಂಥಾ ಶಿಲೆಗಳ ಮೇಲೆಯೇ.

ಸ್ಥಳೀಯರು ಇಲ್ಲಿಯ ಶಿಲಾವರ್ಗವನ್ನು ಸಳುಕುಕಲ್ಲು, ಕರೇಕಲ್ಲು, ಹಳದಿಬಣ್ಣದಕಲ್ಲು (ಪಸುವರ್ಣಕಲ್ಲು-ತೆಲುಗು)ಗಳಿಂದು ಗುರುತಿಸುವುದುಂಟು. ಒಡೆದರೆ ಹಲಗೆರೂಪದಲ್ಲಿ ಸೀಳುವ ಈ ಕಲ್ಲುತುಂಡುಗಳನ್ನು ಜೋಡಿಸಿ ತಮ್ಮ ತಮ್ಮ ಹೊಲಗಳಿಗೆ ಅಲ್ಲಲ್ಲಿ ಸಾಮಾನ್ಯ ಎತ್ತರದ ತಡೆಗೋಡೆಗಳನ್ನು ಹಾಕಿಕೊಂಡಿರುವುದುಂಟು.

೩. ಈವರೆಗಿನ ಸಂಶೋಧನೆ


ಚಿತ್ರದುರ್ಗ-ತುರುವನೂರು ಮಾರ್ಗ ಮತ್ತು ಚಿತ್ರದುರ್ಗ-ಸೊಲ್ಲಾಪುರದ ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ಬರುವ ತಮಟಕಲ್ಲು, ಗುಡ್ಡದರಂಗವ್ವನಹಳ್ಳಿ, ಗೋನೂರು, ಕಲ್ಲೇನಹಳ್ಳಿ, ವೀರಮೆದ ಕೇರಿಪುರ (ಬೇಚರಾಕ್), ಬೆಳಗಟ್ಟ, ಬಾಗೇನುಹಾಳು, ಹಾಯಕಲ್ಲು, ತುರುವನೂರು, ಚಿಪ್ಪಿನಕೆರೆ, ಸಂಗೇನಹಳ್ಳಿಕೆರೆ ಮೊದಲಾದ ಪ್ರದೇಶಗಳಲ್ಲಿ ಈಚಿನ ವರ್ಷಗಳಲ್ಲಿ ಕೈಗೊಳ್ಳಲಾದ ವ್ಯಾಪಕ ಕ್ಷೇತ್ರಕಾರ್ಯದಲ್ಲಿ ಬಯಲುಬಂಡೆ ರೇಖಾಕೃತಿಗಳಿರುವ ಎಡೆಗಳು, ಕಬ್ಬಿಣಯುಗದ ಬೃಹತ್‌ಶಿಲಾಯುಗದ ಸಂಸ್ಕೃತಿಯ ನೆಲೆಗಳು, ಚರಿತ್ರಾರಂಭಕಾಲದ ನಿವೇಶನಗಳು, ಶಾತವಾಹನಕಾಲೀನ ಸಂಸ್ಕೃತಿ ನಿವೇಶನಗಳು ಹಾಗೂ ಇತರ ಪ್ರಾಚೀನ ನಿವೇಶನಗಳನ್ನು ಶೋಧಿಸಲಾಗಿದೆ; ಇವುಗಳಲ್ಲಿ ಕೆಲವನ್ನು ವರದಿ ಮಾಡಲಾಗಿದೆ. ಈಚೆಗೆ ಇದೇ ಭಾಗದ ಕೂನಬೇವು ಮತ್ತು ಬೆಳಗಟ್ಟಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿನೆಲೆಗಳನ್ನು ಸಂಶೋಧಕರು ಪತ್ತೆಹಚ್ಚಿರುತ್ತಾರೆ.

ಬಯಲುಬಂಡೆ ರೇಖಾಕೃತಿಗಳ ಶೋಧದ ಮಟ್ಟಿಗೆ, ಈ ಮೇಲೆ ಪ್ರಸ್ತಾಪಿಸಿದ ನಿವೇಶನಗಳಲ್ಲದೆ, ಇವುಗಳಿಗೆ ಸಮೀಪವಿರುವ ಎಡೆಗಳು ಮುಖ್ಯವಾಗಿ ಗುಡ್ಡಪ್ರದೇಶಗಳು ಸಂಶೋಧಕರ ಗಮನ ಸೆಳೆಯುತ್ತವೆ. ಚಿತ್ರದುರ್ಗ ನಗರವ್ಯಾಪ್ತಿಯ ಹೊರಗೆ, ತುರುವನೂರಿಗೆ ಹೋಗುವ ಮುಖ್ಯಮಾರ್ಗದ ಅಕ್ಕಪಕ್ಕಗಳಲ್ಲಿ ಬರುವ ಹಂಪಯ್ಯನಮಾಳಿಗೆ, ಕಲ್ಲೇನಹಳ್ಳಿಯ ಸಮೀಪ ಬೇಡ ಜನಾಂಗದ ಸಾಂಸ್ಕೃತಿಕ ನಾಯಕ **ಸೂರೆ ಯರಗಾಟನಾಯಕ** ಮಡಿದ ಸ್ಥಳವಿರುವ ಕಣಿವೆ (ಅಜ್ಜನ ಕಣಿವೆ) ಮತ್ತಿತರ ಪ್ರದೇಶಗಳು ಈ ನಿಟ್ಟಿನಲ್ಲಿ ಮುಖ್ಯವಾದುವು. ಗುಡ್ಡವೊಂದರ ಶಿಲಾಓಟವನ್ನನುಸರಿಸಿ ಪ್ರಾಣಿವರ್ಗದ ರೇಖಾಕೃತಿಗಳ, ಕುಳಿಗಳು (ಕಪ್‌ಮಾರ್ಕ್ಸ್) ಮತ್ತು ಅವುಗಳ ವಿನ್ಯಾಸಗಳು ಅಲ್ಲಲ್ಲಿ ಚದುರಿದಂತೆ ಇದ್ದರೂ ಸಾಲಾಗಿ ಕಂಡುಬರುವುದು ವಿಶೇಷ. ಗುಡ್ಡ/ಮಟ್ಟಿಗಳ ಅಂಚುಗಳಲ್ಲಿ, ಬಯಲಿನಲ್ಲಿ ತಕ್ಕಮಟ್ಟಿಗೆ ಸಮತಟ್ಟಾಗಿರುವ ಬಂಡೆ/ಗುಂಡುಗಳು ಮೇಲೆ ಇಂಥಾ ಕೊರೆಚಿತ್ರಗಳು ತಮ್ಮ ಅಸ್ತಿತ್ವ ಪಡೆದಿರುತ್ತವೆ. ಈಚೆಗೆ ಚಿಕ್ಕಜಗಲೂರು, ಬೊಗ್ಗಲರಂಗವ್ವಹಳ್ಳಿಗಳ ಪರಿಸರದಲ್ಲೂ ಇಂಥಾ ರೇಖಾಕೃತಿಗಳ ಕುರುಹುಗಳಿರುವುದನ್ನು ಸಂಶೋಧಕರು ವರದಿಮಾಡಿದ್ದಾರೆ. ಇದೀಗ ಪತ್ತೆಹಚ್ಚಲಾಗಿರುವ ಬೆಳಗಟ್ಟ ಸಮೀಪದ ಎದ್ದುಲುಬಂಡೆಯು ಈ ಪ್ರದೇಶದ ವಿವಿಧ ಬಗೆಯ ಅಸಂಖ್ಯಾತ ರೇಖಾಕೃತಿಗಳನ್ನು, ಮುಖ್ಯವಾಗಿ ಪ್ರಾಣಿವರ್ಗದವನ್ನು ಹೊಂದಿರುವ ದೊಡ್ಡ ನೆಲೆಯನ್ನಲಡ್ಡಿಯಿಲ್ಲ. ಗುಡ್ಡದ

ಹೆಸರೇ ಇದನ್ನು ಸಮರ್ಥಿಸುತ್ತದೆ. ಹೀಗಾಗಿ ಎದ್ದುಲು ಬಂಡೆಯು ಈ ಪರಿಸರದಲ್ಲಿ ಬಯಲುಬಂಡೆ ರೇಖಾಕೃತಿಗಳ ಪರಂಪರೆ ಮುಂದುವರೆದುದರ ಹಾಗೂ ಆ ಬಗೆಗೆ ಸ್ಥಳೀಯ ಸಮುದಾಯಗಳು ಹೊಂದಿದ್ದ ಅಭಿರುಚಿ ಹಾಗೂ ವಹಿಸಿದ್ದ ವಿಶೇಷ ಆಸಕ್ತಿ-ಮುತುವರ್ಜಿಗಳ ಪ್ರತೀಕವಾಗಿ ಕಾಣಿಸಿಕೊಳ್ಳುತ್ತದೆನ್ನಬೇಕು.

೪. ರೇಖಾಕೃತಿಗಳ ವಿವರ

'ಎದ್ದುಲುಬಂಡೆ' ಎಂಬ ಹೆಸರೇ ಸೂಚಿಸುವಂತೆ, ಈ ಗುಡ್ಡದಲ್ಲಿರುವ ರೇಖಾಕೃತಿಗಳು ಬಹುಪಾಲು ಎತ್ತು/



ವಿಶಿಷ್ಟ ಮಾನವ ರೇಖಾಕೃತಿ

ಗೂಳಿಚಿತ್ರಗಳಿಂದಲೇ ಕೂಡಿವೆ. ಉಳಿದಂತೆ, ಇತರ ಕೊರೆಚಿತ್ರಗಳ ಸಂಖ್ಯೆಯೂ ಗಣನೀಯವಾಗಿದೆ. ಅಧ್ಯಯನದ ದೃಷ್ಟಿಯಿಂದ ಇಲ್ಲಿಯ ರೇಖಾಕೃತಿಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು:

೧. **ವಿವಿಧಕಾಲೀನ ಪ್ರಾಣಿವರ್ಗದ (ಗೂಳಿಗಳು) ರೇಖಾ ಕೃತಿಗಳು**
೨. **ಮನುಷ್ಯಾಕೃತಿಗಳು**
೩. **ಖಡ್ಗಗಳನ್ನು ಹಿಡಿದಿರುವ ಕುದುರೆ ಸವಾರರು**
೪. **ಮಾನವ ಪಾದಾಕೃತಿಗಳು**
೫. **ಜ್ಯಾಮಿತಿಯಾಕೃತಿಗಳು**
೬. **ಕುಳಿಗಳು (ಕಪ್‌ಮಾರ್ಕ್ಸ್) ಮತ್ತು ಕುಳಿವಿನ್ಯಾಸಗಳು**
೭. **ಆಂಜನೇಯ ರೇಖಾಕೃತಿ.**

ಈ ಗುಡ್ಡದಲ್ಲಿ ಮೂಡಿಸಲಾಗಿರುವ ಪ್ರಾಣಿ/ಗೂಳಿಯಾಕೃತಿಗಳ ನಿರ್ದಿಷ್ಟ ಸಂಖ್ಯೆಯನ್ನು ಹೇಳುವುದು ಸುಲಭವಲ್ಲ. ಸಹಸ್ರ ಸಂಖ್ಯೆಯಲ್ಲಿ ಸೂಚಿಸುವುದು ಉಚಿತವಾದೀತು. ೫ ಸೆಂ.ಮೀ.ನಿಂದ ೨೫ ಸೆಂ.ಮೀವರೆಗಿನ ಗೂಳಿಯಾಕೃತಿಗಳು ಇಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಹೆಚ್ಚಿನವು ಪೂರ್ವಾಭಿಮುಖನಾಗಿರುವುದು ವಿಶೇಷ. ದಕ್ಷಿಣಾಭಿಮುಖನಾಗಿರುವ ಆಕೃತಿಗಳೂ ಸಾಕಷ್ಟಿವೆ. ಆರಾಧನೆಯ ಎಡೆಯೆಂದು ಭಾವಿಸಬಹುದಾದ ಕೆಲವು ತಾಣಗಳು ಇಲ್ಲಿವೆ. ತೀರಾ ಮಟ್ಟಸವಾದ ಪ್ರದೇಶವಿರುವುದು ಮುಖ್ಯಗುಡ್ಡದ ಮೇಲೆಯೇ. ಈ ಲಕ್ಷಣಗಳೆಲ್ಲ ಇಲ್ಲಿಯೇ ಹೆಚ್ಚಾಗಿ ಕಂಡುಬರುತ್ತವೆ. ಇಲ್ಲಿ ಸಣ್ಣ-ಪುಟ್ಟ ನೈಸರ್ಗಿಕ ದೊಣೆಗಳಿದ್ದು, ಇವುಗಳ ಅಂಚಿನಲ್ಲಿ, ಬುಡದಲ್ಲಿ, ಅಕ್ಕಪಕ್ಕಗಳಲ್ಲಿ ಸಾಕಷ್ಟು



ಅಗಲವಾದ ಕೊಂಬುಗಳುಳ್ಳ ವಿಶಿಷ್ಟ ಗೂಳಿಯಾಕೃತಿ

ಗೂಳಿಯಾಕೃತಿಗಳಿವೆ. ಭಾರಿ ಭುಜಗಳಿರುವ ಗೂಳಿಗಳ ಕೊಂಬುಗಳು ನಾನಾ ವಿನ್ಯಾಸಗಳಿಂದ ಕೂಡಿರುವುದು ವಿಶೇಷ. ತೀರಾ ಉದ್ದನೆಯ ಕೊಂಬುಗಳಿರುವುದು ಗಮನಾರ್ಹ.

ಉಳಿದ ರೇಖಾಕೃತಿಗಳಲ್ಲಿ, ಕುದುರೆಗಳನ್ನು ಏರಿರುವ ಆಯುಧಧಾರಿ ವ್ಯಕ್ತಿಗಳು ಗಮನ ಸೆಳೆಯುತ್ತಾರೆ. ಈ ರೇಖಾಕೃತಿಗಳಿಗಿರುವ ಸಾಂಸ್ಕೃತಿಕ ಮಹತ್ವ ಪರಿಗಣನಾರ್ಹ. ಅಂತೆಯೇ, ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಾನವ ಪಾದಾಕೃತಿಗಳು ಕಂಡುಬಂದಿವೆ. ಸಹಜ ಅಳತೆಯಲ್ಲಿರುವ ಇವುಗಳನ್ನು ಜೋಡಿಯಾಗಿಯೇ ಬಿಡಿಸಲಾಗಿದೆ. ನೆಲದಲ್ಲಿ ಸಮಾನವಾದ ಕಲ್ಲುಗಳ ಮೇಲೆ ಮೂಡಿಸಲಾದಂತೆಯೇ, ಕೆಲವು ಪಾದಾ ಕೃತಿಗಳನ್ನು ಬಂಡೆಯ ಎದುರು ಭಾಗದಲ್ಲೂ ಬಿಡಿಸಲಾಗಿದೆ. ಧಾರ್ಮಿಕ ನಂಬುಗೆ/ಆಚರಣೆಗಳ ಹಿನ್ನೆಲೆಯಲ್ಲಿ ಬಿಡಿಸಲಾಗುವ ಇಂಥಾ ಪಾದಾಕೃತಿಗಳ ಬಗೆಗೆ ನಿರ್ದಿಷ್ಟ ವಿವರಣೆ ಕಂಡುಬರುವುದಿಲ್ಲ. ಏಕಪಾದಾಕೃತಿಗಳೂ ಅಲ್ಲಲ್ಲಿ ಗೋಚರಿಸುತ್ತವೆ. ಇಲ್ಲಿರುವ ಕೆಲವು ಜ್ಯಾಮಿತಿ ಆಕೃತಿಗಳೂ ಆಚರಣೆಸಂಬಂಧಿಯೇ ಆಗಿರಬಹುದು. ಆದರೆ ಇವುಗಳ ಸಂಖ್ಯೆ ಹೆಚ್ಚೇನಲ್ಲ.

ಗುಡ್ಡದ ಎಲ್ಲ ಮಗ್ಗುಲುಗಳಲ್ಲೂ ಕುಳಿಗಳು (ಕಪ್‌ಮಾರ್ಕ್ಸ್) ಮತ್ತು ಕುಳಿವಿನ್ಯಾಸಗಳು ಗೋಚರಿಸುವುದುಂಟು. ಗುಡ್ಡದ ದಕ್ಷಿಣದ ಇಳಿಜಾರಿನ ಬಂಡೆಯೊಂದರ ಮೇಲೆ, ಸಾಮಾನ್ಯವಾಗಿ ಎಲ್ಲ ಪ್ರಾಚೀನ ನಿವೇಶನಗಳಲ್ಲಿ ಕಂಡುಬರುವ ನಿರ್ದಿಷ್ಟ ಸಂಖ್ಯೆಯ ಕುಳಿಗಳಿಂದ ಕೂಡಿದ ಆಟದ ಮನೆಯಂಥಾ ವಿನ್ಯಾಸ ಕಂಡುಬರುತ್ತದೆ. ಗುಡ್ಡದ ಮೇಲ್ಭಾಗದಲ್ಲಿ ಚಿಕ್ಕ ಕುಳಿಯಾಕೃತಿಗಳೊಡನೆ ದೊಡ್ಡಗಾತ್ರದ ಹಾಗೂ ಸ್ವಲ್ಪಮಟ್ಟಿಗೆ ಆಳವಾಗಿರುವ ಬಟ್ಟಲಾಕಾರದ ಸಾಕಷ್ಟು ಕಲ್ಲುಗುಳಿ (ಪೆಟ್ರೊಗ್ಲಿಫ್ಸ್)ಗಳಿವೆ. ಪ್ರಾಕ್ಚಾರಿತ್ರಿಕ ವಸತಿ ನಿವೇಶನಗಳ ಬಳಿ ಇಂಥಾ ಕಲ್ಲುಗುಳಿಗಳು ಸಾಮಾನ್ಯವಾಗಿ ಕಂಡುಬರುತ್ತವೆ. ನೈಸರ್ಗಿಕ ಕಲ್ಲುದೊಣೆಗಳ ಬಳಿ ಇಂಥಾ ದೊಡ್ಡ ಕಲ್ಲುಗುಳಿಗಳಿದ್ದು, ಇಂಥಲ್ಲೆಲ್ಲ ಸತತವಾಗಿ ಆಯುಧಗಳನ್ನು ಉಜ್ಜಿ ಮೂಡಿಸಿದ ಕುರುಹುಗಳಿವೆ. ಹಾಗೆಯೇ, ಸಮೀಪದಲ್ಲಿ ಗೂಳಿ ಆಕೃತಿಗಳೂ ಪಾದಾಕೃತಿಗಳೂ ಕುಳಿವಿನ್ಯಾಸಗಳೂ ಕಂಡುಬರುತ್ತವೆ.

ಎದ್ದುಲುಬಂಡೆಯಲ್ಲಿ ಕಂಡುಬರುವ ರೇಖಾಕೃತಿಗಳೆಲ್ಲವೂ ಕುಟ್ಟಿ ಮೂಡಿಸಿದಂಥವು. ಇವುಗಳೊಡನೆ ಉಜ್ಜಿಮೂಡಿಸಲಾದ ಕೆಲವು ಆಕೃತಿಗಳನ್ನಾದರೂ ಗುರುತಿಸಬಹುದು. ಆದರೆ ಇವು ಕುಟ್ಟಿ ಮೂಡಿಸಲಾದ ಆಕೃತಿಗಳನ್ನು ತಿದ್ದುವ ಹಂತದಲ್ಲಿ ಉಂಟಾದುವು. ಚಿತ್ರದುರ್ಗ ಬೆಟ್ಟ ಪರಿಸರದ ವಿನಾ ಈ ಭಾಗದಲ್ಲಿ ಕೊರೆದು ಮೂಡಿಸಿದ, ಉಜ್ಜಿ ನಯನಗೊಳಿಸಿದ ಆಕೃತಿಗಳು ಇಲ್ಲವೇಇಲ್ಲವೆನ್ನುವಷ್ಟು ವಿರಳ. ಸ್ವಲ್ಪ ಪ್ರಾಚೀನವೆನ್ನಬಹುದಾದ ಕಲವು ಮನುಷ್ಯಾಕೃತಿಗಳೂ ಗೂಳಿ ಆಕೃತಿಗಳೂ ಕುಟ್ಟಿಮೂಡಿಸಿದ ಶೈಲಿಯಲ್ಲಿಯೇ ಇವೆ. ಆದರೂ ಕೆಲವು ಗೂಳಿ ಆಕೃತಿಗಳು ಇಂಥಾ ಶೈಲಿಯಲ್ಲಿಯೇ ಸುಂದರವಾಗಿ ಕಂಡುಬರುವುದು ವಿಶೇಷ.

೫. ಕಾಲಮಾನ

ತಾಂತ್ರಿಕವಾಗಿ, ಎದ್ದುಲುಬಂಡೆಯ ರೇಖಾಕೃತಿಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸುವುದು/ಜೋಡಿಸುವುದು ಕಷ್ಟಕರವಾದ ಕೆಲಸ. ಆದರೆ ಆಕೃತಿಗಳ ವಿನ್ಯಾಸ, ಶೈಲಿ, ಉದ್ದೇಶ, ಪರಿಸರ



ಆಳವಾಗಿ ಕುಟ್ಟಿ ಮಾಡಿಸಲಾದ ಗೂಳಿಯಾಕೃತಿ



ಖಡ್ಗಸಹಿತವಿರುವ ಕುದುರೆ ಸವಾರ



ಗೂಳಿ ಕುದುರೆ ಸವಾರ-ರೇಖಾಕೃತಿಗಳಿಂದ ತುಂಬಿದ ಬಂಡೆ



ಮಾನವ ಪಾದಾಕೃತಿಗಳು



ರೇಖಾಕೃತಿಗಳ ಸಹಿತವಿರುವ ಕುಳಿಯಾಕೃತಿ

ಇತ್ಯಾದಿಯನ್ನು ಗಮನದಲ್ಲಿರಿಸಿಕೊಂಡು ಸ್ಥೂಲವಾಗಿ ಮೂರು ಹಂತಗಳಾಗಿ ವಿಭಾಗಿಸಬಹುದು :

೧. ಚರಿತ್ರಾರಂಭ ಕಾಲ ೨. ಪಾಳೆಯಗಾರರ ಕಾಲ ೩. ಆಧುನಿಕ ಕಾಲ

ಗುಡ್ಡದ ಬುಡದಲ್ಲಿ ತೀರಾ ಹಳೆಯವೆಂದು, ಅಂದರೆ ಚರಿತ್ರಾರಂಭಕಾಲದ ಅಥವಾ ಕಬ್ಬಿಣದ ಬೃಹತ್‌ಶಿಲಾಯುಗ ಸಂಸ್ಕೃತಿಗೆ ಸೇರಿದವೆಂದು ತೋರುವ ಕೆಲವು ಗೂಳಿ ಆಕೃತಿಗಳನ್ನೂ ಈ ಕಾಲಕ್ಕೆ ಸೇರಿಸಬಹುದು. ಖಡ್ಗಸಹಿತವಿರುವ ಕುದುರೆ ಸವಾರರು/ಯೋಧರು ತೀರಾ ಪ್ರಾಚೀನರಾಗಿರದೆ, ಈ ಪ್ರದೇಶದಲ್ಲಿ ಪಾಳೆಯಗಾರರ ಆಳ್ವಿಕೆಯ ಅವಧಿಯವರಾಗಿರಬಹುದು. ಇನ್ನು, ಕೃಷಿಸಂಕಷ್ಟಗಳ ನಿವಾರಣೆಗೆ, ಮಾಂತ್ರಿಕ ಕಟ್ಟಳೆಗಳಿಗೆ, ತಮ್ಮ ಸಹಜೀವಿಗಳಾದ ಪಶುಗಳೊಡನೆ ಬೆಳೆಸಿಕೊಂಡ ಭಾವನಾತ್ಮಕ/ದೈವಿಕ ಸಂಬಂಧಗಳ ಸ್ಮರಣೆಗೆ, ತಮ್ಮ ಸಹಜ ಕಲಾಭಿವ್ಯಕ್ತಿಗಳಿಗೆ, ಮನುಷ್ಯ ಸಹಜವಾದ ಸೃಜನ ವರ್ತನೆಗಳಿಗೆ ಎದ್ದುಲುಬಂಡೆ ಯಂಥಾಎಡೆಯನ್ನು ಬಳಸಿಕೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ. ಒಟ್ಟಿನಲ್ಲಿ, ಪ್ರಾಚೀನಕಾಲದಿಂದ ಈಚಿನವರೆಗೆ, ಹಾಗೂ ಈಗಲೂ ಈ ಎಡೆಯನ್ನು ಈ ಪರಿಸರದ ರೈತರು, ಪಶುಪಾಲಕರು ಮೊದಲಾದವರು ತಮ್ಮ ಸಹಜ ಕುತೂಹಲ, ಆಸಕ್ತಿ, ಭಯ, ಸಂವೇದನೆಗಳಿಗೆ ಸಂಕೇತವಾಗಿಸಿಕೊಂಡಿರುವುದು ಸ್ಪಷ್ಟ.

೬. ಸಾಂಸ್ಕೃತಿಕ ಹಿನ್ನೆಲೆ

ಚಿತ್ರದುರ್ಗ ತಾಲ್ಲೂಕಿನ-ಆರಂಭ-ನಂತರದ ಜನವಸತಿ ನಿವೇಶನಗಳನ್ನೊಮ್ಮೆ ಅವಲೋಕಿಸಿದರೆ, ಇವು ಎಲ್ಲ ಕಾಲಕ್ಕೂ ಎಲ್ಲ ಸಾಂಸ್ಕೃತಿಕ ಧೋರಣೆಗಳಿಗೂ ಸ್ಪಂದಿಸಿದುದು ದೃಢಪಡುತ್ತದೆ. ಎದ್ದುಲುಬಂಡೆ ಪ್ರದೇಶವನ್ನು ಈ ಹಿನ್ನೆಲೆಯಲ್ಲಿಯೇ ಪರಿಶೀಲಿಸ ಬೇಕಾಗುತ್ತದೆ. ಇಷ್ಟಾದರೂ ಯಾವ ಯಾವ ಸಂಸ್ಕೃತಿಗಳಿಗೆ ಸೇರಿದ ಸಮುದಾಯಗಳು ಈ ಗುಡ್ಡದಲ್ಲಿಯ ಆಕೃತಿಗಳನ್ನು ಕುಟ್ಟಿಮೂಡಿಸಿ ದವೆಂದು ನಿಖರವಾಗಿ ಹೇಳಲಾಗದು. ಅಲ್ಲದೆ, ಈ ಪ್ರದೇಶದಲ್ಲಿ, ಅಂದರೆ ಎದ್ದುಲುಬಂಡೆ ಸುತ್ತಮುತ್ತಲಲ್ಲಿ ಜನವಸತಿ ಎಲ್ಲಿ ಇದ್ದಿತೆಂಬುದು ಸಹಾ ಸದ್ಯಕ್ಕೆ ತಿಳಿದುಬಂದಿಲ್ಲ. ಗುಡ್ಡದಲ್ಲಾಗಲೀ, ಸುತ್ತಮುತ್ತಲಲ್ಲಾಗಲೀ ಯಾವ ಪ್ರಾಚ್ಯವಸ್ತುಗಳೂ ದೊರಕದಿ ರುವುದು ಇನ್ನೊಂದು ಸಮಸ್ಯೆ. ಗುಡ್ಡದ ಸುತ್ತಲೂ ಬಹುದೂರ ದವರೆಗೆ ವಿಶಾಲ/ಸಮತಟ್ಟಾದ ಕೃಷಿಭೂಮಿಯಿರುವು ದರಿಂದ ಜನವಸತಿ ನೆಲೆಯ ಶೋಧಕಾರ್ಯ ಕಠಿಣವಾಗಿದೆ. ಗುಡ್ಡದ ಹಿಂಬದಿಯಲ್ಲಿ ಒಡ್ಡಿನ ಕುರುಹು ಇದ್ದರೂ ಇದೀಗ ಕೃಷಿಭೂಮಿ ಯಾಗಿ ಮಾರ್ಪಟ್ಟು ಈ ಪ್ರದೇಶ ಬಹುಮಟ್ಟಿಗೆ ಸಮತಟ್ಟಾಗಿದೆ. ಅಲ್ಲದೆ, ಈ ಒಡ್ಡು ಪ್ರಾಚೀನವಾದುದೆಂದು ಕಂಡುಬರುವುದಿಲ್ಲ.

ಬೆಳಗಟ್ಟ-ಎದ್ದುಲುಬಂಡೆ ಪ್ರದೇಶವನ್ನು ಕೇಂದ್ರವಾಗಿರಿಸಿ ಕೊಂಡು ಸುತ್ತಮುತ್ತಲ ಪರಿಸರವನ್ನು ಗಮನಿಸಿದರೆ, ಬಯಲು ಬಂಡೆ ರೇಖಾಕೃತಿಗಳಿರುವ ನಿವೇಶನಗಳು, ಕಬ್ಬಿಣಯುಗದ ಬೃಹತ್‌ಶಿಲಾಯುಗ ಸಂಸ್ಕೃತಿ ನೆಲೆಗಳು, ಚರಿತ್ರಾರಂಭ ಕಾಲದ ಸಂಸ್ಕೃತಿ ನಿವೇಶನಗಳು, ಶಾತವಾಹನಕಾಲೀನ ಸಂಸ್ಕೃತಿ ನಿವೇಶನಗಳು ಇನ್ನಿತರ ಪ್ರಾಚೀನ ನಿವೇಶನಗಳು ತೀರಾ ಸಮೀಪ ದಲ್ಲಿರುವುದು ಗೋಚರಿಸುತ್ತದೆ. (ನಕ್ಷೆನೋಡಿ). ಉದಾಹರಣೆಗೆ, ಎದ್ದುಲುಬಂಡೆಯಿಂದ ಪೂರ್ವಕ್ಕೆ ೫ ಕಿ.ಮೀ. ಅಂತರದಲ್ಲಿ ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಾದ ಹಾಯಕಲ್ಲು ಇದ್ದರೆ, ಬಯಲು ಬಂಡೆ ರೇಖಾಕೃತಿಗಳು ಪತ್ತೆಯಾಗಿರುವ ಕಲ್ಲೇನಹಳ್ಳಿಯು ಪಶ್ಚಿಮದಿಕ್ಕಿನಲ್ಲಿ ೫ಕಿ.ಮೀ. ಅಂತರದಲ್ಲಿದೆ. ಉತ್ತರದಲ್ಲಿ ೪ ಕಿ.ಮೀ. ಅಂತರದಲ್ಲಿ ಬಾಗೇನ ಹಾಳು ಇದ್ದು, ಇದು ಪ್ರಾಚೀನ ನಿವೇಶನವಾಗಿ ಗುರುತಿಸಲ್ಪಟ್ಟಿದೆ. ದಕ್ಷಿಣದಲ್ಲಿ ಕೇವಲ ೨ ಕಿ.ಮೀ. ಅಂತರದಲ್ಲಿ ವೀರಮೆದಕೇರಿಪುರ (ಬೇಚರಾಕ್) ಇದ್ದರೆ, ೪ಕಿ.ಮೀ. ಅಂತರದಲ್ಲಿ ಗೋನೂರು ಇದೆ. ಇವೆರಡೂ ಬಯಲುಬಂಡೆ ರೇಖಾಕೃತಿಗಳಿಂದ ಕೂಡಿದ ನಿವೇಶನಗಳು. ಇವುಗಳ ಹಿನ್ನೆಲೆಯಲ್ಲಿ ಎದ್ದುಲುಬಂಡೆ ನಿವೇಶನದ ರೇಖಾಕೃತಿಗಳು ಮೊದಲಿಗೆ ಈ ಗುಡ್ಡದ ಬಂಡೆಗಳ ಮೇಲೆ ಮೂಡಲಾರಂಭಿಸಿದ ಕಾಲಮಾನವನ್ನು ಸ್ಥೂಲವಾಗಿಯಾದರೂ ನಿರ್ಧರಿಸಬಹುದು.

ಒಟ್ಟಿನಲ್ಲಿ, ಬೆಳಗಟ್ಟ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿಯ ಕುರುಹುಗಳು ಸಾಕಷ್ಟು ಪ್ರಮಾಣದಲ್ಲಿ ಗೋಚರಿಸಿರುವುದರ ಹಿನ್ನೆಲೆಯಲ್ಲಿ, ಈಗ ವರದಿಯಾಗುತ್ತಿರುವ ಎದ್ದುಲಬಂಡೆಯ ರೇಖಾಕೃತಿಗಳು ಮೊದಲಿಗೆ ಇದೇ ಸಂಸ್ಕೃತಿಗೆ ಸೇರಿದ ಜನರಿಂದ ಆರಂಭಿಸಲ್ಪಟ್ಟವೆನ್ನಬಹುದು. ಮೇಲೆಯೇ ಸೂಚಿಸಿದಂತೆ, ಆ ನಂತರದ ಕಾಲದಲ್ಲಿ ಇದು ಎರಡು-ಮೂರು ಹಂತಗಳಲ್ಲಿ ಬೇರೆ ಬೇರೆ ಸಮುದಾಯಗಳಿಂದ ಮುಂದುವರೆದಿರಬಹುದು. ಪ್ರಾಯಶಃ ಎದ್ದುಲುಬಂಡೆಗೆ ಸನಿಹದಲ್ಲಿ ವಸತಿನೆಲೆ ಹೊಂದಿದ್ದ ಯಾವುದೋ ಸ್ಥಳಿಯ ಬುಡಕಟ್ಟು ಸಮುದಾಯ ವೊಂದು ಈ ಕಾರ್ಯದಲ್ಲೂ ಭಾಗವಹಿಸಿರಬಹುದು. ಕೃಷಿ ಪಶುಪಾಲನೆ, ಬೇಟೆ ಹಾಗೂ ಹೋರಾಟ/ಸಮರಕಲೆಗಳಲ್ಲಿ ಆಸಕ್ತಿಯನ್ನೂ ಸಾಮರ್ಥ್ಯವನ್ನೂ ಹೊಂದಿದ್ದ ಜನಾಂಗವೊಂದು ನೂರಾರು ವರ್ಷಗಳಿಂದ ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬೇಡ ಜನಾಂಗದವರ ಹಿನ್ನೆಲೆಯನ್ನೂ ಪರಿಶೀಲಿಸಬಹುದು. ಈ ಭಾಗದಲ್ಲಿ ಇಂದಿಗೂ (ಮ್ಯಾಸ) ಬೇಡರ ಸಂಖ್ಯೆ ಅಧಿಕವಾಗಿರು ವುದರಿಂದ, ಈ ಸಮುದಾಯಕ್ಕೆ ಸೇರಿದ ಪ್ರಾಚೀನರೇ ಎದ್ದುಲು ಬಂಡೆಯನ್ನು ತಮ್ಮ ಸಂಸ್ಕೃತಿಯ ಕುರುಹುಗಳನ್ನು ದಾಖಲಿಸಲು ಬಳಸಿಕೊಂಡಿದ್ದಿರ ಬಹುದೇನೋ.*

* (ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಚಿತ್ರದುರ್ಗ ಸಂಶೋಧನ ತಂಡದ ಸರ್ವಶ್ರೀ ಲ. ನಾಗರಾಜ ಹೊಯ್ಸಳ, ಭೀ. ಉಮೇಶ್, ಕ.ಮ. ರವಿಶಂಕರ, ನಾ. ವೆಂಕಟೇಶಭಟ್, ಎಸ್.ಆರ್. ಗುರುನಾಥ್, ಹೆಚ್.ಎನ್. ಉಮೇಶ್, ಪಿ.ಆರ್. ಜಗದೀಶ್, ಸಿ.ಎಲ್. ಶಿವಶಕ್ತಿ ಪ್ರಸನ್ನಕುಮಾರ್, ಆಟೊ ನಾಗರಾಜ್ ಹಾಗೂ ಕಲ್ಲೇನಹಳ್ಳಿ ಮತ್ತು ಬೆಳಗಟ್ಟಗಳ ಗ್ರಾಮಸ್ಥರಿಗೆ ಆಭಾರಿ-ಲೇಖಕ.)

ಸಾಸಲು ಜಿ. ವಿಶ್ವನಾಥ್*

ರಾಜಘಟ್ಟದ ಐತಿಹಾಸಿಕ ವಿವೇಚನೆ ಹಾಗೂ ದೇಗುಲವೊಂದರ ಶೋಧ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟ ಬೃಹತ್ ಶಿಲಾ ಸಂಸ್ಕೃತಿಯಿಂದ ಇಂದಿನವರೆಗೂ ಕಾಲಕಾಲಕ್ಕೆ ಹಂತಹಂತವಾಗಿ ಬೆಳೆದು ಕೆಲವೊಮ್ಮೆ ಅಳಿದು, ಅವಶೇಷಗಳ ಗರ್ಭದಲ್ಲಿ ನಲುಗಿ ಇಂದಿಗೂ ಅನ್ವೇಷಕರಿಗೆ ಸವಾಲಾಗಿ ನೆಲೆನಿಂತ ಸ್ಥಳ. ೧೯೯೦ರಿಂದಲೂ ಈ ಪರಿಸರದಲ್ಲಿ ಸಂಶೋಧನೆ ನಡೆಸುತ್ತಿರುವ ನನಗೆ ಹಂತಹಂತವಾಗಿ ಅನೇಕ ಮುಖ್ಯ ಐತಿಹಾಸಿಕ ಹಾಗೂ ಪ್ರಾಗೈತಿಹಾಸಿಕ ನೆಲೆಗಳು ದೊರಕಿವೆ. ಅದರ ಸ್ಥೂಲ ವಿವರ ಮುಂದಿನಂತಿದೆ.

೧. ಬೃಹತ್ ಶಿಲಾ ಸಂಸ್ಕೃತಿ

ರಾಜಘಟ್ಟದ ಪರಿಸರದಲ್ಲಿ ೬೦ ಎಕರೆ ಬೂದಿಗುಂಡಿಯಿದ್ದು ಕ್ರಿ.ಪೂ. ೧೨೦೦ಕ್ಕೆ ಸೇರುವ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರುವ ಮೂರು ಹಾದಿ ಕೋಣೆ ಸಮಾಧಿಗಳು, ರಂಧ್ರ ಕೋಣೆ ಸಮಾಧಿಗಳು, ಕಲ್ಗುಪ್ಪೆ ಸಮಾಧಿಗಳು ಗ್ರಾಮದ ಸುತ್ತಮುತ್ತಲ ಪ್ರದೇಶ ಹಾಗೂ ಬೂದಿಗುಂಡಿಯಲ್ಲಿ ದೊರೆತಿವೆ. ಅಗೆದು ಹಾಳಾದ ಸಮಾಧಿಗಳ ಜೊತೆಗೆ ಒಂದು ಮಣ್ಣಿನ ಮಡಿಕೆ, ಮಡಿಕೆಗೆ ಮುಚ್ಚುವ ಕಲಾತ್ಮಕ ತಟ್ಟೆ ಪತ್ತೆಯಾಗಿದೆ. ಈ ಸಮಾಧಿಗಳಿಗೆ ಬಳಸಿರುವ ಚಪ್ಪಡಿಗಳು ೧೧ ಅಂಗುಲ ದಪ್ಪವಾಗಿದೆ. ಸ್ವಸ್ತಿಕ್ ಮಾದರಿಯ ಈ ಸಮಾಧಿಗಳ ಪೂರ್ವ ದಿಕ್ಕಿನಲ್ಲಿ ರಂಧ್ರವಿದೆ.[೧]

೨. ಗಂಗರ ಕಾಲದ ಶಿವಾಲಯಗಳು

ರಾಜಘಟ್ಟದ ಬೂದಿಗುಂಡಿ ಪರಿಸರ ಹಾಗೂ ಈಶಾನ್ಯ ಭಾಗಗಳಲ್ಲಿ ಸುಂದರವಾದ ಕಪ್ಪುಶಿಲೆಯ ಮೂರು ಶಿವಲಿಂಗಗಳು ಪತ್ತೆಯಾಗಿವೆ.[೨] ಒಂದು ಶಿವಲಿಂಗ ಇಂದಿಗೂ ಪೂಜೆಗೊಳ್ಳುವ ಹಳೆಯ ದೇವಾಲಯದಲ್ಲಿದ್ದರೆ ಉಳಿದೆರೆಡು ಲಿಂಗಗಳು ಹೊಲವನ್ನು ಸಮ ಮಾಡುವಾಗ ಭೂಮಿಯೊಳಗೆ ದೊರೆತವು. ಈ ಶಿವಲಿಂಗಗಳು ಕಪ್ಪು ಕಲ್ಲಿನಿಂದ ರಚಿತವಾಗಿದ್ದು, ೨ ೧/೨ ಅಡಿ ಎತ್ತರವಾಗಿವೆ. ಪ್ರಾಚೀನ ಶೈಲಿಯ ಬ್ರಹ್ಮ ಸೂತ್ರವನ್ನು ಶಿವಲಿಂಗಗಳು ಹೊಂದಿರುವುದರಿಂದ ಇವು ಗಂಗರ ಕಾಲಕ್ಕೆ ಸೇರುತ್ತವೆ.

ವಿಗ್ರಹಲಕ್ಷಣಗಳ ಆಧಾರದಿಂದ ಈ ಶಿವಲಿಂಗಗಳ ಕಾಲವನ್ನು ೬-೭ನೆಯ ಶತಮಾನವೆನ್ನಬಹುದು. ಗಂಗರ ತಾತ್ಕಾಲಿಕ ರಾಜಧಾನಿಯಾಗಿದ್ದ ಮಣ್ಣೆ ಕೋಳಾಲ ಈ ಪರಿಸರಕ್ಕೆ ಸನಿಹವಾಗಿರುವುದರಿಂದಲೂ, ಇದೇ ಪರಿಸರದ ಬೈರಾಪುರ ಗ್ರಾಮದಲ್ಲಿ ಇದೇ ರೀತಿಯ ಪ್ರಾಚೀನ ವಿಗ್ರಹ ಲಕ್ಷಣಗಳನ್ನು ಒಳಗೊಂಡಿರುವ ಶಿವಲಿಂಗ ಹಾಗೂ ಶಿವಾಲಯದ ಅವಶೇಷಗಳು ದೊರಕಿವೆ.[೩] ಒಟ್ಟಿನಲ್ಲಿ ಬೈರಾಪುರ ಹಾಗೂ ರಾಜಘಟ್ಟದ ಪರಿಸರದಲ್ಲಿ ಈ ಶಿವಲಿಂಗಗಳು ದೊರೆತ ಪರಿಸರದಲ್ಲಿಯೇ ೧ ಅಡಿ ಅಗಲ ೧ ೧/೨ ಅಡಿ ಉದ್ದದ ಗಂಗರ ಕಾಲದ ಇಟ್ಟಿಗೆಗಳು ಸುಮಾರು ೩ ರಿಂದ ೪ ಸಾವಿರದಷ್ಟು ದೊರಕಿವೆ. ಗಂಗರ ಕಾಲದ ಶಿವಾಲಯದ ಅವಶೇಷಗಳು ಈ ಗ್ರಾಮ ಪರಿಸರದಲ್ಲಿ ಶಿಥಿಲಾವಸ್ಥೆಯಲ್ಲಿ ಭೂಮಿಯೊಳಗೆ ಇಣುಕಿವೆ. ಇಲ್ಲಿ ದೊರೆತ ಇಟ್ಟಿಗೆಗಳು ತಲಕಾಡು ಉಪವನದಲ್ಲಿ ದೊರೆತ ಗಂಗರ ಶೈಲಿ ಹಾಗೂ ಮಣ್ಣೆಯ ಕಪಿಲೇಶ್ವರ ದೇವಾಲಯದ ಅಧಿಷ್ಠಾನದ ಗಂಗರ ಕಾಲ-ಶೈಲಿಯ ಇಟ್ಟಿಗೆಗಳನ್ನು ಸಂಪೂರ್ಣವಾಗಿ ಹೋಲುವುದರಿಂದ ಗಂಗರ ಕಾಲದ ಮೂರು ದೇವಾಲಯಗಳು ಈ ಗ್ರಾಮದಲ್ಲಿ ದೊರಕಿದಂತಾಯಿತು.

೩ ಬೌದ್ಧಧರ್ಮದ ಪ್ರಮುಖ ನೆಲೆ



ಬುದ್ಧ ಮತ್ತು ಹರಿಹರ ವಿಗ್ರಹಗಳು

ಮಣ್ಣಿನ ಮೇಲೆ ಗಾರೆಯನ್ನು ನೊರೆದು ಮಾಡಿರುವ ಬುದ್ಧ ವಿಗ್ರಹದ ತಲೆ ಮೊದಲು ಲಭ್ಯವಾಯಿತು.[೪] ರಾಜಘಟ್ಟದ ೬೦ ಎಕರೆ ಬೂದಿಗುಂಡಿಯಲ್ಲಿ ದೊರೆತ ಬುದ್ಧ ವಿಗ್ರಹದ ತಲೆ ಸಾತ್ವಿಕ ನಗೆಯ ಅಪರೂಪದ ಶಿಲ್ಪ ಇದಾಗಿದೆ. ಈ ವಿಗ್ರಹಭಾಗ ೮ ಸೆಂ.ಮೀ ಉದ್ದ ೬ ಸೆಂ.ಮೀ ಅಗಲವಿದೆ. ಆದಿಚರಿತ್ರಕಾಲಕ್ಕೆ ಸೇರುವ ಶಾತವಾಹನ ಲಕ್ಷಣಗಳ ಸಾವಿರಾರು ಇಟ್ಟಿಗೆಗಳು ಈ ಭಾಗದಲ್ಲಿ ದೊರೆತಿವೆ. ಮಣ್ಣಿನಿಂದ ಮಾಡಿದ ಹರಕೆಯ

* ಕನ್ನಡ ಅಧ್ಯಾಪಕ, ಎಸ್.ಜೆ.ಆರ್. ರಾಜಾಜಿನಗರ ಕಾಲೇಜು, ರಾಜಾಜಿನಗರ, ಬೆಂಗಳೂರು-೫೬೦ ೦೧೦.

ಸ್ತೂಪಗಳು ಈ ಗ್ರಾಮದಲ್ಲಿ ದೊರೆತಿವೆ.[೫] ಬ್ರಾಹ್ಮಿ ಲಿಪಿಯ, ಸಂಸ್ಕೃತ ಪ್ರಾಕೃತ ಭಾಷೆಯ ಈ ಶಾಸನವು ಈ ಹರಕೆಯ ಸ್ತೂಪಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. "**ಯೇ ಧಮಾ ಹೇತುಪ್ಪ ಭವಾ ತೇಸ ಹೇತು ತಥಾಗತೋ ಆ ಹೇ ತೇಸ ಚ ಯೋ ನಿರೋಧೋ ಏವವಾದೀ ಮಹಾಸಮಣೋ**" ಮುದ್ರೆಯಿಂದ ಮುದ್ರೆಗೆ ಈ ಪಾಠದಲ್ಲಿ ಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಆಶಯ ಏಕರೂಪವಾಗಿರುವುದು ತಿಳಿಯುತ್ತದೆ.

ಈ ಧಾರ್ಮಿಕ ಹರಕೆಯ ಸ್ತೂಪ ಶಾಸನದ ಅರ್ಥ:"ಕಾರಣ ಸರಣಿಯಿಂದ ಉತ್ಪನ್ನವಾಗುವ ಯಾವ ಧರ್ಮ ಇದೆಯೋ ಅದರಲ್ಲಿನ ಕಾರಣಗಳನ್ನು ತಥಾಗತನು ತಿಳಿಸಿದ್ದಾನೆ. ಈ ಕಾರಣಗಳನ್ನು ನಿರೋಧಿಸುವುದು ಹೇಗೆಂಬುದನ್ನು ತೋರಿಸಿದ್ದಾನೆ. ಮಹಾಶ್ರಮಣನ ವಾದ ಇದು." ಈ ಸಾಲುಗಳು ಬೌದ್ಧ ಪಾಳೀ ಗ್ರಂಥಗಳಲ್ಲಿನ ಒಂದು ಗಾಥೆಯಾಗಿದೆ[೬]. ಇದನ್ನು ಕ್ರಿ. ಶ. ೩ನೇ ಶತಮಾನದ ಬ್ರಾಹ್ಮಿಲಿಪಿಯಲ್ಲಿ ಬರೆಯಲಾಗಿದ್ದು ಇಂಥ ಚಿಕ್ಕ ಸ್ತೂಪಗಳನ್ನು ಪ್ರಾಚೀನ ಹಾಗೂ ಮಧ್ಯಕಾಲೀನ ಬೌದ್ಧ ಯಾತ್ರಾ ಸ್ಥಳಗಳಲ್ಲಿ ಭಕ್ತರು ದೊಡ್ಡ ಸ್ತೂಪಗಳ ಬಳಿಯಲ್ಲಿ ತಂದು ಹರಕೆ ಒಪ್ಪಿಸುವ ಪದ್ಧತಿ ಇತ್ತು. ಬೌದ್ಧರ ಈ ಪದ್ಧತಿಯನ್ನು ಕುರಿತು ೭ನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿನೀಡಿದ ಚೀನಾದ ಹೂಯಾನ್‌ತ್ಸಾಂಗ್ ತಿಳಿಸಿದ್ದಾನೆ. ಕರ್ನಾಟಕದ ಸನ್ನತಿಯಲ್ಲಿ ಇಂಥ ಒಂದು ದೊಡ್ಡ ಸ್ತೂಪ ದೊರೆತಿದೆ ಆದರೆ ರಾಜಘಟ್ಟದಲ್ಲಿ ಸಾವಿರಾರು ಚಿಕ್ಕ ಹರಕೆಯ ಸ್ತೂಪ ಸಿಗುವುದರಿಂದ ಇಲ್ಲಿ ಒಂದು ದೊಡ್ಡ ಸ್ತೂಪವಿರಲೇಬೇಕು. ಆದರೆ ಅದು ಇನ್ನೂ ದೊರೆತಿಲ್ಲ. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆ ಉತ್ಖನನ ನಡೆಸಿದರೂ ಅದು ಪೂರ್ಣವಾಗಿಲ್ಲ. ಏಕೆಂದರೆ ದೊಡ್ಡ ಸ್ತೂಪ ಸಿಗಲೇಬೇಕು. ಹಾಳಾಗಿದ್ದರೆ ಅವಶೇಷಗಳಾದರೂ ದೊರಕಬೇಕು. ಇಲ್ಲಿ ಉತ್ಖನನ ನಡೆಸಿದ ನಂತರವೂ ನನ್ನ ಸಂಶೋಧನೆಯಲ್ಲಿ ಮತ್ತೆರೆಡು ಹಿಂದೂ ಪ್ರಾಚೀನ ದೇವಾಲಯಗಳ ಅವಶೇಷ ದೊರೆತಿರುವುದೇ ನನ್ನ ಈ ಮೇಲಿನ ಅನಿಸಿಕೆಗೆ ಕಾರಣವಾಗಿದೆ.

೪) ಅಮೂರ್ತವಾಗಿರುವ ದೇವಾಲಯವೊಂದರ ಶೋಧನೆ

ಈ ರಾಜಘಟ್ಟ ಗ್ರಾಮದಲ್ಲಿ ಸಾತವಾಹನ ಕಾಲಕ್ಕೆ ಸೇರುವ ಆದಿಚರಿತ್ರೆ ಕಾಲದ ಮಣ್ಣಿನ ಸುಟ್ಟ ಇಟ್ಟಿಗೆಗಳೂ ದೊರಕುತ್ತಿವೆ. ಅಂತೆಯೇ ಗಂಗರ ಕಾಲದ ೮-೧೦ನೇ ಶತಮಾನಕ್ಕೆ ಸೇರುವ ಸುಟ್ಟಇಟ್ಟಿಗೆಗಳೂ ದೊರಕುತ್ತಿವೆ. ಗಂಭೀರವಾಗಿ ಅಧ್ಯಯನ ನಡೆಸಿದರೆ ಸಹಜಸತ್ಯ ವಿಚಾರ ನಮಗೆ ಗೋಚರವಾಗುತ್ತದೆ.

ಪ್ರಾಚೀನ ಶಾತವಾಹನರ ಕಾಲಕ್ಕೆ ಸೇರುವ ಬುದ್ಧ ವಿಗ್ರಹ ದೊರೆತ ಪರಿಸರದಲ್ಲಿಯೇ ಹಿಂದೂ ಧರ್ಮಕ್ಕೆ ಸೇರುವ ಹರಿಹರ ವಿಗ್ರಹದ ತಲೆಯ ಭಾಗವೊಂದು ಇತ್ತೀಚೆಗೆ ದೊರಕಿದೆ.

ಮಣ್ಣಿನ ಮೇಲೆ ಗಾರೆಯನ್ನು ನೊರೆದು ಈ ವಿಗ್ರಹವನ್ನು ಮಾಡಲಾಗಿದೆ. ಜಟಾಮುಕುಟ, ಕಿರೀಟ ಮುಕುಟಗಳಿಂದ ಈ ವಿಗ್ರಹ ಅಲಂಕೃತವಾಗಿದೆ. ಬುದ್ಧ ವಿಗ್ರಹ ಸಿಕ್ಕ ಪರಿಸರದಲ್ಲಿಯೇ ಈ ವಿಗ್ರಹವೂ ದೊರಕಿರುವುದರಿಂದ ಉತ್ಖನನದಲ್ಲಿ ಬೌದ್ಧ ಸ್ತೂಪ ದೊರೆತ ಹಾಗೆ ಈ ಪರಿಸರದಲ್ಲಿ ಶಾಸ್ತ್ರೀಯ ಉತ್ಖನನ ಮತ್ತೆ ನಡೆದರೆ ಹರಿಹರೇಶ್ವರ ದೇವಾಲಯ ದೊರೆಯುವುದರಲ್ಲಿ ಸಂಶಯವಿಲ್ಲ. ಶಿಲಾಯುಗದ ಸಂಸ್ಕೃತಿಯಿಂದ ಇಂದಿನ ತನಕ ಧಾರ್ಮಿಕ ಪರಂಪರೆಯ ಕೇಂದ್ರವಾಗಿರುವ ರಾಜಘಟ್ಟ ಧಾರ್ಮಿಕ ಘರ್ಷಣೆಗಳಿಗೂ ಕಾರಣವಾಗಿರಬೇಕು. ಶೈವ ಅವಶೇಷಗಳು. ಬೌದ್ಧ ಅವಶೇಷಗಳು ದೊರೆತಂತೆ ಈಗ ಹರಿಹರೇಶ್ವರ ದೇವರ ಅವಶೇಷಗಳು ಲಕ್ಷ್ಮಿಯ ವಿಗ್ರಹ ಹಾಗೂ ಸಪ್ತ ಮಾತೃಕೆಯರ ಅವಶೇಷಗಳು ಈ ಪರಿಸರದಲ್ಲಿ ಇತ್ತೀಚಿನ ನನ್ನ ಸಂಶೋಧನೆಯಲ್ಲಿ ದೊರೆತಿವೆ.

ಇದೇ ಗ್ರಾಮದ ಬೂದಿಗುಂಡಿಯಲ್ಲಿ ತೊಡೆಯ ಮೇಲೆ. ಪಾರ್ವತಿ ಕುಳಿತಿರುವ ೬ ಸೆಂ.ಮೀ. ಅಗಲ, ೫ ೧/೨ ಸೆಂ.ಮೀ. ಎತ್ತರದ ಶಿವನ ಕಂಚಿನ ವಿಗ್ರಹ ಸಹ ದೊರಕಿದೆ. ಒಟ್ಟಾರೆ ಬೌದ್ಧರ ಕಾಲದ ಸಮಕಾಲೀನ ಸಂದರ್ಭದಲ್ಲಿಯೇ ಶೈವ-ವೈಷ್ಣವ ಹಾಗೂ ಶೈವ-ವೈಷ್ಣವ ಸಂಗಮದ ಹರಿಹರ ಮುಂತಾದ ವಿಭಿನ್ನ ಧರ್ಮಗಳ ದೇವಾಲಯಗಳು ಈ ಗ್ರಾಮದಲ್ಲಿದ್ದು ಇದೊಂದು ಧಾರ್ಮಿಕ ಕೇಂದ್ರವಾಗಿ ಸರ್ವಧರ್ಮಗಳ ಜನರನ್ನು ಆಕರ್ಷಿಸುತ್ತಿರಬೇಕು. ಆದರೆ ಯಾವಾಗ ಧಾರ್ಮಿಕ ಘರ್ಷಣೆಗಳು ನೆಡೆದು ಎಲ್ಲವೂ ಹಾಳಾಯಿತೆಂಬ ಬಗ್ಗೆ ಐತಿಹಾಸಿಕ ಸಾಕ್ಷ್ಯ ಸಧ್ಯಕ್ಕೆ ದೊರಕಬೇಕಾಗಿದೆ. ಗಂಗರ ಕಾಲದ ೩ ಶಿವಾಲಯಗಳ ಅವಶೇಷಗಳು ೨ ವೈಷ್ಣವ ದೇವಾಲಯಗಳ ಅವಶೇಷಗಳು, ೧ ಶಿವಮಂದಿರ, ೧ ಬೌದ್ಧನೆಲೆ ಸಧ್ಯಕ್ಕೆ ಈ ಪ್ರದೇಶದಲ್ಲಿ ತಮಗೆ ದೊರೆತಂತಾಗಿದೆ. ಬುದ್ಧನ ಹಿಂದೆಯೇ ಶೈವ-ವೈಷ್ಣವ ಪೂಜಾರಾಧನೆ ಇದ್ದ ನಾಗಕುಲ ಶೈವ ಪರಂಪರೆ ಇಲ್ಲಿರಬೇಕು. ಒಟ್ಟಾರೆ ಧಾರ್ಮಿಕ ಕ್ಷೇತ್ರದ ಒಂದು ಪ್ರಮುಖನ ನೆಲೆಯಾಗಿದೆ. -ರಾಜಘಟ್ಟ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧ ೩ನೇ ಮಾರ್ಚ್ ೧೯೯೬, **ಹೊಸ ದಿಗಂತ**; ಸಂಶೋಧನಾ ಲೇಖನ -ಸಾಸಲು ಜೆ. ವಿಶ್ವನಾಥ
೨. ಜನವರಿ ೨೦, ೧೯೯೬, **ಪ್ರಜಾವಾಣಿ**-ಸಂಶೋಧನ ಲೇಖನ -ಸಾಸಲು ಜೆ. ವಿಶ್ವನಾಥ
೩. ೧೫ ನೇ ಅಕ್ಟೋಬರ್, ೧೯೯೫ **ಸಂಯುಕ್ತ ಕರ್ನಾಟಕ**, ಸಂಶೋಧನಾಲೇಖನ - ಸಾಸಲು ಜೆ. ವಿಶ್ವನಾಥ
೪. ಮಾರ್ಚ್, ೩, ೧೯೯೬, **ಹೊಸದಿಗಂತ**, ಸಂಶೋಧನಾ ಲೇಖನ -ಸಾಸಲು ಜೆ. ವಿಶ್ವನಾಥ್
೫. ೨೭ನೇ ಆಗಸ್ಟ್ ೨೦೦೦, **ಪ್ರಜಾವಾಣಿ**, ಸಂಶೋಧನಾ ಲೇಖನ - ಡಾ॥ ರಾಜಾರಾಮ ಹೆಗಡೆ
೬. **ಇತಿಹಾಸ ದರ್ಶನ ಸಂಪುಟ**, ೧೭, ೨೦೦೨ ಡಾ॥ ಎಂ.ಎಸ್. ಕೃಷ್ಣಮೂರ್ತಿ ಡಾ॥ ಎ.ಪಿ. ಮಹಾದೇವಯ್ಯ ಲೇಖನ : ಕರ್ನಾಟಕದ ಬೌದ್ಧ ಧರ್ಮದ ಮೇಲೆ ಹೊಸಬೆಳಕು - ರಾಜಘಟ್ಟ ಉತ್ಖನನ

ಡಾ. ಪಿ. ಎನ್. ನರಸಿಂಹಮೂರ್ತಿ*

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಶಿಲಾಯುಗಗಳ ಸಂಸ್ಕೃತಿ ನೆಲೆ ಶೋಧ - ಒಂದು ಟಿಪ್ಪಣಿ

ದಕ್ಷಿಣ ಕನ್ನಡ ಜಿಲ್ಲೆಯು ೧೯೯೭ರಲ್ಲಿ ಎರಡಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾಗಿ ರೂಪುಗೊಂಡಿತು. ಆಡಳಿತಾತ್ಮಕ ವಿಭಜನೆ ಭಾವನಾತ್ಮಕವಾಗಿ ಆಗಿಲ್ಲ, ಆಗುವುದೂ ಇಲ್ಲ. ಕಾರಣ ಇದಕ್ಕಿರುವ ಏಕತ್ವ ಸಾಧಿಸುವ ಸಂಸ್ಕೃತಿ ಮತ್ತು ಪರಂಪರೆ. ವಿಪುಲವಾಗಿ ದೊರೆಯುವ ಇಲ್ಲಿಯ ಇತಿಹಾಸದ ಅಧ್ಯಯನ ಸಾಕಷ್ಟು ಆಗಿದೆ. ಆದರೆ ಇದು ಬನವಾಸಿ ಕದಂಬರ ಕಾಲದಿಂದ ಬ್ರಿಟಿಷ್ ಆಡಳಿತ ಮತ್ತು ಸ್ವಾತಂತ್ರ್ಯ ಕಾಲದವರೆಗಿನದು. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಇದರ ಇತಿಹಾಸದ ಅಧ್ಯಯನಕ್ಕೆ ಚಾಲನೆ ನೀಡಿದವರು ಪೊಳಲಿ ಶೀನಪ್ಪ ಹೆಗ್ಗಡೆ[೧] ಮತ್ತು ಗಣಪತಿರಾವ್ ಐಗಳು.[೨] ಅಧ್ಯಯನಕ್ಕೆ ವೈಜ್ಞಾನಿಕ ಚಿಕಿತ್ಸೆ ನೀಡಿದವರು ಡಾ. ಬಿ. ಎ. ಸಾಲತ್ತೂರರು.[೩] ಇವರನ್ನು ಅನುಸರಿಸಿದರು-ಕೇಶವ ಕೃಷ್ಣಕುಡ್ವ.[೪] ೧೯೬೦ರ ದಶಕದಲ್ಲಿ ಮೂವರು ಘನವೆತ್ತ ವಿದ್ವಾಂಸರಿಂದ ಅಧ್ಯಯನ - ಅವರುಗಳೆಂದರೆ - ಡಾ. ಸೂರ್ಯನಾಥ ಕಾಮತ್[೫], ಡಾ. ಕೆ. ವಿ. ರಮೇಶ್[೬] ಮತ್ತು ಡಾ. ಪಿ. ಗುರುರಾಜ ಭಟ್.[೭] ಅನಂತರ ಈ ಸಾಲಿನಲ್ಲಿ ಹಲವಾರು ಯುವ ಸಂಶೋಧಕರು[೮] ಇಲ್ಲಿಯ ಇತಿಹಾಸದ ಹಲವು ಮಗ್ಗುಲುಗಳ ಬಗ್ಗೆ ಅಧ್ಯಯನ ನಡೆಸಿರುವರು.

ಆದರೆ ಇಲ್ಲಿಯ ಇತಿಹಾಸಪೂರ್ವ ಕಾಲದ ಇತಿಹಾಸ (Pre-history) ಬೆಳಕು ಕಾಣಲೇ ಇಲ್ಲ. ಈ ದಿಸೆಯಲ್ಲಿ ನುರಿತ ವಿದ್ವಾಂಸರು ಎರಡು ರೀತಿಯ ತೊಡಕುಗಳನ್ನು ಗುರುತಿಸಿಕೊಂಡಿದ್ದರು. ಅವು ಒಂದು-ದೀರ್ಘ ಮಳೆಗಾಲ. ಎರಡು ಅನಂತರದ ಬಿಸಿಲ ಧಗೆಯ ಬೇಸಿಗೆ ಕಾಲ. ಈ ಪರಿಸ್ಥಿತಿಯನ್ನು ಮುರಿದು ಹೊಸ ರೀತಿಯ ಅಧ್ಯಯನಕ್ಕೆ ನಾಂದಿ ಹಾಡಿದವರು ದಿವಂಗತ ಡಾ. ಪಿ. ಗುರುರಾಜ ಭಟ್ಟ ಅವರು.[೯] ಇವರದೆ ಹಾದಿಯಲ್ಲಿ ಸಾಗಿದವರು (ಇವರ ಶಿಷ್ಯರೂ ಆಗಿದ್ದ) ದಿವಂಗತ ಡಾ. ಬಿ. ವಸಂತಶೆಟ್ಟಿ.[೧೦] ಡಾ. ಗುರುರಾಜಭಟ್ಟ ಅವರು ಈ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ಬೃಹತ್ ಶಿಲಾಯುಗ ಕಾಲದ ಹಲವಾರು ಸಮಾಧಿಗಳನ್ನು ಪತ್ತೆ ಹಚ್ಚಿದರು. ಡಾ. ಅ. ಸುಂದರ ಅವರು ಕೆಲವು ಸ್ಥಳಗಳಿಗೆ ಭೇಟಿ ಇತ್ತು ಅಲ್ಲಿಯ ಸಮಾಧಿಗಳ ಬಗ್ಗೆ ಅಧ್ಯಯನ ನಡೆಸಿದರು. ಶ್ರೀಯುತ ವಸಂತಶೆಟ್ಟಿ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಸಾಗಿದರು. ಬೃಹತ್ ಶಿಲಾಯುಗದ ಪಳೆಯುಳಿಕೆಗಳನ್ನಷ್ಟೆ ಅಲ್ಲದೆ ಉಡುಪಿ ತಾಲೂಕಿನ ಹಲವು ಸ್ಥಳಗಳಲ್ಲಿ ನೂತನ ಶಿಲಾಯುಗದ ಪಳೆಯುಳಿಕೆಗಳನ್ನು ಪತ್ತೆ ಹಚ್ಚಿದರು; ತನ್ಮೂಲಕ ಈ ನಿಟ್ಟಿನ ಅಧ್ಯಯನಕ್ಕೆ ತಮ್ಮ ಅಮೂಲ್ಯ ಕಾಣಿಕೆಯನ್ನಿತ್ತರು. ನೇತ್ರಾವತಿ ನದಿ ಪಾತ್ರದ ಹಲವು ಸ್ಥಳಗಳಲ್ಲಿ ಡಾ. ರಾಜೇಂದ್ರ ಸ್ವಲ್ಪ ಅನ್ವೇಷಣೆ ಮಾಡಿದ್ದಾರೆ.[೧೧] ಡಾ. ಬಿ. ಶಿವತಾರಕ[೧೨] ಅವರ ಅನ್ವೇಷಣೆ ಮತ್ತೂ ಮುಂದುವರೆದಿದ್ದಾಗಿದೆ. ನೂತನ ಶಿಲಾಯುಗ ಹಿಂದಿನ ಮೆಸೊಲಿಥಿಕ್ ಕಾಲದ ಶಿಲಾ ಉಪಕರಣಗಳನ್ನು ಪತ್ತೆಮಾಡಿದ್ದಾರೆ. ಈ ಶೋಧಗಳು ಹಿಂದಿನ ನಂಬಿಕೆಯನ್ನು ಬುಡಮೇಲು ಮಾಡಿವೆ. ತೀರ ಇತ್ತೀಚಿನ ಅಂದರೆ ೨೦-೮೦ರ ದಶಕದವರೆಗೂ ಈ ಪ್ರದೇಶದ ಪ್ರಾಗೈತಿಹಾಸಿಕ ವಿಚಾರದ ಬಗ್ಗೆ ಇದ್ದ ನಂಬಿಕೆ ಏನೆಂದರೆ-ಮಾನವ ಕಬ್ಬಿಣದ ಉಪಯೋಗ ಕಂಡು ಕೊಂಡನಂತರ ನಿಧಾನವಾಗಿ ತನ್ನ ಕೊಡಲಿ ಹಿಡಿದು ಈ ಭಾಗಕ್ಕೆ ಬಂದು ಇದ್ದ ದಟ್ಟ ಕಾಡನ್ನು ಬೇಕಾದಷ್ಟೆ ಕಡಿದು ನೆಲೆಗೊಂಡ; ಹಾಗಾಗಿ ಇಲ್ಲಿಯ ಪ್ರಾಚೀನ ಇತಿಹಾಸ ಕ್ರಿ.ಪೂ. ೩-೪ನೆ ಶತಮಾನಕ್ಕಿಂತ ಹಿಂದೆ ಹೋಗಲಾರದು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ತಜ್ಞ ಶೋಧಕರಿಗೆ ಆಹ್ವಾನ ನೀಡುವಂತಹ ಮಾಹಿತಿ ಲಭ್ಯವಿದೆ.

ಇತ್ತೀಚಿನ ದಿನಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಾಚೀನ ಮಾನವನ ಶಿಲಾಯುಗೀನ ಸಂಸ್ಕೃತಿಯ ನೆಲೆಗಳ ಪತ್ತೆ ಕಾರ್ಯ ಬಹಳವಾಗಿ ನಡೆಯುತ್ತಿದೆ. ಹೊಸಹೊಸ ನೆಲೆಗಳನ್ನು ಅನಾವರಣಗೊಳಿಸುವ ಕಾರ್ಯದಲ್ಲಿ ಉಡುಪಿ ಜಿಲ್ಲೆ ಮುಂಚೂಣಿಯಲ್ಲಿದೆ. ಈ ದಿಸೆಯಲ್ಲಿ ನಾನು ನಡೆಸಿರುವ ಶೋಧಕಾರ್ಯದ ಬಗೆಗಿನ ಒಂದು ಟಿಪ್ಪಣಿ ಇಲ್ಲಿದೆ.

೧ ಸೂಳ್ಯಪದವು ನೆಲೆಗಳು

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಬಡಗನ್ನೂರು ಪಡುವನ್ನೂರು ಗ್ರಾಮಗಳು ಸೇರಿದ ದಟ್ಟಕಾಡಿನಿಂದ ಕೂಡಿದ ಬೆಟ್ಟ ಪ್ರದೇಶಕ್ಕೆ ಪಡುಮಲೆ ಎಂದು ಹೆಸರು. 'ಸೂಳ್ಯಪದವು'

*ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ ೫೭೬೧೦೨.

ಇಲ್ಲಿಯ ಒಂದು ಉಪಗ್ರಾಮ. ಪಡುಮಲೆ ಕರ್ನಾಟಕ- ಕೇರಳ ರಾಜ್ಯಗಳ ಗಡಿಯುದ್ದಕ್ಕು ಹರಡಿರುವ ಆನೆಮಲೈಬೆಟ್ಟ ಪ್ರದೇಶದ ಒಂದು ಭಾಗ. ೧೯೭೯ರಲ್ಲಿ ಶಿಲಾಶಾಸನಗಳಿಗಾಗಿ ನಾನು ನಡೆಸಿದ ಕ್ಷೇತ್ರ ಕಾರ್ಯ ಸಮಯದಲ್ಲಿ ಈ ಭಾಗದಲ್ಲಿ ಗೋಚರವಾದ್ದು ಅಧಿಕ ಸಂಖ್ಯೆಯ ಮಾರ್ಗ ಸಮಾಧಿಗಳು. ಮುರಗಲ್ಲನ್ನು (ಲ್ಯಾಟರೈಟ್‌ಕಲ್ಲು) ಕೊರೆದು ಮಾಡಿದ ಸಮಾಧಿಗಳ ಇವು ಮಾರ್ಗದ ಭಾಗ (Passage Section) ಒಂದನ್ನು ಬಿಟ್ಟರೆ ಉಳಿದಂತೆ ಅವು ಗುಹಾ ಸಮಾಧಿಗಳು. ವೃತ್ತಾಕಾರದಲ್ಲಿ ಕೊರೆದ ಈ ಸಮಾಧಿಗಳು ಅರ್ಧಚಂದ್ರಾಕಾರ ಇಲ್ಲವೆ ಗೋಳಾಕಾರದ ಮುಚ್ಚಿಗೆ ಹೊಂದಿವೆ. ಒಬ್ಬ ದೃಢಕಾಯನಾದ ಮನುಷ್ಯ ಕೇಂದ್ರ ಭಾಗದಲ್ಲಿ ಪದ್ಮಾಸನ ಹಾಕಿ ಕುಳಿತುಕೊಳ್ಳಬಲ್ಲಷ್ಟು ಎತ್ತರ ಒಳಗಿನದು. ಪ್ರವೇಶ ದ್ವಾರದಲ್ಲಿ ಚೆನ್ನಾಗಿ ಕೆತ್ತಲ್ಪಟ್ಟ ಬಾಗಿಲುವಾಡ, ಅದಕ್ಕೊಪ್ಪುವ ಬಾಗಿಲು (ಎಲ್ಲವೂ ಮುರಕಲ್ಲಿನವೆ) ಇದಕ್ಕೆ ಒಳಗೆ ಸಮಾಧಿಗೆ ಸಂಬಂಧಪಟ್ಟಂತೆ ಕುಂಭಗಳಿವೆ. ಕೆಲವೆಡೆಗಳಲ್ಲಿ ನನಗೆ ಮಾಹಿತಿ ದೊರೆಯುವ ವೇಳೆಗೆ ನಾನಾ ಕಾರಣಗಳಿಂದಾಗಿ ಒಡೆದು ಹಾಕಲಾಗಿತ್ತು. ಒಂದು ಕಡೆ ಕೆಲವು ಅಪರೂಪದ ಕುಂಭಗಳು. ಬೋಗುಣಿಗಳು, ಹಣತೆ, ಮೂರುಕಾಲಿನ ಹೂಜದಂತಹ ಮಡಕೆ ದೊರೆತವು.

ಇವುಗಳಲ್ಲಿ ಕೆಲವು ಸ್ಥಳೀಯ ಪ್ರೌಢಶಾಲೆಯಲ್ಲೂ[೧೧] ಇನ್ನು ಕೆಲವು ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ಸಂಗ್ರಹಾಲಯದಲ್ಲೂ ಇವೆ. ಚಿನ್ನದ ಆಸೆಯಿಂದ ಒಡೆದ ಒಂದು ಸಮಾಧಿಯಲ್ಲಿ ಸಿಕ್ಕ ದೊಡ್ಡ ಕುಂಭಗಳನ್ನು ಚೂರು ಮಾಡಿ ಎಸೆಯಲಾಗಿತ್ತು. ಆಶ್ಚರ್ಯದ ಸಂಗತಿ ಎಂದರೆ ಸಮಾಧಿಗೆ ಇರುವ ಪ್ರವೇಶ ದ್ವಾರ ಬಹಳ ಕಿರಿದಾದ್ದು. ಇದರ ಮುಖಾಂತರ ತೆವಳಿಕೊಂಡು ಒಳಪ್ರವೇಶ ಮಾಡಬೇಕು. ಬಾಗಿಲು ವಾಡದ (Door Frame) ರಚನೆ ಮಾತ್ರ ಹಳ್ಳಿಗಳಲ್ಲಿ ಮಠದ ಬಾಗಿಲುಗಳ ರಚನೆಯನ್ನೇ ಹೋಲುವಂತಹುದು. ಮುರಕಲ್ಲಿನ ಒಂದು ಸಣ್ಣಚಪ್ಪಡಿ ಇದರ ಬಾಗಿಲು ಮಾರ್ಗ (Passage) ಬಹಳ ಕಿರಿದಾಗಿದ್ದು ಬಹಳ ದೂರದವರೆಗೆ ಇರುವುದನ್ನು ಕಾಣಬಹುದು.

ಇಂತಹ ಸಮಾಧಿಗಳಿಗಾಗಿ ಸುತ್ತಮುತ್ತಲಿನ ಬೆಟ್ಟ ಪ್ರದೇಶದಲ್ಲಿ ಹುಡುಕಾಟ ನಡೆಸಿದಾಗ ಇವು ಅಧಿಕ ಸಂಖ್ಯೆಯಲ್ಲಿರುವುದು ಕಂಡು ಬಂದಿತು. ಬೆಟ್ಟ ಭಾಗದ ಗಟ್ಟಿ ಮುರಕಲ್ಲಿನ ಮೇಲ್ಭಾಗದಲ್ಲಿ ಕೆಳಮಟ್ಟದಲ್ಲಿ ಸಮಾಧಿಗಳಿರುವ ಸೂಚನೆಗಳಿವೆ. ಮಳೆಗಾಲದಲ್ಲಿ ನೀರು ಶೀಘ್ರವಾಗಿ ಹರಿದು ಹೋಗುವುದಕ್ಕೆ ಮಾಡಿದ ವ್ಯವಸ್ಥೆಯನ್ನು ಈಗಲೂ ನೋಡಬಹುದು. ಪುಣ್ಯವಶಾತ್ ಹಲವಾರು ಶಿಲಾಸಮಾಧಿಗಳು ಅಷ್ಟಾಗಿ ಗೋಚರಕ್ಕೆ ಬರದೆ ಹಾಗೆ ಉಳಿದಿವೆ. ಮನೆ ಕಟ್ಟಲು ಸಾಮಗ್ರಿಗಾಗಿ ಮುರಕಲ್ಲನ್ನು (Laterite Stone) ಕಡಿಯುವ ಕೆಲಸ ಈಗ ಎಲ್ಲೆಲ್ಲೂ ಅವ್ಯಾಹತವಾಗಿ ನಡೆದಿದೆ. ಇದೇ ಈಗಿರುವ ಆತಂಕದ ವಿಷಯ. ಆದರೆ ಪ್ರಾಚೀನ ಮಾನವರು ತಮ್ಮ ಹಿರಿಯರಿಗಾಗಿ ಅಥವಾ ಮೃತರಿಗಾಗಿ ಮುರಕಲ್ಲನ್ನು ಕೊರೆದು ರಚಿಸಿರುವ ಈ ಸಮಾಧಿಗಳ ಗುಣಮಟ್ಟ ಮತ್ತು ರಚನಾ ಕೌಶಲ್ಯ ನಿಜಕ್ಕೂ ಗಮನ ಸೆಳೆಯುವಂತಹುದು.

ಡಾ. ಅಸುಂದರ ಅವರು ಉತ್ತರ ಕರ್ನಾಟಕದ ಮಾರ್ಗ ಸಮಾಧಿಗಳ ಬಗ್ಗೆ ಬರೆಯುತ್ತಾ ಈ ರೀತಿಯ ರಚನೆ ತೀರ ಪ್ರದೇಶದಲ್ಲಿ ಹುಟ್ಟಿ ಘಟ್ಟ ಹತ್ತಿ ಮೈದಾನ ಭಾಗಕ್ಕೆ ಬಂದು ತನ್ನ ಪ್ರಭಾವ ಬೀರಿರಬೇಕೆಂದು ಹೇಳಿದ್ದಾರೆ. ತೀರಪ್ರದೇಶದಲ್ಲಿ ಇವುಗಳ ಬೆಳವಣಿಗೆ ಕ್ರಿ.ಪೂ. ೮೦೦-೬೦೦ರ ವೇಳೆಗೆ ಆಗಿರಬೇಕೆಂಬ ಅನುಮಾನವನ್ನು ಅವರು ಪ್ರಕಟಿಸಿದ್ದಾರೆ. ಸೂಳ್ಯಪದವು ಭಾಗದ ಮಾರ್ಗ ಸಮಾಧಿಗಳು ಎಂಬ ಅ. ಸುಂದರ ಅವರ ಮಾತು ಸತ್ಯ ಅನ್ನುವಂತಿವೆ. ಅಷ್ಟೆ ಅಲ್ಲ ಅವುಗಳು ಕ್ರಿ.ಪೂ. ೧೫೦೦ ರಿಂದ ೬೦೦ರ ಕಾಲಕ್ಕೆ ಸೇರುವಂತಿವೆ.

೨ ಪಾಂಡವರ ಕಲ್ಲು-ಕಿಂಡಿ-ಕೋಣೆ ಶಿಲಾ ಸಮಾಧಿಗಳು

ಪಾಂಡವರ ಕಲ್ಲು ಬಡಗಕಜೆಕಾರು ಗ್ರಾಮದ ಒಂದು ಸ್ಥಳಕ್ಕೆ ಇರುವ ಹೆಸರು. ಇದು ಬಂಟವಾಳ ತಾಲೂಕಿನಲ್ಲಿದೆ. (ಜಿಲ್ಲೆ ದ.ಕ.) ಡಾ. ಗುರುರಾಜಭಟ್ಟ ಅವರು ಇಲ್ಲಿಗೆ ಮೊದಲು ಭೇಟಿಕೊಟ್ಟು ಇಲ್ಲಿಯ ಕಿಂಡಿ-ಕೋಣೆ ಶಿಲಾ ಸಮಾಧಿ (ಕಲ್ಮನೆ)ಗಳನ್ನು ಬೆಳಕಿಗೆ ತಂದರು. ಡಾ. ಅ. ಸುಂದರ ಅವರು ಇವನ್ನು ಪರಿಶೀಲಿಸಿದ್ದಾರೆ. ಬೃಹದ್ ಕಣಿವೆಯೊಂದರ ಮಟ್ಟಸವಾದ ಮೇಲ್ಮೈ ಜಾಗದಲ್ಲಿ ಅಧಿಕ ಸಂಖ್ಯೆಯಲ್ಲಿದ್ದ ಈ ಕಲ್ಮನೆಗಳು ಈಗ ಇಲ್ಲ. ಕಾರಣ ಜನರ ಸಂಚಾರಕ್ಕಾಗಿ ಒಂದು ದೊಡ್ಡ ರಸ್ತೆ ಈಗ ಇಲ್ಲಿ ಆಗಿದೆ. ಅಳಿದುಳಿದಿರುವ ಬೆರಳೆಣಿಕೆಯಷ್ಟು ಕಲ್ಮನೆಗಳ ಕಲ್ಲುಗಳು ಈಗ ಕೆಳಗೆ ಬಿದ್ದಿವೆ. ಕೆಲವೆಡೆ ಇದ್ದ ಭಾರಿ ಕಲ್ಲು ಚಪ್ಪಡಿಗಳನ್ನು ಒಡೆದು ಸಾಗಿಸಿ ಆಗಿದೆ. ಇವುಗಳು ಇದ್ದ ಸ್ಥಳಗಳಲ್ಲಿ ಈಗ ಮನೆಗಳನ್ನು ಕಟ್ಟಿದ್ದಾರೆ, ಇಲ್ಲವೆ ಆ ಸ್ಥಳಗಳಲ್ಲಿ ಮುರಕಲ್ಲನ್ನು ಕಡಿಯುವ ಕೆಲಸ ನಡೆದಿದೆ.

ದುಃಸ್ಥಿತಿಯಲ್ಲಿರುವ ಈ ಸ್ಥಳವನ್ನು ಹಲವು ಬಾರಿ ವೀಕ್ಷಿಸಿ ಕುತೂಹಲಕ್ಕಾಗಿ ಇರಬಹುದಾದ ಇಂತಹುದೇ ಸಮಾಧಿಗಳಿಗಾಗಿ ಸುತ್ತ ಮುತ್ತಲಿನ ಕಾಡು ಪ್ರದೇಶವನ್ನು ವಿಸ್ತೃತ ನೆಲೆಯಲ್ಲಿ ಶೋಧಿಸಿದೆ. ಆಶ್ಚರ್ಯವೆಂಬಂತೆ ಗುಡ್ಡೆಯ ಇಳಿಜಾರು ಮತ್ತು ಎತ್ತರದ ಮಟ್ಟಸ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯ ಶಿಲಾ ಸಮಾಧಿಗಳಿರುವುದು ಗೋಚರಿಸಿತು. ಒಂದು ವಿಶಾಲವಾದ ಸ್ಥಳದಲ್ಲಿ ಮರಗಳ ನೆರಳಿನಲ್ಲಿ ಗಾತ್ರದಲ್ಲಿ ಚಿಕ್ಕದಾದ, ಸಂಖ್ಯೆಯಲ್ಲಿ ಅಧಿಕವಾದ ಶಿಲಾ ಸಮಾಧಿ ಸ್ಥಾನ ಪತ್ತೆಯಾಯಿತು. ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಗ್ರಾಮ ಬಡಗಕಜೆಕಾರು. ಗ್ರಾಮದ ಮುಖ್ಯ ಕಛೇರಿಗಳಿರುವುದು ಪಾಂಡವರ ಕಲ್ಲಿನಲ್ಲೆ. ಕ್ರಮೇಣ

ಹೆಸರು ಮಾತ್ರ ಉಳಿದು ಸಮಾಧಿಕಲ್ಲುಗಳು ಮಾಯವಾಗುವ ಕಾಲ ದೂರವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಂದು ಅಪರೂಪದ ಬೃಹತ್ ಶಿಲಾಯುಗ ಕಾಲದ ನೆಲೆ ಈ ಪಾಂಡವರ ಕಲ್ಲು. ಆಡಳಿತ ಉಳಿಸಿದರೆ ಜಿಲ್ಲೆಯ ಇತಿಹಾಸಕ್ಕೊಂದು ಮಹತ್ತಮವಾದ ಆಧಾರ ಇಲ್ಲಿದೆ. ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ನಾಗಪುರದ ಪ್ರಾಕ್ತನ ವಿಭಾಗ ಅಧಿಕಾರಿಗಳಿಗೆ ಈ ಸ್ಥಳದ ಪರಿಚಯ ಮಾಡಿಸಿದ್ದೇನೆ. ಅವರು ಕೆಲವು ಮಾದರಿಗಳನ್ನು ಇಲ್ಲಿಂದ ಪಡೆದುಕೊಂಡು ಹೋಗಿ ವರದಿ ಮಾಡಿದ್ದಾರೆ.

೩. ನವಶಿಲಾಯುಗ ಕೊಡಲಿಗಳು-ಕಾರ್ಕಳದ ಸುತ್ತಮುತ್ತ

ಉಡುಪಿ ಜಿಲ್ಲೆಯ ಕಾರ್ಕಳ ಒಂದು ತಾಲೂಕು ಕೇಂದ್ರ. ಸಹ್ಯಾದ್ರಿ ಬೆಟ್ಟ ಸಾಲುಗಳ ಸೆರಗಿನಲ್ಲೆ ಸಾಗುವ ಇದು ಜಿಲ್ಲೆಯ ಇತಿಹಾಸ ಸಂಸ್ಕೃತಿ ಹಾಗೂ ಕಲೆಯ ಒಂದು ಪ್ರಮುಖಕೇಂದ್ರ. ರಾಜ್ಯದ ಎರಡನೇ ಪ್ರಾಚೀನ ಬಾಹುಬಲಿ ಪ್ರತಿಮೆ ಇರುವುದು ಇಲ್ಲೆ. ಕನ್ನಡದ ಅತ್ಯಂತ ಪ್ರಾಚೀನವಾದ ತಾಮ್ರ ಶಾಸನ ದೊರಕಿರುವುದು ಈ ತಾಲೂಕಿನಲ್ಲಿ (ಎರಡನೆಯ ಆಳುವರಸನ ಬೆಳ್ಮಣ್ಣು ತಾಮ್ರ ಶಾಸನ). ಇತಿಹಾಸ ಕಾಲದಂತೆ ಇತಿಹಾಸ ಪೂರ್ವ ಕಾಲದಲ್ಲೂ ಮಾನವ ಚಟುವಟಿಕೆಗಳ ಕೇಂದ್ರವಾಗಿತ್ತು ಎನ್ನುವುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿದೆ.

ಕಾರ್ಕಳ ನಗರದ ಎರಡು ಪ್ರದೇಶಗಳಲ್ಲಿ ನವಶಿಲಾಯುಗದ ಶಿಲಾ ಕೊಡಲಿಗಳು ದೊರೆತಿವೆ. ನಗರದ ದಕ್ಷಿಣ ಭಾಗದ ಹೊರವಲಯದಲ್ಲಿ ಎತ್ತರವಾದೊಂದು ಶಿಖರ. ಇದನ್ನು ಸ್ಥಳೀಯವಾಗಿ **"ಪರ್ಪಲೆ ಗುಡ್ಡ"** ಎಂದು ಹೆಸರಿಸಲಾಗಿದೆ. ಇದರ ನಡುಭಾಗದಲ್ಲೊಂದು ಪ್ರಾಕ್ಚಾರಿತ್ರಿಕ ಗವಿ ಇದೆ. ಇದರ ಅವಲೋಕನಾರ್ಥ ಹೋದಾಗ ಗವಿಯ ಹೊರಭಾಗದ ಒಂದು ಪಾರ್ಶ್ವದಲ್ಲಿ ಒಂದು ನೂತನ ಶಿಲಾಯುಗದ ಕೊಡಲಿ ದೊರೆ ಯಿತು. ಅಂತೆಯೆ ಕಾರ್ಕಳದ ಪೂರ್ವಭಾಗದ ಗುಡ್ಡೆಯ ಮೇಲ್ಭಾಗದಲ್ಲಿ ಹೊಸ ಬಡಾವಣೆಯೊಂದು ಬೆಳೆಯಲು ಪ್ರಾರಂಭವಾಯಿತು. ಇಲ್ಲೆ ಮನೆ ಮಾಡಿಕೊಂಡಿರುವ ಸಹೋದ್ಯೋಗಿ ಮಾತ್ರ ಶ್ರೀ ಜಿ. ನಾಗರಾಜ ಅವರಿಗೆ ಅವರ ಮನೆಯ ಸಮೀಪದ ರಸ್ತೆ ಬದಿಯ ಗುಡ್ಡೆಯಲ್ಲಿ ಹೂತು ಹೋಗಿದ್ದ ಒಂದು ಕಲ್ಲು ಗಮನ ಸೆಳೆಯಿತು. ಅದನ್ನವರು ತಂದು ನನಗಿತ್ತರು. ಅದುವೆ ಕಾರ್ಕಳದಲ್ಲಿ ದೊರೆತ ಎರಡನೆಯ ನೂತನ ಶಿಲಾಯುಗದ ಕೊಡಲಿ.

ಎರಡೂ ಕೊಡಲಿಗಳು ಒಂದೇ ಅಳತೆಯವು. ಒಂದು ಸ್ವಲ್ಪ ಹೆಚ್ಚು ಬಳಕೆಯಾದಂತಿದೆ. ಮತ್ತೊಂದರ ಮೊನಚು ಬಹಳ ಸ್ಪಷ್ಟವಾಗಿದೆ. ಬೆನ್ನ ಮೇಲಿನ ಉಬ್ಬು (Dis) ಬಹಳ ಸ್ಪಷ್ಟವಾಗಿ ರೂಪಿತವಾಗಿದೆ. ಎರಡನ್ನೂ ನಾಗಪುರದ ಪ್ರಾಕ್ಚಾರಿತ್ರಿಕ ವಿಭಾಗದ ತಜ್ಞರ ಗಮನಕ್ಕೆ ತರಲಾಗಿದೆ.

ಎರಡೂ ಸ್ಥಳಗಳಲ್ಲಿ ವಿಸ್ತೃತ ಶೋಧ ನಡೆಸಲಾಯಿತು. ಆದರ ಬೇರೆ ಯಾವ ವಸ್ತುಗಳೂ ಆ ಕಾಲಕ್ಕೆ ಸಂಬಂಧಪಟ್ಟಂತೆ ದೊರೆಯಲಿಲ್ಲ. ಎರಡೂ ಕಡೆಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿರುವುದರಿಂದ ಅವು ಇದ್ದಿರಬಹುದಾದ ಪ್ರಾಚೀನ ಕುರುಹುಗಳನ್ನು ಮುಚ್ಚಿಹಾಕುವ ಸಾಧ್ಯತೆಗಳು ಹೆಚ್ಚು.

ಕಾರ್ಕಳದ ಈದುಗ್ರಾಮದ ಉಡಂಗಜೆ ಸಹ್ಯಾದ್ರಿ ಬೆಟ್ಟಗಳ ಸೆರಗಿನಲ್ಲಿರುವ ಅರಣ್ಯಪ್ರದೇಶ. ಈಗ ಇದು ಕುದುರೇಮುಖ ರಾಷ್ಟ್ರೀಯ ರಕ್ಷಿತಾರಣ್ಯ ವಲಯದೊಳಗಿದೆ. ಈ ದಟ್ಟ ಅಡವಿಯ ಕಣಿವೆ ಪ್ರದೇಶದಲ್ಲಿ ಶೋಧಕಾರ್ಯ ನಡೆಸಿದಾಗ ಒಂದು ಸ್ವಲ್ಪ ಉಪಯೋಗಿಸಿದ್ದ ನೂತನ ಶಿಲಾಯುಗದ ಆಯುಧ ಒಂದು ದೊರೆಯಿತು. ಇದು ಗಾತ್ರ ಮತ್ತು ತೂಕದಲ್ಲಿ ಹಿರಿದಾಗಿದ್ದು ನೋಡಲು ಕೊಡಲಿಯನ್ನು ಹೋಲುತ್ತದೆ. ಆದರೆ ಕೊಡಲಿ ಅಲ್ಲ-ಪ್ರಾಯಶಃ ಇದು ಕೈಯಿಂದ ಬಳಸಲಾಗುತ್ತಿದ್ದ ಸುತ್ತಿಗೆ. ಈ ಪ್ರದೇಶದಲ್ಲಿ ಇನ್ನಷ್ಟು ಶೋಧ ಕಾರ್ಯ ನಡೆದರೆ ಶಿಲಾಯುಗಗಳ ಕಾಲದ ಹಲವು ರೀತಿಯ ಅಮೂಲ್ಯ ಪಳೆಯುಳಿಕೆಗಳು ದೊರೆಯುವ ಸಾಧ್ಯತೆ ಹೆಚ್ಚಿದೆ.

೪. ಒಂದು ಕಾರ್ಖಾನೆಗಳ ಸ್ಥಳ

ಕಾರ್ಕಳದ ಸುತ್ತಮುತ್ತ ಕಾಡಿನಿಂದ ಕೂಡಿದ ಬಂಡೆಗಲ್ಲುಗಳ ಬೆಟ್ಟ ಸಾಲುಗಳು ಬಹಳವಾಗಿ ಹರಡಿವೆ. ಇಲ್ಲಿ ಕೆಲವೆಡೆ ಈಗಾಗಲೆ ಬೃಹತ್ ಶಿಲಾಯುಗದ ಸಮಾಧಿಗಳು ಪತ್ತೆಯಾಗಿವೆ. ಈಗ ಉತ್ತರ ಮತ್ತು ದಕ್ಷಿಣ ಭಾಗಗಳ ಗುಡ್ಡಸಾಲುಗಳಲ್ಲಿ ಬಂಡೆಗಲ್ಲು ವಾಸ್ತವ್ಯಗಳು (Rock Shelters) ಪತ್ತೆಯಾಗಿವೆ. ಇಲ್ಲಿ ಒಂದು ಗುಡ್ಡೆಯ ಭಾಗದಲ್ಲಿ ಶಿಲಾ ಆಯುಧಗಳನ್ನು ತಯಾರು ಮಾಡುತ್ತಿದ್ದ ಕೇಂದ್ರ ಸ್ಥಾನ (Factory Site) ಪತ್ತೆಯಾಗಿದೆ. (ಇದು ಇಲ್ಲಿನ ಕಣಜಾರುಗುಡ್ಡೆಗಳಲ್ಲಿದೆ). ಇಲ್ಲಿ ಹೆಚ್ಚಾಗಿ ಆಯುಧಗಳನ್ನು ಮಾಡುವಾಗ ತೆಗೆಯುವ ಚಕ್ಕೆ(Flakes)ಗಳು ದೊರೆತಿವೆ. ಸ್ಥಳೀಯವಾಗಿ ದೊರೆಯುವ ಕಲ್ಲಿಗೂ ಈ ಚಕ್ಕೆಗಳ ಕಲ್ಲಿಗೂ ಗುಣಮಟ್ಟದಲ್ಲಿ ಬಹಳ ವ್ಯತ್ಯಾಸವಿದೆ. ಪ್ರಾಯಶಃ ಆಯುಧಗಳ ರಚನೆಗಾಗಿ ಅದಕ್ಕೆ ಬೇಕಾದ ವಿಶಿಷ್ಟ ರೀತಿಯ ಗಟ್ಟಿ ಗುಣಮಟ್ಟದ ಕಲ್ಲನ್ನು ಬೇರೆಡೆಯಿಂದ ಇಲ್ಲಿಗೆ ತಂದಿದ್ದಂತೆ ಕಾಣುತ್ತದೆ. ಈಗ ಈ ಸ್ಥಳ ರಕ್ಷಿತಾರಣ್ಯದ ಭಾಗವಾಗಿದೆ. ಇಲ್ಲೆ ಹೆಬ್ಬಂಡೆ ವಾಸ್ತವ್ಯಗಳೂ ಪತ್ತೆಯಾಗಿವೆ. ಹಲವು ಚ.ಕಿ.ಮೀ. ವಿಸ್ತಾರಕ್ಕೆ ಹರಡಿರುವ ಈ ಗುಡ್ಡಪ್ರದೇಶ ವಿಸ್ತೃತ ಶೋಧ ಕಾರ್ಯಕ್ಕೆ ಯೋಗ್ಯವಾದ ಒಂದು ಸ್ಥಳ.[೧೨]

೫. ಅರೆಹೊಳೆಯಲ್ಲಿ ನೂತನ ಶಿಲಾಯುಗದ ಪಳೆಯುಳಿಕೆಗಳು:

ಕುಂದಾಪುರ ತಾಲೂಕಿನ (ಉಡುಪಿ ಜಿಲ್ಲೆ) ಒಂದು ಗ್ರಾಮ ಅರೆಹೊಳೆ. ಹೆಸರಿಗೆ ತಕ್ಕಂತೆ ಇಲ್ಲಿ ಬಂಡೆಗಲ್ಲುಗಳು ಮತ್ತು ಹೊಳೆ-ಎರಡೂ ಇದ್ದು ಅವು ಒಂದು ರಮಣೀಯ ತಾಣವನ್ನು ಸೃಷ್ಟಿಸಿವೆ.

ಶಾಸನಗಳ ಶೋಧಕ್ಕಾಗಿ ಈ ಪ್ರದೇಶಕ್ಕೆ ಹಿರಿಯ ಮಿತ್ರರಾದ ಶ್ರೀ ಉಪ್ಪಂದ ಚಂದ್ರಶೇಖರ ಹೊಳ್ಳರವರೊಂದಿಗೆ ಹೋದಾಗ ಕೆಲವು ಅಪೂರ್ವ ಪ್ರಾಚೀನ ಶಾಸನಗಳು ದೊರೆತವು. ಆದರೆ ಅವಕ್ಕಿಂತ ಮಿಗಿಲಾಗಿ ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನಾಗಬನದ ಸಮೀಪದ ಹಾಡಿಯಲ್ಲಿನ ಗುಡ್ಡೆ ಸ್ಥರದಲ್ಲಿ ಕೆಲವು ನವಶಿಲಾಯುಗದ ಮಡಕೆ ಚೂರುಗಳು ದೊರೆತವು. ಈ ಸ್ಥಳದ ವಿಸ್ತೃತ ಶೋಧ ಇನ್ನೂ ಮಾಡಬೇಕಾಗಿದೆ. ಈ ಹಿಂದೆ ಡಾ. ಪಿ. ಗುರುರಾಜ ಭಟ್ಟರು ಬಸರೂರಿನಲ್ಲಿ ಬಂಡೆಗಲ್ಲಿನಲ್ಲಿ ಗೀರು-ಉಬ್ಬು ಚಿತ್ರಗಳನ್ನು ಪತ್ತೆ ಮಾಡಿದ್ದರು[೧೩]. ಅದರೊಂದಿಗೆ ಈಗಿನದು ಒಂದು ಪ್ರಮುಖ ಶೋಧ. ಇದರಿಂದ ಕಾರ್ಕಳ ಅಷ್ಟೆ ಅಲ್ಲದೆ ಕುಂದಾಪುರ ತಾಲೂಕು ಸಹ ನೂತನ ಶಿಲಾಯುಗ ಕಾಲದ ಮಾನವ ಚಟುವಟಿಕೆಗಳಿಂದ ಕೂಡಿತ್ತು ಎಂದು ತಿಳಿದುಬರುತ್ತದೆ.

೬. ಸೂಕ್ಷ್ಮ ಶಿಲಾಯುಗದ ಪಳೆಯುಳಿಕೆ – ಉಡುಪಿ ತಾಲೂಕಿನ ಹೊಸ ನೆಲೆಗಳು

ಉಡುಪಿ ತಾಲೂಕಿನ ಬಾರಕೂರು ಸುತ್ತಮುತ್ತ ಸೂಕ್ಷ್ಮ ಶಿಲಾಯುಗದ ಪಳೆಯುಳಿಕೆಗಳನ್ನು ಡಾ. ಶಿವತಾರಕ್ ಈಗಾಗಲೇ ಪತ್ತೆ ಮಾಡಿದ್ದಾರೆ. ಅದಕ್ಕೆ ಸೇರ್ಪಡೆ ಈಗ ಪತ್ತೆಯಾಗಿರುವ ಹೊಸ ನೆಲೆಗಳು.

ಶಾಸನ ಶೋಧ ಮತ್ತು ದೇವಾಲಯ ಅಧ್ಯಯನ ಕಾರ್ಯನಿಮಿತ್ತ ಮಿತ್ರರಾದ ಡಾ. ಪಾದೆಕಲ್ಲು ವಿಷ್ಣುಭಟ್ (ಹೆಬ್ರಿ ಸರಕಾರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು) ಅವರೊಂದಿಗೆ **'ಆತ್ರಾಡಿ'** ಗ್ರಾಮ ಪರಿವೀಕ್ಷಣೆ ನಡೆಸಿದಾಗ ಮಾರ್ಗದ ಬದಿಯಲ್ಲೇ ಇದ್ದ ನಾಗಬನವೊಂದು ಆಕರ್ಷಿಸಿತು. ಈ ಸ್ಥಳ ಗುಡ್ಡೆಯೊಂದರ ಶಿರಭಾಗದ ಇಳಿಜಾರಿನಲ್ಲಿದೆ. ನಾಗಪೂಜೆಯ ಪವಿತ್ರಸ್ಥಾನವಾದ್ದರಿಂದ ಈ ನಾಗಬನದ ಸ್ಥಳ ತನ್ನ ಯಥಾಸ್ಥಿತಿಯನ್ನು ಕಾಯ್ದುಕೊಂಡಿದೆ. ಆದರೆ ನಮ್ಮ ಆಕರ್ಷಣೆಯ ಮುಖ್ಯವಸ್ತು ಇಲ್ಲಿ ಹೇರಳವಾಗಿ ಕಂಡುಬರುವ ಅತಿ ಉತ್ಕೃಷ್ಟವಾದ ಬೆಣಚುಕಲ್ಲು ಹಾಗೂ ಅದರ ಚಕ್ಕೆ (Flakes)ಗಳು. ಇದನ್ನು ಆಧರಿಸಿ ಸ್ಥಳ ಪರಿಶೀಲಿಸಿದಾಗ ದೊರೆತದ್ದು ಸೂಕ್ಷ್ಮ ಶಿಲಾಯುಗದ ಹಲವು ನಮೂನೆಯ ಆಯುಧ ಮತ್ತು ಉಪಕರಣಗಳು. ಇದರಿಂದ ಉಡುಪಿ ನಗರಕ್ಕೆ ತೀರ ಸಮೀಪ ಮೂಡಲಾಗಿ ಒಂದು ಅತ್ಯಂತ ಪ್ರಮುಖವೂ ಹಾಗೂ ಪ್ರಾಚೀನವೂ ಆದಂತಹ ಪ್ರಾಕ್ಚಾರಿತ್ರಿಕ ನೆಲೆಯ ಪತ್ತೆಯಾದಂತಾಯಿತು.

ಪರ್ಕಳದಿಂದ **೮೦ ಬಡಗಬೆಟ್ಟು** ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಅಲೆಂಬಿ ಎಂಬ ಗುಡ್ಡೆಗಳಿಂದ ಆವೃತವಾದ ಸ್ಥಳವೊಂದಿದೆ. ಇತ್ತೀಚಿನ ವರ್ಷಗಳವರೆಗೆ ಇಲ್ಲಿಯ ಗುಡ್ಡಗಳು ದಟ್ಟಕಾಡಿನಿಂದ ಕೂಡಿದ್ದುವು. ವಿಶಾಲವಾದೊಂದು ಕೆರೆ, ಕೆಲವು ಮನೆಗಳು, ದೇವಾಲಯ, ದೈವಾಲಯಗಳು ಇಲ್ಲಿದ್ದವು. ಈಗ ಅವುಗಳ ಪಳೆಯುಳಿಕೆಗಳಿವೆ. ಇವುಗಳನ್ನು ವೀಕ್ಷಿಸಲು ಮಿತ್ರರಾದ ಶಾಲಾ ಅಧ್ಯಾಪಕ ಶ್ರೀಧರಭಟ್ ಅವರೊಂದಿಗೆ ತೆರಳಿದಾಗ ಗುಡ್ಡೆಯೊಂದರ ನೆತ್ತಿಯ ಮೇಲೆ ನಮಗೆ ದೊರಕಿದ್ದು ಸೂಕ್ಷ್ಮ ಶಿಲಾಯುಗದ ಉಪಕರಣಗಳು. ಪ್ರಾಚೀನ ಮಾನವನ ವಾಸ್ತವ್ಯದ ನೆಲೆ ಉಡುಪಿಯ ಸಮೀಪವೇ ಮತ್ತೊಂದು ಇರುವುದು ಇದರಿಂದ ಗೋಚರಕ್ಕೆ ಬಂತು.

ಎರಡೂ ನೆಲೆಗಳನ್ನು ಮತ್ತು ಕೂಲಂಕಷವಾಗಿ ಶೋಧಿಸಿದರೆ ಕನಿಷ್ಠ ಹಳೇ ಶಿಲಾಯುಗದ ಉತ್ತರ ಕಾಲದ ಪಳೆಯುಳಿಕೆ ಮತ್ತು ಮಾಹಿತಿ ದೊರೆಯುವುದರಲ್ಲಿ ಸಂದೇಹವಿಲ್ಲ ಎಂಬ ಮನವರಿಕೆಯಾಯಿತು.

೭. ಹೊಸ ಶಿಲಾಯುಗದ ಮತ್ತೊಂದು ನೆಲೆ

ಉಡುಪಿ ತಾಲೂಕಿನ ಕರಾವಳಿ ಭಾಗದಲ್ಲಿ ಹೊಸ ಶಿಲಾಯುಗದ ಹಲವು ನೆಲೆಗಳನ್ನು ಡಾ. ಬಿ. ವಸಂತ ಶೆಟ್ಟರು ಶೋಧಿಸಿದ್ದಾರೆ. ತಾಲೂಕಿನ ಪೂರ್ವ ಭಾಗದಲ್ಲಿ ಇತ್ತೀಚೆಗೆ ನನಗೊಂದು ನೆಲೆ ಲಭ್ಯವಾಯಿತು.

ಪರ್ಕಳದ ಸಮೀಪವಿರುವ ೮೦ ಬಡಗಬೆಟ್ಟು ಒಂದು ದೊಡ್ಡ ಗ್ರಾಮ. ಇದರ ಬಹಳಷ್ಟು ಭಾಗದಲ್ಲಿ ಗುಡ್ಡ, ಕಣಿವೆ, ಬಯಲುಗಳಿವೆ. ಇಲ್ಲಿನ ಪಂಚಾಯತ್ ಸದಸ್ಯರೊಬ್ಬರ ಮನೆಯ ಹಳೆಬಾವಿಯೊಂದನ್ನು ಶೋಧಿಸುತ್ತಿದ್ದಾಗ ಅದರ ಕೆಸರಿನಲ್ಲಿ ನೂತನ ಶಿಲಾಯುಗದ ಕೊಡಲಿಯೊಂದು ದೊರೆಯಿತು. ಕೊಡಲಿಯ ಮೊನೆ ಬಹಳ ಸ್ಪಷ್ಟವಾಗಿದ್ದು, ಸ್ವಲ್ಪ ಉಪಯೋಗಿಸಿದಂತಿದೆ. ಈ ಕಾಲದ ಹೆಚ್ಚಿನ ಪಳೆಯುಳಿಕೆಗಳಿಗಾಗಿ ನಡೆಸಿದ ನಮ್ಮ ಶೋಧ ಕಾರ್ಯ ಸದ್ಯಕ್ಕೆ ಫಲಕಾರಿಯಾಗಿಲ್ಲ. ಆದರೂ ಏನಾದರೂ ದೊರೆಯಬಹುದೆಂಬ ಆಶಾಭಾವ ಇದೆ.

೮. ಅಪರೂಪದ ವರ್ಣಕುಂಭದ ತುಣುಕುಗಳು

೮೦ ಬಡಗಬೆಟ್ಟುವಿನಲ್ಲಿ ಶೋಧ ಕಾರ್ಯ ನಡೆಸಿದಾಗ ಒಂದು ಸಣ್ಣ ಕಾಡಿನ ಪ್ರದೇಶದಲ್ಲಿ ಹಲವು ಮಡಕೆ ಚೂರುಗಳು ದೊರೆತವು. ಆ ಮಡಕೆ ಚೂರುಗಳು ಬೃಹತ್ ಶಿಲಾಯುಗಕ್ಕೆ ಸೇರಿದವಾಗಿದ್ದು, ಅವುಗಳ ಮೇಲೆ ವರ್ಣಲೇಪನ ಮಾಡಿದ್ದ ಕುರುಹುಗಳು ಕಂಡುಬಂದವು. ಹಿಂದೆ ಘನಘೋರ ವರ್ಷಧಾರೆ ಇದ್ದ ಈ ಪ್ರದೇಶದ ಸ್ಥಳವೊಂದರಲ್ಲಿ ವರ್ಣಲೇಪಿತ ಕುಂಭ ತುಣುಕು ದೊರೆಯುವುದು ಪ್ರಾಯಶಃ ಇದೆ ಮೊದಲ ಉದಾಹರಣೆ. ಮೈದಾನ ಪ್ರದೇಶದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ದೊರೆಯುವ ಇಂತಹ ವಸ್ತುವಿನ ಬಗ್ಗೆ ಇನ್ನೂ ಮಾಹಿತಿ ದೊರೆಯಬೇಕಾಗಿದೆ.

೯. ಹೀಗೊಂದು ಸಮಾಧಿ ಸ್ಥಳ

ಬೃಹತ್ ಶಿಲಾಯುಗ ಕಾಲೀನ ಸಮಾಧಿಗಳೂ, ಕಲ್ಮನೆಗಳು ಈಗ ಬಹಳಷ್ಟು ಸಂಖ್ಯೆಯಲ್ಲಿ ದೊರೆಯುತ್ತಿವೆ. ನಾನು ಆತ್ರಾಡಿ, ೮೦ ಬಡಗಬೆಟ್ಟು ಮತ್ತು ಪರ್ಕಳಗಳಲ್ಲಿ ನಡೆಸಿದ ಶೋಧ ಕಾರ್ಯದಲ್ಲೂ ಹಲವು ಇಂತಹ ಸ್ಮಾರಕಗಳು ಲಭ್ಯವಾಗಿವೆ.

ಇವುಗಳೆಲ್ಲವೂ ಸರ್ವೇಸಾಮಾನ್ಯ ಎಲ್ಲ ಕಡೆ ಕಂಡುಬರುವಂತಹವು. ಆದರೆ ಪರ್ಕಳದ ಮಾದರಿ ವಿಶಿಷ್ಟ ರೀತಿಯದು. ಇಲ್ಲಿ ಎರಡು ರೀತಿಯ ಸಮಾಧಿಗಳಿವೆ. ೧) ನೆಲಮಟ್ಟಕ್ಕಿಂತ ಕೆಳಗಿನವು ೨) ನೆಲಮಟ್ಟದವು. ಒಂದನೆಯ ಮಾದರಿಯವು ಸಮತಟ್ಟಾದ ವಿಶಾಲ ಪ್ರದೇಶದಲ್ಲಿ ಸುಮಾರು ನೂರಕ್ಕೂ ಹೆಚ್ಚು ಇವೆ. ಕುಂಭ ರೀತಿಯಲ್ಲಿ ಮುರಕಲ್ಲನ್ನು (Laterite Stone) ನೆಲಮಟ್ಟದಿಂದ ಕೆಳಗೆ ಕಡಿದು ಮಾಡಿರುವುದು ಸ್ಥಳೀಯರಿಗೆ ಬಾವಿಯಂತೆ ಕಂಡಿದೆ. ಕಾರಣ ಮಳೆಗಾಲದಲ್ಲಿ ಇವುಗಳಲ್ಲಿ ತುಂಬುವ ನೀರು. ಹಾಗಾಗಿ ಈ ಸ್ಥಳವನ್ನು ನೂರೊಂದು ಬಾವಿಯ ಬಯಲು ಎಂದು ಕರೆಯುತ್ತಾರೆ. ಇಂತಹ ಕೆಲವು ಸಮಾಧಿ (ಬಾವಿ)ಗಳಿಂದ ಕೃಷಿಗಾಗಿ ನೀರನ್ನು ಬಹಳ ಕಾಲದವರೆಗೆ ಬಳಸಿದ ಮಾಹಿತಿ ಲಭ್ಯವಿದೆ. ಒಂದೇ ವಿಶಾಲವಾದ ಪ್ರದೇಶದಲ್ಲಿ ಇಷ್ಟೊಂದು ಸಂಖ್ಯೆಯ ಸಮಾಧಿಗಳಿರುವುದು ಅದೂ ಏಕರೂಪದ್ದು ಪರ್ಕಳದಲ್ಲಿ ಆ ಕಾಲದಲ್ಲಿದ್ದ ಸಾಮಾಜಿಕ ವ್ಯವಸ್ಥೆಯ ಮೇಲೆ ನಿಜಕ್ಕೂ ಬೆಳಕು ಚೆಲ್ಲಬಲ್ಲವು. ಆದರೆ ದುರದೃಷ್ಟವಶಾತ್ ಇವುಗಳಲ್ಲಿದ್ದ ವಸ್ತುಗಳು ನಷ್ಟವಾಗಿವೆ. ಬಡಗಕಜೆಕಾರಿನ ಪಾಂಡವರಕಲ್ಲು ಒಂದು ರೀತಿಯದಾದರೆ ಪರ್ಕಳದ ನೂರೊಂದು ಬಾವಿಸ್ಥಳ ಮತ್ತೊಂದು ರೀತಿಯದು.

ಎರಡನೆಯ ರೀತಿಯ ಸಮಾಧಿ ಸ್ಥಳ ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿದೆ. ಪೂರ್ವಕ್ಕೆ ಇಳಿಜಾರಾಗಿರುವ ವಿಶಾಲವಾದ ಈ ಆಯತಾಕಾರದ ಸ್ಥಳವು ಗಟ್ಟಿಮುರಕಲ್ಲಿನ (Laterite Stone) ಪೀಠಪ್ರದೇಶ. ಇಲ್ಲಿ ಹಲವಾರು ನಡುಗಡ್ಡೆಗಳಂತಹ ಕಡಿದು ಮಾಡಿದ ರಚನೆಗಳಿವೆ. ಕೆಲವಕ್ಕೆ ಅವುಗಳ ಎತ್ತರಕ್ಕೆ ತಕ್ಕಂತೆ ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ಬಿದ್ದ ಮಳೆಯ ನೀರು ಸರಾಗವಾಗಿ ಹರಿದುಹೋಗುವಂತೆ ತೋಡಿದ ರಚನೆ ಇದೆ. ಇದರ ಕೇಂದ್ರ ಭಾಗದಲ್ಲಿ ದಕ್ಷಿಣೋತ್ತರವಾಗಿ ಆಯತಾಕಾರದ ಗುಂಡಿ ಮಾಡಿ ಮುಚ್ಚಲಾಗಿದೆ. ಕೆಲವು ಗುಡ್ಡೆಗಳಲ್ಲಿ ಇಂತಹ ಗುಂಡಿಗಳ ಸಮುಚ್ಚಯವೇ ಇದೆ. ಖಾಸಗಿ ವಶದಲ್ಲಿರುವ ಈ ಸ್ಥಳದ ಸಮಾಧಿಗಳು ಅದೃಷ್ಟವಶಾತ್ ಸುಸ್ಥಿತಿಯಲ್ಲಿವೆ.

ದೇವಸ್ಥಾನಕ್ಕೆ ತೀರ ಸಮೀಪದಲ್ಲಿರುವ ಈ ಸಮಾಧಿಗಳ ರಚನೆಯನ್ನು ಪರಿಶೀಲಿಸಿದರೆ ಪ್ರಾಯಶಃ ಇವು ಸಮಾಜದ ಹಿರಿಯರ ಹಾಗೂ ಗೌರವಾನ್ವಿತರ ಸಮಾಧಿಗಳು. ಈ ಜನರು ಯಾವುದೋ ಸಂಪ್ರದಾಯಬದ್ಧ ಧಾರ್ಮಿಕಾಚರಣೆಯ ವರ್ಗಕ್ಕೆ ಸೇರಿದವರಿರಬಹುದು. (ಪ್ರಾಚೀನ ಕಾಲದಲ್ಲಿ ಶಿವಾಲಯಗಳನ್ನು ಸಮಾಧಿಸ್ಥಳ ಇಲ್ಲವೆ ಸ್ಮಶಾನದ ಬಳಿ ನಿರ್ಮಿಸುವ ರೂಢಿ ಇದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು). ಬೇರೆಡೆಗಳಲ್ಲಿ ಇಂತಹ ಸಮಾಧಿ ಸ್ಥಳಗಳಿರುವ ಬಗ್ಗೆ ಮಾಹಿತಿ ಇನ್ನೂ ಲಭ್ಯವಾಗಬೇಕಾಗಿದೆ.

೧೦. ಅತೀ ಅಪರೂಪದ ಒಂದು ಶೋಧ

ಪ್ರಾಕ್ಚಾರಿತ್ರಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಉಡುಪಿ ತಾಲೂಕು ಹಲವು ಅಪರೂಪಗಳ ಆಗರವಾಗಿ ಈಗ ಹೊರ ಹೊಮ್ಮುತ್ತಿದೆ. ಇದರಲ್ಲಿ ಪ್ರಮುಖವಾದದ್ದೆನ್ನಬಹುದಾದ ಒಂದು ಸ್ಥಳ ಪೆರಡೂರಿನಲ್ಲಿ ಪತ್ತೆಯಾಗಿದೆ.[೧೪]

ಉಡುಪಿ ತಾಲೂಕಿನ ಒಂದು ದೊಡ್ಡ ಗ್ರಾಮ ಪೆರಡೂರು. ಇಲ್ಲಿ ಒಂದೆಡೆ ವಿಶಾಲವಾದ ಬಯಲು ಪ್ರದೇಶ ಇದ್ದು ಅದರ ಪಕ್ಕದಲ್ಲೆ ಸಣ್ಣ ತೊರೆಯೊಂದಿದೆ. ಈ ಬಯಲು ಸಾಕಷ್ಟು ಉದ್ದವಾಗಿಯೂ ಮತ್ತು ಫಲವತ್ತಾಗಿಯೂ ಇದೆ. ಇಲ್ಲಿಯ ಪರಿಸರವನ್ನು ಗಮನಿಸಿದರೆ ಪ್ರಾಚೀನ ಕಾಲದಲ್ಲಿ ಹರಿದ ಹೆದ್ದೊರೆಯೊಂದರ ಪಾತ್ರವೇ ಈಗ ಗದ್ದೆ ಬಯಲಾದಂತೆ ಕಾಣುತ್ತದೆ. ಇದರ ಮೂಲಭಾಗದ ವಿಶಾಲಗದ್ದೆಯೊಂದನ್ನು **"ಕಂಬಳಗದ್ದೆ"** ಎಂದು ಕರೆಯುತ್ತಾರೆ. ವರ್ಷಕ್ಕೊಂದಾವರ್ತಿ ಕೋಣಗಳ ಓಟದ ಸ್ಪರ್ಧೆ ಇಲ್ಲಿ ನಡೆಯುತ್ತದೆ. ಆ ಸಮಯದಲ್ಲಿ ದೇವರನ್ನು ಕೂರಿಸಿ, ಪೂಜಿಸುವ ಕಲ್ಲಿನ ಪೀಠವೊಂದು ಇದರ ದಂಡೆಯ ಮೇಲಿದೆ. ಕುತೂಹಲದಿಂದ ವೀಕ್ಷಿಸಿದಾಗ ಕಂಡುಬಂದದ್ದೇನೆಂದರೆ ಇದೊಂದು ಬೃಹತ್ ಶಿಲಾಯುಗದ ಕಲ್ಮನೆ (ಸಮಾಧಿ). ಈಗ ದೇವರ ಪೀಠ ಸ್ಥಳವಾಗಿದ್ದು ಯಾರೂ ಇದರ ಮೇಲೆ ಕುಳಿತುಕೊಳ್ಳುವುದಿಲ್ಲ.

ಇಲ್ಲಿಂದ ಸುಮಾರು ಒಂದು ಫರ್ಲಾಂಗ್ ದೂರ ಬಯಲಿನಲ್ಲಿ ನಡೆದರೆ ಮನೆಯೊಂದರ ಸಮೀಪ ಹೆಬ್ಬಂಡೆಯೊಂದು ಕಾಣುತ್ತದೆ. ಇದು ಸಾಕಷ್ಟು ಎತ್ತರವೂ ಮತ್ತು ವಿಶಾಲವೂ ಆಗಿದೆ. ಹಂತಹಂತವಾಗಿ ಮೇಲೇಳುವ ಇದರ ನಡುಭಾಗದಲ್ಲಿ ನದಿಭಾಗದ ಕೆಸರು ಮಣ್ಣಿನೊಂದಿಗೆ ನೊರಜು ಕಲ್ಲುಗಳು ಸೇರಿ ಕಾಂಕ್ರೀಟಿನಂತೆ ಗಟ್ಟಿಯಾಗಿರುವ ಭಾಗ (Encrust Material)ಗಳು ಇವೆ. ಮೂಲ ನೀರ ಹರಿವಿನ ಪಾತ್ರದ ಎತ್ತರ ಈ ಮಟ್ಟದವರೆಗೆ ಇದ್ದುದು ಇದರಿಂದ ಗೊತ್ತಾಗುತ್ತದೆ. ಉಡುಪಿ ಜಿಲ್ಲೆಯಲ್ಲಿ ಹಲವು ನದಿಗಳಿದ್ದರೂ ಇಂತಹ ಸ್ಥಳ ದೊರೆತಿರುವುದು ಇಲ್ಲಿ ಮಾತ್ರ.

ಇಲ್ಲೇ ಸಮೀಪದಲ್ಲಿ ನವಶಿಲಾಯುಗದ ಕಾಲದಲ್ಲಿ ಆಯುಧಗಳಿಗೆ ಹೊಳಪು ಕೊಡಲು ಮಾಡಿಕೊಂಡಿದ್ದ ಒಂದು ವರ್ತುಲಾಕಾರದ ಗುಂಡಿ ಇದೆ. ಇದು ಬಹಳ ಅಪರೂಪವಾಗಿ ದೊರೆಯುವಂತಹ ಪಳೆಯುಳಿಕೆ. ಬಂಡೆಯ ಕೆಲವು ಸಂದುಗಳಲ್ಲಿ ಬೆಣಚುಕಲ್ಲಿನ ಚಕ್ಕೆಗಳು ದೊರೆತವು. ಆದರೆ ಬಹಳ ಪ್ರಾಚೀನ ಕಾಲದಿಂದ ನಡೆಯುತ್ತಿರುವ ಕೃಷಿ ಕಾರ್ಯದ ಫಲವಾಗಿ ಸೂಕ್ಷ್ಮ ಶಿಲಾಯುಗ ಮತ್ತು ನವಶಿಲಾಯುಗದ ಬೇರೆ ಯಾವುದೇ ರೀತಿಯ ವಸ್ತುಗಳು ಇಲ್ಲಿ ದೊರೆಯಲಿಲ್ಲ. ಇಲ್ಲಿ ಸಮರ್ಪಕ ಶೋಧ ಕಾರ್ಯ ಆಗಬೇಕಾಗಿದೆ. ನವಶಿಲಾಯುಗ ಸಂಸ್ಕೃತಿಯ ಹಲವಾರು ನೆಲೆಗಳು ಕರ್ನಾಟಕದಲ್ಲಿ ಪತ್ತೆಯಾಗಿರುವ ವಿಚಾರ ವಿವರವಾಗಿ

ದೊರೆಯುತ್ತದೆ. ಆದರೆ ಎಲ್ಲೂ ಪೆರಡೂರಿನಂತಹ ಅವಶೇಷ ದೊರೆತಿಲ್ಲ. ಹಾಗಾಗಿ ಈ ಶೋಧಕ್ಕೊಂದು ಪ್ರಾಮುಖ್ಯತೆ ಇದೆ.

ಒಟ್ಟಿನಲ್ಲಿ ಹೇಳುವುದಾದರೆ ಪುರಾತತ್ವ ಶಾಸ್ತ್ರ ಒಂದು ಕಾಲದಲ್ಲಿ ಕಡೆಗಣಿಸಿ ಆನಂತರ ಪರಶುರಾಮನ ಕೊಡಲಿಯಿಂದ ಮಾತ್ರ ಇಲ್ಲಿ ವಾಸ್ತವ್ಯ ಪ್ರಾರಂಭವಾದ್ದು ಎಂದೆಲ್ಲಾ ಪರಿಗಣಿಸಲ್ಪಟ್ಟಿದ್ದ ಕರ್ನಾಟಕದ ಕರಾವಳಿಯ ಈ ಪ್ರದೇಶ ತನ್ನ ನೂತನ ಶೋಧಗಳಿಂದ ಗರಿಗೆದರಿ ಮೇಲೆದ್ದಿದೆ. ಇತರ ಯಾವುದೇ ಸ್ಥಳ ಮತ್ತು ಪ್ರಾಚೀನತೆಗೆ ಸರಿಸಾಟಿಯಾಗಿ ನಿಲ್ಲಬಲ್ಲ ಸ್ಥಳಗಳು ಇಲ್ಲೂ ಇದ್ದು ಅವು ಇಲ್ಲಿಯ ಇತಿಹಾಸಕ್ಕೆ ಹೊಸಮೆರಗನ್ನಿತ್ತಿವೆ. ಇದು ನಿಜಕ್ಕೂ ಹೆಮ್ಮೆಪಡುವಂತಹ ಸಂಗತಿ*.

* (ನನ್ನ ಶೋಧ ಕಾರ್ಯಗಳಲ್ಲಿ ಹಲವಾರು ಮಂದಿ ಮಾರ್ಗದರ್ಶಿಗಳಾಗಿದ್ದಾರೆ. ಅವರುಗಳಿಗೆ ಮತ್ತು ತಮ್ಮ ಅಮೂಲ್ಯ ಸಮಯ ಮತ್ತು ಸಹಕಾರಗಳನ್ನಿತ್ತ ಡಾ. ಬಿ. ಶಿವತಾರಕ್, ಡಾ. ಪಾದೆಕಲ್ಲು ವಿಷ್ಣುಭಟ್ ಮತ್ತು ಶ್ರೀ ಶ್ರೀಧರಭಟ್ ಇವರುಗಳಿಗೆ ನನ್ನ ಕೃತಜ್ಞತಾಪೂರ್ವಕ ಸ್ಮರಣೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧ ಪೊಳಲಿ ಶೀನಪ್ಪ ಹೆಗ್ಗಡೆಯವರು ಸ್ವಾತಂತ್ರ್ಯ ಯೋಧರು. ಸೆರೆಮನೆಯಲ್ಲಿದ್ದಾಗಲೇ ಇತಿಹಾಸದ ಬಗ್ಗೆ ಆಸಕ್ತಿ ವಹಿಸಿ **ಭೂತಾಳ ಪಾಂಡ್ಯನ ಕಟ್ಟುಕಟ್ಟಲೆ ಮತ್ತು ಅಳಿಯ ಸಂತಾನದ** ಬಗ್ಗೆ ಗ್ರಂಥ ರಚಿಸಿದರು.

೨. **ಗಣಪತಿರಾವ್ ಐಗಳ್** ಅವರು ಇಲ್ಲಿಯ ಮೊದಲ ಇತಿಹಾಸ ಗ್ರಂಥ ರಚಿಸಿದರು- **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ** (೧೯೨೨)

೩. *Ancient Karnataka Vol. I-Tuluvas*- Dr. B.A. Saletore, Poona, 1936.

೪. ಕೇಶವ ಕೃಷ್ಣ ಕುಡ್ವ-**ದಕ್ಷಿಣ ಕನ್ನಡದ ಇತಿಹಾಸ**, ಮಂಗಳೂರು-೧೯೪೮

೫. ಡಾ. ಸೂರ್ಯನಾಥ ಕಾಮತ್- *Tuluva in Vijayanagara Times* Ph. D Thesis. Typescript

೬. ಡಾ. ಕೆ.ವಿ. ರಮೇಶ- *A History of South Kanara*, Dharwad-1970

೭. ಡಾ. ಪಿ. ಗುರುರಾಜ ಭಟ್- *Studies in Tuluva History and Culture*, Kallianpur-1976

೮. ಡಾ. ಕೆ.ಜಿ. ವಸಂತ ಮಾಧವ - *The Pol. Hist. of Kanara* from 1565-1763
ಡಾ. ಪಿ.ಎನ್. ನರಸಿಂಹಮೂರ್ತಿ- *Jainism on the Kanara Coast*
ಡಾ. ಬಿ. ವಸಂತ ಶೆಟ್ಟಿ- *Barkur-A Metropolis*
ಆನಂತರ ಡಾ. ಮಾಲತಿ ಕೆ. ಮೂರ್ತಿ, ಡಾ. ಬಿ. ಜಗದೀಶ ಶೆಟ್ಟಿ, ಡಾ. ವಿಲ್ಸನ್ ಪ್ರಭಾಕರ್ ಇತ್ಯಾದಿ ಸಂಶೋಧಕರು ಇಲ್ಲಿಯ ವಿವಿಧ ವಿಷಯಗಳ ಕುರಿತು ಸಂಶೋಧನೆ ಮಾಡಿದ್ದಾರೆ.

೯. ಡಾ. ಪಿ. ಗುರುರಾಜ ಭಟ್ಟ ಇವರ ಮೇಲೆ ಹೆಸರಿಸಿದ ಗ್ರಂಥದಲ್ಲಿ ಈ ಬಗ್ಗೆ ಸ್ವಲ್ಪ ವಿವರ ಇದೆ.

೧೦. ಡಾ. ಬಿ. ವಸಂತ ಶೆಟ್ಟಿ ತಮ್ಮ ಹೊಸ ಶೋಧಗಳನ್ನು ಕುರಿತು ಹಲವು ಲೇಖನಗಳನ್ನು ಬರೆದಿದ್ದಾರೆ. ಕಂಡುಹಿಡಿದ ವಸ್ತುಗಳನ್ನು ತಮ್ಮ ಕಾಲೇಜಿನ ವಸ್ತುಸಂಗ್ರಹಾಲಯದಲ್ಲಿ ಇರಿಸಿದ್ದಾರೆ.

೧೧. 'ಸೂಳ್ಯಪದವು' ನ್ಯಾಶನಲ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ನನ್ನ ಈ ಕಾರ್ಯದಲ್ಲಿ ಸಹಾಯ-ಸಹಕಾರಗಳನ್ನು ನೀಡಿದರು.

೧೨. ನಾಗಪುರದ ಪ್ರಾಕ್ತನ ಇತಿಹಾಸದ ವಿಭಾಗ ತಜ್ಞರಿಗೆ ಈ ಸ್ಥಳದ ಪರಿಚಯ ಮಾಡಿರುತ್ತೇನೆ.

೧೩. ಇದರ ಛಾಯಾಚಿತ್ರವನ್ನು ತಮ್ಮ ಗ್ರಂಥದಲ್ಲಿ ಪ್ರಕಟಿಸಿದ್ದಾರೆ.


೧೪. ಈ ಪತ್ತೆ ಕಾರ್ಯದಲ್ಲಿ ನನಗೆ ಶ್ರೀ ಶ್ರೀಧರಭಟ್ಟರು ನೆರವಾಗಿದ್ದರು.

ಡಾ|| ಎಂ.ಕೆ. ದುರುಗಪ್ಪ*

ಹಗರಿಬೊಮ್ಮನಹಳ್ಳಿ ತಾಲೂಕು ದಶಮಾಪುರ ಪರಿಸರದ ಪ್ರಾಗೈತಿಹಾಸಿಕ ಕುರುಹುಗಳು

ಬಳ್ಳಾರಿ ಜಿಲ್ಲೆಯು ಐತಿಹಾಸಿಕವಾಗಿ ತುಂಬಾ ಮಹತ್ವಪಡೆದ ಜಿಲ್ಲೆಗಳಲ್ಲೊಂದು. ಇತಿಹಾಸಪೂರ್ವ ಮತ್ತು ಇತಿಹಾಸ ಕಾಲದಿಂದಲೂ ಈ ಜಿಲ್ಲೆಯ ಕೆಲವು ಸ್ಥಳಗಳು ಗುರುತಿಸಲ್ಪಟ್ಟಿವೆ. ಮತ್ತು ಎಲ್ಲಾ ಏಳು ತಾಲೂಕುಗಳ ಪರಿಸರದಲ್ಲಿ ಪ್ರಾಗೈಹಾಸಿಕ ಕುರುಹುಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಹಗರಿಬೊಮ್ಮನಹಳ್ಳಿ ತಾಲೂಕಿನ ಗದ್ದಿಕೇರಿ, ಹಂಪಸಾಗರ ಮತ್ತು ಕೋಗಳಿ ಪರಿಸರದಲ್ಲಿ ನೂತನ ಶಿಲಾಯುಗ, ಶಿಲಾತಾಮ್ರಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭಯುಗಕ್ಕೆ ಸೇರಿದ ನೆಲೆಗಳನ್ನು ಈಗಾಗಲೇ ಪತ್ತೆಹಚ್ಚಲಾಗಿದೆಯಾದರೂ ಇದೇ ತಾಲೂಕಿನ ದಶಮಾಪುರ ಪರಿಸರದಲ್ಲಿರುವ ಬೃಹತ್ ಶಿಲಾಯುಗಕ್ಕೆ ಸೇರಿದ ನೆಲೆಗಳನ್ನು ಇಲ್ಲಿಯುವರೆಗೆ ಗುರುತಿಸಿರುವುದಿಲ್ಲ; ಈ ಬಗ್ಗೆ ಬೆಳಕು ಚೆಲ್ಲುವುದೇ ಈ ಪ್ರಬಂಧದ ಉದ್ದೇಶವಾಗಿದೆ.

ಹಗರಿಬೊಮ್ಮನಹಳ್ಳಿಯಿಂದ ಪೂರ್ವಕ್ಕೆ ೧೧ ಕೀ. ಮೀ. ದೂರದಲ್ಲಿರುವ ದಶಮಾಪುರ ಗ್ರಾಮದ ಉತ್ತರ ಮತ್ತು ಪೂರ್ವ ಭಾಗದಲ್ಲಿ ಗುಡ್ಡಾಗಳಾವೃತ ಕುರುಚಲ ಅರಣ್ಯ ಪ್ರದೇಶವಿದೆ. ಐತಿಹಾಸಿಕ ಸ್ಥಳಗಳಾದ ಕೋಗಳಿ ಮತ್ತು ತಿಮ್ಮಲಾಪುರ ಗ್ರಾಮಗಳು ಈ ಗ್ರಾಮದ ನೈರುತ್ಯ ಮತ್ತು ಪೂರ್ವ ಭಾಗದಲ್ಲಿವೆ. ಉತ್ತರಕ್ಕಿರುವ ಅರಣ್ಯಪ್ರದೇಶವನ್ನು, ಅಲ್ಲಿನ ಗುಡ್ಡಗಳೊಂದರಲ್ಲಿ ತಿಮ್ಮಪ್ಪ ದೇವರು ಇರುವುದರಿಂದ ಸ್ಥಳೀಯ ಜನರು **ಗುಡ್ಡದ ತಿಮ್ಮಪ್ಪನ ಅಡವಿ** ಎಂದು ಕರೆಯುತ್ತಾರೆ. ಈ ಅರಣ್ಯದ ಪೂರ್ವಕ್ಕೆ ಹೊಂದಿಕೊಂಡಂತೆ ಕರಡಿ ಗುಡ್ಡವಿದೆ. ಇದಕ್ಕೆ ವಾರಿಕೊಂಡು ಮನಿಗುಡ್ಡವಿದೆ. ಕರಡಿಗುಡ್ಡದ ಪಶ್ಚಿಮ ಇಳಿಜಾರು ಪ್ರದೇಶದಲ್ಲಿ ಪ್ರಾಗೈಹಾಸಿಕ ಕಾಲಕ್ಕೆ ಸೇರಿದ ಒಟ್ಟು ೯೧ ಕಲ್ಲುವೃತ್ತಗಳಿವೆ. ಹೆಚ್ಚಾಗಿ ವೃತ್ತಾಕಾರದಲ್ಲಿದ್ದರೂ ಕೆಲವು ಆಯಾತಾಕಾರದಲ್ಲಿದ್ದಂತೆ ಕಾಣಿಸುತ್ತವೆ. ಇವು ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿದ ವೃತ್ತಕಟ್ಟೆ ಶವಕುಣಿಯನ್ನು ಹೋಲುತ್ತವೆ. ಇವುಗಳನ್ನು ನಿರ್ಮಿಸುವಲ್ಲಿ ಅಷ್ಟೊಂದು ದೊಡ್ಡದಾದ ಕಲ್ಲುಗಳನ್ನು ಬಳಸದೇ ಪಕ್ಕದ ಗುಡ್ಡಗಾಡುಗಳಲ್ಲಿ ದೊರೆಯುವ ಬಿರುಸಲ್ಲದ ಚಪ್ಪಡಿ ಕಲ್ಲುಗಳನ್ನು ಉಪಯೋಗಿಸಿದ್ದಾರೆ. ಸದ್ಯ ಭೂಮಿಯಿಂದ ೧ ರಿಂದ ಎರಡು ಅಡಿಯವರೆಗೂ ಎತ್ತರದಲ್ಲಿರುವ ಈ ಕಲ್ಲುವೃತ್ತಗಳು ಇದಕ್ಕಿಂತಲೂ ಎತ್ತರವಿದ್ದ ಸೂಚನೆ ಎದ್ದು ಕಾಣುತ್ತದೆ. ಏಕೆಂದರೆ ಒಂದರ ಮೇಲೊಂದು ಹೊಂದಿಸಿದ ಕಲ್ಲುಗಳು ಕದಲಿಬಿದ್ದಿವೆ. ಈ ಕಲ್ಲುವೃತ್ತಗಳ ನಡುವೆ ೪ ರಿಂದ ೫ ಅಡಿಯವರೆಗೂ ನಿಧಿಶೋಧಕರು



ಭೂಅಗೆತ ಮಾಡಿದ್ದಾರೆ. ಈ ಸ್ಥಳದಲ್ಲಿ ಈಗಲೂ ಕಪ್ಪು, ಕೆಂಪು, ಕೆಂಪು-ಕಪ್ಪು ವರ್ಣದ ಹೊಳಪಾದ ಸುಟ್ಟ ಮಡಿಕೆ ಚೂರುಗಳು ದೊರಕುತ್ತವೆ. ಮೇಲ್ನೋಟದಲ್ಲಿ ಹೆಚ್ಚಾಗಿ ಈ ಕಲ್ಲುವೃತ್ತಗಳು ದಕ್ಷಿಣೋತ್ತರವಾಗಿ ನಿರ್ಮಾಣಗೊಂಡಿವೆ. ಕೆಲವು ಕಲ್ಲುವೃತ್ತಗಳು ಒಂದಕ್ಕೊಂದು ತಾಗಿಕೊಂಡಿದ್ದರೆ ಹೆಚ್ಚಾಗಿ ಒಂದರಿಂದ ಇನ್ನೊಂದರ ನಡುವೆ ಅಂತರವಿದೆ. ಇವುಗಳನ್ನು ಕೋಣೆಯಾಕೃತಿಯಲ್ಲಿಲ್ಲದ ಕಲ್ಗೋರಿಗಳೆಂದು ಕರೆಯಬಹುದಾದರೂ ಸ್ಥಳೀಯರು ಇವುಗಳನ್ನು **ಮೊರೇರ** ಮನೆಗಳೆಂದು ಹೇಳುವುದನ್ನು ಗಮನಿಸಬೇಕಾಗುತ್ತದೆ. ಮೊರೇರು ಒಂದು ಜನಾಂಗ, ಅವರು ತುಂಬಾ ಕುಳ್ಳರು, ಸಾಹಸಿಗರು, ಗುಡ್ಡಗಾಡು ಪ್ರದೇಶದಲ್ಲಿ, ದಟ್ಟ ಅರಣ್ಯದಲ್ಲೂ, ಗವಿಗಳಲ್ಲೂ, ಬಿಸಿಲು ಮಳೆಗಳಿಗಂಜದೇ ಬದುಕುತ್ತಿದ್ದರು. ಅವರ ಮನೆಗಳು, ಮನೆಗಳ ಬಾಗಿಲುಗಳು ತುಂಬಾ ಚಿಕ್ಕವು, ಅವರು ಯಾವಾಗಲೂ ಬರೀ ಮೈಯಲ್ಲಿ ವಾಸಿಸುತ್ತಿದ್ದರೆಂದು ಹೇಳುತ್ತಾರೆ. ಬೃಹತ್ ಶಿಲಾಯುಗದ ನೆಲೆಗಳ ಕುರುಹುಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ವಿದ್ವಾಂಸರಾದ ಅ. ಸುಂದರವರು


* ಇತಿಹಾಸ ಉಪನ್ಯಾಸಕರು, ಸ.ಪ.ಪೂ. ಕಾಲೇಜು, ಕನಕಗಿರಿ, ತಾ. ಗಂಗಾವತಿ, ಜಿ. ಕೊಪ್ಪಳ - ೫೮೪ ೧೧೯



ಸಹಾ ಮೊರೇರು ಒಂದು ವಿಶೇಷ ಜನಾಂಗವೆಂದು ಅಭಿಪ್ರಾಯ ಪಟ್ಟಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರೆ, ಈ ಕಲ್ಲುವೃತ್ತಗಳು ಮೊರೇರು, ಗವಿಗಳಿಂದ ಮನೆಗಳಿಗೆ ಬಂದ ಕಾಲದ ಆರಂಭ ಸೂಚನೆಯನ್ನು ಹೇಳುತ್ತವೆ ಎನಿಸುತ್ತದೆ.

ಈ ಕಲ್ಲುವೃತ್ತಗಳಿರುವ ಉತ್ತರದಲ್ಲಿ ಕರಿಮಣ್ಣಿನ ಪುಟ್ಟ ತಗ್ಗೊಂದು ಇದೆ. ಈಗ ಅದೊಂದು ನೀರಿನ ಕಟ್ಟೆಯಂತೆ ಕಾಣಿಸುತ್ತದೆ. ಈ ಸ್ಥಳದ ಸುತ್ತಮುತ್ತ ಸುಮಾರು ೧೫-೨೦ಕಿ.ಮೀ. ದೂರದವರೆಗೂ ಈ ತರಹದ ಕಪ್ಪು ಮಣ್ಣನ್ನು ಕಾಣುವುದಿಲ್ಲ. ಅಂದರೆ ಮಡಿಕೆ ತಯಾರಿಕೆಗಾಗಿ ಈ ಮಣ್ಣನ್ನು ಬೇರೆ ಕಡೆಯಿಂದ ತಂದು ಸಂಗ್ರಹಿಸಿಕೊಂಡಂತೆ ಕಾಣಿಸುತ್ತದೆ. ಇದರ ಪಕ್ಕಕ್ಕೆ ಕಬ್ಬಿಣದ ಕಿಮುಟವಿರುವ ಸ್ಥಳವನ್ನು ಈಗಲೂ ಗುರುತಿಸಬಹುದು.

ಈ ಕಲ್ಲುವೃತ್ತಗಳಿರುವ ಸ್ಥಳಗಳಿಂದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲೇ ಕಂಡಿಕೋಣೆ ಕಲ್ಗೋರಿಗಳಿದ್ದುದರ ಕುರುಹುಗಳಿವೆ. ಈ ಸ್ಥಳದಲ್ಲಿ ತ್ರುಟಿತ ಕಂಡಿಕೋಣೆಕಲ್ಲು ಬಂಡೆಯೊಂದು ವಾಲಿ ನಿಂತಿರುವುದು, ಅದರ ಪಕ್ಕದಲ್ಲೊಂದು ಬಿದ್ದಿರುವ ಕಲ್ಲುಬಂಡೆ, ಚಪ್ಪಡಿಕಲ್ಲುಗಳಿರುವುದು ಕಂಡುಬರುತ್ತದೆ. ಈ ಸ್ಥಳದಲ್ಲೂ ಹೋಳಾದ ಕಪ್ಪು-ಕೆಂಪು, ಕಪ್ಪು-ಕೆಂಪುವರ್ಣದ ಸುಟ್ಟ ಮಡಿಕೆ ಚೂರುಗಳು ದೊರೆತಿವೆ.



ಒಟ್ಟಾರೆ ಈ ಪರಿಸರದಲ್ಲಿ ದೊರೆತಿರುವ ಅವಶೇಷಗಳನ್ನು ಗಮನಿಸಿದಾಗ ಇವೆಲ್ಲವೂ ಬೃಹತ್ ಶಿಲಾಯುಗಕ್ಕೆ ಸೇರಿವೆಯೆಂದು ನಿರ್ಧರಿಸಬಹುದು ಹಾಗೂ ಈ ಸ್ಥಳವನ್ನು ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳಲ್ಲೊಂದು ಎಂದು ಹೇಳಲೂಬಹುದು.

ಡಾ. ಚೆನ್ನಕ್ಕ ಪಾವಟೆ*

ಬೈಲುಹೊಂಗಲ ಪ್ರಾದೇಶಿಕ ಪ್ರಾಚ್ಯ ಸ್ಮಾರಕಗಳು

ಕರ್ನಾಟಕದ ಭೂನಕ್ಷೆಯಲ್ಲಿ ಬೆಳಗಾವಿ ಜಿಲ್ಲೆಯ ಬೈಲುಹೊಂಗಲ ತಾಲೂಕು ವೈವಿಧ್ಯಮಯ ವೈಶಿಷ್ಟ್ಯಗಳನ್ನು ಸಂಪಾದಿಸಿಕೊಂಡು ಬಂದಿದೆ. ಇಲ್ಲಿಯ ಪ್ರಾದೇಶಿಕ ಪ್ರಾಚ್ಯ ಸ್ಮಾರಕಗಳು ಪ್ರಸಿದ್ಧ ಶರಣ ಕ್ಷೇತ್ರಗಳು, ಪ್ರಾಚ್ಯ ಮೂರ್ತಿ ಶಿಲ್ಪಗಳು ನಾಡಿನ ಗೌರವಕ್ಕೆ ಪಾತ್ರವಾಗಿವೆ. ಪ್ರಕೃತಿ ಪರಿಸರವನ್ನು ನಿತ್ಯ ಹರಿದ್ವರ್ಣವನ್ನಾಗಿಸಿ ಪ್ರವಹಿಸುವ ಮಲಪ್ರಭೆ ಬೈಲುಹೊಂಗಲ ಪ್ರಾದೇಶಿಕ ಪರಿಸರಕ್ಕೆ ರಕ್ಷಾಕವಚವಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಸವದತ್ತಿ ರಟ್ಟ ಅರಸರದು ಅಚ್ಚಳಿಯದ ಕೊಡುಗೆ. ಕಲ್ಯಾಣದ ಚಾಲುಕ್ಯರ ಪ್ರಬಲ ಮಂಡಲೇಶ್ವರರಾಗಿ ಸುಮಾರು ೨೫೦ ವರ್ಷಗಳು ಸವದತ್ತಿ ಬೈಲಹೊಂಗಲ ಪ್ರದೇಶಗಳ ಆಳ್ವಿಕೆಯನ್ನಾಳಿದ ರಟ್ಟರದು ಮಹತ್ವಪೂರ್ಣ ಅಧ್ಯಾಯ. ಇಲ್ಲಿಯ ಐತಿಹಾಸಿಕ ಮಹತಿ ಮೆರವ ಕೆಲವು ಪ್ರಮುಖ ಸ್ಥಳಗಳಲ್ಲಿ ನೇಸರಗಿ, ಮುರಕಿ ಬಾವಿ, ಮೂಗಬಸವ, ನಂದೀಹಳ್ಳಿ, ಕಕ್ಕೇರಿ, ಕಲ್ಲೂರು, ತಿಗಡಿ, ನಾಗಲಾಪುರ, ಮುಗುಟಖಾನ ಹುಬ್ಬಳ್ಳಿ ಹಾಗೂ ಕಾದರವಳ್ಳಿ ವಿಶೇಷವೆನಿಸಿವೆ. ಇಲ್ಲಿ ಅಭಿವ್ಯಕ್ತಪಡುವ ಪ್ರಾಚ್ಯ ಸ್ಮಾರಕಗಳ ಮಹತ್ವವನ್ನರಿಯುವಲ್ಲಿ, ಅವು ನಮ್ಮ ಜ್ಞಾನಕ್ಷೇತ್ರವನ್ನು ವಿಕಸಿಸುವಂತಿವೆ. ಪ್ರಸ್ತುತ ಸ್ಥಳಗಳಿಗೆ ಕ್ಷೇತ್ರಕಾರ್ಯ ಕೈಕೊಳ್ಳುವ ಮೂಲಕ ಸಂಗ್ರಹಿಸಿದ ಪ್ರಾಚ್ಯ ದಾಖಲೆಗಳ ಪಕ್ಷಿನೋಟ ಈ ಲೇಖನ.

ಪ್ರಮುಖ ಕಾಳಾಮುಖ ಕೇಂದ್ರ ನೇಸರಿಗಿ

ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಮಹತಿ ಮೆರೆದ ಪ್ರದೇಶ ಬಳ್ಳಿಗಾವೆ. ಅದೊಂದು ಪ್ರಸಿದ್ಧ ಕಾಳಾಮುಖ ಕೇಂದ್ರವಾಗಿದ್ದಂತೆ ಬೈಲಹೊಂಗಲ ಪ್ರಾದೇಶಿಕ ಪರಿಸರದ ನೇಸರಗಿಯೂ ಮಹತ್ವದ ಕಾಲಾಮುಖ ಪೀಠವೆನಿಸಿತ್ತು. ಇಂದಿಗೂ ಅಲ್ಲಿ ದೊರಕುವ ಪ್ರಾಚ್ಯ ದಾಖಲೆಗಳು ಕಾಳಾಮುಖ ಸಂಪ್ರದಾಯದ ಬಗೆಗೆ ಸೂಕ್ಷ್ಮ ತಿಳುವಳಿಕೆ ನೀಡುವಂತಿವೆ. ಇಲ್ಲಿಯ ಕಾಳಾಮುಖ ಕೇಂದ್ರ ಊರ ಹೊರಗಿರುವ ಜೋಡು ಗುಡಿಯ ಆವರಣ. ಚಾಲುಕ್ಯ ಮಾದರಿಯ ಎರಡು ಜೋಡುಗುಡಿಗಳಿದ್ದು ಇವೆರಡು ಮಧ್ಯೆ ಚಿಕ್ಕದೊಂದು ಗುಡಿಯ ಆವರಣವಿದ್ದ ಶಿಖರದಲ್ಲಿರುವ ನಾಟ್ಯರೂಪಿ ನಟರಾಜನ ಮುಕುಟ ವನ್ನೊಳಗೊಂಡ ಈ ದೇವಸ್ಥಾನ ಸಂಕೀರ್ಣ ತಟ್ಟನೆ



ನೇಸರಗಿಯ ಜೋಲುಗುಡಿಗಳಲ್ಲಿಯ ಒಂದುಗುಡಿ

ಬಳ್ಳಿಗಾವೆಯ ಕೇದಾರೇಶ್ವರ ದೇವಸ್ಥಾನವನ್ನು ನೆನಪಿಸುವಂತಿದೆ. ಗರ್ಭಗೃಹದಲ್ಲಿ ಶಿವಲಿಂಗಗಳಿದ್ದು ದೇವಸ್ಥಾನಗಳು ಗೋಪುರಗಳನ್ನೊಳಗೊಂಡಿವೆ.

ದೇವಾಲಯ ಸಂಕೀರ್ಣ ಆವರಣದಲ್ಲಿ ಸವದತ್ತಿ ರಟ್ಟದೊರೆಗಳ ಕಾಲದ ಕನ್ನಡ ಶಾಸನವೊಂದಿದ್ದು ತುಂಬ ವಿನ್ಯಾಸಪೂರ್ಣ ಅಕ್ಷರಗಳನ್ನೊಳಗೊಂಡಿದೆ. ಶಾಸನ ಬರೆದ ಲಿಪಿಕಾರನ ತಾಳ್ಮೆಯನ್ನು ಪರೀಕ್ಷಿಸಿದಂತಿದೆ. ತುಂಬ ಜಿನುಗಾದ ಬರಹವಿದ್ದು, ಕೆಳಕೆಳಗೆ ಹೋದಂತೆ ಅಕ್ಷರ ಇನ್ನೂ ಜಿನುಗಾಗುತ್ತ ಹೋದುದು ವಿಶೇಷ. ವಿದ್ವಾಂಸ ಜೆ.ಎಫ್. ಫ್ಲೀಟರು. ಪ್ರಸ್ತುತ ಶಾಸನವನ್ನು ಅಂದು *J.B.B.R.A.S.* ದಲ್ಲಿ ಪ್ರಕಟಪಡಿಸಿರುವರು. ಶಿಥಿಲಾವಸ್ಥೆಯಲ್ಲಿರುವ ದೇವಾಲಯ ಸಂಕೀರ್ಣ ಜೀರ್ಣೋದ್ಧಾರ ವನ್ನು ಬಯಸುವಂತಿದೆ. ಇಂಥ ಮಹತ್ವದ ಕೇಂದ್ರ ಇಂದು ಇಸ್ಪೇಟ್ ಎಲೆ ಅಣ್ಣಗಳ ಆಡುಂಬೊಲವಾಗಿರುವುದು ದುರ್ದೈವ.

ನೇಸರಗಿಯ ಪ್ರಸಿದ್ಧ ದೈವ ವೀರಭದ್ರೇಶ್ವರಸ್ವಾಮಿ. ಶ್ರೀ ಎಮ್.ಜಿ. ನಾಗರಾಜ ಅವರ ಗರುಡದೃಷ್ಟಿಯಿಂದ ತಪ್ಪಿಸಿಕೊಂಡ ವೀರಭದ್ರ ನನ್ನ ಸಂಶೋಧನಾಗಾಳಕ್ಕೆ ಸಿಲುಕಿದುದು ಯೋಗಾಯೋಗ. ಇದೊಂದು ಮೂಲತಃ ಜೈನಬಸದಿ. ಭವ್ಯವಾದ ದೇವಸ್ಥಾನ ಗರ್ಭಗೃಹ, ಸುಖನಾಸಿ, ರಂಗಮಂದಿರ, ಪರಿವಾರ ದೇವತೆಗಳಿಂದ ಕೂಡಿದೆ. ತುಂಬ ಪ್ರಚೀನ ಕಾಲದಲ್ಲಿಯೆ ಬಸದಿ ದೇವಸ್ಥಾನವಾಗಿ ಪರಿವರ್ತನೆಯಾದುದಕ್ಕೆ ಪೀಠದ ಮೇಲೆ ಮುಕ್ಕಾದ

* 'ಪ್ರಾಧ್ಯಾಪಕರು, ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ-೫೮೦ ೦೦೩.

ವೀರಭದ್ರನ ಭವ್ಯ ವಿಗ್ರಹವಿದ್ದು, ಅದರ ಮುಂಭಾಗದಲ್ಲಿಯೇ ಸು. ೧೭ನೆಯ ಶತಮಾನದಲ್ಲಿ ಹೊಸ ವೀರಭದ್ರನ ವಿಗ್ರಹ ಪ್ರತಿಷ್ಠಾಪನೆಗೊಂಡಿದೆ. ಇಲ್ಲಿಯ ವೀರಭದ್ರ ವಿಗ್ರಹ ತುಂಬ ಸುಂದರವಾಗಿದೆ. ಇದೊಂದು ಅಪರೂಪದ ದಾಖಲೆಯಾಗಿದ್ದು, ಇದರ ಇತರ ವರ್ಣನೆ ಹೇಳುವಲ್ಲಿ ತುಸು ಮೌನ ವಹಿಸಬೇಕಾಗುತ್ತದೆ. ಕಾರಣ ವಿವರಣೆಯನ್ನು ಬೇಕಿದ್ದವರು ಶ್ರೀ ಎಮ್.ಜಿ. ನಾಗರಾಜ್ ಅವರ ಕೃತಿ, *'ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ'*ಯನ್ನು ಗಮನಿಸಿ. ಈ ಎರಡು ದಾಖಲೆಗಳು ನೇಸರಗಿಯ ಪ್ರಮುಖ ಸ್ಮಾರಕಗಳು.

ಮುರಕಿಬಾವಿಯ ಸ್ಮಾರಕಗಳು

ನೇಸರಗಿಯಿಂದ ೬ ಕಿ.ಮೀ. ದೂರದ ಮುರಕಿಬಾವಿ ಪ್ರಾಚ್ಯದಾಖಲೆಗಳಿಗೆ ಪ್ರಸಿದ್ಧ ತಾಣ. ೧೨ನೆಯ ಶತಮಾನದಲ್ಲಿ ವೀರಶೈವಧರ್ಮ ವಚನಸಾಹಿತ್ಯ ರಕ್ಷಣೆಗೆ ಬೆಂಗಾವಲಾಗಿದ್ದ ಶಿವಶರಣರು ಇದೇ ಮಾರ್ಗದಿಂದ ಮುಂದುವರೆದು ಉಳವಿ ಕ್ಷೇತ್ರವನ್ನು ತಲುಪಿದ್ದರಷ್ಟೇ. ಮುರಕಿಬಾವಿಯಲ್ಲಿ ಕೆಲಕಾಲ ವಿಶ್ರಾಂತಿ ಪಡೆದ ಬಗ್ಗೆ ಅಲ್ಲಿ ದೊರಕುವ ದಾಖಲೆಗಳು ಸಾಕ್ಷಿಯಾಗಿವೆ. ಉಳವಿಯತ್ತ ಹೊರಟ ಶರಣಸಮೂಹದಲ್ಲಿ ಶರಣೆ ಅಕ್ಕನಾಗಮ್ಮ ಕುಳಿತು ಪ್ರಯಾಣಿಸುತ್ತಿದ್ದ ದಂಡಿಗೆ ಈ ಕ್ಷೇತ್ರಕ್ಕೆ ಬರುವಲ್ಲಿ ಜಖಂಗೊಂಡಿರುವುದರಿಂದ ಇಂದಿಗೂ ಗ್ರಾಮನಾಮ ಮುರಕಿಬಾವಿಯೆಂದೇ ಹೆಸರಾಗಿರುವದು.

ನೀಲಮ್ಮನ ಗುಡಿಯ ತಾಣದಲ್ಲಿ ನಿಂತ ನಿಲುವಿನ ಮಹಿಳೆಯ ಶಿಲ್ಪವೊಂದು ಅಗಲ ಮುಖಮಂಡಲ, ಅಗಲವಾದ ಕಿವಿಗಳು, ಕಿವಿಗಳಲ್ಲಿ ದೊಡ್ಡ ಬಳೆಗಳು ಬಲಗೈಯನ್ನು ನಡದ ಮೇಲಿರಿಸಿ ಎಡಗೈ ಇಳಿಬಿಟ್ಟ ನಿರಿಗೆ ಮಾಡಿ ಉಟ್ಟ (ಇಂದಿನ ಸಲ್ವಾರ ಕಮೀಜದಂತೆ) ವೇಷಭೂಷಣ ಶಿಲ್ಪದ ದೇಹವನ್ನು ಅಲಂಕರಿಸಿದ್ದು ಪ್ರಸ್ತುತ ಮಹಿಳೆ ಬಸವಣ್ಣನವರ ಸೋದರಿ ಅಕ್ಕನಾಗಮ್ಮನ ಶಿಲ್ಪವಾಗಿರಬೇಕೆಂದು ತಿಳಿದುಬರುವ ಅಂಶ. 'ಶರಣತತ್ವ ಚಿಂತನೆ' III ನೆಯ ಸಂಪುಟದಲ್ಲಿ ಇಬ್ಬರು ಮಹಿಳೆಯ ಶಿಲ್ಪಗಳಿರುವನ್ನು ಸೂಚಿಸಿರುವರು. ಸದ್ಯಕ್ಕೆ ಇರುವುದು ಇಲ್ಲಿ ಒಂದೇ ಒಂದು ವಿಗ್ರಹ. ಆದರೆ ಇಲ್ಲಿ ಚಿಂತಿಸಬೇಕಾದುದು ನೀಲಮ್ಮನ ಹೆಸರಿನ ಗುಡಿ. ಬಸವಣ್ಣನ ಮಡದಿಯರಾದ ನೀಲಲೋಚನೆ ಕೂಡಲಸಂಗಮದತ್ತ ಮುನ್ನಡೆದರೆ, ವೀರಶೈವ ಧರ್ಮಕ್ಕೆ ಶರಣಸಮುದಾಯಕ್ಕೆ ತನ್ನನ್ನರ್ಪಿಕೊಂಡ ಗಂಗಾಂಬಿಕೆ ಶರಣ ಸಮೂಹದೊಡನೆ ಮುನ್ನೆಡೆದು ಮಲಪ್ರಭೆಯ ತಡಿಯಲ್ಲಿ ಲಿಂಗೈಕ್ಯಳಾಗಿರುವಳು. ಇಲ್ಲಿಯ ನೀಲಮ್ಮನಗುಡಿ ಬಸವಣ್ಣನ ಮಡದಿಯರು ಸ್ಮರಣೆಯ ತಾಣವೆನಿಸದೆ, ಯಾರೋ ಒಬ್ಬಳು ಅಕ್ಕನಾಗಮ್ಮನವರ ಜೊತೆಗಾತಿ ಆಗಿರಬಹುದಾದ ಶರಣೆಯನ್ನು ಉಲ್ಲೇಖಿಸುವಂತಿದೆ.

ಮುರಕಿಬಾವಿ ಬಸಸ್ಟಾಂಡ್ ಪಕ್ಕದಲ್ಲಿ ಎರಡು ವೀರಗಲ್ಲುಗಳು ನಮ್ಮ ಗಮನ ಸೆಳೆಯುತ್ತವೆ. ಸಾಮಾನ್ಯ ಚಿತ್ರಗಳು ವೀರಗಲ್ಲಿನಲ್ಲಿ ಕಂಡರೂ ಗಮನಿಸಿ ನೋಡಿದರೆ ಚಾರಿತ್ರಿಕ ಮಹತಿ ಮೆರೆವ ಶಿಲ್ಪಗಳವು ಎನಿಸುತ್ತದೆ. ನುಡಿದ ಸತ್ಯವನ್ನು ನಡೆಯಲ್ಲಿ ಪಾಲಿಸಿ ಶಿವನಿಗಾಗಿ ಪ್ರಾಣತೆತ್ತು ಹತ್ತಾರು ಕಾವ್ಯಗಳಲ್ಲಿ ಜೀವಂತ ವಾಗಿ ಬದುಕಿರುವ ಗುಂಡಬ್ರಹ್ಮಯ್ಯಗಳ ಚರಿತ್ರೆಗೆ ಪೂರಕ ಮಾಹಿತಿ ಒದಗಿಸುವ ಶಿಲ್ಪಗಳು ಮುರಕಿಭಾವಿಯ ಅಪರೂಪದ ಶಿಲ್ಪಗಳೆನಿಸಿವೆ.

ಈಗಾಗಲೇ ಸಂಪಿಗೆ ಸಿದ್ದೇಶ್ವರ ಚಿತ್ರದುರ್ಗ, ಹಾವೇರಿಯ ಶ್ರೀ ವೀರಭದ್ರೇಶ್ವರ, ಗುಂಡೇನಹಳ್ಳಿ, ನೀತಿಗೆರೆ ಕುನೂರು ಬಳ್ಳಾರಿಯ ಮಲ್ಲಿಕಾರ್ಜುನ ದೇವಸ್ಥಾನ ಹಾಗೂ ವರದಮೂಲದ ಗುಂಡಬ್ರಹ್ಮಯ್ಯಗಳ ಶಿಲ್ಪ ಮಾಲಿಕೆಗೆ ಸೇರಿದ ಎರಡು ಅಮೂಲ್ಯ ಶಿಲ್ಪಗಳು ಇಲ್ಲಿಯವರೆಗಿದ್ದ ಗುಂಡಬ್ರಹ್ಮಯ್ಯಗಳ ಶಿಲ್ಪ ಸಂಖ್ಯೆಯನ್ನು ಹೆಚ್ಚಿಸಿವೆ. ಯಾವುದಾದರೊಂದು ಪ್ರಾಚ್ಯ ದಾಖಲೆಗಳ ಮ್ಯೂಸಿಯಂದಲ್ಲಿ ಇಡಲು ಯೋಗ್ಯವಾಗಿವೆ.



ಮುರ್ಕಿಭಾವಿಯ ವೀರಗಲ್ಲಿನಲ್ಲಿ ಗುಂಡಬ್ರಹ್ಮಯ್ಯರು

ವೀರಗಲ್ಲುಗಳ ಮಾದರಿಯಲ್ಲಿಯೆ ಇರುವ ಎರಡು ಶಿಲ್ಪಗಳು ಸುಮಾರು ೧೪ನೆಯ ಶತಮಾನವನ್ನು ಪ್ರತಿನಿಧಿಸುವಂತಿವೆ. ಚೌಕಾಕಾರದ ತಳಗಟ್ಟಿನ ಮೇಲೆ ಮೂರು ಕಮಾನುಗಳಿರುವ ಶಿಲ್ಪಗಳು, ಮೊದಲ ಕಮಾನಿನಲ್ಲಿಯ ಗುಂಡಬ್ರಹ್ಮಯ್ಯ ಶರಣರ ವಿಗ್ರಹ ಕಂಡರಿಸಿರುವುದು ವಿಶೇಷ. ಎರಡೂ ಶಿಲ್ಪಗಳಲ್ಲಿ ಇಬ್ಬರು ಪುರುಷರು ಎದುರು ಬದುರಾಗಿ ನಿಂತಿದ್ದರೆ, ಎಡದವನ ಬಲಗೈ, ಬಲದವನ ಬಲಗೈ ಬಲಭಾಗದವನ ಬಲಗಾಲು ಎಡಭಾಗದವನ ಬಲಗಾಲು ಮುಂದಿದ್ದು, ಇಬ್ಬರ ಕೈಯಲ್ಲಿ ಎರಡು ಶಿವಲಿಂಗಗಳಿವೆ. ಎರಡೂ ಶಿಲ್ಪಗಳ ಸಾಮ್ಯ ಮುಖಮಂಡಲ, ಕೊರಳು, ರಟ್ಟೆ, ಮುಂಗೈ ಧರಿಸಿದ ಕೈಯ ಕಂಕಣ, ಕಿವಿಯಲ್ಲಿ ಕರ್ಣಕುಂಡಲ, ನಡಪಟ್ಟಿ, ಕೈಯಲ್ಲಿ ಎತ್ತಿಹಿಡಿದ ಶಿವಲಿಂಗಗಳು ಗುಂಡಬ್ರಹ್ಮಯ್ಯನ ವಿಶೇಷ ಕೇಶಾಲಂಕಾರ ವಿಶೇಷತೆಯನ್ನೊಳಗೊಂಡಿವೆ. ಇವು ಇತಿಹಾಸದೃಷ್ಟಿಯಿಂದ ಪ್ರಮುಖ ದಾಖಲೆಗಳೆನಿಸಿವೆ.

ಮೂಗಬಸವ ತಿಗಡಿ ಕಲ್ಲೂರು ಗ್ರಾಮರ ಸ್ಮಾರಕಗಳು

ಮೂಗಬಸವ ಬೆಲವಡಿಯಿಂದ ೩ ಮೈಲು ದೂರದ ಪ್ರದೇಶ. ಶರಣರು ಮೊದಲೂರಿನಲ್ಲಿ ಮುರಿಯ ತಿವಿದರೆ, ಮೂಗಬಸವದಲ್ಲಿ ಜಾಂಗಟೆ ಬಾರಿಸಿದರು ಎಂದು ಹೇಳುವುದು ಶರಣರ ಕಾಲಜ್ಞಾನ ಸಾಹಿತ್ಯ. ಮೂಗಬಸವದಲ್ಲಿ ಜಾಂಗಟಿ ಹಳ್ಳವೆಂಬುದು ಶರಣ ಸ್ಮರಣೆಯೆನಿಸಿದೆ. ಉಳವಿ ಮಾರ್ಗದಲ್ಲಿ ಶರಣರ ಜೊತೆಗೂಡಿ ಬಂದ ಚನ್ನಬಸವಣ್ಣ ಮೂಗಬಸವದಲ್ಲಿ ಕ್ಷಣಹೊತ್ತು ವಿಶ್ರಾಂತಿ ಪಡೆದು ಪಟ್ಟೇಹಾಳದ ಮುಖಾಂತರ ಉಳವಿಯ ದಾರಿ ಹಿಡಿದಿರುವರು. ಇಲ್ಲಿಯ ಮೂಲ ಬಸವಣ್ಣನ ದೇವಾಲಯ ಮಲಪ್ರಭಾ ನದಿ ದಂಡೆಯ ಮೇಲಿದ್ದು ಕಣ್ಣು, ಕಿವಿ, ಮೂಗು, ಬಾಯಿ ಯಾವುದೇ ಆಕಾರವಿಲ್ಲದೆ ಏಕಾಕಾರದ ಗುಂಡುಶಿಲೆಯನ್ನೇ ಗ್ರಾಮಸ್ಥರು ಮೂಗಬಸವನೆಂದು ಪೂಜಿಸುತ್ತಿರುವುದು ಇಲ್ಲಿಯ ವಿಶೇಷ. ಊರೊಳಗೆ ಕಟ್ಟಿದ ವಿನ್ಯಾಸಪೂರ್ಣ ಬಸವೇಶ್ವರ ದೇವಸ್ಥಾನ ಗ್ರಾಮಸ್ಥರ ಶುಭ ಸಮಾರಂಭ, ಕಲ್ಯಾಣಕಾರಕ ಸಮಾರಂಭಗಳಿಗೆ ಸದುಪಯೋಗ ವಾಗುವಂತಿದೆ.

ತಿಗಡಿ ಕಲ್ಲೂರುಗಳು ಶಿವಶರಣರು ನಡೆದುಹೋದ ಪವಿತ್ರ ತಾಣಗಳು. ಶರಣೆ ಗಂಗಾಂಬಿಕೆ ಸಮಾಜಕ್ಕೆ ತನ್ನನ್ನು ಅರ್ಪಿಸಿಕೊಂಡ ಧೀರ ಮಹಿಳೆ. ಶರಣಸಮೂಹ ದೊಡಗೂಡಿ ಪ್ರಾಕೃತಿಕ ನೋವು ನಲಿವುಗಳಿಗೆ ಸ್ಪಂದಿಸುತ್ತ ಬಂದ ಆ ಜೀವ, ಮಲಪ್ರಭೆಯ ತಡಿಯ ಪರಿಸರಕ್ಕೆ ಬರುವ ವೇಳೆಗೆ ಬಸವಳಿದು ಹೋಗಿ ಅಲ್ಲಿಯೆ ಅವಸಾನಗೊಂಡಿರಬೇಕು. ಇಂದಿಗೂ ಬೆಳಗಾವಿ ದಾರಿಯ ಮಲಪ್ರಭಾ ನದಿ ಮಧ್ಯದ ಗಂಗಾಂಬಿಕೆಯರ ಸಮಾಧಿ ಗೋಪುರ ನಮಗೆ ಹೊಳೆ ಬರಿದಾದಾಗಲೂ, ತುಂಬಿದಾಗಲೂ ಸ್ಪಷ್ಟವಾಗಿ ಕಾಣಿಸುತ್ತದೆ. ಅಲ್ಲಿಯೆ ರಸ್ತೆಯ ಪಕ್ಕದಲ್ಲಿ ಒಂದು ಕಲ್ಬರಹವಿದ್ದು ಅದರಲ್ಲಿ 'ಬಸವಣ್ಣನವರ ಧರ್ಮಪತ್ನಿ ಗಂಗಾಂಬಿಕೆಯರ ಸಮಾಧಿ' ಎಂಬ ಒಕ್ಕಣಿಕೆ ಬಿಟ್ಟರೆ ನಮ್ಮ ಸರಕಾರ ಶರಣರ ಬಗೆಗೆ ತೋರಿಸಿದ ಅನಾದರ, ಅಗೌರವ ಸ್ಪಷ್ಟವಾಗಿ ತಿಳಿದುಬರುತ್ತದೆ.

ಶರಣ ಸಮೂಹದೊಡನೆ ಉಳಿವಿಯತ್ತ ಪ್ರಯಾಣಿಸಿದ ಇನ್ನೊಬ್ಬ ಶರಣೆ ಶರಣ ಹರಳಯ್ಯನವರ ಧರ್ಮಪತ್ನಿ ಕಲ್ಯಾಣಮ್ಮ, ಶರಣೆ ಗಂಗಾಂಬಿಕೆಯ ಅಗಲಿಕೆಯಿಂದ ಘಾಸಿಗೊಂಡು ಮುಂದೆ ನಾಲ್ಕು ಹೆಜ್ಜೆ ಮುಂದಿಡುವುದರಲ್ಲಿ ಬಸವಳಿದು ಕುಸಿದು ಲಿಂಗೈಕ್ಯಳಾಗಿರುವಳು. ಇಂದಿಗೂ ಕಲ್ಲೂರಿನಲ್ಲಿ ಕಲ್ಯಾಣಮ್ಮನವರ ಸಮಾಧಿ ಇದ್ದು, ತಿಗಡಿಯಲ್ಲಿ ಕಲ್ಯಾಣಮ್ಮನವರ ಸ್ಮಾರಕ ದೇವಸ್ಥಾನವಿದೆ. ಕಲ್ಯಾಣಮ್ಮ ಲಿಂಗಪೂಜೆಯಲ್ಲಿ ನಿರತಳಾದ ಸಂದರ್ಭ ಸೂಚಿತ ಇನ್ನೂ ಎರಡು ಶಿಲ್ಪಗಳು ಕಲ್ಲೂರು ಪರಿಸರದ ವಿವಿಧೆಡೆಗಳಲ್ಲಿ ದೊರೆಯುತ್ತಿದ್ದು, 'ಶಿಲ್ಪಗಳಲ್ಲಿ ಶಿವಶರಣರು' ಅಧ್ಯಯನ ಕೈಕೊಳ್ಳುವ ಸಂಶೋಧಕರಿಗೆ ಪೂರಕ ದಾಖಲೆಗಳೆನಿಸಿವೆ.

ಕಲ್ಲೂರು ಮೂಲತಃ ಜೈನ ಕೇಂದ್ರವಾಗಿದ್ದು, ಇಲ್ಲಿ ಕಂಡು ಬರುವ ಪಾರ್ಶ್ವನಾಥ ತೀರ್ಥಂಕರನ ವಿಗ್ರಹ ತುಂಬ



ಮುದ್ದಾಗಿದೆ. ಏಳು ಹೆಡೆಯ ಸರ್ಪ ತೀರ್ಥಂಕರನ ಶಿರದ ಮೇಲೆ. ಚಿತ್ತಾರಯುತ, ಸಮವಸರಣದ ಭಂಗಿ, ಪಾರ್ಶ್ವಜಿನ ತೀರ್ಥಂಕರ ಶಿಲ್ಪದ ಪಕ್ಕದಲ್ಲಿ ಪದ್ಮಾವತಿ ಯಕ್ಷಿಯರ ಶಿಲ್ಪ ಸ್ಪಷ್ಟವಾಗಿ ಗೋಚರವಾಗಿದೆ. ಇಂದಿಗೂ ಈ ಶಿಲ್ಪ ಕಲ್ಲೂರಿನಲ್ಲಿ ಜೈನಧರ್ಮ ಪಳಿಯುಳಿಕೆ ಯೆನಿಸುವಂತಿದೆ.

ನಂದಿಹಳ್ಳಿ ಕಕ್ಕೇರಿ ಲಿಂಗನಮಠ ಪ್ರಾಚ್ಯ ಸ್ಮಾರಕಗಳು

ನಂದಿಹಳ್ಳಿಯ ನಂದೀಶ್ವರ ಕಿತ್ತೂರು ಗ್ರಾಮದ ಅಧಿದೈವ ಕಿತ್ತೂರು ಸಂಸ್ಥಾನಿಗರ ಕುಲದೇವತೆಯಾಗಿ ಪೂಜೆಗೊಂಡ ನಂದಿ ಅವರ ರಾಜಚಿಹ್ನೆಯೂ ಆಗಿರವುದು ವಿಶೇಷ. ದಂಡನಾಯಕ ಚನ್ನಬಸವಣ್ಣ ತನ್ನ ಸಮೂಹದೊಂದಿಗೆ ಉಳವಿಯ ಮಾರ್ಗದಲ್ಲಿ ತಂಗಿದ ಪ್ರದೇಶವಿದು. ಆಳೆತ್ತರದ ಭವ್ಯ ಸುಂದರ ನಂದಿಯ ವಿಗ್ರಹ ಇದಾಗಿದ್ದು ಗುಡಿ ಮಾತ್ರ ತುಂಬ ಚಿಕ್ಕದಿದೆ. ೧೨ನೆಯ ಶತಮಾನದ ಯಾವುದೋ ಒಬ್ಬ ಮಹಾತ್ಮನ ಸಮಾಧಿ ನಂದಿಯಾಗಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಬೈಲಹೊಂಗಲ ತಾಲೂಕಿನ ಕಕ್ಕೇರಿ, ಶರಣ ಡೋಹರ ಕಕ್ಕಯ್ಯನವರ ಸಮಾಧಿಯಿಂದ ಹೆಸರಾಗಿದೆ. ಲಿಂಗಪೂಜೆಯಲ್ಲಿ ಮಗ್ನನಾದ ಕಕ್ಕಯ್ಯ ಶರಣರು ತಲೆಯ ಮೇಲೆ ಕಟ್ಟಿದ ರುಮಾಲು, ಉರದಲ್ಲಿ ಇಷ್ಟಲಿಂಗ ಸೌಮ್ಯ ಮುಖಮಂಡಲ ಲಿಂಗಪೂಜೆಗೆ



ಕುಳಿತ ಸ್ಥಿತಿಯಲ್ಲಿಯ ವಿಗ್ರಹ ಸುಮಾರು ಪ್ರಾಚೀನವೇ ಎನ್ನಬೇಕು.

ಡೋಹರ ಕಕ್ಕಯ್ಯನ ಗುಡಿಯ ಆವರಣದಲ್ಲಿದ್ದ ಎರಡು ವೀರಗಲ್ಲು ನಾವಿನ್ಯತೆಯಿಂದ ಕೂಡಿವೆ. ಐದು ಅಂಕಣಗಳ ನ್ನೊಳಗೊಂಡ ವೀರಗಲ್ಲು ಇದು. ಹೋರಾಟವೊಂದರಲ್ಲಿ

ಭಾಗಿಯಾದ ವೀರರ ಪಡೆ ಯುದ್ಧವೀರನನ್ನು ತುಸು ದೊಡ್ಡ ಆಕಾರದಲ್ಲಿಯೇ ಶಿಲ್ಪಿ ಕಂಡರಿಸಿದ್ದು ಕುದುರೆಯ ಮೇಲೆ ಕುಳಿತ ವೀರನ ಕೈಯಲ್ಲಿ ಆಯುಧ ಝಳಪಿಸುವಂತಿದೆ. ಎರಡನೆಯ ಅಂಕಣದ ಎಡಭಾಗ ಪೂರ್ಣ ಖಾಲಿ ಇದ್ದು, ಬಲಭಾಗದಲ್ಲಿ ಎರಡು ಸಾಲಿನಲ್ಲಿ ವೀರರು ಆಯುಧಧಾರಿಗಳಾಗಿ ನಿಂತಿರುವರು. ಮೇಲೆ ವೀರನನ್ನು ದಂಡಿಗೆಯಲ್ಲಿ ಕುಳ್ಳಿರಿಸಿಕೊಂಡು ಸಂಚಾಲಕರು ವಾದ್ಯ ಸಮೇತ ಹೊರಟ ದೃಶ್ಯ ನಾವಿನ್ಯಪೂರ್ಣವಾಗಿದೆ. ದಂಡಿಗೆಯ ಮೇಲೆ ಹಿಡಿದ ಕೊಡೆಯ ಶಿಲ್ಪ ಚಿತ್ರದ ಮಧ್ಯ ಅಡ್ಡಭಾಗಕ್ಕೆ ಬಂದಿದ್ದು ಮೇಲಿನ ಅಂಕಣದಲ್ಲಿ ನೃತ್ಯನಿರತ ದೇವಲೋಕದ ನಾರಿಯುರು ವೀರರನ್ನು ವೀರಸ್ವರ್ಗದೆಡೆ ಕರೆದೊಯ್ಯುವ ಚಿತ್ರ. ಒಟ್ಟು ಶಿಲ್ಪ, ವಿನ್ಯಾಸಪೂರ್ಣ ನಡಿಗೆಯಲ್ಲಿದ್ದು




ಕಕ್ಕೇರಿಯ ವೀರಗಲ್ಲು

ಸವದತ್ತಿ ರಟ್ಟರ ಕಾಲದ ಹೋರಾಟವೊಂದರ ಶಿಲ್ಪವನ್ನು ಈ ಶಾಸನರಹಿತ ವೀರಗಲ್ಲು ಪ್ರತಿನಿಧಿಸುವಂತಿದೆ. ಇದೊಂದು ಅತ್ಯುತ್ತಮ ವಾಸ್ತುಶಿಲ್ಪದ ಕೊಡುಗೆ ಎನಿಸಿದೆ.

ಉಳವಿಯತ್ತ ಹೊರಟ ಶರಣಸಮೂಹದಲ್ಲಿ ಕಕ್ಕೇರಿಯ ಬಳಿಯಲ್ಲಿ ಶರಣ ಕಕ್ಕಯ್ಯನವರು ಲಿಂಗೈಕ್ಯರಾದರು. ಅಲ್ಲಿ ಅವರನ್ನು ಅಂತ್ಯಕ್ರಿಯೆಗೊಳಿಸಿ ಸಮಾಧಿ ಕಟ್ಟಿದ ಶರಣರು ಮುಂದೆ ಪಕ್ಕದ ಲಿಂಗನಮಠ ಗ್ರಾಮಕ್ಕೆ ಬಂದು ಅಲ್ಲಿರುವ ಪ್ರಾಚೀನ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಲಿಂಗಪೂಜೆಗೈದಿರುವರೆಂಬುದು ಪ್ರತೀತಿ. ಇಂದಿನ ಮಲಪ್ರಭಾ ಗ್ರಾಮೀಣ ಬ್ಯಾಂಕಿನ ಶಾಖಾ ಕಚೇರಿಯ ಪಕ್ಕದಲ್ಲಿ ನೂತನವಾಗಿ ನಿರ್ಮಿಸಿದ ಬಸವೇಶ್ವರ ದೈವಸ್ಥಾನ ಕಟ್ಟಡ ಭವ್ಯವಾಗಿದೆ. ಇದರ ಹೊರತಾಗಿ ಲಿಂಗನಮಠದಲ್ಲಿ ಚಿಕ್ಕ ಪುಟ್ಟ ಸ್ಮಾರಕಗಳು ದೊರೆತಿದ್ದರೂ ಮಹತ್ವದ ದೃಷ್ಟಿಯನ್ನು ಗಮನಿಸಿ ಅವುಗಳನ್ನು ಕಡೆಗಣಿಸಲಾಗಿದೆ.

ಮುಗುಟಖಾನ ಹುಬ್ಬಳ್ಳಿ ನಾಗಲಾಪುರ ಇರಚಲ ಕಾದರೊಳ್ಳಿ ಸ್ಮಾರಕಗಳು

ಮುಗುಟಖಾನ ಹುಬ್ಬಳ್ಳಿ ಪ್ರಾಚೀನ ಸ್ಥಳ. ಪೂರ್ವಬದಿಯ ದೊಡ್ಡ ಹೊಂಡದಂತಿರುವ ಕೆರೆ, ನೈರುತ್ಯ ಭಾಗಲ್ಲಿರುವ ಕೆರೆಗಳು ಗ್ರಾಮದ ಪ್ರಾಚೀನತೆಯನ್ನು ಸಾರುವಂತಿವೆ. ನೈರುತ್ಯದಲ್ಲಿರುವ ಹೂಬಳ್ಳೆವ್ವನ ಕೆರೆ ಗಜಲಕ್ಷ್ಮೀಶಿಲ್ಪ, ಮುಕ್ಕಾದ ನಂದಿವಿಗ್ರಹಗಳು ಇಲ್ಲಿವೆ. ಇಲ್ಲಿಯ ಎರಡು ಶಾಸನಗಳನ್ನು ಡಾ. ಎಮ್.ಬಿ. ನೇಗಿನಹಾಳರು ಪ್ರಕಟಪಡಿಸಿರುವರು. ಸುರಭಿದಾಬಾ ಪ್ರದೇಶದ ಹಿಂಭಾಗದಲ್ಲಿ ಒಂದು ವೀರಗಲ್ಲು ಕೆಸರಿನಲ್ಲಿದ್ದು ಕಲ್ಲು ತುಂಬ ಗಡಚಾಗಿದೆ. ಇಬ್ಬರು ಹೋರಾಡುವ ಚಿತ್ರಶಿಲ್ಪ ಅದರ ಮೇಲ್ಭಾಗದಲ್ಲಿದ್ದು ಅಂಕುಡೊಂಕಾದ ಕಲ್ಲಿನ ಮಧ್ಯಭಾಗದಲ್ಲಿ ಶಾಸನವನ್ನು ಬರೆಯಲಾಗಿದೆ. ಅಕ್ಷರಗಳು ಸವಕಳಿಗೊಂಡಿದ್ದು ಶಾಸನವು ಇನ್ನೂ ಅಪ್ರಕಟಿತವಾಗಿದೆ.



ಎಂ. ಕೆ. ಹುಬ್ಬಳ್ಳಿ ವೀರಗಲ್ಲು

ನಾಗಲಾಪುರದಲ್ಲಿ ಶರಣೆ ಅಕ್ಕನಾಗಮ್ಮನ ಸ್ಮಾರಕವಿದೆ. ಆಳೆತ್ತರದ ಸಮಾಧಿಸ್ಥಿತಿಯಲ್ಲಿರುವ ಶಿಲ್ಪವಿದು. ಇಂದು ಗ್ರಾಮಸ್ಥರೆಲ್ಲ ಸೇರಿ ಶರಣರ ಹೆಸರಿನಲ್ಲಿ ಗುಡಿಕಟ್ಟಿ ಶುಭ ಸಮಾರಂಭ ಸಮಾಜದ ಕಲ್ಯಾಣ ಪ್ರಸಂಗಗಳಿಗೆ ಉಚಿತವಾಗುವಂತೆ ಕಲ್ಯಾಣಮಂಟಪವನ್ನು ಕಟ್ಟಿ ಸಮಾಜದ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದನ್ನು ಗಮನಿಸಬೇಕು.

ಚಿಕ್ಕಬಾಗೇವಾಡಿ ಮುಗುಟಖಾನ ಹುಬ್ಬಳ್ಳಿಯ ಪಕ್ಕದ ಗ್ರಾಮ. ಬಾಗೇವಾಡಿಯ ಶಿಲ್ಪವೊಂದು ವೀರಮಾಸ್ತಿ ಶಿಲ್ಪವಾಗಿದೆ. ಶಿಲ್ಪಗಂಭೀರವಾಗಿದ್ದು ನಿಂತನಿಲುವಿನಲ್ಲಿದ್ದ ಪುರುಷನ ಕೈಯಲ್ಲಿ ಈಟಿ ಹಿಡಿದು ನಿಂತಿದ್ದರೆ, ಅವನ ಎಡಗಡೆಗೆ ಕೈಎತ್ತಿನಿಂತ ಮಾಸ್ತಿ, ಆತನ ಮಡದಿ. ದಂಪತಿಗಳ ತೊಡಿಗೆ ಸರಳವಾಗಿವೆ. ಮಹಾಸತಿಯ ತಲೆಯ ಹಿಂಭಾಗದಲ್ಲಿ ಬೆಂಕಿಯ ಜ್ವಾಲೆ ಉರಿಯುತ್ತದೆ.

ಇದೊಂದು ಬೇಟೆ ಪ್ರಸಂಗಕ್ಕೆ ಸಂಬಂಧಿಸಿದ ವೀರಮಾಸ್ತಿ ಎಂದು ಹೇಳಬೇಕು. ಶಿಲ್ಪ ಸುಮಾರು ೧೪ನೆಯ ಶತಮಾನಕ್ಕೆ ಸಂಬಂಧಿಸಿದ್ದು ಬೇರೆ ಬರಹವಿಲ್ಲ.



ಹಿರೇಬಾಗೇವಾಡಿ ಮಾಸ್ತಿ ವಿಗ್ರಹ

ಇರಚಲ ಬೈಲಹೊಂಗಲ ಪರಿಸರ ಒಂದು ಗ್ರಾಮ. ಕಾದರೊಳ್ಳಿಯಲ್ಲಿ ಬಿಜ್ಜಳನ ಸೈನಿಕರು ಶರಣರೊಂದಿಗೆ ಕಾದಿದಾಗ ಈ ಹೋರಾಟದಲ್ಲಿ ಗಾಯ ಗೊಂಡ ಶರಣ ಬಂಕನೆಂಬವ ಇಂಚಲಕ್ಕೆ ಹೋಗಿ ತನ್ನ ಬದುಕಿನ ಕೊನೆಯ ದಿನಗಳನ್ನು ಕಳೆದುದಕ್ಕೆ ಅಲ್ಲಿ ದೊರಕುವ ಬಂಕನಾಥನ ಸಮಾಧಿ ನಮಗೆ ಆಧಾರವೆನಿಸುವಂತಿದೆ. ಇತ್ತೀಚೆಗೆ ಜೀರ್ಣೋದ್ಧಾರಗೊಂಡ ಈ ದೈವಸ್ಥಾನ ಭಕ್ತಾದಿಗಳ ಭಕ್ತಿಯ ಕೇಂದ್ರವಾಗಿದೆ.

ಕಾದರೊಳ್ಳಿಯಲ್ಲಿ ಶರಣರು ಯುದ್ಧಗೈದುದು ಅದೇ ಕಾದಿದಹಳ್ಳಿ ಎನಿಸಿದೆ. ಬಲವಾದ ಠಾಣ್ಯ ಹಾಕಿದ ಶರಣರು ಸೆರೆ ಸಿಕ್ಕಿ ಅಳಿಯ ಬಿಜ್ಜಳನನ್ನು ಕೊಲ್ಲಬೇಕೆಂದರೆ ಅಕ್ಕನಾಗಮ್ಮನವರ ಆಣತಿಯ ಮೇರೆಗೆ ಅವನಿಗೆ ಜೀವದಾನ ಮಾಡಲಾಯಿತು. ಇಂಥ ಕಾದರವಳ್ಳಿ ಶರಣರ ಅನೇಕ ಪ್ರಾಚ್ಯದಾಖಲೆಗಳನ್ನು ಹೊಂದಿದೆ.

ಕಾದರೊಳ್ಳಿ ಮಲಪ್ರಭಾ ನದಿ ಮಧ್ಯದಲ್ಲಿ ಗಂಗಾಂಬಿಕೆಯ ಸಮಾಧಿ ಇದೆ. ಊರಲ್ಲಿ ಗೌರಿಶಂಕರ ರಾಮಲಿಂಗೇಶ್ವರ ದೈವಸ್ಥಾನಗಳು ಪ್ರಾಚೀನವಾಗಿವೆ. ಗುಡಿಯ ಆವರಣದಲ್ಲಿ ನಿಲ್ಲಿಸಿದ ವೀರಗಲ್ಲು ಮನೋಹರವಾಗಿದೆ. ಇಲ್ಲಿದ್ದ ಅನೇಕ ಇತರ ಕನ್ನಡ ಶಾಸನಗಳನ್ನು ಕಿತ್ತೂರಿನ ಮ್ಯೂಸಿಯಂಗೆ ಕಳಿಸಿದ ಬಗ್ಗೆ ತಿಳಿಸಿದರು. ಕಾದರವಳ್ಳಿಯ ವೀರಗಲ್ಲು ಮೂರು ಹಂತಗಳಲ್ಲಿ ವಿಸ್ತರಿಸಲ್ಪಟ್ಟಿದೆ. ಹೋರಾಟದಲ್ಲಿ ಭಾಗಿಯಾದ ಹತ್ತಾರು ವೀರರು ಅವರ ಆಯುಧಗಳು ಇಲ್ಲಿ ಅಭಿವ್ಯಕ್ತಗೊಂಡ ವೀರರ ವೀರತ್ವ ಸ್ಪಷ್ಟವಾಗಿ ಕಲ್ಲಿನಲ್ಲಿ ದಾಖಲಾಗಿವೆ. ಎರಡನೆಯ ಹಂತದಲ್ಲಿ ವೀರನನ್ನು ನಾಲ್ವರು ದೇವಕನ್ಯೆಯರು ಛತ್ರಿಚಾಮರ ಸಹಿತ ದೇವಲೋಕಕ್ಕೆ ಕರೆದೊಯ್ವ ಸುಂದರ ದೃಶ್ಯ ನಮೂದಾಗಿದೆ. ಇದರ ಪಕ್ಕದಲ್ಲಿ ನಿಂತ ನಿಲುವಿನ ವೀರನೊಬ್ಬ ಕೈಯಲ್ಲಿ ಕೋಲಿನಂತಹ ಆಯುಧ, ಕೆಳಗ ಬಿದ್ದ ಸೈನಿಕರು, ಒಟ್ಟಿನಲ್ಲಿ ಶಿಲ್ಪ ಭವ್ಯ, ಅಷ್ಟೇ ಸರಳವಾಗಿದೆ.

ಊರೊಳಗೆ ರಾಮಮಂದಿರವಿದ್ದು ಅದರ ಗರ್ಭಗೃಹದಲ್ಲಿ ಮಹತ್ವದ ಶಿಲ್ಪಗಳಿದ್ದು, ಮಧ್ಯದ ಶಿಲ್ಪ ಕುಮಾರರಾಮನಿಗೆ ಸಂಬಂಧಿಸಿದುದು. ಅತ್ತಿತ್ತ ಇರುವ ಎರಡು ವಿಗ್ರಹಗಳು ಎಣ್ಣೆಗೆಣ್ಣಗಳಿಂದ ಮೂಲರೂಪವನ್ನೇ ಮರೆಮಾಡಿಕೊಂಡಿವೆ. ಕುದುರೆ ಏರಿ ನಿಂತ ಕೈಯಲ್ಲಿ ಥಾಲು ಝಳಪಿಸುತ್ತ ಓಡುವ ಹಂತದಲ್ಲಿದ್ದ ಕುಮಾರರಾಮನ ಶಿಲ್ಪ ಆತನ ವೇಷಭೂಷಣಗಳು ಶಿಲ್ಪದ ಗಾಂಭೀರ್ಯವನ್ನು ಹೆಚ್ಚಿಸಿವೆ. ಈಗಾಗಲೇ ದೊರೆತ ಕುಮಾರರಾಮನ ಶಿಲ್ಪಗಳಿಗೆ ಇದೊಂದು ನೂತನ ಸೇರ್ಪಡೆಯೆನ್ನಬೇಕು.

ಇಲ್ಲಿ ಕಂಡುಬರುವ ಕಂಬಗಳನ್ನು ಸಂಶೋಧಕರು ಗಮನಿಸಬೇಕಾಗಿದೆ. ಇಂಥ ಕಂಬಗಳು ನನಗೆ ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿದ್ದು ಗೊಡಚಿಯಲ್ಲಿ ೩, ಚಿಕ್ಕೋಡಿಯಲ್ಲಿ ೧, ಸೊಗಲದಲ್ಲಿ ೧, ವಕ್ಕುಂದದಲ್ಲಿ ೧, ಮುರಗೋಡದಲ್ಲಿ ೩, ಬಾಗಿಲು ತೆಲ್ಲರುಗುಡ್ಡದ ಮೇಲೆ ೧. ಹೀಗೆ ಬೇರೆ ಕಡೆಗಳಲ್ಲಿ ಕುರುಹುಗಳು ಲಭಿಸಿವೆ. ಮುರಗೋಡದಲ್ಲಿ ಲಭಿಸಿರುವ ಬಾಗಿಲಗಳನ್ನು ನೋಡಿದರೆ ಇವು ಶರಣರಿಗೆ ಸಂಬಂಧಿಸಿದ ಯಾವುದೋ ಸಂಜ್ಞೆಯನ್ನು ಸೂಚಿಸುವ ಸಂಕೇತಗಳೆನಿಸಿದಂತಿವೆ.

ಬಹುಶಃ ೧೨ನೆಯ ಶತಮಾನದಲ್ಲಿ ಶರಣರ ಪ್ರಾಣ ರಕ್ಷಣೆಯ ಪ್ರಮುಖ ಪಾತ್ರದಲ್ಲಿ ಕೂಗು ಬಸವನೆಂಬ ಶರಣರು ಪ್ರಸಿದ್ಧ ಹೆಸರು. ಈ ಹೆಸರಿನಲ್ಲಿ ನಿಲ್ಲಿಸಿದ ಇವು ಕೂಗುಬಸವನ ಕಂಬಗಳು ನಂದಿಕಂಬಗಳೆಂದು ಕರೆಯುವರು. ಇಂದು 'ಕೂಗು' ಎಂಬ ಅಡ್ಡಹೆಸರಿನ ಮನೆಗಳೂ ಇದೇ ಪಳಿಯುಳಿಕೆಗಳು.

ಶರಣರು ಉಳವಿಯತ್ತ ಹೋದಮಾರ್ಗ ಮುಂದಿನ ಜನಾಂಗಕ್ಕೆ ತಿಳಿಯಪಡಿಸುವ ಉದ್ದೇಶದಿಂದ ಈ ನಂದಿಕಂಬಗಳನ್ನು ಅವರು ಪ್ರವಾಸ ಮಾಡಿದೆಡೆಗಳಲ್ಲಿ ನಿಲ್ಲಿಸುವುದರ ಮೂಲಕ ಮುಂದಿನವರು ಕೈಕೊಂಡ ಮಹತ್ವದ ಸೂಚನಾಶಿಲ್ಪಗಳೆಂದು ಇವನ್ನು ಕರೆಯಬಹುದೇನೋ. ಬಹುಶಃ ಹುಡುಕಿನೋಡಿದರೆ ಸ್ವಾದಿ ಸದಾಶಿವರಾಯ ಪ್ರಕಟಪಡಿಸಿದ ಶರಣಕ್ಷೇತ್ರ ಉಳವಿಯ ಮಾರ್ಗದುದ್ದಕ್ಕೂ ಕ್ಷೇತ್ರಕಾರ್ಯ ಮಾಡಿದರೆ ಇಂತಹವು ಇನ್ನಷ್ಟು ವಿಗ್ರಹಗಳು ಸಿಗಬಹುದು. ಆಸಕ್ತ ಸಂಶೋಧಕರು ಇತ್ತ ಗಮನ ಹರಿಸಿದರೆ ವೀರಶೈವರ ಪ್ರಮುಖ ವಿಚಾರವೊಂದು ಇಲ್ಲಿ ಸುವ್ಯಕ್ತವಾಗದಿರದು.

ಡಾ. ಅ. ಸುಂದರ* / ಜಯದೇವಪ್ಪ ಜೈನಕೇರಿ**

ಹೊಗರೇಹಳ್ಳಿಯ ಪ್ರಾಚ್ಯಾವಶೇಷಗಳು

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಕೇಂದ್ರದಿಂದ ಪ್ರಸಿದ್ಧ ಪ್ರವಾಸೀ ತಾಣ ಕೆಮ್ಮಣ್ಣುಗುಂಡಿಗೆ ಹೋಗುವ ದಾರಿಯಲ್ಲಿರುವ ಲಿಂಗದಳ್ಳಿಬೀರೂರು ರಸ್ತೆಯಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿದೆ, ಐತಿಹಾಸಿಕ ಗ್ರಾಮ ಹೊಗರೇಹಳ್ಳಿ. ಹೊಗರೆ ಎಂದರೆ ಪ್ರಕಾಶ, ಕಾಂತಿ, ಬೆಳಕು ಎಂಬ ಅರ್ಥಗಳಿವೆ. ಗ್ರಾಮದ ಹಿನ್ನೆಲೆಗೆ ಪಶ್ಚಿಮಘಟ್ಟದ ಸುಂದರ ಬೆಟ್ಟಗಳ ಸಾಲುಗಳಿವೆ. ಗ್ರಾಮದ ಮಧ್ಯ ಇರುವ ಸಮತಟ್ಟಾದ ಪ್ರದೇಶದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಾಲಯದಿಂದಾಗಿ ಹೊಗರೇಹಳ್ಳಿ ಪ್ರಸಿದ್ಧವಾಗಿದೆ. ಸುಮಾರು ೧೩-೧೪ನೇ ಶತಮಾನದಲ್ಲಿ ನಿರ್ಮಾಣವಾಗಿರುವ ದ್ವಿಕೂಟಾಚಲ ದೇವಾಲಯ ಸ್ಥಳೀಯವಾಗಿ ದೊರಕುವ ಕಣ ಶಿಲೆಯಿಂದ ನಿರ್ಮಾಣವಾಗಿದೆ. ವಿಜಯನಗರ ಕಾಲದ ಮಧ್ಯ ಅಂತ್ಯಕಾಲಕ್ಕೆ ಸೇರಿದ ರಂಗನಾಥ ದೇವಾಲಯದ ಸಂರಕ್ಷಣಾ ಕಾರ್ಯದ ವೀಕ್ಷಣೆಗೆ ಗ್ರಾಮಕ್ಕೆ ಭೇಟ್ಟಿ ನೀಡಿದಾಗ, ದೇವಾಲಯವನ್ನು ಮತ್ತು ಸ್ಥಳೀಯ ಪ್ರಾಚ್ಯಾವಶೇಷಗಳ ಪರಿಶೀಲನ ಕಾರ್ಯವನ್ನು ಡಾ. ಅ. ಸುಂದರ ಅವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಸ್ಥಳೀಯರ ಸಹಕಾರದಿಂದ ಪರಿಶೀಲಿಸಿ ಛಾಯಾಚಿತ್ರಗಳನ್ನು ತೆಗೆದು ದಾಖಲಿಸಲಾಯಿತು. ಬೆಟ್ಟದ ಬುಡದಲ್ಲಿ ಪ್ರಾಚೀನ ಗ್ರಾಮವಿದ್ದು ಜನವಸತಿ ಇದ್ದ ಕುರುಹುಗಳು, ಸುಟ್ಟ ಇಟ್ಟಿಗೆಗಳು, ಮಡಿಕೆ-ಮಣ್ಣಿನ ಪಾತ್ರೆಗಳ ಅವಶೇಷಗಳು ಕಂಡುಬರುತ್ತಿವೆ. ಇಲ್ಲಿ ದೊರಕಿದ ಒಂದು ಶಿಲಾಮೂರ್ತಿ ಮತ್ತು ಒಂದು ತಾಮ್ರದ ಸರಪಳಿ ಸರವನ್ನು ಸ್ಥಳೀಯರು ತೋರಿಸಿದರು. ಮಡಿಕೆ ಚೂರುಗಳು ಹೆಚ್ಚಾಗಿ ಕೆಂಪು ವರ್ಣದಿಂದ ಕೂಡಿವೆ. ಸ್ಥಳೀಯರು ಈ ಸ್ಥಳದಲ್ಲಿ ಪ್ರಾಚೀನವಾದ ಪೂರ್ಣ ಪ್ರಮಾಣದ ಮಡಿಕೆಗಳು, ನಾಣ್ಯಗಳು ದೊರಕಿವೆ ಎಂದು ತಿಳಿಸಿದರು. ಈ ನೆಲೆ ಉತ್ಖನನಕ್ಕೆ ಯೋಗ್ಯವಾಗಿದೆ. ಕೈ ಮುಗಿದು ಮಂಡಿಯೂರಿ ಕುಳಿತಿರುವ ಭಂಗಿಯ ಶಿಲಾಮೂರ್ತಿ. ಇಂತಹ ಶಿಲಾಮೂರ್ತಿಗಳು ಬನವಾಸಿಯಲ್ಲಿಯೂ ದೊರಕಿದೆ ಎಂದು ಡಾ. ಅ. ಸುಂದರ ತಿಳಿಸಿದ್ದಾರೆ. ಇಲ್ಲಿ ದೊರಕಿರುವ ಪ್ರಾಚೀನ ತಾಮ್ರದ ಗೊಣಸುಗಳ ಮಾಲೆ ಸರಳವಾಗಿದ್ದರೂ ಉತ್ತಮ ಕಲಾ ಕುಶಲತೆಯಿಂದ ಕೂಡಿದೆ. ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿರುವ ಬೆಟ್ಟದ ಮೇಲೆ ಆದಿ ಇತಿಹಾಸ ಕಾಲದ ನೆಲೆಯಿದೆ. ಪ್ರಾಕೃತಿಕವಾದ ಗವಿಯಂತಿರುವ ಶಿಲಾ ಸಮೂಹದಲ್ಲಿ ಸ್ಥಳೀಯರು ಸಿದ್ಧೇಶ್ವರ ಎಂದು ಕರೆಯುವ ಮೂರ್ತಿ ಇದೆ. ನೀರಿನ ಆಶ್ರಯ ಮತ್ತು ಇತ್ತೀಚಿನ ಮಣ್ಣಿನ ಕಟ್ಟಡವಿದೆ. ಭಗ್ನಾವಸ್ಥೆಯಲ್ಲಿರುವ ಕಟ್ಟಡ ಸುಮಾರು ೧೬-೧೭ನೇ ಶತಮಾನಕ್ಕೆ ಸೇರಿದೆ. ಮೂಲ ರಂಗನಾಥ, ಸಿದ್ಧೇಶ್ವರ ದೇವಾಲಯಗಳು ಹೊಗರೆಖಾನೆ ಗಿರಿ ಎಂದು ಕರೆಯುವ ಈ ಬೆಟ್ಟದಲ್ಲಿದ್ದವೆಂದೂ, ಜನವಸತಿ ಬಯಲು ಪ್ರದೇಶಕ್ಕೆ ಸ್ಥಳಾಂತರಗೊಂಡು ದೇವಾಲಯಗಳು ಕೆಳಗೆ ಮೈದಾನ ಪ್ರದೇಶದಲ್ಲಿ ನಿರ್ಮಾಣವಾಗಿವೆ.



ಪ್ರಾಚೀನ ಸರಪಳಿ ಮಡಿಕೆ

ಈಗಿನ ಗ್ರಾಮದಲ್ಲಿರುವ ಈಶ್ವರ ದೇವಾಲಯದ ಆವರಣದಲ್ಲಿ ೧೨ನೇ ಶತಮಾನದ ಸೇರಿದ ಒಂದು ವೀರಗಲ್ಲು ಮತ್ತು ೧೪ನೇ ಶತಮಾನದ ಇನ್ನೊಂದು ವೀರಗಲ್ಲು ಇದ್ದು ಇವುಗಳನ್ನು ಬೇರೆ ಕಡೆಗಳಿಂದ ತಂದು ನಿಲ್ಲಿಸಿರುತ್ತಾರೆ. ಈ ವೀರಗಳಲ್ಲುಗಳ ಸಮೀಪ ಹಲವು ಪ್ರಾಚೀನ ಮೂರ್ತಿಗಳ ತುಂಡಾದ ಅವಶೇಷಗಳಿವೆ. ಎರಡು ವೀರಗಲ್ಲುಗಳಲ್ಲಿ ಶಾಸನಗಳಿವೆ. ಆದರೆ ತುಂಬಾ ಹಾಳಾಗಿ ಓದಲು ಬಾರದಂತೆ ತ್ರುಟಿತವಾಗಿವೆ. ಈ ಶಾಸನಗಳ ಪಾಠ ದೊರಕಿದರೆ ಪ್ರಾಚೀನ ಇತಿಹಾಸದ ಮೇಲೆ ಬೆಳಕುಚೆಲ್ಲಲು ಸಾಧ್ಯವಾಗಬಹುದು.

* ನಿವೃತ್ತ ಪುರಾತತ್ವ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** ೮೭, ಶಾಂತಲಾ, ಕುವೆಂಪು ರಸ್ತೆ, ಶಿವಮೊಗ್ಗ - ೫೭೭ ೨೦೧.

ಗ್ರಾಮದ ಪ್ರಮುಖ ದೇವಾಲಯ ರಂಗನಾಥ ದೇವಾಲಯ ಸಂಪೂರ್ಣವಾಗಿ ಶಿಲೆಯಿಂದ ನಿರ್ಮಾಣವಾಗಿದ್ದು, ಅರ್ಧಮಂಟಪ ಸಭಾ ಮಂಟಪದಿಂದ ಕೂಡಿದೆ. ದಕ್ಷಿಣ ದಿಕ್ಕಿಗೆ ದ್ವಾರವಿರುವ ಗರ್ಭಗುಡಿಯಲ್ಲಿ ರಂಗನಾಥ ವಿಗ್ರಹವಿದೆ. ಪೂರ್ವ ದಿಕ್ಕಿನಲ್ಲಿರುವ ಪಶ್ಚಿಮಕ್ಕೆ ದ್ವಾರವಿರುವ ಮತ್ತೊಂದು ಗರ್ಭಗುಡಿಇದೆ. ಇದರಲ್ಲಿ ಯಾವುದೇ ಮೂರ್ತಿ ಇಲ್ಲ. ರಂಗನಾಥ ವಿಗ್ರಹವಿರುವ ಗರ್ಭಗುಡಿ ಮುಂದೆ ಅಂತರಾಳವಿದೆ. ದ್ವಾರದ ಎರಡೂ ಪಕ್ಕ ದ್ವಾರಪಾಲಕರು, ಲಲಾಟದಲ್ಲಿ ರೆಕ್ಕೆ ಬಿಚ್ಚಿದ ಗರುಡ ವಿಗ್ರಹ ಇದೆ. ಎಡಭಾಗದ ಗರ್ಭಗುಡಿಯ ದ್ವಾರದಲ್ಲಿ ಸುಂದರ ಕೆತ್ತನೆಯ ದ್ವಾರಪಾಲಕರೂ, ಲಲಾಟದಲ್ಲಿ ಗಜಲಕ್ಷ್ಮಿಯ ವಿಗ್ರಹವೂ ಇದೆ. ಈ ಖಾಲಿ ಇರುವ ಗರ್ಭಗುಡಿ ಎದುರಿಗೆ ಹೊಸದಾಗಿ ೩ನೇ ಗರ್ಭಗುಡಿಯನ್ನು ಇತ್ತೀಚೆಗೆ ನಿರ್ಮಿಸಿ ನೂತನ ಲಕ್ಷ್ಮೀ ವಿಗ್ರಹವನ್ನು ಸ್ಥಾಪಿಸಲಾಗಿದೆ. ಪ್ರಾಚೀನವಾದ ಎರಡೂ ಗರ್ಭಗುಡಿಗಳ ಮೇಲೆ ಸುಮಾರು ೧೫ ಮತ್ತು ೧೨ ಅಡಿಗಳ ಎತ್ತರದ ಸುಂದರವಾಗಿ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾದ ಗೋಪುರಗಳಿವೆ. ಸಭಾಮಂಟಪ ಅರ್ಧ ಮಂಟಪಗಳ ಮೇಲೆ ಇಟ್ಟಿಗೆ, ಗಾರೆ ಕುಸುರಿ ಕೆಲಸದ ಮಂಟಪಗಳಿವೆ. ಇವುಗಳ ಮಧ್ಯೆ ದಶಾವತಾರ ಮೂರ್ತಿಗಳಿವೆ. ದೇವಾಲಯದ ವಾಸ್ತು ಶಿಲ್ಪ ಸರಳವಾಗಿದೆ. ಅಲ್ಲಲ್ಲಿ ಜಲಚರಗಳ ಉಬ್ಬು ಶಿಲ್ಪಗಳಿವೆ. ದೇವಾಲಯದ ಸ್ತಂಭಗಳ ಮೇಲೆ ಭಕ್ತ ದಂಪತಿಗಳ, ನಾಗ ನಾಗಿಣಿಯರ ಉಬ್ಬು ಶಿಲ್ಪಗಳೂ ಮೇಲ್ಚಾವಣಿಯಲ್ಲಿ ಅರಳಿದ ಪದ್ಮ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಸಮ ಭಂಗದಲ್ಲಿರುವ ಮಹಾವಿಷ್ಣುವಿನ ಸುಮಾರು ೩೦ ಇಂಚು ಎತ್ತರದ ಮೂರ್ತಿ ಸುಂದರವಾಗಿದೆ. ಮೂರ್ತಿಯ ಹಿಂಭಾಗದಲ್ಲಿ ಹೆಣೆದ ಜಡೆ ಇರುವುದು ಒಂದು ಅಪರೂಪದ ಶಿಲ್ಪ ಲಕ್ಷಣ ಎಂದು ಡಾ. ಅ. ಸುಂದರ ಅಭಿಪ್ರಾಯ ಪಟ್ಟಿದ್ದಾರೆ. ಗರ್ಭಗುಡಿಯ ಮೇಲ್ಭಾಗದ ಗೋಪುರಗಳಲ್ಲಿ ಇಟ್ಟಿಗೆ ಗಾರೆಗಳಿಂದ ಮಾಡಿದ ವೈಷ್ಣವ ಮೂರ್ತಿಗಳು, ಮಿಥುನ ಶಿಲ್ಪಗಳಿವೆ. ಶಿಖರದ ಅಲಂಕಾರ ನಯನ ಮನೋಹರವಾಗಿದೆ. ದಕ್ಷಿಣ ದಿಕ್ಕಿನಲ್ಲಿರುವ ಮಹಾದ್ವಾರ ಗೋಪುರ ಸುಮಾರು ೩೦ಅಡಿ ಎತ್ತರವಾಗಿದೆ.

ದ್ವಿಕೂಟಾಚಲ ದೈವಾಲಯದಲ್ಲಿ ಎರಡು ಗರ್ಭ ಗೃಹಗಳಿವೆ. ಒಂದು ಪಶ್ಚಿಮಕ್ಕೆ ಮತ್ತೊಂದು ಉತ್ತರ ದಿಕ್ಕಿನಲ್ಲಿದ್ದು ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ಮುಖ ಮಾಡಿದೆ. ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಮುಂಭಾಗದಲ್ಲಿ ಧ್ವಜಸ್ತಂಭವಿದೆ. ಹಿತ್ತಾಳೆಯ ತಗಡುಗಳಿಂದ ಅಲಂಕರಿಸಲ್ಪಟ್ಟಿದೆ. ಇದನ್ನು ಗರುಡ ಧ್ವಜಸ್ತಂಭ ಎನ್ನುತ್ತಾರೆ. ಒಂದೇ ಪ್ರಕಾರದೊಳಗಿರುವ ರಂಗನಾಥ ದೇವಾಲಯದ ತ್ರಿತಳ ಗೋಪುರದ ಮಹಾದ್ವಾರ ಪೂರ್ವಕ್ಕೆ ಇದೆ. ಪ್ರಾಕಾರದ ಒಳಗೆ ದೇವಾಲಯದ ಎಡ ಭಾಗದಲ್ಲಿ ಹನುಮಂತನ ಗುಡಿ ಇದೆ.



ಪ್ರಾಚೀನ ಉತ್ಸವಮೂರ್ತಿ

ಈಶಾನ್ಯ ದಿಕ್ಕಿನಲ್ಲಿ ಚಂದ್ರಸಾಲೆ ಇದೆ. ಉಳಿದಂತೆ ಆಡಳಿತ ಕಟ್ಟಡಗಳಿವೆ. ಸಭಾಮಂಟಪದ ಮಧ್ಯದಲ್ಲಿ ಕಮಲದ ಹೂವಿನ ಕೆತ್ತನೆ ಇದೆ. ಉತ್ತರ ದಿಕ್ಕಿನ ಗರ್ಭಗೃಹದ ಎದುರು ದಕ್ಷಿಣ ಭಾಗದ ಗೋಡೆಯಲ್ಲಿ ಇತ್ತೀಚೆಗೆ ನಿರ್ಮಾಣವಾದ ಹೊಸ ಗರ್ಭಗೃಹವಿದೆ. ಇದರಲ್ಲಿ ಇತ್ತಿಚೆಗೆ ಲಕ್ಷ್ಮಿವಿಗ್ರಹ ವನ್ನು ಪ್ರತಿಷ್ಠಾಪಿಸಿ ಪೂಜಿಸ ಲಾಗುತ್ತಿದೆ. ಮುಖ ಮಂಟ ಪದ ಬಲ ಭಾಗದಲ್ಲಿಯೂ ಇತ್ತೀಚೆಗೆ ಸೇರ್ಪಡೆಯಾದ ಕೆಂಚರಾಯ ಸ್ವಾಮಿ ಎಂಬ ಕ್ಷೇತ್ರ ಪಾಲನ ಗುಡಿಯೂ ಇದೆ. ಗರ್ಭಗೃಹಗಳ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಲಾದ ವಿಮಾನ ಗೋಪುರವಿದೆ. ಇನ್ನೊಂದು ಗೋಪುರ ಕದಂಬ ನಾಗರ ಶೈಲಿಯಲ್ಲಿದೆ. ಮುಖ್ಯ ಗರ್ಭ ಗೃಹದಲ್ಲಿ ಸಮಭಾಗದಲ್ಲಿರುವ ವಿಷ್ಣುಮೂರ್ತಿ ಜನಾರ್ದನ ಶೈಲಿಯಲ್ಲಿದೆ. ಸಭಾಮಂಟಪದ ಸ್ತಂಭಗಳು ಮುಷ್ಟಿ ಬಂಧ ಶೈಲಿಯಲ್ಲಿವೆ. ಮುಖ ಮಂಟಪದ ಸ್ತಂಭಗಳು ಪುಷ್ಪಬೋದಿಗೆ ಶೈಲಿಯಲ್ಲಿವೆ. ಮುಂಭಾಗದ ಸ್ತಂಭದ ಎಡಭಾಗದಲ್ಲಿ ವಿಜಯನಗರ ಶೈಲಿಯ ಕುಳಿತಿರುವ ಸಿಂಹದ ಉಬ್ಬು ಶಿಲ್ಪವಿದೆ.ಮುಂಭಾಗದ ಸ್ತಂಭದ ಮೇಲೆ ದೇವಾಲಯ ನಿರ್ಮಿಸಿದ ಭಕ್ತ ದಂಪತಿಗಳ ಉಬ್ಬು ಶಿಲ್ಪವಿದೆ. ಉತ್ತರ ದಿಕ್ಕಿನಲ್ಲಿ ಭೂತರಾಯನ ಗುಡಿಯಿದ್ದು ಇದೂ ಸಹ ಕ್ಷೇತ್ರಪಾಲನಾಗಿದ್ದಾನೆ. ವಾಸ್ತುಶೈಲಿಯ ದೃಷ್ಟಿಯಿಂದ ಗರ್ಭಗೃಹ, ಅಂತರಾಳ, ಸಭಾ ಮಂಟಪಗಳು ವಿಜಯನಗರ ಪ್ರಾರಂಭಕಾಲದ ಹೊಯ್ಸಳ ಮಿಶ್ರ ಶೈಲಿಯಲ್ಲಿ ನಿರ್ಮಾಣವಾಗಿದೆ. ಮುಖ ಮಂಟಪ ಮತ್ತು ಅದರ ಮೇಲಿನ ಇಟ್ಟಿಗೆ ಗಾರೆ ನಿರ್ಮಾಣಗಳು ವಿಜಯನಗರ ಕೊನೆಯ ಕಾಲಕ್ಕೆ ಸೇರಿವೆ. ಮುಖ್ಯ ದೈವ ಜನಾರ್ದನ ಮೂರ್ತಿ ವಿಶಿಷ್ಟವಾದ ಹೆಣೆದ ಜಡೆಯುಳ್ಳ ಹೊಯ್ಸಳ ವಿಜಯನಗರ ಶೈಲಿಯ ಅಲಂಕಾರಗಳಿಂದ ಕೂಡಿದ ಸುಂದರ ಮೂರ್ತಿಯಾಗಿದೆ.

ಉತ್ತರ ದಿಕ್ಕಿನಲ್ಲಿರುವ ಗರ್ಭಗೃಹದಲ್ಲಿ ಮೂಲತಃ ಲಕ್ಷ್ಮಿ ವಿಗ್ರಹ ಇದ್ದಿರಬಹುದು. ಈಗ ಅಲ್ಲಿ ಯಾವುದೇ ಮೂರ್ತಿ ಇಲ್ಲ. ಉತ್ಸವ ಮೂರ್ತಿಗಳನ್ನಿಡಲು ಮಾತ್ರ ಉಪಯೋಗಿಸುತ್ತಿದ್ದಾರೆ. ಆದರೆ ಈ ಗರ್ಭಗುಡಿಯ ಕಲಾತ್ಮಕ ದ್ವಾರ, ಕದಂಬನಾಗರ ಶೈಲಿಯ ಗೋಪುರದ ವಾಸ್ತುಶೈಲಿ ಮತ್ತು ವಿಷ್ಣುವಿನ ಎಡ ಭಾಗದಲ್ಲಿ ಲಕ್ಷ್ಮಿ ಇರಬೇಕಾದ್ದು ವಾಸ್ತವ ಸಂಗತಿಯಾಗಿದೆ. ಶಂಖ, ಚಕ್ರ,


ಗಧಾ ಪದ್ಮಧಾರಿಯಾದ ಮೂರ್ತಿ ವಿಷ್ಣು ಅಥವಾ ಜನಾರ್ದನ ರೂಪದಲ್ಲಿದೆ. ರಂಗನಾಥ ಮೂರ್ತಿಯಲ್ಲಿ ಬಿಲ್ಲು, ಬಾಣ, ಶಂಖ, ಚಕ್ರ ಇರಬೇಕಾಗಿತ್ತು. ಆದ್ದರಿಂದ ಇದು ಮೂಲತಹ ರಂಗನಾಥ ದೇವಾಲಯವಾಗಿರಲಾರದು. ಕಾಲಾನುಕ್ರಮದಲ್ಲಿ ರಂಗನಾಥ ದೇವಾಲಯವೆಂದು ಪೂಜಿಸುತ್ತಾ ಬಂದಿದ್ದಾರೆ. ಸ್ಥಳೀಯ ಪೂಜಾರಿಗಳ ಹೇಳಿಕೆಯಂತೆ ಟಿಪ್ಪುಸುಲ್ತಾನನ ಆಳ್ವಿಕೆಯಿಂದಲೂ ಇಲ್ಲಿ ರಂಗನಾಥ ದೇವಾಲಯವೆಬ ಹೆಸರು ಬಳಿಕೆಯಲ್ಲಿದೆ ಎನ್ನುತ್ತಾರೆ. ಟಿಪ್ಪುಸುಲ್ತಾನ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿಯ ಭಕ್ತನಾಗಿದ್ದು ಇದಕ್ಕೆ ಕಾರಣ ಇರಬಹುದು.

ಹೊಗರೇಹಳ್ಳಿ ಈಗ ಸುಮಾರು ೨೦೦೦ ಜನಸಂಖ್ಯೆ ಇರುವ ಸಾಮಾನ್ಯ ಹಳ್ಳಿ. ಆದರೆ ೬೦೦ ವರ್ಷಗಳ ಕೆಳಗೆ ಇಂತಹ ಕಲಾತ್ಮಕ ದೇವಾಲಯ ನಿರ್ಮಾಣ ಹೇಗಾಯಿತು ಎಂದು ವಿಚಾರಿಸಿದಾಗ ಇಲ್ಲಿಂದ ಸುಮಾರು ೨ ಕಿ.ಮೀ. ದೂರದಲ್ಲಿ ಪ್ರಾಚೀನವಾದ ಅಂದರೆ ಶಾತವಾಹನರ ಕಾಲದ ದೊಡ್ಡ ಪಟ್ಟಣ ಇದ್ದಿರಬಹುದಾದ ಸ್ಥಳವನ್ನು ವಿವರವಾಗಿ ಪರಿಶೀಲಿಸಿದೆವು.



ಶಾತವಾಹನರ ಕಾಲದ ಶಿಲ್ಪ

ಪಶ್ಚಿಮಘಟ್ಟ ಸಾಲಿನ ಹಿನ್ನಲೆಯ ವಿಶಾಲ ಪ್ರದೇಶದಲ್ಲಿ ಪ್ರಾಚೀನ ಪಳೆಯುಳಿಕೆಗಳು ಸುಟ್ಟ ಮಣ್ಣಿನ ಮಡಿಕೆ, ಕುಡಿಕೆ, ಇಟ್ಟಿಗೆಗಳು ಈಗಲೂ ಕಂಡುಬರುತ್ತಿವೆ. ಸುಮಾರು ೨ ಕಿ.ಮೀ. ವ್ಯಾಸದ ಸ್ಥಳ ಹೊಗರೇಖಾನ್‌ಗಿರಿಯಿಂದ ಹರಿದು ಬರುವ ಹಳ್ಳಿ ಕೊರಕಲುಗಳನ್ನು ಸುತ್ತಿದೆವು. ಹಲವು ಪ್ರಾಚೀನ ಶಾತವಾಹನರ ಕಾಲದ ಕೆಂಪು ಮಣ್ಣಿನ ಮಡಿಕೆಗಳು ವಿವಿಧ ಅಳತೆ ಆಕಾರದ ಮಡಿಕೆ ಚೂರುಗಳು ದೊರಕಿದವು. ಈ ಪ್ರದೇಶವನ್ನು ಸ್ಥಳೀಯರು 'ಗರ್ತಿಕಟ್ಟೆ' ಎಂದು ಕರೆಯುತ್ತಾರೆ. ಈ ಸ್ಥಳದಲ್ಲಿ ದೊರಕಿದ ಅಪಾರ ಪ್ರಮಾಣದ ಇಟ್ಟಿಗೆ ನಾಣ್ಯಗಳು ತುಂಬಿದ ಕುಡಿಕೆಗಳು ಮತ್ತು ಪ್ರಾಚೀನ ಪಳಯುಳಿಕೆಗಳನ್ನು ತಾಮ್ರದ ಸರಪಳಿಗಳನ್ನು ನೋಡಿರುವುದಾಗಿ ತಿಳಿಸಿದರು, ವಜ್ರಾಸನದಲ್ಲಿ ಕುಳಿತ ಶಾತವಾಹನರ ಕಾಲದ ಕಲ್ಲಿನ ಗೊಂಬೆ, ತಾಮ್ರದ ಸರಪಳಿ, ವಿಶಿಷ್ಟ ಮಡಿಕೆಗಳನ್ನು ಪರಿಶೀಲಿಸಿ ಛಾಯಾಚಿತ್ರ ತೆಗೆದೆವು. ಈ ರೀತಿಯ ಕಲ್ಲಿನ ಶಿಲ್ಪಗಳು ಬನವಾಸಿಯಲ್ಲಿಯೂ ಕಂಡುಬರುತ್ತವೆ. ಇಲ್ಲಿ ಸಿಕ್ಕ ನಾಣ್ಯಗಳೆಲ್ಲವೂ ಬಹಳ ಹಿಂದೆಯೇ ಇದ್ದವು. ಈಗ ಇಲ್ಲವೆಂದರು. ಈ ಎಲ್ಲ ಕುರುಹುಗಳಿಂದ ಇದೊಂದು ಪ್ರಾಚೀನ ಸಾಂಸ್ಕೃತಿಕ ಕೇಂದ್ರವಾಗಿತ್ತು ಎನ್ನಬಹುದು. ಕ್ರಿ.ಪೂ. ೨ನೇ ಶತಮಾನದಿಂದಲೂ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿ ಉದ್ದಕ್ಕೂ ಕಂಡುಬರುತ್ತಿದೆ ಎಂದಿದ್ದಾರೆ ಡಾ. ಅ. ಸುಂದರ ಅವರು.



ಇಲ್ಲಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಶ್ರೇಷ್ಠ ಕಬ್ಬಿಣ ಅದಿರು ದೊರಕುವ ಕೆಮ್ಮಣ್ಣು ಗುಂಡಿ ಇದೆ. ಇಲ್ಲಿಂದಲೇ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಅದಿರು ಪೂರೈಸಲಾಗುತ್ತಿದೆ. ಪ್ರಾಚೀನವಾಗಿ ಹೊಗರೇಹಳ್ಳಿಯಲ್ಲಿ ದೇಶೀ ಪದ್ಧತಿಯಿಂದ ಕಬ್ಬಿಣ ಆಯುಧಗಳನ್ನು ತಯಾರಿಸಲಾಗುತ್ತಿದ್ದ ಕುರುಹುಗಳಿವೆ. ದೇವಾಲಯ ದಲ್ಲಿರುವ ಹತ್ತಾರು ದೊಡ್ಡ ಅಳತೆಯ ಕಬ್ಬಿಣದ ಈಟಿಗಳು ಬೃಹತ್ ಗಾತ್ರದ ಬಿಲ್ಲು ಬಾಣಗಳು ಈಗಲೂ ಇವೆ. ಇವುಗಳನ್ನು ತಯಾರಿಸುವ ಮನೆತನದವರನ್ನು ಸರ್ಪಕುಲದವರೆಂದು ಕರೆಯುತ್ತಾರೆ. ಇವರು ಈಗಲೂ ಕಬ್ಬಿಣ ಕುಲುಮೆ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಸಿಕ್ಕಿರುವ ಪ್ರಾಚೀನ ಇಟ್ಟಿಗೆಗಳು, ಕಬ್ಬಿಣದ ಆಯುಧಗಳು, ತ್ರಿಶೂಲ, ಕತ್ತಿ, ಭಾರಿ ಗಾತ್ರದ ಭಾರವಾದ ಕಬ್ಬಿಣದ ಬಿಲ್ಲು ಬಾಣಗಳು ಶಾತವಾಹನ ಕಾಲದ ಕಲ್ಲಿನ ಮೂರ್ತಿಗಳಿಂದಾಗಿ ಈ ಪ್ರದೇಶ ಪ್ರಾಗೈತಿಹಾಸಿಕ ಪಳೆಯುಳಿಕೆಗಳ ಸಮೃದ್ಧ ನೆಲೆಯಾಗಿತ್ತು ಎನ್ನಬಹುದು.*

* (ಕ್ಷೇತ್ರ ಕಾರ್ಯದಲ್ಲಿ ಮಾಹಿತಿಗಳನ್ನಿತ್ತ ಅರ್ಚಕರಿಗೆ, ಗ್ರಾಮಸ್ಥರಿಗೆ ದೇವಾಲಯ ಆಡಳಿತ ಮಂಡಲಿಯ ಅಧ್ಯಕ್ಷರಾದ ಶ್ರೀ ಟಿ.ಆರ್. ಅಶ್ವತ್ಥನಾರಾಯಣ ಅವರಿಗೆ ಕೃತಜ್ಞತೆಗಳು.)

ಶಿವಪ್ಪ ನ. ನೀರಲಗಿ*


ದೇವರ ಗೋನಾಲದ ಪ್ರಾಚ್ಯಾವಶೇಷಗಳು

ಪೀಠಿಕೆ

ದೇವರ ಗೋನಾಲವು ಗುಲ್ಬರ್ಗಾ ಜಿಲ್ಲೆಯ ಶೋರಾಪೂರ ತಾಲೂಕಿನಲ್ಲಿರುವ ಒಂದು ಚಿಕ್ಕ ಗ್ರಾಮ. ಶೋರಾಪುರದಿಂದ ಕೆಂಭಾವಿಯ ಕಡೆಗೆ ಹೋಗುವ ದಾರಿಯಲ್ಲಿ ಸುಮಾರು ೮ ಕಿ.ಮೀ. ಹಾಗೂ ಪ್ರಾಗೈತಿಹಾಸಿಕ ನೆಲೆಯಾದ ಹುಣಸಗಿಯಿಂದ ಈಶಾನ್ಯಕ್ಕೆ ಸುಮಾರು ನಲವತ್ತು ಕಿ.ಮೀಟರ್‌ಗಳ ಅಂತರದಲ್ಲಿ ಈ ಗ್ರಾಮವಿದೆ. ಪ್ರಸಿದ್ಧ ಸೂಫಿ ಸಂತ ಶ್ರೀ ಮೌನೇಶ್ವರರ ಜನ್ಮಸ್ಥಳ ವಿದ್ದು, ಮೌನೇಶ್ವರರ ದೇವಸ್ಥಾನದಿಂದಲೂ ಪ್ರಸಿದ್ಧಿಯನ್ನು ಪಡೆದಿದೆ. ಈ ಊರ ಸುತ್ತಲಿನಲ್ಲಿರುವ ಗುಡ್ಡಗಳಲ್ಲಿ ಆದಿಮಾನವನು ವಾಸಿಸಲು ಯೋಗ್ಯವಾದ ಅನೇಕ ಕಲ್ಮನೆಗಳು ಹಾಗೂ ಅಲ್ಲಲ್ಲಿಗೆ ನೀರಿನ ಬರತೆಗಳು ಇವೆ. ವಿಶಾಲವಾದದ್ದೊಂದು ಕೆರೆ ಬಿಟ್ಟರೆ ದೇವರ ಗೋನಾಲದ ಹತ್ತಿರ ಯಾವುದೇ ನದಿ ಅಥವಾ ತೊರೆಗಳಿಲ್ಲ. ಅಲ್ಲಿಯ ಪ್ರಾಚೀನ ಜನವಸತಿಗೆ ಈ ಕೆರೆ ನೀರು ಆಸರೆಯನ್ನು ಒದಗಿಸಿರಬಹುದು. ಈ ಊರಿನಲ್ಲಿ ಮನೆಗಳ ಬುನಾದಿಯನ್ನು ಅಗೆಯುವಾಗ, ಹೊಲ ಉಳುವಾಗ ಬೂದಿ ಮಿಶ್ರಿತ ಇದ್ದಿಲು ಹಾಗೂ ಎಲುವುಗಳಿಂದ ತುಂಬಿದ ಗಡಿಗೆಗಳು, ಅನೇಕ ತರಹದ ಅಲಂಕಾರಿಕ (Glized) ಮಡಕೆಯ ಚೂರುಗಳು, ಹಲವು ಬಣ್ಣದ ಗಾಜಿನ ಮಣಿಗಳು, ಕಬ್ಬಿಣದ ಕಿಟ್ಟದ ಉಂಡೆಗಳು, ತೆಳುವಾದ ಕೆಂಪು ಚೌಕಾಕಾರದ ಇಟ್ಟಿಗೆಗಳು ಲಭ್ಯವಿದ್ದು ಇವು ಶಾತವಾಹನರ ಕಾಲದ ಲಕ್ಷಣಗಳನ್ನು ಹೋಲುವುದರಿಂದ ಈ ಪ್ರದೇಶವೂ 'ಆದಿಚಾರಿತ್ರಿಕ' ಯುಗಕ್ಕೆ ಸೇರಿರಬಹುದೆಂದು ನಮಗೆ ತಿಳಿದು ಬರುವುದು.

ಅವಶೇಷಗಳು

ಸಿಸ್ಟ (Cist) ಸಮಾಧಿಗಳು : ಶವಸಂಸ್ಕಾರ ನಡೆಸಿ ಬೂದಿ ಮಿಶ್ರಿತ ಇದ್ದಿಲು ಹಾಗೂ ಎಲುವುಗಳನ್ನು ಗಡಿಗೆಯಲ್ಲಿ ತುಂಬಿ ಹೂಳಿಟ್ಟು ಅದರ ಮೇಲ್ಗಡೆ ದಪ್ಪವಾದ ಉಂಡೆಗಲ್ಲುಗಳನ್ನು ವೃತ್ತಾಕಾರವಾಗಿ ಜೋಡಿಸಿರುವುದು. ಇಂತಹ ಹಾಳಾದ ಸಿಸ್ಟ ಸಮಾಧಿಗಳು ದೇವರ ಗೋನಾಲದಲ್ಲಿ ಮನೆಯ ಬುನಾದಿಯನ್ನು ಅಗೆಯುವಾಗ, ಹೊಲಗಳನ್ನು ಉಳುವಾಗ ಅನೇಕ ಸಿಕ್ಕಿವೆ. ಈ ಊರಿನ ದೇವಾಲಯದಲ್ಲಿಟ್ಟು ಪೂಜಿಸುವ ನಯಗೊಳಿಸಿದ



ನೂತನ ಶಿಲಾಯುಗದ ನಯಗೊಂಡ ಕೈಗೊಡಲಿ

ಕೊಡಲಿಯು ನೂತನ ಶಿಲಾಯುಗಕ್ಕೆ ಸೇರಿದ್ದುದಾಗಿದೆ. ಇದನ್ನು ಇಲ್ಲಿಯ ಜನರು ಮೌನೇಶ್ವರರ ಕೊಡಲಿ ಎಂದು ಕರೆಯುತ್ತಾರೆ. ಸುಮಾರು ನಾಲ್ಕು ಎಕರೆ ಪ್ರದೇಶವೂ ಬೂದಿ ಮಿಶ್ರಿತ ಮಣ್ಣಿ (Ash mound) ನಿಂದ ಕೂಡಿದ್ದು ನೂತನ ಶಿಲಾಯುಗಕ್ಕೆ ಸೇರಿರಬಹುದಾಗಿದೆ.

ಬೃಹತ್ ಶಿಲಾಯುಗ ಸಂಸ್ಕೃತಿ


ಶಿಲಾಯುಗ, ತಾಮ್ರ ಶಿಲಾಯುಗಗಳ ನಂತರದಲ್ಲಿ ಕಬ್ಬಿಣದ ಆವಿಷ್ಕಾರವಾಗಿ ಕಲ್ಲಿನ ಆಯುಧಗಳ ಬದಲಿಗೆ ಕಬ್ಬಿಣದ ಆಯುಧಗಳ ಬಳಕೆ ಪ್ರಾರಂಭವಾಯಿತು.ಈ ಯುಗವನ್ನು ಕಬ್ಬಿಣ ಯುಗ ಅಥವಾ ಬೃಹತ್ ಶಿಲಾಯುಗವೆಂದು ಕರೆಯುತ್ತಾರೆ. ಈ ಯುಗದಲ್ಲಿ ಕಬ್ಬಿಣದ ಬಳಕೆಯ ಜೊತೆಗೆ ಕಪ್ಪು ಬಣ್ಣದ, ಕೆಂಪು ಬಣ್ಣದ ಹಾಗೂ ಕಪ್ಪು-ಕೆಂಪು ಬಣ್ಣದ ಮಡಕೆಗಳು ಮತ್ತು ತೆಳುವಾದ ಹೊಳಪಿನ ಮಡಕೆಗಳು ಬಳಕೆ ಇರುತ್ತದೆ. ದೇವರ ಗೋನಾಲದಲ್ಲಿಯೂ ಸಹ ಕಬ್ಬಿಣವನ್ನು ಅದಿರಿನಿಂದ ಬೇರ್ಪಡಿಸಿದ ಮೇಲೆ ಉಳಿಯುವ ದೊಡ್ಡ ದೊಡ್ಡ ಕಿಟ್ಟದ ಉಂಡೆಗಳು ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ಹರಡಿವೆ. ಹಾಗೂ ಲೋಹ ಕರಗಿಸುವ ಕಲ್ಲಿನ ಮೂಸೆಗಳು ಈ ನಿವೇಶನದಲ್ಲಿ ಸಿಕ್ಕಿರುವುದರಿಂದ ಇಲ್ಲಿ ಖಚಿತವಾಗಿ ಕುಲುಮೆಯ ಕಾರ್ಯಗಾರದ ಕೆಲಸ ನಡೆದಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಇದೆ ನಿವೇಶನದಲ್ಲಿ ಮೊಂಡ ಮೂಗು ಎದೆ ಇರುವ ಸುಟ್ಟ ಜೇಡಿ ಮಣ್ಣಿನ ಬೊಂಬೆಗಳು ಹಿಂದೆ ಸಿಗುತ್ತಿದ್ದವೆಂದು ಈ ಊರಿನ ಹಿರಿಯರು ಹೇಳುವುದರಿಂದ ಇದೊಂದು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯೆಂದು ಹೇಳಬಹುದು. ಅಲ್ಲದೆ


* ಭಂಟನೂರ್, ತಾಳಿಕೋಟೆ ತಾ., ಬಿಜಾಪುರ ಜಿ.

ಕರ್ನಾಟಕದ ವಡಗಾಂವ್ ಮಾಧವಪುರ, ಪಿಕ್ಲಿಹಾಳ್, ಸನ್ನತಿ ಮುಂತಾದ ಊರುಗಳ ಬೃಹತ್ ಶಿಲಾಯುಗ ಸಮಾಧಿಗಳಲ್ಲಿ ಈ ತರಹದ ಟೆರಕೋಟಾ ಮಣ್ಣಿನ ಬೊಂಬೆಗಳು ದೊರೆತ ನಿದರ್ಶನಗಳಿವೆ.

ವಿಶೇಷವಾದ ಕುಂಭಗಳು

ಈ ನೆಲೆಯಲ್ಲಿ ದೊರೆಯುವ ಪ್ರಮುಖ ಅವಶೇಷಗಳೆಂದರೆ ಕಪ್ಪು, ಕೆಂಪು, ಕಂದು, ಬಿಳಿ ಹಾಗೂ ಬೂದು ಬಣ್ಣದ ಅದರಲ್ಲಿಯೂ






ವಿಶೇಷವಾಗಿ ಅಲಂಕಾರಿಕ (Glized) ಗ್ರಾಫಿಟ್ಟ್ ಕಲೆಗಳಿಂದ ಕೂಡಿದ ದಪ್ಪ ಹಾಗೂ ತೆಳುವಾದ ಮಡಕೆ ತುಣುಗಳು ಲಭ್ಯ ಇವೆ. ಕೆಲವೊಂದು ಮಡಕೆಗಳಲ್ಲಿ ಹಸಿರು ಹಾಗೂ ನೀಲಿಬಣ್ಣದ ಗಾಜುಗಳಿಂದ ಎರಕ ಹೊಯ್ದಂತೆ ಮಾಡಿ ತಯಾರಿಸಲಾಗಿದೆ. ಇನ್ನೂ ಕೆಲವು ಮಡಕೆಗಳಲ್ಲಿ ಕಪ್ಪು ಉಂಗುರಾಕಾರದ ಬಳೆಯನ್ನು ಸೇರಿಸಿ ಎರಕ ಹೊಯ್ದಂತೆ ಮಾಡಲಾಗಿದೆ. ಅಲ್ಲದೆ ದೊಡ್ಡದಾದ ರಂಜಣಿಗೆಯಂತಿರುವ ಹಣ ಸಂಗ್ರಹಿಸುವ ಡ್ರಮ್ಮಿನಾಕಾರದ ಹಸಿರುಗಲ್ಲಿನ ಕುಂಡಗಳು ಇಲ್ಲಿ ದೊರೆಯುವುದರಿಂದ ಆ ಕಾಲದ ಆರ್ಥಿಕ ಬೆಳವಣಿಗೆಯ ಮೇಲೂ ಬೆಳಕು ಚೆಲ್ಲುತ್ತದೆ. ಕೆಂಪು ತೆಳುವಾದ ಚೌಕಾಕಾರದ ಇಟ್ಟಿಗೆಗಳು ಈ ನಿವೇಶನದಲ್ಲಿ ದೊರೆಯುವುದರಿಂದ ಇವು ಶಾತವಾಹನರ ಕಾಲದ ಅಥವಾ ಮಧ್ಯಯುಗೀನ ಕಾಲಕ್ಕೆ ಸೇರಿದವುಗಳಾಗಿರಬಹುದಾಗಿದೆ.

ಗಾಜಿನ ಮಣಿಗಳು

ನೀಲಿ, ಹಸಿರು, ಹಳದಿ, ಕೆಂಪು, ಬಿಳಿ ಹಾಗೂ ಹೇರಳವಾಗಿ ಕಪ್ಪು ಬಣ್ಣದ ಮಣಿಗಳು ಮತ್ತು ವಿಶೇಷವಾದ ಪಚ್ಚೆ(Cates



eyc)ಗಲ್ಲುಗಳು ಈ ನಿವೇಶನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಈ ನಿವೇಶನದಲ್ಲಿ ದೊರೆಯುವ ಮತ್ತೊಂದು ವಿಶೇಷವೇನೆಂದರೆ ಸುಣ್ಣ ಮತ್ತು ಗಾರೆಗಚ್ಚಿನಿಂದ ನಿರ್ಮಿಸಿರುವ ಕಟ್ಟಡದ ಒಳಭಾಗವನ್ನು ತಿಳಿನೀಲಿ ಮತ್ತು ಹಸಿರು ಬಣ್ಣದಿಂದ ಅಲಂಕರಿಸಿರುವದನ್ನು ನೋಡಿದರೆ ಇದೊಂದು ಶಾತವಾಹನರ ಕಾಲದ ಚೈತ್ಯ ಅಥವಾ ಸ್ತೂಪವಿರಬಹುದೆಂದು ಉಹಿಸ ಬಹುದಾಗಿದೆ.

ಪೂಜ್ಯ ಶ್ರೀ ಮೌನೇಶ್ವರರು

ವಿಶ್ವಕರ್ಮರ ಆರಾಧ್ಯ ದೈವವಾದ ಪೂಜ್ಯ ಶ್ರೀ ಮೌನೇಶ್ವರರು ದೇವರ ಗೋನಾಲದ ಶ್ರೀ ಶೇಷಪ್ಪ ಮತ್ತು ಶೇಷಮ್ಮರೆಂಬ ಸಾತ್ವಿಕ



ದಂಪತಿಗಳ ಪುಣ್ಯಗರ್ಭದಲ್ಲಿ ಹದಿನಾರನೆಯ ಶತಮಾನದಲ್ಲಿ ಜನಿಸಿದರು. ಪೂಜ್ಯರು ಪ್ರಸಿದ್ಧ ಸೂಫಿ ಸಂತರಾಗಿದ್ದು ಹಿಂದು-ಮುಸ್ಲಿಮರ ಭಾವೈಕ್ಯತೆಗಾಗಿ ತುಂಬ ಶ್ರಮಿಸಿದವ ರಾಗಿದ್ದಾರೆ. ಶಿರಹಟ್ಟಿಯ ಶ್ರೀ ಫಕೀರ ಸ್ವಾಮಿಗಳು ಮೌನೇಶ್ವರರ ಗುರುಗಳಾಗಿದ್ದು, ಬಿಜಾಪುರದ ಅಲಿ ಆದಿಲ್‌ಷಹ್‌ನು ಇವರ ಸಮಕಾಲಿನರಾಗಿದ್ದಾರೆ. ಶ್ರೀಯುತರು ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ ಇತ್ಯಾದಿ ಶರಣರ ಹೆಸರುಗಳನ್ನು ಬಳಸಿ ಅನೇಕ ವಚನಗಳನ್ನು ರಚಿಸಿದ್ದಾರೆ. ಇಂದಿಗೂ ದೇವರು ಗೋನಾಲದಲ್ಲಿ ಮೌನೇಶ್ವರರು ಹುಟ್ಟಿದ ಮನೆಯಿದ್ದು, ಶ್ರೀಯುತರು ಗಾಣಹೊಡೆದರೆಂದು ಹೇಳುವ ಗಾಣಿಗರ ಮನೆಯೂ ಈ ಊರಲ್ಲಿ ಇದೆ. ಶ್ರೀಯುತರು ಬಳಸಿದರೆಂದು ಹೇಳುವ ಕಲ್ಲಿನ ಕೈಗೊಡಲಿ, ಕಂಚಿನ ಹುಕ್ಕ ಮುಂತಾದವುಗಳನ್ನು ದೇವಸ್ಥಾನದಲ್ಲಿ ಇಂದಿಗೂ ಕಾಯ್ದಿರಿಸಿದ್ದಾರೆ.

ಒಂದು ಸಲ ಪೂಜ್ಯರು ಬಿಜಾಪುರಕ್ಕೆ ಹೋಗುವಾಗ ಪಿಡ್ಡವ್ವನೆಂಬ ಕುರುಬರ ಭಕ್ತೆಗೆ ಹತ್ತಿ ನೂಲುವ ಕದಿರನ್ನು ಮಾರಿ ಹೋದರಂತೆ ತಿರುಗಿ ಬಂದ ಮೇಲೆ ದುಡ್ಡು ಕೊಡುವ ಕರಾರು ಆಗಿತ್ತು. ಮರಳಿ ಬರುವುದರೊಳಗಾಗಿ ಆ ಭಕ್ತೆ ತೀರಿಕೊಂಡಿದ್ದು, ಅವಳ ಹೆಣವನ್ನು ಸ್ಮಶಾನಕ್ಕೆ ಸಾಗಿಸುವಾಗ ನನ್ನ ಕದುರಿನ ದುಡ್ಡು ಕೊಡಬೇಕೆಂದು ಮೌನೇಶ್ವರರು ಕೇಳಿದರಂತೆ. ಹೆಣಕ್ಕೆ ದುಡ್ಡು

ಕೇಳುತ್ತಿದ್ದನೆಂದು ಜನರು ಹಾಸ್ಯ ಮಾಡಿ ನಕ್ಕರಂತೆ. ಆದರೆ ಹೆಣವಾಗದ್ದ ಪಿಡ್ಡಮ್ಮನು ಸ್ವತಃ ಎದ್ದು ಬಂದು ನೆಲುವಿಗೆ ಕಟ್ಟಿದ್ದ ಕದುರಿನ ದುಡ್ಡು ಕೊಟ್ಟು ಪ್ರಾಣ ಬಿಟ್ಟಳೆಂಬ ಐತಿಹ್ಯವನ್ನು ಈ ಊರಿನ ಭಕ್ತರು ಇಂದಿಗೂ ಹೇಳುತ್ತಾರೆ.

ಮೌನೇಶ್ವರರ ದೇವಾಲಯ

ಹಿಂದು ಮುಸ್ಲಿಂ ವಾಸ್ತುಶಿಲ್ಪ ಶೈಲಿಯಲ್ಲಿರುವ ಮೌನೇಶ್ವರರ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಿದ್ದು, ವಿಶಾಲ ವಾದ ಪೌಳಿ, ಕಲ್ಯಾಣಮಂಟಪ, ಮುಂತಾದ ನಾಗರಿಕ ಸೌಲಭ್ಯ ಗಳಿಂದೊಡಗೂಡಿದೆ. ದೇವಾಲಯದೊಳಗೆ ಮಸ್ಲಿಂ ಶೈಲಿಯ ಮಯೂರವಿದ್ದು ಅದಕ್ಕೆ ಹಸಿರು ಚಾದಾರನ್ನು ಹೊದಿಸಿದ್ದಾರೆ. ಗುಡಿಯ ಮೇಲ್ಭಾಗವು ಸುಂದರವಾದ ಒಂಬತ್ತು ಗುಮ್ಮಟ ಹಾಗೂ ಒಂಬತ್ತು ಕಳಸಗಳಿಂದ ಕೂಡಿದೆ.

"ಹುಟ್ಟಿದ್ದು ಗೋನಾಳ
ಇರುವುದು ವರವಿ
ಮೆರೆದುದು ಲಿಂಗನಬಂಡಿ
ಸ್ಥಿರವಾದದ್ದು ತಿಂತಣಿ
ನಮ್ಮ ನರಕುರಿಗಳ ಕಾಯ್ವ ಪ್ರಭುದೇವ ಬಹುಪರಾಕು."

ಮೇಲಿನ ವಚನದಲ್ಲಿ ಹೇಳುವ ಹಾಗೆ ಪೂಜ್ಯ ಶ್ರೀ ಮೌನೇಶ್ವರರು ದೇವರುಗೋನಾಳದಲ್ಲಿ ಹುಟ್ಟಿ ವರವಿಯಲ್ಲಿ ಇದ್ದು ಲಿಂಗನಬಂಡಿಯಲ್ಲಿ ಮೆರೆದು ತಿಂತಣಿಯಲ್ಲಿ ಐಕ್ಯವಾದರು.

"ಈ ಷಣಕೆ ಭೂಷಣಕೆ ಈಶ ತಾ ಒಲಿವನೆ
ಕೀಸ ಮಾದಿಗರ ಮನೆಯ ಕಾಯಕವ ಮಾಡಿ ಕೊಡಲು
ಕಾಶಿಯ ಗಂಗೆ ಕೈ ನೀಡುವಳು
ಈ ಭೂಸುರರ ಮಾತೇನು ಬಸವಣ್ಣ."

ಈಶನು ನಮಗೊಲಿಯಬೇಕಾದರೆ ನಮ್ಮ ಅಂತರಂಗ ಬಹಿರಂಗಗಳು ಶುದ್ಧವಾಗಿರಬೇಕು. ಹೊರಗಿನ ಡಾಂಭಿಕ ವೇಷಭೂಷಣಗಳಿಗೆ ಶಿವನು ತಾನೊಲಿವನಲ್ಲ, ಜಾತಿಭೇದ ಮಾಡದೆ ಸತ್ಯ ಶುದ್ಧ ಕಾಯಕವನ್ನು ಮಾಡಿದರೆ ಕಾಶಿಯ ಗಂಗೆ ತಾನೆದ್ದು ಕೈ ಮುಗಿವಳಲ್ಲದೆ ಇಂತಹ ಅಂತಃಕರಣ ಶುದ್ಧ ಭಕ್ತರ ಕೈಹಿಡಿವಳೆಂದು ಹಾಗೂ ಜನಮೆಚ್ಚುಗೆಗಾಗಿ ಕೆಲಸ ಬೇಡವೆಂದಿದ್ದಾರೆ ಶ್ರೀ ಮೌನೇಶ್ವರರು ಈ ವಚನದಲ್ಲಿ.

ವರವಿಯ ಪುರದಲ್ಲಿ ಕುರುಹುಂಟು ಲಿಪಿಯುಂಟು
ಕುರಿಯ ಹೆಜ್ಜೆ ಮೊದಲುಂಟು ಇದು ನಮ್ಮ
ಹಿರಿಯರಿದ್ದ ಸ್ಥಳವೆಂದು ಬಂದೆ ವರವಿಗೆ ಬಸವಣ್ಣ.

ಅದೇ ತರಹ ದೇವರ ಗೋನಾಳದಲ್ಲಿಯೂ ಸಹ, ಕುರುಹುಂಟು, ಲಿಪಿವುಂಟು ಹಾಗೂ ಕುರಿಯ ಹೆಜ್ಜೆಯುಂಟು. ಊರಿನ ಪೂರ್ವದಿಕ್ಕಿನಲ್ಲಿರುವ ಗುಡ್ಡದಲ್ಲಿ ಮೌನಿಮಹಾರಾಜರು ತಪಗೈದ ಗವಿಯಿದೆ. ಈ ಗವಿಯ ಮೇಲ್ಗಡೆ ಭಾಗದ ಗುಡ್ಡದಲ್ಲಿ ಕುರಿಯ ಹೆಜ್ಜೆಗಳು, ಮನುಷ್ಯರ ಹಜ್ಜೆಗಳು, ಆದಿ ಮಾನವನು ಕುಟ್ಟಿರಬಹುದಾದ ಕುಳಿಗಳು (cup marks) ಇವೆ. ಶ್ರಾವಣ ಮಾಸದಲ್ಲಿ ಮಳೆ ಬಾರದಿದ್ದರೆ ಈ ಊರಿನ ಜನರು ಈ ಗುಡ್ಡದಲ್ಲಿರುವ ಕುರುಹುಗಳಿಗೆ "ಅಂಬಲಿ ಪೂಜೆ"ಯೆಂಬ ಸೇವೆಯನ್ನು ಸಲ್ಲಿಸುತ್ತಾರೆ.

"ಕುರುಬರ ಕುಲದಲ್ಲಿ ಹುಟ್ಟಿದರೆ ಹಿರಿದಾಗುತ್ತಿದ್ದೆ
ಭವಿ ಪಾಂಚಾಳರ ಕುಲದಲ್ಲಿ ಹುಟ್ಟಿ ಕಿರಿದಾದೆನು
ಕಾಣಾ ಬಸವಣ್ಣ"

ಎಂದು ಮೌನೇಶ್ವರರು ತಮ್ಮ ವಚನವೊಂದರಲ್ಲಿ ಹೇಳುವ ಹಾಗೆ ಕಂಬಳಿ ಹೊದ್ದು ಕುರುಬರ ವೇಷದಲ್ಲಿ ಕುರಿಯನ್ನು ಕಾಯ್ದರೆಂದು ಹಾಗೂ ಅನೇಕ ಪವಾಡಗಳನ್ನು ಮೆರೆದರೆಂದು ನಮಗೆ ತಿಳಿದುಬರುವುದು.

ಅವರವರ ಭಕುತಿಗೆ ಅವರವರ ಭಾವಕ್ಕೆ ಅವರವರ ತೆರನಾಗಿ ಇರುತಿಹನು ಶಿವಯೋಗಿ ಎಂದು ಮುಪ್ಪಿನ ಷಡಕ್ಷರಿಗಳು ಹೇಳುವ ಹಾಗೆ

"ಹರಿಯ ಭಕ್ತರಿಗೆ ಹರಿಯಾಗಿ
ಹರನ ಭಕ್ತರಿಗೆ ಹರನಾಗಿ
ಹಜರತನ ಭಕ್ತರಿಗೆ ಹಜರತ್‌ನಾಗಿ"

ಒಟ್ಟಿನಲ್ಲಿ ಹಿಂದು-ಮುಸ್ಲಿಂ ಭಾವೈಕ್ಯದ ಸಂಕೇತವಾಗಿಯೂ ಮತ್ತು ಭಾವಸಂಗಮವಾಗಿಯೂ ಮೌನೇಶ್ವರರಿದ್ದರು.ಇಂದಿನ ದಿನಗಳವರೆಗೂ ಈ ಭಾಗದ ಹಿಂದೂ ಜನರು ಮಾನಮ್ಮ ಮತ್ತು ಮಾನಪ್ಪನೆಂದು ಹಾಗೂ ಮುಸ್ಲಿಂರು ಮೌನುದ್ದೀನ್ ಎಂದು ತಮ್ಮ ಮಕ್ಕಳಿಗೆ ಹೆಸರಿಡುತ್ತಾರೆ. ಇದು ಹಿಂದು ಮುಸ್ಲಿಂರ ಭಾವೈಕ್ಯತೆಯ ಸಂಕೇತವಲ್ಲದೇ ಮತ್ತೇನು.

"ಹಿಂದರು-ತುರುಕರು ಒಂದಾಗಿ ನಡದಾರು
ಹಿಂದೂ ತುರ್ಕರಿಗೆ ಚಂದ್ರಮನೊಬ್ಬನೆ
ನಿಂದಸಿದವನೆ ಅಧಮನು ಕಾಣದ
ಅಂಧಕರಿಗೆ ಯಾಕೆ ದರ್ಪಣವು ಸಕಲವು"

ಎನ್ನುವ ಹಾಗೆ ಮೌನೇಶ್ವರರು ಹಿಂದು ಮುಸ್ಲಿಂ ಭಾವೈಕ್ಯತೆಗಾಗಿ ತುಂಬಾ ಶ್ರಮಿಸಿದ್ದಾರೆ.

"ಕಾಶೀಗೋಗುವುದಕ್ಕಿಂತ ಲೇಸಪ್ಪ ತಿಂಥಣಿ
ಶಾಶನದ ಕಟ್ಟಿ ಸಿರಿ ತಿಂಥಿಣಿ
ಶಾಶನದ ಕಟ್ಟಿ ಸಿರಿ ತಿಂಥಿಣಿಯ
ಗಂಗಿ ದಡದಲ್ಲಿ ನೆನೆದಾನ
ಗಂಗಿ ದಡದಲ್ಲಿ ನೆನೆದಾನ ಮೌನೇಶ
ಅಲ್ಲಿ ಯೋಗ ಸಮಾಧಿ ಪಡೆದಾನ."

ಎನ್ನುವ ಹಾಗೆ ಕೃಷ್ಣೆಯ ಪ್ರಶಾಂತ ವಾತವರಣದಲ್ಲಿ ಪೂಜ್ಯ

ಮೌನೇಶ್ವರರು ಯೋಗಸಮಾಧಿಯಲ್ಲಿ ಐಕ್ಯರಾದರು. ಆದುದರಿಂದ ಈ ಭಾಗದ ಜನಪದರು ಭಾನ ಇಲ್ಲದವನು ಗೋನಾಲಕ್ಕೆ ಬರಬೇಕು. ಚಿಂತೆ ಇದ್ದವನು ತಿಂಥಿಣಿಗೆ ಹೋಗಬೇಕೆಂಬುವುದು ಅವರ ನಂಬಿಕೆಯಾಗಿದೆ.

ಭೈರವನ ಶಿಲ್ಪಗಳು






ಮೌನೇಶ್ವರರ ದೇವಾಲಯದ ಪ್ರಾಂಗಣದಲ್ಲಿ ಮೂರು ಭೈರವನ ಶಿಲ್ಪಗಳಿವೆ. ಅದರಲ್ಲಿ ಒಂದು ಶಿಲ್ಪವು ಪ್ರತಿಮಾ ಯೋಗದಲ್ಲಿದ್ದು ಮೂರ್ತಿಯ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಡಮರು, ಕಾಲಲ್ಲಿ ಕಾಲ್ಗಡಗ, ಸೊಂಟದಲ್ಲಿ ಗೆಜ್ಜೆಪಟ್ಟಿ, ಕೊರಳಲ್ಲಿ ಕಂಠಿಹಾರ ಹಾಗೂ ಜನಿವಾರವನ್ನು ಧರಿಸಿದ್ದು, ತಲೆಗೆ ಕುಲಾಯಿ ತರಹದ ಕೌಫಿನ, ಹಾಗೂ ಕಿವಿಯಲ್ಲಿ ಕರ್ಣಕುಂಡಲಗಳಿವೆ. ಇನ್ನೊಂದು ಭೈರವನ ಮೂರ್ತಿಯು ಲಲಿತಾಸನದಲ್ಲಿದ್ದು, ಬಲಗೈಯಲ್ಲಿ ಖಟ್ವಾಂಗ, ಎಡಗೈಯಲ್ಲಿ ಪಾನ ಬಟ್ಟಲು, ಕೊರಳಲ್ಲಿ ಕಂಠಿಹಾರ ಹಾಗೂ ಯಜ್ಞೋಪವಿತವನ್ನು ಧರಿಸಿದ್ದು, ಕಾಲಲ್ಲಿ ಕಾಲ್ಗಡಗ, ರಟ್ಟೆಗೆ ರುದ್ರಾಕ್ಷಿ ಮಾಲೆ, ತಲೆಯ ಮೇಲೆ ಕೌಫಿನ ಧರಿಸಿದೆ. ಶಿಲ್ಪಕಲಾ ಲಕ್ಷಣಗಳಿಂದ ಇವೆರಡೂ ಮೂರ್ತಿಗಳನ್ನು ಹನ್ನೊಂದನೆಯ ಶತಮಾನಕ್ಕೆ ಸೇರಿಸಬಹುದು.

ಸ್ತ್ರೀ ಮಿಥುನ ಶಿಲ್ಪಗಳು

ದೇವರ ಗೋನಾಲದ ಪಶ್ಚಿಮ ದಿಕ್ಕಿನಲ್ಲಿರುವ ಕೆರೆಯ ದಂಡೆಯ ಮೇಲೆ 'ಬತ್ತಲೆಗೌರಿ'ಯಂತಿರುವ ಮೂರು ಸ್ತ್ರೀ ಮಿಥುನ ಶಿಲ್ಪಗಳಿವೆ. ಜೈನ ಸನ್ಯಾಸಿನಿಯರು ಸಲ್ಲೇಖನ ವ್ರತಗೈದು ತಮ್ಮ



ಪ್ರಾಣತ್ಯಾಗ ಮಾಡಿದುದರ ಸಂಕೇತವಾಗಿ ಈ ಮೂರ್ತಿಗಳನ್ನು ಕೆತ್ತಿರಬಹುದು. ಒಟ್ಟಿನಲ್ಲಿ ಇವುಗಳ ಉದ್ದೇಶ ನಿಗೂಢವಾಗಿದೆ. ಇವುಗಳ ಪಕ್ಕದಲ್ಲಿಯೆ ರುಂಡವಿಲ್ಲದ ಸುಂದರವಾದ ಒಂದು ನಂದಿ ವಿಗ್ರಹವಿದೆ.

ವೀರಗಲ್ಲು



ಮೌನೇಶ್ವರರ ಗವಿಯ ಮುಂದೆ ಇರುವ ವೀರಗಲ್ಲಿನಲ್ಲಿರುವ ವೀರನು, ವೀರಮುಡಿ ಕಟ್ಟಿದ್ದು ಕೈಯಲ್ಲಿ ಖಡ್ಗ ಹಿಡಿದಿದ್ದಾನೆ. ಕಿವಿಯಲ್ಲಿ ಕರ್ಣ ಕುಂಡಲಗಳಿವೆ. ಈ ವೀರಗಲ್ಲು ಸುಮಾರು ಹನ್ನೊಂದನೆ ಶತಮಾನಕ್ಕೆ ಸೇರಿದುದಾಗಿದೆ.

i. (ಈ ನಿವೇಶನದ ಮಾಹಿತಿ ನೀಡಿದ ಶ್ರೀಮತಿ ಶಿವಗಂಗಮ್ಮ ನೀರಲಗಿ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀಮತಿ ನೀಲಮ್ಮ W/O ಸಾಹೇಬ್‌ಗೌಡ ಪೋಲಿಸ್ ಪಾಟಿಲ್, ಕು|| ರಾಜು ಪೋಲಿಸ್ ಪಾಟಿಲ್, ಕು|| ಹಣಮಂತರಾಯ ಬಡಿಗೇರ್, ಶ್ರೀ ಮುದುಕಪ್ಪ ಭಂಟನೂರ್, ಶ್ರೀನಾಗಪ್ಪ ಹರಿಜನ್ ಇವರೆಲ್ಲರಿಗೂ ಲೇಖಕರ ಕೃತಜ್ಞತೆಗಳು.)

ii. (ಈ ಲೇಖನವನ್ನು ತಯಾರಿಸುವಲ್ಲಿ ಸಲಹೆ-ಸೂಚನೆಗಳನ್ನಿತ್ತು ಸಹಕರಿಸಿದ ನನ್ನ ಗುರುಗಳಾದ ಡಾ|| ದೇವರ ಕೊಂಡಾರೆಡ್ಡಿ ಕನ್ನಡ ವಿ.ವಿ ಹಂಪಿ, ಡಾ|| ಅ. ಸುಂದರ, ಡಾ|| ಎಸ್.ಕೆ. ಜೋಶಿ ಧಾರವಾಡ, ಡಾ|| ಎಮ್. ಜಿ. ಮಂಜುನಾಥ ಬೆಂಗಳೂರು ವಿಶ್ವವಿದ್ಯಾಲಯ, ಕು|| ಸಂತೋಷ ಬೀದರ ಇವರೆಲ್ಲರಿಗೂ ಲೇಖಕರ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) ಪುರಾತತ್ವ ಶೋಧನೆ - ಡಾ|| ಎಸ್ ಶ್ರೀಕಂಠಶಾಸ್ತ್ರೀ.

೨) ಪ್ರಾಚ್ಯ ವಸ್ತು ಸಂಶೋಧನೆ - ಡಾ|| ಅ. ಸುಂದರ.

೩) ಇತಿಹಾಸ ದರ್ಶನ - ಸಂಪುಟಗಳು.

ಡಾ. ಎಂ. ಜಿ. ಮಂಜುನಾಥ *

ಮೆಳೆಕೋಟೆ ಶಾಸನೋಕ್ತ ಬೌದ್ಧವಿಹಾರ - ಹೊಸಶೋಧ

ತುಮಕೂರು ಜಿಲ್ಲೆಯ ಮೆಳೆಕೋಟೆ ಎಂಬ ಗ್ರಾಮದ ಸಿದ್ಧಲಿಂಗೇಗೌಡ ಎಂಬುವರ ಮನೆಯಲ್ಲಿ ದೊರೆತಿದ್ದ ಕ್ರಿ.ಶ. ೫ನೇ ಶತಮಾನದ ತಾಮ್ರಶಾಸನವೊಂದು ಆರ್. ನರಸಿಂಹಾಚಾರ್ ಅವರು ಸಂಪಾದಿಸಿದ ೧೯೧೦ರ ಮೈಸೂರ್ ಆರ್ಕಿಯಲಾಜಿಕಲ್ ರಿಪೋರ್ಟ್ಸ್‌ನಲ್ಲಿ ಮೊದಲು ಪ್ರಕಟವಾಯಿತು.[೧] ನಂತರ ಡಾ. ಕೆ.ಎ. ನೀಲಕಂಠ ಶಾಸ್ತ್ರಿಗಳು ಸಂಪಾದಿಸಿದ ಎಪಿಗ್ರಾಫಿಯ ಕರ್ನಾಟಕದ ಹದಿನಾರನೆಯ ಸಂಪುಟದಲ್ಲಿ ೧೯೫೬ರಲ್ಲಿ ಮತ್ತೆ ಪ್ರಕಟವಾಯಿತು.[೨] ತದನಂತರ ಡಾ. ಕೆ.ವಿ. ರಮೇಶ್ ಅವರು ಸಂಪಾದಿಸಿದ 'ಇನ್‌ಸ್ಕ್ರಿಪ್ಷನ್ಸ್ ಆಫ್ ವೆಸ್ಟರ್ನ್ ಗಂಗಾಸ್' ಎಂಬ ಕೃತಿಯಲ್ಲಿ ೧೯೮೪ರಲ್ಲಿ ಮತ್ತೊಮ್ಮೆ ಪ್ರಕಟವಾಯಿತು.[೩]

ಹೀಗೆ ಹಲವು ಬಾರಿ ಪ್ರಕಟವಾದ ಆ ತಾಮ್ರಶಾಸನದಲ್ಲಿ ಗಂಗರ ದೊರೆಯಾದ ಎರಡನೇ ಮಾಧವನು ಕ್ರಿ.ಶ. ೫ನೇ ಶತಮಾನದಲ್ಲಿ ಒಂದು ಬೌದ್ಧವಿಹಾರಕ್ಕೆ ಕೊಟ್ಟ ದಾನದ ವಿವರಗಳಿವೆ. ಐದು ಹಲಗೆಗಳಿಂದ ಕೂಡಿದ್ದ ಆ ತಾಮ್ರಶಾಸನ ದಲ್ಲಿನ ಎರಡನೆಯ ಹಲಗೆ ಕಳೆದು ಹೋಗಿದ್ದುದರಿಂದ ಆ ಶಾಸನೋಕ್ತ ಬೌದ್ಧವಿಹಾರ ಎಲ್ಲಿತ್ತು ಎಂದು ಯಾರಿಂದಲೂ ಗುರ್ತಿಸಲು ಸಾಧ್ಯವಾಗಿರಲಿಲ್ಲ.

ಡಾ. ಎಂ. ಚಿದಾನಂದಮೂರ್ತಿಯವರು ಈ ಶಾಸನದ ಬಗ್ಗೆ ಬರೆಯುತ್ತಾ "ಮೆಳೆಕೋಟೆ ತಾಮ್ರಶಾಸನದಲ್ಲಿ ಗಂಗಕುಲದ ಮಾಧವಶರ್ಮನು ಬೌದ್ಧವಿಹಾರಕ್ಕೆ ಭೂಮಿಯನ್ನು ದಾನಮಾಡಿದ ವಿಷಯ ಬಂದಿದೆ. ಈ ತಾಮ್ರಪಟದ ಎರಡನೆಯ ಹಲಗೆ ಕಳೆದು ಹೋಗಿರುವುದರಿಂದ ಆ ಶಾಸನದಲ್ಲಿ ಉಕ್ತವಾಗಿರುವ ವಿಹಾರವು ಎಲ್ಲಿತ್ತೆಂದು ನಿರ್ಧರಿಸುವುದು ಕಷ್ಟವಾಗಿದೆ. ಆವನಿನದಿಯ ಹೆಸರು ಬರುವುದರಿಂದ ಬಹುಶಃ ಕೋಲಾರ ಜಿಲ್ಲೆಯಲ್ಲಿ ಆವಣಿ ಎಂಬ ತೀರ್ಥಕ್ಷೇತ್ರದ ಸಮೀಪದಲ್ಲಿ ಇತ್ತೋ ಏನೋ" ಎಂದು ಅಭಿಪ್ರಾಯಪಟ್ಟಿದ್ದಾರೆ.[೪]

ಡಾ. ಎಸ್. ನಾಗರಾಜು ಅವರು ಈ ಶಾಸನದ ಬಗ್ಗೆ ಬರೆಯುತ್ತಾ "ನಾಲ್ಕನೆಯ ಶತಮಾನದ ಗಂಗಮಾಧವನ ಒಂದು ಶಾಸನದಲ್ಲಿ ಶಾಕ್ಯಶಿಲಾ ಎಂಬ ಪದದ ಪ್ರಯೋಗವಿದೆ. ಶಾಸನದ ಕೊನೆಯಲ್ಲಿ 'ಬುದ್ಧ ಸತ್ವಾಯ ದತ್ತಮಾಚಂದ್ರತಾರಕಂ' ಎಂದಿರುವುದರಿಂದ ಇದು ಬೌದ್ಧರಿಗೆ ಕೊಟ್ಟ ದತ್ತಿಗೆ ಸಂಬಂಧಿಸಿದ್ದು ಎಂದು ತಿಳಿಯುತ್ತದೆ. ಶಾಸನದಲ್ಲಿ ದೊರೆಯುವ ಆಂತರಿಕ ಆಧಾರಗಳಿಂದ ಕೋಲಾರ ಜಿಲ್ಲೆಯ ಆವನಿಯ ಸಮೀಪದಲ್ಲೆಲ್ಲೋ ಈ ದತ್ತಿ ನೀಡಿದ್ದಂತೆ ತೋರುತ್ತದೆ"ಎಂದು ಅಭಿಪ್ರಾಯ ಪಟ್ಟಿದ್ದಾರೆ.[೫] ಆದರೆ ಡಾ. ಎಸ್. ನಾಗರಾಜು ಅವರು ಆ ಶಾಸನೋಕ್ತ ಬೌದ್ಧವಿಹಾರ ಎಲ್ಲಿತ್ತು ಎಂಬ ಬಗ್ಗೆ ಏನನ್ನೂ ಬರೆದಿಲ್ಲ.

ಕೆ. ಅಭಿಶಂಕರ್ ಅವರು ಸಂಪಾದಿಸಿರುವ ಕರ್ನಾಟಕ ರಾಜ್ಯ ಗ್ಯಾಸೆಟಿಯರ್‌ನ ತುಮಕೂರು ಜಿಲ್ಲಾ ಸಂಪುಟದಲ್ಲಿ "ದಡಿಗನ ಪುತ್ರನಾದ ಇಮ್ಮಡಿ ಮಾಧವನು ಬೌದ್ಧವಿಹಾರಕ್ಕೆ ದಾನಕೊಟ್ಟ ವಿವರಗಳನ್ನು ಈ ಶಾಸನವು ದಾಖಲಿಸಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.[೬]

ಡಾ. ಬಿ. ಷೇಕ್ ಅಲಿಯವರು 'ಹಿಸ್ಟರಿ ಆಫ್ ವೆಸ್ಟರ್ನ್ ಗಂಗಾಸ್' ಎಂಬ ಕೃತಿಯಲ್ಲಿ ಮೆಳೆಕೋಟೆ ತಾಮ್ರಶಾಸನವು ಬೌದ್ಧವಿಹಾರಕ್ಕೆ ಕೊಟ್ಟ ಭೂದಾನದ ವಿವರಗಳನ್ನು ದಾಖಲಿಸಿದೆ' ಎಂದು ಬರೆದಿದ್ದಾರೆ.[೭]


ಇದೇ ರೀತಿ ಮೆಳೆಕೋಟೆ ಶಾಸನ ದೊರೆತ ಕಾಲದಿಂದ ಇಂದಿನವರೆಗೆ ಹತ್ತಾರು ಮಂದಿ ವಿದ್ವಾಂಸರು ತಮ್ಮ ಸಂಶೋಧನಾ ಕೃತಿಗಳಲ್ಲಿ, ಸಂಪ್ರಬಂಧಗಳಲ್ಲಿ ಮೆಳೆಕೋಟೆ ಶಾಸನದ ಬಗ್ಗೆ ಹಾಗೂ ಗಂಗರ ಇಮ್ಮಡಿಮಾಧವನು ಒಂದು ಬೌದ್ಧವಿಹಾರಕ್ಕೆ ದಾನ ಕೊಟ್ಟ ಬಗ್ಗೆ ಬರೆದಿದ್ದಾರೆ. 'ಕರ್ನಾಟಕದಲ್ಲಿ ಬೌದ್ಧಧರ್ಮ' ಎನ್ನುವ ವಿಷಯದ ಬಗ್ಗೆ ಬರೆದ ಎಲ್ಲಾ ವಿದ್ವಾಂಸರೂ ಈ ಶಾಸನದ ಬಗ್ಗೆ ಚರ್ಚಿಸಿದ್ದಾರೆ. ಆದರೆ ಈ ಶಾಸನದಲ್ಲಿ ಹೇಳಲಾಗಿರುವ ಬೌದ್ಧವಿಹಾರ ಎಲ್ಲಿತ್ತು ಎಂದು ಈ ಯಾರೂ ಗುರುತಿಸಿರಲಿಲ್ಲ.

ಆ ಬೌದ್ಧ ವಿಹಾರವನ್ನು ಪತ್ತೆಹಚ್ಚಲು ಸಂಶೋಧನೆ ಕೈಗೊಂಡಾಗ ಮೆಳೆಕೋಟೆ ತಾಮ್ರಶಾಸನದಲ್ಲಿ ದೊರೆಯುವ ಆಂತರಿಕ ಆಧಾರಗಳನ್ನು ಪರಿಶೀಲಿಸುತ್ತಿರುವ ಸಂದರ್ಭದಲ್ಲಿಯೇ ಡಾ. ಎಂ. ಎಚ್. ಕೃಷ್ಣ ಅವರು ಸಂಪಾದಿಸಿದ ೧೯೩೦ರ ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ಸ್‌ನಲ್ಲಿ 'ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಹರಳಕೋಟೆ ಎಂಬ ಗ್ರಾಮದ ಹೊರವಲಯದಲ್ಲಿ ೪೦ ಅಡಿ ಉದ್ದ ಹಾಗೂ ೧೨ ಅಡಿ ಎತ್ತರದ ಗಜಪೃಷ್ಠಾಕಾರದ ದಿಬ್ಬವೊಂದು ಇದೆ' ಎಂಬ ಮಾಹಿತಿ ಲಭ್ಯವಾಯಿತು.

* ಹಿರಿಯ ಉಪನ್ಯಾಸಕ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.

ಆದರೆ ನಂತರ ಪರಿಶೀಲಿಸಿದಾಗ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹರಳಕೋಟೆ ಎಂಬ ಗ್ರಾಮವೇ ಇಲ್ಲವೆಂಬುದು ತಿಳಿಯಿತು. ಆದರೆ ಹರಳುಕುಂಟೆ ಎಂಬ ಗ್ರಾಮ ಶ್ರೀನಿವಾಸಪುರ ತಾಲ್ಲೂಕಿನಲ್ಲೊಂದು ಹಾಗೂ ಕೋಲಾರ ತಾಲ್ಲೂಕಿನಲ್ಲೊಂದು ಇರುವುದಾಗಿ ತಿಳಿಯಿತು. ಕೋಲಾರ ತಾಲ್ಲೂಕಿನ ಹರಳ ಕುಂಟೆಯಲ್ಲಿ ಗಜಪೃಷ್ಠಾಕಾರದ ದಿಬ್ಬ ದೊರೆಯಲಿಲ್ಲ. ನೊಳಂಬರ ಮೂರು ವೀರಗಲ್ಲುಗಳು ದೊರೆತವು. ಶ್ರೀನಿವಾಸಪುರ ತಾಲ್ಲೂಕಿನ ಹರಳಕುಂಟೆ ಗ್ರಾಮದಲ್ಲಿ ಯಾರನ್ನು ವಿಚಾರಿಸಿದರೂ ಗಜಪೃಷ್ಠಾಕಾರದ ದಿಬ್ಬದ ಮಾಹಿತಿ ದೊರೆಯಲಿಲ್ಲ. ಆ ಊರಿನ ಹನುಮಂತ ದೇವಾಲಯದ ಪಕ್ಕದಲ್ಲಿ ಒಂದು ಅಪ್ರಕಟಿತ ಶಿಲಾಶಾಸನ ದೊರೆಯಿತು. ಕ್ರಿ. ಶ. ೧೪೦೫ರ ಆ ಶಾಸನದಲ್ಲಿ 'ವಿಜಯನಗರದ ಅರಸನಾದ ಒಂದನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ ಮುಳವಾಯಿ ರಾಜ್ಯದ ಹೊದೆನಾಡಿನ ಜ್ಯೋತಿನಾಯಕನ ಮಗ ಮದ್ದೆನಾಯಕನು ಹರಳುಕುಂಟೆ ಗ್ರಾಮದಲ್ಲಿ ಆಂಜನೇಯ ದೇವಾಲಯವನ್ನು ಕಟ್ಟಿಸಿ ಆ ದೇವಾಲಯದ ಅರ್ಚಕರಿಗೆ ನೀಡಿದ ದಾನದ ವಿವರಗಳನ್ನು ದಾಖಲಿಸಿದೆ.[೮]

ನಂತರ ಆ ಊರಿನ ಹೊರವಲಯದಲ್ಲಿ ಕ್ಷೇತ್ರ ಪರಿವೀಕ್ಷಣೆ ಮಾಡುತ್ತಿದ್ದಾಗ ಆ ಗ್ರಾಮದ ಪೂರ್ವದಿಕ್ಕಿನಲ್ಲಿ ಒಂದು ಕಿ.ಮೀ. ದೂರದಲ್ಲಿ ನಾರಾಯಣಸ್ವಾಮಿ ಎಂಬುವರ ನೀಲಗಿರಿ ತೋಪಿನಲ್ಲಿ ದೊಡ್ಡದಾದ ಗಜಪೃಷ್ಠಾಕಾರದ ದಿಬ್ಬ ಪತ್ತೆಯಾಯಿತು. ಆದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮೆಳೆಕೋಟೆ ಶಾಸನೋಕ್ತ ಬೌದ್ಧವಿಹಾರದ ಅವಶೇಷ ಅದೇ ಎಂಬುದು ಖಚಿತವಾಯಿತು.



ಗಜಪೃಷ್ಠಾಕಾರ, ಅರ್ಧ ದುಂಡಾಯತ, ಅಥವಾ ಕುದುರೆ ಲಾಳಾಕಾರ ಎಂದು ಕರೆಯಲಾಗುವ ಬೌದ್ಧ ದೇವಾಲಯಗಳ ಸಾಂಪ್ರದಾಯಿಕ ಮಾದರಿಯಲ್ಲಿ ಕಟ್ಟಲ್ಪಟ್ಟ ಪ್ರಾಚೀನ ದೇವಾಲಯ ವೊಂದರ ಅವಶೇಷಗಳು ಅಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಕಲ್ಲಿನ ದೊಡ್ಡ ದೊಡ್ಡ ತುಂಡುಗಳನ್ನು ಬಳಸಿ ಕಟ್ಟಿದ ಅಧಿಷ್ಠಾನದ ಮೇಲೆ ಇಟ್ಟಿಗೆಯಿಂದ ನಿರ್ಮಿಸಿದ ಭಿತ್ತಿ ಹಾಗೂ ಮೇಲ್ಛಾವಣಿ ಎಲ್ಲವೂ ಕಾಲನ ದವಡೆಗೆ ಸಿಕ್ಕಿ ಕುಸಿದು ದೊಡ್ಡ ದಿಬ್ಬದ ರೂಪ ತಾಳಿದ್ದುದು ಅಲ್ಲಿ ಕಂಡು ಬಂದಿತು. ಆ ದಿಬ್ಬಕ್ಕೆ ಹೊಂದಿ ಕೊಂಡಂತೆಯೇ ಇರುವ ಸುಮಾರು ಎರಡೂವರೆ ಅಡಿಗಳಷ್ಟು ದಪ್ಪದ, ಸುಮಾರು ಎಂಬತ್ತು ಅಡಿಗಳಷ್ಟು ಉದ್ದದ ಗೋಡೆ ಯೊಂದರ ಅಡಿಪಾಯವೂ ಸಹ ಕಂಡು ಬಂದಿತು. ಬಹುಶಃ ಅದು ಆ ಬೌದ್ಧ ದೇವಾಲಯಕ್ಕೆ ಹೊಂದಿಕೊಂಡಂತೆ ಇದ್ದಿರಬಹುದಾದ ವಿಸ್ತಾರವಾದ ಕಟ್ಟಡವೊಂದರ ತಳಪಾಯ ವಿರಬಹುದೆಂದು ತೋರುತ್ತದೆ.

ಮೆಳೆಕೋಟೆ ಶಾಸನದಲ್ಲಿ ಬೌದ್ಧವಿಹಾರಕ್ಕೆ ದಾನವಾಗಿ ಕೊಟ್ಟ ಗದ್ದೆಗಳ ಸಮೀಪದಲ್ಲಿ ರಕ್ತತಟಾಕ ಮತ್ತು ಶಿಲಾತಟಾಕಗಳೆಂಬ ಎರಡು ಕೆರೆಗಳಿರುವುದಾಗಿ ಹಾಗೂ ಆ ಕೆರೆಗಳಿಂದ ಈ ಗದ್ದೆಗಳಿಗೆ ನೀರು ಪೂರೈಕೆಯಾಗುತ್ತಿತ್ತೆಂಬ ವಿವರಗಳಿವೆ. ಆ ಶಿಲಾತಟಾಕವು ಪ್ರಸ್ತುತ ನಾನು ಪತ್ತೆಹಚ್ಚಿದ ಬೌದ್ಧ ದೇವಾಲಯದ ಅವಶೇಷಗಳಿರುವ ಹರಳುಕುಂಟೆ ಗ್ರಾಮದ ಕೆರೆಯೇ ಆಗಿದೆ. ಆ ಕೆರೆಯ ಏರಿಗೆ ಅಂಟಿಕೊಂಡಂತೆ ಬೃಹದಾಕಾರದ ಬಂಡೆಯೊಂದಿದೆ. ಆ ಬಂಡೆಯಿಂದಾಗಿಯೇ ಅದನ್ನು ಶಿಲಾತಟಾಕವೆಂದು ಕರೆಯಲಾಗಿದೆ. ಈಗ ಆ ಊರಿಗೆ ಹರಳುಕುಂಟೆ ಎಂಬ ಹೆಸರು ಬರಲು ಸಹ ಬಡೆಯೊಂದಿಗಿರುವ ಕೆರೆಯೇ ಕಾರಣವಾಗಿದೆ. ಶಾಸನವೊಂದ ರಲ್ಲಿಯೂ ಈ ಗ್ರಾಮವನ್ನು ಪರ್ಲಕುಂಟೆ ಎಂದು ಕರೆದಿರುವುದನ್ನು ಗಮನಿಸಬಹುದು. ಪ್ರಸ್ತುತ ಅಲ್ಲಿ ಸಂಪೂರ್ಣವಾಗಿ ತೆಲುಗು ಭಾಷೆಯ ಪ್ರಭಾವವಿರುವುದರಿಂದ ಆ ಕೆರೆಯನ್ನು ಬಂಡೆಚೆರುವು ಎಂದು ಕರೆಯಲಾಗುತ್ತಿದೆ. ಆ ಸ್ಥಳದಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿ ಸೋಮಯಾಜಲಪಲ್ಲಿ ಎಂಬ ಗ್ರಾಮವಿದೆ. ಆ ಗ್ರಾಮದ ಕೆರೆಯ ಸುತ್ತಮುತ್ತಲಿನ ಪ್ರದೇಶವೆಲ್ಲವೂ ಸಂಪೂರ್ಣವಾಗಿ ಕೆಮ್ಮಣ್ಣಿನಿಂದ ಕೂಡಿದೆ. ಆ ಕೆಮ್ಮಣ್ಣು (ಕೆಂಪುಮಣ್ಣು) ಮಳೆಯ ನೀರಿನಿಂದ ಕರಗಿ ಆ ಕೆರೆಯ ನೀರು



ಸಂಪೂರ್ಣವಾಗಿ ರಕ್ತದಂತೆ ಕೆಂಪಾಗುತ್ತದೆ. ಆದ್ದರಿಂದಲೇ ಆ ಕೆರೆಯನ್ನು ಮೆಳೆಕೋಟೆ ಶಾಸನದಲ್ಲಿ ರಕ್ತತಟಾಕವೆಂದು ಕರೆಯಲಾಗಿದೆ. ಈ ಕೆರೆಯನ್ನು ರಕ್ತಮುಚೆರುವು ಎಂದು ಕರೆಯುತ್ತಾರೆ. ಈ ಎರಡೂ ಕೆರೆಗಳು ತುಂಬಿದ ನಂತರ ಆ ಕೆರೆಗಳ ಹೆಚ್ಚುವರಿ ನೀರು ಒಂದು ಕಣಿವೆಯ ಮೂಲಕ ಹರಿದು ಬಂದು ಆವನಿ ನದಿಗೆ ಸೇರುತ್ತದೆ. ಆವನಿ ನದಿಯು ಈಗಿನ ಹರಳುಕುಂಟೆ ಗ್ರಾಮದ ಬೌದ್ಧ ದೇವಾಲಯದ ಅವಶೇಷಗಳು ಇರುವ ಸ್ಥಳದಿಂದ ಸುಮಾರು ಅರ್ಧ ಕಿ.ಮೀ. ದೂರದಲ್ಲಿಯೇ ಹರಿಯುತ್ತದೆ. ಮೆಳೆಕೋಟೆ ಶಾಸನದಲ್ಲಿ ಆ ಬೌದ್ಧವಿಹಾರಕ್ಕೆ ದಾನವಾಗಿ ನೀಡಿದ ಗದ್ದೆಯ ಹತ್ತಿರದಲ್ಲಿ ಆವನಿ ನದಿ ಇದೆ ಎಂಬುದಾಗಿ ಉಕ್ತವಾಗಿರುವುದು

ಸಹಾ ಸರಿಯಾಗಿಯೇ ಹೊಂದಿಕೊಳ್ಳುತ್ತದೆ. ಶಾಸನೋಕ್ತ ಮಣಿಗ್ರಾಮ ಇಂದಿನ ಮಣಿಗಾನಹಳ್ಳಿ. ಅದೇ ರೀತಿ ಮೆಳೆಕೋಟೆ ಶಾಸನದಲ್ಲಿ ಆ ಬೌದ್ಧವಿಹಾರಕ್ಕೆ ದಾನವಾಗಿ ನೀಡಿದ ಗದ್ದೆಯ ಗಡಿಯಲ್ಲಿ 'ಶಾಕ್ಯಶಿಲೆ' ಇದೆ ಎಂಬ ವಿವರಗಳಿವೆ. ಆ ಶಾಕ್ಯ ಶಿಲೆಯನ್ನು ಹರಳುಕುಂಟೆ ಗ್ರಾಮದ ಬಂಡೆ ಚೆರುವು (ಶಿಲಾತಟಾಕ) ಕೆರೆಯ ಅಚ್ಚುಕಟ್ಟಿನಲ್ಲಿರುವ ಗದ್ದೆಗಳ ಹತ್ತಿರದಲ್ಲಿ ಪತ್ತೆ ಹಚ್ಚಿದ್ದೇನೆ. ಬುದ್ಧನು ಶಾಕ್ಯವಂಶದವನಾದ್ದರಿಂದ ಬೌದ್ಧ ವಿಹಾರಕ್ಕೆ ದಾನ ನೀಡಿದ ಭೂಮಿಯ ಗಡಿಯಲ್ಲಿ ಗುರುತಿಗಾಗಿ ಸ್ಥಾಪಿಸಿದ ಗುರುತನ್ನು ಶಾಕ್ಯಶಿಲೆಯೆಂದು ಕರೆಯಲಾಗಿದೆ. ಶೈವ ಶಾಸನಗಳಲ್ಲಿ ಇಂತಹದ್ದನ್ನು ಲಿಂಗಮುದ್ರೆಕಲ್ಲು ಎಂದು ಕರೆಲಾಗುತ್ತಿತ್ತು, ವೈಷ್ಣ ಶಾಸನಗಳಲ್ಲಿ ವಾಮನಮುದ್ರೆ ಕಲ್ಲು ಎಂಬುದಾಗಿಯೂ, ಜೈನ ಶಾಸನಗಳಲ್ಲಿ ಮುಕ್ಕೊಡೆಯ ಕಲ್ಲು ಎಂದೂ ಕರೆಯಲಾಗುತ್ತಿತ್ತು.

ಪ್ರಸ್ತುತ ಹರಳುಕುಂಟೆಯ ಬೌದ್ಧವಿಹಾರದ ಸನಿಹದ ಕೆರೆಯ ಅಚ್ಚುಕಟ್ಟಿನಲ್ಲಿ ಇರುವ ಗದ್ದೆಯ ಬದುವಿನಲ್ಲಿರುವ ಹುಟ್ಟು ಬಂಡೆಯೊಂದರ ಮೇಲೆ ಈ ಶಾಕ್ಯಶಿಲೆಯಲ್ಲು ರೇಖಾಚಿತ್ರದಂತೆ ಕಂಡರಿಸಲಾಗಿದೆ. ಒಂದೂವರೆ ಅಡಿಗಳಷ್ಟು ಎತ್ತರದ ಈ ರೇಖಾ ಚಿತ್ರದಲ್ಲಿ ಒಂದು ತ್ರಿಶೂಲವನ್ನು ಕೊರೆಯಲಾಗಿದೆ. ಈ ತ್ರಿಶೂಲದ ಕೆಳಗಿನ ದಂಡಕ್ಕೆ ಆಯತಾಕಾರದ ಒಂದು ರಚನೆಯಿದೆ. ಈ ಆಯತಾಕಾರ ಸಹಿತವಾದ ತ್ರಿಶೂಲವನ್ನು ಶಾಕ್ಯಶಿಲೆಯೆದು ಗುರುತಿಸಲಾಗಿದೆ.

ಬೌದ್ಧ ಧರ್ಮೀಯರು ಬಳಸುತ್ತಿದ್ದ ಬೌದ್ಧ ಚಿಹ್ನೆಗಳೆಲ್ಲವೂ ಬುದ್ಧ ಪೂರ್ವಯುಗದ ಚಿಹ್ನೆಗಳೇ ಆಗಿವೆ. ಅವುಗಳಲ್ಲಿ ಬಹುಪಾಲು ಚಿಹ್ನೆಗಳು ಹಿಂದೂ ಧರ್ಮದ ಪ್ರಭಾವದಿಂದ ಬಳಕೆಗೆ ಬಂದವುಗಳೇ ಆಗಿವೆ. ಆ ಚಿಹ್ನೆಗಳಾವುವೆಂದರೆ ಪಾದ, ಸಿಂಹಾಸನ, ಚಕ್ರ, ವೃಕ್ಷ, ಸ್ತೂಪ, ಜ್ವಲಿಸುತ್ತಿರುವ ಸ್ಥಂಭ, ತಾವರೆ, ತ್ರಿಶೂಲ, ಸಿಂಹ, ವೃಷಭ, ಆನೆ, ಶ್ರೀವತ್ಸ, ಸ್ವಸ್ತಿಕ ಮುಂತಾದ ಚಿಹ್ನೆಗಳನ್ನು ಬೌದ್ಧಧರ್ಮೀಯರು ಬಳಸುತ್ತಿದ್ದರು. ಈ ಚಿಹ್ನೆಗಳು ಭಾರತದಲ್ಲಿನ ಎಲ್ಲ ಪ್ರಾಚೀನ ಬೌದ್ಧದೇವಾಲಯಗಳಲ್ಲಿಯೂ ಕಂಡು ಬರುತ್ತವೆ. ತ್ರಿಶೂಲದ ಚಿಹ್ನೆ ಜುನ್ನಾರ್, ಭಾಜಾ, ಬೇಡ್ಸ, ಕೀರ್ತಿ, ಮುಂತಾದ ಸ್ಥಳಗಳಲ್ಲಿನ ಬೌದ್ಧಸ್ತೂಪಗಳಲ್ಲಿ ಇಂದಿಗೂ ನೋಡಬಹುದು. ತ್ರಿಶೂಲವು ತ್ರಿರತ್ನದ ಸಂಕೇತವಾಗಿ ಬೌದ್ಧ ಧರ್ಮೀಯರಲ್ಲಿ ಬಳಕೆಯಲ್ಲಿತ್ತು.

'The trisula has been supposed to represent the triratna of the Buddlists. Shula having Siva connections. Siva is here called Mayaskara or Mayodhava. Maya means sukhn or bliss' ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಆದ್ದರಿಂದ ತ್ರಿಶೂಲವನ್ನು ಹರಳುಕುಂಟೆಯ ಬೌದ್ಧ ವಿಹಾರದ ಹತ್ತಿರದಲ್ಲಿ ಶಾಕ್ಯಶಿಲೆಯನ್ನಾಗಿ ಬಳಸಲಾಗಿದೆ ಎಂದು ಹೇಳಬಹುದು. ಮೆಳೆಕೋಟೆ ತಾಮ್ರಶಾಸನದಲ್ಲಿ ವಿವರಿಸಲಾಗಿರುವ ಎಲ್ಲಾ ಅಂಶಗಳೂ ಸಹ ಹರಳುಕುಂಟೆಯಲ್ಲಿ ಪ್ರಸ್ತುತ ನಾನು ಪತ್ತೆಹಚ್ಚಿರುವ ಬೌದ್ಧ ದೇವಾಲಯದ ಅವಶೇಷಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಮೆಳೆಕೋಟೆ ಶಾಸನದಲ್ಲಿ ಈ ಬೌದ್ಧ ದೇವಾಲಯವನ್ನು ವಿಹಾರವೆಂದು ಕರೆಯಲಾಗಿದೆ. ಈ ಬೌದ್ಧ ವಿಹಾರದ ಅವಶೇಷಗಳಲ್ಲಿ ಕಟ್ಟಡದ ಪಾಯಕ್ಕೆ ಬಳಸಿರುವಂತಹ ಉರುಟು ಕಾಡುಗಲ್ಲುಗಳು ಹಾಗೂ ಅದೇ ಅವಶೇಷಗಳಲ್ಲಿ ದೊರೆತ ಇತಿಹಾಸ ಆರಂಭಕಾಲಘಟ್ಟದ ಶಾತವಾಹನರ ಕಾಲದ ಇಟ್ಟಿಗೆಗಳ ಆಧಾರದಿಂದ ಆ ಬೌದ್ಧವಿಹಾರವು ಕ್ರಿ.ಶ. ಸುಮಾರು ಒಂದನೆಯ ಶತಮಾನದಲ್ಲಿ ನಿರ್ಮಿತವಾಗಿದ್ದಿರಬಹುದೆಂದು ಊಹಿಸಬಹುದು.

ಆ ಬೌದ್ಧವಿಹಾರದ ಪರಿಸರದಲ್ಲಿ ಬೇರೆ ಏನಾದರೂ ಬೌದ್ಧಾವಶೇಷಗಳು ದೊರೆಯಬಹುದೆಂದು ಸುತ್ತಮುತ್ತಲಿನ ಪ್ರದೇಶದಲ್ಲಿ ಕ್ಷೇತ್ರ ಪರಿವೀಕ್ಷಣೆ ಮಾಡಿದಾಗ ಅಲ್ಲಿಂದ ದಕ್ಷಿಣ ದಿಕ್ಕಿನಲ್ಲಿ ಸುಮಾರು ನೂರು ಮೀಟರ್‌ಗಳಷ್ಟು ದೂರದಲ್ಲಿ ಮತ್ತೊಂದು ಬೌದ್ಧ ದೇವಾಲಯದ ಅವಶೇಷ ಪತ್ತೆಯಾಯಿತು. ಆ ಕಟ್ಟಡದ ಅವಶೇಷವು ಸುಮಾರು ನಲವತ್ತು ಅಡಿಗಳಷ್ಟು ಉದ್ದವಾಗಿದ್ದು ಅದರ ಹಿಂಭಾಗವು ಗಜಪೃಷ್ಠಾಕಾರವಾಗಿದ್ದು ಸಂಪೂರ್ಣವಾಗಿ ಭೂಗತವಾಗಿದೆ. ಪ್ರಸ್ತುತ ಆ ಕಟ್ಟಡವು ಇದ್ದ ಸ್ಥಳದಲ್ಲಿ ಸಣ್ಣದಾದ ಒಂದು ದಿಬ್ಬ ಮಾತ್ರ ಕಂಡು ಬರುತ್ತದೆ. ಜನರ ಓಡಾಟದಿಂದ ತುಂಬಾ ಚೆದುರಿ ಹೋಗಿರುವ ಆ ಅವಶೇಷಗಳು ಸೂಕ್ಷ್ಮವಾದ ಪರಿಶೀಲನೆಯಿಂದ ಮಾತ್ರ ಗೋಚರವಾಗುವಂತಿದ್ದು ದೊಡ್ಡದಾದ ಬೌದ್ಧದೇವಾಲಯವೊಂದು ಭೂಗತವಾಗಿರುವುದು ತಿಳಿಯುತ್ತದೆ.


ಈ ಎರಡನೇ ಬೌದ್ಧದೇವಾಲಯದ ಅವಶೇಷಗಳ ಆಸು ಪಾಸಿನಲ್ಲಿಯೇ ಹಲವಾರು ಕೋಣೆಗಳುಳ್ಳ ದೊಡ್ಡ ಕಟ್ಟಡವೊಂದರ ತಳಪಾಯವು ಸಹ ಕಂಡುಬಂದಿದೆ. ಪ್ರಾಯಶಃ ಈ ಬೌದ್ಧ ದೇವಾಲಯದ ದರ್ಶನಕ್ಕೆ ಬರುತ್ತಿದ್ದ ಬೌದ್ಧ ಭಿಕ್ಷುಗಳು ಮತ್ತಿತರ ಭಕ್ತಾದಿಗಳು ತಂಗುವುದಕ್ಕೋಸ್ಕರ ಈ ಕಟ್ಟಡವನ್ನು ಬಳಸಿ ಕೊಳ್ಳುತ್ತಿದ್ದರೆಂದು ತೋರುತ್ತದೆ.

ಈ ಎರಡನೆಯ ಬೌದ್ಧ ದೇವಾಲಯದ ಸನಿಹದಲ್ಲಿಯೇ ಪುಟ್ಟಪುಟ್ಟದಾದ ಒಂದೆ ಒಂದು ಕೋಣೆಯುಳ್ಳ ಹಿಂಭಾಗದಲ್ಲಿ ಗಜಪೃಷ್ಠಾಕಾರದ ರಚನೆಯುಳ್ಳ ಪುಟ್ಟ ಕಟ್ಟಡಗಳ ಅವಶೇಷಗಳು ಸಹಾ ಇವೆ. ಬಹುಶಃ ಈ ಕಟ್ಟಡಗಳೂ ಸಹಾ ಪುಟ್ಟದಾದ ಬೌದ್ಧ ದೇವಾಲಯಗಳಾಗಿದ್ದಿರಬಹುದೆಂದು ತೋರುತ್ತದೆ. ಗುಲ್ಬರ್ಗಾ ಜಿಲ್ಲೆಯ ಸನ್ನತಿಯ ಸಮೀಪದಲ್ಲಿರುವ ಕಣಗನಹಳ್ಳಿಯ ಉತ್ಖನನದಲ್ಲಿ ಪತ್ತೆಯಾಗಿರುವ ಬೃಹದಾಕಾರದ ಬೌದ್ಧ ದೇವಾಲ ಯದ ಆವರಣದಲ್ಲಿರುವ ಪುಟ್ಟ ಬೌದ್ಧ ದೇವಾಲಯ ಗಳನ್ನು ಇವು ಹೋಲುತ್ತವೆಂದು ಹೇಳಬಹುದು. ಇದೂ ಸಹ ಕ್ರಿ.ಶ. ೧-೨ನೆಯ ಶತಮಾನದ್ದೆಂದು ಹೇಳಬಹುದು. ಈ ಕಟ್ಟಡದ ಸನಿಹದಲ್ಲಿಯೇ ಶಾತವಾಹನರ ಕಾಲಕ್ಕೆ ಸೇರಿದ ಕಬ್ಬಿಣದ ಕುಲುಮೆಯೊಂದರ

ಅವಶೇಷಗಳು ಸಹ ಪತ್ತೆಯಾಗಿವೆ. ಕಬ್ಬಿಣದ ಅದಿರನ್ನು ಕರಗಿಸಿ ಆಯುಧಗಳನ್ನು ತಯಾರಿಸಿ ಉಳಿದ ಕಬ್ಬಿಣದ ಕಿಟ್ಟವನ್ನು ಅಲ್ಲಿಯೇ ಪಕ್ಕದಲ್ಲಿ ಸುರಿದ ಪರಿಣಾಮವಾಗಿ ಆ ಕುಲುಮೆಯ ಪಕ್ಕದಲ್ಲಿಯೇ ಕಬ್ಬಿಣದ ಕಿಟ್ಟದ ಮುದ್ದೆಗಳು ಬಿದ್ದಿವೆ.

ಒಟ್ಟಿನಲ್ಲಿ ಹರಳುಕುಂಟೆಯಲ್ಲಿ ಪ್ರಸ್ತುತ ಪತ್ತೆ ಹಚ್ಚಲ್ಪಟ್ಟಿರುವ ಈ ಬೌದ್ಧವಿಹಾರಗಳ ಅವಶೇಷಗಳು ಕ್ರಿ.ಶ.ದ ಆರಂಭ ಕಾಲಘಟ್ಟಕ್ಕೆ ಸೇರಿದವುಗಳಾಗಿದ್ದು ಕ್ರಿ.ಶ. ೫ನೆಯ ಶತಮಾನದವರೆಗಾದರೂ ಸುರಕ್ಷಿತವಾಗಿದ್ದಿರಬಹುದೆಂದು ಹೇಳಬಹುದು. ಏಕೆಂದರೆ ಕ್ರಿ.ಶ ೪೦೦ರ ಕಾಲದಲ್ಲಿ ಗಂಗರ ಮಾಧವನು ಇಲ್ಲಿಯ ಬೌದ್ಧವಿಹಾರಕ್ಕೆ ದಾನಕೊಟ್ಟ ವಿವರಗಳು ಮೆಳೆಕೋಟೆ ಶಾಸನದಲ್ಲಿ ದೊರೆತಿರುವುದರಿಂದ ಆ ವೇಳೆಗೆ ಈ ಬೌದ್ಧ ವಿಹಾರವು ಉಚ್ಛ್ರಾಯಸ್ಥಿತಿಯಲ್ಲಿತ್ತೆಂದು ಹೇಳಬಹುದು. ಆ ನಂತರದ ಕಾಲದಲ್ಲಿ ಬೌದ್ಧ ಧರ್ಮೀಯರ ಸಂಖ್ಯೆ ಕ್ಷೀಣಿಸಿದಂತೆ ಈ ಬೌದ್ಧ ವಿಹಾರಗಳೂ ಸಹ ಕಾಲನ ದವಡೆಗೆ ಸಿಕ್ಕಿ ಭೂಗತವಾಗಿರ ಬಹುದೆಂದು ಹೇಳಬಹುದು.

ಮೆಳೆಕೋಟೆ ಶಾಸನದಲ್ಲಿ 'ಬುದ್ಧಸತ್ವ'ನಿಗೆ ದಾನ ಕೊಡಲಾಗಿದೆ ಎಂಬ ಉಲ್ಲೇಖವಿರುವುದರಿಂದ ಬುದ್ಧಸತ್ವ ಅಥವಾ ಬೋಧಿಸತ್ವನ ಕಲ್ಪನೆಯು ಮಹಾಯಾನ ಪಂಥದಲ್ಲಿ ರೂಢಿಗೆ ಬಂದಿರುವುದರಿಂದ ಹರಳುಕುಂಟೆಯ ಬೌದ್ಧವಿಹಾರಗಳು ಮಹಾಯಾನ ಪಂಥಕ್ಕೆ ಸೇರಿದ್ದುದೆಂದು ಹೇಳಬಹುದು. ಹರಳುಕುಂಟೆಯ ಬೌದ್ಧ ವಿಹಾರಗಳಿಂದ ನಾಲ್ಕೈದು ಕಿ.ಮೀ. ದೂರದಲ್ಲಿರುವ ಮುಡಿಯನೂರು



ಗ್ರಾಮದಲ್ಲಿ ದೊರೆತಿರುವ ತಾಮ್ರ ಶಾಸನ ವೊಂದರಲ್ಲಿ 'ನಂದಿ ವರ್ಮ ಎಂಬ ರಾಜನನ್ನು ಬುದ್ಧನಂತೆ ಕರುಣಾಮಯಿ' ಎಂದು ವರ್ಣಿಸಲಾಗಿದೆ. ಈ ಶಾಸನವು ಕ್ರಿ.ಶ. ೩೩೯ನೆಯ ಕಾಲದ್ದೆಂದು ಆ ಶಾಸನದಲ್ಲಿಯೇ ಉಲ್ಲೇಖಿಸಲಾಗಿದೆ. ಆದರೆ ಆ ಶಾಸನದ ಲಿಪಿ ಸ್ವರೂಪವನ್ನು ಗಮನಿಸಿದರೆ ಆದು ಕ್ರಿ.ಶ. ೮-೯ನೆಯ ಶತಮಾನದ್ದೆಂದು ಹೇಳಬಹುದು. ಪ್ರಾಯಶಃ ಮೂಲಶಾಸನವೊಂದನ್ನು ಕ್ರಿ.ಶ. ೮-೯ನೆಯ ಶತಮಾಲದ ಕಾಲದಲ್ಲಿ ಪ್ರತಿಮಾಡಿರಬಹುದೆಂದು ತೋರುತ್ತದೆ.

ಹರಳುಕುಂಟೆಯಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಕುರುಡುಮಲೆಯಲ್ಲಿ ಬುದ್ಧನ ವಿಗ್ರಹವೊಂದು ದೊರೆತಿತ್ತೆಂದು ಸಿ. ಹಯವದನರಾವ್ ಅವರು ಗ್ಯಾಸೆಟಿಯರ್‌ನಲ್ಲಿ ಹೇಳಿದ್ದಾರೆ. ಆದರೆ ಆ ವಿಗ್ರಹ ಹರಳುಕುಂಟೆಯ ಬಳಿ ದೊರೆತಿದ್ದೆಂಬುದಾಗಿಯೂ ಅದನ್ನು ಕುರುಡುಮಲೆಯ ದೇವಾಲಯಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟಿದ್ದುದಾಗಿಯೂ ಸ್ಥಳೀಯರಿಂದ ಮಾಹಿತಿ ದೊರೆಯಿತು. ಕುರುಡುಮಲೆಯ ಸೋಮೆಶ್ವರ ದೇವಾಲಯದಲ್ಲಿಟ್ಟಿದ್ದ ಈ ಬುದ್ಧನ ವಿಗ್ರಹವನ್ನು ಕೆ.ಜಿ.ಎಫ್.ನ ಮುಷ್ಕಂರಸ್ತೆಯ ಬೌದ್ಧ ದೇವಾಲಯಕ್ಕೆ ತೆಗೆದುಕೊಂಡು ಹೋಗಲಾಯಿತೆಂಬ ಮಾಹಿತಿಯನ್ನನುಸರಿಸ ಅಲ್ಲಿಗೆ ಹೋಗಿ ವಿಚಾರಿಸಿದಾಗ ಅಲ್ಲಿಯೂ ಆ ಬುದ್ಧನ ವಿಗ್ರಹ ದೊರೆಯಲಿಲ್ಲ. ಅದನ್ನು ಬೆಂಗಳೂರಿನ ಯಾರೋ ತೆಗೆದುಕೊಂಡು ಹೋದರು ಎಂಬ ವಿಷಯ ದೊರೆಯಿತು. ಕೆ.ಜಿ.ಎಫ್. ನಲ್ಲಿ ಸುಮಾರು ೧೫೦ವರ್ಷ ಹಿಂದಿನ ಬೌದ್ಧ ದೇವಾಲಯ ಈಗಲೂ ಇದೆ. ಒಬ್ಬರು ಬೌದ್ಧ ಭಿಕ್ಷು ಈಗಲೂ ಇದ್ದಾರೆ.

ಕೆಲವು ವರ್ಷಗಳ ಹಿಂದೆ ಪತ್ತೆಯಾದ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡ ಬಳ್ಳಾಪುರ ತಾಲ್ಲೂಕು ರಾಜಘಟ್ಟದ ಬೌದ್ಧ ದೇವಾಲಯದಿಂದ ನೇರವಾಗಿ ಪೂರ್ವದಿಕ್ಕಿಗೆ ಬಂದರೆ ಪ್ರಸ್ತುತಶೋಧಿತವಾಗಿರುವ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಹರಳುಕುಂಟೆಯ ಬೌದ್ಧವಿಹಾರದ ಅವಶೇಷಗಳಿರುವ ಸ್ಥಳ ದೊರೆಯುತ್ತದೆ. ಈ ನಿವೇಶನವನ್ನು ಉತ್ಖನನ ಮಾಡಿದರೆ ಹಲವಾರು ಅಮೂಲ್ಯ ವಿಷಯಗಳು ಬೆಳಕಿಗೆ ಬರುತ್ತವೆ. ಈ ನಿವೇಶನವನ್ನು ಉತ್ಖನನ ಮಾಡಿ ಸಂರಕ್ಷಿಸಬೇಕಾದದ್ದು ಅತ್ಯಂತ ತುರ್ತಾಗಿ ಆಗಬೇಕಾಗಿರುವ ಕಾರ್ಯ. ಈ ನಿಟ್ಟಿನಲ್ಲಿ ನಮ್ಮ ಪುರಾತತ್ವ ಇಲಾಖೆ ಗಮನಹರಿಸುತ್ತದೆ ಎಂದು ಆಶಿಸುತ್ತೇನೆ.*

* (ಕ್ಷೇತ್ರಕಾರ್ಯದ ವೇಳೆಯಲ್ಲಿ ನೆರವು ನೀಡಿದ ಡಾ. ಕೆ.ಜಿ. ಗೋಪಾಲಕೃಷ್ಣರಾವ್, ಕುಬೇರಗೌಡ, ಚೌಡೇಗೌಡ, ಆರ್.ವಿ. ರವೀಂದ್ರನಾಥ್, ಹರಳು ಕುಂಟೆಯ ನಾರಾಯಣಸ್ವಾಮಿ, ಶ್ರೀನಾಥ್, ಲಕ್ಷ್ಮೀನಾರಾಯಣ ಗೌಡ, ವೆಂಕಟರತ್ನಯ್ಯ ಮುಂತಾದವರಿಗೆ ವಂದನೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. (ಸಂ) ಆರ್. ನರಸಿಂಹಾಚಾರ್ : *M.A.R.1910* - ಪುಟ. 16 - 17

೨. (ಸಂ) ಡಾ .ಕೆ.ಎ. ನೀಲಕಂಠಶಾಸ್ತ್ರಿ : *E.C. Vol.* No. XVI. ಪುಟ.

೩. (ಸಂ) ಡಾ. ಕೆ. ವಿರಮೇಶ್ : **ಇನ್ಸ್‌ಕ್ರಿಪ್ಷನ್ಸ್ ಆಫ್ ವೆಸ್ಟರ್ನ್ ಗಂಗಾಸ್**. ಪುಟ.

೪. ಡಾ. ಎಂ. ಚಿದಾನಂದ ಮೂರ್ತಿ : **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**. ಪುಟ ೧೧೪

೫. (ಸಂ) ಡಾ.ಹಾ.ಮಾ.ನಾಯಕ : **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ**. ಪುಟ ೧೦೭೦.

೬. ಕೋ. ಅಭಿಶಂಕರ್ : **ತುಮಕೂರು ಜಿಲ್ಲಾ ಗ್ಯಾಸೆಟಿಯರ್**. ಪುಟ. ೨೭-೨೮.

೭. ಡಾ. ಬಿ. ಷೇಕ್‌ಅಲಿ : **ಹಿಸ್ಟರಿ ಆಫ್ ವೆಸ್ಟರ್ನ್ ಗಂಗಾಸ್**. ಪುಟ ೫೬.

೮. ಆ ಶಾಸನದ ಐತಿಹಾಸಿಕ ಸಾಂಸ್ಕೃತಿಕ ಮಹತ್ವ ಹಾಗೂ ಆ ಶಾಸನಪಾಠವನ್ನು ಬೇರೊಂದು ಲೇಖನದಲ್ಲಿ ಪ್ರಕಟಿಸಲಿದ್ದೇನೆ.

ಜಯಶ್ರೀ ಬಿ. ರಾಜಮಾನ್ಯೆ*

ಬೌದ್ಧ ಧರ್ಮ-ಸಂಸ್ಕೃತಿಗೆ ಗುಲ್ಬರ್ಗಾ ಜಿಲ್ಲೆಯ ಕೊಡುಗೆ

ಕರ್ನಾಟಕದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಬೌದ್ಧ ಧರ್ಮ ಒಂದು. ಬೌದ್ಧಧರ್ಮ ವಿಶ್ವದ ಇತಿಹಾಸದಲ್ಲಿ ಪ್ರಮುಖ ಧರ್ಮವಾಗಿ ಬೆಳೆಯಿತು.

ಹೈದರಾಬಾದ ಕರ್ನಾಟಕವು ಗುಲ್ಬರ್ಗಾ, ಬೀದರ, ರಾಯಚೂರು ಮತ್ತು ಬಳ್ಳಾರಿ ಎಂಬ ನಾಲ್ಕು ಜಿಲ್ಲೆಗಳನ್ನು ಒಳಗೊಂಡಿವೆ. ಈ ನಾಲ್ಕು ಜಿಲ್ಲೆಗಳು ಅನೇಕ ಧರ್ಮಗಳ ಆಚರಣೆಗಳಿಗೆ ನೆಲೆಯಾದುದು ನಮಗೆ ಕಂಡುಬರುತ್ತದೆ.

ಗುಲ್ಬರ್ಗಾ ಜಿಲ್ಲೆಯು ಪ್ರಾಗೈತಿಹಾಸಿಕ ಚರಿತ್ರೆಯಿಂದ ಸ್ವಾತಂತ್ರ್ಯದ ಚರಿತ್ರೆಯವರೆಗೆ ವೈದಿಕ, ಜೈನ, ಬೌದ್ಧ ಹಾಗೂ ಲೋಕಾಯತ ಧರ್ಮದವರೆಗೆ ಎಲ್ಲ ಧರ್ಮಗಳ ಬೆಳವಣಿಗೆಗೆ ತನ್ನದೆ ಆದ ಕೊಡುಗೆಯನ್ನು ನೀಡಿದೆ. ಅದೇ ರೀತಿಯಾಗಿ ಯಾವುದೇ ಧರ್ಮ ಇದ್ದಕ್ಕಿದ್ದಂತೆ ಪ್ರಭಾವಬೀರಲು ಸಾಧ್ಯವಾಗುವುದಿಲ್ಲವೆಂಬುದು ಗಮನಿಸಬೇಕಾದ ಸಂಗತಿಯಾಗುತ್ತದೆ. ಅದಕ್ಕೆ ರಾಜಕೀಯದ ಏಳು-ಬೀಳುಗಳು ಧರ್ಮದ ಏಳು-ಬೀಳುಗಳಿಗೂ ಕಾರಣಗಳಾಗುತ್ತವೆ. ಬೌದ್ಧ ಧರ್ಮವು ತನ್ನ ಸರಳವಾದ ತತ್ವಗಳಿಂದ ಮೇಲು, ಕೀಳು, ಉಚ್ಚ, ನೀಚ, ಬಡವ, ಶ್ರೀಮಂತ ಹಾಗೂ ಯಾವುದೂ ಲಿಂಗಬೇಧವಿಲ್ಲದೆ ಬೌದ್ಧ ಧರ್ಮವು ಎಲ್ಲರನ್ನು ತನ್ನವರನ್ನಾಗಿಸಿಕೊಂಡು ಪ್ರಚಾರಗೊಂಡಿತು.

ಕರ್ನಾಟಕದಲ್ಲಿ ಬೌದ್ಧ ಧರ್ಮದ ಪ್ರಸಾರ ಹಾಗೂ ಆಧಾರಗಳು

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ಬೌದ್ಧ ಧರ್ಮವು ಗಮನ ಸೆಳೆಯುವ ಒಂದು ಶಾಖೆಯಾಗಿದೆ. ಭಾರತದಲ್ಲಿ ಇದು ಹೆಚ್ಚಿನ ಪ್ರಸಾರ ಪ್ರಾರಂಭವಾದುದು ಅಶೋಕನ ಕಾಲದಲ್ಲಿ. ಕರ್ನಾಟಕದಲ್ಲಿ ಬೌದ್ಧ ಧರ್ಮ ಪ್ರಚಾರಕ್ಕೆ ಬಂದುದು ಕ್ರಿ.ಪೂ. ೩ನೇ ಶತಮಾನದಲ್ಲಿ, ಆದರೆ ಅಶೋಕ ಪೂರ್ವಯುಗದಲ್ಲಿ ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮ ಅಸ್ತಿತ್ವದಲ್ಲಿದ್ದಿರಬೇಕೆಂಬ ಹೇಳಿಕೆಯನ್ನು ಅಲ್ಲಗಳೆಯುವಂತಿಲ್ಲ.

ಸುತ್ತನಿಪಾತದಲ್ಲಿ ಬರುವ ಕೆಲವು ಉಲ್ಲೇಖಗಳು ಸಹ ಇದಕ್ಕೆ ಸಾಕ್ಷ್ಯಾಧಾರಗಳನ್ನು ನೀಡುತ್ತವೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ ಉಪಲಬ್ಧವಿರುವ ಮೊಟ್ಟ ಮೊದಲ ಲಿಖಿತ ದಾಖಲೆಗಳಾದ ಅಶೋಕನ ಶಿಲಾಶಾಸನಗಳು, ಬೌದ್ಧ ದಾಖಲೆಗಳು ಹೌದು. ಈ ಶಾಸನಗಳ ಮುಖ್ಯ ಉದ್ದೇಶ ಬೌದ್ಧ ಧರ್ಮ ಪ್ರಸಾರಪಡಿಸುವುದಾಗಿತ್ತು. ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಶಾಸನಗಳಲ್ಲಿ ಸನ್ನತಿಯ ನಾಲ್ಕು ಶಾಸನಗಳನ್ನು ಹೊರತುಪಡಿಸಿ ಇನ್ನುಳಿದವು ಲಘು ಶಿಲಾ ಲೇಖನಗಳೆ ಆಗಿವೆ.

ಕರ್ನಾಟಕದಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಬೌದ್ಧ ನೆಲೆಗಳೆಂದರೆ; ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಗುಲ್ಬರ್ಗಾ ಜಿಲ್ಲೆಯ ಸನ್ನತಿ, ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಮತ್ತು ಕೋಲಾರ ಜಿಲ್ಲೆಯ ಭಾಗಗಳಲ್ಲಿ ಮಾತ್ರ ಎಂಬುದನ್ನು ಗಮನಿಸಬಹುದು.

ಗುಲ್ಬರ್ಗಾ ಜಿಲ್ಲೆಯ ಸನ್ನತಿಯ ಮೂಲ

ಸನ್ನತಿ ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಒಂದು ಚಿಕ್ಕ ಗ್ರಾಮ. ಚಿತ್ತಾಪೂರ ತಾಲೂಕಾ ಕೇಂದ್ರದಿಂದ ನೈಋತ್ಯಕ್ಕೆ ೪೫ ಕಿ.ಮೀ. ಅಂತರದಲ್ಲಿದೆ. ಸನ್ನತಿ ಸಂಪೂರ್ಣವಾಗಿ ಭೀಮಾನದಿಯಿಂದ ಆವರಿಸಲ್ಪಟ್ಟಿದೆ.

ಕಲ್ಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತಿ ತನ್ನದೆ ಆದ ಪ್ರಾಚೀನ ಕಾಲದ ಇತಿಹಾಸವನ್ನು ಒಳಗೊಂಡಿದೆ. ಈ ತಾಲೂಕು ಪುರಾತತ್ವ ದೃಷ್ಟಿಯಿಂದಲೂ, ಸ್ತೂಪಗಳ, ಶಾಸನಗಳ ಶೋಧಿಸಿ ಮತ್ತು ಅಧ್ಯಯನಗಳ ದೃಷ್ಟಿಯಿಂದ ಹೆಚ್ಚು ಮಹತ್ವವಾದ ಪ್ರದೇಶವಾಗಿದೆ. ಸನ್ನತಿಯಲ್ಲಿ ಇರುವ ಸ್ತೂಪ ಮತ್ತು ಶಿಲಾಶಾಸನಗಳು ಆಗಲೇ ಬೆಳಕನ್ನು ಕಂಡಿವೆ.

ಅನೇಕ ವಿದ್ವಾಂಸರು, ಇತಿಹಾಸ ಆಸಕ್ತರು ಈ ಪ್ರದೇಶದ ಕುರಿತಾಗಿ ವಿಭಿನ್ನ ಲೇಖನಗಳನ್ನು ಬರೆದಿದ್ದಾರೆ. ಈ ಎಲ್ಲ ಪುರಾತತ್ವ ಆಧಾರಗಳಿಂದ ಸನ್ನತಿಯ ಪ್ರಾಚೀನ ಇತಿಹಾಸವನ್ನು ರಚಿಸಲು ಸಾಧ್ಯವಾಗಿದೆ.

ಸನ್ನತಿ ಕುರಿತು ಇತ್ತೀಚಿನ ಶೋಧಗಳು

ಸನ್ನತಿ ಪ್ರದೇಶವನ್ನು ಆಳ್ವಿಕೆ ಮಾಡಿದ ಮೌರ್ಯರ ಅಶೋಕ, ಬೌದ್ಧ ಧರ್ಮ ಪ್ರಚಾರಕ್ಕೆ ತಂದ. ಇದನ್ನು ಜಾಗ್ರತ ಧರ್ಮವಾಗಿ ಹಾಗೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಡಿಸಿದ.

ಕ್ರಿ.ಪೂ. ಆರಂಭದ ಶತಕಗಳಲ್ಲಿ ಉನ್ನತಿಯನ್ನು ಹೊಂದಿದ

* ಅತಿಥಿ ಉಪನ್ಯಾಸಕಿ, ಕಿಟಲ್ ಕಲಾ ಮಹಾವಿದ್ಯಾಲಯ

ಚಂದ್ರವಳ್ಳಿಯಲ್ಲಿ ಬುದ್ಧ ವಿಗ್ರಹಗಳು ಸಿಕ್ಕಿರುವುದಿಂದ ಅಲ್ಲಿ ಬೌದ್ಧ ಧರ್ಮದ ಅನುಯಾಯಿಗಳಿದ್ದರು ಎಂದು ಎಂ.ಎಚ್. ಕೃಷ್ಣ ಅವರು **ಕರ್ನಾಟಕ ಪೂರ್ವ ಚರಿತ್ರೆ**ಯಲ್ಲಿ ಉಲ್ಲೇಖಿಸಿದ್ದನ್ನು ಡಾ. ಎಂ. ಚಿದಾನಂದಮೂರ್ತಿಯವರು ಸ್ಪಷ್ಟಪಡಿಸಿದ್ದಾರೆ.

ಗುಲ್ಬರ್ಗಾ ಜಿಲ್ಲೆಯ ಸನ್ನತಿ ಗ್ರಾಮದಲ್ಲಿ ಮೂವತ್ತಕ್ಕೂ ಹೆಚ್ಚು ಸಣ್ಣಸಣ್ಣ ಪ್ರಾಕೃತ ಶಾಸನಗಳು ಬೌದ್ಧ ಧರ್ಮಕ್ಕೆ ಮೀಸಲಾಗಿರುತ್ತವೆ. ಅಲ್ಲದೇ ಅಲ್ಲಿ ಸ್ತೂಪಗಳಿವೆ ಎಂಬುದಕ್ಕೆ ಅನೇಕ ಆಧಾರಗಳು ಲಭಿಸುತ್ತವೆ.

ಸನ್ನತಿ ಒಂದು ಬೌದ್ಧರ ವಿದ್ಯಾಕೇಂದ್ರವೆಂದು ಮೊಟ್ಟ ಮೊದಲ ಬಾರಿಗೆ ಬೆಳಕಿಗೆ ತಂದವರು ಗುಲ್ಬರ್ಗಾದ ಕಪಟರಾಳ ಕೃಷ್ಣರಾಯರು. ಅವರು ತಮ್ಮ **ಕರ್ನಾಟಕ ಸಂಸ್ಕೃತಿ ಸಂಶೋಧನೆ** ಎಂಬ ಸಂಶೋಧನಾ ಕೃತಿಯಲ್ಲಿ ಅದನ್ನೆಲ್ಲ ವಿವರಿಸಿದ್ದಾರೆ. ೧೯೬೦ರಲ್ಲಿ ಅವರು ನಿರ್ಭಯವಾಗಿ ಚಂದ್ರಲಾಪರಮೇಶ್ವರಿ ಸ್ಥಾನವು ಬೌದ್ಧರ ಕೇಂದ್ರವಾಗಿತ್ತು, ಅದು ಬೌದ್ಧರ ದೇವತೆ ಹೌದು ಎಂದು ಸ್ಪಷ್ಟಪಡಿಸಿದ್ದಾರೆ.

ಕಪಟರಾಳರ ತರುವಾಯ ಹತ್ತು ವರ್ಷಗಳ ನಂತರ ಈ ಸ್ಥಳದ ಸುತ್ತೆಲ್ಲ ಅಧ್ಯಯನ ಹಾಗೂ ಶೋಧನೆ ಮಾಡಿದವರು ಡಾ. ಎಸ್. ನಾಗರಾಜು ಅವರು. ಶೋಧನೆ ಮಾಡುತ್ತಾ ಸನ್ನತಿ ಬೌದ್ಧ ಕೇಂದ್ರವೆಂದು ಅವರು ಗುರುತಿಸುವ ಕೆಲಸ ಮಾಡಿದರು.

ಇವರ ನಂತರದಲ್ಲಿ ಡಾ. ಎಂ.ಎಸ್. ನಾಗರಾಜರಾವ್ ಎಂಬುವರು ಸಹ ಅಶೋಕನ ಕಾಲದ ಬ್ರಾಹ್ಮಿಲಿಪಿಯ ಶಾಸನಗಳ ಮಹತ್ವ ಎತ್ತಿ ಹೇಳುತ್ತಾ ಅಲ್ಲಿ ಕಂಡುಬರುವ ಸ್ತೂಪ ಬೌದ್ಧರ ಪ್ರಮುಖ ಕೇಂದ್ರವಾಗಿತ್ತೆಂಬುದನ್ನೂ ಕೂಲಂಕಷ ಅಧ್ಯಯನದಿಂದ ತಿಳಿಸಿಕೊಟ್ಟರು.

ಡಾ. ಡಿ.ಇ. ದೇಸಾಯಿ ಶಾಸನಗಳ ಕುರಿತು ಸನ್ನತಿಯ ಮೇಲೆ ಹೊಸ ಬೆಳಕು ಚೆಲ್ಲಿದರು. ಇವರು ಬೌದ್ಧರ ಪ್ರಾಚೀನ ಕೇಂದ್ರ ಸನ್ನತಿ ಎಂದು ಹೇಳುತ್ತಾ ಶಾತವಾಹನರ ಕಾಲದ ದೀಪಕ ಕುರಿತು ಅವರು ಹೇಳಿದ್ದಾರೆ. ಅದರೊಂದಿಗೆ ಬೌದ್ಧರ ಕಾಲದಲ್ಲಿ ಇದ್ದ ಹತ್ತು ಹಲವು ಸ್ತೂಪ ವಿಗ್ರಹಗಳೂ ಶಿಲ್ಪ ಇತಿಹಾಸಗಳನ್ನು ಕುರಿತು ಅವರು ಶೋಧಿಸಿದುದು ಕರ್ನಾಟಕದ ಚರಿತ್ರೆಗೆ ಅವರು ನೀಡಿದ ಕೊಡುಗೆಯನ್ನು ಮರೆಯುವಂತಿಲ್ಲ.

ಮಣ್ಣಿನ ಗೊಂಬೆಗಳು, ಶಾಸನಗಳ ಕುರಿತು ಹೊಸ ಅಂಶಗಳನ್ನು ಹೊಂಬೆಳಕಿಗೆ ತಂದಿರುವವರಲ್ಲಿ ದೇಸಾಯಿ ಪ್ರಮುಖರು ಎಂದು ಡಾ. ರು.ಮ ಷಡಕ್ಷರಯ್ಯನವರು ಅಭಿಪ್ರಾಯ ಪಡುತ್ತಾರೆ. ಇವರೆಲ್ಲರಿಗಿಂತ ಭಿನ್ನವಾಗಿ ಕೋಟೆಯ ರಚನೆ, ಅದರ ಗೋಡೆಯ ರಚನಾ ವಿನ್ಯಾಸ, ಇಟ್ಟಿಗೆ ಹೇಗೆ ಬಳಸಿದ್ದಾರೆ ಎಂಬುದನ್ನು ಕುರಿತು ಗಂಭೀರ ಅಧ್ಯಯನ ಮಾಡಿದವರು ಡಾ. ಎಸ್. ಜೋಗಿಯವರು.

ಇತ್ತೀಚಿನ ಶೋಧಕರಾದ ಡಾ. ತಾಳ್ತಜೆ ವಸಂತಕುಮಾರ ಅವರ ಅಭಿಪ್ರಾಯದಂತೆ ಸನ್ನತಿ ಬೌದ್ಧರ ಕೇಂದ್ರವಾಗಿತ್ತು ಎನ್ನುವ ಹಿನ್ನೆಲೆಯಲ್ಲಿ ಸನ್ನತಿ ಹೆಚ್ಚು ಅಪೂರ್ವ ಹಾಗೂ ಮೌಲಿಕವಾದ ಧಾರ್ಮಿಕ ಕೇಂದ್ರವೆಂದು ಸಾಬೀತು ಪಡುತ್ತದೆ.

ಸ್ತೂಪದ ವಿಶಿಷ್ಟತೆ

ಸ್ತೂಪಗಳೆಂದರೆ ಬುದ್ಧನ ಅಥವಾ ಇನ್ನಾರಾದರೂ ಒಬ್ಬ ಬೌದ್ಧ ಸನ್ಯಾಸಿಯ ಭಗ್ನಾವಶೇಷಗಳನ್ನು ತುಂಬಿಡಲು ಇಟ್ಟಿಗೆ ಅಥವಾ ಕಲ್ಲಿನಿಂದ ನಿರ್ಮಿಸಿದ ಗುಮ್ಮಟಾಕಾರದ ಕಟ್ಟಡಗಳಾಗಿವೆ. ಈ ಸ್ತೂಪಗಳು ಒಂದಕ್ಕಿಂತ ಹೆಚ್ಚು ಬಾಗಿಲುಗಳನ್ನು ಹೊಂದಿವೆ. ಸ್ತೂಪದ ಗುಮ್ಮಟಾಕಾರದ ಹೊರಮೈಮೇಲೆ ಬಳ್ಳಿಯಾಕಾರದ ಅಲಂಕಾರಿಕ ಚಿತ್ರಗಳಿವೆ. ಪ್ರತಿಯೊಂದು ಸ್ತೂಪವು ಅತ್ಯುತ್ತಮವಾದ ಪರಿಷ್ಕರಿಸಿದ ವಿಧಾನದಿಂದ ಕೂಡಿದ್ದು, ವಿಶಿಷ್ಟ ಶಿಲ್ಪಕಲೆಯಿಂದ ಅಲಂಕರಿಸಲ್ಪಟ್ಟಿದೆ. ಸ್ತೂಪವು ಹಲವಾರು ಚೈತ್ಯಾಲಯಗಳಿಂದ ಕೂಡಿದೆ. ಸ್ತೂಪವನ್ನು ಧಾರ್ಮಿಕ ಚರ್ಚುಗಳಿಗೆ ಉಪಯೋಗಿಸ ಲಾಗುತ್ತಿತ್ತು.

ಈ ಸ್ತೂಪದ ನಿರ್ಮಾಣದ ಮುಖ್ಯ ಉದ್ದೇಶವೆಂದರೆ ಬೌದ್ಧ ಧರ್ಮೀಯರ ಭಗ್ನಾವಶೇಷಗಳನ್ನು ಕಾಪಾಡಿಕೊಂಡು ಬರುವುದೇ ಆಗಿದೆ.

ಕೆಲವೊಂದು ಸ್ತೂಪಗಳಲ್ಲಿ ಯಾವುದೇ ಅವಶೇಷಗಳು ದೊರೆತಿಲ್ಲ. ಇಂಥ ಸ್ತೂಪಗಳಲ್ಲಿ ಬುದ್ಧನ ಜೀವನದ ಘಟನೆಗಳನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಇಂಥ ಸ್ತೂಪಗಳು ನಾಗಾರ್ಜುನ ಕೊಂಡದಲ್ಲಿ ಹೆಚ್ಚಾಗಿವೆ.

ಕರ್ನಾಟಕದಲ್ಲಿ ಶಾತವಾಹನರ ವಾಸ್ತು ಶಿಲ್ಪದ ಬಗ್ಗೆ ಈಗ ನಮಗೆ ತಿಳಿದು ಬಂದಿರುವುದು ಅತ್ಯಲ್ಪ. ಅದು ಕೂಡ ಉತ್ಖನನಗಳ ಅವಶೇಷಗಳನ್ನು ಆಧರಿಸಿದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ವಡಗಾಂವ ಮಾಧವಪುರ, ಬ್ರಹ್ಮಗಿರಿ, ಚಂದ್ರವಳ್ಳಿ, ಬಳ್ಳಿಗಾವಿ, ಬನವಾಸಿ, ಕುರುಗೋಡು ಇತ್ಯಾದಿ ಸ್ಥಳಗಳಲ್ಲಿ ನಡೆದ ಉತ್ಖನನ ಹಾಗೂ ಮೇಲ್ಶೋಧಗಳಿಂದ ಅವರ ಕಾಲದ ಕಟ್ಟಡಗಳ ಅವಶೇಷ ಗಳು, ಮಡಿಕೆ ಪಾತ್ರೆಗಳು ಜೇಡಿಮಣ್ಣಿನಿಂದ ನಿರ್ಮಿಸಿದ ಶಿಲ್ಪಗಳು ಮತ್ತು ನಾಣ್ಯಗಳು ಸಿಕ್ಕಿವೆ.

ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತಿಯಲ್ಲಿ ಶಾತವಾಹನರ ಕಾಲದ ಒಂದು ಸ್ತೂಪದ ಅವಶೇಷಗಳು ದೊರೆತಿದ್ದು ಅವುಗಳ ಅಧ್ಯಯನದಿಂದ ಆ ಸ್ತೂಪ ನಿಜವಾಗಿಯೂ ಭವ್ಯವಾಗಿತ್ತೆಂದು ಊಹಿಸಬಹುದಾಗಿದೆ. ಭೀಮಾನದಿಯ ದಂಡೆಯ ಮೇಲಿರುವ ಈ ಸ್ತೂಪ ಪ್ರದೇಶ ಕ್ರಿ.ಶ. ಒಂದು-ಎರಡನೆಯ ಶತಮಾನದಲ್ಲಿ ಬೌದ್ಧ ನೆಲವೀಡಾಗಿತ್ತು.

ಈ ಸ್ತೂಪದ್ದೆನ್ನಬಹುದಾದ ಆಯಕ ಸ್ತಂಭಗಳು, ಬ್ರಾಹ್ಮೀ ಲಿಪಿಯಲ್ಲಿರುವ ಚಿಕ್ಕ ಶಾಸನಗಳು ಹಾಗೂ ಅನೇಕ ಉಬ್ಬು ಶಿಲ್ಪಗಳು ಶೋಧನೆಯಲ್ಲಿ ಸಿಕ್ಕಿವೆ. ಸನ್ನತಿಯ ಸ್ತೂಪ ಗಾತ್ರದಲ್ಲಿ ಚಿಕ್ಕದು.

ಆದರೆ ಹೊರಮೈ ಉಬ್ಬು ಶಿಲ್ಪದ ಶಿಲೆಗಳಿಂದ ಕೂಡಿತ್ತು. ಅದನ್ನು ಬಳಪದ ಕಲ್ಲಿನಲ್ಲಿ ಕೆತ್ತಿದ್ದಾರೆ. ಅಮರಾವತಿಯ ಸ್ತೂಪದಲ್ಲಿಯಂತೆ ಇಲ್ಲಿ ಕೂಡ ಪ್ರದಕ್ಷಣಾಪಥವಿತ್ತು. ಆಯಕ ಸ್ತಂಭಗಳನ್ನು ಪ್ರಮುಖ ದಿಕ್ಕುಗಳಲ್ಲಿ ನಿಲ್ಲಿಸಲಾಗಿತ್ತು.

ಶೈಲಿಯಲ್ಲಿ ಈ ಆಯಕ ಸ್ತಂಭಗಳು ನಾಗಾರ್ಜುನಕೊಂಡದ ಆಯಕ ಸ್ತಂಭಗಳನ್ನು ಹೋಲುತ್ತವೆ. ಸನ್ನತಿಯ ಸ್ತೂಪದ ಉಬ್ಬು ಶಿಲ್ಪವೊಂದರಲ್ಲಿ ಬೋದಿವೃಕ್ಷ, ವಜ್ರಾಸನ ಮತ್ತು ಪಾದಗಳನ್ನು ಕೆತ್ತಲಾಗಿದ್ದು, ಅವು ಬುದ್ಧನನ್ನು ಸಂಕೇತಿಸುತ್ತವೆ. ಈ ಸನ್ನಿವೇಶ ಸಿದ್ಧಾರ್ಥನಿಗೆ ಜ್ಞಾನೋದಯವಾದುದರ ಸೃಷ್ಟಿ ಸೂಚನೆಯಾಗಿದೆ. ಇಲ್ಲಿ ದೊರೆತಿರುವ ಕೆಲವು ಉಬ್ಬು ಶಿಲ್ಪಗಳು ಜಾತಕ ಕಥೆಗಳಲ್ಲಿ ಬರುವ ಸನ್ನಿವೇಶಗಳನ್ನು ಒಳಗೊಂಡಿದೆ. ನಂದಿ ವಿಶಾಲ ಜಾತಕದ ದೃಶ್ಯ ಒಂದು ಶಿಲ್ಪದಲ್ಲಿರುವುದು ಇದಕ್ಕೆ ಉದಾಹರಣೆಯಾಗಿದೆ.

ಸನ್ನತಿಯಿಂದ ಕನಗನಹಳ್ಳಿಯವರೆಗೆ ಭೀಮಾನದಿಯ ದಂಡೆಯ ಗುಂಟ ಸುಮಾರು ಮೂರು ಚದರ ಮೈಲು ಪ್ರದೇಶದಲ್ಲಿ ಸುಟ್ಟ ಮಣ್ಣಿನ ಗೊಂಬೆಗಳು, ಶಿಲಾ ನಿರ್ಮಿತ ಯಕ್ಷವಿಗ್ರಹಗಳು, ಶಿಲಾಫಲಕಗಳು ಹಾಗೂ ಮಣ್ಣಿನ ಪಾತ್ರೆಗಳು ಸಿಕ್ಕಿವೆ. ಇವೆಲ್ಲ ಈ ಕಾಲದ ಕಲಾನೈಪುಣ್ಯಕ್ಕೆ ಉತ್ತಮ ಉದಾಹರಣೆಗಳಾಗಿವೆ. ಇಲ್ಲಿ ದೊರೆತ ಆಯಕ ಸ್ತಂಭವೊಂದರಲ್ಲಿ ದಂಪತಿಗಳ ಚಿತ್ರವೊಂದನ್ನು ಕೆತ್ತಲಾಗಿದ್ದು, ಅವರ ಸೇವೆಗಾಗಿ ಒಬ್ಬ ಸೇವಕ ಮತ್ತು ಸೇವಕಿ ಇದ್ದಾರೆ. ಅವರಿಬ್ಬರೂ ತಮ್ಮ ಕೈಯಲ್ಲಿ ಪಾತ್ರೆ ಹಿಡಿದಿದ್ದಾರೆ. ಅವು ಮಧು ತುಂಬಿದ ಪಾತ್ರೆಗಳಾಗಿರಬೇಕೆಂದು ಊಹೆ ಮೂಡುತ್ತದೆ.

ದಂಪತಿಗಳು ಸುಖಾಸೀನದಲ್ಲಿ ಕುಳಿತಿರುವ ಭಂಗಿ ಹಾಗೂ ಮಧುವನ್ನೀಯುತ್ತಿರುವ ಸೇವಕ-ಸೇವಕಿಯರನ್ನು ನೋಡಿದಾಗ ಆ ದಂಪತಿಗಳು ಶ್ರೀಮಂತರಿರಬಹುದೆಂದು ಊಹಿಸಬಹುದಾಗಿದೆ. ಮತ್ತೊಂದು ಶಿಲಾಫಲಕ ರೆಕ್ಕೆಗಳುಳ್ಳ ಕುದುರೆ ಹಾಗೂ ಓಡಾಡುತ್ತಿರುವ ಕೋಣನ ಚಿತ್ರವನ್ನು ಒಳಗೊಂಡಿದೆ.

ಇಂತಹ ರೆಕ್ಕೆಯುಳ್ಳ ಕುದುರೆಗಳನ್ನು ಬೆಡ್ಸಾದ ಗುಹೆಗಳಲ್ಲಿ ಕಾಣಬಹುದಾಗಿದೆ. ಸನ್ನತಿಯಲ್ಲಿ ದೊರೆತ ಮತ್ತೊಂದು ಮಹತ್ವದ ಶಿಲ್ಪ, ಯಕ್ಷನ ವಿಗ್ರಹ. ನಿಂತ ಭಂಗಿಯಲ್ಲಿರುವ ಇಂತಹ ಯಕ್ಷ ವಿಗ್ರಹಗಳು ಬಹಳ ವಿರಳ. ಈ ವಿಗ್ರಹದ ರುಂಡ ಇಲ್ಲದಿರುವುದು ವಿಷಾದ ಸಂಗತಿ. ಸದ್ಯಕ್ಕೆ ಈ ವಿಗ್ರಹ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತು ಸಂಗ್ರಹಾಲ ಯದಲ್ಲಿದೆ.

ಬುದ್ಧನ ಜೀವನಕ್ಕೆ ಸಂಬಂಧಿಸಿದ ಕೆಲವು ಶಿಲಾಫಲಕಗಳು ದೊರೆತಿವೆ. ಒಂದರಲ್ಲಿ ಬುದ್ಧನ ಜನ್ಮ ದೃಶ್ಯವಿದೆ. ಇಲ್ಲಿ ಅದೇ ತಾನೇ ಜನಿಸಿದ ಶಿಶುವನ್ನು ಸೇವಕಿಯೊಬ್ಬಳು ಎತ್ತಿಕೊಂಡಿ ದ್ದಾಳೆ. ಪಕ್ಕದಲ್ಲಿ ಮಾಯಾದೇವಿಯೂ ಇದ್ದಾಳೆ. ಇನ್ನೊಂದು ಶಿಲಾಫಲಕ ಸಿದ್ಧಾರ್ಥನ ಮಹಾಪರಿತ್ಯಾಗಕ್ಕೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಸಿದ್ಧಾರ್ಥನು ತನ್ನ ಪ್ರಿಯ ಕುದುರೆ ಕಂಠಕವನ್ನು ತೊರೆಯುತ್ತಿರುವ ದೃಶ್ಯವಿದೆ.

ಮಗದೊಂದು ಶಿಲಾಫಲಕ ಸ್ತೂಪದ ಶಿಲ್ಪವನ್ನೊಳ ಗೊಂಡಿದ್ದು, ಆ ಸ್ತೂಪವನ್ನು ಐದು ಹೆಡೆಯ ಮುಚಲಿಂದ ನಾಗನು ಸಂರಕ್ಷಿಸುವಂತೆ ತೋರಿಸಲಾಗಿದೆ. ತ್ರುಟಿತವಾದ ಒಂದು ಆಮಲಕ ಮತ್ತು ಅಮರಾವತಿಯ ಅಮರೇಶ್ವರ ಲಿಂಗವನ್ನು ಹೋಲುವ ಒಂದು ಸ್ತಂಭದ ತುಂಡು ಕೂಡ ಇಲ್ಲಿ ಸಿಕ್ಕಿದೆ. ಸನ್ನತಿಯಲ್ಲಿ ದೊರೆತಿರುವ ಈ ಶಿಲ್ಪಗಳ ಮೇಲೆ ನಾಗಾರ್ಜುನಕೊಂಡ ಮತ್ತು ಅಮರಾವತಿಯ ಶಿಲ್ಪಗಳ ಪ್ರಭಾವವಾಗಿರುವುದು ಕಂಡುಬರುತ್ತದೆ.

ಸನ್ನತಿಯಲ್ಲಿ ಅನೇಕ ಶಾಸನಗಳು ದೊರೆತಿವೆ. ಇವೆಲ್ಲ ಬ್ರಾಹ್ಮೀ ಲಿಪಿಯಲಿದ್ದು ಪ್ರಾಕೃತ ಭಾಷೆಯಲ್ಲಿವೆ. ಈ ಶಾಸನಗಳು ದಾನ ಕೊಟ್ಟವರ ಹೆಸರುಗಳನ್ನು ಉಲ್ಲೇಖಿಸುತ್ತವೆ. ಈ ಶಾಸನಗಳ ಅಧ್ಯಯನದಿಂದ ನಮಗೆ ತಿಳಿದು ಬರುವ ಅಂಶವೆಂದರೆ ಸನ್ನತಿಯ ಸ್ತೂಪ, ವಿಹಾರ, ಸಂರಕ್ಷಣೆಗೆ ಅಧಿಕಾರಗಳು, ಉಪಾಸಕ, ಉಪಾಸಕಿಯರ ಮತ್ತು ಭಕ್ತರು ದತ್ತಿಗಳನ್ನು ಬಿಟ್ಟಿರುವುದು.

ಈ ರೀತಿ ದತ್ತಿಗಳನ್ನು ಬಿಟ್ಟವರಲ್ಲಿ ಸೂಲಸ, ಅಮಾತ್ಯ, ಯಕ್ಷಣಿಕಾ, ರಾಜಮಾತ್ಯೆ, ರಾಮಾಸಾರಿ, ಬಿಕ್ಷಣಿ, ಅಹಿಯರಿಕಾ, ನಾಗನಿಕಾ ಮುಂತಾದವರನ್ನು ಹೆಸರಿಸಬಹುದು.

ಸಮಾರೋಪ

ಒಟ್ಟಿನಲ್ಲಿ ಬೌದ್ಧ ಧರ್ಮದ ಸ್ತೂಪಗಳಿಗೆ ಪೂಜ್ಯ ಸ್ಥಾನವಿದೆ. ಸ್ತೂಪಗಳು ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ತಮ್ಮದೆ ಆದ ಮಹತ್ವವನ್ನು ಹೊಂದಿದೆ. ಇವುಗಳನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲೆ ಇದೆ. ಇಲ್ಲದಿದ್ದರೆ ಮುಂದೆ ಕೇವಲ ಭಾವಚಿತ್ರಗಳಲ್ಲಿ ನೋಡ ಬೇಕಾದ ಪರಿಸ್ಥಿತಿ ಬಂದರೂ ಅಚ್ಚರಿಯೇನಲ್ಲ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ., ಡಾ. ಸಿಂದಗಿ ರಾಜಶೇಖರ, ಸುಜಾತಾ ಪಬ್ಲಿಕೇಷನ್ಸ್, ಧಾರವಾಡ.

೨. ತುಂಬಿದ ಕೊಡ., ೧೯೯೨, ಡಾ. ಎಂ. ಪಿ. ಮಂಜಪ್ಪ ಶೆಟ್ಟಿ ಮಸಗಲಿ, ಕಾಶಿ ವಿಶ್ವನಾಥ ಶೆಟ್ಟಿ, ಸಂಸ್ಮರಣ ಗ್ರಂಥ ಸಮಿತಿ, ಚಿಕ್ಕಮಗಳೂರು.

೩. ಪ್ರಾಚೀನ ಬೌದ್ಧ ವಿದ್ಯಾಕೇಂದ್ರ; ಸನ್ನತಿ., ೨೦೦೨, ಜಯದೇವಿ ಎಂ. ಗಾಯಕವಾಡ, ಅಮರ ಬೌದ್ಧ ಪ್ರಕಾಶನ, ಗುಲಬರ್ಗಾ.

4. Sharma I.K. And J. Varaprasada Rao, (1990) *Early Brahmi Inscriptions from Sannati*, Delhi.

ಡಾ: ಎಸ್.ಜಿ. ಸಾಮಕ್* / ಡಾ. ಜಗದೀಶ / ಎಂ.ವಿ. ರಮೇಶ್ ಜೋಯಿಸ್

ಕದಂಬ ದೊರೆ ಒಂದನೇ ಕೃಷ್ಣವರ್ಮನ ಅರತೆಲಗದ್ದೆ ತಾಮ್ರ ಶಾಸನ

ಅರತೆಲಗದ್ದೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಜಡೆ ಹೋಬಳಿಯ, ಜಡೆಪಟ್ಟಣದಿಂದ ಹೊಸೂರಿಗೆ ಹೋಗುವ ದಾರಿಯಲ್ಲಿ ೭ಕಿ.ಮೀ ದೂರದಲ್ಲಿ ರಸ್ತೆಯ ಎಡಭಾಗದಲ್ಲಿರುವ ಅರೆಮಲೆನಾಡಿನ ಒಂದು ಪುಟ್ಟ ಗ್ರಾಮ. ಇಲ್ಲಿ ಸುಮಾರು ೪೦ ವರ್ಷಗಳ ಹಿಂದೆ ವೀರಣ್ಣಗೌಡ ಎಂಬುವವರ ಹೊಲದಲ್ಲಿ ವ್ಯವಸಾಯಕ್ಕೆ ಜಮೀನನ್ನು ಸಮತಟ್ಟಾಗಿಸುತ್ತಿದ್ದಾಗ ಏಳು ತಾಮ್ರ ಶಾಸನಗಳೂ ಹಾಗೂ ಇನ್ನಿತರೆ ಪ್ರಾಚ್ಯಾವಶೇಷಗಳು ದೊರೆತ್ತಿದ್ದವು. ಈಗ ಕೆಲವು ತಿಂಗಳ ಹಿಂದೆ ಶಿವಮೊಗ್ಗೆಯಲ್ಲಿ ವಕೀಲಿ ವೃತ್ತಿ ನಡೆಸುತ್ತಿರುವ ವೀರಣ್ಣಗೌಡರ ಪುತ್ರರಾದ, ವಿ. ಎನ್. ಚನ್ನಬಸವನ ಗೌಡರು ನಮಗೆ ಅಧ್ಯಯನಕ್ಕಾಗಿ ನೀಡಿದ್ದರು. ಈ ತಾಮ್ರಶಾಸನ ನಿಕ್ಷೇಪದಲ್ಲಿರುವ ಶಾಸನಗಳು ಅನುಕ್ರಮವಾಗಿ ಪ್ರಿಯವ್ರತವರ್ಮ[೧], ಕೃಷ್ಣವರ್ಮ, ಶಾಂತಿವರ್ಮ[೨], ರವಿವರ್ಮ[೩], ಹರಿವರ್ಮ[೪], ಪುಳಿಂದವರ್ಮ[೫] ಮುಂತಾದ ಕದಂಬ ದೊರೆಗಳ ಕಾಲದಾಗಿದ್ದು ಎಲ್ಲವೂ ಅಪ್ರಕಟಿತ ಶಾಸನಗಳೇ. ಈ ಶಾಸನಗಳು ಬನವಾಸಿ ಕದಂಬರ ಪೇಟಿಕಾ ಶಿರೋಲಿಪಿಯಲ್ಲಿ ಬರೆಯಲ್ಪಟ್ಟಿದ್ದು ಸಂಸ್ಕೃತ ಭಾಷೆಯಲ್ಲಿವೆ. ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ, ಒಂದೇಸ್ಥಳದಲ್ಲಿ, ಒಟ್ಟಿಗೆ ದೊರೆತಿರುವ ಅತಿ ದೊಡ್ಡ ಶಾಸನ ನಿಕ್ಷೇಪ ಇದಾಗಿದೆ. ಇದರೊಟ್ಟಿಗೆ ೧೪ ಸೆಂ. ಮೀ ಎತ್ತರ ಹಾಗೂ



೧೦ ಸೆಂ.ಮೀ. ಉದ್ದದ (೫ ಸೆಂ.ಮೀ. ದಪ್ಪ) ಕಂಚಿನ ಬನವಾಸಿ ಕದಂಬ ರಾಜ ಲಾಂಛನ ಸಿಂಹದ ವಿಗ್ರಹವೊಂದು ದೊರೆತಿದ್ದು ಅದುಕೂಡ ಕರ್ನಾಟಕದಲ್ಲಿ ದೊರೆತಿರುವ ಅತೀ ಪ್ರಾಚೀನ ಕಂಚಿನ ವಿಗ್ರಹವಾಗಿರುವುದು ವಿಶೇಷ.

೭ ತಾಮ್ರ ಹಲಗೆಗಳಲ್ಲಿ ಬರೆಯಲಾಗಿರುವ ಕೃಷ್ಣವರ್ಮನ ಶಾಸನ ೭೬ ಸಾಲುಗಳನ್ನು ಹೊಂದ್ದಿದ್ದು ಇಲ್ಲಿಯವರೆಗಿನ ಕದಂಬರ ತಾಮ್ರ ಶಾಸನಗಳಲ್ಲಿ ಅತ್ಯಂತ ದೊಡ್ಡ ಶಾಸನವಾಗಿದೆ. ಅವುಗಳನ್ನು ಬಂಧಿಸಿರುವ ಬಳೆಯಲ್ಲಿ ಸಿಂಹಲಾಂಛನವಿದ್ದು, ಅದು ಬಹುತೇಕ ಸವೆದಿದೆ. ಪ್ರಸ್ತುತ ಪ್ರಬಂಧದಲ್ಲಿ ಈ ಶಾಸನವನ್ನು ವಿವರವಾಗಿ ಚರ್ಚಿಸಲಾಗಿದೆ. ಒಟ್ಟು ತಾಮ್ರ ಹಲಗೆಗಳು = ೭, ಸಾಲುಗಳು = ೭೬

ಮೊದಲನೇ	**ಹಲಗೆ** ಮುಂಭಾಗ - ಖಾಲಿ	
	ಹಲಗೆ ಹಿಂಭಾಗ - ೫ ಸಾಲುಗಳು	
ಎರಡನೇ	**ಹಲಗೆ** ಮುಂಭಾಗ - ೫ ಸಾಲುಗಳು	
	ಹಲಗೆ ಹಿಂಭಾಗ - ೬ ಸಾಲುಗಳು	
ಮೂರನೇ	**ಹಲಗೆ** ಮುಂಭಾಗ - ೬ ಸಾಲುಗಳು	
	ಹಲಗೆ ಹಿಂಭಾಗ - ೬ಪಕ್ಕದಲ್ಲಿ ೧ = ೭ ಸಾಲು.	
ನಾಲ್ಕನೇ	**ಹಲಗೆ** ಮುಂಭಾಗ-೩ ಕಾಲಂಪ್ರತಿಯೊಂದು = ೬ ಸಾಲು	
	ಹಲಗೆ ಹಿಂಭಾಗ-೩ಕಾಲಂಪ್ರತಿಯೊಂದು = ೬ ಸಾಲು	
೫ನೇ	**ಹಲಗೆ** ಹಿಂಭಾಗಮುಂಭಾಗ-೩ ಕಾಲಂ ಪ್ರತಿಯೊಂದು=೬ಸಾಲು	
೬ನೇ	**ಹಲಗೆ** ಮುಂಭಾಗ -೩ಕಾಲಂಪ್ರತಿಯೊಂದು =೬ ಸಾಲು	
	ಹಲಗೆ ಹಿಂಭಾಗ-೩ ಕಾಲಂಪ್ರತಿಯೊಂದು = ೬ ಸಾಲು	
೭ನೇ	**ಹಲಗೆ** ಮುಂಭಾಗ - ೬ ಸಾಲು	
	ಹಲಗೆ ಹಿಂಭಾಗ - ಖಾಲಿ,	

ಪ್ರತಿ ಹಲಗೆ : ೨೧ ಸೆಂ.ಮೀ, ೭ ಸೆಂ.ಮೀ, ೦.೨ ಸೆಂ.ಮೀ ಅಂಚುಗಳು ಮುರಿದಿವೆ.

ಬಳೆವ್ಯಾಸ =೮ ಸೆಂ.ಮೀ, ದಪ್ಪ=೦.೫ ಸೆಂ.ಮೀ

ಮುದ್ರೆ = ೪.೫ ಸೆಂ.ಮೀ, ೩.೫ ಸೆಂ.ಮೀ (ಸವೆದಿದೆ)

ಲಾಂಛನ =ಸಿಂಹ

ತೂಕ = ೧.೫೮೫ ಕಿ.ಗ್ರಾಂ

ಕೃಷ್ಣವರ್ಮನ ಶಾಸನ ಪಾಠ

ಮೊದಲನೆ ಹಲಗೆ ಹಿಂಭಾಗ

೧ ಸ್ವಸ್ತಿ ಜಯತಿ ವಿಜಯ ಹೇತುಃ ಕಾರಣಂ ಕಾರಣಾನಾಂ ಪರಮ ನಿಧನಮೇಕ

೨ ಜ್ಯೋತಿರಾತ್ಮೇಶ್ವರಸ್ಯ ಯದಧಿ ವಸತಿ ವಿಶ್ವಾವಿಷ್ಟ ಪಾನಾಂ ವಿಭೂತಿಃ

೩ ಸ್ಥಿಚಿರತಿ ನಿಸರ್ಗ್ಗೇಸ್ವೇನ ವಿಷ್ವಜ್ಮಹಿಮ್ನಾತ್ ॥ ತದನುಕೃತ ವಿಧಾತಃ

೪ ಕೃಷ್ಣ ವರ್ಮ್ಮಾರುಧರ್ಮ್ಮ ಭುವನವಿದಿತ ಶೌರ್ಯ್ಯಾವಪ್ತ ಸರ್ವ್ವ ಸ್ವರಾಜ್ಯಃ

* 'ಸುಮಿತ್ರ', ಪ್ರಿಯದರ್ಶಿನಿ ಬಡಾವಣೆ, ವಿನೋಬನಗರ, ಶಿವಮೊಗ್ಗ - ೫೭೭ ೨೦೪

೫ ಜಯತಿ ಭುವ ಮೃಡತ್ವತ್ತ್ಮೋಖಿಮೇಕಪತ್ನೀನಿಹತರಿಪು ನೃಪ ಶ್ರೀ ದೋ

ಎರಡನೆ ಹಲಗೆ ಹಿಂಭಾಗ

೬ ಷರಾಷಿನ್ನರೇನ್ನ್ಯಃ ಪರಮಾಯುಷಾಮಧಿಗತ ವಿದ್ಯಾನಾಂ
೭ ಮತಿಷಯ ವಿಭವಭುವನ ವಿದಿತಾನಾಮವಿಪನ್ನರ್ಮ ಸಮ್ಪದಭಿ
೮ ವೃದ್ದಜನಪದ ಧನಕನಕ ನಿಚಯಾಭಿರ್ಪ್ಪತೋರ್ಪಿತ ಸುರ
೯ ಗುರುಜನಾನಾನ್ನಿರನ್ತರ ವರ್ಧಮಾನ ಪುಣ್ಯಕರ್ಮ್ಮಣಾಮ್
೧೦ ಅನೇಕ ಸಮರ ಸಂಕಟ ವಿಜಯಲಬ್ದ ಬಹುಮಾನಾನಾಮ್

ಎರಡನೆ ಹಲಗೆ ಮುಂಭಾಗ

೧೧ ಪ್ರಶಸ್ತಿ ಪೂಜಕಾಪತಿನಾಮಖಿಲ ಜನದರ್ಮ್ಮಣಾ ಕದ(೦)
೧೨ ಬಾನಾಂಮ್ಮಹಾರಾಜಃ ಸ್ವಾಮಿ ಮಹಾಸೇನ ಮಾತೃ ಗಣಾನು
೧೩ ಧ್ಯತೋಶ್ವಮೇಧಾಭಿಷಿಕ್ತೋ ಮಾನವ್ಯ ಸಗೋತ್ರೋ ಹಾರಿ
೧೪ ತಿ ಪುತ್ರಃ ಶ್ರೀ ಕೃಷ್ಣವರ್ಮ್ಮಾ ಶ್ರೀ ಮತ್ಸಾಸ್ವಸಾಮ್ರಾಜ್ಯವ್ರ
೧೫ ತ ದೀಕ್ಷಯಾಃ ಪಥೇ ದಶೇ ವರ್ಷೇ ಶ್ರೀ ಮಾತಾಮಮೃತಭುಜೆಮಿವ
೧೬ ಮರ್ತ್ಯಲೋಕ ಜನ್ಮ ಪರಿಗ್ರಹೇಣಾಲಂಕುರ್ವ್ವತಾಂ ನಿರಂತರ

ಮೂರನೇ ಹಲಗೆ ಮುಂಭಾಗ

೧೭ ವರ್ದ್ಧಮಾನ ಪುಣ್ಯಕೋಶಾನಾಂ ಕೋಶಾವನಮಿತಾರಿ ಮಿತ್ರಾಣಾಂ
೧೮ ತ್ರೈರಾಜ್ಯರಲಕ್ಮ್ಯಾ ತುಭವತಲಬ್ಬ ಮಾನಾನಾಂ ತಾರಕಾಯಣ
೧೯ ಗೋತ್ರಾಣಾಂ ಮಲವಾತಷ್ಮ ಮಹಾರಾಜಸ್ಯ ಕಲಿಜಲ
೨೦ ದ. ಪಟಲಾವ ಕುಣ್ಠಿತಸ್ಯ ಜಗತೋಃ ಪ್ರದಾನ ಸಮೀ
೨೧ ರಣೋತ ಪ್ರದರ್ಶಿತಂ ಧರ್ಮಚನ್ದ್ರ ಮಣ್ಡಲಸ್ಯ ಶ್ರೀ ಮತೋ
೨೨ ರುದ್ರವರ್ಮಣಃ ಅತಿ ಧನ ಪುಣ್ಯಾಭಿವೃದ್ಧಯೇ

ಮೂರನೇ ಹಲಗೆ ಹಿಂಭಾಗ

೨೩ ಸ್ರಾವಣ ಪೌರ್ಣಮಾಸ್ಯಾಂ ಗಬ್ದಿಕ ವಿಷಯ ಮಧ್ಯಂ ಮುಕ್ತಾ
೨೪ ಕ್ಷಿಮಣೆರಿವ ಶೋಭೇಯ ಮಾನ ಮದಲ್ಬಿರ ಗ್ರಾಮ್ಮಂ
+ವಸ ಸ.ದ್ಭೋಗ್ಯ ಮತ್ರ ಯವದಾಖ ನಾಮ ಶುಲ್ಕಮಗ್ರಹಾರ
೨೫ ಸರ್ವ್ವ ಪರಿಹಾರಂ ಗಬ್ದಿಕ ವಿಷಾಯ ವಾಸಿಭ್ಯಃ ಸಾ
೨೬ ರ ಸ್ವತ ಸಮೇಭ್ಯಃ ಅಷ್ಟಶತ ಸಂಖ್ಯಾ ಸಃ ಖ್ಯಾತೇ
೭೭ ಭ್ಯಃ ನಪ್ರದಾನತವನೇ ಬ್ರಾಹ್ಮಣಾಃ ತೋತ್ರಂ ವರಣ
೨೮ ನ ಮಭಿರೂಪ ವರ್ಣ್ಣೇ ಧ್ವಶಯಾಃ ಚಿರಾಯುಷಃ

ನಾಲ್ಕನೇ ಹಲಗೆ ಮುಂಭಾಗ

೨೯ ಸ್ವಸ್ತಿ ॥ ಗೋದೂಮದ / ಕೋಸಿಪಸು / ಭಾರದಾತಾನ್ನಜ
೩೦ ಗೋಪುಕಬ್ಬ / ಅರಿದಪವಕಡ್ಯ / ಭಾರದಾರವಿಜ
೩೧ ವಮಭಾಣು / ಭಾರದಾಮಾದೆ / ವಚ್ಯಸಿವಜ

೩೨	ಸಣ್ಣೆಭಟ್ಟಿ	ಸಣ್ಣಲಪಸು	ಕಚ್ಯವಸೋಮ
೩೩	ಸಣ್ಣೆದಾಮೋ	ಕೋಣ್ಣೆದೇವಜ	ವಚ್ಯಭವದೇವ
೩೪	ಕೋಣ್ಣೆಪಸು	ಭಾರಗೋದಾತ್ರ	ಭಾರದಾದಿವ

ನಾಲ್ಕನೇ ಹಲಗೆ ಹಿಂಭಾಗ

೩೫ ಗೋಧುಟ್ವಿಜ / ಕಾಸಿಸಿರವು / ಕಾಮಾತೊಸಂತುರ
೩೬ ಕಚ್ಯಸಿರಿದೆ / ಭಾರಜತ್ನಜ / ತಿಚ್ಯದುತೇಜ
೩೭ ಧಚ್ಚರವಿಜ / ಅಗ್ನೇನನ್ತ / ಅದ್ಗಿರಮಾದೇ
೩೮ ವಚ್ಯಣಮ್ಮಗ / ಕಚ್ಯಬಶ್ವೋರಿ / ಗೋದುದೇವು
೩೯ ವಚ್ಯಬಾಪು / ಮರವಮ್ಮಭೇ / ಕಚ್ಯಸೋಮ
೪೦ ಭಾರಮ್ಯಣೋ / ಕೌಶಿಮಾಣಾಸಿ / ಕಮ್ಮವೇದೋಸಿ
೪೧ ಕೋಸಿಗಪಾವಿ (ತಿ)

ಐದನೇ ಹಲಗೆ ಮುಂಭಾಗ

೪೨	ಕಚ್ಯವಸಿರಿದ	ವಚ್ಯಮಾದಥ	ಕಚ್ಯನಾಗ
೪೩	ಕೋಣ್ಣೆನಾನ್ನೇ	ಅತ್ನೇಯಕಾವಾಲಿ	ಕೋಸಿಗಾಮಟ್ಟೆ
೪೪	ವಚ್ಯಾಅಣ್ಣೆ	ಮೋಗಧಾಮಜ	ಕೋಣ್ಣೆನರಾಮ
೪೫	ಅತ್ನೆಯಸಿರಿ	ಕೋಸಿಗತ್ರಸಿಯ	ಕೋಣ್ಣೆನಸುರೂಪ
೪೬	ಅರಿದೇವಾಮಜ	ಸಣ್ಣಲಸರ್ವಜ	ಕಾಚ್ಯವಮಾದೇವ
೪೭	ಅಣ್ಣೇಯಭೋತ	ಅತ್ನೇಯಸರ್ವ	ಕೊಚ್ಯವಬಮ
೪೮		ಕೋಸಿಗಗಾಮ್ಯಗ	

ಐದನೆ ಹಲಗೆ ಮುಂಭಾಗ

೪೯	ಭಾರವಿರಜ	ಕಚ್ಚತಾಣು	ಬಾಲಕೋಸಿವ್
೫೦	ಭಾರಕತ್ನಜ	ಅರಿಕಕೋಮಾ	ಶಾಲಕಾಸಾಮಿ
೫೧	ಕೋಸಿಭವ	ಅರಿಕಾಪಾಲಿ ॥	ಸಣ್ಣಲದೋಣೆ
೫೨	ಭಾರಾಅಜತ್ನ	ವಧಣ್ಣಗರ	ಸಣ್ಣಲದಿವಾ
೫೩	ಕೋಣ್ಣೆಭವ	ಕಚ್ಚದಿವಾ	ಸಣ್ಣಲವಾಮ
೫೪	ಕೋಣ್ಣೆಕಿಬು	ಶಾಲಕಾದೋಣ	ಕೋಣ್ಣೆರಸನಾ

ಆರನೆ ಹಲಗೆ ಮುಂಭಾಗ

೫೫	ಬೃಬ್ಬಿಸಅತ್ನೆಪಸು	ಕಚ್ಚಅರನ	ಬಾಗವಿಸಕರ
೫೬	ಅತ್ನೆಯಸಾಮಿ	ಕಚ್ಚಸಿವಜ	ಬಾಗಕೋಸವ
೫೭	ಸಾದಾತಿದಿವಾ	ಬಾಲಿಯವಾಮ	ವಿಷ್ಣುವೃದ್ಧದೇವ
೫೮	ಸೋದಾತಿಅರಜ	ಕಚ್ಚವರವಿಜ	ವೃಷ್ಣುವೃದ್ದದೇವ
೫೯	ವಾಸಅದಿ	ವಾಸಿಷ್ಟಕಣ್ಮೋ	ಕವಚ್ಚಮರಿ
೬೦	ಕಾಣೊದುದಿವಾ	ಭಗವಿಅನನ್ತ	ಅ [ ] ಗಿತಿತೋದ
೬೧			ವಭರಟ

ಆರನೆ ಹಲಗೆ ಹಿಂಭಾಗ

೬೨	ಕಚ್ಚಅರಜ	ವಚ್ಚಭೂತಿಜನ	ಪರಾಶರಗೋಣದೆ
೬೩	ಸೋಸಿರಿ	ಗೋದೂತಾಗಿಸೋ	ಗೋದೂವಕೇಶವ
೬೪	ಸೋಪವಾಮ	ವುಶಾಕಾವಾಲಿ	ಇತ್ಯೇತೇ ಬ್ರಾಹ್ಮಣಾಮ್
೬೫	ಸೋಪ ಉಣ್ಣ	ವಾಜಿಗಯ ಕಚ್ಚದೇವು ಸಣಾಮ ಗ್ರಾಮ	
೬೬	ಸೋಪದಮ	ಕಚ್ಚಮಾದೇವ	ಮಪಹರಸೇಪ
೬೭	ಗೋದುಭವ	ಧಾರದಾಜಯಜನ್	ಚಾಮಹಾಲತಕಸಮ
೬೮	ಗೋದುಪುರು	ವಚ್ಚಸಿವಾಕರನ್	ಮವಾಯೇನಾವಿರನಸ

ಏಳನೆ ಹಲಗೆ ಮುಂಭಾಗ

೬೯ ಯುಕ್ತೋಭವತಿ ॥ ಉಕ್ತಞ್ಚ ॥ ಬಹುಭಿರ್ವ್ವಸುಧಾ ಭುಕ್ತಾ ರಾಜಭಿಃ
೭೦ ಸಗರಾಧಿಭಿಃ ಯಸ್ಯ ಯಸ್ಯ ಯಸ್ಯ ಯದಾಭೂಮಿಃ ತಸ್ಯ ತ
೭೧ ಸ್ಯ ತದಾ ಫಲಂ ॥ ಸ್ವದತ್ತ ಪರದತ್ತಾ ವಾ ಯೋ ಹರೇತಿ ವ
೭೨ ಸು ಧ್ವರಾಂ ಷಷ್ಟಿ ವರ್ಷ ಸಹಸ್ರಾಣಿ ವಿಷ್ಟಾಯಾಂ ಜಿ ಯತ ತು
೭೩ ಗೆ ಕ್ರಿಮಿಃ ॥ ಅದ್ಭಿದುನ್ನತ್ರಿಭಿರ್ಭ್ಯಕ್ತಃ ಸದ್ಭಿಃ ಶ್ಯಾ ಪರಿ ಪಾ
೭೪ ಲಿ ಗಃ ವನಾತಿ ತ । ವರ್ತ್ತತ್ನೆ ಪೃರ್ಚ್ಚ ರಾಜ್ಯಕೃತಾಗಿವ
೭೫ । ತಿ ।

ಾರಾಂಶ

ಮಂಗಳವು. ವಿಜಯಕ್ಕೆ ಕಾರಣನು, ಕಾರಣಗಳಿಗೆ ಾರಣನೂ, ಆತ್ಮೇಶ್ವರನ ಏಕಜ್ಯೋತಿಯಾದ, ವಿಶ್ವವ್ಯಾಪಿಗಳ, ತಿ, ಚರ, ನಿಸರ್ಗ (ಮೂರು ಸ್ವಭಾವಗಳಿಗೂ) ಕಾರಣ ುರುಷನೂ, ವಿಶ್ವದ ಮಹಿಮೆಯಿಂದ ತಾನೇ ಆಗಿರುವನು, ಯಾವುದನ್ನು ಆಶ್ರಯಿಸಿ ವಾಸಿಸುತ್ತಾನೆ (ಅವನು ಜಯಿಸುತ್ತಾನೆ). ಅವನನ್ನು ಅನುಕರಿಸಿದ ವಿಧಾತನಾದ ಕೃಷ್ಣವರ್ಮ(ನು) ಹೆಚ್ಚಿನ ರ್ಮದಿಂದಾಗಿ ಪ್ರಪಂಚದಲ್ಲಿ ತಿಳಿಯಲ್ಪಟ್ಟ, ಶೌರ್ಯದಿಂದ ಆವರಿಸಿ(ದ) ಎಲ್ಲಾ ಸ್ವರಾಜ್ಯಗಳನ್ನು ಹೊಂದಿದವನಾಗಿ ಒಡೆತನ ದಿಂದಾಗಿ ಅಖಿಲ ಸ್ವರಾಜ್ಯವನ್ನು ಏಕಪತ್ನಿಯನ್ನಾಗಿ ಮಾಡಿಕೊಂಡ, ಸೋಲಲ್ಪಟ್ಟ ಶತ್ರು ರಾಜರುಗಳನ್ನು ಹೊಂದಿದ, ಶ್ರೀ ದೋಷ ರಾಶಿನರೇಂದ್ರನು ಜಯಿಸುತ್ತಾನೆ, ಮತ್ತು ಕೂಡ ಪರಮಾಯುಷಿಗಳು (ಹೆಚ್ಚಿನ) ಆಯುಶುಳ್ಳ, ವಿದ್ಯೆಯನ್ನು ಹೊಂದಿದವರ, ಅತಿಶಯ ವಾದ ಐಶ್ವರ್ಯದಿಂದಾಗಿ ತಿಳಿಯಲ್ಪಟ್ಟವರ, ಭೂ ಸಂಪತ್ತನ್ನು ಹೊಂದಿದ, ಹೆಚ್ಚುತ್ತಿರುವ ದೇಶ, ದನಕನಕಗಳ ರಾಶಿಯಿಂದ ತರ್ಪಿಸಲ್ಪಟ್ಟ, ಅರ್ಪಿಸಲ್ಪಟ್ಟ, ದೇವ, ಗುರು ಜನರನ್ನು, ನಿರಂತರವಾಗಿ ಹೊಂದಿರುವ, ಹೆಚ್ಚುತ್ತಿರುವ ಪುಣ್ಯಕಾರ್ಯ ಗಳಿಂದಾಗಿ ಅನೇಕ ಸಮರಗಳೆಂಬ ಸಂಕಟದಲ್ಲಿ ವಿಜಯವನ್ನು ಪಡೆದ, ಪ್ರಶಸ್ತಿಗಳನ್ನು ಪೂಜಿಸುವ ಒಡೆಯರ (ರಾಜರ) ಅಖಿಲ ಜಗದರ್ಮದವರ, ಹೊಂದಿರುವ ಮಹಾ ರಾಜನಾದ ಒಡೆಯ ನಾದ ಮಹಾಸೇನ ಮಾತೃಗಣಗಳನ್ನು ಸೇವಿಸಿದ ವನಾದ, ಅಶ್ವಮೇಧಯಾಗ ಮಾಡಿರುವ ಮಾನವ್ಯಸ ಗೋತ್ರದ, ಹಾರಿತಿಪುತ್ರನಾದ ಶ್ರೀ ಕೃಷ್ಣವರ್ಮನು, ಶ್ರೀಮತಿಯೊಂದಿಗೆ ಸ್ವಸಾಮ್ರಾಜ್ಯದ ವ್ರತದೀಕ್ಷೆಯ ಹತ್ತನೇ ವರ್ಷದಲ್ಲಿ, ಮಾನವ ಲೋಕದಲ್ಲಿ ಜನ್ಮಪಡೆಯುವುದರಿಂದ ಅಲಂಕರಿಸಲ್ಪಟ್ಟವರ, ನಿರಂತರವಾಗಿ ಹೆಚ್ಚುತ್ತಿರುವ, ಪುಣ್ಯಕೋಶಗಳ ಕೋಶಗಳಿಂದ, ಮಿತ(ಸಂಖ್ಯೆ) ಶತ್ರು, ಮಿತ್ರರುಗಳನ್ನು ಈ ಪ್ರಪಂಚದಲ್ಲಿ ಪಡೆದ ತ್ರೈರಾಜ್ಯ ಲಕ್ಷ್ಮಿಯಿಂದ ಗೌರವಿಸಲ್ಪಟ್ಟ, ತಾರಕಾಯಣ ಗೋತ್ರದ, ಕಲಿಯಂಬ ಮೋಡದ ಪರದೆಯನ್ನು ತೆರೆದ ಸಮಿರನಾದ (ಗಾಳಿಯಾದ), ಧರ್ಮಚಂದ್ರನ ಸೆರಗಾದ ಶ್ರೀ ರುದ್ರವರ್ಮನ ಹೆಚ್ಚಿನ ಧನ, ಪುಣ್ಯಾಭಿವೃದ್ಧಿಗಾಗಿ ಶ್ರಾವಣ ಪೌರ್ಣಮಿಯಂದು ಗಬ್ಬಿಕ ಪ್ರದೇಶದ ಮಧ್ಯದಲ್ಲಿ ಮತ್ತಿನ ಕಣ್ಮಣಿಯಂತಿರುವ ಅದಲ್ಬಿರ ಗ್ರಾಮವನ್ನು ವಾಸ, ಭೋಗಕ್ಕಾಗಿ (ಹಾಗೂ) ಇಲ್ಲಿ ಯವದಾಖ ವೆಂಬ ಶುಲ್ಕವನ್ನು ಅಗ್ರಹಾರಕ್ಕೆ, ಸರ್ವಪರಿಹಾರಕ್ಕಾಗಿ, ಗಬ್ಬಿಕ ಪ್ರದೇಶದ ವಾಸಿಗಳಾದ, ಸರಸ್ವತಿಗೆ ಸಮಾನರಾದ ೧೧೮ ಸಂಖ್ಯೆಯವರೆಂದೇ ಖ್ಯಾತರಾದ ಬ್ರಾಹ್ಮಣರಿಗೆ ದಾನ ನೀಡಿದ್ದಾನೆ.

ಪ್ರಸ್ತುತ ಶಾಸನದ ಮಹತ್ವವನ್ನು ಈ ಕೆಳಕಂಡಂತೆ ಗುರುತಿಸ ಬಹುದು.

ಈವರೆಗೆ ಕದಂಬರ ವಂಶಾವಳಿಯಲ್ಲಿ ೧ನೇ ಕೃಷ್ಣವರ್ಮನೆಂಬ ರಾಜನಿದ್ದ ಬಗ್ಗೆ ಶಾಸನದಲ್ಲಿ ಉಲ್ಲೇಖವಿತ್ತು. ಇದು ಆತನ ಪ್ರಥಮ ಉಪಲಬ್ದ ಶಾಸನವಾಗಿರುವುದು ವಿಶೇಷ.

- ಕೃಷ್ಣವರ್ಮ ಬನವಾಸಿಯ ಮೂಲ ಮನೆತನದಿಂದ ಹೊರಬಂದು ಹೊಸತೊಂದು ಸ್ವಸಾಮ್ರಾಜ್ಯ ಸ್ಥಾಪಿಸಲು ಮಾಡಿರುವ ಸಂಕಲ್ಪ-
  ಕದಂಬರ ವಂಶಾವಳಿಯಲ್ಲಿ ಈತನಿಗೆ ಪ್ರತ್ಯೇಕಸ್ಥಾನ ಕಲ್ಪಿಸಬಹುದೆಂಬ ಅಭಿಪ್ರಾಯವನ್ನು ಬಾ. ರಾ. ಗೋಪಾಲರವರು ತಮ್ಮ ಬನವಾಸಿ ಕದಂಬರು ಕೃತಿಯಲ್ಲಿ ಸೂಚಿಸಿದ್ದಾರೆ. ಈ ಅರತಲಗದ್ದೆ ಶಾಸನ ಗೋಪಾಲ್‌ರವರ ಅಭಿಪ್ರಾಯವನ್ನು ದೃಢಪಡಿಸುತ್ತದೆ. ಇದರಿಂದಾಗಿ ಕದಂಬರ ಹೊಸ ಸ್ವತಂತ್ರ ಮನೆತನಕ್ಕೆ ಈ ಕೃಷ್ಣವರ್ಮನೇ ಮೂಲ ಪುರುಷನಾಗುತ್ತಾನೆ.
- ಇಲ್ಲಿ ಬರುವ ಸ್ವಸಾಮ್ರಾಜ್ಯ ವ್ರತದೀಕ್ಷೆ ಹಾಗೂ ತ್ರೈರಾಜ್ಯ ಲಕ್ಷ್ಮಿ ಉಲ್ಲೇಖಗಳು, ಆತ ಸಮಕಾಲಿನ ಬನವಾಸಿ, ಉಚ್ಚಂಗಿ ಹಾಗೂ ಪಲಾಶಿಕಗಳನ್ನು ಒಂದುಗೂಡಿಸಿ ಸ್ವತಂತ್ರ ಅಖಂಡ ಕದಂಬ ರಾಜ್ಯಸ್ಥಾಪನೆ ಮಾಡುವ ಸಂಕಲ್ಪ ಮಾಡಿ ಹತ್ತು ಸುದೀರ್ಘ ವರ್ಷಗಳ ಸಂಘರ್ಷ ನಡೆಸಿದ ಮಾಹಿತಿ ಇಲ್ಲಿ ದೊರೆಯುತ್ತದೆ. ಇಲ್ಲಿಯವರೆಗೆ ಪ್ರಕಟವಾದ ಕದಂಬ ಶಾಸನಗಳಲ್ಲಿ ಅಶ್ವಮೇಧಯಾಗದ ಉಲ್ಲೇಖ ರವಿವರ್ಮ, ದೇವವರ್ಮ, ಸಿಂಹವರ್ಮ, ೨ನೇ ಕೃಷ್ಣವರ್ಮರ ಶಾಸನದಲ್ಲಿ ಬರುತ್ತದೆ. ರವಿವರ್ಮನನ್ನು ಹೊರತುಪಡಿಸಿ ಉಳಿದವರು ಮೂಲ ಕದಂಬ ಮನೆತನದಿಂದ ಪ್ರತ್ಯೇಕವಾದ ವಂಶಕ್ಕೆ ಸೇರಿದವರಾಗಿದ್ದು, ಅಶ್ವಮೇಧಯಾಗ ಮಾಡಿರುವ ಕೃಷ್ಣವರ್ಮನ ಸಂತತಿಯವರೆಂದು ಹೇಳಿಕೊಂಡಿದ್ದಾರೆ. ಈ ಅರತಲಗದ್ದೆ ಶಾಸನ ಕೃಷ್ಣವರ್ಮ ಆ ಯಾಗ ಮಾಡಿರುವ ಸಂಗತಿಯನ್ನು ದೃಢೀಕರಿಸಿದೆ.
- ಈ ಶಾಸನದಲ್ಲಿ ರುದ್ರವರ್ಮನನ್ನು ಸಾಕಷ್ಟು ಬಿರುದುಗಳಿಂದ ಹೊಗಳಿ, ಆತನ ಪುಣ್ಯಾಭಿವೃದ್ಧಿಗಾಗಿ ಕೃಷ್ಣವರ್ಮನು ದಾನ ನೀಡಿದ್ದಾನೆ. ಈತ ಯಾರು? ಕದಂಬ ದೊರೆಯೆ (ತಂದೆ) ಅಥವಾ ಕೃಷ್ಣವರ್ಮನ ಸಂಕಲ್ಪದಲ್ಲಿ ಸಹಕರಿಸಿದ ಪ್ರಮುಖ ವ್ಯಕ್ತಿಯೇ ಎಂಬ ಅಂಶದ ಬಗ್ಗೆ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.
- ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ೧೧೮ ಬ್ರಾಹ್ಮಣರ ಹೆಸರುಗಳು ೪ನೇ ಹಲಗೆಯ ಮುಂಭಾಗದಿಂದ ಪ್ರತಿಹಲಗೆಯಲ್ಲಿ ೩ ಕಾಲಂಗಳ ೬ ಸಾಲುಗಳಲ್ಲಿ, ೭ನೇ ಹಲಗೆಯ ಮುಂಭಾಗದವರೆಗೆ ಬರೆಯಲ್ಪಟ್ಟಿದ್ದು, ಅವು

ಪ್ರಾಕೃತ ಭಾಷೆಯಲ್ಲಿವೆ. ಶಾಸನದ ಉಳಿದ ಭಾಗ ಸಂಸ್ಕೃತದಲ್ಲಿದೆ. ಈ ಕಾಲಂ ಮಾದರಿ ಬರವಣಿಗೆ ಮೊಟ್ಟ ಮೊದಲ ಬಾರಿಗೆ ಕಾಣಿಸಿಕೊಂಡಿದೆ.

- ಇಲ್ಲಿ ಉಲ್ಲೇಖಿತವಾಗಿರುವ ದೋಷರಾಶಿನರೇಂದ್ರ ಎನ್ನುವ ಬಿರುದು, ಈ ಹಿಂದೆ ಎರಡನೇ ಕೃಷ್ಣವರ್ಮನ ಶಾಸನದಲ್ಲಿ ವ್ಯಕ್ತವಾಗಿದೆ. ಬಹುಶಃ ಆತ ೧ನೇ ಕೃಷ್ಣವರ್ಮನಿಗಿದ್ದ ಬಿರುದನ್ನು ತಾನೂ ಧರಿಸಿರಬೇಕೆಂದು ತೋರುತ್ತದೆ.
- ಗಬ್ಬಿಕ ವಿಷಯ ಕೂಡ ಹೊಸ ಪ್ರಾಂತ್ಯವಾಗಿದ್ದು ಅದನ್ನು ಗುರುತಿಸಬೇಕಾಗಿದೆ.

ಒಟ್ಟಿನಲ್ಲಿ ಅರತಲಗದ್ದೆ ತಾಮ್ರಶಾಸನ ನಿಕ್ಷೇಪದಲ್ಲಿ ಒಂದಾಗಿರುವ ಈ ಶಾಸನ ಬನವಾಸಿ ಕದಂಬರ ರಾಜಕೀಯ ರಂಗದ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುವಲ್ಲಿ ಸಹಕಾರಿಯಾಗಿದ್ದು, ಹೆಚ್ಚಿನ ಸಂಶೋಧನೆಗೆ ದಾರಿಮಾಡಿಕೊಟ್ಟಿದೆ.*

* (ಈ ಶಾಸನ ಭಂಡಾರವನ್ನು ನಮಗೆ ಅಧ್ಯಯನಕೆ ನೀಡಿದ ಶ್ರೀ ಚೆನ್ನಬಸವನಗೌಡರು, ವಕೀಲರು ಶಿವಮೊಗ್ಗ, ಅವರನ್ನು ನಮಗೆ ಪರಿಚಯಿಸಿ ಸಹಕರಿಸಿದ ಶ್ರೀ ಖಂಡೋಬ ರಾವ್, ನಿವೃತ್ತ ಇತಿಹಾಸ ಅಧ್ಯಾಪಕರು, ಶಿವಮೊಗ್ಗ ಹಾಗೂ ಶಾಸನಗಳ ಪಾಠಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಿರುವ ಡಾ. ಕೆ.ವಿ. ರಮೇಶ್, ಡಾ. ಅ. ಸುಂದರ ಮುಂತಾದವರಿಗೆ ನಮ್ಮ ಧನ್ಯವಾದಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) ಪ್ರಿಯವ್ರತವರ್ಮನ ಶಾಸನ ಮೂರು ತಾಮ್ರದ ಹಲಗೆಗಳಲ್ಲಿ ೧೭ ಸಾಲುಗಳನ್ನು ಹೊಂದಿದ್ದು ಅವುಗಳನ್ನು ಬಂಧಿಸಿರುವ ಬಳೆಯಲ್ಲಿ ಸಿಂಹಲಾಂಛನವಿದೆ. ರಾಜ ತನ್ನ ಆಳ್ವಿಕೆಯ ೧೨ನೇ ವರ್ಷದಲ್ಲಿ ಯುವರಾಜ ಕಾಕುಸ್ತವರ್ಮನಿಗೆ ಪುಣ್ಯ ಸಿಗಲೆಂದು ಕೌಶಿಕ ಗೋತ್ರದ ಸ್ವಾಮಿತ್ರನೆಂಬ ಬ್ರಾಹ್ಮಣನಿಗೆ ಮೂಲಮಣಿ ಗ್ರಾಮದಲ್ಲಿ ಭೂದಾನವನ್ನು ನೀಡಿದ್ದಾನೆ. ಈ ಶಾಸನವನ್ನು ದಾಮಸೇನಾಪತಿ ಬರೆದಿದ್ದಾನೆ. ಈ ಶಾಸನ ಬನವಾಸಿ ಕದಂಬರ ವಂಶಾವಳಿ ಹಾಗೂ ಕಾಲಮಾನವನ್ನು ಪುನಃ ವಿಮರ್ಶಿಸಲು ಸಹಕಾರಿಯಾಗಿದೆ.

೨) ಶಾಂತಿವರ್ಮನ ಶಾಸನಕೂಡ ಮೂರು ತಾಮ್ರದ ಹಲಗೆಗಳ ಮೇಲೆ ಬರೆಯಲ್ಪಟ್ಟಿದ್ದು ೧೪ ಸಾಲುಗಳನ್ನು ಹೊಂದಿದೆ. ತಾಮ್ರಪತ್ರಗಳನ್ನು ಬಂಧಿಸಿರುವ ಬಳೆಯಲ್ಲಿ ಶ್ರೀಶಾಂತಿವರವರ್ಮನ ಹೆಸರನ್ನು ನಮೂದಿಸಲಾಗಿದೆ. ಇದರಲ್ಲಿ ಶಾಂತಿವರ್ಮ ತನ್ನ ಆಳ್ವಿಕೆಯ ೫ನೇ ವರ್ಷದಲ್ಲಿ ಕಶ್ಯಪಗೋತ್ರದ ಬ್ರಾಹ್ಮಣ ದೇವಾರ್ಯನಿಗೆ ಮೋಕರಪಲ್ಲಿ ಗ್ರಾಮದಲ್ಲಿ ದಾನ ನೀಡಿದ್ದಾನೆ.

೩) ರವಿವರ್ಮನ ಶಾಸನ ೧೬ ಸಾಲುಗಳನ್ನು ಹೊಂದಿದ್ದು ೩ತಾಮ್ರದ ಹಲಗೆಗಳಮೇಲೆ ಬರೆಯಲಾಗಿದೆ. ಅವುಗಳನ್ನು ಬಂಧಿಸಿರುವ ಬಳೆಯಲ್ಲಿ ಸಂಪೂರ್ಣ ಸವೆದಿರುವ ರಪ್ರಾಣಿಯ (ಸಿಂಹ?) ಚಿತ್ರವಿದೆ. ರಾಜ ತನ್ನ ಆಳ್ವಿಕೆಯ ಮೊದಲ ವರ್ಷದಲ್ಲಿ ವಸಗೂರು ಗ್ರಾಮದಲ್ಲಿ ಕಾರ್ಪಟೇಶ್ವರಮಾನದಿಂದ ನಗ್ನಸ್ವಾಮಿಯೆಂಬ ಬ್ರಾಹ್ಮಣ ಭೂದಾನ ನೀಡಿದ್ದಾನೆ.

೪) ೧೮ ಸಾಲುಗಳ ಹರಿವರ್ಮನ ಶಾಸನ ಸಹಾ ೩ತಾಮ್ರ ಪಟಗಳಮೇಲೆ ಬರೆಯಲಾಗದೆ. ಅವನ್ನು ಹಿಡಿದಿಟ್ಟಿರುವ ಬಳೆಯಲ್ಲಿರುವ ಮುದ್ರೆಯಲ್ಲಿ ಯಾವುದೆ ಲಾಂಛನವಿಲ್ಲ. ಹರಿವರ್ಮ ತನ್ನ ಆಳ್ವಿಕೆಯ ೭ನೇ ವರ್ಷದಲ್ಲಿ ಮಳಪಲ್ಲಿ ವಿಷಯದ ಅತ್ತರಪಲ್ಲಿ ಗ್ರಾಮದಲ್ಲಿ ಗೌತಮ ಗೋತ್ರದ ರವಿಶರ್ಮನಿಗೆ ತನ್ನ ಚಿಕ್ಕಮ್ಮನ ಒಳಿತಿಗಾಗಿ ಭೂದಾನ ಕೊಟ್ಟಿದ್ದಾನೆ.

೫) ೨ ತಾಮ್ರದ ಹಲಗೆಗಳ ಮೇಲೆ ೯ಸಾಲುಗಳಲ್ಲಿ ಬರೆದಿರುವ ಪುಳಿಂದವರ್ಮನ ಶಾಸನ ಮಧ್ಯದ ಪತ್ರವಿಲ್ಲದೇ ಅಪೂರ್ಣವಾಗಿದೆ. ೩ ತಾಮ್ರದ ಹಲಗೆಗಳನ್ನು ಹೊಂದಿರುವ ಮತ್ತೊಂದು ಶಾಸನ ಸಂಪೂರ್ಣವಾಗಿ ಸವೆದಿದ್ದು ಓದಲು ಬರುವಂತಿಲ್ಲ. ಅವನ್ನು ಬಂಧಿಸಿರುವ ಬಳೆಯಲ್ಲಿ ಸವೆದಿರುವ ಸಿಂಹ ಲಾಂಛನವಿದೆ.

೧. ಬಾ.ರಾ. ಗೋಪಾಲ್., ಬನವಾಸಿ ಕದಂಬರು

೨. B.R. Gopal., *Corpus of Kadamba Inscriptions*

೩. G.S. Gai., *Inscriptions of the Early Kadambas*

ಡಾ. ಎಚ್‌ಸ್. ಗೋಪಾಲ ರಾವ್*

ಶಿವಮಾರನ ಮರಳಕುಂಟೆ ಶಾಸನ ಮತ್ತು ಮಣ್ಣೆಯ ಯುದ್ಧನೆಲೆ

ಗಂಗ ವಂಶದಲ್ಲಿ ಎರಡನೆಯ ಶಿವಮಾರನ ಹೆಸರನ್ನು ಇತಿಹಾಸಕಾರರೆಲ್ಲ ಬಲ್ಲರು. ಸಾಹಿತ್ಯಾಸಕ್ತರಿಗೂ ಅವನು ಸೈಗೊಟ್ಟ ಶಿವಮಾರ ಎಂದು ಗೊತ್ತು. ಶಿವಮಾರ ಮತ, ವಡ್ಡಕಥೆ, ಗಜಾಷ್ಟಕ ಅಥವಾ ಓವನಿಗೆಯ ಹಾಡು ಇತ್ಯಾದಿ ಕೃತಿಗಳು ಸದ್ಯಕ್ಕೆ ಅಲಭ್ಯವಾದರೂ, ಅವು ಮತ್ತು ಅವುಗಳ ಕರ್ತೃ ಸದಾ ಚರ್ಚೆಯಲ್ಲಿದ್ದಾನೆ. ಸಾಹಿತ್ಯದ ಇತಿಹಾಸಕಾರರಿಗೆ ಶಿವಮಾರ ಹೀಗೆ ಪರಿಚಿತನಾದರೆ, ಇತಿಹಾಸಕಾರರಿಗೆ ಅವನು ಪರಿಚಿತನಾಗಿರುವುದು, ಗಂಗ-ರಾಷ್ಟ್ರಕೂಟ ಹೋರಾಟಗಳಲ್ಲಿ ಬಹುಕಾಲ ಸೆರೆಯಲ್ಲಿದ್ದರೂ ಆತ್ಮಾಭಿಮಾನವನ್ನು ಕಳೆದುಕೊಳ್ಳದ, ಸೆರೆವಾಸವನ್ನೂ ಸಾಹಿತ್ಯಾತ್ಮಕ ಕೆಲಸಗಳಿಗೆ ಬಳಸಿಕೊಂಡ ಕರ್ತೃತ್ವಶಾಲಿ ಎಂಬ ಕಾರಣದಿಂದ.

ಗಂಗದೊರೆ ಶ್ರೀಪುರುಷನ ಮಗನೇ ಶಿವಮಾರ. ಶ್ರೀಪುರುಷನ ಆಳ್ವಿಕೆಯ ಅವಧಿಯಲ್ಲೇ ರಾಷ್ಟ್ರಕೂಟ ಒಂದನೆಯ ಕೃಷ್ಣ ಗಂಗವಾಡಿಯನ್ನು ಆಕ್ರಮಿಸಲು ಹೋರಾಟ ನಡೆಸಿ, ವಿಫಲನಾಗಿದ್ದು. ಮಣ್ಣೆಯನ್ನು ಅವನು ಸಮೀಪಿಸಿದ್ದ ಎನ್ನುವುದನ್ನು ಮಣ್ಣೆಗೆ ಹತ್ತಿರ ಇರುವ ತುಮಕೂರು ಜಿಲ್ಲೆಯ ಹಿರೇಗುಂಡುಗಲ್ಲಿನ ಶಾಸನಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಶಿವಮಾರನ ಮಗ ಮಾರಸಿಂಹನು ದೀರ್ಘಕಾಲ ಯುವರಾಜನಾಗಿಯೇ ಆಡಳಿತ ನಡೆಸಿದ್ದ ಎನ್ನುವುದಕ್ಕೂ ಸಾಕಷ್ಟು ದಾಖಲೆಗಳಿವೆ. ಯುವರಾಜ ಮಾರಸಿಂಹನು ತನ್ನ ಆಡಳಿತದ ಬಹುಕಾಲವನ್ನು ಮಣ್ಣೆಯಲ್ಲೇ ಕಳೆದಿದ್ದಾನೆ. ಅವನ ಮೂರು ತಾಮ್ರಪಟಗಳು ಮಣ್ಣೆಯಲ್ಲೇ ದೊರೆತಿವೆ.[೨] ಆದರೆ, ಅವನ ತಂದೆ ಶಿವಮಾರನ ಒಂದು ಶಾಸನವೂ ಈ ಭಾಗದಲ್ಲಿ ದೊರೆತಿರಲಿಲ್ಲ. ಈ ಕೊರತೆಯನ್ನು ತುಂಬುವಂತೆ ೨೦೦೨ರ ಆಗಸ್ಟ್ ೧೫ರಂದು ಮಣ್ಣೆಯ ಸಮೀಪದ ಮರಳಕುಂಟೆಯಲ್ಲಿ ಎರಡನೆಯ ಶಿವಮಾರನ ಒಂದು ವೀರಗಲ್ಲು ಶಾಸನ ಲಭ್ಯವಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ ತಾಲ್ಲೂಕಿನ ಮರಳಕುಂಟೆ ಗ್ರಾಮದಲ್ಲಿ ಊರಿನ ಪೂರ್ವಕ್ಕೆ ಶ್ರೀ ಜಯಣ್ಣ ಅವರ ಜಮೀನಿನ ಪಕ್ಕ ಕಾಲುವೆ ಬಳಿ ಇರುವ ಜಮೀನಿನಲ್ಲಿ ಈ ವೀರಗಲ್ಲು ಶಾಸನವನ್ನು ನೆಡಲಾಗಿದೆ. ಸುಮಾರು ಏಳು ಅಡಿ ಎತ್ತರ ಮತ್ತು ಮೂರು ಅಡಿ ಅಗಲ ಇರುವ ಕಲ್ಲುಚಪ್ಪಡಿಯ ಮೇಲೆ ಈ ವೀರಗಲ್ಲು ಶಾಸನ ಇದೆ. ಶಿಲ್ಪಭಾಗಕ್ಕೆ ಮೇಲೆ ಐದು ಸಾಲುಗಳು ಮತ್ತು ಶಿಲ್ಪದ ಎಡಭಾಗಕ್ಕೆ ಐದು ಸಾಲುಗಳ ಶಾಸನವನ್ನು ಕೆತ್ತಲಾಗಿದೆ. ಶಾಸನದ ಪಾಠದಂತೆಯೇ ವೀರಗಲ್ಲಿನ ಶಿಲ್ಪವೂ ವಿಶೇಷ ಗಮನ ಸೆಳೆಯುತ್ತದೆ. ಇಬ್ಬರು ವೀರರು ಹೋರಾಟದಲ್ಲಿ ನಿರತರಾಗಿದ್ದು, ಇಬ್ಬರ ಆಯುಧಗಳು, ಹೋರಾಟದ ಭಂಗಿ, ಹೋರಾಟದ ಸ್ವರೂಪ ಇತ್ಯಾದಿಗಳನ್ನು ಶಿಲ್ಪಿಯು ಯಾವುದೇ ಜಿಪುಣತನವಿಲ್ಲದೆ ಚಿತ್ರಿಸಿದ್ದಾನೆ. ವೀರಗಲ್ಲಿನ ಬಲಬದಿಯಲ್ಲಿರುವ ವೀರನು ಕತ್ತಿಯನ್ನು ಹಿಡಿದು ಹೋರಾಟದಲ್ಲಿ ನಿರತನಾಗಿದ್ದಾನೆ. ಅವನ ಬಲಗೈಲಿ ಕತ್ತಿ ಇದ್ದು, ಎಡಗೈನಲ್ಲಿ ಗುರಾಣಿ ಇದೆ. ಎಡಬದಿಯ ವೀರನು ಬಿಲ್ಲನ್ನು ಬಲಗೈಲಿ ಹಿಡಿದು, ಎಡಗೈನಿಂದ ಬಾಣವನ್ನು ಬತ್ತಳಿಕೆಯಿಂದ ತೆಗೆಯುತ್ತಿದ್ದಾನೆ. ಬಲಬದಿಯ ವೀರನು ತನ್ನ ಎಡಗಾಲಿನಿಂದ ಶತ್ರು ವೀರನೊಬ್ಬನನ್ನು ಮೆಟ್ಟಿ ನಿಂತಿದ್ದಾನೆ. ಎಡಬದಿಯ ವೀರನು ಬಿಟ್ಟ ಬಾಣಗಳು ಬಲಬದಿಯ ವೀರನ ಎದೆ, ಹೊಟ್ಟೆ ಮತ್ತು ಸೊಂಟಗಳನ್ನು ಹೊಕ್ಕಿವೆ. ಇಬ್ಬರೂ ಕಚ್ಚೆಯಂತಹ ಉಡುಪನ್ನು ಧರಿಸಿದ್ದಾರೆ. ಬಲಬದಿಯ ವೀರನ ತಲೆಯ ಮೇಲೆ ಸೇವಕನೊಬ್ಬನು ಛತ್ರಿಯನ್ನು ಹಿಡಿದಿದ್ದಾನೆ. ಇದರಿಂದ ವೀರನು ರಾಜ ಕುಟುಂಬಕ್ಕೆ ಸೇರಿದವನು ಎಂದು ತಿಳಿಯಬಹುದು. ಈ ಹೋರಾಟದ ಚಿತ್ರಣದ ಮೇಲ್ಭಾಗಕ್ಕೆ ಕಲ್ಲಿನ ಮಧ್ಯಭಾಗದಲ್ಲಿ ವೀರನು ಸ್ವರ್ಗಾರೋಹಣ ಮಾಡಿರುವ ಚಿತ್ರಣ ಇದೆ. ಸ್ವರ್ಗದಲ್ಲಿ ಅವನಿಗೆ ಇಬ್ಬರು ಚಾಮರಧಾರಿಯರು ಚಾಮರ ಬೀಸುತ್ತಿದ್ದಾರೆ. ಕೇವಲ ಎರಡು ಹಂತದ ಈ ವೀರಗಲ್ಲನ್ನು ಯಾವುದೇ ಅನುಮಾನ ಇಲ್ಲದೆ ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿಸಬಹುದು. ಆ ಕಾಲಕ್ಕೆ ವೀರಗಲ್ಲುಗಳ ಸ್ವರೂಪ ಅತ್ಯಂತ ಸರಳವಾಗಿರುತ್ತಿತ್ತು. ಆ ಕಾಲಕ್ಕೆ ವೀರಗಲ್ಲು ಶಿಲ್ಪಗಳಲ್ಲಿ ಹೋರಾಟ ಮತ್ತು ಸ್ವರ್ಗಾರೋಹಣಗಳಿಗಷ್ಟೇ ಪ್ರಾಧಾನ್ಯತೆ ಇದ್ದುದನ್ನು ಈಗಾಗಲೇ ಸ್ಪಷ್ಟಪಡಿಸಿಕೊಳ್ಳಲಾಗಿದೆ. ಶಿಲ್ಪದ ಕಾರಣದಿಂದ ಮಾತ್ರವಲ್ಲದೆ, ಕಾಲದ ಉಲ್ಲೇಖ ಇಲ್ಲದಿದ್ದರೂ ಸಹ ಶಾಸನದ ಪಾಠವು ಶಾಸನದ ಕಾಲವನ್ನು ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿಸಲು ಲಿಪಿ ಸ್ವರೂಪವು ಅವಕಾಶ ಮಾಡಿದೆ.

ಹತ್ತು ಸಾಲುಗಳ ಶಾಸನದ ಪಾಠ ಈ ಕೆಳಕಂಡಂತಿದೆ.

೧ ಸ್ವಸ್ತಿಶ್ರೀ ಶಿವಮಾರ ಮಹಾರಾಜರ್ ಪೃಥಿ
೨ ವಿ ರಾಜ್ಯಂಗೆಯೆ ಮಣ್ಣೆಯ ಕೊಟ್ಟೆಕಾಳೆಗದುಳ್
೩ ಆಮ. ಗಜ್ಜರ ಪರಮ. ಎಜೆದು ಸತ್ತೋರ್ಕ
೪ ಅವರ ಮಗನ್ ಸಿಜ್ಜಗಿಗ ಕೊ

* 'ಸ್ವಸ್ತಿ ಸ್ಕಂದ', ಅರಸಿನಕುಂಟೆ, ನೆಲಮಂಗಲ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ - ೫೬೨ ೧೨೩.

೫ ಟ್ರೊದು ತಲ್ಲ ಕ
೬ ಟ್ಟುರ ಮಾರ್ಗ್ಗಟಿ
೭ ಇದೋನ್...
೮ ಪಞ್ಚಮಹಾ
೯ ಅಮ್ಮಿಕರಣಪೂರ್ಣ
೧೦ ....


ಗದ್ಯದಲ್ಲಿ ರಚಿತವಾಗಿರುವ ಶಾಸನ ಪಾಠವು ಸರಳವಾಗಿದೆ. ಸ್ವಸ್ತಿ ವಾಚನದ ನಂತರ, ಶಿವಮಾರ ಮಹಾರಾಜನು ರಾಜ್ಯಭಾರ ಮಾಡುತ್ತಿದ್ದಾಗ, ಮಣ್ಣೆಯ ಕೋಟೆ ಕಾಳಗದಲ್ಲಿ ಗಂಗರ ಪರಮ ಹೋರಾಡಿ ಮರಣ ಹೊಂದಿದ ಮತ್ತು ಅವನ ಮಗ ಸಿಜ್ಗಟಿಗ ಬಿಟ್ಟ ದತ್ತಿಯನ್ನು ಅಪಹರಿಸಿದವರಿಗೆ ಪಞ್ಚಮಹಾಪಾತಕ ಶಿಕ್ಷೆ ಆಗುತ್ತದೆ ಎಂಬ ವಿಷಯವನ್ನು ಶಾಸನ ತಿಳಿಸಿದೆ.

ಲಿಪಿ ಸ್ವರೂಪದ ಕಾರಣದಿಂದ ಈ ಶಾಸನದ ಕಾಲವನ್ನು ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿಸಬಹುದಾಗಿರುವುದರಿಂದ ಇಲ್ಲಿ ಉಕ್ತನಾಗಿರುವ ಶಿವಮಾರನು ಕ್ರಿ.ಶ. ೭೮೮ರಿಂದ ೮೧೨ರವರೆಗೆ ಆಳಿದ ಎರಡನೆಯ ಶಿವಮಾರ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇವನೇ ರಾಷ್ಟ್ರಕೂಟರ ಬಂದಿಯಾಗಿ ದೀರ್ಘಕಾಲ ಸೆರೆಮನೆಯಲ್ಲಿ ಜೀವನ ಕಳೆದವನು. ಇವನ ಕಾಲದಲ್ಲೇ ಗಂಗವಾಡಿಯು ರಾಷ್ಟ್ರಕೂಟರ ವಶವಾದದ್ದು. ಆ ಹೊತ್ತಿಗಾಗಲೇ ಮಣ್ಣೆಯು ಪ್ರಮುಖ ನಗರವಾಗಿತ್ತು. ರಾಜ ನೆಲೆವೀಡಾಗಿ ಎರಡನೆಯ ರಾಜಧಾನಿ ಎಂದು ಪರಿಗಣಿತವಾಗಿತ್ತು. ಮಣ್ಣೆಯಲ್ಲಿ ದೊರೆತ ಶಿವಮಾರನ ಉಲ್ಲೇಖವಿರುವ ಮೇಲ್ಕಂಡ ಶಾಸನವು ಮಣ್ಣೆಯ ಕೋಟೆ ಕಾಳಗವನ್ನು ಪ್ರಸ್ತಾಪಿಸುತ್ತದೆ. ಎಂದರೆ, ಆ ಹೊತ್ತಿಗೆ ಮಣ್ಣೆಯ ಕೋಟೆಯು ಪ್ರಮುಖವಾಗಿದ್ದಂತೆ ತೋರುತ್ತದೆ. ಮಣ್ಣೆಯ ಕೋಟೆ ಕಾಳಗದಲ್ಲಿ ಹೋರಾಡಿ ಸತ್ತವನು ಪರಮ ಎಂಬ ವೀರ. ಅವನು ರಾಜಕುಟುಂಬಕ್ಕೆ ಸೇರಿದವನಾಗಿರಬೇಕು ಎಂದು ಊಹಿಸಲು ಅವನದೆಂದೆ ತಿಳಿಯಲಾದ ಶಿಲ್ಪದ ಮೇಲೆ ಹಿಡಿಯ ಲಾಗಿರುವ ಛತ್ರಿಯು ನೆರವಾಗುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸ್ವೀಕರಿಸ ಲಾಗಿರುವ ಶಾಸನದಲ್ಲಿ ಉಕ್ತವಾಗಿರುವ ದಾನವನ್ನು ನೀಡಿದವನು ಹಾಗೂ ಬಹುತೇಕ ವೀರಗಲ್ಲನ್ನು ಹಾಕಿಸಿದವನು ಪರಮನ ಮಗ ಸಿಜ್ಗಟಿಗ.

ಈವರೆಗೆ ಮಣ್ಣೆಯ ಆಸುಪಾಸಿನಲ್ಲಿ ಶಿವಮಾರನ ಒಂದು ಶಾಸನವೂ ದೊರೆತಿರಲಿಲ್ಲ. ಆದ್ದರಿಂದ ಈ ಶಾಸನವು ಪ್ರಮುಖ ಎನಿಸಿಕೊಳ್ಳುತ್ತದೆ ಹಾಗೂ ಮಣ್ಣೆಯ ಕೋಟೆಯ ಬಗ್ಗೆ ಮೊದಲ ಬಾರಿಗೆ ದಾಖಲೆಯನ್ನೊದಗಿಸುತ್ತದೆ.

ಮಣ್ಣೆಯಲ್ಲಿ ಒಂದು ಕೋಟೆ ಇತ್ತು ಎನ್ನುವುದಾದರೆ, ಅದು ಎಲ್ಲಿತ್ತು? ಅದರ ವ್ಯಾಪ್ತಿ ಎಷ್ಟಿತ್ತು? ಇತ್ಯಾದಿ ಪ್ರಶ್ನೆಗಳು ಎದುರಾಗುತ್ತವೆ. ಅವುಗಳಿಗೆ ಉತ್ತರವನ್ನು ಮಣ್ಣೆ ಮತ್ತು ಮರಳುಕುಂಟೆಗಳ ನಡುವೆ ಇರುವ ದುಗ್ಗಲಮ್ಮ ಗುಡ್ಡದಲ್ಲಿ ಕಾಣಬಹುದು.

ದುಗ್ಗಲಮ್ಮ ಗುಡ್ಡವು ಮಣ್ಣೆ ಗ್ರಾಮದ ಗಡಿಗೆ ಹೊಂದಿಕೊಂಡಂತೆಯೇ ಇದೆ. ಮಣ್ಣೆಯಿಂದ ಮರಳಕುಂಟೆಗೆ ಹೋಗುವಾಗ ರಾಮಪುರ ದಾಟಿದ ನಂತರ ಎಡಬದಿಗೆ ಕಾಣುವ ಸಣ್ಣದೊಂದು ಗುಡ್ಡವೇ ದುಗ್ಗಲಮ್ಮ ಗುಡ್ಡ. ಸುಮಾರು ೩೦೦ ರಿಂದ ೩೫೦ ಅಡಿ ಉದ್ದ ಮತ್ತು ೫೦ ರಿಂದ ೭೫ ಅಡಿ ಅಗಲದ ಮಟ್ಟಸ ಪ್ರದೇಶವನ್ನು ಈ ಗುಡ್ಡದ ಮೇಲೆ ಕಾಣಬಹುದು. ಈ ಮಟ್ಟಸವಾದ ಬಂಡೆಯ ಉತ್ತರದ ಅಂಚಿನಲ್ಲಿ ಇಟ್ಟಿಗೆಯ ತಳಪಾಯದ ಗುರುತನ್ನು ಕಾಣಬಹುದು. ಇಟ್ಟಿಗೆಗಳನ್ನು ಓರೆಯಾಗಿ ನಿಲ್ಲಿಸಲಾಗಿದ್ದು, ಇದು



ದುರ್ಗಾ ಗುಡಿಯ ತಳಪಾಯದ ನಕ್ಷೆ (ಗೆರೆಗಳು).

ಅರ್ಧವೃತ್ತಾಕಾರದಲ್ಲಿ ಉಳಿದಿದೆ. ಈ ಅಂಚು ಇರುವುದು ಉತ್ತರ ಭಾಗಕ್ಕೆ; ಇಲ್ಲೇ ಪೂರ್ವಕ್ಕೆ ೮ ಅಡಿ ಚಚ್ಚೌಕ ಮತ್ತು ಪಶ್ಚಿಮಕ್ಕೆ ೮ ಅಡಿ ಚಚ್ಚೌಕ ಗುರುತುಗಳಿದ್ದು, ಇವುಗಳ ನಡುವೆ ಇರುವ ಎರಡು ಅಡಿಗಳ ಅಂತರವನ್ನು ಎರಡು ಗೆರೆಗಳು ಕೂಡಿಸಿವೆ. ಇಲ್ಲಿ ಹಾಕಲಾಗಿರುವ ಗೆರೆಗಳ ಗುರುತು ಇನ್ನೂ ಮಾಸಿಲ್ಲ. ಈ ಗೆರೆಗಳು ಮತ್ತು ಹೊಂದಿಕೊಂಡಿರುವ ಇಟ್ಟಿಗೆಯ ತಳಪಾಯದ ಗುರುತುಗಳು, ಇಲ್ಲಿದ್ದ ಯಾವುದೋ ಕಟ್ಟಡವನ್ನು ನಿರ್ದೇಶಿಸುತ್ತವೆ. ಇಷ್ಟು ಚಿಕ್ಕದಾದ ಕಟ್ಟಡವು ವಾಸದ ನೆಲೆಯಂತು ಆಗಿರಲು ಸಾಧ್ಯವಿಲ್ಲ. ಆದ್ದರಿಂದ, ಈ ಗುರುತುಗಳು ಇಲ್ಲಿ ಇದ್ದ ಯಾವುದೋ ಒಂದು ದೇವಾಲಯಕ್ಕೆ ಸಂಬಂಧಿಸಿವೆ ಎಂದು ತಿಳಿಯುತ್ತದೆ. ಈ ಗುಡ್ಡಕ್ಕೆ ಈಗ ಇರುವ ಹೆಸರು ದುಗ್ಗಲಮ್ಮ ಗುಡ್ಡ. ಆದ್ದರಿಮದ ಸಹಜವಾಗಿಯೇ ಇದು ದುರ್ಗಿಗೆ ಸಂಬಂಧಿಸಿದ ನೆಲೆ ಎಂದು ಸ್ಪಷ್ಟವಾಗುತ್ತದೆ. ಗುಡ್ಡದ ಪೂರ್ವದ ತಪ್ಪಲಿನಲ್ಲಿ ಸುಂದರ ಮಹಿಷಾಸುರ ಮರ್ದಿನಿಯ ವಿಗ್ರಹವು ಭಿನ್ನವಾಗಿ ಬಿದ್ದಿದೆ. ಬಹುಷಃ ಇದೇ ವಿಗ್ರಹಕ್ಕೆ, ಮೇಲೆ ತಿಳಿಸಲಾದ ಗೆರೆಗಳ ಗುರುತಿನ ನಕ್ಷೆಯ ಮೇಲೆ ನಿರ್ಮಿತವಾಗಿದ್ದ ದೇವಾಲಯದಲ್ಲಿ ಪೂಜೆ ಸಲ್ಲುತ್ತಿತ್ತು ಎಂದು ಭಾವಿಸಬಹುದಾಗಿದೆ. ಒಟ್ಟು ಹದಿನಾರು ಕೈಗಳ, ಕಪ್ಪುಕಲ್ಲಿನ ಶಿಲ್ಪವು ಸುಮಾರು ೩ ಅಡಿ ಎತ್ತರ ಮತ್ತು ಎರಡು ಅಡಿ ಅಗಲ ಇದೆ. ಪಾದದ ಭಾಗ ಪೂರ್ಣ ಪ್ರತ್ಯೇಕಗೊಂಡು ಬಿದ್ದಿದೆ. ದೇವಿಯು ತನ್ನ ಅತ್ಯಂತ ಮೇಲಿನ ಎಡ ಹಸ್ತದಲ್ಲಿ ಭರ್ಜಿಯಂಥಯ ಆಯುಧವನ್ನು ಹಿಡಿದಿದ್ದಾಳೆ. ಬಲಭಾಗುದ ಕೈಗಳ ಪೈಕಿ ಕೆಳಗಿನಿಂದ ಎರಡನೆಯ ಕೈನಲ್ಲಿ ಗುರಾಣಿ ಹಿಡಿದಿದ್ದಾಳೆ.



ದುಗ್ಗಲಮ್ಮ ಗುಡ್ಡದ ಪೂರ್ವದಲ್ಲಿ ಬಿದ್ದಿರುವ ಮಹಿಷಾಸುರ ಮರ್ದಿನಿಯ ಭಗ್ನ ವಿಗ್ರಹ

ಬಹುತೇಕ ಎಲ್ಲ ಕೈಗಳ ಹಸ್ತದ ಭಾಗಗಳು ಭಿನ್ನವಾಗಿವೆ. ಮುಖದಲ್ಲಿ ಉಗ್ರಮುಖಭಾಗವನ್ನು ಗುರುತಿ ಸಬಹುದು. ಮಹಿಷಾಸುರ ಮರ್ದಿನಿ ಅರ್ಥಾತ್ ದುರ್ಗಿಯ ನೆಲೆಯಾಗಿತ್ತು ಎಂದು ಭಾವಿಸಲು ಅವಕಾಶಗಳಿವೆ. ಈಗಾಗಲೇ ಪ್ರಸ್ತಾಪಿಸಲಾಗಿರುವ ದೇವಾಲಯವು ಈ ಮಹಿಷಾಸುರ ಮರ್ದಿನಿ ಅರ್ಥಾತ್ ದುರ್ಗಿಗೆ ಸಂಬಂಧಿಸಿದ್ದು, ಆದ್ದರಿಂದಲೇ ಈ ಗುಡ್ಡಕ್ಕೆ ದುಗ್ಗಲಮ್ಮನ ಗುಡ್ಡ ಎಂಬ ಹೆಸರು ಉಳಿದಿದೆ ಎಂದು ತಿಳಿಯಬಹುದಾಗಿದೆ.



ದುರ್ಗಿ ವಿಗ್ರಹ

ಇದು ದುರ್ಗಿಯ ನೆಲೆಯಾದ್ದರಿಂದ, ಆಕೆಗೆಂದೇ ಒಂದು ದೇವಾಲಯವೂ ಇತ್ತು ಎಂದು ಈಗ ಸ್ಪಷ್ಟವಾಗಿರು ವುದರಿಂದ, ಇದು ಪ್ರಾಚೀನ ಕಾಲಕ್ಕೆ ಯುದ್ಧದ ನೆಲೆಯೂ ಆಗಿದ್ದಿರಬಹುದು ಎಂದು ಊಹಿಸಲು ಅವಕಾಶ ಗಳಿವೆ. ಗಂಗ ವಂಶದ ಪ್ರಸಿದ್ಧ ದೊರೆ ಗಳಲ್ಲಿ ಒಬ್ಬನಾದ ಶ್ರೀಪುರುಷನ ಕಾಲಕ್ಕಾಗಲೇ ಮಣ್ಣೆಯು ಒಂದು ವಿಜಯಸ್ಕಂದಾ ವಾರ ಎಂಬ ಮನ್ನಣೆಗೆ ಪಾತ್ರವಾಗಿದ್ದ ವಿಷಯವು ಅವನ ಕಾಲದ ಹಲವು ಶಾಸನಗಳಿಂದ ತಿಳಿದಿದೆ.[3] ಆ ಯುದ್ಧದ ನೆಲೆಯು ಈಗ ತಿಳಿದಿರುವ ದುಗ್ಗಲಮ್ಮನ ಗುಡ್ಡ ಎಂದು ಖಚಿತವಾಗುತ್ತದೆ. ಇದು ಯುದ್ಧದ ನೆಲೆಯಾದ ಕಾರಣದಿಂದಲೇ ಇಲ್ಲಿ ಮಹಿಷಾಸುರ ಮರ್ದಿನಿ ಅರ್ಥಾತ್ ದುರ್ಗಿಯ ದೇವಾಲಯಕ್ಕೆ ಅವಕಾಶ ದೊರೆತಿದೆ.

ದುಗ್ಗಲಮ್ಮ ಗುಡ್ಡದಿಂದ ಪಶ್ಚಿಮಕ್ಕೆ ಸುಮಾರು ೧೦೦ ಅಡಿಗಳ ಅಂತರದಲ್ಲಿ ಕಲ್ಲು ಬಂಡೆಗಳ ಸಾಲು ಇದೆ. ಈ ಸಾಲು ಬಂಡೆಗಳಿಂದ ಮುಂದಕ್ಕೆ ಪ್ರಪಾತ ಅಥವಾ ಕಂದಕದಂತಹ ಪ್ರದೇಶ. ಈ ಬಂಡೆಗಳ ಮೇಲೆ ನಿಂತು ನೋಡಿದರೆ, ಸುತ್ತಲೂ ಸುಮಾರು ಇಪ್ಪತ್ತು ಮೈಲಿಗಳ ವ್ಯಾಪ್ತಿಯ ಪ್ರದೇಶವನ್ನು ವೀಕ್ಷಿಸಬಹುದು. ಈ ಬಂಡೆಗಳ ಸಾಲು ಮತ್ತು ದುರ್ಗಿಯ ದೇವಾಲಯ ಇದ್ದ ನಡುವಿನ ಕಣಿವೆಯಂತಹ ಪ್ರದೇಶದಲ್ಲಿ ಗಂಗರ ಸೈನ್ಯ ಬೀಡು ಬಿಟ್ಟು, ಬಂಡೆಯ ಸಾಲಿನ ಮೇಲಿನಿಂದ ಶತ್ರುಗಳ ಚಲನ ವಲನಗಳ ಮೇಲೆ ಕಣ್ಣಿಟ್ಟು, ವ್ಯವಸ್ಥಿತವಾಗಿ ಯುದ್ಧ ಮಾಡುತ್ತಿತ್ತು ಎಂದು ತಿಳಿಯಬಹುದು. ಆದ್ದರಿಂದ ಬಹುತೇಕ ಈ ಬಂಡೆಗಳ ಸಾಲು ಕಾವಲು ನೆಲೆಯಾಗಿತ್ತು ಎಂದು ಭಾವಿಸಲು ಅವಕಾಶಗಳಿವೆ. ರಾಷ್ಟ್ರಕೂಟರ ಸೈನ್ಯವು ಓರೇಗುಂಡಗಲ್ಲು ಮಾರ್ಗವಾಗಿ ಮಣ್ಣೆಯನ್ನು ಈ ಮಾರ್ಗವಾಗಿಯೇ ಪ್ರವೇಶಿಸಬೇಕಾಗಿತ್ತು. ಆದ್ದರಿಂದ ಆಯಕಟ್ಟಿನ ಈ ಪ್ರದೇಶವನ್ನು ಶ್ರೀ ಪುರುಷನ ಕಾಲಕ್ಕೆ ಯುದ್ಧದ ನೆಲೆಯಾಗಿ ಬಳಸಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಈ ಮೇಲೆ ಪ್ರಸ್ತುತಪಡಿಸಿದ ಶಿವಮಾರನ ಮರಳಕುಂಟೆ ಶಾಸನದಲ್ಲಿ ಉಕ್ತವಾಗಿರುವ ಮಣ್ಣೆಯ ಕೋಟೆಯ ಮೊದಲ ಸುತ್ತು ಈ ದುಗ್ಗಲಮ್ಮ ಗುಡ್ಡವನ್ನು ಹೊಂದಿಕೊಂಡಂತೆಯೇ ಇತ್ತು ಎಂದು ತಿಳಿಯಲು ಅವಕಾಶಗಳಿವೆ.

ಹಲವು ವರ್ಷಗಳ ಹಿಂದಿನವರೆಗೂ ದುಗ್ಗಲಮ್ಮನ ಗುಡ್ಡದ ಮೇಲಿನ ದುರ್ಗಿಗೆ ಉತ್ಸವ ಅಥವಾ ಜಾತ್ರೆ ಆಗುತ್ತಿತ್ತು ಮತ್ತು ಎರಡು ಊರುಗಳ ನಡುವಿನ ಜನರ ಭಿನ್ನಾಭಿಪ್ರಾಯದಿಂದ ಈ ಉತ್ಸವ ಅಥವಾ ಜಾತ್ರೆ ನಿಂತಿತು ಎಂದು ಇಲ್ಲಿನ ಕೆಲವು ಹಿರಿಯರ ಹೇಳಿಕೆ. ಈ ಮಾತಿಗೆ ಯಾವುದೇ ಲಿಖಿತ ದಾಖಲೆಯನ್ನು ಒದಗಿಸಲು ಸಾಧ್ಯವಿಲ್ಲ. ಆದರೆ ಗುಡ್ಡಕ್ಕೆ ಈಗಲೂ ಉಳಿದಿರುವ ಹೆಸರು, ಗುಡ್ಡದ ಮೇಲೆ ಈಗಲೂ ಇರುವ ರೇಖಾ ನಕ್ಷೆ, ನೆಲಕ್ಕೆ ಹದಿಯಲಾಗಿರುವ ಗಂಗರ ಕಾಲದ್ದೆಂದು ಹೇಳಬಹುದಾದ ಇಟ್ಟಿಗೆಯ ತಳಪಾಯದ ಗುರುತು ಮತ್ತು ಗುಡ್ಡದ ಕೆಳಗೆ ಬಿದ್ದಿರುವ ಮಹಿಷಾಸುರ ಮರ್ದಿನಿಯ ಶಿಲ್ಪ, ಗುಡ್ಡದ ದಕ್ಷಿಣ ಅಂಚಿನಲ್ಲಿರುವ ಕೆರೆಯಲ್ಲಿ ಕಾಣುವ ಭೈರವಿ ಶಿಲ್ಪ ಹಾಗೂ ಸುತ್ತಲಿನ ಪರಿಸರವು ಇದು ಯುದ್ಧದ ನೆಲೆಯಾಗಿದ್ದ ಸಾಧ್ಯತೆಗಳೇ ಹೆಚ್ಚು ಎಂದು ಖಚಿತಪಡಿಸುತ್ತವೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ. XVI (ಸಪ್ಲಿಮೆಂಟರಿ), ತುಮಕೂರು ೮೬ ರಿಂದ ೧೦೬

೨. ೧) ಎ.ಕ. IX ನೆಲಮಂಗಲ ೬೦,
೨) M.S. Nagaraja Rao & K.V. Ramesh, 1985 Copper plate inscriptions from Karnataka: Recent Discoveries. Mysore, No. 3. pp. 8-13

೩. i) ಎ.ಕ. VI ಮೂಡಿಗೆರೆ ೩೬, ಕ್ರಿ.ಶ. ೭೫೦-೫೧, ii) ಎ.ಕ. X ಗೌರಿಬಿದನೂರು, ಕ್ರಿ.ಶ. ೭೬೨-೬೩, iii) ಎ.ಕ. IV ನಾಗಮಂಗಲ ೮೫ ಕ್ರಿ.ಶ. ೭೭೬-೭೭

ಆದಪ್ಪ ಪಾಸೋಡಿ*

ಮೇದಹಳ್ಳಿಯ ವೀರರ ಗುಡಿಗಳು ಮತ್ತು ಅಪ್ರಕಟಿತ ಶಾಸನಗಳು

ಬೆಂಗಳೂರು ಪೂರ್ವ ತಾಲ್ಲೂಕು ಕೃಷ್ಣರಾಜಪುರದಿಂದ ಹೊಸಕೋಟೆ ಮಾರ್ಗದಲ್ಲಿ (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-೪) ಮೇಡಹಳ್ಳಿ ಗ್ರಾಮವಿದೆ. 'ಮೇಡಹಳ್ಳಿ' ಸಸ್ಯಸಂಬಂಧಿ ಸ್ಥಳನಾಮವಾಗಿದೆ. 'ಮೇದೆ' ಔಷಧಕ್ಕೆ ಬಳಕೆಯಾಗುವ ಎಂಟು ವಿಧವಾದ ಮೂಲಿಕೆಗಳಲ್ಲಿ ಒಂದು[೧]. ಶುಂಠಿಯನ್ನು ಹೋಲುವ ಒಂದು ಬಗೆಯ ಬೇರಿನ 'ಮೇದೆ' ಗಿಡಗಳು ಈ ಪ್ರದೇಶದಲ್ಲಿ ಹೆಚ್ಚಾಗಿರುವುದರಿಂದ ಮೇದಹಳ್ಳಿ ಎಂತಲೂ ಕ್ರಮೇಣವಾಗಿ ಮೇಡೆಹಳ್ಳಿ > ಮೇಡೆಹಳ್ಳಿ ಆಗಿರುವ ಸಾಧ್ಯತೆ ಇದೆ.

ಕೃಷ್ಣರಾಜಪುರ ನಗರಸಭೆಯ ೧೩ನೇ ವಾರ್ಡು ವ್ಯಾಪ್ತಿಗೊಳಪಡುವ ಮೇಡಹಳ್ಳಿಯ ಹೊರವಲಯದಲ್ಲಿ ಕೆ. ತಿಪ್ಪರಾಜು ತಂದೆ ಕೃಷ್ಣಪ್ಪ ಇವರ ಹೊಲದಲ್ಲಿ ಪೂರ್ವಾಭಿ ಮುಖವಾಗಿ ಎರಡು ಸಾಲುಗಳಲ್ಲಿರುವ ಒಂಭತ್ತು ವೀರಗಲ್ಲುಗಳು ಪ್ರಥಮ ನೋಟಕ್ಕೆ ವೀರಗಲ್ಲುಗಳಂತೆ ಕಂಡರೂ ಅವುಗಳ ಎಡ -ಬಲಕ್ಕೆ ನೆಟ್ಟ ಕಲ್ಲು ಚಪ್ಪಡಿಗಳನ್ನು ಗಮನಿಸಿದಾಗ, ವೀರರ ಗುಡಿಗಳೆಂಬುದು ಸ್ಪಷ್ಟವಾಗುತ್ತವೆ. ಒಂದು ವೀರಗಲ್ಲು ಮಾತ್ರ ಉತ್ತರಕ್ಕೆ ಮುಖ ಮಾಡಿದೆ. ವೀರಶಾಸನಗಲ್ಲೂ ಇದೆ.

ಪ್ರಥಮ ಸಾಲು-೧ನೇ ವೀರಗಲ್ಲು

ಈ ವೀರಗಲ್ಲಿನ ಮುಕ್ಕಾಲು ಭಾಗದಲ್ಲಿ ವೀರನ ಶಿಲ್ಪಕ್ಕೆ ಪ್ರಾಧಾನ್ಯತೆ ಇದೆ. ಆಲೀಢಾಸನದಲ್ಲಿ ನಿಂತು, ಬಲಗೈಯಲ್ಲಿ ಖಡ್ಗ



ಮತ್ತು ಎಡಗೈಯಲ್ಲಿ ಗುರಾಣಿ ಹಿಡಿದಿರುತ್ತಾನೆ. ಬಲಭಾಗದಲ್ಲಿ ಕುದುರೆ, ಕುದುರೆ ಮೇಲೆ ಇಬ್ಬರು ಸೈನಿಕರು ಧ್ವಜಗಳನ್ನು ಹಿಡಿದಿದ್ದಾರೆ. ಇದೇ ಬಗೆಯ ಧ್ವಜಗಳನ್ನು ಕೈಯಲ್ಲಿ ಹಿಡಿದ ಸೈನಿಕರ ಚಿತ್ರಣ ಕೋಲಾರದ ವೀರಗಲ್ಲಿನಲ್ಲಿ ಕಾಣಬಹುದು[೨]. ಧ್ವಜಗಳೆರಡರ ಮಧ್ಯದಲ್ಲಿ ಎತ್ತರದಲ್ಲಿ ಸಿಂಹಧ್ವಜವಿರುವುದು ವಿಶೇಷ. ಬಹುಶಃ ಧ್ವಜದ ಸಂಕೇತಗಳನ್ನು ಗುರುತಿಸುವುದರ ಮೂಲಕ ಯುದ್ಧರಂಗದಲ್ಲಿನ ಯೋಧರಿಗೆ ತಮ್ಮ ಪಡೆಗಳನ್ನು ಗುರುತಿಸಿಕೊಳ್ಳವುದಕ್ಕೆ ಅನುಕೂಲವಾಗುತ್ತಿತ್ತೆಂದು ತೋರುತ್ತದೆ. ವೀರಗಲ್ಲಿನ ಅಡಿಭಾಗದಲ್ಲಿ ಡೊಳ್ಳು ಬಾರಿಸುವವರಿದ್ದು, ಯುದ್ಧಕ್ಕೆ ಹೊರಡುವಾಗ, ಪ್ರಯಾಣದ ದಾರಿಯಲ್ಲಿ ಮತ್ತು ಯುದ್ಧರಂಗದಲ್ಲಿ ಅನೇಕ ರೀತಿಯ ವಾದ್ಯಗಳನ್ನು ಮೊಳಗಿಸುತ್ತಿದ್ದರು ಎಂಬ ಅಂಶ ಭಾರತೀಯ ಸಾಹಿತ್ಯ ಕೃತಿಗಳಲ್ಲಿ ಬರುವ ಯುದ್ಧ ವರ್ಣನೆಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ತಮಿಳಿನ ಸಂಗಮ್ ಸಾಹಿತ್ಯದಿಂದ ತಮಿಳರಲ್ಲಿ 'ವೀರ ಮೊರಸು', 'ಕಾಲಿಮೊರಸು' ಎಂಬ ಪ್ರಸಿದ್ಧವಾದ ಯುದ್ಧವಾದ್ಯಗಳು ಪ್ರಚಲಿತವಿದ್ದುದು ತೋರುತ್ತದೆ[೩]. ಶಂಖ, ಕಹಳೆ, ಭೇರಿ, ಪಣವ, ಝುಲ್ಲರಿ, ಮೃದಂಗದಂತಹ ವಾದ್ಯಗಳನ್ನು ಯುದ್ಧ ಸಮಯದಲ್ಲಿ ಮೊಳಗಿಸುತ್ತಿದ್ದರೆಂಬ ವಿಷಯ ಪಂಪನ ವಿಕ್ರಮಾರ್ಜುನ ವಿಜಯದಿಂದ ನಮಗೆ ತಿಳಿದು ಬರುತ್ತದೆ[೪]. ಡಮರುಗ, ಡೊಳ್ಳು, ಕಹಳೆ, ತಿತ್ತಿರಿ, ಭೇರಿ, ಡಿಂಢಿಮ, ಪಟಹ, ಪಣವ, ಕೊಳಲು, ಕೊಂಬು, ಡಮರು, ಢಕ್ಕೆ, ಜರ್ಝರ, ಚಕ್ರವಾದ್ಯ, ಚಿನ್ನಕಹಳೆ, ಹೆಗ್ಗಾಳ, ಬರುಗು, ಮದ್ದಳೆ ಮತ್ತು ನಾಗಸ್ವರ ಎಂಬ ಯುದ್ಧ ವಾದ್ಯಗಳನ್ನು ಬಳಸಲಾಗುತ್ತಿತ್ತೆಂದು ನಂಜುಂಡ ಹೆಸರಿಸುತ್ತಾನೆ[೫]. ಈ ಎಲ್ಲ ಬಗೆಯ ವಾದ್ಯಗಳನ್ನು ಬಾರಿಸುವವರು ನಿರಾಯುಧರಾಗಿರುವಂತೆ, ಯುದ್ಧರಂಗದ ಮಧ್ಯೆ ಅಥವಾ ಅಂಚಿನಲ್ಲಿ ನಿಂತಿರುವಂತೆ ಚಿತ್ರಿತವಾಗಿರುವುದರಿಂದ ಬಹುಶಃ ಇವರನ್ನು ಯುದ್ಧದಲ್ಲಿ ಕೊಲ್ಲುತ್ತಿರಲಿಲ್ಲ.[೬]

ಈ ವೀರಗಲ್ಲಿನಲ್ಲಿ ಡೊಳ್ಳು ಬಾರಿಸುವವರ ಪಕ್ಕದಲ್ಲಿ ಕಾವಡಿಯಲ್ಲಿ ಸಾಮಾನು ಸಾಗಿಸುವ ವ್ಯಕ್ತಿಯನ್ನು ಚಿತ್ರಿಸಲಾಗಿದೆ. ಯುದ್ಧಭೂಮಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಹೊರುವ ಪಡೆಯೂ ಇದ್ದಂತೆ ತೋರುತ್ತದೆ. ವೀರನನ್ನು ದೇವಾಲಯದಲ್ಲಿ ಲಿಂಗದ ಮುಂದೆ ಕುಳಿತಂತೆ ತೋರಿಸಿ, ವೀರಸ್ವರ್ಗ ಕಲ್ಪನೆ ಮೂಡಿಸಲಾಗಿದೆ. ವೀರಗಲ್ಲಿಗೆ ಒಂದು ಆಕಾರವನ್ನು ಕೊಡುವುದರ ಬದಲು ಕಲ್ಲಿನ ಮೂಲ ಆಕಾರಕ್ಕನುಗುಣವಾಗಿ ಕೆತ್ತಿದೆ.

* ಬಿ.ವಿ.ಕೆ. ಫೋಟೋ ಸ್ಟುಡಿಯೋ ಹಿಂಭಾಗ, ವರ್ತೂರು, ಬೆಂಗಳೂರು - ೫೬೦ ೦೮೭.

೨ನೇ ವೀರಗಲ್ಲು

ಇಡೀ ಕಲ್ಲಿನಲ್ಲಿ ವೀರನೊಬ್ಬನನ್ನು ಮಾತ್ರ ಬಿಡಿಸಲಾಗಿದೆ. ಆಲೀಢಾಸನದಲ್ಲಿರುವ ವೀರ ತನ್ನ ಎಡಗೈಯಲ್ಲಿ ಬಿಲ್ಲು ಮತ್ತು ಬಲಗೈಯಲ್ಲಿ ಬಾಣ (ಕಠಾರಿ?) ಹಿಡಿದಿರುವನು. ವೀರನನ್ನು ತಲೆಮುಡಿ ಕಟ್ಟಿರುವಂತೆ ಚಿತ್ರಿಸಲಾಗಿದೆ. ಕನ್ಯೆಯರು ವೀರನ ಕೈಹಿಡಿದು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವುದನ್ನು ಶಿಲ್ಪದ ಮೇಲ್ಭಾಗದಲ್ಲಿ ಚಿಕ್ಕದಾಗಿ ತೋರಿಸಲಾಗಿದೆ. ವೀರಗಲ್ಲು ಬಲಕ್ಕೆ ವಾಲಿಕೊಂಡಿರುವುದರಿಂದ ಎಡ-ಬಲಕ್ಕೆ ಕಲ್ಲುಚಪ್ಪಡಿಗಳು ಅಸ್ತವ್ಯಸ್ತವಾಗಿ ಬಿದ್ದಿರುತ್ತವೆ.


೩ನೇ ವೀರಗಲ್ಲು

ವೀರನನ್ನು ಪ್ರಧಾನವಾಗಿ ತೋರಿಸಿರುವ ಈ ವೀರಗಲ್ಲಿನ ಬಲಕ್ಕೆ ಕಲ್ಲೊಂದು ನೆಟ್ಟ ಸ್ಥಿತಿಯಲ್ಲಿದೆ. ಅಷ್ಟೇ ಗಾತ್ರದ ಅಸ್ಪಷ್ಟ ಶಾಸನಶಿಲೆ ಎಡಭಾಗದಲ್ಲಿ ಬಿದ್ದಿರುವುದರಿಂದ, ಇದೂ ಕೂಡ ವೀರನ ಗುಡಿಯಾಗಿತ್ತೆಂದು ಹೇಳಬಹುದು. ಶಿಲ್ಪದಲ್ಲಿ ವೀರನು ಆಯುಧಪಾಣಿಯಾಗಿ ಶತ್ರು ಪಕ್ಷದವರ ಮೇಲೆ ಆಕ್ರಮಣ ಮಾಡುತ್ತಿರುವಂತೆ, ಶತ್ರುಪಾಳೆಯದಿಂದ ಬಾಣವೊಂದು ವೀರನ ತೊಡೆಯ ಭಾಗದಲ್ಲಿ ಪ್ರವೇಶಿಸಿರುವಂತೆ ಬಿಡಿಸಲಾಗಿರುತ್ತದೆ, ಎದುರಾಳಿಗಳನ್ನು ಇಲ್ಲಿ ತೋರಿಸಿಲ್ಲ. ವೀರ ತನ್ನ ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಬಿಲ್ಲು ಹಿಡಿದಿದ್ದಾನೆ.

ವೀರಗಲ್ಲಿನ ಬಲಭಾಗದಲ್ಲಿ ಮೂರು ಹಸುಗಳನ್ನು ಬಿಡಿಸಿರುವುದರಿಂದ ಇದೊಂದು 'ತುರುಗೋಳ್' ಎಂಬುದು ಸ್ಪಷ್ಟವಾಗುತ್ತದೆ. ಭಾರತೀಯ ತುರುಗಾಳಗಳನ್ನು ಗಮನಿಸಿದಾಗ ಅವುಗಳನ್ನು ನಡೆಸುತ್ತಿದ್ದವರ ಉದ್ದೇಶಗಳನ್ನು ಗಮನದಲ್ಲಿಟ್ಟು ಕೊಂಡು, ರಾಜಕೀಯ ಕಾರಣಗಳನ್ನು ಉದ್ದೇಶವಾಗಿಟ್ಟುಕೊಂಡು ಅಪಹರಿಸುತ್ತಿದ್ದುದು ಮತ್ತು ಕೇವಲ ಕಳ್ಳತನಕ್ಕಾಗಿಯೇ ಅಪಹರಿಸುತ್ತಿದ್ದುದು ಎಂಬುದಾಗಿ ಎರಡು ಸ್ತರಗಳಲ್ಲಿ ಗುರುತಿಸಬಹುದಾಗಿದೆ. ಉದ್ದೇಶಗಳೇನೇ ಇರಲಿ, ತುರುಗಳನ್ನು ಅಪಹರಿಸಿದವರನ್ನು ಎದುರಿಸಿ, ಬಿಡಿಸಿಕೊಂಡು ತರುವುದನ್ನು ವೀರತನವೆಂದೇ ಬಗೆಯಲಾಗಿತ್ತು[2]. ಹೀಗೆ ತುರುಗಾಳಗದಲ್ಲಿ ಮಡಿದ ವೀರನಿಗೆ ವೀರಸ್ವರ್ಗ ಎಂಬ ಸಂಕೇತವನ್ನು ಈ ವೀರಗಲ್ಲಿನ ಎಡಮೇಲ್ಭಾಗದಲ್ಲಿ ಕಂಡರಿಸಲಾಗಿದೆ.


ತುರುಗಾಳಗದ ಪ್ರಸ್ತಾಪವಿರುವ ಶಿಲಾಶಾಸನವೊಂದು ಇದೇ ಪರಿಸರದ ೫ನೇ ವೀರಗಲ್ಲಿನ ಬಲಭಾಗದಲ್ಲಿ ಬಿದ್ದಿರುತ್ತದೆ. ೬ ೧/೨ ಅಡಿ ಉದ್ದ, ೩ ಅಡಿ ಅಗಲವಿರುವ ದಪ್ಪನೆಯ ಕಲ್ಲು ಚಪ್ಪಡಿ ಮೇಲೆ ೮ ಸಾಲುಗಳಲ್ಲಿ ಗಂಗರ ಕಾಲದ ಶಾಸನವಿದೆ. ಅದರ ಪಾಠ ಹೀಗಿದೆ.

೧ ಸ್ವಸ್ತಿ ಶ್ರೀ ರಾಚ ಸ
೨ ಟ್ಟಿಯರ ಮಗ ಮ
೩ ರಮ್ಮ ಸೆಟ್ಟಿ ಥಳರ
೪ ದರ ಬೆಟದಲ
೫ ನ್ದು ಪರಳೂರ ತುರು
೬ ಗೊಣ್ಡೊಡೆ ಕಾದಿ ಸ
೭ ತ್ತ ಬಿಳ್ಗುನ್ದ (ರಾಜ?) ರಾ
೮ ಚವಲ್ಲರ ಬಾವ



ರಾಚಸೆಟ್ಟಿಯರ ಮಗ ಮರಮ್ಮಸೆಟ್ಟಿ ಪರಳೂರಿನ (ಹರಳೂರು) ತುರುಗಳನ್ನು ಅಪಹರಿಸುತ್ತಾನೆ[೮]. ತುರುಗಳ ಅಪಹರಣ ಮಾಡಿದ ಮರಮ್ಮಸೆಟ್ಟಿಯನ್ನು ಎದುರಿಸುವ ಪ್ರಯತ್ನ ಮಾಡಿ, ಬೀಳ್ಗುನ್ದದಲ್ಲಿ ಕಾದಿ ಸತ್ತವನು ರಾಚವಲ್ಲರ ಭಾವ ಶಾಸನವಿರುವ ಸ್ಥಳದಿಂದ ಪಶ್ಚಿಮ ದಿಕ್ಕಿನಲ್ಲಿ (ಬೀಳ್ಗುನ್ದ=ಬೀಳ್+ಕುಂದ) ಹಾಳುಗುಡ್ಡದ ಸಾಲು ಈಗಲೂ ಮೇಡಹಳ್ಳಿಯಲ್ಲಿ ಕಾಣಸಿಗುತ್ತದೆ. ಶಾಸನೋಕ್ತ 'ಪರಳೂರು' ಈಗ ಹೊಸಕೋಟೆ ತಾಲ್ಲೂಕಿನಲ್ಲಿರುವ ಹರಳೂರು ಗ್ರಾಮವಾಗಿದೆ. 'ಥಳರದ ಬೆಟ್ಟ' ಎಂಬುದು ತುರುಗಳನ್ನು ಮೇಯಲು ಬಿಡುವ ಹುಲ್ಲುಗಾವಲು ಅಥವಾ ತುರುಗಳನ್ನು ಹಿಡಿದಿಟ್ಟ ಬೆಟ್ಟ ಪ್ರದೇಶವಾಗಿದೆ.ಇದನ್ನು ತಳವಾರರಿಗೆ ಬಿಟ್ಟಿದ್ದರಿಂದ ತಳವಾರ ಬೆಟ್ಟ > ತುಳಾರ ಬೆಟ್ಟ > ಥಳಾರ ಬೆಟ್ಟ > ಥಳರದ ಬೆಟ್ಟ ಎಂಬ ರೂಢಿನಾಮ ಬಂದಿರುವ ಸಾಧ್ಯತೆ ಇದೆ[೯]. ತುರುಗಾಳದಲ್ಲಿ ಹೋರಾಡಿ ಮಡಿದ ವ್ಯಕ್ತಿಯ ಹೆಸರು ಹೇಳದೆ ಅವನು 'ರಾಚವಲ್ಲರ ಭಾವ' ಎಂಬ ಸಂಬಂಧ ಸೂಚಕ ಪದ ಬಳಕೆ ಮಾಡಲಾಗಿದೆ. 'ರಾಚವಲ್ಲರಭಾವ'ನ ಬಗ್ಗೆ ಹೇಳುವುದಾದರೆ, ಗಂಗರ ದೊರೆ ನೀತಿಮಾರ್ಗ ಎರೆಯಂಗನ ಮಗನಾದ ಇಮ್ಮಡಿ ರಾಚಮಲ್ಲನ (೮೭೦-೯೧೯) ಅಧೀನನಾಗಿ 'ಗಂಗರು ಸಾಸಿರ'ದ ಆಳ್ವಿಕೆ ನಡೆಸುತ್ತಿದ್ದ ಮತ್ತು ಗಂಗವಂಶದ ಜಾಯಬ್ಬೆಯ ಮಗನಾದ ಮಹೇಂದ್ರನನ್ನು 'ರಾಚವಲ್ಲರ ಭಾವ'ನೆಂದು ತಿಳಿಯಲು ಸಾಧ್ಯವಿಲ್ಲ. ಏಕೆಂದರೆ, ಈ ಮಹೇಂದ್ರ, ಎರೆಯಪ್ಪನಿಂದ ಹತನಾದ ವಿಷಯ ಶಿವಮೊಗ್ಗ ಬಲಿಯ ಹುಂಚದ ಶಾಸನದಿಂದ ತಿಳಿದಿದೆ.[೧೦] ಹಾಗಾದರೆ ಶಾಸನದಲ್ಲಿ ಉಲ್ಲೇಖವಾಗಿರುವ 'ರಾಚವಲ್ಲರ ಭಾವ' ಗಂಗದೊರೆ ೩ನೇ ರಾಚಮಲ್ಲನ (೯೩೩-೯೩೬) ಭಾವನಾಗಿರಬಹುದೇ?

ಈ ಶಿಲಾಶಾಸನದ ಅಕ್ಷರಗಳು ಬೇಗೂರಿನ ನಾಗತ್ತರನ ಶಾಸನ ಮತ್ತು ಕುರುಡುಸೊಣ್ಣೇನಹಳ್ಳಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಎಲೆಮಲ್ಲಪ್ಪನ ಕೆರೆ ದಂಡೆ ಮೇಲಿರುವ 'ಎರೆಯಪಮಜ್ಜಲದ ಊರಳಿವು' ಶಾಸನ[೧೧]ದಲ್ಲಿರುವ ಅಕ್ಷರಗಳನ್ನು ಮತ್ತು ಶಿಲ್ಪವನ್ನು ಹೋಲುತ್ತವೆ. ಆದ್ದರಿಂದ ಮೇಡಹಳ್ಳಿ



ತುರುಗೋಳ್ ಕುರಿತಾದ ಈ ಶಿಲಾಶಾಸನದ ಕಾಲ ಸುಮಾರು ೧೦ನೇ ಶತಮಾನದ ಪೂರ್ವಭಾಗ ಎಂದು ಹೇಳ ಬೇಕಾಗುತ್ತದೆ.

೪ನೇ ವೀರಗಲ್ಲು

ಆಳವಾಗಿ ತಗ್ಗು ತೋಡಿ ವೀರಗಲ್ಲನ್ನು ಕಿತ್ತು, ಕೆಳಮುಖ ಮಾಡಿ ಹಾಕಿರುವುದರಿಂದ ವಿವರಗಳು ಅಸ್ಪಷ್ಟ.

೫ನೇ ವೀರಗಲ್ಲು

ಮೇಡಹಳ್ಳಿ ವೀರಗಲ್ಲು ಗಳ ಸಮೂಹದಲ್ಲೇ ಅತ್ಯಂತ ಸುಂದರವಾಗಿರುವ ಮತ್ತು ವೀರನ ಅಂಗಸೌಷ್ಠವ ಚೆನ್ನಾಗಿ ಮೂಡಿ ಬಂದಿರುವ ವೀರಗಲ್ಲು ಇದಾಗಿದೆ. ಆಲೀಢಾಸನದಲ್ಲಿರುವ ವೀರ ಬಲಗೈಯಲ್ಲಿ ಖಡ್ಗ ಹಾಗೂ ಎಡಗೈಯಲ್ಲಿ ಗುರಾಣಿ ಹಿಡಿದು ವೀರಾವೇಶದಿಂದ ಹೋರಾಡುತ್ತಿದ್ದಾನೆ. ಎದುರುಗಡೆಯಿಂದ ಬರುತ್ತಿರುವ ಒಂಭತ್ತು ಬಾಣಗಳು ರಕ್ಷಾಕವಚಕ್ಕೆ ತಾಕಿರುತ್ತವೆ. ಒಂದು ಬಾಣ ಮಾತ್ರ ಎಡಭುಜಕ್ಕೆ , ಇನೊಂದು ಬಾಣ ಎಡ



ತೊಡೆಗೆ ಸ್ಪರ್ಷಿಸಿವೆ. ವೀರನ ಹಿಂದೆ ಪಟ್ಟದ ಕುದುರೆ, ಕುದುರೆಯ ಮೇಲೆ ಇಬ್ಬರು ಸೈನಿಕರು ರಾಜಛತ್ರಿಯನ್ನು ಹಿಡಿದಿರುತ್ತಾರೆ. ಧ್ವಜವು ಹೇಗೆ ಒಂದು ಆಡಳಿತ ವ್ಯವಸ್ಥೆಯ ಸಂಕೇತವಾಗಿತ್ತೋ, ಹಾಗೆಯೇ ರಾಜಛತ್ರಿಯೂ ಆಡಳಿತ ವ್ಯವಸ್ಥೆಯ ಮತ್ತೊಂದು ಸಂಕೇತ. ರಾಜಛತ್ರಿಯು ಒಂದು ಆಳ್ವಿಕೆಯ ಅಧೀನದಲ್ಲಿರುವ ಪ್ರಜೆಗಳ ರಕ್ಷಣಾ ಸಂಕೇತವೂ ಹೌದು. ರಾಜನೊಬ್ಬ ಬೇರೆ ಸಾಮ್ರಾಜ್ಯಗಳನ್ನು ಗೆದ್ದು, ತನ್ನ ಪ್ರದೇಶಕ್ಕೆ ಸೇರಿಸಿಕೊಂಡರೆ, ಆಗ ರಾಜನಾಳ್ವಿಕೆ ಗೊಳಪಟ್ಟ ಜನ ಆ ಪ್ರದೇಶವೂ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಬಂದಿತೆಂದು ಭಾವಿಸುತ್ತಿದ್ದರು. ಈ ಬಗೆಯ ರಾಜಛತ್ರಿಗಳನ್ನು ರಾಜರಿಗಲ್ಲದೆ, ಪ್ರತಿಷ್ಠಿತರಾದ ವೀರರಿಗೆ ಅವರ ಸೇವಕರು ರಣರಂಗದಲ್ಲಿ ಹಿಡಿಯುತ್ತಿದ್ದರೆಂದು ಇದರಿಂದ ತಿಳಿದುಬರುತ್ತದೆ. ಯುದ್ಧಭೂಮಿಗೆ ಹೊರಡುವಾಗ ಗೌರವಸೂಚಕವಾದ ರಾಜಛತ್ರಿಯನ್ನು ಹಿಡಿಸಿಕೊಂಡು ಹೋಗುವ ಪರಿಪಾಠವಿದ್ದಂತೆ ತೋರುತ್ತದೆ[೧೨].

ಪ್ರತಿಷ್ಠಿತರ ವೀರಗಲ್ಲುಗಳನ್ನು ಮಾಡುವಲ್ಲಿ ಶಿಲ್ಪಗಳು ಕೆಲವಾರು ವಿಶೇಷ ವಿವರಗಳನ್ನು ಬಿಡಿಸಬೇಕೆಂದು ಷರತ್ತುಗಳನ್ನು ಹಾಕಿಕೊಂಡಿದ್ದಂತೆ ತೋರುತ್ತದೆ. ಅದರಂತೆ ಈ ವೀರಗಲ್ಲನ್ನು ಸಹ ನುರಿತ ಶಿಲ್ಪಿಯೊಬ್ಬ ಮಾಡಿದ್ದು, ಉಳಿದ ವೀರಗಲ್ಲುಗಳಿಗಿಂತ ಹೆಚ್ಚು ಉದ್ದಗಲ ಮತ್ತು ಎತ್ತರವಿರುವ ಕಲ್ಲನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಇಂಥದೇ ಸುಂದರ ಶಿಲ್ಪ ಹೊಸಕೋಟೆ ತಾಲ್ಲೂಕು ದೊಡ್ಡ ಹುಲ್ಲೂರಿನ ಕೆರೆ ದಂಡೆ ಮೇಲಿರುವ ಪುರಾತನ ಈಶ್ವರ ದೇವಸ್ಥಾನದ ಮುಂದೆ ಇದೆ. ಇದರಲ್ಲಿ ಪಲ್ಲಕ್ಕಿ ಹೊತ್ತಿರುವ ಸೇವಕರು, ಪಟ್ಟದ ಕುದುರೆ, ರಾಜಛತ್ರಿಗಳನ್ನು ಬಿಡಿಸಲಾಗಿದೆ. ವೀರನ ಎದುರಿನಿಂದ ಶತ್ರು ಬರ್ಚಿ ಹಿಡಿದು ಕುದುರೆ ಮೇಲೆ ಬರುತ್ತಿದ್ದಾನೆ. ಬಹುಶಃ ಯುದ್ಧರಂಗಕ್ಕೆ ಹೊರಟಾಗ ಅರಸ ಅಥವಾ ದಂಡಾಧಿಪತಿ ಪಲ್ಲಕ್ಕಿಯಲ್ಲಿ ಕುಳಿತು ಹೋಗುತ್ತಿದ್ದಿರಬಹುದು; ಈ ರೀತಿ ಪಲ್ಲಕ್ಕಿಯಲ್ಲಿ ವೀರನನ್ನು ಹೊತ್ತುಕೊಂಡು ಹೋಗುತ್ತಿರುವ ಚಿತ್ರ ಕಾಯ್ಕಿಣಿ ಮತ್ತು ಬೆಂಗಳೂರಿನ ಗೋಖಲೆ ಇನ್‌ಸ್ಟಿಟ್ಯೂಟ್ ಬಳಿಯಿರುವ ವೀರಗಲ್ಲುಗಳ ಶಿಲ್ಪದಲ್ಲಿ ಗಮನಿಸಬಹುದು. ಆದರೆ ಮೇಡಹಳ್ಳಿಯ ಯಾವುದೇ ವೀರಗಲ್ಲಿನಲ್ಲಿ ಈ ಬಗೆಯ ಪಲ್ಲಕ್ಕಿ ಮತ್ತು ವೀರನೆದುರು ಬರುತ್ತಿರುವ ಶತ್ರುವನ್ನು ತೋರಿಸಿರುವುದಿಲ್ಲ.

೬ನೇ ವೀರಗಲ್ಲು

ನೆಲದಲ್ಲಿ ಮುಚ್ಚಿಹೋಗಿದ್ದು, ವೀರಗಲ್ಲಿನ ಮೇಲ್ಭಾಗ ಮಾತ್ರ ಕಾಣಿಸುತ್ತದೆ. ಇದರಲ್ಲೂ ವೀರನ ಶಿಲ್ಪಕ್ಕೆ ಪ್ರಾಮುಖ್ಯತೆ ಇದೆ.

ಎರಡನೇ ಸಾಲು- ಉತ್ತರದಿಂದ ದಕ್ಷಿಣಕ್ಕೆ.

೧ನೇ ವೀರಗಲ್ಲು

ವೀರಗಲ್ಲಿನ ಮೇಲ್ಮೈಯನ್ನು ನುಣುಪು ಮಾಡಿಕೊಳ್ಳದೇ, ಶಿಲ್ಪಿಯು ಎಡಗೈಯಲ್ಲಿ ಬಿಲ್ಲು ಮತ್ತು ಬಲಗೈಯಲ್ಲಿ ಬಾಣ ಹಿಡಿದು ಅದನ್ನು ಬಿಲ್ಲಿಗೆ ಪ್ರಯೋಗಿಸಲು ಸನ್ನದ್ಧನಾಗಿರುವನು. ವೀರಗಲ್ಲಿನ ಬಲಮೂಲೆಯಲ್ಲಿ ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವುದನ್ನು ಚಿಕ್ಕದಾಗಿ ತೋರಿಸಲಾಗಿದೆ.

೨ನೇ ವೀರಗಲ್ಲು

ಇಬ್ಬರು ವೀರರನ್ನು ಒಂದೇ ವೀರಗಲ್ಲಿನಲ್ಲಿ ಶಿಲ್ಪಿ ಕೆತ್ತಿದ್ದಾನೆ. ವೀರರ ಬಲಗೈಯಲ್ಲಿ ಕಿರಿದಾದ ಬಾಣ, ಎಡಗೈಯಲ್ಲಿ ಬಿಲ್ಲುಗಳಿವೆ. ಶತ್ರು ಸೈನಿಕರಿಂದ ಅಸಂಖ್ಯಾತ ಬಾಣಗಳು ಈ ವೀರರ ದೇಹದಲ್ಲಿ ಸ್ಪರ್ಶಿಸಿ, ಪಾರಾಗಿವೆ. ವೀರರು ಕಾಲ್ಕಡಗ, ಕೈಕಡಗ, ಧರಿಸಿರುವುದನ್ನು ಶಿಲ್ಪಿ ತೋರಿಸಿದ್ದಾನೆ. ಮೇಲ್ಭಾಗದಲ್ಲಿ ವೀರಸ್ವರ್ಗ ಕಲ್ಪನೆಯ ಚಿಕಣಿ ಶಿಲ್ಪವಿದೆ.

ಶಿಲ್ಪಿಯೊಬ್ಬ ತನ್ನ ಕಾಯಕ ಪ್ರಾರಂಭಿಸುವುದಕ್ಕಿಂತ ಮುಂಚೆ ಯೋಜನೆಯನ್ನು ತಯಾರಿಸಿಕೊಂಡು, ಕಲ್ಲಿನ ಮೇಲ್ಮೈ ಮೇಲೆ

ಳಿಗುರುತುಗಳನ್ನು (ಸ್ಕೆಚ್) ಹಾಕಿಕೊಂಡು ಕೆಲಸ ಪ್ರಾರಂಭಿ ತ್ತಾನೆಂಬುದನ್ನು ಈ ವೀರಗಲ್ಲು ಉದಾಹರಣೆಯಾಗಿದೆ. ವೀರರ ಲುಗಳನ್ನು ಕಂಡರಿಸುವ ಸಂದರ್ಭದಲ್ಲಿ ತನ್ನ ಮೊದಲಿನ ರೆ-ಗುರುತು ಹಾಕಿಕೊಂಡಿರುವುದನ್ನು ಬಿಟ್ಟು, ಕಾಲುಗಳ ಉದ್ದ



ತೀರ ಪುಷ್ಟಾದೀತು ಎಂದು ಭಾವಿಸಿ, ವೀರರ ಶರೀರದ ಪ್ರಮಾಣ ಕ್ಕನುಗುಣವಾಗಿ ಕಾಲುಗಳನ್ನು ಚಿತ್ರಿಸಿರುವ ಅಂಶ ಸ್ಪಷ್ಟವಾಗುತ್ತದೆ.

ನೇ ವೀರಗಲ್ಲು

ವೀರನು ತನ್ನೆರಡು ಕೈಗಳನ್ನು ಎದೆ ಭಾಗದಲ್ಲಿ ಒಂದರ ಮೇಲೊಂದು ಇಟ್ಟುಕೊಂಡಿದ್ದು, ಬಲಭಾಗದಲ್ಲಿ ಸ್ತ್ರೀಯೊಬ್ಬಳು ಕೈಮುಗಿದು ಕುಳಿತಿದ್ದಾಳೆ. ಅವಳ ಪಕ್ಕದಲ್ಲಿ ಖಡ್ಗ ಮತ್ತು ಕಲ್ಲಿನ ಮೇಲ್ಭಾಗದಲ್ಲಿ ವೈಕುಂಠ ಕಲ್ಪನೆ ಮೂಡಿಸಲಾಗಿದೆ.

೧೦ನೇ ವೀರಗಲ್ಲು

ಉತ್ತರಕ್ಕೆ ಮುಖ ಮಾಡಿರುವ ಈ ಏಕೈಕ ವೀರಗಲ್ಲನ್ನು ಶಿಲ್ಪಿಯು ಅಷ್ಟೇನು ಸುಂದರವಾಗಿ ಕೆತ್ತಿರುವುದಿಲ್ಲ. ಈ ವೀರಗಲ್ಲು ಸಮೂಹದಲ್ಲೇ ಅತ್ಯಂತ ಕಡಿಮೆ ಎತ್ತರದ ವೀರಗಲ್ಲು ಇದಾಗಿದೆ. ವೀರನು ತನ್ನ ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಬಿಲ್ಲು ಹಿಡಿದಿರುವನು. ವೀರಸ್ವರ್ಗ ಭಾವವನ್ನು ರೇಖೆಗಳ ಮೂಲಕ ಬಿಡಿಸಲಾಗಿದೆ.

ಮೇಡಹಳ್ಳಿಯಲ್ಲಿರುವ ವೀರಗಲ್ಲುಗಳು ಬಿಳಿಯ ಕಲ್ಲು ಚಪ್ಪಡಿಯಿಂದಾದವುಗಳು. ವೀರಗಲ್ಲುಗಳಿಗೆ ಒಂದು ಆಕಾರವನ್ನು ಕೊಡುವುದರ ಬದಲು, ಕಲ್ಲಿನ ಮೂಲ ಆಕಾರಕ್ಕೆ ಹೊಂದುವಂತೆ ಶಿಲ್ಪ ಬಿಡಿಸುವ ಪ್ರಯತ್ನ ಜಿಲ್ಲೆಗಳ ಹಳ್ಳಿಗಳಲ್ಲಿ 'ಬೂದಿನೆತ್ತು'[೧೩] ಎಂದು ಕರೆಯಲ್ಪಡುವ ಹೊಲಗಳಲ್ಲಿರುವಂತೆ, ಇವೂ ಕೂಡ ಪೂರ್ವಾಭಿಮುಖವಾಗಿವೆ. ಎಲ್ಲ ವೀರಗ್ಲಲುಗಳಲ್ಲಿ ವೀರನನ್ನು ಮಾತ್ರ ಆಯುಧಪಾಣಿಯಾಗಿರುವಂತೆ ಮತ್ತು ಶತ್ರುಗಳ ಮೇಲೆ ಆಕ್ರಮಣ ಮಾಡುತ್ತಿರುವಂತೆ ಬಿಡಿಸಲಾಗಿರುತ್ತದೆ. ಕಲ್ಲಿನ ಮುಕ್ಕಾಲು ಭಾಗದಲ್ಲಿ ವೀರನ ಶಿಲ್ಪವಿದ್ದು, ಸಾಮಾನ್ಯವಾಗಿ ಇವನು ಆಲೀಢಾಸನದಲ್ಲಿ ನಿಂತು ಬಲಗೈಯಲ್ಲಿ ಬಾಣ ಅಥವಾ ಕಠಾರಿ, ಎಡಗೈಯಲ್ಲಿ ಬಿಲ್ಲು ಅಥವಾ ಖಡ್ಗ ಹಿಡಿದಿರುವುದನ್ನು ಕಾಣುತ್ತೇವೆ.

ವೀರಗಲ್ಲುಗಳ ಅಂಗಸೌಷ್ಠವ ಮತ್ತು ಶಿಲ್ಪವಿನ್ಯಾಸಗಳನ್ನು ಗಮನಿಸಿದಾಗ, ೫ನೇ ವೀರಗಲ್ಲು ಪ್ರತಿಷ್ಠಿತ ವ್ಯಕ್ತಿಗೆ ಸಂಬಂಧಿಸಿದ್ದು, ಉಳಿದ ವೀರಗಲ್ಲುಗಳು ಸಾಮಾನ್ಯವಾಗಿವೆ. ಈ ಹಿನ್ನೆಲೆಯಲ್ಲಿ ಬೇಗೂರು ಮತ್ತು ಹಿರೇಬಿದನೂರಿನ ವೀರಗಲ್ಲುಗಳು ಗಮನಾರ್ಹ ವಾಗಿವೆ. ಮುಳುಬಾಗಿಲು ತಾಲ್ಲೂಕಿನ ಬಲ್ಲ, ಗೌರಿಬಿದನೂರು ತಾಲ್ಲೂಕಿನ ನಗರಗೆರೆ ಗ್ರಾಮಗಳಲ್ಲಿ ಇಂಥ ವಿಶಿಷ್ಟ ವೀರಗಲ್ಲುಗಳು ದೊರಕಿವೆ. ಅಂದರೆ ಮೇಡಹಳ್ಳಿಯ ೫ನೇ ವೀರಗಲ್ಲಿನಂತಹ ಪ್ರತಿಷ್ಠಿತ ವೀರಗಲ್ಲುಗಳನ್ನು ಹಾಕುವಲ್ಲಿ ಶಿಲ್ಪಿ ದಪ್ಪ ಮತ್ತು ಅಗಲವಾದ ಕಲ್ಲನ್ನು ಆಯ್ಕೆ ಮಾಡಿರುತ್ತಾನೆ. ವೀರನು 'ರಾಜ ಮಾನ್ಯ' ಎಂಬುದನ್ನು ಸಂಕೇತಿಸಲು ರಾಜಛತ್ರಿ, ರಾಜಧ್ವಜ ಹಾಗೂ ಪಟ್ಟದ ಕುದುರೆಗಳನ್ನು ಬಿಡಿಸಲಾಗಿರುತ್ತದೆ. ಆದರೆ ವೀರಗಲ್ಲುಗಳನ್ನು ಮಾಡಿದ ಶಿಲ್ಪಿ ಯಾರು ಎಂಬುದು ತಿಳಿಯದು. ಅವನು ಯಾರೇ ಆಗಿರಲಿ ತನ್ನ ಹೃದಯ ಸಂವೇದನೆಯನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸಿದ್ದಾನೆ.

ತೆಳು ಉಬ್ಬುಶಿಲ್ಪದಲ್ಲಿ ಬಿಡಿಸಿರುವ ನೂರಾರು ವೀರ ಗಲ್ಲುಗಳ ಶಿಲ್ಪದ ರೀತಿ ಗಂಗರ ಕಾಲದ ಒಂದು ವೈಶಿಷ್ಟ್ಯ ವೆಂದೇ ಹೇಳಬೇಕು. ಇದಕ್ಕೆ ಇನ್ನೊಂದು ಉದಾಹರಣೆ ಹಿರೇಗುಂಡುಗಲ್ಲಿನ ವೀರಗಲ್ಲು. ಇದರಲ್ಲಿ ದ್ವಂದ್ವಯುದ್ಧದಲ್ಲಿ ತೊಡಗಿರುವ ವೀರರಿಬ್ಬರ ಶೈಲಿ ಇನ್ನೂ ವಿಶಿಷ್ಟ. ಇಂಥ ಇಪ್ಪತ್ತಕ್ಕೂ ಹೆಚ್ಚು ವೀರಗಲ್ಲುಗಳ ದೊಡ್ಡ ಗುಂಪೇ ಇಲ್ಲಿದೆ. ರಾಷ್ಟ್ರಕೂಟರಿಗೂ ಗಂಗ ಶ್ರೀ ಪುರುಷ ಶಿವಮಾರನಿಗೂ ಬೇರೆ ಬೇರೆ ಕಡೆ ನಡೆದ ಯುದ್ಧಗಳಲ್ಲಿ ಮಡಿದ ವೀರರ ಸ್ಮಾರಕವಾಗಿ ಇವು ನಿಂತಿವೆ[೧೪].

ಮೇಡಹಳ್ಳಿ ವೀರಗಲ್ಲುಗಳು ಹೊಸಕೋಟೆ ತಾಲ್ಲೂಕಿನ ದೊಡ್ಡ ಹುಲ್ಲೂರು 'ಬೀರರ ಗುಡಿ'ಗಳಂತೆ, ತಾವರೆಕೆರೆಯ 'ವೀರಗಾರರ ಗುಡಿ'ಗಳಂತೆ ಕಾಣಸಿಗುವುದಿಲ್ಲ. ಏಕೆಂದರೆ ಎಡಬಲದ ಕಲ್ಲುಗಳು ಉರುಳಿ, ಗುಡಿಗಳ ರಾಚನಿಕ ವಿನ್ಯಾಸ ಸ್ವಲ್ಪ ಅಸ್ತ ವ್ಯಸ್ತವಾಗಿರುತ್ತದೆ. ಆದರೆ ವೀರನ ಶಿಲ್ಪ ಮಾತ್ರ ಆಳವಾಗಿ ನೆಟ್ಟಿರುವುದರಿಂದ ಸುಸ್ಥಿತಿಯಲ್ಲಿವೆ. ದೊಡ್ಡ ಹುಲ್ಲೂರಿನ ಬೀರರ ಗುಡಿಗಳಿರುವ ಹುಲ್ಲೂರೇಶ್ವರ ಆವರಣದಲ್ಲಿ ೧೨ ವರ್ಷಗಳಿಗೊಮ್ಮೆ ಜಾತ್ರೆ ನಡೆಯುತ್ತದೆ ಮತ್ತು ಹಾಲುಮತದವರು ಈ ಬೀರರ ಗುಡಿಗಳಿಗೆ ಪೂಜೆ ಮಾಡುತ್ತಾರೆ. ಅದರಂತೆ ವೀರಗಲ್ಲುಗಳನ್ನು ಮತ್ತು ವೀರರ ಗುಡಿಗಳನ್ನು ಪೂಜೆ ಮಾಡುವುದಕ್ಕಾಗಿ ಜಮೀನನ್ನು ಪಡೆದಿರುವ ವೀರರಗುಡಿಗಳ ಪೂಜಾರಿಗಳನ್ನು ಕೋಲಾರ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಗುರುತಿಸಬಹುದಾಗಿದೆ. ಆದರೆ ಮೇಡರಹಳ್ಳಿಯಲ್ಲಿ ಈ ಬಗೆಯ ಪೂಜಾರಿಗಳು ಅಥವಾ ಪೂಜಾಚರಣೆಗಳು ಚಾಲ್ತಿಯಲ್ಲಿರುವುದಿಲ್ಲ.


ವೀರಗಲ್ಲು-ವೀರರ ಗುಡಿಗಳಿರುವ ಜಮೀನಿಗೆ ಹೊಂದಿಕೊಂಡು ಗ್ರಾಮದ ಕಡೆಗೆ ದಕ್ಷಿಣೋತ್ತರವಾಗಿ ನೈಸರ್ಗಿಕ ಕಲ್ಲು ಬಂಡೆಗಳ (ಹಾಳುಗುಡ್ಡ- ಬೀಳ್ಗುನ್ದ?) ಸಾಲಿದೆ. ಅಲ್ಲಿ ಶ್ರೀ

ಪುಟ್ಟಪ್ಪನವರ ತೋಟದ ಮನೆ ಹತ್ತಿರ ಹುಟ್ಟು ಕಲ್ಲುಬಂಡೆ ಮೇಲೆ ಸುಮಾರು ೧೮ನೇ ಶತಮಾನದ ಎರಡು ಸಾಲುಗಳ ಶಾಸನವಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ.

ಶಾಸನದ ಪಾಠ

ಶುಭ ಮಸಂಮದ ಗಫರಲಿ ಮಾನ್ಯ

ದ ಹೊಲ ೧೧೨ ರಾಕ್ಷಸಂ ವೈಶ್ಯಾಕ್ಯ ೩.



ಕ್ರಿ.ಶ. ೧೬೩೮ರಲ್ಲಿ ವಿಜಾಪುರದ ಆದಿಲ್‌ಶಾಹಿಯ ದಂಡನಾಯಕನಾದ ರಣದುಲ್ಲಾಖಾನನು, ಕೆಂಪೇಗೌಡನ ವಶದಲ್ಲಿದ್ದ ಬೆಂಗಳೂರನ್ನು ತನ್ನ ಕೇಂದ್ರಸ್ಥಾನವಾಗಿಸಿಕೊಂಡನು. ಆಗ ದಕ್ಷಿಣ ಭಾಗದ ಶಿರಾ, ಬೆಂಗಳೂರು, ಹೊಸಕೋಟೆ, ದೊಡ್ಡ ಬಳ್ಳಾಪುರ ಮತ್ತು ಕೋಲಾರ ಪ್ರದೇಶಗಳನ್ನು ಶಹಾಜಿಗೆ ಉಂಬಳಿಯಾಗಿ ಕೊಡಲ್ಪಟ್ಟವು[೧೫]. ಬಹುಶಃ ಅದೇ ಸಂದರ್ಭದಿಂದೀಚೆಗ, ದಾನದತ್ತಿ ಬಿಟ್ಟಿರುವ ಉಲ್ಲೇಖ ಈ ಶಾಸನದಲ್ಲಿದೆ.*

* (ಮೇಡಹಳ್ಳಿ ವೀರಗಲ್ಲುಗಳ ಮಾಹಿತಿ ನೀಡಿದ ಶಿಕ್ಷಕ ಎನ್. ಮುನಿರಾಮಯ್ಯ, ದೊಡ್ಡಹುಲ್ಲೂರಿನ ಪ್ರಾಚ್ಯಾವಶೇಷಗಳ ಬಗ್ಗೆ ತಿಳಿಸಿದ ಬಿ.ಈ.ಓ. ಶ್ರೀ ಸಿ. ನಾಗರಾಜನ್ ಹಾಗೂ ಪ್ರಬಂಧ ಮಂಡಿಸಿ, ಲೇಖನ ಸಿದ್ಧಪಡಿಸಲು ಪ್ರೋತ್ಸಾಹಿಸಿದ ಪೂಜ್ಯ ಗುರುಗಳಾದ ಡಾ. ಪಿ.ವಿ. ಕೃಷ್ಣಮೂರ್ತಿಯವರುಗಳಿಗೆ ಕೃತಜ್ಞ)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕನ್ನಡ ನಿಘಂಟು**., ಸಂಪುಟ-೭, ಕ.ಸಾ,ಪ. ಬೆಂಗಳೂರು, ಪುಟ-೭೪೦೭.

೨. ಡಾ. ಆರ್. ಶೇಷಶಾಸ್ತ್ರಿ., (೧೯೮೨), **ಕರ್ನಾಟಕದ ವೀರಗಲ್ಲುಗಳು**, ಕ.ಸಾ.ಪ ಬೆಂಗಳೂರು, ಚಿತ್ರ-೧೭೫.

3. Subramani N., *Sanga m Polity* : Page 75 & 76

೪. **ಪಂಪ: ವಿಕ್ರಮಾರ್ಜುನ ವಿಜಯ** : ೧೧-೩೩-ನಂತರದ ವಚನ.

೫. ನಂಜುಂಡ., **ರಾಮನಾಥ ಚರಿತೆ** ಭ-೩, ೧೧.

೬. ಎಂ. ಚಿಂದಾನಂದಮೂರ್ತಿ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪುಟ೨೭೮.

೭. ಡಾ. ಶೇಷಶಾಸ್ತ್ರಿ ಆರ್., (೧೯೮೨), **ಕರ್ನಾಟಕದ ವೀರಗಲ್ಲುಗಳು**, ಕ.ಸಾ.ಪ. ಬೆಂಗಳೂರು ಪುಟ-೧೩೯.

೮. ವ್ಯಾಪಾರವನ್ನು ವೃತ್ತಿಯನ್ನಾಗಿಸಿಕೊಂಡ ಸೆಟ್ಟಿ ಅಥವಾ ಬಣಂಜಿಗರು ಸಾಮಾನ್ಯವಾಗಿ ವ್ಯಾಪಾರಕ್ಕಾಗಿ ಹೋಗಿ ದಾರಿಗಳ್ಳರನ್ನು ಎದುರಿಸಿ ಮಡಿದಿರುವ ಸಂಗತಿಗಳನ್ನು ತಿಳಿದಿದ್ದೇವೆ. ಕೊಣಂಗೇರಿಯ ಹಾರುವ ಬಮ್ಮಿಸೆಟ್ಟಿಯ ಮಗ ಸೋವಿಸೆಟ್ಟಿ ಎಂಬುವನು ಬಡಗಲು ವ್ಯವಹಾರಕ್ಕಾಗಿ ಬರುವಲ್ಲಿ ಅಂಣೆಗೇರಿಯ ಹೊಲದಲು ಕಾಕಳ್ಳರು ತಾಗಿದಾಗ, ಅವರೊಡನೆ ಹೋರಾಡಿ ಸಾಯುತ್ತಾನೆ. (K.I.V ೧೮, ೧೧೭೬) ಕಣಸೋಗೆಯ ಮಲ್ಲಿಸೆಟ್ಟಿಯ ಮಗ ದೇವಂಣನು ಉಭೆಯ ಗಟ್ಟದ ಸಾಳಗೆ ಬರುವಾಗ ಕಳ್ಳರು ಅವನ ಮೇಲೆ ಬಿದ್ದಾಗ, ಅವರಲ್ಲಿ ಕೆಲವರನ್ನು ಕೊಂದು ತಾನೂ ಸಾಯುತ್ತಾನೆ. (E.C.VII.SK ೨೧೫, ೧೧೫೮) ಶ್ರೀಮತ್ ರಾಜೆಸೆಟ್ಟಿಯ ಮಗ ದುಗ್ಗಣ ಎಂಬುವನು ಹರಿಹರಕ್ಕೆ ಹೋಗಿ ಬರುತ್ತಿದ್ದಾಗ ನಿಟ್ಟೂರ ಹಾರಿವಾಳಡೆದಯಣಗೊಡ್ಡಿ ಸಾಲದಲಿ ಬಟ್ಟೆಯ ಕಳ್ಳರನ್ನು ತಾಗಿ, ಅವರೊಂದಿಗೆ ಹೋರಾಡಿ ಸಾಯುತ್ತಾನೆ. (E.C.VII.HI ೮೫, ೧೧೮೯) ಬಾಳದಂತಿ ಸೆಟ್ಟಿಯ ಮಗ ಆಲಪ್ಪ ಎಂಬುವನು ಸಾವಂದಿಯ ದಾರಿಯಲ್ಲಿ ಕಳ್ಳರೊಡನೆ ಹೋರಾಡಿ ಸತ್ತನು. (E.C.IX Ma ೧೩, ೧೩೪೦) ಇವು ವ್ಯಾಪಾರಕ್ಕಾಗಿ ಹೋದ ಸಂದರ್ಭದಲ್ಲಿ ಕಳ್ಳರೊಡನೆ ಹೋರಾಡಿ ಮಡಿದ ವೀರ ವರ್ತಕರ ಉದಾಹರಣೆಗಳಾದರೆ, ಮೇಡಹಳ್ಳಿಯಲ್ಲಿ ದೊರೆತ ಪುಸ್ತಕ ಅಪ್ರಕಟಿತ ಶಾಸನದಲ್ಲಿ ರಾಚಸೆಟ್ಟಿಯ ಮಗ ಮರಮ್ಮಸೆಟ್ಟಿ ಹರಳೂರಿನ ತುರುಗಳನ್ನು ಅಪಹರಿಸುತ್ತಾನೆ - ಇದೊಂದು ಅಪವಾದ. ಏಕೆಂದರೆ ವರ್ತಕ ಶ್ರೇಣಿಯವರು ಅಪಹರಣ ಅಥವಾ ಕಳ್ಳತನಕ್ಕೆ ಕೈ ಹಾಕುತ್ತಿದ್ದುದು ತೀರ ಅಪರೂಪದ ಪ್ರಸಂಗವಾಗಿದೆ.

೯. **ಕನ್ನಡ ನಿಘಂಟು**, ಸಂಪುಟ-೪, ಕ.ಸಾ.ಪ. ಬೆಂಗಳೂರು, ಪುಟ -೩೩೮೫.

೧೦. **ಕನ್ನಡ ವಿಶ್ವಕೋಶ** (೧೯೮೦), ಸಂಪುಟ-೧೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಪುಟ-೫೪೦-೪೧

11. Dr. Krishnamurty p.v- 'The Herostone inscription of deserted village Ereyapamangala' in Quarterly Journal (Vol-LXXI,Nos 1-2 published by mythic society -Bangalore - page 149.

೧೨. ಡಾ. ಶೇಷ, ಶಾಸ್ತ್ರಿ. ಆರ್. (೧೯೮೨), **ಕರ್ನಾಟಕ ವೀರಗಲ್ಲುಗಳು**, ಕ.ಸಾ.ಪ. ಬೆಂಗಳೂರು, ಪುಟ -೧೭೪

೧೩. -----ಅದೇ------ ಪುಟ ೩೦೧.

೧೪. ಕನ್ನಡ ವಿಶ್ವಕೋಶದ (೧೯೭೨) ಸಂ-೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಪುಟ-೮೬೦.

15. Mysore - A Gazetteer Compiled for Government, Vol-II, By -B. Lewis Rice; page 22.

ಡಾ. ಪಿ.ವಿ. ಕೃಷ್ಣಮೂರ್ತಿ*

ರಾಷ್ಟ್ರಕೂಟ ಅಕಾಲವರ್ಷದೇವ ಮುಮ್ಮಡಿ ಕೃಷ್ಣನ ಕುಣಿಗಲ್ ಕೆರೆ ಶಾಸನ

ತುಮಕೂರು ಜಿಲ್ಲೆಯ ತಾಲೂಕೊಂದರ ಕೇಂದ್ರವಾಗಿರುವ ಕುಣಿಗಲ್; ತುಮಕೂರಿಗೆ ದಕ್ಷಿಣದಲ್ಲಿ ಸುಮಾರು ೩೫ ಕಿ.ಮೀ. ಅಂತರದಲ್ಲಿ, ಬೆಂಗಳೂರು-ಹಾಸನ ಹೆದ್ದಾರಿಯಲ್ಲಿದೆ. ಮೈಸೂರು ಸಂಸ್ಥಾನದ ಆಳ್ವಿಕೆಯ ಕಾಲದಲ್ಲಿ ಕುಣಿಗಲ್ ಕೆಲವು ವಿಶಿಷ್ಟ ಸಂಗತಿಗಳಿಗಾಗಿ ಪ್ರಸಿದ್ಧಿಯನ್ನು ಪಡೆದಿದ್ದಿತು. ಅಂದಿನ ಸೈನ್ಯ ಮತ್ತು ಕುದುರೆ ಪಂದ್ಯಗಳಿಗೆ ಅಗತ್ಯವಿದ್ದ ಕುದುರೆಗಳ ಸಾಕಣೆ ಮತ್ತು ತರಬೇತಿ ಕೇಂದ್ರವು ಸುಮಾರು ೩೫೦ ಎಕರೆ ಪ್ರದೇಶವನ್ನು ವ್ಯಾಪಿಸಿಕೊಂಡು ರಾಜಮರ್ಯಾದೆಯನ್ನು ಪಡೆದುಕೊಂಡಿದ್ದಿತು. ಇದಕ್ಕೂ ಮೊದಲು ೧೬-೧೭ ಶತಮಾನದಲ್ಲಿ ಕುಣಿಗಲ್ ಪ್ರಸಿದ್ಧ ಬೆಂಗಳೂರು ಕೆಂಪೇಗೌಡನ ಆಳ್ವಿಕೆಗೆ ಸೇರಿದ್ದ ಒಂದು ಪ್ರಮುಖ ಕೇಂದ್ರವಾಗಿದ್ದಿತು, ಅಲ್ಲದೆ ಬೃಹತ್ತಾದ ಅಲ್ಲಿನ ಕೆರೆಯ ಮಹತ್ವ ಸ್ಥಳೀಯ ಜಾನಪದದಲ್ಲಿ ಜನಜನಿತವಾಗಿರುವುದು ಗಮನಾರ್ಹ ಸಂಗತಿ. ಸುಮಾರು ೧೫ ಮೀಟರ್ ಆಳ ಮತ್ತು ಉತ್ತರ-ದಕ್ಷಿಣವಾಗಿ ಸುಮಾರು ಒಂದೂವರೆ ಕಿ.ಮೀ. ಉದ್ದದ ಕಟ್ಟೆಯನ್ನು ಹೊಂದಿರುವ ಈ ಕೆರೆಯಲ್ಲಿ ಪೂರ್ಣವಾಗಿ ನೀರು ತುಂಬಿದಾಗ ಸುಮಾರು ೨೨ ಕಿ.ಮೀ. ಸುತ್ತಳತೆಯನ್ನು ಪಡೆದುಕೊಳ್ಳುತ್ತದೆ ಎಂದು ಅಂದಾಜು ಮಾಡಲಾಗಿದೆ. ಅದೊಂದು ಬೃಹತ್ ಕೆರೆ ಅಥವಾ ಅಣೆಕಟ್ಟು ಎಂದರೂ ನಡೆದೀತು. ಅಂತಹ ಕೆರೆಯ ಕಟ್ಟೆಯ ಮೇಲೆ ಪಶ್ಚಿಮದ ಬದಿಯಲ್ಲಿ ಗಂಗರಸರ ಕಾಲದ ವಾಸ್ತು ರಚನೆಗಳು ಇವೆ. ಅದೇ ಕಟ್ಟೆಯ ಆಗ್ನೇಯಕ್ಕೆ ಇರುವ ತೂಬಿನ ಸಮೀಪದಲ್ಲಿ ಅಶ್ವಾರೂಢ ವೀರನಿರುವ ವೀರಗಲ್ಲೊಂದು ಇದೆ. ಆ ವೀರಗಲ್ಲಿಗೆ ಈ ಮೊದಲು ಅದರ ಎಡಬಲ ಬದಿಗಳಲ್ಲಿ ಒಂದೊಂದು ನಿಲುವುಗಲ್ಲುಗಳನ್ನು ನಿಲ್ಲಿಸಿ ಅದರ ಮೇಲೆ ಮೇಲ್ಛಾವಣಿಯಂತೆ ಸುಮಾರು ೧.೫ ಮೀಟರ್ ಉದ್ದ, ೦.೭ ಮೀಟರ್ ಅಗಲವಾದ ಚಪ್ಪಡಿ ಕಲ್ಲನ್ನು ಮುಚ್ಚಲಾಗಿತ್ತು. ಇತ್ತೀಚೆಗೆ ಸ್ಥಳೀಯರು ಆ ಚಪ್ಪಡಿ ಕಲ್ಲನ್ನು ತೆಗೆದು ಆ ವೀರಗಲ್ಲಿಗೆ ಒಂದು ಪುಟ್ಟ ಗುಡಿಯನ್ನು ನಿರ್ಮಿಸುವ ಕೆಲಸವನ್ನು ಕೈಗೊಂಡಾಗ, ಆ ಚಪ್ಪಡಿಯ ಒಳಬದಿಯಲ್ಲಿ ಲಿಪಿಗಳಿರುವುದು ಗಮನಕ್ಕೆ ಬಂದಿತು. ಆ ಸಂಗತಿಯನ್ನು ತಿಳಿದ ಅಲ್ಲಿನ ಸ್ಥಳೀಯ ಪದವಿಪೂರ್ವ ಮಹಿಳಾ ಕಾಲೇಜಿನ ಇತಿಹಾಸ ಅಧ್ಯಾಪಕರಾದ ಮಾನ್ಯಶ್ರೀ ಗೋಪಾಲ್ ಎಂಬುವರು ಸ್ಥಳೀಯರ ನೆರವಿನಿಂದ ಅದನ್ನು ಸ್ವಚ್ಛಗೊಳಿಸಿ, ಶಾಸನದ ಛಾಯಾಚಿತ್ರವನ್ನು ತೆಗೆದು ಅದರ ಅಧ್ಯಯನಕ್ಕಾಗಿ ನನಗೆ ನೀಡಿದರು. ಅಲ್ಲದೆ ಆ ಶಾಸನವನ್ನು ಸ್ಥಳದಲ್ಲೇ ಒಮ್ಮೆ ಪರೀಕ್ಷಿಸಲು ಕೂಡ ಅನುವು ಮಾಡಿಕೊಟ್ಟರು. ಅಂತೆಯೇ ಅವರಿಗೆ ನಮ್ಮ ಹೃತ್ಪೂರ್ವಕ ವಂದನಾಪೂರ್ವಕ ಅಭಿನಂದನೆಗಳು ಸಲ್ಲುತ್ತವೆ.

ಈ ಶಾಸನದ ಕೊನೆಯ ಭಾಗ ಕಳೆದುಹೋಗಿದೆ. ಶಾಸನದ ಮೊದಲ ೧೦ ಸಾಲುಗಳು ಮಾತ್ರ ಉಳಿದಿವೆ. ರಾಷ್ಟ್ರಕೂಟ ದೊರೆ ಅಕಾಲವರ್ಷದೇವನನ್ನು ಪ್ರಸ್ತಾಪಿಸುವ ಈ ಶಾಸನದಲ್ಲಿ ಶಕಕಾಲದ ಸ್ಪಷ್ಟ ಉಲ್ಲೇಖವಿದೆ. ಶಾಸನೋಕ್ತ 'ಸಕನೃಪ ಕಾಳಾತೀತ ಸಂವತ್ಸರ ಸತಂಗಳ್ ೮೮೫ನೆಯ ರುಧಿರೋದ್ಗಾರಿ ಸಂವತ್ಸರ' ಎಂಬುದು ಕ್ರಿ.ಶ. ೯೬೩ಕ್ಕೆ ಸರಿ ಹೊಂದುತ್ತದೆ. ಈ ಶಾಸನದಲ್ಲಿ ೪ ಮತ್ತು ೫ನೇ ಸಾಲಿನ ಮತ್ತು ೯, ೧೦ನೇ ಸಾಲಿನ ಕೆಲವು ಅಕ್ಷರಗಳು ಅಸ್ಪಷ್ಟ/ತ್ರುಟಿತವಿದ್ದು, ಉಳಿದಂತೆ ಲಭ್ಯವಾಗಿರುವ ಇಡೀ ಶಾಸನದಲ್ಲಿ ಲಿಪಿಗಳನ್ನು ಆಳವಾಗಿ ಸ್ಪಷ್ಟವಾಗಿ ಕೊರೆಯಲಾಗಿದೆ. ಹತ್ತನೆಯ ಶತಮಾನದ ಮಧ್ಯಾವಧಿಗೆ ಸೇರುವ ಈ ಶಾಸನದ ಲಿಪಿಗಳು ಈ ಪ್ರದೇಶದ ಸಮಕಾಲೀನ ಗಂಗ, ನೊಳಂಬ ಶಾಸನಗಳ ಲಿಪಿಗಳೊಂದಿಗೆ ಹೋಲಿಕೆಯನ್ನು ಪಡೆದಿವೆ.

ಭಾಷೆಯ ದೃಷ್ಟಿಯಿಂದ ಗಮನಿಸಿದರೆ, ಸಮಕಾಲೀನ ರಾಷ್ಟ್ರಕೂಟರ ಇತರ ಶಿಲಾಶಾಸನಗಳ ಸ್ವರೂಪವನ್ನೇ ಬಹುವಾಗಿ ಹೋಲುತ್ತೆಯಾದರೂ 'ಶ'ಕಾರಗಳಿಗೆ ಪರ್ಯಾಯವಾಗಿ 'ಸ'ಕಾರಗಳ ಪ್ರಯೋಗವಾಗುವ ಪ್ರಾದೇಶಿಕತೆಯನ್ನು ಗಮನಿಸಬಹುದಾಗಿದೆ.

ಹತ್ತನೇ ಶತಮಾನ ಮತ್ತು ಅದಕ್ಕೂ ಹಿಂದಿನ ಅನೇಕ ಶಾಸನಗಳಲ್ಲಿ ಸಂಖ್ಯೆಗಳನ್ನು ಸಾಮಾನ್ಯವಾಗಿ ಅಕ್ಷರಗಳಲ್ಲೇ ಬರೆಯುವುದು ವಾಡಿಕೆ. ಆದರೆ ಪ್ರಸ್ತುತ ಶಾಸನದಲ್ಲಿ ಉಕ್ತವಾಗಿರುವ ಶಕವರ್ಷವನ್ನು ಅಪರೂಪಕ್ಕೆ '೮೮೫' ಎಂದು ಅಂಕಿಗಳಲ್ಲೇ ಬರೆದಿರುವುದು ಒಂದು ವಿಶೇಷ ಸಂಗತಿಯಾಗಿದೆ. ಹಾಗಾಗಿ ಸಮಕಾಲೀನವಾಗಿ ಪ್ರಚಲಿತವಿದ್ದ ಅಂಕಿಗಳ (ಸಂಕೇತ) ಸ್ವರೂಪವನ್ನು ಅರಿಯಲು ಸಹಾಯಕವಾಗಿದೆಯೆಂದರೆ ತಪ್ಪಾಗ ಲಾರದು.

ಶಾಸನದ ಸಾರಾಂಶ

ರಾಷ್ಟ್ರಕೂಟ ಅಕಾಲವರ್ಷದೇವ ತನ್ನ ಪ್ರವರ್ದ್ಧಮಾನ ವಿಜಯರಾಜ್ಯವನ್ನು ಆಳುತ್ತಿರುವಾಗ ಅವನ ಮಹಾಸಾಮನ್ತ ಚಾಳುಕ್ಯ ಮಾನ್ಧಾತನೆಂಬವನು ಎಂಟುನೂರು ಬಾಡಗಳನ್ನು ಸುಖಸಂತಿಯೊಳು ಅಳುತ್ತಿದ್ದು, ಕುಣಂಗಿಲೊಳ್ ಇರುವ ಶ್ರೀಪುರುಷ ಮಹಾ

* ಡಿ-೧೦, ಎಚ್. ಎ. ಎಲ್. ಓಲ್ಡ್ ಟೌನ್‌ಶಿಪ್, ವಿಮಾನಪುರ, ಬೆಂಗಳೂರು - ೫೬೦ ೦೧೭.

ರಾಜನ್ ಕಟ್ಟಿಸಿದ ಕೆರೆ ಭಿನ್ನವಾದಾಗ, ಅಂದರೆ ಕೆರೆಕಟ್ಟೆ ಒಡೆದು ಹೋಗಿದ್ದಾಗ ಅದನ್ನು ಜೀರ್ಣೋದ್ಧಾರ ಮಾಡಿಸಿದ ಸಂಗತಿಯನ್ನು ತಿಳಿಸುವಂತಿದ್ದು, ಶಾಸನದ ಮುಂದಿನ ಭಾಗ ನಾಶವಾಗಿದೆ.

ರಾಷ್ಟ್ರಕೂಟ, ಚೋಳ ಮತ್ತು ಗಂಗರ ಸಂಬಂಧಗಳು-ಒಂದು ಸ್ಥೂಲ ಹಿನ್ನೆಲೆ

ಕುಣಿಗಲ್ ಪ್ರದೇಶವು ವಾಸ್ತವವಾಗಿ ಗಂಗರಾಜ್ಯದ ಸರಿಸುಮಾರು ಕೇಂದ್ರಸ್ಥಳವೆನ್ನಬಹುದು. ಅದು ಬಹುಕಾಲದಿಂದಲೂ ಗಂಗರಸರ ನೇರ-ಆಳ್ವಿಕೆಯ ಪ್ರದೇಶವೇ ಆಗಿತ್ತು. ನೆರೆಯಲ್ಲಿಯೇ ಮಣ್ಣೆ, ಮುಕ್ಕುಂದ ಮುಂತಾದ ಗಂಗರ ಪ್ರಸಿದ್ಧ ರಾಜಧಾನಿ, ನೆಲೆವೀಡುಗಳು ಇರುವುದು ಗಮನಾರ್ಹ ಅಂಶವಾಗಿದೆ. ಹಾಗಾಗಿ ಗಂಗರಾಜ್ಯದ ಹೃದಯ ಸ್ಥಾನದಲ್ಲಿ ರಾಷ್ಟ್ರಕೂಟರ ನೇರ ಆಳ್ವಿಕೆಯನ್ನು ಪ್ರತಿನಿಧಿಸುವ ಪ್ರಸ್ತುತ ಶಾಸನ ಕ್ರಿ.ಶ. ೯೬೩ ರಲ್ಲಿ ಹುಟ್ಟಿಕೊಂಡಿರುವುದು ಪರಿಶೀಲನಾರ್ಹ ಅಂಶವಾಗಿದೆ.


ಕರ್ನಾಟಕದ ಇತಿಹಾಸದಲ್ಲಿ ಗಂಗ ರಾಷ್ಟ್ರಕೂಟರ ಹೋರಾಟ ಎಷ್ಟು ಪ್ರಬಲವಾಗಿದ್ದಿತೆಂದರೆ, ಅದು ಸುಮಾರು ೧೫೦ ವರ್ಷಗಳಷ್ಟು ದೀರ್ಘಕಾಲದ ಏಳುಬೀಳುಗಳಿಂದ ಕೂಡಿದ್ದಿತಷ್ಟೇ ಅಲ್ಲ, ಕೊನೆಗೆ ರಾಷ್ಟ್ರಕೂಟ ಸಾಮ್ರಾಟ ಅಮೋಘವರ್ಷ ನೃಪತುಂಗನು ಗಂಗರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುವುದರ ಮೂಲಕ ಅವರನ್ನು ತಮ್ಮವರನ್ನಾಗಿ ಮಾಡಿಕೊಳ್ಳಬೇಕಾಯಿತು. ಅವನು ತನ್ನ ಮಗಳಾದ ಚಂದ್ರೊಬ್ಬಲಬ್ಬೆಯನ್ನು ಎರೆಯಂಗನ ಕಿರಿಯ ಮಗನಾದ ಬೂತುಗನಿಗೆ ಮದುವೆ ಮಾಡಿಕೊಟ್ಟನು. ಆ ನಂತರವೇ ಅವರ ಮಧ್ಯದ ಘರ್ಷಣೆ ಮಾಯವಾಗಿ ಮಧುರ ಬಾಂಧವ್ಯ ಮೂಡಿ ರಾಷ್ಟ್ರಕೂಟ ಉತ್ತರೋತ್ತರ ಅಭಿವೃದ್ಧಿಯಲ್ಲಿ ಗಂಗರಸರು ಪ್ರಧಾನ ಪಾತ್ರ ವಹಿಸಿರುವುದು ಕಂಡುಬರುತ್ತದೆ.

ಈ ಸಂಬಂಧಗಳು ಏರ್ಪಡುವುದಕ್ಕೆ ಮೊದಲು ರಾಷ್ಟ್ರಕೂಟರು ಒಂದೊಮ್ಮೆ ಪ್ರಬಲರಾಗಿದ್ದಾಗ ಗಂಗಮಂಡಲದ ಹಲವು ಪ್ರದೇಶಗಳನ್ನು ಆಕ್ರಮಿಸಿ ಆ ಪ್ರದೇಶಗಳ ಮೇಲೆ ರಾಜಕುಮಾರ ಕಂಬರಸನನ್ನು ಅಧಿಕಾರಿಯಾಗಿ ನೇಮಿಸಿದ್ದುಂಟು. ಆ ಸಂದರ್ಭದಲ್ಲೇ ಗಂಗರಾಜ ಶಿವಮಾರ ಅವರ ಸೆರೆಗೆ ಒಳಗಾಗಿದ್ದು. ಆಗ ಅವರು ಚಾಲುಕ್ಯ ವಂಶೀಯರಾದ ಸಾಮಂತನೋರ್ವನನ್ನು ಗುಬ್ಬಿ, ಕುಣಿಗಲ್ ಪ್ರದೇಶಗಳಲ್ಲಿ ಪ್ರತಿಷ್ಠಾಪಿಸಿದ್ದ ಸಂಗತಿ ಗುಬ್ಬಿ ತಾಲೂಕಿನ ಶಾಸನವೊಂದರಿಂದ ಮನಗಾಣಬಹುದಾಗಿದೆ.[೧] ಹಾಗಾಗಿ ೮ನೇ ಶತಮಾನದ ಕೊನೆಗಾಗಲೇ ಗಂಗಮಂಡಲ ಪ್ರದೇಶದಲ್ಲಿ ರಾಷ್ಟ್ರಕೂಟರ ಸಾಮಂತರಾಗಿ ಚಾಲುಕ್ಯ ವಂಶೀಯರು ಬೇರೂರಿದ್ದರು. ಅಲ್ಲದೇ ಅನಂತರದಲ್ಲಿ ಕುಣಿಗಲ್ ಪ್ರದೇಶದ ದಕ್ಷಿಣಕ್ಕೆ ಬರುವ ಮೈಸೂರು ಜಿಲ್ಲೆಯ ವರುಣ ಪ್ರದೇಶದಲ್ಲಿ ಚಾಲುಕ್ಯ ವಂಶೀಯ ಸಾಮಂತರ ಅನೇಕ ಶಾಸನಗಳು[೨] ಲಭ್ಯವಾಗಿದ್ದು, ದುರ್ಗ, ಗೊಗ್ಗಿ, ನರಸಿಂಗ ಮುಂತಾದ ಹೆಸರಿನ ಸಾಮಂತರು ತಮ್ಮ ಆಳ್ವಿಕೆಯನ್ನು ಪ್ರಾಯಶಃ ಗಂಗರಸರ ಅಧೀನದಲ್ಲಿ ಮುಂದುವರೆಸಿದ್ದು ಕಂಡುಬರುತ್ತದೆ. ಹಾಗೆಯೇ ಅಧಿರಾಜರಾದ ರಾಷ್ಟ್ರಕೂಟರ ನಂಬಿಕೆಯ ಬಂಟ ರಾಗಿಯೇ ಅವರು ಮುಂದುವರಿದಿದ್ದರೆಂದು ಭಾವಿಸಬಹುದಾಗಿದೆ. ಪ್ರಸ್ತುತ ಕುಣಿಗಲ್ ಕೆರೆ ಶಾಸನದಲ್ಲಿ ಉಕ್ತನಾಗಿರುವ ಚಾಲುಕ್ಯ ಮಾನ್ದಾತನು ಈ ಸಾಮಂತ ಸಂತತಿಯವನೇ ಆಗಿರಬಹುದು. ಆದರೆ ಈ ಅಂಶವನ್ನು ದೃಢವಾಗಿ ಹೇಳಲು ಆಧಾರಗಳು ಸಾಲದಾಗಿದೆ.

ಕ್ರಿಸ್ತಶಕ ೯ನೇ ಶತಮಾನದ ಉತ್ತರಾರ್ಧ ಮತ್ತು ೧೦ನೇ ಶತಮಾನದ ಆರಂಭದವರೆಗೆ ರಾಷ್ಟ್ರಕೂಟ ಮತ್ತು ಚೋಳರ ಮಧ್ಯೆ ವೈವಾಹಿಕ ಸಂಬಂಧಗಳೇರ್ಪಟ್ಟು ಪರಸ್ಪರ ಕೊಡುಕೊಳೆಗಳ ಮೂಲಕ ಸೌಹಾರ್ದತೆ ನೆಲಸಿದ್ದಿತು. ಚೋಳರಾಜರ ಮೊದಲನೇ ಆದಿತ್ಯನಿಗೆ ರಾಷ್ಟ್ರಕೂಟ ಇಮ್ಮಡಿಕೃಷ್ಣ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟಿದ್ದನು. ಇವರಿಗೆ ಕನ್ನರದೇವನೆಂಬ ಮಗನಿದ್ದನು. ಆದಿತ್ಯನ ನಂತರ ಚೋಳ ಸಾಮ್ರಾಜ್ಯದ ಪಟ್ಟ ಈ ಕನ್ನರದೇವನಿಗೆ ವಾಸ್ತವವಾಗಿ ಲಭ್ಯವಾಗಬೇಕಾಗಿದ್ದಿತು. ಆದರೆ ಹಾಗೆ ಆಗದೇ ಚೋಳ ಆದಿತ್ಯನ ಇನ್ನೋರ್ವ ಪತ್ನಿಯ ಮಗನಾದ ಪರಾತಂಕನಿಗೆ ಅದು ಏರ್ಪಟ್ಟಿತು. ಈ ಸಂಗತಿ ರಾಷ್ಟ್ರಕೂಟರಿಗೆ ನುಂಗಲಾರದ ತುತ್ತಾಯಿತು. ಅದರ ಪರಿಣಾಮವಾಗಿ ಕ್ರಿ.ಶ. ೯೧೧ರಲ್ಲಿ ವಲ್ಲಾಳ ಎಂಬಲ್ಲಿ ರಾಷ್ಟ್ರಕೂಟರಿಗೂ ಚೋಳರಿಗೂ ಘೋರವಾದ ಯುದ್ಧ ನಡೆಯಿತು. ಈ ಸಂದರ್ಭದಲ್ಲಿ ರಾಷ್ಟ್ರಕೂಟರ ದಾಯಾದಿ ನಾಲ್ಕನೇ ಗೋವಿಂದನಿಗೆ ಚೋಳರು ಆಶ್ರಯ ನೀಡಿದ್ದರು. ಈ ಸಂಗತಿ ರಾಷ್ಟ್ರಕೂಟ ಮತ್ತು ಚೋಳರ ಮಧ್ಯದ ವೈರತ್ವವನ್ನು ಹೆಚ್ಚಿಸಿತ್ತು ಹಾಗೂ ಮುಂದುವರಿಸಿತ್ತು.

ಆ ಸಂದರ್ಭದಲ್ಲೇ, ಪ್ರಸ್ತುತ ಶಾಸನೋಕ್ತ 'ಅಕಾಳವರ್ಷ' ಎಂಬ ಬಿರುದನ್ನು ಧರಿಸಿದ್ದ ಕ್ರಿ.ಶ. ೯೩೯-೯೬೭ರವರೆಗೆ ರಾಷ್ಟ್ರಕೂಟ ಸಾಮ್ರಾಜ್ಯವನ್ನಾಳಿದ ಮೂರನೇ ಕೃಷ್ಣನು ಬಹಳ ಪ್ರಖ್ಯಾತನಾಗಿದ್ದನು. ಆತನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ತನ್ನ ಔನ್ನತ್ಯದ ಶಿಖರವನ್ನು ಮುಟ್ಟಿದ್ದಿತು. ಆತನು ತನ್ನ ಆಳ್ವಿಕೆಯ ಆರಂಭಕ್ಕಾಗಲೇ ಚೋಳರ ವಿರುದ್ಧ 'ತಕ್ಕೋಳಂ' ಎಂಬಲ್ಲಿ ಯುದ್ಧವನ್ನು ಹೂಡಿ ಚೋಳ ರಾಜಕುಮಾರ ರಾಜಾದಿತ್ಯನನ್ನು ಕೊಲ್ಲುವುದರ ಮೂಲಕ ಗಮನಾರ್ಹ ವಿಜಯವನ್ನು ಸಾಧಿಸಿದನು. ಈ ತಕ್ಕೋಳಂ ಯುದ್ಧದಲ್ಲಿ ರಾಷ್ಟ್ರಕೂಟರಿಗೆ ತಮ್ಮ ನೆಚ್ಚಿನ ಮಾಂಡಲಿಕರೂ, ಬಂಧುಗಳೂ ಆದ ಬೂತುಗನು ವಿಶೇಷ ಪಾತ್ರವನ್ನು ವಹಿಸಿದ್ದನು.

ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಆಳ್ವಿಕೆಯ ಕಾಲದಿಂದ ಗಂಗ, ರಾಷ್ಟ್ರಕೂಟರ ಸಂಬಂಧಗಳು ಉತ್ತಮ ವಾಗಿದ್ದವಷ್ಟೆ. ಅದರ ಮುಂದುವರಿಕೆಯಾಗಿ ರಾಷ್ಟ್ರಕೂಟ ಬದ್ದೆಗ ಕ್ರಿ.ಶ. ೯೩೩ರಲ್ಲಿ ಗಂಗ ಎರೆಯಂಗ (೮೮೬-೯೨೦)ನ ಕಿರಿಯ ಮಗನಾದ ಇಮ್ಮಡಿ ಬೂತುಗನಿಗೆ ತನ್ನ ಮಗಳಾದ ರೇವಕ



ನಿರ್ಮಡಿಯನ್ನು ಮದುವೆ ಮಾಡಿಕೊಟ್ಟಿದ್ದನು. ಮುಂದೆ ಕ್ರಿ.ಶ. ೯೩೬ರಲ್ಲಿ ಈ ಬೂತುಗನು ತನ್ನ ಸೋದರ ರಾಚಮಲ್ಲನನ್ನು ರಾಷ್ಟ್ರಕೂಟರ ನೆರವಿನಿಂದ ಸೋಲಿಸಿ ಗಂಗರಾಜ್ಯದ ಅಧಿಪತಿ ಯಾಗಿದ್ದನು. ಈ ಬೂತುಗನೇ ಮೇಲೆ ಉಲ್ಲೇಖಿಸಿದ ತಕ್ಕೋಳಂ ಕಾಳಗದಲ್ಲಿ ರಾಷ್ಟ್ರಕೂಟರ (ಬದ್ದೆಗನ ಮಗನಾದ) ಮುಮ್ಮಡಿ ಕೃಷ್ಣನಿಗೆ ನೆರವಾಗಿ ಆ ಯುದ್ಧದಲ್ಲಿ ವಿಜಯ ಸಾಧಿಸಲು ಕಾರಣ ವಾದವನು. ಆ ಕಾರಣದಿಂದಾಗಿಯೇ ಬೂತುಗನಿಗೆ ಬನವಾಸಿ -೧೨,೦೦೦ ಬೆಳ್ವೊಲ-೩೦೦, ಪುಲಿಗೆಱೆ-೩೦೦ ಕಿಸುಕಾಡು-೭೦ ಮುಂತಾದ ಪ್ರದೇಶಗಳನ್ನು ಉಂಬಳಿಯಾಗಿ ನೀಡಲಾಯಿತು. ಅಲ್ಲದೆ ಆನಂತರದಲ್ಲಿ ರಾಷ್ಟ್ರಕೂಟರು ಚೋಳರ ಮೇಲಿನ ತಮ್ಮ ಆಕ್ರಮಣವನ್ನು ಮುಂದುವರೆಸಿ, ಕಂಚಿ, ತಂಜಾ ವೂರುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಂತೆ ತೋರುತ್ತದೆ. ಏಕೆಂದರೆ ಮುಮ್ಮಡಿ ಕೃಷ್ಣನು ತನ್ನ ಅನೇಕ ಶಾಸನಗಳಲ್ಲಿ 'ಕಚ್ಚಿಯಂ ತಂಜೈಯಂ ಕೊಂಡ' ಬಿರುದಿನೊಂದಿಗೆ ಪ್ರಸ್ತಾಪಿತ ನಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಮುಮ್ಮಡಿ ಕೃಷ್ಣನ ಆಡಳಿತ ಅವಧಿಯಲ್ಲಿ ಸುಮಾರು ೨೦೦ ಶಾಸನಗಳು ಹುಟ್ಟಿ ಕೊಂಡಿವೆ. ಇವುಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯ ಶಾಸನಗಳು 'ತಕ್ಕೋಲಂ ಯುದ್ಧ' ಕಾಲದಲ್ಲಿ ಇವರ ಅಧೀನ ಕ್ಕೊಳಪಟ್ಟ ತೊಂಡೆ ಮಂಡಲ -೪೮೦೦೦ ಪ್ರದೇಶದಲ್ಲೇ ಮುಂದಿನ ಇಪ್ಪತ್ತು ವರ್ಷಗಳವರೆಗೂ ಹುಟ್ಟಿಕೊಂಡಿರುವುದು ಗಮನಾರ್ಹ ಸಂಗತಿ ಯಾಗಿದೆ. ರಾಷ್ಟ್ರಕೂಟರು ದಕ್ಷಿಣದಲ್ಲಿ ಅಂದರೆ ತೊಂಡೆ ಮಂಡಲ ಪ್ರದೇಶದಲ್ಲಿ ಇಷ್ಟು ದೀರ್ಘಕಾಲ ನೆಲೆನಿಲ್ಲಲು, ಆ ಪ್ರದೇಶದ ನೆರೆಯವರೂ ಮತ್ತು ನಂಬುಗೆಯ ಮಾಂಡಲಿಕರೂ ಬಂಧುಗಳೂ ಆಗಿದ್ದ ಗಂಗರಸರೇ ಒಂದು ರೀತಿಯಲ್ಲಿ ಕಾರಣ ರಾಗಿದ್ದರೆಂದರೆ ತಪ್ಪಾಗಲಾರದು.

ರಾಷ್ಟ್ರಕೂಟರ ನೆರವಿನೊಂದಿಗೆ ಪಟ್ಟವನೇರಿದ ಗಂಗರಸ ಇಮ್ಮಡಿ ಬೂತುಗನು ಮರಣ ಹೊಂದಿದಾಗ ಅವನ ಹಿರಿಯ ಮಗ ಮರುಳ ಅಧಿಕಾರಕ್ಕೆ ಬಂದು ಕ್ರಿ.ಶ. ೯೬೩ರವರೆಗೆ ಆಳಿದನು. ಈತನ ಒಂದೆರಡು ವರ್ಷಗಳ ಸಂಕ್ಷಿಪ್ತ ಅವಧಿಯ ಆಳ್ವಿಕೆಯ ನಂತರ ಅವನ ಸಹೋದರರಾದ ಇಮ್ಮಡಿ ಮಾರಸಿಂಹ ಮತ್ತು ನೀತಿಮಾರ್ಗ ಗೋವಿಂದರಸರ ಮಧ್ಯೆ ಗಂಗಮಂಡಲದ ಸಿಂಹಾಸನಕ್ಕಾಗಿ ಗೊಂದಲವೇರ್ಪಟ್ಟಿರಬೇಕು. ಆಗ ರಾಷ್ಟ್ರಕೂಟರ ನೇರ ಆಡಳಿತ ಗಂಗಮಂಡಲದ ಮೇಲೆ ನಡೆದಿರಬೇಕು. ಬಹುಶಃ ಆ ಕಾಲಕ್ಕೇ ಸೇರಿದ ಪ್ರಸ್ತುತ ಕ್ರಿ.ಶ. ೯೬೩ರ ಶಾಸನವಾಗಿದೆ. ಮುಂದೆ ರಾಷ್ಟ್ರಕೂಟರು ಮಾರಸಿಂಹನಿಗೆ ಗಂಗಸಿಂಹಾಸನವನ್ನು ದೃಢಪಡಿಸಿರಬೇಕೆಂದು ತೋರುತ್ತದೆ. ಆ ಕಾರಣದಿಂದಲೇ ಇರಬೇಕು- ಮುಂದೆ ಗಂಗರಸ ಮಾರಸಿಂಹ, ರಾಷ್ಟ್ರಕೂಟರಿಗೆ ಬಹಳ ನಿಷ್ಠನಾಗಿದ್ದನು. ರಾಷ್ಟ್ರಕೂಟರ ಕೊನೆಯ ದೊರೆ ಅಂದರೆ ಮುಮ್ಮಡಿ ಕೃಷ್ಣನ ಮೊಮ್ಮಗ ಇಂದ್ರನನ್ನು ಕ್ರಿ.ಶ. ೯೬೭ರಲ್ಲಿ ಬಂಕಾಪುರದಲ್ಲಿ ಪಟ್ಟಕ್ಕೆ ತರುವುದರ ಮೂಲಕ ತನ್ನ ಸಾಹಸವನ್ನು ಮೆರೆದಿರುವುದು ಗಮನಾರ್ಹ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಕುಣಿಗಲ್ ಕೆರೆ ಶಾಸನದಲ್ಲಿ ಉಕ್ತವಾಗಿರುವ ವಿವರಗಳನ್ನು ವಿವೇಚಿಸಬೇಕಾಗಿದೆ. ಅಂತೆಯೇ ಗಂಗ ಶಿವಮಾರನ ಕಾಲ(ಕ್ರಿ.ಶ. ೭೮೧)ದಿಂದಲೇ ರಾಷ್ಟ್ರಕೂಟರ ಸಾಮಂತರಾದ ಚಾಲುಕ್ಯ ವಂಶೀಯರು ಗಂಗಮಂಡಲದೊಳಗೇ ಸಾಮಂತರಾಗಿಯೋ ಅಧಿಕಾರಿಗಳಾಗಿಯೋ ಮುಂದುವರೆದಿದ್ದ ಸಂಗತಿ ನಿಚ್ಚಳವಾಗುತ್ತದೆ. ಅಲ್ಲದೆ ಪ್ರಸಿದ್ಧ ಕುಣಿಗಲ್‌ನ ದೊಡ್ಡ ಕೆರೆಯ ನಿರ್ಮಾತೃ ಸು. ಕ್ರಿ.ಶ. ೭೫೦-೮೦೦ರ ಅವಧಿಯಲ್ಲಿ ಗಂಗರಾಜ್ಯವನ್ನು ವಿಶಿಷ್ಟವಾಗಿ ಆಳಿದ ಶ್ರೀಪುರುಷ ಮಹಾರಾಜನು ಎಂಬುದು ಖಚಿತವಾಗಿ ತಿಳಿದುಬರುತ್ತದೆ. ಕ್ರಿ.ಶ. ೯೬೩ರ ವೇಳೆಗೆ ಒಮ್ಮೆ ಆ ಕೆರೆ ಶಿಥಿಲವಾಗಿದ್ದ ಅಂಶ ಹಾಗೂ ರಾಷ್ಟ್ರಕೂಟರ ತತ್ಕಾಲಿಕ ಆಡಳಿತ ಕಾಲದಲ್ಲಿ ಚಾಲುಕ್ಯ ವಂಶೀಯವಾದ ಸಾಮಂತ ಮಾನ್ಸಾದ್ರಿತ ಎಂಬುವನು ಕೆರೆಯ ಜೀರ್ಣೋದ್ಧಾರ ಕಾರ್ಯ ನಡೆಸಿರುವ ಸಂಗತಿಗಳು ಈ ಶಾಸನದಿಂದ ಸುವ್ಯಕ್ತವಾಗುತ್ತದೆ.

ಹಾಗಾಗಿ ಈ ಕೆರೆಯ ರಚನೆಯ ಬಗ್ಗೆ ಜನಜನಿತವಾಗಿರುವ ಐತಿಹ್ಯಗಳು ಮುಂದೆ ಹುಟ್ಟಿಕೊಂಡ ಕಟ್ಟುಕಥೆಗಳೆಂಬುದರಲ್ಲಿ ಸಂದೇಹವಿಲ್ಲ.[೫]

ಶಾಸನ ಪಾಠ

೧ ಸ್ವಸ್ತಿ ಸಕನೃಪ ಕಾಳಾತೀತ ಸಂವತ್ಸರ ಸತಂಗಳ್ ಆಱಱನೆಯ ರುಧಿರೋದ್ಗಾರಿ

೨ ಸಂವತ್ಸರ ಪ್ರವತ್ತಿಸುರ್ತ್ತಮಿರೆ ಸ್ವಸ್ಯಕಾಳವರ್ಷದೇವ ಶ್ರೀ ಪ್ರಿಥ್ವಿವಲ್ಲಭ ಮ

೩ ಹಾ ರಾಜಾಧಿರಾಜ ರಾಜ ಪರಮೇಶ್ವರ ಪರಮಭಟ್ಟಾರಕ ಪ್ರವರ್ಧ್ಧಮಾನ ವಿಜಯರಾಜ್ಯ ರಾಜ್ಯ

೪ ರೊತ್ತರಭಿವೃದ್ಧಿಗೆ ಸಲುತ್ತಮಿರೆ ತತ್ಪಾದ ಪದ್ಮಾರಾದನೆಯೊ... ಸ್ವಸ್ತಿ ಸಮದಿಗತ

೫ ಪಞ್ಚಮಹಾಶಬ್ದ ಮಹಾ ಸಾಮನ್ತ ಚಾಳುಕ್ಯ ಮಾನ್ದಾತನ ಪುಡವಿಳ್ಯಾರ . ನ . ಮಾನ

೬ ಮಾನ್ದಾರುತ್ತು ಚಿನ್ತಾಮಣಿ ಸೋಕಾನೆಮಲ್ಲ ಪರಾಕ್ರಮಗಳ ನನ್ದೇಸಖಾಯಬಟ್ಟ

೭ . ಮಣ್ಣಂ ಕಲಿಗೆದೊರೆಯ್ಗಂ ಗುಣರತ್ನಧಾಮ ಶ್ರೀಮತ್ ಗಣ್ಡರ ಭೀಮರಣಧೀರ

೮ ಲೆಣ್ಬುನೂಱು ಬಾಡಮುಮಂ ಸುಖ ಸನ್ತತಿಯೊಳಾಳುತ್ತುಮಿಬ್ದು ಕುಣಂಗಿಲೊಳ್

೯ [ಮುಳ್ಳೆ] ಶ್ರೀಪುರುಷ ಮಹಾರಾಜನ್ ಕಟ್ಟಿಸಿದ ಪಿರಿಯ ಕೆಱೆ ಭಿಂನಮಾದೊಡೆ...ಳ್

೧೦ . ನಾಡ . ಸುಗಳರು ಕಟ್ಟಿಸಲಾಟಿ....
(ಮುಂದೆ ಕಲ್ಲು ಒಡೆದಿದೆ.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ XII, ಗುಬ್ಬಿ ೬೧.
೨. ಅದೇ (ಪರಿಷ್ಕೃತ) ಸಂಪುಟ ೫, ಮೈಸೂರು ೧೬೭-೧೬೯; ೧೭೩-೧೭೮ ಮತ್ತು ೨೨೩ ಇತ್ಯಾದಿ.
೩. ಅದೇ (ಪರಿಷ್ಕೃತ) ಸಂಪುಟ ೭ ಮದ್ದೂರು ೪೨.
4. Dr. S. Swaminathan (Ed), *Rastrakuta Inscriptions in the Tamil country*, Kannada University, Hampi, 2000, No. 82, 105; 6, 12, 20, 23-27, 32, 34, 36 ಮುಂತಾದವು.
೫. ಶಿವಗಂಗೆಯಲ್ಲಿ ಹುಟ್ಟುವ ನಳಿನಿ, ನಾಗಿನಿ ಮತ್ತು ಕಮಲಾ ನದಿಗಳು ಈ ಕುಣಿಗಲ್ ಕೆರೆಯಲ್ಲಿ ಸಂಗಮವಾಗುವುವೆಂದು ಜನರ ನಂಬಿಕೆ. ನೃಗನೆಂಬ ಒಬ್ಬ ಚಕ್ರವರ್ತಿ ಇಲ್ಲಿ ಸ್ನಾನ ಮಾಡಿ ತನ್ನ ಕುಷ್ಠರೋಗವನ್ನು ಕಳೆದುಕೊಂಡನೆಂಬುದಾಗಿ ಸ್ಥಳಪುರಾಣ ಹೇಳುತ್ತದೆ. ಇಲ್ಲಿನ ಭಾರಿ ಕೆರೆಯನ್ನು ಆತನೇ ಕಟ್ಟಿಸಿದನಂತೆ. ಅನಂತರ ಹಿಮಾಲಯದಿಂದ ಏಳು ಮಂದಿ ಲಿಪಿ-ಜೋಗಿಗಳು ಬಂದು ಕೆರೆಯ ಅಡಿಯಲ್ಲಿ ಹುದುಗಿದ್ದ ಐಶ್ವರ್ಯವನ್ನು ಕಾಯುತ್ತಿದ್ದ ಏಳು ಹೆಡೆಗಳ ಘಟಸರ್ಪವನ್ನು ಕೊಂದು ಆ ಐಶ್ವರ್ಯವನ್ನು ಎತ್ತಿಕೊಂಡು ಹೋದರಂತೆ. ಶಿವ ಇಲ್ಲಿ, ಕಲ್ಲುಬಂಡೆಯ ಮೇಲೆ ನೃತ್ಯ (ಕುಣಿತ) ಮಾಡಿದನೆಂದೂ, ಆದ್ದರಿಂದ ಈ ಸ್ಥಳಕ್ಕೆ ಕುಣಿಗಲ್ ಎಂಬ ಹೆಸರು ಬಂದಿತೆಂದೂ ಐತಿಹ್ಯವಿದೆ.

ಎಸ್.ಎಲ್.ಶ್ರೀನಿವಾಸಮೂರ್ತಿ*

ಮಳೂರಿನ ಅಪ್ರಕಟಿತ ಶಾಸನಸಹಿತ ವೀರಗಲ್ಲು

ಮಳೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಒಂದು ಗ್ರಾಮವಾಗಿದ್ದು ಶಿರಾಳಕೊಪ್ಪದಿಂದ ಆನವಟ್ಟಿಗೆ ಹೋಗುವ ಮಾರ್ಗದಲ್ಲಿ, ಬಳ್ಳಿಗಾವೆಗೆ ಬಹಳ ಸಮೀಪದಲ್ಲಿದೆ. ಈ ಹಳ್ಳಿಯ ಆದ್ಯಂತ ಇರುವ ಅನೇಕ ವೀರಗಲ್ಲುಗಳು ಹಾಗೂ ಮಾಸ್ತಿಕಲ್ಲುಗಳ ಪೈಕಿ ಒಂದು ವಿಶಿಷ್ಟವಾದ ವೀರಗಲ್ಲೊಂದನ್ನು ಮಾತ್ರ ಪರಿಚಯಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶವಾಗಿದೆ.

ಸುಮಾರು ನಾಲ್ಕೂವರೆ ಅಡಿ ಉದ್ದ ಹಾಗೂ ಮೂರೂವರೆ ಅಡಿ ಅಗಲವಿರುವ ಈ ವೀರಗಲ್ಲು ಮಳೂರಿನ ಮಧ್ಯಭಾಗದಲ್ಲಿ ಇರುವ ಕುಡಿಯುವ ನೀರಿನ ಹೊಂಡಕ್ಕೆ ಹೋಗುವ ಮಾರ್ಗದಲ್ಲಿ ಅರೆಬರೆಯಾಗಿ ಹೂತುಹೋಗಿತ್ತು. ಗ್ರಾಮಸ್ಥರ ನೆರವಿನಿಂದ ಇತ್ತೀಚೆಗೆ ಅದನ್ನು ಹೊರತೆಗೆಸಿದಾಗ ಸಂಪೂರ್ಣ ವಿವರಗಳು ಕಂಡು ಬಂದವು ಈ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು ಕೆಳಗಿನ ಹಂತದಲ್ಲಿ ವೀರನೊಬ್ಬ ಆನೆಯೊಂದಿಗೆ ಹೋರಾಡುತ್ತಿರುವ ದೃಶ್ಯವನ್ನು ಕಂಡರಿಸಲಾಗಿದೆ. ಮಧ್ಯದ ಹಂತದಲ್ಲಿ ದೇವತಾ ಸ್ತ್ರೀಯರು ಅವನನ್ನು ಶಿವಲೋಕಕ್ಕೆ ಕರೆದುಕೊಂಡು ಹೋಗುತ್ತಿರುವಂತೆಯೂ ಮತ್ತು ಮೇಲಿನ ಹಂತದಲ್ಲಿ ವೀರನು ಶಿವಪೂಜೆಯಲ್ಲಿ ನಿರತವಾಗಿರುವಂತೆಯೂ ತೋರಿಸಲಾಗಿದೆ. ಹಂತಗಳನ್ನು ಬೇರ್ಪಡಿಸುವ ಪಟ್ಟಿಕೆಗಳಲ್ಲಿ ಶಾಸನವನ್ನು ಕೆತ್ತಲಾಗಿದೆ.

ಶಿಲ್ಪದ ವಿವರಗಳು

ಇಲ್ಲಿಯ ಶಿಲ್ಪಗಳು ಅಲ್ಲಲ್ಲಿ ಕೆತ್ತಿಹೋಗಿದ್ದರೂ ನೋಡಲು ಸುಂದರವಾಗಿವೆ ಹಾಗೂ ಸ್ಫುಟವಾಗಿವೆ. ಮೇಲಿನ ಹಂತವು ಅತ್ಯಂತ ಸಾಂಪ್ರದಾಯಿಕವಾಗಿದ್ದು ಹೆಚ್ಚೇನೂ ವಿಶೇಷವನ್ನು ಹೊಂದಿಲ್ಲ. ಮಧ್ಯಭಾಗದಲ್ಲಿರುವ ಅಪ್ಸರ ಸ್ತ್ರೀಯರ ಅಲಂಕರಣಗಳು ಬೇಲೂರಿನ ಶಿಲಾ ಬಾಲಿಕೆಯರನ್ನು ನೆನಪಿಸುತ್ತವೆ. ಶಾಸನ ಶಿಲ್ಪದ ನಿಜವಾದ ವೈಶಿಷ್ಟ್ಯವಿರುವುದು ಕೆಳಗಿನ ಹಂತದಲ್ಲಿ. ಇಲ್ಲಿ ಸರ್ವಾಲಂಕೃತವಾದ ದೊಡ್ಡ ಆನೆಯೊಂದು ಶತ್ರುಗಳ ಸಂಹಾರದಲ್ಲಿ ತೊಡಗಿರುವುದನ್ನು ನಾವು ನೋಡಬಹುದು (ಚಿತ್ರ-೩) ಆನೆಕಾಳಗದ ದೃಶ್ಯಗಳನ್ನು ಒಳಗೊಂಡಿರುವ ಇತರ ವೀರಗಲ್ಲುಗಳಲ್ಲಿ ಆನೆಯು ತನ್ನ ಸೊಂಡಿಲಿನಿಂದ ಮೇಲೆತ್ತಿರುವುದು ಸಾಧಾರಣವಾಗಿ ಕಂಡು ಬರುವ ಅಂಶ. ಆದರೆ ಇಲ್ಲಿ ಆನೆಯು ಕುದುರೆಯೊಂದರ ಹಿಂದಿನ ಎರಡೂ ಕಾಲುಗಳನ್ನು ಸೊಂಡಿಲಿನಿಂದ ಮೇಲೆತ್ತಿರುವುದರ ಮೂಲಕ ಅದರ ಸವಾರನನ್ನು ಕೆಳಗೆ ಬೀಳಿಸಿ ಅವನನ್ನು ತುಳಿದು



ಕೊಲ್ಲುತ್ತಿರುವ ಅಪರೂಪದ ದೃಶ್ಯ ಕಾಣಸಿಗುತ್ತದೆ. ಆನೆಯ ಹಿಂಭಾಗದಲ್ಲಿರುವ ಧ್ವಜ, ಛತ್ರ ಮುಂತಾದ ಲಾಂಛನಗಳು ಇದು ರಾಜಪುರುಷನಿಗೆ ಸೇರಿದ ಆನೆ ಎಂಬುದನ್ನು ಸೂಚಿಸುತ್ತದೆ. ಮಹಾಭಾರತ ಯುದ್ಧದ 'ಸುಪ್ರತೀಕ'ವನ್ನು ನೆನಪಿಗೆ ತರುವ ಇಂತಹ ಆನೆಯನ್ನು ವೀರನೊಬ್ಬ ತನ್ನ ಖಡ್ಗದಿಂದ ಇರಿದು ಕೊಲ್ಲಲು ಹೊರಟಿದ್ದಾನೆ.

ಶಾಸನ ಪಾಠ

೧ ಭುವನಾಸ್ರಯಂ ಪ್ರಿಥಿವೀ ವಲ್ಲಭಂ ಮಹಾರಾಜಾ...

೨ [ಸತ್ಯಾ] ಸ್ರಯ ಕುಳತಿಳಕಂ ಚಾಲುಕ್ಯಭರಣಂ ಶ್ರೀ...

೩ . . ವ್ರಿದ್ದಿ ಪ್ರವರ್ಧಮಾನಂ ಮಾ ಚಂ...........

೪ . . ಧಿಗತ ಪಂಚಮಹಾಸಬ್ದ ಮಹಾ ಮಣ್ಡಳೇಸ್ವರಂ ಬನವಾಸಿ ಪುರವರಾ ಧೀ ಸ್ವ [ರಂ].....

೫ . . ದ ಕಡಂಬರಾಭರಣಂ ಮಾರ್ಕ್ಕೊಳ್ವರ ಗಂಡ ಸತ್ಯ ರಾಧೇಯ ಪ್ರತಾಪ......

೬ [ಬ] ನವಾಸೆ ಪನ್ನಿರ್ಚ್ಛಾಸಿರ ಸಾಂನ್ತಳಿಗೆ ಸಾಯಿರ ಬೆಳ್ವಲ ಎರಡಱು ನೂಱ್..........

೭ . . ವರ್ಷ ೧೦೫೧ ನೆಯ ಆನನ್ದ ಸಂವತ್ಸರದ ವೈಶಾಖ ಸುಧ್ಧ ಧಸಮಿ........

೮ . ಲ ಶೇಖರ ಮಣ್ಡಳೀಕನು ಎರಡೊಡ್ಡಿನ ಬಲಂ ನೋಡಲು . .

೯ . . ಳಿಗೆ ರಾಜಿಯಬ್ಬೆ ಗೌವುಡಿಯ ಮಗಂ ಮಸಣಾಯ ನಾಯ[ಕ].......

* ಮುಖ್ಯಸ್ಥ, ಕನ್ನಡ ವಿಭಾಗ, ವಿಜಯ ಪದವಿ ಪೂರ್ವ ಕಾಲೇಜು, ಆರ್. ವಿ. ರಸ್ತೆ , ಬಸವನಗುಡಿ, ಬೆಂಗಳೂರು -೪



೧೦ ಯ ದಳ ಆನೆಯ ಮೇಲೆ ವೀಳೆ ಆನೆಯಂ ತಳ್ತಿಜಿ‌ದು.........

೧೧ . . ಶ್ರೀ ಮದರಸರು ಕೊಟ್ಟ ಕೊಡಂಗೆ ಯೀ ಆನೆಯ..........

೧೨ ಜಿತೇನ ಲಭ್ಯತೇ ಲಕ್ಷ್ಮೀ ಮ್ರಿತೇನಾ................

೧೩ . . . . . ರಣೇ ರಣೇ॥

ಚಾರಿತ್ರಿಕಾಂಶಗಳು

ಶಾಸನದ ಎಲ್ಲ ಹದಿಮೂರು ಸಾಲುಗಳ ಮೊದಲ ಹಾಗೂ ಕಡೆಯ ಅನೇಕ ಅಕ್ಷರಗಳು ಹಾಳಾಗಿರುವುದರಿಂದ ಅದರ ಸಂಪೂರ್ಣವಾದ ಅನ್ವಯವನ್ನಾಗಲೀ ಅಥವಾ ಸಾರಾಂಶ ವನ್ನಾಗಲೀ ಸ್ಪಷ್ಟವಾಗಿ ಹೇಳುವುದು ಕಷ್ಟಕರವಾಗಿದೆ. ಲಭ್ಯವಿರು ವಷ್ಟೇ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ಶಾಲೀವಾಹನ ಶಕ ೧೦೫೧ರಲ್ಲಿ ನಡೆದ ಕಾಳಗವೊಂದರಲ್ಲಿ ಆನೆಯೊಂದಿಗೆ ಕಾದಿ ಸ್ತತ ವೀರನೊಬ್ಬನಿಗೆ ಕೊಡುಗೆ ಕೊಟ್ಟುದನ್ನು ಈ ಶಾಸನವು ದಾಖಲಿಸುತ್ತಿದೆ.

ಶಾಸನದ ಆರಂಭದಲ್ಲಿ ಬಂದಿರುವ '(ಸಮಸ್ತ) ಭುವನಾ ಶ್ರಯ, ಪ್ರಿಥಿವಿವಲ್ಲಭ, ಸತ್ಯಾಶ್ರಯ ಕುಲತಿಳಕ, ಚಾಲುಕ್ಯಭರಣ' ಮುಂತಾದ ಬಿರುದುಗಳಿಂದ ಈ ಶಾಸನವು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲದ್ದೆಂದು ಸ್ಪಷ್ಟವಾಗುತ್ತದೆ. ಇಲ್ಲಿ ನಮೂದಿತವಾಗಿರುವ ೧೦೫೧ನೆಯ ಶಕವರ್ಷವು ಕ್ರಿ. ಶ. ೧೧೨೯ನೆಯ ಇಸವಿಗೆ ತಾರ್ಕಿಕವಾಗಿ ಸರಿಹೋಗುತ್ತದೆ. ಈ ಕಾಲಘಟ್ಟದಲ್ಲಿ ಚಾಲುಕ್ಯ ರಾಜ್ಯವನ್ನು ಆಳುತ್ತಿದ್ದವನು ಮೂರನೆಯ ಸೋಮೇಶ್ವರ. ಇವನಿಗೆ 'ಭೂಲೋಕಮಲ್ಲ, ಸರ್ವಜ್ಞ ಚಕ್ರವರ್ತಿ' ಇತ್ಯಾದಿ ಬಿರುದು ಗಳಿದ್ದುವಾದರೂ ಅವಾವುವೂ ಈ ಶಾಸನದಲ್ಲಿ ಉಕ್ತವಾಗಿಲ್ಲ ದಿರುವುದು ಗಮನಾರ್ಹ.

ಮೂರನೇ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಚಾಲುಕ್ಯರ ಸಾಮಂತರಾಗಿ ಬನವಾಸಿ ಪನ್ನಿರ್ಚ್ಛಾಸಿರವನ್ನು ಆಳುತ್ತಿದ್ದವರು. 'ಸಮಧಿಗತ ಪಂಚಮಹಾಶಬ್ಧ, ಮಹಾಮಂಡಳೇಶ್ವರ, ಕದಂಬರಾ ಭರಣ, ಮಾರ್ಕೊಳ್ವನ ಗಂಡ, ಸತ್ಯಾರಾಧೇಯ ಪ್ರತಾಪ' ಇತ್ಯಾದಿ ಬಿರುದಾಂಕಿತರಾಗಿದ್ದ ಹಾನುಗಲ್ಲು ಕದಂಬರು. ಪ್ರಸ್ತುತ ಶಾಸನದಲ್ಲಿ ಮಹಾಮಂಡಲೇಶ್ವರನ ಹೆಸರನ್ನು ಓದುವುದು ಸಾಧ್ಯವಿಲ್ಲವಾದರೂ ಇತರ ಶಾಸನಗಳ ಆಧಾರದ ಮೇಲೆ ಹೇಳುವುದಾದರೆ ಈತ ಇಮ್ಮಡಿ ತೈಲಪ.

ಇಲ್ಲಿ ಪ್ರಸ್ತಾಪಿತವಾಗಿರುವ ಮತ್ತೊಬ್ಬ ವ್ಯಕ್ತಿಯೆಂದರೆ ರಾಜಿಯಬ್ಬೆ ಗೌವುಂಡಿಯ ಮಗನಾದ ಮಸಣಯ್ಯ ನಾಯಕನದು. ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ಮಸಣ[೧], ಮಸಣಗೌಡ[೨], ಮಸಣಯ್ಯನಾಯಕ[೩], ಮಸಣಯ್ಯ[೪], ಮಸನಯ್ಯ[೫], ಮುಂತಾದ ಹೆಸರಿನ ಅನೇಕರ ಉಲ್ಲೇಖಗಳಿದ್ದು ಪ್ರಸ್ತುತ ಶಾಸನದ ಮಸಣಯ್ಯನಾಯಕನಿಗೂ ಇವರಲ್ಲಿ ಯಾರಿಗಾದರೂ ಸೌಮ್ಯ ಇರುವುದೇ ಎಂಬ ಅಂಶ ಪರಿಶೀಲನಾರ್ಹ. ಅವುಗಳಲ್ಲಿ ಕಾಲದ ದೃಷ್ಟಿಯಿಂದ ಅತಿ ಸಮೀಪದ ಶಾಸನಗಳೆಂದರೆ ರೈಸ್ ಸಂಪಾದಿತ 'ಎಪಿಗ್ರಾಫಿಯಾ ಕರ್ನಾಟಿಕಾ' ಸಂಪುಟಗಳಲ್ಲಿ ದಾಖಲಾಗಿರುವ ಸೊರಬ ತಾಲ್ಲೂಕಿನ ೧೪೧ನೇ ಕ್ರಮಸಂಖ್ಯೆಯ ಹಾಗೂ ಶಿಕಾರಿಪುರದ ೧೩೩ನೇ ಕ್ರಮಸಂಖ್ಯೆಯ ಶಾಸನಗಳು.

ಇವುಗಳ ಪೈಕಿ ಸೊರಬದ ಶಾಸನದಲ್ಲಿ (ಕಾಲ ಕ್ರಿ.ಶ. ೧೧೨೭) ಭೂಲೋಕಮಲ್ಲನು ರಾಜ್ಯವಾಳುತ್ತಿದ್ದಾಗ ಮಹಾ ಮಂಡಳೇಶ್ವರನಾದ ತೈಲಪದೇವನ ಅಧಿಪತ್ಯದಲ್ಲಿದ್ದ "ಸ್ವಸ್ತಿ ಶ್ರೀಮನು ಮಹಾಪ್ರಧಾನಂ ಮನೆವೇರ್ಗ್ಗಡೆ ದಂಡನಾಯಕಂ ಮಸಣೈಯಂ" ತನ್ನ ಸಮಸ್ತ ಸೈನ್ಯವನ್ನು ಮೈದುನನಾದ ಕಾಳಿಂಗ ನಾಯಕನ ನೇತೃತ್ವದಲ್ಲಿ ಈ ಸಾಪುರದಲ್ಲಿದ್ದ ಪೆರ್ಮಾಡಿ ಸಾಂತಾರರ ಕೋಟೆಯನ್ನು ಗೆಲ್ಲಲು ಕಳುಹಿಸಿದ ಅಂಶ ವ್ಯಕ್ತವಾಗಿದೆ.

ಶಿಕಾರಿಪುರದ ಶಾಸನವು (ಕಾಲ:ಕ್ರಿ.ಶ.೧೧೩೧) "ಶ್ರೀಮನ್ಮ ಹಾಮಣ್ಡಳೇಶ್ವರ ಬನವಾಸೆಯಾ ತೈಲಹ ದೇವರ ಬೆಸದಿಂ ತತ್ಪಾದ ಪದ್ಮೋಪಜೀವಿ ಮಣ್ಡಳಿಕ ಮಸಣೆಯ್ಯಂ ಶ್ರೀ ಮದ್ರಾಜಧಾನಿ ಬಲಿಪುರದ ಸಮಸ್ತ ಪ್ರಶಸ್ತಿ ಸಹಿತಾನೇಕ ಗುಣಗಣಾಲಂಕಾರಮಂ ಸಮಸ್ತ ಬುಧ ಜನಾಧಾರರುಂ ಚತು ಸ್ಸಮಯ ಸಮುದ್ಧರಣ ಧೀರರುಂ ಶರಣಾಗತ ವಜ್ರ ಪ್ರಾಕಾರರುಂ " ಆದ ಅನೇಕ ಜನ ಶ್ರೇಷ್ಠಿಗಳು ಕಾಳಿಯ ದೇವಾಲಯಕ್ಕೆ ದಾನವಿತ್ತುದನ್ನು ಉಲ್ಲೇಖಿಸುತ್ತದೆ.

ಈ ಎರಡೂ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮಸಣಯ್ಯ ದಂಡನಾಯಕನೂ, ಪ್ರಸ್ತುತ ದೊರೆತಿರುವ ಶಾಸನದಲ್ಲಿ

ಉಕ್ತವಾಗಿರುವ ಮಸಣಯ್ಯ ದಂಡನಾಯಕನೂ ಒಬ್ಬನೇ ಎಂದು ತೋರುತ್ತದೆ. ಹಾಗಿದ್ದಲ್ಲಿ ಶಿಕಾರಿಪುರದ ಶಾಸನವು ಪ್ರಸ್ತುತ ಶಾಸನಕ್ಕಿಂತಲೂ ನಂತರದ್ದಾಗಿರುವುದರಿಂದ ಯುದ್ಧದಲ್ಲಿ ಹೋರಾಡಿ ಮಡಿದವನು ಮಸಣಯ್ಯ ನಲ್ಲವೆಂಬುದು ಸ್ಪಷ್ಟವಾಗುತ್ತದೆ. "ಮಸಣಯ್ಯನಾಯಕ" ಎಂಬ ಪದದ ಮುಂದೆ ಸಾಕಷ್ಟು ಅಕ್ಷರಗಳನ್ನು ಹಾಳಾಗಿದ್ದು ಅಲ್ಲಿ ಮಡಿದ ವೀರನ ಹೆಸರು ದಾಖಲಾಗಿತ್ತೆಂದು ಊಹಿಸಬಹುದು.*

* (ಪ್ರಸ್ತುತ ಶಾಸನವನ್ನು ಹೊರತೆಗೆಯಲು ನೆರವಾದ ಮಳೂರಿನ ಗ್ರಾಮಸ್ಥರಿಗೆ ಹಾಗೂ ಅದರ ಅಧ್ಯಯನವನ್ನು ಕೈಗೊಳ್ಳಲು ಸಹಕರಿಸಿದ ಶ್ರೀ ಎಂ. ಎಸ್. ಗುರುರಾಜರಾವ್ ಮತ್ತು ಶ್ರೀ ಎಂ.ಎಸ್. ವಾದಿರಾಜರಾವ್‌ರವರಿಗೂ, ಶಾಸನದ ಪಾಠವನ್ನು ಓದುವಲ್ಲಿ ನೆರವಾದ ಡಾ॥ ಕೆ. ಆರ್. ಗಣೇಶ್, ಡಾ॥ ಪಿ. ವಿ. ಕೃಷ್ಣಮೂರ್ತಿ, ಡಾ॥ ಎಂ. ಜಿ. ಮಂಜುನಾಥ ಹಾಗೂ ಡಾ॥ ಬಿ. ರಾಜಶೇಖರಪ್ಪ ಅವರಿಗೆ ಧನ್ಯವಾದಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ., ಸಂಪುಟ-೭, ಶಿವಮೊಗ್ಗ ೨೩; ಸಂಪುಟ-೮ ಸಾಗರ ೧೪೨,ಸೊರಬ ೨೮, ತೀರ್ಥಹಳ್ಳಿ ೨೧೨
೨. ಎ.ಕ., ಸಂಪುಟ-೮, ಸೊರಬ ೧೯, ೧೦೬, ೧೧೧, ೧೧೫, ೧೬೭; ಸಾಗರ ೧೨೭ ಇತ್ಯಾದಿ
೩. ಎ.ಕ., ಸಂಪುಟ-೮, ಸೊರಬ ೧೯, ೧೪೧, ೭೯, ೮೦, ೧೭೨, ೨೦೨, ೩೨೫
೪. ಎ.ಕ., ಸಂಪುಟ-೮, ಸಾಗರ - ೧೩೩
೫. ಎ.ಕ., ಸಂಪುಟ-೭, ಶಿಕಾರಿಪುರ ೭೦, ೧೩೩, ೨೪೨

ಕೆ. ಆರ್. ನರಸಿಂಹನ್*

'ದುಗ್ಗಸಂದ್ರ'ದ ಅಪ್ರಕಟಿತ ಶಾಸನಗಳು

ದುಗ್ಗಸಂದ್ರವು ಕೋಲಾರ ಜಿಲ್ಲೆ ಮುಳಬಾಗಲ್ ತಾಲೂಕಿಗೆ ಸೇರಿದ ಹೋಬಳಿ ಕೇಂದ್ರವಾಗಿರುವ ಗ್ರಾಮವಾಗಿರುತ್ತದೆ. ಇಲ್ಲಿನ ಸಪ್ತಮಾತೃಕೆಯರ ದೇವಾಲಯದ ಮುಂಭಾಗದಲ್ಲಿ ಶಾಸನಗಳು, ಮತ್ತು ವೀರಗಲ್ಲಿನಿಂದ ಕೂಡಿದ ಹಲವಾರು ಶಿಲೆಗಳಿವೆ. ಇವೆಲ್ಲವೂ ಅಪ್ರಕಟಿತವಾಗಿದ್ದು, ಇವುಗಳನ್ನು ದಾಖಲೆಗೊಳಿಸುವುದು ಅಗತ್ಯವಾಗಿರುತ್ತದೆ.

ಇತಿಹಾಸದ ಹಿನ್ನೆಲೆಯಲ್ಲಿ ಗಮನಿಸುವುದಾದರೆ, ದುಗ್ಗಸಂದ್ರಕ್ಕೆ ಗಂಗರ ಕಾಲದ ರಾಜಕೀಯ ಸಂಬಂಧವಿರುವುದು ಮೇಲುನೋಟಕ್ಕೆ ತಿಳಿದುಬರುತ್ತದೆ. ಗಂಗರ ದೊರೆಯಾದ ಶ್ರೀಪುರುಷನ ಮಗ ದುಗ್ಗಮಾರ ಎರೆಯಪ್ಪನೊಂದಿಗೆ ಇದು ಸಂಬಂಧಪಟ್ಟಿರುವುದು ಸುತ್ತಲಿನ ಪರಿಸರ ಮತ್ತು ದಾಖಲೆಗಳಿಂದ ದೃಢಪಡುತ್ತದೆ. ಸದ್ಯದ ಆಕರಗಳು ಸ್ಥಳೀಯ ಘಟನೆಗಳನ್ನರಿಯಲು ನೆರವಾಗುತ್ತವೆ.

ದುಗ್ಗಸಂದ್ರದಲ್ಲಿ ಲಭ್ಯವಿರುವ ಚಾರಿತ್ರಿಕ ಆಕರಗಳನ್ನು ಎರಡು ಗುಂಪಿನಲ್ಲಿ ಪರಿಶೀಲಿಸಬಹುದು. ಮೊದಲನೆಯದು, ಕೇವಲ ಶಾಸನರೂಪದಲ್ಲಿರುವ ಶಿಲಾಸ್ಮಾರಕಗಳು; ಎರಡನೆಯದು, ಶಿಲ್ಪಗಳ ಕೆತ್ತನೆಯೊಂದಿಗೆ ಕೂಡಿರುವ ಶಾಸನಸಹಿತ ವೀರಗಲ್ಲುಗಳು. ಎರಡು ವೈಶಿಷ್ಟ್ಯಪೂರ್ಣವಾದ ಶಾಸನಗಳನ್ನು ಇಲ್ಲಿ ಕಾಣಬಹುದು, ಹಾಗೂ ಉತ್ತಮವಾದ ಕೆತ್ತನೆಯ ವೀರಗಲ್ಲುಗಳೂ ಇವೆ.

ಇಲ್ಲಿನ ಬರಹ ಮತ್ತು ಕೆತ್ತನೆಗಳೆಲ್ಲವನ್ನೂ ಸುಮಾರು ಎಂಟು-ಒಂಬತ್ತನೆಯ ಶತಮಾನದ ಆರಂಭದಿಂದ ಹತ್ತನೇ ಶತಮಾನದ ಮಧ್ಯಕಾಲದವರೆಗೆ ಸೇರಿಸಬಹುದು. ಆದರೆ ಅಲ್ಲಲ್ಲಿ ಸವೆದುಹೋದ ಅಕ್ಷರಗಳಿಂದ ಸಂಪೂರ್ಣವಾದ ಸ್ಪಷ್ಟವಾದ ಅರ್ಥಕ್ಕೆ ತೊಡಕುಂಟಾಗಿರುತ್ತದೆ. ಕಲ್ಲಿನ ಅಳತೆ ಮತ್ತು ಶಿಲ್ಪದ ಕೆತ್ತನೆಗಳಿಂದ ಅಕ್ಷರಗಳನ್ನು ಕೊರೆಯುವಲ್ಲಿ ಹೆಚ್ಚಿನ ಅಚ್ಚುಕಟ್ಟುತನಕ್ಕೆ ಕೊರತೆಯಾಗಿದೆ. ಇದೇನೇ ಆದರೂ ಇಲ್ಲಿನ ದಾಖಲೆಗಳು ಹಲವು ವಿಶಿಷ್ಟ ಮಾದರಿಗಳಿಗೆ ನಿದರ್ಶನವಾಗಿಯೆ ಉಳಿದುಕೊಂಡು ಬಂದಿವೆ.

ಮೊದಲನೆಯದು, ಸುಮಾರು ಮೂರು ಅಡಿ ಅಗಲ ಮತ್ತು ನಾಲ್ಕು ಅಡಿ ಎತ್ತರವಿರುವ ದಪ್ಪನೆಯ ಬಂಡೆಯ ಮೇಲೆ ಕೆತ್ತಲಾಗಿರುವ ವೈದುಂಬರ ದೊರೆ ತಿರುವಯ್ಯನ ಬಿತ್ತುಕಟ್ಟು ಶಾಸನದ ಬರಹ. ಶಾಸನ ಶಿಲೆಯಲ್ಲಿ ಸೊಗಸಾದ ಅಕ್ಷರಗಳನ್ನಷ್ಟೆ ಅಲ್ಲದೆ, ಸುಂದರವಾದ ಆಕಳು-ಕರುವಿನ ಚಿತ್ರಣವಿದೆ.

ದಿಲೀಪನೊಳಂಬಾಧಿರಾಜನ ಪೃಥ್ವೀರಾಜ್ಯದ ಕಾಲದಲ್ಲಿ ವೈದುಂಬ ಕುಲಕ್ಕೆ ಸೇರಿದ ತಿರುವಯ್ಯನು ಕೊಲದೆಯದಕೆಱೆಗೆ ಬಿತ್ತುಕಟ್ಟು ನೀಡಿರುತ್ತಾನೆ. ಇದನ್ನು ಸಲ್ಲಿಸುವವನಿಗೆ ಅಶ್ವಮೇಧದ ಫಲವು ದೊರೆಯುತ್ತದೆ. ಕೆಡಿಸಿದವನು ಕಪಿಲೆಯನ್ನು, ಕೆರೆಯನ್ನು ವಾರಣಾಸಿಯನ್ನೂ ನಾಶಮಾಡಿದ ಪಾಪಕ್ಕೆ ಗುರಿಯಾಗುವನೆಂದು ಶಾಸನದಲ್ಲಿ ಹೇಳಲಾಗಿದೆ. ಹತ್ತನೆಯ ಶತಮಾನಕ್ಕೆ ಸೇರುವ ಲಿಪಿಯನ್ನು ಇದು ಹೋಲುತ್ತದೆ. ಇಲ್ಲಿ ಉಕ್ತವಾಗಿರುವ ಕೊಲದೆಯ ಎಂಬ ಪ್ರಾಚೀನ ಸ್ಥಳವು ಸಮೀಪದಲ್ಲಿರುವ ಇಂದಿನ ಕೊಲ ದೇವಿಯೇ ಆಗಿರುತ್ತದೆ. ಶಾಸನವಿರುವ ಸ್ಥಳಕ್ಕೆ ಹತ್ತಿರವಾಗಿ ಮತ್ತೊಂದು ಸಪ್ತಮಾತೃಕೆಯರ ದೇವಾಲಯವಿದೆ. ಇದಕ್ಕೆ ಸನಿಹದಲ್ಲಿ ಕೂಲದೇವಿ ಕೆರೆಯಿರುತ್ತದೆ. ಇವೆಲ್ಲವೂ ಕೊಲದೇವಿಯ ಸಾಂಸ್ಕೃತಿಕ ಚರಿತ್ರೆಗೆ ಪುಷ್ಟಿ ನೀಡುತ್ತದೆ.

ಎರಡನೆಯದು, ಸುಮಾರು ಮೂರು ಅಡಿ ಅಗಲ ಮತ್ತು ಐದು ಅಡಿ ಎತ್ತರವಿರುವ ಮತ್ತೊಂದು ಶಾಸನ. ಮೊದಲನೆಯ ಬರಹಕ್ಕಿಂತ ಇದು ಸುಮಾರು ಐವತ್ತು ವರ್ಷಗಳು ಹಳೆಯ ದಾಗಿರುವ ಸಾಧ್ಯತೆಯಿದೆ. ಇದಕ್ಕೆ ಕಾರಣ, ಇದರಲ್ಲಿರುವ ಕೆಲವು ಹಳಗನ್ನಡ ರೂಪಗಳು. ಪನ್ನಿರ್ವ್ವರು, ಇಕ್ಕಂಡುಗಕಟಿನಿ, ಬಾೞ್ಗೆ ಕೊಟ್ಟರ್- ಮೊದಲಾದ ಪ್ರಯೋಗಗಳನ್ನು ಇದರಲ್ಲಿ ಕಾಣುತ್ತೇವೆ. ಇಲ್ಲಿ ಕೊರೆಯಲಾಗಿರುವ ಅಕ್ಷರಗಳ ರೂಪದಲ್ಲಿ ಸಹ ವಿಶಿಷ್ಟತೆಯ ಅಂಶವಿದೆ.

ನೊಳಂಬರ ಪ್ರಶಸ್ತಿಯಾದ 'ಸಮಧಿಗತ ಪಞ್ಚಮಹಾಶಬ್ದ' ಎಂಬುದರಿಂದ ಶಾಸನವು ಆರಂಭವಾಗುತ್ತದೆ. ಇಲ್ಲಿ ಉಲ್ಲೇಖ ಗೊಂಡಿರುವ ನೊಳಂಬಾಧಿರಾಜನು ಒಂಬತ್ತನೆಯ ಶತಮಾನದ ಅಂತ್ಯಭಾಗದಲ್ಲಿ ಆಳುತ್ತಿದ್ದಿರಬೇಕು. ಪುಲಿನಾಡು, ಪೊದಲಿನಾಡು, ಕೋಲಾಳನಾಡುಗಳ ಪ್ರಸ್ತಾಪವು ಒಂದೇ ಶಾಸನದಲ್ಲಿ ಬಂದಿರು ವುದು ಸಹ ನೊಳಂಬ-ಬಾಣರ ಆಳ್ವಿಕೆಯ ಆರಂಭ ಕಾಲಕ್ಕೆ ಸೂಚನೆಯಂತಿದೆ. ಇದರಿಂದ ದುಗ್ಗಸಂದ್ರದ ಅಂದಿನ ಭಾಗವು ಕುವಲಾಳನಾಡಿನ ಕೇಂದ್ರಸ್ಥಳವಾಗಿತ್ತೆಂಬುದರ ಸೂಚನೆಯೂ ದೊರೆತಂತಾಗುತ್ತದೆ.

* ಪ್ರಾಚಾರ್ಯರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಶಿಡ್ಲಘಟ್ಟ, ಕೋಲಾರ ಜಿಲ್ಲೆ.

ಸಾಂತಪ್ಪನೆಂಬ ವ್ಯಕ್ತಿಯು ತುರುಗೋಳ್‌ದಲ್ಲಿ ಸತ್ತ ಕಾರಣ ಆತನಿಗೆ ಪನ್ನಿರ್ವರು ಮೆಚ್ಚಿ ಕಂಡುಗ ಕಲನಿಯನ್ನು ನೀಡಿರುವುದು ಶಾಸನದ ಮುಖ್ಯ ವಿಷಯವಾಗಿದೆ. ಸಾಂತಪ್ಪನಿಗೂ ಮತ್ತು ಸಮೀಪದ ಸಾತನೂರಿಗೂ ಸಂಬಂಧವಿದ್ದಿರಬೇಕು. ಇದೇ ಸಾತನೂರಿನಲ್ಲಿ ದುಗ್ಗಮಾರ ಎರೆಯಪ್ಪನು ಪಾಂಡಪ್ಪನೆಂಬ ವ್ಯಕ್ತಿಗೆ ಕಲನಿಯ ಪರಿಹಾರ ನೀಡಿರುತ್ತಾನೆ (ಈ ವಿಚಾರವು ಬಿಸನಹಳ್ಳಿ ಶಾಸನದಿಂದ ತಿಳಿದುಬರುತ್ತದೆ. ಬಿಸನಹಳ್ಳಿ ಶಾಸನವು ದುಗ್ಗಮಾರ ಎರೆಯಪ್ಪನ ಕೊವಳಾಲನಾಡಿನ ಆಳ್ವಿಕೆಯನ್ನು ತಿಳಿಸುವ ಪ್ರಮುಖ ಶಾಸನವಾಗಿರುತ್ತದೆ. ಇದು ದುಗ್ಗಸಂದ್ರದಿಂದ ಸುಮಾರು ನಾಲ್ಕು ಮೈಲಿ ದೂರದಲ್ಲಿದೆ.)

ಮೂರನೆಯ ವೀರಶಾಸನ ಕಲ್ಲು

ಶಿಲ್ಪ-ಶಾಸನಗಳೆರಡರ ದೃಷ್ಟಿಯಿಂದ ಪ್ರಮುಖವಾದ ವೀರಗಲ್ಲು ದುಗ್ಗಸಂದ್ರದಲ್ಲಿ ಕಂಡುಬರುತ್ತಿದೆ. ಅರಸುಮನೆತನ, ಅಕ್ಷರಗಳನ್ನು ಮೂಡಿಸುವಲ್ಲಿ ಅನುಸರಿಸಲಾದ ವಿಧಾನ, ಆಕಾರ-ಇವೆಲ್ಲದರ ದೃಷ್ಟಿಯಿಂದ ಇದು ವಿಭಿನ್ನವಾಗಿದೆ. ಇದರಲ್ಲಿ ಮೂರು ಪ್ರಮುಖ ರಾಜ ವಂಶಗಳಾದ ಬಾಣ-ಗಂಗ- ನೊಳಂಬರ ಪ್ರಸ್ತಾಪವಿದೆ. ಕುದುರೆಯ ಮೇಲೆ ಕುಳಿತಿರುವ ವೀರನನ್ನು ಮತ್ತೊಬ್ಬ ವೀರಪುರುಷನು ಉದ್ದನೆಯ ಭಲ್ಲೆಯಿಂದ ಇರಿಯುತ್ತಿರುವ ಶಿಲ್ಪವು ನುರಿತ ಶಿಲ್ಪಿಯ ಕೈವಾಡದಂತೆ ಕಾಣುತ್ತದೆ.

'ಸಕಲಜಗತ್ರಯಾಭಿವನ್ದಿತ'- ಎಂಬ ಬಾಣರಾಜರ ಪ್ರಶಸ್ತಿಯೊಂದಿಗೆ ಆರಂಭವಾಗುವ ಇಲ್ಲಿನ ಶಾಸನದಲ್ಲಿ ಕಿರಿದಾದ ಮತ್ತು ಉದ್ದವಾದ ಹದಿನಾರು ಸಾಲುಗಳಿವೆ. ಕಮಾನಿನ ಆಕಾರದಲ್ಲಿ ಮೊದಲ ನಾಲ್ಕು ಸಾಲುಗಳನ್ನು ಕೊರೆಯಲಾಗಿದೆ. ಸುಮಾರು ಆರು ಅಡಿ ಎತ್ತರ ಮತ್ತು ನಾಲ್ಕು ಅಡಿಗೂ ಹೆಚ್ಚು ಅಗಲವಾದ ಬಂಡೆಗಲ್ಲಿನ ಮೇಲೆ ಹರಡಿಕೊಂಡಿರುವ ಶಾಸನಲಿಪಿ ಕೌತುಕ ಮೂಡಿಸುವಂತಿದೆ.

ಶಾಸನದಲ್ಲಿ ಪೊನ್ನಯ್ಯನೆಂಬ ವ್ಯಕ್ತಿಯ ಆಳ್ವಿಕೆಯ ವಿಚಾರವಿದೆ. ಈತನನ್ನು ನನ್ದಗಿರಿನಾತನಣ್ಣನ ಚಕ್ರಬಣ್ಣರ ನಣ್ಪಸಂದು ಕರೆಯಲಾಗಿದ್ದು, ಇದರ ಅರ್ಥದಲ್ಲಿ ಅಸ್ಪಷ್ಟತೆಯಿದೆ. ಮುಂದಕ್ಕೆ ನೊ(ಳ)ಮ್ಬ ದಿಲೀಪಯ್ಯನ ಪೃಥಿವೀರಾಜ್ಯದ ವಿಚಾರವಿರುತ್ತದೆ. ನಂತರದ ಭಾಗ ಸುಸ್ಪಷ್ಟವಾದದ್ದು. ಸಿವಮಾರಯ್ಯನು ಕೂಲದೆಯನ್ನು ಇರಿಯುವುದಕ್ಕಾಗಿ ಬಂದಾಗ ಬೊ(ೇ)ಗೊಳಯ್ಯನೆಂಬ ವ್ಯಕ್ತಿ ಪ್ರತಿಭಟನೆಯೊಡ್ಡುತ್ತಾನೆ. ಕುದುರೆಯನ್ನು ಕೊಂದು ತಾನೂ ಸಾಯುತ್ತಾನೆ.

ನಾಲ್ಕನೆಯದು, ಮತ್ತೊಂದು ವೀರಗಲ್ಲು ಶಾಸನ. ಇದರಲ್ಲಿ ದಿಲೀಪಯ್ಯನ ಪೃಥಿವೀರಾಜ್ಯದ ವಿಚಾರವಿದೆ. ಇದರಲ್ಲಿ ಮ(ಣ್ಣ)ಯ ಗಾವುಣ್ಣನ ಮಗ ತುರುಗೋಳದಲ್ಲಿ ಸತ್ತ ಕಾರಣ ಅದಕ್ಕೆ ಪನ್ನಿರ್ವ್ವರು ಮೆಚ್ಚಿ ಕಣ್ಣುಗ ಕಲನಿಯನ್ನು ಪರಿಹಾರ ನೀಡಿರುತ್ತಾರೆ. ನೊಳಂಬರ ಕಾಲದ ಐತಿಹಾಸಿಕ ಘಟನೆಯನ್ನು ಬಿತ್ತಿರಿಸುವ ವೀರಗಲ್ಲು ಶಿಲ್ಪವು ವಿಶಿಷ್ಟಪೂರ್ಣವಾಗಿದೆ.

ಕುವಳಾಲನಾಡಿನ ಅಧ್ಯಯನದ ಒಂದು ಎಳೆಯಾಗಿ ಗುರುತಿಸಬಹುದಾದ ದುಗ್ಗಸಂದ್ರದ ಶಾಸನ ಮತ್ತು ವೀರಗಲ್ಲುಗಳನ್ನು ಇತಿಹಾಸದ ಇತರ ಆಯಾಮಗಳಿಂದ ನೋಡಿದಾಗ ಹೊಸ ಹೊಳಹುಗಳು ಹೊಳೆಯಬಹುದೆನಿಸುತ್ತದೆ.*


ಶಾಸನ ಪಾಠಗಳು

I. **ದುಗ್ಗಸಂದ್ರದ ಚೌಡೇಶ್ವರಿ (ಸಪ್ತಮಾತೃಕ) ದೇವಾಲಯದ ಮುಂದೆ ಬಲಬದಿಗೆ ಚಪ್ಪಡಿಯ ಕಲ್ಲಿನ ಮೇಲೆ**

೧ ಸ್ವಸ್ತಿಶ್ರೀ ದಿಲಿಪನೊಟಿಮ್ಬಾಧಿರಾಜರ್
೨ ಪೃಥಿವಿರಾಜ್ಯಂಗೆಯ್ಯುತ್ತಿರೆ ತಿರುವಯ್ಯಂ
೩ ಕೊಲದೆಯದ ಕೆಜಿ'ಗೆ ಬಿತ್ತುಕಟ್ಟು
೪ ಬಿಟ್ಟರ್ ಇದಂ ಸಲಿಸುಮೊಂಗಸ್ವಮೇದದ
೫ ಪಲಂ ಇ [ಆಕಳು ಮತ್ತು ಕರು ಚಿತ್ರ] ದನಟಿ'ದೊಂ
೬ ಕಪಿಲೆಯುಂ [ಆಕಳು ಮತ್ತು ಕರು ಚಿತ್ರ] ಕೆಜ'ಯುಂ ಬಾ
೭ ರಣಾಸಿಯುಮಟಿ'ದ ಪಞ್ಚಮಹಾಪ
೮ ತಕನಕ್ಕುಂ ಬೆಸಗೆಯ್ದೊಂ ವಿಕ್ರಮಾದಿತ್ಯನ್



II. **ಅದೇ ದೇವಾಲಯದ ಬಲಕ್ಕೆ ವೀರಗಲ್ಲುಗಳ ಸಮೀಪದ ಚಪ್ಪಡಿ ಕಲ್ಲಿನ ಮೇಲೆ**



೧ ಸ್ವಸ್ತಿ ಸಮಧಿಗತ ಪಞ್ಚಮ

೨ ಹಾಶಬ್ದಪಲ್ಲ(ವಾ)ನ್ವಯ ಶ್ರೀಮ(ತ್)

೩ ಪ್ರಿಥಿವೀ ವಲ್ಲಭ ನೊಟಿಮ್ಬಾ

೪ ಧಿರಾಜರ್ ಪ್ರಿಥಿವೀ ರಾಜ್ಯಂಗೆಯೆ

೫ ಪಲ್ಲವರಸರ್ ಪುಲಿನಾಡು ಪೊದಲಿ

೬ ನಾಡ ಕೋಲಾಳದ ತುಜುಕೋಳೊಳು

೭ ಸಾಂತಪ್ಪನ್ ಆನ್ತೆಜಿ'ದು ಸತ್ತನ್ ಅದ

೮ ರ್ಕ್ಕೆ ಪನ್ನಿರ್ವ್ವರುಮೆಚ್ಚಿ ಕಂಡುಗ ಕಟಿನಿಯಂ

೯ . . . . ಬಾಟ್ಗಕೊಟ್ಟಾರ್ ಇದಾನಟಿವೊನ್ಗೆಪ

೧೦ ಞ್ಚಮಹಾಪಾತಕಂ

III. ಅದೇ ಸ್ಥಳದಲ್ಲಿ ೧ನೇ ವೀರಗಲ್ಲಿನ ಮೇಲೆ

೧ ಸ್ವಸ್ತಿ ಶಮಸ್ತ ಶಖಳ ಜಗತ್ರಯಾಭಿವನ್ದಿತ ಪರಾಕ್ರಮ ಬಲವ . . ರ

೨ ಸುರಾಸುರಾಧೀಶಮ್ಪರಮೇಶ್ವರಮ್ಮತೀಹಾರಿಕ್ರಿತ ಮಹಾ

೩ ಬಲಿಕುಲೋತ್ಭವ . ಎಬ್ಬಿ ಬಲಿ .

೪ ಜಿತಮ್ಬನಾರಾಯಣ್ಮಾಕಾಯ್ಸರ . ರವ

೫ . . ಬ . ಪಟ . ಹ . . ಗೊ . . .

೬ ಪುರಪರಮೇಸ್ವರ . . . ಪ

೭ ಞ್ಚನನ ನ್ದಗಿರಿ ನಾ

೮ ತ ನಣ್ನನ

೯ ಚಕ್ರ ಬ

೧೦ ಣ್ವರ ನಣ್ವ

೧೧. ಶ್ರೀಮತ್

೧೨. ಪೊನ್ನಯ್ಯ

೧೩. ನಾಳೆ ಬಾಳಿ (ನಾಳ್ಬೊಳಿ)

೧೪. ಯಕ್ಕಿ ಎಜಿ'ಗನೊಮ್ಬದಿಲಿಪಯ್ಯಪ್ರಿಥಿ

೧೫. ವೀರಾಯ್ಯಗೆಯ್ಯುತ್ತಿರೆ ಸಿವಮಾರಯ್ಯ ಕುಲದೆ

೧೬. ಯಮಿಜಿ'ವನ್ನೂದರಪೆಜಿಗಿಕ್ಕಿಬನ್ದೊಬೊ(ೞ)ಗೊಟಿಯ್ಯ

೧೭. ನುಮೊನ್ದು ಕುದುರೆಯುಮಕೊನ್ದು ಸತ್ತ(ಂ)

IV. ಅದೇ ಸ್ಥಳದಲ್ಲಿ ೨ನೆಯ ವೀರಗಲ್ಲಿನ ಮೇಲೆ

೧. ಸ್ವಸ್ತಿಶ್ರೀ ದಿಲೀಪಯ್ಯಪ್ರಿಥಿವೀರಾಜ್ಯಂಗೆಯ್ಯೆ

೨. ಮ. ವ ಗಾವುಣ್ಡರ

೩. ಮಗ....

೪. ಣ್ದೂರಲಿ ಪಾಯ್ವಲಿತು

೫. .....

೬. ಪರಿಯೆಸ

೭. ತುಸ್ವಸ್ತಿ.

೮. . ದರಿಂ ಮೆಚ್ಚಿ

೯. ಪನ್ನೀ . ರುಕ

೧೦. ಣ್ಣುಗಜೆ(ನಿ)

೧೧. ಯಕೊಟ್ಟರ ಇವ

೧೨. ನಟಿವ ಪಞ್ಚಮ

೧೩. ಹಾಪತಕನಕ್ಕು.





* (ಕ್ಷೇತ್ರಕಾರ್ಯ ಮತ್ತು ಶಾಸನವನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾದ ಡಾ. ಕೆ.ಆರ್. ಗಣೇಶ್, ಡಾ. ಪಿ.ವಿ. ಕೃಷ್ಣಮೂರ್ತಿ, ಡಾ. ಎಂ.ಜಿ. ಮಂಜುನಾಥ್ ಮತ್ತು ಶ್ರೀ ಎನ್.ಎಸ್. ಸ್ವಾಮಿ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.)

ಡಾ. ಕೆ. ಜಿ. ಗೋಪಾಲಕೃಷ್ಣ*, ಡಾ. ಎಂ. ಜಿ. ಮಂಜುನಾಥ **

ದಿಂಬಾಲು ಗ್ರಾಮದ ಎರಡು ಅಪ್ರಕಟಿತ ಶಾಸನಗಳು


ಸುಮಾರು ಆರು ತಿಂಗಳ ಹಿಂದೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ದಿಂಬಾಲು ಗ್ರಾಮದ ಗ್ರಾಮಸ್ಥರು ಅದೇ ಊರಿನ ಸೋಮೇಶ್ವರ ದೇವಸ್ಥಾನದ ಪರಿಸರವನ್ನು ಸ್ವಚ್ಛಗೊಳಿಸುತ್ತಿದ್ದಾಗ ಸಿಕ್ಕಿದ ಒಂದು ಶಾಸನವನ್ನು ಪ್ರಜಾವಾಣಿ ದಿನಪತ್ರಿಕೆ ಚಿತ್ರಸಹಿತ ಪ್ರಕಟಿಸಿತ್ತು. ಈ ಅಪ್ರಕಟಿತ ಶಾಸನವೇ ಈ ಲೇಖನದ ವಿಷಯ.

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ, ಶ್ರೀನಿವಾಸಪುರ, ಕಡಪ ರಸ್ತೆಯಲ್ಲಿ ಬಲಕ್ಕೆ ತಿರುಗಿದರೆ ಮೊದಲು ರೋಣೂರು ನಂತರ ದಿಂಬಾಲು ಗ್ರಾಮ ಸಿಗುತ್ತವೆ. ಊರ ಹೊರಗೆ ಸೋಮೇಶ್ವರ ದೇವಸ್ಥಾನದ ಭಾವಿಯ ಬಳಿ ಸಿಕ್ಕಿದ ಶಾಸನದ ಕಲ್ಲನ್ನು ಗ್ರಾಮಸ್ಥರು ದೇವಾಲಯದ ಪ್ರಕಾರಾದ ಗೋಡೆಗೆ ಸೇರಿಸಿ ಸಿಮೆಂಟ್ ಮಾಡಿದ್ದಾರೆ. ದಿಂಬಾಲದ ಪ್ರಕಟಿತ ಶ್ರೀಪುರುಷನ ಶಾಸನ ಇದರ ಪಕ್ಕದಲ್ಲೇ ಇದೆ.[೧]

ಒರಟು ಕಣಶಿಲೆಯ ಚಪ್ಪಡಿಯ ಉದ್ದ ಎರಡೂವರೆ ಅಡಿ ಮತ್ತು ಅಗಲ ಎರಡು ಅಡಿ ಮೇಲ್ಮೈಯನ್ನು ಅಸಮರ್ಪಕವಾಗಿ ಮಟ್ಟಗೊಳಿಸಿ ನಯಗೊಳಿಸಲಾಗಿದೆ. ಆರು ಸಾಲಿನ ಶಾಸನ.

ಶಾಸನ ಪಾಠ :

೧ ಸ್ವಸ್ತಿ ಶ್ರೀ ವಿಟ್ಟಪ್ಪಯ್ಯನ್ಕೊವ
೨ ಳಲ ನಾಡಾಳೆ ಮಟ್ಟಿಯನೆ
೩ ನ್ಬೊ ನಾಯಿ ನ್ಬೊಟೆ ಇಕ್ಕಿಸಿ ಸತ್ತ
೪ ನವನ್ಗೆ (ರಾ)ಜರು ಕೊಯಿಲು ಮಿಟ್ಟು
೫ ಕೊಟ್ಬೊದು ಅಯ್ದುಮ್ಬು ಕಟಿನಿ ಸರ್ವ
೬ ಪರಿಯಾರಮ್ ಪೊಲಿ ಕೊಟ್ಟಾನ್



ಸಾಂಸ್ಕೃತಿಕ/ಐತಿಹಾಸಿಕ ಅಂಶಗಳು

ಭಾಷೆ : ಶಾಸನದ ಭಾಷೆ ಪೂರ್ವದ ಹಳಗನ್ನಡ. ನಾಡಾಳೆ, ಕೊರು, ಕೊಟ್ಬೊದು, ಕೊಟ್ಟಾನ್ ಇತ್ಯಾದಿ ಪದಗಳಿಂದ ಇದು ಸ್ಪಷ್ಟವಾಗುತ್ತದೆ.

ಈ ಶಾಸನದ ಕೆಲವು ಪದಗಳ ಬಗೆಗೆ ವಿಮರ್ಶೆ ಅಗತ್ಯ.

ಅಯ್ದೊಂಬು : ಮೇಲ್ನೋಟಕ್ಕೆ ಇದು ಭೂಮಾಪನದ ಒಂದು ಮಾನದಂಡವೆನ್ನುವುದು ಸ್ಪಷ್ಟ. ಈ ಪದ ಈಗಲೂ ಕೋಲಾರ ಜಿಲ್ಲೆಯಲ್ಲಿ ಬಳಕೆಯಲ್ಲಿದೆ. ಇದು ಕೊಳಗ ಎಂಬುದರ ಪರ್ಯಾಯ ಪದ.

ಮಟ್ಟಿಯ : ವ್ಯಕ್ತಿ ನಾಮವಿರಬಹುದು. ಬೆಂಗಳೂರು ಜಿಲ್ಲೆ ಹೊಸಕೋಟೆಯ ವೀರಗಲ್ಲೊಂದರಲ್ಲಿ "... ಮಕ್ಕಳ್ ಮಟ್ಟಿಯ್ಯನು ಬೆಸಗೆಯ್ದೊ..."[೨] ಎಂಬ ಒಕ್ಕಣೆಯಿದೆ. ಇದು ಪ್ರಸ್ತುತ ಶಾಸನದಲ್ಲಿಯ ವೀರನ ಹೆಸರೆ ಆಗಿರಬಹುದು.

ಪೊಲಿ, ಮಿಟ್ಟು : ಈ ಪದಗಳ ಅರ್ಥ ಈ ಶಾಸನದ ಸಂದರ್ಭದಲ್ಲಿ ಸ್ಪಷ್ಟವಾಗಿಲ್ಲ.

ಕಾಲ : ಶಾಸನದಲ್ಲಿ ನೇರ ಕಾಲ ನಿರ್ದೇಶನವಿಲ್ಲ. ಊಹೆಗೆ ನೆರವಾಗುವಂಥಾದ್ದು. ೧) ಲಿಪಿ ಸ್ವರೂಪ ಮತ್ತು ೨) ಇದರ ಸಂಗಾತಿಯಾದ ಶ್ರೀಪುರುಷನ ಶ್ರೀನಿವಾಸಪುರ ೬೫ನೇ ಶಾಸನ[೩]

ಲಿಪಿ ಸ್ವರೂಪ : ಈ ಶಾಸನದ ಲಿಪಿ ರಾಷ್ಟ್ರಕೂಟರ ಆರಂಭಿಕ ಲಿಪಿಯನ್ನು ಹೋಲುವುದರಿಂದ ಶಾಸನ ೭-ಲನೇ ಶತಮಾನಕ್ಕೆ ಸೇರಿದ್ದಾಗಿದೆ.

ಐತಿಹಾಸಿಕ ಅಂಶಗಳು

ಶಾಸನದ ಐತಿಹಾಸಿಕ ಅಂಶವೆಲ್ಲ ಒಂದು ಪದದ ಮೇಲೆ ನಿಂತಿದೆ. ಅದು ವಿಟ್ಟಪ್ಪಯ್ಯ. ಕುತೂಹಲಕಾರಿ ಅಂಶವೆಂದರೆ ಈ ಅಪ್ರಕಟಿತ ಶಾಸನದ ಪಕ್ಕದಲ್ಲೇ ಇರುವ ಪ್ರಕಟಿತ ಶ್ರೀನಿವಾಸಪುರ ೬೫ನೇ ಶಾಸನ. ಇದರ ಒಕ್ಕಣೆಯಲ್ಲಿ "ಶ್ರೀಪುರುಷ ಮಹಾರಾಜರ್ ದ್ರಮ... ಗೆಯೆ ದುಗ್ಗಮಾರೆಜೆಯಪ್ಪ ಕೊವಳಾಲ ನಾಡಾಳೆ ವೆಜ್ಜಪೆ. ರಸರ್ ರೋಣೂರಾಳೆ..." ಎಂದಿದೆ. ಈ ಶಾಸನವನ್ನು ಸರಿಯಾಗಿ ಪರಿಶೀಲಿಸಿದರೆ "ವೆಜ್ಜಪೆ" ಎಂದು ಓದಿರುವ ಭಾಗದ "ಜ್ಜ",

* ಡಾ. ಕೆ.ಜಿ. ಗೋಪಾಲಕೃಷ್ಣ ನರ್ಸಿಂಗ್ ಹೋಂ, ಪುರಭವನದೆದುರು, ವಿಸ್ತರಣ, ರಾಮನಗರಂ, ಬೆಂಗಳೂರು (ಗ್ರಾ) ಜಿಲ್ಲೆ- ೫೭೧ ೫೧೧

** ಹಿರಿಯ ಉಪನ್ಯಾಸಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.

"ಟ್ಟ" ಎಂಬುದಾಗಿ ಸ್ಪಷ್ಟವಾಗುತ್ತದೆ. ಹೀಗಾಗಿ ಪ್ರಕಟಿತ ಶಾಸನವೂ ವಿಟ್ಟಪ್ಪಯ್ಯನದೇ ಆದರೆ ನಮ್ಮ ಪ್ರಸ್ತುತ ಅಪ್ರಕಟಿತ ಶಾಸನದ ಕಾಲ ನಿರ್ಧಾರಕ್ಕೆ ಸಹಾಯವಾಗುತ್ತದೆ.

ಎರಡು ಶಾಸನಗಳಲ್ಲಿಯೂ ಕಾಲಪ್ರಸ್ತಾಪವಿಲ್ಲ. ಆದರೆ ಶಾಸನಗಳಲ್ಲಿ ಪ್ರಸ್ತಾಪಿಸುವ ಕೆಲವು ವ್ಯಕ್ತಿನಾಮಗಳಿಂದ ಕಾಲ ನಿರ್ಧಾರಕ್ಕೆ ಪ್ರಯತ್ನಿಸಬಹುದು. ಉದಾ : ದುಗ್ಗಮಾರ ಎರೆಯಪ್ಪ, ಶ್ರೀಪುರುಷ, ವಿಟ್ಟಪ್ಪರಸ, ಇತ್ಯಾದಿ.

ಶ್ರೀಪುರುಷನ ಮರಣದ ವರ್ಷ ಕ್ರಿ.ಶ. ೭೮೮ ಎಂದು ಇತಿಹಾಸಕಾರರು ಸಾಮಾನ್ಯವಾಗಿ ಒಪ್ಪಿದ್ದರೂ ಇನ್ನೂ ಗೊಂದಲಗಳಿವೆ. ಡಾ. ಕೆ.ವಿ. ರಮೇಶ್ ಅವರು ತಮ್ಮ "ಇನ್‌ಸ್ಕ್ರಿಪ್ಷನ್ ಆಫ್ ವೆಸ್ಟರ್ನ್ ಗಂಗಾಸ್" ಗ್ರಂಥದಲ್ಲಿ ದಾಖಲಿಸುವ ಮೈಸೂರು ಜಿಲ್ಲೆಯ ಬಸವಟ್ಟಿ ಗ್ರಾಮದ ಶಿಲಾಶಾಸನದಲ್ಲಿ[೪] ಸಂವತ್ಸರವನ್ನು ಹೆಸರಿಸದಿದ್ದರೂ ತಿಥಿ, ವಾರ, ಗ್ರಹಣದ ವಿವರಗಳೊಂದಿಗೆ ಕಾಲವನ್ನು ಶಾಲಿವಾಹನ ಶಕ "ಏಳ್ನೂರಿರ್ಪತ್ತೆರಡು" ಎಂದು ದಾಖಲಿಸಲಾಗಿದೆ. ಇದು ಕ್ರಿ.ಶ. ೮೦೦ಕ್ಕೆ ಸರಿಹೊಂದುತ್ತದೆ. ಆದರೆ ಡಾ. ಕೆ.ವಿ. ರಮೇಶ್ ಅವರ ವಿಶ್ಲೇಷಣೆಯಂತೆ ಶಾ.ಶ. ೭೨೨ರ ಆ ತಿಥಿಯಂದು ಗ್ರಹಣವಿರಲಿಲ್ಲ. ತಿಥಿ, ವಾರ, ಗ್ರಹಣಗಳ ವಿವರಗಳು ಶಾ.ಶ. ೭೧೨ಕ್ಕೆ ತಾಳೆಯಾಗುವುದರಿಂದ ಶಾಸನದ ತೇದಿಯನ್ನು ಶಾ.ಶ. ೭೧೨ಕ್ಕೆ ಅಥವಾ ಕ್ರಿ.ಶ. ೭೯೧ ಎಂದು ಪರಿಗಣಿಸಿದ್ದಾರೆ. ಎಂದರೆ ಶ್ರೀಪುರುಷನ ಅಂತ್ಯಕಾಲವನ್ನು ಕ್ರಿ.ಶ. ೭೮೮ ರಿಂದ ಕ್ರಿ.ಶ. ೭೯೧ರವರೆಗೆ ವಿಸ್ತರಿಸಿದಂತಾಗಿದೆ.

ಇನ್ನೊಂದು ತೊಡಕು ಮಣ್ಣೆ ತಾಮ್ರಪಟದಲ್ಲಿ[೫] ಎದುರಾಗುತ್ತದೆ. ಇದರ ತೇದಿ ಕ್ರಿ.ಶ. ೭೯೯. ತಾಮ್ರಪಟ ಶಿವಮಾರನ ಆಳ್ವಿಕೆಯ ಮೊದಲನೇ ವರ್ಷದಂದು ಹಾಕಿಸಿದ್ದೆಂದು ಪರಿಗಣಿಸಲಾಗಿದೆ. ಹಾಗಾದರೆ ಶಿವಮಾರ ಕ್ರಿ.ಶ. ೭೯೯ರಲ್ಲೇ ಪಟ್ಟಕ್ಕೆ ಬಂದಿರಬೇಕು. ಇಲ್ಲಿನ ತೊಡಕು: ಗಂಗ ಸಿಂಹಾಸನ ಶ್ರೀಪುರುಷನ ಆಳ್ವಿಕೆಯ ಕೊನೆಯ ಶಾಸನದ ತೇದಿಯಾದ ಕ್ರಿ.ಶ. ೭೯೧ ರಿಂದ ಶಿವಮಾರನ ಪಟ್ಟದ ವರ್ಷವಾದ ಕ್ರಿ.ಶ. ೭೯೭ರವರೆಗೂ ತೆರವಾಗಿತ್ತೆ? ಇದರ ಸಾಧ್ಯತೆಗಳು ಕಡಿಮೆಯೆಂದೇ ಹೇಳಬೇಕು. ಹಾಗಾಗಿ ವೃದ್ಧನಾದ ಶ್ರೀಪುರುಷ ಕ್ರಿ.ಶ. ೭೯೧ಕ್ಕಿಂತಲೂ ಈಚೆಗೆ ಎಂದರೆ ಸುಮಾರು ೭೯೯ರವರೆಗೂ ಬದುಕಿರಬೇಕು.

ಈ ಸಂದರ್ಭದಲ್ಲಿ ಕಾಲನಿರ್ಧಾರಕ್ಕೆ ಗಂಗರ ಅಧಿಕಾರಿ, ಶಾಸನೋಕ್ತ ವಿಠ್ಠಪ್ಪರಸನಿಂದ ಸಹಾಯವಾದೀತೆಂದು ವಿಠ್ಠಪ್ಪಯ್ಯನ ಮೂಲವನ್ನು ಕೆದಕಿದಾಗ ಕೆಲವು ಕುತೂಹಲಕಾರಿ ಸಂಗತಿಗಳು ಕಂಡುಬಂದವು.

ಒಟ್ಟಾರೆ ಗಂಗರ ಶಾಸನಗಳಲ್ಲಿ ವಿಠ್ಠಪ್ಪರಸ ನಾಲ್ಕು ಬಾರಿ ಹೆಸರಿಸಲ್ಪಟ್ಟಿದ್ದಾನೆ.

೧. ಪ್ರಕಟಿತ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ೬೫ನೇ ಶಾಸನ.

೨. ಅಪ್ರಕಟಿತ, ಈಗ ನಾವು ಪ್ರಸ್ತುತಪಡಿಸಿರುವ ದಿಂಬಾಲದ ಶಾಸನ

೩. ಡಾ. ಕೆ. ವಿ. ರಮೇಶ್ ಅವರ ಇನ್ಸ್ಕ್ರಿಪ್ಷನ್‌ಸ್ ಆಫ್ ವೆಸ್ಟರ್ನ್ ಗಂಗಾಸ್ ಗ್ರಂಥದ ೫೪ನೇ ನಂಬರಿನ, ೨೨೩ನೇ ಪುಟ ಹರಳುಕೋಟೆ ಶಾಸನ

೪. ಅದೇ ಗ್ರಂಥದ ೮೫ನೇ ಸಂಖ್ಯೆಯ ೨೭೪ನೇ ಪುಟದ ಚಿಕ್ಕಮಗಳೂರು ಜಿಲ್ಲೆ ಸಿಂಹನಗದ್ದೆ ಜೈನಮಠದಲ್ಲಿರುವ ತಾಮ್ರಶಾಸನ.

ವಿಠ್ಠಪ್ಪಯ್ಯನ ಹೆಸರಿಗೆ ಈ ಶಾಸನಗಳಲ್ಲಿ ವಿಟ್ಟಪ್ಪಯ್ಯ, ವೆಜ್ಜಪೆ ಅರಸ, ವೆಡ್ಡಿಪೆಗೆ ಮನ್ನೆ ಮತ್ತು ವಿಟ್ಟರಸ ಎಂಬ ರೂಪಾಂತರಗಳಿವೆ. ಲಿಪಿ ಸ್ವರೂಪ ಮತ್ತು ಇತರೆ ಸಾಂದರ್ಭಿಕ ಸಾಕ್ಷ್ಯಗಳಿಂದ ಈ ನಾಲ್ಕು ಶಾಸನಗಳೂ ಪರಸ್ಪರ ಸಂಬಂಧವುಳ್ಳವಾಗಿವೆಯೆಂದೂ, ಏಕವ್ಯಕ್ತಿಯನ್ನು ಕುರಿತದ್ದೆಂದೂ ಊಹಿಸಬಹುದಾಗಿದೆ.

ಈ ನಾಲ್ಕೂ ಶಾಸನಗಳ ಪರಾಮರ್ಶೆಯಿಂದ ಸಿದ್ಧವಾಗುವ ವಿಠ್ಠರಸನ ಸಂಗತಿ ಹೀಗಿದೆ :

ವಿಟ್ಟಪ್ಪರಸ ಗಂಗರ ಆಡಳಿತಗಾರನಾಗಿ ರೋಣೂರಿನಲ್ಲಿ ತನ್ನ ಅಧಿಕಾರ ಜೀವನವನ್ನು ಪ್ರಾರಂಭಿಸಿದ. ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕಿನ ರೋಣೂರು ಒಂದು ಸಣ್ಣಗ್ರಾಮ. ರೋಣೂರು ಕೋಲಾರ ಸೀಮೆಯಲ್ಲಿದ್ದದ್ದರಿಂದ ಕೋಲಾರ ಸೀಮೆಯನ್ನು ಆಳುತ್ತಿದ್ದ ದುಗ್ಗಮಾರ ಎರೆಯಪ್ಪನ ಅಧೀನದಲ್ಲಿದ್ದ. ವಿಟ್ಟಪ್ಪಯ್ಯನ ಮುಂದಿನ ಏಳಿಗೆಯನ್ನು ನೋಡಿದರೆ ಅವನು ಎರೆಯಪ್ಪನ ಹತ್ತಿರದ, ನಿಷ್ಠಾವಂತ ಅಧಿಕಾರಿಯೂ ಆಗಿದ್ದುದು ಸ್ಪಷ್ಟವಾಗುತ್ತದೆ. ನಂತರದ ಹರಳುಕೋಟೆ ಶಾಸನದಲ್ಲಿ ಎರೆಯಪ್ಪನನ್ನು "ಮನ್ನೆಯಂ ಬೇಡಿಕೊಂಡು ಪಟ್ಟಂಗಟ್ಟಿ ಕೊಟ್ಟುದು" ಎಂಬ ಒಕ್ಕಣೆ ಇದೆ. ಈ ವೇಳೆಗೆ ವಿಟ್ಟಪ್ಪಯ್ಯ ಎರೆಯಪ್ಪನಿಗೆ ಹತ್ತಿರದವನಾಗಿದ್ದು, ಅವನನ್ನು ಬೇಡಿ ಮನ್ನೆಯನಾಗಿ ಬಡ್ತಿ ಗಿಟ್ಟಿಸಿಕೊಂಡ.

ಪ್ರಸ್ತುತ ಅಪ್ರಕಟಿತ ದಿಂಬಾಲದ ಶಾಸನ, ಮುಂದಿನ ಹಂತವನ್ನು ಸೂಚಿಸುತ್ತದೆ. ಈ ಶಾಸನದಲ್ಲಿ ಎರೆಯಪ್ಪನದಾಗಲಿ, ಶ್ರೀಪುರುಷನದಾಗಲಿ ಪ್ರಸ್ತಾಪವಿಲ್ಲ. ಬದಲಿಗೆ ವಿಟ್ಟಪ್ಪಯ್ಯ ಕೊವಳಲ ನಾಡಾಳೆ ಎಂಬ ಒಕ್ಕಣೆಯಿದೆ. ಶ್ರೀಪುರುಷನ ಮರಣಾನಂತರ ನಡೆದ ಯಾದವೀ ಕಲಹದಲ್ಲಿ ಭಾಗವಹಿಸಲು ದುಗ್ಗಮಾರ ಕೋಲಾರವನ್ನು ಬಿಡುಬೇಕಾಗಿ ಬಂದಾಗ ತನ್ನ ನೆಚ್ಚಿನ ಬಂಟನಾದ ವಿಟ್ಟಪ್ಪಯ್ಯನನ್ನು ತನ್ನ ಸ್ಥಾನದಲ್ಲಿ ಕೋಲಾರದಲ್ಲಿ ನೇಮಿಸಿ ದುಗ್ಗಮಾರ ತಲಕಾಡಿಗೆ ನಡೆದಿರಬೇಕು.

ಪಲ್ಲವರ ನೆರವಿನಿಂದ ಶಿವಮಾರ ಸಿಂಹಾಸನವೇರಿದಾಗ ವಿಟ್ಟಪ್ಪಯ್ಯನಿಗೆ ಉಳಿದದ್ದು ಒಂದೇ ದಾರಿ-ಪಕ್ಷಾಂತರ. ಸಿಂಹನಗದ್ದೆ ಶಾಸನ ಇದನ್ನೇ ತೋರಿಸುತ್ತದೆ. ಶಿವಮಾರನನ್ನು ಉಲ್ಲೇಖಿಸುವ ಈ ಶಾಸನದಲ್ಲಿ ಕಾಲ ನಿರ್ದೇಶನವಿಲ್ಲ. ವಿಟ್ಟರಸನು ಶಿವಮಾರನ ಅಧೀನನಾಗಿ ಸಿಂದನಾಡು ೮೦೦೦ ಮತ್ತು ತಗರೆನಾಡು ೭೦ನ್ನು ಆಳುತ್ತಿದ್ದ ಸಂಗತಿ ಬಂದಿದೆ. ದುಗ್ಗಮಾರನ ಪಕ್ಷದಿಂದ ಶಿವಮಾರನ ಪಕ್ಷಕ್ಕೆ ನಿಷ್ಠೆ ಬದಲಾಯಿಸಿ ಅದರಿಂದ ಲಾಭ ಪಡೆದದ್ದಕ್ಕೆ ಸ್ಪಷ್ಟ ದಾಖಲೆ ಇಲ್ಲಿದೆ.

ದುರದೃಷ್ಟವಷಾತ್ ಈ ನಾಲ್ಕು ಶಾಸನಗಳಲ್ಲೂ ಕಾಲ ನಿರ್ದೇಶನವಿಲ್ಲ. ಮೇಲೆ ತಿಳಿಸಿದ ಘಟನೆಗಳಿಂದ ನಾಲ್ಕು ಶಾಸನಗಳ ಕಾಲಾನುಕ್ರಮಣಿಕೆಯನ್ನು ಖಚಿತವಾಗಿ ನಿರ್ಧರಿಸಿದರೂ ಕಾಲದ ಒಕ್ಕಣೆ ಇಲ್ಲದ್ದರಿಂದ ಪ್ರಸ್ತುತ ಅಪ್ರಕಟಿತ ದಿಂಬಾಲ ಶಾಸನದ ಕಾಲದ ಬಗೆಗೆ ಕೆಳಕಂಡ ಊಹೆಯನ್ನು ಮಾಡ ಬಹುದಾಗಿದೆ.

ಮೈಸೂರು ಜಿಲ್ಲೆ ಬಸವಟ್ಟಿ[೬] ಶಾಸನದ ಆಧಾರದಿಂದ ಮತ್ತು ಮಣ್ಣೆಯ ತಾಮ್ರಪಟದ ಆಧಾರದಿಂದ ಪ್ರಾಯಶಃ ಶ್ರೀಪುರುಷನ ಮರಣಕಾಲವನ್ನು ಕ್ರಿ.ಶ. ೭೯೯ರವರೆಗೆ ಮುಂದಕ್ಕೆ ಹಾಕಬಹುದಾಗಿದೆ. ಅದೇ ವರ್ಷ ಯಾದವೀ ಕಲಹ ನಡೆದಿರಬೇಕು. ಶಿವಮಾರ ಪಟ್ಟಕ್ಕೆ ಬಂದದ್ದು ಖಚಿತವಾಗಿ ಮಣ್ಣೆ ಶಾಸನೋಕ್ತ ಕ್ರಿ.ಶ. ೭೯೯ನೇ ವರ್ಷವೇ. ಅಪ್ರಕಟಿತ ಶಾಸನದಲ್ಲಿ ಶ್ರೀಪುರುಷನ/ಶಿವಮಾರನ/ಎರೆಯಪ್ಪನ ಉಲ್ಲೇಖವೇ ಇಲ್ಲದಿರುವುದರಿಂದ ಯಾದವೀ ಕಲಹದ ಕಾಲಕ್ಕೆ ಹೊಂದಿಸಬಹುದಾಗಿದೆ. ಹಾಗಾಗಿ, ಈ ಶಾಸನದ ಕಾಲ ಸುಮಾರು ಕ್ರಿ.ಶ. ೭೯೯ ಎಂದು ನಂಬುತ್ತೇವೆ.

ದಿಂಬಾಲದ ಮೂರನೆಯ ಶಾಸನ : ಇದೇ ಸೋಮೇಶ್ವರ ದೇವಸ್ಥಾನದ ಎಡಬದಿಯ ಗೋಡೆಯ ಹತ್ತಿರ ಗಂಗರ ಕಾಲದ ಅಪ್ರಕಟಿತ ಶಾಸನಸಹಿತ ತುರುಗೋಳ್ ವೀರಗಲ್ಲೊಂದಿದೆ. ಮುಡಿಕಟ್ಟಿದ ಆಲೀಢಭಂಗಿಯ ವೀರ. ಬಿಲ್ಲು ಮತ್ತು ಕಿರು ಕಠಾರಿ. ಕಲ್ಲಿನ ಎಡಮೂಲೆಯಲ್ಲಿ ಮೇಲ್ಭಾಗದಲ್ಲಿ ಗೋಪುರ ಸಹಿತ ಮಂಟಪ, ಅದರ ಕೆಳಗೆ ಕುಂಭ, ಕಲ್ಲಿನ ಬಲಭಾಗದಲ್ಲಿ ಹಸುಗಳು. ಕಲ್ಲಿನ ಬಲ ಅಂಚಿಗೆ ಹೊಂದಿದಂತೆ ಎಂಟು ಅಕ್ಷರದ ಶಾಸನವಿದೆ.

೧ ಸ್ವಸ್ತಿ ಶ್ರೀ ಶಕವರಿಷ....



ನಂತರ ಕಲ್ಲು ಚಪ್ಪೆ ಎದ್ದಿದೆ. ಲಿಪಿ ಮೊದಲಿನೆರಡು ಶಾಸನಗಳ ಲಿಪಿಯನ್ನು ಹೋಲುತ್ತದೆ. ಲಿಪಿ ಸಾಮ್ಯದಿಂದ ಮತ್ತು ಮೊದಲಿನ ಅಪ್ರಕಟಿತ ಶಾಸನಕ್ಕೆ ಹತ್ತಿರದಲ್ಲೇ ಈ ಶಾಸನಸಹಿತ ವೀರಗಲ್ಲು ಸಿಕ್ಕಿರುವುದರಿಂದ ಶಾಸನ ಹೇಳುವ ಘಟನೆಯೂ ವೀರಗಲ್ಲು ತೋರಿಸುವ ಘಟನೆಯೂ ಒಂದೇ ಎಂದು ಹೇಳಬಹುದು.*

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) *E.C.X.*, ಶ್ರೀನಿವಾಸಪುರ ೬೫.
೨) *E.C.IX.*, ಹೊಸಕೋಟೆ.
೩) *E.C.X.*, ಶ್ರೀನಿವಾಸಪುರ ೬೫
೪) ಡಾ. ಕೆ.ವಿ. ರಮೇಶ್-"**ಇನ್‌ಸ್ಕ್ರಿಪ್ಷನ್ಸ್ ಆಫ್ ವೆಸ್ಟರ್ನ್ ಗಂಗಾಸ್**" -ಶಾಸನ ಸಂಖ್ಯೆ ೫೭, ಪುಟ ೨೧೭ ಹಾಗೂ E.C.IV ಚಾಮರಾಜನಗರ ೧೨೬.
೫) *E.C. IX.*, ನೆಲಮಂಗಲ ೬೦
೬) *E.C. IV.*, ಚಾಮರಾಜನಗರ ೧೨೬.

ಬಿ. ಸಿ. ಪಾಟೀಲ್*

ಗುಡ್ಲಾನೂರು ಶಾಸನ

ಶಾಸನದ ವಿಷಯ

ಸಿಂದವುಗೆ ಗ್ರಾಮದಲ್ಲಿ ಅಣ್ಣಿಗನು ಕಟ್ಟಿಸಿದ ನಾಗೇಶ್ವರ ದೇವಾಲಯಕ್ಕೆ ತಾಯಿ ಅತ್ತಿಮಬ್ಬೆ ಮತ್ತು ಮಗ ಅಣ್ಣಿಗ ಭೂಮಿಯನ್ನು ಬಿಡುವರು.

ಮೂಲಸ್ಥಳ : ತುಂಗಭದ್ರೆ ಅಣೆಕಟ್ಟಿನಲ್ಲಿ ಮುಳುಗಡೆಯಾದ ನೂತನ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಗುಡ್ಲಾನೂರಿನ ಶಿವದೇವಾಲಯದ ಆವರಣದಲ್ಲಿ ನಿಲ್ಲಿಸಿದ್ದ ಶಿಲಿ.

ಸದ್ಯದ ಸ್ಥಳ : ಪುನರ್ ವಸತಿ ಗ್ರಾಮ ಗುಡ್ಲಾನೂರಿನ ಸರಕಾರಿ ಕನ್ನಡ ಶಾಲೆಯ ಹತ್ತಿರ.

ಕಾಲ : ಶಕ ವರುಷ ೯೦೯ ಸರ್ವಧಾರಿ ಸಂವತ್ಸರ ಮಾಸ ಶುದ್ಧ ತ್ರಯೋದಸಿ, ಕ್ರಿ.ಶ. ೯೮೭, ೧೦ನೇ ಶತಮಾನದ ಉತ್ತರಾರ್ಧದ ಕೊನೆಯ ಭಾಗ.

ಆಕಾರ : ತಿಳಿಹಸಿರು ಶಿಲೆ, ಇದರ ಉದ್ದ ೨ಮೀಟರ್ ಅಗಲ ೭೧ ಸೆಂ.ಮೀಟರ್ ಚಿತ್ರವಿರುವ ಆಕಾರ: ಉದ್ದ ೩೭ ಸೆಂ.ಮೀ ಅಗಲ ೭೧ ಸೆಂ.ಮೀ. ಇದರ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಕೆಳಗೆ ಕರುವಿಗೆ ಮೊಲೆಯುಣಿಸುವ ಹಸು (ದ್ವಿಮುಖ), ಲಿಂಗದ ಮುಂದೆ ಕೈ ಮುಗಿದು ಕುಳಿತ ಭಕ್ತ, ಲಿಂಗ ನಂತರ ಕುಳಿತ ಭಾಂಗಿಯಲ್ಲಿ ನಂದಿ.

ಲಿಪಿಯ ಪ್ರದೇಶ : ಉದ್ದ ೧ಮೀ. ೬೩ಸೆಂಮೀ. ಅಗಲ ೭೧ ಸೆಂ.ಮೀ. ಲಿಪಿಗಳ ಸಾಲುಗಳು ೪೨.

ಶೈಲಿ : ವಚನ

ಲಿಪಿಕಾರ : ಚಿತ್ತಾರಿ ಮಾಳೋಜನ ಮಗ ಚಿತ್ರ ಮನೋಜ ವಟ್ಟೋಜ.

ವಿಷಯ : ನಾಗೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟಿದ್ದು.

ಹಿನ್ನೆಲೆ : ವೆಂಗಿ ಮಂಡಲದ ಪುಂಗನೂರಿನ ಕೌಂಡಿಣ್ಣ ಗೋತ್ರದ ನಾಗಮಯ್ಯನು ಕನ್ನಡ ನಾಡಿಗೆ ಆಗಮಿಸಿ, ನೆಲಸಿದ ನಂತರ ಜಿನಚಂದ್ರ ಮುನಿಪತಿಯಿಂದ ಜಿನದೀಕ್ಷೆ ಪಡೆದನು. ಈತನ ಪುತ್ರರು ಮಲ್ಲಪಯ್ಯ, ಪುನ್ನಮಯ್ಯ ಕ್ರಿ. ವರುಷ ೯೫೦ರ ಪೂರ್ವದಲ್ಲಿಯೇ ರಾಷ್ಟ್ರಕೂಟರ ಪ್ರಬಲ ಸಾಮಂತ, ಚಾಲುಕ್ಯ ವಂಶದ ೨ನೇ ತೈಲನ ಸೈನ್ಯದಲ್ಲಿ ಉನ್ನತಾಧಿಕಾರಿಗಳಾಗಿದ್ದರು. ಪುನ್ನಮಯ್ಯ ಕಾವೇರಿ ತೀರದಲ್ಲಿ ನಡೆದ ಯುದ್ಧದಲ್ಲಿ ವೀರ ಮರಣವನ್ನಪ್ಪಿದ್ದರು. ದಂಪತಿಗಳಾದ ಮಲ್ಲಪಯ್ಯ ಮತ್ತು ಅಪ್ಪಕಬ್ಬೆಗೆ ಐದು ಮಂದಿ ಪುತ್ರರು, ಮೂರು ಮಂದಿ ಪುತ್ರಿಯರು ಅತ್ತಿಯಬ್ಬೆ, ಗುಂಡುಮಬ್ಬೆ ಮತ್ತು ನಾಗಿಯಬ್ಬೆ.

ಇದೇ ಸಾಮಂತನ ಸಚಿವೋತ್ತಮನ, ವಿವೇಕ ಬ್ರಹಸ್ಪತಿ, ಚತುರ ಧಲ್ಲಪನ ಮಗ, ವಿನಯ ಸುಂದರ, ಸ್ವಾಮಿನಿಷ್ಠ ದಂಡ ನಾಯಕ ನಾಗದೇವನಿಗೆ ಮಲ್ಲಪನು ಅತ್ತಿಯಬ್ಬೆ ಮತ್ತು ಗುಂಡು ಮಬ್ಬೆಯರನ್ನು ಕೊಟ್ಟು ಲಗ್ನ ಮಾಡಿದನು. ನಂತರದ ಕಾಲದಲ್ಲಿ ಅತ್ತಿಯಬ್ಬೆ ಗಂಡು ಮಗುವಿಗೆ ಜನ್ಮವಿತ್ತಳು, ಅವನೇ ಅಣ್ಣಿಗ.

ಚಾಲುಕ್ಯ ರಾಜ್ಯ ಸ್ಥಾಪನೆ : ರಾಷ್ಟ್ರಕೂಟರ ಪ್ರಬಲ ಸಾಮಂತ, ಸರ್ವರ ಗೌರವಾದರಕ್ಕೆ ಪಾತ್ರನಾದ ೨ನೇ ತೈಲನು ಸಕಲರ ಅಪೇಕ್ಷೆಯಂತೆ ರಾಷ್ಟ್ರಕೂಟರ ಅರಸ ರಾಜಕೀಯದಲ್ಲಿ ಮತ್ತು ಪ್ರಜಾ ಹಿತಾಸಕ್ತಿಯಲ್ಲಿ ನಿರಾಸಕ್ತಿ ತೋರಿದ ೨ನೇ ಕರ್ಕನನ್ನು ಸೋಲಿಸಿ ಕ್ರಿ. ಪೂ. ೯೭೩ರಲ್ಲಿ ಸಿಂಹಾಸನವೇರಿದನು. ರಾಜಧಾನಿ ಮಳಖೇಡದಿಂದಲೇ ಆಡಳಿತ ನಡೆಯಿಸಿದನು. ದಂಡನಾಯಕರ, ಸಚಿವರ, ಸಹಕಾರದಿಂದ ವೈರಿಗಳನ್ನು ಸದೆಬಡಿದು ಅನೇಕ ನಾಡುಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು ಅಹವಮಲ್ಲನೆಂದು ಬಿರುದು ಧರಿಸಿಕೊಂಡನು.

ಮಾಸವಾಡಿನಾಡು : ಕನ್ನಡ ನಾಡಿನ ಪ್ರಾಚೀನ, ಮಧ್ಯ ಯುಗೀನ ಅರಸರು ಸುಗಮ ಮತ್ತು ಸುಭದ್ರ ಆಡಳಿತೆಗಾಗಿ ನಾಡು ಗಳನ್ನು ರಚಿಸಿ, ಅವುಗಳ ಅಧಿಪತಿಯನ್ನಾಗಿ ಸಚಿವರ, ಮತ್ತು ದಂಡನಾಯಕರನ್ನಾಗಿ ನಿಯಮಿಸುತ್ತಿದ್ದರು. ಅಂಥ ನಾಡುಗಳಲ್ಲಿ ಮಾಸವಾಡಿ ೧೪೦ ಒಂದು. ಇತಿಹಾಸತಜ್ಞರ ಅಭಿಪ್ರಾಯದಂತೆ ಇಂದಿನ ಮುಂಡರಗಿ ತಾಲೂಕ ಹಾವೇರಿ ವರದಾ ನದಿಯ ಉತ್ತರದ ಪೂರ್ವಭಾಗ ಮತ್ತು ಗದಗ ತಾಲೂಕಿನ ಪೂರ್ವಭಾಗ, ಒಳಗೊಂಡಿದ್ದ ಒಂದು ಆಡಳಿತ ವಿಭಾಗ ಇದರ ಮುಖ್ಯಸ್ಥಳ ಲೊಕ್ಕಿಗುಂಡಿ ಇಂದಿನ ಲಕ್ಕುಂಡಿ. ವಿನೂತನ ಪ್ರಕಟಿತ ಗುಡ್ಲಾನೂರು ಶಾಸನವು ಕೊಪ್ಪಳ ತಾಲೂಕಿನ ಪಶ್ಚಿಮ ಭಾಗ ಮಾಸವಾಡಿ ನಾಡಿನಲ್ಲಿತ್ತೆಂದು ತಿಳಿಸುತ್ತಿದೆ. ಗದಗ ತಾಲೂಕಿನ ಕ್ರಿ.ಪೂ. ೧೦೦೭ ಲಕ್ಕುಂಡಿಯ ಶಾಸನ ಮತ್ತು ಕ್ರಿ.ಶ. ೧೧೭೭ ಕೌಲೂರಿನ ಶಾಸನ ಈ ಪ್ರದೇಶ ಮಾಸವಾಡಿಯಲ್ಲಿತ್ತೆಂದು ತಿಳಿಸುತ್ತಿವೆ. ಅದು ಕಾರಣ ಮಾಸವಾಡಿನಾಡು ಸಾಕಷ್ಟು ವಿಶಾಲ ವಾಗಿತ್ತು.

* ನಿವೃತ್ತ ಶಿಕ್ಷಕರು, ಜವಾಹರ್ ರೋಡ್, ಕೊಪ್ಪಳ - ೫೮೩ ೨೩೧.

ಸಾರಾಂಶ : ಸತ್ಯಾಶ್ರಯ ಕುಲತಿಲಕ, ಭುವನಾಶ್ರಯ, ಪೃಥ್ವಿವಲ್ಲಭ, ಚಾಳುಕ್ಯಾಭರಣ, ಅಹವಮಲ್ಲ ೨ನೇ ತೈಲನ ಪಾದಪದ್ಮೋಪಜೀವಿ, ಅರಿನೃಪರ ತಿಮಿರ ಹರಿಣಿ ರಿಪುಗಳ ಕುಲಕೆ ದಾವಾಗ್ನಿ, ವಿಜಯ ಲಕ್ಷ್ಮೀಧರ, ಬಲಭುಜದಲ್ಲಿ ವೀರಲಕ್ಷ್ಮೀ ನಿವಾಸ, ಸುಭಟ, ಸಾಹಸ ಭೀಮ ನನ್ನಿ ಮಹಾಪುರುಷ, ಸುಜನರ ಮಿತ್ರ ಮನೋಜ ದಂಡನಾಯಕ ನಾಗದೇವನ ಸತ್ಕುಲ ಜಾತೆ, ಪರಮ ಪವಿತ್ರೆ, ಪರಿಶುದ್ಧ ಸುವರ್ಣ, ಗುಣದಂಕಕಾರ್ತಿ, ಕವಿಗಳಿಗೆ ಕಾಮಧೇನು, ಜಿನಭಕ್ತಿ ಪಾರಾಯಣ ಧರ್ಮಪತ್ನಿ ಅತ್ತಿಮಬ್ಬೆಯ ಮಗ, ಮಹಾದಂಡ ನಾಯಕ ಸತ್ಯವಂತ ಸಂಗ್ರಾಮಧೀರ ದುಷ್ಟ ನಿಗ್ರಹಿ, ಶಿಷ್ಟಪರಿಪಾಲಕ, ಒಡೆಯ ಅಹವಮಲ್ಲನ ಹಿತವನ್ನು ಬಯಸುವವ ಅಣ್ಣಿಗ ದೇವನು ಮಾಸವಾಡಿ ೧೪೦ನ್ನು ಸುಖದಿಂದ ಸುಮಾರು ೯೮೭ ರಿಂದ ೧೦೦೭ ರವರೆಗೂ ಆಳಿರಬಹುದು.

ದಂಡನಾಯಕ ಅಣ್ಣಿಗನು, ತಂದೆ ನಾಗದೇವನ ಸ್ಮರಣಾರ್ಥ ಮಾಸವಾಡಿಯ ನಾಡಿನ ಗ್ರಾಮ ಸಿಂದವುಗೆಯಲ್ಲಿ ದೇವಾಲಯ ಕಟ್ಟಿಸಿ ಅದಕ್ಕೆ ನಾಗೇಶ್ವರ ದೇವಾಲಯ ಎಂದು ಹೆಸರಿಸಿದನು. ಇದೇ ಗ್ರಾಮದಲ್ಲಿದ್ದ ಯಮ ನಿಯಮ ಸ್ವಾಧ್ಯಾಯ, ಧ್ಯಾನ, ಅನುಷ್ಠಾನ ಬಲ್ಲಿದ ಪರಮ ಸಂಪನ್ನರಪ್ಪ ದೇವರಾಶಿ ಮುನಿಪನ ಪಾದಪದ್ಮಂಗಳನ್ನು ಅತ್ತಿಯಬ್ಬೆ ಅಣ್ಣಿಗ ತೊಳೆದು, ನಾಗೇಶ್ವರ ದೇವಾಲಯದ ಅಂಗರಂಗ ಭೋಗಕ್ಕೆ ಕಾಂತರಕಿ, ಗಾವುಂಡನೂರು, ಕರ್ವಾಳ್ಳ ಮಧ್ಯದಲ್ಲಿರುವ ಎರೆ ಮತ್ತು ಕೆಂಪು ಭೂಮಿಗಳನ್ನು- ೭೦೦ ಮತ್ತರು ಮಾಘ ಶುದ್ಧ ತ್ರಯೋದಶಿ ಸೋಮವಾರ ಸರ್ವಧಾರಿ ಸಂವತ್ಸರ ಶಕವರುಷ ೯೦೯ರಂದು ಸರ್ವಭಾದಾ ಪರಿಹಾರ ಮಾಡಿ ಬಿಟ್ಟುಕೊಟ್ಟರು. ನಂತರ ಶಾಪಾಶಯವಿದೆ. ಕೊನೆಯಲ್ಲಿ ಮಹಾಘನವಂತ, ಉದಾರ, ಮಲಬಟೋಜನ ತಮ್ಮನ ಮಗ ಚಿತ್ತಾರೆ ಮಾಳೋಜನ ಮಗ ಚಿತ್ರ ಮನೋಜ ವಟ್ಟೋಜನು ಈ ಶಾಸನದ ಲಿಪಿಕಾರನು.

ಸಮೀಕ್ಷೆ : ಪ್ರತಿ ಶಾಸನದ ಪ್ರಾರಂಭದಲ್ಲಿ ಶ್ಲೋಕವಿರುವುದು ಸಂಪ್ರದಾಯ. ಆದರೆ ಕವಿಯು ಇದನ್ನು ಇಲ್ಲಿ ಕೈಬಿಟ್ಟು ನೇರವಾಗಿ ವಿಷಯವನ್ನು ಪ್ರಸ್ತಾಪಿಸಿರುವುದು ಹಾಗೂ ಲಿಪಿಗಾರನ ಗಮನಾರ್ಹ ಹೆಸರನ್ನು ಉಲ್ಲೇಖಿಸಿರುವುದು. ಅತ್ತಿಯಬ್ಬೆ ನಾಗದೇವ, ಅಣ್ಣಿಗ ಇವರನ್ನು ಕುರುತು ಹೇಳುವ ಪ್ರಪ್ರಥಮ ಶಾಸನ

ಇನ್ನೊಂದು ಕ್ರಿ.ಶ. ೧೦೦೭ರಲ್ಲಿ ರಚಿತ ಲಕ್ಕುಂಡಿ ಶಾಸನ. ಗುಡ್ಡಾನೂರು ಶಾಸನದಲ್ಲಿ ಕವಿಯು ಮಲ್ಲಪ್ಪಯ್ಯ, ಭಲ್ಲಪ ಮತ್ತು ಗುಂಡುಮಬ್ಬೆ ಇವರನ್ನು ಕೈಬಿಟ್ಟಿರುವನು. ಅಣ್ಣಿಗನ ಪಿತೃ ಭಕ್ತಿ ಗೌರವಾದರ ಮತ್ತು ಅತ್ತಿಯಬ್ಬೆಯ ಪತಿಭಕ್ತಿ ಅಪಾರ ಮತ್ತು ದೇವರಾಸಿ ಮುನಿಪತಿಯಲ್ಲಿರಿಸಿದ ಅಪಾರ ಭಕ್ತಿ ಭಾವ ಮತ್ತು ಜೈನ ಧರ್ಮದ ಮೇಲಿನ ಪರಮ ಪಾವಿತ್ರ್ಯತೆ ತಿಳಿಸುತ್ತಿವೆ.

ಈ ಶಾಸನದಲ್ಲಿ ಉಲ್ಲೇಖಿಸಿರುವ ಗ್ರಾಮಗಳು ಅಲ್ಪ ಬದಲಾವಣೆಗಳೊಂದಿಗೆ ಇಂದಿಗೂ ಜೀವಂತವಾಗಿವೆ. ಸಿಂದವುಗೆ - ಸಿಂದೋಗಿ, ಕಾಂತರಗಿ - ಕಾತರಕಿ, ಗಾವುಂಡನೂರು -ಗುಡ್ಡಾನೂರು ಕರ್ವಾಳ್ಳ-ಕಬ್ಬಳ್ಳ, ಮಳ್ತಪುರ-ಮೈನಳ್ಳಿ, ಘಾಟ-ನದಿ ದಾಟುವ ತಾಣ ತುಂಗಭದ್ರಾ ಅಣೆಕಟ್ಟುವ ಪೂರ್ವದಲ್ಲಿ ಇದುವೇ ನದಿ ದಾಟುವ ಮಾರ್ಗ ಸಿಂದೋಗಿಯ ದಕ್ಷಿಣಕ್ಕೆ ವಿಶಾಲ ಕೆರೆಯಿದ್ದು, ಇದುವೆ ಅಣ್ಣಿಗನ ಕೆರೆ ಇರಬಹುದು. ಇಂದು ಇದನ್ನು ಕೃಷಿಗೆ ಅಳವಡಿಸಿರುವರು. ನಾಗೇಶ್ವರ ದೇವಾಲಯ ತಳಪಾಯ ಮೇಲೆ ಕಟ್ಟೆಯನ್ನು ಕಟ್ಟಿರುವರು. ಭಾವಿ ಇದ್ದುದನ್ನು ಮುಚ್ಚಿಸಿರುವರು.

ಈ ಶಾಸನ ಕಾವ್ಯಮಯವಾಗಿದೆ. ಇದರ ಓಟ ಎಲ್ಲೂ ಕುಂಠಿತವಾಗಿಲ್ಲ. ಸಂಸ್ಕೃತ ಪದಗಳ ಅತಿ ಭಾರ ಕಂಡು ಬರುವುದಿಲ್ಲ. ಭಾಷೆ ಸರಳವಾಗಿದೆ. ಹಿತ-ಮಿತ ಅಲಂಕಾರಗಳ ಮತ್ತು ಸತ್ವಯುತ ಪದಗಳ ಜೋಡಣೆ ಶಾಸನಕ್ಕೆ ಮೆರಗು ನೀಡಿವೆ. ಗಾವುಣ್ಡ, ಮಿಳ್ದು, ಕಳ್ಚ, ಪವಿತ್ರೆಯರ್, ಕಾರ್ತಿಯರ್, ಈ ಪದಗಳು ಈ ಶಾಸನದಲ್ಲೂ ಮುಂದುವರಿದಿವೆ. ರಸ, ಧಿಮಂತ ಶೈಲಿ ಆಕರ್ಷಕವಾಗಿದೆ. ಈ ಶಾಸನ ಅತ್ತಿಮಬ್ಬೆಯ ಮತ್ತು ಅಣ್ಣಿಗನ ಚರಿತೆಯನ್ನು ಮನದುಂಬಿ, ಹೆಣೆದಿರುವುದು ಶ್ಲಾಘನೀಯ.

ಗುಡ್ಡಾನೂರು ಪಾಳು ಈಶ್ವರ ದೇವಾಲಯದ ಮುಂದೆ ಇದ್ದದ್ದು :

೧ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಧಿರಾ
೨ ಜ ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕ ಚಾಳು
೩ ಕ್ಯಾಭರಣಂ ಶ್ರೀಮದಾಹವಮಲ್ಲ ದೇವರ ರಾಜ್ಯಾಭಿವೃಧಿ ಪ್ರವರ್ದ್ಧಮಾಚನ್ಸಾರ್ಕ ತಾರಂಬರಂ ಸಲುತ್ತಮಿರೆ
೪ ತತ್ಪಾದ ಪದ್ಮೋಪಜೀವಿ ಸ್ವಸ್ಯರಿನರಪ ತಿಮಿರ ಹರಣ ವಿಜಯಲಕ್ಷೀ ಲಕ್ಷಣ ದಕ್ಷ ದಕ್ಷಿಣ
೫ ಭುಜ ವಿಜಯ ವೀರಲಕ್ಷ್ಮೀನಿವಾಸಾಯ ಮಾನಾನೂನರತ್ನಂ ರಜಿತ ಚ್ಚೂರ್ಬಿತ . ವಿವಿದಾಭರಣ ಕಿರಣ ರಗಾ
೬ ರುಣಿತ ವಿತತ ಸುಭಲಕ್ಷ್ಮಣ ಲಕ್ಷಿತ ಬ್ರಹ್ಮ ವಂಶೋದ್ಭವಂ ವಾಜಿ ಕುಳ ಗಗನಭಾಸ್ಕರ ಸುಭಟ ತ್ರಿಣೇತ್ರ ಸುಜ
೭ ನೈಕಮಿತ್ರಂ ವಿಭವ ಮಾಂಧಾತ ರಿಪು ಬಳೋಪೇತಂ ವೈರಿ ನಾರಾಯಣ ಪ್ರಯಜನಾಧಾರಣ ರಿಪುಬಳ ಭೀಮ ಸಾಹಸ
೮ ರಾಮ ನನ್ನಿಮಹಾರ್ಣ್ಣವ ಸಕಳ ವಿಸ್ತೀರ್ಣ್ನವಂ ಸಮರ ಕೊಳ್ಗಣ್ಡ ವೈರಿ ಕುಳಕಾಳದಣ್ಡ ವಿಳಾಸಿನೀಜನ ಮನೋಜ ಕಂದು ಕೋಜ
೯ ಶ್ರೀಮತ್ ಪಡೆವಳ ನಾಗದೇವನ್ ತತ್ಕುಳ ಪತ್ನಿಯರ್ ಸ್ವಸ್ತಿ ಜಿನಸ್ನಪನ ಬಂಧುರ ಗಣ್ಡಳಕ ಪರಮ ಪವಿತ್ರೀಕೃತೋತ್ತ ಮಾಂಗೆಯರ್
೧೦ ಕಟಕ ಪವಿತ್ರೆಯರ್ ಗುಣದಂಕ ಕಾರ್ತ್ತಿಯರ್ ಕವಿಯರ ಕಾಮಧೇನುಗಳಪ್ಪ ಶ್ರೀಮದತ್ತಿಯಬ್ಬರಸಿಯರ ಮಗಂ ಸ್ವಸ್ತಿ
೧೧ ಸಮಸ್ತ ರಾಜ್ಯಭರ ನಿರೂಪಿತಂ ಮಹಾಸೈನ್ಯಾಧಿಪತಿ ಪ್ರಚಣ್ಡ ದಣ್ಡನಾಯಕಂ ನನ್ನಿನಾರಾಯಣ ಸಂಗ್ರಾಮಧೀರ ಕಪ್ಪುರ
೧೨ ವರ್ಷನಾಯದಾಚಾರ್ಯ್ಯ ಹಯವತ್ಸರಾಜ ಪತಿಹಿತಾಭರಣ ಶ್ರೀ ಮದಣ್ಣಿಗದೇವ ಮಾಸಿವಾಡಿ ನೂಱ ನಾಲ್ವತ್ತುಮ ನಿಧಿ ನಿಧಾನ

೧೩ [ನಿ] ಕ್ಷೇಪ ಸಹಸ್ರದಣ್ಣ ಮೊದಲಾಗೆ ದುಷ್ಟನಿಗ್ರ ವಿಶಿಷ್ಟ ಪ್ರತಿಪಾಳನಗೆಯ್ದು ಸುಖದೊಳರಸುಗಯ್ಯುತ್ತ ಮಿಬ್ಬಿ ಸಿಂದ
೧೪ [ವುಗ] ಯೊಳ್ ನಾಗೇಶ್ವರ ಮಂದು ದೇಗುಲವಂ ಪರೋಕ್ಷ ವಿನಿಯದಿಂ ಮಾಡಿಸಿ॥ಸ್ವಸ್ತಿ ಯಮನಿಯಮ ಸ್ವಾಧ್ಯಾಧ್ಯಾಯ ಧ್ಯಾನ ಮೋ
೧೫ [ನಾ] ನುಷ್ಠಾನ ಸಮಾಧಿ ಸಂಪನ್ನರಪ್ಪ ಸ್ರೀಮತ್ಸಿಂದವುಗೆಯ ದೇವರಾಸಿ ಪಣ್ಡಿತರ ಕಾಲಂ ಶ್ರೀಮದತ್ತಿಯಬ್ಬರಸಿಯರು ಮಣ್ನೆ
೧೬ [ಗ] ದೇವನು ಮಿಬ್ಬಿ ಕಟ್ಟಿ ॥ ಶಖಕಳಾತೀತ ಸಂವತ್ಸರ ಶತಂಗಳೊಂಬ್ಯನೂಱೊಂಭತ್ತನೆಯ ೯೦೯ ಸರ್ವ್ವಧಾರಿ ಸಂವತ್ಸರ [ಂ]
೧೭ ಪ್ರನರ್ತ್ತಿಸೆ ತದ್ವರ್ಷಾಭ್ಯನ್ತರ ಮಾಘ ಸುದ್ಧ ತ್ರಯೋದ [ಸಿಯುಂ] ಸೋಮವಾರಮು ವಿತಿಪಾತದಂದು ನಾಗೇಶ್ವರಕ್ಕೆ ಬಿಟ್ಟ
೧೮ ಊರು ಆನೆಗುಣ್ಡಿಯುಂ ಬಟ್ಟಕಜೆಯ ಗುಣ ಗಾವುಣ್ಡ... ನ ನೂರು ದೆಸೆಯಿಂದ ಪಿಂಗಿಸಿ ಊರಪೊಲದ ಬಡಗಣ ದೆ
೧೯ ಸೆಯೊಳ್ ಎರೆಮೂನೂಱ ಮತ್ತರ್ ೩೦೦ಊರ ತೆಂಕಣ [ದೆ] [ಸೆ] ಯೊಳ್ ಕಿಸುಕಾಡು ಮೂನೂಱು ಮತ್ತರ್ ೩೦೦ ಅದಱ ಏರಿಯ
೨೦ ಸೀಮೆ ಆವುದೆನ್ದೊಡೆ ಸಿಂದವುಗೆಯಿಂದ ಪಡುವ ಅಳವಿಣ್ಡೆ.. ದಬಟ್ಟೆಯ ತೆಂಕಣದೆಸೆಯ ಅಣ್ನೆಗನ ಕೊಳದ ಕೆ
೨೧ ಱಗೆ ನೆಟ್ಟಕಲ್ಲು ಮೇರೆ ಅದಕ್ಕೆ ಸಯ್ಯು ತೆಂಕ ಶಾನ್ತ ವೊಲದ...ಕೆಱಿಯ ಪೊಲದ ಮೇರೆಯೊಳ್ ನಟ್ಟ ಸಾಸನ ಕಲ್ಲು ಅದ
೨೨ ಕ್ಕೆ ಸಯ್ಯು ಮೂಡಲ್ ಕರ್ವ್ವಳ್ಳ ಮೆ ಮೇರೆ ಅದಕ್ಕೆ ಸಯ್ಯು ಬಡ . ಕರ್ವ್ವಳ್ಳಂ ಬಿಡಿದು ಬನ್ದು ಸಿನ್ದವುಗೆಯಿಂದ
೨೩ ಬಟ್ಟೆಯ ತೆಂಕಣದೆಸೆಯೊಳ್ ಈಶಾನ್ಯ ದೊಳ್ ನಟ್ಟಕ . ಇದುವರಿಯ ಚತುರಾಘಾಟ ಶುದ್ಧಿ ಮತ್ತಂ ಕಿಸುಕಾಡ ಮೇರೆ
೨೪ ಅವುದೆಂದೊಡೆ ಮಟ್ಟಿವುರದ ಬಟ್ಟೆಯೊ. ಕೊಣ್ಡಗೆಱಿಯೊ . . ಗ ಣ ನಟ್ಟ ಮೋರಿಯಂಗಲ್ ಅದಂಸಯ್ಯು ಪಡುವ ಮೊ
೨೫ ಗದೆ ನಿಡುಸವಸಿಯ ಬಟ್ಟೆಯ ಮೂಡ ಕಾನ್ತರಿಕೆ ಬೆಲದ ಮೊದಲಗೆಳ್ ನಟ್ಟಕಲ್ ಅದಕ್ಕೆ ತೆಂ
೨೬ ಕ ಮೊಗದೆ ಹರ್ತ್ಥದ ಮೊದಲೊಳ್ ನಟ್ಟಕಲ್ ಅದೇ ಮೊದಲಾ [ಗೆ] [ಪ*]ಡು ಮೊಗದೆ ಬಾಟ್ಗಿಲ್ಲ ಪಡುವಣ ಪೊನ್ನುಗುಡ್ಡೆಯ
೨೭ ಬಟ್ಟೆಯ ಕಾನ್ತರಿಕೆಯ ಬೇವಿನ ಹರ್ತ್ತದ ಮೊದಲೊಳ್ ನಟ್ಟ ಕಲ್ ಅದಕ್ಕೆ ತೆಂಕ ಪುತ್ತಿನ ಪಡುವಣ ಬನ್ನಿಯ ಮೊದಲೊಳ್
೨೮ ನಟ್ಟಕಲ್ ಅಲ್ಲಿಂದ ಮೂಡ ನಿಡುಸವಸಿಯ ಬಟ್ಟೆಯ ಪಡುವಲಾನೆ ವಬ್ಬುಲೆಯ ಮೊದಲೊಳ್ ನಟ್ಟಕಲ್ ಅದಕ್ಕೆ ಸ
೨೯ ಯ್ಯು ನೈರಿತ್ಯದ ದೆಸೆಯ ಆಲದ ಬಾಗಿನ ಸೀಗೆಯ ಪಾರ್ತ್ಥದ ನಡುವೆ ನಟ್ಟಕಲ್ ಆಯಾಲದ ಬಾಲವಿಡಿದು ಕಾರೆಯ ಕೆಳಗಣಮೊ
೩೦ ದಲಮೇರೆಯಾಗೆ ಮಟ್ಟಿಪುರದ ಬಟ್ಟೆಯ ಮೂಡಣ ಬಿಲ್ಲವತ್ತದ ಮೂಡಣ ಬಾಟ್ಗಿಲ್ಲದಕ್ಕೆ ಬಡಗ ಕೊಣ್ಡಗೆಯಜೆಯ ಕೆಳಗಣಮೊ
೩೧ ರಿಯಗಲ್ಮೇರೆ ಇದು ಕಿಸುಕಾಡ ಮೇರೆ । ಇನ್ತು ಕಿಸುಕಾಡ ಮೇರೆಯು ತಳವೃತ್ತಿ ಅಱುನೂಱು ಮತ್ತರ್ ೬೦೦ ಇದಕ್ಕೆ ಅರು
೩೨ ವಣಗದ್ಯಾಣ ಆಱು ೬ ಆನೆಗುಣ್ಡಿಗೆ ಗದ್ಯಾಣ ಮೊಂಭತ್ತು ೯ ಸರ್ವ್ವಬಾಧಾ ಪರಿಹಾರ ಇನ್ತು ಮರ್ಯ್ಯಾದೆಯಂ ತಪ್ಪದೆ ನಡೆ
೩೩ ಸಿದವರ್ಗ್ಗಳ್ ಪ್ರಯಾಗೆಯೊಳಂ ಬಾಣರಸಿಯೊಳಂ ಕುರುಕ್ಷೇತ್ರಗೊಳಂ ಅನನ್ತ ಕೋಟಿ ತಪೋಧನರ್ಗ್ಗಂ ಬ್ರಾಹ್ಮಣರ್ಗ್ಗೆ
೩೪ ಆಹಾರದಾನ ಮಿಕ್ಕಿದ ಫಳಮುಂ ಸಹಶ್ರಾಶ್ವ ಮೇಧಗೆಯ್ದು ನಾಗೇಶ್ವರದ ದೊರೆಯ ವಿಪ್ರತ್ತನಾಲ್ಕು ದೇಗುಲಮ ಮಾಡಿ
೩೫ ಸಿದ ಫಳಮಕ್ಕು ಈ ಮರ್ಯ್ಯಾದೆಯಂ ದಾಣ್ಟಿಗವರ್ಗ್ಗೆ ॥ ಅನೇಕ ಕೋಟಿ ತಪೋಧನರುಮಂ ಬ್ರಾಹ್ಮಣರುಮಂ ಕವಿಲೆಗಳುಮನ
೩೬ ಱಿದ ಪಂಚ ಮಹಾಪಾತಕನು ಬ್ರಹ್ಮಾತಿಕಾಱನುಮಕ್ಕುಂ ಸಾಮಾನ್ಯೋಯಂ ಧರ್ಮ್ಮ ಸೇತುಬಂದು ನೃಪಾಣಾಂ ಕಾಳೇ ಕಾಳೇ
೩೭ ಪಾಳನೀಯೋ ಭವದ್ಭಿ : ಸರ್ವ್ವನೇತಾಭಾಗಿನ ಪಾರ್ತ್ಥಿ ವೇನ್ಸ್ರಾ ಭೂಯೋ ಭೂಯೋ ಯಾಚತೇ ರಾಮಭದ್ರ: ॥ ಸ್ವದತ್ತಂ ಪರದತ್ತಂ ವಾಯೋ
೩೮ ಹರನ್ತಿ ವಸುಂಧರಾ ಷಷ್ಟಿರ್ವ್ವರ್ಷ ಸಹಶ್ರಣೆ ವಿಷ್ಟಾಯಾಂ ಚಾಯತೇ ಕೃಮಿ । ಮೊಳೆತು ರಸಾತಳಾನ್ತದೊಳೆಯ್ದೆಮದಲ್ತು ಧರಿತ್ರೀಯೊಳ್ವಿಶಾವಳಿಗಳ
೩೯ ಕೊಣ್ಬರಂ ನಿಮಿರ್ದ್ದ ದಾಗುಂಡಿವೋಗಿ ಪೊದಲ್ದು ದಿಗ್ಗಜಾವಳಿ ರಜನಂಗಳಂ ಬಡಿದು ಸುತ್ತಿ ವಿಳಾಸದಜಾಣ್ಡದತ್ತ ಬಳ್ವಳ ಬಳೆದುರ್ವ್ವೀ ಪರ್ವ್ವಿದುದು ಕೀರ್ತ್ತಿಲತಾವಳಿ ಧೈರ್ಯ್ಯ
೪೧ ದೇವರ।ಅಲಸುತಮೀವ ಚಿನ್ತಿಸುತಮೀವ ವೇಗ ಮುರಿದೀವ ಮುಟ್ಟೆ ಮೂದಲಿಸಿದೊಡೀವ ಬೆಚ್ಚನುಸಿರ್ದ್ದೀವ ಬೇಗಳ್ಮೊಗದಿನ್ದ ಮೀವ ಮಲ್ಮಲ ಮಱುಗುತ್ತ ಮೀವ ಕಡುಲೋಬರ ದಾ
೪೨ ನಗುಣಂಗಳಂ ಪಳಂಚಲೆದಪುದಾರ್ತ್ತ ಕೂರ್ತ್ತು ಪಿರಿದೀವ ಗುಣಂ ಗುಣದಂಕಕಾರ್ತ್ತಿಯ । ಶ್ರೀ ಮಲ್ಪೆಟ್ರೋಜನ ತಮ್ಮ ಚಿತ್ತಾರಿಮಾಳೋಜನ ಮಗಂ ಚಿತ್ರಮನೋಜ ವಟ್ರೋಜಂ ಬರೆದ

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) ಪಿ.ಬಿ. ದೇಸಾಯಿ., ೧೯೬೮ : **ಬಸವೇಶ್ವರ ಆ್ಯಂಡ್ ಹಿಸ್‌ಟಾಯಿಮ್ಸ್** ಪುಟ ೩೭೬.

೨) ಎಸ್.ಪಿ. ಪಾಟೀಲ್., ೧೯೯೫ : **ದಾನ ಚಿಂತಾಮಣಿ ಅತ್ತಿಮಬ್ಬೆ** ಪುಟ ೧೩

೩) ಎಸ್.ಪಿ. ಪಾಟೀಲ್., ೧೯೯೫ : ಅದೇ ಕಡೆ ಪುಟ ೧೫

೪) ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಂ. ಕಲಬುರ್ಗಿ., ೧೯೯೫ : **ಕನ್ನಡ ಶಾಸನ ಸಂಪದ.** ಪುಟ : ೧೪೬

೫) ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಂ. ಕಲಬುರ್ಗಿ., ೧೯೯೫ : ಅದೇ ಕಡೆ ಪುಟ ೩೨

೬) **ಕೊಪ್ಪಳ ಜಿಲ್ಲೆಯ ಶಾಸನಗಳು.**, ೧೯೯೯, (ಸಂ .) ಡಾ. ದೇವರ ಕೊಂಡಾರೆಡ್ಡಿ., ಪುಟ ೯. ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

ಡಾ. ಗಣಪತಿಗೌಡ. ಎಸ್.*

ಚಂದಾವರ ಕದಂಬ ವೀರಕಾವದೇವ ಮತ್ತು ಶಿವಚಿತ್ತ ವೀರಕಾವದೇವನ ನಾಗೂರು ಶಿಲಾಶಾಸನಗಳು

ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿ ನಾನು ಕ್ಷೇತ್ರ ಕಾರ್ಯ ಅನ್ವೇಷಣೆ ಕೈಗೊಂಡಿದ್ದಾಗ ಈ ತಾಲೂಕಿನ ಮಿರ್ಜಾನಿನಿಂದ ಪೂರ್ವಕ್ಕೆ ೫ ಕಿ.ಮೀ. ದೂರದಲ್ಲಿರುವ ನಾಗೂರಿನಲ್ಲಿ ಎರಡು ಶಿಲಾಶಾಸನಗಳು ಬೆಳಕಿಗೆ ಬಂದವು. ಇಲ್ಲಿಯ ವಿಷ್ಣುದೇವಾಲಯದ ಬಲ ಮತ್ತು ಎಡಪಾರ್ಶ್ವದಲ್ಲಿ ಒಂದೊಂದು ಶಿಲಾಶಾಸನವಿದೆ. ಬಲಪಾಶ್ವದಲ್ಲಿರುವ ಶಾಸನದ ಮುಂಭಾಗದಲ್ಲಿ ೧೪ನೇ ಶತಮಾನದ ಲಿಪಿಯಿದ್ದರೆ, ಹಿಂಬದಿಯಲ್ಲಿ ತಿಗಳಾರಿ ಲಿಪಿಯಿದೆ. ಎಡಪಾರ್ಶ್ವದಲ್ಲಿರುವ ಶಾಸನ ಕೇವಲ ಕನ್ನಡ ಭಾಷೆಯನ್ನಷ್ಟೇ ಹೊಂದಿದ್ದರೂ ಇದರ ಅಕ್ಷರದ ಗಾತ್ರ ವಿನ್ಯಾಸದಲ್ಲಿ ತುಂಬಾ ಅಸ್ಪಷ್ಟತೆ ಇದೆ. ಇಲ್ಲಿಯ ಎರಡು ಶಾಸನಗಳಲ್ಲಿನ ಕನ್ನಡ ಪಾಠಗಳನ್ನು ಮಾತ್ರ ಅಧ್ಯಯನಕ್ಕೆ ಅಳವಡಿಸಲಾಗಿದೆ. ಶಾಸನಗಳ ಮೇಲ್ಭಾಗ ಅರ್ಧವೃತ್ತಾಕಾರ ವಾಗಿದ್ದು, ಮೇಲ್ಭಾಗದಲ್ಲಿ ಚಂದ್ರ - ಸೂರ್ಯರ ಸಂಕೇತ, ಶಿವಲಿಂಗ, ಅರ್ಚಕ, ನಂದಿ ಮತ್ತು ಬಿಲ್ಲು ಬಾಣ ಧರಿಸಿರುವ ವ್ಯಕ್ತಿಗಳನ್ನು ಚಿತ್ರಿಸಲಾಗಿದೆ.

ಶಾಸನದ ಕಾಲ : ಬಲಪಾರ್ಶ್ವದಲ್ಲಿರುವ ಮೊದಲನೆಯ ಶಾಸನ ಶಿವಚಿತ್ತವೀರಕಾವದೇವನ ಆಳ್ವಿಕೆಯ ೫೯ನೇ ವರ್ಷ ತಾರಣ ಸಂವತ್ಸರದ ಕಾರ್ತಿಕ ಶುದ್ಧ ಆದಿತ್ಯವಾರವಾಗಿದೆ. ಈ ಕಾಲಮಾನ ಕ್ರಿ.ಶ. ೧೪೦೪ನೇ ಅಕ್ಟೋಬರ್ ೫ನೇ ರವಿವಾರಕ್ಕೆ ಸರಿ ಹೊಂದುತ್ತದೆ.

ಎಡಪಾರ್ಶ್ವದಲ್ಲಿರುವ ಎರಡನೇ ಶಾಸನದಲ್ಲಿ ಶ್ರೀ ವೀರಕಾವದೇವರಸನ ಆಳ್ವಿಕೆಯ ಸರ್ವಧಾರಿ ಸಂವತ್ಸರ ಕಾರ್ತಿಕ ಶುದ್ಧ ಆದಿತ್ಯವಾರದ ಉಲ್ಲೇಖವಿದೆ. ಆಳ್ವಿಕೆಯ ವರ್ಷ ಸ್ಪಷ್ಟವಿಲ್ಲ. ಈ ವಿವರ ಕ್ರಿ.ಶ. ೧೪೦೮ ನವ್ಹೆಂಬರ್ ೧೭ನೇ ಶನಿವಾರಕ್ಕೆ ಸರಿಹೊಂದುತ್ತದೆ.

ಶಾಸನಗಳ ಸಾರಾಂಶ

ಮೊದಲನೆಯ ಶಾಸನದಲ್ಲಿ ೩೪ ಸಾಲುಗಳಿವೆ. ಗಣಾಧಿಪತಿಗೆ ನಮನದೊಂದಿಗೆ ಮತ್ತು 'ನಮಸ್ತುಂಗ' ಇತ್ಯಾದಿ ಶಿವಸ್ತುತಿಯೊಂದಿಗೆ ಇದು ಆರಂಭಗೊಂಡಿದೆ. ಮೊದಲ ಭಾಗದಲ್ಲಿ ಸಮಧಿಗತ ಪಂಚಮಹಾಶಬ್ದ, ಮಹಾಮಂಡಲೇಶ್ವರ, ಬನವಾಸಿ ಪುರವರಾಧೀಶ್ವರ ಜಯಂತೀ ಮಧುಕೇಶ್ವರದೇವರ ಲಬ್ಧವರ ಪ್ರಸಾದ, ಹರಧರಣೀ ಪ್ರಸೂತ, ಮುಕ್ಕಣ್ಣ ಕದಂಬ ವಂಶಜ ಪಶ್ಚಿಮ ಸಮುದ್ರಾಧಿಪತಿ ಶ್ರೀ ಗೋಕರ್ಣ ಮಹಾಬಳೇಶ್ವರ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕನಾದ ಶಿವಚಿತ್ತ ವೀರಕಾವದೇವನ ಆಳ್ವಿಕೆಯ ೫೯ನೇ ವರ್ಷ ತಾರಣ ಸಂವತ್ಸವರದ ಕಾರ್ತಿಕ ಶುದ್ಧ ಆದಿತ್ಯವಾರದ ಉಲ್ಲೇಖವಿದೆ. ಅಂದು ನಾಘೂರ ॥ ಮಾನಿಸ ಪ್ರಭುಗಳು ಒಮ್ಮತದಿಂದ ವಿನಾಯಕ ದೇವರು, ವಿಷ್ಣು ದೇವರು ಮತ್ತು ಮಹಾದೇವರುಗಳಿಗೆ ಸಂಬಂಧಿಸಿದಂತೆ ಆದಾಯಗಳನ್ನು ನಿರ್ದಿಷ್ಟಪಡಿಸಿ ಬೋರಿವಾಳ ಪರಿಷೆಯ ಶ್ರೀ ಪ್ರಕಾಶತೀರ್ಥ ಶ್ರೀಪಾದಂಗಳಿಗೆ ಧಾರಾಪೂರ್ವಕವಾಗಿ ಬಿಟ್ಟದ್ದಾಗಿ ತಿಳಿಸುತ್ತದೆ. ವಿನಾಯಕ ದೇವರು ಮತ್ತು ವಿಷ್ಣುದೇವರ ಶಾಂತಿಗೆ, ಗಣಪತಿಯ ಹೋಮಕ್ಕೆ ಭೂಮಿಯಿಂದ ಬರುವ ಆದಾಯಗಳನ್ನು ನೀಡಲಾಗಿದೆ. ಇದಲ್ಲದೇ ವೀರಕಾವದೇವರಸನು ಗ್ರಹಣ ಕಾಲದಲ್ಲಿ ಮಹಾಬಳ ದೇವರ ಮುಂದೆ ನೈವೇದ್ಯ, ನಂದಾದೀಪ ಇತ್ಯಾದಿ ಗಳಿಗಾಗಿ ದಾನ ನೀಡಿದ ಉಲ್ಲೇಖವೂ ಇದೆ.

ಎರಡನೇ ಶಾಸನದಲ್ಲಿಯೂ, ಮೇಲ್ಭಾಗದಲ್ಲಿ ಅರ್ಧಚಂದ್ರಾ ಕಾರವಾಗಿದ್ದು, ಮೊದಲನೇ ಶಾಸನದಲ್ಲಿ ಕಂಡುಬರುವ ಎಲ್ಲಾ ಶಿಲ್ಪಗಳೂ ಇವೆ. ಈ ಉಬ್ಬುಶಿಲ್ಪದ ಕೆಳಗಡೆ ಕನ್ನಡ ಲಿಪಿಯಲ್ಲಿರುವ ಮೂವತ್ತು ಸಾಲುಗಳ ಶಾಸನವಿದೆ. ಅಕ್ಷರಗಳ ಗಾತ್ರ, ರೂಪಗಳು ಒಂದೇ ತೆರನಾಗಿರದೇ ಕೆಲವೆಡೆ ಸ್ಪಷ್ಟವೂ ಇನ್ನು ಕೆಲವೆಡೆ ಅಸ್ಪಷ್ಟವೂ ಇದೆ. ಗಣಪತಿ, ಸರಸ್ವತಿ, ದೇವತೆಗಳ ನಮನದೊಂದಿಗೆ ಆರಂಭ ಗೊಂಡು 'ನಮಸ್ತುಂಗ' ಇತ್ಯಾದಿ ಶಿವಸ್ತುತಿಯನ್ನು ಒಳಗೊಂಡಿದೆ. ನಂತರ ಸಮಧಿಗತ ಪಂಚಮಹಾಶಬ್ಧ ಮಹಾಮಂಡಳೇಶ್ವರ, ಬನವಾಸಿ ಪುರವರಾಧೀಶ್ವರ, ಶ್ರೀ ಗೋಕರ್ಣ ಮಹಾಬಳದೇವರ ದಿವ್ಯಶ್ರೀ ಪಾದಪದ್ಮಾರಾಧಕ, ಪಶ್ಚಿಮ ಸಮುದ್ರಾಧಿಪತಿ, ಅರಿರಾಯರ ಗಂಡರ ದಾವಣಿ ಬಿರುದಾಂಕಿತ ಶ್ರೀ ವೀರಕಾವ ದೇವರಸನ ಆಳ್ವಿಕೆಯ ಸರ್ವಧಾರಿ ಸಂವತ್ಸರದ ಕಾರ್ತಿಕ ಶುದ್ಧ ಆದಿತ್ಯವಾರದ ಉಲ್ಲೇಖವಿದೆ. ಆಳ್ವಿಕೆಯ ವರ್ಷ ಸ್ಪಷ್ಟವಿಲ್ಲ. ಆ ದಿನದಂದು ವೀರಕಾವದೇವರಸನು ಗೋಕರ್ಣ ಮಹಾಬಳ ದೇವರ ಸಂವಿಧಾನದಲ್ಲಿ ಬೋರಿವಾಳ ಪರುಷೆಯ ಅಗಸ್ತ್ಯಾಶ್ರಮ ಶ್ರೀಪಾದಂಗಳ ಶಿಷ್ಯ ಶ್ರೀ ಪ್ರಕಾಶತೀರ್ಥ ಶ್ರೀಪಾದಂಗಳಿಗೆ ವಿನಾಯಕ

* ಇತಿಹಾಸ ಉಪನ್ಯಾಸಕರು, ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ಮಡಿಕೇರಿ-ಕೊಡಗು ಜಿಲ್ಲೆ

ಮತ್ತು ವಿಷ್ಣುದೇವರ ಪೂಜಾಪುನಸ್ಕಾರಗಳಿಗಾಗಿ ಕೆಲವು ಆದಾಯಗಳನ್ನು ದಾನ ಬಿಟ್ಟಿದ್ದಾಗಿ ತಿಳಿಸುತ್ತದೆ. ನಾಘೂರ ಪ್ರಭುಗಳ ಉಲ್ಲೇಖವೂ ಇದೆ. ಆದರೆ ಈ ಭಾಗದಲ್ಲಿ ಶಾಸನದ ಅಕ್ಷರಗಳು ಬಹಳ ಅಸ್ಪಷ್ಟವಿದೆ.

ಶಾಸನಗಳ ಮಹತ್ವ

ಪ್ರಸ್ತುತ ಎರಡು ಶಾಸನಗಳನ್ನು ಗಮನಿಸಿದರೆ ಇವು ಚಂದಾವರ ಕದಂಬರ ಶಾಸನಗಳೆಂಬುದು ಸ್ಪಷ್ಟವಿದೆ. ಮೊದಲ ಶಾಸನದಲ್ಲಿ ಶಿವಚಿತ್ತ ವೀರಕಾವದೇವರಸನ ಉಲ್ಲೇಖವಿದೆ ಯಾದರೆ, ಎರಡನೇ ಶಾಸನದಲ್ಲಿ ವೀರಕಾವದೇವರಸನ ಉಲ್ಲೇಖ ವಿದೆ. ಎರಡೂ ಶಾಸನದಲ್ಲಿಯೂ ಶ್ರೀ ಪ್ರಕಾಶತೀರ್ಥ ಶ್ರೀಪಾದರ ಉಲ್ಲೇಖವಿರುವುದರಿಂದ ಮತ್ತು ಇವೆರಡು ಶಾಸನಗಳ ನಡುವೆ ಸಂವತ್ಸರಗಳಲ್ಲಿ ಕೇವಲ ನಾಲ್ಕು ವರ್ಷ ಅಂತರ ವಿರುವುದರಿಂದ ವೀರಕಾವದೇವ ಮತ್ತು ಶಿವಚಿತ್ತ ವೀರಕಾವದೇವ ಒಬ್ಬನೇ ಆಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ಮೇಲಿನ ಎರಡೂ ಶಾಸನಗಳು ಮತ್ತು ಈಗಾಗಲೇ ಈತನ ಆಳ್ವಿಕೆಗೆ ಸಂಬಂಧಿಸಿದಂತೆ ದೊರೆತ ಶಿಲಾಶಾಸನಗಳ ಆಧಾರದಿಂದ ಶಿವಚಿತ್ತ ವೀರಕಾವದೇವರಸನ ಇತಿಹಾಸವನ್ನು ಈ ಕೆಳಗಿನಂತೆ ಪುನಾರಚಿಸಬಹುದು. ಈತ ಚಂದಾವರ ಕದಂಬ ಇಮ್ಮಡಿ ಶಿವಚಿತ್ತ ಬಸವದೇವರಸನ ಮಗ ಮತ್ತು ಉತ್ತರಾಧಿಕಾರಿ. ಆದರೆ ಈತ ಆಳ್ವಿಕೆ ಮಾಡುತ್ತಿರುವಾಗ ಈತನ ತಂದೆಯಾದ ಶಿವಚಿತ್ತ ಬಸವಿದೇವರಸನು ಚಂದಾವರದಿಂದ ಆಳ್ವಿಕೆ ಮಾಡುತ್ತಿದ್ದುದಕ್ಕೆ ದಾಖಲೆಗಳಿವೆ.[೧] ಇದನ್ನು ನೋಡಿದರೆ ಇವರಿಬ್ಬರ ಜಂಟಿ ಆಳ್ವಿಕೆ ಈ ಭಾಗದಲ್ಲಿದ್ದುದು ಮನದಟ್ಟಾಗುತ್ತದೆ. ಕ್ರಿ.ಶ. ೧೩೭೮ರ ಹೊತ್ತಿಗೆ ಈತನ ತಂದೆ ಬಸವೀದೇವ ಪ್ರಭಾವಶಾಲಿಯಾಗಿ ಚಂದ್ರಿಕಾಪುರದಿಂದ ಆಳ್ವಿಕೆ ಮಾಡುತ್ತಿದ್ದ ವಿಷಯವನ್ನು ಗೇರುಸೊಪ್ಪೆಯಲ್ಲಿನ ಶಾಸನ ಪ್ರಸ್ತಾಪಿಸುತ್ತಿದೆ.[೨] ಹೀಗಾಗಿ ಬಹುಶಃ ಶಿವಚಿತ್ತ ಕಾವದೇವ ರಾಜಧಾನಿ ಚಂದ್ರಿಕಾಪುರದ ವಿಷಯದಲ್ಲಿ ತನ್ನ ತಂದೆಯೊಂದಿಗೆ ಹಸ್ತಕ್ಷೇಪ ಮಾಡಿದಂತೆ ಕಂಡುಬರುವುದಿಲ್ಲ.

ಪ್ರಸ್ತುತ ಈ ಲೇಖನದಲ್ಲಿ ಚರ್ಚಿಸಿರುವ ಎರಡೂ ಶಾಸನಗಳು ವೀರಕಾವದೇವನ ಆಳ್ವಿಕೆಗೆ ಸೇರಿದ್ದು ಕ್ರಮವಾಗಿ ಕ್ರಿ.ಶ. ೧೪೦೪ ಮತ್ತು ಕ್ರಿ.ಶ. ೧೪೦೮ಕ್ಕೆ ಸರಿಹೊಂದುತ್ತದೆ. ಕ್ರಿ.ಶ. ೧೪೦೮ರ ಶಾಸನ ಈತನ ೫೯ನೇ ವರ್ಷದ ಆಳ್ವಿಕೆಯನ್ನು ಹೇಳಿರುವುದರಿಂದ ಈತ ಕ್ರಿ.ಶ. ೧೯೪೯-೫೦ರಲ್ಲಿ ಪಟ್ಟಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಈತನ ಆಳ್ವಿಕೆಗೆ ಸೇರಿದ ಉಪ್ಪಲೆಯ ಮೂರು ವೀರಗಲ್ಲು ಶಾಸನಗಳು ಸರ್ವಧಾರಿ ಸಂವತ್ಸರದಲ್ಲಿ ಹೊರಡಿಸಲ್ಪಟ್ಟಿದ್ದು ಕ್ರಿ.ಶ. ೧೩೪೯ಕ್ಕೆ ಸರಿಹೊಂದುವುದರಿಂದ ಇದು ಆತನ ಆಳ್ವಿಕೆಯ ಮೊದಲನೆ ವರ್ಷ ಎಂದು ತಿಳಿಯಬಹುದು. ಈ ಶಾಸನಗಳನ್ವಯ ನಗಿರೆಯ ಕೋಟೆಯರಸ ನಡಿಮನಾಡಿನಲ್ಲಿಯ ಕಡಿಮೆಯ ಮೇಲೆ ಆಕ್ರಮಣ ಮಾಡಿದ್ದುದರಿಂದ ಎರಡೂ ಬಣಗಳಿಗೆ ಮರವಳಿಯೂರಿನಲ್ಲಿ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಸಾತವಳಿಯ ಬಂಕೇಯ ನಾಯಕ ಮರಣವನ್ನಪ್ಪಿದನು[೪]. ಕ್ರಿ.ಶ. ೧೩೫೪ಕ್ಕೆ ಸೇರುವ ಮೊಗಟಾ ವೀರಗಲ್ಲಿನಲ್ಲಿ ಕಾವದೇವನ ಸೈನ್ಯ ವೈರಿಗಳೊಂದಿಗೆ ಹೋರಾಡುವಾಗ ಮಡಿದ ವೀರನನ್ನು ಪ್ರಸ್ತಾಪಿಸಿದೆ. ಈ ಶಾಸನ ಕಾವದೇವನ ಆಳ್ವಿಕೆಯ ಮೂರನೇ ವರ್ಷಕ್ಕೆ ಸೇರಿದ್ದಾಗಿದೆ.[೫]

ಸಾಮ್ರಾಜ್ಯ ವಿಸ್ತರಣೆಗಾಗಿ ಹೋರಾಟ

ಕ್ರಿ.ಶ ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಪಶ್ಚಿಮ ಕರಾವಳಿಯಲ್ಲಿನ ತಮ್ಮ ಸಾಮ್ರಾಜ್ಯವಿಸ್ತರಣೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಕ್ರಿ.ಶ. ೧೩೪೭ರಲ್ಲಿ ಕರಾವಳಿ ಪ್ರದೇಶದ ಮೇಲೆ ಪ್ರಾಬಲ್ಯ ಸಾಧಿಸುವುದಕ್ಕಾಗಿ ಚಂದ್ರಗುತ್ತಿಯಿಂದ ಆಳ್ವಿಕೆಮಾಡುತ್ತಿದ್ದ ವಿಜಯನಗರದ ದೊರೆ ಹರಿಹರನ ಸಹೋದರನಾಗಿದ್ದ ಮಾರಪ್ಪ ಒಡೆಯ ದಿಗ್ವಿಜಯ ಕೈಗೊಂಡನು. ಮುನ್ನುಗ್ಗಿ ಬರುತ್ತಿರುವ ಮಾರಪ್ಪನ ಸೈನ್ಯವನ್ನು ಚಂದಾವರ ಕದಂಬರ ಸೈನ್ಯ ತಡೆದಿದ್ದುದರಿಂದ ಎರಡೂ ಬಣಗಳ ಮಧ್ಯೆ ಯುದ್ಧ ಏರ್ಪಟ್ಟಿತು. ಈ ಯುದ್ಧದಲ್ಲಿ ವಿಜಯನಗರದ ಸೈನ್ಯವನ್ನು ಎದುರಿಸಲಾಗದ ಕದಂಬರ ಸೈನ್ಯ ಸೋಲನ್ನನುಭವಿಸಿತು. ಕದಂಬ ದೊರೆಯನ್ನು ಸೋಲಿಸಿದ ನಂತರ ಮಾರಪ್ಪ ಒಡೆಯ ಗೋಕರ್ಣಕ್ಕೆ ಭೇಟ್ಟಿ ನೀಡಿ ಸಮುದ್ರದಲ್ಲಿ ಸ್ನಾನ ಮಾಡಿ ಶಿವನಿಗೆ ಪೂಜೆ ಸಲ್ಲಿಸಿ, ಪಿತೃಗಳಿಗೆ ಅರ್ಪಣೆ ನೀಡಿ ಬ್ರಾಹ್ಮಣರಿಗೆ ಭೂಮಿ, ಬಂಗಾರ, ಗೋವುಗಳನ್ನು ದಾನ ನೀಡಿದನು. ಈ ಮಾಹಿತಿಯನ್ನು ನೀಡುವ ಶಾಸನದಲ್ಲಿ ಕದಂಬ ದೊರೆಯ ಹೆಸರಿನ ಪ್ರಸ್ತಾಪವಿಲ್ಲ.[೬] ಆದರೆ ಮಾರಪ್ಪ ಒಡೆಯ ಈ ಭಾಗದಲ್ಲಿ ದಿಗ್ವಿಜಯ ಕೈಗೊಂಡಾಗ ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಚಂದಾವರ ಕದಂಬ ದೊರೆ ಬಸವಿದೇವರಸನಾಗಿದ್ದನು. ಬಹುಶಃ ಈತನೇ ವಿಜಯನಗರ ಸೈನ್ಯದಿಂದ ಸೋತ ಕದಂಬ ದೊರೆಯಾಗಿರಬೇಕು. ಈ ಸೋಲಿನ ನಂತರ ಚಂದಾವರ ಕದಂಬ ದೊರೆಗಳು ಘಟ್ಟದ ಮೇಲಿನ ಸಾರ್ವಭೌಮತ್ವವನ್ನು ಕಳೆದುಕೊಂಡಿರಬೇಕು.

ನಂತರ ವಿಜಯನಗರ ಅರಸರು ತಮ್ಮ ಸಾಮಂತರಾಗಿದ್ದ ಗೇರುಸೊಪ್ಪೆ (ನಗಿರೆ)ಯ ಸಾಳ್ವರಿಗೆ ಚಂದಾವರದ ಕದಂಬರನ್ನು ಹತ್ತಿಕ್ಕಲು ಆದೇಶ ಮಾಡಿರಬಹುದು ಅಥವಾ ತಮ್ಮ ನೆರೆಯಲ್ಲಿ ಪರಮವೈರಿಯಾಗಿದ್ದ ಇನ್ನೊಂದು ಮನೆತನದ ಅಸ್ತಿತ್ವ ಸಾಳ್ವರಿಗೆ ಪರಮವೈರಿಯಾಗಿದ್ದ ಇನ್ನೊಂದು ಮನೆತನದ ಅಸ್ತಿತ್ವ ಸಾಳ್ವರಿಗೆ ಬೇಕಾಗಿರಲಿಲ್ಲ. ಹೀಗಾಗಿ ಒಂದು ಕಡೆ ಗೇರುಸೊಪ್ಪೆಯ ಸಾಳ್ವರು, ಇನ್ನೊಂದು ಕಡೆ ದಕ್ಷಿಣ ಕನ್ನಡದಲ್ಲಿ ವಿಜಯನಗರದ ಗವರ್ನರನಾಗಿದ್ದ ಮಹಾಪ್ರಧಾನ ಮಲೆಯ ದಂಡನಾಯಕ[೭] ಚಂದಾವರ ಕದಂಬರ ಪ್ರಾಬಲ್ಯಕ್ಕೆ ಬಲವಾದ ಪೆಟ್ಟುಕೊಡಲು ಪ್ರಾರಂಭಿಸಿದರು. ಇಂತಹ

ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಹೈವೆ-೫೦೦ರ ಭಾಗದ ಮೇಲೆ ತಂದಾವರ ಕದಂಬರು ಹಿಡಿತ ಇಟ್ಟುಕೊಂಡಿದ್ದಕ್ಕೆ ನಾಗೂರಿನಲ್ಲಿ ದೊರೆತ ಪ್ರಸುತ್ತ ಶಾಸನಗಳು ಆಧಾರ ಒದಗಿಸುತ್ತವೆ. ಈ ಶಾಸನದನ್ವಯ ಶಿವಚಿತ್ತ ವೀರಕಾಮದೇವರಸನು ಗೋಕರ್ಣ ಮಹಾಬಳದೇವರ ಸನ್ನಿದಾನದಲ್ಲಿ ಬೋರಿವಾಳ ಪರಿಷೆಯ ಅಗಸ್ತ್ಯಾಶ್ರಮ ಶ್ರೀಪಾದಂಗಳ ಶಿಷ್ಯ ಶ್ರೀಪ್ರಕಾಶ ತೀರ್ಥಶ್ರೀಪಾದಗಳಿಗೆ ವಿನಾಯಕ ಮತ್ತು ವಿಷ್ಣುದೇವರ ಪೂಜೆ-ಪುನಸ್ಕಾರಗಳಿಗಾಗಿ ಕೆಲವು ದತ್ತಿ ಬಿಟ್ಟಿದ್ದಿದಾಗಿ ತಿಳಿಸಿದೆ. ಹೀಗೆ ವಿಜಯನಗರ ಮತ್ತು ಅವರ ಮಾಂಡಲಿಕರ ಪ್ರಭಾವದ ಮಧ್ಯೆಯೂ ತನ್ನ ಪ್ರಾಬಲ್ಯವನ್ನು ಮುಂದುವರಿಸಿಕೊಂಡು ಬಂದು ಹಲವಾರು ಕೊಡುಗೆಗಳನ್ನು ನೀಡಿದ ಕೀರ್ತಿ ಶಿವಚಿತ್ತ ವೀರಕಾವದೇವರಸನಿಗೆ ಸೇರುತ್ತದೆ.

ನಾಗೂರು ವಿಷ್ಣು ದೇವಾಲಯದ ಬಲಬದಿಯಲ್ಲಿರುವ ಶಾಸನ ಸಂಖ್ಯೆ-೧

೧ ಶ್ರೀ ಗಣಾಧಿಪತಎ ನಮಃ।। ನಮಃಸ್ತುಂಗ ಶಿರಸ್ತುಂಗ ಚಂದ್ರಚಾಮರ
೨ ತಾರಾಯೋತ್ರೈಲೋಕ್ಯಾಬಿ ನಗರಾರಂಭಂ ಮೂಲಸ್ಥಂಭಾಯ ಸಂಭ
೩ ವೇ।।೦ ಸ್ವಸ್ತಿ ಸಮಧಿಗತ ಪಂಚಮಹಾಸಬ್ಧ ಮಹಾಮಹೇಶ್ವರಂ ಬನ
೪ ವಾಸಿ ಪುರವರಾಧೀಶ್ವರಂ ಜಯಂತಿಮಧುಕೇಶ್ವರ ದೇವರ ಲಬ್ಧವರ ಪ್ರಸಾ
೫ ದಂ ಹರಧರಣೀ ಪ್ರಸೂತ ಮುಕ್ಕಣ್ಣ ಕದಂಬ..... ರಾಯಮಣಿಮ
೬ ಕುಡಚೂಡಾಮಣಿ ಪಶ್ಚಿಮ ಸಮುದ್ರಾಧಿಪತಿ ದೀನಾನಾಥ ಸಮುದ್ಧರಣ ಹುಸಿವರ
೭ ಸೂಲ ನಿಷ್ಕಳಂಕಮಲ್ಲ ಸತ್ಯಪ್ರತಾಪ ಚಕ್ರವರ್ತ್ತಿ ಶ್ರೀ ಗೋಕರ್ಣ ಮಹಾಬಳೇಶ್ವರ
೮ ದೇವರ ದಿಬ್ಬ ಶ್ರೀವಾದಪದ್ಮಾರಾಧಕರುಪುಪ್ಪ ಶಿವಚಿತ್ತವೀರಕಾವದೇ
೯ ವರ್ಸರು ರಾಜ್ಯವ ಪ್ರತಿಪಾಲಿಸುವ ೫೯ ತಾರಣ ಸ[೦]ವಛರದ ಕಾರ್ತಿಕ ಸು.೧ ಆದಿವಾರದಂ
೧೦ ದು ನಾಘೂರದ ೧೧ ಮಾನಿಸ ಪ್ರಭುಗಳು ತಂಮೊಳೇಕಸ್ತವಾಗಿ ಶ್ರೀ ವಿನಾಯಕದೇವರ
೧೧ ರ ಶ್ರೀ ವಿಷ್ಣುದೇವರ ಷಾ[ಪಾ]ಲೆಯ ದೇವರಿಗೆ ಬಹಾಯ ಸುಂಕ ದೊಮ್‌ಮಾನದ ವೊಳಗೆ ಬಹಂತ
೧೩ ಡು ಭಾಗಯಾಯವನೂ ಹೊಂನರೊಳಗೆ ಬಹಂತಹಯಾ
೧೪ ಯಾವೊಂದು ಭಾಗ ವಿಷ್ಣು ದೇವರಿಗೆ ವೊಂದುಭಾಗ ವಿನಾಯ್ಕ[ಪಾ)ಲಿಗೆ ಯಿಂ
೧೫ ಲೇ ಎರಡು ಭಾಗವನುನೊ ಬೋರಿವಾಳ ಪರಿಸೆಯ ಪ್ರಕಾಸತೀರ್ಥಶ್ರೀ
೧೬ ಪಾದಂಗಳಿಗೆ ಯೀಮರ್ಯ್ಯಾದಯ ಪಾದ [ಸಸಿಗೆರ್ಶಾ?] ಧಾರಾ ಪೂರ್ರ್ಯವಾಗಿ ಕೊಟ್ಟ
೧೭ ರು ವಿನಾಯಕ ದೇವರ ವಿಷ್ಣುದೇವರ ಸಾಂತಿಗೀ ಗಣಪತ....
೧೮ ವನಮೇಲೆ ಲೋಕಿಮ ಖ.....ರಿಕೆಯ ಎಮಡಿಕೆ.....ಡುಗ ಅನ್ತು ಶಾಂಟ
೧೯ ತಿಗೆ ಗಳ ಯಾತಮೆಯ ಗಡಿ ಬಡಗ[ದ] ಸಯಲಿಯಾಮಬಾಳ [೩] .....ಗಡಿತೆಂಕದೆಸ
೨೦ ಯಲ್ಲಿಕ್ಕಿದ ಕಲಿಂದ ಮೇಲೆ ಪಡುವಲುಯೂಲಿಯ ಹ.....ಉ ದಾರಿಯಂ
೨೩ ದ ಮೇಲೆ ಯಿಂದ ....ವೊಳಗಣಯಾತಿದ
೨೨ ಮೇಲ ಗುಂಡಿಯ ಮಾರಿದ ಕಡಿನನೀರುಂಬ ಬಯಲು .....ಂಡಿವೋದ ಬಯ
೨೩ ಲು ಸಹಿತ ತೆಂಕಲು ಸೋಗೆ[ಕಾ] ಯ ಬಯಲು ಸಹಿತ ಹರಿವ .:....ಕೂಡಲ
೨೪ ಳ ಬಡಗಲು ......ಕೂ
೨೫ ....ಗೊಳ ಬಯಲೊಳಗೆ ವಿನಾಯ[ಕ] ದೇವರಿಗೆ [೫?] ಮೂಡೆ ವಿಷ್ಣು ದೇವರಿಗೆ ೫ ಮೂಡೆಯಿ
೨೬ ಂತೀಸುವ [ವೀರ] ಕಾವದೇವರು ಧಾರಾಪೂರ್ವ್ವವಾಗಿ ಕೊಟ್ಟರು ಶ್ರೀ ವೀರಕಾವದೇವರ್ಸರು
೨೭ ಗ್ರಹಣಕಾಲದಲ್ಲಿ ಶ್ರೀ ಮಹಾಬಳದೇವರ ಮುಂದೆ ಶ್ರೀ ......
೨೮ ವರಿಗೆ ನಯವೇದ್ಯ ನಂದಾವೆಳಗ .....ಧಾರಾ ಪೂರ್ವ್ವವಾಗಿಹ
೨೯ ಗದ್ಯಾಣ ೧೦
೩೦ ವೇಗ ೩
೩೧ ಹೆಬ್ಬಾರು ೨೨ಯಿಂತು .....ಮೇ ಗ. ೧೦
೩೨ ....ಧರ್ಮ್ಮ್ಯಯಿ...ವ ಪುತಿವಾಳಿ
೩೩ ಕುರುಕ್ಷೇತ್ರದೊಳಗೆ ೧೦೦ ಕಿವೆತೆ ಬ್ರಾಹ್ಮ

೩೪ ಯಿ ಧರ್ಮ್ಮವನು। ಭೂಮಿಯ.....
ಮುಂದಿನ ಭಾಗ ಹಾಳಾಗಿದೆ.

ನಾಗೂರು ವಿಷ್ಣುದೇವಾಲಯದ ಎಡಬದಿಯಲ್ಲಿರುವ ಶಾಸನ ಸಂಖ್ಯೆ-೨

೧ <◇> ಶ್ರೀಗಣಾಧಿಪತಏನಮಃ।। ಶ್ರೀ ಸರಸ್ವತ್ಯಾಯ ನಮಃ।।
೨ ನಮಸ್ತುಂಗ ಸಿರಸ್ತುಂಗ ಚಂದ್ರಾಚಾಮರಚಾರವೇ ತ್ರೈಲೋಕ್ಯ
೩ ನಗರಾಂಭ ಮೂಲಸ್ತಂಭಾಯ ಸಂಭವೇ।। ಸ್ವಸ್ತಿ ಸಮಧಿ
೪ ಗತ ಪಂಚ ಮಹಾಸಬುದ ಮಹಾಮಹೇಶ್ವರ ಬನವಾಸಿಪುರವ
೫ ರಾಧೀಸ್ವರ ಶ್ರೀ ಗೋಕರ್ಣ್ನ ಮಹಾಬಳದೇವರ ದಿಬ್ಬ ಶ್ರೀಪಾದಪದ್ಮಾ
೬ ರಾಧಕಂ ಪಶ್ಚಿಮ ಸಮುದ್ರಾಧಿಪತಿ ಯರಿರಾಯರ
೭ ಗಂಡರದಾವಣಿ ಶ್ರೀ ವೀರಕಾವದೇವರ್ಸರು ರಾಜ್ಯವ ಪ್ರತಿಪಾಳಿಸು
೮ ......ನೆಯ ಸರ್ಬ್ಬಧಾರಿ ಸಂವತ್ಸರದ ಕಾರ್ತ್ತಿಕ ಸು
೯ ದಿವಾರದಂದು ಶ್ರೀವೀರಕಾವರ್ಸರು ....ಶ್ರೀಗೋಕ
೧೦ [ರ್ಣ್ನ] ಮಹಾಬಳದೇವರ ಸಂನಿಧಾನದಲಿ ದೇವರ
೧೧ ....ದಿಂ ಬೋರಿವಾಳ ಪರುಷೆಯ ಅಗಸ್ತ್ಯಾಶಮ ಶ್ರೀಪಾದಂ
೧೨ ಗಳ ಶಿಷ್ಯ ಶ್ರೀ ಪ್ರಕಾಶತೀರ್ಥ ಶ್ರೀಪಾದಂಗಳಿಗೆ [ಪುಜ್ಯಾ]
೧೩ ಹ ಪ್ರಭುಗಳು ಸ.....ಮಾನಾಗಿ ವಿನಾಯ್ಕನ ಶ್ರೀವಿಷ್ಣುದೇವ
೧೪ ರ........
೧೫ ....
೧೬ ....
೧೭ ವಂತಾಗಿ ನಾಘೂರ [ಪ್ರ]ಭುಗಳ
೧೮ ....ನಡಸುವಂತಾಗಿ ಶ್ರೀ ....ಸಂನಿಧಿಯಾ
೧೯ ಳು ....
೨೦ ....ಗ್ರಹಣ ಕಾಲದಲಿ*

* (ಶಾಸನದ ಪಾಠವನ್ನು ಓದಲು ಸಹಕರಿಸಿದ ಡಾ. ಶ್ರೀನಿವಾಸ ಪಾಡಿಗಾರ ಇವರಿಗೆ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ನಂ೬, ನಂ. ೭೮, ಪು.೨೪೩-೪೫, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೨. ಎಂ.ಎ.ಆರ್. ೧೯೨೮, ನಂ.೧೦೮
೩. ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಆ್ಯಂಡ್ ಕಾಫರ್ ಪ್ಲೇಟ್ ಇನ್‌ಸ್ಕ್ರಿಪ್ಷನ್ಸ್ (೧೯೪೦-೪೩) ನಂ. ೨೫, ೨೬, ೨೭, ಕನ್ನಡ ಸಂಶೋಧನ ಸಂಸ್ಥೆ, ಕೆ. ವಿ. ವಿ. ಧಾರವಾಡ
೪. ಅದೇ.
೫. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ನಂ.೬. ನಂ೭೬, ಪು.೨೪೧-೪೩, ಕೆ.ವಿ.ವಿ. ಧಾರವಾಡ
೬. ಎಂ.ಎ.ಆರ್., ೧೯೨೯, ಪು. ೧೭೧
೭. ಸೂರ್ಯನಾಥ ಕಾಮತ್., ಉತ್ತರ ಕನ್ನಡ ಜಿಲ್ಲಾ ಗ್ಯಾಜಿಟಿಯರ್, ಪು. ೧೨೨.

ವ್ಹಿ.ಬಿ. ಉಗಲಾಟ*

ಹೆಗ್ಗೂರಿನ ಚಾಳುಕ್ಯ ಜಗದೇಕಮಲ್ಲನ ಹೊಸ ಶಾಸನ

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಹೆಗ್ಗೂರು ಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆಯಾದ ಏಳು ಹಳ್ಳಿಗಳಿರುವ ಂದ ಎತ್ತರದ ಪ್ರದೇಶ. ಇಂದು ನಡುಗಡ್ಡೆಯ ಹಾಗೆ ಕಾಣುತ್ತದೆ. ಳೆಗಾಲದಲ್ಲಿ ಈ ಪ್ರದೇಶ ಸಂಪೂರ್ಣ ಮುಳುಗಿ ಹೋಗಿರುತ್ತದೆ. ೇಸಿಗೆಯಲ್ಲಿ ಕೃಷ್ಣಾನದಿ ನೀರು ಸುತ್ತುವರಿದಿರುತ್ತುದೆ. ಈ ಗ್ರಾಮದ ನತೆಗೆ ಹೊಸ ವಸತಿ ನೆಲೆಯನ್ನು ಬೀಳಗಿಯ ಪಕ್ಕದಲ್ಲಿ ೂಡಲಾಗಿದೆ. ಮುಳುಗಡೆಯಾದ ಪ್ರದೇಶದಲ್ಲಿ ಈಚೆಗೆ ಚಾಲುಕ್ಯ ಅರಸು ಜಗದೇಕಮಲ್ಲ ಜಯಸಿಂಹನ ಶಿಲಾಶಾಸನವು ದೊರೆತಿದೆ. ್ಯಾನಪ್ಪ ದೇವಾಲಯದ ಕಟ್ಟಡಕ್ಕೆ ಈ ಶಾಸನದ ಕಲ್ಲನ್ನು ಬಳಸಿದ್ದರು. ಈ ಗೋಡೆ ಬಿದ್ದ ಕಾರಣ ಅದರಲ್ಲಿದ್ದ ಈ ಶಾಸನ ಬೆಳಕಿಗೆ ಬಂದಿದೆ.

ಹೆಚ್ಚು ಕಡಿಮೆ ತ್ರಿಕೋನಕಾರದಲ್ಲಿರುವ ಚಪ್ಪಟೆಯಾದ ಮುಖದಲ್ಲಿರುವ ಈ ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಸಂಕೇತ, ಶಿವಲಿಂಗ, ಮಲಗಿರುವ ನಂದಿ, ಕತ್ತಿ ಮತ್ತು ಆಕಳಿನ ರೇಖಾಚಿತ್ರ ಇವೆ. ಅಸಮಗಾತ್ರದ ೨೦ ಸಾಲುಗಳಲ್ಲಿ ಕ್ರಿ.ಶ. ೧೧ನೇ ಶತಮಾನದ ಮಧ್ಯಾವಧಿಯ ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಶಾಸನವನ್ನು ಬರೆದಿದ್ದಾರೆ.

ಶಾಸನದ ಪಠ್ಯ

೧ ಸ್ವಸ್ತಿ ಸಮಸ್ತ ಭುವನಾಶ್ರಯ
೨ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾ
೩ ಜ ಪರಮೇಶ್ವರ ಪರಮಭಟ್ಟಾರ
೪ ಕ ಸತ್ಯಾಶ್ರಯ ಕುಳತಿಳಕ ಚಾಳು
೫ ಕ್ಯಾಭರಣ ಶ್ರೀಮಜ್ಜ ಗದೇಕಮಲ್ಲ ದೇ
೬ ವರ ವಿಜಯರಾಜ್ಯಾಭಿವೃದ್ಧಿ ಪ್ರ[ವ]ರ್ಧ ಮಾ
೭ ನಮಾಚಂದ್ರಾರ್ಕತಾರಂಬರಂ ಸಲುತ್ತಮಿರೆ
೮ ತತ್ಪಾದಪದ್ಮೊಪಜೀವಿ ಸಮಧಿಗತ ಪಂ
೯ ಚಮಹಾಸಬ್ದ ಮಹಾಸಾಮನ್ತ ರಿಪುಬಳಕ್ರಿತಾ
೧೦ ನ್ತಂ ರಣಮೂರ್ಖ್ಖವಂಶೋದ್ಭವಂ ಸಿಂಗನ ಬಂಣ್ಣ ಶ್ರೀ ಮದಾ
೧೧ ಯ್ತುವರ್ಮ್ಮರಸಂ ಸಕವರ್ಷ ೯೪[೬]ನೆಯ ರಕ್ತಾಕ್ಷಿ

ಈ ಶಾಸನವು ಕಲ್ಯಾಣದ ಚಾಳುಕ್ಯ ಅರಸ ಜಗದೇಕಮಲ್ಲ ಮೊದಲನೇ ಜಯಸಿಂಹನ ಕಾಲದಲ್ಲಿ ಬರೆಯಿಸಲಾಗಿದೆ. ಅವನ ಮಹಾ ಸಾಮಂತನಾದ ರಣಮೂರ್ಖ ವಂಶದ ಆಯ್ತು ವರ್ಮರಸನು ಪೆರ್ಗಿಱುವದ ಅಂದರೆ ಈಗಿನ ಹೆಗ್ಗೂರಿನ ರೆಬ್ಬಲೇಶ್ವರ ದೇವರಿಗೆ ಭೂದಾನ ನೀಡಿದ ವಿಷಯವನ್ನು ಒಳಗೊಂಡಿದೆ.ಇದಲ್ಲದೇ ಅದೇ ಊರಲ್ಲಿದ್ದ ಸುಂಬಳೇಶ್ವರ, ಹೊಲೇಶ್ವರ ಮತ್ತು ಲೋಕೇಶ್ವರ ದೇವರುಗಳಿಗೆ ಕೊಟ್ಟ ಭೂದಾನದ ವಿವರಗಳು ಕೂಡ ಈ ಶಾಸನದಲ್ಲಿವೆ. ಈ ದಾನವನ್ನು ಸ್ವೀಕರಿಸಿದ ವಾದಿಘಂಟಪಂಡಿತದೇವನ ಉಲ್ಲೇಖವೂ ಅದರಲ್ಲಿದೆ. ಈ ಶಾಸನ ಹೊರಡಿಸಿದ ಕಾಲ ಶಕವರ್ಷ ೯೪೬, ರಕ್ತಾಕ್ಷಿ ಸಂವತ್ಸರದ ಪುಷ್ಯ ಶುದ್ಧ ಪಂಚಮಿ ಗುರುವಾರ ಉತ್ತರಾಯಣ ಸಂಕ್ರಾಂತಿ, ಈ ವಿವರ ಡಿಸೆಂಬರ್೮, ಕ್ರಿ.ಶ. ೧೦೨೪ಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿಯ ಕೆಲವು ವಿಷಯಗಳನ್ನೊಳಗೊಂಡ ಇದೇ ಕಾಲದ ಇನ್ನೊಂದು ಶಾಸನವನ್ನು ೧೯೨೮-೨೯ರಲ್ಲಿ ಭಾರತೀಯ ಪುರಾತತ್ವ ಇಲಾಖೆಯ ಶಾಸನಶಾಸ್ತ್ರ ವಿಭಾಗದವರು ಹೆಗ್ಗೂರಿನಲ್ಲಿ ಗಮನಿಸಿದ್ದರು. (ARSIE 1928-20, B.K. No. 80; SII Vol..... No. 62) ಈಗ ದೊರೆತಿರುವ ಶಾಸನದಲ್ಲಿ ಹೆಚ್ಚು ವಿವರಗಳಿವೆ. ಹೀಗಾಗಿ ಇದೊಂದು ಮಹತ್ವದ ಶಾಸನವಾಗಿದೆ. *



* ಇತಿಹಾಸ ಉಪನ್ಯಾಸಕರು, ಎಸ್.ಕೆ.ಪಿ.ಯು. ಕಾಲೇಜ್, ಹೊಳೆಆಲೂರ.

೧೨ ಸಂವತ್ಸರದ ಪುಷ್ಯ ಸುದ್ಧ ೫ ಮಿ ಬ್ರಿಹಸ್ಪತಿ ವಾರ ಮು
೧೩ ತ್ತರಾಯಣ ಸಂಕ್ರಾಂತಿಯೊಳ್ ಪೆರ್ಗ್ಗಜುವದ ರೆಬ್ಬಲೇಸ್ವರಂ[ಗೆ]
೧೪ ಬಿಟ್ಟ ಭೂಮಿ ಮತ್ತ ೨೪ ಆ ಬಳಿಯ ಚತ್ರಕ್ಕೆ ೪
೧೫ . . . ೯ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸು
೧೬ ನ್ಧರಾ ಷಷ್ಠಿರ್ ವರ್ಷ ಸಹಶ್ರಾಣಿ ವಿಷ್ಠಾಯಾಂ ಜಾಯತೇ ಕ್ರಿ ಮಿ
೧೭ ಸುಂಬಳೇಸ್ವರ ದೇವರ್ಗೆ ಮತ್ತರು ೬ ಹೊಲೇಸ್ವರಕ್ಕೆ ೬
೧೮ ಲೋಕೇಸ್ವರ ದೇವರ್ಗೆ ಮತ್ತರು ೬ ಸರ್ವ್ವಸ್ವ ದಾನಂಮಾಡಿ
೧೯ ಬಲದೇಜ಼ಿ ಕೊಟ್ಟದು ವಾದಿಘಣ್ಣಪಂಡಿತರ
೨೦ ಕಾಲಂಕಜ್ಚಿ ಧಾರೆಯ ಕೊಟದು ೪೧ ಮತ್ತರು

* (ಡಾ. ಶ್ರೀನಿವಾಸ ಪಾಡಿಗಾರ, ಪ್ರವಾಚಕರು ಮತ್ತು ಅಧ್ಯಕ್ಷರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕ.ವಿ.ವಿ., ಧಾರವಾಡ. ನನ್ನ ವಿದ್ಯಾಗುರುಗಳು, ಲೇಖನ ರಚಿಸಲು ಮಾರ್ಗದರ್ಶನ ನೀಡಿದವರು. ವ್ಹಿ. ಎಸ್. ತಳೇವಾಡ, ಕನ್ನಡ ಉಪನ್ಯಾಸಕರು, ಎಸ್.ಕೆ.ಪಿ. ಯು. ಕಾಲೇಜ್, ಹೊಳೆ ಆಲೂರ,ಶಾಸನ ಪತ್ತೆ ಹಚ್ಚಲು ನೆರವು ನೀಡಿದವರು. ಹೆಗ್ಗೂರಿನ ರುದ್ರಪ್ಪ ಇಟಗಿ, ಕೊಪ್ಪದ ವಿಠಲ ತೆಲಗಿ, ನಡುಗಡ್ಡೆಯಾಗಿರುವ ಈ ಸ್ಥಳಕ್ಕೆ ಹೋಗಬೇಕಾದರೆ ಮೀನುಗಾರರ ಬುಟ್ಟಿಯಲ್ಲಿ ಶಾಸನವಿರುವ ಸ್ಥಳಕ್ಕೆ ಕರೆದುಕೊಂಡು ಹೋದವರು. ಇವರಿಗೆಲ್ಲ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.)

ಸಂತೇಬೆನ್ನೂರು ಸುಮತೀಂದ್ರ ನಾಡಿಗ್*

ಚನ್ನಗಿರಿ ತಾಲ್ಲೂಕಿನಲ್ಲಿ ಈಚೆಗೆ ದೊರೆತ ಹೊಯ್ಸಳರ ಒಂದು ಶಾಸನ

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಉಬ್ರಾಣಿ ಹೋಬಳಿ ಬಸಾಪುರದ ಬಳಿ ಇರುವ ಏಕತಲೆಗುಡ್ಡದಲ್ಲಿರುವ ವೀರಭದ್ರ ದೇವಸ್ಥಾನದ ಎದುರಿಗೆ ಒಂದು ಸುಸ್ಥಿತಿಯಲ್ಲಿರುವ ಶಿಲಾಶಾಸನ ಇರುವುದು ಈಚೆಗೆ ನನ್ನ ಗಮನಕ್ಕೆ ಬಂದಿತು. ಈಗ ಜನವಾಸವಾಗದಿರುವ ಕಾಡುಗಿಡಗಳ ಪೆಳೆಗಳ ಮಧ್ಯೆ ಈ ಶಾಸನ ಇರುವುದರಿಂದ ಅದು ಶಾಸನತಜ್ಞರ ಕಣ್ತಪ್ಪಿಸಿ, ಈವರೆವಿಗೆ ಪ್ರಕಟವಾಗದೆ ಉಳಿದಿದೆ.

ಈ ಶಿಲಾಶಾಸನ ೬' ಉದ್ದ, ೨೧/೪' ಅಗಲವಿದ್ದು ಶಾಸನದ ಮೇಲ್ಭಾಗದ ವೃತ್ತಾಕಾರದಲ್ಲಿ ಸೂರ್ಯ, ಚಂದ್ರ, ಶಿವಲಿಂಗ, ನಂದಿ, ಹಸು-ಕರುಗಳನ್ನು ಬಿಡಿಸಿದ್ದು, ಅವೆಲ್ಲಾ ಈಗ ಮುಕ್ಕಾಗಿವೆ. ಶಾಸನ ೬೦ ಸಾಲುಗಳಲ್ಲಿದ್ದು, ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ.

ಶಾಸನದಲ್ಲಿ ಉಲ್ಲೇಖಿಸಿರುವಂತೆ ಈ ಶಾಸನವನ್ನು ಶಾಲಿವಾಹನ ಶಕ ೧೧೨೦ನೇ ಕಾಳಾಯುತ್ತಿ ಸಂವತ್ಸರದ ಶ್ರಾವಣ ಶುದ್ಧ ಪ್ರತಿಪದೆ ಸೋಮವಾರ, ಉತ್ತರಾಯಣ, ಸಂಕ್ರಮಣ ಕಾಲದಂದು ಹೆಗ್ಗುಂದಲೆಯ ಬಲ್ಲೇಶ್ವರ ದೇವರ ರಂಗಭೋಗ, ತ್ರಿಸಂಧ್ಯ ಪೂಜೆ, ನೈವೇದ್ಯಕ್ಕೆಂದು ಹೊಯ್ಸಳ ವೀರಬಲ್ಲಾಳನ ನಾಡಗಾವುಂಡ, ಮಾಚಗಾವುಂಡನ ಸಾಮಂತ ಬಲ್ಲಾಳನೆಂಬುವನು, ೧ ಮತ್ತರು, ೫೦ ಕಂಭ ಅಳತೆಯ ಭೂಮಿಯನ್ನು ದತ್ತಿ ಬಿಟ್ಟದ್ದನ್ನು ತಿಳಿಸುತ್ತದೆ. ಎಫಿಮರೀಸ್ ದಾಖಲೆಯಂತೆ ಶಾಸನದ ಕಾಲ ೧೦-೭-೧೧೯೮ಕ್ಕೆ ಸರಿಹೊಂದುತ್ತದೆ.

ಈ ಶಾಸನದಿಂದ ಕೆಳಕಂಡ ಅಂಶಗಳು ತಿಳಿದುಬರುತ್ತದೆ.

೧. ಈ ಶಾಸನದಲ್ಲಿ ಉಲ್ಲೇಖಿಸಿರುವ ವಂಶಾವಳಿ ವಿವರ, ಉಪಯೋಗಿಸಿದ ಭಾಷೆ, ಲಿಪಿ ಇತ್ಯಾದಿಗಳು ಹೊಯ್ಸಳ ವೀರಬಲ್ಲಾಳನ ಇತರ ಶಾಸನಗಳಿಗೂ, ಇದಕ್ಕೂ ಹೊಂದಾಣಿಗೆ ಆಗಲಿರುವುದರಿಂದ ಇದೊಂದು ನೈಜ ಶಾಸನವಾಗಿದೆ.

೨. ಈ ಶಾಸನದಲ್ಲಿ ಉಲ್ಲೇಖಿಸಿರುವಂತೆ ಹೆಗ್ಗುಂದಲೆಸ್ಥಳ, ಈ ಬೆಟ್ಟಕ್ಕೆ ಕರೆದಿರುವ ಹೆಸರೇ ಆಗಿರುತ್ತದೆ. ದೊರೆ ಬಲ್ಲಾಳನ ಹೆಸರಿನಲ್ಲಿ ಇಲ್ಲಿ ಈಶ್ವರ ದೇವಸ್ಥಾನ ನಿರ್ಮಿಸಿ, ಬಲ್ಲೇಶ್ವರ ದೇವಸ್ಥಾನ ಎಂದು ಕರೆದಿರಬಹುದು.

೩. ಇಲ್ಲಿ ಈಗ ಮೂಲ ಈಶ್ವರ ದೇವಾಲಯ ಇಲ್ಲ. ಹಳೆಯ ದೇವಸ್ಥಾನ ಕಾಲಾಂತರದಲ್ಲಿ ಬಿದ್ದು ಹೋಗಿದ್ದು, ಅದರ ಪಳೆಯುಳಿಕೆಯಾಗಿ ಈ ಸ್ಥಳದ ಸುತ್ತಮುತ್ತ ಅನೇಕ ಭಿನ್ನವಿಗ್ರಹಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಾಗರಕಲ್ಲುಗಳು, ಬಸವ, ಗಣಪತಿ, ಭೈರವ, ಮಹಿಷಾಸುರಮರ್ದಿನಿ, ಷಣ್ಮುಖ, ದುರ್ಗಿ, ಗುಂಡಬ್ರಹ್ಮಯ್ಯರ ವಿಗ್ರಹ ಮುಂತಾದವುಗಳು ಮತ್ತು ದೇವಾಲಯಕ್ಕೆ ಉಪಯೋಗಿಸಿದ ಕುಸುರಿ ಕೆಲಸದ ಕೆತ್ತನೆಯ ಕಲ್ಲುಗಳು ಚದುರಿದಂತೆ ಅಲ್ಲಲ್ಲಿ ಬಿದ್ದಿವೆ.

೪. ಶಾಸನ ಅಲಕ್ಷಿತ ತಾಣದಲ್ಲಿದ್ದು, ಬಹಳಷ್ಟು ಅಕ್ಷರಗಳು ಸವೆದು ಹೋಗಿರುವುದರಿಂದ ಸರಿಯಾದ ಶಾಸನದ ಪ್ರತಿ ತೆಗೆಯುವುದು ಕಷ್ಟವಾಗಿದೆ. ಹಾಗಾಗಿ ಶಾಸನದ ಪೂರ್ಣ ವಿವರಣೆ ಕೊಡುವುದು ಇಲ್ಲಿ ಸಾಧ್ಯವಾಗುತ್ತಿಲ್ಲ. ಈ ಶಾಸನದಲ್ಲಿ ಪ್ರಭುವಿನ ವರ್ಣನೆಗೇ ಹೆಚ್ಚು ಮಹತ್ವ ಕೊಡಲಾಗಿದೆ.

೫. ಈ ಹೊಸ ಶಾಸನದ ಪತ್ತೆಯಿಂದ ಈವರೆವಿಗೆ ಹೊಯ್ಸಳರ ಕಾಲದ ೧೧ ಶಾಸನಗಳು, ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಂತಾಗಿದ್ದು, ದಾವಣಗೆರೆ ಜಿಲ್ಲೆಯಲ್ಲಿ ಈವರೆಗೆ ದೊರೆತ ಹೊಯ್ಸಳರ ೪೫ನೇ ಶಾಸನವಿದಾಗಿದೆ. *

ಶಾಸನದ ಪಾಠ

೧ ಶ್ರೀ ಓನಮಃಶಿವಾಯ॥ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಳೋಕ್ಯ ನಗರಾ
೨ ರಂಭ ಮೂಲಸ್ತಂಭಾಯ ಶಂಭವೇ। ಸ್ವಸ್ತಿ ಸಮಧಿಗತ ಪಂಚಾಮಹಾಶ
೩ ಬ್ದಮಹಾಮಂಡಳೇಶ್ವರಂ ದ್ವಾರಾವತಿ ಪುರವರೇಶ್ವರ ಯಾದವ ಕುಳಾಂಬರದ್ಯುಮಣಿ
೪ ಸಂಯುಕ್ತ ಚೂಡಾಮಣಿ ಮಲಪರೂಳು ಗಂಡ.......
೫ ಯ ಶೌಚ ಗಾಂಗೆಯ ಕ್ಷತ್ರ ಧರ್ಮ್ಮನಿರ್ಮ್ಮಳ ಪರಪೂರ್ಣ್ಣಾರ್ಣ್ಣವಂ ಕದನೈಕ ಭೈರವಂ ಚೋ(ಳಕಟಕಸೂ)

* ವರದಿಗಾರ, ಪ್ರಜಾವಾಣಿ ದೈನಿಕ, ಸಂತೇಬೆನ್ನೂರು - ೫೭೭ ೫೫೨, ದಾವಣಗೆರೆ ಜಿಲ್ಲೆ

೬ ರ್ಪ್ವ ಕಾಜಿ ರಣರಂಗಧೀರ ಬಿರುದ ಮಂಡಳಿಕ ತುರಹಂಕ ಕಂಠೀರವಂ ವೈರಿ ಮಂಡಳಿಕ ಚಾತುರ್ವ್ವರಣ-
೭ ಖಾಂಡವ ಪಾಂಡವನ... ಸಮಸ್ತ ಲೋಕಯಾನ ಶ್ರೀ ಪುರುಷೋತ್ತಮದೇವರ ಶ್ರೀ ಪಾದಾಂಬುದಭೃಂಗ ಸಾಹಸೋತ್ತುಂಗಬಾ
೮ . . . ಬವ. . ಪ್ರ . . ದಾನೇಕ ನಾಮಾದಿಪ್ರಶಸ್ತಿ ಸಹಿತಂ ಶ್ರೀ ಮನುಮಹಾಮಂಡಳೇಶ್ವರಂ ತ್ರಿಭು
೯ ವನಮಲ್ಲ ವೀರಗಂಗವಿಷ್ಣುವರ್ದ್ಧನ ಹೊಯ್ಸಳದೇವರ ಕಾನೂರ್ಜ್ಜನದೂಡೆಯ ಕೆಂದೆಡೆ ।।ವಿ।। ದಾರದೂಳು ಬ
೧೦ ದುಜಿದಿ...ಂದರಿ...ತ ಕೂ...ಯ್ಯ...ನಿಂ...ದರ್ತ್ಥಿ ಪ್ರವರಕ್ಕೆ ವಾರವನಿತಾನಿಕ್ಕ ಗಂಭೀರ...ಗರ
೧೧ ನೆಪ್ಪಿ ನರಸಿಂಹನಾ...ಲೆಯ...ಯಲು ಸಾ.ಸಲು ಬಲ್ಲನಾಹಾಪುತ್ರಂ ಹ . ತ್ರ ನಾ------ದ್ಮ
೧೨ ಂಸುತ . ನಂದದೇವಣ್ಣ ಪಂ।। ತೆದಾತ್ಮಜ ಸ್ವಸ್ತಿಶ್ರೀ ಮನ್ಮಹಾಮಂಡಳೇಶ್ವರಂ ತಳಕಾಡು ಗಂಗವಾಡಿ ನೊಳಂಬವಾಡಿ
೧೩ ಬನವಾಸೆ ಹಾನುಂಗಲ್ಲು . . . ನು . . . ಹಲಸಿಗೆ ಬೆಳುವಲಪುಟ್ಟು . . . ಮೆ . . . ದಭುಜಬ
೧೪ ಳವೀರಗಂಗನ ಸಹಾಯಶೂರ ಶನಿವಾರ ಸಿದ್ಧಿ ಗಿರಿದುರ್ಗ್ಗ ಮಲ್ಲ ಚಲದಂಕ ರಾಮ ನಿಸ್ಸಂಕ ಪ್ರತಾಪ ಚಕ್ರವರ್ತ್ತಿಪೊ
೧೫ ಯಿಸಳ **ವೀರಬಲ್ಲಾಳದೇವರು ದ್ವಾರಸಮುದ್ರದ** ನೆಲವೀಡಿನೊಳು ದುಷ್ಟನಿಗ್ರಹ ಸಿಷ್ಟಪ್ರತಿಪಾಳನಂ ಮಾಡಿ ಸು
೧೬ ಖ ಸಂಕಥಾ ವಿನೋದದಿಂ ರಾಜ್ಯಂ ಮುಕ್ತಿಗೆ ತ್ತೊಂಭಾವೃದ್ಧಿ ಪ್ರವರ್ದ್ಧಮಾನ ಮಾ ಚಂದ್ರಾರ್ಕ್ಕತಾರಂಬರಂ ಸಲುತ್ತಮಿರತ
ಆತನ
೧೭ ಪ್ರತಾಪಮೆತೆಂದಡೆ ।।ವ್ರಿ।। ಚಲಂ . ರಪಂವುರಿವ್ರಿಂದ ಹಾಣಗಲ್ಲುಜಿದಿ ...ದಾಂ... ಗಣದಿಂದಯಿದನೆ
೧೮ ತೆಂಕಣ. . ತಂತಂಸುಭಟ . . ಕ್ಷಿ ತಾಯಾ ಜಯಶ್ರೀ ಸುಕಾಂತವಾತೆ ರಾಜ್ಯ ರಾಜರಾಜ್ಯೊಂದಯವತಿ ಭುಮಾ
೧೯ ಚಂ ದಿಗಂದಿಶತೇಜಿಂನಲ್ಲಿ . . . ಬಲ್ಲಾಳ . . ಜ ಸಕೆನಲ್ಲಂ ತ್ರೈಳೋಕ್ಯಮಲ್ಲಂ।ಬಲ್ಲಾಳನು ಮಾಳವೇನೇಂದ್ರನ ಕ
೨೦ ಳಿಂಗ ನಂದನ ವಳನಬ್ದಾಳಿಕೆ ಪಂ . . . ರು ಬಲ್ಲಾಳ ನ್ರಿ ಪಾಳನಪಾದನೂದಪ್ಪ ..ದು.. ತತ್ಪಾದಪದ್ಮೋಪಜೀ
೨೧ ವಿ ಸ್ವಸ್ತಿ ಸಮಸ್ತದ ಗುಣಸಂಪನ್ನರಪ್ಪ ಶ್ರೀ ಮನ್ಮಹಾನಾಟ್ಬಿಭು ಗೋತ್ರ ಪವಿತ್ರ ಯಿಂತು ಹಿ .. ಮಾ
೨೨ ...ಬನು.. ರಷಿ ..ಸಂ... ದಾನ ವಿನೋದನುವೆಪ್ಪ ಕ್ರಗ್ಗಿಯಸಕ್ತಿಯ **ಸಾಮಂತ ಮಾ**
೨೩ **ಚಗಲುಂಡನುಸುಖದಿಂದ** . ನಿ ।।ಕ। ಆತನ ತನೂಜನಖಿಳೂರ್ರ್ವತಳದೂಳು ಭಾಗಿ ಸುಭಟನತಿ ಬರೆ
೨೪ ದಂ ವಿಖ್ಯಾತ ಯಶನ ಮೆಳ . . ಸಂಪ್ರಿತಂ ಜೆಸಮೆನಿ ಯಲರಸ ಗುಂಡಂ ನೆಗಳ್ದಂ।। . . ಸಗ . . ಂಳನಸತಿ ತಾಂ
೨೫ ಸರಸಿಜ ಮುಖ ಬಿಂದುರೂಡಿಗುಡೆಯ ಸಿದರ್ಸ್ವಚರಿತಂ ಮಾಚಗಲುಂಡರ ಸಿರಿಯ . ಯು ಬಲ್ಲಾಳನೆಂಬ
೨೬ ಸುದರ್ಕ್ಕಳು।। ಅವರೂಳಪಾ. ಸೌರ್ಯ್ಯಕಲಿ ನಿಚ್ಚಥ ನಾಕದನ್ಯೆಕ ದಕ್ಷನಿಭುವನ ಜನಾಸುತ. ಯುವಕ್ತಿಮ
೨೭ ನುಮಂಥನ ಪ್ರತಿಮೆ ಪ್ರತಾಪ ಬಾ . ದವರು . ಕಲ್ಪ ಭೂ . ನಖಿಳಾಂಕ್ರಿತ ಸಜ್ಜನಕಾರಿ ವೆಂದವನಿ ತಳಾ
೨೮ ಗ್ರದೊಳು . . . ದೆಬಲ್ಲಿನುದಾರೆದೆ ವೀರದೆಡೆಯಂ ।।ವ।। ಆ ಸಾಮಂತ ಬ . . . ಯಳಪ್ಪ ಪ
೨೯ ತಿಬ್ರತಾಗುಣ . ರೂಪನಿ . . . ದ್ವೆಗಂ ಸಕಳಗುಣಶ್ರಯನಪ್ಪ ಸ.ವ. ವೂಪ್ಪಂಗಂ
೩೦ ಯಶೋವಲ್ಲರಿವೆದಾಂಕುರ ಮಂದಿರಾಂ ಕುರಮುಂ . . . ನಿಂತೆ ಪುಟ್ಟ ಸುಪುತ್ರ . . ದೀಪಕನುಂ।
೩೧ ಸೌಂದರ್ಯ್ಯ ಕಂದರ್ಪ್ಪನುಂ ಮಾವಂಗೆನುತಿ ವೀರ . . . ತೋ . . ಂಬಲು . . . ೦ . . . ತಾಂಡಸಾ
೩೨ ಮಕರ ಹಿಂಡನರ್ವ್ವಟ್ಟುವ ಗಂಡಬೇರುಂಡನುಂ। ದರ್ಪ್ಪಿಷ್ಟ ಸಾಮಂತಕುಳ ಕಳಾಧೂಳನುಂ।
೩೩ ಹಚ್ಚರಿಪ ಸಾಮಂತ ಮಸ್ತಕ ಶೂಲನುಂ । ಅಂ... ಮಂತ... ಂಗ ಕೇಸರಿಯಂ
೩೪ ವೈರಿಸಾಮಂತ ಮ್ರಿಗಶಾರ್ದ್ದೂಳನುಂ। ದುಷ್ಟಸಾಮಂತ ಅನ್ಯವನದಾವಾ...ಂ। ಕೊದಂಡರಾಮ
೩೫ ನುಂ ಸಂಗ್ರಾಮಶೂದ್ರಕನುಂ ಬಿರುದ ರೊಡ್ಡಳಿವನುಂ। ಸುಚ.. ದರೆನುಮಪ್ಪೆ ।।ಶ್ರೀ ನಿಳ
೩೬ ಯಂ ನೆಗಳ್ದವ ಚಕ್ರಿ ನಿರಯಂವಿದಾನದಕ್ಷದೂರ್ಮ್ದಳ ವೀರ ಶ್ರೀ ನಿಳಯಂ। ಚಾತುರ್ಯ್ಯಯ
೩೭ ಶೂನಿಳಯಂ ಕಲಿಗಳಂಕುಶ ಕಲ್ಲೆ ಪಿಲ್ಲೆಂ ।।ವ್ರಿ।। ಅಂ ಸಾಮಂತ ಕುಳಾದ್ರಿ ಖಂಡನಲ್ಲಿ ಪ
೩೮ ದ್ವರ್ಜ್ರಯುದಂ ಕಾಯ್ಸನಿಂದಂ ಸಾಮಂತ ಮದೆಭಮಸ್ತಕದಳಕ್ಕಂಠೀರವಂ ಕೋಪದಿಂ ಪರಿಸಾಮಂತ
೩೯ ಮಹೀರಪ್ರಕರ ಮು . . . ಲ್ವಲ್ಲಿ ತಾರ್ಕ್ಷ್ಯಂರಣೌ ಧೀರ ಕೂಹಾ ಹಾಳನೆಂದೂಡೆ ವೂಗಳ್ಪುದೊ ಸಾಮಂ
೪೦ ತ ಬಲ್ಲಾಳನಂ ।।ವ್ರಿ।। ಧುರೆದೂಳ್ ಸಾಮಂತ ಬಲ್ಲಿಂ ಮುಳಿದುರಿಪಂ ಬಳಾವಿಕ ಸಾಮಂತ ಸೆ

ನೋಕ್ಕರಮಂತ ತಳ್ಗಿ ಎಂದುಂ ತಡಿಯ ಪರಿವ ಕಂನೆತ್ತರೊಳು ಭೂತಯಾಥಂನೆರಡೂ ಆಡೆ.
ಲ್ಕ ನಿತುಂ ಕುಣಿವ ಕಬಂದಂಗಳಿದಾಕಿನಿ ಭೀಕರವೆ ಕಾಳಾಗ್ರ ಕೂಳಾಪಳ ಕಳ ಕಳದಿಂ
ರೌದ್ರ ಮತ್ತಂ ನಿಧಾತಂ ॥೫॥ ತೋಡಿನೊಳಾಂತರಂ ಭಟ್ಟರಂ ದಾಟದ ಕಲಿಗಳಂ ಕುಶೂ ಕಲಿ ಬ
ಲ್ಲಂ ಚಂಡಣದೊಳು ಗೆಲ್ದು ಮಹಿಮಂಡಳ ಮುಂ ಪೊಗಳೆ ತಾಳ್ದಿದಂ ಜಯವಧುವಂ॥ ೧ ॥ ಭೂವ
ಳೆಯದೂಳುಪ್ಪಮದಿ ದೇವಾಲಯಮೆಂದು **ಬಾಗಳಿ ಬಲ್ಲೇಶ್ವರ** ವಡನಾವಿಭು ನಿಂಮ್ಮಿರ್ಸಿ ಮತ್ತಂ ಪಾ
ವನ ಮನೆ ಸುಪ್ರತಿಷ್ಟೆಯಂ ಮಾಡಿಸಿದಂ ॥ ಯತಿ ಬಿಂದುಡಿ ಯನಂಕ. ಪತಿಮುದದಿಂ ಕಾಲಂ ಕರ್ಚ್ಚಿ
ಧಾರಾಪೂರ್ವ್ವ ಸ್ಥಿತಿಯಿಂ ಸ್ಥಾನಕ್ಕೆ ವರದಿ ಪತಿಯೆನ ಮಾಡಿಸಿದ ನಿಂತು ಧರಿಯುಳ್ಳಿನೆಗಂ ॥ಸಕವರ್ಷ ೧೧೨೦
ನೆಯ ಕಾಳಯುಕ್ತ ಸಂವತ್ಸವರದ ಶ್ರಾವಣ ಸು೧ ಸೋಮವಾರ ಉತ್ತರಾಯಣ ಸಂಕ್ರಮಣ ಸೂ
ರ್ಯ್ಯ ಗ್ರಹಣ ಯತಿ ಪಾತದಲು **ಹೆಗುಂದಲೆಯ ಬಲ್ಲೇಶ್ವರ ದೇವರಂಗಭೋಗ** ತ್ರಿ ಸಂಧ್ಯ ಪೂಜೆ ನೈವೇದ್ಯ
ಚೈತ್ರ ಪವಿತ್ರ ಖಂಡಸ್ಫುಟಿತ ಜೀರ್ಣೋದ್ಧಾರಕಂ ಬಿಟ್ಟ ದತ್ತಿ ಗದ್ದೆ ಮತ್ತರು ೧ ಕಂಬ ೫೦ ಕಂಭ ಚತುಸ್ಸಿಮೆ
ಯೆಂತೆಂದಡೆ ಊರಿಂ ಬಡಗಣ ಮೆಳಯ್ಯಬಹುದು ಹುಮರೆ।ಮೂಡಲು ಹುಮೇಶಿ।ಹಡುವಲು ಓಣಿ
ಮೆಂತಿಗುಳ ಕೆಜಿಯೆರಿ ಮಂಮೆರೆ । ಅಲ್ಲಿಂ ಬಿಡಗತಿ ಗುಳನ ಕೆಜಿಯ ಹಿಂದೆ ದಿಡೆಯ ಭೋವ ಕಡಿದ ಸರಿ
ವಿನ ತೆಂಕಣ ಬದು ಹೂ ಮಶಿ । ಅಲ್ಲಿಂ ಮೂಡಲು ರೆವೋಜನ ಹದುಗಿನ ತೆಂಕಣ ದಡವೂರೆ । ಅಲ್ಲಿಂ ಮೂ
ಡಲು ಮಾವಿನ ಮರವೊಶಿ । ದೇವರ ತೊಟಕೆ ಗೌಡನ ತೋಟದ ಬಡಗ ಕಂಬ ೩ ನಂದಾದೀವಿಗೆ ಗಾಣ೧ ಅರಿಸಿನ
ದಕಯ್ಯ ಹತ್ತು ಹಲರಿಸಿನವಂ ಸರಿಸುವರು । ಈ ಧರ್ಮ್ಮವಂ ಕಿಡಿದೆ ನಡಸಿದವರು ಗಂಗೆಯ ತಡಿಯ
ಸಹಶ್ರ ಕವಲೆಯಂ ಸಹಶ್ರ ದ್ವಿಜರ್ಗ್ಗೆ ಕೊಟ್ಟ ಫಲ । ಧರ್ಮ್ಮಮಂ ಕಿಡಿಸಿದವರ್ಗ್ಗೆ ಸಹಸ್ರ ಕವಿಲೆ
ಯಂ ಸಹಸ್ರ ದ್ವಿಜರಂ ಕೊಂದ ಪಾಪತ್ರಿಯ ಯಿಂ ದಿಂದನಯ್ಯ ಕಾಯ್ವಮ
ನುಜಂಗಾಯುಂ ಜಯಶ್ರೀಯುವಕ್ಕೆಯಿದೆಂ ಕಾಯದೆ ಕಾಯ್ವ ಪಾ
ಪಿಗೇ ಕುರುಕ್ಷೇತ್ರಂಗಳೊಳು ವಾರಣಾಸಿಯೊಳೆ ಕಾಳಿಮುನೀಂದ್ರಂರಂ ಕವಿಲೆಯಂ ವೇದಾ
ಧ್ಯರಂ ಕೊಂಡುನೂಂದಯ ಸಂಪೂರ್ಣದುರ್ಗಾವೆಂದು ಸಾಡಿದ ಪುದಿಶ್ಪೂಲಾಕ್ಷರಂ ಧಾತ್ರಿಯೊಳು



ಚನ್ನಗಿರಿ ತಾಲ್ಲೂಕು ಉಬ್ರಾಣಿ ಹೋಬಳಿ ಬಸಾಪುರದ ಬಳಿ ಇರುವ ಏಕತಲೆ ಗುಡ್ಡದ ಮೇಲಿರುವ ಹೊಯ್ಸಳರ ಕಾಲದ ಶಿಲಾಶಾಸನ

* (ಈ ಶಾಸನ ಇರುವ ವಿಚಾರ ನನ್ನ ಗಮನಕ್ಕೆ ತಂದ ಉಬ್ರಾಣಿ ಹೋಬಳಿ, ತಾವರೆಕೆರೆಯ ಟಿ.ಎನ್. ಚಂದ್ರಶೇಖರ್ ಅವರಿಗೂ, ಶಾಸನದ ಪಡಿಯಚ್ಚು ತೆಗೆದು, ಪಾಠಟಿಪ್ಪಣಿ ಒದಗಿಸಿದ ಮೈಸೂರಿನ ಕೇಂದ್ರ ಪ್ರಾಚ್ಯ ಸಂಶೋಧನಾಲಯದ ಶಾಸನತಜ್ಞ ಡಾ. ಡಿ.ಎಂ. ನಾಗರಾಜ್ ಅವರಿಗೂ ಕೃತಜ್ಞತೆಗಳು. ನಾನು ಶಾಸನತಜ್ಞನಲ್ಲವಾದ ಕಾರಣ ಹೊಸ ಶಾಸನವೊಂದನ್ನು ಪರಿಚಯಿಸುವುದಕ್ಕೆ ಈ ನನ್ನ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.)

ಡಾ. ಎಸ್. ಕೆ. ಮೇಲಕಾರ*

ಶಾಸನಗಳಲ್ಲಿ ನಿಸರ್ಗದ ವರ್ಣನೆ

(ಕೊಪ್ಪಳ ಜಿಲ್ಲೆಗೆ ಸೀಮಿತವಾಗಿ)

ಪ್ರಸ್ತಾವನೆ

ಸುಮಾರು ೪೫೦೦ ಮಿಲಿಯನ್ ವರ್ಷಗಳ ಹಿಂದೆ ರೂಪುಗೊಂಡ ನಮ್ಮ ಬದುಕಿಗೆ ನೆಲೆಯಾಗಿರುವ ಈ ಭೂಮಿ, ಉಸಿರಾಡುವ ಗಾಳಿ, ಕುಡಿಯುವ ನೀರು, ಉರಿಸುವ ಬೆಂಕಿ, ಸುತ್ತಲಿರುವ ಸಸ್ಯ, ಕಾಡು, ಬೆಟ್ಟ, ಸಮುದ್ರ, ಎಂಟು ಗ್ರಹಗಳು, ಅದರಲ್ಲಿರುವ ಪ್ರಾಣಿ-ಪಕ್ಷಿಗಳು, ಮೇಲಿರುವ ಸೂರ್ಯ-ಚಂದ್ರ ನಕ್ಷತ್ರಗಳು ಹಾಗು ಮನುಷ್ಯನ್ನೊಳಗೊಂಡಿರುವ ಪ್ರಪಂಚವೇ ನಿಸರ್ಗ. ನಮ್ಮ ಶಾಸನ ಕವಿಗಳು ಈ ನಿಸರ್ಗದ ಚಿತ್ರಣವನ್ನು ಯಥಾವತ್ತಾಗಿ ಚಿತ್ರಿಸುವಲ್ಲಿ ತಮ್ಮ ಪಾತ್ರವನ್ನು ತೋರಿದ್ದಾರೆ. ಸದ್ಯ ಕೊಪ್ಪಳ ಶಾಸನಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ದಿಸೆಯಲ್ಲಿ ವಿಶ್ಲೇಷಣೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಶಿಲಾಯುಗದ ಕಾಲದಿಂದ ಹಿಡಿದು ೧೫ನೇ ಶತಮಾನದವರೆಗಿನ ಕೊಪ್ಪಳ ಜಿಲ್ಲೆಯ ಶಾಸನದಂಥ ಮೂಲ ಆಕರಗಳನ್ನು ವಿಮರ್ಶಿಸಿದಾಗ ನಮಗೆ ಪ್ರಕೃತಿಯ ವರ್ಣನೆಯ ಶ್ರೀಮಂತವಾದ ಇತಿಹಾಸ ದೊರಕುತ್ತದೆ. ಶಿಲಾಯುಗದ ಮಾನವ ಮಳೆ, ಗಾಳಿ, ಗುಡುಗು, ಸಿಡಿಲು, ಬಿಸಿಲು, ಚಳಿ, ಕಾಡಿನಲ್ಲಿರುವ ಕ್ರೂರ ಪ್ರಾಣಿಗಳಿಗೆ ಅಂಜದೆ ಅಳುಕದೆ ಗುಡ್ಡ ಗಾಡಿನ ಗವಿಗಳಲ್ಲಿ ಪೊಟರೆಗಳಲ್ಲಿ ಬಂಡೆಗಲ್ಲುಗಳ ಆಶ್ರಯದಲ್ಲಿ ವಾಸವಾಗಿರುವ ಕುರಿತು ಈ ಭಾಗದ ಹನುಮಸಾಗರ, ಕೊಪ್ಪಳ, ಹಿರೇಬೇನಕಲ್, ತಾವರಗೇರಿ, ಆನೆಗೊಂದಿ, ಮಲ್ಲಾಪೂರ, ಹೆಮಗುಡ್ಡ, ಶಿವಪುರ ಅಪ್ಪಿನಾಳ., ಮುಂತಾದ ಶಿಲಾಯುಗದ ನೆಲೆಗಳ ಅಧ್ಯಯನದಿಂದ ಕಂಡು ಬರುವುದು.

"ಶಾಸನಗಳಲ್ಲಿ ನಿಸರ್ಗದ ವರ್ಣನೆ" ಇತಿಹಾಸ ಅಧ್ಯಯನ ದಲ್ಲಿ ಎಷ್ಟೊಂದು ಮುಖ್ಯ ಎಂದರಿಯಬೇಕಾದರೆ ಕೇವಲ ಸಾಹಿತ್ಯ ಕವಿಗಳು ವರ್ಣಿಸಿದ ನಿಸರ್ಗದ ಕುರಿತು ತಿಳಿದರೆ ಸಾಲದು; ಶಾಸನ ಕವಿಗಳಿಗೆ ಅದರ ಪರಿಚಯ ಗಾಢವಾಗಿತ್ತೆಂದು ಇಲ್ಲಿಯ ಶಾಸನ ಮತ್ತು ಸಾಹಿತ್ಯ ಕವಿಗಿರುವ ಜ್ಞಾನವನ್ನು ವಿಮರ್ಶಿಸಲಾಗಿ ಸ್ಪಷ್ಟಗೊಳ್ಳುತ್ತದೆ.

ಕಾಡು-ಬೆಟ್ಟ, ನದಿ-ಸಮುದ್ರ, ಗಿರಿ-ಪರ್ವತ, ಋತು ವರ್ಣನೆ
ಕವಿರಾಜಮಾರ್ಗಕಾರನಲ್ಲಿ :

ಕಾವೇರಿಯಿಂದ ಮಾ ಗೋದಾವರಿವರಮಿರ್ದ
ನಾಡದಾ ಕನ್ನಡದೊಳ್ / ಭಾವಿಸಿದ ಜನಪದಂ
ವಸುಧಾವಳಯವಿಲೀನ ವಿಶನವಿಷಯ ವಿಶೇಷಂ॥
ಅದಱೊಳಗಂ ಕಿಸುವೊಳಲಾವಿದಿತ
ಮಹಾಕೊಪಣ ನಗರದಾ
ಪುಲಿಗೆಱೆ ಮಾಸದಭಿಸ್ತುಂ ತಮಪ್ಪೊಂಕುಂದದ
ನಡುವಣ ನಾಡೆ ನಾಡೆ ಕನ್ನಡದ ತಿರುಳ್"

-ಎಂದು ವರ್ಣಿಸುವ ಕೊಪ್ಪಳ ನಾಡಿನ ಭೌಗೋಳಿಕ ದರ್ಶನ ನಮಗಾಗುತ್ತದೆ. ಜಿಲ್ಲೆಯ ಅಳವಂಡಿಯ ಕ್ರಿ.ಶ. ೧೧೫೭, ೧೧೯೦, ೧೨೬೮ರ ಕಾಲಮಾನದ ಶಾಸನ "ಭಾರತ ಮಹೀ ವಧೂರಚಿರ ಕುಂತಳದೇಶಾದ ದಿನಪ್ಪ ಕುಂತಳೋ ವಿಭೂಷಣಾ ಕೃತಿಯೊಳೊಪ್ಪುವದೆಕ್ಕಲಮಾಡವಾ ಮಹೀ ಗುರು ಕುಚದಗ್ರಹಾರ ಮನೆ ರಂಜಸುಗುಂ ಸಕಳಾಗ್ರಾಹಾರ ಶ್ರೀಖರ ರಮಣೀಯ ರತ್ನವಳವಿಂಡಿ ಬೆಳೆದರಿಗಿದ

"ಕೊಯ್ವೊಲದಿಂದ ಗಿಳಿ ಸೋವುತ್ತಿರ್ಪ್ಪ, ಪಾಮರೀಜನ
ದಿಂದೆಳಕ್ಕಿತ
ತಟಾಕಗಳಿ ನಳಿಪಿಕಶುಕ, ವಿತತಿರುಚಿಯಿನತಿ
ರಮಣೀಯ"॥
"ಇನ್‌ಶಸಿ ರಶ್ಮಿಯಂ ನುಸುಳಲೀಯದ ನಾಗಲತಾ
ವಿತಾನಿನಂದನ
ತಮವಂ ಘನಾಗಮ ಮಿದೆಂದಿರುಳೆಂದು ಕನಲ್ವಹಂಸೆ ನರ್ತ್ತನ
ಮನೋಡುರ್ಚುತಿರ್ಪ್ಪ ನವಿಲೊತ್ತೊಡಗೂಡದ ಜಕ್ಕವಕ್ಕಿ
ತನ್ಮನಸಿ
ಜರಾಗದಿಂ ನೆರೆವ ದಂಪತಿ ದಿವ್ಯವನಾಂತರಾಳದೊಳ್"॥

ಹರಪದಾ ತುಂಗಭದ್ರಾ ನಿರವಳ ಸ್ನಾನ ಪೂತಗಾತ್ರರ್ ದಿರ್ಗಿಚಿರಧರೆಯೊಳು ನಾಲ್ಕೂರ್ವರೆಸೆದರ ಪಗತಗರ್ವರು"॥ ಎಂದರೆ ಇದೇ ಸಮಕಾಲೀನ ಕ್ರಿ.ಶ. ೯೭೩., ಮತ್ತು ೧೧೯೦, ರ ಕಾಲಮಾನದ ಮಾದಿನೂರು ಶಾಸನ ಚಾಳುಕ್ಯ ದೊರೆ

* ಮ್ಯೂಸಿಯಂ ಮೇಲ್ವಿಚಾರಕರು, ಕನ್ನಡ ಸಂಶೋಧನಾ ಸಂಸ್ಥೆ, ಕರ್ನಾಟಕ ವಿ.ವಿ., ಧಾರವಾಡ-೩

ೂಲೋಕಮಲ್ಲನು ಕಲ್ಯಾಣಪುರದ ನೆಲೆವೀಡಿನೊಳು ಸುಖ ಂಕಥಾವಿನೋದದಿಂದ ರಾಜ್ಯವಾಳುತ್ತಿರುವಾಗ "ಎಡೆದೊರೆ ರುಚ್ಛಾಸಿರದ ಬಳಿಯ ಕೆಳವಾಡಿ ಮುನ್ನೂರಕ್ಕೆ ತಿಳಕದಂತಿರುವ ಅಗ್ರಹಾರ ಮೊದೆಯನೂರು ಅಲ್ಲಿರುವ ಹಳ್ಳ, ಶಿಕ್ಷಣ ಕೇಂದ್ರ, ತೋಟ, ಗದ್ದೆ, ಕೆರೆ, ಇತ್ಯಾದಿಯಾಗಿ ವರ್ಣಿಸುತ್ತದೆ.

ಸಾಹಿತ್ಯದಲ್ಲಿ ವರ್ಣನೆ ಬರುವ ಕುಂತಳ ದೇಶದ ಕುರಿತಾಗಿ ನಾನಾದ್ವೀಪದೊಳಗ್ರೀಮಂ ನೆಗೆಳ್ದಿಜಂಬೂದ್ವೀಪ ಮದ್ವೀಪ ದೊಳ್, ನಾನಾ ಕ್ಷೇತ್ರದೊಳುತ್ತಮಂ ಭಾರತ ಮಾಭೂಭಾಗ ದೊಳಕುನ್ತಳಂತಾನ ತ್ರುರ್ಜ್ಜಿತ್ ಮಲ್ಲಿ ಭೋಗಿ ರಮ್ಯಂ ಜನರಮ್ಯಂ ವೆಳ್ವಲಂತನ್ಮುಖಸ್ಥಾನ ಸೋಭಿಕುವಾಗಳಂ ಪುರಿಕರ ಶ್ರೀರಾಜದಾನ್ಯಾದ್ವಯಂ ಎಂದು ವರ್ಣಿಸುತ್ತವೆ.

ಇಷ್ಟೇ ಮಹತ್ವವಾಗಿ ಹರಿಹರ ಕವಿಯು ಚಿತ್ರಿಸಿ ವರ್ಣಿಸುವ ಗಿರಿಜಾ ಕಲ್ಯಾಣದಲ್ಲಿ ಗಿರಿರಾಜನ ದೇಶವು ಸೌಂದರ್ಯ, ಶಿವ ಭಕ್ತಿ, ಸಂಪತ್ತುಗಳಿಂದ ಕೂಡಿದೆ. ಆತನ ದೇಶದ ರಾಜಧಾನಿ "ಔಷಧಿ ಪ್ರಸ್ಥಪುರ" (ಇದು ಹಿಮಾಲಯ ಪರ್ವತದ ಗಿಡಮರಗಳಿಂದ ಬಂದ ಹೆಸರು) ಅಲ್ಲಿ ಗಿರಿ ರಾಜನ ಪತ್ನಿ ಮೇನಾದೇವಿಯ ಬಯಕೆಯನ್ನು ಪೂರ್ಣಗೊಳಿಸುವ ನೆಪದಿಂದ ಗಿರಿರಾಜ ಮೇನಾದೇವಿಯರಿಗೆ ಮಗಳಾಗಿ ಜನಿಸುತ್ತಾಳೆ. ಈ ಸ್ತ್ರೀರತ್ನ ಅವರ ಹೃತ್ಕಮಲದಲ್ಲಿ ಬೆಳಗಿದ ಪಾರ್ವತಿಯಾಗಿ ಹುಟ್ಟುತ್ತಾಳೆ. ಆ ಕೂಸು ಕಣ್ಣು ತೆರೆಯದಿದ್ದಾಗ ತಂದೆ ತಾಯಿಗಳು ಗಾಬರಿಯಾಗಿ ಶಿವಾಲಯಕ್ಕೆ ತಂದು ಶಿವನ ಲಿಂಗವನ್ನು ತೋರಲು ಆ ಮಗು ಕಣ್ತೆರೆದು ಬೆಳೆಯುತ್ತಾಳೆ. ಅವಳು ಬೆಳೆದ ಬಗೆಯನ್ನು ಕವಿ ನಿಸರ್ಗದೊಂದಿಗೆ ಹೋಲಿಸುತ್ತಾ ಆ ಸೌಂದರ್ಯದ ಕಲ್ಪನೆ ನಮಗೆ ತೋರಿಸುತ್ತಾನೆ. ಮುಂದೆ ಮಗಳು ಬೆಳೆದು ೧೦ ವರ್ಷ ಕಳೆಯುತ್ತವೆ. ಹೀಗೆ ಬಾಲ್ಯವು ಸರಿದು ಯೌವನಕ್ಕೆ ಕಾಲಿರಿಸಿದ ಮಗಳನ್ನು ಕಂಡು ಗಿರಿರಾಜ ಮೇನೆಯವರು ಹರುಷ ಪಡುತ್ತಾರೆ. ಆಕೆ ತಾರುಣ್ಯದಲ್ಲಿ ಜಲಕ್ರೀಡೆಗೆ ಕೊಳ್ಳಕ್ಕೆ ಬಂದಾಗ,

"ವಿಮಳಾಕಾಶದಲ್ಲಿ ಎಳೆಯ ಶಸೆ ಹೋಗುವಂತೆ ಅಂಬಿಕೆ ಕಾಸಾರದಲ್ಲಿ

ಹೊಕ್ಕೊಡನೆ ನೆಯ್ದಿಲೆಗಳು, ಶಶಿಯುದಯವಾಯಿತು.

ಕಮಲಗಳು ಮುಚ್ಚುತ್ತವೆ. ಕೋಕಗಳು ವಿರಹ ತಾಳುತ್ತವೆ"

ಇದನ್ನು ನೋಡಲು ಅಲ್ಲಿಗೆ ಬಂದ ನಾರದರು ಈಕೆಗೆ ಶಿವನೆ ಯೋಗ್ಯ ವರನು ಎಂದು ನಿರ್ಧರಿಸುತ್ತಾರೆ. ಇವಳಿಗೆ ಶಂಕರ ಮೆಚ್ಚಿದ್ದಾನೆ ಎಂದು ತಿಳಿಸಲು ಇಲ್ಲಿಗೆ ಬಂದಿದ್ದೇನೆ ಎಂಬುದಾಗಿ ಅವಳ ತಂದೆ-ತಾಯಿಗಳಿಗೆ ಸಂದೇಶ ನೀಡುತ್ತಾನೆ. ಮುಂದೆ ಆ ನಾರದರ ಹೇಳಿಕೆಯಂತೆ ಗಿರಿರಾಜನು ನಾನಾವರವಾರ ಸ್ತ್ರೀಯರಲ್ಲಿ ಜಯೆ ವಿಜಯೆಂಬರೊಡನೆ ತನ್ನ ಪುತ್ರಿ ಪಾರ್ವತಿಯೊಳೊಂದಿಗೆ ಹೇಮಕೂಟಕ್ಕೆ ತಮ್ಮ ಪುಷ್ಪಕ ವಿಮಾನದಲ್ಲಿ ಹಂಪೆಯ ವಿರೂಪಾಕ್ಷನಲ್ಲಿಗೆ ಹೊರಡುತ್ತಾರೆ. ಹೋಗುವಾಗ ಹಲವು "ದೇಶ, ನಗರ, ತಟಾಕ, ಕೇದಾರ, ಪರ್ವತಕಾಸಾರ, ತಾವರೆ, ಅಳಿಮಾಲೆ, ಹಂಸಮಾಲೆಯನ್ನು ಅಗಜೆಗೆ ತೋರುತ್ತಾರೆ." ಅಲ್ಲಿಂದ ತುಂಗಾಭದ್ರ ನದಿಯನ್ನು ತೋರಿಸುತ್ತಾ ಹೇಮಕೂಟಾಚಳಪ್ರಾಂತ ಪ್ರದೇಶದಲ್ಲಿದ್ದ ನಾನಾ ಮುನಿಪ್ರಕರವನ್ನು ನೋಡುತ್ತಾ ಬರುತ್ತಾರೆ. ಅಲ್ಲಿ ನಂದೀಶನು ಆ ಪ್ರದೇಶವನ್ನು ಕಾಯ್ದುಕೊಂಡಿರುತ್ತಾನೆ. ಆತನು ಪಾರ್ವತಿಯನ್ನು ಸ್ವಾಗತಿಸಿ ಅಲ್ಲಿಯ ಕಾಡು ವನವೆಲ್ಲಾ ಪರಿಚಯಿಸುವನು. ಅಲ್ಲಿಯೆ ಪರಮೇಶ್ವರನು ಕಾಲಿಗೆ ರತ್ನದ ಹಾವುಗೆ ಧರಿಸಿ, ತಪದಲ್ಲಿ ತಲ್ಲೀನನಾಗಿರುವುದನ್ನು ಕಾಣುತ್ತಾರೆ. ಈತನೇ ತನ್ನ ಆಳ್ವ ಪ್ರಖ್ಯಾತ ಗುರು. ಈತನನ್ನು ನಿತ್ಯವೂ ಆರಾಧಿಸುವುದಾಗಿ ಪಾರ್ವತಿ ತನ್ನ ತಂದೆ ಗಿರಿ ರಾಜನಿಗೆ ತಿಳಿಸುತ್ತಾಳೆ. "ಮಗಳೆ ಮಾತೆ, ನಟ್ಟಡವಿ, ಗಹ್ವರ, ಮಡುಗಿಡ, ಪದುಳದಿಂದ ಅರ್ಚಿಸು" ಎಂದು ಹೇಳಿ ಹರಸಿ ಮರಳಿ ಹೋಗುತ್ತಾನೆ. ನಂತರ ಪಾರ್ವತಿ ಆ ಶಿವನನ್ನು ನಾನಾ ಹೂಗಳಿಂದ ದಿನಾಲು ವಿವಿಧ ರೀತಿಯಲ್ಲಿ ಪೂಜಿಸಲು ಪ್ರಾರಂಭಿಸುತ್ತಾಳೆ. ಈ ರೀತಿ ಪೂಜೆಯ ನೆವದಿಂದ ಶಿವಸಂಗ ಬಯಸಿ ಶಿವನನ್ನು ನೋಡುತ್ತಾಳೆ. ಇಂತು ಶರ್ವನ ಸರ್ವಾಂಗದಲ್ಲಿ ಪಾರ್ವತಿಯ ನೋಟವು ಸಿಲುಕುತ್ತದೆ. ಮುಂದೆ ಕತೆ ಬೇರೆ ರೂಪ ಪಡೆದು ಅವಳೇ ಆ ಕಾಡಿನಲ್ಲಿ ತಪಸ್ಸಿಗೆ ನಿಲ್ಲುತ್ತಾಳೆ. ಆಗ ಮಳೆಗಾಲದ ಮೋಡಗಳು, ತುಂಬ ಮಳೆ, ಮಿಂಚು, ಅರ್ಭಟಿಸುವ ಗುಡುಗು, ಗಗನಗಳು, ತಮ್ಮ ಕ್ರಿಯೆಗಳಿಂದ ಧಾರಾಕಾರವಾಗಿ ಮಳೆ ಸುರಿಸುತ್ತವೆ. ಸೂರ್ಯ-ಚಂದ್ರರು ಕಾಣದಾಗಿ ಕಲ್ಲು ಕರಗುವಂತೆ ಮಳೆ ಸುರಿಯುತ್ತದೆ. ಅಲ್ಲಿಯ ಕ್ರೂರ ಮೃಗಗಳ ಭಯಾನಕತೆ, ಉಗ್ರ ಸರ್ಪಗಳ ಅದ್ಭುತತೆ ಇತ್ಯಾದಿಯಾಗಿ ವರ್ಣಿಸಿ ಮಳೆಗಾಲ ಕಳೆದುದನ್ನು ತಿಳಿಸುತ್ತಾರೆ. ಮುಂದೆ ಆ ಶಾಸನದಲ್ಲಿ ಶಿಶಿರ ಋತು ವರ್ಣನೆ ಹೇಮಕೂಟದ ಸೌಂದರ್ಯದ ವರ್ಣನೆ ಬರುತ್ತದೆ. ಇಂತಹ ಸನ್ನಿವೇಶದ ನಾನಾ ಘಟ್ಟಗಳಲ್ಲಿ ಶಿವನು ಆ ಗಿರಿಜೆಯನ್ನು ಮದುವೆ ಆಗಲು ನಿಶ್ಚಯಿಸಿ ಸಪ್ತ ಋಷಿಯರನ್ನು ಅಲ್ಲಿಗೆ ಕಳಿಸುತ್ತಾನೆ. ಅವರೆಲ್ಲಾ ಅಲ್ಲಿಗೆ ಬಂದು ಶಿವ ಪಾರ್ವತಿಯರ ಶುಭವಿವಾಹ ನೆರವೇರಿಸುತ್ತಾರೆ. ಇಂತಹ ಸನ್ನಿವೇಶದ ಚಿತ್ರಣ ನಿಸರ್ಗದ ವರ್ಣನೆಯೊಂದಿಗೆ ಕೊಪ್ಪಳ ಜಿಲ್ಲೆಯಲ್ಲಿ ಬರುವ ಆನೆಗೊಂದಿಯ ಕ್ರಿ.ಶ. ೧೩ನೇ ಶತಮಾನದ ಶಾಸನ ಆ ಗಿರಿಜೆಯು ಆ ಶಿವನನ್ನು ಪಡೆಯಲು ಪರ್ವತಕ್ಕೆ ಬರುವ ಸನ್ನಿವೇಶವನ್ನು

"ಗಿರಿರಾಜನಿಗೆ ಪುಟ್ಟ ಸುಸ್ವತನಪ್ಪ ಪುರ್ಷಂ
ಬೇಳ್ಪುಮೆಂದು ಗಿರಿಯನೇರಿ ತಪಸ್ಸಂ ಮಾಳ್ಪನೆಂದು
ಬೆಟ್ಟದ ಸಮಿಪಕ್ಕೆ ಬಂದು ಪೂವಾಗಳಾಪರ್ವತಮ್ಮೆತಿರ್ದ್ದು
ದೆಂದೊಡೆ ಮಾಲೆ ಪಾದರಿ ಮರುಗಮಲ್ಲಿಗೆ ಮಾವುಕಾಳು
ಮಾಲೆ ಕೆತಕಿ, ಜಾತಿಮಾವಿನ ಚಂದ್ವವನ ಆ ನಂದನ
ವನದಲ್ಲಿ ಹುಲಿಗಂ, ನರಿಗಂ ಸಿಪ್ವಕ್ಕಂ। ಮಾನೇಗಂ
ಕಾಳೆಕ್ಕಿಂಪಾವಿಗಂ ಮುಂಗುರಿಗಂ ಕಾಗೆಗಂ। ಗೂಗೆಂ"

-ಕೀಳಿಯಾಗಿ ದೇವಿಯ ತಪಸ್ಸನ್ನು ಆಚರಿಸುವ ಸನ್ನಿವೇಶದಲ್ಲಿ ಶಿವನು ಆ ಪರ್ವತಕ್ಕೆ ಬರುತ್ತಾನೆಂಬ ಬನದ ಮಾಹಿತಿಯನ್ನು ಶಾಸನ ಕವಿ ಇಲ್ಲಿ ನಿಸರ್ಗ ಮತ್ತು ಪ್ರಾಣಿ ಪಕ್ಷಿಗಳ ಬಗ್ಗೆ ಬಹಳ ಸೊಗಸಾಗಿ ವರ್ಣಿಸುತ್ತಾನೆ. ಈ ಮುಂಚೆ ಹರಿಹರ ಕವಿ ವರ್ಣಿಸಿದಂತೆ ಅವಳು ತಪಸ್ಸು ಆಚರಿಸಿದ ಬಗೆಯನ್ನು ಶಾಸನದಲ್ಲಿ

ಸಹ ವರ್ಣಿಸಿರುವುದು, ಪ್ರಕೃತಿಯ ಕುರಿತು ಅವರಿಬ್ಬರಿಗೂ ಇರುವ ಜ್ಞಾನವನ್ನು ತಿಳಿಯಬಹುದಾಗಿದೆ. ಮುಂದೆ ಈ ಶಾಸನ ರಾಜನ ವರ್ಣನೆ ಕಂದಾರದ ಕಣಿವೆ, ಕರಹಡದ ಕಣಿವೆ, ಕೊಲ್ಲಾಪುರದ ಕಣಿವೆ, ಕೊಂಕಣಾದ ಕಣಿವೆ, ಪಾನುಂಗಲ್ಲ ಕಣಿವೆ, ದೂರ ಸಮುದ್ರದ ಕಣಿವೆ, ನದಿಗಳು, ಬೇತೂರ ಕಣಿವೆ, ತುಂಬುಳ ಕಣಿವೆ, ಗಂಗಾಪೂರ, ವುಜ್ಜನಿ, ಅಲ್ಲಿಯೂರು, ನಿಡಗುಂದೆ, ಬಮ್ಮಕೂರು ವಲ್ಲೂರ, ಮಲ್ಲಿಯಾರ ಹೀಗೆ ೧೮ ಕಣಿವೆಯ ಮೇಲಾದ ಮೂವತಿಭಾಸಿರ ಕೇಣಿಯ ಪ್ರಶಸ್ತಿಯೆಂತೆಂದೊಡೆ ಈಶ್ವರನ ವಿವಾಹ ಕಾಲದಂದು ಹುಟ್ಟಿದ ಗಿರಿರಾಜ. ಮಹಾದೇವರ ಮಯ್ದುನರು, ಮಾವಂದಿರು, ಮುಂತಾದ ಬಂಧುಗಳು ಅಲ್ಲಿಗೆ ಬಂದಿದ್ದರು ಎಂದು ಶಾಸನ ನಿಸರ್ಗದಲ್ಲಿಯ ಮುಖ್ಯಸ್ಥಳ, ಊರುಗಳ ಹೆಸರನ್ನು ತಿಳಿಸುತ್ತದೆ. "ನೀರಂತೆ ಬೇದಿವರುಂ। ಗಾಳಿಯಂತೆ ಬೀಸುವರುಂ, ಭೂಮಿಯಂತೆ ಧೈರ್ಯದಲು ಪೆರಿಯರು, ಮಲತರ ನೆಲದಲಿಟ್ಪೊರಸುವರುಂ ಬಾನಲಿಯರುಂ ತಾಂಬೂಳಮಂ" ಎಂದು ನಿಸರ್ಗದ ಬಗ್ಗೆ ವರ್ಣಿಸುವಲ್ಲಿ ಗಾಳಿ, ಮಳೆ, ಭೂಮಿ, ಬಾನು, ನೆಲ, ತಾಂಬುಳದ ವಿಷಯ ನಮಗೆ ತಿಳಿಸಿ ಕೊಡುತ್ತದೆ. ಹೀಗೆ ಆನೆಗುಂದಿಯ ಕ್ರಿ.,ಶ. ೧೩ನೆಯ ಶತಮಾನದ ಶಾಸನ ವರ್ಣಿಸುವ ಗಿರಿಜಾ ಕಲ್ಯಾಣ ನಿಸರ್ಗದ ವರ್ಣನೆ, ಹರಿಹರ ಕವಿ ವರ್ಣಿಸುವ ಕಾಲ ಕ್ರಿ.ಶ. ೧೧೬೦ರಿಂದ ೧೨೫೦ರವರೆಗೆ ಎರಡು ಹೆಚ್ಚು ಕಡಿಮೆ ಸಮವಾಗಿ ಬರುವುದರಿಂದ ಶಾಸನ ಕವಿ, ಸಾಹಿತ್ಯ ಕವಿ ಅಷ್ಟೇ ಜಾಣರಾಗಿದ್ದರೆಂದು ಸ್ಪಷ್ಟಗೊಳ್ಳುತ್ತದೆ.

ಕೊಪ್ಪಳ ಜಿಲ್ಲೆಯ ೧೦-೧೧ನೇ ಶತಮಾನದ ಶಾಸನಗಳು

"ನಾನಾ ದ್ವಿಪದೊಳಗ್ರೀಮಂ ನೆಗಳ್ದಜಂಬೂದ್ವೀಪ ಮಾದ್ವೀಪದೊಳ್
ನಾನಾ ಕ್ಷೇತ್ರದೊಳುತ್ತಮ ಬಾರಮಾ ಭೂಭಾಗದೊಳ್ ಕುನ್ತಳಂ
ತಾನತ್ಯುತಮಲ್ಲಿ ಭೋಗಿ ರಮಂಜನ ರಮಂ ಬೆಳ್ವಲಂ ತನ್ಮುಖಸ್ಥಾನ
ಶೋಬಿಕುವೊಗಳುಂಪುರಿಕರ (ಪುಲಗೇರಿ) ಭರತ ಮಹಿಮಧುರ ಚಿರಕುನ್ತಳದಂದಿ
ದಿಪ್ಪ ಕುಂತಳೋರ್ವರೆಯು ವಿಭೂಷಣಾಕೃತಿ ಯೊಳೊಪ್ಪವುದಕ್ಕೆಲವಾಡ ವಾಮಹೀ
ಗುರುಕುಚದ್ರಗ್ರಹಾರವನ ರಂಜಿಸುಗೂ ಸಕಳಗ್ರಹಾರ ಶೇಖರ ರಮಣೀಯ ರತ್ನ
ಮಳವಿಂಡಿ ಸಮಸ್ತಧರಾ ವಿಭಾ ಗದೊ"
ಇನ್‌ಶಸಿ ರಸ್ಮೆಯುಂ ನುಸುಳಲೀಯುದ ನಾಗಲತಾ ವಿತಾನಿನಂದನ
ತಮವಂಘನಾಗಮ ಮಿದೆಂದಿರುಳೆಂದು ಕ್ನಲ್ವ ಹಂಸೆ ನರ್ತನಮನೋಡು ಚುತಿರ್ಪ
ನವಿಲೊತ್ತೊಡಗೂಡದ ಜಕ್ಕ ವಕ್ಕಿನನ್ಮನಸಿ ಜರಾಗದಿಂ ನೆರೆವ ದಂಪತಿ ದಿವ್ಯ.
ವನಾಂತರಾಳದೊಳ್।।ಹರವಾದ ತುಂಗಭದ್ರಾ ನಿರವಳ ಸ್ನಾನ ಪುತಗಾತ್ರದ
ದುರ್ಗಿಚಿರ ಧರೆಯೊಳು"

ಎಂದು ಹಂಸ ನವಿಲುಗಳ ನರ್ತನ ಮಾಡುವ ವಸಂತ ಋತುಮಾನದ ನಾಡು, ಕಾಡು, ಪರ್ವತ, ಸಮುದ್ರ, ದೇಶ ಇತ್ಯಾದಿ ನಿಸರ್ಗ ವರ್ಣನೆಗಳು ಕಂಡು ಬರುವವು. ಕ್ರಿ.ಶ. ೧೦೦೫ರ ಕೂಕ್ಕನೂರಿನ ಶಾನವು ಸಮುದ್ರ ಜಂಬೂದ್ವೀಪ, ಮೇರು ಗಿರಿ ಪರ್ವತದಲ್ಲಿರುವ ಕುಂತಳದೇಶ ಅದರಲ್ಲಿ ಬೆಳ್ವ ಬೆಳ್ವಲನಾಡು, ಅದಕ್ಕೆ ಕಾಂತಿಯಂತಿರುವ ಕೂಕ್ಕನೂರು ಮುವತ್ತು ಆ ಮೂವತ್ತರ ಶ್ರೀಮನಗ್ರಹಾರದ ಬಗ್ಗೆ ಹೀಗೆ ವರ್ಣಿಸುವುದು

"ಸೊಗಯಿಸುಗುಂ ಸಾರ ನಾಲ್ವತ್ತೆಂಟು ಕೇರಿಗಳಿರೆ ಬಳಸಿ ಬೆಳೆದ ಬಾಳೆಯ
ಬನದಿಂ ನಾರಂಗದ ತನಿವಣ್ಣಗಳಿನೋರೆಂತಿರೆ" ಕೂಕ್ಕನೂರು ಕಣ್ಗೆಸಿದಿಕ್ಕು।।
ಮನೋಹರವಾಗಿ ಈ ಭೂಭಾದೊಳಂ "ಫಲವುಂ, ಮಂಟಪದಿಂ
ದೇಗುಲದಿಂದಾ ಪುಣ್ಯ ವೀಥಿಯಂ ಚೌವಟದಿಂಸಲೆ ವೇದ ಪಾಠದಿಂದಂ
ಪಲತೆರಿದಿಂ ಕೂಕ್ಕನೂರು ಚೆಲ್ವಂತಳೆಗುಂ ಕಣ್ಗಳಿನಂಭೋರುಹಮಂ
ನೊಣ್ಗೊಗ್ಗರಲಿಂ ಪಿಕನಿಕಾಯಮಂ ನಗೆಮೊದಿಂ, ತಣ್ಗದಿರ ನನಿಳಿಸುವ ಬೆಲೆ
ವೆಣ್ಗಳಿನೀ ಕೂಕ್ಕನೂರು ಮಿಕ್ಕೆಸಿದಿರ್ಕ್ಕು"

ಎಂದು ವರ್ಣಿಸಿದೆ. ಜೊತೆಗೆ ಈ ಶಾಸನಗಳಲ್ಲಿ ಬರುವ ಗ್ರಾಮಗಳಾದ ಆಳವಂಡಿ, ಕೂಕ್ಕನೂರು, ಯಕ್ಕಲವಾಡು, ಬೆಳ್ವಲ, ಪುಲಗೇರಿ ಕೊಪ್ಪಳ ಇವೆಲ್ಲವುಗಳು ಕವಿರಾಜಮಾರ್ಗಕಾರನು ವರ್ಣಿಸುವ ಕಾವೇರಿಯಿಂದ ಗೋದಾವರೆಗಿನ ನಾಡು. ಭರತ ಖಂಡದ ಕುಂತಳ ದೇಶದಲ್ಲಿ ಗಿಡ ಮರ ಬಳ್ಳಿಗಳು ನಿಸರ್ಗದಿಂದ ಶೋಭಿಸುತ್ತಿದ್ದವೆಂದು ಶಾಸನ ಕವಿ ಸಮಗ್ರ ಈ ನಾಡಿನ ನಿಸರ್ಗದ ಚಿತ್ರಣ ಶಾಸನಗಳಲ್ಲಿ ವರ್ಣಿಸಿದ್ದಾನೆಯಲ್ಲಿ ಅದು ಮೆಚ್ಚುವಂತಾಗಿದೆ.

೧೧೬೩, ೧೧೭೦ರ ಇನ್ನೆರಡು ಶಾಸನಗಳು "ವಲಣಾಂಬುಧಿ ಸುತ್ತುವರೆ ಜಂಬೂದ್ವೀಪ ಈ ಜಂಬೂದ್ವೀಪದ ಮಧ್ಯದೊಳು ಕನಕಾಧಾತ್ರೀಧ್ರಂ ಮನಂಗೊಳವದಾ ಪೊಂಬೆಟ್ಟಂದವೆ ತೆಂಕ ಭಾರತದರಾಶಿ ದೇವಿಯಾದೇವಿಗಂದಬೆತ್ತೊಪ್ಪುವ ಕುಂತಳಂ ಬೊಲೆಸಗು ಶ್ರೀ ಕುಂತಳೋವೀ ತಳಂ।। ಈ ಲೋಕ ಸ್ತೂತ್ಯಂ ಜಗದೊಳು ಸುವರ್ಣ್ನವ್ರಿಷಭದ್ವಜದಿಂ ನಂದನನೆಸಿ" ಸೋವಿದೇವನು ಈ ಗಿರಿದುರ್ಗಮಲ್ಲ, ಲಂಕಾಪತೇಶ್ವರ, ಎಂದು ಬಿರುದು ಪಡೆದದ್ದನ್ನು ವರ್ಣಿಸುವಲ್ಲಿ ಗಿರಿದುರ್ಗವುಳ್ಳ ಈ ನಾಡು ಮತ್ತು ದೇಶದ ಕುರಿತಾಗಿ ತಿಳಿಸುವುದು ಮುಖ್ಯವಾಗಿದೆ.

ಕ್ರಿ.ಶ. ೧೧ನೇ ಶತಮಾನದ ಇಟಗಿ ಶಾಸನ "ಸಪ್ತದ್ವೀಪಗಳಲ್ಲಿ ಮಿನುಗುವ ಜಂಬುದ್ವಿಪ ಕೀರ್ತಿವೆತ್ತ ಉತ್ಕೃಷ್ಟ ಭರತ ವರ್ಷದಲ್ಲಿ ಪಶ್ಚಿಮ ದಕ್ಷಿಣೋತ್ತರ ದರಣೀಮೇಖಳಾ

ತತುಸ್ಸಮುದ್ರ' ಪರ್ಯ್ಯಂತ ಯಶೋವಿರಾಜ ಮಾನಗ್ಗಂಬೀರ ಸಾಗರ ಗಂಗಾ ಸಿಂಧುವಂ ಜಾಹ್ನವಿ' ಜಳದಿಂದೀ ಶಿವತೀರ್ಥ ಮಾಯ್ತಿ ದನೆ" 'ಪಂಪಾಸ್ಥಳ', ಪುಣ್ಯ ಕ್ಷೇತ್ರದ ವರ್ಣನೆಯಲ್ಲಿ ಜಂಬೂದ್ವೀಪದ' ಭಾರತದ ಮಡಿಲಲ್ಲಿ ಸಮುದ್ರ, ಸಾಗರ ನದಿಗಳ ವರ್ಣನೆ ಅದರಲ್ಲಿ ವಿಶಾಲವಾದ ಬೆಳ್ವಲ ನಾಡು, ಚಿನ್ನರಡಿ, ಬಿಂಕಲಿ, ನವಲಗುಂದ, ಕೊಳನೂರು, ಬೆಳ್ವಣಿಗೆ ಮಳಗುಂದ, ಕುನಗುಂದ ಕಿಸುವೊಳಲು, ಕೂಕ್ಕನೂರು, ನೆರೆಯಂಗಲ ೧೨ ಇದರಲ್ಲಿಯ ಇಟ್ಟಿಗೆ, "ಧರಾಂಗನೆಗೆ, ತಿಲಕ ಹಾಲು 'ಸಮುದ್ರ' ಕನಾಕಾದ್ರಿ, ವಿಬುಧ ಜನತಾಣ ಅನಂತ ಭೋಗ ಭಾಗ್ಯಗಳ ತವರು ಹೂಬಳ್ಳಿಗಳಿಂದ. ಹೂದೋಟಗಳಿಂದ ನಂದನವಾಗಿತ್ತು. ಇಲ್ಲಿ ನವಿಲುಗಳು ನರ್ತಿಸುತ್ತಿದ್ದವು. ಗಿಳಿಗಳು ನುಡಿಯುತ್ತಿದ್ದವು. ಹಂಸಗಳು ನಡೆದಾಡುತ್ತಿದ್ದವು. ಹೋಮ ಹವನಗಳಿಂತಿದ್ದ ಧೂಮ ನಭೆಯ ನಾಕಾ ನದಿ ಹರಿದಂತೆ ಹರಿಯುತ್ತಿತ್ತು. ಹೀಗೆ ವಿತ್ತ ನೋಡಿದತ್ತಾ ನಿಸರ್ಗಮಡಿಲಲ್ಲಿ ಪ್ರಾಚೀನ ಶಿಕ್ಷಣ ಕೇಂದ್ರಕ್ಕೆ ಹೆಸರಾದ ಇಟ್ಟಿಗೆ ಶೋಭಿಸುತ್ತಿರುವುದಾಗಿ ಈ ಸುಂದರ ಪ್ರಕೃತಿಯಲ್ಲಿ "ಅಗ್ರಹಾರದ ನಂದನದೊಳು ಸುರತರು ನಂದನದಿಂದ ಹರಿದು ಮಹೇಶ್ವರನ ಜಟಾಗ್ರದಿಂದಿಳಿದು ಗಂಗೆಯ ಕಾಲನಪ್ಪಿ ಇಲ್ಲಿ ದೊಡ್ಡ ತೆರೆಯನ್ನು ನಿರ್ಮಿಸಿತು." ಇದರಲ್ಲಿ ಬೇಟೆಯರ್ಣನೆ ಯೊಂದು ಬಿಟ್ಟು ಉಳಿದ ಎಲ್ಲಾ ೧೮ ವರ್ಣನೆಗಳ ಬಗ್ಗೆ ಈ ಶಾಸನ ವರ್ಣಿಸುವುದು

> "ಆಡುವ ಸೋಗೆ ಪಾಡುವಳಿಗಳ್, ನಡೆದಾಡುವ
> ಹಂಸೆ ಪಂಚಮಂ ಬಾಡುವ ಗಣ್ಣಗೋಗಿಲೆ, ಕೆಲರ್ನ್ನು
> ಡಿದಂತುಟಿನಾಗಳಂತೆ ಮಾತಾಡುವ ರಾಜಕೀರವೊಲ
> ವರ್ಕಿಸಲಾರದಗಲ್ದು ಪೂವಿನಂಬಾಡೆ ಲತಾವನಂಬು
> ಗುವನಲ್ಲವರಲ್ಲಿಯ ನಂದನಂಗೊಳಳ್"

ಎಂದಿದೆ. ಈ ಸಹಜತೆಯ ವರ್ಣನೆಗಳನ್ನು ಜಲಕೇಳಿ, ಮನಕೇಳಿ, ಸರೋವರ ಸಮುದ್ರ, ಪುರ ದೇಶ, ವಸಂತ ಮಾಸ, ಪರ್ವತದ ಸಾಂಪ್ರದಾಯಿಕ ಉಲ್ಲೇಖಗಳು, ಶಾಸನ ಓದಿಸಿಕೊಂಡು ಹೋಗುವಾಗ ಶಾಸನ ಕವಿ ವಿಷಯ ಮತ್ತು ನಿಸರ್ಗದ ಪರಿಚಯ ನೀಡುತ್ತಾ ಹೋಗಿದ್ದಾನೆ. ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಪ್ರತಿ ದಿನವೂ ಪ್ರಕೃತಿಯ ತೊಟ್ಟಿಲಲ್ಲಿ ಬದುಕಿರಬೇಕಾದ ಮನುಷ್ಯನ ಕಥೆಯ ವಿಭಿನ್ನ ಮಗ್ಗಲುಗಳನ್ನು ಪ್ರಕೃತಿಯ ಒಲವು ಕರುಣೆ ಸಮೃದ್ಧಿಗಳಲ್ಲಿ ತಮ್ಮ ಸುಖ ಸಂತಸಗಳನ್ನು ಅದರ ಭೀಕರತೆ ಕ್ರೌರ್ಯ ವಿಷಮತೆಗಳಲ್ಲಿ ಕಷ್ಟ, ಕಾರ್ಪಣ್ಯ ನೋವುಗಳನ್ನು ಅನುಭವಿಸುವ ಜನವರ್ಗ ಮತ್ತು ನಿಸರ್ಗದ ವರ್ಣನೆ ಸಾಂಸ್ಕೃತಿಕ ಇತಿಹಾಸದಲ್ಲಿ ಮನುಷ್ಯನು ಪರಿಸರವನ್ನು ಪರಿಸರ ಮನುಷ್ಯನನ್ನು ಪರಸ್ಪರ ಪ್ರಭಾವಿಸುತ್ತ ಬಂದಿರುವುದನ್ನು ಕಾಣುತ್ತೇವೆ.

ಕಾಡಿನಲ್ಲಿಯ ಬಯಕೆಂದರೆ ಕಾಡನ್ನು ಅವಲಂಬಿಸಿದ ಬದುಕೇ ಸರಿ. ಜನರ ಭೌತಿಕ ಸಂಗತಿಗಳು, ಎಂದರೆ ದುಡಿಮೆ ಉತ್ಪತ್ತಿ, ಹಂಚಿಕೆ, ಉದ್ಯೋಗ, ಹವ್ಯಾಸಗಳೆಲ್ಲ, ಪ್ರಕೃತಿಯ ಸಂಬಂಧವನ್ನು ಪಡೆದುಕೊಂಡಿವೆ. ಜನರು ಬೆಳೆಯುತ್ತಿದ್ದ ಭತ್ತ, ಅಡಿಕೆ, ಬಾಳೆ, ತೆಂಗುಗಳೆಲ್ಲ, ಗಾಳಿ, ಮಳೆ, ನೀರು ನದಿ ಹಳ್ಳಗಳನ್ನು ಸಹಜವಾಗಿ ಅವಲಂಬಿಸಿವೆ. ಹೀಗೆ ಕಾಡು, ಆ ಕಾಡಿನ ನಡುವಿನ ನದಿ ಹಳ್ಳ ಹೊಂಡಗಳು, ಈ ಮನುಷ್ಯನ ಜೀವನಕ್ಕೆ ಅವಶ್ಯಕವಿರುವುದನ್ನೆಲ್ಲಾ ಪೂರೈಸುವ ಸಂಪನ್ಮೂಲಗಳಾಗಿವೆ. ಇದರಿಂದಾಗಿ ಅದು ಜನರ ಬದುಕನ್ನು ಅವರ ಸಂಸ್ಕೃತಿಯನ್ನು ಕಟ್ಟಿದೆ ಮತ್ತು ರೂಪಿಸಿದೆ. ಮನೆಗಳು, ಗುಡಿಸಲುಗಳು, ಗದ್ದೆ, ತೋಟಗಳು ದೇವಾಲಯ ತೀರ್ಥಸ್ಥಳಗಳು ಎಲ್ಲ ಕಾಡಿನ ನಡುವೆ ಬೆಟ್ಟ ಸಾಲುಗಳ ನಡುವೆ, ನಿರ್ಮಾಣಗೊಂಡಿವೆ. ಹೀಗಾಗಿ ಅಲ್ಲಿಯ ಗಿಡಮರ, ಪ್ರಾಣಿ ಪಕ್ಷಿ ಮತ್ತು ಇತರ ಕಾಡಿನ ಉತ್ಪತ್ತಿ ಗಳಿಗೆ ಬೆಲೆಕಟ್ಟುವಂತಿಲ್ಲ. ಇಂಬಳದಿಂದ ಹುಲಿಯವರೆಗೆ ಅಪಾಯ ಗಳ ಸಾಲು ಸಾಲು ಬಾಯ್ದೆರೆದದ್ದು ಇರುವುದರಿಂದ ಸಾವು ಕ್ರೌರ್ಯ ಹಿಂಸೆಗಳು ಪ್ರಚ್ಛನ್ನವಾಗಿವೆ ಎಂಬ ಅಂಶಗಳು ಶಾಸನಗಳಲ್ಲಿ ನಿಸರ್ಗದ ವರ್ಣನೆಯನ್ನು ತಿಳಿಯುವಾಗ ನಮಗೆ ಈ ವಿಷಯಗಳ ಗೋಚರವಾಗುತ್ತವೆ.

೩. ಋತುವರ್ಣನೆ :

ವಸಂತಋತು ವರ್ಣನೆ ನಿಸರ್ಗದ ವರ್ಣನೆಯಲ್ಲಿ ಎರಡನೆಯದು ಋತುವರ್ಣನೆ. "ಕಳೆದುದು ಮಾಗಿ ಕೂಗಿದುದು ಕೋಗಿಲೆ ಪಲ್ಲವಿಸಿತ್ತು ಮಾಮರಂ" ಆಡುವ ಸೋಗೆ, ಪಾಡುವಳಿಗಳ್, ನಡೆದಾಡುವ ಹಂಸೆ ಪಂಚಮಂ ಬಾಡುವ ಗಣ್ಣ ಕೋಗಿಲೆ ಕೆಲರ್ಮುಡಿದಂತುಟನಾಗಳಂತೆ ಮಾತಾಡುವ ರಾಜಕೀಯ ಪೊಲವರ್ಕಿಸಲಾದಗಲ್ದು ಪೂವಿನಂ ಬಾಡೆ ಲತಾವ ನಂಬುಗುವನಲ್ಲ ವರಲ್ಲಿಯ ನಂದನಗಳೊಳ್ ವಸಂತ ಮಾಸದಿಂದ ಎಲ್ಲರೂ ಆನಂದದಿಂದ ಉದ್ಭವಿಸಿದು ದಾಯಿತು. ಅದು ಮೆಲ್ಲಮೆಲ್ಲಗೆ ಹಿಂಜರಿಯಲು ರವಿ ಕಿರಣಗಳು ತೀಕ್ಷ್ಣವಾಗಿ ಮಂದ ಮಾರುತನ ಸುಗಂಧದ ಭಾರವು ಕಡಿಮೆಯಾಗಿ ಅದರಶೈತ್ಯ ಮಾಂದ್ಯಾದಿಗಳು ಬೇಸಗೆಯ ತಾಪಕ್ಕೆಡೆಗೊಟ್ಟವು. ಕೆರೆ ಕಾಲುವೆಗಳು ಬತ್ತಿದವು ಮರಗಳು ಬಳ್ಳಿಗಳು ಬಾಡಿದವು ಎಂಬ ವರ್ಣನೆ ಯಲ್ಲಿ ಗ್ರೀಷ್ಮ ಋತುವಿನ ಮಂದ ವರ್ಣದ ಚಿತ್ರಣ ನಮಗೆ ಕಂಡು ಬರುವುದು.

ಶರದೃತು ವರ್ಣನೆ, ಗುಡುಗು, ಮಿಂಚುಗಳು ನದಿ-ಹಳ್ಳಿಗಳ ಹರಿವು ಅದನ್ನು ಗಮನಿಸಿದ ರಾಜರು ಅಂದು ದಿಗ್ವಿಜಯಕ್ಕೆ ಹೊರಡುವ ಕಾಲ ಸಮೀಪಿಸಿತೆಂದು ತಿಳಿಯುತ್ತದೆ. ನದಿ ಕೆರೆಗಳಲ್ಲಿ ನೀರಿನಿಂದ ಮನೋಹರವಾದವು ಆಗ ಹಂಸ ಪಕ್ಷಿಗಳು ಅಲ್ಲಿಗೆ ಬಂದಿರಬೇಕು. ಇವೆಲ್ಲವುಗಳ ವರ್ಣನೆ ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುವವು. ಹೀಗೆ ಚಳಿಗಾಲ, ಮಳೆಗಾಲ ಬೇಸಿಗೆ ಕಾಲಗಳ ವರ್ಣನೆ ನಾಡಿನ ಬೇರೆ ಬೇರೆ ಶಾಸನಗಳಲ್ಲಿ ನೇರವಾಗಿ ಬಂದರೆ ಕೊಪ್ಪಳ ಶಾಸನಗಳಲ್ಲಿ ಮಾತ್ರ ಅದರ ಹತ್ತಿರವಾಗಿ ವರ್ಣಿಸುತ್ತವೆ.

ಇನ್ನು ಸೂರ್ಯಚಂದ್ರ ಸಮುದ್ರಗಳ ವರ್ಣನೆ ಶಾಸನದಲ್ಲಿ ರಾಜನನ್ನು ವರ್ಣಿಸುವಾಗ ಹೋಲಿಕೆ ಕೊಟ್ಟು ಹೇಳಿದ್ದನ್ನು

ನೋಡುತ್ತವೆ. ಜಿಲ್ಲೆಯ ಇಟಗಿ, ಅಳವಂಡಿ ಆನೆಗೊಂದಿ, ಕವಲೂರು, ಪುರ ಮಾದೆನೂರು, ಕುಕನೂರಿನ ಕ್ರಿ.ಶ. ೧೧೬೩ರ ಶಾಸನದಲ್ಲಿ ಬಿಜ್ಜಳ ರಾಜನನ್ನು ಚಂದ್ರಚಾಮರ ತ್ರೈಲೋಕ್ಯ ನಗರಾಂಭ ಮೂಲ ಸಂಭಾಯ ಶಂಭವೇ ಎಂದು ಪ್ರಾರಂಭಿಸಿ ವಿವಿಧ ರೀತಿಯಲ್ಲಿ ವರ್ಣಿಸುತ್ತಾ ಚಂದ್ರಪುತ್ರ ಜಂಬೂದ್ವೀಪ, ಬೆಟ್ಟ ತೆಂಕ ಭಾರತದಲ್ಲಿ ಕುಂತಳ ದೇಶದ ಅದರಲ್ಲಿ ಕೂಕನೂರು ಸುಗಂಧ ಶಾಳಿಮಿಳಿತಂ ಲಳಿತಂ ಫಳಿತಮ ಮಾನ್ವಿತಂ॥ ಇತ್ಯಾದಿಯಾಗಿ ಅಲ್ಲಿಯ ಹಳ್ಳ, ಸೀಮೆ, ದಾರಿ ಭೂಮಿ, ತೋಟದ ಬಗ್ಗೆ ತಿಳಿಸಿದರೆ ಕ್ರಿ.ಶ. ೧೦೯೦, ೧೧೭೦ರ ಅದೇ ಊರಿನ ಶಾಸನ ರಾಜನನ್ನು ಸೂರ್ಯ, ಚಂದ್ರರಿಗೆ ಹೋಲಿಸಿ ವರ್ಣನೆ ನೀಡುತ್ತಾ ಗಿರಿದುರ್ಗ, ಲಂಕಾಪಟ್ಟಣ, ಸ್ವರ್ಗ, ನರಕಗಳ , ದೇವರ ಮಾನವರ ಪ್ರಸ್ತಾಪ, ಸೀಮೆ, ಮೇರೆ, ದಿಕ್ಕೂ, ಸೂರ್ಯ ಧಾಂಶು, ಸುರಾದ್ರಿ ರಾಜಭಾಸುರ ಪುರಕೋಟಿಗಳ ಮಾಹಿತಿ ನೀಡಿದರೆ ಕ್ರಿ.ಶ. ೧೦೦೫ರ ಶಾಸನ ಕೂಕ್ಕನೂರಿನ ಇನ್ನೊಂದು ಶಾಸನ ಬೀದಿಗಳ, ಕಟ್ಟಡಗಳ, ತೋಟಗಳ, ಗಿರಿ, ಪರ್ವತ, ಕುಂತಳ ದೇಶ, ದ್ವೀಪಗಳ ಉಲ್ಲೇಖಗಳನ್ನು ನೀಡಿದ್ದನ್ನು ಕಾಣುತ್ತೇವೆ.

ಇತರ ವರ್ಣನೆಗಳು

ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ನೀರು, ಗಾಳಿ, ಆಕಾಶ, ಬೂಮಿ, ಮೇಲಿರುವ ಸೂರ್ಯ, ಚಂದ್ರ, ಕಾಡುಪ್ರಾಣಿಗಳು, ಕೆರೆ, ಬಾವಿ, ಹಳ್ಳ, ಹೂ, ಹಣ್ಣುಗಳು ಇತ್ಯಾದಿಗಳ ಕುರಿತು ವರ್ಣಿಸುವುದಿಲ್ಲ. ಆದರೆ ಅವುಗಳ ಪ್ರಸ್ತಾಪ ಇಲ್ಲಿದೆ. ಇದಲ್ಲದೆ ವಿವಿಧ ಪ್ರಾಣಿ ಪಕ್ಷಿಗಳು ಪುರ-ದೇಶ, ನಾಡು, ಮಳೆಗಾಲ, ಚಳಿಗಾಲ, ವಸಂತಮಾಸದ ಅಲ್ಪ ಸ್ವಲ್ಪ ವರ್ಣನೆಯಲ್ಲಿ ಹೊಸತೇನು ಇಲ್ಲವೆಂದರೂ ಸಾಂಪ್ರದಾಯಿಕವಾಗಿ ಶಾಸನ ಕವಿಯಲ್ಲಿರುವ ಜ್ಞಾನ, ಶ್ರೀಮಂತಿಕೆ, ಪ್ರತಿಭೆಯನ್ನು ಅರಿಯಲು ಸಾಧ್ಯವಾಗಿದೆ. ಇದರಿಂದ ನಮಗೆ ತಿಳಿದುಬರುವುದೇನೆಂದರೆ ಶಾಸನಗಳು ಕೇವಲ ಮಾನವನ ಜೀವನದ ಸಂಸ್ಕೃತಿಯನ್ನು ತಿಳಿಸುವ ಭಾಗವಾಗಿರದೆ ಮನುಷ್ಯನ ಬದುಕಿಗೆ ಮುಖ್ಯವಾಗಿರುವ ಈ ನಿಸರ್ಗದ ವರ್ಣನೆಯು ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವ ಪಡೆದು ಕೊಂಡಿದ್ದವೆಂದು ಹೇಳಬಹುದು.

ಸಾಮಾನ್ಯವಾಗಿ ಸಾಂಸ್ಕೃತಿಕ ಚರಿತ್ರೆಯ ರಚನೆಯಲ್ಲಿ ವಿದ್ವಾಂಸರು ಸಂಶೋಧಕರು ನಿಸರ್ಗದ ವರ್ಣನೆಯ ಭಾಗವನ್ನು ನಿರ್ಲಕ್ಷಿಸಿರುವುದು ಕಂಡುಬಂದಿರುವುದರಿಂದ ಅದರ ಮಹತ್ವ ಇತಿಹಾಸ ರಚನೆಗೆ ಎಷ್ಟು ಮುಖ್ಯವಾಗಿದೆ ಎಂಬುದನ್ನು ವಿದ್ವಾಂಸರ ಗಮನ ಸೆಳೆಯಲು ಮಾಡಿದ ಪ್ರಯತ್ನ ಇದಾಗಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕನ್ನಡ ವಿಶ್ವವಿದ್ಯಾಲಯ** ಶಾಸನ ಸಂಪುಟ-೨ ಕೊಪ್ಪಳ ಜಿಲ್ಲೆ ಶಾಸನಗಳು., ೧೯೯೯, (ಸಂ) ಡಾ. ದೇವರಕೊಂಡಾರೆಡ್ಡಿ ಮತ್ತು ಸಂಗಡಿಗರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಡಾ. ಎಲ್. ನರಸಿಂಹಾಚಾರ್ ಬಿ.ಎ., 'ಕರ್ನಾಟಕ ಸಾಹಿತ್ಯದಲ್ಲಿ ಪ್ರಕೃತಿಯ ವರ್ಣನೆ' **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ** ಸಂಪುಟ-೧೩ ಸಂಚಿಕೆ-೩ ಅಕ್ಟೋಬರ್ ೧೯೨೮.

೩. ಡಾ. ಬಿ.ಸಿ. ಜವಳಿ., "**ಹರಿಹರ ಕವಿಯ ಸ್ತ್ರೀ ಪಾತ್ರದರ್ಶನ**" ಪ್ರಸಾರಾಂಗ, ಕರ್ನಾಟಕ ವಿಶವವಿದ್ಯಾಲಯ ಧಾರವಾಡ-೧೯೮೩.

೪. ಡಾ. ಎಂ.ಆರ್. ಉಮಾದೇವಿ **ಕವಿಚಕ್ರವರ್ತಿ ಪೊನ್ನ ಮತ್ತು ಆತನ ಕೃತಿಗಳು** ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೭೮.

೫. ಡಾ. ಬಿ.ಎಸ್. ಕುಲಕರ್ಣಿ., **ನೇಮಿಚಂದ್ರ ಕವಿ ಕಾವ್ಯ ವಿಮರ್ಶೆ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೬೯.

೬. ಡಾ. ಬಿ.ವಿ. ಮಲ್ಲಾಪೂರ., **ನಯಸೇನ ಮತ್ತು ಅವನ ಕೃತಿಗಳು** ಕನ್ನಡ ಅಧ್ಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೮.

೭. ಎಚ್.ಎಸ್. ಪಾಟೀಲ., (ಪ್ರ.ಸಂ) ಮತ್ತು ಸಂಪಾದಕರು ತಿರುಳ್ಗನ್ನಡ ಅಖಿಲಭಾರತ ೬೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸವಿ ಸಂಚಿಕೆ ೧೯೯೩ ಕೊಪ್ಪಳ

೮. ಡಾ. ಗುರುಪಾದ ಮರಿಗುದ್ದಿ., **ಕುವೆಂಪು ಕಾದಂಬರಿಗಳಲ್ಲಿ ಪರಿಸರ** ಕರ್ನಾಟಕ ವಿಶ್ವವಿದ್ಯಾಲಯ ಹಂಪಿ. ೧೯೯೯

೯. ಶ್ರೀ ಬಿ.ಸಿ. ಪಾಟೀಲರು., ೧) **ಕೊಪ್ಪಳದ ಹೆಚ್ಚಿನ ಶಾಸನಗಳು** ೨) **ಮಾದೆನೂರು ನೆನಹು**, ವಿಶಾಲ ಪ್ರಕಾಶನ ಕೊಪ್ಪಳ ೧೯೯೮ ೩) **ಕೊಪ್ಪಳ ಸಾಂಸ್ಕೃತಿಕ ಪರಂಪರೆ** ೪) **ಇಟಗಿ ಮಹಾದೇವಾಲಯ**, ಹರಿಹರ ಪ್ರಕಾಶನ ೨೦೦೧ ಕೊಪ್ಪಳ, ಎಂಬ ಕೃತಿಗಳು. ನೆರವು ಪಡೆಯಲಾಗಿದೆ

೧೦. ಡಾ. ಎಂ. ಚಿದಾನಂದಮೂರ್ತಿ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು ವಿಶ್ವವಿದ್ಯಾಲಯ ೧೯೭೯.

೧೧. **ಇತಿಹಾಸ ದರ್ಶನ** ಸಂಪುಟ ೫ ರಿಂದ ೧೭ರವರೆಗಿನ ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು

೧೨. ಡಾ. ಕಲಬುರ್ಗಿ ಎಂ.ಎಂ., '**ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ**' ಕರ್ನಾಟಕ ವಿಶ್ವವಿದ್ಯಾಲಯ, ೧೯೭೩ ಧಾರವಾಡ

೧೩. ಎಚ್. ತಿಪ್ಪೇರುದ್ರಸ್ವಾಮಿ, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ೧೯೬೮

೧೪. ಡಾ. ದೇಸಾಯಿ ಪಿ.ಬಿ., **ಶಾಸನ ಪರಿಚಯ** 'ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ ೧೯೫೬

೧೫. ಡಾ. ಪಪ್ಪ ಆರ್.ಎನ್. (ಸಂ) ಪ್ರಾಚೀನತಮ, ಮಾನವ ಸಂಸ್ಕೃತಿಗಳ ವಿಕಸನದ ಹುತಗಳು. **ಕರ್ನಾಟಕ ಚರಿತ್ರೆ ಸಂಪುಟ**.೧.ಕ.ವಿ.ವಿ. ಹಂಪಿ. ೧೯೯೭.

ಡಾ. ರು. ಮ. ಷಡಕ್ಷರಯ್ಯ* / ಕುಮಾರಿ ಜಯಮ್ಮ. ಬಿ.**

ಕೆಲವು ಹೊಸ ದೇವಾಲಯಗಳು, ವೀರಗಲ್ಲು - ಶಾಸನಗಳು ಮತ್ತು ಪ್ರಾಚೀನ ಜನವಸತಿ ನಿವೇಶನಗಳು (ಹಳೇಧಾರವಾಡ ಜಿಲ್ಲೆ)

ಹಳೇ ಧಾರವಾಡ ಜಿಲ್ಲೆಯಲ್ಲಿ ಇತ್ತೀಚಿನ ಅನ್ವೇಷಣೆಗಳಿಂದ ಕೆಲವು ಜನವಸತಿ ನೆಲೆಗಳು, ದೇವಾಲಯಗಳು, ವೀರಗಲ್ಲುಗಳು ಮತ್ತು ಶಾಸನಗಳು ಕಂಡುಬಂದಿವೆ. ಅವುಗಳಲ್ಲಿ ಜನವಸತಿ ನಿವೇಶನ, ದೇವಾಲಯ, ಶಾಸನ ಮತ್ತು ವೀರಗಲ್ಲುಗಳು ತಂಬೂರಿನಲ್ಲಿ, ಶಾಸನ ದೈವಿಕೊಪ್ಪ ತಾಂಡದಲ್ಲಿ ಪ್ರಾಚೀನ ಜನವಸತಿ ನಿವೇಶನ ಸೊರಟೂರಿನಲ್ಲಿ ಕಾಣಿಸಿವೆ.

ಪ್ರಾಚೀನ ಜನವಸತಿ ನಿವೇಶನಗಳು

ತಂಬೂರು : ತಂಬೂರು ಗ್ರಾಮವು ಕಲಘಟಗಿಯಿಂದ ದಕ್ಷಿಣಕ್ಕೆ ಸು. ೧೧ ಕಿ. ಮೀ. ದೂರದಲ್ಲಿ ಅರಣ್ಯ ಪ್ರದೇಶದ ಮಧ್ಯದಲ್ಲಿದೆ. ಪ್ರಾಚಿನ ಶಾಸನಗಳಲ್ಲಿ ತಮ್ಮಿಯೂರು,[೧] ತಮ್ಮ ಊರ ಹಾಗೂ ತಾಂಬ್ರಾಪುರ[೨] ಎಂದೆಲ್ಲಾ ಉಲ್ಲೇಖಗೊಂಡಿರುವ ಈ ಗ್ರಾಮಕ್ಕೆ ರಾಷ್ಟ್ರಕೂಟರ ಕಾಲದಷ್ಟು ಹಳೆಯ ಇತಿಹಾಸವಿದೆ. ಹಿಂದೆ ಇದು ಪಲಸಿಗೆ-೧೨೦೦೦ಕ್ಕೆ ಸೇರಿದ ತಮ್ಮಿಯೂರು-೧೨[೩]ರ ಆಡಳಿತ ಕೇದ್ರವಾಗಿತ್ತು.

ತಂಬೂರು ಗ್ರಾಮದ ಶಾಲೆಯ ಎದುರಿಗೆ ಒಂದು ನೆಲೆಯಿದ್ದು ಈಗ ಅದನ್ನು ಹೊಲ ಮಾಡಲಾಗಿದೆ. ಅಲ್ಲೊಂದು ಬಸವಣ್ಣ ಗುಡಿ ಮತ್ತು ದೀಪಸ್ತಂಭವಿದೆ. ಈ ನೆಲೆಯು ಸುಮಾರು ಒಂದು ಹೆಕ್ಟೇರ್ ಪ್ರದೇಶವನ್ನು ವ್ಯಾಪಿಸಿದೆ. ಅಲ್ಲಿ ಕೆಂಪು ಗಡಿಗೆ-ಮಡಿಕೆಗಳು, ಹಂಚುಗಳು, ಇಟ್ಟಿಗೆಯ ತುಂಡುಗಳು ಹೆಚ್ಚು ಹರಡಿವೆ. ಈ ಹಂಚು ತುಂಡುಗಳು ಮತ್ತು ಗಡಿಗೆ-ಮಡಿಕೆಗಳು ಸು. ಕ್ರಿ.ಶ. ೧-೨ನೇ ಶತಮಾನದ ಅವಶೇಷಗಳನ್ನು ಹೋಲುತ್ತವೆ. ಹೀಗಾಗಿ ಈ ನೆಲೆಯ ಇತಿಹಾಸ ಆರಂಭಿಕ ಕಾಲದ್ದೆಂದು ತರ್ಕಿಸಬಹುದು.

ಬಸವಣ್ಣ ದೇವಾಲಯದ ಪರಿಸರದಲ್ಲಿ ಇನ್ನೊಂದು ಜನವಸತಿ ನಿವೇಶನವಿವೆ. ಈ ನೆಲೆಯಲ್ಲಿ ಕೆಲವು ಕಡೆಗಳಲ್ಲಿ ಸ್ಥಳಿಕರು ತಗ್ಗುಗಳನ್ನು ತೋಡಿದ್ದರಿಂದ ಅದರಲ್ಲಿ ಕೆಳಗಿನ ಪದರಿನಲ್ಲಿ ಗಡಿಗೆಗಳು ಸಂಗ್ರಹವಾಗಿವೆ. ಹೆಚ್ಚಿನ ಗಡಿಗೆಗಳು ಕೆಂಪು ಛಾಯೆಯನ್ನು ಹೊಂದಿವೆ ಮತ್ತು ನಯವಾಗಿವೆ. ಹಾಗೂ ಆದರ ಮೇಲಿನ ಪದರಿನಲ್ಲಿ ಮಧ್ಯಯುಗೀನ ಮತ್ತು ಆಧುನಿಕ ಕಾಲಘಟ್ಟದ ಹೆಚ್ಚಿನ ಗಡಿಗೆ, ಮಡಿಕೆ ಚೂರುಗಳು ಹರಡಿರುತ್ತವೆ. ಹೀಗಾಗಿ ಕೆಂಪುಗಡಿಗೆಗಳು ಕ್ರಿ.ಶ. ೮ನೇ ಶತಮಾನ ಪೂರ್ವದ್ದಾಗಿದ್ದು, ಉಳಿದವು ಮಧ್ಯಯುಗೀನ ಕಾಲ ಮತ್ತು ಆಧುನಿಕ ಕಾಲದ್ದಾಗಿವೆ.

ಸೊರಟೂರು : ಗದಗ ತಾಲೂಕಿನ ಸೊರಟೂರು ಗ್ರಾಮದ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ವಿಸ್ತಾರವಾಗಿ ಹರಡಿದ ಒಂದು ವಿಶಾಲವಾದ ಮತ್ತು ಹಾಳಾದ ಜನವಸತಿ ನಿವೇಶನವಿದೆ. ಈ ನಿವೇಶವನ್ನು ಹೊಲಗಳನ್ನಾಗಿ ಪರಿವರ್ತಿಸಲಾಗಿದೆ. ಈ ಊರ ದಕ್ಷಿಣದ ಅಂಚಿನಲ್ಲಿ ಒಂದು ಹಳ್ಳವಿದ್ದು ಆ ಹಳ್ಳದ ಬಲಬದಿಗೆ ಈ ನೆಲೆಯಿದೆ. ಈ ನೆಲೆಯನ್ನು ಹಾಳು ನೆಲವೆಂದು ಹಾಗೂ ಈ ಊರು ಮೊದಲು ಆ ನೆಲೆಯಲ್ಲಿ ಇದ್ದಿತೆಂದು ಪ್ರತೀತಿ. ಈ ವಿಸ್ತಾರವಾದ ಪೂರ್ವದ ಕಡೆಗೆ ಕೆಂಪು ಬಣ್ಣದ ಗಡಿಗೆ ಮಡಿಕೆಗಳು ಹೆಚ್ಚು ಕಾಣಿಸಿವೆ. ಜೊತೆಯಲ್ಲಿ ಮಧ್ಯಯುಗೀನ ಕಾಲದ ಗಡಿಗೆಗಳೂ ಕಡಿಮೆ ಪ್ರಮಾಣದಲ್ಲಿ ಸಂಗ್ರಹವಾಗಿವೆ. ಈ ನೆಲೆಯ ಮತ್ತು ಈ ಗ್ರಾಮದ ಪೂರ್ವಕ್ಕೆ ಮಧ್ಯಯುಗೀನ ಕಾಲದ ಅವಶೇಷಗಳು ಹೇರಳವಾಗಿವೆ. ಅಲ್ಲಲ್ಲಿ ಗುಡಿ-ಗುಂಡಾರಗಳು ನೆಲದಲ್ಲಿ ಹೂತಿವೆ ಎಂದು ಸ್ಥಳಿಕರು ಹೇಳುತ್ತಾರೆ. ಒಟ್ಟಾರೆ ಈ ನೆಲೆಯ ವಿಸ್ತೀರ್ಣ ಸುಮಾರು ೨೫ ಹೆಕ್ಟೇರ್ ಇದ್ದು ಕೆಂಪು, ಕಪ್ಪು, ಬೂದಿಮರ್ಣದ ಮಣ್ಣು ಈ ನೆಲೆಯಲ್ಲಿ ಆವರಿಸಿದೆ. ದೊರೆತ ಗಡಿಗೆ, ಮಡಿಕೆಗಳ ಲಕ್ಷಣಗಳಿಂದ ಈ ನೆಲೆಯಲ್ಲಿ ಜನರು ಮೂರು ಕಾಲಘಟ್ಟದಲ್ಲಿ ನೆಲೆಸಿದ್ದರೆಂದು ತರ್ಕಿಸಬಹುದು. ಅವೆಂದರೆ; ಇತಿಹಾಸ ಆರಂಭಕಾಲ, ಮಧ್ಯಯುಗೀನಕಾಲ ಮತ್ತು ವಿಜಯನಗರ ಕಾಲ.

ಸೊರಟೂರಿನಲ್ಲಿ ಆನೇಕ ದೇವಾಲಯಗಳು ಮತ್ತು ಶಾಸನಗಳು ಇದ್ದು ಅವುಗಳಲ್ಲಿ ಹೆಚ್ಚಿನ ಸಂಖ್ಯೆಯ ಅವಶೇಷಗಳು ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದವಾಗಿವೆ. ಈ ಗ್ರಾಮದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ಐವತ್ತು ಮಹಾಜನರು[೪] ಇದ್ದರು. ಮೊದಲನೇ ಅಮೋಘವರ್ಷ[೫], ಇಮ್ಮಡಿ ಮತ್ತು ಮುಮ್ಮಡಿ ಕೃಷ್ಣ[೬] (ರಾಷ್ಟ್ರಕೂಟ) ಇವರ ಆಳ್ವಿಕೆಯ ಪುರಾವೆಗಳಿವೆ.

* ಪ್ರಾಧ್ಯಾಪಕ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿ.ವಿ. ಧಾರವಾಡ

** ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿ.ವಿ. ಧಾರವಾಡ.

ಅದೇ ರೀತಿ ಕಲ್ಯಾಣ ಚಾಲುಕ್ಯ ದೊರೆ ಇಮ್ಮಡಿ ಸೋಮೇಶ್ವರ[೭] ಮತ್ತು ಆರ್ಮಡಿ ವಿಕ್ರಮಾದಿತ್ಯನ[೮] ಪುರಾವೆಗಳಿವೆ. ಈ ಎರಡು ಕಾಲಘಟ್ಟದ ಶಾಸನ, ಶಿಲ್ಪ, ದೇವಾಲಯಗಳು ಶೈವ, ವೈಷ್ಣವ ಮತ್ತು ಜೈನ ಧರ್ಮಕ್ಕೆ ಸೀಮಿತವಾಗಿವೆ. ಈ ಹಿನ್ನೆಲೆಯಿಂದ ರಾಷ್ಟ್ರಕೂಟರ ಕಾಲದಲ್ಲಿ ಈ ಸ್ಥಳವು ಪ್ರಸಿದ್ಧಿಯನ್ನು ಹೊಂದಿದ್ದಿತ್ತೆಂದು ಮತ್ತು ಜನನಿಬಿಡ ಪ್ರದೇಶವಾಗಿದ್ದಿತ್ತೆಂದು ಹೇಳಬಹುದು.

ದೇವಾಲಯಗಳು

ಉತ್ತರ ಕುಮಾರ ದೇವಾಲಯ

ದಂತಕಥೆ : ಹಿಂದೆ ಪಾಂಡವರು ವನವಾಸದಲ್ಲಿದ್ದಾಗ ಈ ಗ್ರಾಮದಲ್ಲಿ ವಾಸವಾಗಿದ್ದರೆಂತಲೂ, ಪಾಂಚಾಲ ದೇಶದ ವಿರಾಟರಾಜನ ಮಗ ಉತ್ತರ ಕುಮಾರನೂ ಈ ಗ್ರಾಮದಲ್ಲಿ ಇದ್ದನೆಂತಲೂ, ಆದ್ದರಿಂದ ಇಲ್ಲಿಯ ವಾಡೆ, ಕೆರೆ ಮತ್ತು ದೇವಾಲಯಕ್ಕೆ ಉತ್ತರಕುಮಾರನೆಂಬ ಹೆಸರು ಇರುವುದೆಂದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

ತಂಬೂರು ಗ್ರಾಮದ ಉತ್ತರದ ಭಾಗವನ್ನು ಉತ್ತರ ಕುಮಾರ ವಾಡೆ ಎಂದು ಕರೆಯುವರು. ಅಲ್ಲಿ ವಾಡೆಯ ಕುರುಹುಗಳು ಇಂದಿಗೂ ಇದೆ, ವಾಡೆ ಅಂದರೆ ಕೋಟೆ, ಒಳಗಡೆ ಅರಮನೆ ಇದ್ದಿತೆಂಬ ಪ್ರತೀತಿ. ವಾಡೆಯ ಬಳಿಯಲ್ಲಿಯೇ ಈ ದೇವಾಲಯ ವಿರುವುದು.



ಇದೊಂದು ಕಿರುದೇವಾಲಯ, ಇದು ತಳಪಾಯದಲ್ಲಿ ಗರ್ಭಗೃಹ ಮತ್ತು ತೆರೆದ ಅರ್ಧ ಮಂಟಪವನ್ನು ಮಾತ್ರ ಹೊಂದಿದೆ. ಚೌಕಾದ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಒಳಭಿತ್ತಿಯಲ್ಲಿಯ ಮೂಲೆಗಳಲ್ಲಿ ನಾಲ್ಕು ಅರ್ಧಗಂಬಗಳಿವೆ. ಛತ್ತಿನ ಭುವನೇಶ್ವರಿಯಲ್ಲಿ ಅರಳಿದ ಕಮಲದ ಚಿತ್ರಣವಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ಶಾಖೆಗಳಿದ್ದು ಅವುಗಳು ಲಲಾಟದಲ್ಲೂ ಹರಿದಿವೆ. ಈ ಶಾಖೆಗಳಲ್ಲಿ ಅರ್ಧಗಂಬ ಬಿಟ್ಟರೆ ಉಳಿದವು ಸರಳವಾಗಿವೆ. ಲಲಾಟದಲ್ಲಿ ಗಜಲಕ್ಷ್ಮಿಯನ್ನು ಕಂಡರಿಸಲಾಗಿದೆ. ಗರ್ಭಗೃಹದ ಮುಂಭಾಗದಲ್ಲಿ ತೆರಿದ ಎರಡು ಸ್ಥಂಭಗಳುಳ್ಳ ಅರ್ಧಮಂಟಪವಿದೆ. ಈ ಕಂಬಗಳು ಪೀಠ, ಕಾಂಡದಲ್ಲಿ ನೀಳ, ಎತ್ತರ ಭಾಗ ಅದರಲ್ಲಿ ಕೆಳಗಡೆ ಮತ್ತು ಮೇಲೆ ಎರಡು ಚೌಕಗಳು ಮಧ್ಯದಲ್ಲಿ ಅನೇಕ ವೃತ್ತ ಪಟ್ಟಿಕೆಗಳಿವೆ, ಮೇಲೆ ವೃತ್ತಾಕಾರದ ಮತ್ತು ಕ್ಯಾಪಿಟಲ್ ಮತ್ತು ಸರಳ ಬೋದಿಗೆಯಿದೆ. ದೇವಾಲಯದ ಹೊರ ಭಿತ್ತಿಯು ಸರಳವಾಗಿದ್ದು ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರವಿದೆ.



ಶಿಖರದ ಮೇಲಿನಭಾಗ ಬಿದ್ದಿದೆ. ಸುಂದರವಾಗಿ ಕಾಣುವ ಈ ಕಿರುದೇವಾಲಯದ ದ್ವಾರಬಾಗಿಲು ಮತ್ತು ಅರ್ಧಮಂಟಪದ ಕಂಬಗಳ ಶೈಲಿಯು ಸು. ಕ್ರಿ.ಶ. ೧೦ನೇ ಶತಮಾನದ ಅಂತ್ಯಭಾಗದ ಲಕ್ಷಣಗಳನ್ನು ಹೋಲುತ್ತದೆ. ಈ ಲಕ್ಷಣವುಳ್ಳ ಕಂಬಗಳು ಹಾವೇರಿ ಜಿಲ್ಲೆಯ ಕಿತ್ತೂರಿನ ಸಂಗಮೇಶ್ವರದ ದೇವಾಲಯ ಮತ್ತು ದೇವಿಹೊಸೂರಿನ ಬನಶಂಕರಿ ದೇವಾಲಯಗಳನ್ನು ಹೋಲುತ್ತದೆ.

ಬಸವಣ್ಣ ದೇವಾಲಯ


ಈ ದೇವಾಲಯ ಗ್ರಾಮದ ದಕ್ಷಿಣಭಾಗಕ್ಕೆ ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ತಳವಿನ್ಯಾಸದಲ್ಲಿ ಗಭಗೃಹ, ಅಂತರಾಳ ಮತ್ತು ನಂದಿಮಂಟಪಗಳನ್ನು ಹೊಂದಿದೆ. ಗರ್ಭಗೃಹ ಚೌಕಾಕಾರವಾಗಿದ್ದು ಮಧ್ಯದಲ್ಲಿ ಶಿವಲಿಂಗವಿದೆ. ಈ ಶಿವಲಿಂಗದ ಹಿಂದಿನ ಒಳಗೋಡೆಯಲ್ಲಿ ಒಂದು ದೇವಕೋಷ್ಠ ವಿರುವುದು ಗಮನೀಯ. ಅಲ್ಲಿ ಈಗ ಯಾವುದೇ ಪ್ರತಿಮೆ ಇಲ್ಲ. ಭಿತ್ತಿಗೆ ಹೊಂದಿಕೊಂಡಂತೆ ಸೂರ್ಯ, ವಿಷ್ಣು ಮುಂತಾದ ಭಗ್ನ ಶಿಲ್ಪಗಳಿವೆ.

ಗರ್ಭಗೃಹದ ಪ್ರದೇಶದಲ್ಲಿ ಪಂಚಶಾಖೆಗಳಿದ್ದು ಅವುಗಳು ಲಲಾಟ ಪಟ್ಟಿಕೆಯಲ್ಲಿಯೂ ಮುಂದುವರಿದಿವೆ. ಶಾಖೆಗಳಲ್ಲಿ ಅರ್ಧಗಂಬಬಿಟ್ಟರೆ ಉಳಿದವು ಸರಳವಾಗಿವೆ. ಲಲಾಟದಲ್ಲಿ ಸರಸ್ವತಿ ಚಿತ್ರವಿದೆ. ಉತ್ತರಾಂಗದಲ್ಲಿ ಒಂದೇ ಸಾಲಿನಲ್ಲಿ ಪಂಚಶಿಖರಗಳಿದ್ದು ಎಡದಿಂದ ಬಲಕ್ಕೆ ಕ್ರಮವಾಗಿ ಬ್ರಹ್ಮ, ಗಣೇಶ, ನಟರಾಜ ಸೂರ್ಯ ಮತು ವಿಷ್ಣುವಿನ ಶಿಲ್ಪಗಳಿವೆ. ಗರ್ಭಗೃಹದ ಮುಂದೆ ತೆರೆದ ಅಂತರಾಳವಿದ್ದು ಅಲ್ಲಿಯ ಮೂಲೆಗಳಲ್ಲಿ ನಾಲ್ಕು ಅರ್ಧಗಂಬಗಳಿವೆ. ಅಂತರಾಳದ ಮುಂದೆ ನಾಲ್ಕು ಕಂಬಗಳ ನವರಂಗವಿದೆ. ಈ ನವರಂಗದ ಒಳಭಿತ್ತಿಯಲ್ಲಿ ಹತ್ತು ಅರ್ಧಗಂಬಗಳಿವೆ. ಈ ಅರ್ಧಗಂಬಗಳು ಅಲಂಕರಣ ಹೊಂದಿವೆ.

ವರಂಗದ ಮಧ್ಯದ ನಾಲ್ಕು ಕಂಬಗಳು ಪೀಠ, ಚೌಕಾಕಾರ, ಂಟಾಕಾರ ಸರಳಬೋದಿಗೆಯಲ್ಲಿವೆ. ಚೌಕಾಕಾರ ಮತ್ತು ಂಟಾಕಾರಗಳ ಮಧ್ಯೆ ಪದ್ಮ ಮತ್ತು ಕಿರುವೃತ್ತ ಪಟ್ಟಿಕೆಗಳಿವೆ. ಂಟಾಕಾರ ಮತ್ತು ಬೋಧಿಗೆ ಮಧ್ಯೆ ಕಳಸ ಭಾಗವಿದೆ. ನವರಂಗ ತಾನ ಭುವನೇಶ್ವರಿಯಲ್ಲಿ ಸುಂದರವಾಗಿ ವೃತ್ತಕಾರದ ಪದ್ಮವನ್ನು ಲಂಕರಣ ಮಾಡಲಾಗಿದೆ. ಈ ಪದ್ಮದ ಸುತ್ತ ಮತ್ತೆ ಎಂಟು ರು ದ್ವಿದಳ ಪದ್ಮಗಳ ಅಲಂಕರಣಗಳಿವೆ. ನವರಂಗಕ್ಕೆ ಹೊಂದಿ ಮುಂದಿನ ಭಾಗದಲ್ಲಿ ನಂದಿಮಂಟಪವಿದೆ. ಅಲ್ಲಿ ನಂದಿಯನ್ನು ರ್ಭಗೃಹದ ಶಿವಲಿಂಗಕ್ಕೆ ಎದುರು ಕೂಡಿಸಲಾಗಿದೆ. ನಂದಿಯನ್ನು ಅನೇಕ ಆಭರಣಗಳಿಂದ ಅಲಂಕರಿಸಲಾಗಿದೆ.

ದೇವಾಲಯಕ್ಕೆ ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಿಗೆ ಎರಡು ಪ್ರವೇಶದ್ವಾರಗಳಿವೆ. ದಕ್ಷಿಣ ಪ್ರವೇಶದ್ವಾರವೇ ಮುಖ್ಯದ್ವಾರವಾಗಿದೆ. ಪೂರ್ವದಿಕ್ಕಿನ ಪ್ರವೇಶದ್ವಾರವನ್ನು ನಂತರದಲ್ಲಿ ಎರಡು ಕಂಬಗಳ ಸಹಾಯದಿಂದ ಸ್ವಲ್ಪ ಜೀರ್ಣೋದ್ಧಾರಗೊಳಿಸಿ ಮುಚ್ಚಲಾಗಿದೆ. ದಕ್ಷಿಣ ದಿಕ್ಕಿನ ಪ್ರವೇಶದ್ವಾರದಲ್ಲಿ ಪಂಚಶಾಖೆಗಳಿದ್ದು ಅಲ್ಲಿಯೂ ಅರ್ಧಗಂಬ ಬಿಟ್ಟರೆ ಉಳಿದವು ಸರಳವಾಗಿವೆ. ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಉತ್ತರಾಂಗದ ಚಿತ್ರಗಳು ಗರ್ಭಗೃಹದ ಉತ್ತರಾಂಗದ ಲಕ್ಷಣಗಳನ್ನು ಹೋಲುತ್ತವೆ. ಪ್ರವೇಶದ್ವಾರದಲ್ಲಿ ಸೋಪಾನ ಬದಿಯಲ್ಲಿ ತಾಳವಾರಗಳಿವೆ. ಪೂರ್ವದಿಕ್ಕಿನ ಪ್ರವೇಶ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಮತ್ತೆ ಪ್ರವೇಶಕ್ಕೆ ಸೋಪಾನ ಮತ್ತು ತಾಳವಾರಗಳಿವೆ.

ಸಂಪೂರ್ಣ ದೇವಾಲಯವು ಅಧಿಷ್ಠಾನದ ಮೇಲಿದ್ದು ಅಧಿಷ್ಠಾನ ಕಪೋತಬಂಧ ಮಾದರಿಯಲ್ಲಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟಕುಮುದ ಕಪೋತಭಾಗಗಳಿವೆ. ದೇವಾಲಯವನ್ನು ಪಂಚರಥ ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದೆ. ಹೊರಭಿತ್ತಿಯಲ್ಲಿ ಅರ್ಧಗಂಬಗಳಿಲ್ಲ. ಮಧ್ಯದ ಅಗಲಗೋಡೆಯೇ ಅರ್ಧಗಂಬವನ್ನು ವ್ಯಕ್ತಪಡಿಸುತ್ತದೆ. ಹಾಗೂ ಈ ಲಕ್ಷಣವು ಉತ್ತರದ ನಾಗರಲಕ್ಷಣವನ್ನು ಪ್ರತಿನಿಧಿಸುತ್ತದೆ. ಭಿತ್ತಿಯ ಮೇಲಿನ ಕಪೋತ ಸರಳವಾಗಿದೆ. ಕಪೋತ, ದಂತಪಟ್ಟಿಕಾ, ಹಾರಭಾಗಗಳು ದೇವಾಲಯದ ಸುತ್ತಲೂ ಇವೆ. ಹಾರಭಾಗದಲ್ಲಿ ನಾಸಿಕಗಳಿವೆ. ಹಾರದ ಮೇಲೆ ಗರ್ಭಗೃಹಕ್ಕೆ ದ್ರಾವಿಡ ದ್ವಿತಲ ವಿಮಾನದಲ್ಲಿ ಕೂಟಪಂಜರ ಶಾಲಗಳಿವೆ. ಶಾಲಗಳಲ್ಲಿ ನಾಸಿಕ



ಗಳಿವೆ. ವಿಮಾನದ ಕೆಳಗಿನ ತಲದಲ್ಲಿ ಅರ್ಧಗಂಬಗಳಿವೆ. ವಿಮಾನದ ಮೂರು ದಿಕ್ಕಿಗೂ ಇರುವ ನಾಸಿಗಳಲ್ಲಿ ದಕ್ಷಿಣ ದಿಕ್ಕಿಗೆ ವಿಷ್ಣು, ನಟರಾಜ ಮತ್ತು ದೇಪತೆ, ಪಶ್ಚಿಮ ದಿಕ್ಕಿಗೆ ಶಿವ, ಸರಸ್ವತಿ ಉತ್ತರಕ್ಕೆ ಬ್ರಹ್ಮ ಮತ್ತು ಉಗ್ರದೇವತೆಯ ಚಿತ್ರಗಳನ್ನು ಕಂಡರಿಸಲಾಗಿದೆ. ವಿಮಾನಕ್ಕೆ ಹೊಂದಿಕೊಂಡಂತೆ ಅಂತರಾಳದ ಮೇಲೆ ಶುಕನಾಸವಿದ್ದು ಅಲ್ಲಿ ನಟರಾಜ ಚಿತ್ರವಿದೆ.

ದೇವಾಲಯದ ಅಧಿಷ್ಠಾನ ಹಾಗೂ ಶಿಖರದಭಾಗ ವಾಸ್ತು ಶಿಲ್ಪ ದೃಷ್ಟಿಯಿಂದ ಅತ್ಯುತ್ತಮವಾಗಿದೆ. ಭಿತ್ತಿಯ ಭಾಗ ಪೂರ್ವ ಪ್ರವೇಶದ್ವಾರದ ಕಡೆ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ವಿಮಾನ ಮತ್ತು ನವರಂಗದಲ್ಲಿಯ ಕಂಬಗಳ ಶೈಲಿಯ ಆದಾರದ ಮೇಲೆ ಈ ದೇವಾಲಯದ ನಿರ್ಮಾಣ ಕಾರ್ಯ ಕ್ರಿ.ಶ. ೧೨ನೇ ಶತಮಾನದಲ್ಲಿ ಆಗಿದೆ ಎನ್ನಬಹುದು. ಈ ದೇವಾಲಯದ ಸುತ್ತಲೂ ಪ್ರಾಂಗಣವಿದ್ದು ಅಲ್ಲಿ ಅನೇಕ ಶಿಲ್ಪಗಳು, ವೀರಗಲ್ಲುಗಳು ಮತ್ತು ಶಾಸನಗಳಿವೆ. ಇಲ್ಲಿಯ ಶಾಸನಗಳಲ್ಲಿ ಚೌಡೇಶ್ವರ ದೇವಾಲಯ[೯], ನಾರಾಯಣ ದೇವಾಲಯ[೧೦], ಪಣಿರಾಜ ದೇವಾಲಯ[೧೧], ಜಿನಾಲಯ ನಿರ್ಮಾಣ[೧೨] ಮತ್ತು ಸತ್ರಗಳ ವಿವರಗಳಿವೆ.

ಶಾಸನವುಳ್ಳ ವೀರಗಲ್ಲುಗಳು

ತಂಬೂರಿನ ಬಸವಣ್ಣ ದೇವಾಲಯದ ಹತ್ತಿರ ಎರಡು ವೀರಗಲ್ಲುಗಳಿದ್ದು ಅವುಗಳಿಗೆ ಶಾಸನಗಳಿವೆ. ಈ ಶಾಸನಗಳ ಸ್ಥೂಲ ಸಾರಾಂಶ ಈ ಹಿಂದೆ ಪ್ರಕಟವಾಗಿದೆ.[೧೩] ಆದರೆ ಅವುಗಳ ಪೂರ್ಣಪಾಠ ಮತ್ತು ಕಲಾ ಅಂಶಗಳು ಪ್ರಕಟವಾಗಿಲ್ಲ. ಈ ಶಾಸನದ ಅಕ್ಷರಗಳು ತ್ರುಟಿತಗೊಂಡಿವೆ. ಮೊದಲನೇ ಶಾಸನದ ಅಳಿದುಳಿದ ಪಾಠ ಹೀಗಿದೆ :

೧ ....ಯಳಸತ್ತ ಸಾಸಿರ್ವ ಹು.........

೨ ....ಮಯ್ದನಂಗೆ ಕಲ್ಲಂ ಮಾಡಿಸಿ ನಿ....ದೊ.

ಈ ಶಾಸನದಿಂದ ಬಹುಶಃ ಸಾಸಿರ್ವ ಮಹಾಜನರ ಪರವಾನಿಗೆಯಿಂದ ಮರಣಹೊಂದಿದ ಯೋಧನ ಸ್ಮರಣಾರ್ಥ ಆತನ ಮಯ್ದುನ ಈ ವೀರಗಲ್ಲನ್ನು ನಿಲ್ಲಿಸಿರಬೇಕೆಂದು ಹೇಳಬಹುದು.

ಈ ಶಾಸನವನ್ನು ಹೋರಾಟ ದೃಶ್ಯದ ಮೇಲೆ ಬರೆಯಲಾಗಿದೆ. ಅದರ ಬಲಭಾಗ ಸ್ವಲ್ಪ ಮುರಿದಿದೆ. ಈ ದೃಶ್ಯದಲ್ಲಿ ಚಿತ್ರಿಸಿದ ದೊಡ್ಡ ಎತ್ತರ ಗಾತ್ರದ ವ್ಯಕ್ತಿಯೇ ಮಡಿದ ವೀರನಿರಬೇಕು. ಕುತೂಹಲವೆಂದರೆ ಮಡಿದ ವೀರನೂ ಮತ್ತು ತನ್ನ ಜತೆಯ ಸೈನ್ಯಪರಿವಾರದವರೂ ವೈರಿಗಳ ವಿರುದ್ಧ ಬಲಗಡೆಗೆ ಮುಖಮಾಡಿ ಹೋರಾಡುವ ಭಂಗಿಯಲ್ಲಿದ್ದಾರೆ. ಅವರು ಕೈಗಳಲ್ಲಿ ಬಿಲ್ಲುಗಳನ್ನು ಮುಂದಕ್ಕೆ ಚಾಚಿ ಹಿಡಿದಿದ್ದು ಎಡಗೈಯಲ್ಲಿ ಕಠಾರಿ (ಬಾಣದ ಬದಲು)ಗಳಿವೆ. ಬಲಗಡೆಯಲ್ಲಿ ಕೇವಲ ಮಡಿದ ವೈರಿಗಳು ಅಥವಾ ಕಳ್ಳರು ನೆಲಕ್ಕೆ ಬಿದ್ದಿರುವರು. ಮಡಿದ ವೀರನ ಎಡ ಭಾಗದಲ್ಲಿ ಕೆಳಗೆ ದನಕರುಗಳ ಚಿತ್ರಗಳಿವೆ. ಈ ದನಕರುಗಳ ಚಿತ್ರಗಳಿಂದ ದನಗಳನ್ನು ಕದಿಯಲು ಬಂದ ಕಳ್ಳರ ಸಂಗಡ ವೀರನು



ಹೋರಾಡಿ ತನ್ನ ಪ್ರಾಣವನ್ನು ಕಳೆದುಕೊಂಡಿರುವುದು ವಿದಿತವಾಗುತ್ತದೆ. ಇಂತಹ ವೀರಗಲ್ಲು ಗಳನ್ನು ಗೋಗ್ರಹಣವೆಂದು ಕರೆಯುವರು ಮತ್ತು ಇದರ ಶಾಸನದ ಪ್ರಕಾರ ಅಲ್ಲಿಯ ಸಾವಿರ ಮಹಾರಾಜರ ಪರವಾನಿಗೆ ಪಡೆದು ವೀರನ ಮೈಯ್ದುನ ಈ ವೀರಗಲ್ಲುನ್ನು ನಿಲ್ಲಿಸಿರಬೇಕೆಂದು ತಿಳಿಯುತ್ತದೆ. ಈ ದೃಶ್ಯದ ಚಿತ್ರಗಳ ಮತ್ತು ಶಾಸನದ ಅಕ್ಷರಗಳ ಶೈಲಿಯಿಂದ ಇದರ ಕಾಲ ಸು. ಕ್ರಿ.ಶ. ೧೧ನೇ ಶತಮಾನದ ಮಧ್ಯವೆಂದರೆ, ರಾಷ್ಟ್ರಕೂಟರ ಕಾಲದ್ದೆಂದು ಹೇಳಬಹುದು.

ಈ ವೀರಗಲ್ಲಿನ ಪಕ್ಕದಲ್ಲಿರುವ ಇನ್ನೊಂದು ವೀರಗಲ್ಲಿನಲ್ಲೂ ಹೋರಾಟದ ದೃಶ್ಯವಿದ್ದು ಅದರ ಮೇಲೆ ನಾಲ್ಕು ಸಾಲುಳ್ಳ ಶಾಸನವಿದೆ. ಈ ಶಾಸನದ ಕೇವಲ ಸ್ಥೂಲ ಸಾರಾಂಶವು ಈ ಹಿಂದೆ ಪ್ರಕಟವಾಗಿದೆ.[೧೪] ಅದರ ವಿವರದಲ್ಲಿ ಕಣ್ಣಹ ಮಹಾರಾಜ ಪಲಸಿಗೆ- ೧೨೦೦೦ ಆಳುವಾಗ ತಮ್ಮವೂರ ಅಣ್ಣಿಗನ ವೀರಮರಣ ಹೊಂದಿದನೆಂದು ಹೇಳಲಾಗಿದೆ.

ಶಾಸನದ ಪಾಠ ಹೀಗಿದೆ :

೧ . . . ಪರಮೇಸ್ವರಗೊಳ್ಳರ ವಲ್ಲಭ[ಟ್ಟ]
೨ . . ರಮ ಕಣ್ಣಹ ಮಹಾರಾಜ ರಾಜ್ಯಂಗೆ
೩ ಮೂ . . ನೆಯಲು ನಾಳೆ ನವೆಮಾ ಸಗೊಟ್ಟ
೪ ಮನಣೆ ನಿಪೇದರ್ದ್ದು

ಈ ವೀರಗಲ್ಲಿನ ಯುದ್ಧ ದೃಶ್ಯದಲ್ಲಿ, ಮಡಿದ ವೀರನನ್ನು ಭವ್ಯವಾಗಿ ಎತ್ತರವಾಗಿ ಕತ್ತಿಯನ್ನು ತನ್ನ ವೈರಿಯ ಕುದುರೆಗೆ ಇರಿಯುವ ರೀತಿಯಲ್ಲಿ ತನ್ನ ಪರಿವಾರದ ಸಂಗಡ ಎಡಕ್ಕೆ ಮುಖಮಾಡಿ ನಿಂತಿದ್ದಾನೆ. ತನ್ನ ಪರಿವಾರದವರು ವೈರಿ ಪರಿವಾರದವರು ಬಿಲ್ಲುಗಳನ್ನು ಹಿಡಿದು ಯುದ್ಧ ಮಾಡುವ ಭಂಗಿಯಲ್ಲಿ ಹಾಗೂ ವೈರಿಯು ಮಾತ್ರ ಕುದುರೆ ಮೇಲೆ ಕುಳಿತು ಉದ್ದವಾದ ಈಟಿಯನ್ನು ಹಿಡಿದುಕೊಂಡಿದ್ದು ಜೊತೆಯಲ್ಲಿ ತನ್ನ ಪರಿವಾರದ ಕುದುರೆಯೊಂದು ನೆಲಕ್ಕೆ ಬಿದ್ದಿರುವುದನ್ನು ಚಿತ್ರಿಸಲಾಗಿದೆ. ಹೀಗಾಗಿ ಕಾಲ್ದಳದವರ ಸಂಖ್ಯೆಯೇ ಹೆಚ್ಚು ಇಲ್ಲಿ ಕಾಣುತ್ತದೆ. ಈ ದೃಶ್ಯದ ಬಲಭಾಗದ ಮೂಲೆ ಅಡ್ಡವಾಗಿ ಮುರಿದಿರುವುದರಿಂದ ಈ ಫಲಕದ ಹೆಚ್ಚಿನ ವಿವರಗಳು ಗೋಚರಿಸುವುದಿಲ್ಲ. ಇದರ ಶಾಸನದಲ್ಲಿ



ಹೇಳಿದ ಪ್ರಕಾರ ಈ ಸ್ಥಳದ ಹೆಸರು ತಮ್ಮವೂರೆಂದು, ಮಡಿದ ವೀರ ಅಣ್ಣಿಗನೆಂತಲೂ, ಕಣ್ಣಹ ಮಹಾರಾಜನ ಆಳ್ವಿಕೆಯು ಬಹುತೇಕ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನೆಂತಲೂ (ಈ ಮೊದಲು ಮುಮ್ಮಡಿ ಗೋವಿಂದನ? ಕಾಲ ಎಂಥಲೂ ಹೇಳಲಾಗದೆ) ಇತ್ಯಾದಿ ತಿಳಿದು ಬರುತ್ತದೆ.

ಇದೆ ಗ್ರಾಮದ ಒಂದು ವೀರಗಲ್ಲು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ. ಈ ಶಿಲ್ಪದ ಐತಿಹಾಸಿಕತೆಯನ್ನು ಈಗಾಗಲೇ ವರದಿ ಮಾಡಲಾಗಿದೆ.[೧೫] ಆದರೆ ಅದರಲ್ಲಿ ಶಿಲ್ಪದ ಚಿತ್ರಕಲೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿರುವುದಿಲ್ಲ. ಈ ವೀರಗಲ್ಲಿನ ಶಾಸನದಲ್ಲಿ[೧೬] ಮೂರನೇ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಕ್ರಿ. ಶ. ೧೧೩೬ರ ಅವನ ಮಹಾಮಂಡಳೇಶ್ವರ ಕದಂಬ ಮಲ್ಲಿಕಾರ್ಜುನನು ಹಾನಗಲ್ಲಿನಿಂದ ರಾಜ್ಯಭಾರ ಮಾಡುತ್ತಿದ್ದನು. ಆ ಸಂದರ್ಭದಲ್ಲಿ ತೆರಕಾಡ ಬಿಜ್ಜಳದೇವ, ಹಾನಗಲ್ಲ ಪೂರ್ವಕಡೆಗೆ ಸೈನ್ಯದೊಂದಿಗೆ ಬೀಡು ಬಿಟ್ಟಿದ್ದನು. ಈತನು ಕಾಲ್ದಳ ಮತ್ತು ಕುದುರೆಗಳೊಂದಿಗೆ ಆನೆಯನ್ನು ಏರಿಕೊಂಡು ಹಾನಕೋಟೆಗೆ ದಾಳಿಯನ್ನು ಮಾಡಿದ್ದ ಸಂದರ್ಭದಲ್ಲಿ ಮಹಾಮಂಡಳೇಶ್ವರನ ಮೈದುನ ಕೋಟೆಯಿಂದ ಹೊರಬಂದು ಬಿಜ್ಜಳನ ಸೈನದೊಂದಿಗೆ ಉಗ್ರವಾಗಿ ಹೋರಾಡಿ ದನು. ಆಗ ಆತನ ನಾಯಕನಾದ ಜಲಗರಿ ಮಾಚಸೆಟ್ಟಿಯ ಕೇತಯನಾಯಕ ಬಿಜ್ಜಳನ ಸೈನ್ಯದ ಮೇಲೆ ಏರಿ ಹೋದನು. ಇದು ಸಾಧ್ಯವಿಲ್ಲವೆಂದು ಅರಿತು ಬಿಜ್ಜಳ ತನ್ನ ಕಾಲ್ದಳ ಮತ್ತು ಕುದುರೆದಳದೊಂದಿಗೆ ತನ್ನ ಆನೆಯನ್ನು ಮುಂದೆ ನೂಕಿದನು. ಆಗ ಆನೆಯ ಜೊತೆ ಶೌರ್ಯದಿಂದ ಯುದ್ಧಮಾಡಿ ಕೇತಯನಾಯಕ ಸುರಲೋಕ ಪ್ರಾಪ್ತನಾದನೆಂದು ಈ ಶಾಸನ ಹೇಳುತ್ತದೆ. ಈ ವೀರಗಲ್ಲು ಶಿಲ್ಪದಲ್ಲಿ ದೃಶ್ಯಗಳನ್ನು ಮೂರು ಭಾಗಗಳಲ್ಲಿ ಕಂಡರಿಸಲಾಗಿದೆ. ಕೆಳಗಿನ ಭಾಗದಲ್ಲಿ ಒಬ್ಬ ವೀರನು ಕುದುರೆ ಸವಾರರ ವಿರುದ್ಧ ಹೋರಾಡುತ್ತ

ಂತಿರುವುದನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಈತ ಕೈಯಲ್ಲಿ ಂಡಾದ ಗುರಾಣಿ ಮತ್ತು ಕತ್ತಿಯನ್ನು ಹಿಡಿದು ಎದುರಿಗೆ ೋರಿಸಿದ ಕುದುರೆಗಳ ವಿರುದ್ಧವಾಗಿ ನಿಂತಿದ್ದಾನೆ. ಆ ಕುದುರೆಗಳ ಂಭಾಗದಲ್ಲಿ ಒಂದು ಭವ್ಯವಾದ ಆನೆಯ ಮೇಲೆ ಒಬ್ಬನು ಈಟಿಯನ್ನು ಹಿಡಿದು ಎತ್ತರವಾದ ಪೀಠದ ಮೇಲೆ ಕುಳಿತು ಆ ಈಟಿಯನ್ನು ಯುದ್ಧ ಮಾಡುವ ರೀತಿಯಲ್ಲಿ ಮುಂದಕ್ಕೆ ಚಾಚಿದ್ದಾನೆ. ಈ ಆನೆಯ ಮೇಲೆ ಮಾವುತನೂ ಕುಳಿತಿರುವನು. ಈ ಇಬ್ಬರ ನಡುವೆ ತೋರಿಸಿದ ಕುದುರೆ ಸವಾರರಲ್ಲಿ ಕೆಲವರು ನೆಲಕ್ಕೆ ಬಿದ್ದಿರುವುದನ್ನು ಚಿತ್ರಿಸಲಾಗಿದೆ. ಈ ದೃಶ್ಯದಲ್ಲಿ ಕತ್ತಿ ಹಿಡಿದು ನಿಂತವನು ಮಡಿದ ವೀರ ಕೇತಯ್ಯನಾಯಕನೆಂದು ಮತ್ತು ಕುದುರೆ ಸವಾರ ಬಿಜ್ಜಳನೆಂದು ಗುರುತಿಸಲಾಗಿದೆ. ಅದರ ಎರಡನೆ ದೃಶ್ಯದಲ್ಲಿ ಮಡಿದ ವೀರ ವಿಮಾನ ಮಂಟಪದಲ್ಲಿ ಕುಳಿತಿದ್ದು, ಈ ವಿಮಾನ ವನ್ನು ಅಪ್ಸರೆಯರಿಬ್ಬರು ಒಯ್ಯುತ್ತಿರುವುದನ್ನು ಪ್ರಮಾಣ ಬದ್ಧವಾಗಿ ಚಿತ್ರಸಲಾಗಿದೆ. ಈ ಅಪ್ಸರೆಯರು ಒಂದು ಕೈಯಲ್ಲಿ ವಿಮಾನವನ್ನು ಇನ್ನೊಂದು ಕೈಯಲ್ಲಿ ಚೌರಿಯನ್ನು ಹಿಡಿದಿರುವರು ಈ ವಿಮಾನದ ಶಿಖರದ ಬದಿಗಳಲ್ಲಿ ನೃತ್ಯಗಾರರು ಮತ್ತು ವಾದ್ಯಮೇಳದವರಿದ್ದಾರೆ ಮತ್ತು ಒಬ್ಬನು ಕೈಮುಗಿದು ನಿಂತಿರವನು. ಜೊತೆಯಲ್ಲಿ ತಲೆಯ ಮೇಲೆ ಕುಂಭ ಹೊತ್ತು ನಿಂತ ಇಬ್ಬರು ಮಹಿಳೆಯರಿದ್ದಾರೆ. ಈ ದೃಶ್ಯವು ಮೆರವಣಿಗೆಯನ್ನು ಪ್ರತಿ ನಿಧಿಸುತ್ತದೆ. ಮೇಲಿನ ಮೂರನೇ ಫಲಕದಲ್ಲಿ ದೊಡ್ಡ ಗಾತ್ರದಲ್ಲಿ ವಿಮಾನವನ್ನು ಚಿತ್ರಿಸಿದ್ದು ಅದರ ಮಧ್ಯೆ ಶಿವಲಿಂಗವಿದೆ. ಆ ಶಿವಲಿಂಗದ ಬಲಗಡೆ ಮಡಿದ ವೀರ ಕೈಮುಗಿದು ಕುಳಿತಿದ್ದಾನೆ. ಅವನ ಮುಂದೆ ಯತಿಯೊಬ್ಬ ನಿಂತು ಶಿವಲಿಂಗವನ್ನು ಪೂಜಿಸು ತ್ತಿರುವನು. ಮತ್ತೊಂದು ಕುತೂಹಲದ ಸಂಗತಿ ಎಂದರೆ ಈ ವಿಮಾನದ ಬಲಗಡೆಗೆ ನಂದಿಯು ಮತ್ತು ಎಡಗಡೆ ಆಕಳು -ಕರು ಶಿವಲಿಂಗದ ಕಡೆ ಮುಖಮಾಡಿ ಕುಳಿತಿವೆ. ಈ ವಿಮಾನದ ಶಿಖರದ ಬದಿಗಳಲ್ಲಿ ಸೂರ್ಯ-ಚಂದ್ರರ ಚಿಹ್ನೆಗಳಿವೆ. ಕಲಾ ನಿರ್ಮಾಪಕ ಈ ಶಿಲ್ಪವನ್ನು ತುಂಬಾ ಆಕರ್ಷ ಣೀಯವಾಗಿ ಮತ್ತು ಪ್ರಮಾಣಬದ್ಧವಾಗಿ ಮತ್ತು ನೈಜವಾಗಿ



ಚಿತ್ರಿಸಿರುವನು. ಹೀಗಾಗಿ ಈ ಶಿಲ್ಪ ಕೇವಲ ರಾಜಕೀಯ ಚರಿತ್ರೆಯ ಪುನರ್ರಚನೆಗಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಕಲಾ ಇತಿಹಾಸದ ರಚನೆಗೂ ಮಹತ್ವವೆನಿಸಿದೆ ಕೃಪೆ ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ., ಧಾರವಾಡ)

ಇದೇ ಗ್ರಾಮದ ಬಸವಣ್ಣ ದೇವಾಲಯದ ಆವರಣದಲ್ಲಿ ಐದು ವೀರಗಲ್ಲುಗಳಿವೆ. ಅವುಗಳ ವಿವರ ಈ ಕೆಳಗಿನಂತಿವೆ.

ಒಂದನೆಯ ವೀರಗಲ್ಲಿನ ಕೆಳಗಿನ ಮತ್ತು ಮೇಲಿನ ಭಾಗ ಒಡೆದು ಹೋಗಿದ್ದು ಅದರ ಮಧ್ಯಭಾಗ ಮಾತ್ರ ಕಂಡುಬರುತ್ತಿದೆ. ಈ ಫಲಕದ ಮೇಲಿನ ಭಾಗದಲ್ಲಿ ಶಾಸನ ಕಂಡುಬರುತ್ತಿದ್ದು ಅದು ಒಡೆದಿರುವ ಕಾರಣ ಸ್ವಲ್ಪ ಮಾತ್ರ ಕಂಡು ಬರುತ್ತಿದೆ. ಅಳಿದುಳಿದ ಶಾಸನವೆಂದರೆ,

೧ . . . ತುಮ ತನ.........(ಹ) ಳ್ಳ ಗ್ರಾಮ. . . .

ಎಂಬುದು ಮಾತ್ರ ಕಂಡುಬರುತ್ತಿದೆ. ಫಲಕದ ಕೆಳಗೆ ಕಂಡು ಬರುವ ಶಾಸನವೆಂದರೆ,

೧ . . . ಓಗನೆಯರ ವಧನಾಳೊ . . . ದ॥ಆ ವಯ ನದಿಂದೊ

೨ . . . ಮುದ್ದವೊ (ಕೊ?) ನ್ದ . . . . ಳಿ ಬ


ಈ ಫಲಕದ ದೃಶ್ಯದಲ್ಲಿ ಅಲಂಕಾರವುಳ್ಳ ವಿಮಾನ ಮಂಟಪದಲ್ಲಿ ವೀರ ಕೈ ಮುಗಿದು ಪದ್ಮಾಸನದಲ್ಲಿ ಕುಳಿತಿರುವನು. ಅಪ್ಸರೆಯರು ಒಂದು ಕೈಯಲ್ಲಿ ವಿಮಾನವನ್ನು ಮತ್ತೊಂದು ಕೈಯಲ್ಲಿ ಚೂರಿಯನ್ನು ಹಿಡಿದು ಮೇಲಕ್ಕೆ ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಈ ಅಪ್ಸರೆಯರ ಬದಿಯಲ್ಲಿ ಸೇವಕಿಯರು ಕಳಸ ಹೊತ್ತಿದ್ದಾರೆ. ಈ ಅಪ್ಸರೆಯರ ಮತ್ತು ವಿಮಾನದ ಮೇಲ್ಭಾಗದಲ್ಲಿ ಮೋಡಗಳ ಚಿನ್ಹೆಗಳನ್ನು ರೂಪಿಸಲಾಗಿದೆ. ಈ ಮಂಟಪದ ಬಲಬದಿಗೆ ಮತ್ತು ಎಡಬದಿಗೆ ವಾದ್ಯ ಮತ್ತು ನೃತ್ಯ ಮೇಳದವರು ಇರುವರು. ಈ ಮಂಟಪದ ಶಿಖರ ನಾಗರ ಶೈಲಿಯಲ್ಲಿದೆ. ಶಿಲ್ಪದ ಲಕ್ಷಣ ಮತ್ತು ಶಾಸನದ ಅಕ್ಷರಗಳ ಶೈಲಿಯಿಂದ ಈ ಶಿಲ್ಪದ ಕಾಲ ಸು. ಕ್ರಿ.ಶ. ೧೨ನೇ ಶತಮಾನ ಎಂದು ತರ್ಕಿಸಬಹುದು.



ಎರಡನೆಯ ವೀರಗಲ್ಲಿನಲ್ಲಿ ಮೂರು ಪಟ್ಟಿಕೆಗಳಿವೆ. ಈ ಪಟ್ಟಿಕೆಗಳ ಮಧ್ಯಭಾಗದಲ್ಲಿ ಎರಡು ಪಟ್ಟಿಕೆಗಳಲ್ಲಿ ಶಾಸನವಿದೆ. ಮೊದನೆಯ ಫಲಕದ ಎಡಭಾಗದ ಅಲ್ಪ ಭಾಗ ಮುರಿದು

ಹೋಗಿದೆ. ಉಳಿದ ಭಾಗದಲ್ಲಿ ವೀರನು ಬಿಲ್ಲು ಮತ್ತು ಕತ್ತಿಯನ್ನು ಹಿಡಿದು ವೈರಿಗಳ ವಿರುದ್ಧ ಮುಂದಕ್ಕೆ ಚಾಚಿ ನಿಂತಿದ್ದಾನೆ. ಈತನನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಈತನ ಕಣ್ಣುಗಳನ್ನು ಸೂಕ್ಷ್ಮ ಅತಿ ನೈಜವಾಗಿ ಚಿತ್ರಿಸಲಾಗಿದೆ. ಈತನ ತಲೆಯ ಬಲಭಾಗಕ್ಕೆ ಮೂರು ಗೋವುಗಳ ಚಿತ್ರಗಳಿವೆ. ಈ ಗೋವುಗಳ ಕೆಳಗಡೆ ಇಬ್ಬರು ಸೈನಿಕರ ಮುರಿದ ಚಿತ್ರಗಳಿವೆ. ಎಡಗಡೆ ಮುರಿದ ಭಾಗದಲ್ಲಿ ಒಬ್ಬ ಯೋಧನು ವೀರನ ಬಿಲ್ಲಿಗೆ ಈಟಿಯಿಂದ ಚುಚ್ಚಿರುವುದನ್ನು ಕಾಣಬಹುದು. ಇದರ ಮೇಲಿನ ಫಲಕದ ದೃಶ್ಯದಲ್ಲಿ ಮಡಿದ ವೀರನನ್ನು ವಿಮಾನ ಮಂಟಪದಲ್ಲಿ ಕೈಮುಗಿಸಿ ಕೂಡಿಸಲಾಗಿದೆ. ಈ ವಿಮಾನವನ್ನು ಬಲಗಡೆ ಅಪ್ಸರೆಯೊಬ್ಬಳು ಒಂದು ಕೈಯಿಂದ ಹಿಡಿದು ಮತ್ತೊಂದು ಕೈಯಲ್ಲಿ ಚೌರಿಯನ್ನು ಹಿಡಿದು ನಿಂತಿದ್ದಾಳೆ. ಆಕೆಯು ತನ್ನ ಎಡಗಾಲನ್ನು ವಿಮಾನಮಂಟಪದ ಬುಡದಲ್ಲಿಟ್ಟು ನಿಂತಿದ್ದಾಳೆ. ಈ ಮಂಟಪದ ಎಡಗಡೆಯಲ್ಲಿ ಮಹಿಳೆಯೊಬ್ಬಳು ನೃತ್ಯ ಮಾಡುತ್ತಿರುವಳು. ಈ ವಿಮಾನದ ಶಿಖರದ ಬದಿಗಳಲ್ಲಿ ವಾದ್ಯ ಮೇಳದವರು ತಾಳ, ಮದ್ದಳೆ, ತುತ್ತೂರಿ ಹಿಡಿದಿದ್ದಾರೆ. ಮೇಲಿನ ಫಲಕದಲ್ಲಿ ವಿಮಾನ ಮಂಟಪವಿದ್ದು ಅದರಲ್ಲಿ ಯತಿ ಶಿವಲಿಂಗಕ್ಕೆ ಪೂಜಿಸುತ್ತಾ ನಿಂತಿರುವನು. ಬಲಗಡೆ ಮಡಿದ ವೀರ ಕೈಮುಗಿದು ಕುಳಿತಿರುವನು. ಎಡಗಡೆ ನಂದಿ ಕುಳಿತಿದೆ. ವಿಮಾನದ ಶಿಖರ ಮಾದರಿ ಮತ್ತು ಮಧ್ಯ ಫಲಕದಲ್ಲಿ ಚಿತ್ರಿಸಿದ ವಿಮಾನದ ಶಿಖರ ಭಿನ್ನವಾಗಿವೆ. ಮೇಲಿನ ವಿಮಾನದ ಮಧ್ಯಭಾಗದಲ್ಲಿ ಕೈಚಾಚಿ ನಿಂತ ವೀರನ ಚಿತ್ರವನ್ನು ಕೊರೆಯಲಾಗಿದೆ. ಈ ವಿಮಾನದ ಎಡ-ಬಲಗಳಲ್ಲಿ ಸೂರ್ಯ-ಚಂದ್ರ ಚಿತ್ರಗಳಿವೆ.

ಮೂರನೆಯ ವೀರಗಲ್ಲಿನಲ್ಲಿ ಮೂರು ಫಲಕಗಳಲ್ಲಿ ದೃಶ್ಯಗಳಿವೆ. ಕೆಳಗಿನ ಫಲಕದ ದೃಶ್ಯದ ಮಧ್ಯೆ ವೀರನ ಚಿತ್ರವನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಬಿಲ್ಲನ್ನು ಎಡಗೈಯಲ್ಲಿ ಹಿಡಿದು ವೈರಿಗಳ ಕಡೆ ಅಡ್ಡವಾಗಿ ಹಿಡಿದು ಬಲಗೈಯಲ್ಲಿ ಬಾಣವನ್ನು ಹಿಡಿದು ಯುದ್ಧದಲ್ಲಿ ಮಡಿದ ಒಬ್ಬ ವ್ಯಕ್ತಿಯ ಮೇಲೆ ನಿಂತಿದ್ದಾನೆ. ಆ ವ್ಯಕ್ತಿ ನೆಲದ ಮೇಲೆ ಮಲಗಿರುವನು. ಸೊಂಟಕ್ಕೆ ಚೂರಿಯನ್ನು ಜೊತೆಗೆ ವಸ್ತ್ರವನ್ನು ಕಟ್ಟಿದ್ದಾನೆ. ಅವನ ಬಲಗಡೆಗೆ ಅವನ ಅನುಯಾಯಿಗಳಾದ ಮೂವರು ಸೈನಿಕರು ಬಿಲ್ಲು-ಬಾಣ, ಈಟಿ, ಕತ್ತಿ ಆಯುಧಗಳನ್ನು ಹಿಡಿದು ನಿಂತಿರುವರು ಮತ್ತು ಅವರ ಬಲಬದಿಗೆ ಕೆಳಗಿನಿಂದ ಮೇಲಕ್ಕೆ ಮೂರು ಆಕಳುಗಳ ಚಿತ್ರಗಳಿವೆ. ಈ ವೀರನ ಬಿಲ್ಲಿನ ಎದುರಿಗೆ ವೈರಿ ದಳದಲ್ಲಿ ಇಬ್ಬರು ಬಾಣ, ಈಟಿ, ಗುರಾಣಿಗಳನ್ನು ಹಿಡಿದು ನಿಂತಿದ್ದು, ಬಿಲ್ಲಿನ ಕೆಳಗೆ ಮತ್ತು ಮುಂದೆ ನಿಂತ ವೈರಿಯ ಪಾದದ ಕೆಳಗಡೆ ಕೇವಲ ರುಂಡದ ಚಿತ್ರವನ್ನು ಚಿತ್ರಿಸಲಾಗಿದೆ. ಇಬ್ಬರು ಕಾಲ್ದಳ ವೈರಿಗಳ ಹಿಂಬದಿಯಲ್ಲಿ ಇಬ್ಬರು ಕುದುರೆದಳ ಸೈನಿಕರು ಈಟಿ, ಕಠಾರಿಗಳನ್ನು ಹಿಡಿದು ಕುದುರೆ ಸವಾರಿ ಮಾಡುತ್ತಿರುವರು. ಎರಡನೇ ಫಲಕದ ದೃಶ್ಯದ ಮಧ್ಯದಲ್ಲಿ ವಿಮಾನದಲ್ಲಿ ಮಡಿದ ವೀರ ಕೈಮುಗಿದು ಕುಳಿತಿದ್ದು ಆತನ ತುರುಬನ್ನು ಇಲ್ಲಿ ತಲೆಯ ಎಡಗಡೆ ಚಿತ್ರಿಸಿರುವುದು ಗಮನೀಯ. ಈ ವಿಮಾನ ಮಂಟಪವನ್ನು ತಲಾ ಒಂದು ಕಡೆ ಇಬ್ಬರು ಅಪ್ಸರೆಯರು ಹಿಡಿದುಕೊಂಡು ನಿಂತಿದ್ದಾರೆ. ಅಪ್ಸರೆಯರ ಮತ್ತೊಂದು ಕೈಯಲ್ಲಿ ಇಬ್ಬರು ಫಲಗಳನ್ನು ಹಿಡಿದಿದ್ದಾರೆ. ಉಳಿದಿಬ್ಬರು ಫಲ ಮತ್ತು ಚೌರಿಯನ್ನು ಹಿಡಿದಿದ್ದಾರೆ. ಮೂರನೇ ಫಲಕದಲ್ಲಿ ಯತಿಯೊಬ್ಬ ಘಂಟೆ ಮತ್ತು ಆರತಿಯನ್ನು ಹಿಡಿದು ಶಿವಲಿಂಗಕ್ಕೆ ಪೂಜಿಸುತ್ತಿರುವನು. ಆತನ ಬಲಬದಿಗೆ ವೀರನು ಕೈಮುಗಿದು ಕುಳಿತಿದ್ದಾನೆ. ತನ್ನ ಬಲಗಡೆಗೆ ತನ್ನ ತಲೆಯ ತುರುಬನ್ನು ತೋರಿಸಿರುವುದು ಗಮನೀಯ. ಶಿವಲಿಂಗದ ಎಡಗಡೆಗೆ ಕುಳಿತ ನಂದಿ ತನ್ನ ಬಲಗಾಲನ್ನು ಮುಂದಕ್ಕೆ ಚಾಚಿ ಕುಳಿತಿದೆ. ಈ ಶಿಲ್ಪದಲ್ಲಿ ವಿಮಾನದ ಭಾಗ ಶಿವಲಿಂಗದ ಭಾಗ ಮತ್ತು ಮೇಲಿನ ಪಟ್ಟಿಕೆಯ ಭಾಗ ಒಡೆದು ಹೋಗಿದೆ. ಶಿಲ್ಪದ ಶೈಲಿಯ ಆಧಾರದಿಂದ ಇದರ ಕಾಲ ಕ್ರಿ.ಶ. ೧೨ನೇ ಶತಮಾನ.



ನಾಲ್ಕನೆಯ ವೀರಗಲ್ಲು ಶಿಲ್ಪದಲ್ಲಿ ಮೂರು ದೃಶ್ಯಗಳಿವೆ. ಈ ದೃಶ್ಯಗಳ ಮಧ್ಯೆ ಎರಡು ಹಂತಗಳಲ್ಲಿ ಐದೈದು ಸಾಲಿನ ಶಾಸನವಿದೆ. ಮೇಲಿನ ಹಂತದ ಐದು ಸಾಲಿನ ಶಾಸನದಲ್ಲಿ

೧ ಜೀತನ ಲಬ್ಯತೆ ಲಕ್ಷ್ಮಿ......

ಎಂದು ಮೊದಲ ಸಾಲಿನಲ್ಲಿದೆ. ಕೆಳಗಿನ ಪಟ್ಟಿಕೆಯ ಐದು ಸಾಲಿನ ಶಾಸನದಲ್ಲಿ ಮೊದಲೆರಡು ಸಾಲಿನಲ್ಲಿ-

೧ ..... ತಲೆಯ ಕೊಂಡು [ದು]....

೨ .... ಸುರಲೋಕ ಪ್ರಾಪ್ತನಾ[ದ]...

ಎಂಬುದಿಷ್ಟು ಮಾತ್ರ ಕಂಡುಬರುತ್ತದೆ. ಕಾರಣ ಶಾಸನ ಅಲ್ಲಲ್ಲಿ ತ್ರುಟಿತಗೊಂಡಿದೆ.

ಮೂರು ದೃಶ್ಯಗಳಿರುವ ಈ ವೀರಗಲ್ಲಿನ ಕೆಳಗಿನ ಫಲಕದ ದೃಶ್ಯದಲ್ಲಿ ವೀರನ ಚಿತ್ರವನ್ನು ಮಧ್ಯ ದೊಡ್ಡದಾಗಿ ಚಿತ್ರಿಸಲಾಗಿದೆ. ವೀರನು ಎದುರು ನಿಂತ ವೈರಿಯ ಕೂದಲನ್ನು ಎಡಗೈಯಲ್ಲಿ ಹಿಡಿದು, ಬಲಗೈಯಲ್ಲಿ ಹಿಡಿದ ಕತ್ತಿಯಿಂದ ಹೊಟ್ಟೆಯ ಒಳಗೆ ತಿವಿದು ನೆಲದ ಮೇಲೆ ಸತ್ತ ವ್ಯಕ್ತಿಯ ಮೇಲೆ ತನ್ನ ಕಾಲುಗಳನ್ನು ಮೆಟ್ಟಿ ನಿಂತಿದ್ದಾನೆ. ತಾನು ಮೆಟ್ಟಿದ ಸತ್ತ ಸೈನಿಕನ ಹೊಟ್ಟೆಯಿಂದ

ಮ್ಮಿದ ರಕ್ತ ಮತ್ತು ಇಳಿಬಿದ್ದ ಉದರ ಭಾಗವನ್ನು ನಾಯಿಯೊಂದು ನ್ನುತ್ತಿರುವಂತೆ ಚಿತ್ರಿಸಿರುವುದು ತುಂಬಾ ಮಾರ್ಮಿಕವಾಗಿದೆ. ನ್ನ ಎಡ ತೋಳಿನಲ್ಲಿ ಕಟ್ಟಿದ ಗುರಾಣಿಯನ್ನು ವೈರಿಯ ಅರ್ಧತಲೆ, ನ್ನ ಎಡಗೈ ಮತ್ತು ಸ್ವಲ್ಪ ದೇಹಾಂಗದ ಹಿಂಬದಿಯಲ್ಲಿ ವೃತ್ತಾಕಾರವಾಗಿ ಚಿತ್ರಿಸಲಾಗಿದೆ. ಸೊಂಟದಲ್ಲಿ ವಸ್ತ್ರವನ್ನಲ್ಲದೆ ಗುರಾಣಿಯನ್ನು ಕಟ್ಟಿದ್ದಾನೆ. ತನ್ನ ತಲೆಯ ಕೇಶದ ತುರುಬು ತಲೆಯ ಬಲಭಾಗದಲ್ಲಿದ್ದು ಅದನ್ನು ಗಂಟು ಹಾಕಿದ ಚುಂಬು ಕೆಳಗಡೆಗೆ ಇಳಿದಿದೆ ಮತ್ತು ಗಂಟು ಮೇಲಕ್ಕಿದೆ. ತುರುಬು ತಲೆಯ ಮೇಲೆ ಅಲಂಕಾರ ಮಾಡಿದ ಛತ್ರಿಯನ್ನು ಕಂಡರಿಸಲಾಗಿದೆ. ವೈರಿ ತನ್ನ ಎಡಗೈಯಲ್ಲಿ ಹಿಡಿದ ವೃತ್ತಾಕಾರದ ಗುರಾಣಿ ತನ್ನ ಬೆನ್ನ ಹಿಂದಕ್ಕೆ ಹಿಡಿದ್ದಾನೆ. ಈ ವೀರನ ಬಲಭಾಗದಲ್ಲಿ ಆತನ ಸೈನಿಕ ಪರಿವಾರ ದವರನ್ನು ಹೋರಾಟ ದೃಶ್ಯದಲ್ಲಿ ಚಿತ್ರಿಸಲಾಗಿದೆ. ತನ್ನ ಪರಿವಾರ ದವರಲ್ಲಿ ಒಟ್ಟು ಕಾಲ್ದಳದಲ್ಲಿ ನಾಲ್ವರು ಅಶ್ವದಳ ದವರಿದ್ದಾರೆ. ಕಾಲ್ದಳದವನು ಬಿಲ್ಲನ್ನು ಮುಂದಕ್ಕೆ ಚಾಚಿ ಬಾಣವನ್ನು ಹೊಡೆಯು ತ್ತಿರುವಂತೆ ನಿಂತಿದ್ದಾನೆ. ಈ ಅಶ್ವದಳದಲ್ಲಿ ಒಬ್ಬನು ಒಂದು ಕೈಯಲ್ಲಿ ಕುದುರೆಯ ಲಗಾಮನ್ನು ಮತ್ತೊಂದು ಕೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಮತ್ತೊಬ್ಬನು ಕುದುರೆಯ ಮೇಲೆ ಕುಳಿತು ನಗಾರಿಯನ್ನು ಬಾರಿಸುತ್ತಿರುವನು. ಮತ್ತೊಬ್ಬನು ಒಂದು ಕೈಯಲ್ಲಿ ಕುದುರೆಯ ಲಗಾಮನ್ನು ಮತ್ತೊಂದು ಕೈಯಲ್ಲಿ ಧ್ವಜದ ಕೋಲನ್ನು ಹಿಡಿದುಕೊಂಡು ಕುದುರೆಯ ಮೇಲೆ ಕುಳಿತಿದ್ದಾನೆ. ಮಗದೊಬ್ಬನು ಒಂದು ಕೈಯಲ್ಲಿ ಕುದುರೆಯ ಲಗಾಮನ್ನು ಮತ್ತೊಂದು ಕೈಯಲ್ಲಿ ಉದ್ದವಾದ ಭರ್ಜಿಯನ್ನು ಹಿಡಿದುಕೊಂಡು ಕುಳಿತಿರುವನು. ವೈರಿಗಳ ಗುಂಪಿನಲ್ಲಿ ಒಬ್ಬನು ಕಾಲ್ದಳದವನು, ಮೂವರು ಕುದುರೆ ದಳದವರು ಮತ್ತೊಬ್ಬನು ವಾದ್ಯ ಬಾರಿಸುತ್ತಿರುವವನನ್ನು ಚಿತ್ರಸಲಾಗಿದೆ. ಕಾಲ್ದಳದವನು ಒಂದು ಕೈಯಲ್ಲಿ ಕತ್ತಿ ಮತ್ತೊಂದು ಕೈಯಲ್ಲಿ ಆಯತಾಕಾರದ ಗುರಾಣಿಯನ್ನು ಹಿಡಿದ್ದಾನೆ. ಈ ಆಯತಾಕಾರದ ಗುರಾಣಿಯ ಮುಂಭಾಗ ಸ್ವಲ್ಪ ಚೂಪಾಗಿರುವುದು. ಕುದುರೆ ದಳದಲ್ಲಿ ಒಬ್ಬನ ಕುದುರೆಯ ಕುತ್ತಿಗೆಗೆ ಅಲಂಕಾರಯುಕ್ತ ಬಾಣ ನೆಟ್ಟಿದೆ. ಕುದುರೆ ಸವಾರಿ ಮಾಡುವವ ಒಂದು ಕೈಯಲ್ಲಿ ಕುದುರೆ ಲಗಾಮು ಮತ್ತೊಂದು ಕೈಯಲ್ಲಿ ಕತ್ತಿಯನ್ನು ಮೇಲಕ್ಕೆತ್ತಿ ಹಿಡಿದಿದ್ದಾನೆ. ಇನ್ನೊಬ್ಬ ಕುದುರೆ ಸವಾರನು ನಗಾರಿಯನ್ನು ಬಾರಿಸುತ್ತಿರುವನು. ಮತ್ತೊಬ್ಬ ಕುದುರೆ ಸವಾರನು ಒಂದು ಕೈಯಲ್ಲಿ ಲಗಾಮನ್ನು ಹಿಡಿದು ಕುಳಿತಿದ್ದಾನೆ. ತನ್ನ ಬಲಗೈಯಲ್ಲಿ ಈಟಿಯನ್ನು ಮುಂದಕ್ಕೆ ಚಾಚಿ ಹಿಡಿದಿದ್ದಾನೆ. ಕುತೂಹಲವೆಂದರೆ ಈ ಯೋಧ ತಲೆಯಿಂದ ಕುತ್ತಿಗೆಯವರೆಗೆ ಮುಖಭಾಗ ಬಿಟ್ಟು ಶಿರಸ್ತ್ರಾಣವನ್ನು ಧರಿಸಿದ್ದಾನೆ ಮತ್ತು ದೇಹಕ್ಕೆ ಕವಚವನ್ನು ಹಾಕಿಕೊಂಡಿದ್ದಾನೆ. ಕುದುರೆಯ ದೇಹದ ಮೇಲೆ ಜೂಲನ್ನು ಹಾಕಲಾಗಿದ್ದು, ತನ್ನ ಕಾಲನ್ನು ಜೂಲಿನ ಕೆಳಗಿನ ರಂಧ್ರದಲ್ಲಿ ಇಟ್ಟಿದ್ದಾನೆ. ಅವನ ಹಿಂದೆ ಒಬ್ಬ ವ್ಯಕ್ತಿ ಒಂದು ಕೈಯಲ್ಲಿ ತುತ್ತೂರಿಯನ್ನು ಊದುತ್ತಿರುವನು. ಮತ್ತೊಂದು ಕೈಯಲ್ಲಿ ಇನ್ನೊಂದು ವಾದ್ಯದ ವಸ್ತುವನ್ನು ಹಿಡಿದಿರುವನು. ಈ ಚಿತ್ರಗಳ ಕೆಳಗೆ ಒಂದೇ ಸಾಲಿನಲ್ಲಿ ನಾಲ್ಕು ಗೋವುಗಳಿವೆ.

ಎರಡನೆಯ ಫಲಕದ ದೃಶ್ಯದಲ್ಲಿ ವಿಮಾನ ಮಂಟಪದ ಮಧ್ಯೆ ವೀರನು ಕೈಮುಗಿದು ಕುಳಿತಿದ್ದಾನೆ. ಆ ವಿಮಾನದ ಕೆಳಗಡೆ ಸಾಲಾಗಿ ಐದು ಮಂದಿ ವಾದ್ಯ ನೃತ್ಯದವರು ನಿಂತಿದ್ದಾರೆ. ಇಬ್ಬರು ತಾಳವನ್ನು ಹಾಕುತ್ತಾ ನಿಂತಿದ್ದರೆ, ಇನ್ನಿಬ್ಬರು ನಗಾರಿಯನ್ನು ಬಾರಿಸುತ್ತಾ ನಿಂತಿರುವರು. ಮಧ್ಯದಲ್ಲಿ ಒಬ್ಬ ವ್ಯಕ್ತಿ ಬಲಗೈಯಲ್ಲಿ ಒಂದು ವಸ್ತುವನ್ನು ಹಿಡಿದು ಎಡಗೈಯಲ್ಲಿ ವಾದ್ಯದ ವಸ್ತು ಹಿಡಿದು ಬಲಗಾಲು ಮೇಲಕ್ಕೆತ್ತಿ ನೃತ್ಯ ಮಾಡುತ್ತಿರುವಂತೆ ಇರುವನು. ನಗಾರಿಯವರು ತಮ್ಮ ತೊಡೆಯ ಮೇಲೆ ನಗಾರಿಗಳನ್ನಿಟ್ಟುಕೊಂಡು ಬಾರಿಸುತ್ತಿರುವರು. ಈ ವಿಮಾನವನ್ನು ಅಪ್ಸರೆಯರಿಬ್ಬರು ಒಂದು ಕೈಯಲ್ಲಿ ವಿಮಾನವನ್ನು ಮತ್ತೊಂದು ಕೈಯಲ್ಲಿ ಚೌರಿ ಹಿಡಿದು ಒಂದು ಕಾಲನ್ನು ವಿಮಾನದ ಮಂಟಪಕ್ಕೆ ಮೆಟ್ಟಿ ಆಕಾಶದಲ್ಲಿ ಹಾರುವಂತೆ ಚಿತ್ರಸಲಾಗಿದೆ. ವಿಮಾನ ಮತ್ತು ಈ ಅಪ್ಸರೆಯರ ಮೇಲ್ಭಾಗದಲ್ಲಿ ಮೋಡಗಳ ತೆರೆಗಳನ್ನು ಕಂಡರಿಸಲಾಗಿದೆ. ಈ ವಿಮಾನದ ಕಳಸದ ಬದಿಗಳಲ್ಲಿ ತುತ್ತೂರಿ ಊದುವ ವಾದ್ಯ ಗಾರರಿದ್ದಾರೆ. ಆಕಾಶದಲ್ಲಿ ಹಾರುವ ಮೆರವಣಿಗೆಯ ಈ ದೃಶ್ಯ ಮನಮೋಹಕವೆನಿಸಿದೆ.

ಮೂರನೇ ಫಲಕದ ದೃಶ್ಯದಲ್ಲಿ ಮಧ್ಯದಲ್ಲಿ ಅಲಂಕಾರಯುಕ್ತ ವಿಮಾನವಿದೆ. ಅದರ ಒಳಗಡೆ ಮಧ್ಯೆ ಶಿವಲಿಂಗವನ್ನು ಉದ್ದ ಜಡೆಯ ಯತಿಯೊಬ್ಬ ಒಂದು ಕೈಯಲ್ಲಿ ಗಂಟೆ ಮತ್ತೊಂದು ಕೈಯಲ್ಲಿ ಆರತಿ ಹಿಡಿದು ಪೂಜಿಸುತ್ತಾ ನಿಂತಿರುವನು. ವಿಮಾನದ ಬಲಗಡೆಗೆ ಮಡಿದ ವೀರ ಕೈಮುಗಿದು ಪೀಠದ ಮೇಲೆ ಕುಳಿತಿರುವನು. ಬಲಗಡೆಗೆ ನಂದಿಯು ತನ್ನ ಬಲಗಾಲನ್ನು ಮುಂದೆ ಚಾಚಿಕೊಂಡು ಪೀಠದ ಮೇಲೆ ಕುಳಿತಿರುವುದು. ಈ ವಿಮಾನಕ್ಕೆ ಮೂರು ಮುಂಚಾಚಿದ ಪಟ್ಟಿಕೆಗಳು ಅದರ ಮೇಲೆ ಕಳಸವಿದೆ. ಈ ಕಳಸದ ಬದಿಗಳಲ್ಲಿ ಸೂರ್ಯ-ಚಂದ್ರರ ಚಿಹ್ನೆಗಳಿವೆ. ಈ ಶಿಲ್ಪದ ಮೇಲಿನ ಭಾಗ ಸುಮಾರಾಗಿ ಅರ್ಧವೃತ್ತಾಕಾರದಲ್ಲಿದೆ. ಈ ಶಿಲ್ಪದ ಸುತ್ತಲಿನ ಅರ್ಧವೃತ್ತಾಕಾರ ಮತ್ತು ಮೇಲೆ ಕೆಳಗಿನ ಪಟ್ಟಿಕೆಯಲ್ಲಿ ರತ್ನಗಳನ್ನು ಕಂಡರಿಸಲಾಗಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ ೧೨ನೇ ಶತಮಾನ (ಚಿತ್ರ ೮-೩).

ಐದನೆಯ ವೀರಗಲ್ಲಿನಲ್ಲಿ ಮೇಲಿನ ಅಡ್ಡಪಟ್ಟಿಕೆಯಲ್ಲಿ ನಾಲ್ಕು ಸಾಲಿನ ಶಾಸನವಿದೆ. ಅದರ ಪಾಠ ಹೀಗಿದೆ:

ಪಾಠ :

೧ ಸ್ವಸ್ತಿ ಶ್ರೀ ಕಾದಂಬ ಶ್ರೀ ವೀರ ಜಯಕೇಶಿ ದೇವ [ವರ್ಷ] ದ ೧೫ನೆ

೨ [ಯ] ದುರ್ಮತಿ ಸಂವತ್ಸರದ ಶ್ರಾವಣ ಸುದ್ಧ ಆದಿತ್ಯವಾರ [ದಂದು ತಂ]


೩ ಮ್ಮಿಯೂರ ನಾಮಿಕ ಬೊಪ್ಪ ತುರು ಹರೆಯಲು ಕಾದಿ ಸುರಲೋಕ ಪ್ರಾ

೪ ಪ್ತ ವಂತನಾದ॥

ಈ ವೀರಗಲ್ಲು ಸಹ ಮೂರು ಹಂತಗಳಲ್ಲಿದೆ. ಮೊದಲನೇ ಹಂತದ ದೃಶ್ಯದಲ್ಲಿ ವೀರನನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಆತ ಒಂದು ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಇನ್ನೊಂದು ಕೈಯಲ್ಲಿ ಕತ್ತಿಯನ್ನು ಹಿಡಿದು ವೈರಿಯ ಹೊಟ್ಟೆಯನ್ನು ಇರಿದಿದ್ದಾನೆ. ವೈರಿಯ ಹೊಟ್ಟೆಯ ಕರುಳಿನ ಭಾಗವು ಹೊಟ್ಟೆಯಿಂದ ಚಿಮ್ಮಿದೆ. ಸೊಂಟದಲ್ಲಿ ಕಠಾರಿಯನ್ನು ವಸ್ತ್ರದೊಂದಿಗೆ ಕಟ್ಟಿದ್ದಾನೆ. ನೆಲದ ಮೇಲೆ ಬಿದ್ದ ಸತ್ತ ವ್ಯಕ್ತಿಯ ತಲೆಯ ಮೇಲೆ ಮುಂದಿನ ಕಾಲಿನಿಂದ ಮೆಟ್ಟಿದ್ದಾನೆ. ತಲೆಯ ಎಡಗಡೆಗೆ ಕೇಶದಿಂದ ಕಟ್ಟಿದ ತುರುಬಿನ ಅಲಂಕರಣವಿದೆ. ತಲೆಯ ಮೇಲೆ ಒಂದು ಛತ್ರಿ ಇದೆ. ಆತನ ಹಿಂಬದಿಗೆ ಕೆಳಗಿನಿಂದ ಮೇಲಕ್ಕೆ ಒಂದೇ ಸಾಲಿನಲ್ಲಿ ಐದು ಹಸುಗಳಿವೆ. ವೈರಿಯು ಒಂದು ಕೈಯಲ್ಲಿ ಕತ್ತಿ ಮತ್ತೊಂದು ಕೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡು ತನ್ನ ದೇಹ ಮತ್ತು ತಲೆಯನ್ನು ಹಿಂದಕ್ಕೆ ಬಾಗಿಸಿ ನಿಂತಿದ್ದಾನೆ. ವೀರನ ಕತ್ತಿಯಿಂದ ಹೊಟ್ಟೆಗೆ ಇರಿದ ನಿಮಿತ್ಯ ತನ್ನ ಶಕ್ತಿ ಕುಂದಿದ್ದರಿಂದ ಹಾಗೂ ಅದಕ್ಕೆ ತತ್ತರಿಸಿದ್ದರಿಂದ ತನ್ನ ದೇಹದ ಭಾಗವನ್ನು ಹಿಂದಕ್ಕೆ ಬಗ್ಗಿಸಿರುವುದನ್ನು ಶಿಲ್ಪಿಯು ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ವೀರನು ಮೆಟ್ಟಿನಿಂತ ಶವದ ಕೆಳಗಡೆ ನಾಯಿ ಬಂದು ಅದರ ರಕ್ತವನ್ನು ಕುಡಿಯುವಂತೆ ಚಿತ್ರಿಸಲಾಗಿದೆ. ವೈರಿಯ ಎಡಬದಿಯಲ್ಲಿ ಅವನ ಪರಿವಾರದವನೊಬ್ಬನು ಬಿಲ್ಲಿನಿಂದ ಹೊಡೆಯುವಂತೆ ನಿಂತಿದ್ದಾನೆ. ವೈರಿಯ ತಲೆಯ ಮೇಲ್ಭಾಗದಲ್ಲಿ ನಾಲ್ಕು ಮಂದಿ ಅವನ ಪರಿವಾರದವರು ಕತ್ತಿಯನ್ನು ಮೇಲಕ್ಕೆತ್ತಿ ಗುರಾಣಿಯನ್ನು ಮುಂದಕ್ಕೆ ಹಿಡಿದು ಶಿರಸ್ತ್ರಾಣವನ್ನು ಧರಿಸಿ ನಿಂತಿದ್ದಾರೆ. ಇಲ್ಲಿ ದುಂಡಾದ ಗುರಾಣಿಗಳನ್ನು ಒಂದೇ ಸಾಲಿನಲ್ಲಿ ದೊಡ್ಡದಾಗಿ ಚಿತ್ರಿಸಿರುವುದರಿಂದ ಕೇವಲ ನಾಲ್ಕು ತಲೆಗಳು ಮತ್ತು ಅವರು ಮೇಲಕ್ಕೆತ್ತಿ ಹಿಡಿದ ನಾಲ್ಕು ಕತ್ತಿಗಳು ಮಾತ್ರ ಕಂಡುಬರುತ್ತಿದ್ದು ಅವುಗಳನ್ನು ಸಮಾನಾಂತರವಾಗಿ ಚಿತ್ರಿಸಲಾಗಿದೆ. ಎರಡನೇ ಫಲಕದ ದೃಶ್ಯದಲ್ಲಿ, ಮಧ್ಯದಲ್ಲಿ ವಿಮಾನ ಅದರ ಒಳಗೆ ಪೀಠದ ಮೇಲೆ ವೀರ ಕೈಮುಗಿದು ಕುಳಿತಿದ್ದಾನೆ. ಈ ವಿಮಾನವನ್ನು ಅಪ್ಸರೆಯರಿಬ್ಬರು ಒಂದು ಕೈಯಲ್ಲಿಡಿದು ಮತ್ತೊಂದು ಕೈಯಲ್ಲಿ ಚೌರಿಗಳನ್ನು ಹಿಡಿದು ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಅವರ ತಲೆಯ ಮೇಲ್ಭಾಗದಲ್ಲಿ ಮೋಡದ ಚಿತ್ರವಿದೆ. ಈ ವಿಮಾನ ಮಂಟಪದ ಶಿಖರದ ಬದಿಗಳಲ್ಲಿ ವಾದ್ಯಮೇಳದವರಿದ್ದಾರೆ. ಇಬ್ಬರು ತುತ್ತೂರಿಯನ್ನು ಊದುತ್ತಿರುವದು ಮತ್ತಿಬ್ಬರು ಜಾಗಟೆ ಮತ್ತೆ ಇಬ್ಬರು ಮದ್ದಳೆ ಬಾರಿಸುತ್ತಿರುವರು.


ಮೂರನೇ ಫಲಕದ ದೃಶ್ಯದಲ್ಲಿ ಸರಳ ಸುಂದರ ವಿಮಾನವಿದ್ದು ಅದರ ಒಳಗಡೆ ಯತಿಯೊಬ್ಬ ಘಂಟೆ, ಆರತಿ ಹಿಡಿದು ನಿಂತು ಶಿವಲಿಂಗವನ್ನು ಪೂಜಿಸುತ್ತಾ ನಿಂತಿರುವನು. ಈ ವಿಮಾನದ ಬಲಗಡೆಗೆ ಕುಳಿತ ನಂದಿಯನ್ನು ತೋರಿಸಿರುವುದು ವಿಶೇಷ. ಮಡಿದ ವೀರನನ್ನು ಎಡಗಡೆಗೆ ಚಿತ್ರಿಸಲಾಗಿದೆ. ಆತ ಕೈಮುಗಿದು ಪದ್ಮಾಸನದಲ್ಲಿದ್ದಾನೆ. ಬದಿಗಳಲ್ಲಿ ಸೂರ್ಯ-ಚಂದ್ರರ ಚಿತ್ರಗಳಿವೆ. ಈ ಶಿಲ್ಪದ ಕಾಲ ಸು. ಕ್ರಿ.ಶ. ೧೨ನೇ ಶತಮಾನ.

ಒಟ್ಟಾರೆ ಈ ಐದು ವೀರಗಲ್ಲುಗಲ್ಲಿ ಯುದ್ಧದ ದೃಶ್ಯ ಬದಿಗೆ ಅಥವಾ ಕೆಳಗಡೆ ಆಕಳುಗಳನ್ನು ತೋರಿಸಿರುವುದರಿಂದ ಇವುಗಳು ಗೋಗ್ರಹಣ ವೀರಗಲ್ಲುಗಳೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.



ಶಾಸನ

ಕಲಘಟಗಿ ತಾಲೂಕಿನ ದೇವಿಕೊಪ್ಪ ತಾಂಡದ ಶಾಲೆಯ ನಾಗರಕಟ್ಟೆಯ ಬಳಿ ನೇಮಿನಾಥನ ಸ್ತಂಭಶಾಸನದ (ಫಲಕದ) ಮುಖ ಭಾಗವನ್ನು ನಯಗೊಳಿಸಲಾಗಿದೆ. ಅದರ ಮೇಲಿನ ಭಾಗದಲ್ಲಿ ಜಿನನು ಒಂದು ಶಂಖದ ಮೇಲೆ ಕಾಯೋತ್ಸರ್ಗ ಭಂಗಿಯಲ್ಲಿ ನಿಂತಿದ್ದಾನೆ. ಭುಜದ ಪಕ್ಕದಲ್ಲಿ ಸಮಾನಾಂತರವಾಗಿ ಚೌರಿಗಳ ಚಿಹ್ನೆಗಳಿವೆ. ತಲೆಯ ಮೇಲ್ಗಡೆ ಮುಕ್ಕೊಡೆಯನ್ನು ಚಿತ್ರಿಸಲಾಗಿದೆ. ಕಂಬದಂತಿರುವ ಈ ಶಾಸನ ಫಲಕದಲ್ಲಿ ಐದು ಸಾಲುಗಳಿದ್ದು ಕದಂಬ ಕುಲದವರ ಪ್ರಶಸ್ತಿ ಇತ್ಯಾದಿ ಉಲ್ಲೇಖಗಳಿವೆ. ಅಕ್ಷರಗಳ ಮತ್ತು ಚಿತ್ರದ ಶೈಲಿಯಿಂದ ಇದರ ಕಾಲ ಸು. ಕ್ರಿ.ಶ. ೧೩ನೇ ಶತಮಾನ ವೆಂದು ಹೇಳಬಹುದು.



ಒಟ್ಟಾರೆ ಈ ಅಧ್ಯಯನದಿಂದ ಮೂರು ಜನವಸತಿ ನಿವೇಶನಗಳು, ಎರಡು ದೇವಾಲಯಗಳು, ಏಳು ವೀರಗಲ್ಲುಗಳು (ರಾಷ್ಟ್ರಕೂಟ ಕಾಲದಿಂದ ಸು. ಕ್ರಿ.ಶ. ೧೩ನೇ ಶತಮಾನ) ಮತ್ತು ಸು. ಕ್ರಿ.ಶ. ೧೩ನೇ ಶತಮಾನದ ಒಂದು ಹೊಸ ಶಾಸನ ಆ ಸ್ಥಳಗಳ ಸಾಂಸ್ಕೃತಿಕ ಚರಿತ್ರೆಯ ಪುನಾರಚನೆಗೆ ಸಹಕಾರಿಯಾಗಿವೆ. ಜೈನ ಕಲೆಯಲ್ಲಿ ನೇಮಿನಾಥನ ಕುರಿತ ಪ್ರಸ್ತುತ ಅಧ್ಯಯನದಲ್ಲಿ ಒಳಗೊಂಡಿರುವ ಚಿತ್ರವು ಈ ಪ್ರದೇಶದಲ್ಲೇ ಅಪರೂಪದ್ದಾಗಿದೆ. ಇಲ್ಲಿಯ ದೇವಾಲಯಗಳ ವಾಸ್ತುಶಿಲ್ಪಕಲೆಯ ವಿಶೇಷ ಗಮನವನ್ನು ಸೆಳೆಯುತ್ತವೆ. ಅವುಗಳಲ್ಲಿ ಬಸವಣ್ಣ ದೇವಸ್ಥಾನವನ್ನು ಇತ್ತೀಚೆಗೆ ಎಂ.ಎ. ಧಾಕೆ[೧೭] ಮತ್ತು ಗೆರಾಲ್ಡ್ ಫ್ಹಕೀಮ[೧೮] ಅವರು ಅಧ್ಯಯನವನ್ನು ಮಾಡಿದ್ದರೂ ಸಹ ಈ ದೇವಾಲಯದ ಹೆಚ್ಚಿನ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯನ್ನು ಈ ಲೇಖನ ಪೂರೈಸುತ್ತದೆ ಎನ್ನಬಹುದು.*

* (ತಂಬೂರಿನ ಕ್ಷೇತ್ರ ಕಾರ್ಯದಲ್ಲಿ ನೆರವಾದ ಶ್ರೀ ಚಂದ್ರಕಾಂತ ಕೋಳಿಗುಡ್ಡೆ, ಕುಮಾರಿ ವನಜಾಕ್ಷಿ ಭರಮಗೌಡರ ಅವರಿಗೆ ಈ ದೇವಾಲಯ ಶಿಲ್ಪಗಳ ಅಧ್ಯಯನಕ್ಕೆ ಸಹಕಾರ ನೀಡಿದ, ಪುರಾತತ್ವ ಅಧಿಕಾರಿಗಳಿಗೆ ಧನ್ಯವಾದಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧ **ಸಾಧನೆ.**, ಸಂ-೪. ಪು. ೭೮.

೨ ಅದೇ, ೭೮-೭೯.

೩ ಅದೇ, ಪು. ೭೮.

೪ **ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್.**, ಸಂ. XI-i, ನಂ. ೨೦. ಪು. ೧೨.

೫ ಅದೇ, ನಂ.-೧೨, ಪು. ೮.

೬ ಅದೇ, ನಂ-೨೦,೩೯, ಪು.೧೨,೨೪.

೭ ಅದೇ, ನಂ.೧೧೧, ಪು.೧೦೭.

೮ ಅದೇ, ಸಂ. XI-ii, ನಂ. ೧೩೭, ೧೪೫, ಪು. ೧೬೫, ೧೭೬

೯ **ಸಾಧನೆ**, ಸಂ-೪. ಸಂಚಿಕೆ-೧,ಪು,೬೪.

೧೦ ಆರ್. ಎನ್. ಗುರವ್ ಅವರ ಪ್ರಬಂಧ, ಪು. ೬೩೧-೬೩೪.

೧೧ **ಸಾಧನೆ**, ಸಂ-೫, ಪು. ೧೯-೩೧

೧೨ **ಸಾಧನೆ**, ಸಂ-೪. ಸಂಚಿಕೆ-೧, ಪು. ೯೦-೧೦೬.

೧೩ ಆನ್ಯುವಲ್ ರಿಪೋರ್ಟ್ ಆನ್‌ಸೌತ್ ಇಂಡಿಯನ್ ಎಪಿಗ್ರಫಿ, ೧೯೬೪-೬೫, ನಂ.೪೦೦.

೧೪ ಅದೇ, ನಂ.೪೦೧.

೧೫ i. ಪಿ. ಬಿ. ದೇಸಾಯಿ., **ಬಸವೇಶ್ವರ ಆ್ಯಂಡ್ ಹಿಸ್ಸ್ ಟೈಮ್ಸ್**, ಧಾರವಾಡ.
ii. ಡಾ. ಡಿ. ವಿ. ಪರಶಿವಮೂರ್ತಿ., **ಕನ್ನಡ ಶಾಸನ ಶಿಲ್ಪ**, ಹಂಪಿ, ೧೯೯೯.

೧೬ ಆರ್. ಎನ್. ಗುರವ ಅವರ ಪ್ರಬಂಧ, ಪು.೫೯೨.

೧೭ ಎಂ. ಎ. ಧಾಕೆ., **ಎನ್‌ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್**, ಪು.೬೩-೬೪, ನ್ಯೂ ದೆಹಲಿ, ೧೯೯೬.

೧೮ ಗೆರಾರ್ಡ್ ಫ್ಹಕೀಮಾ., **ಚಾಲುಕ್ಯ ಆರ್ಕಿಟೆಕ್ಚರ್**, ಸಂ-೧, ಪು. ೭೧೩-೭೧೪, ನ್ಯೂ ದೆಹಲಿ, ೨೦೦೩.

ಡಾ।। ಹೆಚ್. ಚಂದ್ರಶೇಖರ*

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅರಕೇರಿ ಗ್ರಾಮದ ವೀರಗಲ್ಲುಗಳು

ಪೀಠಿಕೆ

ಅರಸನ ಪರವಾಗಿ ಯುದ್ಧದಲ್ಲಿ ಹೋರಾಡಿ ಮಡಿದ ಅಥವಾ ಊರಿನ ಹಿತರಕ್ಷಣೆಗಾಗಿ ಹೋರಾಡಿ ಮಡಿದ ವೀರರ ಸ್ಮರಣೆಗಾಗಿ ನಿಲ್ಲಿಸುವ ಸ್ಮಾರಕ ಶಿಲ್ಪ ಶಿಲಾಫಲಕಗಳು ಅಥವಾ ಶಾಸನ ಸಹಿತವಾದ ಶಿಲ್ಪ ಶಿಲಾಫಲಕಗಳನ್ನು ವೀರಗಲ್ಲುಗಳೆಂದು ಕರೆಯುವದು ವಾಡಿಕೆ.

ತನ್ನ ರಾಜನ ಹಿತಕ್ಕಾಗಿ ಅಥವಾ ಊರಿನ ಹಿತಕ್ಕಾಗಿ ಒಂದು ಧಾರ್ಮಿಕ ಆಚರಣೆಯ ರೂಪವಾಗಿ ಆತ್ಮಬಲಿ ದಾನವನ್ನು ಮಾಡಿದ ವೀರನ ಸ್ಮೃತಿಗಾಗಿ ನಿಲ್ಲಿಸುವ ಶಿಲಾಫಲಕಗಳನ್ನೂ ವೀರಗಲ್ಲುಗಳೆಂದು ಕರೆಯುತ್ತಾರೆ. ಆದರೆ ಎರಡನೆಯ ವರ್ಗಕ್ಕೆ ಸೇರಿದ ವೀರಗಲ್ಲುಗಳ ಸಂಖ್ಯೆ ತೀರಾ ಕಡಿಮೆ. ಈ ವರ್ಗಗಳಲ್ಲದೆ ಬೇಟೆಯಲ್ಲಿ ಮಡಿದ ಗೋಗ್ರಹಣ ವಿಮೋಚನೆಗಾಗಿ ಮಡಿದ ವೀರರ ಸ್ಮೃತಿಗಾಗಿ ನಿಲ್ಲಿಸುವ ಶಿಲಾಫಲಕಗಳೂ ಮೊದಲನೆಯ ವರ್ಗಕ್ಕೆ ಸೇರುತ್ತವೆ. ಕೆಲವೊಂದು ಸಲ ಇಂಥ ಮಡಿದ ವೀರರ ಸಮಾಧಿಗಳ ಮೇಲೆ ಗುಡಿಗಳನ್ನು ಕಟ್ಟಲಾಗುತ್ತದೆ. ಅವುಗಳನ್ನು ವೀರರಗುಡಿಗಳು ಅಥವಾ ವೀರರ ಸಮಾಧಿಗಳು ಎಂದು ಕರೆಯಲಾಗುತ್ತದೆ.

ವೀರಗಲ್ಲುಗಳ ವರ್ಗೀಕರಣ

ಶೈಲಿಯ ದೃಷ್ಟಿಯಿಂದ ಈ ಕೆಳಗಿನಂತೆ ಡಾ।। ಶೇಷ ಶಾಸ್ತ್ರಿಗಳು ವೀರಗಲ್ಲುಗಳನ್ನು ವಿಂಗಡಿಸುತ್ತಾರೆ.[೧]

ಆರಂಭಕಾಲದ ವೀರಗಲ್ಲುಗಳು

ಅ) ಬಾದಾಮಿ ಚಾಳುಕ್ಯರ ವೀರಗಲ್ಲುಗಳು.

ಆ) ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು

ಇ) ಗಂಗರ ನೊಳಂಬರ ಕಾಲದ ವೀರಗಲ್ಲುಗಳು

ಮಧ್ಯಯುಗದ ವೀರಗಲ್ಲುಗಳು

ಅ) ಕಲ್ಯಾಣ ಚಾಳುಕ್ಯರ ಕಾಲದ ವೀರಗಲ್ಲುಗಳು

ಆ) ಹೊಯ್ಸಳರ ಕಾಲದ ವೀರಗಲ್ಲುಗಳು

ವಿಜಯನಗರ ಕಾಲದ ವೀರಗಲ್ಲುಗಳು

ಈ ವರ್ಗೀಕರಣವು ಕಾಲಮಾನದ ದೃಷ್ಟಿಯಿಂದಲೂ ಹೊಂದುತ್ತವೆ. ಹಾಗೆಯೇ ಆನುಷಂಗಿಕವಾಗಿ ವಾಸ್ತುಶಿಲ್ಪ ಬೆಳವಣಿಗೆಗೂ ಮತ್ತು ಬಳಸಿದ ಶಿಲೆಗಳಿಗೂ ಹೊಂದುತ್ತ ದೆಂಬುದನ್ನು ಮುಂದೆ ಚರ್ಚಿಸಲಾಗಿದೆ.

ವಾಸ್ತುಶಿಲ್ಪ, ವೀರಗಲ್ಲುಗಳ ಪರಸ್ಪರ ಸಂಬಂಧ

ಬಾದಾಮಿ ಚಾಳುಕ್ಯರ ಕಾಲದಲ್ಲಿ ಹೆಚ್ಚಾಗಿ ಮರಳುಗಲ್ಲುಗಳನ್ನು (Sandstone) ಬೆಣಚು ಶಿಲೆಗಳನ್ನು (Quartzite) ವಾಸ್ತುಶಿಲ್ಪ ನಿರ್ಮಾಣಕಾರ್ಯದಲ್ಲಿ ಬಳಸಲಾಯಿತು. ಈ ಶಿಲೆಗಳ ನೈಸರ್ಗಿಕ ಗುಣಗಳಿಂದಾಗಿ ಸೂಕ್ಷ್ಮ ಕುಸುರಿ ಕೆಲಸಮಾಡಲು ಅಂದಿನ ಶಿಲ್ಪಗಳಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ದೊಡ್ಡ ಆಕಾರದ ಗುಡಿಗಳನ್ನೂ, ಗುಹೆಗಳನ್ನೂ ಮತ್ತು ಶಿಲ್ಪಗಳನ್ನು ನಿರ್ಮಿಸಿದರು. ಈ ಇತಿಮಿತಿಯು ಆ ಕಾಲದ ವೀರಗಲ್ಲುಗಳ ಮೇಲೆ ಪ್ರಭಾವ ಬೀರಿದೆ. ಹಾಗೆಯೇ ರಾಷ್ಟ್ರಕೂಟರ ಕಾಲದಲ್ಲಿ ಮತ್ತು ಗಂಗರ ಕಾಲದಲ್ಲಿ ಬಳಸಲಾದ ಬೆಸಾಲ್ಟ್ (Basalt), ಸುಣ್ಣದ ಕಲ್ಲು (Lime Stone), ಮರಳುಗಲ್ಲುಗಳು ಮತ್ತು ಕಣ್ವಶಿಲೆಗಳು ವಾಸ್ತುಶಿಲ್ಪಗಳ ಮತ್ತು ವೀರಗಲ್ಲುಗಳ ಕುಸುರಿ ಕೆಲಸ ಮತ್ತು ಆಕಾರದ ಅಳತೆಯನ್ನು ನಿರ್ಧರಿಸಿದವು. ಅಂದರೆ ಈ ಬಗೆಯ ಶಿಲೆಗಳಲ್ಲಿ ದೊಡ್ಡ ಆಕಾರದ ಗುಡಿಗಳನ್ನು ನಿರ್ಮಿಸಬಹುದೇ ವಿನಹ ಸೂಕ್ಷ್ಮ ಕುಸುರಿ ಕೆಲಸದ ಕಲೆಗೆ ಈ ಶಿಲೆಗಳು ಒಗ್ಗುವುದಿಲ್ಲ.

ಕಲ್ಯಾಣ ಚಾಳುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ ಬಳಪದ ಕಲ್ಲನ್ನು (Soap Stone) ವ್ಯಾಪಕವಾಗಿ ಬಳಕೆಗೆ ತಂದದ್ದರಿಂದ ಆ ಕಾಲದ ಸ್ಥಪತಿಗಳಿಗೆ ಬಳಕೆಗೆ ಶಿಲ್ಪಗಳಿಗೆ ಅತ್ಯಂತ ಮನೋಹರವಾದ ಮತ್ತು ಸೂಕ್ಷ್ಮ ಕುಸುರಿ ಕೆಲಸವುಳ್ಳ ಮತ್ತು ಸುಂದರವಾದ ಹೂಬಳ್ಳಿಗಳಿಂದ ಕೂಡಿದ ಗುಡಿಗಳನ್ನು ಮತ್ತು ಶಿಲ್ಪಗಳನ್ನು ನಿರ್ಮಿಸಲು ಸಾಧ್ಯವಾಯಿತು. ಅಪವಾದವಾಗಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಬೆಸಾಲ್ಟ್ ಶಿಲೆಯನ್ನು ತುಂಬಾ ಎಚ್ಚರಿಕೆಯಿಂದ ಆಯ್ದು ಸುಂದರ ವಾಸ್ತು ಶಿಲ್ಪಗಳನ್ನು ಆ ಕಾಲದ ಶಿಲ್ಪಿಗಳು ನಿರ್ಮಿಸಿದ್ದಾರೆ. ಈ ಸುಂದರ ಶೈಲಿ ಮತ್ತು

* 'ಸಂಗಮ' ಎಂ.ಐ.ಜಿ-೭೭, ೭ನೇ ಕ್ರಾಸ್, ೭ನೇ ಮೇನ್, ಕೆ.ಎಚ್.ಬಿ. ಕಾಲೋನಿ, ೨ನೇ ಹಂತ. ಬಸವೇಶ್ವರ ನಗರ, ಬೆಂಗಳೂರು-೫೬೦ ೦೭೯.

ಮೃದುವಾದ ಬಳಪದ ಕಲ್ಲು, ಸುಂದರ ಹಾಗೂ ಸಾಮಾನ್ಯವಾಗಿ ಮೂರು ಹಂತಗಳುಳ್ಳ ವೀರಗಲ್ಲುಗಳ ನಿರ್ಮಾಣಕ್ಕೆ ಕಾರಣವಾದವು.

ವಿಜಯನಗರದ ಕಾಲಕ್ಕೆ ಶಿಲ್ಪಿಗಳು ಮತ್ತು ಕುಶಲಕರ್ಮಿಗಳು ತಮಿಳುನಾಡಿನಿಂದ ವಲಸೆ ಬಂದರು. ತಮ್ಮ ಜೊತೆಗೆ ಅಲ್ಲಿಯ ಶೈಲಿಯನ್ನು ತಂದರು. ಹಂಪಿಯ ಸುತ್ತಮುತ್ತಲಿರುವ ಕಂದು ಬಣ್ಣದ ಕಣಶಿಲೆಯನ್ನು (Grey Granite) ಹಾಗೂ ತತ್ಸಂಬಂಧಿತ ಶಿಲೆಗಳನ್ನು ಗುಡಿಗಳ ಗೋಪುರಗಳ, ವಿಮಾನಗಳ ಮತ್ತಿತರ ಶಿಲ್ಪಕಲಾ ವಸ್ತುಗಳ ನಿರ್ಮಾಣದಲ್ಲಿ ಆ ಕಾಲದ ಸ್ಥಪತಿಗಳು ಮತ್ತು ಶಿಲ್ಪಿಗಳು ಬಳಸಿದರು. ಈ ಬಗೆಯ ಕಲ್ಲಿನಲ್ಲಿ ದಪ್ಪ ಹರಳುಗಳ ಖನಿಜಗಳಿರುವುದರಿಂದ (Coarse Grained Granites) ಅತಿಸೂಕ್ಷ್ಮ ಕುಸುರಿ ಕೆಲಸ ಸಾಧ್ಯವಾಗದು. ಆದರೆ ಬೃಹತ್ ಆದ ಕಲಾಕೃತಿಗಳಿಗಾಗಿ ಹೇಳಿಮಾಡಿಸಿದಂತಹ ದೊಡ್ಡ ದೊಡ್ಡ ಸೈಜಿನ ಗುಂಡುಗಲ್ಲುಗಳನ್ನು, ಸೈಜುಗಲ್ಲುಗಳನ್ನು ಉಪಯೋಗಿಸಿ ಬೃಹತ್ ಕಲಾಕೃತಿಗಳನ್ನೂ ಈ ಕುಶಲಕರ್ಮಿಗಳು ನಿರ್ಮಿಸಿದರು. ಈ ಇತಿಮಿತಿಗಳ ಕಾರಣದಿಂದಾಗಿಯೇ ಕಲ್ಯಾಣ ಚಾಳುಕ್ಯರ ಕಾಲದ ಅಥವಾ ಹೊಯ್ಸಳರ ಕಾಲದ ಮೂರು ಹಂತಗಳುಳ್ಳ ಸುಂದರ ವೀರಗಲ್ಲುಗಳ ಬದಲಾಗಿ ಒಂದೇ ಹಂತವಿರುವ ವೀರಗಲ್ಲುಗಳನ್ನು ಈ ಕಾಲದ ಶಿಲ್ಪಿಗಳು ನಿರ್ಮಿಸಿದರು. ಅಂದರೆ ವೀರಗಲ್ಲುಗಳ ಸೌಂದರ್ಯ, ಶೈಲಿ, ಶಿಲೆ ಇತ್ಯಾದಿ ಅಂಶಗಳು ಸ್ವತಂತ್ರವಾಗಿಲ್ಲ, ಬದಲಾಗಿ ಆಯಾ ಕಾಲದ ವಾಸ್ತುಶಿಲ್ಪ ಮತ್ತು ಕಲೆಯ ಜೊತೆ ಜೊತೆಯಾಗಿ ಸೂಕ್ತವಾಗಿ ರೂಪಗೊಂಡವು ಎಂಬುದನ್ನು ನಾವು ಗಮನಿಸಬೇಕು.

ಅರಕೇರಿಯ ವೀರಗಲ್ಲುಗಳು ಮತ್ತು ಸಮಾಧಿ ಗುಡಿಗಳು

ಪ್ರಸ್ತುತ ಅಧ್ಯಯನದ ವಸ್ತುವಾಗಿರುವ ಅರಕೇರಿಯ ವೀರಗಲ್ಲುಗಳು ವಿಜಯನಗರ ಕಾಲದವುಗಳು. ಆ ಕಾಲದಲ್ಲಿ ಬಳಸಲಾದ ಕಣಶಿಲೆಯನ್ನೇ ಈ ವೀರಗಲ್ಲುಗಳನ್ನು ಕಡೆಯಲು ಉಪಯೋಗಿಸಲಾಗಿದೆ. ಶಿಲ್ಪ ಶೈಲಿಯೂ ವಿಜಯನಗರದ ಶೈಲಿಗೆ ಹೊಂದುತ್ತದೆ. ಅರಕೇರಿ ಗ್ರಾಮವು ತಾಲ್ಲೂಕು ಕೇಂದ್ರವಾದ ದೇವದುರ್ಗದಿಂದ ದಕ್ಷಿಣ ದಿಕ್ಕಿಗೆ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಈ ಊರು, ಪೂರ್ವದಲ್ಲಿ ಪಕ್ಕದಲ್ಲಿರುವ ಕಣಶಿಲೆಯ ಬೆಟ್ಟದ ಮೇಲೆ ನೆಲೆಗೊಂಡಿತ್ತು. ಬಹುಶಃ ೧೯ನೇ ಶತಮಾನದ ಅಂತ್ಯ ಅಥವಾ ೨೦ನೇ ಶತಮಾನದ ಆದಿ ಭಾಗದಲ್ಲಿ ಈ ಊರು ಈಗಿರುವ ನೆಲೆಯಲ್ಲಿ ಸ್ಥಾಪಿತಗೊಂಡಿರಬಹುದೆಂದು ಸ್ಥಳೀಯರು ಹೇಳುತ್ತಾರೆ. ಗುಡ್ಡದ ಮೇಲೆ ಹಾಳು ಬಿದ್ದಿರುವ ಮನೆಗಳ ಅವಶೇಷಗಳನ್ನು ಕೋಟೆಗೋಡೆಯ ಅವಶೇಷಗಳನ್ನು ಸೂಕ್ಷ್ಮವಾಗಿ ನೋಡಿದರೆ ಈ ಮಾತು ಸರಿ ಅನಿಸುತ್ತದೆ.

ಪ್ರಸ್ತುತ ಅಧ್ಯಯನಕ್ಕೊಳಪಟ್ಟ ಒಟ್ಟು ೨೯ ವೀರಗಲ್ಲುಗಳಲ್ಲಿ ೧೧ ವೀರಗಲ್ಲುಗಳನ್ನು ಹಳೆಯ ಊರಿನ ನಿವೇಶನದಲ್ಲಿ ಈಗ ನಿರ್ಮಾಣಗೊಂಡಿರುವ ಪವಿತ್ರವನದಲ್ಲಿ ಜೋಡಿಸಿ ಇಡಲಾಗಿದೆ. ಉಳಿದ ೧೮ ವೀರಗಲ್ಲುಗಳು ಅರಕೇರಿಯಿಂದ ಈ ಕಲಕುಂಟಾ ದೊಡ್ಡಿಗೆ ಹೋಗುವ ದಾರಿಯಲ್ಲಿ ಸುಮಾರು ೨ ಕಿ.ಮೀ. ದೂರದಲ್ಲಿರುವ ಲಡಾಯ ಹೊಲವೆಂದು ಸ್ಥಳೀಯರು ಕರೆಯುವ (ಸ್ಥಳೀಯರ) ಹೊಲದ ಮಧ್ಯಭಾಗದಲ್ಲಿ ಬಿದ್ದಿವೆ. ಈ ವೀರಗಲ್ಲುಗಳು, ಆರು ವೀರರ ಸಮಾಧಿ ಗುಡಿಗಳ ಮುಂಬದಿಯಲ್ಲಿ ಅಸ್ತವ್ಯಸ್ತವಾಗಿ ಬಿದ್ದಿರುವುದನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಿದ್ದೇನೆ. ಇದು ನಿವೇಶನವನ್ನಾಧರಿಸಿದ ವರ್ಗೀಕರಣವಾಯಿತು.

ವಸ್ತುವಿಷಯವನ್ನಾಧರಿಸಿ, ಹೇಳುವುದಾದಾರೆ ಐದು ಬೇಟೆಗಳಲ್ಲಿ ಮಡಿದ ವೀರರ ಮತ್ತು ನಾಯಿಗಳ ಸ್ಮಾರಕಗಳಾಗಿವೆ. ಉಳಿದ ೨೪ ವೀರಗಲ್ಲುಗಳು ಯುದ್ಧದಲ್ಲಿ ಮಡಿದ ವೀರರ ಸ್ಮಾರಕಗಳಾಗಿವೆ. ಪವಿತ್ರವನದಲ್ಲಿರುವ ವೀರಗಲ್ಲುಗಳೆಲ್ಲವು ಯುದ್ಧದ ವೀರಗಲ್ಲುಗಳಾಗಿವೆ. ಲಡಾಯ ಹೊಲದಲ್ಲಿ ಮಾತ್ರ ಐದು ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳಿವೆ.

ಈ ವೀರಗಲ್ಲುಗಳ ವಿವರಣೆ

ಈ ವೀರಗಲ್ಲುಗಳನ್ನು ಕಟೆಯಲು ಶಿಲ್ಪಿಗಳು ಸ್ಥಳೀಯವಾಗಿ ಲಭ್ಯವಿರುವ ಕಂದು, ಕೆಂಪು ಬಣ್ಣದ ದೊಡ್ಡಹರಳುಗಳ ಕಣಶಿಲೆಯನ್ನು ಉಪಯೋಗಿಸಿದ್ದಾರೆ. ಕೆಲವು ಸಲ ಒಂದೇ ಶಿಲಾಫಲಕದಲ್ಲಿ ಬೇರೆ ಬೇರೆ ವರ್ಣದ ಖನಿಜವಸ್ತುಗಳಿರುವುದರಿಂದ ಕಲೆಯ ದೃಷ್ಟಿಯಿಂದ ಕೆಳಮಟ್ಟದ ವೀರಗಲ್ಲುಗಳಾಗಿ ಕಾಣುತ್ತವೆ. ಅಳತೆಯ ದೃಷ್ಟಿಯಿಂದ ಈ ವೀರಗಲ್ಲುಗಳಲ್ಲಿ ತುಂಬಾ ವೈವಿಧ್ಯತೆ ಇದೆ. ಈ ವೀರಗಲ್ಲುಗಳ ಉದ್ದಳತೆ ಸುಮಾರು ೧೪೦ ಸೆಂ.ಮೀ ನಿಂದ ೪೭ಸೆಂ.ಮೀ ವರೆಗೆ ಇದ್ದರೆ, ಎತ್ತರವು ೫೬ಸೆಂ.ಮೀನಿಂದ ೧೨೦ ಸೆಂ.ಮೀ ವರೆಗೆ ಇದೆ. ಯಾವ ವೀರಗಲ್ಲಿಗೂ ಹೊಳಪನ್ನು ನೀಡಿಲ್ಲ. ನೈಸರ್ಗಿಕವಾಗಿ ಸಿಗುವ ಕಣಶಿಲೆಯ ಚಪ್ಪಡಿ ಕಲ್ಲುಗಳ (Slabs) ಮೇಲೆ ವೀರರ, ಪರಿವಾರದವರ, ಕುದುರೆ, ನಾಯಿಗಳ, ಧ್ವಜ, ರಾಜಛತ್ರಿ ಇತ್ಯಾದಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕೆಲವು ವೀರಗಲ್ಲುಗಳ ಶಿಲ್ಪಗಳು ತುಂಬಾ ಕಲಾತ್ಮಕವಾಗಿದ್ದು ನೈಜ ಚಿತ್ರಣ (Realistic) ಗಳನ್ನು ನೀಡುತ್ತವೆ. ಇಂಥ ಉತ್ತಮ ಶಿಲ್ಪಗಳನ್ನು ಬಹುಶಃ ನುರಿತ ಕೈಗಳ ಮತ್ತು ಸೂಕ್ಷ್ಮದೃಷ್ಟಿಯ ಕಲಾವಿದರು ಕೆತ್ತಿರುವರೆಂದು ಅನ್ನಿಸುತ್ತದೆ. ಎಲ್ಲಾ ವೀರಗಲ್ಲುಗಳ ಮೇಲ್ಭಾಗದಲ್ಲಿ ಸೂರ್ಯಚಂದ್ರ ಶಿಲ್ಪಗಳನ್ನು ಒಂದೆರಡು ಶಿಲ್ಪಗಳಲ್ಲಿ ಇವುಗಳ ಜೊತೆ ಕಮಲಗಳನ್ನು ಕೆತ್ತಲಾಗಿದೆ.

ವೀರರ ಶಿಲ್ಪ: ವೀರರ ಉಬ್ಬು ಶಿಲ್ಪಗಳೇ ಈ ವೀರಗಲ್ಲುಗಳ ಕೇಂದ್ರವಸ್ತು. ಎಲ್ಲಾ ವೀರಗಲ್ಲುಗಳಲ್ಲಿಯ ವೀರರು ಹುರಿ ಮೀಸೆಯನ್ನು ಹೊಂದಿದವರು. ಕೆಲ ವೀರಗಲ್ಲುಗಳಲ್ಲಿ ಮೀಸೆಯನ್ನು ಸೂಕ್ಷ್ಮವಾಗಿ ಹಾಗೂ ಕಲಾತ್ಮಕವಾಗಿ ಕೆತ್ತಲಾಗಿದೆ. ಇದರಿಂದಾಗಿ ವೀರನ ಮುಖದಲ್ಲಿ ವೀರಕಳೆ ಎದ್ದುಕಾಣುತ್ತದೆ. ವೀರನು ಕುದುರೆ ಸವಾರನಾಗಿದ್ದರೆ ಎಡಗೈಯಲ್ಲಿ ಕುದುರೆಯ ಲಗಾಮನ್ನು ಬಲ

ಗೈಯಲ್ಲಿ ಕತ್ತಿಯನ್ನು ಎತ್ತಿ ಹಿಡಿದ್ದಾನೆ. ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುವ ಭಂಗಿಯೇ ಅವನೊಬ್ಬ ವೀರನೆಂದು ಬಿಂಬಿಸುತ್ತದೆ. ಕಾಲ್ದಳಕ್ಕೆ ಸೇರಿದ ಸಾಮಾನ್ಯ ಸೈನಿಕರು ಎಡದ ಕೈಯಲ್ಲಿ ಗುರಾಣಿ ಬಲದ ಕೈಯಲ್ಲಿ ಖಡ್ಗ ಇಲ್ಲವೆ ಬಂದೂಕು ಹಿಡಿದಿದ್ದಾರೆ. ಬೇರೆ ಶಿಲ್ಪಗಳನ್ನು ಎರಡೂ ಕೈಯಲ್ಲಿ ಭರ್ಜಿಯೊಂದನ್ನು ಹಿಡಿದುಕೊಂಡು ವೈರಿಯತ್ತ ತಿವಿಯಲು ಸಿದ್ಧವಾಗಿದ್ದಾನೆ. ಪರಿವಾರದ ಸೈನಿಕನೂ ಸೇರಿ ಕುದುರೆ ಸವಾರ ವೀರನೂ ಟೊಂಕದಿಂದ ಪಾದದವರೆಗೆ ಕಾಲುಗಳಿಗೆ ಬಿಗಿಯಾಗಿ ಅಂಟಿಕೊಂಡಿರುವಂಥ ಚಲ್ಲಣ (ಚೂಡಿದಾರ ಪೈಜಾಮ) ಧರಿಸಿದ್ದಾರೆ. ಟೊಂಕಕ್ಕೆ ಟೊಂಕ ಪಟ್ಟಿಯನ್ನು ಕಟ್ಟಿಕೊಂಡು ಅಲ್ಲಿ ಒಂದು ಜಂಬ್ಯಾವನ್ನು (ಕಠಾರಿ) ಇಟ್ಟುಕೊಂಡಿದ್ದಾರೆ ಈ ವೀರರು.

ಕುದುರೆ ಸವಾರನೆಂದರೆ ಸೈನ್ಯದಲ್ಲಿ ಪ್ರಮುಖವ್ಯಕ್ತಿ ಎಂದರ್ಥ (ದಳಪತಿ ಇತ್ಯಾದಿ). ಇಂಥ ವ್ಯಕ್ತಿಯ ಶಿಲ್ಪವನ್ನು ಬಿಡಿಸುವಲ್ಲಿ ಶಿಲ್ಪಿಗಳು ತುಂಬಾ ಕಾಳಜಿವಹಿಸಿರುವದು ಕಂಡು ಬರುತ್ತದೆ. ಸಾಮಾನ್ಯವಾಗಿ ಎದೆಯಿಂದ ಕೆಳಕ್ಕೆ ವಕ್ಷಸ್ಥಳದವರೆಗೂ ಇಳಿಬಿದ್ದಿರುವ ಕಂಠಿಹಾರವನ್ನು ಧರಿಸಿದ್ದಾನೆ. ಕಿವಿಯಲ್ಲಿ ಕರ್ಣಕುಂಡಲ ಕೈಗಳಲ್ಲಿ ಕಡಗ, ಕಾಲುಗಳಲ್ಲಿ ಕಡಗ ಮತ್ತು ರಟ್ಟೆಯಲ್ಲಿ ವಂಕಿಯನ್ನು ಧರಿಸಿದ್ದಾನೆ ಈ ವೀರ -ತಲೆಯ ಕೂದಲನ್ನು ಕಟ್ಟಿಕೊಂಡಿದ್ದರೆ ಶಿಖೆಯನ್ನು (ತುರುಬು) ಕೊಂಚ ಬಲಕ್ಕೆ ವಾಲಿದಂತೆ ಕಲಾತ್ಮಕವಾಗಿ ಕಟೆಯಲಾಗಿದೆ. ಶಿರಸ್ತ್ರಾಣ ಮತ್ತು ಕಿರೀಟ ಅಥವಾ ವಿಶಿಷ್ಠ ಬಗೆಯ ರುಮಾಲನ್ನು ತಲೆಯ ಮೇಲೆ ಇಟ್ಟುಕೊಂಡಿರುವುದನ್ನು ಕಾಣಬಹುದು. ಪವಿತ್ರ ವನದಲ್ಲಿರುವ ಮೂರು ವೀರಗಲ್ಲಿನ ವೀರರು (ಕುದುರೆ ಸವಾರ) ಕಂಠಿಹಾರದ ಮೇಲೆ ಇಷ್ಟಲಿಂಗದ



ಕರಡಿಕೆಯನ್ನು ಹಾಕಿಕೊಂಡಂತೆ ಕೆತ್ತಲಾಗಿದೆ. (ಚಿತ್ರ . ೧) ಲಡಾಯಿ ಪೊಲದಲ್ಲಿರುವ ಒಂದು ವೀರಗಲ್ಲಿನಲ್ಲಿ ವೀರನು ಪಲ್ಲಕಿಯಲ್ಲಿ ಸುಖಾಸನದಲ್ಲಿ ಕುಳಿತಿದ್ದಾನೆ. ಮೇಲೆ ವಿವರಿಸಲಾದ ಆಭರಣಗಳಲ್ಲದೆ ಕೊರಳಲ್ಲಿ ಇಷ್ಟಲಿಂಗ ಧರಿಸಿದ್ದಾನೆ. (ಚಿತ್ರ . ೨) ಪಲ್ಲಕ್ಕಿಯನ್ನು ಇಬ್ಬರು ಬೋವಿಗಳು (ಆಳುಗಳು) ಹೊತ್ತಿದ್ದಾರೆ. ಮುಂದೆ ಸಿಂಗಾರಗೊಂಡ ಕುದುರೆ ಇದೆ, ಅದಕ್ಕೂ ಮುಂದೆ



ಧ್ವಜವನ್ನು ಹೊತ್ತ ಸೈನಿಕ ನಿಂತಿದ್ದಾನೆ. ವೀರನ ಬಲಗಡೆ ಪಲ್ಲಕ್ಕಿ ಹೊತ್ತವನಿ ಗಿಂತ ಮುಂಚೆ ಒಬ್ಬ ಸೇವಕಿಯು ತತ್ರಾಣಿಯನ್ನು ಬಲಗೈಯಲ್ಲಿ ಹಿಡಿದುಕೊಂಡು ನಿಂತಿದ್ದಾಳೆ. ಮೇನೆಯ ಮೇಲೆ ರಾಜಛತ್ರವನ್ನು (ಕೊಡ) ಕೆತ್ತಲಾಗಿದೆ. ಈ ಶಿಲಾಫಲಕದ ಮೇಲಿನ ತುದಿಯ ಸಾಲಿನಲ್ಲಿ ಎಡದಿಂದ ಬಲಕ್ಕೆ ಸೂರ್ಯ, ಎರಡು ಕಮಲಗಳು ಮತ್ತು ಅರ್ಧ ಚಂದ್ರನನ್ನು ಕೆತ್ತಲಾಗಿದೆ. ಈ ವೀರಗಲ್ಲುಗಳ ಮತ್ತು ಸಮೂಹದಲ್ಲಿಯೇ ಅತ್ಯಂತ ಕಲಾತ್ಮಕವಾದ ಸುಂದರ ವೀರಗಲ್ಲು ಇದು.

ಕುದುರೆ : ಈ ವೀರಗಲ್ಲುಗಳಲ್ಲಿ (ಚಿತ್ರ ೩) ಆಕರ್ಷಕವಾಗಿ



ಕುದುರೆಗಳ ಶಿಲ್ಪಗಳನ್ನು ತುಂಬಾ ಕಾಳಜಿಯಿಂದ ಶಿಲ್ಪಿಗಳು ಕೆತ್ತಿದ್ದಾರೆ. ಇಡೀ ಶಿಲ್ಪಕ್ಕೆ ಶೌರ್ಯದ ಕಳೆಯನ್ನು ಕುದುರೆಯ ಶಿಲ್ಪ ತುಂಬುವಷ್ಟೆ ಸಜೀವವಾಗಿ ಕೆತ್ತಲಾಗಿದೆ. ಕುದುರೆಯ ಮೇಲೆ ಕುಸುರಿ ಕೆಲಸದ ಜೀನು ಹಾಕಲಾಗಿದ್ದು ಅದು ಸರಿದಾಡದಂತೆ ಕುದುರೆಯ ಬಾಲಕ್ಕೆ ಕಟ್ಟಲಾಗಿದೆ. ಕುದುರೆಯ ಬಾಲ, ಕುದುರೆಯ ಕಿವಿಗಳಸುತ್ತ ಮತ್ತು ಕೊರಳಲ್ಲಿ ಸಿಂಗರಿಸಿದ ಗೊಂಡೆಗಳ ಸರಗಳು ಕುದುರೆಯ ತಲೆಯ ಮೇಲೆ ತುರಾಯಿ, ನಾಲ್ಕು ಕಾಲುಗಳಿಗೂ ಒಂದೊಂದು ಕಡಗವನ್ನು ಅಂದವಾಗಿ ಕೆತ್ತಲಾಗಿದೆ. ಕುದುರೆಗಳು ಮುಂಗಾಲುಗಳನ್ನು ಎತ್ತಿ ಓಡಲು ಸಿದ್ಧವಾಗಿ ನಿಂತಿರುವ ಭಂಗಿ ಚಿತ್ತಾಕರ್ಷಕವಾಗಿದೆ



ಚಿತ್ರ ೪). ಪವಿತ್ರವನದಲ್ಲಿರುವ ಒಂದು ವೀರಗಲ್ಲಿನಲ್ಲಿ, ವೀರನು
ನ್ನ ಕುದುರೆಯಿಂದ ಇಳಿದು ನಿಂತು ತನ್ನ ವೈರಿ ಕುದುರೆಯ ಜುಟ್ಟನ್ನು



ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿರುವ ಕಠಾರಿಯಿಂದ ತಿವಿಯುತ್ತಿರುವ ದೃಶ್ಯ ಅಪರೂಪದ್ದಾಗಿದೆ. (ಚಿತ್ರ ೫).

ನಾಯಿ : ಲಡಾಯ ಹೊಲದಲ್ಲಿರುವ ೧೮ ವೀರಗಲ್ಲುಗಳಲ್ಲಿ ಐದು ವೀರಗಲ್ಲುಗಳಲ್ಲಿ ಒಂದು ಅಥವಾ ಎರಡು ನಾಯಿಗಳನ್ನು ಕೆತ್ತಲಾಗಿರುವುದರಿಂದ ಇವು ಬೇಟೆಯಲ್ಲಿ ಮಡಿದ



ವೀರರ ಅಥವಾ ಬೇಟೆನಾಯಿಗಳ ಸ್ಮಾರಕಗಳೆಂದು ಗುರ್ತಿಸಲಾಗಿದೆ (ಚಿತ್ರ ೬). ನಾಯಿಯ ಶಿಲ್ಪ ಜೀವಕಳೆಯನ್ನು ಹೊಂದಿಲ್ಲ.

ಪರಿವಾರದವರು : ವೀರನ ಪರಿವಾರದಲ್ಲಿ ಧ್ವಜಸ್ತಂಭವನ್ನು ಹೊತ್ತವನು ರಾಜಛತ್ರವನ್ನು ಹಿಡಿದವನು ಅಲ್ಲದೆ ಪಾನಪಾತ್ರೆ ಅಥವಾ ನೀರಿನ ತತ್ರಾಣಿಯನ್ನು ಬಲಗೈಯಲ್ಲಿ ಹಿಡಿದು ಎಡಗೈಯಲ್ಲಿ ಕುಡಿಯಲು ಉಪಯೋಗಿಸುವ ಕೊಂಬನ್ನು ಹಿಡಿದು ನಿಂತಿರುವ ಹೆಣ್ಣಿನ ಶಿಲ್ಪಗಳು ಶಿಲ್ಪಿಗಳ ಕಾಳಜಿಯನ್ನು ಬಿಂಬಿಸಿವೆ. ಒಂದು ಶಿಲ್ಪದಲ್ಲಿ ಮೂರು ಹೆಣ್ಣುಗಳ ಶಿಲ್ಪಗಳಿವೆ (ಚಿತ್ರ ೭), ಇನ್ನೊಂದು ಶಿಲ್ಪದಲ್ಲಿ ಇಬ್ಬರು ಸೇವಕಿಯರಿದ್ದಾರೆ (ಚಿತ್ರ ೮). ಉಳಿದ ಶಿಲ್ಪಗಳಲ್ಲಿ





ಒಬ್ಬ ಸೇವಕಿಯನ್ನು ಕೆತ್ತಲಾಗಿದೆ. ಒಂದೆರಡು ಶಿಲ್ಪಗಳಲ್ಲಿ ಸೇವಕಿಯ ಬದಲಾಗಿ ಸೇವಕನನ್ನು ಕೆತ್ತಲಾಗಿದೆ. ಹೆಣ್ಣಿನ ಶಿಲ್ಪಗಳಲ್ಲಿ ತೋರಮೊಲೆಗಳು, ಮೊಲೆಕಟ್ಟುಗಳು, ಕೈಬಳೆಗಳು, ಡಾಬ, ಕಾಲುಗಳಲ್ಲಿ ಕಡಗ, ಕಿವಿಗಳಲ್ಲಿ ಲೋಲಾಕುಗಳನ್ನು ರಟ್ಟೆಗಳಲ್ಲಿ ವಂಕಿಗಳನ್ನು ಕೆತ್ತಲಾಗಿರುವುದರಿಂದ ಹೆಣ್ಣಿನ ಆಕರ್ಷಕವಾದ ಹೆಣ್ಣು ಶಿಲ್ಪಗಳಿದ್ದು, ತಲೆಯ ಮೇಲೆ ತುರುಬನ್ನು ಕೊಂಚ ಬಲಕ್ಕೆ ವಾಲುವಂತೆ ಈ ಸಿಂಗಾರಿಗಳು ಕಟ್ಟಿಕೊಂಡಿದ್ದಾರೆ. ಟೊಂಕದ ಮೇಲೆ ಕುಪ್ಪಸಗಳನ್ನು ಈ ಸೇವಕಿಯರು ಧರಿಸಿದ್ದಾರೆ. (ಚಿತ್ರ ೯).



ಸೀರೆಯನ್ನು ಎರಡು ಕಾಲುಗಳಿಗೆ ಅಂಟಿಕೊಳ್ಳುವಂತೆ ಕಚ್ಚೆಯನ್ನು ಹಾಕಿದ್ದಾರೆ ಮತ್ತು ಸೀರೆಯ ಸೆರಗನ್ನು ಇಂದಿನಂತೆ ಎದೆಯಮೇಲೆ ಹಾಯಿಸದೆ, ಟೊಂಕದಿಂದ ಎರಡು ಕಾಲುಗಳ ಮಧ್ಯೆ ನಿರಿಗೆ ನಿರಿಗೆಯಾಗಿ ಬೀಳುವಂತೆ ಧರಿಸಿದ್ದಾರೆ ಈ ನೀರೆಯರು (ಚಿತ್ರ ೭, ೮, ೯, ೧೦). ಒಟ್ಟಿನಲ್ಲಿ ಈ ಶಿಲ್ಪಗಳನ್ನು ಕೆತ್ತಿದ




ಶಿಲ್ಪಿಗಳು ಅಂದಿನ ವೀರರಂತೆ ರಸಿಕರಾಗಿದ್ದರೆಂಬುದಕ್ಕೆ ಈ ಶಿಲ್ಪಗಳೇ ಸಾಕ್ಷಿ.

ಸಮಾಧಿ ಗುಡಿಗಳು

ಆಗಲೇ ಹೇಳಿದಂತೆ ಲಡಾಯಿ ಹೊಲದಲ್ಲಿ ಇಂಡೋ ಸಾರ್ಸನಿಕ್ ಶೈಲಿಯಲ್ಲಿ (ಸರಿಯಾಗಿ ಹೇಳಬೇಕೆಂದರೆ ಮಸೀದೆಯ ಗುಮ್ಮಟಗಳಂತೆ) ಕಣಶಿಲೆ ಮತ್ತು ಸುಣ್ಣದ ಗಚ್ಚನ್ನು (Lime Mortar) ಉಪಯೋಗಿಸಿ ಕಟ್ಟಲಾದ ಒಟ್ಟು ಆರು ರಚನೆಗಳು (Structures) ನೋಡುಗರ ಗಮನಸೆಳೆಯುತ್ತವೆ. ಈ ಆರು ರಚನೆಗಳಲ್ಲಿ ಒಂದು ರಚನೆಯು ಸಂಪೂರ್ಣವಾಗಿ ಬಸರಿಗಿಡದಿಂದ ಮುಚ್ಚಿಹೋಗಿದೆ. ಈ ಗಿಡದ ಬೇರುಗಳು ಗುಮ್ಮಟದ ಮೂಲಕ ಗೋಡೆಗಳಿಗೆ ಇಳಿದು ಅಲ್ಲಿಂದ ನೆಲದೊಳಕ್ಕೆ ಬೆಳೆದಿವೆ. ಇದರಿಂದಾಗಿ ಈ ರಚನೆಯ ಗೋಡೆಗಳು ಸಂಪೂರ್ಣವಾಗಿ ಬಿದ್ದುಹೋಗಿವೆ. ಗಿಡದ ಬೇರುಗಳಿಂದ ಆವೃತವಾಗಿರುವ ಗವಿಯೊಳಕ್ಕೆ ಹೋಗಿ ತಲೆ ಎತ್ತಿ ನೋಡಿದರೆ ಗುಮ್ಮಟದ ರಚನೆಗಾಗಿ ಕಣಶಿಲೆಯ ಚೂರುಗಳನ್ನು ಇಟ್ಟಿಗೆಯಂತೆ ತಾಂತ್ರಿಕವಾಗಿ ಜೋಡಿಸಿರುವದು ಕಂಡುಬರುತ್ತದೆ. ಈ ಗುಮ್ಮಟಗಳನ್ನು ಕಟ್ಟಿದ ಸ್ಥಪತಿಗಳ ಕೌಶಲ್ಯವನ್ನು ಮೆಚ್ಚಲೇಬೇಕು. ಉಳಿದ ಐದು ಗುಮ್ಮಟಗಳು ಇನ್ನೂ ಸುಸ್ಥಿತಿಯಲ್ಲಿವೆ. (ಚಿತ್ರ ೧೧, ೧೨, ೧೩) ಈ ಲಡಾಯಿ







ಹೊಲದಲ್ಲಿರುವ ಈ ರಚನೆಗಳನ್ನು ಸ್ಥಳೀಯರು (ಸೂಕ್ಷ್ಮವಾಗಿ ಗಮನಿಸಿದೆ) ಮುಸ್ಲಿಂಗೋರಿಗಳೆಂದು ಭಾವಿಸುತ್ತಾರೆ. ಈ ರಚನೆಗಳ ಮುಂದೆ ಹಿಂದು ಧರ್ಮದ ಸಂಕೇತಗಳನ್ನು ಹೊತ್ತಿರುವ ವೀರಗಲ್ಲುಗಳು ಹಿಂದೂ ಸೈನಿಕರ ಸ್ಮಾರಕಗಳೆಂದು ಭಾವಿಸುತ್ತಾರೆ. ಅದಲ್ಲದೆ ಈ ಹೊಲ ಹಿಂದಿನ ಕಾಲದಲ್ಲಿ ಹಿಂದೂ-ಮುಸ್ಲಿಂರ ರಣರಂಗ ವಾಗಿತ್ತೆಂದು ಭಾವಿಸುತ್ತಾರೆ. ನಮ್ಮ ವಾಸ್ತು ಶಿಲ್ಪಕಲೆಯ ಪರಂಪರೆ ಮತ್ತು ಧಾರ್ಮಿಕ ಆಚರಣೆಗಳ ಪರಂಪರೆಯ ಬಗ್ಗೆ ತಿಳುವಳಿಕೆ ಇರದ ಸ್ಥಳೀಯರ ಈ ನಂಬಿಗೆ ಅರ್ಧಸತ್ಯದಿಂದ ಕೂಡಿದೆ.

ಹೊರನೋಟಕ್ಕೆ ಮಸೀದೆಯ ಗುಮ್ಮಟಗಳಂತೆ ಕಾಣುವ ಈ ರಚನೆಗಳು ನೆಲದಿಂದ (ಅಧಿಷ್ಠಾನ ಅಥವಾ ಕಟ್ಟೆಯೂ ಸೇರಿ) ಸುಮಾರು ೧೦ ಮೀಟರ್ ಎತ್ತರವುಳ್ಳವುಗಳಾಗಿವೆ. ಅಧಿಷ್ಠಾನದ ಮೇಲೆ ಸುಮಾರು ೩ ಮೀ. x ೩ ಮೀ. ಉದ್ದಗಲವುಳ್ಳ ನಾಲ್ಕು ಗೋಡೆಗಳ ಮೇಲೆ ಗುಮ್ಮಟವನ್ನು ಕಟ್ಟಲಾದ ರಚನೆಗಳ ಒಂದು ರಚನೆಯ ಹೊರತಾಗಿ ಎಲ್ಲಾ ರಚನೆಗಳ ಬಾಗಿಲು ಚೌಕಟ್ಟು ಕಮಾನಿನ ಆಕಾರದಲ್ಲಿವೆ. (ಚಿತ್ರ ೧೪). ಒಂದು ರಚನೆಯ



ಾಗಿಲು ಚೌಕಟ್ಟು ಮಾತ್ರ ಆಯಾತಾಕಾರದಲ್ಲಿದೆ. ಇದೇ ರಚನೆಯ ೋಡೆಗಳ ಮೇಲೆ ಗುಮ್ಮಟವನ್ನು ಕಟ್ಟಿದೆ ಕಲ್ಯಾಣ ಚಾಳುಕ್ಯರ ೖಲಿ ಅನುಕರಿಸಿದ ಮತ್ತು ಮುಸ್ಲಿಂ ಶೈಲಿಯ ಕಮಾನುಗಳುಳ್ಳ ೋಪುರವನ್ನೂ ಕಟ್ಟಲಾಗಿದೆ (ಚಿತ್ರ ೧೫).



ಈ ಐದು ರಚನೆಗಳ ಒಳಹೊಕ್ಕರೆ ನೆಲದ ಮೇಲೆ ಯಾವ ಶಿಲ್ಪವಿಲ್ಲ ಮತ್ತು ಮುಸ್ಲಿಂ ಗೋರಿಯ ಚಿಹ್ನೆಗಳಿಲ್ಲ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಈ ಐದು ರಚನೆಗಳ ಮಧ್ಯದಲ್ಲಿ ಯಾವುದೋ ಶಿಲ್ಪವನ್ನು ತೋಡಿ ಕಿತ್ತೆಸೆಯಲಾಗಿದೆ ಎಂಬುದಕ್ಕೆ ಸಾಕ್ಷಿಯಾಗಿ ಒಂದು ಸಣ್ಣ ಕುಣಿ ಇರುವದು ಕಂಡು ಬರುತ್ತದೆ ಮತ್ತು ಈ ರಚನೆಗಳ ಎಡಗೋಡೆಯಲ್ಲಿ ಒಂದು ಚಿಕ್ಕ ಮೋರಿಯನ್ನು ಕಾಣಬಹುದು. ಹೊರಗಡೆ ಇದೇ ಮೋರಿಯಿಂದ ನೀರು ಹೊರಕ್ಕೆ ಹರಿದುಹೋಗಲು ಅನುಕೂಲವಾಗುವಂತೆ ಜಲಹರಿನಾಳಗಳನ್ನು ಕಾಣಬಹುದು. ಅಂದರೆ ಈ ರಚನೆಗಳ ಕೇಂದ್ರ ಸ್ಥಳದಲ್ಲಿ ಶಿವಲಿಂಗ ವನ್ನು ಸ್ಥಾಪಿಸಲಾಗಿತ್ತು ಎಂದು ತಿಳಿದು ಬರುತ್ತದೆ. ಆಗಲೇ ವಿವರಿಸ ಲಾದ ನಾಲ್ಕು ವೀರಗಲ್ಲುಗಳಲ್ಲಿ ಚಿತ್ರಿಸಲ್ಪಟ್ಟ ನಾಲ್ಕು ವೀರರು ಇಷ್ಟಲಿಂಗಧಾರಿಗಳಾದವರು ಎಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಈ ಐದು ಮತ್ತು ಈಗ ಬಸರಿ ಗಿಡದ ಬೇರುಗಳಿಂದ ಜರ್ಜರಿತವಾಗಿರುವ ಇನ್ನೊಂದು ರಚನೆಯು ಲಿಂಗಾ ಯುತರ ಸಮಾಧಿಗಳು ಎಂದು ಸಾಬೀತಾಗುತ್ತದೆ. ಇದೂ ಅಲ್ಲದೆ ಕಲ್ಯಾಣ ಕರ್ನಾಟಕದಲ್ಲಿ ಹಲವು ಕಡೆ ಶರಣರ ಸಮಾಧಿಗಳನ್ನು ಮುಸ್ಲಿಂ ಶೈಲಿಯ ಗುಮ್ಮಟದ ರಚನೆಗಳಂತೆ ಕಟ್ಟಲಾಗಿರುವುದನ್ನು ಕಾಣಬಹುದು. ಇದಕ್ಕೆ ನಿದರ್ಶನವಾಗಿ ಕೊಡೇಕಲ್ಲ ಬಸವಣ್ಣನ ಗುಡಿ (ಸಮಾಧಿ) ಹಿಂದಿನ ಮೋನವ್ವನ ಗುಡಿ (ಸಮಾಧಿ) ಇವುಗಳನ್ನು ಉದಾಹರಿಸಬಹುದು. ತೀರ ಇತ್ತೀಚಿನ ಉದಾಹರಣೆ ದೇವದುರ್ಗದಲ್ಲಿಯೇ ಸಿಗುತ್ತದೆ. ದೇವದುರ್ಗದ ಪ್ರವೇಶದ್ವಾರ ದಲ್ಲಿರುವ ಬೂದಿ ಬಸವ್ವನ ಮಠದ ಪಕ್ಕದಲ್ಲಿ ಲಿಂಗಾಯುತರ ರುದ್ರಭೂಮಿ ಇದೆ. ಈ ರುದ್ರ ಭೂಮಿಯ ಪಕ್ಕದಲ್ಲಿಯೇ ಇದೇ ಊರಿನ ಶ್ರೀಮಂತ ಮನೆತನಗಳಲ್ಲಿ ಒಂದಾಗಿರುವ ರೇವಣ್ಣ ಮಹಾದೇವಪ್ಪನವರಿಗಿಂತ ಮೂರು ತಲೆಮಾರಿನ ಹಿಂದೆ ಇದ್ದ ಆ ಮನೆತನದ ಹಿರಿಯರ ಸಮಾಧಿ ಇದೆ. ಈ ಸಮಾಧಿಕಟ್ಟಡವನ್ನು ಮಸೀದೆ ಗುಮ್ಮಟದ ರೀತಿಯಲ್ಲಿ ಕಟ್ಟಲಾಗಿದೆ. ಈ ಸಮಾಧಿಯನ್ನು ಈ ಮನೆತನದವರು ಈಗಲೂ ಪೂಜಿಸುತ್ತಾರೆ. ಅಂದರೆ ಲಿಂಗಾಯುತರ ಸಮಾಧಿಗಳನ್ನು ಹಲವಾರು ಕಾರಣಗಳಿಂದಾಗಿ ಗುಮ್ಮಟದ ರೀತಿಯಲ್ಲಿ ಕಟ್ಟಲಾಗುತ್ತಿತ್ತು, ಎಂಬುದು ಸಾಬೀತಾಗು ತ್ತದೆ. ಆದ್ದರಿಂದ ಈಗ ಕಣ್ಣಿಗೆ ಕಾಣುವ ಲಡಾಯಿ ಹೊಲದ ರಚನೆಗಳು ಲಿಂಗಾಯುತ ಧರ್ಮಕ್ಕೆ ಸೇರಿದ್ದ ಪ್ರಮುಖ ಸೈನಿಕ ಅಧಿಕಾರಿಗಳ ಸಮಾಧಿಗುಡಿಗಳು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಕೇವಲ ಹೊರನೋಟ ದಿಂದ ಮಾತ್ರ ಮುಸ್ಲಿಂರ ಗೋರಿಗಳೆಂದು ಸಾಮಾನ್ಯರು ಭಾವಿಸಿರುವದು ತಪ್ಪು. ಈ ರಚನೆಗಳ ಮಧ್ಯದಲ್ಲಿ ಸ್ಥಾಪಿಸಲ್ಪಟ್ಟ ಶಿವಲಿಂಗವನ್ನು ಈ ಭಾಗದಲ್ಲಿ ಹಿಂದೆ ನಡೆದ ಇಂದಿಗೂ ನಡೆಯುತ್ತಿರುವ ನಿಧಿಶೋಧದ ಕಳ್ಳರ ಕೃತ್ಯದ ಫಲವಾಗಿ ಕಿತ್ತೆಸೆಯಲಾಗಿದೆ.

ಈ ವೀರರು ಎಲ್ಲಿ ಹೋರಾಡಿದರು?

ಅರಕೇರಿಯಂಥ ಸಣ್ಣ ಹಳ್ಳಿಯಲ್ಲಿ ನನಗೆ ಮೂರು ದಿನಗಳ ಕ್ಷೇತ್ರ ಕಾರ್ಯದಲ್ಲಿ ೨೯ ವೀರಗಲ್ಲುಗಳು ಮತ್ತು ೬ ಸಮಾಧಿ ಗುಡಿಗಳು ಸಿಕ್ಕಿರುವುದು ಯಾವ ವೀರಗಲ್ಲಿನಲ್ಲಿಯೂ ಒಂದಕ್ಷರದ ಶಾಸನ ಕೂಡ ಇಲ್ಲ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಒಂದೇ ಊರಿನಲ್ಲಿ ಒಂದೇ ಶೈಲಿಯ (ವಿಜಯನಗರ ಶೈಲಿ) ವೀರಗಲ್ಲುಗಳು ಸಿಗಬೇಕಾದರೆ ಈ ಹಳ್ಳಿಯ ಹತ್ತಿರದಲ್ಲಿ ಒಂದು ದೊಡ್ಡಯುದ್ಧ ವಾಗಿರಬೇಕೆಂದು ಊಹಿಸಿದರೆ ತಪ್ಪಾಗದು. ಮತ್ತು ಈ ಯುದ್ಧದಲ್ಲಿ ಈ ಹಳ್ಳಿಯ ವೀರರು ಮಡಿದಿರಬಹುದೆಂದು ಊಹಿಸಬಹುದು.

ಡಾ॥ ಜಿ. ಎಸ್. ದೀಕ್ಷಿತರು ಮತ್ತಿತರರು ಬರೆದು ಪ್ರಕಟಿಸಿ ರುವ "ಶ್ರೀ ಕೃಷ್ಣದೇವರಾಯ : ಜೀವನ ಸಾಧನೆಗಳು" ಎಂಬ ಗ್ರಂಥದಲ್ಲಿ ಈ ಬಗ್ಗೆ ಸೂಚನೆ ಸಿಗುತ್ತದೆ.[೭] ಶ್ರೀಕೃಷ್ಣ ದೇವರಾಯನು ರಾಯಚೂರು ಕೋಟೆಯನ್ನು ಗೆಲ್ಲುವ ಪೂರ್ವದಲ್ಲಿ (ಕೆಲ ವಾರಗಳ ಮುಂಚೆ) ಅರಕೇರಿಯಿಂದ ಸುಮಾರು ೨೦ ಕಿ.ಮೀ. ದೂರ ದಲ್ಲಿರುವ ದೇವರದುರ್ಗ ತಾಲ್ಲೂಕಿನ ಗೊಬ್ಬೂರಿನಲ್ಲಿ ಇಸ್ಮಾಯಿಲ್ ಆದಿಲ್‌ಶಾಹನ ಸೈನಿಕರಿಗೂ ಮತ್ತು ವಿಜಯನಗರ ಸೈನಿಕರಿಗೂ ಒಂದು ಯುದ್ಧ ನಡೆಯಿತು. ಶತ್ರುವಿಗೆ ಫಿರಂಗಿಗಳ ನೆರವೂ ಮತ್ತು ಗೊಬ್ಬೂರು ಕೋಟೆಯ ಸಂರಕ್ಷಣೆಯಿದ್ದುದ್ದರಿಂದ ಮೊದಲಿಗೆ ಸುಲ್ತಾನನ ಸೈನಿಕರಿಗೆ ಜಯವಾಗಿ ವಿಜಯನಗರದ ಸೈನಿಕರು ಹಿಮ್ಮೆಟ್ಟಿದ್ದರು. ಇದನ್ನು ಕಂಡ ಕೃಷ್ಣದೇವರಾಯನು ತಾನೇ ಕುದುರೆಯನ್ನೇರಿ ರಣರಂಗ ಪ್ರವೇಶಿಸಿ ತನ್ನ ಸೈನಿಕರನ್ನು ಕೂಗಿ ಹುರಿದುಂಬಿಸಿ ತನ್ನ ಜೀವದ ಹಂಗು ತೊರೆದು ಹೋರಾಡಿದನು. ಇದರ ಫಲವಾಗಿ ಕ್ರಿ.ಶ. ೧೫೨೦ರ ಮೇ ತಿಂಗಳ ೧೯ರಂದು ಈ ಚಾರಿತ್ರಿಕ ಮಹಾಯುದ್ಧದಲ್ಲಿ ವಿಜಯನಗರದ ಪಡೆ ವಿಜಯಶಾಲಿಯಾಯಿತು. ಇಸ್ಮಾಯಿಲ್ ಆದಿಲ್ ಶಹಾನು ಅಸದಖಾನನ ಸಹಾಯದಿಂದ ಕೃಷ್ಣಾನದಿಯನ್ನು ದಾಟಿ ಗುಡ್ಡಗಳ

ಹಾದಿಯನ್ನು ಹಿಡಿದು ತಲೆಮರೆಸಿಕೊಂಡು ವಿಜಾಪುರವನ್ನು ಸೇರಿದನು. ಈ ಯುದ್ಧದ ವಿಜಯದಿಂದಾಗಿ ರಾಯಚೂರು ಕೋಟೆಯನ್ನು ಕೃಷ್ಣದೇವರಾಯನು ಸುಲಭವಾಗಿ ಗೆದ್ದುಕೊಂಡನು. ಆದ್ದರಿಂದ, ಈ ಗೊಬ್ಬೂರಿನ ಯುದ್ಧದಲ್ಲಿ ಅರಕೇರಿಯ ಯೋಧರು ಕೃಷ್ಣದೇವರಾಯನ ಪರವಾಗಿ ಹೋರಾಡಿ ಮಡಿದರು. ಅವರ ಸ್ಮಾರಕಗಳಾಗಿ ಈ ವೀರಗಲ್ಲುಗಳನ್ನು ಮತ್ತು ಸಮಾಧಿಗುಡಿಗಳನ್ನು ಅವರ ಬಂಧುಗಳು ಮತ್ತು ಅಭಿಮಾನಿಗಳು ಕಟ್ಟಿಸಿದರೆಂದು ಊಹಿಸಿದರೆ ತಪ್ಪಾಗದು.

ಈ ವೀರರ ಧರ್ಮ ಮತ್ತು ಜಾತಿ

ಈ ವೀರರು ಯಾವ ಧರ್ಮಕ್ಕೆ ಸೇರಿದವರು ಅಥವಾ ಯಾವ ಜಾತಿಗೆ ಸೇರಿದವರು ಎಂಬ ಬಗ್ಗೆ ನೇರ ಆಧಾರಗಳಿಲ್ಲ. ಆದರೆ ಒಟ್ಟು ನಾಲ್ಕು ವೀರಗಲ್ಲುಗಳ ವೀರರು ಇಷ್ಟಲಿಂಗ ಧರಿಸಿರುವದರಿಂದಲೂ ಈ ಸಮಾಧಿಗುಡಿಗಳು ಈ ಭಾಗದಲ್ಲಿ ಪ್ರಚಲಿತವಿದ್ದ ಲಿಂಗಾಯತರ ಸಮಾಧಿಯನ್ನು ಹೋಲುತ್ತಿರುವುದರಿಂದಲೂ ಈ ವೀರರಲ್ಲಿ ಕನಿಷ್ಠ ೮-೧೦ ಜನ ಪ್ರತಿಷ್ಠಿತ ವ್ಯಕ್ತಿಗಳು ಲಿಂಗಾಯುತ ಧರ್ಮೀಯರು ಎಂದು ನಿಸ್ಸಂದೇಹವಾಗಿ ಹೇಳಬಹುದು. ಈ ಊರಿನಲ್ಲಿ ಬೇಡ ಜನಾಂಗಕ್ಕೆ ಸೇರಿದ ಜನರೇ ಬಹುಸಂಖ್ಯಾತರು. ಇವರನ್ನು ಕ್ಷಾತ್ರ ವೃತ್ತಿಯ ವೀರಜನಾಂಗವೆಂದು ಇತಿಹಾಸದಲ್ಲಿ ಗುರ್ತಿಸಲಾಗಿದೆ. ಆದ್ದರಿಂದ ಈ ಜನಾಂಗಕ್ಕೆ ಸೇರಿದ ವೀರರು ಚಾರಿತ್ರಿಕ ಗೊಬ್ಬೂರಿನ ಯುದ್ಧದಲ್ಲಿ ಮಡಿದಿರ ಬಹುದು ಎಂದು ಊಹಿಸಿದರೆ ತಪ್ಪಾಗದು. ಅದೇ ರೀತಿ ಅರಕೇರಿಗ್ರಾಮದಲ್ಲಿ ಲಿಂಗಾಯಿತ ಧರ್ಮೀಯರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಅವರೂ ಈ ಯುದ್ಧದಲ್ಲಿ ಮಡಿದ ವೀರರ ಗುಂಪಿಗೆ ಸೇರಿದ್ದಾರೆ ಎಂಬುದು ನಿಸ್ಸಂಶಯ.

ಉಪಸಂಹಾರ ಮತ್ತು ಸಲಹೆಗಳು

ಮೇಲೆ ವಿವರಿಸಲಾದ ಅಂಶಗಳ ಸಾರಾಂಶವನ್ನು ಹೀಗೆ ಹೇಳಬಹುದು :

೧. ಕಲ್ಯಾಣ ಕರ್ನಾಟಕದ ವೀರಗಲ್ಲುಗಳ ಮತ್ತು ಮಾಸ್ತಿಕಲ್ಲುಗಳ ವಿವರವಾದ ಅಧ್ಯಯನ ನಡೆಯಬೇಕಾಗಿದೆ.

೨. ಅರಕೇರಿಯ ವೀರರು ಬಹುಶಃ ಗೊಬ್ಬೂರಿನ ಯುದ್ಧದಲ್ಲಿ ಕೃಷ್ಣದೇವರಾಯನ ಪರವಾಗಿ ಹೋರಾಡಿದರು. ಆಗ ಮಡಿದ ವೀರರ ನೆನಪಿಗಾಗಿ ಈ ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ ಹಾಗೂ ಸಮಾಧಿಗುಡಿಗಳನ್ನೂ ಕಟ್ಟಲಾಗಿದೆ.

೩. ಲಡಾಯಿ ಹೊಲದಲ್ಲಿರುವ ಆರು ಗುಮ್ಮಟದ ರಚನೆಗಳು ಲಿಂಗಾಯಿತ ಧರ್ಮೀಯರ ಸಮಾಧಿಗಳು.

೪. ಈ ಊರಿನಿಂದ ಲಿಂಗಾಯಿತ ಧರ್ಮೀಯರು ಮತ್ತು ಹಿಂದೂಧರ್ಮಕ್ಕೆ ಸೇರಿದ ಬೇಡರು ರಾಯನ ಪರವಾಗಿ ಹೋರಾಡಿದರು.

ಈ ಕಾರಣ ಈ ಕೆಳಗಿನಂತೆ ರಾಯಚೂರು ಜಿಲ್ಲೆಯ ಇತಿಹಾಸಕಾರರಿಗೆ ಈ ಮುಂದಿನ ಸಲಹೆಗಳು :

೧. ಈ ಹಿಂದೆ ನಾನು ಚಂಪನಕೆರೆಯಲ್ಲಿ ವೀರಗಲ್ಲುಗಳನ್ನು ಗುರ್ತಿಸಿದ್ದೆ. ಅದರಂತೆ ಕ್ಯಾದಿಗೇರಿ ಮತ್ತು ಕರಿಗುಡ್ಡದ ಬಳಿ ವೀರಗಲ್ಲುಗಳಿರುವುದನ್ನು ಕೇಳಿದ್ದೇನೆ. ಆದ್ದರಿಂದ ದೇವದುರ್ಗ ತಾಲ್ಲೂಕಿನ ಮತ್ತಿತರ ತಾಲ್ಲೂಕಿನ ವೀರಗಲ್ಲುಗಳ ಮತ್ತು ಮಾಸ್ತಿಕಲ್ಲುಗಳ ಸವಿವರವಾದ ಅಧ್ಯಯನ ಮಾಡಿದರೆ ಒಂದು ಹೊಸ ಅಧ್ಯಾಯವನ್ನು ತೆರೆದಂತಾಗುತ್ತದೆ.

ಆದ್ದರಿಂದ ನಾಡಿನ ಬೇರೆಭಾಗದ ಇತಿಹಾಸಕಾರರು ಮತ್ತು ವಿಶೇಷವಾಗಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಇತಿಹಾಸಕಾರರು ಈ ಕಡೆ ಗಮನಹರಿಸಬೇಕೆಂದು ಕೋರುತ್ತೇನೆ.

ಅನುಬಂಧ

ಫೋಟೋಗಳ ವಿವರಣೆ

ಚಿತ್ರ ೧. ಇಷ್ಟಲಿಂಗಧಾರಿ ಪ್ರಮುಖ ಸೇನಾಧಿಕಾರಿ. ಈ ವೀರನು ಎಡಗೈಯನ್ನು ಕುದುರೆ ಲಗಾಮು ಮತ್ತು ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿರುವ ಭಂಗಿ ಕಾರ್ಯವನ್ನು ಬಿಂಬಿಸುತ್ತದೆ. ಮುಂದೆ ಧ್ವಜವನ್ನು ಹಿಡಿದಿರುವ ಸೇವಕ ನಿಂತಿದ್ದಾನೆ.

ಚಿತ್ರ ೨. ಪಲ್ಲಕ್ಕಿಯಲ್ಲಿ ಕುಳಿತು ಯುದ್ಧಕ್ಕೆ ಹೊರಟಿರುವ ಅತ್ಯಂತ ಪ್ರಮುಖ ಸೇನಾಧಿಕಾರಿ ವೀರನ ಶಿಲ್ಪ. ರಾಜಛತ್ರಿ ಮತ್ತು ಧ್ವಜ ಇವುಗಳು, ಈ ವೀರನು ಸೇನೆಯಲ್ಲಿ ಉನ್ನತದರ್ಜೆಯ ಅಧಿಕಾರಿ ಎಂಬುದನ್ನು ಸಂಕೇತಿಸುತ್ತವೆ. ಮೇಲ್ಭಾಗದಲ್ಲಿ ಸೂರ್ಯ, ಕಮಲ ಮತ್ತು ಚಂದ್ರರ ಉಬ್ಬುಶಿಲ್ಪಗಳು ಈ ವೀರಗಲ್ಲಿಗೆ ಶೋಭೆಯನ್ನು ನೀಡಿವೆ. ವೀರನ ಕೊರಳಲ್ಲಿ ಕಂಠಿಹಾರ ಮತ್ತು ಇಷ್ಟಲಿಂಗ ಕರಡಿಕೆಯನ್ನು ಗುರ್ತಿಸಬಹುದು.

ಚಿತ್ರ ೩. ಪ್ರಮುಖ ಸೇನಾಧಿಕಾರಿ ಕುಳಿತಿರುವ ಕುದುರೆಯು ಸಿಂಗರಿಸಲ್ಪಟ್ಟಿದೆ. ಕಲಾತ್ಮಕವಾಗಿ ಕೆತ್ತಿದ ವೀರನಶಿಲ್ಪ. ಬಲತುದಿಯಲ್ಲಿ ಒಬ್ಬ ಕಾಲಾಳಿನ ಉಬ್ಬುಶಿಲ್ಪ ಇದೆ. ಎಡಗೈಯಲ್ಲಿ ಗುರಾಣಿ ಬಲಗೈಯಲ್ಲಿ ಕಠಾರಿ ಇದೆ. ತಲೆಗೂದಲಿನ ತುರುಬನ್ನು ಕಲಾತ್ಮವಾಗಿ ಕೆತ್ತಲಾಗಿದೆ.

ಚಿತ್ರ ೪. ಕಲಾತ್ಮಕವಾಗಿ ಕೆತ್ತಲಾದ ವೀರಗಲ್ಲು. ಎಲ್ಲಾ ರೀತಿಯಿಂದಲೂ ಸುಂದರಶಿಲ್ಪ.

ಚಿತ್ರ ೫. ಬೇಟೆ ನಾಯಿಗಳಿರುವ ಶಿಲ್ಪ.

ಚಿತ್ರ ೬. ಎರಡು ಕಡೆಗಳಲ್ಲಿ ಸೀಳಿದರೂ ಸುಂದರವಾಗಿ ಕಾಣುವ ವೀರಗಲ್ಲು. ವೀರನ ಹಿಂಬದಿಯಲ್ಲಿ ಮೂವರು ಚೆಲುವೆಯರು ಪಾನಪಾತ್ರೆಗಳನ್ನು ಹಿಡಿದುಕೊಂಡು ನಿಂತಿದ್ದಾರೆ. ಹೆಣ್ಣುಗಳ ಉಡುಪು ಮತ್ತು ಆಭರಣಗಳು ಆಕರ್ಷಕವಾಗಿವೆ.

ಚಿತ್ರ ೮. ಲಡಾಯಿ ಹೊಲದಲ್ಲಿರುವ ಸಮಾಧಿಗುಡಿಯೊಂದಕ್ಕೆ ಆನಿಸಿ ನಿಲ್ಲಿಸಲಾಗಿರುವ ಕಲಾತ್ಮಕ ವೀರಗಲ್ಲು. ಇಬ್ಬರು ಸೇವಕರು ಇಬ್ಬರು ಸೇವಕಿಯರು

ರಾಜಛತ್ರಿ ಮತ್ತು ಧ್ವಜ - ಈ ವೀರನ ಅಂತಸ್ತನ್ನು ಸೂಚಿಸುತ್ತವೆ.

ಚಿತ್ರ ೯. ಪವಿತ್ರವನದಲ್ಲಿ ನಿಲ್ಲಿಸಲಾಗಿರುವ ಒಬ್ಬ ಸುಂದರ ಸೇವಕಿಯ ಸುಂದರಶಿಲ್ಪ. ಈ ಶಿಲ್ಪದಲ್ಲಿ ಹೆಣ್ಣಿನ ಸಿಂಗಾರ ಮತ್ತು ಆಭರಣಗಳು ಕಣ್ಸೆಳೆಯುತ್ತವೆ.

ಚಿತ್ರ ೧೦. ಸುಂದರ ಶಿಲ್ಪ. ಮೂರು ಸೇವಕರು ಮತ್ತು ಒಬ್ಬ ಸುಂದರ ಸೇವಕಿ, ಧ್ವಜ, ರಾಜಛತ್ರಿ ಇವುಗಳನ್ನು ಗಮನಿಸಿದರೆ ಈ ವೀರನೊಬ್ಬ ಪ್ರಮುಖ ಸೇನಾಧಿಕಾರಿಯಾಗಿರಬೇಕೆಂದೆನಿಸುತ್ತದೆ.

ಚಿತ್ರ ೧೧. ಲಡಾಯಿ ಹೊಲದಲ್ಲಿ ಕಟ್ಟಲಾಗಿರುವ ಆರು ಸಮಾಧಿ ಗುಡಿಗಳಲ್ಲಿ ನಾಲ್ಕು ಗುಡಿಗಳನ್ನು ಈ ಚಿತ್ರದಲ್ಲಿ ನೋಡಬಹುದು.

ಚಿತ್ರ ೧೨. ಸಂಪೂರ್ಣವಾಗಿ ಬಸರಿಗಿಡದ ಬೇರುಗಳಿಂದ ಆವೃತವಾಗಿರುವ ಸಮಾಧಿಯ ಕಟ್ಟಡವು ಬೇರುಗಳ ಬೆಳವಣಿಗೆಯಿಂದಾಗಿ ಸಂಪೂರ್ಣವಾಗಿ ಹಾಳಾಗಿದೆ.

ಚಿತ್ರ ೧೩. ಇದೇ ಬಸರಿಗಿಡದಿಂದ ನಿರ್ಮಿತ ಗವಿಯೊಳಕ್ಕೆ ಹೋಗಿ ನೋಡಿದಾಗ ಕಾಣುವ ನೋಟ ಅಚ್ಚರಿಯನ್ನು ಹುಟ್ಟಿಸುತ್ತದೆ. ಯಾವ ನಿರ್ದಿಷ್ಟವಾದ ರೂಪ ಮತ್ತು ಅಳತೆಗಳಿಲ್ಲದ ಬಿಂಚಿಗಲ್ಲುಗಳನ್ನು ಜೋಡಿಸಿ ಗುಮ್ಮಟವನ್ನು ನಿರ್ಮಿಸಲಾಗಿದೆ.

ಚಿತ್ರ ೧೪. ಹೊರನೋಟಕ್ಕೆ ಮುಸ್ಲಿಮರ ಗೋರಿಯಂತೆ ಕಾಣುವ ಲಿಂಗಾಯತ ವೀರನ ಸಮಾಧಿ ಗುಡಿ ಇದೆ.

ಚಿತ್ರ ೧೫. ಕಲ್ಯಾಣ ಚಾಳುಕ್ಯರ ಶೈಲಿಯನ್ನು ಅನುಕರಿಸಿ ಕಟ್ಟಲಾಗಿರುವ ಗೋಪುರ ಮತ್ತು ಕಮಾನುಗಳುಳ್ಳ ಲಿಂಗಾಯತ ವೀರನ ಸಮಾಧಿ ಗುಡಿ.

* (ಪ್ರಸ್ತುತ ಅಧ್ಯಯನದ ಕ್ಷೇತ್ರ ಕಾರ್ಯಕ್ಕೆ ಬಾಲ್ಯ ಸ್ನೇಹಿತ ಹಾಗು, ಅರಕೇರಿ ಗ್ರಾಮದ ಸಂಸತ್ ಸದಸ್ಯ ಶ್ರೀ ವೆಂಕಟೇಶನಾಯಕ ಮತ್ತು ಅವರ ಚಿರಂಜೀವಿ ಶ್ರೀ ರಾಜಶೇಖರನಾಯಕ, ಸೌಕರ್ಯಗಳನ್ನು ಒದಗಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ದೇವದುರ್ಗ ತಾಲ್ಲೂಕಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮತ್ತು ರಂಗಯ್ಯ ಅಳ್ಳುಂಡಿ, ಇವರೆಲ್ಲಗೂ ನನ್ನ ಕೃತಜ್ಞತೆಗಳು. ಇದೇ ೨೦೦೪ರ ಜನವರಿ ಮತ್ತು ಫೆಬ್ರುವರಿ ತಿಂಗಳ ಅವಧಿಯಲ್ಲಿ ನಾನು ಕೈಗೊಂಡ ಕ್ಷೇತ್ರ ಕಾರ್ಯಗಳಿಗೂ, ಸದ್ಯದ ಸಂಶೋಧನ ಬರೆಹ ಅಲ್ಲದೆ ಇತರ ನನ್ನ ಬರಹಗಳಿಗೆ ಸಕಲ ಸೌಕರ್ಯಗಳನ್ನು ಕರುಣಿಸಿದ ಪರಮ ಪೂಜ್ಯ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳಿಗೆ ಭಕ್ತಿಪೂರ್ವಕವಾಗಿ ನಮಿಸುತ್ತೇನೆ. ಶ್ರೀಮಠದ ಕಾರ್ಯಕರ್ತರು ನನಗೆ ನೆರವಾಗಿದ್ದಾರೆ; ಅವರಿಗೆ ನನ್ನ ನೆನಕೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ॥ ಶೇಷ ಶಾಸ್ತ್ರಿ, ಆರ್., (೧೯೮೨), **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ೪೧-೮೭ ಮತ್ತು ೨೯೮-೩೦೭

೨. ದೀಕ್ಷಿತ, ಜಿ.ಎಸ್., ರಾಮಸ್ವಾಮಿ. ಬಿ., ಮತ್ತು ಭಾರ್ಗವಿ ಶಿವಯ್ಯ., (೧೯೯೧), **ಶ್ರೀಕೃಷ್ಣದೇವರಾಯ : ಜೀವನ, ಸಾಧನೆಗಳು**, ಪ್ರಾಚ್ಯ ಮತ್ತು ವಸ್ತು ಸಂಗ್ರಾಹಾಲಯಗಳ ನಿರ್ದೇಶನಾಲಯ., ಮೈಸೂರು, ಪುಟ೬೨-೬೪.

ಮಂದರ್ಕೆ ನಿತ್ಯಾನಂದ ಪೈ*

ರಾಷ್ಟ್ರಕೂಟ ಕುಲಸಂಜಾತ ಭೀಮದೇವನ ಗದ್ಯಾಣ ಮತ್ತು ಇಮ್ಮಡಿ ಹರಿಹರನ ಕಾಲದ ಶಾಸನೋಕ್ತ ಕಠಾರಿ ಅಂಕುಶ ಗದ್ಯಾಣ

೧. ಭೀಮದೇವನ ಚಿನ್ನದ ಗದ್ಯಾಣ


ಆಕಾರ : ವೃತ್ತಾಕಾರ **ತೂಕ** : ೪.೧. ಗ್ರಾಂ **ಲೋಹ** : ಚಿನ್ನ

ಈ ನಾಣ್ಯದ ಮುಂಭಾಗದಲ್ಲಿ ಬಾಲವನ್ನು ಮೇಲೆತ್ತಿ



ಬಲಗಡೆಗೆ ಮುಖಮಾಡಿ ನಿಂತಿರುವ ಸಿಂಹವಿದ್ದು ಮೇಲ್ಗಡೆ ಸೂರ್ಯಚಂದ್ರರಿದ್ದಾರೆ. ಸಿಂಹವು ಎದುರಿನ ಕಾಲನ್ನು ಎತ್ತಿ ಹಿಡಿದಿದ್ದು ಕೆಳಗಡೆ ಪಕ್ಷಿಯಿದೆ.

ಹಿಂಬದಿಯಲ್ಲಿ ಮೂರು ಸಾಲಿನ ಶ್ರೀ ಗಣ್ಡರ ಗೋ/ವ ಎಂಬ ಕನ್ನಡ ಲಿಪಿ ಇದೆ.



ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಬನಶಂಕರಿಯಲ್ಲಿರುವ ಶ್ರೀ ಬನಶಂಕರಿ ದೇವಿಯ ದೇವಸ್ಥಾನದ ಎಡಭಾಗದ ಶಿವನಗುಡಿಯ ಸ್ತಂಭದಲ್ಲಿರುವ ಶಾಸನದಲ್ಲಿ 'ಗಂಡರಗೋವ' ಬಿರುದಾಂಕಿತ ಭೀಮದೇವನ ಉಲ್ಲೇಖವಿದೆ. ಈ ಶಾಸನವು ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲದೇವ। (ಜಯಸಿಂಹ ॥ ಕಾಲ ಸುಮಾರು ಕ್ರಿ.ಶ. ೧೦೧೫-೧೦೪೪) ಇವನ ಆಳ್ವಿಕೆಯ ಕಾಲದ್ದಾಗಿದೆ. ಈ ಶಾಸನವು ಭೀಮದೇವನ ನಂಬಿಗಸ್ತನಾದ ಸೇನಬೋವ ನಾಗವರ್ಮಯ್ಯನು ಕಾಳಗದಲ್ಲಿ ವೀರಮರಣವನ್ನು ಹೊಂದಿದ ವಿಷಯವನ್ನು ತಿಳುಹಿಸುತ್ತದೆ.[೧]

"ಸ್ವಸ್ತಿ ಶ್ರೀ ಪ್ರಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಸ್ವರ ಪರಮಭಟ್ಟಾರಕಸ ತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣಂ ಶ್ರೀಮಜ್ಜಗದೇಕ ಮಲ್ಲದೇವರ...." ಹೀಗೆ ಪ್ರಾರಂಭವಾಗುವ ಶಾಸನದಲ್ಲಿ ಭೀಮದೇವನು ತನ್ನನ್ನು ರಾಷ್ಟ್ರಕೂಟ ಕುಲ ಸಂಜಾತನೆಂದು, ಆಹವಮಲ್ಲದೇವನ (ತೈಲ॥ ಕಾಲ ೯೭೩- ೯೯೭) ಪಾದಪಂಕಜ ಭ್ರಮರನೆಂದೂ, ಸಿಂಹನ (ಜಯ ಸಿಂಹ॥) ಹನುಮನೆಂದೂ ಕರೆಯಿಸಿ ಕೊಂಡಿದ್ದಾನೆ. ಇದು ಶಾಸನದ ೧೧-೧೪ನೇ ಸಾಲಿನಿಂದ ತಿಳಿಯುತ್ತದೆ. ಅದರಲ್ಲಿ

"ಮಹಾಮ(ಂ)ಣ್ಡಳೇಶ್ವರ ರಾಷ್ಟ್ರಕೂ ಟ ಕುಳ ತಿಳಕನ ಹಿತ ಕೋಳಾಹಳಂ ಶ್ರೀಮದಾಹ (ವ)ಮಲ್ಲದೇವ ಪಾದ ಪಂಕಜ ಭ್ರಮರಂ ಮಾವನ ಗಂಧ್ಧವಾರರಣಂ ಭಾವನಸಿ(ಘಂ)..." ಎಂದಿದೆ.

ಇವನು ರಾಷ್ಟ್ರಕೂಟ ಕುಲದವನೆಂದು ಪ್ರಥಮತಃ ಈ ಶಾಸನದಿಂದ ಗೊತ್ತಗುತ್ತಾಗುತ್ತದೆ.

"ಶಾಸನದ ೨೦-೨೪ರ ಸಾಲಿನಲ್ಲಿ ಸತ್ಯರತ್ನಾಕರಂ ನಡೆಗೋಟೆ ಮಲ್ಲಂ ಗ(ಂ)ಣ್ಡರ ಗೋವಂ, ಮಣ್ಡಳೀಕ ನಾರಾಯಣಂ ಶ್ರೀಮಂತ್ ಭೀಮದೇವರಸುರಿಗೆ ಗ(ಂ)ಣ್ಡರ ಗೋವನ ಸೇನಬೋವಂ ನಾಗವರ್ಮ್ಮಯ್ಯ..." ಎಂದಿದೆ.

ಇದರಿಂದ ಭೀಮದೇವನಿಗೆ 'ಗಂಡರಗೋವ' ನೆಂದು ಬಿರುದಿದ್ದು, ಸಾಮಾನ್ಯವಾಗಿ ಇವನು ಗಂಡರ ಗೋವನೆಂಬ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಿದ್ದ ಎಂದು ಈ ಶಾಸನದಿಂದ ತಿಳಿಯುತ್ತದೆ. ಇಮ್ಮಡಿ ತೈಲ ಮತ್ತು ಇರಿವ ಬೆಡಂಗ ಸತ್ಯಾಶ್ರಯನ ಆಳ್ವಿಕೆಯಲ್ಲಿ ಬನವಾಸಿ, ಸಾಂತಳಿಗೆ ಮತ್ತು ಕಿಸುಕಾಡು ಪ್ರದೇಶಗಳಲ್ಲಿ ರಾಜ್ಯಾಡಳಿತ ಮಾಡುತ್ತಿದ್ದ ಭೀಮರಸ ಅಥವಾ ಭೀಮ ರಾಜನು ಮತ್ತು ಮೇಲಿನ ಶಾಸನದಲ್ಲಿ ಉಲ್ಲೇಖಿತನಾದ ಗಂಡಗೋವ ಬಿರುದಾಂಕಿತ ಭೀಮದೇವನು ಒಬ್ಬನೇ ಎಂದು ಗುರುತಿಸಬಹುದು.[೨] ಈ ಶಾಸನದಲ್ಲಿ ಬರುವ ಶಕ ೯೪೧ ಸಿದ್ದಾರ್ಥಿ ಸಂವತ್ಸರ ಶುದ್ಧ ಆದಿತ್ಯವಾರವು ಕ್ರಿ.ಶ. ೧೦೧೯ ಏಪ್ರಿಲ್

* ಗಣೇಶ ಎಂಟರ್ ಪ್ರ್ಯಾಸಸ್, ಮೂಡಬಿದರೆ - ೫೭೪ ೨೨೭.

೧೨, ಕ್ರಿ.ಶ. ೧೦೧೯ ಸೆಪ್ಟೆಂಬರ್ ೬ ಮತ್ತು ಕ್ರಿ.ಶ. ೧೦೨೦ ಜನವರಿ ೩, ಹೀಗೆ ೩ ಸಲ ಬರುತ್ತದೆ. ಪ್ರಸ್ತುತ ಲೇಖನದಲ್ಲಿರುವ ನಾಣ್ಯವು ನನ್ನ ಸಂಗ್ರಹದಲ್ಲಿದ್ದು ಅದು ನನಗೆ ಬಾದಾಮಿಯ ಪರಿಸರದಿಂದಲೇ ಬಂದಿರುತ್ತದೆ.

ಕಠಾರಿ ಅಂಕುಶ ಗದ್ಯಾಣ

ಕಠಾರಿ ಅಂಕುಶ ಗದ್ಯಾಣದ ಉಲ್ಲೇಖವು ಇಮ್ಮಡಿ ಹರಿಹರನ ಕ್ರಿ.ಶ. ೧೩೮೯ ಪುತ್ತಿಗೆ ಬರುತ್ತದೆ. ಇದರ ಪ್ರಕಾರ ಮುಡಿಯ ಎಂಬ ಕಾವಲುಗಾರನಿಗೆ ೪ ಕಠಾರಿ ಅಂಕುಶ ಗದ್ಯಾಣವನ್ನು ಕೊಡಬೇಕಾಗಿದ್ದಿತು. ಕಠಾರಿ ಅಂಕುಶ ಗದ್ಯಾಣ ವೆಂದರೆ ಕಠಾರಿ ಮತ್ತು ಅಂಕುಶ ಚಿಹ್ನೆ ಇರುವ ನಾಣ್ಯ. ಆದರೆ ವಿಜಯನಗರದ ಯಾವುದೇ ರಾಜರುಗಳ ನಾಣ್ಯದಲ್ಲಿ ಪ್ರಮುಖ ವಾಗಿ ಕಠಾರಿ ಮತ್ತು ಅಂಕುಶದ ಚಿಹ್ನೆ ಕಂಡುಬರುವುದಿಲ್ಲ. ಮತ್ತು ಅಂಕುಶದ ಚಿಹ್ನೆ ಇಮ್ಮಡಿ ಹರಿಹರನ ಅಥವಾ ಅದಕ್ಕೂ ಮುಂಚಿನ ವಿಜಯನಗರ ರಾಜರ ಕಾಲದಲ್ಲಿ ಕಠಾರಿ ಅಂಕುಶ ಚಿಹ್ನೆ ಇರುವ ನಾಣ್ಯಗಳು ಟಂಕಿಸಲ್ಪಟ್ಟರೂ ಈ ನಾಣ್ಯಗಳು ಇದುವರೆಗೆ ನಮಗೆ ಲಬ್ಧವಾಗಿಲ್ಲ ಎಂದು ಹಿರಿಯ ನಾಣ್ಯ ತಜ್ಞರುಗಳು ಅಭಿಪ್ರಾಯ ವಾಗಿದೆ. [೩]

ಪ್ರಸ್ತುತ ಈ ಪ್ರಬಂಧದಲ್ಲಿ ಕಠಾರಿ ಅಂಕುಶ ಗದ್ಯಾಣದ ಕುರಿತ ನನ್ನ ಅನಿಸಿಕೆಗಳನ್ನು ವಿವರಿಸಿದ್ದೇನೆ.

ಸುಮಾರು ೧೦೦೦ವರ್ಷಕ್ಕಿಂತಲೂ ಹೆಚ್ಚು ಕಾಲ ಆಳ್ವಖೇಡವನ್ನು (ದಕ್ಷಿಣ ಕನ್ನಡ, ಉತ್ತರಕನ್ನಡ ಮತ್ತು ಪಶ್ಚಿಮ ಘಟ್ಟಗಳ ಮೇಲಣ ಕೆಲವು ಪ್ರದೇಶಗಳು) ಆಳಿದ ಆಳೂಪರು ಬಹಳ ವೈವಿಧ್ಯಮಯ ನಾಣ್ಯಗಳನ್ನು ಟಂಕಿಸಿದ್ದಾರೆ. ಸಾಮಾನ್ಯವಾಗಿ ಇವರ ಗದ್ಯಾಣಗಳ (ಮಂಗಳೂರು ಗದ್ಯಾಣ ಮತ್ತು ಬಾರಕೂರು ಗದ್ಯಾಣ) ಎದುರು ಭಾಗದಲ್ಲಿ ಜೋಡಿ ಮೀನು ಅಥವಾ ಸಾಂಕೇತಿಕ ಜೋಡಿ ಮೀನುಗಳನ್ನು ಕಾಣುಬಹುದು. ಈ ಜೋಡಿ ಮೀನುಗಳ ಬದಿಯಲ್ಲಿ ಶಂಖ, ದೀಪದ ಕಂಬ, ಚಾಮರ, ಸಣ್ಣ ಮೀನು,ಗದೆ, ಚಾಮರ ಬೀಸುವ ಸ್ತ್ರೀಯರು, ಪೂರ್ಣಕುಂಭ, ಕಮಲದ ಮೊಗ್ಗು, ತ್ರಿಶೂಲ, ಹೂವಿನ ಗಿಡ ಬಳ್ಳಿಗಳನ್ನು ಕಾಣಬಹುದು. ಚಿನ್ನದ ಅಂಶ ಜಾಸ್ತಿ (೮೦%ಕ್ಕಿಂತಲೂ ಹೆಚ್ಚು) ಇರುವ ಇಂತಹ ನಾಣ್ಯಗಳ ಹಿಂಬದಿಯಲ್ಲಿ ಕನ್ನಡ ಅಥವಾ ನಂದಿ ನಾಗರೀ ಲಿಪಿಯಲ್ಲಿ 'ಪಾಂಡ್ಯ ಧನಂಜಯ' ಎಂಬ ಆಳೂಪರ ಬಿರುದನ್ನು ಕಾಣ ಬಹುದು. ಶೇಕಡಾ ೩೦% ಕ್ಕಿಂತಲೂ ಕಡಿಮೆ ಚಿನ್ನ ಇರುವ



ಇವರ ಇತರ ನಾಣ್ಯಗಳ ಮುಂಭಾಗದಲ್ಲಿ ಸಾಂಕೇತಿಕ ಜೋಡಿ ಮೀನುಗಳಿದ್ದು ಹಿಂಬದಿಯಲ್ಲಿ ನಂದಿ ನಾಗರಿ ಲಿಪಿಯಲ್ಲಿ ಶ್ರೀ ಪಾಂಡ್ಯ ಧನಂಜಯ ಎಂಬ ಬಿರುದನ್ನು ಕಾಣಬಹುದು.

ನನ್ನ ಸಂಗ್ರಹದಲ್ಲಿರುವ ಇಂತಹ ನಾಣ್ಯಗಳನ್ನು ಪರಿಶೀಲಿಸು ವಾಗ ಕೆಲವು ವಿಸ್ಮಯಕರವಾದ ವಿಷಯಗಳು ಗಮನಕ್ಕೆ ಬಂದಿತು. ಕೆಲವು ಗದ್ಯಾಣಗಳ (ಚಿನ್ನದ ಅಂಶ ೩೦% ಗಿಂತ ಕಡಿಮೆ) ಮುಭಾಗದಲ್ಲಿ ಸಾಂಕೇತಿಕ ಜೋಡಿ ಮೀನುಗಳಿದ್ದು, ಮೀನುಗಳ ಬದಿಯಲ್ಲಿ ಶಂಖ ಮತ್ತು ಡಮರುವನ್ನು ಕಾಣಬಹುದು. ನಾಣ್ಯದ ಮೇಲ್ಭಾಗದ ತುದಿಯನ್ನು ಒಂದು ಉದ್ದವಾದ ಗೆರೆಯಿಂದ ಬೇರ್ಪಡಿಸಿ ಪುನಃ ಅದನ್ನು ಸಣ್ಣ ೨ ರೇಖೆಗಳಿಂದ ೩ಭಾಗವಾಗಿ ವಿಂಗಡಿಸಲಾಗಿದೆ. ಇದರ ಮಧ್ಯ ಭಾಗದಲ್ಲಿ ನಾಗರೀ (ಹ-ಕ) ವಿದ್ದು ಬದಿಯಲ್ಲಿ ಚಂದ್ರ ಸೂರ್ಯರಿದ್ದಾರೆ. ಈ ನಾಣ್ಯದ ಕೆಳಭಾಗದಲ್ಲಿ ಕಠಾರಿ ಇದೆ. ಹಿಂಭಾಗದಲ್ಲಿ ಶ್ರೀ ಪಾಂಡ್ಯ ಧನಂಜಯ ಎಂಬ ನಂದಿ ನಾಗರೀ ಲಿಪಿ ಇದೆ.

ಇನ್ನು ಕೆಲವು ಗದ್ಯಾಣಗಳಲ್ಲಿ (ಚಿನ್ನದ ಅಂಶ ೧೫%)



ಎದುರು ಭಾಗದಲ್ಲಿ ಜೋಡಿ ಮೀನಿನ ಚಿತ್ರವಿದ್ದು ಅದರ ಬದಿಯಲ್ಲಿ ಶಂಖ ಮತ್ತು 'ಕಠಾರಿ'ಯನ್ನು ಕಾಣಬಹುದು. ಕೆಲವು ನಾಣ್ಯಗಳ ಕೆಳಭಾಗದಲ್ಲಿ 'ಅಂಕುಶ' ವನ್ನು ಕಾಣಬಹುದು. ಇಂತಹ 'ಕಠಾರಿ ಅಂಕುಶ' ಚಿಹ್ನೆ ಇರುವ ನಾಣ್ಯಗಳ ಹಿಂಭಾಗದಲ್ಲಿ ಶ್ರೀ ಪಾಂಡ್ಯ ಧವಂಜಯ ಎಂಬ ನಂದಿ ನಾಗರೀ ಲಿಪಿ ಇದ್ದು ಶ್ರೀ ಪಾಂಡ್ಯ ಮತ್ತು ಧನಂಜಯದ ಮಧ್ಯ ನಾಗರೀ (ಹ-ಕ) ಇದೆ. ಈ (ಹ-ಕ) ವು ಹರಿಪರನ ಹೆಸರಿನ ಮೊದಲಕ್ಷರವಾಗಿದೆ.



(ಇದು ಇಮ್ಮಡಿ ಹರಿಹರನ ೧/೨ ವರಹದಲ್ಲಿರುವ ಶ್ರೀ ಪ್ರತಾಪ ಹರಿಹರ ಎಂಬ ನಾಗರೀಲಿಪಿಯಲ್ಲಿನುವ ಕ ವನ್ನೆ ಹೋಲುತ್ತದೆ.) ಆದ್ದರಿಂದ ಯಾವ ನಾಣ್ಯಗಳಲ್ಲಿ ಕ ಅಕ್ಷರವಿದ್ದು ಮುಂಭಾಗದಲ್ಲಿ 'ಕಠಾರಿ' ಅಥವಾ 'ಅಂಕುಶ'ದ ಚಿಹ್ನೆ ಇದೆಯೇ ಅದನ್ನೇ 'ಕಠಾರಿ ಅಂಕುಶ' ಗದ್ಯಾಣವೆಂದು ಹೇಳಬಹುದು. ಆ ಕಾಲದಲ್ಲಿ ತುಳುನಾಡಿನಲ್ಲಿ ಪ್ರಚಲಿತವಾಗಿದ್ದು, ಜನಪ್ರಿಯವಾದ ಆಳೂಪರ ಗದ್ಯಾಣದ ಮಾದರಿಯಲ್ಲೇ ಇಂತಹ ಗದ್ಯಾಣಗಳನ್ನು ಇಮ್ಮಡಿ ಹರಿಹರನು ಟಂಕಿಸಿರಬಹುದು ಅಥವಾ ಅದೇ ಕಾಲದಲ್ಲಿ ಮೂಡುಬಿದಿರೆಯಲ್ಲಿ ತಮ್ಮ ಕೊನೆಯ ಕಾಲವನ್ನು ಕಳೆಯುತ್ತಿರುವ ಆಳೂಪ ರಾಜರ ಗೌರವಕ್ಕೆ ಧಕ್ಕೆಬಾರದಂತೆ ಅವರದೇ ನಾಣ್ಯಗಳ ಮಾದರಿಯಲ್ಲಿ ಇಂತಹ 'ಕಠಾರಿ ಅಂಕುಶ ಗದ್ಯಾಣ'ವನ್ನು ಟಂಕಿಸಿರಬಹುದೇ ಎಂದು ಊಹಿಸಬಹುದು.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

1 *South Indian Inscription* vol xi., part I
Bombay Karnataka Inscription (vol1 part 1)
2 Dyn. Kan Dist.p.p.430 & 433
(೩) ಡಾ| ಎ. ವಿ. ನರಸಿಂಹಮೂರ್ತಿ., ವಿಜಯನಗರದ ನಾಣ್ಯ ಸಂಪತ್ತು :

ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ*

ಚಿಂತಾಮಣಿ ತಾಲ್ಲೂಕಿನ ಅಂಬಾಜಿದುರ್ಗ ಮತ್ತು ರೆಹಮಾನ್‌ಘಡ ಕೋಟೆಗಳು

ಅಂಬಾಜಿದುರ್ಗ, ಚಿಂತಾಮಣಿ-ಶಿಡ್ಲಘಟ್ಟ ರಸ್ತೆಯಲ್ಲಿ ಮೂರು ಮೈಲಿ ದೂರದಲ್ಲಿದೆ. ರೆಹಮಾನ್‌ಘಡ ಚಿಂತಾಮಣಿ -ಬೆಂಗಳೂರು ರಸ್ತೆಯಲ್ಲಿ ಏಳುಮೈಲಿ ದೂರದಲ್ಲಿದೆ. ಈ ಎರಡೂ ಕೋಟೆಗಳು ಚಿಂತಾಮಣಿಯ ನೈಋತ್ಯ ದಿಕ್ಕಿನಲ್ಲಿವೆ. ಎರಡೂ ಗಿರಿದುರ್ಗಗಳಾಗಿವೆ. ಅಂಬಾಜಿದುರ್ಗದ ಬೆಟ್ಟವು ಸಮುದ್ರ ಮಟ್ಟದಿಂದ ೪,೩೯೯ ಅಡಿ ಎತ್ತರವಿದ್ದರೆ, ರೆಹಮಾನ್‌ಘಡ ಬೆಟ್ಟವು ಸಮುದ್ರಮಟ್ಟದಿಂದ ೪,೨೨೭ ಅಡಿ ಎತ್ತರವಿದೆ. ಅಂಬಾಜಿ ದುರ್ಗವು ೧೮೭೩ರವರೆಗೆ ತಾಲ್ಲೂಕು ಕೇಂದ್ರ ವಾಗಿದ್ದಿತು. ಈಗ ಚಿಂತಾಮಣಿ ತಾಲ್ಲೂಕಿಗೆ ಸೇರಿದೆ. ರೆಹಮಾನಘಡವು ಕೈವಾರ ಹೋಬಳಿಗೆ ಸೇರಿದೆ. ಅಂಬಾಜಿದುರ್ಗದ ಕೋಟೆಯನ್ನೂ ಮತ್ತು ರೆಹಮಾನ್‌ಘಡದ ಕೋಟೆಯನ್ನು ಟಿಪ್ಪು ಕಟ್ಟಿಸಿದನು ಹಾಗೂ ಈ ಎರಡೂ ಕೋಟೆಗಳನ್ನೂ ಕಾರ್ನವಾ ಲೀಸನು ೧೭೯೧ರಲ್ಲಿ ಟಿಪ್ಪುವನ್ನು ಸೋಲಿಸಿ ವಶಪಡಿಸಿ ಕೊಂಡು ಹಾಳುಗೆಡವಿದನು.

ಅಂಬಾಜಿದುರ್ಗಕ್ಕೆ ತಲುಪಲು ಕೋಣಪ್ಪನಹಳ್ಳಿ ಕ್ರಾಸ್‌ನಿಂದ ದರ್ಗದ ಮಾರ್ಗವಾಗಿ ಹೋಗಬಹುದು ಅಥವಾ ಉಪ್ಪಾರ ಪೇಟೆಯಿಂದ ಹೊಲಗಳನ್ನು ದಾಟಿಕೊಂಡು ಹೋಗ ಬಹುದು. ದನಗಾಹಿಗಳ ಕಾಲುದಾರಿಯಲ್ಲಿ ಮುಳ್ಳುಕಂಟಿ ಗಳನ್ನು ಸವರಿ ಕೊಂಡು ಮೇಲಕ್ಕೆ ಸಾಗಬೇಕಾಗುತ್ತದೆ. ಕೆಳಗಿನಿಂದ ಕೋಟೆಯೊಳಗೆ ಮೇಲ್ಭಾಗಕ್ಕೆ ತಲುಪಲು ಎರಡೂವರೆ ಮೂರು ಗಂಟೆಗಳ ಕಾಲ ನಡೆದು ಹತ್ತಿ ಪ್ರಯಾಸಪಡಬೇಕಾಗುತ್ತದೆ. ಮೂರು ಸುತ್ತಿನ ಈ ಕೋಟೆಯನ್ನು ಕಲ್ಲಿನಿಂದ ಕಟ್ಟಲಾಗಿದೆ. ಇಲ್ಲಿನ ಕೋಟೆ ಬುರುಜುಗಳು ಮಧ್ಯದಲ್ಲಿರುವುದು ಚೌಕಾಕಾರದಲ್ಲಿದ್ದು ಕೊನೆ ಯಲ್ಲಿರುವುದು ದುಂಡಾಕಾರದಲ್ಲಿದೆ. ಮೇಲಿನ ಕೋಟೆಯಲ್ಲಿ ಒಂದೆಡೆ ಚೌಕಾಕಾರದ ಬುರುಜಿಗೆ ಹೊಂದಿಕೊಂಡಂತೆ ಪಿರಮಿಡ್ಡಿನ ಆಕೃತಿಯಿದ್ದು ಅದರ ಪಕ್ಕದಲ್ಲಿ ಇಳಿಜಾರಾದ ಭಾಗವಿದೆ. ಈ ತರಹದ ಬುರುಜಿನ ಕಟ್ಟಡ ವೈಶಿಷ್ಟ್ಯಪೂರ್ಣವೆಂದು ಕೋಟೆಗಳ ಅಧ್ಯಯನದಲ್ಲಿ ತಜ್ಞರಾದ ಡಾ. ಎಸ್. ಕೆ. ಜೋಷಿಯವರು ಅಭಿಪ್ರಾಯ ಪಟ್ಟಿರುವರು. ಈ ದುರ್ಗ ಫ್ರೆಂಚ್ ನಿರ್ಮಾಣ ತಂತ್ರ ಕೌಶಲದ ದ್ಯೋತಕವೆಂದೂ ಹೇಳಬಹುದು. ಟಿಪ್ಪುಕೋಟೆಯ ನಿರ್ಮಾಣದಲ್ಲಿ ಫ್ರೆಂಚ್ ತಂತ್ರಜ್ಞರನ್ನು ಬಳಸುತ್ತಿದ್ದುದು ಸರ್ವ ವಿಧಿತವೇ ಆಗಿದೆ. ಆದರೆ ಇಲ್ಲೆಲ್ಲೂ ಫಿರಂಗಿಯನ್ನು ಬಳಸಿರುವ ಸೂಚನೆ ಕಂಡುಬರುವುದಿಲ್ಲ. ಕೋಟೆಯ ಪಶ್ಚಿಮದ ಕಡೆಗೆ ಒಂದೇ ಬಾಗಿಲು ಕಂಡುಬರುತ್ತದೆ. ದ್ವಾರದ ಮೇಲೆ ಅಲಂಕರಣವಿದೆ. ಆದರೆ ಸಮೀಪದಿಂದ ಅದನ್ನು ಗಮನಿಸಲು ದಾರಿ ದುರ್ಗಮವಾಗಿದ್ದುದರಿಂದ ಸಾಧ್ಯವಾಗಿಲ್ಲ.

ಬೆಟ್ಟದ ಮೇಲಿನ ಒಳ ಕೋಟೆಯಲ್ಲಿ ಒಂದು ಚಿಕ್ಕ ಶಿವಾಲಯವಿದೆ. ದ್ವಾರದ ಬಳಿ ಇಕ್ಕೆಡೆ ನಿಲ್ಲಿಸಿರುವ ಪ್ರತ್ಯೇಕವಾದ ಕಲ್ಲಿನ ಫಲಕಗಳ ಬುಡದಲ್ಲಿ ಚಿಕ್ಕಪ್ರಮಾಣದ ದ್ವಾರಪಾಲಕ ಶಿಲ್ಪಗಳನ್ನು ನೋಡಬಹುದಾಗಿದೆ. ದೇವಾಲಯವು ಬಿದ್ದುಹೋಗಿ ಈಗ ಪುನಃ ಜೋಡಿಸಲಾಗಿದೆ. ಗರ್ಭಗುಡಿಯೊಂದೇ ಇರುವುದು. ಇದರಲ್ಲಿ ಚಿಕ್ಕ ಶಿವಲಿಂಗವಿದೆ. ಅದರಲ್ಲಿ ಬಾಂದುಕಲ್ಲಿನಲ್ಲಿ ನಾಗರಿಲಿಪಿಯಲ್ಲಿ 'ಲಕ್ಷ್ಮೀನಾರಾಯಣಾಯ ನಮಃ' ಎಂಬ ಬರೆಹವೂ ಕಂಡುಬರುತ್ತದೆ. ಗುಡಿಯ ಮುಂದೆ ಕಲ್ಲಿನ ಸ್ತಂಭವಿದ್ದು, ಸುಂದರವಾದ ನಂದಿಯ ಶಿಲ್ಪವಿದೆ. ಗುಡಿಯ ಸುತ್ತಲೂ ಸಾಕಷ್ಟು ಎತ್ತರವಾಗಿ ಹುಲ್ಲು ಬೆಳೆದಿದೆ. ಪಾಳೆಯಗಾರರ (ಆವತಿ) ಕಾಲದ ಆಳ್ವಿಕೆಯ ಕೊನೆಯ ಭಾಗದಲ್ಲಿ ಕಟ್ಟಿದ್ದಿರಬಹುದೆನಿಸುತ್ತದೆ. ಈ ಗುಡಿಯಿಂದ ಸ್ವಲ್ಪದೂರ ಎಡಗಡೆಯ ಹಿಂಭಾಗಕ್ಕೆ ಸಾಗಿದರೆ ಒಂದು ನೆಲಬಾವಿ ಕಂಡುಬರುತ್ತದೆ. ನೆಲಬಾವಿಯ ಛಾವಣಿ ಮತ್ತು ಗೋಡೆ, ದ್ವಾರದ ಕಂಬಗಳನ್ನು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಒಳಗಡೆ ನೀರಿನ ಮಧ್ಯದಲ್ಲಿ ಕಲ್ಲಿನ ಸ್ತಂಭವಿದೆ. ಸ್ತಂಭದ ಮೇಲೆ ಶಿಲ್ಪವಿದ್ದಂತೆ ಮಸುಕಾಗಿ ಕಂಡುಬರುತ್ತದೆ. ಸ್ತಂಭಕ್ಕೆ ಬಲಭಾಗದಲ್ಲಿ ಗೂಟಗಳಂತೆ ಕಾಣುವ ಎರಡು ಶಿಲೆಗಳು ಇವೆ. ಅವು ಶಿಲ್ಪಗಳಾಗಿಯೂ ಇರಬಹುದೇನೋ? ನೀರಿನಲ್ಲಿ ಇರುವುದಾದ್ದರಿಂದ ಸಮೀಪಕ್ಕೆ ಹೋಗಿ ನೋಡಲಾಗಲಿಲ್ಲ. ಇದನ್ನು ಕೋಲಾರ ಜಿಲ್ಲಾ ಗೆಜೆಟಿಯರ್‌ನಲ್ಲಿ 'ಎಣ್ಣೆಕಣಜ'ವೆಂದು ಬರೆಯಲಾಗಿದೆ.

ಈ ಕಟ್ಟಡದಿಂದ ಉತ್ತರಕ್ಕೆ ಕೋಟೆಯಂಚಿಗೆ ಸರಿದರೆ ಅಲ್ಲೊಂದು ಕೊಳವು ಕಂಡುಬರುತ್ತದೆ. ಎರಡು ವರಸೆಗಳಲ್ಲಿ ಗೋಡೆಯೂ ಉದ್ದಕ್ಕೆ ಮುಂದುವರೆದಿರುವುದೂ ಕಂಡುಬರುತ್ತಿದೆ.

ಅಂಬಾಜಿ ದುರ್ಗಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು ಮುಂದಿನಂತಿವೆ :

* ಇತಿಹಾಸ ವಿಭಾಗದ ಮುಖ್ಯಸ್ಥರು, ಬಸವೇಶ್ವರ ಪ್ರಥಮದರ್ಜೆ ಮಹಾವಿದ್ಯಾಲಯ, ರಾಜಾಜಿನಗರ, ಬೆಂಗಳೂರು-೧೦

ಅಂಬಾಜಿ ದುರ್ಗ



ಕೋಟೆಯ ಚಾಕೌಕಾರದ ಮತ್ತು ದುಂಡಾಕಾರದ ಬುರುಜುಗಳು



ಕೋಟೆಯ ವಿಶಿಷ್ಟ ಚೌಕಾಕಾರದ ಬುರುಜಿಗೆ ಆತುಕೊಂಡ ಪಿರಮಿಡ್ಡು ಆಕೃತಿಯ ಬುರುಜು



ಬೆಟ್ಟದ ಕೋಟೆಯ ಶಿವಾಲಯ ಮತ್ತು ನಂದಿಸ್ತಂಭ



ದುರ್ಗದ ಶಿವಾಲಯದ ಮುಂದಿನ ಕಂಬದ ಮೇಲಿನ ನಂದಿಶಿಲ್ಪ



ಕೋಟೆಯೊಳಗಿನ ನೆಲಬಾವಿ



ಕೋಟೆಯೊಳಗಿನ ನೆಲಬಾವಿಯ ಮಧ್ಯಭಾಗ

ಇನ್ನು ರೆಹಮಾನ್‌ಘಡದ ಬಗೆಗಿನ ವಿವರಗಳಿಂತಿವೆ :

ರೆಹಮಾನ್‌ಘಡವನ್ನು ಕೈವಾರದ ಯೋಗಿನಾರಾಯಣ ತಪೋವನದ ಎದುರಿಗೆ ಇತ್ತೀಚೆಗೆ ಅರಣ್ಯ ಇಲಾಖೆ ಅಭಿವೃದ್ಧಿಗೊಳಿಸಿರುವ ಸಂರಕ್ಷಿತ ಪ್ರಾಣಿಸಸ್ಯ ವನದೊಳಗಿಂದ ಅರಣ್ಯ ಸಂರಕ್ಷರ ಅನುಮತಿಯನ್ನು ಪಡೆದು ನೀರಿನ ಕೊಳವೆ ಮಾರ್ಗವನ್ನನುಸರಿಸಿ ಸಾಗಿದರೆ ಬೆಟ್ಟಕ್ಕೆ ಹೋಗಲು ಹಿಂದೆ ನಿರ್ಮಿಸಿದ್ದ ಪಾವಟಿಗೆ ಮಾರ್ಗವು ದೊರಕುತ್ತದೆ. ಬೆಟ್ಟದ ಮೇಲಿನವರೆಗೆ ಈ ಮೆಟ್ಟಿಲು ಮಾರ್ಗ ಮುಂದುವರೆದಿದೆ. ಹೊರಸುತ್ತಿನ ಕೋಟೆಯ ಮುಖ್ಯದ್ವಾರವು ಚೌಕಾಕಾರದ ಎರಡು ಬುರುಜುಗಳ ನಡುವೆ ಪಶ್ಚಿಮಾಭಿಮುಖವಾಗಿದೆ. ಮೂರು ಸುತ್ತಿನಲ್ಲಿ ಕೋಟೆ ಭಾಗಗಳು ಕಂಡುಬರುತ್ತವೆ. ಕೋಟೆಯ ಬುರುಜುಗಳು ವರ್ತುಲ ಬುರುಜುಗಳಾಗಿವೆ. ಬುರುಜುಗಳ ಮೇಲಿನ ಭಾಗವು ಇಟ್ಟಿಗೆ ಗಾರೆ ಗಚ್ಚಿನಿಂದ ನಿರ್ಮಿಸಲಾಗಿದೆ. ಅಂಬಾಜಿದುರ್ಗದ ಬುರುಜುಗಳಿಗಿಂತ ಇಲ್ಲಿನ ಬುರುಜುಗಳೂ ಕೋಟೆಯ ಭಾಗಗಳೂ ಸುಸ್ಥಿತಿಯಲ್ಲಿವೆ. ಬೆಟ್ಟದ ಮೇಲಿನ ಒಳಕೋಟೆಯಲ್ಲಿ ಮೂರು ಕೋಣೆಗಳುಳ್ಳ ಮದ್ದಿನ ಮನೆ, ಒಂದು ಹಜಾರದಂತಹ ಕಟ್ಟಡ, ನೀರಿನ ದೋಣಿ ಹಾಗೂ ಅದರಿಂದ ಮುಂದಕ್ಕೆ ಪೂರ್ವಾಭಿಮುಖವಾಗಿರುವ ಒಂದು ಚಿಕ್ಕ ಗುಡಿಯಿದೆ. ಇದರ ವಿಶೇಷತೆಗಳಾದರೆ ಗುಡಿಯೊಳಗೆ ಸೂರ್ಯಕಿರಣಶಿಲ್ಪ ಅದರ ಪಕ್ಕದಲ್ಲಿ ನಾರಾಯಣ ಶಿಲ್ಪವಿದ್ದು ಗುಡಿಯ ಮುಂಭಾಗದ

ರೆಹಮಾನ್‌ಘಡದ ಚಿತ್ರಗಳು



ಕೋಟೆಯ ದೇಗುಲದ ಸೂರ್ಯ ಮತ್ತು ನಾರಾಯಣ ಶಿಲ್ಪಗಳು



ರೆಹಮಾನ್‌ಘಡದ ದುಂಡಗಿನ ಬುರುಜು ಮತ್ತು ಕೋಟೆ



ಕೋಟೆಯ ಸೂರ್ಯ ಮತ್ತು ನಾರಾಯಣ ಗುಡಿ



ಕೋಟೆಯೊಳಗಿನ ಕಲ್ಲಿನ ಕಟ್ಟಡ ಮತ್ತು ನೀರಿನ ದೋಣೆ



ಸೂರ್ಯ ಮತ್ತು ನಾರಾಯಣ ದೇಗುಲ ಧ್ವಜಂಸ್ತಂಭದ ಮಾರುತಿ ಶಿಲ್ಪ



ಘಡದ ಕೋಟೆಯ ಕಲ್ಲಿನಕಟ್ಟಡಗಳು



ಒಳಕೋಟೆಯ ಪ್ರವೇಶದ್ವಾರ

ಸ್ತಂಭದ ಮೇಲೆ ಆಂಜನೇಯನ ಶಿಲ್ಪವಿದೆ. ಆಂಜನೇಯನು ಸೂರ್ಯನ ಶಿಷ್ಯ ಮತ್ತು ವಿಷ್ಣು(ರಾಮ)ವಿನ ಬಂಟ. ಆದುದರಿಂದ ಈ ಗುಡಿಯನ್ನು ಸೂರ್ಯನಾರಾಯಣ ಗುಡಿಯೆಂದು ಕರೆಯಲು ಸಾಧ್ಯತೆಯಿದೆ. ಇಂತಹ ಗುಡಿ ಅಪೂರ್ವವೆಂದು ಪರಿಗಣಿಸ ಬಹುದೇನೋ?

ಗುಡಿಯಿಂದ ಉತ್ತರಾಭಿಮುಖವಾಗಿ ಇಳಿಯುತ್ತಾ ಬಂದರೆ ಪೂರ್ವದ ಕಡೆಗೆ ಚಿಕ್ಕದಾದ ರಹಸ್ಯ ಮಾರ್ಗವು ಕಂಡುಬರುತ್ತದೆ. ಎರಡನೇ ಸುತ್ತಿನ ದ್ವಾರವೂ ಚಿಕ್ಕದಾಗಿದ್ದು ಸರಳವಾಗಿದೆ. ಇಳಿಯುವ ದಾರಿಯಲ್ಲಿನ ಹೊರಸುತ್ತಿನ ಕೋಟೆಯ ದ್ವಾರವು ವಿಶಾಲ ವಾಗಿಯೂ ಕಲಾತ್ಮಕವಾಗಿಯೂ ಇದೆ. ದ್ವಾರದ ಎಡಗಡೆಯ ಹೊರಮೈಯಲ್ಲಿ ಶೇಷಶಾಯಿ ರಂಗನಾಥನ ಉಬ್ಬುಶಿಲ್ಪವಿದೆ. ದ್ವಾರದ ಬಲಗಡೆಗೆ ಒಂದು ವೀರಗಲ್ಲು ಫಲಕವಿದೆ. ದ್ವಾರದ ಮೇಲ್ಭಾಗವೆನಿಸಬಹುದಾದ ಒಂದು ಕಲ್ಲು ಕೆಳಗೆ ಬಿದ್ದಿದ್ದು ಅದರ ಮೇಲೆ ಹಂಸಪಕ್ಷಿಗಳು ಕೊಕ್ಕನ್ನು ಚಾಚಿ ರೆಕ್ಕೆ ಬಿಚ್ಚಿ ಹಾರುತ್ತಿರುವಂತೆ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಈ ಬಾಗಿಲನ್ನು (ದ್ವಾರವನ್ನು) ರಂಗಯ್ಯ(ರಂಗನಾಥ)ನ ಬಾಗಿಲೆಂದು ಕರೆಯಬಹುದಾಗಿದೆ. ಅದರ ಸಮೀಪದಲ್ಲೆ ಬಿದ್ದಿರುವ ಇನ್ನೊಂದು ಕಲ್ಲಿನ ಮೇಲೆ ಕಲಾತ್ಮಕವಾಗಿ ಲತಾಸುರುಳಿಗಳಲ್ಲಿ ಪುಷ್ಪಾಲಂಕರಾಣವನ್ನು ಕೆತ್ತಲಾಗಿದೆ.

ಈ ಕೋಟೆಯನ್ನು ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಕಾರ್ನ್‌ವಾಲೀಸನು ಸೈನ್ಯವನ್ನು ನೆಲೆಗೊಳಿಸಲು ಯೋಚಿ ಸಿದ್ದನೆಂದೂ, ಆದರೆ ಕೋಟೆಯೊಳಗಿನ ಭಾಗವು ಬೆಟ್ಟದ ಮೇಲೆ ಸಾಕಷ್ಟು ವಿಸ್ತಾರವಿಲ್ಲವೆಂದು ಆ ವಿಚಾರವನ್ನು ಕೈಬಿಟ್ಟನೆಂದೂ ಗೆಜೆಟಿಯರ್‌ನಲ್ಲಿ ಬರೆದಿದೆ.

ಈ ಎಡೂ ಕೋಟೆಗಳ ವಿವರಗಳನ್ನು ಒಟ್ಟಾಗಿ ನೋಡಿ ದಾಗ ಕೋಟೆ ರಚನಾವಿಧಾನದಲ್ಲೂ, ಕಾಲದ ದೃಷ್ಟಿ ಯಿಂದಲೂ, ಕೋಟೆಗಳು ವಿನಾಶಗೊಂಡ ರೀತಿಯಲ್ಲೂ ಸಾಕಷ್ಟು ಸಾಮ್ಯತೆಯನ್ನು ಹೊಂದಿರುವುದನ್ನು ಗಮನಿಸಬಹುದಾಗಿದೆ. ಈ ಕೋಟೆಗಳು ಕೋಲಾರ ಜಿಲ್ಲೆಯಲ್ಲಿ ವಿಜಯನಗರ, ಆನಂತರ ಪಾಳೆಯಗಾರರ ಹಾಗೂ ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಕೋಟೆ ನಿರ್ಮಾಣದ ರಚನಾವಿಧಾನ, ತಂತ್ರಕೌಶಲ್ಯ ಮುಂತಾದ ಅಂಶಗಳ ಅಧ್ಯಯನಕ್ಕೆ ತುಂಬಾ ಸಹಕಾರಿಯಾಗಿವೆ.

(ಈ ಕ್ಷೇತ್ರ ಕಾರ್ಯದಲ್ಲಿ ನನ್ನೊಂದಿಗಿದ್ದು ಸಹಾಯ ಮಾಡಿದ ನನ್ನ ವಿದ್ಯಾರ್ಥಿ ಮಿತ್ರರಾದ ಚಿರಂಜೀವಿಗಳಾದ ವಿಜಯಕುಮಾರ, ಲೋಕೇಶ, ರುದ್ರೇಶಕುಮರ್ ಇವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.)

ಡಾ. ಎಸ್.ಕೆ. ಜೋಶಿ*

ಬಾದಾಮಿ ಚಾಲುಕ್ಯರ ಕೋಟೆಗಳು (ವಿನ್ಯಾಸ ಹಾಗೂ ವಾಸ್ತು ವಿಶೇಷ)

ಮಾನವನಂತೂ ಶಿಲಾಯುಗದಿಂದ ನಮ್ಮ ಈ ಆಧುನಿಕ ೨೧ನೆಯ ಶತಮಾನದವರೆಗೂ ತನ್ನ ಸ್ವರಕ್ಷಣೆಗಾಗಿ ಮನೆಗಳನ್ನೂ, ಗ್ರಾಮ ಗೋಡೆಗಳನ್ನೂ, ನಗರ-ರಾಜಧಾನಿಗಳ ಕೋಟೆಗಳನ್ನೂ ವಿವಿಧ ಶೈಲಿಗಳಲ್ಲಿ ಸಾಮಗ್ರಿಗಳಲ್ಲಿ ವಿನ್ಯಾಸವಾಸ್ತುಗಳಲ್ಲಿ ಕಟ್ಟುತ್ತಲೇ ಬಂದಿದ್ದಾನೆ. ಇದು ಸಂಕ್ಷಿಪ್ತತೆಯಲ್ಲಿ ಬದುಕಿಗಾಗಿ, ಜೀವಿಸುವುದಕ್ಕಾಗಿ, ರಕ್ಷಣೆಗಾಗಿ ಗವಿಯಿಂದ ಕೋಟೆಯವರೆಗೂ ರಕ್ಷಣಾ ವ್ಯವಸ್ಥೆಯು ನಡೆದು ಬಂದ ದಾರಿ.

ಇನ್ನು ರಾಜಸ್ವ, ರಾಜ್ಯ, ಆಡಳಿತ ಮೇರೆಗಳು, ನಾಡು, ದೇಶಗಳ ಪರಿಕಲ್ಪನೆಯು ವಾಸ್ತವದಲ್ಲಿ ನೆಲೆಯೂರಲು ಸಾಗಿದಾಗ ಆಯಾ ರಾಜರುಗಳು, ತಮ್ಮ ತಮ್ಮ ನೆಲವನ್ನು ಹಾಗೂ ತಮ್ಮತಮ್ಮ ಜನವನ್ನು ರಕ್ಷಿಸುವ ವ್ಯವಧಾನದಲ್ಲಿ ಕೋಟೆ ಕೊತ್ತಲಗಳನ್ನು ನಿರ್ಮಿಸುವುದು ಅವಶ್ಯವಾಯಿತು. ವಿವಿಧ ಪ್ರಾದೇಶಿಕ ಹಾಗೂ ಭೌಗೋಳಿಕ ಪರಿಸರದಲ್ಲಿ ಕೋಟೆಗಳ ವೈವಿಧ್ಯತೆ ಮೂಡಿಬಂದಿತು. ಕೌಟಿಲ್ಯ, ಮಯಮತ, ಮಾನಸಾರರಂಥ ವಿದ್ವಾಂಸರುಗಳು ರಾಜ, ರಾಜಸ್ವ ಹಾಗೂ ಪ್ರಾಚೀನ ಗ್ರಂಥಗಳಲ್ಲಿ ನಮೂದಿಸಲಾದ ಕೋಟೆಗಳು, ಇಷ್ಟಿಕಾದುರ್ಗ, ಪಾಷಾಣದುರ್ಗ, ಮೃದದುರ್ಗ, ಮರುದುರ್ಗ, ದಾರುದುರ್ಗ, ನರದುರ್ಗ, ಸ್ಥಲದುರ್ಗ, ಗಿರಿದುರ್ಗ, ವನದುರ್ಗ ಹಾಗೂ ಜಲದುರ್ಗಗಳೆಂಬ ಕೋಟೆಗಳ ಪ್ರಕಾರಗಳ ರಚನೆಗಳ ನಿಬಂಧಗಳನ್ನು ನಿರ್ಧರಿಸಿದರು. ವಿಷ್ಣುಪುರಾಣ, ಶುಕ್ರನೀತಿಸಾರ, ಮನುಸ್ಮೃತಿ, ಅಭಿಲಷಿತಾರ್ಥ ಚಿಂತಾಮಣಿಗಳಂಥ ಗ್ರಂಥಗಳು ಕೋಟೆಗಳ ಬಗ್ಗೆ ವಿವರಿಸಿವೆ. ಈ ಪೂರ್ವದಲ್ಲಿ, ಇತಿಹಾಸದ ಅರುಣೋದಯದಲ್ಲಿ, ವೇದಗಳು, ರಾಮಾಯಣ ಮಹಾಭಾರತಗಳು ಕೋಟೆಗಳ ವಿಷಯವನ್ನು ಸ್ಪರ್ಶಿಸಿವೆ. ಇಲ್ಲಿ, ಈಗ, ಕೋಟೆಗಳ ಪರಿಕಲ್ಪನೆ *(Concept of Forts)* ಇಷ್ಟು ಸಾಕು. ಹೇಳಬೇಕಾದರೆ ಬಹಳಷ್ಟಿದೆ.

'ಬಾದಾಮಿ ಚಾಲುಕ್ಯರ ಕೋಟೆಗಳು' ಎಂಬ ವಿಷಯವು ಪ್ರಾಚೀನ ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಬಾದಾಮಿ ಚಾಲುಕ್ಯರಂಥ ಬಲಿಷ್ಠ ರಾಜಮನೆತನದ ಕೊಡುಗೆಯು (ಜಯಸಿಂಹ ಕ್ರಿ.ಶ. ೫೦೦-೫೨೦ ರಿಂದ ಕೊನೆಯ ಅರಸು ಕೀರ್ತಿವರ್ಮ ಕ್ರಿ.ಶ. ೭೪೫-೭೫೭) ಘನವಾದುದು ಅಪಾರವಾದುದು ಹಾಗೂ ತದನಂತರ ಆಳಿದ ಬೇರೆ ಬೇರೆ ಕನ್ನಡ ನಾಡಿನ ಅರಸುಮನೆತನಗಳಿಗೆ ದಿಕ್-ಸೂಚಿ ಆದುದು ಆಗಿದೆ.

ಬಾದಾಮಿ ಚಾಲುಕ್ಯರು : ಒಂದು ಸ್ಥೂಲ ಅವಲೋಕನ

'ಧರಾಧರೇಂದ್ರರೆಂದೂ..., ಹಿರಣ್ಯ ಗರ್ಭ ಸಂಭೂತರೆಂದೂ..., ಪರಮಭಾಗವತರೆಂದೂ..., ತಮಗೆ ತಾವೇ ಅಭಿದಾನ ನೀಡಿ, ಸಾರ್ಥಕ್ಯವಾಗಿ, ವೈಭವೋಪೇತವಾಗಿ, ಮೆರೆದ ಇತಿಹಾಸ ಕಟ್ಟಿದ ಈ ಬಾದಾಮಿ ಚಾಲುಕ್ಯ ಅರಸರು ಸಾಂಸ್ಕೃತಿಕ ಧೀಮಂತರು. ಅವರು ಕೇವಲ ತಾವು ಬದುಕಬೇಕೆಂದು ಬದುಕಲಿಲ್ಲ. ಬೌದ್ಧಿಕ ವಿಕಸನದಲ್ಲಿ ಬದುಕಿದರು, ಸಂಸ್ಕೃತಿಗಾಗಿ ಬದುಕಿದರು, ನಾಡಿಗಾಗಿ ಬದುಕಿದರು. ತಾವು ನಂಬಿದ ಧರ್ಮ ಸಂಪ್ರದಾಯದ ನೂರಾರು ಗುಡಿಗಳನ್ನೂ, ಕೋಟೆ ಕೊತ್ತಲುಗಳನ್ನೂ, ಕೆರೆ ಭಾವಿ ಸರೋವರಗಳನ್ನೂ ಕಟ್ಟಿಸಿ ತಮ್ಮ ಬದುಕನ್ನು ಕೃತಾರ್ಥಗೊಳಿಸಿದರು. ಈ ಭರತ ಖಂಡದ ಇತಿಹಾಸದಲ್ಲಿ ಎಂದೂ ಮರೆಯದ ವಿಸ್ತಾರವಾದ ಸಾಮ್ರಾಜ್ಯ ಕಟ್ಟಿ, ಅದರ ಪುಟಗಳಲ್ಲಿ ತಮ್ಮನ್ನು ತಾವೇ ಬರೆದರು.

ಅವರು ನಿರ್ಮಿಸಿದ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಆಲಂಪುರ (ಕೃಷ್ಣೆ ತುಂಗಭದ್ರೆಯರ ಸಂಗಮ ತಾಣ ಕರ್ನೂಲ ಜಿಲ್ಲೆ ಆಂಧ್ರ) ಇತ್ಯಾದಿಗಳಲ್ಲಿಯ ದೇವಾಲಯಗಳ ಸಂಕುಲವು ಇಡೀ ಭರತ ವರ್ಷದ ದೇವಾಲಯಗಳ ನಿರ್ಮಿತಿಗೆ ನಾಂದಿ ಹಾಡಿವೆ. ಅವರ ಸ್ಥಪತಿಗಳು, ಶಿಲ್ಪಿಗಳು, ವಾಸ್ತುಶಾಸ್ತ್ರಜ್ಞರು ದೇವಾಲಯಗಳ 'ಕಟ್ಟುವಿಕೆ'ಯನ್ನೇ ಒಂದು ಆಹ್ವಾನವಾಗಿ ತೆಗೆದುಕೊಂಡಿದ್ದಾರೆ. ಹಾಗಾಗಿ ಅದರ ಅಂತಃಶಕ್ತಿಯಿಂದ (Challenge) ಎಷ್ಟೊಂದು ತರಹದ ಗುಡಿಗಳ ನಿರ್ಮಿತಿಯ ಪ್ರಯೋಗಗಳನ್ನು ಮಾಡಿದ್ದಾರೆ. ಐಹೊಳೆ ನೋಡಿ: ಎಲ್ಲಿ ನೋಡಿದಲ್ಲಿ ನೂರಾರು ಪ್ರಾಯೋಗಿಕ ವ್ಯವಸ್ಥೆಗೆ ಅಳವಡಿಸಿದ ದೇವಾಲಯಗಳು. 'ನಾಗರ', 'ದ್ರಾವಿಡ' ಹಾಗೂ 'ಕದಂಬ-ನಾಗರ'ಗಳೆಂಬ ವಾಸ್ತುಮೂಸೆಯಲ್ಲಿ, ಕೆಂಪಾದ ಮರಳು ಕಲ್ಲಿನಲ್ಲಿ (Red sand stone) ಎರಕ ಹೊಯ್ದಿದ್ದಾರೆ. ದೇವಾಲಯಗಳ ಬಗ್ಗೆ ಇಷ್ಟು ಸಾಕು (Dr. S. Rajashekhar : *A Study of Aihole Temples*, Ph.D. Thesis).

ಇನ್ನು ಈ ದೇವಾಲಯಗಳನ್ನೊಳಗೊಂಡು, ಪ್ರಜಾವಸತಿ

* ಪುರಾತತ್ವವಿದ, ೬೦, ಸಿಲ್ವರ್ ಆರ್ಚರ್ಡ್, ಧಾರವಾಡ

ತಾಣಗಳನ್ನು ಆವರಿಸಿ, ತಮ್ಮ ವಾಸ್ತವ್ಯದ ನೆಲೆಗಳನ್ನು (ಅರಮನೆ, ರಾಣಿವಾಸ ಇತ್ಯಾದಿಗಳನ್ನು ಇನ್ನೂ ಶೋಧಿಸಬೇಕಾಗಿದೆ) ಸುತ್ತುವರಿದು ರಕ್ಷಣಾ ಗೋಡೆಗಳನ್ನು *(Forts)* ನಿರ್ಮಿಸಿದ್ದಾರೆ. ಈ ಸಂಪ್ರಬಂಧದಲ್ಲಿ ಐಹೊಳೆ, ಬಾದಾಮಿ, ಪಟ್ಟದಕಲ್ಲು ಹಾಗೂ ಇನ್ನಿತರ ಅವರ ಆಡಳಿತ ಕ್ಷೇತ್ರಗಳಲ್ಲಿ ಕಟ್ಟಿಸಿದ ಕೋಟೆಗಳ ವಾಸ್ತುವಿಶೇಷವನ್ನು *(Defence Architecture)* ಪ್ರಾಮುಖ್ಯವಾಗಿ ಕೈಗೆತ್ತಿಕೊಳ್ಳಲಾಗಿದೆ.

ಬಾದಾಮಿ ಚಾಲುಕ್ಯರ ಕ್ಷಾತ್ರ ತೇಜ

'ಜಿತೇನ ಲಭ್ಯತೇರ್ಲಕ್ಷ್ಮೀ ಮೃತೇನಾಪಿ ಸುರಾಂಗನಾ,
ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇ ರಣೆ'

ಈ ಗಂಡೆದೆಯ ಘೋಷಣೆಯು ಬಾದಾಮಿಯ ಕೋಟೆಯ ಕಲ್ಲುಬಂಡೆಗಳ ಮೇಲೆ ಹತ್ತಾರು ಕಡೆ ವೀರಗಾಥೆಯಾಗಿ ಕೊರೆಯಲ್ಪಟ್ಟಿದೆ. (ಡಾ. ಶ್ರೀನಿವಾಸ ರಿತ್ತಿ). 'ಜಯಿಸಿದರೆ ಸಂಪದ್ ಲಕ್ಷ್ಮೀ ದೊರೆಯುತ್ತಾಳೆ, ಮರಣ ಹೊಂದಿದರೆ ಸ್ವರ್ಗದ ಅಪ್ಸರೆ ದೊರಕುತ್ತಾಳೆ ಅದಾಗಿ ಯುದ್ಧ ಭೂಮಿಯಲ್ಲಿ ಕಾದುವುದಲ್ಲದೆ ಮತ್ತೊಂದರ ಚಿಂತೆ ಏಕೆ?' ಈ ಶಿಲಾಶಾಸನವು ಚಾಲುಕ್ಯ ಯೋಧರಿಗೆ ಹೆಜ್ಜೆಹೆಜ್ಜೆಗೂ ಸ್ಫೂರ್ತಿ ನೀಡಿರಲು ಸಾಕು. ಹಾಗಾಗಿ, ಚಾಲುಕ್ಯರು ಶೂರಭಟರಾಗಿರಲು ಸಾಕು.

ಸಪ್ತಸಾಗರಗಳನ್ನೇ ಕುಡಿದ ಅಗಸ್ತ್ಯ ಮುನಿಯ ಅರ್ಘ್ಯದ ಚಳಕದಿಂದ (ಬೊಗಸೆ)ಹೊರಬಂದ ಈ ವಾತಾಪಿ ಚಾಲುಕ್ಯರು ('ಚಲುಕ್ಯ' ಸರಿಯಾದ ಹೆಸರು ಡಾ. ಕೆ. ವಿ. ರಮೇಶ್) ಹಾಗೆ ನೋಡಿದಲ್ಲಿ ಯುದ್ಧಪ್ರಿಯರು. ರಣಾಂಗಣ ಇವರ ಮೆಲ್ವಾಸಿಗೆ. ಸಂಸ್ಥಾಪಕ ಜಯಸಿಂಹನಿಂದ ಹಿಡಿದು (ಕ್ರಿ.ಶ. ೫೦೦-೫೨೦) ಕೊನೆಯ ಅರಸು ದ್ವಿತೀಯ ಕೀರ್ತಿವರ್ಮನವರೆಗೆ (ಕ್ರಿ.ಶ. ೭೪೫-೭೫೭) ಎಲ್ಲರೂ ರಣರಾಗರೇ! ದ್ವಿತೀಯ ಪುಲಿಕೇಶಿ (ಕ್ರಿ.ಶ. ೬೧೦-೬೫೨) ನರ್ಮದೆಯ ದಡಕ್ಕೆ ಹೋಗಿ ಹರ್ಷವರ್ಧನನ್ನೇ ಸೋಲಿಸಿದ. ಮುಂದೆ ಬಂದ ವಿಕ್ರಮಾದಿತ್ಯ (ಕ್ರಿ.ಶ. ೬೫೫-೬೮೦), ವಿನಯಾದಿತ್ಯ (ಕ್ರಿ.ಶ. ೬೮೧-೬೯೫), ವಿಜಯಾದಿತ್ಯ ಎರಡನೆಯವ (ಕ್ರಿ.ಶ. ೬೯೬-೭೩೩) ಹಾಗೂ ವಿಕ್ರಮಾದಿತ್ಯ ಎರಡನೆಯವ (ಕ್ರಿ. ಶ. ೭೩೩-೭೪೫) ಮತ್ತು ಕೀರ್ತಿವರ್ಮ ದ್ವಿತೀಯ (ಕ್ರಿ.ಶ. ೭೪೫-೭೫೭) ಮುಂತಾದವರೆಲ್ಲ ದಕ್ಷಿಣದ ಪಲ್ಲವರನ್ನು ಸದೆಬಡಿಯುತ್ತಿದ್ದರು. ಹೀಗಾಗಿ ಯುದ್ಧದಲ್ಲಿಯೇ ತೊಡಗಿದ ಇವರು ಸಾಮಾನ್ಯವಾಗಿ ತಾವು ಗೆದ್ದುಕೊಂಡ ಸ್ಥಳಗಳಲ್ಲಿ ಶಾಶ್ವತವಾದ ಕೋಟೆಗಳನ್ನು ಕಟ್ಟಲು ಅಷ್ಟಾಗಿ ಉತ್ಸುಕತೆ ತೋರಿಸಲಿಲ್ಲ. ಹಾಗಾಗಿ ಕೋಟೆಗಳ ಸಂಖ್ಯೆಯಲ್ಲಿ ಕೊರತೆ.

'ವೆಂಗಿ' ಚಾಲುಕ್ಯರು, ಗುಜರಾತಿನ ಸೋಲಾಂಕಿಗಳು

ಬಾದಾಮಿ ಚಾಲುಕ್ಯರಿಂದ ಕುಡಿಯೊಡೆದ ವಂಶಜರಾದ ಆಂಧ್ರದ 'ವೆಂಗಿ' ಚಾಲುಕ್ಯರು ಹಾಗೂ ಗುಜರಾತಿನ 'ಸೋಲಾಂಕಿ' ಚಾಲುಕ್ಯರು ಇತಿಹಾಸ ಸಂಶೋಧಕರಿಗೆ ಗ್ರಾಸ ಒದಗಿಸುತ್ತಾರೆ. ಈ ದಿಸೆಯಲ್ಲಿ ಸಂಶೋಧನೆ ಇನ್ನೂ ಅಗತ್ಯ. ಯುವ ಇತಿಹಾಸ ಸಂಶೋಧಕರು, ಈ ದಿಸೆಯಲ್ಲಿ ಮಹಾಪ್ರಬಂಧಗಳಿಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬಹುದು.

ಪ್ರಾಸಂಗಿಕವಾಗಿ, ಯುದ್ಧ ಹಾಗೂ ಕೋಟೆಗಳ ಬಗ್ಗೆ ಈ ಸಂಪ್ರಬಂಧ ಒಡುತ್ತಿರುವುದರಿಂದ, ಇಲ್ಲಿ 'ಕೋಟಾ ಚಕ್ರ ಶಾಸ್ತ್ರ' ಎಂಬ ಇತ್ತೀಚಿನ ಅತ್ಯಂತ ವಿಸ್ಮಯಕಾರಕ ಜ್ಞಾನವನ್ನು ಇಲ್ಲಿ ವಿವರಿಸಬೇಕೆಂದರೆ, ಅದೇನೂ ವಿಷಯಬಾಹಿರವಾಗಲಿಕ್ಕಿಲ್ಲ ಎಂದು ನನ್ನ ಅನಿಸಿಕೆ. ಕೋಟೆಗಳನ್ನು ಗೆಲ್ಲುವುದಕ್ಕಾಗಿ ಅನುಸರಿಸುವ ಶಾಸ್ತ್ರವೇ 'ಕೋಟಾ ಚಕ್ರಶಾಸ್ತ್ರ' (**ಡಾ. ಎಚ್. ಚಂದ್ರಶೇಖರ:** 'ಕರ್ನಾಟಕದ ಕೋಟೆಗಳ ಅಂತರಂಗದಲ್ಲಿ...,' ಪ್ರಜಾವಾಣಿ ದೀಪಾವಳಿ-೨೦೦೦ ವಿಶೇಷಾಂಕ, ಪುಟ ೧೭೪-೭೫ ಹಾಗೂ **ಪ್ರೊ. ಮಲ್ಲೇಪುರಂ ವೆಂಕಟೇಶ್** ಅವರ ಶೋಧನೆ). ಈ 'ಕೋಟಾ ಚಕ್ರ ಶಾಸ್ತ್ರವು' ಬಹಳ ಕುತೂಹಲಕಾರಿಯಾಗಿದೆ. ಇದು ಸ್ವಲ್ಪಮಟ್ಟಿಗೆ ಜ್ಯೋತಿಶ್ಶಾಸ್ತ್ರದಿಂದ ಪ್ರೇರಿತವಾದ ಮೂಢನಂಬಿಕೆ ಗಳಿಂದ ಕೂಡಿದ್ದರೂ ನಂಬುಗೆಯಿಂದ ಅನುಷ್ಠಾನಗೊಳಿಸಿದರೆ ಜಯಸಾಧ್ಯ. ಈ ಶಾಸ್ತ್ರದ ಪ್ರಕಾರ ವೈರಿಯ ಕೋಟೆಯು ಮಣ್ಣಿನ ಕೋಟೆಯಾಗಿದ್ದರೆ ಒಡೆಯಬೇಕು. ಜಲದುರ್ಗವಾಗಿದ್ದರೆ ನೀರನ್ನು ಹೊರಗೆ ಹರಿಯಲು ಬಿಡಬೇಕು. ಗ್ರಾಮ ಕೋಟೆಯಾಗಿದ್ದರೆ ಬೆಂಕಿ ಇಡಬೇಕು. ಗಹ್ವರ ಕೋಟೆಯಾಗಿದ್ದರೆ ಪ್ರವೇಶಿಸಿ ಸ್ವಾಧೀನಪಡಿಸಿಕೊಳ್ಳಬೇಕು. ಗಿರಿದುರ್ಗವಾಗಿದ್ದರೆ ಬಂಡೆಗಳನ್ನು ಒಡೆಯಬೇಕು. ಭಟಾವರ ದುರ್ಗವಾದರೆ ತನ್ನ ಸೈನಿಕರನ್ನು ನಿಯೋಜಿಸಿ ಯುದ್ಧ ಮಾಡಿ ಗೆಲ್ಲಬೇಕು. ಅರಸನು ಆಕ್ರಮಣ ಮಾಡುವ ಮೊದಲು ಯಾವ ದಿಕ್ಕಿನಲ್ಲಿ ಯಾವ ಕ್ರೂರ ಗ್ರಹಗಳು ಇವೆ ಎಂಬುದನ್ನೂ ಹಾಗೂ ವೈರಿ ಅರಸನ ಶನಿಕಾಟ ಕಾಲವನ್ನೂ ಜ್ಯೋತಿಷಿಗಳಿಂದ ತಿಳಿದುಕೊಂಡು ಮುನ್ನುಗ್ಗಬೇಕು ಹಾಗೂ ತನಗೆ ಯಾವುದು ಅನುಕೂಲಕರವಾದ ಲಗ್ನ (ಮುಹೂರ್ತ)ವಿದೆಯೋ ಆ ಕಾಲವನ್ನು ಹುಡುಕಿ ವಿಜಯಯಾತ್ರೆ ಕೈಗೊಳ್ಳಬೇಕು.

ಅದೇ 'ಕೋಟಾ ಚಕ್ರಶಾಸ್ತ್ರವು' ಮುಂದುವರಿದು ಈ ತರಹದ ಆಕ್ರಮಣದ ವಿವರಗಳನ್ನು ನೀಡುತ್ತದೆ. ಕಂದಕಗಳಿಂದ ನೀರನ್ನು ಅಗೆದು ಹೊರಹೋಗುವಂತೆ ಮಾಡಬೇಕು. ಅಲ್ಲಿ ಮಣ್ಣನ್ನು ತುಂಬಿ ಸೇತುವೆಯನ್ನು ಕಟ್ಟಬೇಕು. ನೀರು ಒಂದು ವೇಳೆ ಆಳವಾಗಿದ್ದರೆ ಸಣ್ಣ ಸಣ್ಣ ದೋಣಿಗಳಿಂದ ದಾಟಬೇಕು. ಕೋಟೆಯನ್ನು ಸುತ್ತುವರಿದು ಆಹಾರ ಪದಾರ್ಥಗಳು ಕೋಟೆ ಯೊಳಗೆ ಪ್ರವೇಶಿಸದಂತೆ ತಡೆದು ಕೋಟೆಯೊಳಗಿನ ಅನ್ನದ ಕೊರತೆಯಿಂದ ಬಳಲುವಂತೆ ಮಾಡಬೇಕು. 'ನಿರ್ಬಂಧ-ಭೇದ'ದಿಂದ ಕೋಟೆಯನ್ನು ಗೆಲ್ಲಬೇಕು. ಕಲ್ಲು, ಮಣ್ಣು, ಇಟ್ಟಿಗೆಗಳಿಂದ ಕಟ್ಟಲಾದ ದುರ್ಗಗಳನ್ನು ಯಂತ್ರಗಳಿಂದ ಅಗೆದು ಉರುಳಿಸಬೇಕು. ನೂರು ಸಹಸ್ರ ಕೊಡಲಿಗಳಿಂದ ಗಿಡಮರಗಳನ್ನು ಕಡಿದೊಗೆಯಬೇಕು.

'ವನದುರ್ಗಗಳಿದ್ದರೆ ಕಾಡ್ಗಿಚ್ಚಿನಿಂದ ಸುಡಬೇಕು. ಬೇಗನೇ

ಹೊತ್ತಿಕೊಳ್ಳುವ ಎಣ್ಣೆಯಿಂದ ಹತ್ತಿ ಉಂಡೆಗಳನ್ನು ಬಾಣಗಳ ತುದಿಗೆ ಬಿಗಿಯಾಗಿ ಕಟ್ಟಿ, ಕೋಟೆಯೊಳಗೆ ಬೆಂಕಿ ಹಚ್ಚಿ ಎಸೆಯಬೇಕು. ಅಂದರೆ ಒಳಗಡೆ ದೂರದವರಗೆ ಬೆಂಕಿ ಹರಡಿ ಮನೆ ಮಠಾರಗಳು ಸುಡಲು ಪ್ರಾರಂಭಿಸಿ ವೈರಿಗಳ ಮನೋಧೈರ್ಯ ಕುಸಿದು, ಎತ್ತಲೂ ಹಾಹಾಕಾರ ಉದ್ಭವಿಸುತ್ತದೆ. ನೀರಿನ ಅಭಾವ ದಿಂದ ಒಳಗಿನ ಜನರಿಗೆ ಸಾವನ್ನಪ್ಪುವ ಹಾಗೆ ಮಾಡಬೇಕು. ತನ್ನ ಸೈನಿಕರಿಗೆ ನೀರನ್ನು ದೂರದಿಂದ ತರಿಸಿಯಾದರೂ ತೃಪ್ತಿಪಡಿಸಬೇಕು. ಆನೆ ಮತ್ತು ಕುದುರೆಗಳಿಂದ ನರದುರ್ಗವನ್ನು ಭಗ್ನಗೊಳಿಸಬೇಕು. ಹೀಗೆ ನಾನಾ ವಿಧದ ಆಕ್ರಮಣಕಾರಿ ಕ್ರಮಗಳನ್ನು **ಕೌಟಿಲ್ಯನ** ಅರ್ಥಶಾಸ್ತ್ರದಲ್ಲಿಯೂ, ತದನಂತರ **ಮಯಮತ, ಮನಸಾರಗಳಲ್ಲೂ** ಹೇಳಿದೆ. ಅಲ್ಲದೆ ಅತೀ ಇತ್ತೀಚಿನ ಕೆಳದಿ ನೃಪ ಬಸವರಾಜರು ವಿರಚಿತ '**ಶಿವತತ್ವ ರತ್ನಾಕರದಲ್ಲಿಯೂ** ಹೇಳಿದೆ.

ಐಹೊಳೆ ಕೋಟೆ: ವಾಸ್ತು, ವಿನ್ಯಾಸ ಇತ್ಯಾದಿ

ಐಹೊಳೆಯು (ಆರ್ಯಪುರವೆಂದು ಶಾಸನದಲ್ಲಿ ಕರೆಯಲಾಗಿದೆ-ಡಾ. ಎಸ್.ಆರ್. ರಾವ್) ಬಾದಾಮಿ ಚಾಲುಕ್ಯರ ಮೂಲ ರಾಜಧಾನಿಯಾಗಿತ್ತು. ಬಾದಾಮಿಯು ರಾಜಧಾನಿ ಆಗುವ ಪೂರ್ವದಲ್ಲಿ, ಜಯಸಿಂಹ (ಕ್ರಿ.ಶ. ೫೦೦-೫೨೦) ಹಾಗೂ ರಣರಾಗರ (ಕ್ರಿ.ಶ. ೫೨೦-೫೪೦) ಕಾಲದಲ್ಲಿ ಐಹೊಳೆಯು ರಾಜಧಾನಿ ಆಗಿತ್ತು. ತದನಂತರ ಮೊದಲನೆಯ ಪುಲಿಕೇಶಿಯು (ಕ್ರಿ.ಶ. ೫೪೦-೫೬೬) ಬಾದಾಮಿಯಲ್ಲಿ ದುರ್ಗವನ್ನು ಕಟ್ಟಿಸಿ, ಅಲ್ಲಿಗೆ ರಾಜಧಾನಿಯನ್ನು ಸ್ಥಳಾಂತರಿಸಿದನು.

ಈ ಐಹೊಳೆ ಕೋಟೆಯು ೩/೪ ಭಾಗ ಅಂದರೆ ಉತ್ತರ ಪಶ್ಚಿಮ ಹಾಗೂ ದಕ್ಷಿಣ ಭಾಗಗಳಲ್ಲಿ ಸ್ಥಳದುರ್ಗವೇ ಆಗಿದೆ. ಸಪಾಟಾದ ಪ್ರದೇಶವನ್ನು ಆಕ್ರಮಿಸಿದೆ. ಪೂರ್ವ-ದಕ್ಷಿಣ ಭಾಗದಲ್ಲಿ ಬೆಟ್ಟದವರೆಗೆ ಗೋಡೆ ಕಟ್ಟಿದ್ದು, ಅಂದರೆ ಮೇಗುತಿ ದೇವಾಲಯದ ಗುಡ್ಡದ ವರೆಗೆ ಕಲ್ಲಿನ ಗೋಡೆಯಿಂದ ಸುಭದ್ರವಾಗಿರಲು ಸಾಕು. ಈಗ ಮಾತ್ರ ಅಲ್ಲಲ್ಲಿ ಗೋಡೆಯ ಭಾಗಗಳು ಉಳಿದಿವೆ (Chunks of Fort Wall). ವಿನ್ಯಾಸದಲ್ಲಿ ಯಾವುದೇ ನಿರ್ದಿಷ್ಟ ಭೂಮಿತಿ ಆಕೃತಿಯನ್ನು (Geometrical pattern) ಹೊಂದಿಲ್ಲ. ಸ್ಥಳ ದೊರೆತಂತೆ ಹಾಗೂ ಅಗತ್ಯಕ್ಕೆ ಬೇಕಾದಂತೆ ಗೋಡೆಯನ್ನು ಕಟ್ಟುತ್ತ ಹೋಗಿದ್ದಾರೆ. ಪೂರ್ವ-ಪಶ್ಚಿಮ ಹಾಗೂ ದಕ್ಷಿಣೋತ್ತರ ವಾಗಿ ನೇರ ಅಳತೆಯಲ್ಲಿ (Axialway) ಸುಮಾರು ಒಂದು ಕಿಲೋ ಮೀಟರ್‌ನಷ್ಟಾಗ ಬಹುದು. ಕೋಟೆಯ ಗೋಡೆಯು ಸುತ್ತ ಕಂದಕ ಅಳವಡಿಸ ಲಾಗಿದ್ದು, ಗುಡ್ಡದ ಕೊಳ್ಳದಿಂದ ಹರಿದು ಬರುವ ನೀರನ್ನು ಕಂದಕದಲ್ಲಿ ಸಂಗ್ರಹಿಸಲಾಗುತ್ತಿತ್ತು ಹಾಗೂ ದಕ್ಷಿಣ-ಪಶ್ಚಿಮ ದಿಕ್ಕಿನಲ್ಲಿ ಹರಿದ ಹಳ್ಳ ಹಾಗೂ ಅದರ ಅನತಿದೂರದಲ್ಲಿ ಹರಿವ ಮಲಪ್ರಭೆಯ ನೀರನ್ನು, ಕಾಲುವೆ ಕಡಿದು ಉಪಯೋಗಿಸಲಾಗಿದೆ. ಇದನ್ನು ಅಂಬಿಗೇರ ಗುಡಿ (ನಾವಾಡಿ ಗರಿರುವ ಪ್ರದೇಶ) ಆಚೆಗೆ ವಿಸ್ತಾರ ವಾಗಿ ಹಬ್ಬಿಕೊಂಡ ತೋಟದಲ್ಲಿ ಈ ನೀರಿನ ಕಾಲುವೆ ಯನ್ನು ಕಾಣಬಹುದು.

ಕೋಟೆಯ ಪೂರ್ವ ಭಾಗದ ಮಧ್ಯದಲ್ಲಿ ಪ್ರವೇಶದ್ವಾರ ದುರ್ಗಾ ದೇವಸ್ಥಾನದ ಉತ್ತರ ಬದಿಯಲ್ಲಿ ಪ್ರವೇಶದ್ವಾರ (ಈಗ ಸ್ವಲ್ಪ ಭಾಗವೇ ಉಳಿದಿದೆ) ಹಾಗೂ ದಕ್ಷಿಣ-ಪಶ್ಚಿಮ ಮೂಲೆಯಲ್ಲಿ ಅಂದರೆ ನೈಋತ್ಯ ಮೂಲೆಯಲ್ಲಿ ಹನುಮಾನ ದೇವಸ್ಥಾನದ ಹತ್ತಿರ ಮತ್ತೊಂದು ಪ್ರವೇಶ ದ್ವಾರ ಹೀಗೆ ಕೇವಲ ಮೂರು ದ್ವಾರಗಳು ಮಾತ್ರ ಉಳಿದಿವೆ. ಇವುಗಳ ವಿನ್ಯಾಸವು ರಕ್ಷಣಾ ವ್ಯವಸ್ಥೆಯನ್ನು ಹೊಂದಿ, ವೈರಿಗಳನ್ನು ದಿಗ್‌ಭ್ರಮೆಗೊಳಿಸಲು ಇಂಗ್ಲಿಷ್ 'Z' ಆಕಾರದಲ್ಲಿ ಕಟ್ಟಲಾಗಿದೆ. ಇವುಗಳಿಗೆ 'Barbican' ಎಂದು ಹೆಸರು. ಬುರುಜುಗಳು ಕೋಟೆಯ ಹೊರ ಗೋಡೆಗೆ ಹೊಂದಿಕೊಂಡು, ಅರ್ಧ ಚೌಕಾಕಾರದವುಗಳಾಗಿವೆ. ವರ್ತುಲಾಕಾರ ಅಥವಾ ಅರ್ಧ ವರ್ತುಲಾಕಾರದವು ಇಲ್ಲವೇ ಇಲ್ಲ. ಏಕೆಂದರೆ ಆಗಿನ ಯುದ್ಧಕಲೆ (Art of War) ಕೇವಲ ಬಿಲ್ಲು, ಬಾಣ, ಭರ್ಚಿ, ಖಡ್ಗ ಇತ್ಯಾದಿಗಳನ್ನು ಅವಲಂಬಿಸಿದ್ದು, ಚೌಕಾಕಾರದ ಬುರುಜುಗಳು, ಮೂರೂ ನಿಟ್ಟಿನಲ್ಲಿ ಸೈನಿಕರನ್ನು ನಿಲ್ಲಿಸಿ, ಆಕ್ರಮಣಕಾರರನ್ನು ಹೊಡೆದೋಡಿಸಲು ಅನುವು ಮಾಡಿಕೊಡುತ್ತವೆ.

ಇಲ್ಲಿ, ರಾಜರ ಅರಮನೆ ರಾಣಿವಾಸ ಇತ್ಯಾದಿಗಳನ್ನು ಸಂಶೋಧಿಸಿದರೂ ಈವರೆಗೆ ದೊರೆತಿಲ್ಲ. ಜನವಸತಿಯ ಮಧ್ಯದಲ್ಲಿ ನೂರಾರು ಗುಡಿಗಳೂ ಕೆಲವು ಹೊಕ್ಕು ತುಂಬುವ ಬಾವಿಗಳೂ ಇವೆ. ೧೯೬೦-೭೦ರ ಸುತ್ತಮುತ್ತ ಡಾ. ಎಸ್.ಆರ್. ರಾವ್ ಹಾಗೂ ಅವರ ಟೀಮ್ ಇಲ್ಲಿಯ ದೇವಾಲಯಗಳ ಸುತ್ತ ಇದ್ದ ಮನೆಗಳನ್ನು ಅಕ್ವಾಯರ್ ಮಾಡಿ, ಸುಂದರವಾದ ಹೂದೋಟ ಗಳನ್ನು ನಿರ್ಮಿಸಿ, ಉತ್ತಮ ಜೀರ್ಣೋದ್ಧಾರದ ಕ್ರಮವನ್ನೂ ಕೈಗೊಂಡಿದ್ದಾರೆ.

ಬಾದಾಮಿ ಕೋಟೆಗಳು: (ಕಾಲವಿಸ್ತಾರ ಕ್ರಿ.ಶ. ೬ ಶತಕದಿಂದ ೧೮ನೆಯ ಶತಮಾನದವರೆಗೆ)

'ಆರ್ಯಪುರ'ದಿಂದ ಐಹೊಳೆಯಿಂದ ವಾತಾಪಿಗೆ-ಬಾದಾಮಿಗೆ ಚಾಲುಕ್ಯರ ಉತ್ತರಾರ್ಧ ಕಾಲದಲ್ಲಿ, ಅಂದರೆ ಪುಲಿಕೇಶಿ (ಪ್ರಥಮ)ಯ ಸಮಯದಲ್ಲಿ ಆಡಳಿತ ಕೇಂದ್ರ ಸ್ಥಳಾಂತರಗೊಂಡಿತು. ಆತನು ಬಾದಾಮಿಯಲ್ಲಿ ದುರ್ಗಮವಾದ ಅಭೇದ್ಯವಾದ ಕೋಟೆಯನ್ನು ಕಟ್ಟಿಸಿದ ಶಿಲಾಶಾಸನವೊಂದು ಹೇಳುತ್ತದೆ. ಇದು ಬಾದಾಮಿಯ ಉತ್ತರದ ಕೋಟೆಯಲ್ಲಿ ಸ್ವಾಭಾವಿಕ ಆಳವಾದ ಕಂದರ ನಿರ್ಮಾಣವಾಗಿದ್ದು, ಅಲ್ಲಿ ಬಂಡೆಗಲ್ಲಿನ ಮೇಲೆ ಚಾಲುಕ್ಯ ಮೊದಲ ಪುಲಕೇಶಿಯು (ಕ್ರಿ.ಶ. ೫೪೦-೫೬೬), ಈ ಕೋಟೆಯನ್ನು ಕಟ್ಟಿಸಿದ ಬಗ್ಗೆ ಶಾಸನ ಕೊರೆದಿದ್ದಾನೆ. ಅದರ ಕಾಲ ಕ್ರಿ.ಶ. ೫೪೩. ಇದು ದ.ಭಾ. ಇತಿಹಾಸದಲ್ಲಿ ಕಾಲ ನಿರ್ಧರಿತ ಕೋಟೆ ಎಂದು (Datable

Fort) ಹೇಳಬಹುದು. ಇದರ ಶೋಧವನ್ನು ೧೯೪೦ರಲ್ಲಿ ವಿದ್ವಾನ್ ಡಾ. ಆರ್. ಎಸ್. ಪಂಚಮುಖಿ ಮಾಡಿದರು. ಅದರ ಪಠ್ಯ ಹೀಗಿದೆ. (Panchamukhi R.S.K.I, 1940, Vol. ii)

> ಸ್ವಸ್ತಿ ಶತವರ್ಷೇಷು ಚತುಶ್ಯತೇಷು ಪಂಚಷಷ್ಟಿಯುತೇಷು,
> ಅಶ್ವಮೇಧಾದಿಯಜ್ಞಾನಾಮ್ ಯಾಜ್ವಶ್ರೋತ ವಿಧಾನತಃ
> ಹಿರಣ್ಯಗರ್ಭ ಸಂಭೂತಶ್ಚಲುಕ್ಯೋ ವಲ್ಲಭೇಶ್ವರಃ
> ಧರಾಧರೇಂದ್ರ ವಾತಾಪಿಮಜೇಯಮ್ ಭೂತಯೇ ಭುವಃ
> ಅಧಸ್ತಾತುಪರಿಷ್ಟಾಚ್ಚ ದುರ್ಗಮೇತದ ಚೀಕರತ್'

ಈ ಅಭೇದ್ಯವಾದ ದುರ್ಗವನ್ನು ಗುಡ್ಡದ ಮೇಲೆಯೂ ಅದರ ಕೆಳಗಡೆಯೂ ಶಕವರ್ಷದಲ್ಲಿ ನಾಲ್ಕು ಶತಕ ಹಾಗೂ ಪಂಚಷಷ್ಟಿ (೪೦೦ ಹಾಗೂ ೬೫ ವರುಷದಲ್ಲಿ)ಯಲ್ಲಿ, ಅಂದರೆ ೪೬೫+೭೮=೫೪೩ ಕ್ರಿಸ್ತ ಶಕದಲ್ಲಿ ಕಟ್ಟಲಾಗಿದೆ ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಇಲ್ಲಿ ಅಲ್ಲಲ್ಲಿ ಬಿಟ್ಟ ಬಂಡೆಗಲ್ಲುಗಳ ಕಂದರಗಳನ್ನು ಗೋಡೆಗಳಿಂದ ಜೋಡಿಸಿ, ಗಿರಿದುರ್ಗವನ್ನು ಕಟ್ಟಲಾಗಿದೆ. (ಚಿತ್ರ ನೋಡಿ). ನಂತರ ಕೆಳಗಡೆ ಕಾಲಾಂತರದಲ್ಲಿ ಈ ಭಾಗವು ರಾಷ್ಟ್ರಕೂಟರ ಆಡಳಿತದಲ್ಲಿ ಬಂದು, ರಾಷ್ಟ್ರಕೂಟರ ಸ್ಥಲದುರ್ಗವು ಕಟ್ಟಲ್ಪಟ್ಟಿದೆ (೯ನೆಯ ಶತಮಾನ); ನಂತರ ಅದರ ಆಚೆಗೆ ವಿಜಯನಗರದ ಕಾಲದ (೧೬-೧೭ ಶತಕದ) ಹಾಗೂ ಟಿಪ್ಪು ಸುಲ್ತಾನರ (೧೮ನೆಯ ಶತಮಾನ) ಕೋಟೆ ದಕ್ಷಿಣ ಗುಡ್ಡದ ಮೇಲೆ ಕಟ್ಟಲ್ಪಟ್ಟಿವೆ.

ಉತ್ತರದ ಗುಡ್ಡ ದಕ್ಷಿಣದ ಗುಡ್ಡ ಇವೆರಡರ ಮಧ್ಯೆ ಅಗಸ್ತ್ಯ ಸರೋವರವು ತನ್ನ ನೀರಿನ ಸಂರಕ್ಷಣ ಪಾತಳಿಯನ್ನೇ ಸ್ವಾಭಾವಿಕವಾಗಿ ನಿರ್ಮಿಸಿದೆ. ಈ ಸರೋವರದ ಈಶಾನ್ಯ ದಿಕ್ಕಿನಲ್ಲಿ 'ತಟಕೋಟೆ' ಎಂದು ಈಗಲೂ ಕರೆಯಲ್ಪಡುತ್ತಿದ್ದು, 'ತಟ' ಅಂದರೆ 'ದಡ' 'ನೀರಿನ ಅಂಚೆ' ಎಂದರ್ಥ. ಹಾಗಾಗಿ ಈ ಸರೋವರದ ದಡದಲ್ಲಿ ಕಟ್ಟಲಾದ ಈ ಕೋಟೆಗೆ ತಟಕೋಟೆ ಎಂದು ಕರೆದಿರಲು ಸಾಕು. ಇದು ಚಾಲುಕ್ಯರ ಕಾಲದ್ದೆ. ಜನವಸತಿ ಬೆಳೆದಂತೆ ಇದನ್ನು ಕಟ್ಟಲಾಯಿತು. ಇದು ಈಗ ಸಂಪೂರ್ಣ ನಶಿಸಿದೆ. ರಾಷ್ಟ್ರಕೂಟರ ಕಾಲದ ಕೋಟೆಯ ಪ್ರವೇಶ ದ್ವಾರ ದಕ್ಷಿಣಾಭಿಮುಖವಾಗಿ ಹೇಗೋ ಅಳಿದುಳಿದು ನಿಂತಿದೆ. ವಿಜಯನಗರ ಕಾಲೀನ ಕೋಟೆಯು ಈಗಿನ ಮಾರ್ಕೆಟನ್ನು ಸುತ್ತುವರಿದಿತ್ತು. ಅದರಾಚೆ ಅಗಳವೂ ಇತ್ತು. ೪೦ ವರುಷಗಳ ಹಿಂದೆ ಈ ಲೇಖಕನು ನೋಡಿದಂತೆ. ಆದರೆ ಈಗ ಹೊಸ ಬಾದಾಮಿ (New Badami) ಊರು ಬೆಳೆದಿದೆ. ಒಟ್ಟಿನಲ್ಲಿ ಇದು ಗಿರಿದುರ್ಗ, ಸ್ಥಲದುರ್ಗ ಹಾಗೂ ಜಲದುರ್ಗಗಳ ಸಂಕೀರ್ಣವೆಂದು ಹೇಳಬಹುದು.

ಪಟ್ಟದಕಲ್ಲಿನ ಸಿವಿಲಿಯನ್ ಫೋರ್ಟ್

ದಕ್ಷಿಣ ಭಾರತದ ರತ್ನತ್ರಯ ದೇವಾಲಯಗಳಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ, ಎಲ್ಲೋರದ ಕೈಲಾಸನಾಥ ದೇವಾಲಯ, ತಂಜಾವೂರಿನ ಬೃಹದೀಶ್ವರ ದೇವಾಲಯ ಹೀಗೆ ಈ ಮೂರು ದೇವಸ್ಥಾನಗಳು ಇಡೀ ಭಾರತದ ದೇವಮಂದಿರಗಳಲ್ಲಿ, ಅವುಗಳ ಸರಮಾಲೆಯಲ್ಲಿ 'ಕರ್ಮಣಿ ಸರದೋಳ್ ಚುಂಬವಳಮಂ ಕೋದಂತಿರೆ' ಅಂತಾಗಿ ಹೊಳೆಯುತ್ತಿವೆ.

ಪಟ್ಟದಕಲ್ಲಿನ (ಈಗ ಬಾಗಲಕೋಟ ಜಿಲ್ಲೆ) ದೇವಾಲಯಗಳ ಸಮೂಹವೂ ಬಾದಾಮಿ ಚಾಲುಕ್ಯರ ಅನನ್ಯ ಕೊಡುಗೆ. ಇಲ್ಲಿ ೬-೮ ಶತಮಾನಗಳ ಕಾಲಸಂಪುಟದಲ್ಲಿ ವಾಸ್ತುಶಾಸ್ತ್ರದ ಪರಿಪೂರ್ಣತೆಯೇನೋ ಅನ್ನಿಸುವಂತೆ; ಉತ್ತರವಾಹಿನಿಯಾಗಿ ಹರಿವ ಮಲಪ್ರಭೆಯ ದಂಡೆಯಲ್ಲಿ-ಉತ್ತಮೋತ್ತಮ ದೇವಾಲಯಗಳನ್ನು ಬಾದಾಮಿ ಚಾಲುಕ್ಯರು ನಿರ್ಮಿಸಿದ್ದಾರೆ. ವಿರೂಪಾಕ್ಷ, ಸಂಗಮೇಶ್ವರ, ಕಾಶಿ ವಿಶ್ವನಾಥ, ಗಳಗನಾಥ, ಪಾಪನಾಥ ಇತ್ಯಾದಿಗಳು ರೇಖಾನಾಗರ, ದ್ರಾವಿಡ ವಿಮಾನ ಹಾಗೂ ಕದಂಬ ನಾಗರ ಶೈಲಿಯ ಶಿಖರಗಳ ಸುಂದರ ಹಾಗೂ ಪರಿಪೂರ್ಣತೆಯ ಉದಾಹರಣೆಗಳಾಗಿವೆ. ಇವು ಕೆಂಪಡರಿದ ಕಪೋಲಗಳ ಅಪ್ಸರೆಯಂತೆ, ಸಂಧ್ಯಾ ಸಮಯದಲ್ಲಿ ಗೋಚರಿಸುತ್ತವೆ (Percy Brown).

ಇಲ್ಲಿ, ಚಾಲುಕ್ಯ ಅರಸುಗಳು ತಮ್ಮ ಸಿಂಹಾಸನಾರೂಢ ಸಮಯದಲ್ಲಿ ರಾಜ್ಯದ ಗದ್ದುಗೆ-ಪಟ್ಟವನ್ನು ಏರುತ್ತಿದ್ದರಿಂದ, ಆ ಸಮಯದ ನೆನಪಿಗಾಗಿ ಒಂದೊಂದು ದೇವಸ್ಥಾನ ಕಟ್ಟಿಸುತ್ತಿದ್ದರೆಂಬ ಪ್ರತೀತಿ; ಅದರಂತೆ ವಿಜಯೋತ್ಸವಗಳಲ್ಲಿಯೂ ಕೂಡ. ಹಾಗಾಗಿ 'ಪಟ್ಟದ ಕಿಶುವೊಳಲ್' ಎಂಬ ಅಭಿದಾನವೂ ಕೂಡ ಈ ಸ್ಥಾನಕ್ಕೆ ಬಿದ್ದಿದೆ.

ಈ ದೇವಸ್ಥಾನಗಳ ಸಾಮಾನ್ಯ ರಕ್ಷಣೆಗಾಗಿ, ಇಡಿಯಾದ ಅವುಗಳ ಸಮೂಹದ ರಕ್ಷಣೆಗಾಗಿ, ರಕ್ಷಣಾ ಗೋಡೆಗಳನ್ನು ಸುತ್ತಲೂ ಕಟ್ಟಿದ್ದಾರೆ. ಪೂರ್ವ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ರಕ್ಷಣಾ ಗೋಡೆಗಳ ಭಾಗಗಳು ಉಳಿದಿವೆ. ಪಶ್ಚಿಮ ಹಾಗೂ ಉತ್ತರ ಭಾಗದಲ್ಲಿ ಅಸ್ತಿತ್ವದಲ್ಲಿ ಇಲ್ಲ. ದೇವಾಲಯಗಳ ರಕ್ಷಣೆಗೆ ಅಷ್ಟೊಂದು ರಕ್ಷಣಾ ಚಾಕಚಕ್ಯತೆಗಳೇನೂ ಬೇಡ. ಅದಾಗಿ ಸಿಂಪಲ್-ಸರಳ ಸೀದಾ ಸಾದಾ-ಗೋಡೆ ಕಟ್ಟಿ, ಅವುಗಳನ್ನು ಒಂದು ಚೌಕಟ್ಟಿನಲ್ಲಿ ಇಡಲಾಗುತ್ತದೆ. ಇಂಥ ರಕ್ಷಣಾ ಗೋಡೆಗಳಿಗೆ ಸಾರ್ವಜನಿಕ ಕೋಟೆ (Civilian Forts) ಎಂದು ಕರೆಯಲಾಗುತ್ತದೆ (ಡಾ. ಅ. ಸುಂದರ). ಇಂಥ 'ಸಿವಿಲಿಯನ್ ಫೋರ್ಟ್‌ಗಳು', ತದನಂತರ ಗತಿಸಿದ ಕಾಲದಲ್ಲಿ 'Temple forts'ಗಳಾಗಿ ದೇವಸ್ಥಾನಗಳ ರಕ್ಷಣಾ ಗೋಡೆಗಳೆಂದು, ಗುಡಿಗಳ ಸುತ್ತ, ತಂಜಾವೂರ, ಶ್ರೀರಂಗಮ್, ಮಧುರೈ, ತಿರುವನಂತಪುರಮ್, ತಿರುಪತಿ, ಗುರುವಾಯೂರು, ಇತ್ಯಾದಿಗಳಲ್ಲಿ ಕಾಣಬಹುದು. ಇವು ಮೂರು, ನಾಲ್ಕು, ಐದು ಸುತ್ತುಗಳಿಂದ ಕೂಡ ಅಳವಡಿಸಲಾಗಿದೆ. ಇವುಗಳಲ್ಲಿ ವಿವಿಧ ಜನ ವಸತಿಗಳೂ ಇರುತ್ತವೆ 'City Temple' 'ನಗರ ದೇವಸ್ಥಾನ'ಗಳೆಂದು ಕರೆಯಲ್ಪಡುತ್ತವೆ. (A.K. Coomaraswami: *'Cities and City Gates'*, Vol ii, London, 1930). ಇಷ್ಟು ಇದು ಪಟ್ಟದಕಲ್ಲಿನ ಕಥೆ.

ಇನ್ನಿತರ ಬಾದಾಮಿ ಚಾಲುಕ್ಯರ ಕೋಟೆಗಳು

ಈ ಸಂಶೋಧಕನಿಂದ ಬಾದಾಮಿ ಚಾಲುಕ್ಯರ ಇನ್ನಿತರ ತಾಣಗಳಲ್ಲಿ ಅವರ ಕೋಟೆಯ ಅವಶೇಷಗಳನ್ನು ಶೋಧಿಸಲಾಗಿದೆ. ಇನ್ನೂ ಶೋಧದ ಅವಶ್ಯಕತೆ ಇದೆ.

ಹಲಸಿ : (ತಾ: ಖಾನಾಪುರ, ಜಿ: ಬೆಳಗಾವಿ), 'Ancient Palasika'- ಪ್ರಾಚೀನ 'ಪಲಾಸಿಕಾ' ಎಂದು ಕರೆಯಲ್ಪಡುವ ಈ ತಾಣದಲ್ಲಿ, ಕದಂಬ ಅರಸನಾದ ಮೃಗೇಶವರ್ಮನ (ಕ್ರಿ. ಶ. ೫೦೦ರ) ದೊರೆತ ತಾಮ್ರ ಪಟ ಶಾಸನದ ಪ್ರಕಾರ ಇದು ಕದಂಬರ ಆಡಳಿತದಲ್ಲಿ ಇದ್ದಿತ್ತು. ಹಾಗೂ ಅಲ್ಲಿ ಮೃದ್ ಕೋಟೆಯ ಅವಶೇಷಗಳು, ಮಣ್ಣಿನ ದಿಬ್ಬಗಳು ಅರ್ಧಚಂದ್ರಾ ಕೃತಿಯಲ್ಲಿ ವಿನ್ಯಾಸದಲ್ಲಿ ಉಳಿದಿವೆ ಹಾಗೂ ಪ್ರಾಯಶಃ (ಡಾ. ಅ. ಸುಂದರ) ಅರಮನೆಯ ಹಾಳುಬಿದ್ದ ಅಧಿಷ್ಠಾನಗಳು ಕಾಣ ಸಿಗುತ್ತವೆ. ಈ ಭಾಗವು ಈಗಿನ ವಸತಿಯ ನೈಋತ್ಯ ದಿಕ್ಕಿನಲ್ಲಿ ಹಬ್ಬಿಕೊಂಡಿದೆ. ಮೊದಲನೆಯ ಪುಲಿಕೇಶಿ (ಬಾದಾಮಿ ಚಾಲುಕ್ಯ) ಇದನ್ನು ಯುದ್ಧಮಾಡಿ ಜಯಿಸಿದನೆಂದು ಪ್ರತೀತಿ. ತದನಂತರ ಇದು ಬಾದಾಮಿ ಚಾಲುಕ್ಯರ ಒಂದು ಆಡಳಿತ ಕೇಂದ್ರವಾಗಿತ್ತು. ಈ ಊರಿನ ಪಶ್ಚಿಮಕ್ಕೆ ತುಸು ಅಂತರದಲ್ಲಿ ಗುಡ್ಡದ ಮೇಲಿರುವ 'ರಾಮತೀರ್ಥ'ವೆಂದು ಕರೆಯಲ್ಪಡುವ ಪ್ರದೇಶದಲ್ಲಿ ದೇವಾಲಯಗಳಿವೆ ಹಾಗೂ ಅಲ್ಲಲ್ಲಿ ಕೋಟೆಯ ಅವಶೇಷಗಳೂ (ಕಲ್ಲಿನಲ್ಲಿ) ಇವೆ. ಬಾದಾಮಿ ಚಾಲುಕ್ಯರು ಈ ಪ್ರದೇಶದ ರಕ್ಷಣಾ ಗೋಡೆಗಳನ್ನು ಜೀರ್ಣೋದ್ಧಾರಗೊಳಿಸಿರಲು ಇಲ್ಲಿ ಅವರ ಕೈಯಾಡಿದೆ. ಹೆಚ್ಚಿನ ಸಂಶೋಧನೆ ಹಾಗೂ ಉತ್ಖನನಗಳ ಅವಶ್ಯಕತೆ ಇದೆ.

ಹೂಲಿ : (ತಾಲ್ಲೂಕು: ಸೌಂದತ್ತಿ, ಜಿ: ಬೆಳಗಾವಿ). ಇಲ್ಲಿ ವಿಶಾಲ ಕೆರೆ; ಅದರ ಉತ್ತರಕ್ಕೆ ಎತ್ತರವಾದ ಗುಡ್ಡ ಅದರ ಮೇಲೆ ಪ್ರಾಚೀನ ಕೋಟೆ; ಬಹಳ ಶಿಥಿಲವಾಗಿದೆ. ಆದರೂ ಅದರ ಪೂರ್ಣ ವಿನ್ಯಾಸ ಕಾಣ ಸಿಗುತ್ತದೆ. ಇದು ಬಾದಾಮಿ ಚಾಲುಕ್ಯರ ಆಡಳಿತದಲ್ಲಿ ಇತ್ತು. ಮಂಗಳೇಶನು, ಶಾಂತಿನಾಥಗೆ ದತ್ತಿ ನೀಡಿದ ಬಗ್ಗೆ 'ಕಾಪರ್‌ಪ್ಲೇಟ್' ಸೂಚಿಸುತ್ತದೆ. ಸಮೀಪದ ಕಿರುವತ್ತಕೆರೆಯಲ್ಲಿ ಚಿಕ್ಕ ಕೋಟೆ ಹಾಗೂ ಗುಡಿಗಳು ಇವೆ. ಇವು ಬಾದಾಮಿ ಚಾಲುಕ್ಯರ ಸಮಯದವೆಂದು ಅವುಗಳ ವಾಸ್ತು ವೈಶಿಷ್ಟ್ಯದಿಂದ ಹೇಳಬಹುದು. ಹೂಲಿಯ ಕೆರೆಯ ಸುತ್ತ ಸುಂದರವಾದ ದೇವಾಲಯಗಳಿವೆ. ಕೆಲವು ಮೂಲತಃ ಬಾದಾಮಿ ಚಾಲುಕ್ಯರ ಕೃತೇನ ಆಗಿ, ನಂತರ ಲೇಟರ್ ಚಾಲುಕ್ಯರ (ಕಲ್ಯಾಣ) ಕೈಯಿಂದ ವಿಸ್ತೃತಗೊಂಡಿರಲು ಸಾಕು. ಈ ಕೋಟೆಯು ಛತ್ರಪತಿ ಶಿವಾಜಿಯಿಂದ ಕ್ರಿ.ಶ. ೧೬೭೪ ರಲ್ಲಿ ಮತ್ತೊಮ್ಮೆ ಜೀರ್ಣೋದ್ಧಾರಗೊಂಡಿದೆ. (Dr. Suryanath Kamat: ***Belgaum District*** *Gazetteer)* ಇನ್ನೂ ಇಲ್ಲಿ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ಇಂಚಲ : (ಜಿ: ಬೆಳಗಾವಿ); ಇಲ್ಲಿ ಆರಂಭದ ಚಾಲುಕ್ಯರ ದೇವಸ್ಥಾನಗಳು,ಹಾಗೂ ಅವುಗಳನ್ನು ರಕ್ಷಿಸುವ ರಕ್ಷಣಾ ಗೋಡೆ (civilian fort) ಇದೆ. ಇದು ವಿಜಯನಗರದ ಕಾಲದಲ್ಲಿ ಆಡಳಿತ ಮಹತ್ವದ ತಾಣವಾಗಿತ್ತು. ಹಾಗೂ ಇಲ್ಲಿಯ ಕೋಟೆ ಮತ್ತು ದೇವಸ್ಥಾನಗಳು ಆಗ ಜೀರ್ಣೋದ್ಧಾರಗೊಂಡಿವೆ. (Dr. Suryanath Kamat).

ಉಪಸಂಹಾರದಲ್ಲಿ ಹೇಳಬೇಕಾದರೆ, ಬಲಿಷ್ಠ ರಾಜಮನೆತನದ ಬಾದಾಮಿ ಚಾಲುಕ್ಯರು ಕನ್ನಡ ನೆಲದ ಕೀರ್ತಿ ಮೆರೆದಿದ್ದಾರೆ. ದೇವಸ್ಥಾನಗಳ ನಿರ್ಮಾಣದಲ್ಲಿ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಆದರೆ ರಣರಂಗರಾದ ಅವರು ಹೆಚ್ಚಾಗಿ ಯುದ್ಧಗಳಲ್ಲಿಯೇ ತಮ್ಮನ್ನು ತಾವು ತೊಡಗಿಸಿಕೊಂಡರು. ಹಾಗಾಗಿ ವಿಶಿಷ್ಟ ಕೋಟೆಗಳ ಬಗ್ಗೆ ಅಷ್ಟಾಗಿ ಗಮನ ಕೊಡಲಿಲ್ಲ. ನರ್ಮದೆಯಿಂದ ದಕ್ಷಿಣದ ಕಾವೇರಿವರೆಗೆ ಹಬ್ಬಿದ ಅವರ ಸಾಮ್ರಾಜ್ಯದಲ್ಲಿ, ಅವರಿಂದಲೇ ನಿರ್ಮಿತವಾದ ಕೋಟೆಗಳು ವಿರಳ, ಬಹಳ ಕಡಿಮೆ ಎಂದು ಇತಿಹಾಸ ದಾಖಲಿಸುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Prof. K.A. Nilakanta Sastri & G. Srinivasachari., 1982 : *Advanced History of India* (Sec. Edn. New Delhi
2. Dr. S.K. Joshi, 1985 : *Defence Architecture of Early Karnataka,* New Delhi.
3. ಡಾ. ಚನ್ನಬಸಪ್ಪ ಪಾಟೀಲ., 1998 : **ಕರ್ನಾಟಕದ ಕೋಟೆ ಕೊತ್ತಲಗಳು**, ಮೈಸೂರು
4. ಡಾ. ಎಂ. ಚಿದಾನಂದಮೂರ್ತಿ., 1966 : **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು
5. ಜೆ.ಎಸ್. ಕಮಲಾಪುರ., 1964 : *Deccan Forts,* Bombay
6. R.S. Panchamukhi ., 1940 : *(Ed) Inscriptions of Karnataka,* Vol-ii, Dharwad
7. Dr. A.K. Coomaraswami., 1930 : *Cities and City Gates,* Vol-ii, London.
8. Dr. Suryanath Kamat., : *Belgaum District Gezetteer.*
9. ಡಾ. ಎಂ. ಕೊಟ್ರೇಶ., (Ph.d. Thesis 2002) : **ಕೋಟೆಗಳು ಮತ್ತು ಕೊತ್ತಲಗಳು**-ಒಂದು ಅಧ್ಯಯನ

ಅನುಬಂಧ :







ಐಹೊಳೆ : ಬಾದಾಮಿ ಚಾಲುಕ್ಯರ ಪ್ರಾರಂಭದ ರಾಜಧಾನಿ (ಕ್ರಿ.ಶ. ೪೫೦ ರಿಂದ ೭೫೦) ತದನಂತರ ಬಾದಾಮಿಗೆ ಸ್ಥಳಾಂತರಿಸಲಾಯಿತು). ಹಿಂದು ದೇವಾಲಯ - ವಾಸ್ತು ಶಿಲ್ಪದ ತೂಗು ತೊಟ್ಟಿಲು (Percy Brown) ಪಾರ್ಶ್ವದಲ್ಲಿ ದುರ್ಗಾ ದೇವಾಲಯ ಹಾಗೂ ಅದರ ಸಮುಚ್ಚಯ.


ಪುಲಕೇಶಿ-II ಸಾಮ್ರಾಜ್ಯ





BADAMI— showing Different Fortifications
1CM·80M
NORTH HILL
TANK
SOUTH HILL
① — FORT, BY PULIKESI (I)
② — FORT, BY RASTRAKUTAS
③ — FORT, BY VIJAYANAGAR RULERS
④ — FORT, BY HYDER & TIPPU SULTAN



SCHEDULE
1) ENT ENTRANCE
2) FORT WALL WITH BASTIONS
3) MONUMENTS
4) INSCR INSCRIPTION SCARP 105 M
5) ROCKS
6) TANK
ROCKS
SCARP
SCARP 55m
TANK
BADAMI - FORT ON THE NORTH-HILL (EARLY CHALUKYAN PERIOD). It measures on its axis 330m E.W and 340 m NS


SCULPTURAL REPRESENTATION BY CHALUKYAS OF BADAMI.
CAVE NO III C 600 AD
Ref SANSRITI VIHAR, R S PANCHAMUKHI



SCALE
0 5 10 15 20 25 CMS
LOWER SHIVALAYA
FORT WALL
BADAMI
CHLUKYAN FORT ON THE STEEP SCARP, 55.00M HIGH ABOVE G.L. THE WALL CONNECTS THE BOULDERS


(WORLD HERITAGE MONUMENTS)
(PATTADAKAL)
NOT TO SCALE


STYLES OF SHIKARHARAS



DRAVIDA VIMAN STYLE
PATTADAKAL - VIRUPAKSHA TEMPLE



NAGARA (VESARA) STYLE
PATTADAKAL - JAMBULINGA TEMPLE



MAHAKUTA : KADAMBA NAGAR STYLE



ಪಟ್ಟದಕಲ್ಲು ದೇಗುಲಗಳು (ಪಟ್ಟದ ಕಿಸೊವೊಳಲ್)



ಪಟ್ಟದಕಲ್ಲು (ಜಿ. ಬಿಜಾಪುರ)
(ವಿಶ್ವಪರಂಪರೆಯ ಸ್ಮಾರಕಗಳು)
ಪಶ್ಚಿಮ ಚಾಲುಕ್ಯರಿಂದ ನಿರ್ಮಿತ 'ನಾಗರ' ಹಾಗೂ 'ದ್ರಾವಿಡ' ವಾಸ್ತು ಪರಿಪೂರ್ಣತೆ ಇಲ್ಲಿ ಕಾಣಬಹುದು (೭-೮ ಶತಕಗಳು)




ಅ.ದ. ಕಟ್ಟಿಮನಿ*

ಪಾಳಾ ಬಾದಾಮಿ ರಸ್ತೆ ರಾಜಮಾರ್ಗ- ಒಂದು ಟಿಪ್ಪಣಿ

ಬಾದಾಮಿಯ ಆಡಳಿತ ಕಾಲದ ಪ್ರಮುಖ ಹೆದ್ದಾರಿ ಪಾಳಾದಿಂದ ಬಾದಾಮಿವರೆಗೂ ಇರುವ ರಸ್ತೆ. ಬಂಕಾಪುರ ಹತ್ತಿರದ ಪಾಳಾ ಗ್ರಾಮದಿಂದ ರಾಜಧಾನಿ ಬಾದಾಮಿಯವರೆಗೆ ರಸ್ತೆ ಕುರಿತು ವಿವರಣೆ, ನಕ್ಷೆ, ಆಧಾರಗಳನ್ನು ವಿವರಿಸುವುದೇ ಈ ಪ್ರಬಂಧದ ವಿಷಯ.

ಬಾದಾಮಿ ಸ್ಥಳನಾಮನಿಷ್ಪತ್ತಿ : ಶಾಸನಗಳ ಆಧಾರದಿಂದ ಬಾದಾ ಮಿಯ ಅತಿ ಪ್ರಾಚೀನ ಊರು ಹೆಸರು ಹೇಗೆ ಬಂತೆಂಬುದರ ಬಗ್ಗೆ ವಿವರಣೆ.

ನಕ್ಷೆ



- ಬಾದಾಮಿ ಚಾಲುಕ್ಯರ ಪ್ರಮುಖ ರಾಜಮಾರ್ಗ ಪಾಳಾ ಬಾದಾಮಿ ರಸ್ತೆ
---- ರಾಜ್ಯದ ಮೇರೆ.

ಬಾದಾಮಿ ಸ್ಥಳನಾಮನಿಷ್ಪತ್ತಿ

ಬಾದಾಮಿ ಪ್ರಾಚೀನತೆಯ ಹೆಸರು ರಂಜಲವಾಡಿಗೆ. ೧೮೮೩ನೇ ಇಸ್ವಿ ಗೆಜೇಟಿಯರ್, ಮುಂಬಯಿ ಇಲಾಖೆ ದಕ್ಷಿಣ ಮಹಾರಾಷ್ಟ್ರ ಉತ್ತರ ಕರ್ನಾಟಕ ಗ್ರಾಮಗಳ ಇತಿಹಾಸ ವಿವರಣೆಯಲ್ಲಿದೆ. ಕೋಟೆ-ಉತ್ತರ ಬಂಡೆಗಲ್ಲು ಶಾಸನ. ಒಂದನೆಯ ಪುಲಿಕೇಶಿಯಿಂದ ವಾತಾಪಿ ಕೋಟೆಯ ನಿರ್ಮಾಣ ಕ್ರಿ.ಶ ೫೪೩ರಲ್ಲಿ ಆಗಿದೆ. ೧ನೇ ಕೀರ್ತಿವರ್ಮನ ಸಹೋದರ ಮಂಗಲೀಶನು ವಿಷ್ಣು(ಲಂಜೀಶ್ವರ ದೇವಾಲಯ ವಿಷ್ಣುಗುಹೆ ನಿರ್ಮಿಸಿ ಲಂಜೀಶ್ವರ ಗ್ರಾಮದಾನ ಕ್ರಿ.ಶ. ೫೭೮ ವಿಜಯ ವಾತಾಪ್ಯಧಿಷ್ಠಾನವೆಂದು ಹೆಸರಿಸಿದ ಉಲ್ಲೇಖ ಕ್ರಿ.ಶ ೬೧೦ರದು.

೨) ಬಾದಾಮಿಯ ಚಾಲುಕ್ಯರ ಕಾಲದ ಗದಗ ಜಿಲ್ಲೆಯ ಶಿಲ್ಪ ಶಿಲಾಶಾಸನಗಳ ವಿವರಣೆ :

ಕ್ರಿ.ಶ. ೬೦೦ ಪಾಳಾ ಬಾದಾಮಿ ರಸ್ತೆಗೆ ಹೊಂದಿ ಇರುವ ಗದಗ ಬೆಟಗೇರಿ ಅವಳಿ-ಜವಳಿ ನಗರವಾಗಿ ಬೆಳೆಯಿತು. ಅಲ್ಲಿನ ಗ್ರಾಮಗಳ ಕೃತಪುರ (ಹಾಳದಿಬ್ಬ) ಕಳದುಗು (ಅಗ್ರಹಾರ) ಕರ್ದುಗಿ (ಕೋಟೆ) ಕಲದುಗು ಕಲ=ಗ ಗದುಗು ಬಟ್ಟಕೇರಿ ಬಂಟಗೇಸಿ (ಗ್ರಾಮ)ಬೆಟಗೇರಿ. (ಅಗ್ರಹಾರ)

ಗದಗದಲ್ಲಿ ಗಜಲಕ್ಷ್ಮೀ ಪ್ರಾಕೃತ ಶಾಸನ :

ಬೆಟಗೇರಿಯಲ್ಲಿನ ವಟ್ಟಕೇರ ಪ್ರಾಕೃತ ಕವಿ. ವಕ್ಕಾಣಜೀಯ;

ಕುರ್ತಕೋಟೆಯಲ್ಲಿ ಕುರ್ತಕುಂಟೆ ಚಾಲುಕ್ಯರ ಆಳ್ವಿಕೆ ಲೋಕೆತಿನಿಮ್ಮಡಿ ವಿಷಯ ;

ಲಕ್ಕುಂಡಿಯಲ್ಲಿ ಕೆಂಪು ಉಸುಕು ಕಲ್ಲಿನ ವೀರಗಲ್ಲು;

ಬಾ.ಚಾ.ಪುಲಕೇಶಿ ೨ ಲಕ್ಷ್ಮೀಶ್ವರದಲ್ಲಿ ಶಂಖ ಬಸದಿ ಶಿಲ್ಪ ಶಾಸನ;

ರೋಣದ ಶಾಸನ;

ಬಾ.ಚಾ.ವಿಜಯಾದಿತ್ಯ ಜಕ್ಕಲಿಯಲ್ಲಿ ವೀರಗಲ್ಲು

ಮುಳಗುಂದ ೫೭೭ ನಾರಾಯಣದೇವರ ಗುಡಿಸ್ತಂಭ ಕಾಣಬರುತ್ತವೆ.

೩) ಬಾದಾಮಿ ಚಾಲುಕ್ಯರ ಸರ್ವಧರ್ಮ ಸಮನ್ವಯದ ಸಾಕ್ಷ್ಯಗಳು ಹಾಗೂ ಪ್ರಭಾವ ಪರಂಪರಾಗತ.

೧) ಲಕ್ಷ್ಮೀಶ್ವರದಲ್ಲಿ ತಾಲೂಕ, ಕಚೇರಿ ಕಂಬ ಶಾಸನ, ಬಾ. ಚಾ. ಯುವರಾಜ ೨ನೇ ವಿಕ್ರಮಾದಿತ್ಯ. ೭೨೫ ಪೂರಿಗೆರೆಯ ಮಹಾಜನಾದಿಗಳಿಗೆ ಯುವರಾಜ ವಿಕ್ರಮಾದಿತ್ಯನು ಹಾಕಿಕೊಟ್ಟ ಗ್ರಾಮದ ವ್ಯವಹಾರ ನಿಯಮಗಳು;

೨) ರಾಷ್ಟ್ರಕೂಟರು ೨) ತಾಲೂಕ ಕಚೇರಿ ಹಿಂದೆ. ರಾ. ಗೋವಿಂದ ೩ನೇ ಶ್ರೀವಲ್ಲಭ ಪುರಿಗೆರೆಯ ಮೂರುಕೇರಿಯ ಪಟ್ಟಗಾರರ ಶ್ರೇಣಿಯು ಬಿಟ್ಟ ಉಲ್ಲೇಖ-೮೦೦;

* ಗದಗ ಪ್ರಾಚ್ಯವಸ್ತು ಸಂಗ್ರಹಾಲಯ, ಗದಗ-೫೮೨ ೧೦೧

ಹೊಯ್ಸಳರ ಕಾಲದಲ್ಲಿನ ಶೈವ ಶಾಸನ; ವಿಜಯನಗರ ಕಾಲದ ೨ನೇ ಬುಕ್ಕರಾಯ ಮಧುರಾ ವಿಜಯಂ ಸಂಸ್ಕೃತ ಗ್ರಂಥ;

ಸಾಯಣಾಚಾರ್ಯರ ಕಾಲದಲ್ಲಿ ಸರ್ವಧರ್ಮ ಮತಗಳ ಕಟ್ಟುಪಾಡುಗಳ ಪರಿಷ್ಕರಣೆ, ಪುನರ್ ವ್ಯವಸ್ಥೆ, ಮತೀಯ ಸಾಮರಸ್ಯ ಬಗ್ಗೆ ಪ್ರಯತ್ನ;

ಆದಿಲ್‌ಶಾಹಿಗಳು ಬಿಜಾಪುರ ೨ನೇ ಇಬ್ರಾಹಿಮ್ ಕಿತಾಬೇ ನವರಸನಾಮಾ ದಖನಿ ಭಾಷೆಯಲ್ಲಿ ಗಣಪತಿ-ಸರಸ್ವತಿ ಸ್ತುತಿಯೊಂದಿಗೆ ಮತಿಯ ಸಾಮರಸ್ಯ;

ಟೀಪು ಸುಲ್ತಾನರ ಕಾಲದ ಶೃಂಗೇರಿ ಮಠಕ್ಕೆ, ನಂಜನಗೂಡು ದೇವಾಲಯಕ್ಕೆ ದಾನದತ್ತಿ ದಾಖಲೆಗಳು;

ಮೈಸೂರು ಅರಸರ ಕಾಲದಲ್ಲಿ ಮತೀಯ ಸಾಮರಸ್ಯ ದಾಖಲೆಗಳು;

ಆಂಗ್ಲರ ಕಾಲದಲ್ಲಿ ೧೮೪೯ ಗದಗ ವೀರನಾರಾಯಣ, ವ ತ್ರಿಕೂಟೇಶ್ವರ ಹಾಗೂ ಜುಮ್ಮಾ ಮಸೀದಿಗೆ ಒಂದೇ ಟ್ರಸ್ಟ್ ಕಮಿಟಿ ಈಗಲೂ ಅಸ್ತಿತ್ವದಲ್ಲಿದೆ.

ಬಾದಾಮಿ ಕರ್ನಾಟಕ ಸಂಗೀತ, ನೃತ್ಯ ಶಿಲ್ಪಕಲೆ ವಿವರಣೆ ವಾತಾಪಿ ಗಣಪತಿ ಗುಡಿ ಗಣೇಶನ ಸ್ತುತಿಯೊಂದಿಗೆ ಕರ್ನಾಟಕ ಸಂಗೀತದ ಹಿನ್ನೆಲೆ ಸೂಚಿತವೆನಿಸುತ್ತದೆ.

ನೃತ್ಯದ ದೃಷ್ಟಿಯಿಂದ ಮೇಣ ಬಸದಿ ಗುಹೆಗಳಲ್ಲಿ ಬಾದಾಮಿಯ ನಟರಾಜ ಶಿಲ್ಪವು ತಾಂಡವ ನೃತ್ಯದಲ್ಲಿ ವಿವಿಧ ಭಂಗಿಯನ್ನೊಳಗೊಂಡಿದೆ.

ಬಾದಾಮಿ ಗುಹಾಂತರ ಗತ ದೇವಾಲಯಗಳು :

ಬೆಟ್ಟವನ್ನೆ ಕೊರೆದು ಮಾಡಿದ ಕೆಂಪು ಉಸುಕಿನ ಕಲ್ಲುಗಳಿಂದಾಗಿವೆ.

ಕೆಂಪಡರಿದ ಕೆಂದೂಳಿಯ ಕೆಂಪು ಬಣ್ಣದ ಬಂಡೆಗಲ್ಲುಗಳ ಬಾದಾಮಿಯಲ್ಲಿ ಶೈವ, ಜೈನ, ವೈಷ್ಣವ, ಬೌದ್ಧ, ಶಿಲ್ಪಗಳು, ದೇವಾಲಯಗಳು, ಶಾಸನಗಳು ಬಾದಾಮಿ, ಐಹೊಳೆ, ಲೋಕಾಸುರ ಗ್ರಾಮಗಳಲ್ಲಿವೆ. ಬಾದಾಮಿ ಗುಹೆಯ ಕೆಳಗಿನ ಜುಮ್ಮಾ ಮಸೀದೆ. ಆದಿಲ್‌ಶಾಹಿ ದೃಷ್ಟಿಯಿಂದ

೫) ಬಾದಾಮಿ ವಾಸ್ತು ಶಿಲ್ಪ (ಮುಸ್ಲಿಂ) ವಿವರಣೆಯು ಕೃತಿಕುಠಾರದಲ್ಲಿ ಮುಂದಿನಂತಿದ್ದ ಬಾದಾಮಿ ಗುಹೆಯ ಕೆಳಗಿನ ಜುಮ್ಮಾ ಮಸೀದೆ. ಆದಿಲ್ ಶಾಹಿ ದೃಷ್ಟಿಯಿಂದ

ಸೂರ. ಅಲಕಲಮ್ ೧) ಕುರಾನ ಅಧ್ಯಾಯ LXVIII ಪದ್ಯ ೧-೩. (ಲೇಖನಿ ಬರವಣಿಗೆ)

ಸೂರ ಅ.ಆಲಾಪಾತಾ (೨) ಕುರಾನ ಅಧ್ಯಾಯ XVIII ಪದ್ಯ - ೧-೬ (ವಿಜಯ)

ಸುರೇ-ಬಖರ (೩) ಕುರಾನ ಅಧ್ಯಾಯ II ಪದ್ಯ-೨೫೬ (ಧರ್ಮದಲ್ಲಿ ಒತ್ತಾಯವಿಲ್ಲ)

೪) ಕುರಾನ ಅಧ್ಯಾಯ II ಪದ್ಯ - ೨೫೬.

ಸೂರ : ಮುಹಮ್ಮದ್ (೫) ಕುರಾನ ಅಧ್ಯಾಯ XLVII ಪದ್ಯ ೧-೪ (ಸತ್ಕರ್ಮ)

೬) ಕುರಾನ ಅಧ್ಯಾಯ II ಪದ್ಯ ೨೫೬-೨೫೭

ಸೂರ : ಅಲ್‌ಕಹ್ಫ್ ೭) ಕುರಾನ ಅಧ್ಯಾಯ XVIII ಪದ್ಯ ೧-೯ (ದೇವರ ಅಂಜಿಕೆ)

ಇವೆಲ್ಲ ಬಾದಾಮಿ ಪ್ರದೇಶವು ಪರಂಪರಾಗತವಾಗಿ ವಿಕಸಿಸಿದ ರೀತಿಯ ಚಿತ್ರವನ್ನು ನೀಡುತ್ತವೆ.

ಪ್ರೊ. ಕ.ವೆಂ. ರಾಜಗೋಪಾಲ್*

ಪಶ್ಚಿಮ ಕರಾವಳಿಯ ಸೂರ್ಯ

ಟಿಪ್ಪಣಿಗಳು :

ಪಶ್ಚಿಮಕರಾವಳಿತೀರ ಪ್ರದೇಶದಲ್ಲಿ ಗುಜರಾತಿನ ದಕ್ಷಿಣಕ್ಕೆ ಸೂರತ್‌ನಿಂದ ಮೊದಲಾಗಿಸಿ ಗೋವಾ-ಕಾರವಾರ- ಗೋಕರ್ಣ -ಬಾರಕೂರು-ಉಡುಪಿ (ಮಲ್ಪೆ) - ಮಂಗಳೂರು- ಸುರತ್‌ಕಲ್ -ವರೆವಿಗೂ ಸೂರ್ಯಾರಾಧನೆಯ ಕೇಂದ್ರಗಳಿವೆ. ಈ ದೇಗುಲಗಳು ಸಾಮಾನ್ಯವಾಗಿ ಮೇಲುವರ್ಗದ (ಬ್ರಾಹ್ಮಣ) ಮನ್ನಣೆಯಿರುವುದಕ್ಕಿಂತಲೂ ಮಿಗಿಲಾಗಿ ಬುಡಕಟ್ಟು ಜನಾಂಗಗಳು ಇವುಗಳನ್ನು ರಕ್ಷಿಸಿಕೊಂಡು ಬರುತ್ತಿವೆ.

ಈ ದೇಗುಲಗಳಿಗೂ ಕಡಲಿನ ಸಾಮಿಪ್ಯವಿದ್ದು ಬಂದರುಗಳ ಸಂಬಂಧವಿರುವುದನ್ನು ಐತಿಹಾಸಿಕವಾಗಿ ಗುರುತಿಸಬಹುದು. ಉದಾ : ಗೋವಾ, ಕಾರವಾರ, ಬಾರಕೂರು (ಹಂಗಾರಕಟ್ಟೆ ಬಂದರು), ಮಂಗಳೂರು, ಮರತ್‌ಕಲ್........

ಈ ದೇಗುಲಗಳು ತುಂಬಹಳೆಯ ರೀತಿಯವಾಗಿವೆ: ಗರ್ಭಗೃಹವು ಮೂರು-ನಾಲ್ಕು-ಐದು ಪ್ರದಕ್ಷಿಣಾಪಥಗಳಿಂದ (ಸುಮಾರು ಮೂರು ಮೂರು ಅಡಿ ಅಂತರದ ಜಂಬಿಟ್ಟಿಗೆಯವು) ಕೂಡಿದ ಏಳೆಂಟು ಅಡಿಗಳಷ್ಟೇ ಎತ್ತರದ ಗುಡಿಗಳಾಗಿವೆ. ಮೂರು ನಾಲ್ಕು ಮೆಟ್ಟಿಲುಗಳು ಮಾತ್ರ ಇರುವ ನೇರ ಗರ್ಭಗೃಹಕ್ಕೆ ತೆರೆದಿರುವ ಬಾಗಿಲುಗಳು-ಸರಳವಾಗಿವೆ. ರಂಗಮಂಟಪವು ಗರ್ಭಗುಡಿಯ ಎದುರಿಗೆ ನಾಲ್ಕೈದು ಅಡಿಗಳ ಅಂತರದಲ್ಲಿ ಉತ್ಸವಮಂಟಪಗಳಂತೆ ಇವೆ. ಈ ಮಂಟಪದ ಜಗಲಿಯು ಗರ್ಭಗುಡಿಯ ದೇವರ ಪೀಠಕ್ಕೆತ್ತರಿಸಿದಂತೆ ಇರುತ್ತವೆ. ಇಷ್ಟನ್ನೂ ಕಾಲಕ್ರಮೇಣ ಬೆಳವಣಿಗೆಯೆನ್ನಬಹುದಾಗಿ **ಗೋಕರ್ಣ** ದಂಥ ಸೂರ್ಯದೇಗು ಲವು ಅಶ್ವತ್ಥ (?) ದ ಬುಡದಲ್ಲಿರುವ ಒಂದುಗೂಡು. ಜಗಲಿಯ ಮೇಲೆ ಪ್ರದಕ್ಷಿಣೆಗೆ ಅನುಕೂಲವಾಗುವಂತೆ ಇರುವುದು- ಬಹುಶಃ ಬಹಳ ಹಳೆಯದಿರಬಹುದು. ಇದರಕೊಳವಂತೂ (ತಾವರೆಕೊಳ) ಹತ್ತಿರದಲ್ಲೇ ಇರುವುದಲ್ಲದೆ ಸ್ನಾನಕ್ಕೆಂಬುದು ಖಚಿತವಾಗುತ್ತದೆ.) - ಕಲ್ಯಾಣಿಯು ಸಾಮಾನ್ಯವಾದುದು. ರಥೋತ್ಸವವನ್ನು ರಥಸಪ್ತಮಿಯಲ್ಲಿ ಜರುಗಿಸುವುದು ಸೂರ್ಯಾರಾಧನೆಯ ಒಂದು ಲಕ್ಷಣವೆನ್ನಬಹುದು.

ಉಡುಪಿಯ ಸೂರ್ಯನೂ ಹೀಗೆಯೇ ಇರುವಂತಿದೆ. ಮಠದ ದೆಸೆಯಿಂದಾಗಿ ಇದಕ್ಕೆ ಪ್ರಾಮುಖ್ಯತೆ ಕಡಿಮೆ- ಸ್ವಾಮಿಗಳು ರಥಸಪ್ತಮಿಯಂದು ತಾವೇ ಆರಾಧಿಸುತ್ತಾರೆ., (ಶೃಂಗೇರಿಯಲ್ಲಿ ಕೂಡ ಈ ಪದ್ಧತಿಯು ಅನೂಚಾನವಾಗಿ ಬಳಕೆಯಲ್ಲಿದೆ).

ಇಲ್ಲಿಯ ಸೂರ್ಯಪ್ರತಿಮೆಗಳಿಗಿಂತ ಸಪ್ತಾಶ್ವಗಳ ಪ್ರಾಧಾನ್ಯತೆಯಿದ್ದು ಸಂಧ್ಯಾ ಮತ್ತು ಛಾಯಾ ಹಾಗೂ ಅರುಣ - ಇವರ ಉಬ್ಬುಶಿಲ್ಪಗಳು ಗಮನ ಸೆಳೆಯುತ್ತವೆ. (ಕೆಲವು ಸಣ್ಣಪುಟ್ಟ ವ್ಯತ್ಯಾಸಗಳು ಇರಬಹುದು) ಸೂರ್ಯನ ವಿಗ್ರಹದಲ್ಲಿ ಸಪ್ತಾಶ್ವಗಳು ಕಂಡೂ ಕಾಣದಂತೆ ಉಬ್ಬು ಶಿಲ್ಪಗಳಾಗಿದ್ದು ಕುಳಿತ ಸೂರ್ಯನಿಗೆ ಪ್ರಾಮುಖ್ಯತೆ ಇರುವಲ್ಲಿ ಅಂಥದು ಮಧ್ಯಂತರದ ಅಂದರೆ ನಿಂತ ಸೂರ್ಯನು ಪ್ರಭಾವಳಿ ಸಮೇತ ಕಂಡುಬರುವುದು ಅನಂತರದ ಬೆಳವಣಿಗೆಯಾಗಿರುವ ಸಾಧ್ಯತೆಯನ್ನು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಾಣಬಹುದಾಗಿದೆ. ಕ್ರಿ.ಶ. ೮೦೦ರ ವೇಳೆಗೆ ಮನ್ನೆಯ ಸೂರ್ಯನಂತೆ ಅದರ ಪಾಣಿ ಪೀಠಕ್ಕೆ ಸೂರ್ಯನ ಸಾರಥಿ (ಅರುಣ) ಸಮೇತ ಸಪ್ತಾಶ್ವಗಳು ಸೇರುವುದನ್ನು ಗಮನಿಸಿದಲ್ಲಿ ಇದಕ್ಕೂ ಹಿಂದಿನ ಶತಮಾನಗಳಲ್ಲಿ ಗೋಕರ್ಣ, ಉಡುಪಿ-ಮತ್ತು ಮಂಗಳೂರಿನ ಸೂರ್ಯರನ್ನು ಗುರುತಿಸಬೇಕಾಗಬಹುದು-ಇದಕ್ಕೆ ಕಾರಣಗಳನ್ನು ಮುಂದಿನ ಟಿಪ್ಪಣಿಗಳಲ್ಲಿ ಕಾಣಬಹುದು.

೩. ಕರಾವಳಿ ತೀರ ಪ್ರದೇಶವು ಕ್ರಿಸ್ತ ಪೂರ್ವದ ಹಾಗೂ ಶಕದ ಎರಡೂ ಶತಮಾನಗಳಲ್ಲಿ ಖಚಿತವಾಗಿ ಪರಕೀಯ ಪ್ರಭಾವಗಳಿಗೆ ಒಳಗಾಗಿರುವುದನ್ನೂ ೧ ಆಕ್ಸಿರಿಂಕ್‌ಸ್ ಪ್ಯಾಪಿರೀದ (ಮಲ್ಪೆಗೆ ಸಂಬಂಧಿಸಿದುದು) ೨. ಸೊಪಾರ (ಹಳೆಯ ಬಂದರು- ಮುಂಬಯಿಗೆ ಹತ್ತಿರವಾದಂತೆ) ಪ್ರಭಾವದಿಂದ ಕಾರ್ಲಾದ ಗುಹಾಂತರ ದೇವಾಲಯ-ನಾಸಿಕ್‌ಮೊದಲಾದಂಥವು ಕೂಡ- ಹೊರಗಿನ ಅಂದರೆ ಗ್ರೀಕೋ ಇಂಡಿಯನ್ ಎನ್ನಬಹುದಾದ ಗುಹಾಂತರಗಳು ಆಚರಣೆಸಮೇತವಾಗಿ (ನನ್ನ 'ಬೌದ್ಧಮತದಲ್ಲಿ ಯಕ್ಷಕಲೆ' ಎಂಬ ಸಂಶೋಧನ ಕೃತಿಯಲ್ಲಿ) ಗುರುತಿಸ ಲಾಗಿದೆ. ಇಲ್ಲಿಂದ ಮುಂದೆ ಮುಖ್ಯವಾಗಿ ಬೆಳೆದ 'ವಾಸ್ತು'ವಿನಲ್ಲಿ (ಆರ್ಕಿಟೆಕ್ಚರ್ ಬೆಳವಣಿಗೆಯು ಬಾದಾಮಿ ಚಾಲುಕ್ಯರ ಕಾಲದಲ್ಲಿ ಕೂಡ) ಗಜಪೃಷ್ಠಾಕಾರ ಎಂಬ ಅಭಿದಾನದಲ್ಲಿ ಬಳಕೆಯಿದೆ- ಇದನ್ನು ಐಹೊಳೆಯ ದುರ್ಗಾದೇಗುಲದಲ್ಲಿ ಸೂರ್ಯಾರಾಧನೆಯ ಜೊತೆಗೇ ಗುರುತಿಸಲಾಗಿದೆ. ಇಂಥ ಅಕಾರದ ದೇಗುಲಗಳು ಪಶ್ಚಿಮ ಕರಾವಳಿಯಲ್ಲಿ ಹಲವು ಕಂಡು ಬರುತ್ತವೆ.

* ಕೆಂಗೇರಿ ಉಪನಗರ, ಬೆಂಗಳೂರು ಜಿಲ್ಲೆ.

೧) ಈ ಮೂಲಕ ಕಾರ್ಲಾದ ಗಜಪೃಷ್ಠಾಕಾರದ ಗುಹಾಂತರ (ಚೈತ್ಯಗಳು) ರಚನೆಗಳನ್ನು ಅಜಂತಾದಲ್ಲಿ ಕ್ರಮವಾಗಿ ಕ್ರಿ.ಶ. ೭ನೇ ಶತಮಾನದವರೆಗೂ ಗುರುತಿಸಬಹುದಾಗಿದೆ. ಆಯತಾಕಾರದ ದೇಗುಲ ರಚನೆಗಳು ಅನಂತರವೇ ಬಯಲಿನಲ್ಲಿ ನಿಲ್ಲತೊಡಗಿರಬಹುದಾಗಿದೆ.

೨) ಶಾತವಾಹನರು ಮೊದಲಾಗಿ ಕದಂಬರು ಮತ್ತು ಕುಶಾನರು ತಮ್ಮ ರಾಜಮನೆತನಗಳನ್ನು ಈ ಕರಾವಳಿ ತೀರ ಪ್ರದೇಶದಲ್ಲಿ ಪ್ರಾರಂಭಿಸಿರಬೇಕೆನ್ನುವ ವಿಷಯಗಳಲ್ಲಿ ಬನವಾಸಿಯ ನಾಗಶಿಲ್ಪ ಶಾಸನವೂ ಆಧರಿಸುತ್ತದೆ. (ನಾಗಮಂಡಲವೂ ಅಷ್ಟು ಹಳೆಯದೆಂಬುದರಲ್ಲಿ ಸಂಶಯವಿರಲಾರದು)

ಬೌದ್ಧ(ಬನವಾಸಿಯ ಉತ್ಖನನ ಮೊದಲಾಗಿ ಹೀನಯಾನದ ಸ್ತೂಪಗಳಲ್ಲದೆ ರೋಮನ್ ನಾಣ್ಯಗಳು ಕಂಡುಬಂದಿವೆಯಷ್ಟೇ? ಜೈನ-ಹವ್ಯಕ-ಮಾಧ್ವ (ಇದಕ್ಕೆ ಆಧಾರವಾಗಿ ಶಿವಳ್ಳಿಯ ಬ್ರಾಹ್ಮಣರು) ಮತಗಳ ಪ್ರಭಾವವೂ ಇಲ್ಲಿಯ ಸಂಸ್ಕೃತಿಯಲ್ಲಿ ಬೆರೆತು ಹೋಗಿವೆ (ಭೂತಾರಾಧನೆಯಮನ್ನು ಉಡುಪಿ ಮಠಗಳೂ ಸ್ವೀಕರಿಸಿವೆ. ನಾಗಾರಾಧನೆಯೂ ಇವರಿಂದ ಗಂಭೀರರೂಪತಾಳಿದೆ.) ಇವುಗಳಿಗೆಲ್ಲಕ್ಕೂ ಕಡಲ ತೀರದ ಸಂಬಂಧವು (ಬಂದರುಗಳು ಸೇರಿದಂತೆ) ಖಚಿತವಾಗಿದೆ. (ಭೂತಾರಾಧನೆಯ ವಿಷಯದಲ್ಲಿ ಬೊಬ್ಬರ್ಯವು ಹೊರಗಿನದಿರಬೇಕೆಂದು ದಿ। ಗೋವಿಂದಪೈ ಅವರು ಅನುಮಾನಿಸಿದ್ದಾರೆ) ಆದುದರಿಂದ ಈ ತೀರದಲ್ಲಿ ಇಂದಿಗೂ ಉಳಿದು ಬಂದಿರುವ ಸೂರ‍್ಯಾರಾಧನೆ ಹಾಗೂ ದೇಗುಲಗಳು ಬುಡಕಟ್ಟು ಜನಾಂಗಗಳಿಂದ ಮುಖ್ಯವಾಗಿ ಸೂರ್ಯನಿಗೆ ಸಂಬಂಧಿಸಿದ ಸಂಕ್ರಮಣಗಳಲ್ಲದೆ ರಥಸಪ್ತಮಿಯ ಆಚರಣೆಯು ಪರಕೀಯ ಪ್ರಭಾವಗಳಿಂದ ಬಂದಿರಬೇಕೆಂದು ಊಹಿಸಲು ಅವಕಾಶವಿದೆ.

ಮೇಲೆ ಹೇಳಿದಂತೆ ಐತಿಹಾಸಿಕ ಕಾರಣಗಳಿಂದಾಗಿ ಪರಕೀಯ ಪ್ರಭಾವಗಳನ್ನು i. ದ್ರಾಕ್ಷಾಪಾನಕ್ಕೆ ಸಂಬಂಧಿಸಿದಂತೆ ಅಕ್ಸೆರಿಂಕ್ಸ್ ಪ್ಯಾಪಿರಿಯೂ ಸೇರಿದಂತೆ ii. ಶಾತವಾಹನರು ಶಕೆಯೊಂದನ್ನು ಗುರುತಿಸಿರುವುದು ಈ ಕಡಲತೀರದಲ್ಲಿ ಅವರ ವಾಸ್ತವ್ಯವು ಮೊದಲಾಗಿ ಪೂರ್ವಕ್ಕೆ ಅಂದರೆ ಆಂಧ್ರಕ್ಕೆ ಜರುಗಿದುದನ್ನೂ ಕದಂಬರ ನೆಲೆಗಳು ಮೊದಲಿಗೆ ಇಲ್ಲಿಂದ ಪೂರ್ವಕ್ಕೆ ಜರುಗಿ ಕರ್ನಾಟಕದಲ್ಲಿ ಐತಿಹಾಸಿಕ ಆಧಾರವಾಗಿರುವುದನ್ನೂ -ಈ ಶಕೆಯು ಸೂರ್ಯಮಾನವೆಂದು ಇಂದಿಗೂ ಗಣನೆಯಲ್ಲಿದೆ- ಇದಕ್ಕೆ ಚಂದ್ರಮಾನವು ಬೆರೆತಿದ್ದರೂ ಸೂರ್ಯಮಾನವೇ ಮೊದಲನೆಯದೆನ್ನಬಹುದು.

ಕಾಲಗಣನೆಗೆ ಸೂರ್ಯಮಾನವು ಮುಖ್ಯವಾಗಿದ್ದಿರಬೇಕೆಂದು ಹೇಳಲು ಕ್ರಿ.ಶ. ೮ನೇ ಶತಮಾನದಿಂದ ದ್ವಾದಶ ರಾಶಿ ಸ್ತಂಭಗಳುಳ್ಳ ರಚನೆಗಳನ್ನು ಐಹೊಳೆಯಿಂದಲೂ ಗುರುತಿಸಬಹುದಾಗಿದೆ. ಮನ್ನೆ-ಶೃಂಗೇರಿ-ಹಳೇಬೀಡು; ಹೀಗೆ ಇದರ ಅವಶೇಷಗಳನ್ನು ಗುರುತಿಸಲಾಗಿದೆ.

ಬುಡಕಟ್ಟು ಜನಾಂಗಗಳಲ್ಲಿ ಶಾತವಾಹನರಷ್ಟು ಹಳೆಯದೆಂದು ಗುರುತಿಸಬಹುದಾದ ಕೊರಗರು ಸೂರ್ಯಾರಾಧಕರಾಗಿದ್ದಾರೆ. ನಾಗಾರಾಧನೆಯೂ ಇವರಲ್ಲಿದೆ. - ಇವರ ರಾಜರುಗಳಲ್ಲಿ ಹೊಬಿಷ್ಕಾ-(ಹುವಿಷ್ಕಾ) ಎಂಬವನ ಕಾಲವಿದ್ದಿರಬೇಕೆಂದು ಪ್ರೊ. ಅಮೃತಸೋಮೇಶ್ವರ- (**ಕೊರಗರು.** ಐಬಿಹೆಚ್ ಪ್ರಕಾಶನ) ಅವರು ಗುರುತಿಸಿದ್ದಾರೆ. ಇದನ್ನು ಪ್ರೊ. ಗುರುರಾಜ ಭಟ್ಟರು ಕೂಡ ಗುರುತಿಸಿದ್ದರು. ಈ ದೊರೆಯನ್ನು ಕಾನಿಷ್ಕನ ನಂತರ ಆಳಿದವನೆಂದೂ ಆತನ ಕಾಲದಲ್ಲಿ ಬೆಳೆದ ರಾಜಕೀಯ ಗೊಂದಲಗಳಿಂದಾಗಿ ದಕ್ಷಿಣಕ್ಕೆ ಬಂದಿರಬಹುದೆಂದು ಊಹಿಸಲಾಗಿದೆ. ಕುಶಾನರ ನಾಣ್ಯಗಳಲ್ಲಿ ಸೂರ್ಯನ ಚಿಹ್ನೆಯೂ ಇರುವುದರಿಂದ ಮತ್ತು ಕೊರಗರು ತಮ್ಮ ಮಕ್ಕಳಿಗೆ ಹುಟ್ಟಿದವಾರದ ಹೆಸರನ್ನು ಇಡುವ ರೂಢಿಯಿದೆ. ಐತ ಎಂಬುದು ಹೀಗೆ ಅವರಲ್ಲಿ ಬಳಕೆಯಿದೆ-(ಅಮೃತಸೋಮೇಶ್ವರ-ಅದೇ.)

೩. ಸೂರ್ಯಾರಾಧನೆಯು ಹೊರಗಿನಿಂದ ಬಂದಿರಬೇಕೆನ್ನುವುದಕ್ಕೆ ಕೆಲವು ಕಾರಣಗಳನ್ನು ಗುರುತಿಸಬಹುದು-

೧. ವಿಗ್ರಹಾರಾಧನೆಯು ಮಹಾಯಾನದ ಕಡೆಯಿಂದ ಬಂದಿವೆ. ಜೈನಧರ್ಮ ಕೂಡ ಮೊದಲಿಗೆ ಹೀಗೆಯೇ ವಿಗ್ರಹಾರಾಧನೆಯನ್ನು ಒಪ್ಪಿಕೊಂಡುದಲ್ಲ. ೨. ಕದುಂಬರಲ್ಲಿ ಹವ್ಯಕರು ಬಂದಾಗ ವಿನಾಯಕನೂ ಬಂದಂತಿದೆ. ಗೋಕರ್ಣ ಮತ್ತು ಇಡಗುಂಜಿಯ ವಿನಾಯಕ ಪ್ರತಿಮೆಗಳು ಇದಕ್ಕೆ ಆಧಾರವಾಗುತ್ತವೆ. ೩. ವೈದಿಕ ಕರ್ಮಗಳಲ್ಲಿ ಯಜ್ಞಯಾಗಾದಿಗಳಿಗೆ ಸಂಬಂಧಿಸಿದಂತೆ ಮಾಂತ್ರಿಕವಾಗಿ ವಿವರಗಳುಳ್ಳ ಮಂತ್ರಗಳು ವಿಗ್ರಹಾರಾಧನೆಯನ್ನು ಒಳಗೊಳ್ಳುವುದಿಲ್ಲ. ಪ್ರಣವೇಶ್ವರ ಎಂಬುದು ಲಿಂಗವಾಗಿರದೆ ವಿನಾಯಕನ ರೂಪದ್ದಾಗಿರಬೇಕಾಗಿದೆ. ೪. ಸೂರ್ಯ ಪ್ರತಿಮೆಯಲ್ಲಿರುವ ಸಪ್ತಾಶ್ವಗಳ ರಥಕ್ಕೆ ಪುರಾಣಗಳು ಕಾರಣವಾಗಿರುವಂತಿದೆಯಾದರೂ ಅದರ ಕಾಲವನ್ನು (ಸೂರ್ಯಪುರಾಣವೂ ಆದಿತ್ಯಪುರಾಣ.) ಖಚಿತವಾಗಿ ಗುರುತಿಸಲು ಸಾಧ್ಯವಿಲ್ಲ. ಅದು ಪುರಾತನವಾದುದೇನಲ್ಲ.

5 Temples for the SunGod - collected papers ; (Studies in Tamil culture) by Natana Kashinathan, Director of Archaeology :-

ಅ. ವೇದಗಳಲ್ಲಿ ಸೂರ್ಯನನ್ನು ಆದಿತ್ಯನೆಂದೂ ಇರಾಕಿನಲ್ಲಿ ಮೂಘರು ಸೂರ‍್ಯಾರಾಧನೆಯನ್ನು ತಂದರು.

ಆ. ಶತಪಥ ಬ್ರಾಹ್ಮಣರಲ್ಲಿ ಸೂರ್ಯನನ್ನು ೮ ಬಗೆಯಲ್ಲಿ ಗುರುತಿಸಲಾಗಿದೆ. ಹನ್ನೆರಡು - ಎಂದೂ ಹೇಳಲಾಗಿದೆ. ಆದಿತ್ಯನನ್ನು ಅದಿತಿಯಮಗ - ಎಂದಿದೆ.

ಇ. ಕ್ರಿ. ಶ. ಪ್ರಾರಂಭಕಾಲದಿಂದ ಸೂರ‍್ಯಾರಾಧನೆಯು ಜನಪ್ರಿಯತೆಯನ್ನು ಗಳಿಸಿರಬಹುದು. ಆದರೂ ಕುಶಾನರ ನಾಣ್ಯಗಳಲ್ಲಿ ಸೂರ್ಯನ ಗುರುತುಗಳಿವೆ. (Shakthi M. Gupta - Surya the Sun God-ಲೇಖನ. Somaiya Publications Bombay. 1977-pp.18).

ಈ ಪುರಾತನ (ಸೂರ್ಯ) ಪ್ರತಿಮೆಗಳು:- ಭಾಜ ಮತ್ತು ಬೋಧಗಯಾ ಗುಹೆಗಳಲ್ಲಿ ಸೂರ್ಯ-ಅದರಲ್ಲಿ ೪ ಕಟ್ಟಿದ ಕುದುರೆಗಳಿಂದ ಎಳೆಯುವ ರಥದಲ್ಲಿ-ಇದ್ದಾನೆ. ಪಕ್ಕದಲ್ಲಿ ಉಷಾ-ಪ್ರತ್ಯೂಷಾ ಇದ್ದಾರೆ. ಇವರು ಬಿಲ್ಲಿಗೆ ಹೂಡಿದ ಬಾಣವನ್ನು ಆಕಾಶಕ್ಕೆ ಗುರಿಯಿಟ್ಟಂತ (ಜ್ಯೋತಿಷ್ಯದ ನಕ್ಷತ್ರ ಮಂಡಲವನ್ನು ಸೂಚಿಸುತ್ತಾ) ನಿಂತಿದ್ದಾರೆ- ಈ ಬಗೆಯನ್ನು ಕ್ರಿ.ಪೂ ೩ನೇ ಶತಮಾನಕ್ಕೆ ಸೇರಿಸಬಹುದಾಗಿದೆ.

ಉ. ಸೂರ್ಯ ದೇವಸ್ಥಾನವನ್ನು ಹ್ಯೂಯಂತ್ ಸಾಂಗ್, ಅಲ್‌ಎದ್ರಿಶಿ, ಅಬು ಇಷ್ಕತ್ ಇತ್ಯಾದಿಗಳು ಗುರುತಿಸಿ ದ್ದಾರೆ. ಸದ್ಯಕ್ಕೆ ಕಾಶ್ಮೀರದ ಮಾರ್ತಂಡ ದೇಗುಲವೇ ಹಳೆಯದು. (ಮಾರ್ತಂಡ ಪದಕ್ಕೆ ನಿರುಕ್ತವಿರುವುದಿಲ್ಲ,. ಆದುದರಿಂದ ಅದು ಮೂಲದಲ್ಲಿ ಸಂಸ್ಕೃತವಲ್ಲ. ಈ ಹೆಸರು ಸೂರ್ಯನಿಗೆ ಬಿರುದೆನ್ನುವಂತೆ ಸೇರುತ್ತದೆ. ಉದಾ : ಸರ್ವ ಮಾರ್ತಂಡ-ನರಸಿಂಹ ಬಲ್ಲಾಳನ ಬಿರುದುಗಳಲ್ಲಿ ಒಂದು.) ಕ್ರಿ.ಶ. ೭ನೇ ಶತಮಾನದಷ್ಟು ಹಳೆಯದೆಂದು. ಮತ್ತೊಂದು ರಾಜಸ್ತಾನದ ಒಸಿಯಾದಲ್ಲಿ - ೮ನೇ ಶತಮಾನದೆಂದೂ- ಮೊಡೇರದ (ಗುಜರಾತ್) ಸೂರ್ಯದೇಗುಲ ದ್ವಾದಶ ರಾಶಿ ಸ್ತಂಭಗಳಿಂದ ಕೂಡಿರುವುದು ಕ್ರಿ.ಶ. ೧೧ನೇ ಶತಮಾನ ದೆಂದೂ ಕೊನಾರ್ಕದ ಸೂರ್ಯದೇಗುಲವು ಕ್ರಿ.ಶ. ೧೩ನೇ ಶತಮಾನ ದ್ದೆಂದೂ ಪರಾಂತಕ ೧ ನ ಶಾಸನದಲ್ಲಿ (ಕ್ರಿ.ಶ. ೯೦೭ರಿಂದ ೯೫೫) ತಮಿಳುನಾಡು ಕುಲೋತ್ತುಂಗ ಚೋಳ (ಕ್ರಿ.ಶ. ೧೦೭೦ರಿಂದ ೧೧೨೦) ನ ಕಾಲದ ಸೂರ್ಯದೇಗುಲ ಅಲ್ಲದೆ ತಿರುಕೋಷ್ಟಿಯೂ-ನಲ್ಲಿ ಅನಂತರದ್ದು-ಗುಡಿಯಲ್ಲಮ್ಮನ ದೇಗುಲದಲ್ಲಿ ಸೂರ್ಯನ ಪ್ರತಿಮೆಯಿದೆ.

ಸೂರ್ಯನ bas relief - ಮಹಾಬಲಿಪುರಂನಲ್ಲಿದೆ. ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯುವಲ್ಲಿ.

ಊ. ರಾಜಸ್ತಾನದ ಒಸಿಯಾ ದೇಗುಲವು ನಮ್ಮ ಪಟ್ಟದಕಲ್ಲಿನ ಸೂರ್ಯಪ್ರತಿಮೆಯನ್ನು ಹೋಲುತ್ತದೆ.

ಉಪಸಂಹಾರ :

೧ ಪಶ್ಚಿಮ ಕರಾವಳಿಯ ಸೂರ್ಯನನ್ನು ಹೊರದೇಶ(ಗಳ) ಪ್ರಭಾವದಿಂದ ಬಂದುದೆಂದು ಗುರುತಿಸಬೇಕಾಗಿದೆ.

೨. ಈ ಸೂರ್ಯ ದೇಗುಲಗಳಲ್ಲಿ ಅಷ್ಟದಿಕ್ಪಾಲಕರ ನಡುವೆ ಸ್ಥಾಪಿತವಾದ ಸೂರ್ಯನನ್ನು ಕಾಣುತ್ತೇವೆ. ಈ ಸಂಬಂಧ ದಲ್ಲಿ ಹವನಹೋಮಗಳ ಹಾಗೂ ಯಜ್ಞಯಾಗಾದಿಗಳ ಆಚರಣೆ ಯಿರುವುದಿಲ್ಲ.

೩. ಆಂಜನೇಯ ಆರಾಧನೆಯ ಸಂಬಂಧದಲ್ಲಿ ರಥಸಪ್ತಮಿಯನ್ನು ಆಚರಿಸುವಾಗ ಸೂರ್ಯ 'ಚಕ್ರೋತ್ಸವ' ಎಂಬುದು ಒಂದು ರಥದಲ್ಲಿ ಕೂಡಿಸಿ ಎಳೆಯುವ ಉತ್ಸವವು ಶ್ರೀರಂಗಪಟ್ಟಣ, ಹೇಮಗಿರಿ, ಕ್ಯಾತಸಂದ್ರ - ಮುಂತಾದೆಡೆ ನಡೆಯುತ್ತದೆ. ಅದರಲ್ಲಿ ಸೂರ್ಯನದು ಮೂಲ ವಿಗ್ರಹದ ಆರಾಧನೆ ಯಾಗಿರುವುದಿಲ್ಲ.

೪. ಜ್ಯೋತಿಷ್ಯದಲ್ಲಿ ಸೂರ್ಯನನ್ನು 'ಹೋರಾರತ್ನ' ಎಂಬ ಪ್ರಯೋಗವಿದೆ. ಇದರಲ್ಲಿ ಹೋರಾ-ಎಂಬುದು ಪರ್ಷಿಯನ್ ಭಾಷೆಯನ್ನು ಸೂಚಿಸುತ್ತದೆ.

ಡಾ. ಕುರುಣಾ ವಿಜಯೇಂದ್ರ*

ಬಾದಾಮಿಯ ಮಹಾನಟ ಮತ್ತು ಕರಣಗಳು

ಬಾದಾಮಿಯ ನಟರಾಜ ಎಂದೊಡನೆ ಕಣ್ಣಮುಂದೆ ಬಂದು ನಿಲ್ಲುವಂತಹ ಚಿತ್ರ ಕೆಂಪುಮಿಶ್ರಿತ ಕಲ್ಲಿನಲ್ಲಿ ಒಟ್ಟು ಹದಿನೆಂಟು ಕೈಗಳಿಂದ ಕೂಡಿದ ಸೌಮ್ಯಮುಖದ ನೃತ್ಯಮೂರ್ತಿ. ಈತನನ್ನು ಅನೇಕ ವಿದ್ವಾಂಸರು ತಮ್ಮ ಅಧ್ಯಯನದ ಸೀಮಿತ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ.

ಪ್ರೊ. ಸಿ. ಶಿವರಾಮಮೂರ್ತಿ[೧], ಪ್ರೊ. ಎಸ್.ಕೆ. ರಾಮಚಂದ್ರರಾವ್[೨], ಟಿ. ಎ. ಗೋಪಿನಾಥರಾವ್[೩], ಡಾ|| ಚೂಡಾಮಣಿ ನಂದಗೋಪಾಲ್[೪], ಅಲೈಸ್ ಬೋನರ್[೫] ಮುಖ್ಯವಾಗಿ ಹಾಗೂ ಗ್ಯಾರಿವಾರ್[೬], ಡಾ|| ಎಸ್. ಪತ್ತಾರ್[೭], ಜೇಮ್ಸ್ ಫರ್‌ಗುಸ್ಸನ್ ಮತ್ತು ಜೇಮ್ಸ್ ಬರ್‌ಗಿಸ್ಸ್[೮], ಶ್ರೀ ಪ್ರೊ. ಜೋಷ್‌ಬ್ಯಾನರ್ಜಿ[೯] ಇನ್ನು ಅನೇಕ ವಿದ್ವಾಂಸರು ತಮ್ಮ ಅಧ್ಯಯನದ ಚೌಕಟ್ಟಿನಲ್ಲಿ ಈ ಶಿಲ್ಪದ ಬಗ್ಗೆ ಚರ್ಚೆಗಳನ್ನು ನಡೆಸಿದ್ದಾರೆ.

ಅಲೈಸ್ ಬೋನರ್ 'ಟೈಮ್ ಅಂಡ್ ಸ್ಪೇಸ್' ಎಂಬ ತತ್ವದಲ್ಲಿ ಅನೇಕ ಹೊಸವಿಚಾರಗಳನ್ನು ಹೇಳಿದ್ದರೂ ಕೆಲವು ಮುಖ್ಯದೋಷಗಳು ಕಂಡುಬರುತ್ತವೆ. ಮೊದನೆಯದಾಗಿ ಶಿಲ್ಪದಲ್ಲಿ ಶಿವನಿಗೆ 'ಹದಿನೇಳು ಕೈಗಳಿವೆ.' ಎಂದು ತಿಳಿಸುತ್ತಾರೆ. ಶಿವನು ತನ್ನ ಎಡಗೈಯಲ್ಲಿ ಪರಶುವನ್ನು ಹಿಡಿದಿರುವುದಾಗಿ ತಿಳಿಸುತ್ತಾರೆ.[೧೦] ಶ್ರೀ ಟಿ. ಎ. ಗೋಪಿನಾಥ್‌ರಾವ್ ಅವರೂ ಸಹ ಇದನ್ನು 'ಪಾಶ'ಅಸ್ತ್ರ ಎಂದು ತಿಳಿಸುತ್ತಾರೆ. ಇದರ ಬಗ್ಗೆ ಮುಂದೆ ಚರ್ಚಿಸಲಾಗುವುದು.

ಸಾಮಾನ್ಯವಾಗಿ ಈ ಎಲ್ಲ ವಿದ್ವಾಂಸರು ಚಾಲುಕ್ಯರ ಕಾಲದ ಮೂರ್ತಿಶಿಲ್ಪದ ಅಧ್ಯಯನದ ಚೌಕಟ್ಟಿನಲ್ಲಿ ಮತ್ತು ನೃತ್ತಮೂರ್ತಿ ಶಿವನ ಬಗ್ಗೆ ಚರ್ಚಿಸುವಾಗ ಒಟ್ಟಿಗೆ ರಾವಳಫಡಿ, ಬಾದಾಮಿ ಹಾಗೂ ಪಟ್ಟದಕಲ್ಲು, ಐಹೊಳೆಯ ದೇವಾಲಯಗಳಲ್ಲಿ ಕಂಡು ಬರುವ 'ನಟರಾಜಶಿಲ್ಪಗಳ' ಬಗ್ಗೆ ಒಟ್ಟಾಗಿ ಚರ್ಚಿಸಿದ್ದಾರೆ. ಬಾದಾಮಿಯ ನೃತ್ತಮೂರ್ತಿಯ ಬಗ್ಗೆಯೇ ವಿಶೇಷವಾದ ವಿವರಣೆಯನ್ನು ನೀಡುವುದಿಲ್ಲ. ಇದುವರೆಗೆ ತಿಳಿದಿರುವಂತೆ ಡಾ|| ಚೂಡಾಮಣಿನಂದಗೋಪಾಲ್ ಅವರ ಸಂಶೋಧನಾ ಗ್ರಂಥದಲ್ಲಿ ಮತ್ತು ಅವರದೇ ಒಂದು ಬಿಡಿ ಪ್ರಬಂಧದಲ್ಲಿ ಬರುವ ವಿವರಗಳೇ ಪ್ರಥಮ ಪ್ರಯತ್ನವೆಂದು ಹೇಳಬಹುದು.[೧೧]

ನಟರಾಜ - ಮಹಾನಟ ಒಂದು ವಿವೇಚನೆ :

ಆಗಮಶಾಸ್ತ್ರ, ಮೂರ್ತಿಶಿಲ್ಪದ ಹಿನ್ನೆಲೆಯಲ್ಲಿ ಗಮನಿಸಿದಾಗ ಕರ್ನಾಟಕದಲ್ಲಿ ಕ್ರಿ.ಶ. ೬ ನೆಯ ಶತಮಾನಕ್ಕೆ ಕಂಡು ಬರುವ ನೃತ್ತಮೂರ್ತಿ ಶಿವನ ಶಿಲ್ಪವನ್ನು 'ನಟರಾಜ' ಎಂದು ಕರೆದಿರುವುದು ಕಂಡು ಬರುವುದಿಲ್ಲ.' Dancing Shiva , 'Dancing Shiva with many hands, Multiple hands' ಎಂಬ ವಿವರಗಳು ಕಂಡು ಬರುತ್ತದೆ. ಶಿವನ ನರ್ತನದ ಬಗ್ಗೆ ತಿಳಿಸುವ, 'ನಟರಾಜ' ನ ಬಗ್ಗೆ ಚರ್ಚಿಸುವ ವಿದ್ವಾಂಸರು 'ನಟರಾಜ' ಪದದ ಬಗ್ಗೆ ಚರ್ಚಿಸಿದಂತೆ ಕಂಡುಬರುವುದಿಲ್ಲ.

ಪ್ರೊ. ಸಿ. ಶಿವರಾಮಮೂರ್ತಿಯವರು ನಟರಾಜ ಇನ್ ಆರ್ಟ್ ಥಾಟ್ ಅಂಡ್ ಲಿಟರೇಚರ್' ಗ್ರಂಥದ ಮೊದಲನೆಯ ಅಧ್ಯಾಯದಲ್ಲಿ ಶಿವನ ನರ್ತನದ ಪ್ರಾಮುಖ್ಯತೆಯನ್ನು ಶಿವ ಮತ್ತು ಲಲಿತಕಲೆಗಳ ಸಂಬಂಧವನ್ನು ವಿವಿಧ ಪುರಾಣಗಳ ಆಧಾರದಲ್ಲಿ ಚರ್ಚಿಸುತ್ತಾರೆ. ಉತ್ತರ ಭಾರತದಲ್ಲಿ 'ನಟೇಶ್ವರ' ಎಂದು ಕರೆಯುವರೆಂದೂ, ಕಾಂಬೋಡಿಯಾದ ಶಾಸನದಲ್ಲಿ 'ನೃತ್ತೇಶ್ವರ' ಎಂದು ಕರೆಯಲಾಗಿದೆ ಎಂದು ತಿಳಿಸುತ್ತಾರೆ.[೧೨] ಆದರೆ ಇದರ ಕಾಲವನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ.

ಚೋಳರ ಕಾಲದ ಶಾಸನಗಳಲ್ಲಿ 'ಆಡವಲ್ಲಾನ್' ಎಂದು ಕರೆಯುತ್ತಿದ್ದರೆಂದು ತಿಳಿಸುತ್ತಾರೆ. (ಡಾ|| ಚೂಡಾಮಣಿ ನಂದ ಗೋಪಾಲ್ ಅವರು 'ಆಡವಲ್ಲವಾನ್'ಎಂದೂ ಕರೆಯಲಾಗುವುದು ಎಂದು ಹೇಳಿದ್ದಾರೆ) ವಾಯುಪುರಾಣದ ಹಿನ್ನೆಲೆಯಲ್ಲಿ ಶಿವನನ್ನು 'ನರ್ತನಶೀಲ' ಎಂದೂ, ಲಿಂಗಮಹಾ ಪುರಾಣದಲ್ಲಿ 'ನೃತ್ಯಪ್ರಿಯ' 'ನಿತ್ಯನೃತ್ಯ' 'ನರ್ತನ' ಸರ್ವಸಾಧಕ ಎಂದು ಬಣ್ಣಿಸಲಾಗಿದೆ ಎಂದು ತಿಳಿಸುತ್ತಾರೆ. ಆದರೆ 'ನಟರಾಜ' ಪದವು ಹೇಗೆ ಬಂದಿತೆಂಬುದರ ಬಗ್ಗೆ ತಿಳಿಸುವುದಿಲ್ಲ.

ಶತಾವಧಾನಿ ಡಾ|| ರಾ. ಗಣೇಶ ಅವರ ವಿವರಣೆ ಹೀಗಿದೆ: "ಸಂಸ್ಕೃತ ಕಾವ್ಯಗಳಲ್ಲಿ 'ನಟರಾಜ' ಪದವು ಕ್ರಿ.ಶ. ೧೦ನೇ ಶತಮಾನದ ಮೊದಲು ಕಂಡುಬರುವುದಿಲ್ಲ... ಕ್ರಿ.ಶ. ೫ ಅಥವಾ ೬ನೆಯ ಶತಮಾನದಲ್ಲಿ ಅಮರಸಿಂಹನಿಂದ ರಚಿತವಾಗಿರುವ ಅಮರಕೋಶದಲ್ಲಿ ಮಹಾನಟ ಎಂಬ ಉಲ್ಲೇಖ ಬರುವುದೆಂದು ತಿಳಿಸುತ್ತಾ ... ಕಾಳಿದಾಸ ಹಾಗೂ ಭಾರವಿಗಳ ಕಾವ್ಯಗಳಲ್ಲಿ

* ಸಹ ಸಂಶೋಧಕಿ, ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ದಕ್ಷಿಣ ಪ್ರಾದೇಶಿಕ ಕೇಂದ್ರ, ಬೆಂಗಳೂರು - ೨

ಕೂಡ ನಟರಾಜ ಪದವು ಕಂಡುಬರುವುದಿಲ್ಲ ಎಂದು ಹೇಳುತ್ತಾ... ಬಹುಶಃ ಈ ಪದವು ಕಾಶ್ಮೀರ ಪ್ರತ್ಯಭಿಜ್ಞಾಶೈವ ದರ್ಶನಗಳ ಕಾಲ ಅಂದರೆ ಸುಮಾರು ಕ್ರಿ.ಶ. ಒಂಭತ್ತನೇ ಶತಮಾನದಿಂದ ಈಚೆಗೆ ಕ್ರಿ. ಶ. ಹತ್ತು ಅಥವಾ ಹನ್ನೊಂದನೆಯ ಶತಮಾನದಿಂದ 'ನಟರಾಜ' ಪದವು ಬಳಕೆಗೆ ಬಂದಿರಬಹುದು ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ನಟರಾಜ ಪದವು 'ನಟನಾಂ ರಾಜಾ' ಷಷ್ಠೀ ತತ್ಪುರುಷ ಸಮಾಸದಲ್ಲಿ ಬರುವುದೆಂದು, ಸಂಸ್ಕೃತ ಭಾಷೆಯಲ್ಲಿ ಗುಣವನ್ನು ಹಿಡಿದು 'ರಾಜ' ಎಂದು ಹೇಳುವುದನ್ನು ಕಾಣಬಹುದೆಂದು, ಕಾವ್ಯಮೀಮಾಂಸೆಯಲ್ಲಿ ರಾಜಶೇಖರನನ್ನು ಕವಿರಾಜ ಎಂದೂ ಬನವಾಸಿಯಲ್ಲಿ ರಾಘವ ಪಾಂಡವೇಯನನ್ನು ಕವಿರಾಜ ಎಂದೂ ಕನ್ನಡದ 'ಕವಿರಾಜಮಾರ್ಗ' ಇವುಗಳೆಲ್ಲವೂ 'ರಾಜ' ಉತ್ಕೃಷ್ಟ ಎಂಬ ಹಿನ್ನೆಲೆಯಲ್ಲಿ ಬಂದಿರುವುದನ್ನು ಕಾಣಬಹುದು ಎಂದು ಹೇಳುತ್ತಾ ನಟರಲ್ಲಿ/ನರ್ತನದಲ್ಲಿ ಪ್ರಥಮನಾದವನು 'ನಟರಾಜ'ಎಂದು ಬಂದಿರಲು ಸಾಧ್ಯ" ಎಂಬ ಸುಧೀರ್ಘ ವಿವರಣೆಯನ್ನು ನೀಡಿದರು.

ಪ್ರೊ. ಎಸ್.ಕೆ. ರಾಮಚಂದ್ರರಾವ್ ಬಾದಾಮಿ ನೃತ್ತಮೂರ್ತಿಯ ಬಗ್ಗೆ ಹೀಗೆ ಹೇಳುತ್ತಾರೆ-

"....Earliest sculptural representation of 'Nataraja' are to be fornd in early chalukyan temples at Badami Aihole & Pattadakal (between 543 AD and 755AD) a couple of cenrturies not only before the cholas took up this theme for iconographical stylization but also before the shilpa- sutra mannuals took shape"..[೧೪]

ಈ ಎಲ್ಲ ವಿದ್ವಾಂಸರ ಚರ್ಚೆಯ ಹಿನ್ನೆಲೆ ಮತ್ತು ಪ್ರಬಂಧ ಮಂಡನೆಯ ಹೊತ್ತಿನಲ್ಲಿ ವಿದ್ವಾಂಸರ ಅಭಿಪ್ರಾಯದಲ್ಲಿ ಬಾದಾಮಿಯ ಚಾಲುಕ್ಯರ ಕಾಲದ ನೃತ್ತಮೂರ್ತಿಶಿವನನ್ನು 'ಮಹಾನಟ' ಎಂದು ಕರೆಯಬೇಕಾಗುವುದು ಎಂದೂ ಮತ್ತು ಚಾಲುಕ್ಯರ ಕಾಲದಲ್ಲಿ ಎರಡು ಕೈಗಳಿಗಿಂತ ಅಧಿಕ ಕೈಗಳನ್ನು ಶಿಲ್ಪದ ಮಾಧ್ಯಮದಲ್ಲಿ ರಚಿಸಿ ಶಿವನ ನರ್ತನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದರು ಎಂಬುದು ತಿಳಿದು ಬರುತ್ತದೆ.

ಬಾದಾಮಿಯ ಮಹಾನಟ

ಸುಮಾರು ಕ್ರಿ.ಶ. ೫೫೦ ರಿಂದ ೫೭೮ ರಲ್ಲಿ ನಿರ್ಮಿತವಾಗಿರಬಹುದಾದ ಬಾದಾಮಿಯ ಒಂದನೆಯ ಗುಹೆಯ ಬಲಭಾಗಕ್ಕೆ ಸುಮಾರು ಐದು ಅಡಿ ಎತ್ತರದ[೧೫] ಹದಿನೆಂಟು ಕೈಗಳುಳ್ಳ 'ಮಹಾನಟನು' ಆಯತಾಕಾರದ ಪದ್ಮಪೀಠದ ಮೇಲೆ ನರ್ತಿಸುತ್ತಿರುವಂತೆ ಚಿತ್ರಿಸಲಾಗಿದೆ. ಶಿವನ ಹದಿನೆಂಟು ಕೈಗಳಲ್ಲಿ ಕ್ರಮವಾಗಿ (ಎಡ + ಬಲಕ್ಕೆ) ಮೂರುಹಸ್ತಗಳಲ್ಲಿ ಆಯುಧಗಳನ್ನು ಮೇಲಿನ ಎರಡು ಹಸ್ತಗಳಲ್ಲಿ ಸರ್ಪವನ್ನು , ೪+೪=೮ ಹಸ್ತಗಳಿಂದ 'ಕರಣ'[೧೬]ಗಳನ್ನು ಮಾಡುತ್ತಿರುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ. ಬಲಗಾಲು ಪಾರ್ಶ್ವಪಾದದಲ್ಲಿ ಎಡಗಾಲು ಸೂಚೀಪಾದದಲ್ಲಿ ಹಾಗೂ ಬಲಭಾಗದ ಕಟಿಯು ಉದ್ವಾಹಿತ ಕಟಿಯೊಂದಿಗೆ ತ್ರಿಭಂಗ ಸ್ಥಾನಕದಲ್ಲಿ ನಿಂತಿರುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ.

ಸುಂದರವಾದ ಹಾಗೂ ವಿಶೇಷವಾಗಿ ಕಂಡುಬರುವಂತಹ



(೧)

ಜಟಾಮುಕುಟವನ್ನು, ಹಿಂದೆ ಅಷ್ಟೇ ಸರಳವಾದ ಪ್ರಭಾವಳಿಯನ್ನು ಹೊಂದಿರುವ ಮಹಾನಟನು ಕತ್ತಿನಲ್ಲಿ ಕಂಠಾಭರಣವನ್ನು, ರುದ್ರಾಕ್ಷಿಮಾಲೆಯನ್ನು, ಯಜ್ಞೋಪವೀತವನ್ನು ಮತ್ತು ರುಂಡಮಾಲೆಯನ್ನು ಧರಿಸಿದ್ದಾನೆ. ಕಟಿಗೆ ಸುಂದರ ಕಟಿ ಆಭರಣವನ್ನು ಹಾಗೂ ಕಟಿ ಸೂತ್ರವನ್ನು ಧರಿಸಿದ್ದಾನೆ. ಮಧ್ಯದಲ್ಲಿ ಉದರ ಸೂತ್ರವು ಶಿಲ್ಪದ ಮಧ್ಯರೇಖೆಯಾಗಿ ಕೆಳಗೆ ಇಳಿಬಿದ್ದಿರುವುದನ್ನು ಕಾಣಬಹುದು. ಬಹು ಸುಂದರವಾಗಿ ಶಿಲ್ಪಿಯು ಇದನ್ನು ಶಿಲ್ಪದ ಮಧ್ಯರೇಖೆಯಾಗಿ ಬಳಸಿಕೊಂಡಿದ್ದಾನೆ. (ಈ ರೀತಿ ಮೂರ್ತಿಗೆ, ಮತ್ತು ಕಲ್ಲನ್ನು ಆಧಾರವಾಗಿ ಬಳಸುವುದು ಸಾಮಾನ್ಯ ಎಂದು ಇಂದಿನ ಶಾಸ್ತ್ರೀಯ ಶಿಲ್ಪಕಾರರೊಬ್ಬರು ತಮ್ಮ ಅಭಿಪ್ರಾಯವನ್ನು ತಿಳಿಸಿದರು) ಹದಿನೆಂಟು ಕೈಗಳಿಗೆ ಕಡಗಗಳನ್ನು ಧರಿಸಿದ್ದಾನೆ. ಎಡತೋಳುಗಳಲ್ಲಿ ತೋಳುಬಂದಿಗಳಿರುವುದು ವಿಶೇಷವಾಗಿದೆ. ಅತ್ಯಂತ ಸರಳವಾದ ವಸ್ತ್ರಾಭರಣಗಳಿಂದ ಶೋಭಿತನಾಗಿ ನಿಂತಿರುವ ಈ ಮಹಾನಟನು ಅನೇಕ 'ನಿಗೂಢವಿಚಾರಗಳನ್ನು' ತನ್ನಲ್ಲಿ ಅಡಗಿಸಿಕೊಂಡು ನರ್ತಿಸುತ್ತಿದ್ದಾನೆ!


ಮಹಾನಟನ ಹಿಂಬದಿಯಲ್ಲಿ ನಂದಿಯೂ, ಎಡಭಾಗದಲ್ಲಿ

ಕೆಳಗಡೆ ಗಜಮುಖಿ ಗಣಪತಿಯು ನರ್ತನದಲ್ಲಿಯೂ, (ಕರಿ ಹಸ್ತಕರಣ) ಹಾಗೂ ಒಬ್ಬ ಪುರುಷನು ಊರ್ಧ್ವಕ'[೧೮] ಎಂಬ ಚಲುಕ್ಯರಕಾಲದ ಅವನದ್ಧ ವಾದ್ಯವನ್ನು ನುಡಿಸುತ್ತಿದ್ದಾನೆ.

ಜೇಮ್ಸ್ ಫರ್‌ಗ್ಯೂಸನ್ ತಮ್ಮ **ಕೇವ್ ಟೆಂಪಲ್ಸ್ ಆಫ್ ಇಂಡಿಯಾ** ಗ್ರಂಥದಲ್ಲಿ ವಾದ್ಯಕಾರನನ್ನು ನಾರದ ಎಂದು ಹೇಳುತ್ತಾರೆ.[೧೯] ಶತಾವಧಾನಿ ಗಣೇಶ್ ಅವರು: ನಾರದ ಮುನಿಯು ವೈಣಿಕ ಕಲಾವಿದ. ಇಲ್ಲಿ ಪುರುಷನಿಗೆ ಸುಂದರವಾದ ಕೇಶವಿನ್ಯಾಸ ವಿದೆ. ಭೃಂಗಿ ಅಥವಾ ನಾರದಮುನಿಗೆ ಇರಬೇಕಾಗಿದ್ದ ಜಟಾ ಮುಕುಟವಿಲ್ಲ. ಪೌರಾಣಿಕವಾಗಿ ಶಿವನ ತಾಂಡವ ನೃತ್ಯಕ್ಕೆ ವಿಷ್ಣುವೇ ಮದ್ದಳೆ ನುಡಿಸಿದ ಆಧಾರಗಳು ದೊರೆಯುತ್ತವೆ. ಆದ್ದರಿಂದ ಈತನು ವಿಷ್ಣುವಾಗಿರಬೇಕು ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಮಹಾನಟನಲ್ಲಿ ಚಿತ್ರಿತವಾಗಿರುವ ಅಸ್ತ್ರಗಳು ಮತ್ತು ವಾದ್ಯಗಳು.

(೨)



ಶಿವನ ಅತಿಮುಖ್ಯ ಲಾಂಛನಗಳಾದ ಡಮರು ಮತ್ತು ತ್ರಿಶೂಲವನ್ನು ಕಾಣಬಹುದು.

ಬಲಗೈಯಲ್ಲಿ ಅಕ್ಷಮಾಲೆಯನ್ನು ಎಡಗೈಯಲ್ಲಿ ಏಕತಂತಿ ವೀಣೆಯನ್ನು ಹಿಡಿದಿದ್ದಾನೆ.

ಬಲಗೈಯಲ್ಲಿ ಹಿಡಿದಿರುವ ಅಕ್ಷಮಾಲೆಯ ಚಿತ್ರವು ಶಿಲ್ಪದಲ್ಲಿ ಬಹಳ ತ್ರುಟಿತವಾಗಿರುವುದರಿಂದ ಖಚಿತವಾಗಿ ಅಕ್ಷಮಾಲೆ ಎಂದು ಹೇಳಲು ಅವಕಾಶವಿಲ್ಲದಂತಾಗಿದೆ. ಎಲ್ಲ ಹಿರಿಯ ವಿದ್ವಾಂಸರ[೨೦] ಅಭಿಪ್ರಾಯದಂತೆ ಇದು ಅಕ್ಷಮಾಲೆ ಇರಬೇಕೆಂದು ಊಹಿಸಲು ಅವಕಾಶಮಾಡಿಕೊಳ್ಳಲಾಗಿವೆ.

ಮಹಾನಟನು ಎಡಗೈಯಲ್ಲಿ ಹಿಡಿದಿರುವ ಏಕತಂತಿ ವೀಣೆಯ ಬಗ್ಗೆ ಅಲೈಸ್ ಬೋನರ್ ಮತ್ತು ಟಿ.ಎ. ಗೋಪಿನಾಥ್ ರಾವ್ ಅವರು ಪರಶು / ಪಾಶ ಎಂದು ತಿಳಿಸುತ್ತಾರೆ. ಅಲೈಸ್ ಬೋನರಿ ತಮ್ಮ *'Time & Space'* ತತ್ವಕ್ಕೆ ಹೊಂದುವಂತೆ ಹೀಗೆ

(೩)




ಹೇಳುತ್ತಾರೆ. "The whole mass of arms is held together by two heavy weapons in Shivas hands the trisula & parasu. The greater weight on the left side is balanced and re- adjusted by the right arms spread in the opposite direction..." [೨೧] ಎಂದು ತಿಳಿಸುತ್ತಾರೆ.

ಇದು ಪರಶು ಅಲ್ಲ ಎಂಬುದು ಸ್ಪಷ್ಟವಾಗಿದೆ. ಡಾ|| ಚೂಡಾಮಣಿ ನಂದಗೋಪಾಲ್ ಅವರು ಬಹಳ ಸ್ಪಷ್ಟ ವಾಗಿ ಇದು ಚಾಲುಕ್ಯರ ಕಾಲದ ರುದ್ರವೀಣೆ ಎಂದು ತಿಳಿಸು ತ್ತಾರೆ.[೨೨] "ಈ ರೀತಿಯ ತಂತಿವಾದ್ಯವನ್ನು ಅಜಂತಾ ಚಿತ್ರಗಳಲ್ಲಿ ಕಾಣಬಹುದು" ಎಂದು ತಿಳಿಸುತ್ತಾರೆ. ಅಜಂತಾ ಚಿತ್ರಗಳನ್ನು ಗಮನಿಸಿದಾಗ, ಹದಿನೇಳನೆಯ ಗುಹೆಯ ಜಾತಕ ಕಥೆಯ ನಿರೂಪಣೆಯವಲ್ಲಿ ಇಂದ್ರನು ಗಾಂಧರ್ವ ಸ್ತ್ರೀಯರೊಂದಿಗೆ ವಿಶ್ವಂತರನನ್ನು ನೋಡಲು ಮೋಡದೊಳಗಿನಿಂದ ಬರುವ ಚಿತ್ರಣದಲ್ಲಿ ಎಡಭಾಗದಲ್ಲಿ ಹಾರುತ್ತಿರವ ಗಾಂಧರ್ವ ಸ್ತ್ರೀಯಳ ಎಡಗೈಯಲ್ಲಿ ಈ ರೀತಿಯ ವಾದ್ಯವು ಕುಡು ಬರುತ್ತದೆ.[೨೩] ಚಲುಕ್ಯರ ಕಾಲಕ್ಕೆ ಅಂದರೆ ಕ್ರಿ.ಶ. ಐದರಿಂದ ಏಳನೆಯ ಶತಮಾಲದಲ್ಲಿ ಇಡೀ ಭಾರತದಲ್ಲಿ ಇದೇ ರೀತಿಯ ವಾದ್ಯಗಳ್ಲು ಕಂಡುಬರುತ್ತವೆ. ಹಾಗೂ ಈತನನ್ನು 'ವೀಣಾಧರ ಶಿವ' ಎಂದು ಕರೆದಿರುವುದನ್ನು ಕಾಣಬಹುದು.[೨೪] ಡಾ|| ಶೀಲಾಕಾಂತ ಪತ್ತಾರರು "...ನಟ ರಾಜನು ಈ ತಂತ್ರೀವಾದ್ಯವನ್ನು ಹಿಡಿದ ರೀತಿ ಭಿನ್ನವಾದುದು. ಆತ ವೀಣೆಯನ್ನು ತನ್ನ ಎರಡು ಎಡಗೈಗಳಿಂದ ನೆಲಕ್ಕೆ ಲಂಬವಾಗಿ ಹಿಡಿದು ನುಡಿಸುತ್ತ ನರ್ತಿಸುತ್ತಿದ್ದಾನೆ" ಎನ್ನುತ್ತಾರೆ. ಇಲ್ಲಿ ಶಿವನು ರುದ್ರ ವೀಣೆಯನ್ನು ಒಂದೇ ಕೈಯಲ್ಲಿ ಹಿಡಿದಿದ್ದಾನೆ. ಇನ್ನೊಂದು

ಹಸ್ತವು ವೀಣೆ. ಹಿಂದೆ ಬಂದಿದೆ. ಆದರೆ ಅದು ಕರಣದ ಚಲನೆಯಲ್ಲಿ ಬಂದಿರುವಂತಹ ಹಸ್ತವಾಗಿದೆ. (ಮುಂದೆ ಚಿತ್ರ ೬ನ್ನು ಗಮನಿಸಿ).

(೪)



ಮಹಾನಟನ ಬಲಗಡೆಗೆ ಕೆಳಗಿನಿಂದ ಮೊದಲನೆಯ ಹಸ್ತವು ಅಭಿನಯ ಹಸ್ತದಲ್ಲಿನ ಅಸಂಯುಕ್ತ ಹಸ್ತವಾದ ಕಟಕಾಮುಖ ಹಸ್ತವು ಕೆಳಮುಖವಾಗಿದೆ. ಎಡಗಡೆಗೆ ಮೇಲಿನಿಂದ ಮೂರನೆಯ ಹಸ್ತವು ಅರ್ಧಪತಾರ ಹಸ್ತದಲ್ಲಿದೆ. ನೃತ್ಯದಲ್ಲಿ ಸಾಮಾನ್ಯವಾಗಿ ಇವೆರಡು ಅಭಿನಯ ಹಸ್ತಗಳನ್ನು ಕ್ರಮವಾಗಿ ಅಂಕುಶ ಮತ್ತು ಪಾಶವನ್ನು ತೋರಿಸಲು ಉಪಯೋಗಿಸಲಾಗುತ್ತದೆ. ಮೂರ್ತಿ ಶಿಲ್ಪದ ವಿವರಣೆಯಲ್ಲೂ ಈ ಹಸ್ತಗಳಿರುವುದನ್ನು ಗಮನಿಸ ಬಹುದು.[೨೫] (ಡಾ॥ ಆರ್. ಗಣೇಶ್ ಮತ್ತು ನೃತ್ಯಾಂಗನೆ ಶ್ರೀಮತಿ ಸುಂದರಿ ಸಂತಾನಂ ಅವರು ಇರಬಹುದು ಎಂದು ತಿಳಿಸಿದರು) ಆದರೆ ಎಡಹಸ್ತವು ಕೊನೆಯಲ್ಲಿ ತ್ರುಟಿತವಾಗಿರು ವುದರಿಂದ ಸ್ಪಷ್ಟವಾಗಿ ಹೇಳಲು ಸಾಧ್ಯವಾಗು ವುದಿಲ್ಲ.

ಮಹಾನಟನಲ್ಲಿ ಗುರುತಿಸಲು ಪ್ರಯತ್ನಿಸಿರುವ ಕರಣಗಳು

ಒಟ್ಟು ಹದಿನೆಂಟು ಕೈಗಳಿಂದ ನರ್ತಿಸುತ್ತಿರುವಂತೆ ಕಂಡುಬರುವ ಮಹಾನಟನು ಕೇವಲ ೪+೪=೮: ಕೈಗಳಿಂದ ನರ್ತಿಸುತ್ತಿದ್ದಾನೆ. ಈ ಎಂಟುಕೈಗಳಲ್ಲಿ ಒಂಭತ್ತು ಕರಣಗಳನ್ನು ಗುರುತಿಸಲು ಸಾಧ್ಯವಾಗಿದೆ. (ಅಪವಿದ್ಧ ಕರಣ - ೪, ನಿಕುಟ್ಟಕಂ- ೯, ಮತ್ತಲ್ಲಿ ೨೩, ಅರ್ಧಮತ್ತಲ್ಲಿ-೨೪, ರೇಚಿತನಿಕು ಟ್ಟಿತಮ್-೨೯, ವಲಿತಂ-೩೧, ಭುಜಂಗತ್ರಸ್ತ ರೇಚಿತ-೩೫, ಆಕ್ಷಿಪ್ತಂ-೫೫, ಸರ್ಪಿತಂ-೮೧,) ಬಹಳ ಸ್ಪಷ್ಟವಾಗಿ ಪ್ರತಿ ಯೊಂದು ಕರಣದಲ್ಲಿನ ನಿರ್ದಿಷ್ಟ ಭಂಗಿ, ಚಲನೆಯಲ್ಲಿನ ಭಂಗಿ (Intermediatory movement) ಕರಣದ ಮೊದಲ ಭಂಗಿ, ಕರಣದ ಕೊನೆಯ ಭಂಗಿಗಳನ್ನು ಗುರುತಿಸಲು ಸಾಧ್ಯವಾಗಿದೆ. ಶಿಲ್ಪಿಯು ಬಹಳ ಸ್ಪಷ್ಟವಾಗಿ ಕರಣಗಳಿಗೆ ನೃತ್ತಹಸ್ತಗಳನ್ನು ಮಾತ್ರ ಬಳಸಿಕೊಂಡಿದ್ದಾನೆ. ಇವುಗಳನ್ನು ಕರಣದ ವಿವರಣೆ ನೀಡುವಾಗ ತಿಳಿಸಲಾಗಿದೆ. (ಇವು ಪಾರಿಭಾಷಿಕ ಶಬ್ದಗಳಾಗಿರುವುದರಿಂದ ವಿವರಗಳಿಗ ನಾಟ್ಯಶಾಸ್ತ್ರಕ್ಕೆ ಸಂಬಂಧಿತ ಗ್ರಂಥಗಳನ್ನು ಗಮನಿಸ ಬೇಕಾಗುತ್ತದ.)

ಇದುವರೆಗೆ ಅಧ್ಯಯನ ನಡೆಸಿರುವ ಅನೇಕ ವಿದ್ವಾಂಸರು ಬಾದಾಮಿಯ ಮಹಾನಟನಲ್ಲಿ ಚತುರ ಕರಣ-೩೯ ಇದೆಯೆಂದು 'ಚತುರದಲ್ಲಿರುವ ಶಿವ' ಎಂದು ತಿಳಿಸುತ್ತಾರೆ. ಆದರೆ ಯಾವ ಹಿನ್ನೆಲೆಯಲ್ಲಿ ತಿಳಿಸುತ್ತಾರೆ ಎಂಬುದು ತಿಳಿದು ಬರುವುದಿಲ್ಲ. ನಾಟ್ಯಶಾಸ್ತ್ರದಲ್ಲಿ ಚತುರ ಕರಣದ ಶ್ಲೋಕ ಮತ್ತು ಪಾಠಾಂತರ ಹೀಗಿದೆ.[೨೬]

ಶ್ಲೋಕ : ಅಂಚಿತಃ ಸ್ಯಾತ್ಕರೋವಾಮಃ ಸವ್ಯಾಚತುರ ಏವತು

ದಕ್ಷಿಣಃ ಕುಟ್ಟಿತಃ ಪಾದಾಶ್ಚತುರಂ ತತ್ಪ್ರಕೀರ್ತಿತಮ್

(ನಾಟ್ಯಶಾಸ್ತ್ರ-IV, ೯೯)

ಅನುವಾದ : ಎಡಭುಜವು ಅಂಚಿತದಲ್ಲಿದ್ದು ಅದೇ ಹಸ್ತವು ಚತುರ ಹಸ್ತದಲ್ಲಿ ಮಾತ್ರ ಇದ್ದು ಬಲಗಾಲು ಕುಟ್ಟಿತಪಾದದಲ್ಲಿದ್ದಾಗ ಚತುರ ಕರಣವಾಗುತ್ತದೆ.

ಶ್ಲೋಕದಲ್ಲಿ ಚತುರ ಹಸ್ತ ಮಾತ್ರ (ಏವತು) ಎಂದು ತಿಳಿಸಲಾಗಿದೆ. ಶಿಲ್ಪದಲ್ಲಿ ಎಡಭಾಗದಲ್ಲಿ ಎಲ್ಲಿಯೂ ಸ್ಪಷ್ಟವಾಗಿ ಚತುರ ಹಸ್ತವು ಕಂಡುಬರುವುದಿಲ್ಲ. ಶಿಲ್ಪದಲ್ಲಿ ಎಡಗಡೆಗೆ ಮೇಲಿನಿಂದ ಮೂರನೆಯ ಹಸ್ತವನ್ನು ಚತುರವನ್ನಾಗಿ ಸ್ವೀಕರಿಸಿದರೂ ಬಲಭಾಗದಲ್ಲಿ ಯಾವುದೇ ಹಸ್ತವು ಚತುರ ಹಸ್ತವಾಗಿ ಕಂಡು ಬರುವುದಿಲ್ಲ ಮತ್ತು ಶ್ಲೋಕದಲ್ಲಿ ತಿಳಿಸಿರುವ ಪಾದಭೇದವು ಹಸ್ತಗಳಿಗೆ ಹೊಂದಿಕೆಯಾಗಿ ಬರುವುದಿಲ್ಲ. ಕೆಲವೊಂದು ಕರಣಗಳು ಎಡಕ್ಕೂ ಬಲಕ್ಕೂ ಮಾಡಲು ಅವಕಾಶವಿದೆ. ಚತುರ ಕರಣವನ್ನು ಮಾಡಬಹುದು. ಆದರೆ ಶ್ಲೋಕದಲ್ಲಿನ ಪಾದಭೇದಕ್ಕೆ ಹಸ್ತಗಳ ಚಲನೆಗೆ ಯಾವ ರೀತಿ ಹೋಲಿಸಿದಲೂ ಇಲ್ಲಿನ ಶಿಲ್ಪಕ್ಕೆ ಹೊಂದಿಕೆಯಾಗಿ ಬರುವುದಿಲ್ಲ.

ಇದುವರೆಗೆ ಗುರುತಿಸಲು ಪ್ರಯತ್ನಿಸಲಾಗಿರುವ ಕರಣಗಳನ್ನು ಬಹಳ ಸೂಕ್ಷ್ಮವಾಗಿ ಪ್ರತಿಯೊಂದು ಹಂತದಲ್ಲಿಯೂ ಮೂಲ ಪಾಠಕ್ಕೆ ಹೊಂದಿಕೆಯಾಗುತ್ತದೆಯೇ ಎಂದು ಗಮನಿಸಿ ಗುರುತಿಸಲು ಪ್ರಯತ್ನಲಾಗಿದೆ.

ಕರಣಗಳ ಅಧ್ಯಯನಕ್ಕೆ ಮುಖ್ಯ ಆಧಾರ ಭರತಮುನಿಯು ನಾಟ್ಯಶಾಸ್ತ್ರ, ಅಭಿನವಗುಪ್ತನ ಅಭಿನಯದರ್ಪಣ ಮತ್ತು ಡಾ. ಪದ್ಮಾಸಬ್ರಮಣ್ಯಂ ಅವರ *Karanas common Dance Codes of India and Idonesia*, ಎಂಬ ಮೂರು ಭಾಗಗಳ ಸಂಶೋಧನಾಗ್ರಂಥ. ಹಾಗೇಯೇ ಅವರ ಪ್ರಮುಖ ಶಿಷ್ಯರಲ್ಲಿ ಒಬ್ಬರಾದ ಶ್ರೀಮತಿ ಸುಂದರಿ ಸಂತಾನಂ ಅವರು ಕರಣಗಳನ್ನು ಕರಗತ ಮಾಡಿಕೊಂಡ ನೃತ್ಯಂಗನೆ. ಈ ಎಲ್ಲ ಹಿನ್ನೆಲೆಯನ್ನು

ಉಪಯೋಗಿಸಿಕೊಂಡು ಹಂತಹಂತವಾಗಿ ಅಧ್ಯಯನ ನಡೆಸಿ ಬಾದಾಮಿ ಮಹಾನಟನಲ್ಲಿ ೯ ಕರಣಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ ಡಾ. ಪದ್ಮಾಸುಬ್ರಮಣ್ಯಂ ಅವರು ಕರಣಗಳ ಸಂಶೋಧನೆಯನ್ನು ಮಾಡಿರುವುದು ಕ್ರಿ.ಶ. ೧೧ನೇ ಶತಮಾನದ ಶಿಲ್ಪಗಳ ಆಧಾರದಲ್ಲಿ ಈ ಕಾಲದಲ್ಲಿ ನಾಟ್ಯಶಾಸ್ತ್ರದ ಅಸ್ತಿತ್ವವು ಬೇರೆಯಾಗಿ ದೇಸೀಯ ಶೈಲಿಗೆ ಹೆಚ್ಚು ಪ್ರಶಸ್ತ್ಯ ಒದಗಿ ಬರುತ್ತಿದ್ದಂತಹ ಕಾಲ. ಆ ಕಾರಣದಿಂದ ತಮಿಳುನಾಡಿನಲ್ಲಿ ಆ ಕಾಲದ ನೃತ್ಯಶೈಲಿ. (ಕರಣಗಳು) ಶಿಲ್ಪಗಳಲ್ಲಿ ದಾಖಲೀಕರಣಗೊಂಡವು.

ಬಾದಾಮಿಯ ಮಹಾನಟನ ಶಿಲ್ಪವು ನಾಟ್ಯಶಾಸ್ತ್ರವು ಅತ್ಯಂತ ಪರಿಪಕ್ವವಾಗಿ ಪ್ರಚಲಿತದಲ್ಲಿದ್ದ (ಕ್ರಿ.ಶ. ೬ನೆಯ ಶತಮಾನ) ಕಾಲದಲ್ಲಿ ರೂಪಿತಗೊಂಡ ನೃತ್ತಶಿಲ್ಪ. ಪ್ರಥಮಬಾರಿಗೆ ನಾಟ್ಯಾಗಮವನ್ನು ಶಿಲ್ಪದಲ್ಲಿ ಪರಿಪೂರ್ಣವಾಗಿ ಉಪಯೋಗಿಸಿ ಕೊಂಡು ನಿರ್ಮಿಸಿದ ಶಿಲ್ಪ. ಆದ್ದರಿಂದ ಇಲ್ಲಿನ ಕರಣಗಳನ್ನು ಬಹಳ ಜಾಗರೂಕತೆಯಲ್ಲಿ ನಾಟ್ಯಸಾಸ್ತ್ರ ಗ್ರಂಥದ ಆಧಾರದಲ್ಲಿ ಮಾತ್ರ ಗಮನಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಗುರುತಿಸಿರುವ ಕರಣಗಳು ಶಿಲ್ಪಕ್ಕೆ ಸ್ಪಷ್ಟಸಾಮ್ಯತೆಯನ್ನು ಹೊಂದಿವೆ. ಆದರೆ ಇದೇ ರೀತಿಯೇ ಮಾಡುತ್ತಿದ್ದರು ಎಂದು ಹೇಳುವ ಸಾಹಸ ಮಾಡುವುದಿಲ್ಲ. ಈ ಕರಣಗಳು ಈ ಶಿಲ್ಪದಲ್ಲಿ ಶಿಲ್ಪಯು ಚಿತ್ರಿಸಿರಬಹುದು ಎಂದು ಮಾತ್ರ ಹೇಳಲು ಪ್ರಯತ್ನಿಸಲಾಗಿದೆ.

ಈ ಶಿಲ್ಪವನ್ನು ಬಿಡಿಸಿರುವ ಶಿಲ್ಪಕಾರನ ಪಾಂಡಿತ್ಯ ಅಸಾಧಾರಣವಾದದ್ದು. ಶಿಲ್ಪದಲ್ಲಿನ ಪ್ರತಿಯೊಂದು ಹಸ್ತಗಳ ಸ್ಥಾನಕ, ಅವುಗಳನ್ನು ನಿರ್ದಿಷ್ಟ ಸ್ಥಳದಲ್ಲಿ (Time & Space Management) ಒಂದರ ಮೇಲೆ ಒಂದು ಬೀಳದಂತೆ (over-lap) ಬಹಳ ಸ್ಪಷ್ಟವಾಗಿ ಬಿಡಿಸಿರುವುದು ಅದ್ಭುತವಾದದ್ದು. ಈ ರೀತಿಯ ಬಹುಹಸ್ತಗಳ ನೃತ್ಯಮೂರ್ತಿ ಶಿವನ ಶಿಲ್ಪಗಳನ್ನು ಚಿತ್ರಿಸುವ ಶಿಲ್ಪಕಾರರ ಪರಂಪರೆಯೇ ಚಲುಕ್ಯರ ಕಾಲಕ್ಕೆ ಇತ್ತು ಎಂಬುದು ಆ ಕಾಲದ ಶಿಲ್ಪಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಬಾದಾಮಿಯ ಮಹಾನಟನನ್ನು ನಿರ್ಮಿಸಿ, ಅವನಲ್ಲಿ ನಾಟ್ಯಾಗಮದ ಅನೇಕ ನಿಗೂಢ ವಿಚಾರಗಳನ್ನು ತುಂಬಿಸಿರುವ ಶಿಲ್ಪಕಾರನ ಅಸಾಧಾರಣ ಪಾಂಡಿತ್ಯಕ್ಕೆ ನಾವು ತಲೆಬಾಗಲೇಬೇಕು.

ಬಾದಾಮಿಯ ಮಹಾನಟನ ಶಿಲ್ಪವು ಕಾಲದಿಂದ ಕಾಲಕ್ಕೆ ತ್ರುಟಿತವಾಗುತ್ತಾ ಬರುತ್ತಿದೆ. ಇದು ಕಾಲನಿಯಮ. ಇದರಿಂದ ಕೆಲವು ಬಾರಿ ಸ್ಪಷ್ಟವಾಗಿ ಶಿಲ್ಪದಲ್ಲಿ ಯಾವ ಬೆರಳು ಮಡಚಿ ಕೊಂಡಿದೆ, ಯಾವ ಕಡೆಗೆ ತಿರುಗಿವೆ ಎಂದು ಸ್ಪಷ್ಟವಾಗಿ ಗೋಚರಿಸುವುದಿಲ್ಲ, ಕರಣಗಳ ಚಲನೆ, ಭಂಗಿ, ಶ್ಲೋಕ, ಶಿಲ್ಪದಲ್ಲಿನ ಹಸ್ತಗಳ ಸ್ಥಾನಕ, ಬೆರಳು, ಮಣಿಕಟ್ಟಿನ ಬಾಗುವಿಕೆ ಈ ಹಿನ್ನೆಲೆಯಲ್ಲಿ ಕೆಲವನ್ನು ಊಹಿಸಲಾಗಿದೆ ಮತ್ತು ಕೆಲವು ಸ್ಪಷ್ಟವಾಗಿ ಅದೇ ಹಸ್ತಗಳು ಎಂದು ತಿಳಿದು ಬರುತ್ತದೆ.

ಕರಣಗಳು

ಅಪವಿದ್ಧ ಕರಣ -೪ (ಚಿತ್ರ ೫)



ಶ್ಲೋಕ :

ಆವರ್ತ್ಯಾ ಶುಕತುಂಡಾಖ್ಯ ಮೂರೂ ಪೃಷ್ಟೇ. ನಿಪಾತ ಯೇತ್
ವಾಮಹಸ್ತಶ್ಚ ವಕ್ಷಃ ಸ್ಥೋಽಪ್ಯ ಅಪವಿದ್ಧಂ ತುತದ್ಭವೇತ್॥

ನಾಟ್ಯಶಾಸ್ತ್ರ - IV ೬೪

ಶುಕತುಂಡ ಹಸ್ತವನ್ನು ತಿರುಗಿಸುತ್ತಾ ತೊಡೆಯ ಮೇಲೆ ಹಿಂದಿನಿಂದ ತಂದಿಳಿಸಿದಾಗ ಅಪವಿದ್ಧವಾಗುತ್ತದೆ. ಇನ್ನೊಂದು ಹಸ್ತವು (ನಿಶ್ಚಲವಾಗಿ) ಎದೆಯ ಹತ್ತಿರವಿರುತ್ತದೆ.

[Dr. Padma Subramanyam- I bid-vol II page -53]

ಮಾಡುವ ವಿಧಾನ : ಅಪವಿದ್ಧ ಕರಣದಲ್ಲಿ ಎರಡು ರೀತಿಯಾಗಿ ಮಾಡುವ ವಿಧಾನಗಳಿವೆ. ಎರಡೂ ರೀತಿಗಳು ಶಿಲ್ಪಕ್ಕೆ ಹೊಂದಿಬಂದರೂ ಮೊದಲನೆಯ ರೀತಿಯ ಕೊನೆಯ ಭಂಗಿ ಸ್ಪಷ್ಟವಾಗಿ ಈ ಶಿಲ್ಪದಲ್ಲಿ ಕಂಡು ಬರುತ್ತದೆ.

ಪಾದಗಳ ಚಲನೆ : **ಆಕ್ಷಿಪ್ತ ಚಾರಿ**ಯನ್ನು ಮಾಡುತ್ತಾ **ಅಂಚಿತಾ** ಪಾದಕ್ಕೆ ಬಂದ ಬಲಕ್ಕೆ **ಉದ್ವಾಹಿತ ಕಟಿ**ಯೊಂದಿಗೆ ಬಲಗಾಲು **ತ್ರಸ್ಯಪಾದದಲ್ಲೂ** ಎಡಗಾಲು **ಅಗ್ರತಲದಲ್ಲಿ** ಬರುವಂತೆ ಮಾಡಬೇಕು.

ಹಸ್ತಗಳ ಚಲನೆ : ಬಲಹಸ್ತವು **ಚತುರಶ್ರ**ದಲ್ಲಿದ್ದಾಗ ಎಡಹಸ್ತವನ್ನು ಶುಕತುಂಡ ಹಸ್ತದಲ್ಲಿ ಪಕ್ಷಪ್ರದ್ಯೋತಕ ನೃತ್ತಹಸ್ತವನ್ನು ಮಾಡುತ್ತಾ ಶಂಕತುಂಡ ಹಸ್ತವನ್ನು ಒಳಮುಖವಾಗಿ ತಿರುಗಿಸಿ ಬೆರಳುಗಳು ಎಡತೊಡೆಗೆ ತಾಗುವಂತೆ ಇಟ್ಟಾಗ ಒಂದನೇ ರೀತಿಯ 'ಅಪವಿದ್ಧ' ಕರಣವಾಗುತ್ತವೆ.

ಈ ಶಿಲ್ಪದಲ್ಲಿ ಶಿಲ್ಪಯು ಮೊದಲನೆಯ ರೀತಿಯ ಅಪವಿದ್ಧ ಕರಣದ ಕೊನೆಯ ಭಂಗಿಯಲ್ಲಿ ಚಿತ್ರಿಸಿದ್ದಾನೆ.

ನಿಕುಟ್ಟಕ್ಮಂ - ೯ನೇಕರಣ

ಶ್ಲೋಕ

ನಿಕುಟ್ಟಿತ್ ಯದಾ ಹಸ್ತ್ ಸ್ವಬಾಹು ಶಿರಸೋಽಅಂತರ

ಪಾದ್ ನಿಕ್ಕುಟ್ಟಿತ್ ಚೈವ ಜ್ಞೇಯಂ ತತ್ತು ನಿಕುಟ್ಟಕಮ್

(ನಾಟ್ಯಶಾಸ್ತ್ರ-IV ೬೯)


ಶಿರಸ್ಸು ಮತ್ತು ಭುಜಗಳ ಅಂತರದಲ್ಲಿ ಕೈಗಳು ನಿಕುಟ್ಟ ಚಲನೆಯಲ್ಲಿಯೂ ಪಾದಗಳು ಉದ್ಘಟ್ಟಿತದಲ್ಲಿಯೂ ಇದ್ದಾಗ ನಿಕುಟ್ಟಕ ಕರಣವಾಗುತ್ತದೆ.

ಮಾಡುವ ವಿಧಾನ :

ಪಾದಗಳ ಚಲನೆ : ಒಂದು ಪಾದವು **ಸಮದಲ್ಲಿಯೂ** ಇನ್ನೊಂದು ಪಾದವು **ಉದ್ಘಟ್ಟಿತ** ಪಾದಲ್ಲಿಯೂ ಇರುತ್ತದೆ.

ಹಸ್ತಗಳ ಚಲನೆ : ಎಡಗೈ **ಆವಿದ್ಧ ನೃತ್ತಹಸ್ತ**ದಲ್ಲಿ ಒಂದೇ ಸಮನಾಗಿ ಚಲಿಸುತ್ತಾ ಬಲಗೈ **ಶುಕತುಂಡದಿಂದ ಪಲ್ಲವ** ಹಸ್ತ ಪಲ್ಲವ ಹಸ್ತದಿದಂದ **ಚತುರಶ್ರ** ಹಸ್ತದಲ್ಲಿ ಕೊನೆಗೊಳಿಸಬೇಕು.

ಶಿಲ್ಪದಲ್ಲಿ ಕಂಡುಬರುವ ಚಲನೆ (ಚಿತ್ರ - ೬)



ಈ ಶಿಲ್ಪಕ್ಕೆ ಸಂಬಂಧಿಸಿದಂತೆ ಈ ಕರಣವು ಬಹಳ ಮುಖ್ಯವಾಗುತ್ತದೆ. ಶ್ಲೋಕದಲ್ಲಿನ ಪಾಠಾಂತರವನ್ನು ಗಮನಿಸಿದಾಗ ಯಾವುದೇ ಪಾದವಾದರೂ ಉದ್ಘಟ್ಟಿತದಲ್ಲಿ ಇರಬಹುದಾಗಿದೆ.

ಇಂದು ಕರಣಗಳನ್ನು ಮಾಡುತ್ತಿರುವ ಕಲಾವಿದರು ಸಮಪಾದದಲ್ಲಿ ನಿಂತು ಅಗ್ರತಲಪಾದದಲ್ಲಿ **ಉದ್ಘಟ್ಟಿತವನ್ನು** ಮಾಡುತ್ತಿದ್ದಾರೆ (ಈ ರೀತಿ ಮಾಡುವುದು ತಕ್ಕಮಟ್ಟಿಗೆ ಸುಲಭ).

ಬಾದಾಮಿಯ ನೃತ್ತಮೂರ್ತಿ ಶಿವನಲ್ಲಿ ಬಲಕಾಲು **ಸಮಪಾದ**ದಲ್ಲಿರುವಂತೆಯೂ ಬಲಗೈ ನಿಕ್ಕುಟ್ಟಿತ ಚಲನೆಯಲ್ಲಿರುವಂತೆಯೂ ಚಿತ್ರಿಸಲಾಗಿದೆ. ಹಾಗಾದಾಗ ಅಗ್ರತಲ ಪಾದದಲ್ಲಿ ನಿಂತು ಸಮಪಾದವನ್ನು **ಉದ್ಘಟ್ಟಿತ್ತವಾಗಿ** ಮಾಡಬೇಕಾಗಿ ಬರುತ್ತದೆ. ಈ ರೀತಿ ಮಾಡಿದಾಗ ಶಿಲ್ಪದಲ್ಲಿ ಕಂಡುಬರುವ ಸ್ಪಷ್ಟಭಂಗಿಯು ಸಿಗುತ್ತದೆ.

ಇದರಿಂದ ತಿಳಿದು ಬರುವ ವಿಷಯವೇನೆಂದರೆ ಈ ಕಾಲಕ್ಕೆ ಅತಿಕ್ಲಿಷ್ಟಕರ ಚಲನೆಗಳನ್ನು ಬಹಳ ಸುಲಲಿತವಾಗಿ ಸುಂದರವಾಗಿ ಕಾಣುವಂತೆ ಮಾಡುವ ಕಲಾವಿದರು ಇದ್ದಿರಬಹುದು. ಈ ರೀತಿ ಮಾಡುತ್ತಿದ್ದರು ಎಂದು ಊಹಿಸಲು ಬಲವಾದ ಕಾರಣ ಮುಂದೆ ಒಂದು ಶತಮಾನಕ್ಕೆ ಅಂದರೆ ಕ್ರಿ.ಶ. ೮ನೇ ಶತಮಾನದಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಸಿಗುವ 'ಅಚಲನ್' ಎಂಬ ಮಾಹಾನಾಟ್ಯಾಚಾರ್ಯನ ಶಾಸನ ಇದರಲ್ಲಿ ಎರಡನೇ ಸಾಲು **'ಅಗ್ರತಲಸಂಚರಮೆಂಬುದಿದೆಂದು ಪೇಳ್ದೊಡಿನ್ನಾತನೇ ನರ್ತಕಮ್'** ಎಂಬ ಸಾಲು ಈ ಊಹೆಯನ್ನು ಪುಷ್ಟೀಕರಿಸುತ್ತವೆ.

ಈ ರೀತಿಯಾಗಿ ಕರಣವನ್ನು ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದಾಗ, ಈ ರೀತಿಯಾಗಿ ಮಾಡಲು ಪ್ರಯತ್ನಿಸಿದ ಕಲಾವಿದ ಮಾಡಬಹುದು, ಆದರೆ ಬಹಳ ಕಷ್ಟ. ಇಡೀ ದೇಹದ ಚಲನೆ ಹಿಡಿತದಲ್ಲಿದ್ದಾಗ ನಿರಂತರ ಅಭ್ಯಾಸದಿಂದ ಒಬ್ಬ ಒಳ್ಳೆಯ ನರ್ತಕ ಮಾತ್ರ ಮಾಡಲು ಸಾಧ್ಯ ಎಂದು ತಿಳಿಸಿದರು.

ಇದರ ಬಗ್ಗೆ ಶತಾವಧಾನಿ ಡಾ|| ಆರ್. ಗಣೇಶ್ ಅವರನ್ನು ಪ್ರಶ್ನಿಸಿದಾಗ, ಪಾಠಾಂತರದಲ್ಲಿ ಎಡಗಾಲು ಅಥವಾ ಬಲಗಾಲು ಎಂದು ನಿರ್ದಿಷ್ಟವಾಗಿ ಹೇಳಲಿಲ್ಲವಾದ್ದರಿಂದ ಮತ್ತು ಶಿಲ್ಪದಲ್ಲಿ ಮೂಡಿಬಂದಿರುವ ಭಂಗಿಯಿಂದ ಹಾಗೂ ೮ನೇ ಶತಮಾನದ ಶಾಸನದ ಆಧಾರದಲ್ಲಿ ಈ ರೀತಿ ಇದ್ದಿರಬಹುದು ಎಂದು ಊಹಿಸಲು ಸಾಧ್ಯವಿದೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಮತ್ತಲ್ಲಿ . ೨೭

ಶ್ಲೋಕ:

ವಾಮ ದಕ್ಷಿಣಪಾದಾಭ್ಯಾಂ ಘೂರ್ಣಮಾನೋಪ ಸರ್ಪಣ್ಯೈಃ

ಉದ್ವೇಷ್ಟಿತಾಪವಿದ್ಧ್ವೈ ಸ್ಚ ಹತ್ತೈರ್ಮತ್ತಲ್ಲ್ಯು ದಾಹೃತಂ||

(ನಾಟ್ಯಶಾಸ್ತ್ರ IV ೮೭)

ಅನುವಾದ : ಎಡಗಾಲು ಅಗ್ರತಲಪಾದದಲ್ಲಿ ಬಲಗಾಲಿನ ಮುಂದೆ ಎಡಗಾಲು


ಎಡಗಾಲಿನ ಮುಂದೆ ಬಲಗಾಲು ಚಕ್ರಾಕಾರವಾಗಿ ಸರ್ಪದಂತೆ ತಿರುಗಿಸುತ್ತಾ ಮತ್ತಲ್ಲಿ ಚಾರಿ ಮಾಡುತ್ತಾ ಹಸ್ತಗಳಿಂದ ಉದ್ವೇಷ್ಟಿತ ಮತ್ತು ಅಪವಿದ್ಧಗಳನ್ನು ಮಾಡಿದಾಗ ಮತ್ತಲ್ಲಿ ಕರಣವಾಗುತ್ತದೆ. (Dr. Padma Subramamyau (bid-vol 2. page 97)

ಶಿಲ್ಪದಲ್ಲಿನ ಭಂಗಿ (ಚಿತ್ರ ೭)

ಪಾದಗಳ ಚಲನೆ : ಬಲಗಾಲು ತ್ರಸ್ಯಪಾದಲ್ಲಿ ಎಡಗಾಲು ಅಗ್ರತಲ ಸಂಚರದಲ್ಲಿ ಬಲಕಉದ್ವಾಹಿತವಾಗಿ ಶಿಲ್ಪದಲ್ಲಿ ನಿರೂಪಿತವಾಗಿದೆ.

ಹಸ್ತಗಳ ಚಲನೆ : ಎಡಗೈ **ಕೇಶಬಂಧ ಹಸ್ತ**ದ ಚಲನೆಯಲ್ಲಿಯೂ ಬಲಗೈ **ಚತುರಶ್ರ** ನೃತ್ತಹಸ್ತದಲ್ಲಿಯೂ ಇದೆ. ಕರಣದ ಮೊತ್ತ ಮೊದಲ ಹಾಗೂ ಕರಣದ ಮಧ್ಯದ ಚಲನೆಯಲ್ಲಿನ

(೭)



ಭಂಗಿಯನ್ನು ಶಿಲ್ಪಿಯು ಚಿತ್ರಸಿದ್ದಾನೆ.

ಅರ್ಧ ಮತ್ತಲ್ಲಿ- ೨೮

ಶ್ಲೋಕ :

ಸ್ಖಲಿತಾಪರಸೃತ್ ಪಾದ್ ವಾಮ ಹಸ್ತಶ್ಚ ರೇಚಿತಃ
ಸವ್ಯಹಸ್ತಃ ಕಟಿಸ್ಥಸ್ಸ್ಯಾತ್ ಅರ್ಧಮತ್ತಲ್ಲಿ ತತ್‌ಸ್ಮೃತಮ್

(ನಾಟ್ಯಶಾಸ್ತ್ರ IV ೮೮)

ಅನುವಾದ : ಪಾದಗಳನ್ನು ಸ್ವಸ್ತಿಕದಿಂದ ಬೇರ್ಪಡಿಸುತ್ತಾ ಎಡಗೈಯನ್ನು ರೇಚಿತಕದಲ್ಲಿಯೂ ಬಲಗೈಯನ್ನು ಕಟಿಭಾಗ ದಲ್ಲಿಯೂ (ಊರುಭಾಗದಲ್ಲಿ)ಇರಿಸಿದಾಗ ಅರ್ಧಮತ್ತಲ್ಲೀ ಕರಣವಾಗುತ್ತದೆ.

(Dr.Padma Subramayam
1 bid vol 2 page - 93)

ಮಾಡುವ ವಿಧಾನ :


ಪಾದಗಳ ಚಲನೆ : ಸ್ವಸ್ತಿಕ ಪಾದದಲ್ಲಿ ಚಲನೆಯನ್ನು ಆರಂಭಿಸಿ ಮುಂದೆ **ಸೂಚೀಪಾದಕ್ಕೆ** ಒಂದು ಅದೇ ಪಾದವನ್ನು ಪಕಕ್ಕೆ ತಂದು **ಉದ್ವಾಹಿತ** ಕಟಿಯಲ್ಲಿ **ಮುಂಡಲಸ್ಥಾನಕದಲ್ಲಿ** ಕೊನೆಗೊಳಿಸಬೇಕು.

ಹಸ್ತಗಳ ಚಲನೆ : ಸಮಾಂತರ ಹಸ್ತವನ್ನು **ಅರ್ಧರೇಚಿತ** ದಲ್ಲಿಯೂ ಒಂದು ಹಸ್ತವನ್ನು ಕಟಿಯಲ್ಲಿಯೂ ಇರಿಸುವುದು

ಶಿಲ್ಪದಲ್ಲಿ ಕಂಡುಬರುವ ಭಂಗಿ (ಚಿತ್ರ ೮)

ಕೊನೆಯಹಂತದ ಪಾದಭೇದವನ್ನು, ಹಸ್ತಚಲನೆಯನ್ನು ಕಾಣಬಹುದು ಹಾಗೂ ಕೊನೆಯ ಭಂಗಿಯನ್ನು ತೆಗೆದುಕೊಂಡಾಗ ಬಲಪಾದ ಸಮಪಾದಲ್ಲಿಯೂ ಎಡಪಾದ **ಅಗ್ರತಲದಲ್ಲಿ** ನಿಲ್ಲಿಸಿರುವುದನ್ನು ಕಾಣಬಹುದು. ಡಾ|| ಪದ್ಮಾಸುಬ್ರಮಣ್ಯಂ ಅವರು ಈ ಕರಣವನ್ನು ಎರಡೂ ಕಡೆಗೂ ಮಾಡಬಹುದಾಗಿ ವಿವರಣೆ ನೀಡುತ್ತಾರೆ[೨೭]

(೮)



ರೇಚಿತ ನಿಕಟ್ಟಿತಮ್ -೨೯

ರೇಚಿತೋ ದಕ್ಷಿಣೋ ಹಸ್ತಃ ಪಾದಃ ಸವ್ಯೋ ನಿಕುಟ್ಟಿತಃ
ದೋಲಾಚೈವ ಭವೇದ್ವಾಮಸ್ತದ್ರೇಚಿತ ನಿಕುಟ್ಟಿತಮ್||

(ನಾಟ್ಯಶಾಸ್ತ್ರ IV 89)

ಎಡಗಾಲು ನಿಕುಟ್ಟಿತವನ್ನು ಮಾಡುವಾಗ ಬಲಗೈ ರೇಚಿತವನ್ನು ಮತ್ತು ಎಡಗೈ ಡೋಲಾಹಸ್ತವನ್ನು ಮಾಡಿದಾಗ ಅದು ರೇಚಿತ ನಿಕುಟ್ಟಿತವಾಗುತ್ತದೆ.

(Dr.Padma Subramanyam
I bid vol 2 page 101)

ಮಾಡುವ ವಿಧಾನ

ಒಂದಾದ ಮೇಲೆ ಒಂದರಂತೆ ಅಗ್ರತಲವನ್ನು ಪಾದಭೇದ ಮಾಡುತ್ತಾ ರೇಚಿತ ಕಟಿ ಮಾಡಿದಾಗ ಹಾಗೂ ಹಸ್ತಗಳ ಭೇದ ಬಲಗೈ **ರೇಚಿತವಾಗಿಯೂ** ಎಡಗೈ **ಡೋಲಾ** ಹಸ್ತವನ್ನು ಮಾಡಿದಾಗ ರೇಚಿತ ನಿಕುಟ್ಟತಮ್ ಕರಣವಾಗುತ್ತದೆ.

ಶಿಲ್ಪದಲ್ಲಿ ಕಂಡುಬರುವ ಭಂಗಿ

ಸ್ಪಷ್ಟವಾಗಿ ರೇಚಿತನಿಕುಟ್ಟಿತದ ಕೊನೆಯ ಭಂಗಿಯನ್ನು ಕಾಣಬಹುದು.

(೯)



ವಲಿತಂ -೩೧

ಅಪವಿದ್ಧೋಭವೇದ್ಧಸ್ತಃ ಸೂಚೀಪಾದಸ್ತಥೈವಚ
ತಥಾ ತ್ರಿಕಂ ವಿವೃತ್ತಂ ಚ ವಲಿತಂ ನಾಮ ತದ್ಭವೇತ್॥
(ನಾಟ್ಯಶಾಸ್ತ್ರ - IV ೯೧)

ಅಪವಿದ್ಧಹಸ್ತಗಳನ್ನು ಮಾಡುತ್ತಾ ಅದರೊಂದಿಗೆ ಸೂಚೀಪಾದವನ್ನು ಮಾಡುತ್ತಾ ತ್ರಿಕ ಭಾಗವನ್ನು ತಿರುಗಿಸಿದಾಗ ಅದು ವಲಿತ ಕರಣವಾಗುತ್ತದೆ.

ಮಾಡುವ ವಿಧಾನ


ಪಾದಭೇದ : ಸೂಚೀ ಚಾರಿಯನ್ನು ಮಾಡುತ್ತಾ ಪಕ್ಕದಲ್ಲಿ ಅದೇ ಪಾದದ ಹತ್ತಿರ ಇನ್ನೊಂದು ಪಾದವನ್ನು ಎಳೆದುಕೊಂಡು ಒಂದು ತಿರುವು ತಿರುಗಿ ಮಂಡಲ ಸ್ಥಾನಕದಲ್ಲಿ ಅಗ್ರತಲದಲ್ಲಿ ಕೊನೆಗೊಳಿಸಬೇಕು.

ಹಸ್ತಭೇದ : ಸಮಾನಾಂತರವಾದ ಕೈಯನ್ನು ವ್ಯಾವರ್ತಿತ ಚಲನೆಯಿಂದ ಸೂಚಾಸ್ಯ ಅಥವಾ ಪತಾಕ ಹಸ್ತದಲ್ಲಿ ಕೊನೆಗೊಳಿಸಬಹುದು.

ಶಿಲ್ಪದಲ್ಲಿನ ಭಂಗಿ (ಚಿತ್ರ ೧೦)

ಈ ಒಂದು ಕರಣದಲ್ಲಿ ಶಿಲ್ಪಿಯು ಒಂದೇ ಭಾಗದಲ್ಲಿ ಎರಡು ಹಸ್ತಗಳನ್ನು ಚಿತ್ರಿಸಿರುವುದನ್ನು ಕಾಣಬಹುದು ಡಾ॥ ಪದ್ಮಾಸುಬ್ರಮಣ್ಯಂ ಅವರು ಸೂಚಾಸ್ಯ ಅಥವಾ ಪತಾಕಹಸ್ತದಲ್ಲಿ

(೧೦)



ಕೊನೆಗೊಳಿಸಬಹುದು ಎಂದು ಸೂಚಿಸುತ್ತಾರೆ[೨೮]. ಬೇರೆ ಕರಣಗಳಿಗೆ ಹೋಲಿಸಿದರೆ ವಲಿತ ಕರಣದಲ್ಲಿ ಹಸ್ತಗಳು ದೇಹದಿಂದ ಪಕ್ಕಕ್ಕೆ ಹೊರ ಭಾಗವಾಗಿ ಬರುತ್ತವೆ. ಇಲ್ಲಿ ಶಿಲ್ಪಿಯು ಸ್ಥಳದ ಅವಕಾಶವನ್ನು ಉಪಯೋಗಿಸಿಕೊಂಡು (Space managed) ಸುಂದರವಾಗಿ ವಲಿತಕರಣದ ಕೊನೆಯ ಭಂಗಿಯನ್ನು ಚಿತ್ರಿಸಿದ್ದಾನೆ.

ಭುಜಂಗ ತ್ರಸ್ತ ರೇಚಿತ - ೩೫.

ಭುಜಂಗ ತ್ರಾಸಿತಂ ಕೃತ್ವಾಯತ್ರೋಭಾವಪಿರೇಚಿತ್
ವಾಮ ಪಾರ್ಶ್ವಸ್ಥಿತ್ ಹಸ್ತ್ ಭುಜಂಗ ತ್ರಸ್ತರೇಚಿತಮ್
(ನಾಟ್ಯಶಾಸ್ತ್ರ IV 95)

ಭುಜಂಗ ತ್ರಾಸಿತವನ್ನು ರೇಚಿತ ಹಸ್ತದೊಡನೆ ಮಾಡಿ ಅನಂತರ ಎಡಭಾಗದಲ್ಲಿ ಭುಜಂಗತ್ರಸ್ತದರೇಚಿತದಲ್ಲಿ ಕೊನೆಗೊಳ್ಳುವುದು ಭುಜಂಗತ್ರಸ್ತರೇಚಿತ ಕರಣ.

(Dr. Padma Subramanyam., Ibid -II, page 111)

ಮಾಡುವ ವಿಧಾನ

ಪಾದಚಲನೆ : ಭುಜಂಗತ್ರಾಸಿತ ಚಾರಿಯನ್ನು ಮಾಡುವುದು

ಹಸ್ತಚಲನೆ : ಕೈಗಳೂ ಸಹ ಸಮಾಂತರವಾಗಿ ಆರಂಭವಾಗಿ ಕಾಲುಗಳು **ಅಪಕ್ರಾಂತ** ವಾದಹಾಗೆ ಅದರ ಸಮನಾದ ಕೈಗಳು ಮುಂದಕ್ಕೆ ಒಂದು (cross ಆಗಿ) ಅಪಕ್ರಾಂತವು ಮುನಿಯುತ್ತಿದ್ದಂತೆ ಮೇಲಿನ ರೇಚಿತ ಹಸ್ತವು ಲತಾ ಹಸ್ತವಾಗುತ್ತದೆ.

ಶಿಲ್ಪದಲ್ಲಿನ ಭಂಗಿ (ಚಿತ ೧೧) :

ಈ ಶಿಲ್ಪದಲ್ಲಿ ಈ ಕರಣದ ಅಂತಿಮ ಹಂತದ ಮೊದಲು ಭಾಗದ ಭಂಗಿಯನ್ನು ಕಾಣಬಹುದು. ಬಲಗೈ ರೇಚಿತದಲ್ಲಿಯೂ

(೧೧)



ಎಡಗೈ ಡೋಲಾಹಸ್ತದಲ್ಲಿಯೂ ಇದೆ. ಪಾದಸ್ಥಾನಕವು ಅಂತಿಮ ಹಂತವನ್ನು ತಲುಪಿದೆ. (ಚಿತ್ರದಲ್ಲಿ ಎರಡೂ ಭಂಗಿಗಳನ್ನು ನೀಡಲಾಗಿದೆ)

ಆಕ್ಷಿಪ್ತ : ೫೫

ಆಕ್ಷಿಪ್ತಂ ಹಸ್ತಪಾದಂ ಚ ಕ್ರೀಯತೇ ಯತ್ರವೇಗತಃ
ಆಕ್ಷಿಪಂ ನಾಮಕರಣಂ ವಿಜ್ಞೇಯಂ ತದ್ದ್ವಿಜೋತ್ತಮಾಃ॥
(ನಾಟ್ಯಶಾಸ್ತ್ರ IV 115)

ಬ್ರಾಹ್ಮಣೋತ್ತಮರೇ, ಎಲ್ಲಿ ಆಕ್ಷಿಪ್ತ ಚಾರಿಯನ್ನು ಹಸ್ತ ಮತ್ತು ಪಾದಚಲನೆಗಳಲ್ಲಿ ವೇಗವಾಗಿ ಮಾಡಲಾಗುವುದೋ ಅದನ್ನು ಆಕ್ಷಿಪ್ತಕರಣ ಎಂದು ತಿಳಿಯಬಹುದು.

ಮಾಡುವವಿಧಾನ :

ಪಾದಚಲನೆ : ಆಕ್ಷಿಪ್ತ ಚಾರಿಯನ್ನು ಮಾಡಿ ಅದರಲ್ಲೇ ತಿರುಗಿ ಒಂದು ಪಾದ, ಸಮ ಹಾಗೂ ಒಂದುಪಾದವನ್ನು **ಅಗ್ರತಲ**ದಲ್ಲಿರುವಂತೆ ಕೆಳಗೆ ಕುಳಿತು ಸಮಪಾದವನ್ನು ಸ್ವಸ್ತಿಕವಾಗಿ ತಿರುಗಿಸಿ ನಿಧಾನವಾಗಿ ಮೇಲೆದ್ದು ಮೊದಲಿನ ಸ್ಥಾನಕ್ಕೆ ಬಂದು ಅಂತ್ಯಗೊಳಿಸಬೇಕು.

ಹಸ್ತಚಲನೆ : ಬಲಗೈ ರೇಚಿತ**ವಾಗಿಯೂ** ಎಡಗೈ **ಲತಾಹಸ್ತ**ದಲ್ಲಿಯೂ ತೆಗೆದುಕೊಂಡು ನಂತರ **ಸ್ವಸ್ತಿಕ**

(೧೨)



ಲತಾಹಸ್ತವನ್ನುಮಾಡಿ ಆನಂತರ ಒಂದನ್ನು **ಚತುರಶ್ರ**ವಾಗಿಯೂ ಮತ್ತೊಂದನ್ನು **ಪತಾಕಹಸ್ತ**ವನ್ನಾಗಿ ಮಾಡಿಕೊಂಡು ತಿರುವು ತಿರುಗಿ ಬಂದು ಪತಾಕಹಸ್ತವನ್ನು **ಚತುರಶ್ರ**ವಾಗಿ ಚತುರಶ್ರವನ್ನು ಕಟಿ (ಊರುಭಾಗ) ಭಾಗದಲ್ಲಿ ನಿಶ್ಚಲವಾಗಿಸಬೇಕು.

ಶಿಲ್ಪದಲ್ಲಿ ಕಾಣುವ ಭಂಗಿ (ಚಿತ್ರ ೧೨)

ಬಹಳ ಕ್ಲಿಷ್ಟಕರವಾದ ಈ ಕರಣದ ಕೊನೆಯ ಭಂಗಿಯನ್ನು ಕಾಣಬಹುದು.

ಸರ್ಪಿತಂ. ೮೧

ಅಂಚಿತಾಪಸೃತೌ ಪಾಪ್ ಶಿರಶ್ಚ ಪರಿವಾಹಿತಮ್

ರೇಚಿತೌಚ ತಥಾ ಹಸ್ತೌ ತತ್ ಸರ್ಪಿತಮುದಾಪಹೃತಮ್॥

(ನಾಟ್ಯಶಾಸ್ತ್ರ-IV 141)

ಪಾದಗಳು ಅಂಚಿತ್‌ದಲ್ಲಿಯೂ ಶಿರಸ್ಸು ಪರಿವಾಹಿತ ದಲ್ಲಿಯೂ ಕೈಗಳು ರೇಚಿತದಲ್ಲಿಯೂ ಚಲಿಸಿದಾಗ ಸರ್ಪಿತ ಕರಣ ಎಂದು ಕರೆಯಲಾಗುತ್ತದೆ.

ಮಾಡುವ ವಿಧಾನ


ಪಾದಚಲನೆ : ಮಂಡಲಸ್ಥಾನಕದಿಂದ ನೆಲದಿಂದ ಕಾಲನ್ನು ಪ್ರತ್ಯೇಕಿಸದೆ **ಅಂಚಿತಾಪಾದ**ದ ಪಾರ್ಶ್ವದಿಂದ ಮುಂದಕ್ಕೆ ಹೋಗಬೇಕು ಸಮಾಂತರವಾಗಿ ಯಾವ ಕಡೆಗೆ ಚಲನೆ ಇದೆಯೋ ಆ ಕಟಿಭಾಗವು ಉದ್ವಾಹಿತ ಸ್ಥಾನಕ್ಕೆ ಬರುತ್ತದೆ. ಇನ್ನೊಂದು ಕಡೆಗೆ ಚಲನೆಯನ್ನು ಆರಂಭಿಸುವ ಮುನ್ನ ಅಗ್ರತಲಪಾದದಲ್ಲಿ ಕೊನೆ ಗೊಳಿಸಿ ಅನಂತರ ಮತ್ತೆ ಚಲನೆಯನ್ನು ಮುಂದುವರಿಸುವುದು.

ಹಸ್ತಚಲನೆ : ಆವಿದ್ಧ ವಕ್ತ್ರ ನೃತ್ಯಹಸ್ತವನ್ನು ಜೋರಾಗಿ ಮಾಡುತ್ತಾ ರೇಚಿತ ಹಸ್ತವನ್ನಾಗಿಸಬೇಕು.

ಶಿಲ್ಪದಲ್ಲಿ ಕಾಣುವ ಭಂಗಿ (ಚಿತ್ರ ೧೩, ೧೪):

ಚಲನೆಯಲ್ಲಿರುವಂತೆ ಬಲಗೈ **ಪತಾಕ**ಹಸ್ತವನ್ನು ಎಡಗೈ **ಆವಿದ್ಧವಕ್ತ್ರ**ವನ್ನು ಗುರುತಿಸಬಹುದು. ಅತ್ಯಂತ ಸುಂದರವಾಗಿ ಸ್ಪಷ್ಟವಾಗಿ ರೇಚಿತದಿಂದ ಮೇಲಕ್ಕೆತ್ತಿ ಸರ್ಪವನ್ನು ಹಿಡಿದೆತ್ತಿದಂತೆ ಬಹಳ ಸುಂದರವಾದ ಸರ್ಪಿತಕರಣವನ್ನು ಶಿಲ್ಪಿಯು ಚಿತ್ರಿಸಿರುವುದನ್ನು ಕಾಣಬಹುದು.

(೧೩)



(೧೪)



ಬಹಳ ಸುಂದರವಾಗಿ ಶಿಲ್ಪಿಯು ಕರಣಗಳಲ್ಲಿನ ಚಲನೆಗಳನ್ನು ಸೆರೆಹಿಡಿದಿದ್ದಾನೆ. ಈ ಕರಣಗಳನ್ನು ಗುರುತಿಸಿದ ನಂತರ ಈ ಕರಣಗಳನ್ನೇ ಏಕೆ ಶಿಲ್ಪಿಯು ಆರಿಸಿಕೊಂಡ ಎಂಬ ಪ್ರಶ್ನೆ ಕಾಡತೊಡಗಿತು ಮತ್ತು ಒಂಭತ್ತು ಸಂಖ್ಯೆಯಲ್ಲಿ ಮಾತ್ರವೇ ಎಂಬ ಪ್ರಶ್ನೆ ಬಂದಿತು. ಒಂಭತ್ತು ಭಾರತೀಯ ಸಂಸ್ಕೃತಿಯಲ್ಲಿ ಶುಭ ಸೂಚಕ- ಜಗದ ಅನೇಕ ಸಿದ್ಧಾಂತಗಳು ಒಂಬತ್ತು ಅಂಕಿಯಲ್ಲಿ ಅಡಗಿದೆ ಎಂದು ಶತಾವಧಾನಿ ಡಾ॥ ಗಣೇಶ್ ತಿಳಿಸಿದರು.

ಒಂಬತ್ತು ಕರಣಗಳನ್ನು ಗಮನಿಸಿದಾಗ ಅವುಗಳಲ್ಲಿ ಸುಕುಮಾರ ಮತ್ತು ಉದ್ಧತ ಚಲನೆಗಳಿರುವುದು ಕಂಡುಬಂದಿತು. (ತಾಂಡವ ಮತ್ತು ಲಾಸ್ಯ) ಅಪವಿದ್ಧ ಕರಣದಲ್ಲಿ ಉದ್ಧತ ಮತ್ತು ಸುಕುಮಾರ ಎರಡನ್ನು ಕಾಣಬಹುದಾಗಿದೆ. ಬಲದಿಂದ ಹೋಗುವಾಗ ಉದ್ಧತ ತಿರುಗಿ ಮುಂದೆ ಬಂದಾಗ ಸುಕುಮಾರ ಕಂಡುಬಂದಿತು. ಇದು ಅರ್ಧನಾರೀಶ್ವರ ತತ್ವವನ್ನು ಹೊರಹಾಕಿತು.

ನಿಕುಟ್ಟಿಕಂ -ಬಲಬಾಗ ಉದ್ಧತವಾಗಿಯೂ ಎಡಬಾಗ ಸುಕುಮಾರವಾಗಿಯೂ ಕಂಡು ಬಂದಿತು. ಅರ್ಧನಾರೀಶ್ವರ ತತ್ವವು ಇಲ್ಲಿಯೂ ಕಂಡುಬಂದಿತು.

ಮತ್ತಲ್ಲಿ - ಸುಕುಮಾರಕ್ಕೆ ಬಂದಿತು.

ಅರ್ಧಮತ್ತಲ್ಲಿ - ಉದ್ಧತಕ್ಕೆ ಬಂದಿತು.

ರೇಚಿತನಿಕ್ಕುಟ್ಟಿತ -ಸುಕುಮಾರಕ್ಕೆ ಬಂದಿತು.

ಮಲಿತಂ - ಸುಕುಮಾರ,ಉದ್ಧತ ಎರಡನ್ನು ಹೊಂದಿರುವುದು ಹಾಗೆಯೇ ಇದಕ್ಕೆ ಹೊಂದಿಕೆಯಾಗುವಂತ ಸೂಚಾಸ್ಯ/ಪತಾಕ ನೃತ್ತಹಸ್ತಗಳು ಬಳಕೆಯಲ್ಲಿರುವುದು ಗಮನಕ್ಕೆ ಬಂದಿತು.

ಭುಜಂಗ ತ್ರಸ್ತರೇಚಿತ-ಬಹಳ ಸ್ಪಷ್ಟವಾಗಿ ಉದ್ಧತಕ್ಕೆ ಬಂದಿತು.

ಆಕ್ಷಿಪ್ತ : ಮೇಲಿನ ಕರಣಕ್ಕೆ ಸರಿಸಾಟಿಯಾಗುವಂತೆ ಪಾರ್ವತಿಯ ಉದ್ಧತ ಚಲನೆ ಇದರಲ್ಲಿ ಕಂಡುಬಂದಿತು.

ಸರ್ಪಿತ : ಇದರಲ್ಲಿ ಎರಡೂ ಭಾಗಗಳು ಉದ್ಧತ ಸುಕುಮಾರ ಕಂಡುಬಂದಿತು.

ಹಾಗೆಯೇ ಪಾದಗಳನ್ನು ಗಮನಿಸಿದಾಗ ಬಲಪಾದವು ಪಾರ್ಶ್ವಪಾದವಾಗಿ ಎಡಪಾದವು ಸೂಚೀ ಪಾದ ಉದ್ಧತ ಮತ್ತು ಸುಕುಮಾರದ ಸಾಂಕೇತಿಕವನ್ನು ಸ್ಪಷ್ಟಪಡಿಸಿದವು.

ಈ ಹಿನ್ನೆಲೆಯಲ್ಲಿ ಇಡಿಯಾಗಿ ಶಿಲ್ಪವನ್ನು ಗಮನಿಸಿದಾಗ ಮಹಾನಟನ ಜಟೆಯಿಂದ ಕತ್ತಿನವರೆಗೆ ಅರ್ಧನಾರೀಶ್ವರದ ವಿವರಣೆ ಸ್ಪಷ್ಟವಾಗಿ ಕಂಡು ಬಂದಿತು.

೧. ಜಟೆಯಲ್ಲಿ ಬಲಭಾಗಕ್ಕೂ ಎಡಭಾಗಕ್ಕೂ ವ್ಯತ್ಯಾಸ
೨. ಮುಖದಲ್ಲಿ ಕಣ್ಣು ಮತ್ತು ಭ್ರೂರೇಖೆಗಳ ಚಿತ್ರಣದಲ್ಲಿ ವ್ಯತ್ಯಾಸ
೩. ಕರಣಪತ್ರ, ಕರಣಕುಂಡಲಗಳಲ್ಲಿ ವ್ಯತ್ಯಾಸ
೪. ಎಡಗಡೆಯ ಎಲ್ಲ ತೋಳುಗಳಿಗೂ ತೋಳುಬಂದಿ ಇರುವುದು.
೫. ಬಲಗಾಲಿನಲ್ಲಿ ಉತ್ತರೀಯವು ಮಧ್ಯರೇಖೆಯಾಗಿ ಬಂದು ಬಲಪಾದಕ್ಕೆ ಸುತ್ತಿ ಬಂದಿರುವುದು, ಇದು ಹಾವಿನ ಹೆಡೆಯಾಗಿಯೂ ಕಂಡು ಬಂದಿತು.
೬. ಎಡಗಾಲು ಸುಕುಮಾರವಾಗಿ ಬರುತ್ತದೆ.

ಕೇವಲ ಈ ಶಿಲ್ಪದಲ್ಲಿ ಕರಣಗಳು ಎಷ್ಟು ಇರಬಹುದು ಎದು ತಿಳಿಯಲು ಪ್ರಯತ್ನಿಸಲು ಹೊರಟಾಗ ಮಹಾನಟನು ತನ್ನಲ್ಲಿರುವ ಅನೇಕ ನಿಗೂಢ ವಿಚಾರಗಳನ್ನು ಹೊರ ಹೊಮ್ಮಿಸುತ್ತಿದ್ದಾನೆ. 'ಅರ್ಧನಾರೀಶ್ವರ ತತ್ವವ' ಇದೆಯೆ ಎಂಬುದರ ಬಗ್ಗೆ ಸಂಶೋಧನೆಯನ್ನು ನಡೆಸಬೇಕಾಗಿ ಬಂದಿದೆ.

* (ರೇಖಾಚಿತ್ರಗಳಿಗೆ ನೆರವನ್ನು ಕಲಾವಿದ ಶ್ರೀಸುಭಾಷ್ ಕಮ್ಮಾರ್, (ಬೆಂಗಳೂರು) ಕರಣಗಳ ಅಧ್ಯಯನಕ್ಕೆ ಸಹಾಯ ಮಾಡಿದ ಶ್ರೀಮತಿ ಸುಂದರೀ ಸಂತಾನಂ ಶತಾವಧಾನಿ ಡಾ|| ರಾ. ಗಣೇಶ್ ಹಾಗೂ ಈ ಸಂಶೋಧನಾ ಪ್ರಬಂಧಕ್ಕೆ ಸಹಾಯ ಮಾಡಿದ ಎಲ್ಲ ಹಿರಿಯ ವಿದ್ವಾಂಸರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತದೆ.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

1. *Nataraja in Art thought & Literature .*, National museum Pub - Delhi 1974
2. *Encyclopedia of Indian Iconography* - Vol II Sri satyan Pub - Delhi - 2003
3. *Elements of Hindhu Iconography* Vol I Part II., Motilal Banarsi das Pub -Delhi - 1997
4. *Dance & Music as Represented in the Karnataka Architecture.*, Agamakala Pub -NewDelhi-1990
5. *Principles of Composition in Hindu Sculpture* , Motilal Banarsidas Pub - NewDelhi -1990
೬. **ಬಾದಾಮಿ ಸಾಂಸ್ಕೃತಿಕ ಅಧ್ಯಯನ**., ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೦
7. *The Cave Temples of India.*, Mershiram Manoharlal Pub First Pub -1880 Revised Pub - 2000
8. *Nataraja The Dancing God* cosma Pub - NewDelhi -1985
೯. ಪೂರ್ವೋಕ್ತ ಪುಟ ೧೯೧.
೧೦. ಪೂರ್ವೋ ಪುಟ ೨೬೮
೧೧. ಪೂರ್ವೋಕ್ತ ಪುಟ ೮೧.
12. *Studies in Karnataka History & Culture.* Ed.by Dr.K.Verathappa.
೧೩. ಪೂರ್ವೋದಾಹುತ, ಪುಟ ೩.
೧೪. ಪೂರ್ವೋದಾಹುತ, ಪುಟ ೩೯೫.
೧೫. *The Cave Temples of India...* ಪೂರ್ವೋದಾಹುತ ...ಪುಟ ೪೦೩.
೧೬. ನೃತ್ಯದಲ್ಲಿ ಬರುವಂತ ಬಹುಕ್ಲಿಷ್ಟಾಕರವಾದ ವಿವಿಧ ಭಂಗಿಗಳ ಗುಚ್ಛ, ವಿವರಗಳಿಗೆ ನೃತ್ಯ ಸಂಬಂಧಿ ಗ್ರಂಥಗಳನ್ನು ಗಮನಿಸಬಹುದು. ಹಾಗೂ ನೃತ್ತದ ಪಾರಿಭಾಷಿಕ ಶಬ್ದಗಳಿಗೆ ನಾಟ್ಯಶಾಸ್ತ್ರ, ಡಾ. ಚೂಡಾಮಣಿ ನಂದಗೋಪಾಲ್ ಅವರ ಸಂಶೋಧನಾ ಗ್ರಂಥ, ಡಾ. ಪದ್ಮಾ ಸುಬ್ರಮಣ್ಯಂ ಅವರ ಸಂಶೋಧನ ಗ್ರಂಥಗಳನ್ನು ಪರಿಶೀಲಿಸಬಹುದು.

೧೭. ಡಾ|| ಚೂಡಾಮಣಿ ನಂದಗೋಪಾಲ್, *Dance & Music in Karnataka Temple Architecture* page 153

೧೮. ಪೂರ್ವೋದಾಹುತ -ಪುಟ ೪೧೩.

೧೯. ಡಾ|| ಅ. ಸುಂದರ , ಡಾ|| ಚೂದಾಮಣಿ ನಂದಗೋಪಾಲ್, ಶತಾವಧಾನಿ ಡಾ|| ಆರ್. ಗಣೇಶ್.

೨೦. ಅಲೈಸ್ ಬೋರ್ನರ್, ಪೂರ್ವೋದಾಹುತ , ಪುಟ, ೧೮೧.

೨೧. ಪೂರ್ವೋದಾಹುತ, ಪುಟ-೮೧.

೨೩. Benoy k.Bhel. *THE AJANTA CAVES,* Aneieut Paintings of Boddhist India. page 164

೨೪. ವಿವರಗಳಿಗೆ ಗಮನಿಸಿ. ಶಿವರಾಮಮೂರ್ತಿ - ಪೂರ್ವೋದಾಹೃತ ಪುಟಗಳು ೧೭೧, ೧೯೫.

೨೫. ಪ್ರೊ. ಎಸ್. ಕೆ.ರಾಮಚಂದ್ರರನ್. ಪೂರ್ವೋದಾಹುತ - ಪುಟ -೧೫೯ vol -1

೨೬. ನಾಟ್ಯಶಾಸ್ತ್ರ

೨೭. ಡಾ|| ಪದ್ಮಾಸುಬ್ರಮಣ್ಯಂ. ಪೂರ್ವೋದಾಹೃತ : ಪುಟ -vol 299.

೨೮. ಪೂರ್ವೋದಾಹೃತ -ಪುಟ - ೧೦೫

ಶಾಸ್ತ್ರ ಗ್ರಂಥಸೂಚಿ ಮತ್ತು ಸಹಾಯ

1. Natya Sastra - by Unnikrishnan (Sanskrit)
2. Nagpib. NewDelhi-1996.
   by Manmohan ghosh-Mauisha pub, Calcutta - 1995,
3. Sangita Kalanidhi vythyana Sameda.
4. Abninava guptas Abhinaya Darpana(Sanskrit)
5. Bharathamuni Peanitat Natya Shastram with Abhinava Bharati - ed. Dr. Ravishankre, Parimal pub New Dellhi 1984. IV Volumes

ಬಿ.ಆರ್. ಗೀತಾಂಜಲಿ*

ಮೆಕ್ಕೆಕಟ್ಟು ಭೂತಶಿಲ್ಪಗಳು

ನೈಸರ್ಗಿಕವಾಗಿ ತೇಗ, ಹಲಸು, ಬೀಟೆ ಮುಂತಾದ ಮರಗಳಿಂದ ಸಮೃದ್ಧವಾಗಿರುವ ದಕ್ಷಿಣ ಭಾರತದಲ್ಲಿ ಅದರಲ್ಲೂ ತಮಿಳುನಾಡು, ಕರ್ನಾಟಕ ಮತ್ತು ಕೇರಳದ ಗಡಿಭಾಗಗಳ ದೇವಸ್ಥಾನಗಳಲ್ಲಿ ಮರದ ರಥಗಳೂ ದೊರೆಯುತ್ತವೆ. ಹೀಗಾಗಿ ಇಲ್ಲಿನ ಮರದ ಕಟ್ಟಡವನ್ನಾಗಲೀ, ಶಿಲ್ಪವನ್ನಾಗಲೀ ರಚಿಸುವಲ್ಲಿ ದಕ್ಷಿಣ ಭಾರತದ ಕುಶಲಕರ್ಮಿಯು ನಿಸ್ಸೀಮನು. ಇಲ್ಲಿ ರಚಿಸಲ್ಪಡುವ ಮರದ ಶಿಲ್ಪಗಳು ಆಳವಾದ ಕೆತ್ತನೆಯನ್ನು ಹೊಂದಿದ್ದು ಈ ಶಿಲ್ಪಗಳು ನೈಸರ್ಗಿಕ ಚಿತ್ರವನ್ನು ಒಳಗೊಂಡಿವೆ.

ದಕ್ಷಿಣ ಕನ್ನಡದಲ್ಲಿ ಹಿಂದೂ ಧರ್ಮದ ನಂಬಿಕೆ, ಪದ್ಧತಿ ಹಾಗೂ ಆಚರಣೆಗಳನ್ನು ಹೆಚ್ಚಾಗಿ ಕಾಣಬಹುದು. ಈ ಹಿಂದೂ ದೇವಾಲಯಗಳಲ್ಲಿ ಮರದ ಶಿಲ್ಪಗಳಿರುವುದು ಸಾಮಾನ್ಯವೇ ಆಗಿದೆ. ಅವುಗಳಲ್ಲಿ ಉಪದೇವತೆಗಳು ಮತ್ತು ಜನಪದ ದೇವತೆಗಳು ಹೆಚ್ಚಾಗಿ ಕಾಣಸಿಗುತ್ತವೆ. ಜನಪದ ದೇವತೆಗಳಲ್ಲಿ ಭೂತಗಳು. ನಾಗದೇವತೆಗಳು ಮತ್ತು ಗ್ರಾಮದೇವತೆಗಳು ಪ್ರಮುಖವಾದುವು. ದಕ್ಷಿಣ ಕನ್ನಡದಲ್ಲಷ್ಟೇ ಅಲ್ಲದೆ ಉತ್ತರಕನ್ನಡದ ಕೆಲವು ಪ್ರದೇಶಗಳಲ್ಲಿ ಭೂತಾಚರಣೆಯನ್ನು ವಿವಿಧ ಹೆಸರು ಮತ್ತು ಆಕಾರಗಳಲ್ಲಿ ನಡೆಸಲಾಗುತ್ತದೆ.

ಹೀಗೆ ಪೂಜಿಸಲ್ಪಡುವ ಮೆಕ್ಕೆಕಟ್ಟುವ ಭೂತಗಳಲ್ಲಿ ಮೂರು ಪಂಗಡಗಳಿವೆ. ಮೊದಲನೆಯ ಪಂಡಗವು ಪ್ರಾಣಿಗಳ ಭೂತ ಗಳಾಗಿದ್ದು ಅವುಗಳಲ್ಲಿ ಪಂಜುರ್ಲಿ-ಹಂದಿಯನ್ನು, ಪಿಲ್ಚಂದಿ -ಹುಲಿಯನ್ನು, ನಂದಿಕೋಣ-ಎತ್ತನ್ನು ಪ್ರತಿನಿಧಿಸುತ್ತವೆ. ಹಿಂದೂ ಧರ್ಮದ ಮಹಾಗ್ರಂಥಗಳಿಗೆ ಸಂಬಂಧಿಸಿದ ದೇವತಾಮೂರ್ತಿಗಳು ಎರಡನೆಯ ಪಂಗಡದ ಭೂತಗಳಾಗಿವೆ. ಅವುಗಳಲ್ಲಿ ಶಿವ ಗಣಗಳು ಅಥವಾ ಪರಿಚಾರಕರೂ ಸೇರುತ್ತಾರೆ. ಕೊನೆಯದಾದ ಮೂರನೆಯ ಪಂಗಡದಲ್ಲಿ ಮನುಕುಲಕ್ಕೆ ಸಂಬಂಧಿಸಿದ ಭೂತಗಳಿರುತ್ತವೆ. ಅವುಗಳು ಕಲ್ಲುರ್ತಿ-ಅವನ ತಂಗಿ ಕಲ್ಕುಂಡ, ಅವಳಿ ಸಹೋದ ರರೂ ವೀರಯೋಧರೂ ಆದ ಕೋಟಿ-ಚೆನ್ನಯ್ಯ ಮತ್ತು ಸಮುದ್ರ ವನ್ನೂ ಮೀನುಗಾರರನ್ನೂ ಕಾಯಲೆಂದೇ ಪೂಜಿಸಲ್ಪಡುವ ಬೊಪ್ಪರಾಯ ಮುಂತಾದವುಗಳು.

ಪ್ರತಿಯೊಂದು ಭೂತಕ್ಕೂ ಅದರದೇ ಆದ ಉಪಕಥೆಗಳಿವೆ. ಭೂತಾರಾಧನೆಯ ಸಮಯದಲ್ಲಿ ಈ ಉಪಕಥೆಗಳನ್ನು ಹಾಡುವುದು ರೂಢಿ. ಕಲ್ಲುರ್ತಿ-ಕಲ್ಕುಂಡ, ಕೋಟಿ-ಚೆನ್ನಯ್ಯ, ಬೊಪ್ಪರಾಯ ಇನ್ನೂ ಮುಂತಾದ ಭೂತಗಳ ಜೀವನವು ವೀರಗಾಥೆಗಳನ್ನು ಹೊಂದಿದ್ದು ಮರಣದ ನಂತರ ಅವರ ಆತ್ಮಗಳು 'ದೈವೀಶಕ್ತಿ'ಯನ್ನು ಪಡೆದು ಸಾಮಾನ್ಯ ಜನರ ರಕ್ಷಣೆಯನ್ನು ಮಾಡುತ್ತವೆ ಎಂಬುದು ಭೂತಾರಾಧಕರ ನಂಬಿಕೆ. ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಭೂತಾರಾಧನೆಯು ಒಂದು ದೃಶ್ಯಭಾಷೆ. ಭೂತಾರಾಧನೆಯು ಆಚರಣೆಯು ನೃತ್ಯದಲ್ಲಿ, ಸಂಗೀತದಲ್ಲಿ, ನಾಟಕಗಳಲ್ಲಿ ಹಾಗೂ ಶಿಲ್ಪಗಳಲ್ಲಿ ಕಂಡುಬರುತ್ತವೆ. ಸಾಮಾನ್ಯವಾದ ಆಚರಣೆಯೆಂದರೆ ಭೂತದ ಮುಖವಾಡಗಳನ್ನು ಮಾಡಿ ಪೂಜಿಸುವುದು ಅತ್ಯಂತ ಪುರಾತನವಾದುದು. ಇಂತಹ ಮುಖವಾಡಗಳು ಉಡುಪಿ ಹಾಗೂ ಮಂಗಳೂರಿನಲ್ಲಿ ಹೆಚ್ಚಾಗಿ ಲಭ್ಯವಾಗುತ್ತದೆ.

ಮೆಕ್ಕೆಕಟ್ಟು ಎಂಬ ಹಳ್ಳಿ ಉಡುಪಿಯಿಂದ ಸುಮಾರು ೨೫ ಕಿಲೋಮೀಟರ್ ಉತ್ತರಕ್ಕಿದೆ. ಇಲ್ಲಿನ 'ನಂದಿಕೇಶ್ವರ' ಶಿವನ ದೇವಾಲಯವು ಭೂತಾರಾಧನೆಗಾಗಿಯೇ ಕಟ್ಟಿಸಿರುವಂತಹುದು. ಹಲಸಿನ ಮರದ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ಇಲ್ಲಿನ ಪ್ರಮುಖ ಮಂದಿರದಲ್ಲಿ ನಂದಿಯ ಮರದ ಶಿಲ್ಪವಿದ್ದು, ಆ ನಂದಿಯನ್ನು ಇತರೆ ಪ್ರಾಣಿ ಶಿಲ್ಪಗಳು ಸುತ್ತುವರೆದಿವೆ. ಕೆಲವು ಶಿಲ್ಪಗಳು ಬಹುಮುಖಗಳನ್ನು ಹೊಂದಿದ್ದು, ಪರಿಚಾರಿಕೆಯರು ಮತ್ತು ಯೋಧ ಶಿಲ್ಪಗಳ ಜೊತೆಗಿವೆ. ಈ ಶಿಲ್ಪಗಳಿಗೆ ಕಾಂತಿಯುಕ್ತವಾದ ಬಣ್ಣಗಳನ್ನು ಲೇಪಿಸಲಾಗಿದೆ. ಅದರಲ್ಲೂ ಕೆಂಪು ಬಣ್ಣವನ್ನು ಹೆಚ್ಚಾಗಿ ಕಾಣ ಬಹುದು. ಕೆಲವು ಪ್ರಾಣಿ ಶಿಲ್ಪಗಳು ಏಕಶೃಂಗವನ್ನು ಹೊಂದಿವೆ. ಹೆಣ್ಣು ಶಿಲ್ಪಗಳ ಕೈಯಲ್ಲಿ ಸೌಂದರ್ಯದ ಪ್ರತೀಕವಾದ ಕನ್ನಡಿ, ಹಾಗೂ ಯೋಧ ಶಿಲ್ಪಗಳಿಗೆ ದಪ್ಪನಾದ ಮೀಸೆಯನ್ನು ಕೆತ್ತಲಾಗಿದೆ. ಮಹಡಿ ಕೋಣೆಯೊಂದರಲ್ಲಿ ದೇವಿ ಪರಮೇಶ್ವರಿಯ ವಿಗ್ರಹವಿದೆ. ಈ ದೇವಿಯು ರೆಕ್ಕೆಯಿರುವ ನಂದಿಯ ಮೇಲೆ ಆಸೀನಳಾಗಿದ್ದು ಒಂದು ಕೈಯಲ್ಲಿ ಕನ್ನಡಿಯನ್ನು ಹಾಗೂ ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾಳೆ. ಅವಳೊಂದಿಗೆ ಅನೇಕ ಪರಿಚಾರಿಕೆಯರೂ ಇದ್ದಾರೆ. ಖಡ್ಗವನ್ನು ಹಿಡಿದು ನಂದಿ ಮುಖವಿರುವ ಪುರುಷ ಶಿಲ್ಪಗಳನ್ನು ಯೋಧರೆಂದು ಪರಿಗಣಿ ಸಲಾಗುತ್ತದೆ. ದೇವಾಲಯದ ಹೊರಗೆ ಜೋಗಿ ಪುರುಷನ ಕುಳಿತ ಆಕೃತಿಯಿದೆ. 'ಜೋಗಿ ಪುರುಷ' ಎಂದರೆ ಸತ್ಯವನ್ನು ಹೇಳುವವನು, ಯೋಗಿ ಎಂದರ್ಥ. ದೊಡ್ಡ ಆವರಣದಲ್ಲಿ ಅನೇಕ

* ಪರ : ಜಿ. ಬ್ರಹ್ಮಯ್ಯ, ೭೯/೨ಬಿ, ೫ನೇ ಕ್ರಾಸ್, ರಾಜೇಂದ್ರನಗರ, ಮೈಸೂರು-೫೭೦ ೦೦೭

ಭೂತಶಿಲ್ಪಗಳಿವೆ. ಅವುಗಳಲ್ಲಿ ಪಂಜುರ್ಲಿ, ಪಿಲ್ಚಂದಿ, ಜುಮಾದಿ ಜೊತೆಗೆ ಕೋಟಿ-ಚೆನ್ನಯ್ಯರ ಶಿಲ್ಪಗಳು ಸೇರಿವೆ. ಬೂತಗಳ ಶಕ್ತಿಯನ್ನು ತೋರಲೆಂದೇ ಅವುಗಳಿಗೆ ಗಾಢವಾದ ಬಣ್ಣಗಳನ್ನು ಲೇಪಿಸಲಾಗಿದೆಯೇನೋ ಎಂಬಂತೆ ಭಾಸವಾಗುತ್ತದೆ.

ಮರದ ಶಿಲ್ಪಗಳನ್ನು ಮಾಡುವಾಗ ಕಲಾವಿದನು ನಿಸರ್ಗದೊಂದಿಗೆ ಒಪ್ಪಂದ ಮಾಡಿಕೊಳ್ಳಲೇಬೇಕಾದ ಸಂದರ್ಭಗಳೇ ಹೆಚ್ಚು. ಕಲಾವಿದನ ಅವಶ್ಯಕತೆಗೆ ತಕ್ಕಂತೆ ಮರಗಳ ಗಾತ್ರಗಳು ಇಲ್ಲದಿರುವುದೇ ಒಂದು ಪ್ರಮುಖ ಕಾರಣ. ಆದ ಕಾರಣ ಮರದ ತುಂಡುಗಳನ್ನು ತೆಗೆದುಕೊಂಡು ತನಗೆ ಬೇಕಾದ ಆಕಾರವನ್ನು ರಚಿಸಿ ಅದನ್ನು ಜೋಡಿಸಬೇಕಾದ ಪರಿಸ್ಥಿತಿಯನ್ನು ಕಲಾವಿದನು ಎದುರಿಸಬೇಕಾಗುತ್ತದೆ. ಇದೇ ಪರಿಸ್ಥಿತಿಯನ್ನು ಮೆಕ್ಕೆಕಟ್ಟು ಭೂತ ಶಿಲ್ಪಗಳ ರಚನಾಕಾರನು ಎದುರಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಮರದ ತುಂಡುಗಳನ್ನು ತೆಗೆದುಕೊಂಡು ಬೇಕಾದ ಆಕಾರವನ್ನು ಕೆತ್ತಿನಂತರ ಒಂದರೊಳಗೊಂದು ಜೋಡಿಸಿರುವುದನ್ನು ಇಲ್ಲಿ ನೋಡಬಹುದು. ಈ ಶಿಲ್ಪಗಳ ಮೇಲ್ಮೈ ನುಣುಪಾಗಿರುವುದಲ್ಲದೆ, ಯಾವ ಭಾಗದಲ್ಲೂ ಉಳಿಯಿಂದ ಕೆತ್ತಲ್ಪಟ್ಟ ಕುರುಹುಗಳು ಕಾಣಸಿಗುವುದಿಲ್ಲ. ಇದೇ ಲಕ್ಷಣಗಳನ್ನು ಸಾಂಪ್ರದಾಯಿಕ ಶಿಲ್ಪಗಳಲ್ಲೂ ಕಾಣಬಹುದು. ಹೊರ ಬಂದಂತಿರುವ ಕಣ್ಣುಗಳು, ಮೊನಚಾದ ಮೂಗು, ಪುಟ್ಟ ಪುಟ್ಟ ತುಟಿಗಳು ದೊಡ್ಡ ದೊಡ್ಡ ಕಿವಿಗಳು ಹಾಗೂ ಕಿರಿದಾದ ಹಣೆ ಇವನ್ನು ಸಾಂಕೇತಿಕವಾಗಿ ತೋರಿಸುವುದೇ ಮೆಕ್ಕೆಕಟ್ಟು ಶಿಲ್ಪಗಳ ಮುಖ್ಯ ಉದ್ದೇಶದಂತಿದೆ. ಇವುಗಳ ಅಂಗ ರಚನೆಯಲ್ಲಿ ಕೈಗಳು ಉದ್ದವಾಗಿವೆ. ಶಿಲ್ಪಗಳ ಕೆಲವು ಭಾಗಗಳನ್ನು ಅಗತ್ಯಕ್ಕಿಂತ ಹೆಚ್ಚಿನ ಗಾತ್ರದಲ್ಲಿ ರಚಿಸಲಾಗಿದೆ. ದೊರಕಿದ ಮರದ ಗಾತ್ರಕ್ಕೆ ಅನುಗುಣವಾಗಿ ಪರಿಚಾರಿಕೆಯರ ಉಡುಪಾಗಲೀ, ದೇಹದ ರೂಪವಾಗಲೀ ಒಂದಕ್ಕಿಂತ ಭಿನ್ನವಾಗಿದೆ.

ಭೂತ ಶಿಲ್ಪಗಳ ಮುಖಚರ್ಯೆಯು ಈಜಿಪ್ಟಿನ ಶಿಲ್ಪಗಳನ್ನು ಹೋಲುತ್ತವೆ ಎಂದು ಮೈಸೂರು ಜಾನಪದ ವಸ್ತು ಸಂಗ್ರಹಾಲಯದ ಮೇಲ್ವಿಚಾರಕರಾದ ಯು.ಎಸ್. ರಾಮಣ್ಣನವರು ಅಭಿಪ್ರಾಯ ಪಡುತ್ತಾರೆ. ಈಜಿಪ್ಟಿಗೂ, ಭಾರತಕ್ಕೂ ವ್ಯಾಪಾರದ ನಂಟಿದ್ದಿರಬಹುದೆಂದು ಊಹಿಸುತ್ತಾರೆ. ಚಿಕ್ಕಪ್ಪಗೌಡರು 'ಭೂತಾರಾಧನೆ' ಎಂಬ ಪುಸ್ತಕದಲ್ಲಿ ಮೆಕ್ಕೆಕಟ್ಟು ಶಿಲ್ಪಗಳು ಪೋರ್ಚುಗೀಸರ ಶಿಲ್ಪಗಳಿಂದ ಪ್ರಭಾವಗೊಂಡಿರಬಹುದು ಎಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ಯಾವುದೇ ಲಿಖಿತ ಆಧಾರವಿಲ್ಲ. ನನ್ನ ಅಭಿಪ್ರಾಯದಲ್ಲಿ ಯಾವುದೇ ಪರದೇಶದ ಪ್ರಭಾವವು ಮೆಕ್ಕೆಕಟ್ಟು ಶಿಲ್ಪಗಳ ಮೇಲೆ ಆಗಿಲ್ಲ. ಈ ಶಿಲ್ಪಗಳ ಶೈಲಿ ಕರ್ನಾಟಕ ಜಾನಪದ ಜನಗಳದ್ದೇ ಆಗಿದೆ. ಯಾವುದೇ ವಸ್ತುವನ್ನು ಸಾಂಕೇತಿಕವಾಗಿ ಪ್ರತಿನಿಧಿಸುವುದು ಜಾನಪದ ಕಲೆಯ ವೈಶಿಷ್ಟ್ಯತೆ. ಇದಕ್ಕೆ ಮೆಕ್ಕೆಕಟ್ಟು ಜನಗಳಾಗಲೀ, ಪೋರ್ಚುಗೀಸರಾಗಲೀ, ಈಜಿಪ್ಟಿನವರಾಗಲೀ ಹೊರತೇನಲ್ಲ. ಆದ್ದರಿಂದ ಯಾವುದೇ ಹೋಲಿಕೆಗಳಿರುವುದು ಸಾಮಾನ್ಯವೇ ಆಗಿದೆ.

ವಿದೇಶಿ ಇತಿಹಾಸ ತಜ್ಞರು ಭೂತಶಿಲ್ಪಗಳು ೧೯ನೆಯ ಶತಮಾನದ್ದೆಂದು ಹೇಳಿದರೆ, ಭಾರತೀಯ ಇತಿಹಾಸ ತಜ್ಞರು ಇದೇ ಶಿಲ್ಪಗಳನ್ನು ೧೪, ೧೫ನೆಯ ಶತಮಾನದವೆಂದು ಗುರುತಿಸುತ್ತಾರೆ. ಮೆಕ್ಕೆಕಟ್ಟು ಶಿಲ್ಪಗಳು ಇತ್ತೀಚೆಗೆ ಅದರಲ್ಲೂ ೧೯೬೦ರಲ್ಲಿ ರಚಿಸಿದವುಗಳು ಹೆಚ್ಚಾಗಿ ಇರುವುದನ್ನು ಕಾಣುತ್ತೇವೆ. ಮೊದಲಿನ ಶಿಲ್ಪಗಳಲ್ಲಿ ಕೆಲವನ್ನು ವಿಸರ್ಜಿಸಲಾಗಿದ್ದು, ಕೆಲವನ್ನು ನವದೆಹಲಿ ಹಾಗೂ ಮೈಸೂರು ಜಾನಪದ ವಸ್ತುಸಂಗ್ರಹಾಲಯಗಳಲ್ಲಿ ಕಾಣಬಹುದಾಗಿದೆ. ಹೀಗಾಗಿ ಪ್ರಾಚೀನ ಶಿಲ್ಪಗಳನ್ನು ಕುರಿತು ಅಧ್ಯಯನ ನಡೆಸಬೇಕಾಗಿದೆ. ಶಿಲ್ಪಕಲೆಯ ಹಿನ್ನೆಲೆಯಲ್ಲಿ ಈ ಶಿಲ್ಪಗಳ ತೌಲನಿಕ ವಿಶ್ಲೇಷಣೆಯ ಕಾರ್ಯ ನಡೆಯಬೇಕಾಗಿದೆ.

ನಂದಿಯ ಮೇಲೆ ಕುಳಿತ ದೇವತೆ - ಪರಮೇಶ್ವರಿ

ಈ ದೇವತೆಯನ್ನು ಶಕ್ತಿ, ದುರ್ಗ ಅಥವಾ ಪರಮೇಶ್ವರಿ



ಎಂದೂ ಕರೆಯುತ್ತಾರೆ. ನಂದಿಯ ರೂಪದಲ್ಲಿರುವ ಶಿವ, ನಂದಿಕೇಶ್ವರನ ಸಂಗಾತಿ ಈಕೆ. ಈ ದೇವತೆಯ ಎರಡೂ ಕೈಗಳು ಹೊರಚಾಚಿದಂತಿವೆ. ಬಹುಶಃ ಬಲಗೈಯಲ್ಲಿ ಹೆಣ್ಣಿನ ಸೌಂದರ್ಯದ ಸಂಕೇತವಾದ ಕನ್ನಡಿ (ಮರದ)ಯನ್ನು ಹಾಗೂ ಎಡಗೈಯಲ್ಲಿ ಖಡ್ಗವನ್ನು ಹಿಡಿದಿದ್ದಿರಬಹುದು ಎಂದು ತಿಳಿಯಬಹುದು. ಈ ದೇವತೆಯ ಕುಳಿತಂತಹ ನಂದಿಯನ್ನು 'ನಂದಿಕೋಣ' ಎಂದು ಕರೆಯುತ್ತಾರೆ. ನುದಿಕೋಣದ ತಲೆಯು ಮೇಲೆತ್ತಿರುವುದರ ಜೊತೆಗೆ

ಕತ್ತಿನಲ್ಲಿರುವ ಮರದ ಗಂಟೆ ಹಾಗೂ ರೆಕ್ಕೆಗಳನ್ನು ನೋಡಿದರೆ ದೈವೀ ಲಕ್ಷಣಗಳು ಎದ್ದು ಕಾಣುತ್ತವೆ.

ರೆಕ್ಕೆಯಿರುವ ನಂದಿ - ನಂದಿಕೋಣ

ನಂದಿ ಹಾಗೂ ನಂದಿಕೋಣ ಎಂದು ಕರೆಯಲ್ಪಡುವ ಈ ಶಿಲ್ಪವು ಮೊದಲೇ ಹೇಳಿದ ನಂದಿಯ ಎಲ್ಲಾ ಲಕ್ಷಣಗಳನ್ನೂ



ಹೊಂದಿದೆ. ಮೆಕ್ಕೆಕಟ್ಟು 'ನಂದಿಕೇಶ್ವರ' ದೇವಾಲಯದ ದೊಡ್ಡ ಆವರಣದಲ್ಲಿರುವ ಪ್ರಾಣಿ ಶಿಲ್ಪಗಳಲ್ಲಿ ಇದೂ ಒಂದು.

ಪರಿಚಾರಿಕೆಯರು

ಈ ಭೂತ ಶಿಲ್ಪಗಳು ಆಭರಣಗಳಿಂದ ಅಲಂಕೃತವಾಗಿವೆ.



ಎಲ್ಲದರ ಮುಖದ ರೇಖೆಗಳು ಚೂಪಾಗಿದ್ದರೂ ಸಹ ಅವುಗಳ ಮುಖಚರ್ಯೆಗಳು, ಸ್ತನಗಳ ಗಾತ್ರಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಪ್ರತಿಯೊಂದು ಶಿಲ್ಪಕ್ಕೂ ಅದರದೇ ಆದ ಅಳತ, ಪ್ರಮಾಣ ಹಾಗೂ ವ್ಯಕ್ತಿತ್ವವಿರುವಂತೆ ತೋರುತ್ತದೆ. ಇವುಗಳ ಎಡಗೈ ಮೇಲೆ ಎತ್ತಿರುವುದನ್ನು ನೋಡಿದರೆ ಬಹುಶಃ ಕನ್ನಡಿಯನ್ನೋ ಅಥವಾ ಬೀಸಣಿಕೆಯನ್ನೋ ಹಿಡಿದಿರುವ ಹಾಗೆ ಭಾಸವಾಗುತ್ತದೆ. ಈ ಶಿಲ್ಪಗಳ ಉಡುಪುಗಳು ಮೈಗೆ ಅಂಟಿದಂತಿದೆ. ತಲೆಗೂದಲನ್ನು ಎಡಗಡೆಗೆ ಗಂಟು ಮಾಡಿರುವುದು ದೇವಿ ಹಾಗೂ ಪರಿಚಾರಿಕೆಯರ ಶಿಲ್ಪಗಳಲ್ಲಿ ಸಾಮಾನ್ಯವಾಗಿದೆ.

ಜೋಗಿ ಪುರುಷ




ಜೋಗಿ ಪುರುಷನು ಸತ್ಯವನ್ನು ಹೇಳುವವನೆಂದೂ, ಭವಿಷ್ಯಕಾರನೆಂದೂ ಭೂತಾರಾಧಕರ ನಂಬಿಕೆ. ಪುರೋಹಿತನ ಜಾತಿಯವನಲ್ಲದ ಕಾರಣ ಈ ಶಿಲ್ಪವನ್ನು ಮಂದಿರದ ಹೊರಗೆ ದ್ವಾರದ ಪಕ್ಕದಲ್ಲಿ ಇರಿಸಲಾಗುತ್ತದೆ. ಬಲಗೈಯಲ್ಲಿ ಒಂದು ದಂಡವನ್ನು ಹಿಡಿದಿದ್ದು, ಎಡಗೈಯಲ್ಲಿ ಹಿಡಿದಿದ್ದ ವಸ್ತುವು ಕಾಣೆಯಾಗಿದೆ. ಅವನ ತಲೆ ಕೂದಲಿನ ಜಟೆಯ ಸರ್ಪದಿಂದ ಅಲಂಕೃತವಾಗಿದೆ. ಅವನ ಕತ್ತಿನಲ್ಲಿರುವ ತಾಯತವನ್ನು ನೋಡಿದರೆ ಮಂತ್ರವಿದ್ಯೆಯನ್ನು ಅರಿತವನೆಂದೂ ತಿಳಿಯುತ್ತದೆ.

ಎರಡು ತಲೆಯಿರುವ ದೇವರು



ಈ ದೇವರನ್ನು 'ರಾಜಯೋಗಿ' ಎಂದು ಕರೆಯುತ್ತಾರೆ. 'ರಾಜ'ನ ಹಾಗೂ 'ಯೋಗಿ'ಯ ಲಕ್ಷಣಗಳಿರುವ ಎರಡು ತಲೆಗಳನ್ನು ಒಂದೇ ಶಿಲ್ಪದಲ್ಲಿ ನೋಡಬಹುದು. ರಾಜನನ್ನು ಪ್ರತಿನಿಧಿಸುವ ತಲೆಯು ಕಿರೀಟ ಹಾಗೂ ಒಡವೆಗಳಿಂದ ಅಲಂಕೃತವಾಗಿದೆ. ಯೋಗಿ ಎಂದು ಗುರುತಿಸಲ್ಪಡುವ ಇನ್ನೊಂದು ತಲೆಯ ಕೂದಲನ್ನು ಜಟೆಯಂತೆ ಕಟ್ಟಲಾಗಿದೆ. ಈ ಶಿಲ್ಪದಲ್ಲಿ ನಾಲ್ಕು ಕೈಗಳಿವೆ. ಎರಡು ಕೈಗಳು ಮೇಲೆತ್ತಿದಂತಿದ್ದು, ಏನನ್ನೋ ಹೇಳುತ್ತಿರುವಂತೆ ಕಾಣುತ್ತದೆ. ಉಳಿದೆರಡು ಕೈಗಳು ಮುಂದ ಚಾಚಿಕೊಂಡಿವೆ. ಮುಂದೆ ಚಾಚಿದ ಯೋಗಿಯ ಕೈಯಲ್ಲಿ ದಂಡವಿದೆ ರಾಜನ ಮುಂದೆ ಚಾಚಿದ ಕೈಯಲ್ಲಿ ಖಡ್ಗವಿದ್ದಿರಬಹುದು. ರಾಜ ಹಾಗೂ ಯೋಗಿಯನ್ನು ಈ ಜನರು ಒಂದೇ ರೀತಿಯ ಗೌರವದಿಂದ ಕಾಣುತ್ತಿದ್ದರು ಎಂಬುದು ಈ ಶಿಲ್ಪದಿಂದ ತಿಳಿಯುತ್ತದೆ.



***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಮೈಸೂರು ಜಾನಪದ ವಸ್ತು ಸಂಗ್ರಹಾಲಯದ ನಿರ್ವಾಹಕರಾದ ಯು.ಎಸ್. ರಾಮಣ್ಣನವರ ಸಂದರ್ಶನ.

೨. *Wooden Traditions of Kerala and Karnataka* - Marg publications.

೩. *Living Wood, Structural Traditions of Southern India* - by - George Michell

೪. ಛಾಯಾಚಿತ್ರಗಳು - ಮೈಸೂರು ಜಾನಪದ ವಸ್ತು ಸಂಗ್ರಹಾಲಯ, ಮೈಸೂರು.

೫. ಚಿನ್ನಪ್ಪಗೌಡ., ಭೂತಾರಾಧನೆ

ಎಂ. ಎನ್. ಕಡಪಟ್ಟಿ*

ಬಾದಾಮಿ ಪರಿಸರದಲ್ಲಿನ ಲಕುಲೀಶ ಶಿಲ್ಪಗಳು

ಭಾರತೀಯ ಪ್ರಾಚೀನ ಧಾರ್ಮಿಕ ಪರಂಪರೆಗಳಲ್ಲಿ ಶೈವ ಧರ್ಮವೂ ಒಂದು. ಶಿವ ಪಾರಮ್ಯವನ್ನು ಒಪ್ಪಿಕೊಂಡಿರುವ ಈ ಧರ್ಮ ಕಾಲಾನುಕ್ರಮದಲ್ಲಿ ಬೆಳೆದುಬಂದ ಬಗೆ ಕುತೂಹಲಕಾರಿಯಾಗಿದೆ. ಅದರ ಅಭಿವೃದ್ಧಿ ಕಾಲದಲ್ಲಿ ಲಕುಲೀಶ ಪರಿಕಲ್ಪನೆ ಸೇರಿಕೊಂಡಿದ್ದು ಗೋಚರಿಸುತ್ತದೆ. ವಾಯು ಪುರಾಣ[೧] ಹಾಗೂ ಲಿಂಗ ಮಹಾಪುರಾಣಗಳಲ್ಲಿ[೨] ಲಕುಲೀಶನು ಶಿವನ ೨೮ನೇ ಅವತಾರವೆಂದು ಉಲ್ಲೇಖವಿದೆ. ಕಾಯಾವರೋಹಣದ ಸ್ಮಶಾನವೊಂದರಲ್ಲಿ ಶವವನ್ನು ಹೊಕ್ಕು ಶಿವನು ಲಕುಲೀಶನಾಗಿ ಪಾಶುಪತವೆಂಬ ಮತವನ್ನು ಬೋಧಿಸಿದನೆಂದೂ, ಇದೇ ಲಕುಲೀಶ ಪಾಶುಪತವೆಂದೂ ತಿಳಿಯಲಾಗಿದೆ.[೩] ಮಾಧವರ ಸರ್ವದರ್ಶನ ಸಂಗ್ರಹದಲ್ಲಿ ಲಕುಲೀಶನನ್ನು ನಕುಲೀಶನೆಂದು ಕರೆದಿದ್ದಾರೆ.[೪] ಲಕುಲೀಶ, ನಕುಲೀಶ, ಲಗುಡೀಶ ಈ ಮೂರು ಒಂದೇ ಹೆಸರಿನ ರೂಪಾಂತರಗಳಾಗಿವೆ.[೫] ಇವನು ಬೋಧಿಸಿದ ತತ್ವವೇ ಲಕುಲೀಶ ಪಾಶುಪತವೆಂದು ಒಪ್ಪಲಾಗಿದೆ.

ಲಕುಲೀಶನ ಕಾಲದ ಬಗ್ಗೆ ನಿಖರ ಮಾಹಿತಿಯಿಲ್ಲ. ಬಹುಶಃ ಕ್ರಿ.ಶ. ೧ನೇ ಶತಮಾನವಾಗಿರಬಹುದೆಂದು ಅಭಿಪ್ರಾಯವಿದೆ. ಈ ಕುರಿತು ಗುಪ್ತರ ಕಾಲದ ಮಥುರಾ ಶಾಸನ ಅತ್ಯಂತ ಮಹತ್ವದ್ದಾಗಿದೆ. ೨ನೇ ಚಂದ್ರಗುಪ್ತನ ಮಥುರಾ ಶಾಸನವು (ಗುಪ್ತವರ್ಷ ೬೧ : ಕ್ರಿ.ಶ. ೩೮೦) ಲಕುಲೀಶನ ಶಿಷ್ಯನ ಬಗ್ಗೆ ನೇರವಾಗಿ ಪ್ರಸ್ತಾಪಿಸುತ್ತದೆ ಹಾಗೂ ಲಕುಲೀಶನ ಬಗ್ಗೆಯೂ ವಿವರಣೆ ನೀಡುತ್ತದೆ. ಇದರ ಪ್ರಕಾರ ಭಗವತ್ ಕುಶಿಕನಿಂದ ೧೦ನೆಯವನಾದ ಹಾಗೂ ಭಗವತ್ ಪರಾಶರನಿಂದ ನಾಲ್ಕನೆಯವನಾದ ಭಗವತ್ ಉಪಮಿತ್ರನ ಪ್ರಶಿಷ್ಯನಾದ ಹಾಗೂ ಭಗವತ್ ಕಪಿಲನ ಶಿಷ್ಯನಾದ ಆರ್ಯ ಉದಿತಾಚಾರ್ಯನು ಉಪಮಿತೇಶ್ವರ ಹಾಗೂ ಕಪಿಲೇಶ್ವರ ಲಿಂಗಗಳನ್ನು ಗುರ್ವಾಯತನದಲ್ಲಿ ಪ್ರತಿಷ್ಠಾಪಿಸಿದನು.[೬] ಇಲ್ಲಿ ಗುರುವಾದ ಲಕುಲೀಶನ ಕುರಿತು ನೇರ ಉಲ್ಲೇಖವಿಲ್ಲ. ಆದರೆ ಕುಶಿಕನು ಲಕುಲೀಶನ ನೇರ ಶಿಷ್ಯನೆಂದು ಪುರಾಣಗಳಿಂದ ತಿಳಿದಿದೆ. ಈ ಶಾಸನದ ೧೭ನೇ ಸಾಲಿನಲ್ಲಿ ಭಗವಾನ್ ದಂಡನನ್ನು ಹೆಸರಿಸಿದ್ದು, ಅವನನ್ನು ಉಗ್ರದಂಡ, ಅಗ್ರನಾಯಕ, ನಿತ್ಯ ಎಂದು ವರ್ಣಿಸಲಾಗಿದೆ. **(ಜಯತಿ ಚ ಭಗವಾನ್ದಂಡಃ ರುದ್ರದಂಡೋಗ್ರ (ನಾ)ಯಕೊ ನಿತ್ಯ)**

ಇಲ್ಲಿ ಭಗವಾನ್ ದಂಡನೆಂದರೆ ಲಕುಟಪಾಣಿ ಲಕುಲೀಶ. ಲಕುಲೀಶ (ದಂಡ)ನನ್ನು ಆಗಲೇ ದೈವತ್ವಕ್ಕೇರಿಸುವುದರಿಂದ ಅವನ ಶಿಷ್ಯನಾದ ಕುಶಿಕನಿಂದ ಗುರುಪರಂಪರೆಯನ್ನು ಉಲ್ಲೇಖಿಸಲಾಗಿದೆ ಎಂದು ಭಾವಿಸಬಹುದು. ಕುಶಿಕನು ಲಕುಲೀಶನ ನೇರ ಶಿಷ್ಯನಾಗಿದ್ದನೆಂಬುದು ಶಾಸನಗಳಿಂದಲೂ ತಿಳಿದಿದೆ. ಉದಯಪುರದ ಸಮೀಪದಲ್ಲಿರುವ ಏಕಲಿಂಗಜಿಯ ಶಾಸನವು[೭] (ಕ್ರಿ.ಶ ೯೭೧) ಲಕುಳವನ್ನು ಕೈಯಲ್ಲಿ ಹಿಡಿದಿರುವ ವ್ಯಕ್ತಿಯೊಬ್ಬ ಭೃಗುಕಚ್ಛದಲ್ಲಿ ಅವತಾರಮಾಡಿದನೆಂದೂ ಅವನಿಗೆ ಕುಶಿಕ, ಮಿತ್ರ, ಗರ್ಗ, ಕೌರುಷ್ಯರೆಂಬ ಶಿಷ್ಯರೆಂದೂ ಇವರು ಪಾಶುಪತ ಯೋಗವನ್ನು ಪ್ರಚಾರಮಾಡಿದರೆಂದೂ ಹೇಳುತ್ತದೆ.

“ವಿಶ್ವಕರ್ಮ ವಾಸ್ತುಶಾಸ್ತ್ರಂ”[೮] ಎಂಬ ಕೃತಿಯಲ್ಲಿ ಲಕುಲೀಶನ ಪ್ರತಿಮಾ ಲಕ್ಷಣವನ್ನು ಈ ರೀತಿ ತಿಳಿಸಲಾಗಿದೆ: “ಲಕುಲೀಶನು ಊರ್ಧ್ವಮೇಢ್ರನಾಗಿ ಕಮಲದ ಮೇಲೆ ಕುಳಿತಿರುತ್ತಾನೆ, ಅಥವಾ ಪದ್ಮಾಸನದಲ್ಲಿ ಕುಳಿತಿರುತ್ತಾನೆ. ಬಲಗೈಯಲ್ಲಿ ಮಾತುಲಿಂಗ ಹಿಡಿದು ಎಡಕೈಯಲ್ಲಿ ಲಕುಟ ಹಿಡಿದಿರುತ್ತಾನೆ.”

ಮಥುರಾದಲ್ಲಿನ ಕುಶಾನರ[೧೦] ಕಾಲದ (ಕ್ರಿ.ಶ.೨ ಅಥವಾ ೩ನೇ ಶತಮಾನ) ಒಂದು ಗಣ ವಿಗ್ರಹದಲ್ಲಿ ನಗ್ನನಾಗಿ ಕೈಯಲ್ಲಿ ದಂಡ ಮತ್ತು ಕಲಶವನ್ನು ಹಿಡಿದಿರುವಂತೆ ತೋರಿಸಿದೆ. ಇದನ್ನು ಲಕುಲೀಶನ ಪೂರ್ವಭಾವಿ ಪ್ರತಿಮೆಯಿಂದ ಗಣಿಸಬಹುದು. ಎಲ್ಲೋರಾ, ಎಲಿಫೆಂಟಾಗಳಲ್ಲಿ ಸುಮಾರು ಕ್ರಿ.ಶ. ೬ನೇ ಶತಮಾನದ ಕುಳಿತ ಲಕುಲೀಶ ವಿಗ್ರಹಗಳು ಗಮನಿತವಾಗಿವೆ.

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚಿತವಾದ ಬಾದಾಮಿ ಪರಿಸರದಲ್ಲಿನ ಲಕುಲೀಶ ಶಿಲ್ಪಗಳು ಪ್ರತಿಮಾ ಲಕ್ಷಣ ವೈವಿಧ್ಯ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿವೆ. ಇವುಗಳ ಪ್ರಭೇದಗಳನ್ನು ಗುರುತಿಸುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಲಕುಲೀಶ ಶಿಲ್ಪಗಳನ್ನು ಬಾದಾಮಿ, ಮಹಾಕೂಟ, ಐಹೊಳೆ, ಪಟ್ಟದಕಲ್ಲುಗಳ ದೇವಾಲಯಗಳ ಕಂಬ ಇಲ್ಲವೇ ಗೋಡೆಗಳ ಮೇಲೆ ಕಾಣುತ್ತೇವೆ. ಅವುಗಳ ಸಾಮಾನ್ಯ ಲಕ್ಷಣಗಳ ಆಧಾರದಿಂದ ಈ ರೀತಿ ವರ್ಗೀಕರಿಸಬಹುದು.

* ಇತಿಹಾಸ ಉಪನ್ಯಾಸಕರು, ಶ್ರೀ ಕ.ವಿ.ಪ್ರ. ಸಮಿತಿಯ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ, ಹೊಳೆ-ಆಲೂರು ತಾ । ರೋಣ, ಜಿ : ಗದಗ - ೫೮೨ ೨೦೩

೧. ಆಸೀನ ಲಕುಲೀಶ ೨. ಸಮಸ್ಥಾನಕ ಭಂಗಿಯಲ್ಲಿರುವ ಲಕುಲೀಶ ೩. ಆಸೀನ ಚತುರ್ಭುಜ ಲಕುಲೀಶ

ಆಸೀನ ಲಕುಲೀಶ : ಬಾದಾಮಿಯ ಎರಡನೇ ಗುಹಾಂತರ



ದೇವಾಲಯದ ಸಭಾಮಂಟಪದಲ್ಲಿರುವ ಎಡ ಮೊದಲನೇ ಭಾಗದ ಕಂಬದ ಪಶ್ಚಿಮ ಮುಖದಲ್ಲಿ ಲಕುಲೀಶನನ್ನು ಚತುರ್ಭುಜನಾಗಿ, ನಗ್ನವಾಗಿ, ಊರ್ಧ್ವಮೇಢ್ರನಾಗಿ ಕುಳಿತಂತೆ ಶಿಲ್ಪಿಸಿದೆ. ಬಲಕೈಗಳಲ್ಲಿ ದಂಡ, ಪರಶು ಹಾಗೂ ಎಡಗೈಗಳಲ್ಲಿ ಅಕ್ಷಮಾಲಾ, ವ್ಯಾಖ್ಯಾನ ಮುದ್ರೆ ಇವೆ. ಯಜ್ಞೋಪವೀತ, ಜಟಾಮಕುಟ ಇವೆ. ಅಕ್ಕಪಕ್ಕದಲ್ಲಿ ನಾಲ್ಕು ಜನ ಶಿಷ್ಯರಿದ್ದಾರೆ. ಒಬ್ಬ ಶಿಷ್ಯ ಪಾಠ ಓದುತ್ತಿದ್ದಾನೆ. ಈ ಶಿಲ್ಪವನ್ನು ಬಾದಾಮಿ ಚಾಲುಕ್ಯರ ಕಾಲದ ಹಾಗೂ ಕರ್ನಾಟಕದ ಅತೀ ಪ್ರಾಚೀನ ಲಕುಲೀಶ ಶಿಲ್ಪವೆಂದು ಸಧ್ಯ ಪರಿಗಣಿಸಬಹುದು.

ಸಮಸ್ಥಾನಕ ಭಂಗಿಯಲ್ಲಿರುವ ದ್ವಿಭುಜ ಲಕುಲೀಶ ಶಿಲ್ಪಗಳು : ಈ ರೀತಿಯ ಶಿಲ್ಪಗಳನ್ನು ಅವುಗಳ ಪ್ರಧಾನ ವ್ಯತ್ಯಾಸಗಳಿಗೆ ಅನುಗುಣವಾಗಿ ಉಪವರ್ಗಗಳಾಗಿ ವಿಂಗಡಿಸಬಹುದು.

ಲಕುಟ ಪಾಣಿಯಾಗಿ ಸಮಸ್ಥಾನಕದಲ್ಲಿರುವ ಲಕುಲೀಶ : ಮಹಾಕೂಟದ ನಂದಿಮಂಟಪದ ಬಲಗಡೆ, ದೇವಾಲ ಯದ ದಕ್ಷಿಣ ಗೋಡೆಯಲ್ಲಿ ಸಮಸ್ಥಾನಕದಲ್ಲಿರುವ ಲಕುಲೀಶ ಶಿಲ್ಪವಿದೆ. ಇಲ್ಲಿ ಅಪಸ್ಮಾರನಿಲ್ಲ. ದ್ವಿಭುಜನಾಗಿದ್ದು ಬಲಗೈಯಲ್ಲಿ ಲಕುಟ, ಎಡಗೈ ಕಟ್ಯವಲಂಬಿತ ಹಸ್ತವಿದೆ. ಜಟೆ ಹರಡಿಕೊಂಡಿದೆ. ವ್ಯಾಘ್ರಚರ್ಮ ಮತ್ತು ಯಜ್ಞೋಪವೀತ ಇವೆ. ಇದು ಬಾದಾಮಿ ಚಾಲುಕ್ಯರ ಕಾಲದ ಎರಡನೆಯ ಹಂತದ ಲಕುಲೀಶ ಶಿಲ್ಪವಾಗಿರಬಹುದು.

ಲಕುಟಪಾಣಿಯಾಗಿ ಅಪಸ್ಮಾರನ ಮೇಲೆ ಸಮಸ್ಥಾನಕ ದಲ್ಲಿರುವ ಲಕುಲೀಶ :

೧) ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿನ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕವಾಗಿದ್ದು



ಬಲಕೈಯಲ್ಲಿ ಲಕುಟ, ಎಡಗೈ ಕಟ್ಯವಂಬಿತವಾಗಿದೆ. ವ್ಯಾಘ್ರಚರ್ಮವಿದ್ದು, ಸೊಂಟದಲ್ಲಿ ಹೆಜ್ಜೆಯ ಮೇಖಲೆಯನ್ನು ಧರಿಸಿದ್ದಾನೆ. ಯಜ್ಞೋಪವೀತವು ಗೆಜ್ಜೆಯಿಂದ ರಚಿತವಾಗಿದೆ. ಜಟೆ ಹರಡಿಕೊಂಡಿದೆ. ಊರ್ಧ್ವ ಮೇಢ್ರನಾಗಿದ್ದಾನೆ.



೨) ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕದಲ್ಲಿದ್ದು ಬಲಗೈಯಲ್ಲಿ ಲಕುಟ, ಎಡಕೈ ಕಟ್ಯವಲಂಬಿತವಾಗಿದೆ. ಯಜ್ಞೋಪವೀತವಿದೆ. ಜಟಾಮುಕುಟ ಹೊಂದಿದ್ದಾನೆ. ಆದರೆ ಚರ್ಮದ ಬದಲಾಗಿ ಬಟ್ಟೆ ಧರಿಸಿದ್ದಾನೆ. (ಚಿತ್ರ ೪)

೧. ಮಹಾಕೂಟದಲ್ಲಿ ಸಂಗಮೇಶ್ವರ ಗುಡಿಯ ಗರ್ಭಗೃಹದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕ ದಲ್ಲಿರುವ ಲಕುಲೀಶ ಬಲಗೈ ವರದ ಹಸ್ತವಾಗಿದ್ದು, ಎಡಕೈಯಲ್ಲಿ ಪರಶು ಹಿಡಿದಿದ್ದಾನೆ. ಜಟೆ ಹರಡಿಕೊಂಡಿದ್ದು



(ಚಿತ್ರ ೪)



(ಚಿತ್ರ ೫)

ಬಲಗಡೆ ಜಟೆಯ ಸಮೀಪದಲ್ಲಿ ಸುಂದರ ನಾಗವಿದೆ. (ಚಿತ್ರ ೫)

೨. ಮಹಾಕೂಟದಲ್ಲಿನ ಸಂಗಮೇಶ್ವರ ಗುಡಿಯ ಮುಂದಿನ ಅರಳಿ ಗಿಡದ ಕೆಳಗಿನ ಒಂದು ಕಲ್ಲಿನಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕದಲ್ಲಿರುವ ಲಕುಲೀಶ ಶಿಲ್ಪವಿದೆ. ಇದು ಸಂಗಮೇಶ್ವರ ಗುಡಿಯಲ್ಲಿನ ಶಿಲ್ಪದ ಮಾದರಿಯನ್ನೇ ಹೋಲುತ್ತದೆ. ಇದೇ ಮಾದರಿಯ ಶಿಲ್ಪ ಪಿನಾಕಪಾಣಿ ದೇವಾಲಯದ ದಕ್ಷಿಣಗೋಡೆಯಲ್ಲಿದೆ.

೩. ಪಟ್ಟದಕಲ್ಲಿನ ಕಾಡಸಿದ್ಧೇಶ್ವರ ದೇವಾಲಯದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನದಕಲ್ಲಿರುವ ಲಕುಲೀಶ ಶಿಲ್ಪ ಬಲಗೈ ಬಹುಶಃ ವರದಹಸ್ತ (ಒಡದಿದೆ) ದಲ್ಲಿರಬಹುದು. ಎಡಗೈಯಲ್ಲಿ ಪರಶು ಹಿಡಿದಿದ್ದಾನೆ. ಯಜ್ಞೋಪವೀತವಿದೆ, ವ್ಯಾಘ್ರಚರ್ಮವಿದೆ.

೪. ಪಟ್ಟದಕಲ್ಲಿನ ಜಂಬುಲಿಂಗ ದೇವಾಲಯದ ದಕ್ಷಿಣ ಗೋಡೆಯಲ್ಲಿ ಅಪಸ್ಮಾರನ ಮೇಲೆ ಸಮಸ್ಥಾನಕನಾಗಿರುವ ಲಕುಲೀಶನ ಬಲಗೈ ಬಹುಶಃ (ಒಡೆದಿದೆ) ವರದಹಸ್ತದಲ್ಲಿದೆ. ಎಡಗೈಯಲ್ಲಿ ಪರಶು ಇದೆ.

೫. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಪಶ್ಚಿಮ ಗೋಡೆ



ಯಲ್ಲಿ ಲಕುಲೀಶನ ಬಲಗೈಯಲ್ಲಿ ಪರಶು ಧರಿಸಿದ್ದು, ಎಡಗೈ ಕಟ್ಯವಲಂಬಿತವಾಗಿದೆ. ಜಟಾಮುಕುಟ, ವ್ಯಾಘ್ರಚರ್ಮ, ಯಜ್ಞೋಪವೀತಗಳಿವೆ. (ಚಿತ್ರ ೬.)

೩. ಷಡ್ಭುಜನಾಗಿ ಅಪಸ್ಮಾರನ ಮೇಲೆ ಸಮಸ್ಥಾನಕ ದಲ್ಲಿರುವ ಲಕುಲೀಶ : ಚಿತ್ರ ೭



ಐಹೊಳೆಯ ದುರ್ಗಾದೇವಾಲಯದ ತೆರೆದ ಪ್ರದಕ್ಷಿಣಾ ಪಥದ ದಕ್ಷಿಣಕ್ಕಿರುವ ಕಂಬದ ಪೂರ್ವ ಮುಖದಲ್ಲಿ ಷಡ್ಭುಜನಾಗಿ ಅಪಸ್ಮಾರನ ಮೇಲೆ ಸಮಸ್ಥಾನಕನಾಗಿದ್ದಾನೆ. ಬಲಭಾಗದ ಎರಡು ಕೈಗಳಿಂದ ಕುಳ್ಳರಂತಿರುವ ವ್ಯಕ್ತಿಗಳನ್ನು ದಂಡಿಸುತ್ತಿರುವಂತಿದೆ. ಮೇಲಿನ ಕೈಯಲ್ಲಿ ಬಹುಶಃ ಪರಶು ಹಿಡಿದಿದ್ದಾನೆ. ಎಡಭಾಗದ ಮೇಲಿನ ಕೈಗಳಲ್ಲಿ ಸರ್ಪ, ಕಟ್ಯವಲಂಬಿತ ಹಸ್ತ ಹಾಗೂ ಕಮಂಡಲು ಇನ್ನೊಂದು ಕೈಯಿಂದ ಒಬ್ಬ ಕುಳ್ಳನನ್ನು ದಂಡಿಸುತ್ತಿದ್ದಾನೆ. ಯಜ್ಞೋಪವೀತವಿದೆ. ಜಟಾಮುಕುಟದ ಬದಲು ಕಿರೀಟ ಮುಕುಟ ವಿರುವುದು ವಿಶೇಷ.

೪. ಇತರ ಲಕುಲೀಶ ಶಿಲ್ಪಗಳು : (ಒಡೆದ)

೧ ಗಳಗನಾಥ ದೇವಾಲಯದ ಬಲಭಾಗದ (ದಕ್ಷಿಣಕ್ಕೆ) ಜಾಲಂಧ್ರದ ಮಂಟಪದ ಬಲಕ್ಕೆ ಚಿಕ್ಕದಾದ ಲಕುಲೀಶ ಶಿಲ್ಪ, ಕೆಳಗಡೆ ಇಕ್ಕೆಲದಲ್ಲಿ ಇಬ್ಬರು ಗಣರಿದ್ದಾರೆ. ಬಹುಶಃ ಅಪಸ್ಮಾರನಿಲ್ಲ.

೨ ಕಾಶೀ ವಿಶ್ವನಾಥ ದೇವಾಲಯದ ಉತ್ತರ ದಿಕ್ಕಿಗಿರುವ ನಾಲ್ಕನೆಯ ಚಿಕ್ಕ ಗುಡಿಯ ದಕ್ಷಿಣಕ್ಕೆ (ಬಹುಶಃ ಸ್ಮಾರಕ ದೇಗುಲಗಳು) ಲಕುಲೀಶ ಶಿಲ್ಪವಿದೆ. ಬಲಕೈಯಲ್ಲಿ ಪ್ರಾಯಶಃ ಬಹುಶಃ ದಂಡ(ಒಡೆದಿದೆ)ವಿದ್ದು ಎಡಕೈ ಕಟ್ಯವಲಂ ಬಿತವಾಗಿದೆ.

ಮೇಲಿನ ಲಕುಲೀಶ ಶಿಲ್ಪಗಳಲ್ಲಿ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

೧. ಸಾಮಾನ್ಯವಾಗಿ ಲಕುಲೀಶ ಶಿಲ್ಪಗಳಲ್ಲಿ ಲಕುಲೀಶನು ವ್ಯಾಘ್ರ ಚರ್ಮವನ್ನು ಧರಿಸಿದ್ದು, ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದಲ್ಲಿನ ಶಿಲ್ಪ ಬಟ್ಟೆಯನ್ನು ಧರಿಸಿದೆ.

೨. ಲಕುಲೀಶ ಶಿಲ್ಪಗಳಲ್ಲಿ ಜಟಾಮಕುಟ ಇರುವುದು ಸಾಮಾನ್ಯ. ಆದರೆ ಐಹೊಳೆ ಶಿಲ್ಪದಲ್ಲಿ ಕಿರೀಟ ಮಕುಟವಿದೆ.

೩. ಲಕುಲೀಶ ಶಿಲ್ಪಗಳು ಊರ್ಧ್ವಮೇಢ್ರವಾಗಿವೆ.

೪. ಮಹಾಕೂಟದ ನಂದಿ ಮಂಟಪದ ಶಿಲ್ಪ, ಬಾದಾಮಿ ಯಲ್ಲಿನ ಶಿಲ್ಪ, ಗಳಗನಾಥನ ಶಿಲ್ಪಗಳಲ್ಲಿ ಅಪಸ್ಮಾರನಿಲ್ಲ.

೫. ಲಕುಲೀಶ ಶಿಲ್ಪಗಳು ಯಜ್ಞೋಪವೀತ ಹೊಂದಿವೆ.

೬. ವಿರೂಪಾಕ್ಷದೇವಾಲಯದಲ್ಲಿನ ಶಿಲ್ಪದಲ್ಲಿ ಲಕುಲೀಶನು ಗೆಜ್ಜೆಯಂತಿರುವ ಮೇಖಲಾ (ಉಡದಾರ) ಹಾಗೂ ಯಜ್ಞೋಪವೀತ ಧರಿಸಿದ್ದಾನೆ.

೭. ಮಹಾಕೂಟದ ನಂದಿ ಮಂಟಪದ ಪಕ್ಕದಲ್ಲಿನ ಶಿಲ್ಪ, ವಿರೂಪಾಕ್ಷ ದೇವಾಲಯದಲ್ಲಿನ ಶಿಲ್ಪ, ಮಲ್ಲಿಕಾರ್ಜುನ ದೇವಾಲಯದಲ್ಲಿನ ಶಿಲ್ಪ ಬಲಕೈಯಲ್ಲಿ ಲಕುಟ ಹಿಡಿದಿದ್ದು, ಎಡಕೈ ಕಟ್ಯವಲಂಬಿತವಾಗಿವೆ.

೮. ಮಹಾಕೂಟದ ಸಂಗಮೇಶ್ವರ ದೇವಾಲಯದಲ್ಲಿನ ಶಿಲ್ಪ, ಅರಳಿ ಗಿಡದ ಕೆಳಗಿನ ಶಿಲ್ಪ, ಪಟ್ಟದಕಲ್ಲಿನ ಕಾಡಸಿದ್ದೇಶ್ವರ ಶಿಲ್ಪ, ಜಂಬೂಲಿಂಗ ದೇವಾಲಯದಲ್ಲಿನ ಶಿಲ್ಪ ಇವುಗಳಲ್ಲಿ ಬಲಗೈ ವರದಮುದ್ರೆಯಲ್ಲಿದ್ದು, ಎಡಕೈಯಲ್ಲಿ ಪರಶು ಹಿಡಿದಿದ್ದಾನೆ.

೯. ವಿರೂಪಾಕ್ಷ ದೇವಾಲಯದಲ್ಲಿನ ಶಿಲ್ಪ ಬಲಕೈಯಲ್ಲಿ ಪರಶು ಹಿಡಿದಿದ್ದು, ಎಡಕೈ ಕಟ್ಯವಲಂಬಿತವಾಗಿದೆ.

ಶೈವ ಸಂದರ್ಭದಲ್ಲಿ ಲಕುಲೀಶನನ್ನು ಲಕುಲೀಶ ಪಾಶುಪತ ಮತದ ಪ್ರವರ್ತಕನೆಂದು ಭಾವಿಸಲಾಗುತ್ತದೆ. ಈ ಶಿಲ್ಪಗಳಿರುವುದು ಪಾಶುಪತ ಮತದ ಪ್ರಭಾವದ ಸಂಕೇತವೆಂದು ಪರಿಗಣಿಸಬಹುದು.

ಇಲ್ಲಿನ ಶೈವ ದೇವಾಲಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಣುತ್ತಿರುವ ಲಕುಲೀಶ ವಿಗ್ರಹಗಳು, ದೇವಾಲಯಗಳ ಮೇಲೆ ಲಕುಲೀಶ ಪಾಶುಪತರ ಮುದ್ರೆಯ ದ್ಯೋತಕವಾಗಿರುವಂತೆ ಕಾಣುತ್ತದೆ. ಈ ದೇಗುಲಗಳಿಗಿಂತ ಪ್ರಾಚೀನವಾದಂತಹ ಬಾದಾಮಿ ಮತ್ತು ಐಹೊಳೆಯ ಶೈವ ಗುಹಾಲಯಗಳಲ್ಲಿ ಲಕುಲೀಶ ವಿಗ್ರಹಗಳು ಇರದಿರುವುದು ಕುತೂಹಲಕಾರಿಯಾಗಿದ್ದು ಬಹುಶಃ ಅವು ಪಾಶುಪತೇತರರ ಶೈವ ದೇಗುಲಗಳೆಂದು ಕಾಣುತ್ತವೆ. ಹೀಗಾಗಿ ನಮಗೆ ದೊರೆಯುವ ಲಕುಲೀಶ ವಿಗ್ರಹಗಳು ಚಾಲುಕ್ಯರ ಕಾಲದ ಉತ್ತರಾರ್ಧದಲ್ಲಿ ಉಂಟಾದ ಲಕುಲೀಶ ಪಾಶುಪತದ ಪ್ರಭಾವದ ಹಾಗೂ ಶೈವ ಮತ ಸ್ವರೂಪದ ಬದಲಾವಣೆಯ ಸಂಕೇತಗಳೆಂದು ಭಾವಿಸಬಹುದು.*

* (ಡಾ. ಎಸ್. ವಿ. ಪಾಡಿಗಾರ, ಮುಖ್ಯಸ್ಥರು, ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕ.ವಿ.ವಿ., ಧಾರವಾಡ; ಡಾ. ಪ್ರಭು ಅ. ಗಂಜೀಹಾಳ, ಕನ್ನಡ ಉಪನ್ಯಾಸಕರು, ಶ್ರೀ ಕಲ್ಮೇಶ್ವರ ಪದವಿ ಮಹಾವಿದ್ಯಾಲಯ, ಹೊಳೆ-ಆಲೂರ, ತಾ:ರೋಣ. ಅವರಿಗೆ ಲೇಖಕರ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಸೇತುಮಾಧವಾಚಾರ್. ಆರ್., ಶ್ರೀಮದ್ವಾಯುಪುರಾಣಂ, ಅಧ್ಯಾಯ ೨೩, ಮಂತ್ರ ೨೦೬-೨೧೩, ಪುಟ ೩೭೪-೩೭೫.

೨. ಎಡತೊರೆ ಚಂದ್ರಶೇಖರಶಾಸ್ತ್ರಿ, ೧೯೪೫ : **ಶ್ರೀಲಿಂಗಮಹಾಪುರಾಣಂ**, ಸಂ-೧, ಅಧ್ಯಾಯ ೨೪, ಮಂತ್ರ ೧೨೨-೧೩೨ (ಅನುವಾದಕ)

೩. ಹನುಮಂತರಾವ್ ಜಿ; ೧೯೭೨ : **"ಪಾಶುಪತ ಆಗಮಗಳು"** (ಸಾಹಿತ್ಯ ವಾಹಿನಿ -೫೦) ಪು.೪.

೪. ಚೌಬೆ.ಎಂ.ಸಿ; ೧೯೯೭: **ಲಕುಲೀಶ ಇನ್ ಇಂಡಿಯನ್ ಆರ್ಟ್ ಆ್ಯಂಡ್ ಕಲ್ಚರ್**, ಪು.೭೧.

೫. ಹನುಮಂತರಾವ್. ಜಿ; **"ಪಾಶುಪತ ಆಗಮಗಳು"** (ಸಾಹಿತ್ಯ ವಾಹಿನಿ-೫೦) ಪು.೪

೬. ಪಾಡಿಗಾರ ಎಸ್.ವಿ; ೧೯೯೮ : "ಪುರಾತತ್ವ ಮತ್ತು ವೀರಶೈವ ಪರಂಪರೆ" **ವೀರಶೈವ ದರ್ಶನ**, 'ಸಂ.' ಹಿರೇಮಠ ಆರ್.ಸಿ. ಪು.೨೯೬.

೭. ಚೌಬೆ ಎಂ.ಸಿ., ೧೯೯೭ : **ಲಕುಲೀಶ ಇನ್ ಇಂಡಿಯನ್ ಆರ್ಟ್ ಆ್ಯಂಡ್ ಕಲ್ಚರ್**, ಪು. ೧೧೫.

೮. ಭಂಡಾರ್ಕರ್ ಆರ್.ಜಿ., ೧೯೨೮: **ವೈಷ್ಣವಿಜಂ, ಶೈವಿಜಂ ಆ್ಯಂಡ್ ಅದರ್ ಮೈನರ್ ರಿಲಿಜಿಯಸ್ ಸೆಕ್ಟ್ಸ್**, ಪು. ೧೬೫-೧೬೬.

೯. ಚೌಬೆ ಎಂ.ಸಿ., ೧೯೯೭: **ಲಕುಲೀಶ ಇನ್ ಇಂಡಿಯನ್ ಆರ್ಟ್ ಆ್ಯಂಡ್ ಕಲ್ಚರ್**, ಪು. ೧೧೫.

೧೦. ಅದೇ, ಪು. ೧೧೫.

ದೇವೇಂದ್ರ ಮಾಧವನವರ*

ಶಿರೋಳದ ಶಾಸನಸ್ಥ ಉಬ್ಬುಶಿಲ್ಪದಲ್ಲಿ ಶಬರಯೋಧರು

ಗದಗ ಜಿಲ್ಲೆಯ ನರಗುಂದ ತಾಲೂಕಾ ಶಿರೋಳ ಗ್ರಾಮ ಮಲಪ್ರಭಾ ನದಿಯ ದಡದಲ್ಲಿದೆ. ಇಲ್ಲಿಯ ತೋಂಟದಾರ್ಯ ಶಾಖಾ ಮಠದ ಆವರಣದ ಉತ್ತರ ಅಂಚಿನಲ್ಲಿ ಒಂದು ಶಾಸನಸ್ಥ ಉಬ್ಬು ಶಿಲ್ಪದ ಶಿಲೆಯಿದೆ. ಹಿಂದೆ ಕಲ್ಲುಗಂಬ ನೆಟ್ಟು, ಅವುಗಳಿಗೆ ಇದನ್ನು ಅಡ್ಡಲಾಗಿ ಆನಿಸಲಾಗಿದೆ. ಮಠದ ಆವರಣದಲ್ಲಿಯ ಮಣ್ಣಿನ ಗುಡ್ಡೆ ಅಗಿಯುವಾಗ (ಕ್ರಿ.ಶ. ೧೯೮೬) ಇದು ಹೊರಬಿತ್ತು. ಆಗ ಇದರ ಮೇಲಿನ ಮತ್ತು ಕೆಳಗಿನ ೬ ಅಂಗುಲ ಅಗಲದ ಅಂಚಿನಲ್ಲಿರುವ ಶಾಸನದ ಅಕ್ಷರಗಳೆಲ್ಲ ಸ್ಪಷ್ಟವಾಗಿದ್ದವು ಎಂದು ಸ್ಥಳೀಯ ಫೋಟೋ ಗ್ರಾಫರ್ ರುದ್ರಯ್ಯ ಹಿರೇಮಠ ಹೇಳುತ್ತಾರೆ. ಈಗ ಬಹುಪಾಲು ಅಕ್ಷರಗಳು ಸವೆದು ಹೋಗಿವೆ. ಅಲ್ಲಲ್ಲಿ 'ಹ', 'ಅ' ಇತ್ಯಾದಿ ಅಕ್ಷರಗಳು ಕಾಣುತ್ತಿವೆ.

ಇದು ಹಸಿರು ಮಿಶ್ರಿತ ಕರಿ ಕಲ್ಲು, ಉದ್ದ ೭೨", ಎತ್ತರ ೩೦" ಈ ಕಲ್ಲಿನಲ್ಲಿ ಅಡ್ಡಲಾಗಿ ಮೂರು ಭಾಗ ಮಾಡಿ ಮೂರು ಬೇಟೆಗಾರರ ಸುಂದರ ಶಿಲ್ಪ ಕೆತ್ತಲಾಗಿದೆ. ಈ ವ್ಯಕ್ತಿ ಶಿಲ್ಪದ ಎತ್ತರ ೧೯" ಈ ಮೂರೂ ಪುರುಷ ಶಿಲ್ಪಗಳು. ಮೂವರು ಬೇಟೆಗಾರರ ಕೊರಳಲ್ಲಿ ಮಣಿಸರ, ತಲೆಕಟ್ಟು, ಕೈಕಡಗ, ಕಾಲುಕಡಗ, ಒಂದು ಕೈಯಲ್ಲಿ ಕಿರುಗತ್ತಿ, ಕರ್ಣಾಭರಣ ಇವೆ. ಕಿವಿಗಳು ದೊಡ್ಡದಾಗಿವೆ. ಮೂರೂ ಬರಿ ಮೈಯಲ್ಲಿ ನಿಂತ ಭಂಗಿಯಲ್ಲಿವೆ, ಬರಿ ಪಾದಗಳು. ಒಂದನೆಯ, ಎರಡನೆಯ ವ್ಯಕ್ತಿಗಳ ತಲೆಯಲ್ಲಿ ಮೂರು ಗರಿಗಳು ಎದ್ದು ನಿಂತಿವೆ. ಮೂರೂ ವ್ಯಕ್ತಿಗಳ ನಡುವಿನಿಂದ ಇಳಿಬಿದ್ದು ಕೆಳಗೆ ಅಗಲವಾಗುತ್ತ ಹೋದ ಶೆಲ್ಲೆಯಂಥ ವಸ್ತ್ರ (ಎರಡು ಕಾಲುಗಳ ಮಧ್ಯ).

ಮೊದಲಿನ ಹಾಗೂ ಮೂರನೆಯ ವ್ಯಕ್ತಿಗಳ ಭಂಗಿ, ವೇಷಭೂಷಣ ಒಂದೇ ತೆರನಾಗಿವೆ. ಇವರಿಬ್ಬರ ಬಲಗೈಯಲ್ಲಿ ಕಿರುಗತ್ತಿ ಎಡಗೈಯಲ್ಲಿ ಬಿಲ್ಲು, ಬಲ ಭುಜದ ಹಿಂದೆ ಬಾಣ ತುಂಬಿದ ಬತ್ತಳಿಕೆ, ಸೊಂಟ ಪಟ್ಟಿಗೆ ಇಳಿಬಿದ್ದ ಹಿಡಿಕೆಯುಳ್ಳ ಸ್ವಲ್ಪ ಬಾಗಿದ ಜಂಬೆಯಂತಹ ಚಿಕ್ಕ ಆಯುಧಗಳಿವೆ. ಆಚೆ ಈಚೆ ಕೈಗಳು ಅಗಲವಾಗಿ ಚಾಚಿಕೊಂಡಿವೆ. ನಡಕಟ್ಟು, ನಡುವಿನಿಂದ ಆಚೆ ಈಚೆ ಇಳಿಬಿದ್ದ ವಸ್ತ್ರ, ತೊಡೆಗಳ ಮೇಲೆ ಎರಡು ಮೂರು ಪದರಿನ ಗಗ್ಗರಿಯಂತಹ ಚಣ್ಣದ ಉಡುಪು, ಮಾರುತಿಯ



* 'ನಿವೃತ್ತ ಕನ್ನಡ ಉಪನ್ಯಾಸಕ, ಹೊಳೆ ಆಲೂರು - ೫೮೨ ೨೦೩, ರೋಣ ತಾಲೂಕು-ಗದಗ ಜಿಲ್ಲೆ

ಠೀವಿಯಲ್ಲಿ ಎರಡು ಕಾಲುಗಳನ್ನು ಅಗಲವಾಗಿಟ್ಟು ಒಂದನ್ನು ತುಸು ಬಗ್ಗಿಸಲಾಗಿದೆ. ಮೂರನೆಯ ಶಬರನ ತಲೆಯಲ್ಲಿ ಗರಿಗಳಿಲ್ಲ, ಬಲಗಡೆ ತುರುಬು ಕಟ್ಟಲಾಗಿದೆ. ಆದರೆ ಸ್ತ್ರೀ ವಿಗ್ರಹವಲ್ಲ. ಮೂರನೆಯ ಯೋಧನ ಪಕ್ಕ ಅವನಿಗಿಂತ ಸ್ವಲ್ಪ ಎತ್ತರವಾದ ಛತ್ರಿಯನ್ನು ಒಬ್ಬ ಸೇವಕ (ಚಿಕ್ಕ ಆಕೃತಿ) ಅದರ ಬುಡದಲ್ಲಿ ಹಿಡಿದಿದ್ದಾನೆ. ಅವನ ಪಕ್ಕ ಇನ್ನೊಬ್ಬ ಥಡಿ ಹಾಕಿದ ಕುದುರೆಯ ಲಗಾಮು ಹಿಡಿದಿದ್ದಾನೆ. ಕುದುರೆ ಸ್ವಲ್ಪ ತಲೆ ತಗ್ಗಿಸಿದೆ.

ಮಧ್ಯದ ವ್ಯಕ್ತಿ ನೀಟಾಗಿ ನಿಂತ ಭಂಗಿಯಲ್ಲಿದೆ. ಎರಡೂ ತೊಡೆಗಳ ಮೇಲೆ ಇಳುಕಲಾಗಿ ವ್ಯಾಪಿಸಿದ ಪದರು ಪದರಾದ ಉಡುಪು. ಸೊಂಟದ ಮೇಲೆ ಇಟ್ಟ ಎಡಗೈಯಲ್ಲಿ ಕಿರುಗತ್ತಿ ಇದೆ. ಸೊಂಟದಿಂದ ಎಡಕ್ಕೆ ಇಳಿಬಿದ್ದ ವಸ್ತ್ರ, ಎಡ ರಟ್ಟೆಯ ಮೇಲೆ ಹಿಂದೆ ಸ್ವಲ್ಪ ಚಾಚಿದ ದುಂಡಾದ ಬಟ್ಟೆ ಗಂಟಿನಂತಹ ವಸ್ತುವಿದ್ದು ಇದರಿಂದ ಹೊರಟ ಎರಡು ಬಟ್ಟೆ ಲಡ್ಡುಗಳು ರಟ್ಟೆಯಿಂದ ಕೆಳಗೆ ಬಂದು ಬಗಲಲ್ಲಿ ಸೇರಿಕೊಂಡಿವೆ. ಇದು ಏನೆಂಬುದು ಅರ್ಥವಾಗುವುದಿಲ್ಲ. ಬೇಟೆ ಪ್ರಾಣಿ ಇರಲಿಕ್ಕಿಲ್ಲ. ಬಲೆಯ ಗಂಟಿರಬಹುದೆ? ಈ ವ್ಯಕ್ತಿಯಲ್ಲಿ ಬಿಲ್ಲು, ಬಾಣ, ಬತ್ತಳಿಕೆ, ಸೊಂಟದಲ್ಲಿ ಜಂಬೆ ಇಲ್ಲ. ಈ ವ್ಯಕ್ತಿಯ ಬಲ ಪಕ್ಕದಲ್ಲಿ ಚಿಕ್ಕ ಮಾನವ ಆಕೃತಿ ಇದೆ. ಇವ ಸೇವಕ ಎಂದು ಅನಿಸುವುದಿಲ್ಲ. ಮಗುವಿನ ಹಾಗೆ ಕಾಣುತ್ತದೆ! ಎರಡನೆಯ ಬೇಟೆಗಾರ ತನ್ನ ಬಲಗೈಯನ್ನು ಇಳಿಬಿಟ್ಟು ಈ ಆಕೃತಿಯ ತಲೆಗೆ ಸ್ಪರ್ಶಿಸುತ್ತಿರುವಂತೆ ಕಾಣುತ್ತದೆ.

ಮೊದಲಿನ ಇಬ್ಬರಲ್ಲಿ ಬೇಟೆಗೆ (ಸಮರಕ್ಕೆ) ಹೊರಡುವ ಸಿದ್ಧತೆ ಕಂಡುಬರುತ್ತದೆ. ಕೊನೆಯ ಶಿಲ್ಪದಲ್ಲಿ ಮಹಾ ಬೇಟೆಯಾಡಿ ಬಂದವನನ್ನು ಅಥವಾ ವೈರಿ ಪಡೆ ನಾಶಮಾಡಿ ಬಂದ ನಾಯಕನನ್ನು ಛತ್ರಿಚಾಮರಗಳಿಂದ ಸ್ವಾಗತಿಸಿ ಕುದುರೆ ಹತ್ತಿಸಿ ಮೆರವಣಿಗೆ ಹೊರಡಿಸುವ ಸನ್ನಾಹ ಕಂಡುಬರುತ್ತದೆ. ಇದು ವೀರಗಲ್ಲು (ವಿಜಯಗಲ್ಲು) ಇರಬಹುದೆ?

ಈ ಮೂರೂ ವ್ಯಕ್ತಿಶಿಲ್ಪಗಳ ಮೂಗು, ಕಣ್ಣು, ಬಾಯಿಗಳನ್ನು ಕೆಡಿಸಿದ್ದರಿಂದ ಮುಖಲಕ್ಷಣಗಳು ಗೊತ್ತಾಗುವುದಿಲ್ಲ. ಉಳಿದ ಎಲ್ಲ ಅವಯವಗಳು ಪ್ರಮಾಣಬದ್ಧವಾಗಿವೆ. ಒಟ್ಟಿನಲ್ಲಿ ಈ ಮೂರೂ ಸುಂದರ ಶಿಲ್ಪಗಳಾಗಿವೆ

* (ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಶಿರೋಳ ಗುರುಬಸವ ಪ್ರೌಢಶಾಲೆಯ ಮುಖ್ಯಾಧ್ಯಾಪಕ ಶ್ರೀ ಎಸ್. ಬಿ. ತೋಟದ ಮತ್ತು ಶ್ರೀ ರುದ್ರಯ್ಯ ಹಿರೇಮಠ ಇವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.)

ಜಿ.ವಿ. ಕಲ್ಲಾಪುರ*

ಕೆಳದಿ ಪಾರ್ವತೀ ದೇವಾಲಯದ ಕಾಷ್ಠಶಿಲ್ಪಗಳು

ಕೆಳದಿ ಕಾಲದ ಕಾಷ್ಠಶಿಲ್ಪಗಳ ಅಧ್ಯಯನ ಸಂಬಂಧವಾಗಿ ಪಾರ್ವತೀ ದೇವಾಲಯದ ಚತ್ತಿನಲ್ಲಿ ಎರಡು ಅಂಕಣಗಳಲ್ಲಿ ಇರುವ ಸುಂದರವಾದ ಕಾಷ್ಠಶಿಲ್ಪಗಳ ಬಗ್ಗೆ ಬೆಳಕು ಚೆಲ್ಲಲು ಇಲ್ಲಿ ಒಂದು ಪ್ರಯತ್ನ ಮಾಡಲಾಗಿದೆ.

ಭಾರತೀಯ ವಾಸ್ತುಶಿಲ್ಪದಲ್ಲಿ ಸೌಂದರ್ಯ ಪ್ರಜ್ಞೆಗೆ ಪ್ರಾಧಾನ್ಯತೆ ಕೊಡಲಾಗಿದೆ. ಪ್ರತಿಯೊಂದು ವಾಸ್ತು ಸುಭದ್ರಾ ಮತ್ತು ಸುಂದರವಾಗಿರಬೇಕು, ಪ್ರತಿಯೊಂದು ಪ್ರತಿಮೆಯು ಕಳೆದುಂಬಿರಬೇಕು. ಶಿಲ್ಪ ಎನ್ನುವ ಮಾತೇ 'ಶೀಲ ಸಮಾಧಾ' ಎಂಬ ಮೂಲದಿಂದ ಹೊರಹೊಮ್ಮಿದ್ದು, ಸಮಾಧಿಯು ಶಿಲ್ಪದಲ್ಲಿ ಮುಖ್ಯವಾದ ವಿವರ ಸಮಾಧಿಯೆಂದರೆ ಚಿತ್ತದ ಏಕಾಗ್ರತೆ, ಒಂದೊಂದು ಶಿಲ್ಪವನ್ನು ನಿರ್ಮಾಣ ಮಾಡುವಾಗಲೂ ಐತರೇಯ ಬ್ರಾಹ್ಮಣದಲ್ಲಿ ಹೇಳಿದಂತೆ (೬.೨೦.೫) ಶಿಲ್ಪಿಯನ್ನು ಅದು ಸಂಸ್ಕಾರಗೊಳಿಸುತ್ತದೆ (ಐತ್ಯೆರ್ಯಜಮಾನ ಆತ್ಮಾನಂ ಸಂಸ್ಕುರುತೇ). ಶಿಲೆಗಳಲ್ಲಿ ಲೋಹಗಳಲ್ಲಿ ಈ ರೀತಿಯ ಶಿಲ್ಪಗಳ ತಯಾರಿ ಸರ್ವೇಸಾಮಾನ್ಯವಾದರೂ ಮರವನ್ನು ಬಳಸಿಕೊಂಡು ಕಲೆಯನ್ನು ಅರಳಿಸುವುದು ಕಷ್ಟಸಾಧ್ಯವಾದ ಕೆಲಸ. ಕೆಳದಿ ಪಾರ್ವತೀ ದೇವಾಲಯದಲ್ಲಿ ನಲವತ್ತಕ್ಕೂ ಅಧಿಕ ಕಾಷ್ಠಶಿಲ್ಪಗಳಿದ್ದು ಅವುಗಳನ್ನು ಇಲ್ಲಿ ಶಿಲ್ಪಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಶಿಲ್ಪಿಗಳ ಸಂಕ್ಷಿಪ್ತ ಇತಿಹಾಸ

ವಿವಿಧ ಜಾತಿಯ ಮರಗಳನ್ನು ಬಳಸಿಕೊಂಡು ಕಲಾರಚನೆಗಳನ್ನು ತಯಾರಿಸುವ ಶಿಲ್ಪಿಗಳಿಗೆ ಗುಡಿಗಾರರು ಎಂಬ ನಾಮ ಬಳಕೆಯಲ್ಲಿದೆ. ಬಹಳ ಕಾಲದಿಂದ ಕರ್ನಾಟಕ ತನ್ನ ಕರಕುಶಲ ವಸ್ತುಗಳನ್ನು ಅತ್ಯಂತ ಸುಂದರವಾಗಿ, ಪರಿಪೂರ್ಣ ಸ್ಥಿತಿಯಲ್ಲಿ ಸಿದ್ಧಪಡಿಸುವ ಕಲೆಯಲ್ಲಿ ಪ್ರಗತಿಯನ್ನು ಸಾಧಿಸಿದೆ. ಈ ರಾಜ್ಯವು ಬಹುಕಾಲದಿಂದ ಜಗತ್ತಿನಾದ್ಯಂತ ಗಂಧ, ಚಂದನ ದಂತದ ಕೆತ್ತನೆಗಳಿಗೆ ಪ್ರಸಿದ್ಧವಾಗಿದೆ.

ಸುಮಾರು ೫೦೦-೬೦೦ ವರ್ಷಗಳ ಹಿಂದೆ ಗುಡಿಗಾರರು ಮೊಟ್ಟಮೊದಲು ಗೋವಾದಲ್ಲಿ ವಾಸಿಸುತ್ತಿದ್ದರೆಂದು ತಿಳಿದು ಬರುತ್ತದೆ. ಆದಿಲ್-ಶಾಹಿ ದೊರೆಗಳು ಮತ್ತು ಪೋರ್ಚುಗೀಸರಿಂದ ಉಂಟಾದ ರಾಜಕೀಯದ ತುಮುಲದಿಂದಾಗಿ ಇವರು ಗೋವೆಯನ್ನು ಬಿಟ್ಟು ಮುಖ್ಯವಾಗಿ ಸಾಗರ, ಸಿರ್ಸಿ, ಸೊರಬ, ಸಿದ್ದಾಪುರ, ಭಟ್ಕಳ, ಉಡುಪಿ ಸುತ್ತಮುತ್ತ ಬಂದು ನೆಲೆಸಿದರೆಂದು ತಿಳಿದುಬರುತ್ತದೆ. ಅವರು ಗೋವೆಯನ್ನು ಬಿಟ್ಟುಬರಲು ಮತಾಂತರದ ಭಯವೂ ಒಂದು ಕಾರಣವೆಂದು ತಿಳಿದು ಬರುತ್ತದೆ. ಸಾಗರದಲ್ಲಿ ನೂರಾರು ಗುಡಿಗಾರ ಕುಟುಂಬಗಳಿವೆ.

ಮೇಲೆ ಹೇಳಿದಂತೆ ರಾಜಕೀಯ ಮತ್ತು ಸಾಮಾಜಿಕ ಕಾರಣಗಳನ್ನು ಬಿಟ್ಟಂತೆ, ಒಂದೆಡೆ ಕರ್ನಾಟಕದ ಮಲೆನಾಡ ಪ್ರದೇಶದಲ್ಲಿ ಕಚ್ಚಾ ಸಾಮಗ್ರಿಗಳು ಲಭ್ಯವಾಗುತ್ತಿದ್ದುದು ಮತ್ತು ಅಲ್ಲಿ ಶಾಂತಿ ಮತ್ತು ನೆಮ್ಮದಿ ಇದ್ದ ಕಾರಣದಿಂದಾಗಿ ಗೋವೆಯನ್ನು ಬಿಟ್ಟು ಹೊರಬರಲು ಕಾರಣವಾಗಿರಬಹುದು. ಜೊತೆಗೆ ರಾಜಾಶ್ರಯ ಮತ್ತು ಮಠಾಧಿಪತಿಗಳ ಆಶ್ರಯ ಧಾರಾಳವಾಗಿ ದೊರೆತಿದ್ದರಿಂದ ಕರ್ನಾಟಕಕ್ಕೆ ವಲಸೆ ಬಂದರಂತೆ. ಗುಡಿಗಾರರು ಈ ಪ್ರದೇಶಗಳಲ್ಲಿ ವಾಸಿಸುವಂತೆ ಪ್ರೇರೇಪಿಸುವಲ್ಲಿ ಕೆಳದಿ ಅರಸರು ಗಣನೀಯ ಪಾತ್ರವಹಿಸಿರಬಹುದೆಂದು ಊಹಿಸಬಹುದಾಗಿದೆ.[೨] ಕಾರಣ ಕೆಳದಿ ದೇವಾಲಯದಲ್ಲಿನ ಕಾಷ್ಠಶಿಲ್ಪಗಳು ಇದಕ್ಕೆ ಸ್ಪಷ್ಟಸಾಕ್ಷಿಗಳಾಗಿ ನಿಂತಿವೆ.

ಕೆಳದಿ ಮತ್ತು ಕಾಷ್ಠಶಿಲ್ಪಕಲೆ

ಶ್ರೀಗಂಧ, ಚಂದನ, ಬೀಟೆ, ಸಾಗವಾನಿ, ಗಂಧಗರಿಗೆ, ಹಲಸು ಮುಂತಾದ ಮರಗಳನ್ನು ಬಳಸಿಕೊಂಡು ಅನೇಕ ದೇವತಾ ಮೂರ್ತಿಗಳು, ಮಂಟಪಗಳು, ವಿವಿಧ ಅಲಂಕಾರಗಳಿಂದ ಕೂಡಿದ ಕಂಭಗಳು, ಪ್ರಾಣಿ ಪಕ್ಷಿಗಳು, ಲತಾ-ಪುಷ್ಪಗಳು ಮುಂತಾದ ಕಲಾ ರಚನೆಗಳ ನಿರ್ಮಾಣದಲ್ಲಿ ಕೆಳದಿ ಕಾಲದ ಗುಡಿಗಾರರು ತಮ್ಮ ಕೌಶಲ್ಯವನ್ನು ಮೆರೆದಿದ್ದಾರೆ. ಕೆಳದಿ ಪಾರ್ವತೀ ದೇವಾಲಯದ ಚತ್ತಿನಲ್ಲಿ (ಸೀಲಿಂಗ್) ೧೨.೬x೧೯ ಅಡಿ ಅಳತೆಯ ಎರಡು ಅಂಕಣಗಳಲ್ಲಿ ಸುಮಾರು ಐವತ್ತಕ್ಕೂ ಅಧಿಕ ವಿವಿಧ ದೇವತೆಗಳ ಕಾಷ್ಠಶಿಲ್ಪಗಳನ್ನು ೨೫x೪೬ ಸೆಂಟಿಮೀಟರ್ ಅಳತೆಯ ಫಲಕಗಳಲ್ಲಿ ಕೆತ್ತನೆ ಮಾಡಿ ಕಲಾಪ್ರೌಢಿಮೆಯನ್ನು ಮೆರೆದಿದ್ದಾರೆ. ಚತ್ತಿನಲ್ಲಿ ೨ ಅಡಿx೨ ಅಡಿ ಅಗಲದ ಚಚೌಕಾಕೃತಿಯ ಅಂಕಣಗಳಲ್ಲಿ ವಿವಿಧ ರೀತಿಯ ಪದ್ಮಗಳಿಂದ ಅಲಂಕರಿಸಲಾಗಿದೆ. ಪ್ರತಿಯೊಂದು ವಿಗ್ರಹವನ್ನು ಒಂದೊಂದು ಮಂಟಪದಲ್ಲಿ ನಿಲ್ಲಿಸಲಾಗಿದೆ. ದೇವತಾ ಶಿಲ್ಪಗಳ ಮೇಲ್ಭಾಗದಲ್ಲಿ ಲತಾ,

* 'ಸುಮಿತ್ರ', ಪ್ರಿಯದರ್ಶಿನಿ ಬಡಾವಣೆ, ವಿನೋಬನಗರ, ಶಿವಮೊಗ್ಗ - ೫೭೭ ೨೦೪

ಪುಷ್ಪ, ವಿವಿಧ ಸಾಮಾಜಿಕ ಚಿತ್ರಣಗಳು, ಕೃಷ್ಣ ಲೀಲೆಗಳು ಮುಂತಾದವುಗಳಿಂದ ಶೃಂಗರಿಸಿದ್ದಾರೆ. ಮೊದಲನೇ ಅಂಕಣದಲ್ಲಿ ದೇವತಾ ಮೂರ್ತಿಗಳನ್ನು ಕೆತ್ತಿದ್ದರೆ, ಎರಡನೇ ಅಂಕಣದಲ್ಲಿ ಅಷ್ಟ ದಿಕ್ಪಾಲಕರು ಹಾಗೂ ಗಣಪತಿ ಮತ್ತು ವಿವಿಧ ಮರ, ಗಿಡ, ಬಳ್ಳಿಗಳ ಕೆತ್ತನೆಯ ಫಲಕಗಳನ್ನು ಅಳವಡಿಸಲಾಗಿದೆ. ಇವುಗಳ ರಚನೆಗೆ ಶಿಲ್ಪಿಗಳು ಚಂದನ, ಸಾಗವಾನಿ ಮತ್ತು ಹಲಸಿನ ಮರಗಳನ್ನು ಬಳಸಿದ್ದಾರೆ. ದೇವತಾ ಫಲಕಗಳನ್ನು ಶಿಲ್ಪಶಾಸ್ತ್ರಕ್ಕನುಗುಣವಾಗಿ ಕೆತ್ತನೆ ಮಾಡಿರುವುದು ಗಮನಾರ್ಹ. ದೇವತಾ ಫಲಕಗಳಲ್ಲಿ ಶಿವನಿಗೆ ಸಂಬಂಧಿಸಿದ ಹತ್ತಕ್ಕೂ ಅಧಿಕ ಫಲಕಗಳಿದ್ದು ಅವುಗಳಲ್ಲಿ ಸದ್ಯಕ್ಕೆ ಐದನ್ನು ಮಾತ್ರ ಅಧ್ಯಯನ ಮಾಡಲಾಗಿದೆ.

ಈ ಕಾಷ್ಠಶಿಲ್ಪಗಳ ರಚನೆ ಕೆಳದಿಯ ಯಾವ ಅರಸರ ಕಾಲದಲ್ಲಿ ಆಗಿದೆ ಹಾಗೂ ಇದನ್ನು ರಚಿಸಿದ ಶಿಲ್ಪಿಗಳು ಯಾರೆಂದು ಹೇಳುವುದು ಕಷ್ಟ. ಕಾರಣ ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇದುವರೆಗೂ ಲಭ್ಯವಾಗಿಲ್ಲ. ಮರ ಮತ್ತು ಶೈಲಿಯ ದೃಷ್ಟಿಯಿಂದ ಹದಿನೇಳನೇ ಶತಮಾನದ್ದಿರಬಹುದೆಂದು ಊಹಿಸ ಬಹುದಾಗಿದೆ.

ಪುರಾಣಗಳು, ಶೈವಾಗಮಗಳು, ಶಿಲ್ಪರತ್ನ ಮುಂತಾದ ಕೃತಿಗಳಲ್ಲಿ ಶಿವನ ಮೂವತ್ತಕ್ಕೂ ಅಧಿಕ ರೂಪಗಳನ್ನು ಅವುಗಳ ಲಕ್ಷಣಗಳನ್ನು ವಿವರಿಸಲಾಗಿದೆ. ಕೆಳದಿಯ ಪಾರ್ವತೀ ದೇವಾಲಯದಲ್ಲಿನ ಕಾಷ್ಠಶಿಲ್ಪಗಳಲ್ಲಿ ಹತ್ತಕ್ಕೂ ಅಧಿಕ ಶಿವನ ಮೂರ್ತಿಗಳನ್ನು ಹಾಗೂ ಕೃಷ್ಣನ ಕೆಲವು ರೂಪಗಳನ್ನು ಮತ್ತು ವಾದ್ಯಗಾರರ ಆರು ಕೃತಿಗಳನ್ನು ಅಳವಡಿಸಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಶಿವನ ಐದುಮೂರ್ತಿಗಳನ್ನು ಶಿಲ್ಪಶಾಸ್ತ್ರದ ಲಕ್ಷಣಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಈ ಪ್ರಬಂಧದಲ್ಲಿ ಶ್ರೀ ಅಘೋರೇಶ್ವರ, ಗಜಾಸುರ ಸಂಹಾರಮೂರ್ತಿ, ಕಂಕಾಳಮೂರ್ತಿ, ಆಲಿಂಗನಮೂರ್ತಿ, ವೀರಭದ್ರಮೂರ್ತಿ ರಚನೆಗಳ ವಿವರಗಳನ್ನು ಚರ್ಚಿಸಲಾಗಿದೆ.

ಶ್ರೀ ಅಘೋರೇಶ್ವರಮೂರ್ತಿ ಲಕ್ಷಣ[1]

ಈ ಮೂರ್ತಿಯು ಕೆಳದಿಯ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾಗಿದ್ದು, ಕೆಳದಿ ರಾಜಧಾನಿ ಆಗಿದ್ದ ಇಕ್ಕೇರಿಯಲ್ಲಿ ಇದಕ್ಕಾಗಿ ಬೃಹತ್ತಾದ ದೇವಾಲಯವನ್ನು ದೊಡ್ಡ ಸಂಕಣ್ಣ ನಾಯಕನು ತೀರ್ಥಯಾತ್ರೆಗೆ ಹೋದಾಗ ಮಹಾರಾಷ್ಟ್ರದ ಪೈಠಣದಲ್ಲಿ ಅಘೋರೇಶ್ವರಮೂರ್ತಿಯನ್ನು ನೋಡಿದ್ದನಂತೆ. ಅದೇ ರೀತಿಯ ಮೂರ್ತಿಯನ್ನು ಇಕ್ಕೆರಿಯಲ್ಲಿ ಪ್ರತಿಷ್ಠೆ ಮಾಡಿಸಿದ್ದಾಗಿ ಶಿವವತತ್ವ ರತ್ನಾಕರ' ಮತ್ತು 'ಕೆಳದಿ ನೃಪವಿಜಯ' ಕಾವ್ಯಗಳಿಂದ ತಿಳಿದು ಬರುತ್ತದೆ. ಇಕ್ಕೇರಿಯಲ್ಲಿನ ಮೂರ್ತಿಯು ರಾಜಕೀಯ ದಾಳಿಯಲ್ಲಿ ಭಗ್ನವಾಗಿದ್ದು, ಇಗ ಅದರ ಅವಶೇಷ ಮತ್ತು ಉತ್ಸವ ಮೂರ್ತಿಗಳನ್ನು ಮಾತ್ರ ನೋಡಬಹುದಾಗಿದೆ. ಮೂರ್ತಿ ಸ್ಥಳದಲ್ಲಿ ಶಿವಲಿಂಗವನ್ನು ಪ್ರತಿಷ್ಠೆ ಮಾಡಲಾಗಿದೆ. ಕೆಳದಿ ಪಾರ್ವತೀ ದೇವಾಲಯದಲ್ಲಿ ಕಾಷ್ಠಶಿಲ್ಪದಲ್ಲಿ ಅದರ ಪ್ರತಿಕೃತಿಯನ್ನು ರಚಿಸಿ ಅಳವಡಿಸಲಾಗಿದ್ದು ಮೂವತ್ತೆರಡು ಕೈಗಳಿಂದ ಕೂಡಿರುವ ಅದು ಅತ್ಯಂತ ಮನೋಹರವಾಗಿದೆ.

ಶಿಲ್ಪಶಾಸ್ತ್ರ ಕೃತಿಗಳಲ್ಲಿ ಎಂಟು ಬಾಹುಗಳಿರುವ, ಹತ್ತುಬಾಹುಗಳಿರುವ ಹಾಗೂ ಮುವತ್ತೆರಡು ಬಾಹುಗಳಿರುವ ಮೂರು ರೀತಿಯ ಅಘೋರೇಶ್ವರಮೂರ್ತಿಯ ವರ್ಣನೆಗಳಿದ್ದು ಅವುಗಳಲ್ಲಿ ಮೊದಲಿನೆರಡು ಉಗ್ರಮೂರ್ತಿಗಳಾಗಿದ್ದು, ಮೂರನೆ ಯದು ಸೌಮ್ಯ ಮೂರ್ತಿ. ಕೆಳದಿ ಪಾರ್ವತಿ ದೇವಾಲಯದ ಕಾಷ್ಠಶಿಲ್ಪವು ಮುವತ್ತೆರಡು ಕೈಗಳ ಸೌಮ್ಯ ಮೂರ್ತಿಯಾಗಿದ್ದು ಅದರ ಲಕ್ಷಣಗಳನ್ನು 'ಶಿವತತ್ವರತ್ನಾಕರ'ದಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ.

ಏಕವಕ್ತ್ರಂ ಸದಾನಂದಂ ದ್ವಾತ್ರಿಂಶುದ್ಭುಜಸಂಯುತಮ್॥
ಜಟಾಮುಕುಟ ಸಂಯುಕ್ತಂ ತ್ರಿಣೇತ್ರಂ ಚಂದ್ರ ಶೇಖರಮ್॥೧೬೫॥

ಅಭಯಂ ಖಡ್ಗಶೂಲೇ ಚ ಚಕ್ರಂ ಡಮರುಕರ ತಥಾ।
ದಧಾನಮಸ್ಥಿಬಾಣಾ ಚ ಗದಾಂ ಪದ್ಮಂ ಕಪಾಲಕಂ॥ ೧೬೬॥

ಜ್ಞಾನಮುದ್ರಾಂ ಕುಂತಹಸ್ತಂ ಅಂಕುಶಂ ಚಾಕ್ಷಮಾಲಿಕಾಮ್।
ಖಟ್ವಾಂಗಂ ಪರಶುಂ ಚೈವ ದಧಾನಂ ದಕ್ಷಿಣೈರ್ಭುಜೈಃ ॥೧೬೭॥

ವರಂ ಚ ಫಲಕಂ ಚೈವ ಟಂಕಂ ಪಾಶಂ ಚ ಮುದ್ಗರಮ್।
ನಾಗಮಗ್ನಿಂ ಮೃಗಂ ಘಂಟಾಂ ಧನುಶ್ಚ ಕಟಿಹಸ್ತಕಮ್ ॥೧೬೮॥

ರತ್ನಂ ಚ ಕುಮುದಂ ಕುಂಭಂ ಖೇಟಕಂ ಪುಸ್ತಕಂ ತಥಾ।
ಅಘೋರಮೂರ್ತಿಂ ನೀಲಾಭಂ ರುಂಡಮಾಲಾ ವಿಭೂಷಿತಮ್ ॥೧೬೯॥

ಕಾಲಮುಂಡಸ್ಯ ಶಿರಸಿ ಸ್ಥಿತಂ ಸರ್ವಾಭಯಪ್ರದಮ್।
ವಾಮೇ ಯಸ್ತು ಬಿಭರ್ತಿ ಚಾಪಫಲಕೌ ದಕ್ಷೇಸಿಬಾಣಾ ಸಥಾ।
ಹಸ್ತಾಭ್ಯಾಂ ಸ ಚತುರ್ಭುಜಸ್ತ್ರಿಣಯನಃ ಶ್ರೀ ಭದ್ರಕಾಲೀಯುತಃ

ದತ್ತೇ ಬ್ರಹ್ಮ ಕಪಾಲದಾಮ ಹೃದಯೇಯಃಪಾದುಕಾ।
ನ್ಯಸ್ತಪಾದೀಶಕ್ರೋಧ ಸಮುದ್ಭವಃ ಸ ಭುವತು ಶ್ರೀವೀರಭದ್ರಃಶ್ರೀಯೇ॥೧೭೦॥

ಒಂದು ಮುಖದ, ನಿತ್ಯಾನಂದಸ್ವರೂಪಿಯಾದ, ಮೂವತ್ತೆರಡು ಭುಜಗಳು, ಜಟೆ, ಮುಕುಟಗಳನ್ನು ಧರಿಸಿರುವ, ಮೂರು ಕಣ್ಣುಗಳುಳ್ಳ, ಚಂದ್ರನನ್ನು ತಲೆಯ ಆಭರಣವಾಗಿ ಹೊಂದಿರುವ, ಅಭಯಮುದ್ರೆ ಹಸ್ತ, ಖಡ್ಗ, ಶೂಲ, ಚಕ್ರ ಡಮರುಗ, ಮೂಳೆ, ಬಾಣ, ಗದಾ, ಪದ್ಮ, ಕಪಾಲ, ಕುಂತವನ್ನು ಧರಿಸಿ ಜ್ಞಾನಸಮುದ್ರೆ ತೋರಿಸುತ್ತಿರುವ ಅಂಕುಶವನ್ನು, ರುದ್ರಾಕ್ಷವನ್ನು ಖಟ್ವಾಂಗ ಕೊಡಲಿ ಇವುಗಳನ್ನು ಬಲಭಾಗದ ಭುಜಗಳಲ್ಲಿ ಧರಿಸಿರುವ ವರದ ಹಸ್ತ, ಫಲಕ, ಟಂಕ, ಪಾಶ, ಮುದ್ಗರ, ಸರ್ಪ, ಅಗ್ನಿ, ಮೃಗ, ಘಂಟೆ, ಧನುಸ್ಸು, ರತ್ನ, ಕುಮುದ, ಕುಂಭ, ಖೇಟಕ, ಪುಸ್ತಕ, ಇವನ್ನು ಧರಿಸಿ ಸೊಂಟದ ಮೇಲೆ ಕೈಯಿಟ್ಟು ಕಾಲಮುಂಡದ ತಲೆಯ ಮೇಲೆ ನಿಂತು ಎಲ್ಲರಿಗೂ ಅಭ್ಯಯವನ್ನು ನೀಡುವ, ರುಂಡಮಾಲೆ ಧರಿಸಿರುವಂತೆ ಶಿಲ್ಪವನ್ನು ರಚಿಸಬೇಕು ಎಂದಿದೆ. ಕೆಳದಿ ಪಾರ್ವತಿ ದೇವಾಲಯದ ಕಾಷ್ಠಶಿಲ್ಪದಲ್ಲಿಯೂ ಈ ಎಲ್ಲಾ ಲಕ್ಷಣಗಳನ್ನು ಕಾಣಬಹುದಾಗಿದೆ. ಚಿತ್ರ ೧ ನೋಡಿ.

ಗಜಾಸುರ ಸಂಹಾರಮೂರ್ತಿ ಲಕ್ಷಣ[೪]

ಅಷ್ಟಾದಶಭುಜಂ ಕ್ವಾಪಿ ಚತುರ್ಬಾಹುರಥಾಪಿ ವಾ।
ತೆ ಶಸ್ತ್ರಾಣಿ ಪ್ರವಕ್ಷ್ಯಾಮಿ ಭುಜೇಷು ಚ ಯಥಾಕ್ರಮಮ್॥
ಅಕ್ಷಮಾಲಾಮಸಿಂ ಶಕ್ತಿಂ ದಂಡಂ ಶೂಲಂ ಚ ದಕ್ಷಿಣೆ।
ಖಟ್ವಾಂಗಂ ಭುಜಗಂ ಚೈವ ಕಪಾಲಂ ಖೇಟಕಂ ತಥಾ॥
ಹರಿಣಂ ಚ ತಥಾ ಹಸ್ತಿ ವಾಮಭಾಗೇ ನಿವೇಶಯೇತ್॥
ಗಜಾಸುರವಧೇನಾಥ್ಯೇ ಬಾಹುಬಿರ್ದಶಭಿರ್ಯುತಃ॥

ಗಜಾಸುರ ಸಂಹಾರ ಮೂರ್ತಿಯಲ್ಲಿ ಎರಡು ವಿಧ ಹೇಳಲಾಗಿದೆ. ನಿಂತಭಂಗಿಯಲ್ಲಿರುತ್ತದೆ, ನಾಲ್ಕು ಕೈಗಳಾಗಲಿ ಅಥವಾ ಎಂಟುಕೈಗಳಾಗಲಿ ಇರಬಹುದು. ನಾಲ್ಕು ಕೈಗಳಿದ್ದರೆ ಬಲಭಾಗದ ಕೈಗಳಲ್ಲಿ ಪಾಶ, ಗಜ ಚರ್ಮ ಇದ್ದರೆ, ಎಡಭಾಗದ ಕೈಗಳಲ್ಲಿ ಗಜಚರ್ಮ, ಆನೆಯ ದಂತ ಇರಬೇಕು. ಎಂಟು ಕೈಗಳಲ್ಲಿದ್ದರೆ ಶೂಲ, ಡಮರುಗ, ಪಾಶ, ಗಜಚರ್ಮ, ಬಲಕೈಗಳಲ್ಲಿದ್ದರೆ, ದಂತ, ಕಪಾಲ, ಗಜಚರ್ಮ ಮತ್ತು ವಿಸ್ಮಯ ಮುದ್ರೆ ಎಡ ಕೈಗಳಲ್ಲಿರುತ್ತದೆ. ಶಿವನ ಎಡಪಾದದ ಅಡಿಯಲ್ಲಿ ಗಜಾಸುರನ ತಲೆಯನ್ನು ಇರಿಸಿರಬೇಕು. ಮುಕುಟದ ಮೇಲೆ ಆನೆಯ ಬಾಲವಿರಬೇಕು. ಶಿವನ ಮೇಲ್ಭಾಗದಲ್ಲಿ ಎರಡು ಕಡೆ ಆನೆಯ ಪಾದಗಳನ್ನು ರೂಪಿಸಬೇಕು. ಆನೆಯ ಚರ್ಮವು ಪ್ರಭಾಮಂಡಲದಂತೆ ವಿಸ್ತರಿಸಿರುವಂತೆ ತೋರಿಸಬೇಕು. ವ್ಯಾಘ್ರ ಚರ್ಮಾಂಬರ ನಾಗಿರಬೇಕು. ಎರಡನೆ ಬಗೆಯಲ್ಲಿ- ಶೂಲ, ಖಡ್ಗ, ಚರ್ಮ, ದಂತ ಬಲಕೈಗಳಲ್ಲಿ ಹಾಗೂ ಕಪಾಲ, ಖೇಟಕ (ಗುರಾಣಿ), ಘಂಟೆ, ಗಜಚರ್ಮ ಎಡಕೈಗಳಲ್ಲಿರಬೇಕು. ಎಡಪಾದವು ಗಜಾಸುರನ ತಲೆಯ ಮೇಲೆ ಸ್ಥಿರವಾಗಿರಬೇಕು. ಬಲಗಾಲನ್ನು ಎತ್ತಿ ಅಡ್ಡಲಾಗಿ ಕಂಚಿತವಾಗಿರಿಸಬೇಕು. ಈ ಪಾದವು ಉತ್ಕುಟಿ ಕಾಸನದಲ್ಲಿ ಇರಬೇಕು. ಕೆಳದಿ ಪಾರ್ವತಿ ದೇವಾಲಯ ದಲ್ಲಿನ ಕಾಷ್ಠ ಶಿಲ್ಪವು ಎರಡನೆಯ ಲಕ್ಷಣವುಳ್ಳದ್ದಾಗಿದೆ. ಚಿತ್ರ ೨ ನೋಡಿ.

ಕಂಕಾಳಮೂರ್ತಿ ಲಕ್ಷಣ[೫]

ಕಂಕಾಳಮೂರ್ತಿಯು ಪಾದಗಳಿಗೆ ಪಾದುಕೆಗಳನ್ನು ಧರಿಸಿದ್ದು ಭಿಕ್ಷುವಿನಂತಿರಬೇಕು. ಹುಲಿಯ ಚರ್ಮ ಅಥವಾ ರೇಷ್ಮೆ ವಸ್ತ್ರವನ್ನು ಧರಿಸಿದ್ದು ಮುಖದಲ್ಲಿ ರುದ್ರ ಕಳೆಯು ತೇಜೋವಂತವಾಗಿರಬೇಕು. ಸ್ವಾಮಿಯ ಅಂಗಾಂಗಗಳೆಲ್ಲಾ ಭಸ್ಮದಿಂದ ಲೇಪಿತವಾಗಿರಬೇಕು. ತೆಳುವಾದ ಕಿರುನಗೆ ಇರಬೇಕು. ಎಡಭುಜದ ಮೇಲೆ ಕಂಕಾಳವನ್ನು ಧರಿಸಿರಬೇಕು. ಶಿವನ ಮುಂದೆ ಒಂದು ಭೂತವು ನಿಂತಿದ್ದು ಬಲಿಪಾತ್ರೆಯನ್ನು ಎರಡು ಕೈಗಳಿಂದ ತಲೆಯಮೇಲೆ ಎತ್ತಿ ಹಿಡಿದಿರಬೇಕು. ಈ ಭೂತದ ವಸ್ತ್ರವು ಸರಿದು ಅದರ ಮರ್ಮಾಂಗವು ಸ್ವಲ್ಪವಾಗಿ ಕಾಣಿಸುತ್ತಿರಬೇಕು. ಶಿವನ ಸೊಂಟದಲ್ಲಿ ಸಣ್ಣ ಕತ್ತಿಯನ್ನು ತೂಗಾಡುತ್ತಿರುವಂತೆ ರೂಪಿಸಬೇಕು. ಶಿವನ ಬಲಗಡೆಗೆ, ಮೊಣಕಾಲುಗಳ ಎತ್ತರಕ್ಕೆ ಜಿಂಕೆಯೊಂದು ಹಿಂಗಾಲುಗಳ ಮೇಲೆ ನಿಂತು, ಮುಂಗಾಲುಗಳನ್ನು ಮಡಚಿ ಕೊಂಡಿರಬೇಕು. ಎಡಗಡೆಯ ಹಿಂದಿನ ತೋಳು ನೇಗಿಲನ್ನು ಹೆಗಲ ಮೇಲೆ ಇಟ್ಟುಕೊಂಡಿರುವಂತೆ ಇರಬೇಕು. ಬಂಗಾರದ ಹಿಡಿಯನ್ನು ಅಂಗುಷ್ಠ ಮತ್ತು ತೋರುಬೆರಳುಗಳು ಹಿಡಿದಿರುವಂತೆ ರೂಪಿಸಬೇಕು. ಬಲಗಡೆಯ ಹಿಂದಿನ ತೋಳು ಹಾಗೂ ಎಡಗಡೆಯ ಹಿಂದಿನ ತೋಳುಗಳು ಶೂಲವನ್ನು ಹೆಗಲಿನ ಮೇಲೆ ಅಡ್ಡಲಾಗಿ ಇರಿಸಿಕೊಂಡಿರಬೇಕು. ಬಲಗಡೆ ಮುಂದಿನ ಹಸ್ತದಲ್ಲಿ ಹುಲ್ಲನ್ನು (ದರ್ಬೆ) ಹಿಡಿದಿರಬೇಕು. ವಿಗ್ರಹವು ಗಮನ ಸ್ಥಿತಿಯಲ್ಲಿರಬೇಕು. ಹೆಗಲ ಮೇಲಿನ ಶೂಲವು ಉದ್ದವಾಗಿರಬೇಕು ಶೂಲದ ಅಗ್ರದ ಕಡೆಗೆ ಘಾತುಕನ ಕಂಕಾಳವು (ಅಸ್ಥಿಪಂಜರವು) ಕಟ್ಟಿರಬೇಕು. ಇದು ಬಹು ಭಯಂಕರವಾದು ದರಿಂದ ಜೋಳಿಗೆಯ ರೀತಿಯಲ್ಲಿ ಶೂಲದಿಂದ ಇಳಿಬಿಟ್ಟ ಬಟ್ಟೆಯಲ್ಲಿ ಭದ್ರಪಡಿಸಿ ಕಟ್ಟಿರುವುದು ವಾಡಿಕೆ. ಆದ್ದರಿಂದ ಕಂಕಾಳವು ನೇರವಾಗಿ ಕಾಣುವುದಿಲ್ಲ. ಈ ಎಲ್ಲಾ ಲಕ್ಷಣಗಳು ಕೆಳದಿಯ ಕಾಷ್ಠಶಿಲ್ಪದಲ್ಲಿ ಅಳವಡಿಸಲಾಗಿದೆ. ಚಿತ್ರ ೩ ನೋಡಿ.

ಆಲಿಂಗನಮೂರ್ತಿ ಲಕ್ಷಣ[೬]

ಮೂರು ವಿಧವನ್ನು ಹೇಳಲಾಗಿದೆ. ಶಿವನು ತನ್ನ ಎಡತೋಳಿನಿಂದ ಅಪ್ಪಿಕೊಂಡಿರುವಂತೆ ಇರಬೇಕು. ಶಿವನ ಎಡ ಹಸ್ತವು ದೇವಿಯ ಎಡಸ್ತನದ ಕೆಳಭಾಗದಲ್ಲಿ ಅಥವ ದೇವಿಯ ಎಡತೋಳಿನ ಮೇಲೆ ಇರಬೇಕು. ಈ ಹಸ್ತವು ದೇವಿಯ ಪಾರ್ಶ್ವಸೂತ್ರದ ಹೊರಗೆ ಇರಬೇಕು. ದೇವಿಯು ಶಿವನನ್ನು ಹಿಡಿಯದೆ ಪ್ರತ್ಯೇಕವಾಗಿಯೂ ಇರಬಹುದು. ಈ ರೂಪದಲ್ಲಿ ಶಿವನಿಗೆ ನಾಲ್ಕು ತೋಳುಗಳು ಇರುತ್ತವೆ. ಅಭಯ ಮುದ್ರೆಯೊಂದಿಗೆ ಬಲಹಸ್ತದಲ್ಲಿ ಅಕ್ಷಮಾಲೆಯೂ ಇರುವಂತೆ ತೋರಿಸಬೇಕು. ವರದ ಮುದ್ರೆ ಎಡಹಸ್ತವು ದೇವಿಯನ್ನು ಬಳಸಿರುತ್ತದೆ. ದೇವಿಗೆ ಎರಡು ಭುಜಗಳು ಮಾತ್ರವೇ ಇರಬೇಕು. ದೇವಿಯನ್ನು ಶಿವನ ಬಲತೋಳು ಬಳಸಿರುವುದರೊಂದಿಗೆ ಎಡಹಸ್ತದಿಂದ ದೇವಿಯ ಬಲಹಸ್ತವನ್ನು ಹಿಡಿದಿರುವಂತೆಯೂ ರೂಪಿಸಬಹುದು. ಶಿವ-ಪಾರ್ವತಿಯರಿಬ್ಬರೂ ತ್ರಿಭಂಗಿಯಲ್ಲಾಗಲಿ, ದೇವಿ ಮಾತ್ರವೇ ತ್ರಿಭಂಗಿಯಲ್ಲಾಗಲಿ ಇರಬಹುದು. ದೇವಿಯು ತನ್ನ ಬಲಹಸ್ತದಿಂದ ದೇವನನ್ನು ಬಳಸಿ ಸೊಂಟದ ಮೇಲೆ ಹಿಡಿದಿರಬೇಕು. ಎಡಹಸ್ತದಲ್ಲಿ ಕೆಂಪು ತಾವರೆಯನ್ನು ಹಿಡಿದಿರಬೇಕು. ಹಾಗೆ ಆಲಿಂಗನ ಮುದ್ರೆ ಇಲ್ಲದೆ ಇದ್ದರೆ ಬಲಹಸ್ತದಲ್ಲಿ ಕೆಂದಾವರೆಯನ್ನು ಹಿಡಿದಿದ್ದು, ಎಡಹಸ್ತವು ಡೋಲಾಹಸ್ತವಾಗಿ ತೂಗಾಡುತ್ತಿರುವಂತೆ ಇರಬೇಕು. ಅಥವ ಸೊಂಟದ ಕೆಳಭಾಗದ ತೊಡೆಯಮೇಲೆ (ಕಟ್ಯಾವಲಂಬಿತಂ) ಕೈ ಇರಿಸಿಕೊಂಡಿರಬಹುದು. ಅಥವ ಶಿವ ಪಾರ್ವತಿಯರಿಬ್ಬರೂ ಬಲತೋಳನ್ನು ಬಳಸಿ ಹಾಗೂ ಎಡತೋಳನ್ನೂ ಬಳಸಿ ಪರಸ್ಪರ ಆಲಿಂಗನ ಭಂಗಿಯಲ್ಲಿ ಇರಬಹುದು. ಹೀಗೆ ಮೂರು ಬಗೆಯಾಗಿ ಆಲಿಂಗನ ಮೂರ್ತಿಯನ್ನು ಶಿಲ್ಪಗಳಲ್ಲಿ ರೂಪಿಸಬಹುದು.

ಕೆಳದಿ ಪಾರ್ವತೀ ದೇವಾಲಯದ ಕಾಷ್ಠಶಿಲ್ಪದಲ್ಲಿ ಶಿವನು

ಕೆಳದಿ ಪಾರ್ವತೀ ದೇವಾಲಯದ ಕಾಷ್ಠ ಶಿಲ್ಪಗಳು


ಚಿತ್ರ ೧


ಚಿತ್ರ ೨


ಚಿತ್ರ ೩


ಚಿತ್ರ ೪


ಚಿತ್ರ ೫


ಚಿತ್ರ ೬

ಎಡಹಸ್ತವು ಪಾರ್ವತಿಯ ಎಡಭುಜದಮೇಲೆ ಇದೆ. ಬಲಹಸ್ತದಿಂದ ಅವಳ ಮುಖವನ್ನು ಸ್ಪರ್ಶಮಾಡಿದ್ದಾನೆ. ಮತ್ತೊಂದು ಬಲಹಸ್ತದಲ್ಲಿ ಟಂಕವನ್ನು, ಎಡಹಸ್ತದಲ್ಲಿ ಮೃಗವನ್ನು ಹಿಡಿದಿದ್ದಾನೆ. ಜಿಂಕೆಯು ಶಿವನನ್ನು ನೋಡುತ್ತಿದೆ. ದೇವಿಯ ಬಲಗೈಯಲ್ಲಿ ಕೆಂದಾವರೆಯನ್ನು ಹಿಡಿದಿದ್ದು ಎಡಹಸ್ತವು ಡೊಲಾಹಸ್ತವಾಗಿ ಸೊಂಟದ ಕೆಳಭಾಗದ ತೊಡೆಯಮೇಲೆ ಇಟ್ಟುಕೊಂಡಿರುವಂತಿದೆ. ಹೀಗೆ ಗುಡಿಗಾರರು ಮರದಲ್ಲಿ ಶಿಲ್ಪಶಾಸ್ತ್ರಕ್ಕನುಗುಣವಾಗಿ ಈ ಮೂರ್ತಿಯನ್ನು ರಚಿಸಿದ್ದಾರೆ. ಚಿತ್ರ ೪ ನೋಡಿ.

ವೀರಭದ್ರಮೂರ್ತಿ ಲಕ್ಷಣ[೭]

ಈ ಮೂರ್ತಿಯು ಮುಕ್ಕಣ್ಣ, ಚತುರ್ಭುಜ, ರುಂಡಮಾಲಾಧರ, ಜಟಾಮುಕುಟ, ಭಯಾನಕ ರೂಪ, ಬಲಗೈಗಳಲ್ಲಿ ಖಡ್ಗ ಮತ್ತು ಬಾಣ, ಎಡಗೈಗಳಲ್ಲಿ ಬಿಲ್ಲು ಮತ್ತು ಢಾಲು, ಕಾಲುಗಳಲ್ಲಿ ಹಾವುಗೆ, ಎಡಭಾಗದಲ್ಲಿ ಭದ್ರಕಾಳಿ ಅಥವಾ ಟಗರು ಮುಖದ ದಕ್ಷಬ್ರಹ್ಮ ನಮಸ್ಕಾರ ಮುದ್ರೆಯಲ್ಲಿ ತನ್ನೆರಡೂ ಕೈಗಳನ್ನು ಜೋಡಿಸಿಕೊಂಡು ಶಿವಧ್ಯಾನ ಮಾಡುತ್ತಾ ನಿಂತಿರುತ್ತಾನೆ. ಅವನ ತಲೆಯ ಮೇಲೆ ಕೋಡುಗಳಿರುತ್ತವೆ. ಈ ಮೇಲಿನ ಲಕ್ಷಣಗಳನ್ನೊಳಗೊಂಡ ಕಾಷ್ಠಶಿಲ್ಪ ಕೆಳದಿಯ ಪಾರ್ವತೀ ದೇವಾಲಯದಲ್ಲಿದ್ದು ಅದರಲ್ಲಿ ದಕ್ಷಬ್ರಹ್ಮ (ಚಿತ್ರ ೫), ಇರುವಂತೆ ಕೆತ್ತಲಾಗಿದೆ. ಚಿತ್ರ ೬: ಭದ್ರಕಾಳಿ ಶಿಲ್ಪದ್ದಾಗಿದೆ.*

* (ನನ್ನ ಶೋಧನೆಗೆ ಅವಕಾಶ ನೀಡಿದ ಭಾರತೀಯ ಪುರಾತತ್ವ ಇಲಾಖೆ., ಕೆಳದಿ ವಸ್ತುಸಂಗ್ರಹಾಲಯ ವಿಶ್ವಸ್ಥ ಸಮಿತಿ, ಮಲ್ನಾಡ್ ರಿಸರ್ಚ್ ಅಕಾಡೆಮಿ (ರಿ). ಶಿವಮೊಗ್ಗ ಅವರಿಗೆ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಈ ವಿಚಾರದ ಬಗ್ಗೆ 'ಮಾಹಿತಿ ಒದಗಿಸಿದವರು ಸಾಗರದ ಗುಡಿಗಾರ ಸಮಾಜದ ಅಧ್ಯಕ್ಷರಾದ ಪುಟ್ಟಪ್ಪನವರು.

೨. ಕೆಳದಿ ನೃಪವಿಜಯದಲ್ಲಿ- 'ಮತ್ತಮದಲ್ಲದೆ, ಚಿತ್ರಕ, ಶಿಲ್ಪಕ, ವರ್ಣಕ, ಕಾಂಸ್ಯಕಾರ, ತೈಲಯಂತ್ರಿಕ, ಕುಂಭಕಾರ, ಸ್ವರ್ಣಕಾರ, ವರ್ಧಕ, ಕಾರುಕ, ವಸ್ತ್ರಶೋಧಕ, ದಾವಾ ಶೀರ್ಷಿಕೆ ಮುಂತಾದ ನಾನಾಕೈವಾಡ ಕರಣ ಚಮತ್ಕಾರ ವಿಶಾರದರಾದ ನಾನಾವಿಧ ಜನರ್ಗಾಸ್ಪದ ನಿವೇಶನಗಳಂ ಕಲ್ಪಿಸಿ ಎಂದಿದೆ.

೩. **ಶಿವತತ್ವರತ್ನಾಕರ ಸಂಪುಟ ೨. ೫ನೇ ಕಲ್ಲೋಲ. ORI Mysore.**

೪. **ಕಾಶ್ಯಪಶಿಲ್ಪಶಾಸ್ತ್ರಂ ಪು. ೫೧೮-೫೨೩ , ಚಿತ್ರಕಲಾ ಪರಿಷತ್, ಬೆಂಗಳೂರು**

೫. **ಕಾಶ್ಯಪಶಿಲ್ಪಶಾಸ್ತ್ರಂ ಪು. ೫೨೮-೫೫೦**

೬. **ಕಾಶ್ಯಪ ಶಿಲ್ಪಶಾಸ್ತ್ರಂ-ಪು. ೪೫೪.**

೭. **ಕಾಶ್ಯಪಶಿಲ್ಪಶಾಸ್ತ್ರಂ ಪು. ೨೩೬-೨೩೭**

ಗ್ರಂಥ ಋಣ

1. *Hindu Iconogrophy. Vol I & II*
2. *Encyclopaedia of Indian I conography* - Six Vols

೩. **ಶ್ರೀತತ್ವನಿಧಿ - ಸಂಪುಟ ೨.**

೪. **ವಾತುಲಶುದ್ಧಾಗಮ** ORI , Mysore.

ಡಾ. ಕೆ. ಮಹೇಶ್*

ಕಲ್ಲಿನ ರಥಗಳು - ಶಿಲ್ಪಗಳು

ಕಲ್ಲಿನ ರಥವೆಂದಾಕ್ಷಣ ನೆನಪಾಗುವುದು ಜಗತ್ಪಸಿದ್ಧ ಹಂಪಿಯಲ್ಲಿರುವ ಕಲ್ಲಿನರಥ ಜಗತ್ತಿನಲ್ಲಿಯೇ ವಿಶೇಷವಾದ ಸ್ಥಾನ ಪಡೆದಿರುವ ಹಂಪಿಯ ಸ್ಮಾರಕಗಳಲ್ಲಿ ಆ ಬಗೆಯ ಆಕರ್ಷಕ ಶಕ್ತಿಯಿದೆ. ಅದರಲ್ಲಿಯೂ ಕಲ್ಲಿನ ರಥಕ್ಕೆ ಅದು ಹೆಚ್ಚಿಗಿದೆ. ಭಾರತದಲ್ಲಿ ಮುಖ್ಯವಾಗಿ ಐದು ಸ್ಥಳಗಳಲ್ಲಿ ಕಲ್ಲಿನ ರಥಗಳಿರುವುದು ಕಂಡುಬಂದಿದೆ. ಈ ಎಲ್ಲ ರಥಗಳಲ್ಲಿ ಹಂಪಿಯ ರಥ ಪ್ರಸಿದ್ಧವಾಗಲು ಹಲವಾರು ಕಾರಣಗಳಿವೆ. ಇಲ್ಲಿ ಮುಖ್ಯವಾಗಿ ಹಂಪಿ ಮತ್ತು ತಾಡಪತ್ರಿಯ ಕಲ್ಲಿನ ರಥಗಳ ಸಾಮ್ಯತೆಯ ವಿವರವನ್ನು ನೀಡಲಾಗಿದೆ.

ಕಲ್ಲಿನ ರಥಗಳನ್ನು ಮಾಡುವ ಮುಂಚಿತವಾಗಿಯೇ ಅವರ ಕಲ್ಪನೆಯಲ್ಲಿ ಕಟ್ಟಿಗೆಯ ರಥಗಳು ನಿರ್ಮಾಣಗೊಂಡು ದೇವಾಲಯಗಳ ವಿಶೇಷ ದಿನ ರಥೋತ್ಸವದಂದು ಉತ್ಸವ ಮೂರ್ತಿಯನ್ನು ರಥದಲ್ಲಿ ಕೂಡಿಸಿ ಎಳೆಯುವ ಪರಿಪಾಠ ಬಹಳ ಹಿಂದಿನಿಂದಲೂ ಕಂಡುಬರುತ್ತದೆ. ಈ ಕಟ್ಟಿಗೆಯ ರಥಗಳ ಮಾದರಿಯಲ್ಲೇ ಇದನ್ನು ಶಾಶ್ವತ ರೂಪದಲ್ಲಿರಿಸಬೇಕೆಂಬ ಕಲ್ಪನೆಯೇ ಈ ಕಲ್ಲಿನರಥಗಳ ಹುಟ್ಟಿಗೆ ಕಾರಣವಾಯಿತೆಂದು ಹೇಳಬಹುದು. ಭಾರತದಲ್ಲಿ ಕಲ್ಲಿನ ರಥಗಳು ಕಂಡುಬರುವ ಸ್ಥಳಗಳೆಂದರೆ, ಒರಿಸ್ಸಾದ ಕೋನಾರ್ಕ್ ಸೂರ್ಯದೇವಾಲಯ ಇದರ ಕಟ್ಟಡಕ್ಕೆ ರಥದ ಗಾಲಿಗಳನ್ನು ಶಿಲ್ಪಿಗಳು ಸುಂದರವಾಗಿ ನಿರ್ಮಿಸಿದ್ದಾರೆ. ಇದು ಬೃಹತ್ತಾದ ದೇವಾಲಯವಾಗಿದ್ದು ದೇವಾಲಯದ ಅಧಿಷ್ಠಾನದ ಸುತ್ತಲೂ ಚಕ್ರಗಳನ್ನು ಅಳವಡಿಸಲಾಗಿದೆ. ಗುಜರಾತ್‌ನ ವಡೋದರದಲ್ಲಿನ ಕಲ್ಲಿನರಥ, ತಮಿಳುನಾಡಿನ ಮಹಾಬಲಿಪುರಂನಲ್ಲಿರುವ ಕಲ್ಲಿನ ಐದು ರಥಗಳು ಪಾಂಡವರ ರಥಗಳೆಂದು ಹೆಸರಾಗಿವೆ. ಇವುಗಳು ಅದ್ಭುತವಾದ ಕಲಾಪ್ರಕಾರಕ್ಕೆ ಸೇರುವಂತಹವುಗಳು. ಇವುಗಳು ಪ್ರಯೋಗಾತ್ಮಕ ಮಾದರಿಯಲ್ಲಿರುವುದು ವಿಶೇಷ. ಇವುಗಳನ್ನು ಹುಣ್ಣಿಮೆಯ ದಿನದಂದು ನೋಡುವುದು ಜನರಿಗೆ ಮುದನೀಡುವ ಕರೆಯಾಗಿ ಬಂದಿದೆ. ಆಂಧ್ರಪ್ರದೇಶದ ತಾಡಪತ್ರಿಯ ವೆಂಕಟರಮಣ ಸ್ವಾಮಿ ದೇವಾಲಯದ ಆವರಣದಲ್ಲಿರುವ ಕಲ್ಲಿನ ರಥ ಕರ್ನಾಟಕದ ಹಂಪಿಯಲ್ಲಿನ ವಿಜಯವಿಠಲ ದೇವಾಲಯದಲ್ಲಿರುವ ಕಲ್ಲಿನರಥ ಈ ಐದು ರಾಜ್ಯಗಳಲ್ಲಿರುವ ರಥ ಶಿಲ್ಪಿಗಳು ಬೇರೆ ಬೇರೆ ಅರಸುಮನೆತನದ ಕಾಲದಲ್ಲಿ ನಿರ್ಮಾಣವಾಗಿರುವುದು ಗಮನಾರ್ಹ. ಆದರೆ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿರುವ ಕಲ್ಲಿನ ಒಂದೇ ಅರಸುಮನೆತನದಲ್ಲಿ ನಿರ್ಮಾಣಗೊಂಡಿರುವುದು ಗಮನಸೆಳೆಯುವ ಸಂಗತಿ. ಕ್ರಿ.ಶ. ೧೪ ನೇ ಶತಮಾನದ ದಕ್ಷಿಣಭಾರತದಲ್ಲಿ ದೊಡ್ಡ ಸಾಮ್ರಾಜ್ಯವಾಗಿ ಮೆರೆದು ತನ್ನ ವೈಭವವನ್ನು ಹೊರನಾಡಿನಲ್ಲಿ ಬೆಳಗಿದ ಹಿಂದೂ ಸಾಮ್ರಾಜ್ಯವೆಂದು ಗುರುತಿಸಿಕೊಂಡಿದ್ದೇ ವಿಜಯನಗರ. ಈ ಮನೆತನದಲ್ಲಿ ೪ ವಂಶಸ್ಥರು ಆಳ್ವಿಕೆ ಮಾಡಿದರು. ಆಳ್ವಿಕೆಯ ೩ ನೇ ವಂಶಸ್ಥರಾದ ತುಳುವ ಮೆನೆತನದ ಸಾಮಂತ ನಾಯಕರಾದ ರಾಮಲಿಂಗ ನಾಯಕನ ಮಗ ಎರ್ರತಿಮ್ಮನಾಯಕನು ಆಂಧ್ರದಲ್ಲಿ ಆಡಳಿತ ಮಾಡುತ್ತಿದ್ದನು. ಇವನ ಸುಪರ್ದಿಗೆ ಒಳಪಟ್ಟ ತಾಡಪತ್ರಿಯಲ್ಲಿ ಕ್ರಿ. ಶ. ೧೫೦೬ ರಲ್ಲಿ ಶ್ರೀ ಚಿಂತಲ ವೆಂಕಟರಮಣ ಸ್ವಾಮಿ ದೇವಾಲಯವನ್ನು ಇವನು ನಿರ್ಮಾಣ ಮಾಡಿದುದು ಚರಿತ್ರೆಯಿಂದ ತಿಳಿದು ಬರುತ್ತದೆ. ಈ ದೇವಾಲಯದ ಮಹಾಮಂಟಪದ ಮುಂದಿನ ಮಂಟಪವೇ ಈ ಕಲ್ಲಿನರಥ ಸಾಕ್ಷಾತ್ ಗರುಡಮಂಟಪ. ಇದು ವಿಷ್ಣುವಿನ ವಾಹನವಾದ ಗರುಡನಿಗಾಗಿ ನಿರ್ಮಿಸಿದ ರಥದ ಮಾದರಿಯ ಕಲ್ಲಿನ ಮಂಟಪವಾಗಿದೆ. ಈ ರಥಕ್ಕೂ ಮತ್ತು ಹಂಪಿಯಲ್ಲಿರುವ ವಿಠಲ ದೇವಾಲಯದ ಕಲ್ಲಿನ ರಥಕ್ಕೂ ಹೆಚ್ಚು ಸಾಮ್ಯತೆ ಇರುವುದು ಕಂಡುಬರುತ್ತದೆ.

ತಾಡಪತ್ರಿ ಕಲ್ಲಿನ ರಥ ನಿರ್ಮಾಣ ಕಾಲ ಕ್ರಿ.ಶ. ೧೫೦೬ (ಛಾಯಚಿತ್ರ-೧) ಎಂದು ಶಾಸನಗಳಿಂದ ತಿಳಿದುಬರುತ್ತದೆ. ಇದರಿಂದ ತಿಳಿದುಬರುವುದೇನೆಂದರೆ ಹಂಪಿಯ ಕಲ್ಲಿನ ರಥಕ್ಕಿಂತಲೂ ಮುಂಚಿತವಾಗಿಯೇ ಇದನ್ನು ನಿರ್ಮಾಣ ಮಾಡಿರುವರು. ಏಕೆಂದರೆ ಕಲ್ಲಿನ ರಥದ ಲಕ್ಷಣಗಳನ್ನು ನೋಡಿದಾಗ ಇದು ಪ್ರಾಥಮಿಕ ಹಂತವಾಗಿದ್ದು, ಇಲ್ಲಿ ಇದನ್ನು ಪ್ರಯೋಗಾತ್ಮಕವಾಗಿ ಶಿಲ್ಪಿಗಳು ಕೆತ್ತಿರುವರು ಇವುಗಳ ಒಂದೊಂದು ಲಕ್ಷಣಗಳನ್ನು ಈ ರೀತಿ ನೋಡಬಹುದು.

ತಾಡಪತ್ರಿಯ ಚಿಂತಲ ವೆಂಕಟರಮಣ ಸ್ವಾಮಿ ದೇವಾಲಯದ ಕಲ್ಲಿನರಥ

ತಾಡಪತ್ರಿ ಚಿಂತಲ ವೆಂಕಟರಮಣ ಸ್ವಾಮಿ ದೇವಾಲಯವು ಊರಿನ ಮಧ್ಯದಲ್ಲಿ ನಿರ್ಮಾಣವಾದ ದೇವಾಲಯವಾಗಿದೆ.

* ೨೦ನೇ ವಾರ್ಡ್, ಎಸ್. ಬಿ. ನಗರ, ಸಿರುಗುಪ್ಪ - ೫೮೩ ೧೨೧


ಇಲ್ಲಿ ವಿಜಯನಗರದ ಲಕ್ಷಣಗಳನ್ನು ಶಿಲ್ಪಿಗಳು ಅಳವಡಿಸಿ ಬೃಹತ್ತಾದ ಸುಂದರವಾದ, ಕಲಾತ್ಮಕತೆಯಿಂದ ಕೂಡಿದ ಆಲಯವನ್ನು ನಿರ್ಮಿಸಿದ್ದಾರೆ. ಆಲಯವು ಗರ್ಭಗೃಹ, ಸುಖನಾಸಿ, ಅಂತರಾಳ, ನವರಂಗ, ಮಹಾಮಂಟಪವನ್ನು ಒಳಗೊಂಡಿದೆ. ಈ ಮುಂದಿನ ಮಂಟಪವೇ ಕಲ್ಲಿನ ರಥ (ಗರುಡ ಮಂಟಪ) ಇದನ್ನು ದೇವಾಲಯದ ಪ್ರಾಂಗಣದಲ್ಲಿ ನಿರ್ಮಿಸಿದ್ದಾರೆ. ಇದರಲ್ಲಿ ಕಪ್ಪು ಛಾಯೆಯ ಗ್ರಾನೈಟ್ ಕಲ್ಲನ್ನು ಬಳಸಿರುವುದು ವಿಶೇಷವಾಗಿದೆ. ಈ ಮಂಟಪದ ಒಳಭಾಗದಲ್ಲಿ ಏಕಶಿಲೆಯಲ್ಲಿ ನಿರ್ಮಿಸಿದ ಅಂಜಲಿಹಸ್ತದಲ್ಲಿರುವ ಗರುಡನ ಮೂರ್ತಿಯಿದೆ. ಈ ರಥದ ಹೊರಮೈ ಲಕ್ಷಣಗಳು ದೇವಾಲಯದ ಮಾದರಿಯಲ್ಲಿ ರಚನೆಯಾಗಿವೆ. ಇದರಲ್ಲಿ ಶಿಲ್ಪಿಗಳು ಅನೇಕ ರೀತಿಯ ಶಿಲ್ಪಗಳನ್ನು ಜಾಗರೂಕತೆಯಿಂದ ಅಲಂಕರಿಸಿದ್ದಾರೆ. ೩ ಅಡಿ ಎತ್ತರದ ಚೌಕಾಕಾರದ ಅಧಿಷ್ಠಾನದ ಮೇಲೆ ರಥವಿದ್ದು ಇದರಲ್ಲಿ ಪಾದುಕೆ, ಪದ್ಮ, ಕಂಠ, ಕಪೋತಗಳ ರಚನೆಯಿದೆ. ಈ ಕಪೋತದಲ್ಲಿ ಅಲಂಕರಣೆಗಾಗಿ ನಾಸಿಗಳು, ವಿಷ್ಣುನಾಮ, ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ರಥವು ದೇವಾಲಯದ ಅಭಿಮುಖವಾಗಿ (ಪಶ್ಚಿಮ) ನಿರ್ಮಾಣವಾಗಿದೆ. ಒಟ್ಟಾರೆಯಾಗಿ ರಥವು ಐದು ಹಂತಗಳನ್ನು ಒಳಗೊಂಡಿದೆ.



ರಥದ ಕೆಳಹಂತವು ಅಧಿಷ್ಠಾನವಾಗಿದ್ದರೆ, ಎರಡನೇ ಹಂತದಲ್ಲಿ ರಥದ ಪಟ್ಟಿಗಳು ನಾಲ್ಕು ಕಲ್ಲಿನ ಗಾಲಿಗಳಿವೆ (ಚಕ್ರ) ಈ ಗಾಲಿಗಳು ದುಂಡಾಕಾರವಾಗಿದ್ದು ಎಲೆ, ಬಳ್ಳಿಯ ಅಲಂಕರಣದ ಕೆತ್ತನೆಯನ್ನು ಹೊಂದಿವೆ. ಮಧ್ಯದಲ್ಲಿ ಕಲ್ಲಿನ ಅಡಿಗೆಯಿದ್ದು ಅದಕ್ಕೆ ಗಾಲಿಗಳು ಕಡಾಣೆಗಳನ್ನು ಕೆತ್ತಿರುವರು. ಈ ಎಲ್ಲಾ ಗಾಲಿಗಳನ್ನು ಮೂಲಕಲ್ಲಿನಿಂದ ಬಿಡಿಸಿದೆ ಹಾಗೆಯೇ ಅವುಗಳನ್ನು ನಿರ್ಮಿಸಿದ್ದಾರೆ. ಇವುಗಳು ತಿರುಗದ ಗಾಲಿಯ ಮಾದರಿಗಳಾಗಿವೆ. ಇವುಗಳನ್ನು ಹಂಪಿಯಲ್ಲಿನ ಕಲ್ಲಿನರಥದ ಗಾಲಿಗಳ ಹಾಗೆ ಬಿಡಿಸಿರುವುದಿಲ್ಲ ಇದರಿಂದ ಹಂಪಿಯ ರಥಕ್ಕಿಂತಲೂ ಇದು ಪ್ರಯೋಗಾತ್ಮಕ ಹಂತದಲ್ಲಿರುವುದು ಮಹತ್ವದ ಸಂಗತಿ. ಈ ರಥವನ್ನು ಎಳೆಯುವ ಹಾಗೆ ಕುದುರೆಗಳನ್ನು ಕಲ್ಲಿನಿಂದ ಕೆತ್ತಿ ಎರಡು ಬದಿಯಲ್ಲಿ ನಿರ್ಮಿಸಿದ್ದಾರೆ. ರಥದ ಗಾಲಿಗಳ ಮಧ್ಯದಲ್ಲಿ ಗರುಡರ ಉಬ್ಬುಶಿಲ್ಪ ನಾಸಿ ಬಳೆಯಾಕಾರದ ಕುಮುದವಿದೆ. ಇದರ ಮೇಲಿನ ಪಟ್ಟಿಯಲ್ಲಿ ಕೆಳಮುಖವಾಗಿ ಜೋತುಬಿದ್ದಿರುವ ಕಮಲದ ಮೊಗ್ಗುಗಳನ್ನು ಅಲಂಕರಿಸಿದ್ದಾರೆ. ೩ನೇ ಹಂತದಲ್ಲಿ ಅರ್ಧ ಕಂಬಗಳು ಹಾಗು ಕುಂಭಪಂಜರಗಳನ್ನು ಎರಡು ಕಂಬಗಳ ಮಧ್ಯದಲ್ಲಿ ಶಿಖರದ ಮಾದರಿಯಲ್ಲಿ ಉಬ್ಬು ಕೆತ್ತನೆಯಾಗಿ ರಚಿಸಿದ್ದಾರೆ. ನಾಲ್ಕನೆಯ ಹಂತದಲ್ಲಿ ಕಪೋತವಿದ್ದು, ಇದರ ಮೇಲೆ ನಾಸಿಗಳಿವೆ. ಮೇಲಿನ ಭಾಗದಲ್ಲಿ ಕರ್ಣಕೂಟ, ಅರ್ಧ ಕಂಬ, ನಾಸಿ, ದೇವತೆಗಳ ಉಬ್ಬು ಕೆತ್ತನೆಗಳಿವೆ. ಇವುಗಳ ಮೇಲೆ ಶಾಲಾವಿದೆ. ಕೊನೆಯಲ್ಲಿ ಕಪೋತ, ಕಪೋತನಾಸಿಗಳನ್ನು ಕೆತ್ತಲಾಗಿದೆ. ಕೊನೆಯ ಹಂತದಲ್ಲಿ ದುಂಡಾಕಾರದ ಆಮಲಕವನ್ನು ಕೆತ್ತಿ ಇದರ ನಾಲ್ಕು ದಿಕ್ಕುಗೆ ಉಬ್ಬು ಶಿಲ್ಪಗಳನ್ನು ಮತ್ತು ಸಿಂಹ ಮುಖದ ನಾಸಿಗಳು ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ರಥದ ಕಲ್ಲಿನ ಚಕ್ರ ಮತ್ತು ಅರ್ಧಕಂಬಗಳನ್ನು ರಥದಿಂದ ಬಿಡಿಸದೇ ಹಾಗೆಯೇ ಅವುಗಳನ್ನು ಕೆತ್ತಿರುವರು.

ಹಂಪಿಯ ವಿಜಯ ವಿಠಲ ದೇವಾಲಯದ ಕಲ್ಲಿನ ರಥ :

ಹಂಪಿಯಲ್ಲಿರುವ ದೇವಾಲಯಗಳಲ್ಲಿಯೇ ಬೃಹತ್ತಾದ,



ಸುಂದರವಾದ ದೇವಾಲಯವೆಂದು ಪ್ರಸಿದ್ಧಿ ಪಡೆದ ವಿಜಯವಿಠಲ ದೇವಾಲಯದ ಆವರಣದಲ್ಲಿರುವುದೇ ಜಗತ್ಪ್ರಸಿದ್ಧ ಕಲ್ಲಿನರಥ (ಗರುಡ ಮಂಟಪ) ವಿಠಲ ದೇವಾಲಯದ ಉಯ್ಯಾಲೆ (ಮಹಾ ಮಂಟಪ) ಮಂಟಪದ ಎದುರು ಗರುಡನಿಗಾಗಿ ನಿರ್ಮಿಸಿದ ಮಂಟಪವೇ ಈ ಕಲ್ಲಿನ ರಥ. ಈ ರಥವು ಸಂಪೂರ್ಣವಾಗಿ

ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ ಇದಕ್ಕೆ ಮೊದಲು ಇಟ್ಟಿಗೆ ಮತ್ತು ಗಾರೆಯ ವಿಮಾನ (ಶಿಖರ) ವಿದ್ದಿತು. ಇದನ್ನು ಹಂಪೆಯ ಮೊಟ್ಟಮೊದಲ ಛಾಯಾಗ್ರಾಹಕನಾದ ಪ್ರತಿಭಾಶಾಲಿ ಇಂಗ್ಲೀಷ್ ಸೇನಾಧಿಕಾರಿಯಾಗಿದ್ದ ಕರ್ನಲ್ ಅಲೆಕ್ಸಾಂಡರ್ ಜಾನ್ ಗ್ರೀನ್ ಲಾ (೧೮೧೮-೧೮೭೦) ಅವರು ೧೮೫೬ರಲ್ಲಿ ತೆಗೆದಿದ್ದ ಅತ್ಯುತ್ತಮ ಛಾಯಾಚಿತ್ರಗಳಲ್ಲಿ ನೋಡಬಹುದು. ಇದರಿಂದ ಪ್ರಾರಂಭಗೊಂಡ ಈ ಛಾಯಾಚಿತ್ರಗಳು ಜಗತ್ತಿನ ಗಮನವನ್ನು ಹಂಪಿಯತ್ತ ಸೆಳೆಯುವಲ್ಲಿ ಸಹಕಾರಿಯಾದವು. ಪ್ರಾಯಶಃ ಇಡೀ ಭಾರತದಲ್ಲೇ ಮೊತ್ತಮೊದಲಿಗೆ ಛಾಯಾಚಿತ್ರಗೊಂಡಿರುವ ಸ್ಮಾರಕಗಳು ಹಂಪಿಯವೇ ಎಂಬುದು ಹೆಮ್ಮೆಯನ್ನುಂಟು ಮಾಡುವಂಥಾದ್ದು.

ಇದು ಎಳೆಯುವ ರಥವಾಗಿರದೆ ಒಂದು ಸಣ್ಣ ಗುಡಿಯಂತಿದೆ. ಒಳಗಡೆ ಗರುಡನ ಮೂರ್ತಿ ಇದ್ದು, (ವಿಷ್ಣುವಾಹನ) ಮರದ ರಥವೋ ಎಂಬಂತೆ ಸೂಕ್ಷ್ಮವಾದ ಕುಸುರಿ ಕೆತ್ತನೆ ಮಾಡಲಾಗಿದೆ. ಇದನ್ನು ಹಲವಾರು ಕಲ್ಲುಗಳಿಂದ ಮಾಡಿದ್ದಾಗಿದೆ. ಮೇಲೆ ಹೇಳಿದಹಾಗೆ ಇದರಮೇಲೆ ವಿಮಾನರೂಪದ ಇಟ್ಟಿಗೆ ಮತ್ತು ಗಾರೆಯ ಒಂದು ಮೇಲು ರಚನೆಯಿದ್ದಿತ್ತು ಕಲ್ಲಿನ ರಥದಲ್ಲಿ ಸೀಳುಗಳು ಕಾಣಿಸಿಕೊಂಡಿದ್ದರಿಂದ ಪುರಾತತ್ವ ವಿಭಾಗದವರು ಹಂಪಿಯನ್ನು ತಮ್ಮ ವಶಕ್ಕೆ ತಗೆದುಕೊಂಡನಂತರ ಮೇಲಿನ ರಚನೆಯಿಂದ ಈ ರೀತಿ ಕಲ್ಲು ಶಿಥಿಲಗೊಳ್ಳುತ್ತಿದೆ. ಎಂದು ತಿಳಿದು ಆಂಗ್ಲ ಅಧಿಕಾರಿಯೊಬ್ಬರು ಇದನ್ನು ಕೆಡವಿಸಿಬಿಟ್ಟಿದ್ದಾರೆ. ಇದರಿಂದ ರಥದ ರೂಪವು (ರಚನೆ) ಪ್ರಸ್ತರದವರಗೆ ಮಾತ್ರ ಇಂದು ಉಳಿದುಕೊಂಡಿದೆ. ಆದರೆ ಶಿಥಿಲಗೊಳ್ಳುತ್ತಲೇ ಇದೆ. ರಥಕ್ಕೆ ಜೋಡಿಸಿರುವ ನಾಲ್ಕು ಗಾಲಿಗಳನ್ನು ತಿರುಗಿಸಿದರೆ ಪುಣ್ಯಬರುತ್ತದೆ ಎಂದು ಜನರು ಅವುಗಳನ್ನು ತಿರುಗಿಸುತ್ತಿದ್ದರು. ಆದ್ದರಿಂದ ಅವುಗಳನ್ನು ಇತ್ತೀಚಿಗೆ ಸಿಮೆಂಟ್‌ನಿಂದ ಭದ್ರಗೊಳಿಸಿದ್ದಾರೆ. ಇಲ್ಲದಿದ್ದಲ್ಲಿ ರಥವು ಸಂಪೂರ್ಣವಾಗಿ ಹಾಳಾಗುವ ಸಂಭವವಿದೆ. ಈ ಕಲ್ಲಿನ ರಥಕ್ಕೆ ನಾಲ್ಕು ಛತ್ರಗಳಿದ್ದು ಇವುಗಳು ಪೀಠದ ಮೇಲೆ ನಿಂತಿವೆ. ಇದರ ಮೇಲ್ಭಾಗದಲ್ಲಿ ವಿಷ್ಣುಲೀಲೆ. ಕೃಷ್ಣಾವತಾರದ ಚಿತ್ರಗಳಲ್ಲದೇ ಸುಂದರವಾದ ಎಲೆ, ಬಳ್ಳಿ, ಹೂವಿನ ಚಿತ್ರಗಳಿವೆ ಇವುಗಳಿಗೆಲ್ಲಾ ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಬಣ್ಣಕೊಡಲಾಗಿದ್ದು ಇಂದು ಸಹಾ ಅಲ್ಲಲ್ಲಿ ಈ ಬಣ್ಣಗಳು ಕಂಡು ಬರುತ್ತವೆ. ರಥವನ್ನು ಎಳೆಯಲು ಹಿಂದೆ ಅರಸರುಗಳು ಅಶ್ವಗಳನ್ನು ಬಳಸುತ್ತಿದ್ದರಿಂದ ಈ ರಥದ ಮುಂದೆ ಅಶ್ವಗಳು ತಾಡಪತ್ರಿಯ ಕಲ್ಲಿನ ರಥದಲ್ಲಿರುವಂತೆ ಇದ್ದಿರಬಹುದು. ಕಾಲನ ಗರ್ಭದಲ್ಲಿ ನಶಿಸಿರುವುದರಿಂದ ಇಂದು ಕಲ್ಲಿನ ಗಜಗಳನ್ನು ಅದೇ ಸ್ಥಳದಲ್ಲಿ ಇಡಲಾಗಿದೆ. ರಥದ ಒಳಗಡೆ ಹೋಗಲು ಕಲ್ಲಿನ ಏಣಿಯನ್ನು ಇಡಲಾಗಿದ್ದು, ಇಂದು ಈ ಏಣಿ ಭಿನ್ನಗೊಂಡಿದೆ. ರಥದ ಕೆಳಗಿನ ಚೌಕಕಾರದ ಪಟ್ಟಿಯಲ್ಲಿ ಸೈನಿಕರು, ವಾದ್ಯಗಾರರು, ನೃತ್ಯಗಾರರು, ಪ್ರಾಣಿಗಳು, ಪಕ್ಷಿಗಳು ಬೇಟೆ ಚಿತ್ರಣ ಇತ್ಯಾದಿ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಈ ರಥದಲ್ಲಿರುವ ನಾಲ್ಕು ಗಾಲಿಗಳನ್ನು ವೃತ್ತಾಕಾರವಾಗಿ ಕೆತ್ತಿ ಅವುಗಳ ಮೇಲೆ ಮೂರು ವೃತ್ತವಾಗಿ ಬಳ್ಳಿ, ಎಲೆಗಳನ್ನು ಕೆತ್ತಿರುವುದು ಇವುಗಳಿಗೆ ಕಡಾಣೆಗಳನ್ನು ಕೆತ್ತದೇ ಒಂದು ಚಿಕ್ಕದಾದ ಪಟ್ಟಿಯನ್ನು ರಚಿಸಿದ್ದಾರೆ.

ರಥದ ಗಾಲಿಗಳಮೇಲಿನ ಭಾಗದಲ್ಲಿ ಪದ್ಮ ಬಳೆಯಾಕಾರದ ಕುಮುದ ಉಬ್ಬುಶಿಲ್ಪಗಳ ಚೌಕಟ್ಟು ಕಪೋತವನ್ನು ಕಾಣಬಹುದು. ಈ ಕಪೋತದಲ್ಲಿ ನಾಸಿಗಳು ಇರುವವು. ರಥದ ಗಾಲಿಗಳ ಅಚ್ಚುಗಳಲ್ಲಿ ತೆಲೆಕೆಳಗಾದ ಕಮಲದ ಮೊಗ್ಗನ್ನು ಕೆತ್ತಲಾಗಿದೆ. ರಥದ ಭಿತ್ತಿಯಲ್ಲಿ ಹೆಚ್ಚು ಅಲಂಕರಣವನ್ನು ಮಾಡಲಾಗಿದ್ದು. ಇದರಲ್ಲಿ ಚಿಕ್ಕದಾಗಿ ಕರ್ಣಕೂಟ, ಶಾಲಾ, ಕೋಷ್ಟಕ, ಪೂರ್ಣಕಂಭಗಳನ್ನು ಸ್ವತಂತ್ರ್ಯವಾಗಿ ನಿರ್ಮಿಸಿದ್ದಾರೆ. ರಥದ ಮೇಲ್ಭಾಗದಲ್ಲಿ ಸಂಯೋಗ ಸ್ತಂಭಗಳನ್ನು ಅಳವಡಿಸಿದ್ದಾರೆ. ಈ ರಥವು ಮುಖ್ಯದೇವಾಲಯಕ್ಕೆ ಅಭಿಮುಖವಾಗಿ ನಿರ್ಮಾಣವಾಗಿದ್ದು ರಥದ ಬಾಗಿಲು ಚೌಕಟ್ಟನ್ನು ಹೆಚ್ಚು ಅಲಂಕಾರದಿಂದ ರಚಿಸಿರುವರು ರಥದ ಪ್ರಸ್ತಾರದಲ್ಲಿ ಚಿಕ್ಕಚಿಕ್ಕ ಗೋಡೆಗಳ ಅಲಂಕರಣೆ ಸೊಗಸಾಗಿ ಮೂಡಿದೆ. ಇದರಲ್ಲಿ ತೆಲೆಕೆಳಗಾಗಿ ಚಿಕ್ಕ ಮೊಗ್ಗುಗಳನ್ನು ಕೆತ್ತಲಾಗಿದೆ. ಮೇಲೆ ಇಂದು ಚೌಕಾಕಾರವಾಗಿ ಸಿಮೆಂಟಿನ ಪಟ್ಟಿಯನ್ನು ಮಾಡಿದ್ದಾರೆ. ಇಲ್ಲಿ ಶಿಖರವಿರದ ರಥವಾಗಿದ್ದು ಪ್ರಸ್ತಾರದವರೆಗೆ ಮಾತ್ರ ಉಳಿದುಕೊಂಡುಬಂದಿದೆ. ಕಾಲಗರ್ಭದಲ್ಲಿ ರಥವು ಅಲ್ಲಲ್ಲಿ ತ್ರುಟಿತಗೊಂಡು ಸೌಂದರ್ಯವನ್ನು ತಗ್ಗಿಸಿದೆ. ಆದರೂ ಜಗತ್ತಿನ ಎಲ್ಲಾ ವಿದೇಶಿ ಹಾಗೂ ದೇಶಿಯ ಜನರನ್ನು ಹೆಚ್ಚು ಆಕರ್ಷಿಸಿರುವುದು ಗಮನಾರ್ಹ, ಬೇರೆ ರಥಗಳಿಗಿಂತ ಈ ಹಂಪಿಯ ಕಲ್ಲಿನರಥವು ಹೆಚ್ಚು ಪ್ರಸಿದ್ಧಿ ಹೊಂದಿದೆ.

ಡಾ. ಬಿ. ಪಾಂಡುಕುಮಾರ್*

ಹೊಯ್ಸಳ ದೇವಾಲಯಗಳಲ್ಲಿ ಕಂಡುಬರುವ ಒಂದು ವಿಶೇಷ ಮೂರ್ತಿ

ಹೊಯ್ಸಳರು ತಮ್ಮ ರಾಜ್ಯದಲ್ಲಿ ಮುನ್ನೂರಕ್ಕೂ ಹೆಚ್ಚು ದೇವಾಲಯಗಳು, ಜಿನಾಲಯಗಳನ್ನು ನಿರ್ಮಿಸಿದರು. ಅವುಗಳಲ್ಲಿ ಕೆಲವು ಶಿಥಿಲಾವಸ್ಥೆಯಲ್ಲಿದ್ದರೆ, ಮತ್ತೆ ಕೆಲವು ಉತ್ತಮಾ ವಸ್ಥೆಯಲ್ಲಿವೆ. ಅವರ ದೇವಾಲಯಗಳ ಭಿತ್ತಿಯಲ್ಲಿ ದೊಡ್ಡ ವಿಗ್ರಹಗಳನ್ನು ಕಾಣಬಹುದು. ಈ ವಿಗ್ರಹಗಳಲ್ಲಿ ವಿಷ್ಣುವಿನ ಹಲವು ಹತ್ತು ಅವತಾರಗಳನ್ನು, ಪ್ರಕಾರಗಳನ್ನು, ಭಾವಭಂಗಿಗಳನ್ನು ಕಾಣಬಹುದು. ಅವರು ನಿರ್ಮಿಸಿದ ದೇವಾಲಯಗಳಲ್ಲಿ ಬಹುತೇಕ ದೇವಾಲಯಗಳು ವಿಷ್ಣು ದೇವಾಲಯಗಳಾಗಿದ್ದು, ಶಿವದೇವಾಲ ಯಗಳು ಕಡಿಮೆ ಸಂಖ್ಯೆಯಲ್ಲಿವೆ. ಅದೇ ರೀತಿ ವಿಷ್ಣು ದೇವಾಲಯಗಳಲ್ಲಿ ಕೆಲವೇ ಶಿವನ ಮೂರ್ತಿ ಇಲ್ಲವೇ ಅವತಾರ ಗಳನ್ನು ಕಾಣಬಹುದು. ಹೊಯ್ಸಳ ದೊರೆ ಬಿಟ್ಟಿದೇವ ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನಾದ ಮೇಲೆ ವಿಷ್ಣುವಿನ ಆರಾಧಕನಾಗಿ ವಿಷ್ಣುವಿಗೆ ಸಂಬಂಧಿಸಿದ ದೇವಾಲಯಗಳನ್ನು ನಿರ್ಮಿಸಲು ಒತ್ತುಕೊಟ್ಟನು. ಇದರಿಂದಾಗಿ ಹಲವಾರು ವಿಷ್ಣು ದೇವಾಲಯಗಳು ನಿರ್ಮಾಣಗೊಂಡವು. ವಿಷ್ಣುವರ್ಧನನ ನಂತರ ಬಂದ ಆತನ ಮಕ್ಕಳು, ಮೊಮ್ಮಕ್ಕಳು, ಮಂತ್ರಿಗಳು ಇನ್ನೂ ಮುಂತಾದವರು ವೈಷ್ಣವ ಮತಾವಲಂಬಿಗಳಾದದ್ದು ಇತಿಹಾಸ ವಾಗಿದೆ.

ಹೊಯ್ಸಳರ ದೇವಾಲಯಗಳ ಭಿತ್ತಿಯಲ್ಲಿ ಅಂದಿನ ಕಾಲದ ಉಡುಗೆ, ತೊಡುಗೆ, ಆಭರಣಗಳು, ಕೇಶವಿನ್ಯಾಸ, ಆಯುಧಗಳು ಇವೇ ಮುಂತಾದ ಅಂದಿನ ಕಾಲದಲ್ಲಿ ಬಳಸುತ್ತಿದ್ದ ವಸ್ತುಗಳನ್ನು ಈ ಮೂರ್ತಿಗಳಿಂದ ಕಾಣಬಹುದು. ಸರ್ವೇಸಾಮಾನ್ಯವಾಗಿ ಉಡುಪಿನ ಕೊರತೆಯನ್ನು ಆಭರಣಗಳು ಮುಚ್ಚಿ ಮೂರ್ತಿಯ ಸೊಬಗನ್ನು ಹಾಗೂ ಆಕರ್ಷಣೆಯನ್ನು ಹೆಚ್ಚಿಸುತ್ತದೆ. ಸಾಂಪ್ರದಾಯಿಕ ಉಡುಗೆ ತೊಡುಗೆ, ಕೇಶ ಶೃಂಗಾರದ ಜೊತೆಗೆ ನವನವೀನ ಉಡುಗೆ ತೊಡುಗೆ, ಕೇಶ ಶೃಂಗಾರವನ್ನು ಕಾಣಬಹುದು. ಅಂತಹ ಕೆಲವು ಮಜಲುಗಳನ್ನು ಅಲ್ಲಲ್ಲಿ ಕಾಣಬಹುದು. ಅವುಗಳಲ್ಲಿ ಪ್ರವಾಸಿಗರ ಮತ್ತು ಇತಿಹಾಸಕಾರರ ಗಮನ ಸೆಳೆವ ಒಂದು ಶಿಲ್ಪವಿದೆ. ಇಂದಿನ ಪೊಲೀಸ್ ಅಧಿಕಾರಿಗಳು ಧರಿಸುವ ಕ್ರಾಸ್‌ಬೆಲ್ಟ್ ಮಾದರಿಯ ಕೋಟಿಗೆ ಸೇರಿದಂತೆ ದೇಹವನ್ನು ಒತ್ತಿ ಹಿಡಿದಿರುವ ಆಭರಣ ಅಥವಾ ವಿಶೇಷ ಧಿರಿಸು, ತಲೆಗೆ ಇಂಗ್ಲಿಷ್ ನ್ಯಾಯಾಧೀಶರು ಧರಿಸುವ ವಿಗ್ ಮಾದರಿಯ ಶಿರ ದಿರಿಸು ಇಲ್ಲವೇ ಹೆಲ್ಮಟ್ಟಿನಂತಹ ಶಿರಸ್ತ್ರಾಣ, ಕಿವಿಗೆ ನರ್ತಕಿಯರು ಧರಿಸುವಂತಹ ದೊಡ್ಡದಾದ ಆಭರಣ ಧರಿಸಿರುವ ಈ ಮೂರ್ತಿಯು ಎಲ್ಲರನ್ನೂ ಆಕರ್ಷಿಸುತ್ತದೆ. (ಛಾಯಾ ಚಿತ್ರವನ್ನು ನೋಡಿ) ದೇವಾಲಯದ ಗೈಡ್‌ಗಳು ಈ ಶಿಲ್ಪವನ್ನು ತೋರಿಸಿ



ಇದು ಹೊಯ್ಸಳರ ನ್ಯಾಯಮೂರ್ತಿ ಎಂದು ಮಿಸ್‌ಗೈಡ್ ಮಾಡುತ್ತಾರೆ. ಅದೇ ರೀತಿ ಎಂ. ಎ. ಆರ್. (ಮೈಸೂರು ಆರ್ಕಿಯಾಲಜಿ ಕಲ್ ರಿಪೋರ್ಟ್‌ನಲ್ಲಿ ಉದಾ : ಬುಚೇಶ್ವರ ದೇವಾಲಯ - ಕೊರವಂಗಲ, ಲಕ್ಷ್ಮೀನರ ಸಿಂಹ ದೇವಾಲಯ - ಜಾವ ಗಲ್, ಲಕ್ಷ್ಮೀ ನಾರಾ ಯಣ ಹೊಸಹೊಳಲು ಇನ್ನು ಮುಂತಾದ ದೇವಾಲ ಯಗಳ ಬಗ್ಗೆ ವರದಿ ಮಾಡಿರುವ ೧೯೩೩ರ ಎಂ. ಎ. ಆರ್. ನಲ್ಲಿ ಮೇಲ್ಕಂಡ ಮೂರ್ತಿಯನ್ನು ದಕ್ಷಿಣಾ ಮೂರ್ತಿ ಎಂದು ತಪ್ಪಾಗಿ ಅರ್ಥೈಸಿದೆ. ಆದರೆ, ಟಿ.ಎ. ಗೋಪಿನಾಥ್ ರಾವ್‌ರವರ 'ಹಿಂದೂ ಐಕನೋಗ್ರಫಿ' ಕೃತಿಯಲ್ಲಿ ದಕ್ಷಿಣಾ ಮೂರ್ತಿಯು ಮೈಬಣ್ಣದಲ್ಲಿ ಶ್ವೇತವರ್ಣಿಯಾಗಿದ್ದು, ಶಿರದಲ್ಲಿ ಅರ್ಧಚಂದ್ರವನ್ನು ಹೊಂದಿದ್ದು, ಚತುರ್ಬಾಹುವುಳ್ಳ ವನ್ನಾಗಿರುವುದಾಗಿ ವರ್ಣಿಸಿದ್ದಾರೆ. ಹಾಗೂ ದಕ್ಷಿಣಾಮೂರ್ತಿ ಯನ್ನು ಈ ಕೆಳಕಂಡಂತೆ ವರ್ಗೀಕರಿಸಿದ್ದಾರೆ.

೧. ವ್ಯಾಕರಣ ದಕ್ಷಿಣಾಮೂರ್ತಿ ೨. ಜ್ಞಾನ ದಕ್ಷಿಣಾ ಮೂರ್ತಿ ೩. ಯೋಗ ದಕ್ಷಿಣಾಮೂರ್ತಿ ೪. ವೀಣಾ ದಕ್ಷಿಣಾ ಮೂರ್ತಿ

ಗೋಪಿನಾಥ್‌ರಾವ್‌ರವರು ಎಲ್ಲೂ ಉದ್ದನೆಯ ಕೋಟಿನ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದರೆ ಸಾಂಪ್ರದಾಯಿಕ ಶೈಲಿಯ ಹಾಗೂ ದೈವಸ್ವರೂಪಿಯಾಗಿ ವರ್ಣಿಸಲಾಗಿದೆ. ಆದರೆ, ಇದೇ ರೀತಿಯ ಕೋಟು ಶಿರಸ್ತ್ರಾಣವನ್ನು ಧರಿಸಿರುವ ಯೋಧನು ಕುದುರೆ, ಇಲ್ಲವೆ ಒಂಟೆಯ ಮೇಲೆ ಸಾಗುತ್ತಿರುವ ದೃಶ್ಯವನ್ನು ದೇವಾಲಯದ ಪುಟೀಪುವಿನಲ್ಲಿ ಕಾಣಬಹುದು.

ಇತಿಹಾಸ ತಜ್ಞರ, ಸಂಶೋಧಕರ ಮುಂದೆ ಈ ಮೇಲ್ಕಂಡ ವಿಷಯ ಪ್ರಸ್ತಾಪಿಸಿದಾಗ, ಹೊಯ್ಸಳ ರೂವಾರಿಗಳು ಹೊಯ್ಸಳರ ಇಲ್ಲವೆ ಅವರ ಸಮಕಾಲದಲ್ಲಿ ಬಂದಿರಬಹುದಾದ ವಿದೇಶಿಯರ ಚಿತ್ತಾಕರ್ಷಕ ಉಡುಗೆ ತೊಡುಗೆಯನ್ನು ಕಂಡು ಕೇಳಿ ಶಿಲ್ಪಿಸಿರ ಬಹುದು, ಇಲ್ಲವೆ ಬೈರಾಗಿ ಎಂದು ತಿಳಿಯಪಡಿಸುತ್ತಾರೆ. ಇದರ ಬಗ್ಗೆ ಮತ್ತಷ್ಟು ಸಂಶೋಧನೆ ಅಗತ್ಯವಾಗಿದೆ.


* ಇತಿಹಾಸ ಪ್ರಾಧ್ಯಾಪಕರು, ವಿವೇಕಾನಂದ ಪದವಿ ಕಾಲೇಜು, ರಾಜಾಜಿನಗರ, ಬೆಂಗಳೂರು.

ವೈ. ಹನುಮಂತ ರೆಡ್ಡಿ*

ಹಂಪೆ ವಿರೂಪಾಕ್ಷ ದೇವರಿಗೆ ಎದುರು ಬಸವಣ್ಣ : ಕುರುಗೋಡ ದೊಡ್ಡ ಬಸವೇಶ್ವರ

ಬಳ್ಳಾರಿ ಜಿಲ್ಲೆಯ ಕುರುಗೋಡು ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವದ ಕ್ಷೇತ್ರ. ಇದು ಬಳ್ಳಾರಿ ನಗರದಿಂದ ವಾಯುವ್ಯ ದಿಕ್ಕಿನಲ್ಲಿ ೩೦ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೯೪೭ರಿಂದ ೧೨೦೭ರ ವರೆಗೆ ಬಲಕುಂದೆ ಮುನ್ನೂರು ನಾಡಿನ ರಾಜಧಾನಿಯಾಗಿ ಮೆರೆದಿತ್ತು. ಇಲ್ಲಿ ಕುರುಗೋಡು ಸಿಂಧವಂಶದ ಅರಿಬಾಲ್ಲ ದಾಗ್ರನಿಂದ ವೀರಕಲಿದೇವರಸನವರೆಗೆ ೧೧ ಜನ ಅರಸರು ರಾಜ್ಯಭಾರ ಮಾಡಿ ಪ್ರಖ್ಯಾತರಾಗಿದ್ದಾರೆ. ಈ ಕಾಲದಲ್ಲಿ ಇಲ್ಲಿ ನಿರ್ಮಾಣವಾದ ಹಿಂಡುಲಿ ಸಂಗಮೇಶ್ವರ, ಕಲ್ಲೇಶ್ವರ, ಉಜ್ಜಾಳೇಶ್ವರ, ಘನಲಿಂಗೇಶ್ವರ ಮತ್ತು ದೊಡ್ಡ ಬಸವೇಶ್ವರ ಮೊದಲಾದ ಕಾಲಾತ್ಮಕವಾದ ದೇವಾಲಯಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇವುಗಳಲ್ಲಿ ದೊಡ್ಡ ಬಸವೇಶ್ವರ ದೇವಾಲಯವು ಐತಿಹಾಸಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಬಹಳ ಪ್ರಸಿದ್ಧಿ ಪಡೆದಿದೆ.

ದೊಡ್ಡ ಬಸವೇಶ್ವರ ದೇವಾಲಯವು ಊರಿನ ಮುಂಭಾಗ ದಲ್ಲಿದ್ದು, ಸುತ್ತಲೂ ಆಯತಾಕಾರದಲ್ಲಿ ಬೃಹತ್ ಗಾತ್ರದ ಬಂಡೆಕಲ್ಲು ಗಳಿಂದ ನಿರ್ಮಿಸಿದ ೧೨ ಅಡಿ ಎತ್ತರದ ಪ್ರಾಕಾರದ ಗೋಡೆ ಇದೆ. ಪಶ್ಚಿಮ ದಿಕ್ಕಿಗೆ ಮುಖವಾದ ಮುಹಾದ್ವಾರವಿದ್ದು, ಅದರ ಮೇಲೆ ೫ ಅಂತಸ್ತಿನ ವಿಜಯನಗರ ಶೈಲಿಯ ಗೋಪುರವಿದೆ. ಉತ್ತರ ದಿಕ್ಕಿಗೆ ಮುಖವಾಗಿ ಇನ್ನೊಂದು ದ್ವಾರವಿದ್ದು, ಅದರ ಮೇಲೆ ೩ ಅಂತಸ್ತುಗಳ ಗೋಪುರವಿದೆ. ಪ್ರಾಕಾರದ ಮಧ್ಯದಲ್ಲಿ ೩ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಿರುವ ಈ ದೇವಾಲಯ, ಸಭಾಮಂಟಪ ಅಂತರಾಳ ಮತ್ತು ಗರ್ಭಗೃಹಗಳ ನ್ನೊಳಗೊಂಡಿದೆ. ಇದರ ಅಧಿಷ್ಠಾನವು ಉಪಾನ, ಜಗತಿ, ಕುಮದ ಮತ್ತು ಪದ್ಮಗಳಿಂದ ಕೂಡಿದೆ. ಈ ದೇವಾಲಯದ ತೆರೆದ ಸಭಾಮಂಟಪದ ಮಧ್ಯದ ವಿಶಾಲವಾದ ಅಂಕಣದಲ್ಲಿ ಸುತ್ತಲೂ ೧೨ ಅಲಂಕೃತವಾದ ಶಿಲಾಸ್ತಂಭಗಳು ಮತ್ತು ಇದರ ಹೊರಭಾಗ ದಲ್ಲಿಯೂ ಚೌಕಾರದ ದೊಡ್ಡದಾದ ೧೨ ಸ್ತಂಭಗಳಿವೆ. ಇದಕ್ಕೆ ಹೊಂದಿಕೊಂಡು ಚಿಕ್ಕದಾದ ಅಂತರಾಳ ಮತ್ತು ವಿಶಾಲ ವಾದ (೨೮x೨೫) ಗರ್ಭಗೃಹವಿದೆ. ಗರ್ಭಗೃಹದಲ್ಲಿ ಪ್ರಾಕೃತಿಕ ಶಿಲೆಯಲ್ಲಿ ನಿರ್ಮಿಸಲಾದ ೧೪ ಅಡಿ ಎತ್ತರದ ಬೃಹತ್ ಗಾತ್ರದ ಮಲಗಿದ ಭಂಗಿಯಲ್ಲಿರುವ ನಂದಿ ವಿಗ್ರಹವಿದೆ. ಈ ಮೂರ್ತಿಯ ಸುತ್ತಳತೆ ೪೨ ಅಡಿ, ಭುಜದಿಂದ ಬಾಲದವರೆಗೆ ಮೈಯ ಅಳತೆ ೧೮ ಅಡಿ ದಪ್ಪ. ಒಂದು ಬದಿಯಿಂದ ಇನ್ನೊಂದು ಬದಿಗೆ ೨೧ ಅಡಿ ಇದ್ದು, ಇದು ಈ ನಾಡಿನಲ್ಲೇ ಅತ್ಯಂತ ದೊಡ್ಡ ನಂದಿ ವಿಗ್ರಹವೆಂದು ಪ್ರಸಿದ್ಧಿಪಡೆದಿದೆ. ಇಂಥಾ ದೊಡ್ಡ ಗಾತ್ರವನ್ನು ಹೊಂದಿರುವ ಈ ಬಸವಣ್ಣನನ್ನು ಔಚಿತ್ಯ ಪೂರ್ಣವಾಗಿ ದೊಡ್ಡ ಬಸವೇಶ್ವರನೆಂದು ಕರೆಯುತ್ತಿದ್ದಾರೆ. ಈ ಪ್ರದೇಶದ ಅನೇಕ ಜನರ ಹೆಸರುಗಳು ದೊಡ್ಡಬಸಪ್ಪ, ದೊಡ್ಡಬಸಮ್ಮ, ದೊಡ್ಡಪ್ಪ ಎಂಬುದಾಗಿ ಇರುವುದು ಈ ದೇವರ ಮೇಲಿನ ಭಕ್ತಿಯ ದ್ಯೋತಕವಾಗಿದೆ.



ಇನ್ನೊಂದು ವಿಶೇಷವೆಂದರೆ, ಈ ದೊಡ್ಡ ಬಸವಣ್ಣ (ನಂದಿಮೂರ್ತಿ) ಹಂಪೆಯ ಅಧಿದೇವನಾದ ವಿರೂಪಾಕ್ಷೇಶ್ವರನಿಗೆ (ಲಿಂಗಕ್ಕೆ) ಎದುರು ಬಸವಣ್ಣನೆಂದು ಪ್ರತೀತಿ ಇದೆ. ಈ ಬಗ್ಗೆ ಪರಿಶೀಲನೆ ಮಾಡಲಾಗಿ, ಈ ಕೆಳಗಿನ ಹಲವಾರು ಅಂಶಗಳು ಈ ಹೇಳಿಕೆಗೆ ಪುಷ್ಟಿಯನ್ನು ನೀಡುತ್ತಿವೆ.

೧. ಹಂಪೆಯ ವಿರೂಪಾಕ್ಷ ದೇವಾಲಯ ಮತ್ತು ದೇವರ ಮೂರ್ತಿ (ಲಿಂಗ) ಪೂರ್ವಾಭಿಮುಖವಾಗಿ ಇವೆ. ಕುರುಗೋಡಿನ ದೊಡ್ಡಬಸವೇಶ್ವರ ದೇವಾಲಯ ಮತ್ತು ಮೂರ್ತಿಯು ಪಶ್ಚಿಮಾಭಿಮುಖವಾಗಿವೆ.

೨. ವಿರೂಪಾಕ್ಷದೇವಸ್ಥಾನವು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಿಂತಲೂ, ಪೂರ್ವದಲ್ಲಿಯೆ ನಿರ್ಮಿಸಲ್ಪಟ್ಟಿದ್ದು, ಸಾಮ್ರಾಟರಾದ ಪ್ರೌಢದೇವರಾಯ ಮತ್ತು ಕೃಷ್ಣದೇವ ರಾಯರ ಕಾಲದಲ್ಲಿ ವಿಸ್ತಾರಗೊಂಡಿದೆ. ಅದೇ ರೀತಿ ದೊಡ್ಡಬಸವೇಶ್ವರ ದೇವಸ್ಥಾನದ ಗರ್ಭಗೃಹ ಮತ್ತು ಅಂತರಾಳಗಳು ವಿಜಯನಗರ ಪೂರ್ವದಲ್ಲೇ ನಿರ್ಮಾಣ ಗೊಂಡಿದ್ದು, ಅದರ ಸಭಾಮಂಟಪ,

* ಇತಿಹಾಸ ಉಪನ್ಯಾಸಕರು (ನಿವೃತ್ತ), ತಾಳೂರು ರಸ್ತೆ, ಬಳ್ಳಾರಿ.

ಪ್ರಾಕಾರ, ಮಹಾ ದ್ವಾರಗಳು ಮತ್ತು ಗೋಪುರಗಳು ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡು ವಿಸ್ತರಿಸಲ್ಪಟ್ಟಿವೆ.

೩. ವಿರೂಪಾಕ್ಷ ದೇವಾಲಯದ ಗರ್ಭಗೃಹದ ಮೇಲೆ ಚೌಕಾಕಾರದ ತ್ರಿತಲ ಶಿಖರ, ಮಧ್ಯ ಮತ್ತು ನಾಲ್ಕು ಮೂಲೆಗಳಲ್ಲಿ ಸ್ತೂಪಗಳಿವೆ. ದೊಡ್ಡಬಸವೇಶ್ವರ ದೇವಾಲಯದ ಮೇಲೆ ಇದೇ ತರದ ಶಿಖರವಿದೆ. ವಿರೂಪಾಕ್ಷ ದೇವಾಲಯದ ಪೂರ್ವದಿಕ್ಕಿನ, ಉತ್ತರದಿಕ್ಕಿನ ಮತ್ತು ಮಧ್ಯದ ಮಹಾದ್ವಾರಗಳ ಮೇಲಿರುವ ಗೋಪುರಗಳು ಕ್ರಮವಾಗಿ ೧೧,೫,೩ ಅಂತಸ್ತುಗಳಿಂದ ಕೂಡಿದ್ದು, ಇಟ್ಟಿಗೆ ಗಾರೆಗಳಿಂದ ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆ. ಅದೇ ರೀತಿ ದೊಡ್ಡಬಸವೇಶ್ವರ ದೇವಾಲಯದ ಪಶ್ಚಿಮ ಮತ್ತು ಉತ್ತರದ ದ್ವಾರದ ಮೇಲಿರುವ ಗೋಪುರಗಳು ಕೂಡಾ ೫ ಮತ್ತು ೩ ಅಂತಸ್ತುಗಳಿಂದ ನಿರ್ಮಿತವಾಗಿದ್ದು, ನಿರ್ಮಾಣ ಮತ್ತು ಶೈಲಿಯಲ್ಲಿ ಸಾಮ್ಯತೆ ಇದ್ದು, ಇವು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿವೆ.

೪. ವಿರೂಪಾಕ್ಷ ದೇವಸ್ಥಾನದ ರಾಜಬೀದಿಯ ಕೊನೆಯಲ್ಲಿರುವ ಮಂಟಪದಲ್ಲಿ ದೊಡ್ಡಗಾತ್ರದ ಮಲಗಿದ ಭಂಗಿಯಲ್ಲಿರುವ ಬಸವಣ್ಣನ ಮೂರ್ತಿ ಇದೆ. ಈ ಎದುರು ಬಸವಣ್ಣನ ಮೂರ್ತಿಗೂ, ಕುರುಗೋಡು ದೊಡ್ಡಬಸವಣ್ಣನ ಮೂರ್ತಿಗೂ ಆಕಾರ, ಗಾತ್ರ, ಶೈಲಿ, ನಿರ್ಮಾಣ ಮತ್ತು ಕಾಲ ಮೊದಲಾದವುಗಳಲ್ಲಿ ತುಂಬಾ ಹೋಲಿಕೆ ಇದೆ.

೫. ವಿರೂಪಾಕ್ಷ ದೇವಾಲಯದ ವಿಸ್ತೃತಗೊಂಡ ಮಹಾಮಂಟಪವನ್ನು ಕೃಷ್ಣದೇವರಾಯನು ಕ್ರಿ.ಶ. ೧೫೧೦ರಲ್ಲಿ ನಿರ್ಮಿಸಿದನು. ಕೃಷ್ಣದೇವರಾಯನ ಅಧಿಕಾರಿ ಬಾಗಿಲ ಕೃಷ್ಣಪ್ಪನಾಯಕನು, ತನ್ನ ರಾಜನಿಗೆ ಪುಣ್ಯವಾಗಲೆಂದು ದೊಡ್ಡಬಸವಣ್ಣನ ಅಮೃತಪಡಿಗೆ ಹೂದೋಟ, ಗದ್ದೆಗಳನ್ನು ದಾನವಾಗಿ ನೀಡಿದ ಬಗ್ಗೆ ಅದೇ ದೇವಸ್ಥಾನದ ಬಂಡೆಯ ಮೇಲಿರುವ ಕ್ರಿ.ಶ. ೧೫೨೮ರ ಶಾಸನದಿಂದ ತಿಳಿದು ಬರುತ್ತದೆ.

೬. ದೊಡ್ಡಬಸವೇಶ್ವರ ಮೂರ್ತಿಗೆ ಎದುರಿನಲ್ಲಿ, ಪ್ರಾಕಾರದ ಒಳಗಡೆ ಒಂದು ಮತ್ತು ಹೊರಗಡೆ ಒಂದು ದೀಪಸ್ತಂಭ ಗಳಿದ್ದು, ಈ ಗುಡಿಯ ಹಿಂಭಾಗದಲ್ಲಿ, ಪೂರ್ವದಿಕ್ಕಿನ ಪ್ರಾಕಾರದ ಗೋಡೆಗೆ ಹೊಂದಿಕೊಂಡಿರುವ ಸಾಲು ಮಂಟಪದಲ್ಲಿ ಮತ್ತೊಂದು ದೀಪಸ್ತಂಭವಿದೆ. ಮೂರ್ತಿಯ ಮುಂದುಗಡೆ ದೀಪಸ್ತಂಭಗಳಿರುವುದು ಸರ್ವೇಸಾಮಾನ್ಯ. ಆದರೆ ಗರ್ಭಗುಡಿಯ ಹಿಂದುಗಡೆ ಇರುವುದು ತೀರ ಅಪರೂಪ. ಇದು ದೊಡ್ಡಬಸವೇಶ್ವರ ಮೂರ್ತಿಗಾಗಿ ಇರುವುದು ಅಲ್ಲ. ಅಂದರೆ ಹಂಪೆ ವಿರೂಪಾಕ್ಷ ದೇವರಿಗೆ ಎದುರುಗಡೆ ದಿಕ್ಕಿಗೆ (ಪೂರ್ವಕ್ಕೆ) ಇದ್ದು, ಆ ದೇವರಿಗಾಗಿ ಸಾಂಕೇತಿಕವಾಗಿ ನಿರ್ಮಿಸಿ ದ್ದಾಗಿರಬೇಕು. ಸಾಮಾನ್ಯವಾಗಿ ಈಶ್ವರ ಲಿಂಗಕ್ಕೆ ಅಭಿಮುಖವಾಗಿ ಬಸವನ (ನಂದಿ) ವಿಗ್ರಹವಿದ್ದು, ನಂತರ ಅನತಿದೂರದಲ್ಲಿ ಎದುರಿನಲ್ಲಿ ದೀಪಸ್ತಂಭವಿರುವುದು ಸಂಪ್ರದಾಯ. ಅದೇ ರೀತಿ ವಿರೂಪಾಕ್ಷಲಿಂಗಕ್ಕೆ ಅಭಿಮುಖವಾಗಿ ಈ ದೊಡ್ಡ ಬಸ ವಣ್ಣನ ವಿಗ್ರಹ ಇದ್ದು, ಇದರ ಹಿಂಭಾಗದಲ್ಲಿ ಅಂದರೆ ಲಿಂಗಕ್ಕೆ ಎದುರುಗಡೆಯಲ್ಲಿ ಈ ದೀಪಸ್ತಂಭ, ಸಂಪ್ರದಾ ಯದ ಪ್ರಕಾರವಾಗಿ ನಿರ್ಮಿಸಲಾಗಿದೆ.

೭. ಕುರುಗೋಡಿನ ಪ್ರತಿವರ್ಷ ಫಾಲ್ಗುಣ ಶುದ್ಧ ಪೌರ್ಣಮಿ ದಿನ ರಥೋತ್ಸವ ಜರುಗುತ್ತದೆ. ಈ ರಥವು ದೊಡ್ಡಬಸವೇಶ್ವರ ದೇವಸ್ಥಾನದಿಂದ ಪೂರ್ವದಿಕ್ಕಿಗೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿರುವ ಎದುರು ಬಸವಣ್ಣನವರೆಗೆ ಹೋಗಿ ಬಸವಣ್ಣನಿಗೆ ಕಾಯಿಕರ್ಪೂರ ಅರ್ಪಿಸಿ ಅಲ್ಲಿಂದ ಹಿಂದಕ್ಕೆ ಬರುತ್ತದೆ. ಈ ಎದುರು ಬಸವಣ್ಣ ದೊಡ್ಡಬಸವಣ್ಣನಿಗೆ ಎದುರುಗಡೆ ಇರದೆ, ಹಿಂಭಾಗದಲ್ಲಿ ಪೂರ್ವ ದಿಕ್ಕಿನಲ್ಲಿ ಒಂದು ಚಿಕ್ಕ ಮಂಟಪದಲ್ಲಿ ಸ್ಥಾಪನೆಯಾಗಿದೆ. ಆದ್ದರಿಂದ ಇದು ಕೂಡಾ ಹಂಪೆ ವಿರೂಪಾಕ್ಷನಿಗೆ ಅಭಿಮುಖವಾಗಿದೆ. ಅಲ್ಲದೆ ಬಸವಣ್ಣನ ಬೆಳ್ಳಿಯ ವಿಗ್ರಹದ ಜೊತೆಗ ಉಮಾಮಹೇಶ್ವರ ಉತ್ಸವ ಮೂರ್ತಿಗಳನ್ನು ರಥದಲ್ಲಿ ಇಟ್ಟು ಎಳೆಯಲಾಗುತ್ತದೆ. ಈ ಉಮಾಮಹೇಶ್ವರ ಮೂರ್ತಿಗಳು, ಹಂಪೆಯ ವಿರೂಪಾಕ್ಷ ಮತ್ತು ಹಂಪಮ್ಮ ದೇವತೆಗಳ ಪ್ರತೀಕವಾಗಿ ರುವಂತೆ ತೋರುತ್ತದೆ. ವಿರೂಪಾಕ್ಷನಿಗೆ ನಂದಿಯು ವಾಹನನಲ್ಲವೇ!

೮. ಕುರುಗೋಡು ದೊಡ್ಡಬಸವೇಶ್ವರ ಮತ್ತು ಹಂಪಿ ವಿರೂಪಾಕ್ಷ ದೇವಸ್ಥಾನಗಳು ೧೫° - ೨೦' ಒಂದೇ ಅಕ್ಷಾಂಶದಲ್ಲಿರುತ್ತವೆ.

ಮೇಲಿನ ಎಲ್ಲಾ ವಿಷಯಗಳ ಬಗ್ಗೆ ವಿವೇಚನೆ ಮಾಡಲಾಗಿ, ಹಂಪೆಯ ವಿರೂಪಾಕ್ಷ ಲಿಂಗಕ್ಕೆ ಕುರುಗೋಡು ದೊಡ್ಡ ಬಸವಣ್ಣನ ವಿಗ್ರಹ, ಎದುರು ಬಸವಣ್ಣನ ಪ್ರತೀಕವಾಗಿದೆ ಎಂಬುದು ಪ್ರತಿಪಾದಿಸಲ್ಪಡುತ್ತದೆ. ವಿಜಯನಗರ ಸಾಮ್ರಾಜ್ಯದ ವಿಸ್ತಾರ, ಹಿರಿದಾದ ಗಾತ್ರ ಮತ್ತು ಘನತೆಗಳನ್ನು ಶ್ರುತಪಡಿಸುವ ಉದ್ದೇಶದಿಂದ, ಇಂಥ ಅತಿಶಯದ ನಿರ್ಮಾಣವಾಗಿರಬೇಕು. ಇದರಿಂದ ಪಂಪಾಕ್ಷೇತ್ರದಿಂದ ಕುರುಗೋಡಿನವರೆಗಿನ ಪ್ರದೇಶವನ್ನು ದಕ್ಷಿಣ ಕಾಶಿ ಎಂಬುದಾಗಿ ಕರೆಯಲಾಗುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ವೈ ಹನುಮಂತ ರೆಡ್ಡಿ., ೧೯೮೫, ಕುರುಗೋಡು ಪಟ್ಟಣ ಪ್ರದೇಶದ ಸಾಂಸ್ಕೃತಿಕ ಇತಿಹಾಸ

೨. ಡಾ. ಸಿಂದಗಿ ರಾಜಶೇಖರ., ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ ಪ್ರ. ೧೯೮೮.

೩. ವೈ ಹನುಮಂತರೆಡ್ಡಿ., ೧೯೯೧ , ಕುರುಗೋಡು ಕ್ಷೇತ್ರ ದರ್ಶನ ಗ್ರಂಥ.

೪. ಕರ್ನಾಟಕ ದೇವಾಲಯಕೋಶ-ಬಳ್ಳಾರಿ ಜಿಲ್ಲೆ., ೧೯೯೬, ಕ.ವಿ.ವಿ. ಹಂಪಿ-ಪ್ರ.

೫. ವೈ. ಹನುಮಂತ ರೆಡ್ಡಿ., ೨೦೦೩, ಬಲ್ಲಕುಂದೆ ಮನ್ನೂರು ನಾಡಿನ ರಾಜಧಾನಿ ಕುರುಗೋಡಿನ ಸಾಂಸ್ಕೃತಿಕ ಇತಿಹಾಸ.

ಕೇಶವ ಉಮರ್ಜಿ*

ಶಿಲಾಯುಗದ ನೆಲೆ ಕಲಹಳ್ಳಿ ಗುಡ್ಡದ ದೇವಾಲಯ ಸಮುಚ್ಚಯ

ಕಲಹಳ್ಳಿ ಗುಡ್ಡವು ಪ್ರಾಗ್ ಚಾರಿತ್ರಿಕ ಸಂಸ್ಕೃತಿಯ ದೃಷ್ಟಿಯಿಂದ ಬಹಳ ಮಹತ್ವ ಪಡೆದಿದೆ. ಪ್ರಾಚೀನ ಶಿಲಾಯುಗದ ಕಾಲದ ಮಾನವನ ವಾಸ್ತವದ ಕುರುಹುಗಳನ್ನು ಜೀವನ ಚಟುವಟಿಕೆಗಳನ್ನು ನಾವಿಲ್ಲಿ ಕಾಣಬಹುದೆಂದು ಲಿಯೋನಾರ್ಡ ಮನ್ ಮತ್ತು ಡಾ. ಅ. ಸುಂದರ ಮುಂತಾದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಿಂದ ಪಶ್ಚಿಮ ದಿಕ್ಕಿಗೆ ಹಬ್ಬಿಕೊಂಡಿರುವ ಗುಡ್ಡವು ಸುಮಾರು ಹತ್ತರಿಂದ ಹನ್ನೆರಡು ಕಿಲೋಮೀಟರ್‌ವರೆಗೆ ಅಲ್ಲಲ್ಲಿ ಕೆಲವೆಡೆ ಇಬ್ಭಾಗ ಗೊಂಡಂತೆ ಕಂಡು ಬಂದರೂ ಮುಂದುವರೆದಿದೆ. ಈ ಗುಡ್ಡವು ಈಗ ಜನವಸತಿ ರಹಿತವಾಗಿ, ಕೃಷಿ ಚಟುವಟಿಕೆಗಳಿಗೆ ಯೋಗ್ಯ ವಿಲ್ಲದ್ದಾಗಿ ನಿರ್ಜನವೆನಿಸಿಕೊಂಡರೂ ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ಬಹಳ ಮಹತ್ವ ಪಡೆದಿದೆ. ಅದಾಗಿ ಸದ್ಯದ ಪ್ರಯತ್ನ.

ಕಲಹಳ್ಳಿಗುಡ್ಡವು ಮುಂದುವರೆದಂತೆ ಏಳು ಕಿಲೋಮೀಟರ್ ಮೇಲೆ ತುಂಡರಿಸಿ ನಡುವೆ ರಸ್ತೆ ನಿರ್ಮಾಣವಾಗಿದೆ. ಮುಂದೆ ಅದು ಗೊಂಬಿಗುಡ್ಡವೆಂದು ಕರೆಸಿಕೊಳ್ಳುತ್ತದೆ. ಬೃಹತ್ ಶಿಲಾಯುಗದ ಕಾಲದ ನೆಲೆಯನ್ನು ನಾವಿಲ್ಲಿ ಕಾಣಬಹುದು. ಬೃಹತ್ ಶಿಲಾಯುಗದ ಕಾಲದ ಕಲ್‌ಗೋರಿಯೊಂದನ್ನು ಕೆಲವರು ದೇವರೆಂದೂ, ಕೆಲವರು ಸಮಾಧಿ ಎಂತಲೂ ಪೂಜಿಸಿದ್ದು ಕಂಡು ಬರುತ್ತದೆ. ನಂತರದ ಹೊಸ ಶಿಲಾಯುಗದ ಕಾಲದ ಮಾನವ ಗುಹೆಗಳನ್ನು ವಾಸಕ್ಕಾಗಿ ಬಳಸಿದ್ದಲ್ಲದೇ ಊಟ ಮಾಡಲು ಕಲ್ಲು ಚಪ್ಪಡಿಯ ಮೇಲೆ ಬಟ್ಟಲಾಕಾರದ ಕಲ್ಲುಕುಣಿಗಳನ್ನು ತೋಡಿ ಮಾನವ ಸಮುದಾಯವೇ ಅಲ್ಲಿ ಹಬ್ಬವನ್ನಾಚರಿಸಿದ ಬಗ್ಗೆ ಕುರುಹುಗಳು ಕಂಡು ಬರುತ್ತವೆ. ಬೃಹತ್ ಬಂಡೆಯಲ್ಲಿ ಬಿಡಿಸಿದ ರೇಖಾಚಿತ್ರಗಳನ್ನೂ ನಾವಿಲ್ಲಿ ಕಾಣುತ್ತೇವೆ.

ದೇವಾಲಯ ಸಮುಚ್ಚಯ

ಕಲಹಳ್ಳಿ ಗುಡ್ಡದಲ್ಲಿ ಏಳು ದೇವಾಲಯಗಳ ಒಂದು ಸಮುಚ್ಚಯುವು ಕಾಣುತ್ತದೆ. ಮುಖ್ಯವಾಗಿ ಕರೆಯಲ್ಪಡುವ ದೇವಸ್ಥಾನ ವೆಂಕಟೇಶ್ವರ ಗುಡಿ. ಅದರ ಪಕ್ಕದಲ್ಲಿ ಎಡಕ್ಕೆ ವರಾಹ ದೇವರ ಗುಡಿ ಇದೆ. ಹಿಂದುಗಡೆ ರಾಮ, ಲಕ್ಷ್ಮಣ, ಸೀತಾ ಗುಡಿ. ಎದುರಿಗೆ ಹನುಮ, ಭೀಮ, ಮಧ್ವ, ನಾಗಶಿಲ್ಪಗಳು ಒಂದೇ ಗುಡಿಯಲ್ಲಿ ಬಲಪಕ್ಕದಲ್ಲಿ ಕಾಶಿಲಿಂಗಗಳು ಒಂದು ಮನೆಯ ಇವೆ. ಅದರ ಹಿಂದುಗಡೆ ತುಗಲೆಪ್ಪನ ಗುಡಿ ಇದೆ. ಇದ ದೇವಸ್ಥಾನಕ್ಕೆ ಮೂಲ ಕಾರಣನಾದ ಬ್ರಹ್ಮಯ್ಯನ ಸಮಾ ಎಂತಲೂ ಹೇಳುತ್ತಾರೆ. ಕೆಳಗೆ ಇಳಿಯುವ ದಾರಿಯಲ್ಲಿ ಹನುಮಂ ದೇವರ ಗುಡಿಯೂ, ಮತ್ತು ಕೆಳಗೆ ಗೋವಿಂದರಾಜ ಗುಡಿಯು ಇವೆ. ಈ ಎಲ್ಲ ಗುಡಿಗಳಲ್ಲಿ ಮೇಲಿನ ಆರು ಗುಡಿಗಳ ಒಳಗಿರು ವಿಗ್ರಹಗಳು ಸುಸ್ಥಿತಿಯಲ್ಲಿದ್ದು ಪೂಜೆಗೊಳ್ಳುತ್ತಿವೆ. ಆದರೆ ಕೆಳಗಿ ಗೋವಿಂದರಾಜ ಗುಡಿಯಲ್ಲಿರುವ ಮೂರ್ತಿಯು ಭಿನ್ನವಾ ಪೂಜೆಗೆ ಅನರ್ಹಗೊಂಡಿದೆ.

ಈ ಎಲ್ಲ ದೇವಸ್ಥಾನಗಳಲ್ಲಿ ಎರಡು ದೇವಾಲಯ ಕಟ್ಟಡಗಳ ಮಾತ್ರ ಪುರಾತನವಾಗಿಯೂ, ಶಿಥಿಲವಾಗಿಯೂ ಕಂಡು ಬರುತ್ತವೆ ಉಳಿದವುಗಳು ಸುಸ್ಥಿತಿಯಲ್ಲಿವೆ.

ವೆಂಕಟೇಶ್ವರ ಗುಡಿ, ವರಾಹದೇವರ ಗುಡಿ ಮತ್ತು ಎದುರಿನ ಹನುಮಂತ ದೇವರ ಗುಡಿಗಳನ್ನು ಕಾಲಕಾಲಕ್ಕೆ ನವೀಕರಿಸಲಾಗಿದೆ ಇದಕ್ಕೆ ಪೂರಕವಾಗಿ ವರಾಹದೇವರ ಗುಡಿಯ ಒಳಗಿನ ಗೋಡೆಯ ಮೇಲಿರುವ ಶಿಲಾಲೇಖವು ಪುಷ್ಟಿ ನೀಡುತ್ತದೆ.



ಇನ್ನು ವೆಂಕಟೇಶ್ವರ ಗುಡಿಯಲ್ಲಿರುವ ವೆಂಕಟಪತಿಮೂರ್ತಿ, ವರಾಹದೇವರ ಗುಡಿಯಲ್ಲಿರುವ ವರಾಹಮೂರ್ತಿ, ಹನುಮಂತ ದೇವರ ಗುಡಿಯಲ್ಲಿರುವ ಹನುಮ, ಭೀಮ, ಮಧ್ವ ಮೂರ್ತಿಗಳು ಸುಮಾರು ಐದಾರುನೂರು ವರ್ಷಗಳಷ್ಟು ಹಳೆಯವು. ಆದರೆ ಗೋವಿಂದರಾಜ ಎಂದು ಕರೆಯಲ್ಪಡುವ ರಂಗನಾಥಸ್ವಾಮಿ ಮತ್ತು

* ಅಗಸ್ತ್ಯ ಕುಟೀರ, ಹುನ್ನೂರು, ಬಾಗಲಕೋಟೆ ಜಿಲ್ಲೆ - ೫೮೭ ೧೧೯.

ಮೇಲಣ ರಾಮ, ಲಕ್ಷ್ಮಣ, ಸೀತಾ ಶಿಲ್ಪಗಳು ಇನ್ನೂ ಹಳೆಯದಾದ ಚಾಲುಕ್ಯರ ಕಾಲದ ಶಿಲ್ಪಗಳೆಂದು ತೋರುತ್ತವೆ. ಇದಕ್ಕೆ ನಾನು ಕೊಡುವ ಮೊದಲ ಕಾರಣ ಶಿಲಾಪ್ರಭೇದ. ಉಳಿದ ಶಿಲ್ಪಗಳಿಗೂ ಈ ಎರಡು ಶಿಲ್ಪಗಳಿಗೂ ಉಪಯೋಗಿಸಿದ ಕಲ್ಲು ವಿಭಿನ್ನ ಪ್ರಕಾರದವುಗಳು. ಸಾಮಾನ್ಯವಾಗಿ ನಾವು ಕಾಣುವ ಪಟ್ಟದಕಲ್ಲು, ಐಹೊಳೆಗಳಲ್ಲಿಯ ದೇವಾಲಯಗಳಲ್ಲಿ ಉಪಯೋಗಿಸಿದ ಶಿಲೆಗಳನ್ನೇ ಗೋವಿಂದರಾಜ ಮೂರ್ತಿ ಮತ್ತು ರಾಮ, ಲಕ್ಷ್ಮಣ ಸೀತಾಮೂರ್ತಿಯನ್ನು ಕೆತ್ತಲೂ ಅಂತಹುದೇ ಶಿಲೆಗಳನ್ನು ಉಪಯೋಗಿಸಲಾಗಿದೆ. ಇನ್ನು ಎರಡನೆಯ ಕಾರಣವೆಂದರೆ ಉಬ್ಬು ಶಿಲ್ಪ. ಉಳಿದ ಮೂರ್ತಿಗಳು ಶಿಲೆಯಲ್ಲಿ ಸ್ಪಷ್ಟವಾಗಿ ಕೆತ್ತಲಾದ ಅಂದರೆ ಕೈ, ಕಾಲು, ಆಯುಧ ಇತ್ಯಾದಿಗಳನ್ನು ಪ್ರತ್ಯೇಕವಾಗಿ ಕೆತ್ತಲಾಗಿದ್ದರೆ, ಗೋವಿಂದರಾಜಮೂರ್ತಿಯನ್ನು ಮತ್ತು ರಾಮ, ಲಕ್ಷ್ಮಣ, ಸೀತಾಮೂರ್ತಿಯನ್ನು ಒಂದೇ ಕಲ್ಲು ಚಪ್ಪಡಿಯಲ್ಲಿ ಉಬ್ಬು ಶಿಲ್ಪವಾಗಿ ಕೆತ್ತಲಾಗಿದೆ. ಇದು ನಯವಾದ ಶಿಲೆಯಲ್ಲಿ ಮಾಡಲಾದ ಕೆತ್ತನೆಯಲ್ಲ. ಹೀಗಾಗಿ ನೋಡಲು ಸ್ವಲ್ಪ ಒರಟು ಆಗಿ (ಅಂದರೆ ಹರುಬುರುಕಾಗಿ) ಕಂಡುಬಂದರೂ ಶಿಲ್ಪಿಯು ಕೆತ್ತನೆಯಲ್ಲಿ ತನ್ನ ಚಾಕಚಕ್ಯತೆಯನ್ನು ತೋರಿದ್ದಾನೆ.

ಗೋವಿಂದರಾಜಮೂರ್ತಿಯ ಉದ್ದ ಸುಮಾರು ಆರು ಫೂಟು ಇದ್ದು, ಅಗಲ ಮೂರೂಕಾಲು ಫೂಟು ಇದೆ. ಆದಿಶೇಷನ ಮೇಲೆ ಮಲಗಿದ್ದರೂ ತಲೆದಿಂಬಾಗಿ ಸೇರು ಇಟ್ಟುಕೊಂಡಿರುವದು ವಿಶೇಷ. ಈ ಮಾದರಿ ಶಿಲ್ಪ ತಮಿಳು ನಾಡಿನಲ್ಲಿ ಅಪರೂಪ. ಹೆಡೆಗಳ ಸುರುಳಿಯಲ್ಲಿ ದಶಾವತಾರಗಳನ್ನು ಕೆತ್ತಲಾಗಿದೆ. ಶ್ರೀದೇವಿ ಭೂದೇವಿಯರು ಕಾಲೊತ್ತುತ್ತಿದ್ದಾರೆ. ತಲೆಯ ಭಾಗದಲ್ಲಿ ಕೆಳಗೆ ದಾಸಿಯು ಕುಳಿತು ಚಾಮರ ಬೀಸುತ್ತಿದ್ದಾಳೆ. (ಕೆಳಗಿನ ಚಿತ್ರ ನೋಡಿ).

ಕ್ರಿ. ಶ ೧೮೦೮ರಲ್ಲಿ ಶೇಷನಿಂದ ವರಾಹದೇವರ ಪ್ರತಿಷ್ಠಾಪನೆಯಾಯಿತೆಂದೂ, ಅದೇ ವರ್ಷದಲ್ಲಿಯೇ ಶೇಷನಿಂದ ವರಾಹ ಗುಡಿ ನಿರ್ಮಾಣವಾಯಿತೆಂದು ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಶಾಸನ ಸೂಚಿಯಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಅವರು ಉಲ್ಲೇಖಿಸಿದಂತೆ ಶೇಷನು ಕಲ್ಲಹಳ್ಳಿಯವನಲ್ಲ. ಮೀರಜದ ಶೇಷಗಿರಿ ನಾಯ್ಕನೆಂಬ ಶ್ರೀಮಂತ ಲೇವಾದೇವಿದಾರನೆಂದು ಇದೀಗ ಪೂಜಾರಿಗಳ ಮನೆಯಲ್ಲಿಯ ಕಡತಗಳನ್ನು ಪರಿಶೀಲಿಸಿದಾಗ ತಿಳಿದು ಬಂದಿತು. ಈ ಬಗ್ಗೆ ಇನ್ನೂ ಸುದೀರ್ಘ ಸಂಶೋಧನೆಯ ಅವಶ್ಯಕತೆ ಇದೆ.



ಗೋವಿಂದರಾಜಮೂರ್ತಿ

ಅರುಣಕುಮಾರ್ ಎಸ್.ಆರ್.*

ಸಿರಿ ಆಲಡೆಗಳು - ಐತಿಹಾಸಿಕ ಅಧ್ಯಯನ

ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಸುಮಾರು ೨೫ಕ್ಕಿಂತಲೂ ಹೆಚ್ಚು ಕಡೆಗಳಲ್ಲಿ, ಐತಿಹಾಸಿಕವಾಗಿ ಪ್ರಮುಖ ವಾಗಿರುವ ಹಾಗೂ ಅತಿಮಾನವೀ ವರ್ಗಕ್ಕೆ ಸೇರಿದ 'ಸಿರಿ'ಯ ಹಾಗೂ ಅವಳ ಬಳಗದ ಆರಾಧನೆ ನಡೆಯುತ್ತದೆ. ಇವುಗಳನ್ನು ದಕ್ಷಿಣ ಕನ್ನಡದಲ್ಲಿ 'ಆಲಡೆಗಳು' ಎಂದು ಕರೆದರೆ, ಉಡುಪಿ ಜಿಲ್ಲೆಯ ಕುಂದಾಪುರ ವಲಯಗಳಲ್ಲಿ 'ದೇವಸ್ಥಾನ' ಎಂಬುದಾಗಿ ಕರೆಯುತ್ತಾರೆ. ಆಲಡೆಗಳೆಂದು ಕರೆಯಲ್ಪಡುವ ಈ ದೈವದೇವತೆಗಳ ಸಮುಚ್ಚಯದ ಪ್ರಧಾನ ದೇವತೆ ಈಶ್ವರ. ತುಳು ನಿಘಂಟು ಹಾಗೂ ದಿ। ಗುರುರಾಜ ಭಟ್ಟರ ಪುಸ್ತಕದಲ್ಲಿ ಉಲ್ಲೇಖಿತವಾದಂತೆ ಆಲಡೆ ಎಂದರೆ ಐದು ದೇವತೆಗಳ ಸಾನ್ನಿಧ್ಯ. ಈ ಐದು ದೇವತೆಗಳೆಂದರೆ ಬ್ರಹ್ಮ, ಕ್ಷೇತ್ರಪಾಲ, ರಕ್ತೇಶ್ವರಿ, ನಂದಿಗೋಣ ಹಾಗೂ ನಾಗದೇವತೆ. ದೈವದೇವತೆಗಳ ಸಾನ್ನಿಧ್ಯವನ್ನು ಬ್ರಹ್ಮಸ್ಥಾನವೆಂತಲೂ ಕರೆಯುತ್ತಾರೆ. ಆದರೆ ಇಲ್ಲಿ ಸಿರಿಗಳ ಸಾನ್ನಿಧ್ಯವಿಲ್ಲದಿರುವ ಬ್ರಹ್ಮಸ್ಥಾನಗಳೂ ಇವೆ. ಈ ಸಮುಚ್ಚಯದಲ್ಲಿ ಉಳಿದ ದೇವತೆಗಳಷ್ಟೇ ಪ್ರಾಮುಖ್ಯ ನಾಗದೇವತೆ ಪಡೆಯುವುದರಿಂದ ಹಾಲು ಎರೆದ ಎಡೆ > ಹಾಲೆಡೆ > ಆಲಡೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೇಳಿದರೂ ಭಾಷಾ ಆಲಡೆ ಎಂದಾಗಿರಬೇಕು ಎಂತಲೂ ಕೆಲವರು ಶಾಸ್ತ್ರದ ಹಿನ್ನಲೆಯಲ್ಲಿ ಸರಿಯೆನಿಸದಿರುವುದರಿಂದ ಒಪ್ಪಿಕೊಳ್ಳಲಾಗುವುದಿಲ್ಲ.

ತುಳುವಿನಲ್ಲಿ ಬಿರ್ಮೇರ್ ಎಂದರೆ ಈಶ್ವರನೇ ಆಗಿದ್ದಾನೆ. ತುಳುನಾಡಿನಲ್ಲಿ ಶೈವಾರಾಧನೆ ಪ್ರಧಾನವಾಗಿದ್ದ ಸಂದರ್ಭದಲ್ಲಿ ಈಶ್ವರನ ಗಣಗಳಾದ ದೈವಗಳು ತುಳುವರಲ್ಲಿ ಜನಪ್ರಿಯಗೊಂಡಿರಬಹುದು. ಸಮನ್ವಯತೆಯ ದೃಷ್ಟಿಯಿಂದ ದೇವಾಲಯದ ಸಂಕೀರ್ಣದಲ್ಲಿ ಭೂತಾಲಯಗಳು ಸಾಕಾರಗೊಂಡಿರಬೇಕು. ಡಾ. ಗುರುರಾಜಭಟ್ಟರು ಈ ಮಾತನ್ನು ಉಲ್ಲೇಖಿಸುತ್ತಾರೆ. ಇವುಗಳನ್ನು ಪೋಷಿಸುವಂತೆ ಸಾಮಾನ್ಯ ಎಲ್ಲಾ ಆಲಡೆಗಳಲ್ಲಿ ಸುಮಾರು ಹತ್ತು ಹದಿನೈದಕ್ಕಿಂತಲೂ ಹೆಚ್ಚು ದೈವಗಳಿವೆ. ಆದ್ದರಿಂದ ಆಲಡೆ ಎಂದರೆ ಸಮೂಹ ಅಥವಾ ಗುಂಪು ಬೀಡು, ನೆಲೆ, ವಾಸಸ್ಥಾನ ಎಂಬ ಅರ್ಥವೇ ಹೆಚ್ಚು ಖಚಿತವೆನಿಸುತ್ತವೆ. (ತುಳು ನಿಘಂಟು, ಸಂಪುಟ ೧, ಪುಟ ೩೦೨) ಮತ್ತು ಈ ಪದ ತುಳು ಮಾತನಾಡುವ ಪ್ರದೇಶದಲ್ಲಿ ಮಾತ್ರ ಬಳಕೆಯಲ್ಲಿರುವುದರಿಂದ ವಿಶೇಷವಾಗಿ ತುಳುನಾಡಿಗರೇ ಈ ಪದವನ್ನು ಸೃಷ್ಟಿಸಿರಬೇಕು ಎನಿಸುತ್ತದೆ.

ದೈವಾರಾಧನೆಯನ್ನು ಮನೆಯಲ್ಲಿ ಮಾಡುವರೇ ಅಶ… ರಾದವರು ಹಾಗೂ ಮನೆದೈವವನ್ನು ಸಾಮೂಹಿಕಗೊಳಿಸುವ… ಇರಾದೆ ಇದ್ದವರು ಇಂತಹ ದೈವಗಳನ್ನು ಊರ ದೇಗುಲಕ್ಕೆ ತಂದ… ಹಾಕಿದ ಸಂದರ್ಭದಲ್ಲಿಯೂ ಈ ದೈವಗಳು ಇದ್ದ ಸ್ಥಳಗಳ… ಆಲಡೆಗಳಾಗಿರಬೇಕು. ಸಿರಿದೈವಗಳು ಹೀಗೆಯೇ ಬಂದಿರಬೇಕು. ಹೀಗೆ ಸಿರಿಗಳಿಗೆ ಪ್ರಾತಿನಿಧ್ಯವಿದ್ದ ಹಾಗೂ ಸಿರಿಗಳ ಆಚರಣೆಗಳ… ನಡೆಯುವ ದೈವ ದೇವತೆಗಳ ಸಮುಚ್ಚಯವನ್ನು ಸಿರಿ ಆಲಡೆಗಳೆಂದು ಕರೆದಿರಬೇಕು. ಡಾ. ಗುರುರಾಜಭಟ್ಟರು ತಮ್ಮ "Studies in Tuluva History and Culture" ಎಂಬ ಗ್ರಂಥದಲ್ಲಿ ಬ್ರಹ್ಮಸ್ಥಾನಗಳೆಂದರೆ ಆಲಡೆಗಳು ಎಂದು ಹೇಳುತ್ತಾ, ಪಡುಬಿದ್ರಿ, ಕಮ್ತಾರು, ಅನಂತಾಡಿ ವಲಯದ ಸ್ಥಳಗಳನ್ನು ಉಲ್ಲೇಖಿಸುತ್ತಾರೆ. ಇದರಲ್ಲಿ ಪಡುಬಿದ್ರೆ ಬ್ರಹ್ಮಸ್ಥಾನದ ಸ್ವರೂಪ ಬೇರೆ. ಜನಸಾಮಾನ್ಯರು ಈ ಬ್ರಹ್ಮಸ್ಥಾನವನ್ನು ಆಲಡೆಗಳೆಂದು ಕರೆಯುವುದಿಲ್ಲ. ನಾಗ, ಬ್ರಹ್ಮ, ಯಕ್ಷ, ರಕ್ತೇಶ್ವರಿ ಹಾಗೂ ನಂದಿಕೇಶ್ವರ ದೇವತೆಗಳ ಜೊತೆಗೆ ಖಡ್ಗೇಶ್ವರಿ ಇಲ್ಲಿ ಪ್ರಧಾನ ದೇವತೆಯಾಗಿ ಆರಾಧನೆಗೊಳ್ಳಲ್ಪಡುತ್ತದೆ. ಪ್ರಧಾನ ದೇವತೆಯೊಂದಿಗೆ ನಾಲ್ಕಾರು ದೈವಗಳು ಪೂಜಿಸಲ್ಪಡುತ್ತಿದ್ದರೂ ಕೆಲವೊಂದು ಕ್ಷೇತ್ರಗಳನ್ನು ಬ್ರಹ್ಮಸ್ಥಾನ ಅಥವಾ ಆಲಡೆ ಎಂದು ಕರೆಯುವುದಿಲ್ಲ (ಉದಾ : ಧರ್ಮಸ್ಥಳ, ಕದಿರೆ). ಭೂತಗಳ ಒಡೆಯನಾದ ಶಿವನನ್ನು ಬ್ರಾಹ್ಮಣೇತರರು ಆರಾಧಿಸುತ್ತಿದ್ದ ಕಾಲದಲ್ಲಿ ಬಿರ್ಮೆರ್ ಎಂದು ಕರೆದು, ಸಿರಿ ಕುಟುಂಬಿಕರ ಜೊತೆಗೆ ಹಲವಾರು ದೈವಗಳ ಸಾನ್ನಿಧ್ಯ ಸಾಧ್ಯವಾಗಿದ್ದಾಗ ಮತ್ತು ಸ್ತ್ರೀಯರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿದ್ದ ಆ ಸನ್ನಿಧಿಯನ್ನು ಸಿರಿ ಆಲಡೆಗಳೆಂದು ಕರೆಯುತ್ತಿದ್ದಿರಬೇಕು.

ಸಿರಿ ಆಲಡೆಗಳಲ್ಲಿ ಬಹಳ ಮುಖ್ಯವಾದದ್ದು ವಿಡಿಗಲ್ಲು, ಪಾಂಗಾಳ, ಕವತ್ತಾರು, ಹಿರಿಯಡಕ, ನಂದಳಿಕೆ ಹಾಗೂ ಬೊಳ್ಳೊಟ್ಟು (ಬೆಳ್ಳಿಬೆಟ್ಟು) ಆಲಡೆಗಳು. ಸಿರಿಗಳ ಕುರಿತು ತುಳುನಾಡಿನಲ್ಲಿ ತುಳುಭಾಷೆಯಲ್ಲಿ ಪಾಡ್ದನಗಳು ದೊರಕುತ್ತವೆ. ಅತ್ಯಂತ ದೀರ್ಘವಾದ ಪಾಡ್ದನವನ್ನು ಬೆಳ್ತಂಗಡಿ ತಾಲೂಕಿನ ಬೆಳಾಲು ಗ್ರಾಮದ ಮಾಚಾರಿನ ಶ್ರೀ ಗೋಪಾಲನಾಯ್ಕ ಅವರಿಂದ ಪ್ರೊ. ಲಾರಿಹಾರಿಕೋ, ಡಾ. ಬಿ.ಎ. ವಿವೇಕ ರೈ ಹಾಗೂ ಡಾ. ಕೆ. ಚಿನ್ನಪ್ಪಗೌಡರವರು ಕಲೆ ಹಾಕಿದ್ದಾರೆ. ಇದರಲ್ಲಿ ಕೆಲವು

* ಕನ್ನಡ ವಿಭಾಗ, ಎಂ.ಜಿ.ಎಂ. ಕಾಲೇಜು, ಕುಂಜಿಬೆಟ್ಟು, ಉಡುಪಿ - ೫೭೬ ೧೦೨.

ಸಿರಿ ಆಲಡೆಗಳ ಪ್ರಸ್ತಾಪವಿದೆ. ಆದರೆ ಇವುಗಳು ಮೌಖಿಕ ವಾದ್ದರಿಂದ ಇವುಗಳನ್ನು ಸಮರ್ಥಿಸುವ ಐತಿಹಾಸಿಕ ದಾಖಲೆಗಳು ಹೇರಳವಾಗಿ ಸಿಗುವುದಿಲ್ಲ. ಸಿರಿ ಆಲಡೆಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಪಾಲ್ಗೊಂಡು ಆವೇಶಕ್ಕೆ ಒಳಗಾಗುವ ಮಹಿಳೆಯರು, ಕುಮಾರರ ಕುರಿತು ದೇಶೀಯ ಹಾಗೂ ವಿದೇಶಿಯ ವಿದ್ವಾಂಸರು ಸಾಕಷ್ಟು ಅಧ್ಯಯನ ನಡೆಸಿರುತ್ತಾರೆ. ಆದರೆ ಆಲಡೆಗಳ ಇತಿಹಾಸ, ಮಹತ್ವದ ಕುರಿತಾಗಿ ಸಾಕಷ್ಟು ಅಧ್ಯಯನ ನಡೆದಿಲ್ಲ ವೆಂದೇ ಹೇಳಬೇಕು.*

* ನನ್ನ ಕ್ಷೇತ್ರಕಾರ್ಯದ ಮಿತಿಯೊಳಗೆ ಮತ್ತು ಜಾನಪದತಜ್ಞ ಶ್ರೀ ಎಸ್.ಎ. ಕೃಷ್ಣಯ್ಯನವರು ಹಾಗೂ ಡಾ. ಪಿ.ಎನ್. ನರಸಿಂಹಮೂರ್ತಿಯವರ ಸಹಕಾರದಿಂದ ಎರಡು ಆಲಡೆಗಳಿಗೆ ಸಂಬಂಧಿಸಿದಂತೆ ಐತಿಹಾಸಿಕವಾದ ಕೆಲವೊಂದು ದಾಖಲೆಗಳು ಸಿಕ್ಕಿದ್ದರಿಂದ ಅವುಗಳನ್ನು ಪ್ರಸ್ತುತಪಡಿಸಿದ್ದೇವೆ.

ದ.ಕ. ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಉಜಿರೆ ಗ್ರಾಮದಲ್ಲಿ ನಿಡಿಗಲ್ಲು ಎಂಬ ಸ್ಥಳದಲ್ಲಿ ಪ್ರಾಚೀನ ಶ್ರೀ ಲೋಕನಾಥೇಶ್ವರ ದೇವಸ್ಥಾನವಿದೆ. ಇದು ಅತ್ಯಂತ ಪ್ರಾಚೀನ ಈಶ್ವರ ದೇಗುಲ. ಇಲ್ಲಿ ಪ್ರತಿ ವರುಷ ಸಿರಿಜಾತ್ರೆ ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ಹುಣ್ಣಿಮೆಯಂದು ನಡೆಯುತ್ತದೆ. ಇಲ್ಲಿ ಪ್ರಧಾನ ದೇವರು ಶ್ರೀ ಲೋಕನಾಥೇಶ್ವರ. ಇಲ್ಲಿರುವ ಶಿವಲಿಂಗವನ್ನು ಸುಮಾರು ೮, ೯ನೇ ಶತಮಾನದ್ದೆಂದು ಡಾ. ಪಿ.ಎನ್. ನರಸಿಂಹ ಮೂರ್ತಿಯವರು ಗುರುತಿಸುತ್ತಾರೆ. ಈ ಪ್ರದೇಶದ ಶ್ರೇಷ್ಠತೆಯನ್ನು ಉಲ್ಲೇಖಿಸುವ ಶಾಸನವೊಂದು ಇಲ್ಲಿ ಸಿಗುತ್ತದೆ. ಇದರ ಕಾಲ ಸುಮಾರು ಕ್ರಿ.ಶ. ೧೪೬೦ ರಿಂದ ೧೪೮೦ ಎಂದು ಇದನ್ನು ಪತ್ತೆ ಮಾಡಿದ ಶ್ರೀ ಎಸ್.ಎ. ಕೃಷ್ಣಯ್ಯನವರು ಅಭಿಪ್ರಾಯಪಡುತ್ತಾರೆ. 'ಲೋಕನಾಡುದ ಲೋಕನಾಥ' ಎಂದೇ ತುಳುವರಲ್ಲಿ ಅಲ್ಲದೆ ಸಿರಿಪಾಡ್ದನದಲ್ಲಿ ದಾಖಲೆಗೊಂಡ ಈ ದೇವರ ಆರಾಧನೆ ನಡೆಸಿ, ಅವನಿಗೆ ದೇವಾಲಯ ಕಟ್ಟಿಸಿದವರು ಮೂಲರ ಮನೆತನದ ಸೋಮಳಾದೇವಿಯ ಹಿಂದಿನ ತಲೆಮಾರಿನ ರಾಜರೆಂದು ಶಾಸನವನ್ನು ಅಧ್ಯಯನ ಮಾಡಿರುವ ದಿ. ಡಾ. ವಸಂತಶೆಟ್ಟಿ, ಶ್ರೀ ಎಸ್.ಎ. ಕೃಷ್ಣಯ್ಯ ಹಾಗೂ ಡಾ. ಪಿ.ಎನ್. ನರಸಿಂಹಮೂರ್ತಿಯವರ ಅಭಿಪ್ರಾಯ. ಈ ಶಾಸನದಲ್ಲಿ ಈ ಪ್ರದೇಶದ ಎರಡು ಪ್ರಧಾನ ಜೈನ ಅರಸರುಗಳಾದ ಬಂಗರು ಹಾಗೂ ಮೂಲರು ಕದನ ನಡೆಸಬಾರದು ಮಾತ್ರವಲ್ಲ ಈ ಕ್ಷೇತ್ರದ ಪಾವಿತ್ರ್ಯತೆಯನ್ನು ಹಾಗೂ ಅದರ ನ್ಯಾಯದ, ಧರ್ಮದ ಸ್ಥಾನವನ್ನು ಕಾಪಾಡಿಕೊಂಡು ಬರಬೇಕು ಎಂಬ ಒಪ್ಪಂದವನ್ನು ಸೋಮನಾಥನ ಸನ್ನಿಧಿಯಲ್ಲಿ ಶ್ರೀಪಾದಂಗಳ ಮಧ್ಯಸ್ಥಿಕೆಯಲ್ಲಿ ಎರಡೂ ರಾಜರ ಸ್ವಹಸ್ತದ ಒಪ್ಪಿಗೆಯಿಂದ ನಡೆದಿದೆ ಎಂದು ಹೇಳಲಾಗಿದೆ. ಬೈಲಂಗಡಿ ಹಾಗೂ ಮೂಲ ಅರಸರ ನಡುವೆ ನಡೆದ ಒಪ್ಪಂದದ ಕುರಿತಾಗಿ ಸಿಗುವ ಪ್ರಥಮ ದಾಖಲೆ ಇದಾಗಿದೆ. ಈ ನಿಡಿಗಲ್ಲು ಕ್ಷೇತ್ರ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿಯೂ, ಬಂದು ಹೋಗುವವರಿಗೆ ಮುಕ್ತ ಕ್ಷೇತ್ರವೂ ಆಗಿರುವುದರಿಂದ ಜನಸಾಮಾನ್ಯರು ಇಂತಹ ವಿಚಾರಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಈ ಪ್ರದೇಶವನ್ನು ಯುದ್ಧಕ್ಷೇತ್ರ ದಿಂದ ಹೊರತಾಗಿಸಬೇಕೆಂಬ ಆಶಯವನ್ನು ಗಮನಿಸಿದಾಗ ಅದು ಅಂದಿನಿಂದಲೇ ಸಿರಿ ಆಲಡೆ ಆಗಿದ್ದಿರಬೇಕು ಎಂಬುದಾಗಿ ಊಹಿಸಬಹುದು.

ಶಾಸನದ ಪಾಠ

೧ ಶ್ರೀಮತು ಕಾಮಿರಾಯ ಬಂಗರು ಪೆನ್ನಂಣ ಮೂಲರೂ ಬರೆಸಿ
೨ ದ ಶಾಸನದ ಕ್ರಮ ಯಂದರೆ ನೆಡಗಲ್ಲ ಹೊಲೂಕಳೆ
೩ ಕೈ ಉಭೆಕೆಯ್ಯದ ಶಾಸನದ ಆಡಕಟೆ ಆಡಕ್ಕೆಯಿ ಹೊ
೪ ಲೂ ಗಳ್ಳದಲ್ಲಿ ಕಾಳಗ ಸಲ್ಲದು ಯೀ ಆಡಕದ ಮೀರಿದಾ
೫ ಶ್ರೀಮತ್ತು . . . . . . ಸೋಮನಾತ
೬ ದೇವರಿಗೂ . . . . . . ೪ಿಯ ಶ್ರೀಪಾದಂಗ
೭ ಳ ಮಧ್ಯಸ್ತ ಬಂಗರ ಮೂಲರ ಸ್ವಹಸ್ತದ ವೊಪ್ಪ ಶ್ರೀ ಶ್ರೀ

ಪದದ ಅರ್ಥ : ೧ನೇ ಸಾಲು : ಕಾಮಿರಾಯ ಬಂಗರು (ಬಂಗರರಾಜ) ಪೆನ್ನಂಣ ಮೂಲರೂ = ಮೂಲವಂಶದ (ಜೈನವರ್ಗದವರೂ) ರಾಜ

೨ನೇ ಸಾಲು : ನೆಡಗಲ್ಲ = ನಿಡ್ಗಲ್ (ಶಾಸನ ದೊರೆತ ಊರಿನ ಹೆಸರು)
ಹೊಲೂಕಳೆ = ಹೊಳೆಹಳ್ಳ

೩ನೇ ಸಾಲು : ಉಭಕೆಯ್ಯದ = ಇಬ್ಬರೊಳಗೆ, ಆಡಕಟ್ಟೆ= ಅಡ್ಯಣ (ಗುರಾಣೆ)
೩ ಹಾಗೂ ೪ನೇ ಸಾಲು : ಹೊಲೂಗಳ್ಳದಲ್ಲಿ = ಹೊಲ ಹಾಗೂ ಹಳ್ಳದ ಆವರಣದಲ್ಲಿ

೪ನೇ ಸಾಲು : ಕಾಳಗ=ಯುದ್ಧ, ಆಡಕವಾ ಮೀರಿದಾ = ಕರಾರನ್ನು ಉಲ್ಲಂಘಿಸಿದಲ್ಲಿ

೫ನೇ ಸಾಲು : ಅಕ್ಷರಗಳು ಲುಪ್ತವಾಗಿವೆ, ಸೋಮನಾತ = ದೇವರ ಹೆಸರು

೬ನೇ ಸಾಲು : ಅಕ್ಷರಗಳೂ ಬಹಳಷ್ಟೂ ಸವೆದು ಹೋಗಿವೆ. ಆದರೆ ಕೊನೆಗೆ 'ಶ್ರೀಪಾದಂಗ' ಬರಹವಿದ್ದು ಏಳನೇ ಸಾಲಿನಲ್ಲಿ 'ಳ' ಅಕ್ಷರವಿದೆ.

ಹೀಗಾಗಿ ಈ ಪಾದವನ್ನು 'ಶ್ರೀ ಪಾದಂಗಳ' ಎಂದು ಓದಬಹುದು. ಬಹುಶಃ ಈ ಭಾಗದಲ್ಲಿ ಗುರುಸ್ಥಾನದಲ್ಲಿನ ಯತಿಗಳ ಸಮ್ಮುಖದಲ್ಲಿ ಈ ಕರಾರು ಲೇಖ ಅಥವಾ ಶಾಸನ ರಚಿತ ವಾದಂತಿದೆ. (ಡಾ|| ಪಿ.ಎಸ್. ನರಸಿಂಹಮೂರ್ತಿಯವರ ಅಭಿಪ್ರಾಯ)

೭ನೇ ಸಾಲು : ಮಧ್ಯಸ್ತ = ಇಬ್ಬರ ನಡುವೆ, ಬಂಗರ = ಬಂಗರಾಜ, ಮೂಲರ = ಜೈನವರ್ಗದ ರಾಜ. ಕೊನೆಯಲ್ಲಿ ಸ್ವಹಸ್ತದ

ವೊಪ್ಪ ಶ್ರೀ ಶ್ರೀ ......ಎಂದಿದೆ ಕರಾರಿನ ಸಹಿಯೊಂದಿಗೆ ಎಂಬ ಅರ್ಥದಲ್ಲಿ ಶಾಸನವನ್ನು ಬರೆಸಲಾಗಿದೆ.

ಶಾಸನದಲ್ಲಿ ತಿಳಿಸಿದಂತೆ ಕಾಮಿರಾಯ ಬಂಗ ಹಾಗೂ ಪೆನ್ನಂಣ ಮೂಲ ಇವರುಗಳು ಸೋಮನಾಥನ ಸನ್ನಿಧಿಯಲ್ಲಿ ಮಾಡಿಕೊಂಡ ಒಪ್ಪಂದದನ್ವಯ ಕದನವನ್ನೇ ಮಾಡಕೂಡದು ಎನ್ನಲಾಗಿದೆ. ಶಾಸನದಲ್ಲಿ ಬಂದಿರುವ 'ಆಡಕಟ್ಟಿ' ಪದವು ಮುಖ್ಯವಾಗಿ ಅದ್ಯಣ ಅಥವಾ ಎತ್ತಿನ ಚರ್ಮದಿಂದ ಮಾಡಿದ ಗುರಾಣಿ ಹಿಡಿದು ಕದನ ಮಾಡುವ ಕ್ರಿಯೆ ಮುಂದುವರೆಯಬಾರದು ಎಂಬುದನ್ನು ಶ್ರೀಪಾದಂಗಳ ಮಧ್ಯಸ್ತಿಕೆಯಲ್ಲಿ ಎರಡೂ ರಾಜರ ಸ್ವಹಸ್ತದ ಒಪ್ಪಿಗೆಯಿಂದ ನಡೆದಿದೆ.

ಶಾಸನ ದೊರೆತ ಸ್ಥಳ ಬೆಳ್ತಂಗಡಿಯಿಂದ ೮ ಕಿ. ಮೀ ಅಂತರದಲ್ಲಿರುವ ತುಳುವಿನಲ್ಲಿ 'ನಡ್ವಾಲ್' ಎಂದು ಕರೆಯಲ್ಪಡುವ ನಿಡ್ಗಲ್ ಒಂದು ಸಣ್ಣ ಕುಗ್ರಾಮ. ಶಾಸನದಲ್ಲಿ ಉಲ್ಲೇಖಿತವಾದಂತೆ ಸೋಮನಾಥ ದೇವರೆಂದು ತಿಳಿಸಿರುವ ಈ ಸ್ಥಳದ ಸಾನ್ನಿಧ್ಯವನ್ನು ಲೋಕನಾಥನೆಂದು ಪೂಜಿಸುತ್ತಾರೆ.

ಈ ಶಾಸನವನ್ನು ಅಧ್ಯಯನ ಮಾಡಿದ ಶ್ರೀ ಎಸ್. ಎ. ಕೃಷ್ಣಯ್ಯನವರ ಅಭಿಪ್ರಾಯದಂತೆ ಸಿರಿಯ ಸಾಕುತಂದೆಯ ಹೆಸರು ಬಿರುಮಣ ಮಾಲ ಎಂಬುದಾಗಿದ್ದು, ಶಾಸನದಲ್ಲಿ ಬರುವ ಪೆನ್ನಂಣಮೂಲ ಎಂಬುದು ಸಿರಿ ಮಹಾಕಾವ್ಯದಲ್ಲಿ ಬರುವ ಬಿರ್ಮ/ಬೆರ್ಮ್ಮ ಅಥವಾ ಬಿರುಮಾ ಮೂಲಯೂ ಬಿರ್ಮ ಪಾಲವನಿಗೆ ಸಂವಾದಿಯಾಗಿ ಬಂದಿರಬೇಕು ಎನ್ನುತ್ತಾರೆ. ಅವನು ಮೂಲ ವಂಶದವನಿರಬೇಕು. ಅವನು ಲಂಕೆಲೋಕನಾಡನ್ನು ಜೀರ್ಣೋದ್ಧಾರ ಮಾಡಿಸಿದ್ದರಿಂದ 'ಸಿರಿ' ಎಂಬ ಮಗು ದಕ್ಕಿರಬೇಕು. ಜನಪದ ಕಾವ್ಯದಲ್ಲಿ ಬರುವ ಬಿರ್ಮಪಾಲ ವನಿಗೆ ಸಮನಾಗಿ ಶಾಸನದ ಪೆನ್ನಂಣಮೂಲ ಎಂಬ ಹೆಸರು ಬಳಸಲಾಗಿರುವುದು ಎಷ್ಟು ಸರಿ ಎಂಬುದು ವಿದ್ವಾಂಸರು ನಿರ್ಣಯಿಸಬೇಕು. ಈ ಸ್ಥಳ ಆಲಡೆಯಾಗಿರುವುದಕ್ಕೆ ಈ ದಾಖಲೆ ಅತ್ಯಂತ ಸಮರ್ಪಕ ಎಂದು ಹೇಳಲಾಗದು. ಆದರೂ ಇದೊಂದು ಪ್ರಾಚೀನ ದೇವಾಲಯವಂತೂ ಹೌದು. ಇಲ್ಲಿ ಪರಿವಾರ ದೈವಗಳಾಗಿ ರಕ್ತೋಶ್ವಾರಿ, ಪಂಜುರ್ಲಿ, ಮೈಸಂದಾಯ, ಮೂರ್ತಿ ರಾಯ, ನಾಗಬ್ರಹ್ಮ ಮುಂತಾದುವುಗಳು ಇವೆ. ಈ ದೇವಳ ಆರಂಭದಲ್ಲಿ ಜೈನರ ಆಡಳಿತದಲ್ಲಿದ್ದು, ನಂತರ ಉಳಿದವರ ಅಧೀನಕ್ಕೆ ಒಳಪಟ್ಟಿರಬೇಕು. ಈ ದೇವಳ ಹೆಚ್ಚು ಪ್ರವರ್ಧಮಾನಕ್ಕೆ ಬಂದಿರುವುದು ೧೯೩೫ರ ನಂತರ ಅಲ್ಲಿಯವರೆಗೆ ಇದೊಂದು ಪಾಳುಬಿದ್ದ ದೇವಾಲಯವೆಂದು ದೇವಳದ ಧರ್ಮದರ್ಶಿ ಶ್ರೀನರಸಿಂಹಮೂರ್ತಿ ಸೋಮಯಾಜಿಯವರು ಹೇಳುತ್ತಾರೆ. ಒಟ್ಟಿನಲ್ಲಿ ಆಲಡೆಯ ಸವಲಿವ್ಯಯದ ಕುರಿತಾಗಿ ಸಿಗುವ ಪ್ರಥಮ ದಾಖಲೆಯಿದು.

ಉಡುಪಿ ಜಿಲ್ಲೆಯ ಉಡುಪಿ-ಮಂಗಳೂರು ಹೆದ್ದಾರಿ ಸಮೀಪದ ಪಾಂಗಾಳದಲ್ಲಿ ಎರಡು ಸಿರಿ ಆಲಡೆಗಳಿವೆ.

೧. ಪಾಂಗಾಳ ಆದಿ ಬ್ರಹಲಿಂಗೇಶ್ವರ ಹಳೆ ಆಲಡೆ

೨. ಪಾಂಗಾಳ ಆದಿ ಬ್ರಹ್ಮಲಿಂಗೇಶ್ವರ ಹೊಸ ಆಲಡೆ

ಇವೆರಡರ ಪಕ್ಕದಲ್ಲಿಯೇ ಪಾಳು ಬಿದ್ದ ಇನ್ನೊಂದು ಆಲಡೆಯೂ ಇದೆ. ಇದನ್ನು ಅಡ್ಡದ ಆಲಡೆ ಎಂದು ಕರೆಯುತ್ತಾರೆ. ಆದರೆ ಹಳೆ ಆಲಡೆ ಹಾಗೂ ಪಾಳುಬಿದ್ದ ಆಲಡೆಗಳಲ್ಲಿ ಯಾವುದೂ ಪ್ರಾಚೀನ ಎಂಬುದು ಗೊತ್ತಾಗುವುದಿಲ್ಲ. ತುಳುನಾಡಿನ ಪ್ರಸಿದ್ಧ ಆಲಡೆಗಳಲ್ಲಿ ಇದೂ ಒಂದು ಎಂಬುದು ಸಾರ್ವಜನಿಕರ ಅಭಿಪ್ರಾಯ. ಹಳೆ ಮತ್ತು ಹೊಸ ಆಲಡೆಗಳು ಅವುಗಳ ರಚನಾ ವಿನ್ಯಾಸ, ದೈವದೇವತೆಗಳು, ತಾಂತ್ರಿಕ ವಿಧಿವಿಧಾನ, ಆಚರಣೆ ಉತ್ಸವ ಮುಂತಾದ ಎಲ್ಲದರಲ್ಲೂ ಒಂದೇ ರೀತಿ ಇವೆ - ಪ್ರಧಾನ ದೇವರ ಬ್ರಹ್ಮಲಿಂಗೇಶ್ವರ, ಕುಮಾರ, ಭೂತರಾಜ, ದೇಗ್ಗಡ್ಡಿ, ಕೋಟಿಪೂಂಜ, ಅಬ್ಬಗದಾರಗ, ರಕ್ತೇಶ್ವರಿ, ಬಾಗಿಲು ಬೊಬ್ಬರ್ಯೆ, ಗೆಜ್ಜೆರಾಮ, ಸೇಮಿಕಲ್ಲ ಪಂಜುರ್ಲಿ, ಜಾಲ ಬೈಕಡ್ಡಿ, ಜುಮಾದಿ, ಜುಮಾದಿಬಂಟ, ಚಾಮುಂಡಿ, ವ್ಯಾಘ್ರ ಚಾಮುಂಡಿ, ಅಡ್ಡತ್ತಾಯ, ಖಡ್ಗೇಶ್ವರ, ಖಡ್ಗೇಶ್ವರಿ ಹಾಗೂ ಇತರ ಪರಿವಾರ ದೈವಗಳು ಅಲ್ಲದೆ ನಾಗಸನ್ನಿಧಿ ಕೂಡ ಇದೆ. ಈ ಆಲಡೆಗಳಲ್ಲಿ ಪ್ರಾಚೀನವಾದುದು ಹಳೆ ಆಲಡೆ. ಸುಮಾರು ೫೦೦ ವರ್ಷಗಳಷ್ಟು ಹಳೆಯದಾದ ಪಾಂಗಾಳ ಲಕ್ಷ್ಮೀಜನಾರ್ಧನ ದೇಗುಲಕ್ಕೆ ಈ ಆಲಡೆಯಿಂದ ದೇವಸ್ಥಾನದ ಛಾವಣಿ ಹೊದಿಕೆಗಾಗಿ ೧೩-೧೨ ಪೈಸೆ ಹಣವನ್ನು ನೀಡಬೇಕು ಎಂಬ ತಸ್ತೀಕನ್ನು ಬ್ರಿಟಿಷರ ಕಾಲದಲ್ಲಿ ಕುಂದಾಪುರದ ಎಂ. ಸಿ. (ಸಹಾಯಕ ಕಮಿಷನರ್) ದೃಢೀಕರಿಸಿರುವುದಕ್ಕೆ ದಾಖಲೆಯಿದೆ ಎಂದು ಜನಾರ್ಧನ ದೇವಳದ ಅರ್ಚಕ ಶ್ರೀ ವಿಠಲಭವ ಹೇಳುತ್ತಾರೆ. ಅಲ್ಲಿದೆ ಜೈನ ವಂಶೀಯ ರಾಜರುಗಳು ಈ ಅಲಡೆಯನ್ನು ನಡೆಸಿಕೊಂಡು ಬಂದಿರಬೇಕು ಎಂಬ ಸ್ಥಳೀಯರ ಊಹೆಗೆ ತಕ್ಕದಾಗಿ ಆಲಡೆಯ ಸಮೀಪದಲ್ಲಿ ಜೈನವಂಶದವರ ಅರಮನೆ, ಬಾವಿ ಮುಂತಾದ ಕುರುಹುಗಳನ್ನು ಕಾಣಬಹುದು. ಜೈನವಂಶದವರು ಜಾಗವನ್ನು ಬಿಟ್ಟುಹೋದಮೇಲೆ ಬಂಟ ಸಮುದಾಯದವರು ಈ ಆಲಡೆಯನ್ನು ನೋಡಿಕೊಂಡಿದ್ದರು. ಈ ಆಲಡೆಯ ಸ್ಥಳ ಪಾಂಗಾಳದ ನಾಯಕ್ (ಕೊಂಕಣಿ ಮತದವರು) ಮನೆತನದವರಿಗೆ ಸೇರಿದ್ದ ಈ ಬಂಟ ಸಮುದಾಯದವರು ಇಲ್ಲಿನ ದೈವಗಳ ಪರಿಚಾರಕ (ಮುಕ್ಕಾಲ್ದಿ) ಕೆಲಸ ಮಾಡುತ್ತಿದ್ದರು. ಈ ಕೊಂಕಣಿ ಸಾಹುಕಾರರಲ್ಲಿ ಸಾಲಮಾಡಿದ ಈ ಅಣ್ಣು ಮುಕ್ಕಾಲ್ದಿ ಮನೆತನದವರು, ಅದನ್ನು ಹಿಂತಿರುಗಿಸಲಾಗದಿದ್ದಾಗ, ಜಗಳ ಆರಂಭವಾಗಿ ಕೋರ್ಟು ಕಟಕಟೆ ಏರಲ್ಪಟ್ಟು, ಅಲ್ಲಿನ ತೀರ್ಪಿನಂತೆ (ಬ್ರಿಟಿಷ್ ನ್ಯಾಯಧೀಶರು ನೀಡಿದ ತೀರ್ಪು) ಅಣ್ಣ ಮುಕ್ಕಾಲ್ದಿ ಕುಟುಂಬಿಕರು ನಂಬಿಕೊಂಡು ಬಂದ ದೈವಗಳನ್ನು ೨೪ ಗಂಟೆಯೊಳಗೆ ತೆಗೆದುಕೊಂಡು ಹೋಗಬೇಕು ಇಲ್ಲವಾದರೆ ಅದರ ಆಡಳಿತ ಹಾಗೂ ಸೇವೆಯ ವಿಚಾರಗಳು ಕೊಂಕಣಿ ಮನೆತನದವರಿಗೆ ಸೇರುತ್ತದೆ ಎಂಬ ಆಜ್ಞೆಯ ಪ್ರಕಾರ ಬಂಟ ಸಮುದಾಯದವರು ಹಳೆ ಆಲಡೆಯ ಮೂಲ ಬ್ರಹ್ಮಲಿಂಗೇಶ್ವರ ದೇವರನ್ನುಳಿದು,

ಉಳಿದೆಲ್ಲಾ ನಾಗ, ದೈವಗಳ ಸಮೇತ ರಾತ್ರೋರಾತ್ರಿ ಆ ಆಲಡೆಯ ಅನತಿದೂರದಲ್ಲಿಯೇ ರಾಶಿಹಾಕಿ, ಉತ್ಸವಾದಿಗಳನ್ನು ಅವುಗಳಿದ್ದಂತೆಯೇ ಮಾಡಿ, ಮರುವರ್ಷ ಹಳೆ ಆಲಡೆಯಂತೆಯೇ ಹೊಸ ಆಲಡೆ ನಿರ್ಮಿಸಿ, ಹೊಸ ಆಲಡೆಗೆ ಅಣ್ಣು ಮುಕ್ಕಾಲ್ದಿ ನಡೆಸಿಕೊಂಡು ಬರುವ ಪಾಂಗಾಳ ಆದಿ ಬ್ರಹ್ಮಲಿಂಗೇಶ್ವರ ಹೊಸ ಆಲಡೆ ಎಂದು ಕರೆದರು. ಈ ಹೊಸ ಆಲಡೆಯನ್ನು ಸ್ಥಳಾಂತರಿಸುವಲ್ಲಿ, ಪುನರ್‌ನಿರ್ಮಿಸುವಲ್ಲಿ ಹಳೆ ಆಲಡೆಯಲ್ಲಿ ಬ್ರಹ್ಮಪಾತ್ರಿಯಾಗಿದ್ದ ಶ್ರೀ ಶಿವಣ್ಣಯ್ಯನವರು ಸಹಕರಿಸಿದ್ದರು ಎಂಬುದಾಗಿ ಹೊಸ ಆಲಡೆಯಲ್ಲಿ ಇತ್ತೀಚೆಗಷ್ಟೇ ನಿವೃತ್ತರಾದ ಶ್ರೀ ದೇವರಾಜ್ ಹೇಳುತ್ತಾರೆ. ಶ್ರೀ ದೇವರಾವ್ ಈ ಆಲಡೆಗಳ ಏಳನೇ ಪಾತ್ರಿ. ೪೦೦ ವರ್ಷಗಳ ಇತಿಹಾಸವಿರುವ ಹಳೆ ಆಲಡೆಯಲ್ಲಿ ಬ್ರಹ್ಮಪಾತ್ರಿಯಾಗಿದ್ದ, ನಂತರ ಸುಮಾರು ೧೧೦ ವರ್ಷಗಳ ನಂತರ ಹೊಸ ಆಲಡೆಗೆ ತಮ್ಮ ಶ್ರದ್ಧೆಯನ್ನು ತೋರಿದ ಇವರ ಕುಟಂಬದಲ್ಲಿ ಶ್ರೀ ದೇವರಾವ್ ನಂತರ ಇದೀಗ ಅವರ ಪುತ್ರ ಶ್ರೀಪತಿದೇವರಾವ್ ರವರು ಬ್ರಹ್ಮಪಾತ್ರಿಯಾಗಿದ್ದಾರೆ. ಮುಕ್ಕಾಲ್ದಿ ಸಂಪ್ರದಾಯವಿರುವುದು ಪಾಂಗಾಳದ ಈ ಅಲಡೆಗಳಲ್ಲಿ ಮಾತ್ರ. ಅದೇರೀತಿ ಇಲ್ಲಿನ ಪ್ರಧಾನ ದೈವವಾದ ಕುಮಾರನಿಗೆ 'ಮಂಜ' ಎಂಬ ವಿಶಿಷ್ಟವಾದ ಮಾಂಸಾಹಾರದ ಹರಕೆ ಸೇವೆ ಸಲ್ಲುತ್ತದೆ. ಬ್ರಹ್ಮನ ಒಂದನೇ ಗಣ ಕುಮಾರನಿಗೆ ಸಲ್ಲುವ ಈ ಸೇವೆಯಂತೆಯೇ ಬ್ರಹ್ಮಲಿಂಗೇಶ್ವರನಿಗೆ ಢಮರು ಸೇವೆ (ಧೂಳಂಬಲಿ) ಹಾಗೂ ಢಕ್ಕೆಬಲಿ ಸೇವೆ ನಡೆಯುವುದು ಇಲ್ಲಿನ ವಿಶೇಷ. ಈಶ್ವರ ಕುಮಾರ ನೆಂದು ಕರೆಯಲ್ಪಡುವ ಈ ಕುಮಾರ ಬ್ರಹ್ಮ ಪಾತ್ರಿಯಲ್ಲಿ ದರ್ಶನದ ಮುಖೇನ ಮೈಮೇಲೆ ಬರುವುದರಿಂದ ದೈವ ದೇವರುಗಳ ದ್ವಂದ್ವ ಮೂಡುತ್ತದೆ. (ಕುಮಾರನ ಕುರಿತಾಗಿ) ಈ ಆಲಡೆಗಳ ಸಿರಿ, ಕುಮಾರ ಹಾಗೂ ಬ್ರಹ್ಮರ್‌ಗಳ ಮೂಲಸ್ಥಾನವಾದ್ದರಿಂದ ಈ ಆಲಡೆಯನ್ನು ನಂಬಿಕೊಂಡು ಬರುವ ಕುಟುಂಬಕರಿಗೆ ಇವುಗಳು ಆದಿ ಆಲಡೆಗಳಾಗಿರುತ್ತವೆ. ಹೀಗೆ ಹಲವಾರು ವೈಶಿಷ್ಟ್ಯ ಹೊಂದಿರುವ ಎರಡೂ ಆಲಡೆಗಳಲ್ಲಿ ಹಳೆಯದಕ್ಕೆ ಸುಮಾರು ೪೦೦ ವರ್ಷಗಳ ಇತಿಹಾಸವಿದ್ದರೆ, ಹೊಸ ಆಲಡೆಗೆ ಸುಮಾರು ೧೧೦ ವರ್ಷಗಳ ಇತಿಹಾಸವಿದೆ. ತುಳುನಾಡಿನಲ್ಲಿ ನಾಗ ಸಂಬಂಧಿಯಾಗಿ ಕುಟುಂಬವೊಂದು ನಂಬುವ ಸ್ಥಳವನ್ನು 'ಮೂಲ' ಎಂದು ಕರೆದರೆ, ಆಲಡೆಗಳಲ್ಲಿ ನಾಗಸನ್ನಿಧಿ ಇದ್ದರೂ, ಆ ಹಿನ್ನೆಲೆಯಲ್ಲಿ ಅಧ್ಯೆಸಿಕೊಳ್ಳಲಾಗದು. ದೇವಾಲಯಗಳ ರಚನೆಯ ನೆಲೆಯಲ್ಲಿಯೇ ಈ ಆಲಡೆಗಳ ಅಧ್ಯಯನ ನಡೆಸಿದರೆ ಈ ರಹಸ್ಯ ಭೇದಿಸಲಾದೀತು. ಸಿರಿ ದೈವಗಳು ದೇವಾಲಯ ಸಂಕೀರ್ಮದೊಳಗೆ ಪ್ರವೇಶ ಪಡೆದ ರೀತಿ, ಆರಾಧನೆಗೆ ಒಳಪಟ್ಟ ರೀತಿ ಹಾಗೂ ಸಿರಿ ಮಹಾಕಾವ್ಯದ ಮೌಖಿಕ ಹಿನ್ನೆಲೆಗಳನ್ನು ಇಟ್ಟುಕೊಂಡು ಅವುಗಳೊಂದಿಗಿನ ಸಂಬಂಧಗಳ ಜಟಿಲತೆಯನ್ನು ಬಿಡಿಸಿದಾಗ ಸಿರಿ ಆಲಡೆಗಳ ಇತಿಹಾಸ ಲಭ್ಯವಾಗಬಹುದು. ಜೊತೆಗೆ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಜಾನಪದ ಇವುಗಳೊಳಗಿನ ಕೊಡುಕೊಳ್ಳುವಿಕೆಯ ಸಾಧ್ಯತೆಯನ್ನು ಅವಲೋಕಿಸಬಹುದು. ಕೇವಲ ಎರಡು ಆಲಡೆಗಳ ಪ್ರಾಥಮಿಕ ಅಧ್ಯಯನ ಮಾಡಲಾಗಿದೆ. ಇನ್ನು ಹಲವಾರು ಆಲಡೆಗಳು ದ.ಕ. ಜಿಲ್ಲೆಯಲ್ಲಿವೆ. ಅವುಗಳ ಸಮಗ್ರ ಅಧ್ಯಯನ ಸಾಧ್ಯವಾದಾಗ ತುಳುನಾಡಿನ ಇತಿಹಾಸದಲ್ಲೂ ಒಂದು ಹೊಸ ಮಜಲು ನಿರ್ಮಾಣವಾದಂತಾಗುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಗಣಪತಿರಾವ್. ಎಂ., ೧೯೨೩, **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ**

೨. ಡಾ. ಪಿ. ಗುರುರಾಜಭಟ್ಟ., ೧೯೭೫, *Studies in Tuluva History and Culture.*

೩. ಡಾ. ಯು.ಪಿ. ಉಪಾಧ್ಯಾಯ., ೧೯೮೭, **ತುಳು ನಿಘಂಟು**, ರಾ.ಗೋ.ಪೈ ಸಂಶೋಧನಾ ಕೇಂದ್ರ, ಉಡುಪಿ.

ಮಾಹಿತಿ ಸಹಕಾರ :

೧. ಶ್ರೀ ಎಚ್. ಎ. ಕೃಷ್ಣಯ್ಯ., ಆರ್.ಆರ್.ಸಿ. ಉಡುಪಿ;
ನಿಡಿಗಲ್ಲು ಶಾಸನದ ಪಾಠ, ಅರ್ಥ ಹಾಗೂ ಮೂಲವಂಶದ ಕುರಿತಾದ ಮಾಹಿತಿ.

೨. ಶ್ರೀ ನರಸಿಂಹಮೂರ್ತಿ ಸೋಮಯಾಜಿ, ಆಡಳಿತ ಮೊಕ್ತೇಸರರು, ಶ್ರೀ ಲೋಕನಾಥೇಶ್ವರ ದೇವಸ್ಥಾನ ನಿಡಿಗಲ್ಲು, ಉಜಿರೆ.

೩. ಶ್ರೀ ಪಿ.ಎಲ್. ವಿಠಲಭಟ್, ಅರ್ಚಕರು, ಶ್ರೀ ಲಕ್ಷ್ಮೀ ಜನಾರ್ಧನ ದೇವಸ್ಥಾನ, ಪಾಂಗಾಳ

೪. ಶ್ರೀನಂದ ಮುಕ್ಕಾಲ್ದಿ, ಶ್ರೀ ಆದಿಬ್ರಹ್ಮಲಿಂಗೇಶ್ವರ ಹೊಸ ಆಲಡೆ, ಪಾಂಗಾಳ.

೫. ಡಾ.ಪಿ.ಎನ್. ನರಸಿಂಹಮೂರ್ತಿ, ಇತಿಹಾಸ ಸಂಶೋಧಕರು, ಉಡುಪಿ.

ಅಶೋಕ. ಕಂದಗಲ್*

ಡಾ॥ ಮಹೇಶಕುಮಾರ ಹ. ಪಾಟೀಲ**

ಮುದ್ದೇಬಿಹಾಳ ಪ್ರದೇಶದ ಶಾಸನೋಕ್ತ ದೇವಾಲಯಗಳು

ದೇವಸ್ಥಾನವನ್ನು ಒಂದು ಸಾಮಾಜಿಕ-ಸಾಂಸ್ಕೃತಿಕ ಕೇಂದ್ರವಾಗಿ ಭಾವಿಸಿ ಅದರ ವ್ಯವಸ್ಥೆ, ಅದು ಜನತೆಯ ಮೇಲೆ ಬೀರಿದ ಪ್ರಭಾವ, ಜನತೆಯು ದೇವಸ್ಥಾನವನ್ನು ಕಂಡ ರೀತಿ ಮುಂತಾದವುಗಳನ್ನು ಕುರಿತ ಅಧ್ಯಯನಗಳು ಕಡಿಮೆಯೇ ಎಂದು ಹೇಳಬಹುದು. ಹೀಗಾಗಿ ದೇವಸ್ಥಾನದ ಹುಟ್ಟು ಮತ್ತು ಬೆಳವಣಿಗೆ, ಹಾಗೂ ಸಾಮಾಜಿಕ ಜೀವನದ ಮೇಲೆ ಬೀರಿದ ಪರಿಣಾಮ ಮುಂತಾದ ಅಂಶಗಳ ಹಿನ್ನೆಲೆಯಲ್ಲಿ ಒಂದು ಸ್ವತಂತ್ರ ಅಧ್ಯಯನ ನಡೆಯಬೇಕಾಗಿದೆ. ಅದಕ್ಕಾಗಿ ನಾವು ಬಿಜಾಪುರ ಜಿಲ್ಲೆ, ಮುದ್ದೇಬಿಹಾಳ ತಾಲೂಕಿನ ಪ್ರದೇಶವನ್ನು ಇಟ್ಟುಕೊಂಡು ಅಲ್ಲಿನ ಶಾಸನಗಳ ಆಧಾರದ ಮೇಲೆ ದೇವಾಲಯಗಳ ಅಧ್ಯಯನವನ್ನಿಲ್ಲಿ ಕೈಕೊಂಡಿದ್ದೇವೆ.

ಕರ್ನಾಟಕದ ಶಾಸನಗಳಲ್ಲಿ ದೇವಸ್ಥಾನಗಳು ಕ್ರಿಸ್ತಪೂರ್ವದಿಂದ ಕಂಡುಬಂದರೂ ಈಗ ಉಳಿದು ಬಂದಿರುವ ದೇವಸ್ಥಾನಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದೆಂದರೆ ತಾಳಗುಂದದ ಪ್ರಣವೇಶ್ವರ ದೇವಾಲಯವಾಗಿದೆ[1]. ಇನ್ನು ಪ್ರಸ್ತುತ ಮುದ್ದೇಬಿಹಾಳ ಪ್ರದೇಶಕ್ಕೆ ಸಂಬಂಧಿಸಿದಂತೆ ಹೇಳವುದಾದರೆ ಕಲ್ಯಾಣಿ ಚಾಲುಕ್ಯ ಅರಸನ ಆಳ್ವಿಕೆಯ ಕಾಲದಲ್ಲಿ, ಕ್ರಿ.ಶ. ೧೦೦೪ರಲ್ಲಿ ಕಂಡುಬರುವ ತುಂಬಗಿಯ ಬ್ರಹ್ಮೇಶ್ವರ ದೇವಾಲಯದ ಉಲ್ಲೇಖವೇ ಅತ್ಯಂತ ಪ್ರಾಚೀನವಾದುದಾಗಿದೆ[2].

ಪ್ರಸ್ತುತ ನಮ್ಮ ಅಧ್ಯಯನ ಪ್ರದೇಶದ ಶಾಸನಗಳಲ್ಲಿ ಹೇರಳವಾಗಿ ಕಂಡುಬರುವ ದೇವಾಲಯಗಳು ಅಂದಿನ ಜನಜೀವನದ ಮೇಲೆ ಮಹತ್ವವಾದ ಪ್ರಭಾವವನ್ನು ಬೀರಿವೆ. ಅಂದು ಅವು ಭಕ್ತಿಯ ಕೇಂದ್ರಗಳಾಗಿರದೇ ಅಂದಿನ ಸಾಮಾಜಿಕ, ಆರ್ಥಿಕ ಕಾರ್ಯಕಲಾಪಗಳನ್ನು ನಿಭಾಯಿಸುವ ಸಂಸ್ಥೆಗಳಾಗಿದ್ದವು. ದೇವಾಲಯ ನಿರ್ಮಾಣ ಹಾಗೂ ಅವುಗಳ ಪೋಷಣೆಯಲ್ಲಿ ಅಂದಿನ ಅರಸರು ಮತ್ತು ಪ್ರಭುವರ್ಗದವರ ಪಾತ್ರ ಪ್ರಧಾನವಾಗಿತ್ತು. ಈ ಪ್ರದೇಶದ ಶಾಸನಗಳಲ್ಲಿ ಸುಮಾರು ೪೧ ದೇವಾಲಯಗಳ ಹೆಸರುಗಳಿದ್ದು, ಅವು ಬೇರೆ ಬೇರೆ ಧರ್ಮಗಳಿಗೆ ಸೇರಲ್ಪಟ್ಟವುಗಳಾಗಿವೆ. ಅವುಗಳನ್ನು ಆಯಾ ಮತ-ಧರ್ಮಗಳ ಹಿನ್ನೆಲೆಯಲ್ಲಿ ಗುರುತಿಸುವದಾದಾರೆ ಈ ಎಲ್ಲ ದೇವಾಲಯಗಳ ಒಂದು ಪಟ್ಟಿಯನ್ನು ಹೀಗೆ ನೋಡಬಹುದು.

ಶೈವ	ಜೈನ	ವೈಷ್ಣವ	ತ್ರಿಕೂಟ	ಇತರೆ	ಒಟ್ಟು
೩೧	೫	೧	೩	೧	೪೧

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಮುದ್ದೇಬಿಹಾಳ ಪ್ರದೇಶದಲ್ಲಿ ಶೈವ ದೇವಾಲಯಗಳನ್ನು ಹೆಚ್ಚು ಪ್ರಮಾಣದಲ್ಲಿ ನಿರ್ಮಿಸಿರುವುದು ಕಂಡುಬರುತ್ತದೆ. ದೇವಾಲಯಗಳ ಸಂಖ್ಯೆ ಮತ್ತು ಅದರ ಭಕ್ತಾದಿಗಳು ಹೆಚ್ಚಿದಂತೆ ದೇವಾಲಯದ ಹರವು ಬೆಳೆಯಿತು. ವಿವಿಧ ರೀತಿಯ ಜನಾಕರ್ಷಣೆಯಿಂದಾಗಿ ಸಮನ್ವಯ ಬುದ್ಧಿ ಬೆಳೆದುಬಂದಿತು. ಇದರ ಪರಿಣಾಮವಾಗಿ ಮೂಲದೇವತೋಪಾಸನೆಯೊಂದಿಗೆ ಇತರ ದೇವತೆಗಳ ಉಪಾಸನೆಯೂ ಆರಂಭವಾಯಿತು. ಬರಬರುತ್ತಾ ದೇವಾಲಯ ನಿರ್ಮಾಣದ ಹಂತದಲ್ಲಿ ಏಕಕೂಟದಿಂದ ಆರಂಭವಾಗಿ ದ್ವಿಕೂಟ, ತ್ರಿಮೂರ್ತಿ ತ್ರೈಪುರುಷ, ತ್ರಿಕೂಟ ಹಾಗೂ ಪಂಚಕೂಟ ದೇವಾಲಯಗಳು ಕಂಡುಬಂದವು. ನಮ್ಮ ಅಧ್ಯಯನದ ಪ್ರದೇಶದಲ್ಲಿ ನಿರ್ಮಿತವಾದ ದೇವಾಲಯಗಳನ್ನು ಗಮನಿಸಿದಾಗ, ಹೆಚ್ಚಿನ ಸಂಖ್ಯೆಯ ಏಕಕೂಟ ದೇವಾಲಯಗಳನ್ನು ನಿರ್ಮಿಸಿರುವದು ಕಂಡುಬರುತ್ತದೆ. ಆದರೆ ಈಗ ದೊರೆತಿರುವ ಶಾಸನಗಳಲ್ಲಿ ದ್ವಿಕೂಟ ದೇವಾಲಯಗಳು ಉಲ್ಲೇಖವಿಲ್ಲ. ತ್ರಿಮೂರ್ತಿ ದೇವಾಲಯಗಳನ್ನು ತ್ರೈಪುರುಷ ದೇವಾಲಯಗಳೆಂದು ಕರೆಯುತ್ತಿದ್ದು, ಅಂತಹ ಒಂದು ದೇವಾಲಯದ ನಿರ್ಮಾಣದ ಉಲ್ಲೇಖ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ ಕ್ರಿ.ಶ. ೧೦೮೬ರ ತುಂಬಿಗೆಯ ಶಾಸನದಲ್ಲಿ ಕಂಡುಬರುತ್ತದೆ[3]. ಇಲ್ಲಿ ೨ ತ್ರಿಕೂಟ ದೇವಾಲಯಗಳ ಉಲ್ಲೇಖ ನಮಗೆ ದೊರೆಯುತ್ತಿದ್ದು, ಅವುಗಳಲ್ಲಿ ತ್ರೈಪುರುಷ ದೇವಾಲಯವಿರುವದು ಗೊತ್ತಾಗುವುದಿಲ್ಲ. ಆದರೆ ಕ್ರಿ.ಶ. ೧೧೮೪ರ ಮಿಣಜಗಿಯ ಶಾಸನದಲ್ಲಿ[4] ಮಾಚಲೇಶ್ವರ, ಮಲ್ಲಿಕಾರ್ಜುನ ಮತ್ತು ಮಾಧವರ ಮೂರ್ತಿಗಳ ಉಲ್ಲೇಖ ಬರುತ್ತದೆ. ಇದರಿಂದ ತ್ರಿಕೂಟ ದೇವಾಲಯದಲ್ಲಿ ಇಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳ ದೇವತೆಗಳ ಪ್ರತಿಷ್ಠಾಪನೆ ಹಾಗೂ ಆರಾಧನೆ ಚಾಲನೆಯಲ್ಲಿತ್ತೆಂದು ಹೇಳಬಹುದು. ಇವುಗಳಲ್ಲದೇ ಧರ್ಮಗಳ ದೇವತೆಗಳ ಪ್ರತಿಷ್ಠಾಪನೆ

* ಇತಿಹಾಸ ಉಪನ್ಯಾಸಕರು, ಶ್ರೀ ಶಂಕರಪ್ಪ ಸಕ್ರಿ, ಪ.ಪೂ. ಮಹಾವಿದ್ಯಾಲಯ, ಬಾಗಲಕೋಟೆ

** ಗೌರವ ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹಾಗೂ ಆರಾಧನೆ ಚಾಲನೆಯಲ್ಲಿತ್ತೆಂದು ಹೇಳಬಹುದು. ಇವುಗಳಲ್ಲದೇ ಕ್ರಿ.ಶ. ೧೬ನೆಯ ಶತಮಾನದ ಆಲಕೊಪ್ಪರ ಗ್ರಾಮದ ಶಾಸನದಲ್ಲಿ ಹನುಮಂತದೇವರ ದೇವಾಲಯದ ಉಲ್ಲೇಖ ದೊರೆಯುತ್ತದೆ[೫].

ದೇವಾಲಯಗಳು ಪ್ರಾಚೀನ ಮತ್ತು ಮಧ್ಯಕಾಲೀನ ಜನರಲ್ಲಿ ಬೇರೂರಿದ ಜೀವನಶ್ರದ್ಧೆ ಮತ್ತು ನಿಷ್ಠೆಗಳ ಪ್ರತೀಕಗಳಾಗಿವೆ. ಅವು ಜನಜೀವನದ ಭಾಗವೇ ಆಗಿ ಅವರನ್ನು ತಿದ್ದುವ ಶಕ್ತಿಗಳಾಗಿರಬೇಕೆಂಬುದೇ ಅವುಗಳ ನಿರ್ಮಾಣದ ಹಿಂದಿರುವ ಮಹೋದ್ದೇಶವಾಗಿತ್ತು[೬] ಇದರಿಂದಾಗಿ ಅಂದಿನ ಕರ್ನಾಟಕದ ಪ್ರತಿಯೊಂದು ಊರಿಗೂ ದೇವಸ್ಥಾನವೇ ಕೇಂದ್ರಬಿಂದು ಆಗಿರುತ್ತಿತ್ತು. ಅದರ ಸುತ್ತ ಆ ಊರಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವು ರೂಪುಗೊಳ್ಳುತ್ತಿದ್ದ ಬಗೆಯನ್ನು ಕುರಿತು "ದೇವಸ್ಥಾನವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾ ಕೇಂದ್ರವೂ ಆಗಿದ್ದಿತು. ಶಿಲ್ಪ, ಚಿತ್ರ, ಸಂಗೀತ, ನರ್ತನಾದಿ ಕುಶಲಕಲೆಗಳು ದೇವಸ್ಥಾನದ ಆಶ್ರಯದಲ್ಲಿ ವೃದ್ಧಿಸಿದವು. ದೇವಾಲಯವು ಜನರ ನ್ಯಾಯಾಲಯವೂ ಆಗಿದ್ದಿತು. ದುಃಖ ಬಂದಾಗ ಜನರು ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಹಬ್ಬಹರಿದಿನಗಳಲ್ಲಿ ದೇವಸ್ಥಾನವನ್ನು ಅಲಂಕರಿಸಿ ಪೂಜೋತ್ಸವಗಳನ್ನು ನಡೆಯಿಸುತ್ತಿದ್ದರು. ದೇವಸ್ಥಾನ ಬಡವರಿಗೆ ಸತ್ರವಾಗಿದ್ದಿತು. ಶ್ರೀಮಂತರ ಐಶ್ವರ್ಯವು ಹರಿದು ಹೊರಗೆ ಬರಲು ಕಾರಣವಾಗಿದ್ದಿತು" ಎಂದು ಡಾ. ಚಿದಾನಂದಮೂರ್ತಿಯವರು ಹೇಳಿದ್ದಾರೆ.[೭] ಹೀಗೆ ಬಹುಮುಖ ಚಟುವಟಿಕೆಯ ಆಗರಗಳಾದ ದೇವಸ್ಥಾನಗಳ ನಿರ್ಮಾಣ ನಮ್ಮ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿಯೂ ನಡೆದು ಬಂದಿರುವುದು ಕಂಡುಬರುತ್ತದೆ. ಅದರಲ್ಲಿಯೂ ಮಧ್ಯ ಕಾಲೀನ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ದೇವಸ್ಥಾನಗಳನ್ನು ನಿರ್ಮಿಸಿರುವದು ಮೇಲೆ ಕೊಟ್ಟಿರುವ ಪಟ್ಟಿಯಿಂದ ಕಂಡು ಬರುತ್ತದೆ.

ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕು ಇಲ್ಲವೇ ಗುಡಿಗಳಿಗೆ ದಾನವನ್ನಾದರೂ ಕೊಡಬೇಕು, ಎಂಬುದು ಆಗಿನವರ ಧಾರ್ಮಿಕ ಭಾವನೆಯಾಗಿತ್ತು[೮]. ಸಂಪತ್ತು ಶಾಶ್ವತವಾದುದಲ್ಲ, ಧರ್ಮವೇ ನಿಜವಾದ ಸಂಪತ್ತು. ಇದಕ್ಕಾಗಿ ನಮ್ಮ ಪ್ರಾಚೀನರು ತಾವು ಸಂಪಾದಿಸದ ಐಶ್ವರ್ಯವನ್ನು ಸಾರ್ಥಕಗೊಳಿಸಲು ದೇವಾಲಯವನ್ನು ಕಟ್ಟಿಸಿದ್ದು ತಿಳಿಯುತ್ತದೆ[೯]. ಶಾಸನವೊಂದು ನ್ಯಾಯವಾದ ರೀತಿಯಲ್ಲಿ ಧನಸಂಪಾದನೆ ಮಾಡಬೇಕು, ಆ ಧನವನ್ನು ದಾನಮಾಡಬೇಕು ಅಥವಾ ಅದರ ಸಹಾಯದಿಂದ ದೇವಸ್ಥಾನವನ್ನು ನಿರ್ಮಿಸಬೇಕು ಇವುಗಳಿಗೆ ಬಳಸದಿದ್ದರೆ ಅಂಥಹ ಹಣವನ್ನು ಬೇರೆಯವರು ಅಪಹರಿಸಿಬಿಡಬಹುದು ಎಂದಿದೆ[೧೦]. ಇದು ಆ ಕಾಲದ ಆದರ್ಶವಾಗಿತ್ತು. "ಪೆರ್ಮ್ಮಂ ಬಡೆದುಂ ಮಡಗಿದೊಡೊರ್ಮ್ಮೆಯೆತಾಂ ಕಿಡುಗುಮೆಂದು ಧರ್ಮಕ್ಕೆ ತವಿಸಿ ಧನಮಂ"- ಶಿವಗೃಹ ನಿರ್ಮಿಸಲು ಕೋಳೂರಿನ ಅಧಿಕಾರಿಯೊಬ್ಬ ಬಳಸಿದ್ದನ್ನು ಶಾಸನ ತಿಳಿಸಿದೆ[೧೧]. ಇದಕ್ಕೆ ನಿದರ್ಶನವಾಗಿ ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಅರಸರು ಮತ್ತು ಅವರ ಅಧಿಕಾರಿ ವರ್ಗದವರಲ್ಲದೇ ಸಾಮಾನ್ಯಜನತೆ ಸಹ ದೇವತಾಪ್ರತಿಷ್ಠೆ ಮತ್ತು ದೇವಾಲಯ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿರುವದು ಕಂಡುಬರುತ್ತದೆ. ಈ ಕಾರ್ಯದ ಪ್ರೇರಣೆ ಹಲವರಿಗೆ ನಿಜಾನ್ವಯದ ಸಮೃದ್ಧಿಕಾರಣ[೧೨], ಇನ್ನು ಕೆಲವರಿಗೆ ಸಂಸಾರದ ಹೆದರಿಕೆ, ಮೋಕ್ಷಾಪೇಕ್ಷೆ[೧೩], ಮತ್ತೆ ಕೆಲವರಿಗೆ ಪುಣ್ಯ ಸಂಪಾದಿಸುವ ಹಂಬಲ[೧೪]ಮುಂತಾದ ವಿಷಯಗಳು ಕಾರಣವಾಗಿರುವಂತೆ ಕಂಡುಬರುತ್ತದೆ.

ದೇವರು ಮತ್ತು ದೇವಾಲಯಗಳನ್ನು ಪ್ರತಿಷ್ಠಾಪಿಸಿದ ವ್ಯಕ್ತಿಯ ಹೆಸರಿನಿಂದ ಸಾಮಾನ್ಯವಾಗಿ ಆ ದೇವಾಲಯ ಮತ್ತು ದೇವರನ್ನು ಕರೆಯಲಾಗುತ್ತಿತ್ತು. ಅದಕ್ಕೆ ಕಾರಣ ದೇವಸ್ಥಾನವನ್ನು ಕಟ್ಟಿಸಿದವನ ಹೆಸರು ದೇವರಿಗೆ ಬಂದು, ಅದನ್ನು ಕಟ್ಟಿಸಿದವನು ದೇವರೇ ಆಗಿಬಿಡುತ್ತಾನೆಂಬುದು ಆಕಾಲದ ನಂಬಿಕೆಯಾಗಿತ್ತೆಂದು ಶಾಸನವೊಂದು ತಿಳಿಸುತ್ತದೆ[೧೫]. ಉದಾಹರಣೆಗೆ ಈ ಪ್ರದೇಶದ ಶಾಸನಗಳು ಉಲ್ಲೇಖಿಸುವಂತೆ, ಕಲ್ಯಾಣೆ ಚಾಲುಕ್ಯ ಇರಿವೆಬೆಡಂಗ ಸತ್ಯಾಶ್ರಯನ ಅಧಿಕಾರಿ ಸೆಟ್ಟಿ ಬ್ರಹ್ಮಯ್ಯ ತುಂಬಗಿಯಲ್ಲಿ ಕಟ್ಟಿಸಿದ ದೇವಾಲಯ ಬ್ರಹ್ಮೇಶ್ವರ[೧೬], ಎರಡನೆಯ ಜಯಸಿಂಹನ ಮಹಾಮಂಡಲೇಶ್ವರ ಗೋಮರಸನ ಹೆಗ್ಗಡೆ ದುರ್ಗಿಮಯ್ಯನ ಹೆಂಡತಿ ಬಲಿಕಬ್ಬೆಗೌಡ ತಮದಡ್ಡಿಯಲ್ಲಿ ನಿರ್ಮಿಸಿದ ದೇಗುಲ ಬಲೇಶ್ವರ[೧೭], ಎರಡನೆಯ ಸೋಮೇಶ್ವರನ ಮಹಾಸಾಹಣಿ ಬಲ್ಲರಸನಿಂದ ಕುಂಟೋಜಿಯಲ್ಲಿ ಕಟ್ಟಿಸಲ್ಪಟ್ಟು ದೇವಾಲಯ ಬಲ್ಲೇಶ್ವರ,[೧೮] ಮಿಣಜಗಿಯ ಪ್ರಭು ಮಾಚರಸಯ್ಯ ಅದೇ ಗ್ರಾಮದಲ್ಲಿ ಮಾಡಿಸಿದ ಆಲಯ ಮಾಚಲೇಶ್ವರ[೧೯] ಮತ್ತು ಯಾದವ ಭಿಲ್ಲಮನ ಮಹಾಪ್ರಧಾನ ನನ್ನರಸನೆಂಬುವನು ಪೀರಾಪೂರದಲ್ಲಿ ನಿರ್ಮಿಸಿದ ದೇಗುಲ ನನ್ನೇಶ್ವರ[೨೦]. ಹೀಗೆ ಕಂಡು ಬರುವ ಅಲ್ಲಿನ ಶಾಸನೋಲ್ಲೇಖಗಳು ಇದನ್ನು ಸಮರ್ಥಿಸುತ್ತವೆ.

ಕೆಲವೊಮ್ಮೆ ಐತಿಹಾಸಿಕ ವ್ಯಕ್ತಿಗಳನ್ನು ಕೂಡ ದೇವರನ್ನಾಗಿ ಪೂಜಿಸುವದು ಹಿಂದಿನಿಂದ ನಡೆದು ಬಂದ ಸಂಪ್ರದಾಯವಾಗಿತ್ತು. ಯಾದವ ದೊರೆ ರಾಯಮುರಾರಿ ಸೋವಿದೇವನ ಅಧಿಕಾರಿ ನಾಗದೇವನಾಯಕನು ಗೊಟಖಂಡಕಿಯಲ್ಲಿ ಗಂಗೇಶ್ವರ ದೇವಾಲಯವನ್ನು ನಿರ್ಮಿಸಿದನು[೨೧]. ಇದರಿಂದ ನಾವು ಮೇಲೆ ಹೇಳಿದ ವಿಷಯವು ಪ್ರಸ್ತುತ ಮುದ್ದೇಬಿಹಾಳ ಪ್ರದೇಶಕ್ಕೂ ಸಂಬಂಧಿಸಿದ್ದು ಸ್ಪಷ್ಟವಾಗುತ್ತದೆ.

ದೇವಸ್ಥಾನವೊಂದು ನಿರ್ಮಾಣವಾದ ನಂತರ ಅದರ ಉಸ್ತುವಾರಿಯನ್ನು ನೋಡಿಕೊಂಡು ಬರುವ ಕೆಲಸ ಸಣ್ಣದಾಗಿರಲಿಲ್ಲ. ಕಾಲಕಾಲಕ್ಕೆ ಅದರ ಜೀರ್ಣೋದ್ಧಾರ, ಪೂಜಾದಿ ಕ್ರಿಯೆಗಳು, ಸಾಂಗವಾಗಿ ನಡೆದುಕೊಂಡುಬರಲು ಆರ್ಥಿಕ ಸಹಾಯದ ಅಗತ್ಯ ಅತ್ಯವಶ್ಯವಾಗಿತ್ತು. ದೇವಾಲಯ ಕಟ್ಟಿಸಿದ ವ್ಯಕ್ತಿಗಳು

ಇದನ್ನರಿತು ಅದಕ್ಕೆ ಸಾಕಷ್ಟು ದಾನ-ದತ್ತಿಗಳನ್ನು ನೀಡುತ್ತಿದ್ದರು[೨೨]. ಈ ಕ್ರಿಯೆ ಅಂದಿನ ಜನರ ಗಮನಸೆಳೆದು, ಇಂಥಹ ದೇವಾಲಯಗಳಿಗೆ ತಮ್ಮ ಕೈಲಾದಷ್ಟು ಸಹಾಯ ನೀಡುವದರ ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶಿಸಿ ತೃಪ್ತರಾಗಿರುತ್ತಿದ್ದರು. ಹೀಗಾಗಿ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಜನಜೀವನದಲ್ಲಿ ದಾನಗುಣ ಪ್ರಮುಖ ಪಾತ್ರವಹಿಸಿದೆ. ಒಬ್ಬ ವ್ಯಕ್ತಿ ತನ್ನ ಜೀವಿತದಲ್ಲಿ ವೈಯಕ್ತಿಕವಾಗಿ, ಕುಟಂಬದ ಸದಸ್ಯನಾಗಿ, ಸಮುದಾಯದ ಜೀವಿಯಾಗಿ ದಾನಕ್ರಿಯೆಯಲ್ಲಿ ಪಾಲುಗೊಂಡಿರುವ ವಿಷಯವನ್ನು ಈ ಪ್ರದೇಶದ ಶಾಸನಗಳು ಉಲ್ಲೇಖಿಸಿವೆ[೨೩].

ಹೀಗೆ ದೇವಾಲಯವನ್ನು ಕಟ್ಟಿಸುವದನ್ನು ಪ್ರೋತ್ಸಾಹಿಸುತ್ತಿದ್ದ ಈ ಪ್ರದೇಶದ ಅಂದಿನ ಅರಸರು, ಅವರ ರಾಣಿಯರು, ಸಾಮಂತರು, ಆಡಳಿತದ ಅಧಿಕಾರಿವರ್ಗ, ವರ್ತಕರು, ಸಾಮಾನ್ಯ ಜನರು, ಯಾವ ಭೇದ-ಭಾವವಿಲ್ಲದೇ ಸಾಮೂಹಿಕವಾಗಿಯೂ, ವೈಯಕ್ತಿಕವಾಗಿಯೂ ದಾನ-ದತ್ತಿಗಳನ್ನು ನೀಡಿದ್ದಾರೆ. ದೇವಸ್ಥಾನಗಳಿಗೆ ಬಿಡುವ ದಾನದ ವಸ್ತುಗಳಲ್ಲಿ ಭೂಮಿ[೨೪], ನಿವೇಶನ[೨೫], ಹಣ[೨೬], ದವಸ-ಧಾನ್ಯ[೨೭], ಎಣ್ಣೆಗಾಣ[೨೮], ಸುಂಕ[೨೯] ಮೊದಲಾದವುಗಳು ಸೇರಿದ್ದವಲ್ಲದೇ, ಇದರಿಂದ ದೇವಾಲಯಗಳಲ್ಲಿ ವಿಪುಲವಾದ ಆಸ್ತಿಯ ಸಂಗ್ರಹವಿರುತ್ತಿತ್ತು. ಹೀಗೆ ಬಂದ ದತ್ತಿಗಳನ್ನು ರಕ್ಷಿಸಲು ಅನೇಕ ಧರ್ಮದರ್ಶಿ ಗಳಿರುತ್ತಿದ್ದರು. ಬಿಟ್ಟಂತಹ ದಾನಗಳ ರಕ್ಷಣೆಯ ಭಾರವನ್ನು ಹೊತ್ತವರಲ್ಲಿ ಅರಸರು, ಅವರ ರಾಣಿಯರು, ಸಾಮಂತರು, ಅಧಿಕಾರಿಗಳು, ಗಾವುಂಡರು, ವ್ಯಾಪಾರಿಗಳು ಹಾಗೂ ಸಾಮಾನ್ಯ ಜನರೂ ಸೇರಿದ್ದರು ಎಂಬು ದನ್ನು ಇಲ್ಲಿನ ತಾಳಿಕೋಟೆಯ ಶಾಸನ ಉಲ್ಲೇಕಿಸಿದೆ[೩೦].

ದೇವಸ್ಥಾನಗಳ ನಿರ್ಮಾಣದ ನಂತರ ಅದನ್ನು ಕಟ್ಟಿಸಿದ ವ್ಯಕ್ತಿಗಳು ಅದರ ಚಟುವಟಿಕೆಗಳು ಸಾಂಗವಾಗಿ ನಡೆಯಲು ಹೇರಳವಾಗಿ ದತ್ತಿ-ದಾನಗಳನ್ನು ಬಿಟ್ಟಿರುವದು ನಮಗೆ ಕರ್ನಾಟಕದ ಶಾಸನಗಳ ಅಧ್ಯಯನದಿಂದ ತಿಳಿಯುತ್ತದೆ. ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಸ್ವತಂತ್ರವಾಗಿ ನಡೆಸಿಕೊಂಡು ಹೋಗಲು ದೇವಾಲಯಗಳನ್ನು ನೈಷ್ಠಿಕ ಸ್ಥಾನಗಳನ್ನಾಗಿ ಮಾಡಿ ಕೊಡಲಾಗುತ್ತಿತ್ತು[೩೧]. ನೈಷ್ಠಿಕ ಸ್ಥಾನಗಳಲ್ಲಿ ನೈಷ್ಠಿಕ ಬ್ರಹ್ಮಚಾರಿಗಳಿಗೆ ಮಾತ್ರ ಅವಕಾಶವಿದ್ದಿತು. ಈ ಬ್ರಹ್ಮಚಾರಿಗಳು ತಪೋನಿಯಮ ಜಪಸಮಾಧಿ ಶೀಲಸಂಪನ್ನರು[೩೨] ಹಾಗೂ ಯಮ, ನಿಯಮ, ದಾನ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನಾನುಷ್ಠಾನ, ಜಪ, ತಪ, ಸಮಾಧಿಶೀಲಗುಣಸಂಪನ್ನರೂ[೩೩] ಆಗಿರುತ್ತಿದ್ದರು. ಸಾಮಾನ್ಯವಾಗಿ ಈ ನೈಷ್ಠಿಕ ಬ್ರಹ್ಮಚಾರಿಗಳಾದ ಸ್ಥಾನಪತಿ ಅಥವಾ ಸ್ಥಾನಾಚಾರ್ಯರುಗಳು ದೇವಾಲಯಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ನೈಷ್ಠಿಕ ಬ್ರಹ್ಮಚರ್ಯದಿಂದಾಗಿ ಅಂದಿನ ಸಮಾಜದಲ್ಲಿ ಗೌರವವನ್ನು ಪಡೆದ ಈ ಸ್ಥಾನಾಚಾರ್ಯರು ಪೂಜ್ಯಸ್ಥಾನದಲ್ಲಿದ್ದರು. ಸ್ಥಾನಾಚಾರ್ಯರ ಅನುಮತಿಯಿಲ್ಲದೇ ದೇವಾಲಯದ ಯಾವುದೇ ಚಟುವಟಿಕೆಗಳೂ ನಡೆಯುವಂತಿರಲಿಲ್ಲ. ದೇವಾಲಯಗಳಿಗೆ ದಾನಬಿಡುವದಾಗಲಿ ಅಥವಾ ಇತರ ಯಾವುದೇ ಧಾರ್ಮಿಕ ಚಟುವಟಿಕೆಗಳನ್ನಾಗಲಿ ಕೈಕೊಳ್ಳಬೇಕಾದರೆ ಅದು ಸ್ಥಾನಾಚಾರ್ಯರ ಪಾದಪೂಜೆಯಿಂದ ಆರಂಭವಾಗಬೇಕಿತ್ತು. ಅದನ್ನು ಅಂದಿನ ಶಾಸನಗಳು ಕಾಲಂಕರ್ಚ್ಚಿ ಎಂದು ಕರೆದಿದ್ದು ಇದರಿಂದ ಸ್ಪಷ್ಟವಾಗುತ್ತದೆ[೩೪]. ಮುದ್ದೇಬಿಹಾಳ ಪ್ರದೇಶದ ಶಾಸನಗಳಲ್ಲಿ ಕಂಡುಬರುವ ಸ್ಥಾನಾಚಾರ್ಯರು ಇಂತಿದ್ದಾರೆ: ಸರ್ವೇಶ್ವರ ಪಂಡಿತ[೩೫]. ಲಕುಳೀಶ್ವರ ಪಂಡಿತ[೩೬], ಲೋಕಜೀಯ[೩೭], ಕನ್ನಗುರು[೩೮], ಅಮ್ರಿತರಾಸಿ ಪಂಡಿತ[೩೯], ಸುದ್ರಕಜೀಯು[೪೦], ಪಂಡಿದೇವ ಭಟ್ಟಾರಕ[೪೧] ಮತ್ತು ಚಂದ್ರಭಟ್ಟಾರಕದೇವ[೪೨].

ದೇವಾಲಯಗಳಿಗೆ ಹೊಂದಿಕೊಂಡು ಮಠಗಳಿರುತ್ತಿದ್ದವು. ಈ ಪ್ರದೇಶದ ಶಾಸನಗಳಲ್ಲಿ ಕಾನ್ತಿಪಟ್ಟಣ(ಬಾವೂರು)ದ ಮೂಲಸ್ಥಾನದ ಮಠ[೪೩], ಬಿದರಕುಂದೆಯ ಶಿವಾಲಯದ ಮಠ[೪೪], ಹಂಡರಗಲ್‌ದ ತೊಂಡೆಸ್ವರದೇವರ ಮಠ[೪೫], ನಾಲತವಾಡದ ನಗರ ಮಠ ಹಾಗೂ ಶ್ರೀಬಾರಿಮಠಗಳು[೪೬], ಪೀರಾಪೂರದ ಮಠ[೪೭] ಮತ್ತು ತಂಗಡಗಿಯ ದೇವಿನಾಯಕರ ಮಠ[೪೮]ಗಳಲ್ಲದೇ ಇನ್ನು ಅನೇಕ ಮಠಗಳು ದೇವಸ್ಥಾನದೊಂದಿಗೆ ಉಲ್ಲೇಖಗೊಂಡಿವೆ. ಕೆಲವು ಸಲ ಮಠಕ್ಕಂಟಿಕೊಂಡು ದೇವಾಲಯಗಳಿರುತ್ತಿದ್ದ ವಿವರಗಳೂ ಉಂಟು[೪೯]. ಬಹುಶಃ ಇಲ್ಲಿ ದೇವಾಲಯಗಳಿಗಿಂತ ಮಠವೇ ಪ್ರಸಿದ್ಧಿಯನ್ನು ಹೊಂದಿರಬೇಕು. ದೇವಸ್ಥಾನದಲ್ಲಿನ ಮಠಗಳು ಪ್ರಮುಖ ವಿದ್ಯಾಕೇಂದ್ರಗಳಾಗಿದ್ದು ದರಿಂದ ಅವು ಸ್ಥಾನಾಚಾರ್ಯ, ತಪೋಧನ, ವಿದ್ಯಾರ್ಥಿಗಳ ವಾಸಸ್ಥಾನಗಳಾಗಿದ್ದವು. ಅಲ್ಲದೇ ಇಲ್ಲಿನ ಅನೇಕ ಶಾಸನಗಳು ದೇವಾಲಯಗಳಿಗೆ ದತ್ತಿ-ದಾನವನ್ನು ಬಿಡುವಾಗ ತಪೋಧನರ, ವಿದ್ಯಾರ್ಥಿಗಳ ಉಲ್ಲೇಖವನ್ನು ಮಾಡುವದರಿಂದ ಅನೇಕ ದೇವಸ್ಥಾನಗಳಲ್ಲಿ ಮಠಗಳಿರುತ್ತಿದ್ದುದು ತಿಳಿದುಬರುತ್ತದೆ.

ದೇವಾಲಯಗಳ ಜೀರ್ಣೋದ್ಧಾರ, ಪೂಜೆಪುನಸ್ಕಾರ, ವಿದ್ಯಾಪ್ರಸಾರ, ಸತ್ರ ಮುಂತಾದವುಗಳ ಖರ್ಚನ್ನು ನೋಡಿಕೊಳ್ಳಲು ಹಣ ಬೇಕಾಗುತ್ತಿತ್ತು. ದೇವಾಲಯಗಳಿಗೆ ದಾನ ನೀಡುವವರು ಬೇರೆ ಬೇರೆ ಕೆಲಸಕ್ಕೆ ಇಷ್ಟಿಷ್ಟೆಂದು ವಿವರವಾಗಿ ನಿಗದಿಪಡಿಸಿ ಕೊಡುತ್ತಿದ್ದರು. ಇವುಗಳಲ್ಲಿ ದೇವರ ನೀವೇದ್ಯಕ್ಕೆ ಹಾಗೂ ನಂದಾದೀವಿಗೆಗೆ[೫೦], ದೇವರ ಪೂಜೆ-ಪುನಸ್ಕಾರ, ಜೀರ್ಣೋದ್ಧಾರ[೫೧], ಆಹಾರದಾನಕ್ಕಂ[೫೨], ಪಾತ್ರ-ಪವುಳ, ಚೈತ್ರ-ಪವಿತ್ರಗಳಿಗೆ[೫೩], ತಪೋಧನರ ಹಾಗೂ ವಿದ್ಯಾರ್ಥಿಗಳ ಆಹಾರ ದಾನಕ್ಕಾಗಿ[೫೪], ಅಲ್ಲದೇ ಇನ್ನು ಮುಂತಾದ ದೇವಾಲಯಗಳಲ್ಲಿ ನಡೆಯುವ ಕೆಲಸಕಾರ್ಯಗಳಿಗೆ ನೀಡುವ ದತ್ತಿ ದಾನಗಳು ಸೇರಿದ್ದವು. ಈ ಎಲ್ಲ ಚಟುವಟಿಕೆಗಳು ಹಾಗೂ ಬಿಟ್ಟದತ್ತಿಗಳು ಆಯಾ ಕೆಲಸಕ್ಕೆ ಬಳಕೆಗೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಾಮಾನ್ಯ

ವಾದುದಲ್ಲ. ಒಂದೆಡೆ ದೇವಾಲಯದ ಸಂಕೀರ್ಣ ಆಡಳಿತ ಇನ್ನೊಂದೆಡೆ ದಾನ-ದತ್ತಿಗಳ ಮೂಲಕ ಹೆಚ್ಚುತ್ತಲಿದ್ದ ದೇವಸ್ಥಾನಗಳ ಆದಾಯ. ಇವೆರಡರ ಮಧ್ಯೆ ಸಿಲುಕಿಕೊಂಡ ಸ್ಥಾನಾಚಾರ್ಯನ ನೈಷ್ಠಿಕ ಬ್ರಹ್ಮಚರ್ಯಕ್ಕೆ ಕುಂದುಂಟಾಗಿರುವದರಲ್ಲಿ ಯಾವುದೇ ಅನುಮಾನವಿಲ್ಲ. ಹಣ(ಸಂಪತ್ತು) ಮುಖ್ಯವಾಗಿಟ್ಟು ಕೊಂಡು ಬೆಳೆಯತೊಡಗಿದ ಮಠ-ಮಾನ್ಯಗಳು ತಮ್ಮ ಪ್ರಶಾಂತತೆಯನ್ನು ಕಾಯ್ದುಕೊಳ್ಳುವಲ್ಲಿ ವಿಫಲಗೊಂಡಿರಬೇಕು. ಇದನ್ನು ಗಮನಿಸಿ ಡಾ. ತಿಪ್ಪೇರುದ್ರ ಸ್ವಾಮಿಯವರು ವಿಶೇಷವಾಗಿ ಬೆಳೆದ ಪೂಜಾ ವಿಧಿಗಳಲ್ಲಿ ಭಕ್ತಿಗಿಂತ ಆಡಂಬರ ಹೆಚ್ಚಾಗಿ ದೇವಾಲಯ ಆಧ್ಯಾತ್ಮಿಕ ಕೇಂದ್ರಗಳಾಗುವದರ ಬದಲು ಸಂಪತ್ತಿನ ಕೇಂದ್ರಗಳಾಗಿ ದ್ದುದನ್ನು ಗುರುತಿಸಿದ್ದಾರೆ[೫೫].

ದೇವಸ್ಥಾನಗಳಿಗೆ ಬಿಟ್ಟಂಥ ದಾನಗಳಲ್ಲಿ ಅಂಗ-ರಂಗ ಭೋಗಗಳೂ ಒಂದಾಗಿದ್ದು, ಮುದ್ದೇಬಿಹಾಳ ಪ್ರದೇಶದ ಶಾಸನಗಳಲ್ಲಿ ಅನೇಕ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡು ವಾಗ ಅಂಗ-ರಂಗಭೋಗಕ್ಕೆ, ಪಾತ್ರಪಾವುಳಕ್ಕೆ ದಾನದತ್ತಿ ಯನ್ನು ಬಿಡಲಾಗಿದೆ. ಇದರಿಂದಾಗಿ ಅಲ್ಲಲ್ಲ ರಂಗ ಚಟುವಟಿಕೆಗಳು ನಡೆಯುತ್ತಿದ್ದವೆಂದು ತಿಳಿಯುತ್ತದೆ. ದೇವಾಲ ಯಗಳಲ್ಲಿ ಗೀತ, ವಾದ್ಯ, ನೃತ್ಯದ ಹಿನ್ನೆಲೆಯಲ್ಲಿ ಸ್ತ್ರೀ ಪ್ರವೇಶಕ್ಕೆ ಅವಕಾಶ ದೊರೆತು, ಸ್ಥಾನಾಚಾರ್ಯ ಮತ್ತು ಇತರ ತಪೋಧನರ ನೈತಿಕ ಅಧಃಪತನ ಆರಂಭವಾಯಿತು. ದೇವಸ್ಥಾನ ಮಠಗಳ ಸ್ಥಾನಾಚಾರ್ಯರು ದುರ್ವ್ಯಸನಿಗಳಾಗಿ ದೇವಸ್ಥಾನದ ಆಸ್ತಿಯನ್ನು ವ್ಯಯಿಸುತ್ತ ಲೋಕದ ಅಪವಾದವನ್ನು ಲೆಕ್ಕಿಸದೇ ನಡೆಯುತ್ತಿದ್ದ ನಿದರ್ಶನಗಳುಂಟು. ಹೀಗೆ ಹಾದಿ ತಪ್ಪಿದ ತಪೋಧನರನ್ನು ಶಾಸನಗಳು ಕಟುವಾಗಿ ಖಂಡಿಸಿವೆ[೫೬]. ಕೆಲವು ಶಾಸನಗಳಂತೂ ಇಂಥಹ ಕ್ಷೇತ್ರವಾಸಿಗಳಿಗೆ ನಿಯಮಾವಳಿಗಳನ್ನೇ ರೂಪಿಸಿವೆ[೫೭]. ಹೀಗಾಗಿ ಅಂದಿನ ಜನ ಸ್ಥಾನಾಚಾರ್ಯರಿಂದ ಏನನ್ನು ನಿರೀಕ್ಷಿಸುತ್ತಿದ್ದ ರೆಂಬ ವಿಷಯ ಇದರಿಂದ ಸ್ಪಷ್ಟವಾಗುತ್ತದೆ.

ದೇವಸ್ಥಾನಗಳಿಗೆ ಬಿಟ್ಟ ದಾನದತ್ತಿಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ಅರಸನಿಂದ ಮೊದಲ್ಗೊಂಡು ಊರ ಗಾವುಂಡ ವರೆಗಿನ ಅಧಿಕಾರಿಗಳ ಮೇಲಿರುತ್ತಿತ್ತು. ಅಲ್ಲದೇ ದೇವರ ಕೇತಿ ಸೆಟ್ಟಿ[೫೮], ಮಠದ ಹೆಗ್ಗಡೆ ಸಂಕಯ್ಯ[೫೯] ಮತ್ತು ಶ್ರೀಬಾರಿಮಠದ ಹೆಗ್ಗಡೆ ಗಂಗಾಧರ[೬೦] ಎನ್ನುವ ವಿಶೇಷಣಗಳನ್ನು ಗಮನಿಸಿದರೆ ಇವರುಗಳು ಆ ದೇವಾಲಯಗಳು ಮತ್ತು ಅದಕ್ಕಂಟಿಕೊಂಡಿದ್ದ ಮಠಗಳ ಮೇಲ್ವಿಚಾರಣೆಯ ಹೊಣೆಯನ್ನು ಹೊತ್ತಿದ್ದವರಾಗಿ ರಬಹುದು. ಅಲ್ಲದೇ ಕೆಲವೊಮ್ಮೆ ಬಿಟ್ಟ ದಾನದತ್ತಿಗಳನ್ನು ಅಪಹರಿಸುತ್ತಿದ್ದುತೆ ತೋರುತ್ತದೆ ದೇವಾಲಯ ಹಾಗೂ ದಾನಗಳನ್ನು ಕಾಪಾಡುವ ಇಲ್ಲವೇ ಅಪಹರಿಸುವ ಹಿನ್ನೆಲೆಯನ್ನೇ ಕುರಿತು ಶಾಸನಗಳಲ್ಲಿ ಫಲಶ್ರುತಿ ಪದ್ಯಗಳು ಮೂಡಿಬಂದಿದ್ದು, ಅವುಗಳಲ್ಲಿ ಪಾಪ-ಪುಣ್ಯಗಳ ಚಿತ್ರಣವಿರುವುದು ಕಂಡುಬರುತ್ತದೆ.

ದೇವಸ್ಥಾನಗಳಲ್ಲಿನ ವಿವಿಧ ಕೆಲಸಕಾರ್ಯಗಳನ್ನು ನಿರ್ವ ಹಣೆಗೆ ಪರಿಚಾರಕವರ್ಗ ಅನಿವಾರ್ಯ. ಇವರಲ್ಲಿ ದೇವರ ಪೂಜೆಯನ್ನು ಮಾಡುವ ಪೂಜಾರಿ, ಪೂಜೆಗೆ ಹೂವನ್ನು ಒದಗಿ ಸುವವ ಮಾಲೆಕಾರ[೬೧], ದೇವಸ್ಥಾನದ ಪಕ್ಕದಲ್ಲಿ ದೇವಸ್ಥಾನಕ್ಕಾಗಿ ಮೀಸಲಾಗಿದ್ದ ಹೂದೋಟವನ್ನು ನೋಡಿ ಕೊಳ್ಳುತ್ತಿದ್ದ ತೋಟದ ಮಾಲೆಗಾರ[೬೨] ಅಥವಾ ತಳಾರ, ಪೂಜೆಯ ಸಮಯ ಅಥವಾ ಪೂಜೆಯ ನಂತರ ಹಾಡುವವರು, ಕೊಳಲನ್ನು, ಶಂಖವನ್ನು ಊದುವವರು ಮತ್ತು ಮದ್ದಲೆ ಬಾರಿಸುವವರು[೬೩] ಮುಂತಾದವರಿ ರುತ್ತಿದ್ದರು. ಹೀಗೆ ಕರ್ನಾಟಕದ ಅನೇಕ ದೇವಾಲಯ ಗಳಲ್ಲಿರುವಂತೆ ಈ ಪ್ರದೇಶದ ಶಾಸನಗಳಲ್ಲಿ ಕಂಡುಬರುವ ದೇವಾಲಯ ಗಳಲ್ಲಿಯೂ ಈ ವ್ಯವಸ್ಥೆಯಿದ್ದುದು ತಿಳಿಯುತ್ತದೆ. ದೇವಸ್ಥಾನ ಮಠಗಳು ಜೊತೆಜೊತೆಯಲ್ಲಿ ಇರುತ್ತಿದ್ದುದರಿಂದ, ಅಲ್ಲಿನ ಸ್ಥಾನಾಚಾರ್ಯ, ತಪೋಧನ, ವಿದ್ಯಾರ್ಥಿಗಳು ಹಾಗೂ ಅತಿಥಿ ಅಭ್ಯಾಗತರುಗಳ ಆಹಾರಾದಿಗಳ ಕೆಲಸಕ್ಕೆ ಅಡಿಗೆಯಾಳು ಗಳನ್ನು ನೇಮಿಸಿಕೊಳ್ಳುತ್ತಿದ್ದಿರಬೇಕು. ವಿದ್ಯಾರ್ಥಿ ಹಾಗೂ ತಪೋಧನರ ಅಶನಾಚ್ಛಾದನ ಮತ್ತು ಸತ್ರಗಳಿಗೆ ದಾನ-ದತ್ತಿ ನೀಡಿದ ಸಾಕಷ್ಟು ವಿವರಗಳು ಇಲ್ಲಿನ ಶಾಸನಗಳಲ್ಲಿ ಬರುವದನ್ನು ನಾವಿಲ್ಲಿ ನೋಡ ಬಹುದು. ಜೊತೆಗೆ ಮಠಗಳಲ್ಲಿ ಪುರಾಣ ಮತ್ತು ವಿದ್ಯಾ ಭ್ಯಾಸ ಹೇಳಲು ದತ್ತಿ ಬಿಟ್ಟ ವಿಷಯ ಶಾಸನವೊಂದರಲ್ಲಿದೆ[೬೪]. ಅಲ್ಲದೇ ಇನ್ನು ಇಂತಹ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ. ದೇವಾಲಯಕ್ಕೆ ಬಿಡಲಾಗುತ್ತಿದ್ದ ವಿವಿಧ ದಾನಗಳಲ್ಲಿ ಖಂಡಸ್ಫುಟಿತ ಜೀರ್ಣೋದ್ದಾರಕ್ಕೆ ಬಿಟ್ಟ ದಾನವೂ ಒಂದಾಗಿತ್ತು[೬೫]. ಈ ಕೆಲಸಕ್ಕಾಗಿ ಬಡಗಿ, ಶಿಲ್ಪಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಉದಾಹರಣೆಗಾಗಿ ಇಲ್ಲಿನ ನಾಗೂರ ಶಾಸನ ಉಲ್ಲೇಖಿಸುವಂತೆ ಕೆಲಸ ನಿರ್ವ ಹಿಸಿದ ಕಲುಕುಟಿಗ ಕೇತೋಜನಿಗೆ ಅಲ್ಲಿನ ಗವುಂಡರು, ಕೇತ ಗುರುಗಳು ಮತ್ತು ಎಂಟುಹಿಟ್ಟುಗಳು ಸೇರಿ ಭೂಮಿಯನ್ನು ನೀಡಿದ್ದಾರೆ[೬೬]. ಅದೇ ರೀತಿ ಹುಲ್ಲೂರದ ಮೂಲಸ್ಥಾನದ ಗುಡಿಯನ್ನು ಉಲ್ಲೇಖಿ ಸುವ ಶಾಸನದಲ್ಲಿ ಬಯಿಚೋಜನ ಮಗ ಗೋಪಣನ ಉಲ್ಲೇಖ ವಿದೆ[೬೭].

ಹೆಣ್ಣುಗಳನ್ನು ದೇವಸ್ಥಾನಕ್ಕೆ ಬಿಟ್ಟುಕೊಡುವ ಸಂಪ್ರದಾಯ ಬಹಳ ಹಿಂದಿನಿಂದಲೂ ನಡೆದು ಬಂದಿದೆ. ಆದರೆ ಕರ್ನಾಟಕದಲ್ಲಿ ಈ ಸಂಪ್ರದಾಯ ಎಂದು ಪ್ರಾರಂಭವಾಯಿತೆಂಬುದು ಸ್ಪಷ್ಟವಿಲ್ಲ ದಿದ್ದರೂ, ಕ್ರಿ.ಶ. ೭೭೮-೭೯ರ ಪಟ್ಟದಕಲ್ಲಿನ ಶಾಸನದಲ್ಲಿ ಕಾಣಿಸಿಕೊಳ್ಳುವ ದೇಗುಲದ ಸೂಳೆಯೇ ಕರ್ನಾಟಕದ ಪ್ರಥಮ ದೇವದಾಸಿಯಾಗಿದ್ದಾಳೆ[೬೮]. ಅಲ್ಲದೇ ಅಂಗ-ರಂಗಭೋಗಗಳ ಹೆಣ್ಣುಗಳಲ್ಲಿ ರಂಗಭೋಗಕ್ಕೆ ಒಪ್ಪಿಸಲ್ಪಟ್ಟವಳು, ದೇವಾಲಯದಲ್ಲಿ ಗೀತ ಹಾಗೂ ನೃತ್ಯಗಳ ಮೂಲಕ ದೇವರ ಸೇವೆಯನ್ನು ಮಾಡಿಕೊಂಡು ಬದುಕಬೇಕಿತ್ತು. ಅದರ ಪ್ರತಿಫಲವಾಗಿ ಅವಳಿಗೆ ಹಣ, ಭೂಮಿಯನ್ನು ಬಿಟ್ಟುಕೊಡಲಾಗುತ್ತಿತ್ತು[೬೯].

ಹೆಚ್ಚಿನ ಸಂಖ್ಯೆಯ ಹೆಣ್ಣುಗಳನ್ನು ಹೊಂದುವದು ಹೆಮ್ಮೆಯ ಸಂಗತಿಯೆಂದು ಮಧ್ಯಾಕಾಲೀನ ದೇವಾಲಯಗಳು ತಿಳಿದಿದ್ದವು[೨೦]. ಈ ಅವಧಿಯಲ್ಲಿ ದೇವಾಲಯಗಳಿಗೆ ಹೆಣ್ಣು ಬಿಡುವ ಸಂಪ್ರದಾಯ ಪಾತ್ರ ಮತ್ತು ಸೂಳೆ ಎಂದು ವಿಭಾಗಗೊಂಡಿದ್ದು, ಪಾತ್ರ ಎಂಬುದು ನೃತ್ಯ ಗೀತಾದಿಗಳಲ್ಲಿ ಪರಿಣಿತಳಾದವಳನ್ನು, ಸೂಳೆ, ಎಂಬುದು ಉಳಿದ ಸೇವಾಕಾರ್ಯ ಮಾಡುವವಳನ್ನು ಸೂಚಿಸುವಂತಿದೆ ಯೆಂದು ಡಾ. ಚಿದಾನಂದಮೂರ್ತಿಯವರು ಸರಿಯಾಗಿ ಗುರುತಿಸಿದ್ದಾರೆ[೨೧]. ಇಂದು ಪಾತ್ರ (ಪಾತ್ರ>ಪಾತರ>ಪಾದರ> ಹಾದರ) ದವರು ವೇಶ್ಯೆಯರಾಗಿ ಕಂಡುಬಂದರೂ ಹಿಂದೆ ಅದು ದೇವಾಲಯಗಳ ನೃತ್ಯ ಗೀತಾದಿಗಳಲ್ಲಿ ಪರಿಣಿತಿಯನ್ನು ಪಡೆದವರ ಗೌರವ ಸ್ಥಾನವಾಗಿ ಬಳಕೆಯಾಗುತ್ತಿತ್ತು. ನಮ್ಮ ಅಧ್ಯಯನ ಪ್ರದೇಶದ ಶಾಸನಗಳು ಪಾತ್ರಪವುಳಕ್ಕೆ ಮತ್ತು ಪಾತ್ರಗಳಿಗೆ ದಾನ ಬಿಟ್ಟಿರುವುದನ್ನು ಉಲ್ಲೇಖಿಸಿವೆ[೨೨]. ಅಂದಿನ ಅನೇಕ ಶಾಸನಗಳು ನಾಲ್ವರು ಕಂಭದ ಸೂಳೆಯರ ಪ್ರಸ್ತಾಪ ಮಾಡಿವೆಯಾದರೂ, ಆ ಸಂಖ್ಯೆ ಅಷ್ಟಕ್ಕೇ ಸೀಮಿತವಾದಂತಿಲ್ಲ[೨೩]. ಆದರೆ ಇಲ್ಲಿನ ನಾಲತವಾಡ ಗ್ರಾಮದ ಶಾಸನದಲ್ಲಿ ಕಂಭದ ಸೂಳೆಯರಿಗೆ ದಾನ ನೀಡಿದ ಉಲ್ಲೇಖ ಬರುತ್ತದೆ[೨೪].

ಕನ್ನಡ ಶಾಸನಗಳಲ್ಲಿ ಕಂಡುಬರುವ ಸೂಳೆವಾಳ, ಪಿರಿಯ ವಾಳದ ಸೂಳೆ ಮೊದಲಾದ ಉಲ್ಲೇಖಗಳು ಪ್ರಧಾನ ಸೂ ಅರ್ಚಕ, ಅಧಿಕಾರಿಗಳ ಅಂಕಿತದಲ್ಲಿರುವದನ್ನು ಸ್ಪಷ್ಟಪಡಿಸುತ್ತವೆ[೨೫] ಈ ಪ್ರದೇಶದ ಶಾಸನವೊಂದರಲ್ಲಿಯೂ ಕೂಡ ಸೂಳೆವಾಳ ಉಲ್ಲೇಖ ಬರುತ್ತದೆ.

ಹೀಗೆ ಮುದ್ದೇಬಿಹಾಳ ಪ್ರದೇಶದ ದೇವಾಲಯಗಳ ಯಾವುದೇ ರಾಜಕೀಯ ಸ್ಥಿತ್ಯಂತರಗಳಿಗೆ ಒಳಗಾಗದೇ, ಯಾವನ ಅರಸನಿರಲಿ-ಹೋಗಲಿ ತಮ್ಮ ಪಾಲಿನ ಕರ್ತವ್ಯವನ್ನು ನಿವ ಹಿಸಿವೆ. ಅರಸರಿಂದ ಹಿಡಿದು ಸಾಮಾನ್ಯಜನರೂ ಕೂಡ ದೇವಾಲಯಗಳನ್ನು ರಕ್ಷಿಸುವದು ತಮ್ಮ ಕರ್ತವ್ಯವೆಂದು ಬಗೆದಿದ್ದರು ಒಟ್ಟಿನಲ್ಲಿ ಸಾಮಾಜಿಕವಾಗಿ ಮಹತ್ವದ ಪಾತ್ರವಹಿಸಿ ದೇವಾಲಯಗಳು ಕ್ರಮೇಣ ಅಂದಿನ ಜನಾಂಗದ ಅವಿಭಾಜ ಅಂಗಗಳಾಗಿದ್ದವು. ಜೊತೆಗೆ ವಿವಿಧ ಪರಿಚಾರಕವರ್ಗವನ ಹೊಂದುವ ಮೂಲಕ ಅಂದಿನ ಕಾಲದಲ್ಲಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿವೆ ಎಂದು ಹೇಳಬಹುದು.

ಅನುಬಂಧಗಳು :

ಮುದ್ದೇಬಿಹಾಳ ಪ್ರದೇಶದ ದೇವಾಲಯಗಳು

ಅ.ನಂ.	ಅರಸ/ಅರಸಿ/ಅಧಿಕಾರಿವರ್ಗ	ಕಾಲ	ದೇವಾಲಯ	ಸ್ಥಳ	ಆಕರಗಳು
		ತ್ರಿಕೂಟ ದೇವಾಲಯಗಳು			
೧.	ಆರನೆಯ ವಿಕ್ರಮಾದಿತ್ಯ (ಕಲ್ಯಾಣ ಚಾಲುಕ್ಯ)	ಕ್ರಿ.ಶ. ೧೦೮೬	ತುಂಬಿಗೆಯ ತ್ರೈಪುರುಷದೇವರು	ತುಂಬಗಿ	SII., XI, Pt-II. No.132
೨.	ಎರಡನೆಯ ಜಗದೇಕಮಲ್ಲ (ಕಲ್ಯಾಣ ಚಾಲುಕ್ಯ)	ಕ್ರಿ.ಶ. ೧೨ನೇ ಶ.	ತ್ರಿಕೂಟಾಲಯ	ಹುಲ್ಲೂರು	SII., XV, No. 45.
೩.	ಸೋಮೇಶ್ವರ (ಕಲ್ಯಾಣ ಚಾಲುಕ್ಯ)	ಕ್ರಿ.ಶ. ೧೧೮೪	ತ್ರಿಕೂಟಾಲಯ	ಮಿಣಜಗಿ	SII., XV, No. 58.

ಅ.ನಂ.	ಅರಸ/ಅರಸಿ/ಅಧಿಕಾರಿವರ್ಗ	ಕಾಲ	ದೇವಾಲಯ	ಸ್ಥಳ	ಆಕರಗಳು
		ವೈಷ್ಣವ ದೇವಾಲಯಗಳು			
೧.	ಮಹಾಮಂಡಲೇಶ್ವರ ಪೆರ್ಮಾಡಿಯರಸ	ಕ್ರಿ.ಶ. ೧೧೨೧	ಮೂಲಸ್ಥಾನ ಗೋವಿಂದದೇವ	ಲೊಟಗೇರಿ	SII., XI, Pt-II, No.197.

ಅ.ನಂ.	ಅರಸ/ಅರಸಿ/ಅಧಿಕಾರಿವರ್ಗ	ಕಾಲ	ದೇವಾಲಯ	ಸ್ಥಳ	ಆಕರಗಳು
		ಇತರೆ ದೇವಾಲಯಗಳು			
೧.	--------------------	ಕ್ರಿ.ಶ. ೧೬ನೇ ಶ.	ಆಲಕೊಪ್ಪರ ಹನುಮಂತದೇವ	ಆಲಕೊಪ್ಪರ	SII., XV, No.713,

ಮುದ್ದೇಬಿಹಾಳ ಪ್ರದೇಶದ ದೇವಾಲಯಗಳು

ಅ.ನಂ.	ಅರಸ/ಅರಸಿ/ಅಧಿಕಾರಿವರ್ಗ	ಕಾಲ	ದೇವಾಲಯ	ಸ್ಥಳ	ಆಕರಗಳು
			ಶೈವ ದೇವಾಲಯಗಳು		
೧.	ಇರಿವೆಬೆಡಂಗ ಸತ್ಯಾಶ್ರಯ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೦೦೪	ಬ್ರಹ್ಮೇಶ್ವರ	ತುಂಬಗೆ	SII., XI, Pt-I, No. 49.
೨.	ತಂತ್ರಪಾಳ ವೆಣ್ಣಮಯ್ಯನಾಯಕ (ಅಧಿಕಾರಿ)	ಕ್ರಿ.ಶ. ೧೦೨೨	ಕಲಿದೇವಸ್ವಾಮಿ	ಮ.ದೇವನಹಳ್ಳಿ	SII., XV, No. 527.
೩.	ಒಂದನೆಯ ಜಗದೇಕಮಲ್ಲ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೦೩೨	ಶಿವಾಲಯ	ಬಿದರಕುಂದಿ	SII., XI, Pt-I, No. 66.
೪.	ಒಂದನೆಯ ಜಗದೇಕಮಲ್ಲ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೦೩೨.	ಮೂಲಸ್ಥಾನ ಮತ್ತು ಕಲ್ಲೇಶ್ವರ	ಬಾವೂರ	SII., XI, Pt-I, No. 67.
೫.	ಎರಡನೆಯ ಜಯಸಿಂಹ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೦೩೩	ಬಲ್ಲೇಶ್ವರದೇವ ಮತ್ತು ಮೂಲಸ್ಥಾನದೇವ	ತಮದಡ್ಡಿ	SII., XI, Pt-I, No. 68.
೬.	ಎರಡನೆಯ ಸೋಮೇಶ್ವರ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೦೬೮	ಬಲ್ಲೇಶ್ವರ	ಕುಂಟೋಜಿ	SII., XI, Pt-I No. 107.
೭.	ಆರನೆಯ ವಿಕ್ರಮಾದಿತ್ಯ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೧ನೆಯ ಶ.	ಮೂಲಸ್ಥಾನದೇವ	ಕೋಳೂರ	ಬಿ.ಜಿ.ಶಾ.ಸೂ., ನಂ. ೮, ಪು. ೨೪.
೮.	ಹೆಗ್ಗಡೆ ಮಾಚಣ್ಣ (ಅಧಿಕಾರಿ)	ಕ್ರಿ.ಶ. ೧೧೨೦-೨೧	....ಶ್ವರದೇವ	ಲೊಟಗೇರಿ	SII., XI, Pt-I No. 195.
೯.	ಜಗದೇಕಮಲ್ಲ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೧೪೫	ಮೂಲಸ್ಥಾನ	ಬೇಲೂರ	SII., XV, No. 30.
೧೦.	ಜಗದೇಕಮಲ್ಲ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೧೪೮	ಕಲಿದೇವ	ನಾಲತವಾಡ	SII., XV, No. 38.
೧೧.	ರಾಯಮುರಾರಿ ಸೋವಿದೇವ (ಯಾದವ)	ಕ್ರಿ.ಶ. ೧೧೭೩	ಮಹಾಲಿಂಗದೇವ	ಜಂಗಮುರಾಳ	SII., XV, No. 123.
೧೨.	ರಾಯಮುರಾರಿ ಸೋವಿದೇವ (ಯಾದವ)	ಕ್ರಿ.ಶ. ೧೧೭೪	ಗಂಗೇಶ್ವರ	ಗೊಟಖಂಡಕಿ	SII., XV, No. 126.
೧೩.	ಅಹಾವಮಲ್ಲ (ಕಲಚೂರಿ)	ಕ್ರಿ.ಶ. ೧೧೮೧	ಸೋಮನಾಥ	ತಾಳಿಕೋಟಿ	SII., XV, No. 143.
೧೪.	ಸೋಮೇಶ್ವರ (ಕಲ್ಯಾಣಿ ಚಾಲುಕ್ಯ)	ಕ್ರಿ.ಶ. ೧೧೮೪	ವೀರಬಯ್ಸೇಶ್ವರ	ತಾಳಿಕೋಟೆ	SII., XV, No. 56.
೧೫.	ಭಿಲ್ಲಮ (ಯಾದವ)	ಕ್ರಿ.ಶ. ೧೧೮೮	....ದೇವರು	ಹಳ್ಳೂರ	SII., XV, No. 145.
೧೬.	ಭಿಲ್ಲಮ (ಯಾದವ)	ಕ್ರಿ.ಶ. ೧೧೮೯-೯೦	ಸಿರಿಯಮೇಶ್ವರ	ಪೀರಾಪೂರ	SII., XV, No. 148.
೧೭.	ಭಿಲ್ಲಮ (ಯಾದವ)	ಕ್ರಿ.ಶ. ೧೧೮೯-೯೦	ನನ್ನೇಶ್ವರ	ಪೀರಾಪೂರ	SII., XV, No. 147.
೧೮.	----------------	ಕ್ರಿ.ಶ. ೧೨ನೆಯ ಶ.	ತೊಂಡೇಶ್ವರ	ಹಂಡರಲ್	SII., XV, No. 594.

೧೯.	-------------------	ಕ್ರಿ.ಶ. ೧೨ನೆಯ ಶ.	ಮೇಚಲೇಶ್ವರ, ನಖರೇಶ್ವರ ಮತ್ತು ....ಮೇಶ್ವರ	ಕುಂಟೋಜಿ	SII., XV, No. 596.
೨೦.	-------------------	ಕ್ರಿ.ಶ. ೧೨ನೆಯ ಶ.	ಸಹಸ್ರಲಿಂಗದೇವ	ತಾಳಿಕೋಟಿ	SII., XV, No. 597.
೨೧.	ಸಿಂಘಣ (ಯಾದವ)	ಕ್ರಿ.ಶ. ೧೨೧೦	ಮಲ್ಲಿಕಾರ್ಜುನ	ಸೂರೂರ	SII., XV, No. 158.
೨೨.	ಸಿಂಘಣ (ಯಾದವ)	ಕ್ರಿ.ಶ. ೧೨೨೫	ಸೋಮನಾಥ	ತಾಳಿಕೋಟಿ	SII., XV, No. 171.
೨೩.	ಮಲ್ಲಿನಾಯಕ (ಅಧಿಕಾರಿ)	ಕ್ರಿ.ಶ. ೧೪೪೫	ಕಪಿಲಸಿದ್ಧದೇವ	ತಂಗಡಗಿ	SII., XV, No. 668.
೨೪.	-------------------	ಕ್ರಿ.ಶ. ೧೭ನೆಯ ಶ.	ಸಂಗಮನಾಥದೇವ	ಹಿರೇಮುರಾಳ	SII., XV, No. 723.
೨೫.	-------------------	ಕ್ರಿ.ಶ. ೧೮ನೆಯ ಶ.	ಮೂಲಸ್ಥಾನದ ಗುಡಿ	ಹುಲ್ಲೂರ	SII., XV, No. 731.
೨೬.	-------------------	ಕ್ರಿ.ಶ. ೧೮ನೆಯ ಶ.	ಶಂಕರದೇವ	ಹಿರೂರ	SII., XV, No. 730.
೨೭.	ಭೋಜನಾಯಕ (ಅಧಿಕಾರಿ)	ಕ್ರಿ.ಶ. ೧೮ನೆಯ ಶ.	ಸಂಗಮದೇವ	ಹಿರೇಮುರಾಳ	SII., XV, No. 729.

ಜೈನ ದೇವಾಲಯಗಳು

ಅ.ನಂ.	ಅರಸ/ಅರಸಿ/ಅಧಿಕಾರಿವರ್ಗ	ಕಾಲ	ದೇವಾಲಯ	ಸ್ಥಳ	ಆಕರಗಳು
೧.	-------------------	ಕ್ರಿ.ಶ. ೧೧ನೇ ಶ.	ಕಣ್ಣೂರುಗಣದ ಬಸದಿ	ಹುಲ್ಲೂರು	SII., XV, No. 539.
೨.	-------------------	ಕ್ರಿ.ಶ. ೧೨ನೇ ಶ.	ಶಾನ್ತಿನಾಥಸ್ವಾಮಿ	ಗುಂಡಕರ್ಜಗಿ	SII., XV, No. 591.
೩.	-------------------	ಕ್ರಿ.ಶ. ೧೨ನೇ ಶ.	ತೀರ್ಥದ ಬಸದಿ	ತಮದಡ್ಡಿ	SII., XV, No. 598.
೪.	ರಾಮಚಂದ್ರ (ಯಾದವ)	ಕ್ರಿ.ಶ. ೧೨೭೭	ಪಾರ್ಶ್ವದೇವ	ತುಂಬಗಿ	SII., XV, No. 198.
೫.	-------------------	ಕ್ರಿ.ಶ. ೧೨೮೨	ಬಸದಿ	ಶಿರೋಳ	SII., XV, No. 616.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೧೭೬
೨. II., XI, Pt-I, No. 49
೩. Ibid., Pt-II, No. 132.
೪. Ibid., XV, No.58.
೫. Ibid., No. 713
೬. ತಿಪ್ಪೇರುದ್ರಸ್ವಾಮಿ, ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು-೨೬೯.
೭. ಚಿದಾನಂದಮೂರ್ತಿ, ಎಂ., ಕನ್ನಡಶಾಸನಗಳಸಾಂಸ್ಕೃತಿಕ ಅಧ್ಯಯನ, ಪು-೨೦೩
೮. ತಿಪ್ಪೇರುದ್ರಸ್ವಾಮಿ, ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು-೨೬೯
೯. B.K.I., I. ii., No. 175.
೧೦. E.C., XI, Dg.90
೧೧. SII., IX, Pt-I, No.197.
೧೨. Ibid., XV, No.129
೧೩. EC., VI, Kd.104
೧೪. KI., I, No.25.
೧೫. Ibid.,
೧೬. SII., XI, Pt-I, No.49.
೧೭. Ibid., No.68.
೧೮. Ibid., No.107.
೧೯. Ibid., XV, No.58.
೨೦. Ibid., No.147.
೨೧. Ibid., No.126
೨೨. Ibid., No.58 & 147.
೨೩. Ibid., No.668 & 729.
೨೪. Ibid., No.171
೨೫. Ibid., No. 596.
೨೬. Ibid., No.145.
೨೭. Ibid., No. 147.
೨೮. Ibid., XI,pt-I,No. 66
೨೯. Ibid., XV, No. 596
೩೦. Ibid., No.143.
೩೧. Ibid., No.32.
೩೨. Ibid., No.596.
೩೩. Ibid., No.45.
೩೪. Ibid., No.147.
೩೫. Ibid., No.45 & 594.
೩೬. Ibid., No.145.
೩೭. Ibid., No.147.
೩೮. Ibid., No.148.
೩೯. Ibid., No.58.
೪೦. Ibid., No.30.
೪೧. Ibid., XI,pt-I,NO.67.
೪೨. Ibid., XV,No.598.
೪೩. Ibid., XI,Pt-I,No.67.
೪೪. Ibid., No.66.
೪೫. Ibid., XV,No.45 & 598.
೪೬. Ibid., No.38.
೪೭. Ibid., No.148.
೪೮. Ibid., No.668.
೪೯. Ibid., No.668.
೫೦. Ibid., No.123 & 668.
೫೧. Ibid., No.148.
೫೨. Ibid., No.668.
೫೩. Ibid., No.143 &171.
೫೪. Ibid., No.596
೫೫. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೨೦೦
೫೬. B.K.I.,I.ii.,No.152.
೫೭. SII.,XV,No.46.
೫೮. Ibid., No.147.
೫೯. Ibid., No.56.
೬೦. Ibid., No.38.
೬೧. Ibid., No.58.
೬೨. Ibid., No.596.
೬೩. Ibid.
೬೪. Ibid.
೬೫. Ibid., No.58.
೬೬. Ibid., No.163.
೬೭. Ibid., No.731.
೬೮. Ind. Ant., Vol-XI, p.124.
೬೯. Slii., XV,No.596.
೭೦. Prasad, Awadhishore, *Devadasis in Karnataka*, p-149. Indian History Congress,1983,Burdwan University,Burdwan.
೭೧. ಚಿಂದಾನಂದಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೧೮೨-೩.
೭೨. SII.,XV,No.56,143 &171.
೭೩. ಚೆನ್ನಕ್ಕ ಎಲಿಗಾರ., ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು೯೬.
೭೪. SII., XV, NO. 596.
೭೫. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು ಒಂದು ಅಧ್ಯಯನ, ಪು೩೧೪-೧೫.
೭೬. SII ., XV,No. 596.

ಶ್ರೀಮತಿ ಹೆಚ್. ಪದ್ಮಾ ವಿಠಲ್*

ಬೆಣ್ಣೆಕಲ್ಲು ಗ್ರಾಮದ ಕಲ್ಲೇಶ್ವರ ದೇವಾಲಯ

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬೆಣ್ಣೆಕಲ್ಲು ಗ್ರಾಮ ಮೂರು ಸಾವಿರ ಜನಸಂಖ್ಯೆಯ ಒಂದು ಊರು. ತಾಲೂಕು ಕೇಂದ್ರದಿಂದ ೧೨ ಕಿ.ಮೀ. ದೂರ ಇರುವ ಇಲ್ಲಿ ೭೦೦ ವರ್ಷಗಳಿಗಿಂತಲೂ ಹಳೆಯದಾದ ಐತಿಹಾಸಿಕ ಶಿಲ್ಪಕಲೆಯ ಈ ಸುಂದರ ದೇವಾಲಯ ನಶಿಸುವ ಅಂಚಿನಲ್ಲಿದೆ. ಇಲ್ಲಿನ ಕಲ್ಲೇಶ್ವರ ದೇವಾಲಯದ ಶಿಲಾಶಾಸನ ಅತ್ಯಂತ ಕಾವ್ಯಾತ್ಮಕ ಗುಣದಿಂದಾಗಿ ಪ್ರಖ್ಯಾತವೆನ್ನಿಸಿದೆ. ಹೊಯ್ಸಳ ದೊರೆ ೨ನೇ ವೀರ ನರಸಿಂಹನ ಮಹಾದಂಡನಾಯಕ ಅಮಿತಯ್ಯ ಶಕವರ್ಷ ೧೧೪೮ (೧೨೨೬ ಎ. ಡಿ.) ರಲ್ಲಿ ಇದನ್ನು ನಿರ್ಮಿಸಿದ್ದಾನೆ.

೭೭ ಸಾಲುಗಳುಳ್ಳ ಈ ಶಾಸನ ಮನೋಜ್ಞವಾಗಿದ್ದು ಹೊಯ್ಸಳ ದೊರೆಗಳ ವಂಶಾವಳಿ, ಬಿರುದು, ಘನತೆ ಹಾಗೂ ಮೇಲ್ಮೆಯನ್ನು ಬಣ್ಣಿಸುವಲ್ಲಿ ಹೆಚ್ಚಿನ ಐತಿಹಾಸಿಕ ದಾಖಲೆಯೇ ಆಗಿದೆ. ಚೋಳ ನಿಸ್ತಾರಕ, ಮಲೆರಾಜರಾಜ, ಮಲಪರೊಳ್ಗಂಡ, ಶನಿವಾರ ಸಿದ್ಧಿ, ಗಿರಿದುರ್ಗಮಲ್ಲ, ಚೋಳರಾಯ ರಾಜ್ಯೋದ್ಧಾರಕ ಎಂದೆಲ್ಲ ಬಿರುದಿನ ವಿವರ ಇದೆ. ಹಾಗೆಯೇ ದಂಡಾಧಿಪನ ವಂಶಾವಳಿಯನ್ನು ಗೋತ್ರ ಸಹಿತ ವಿವರಿಸಿದೆ. ಅಮಿತಯ್ಯ ದಂಡ ನಾಯಕನಿಂದ ನಿರ್ಮಿಸಲ್ಪಟ್ಟು ೨ನೇ ವೀರನಾರಸಿಂಹನು ಶೈವ ಗುರು ಬಳೇಶ್ವರ ದೇವರ ಪಾದ ತೊಳೆದು ವಜ್ರೇಶ್ವರ ಹಾಗೂ ಸೋಮನಾಥ ದೇವರ ಸನ್ನಿಧಿಯಲ್ಲಿ ದತ್ತಿ, ದಾನಗಳೊಡನೆ ಅರ್ಪಣೆ ಮಾಡಿದುದಾಗಿ ತಿಳಿದುಬರುತ್ತದೆ.[೧]

ದೇವಸ್ಥಾನ ಭೂ ಮಟ್ಟದಿಂದ ಮೇಲೆದ್ದ ಜಗತಿಯ ಮೇಲೆ ನಿರ್ಮಿತವಾಗಿದ್ದು ಒಂದು ಗಜದಷ್ಟರಲ್ಲಿ ಕುಸಿತಗೊಂಡಿರುವುದೆಂದು ಇಲ್ಲಿನ ಪೂರ್ವಿಕರು ಅಭಿಪ್ರಾಯಪಡುತ್ತಾರೆ. ಆರು ಗರ್ಭಗುಡಿಗಳು, ನಾಲ್ಕು ರಂಗಮಂಟಪ (ಸಭಾಮಂಟಪ)ಗಳಿದ್ದು, ಸುಂದರ ಕಂಬ ಗಳು ಒಂದಕ್ಕಿಂತ ಮತ್ತೊಂದು ಕುಸುರಿ ಕೆಲಸದಿಂದ ಸೊಗಸು ಗೊಂಡಿವೆ. ಕಂಬದ ಮೇಲ್ತುದಿಗಳಲ್ಲಿ ಕನ್ನಡಿಗಳನ್ನು ಅಳ ವಡಿಸಿದ್ದು, ಅವೆಲ್ಲ ಇಂದಿಲ್ಲ.

ಇದೊಂದು ಷಷ್ಟಕೂಟಗಳನ್ನೊಳಗೊಂಡ ದೇವಾಲಯ. ೬ ಗರ್ಭಗೃಹ, ಅಂತರಾಳಗಳು, ವಿಶಾಲ ಸಭಾಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ, ಗರ್ಭಗೃಹಗಳ ಭುವನೇಶ್ವರಿಯಲ್ಲಿ ಪದ್ಮಗಳಿದ್ದು, ಪ್ರವೇಶ ದ್ವಾರಗಳ ಎರಡೂ ಬದಿಗಳಲ್ಲಿ ಹೂ ಸುರುಳಿ ಗಳು, ದ್ವಾರಪಾಲಕರು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಒಳಗಡೆ ಶಿವಲಿಂಗಗಳು ಇವೆ. ಎರಡು ಮುಖ್ಯ ಗರ್ಭಗೃಹಗಳ ಮೇಲೆ ಸಮಾನಾಂತರವಾಗಿ ಕದಂಬ ನಾಗರ ಶೈಲಿಯ ಶಿಖರಗಳಿದ್ದು, ಮುಂಭಾಗಕ್ಕೆ ಚಾಚಿಕೊಂಡ ಸುಖನಾಸಿಗಳು ಅವುಗಳಲ್ಲಿ ದೇವ ಕೋಷ್ಠಗಳು ಇದೆ ಎಂದು "ಡಾ. ಕೆ.ಎಂ. ಸುರೇಶ್" ವಿವರಿಸುತ್ತಾರೆ.

ಮುಖ್ಯ ಗರ್ಭಗುಡಿಗಳಲ್ಲಿ ಪದುಮಲೇಶ್ವರ, ಅಮಿತೇಶ್ವರರು ಪೂರ್ವ ಮುಖವಾಗಿ ಪ್ರತಿಷ್ಠಿತರಾಗಿದ್ದು, ವಿಶಾಲ ರಂಗ ಮಂಟಪದ ಎಡಭಾಗದಲ್ಲಿ ದಕ್ಷಿಣ ಮುಖವಾಗಿ ಲಕ್ಷ್ಮೀನಾರಾಯಣ, ಉತ್ತರ ಮುಖವಾಗಿ ಬಲ್ಲಾಳೇಶ್ವರ ಲಿಂಗ ಇವೆ. ಅಮಿತೇಶ್ವರ ಹಾಗೂ ಲಕ್ಷ್ಮೀನಾರಾಯಣ ವಿಗ್ರಹ ಸುಂದರ ಶಿಲ್ಪಕಲೆಯ ದ್ಯೋತಕ



ವಾಗಿದ್ದು, ಹೊಯ್ಸಳ ಝಲಕನ್ನ ಎತ್ತಿ ತೋರುತ್ತದೆ. ಸುಖಾಸನದಲ್ಲಿ ಕುಳಿತಿರುವ ನಾರಾಯಣ ಎಡತೊಡೆಯ ಮೇಲೆ ಸರ್ವಾಲಂಕೃತ ಲಕ್ಷ್ಮಿಯನ್ನು ಕೂರಿಸಿಕೊಂಡಿದ್ದು, ಕೈಗಳಲ್ಲಿ ಶಂಕು, ಚಕ್ರ, ಗದೆ ಹಿಡಿದಿರುವುದು ಕಂಡುಬರುತ್ತದೆ. ೪ನೇ ಕೈ ತುಂಡಾಗಿದೆ. ಕೊರಳಲ್ಲಿ ಕಂಠಾಭರಣ ಹಾರ, ಕೇಯೂರ, ಉಪವೀತ ಕಾಲಲ್ಲಿ ಅಂದುಗೆ, ಕೈಯಲ್ಲಿ ಕಡಗ ಇತ್ಯಾದಿ ಅಲಂಕಾರ ಮೋಹಕವಾಗಿದೆ. ಲಕ್ಷ್ಮಿಯ ಒಂದು ಕೈಯಲ್ಲಿ ಅಮೃತ ಕಳಶವಿದೆ. ವಿಗ್ರಹದ ಸುತ್ತಲೂ ಇರುವ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರ ಗಮನ ಸೆಳೆಯುತ್ತದೆ.

ಹೊರಗಿನ ಸಭಾ ಮಂಟಪದ ಎಡಭಾಗದಲ್ಲಿ ಯೋಗ ಮುದ್ರಾಭಂಗಿಯಲ್ಲಿ ಕುಳಿತ ಯೋಗಾನರಸಿಂಹಮೂರ್ತಿ ಇದೆ. ಉಗುರುಗಳು, ಆಭರಣ, ಅಲಂಕಾರಗಳು ಮನಸೆಳೆಯುತ್ತವೆ. ಪಕ್ಕದಲ್ಲಿ ಒಂದು ದೊಡ್ಡದಾದ ಖಾಲಿ ಪೀಠ ಇದ್ದು, ಅಲ್ಲಿದ್ದ

* ದ್ವಾರಾ: ಡಾ. ಎಚ್. ಎನ್. ಪಿ. ವಿಠಲ್, ಅಶ್ವಿನಿ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ

ಪ್ರಹ್ಲಾದ ವಿಗ್ರಹ ಈಗ ದೆಹಲಿಯ ಮ್ಯೂಸಿಯಂನಲ್ಲಿದೆ. ನರಸಿಂಹ ಗರ್ಭಗೃಹದ ಹೊರಭಾಗದಲ್ಲಿ ಶಂಖ ಚಕ್ರಗಳ ಉಬ್ಬುಶಿಲ್ಪ ದ್ವಾರಪಾಲಕರ ಜಾಗದಲ್ಲಿದೆ. ನಾರಸಿಂಹನ ಹಿಂಗೈಗಳಲ್ಲಿನ ಶಂಖ-ಚಕ್ರ ಗಮನ ಸೆಳೆಯುತ್ತವೆ.

ಉತ್ತರ-ದಕ್ಷಿಣ ದಿಕ್ಕುಗಳಲ್ಲೂ ಪ್ರವೇಶ ದ್ವಾರವಿದ್ದು, ಮಧ್ಯದಲ್ಲಿ ಕಲ್ಯಾಣ ಚಾಲುಕ್ಯ ಮಾದರಿಯ ಮೂವತ್ತಾರು ಕಂಬ ಗಳಿವೆ. ಸಪ್ತಮಾತೃಕೆಯರು[೨] ಎಂದಿರುವ ಸಾಲುಶಿಲ್ಪಗಳ ಸಮನ್ವಯದ ಕೊನೆಯಲ್ಲಿ ಗಣೇಶ ತನ್ನ ವಾಹನ ಇಲಿಯ ಸಹಿತ ವಿಜೃಂಭಿಸಿದ್ದಾನೆ. ಉಳಿದ ಎಂಟು ಸ್ತ್ರೀ ಶಿಲ್ಪಗಳು ಕೆಳಗಡೆ ವಾಹನ ಸಹಿತ ಕಂಡುಬರುತ್ತವೆ. ಮೊದಲ ಶಿಲ್ಪದ ಕೈಯಲ್ಲಿ ವೀಣೆಯಾಕಾರದ ವಾದ್ಯವಿದ್ದು ವಾಹನವಾಗಿ ನಂದಿ ಇದೆ. ೬ನೇ ವಿಗ್ರಹ ಸ್ತ್ರೀ ಕುದುರೆ ಮುಖ ಹೊಂದಿದ್ದು ವಾಹನ ಟಗರು ಇರುತ್ತದೆ. ಉಳಿದ ವಿಗ್ರಹಗಳ ವಾಹನಗಳು ನವಿಲು, ಹಂಸ, ಕೋಳಿ, ಆನೆ, ತೋಳ ಮುಂತಾಗಿ ಗುರುತಿಸಬಹುದಾಗಿದ್ದು ಸಪ್ತಮಾತೃಕೆಯ ವಿಗ್ರಹ ಸರಿಯೇ? ಎಂಬ ಪ್ರಶ್ನೆ ಬರುತ್ತದೆ.



ರಂಗಮಂಟಪದ ಕಂಭಗಳ ಕುಸುರಿ ಕೆಲಸ ಸುಂದರ ವಾಗಿದ್ದು, ಸಾಲು ಸಾಲಾಗಿ ಗಿಡ, ಮರ, ಹೂ, ಬಳ್ಳಿಗಳೂ, ಪದ್ಮ ಗಳು, ಹಣ್ಣುಗಳು, ಆನೆ ಸಾಲುಗಳು ಕಂಡುಬರುತ್ತವೆ. ಮೇಲು ಸ್ತುವಾರಿ ಕೊರತೆಯಿಂದಾಗಿ ಉಸುಕು ಮಿಶ್ರಿತ ಕೆಂಪುಕಲ್ಲು ಪದರ ಪದರ ಉದುರುವ ಹಂತದಲ್ಲಿದ್ದು, ಬಹಳಷ್ಟು ಕೆತ್ತನೆಗಳು ಕರಗಿ ಸಾಪಾಗಿ ಬಿಟ್ಟಿವೆ. ಮೊದಲಿಗೆ ಸುಣ್ಣ ಬಣ್ಣ ಬಳಿದು ಕುಸುರಿ ಕೆಲಸ ಸೂಕ್ಷ್ಮತೆ ಕಳೆದುಕೊಂಡಿದೆ. ಈಚಿನ ದಿನಗಳಲ್ಲಿ ಊರಿನ ಆಸಕ್ತರು ಹಣ ಸಂಗ್ರಹಿಸಿ ಜೀರ್ಣೋದ್ಧಾರ ತಮಗೆ ತಿಳಿದಂತೆ ಮಾಡಿ ಕಾಳಜಿ ತೋರಿದ್ದಾರೆ. ದೇವಾಲಯದಿಂದ ಹೊರಗಿರುವ ೨ ಚಿಕ್ಕ ಗುಡಿಗಳಲ್ಲಿ ಒಂದನ್ನು ಮೂಲ ಕಟ್ಟಡಕ್ಕೆ ಜೋಡಿಸಿ ಒಂದು ನಂದಿಯನ್ನಿರಿಸಿ ನಿತ್ಯ ಪೂಜೆ ನಡೆಸುತ್ತಾರೆ.

ದೇವಸ್ಥಾನದ ಪ್ರಾಂಗಣ ಒತ್ತುವರಿ ಕಂಡಿದೆ. ದೇವಸ್ಥಾನದ ಪಶ್ಚಿಮೋತ್ತರದಲ್ಲಿ ಎತ್ತರದ ಜಗಲಿಯ ಮೇಲಿನ ಗರುಡಗಂಬ ಪ್ರಾಂಗಣದ ವಿಸ್ತಾರ ಅರುಹುವಂತಿದೆ. ೩೯" ಅಗಲ, ೨೬" ಎತ್ತರದ ಕರಿಕಲ್ಲಿನ ಬೃಹತ್ ಪಾಣಿಪೀಠದ ಮೇಲೆ ಇರುವ ಲಿಂಗಗಳ ಆಕಾರ ಅತ್ಯಂತ ಕಿರಿದಾಗಿದ್ದು, ಬರೀ ೪" ಎತ್ತರ ಹೊಂದಿದೆ. ಆದರೆ ವಿಷ್ಣು ವಿಗ್ರಹಗಳಾದ ಲಕ್ಷ್ಮೀನಾರಾಯಣ, ಯೋಗಾನರಸಿಂಹರ ವಿಗ್ರಹಗಳು ಮಾತ್ರ ಎತ್ತರದ ಪೀಠದ ಮೇಲೆ ಪ್ರಮಾಣಬದ್ಧವಾಗಿ ಸುಂದರವಾಗಿ ನಿರ್ಮಾಣಗೊಂಡು ಹೊಯ್ಸಳರ ಕಲಾಪ್ರೇಮಕ್ಕೆ ಸಾಕ್ಷಿ ಎನ್ನುವಂತಿದೆ. ಸುಮಾರು ಹತ್ತು ವರ್ಷಗಳ ಹಿಂದೆ ಕುಸಿದ ಕಟ್ಟಡದಿಂದ ಹೊರ ಜಾರಿದ್ದ ಅಂದಿನ ಇಟ್ಟಂಗಿಗಳ ಗಟ್ಟಿತನ ನಮ್ಮ ಪೂರ್ವಿಕರ ನೈಪುಣ್ಯಕ್ಕೆ ಸಾಕ್ಷಿ. ೯"x೬"x೨" ಆಕಾರದ ಬೃಹತ್ ಇಟ್ಟಿಗೆಗಳು ಉತ್ಕೃಷ್ಟ. ಇದಲ್ಲದೇ ವೀರಗಲ್ಲು, ಸತೀಕಲ್ಲುಗಳು ಸಹಾ ಈ ದೇವಸ್ಥಾನದಲ್ಲಿ ಇದ್ದು, ಯುದ್ಧದೃಶ್ಯಗಳೂ, ಕುದುರೆಗಳು, ವೀರರ ಕಾಲ್ತುಳಿತಕ್ಕೊಳಗಾದ ದೇಹಗಳು ಕಾಣುತ್ತೇವೆ. ಇದಲ್ಲದೆ ೩೧/೨ ಅಡಿ ಉದ್ದದ ಫಿರಂಗಿಯನ್ನು ಇರಿಸಲಾಗಿದೆ.

ನೊಳಂಬವಾಡಿ ಆಡಳಿತದ ಕೋಗಳಿ ಐನೂರರ ಆಡಳಿತ ದಲ್ಲಿದ್ದ ಈ ಬೆಣ್ಣೆಕಲ್ಲು ೧೨ ಎಂಬ ಪಟ್ಟಣದ ಭೂ ಕೃತಿ, ಕೆರೆ, ಕುಂಟೆ, ತೋಟ-ಪಟ್ಟ, ಬೆಳೆ-ಭಂಡಾರಗಳ ಸವಿವರ ಚಿತ್ರಣ ದೇವಸ್ಥಾನದ ಮುಂದಿರುವ ಶಾಸನದಲ್ಲಿ ವಿಶದವಾಗಿದೆ. ನೊಳಂಬರು





ಕ್ರಿ.ಶ. ೮ನೇ ಶತಮಾನದಲ್ಲಿ ಹರಪನಹಳ್ಳಿ ತಾಲೂಕಿನ ಉಚ್ಚಂಗಿ ದುರ್ಗದಿಂದ ಆಡಳಿತ ನಡೆಸಿದ ವಿವರ ಮುಂದೆ ಕಂಪಿಲಿ, ಮಡಕಶಿರಾ ತಾಲೂಕಿನ ಹೇಮಾವತಿಗಳು ಬೇರೆ ಬೇರೆ ಸಮಯದಲ್ಲಿ ರಾಜಧಾನಿ ಗಳಾಗಿದ್ದ ವಿವರ ದೊರಕುತ್ತದೆ. ಆಂಧ್ರದ ಕಣೇಕಲ್ಲು, ಕರ್ನಾಟಕದ ಕೋಗಳಿ ನೊಳಂಬವಾಡಿಯ ೨ ವಿಭಾಗಗಳಾಗಿದ್ದವು. ಹೊಯ್ಸಳರು ಹಾಗೂ ಬಾದಾಮಿ ಚಾಲುಕ್ಯರಿಗೂ, ಗಂಗರಿಗೂ ಸಾಮಂತರಾಗಿದ್ದ ಉಲ್ಲೇಖ ಇದೆ. ಮುಂದೆ ಚೋಳರು ನೊಳಂಬವಾಡಿ ವಶಪಡಿಸಿ ಕೊಂಡು ಉಚ್ಚಂಗಿ ಪಾಂಡ್ಯರನ್ನು ರಾಜ್ಯಪಾಲರಾಗಿ ನೇಮಿಸಿದ ಉಲ್ಲೇಖ ಕ್ರಿ.ಶ. ೧೦೬೪ರ ಶಾಸನ ದೊರೆಯುತ್ತದೆ.[೫] ಹೊಯ್ಸಳ ವಿಷ್ಣುವರ್ಧನ ಕ್ರಿ.ಶ. ೧೧೦೮ರ ನಂತರ ಚೋಳರನ್ನು ಸೋಲಿಸಿ ನೊಣಂಬವಾಡಿಯ ಆಡಳಿತವನ್ನು ವಶಪಡಿಸಿಕೊಂಡ ನಂತರ ೨ನೇ ಬಲ್ಲಾಳನ ಮಗ ೨ನೇ ವೀರಸಿಂಹನ ಆಳ್ವಿಕೆಯಲ್ಲಿ ಕೋಗಳಿ ೫೦೦ರ

ಬೆಣ್ಣೆಕಲ್ಲು ೧೨ ಪಟ್ಟಣದಲ್ಲಿ ಆತನ ಮಹಾ ದಂಡನಾಯಕ ಭಾರಧ್ವಾಜಗೋತ್ರದ ಅಮಿತಯ್ಯ ಈ ಸುಂದರ ದೇವಾಲಯ ನಿರ್ಮಿಸಿದ ವಿವರ ಶಾಸನದಲ್ಲಿ ಉಲ್ಲೇಖವಾಗಿದೆ. ದೇವರುಗಳ ಅಂಗಭೋಗ, ರಂಗಪೂಜೆ, ನಿತ್ಯ, ನೈಮಿತ್ತಿಕ ನೈವೇದ್ಯ, ಪಂಚ ಪರ್ವಗಳಿಗೂ, ಜೀರ್ಣೋದ್ಧಾರಕ್ಕೂ ಸೇರಿ ದಾನ, ದತ್ತಿಗಳನ್ನು ೨ನೇ ವೀರನರಸಿಂಹ ದೊರೆಯ ಶ್ರೀಹಸ್ತದಿಂದ ಶಕವರ್ಷ ೧೧೪೮ನೆಯ ಬಯ್ಯಸಂವತ್ಸರ, ಚೈತ್ರ ಶುದ್ಧ ಏಕಾದಶಿ ಆದಿತ್ಯವಾರ ಸಮರ್ಪಿಸಿದ ಸಂಪೂರ್ಣ ವಿವರ ಕಾಣಬಹುದಾಗಿದೆ.

ಸ್ಥಾಪಿತ ಲಿಂಗಗಳಲ್ಲಿ ಮೂರು ಗರ್ಭಗೃಹಗಳಲ್ಲಿ ಮಹಾದಂಡ ನಾಯಕನ ಸಂಬಂಧಿಗಳ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿರುವುದು ಮಹಾದಂಡನಾಯಕನ ಸ್ವಾತಂತ್ರ್ಯ, ಆಡಳಿತದ ಬಿಗಿಗೆ ನಿದರ್ಶನ ಎನ್ನಿಸುತ್ತದೆ. ರಾಜಗುರು ಬಳೇಶ್ವರ ದೇವರ ಹಿರಿಮೆ, ಪ್ರೌಢಿಮೆ, ತಪಸ್ಸು, ಸಿದ್ಧಿಗಳ ವರ್ಣನೆ ಹೊಯ್ಸಳ ದೊರೆಗಳ ಧಾರ್ಮಿಕ ಸಮನ್ವಯಕ್ಕೆ ಸಾಕ್ಷಿಯಂತಿದೆ.

ವಿಶೇಷವಾಗಿ ದೇವಾಲಯ ಶಿಲ್ಪಕಲಾ ದೃಷ್ಟಿಯಿಂದ **ಹೊಯ್ಸಳ, ಚಾಲುಕ್ಯ** ಹಾಗೂ **ಕದಂಬ** ನಾಗರ ಶೈಲಿಗಳ ಸಮ್ಮಿಲನ ದಂತಿದ್ದು ದಾನ, ದತ್ತಿಗಳ ಯಥೇಚ್ಛ ಕೊಡುಗೆ ಹಾಗೂ ಸಾಮಾಜಿಕ ನಿರ್ಬಂಧ ಅಂತಹವುಗಳ ದುರುಪಯೋಗ ಮಾಡಿದವರು ಅನುಭವಿಸ ಬೇಕಾದ ಪಾಪ-ಪುಣ್ಯಗಳ ವಿವರವನ್ನು ಕಟ್ಟುನಿಟ್ಟಾಗಿ ಉಲ್ಲೇಖಿ ಸಲಾಗಿದೆ.

ನಿರ್ಮಾಣದ ಕಾಲ ವಿವರವಾಗಿ ದೊರಕಿದ್ದರೂ, **ವಾಸ್ತು ಶಿಲ್ಪದ ದೃಷ್ಟಿಯಿಂದ ದೇವಸ್ಥಾನ ಬರೀ ಹೊಯ್ಸಳದಿಂದ ಮಾತ್ರ ನಿರ್ಮಾಣವಾಯಿತೇ** ಅಥವಾ ಪಾಂಡ್ಯರ, ಚಾಲುಕ್ಯರ ಸಮಯದಲ್ಲೇ ರೂಪಿತಗೊಂಡು ಹಂತ-ಹಂತವಾಗಿ ಅಮಿತಯ್ಯ ದಂಡನಾಯಕನಿಂದ ಪೂರ್ಣವಾಯಿತೇ ಎಂಬ ಚಿಂತನೆ ಅಗತ್ಯವಿದೆ ಎಂದು ನನ್ನ ಅನಿಸಿಕೆ.*

* (ಡಾ. ರವೀಂದ್ರನಾಥ್, ಶ್ರೀಯುತ ಗೋಪಾಲ್, ಗ್ರಾಮದ ಹಿರಿಯ ಶ್ರೀ ಬೆಟ್ಟಪ್ಪ ಅವರು ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ್ದಾರೆ.)

***

ಆಧಾರಸೂಚಿ

೧. No 343 A.R. No. 280 of 1925 ಕರ್ನಾಟಕ ವಿ.ವಿ.
೨. **ಕರ್ನಾಟಕ ದೇವಾಲಯ ಕೋಶ**, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ ಕ.ವಿ.ವಿ.
೩. ಅದೇ., ಪ್ರಸಾರಾಂಗ. ಕ.ವಿ.ವಿ.
೪. **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ** (ಕುಂ. ಬಾ. ಸ)
೫. ಡಾ. ಸೂರ್ಯನಾಥ ಕಾಮತ್., 'ಕರ್ನಾಟಕ ಪರಂಪರೆಯ ಸಮೀಕ್ಷೆ: ಹೊಯ್ಸಳ- ಸೇವುಣರು'., **೧೯೮೫, ಅವಲೋಕನ.,**

ಹನುಮಂತ ಸಿ. ಮೇಲಿನಮನಿ*

ಗೋವೆ ಕದಂಬರ ಕಾಲದ ಕೇಶವ ದೇವಾಲಯ

ಕೊಂಕಣದ ಶಿಲಾಹಾರದ ಮೇಲೆ ಒತ್ತುವರಿ ನಡೆಸಿ ಗೋವೆಯ ಚುದ್ರಪುರ (ಚಾಂದೋರ್)ದಿಂದ ಆಡಳಿತ ನಡೆಸುತ್ತಿದ್ದ ಗೋವೆಯ ಕದಂಬರು, ಬನವಾಸಿ ಕದಂಬರ ವಂಶಜರು ತಾವೆಂದು ಹೇಳಿಕೊಂಡಿದ್ದಾರೆ. ಗೋವೆಯ ನಾರ್ವೆಯಲ್ಲಿರುವ ಪ್ರಸಿದ್ಧ ಕ್ಷೇತ್ರ ಸಪ್ತಕೋಟೇಶ್ವರನ ಭಕ್ತರೆಂದು ಹೇಳಿಕೊಂಡು ಬಂದ ಇವರು ಮುಂದೆ ತಮ್ಮ ರಾಜಧಾನಿಯನ್ನು ಗೋಪಕ ಪಟ್ಟಣಕ್ಕೆ ೧೦೪೯ರಲ್ಲಿ ಬದಲಾಯಿಸಿದರು. (ಇದು ಇಂದಿನ ಪಣಜಿ ಬಳಿಯ ಹಳೆ ಗೋವೆ-ವೆಲ್ಹಾ ಗೋವಾ) ಇದು ಕೆಲಕಾಲದ ನಂತರ ಬೃಹತ್ ವ್ಯಾಪಾರಿ ಕೇಂದ್ರವಾಗಿ ಬೆಳೆಯಿತು. ರಾಷ್ಟ್ರಕೂಟರ ಕಾಲದಲ್ಲಿ ಆಡಳಿತವನ್ನು ಆರಂಭಿಸಿದ ಒಂದನೆಯ ಚಟ್ಟ, ಅನಂತರ ಅವನ ಮಗ ನಾಗವರ್ಮ, ಅವನ ಮೊಮ್ಮಗ ಗೋವಲದೇವ ಇವರೆಲ್ಲರ ಉಲ್ಲೇಖ ಶಾಸನಗಳಲ್ಲಿದೆ. ಗೋವಲದೇವನು ಚಾಲುಕ್ಯ ಇಮ್ಮಡಿ ತೈಲನ ಮಾಂಡಲೀಕನಾಗಿದ್ದು, ಅವನ ಮಗ ಎರಡನೆಯ ಷಷ್ಠನು (೧೦೦೬-೧೦೭೨ ಕೊಂಕಣ ಶಿಲಾಹಾರವನ್ನು ನಾಮಾವ ಶೇಷಗೊಳಿಸಿದನು.

೧೦೭೮ರಲ್ಲಿ ಗೋವಲದೇವ-III ಅನಿಲಪುರ (ಧಾರವಾಡ ಜಿಲ್ಲೆಯ ಅಳ್ನಾವರ)ವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನು. ಈತ ಕೊಂಕಣ-೯೦೦ ಮತ್ತು ಹಲಸಿಗೆ-೧೨೦೦೦ವನ್ನು ಆಳುತ್ತಿದ್ದನು. ೧೧೨೫ರಲ್ಲಿ ಗೋವಲದೇವ-III ತೀರಿಕೊಂಡನು. ಎರಡನೆಯ ಜಯಕೇಶಿಯ ನರೇಂದ್ರ ಶಾಸನದಲ್ಲಿ[೧] ಆತನು ಕೊಂಕಣ-೯೦೦, ಹೈವೆ-೫೦೦, ಹಲಸಿಗೆ-೧೨೦೦೦ ಹಲಸಿಗೆಗೆ ಸೇರಿದ ಕುಂದೂರ-೫೦೦ ಗಳನ್ನು ಆಳುತ್ತಿರಲು ಅವನ ಸೇನಾನಿ ಸಿಂಗರಸನು ಕುಂದೂರು (ಈಗಿನ ನರೇಂದ್ರ, ಧಾರವಾಡ ಜಿಲ್ಲೆ)ದಲ್ಲಿ ನಿರ್ಮಿಸಲಾದ ಲಕ್ಷ್ಮೇಶ್ವರ ಶಿವಾಲಯಕ್ಕೆ ದಾನ ನೀಡಿದ ವಿಚಾರವಿದೆ. ಇದರಿಂದ ಧಾರವಾಡ ಪ್ರಾಂತ್ಯದಲ್ಲಿ ಗೋವೆ ಕದಂಬರು ರಾಜ್ಯಭಾರ ಮಾಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ

ಗೋವೆಯ ಕದಂಬರ ಆಡಳಿತಕ್ಕೊಳಪಟ್ಟ ಹಲಸಿಗೆ ೧೨೦೦೦ದಲ್ಲಿ ದೇವರಹುಬ್ಬಳ್ಳಿಯೂ ಒಂದಾಗಿತ್ತು. ಇದು ಅಂದು ಹುಪ್ಪವಳ್ಳಿ ಎಂಬ ಅಗ್ರಹಾರವಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ[೨]. ದೇವರಹುಬ್ಬಳ್ಳಿಯು ಧಾರವಾಡದಿಂದ ಸುಮಾರು ೧೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಉತ್ತರ ಭಾಗಕ್ಕೆ ಕೇಶವ ದೇವಾಲಯವಿದೆ. ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಗ್ರಾಮಸ್ಥರು ಈ ದೇವಾಲಯವನ್ನು ರಂಗನಾಥ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯ ಸುಮಾರು ೧೧-೧೨ನೇ ಶತಮಾನದಷ್ಟು ಪುರಾತನವಾಗಿರಬಹುದು. ದೇವಾಲಯ ರಾಷ್ಟ್ರಕೂಟರ ಶೈಲಿಯನ್ನು ಹೊಂದಿರುವುದು ಕಂಡುಬರುತ್ತದೆ.

ಕೇಶವ ದೇವಾಲಯದ ಗರ್ಭಗುಡಿಯ ಬಾಗಿಲು

ಗರ್ಭಗೃಹದಲ್ಲಿರುವ ಕೇಶವಮೂರ್ತಿಯು ಐದು ಅಡಿ ಎತ್ತರ; ಎರಡು ಅಡಿ ಅಗಲವಾಗಿದೆ. ಮೂರ್ತಿಯ ಸುತ್ತಲೂ ಮಕರ ತೋರಣವಿದೆ. ಇದರಲ್ಲಿ ವಿಷ್ಣುವಿನ ಹತ್ತು ಅವತಾರಗಳನ್ನು ಬಿಡಿಸಲಾಗಿದೆ. ಕೇಶವನ ನಾಲ್ಕು ಕೈಗಳಲ್ಲಿ ಪದ್ಮ, ಶಂಖ, ಚಕ್ರ ಮತ್ತು ಗದೆಗಳಿವೆ. ಕಿವಿಯಲ್ಲಿ ಕರ್ಣಕುಂಡಲವಿದೆ. ಮೈಮೇಲೆ ಜನಿವಾರವಿದೆ. ಯುಗಾದಿ ಪಾಡ್ಯದ ದಿವಸ ಮಾತ್ರ ಸೂರ್ಯನ ಕಿರಣಗಳು ಬೆಳಿಗ್ಗೆ ೬ ಗಂಟೆಗೆ ಕೇಶವನ ಪಾದದ ಬಳಿ ಬೀಳುತ್ತವೆ ಎಂದು ದೇವಾಲಯದ ಪೂಜಾರಿ ಹೇಳುತ್ತಾರೆ.

ಕೇಶವಮೂರ್ತಿ




ಕೇಶವಮೂರ್ತಿಯ ಬಲಬದಿಯಲ್ಲಿ ಕಮಲದ ಹೂವನ್ನು ಹಿಡಿದಿರುವ 'ನೀಲೋತ್ಪಲ' ಮೂರ್ತಿಯಿದೆ. ಅವಳ ಹಿಂಭಾಗದಲ್ಲಿ ಚಾಮರಧಾರೆಯ ಮೂರ್ತಿಯಿದ್ದರೆ; ಮುಂಭಾಗದಲ್ಲಿ


* ಸರಸ್ವತಿದೇವಿ, ಶಂ ಭಗವತಿ, ನಂ. ೩ ಡಬ್ಲ್ಯುಎಸ್-೭೯೧, ನವನಗರ, ಹುಬ್ಬಳ್ಳಿ - ೫೮೦ ೦೨೫

ಗರುಡನ ವಿಗ್ರಹವಿದೆ. ಎಡಭಾಗದಲ್ಲಿ 'ಶ್ರೀದೇವಿ'ಯ ವಿಗ್ರಹವಿದೆ. ಅವಳ ಹಿಂಭಾಗದಲ್ಲಿಯೂ ಚಾಮರಧಾರಿಯ ಮೂರ್ತಿಯಿದೆ. ಈ ಮೂರ್ತಿಗಳ ಅಲಂಕಾರಗಳೆಲ್ಲ ರಾಷ್ಟ್ರಕೂಟರ ಶಿಲ್ಪದ ಮಾದರಿಯಲ್ಲಿರುವುದು ಮೇಲಿನ ಮಾತಿಗೆ ಪುಷ್ಠಿಯನ್ನಿಯುತ್ತದೆ.

ಕೇಶವಮೂರ್ತಿಯ ಬಲಬದಿಯಲ್ಲಿರುವ ನೀಲೋತ್ಪಲೆ, ಗರುಡ

ಕೇಶವಮೂರ್ತಿಯ ಎಡಬದಿಯಲ್ಲಿರುವ ಶ್ರೀದೇವಿ.





ದೇವಾಲಯವು ಗರ್ಭಗುಡಿ, ಸುಖನಾಸಿ, ನವರಂಗಗಳ ನ್ನೊಳಗೊಂಡಿದೆ. ಗರ್ಭಗುಡಿಯ ಹೊಸ್ತಿಲದ ಹೊರಭಾಗದ ಮಧ್ಯದಲ್ಲಿ ಚಂದ್ರಶಿಲೆಯಿದೆ. ಚಂದ್ರಶಿಲೆಯ ಮೇಲ್ಭಾಗದ ಕಲ್ಲಿನ ಪಟ್ಟಿಕೆಯಲ್ಲಿ ಲಕ್ಷ್ಮಿಯ ಚಿಕ್ಕ ಮೂರ್ತಿಯಿದೆ. ಬಲಭಾಗದಲ್ಲಿ ಗೋಡೆಗೆ ಆನಿಸಿರುವ ತಳಿಕೆ ಹಾಕಿರುವ ೨, ೩, ೭ ಹೆಡೆಯ ನಾಗರಹಾವಿನ ವಿಗ್ರಹಗಳಿವೆ. ಗರ್ಭಗುಡಿಯ ಬಾಗಿಲ ಮೇಲ್ಭಾಗದ ಕೆತ್ತನೆಗಳು ಅಸ್ಪಷ್ಟವಾಗಿವೆ. ರಂಗಮಂಟಪದಲ್ಲಿ ರಾಷ್ಟ್ರಕೂಟರ ಶೈಲಿಯ ಒಂದೇ ರೀತಿಯ ಕೆತ್ತನೆಯುಳ್ಳ ನಾಲ್ಕು ಕಲ್ಲಿನ ಕಂಬಗಳಿವೆ. ಇವುಗಳಿವೆ ಈಗ ಸುಣ್ಣ-ಬಣ್ಣವನ್ನು ಬಳಿಯಲಾಗಿದೆ.

ದೇವಾಲಯದ ಹೊರಭಾಗದಲ್ಲಿ ಒಂದು ಕಲ್ಲಿನ ಮೇಲೆ ಕೀರ್ತಿಮುಖ ಮತ್ತು ಗೋಪುರಗಳನ್ನು ಕೆತ್ತಲಾಗಿದೆ. ಇದು

ಕೇಶವ ದೇವಾಲಯದ ಒಳಗಿನ ಕಂಬಗಳು



ದೇವಾಲಯದ ಬಾಗಿಲ ಮೇಲೆ ಇಡಲು ತಯಾರಿಸಿರಬಹುದು. ಆದರೆ, ಇಡಲಾಗಿಲ್ಲ. ಈ ದೇವಾಲಯಕ್ಕೆ ಸಂಬಂಧಿಸಿದ ಹಾಗೆ ಯಾವ ಶಾಸನಗಳೂ ದೊರೆತಿಲ್ಲ. ಆ ಗ್ರಾಮಗಳಲ್ಲಿ ದೊರೆತ ಶಾಸನಗಳಲ್ಲಿಯೂ ಕೂಡ ಈ ದೇವಾಲಯದ ಉಲ್ಲೇಖ ಕಂಡುಬರುವುದಿಲ್ಲ.[3] ದೇವಾಲಯದ ಎದುರಿಗಿರುವ ಬಾವಿಯನ್ನು ಗಮನಿಸಿದರೆ, ಅದು ಮುಸ್ಲಿಂ ಶೈಲಿಯಲ್ಲಿರುವುದು ಕಂಡುಬರುತ್ತದೆ.

ಮುಸ್ಲಿಂ ಶೈಲಿಯ ಬಾವಿಯ ನೋಟ



ಈ ದೇವಾಲಯಕ್ಕೆ ಈ ಮೊದಲು ನಾರಾಯಣಕೊಪ್ಪದ ೨೫೦ ಎಕರೆ ಭೂಮಿಯನ್ನು ದಾನವಾಗಿ ನೀಡಲಾಗಿತ್ತೆಂದು ದೇವಾಲಯದ ಪೂಜಾರಿಯಿಂದ ತಿಳಿದುಬರುತ್ತದೆ. ಆದರೆ, ಈಗ ಆ ಭೂಮಿಯಾಗಲೀ, ನಾರಾಯಣಕೊಪ್ಪ ಗ್ರಾಮವಾಗಲೀ ಇಲ್ಲ. ದೇವಾಲಯಕ್ಕೆ ಈಗ ಒಂದು ಎಕರೆ ಭೂಮಿ ಮಾತ್ರ ಉಳಿದಿದೆ.

***

ಆಧಾರಸೂಚಿ

1. *Epigraphia Indica* Vol-XIII 1915-16., (Edi) prof. Sten Konow and F.W. Thomas. Published by the Director General Archaeological survey of India. Janpath, New Delhi - 110 011, 1982. PP. 298-326.
2. *South-Indian Inscriptions* Vol-XV., 1964, P.P. 284, (Edi) P.B. Desai, Published by the Manager of publication, Delhi. 315-316.
3. I bid.

ಪ್ರೊ. ಕೆ.ಸಿ. ಮಲ್ಲಿಗವಾಡ*

ಬೆಂತೂರಿನ ಶ್ರೀ ಶಂಭುಲಿಂಗೇಶ್ವರ ದೇವಾಲಯ

ಗದಗ ಜಿಲ್ಲೆಯ ಗದಗ ತಾಲೂಕಿನ ಕೊನೆಯ ಹಳ್ಳಿ ಬೆಂತೂರು ಗದಗ ಪಶ್ಚಿಮ ಭಾಗದ ಗಡಿರೇಖೆಯಲ್ಲಿ ಸುಮಾರು ೨೫ ಕಿ.ಮೀ. ಅಂತರದಲ್ಲಿದೆ. ಇಲ್ಲಿರುವ ಪ್ರಾಚ್ಯಾವಶೇಷಗಳ ಆಧಾರದ ಮೇಲಿಂದ ಇದೊಂದು ೯ನೇ ಶತಮಾನದಿಂದಲೇ ಪ್ರಚಲಿತವಿದ್ದ ಗ್ರಾಮವೆನ್ನಬಹುದು. ಇಲ್ಲಿ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ಯಾದವರು ನಿರ್ಮಿಸಿದ ಶಾಸನ ವೀರಗಲ್ಲುಗಳಿವೆ. ಅವುಗಳು ಶ್ರೀ ದೇವರಿಗೆ ಸುವರ್ಣದಾನ, ಭೂದಾನಗೈದವು ಗಳಾಗಿವೆ. ಇಂತಹ ಗ್ರಾಮವು ಅಂತೂರು-ಬೆಂತೂರು ಎಂದೇ ಪ್ರಸಿದ್ಧವಾಗಿದೆ.

ಗದಗ ತಾಲೂಕಿನ ಪ್ರತ್ಯೇಕ ೨ ಗ್ರಾಮಗಳು ಇಲ್ಲಿಯೇ ನಿರ್ಮಾಣವಾಗಿವೆ. ಎರಡೂ ಗ್ರಾಮಗಳ ಸರಹದ್ದಿನಲ್ಲಿ ಊರನ್ನು ನಿರ್ಮಿಸಿದ್ದಾರೆ. ಆದ್ದರಿಂದಲೇ ಈ ಊರನ್ನು ಅಂತೂರು-ಬೆಂತೂರು ಎಂದೇ ಕರೆಯುತ್ತಿರುವುದು ವಾಡಿಕೆ ಯಾಗಿದೆ.

ಬೆಂತೂರು ಗ್ರಾಮದಲ್ಲಿ ನಿರ್ಮಾಣಗೊಂಡ ಪ್ರಮುಖ ದೇವಾಲಯವೇ "ಶ್ರೀ ಶಂಭುಲಿಂಗೇಶ್ವರ". ಇದನ್ನು ಶಾಸನಗಳಲ್ಲಿ ಶ್ರೀ ಸ್ವಯಂಭು ದೇವರಗುಡಿ ಎಂದು ವರ್ಣಿಸಲಾಗಿದೆ. ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡಿದೆ. ದೇವಾಲಯದ ನಿರ್ಮಾಣದ ಅವಧಿ ನಿರ್ದಿಷ್ಟ ವಾಗಿಲ್ಲ. ಇಲ್ಲಿರುವ ೨ ಶಾಸನಗಳು ಕಲ್ಯಾಣಿ ಚಾಲುಕ್ಯರ ೧ನೇ ಸೋಮೇಶ್ವರನ ಕಾಲದವು. (ಇದು ಕ್ರಿ.ಶ. ೧೦೪೦ ಮತ್ತು ೧೦೪೫) ೧ನೆಯದರಲ್ಲಿ ಬೆಳ್ವೊಲ ಹಾಗೂ ಅಗ್ರಹಾರ ಬೆನತೂರ ಗ್ರಾಮಗಳ ವರ್ಣನೆ; ೨ನೆಯದರಲ್ಲಿ ಪೆರ್ಗಡೆಯ ಮಗ ವಾದಿರಾಜನ ಗೋಗ್ರಹಣದಲ್ಲಿ ಆಕಳುಗಳನ್ನು ರಕ್ಷಿಸಿದ ಬಗ್ಗೆ ತಿಳಿಸಲಾಗಿದೆ. ಇಲ್ಲಿ ದೇವಾಲಯ ನಿರ್ಮಾಣದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಆದರೆ ಹೊಯ್ಸಳರ ಅರಸ ೨ನೇ ಬಲ್ಲಾಳನು ಶ್ರೀ ಶಂಭುಲಿಂಗ ದೇವಾಲಯದ ಕಂಬದ ಮೇಲೆ ಹೊರಡಿಸಿದ ೨ ಶಾಸನಗಳಲ್ಲಿ ಈ ದೇಗುಲದ ಬಗ್ಗೆ ಉಲ್ಲೇಖವಿದೆ. ೧ನೇ ಶಾಸನ ೧೨೦೦ರ ಶಾಸನದಲ್ಲಿ ಸ್ವಯಂಭು ದೇವರಿಗೆ "ಸುವರ್ಣ ದಾನ" ಮಾಡಿದ ಬಗ್ಗೆ ತಿಳಿಸಲಾಗಿದೆ. ೨ನೇ ಶಾಸನ, ಸೋಮಯ್ಯನಿಂದ ಸ್ವಯಂಭು ದೇವರಿಗೆ "ಸುವರ್ಣದಾನ" ಎಂಬ ಉಲ್ಲೇಖವಿದೆ. ಇದೇ ದೇವಾಲಯದ ಮತ್ತೊಂದು ಕಂಬದಲ್ಲಿದ್ದ ಶಾಸನದಲ್ಲಿ ಶ್ರೀ ಶಂಭುಲಿಂಗ ದೇವಾಲಯಕ್ಕೆ ವೈಜಕಬ್ಬೆಯು ನಿರ್ಮಿಸಿದ "ದೀಪಸ್ತಂಭ"ವಿದೆಯೆಂದು ಉಲ್ಲೇಖವಿದೆ. ಇವೆಲ್ಲವುಗಳನ್ನು ಆಧಾರವಾಗಿಟ್ಟುಕೊಂಡು ಸಂಶೋಧನೆಗೆ ತೊಡಗಿದಾಗ ದೇವಾಲಯವು ೧೧ನೇ ಶತಮಾನದಿಂದ ೧೨ರ ಮಧ್ಯಭಾಗದಲ್ಲಿ ನಿರ್ಮಾಣವಾಗಿರುವುದೆಂದು ವಿದಿತವಾಗುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಂತೆ ತಿಳಿದು ಬರುತ್ತದೆ.

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ನಿರ್ಮಾಣ ಇನ್ನೂ ಅಪೂರ್ಣಗೊಂಡಿದೆ. ಏಕೆಂದರೆ ದೇಗುಲದ ಮುಂಭಾಗವು ಕೇವಲ ಜಗಲಿಯವರೆಗೆ ಕಟ್ಟಲ್ಪಟ್ಟಿದ್ದು, ಹಿಂಭಾಗ ಮಧ್ಯಭಾಗವೆಲ್ಲವೂ ಪೂರ್ತಿಗೊಂಡಿದೆ. ಪ್ರವೇಶದ್ವಾರ, ಸಭಾಮಂಟಪ, ನವರಂಗ, ಮೊಗಶಾಲೆ, ಗರ್ಭಗೃಹಗಳನ್ನು ಹೊಂದಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾಪಥವಿದ್ದು, ಮೇಲ್ಭಾಗದಲ್ಲಿ ಮೇಲ್ಛತ್ತೂ ಕಂಡುಬರುತ್ತದೆ. ಮೇಲೆ ಗೋಪುರ ನಿರ್ಮಾಣವಾಗಿಲ್ಲ. ದೇಗುಲದ ಮೇಲೆ ಕೊಂಬಿನಾಕಾರದಲ್ಲಿ ಕಲ್ಲುಗಳನ್ನು ಜೋಡಿಸಿ ದೇಗುಲದ ಸೌಂದರ್ಯ ಹೆಚ್ಚುವಂತೆ ಮಾಡಿದ್ದಾರೆ. ಇಲ್ಲಿರುವ ಒಂದು ಕಲ್ಲಿನಲ್ಲಿ "ಯಕಲೋ ತಿಮ್ಮ" ಎಂದು ಬರೆಯಲಾಗಿದೆ. ಬಹುತೇಕ ಇದು ಆ ದೇವಾಲಯದ ಶಿಲ್ಪಿಯ ಹೆಸರಾಗಿರಬಹುದು. ಪ್ರವೇಶ ದ್ವಾರದ ಮುಂದಿನ ಭಾಗ ಅಪೂರ್ಣವಾಗಿ ಆದಕ್ಕೆ ಭಕ್ತರು ಜೀರ್ಣೋದ್ಧಾರ ಮಾಡಿ ಕಟ್ಟಿಗೆ ಮಾಡಿಗೆ ಜೋಡಿಸಿ ನಯನಮನೋಹರವಾಗಿಸಿದ್ದಾರೆ.

ದೇವಾಲಯಕ್ಕೆ ಪೂರ್ವ ದಿಕ್ಕಿನಿಂದ ಹಾಗೂ ದಕ್ಷಿಣ ದಿಕ್ಕಿನಿಂದ ಪ್ರವೇಶದ್ವಾರಗಳಿವೆ. ಒಳಪ್ರವೇಶಿಸಿದರೆ ಇಲ್ಲೊಂದು ಭವ್ಯ ಹಾಗೂ ನಯನಮನೋಹರವಾದ ಸಭಾಮಂಟಪವಿದೆ. ಒಟ್ಟು ೧೬ ಕಂಬಗಳಿಂದ ಕೂಡಿದ ಶಿಲಾಮಂಟಪವಾಗಿದ್ದು, ಮಧ್ಯದ ನಾಲ್ಕು ಕಂಬಗಳು ಮಾತ್ರ ಅತೀ ಉತ್ತಮವಾದ ಕುಸುರಿ ಕೆತ್ತನೆಯನ್ನು ಹೊಂದಿವೆ. ೩ ಅಂಕಣಗಳಿಂದ ಚೌಕಾಕಾರ ವಾಗಿ ೨ ಪ್ರತ್ಯೇಕ ಪ್ರವೇಶದ್ವಾರಗಳನ್ನು ಹೊಂದಿದೆ. ನಾಲ್ಕು ಕಂಬಗಳು ಗಜ್ಜರಿ ಗಂಬಗಳಾಗಿವೆ. ಮೇಲೆ ಗಗ್ಗರಿ, ಕೆಳಭಾಗ ಚೌಕಾಗಿದ್ದು ಮಧ್ಯಭಾಗದಲ್ಲಿ ವೃತ್ತಾಕಾರವಾಗಿದೆ. ಕಂಬದ ಮೇಲ್ಭಾಗದಲ್ಲಿ ಅಷ್ಟ ಕೋನಾಕೃತಿಯ ಮೂಲೆಗಳನ್ನು ಕಟೆದು ಅದರ ಕೆಳಗೆ

* ಇತಿಹಾಸ ಉಪನ್ಯಾಸಕ, ಜಿಇಸಿಜಿಕೆ ಹಿರೇಗೌಡ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ರೊಟ್ಟಿಗವಾಡ. ತಾ. ಕುಂದಗೋಳ, ಜಿ. ಧಾರವಾಡ - ೫೮೧ ೧೧೩.

ಗಡಿಗೆಯಾಕಾರದ ಕೆತ್ತನೆ ಇದೆ. ನಂತರ ವೃತ್ತಾಕಾರ ವಾಗಿರುವ ಗಗ್ಗರಿ ಇದ್ದು ಇದರ ಕೆಳಗೆ ಸಪಾಟಾಗಿ ದುಂಡಗಿನ ಸ್ಥಳವಿದೆ. ಇದು ನುಣುಪಾಗಿದೆ. ಕೆಳಭಾಗದಲ್ಲಿ ಹಗ್ಗದ ಹುರಿಗೆಜ್ಜೆ ಸರಪಳಿ ಗಳಿಂದ ಅಲಂಕರಿಸಿದ್ದು ಇದರ ಕೆಳಗಡೆ ಸಪಾಟಾದ ಜಾಗವಿದ್ದು ಅದರಲ್ಲಿ ಹೊಯ್ಸಳರ ಅರಸನೇ ಬಲ್ಲಾಳನ ದೇವಾಲಯದ ಕಂಬದ ಕೆಳಗೆ ಸರ್ವಣ್ಣದಾನ ಮಾಡಿದ ಶಾಸನಗಳನ್ನು ಹೊರಡಿಸಿದ್ದಾನೆ. ಇದರ ಕೆಳಗೆ ಚೌಕಾಕಾರದಲ್ಲಿ ಕಂಬಕ್ಕೆ ಗೆಜ್ಜೆಸರವನ್ನು ಕೆತ್ತಿ ಅಲಂಕರಿಸಿದ್ದಾರೆ. ಇಂತಹ ಮಜ ಭೂತಾದ ನಾಲ್ಕು ಕಂಬಗಳು ಅಲಂಕೃತಗೊಂಡಿವೆ. ಉಳಿದ ೧೨ ಕಂಬಗಳು ಸಪಾಟಾಗಿದ್ದು ಮೇಲೆ ತೊಲೆ, ಬೋದುಗೆಗಳನ್ನು ಹೊತ್ತು ನಿಂತಿವೆ. ಸಭಾ ಮಂಟಪದ ಕೆಳಭಾಗದಲ್ಲಿ ಕಲ್ಲುಗಳನ್ನು ಜೋಡಿಸಿಡಲಾಗಿದೆ. ಮೇಲ್ಛತ್ತಿನಲ್ಲಿ ಅಷ್ಟಕೋನಾಕೃತಿಯ ಗೂಡು ಇದ್ದು ಮಧ್ಯಭಾಗದಲ್ಲಿ ಸಹಸ್ರದಳ ಕಮಲ ಹಾಗೂ ಉತ್ತತ್ತಿ ಯಾಕಾರದ ಕಳಸವಿದೆ. ಕೆಳ ಭಾಗದಲ್ಲಿ ಸಭಾಮಂಟಪದ ಸುತ್ತಲೂ ಪ್ರದಕ್ಷಿಣಾಪಥಕ್ಕೆ ಸ್ಥಳವಿದೆ.

ಸಭಾಮಂಟಪ ದಾಟಿ ಮುಂದೆ ಹೋದರೆ ಮೊಗಶಾಲೆ ಇದೆ. ಇದಕ್ಕೆ ಪ್ರವೇಶ ದ್ವಾರವಿದೆ. ೩ ಅಂಕಣಗಳನ್ನು ಹೊಂದಿದ್ದು ಮಧ್ಯದಲ್ಲಿ ಬಾಗಿಲು, ಹೊಸ್ತಿಲು, ಹಣೆಪಟ್ಟಿ ಚೌಕಟ್ಟು ಸುಂದರವಾಗಿ ಅಲಂಕಾರಗೊಂಡಿವೆ. ಉಳಿದ ಎಡಬಲದ ಅಂಕಣಗಳಲ್ಲಿ ಜಾಲಂಧರ ನಿರ್ಮಿಸಿ ದೇಗುಲಕ್ಕೆ ಬೆಳಕು ಗಾಳಿ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಹೊಸ್ತಿಲನ್ನು ಕೆತ್ತಿದ್ದಾರೆ. ಅಷ್ಟಕೋನಾಕೃತಿಯಲ್ಲಿ ಅಲಂಕಾರಗೊಳಿಸಿದ್ದಾರೆ. ಎಡಬಲದ ಬಾಗಿಲ ಚೌಕಟ್ಟನ್ನು ವಿಶೇಷ ಕೆತ್ತನೆಗಳಲ್ಲಿ ಹಣೆಪಟ್ಟಿಯ ಮಧ್ಯದಲ್ಲಿ ಚೌಕಾಕಾರದ ಕಲ್ಲನ್ನು ಸಪಾಟು ಮಾಡಿದ್ದಾರೆ. ಇಲ್ಲಿಯೂ ಸಹ ಯಾವುದೇ ವಿಗ್ರಹವಿಲ್ಲ. ಇದನ್ನು ದಾಟಿ ಒಳ ಪ್ರವೇಶಿಸಿದರೆ ಸುಖನಾಸಿ ಇದೆ. ಯಾವುದೇ ಅಲಂಕಾರ ಹೊಂದಿಲ್ಲ. ಮುಂದೆ ಗರ್ಭಗೃಹವಿದ್ದು, ಬಾಗಿಲು ಸರಪಳಿಗಳಿಂದ ಅಲಂಕಾರಗೊಂಡಿದೆ. ಮತ್ತು ಕೆಳಗೆ ಹೊಸ್ತಿಲು ಮುಂದಿನ ಹೊಸ್ತಿಲಿನಂತೆಯೇ ಅಷ್ಟಕೋನಾಕೃತಿಯಲ್ಲಿ ಅಲಂಕಾರಗೊಂಡಿದೆ. ಹಣೆಪಟ್ಟಿಯ ಮಧ್ಯಭಾಗದಲ್ಲಿ ಸಪಾಟಾದ ಕಲ್ಲು ಇದ್ದು ಇಲ್ಲಿ ಯಾವುದೇ ವಿಗ್ರಹವಿಲ್ಲ. ಅಂದಿನ ಅರಸರು ಭಕ್ತಿ, ಭಾವ ಶ್ರದ್ಧೆಯಿಂದ ದೇವರಿಗೆ ನಿರ್ಮಿಸಿರುವ ಈ ದೇವಾಲಯದ ಅಂದ ಚಂದವು ವರ್ಣಿಸಲಸದಳವಾಗಿದೆ. ಗರ್ಭಗೃಹದ ಒಳಗೆ ಪ್ರವೇಶಿ ಸಿದರೆ ಶ್ರೀ ಸ್ವಯಂಭುದೇವರ ಲಿಂಗವನ್ನು ಪ್ರತಿಷ್ಠಾಪಿ ಸಲಾಗಿದೆ. ಆದರೆ ಇದರ ಬಾಣವು ತ್ರುಟಿತಗೊಂಡಿದ್ದು, ಭಕ್ತರು ಜೀರ್ಣೋ ದ್ಧಾರಗೊಳಿಸಿ ಹೊಸ ಬಾಣವನ್ನು ನಿರ್ಮಿಸಿದ್ದಾರೆ. ವಿಗ್ರಹವು ಪೀಠ ಜಲಹರಿಯನ್ನು ಮಾತ್ರ ಹೊಂದಿದೆ. ಶಾಂತಿಯಿಂದ ಒಪ್ಪ ಮಾಡಿ ಪೂಜೆಗೆ ಅನುವು ಮಾಡಿದ್ದಾರೆ. ಈಗ ಭಕ್ತರು ನೂತನವಾಗಿ ಹಿತ್ತಾಳಿಯ ವಿಗ್ರಹದ ಮುಖವಾಡ ಜೋಡಿಸಿದ್ದಾರೆ. ಗರ್ಭಗೃಹದ ಮೇಲ್ಛತ್ತಿನಲ್ಲಿ ಅಷ್ಟಕೋನಾಕೃತಿಯಲ್ಲಿ ಗೂಡನ್ನು ನಿರ್ಮಿಸಿದ್ದಾರೆ. ಇದರ ಮಧ್ಯಭಾಗದಲ್ಲಿ ಸುಂದರವಾದ ಸಹಸ್ರದಳ ಕಮಲವಿದೆ. ಕಮಲವು ಸುಂದರವಾಗಿ ಅರಳಿದ ಭಂಗಿಯಲ್ಲಿದ್ದು ಮಧ್ಯದಲ್ಲಿ ಕಳಸದಾಕಾರದ ಮೊಗ್ಗು ಇದೆ. ಗರ್ಭಗೃಹದಲ್ಲಿ ನಿಂತು ಮೇಲೆ ನೋಡಿದರೆ ಅದು ಚಿತ್ತಾಕರ್ಷಕವಾಗಿದೆ. ೪ ಕಂಬಗಳ ಶಿಲಾ ಮಂಟಪದ ಮಧ್ಯದಲ್ಲಿದ್ದ ಈ ಗರ್ಭಗೃಹವು ಅಭಿಷೇಕದ ನೀರು ಹೊರ ಹೋಗಲು ಗೋಡೆಯಿಂದ ಹೊರಗೆ ೩೩" ಉದ್ದದ ವಿಶೇಷವಾದ ಜಲಹರಿ ಇದೆ. ಗರ್ಭಗೃಹ ಪಶ್ಚಿಮದ ಗೋಡೆಯಲ್ಲಿ ೪ ಎತ್ತರ, ೮ ಉದ್ದವಾದ ಜಗುಲಿಯನ್ನು ನಿರ್ಮಿಸಿದ್ದಾರೆ. ಬಹು ತೇಕ ಇಲ್ಲಿ ಶ್ರೀ ವಿಘ್ನೇಶ್ವರ ವಿಷ್ಣು ಶಿವನ ವಿಗ್ರಹಗಳನ್ನು ಪ್ರತಿಷ್ಠಾಪಿ ಸಲು ಯೋಜನೆ ಇರಬೇಕು. ೧೦" ಅಗಲವಾಗಿರುವ ಚೌಕಾಕಾರ ವಾದ ಗರ್ಭಗೃಹವು ಮಜಭೂತಾಗಿರುವುದು ಈ ದೇವಾಲಯದ ನಿರ್ಮಾಣಕ್ಕೆ ಸಾಕ್ಷಿಯಾಗಿದೆ. ಪೀಠದ ಜಲಹರಿಯು ಸುಮಾರು ೪೫" ಉದ್ದವಾಗಿದೆ. ಪೀಠದ ಚೌಕವು ೨೮" ಚೌಕೋನಾಕೃತಿ ಯಲ್ಲಿದ್ದು, ನೋಡಲು ಸುಂದರವಾಗಿದೆ.

ಶ್ರೀ ಶಂಭುಲಿಂಗ ದೇವಾಲಯವು ಮಜಭೂತಾದ ೨೮ ಕಂಬಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ತಯಾರಿಸಿದ ಶಿಲಾಮಂಟಪವಾಗಿದೆ. ಇಲ್ಲಿ ಶಿಲ್ಪಿಯು ಗೋಡೆಗಳ ನಿರ್ಮಾಣಕ್ಕೆ ಕಲ್ಲನ್ನು ಬಳಸಿರಬಹುದು. ಆದರೆ ಕೆಲ ಭಾಗಗಳು ಕೇವಲ ಕಲ್ಲಿನಿಂದ ಮಾತ್ರ ನಿರ್ಮಾಣಗೊಂಡಿದ್ದರಿಂದ ಹೆಚ್ಚಿನ ಬಳಕೆಯ ಅವಶ್ಯಕತೆ ಕಂಡುಬಂದಂತಿಲ್ಲ. ದೇವಾಲಯವು ೪೫'+೧೫'=೬೦' ಉದ್ದವಾಗಿದ್ದು, ಉಳಿದ ಭಾಗ ಅಪೂರ್ಣವಾಗಿರುವ ಸ್ಥಳವು ೧೫" ಉದ್ದವಿದೆ. ಒಟ್ಟು ಉದ್ದ ೬೦', ೩' ಎತ್ತರದ ಜಗಲಿಯ ಮೇಲೆ ನಿರ್ಮಾಣಗೊಂಡಿದೆ. ದೇವಾಲಯದ ಎತ್ತರ ೧೦' ಇದ್ದು, ಇದರ ಮೇಲೆ ಮೇಲ್ಛತ್ತು (ಕುಂಬಿ) ಇದೆ. ದೇಗುಲದ ಮೇಲ್ಛತ್ತು ಚೌಕಾಕಾರದಲ್ಲಿದ್ದು, ಒಳಭಾಗದಲ್ಲಿ ಅಂದರೆ ಮೇಲೆ ಮಧ್ಯಭಾಗದಲ್ಲಿ ಎತ್ತರವಾಗಿ ಹೊರಕ್ಕೆ ಇಳಿಜಾರಾಗಿದೆ. ಇದು ಮಳೆಯ ನೀರನ್ನು ಹೊರಕಳುಹಿಸುವುದಕ್ಕಾಗಿ ನಿರ್ಮಿಸಲಾಗಿದೆ. ಕುಂಬಿಗೆ ಸುತ್ತಲೂ ಕಮಾನಿನಾಕಾರದ ಕಲ್ಲುಗಳನ್ನು ಜೋಡಿಸಿ ಅಂದವನ್ನು ದ್ವಿಗುಣ ಗೊಳಿಸಿದ್ದಾರೆ. ದೂರದಿಂದ ದೇವಾಲಯ ನೋಡಿದರೆ ಈ ಕುಂಬಿಯ ಕಲ್ಲುಗಳು ಕಮಲದಾಕಾರದಂತೆ ಕಂಡುಬರುತ್ತಿವೆ.

ಗರ್ಭಗೃಹದ ಹಿಂಭಾಗದ ಮೇಲ್ಛತ್ತಿನಲ್ಲಿ ೯ ಕಮಾನಿನಾ ಕಾರದ ಕಲ್ಲುಗಳನ್ನು ಜೋಡಿಸಿ ಗೋಡೆಗೆ ರಕ್ಷಣೆ ನೀಡಲಾಗಿದೆ. ಇದರಲ್ಲಿ ಒಂದು ಕಮಾನಿನಲ್ಲಿ **'ಯಕಲೋ ತಿಮ್ಮ'** ಎಂದು ಹಳೆಗನ್ನಡದಲ್ಲಿ ಶಾಸನದ ರೂಪದಲ್ಲಿ ಅಕ್ಷರಗಳನ್ನು ಕೊರೆಯ ಲಾಗಿದೆ. ಇದು ಬಹುತೇಕ ದೇವಾಲಯ ನಿರ್ಮಿಸಿದ ಶಿಲ್ಪಿಯ ಹೆಸರಾಗಿರಬಹುದು. ಆದರೆ ಸ್ಥಳೀಯ ಜನರು ಈ ಹೆಸರಿರುವ ಕಲ್ಲಿನ ಕೆಳಭಾಗದಲ್ಲಿ ಅಪಾರ ಸಂಪತ್ತು ಬಂಗಾರ ಅಡಗಿದೆ ಎಂದುಕೊಂಡಿದ್ದಾರೆ.

ದೇವಾಲಯದ ಮೇಲೆ ಹೋಗಲು ಮಜಭೂತಾದ ಕಲ್ಲುಗಳ ಸುಮಾರು ೧೫ ಪಾವಟಿಗೆಗಳಿವೆ. ಇತ್ತೀಚಿನ ದಿನಗಳಲ್ಲಿ

ಭಕ್ತರು ದೇವಾಲಯದ ಮೇಲ್ಛತ್ತಿನಲ್ಲಿ ಸಭಾಮಂಟಪದ ಮೇಲೆ ಪ್ರತ್ಯೇಕವಾದ ಕೋಣೆಯನ್ನು ನಿರ್ಮಿಸಿ ಅದರಲ್ಲಿ ಭಜನೆ ಮಾಡುತ್ತಿದ್ದಾರೆ. ಇದು ಸಹ ಗಟ್ಟಿಮುಟ್ಟಾಗಿದ್ದು, ದೇವಾಲಯಕ್ಕೆ ಮೆರುಗು ತಂದಂತಿದೆ.

ಈಗಾಗಲೇ ತಿಳಿಸಿರುವಂತೆ ದೇಗುಲವು ಪ್ರತ್ಯೇಕವಾದ ೨ ಪ್ರವೇಶದ್ವಾರಗಳನ್ನು ಹೊಂದಿದೆ. ಪೂರ್ವಕ್ಕೆ ಒಂದು ಸುಮಾರು ೫' ಎತ್ತರ ೩' ಅಗಲವಾಗಿರುವ ಬಾಗಿಲು, ಇನ್ನೊಂದು ದಕ್ಷಿಣ ದಿಕ್ಕಿನಲ್ಲಿದೆ. ಇದು ೫' ಎತ್ತರ ೩' ಅಗಲವಾಗಿದ್ದು, ಇದು ದ್ವಾರಪಾಲಿಕೆಯರ ವಿಗ್ರಹಗಳನ್ನು ಹೊಂದಿದೆ. ಎಡಬಲದಿಂದ ಚೌಕಟ್ಟು ಹಣೆಪಟ್ಟಿಗಳು ಅಲಂಕಾರ ಹೊಂದಿರುವುದಿಲ್ಲ.

ಬಹುತೇಕವಾಗಿ ಬೆಂತೂರು ಗ್ರಾಮವು ಮೊದಲು ಅಗ್ರಹಾರ ವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಆದರೆ ವಿದ್ಯಾರ್ಥಿಗಳ ಪಾಠಕ್ಕೆ ದೇವಾಲಯವನ್ನೇ ಬಳಸಿರುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತವೆ. ಬೆಳ್ವೊಲ ೨೦೦ರ ಆಳ್ವಿಕೆಯಲ್ಲಿ ಇದೊಂದು ಶಿಕ್ಷಣ ಕೇಂದ್ರವಾಗಿತ್ತೆಂದೂ ವಿದಿತವಾಗುತ್ತಿದೆ.



ಈ ಗ್ರಾಮದಲ್ಲಿ ಮಹಾಸತಿಕಲ್ಲು ವೀರಗಲ್ಲುಗಳು ಕಂಡು ಬರುತ್ತಿವೆ. ದೇವಾಲಯದ ಎದುರಿಗೆ ಮಜಭೂತಾದ ಮಸ್ತಟ್ಟಾದ ದೀಪಸ್ತಂಭವನ್ನು ನಿರ್ಮಿಸಲಾಗಿದೆ. ಸುಮಾರು ೫' ಎತ್ತರವಾದ ೧೦' ಚೌಕಾಕಾರವಾದ ಜಗುಲಿಯ ಮೇಲೆ ಸುಮಾರು ೩೫ ಎತ್ತರವಾದ ಕಲ್ಲಿನ ಕಂಬವನ್ನು ನಿರ್ಮಿಸಲಾಗಿದೆ. ಕಲ್ಯಾಣಿ ಚಾಲುಕ್ಯರ ಶಾಸನದಲ್ಲಿ ಚಾಲುಕ್ಯರ ರಾಣಿ ಜೇಕಬ್ಬೆಯ ಸಹೋದರಿ ವೈಜಕಬ್ಬೆಯು ಈ ಕಂಬವನ್ನು ನಿಲ್ಲಿಸಿ ಅದಕ್ಕೆ ಭೂದಾನ ನೀಡಿದ ಉಲ್ಲೇಖವಿದೆ. ಸ್ತಂಭವು ಶ್ರೀ ದೇವರಗುಡಿಯ ಪೂರ್ವ ದಿಕ್ಕಿನಲ್ಲಿದೆ. ಇದು ಹಿಂದೆ ರಾತ್ರಿವೇಳೆಯಲ್ಲಿ ಹಾಗೂ ಕಾರ್ತಿಕ ಮಾಸದಲ್ಲಿ ಶ್ರೀ ಶಂಭುಲಿಂಗೇಶ್ವರ ದೇವರಿಗೆ ದೀಪಾಲಂಕಾರ ಮಾಡಲು ನಿರ್ಮಿ ಸಿದ್ದಾಗಿದೆ. ಅಷ್ಟಕೋನಾಕೃತಿಯಲ್ಲಿ ನಿರ್ಮಿಸಿದ್ದು, ಎಡಬಲಗಳಲ್ಲಿ ದೀಪಗಳನ್ನಿರಿಸಲು ಕಟೆದಿದ್ದಾರೆ. ಮೇಲ್ಭಾಗದಲ್ಲಿ ಗಡಿಗೆಯಾಕಾರದ ಸುಂದರ ಕೆತ್ತನೆ ಮಾಡಿ ದೊಡ್ಡ ದೀಪವನ್ನು ಅಲ್ಲಿಡಲು ಅವಕಾಶ ಕಲ್ಪಿಸಿದ್ದಾರೆ. ಅಲ್ಲಿಯೇ ಶಿವಪಾರ್ವತಿಯರ ವಿಗ್ರಹ ನಿರ್ಮಾಣ ಮಾಡಿರುವುದು ತಿಳಿದುಬರುತ್ತದೆ. ಕೆಳಗೆ ಸಾಲುಭಂಜಿಕೆಯರ ವಿಗ್ರಹಗಳಿವೆ.*

ಅಂತೂರಿನ ಶ್ರೀ ನಾರಾಯಣ ದೇವರಗುಡಿ

ಬೆಂತೂರಿಗೆ ಹೊಂದಿಕೊಂಡಿರುವ ಮತ್ತೊಂದು ಹಳ್ಳಿ ಅಂತೂರು. ಒಂದೇ ಊರಾದರೂ ಸಹ ಕಂದಾಯ ಗ್ರಾಮಗಳು ಬೇರೆಬೇರೆಯಾಗಿವೆ. ಇಲ್ಲಿಯೂ ಪ್ರಾಚೀನ ಅವಶೇಷಗಳು ನೆಲೆಗೊಂಡಿವೆ. ಇಲ್ಲಿ ನಾರಾಯಣ ದೇವರ ಗುಡಿ ಇದೆ. ಇದೂ ಸಹ ಕಲ್ಯಾಣಿ ಚಾಲುಕ್ಯರ ಕಾಲದ ದೇಗುಲವಾಗಿದೆ. ಪೂರ್ವಾಭಿ ಮುಖವಾಗಿದ್ದು, ವಿಶಾಲವಾದ ಹಜಾರ ಪ್ರಾಂಗಣ, ಪ್ರದಕ್ಷಿಣಾ ಪಥ ಹೊಂದಿದೆ. ಆದರೆ ಇಲ್ಲಿ ಕೇವಲ ಗರ್ಭಗೃಹವನ್ನು ಮಾತ್ರ ನಿರ್ಮಿಸಿದ್ದಾರೆ. ದೇಗುಲ ಅಪೂರ್ಣಗೊಂಡಿದೆ. ಇದೊಂದು ಸುಂದರವಾದ ನಾಲ್ಕು ಕಂಬಗಳ ಶಿಲಾಮಂಟಪವಾಗಿದೆ. ಗರ್ಭಗೃಹದ ಪ್ರವೇಶದ್ವಾರವು ಎಡಬಲದ ಬಾಗಿಲ ಚೌಕಟ್ಟುಗಳು ಅಷ್ಟಕೋನಾಕೃತಿಯಲ್ಲಿ ಅಲಂಕಾರಗೊಂಡಿದೆ. ಹಣೆಪಟ್ಟಿಯಲ್ಲಿ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿದ್ದಂತೆಯೇ ಸಪಾಟಾದ ಕಲ್ಲಿನ ಚೌಕನ್ನು ನಿರ್ಮಿಸಿದ್ದಾರೆ. ಕಂಬಗಳು ತಳಭಾಗದಲ್ಲಿ ಚೌಕ ಹಾಗೂ ಮೇಲೆ ವೃತ್ತಾಕಾರವಾಗಿವೆ. ತೊಲೆ ಬೋದುಗೆಗಳನ್ನು ಹೊತ್ತು ನಿಂತಿವೆ. ದೇವಾಲಯದ ಪ್ರವೇಶದ್ವಾರ ಪ್ರತ್ಯೇಕವಾಗಿದೆ. ಮೇಲ್ಛತ್ತಿನಲ್ಲಿ ಮಧ್ಯಭಾಗದಲ್ಲಿ ಸಹಸ್ರದಳ ಕಮಲವಿದೆ. ಇಲ್ಲಿರುವ ಕಂಬಗಳು ಷಟ್ಕೋನಾಕೃತಿಯಲ್ಲಿವೆ. ಕಂಬಗಳ ಮೇಲೆ ಗಗ್ಗರಿಯಾಕಾರದಲ್ಲಿದೆ.

ಗರ್ಭ ಗೃಹದ ಮಧ್ಯಭಾಗದಲ್ಲಿ ಶಿವಲಿಂಗದ ಪೀಠವಿದ್ದು, ಅದರ ಮೇಲೆ ಶ್ರೀ ನಾರಾಯಣದೇವರ, ವಿಗ್ರಹವನ್ನು ಪ್ರತಿಷ್ಠಾಪಿ ಸಲಾಗಿದೆ. ಆದರೆ ತಳಭಾಗದ ಪೀಠವು ಜೈನ ತೀರ್ಥಂಕರ ಪೀಠ ವಾಗಿದ್ದು, ಪೀಠದ ಮಧ್ಯದಲ್ಲಿ ಅಶ್ವಸಿಂಹಗಳು ಕಂಡುಬರುತ್ತಿವೆ. ಇದು ಬಹುತೇಕ ಸ್ಥಾನಪಲ್ಲಟವಾಗಿರಬಹುದು. ಇಲ್ಲಿ ಮೊದಲು ಜೈನ ಧರ್ಮದ ತೀರ್ಥಂಕರ ವಿಗ್ರಹವಿದ್ದಿರಬಹುದು.

ಶ್ರೀ ನಾರಾಯಣ ದೇವರು ಚತುರ್ಭುಜ ಹೊಂದಿದ್ದು, ನಿಂತ ಭಂಗಿಯಲ್ಲಿದೆ. ಗದೆ, ಶಂಖ, ಚಕ್ರಗಳಿವೆ. ತಲೆಗೆ ಮಣಿಮುಕುಟ, ಹಿಂದೆ ಪ್ರಭಾವಳಿಯಲ್ಲಿ ಸುತ್ತಲೂ ಲಕ್ಷ್ಮಿ, ಗಜಲಕ್ಷ್ಮಿ, ಆಮೆ, ಲಕ್ಷ್ಮೀನಾರಾಯಣರ ವಿಗ್ರಹಗಳಿವೆ. ಶ್ರೀ ದೇವರು ಹರವಾದ ಎದೆ, ನೀಳವಾದ ದೇಹ ಆಕರ್ಷಣೀಯ ಮುಖವನ್ನು ಹೊಂದಿದೆ. ಎಡಬಲಗಳಲ್ಲಿ ಸೇವಕಿಯರು ನಿಂತಭಂಗಿ ಯಲ್ಲಿದ್ದು, ಕೈಗಳಲ್ಲಿ ಅಮೃತ ಕಲಶಗಳನ್ನು ಹಿಡಿದಿದ್ದಾರೆ. ವಿಗ್ರಹವು ೩'-೬' ಎತ್ತರ ೨' ಅಗಲ ಪೀಠ ೨೬' ಎತ್ತರವಾಗಿದೆ. ವಿಗ್ರಹಕ್ಕೆ ಪ್ರತ್ಯೇಕವಾದ ಪೀಠ ಜೋಡಿಸಲಾಗಿದೆ.

ಅಂತೂರಿನ ಶ್ರೀ ಹನುಮಂತ ದೇವರ ಗುಡಿಯು ಪ್ರಚ್ಯಾವಶೇಷಗಳ ತಾಣವಾಗಿದೆ. ಅಂದರೆ ಆಸೀನ ಭೈರವ, ಗಜಲಕ್ಷ್ಮಿ ವಿಗ್ರಹ, ನಾಗದೇವತೆ, ನಂದಿ ವಿಗ್ರಹ, ಶಿವಲಿಂಗ, ತ್ರುಟಿತ ಲಕ್ಷ್ಮೀ ವಿಗ್ರಹ, ಗಣಪತಿ ಸ್ತಂಭ ಶಾಸನಗಳ ಸಾಲು

ಭಂಜಿಕೆಯರ ಮೂರ್ತಿಗಳಿವೆ. ಇವೆಲ್ಲವುಗಳು ದೇವಾಲಯದ ಆವರಣದಲ್ಲಿ ಕಲೆ ಹಾಕಿದಂತಾಗಿವೆ.

ಗಜಲಕ್ಷ್ಮೀ ವಿಗ್ರಹ

ಇದೊಂದು ಅಭೂತಪೂರ್ವವಾದ ವಿಗ್ರಹ. ಇದನ್ನು ಅಂತೂರಿನ ಶ್ರೀ ಹನುಮಂತ ದೇವರ ದಕ್ಷಿಣದ ರಕ್ಷಣಾ ಗೋಡೆಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಸ್ಥಳೀಯವಾಗಿ ಇದನ್ನು **ಮೂರ್ತಿಕಲ್ಲು** ಎಂದು ಕರೆಯುತ್ತಾರೆ. ಬೃಹದಾಕಾರವಾದ ಸಾಪುಗಲ್ಲಿನಲ್ಲಿ ಉಬ್ಬು ಚಿತ್ರಣದಲ್ಲಿ ಕೆತ್ತನೆ ಮಾಡಿದ್ದಾರೆ. ಸುಮಾರು ೧೧-೧೨ನೇ ಶತಮಾನಕ್ಕೆ ಸಂಬಂಧಿಸಿದ ಈ ಗಜಲಕ್ಷ್ಮೀ ವಿಗ್ರಹವು ನೋಡಲು ನಯನ ಮನೋಹರವಾಗಿದೆ. ವಿಗ್ರಹದ ಒಟ್ಟು ಅಗಲ ೫'-೯', ಎತ್ತರ ೨'-೯' ಇದೆ. ಈ ಕಲ್ಲಿನಲ್ಲಿ ಎಡಬಲದಲ್ಲಿ ಎರಡೆರಡು ಆನೆಗಳು ಒಟ್ಟು ಐದು ಆನೆಗಳಿವೆ. ಆನೆಗಳು ಮುಂಗಾಲುಗಳನ್ನು ಮೇಲೆತ್ತಿ ಸೊಂಡಿಲಿನಲ್ಲಿ ಚಾಮರ ಹಿಡಿದಿವೆ. ಶ್ರೀ ದೇವರಿಗೆ ವಿಧೇಯವಾಗಿ ಚೌರಿ ಚಾಮರಗಳನ್ನು ಹಿಡಿದು ಗಾಳಿಯನ್ನು ಬೀಸುತ್ತಿವೆ. ಒಂದು ಆನೆ ಸೊಂಡಿಲಿನಲ್ಲಿ ಕುಂಬ ಹಿಡಿದು ಶ್ರೀ ಲಕ್ಷ್ಮಿಗೆ ಕ್ಷೀರಾಭಿಷೇಕ ಮಾಡುವಂತಿದೆ. ಎಲ್ಲ ಗಜಗಳ ಕೊರಳಲ್ಲಿ ಗೆಜ್ಜೆಸರ ಗಂಟೆ, ಬೆನ್ನಿಗೆ ಜೂಲ, ಹಣೆಗೆ ಹಣೆಪಟ್ಟಿ ಗುಮರಿ ಮೊದಲಾದ ಅಲಂಕಾರವನ್ನು ಹೊಂದಿದೆ. ಮೊದಲಿನ ೨ ಆನೆಗಳನ್ನು ಕೂಲಂಕಷವಾಗಿ ವೀಕ್ಷಿಸಿದರೆ ದೇವಿಯ ಕಿರೀಟದ ಮೇಲೆ ತಮ್ಮ ಸೇವೆಯನ್ನು ಸಮರ್ಪಿಸುವಂತೆ ಕಂಡುಬರುತ್ತದೆ.

ಐದು ಆನೆಗಳ ಮಧ್ಯದಲ್ಲಿ ಲಕ್ಷ್ಮೀದೇವಿ ಆಸೀನಳಾಗಿದ್ದಾಳೆ. ವಿಗ್ರಹ ಕುಳಿತ ಭಂಗಿಯಲ್ಲಿದ್ದು, ಪದ್ಮಾಸನದಲ್ಲಿದೆ. ಚತುರ್ಭುಜಗಳನ್ನು ಹೊಂದಿದ್ದಾಳೆ. ವಿಗ್ರಹದ ಎತ್ತರ ೨೪' ಹಾಗೂ ಅಗ
೧೦' ಇದೆ. ಕಿರಿದಾದ ನಡ, ಉಬ್ಬಿದೆದೆ, ಅಗಲವಾದ ಭುಜ
ನೀಳವಾದ ದೇಹ, ದುಂಡಗಿನ ಮುಖ, ತಲೆಯ ಮೇಲೆ ವಜ್ರಖಚಿ
ಕಿರೀಟವಿದ್ದು, ಒಂದು ಅಡಿ ಎತ್ತರದ ಪೀಠದ ಮೇಲೆ ಕುಳಿತಿದ್ದಾಳೆ
ನಡದಲ್ಲಿ ಸೀರೆಯ ನೀರಿಗೆ ಭುಜದಲ್ಲಿ ಸೀರೆಯ ಸೆರಗು, ರಪಿಕೆಗಳನ
ಧರಿಸಿದ್ದಾಳೆ. ವಿಗ್ರಹವು ನೋಡಲು ಚಿತ್ತಾಕರ್ಷಕವಾಗಿದೆ.

ಎಲ್ಲ ಗಜಲಕ್ಷ್ಮಿ ವಿಗ್ರಹಗಳಲ್ಲಿರುವಂತೆ ವಿಗ್ರಹದ ಸುತ್ತಲೂ
ದುಂಡಗಿನ ಪಟ್ಟಿಯನ್ನು ಕೆತ್ತಲಾಗಿದೆ. ಆದರೆ ಈ ವಿಗ್ರಹದ
ವೈಶಿಷ್ಟ್ಯವೇನೆಂದರೆ ಆನೆಗಳ ಹಿಂಭಾಗದಲ್ಲಿ ಎಡಬಲಗಳಲ್ಲಿ
ಸೇವಕಿಯರ ಸ್ಥಾನಕ ವಿಗ್ರಹಗಳಿರುವುದಾಗಿದೆ. ೨ ಭುಜಗಳನ್ನು
ಹೊಂದಿದ್ದು, ಒಂದು ಕೈಯಲ್ಲಿ ಚವರಿ, ಮತ್ತೊಂದು ಕೈಯಲ್ಲಿ
ಅಮೃತ ಕಳಸವನ್ನು ಹಿಡಿದಿದ್ದಾರೆ. ಎರಡು ವಿಗ್ರಹಗಳು
ಆಕರ್ಷಣೀಯವಾಗಿವೆ. ಗಜಲಕ್ಷ್ಮಿ ಶಿಲೆಯ ಎಡಕ್ಕೆ ನಾಗರರೇಖೆ
ಹಾಗೂ ಆಸೀನ ಭೈರವ (ಸ್ಥಾನಕ ಭೈರವ) ಬಲಗಡೆ
ಸಾಲುಭಂಜಿಕೆಯರ ವಿಗ್ರಹಗಳಿವೆ.

ಇದಲ್ಲದೇ ಈ ಗ್ರಾಮದಲ್ಲಿ ಪವಾಡ ಪುರುಷರೆನ್ನಲಾದ ೨೦೦ ವರ್ಷ ಬಾಳಿದ ಶ್ರೀ ಬೂದಿಸ್ವಾಮಿಗಳ ಮಠ, ಗ್ರಾಮದೇವತೆ, ಶ್ರೀ ಪಾಂಡುರಂಗ, ಶ್ರೀ ಬಸವಣ್ಣ ಗುಡಿ, ಶ್ರೀ ಗಡದೇಶ್ವರ ಮಠ, ಶ್ರೀ ತೋಟದಸ್ವಾಮಿ ಮಠ, ಶ್ರೀ ಸಿದ್ದೇಶ್ವರ ಮಠ, ಗುರಿಲಿಂಗಯ್ಯನ ಮಠ ಹಾಗೂ ಬೃಹದಾಕಾರವಾದ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾದ ಶ್ರೀ ಮಾರುತಿ ದೇವಸ್ಥಾನಗಳು ಕಂಡುಬರುತ್ತವೆ.**

ಕೃತಜ್ಞತಾ ಟಿಪ್ಪಣಿಗಳು

* (ಈ ದೇಗುಲದ ಸಂಶೋಧನೆ ಕಾರ್ಯಕ್ಕೆ ಸರ್ವಸಹಾಯ ಮಾಡಿದ ಸರ್ವಶ್ರೀ ಪಕ್ಕೀರಪ್ಪ ನೀಲಪ್ಪ ಕುರುಬರ, ವೇ. ಮೂ. ಶ್ರೀ ಮುಪ್ಪಯ್ಯ ಪಕ್ಕೀರಯ್ಯ ಬೆಟಗೇರಿಮಠ, ವೆಂಕಟರೆಡ್ಡಿ ಉಮಚಗಿ, ನಿಂಗಪ್ಪ ಪ್ರ. ಕುರುಬರ, ಶಿವಪುತ್ರಪ್ಪ. ಯ. ಪೂಜಾರ, ಜಗದೀಶ್ವರಯ್ಯ, ಸಿ. ಹಿರೇಮಠ ಇವರೆಲ್ಲರ ಸೇವೆಗೆ ಕೃತಜ್ಞತೆಗಳು.)

** (ವಿಗ್ರಹ ಸಂಶೋಧನೆಗೆ ಸಹಾಯ ಮಾಡಿದ ಸರ್ವಶ್ರೀ ಕುರುಬರ, ಮಹಾದೇವಪ್ಪ, ಮುದೆಪ್ಪನವಟ ದೇವಿಂದ್ರಪ್ಪ, ಅಣ್ಣೀಗೇರಿ, ಮಹಾದೇವಪ್ಪ, ಭೈರಪ್ಪ, ಬಸವಣ್ಣೆಪ್ಪ ಮಜ್ಜಿಗುಡ್ಡ, ಎಸ್. ಸಿ. ತಬನೂರ, ಪ್ರಾಚಾರ್ಯರಾದ ಎ. ಎಲ್. ಪೊಲೀಸ ಪಾಟೀಲ, ಸಿ. ಎಂ. ತಬನೂರು ಇವರಿಗೆ ಕೃತಜ್ಞತೆಗಳು.)

ಡಾ|| ಎಸ್. ಎಂ. ನಾಗಭೂಷಣ*

ಸೊಮ್‌ಪುರದ ಸೋಮನಾಥ ದೇವಾಲಯ

ಚಿಕ್ಕಮಂಗಳೂರು ಜಿಲ್ಲೆಯ ತರೀಕೆರೆಯಿಂದ ಪಶ್ಚಿಮಕ್ಕೆ ಲಕ್ಕವಳ್ಳಿ ರಸ್ತೆಯಲ್ಲಿ ೧೫ ಕಿಲೋ ಮೀಟರ್ ಅಂತರದಲ್ಲಿ ರುವ ಸೊಮ್‌ಪುರ ಭದ್ರಾನದಿಯ ದಕ್ಷಿಣದ ದಂಡೆಯಲ್ಲಿರುವ ಒಂದು ಪ್ರಾಚೀನ ಗ್ರಾಮ. ಈಗ ಬೇಚಾರಕ್ ಆಗಿದೆ. ಹೊಯ್ಸಳರ ಶಿಲಾಶಾಸನದಲ್ಲಿ ಈ ಗ್ರಾಮವನ್ನು "ಸೋಮನಾಥ ಪುರ" ವೆಂದು ಉಲ್ಲೇಖಿಸಿದೆ. ಸಮೀಪದಲ್ಲಿ ಪಾಳು ಬಿದ್ದ ನರಸಿಂಹ ದೇವಾಲಯದ ಆವರಣ ದಲ್ಲಿನ, ಶಕವರ್ಷ ೧೨೪೭ರ ಶಿಲಾಶಾಸನದಲ್ಲಿ "ನರಸಿಂಹ ಪುರ"ವೆಂದು, ಸಿಂಗಾಪುರವೆಂದು ಉಲ್ಲೇಖಿಗಳಿವೆ. ಹಲಸೂರು ಗ್ರಾಮ ಶಾಸನದಲ್ಲಿ ಹಲಸೂರ ಶ್ರೀಸೋಮನಾಥ ದೇವರೆಂದು ಉಲ್ಲೇಖಗಳಿವೆ. ಆದರೆ ಈಗ ಈ ಪ್ರದೇಶವನ್ನು ಈ ದೇವರ ಹೆಸರಿಂದ "ಸೊಮ್‌ಪುರ" ವೆಂದೇ ಕರೆಯುತ್ತಾರೆ. ಈ ದೇವಾಲ ಯದ ಸಮೀಪದಲ್ಲಿ ಸಂಪೂರ್ಣವಾಗಿ ಪಾಳು ಬಿದ್ದಿರುವ ನರಸಿಂಹ ದೇವಾಲಯವಿದೆ. ಈ ಎರಡು ದೇವಾಲಯ




ಗಳು ಪಾಳು ಬಿದ್ದು ಅನೇಕ ವಿಗ್ರಹಗಳು ಶಿಥಿಲವಾಗಿ ಹೊರಗಡೆ ಬಿದ್ದಿವೆ. ಆದರೆ ಈಗ ಈ ಸೋಮನಾಥ ದೇವಾಲಯದಲ್ಲಿ "ದತ್ತಾತ್ರೇಯ" ದೇವಾಲಯವೆಂದು ಪೂಜಿಸುತ್ತಿರುವುದು ಕುತೂಹಲಕರವಾಗಿದೆ. ಶಿಲಾಶಾಸನಗಳಲ್ಲಿ ಈ ಉಲ್ಲೇಖವಿಲ್ಲ. ಆದರೆ ಈಗಿರುವ ಪೀಠ ಲಿಂಗದಲ್ಲಿ ದತ್ತಾತ್ರೆಯ "ಬಿಂಬ"ವಿದೆ; ಲಿಂಗದಲ್ಲಿ ದತ್ತಾತ್ರೇಯ ಉಬ್ಬುಶಿಲ್ಪವಿದೆ.

ಈ ದೇವಾಲಯದ ಸುತ್ತಲೂ ಪಾಳುಬಿದ್ದ ಪ್ರಾಕಾರವಿದ್ದು ಪಶ್ಚಿಮಾಭಿಮುಖವಾಗಿರುವ ದೇವಾಲಯ, ಗರ್ಭಗೃಹ, ನವರಂಗ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದ ಮೇಲಿನ ಗೋಪುರ ದ್ರಾವಿಡ ನಾಗರ ಶೈಲಿಯಲ್ಲಿದೆ.

ಸೊಮ್‌ಪುರ ಸೋಮೇಶ್ವರ ದೇವಾಲಯದ ಆವರಣದ ಹಿಂಭಾಗಲ್ಲಿ ಪ್ರವೇಶಿಸುತಿದ್ದಂತೆ. ಹೊರ ಭಾಗದಲ್ಲಿ ಅನೇಕ ಭಗ್ನ ಅವಶೇಷಗಳು ಕಾಣುತ್ತವೆ. ಬಲಭಾಗದಲ್ಲಿ ಬಯಲು ಗಣಪತಿ, ಬಹಳ ಸುಂದರ ಸುಖಾಸನದಲ್ಲಿರುವ ಅಲಂಕೃತ ಗಣಪತಿ ಹೊಯ್ಸಳ ಕಾಲದ ಶಿಲ್ಪವೆಂದು ಸುಲಭವಾಗಿ ಹೇಳಬಹುದು. (ಚಿತ್ರ-೧) ಈ ಮೊದಲು ಇದಕ್ಕೆ ಮಂಟಪವಿದ್ದಂತೆ ತೋರುತ್ತದೆ. ನಾಲ್ಕು ಕಂಭಗಳು ಮಧ್ಯದಲ್ಲಿ ಇದೆ, ಮಂಟಪ ಹಾಳಾಗದೆ ಸು. ೭ ಅಡಿ ಎತ್ತರದ ಈ ಬೃಹದ ಗಣಪ ಬಹಳ ವಿರಳ ಇದರ ಸುತ್ತಲು ಶಿಥಿಲ ವಿಗ್ರಹಗಳು ದ್ವಾರಪಾಲಕ, ಮುಂತಾದವು ಬಿದ್ದಿವೆ. ಎಡಭಾಗದಲ್ಲಿ ಎತ್ತರವಾದ ಒಂದು ಮಂಟಪವಿದೆ. ಇದನ್ನು ದೇವರ "**ಭೋಗಮಂಟಪ**"ವೆಂದು ಕರೆಯುತ್ತಾರೆ. ಪಕ್ಕದಲ್ಲಿ ಒಂದು ಕಂಭದ ಮೇಲೆ ನಂದಿ ವಿಗ್ರಹವಿದೆ. ಇದನ್ನು "**ಗಡಿನಂದಿ**" ಎಂದು ಕರೆಯುತ್ತಾರೆ.






ದೇವಾಲಯದ ಪ್ರಾಕಾರ ಪ್ರವೇಶಿಸುತ್ತಿದ್ದಂತೆ ದೇವಾಲಯದ ಹಿಂಭಾಗದಲ್ಲಿ ಅನೇಕ ಶಿಲಾ ಶಾಸನಗಳು ವೀರಗಲ್ಲುಗಳು ಶಿಥಿಲ ಗಣಪತಿ, ವೀರಭದ್ರ ಹಾಗೂ ಶಾಕ್ತ ವಿಗ್ರಹಗಳು ಕಾಣುತ್ತವೆ.

ಸೋಮೇಶ್ವರ ದೇವಾಲಯದ ವಾಸ್ತು :

ಗರ್ಭಗೃಹ : ಪಶ್ಚಿಮಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹ ಚಿಕ್ಕದಾಗಿದ್ದು ಪೀಠದಲ್ಲಿ ಉದ್ದನೆಯ ಲಿಂಗ, ಲಿಂಗದ ಮಧ್ಯಭಾಗದಲ್ಲಿ ದತ್ತಾತ್ರೇಯ ಶಿಲ್ಪವಿದೆ. ಮೂಲ ವಿಗ್ರಹ ಕಳುವಾಗಿ, ತದ್ರೂಪಿ ವಿಗ್ರಹ ಸ್ಥಾಪಿಸಿರುವುದಾಗಿ

* ಎಸ್. ಜೆ. ಎಂ. ಮಹಾವಿದ್ಯಾಲಯ, ಕೆಮ್ಮಣ್ಣುಗುಂಡಿ ರಸ್ತೆ, ತರೀಕೆರೆ - ೫೭೭ ೨೨೮

ಹೇಳುತ್ತಾರೆ. ಮೇಲ್ಛಾವಣಿಯು ಚೌಕೋನಗಳಿಂದ ಕೂಡಿದ. ಗರ್ಭಗೃಹ ದ್ವಾರಬಾಗಿಲು ೫ ಅಡಿ ಎತ್ತರವಾಗಿದ್ದು ಪಟ್ಟಿಕೆ ಶಾಖೆಗಳಿಂದ ಕೂಡಿದ್ದು ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ಅಂತರಾಳದ ದ್ವಾರಮಂಟಪ ಸಹ ಸಾದಾ ಪಟ್ಟಿಕೆಗಳಿಂದ ಕೂಡಿದ್ದು ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ.



ನವರಂಗ : ನವರಂಗದಲ್ಲಿ ೮ ಕಂಭಗಳ ಮಧ್ಯೆ ಚೌಕಾಕಾರದ ಮಂಟಪ ೫" ಎತ್ತರದ ರಂಗಮಂಟಪ ಮಧ್ಯದಲ್ಲಿ ನಂದಿ ವಿಗ್ರಹವಿದೆ. ಕಂಭಗಳ ಕೆಳಭಾಗ ಚೌಕಾಕಾರ, ಅಷ್ಟಕೋನ, ಮೇಲಿನ ಕುಬಗಳಿಂದ ಕೂಡಿದ್ದು ಮೇಲ್ ಚತ್ತು ಚೌಕೋನಗಳಿಂದ, ಕೂಡಿದೆ. ಮೇಲ್ ಚತ್ತು ಸು. ೧೦ ಅಡಿ ಎತ್ತರವಾಗಿದೆ. ನವರಂಗದಲ್ಲಿ ಗರ್ಭಗೃಹ ದ್ವಾರದ ಬಲಭಾಗದಲ್ಲಿ ಗಣಪತಿ, ಎಡಭಾಗದಲ್ಲಿ ಸುಬ್ರಮಣ್ಯ ನಾಗಶಿಲ್ಪಗಳು ವಿಗ್ರಹಗಳಿವೆ, ದೇವಕೋಷ್ಠಗಳಿಲ್ಲ. ಆದರೆ, ಆಗಮ ಶಾಸ್ತ್ರದಂತೆ ಶೈವ ದೇವಾಯದಲ್ಲಿರಬೇಕಾದ ನಂದಿ, ಗಣಪತಿ, ಕಾರ್ತಿಕೇಯ ಸಪ್ತಮಾತೃಕ ಶಿಲ್ಪಗಳು ಶಿಥಿಲಗೊಂಡು ಹೊರಗಡೆ ಬಿದ್ದಿವೆ. ಬಹುಶಃ ಆ ವಿಗ್ರಹಗಳು ಈ ನವರಂಗದಲ್ಲಿದ್ದು ಶಿಥಿಲವಾಗಿರುವುದರಿಂದ ಹೊರಗಿಟ್ಟಿರಬಹುದು. ನವರಂಗದ ಮುಂಭಾಗದ ಸಭಾಮಂಟಪಕ್ಕೆ ಒಂದು ಬಾಗಿಲು ಮತ್ತೊಂದು ಉತ್ತರದ ಕಡೆಗೆ ಮತ್ತೊಂದು ಬಾಗಿಲು ಇದೆ. ಉತ್ತರದ ತೋರಣ ಮಂಟಪದ ಬಾಗಿಲು ಸಾದಾ ಪಟ್ಟಿಕೆಗಳಿಂದ ಕೂಡಿದೆ. ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ.

ಸಭಾಮಂಟಪ : ಸಭಾಮಂಟಪದಿಂದ ನವರಂಗದ ದ್ವಾರಬಂಧದಲ್ಲಿ ಪಟ್ಟಿಕೆಗಳಿಂದ ಕೂಡಿದೆ. ಆದರೆ ಸಭಾಮಂಟಪ ವಿನ್ಯಾಸ ಹಾಗು ಅಲ್ಲಿನ ಕಂಭಗಳು, ನಂತರದಲ್ಲಿ ನಿರ್ಮಿಸಿದ್ದಾಗಿವೆ. ಒಳಭಾಗದ ದೇವಾಲಯ ಕರಿಶಿಲೆಯದ್ದಾದರೆ ಸಭಾಮಂಟಪ ಕಣಶಿಲೆಯಲ್ಲಿದೆ ಸಭಾಮಂಟಪದ ಆ ಕಂಭಗಳು ವಿಭಿನ್ನವಾಗಿವೆ. ಇದರಿಂದ ಅಳಿದುಳಿದ ಸಾಮಾಗ್ರಿಗಳಿಂದಲೇ ಅನಂತರದಲ್ಲಿ ಈ ಸಭಾಮಂಟಪವನ್ನು ಕಟ್ಟಿರಬಹುದು. ಸಭಾಮಂಟಪದಿಂದ ಮುಂಭಾಗಕ್ಕೆ ಒಂದು ದ್ವಾರ ಹಾಗು ದಕ್ಷಿಣಕ್ಕೆ ಒಂದು ದ್ವಾರಗಳಿವೆ. ಸಭಾಮಂಟಪದ ಇಕ್ಕೆಲಗಳಲ್ಲಿ ೮ ಕಂಭಗಳು ವಿಭಿನ್ನ ಶೈಲಿಯಲ್ಲಿವೆ. ಇವುಗಳ ಮಧ್ಯದ ಒಂದು ಜೊತೆ ಕಂಭಗಳು ದುಂಡನೆಯ ವಿನ್ಯಾಸ ಉಳಿದವು ಚೌಕ, ಅಷ್ಟಕೋನಗಳಿಂದ ಕೂಡಿವೆ.

ಸಭಾಮಂಟಪದ ಉತ್ತರ ಭಾಗದಲ್ಲಿ ದಕ್ಷಿಣಾಭಿಮುಖವಾಗಿ ಎರಡು ದೇವಕೋಷ್ಠಗಳನ್ನು ನಿರ್ಮಿಸಿ ಸುಮಾರು ೬ ಅಡಿ ಎತ್ತರದ ಬೈರವ ಹಾಗು ವೀರಭದ್ರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆ. ಭಗ್ನಗೊಂಡಿರುವ ಬೈರವ ವಿಗ್ರಹ ೬ ಅಡಿ ಎತ್ತರದ್ದಾಗಿದೆ. ವೀರಭದ್ರ ವಿಗ್ರಹದ ಪೀಠವನ್ನು ಪರೀಕ್ಷಿಸಿದಾಗ ಪೀಠದಲ್ಲಿ ಸಪ್ತಾಶ್ವಗಳಿವೆ. ಇದರಿಂದ ಈ ಪೀಠದಲ್ಲಿ ಸೂರ್ಯ ವಿಗ್ರಹವಿದ್ದು ನಂತರದಲ್ಲಿ ಭಗ್ನಗೊಂಡ ಸೂರ್ಯ ವಿಗ್ರಹದ ಬದಲಿಗೆ ವೀರಭದ್ರ ವಿಗ್ರಹ ಸ್ಥಾಪಿಸಿದ್ದಾರೆನ್ನಬೇಕು.

ಸಭಾಮಂಟಪದ ಪ್ರವೇಶದ್ವಾರಗಳು, ದಕ್ಷಿಣದಲ್ಲಿ ಮತ್ತು ಪಶ್ಚಿಮದಲ್ಲಿರು ದ್ವಾರಬಂಧಗಳ ಸಾದಾ ಪಟ್ಟಿಕೆಗಳಿಂದ ಕೂಡಿದೆ. ಯಾವುದೇ ರೀತಿಯ ಅಲಂಕಾರಗಳಿಲ್ಲ. ಸಭಾಮಂಟಪದ ದಕ್ಷಿಣದ ಭಿತ್ತಿ ಶಿಥಿಲವಾಗಿದ್ದು ಆಧಾರವಾಗಿ ಅಲ್ಲಲ್ಲಿ ಗೋಡೆಗೆ ಅಡ್ಡ ಕಟ್ಟಲಾಗಿದೆ. ಹೊರಭಾಗದ ಭಿತ್ತಿ ಸಾದಾ ಗೋಡೆಯಿಂದ ಕೂಡಿದ ಚೋಳ ಶೈಲಿಯಲ್ಲಿದೆ.

ದೇವಾಲಯದ ಹೊರ ಭಿತ್ತಿ ಸಾದಾ ಪಟ್ಟಿಕೆಗಳಿಂದ ಕೂಡಿದ್ದು ಗರ್ಭಗೃಹದ ಮೇಲೆ ಗೋಪುರ ಕದಂಬನಾಗರ ಶೈಲಿಯಲ್ಲಿ ಚೌಕಾಕಾರದ ಗೋಪುರದ ಮೇಲ್ಭಾಗ ಅಂಡಾಕೃತಿಯದಾಗಿದ್ದು ಮೇಲೆ ಕಳಸವಿದೆ. ಗೋಪುರ ಸುಮಾರು ೩೦ ಅಡಿ ಎತ್ತರದಲ್ಲಿದೆ. ದೇವಾಲಯದ ಉತ್ತರ ಬದಿಗೆ ನವರಂಗಕ್ಕೆ ದ್ವಾರ ಮಂಪಟವಿದೆ. ಎರಡು ಕಂಭಗಳ ಮಧ್ಯೆ ಕಕ್ಷಾಸನಗಳು, ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಗಜಾಸನಗಳಿವೆ. ಮುಖ್ಯ ದೇವಾಲಯದ ಎಡಬದಿಗೆ ಪಾರ್ವತಿ ದೇವಾಲಯವಿದೆ. ಈ ದೇವಾಲಯದ ಗರ್ಭಗೃಹ ಅಂತರಾಳಗಳಿಂದ ಕೂಡಿದ್ದು ಚಿಕ್ಕದಾಗಿದೆ.



ಈ ದೇವಾಲಯದ ಮುಂಭಾಗದ ಪ್ರಾಕಾರದ ದ್ವಾರವನ್ನು ದಾಟಿದ ಕೂಡಲೆ ಮುಂದೆ ಕೆಳಗೆ ಇರುವ ನದಿಯ ಪಕ್ಕದಲ್ಲಿ ಅನೇಕ ಶಿಥಿಲ ವಿಗ್ರಹಗಳಿವೆ. ಶಿಥಿಲ ವಿಗ್ರಹಗಳು-ಸೂರ್ಯ ವಿಗ್ರಹ, ನಂದಿ, ವೀರಭದ್ರ ವಿಷ್ಣು ವಿಗ್ರಹಗಳು ಭಗ್ನಗೊಂಡು ಬಿದ್ದಿವೆ.

ಈ ದೇವಾಲಯದಿಂದ ಸುಮಾರು, ೧/೨ ಕಿಲೋ ಮೀಟರ್ ದಕ್ಷಿಣಕ್ಕೆ ಲಕ್ಷ್ಮಿನರಸಿಂಹ ದೇವಾಲಯ ಪಾಳುಬಿದ್ದು ಗಿಡಮರಗಳಿಂದ ಆವೃತ್ತವಾಗಿದೆ. ಅನೇಕ ಭಗ್ನ ಶಿಲ್ಪಗಳು ಇವೆ. ಇಲ್ಲಿರುವ ಶಾಸನದಿಂದ ಲಕ್ಷ್ಮಿನರಸಿಂಹ ದೇವಾಲಯವೆಂದು ಈ ಸ್ಥಳಕ್ಕೆ ನರಸಿಂಹಪುರವೆಂದು ಶಿಲಾಶಾಸನದಲ್ಲಿ ಉಲ್ಲೇಖಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಆಲದ ಮರದ ಬುಡದಲ್ಲಿ ಸುಂದರ ವಾಸ್ತುಶಿಲ್ಪಗಳು ಸಿಕ್ಕಿಕೊಂಡು ಬೆಳದಿದೆ.



ಇದರಿಂದ ಈ ದೇವಾಲಯ ಸುಮಾರು ೩೦೦ ವರ್ಷಗಳಿಂದ ಹಾಳು ಬಿದ್ದು ನಿರ್ಲಕ್ಷ್ಯಕ್ಕೊಳಗಾಗಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

(೧) **ಎಪಿಗ್ರಾಫಿಯ ಕರ್ನಾಟಕ** Vol VI., ತರೀಕೆರೆ ತಾಲೂಕು ಶಾಸನಗಳು.

(೨) ಸ್ಥಳೀಯರ ಹೇಳಿಕೆಗಳು.

(೩) ಕ್ಷೇತ್ರಕಾರ್ಯ.

(೪) *Annual Reports of Mysore Archaeological Department 1931.*

(೫) **ಚಿಕ್ಕಮಂಗಳೂರು ಜಿಲ್ಲಾ ಗೆಜೆಟಿಯರ್.**

ಡಾ. ಜ್ಯೋತ್ಸ್ನ ಕಾಮತ್*

ಕನ್ನಡಿಗರ ಮುಖಮಂಡನ ಅಥವಾ ಮೇಕಪ್ ಕಲೆ

ಮಾನವನ ಸೌಂದರ್ಯ ಅಥವಾ ಅಲಂಕಾರಪ್ರಿಯತೆ, ಅತಿ ಪ್ರಾಚೀನವಾದದ್ದು. ದೇಶ-ವಿದೇಶಗಳ ಪ್ರಾಚೀನ ಜನಾಂಗಗಳೆಲ್ಲ ಪ್ರಸಾಧನ ಕಲೆಯ ನಾನಾ ವಿಧಾನಗಳಿಗೆ ಶರಣುಹೋದದ್ದು ಚರಿತ್ರೆಯಿಂದ ತಿಳಿದುಬರುತ್ತದೆ. ವಿಶ್ವದ ಅತಿಸುಂದರ ರಾಣಿಯೆಂದು ಹೆಸರು ಪಡೆದ ಕ್ಲಿಯೋಪಾತ್ರಾ ನುಣುಪಾದ ಹೊಳೆಹೊಳೆಯುವ ಚರ್ಮ ಪಡೆಯಲು ಕತ್ತೆಗಳ ಹಾಲಿನಿಂದ ಸ್ನಾನ ಮಾಡಿದರೆ, ನೂರ್ ಜಹಾನ್ ಕಾಂತಿಮಯ ಕೆಂಪುಬಣ್ಣ ಪಡೆಯಲು ಗುಲಾಬಿ ಹೂ ಹಾಕಿ ಕುದಿಸಿದ ನೀರಿನಿಂದ ಎರೆದುಕೊಳ್ಳುತ್ತಿದ್ದಳು. ಈ ಸಂದರ್ಭದಲ್ಲೇ ಆಕೆ ಗುಲಾಬಿ ಅತ್ತರ್ ಕಂಡುಹಿಡಿದಳೆಂದು ಇತಿಹಾಸ ಸಾರುತ್ತದೆ. ನಮ್ಮ ಹಿರಿಯರೂ ಬಗೆಬಗೆಯ ಪ್ರಸಾಧನ ಕಲೆಗಳನ್ನು ಪಳಗಿಸಿಕೊಂಡಿದ್ದರು. ಈಗ ಅತಿ ಆಧುನಿಕವೆನಿಸುವ 'ಹರ್ಬಲ್ ಫೇಸ್ ಮಾಸ್ಕ್', 'ಹರ್ಬಲ್ ಮಸಾಜ್' 'ಹರ್ಬಲ್ ಶಾಂಪೂ' ಎಂದೆಲ್ಲಾ ಮಾರುಕಟ್ಟೆಗೆ ಬಂದ ಸೌಂದರ್ಯ ಸಾಧನಗಳು ಸಾವಿರ ವರ್ಷ ಪೂರ್ವದಲ್ಲೇ ನಮ್ಮವರು ರೂಢಿಸಿ ಕೊಂಡವುಗಳಾಗಿವೆ. ಕೆಲವನ್ನು ಇಲ್ಲಿ ಪರಿಚಯಿಸಿಕೊಳ್ಳಬಹುದು.

'ಸಂಸ್ಕಾರ' ಎನ್ನುವ ಶಬ್ದ ಮೂಲತಃ ಧೂಪ ಸಂಸ್ಕಾರಕ್ಕೆ ಅಂದರೆ Fumigation ಗೆ ಅನ್ವಯಿಸುತ್ತದೆಂದು ಪ್ರಾಚೀನ ಅಲಂಕರಣ ಶಾಸ್ತ್ರಜ್ಞರಾದ ಪ್ರೊ. ಪಿ.ಕೆ. ಗೋಡೆ ಅವರ ಮತ. ಪ್ರಾಚೀನರು ಸುಗಂಧ ಶಾಸ್ತ್ರವನ್ನು ವಿಜ್ಞಾನದಂತೆಯೂ **ಗಂಧಯುಕ್ತಿ** ಕ್ರಮವನ್ನು ಕಲೆಯನ್ನಾಗಿಯೂ ರೂಢಿಸಿಕೊಂಡಿದ್ದರು[೧]. ಕೂದಲು, ಮುಖ, ಬಾಯಿಗಳನ್ನೆಲ್ಲ ಗಮಗಮ ಸುಗಂಧಿತವಾಗಿಸಲು ವಿವಿಧ ಸುಗಂಧಗಳು ಬಳಕೆಯಲ್ಲಿದ್ದವು. ಹೊಳೆಯುವ ಕೂದಲು, ಹುಬ್ಬುಗಳ ಸೌಂದರ್ಯ, ಮುಖಲೇಪ ಅಥವಾ ಪ್ಯಾಕ್‌ಗಳು, Facials ಇವು ಇಂದಿನವರಿಗೆ ಬ್ಯೂಟಿಪಾರ್ಲರ್‌ಗಳಲ್ಲಿ ಲಭ್ಯವಿವೆ. ಅತ್ಯಾಧುನಿಕರೂ ಹಣವುಳ್ಳವರೂ ಹಾಗೆ ಅನಿಸಿಕೊಳ್ಳುವವರು ಹೋಗುವ ತಾಣಗಳು ಈ ಬ್ಯೂಟಿಪಾರ್ಲರ್‌ಗಳು. ಆದರೆ ಹಿಂದಿನ ಕನ್ನಡಿಗರೂ ಅಂದ ಚೆಂದಗಳನ್ನು ಮನೆಯಲ್ಲಿದ್ದೇ ಬಳಸಿಕೊಳ್ಳುತ್ತಿದ್ದು ಸಂವಹನ ಅಥವಾ 'ಮಸಾಜ್' 'ಉದ್ವರ್ತನ' ಅಥವಾ Facialಗಳು ಅವರಿಗೆ ಚಿರಪರಿಚಿತವಿದ್ದವು.

೧. ಹೊಳೆಯುವ ಕಪ್ಪುಕೂದಲು

ಮುಖದ ಅಂದಕ್ಕೆ ಹೊಳೆಹೊಳೆಯುವ ಕಪ್ಪುಕೂದಲ ಆವರಣ ಅತಿಮುಖ್ಯವಲ್ಲವೇ? ಕೇಶರಂಜನ ಅಥವಾ ಕೂದಲ ಡೈ ಮಾಡುವ ಪದ್ಧತಿ ಶಾಂರ್ಙ್ಗಧರ ಪದ್ಧತಿಯಲ್ಲಿ ಉಲ್ಲೇಖಿತವಾಗಿದೆ. ಕೂದಲ ನರೆ ತಡೆಯಲು ಹಾಗೂ ಬಿಳಿಕೂದಲು ಕರಿದಾಗಿಸಲು ಚಾವುಂಡರಾಯನು ಕೆಲ ಕ್ರಮಗಳನ್ನು ತನ್ನ 'ಲೋಕೋಪಕಾರಂ'ದಲ್ಲಿ ವಿವರಿಸಿದ್ದಾನೆ[೨]. ಕಬ್ಬಿಣದ ಬಾಣಲೆಯಲ್ಲಿ ನೆಲ್ಲಿಕಾಯಿ ಅರೆದ ಲೇಪ ಕುದಿಸುವ ಕ್ರಮದಂತೆ ಶಂಖದ ಭಸ್ಮ, ಸೀಸದ ಪುಡಿ ಔಷಧಿಯ ಎಣ್ಣೆಗಳಿದ್ದವು. ಮುಖದ ಆಕಾರಕ್ಕೆ ತಕ್ಕಂತೆ ಮುಡಿಗಳನ್ನು ಕಟ್ಟಿಕೊಳ್ಳುತ್ತಿದ್ದರು. ಚಿಕ್ಕಮುಖದವರಿಗೆ ನೆತ್ತಿತುರುಬು, ಉದ್ದಮುಖದವರಿಗೆ ಅಗಲದ ಧಮಿಲ್ಲ, ಇಷ್ಟಪಟ್ಟವರಿಗೆ ಗುಂಗುರುಗೂದಲು ಸಹಾಯಕವಾಗುತ್ತಿದ್ದುದನ್ನು ಶಿಲ್ಪಗಳಲ್ಲಿ ಗುರುತಿಸಬಹುದು. (ಪ್ಲೇಟ್ ೧)

೨. ಹುಬ್ಬುಗಳ ಸೌಂದರ್ಯ

ಹುಬ್ಬುಗಳನ್ನು ಕತ್ತರಿಸಿ, ಬೋಳಿಸಿ, ಬೇಕಾದ ಆಕಾರ ಪಡೆಯುವುದು ಇಂದಿನ ದಿನಗಳಲ್ಲಿ ಸಾಮಾನ್ಯ. ಆದರೆ ಪಂಪ ಮಹಾಕವಿ "ಸಮರಿದ ಪುರ್ವು"ಗಳ ಬಗ್ಗೆ ಉಲ್ಲೇಖಿಸಲು ಮರೆತಿಲ್ಲ[೩]. ದಪ್ಪಕಣ್ಣೆವೆ ಮತ್ತು ನೀಳವಾದ ಹುಬ್ಬುಗಳನ್ನು ಇನ್ನೊಬ್ಬ ಕವಿ ಗಮನಿಸಿದ್ದ[೪]. ಹರಿತವಾದ ಆಯುಧದಿಂದ 'ನಿಡಿದಾದ' ಅಥವಾ ದಪ್ಪಗಿನ ಹುಬ್ಬುಗಳನ್ನು ಕೆತ್ತಿ ಕುಡಿಹುಬ್ಬುಗಳನ್ನಾಗಿ ಮಾರ್ಪಡಿಸುತ್ತಿದ್ದರು[೫]. ಕೆಲವರು ಹುಬ್ಬುಗಳನ್ನು ಹೊಳೆಹೊಳೆಯುವಂತೆ ಲೇಪಹಚ್ಚಿ ತೀಡುತ್ತಿದ್ದರು. 'ಮಿಸುಪ ತಿರ್ದಣಮಿದ್ದ ಪುರ್ವು'ಗಳ ಬಗ್ಗೆ ಪಾರ್ಶ್ವನಾಥ ಪುರಾಣ ಹೇಳುತ್ತದೆ[೬]. ಕಣ್ಣೆವೆಗಳಿಗೆ ಕಪ್ಪು, ಕಣ್ಣಿಗೆ ಕಾಡಿಗೆ ತೀಡಿ ಆಕರ್ಷಕವಾಗಿ ಎದ್ದು ಕಾಣುವಂತೆ ಮಾಡುವುದು ಸರ್ವೇ ಸಾಮಾನ್ಯವಾಗಿತ್ತು.

೩. ಮುಖಲೇಪಗಳು

ಮೊಡವೆಗಳನ್ನು ಮಾಯವಾಗಿಸಿ ಮುಖವನ್ನು ನುಣುಪಾಗಿಸುವ ಈಗಿನ Vanishing Lotion ಕುರಿತು ಲೋಕೋಪಕಾರ ವಿವರಿಸುತ್ತದೆ[೭]. ಜವೆ, ಕೋಷ್ಠ, ಲೋಧ್ರ ಮುಂತಾದವುಗಳ ಲೇಪ ಅಥವಾ ವ್ಯಾನಿಶಿಂಗ್ ಕ್ರೀಂ, ಬಳಕೆಯಲ್ಲಿತ್ತು.

Foundation Creamಗೆ ಈಗಲೂ ಅಗಲೂ,

* ೧೧೦, ಶಶಿಕಿರಣ್, ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-೫೬೦ ೦೫೫.

ಯಾವಾಗಲೂ ಆದ್ಯತೆ. ಹಿಂದಿನ ಎಲ್ಲಾ ಕ್ರೀಮುಗಳಿಗೆ ಶ್ರೀಗಂಧ, ಮೂಲ ಸಾಮಗ್ರಿ ಆಗಿತ್ತು. ಅದಕ್ಕೆ ಬೇರೆ ಬೇರ ಅಭಿರುಚಿ, ಮೈಮುಖ ಬಣ್ಣಗಳಿಗೆ ಅನುಸಾರವಾಗಿ ಕರ್ಪೂರ, ಕಸ್ತೂರಿ, ಕೇಸರಿ, ಪುನುಗು, ಆದಿಗಳನ್ನು ವಿವಿಧ ಪ್ರಮಾಣದಲ್ಲಿ ಬೆರಸಿ ಋತುಮಾನಕ್ಕೆ ಅನುಸಾರವಾಗಿ ಅವನ್ನು ಬಳಸುತ್ತಿದ್ದರು. ಆಯಾ ಪರಿಮಳಕ್ಕೆ ಬೇರೆ ಬೇರೆ ಹೂಗಳ ಕೇಸರವನ್ನು ಸೇರಿಸುತ್ತಿದ್ದರು. **'ನವಕೇಸರ ಸಂಭೂತಂ ಕುಂಕುಮಂ ಕಾಯರಂಜನಂ'** ಎಂದಾಗ ಬೇರೆ ಬೇರೆ ಹೂಗಳ ಕೇಸರಗಳನ್ನು ಸೇರಿಸಿ ಕೆಂಪು ಗುಲಾಬಿ, ಅರಿಸಿನ ಪುಡಿಗಳನ್ನೂ ಹದವರಿತು ಬೆರೆಸಿ, ಗಲ್ಲಕ್ಕೆ, ಮುಖಕ್ಕೆ ತೊಡೆಯುವ ಪದ್ಧತಿ ಇತ್ತು. ಶ್ಯಾಮಲಾಂಗ ಕೃಷ್ಣನು ಬಿಳಿಯ ಶ್ರೀಗಂಧವನ್ನು, ಗೌರಾಂಗನಾದ ಬಲರಾಮನು ಕಸ್ತೂರಿಯ ಕಪ್ಪು ಲೇಪವನ್ನು ಧರಿಸಿದ್ದರೆಂದು 'ಜಗನ್ನಾಥ ವಿಜಯ' ಕಾವ್ಯವು ವರ್ಣಿಸುತ್ತದೆ. ಇದು ಕವಿಕಲ್ಪನೆ ಎಂದು ತೋರಿದರೂ '**ವಸ್ತ್ರಭೂಷಾನು ಸಾರೇಣ ಶೃಂಗಾರಾಂಗ** ವಿಲೇಪನಂ' ಎಂದು ಮಾನಸೋಲ್ಲಾಸವು ಸೂಚಿಸುತ್ತದೆ[೮]ಯಾದ್ದರಿಂದ ಮ್ಯಾಚಿಂಗ್ ವಿಲೇಪನಗಳು ಬಳಕೆಯಲ್ಲಿ ಇದ್ದವು ಎಂದು ತೋರುತ್ತದೆ. 'ಅಂಗರಾಗ'ವೆಂಬ ವಿಶೇಷ ಸುಗಂಧ ಮೈ-ಮುಖಗಳ ಕಾಂತಿ ಹೆಚ್ಚಿಸುತ್ತಿತ್ತು.

'ಯಕ್ಷಕರ್ದಮ' ಎಂಬ ವಿಶೇಷ ವಿಲೇಪದ ಉಲ್ಲೇಖ ಕಾವ್ಯಗಳಲ್ಲಿ ಬರುತ್ತದೆ. ಪಚ್ಚಕರ್ಪೂರ, ಅಗರು, ಕಸ್ತೂರಿ, ತಕ್ಕೋಲಗಳ ಮಿಶ್ರಣ ಇದಾಗಿತ್ತು. ವಸಂತಕಾಲದಲ್ಲಿ ಇದನ್ನು ಹೆಚ್ಚಾಗಿ ಉಪಯೋಗಿಸಿದರೆ, ಬೇಸಗೆಯಲ್ಲಿ ಶ್ರೀಗಂಧ, ಪುನ್ನಾಗ, ಕೇಸರ, ಕೇದಗೆ-ಮಲ್ಲಿಗೆಗಳಿಂದ ತಯಾರಿಸಿದ ಗಂಧದೊಂದಿಗೆ ಲೇಪವನ್ನು ಬೇಸಗೆಯಲ್ಲಿ ಬಳಸುತ್ತಿದ್ದರು. ಮಳೆಗಾಲದಲ್ಲಿ ಇದಕ್ಕೆ ಕಾಶ್ಮೀರದ ಕೆಂಪು ಹರಿಚಂದನ ಬೆರಸಲ್ಪಡುತ್ತಿತ್ತು. ಹೇಮಂತ-ಶಿಶಿರಗಳಲ್ಲಿ ಪುನುಗು, ಮಾದಳ ತೊಗಟೆಯ ಪುಡಿ ಮಿಶ್ರಣ ಗೊಂಡರೆ ಶೀತಕಾಲದಲ್ಲಿ ತೈಲಮಿಶ್ರಿತ ಲೇಪಗಳು ಮೈಒಡೆತ ಕಳೆದು ಒಣಗಿದ ಚರ್ಮವನ್ನು ಮೃದುವಾಗಿಸುತ್ತಿದ್ದವು. ಇವುಗಳೆಲ್ಲ ನಾನಾ ಸುಗಂಧ ಹಾಗೂ ಬಣ್ಣಗಳಿಂದ ಕೂಡಿರು ತ್ತಿದ್ದವು[೯].

೪. ಮುಖಚೂರ್ಣ ಅಥವಾ ಫೇಸ್ ಪೌಡರ್

ಮಾದಳದ ಹಣ್ಣಿನ ಒಳಗಿನ ತಿರುಳನ್ನು ತೋಡಿ ತೆಗೆದು, ಅದರಲ್ಲಿ ಕಸ್ತೂರಿ, ಕರ್ಪೂರ, ಬೋರ, ಕೋಷ್ಠ, ತಕ್ಕೋಳಗಳನ್ನು ಅರೆದ ಶ್ರೀಗಂಧದ ದಪ್ಪಲೇಪದಲ್ಲಿ ಮಿಶ್ರಣ ಮಾಡಿ 'ಹಣ್ಣಿನ ಕವಚ'ದಲ್ಲಿ ತುಂಬಿ ಪುಟವಿಕ್ಕಿದಾಗ, ಒಳ್ಳೆಯ 'ಮುಖವಾಸ' ಅಥವಾ ಪೌಡರ್ ಲಭಿಸುತ್ತಿತ್ತು[೧೦]. ಇಂಥ ಮುಖ ಚೂರ್ಣವನ್ನು ಬಿಲ್ಹಣನ ವಿಕ್ರಮಾಂಕಚರಿತವು ಕರ್ಪೂರ ಚೂರ್ಣವೆಂದು ಕರೆದಿರಬಹುದಾಗಿದೆ. 'ವದನಸುಗಂಧೀಕರಣಚೂರ್ಣ'ವೆಂದು ಕರೆಯಲ್ಪಟ್ಟ ಶಿವತತ್ವರತ್ನಾಕರದೊಳಗಿನ ಶೃಂಗಾರಪುಡಿಯ ತಯಾರಿಕೆ[೧೨] ಲೋಕೋಪಕಾರಂದೊಳಗಿನ ಕ್ರಮವನ್ನೇ ಅನುಸರಿಸುತ್ತದೆಯಾದ್ದರಿಂದ ಅನೂಚಾನವಾಗಿ ಶತಮಾನಗಳವರಗೆ ಈ ದೇಶೀ ಫೇಸ್‌ಪೌಡರ್ ಬಳಕೆ ರೂಢಿಯಲ್ಲಿತ್ತು ಎಂದು ಅರ್ಥೈಸಬಹುದು. ಪಂಪನು 'ಚಂದ್ರಕವಳ' ಎಂಬ ಮುಖಚೂರ್ಣ ವವನ್ನು ಹೆಸರಿಸುತ್ತಾನೆ.

೫. ಮುಖಮಂಡನ

ಈಗಿನ ಫೌಂಡೇಶನ್ ಕ್ರೀಮ್‌ದಂತೆ ಶ್ರೀಗಂಧದ ಮುಖಲೇಪದ ಉದ್ವರ್ತನ (Facial) ಕ್ರಿಯೆಯ ಬಳಿಕ ಅನುಲೇಪನ, ವಿಲೇಪನಗಳನ್ನು ಚೂರ್ಣದ ಸವರಿಕೆ ಆದ ಮೇಲೆ ಹಣೆ, ಕಪೋಲ, ಕುತ್ತಿಗೆ, ಬಟ್ಟೆಯಿಂದ ಮುಚ್ಚಲ್ಪಡದ ಭಾಗವನ್ನು ಸುಂದರವಾದ ಎಲೆ, ಬಳ್ಳಿ, ಹೂ ಹಾಗೂ ಇತರ ನಕ್ಷೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು[೧೩] 'ವಿಚಿತ್ರ ಚಿತ್ರಪತ್ರ ಭಂಗ'ವೆಂಬ ಇಂಥ ಅಲಂಕಾರದ ವ್ಯಾಮೋಹದಿಂದ ಗಂಡಸರೂ ದೂರ ವಿರುತ್ತಿರಲಿಲ್ಲವೆಂದು ಆದಿಪುರಾಣದಿಂದ ತಿಳಿದು ಬರುತ್ತದೆ[೧೪]. ದಪ್ಪ ಶ್ರೀಗಂಧಕ್ಕೆ ಬೇಕಾದ ಬಣ್ಣ ಸೇರಿಸಿ, ಕುಂಚ ಅಥವಾ ಕಡ್ಡಿಯಿಂದ ಈ ರಂಗಾವಲಿ ರಚಿತವಾಗುತ್ತಿತ್ತು.

೬. ಜನಸಾಮಾನ್ಯರ ಪ್ರಸಾಧನ

ಕಸ್ತೂರಿ, ಕೇಸರಿ ಪುನುಗಾದಿಗಳು ಅರಸರಿಗೆ, ಶ್ರೀಮಂತರಿಗೆ. ಜನಸಾಮಾನ್ಯರು ಏನು ಮಾಡುತ್ತಿದ್ದರು? ಎಂಬ ಪ್ರಶ್ನೆ ಏಳಬಹುದು. ಅವರಿಗೂ ಇಷ್ಟಪಟ್ಟ ಅಗ್ಗದ ಮುಖಮಂಡನ ದ್ರವ್ಯಗಳು ಲಭ್ಯವಿದ್ದವು. ಕರ್ನಾಟಕದ ವನರಾಜಿ ಯಥೇಷ್ಟ ಶ್ರೀಗಂಧವನ್ನು ಪೂರೈಸುತ್ತಿತ್ತು. ಗಿಡಮರಗಳ ತೊಗಟೆ, ಎಲೆ, ಹೂ, ಹಣ್ಣು, ಬೇರು ಗಡ್ಡೆ, ಹುಲ್ಲುಗಳು ಹಾಗೂ ಗಿಡಮರಗಳಿಂದ ಒಸರುವ ದ್ರವ (Exudation)ಗಳಿಗೆ ಅರಗು ಜೇನುತುಪ್ಪ ಸೇರಿಸಿ ಅವನ್ನು ಪಡೆಯುತ್ತಿದ್ದರು ಭದ್ರಮುಸ್ತೆ, ಜಟಾಮಾಂಸಿ, ಮಡಿವಾಳಗಳ ಕಷಾಯಮಾಡಿ ಶ್ರೀಗಂಧದಲ್ಲಿ ತೇಯ್ದು ಬಳಸು ತ್ತಿದ್ದರು.[೧೫] ಮಲಯ ಹಾಗೂ ತುರುಷ್ಕ ದೇಶಗಳಗಂಧದ ಚಕ್ಕೆ ಶ್ರೇಷ್ಠವೆಂದು ಪರಿಗಣಿಸಲ್ಪಡುತ್ತಿತ್ತು. ಮನೆ ತಯಾರಿಕೆಯ (Home-made) ವಸ್ತುಗಳು ಎಲ್ಲರಿಗೂ ಎಟಕುವಂತಿದ್ದವು.

ಗ್ರಾಮನಾರಿಯರು ಚಂದನದ ಬದಲಿಗೆ ಹಿಟ್ಟಿನ ಪತ್ರಭಂಗ, ಕೇಸರಿಗೆ ಬದಲಾಗಿ, ಅರಿಶಿಣ ಲೇಪ ಹಾಗೂ ತಾವೇ ಕೈಯಾರೆ ತಯಾರಿಸಿದ ದಪ್ಪ ಕಾಡಿಗೆಯನ್ನು ತೀಡಿಕೊಂಡು ತಮ್ಮ ಅಲಂಕಾರ ಪ್ರಿಯತೆ ಮೆರೆಯುತ್ತಿದ್ದರು[೧೬]. ಕಾಡಿನಲ್ಲಿ ಸಿಗುವ ಹೂಗಳಿಂದಲೇ ಕಿವಿ ಕೊರಳುಗಳ ಅಲಂಕಾರಗಳನ್ನು ಪಡೆಯುತ್ತಿದ್ದರು.

ಬಾದಾಮಿ, ಪಟ್ಟದಕಲ್ಲು ಶಿಲ್ಪಗಳಲ್ಲಿ ತೀರ ದೊಡ್ಡ ಕರ್ಣಾಭರಣಗಳನ್ನು ಕಾಣುತ್ತೇವೆ. ನಲಚಂಪುವಿನಲ್ಲಿ ಬರುವ ಹೂ ಎಲೆಯ ಮತ್ತು ಸೋಮೇಶ್ವರ ಭೂಪಾಲನ 'ವಿಕ್ರಮಾಂ ಕಾಭ್ಯುದಯಂ'ದಲ್ಲಿಯ ತಾಡಪತ್ರದ 'ತಾಟಂಕ'ದ ಉಲ್ಲೇಖಗಳಿಂದ ತೀರ ಹಗುರಾದ ಆದರೆ ಕಾಣಲು ಬಲುದೊಡ್ಡವೆನಿಸುವ ಕಿವಿಯ

ಪ್ಲೇಟ್ - ೧



Hair Styles

ಮುಖಮಂಡನ : ಮುಖದ ಉದ್ದಗಲಗಳಿಗೆ ಅನುಗುಣವಾದ ಕೇಶಾಲಂಕಾರ. ಕೃತಕ ಗುಂಗುರುಕೂದಲೂ ಬಳಕೆಯಲ್ಲಿತ್ತು. (೪೧)



Earrings

ಬೃಹತ್ ಕರ್ಣಾಭರಣಗಳು. ಅವುಗಳ ಬೆಳಕು ಕೆನ್ನೆಗಳ ಮೇಲೆ ಪಡಿಮಾಡಿ ಥಳತಳಿಸುವಷ್ಟು ಕೆನ್ನೆಗಳನ್ನು ನಯವಾಗಿರಿಸುತ್ತಿದ್ದರು

ಪ್ಲೇಟ್ - ೩



ಶ್ರವಣಬೆಳ್ಗೊಳದ ಭಿತ್ತಿಚಿತ್ರದ ರೇಖಾಪ್ರತಿಕೃತಿ - ೧೯ನೇ ಶತಮಾನ; ಲಿಪ್‌ಸ್ಟಿಕ್ ಬಳಕೆಯಲ್ಲಿತ್ತು.

ಅಲಂಕಾರಗಳಿಗೆ ಅಂದಿನ ಮಹಿಳೆಯರು ಮನಸೋತಿದ್ದರು ಎಂದು ತೋರುತ್ತದೆ. ಅವುಗಳ ಬೆಳಕು ಕೆನ್ನೆಗಳ ಮೇಲೆ ಬೀಳುವಷ್ಟು ಕಪೋಲಗಳು ಥಳಥಳಿಸುತ್ತಿದ್ದವು (ಪ್ಲೇಟ್ ೨).

೭. ಹಣೆಯ ಬೊಟ್ಟು

ತಿಲಕ ಅಥವಾ ಗಂಧ-ಕುಂಕುಮಾದಿಗಳು ಆಯಾ ಮತಸ್ಥರ ಸಾಂಕೇತಿಕ, ಕೆಲವೊಮ್ಮೆ ಕಡ್ಡಾಯದ ಧಾರಣೆ ಒಳಗೊಂಡಿದ್ದರೂ ಸ್ತ್ರೀ, ಪುರುಷರಿಗೆ ಸಮಾನವಾಗಿದ್ದವು. ಇಂದಿನ ಬಿಂದಿಗಳಂತೆ ಪ್ರಮುಖ ಪ್ರಸಾಧನ ಸಾಧನವಾಗಿದ್ದವು ಎಂದು ಮರೆಯುವಂತಿಲ್ಲ. ದಮಯಂತಿಯ ಹಣೆಯಲ್ಲಿ ಕುಂಕುಮ, ಕಸ್ತೂರಿ, ಚಂದನಗಳ ತ್ರಿಪುಂಡ್ರ ಸತ್ವ, ರಜ, ತಮಗಳನ್ನು ಸೂಚಿಸುತ್ತಿತ್ತು ಎಂದು ನಲಚಂಪು ವರ್ಣಿಸುತ್ತದೆ[೧೭]. ಆಸ್ಥಾನಕ್ಕೆ ಹೋಗುವವರೆಲ್ಲ ವೇಷಭೂಷಣಗಳಿಗೆ ಸರಿಹೊಂದುವ ಭವ್ಯವಾದ ರಂಗುರಂಗಿನ ತಿಲಕಗಳನ್ನು ಧರಿಸುತ್ತಿದ್ದರು[೧೮]. 'ಸಾದು'ವಿನ ಅನೇಕ ಪ್ರಕಾರಗಳನ್ನು ತಯಾರಿಸುವ ರೀತಿ, 'ಲೋಕೋಪಕಾರಂ'ದಲ್ಲಿದೆ.

೮. ತುಟಿಯ ಬಣ್ಣ

ಕೆಂಪು ತುಟಿ ಪಡೆಯಲು ಕಾಚದ ವೀಳ್ಯ ಸೇವನೆ ಸರ್ವೇಸಾಮಾನ್ಯವಾದರೂ, ಅಲಕ್ತಕದ ಪರಿಷ್ಕೃತ ಲೇಪ ರೂಢಿಯಲ್ಲಿತ್ತು. ಶ್ರವಣಬೆಳ್ಗೊಳದ ಭಿತ್ತಿಚಿತ್ರವೊಂದರಲ್ಲಿ ಕನ್ನಡಿ ನೋಡಿ ಲಿಪ್‌ಸ್ಟಿಕ್ ಹಚ್ಚಿಕೊಳ್ಳುತ್ತಿರುವ ಮಹಿಳೆಯ ದೃಶ್ಯವಿದೆ. (ಪ್ಲೇಟ್ ೩). ಬಹುಶಃ ೧೯ನೇ ಶತಮಾನದಲ್ಲಾಗಲೇ ಯುರೋಪಿನಿಂದ ಆಯಾತವಾಗುತ್ತಿದ್ದ ಕನ್ನಡಿ, ಲಿಪ್‌ಸ್ಟಿಕ್‌ಗಳು ಭಿತ್ತಿಚಿತ್ರಕಾರರಿಗೆ ಪರಿಚಿತವಿರಲು ಸಾಕು!

೯. ಪ್ರಸಾಧನ ಕಿಟ್

ರಸಿಕರು ಇಷ್ಟಪಡುವ ಬಗೆಬಗೆಯ ಲೇಪಗಳನ್ನು ತಯಾರಿಸುವ ಘಟ್ಟಿವಳ್ತಿಯರ ದೊಡ್ಡ ವರ್ಗವೇ ಇತ್ತು. ಗಂಧವಣಿಗರ ಅಂಗಡಿಗಳೂ, ಪಸರಗಳೂ ಪೇಟೆಯಲ್ಲಿ ಪ್ರಮುಖ ಸ್ಥಾನಗಳಲ್ಲಿ ಕಂಗೊಳಿಸುತ್ತಿದ್ದವು. ಪ್ರವಾಸಕ್ಕೆ ಹೊರಡುವವರು ಮುಖಪ್ರಸಾಧನದ ಹಡಪವನ್ನೇ ಸೇವಕರಿಂದ ಹೊರಿಸಿ ಒಯ್ಯುತ್ತಿದ್ದರು. ಅದರಲ್ಲಿ ಪನ್ನೀರಕುಪ್ಪಿಗೆ, ಪುಡಿಕಸ್ತೂರಿಯ

ಕರಂಡಕ, ಸಾದಿನ ಭರಣಿ, ಕುಂಕುಮ, ಜವ್ವಾದಿಯ ವಂಕಿ, ತೇಯ್ದ ಗಂಧದ ಸಿಂಪಿನ ಪಾತ್ರೆ, ಕರ್ಪೂರದ ನಾಳಿ, ಕನ್ನಡಿಗಳೊಂದಿಗೆ ಮೊಗದುಕೂಲ ಅಥವಾ ಫೇಸ್‌ಟಾವೆಲ್ ಇರುತ್ತಿದ್ದವು[೧೯]. ಪನ್ನೀರು ಅಥವಾ ಪರಿಮಳದ್ರವ್ಯ 'ಸ್ಪ್ರೇ' ಮಾಡಿಕೊಳ್ಳಲು ಯಂತ್ರ ಸಾಧನವಿದ್ದವು[೨೦].

ಹೊರನಾಡಿನವರ ಫ್ಯಾಶನ್ನುಗಳನ್ನು ಅನುಕರಿಸುವ ಇಂದಿನ ಕನ್ನಡಿಗರಿಗೆ, ಹಿಂದೊಮ್ಮೆ ಅವರ ನಾಡಿನ ಶೃಂಗಾರ ಪ್ರಕಾರಗಳನ್ನು ದೂರದೇಶದವರು ಅನುಸರಿಸುತ್ತಿದ್ದರು ಎಂದು ಹೇಳಿದರೆ ಆಶ್ಚರ್ಯವಾಗಬಹುದು. ಹನ್ನೆರಡನೆಯ ಶತಮಾನದಲ್ಲಿ ಭಾರತದ ಈಗಿನ ರಾಜ್ಯಗಳೆಲ್ಲ ಸ್ವತಂತ್ರ ನಾಡುಗಳೇ ಆಗಿದ್ದವು. ಕರ್ನಾಟಕದ ಉಡುಪುಗಳ ಪ್ರಕಾರಗಳೊಂದಿಗೆ ಬೈತಲೆಮಣಿ, ಕಾಡಿಗೆ, ತಿಲಕದ ಪ್ರಕಾರಗಳು, ಶಿರೋಭೂಷಣಗಳೆಲ್ಲ ನಿರ್ಮಿತವಾಗಿ ಕಾಶ್ಮೀರದಲ್ಲಿ ಜನಪ್ರಿಯವಾದ ವಿಚಾರವನ್ನು ಕಲ್ಹಣನ ರಾಜತರಂಗಿಣಿ ಉಲ್ಲೇಖಿಸುತ್ತದೆ[೨೧].

ಒಟ್ಟಿನಲ್ಲಿ, ಆಧುನಿಕ ಪ್ರಸಾಧನಗಳ ಹತ್ತೆಂಟು ರೂಪಗಳೆಲ್ಲ ನಮ್ಮ ಹಿರಿಯರಿಗೆ ಪರಿಚಿತವಿದ್ದವು, ನಿಸರ್ಗಜನ್ಯ ಸಾಮಗ್ರಿಗಳಿಂದ ಅವನ್ನು ತಯಾರಿಸಿ ಹಿತಮಿತವಾಗಿ ಬಳಸುತ್ತಿದ್ದರು ಎಂದು ಹೇಳಬಹುದು. ಅವು ಆರೋಗ್ಯಕ್ಕೆ ಹಾನಿ ತರುತ್ತಿರಲಿಲ್ಲ. ಆದರೆ ಇಂದು ಮಾರುಕಟ್ಟೆಗೆ ಬರುವ ಪ್ರಸಾಧನಗಳೆಲ್ಲ ವೈಜ್ಞಾನಿಕ ಪರೀಕ್ಷೆಗೆ ಒಳಪಡದ ರಾಸಾಯನಿಕಗಳನ್ನು ಹೊಂದಿರುವುದರಿಂದ ಇವುಗಳ ತುಂಬ ದಿನಗಳ ಬಳಕೆಯಿಂದ ಆಗುವ ದುಷ್ಪರಿಣಾಮಗಳ ವಿಶ್ಲೇಷಣೆ ನಮ್ಮಲ್ಲಿಲ್ಲ. ಇತ್ತೀಚೆಗೆ ಹರ್ಬಲ್ ಎಣ್ಣೆ, ಹರ್ಬಲ್ ಕ್ರೀಮ್, ಫೇಸ್‌ಮಾಸ್ಕ್ ಎಂದೆಲ್ಲ ವನಸ್ಪತಿಜನ್ಯವೆಂದು ಪ್ರಚಾರದೊಂದಿಗೆ, ಧನವನ್ನೂ ಗಿಟ್ಟಿಸುವ ಹತ್ತು ಹಲವು ಕಂಪನಿಗಳಿವೆ. ಅವುಗಳಲ್ಲಿ ಖಾತರೀ, ಶುದ್ಧ ಅಂಶ ಎಷ್ಟು? ವ್ಯಾಪಾರೀ ಅಂಶ ಎಷ್ಟು? ಎಂದು ಪರೀಕ್ಷಿಸಿ ಬೇರ್ಪಡಿಸುವ ಪದ್ಧತಿ ಜಾರಿಯಲ್ಲಿ ಬರುವತನಕ ಅಲಂಕಾರಪ್ರಿಯರನ್ನು ಸುಲಿಯುವ ಪ್ರಸಾಧನಗಳಿಗೆ ಬೇಡಿಕೆ ಇದ್ದೇ ಇರುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Gode P.K., *Studies in Indian Cultural History Pt I, Poona, 1961, P3-4*

೨. *Sesha Iyengar H.*, **ಚಾವುಂಡರಾಯ ವಿರಚಿತ ಲೋಕೋಪಕಾರಂ (ಲೋಕ)**, Madras, ೧೯೫೦, IV ನವಮಾಧಿಕಾರಂ ಪದ್ಯ ೪೮-೫೦

೩. ಕೆ. ಎಲ್. ನರಸಿಂಹಶಾಸ್ತ್ರಿ., (ಸಂ) **ಪಂಪನ ಆದಿಪುರಾಣ IV**; ೪೨ ಕ.ಸಾ.ಪ. ಪ್ರಕಟಣೆ, ಬೆಂಗಳೂರು ೧೯೯೯

೪. ಕರ್ಣಚಾರ್ಯ ವಿರಚಿತ **ನೇಮಿನಾಥ ಪುರಾಣಂ**, ಬೆಂಗಳೂರು, ೧೯೭೭: ಅಧ್ಯಾಯ VII ವಾಚನ ೪೧೦

೫. ಮಹಾಕವಿ ಅಗ್ಗಳದೇವ ವಿರಚಿತ **ಚಂದ್ರಪ್ರಭ ಪುರಾಣಂ**, ಬೆಂಗಳೂರು, ೧೯೭೭, ಅಧ್ಯಾಯ VI: ಪದ್ಯ ೬೩

೬. ಎಸ್. ಬೊಮ್ಮರಸ ಪಂಡಿತ; ಪಾರ್ಶ್ವಕವಿಯ **ಪಾರ್ಶ್ವನಾಥ ಪುರಾಣಂ**, ಮೈಸೂರು-೧೯೫೬, ಅಧ್ಯಾಯ ೧೨, ಪದ್ಯ ೭೩

೭. **ಲೋಕ** : ಅಧ್ಯಾಯ ೯ : ಪದ್ಯ ೮೯

೮. Shrigornidekar G.K. (Ed) *Manasollasa* of King Somesvara Vol II, Baroda, 1939, ಅಧ್ಯಾಯ ೫ ವಂಶ ೩೨ ಪದ್ಯ ೧೮೮೯(ಮಾನ)

೯. **ಲೋಕ** : ಅಧ್ಯಾಯ ೭, ಗಂಧಯುಕ್ತಿ ಕ್ರಮ. ಪದ್ಯ-೨, ೬, ೪೦-೪೩ ಮಾನ II ವಿಶಂತಿ ೩ ಪದ್ಯ ೯೮೮.

೧೦. **ಲೋಕ ಸಪ್ತಮಾಧಿಕಾರಂ** : ಪದ್ಯ ೮

೧೧. ಮಂಗಲದೇವಶಾಸ್ತ್ರಿ (ಸಂ) : ಬಿಲ್ಹಣ ಕವಿಯ **ವಿಕ್ರಮಾಂಕದೇವಚರಿತ ಮಹಾಕಾವ್ಯಂ** (ಸಂಸ್ಕೃತ) ಬನಾರಸ್ ೧೯೪೫ ch IX V ೯೦

೧೨. R. Rama Shastry (Ed) : Sivattvaratnakara of Basavaraja of Keladi Vol II, Mysore, 1969, Kallola VI Taranga XV:V 72, P 23.

೧೩. ಕೈಲಾಶಪತಿ ತ್ರಿಪಾಠೀ : (ಸಂ), **ಶ್ರೀ ತ್ರಿವಿಕ್ರಮಭಟ್ಟ ವಿರಚಿತಾ ನಲಚಂಪೂ** : (ನಲಚಂಪು) ಅಥವಾ ದಮಯಂತಿ ಕಥಾ : ವಾರಣಾಸಿ (ಮೂರನೆಯ ಮುದ್ರಣ), ೧೯೭೭.

(ಅ) ಅಧ್ಯಾಯ III, ಪದ್ಯ-೨೩ (ನಲಚಂಪು) ೧೯೭೭. ೨೩ (ನಲಚಂಪು)

(ಬ) ಮಾನ II ಅಧ್ಯಾಯ II, ವಿಶಂತಿ ೩, ಪದ್ಯ ಸಾಂದ್ರಾಕಸ್ತೂರಿಕಾಪತ್ರವಲ್ಲಭಿ : ಸಮಲಂಕೃತಾ.

೧೪. **ಆದಿ** : **ಚತುರ್ಥಾಶ್ವಾಸಂ** : **ಪುಟ ೧೬೨**

೧೫. **ಲೋಕ** : VII ಪದ್ಯ ೪೯-೫೫

೧೬. **ನಲಚಂಪು** V : ಪದ್ಯ ೭೦

೧೭. **ಪೂರ್ವೋಕ್ತ** : VII ೧೩

೧೮. ಮಾನ : II ಅಧ್ಯಾಯ ೧೧, ವಿಶಂತಿ ೩ ಪದ್ಯ-೧೧೭೬ 'ತಿಲಕೈಃ ವಿವಿಧೈಃ ಭವ್ಯಃ ನಾನಾ ವರ್ಣೈಃ ಮನೋಹರೈಃ'

೧೯. ಆರ್. ಸಿ. ಹಿರೇಮಠ (ಸಂ); ಪದ್ಮಣಾಂಕ ಕವಿ ವಿರಚಿತ **ಪದ್ಮರಾಜ ಪುರಾಣಂ**, (ಧಾರವಾಡ ೧೯೫೭), VIII ಪದ್ಯ-೨

೨೦. ಹಂಡಿಕಿಕೆ.ಕೆ: **ಸೋಮದೇವ ಸೂರಿಸ್ ಯಶಸ್ತಿಲಕ ಎಂಡ್ ಇಂಡಿಯನ್ ಕಲ್ಚರ್**, (ಸೊಲಾಪು ೧೯೪೯) P ೩೩

೨೧. ಸ್ಟೀನ್ ಎಂ.ಎ. (ಸಂ) ಕಲ್ಹಣಸ್ **ರಾಜತರಂಗಿಣಿ**, (New Delhi 1960), VII ಪದ್ಯ ೯೨೫-೩೦ Reprint.

ಚನ್ನಬಸಪ್ಪ. ಬಿ.*

ರಾಯಚೂರು ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು

ಅಗ್ರಹಾರಗಳು ಎಂದರೆ ಪ್ರಾಚೀನ ಕಾಲದ ವಿದ್ಯಾಕೇಂದ್ರಗಳು. ವಿದ್ಯಾಪಾರಂಗತರಾಗಿದ್ದ ಬ್ರಾಹ್ಮಣರ ಉಪಭೋಗಕ್ಕಾಗಿ ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾರ್ಪಡಿಸಿ ದಾನವಾಗಿ ಬಿಟ್ಟುಕೊಡುವ ಸಂಪ್ರದಾಯ ಹಿಂದಿನ ಕಾಲದಲ್ಲಿದ್ದಿತೆಂದು ಶಾಸನಗಳ ಮೂಲಕ ತಿಳಿದುಬರುತ್ತದೆ. ಈ ಅಗ್ರಹಾರಗಳು ಬಹುಸಂಖ್ಯೆಯಲ್ಲಿದ್ದು, ಹಳ್ಳಿಹಳ್ಳಿಗಳಲ್ಲಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುತ್ತಿದ್ದವು. ನಗರಪ್ರದೇಶಗಳಲ್ಲಿ ಬ್ರಹ್ಮಪುರಿಗಳು ಈ ಸೌಕರ್ಯವನ್ನು ಒದಗಿಸಿಕೊಡುತ್ತಿದ್ದವಾದರೂ, ಅವು ವಿರಳ ಸಂಖ್ಯೆಯಲ್ಲಿದ್ದವು. ಘಟಿಕಾಸ್ಥಾನಗಳು ಶೈಕ್ಷಣಿಕ ವ್ಯವಸ್ಥೆಯ ಒಂದು ಅಂಗವೇ ಆಗಿದ್ದರೂ ಧಾರ್ಮಿಕ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದುದುಂಟು. ಹೀಗಾಗಿ ಅಗ್ರಹಾರಗಳೇ ಸಂಪೂರ್ಣವಾಗಿ ನಾಡಿನ ಶಿಕ್ಷಣ ಪ್ರಸಾರದ ಹೊಣೆಯನ್ನು ಹೊತ್ತಿದ್ದವು. ಸಾಮಾನ್ಯವಾಗಿ ಅಗ್ರಹಾರ ಗಳನ್ನು ನೀಡುತ್ತಿದ್ದವರೆಂದರೆ ಅರಸರು, ಸಾಮಂತರು ಮತ್ತು ಮಹಾಮಂಡಲೇಶ್ವರರು. ಅಗ್ರಹಾರಗಳನ್ನು ನಿರ್ಮಿಸಿ ದಾನ ನೀಡುವುದರ ಮೂಲ ಉದ್ದೇಶವೆಂದರೆ ವಿದ್ಯೆಯ ಪ್ರಸಾರವಾಗಲಿ ಎಂಬುದೇ ಆಗಿದ್ದಿತು ಎಂದು ಹೇಳಬಹುದು. ಕೆಲವು ಸಂದರ್ಭದಲ್ಲಿ ಮಂತ್ರಿಗಳು ಮತ್ತು ಪುರೋಹಿತರುಗಳ ಕೋರಿಕೆಯ ಮೇರೆಗೆ ರಾಜರು ಅಗ್ರಹಾರಗಳನ್ನು ನಿರ್ಮಾಣ ಮಾಡುತ್ತಿದ್ದರು ಎಂಬುದರ ಬಗ್ಗೆ ರಾಯಚೂರು ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ.

ರಾಯಚೂರು ಜಿಲ್ಲಾ ಪ್ರದೇಶವನ್ನು "ಎಡದೊರೆನಾಡು" ಎನ್ನುವುದುಂಟು; ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಣ ಈ ಫಲವತ್ತಾದ ಪ್ರದೇಶವನ್ನು 'ದೋಅಬ್' ಎಂದು ಕರೆಯುತ್ತಾರೆ. ಶಾಸನಗಳ ಆಧಾರದಿಂದ ಈ ಜಿಲ್ಲೆಯ ಕೆಲವು ಅಗ್ರಹಾರಗಳ ಕಿರುಪರಿಚಯ ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಅಗ್ರಹಾರದ ಭೇದಗಳು

ರಾಯಚೂರು ಜಿಲ್ಲೆಯ ಅಗ್ರಹಾರಗಳನ್ನು ಸರ್ವ ನಮಸ್ಯದಗ್ರಹಾರ, ಕುತ್ತುಂಬಿಗಿತ್ತಿ ಅಗ್ರಹಾರ, ಶ್ರೀಮದನಾದಿ ಅಗ್ರಹಾರಗಳೆಂದು ವಿಂಗಡಿಸಿ ತಿಳಿದುಕೊಳ್ಳಬಹುದು. ಅವುಗಳು ಈ ಮುಂದಿನಂತಿವೆ.

ಸರ್ವನಮಸ್ಯದಗ್ರಹಾರಗಳು

ಬ್ರಾಹ್ಮಣರು ರಾಜರಿಂದ ಅಗ್ರಹಾರಗಳನ್ನು ಪಡೆಯುತ್ತಿದ್ದರಷ್ಟೇ, ಅವರಿಗೆ ಎಲ್ಲಾ ರೀತಿಯ ತೆರಿಗೆ ಸುಂಕಗಳಿಂದ ಬಿಡುಗಡೆ ಸಿಕ್ಕುತ್ತಿತ್ತು. ಇತರರಿಗೆ ರಾಜರು ವಿಧಿಸುತ್ತಿದ್ದ ಕರಗಳನ್ನು ಅಗ್ರಹಾರದ ಬ್ರಾಹ್ಮಣರಿಗೆ ಹಾಕುತ್ತಿರಲಿಲ್ಲವೆನ್ನಬಹುದು. ಹೀಗೆ ಎಲ್ಲಾ ರೀತಿಯ ತೆರಿಗೆಗಳಿಂದ ಮುಕ್ತವಾದ ಅಗ್ರಹಾರಗಳನ್ನು ಸರ್ವನಮಸ್ಯದ ಅಥವಾ ಸರ್ವಮಾನ್ಯದ ಅಗ್ರಹಾರವೆಂದು ಕರೆಯುತ್ತಾರೆ. ಇಂತಹ ಅಗ್ರಹಾರಗಳು ದಿದ್ದಗಿ, ಗಬ್ಬೂರು, ಕುರ್ಡಿ, ಕಲ್ಲೂರು, ಬಳಗಾನೂರು, ಹಿರೇಕೊಟ್ನೆಕಲ್ ಮುಂತಾದ ಗ್ರಾಮಗಳಲ್ಲಿದ್ದವು.

ದಿದ್ದಗಿ : ಈ ಊರು ಸಿಂಧನೂರು ತಾಲೂಕಿನಲ್ಲಿದ್ದು, ಇಲ್ಲಿಯ ಮಹಾಜನರ ಸಂಖ್ಯೆ ೧೦೮ ಆಗಿದೆ. ದಿದ್ದಗಿ ಗ್ರಾಮದ ಕ್ರಿ.ಶ. ೯೧೮ರ ಶಾಸನದಲ್ಲಿ ಉತ್ತಮದಗ್ರಹಾರ ದಿದ್ದಗೆ ಎಂದಿರುವುದು ತಿಳಿದುಬರುತ್ತದೆ[1]. ಬಳಾನೂರು ಗ್ರಾಮದ ನಗರೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ. ೧೧೮೨ರ ಶಾಸನದಲ್ಲಿ ಕಳಚೂರ್ಯ ಚಕ್ರವರ್ತಿ ರಾಯನಾರಾಯಣ ಆಹವಮಲ್ಲದೇವನ ಆಡಳಿತಾವಧಿಯಲ್ಲಿ ಸರ್ವನಮಸ್ಯದಗ್ರಹಾರ ದಿಗ್ಗಿಗೆಯಲ್ಲಿ ವೈಷ್ಣವ ಸರ್ವದೇವ ಸೆಟ್ಟಿಯರು ತಾವು ಮಾಡಿಸಿದ ಮಠದೊಳಗೆ ಅಲ್ಲಿಯ ಅಶೇಷ ಮಹಾಜನಗಳು, ಸೆಟ್ಟಿಕಾರರು, ಎಂಟು ಹಿಟ್ಟು, ಸಮಸ್ತನಖರಂಗಳು ಮುಂತಾದವರು ದೇವರ ಸೇವೆಗಾಗಿ ಭೂದಾನ ನೀಡುತ್ತಾರೆ[2]. ಇದರಿಂದ ತಿಳಿದುಬರುವುದೇನೆಂದರೆ ಇಲ್ಲಿಯ ವಿದ್ಯಾಭ್ಯಾಸ ಮಠದಲ್ಲಿ ನಡೆಯುತ್ತಿತ್ತೆಂದು ಹೇಳಬಹುದು.

ಗಬ್ಬೂರು

ಈ ಊರು ದೇವದುರ್ಗ ತಾಲೂಕಿಗೆ ಸೇರಿದ ಐತಿಹಾಸಿಕ ಮಹತ್ವ ಪಡೆದ ಗ್ರಾಮವಾಗಿದೆ. ಇದನ್ನು ಶಾಸನಗಳಲ್ಲಿ ಗೋಪುರಪುರ (ಗೋಪುರ ಗ್ರಾಮ), ಹಿರಿಯ ಗಬ್ಬೂರು ಎಂದು ಕರೆಯುತ್ತಿದ್ದರು. ಇದು ಅಯ್ಯನವಾಡಿ-೩೦೦ ವಿಭಾಗಕ್ಕೆ ಸೇರಿತ್ತು. ಇಲ್ಲಿ ದೊರೆತಿರುವ ೩೦ ಶಾಸನಗಳಲ್ಲಿ ೧೬ ಶಾಸನಗಳು (ಕ್ರಿ.ಶ. ೧೦೮೫ ರಿಂದ ಕ್ರಿ.ಶ. ೧೧೭೧ರವರೆಗೆ) ಇದು ಸರ್ವನಮಸ್ಯದಗ್ರಹಾರ ಎಂದು ತಿಳಿಸುವುದರ ಜೊತೆಗೆ, ಇಲ್ಲಿಯ ಮಹಾಜನರ ಸಂಖ್ಯೆ-೨೦೦ ಆಗಿದೆ. ಗಬ್ಬೂರು ಗ್ರಾಮದ ಮೇಲಶಂಕರ ದೇವಾಲಯದ ಮುಂದೆ ನಿಲ್ಲಿಸಿರುವ ಕ್ರಿ.ಶ.

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೫೬೦ ೦೫೬

೧೦೮೫ರ ಶಾಸನವು[೩] ಗಬ್ಬೂರು ಮತ್ತು ಇಲ್ಲಿಯ ಮಹಾಜನರನ್ನು ಈ ರೀತಿ ವರ್ಣಿಸುತ್ತದೆ:

"ಇದು ವಿದ್ಯಾಕ್ಷೇತ್ರ ಲೋಕಕ್ಕಧಿಕ
ಭುವನವಿಖ್ಯಾತವೀಗೋಪುರಂ
ತಾನಿದಾಪುಂಣ್ಯೋದಾ ನಾರುಹ ವಿಭುದ ಜನೋರ್ವ್ವಂದಿ
ವಿದ್ವಜ್ಜನಂಗಳು ಮುದಾದಿಂದಾ
ನಂದದಿಂದಂ ಕೊಡುವರೊಲಿದು
ಮಂತ್ರಾಕ್ಷರಂ ಧೃತಿಯಿಂದಂ ಪದಕುಂ
ಚಂದ್ರಾರ್ಕ್ಕ ತಾರಂನವುರ
ಮಧಿಕ ಮತ್ಯೂರ್ಜ್ಜಿತಂ ಗ್ರಾಮರಾಜಂ"
"ಸೊಗಯಿಸುತಿರ್ಕ್ಕುಮಿಂತು ನಡು
ನಾಡೊಳಗಯ್ಯಣವಾಡಿಯಲ್ಲಿ
ತಾಂಮಿಗಿತಿನಿಸಿಪ್ಪ ಗೋಪುರದ
ವಿಪ್ರಜನಂಗಳ ವೇದಘೋಷದಿಂ
ಅಗಣಿತಮಾನವದ್ಯ ಮಹಿಮೋಂನತಿ
ಕೀರ್ತಿಯುವೆಲ್ಲಿ ನೋರ್ಪ್ಪಡಂ ಬಗೆಗಳ
ನೀತಿ ಶಾಸ್ತ್ರ ಸಕಳಾಗಮಕೋವಿರೇ ಮಹಾತ್ಮರು"

ಈ ಊರಿನ ನೀಲಕಂಠೇಶ್ವರ ದೇವಾಲಯದ ಬಳಿ ಅಗಸಿಗೆ (ಚಂಡಿದರ್ವಾಜ) ಸೇರಿಸಿರುವ ಕ್ರಿ.ಶ. ೧೧೪೪ರ ಶಾಸನವು ಪಿರಿಯ ಬ್ರಹ್ಮಪುರಿ ಸರ್ವನಮಸ್ಯದಗ್ರಹಾರ ಹಿರಿಯ ಗೊಬ್ಬೂರು ಎಂದು ತಿಳಿಸುತ್ತದೆ[೪]. ಇದಕ್ಕೆ ಆಧಾರವೆಂಬಂತೆ ಈ ಗಬ್ಬೂರು ಗ್ರಾಮದಲ್ಲಿ ಇಂದಿಗೂ ಬ್ರಾಹ್ಮಣರ ಓಣಿ ಪ್ರತ್ಯೇಕವಾಗಿದ್ದು, ಆಗಿನ ಸಮಯದಲ್ಲಿ ಬ್ರಹ್ಮಪುರಿ ಭಾಗವಾಗಿತ್ತೆಂದು ಹೇಳಬಹುದು.

ಕುರ್ಡಿ

ಇದು ಮಾನ್ವಿ ತಾಲೂಕಿಗೆ ಸೇರಿದ ಹೋಬಳಿಯ ಕೇಂದ್ರ ಗ್ರಾಮವಾಗಿದೆ. ಈ ಊರಲ್ಲಿ ದೊರಕಿರುವ ಶಾಸನಗಳಿಂದ ಇದು ಸರ್ವನಮಸ್ಯದಗ್ರಹಾರವಾಗಿದ್ದು, ಅಯ್ಯೆಯನವಾಡಿ-೩೦೦ ವಿಭಾಗಕ್ಕೆ ಸೇರಿತ್ತು. ಈ ಗ್ರಾಮದ ಪ್ರಾಚೀನ ಹೆಸರು 'ರೂಡಿ' [ಕುರ್ಡಿ]ಯಾಗಿದ್ದು, ಇಲ್ಲಿಯ ಮಹಾಜನರ ಸಂಖ್ಯೆ ೧೪ ಆಗಿದೆ. ಈ ಊರಿನ ನೆಲಗುಡಿಯ ಹತ್ತಿರ ನಳದ ಕೆಳಗೆ ಹಾಸಿರುವ ಕ್ರಿ.ಶ. ೧೦೯೨ರ ಶಾಸನವು ಜಪಸಮಾಧಿ ಶೀಲದ್ವಿಜಗುರುದೇವ ಪೂಜಾತತ್ಪರರು, ಸಕಳಶಾಸ್ತ್ರವಿಶಾರದರು, ಅನೇಕ ಯಜ್ಞ್ಯಾಗಗಳನ್ನು ಮಾಡಿ ಪವಿತ್ರ ಶರೀರ ಹೊಂದಿದವರು, ವೇದಾಂತ ಸಮಯ ಸಮುದ್ಧರಗ ಸರಸ್ವತೀ ಲಬ್ಧವರಪ್ರಸಾದರು ಮುಂತಾದವುಗಳಿಂದ ಕೂಡಿದ ವಿದ್ವಜ್ಜನ ಎಂಬುವರೊಂದಿಗೆ ಸರ್ವನಮಸ್ಯದಗ್ರಹಾರ ಎಂಬ ವಿಷಯ ತಿಳಿದುಬರುತ್ತದೆ[೫]. ಕುರ್ಡಿ ಗ್ರಾಮದ ಕ್ರಿ.ಶ. ೧೧೧೯ರ ಶಾಸನವು ಕಾಶ್ಯಪಗೋತ್ರದ ವಾಸುದೇವನನ್ನು ಹೆಸರಿಸುತ್ತದೆ. ಇವನು ಕರ್ನಾಟಕ ವಂಶೋದ್ಭವಂ ಎಂದು ತಿಳಿಸುವುದರೊಂದಿಗೆ ಇವನ ಮಗನಾದ ಮಧುಸೂದನನು ತನ್ನ ತಂದೆ ಹೆಸರಿನಲ್ಲಿ ವಾಸುದೇವ ದೇವಾಲಯವನ್ನು ಕಟ್ಟಿಸುತ್ತಾನೆ. (ಇಂದಿನ ನೆಲಗುಡಿಯೇ ಹಿಂದೆ ವಾಸುದೇವ ದೇವಾಲಯವಾಗಿತ್ತು) ಎಂಬ ವಿವರಗಳು ಈ ಶಾಸನದಿಂದ ತಿಳಿದುಬರುತ್ತದೆ. ಮುಂದು ವರೆದ ಇದೇ ಶಾಸನದ (ಕ್ರಿ.ಶ. ೧೧೪೮) ಪ್ರಕಾರ ಅಗ್ರ ಹಾರ ರೂಢಿಯಲ್ಲಿ ವಾಸುದೇವ ದೇವಾಲಯಕ್ಕೆ ಮಧು ಸೂದನನ ಮಗ ಮಾಚರಸನು ಮಹಾಜನಗಳನ್ನು ಬೇಡಿ ಭೂಮಿ ಪಡೆದು, ಅದನ್ನು ಬೆಂಕೊಳ್ವನ ಕೋಲಲ್ಲಿ ಅಳೆದು ನಾಲ್ಕು ಮತ್ತರು ಭೂಮಿಯನ್ನು ದೇವಾಲಯಕ್ಕೆ ಬಿಡುತ್ತಾನೆ[೬]. ಕ್ರಿ.ಶ. ೧೧೩೪ರ ಈ ಊರಿನ ಶಾಸನದಂತೆ ಸೋಮಭಟ್ಟೋ ಪಾಧ್ಯಾಯರ ಮಕ್ಕಳಾದ ನಾರಾಯಣಭಟ್ಟೋಪಾಧ್ಯಾಯರು ಕುರ್ಡಿ ಅಗ್ರಹಾರದ ಮಹಾಜನರ ಉಪಜೀವನಕ್ಕೆ ತಿಂಗಳಿಗೆ ಹೊನ್ನಗದ್ಯಾಣವನ್ನು ನೀಡುತ್ತಿದ್ದ ವಿಷಯ ತಿಳಿದುಬರುತ್ತದೆ[೭]. ಈ ಮೇಲಿನ ಶಾಸನಗಳಲ್ಲದೆ ಈ ಕುರ್ಡಿ ಗ್ರಾಮದ ಇತರ ಶಾಸನಗಳಿಂದ ಇಲ್ಲಿಯೆ ಮಹಾಜನರು ತಾವು ದಾನ ನೀಡುವುದರೊಂದಿಗೆ ತಮ್ಮ ಸನ್ನಿಧಾನದಲ್ಲಿ ಇತರರನ್ನು ದಾನ ನೀಡಿಸುವ ಸಂಗತಿಗಳು ಕಂಡುಬರುತ್ತವೆ.

ಕಲ್ಲೂರು

ಈ ಊರು ಮಾನ್ವಿ ತಾಲ್ಲೂಕಿನಲ್ಲಿದೆ. ಈ ಗ್ರಾಮದ ಮಾರಾಟೇಶ್ವರ ಗುಡಿಯ ಒಳಗೋಡೆಯ ಮೇಲೆ ಇರುವ ಕ್ರಿ.ಶ. ೧೦೯೬ರ ಶಾಸನವು[೮] ಚಾಳುಕ್ಯ ಚಕ್ರವರ್ತಿ ೬ನೆಯ ವಿಕ್ರಮಾದಿತ್ಯನು ಪಂಚಲಾಂಗವೆಂಬ ಕ್ರತುಮಾಡಿ ಕಲ್ಲೂರು ಗ್ರಾಮ ವನ್ನು ಸೋಮಯಾಜಿ ಭಟ್ಟರೆಂಬ ವೈದಿಕ ವಿದ್ವಾಂಸರಿಗೆ ದಾನ ಮಾಡಿದ ಸಂಗತಿ ಇದ್ದು, ವಿದ್ವಾಂಸರನ್ನು ಶಾಸನವು ಈ ರೀತಿ ಬಣ್ಣಿಸುತ್ತದೆ.

ಜಪಹೋಮ, ಸಮಾಧಿಶೀಲಗುಣ, ತ್ಯಾಗಚಿನ್ತಾಮಣಿ, ವಿದ್ವತ್ ಚೂಡಾಮಣಿ, ನೀತಿಚಾಣುಕ್ಯ, ದ್ವಿಜಕುಳಕಮಳನೀ ದಿವಾಕರ, ಸೌಜನ್ಯರತ್ನಾಕರ, ಕಾವ್ಯಚಾಮಿಕರ ಮೊದಲಾದ ಪ್ರಶಸ್ತಿಗಳಿಂದ ಕೂಡಿದ ಶ್ರೀ ವಿಕ್ರಮಾದಿತ್ಯದೇವ ಭಟ್ಟೋಪಾಧ್ಯಾಯ ಸರ್ವಶ್ರುತಸೋಮಾಯಾಜಿ ಎಂದು ತಿಳಿದುಬರುತ್ತದೆ.

ಬಳಗಾನೂರು

ಸಿಂಧನೂರು ತಾಲ್ಲೂಕಿಗೆ ಸೇರಿದ ಬಳಗಾನೂರು ಗ್ರಾಮದ ಕ್ರಿ.ಶ. ೧೧೭೫ರ ಶಾಸನದಲ್ಲಿ ಶ್ರೀಮತ್ರಿಭುವನಮಲ್ಲದೇವರ ನಿತ್ಯ ಭೂಮಿದಾನದ ಸಂದರ್ಭದಲ್ಲಿ ಸರ್ವನಮಸ್ಯದ ಮಹಾಗ್ರಹಾರ ಹಿರಿಯ ಬಳಗಾನೂರಿಗೆ ಗೋಸಹಸ್ರದಾನ, ಅನ್ನದಾನ ವಿನೋದದೀನನಾಥ ಸಮುದ್ಧರಣ ಮುಂತಾದ ವಿಶೇಷಣಗಳಿಂದ ಕೂಡಿದ ನಖರರು ಮತ್ತೇಯನ ಮಧುಪಾಧ್ಯಾಯರ ಕೈಯಿಂದ ಕ್ರಯವಾಗಿ ಪಡೆದು ಅವನ ಚಿಕ್ಕಪ್ಪ ನಾಗವಿಷ್ಣುಪಾಧ್ಯರ ಮಗ

ಮುದ್ದಣುಪಾಧ್ಯಾಯರ ಕೈಯಿಂದ ಕೆಲವು ವೃತ್ತಿಗಳನ್ನು ಕ್ರಯಕ್ಕೆ ಪಡೆದು ಮಹಾಜನಗಳ ಪಾದಪೂಜೆ ಮಾಡಿದ ವಿಷಯ ತಿಳಿದುಬರುತ್ತದೆ.

ಹಿರೇಕೊಟ್ನನೆಕಲ್ಲು

ಈ ಗ್ರಾಮವು ಮಾನ್ವಿ ತಾಲ್ಲೂಕಿನಲ್ಲಿದೆ. ಇದರ ಪ್ರಾಚೀನ ಹೆಸರು ಕೊಟ್ಟಕುಣುಹೆಯಾಗಿದೆ. ಈ ಊರಿನ ಬನ್ನಿಕಟ್ಟೆಯ ಮೇಲೆ ಇರುವ ಕ್ರಿ.ಶ. ೧೧೯೧ರ ಶಾಸನದಂತೆ[೧೦] ಆರನೇ ವಿಕ್ರಮಾದಿತ್ಯನು ತನ್ನ ನಿತ್ಯಭೂಮಿದಾನ ಕಾರ್ಯದಲ್ಲಿ ಇದನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ನೀಡಿದನು. ಇವರು ನಾನಾ ಅಗ್ನಿಹೋತ್ರ ದ್ವಿಜಗುರುದೇವತಾಪೂಜತತ್ಪರರೂ, ಸಕಳಶಾಸ್ತ್ರವಿಶಾರದರೂ ಆಗಿದ್ದರು. ಕೊಟ್ಟಕುಣುಹೆಯ ಅಶೇಷ ಮಹಾಜನರ ಸನ್ನಿಧಾನದಲ್ಲಿ ಚಿಕ್ಕತಿಪ್ಪಣ್ಣ ಭಟ್ಟೋಪಾಧ್ಯಾಯನ ಮೊಮ್ಮಗನಾದ ಬ್ರಹ್ಮದೇವನು ತನ್ನ ಆಸ್ತಿಯಲ್ಲಿ ಚಿಕನಬರವಿಯೆಣ್ಣನು ಗಂಗದೇವನಾಯಕನ ಮಕ್ಕಳು ಬಾಗುಳಹಾಳದ (ಇಂದಿನ ಬಾಗಲವಾಡ ಗ್ರಾಮ) ಈಶ್ವರಣ್ಣನಿಂದ ಕ್ರಯಕ್ಕೆ ಪಡೆದು ಧರ್ಮದವತಕ್ಕೆ ಮತ್ತು ಸತ್ರಕ್ಕೆಂದು ಆ ಮಹಾಜನಗಳ ಪಾದಪೂಜೆ ಮಾಡಿ ದಾನ ನೀಡಿದ ವಿಷಯ ತಿಳಿಯುತ್ತದೆ.

ಕುತ್ತುಂಬಿತ್ತಿ ಅಗ್ರಹಾರ

ಕುತ್ತುಂಬಿತ್ತಿ ಎಂದರೆ (ಕುಟುಂಬ ವೃತ್ತಿ) ಯಾವುದೇ ಒಂದು ಊರಲ್ಲಿ ಒಂದು ಬ್ರಾಹ್ಮಣರ ಕುಟುಂಬದ ಉಪಜೀವನಕ್ಕಾಗಿ ಬಿಟ್ಟುಕೊಟ್ಟ ಊರನ್ನು ಕುತ್ತುಂಬಿತ್ತಿ ಅಗ್ರಹಾರ ಎನ್ನುತ್ತಾರೆ. ಲಿಂಗಸೂಗೂರು ತಾಲ್ಲೂಕು ಕಿಲಾರಹಟ್ಟಿ ಗ್ರಾಮದ ಹನುಮಾನ ದೇವಾಲಯದಲ್ಲಿರುವ ಕ್ರಿ.ಶ. ೧೦೬೮ರ ಶಾಸನದಲ್ಲಿ ಕರಡಿ ಕಲ್ಲು-೩೦೦ ವಿಭಾಗದಲ್ಲಿಯ ಕುತ್ತುಂಬಿತ್ತಿ ಅಗ್ರಹಾರ ಬನ್ನಿಗೋಳ ವನ್ನು ಕಲ್ಯಾಣ ಚಾಳುಕ್ಯ ಅರಸ ತ್ರೈಲೋಕ್ಯಮಲ್ಲನ ಮಗ ಕುಮಾರ ಜಯಸಿಂಹದೇವನು ಆಳುತ್ತಿದ್ದನೆಂಬ ವಿಷಯ ತಿಳಿದುಬರುತ್ತದೆ.

ಶ್ರೀಮದನಾದಿ ಅಗ್ರಹಾರ

ಒಂದು ಊರನ್ನು ಅಥವಾ ಗ್ರಾಮಗಳನ್ನು ಸೇರಿಸಿ ಒಬ್ಬ ರಾಜನೋ, ಅಧಿಕಾರಿಯೋ ಅಥವಾ ದಾನಿಯೋ ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ನೀಡುತ್ತಿದ್ದನು. ಅನೇಕ ಸಂದರ್ಭಗಳಲ್ಲಿ ಊರಿನ ಅಥವಾ ಗ್ರಾಮಗಳ ಹೆಸರು ಬದಲಾವಣೆ ಹೊಂದು ತ್ತಿದ್ದವು. ಕೆಲವು ಅಗ್ರಹಾರಗಳು ಯಾರಿಂದ ಸ್ಥಾಪಿತವಾದವು ಎಂಬುದು ಕಾಲಾನಂತರದಲ್ಲಿ ಜನರ ಸ್ಮರಣೆಯಿಂದ ಮರೆತು ಹೋದಾಗ ಅಂತಹ ಸ್ಥಳವನ್ನು ಶ್ರೀಮದನಾದಿ ಅಗ್ರಹಾರ ವೆಂದು ಕರೆಯುತ್ತಾರೆ. ಇಂತಹ ಅಗ್ರಹಾರಗಳಲ್ಲಿ ಗಬ್ಬೂರು ಮತ್ತು ಸಿಂಧನೂರುಗಳು ಪ್ರಮುಖವಾಗಿವೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕು ಪುರ ಗ್ರಾಮದ ಈಶ್ವರ ದೇವಾಲಯದ ಬಳಿ ಅಗಸಿಗೆ ಸೇರಿಸಿರುವ ಕ್ರಿ.ಶ. ೧೨ನೇ ಶತಮಾನದ ಶಾಸನ[೧೨] ಸಿಂಧನೂರಿನ ಬಗ್ಗೆ ಈ ರೀತಿ ವಿವರಿಸುತ್ತದೆ.

ನಾಚಿಯರೆನೆ ನವಿತಿಯ ಸ್ಥಳಮುಂ ಹೆಗ್ಗಡೆವನೆ
ಶ್ರೀಮದಗ್ರಹಾರಂ ಸಿಂದನೂರ ಸ್ಥಳಮಂತೊರ

ಎಂದು ಹೇಳುತ್ತದೆ.

ಅಗ್ರಹಾರಗಳು

ರಾಯಚೂರು ಜಿಲ್ಲೆಯಲ್ಲಿ ಇನ್ನೂ ಕೆಲವು ಅಗ್ರಹಾರಗಳ ಪ್ರಸಿದ್ಧಿ ಪಡೆದಿದ್ದು, ಅವುಗಳಿಗೆ ಸಾಮಾನ್ಯ ಅಗ್ರಹಾರಗಳೆಂದ ಕರೆಯಲಾಗಿದೆ. ಅವುಗಳು ಈ ಕೆಳಗಿನಂತಿವೆ.

ಸಾಲಗುಂದೆ

ಈ ಊರು ಸಿಂಧನೂರು ತಾಲ್ಲೂಕಿನಲ್ಲಿದ್ದು, ಈ ಗ್ರಾಮದ ನೀಲಕಂಠೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೦೬೩ರ ಶಾಸನದಲ್ಲಿ[೧೩] ಇಡೀ ಭೂಮಂಡದಲ್ಲಿಯೇ ಎಡದೊರೆನಾಡು ಪ್ರಸಿದ್ಧಿಯಾಗಿದ್ದು, ಅದರಲ್ಲಿ ನಿಟ್ಟರವೆ-೭೦ರ ಅಗ್ರಹಾರವಾದ ಸಾಲಗುಂದೆಯು ಕೆರೆ, ಬಾವಿ, ತೋಟ ಮೊದಲಾದವುಗಳಿಂದ ಶೋಭಿಸುವದರೊಂದಿಗೆ, ಅಮರಾವತಿ ಪಟ್ಟಣಕ್ಕಿಂತಲೂ ಸುಂದರವಾಗಿತ್ತೆಂದು ಶಾಸನ ಬಣ್ಣಿಸುತ್ತದೆ. ಇಲ್ಲಿ ಉತ್ತಮರೆನಿಸಿದ ಮಹಾಜನರಿದ್ದು, ಇವರು ೩೨ ಗೇಣಗಳೆಯಿಂದ ೧೨ ಮತ್ತರು ನೆಲವನ್ನು ದತ್ತಿ ಪಡೆದವರಾಗಿದ್ದರು. ಇವರು ನಯವಿದರು, ಧರ್ಮಪರರಾಗಿದ್ದರೆಂದು ತಿಳಿದುಬರುತ್ತದೆ. ಸಾಲಗುಂದೆ ಗ್ರಾಮದ ಕಾಲಕಾಲೇಶ್ವರ ದೇವಾಲಯದ ನವರಂಗದಲ್ಲಿರುವ ಕ್ರಿ.ಶ. ೧೧೫೩ರ ಶಾಸನವು[೧೪] 'ಎಡದೊರೆಯಿಚ್ಚಾಸಿರ ನಾಡೊಳಗೆ ಸೋಭೆವತಿರ್ಪ ಭೂದೇವ ಕುಳೋತ್ತಮರಿಂದಂ ಕೇವಳವೆ ಸಾಲಗುಂದೆಯಪ್ಪತ್ತರೊಳು' ಎಂದು ಸ್ಪಷ್ಟಪಡಿಸುತ್ತದೆ. ಆರಂಭದಲ್ಲಿ ನಿಟ್ಟರವೆ ನಾಡಿನ ಅಗ್ರಹಾರವಾಗಿದ್ದ ಸಾಲಗುಂದೆಯು ಕ್ರಿ.ಶ. ೧೧೫೩ರ ವೇಳೆಗೆ ಸ್ವತಂತ್ರ ವಿಭಾಗವಾಗಿ ರೂಪುಗೊಂಡಿತು.

ಮುಕ್ಕುಂದ

ಈ ಗ್ರಾಮವು ಸಿಂಧನೂರು ತಾಲೂಕಿನಲ್ಲಿದೆ. ತುಂಗಭದ್ರಾ ನದಿ ತೀರದಲ್ಲಿರುವ ಇದಕ್ಕೆ ಹಿಂದೆ ವರದರಾಜ ಅಮ್ಮಪುರವೆಂದು ಕರೆಯುತ್ತಿದ್ದರು. ಇದು ಹಿಂದೆ ನಿಟ್ಟರವೆ-೭೦ರ ಅಗ್ರಹಾರವಾಗಿದ್ದು, ಇದರ ಮಹಾಜನರ ಸಂಖ್ಯೆ-೩೦೦ ಆಗಿದೆ. ಕಲ್ಬುರ್ಗಿ ಜಿಲ್ಲೆ ಸುರಪುರ ತಾಲೂಕು ಏವೂರ ಗ್ರಾಮದ ಕ್ರಿ.ಶ. ೧೦೭೭ ಶಾಸನವು[೧೫] ಹೀಗೆಂದಿದೆ :

ಕಂ॥ ಪೊಡವಿಗದೆ ತಾನೆ ಮುಖಮೆನಿ
ಪೆಡೆದೊರೆನಾಡಿಂಗೆ ತಿಳಕದನ್ನದಿ ನೊಪ್ಪಂ
ಬಡೆದಿರ್ಕ್ಕು ಮೆಸೆವ ಕಿರುದೊರೆದಡಿಯೊಳು
ಮುಕ್ಕುನ್ದೆಯೆಂಬ ವಿಪ್ರಗ್ರಾಮಂ

-ಹೀಗೆ ಮುಕ್ಕುಂದಿ ಗ್ರಾಮವು ಪ್ರಸಿದ್ಧಿ ಪಡೆದಿತ್ತು. ಸಿಂಧನೂರು ತಾಲ್ಲೂಕು ಮುಕ್ಕುಂದಿ ಗ್ರಾಮದ ಸೋಮಲಿಂಗೇಶ್ವರ ದೇವಾಲಯದ ಕ್ರಿ.ಶ. ೧೦೮೮ರ ಶಾಸನವು ವೇದಾರ್ತ್ಥ ಶಾಸ್ತ್ರವಿದರಾದ ಬ್ರಾಹ್ಮಣರ ಕುಶಲೋಪಚಾರಕ್ಕೆ ಭೂದಾನ ನೀಡಿದ

ವಿಷಯ ತಿಳಿದುಬರುತ್ತದೆ. ಹಾಗೆಯೇ ಇದೇ ದೇವಾಲಯದಲ್ಲಿರುವ ಕ್ರಿ.ಶ. ೧೦೯೭ರ ಇನ್ನೊಂದು ಶಾಸನವು[೧೭] ಆರನೇ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಸಿಂಧಕುಲದ ಬಾಚರಸನು ಅಗ್ರಹಾರ ಮುಕ್ಕುಂದೆಯಲ್ಲಿ ಬಾಚೇಶ್ವರ ದೇವಾಲಯವನ್ನು ಕಟ್ಟಿಸಿ ಅದರ ರಂಗಭೋಗ ಜೀರ್ಣೋದ್ಧಾರ, ಮಠದ ತಪೋಧನರ ವಿದ್ಯಾಸತ್ರಕ್ಕೆ, ಮಣಿಗಳಾಹಾರ, ಧಾನ್ಯಕ್ಕೆ, ವಸ್ತ್ರಕ್ಕೆ ಮರಯಿಟ್ಟಿಗೆಯಲು ತಮ್ಮ ಮನೆಯ ಸಾಮ್ಯದಲ್ಲಾದ ಸಿದ್ಧಾಯ ಅರವತ್ಮೂರು ಮತ್ತರು ಭೂಮಿಯನ್ನು ದತ್ತಿ ಬಿಟ್ಟು ಕೊಡುತ್ತಾನೆ.

ಬೆಳಗುರ್ಕಿ

ಸಿಂಧನೂರು ತಾಲ್ಲೂಕಿನಲ್ಲೂ ಈ ಗ್ರಾಮದ ಅಗಸೆ ಬಾಗಿಲ ಬಳಿಯಿರುವ ಕ್ರಿ.ಶ. ೯೯೨ರ ಶಾಸನವು[೧೮] ಚಾಳುಕ್ಯ ಅರಸ ಸತ್ಯಾಶ್ರಯನು 'ಮನೆವೆರ್ಗ್ಗಡೆವಿದ್ದಮಯ್ಯನ ಭಿನ್ನಪದಂತೆ' ಕುದಿಯಪರವಿ-೭೦ರಲ್ಲಿದ್ದ ಬೆಳಗುರ್ಕಿಯನ್ನು ಅಗ್ರಹಾರ ಮಾಡಿ, ಇದಕ್ಕೆ ಕ್ರಯದಾನ, ಮತ್ತರು, ತೋಟಗಳನ್ನು ದತ್ತಿ ಕೊಟ್ಟನು.

ಒಳಬಳ್ಳಾರಿ

ಈ ಗ್ರಾಮವು ಸಿಂಧನೂರು ತಾಲೂಕಿನಲ್ಲಿದೆ. ಇದರ ಪ್ರಾಚೀನ ಹೆಸರು ಪಿರಿಯಬೆಳ್ಳಹಾರವಾಗಿದ್ದು, ಇಲ್ಲಿಯ ಮಹಾಜನರ ಸಂಖ್ಯೆ-೧೨೦ ಆಗಿದೆ. ಈ ಊರಿನ ರಾಮಲಿಂಗೇಶ್ವರ ದೇವಾಲಯದ ಹತ್ತಿರ ಇರುವ ಕ್ರಿ.ಶ. ೧೧೧೭ರ ಶಾಸನವು[೧೯] ಚಾಳುಕ್ಯ ಅರಸರ ತ್ರಿಭುವನ ಮಲ್ಲದೇವನು ಜಯಂತಿಪುರ (ಇಂದಿನ ಬನವಾಸಿ)ದ ನೆಲೆವೀಡಿನಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ, ಅವನ ಸಾಮಂತನಾದ ಪಿರಿಯ ಬೇಂಟೆಯ ವಸಂತನಾಯಕನು ತಾನು ಪ್ರತಿಷ್ಠೆ ಮಾಡಿಸಿದ ಬಾಲಭಾಸ್ಕರ ದೇವರು ಮತ್ತು ಕೇಶವದೇವರ ನೈವೇದ್ಯಕ್ಕೆಂದು ಆದಿತ್ಯದೇವರ ಗಡಿಗಂಬದ ಕೋಲಿನಲ್ಲಿ ಹತ್ತು ಮತ್ತರು ಕರಿಯ ನೆಲವನ್ನು ಅಳೆದು ನೀಡುತ್ತಾನೆ. ಈ ಧರ್ಮವನ್ನು ಪಿರಿಯ ಬೆಳ್ಳಹಾರದ ೧೨೦ ಮಹಾಜನರು ರಕ್ಷಿಸಬೇಕೆಂದಿದೆ.

ಮಾನ್ವಿ ತಾಲೂಕು ತಡಕಲ್ ಗ್ರಾಮವು ಅಗ್ರಹಾರವಾಗಿದ್ದು, ಚಾಳುಕ್ಯ ಚಕ್ರವರ್ತಿ ಜಗದೇಕ ಮಲ್ಲನು ಏತಗಿರಿ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ರಾಣಿಯಾದ ಬಿಜ್ಜಲದೇವಿಯು ಅಗ್ರಹಾರ ತಡಕಲ್‌ನ ದೇವಾಲಯವೊಂದಕ್ಕೆ ಭೂದಾನ ಮಾಡಿದ ವಿಷಯವನ್ನು ಕ್ರಿ.ಶ. ೧೦೩೩ರ ತಡಕಲ್ ಗ್ರಾಮದ ಶಾಸನ[೨೦]ವು ತಿಳಿಸುತ್ತದೆ. ಲಿಂಗಸೂಗೂರು ತಾಲೂಕು ಮುದಗಲ್ ಗ್ರಾಮವು ೩೦೦ ಮಹಾಜನರಿಂದ ಕೂಡಿದ ಅಗ್ರಹಾರ[೨೧] (ಮುದಗಲ್ ಗ್ರಾಮದ ಕ್ರಿ.ಶ. ೧೦೬೫ರ ಶಾಸನ)ವಲ್ಲದೆ ಬ್ರಹ್ಮಪುರಿ[೨೨] (ಮುದಗಲ್ ಗ್ರಾಮದ ರಾಮಲಿಂಗದೇವಾಲಯದ ಹತ್ತಿರ ಕೋಟೆಗೆ ಜೋಡಿಸಿರುವ ಕ್ರಿ.ಶ. ೧೨೧೫ರ ಶಾಸನ) ಕೂಡ ಈ ಊರಲ್ಲಿದ್ದಿತೆಂದು ತಿಳಿದುಬರುತ್ತದೆ. ಇದೇ ತಾಲ್ಲೂಕು ತಾಲೇಖಾನ ಗ್ರಾಮವು ಕೆಳವಾಡಿ-೩೦೦ರಲ್ಲಿಯು ಪ್ರಸಿದ್ಧಿ ಪಡೆದ ಅಗ್ರಹಾರವಾಗಿದ್ದು, ಇದನ್ನು ಪ್ರಾಚೀನದಲ್ಲಿ ತಂಕಬಾವಿ[೨೩] ಎಂದು ಕರೆಯುತ್ತಿದ್ದರು. ಇದೇ ತಾಲ್ಲೂಕು ಸುಲ್ತಾನಪುರ ಗ್ರಾಮದ ಹನುಮಂತ ದೇವಾಲಯದ ಮುಂದೆ ಇರುವ ಕ್ರಿ. ಶ ೧೫೩೭ರ ಶಾಸನದಲ್ಲಿ[೨೪] ಮೇದಿನಾಪುರ ಅಗ್ರಹಾರವನ್ನು ವಿಜಯನಗರದ ಅರಸ ಅಚ್ಯುತ ದೇವರಾಯನ ಅವಧಿಯಲ್ಲಿ ಅವನ ಸಾಮಂತ ಗುಜ್ಜಲ ಇಮ್ಮಡಿ ಮೇದಿನಿರಾಯನು ಮೇದಿನಾಪುರ (ಲಿಂಗಸೂಗೂರು ತಾಲ್ಲೂಕು) ಅಗ್ರಹಾರಕ್ಕೆ ದತ್ತಿ ಕೊಟ್ಟ ವಿಷಯ ತಿಳಿದುಬರುತ್ತದೆ.

ಇತರೆ ಅಗ್ರಹಾರಗಳು

ರಾಯಚೂರು ಜಿಲ್ಲೆಯಲ್ಲಿ ಇನ್ನೂ ಕೆಲವು ಅಗ್ರಹಾರಗಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಇವುಗಳ ಪೈಕಿ ಮಾನವಿ ತಾಲ್ಲೂಕು ತುಪದೂರು ಗ್ರಾಮದ ಕ್ರಿ. ಶ.೧೨ ನೇ ಶತಮಾನದ (೬ನೇ ವಿಕ್ರ ಮಾದಿತ್ಯ) ಶಾಸನ ಅಗ್ರಹಾರಂ ತೆನೆಯ[೨೫] ಮತ್ತು ಇದೇ ತಾಲ್ಲೂಕು ಕುರ್ಡಿಗ್ರಾಮದ ಈಶ್ವರಗುಡಿಯ ಕ್ರಿ. ಶ. ೧೧೩೭ರ ಶಾಸನದಲ್ಲಿ ಸರ್ವನಮಸ್ಯದಗ್ರಹಾರ ರಾರಾವಿ[೨೬] ಎಂಬ ಹೆಸರುಗಳು ಬರುತ್ತವೆ. ಇವುಗಳು ಈಗ ಯಾವ ಊರುಗಳು ಎಂಬುದು ಪತ್ತೆಹಚ್ಚುವದಕ್ಕೆ ಸಾಧ್ಯವಾಗಿಲ್ಲ. ಹಾಗೆಯೇ ಲಿಂಗಸೂಗೂರು ತಾಲ್ಲೂಕು ಕರಡಿಕಲ್,[೨೭] ಮಾನ್ವಿ ತಾಲ್ಲೂಕಿನ ಬಲ್ಲಟಗಿ[೨೮] ಮತ್ತು ಅತ್ತನೂರು[೨೯] ಗ್ರಾಮಗಳಲ್ಲಿ ಬ್ರಹ್ಮಪುರಿಗಳಿದ್ದುದು ರಾಯಚೂರು ಜಿಲ್ಲೆಯ ಶಾಸನಗಳಿಂದ ತಿಳಿದು ಬರುತ್ತದೆ.

ಈ ಮೇಲೆ ತಿಳಿಸಿದ ರಾಯಚೂರು ಜಿಲ್ಲೆಯ ಅಗ್ರಹಾರಗಳಲ್ಲಿಯ ಮಹಾಜನರು ವಿದ್ಯೆ ಕಲಿಸುವ ಭಟ್ಟೋ ಪಾಧ್ಯಾಯ, ನಾಗವಿಷ್ಣು ಉಪಾಧ್ಯಾಯ, ಸೋಮಯಾಜಿ ಭಟ್ಟರೂ ಆಗಿದ್ದರು ಎಂಬ ಬಗ್ಗೆ ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತವೆ. ಇವರುಗಳು ಅಂದಿನ ದಿನಗಳಲ್ಲಿ ವೇದಶಾಸ್ತ್ರ ಪರಿಣಿತರು, ನೀತಿಶಾಸ್ತ್ರ, ಸಕಳಾಗಮ ಕೋವಿದರು, ಸಕಳ ಶಾಸ್ತ್ರಗಳಲ್ಲಿ ಪರಿಣಿತರಲ್ಲದೆ, ಜಪ, ಹೋಮ, ದ್ವಿಜಗುರುದೇವ ಪೂಜಾತತ್ಪರರೂ ಆಗಿದ್ದು ಇವರು ಅಂದಿನ ದಿನಗಳಲ್ಲಿ ತಾವು ಕಲಿತ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಮಠ, ದೇವಾಲಯಗಳನ್ನು ಆಶ್ರಯಿಸಿಕೊಂಡಿರುವುದರೊಂದಿಗೆ, ದೇವಾಲಯಗಳ ಪೂಜೆಯ ಕೈಂಕರ್ಯವನ್ನು ಮಾಡುವವರಾಗಿದ್ದರು. ಆದುದರಿಂದ ಇವರಿಗೆ ಕಲ್ಯಾಣ ಚಾಳುಕ್ಯ ಅರಸರಾದ ಸತ್ಯಾಶ್ರಯ, ತ್ರೈಲೋಕ್ಯಮಲ್ಲ, ಎರಡನೇ ಜಗದೇಕಮಲ್ಲ, ಆರನೇವಿಕ್ರಮಾದಿತ್ಯ, ಕಳಚೂರಿ ಅರಸರಾದ ರಾಯಮುರಾರಿ ಸೋವಿದೇವ, ಆಹವಮಲ್ಲದೇವ , ಸೇವುಣ ಅರಸಸಿಂಘಣ, ವಿಜಯನಗರ ಅರಸ ಅಚ್ಯುತ ದೇವರಾಯನ ಸಾಮಂತ ಅರಸನಾದ ಗುಜ್ಜಲ ಇಮ್ಮಡಿ ಮೇದಿನಿರಾಯ ಮೊದಲಾದವರು ಅಗ್ರಹಾರಗಳನ್ನು ನಿರ್ಮಿಸಿ ದತ್ತಿ ಕೊಟ್ಟಿರುವ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಅರಸರು ಅಧ್ಯಾಪಕ ಮಹಾಜನರಿಗೆ ಮಠಗಳನ್ನೂ ವಿದ್ಯಾಸತ್ರಗಳನ್ನು ಕಟ್ಟಿಸಿಕೊಟ್ಟಿದ್ದರು. ಉಪಜೀವನಕ್ಕೆ ಧ್ಯಾನ, ತೊಡಲು ವಸ್ತ್ರ , ಹೊನ್ನು, ಗದ್ಯಾಣ, ಗೋಸಹಸ್ರ ದಾನ, ಅನ್ನದಾನ ಮೊದಲಾ

ದವುಗಳನ್ನು ಒದಗಿಸಿದಲ್ಲದೆ, ತಪೋಧನರಾದ ಆಚಾರ್ಯರುಗಳಿಗೆ ಯಾವುದೇ ರೀತಿಯ ತೊಂದರೆ ಬರದಂತೆ ನೋಡಿ ಕೊಳ್ಳುತ್ತಿದ್ದರು. ಸಮಾಜದಲ್ಲಿ ಉನ್ನತ ಸ್ಥಾನ ಹೊಂದಿದ್ದ ಮಹಾಜನರು ತಮ್ಮ ಪೌರೋಹಿತ್ಯದಿಂದಾಗಿ ರಾಜಕೀಯದಲ್ಲೂ ಪ್ರಮುಖ ಸ್ಥಾನ ಪಡೆದಿದ್ದರು. ಏಕೆಂದರೆ ಇಲ್ಲಿಯವರೆಗೆ ದೊರೆತ ಗಬ್ಬೂರು ಗ್ರಾಮದ ೩೦ ಶಾಸನಗಳಲ್ಲಿ ಮಹಾಜನರ ಉಲ್ಲೇಖವೇ ಪ್ರಧಾನವಾಗಿದ್ದು ಮಹಾಮಂಡಳೇಶ್ವರನ ಉಲ್ಲೇಖವಿಲ್ಲದಿರುವುದು ಆ ಗ್ರಾಮದಲ್ಲಿದ್ದ ಬ್ರಾಹ್ಮಣರ ಪ್ರಭಾವವನ್ನು ಸೂಚಿಸುತ್ತದೆ. ಅಂದಿನದಿನಗಳಲ್ಲಿ ಅರಸರು ಇವರನ್ನು ಗೌರವದಿಂದ ಕಾಣುತ್ತಿದ್ದು, ಯಜ್ಞಯಾಗ ಮಾಡಲು ಅನುವು ಮಾಡಿಕೊಡುತ್ತಿದ್ದರು. ಅರಸರಲ್ಲದೆ ಇಲ್ಲಿಯ ವರ್ತಕರಾದ ಮೇಳಸಾಸಿರ್ವರ, ಮುಂಮ್ಮರಿದಂಡರು, ನಖರರು, ಎಂಟುಹಿಟ್ಟು, ಸೆಟ್ಟಿ ಮೊದಲಾದವರುಗಳು ಅಗ್ರಹಾರಗಳಿಗೆ ದತ್ತಿ ಕೊಟ್ಟಿರುವ ವಿಷಯವನ್ನು ರಾಯಚೂರು ಜಿಲ್ಲೆಯ ಶಾಸನಗಳು ತಿಳಿಸಿಕೊಡುತ್ತವೆ.

ರಾಯಚೂರು ಜಿಲ್ಲೆಯಲ್ಲಿ ಹಿಂದೆ ವೈಭವಯುತವಾಗಿ ಮೆರೆದ ಅಗ್ರಹಾರಗಳಾದ ತನೆ, ರಾರಾವಿ, ತಾಲೇಖಾನ ಗ್ರಾಮಗಳು ಹೇಳ ಹೆಸರಿಲ್ಲದಂತೆ ಹಾಳಾಗಿವೆ. ಹಾಗೆಯೇ ಗಬ್ಬೂರು, ಬಳಗಾನೂರು, ಸಿಂಧನೂರು, ಮುದಗಲ್, ದಿದ್ದಗಿ, ಕುರ್ಡಿ, ಕಲ್ಲೂರು, ಮುಕ್ಕುಂದ, ಬಳಬಳ್ಳಾರಿ, ಹಳಗುರ್ಕಿ, ಹಿರೇಕೊಟ್ನೆಕಲ್ಲು, ಸಾಲಗುಂದಾ, ಬನ್ನಿಗೋಳ ಅಗ್ರಹಾರಗಳು ಹೀನ ಸ್ಥಿತಿಗೆ ಬಂದಿವೆ ಎಂದು ಹೇಳಬಹುದು. ಇದಕ್ಕೆ ಹಿಂದಿನ ಮಹಾಜನರ ವಂಶೀಕರು ಹೊಂದಿದ್ದ ಇನಾಮು ಭೂಮಿಗಳನ್ನು ಮಾರಿಕೊಂಡು ಪಟ್ಟಣ, ನಗರ ಪ್ರದೇಶಗಳಿಗೆ ಹೋಗಿ ನೆಲೆಸಿರುವುದೇ ಕಾರಣವಿರಬಹುದು.

* (ಈ ಲೇಖನವನ್ನು ಸಿದ್ಧಪಡಿಸಲು ಸಲಹೆ, ಸೂಚನೆಗಳನ್ನು ನೀಡಿದ ನನ್ನ ಮಾರ್ಗದರ್ಶಕರಾದ ಡಾ. ಬಿ.ಎಸ್. ಶ್ಯಾಮಲಾರತ್ನಕುಮಾರಿ ಯವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಶಾಸನಶಾಸ್ತ್ರ ವಿಭಾಗದ ಎಲ್ಲಾ ಅಧ್ಯಾಪಕ ಗುರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೭.,** (ಸಂ.), ಡಾ. ದೇವರಕೊಂಡಾರೆಡ್ಡಿ, ಸಂಪುಟ. ೪೧೪-೪೧೫ ಶಾಸನ . ನಂ.೪೨

೨. **ಅದೇ., ಪುಟ. ೪೦೦-೪೦೫,** ಶಾಸನ . ನಂ. ೩೮.

೩. ಅದೇ., ಪುಟ. ೪೭-೪೮ , ಶಾಸನ . ನಂ -೨

೪. ಅದೇ., ಪುಟ. ೭೧-೭೨ , ಶಾಸನ . ನಂ -೧೩

೫. ಅದೇ., ಪುಟ. ೨೬೫ , ಶಾಸನ . ನಂ -೪೬

೬. ಅದೇ., ಪುಟ. ೨೭೧-೨೭೩ , ಶಾಸನ . ನಂ -೫೧

೭. ಅದೇ., ಪುಟ. ೨೬೩-೨೬೪ , ಶಾಸನ . ನಂ -೪೫

೮. ಅದೇ., ಪುಟ. ೨೮೬ , ಶಾಸನ . ನಂ -೬೬

೯. ಅದೇ., ಪುಟ. ೩೯೮-೪೦೦ , ಶಾಸನ . ನಂ -೩೭

೧೦. ಅದೇ., ಪುಟ. ೨೪೧ , ಶಾಸನ . ನಂ - ೧೭

೧೧. C. S. Patil and Vinoda . C. Patil., *Karnataka Inscriptions,* Vol. No -IV, p - 25

೧೨. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ** - ೨., (ಸಂ.) ಡಾ. ದೇವರಕೊಂಡಾರೆಡ್ಡಿ, ಪುಟ. ೨೮೯ , ಶಾಸನ . ನಂ -೧೩

೧೩. ಅದೇ., ಪುಟ. ೩೫೦ - ೩೫೩ , ಶಾಸನ . ನಂ -೪

೧೪. ಅದೇ., ಪುಟ. ೩೪೭ , ಶಾಸನ . ನಂ - ೨

೧೫. ಎ.ಎಂ. ಅಣ್ಣಿಗೇರಿ, ಶಾಸನ ಸಾಹಿತ್ಯ ಸಂಚಯ , ಪುಟ - ೪೯

೧೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೭., (ಸಂ.) ಡಾ. ದೇವರಕೊಂಡಾರೆಡ್ಡಿ, ಪುಟ. ೩೬೧ - ೩೬೪ , ಶಾಸನ . ನಂ - ೮

೧೭. ಅದೇ., ಪುಟ. ೩೫೮ - ೩೬೧ , ಶಾಸನ . ನಂ - ೭

೧೮. ಅದೇ., ಪುಟ. ೪೨೦ , ಶಾಸನ . ನಂ - ೪೯

೧೯. ಅದೇ., ಪುಟ. ೪೨೩ - ೪೨೪ , ಶಾಸನ . ನಂ - ೫೩

೨೦. ಅದೇ., ಪುಟ. ೨೩೯ , ಶಾಸನ . ನಂ - ೧೬

೨೧. C.S. Patil and Vinoda .C.Patil., *Karnataka Inscriptions,* Vol. No -IV, p - 60 -61 Inscription No - 209

೨೨. H. A. S,Volume No-18, p - 92, Inscription No - 17 --

೨೩. C.S. Patil and Vinoda .C.Patil., *karnataka Inscriptions,* Vol. No -IV, p -70 , Inscription No - 242

೨೪. ಅದೇ., ಪುಟ. ೬೮ , ಶಾಸನ . ನಂ - ೨೩೪

೨೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೭., ಅದೇ., ಪುಟ. ೩೩೦ , ಶಾಸನ . ನಂ - ೧೧೪

೨೬. ಅದೇ., ಪುಟ. ೨೬೩ , ಶಾಸನ . ನಂ - ೪೪

೨೭. ಅದೇ., ಪುಟ. ೧೩೦ , ಶಾಸನ . ನಂ - ೪

೨೮. ಅದೇ., ಪುಟ. ೩೦೦ , ಶಾಸನ . ನಂ - ೮೦

೨೯. ಅದೇ., ಪುಟ. ೨೯೩ - ೨೯೪ , ಶಾಸನ . ನಂ - ೭೨

ಡಾ. ಕೆ. ವಸಂತಲಕ್ಷ್ಮಿ*

ಬಳ್ಳಾರಿ ಜಿಲ್ಲೆಯಲ್ಲಿದ್ದ ಕಾಶ್ಮೀರಿ ಬ್ರಾಹ್ಮಣರು

'ಅನೇಕತೆಯಲ್ಲಿ ಏಕತೆಯನ್ನು' ಬಿಂಬಿಸುವ ಭಾರತೀಯ ಸಂಸ್ಕೃತಿಯು ವಿಶಿಷ್ಟತೆಯುಳ್ಳದ್ದಾಗಿದೆ. ಪ್ರಾಚೀನ ಕಾಲದಿಂದಲೂ ವಿಶಾಲವಾದ ಭಾರತದಲ್ಲಿ ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ ಭಾರತದಲ್ಲಿನ ಜನರಲ್ಲಿ ಸತತವಾಗಿ ಕೊಡು-ಕೊಳ್ಳುವಿಕೆ ನಡೆದು ಬಂದಿರುವುದು ಸರ್ವವಿದಿತ. ರಾಜಕೀಯ ಮತ್ತು ಧಾರ್ಮಿಕ ರಂಗದಲ್ಲಿ ದಿಗ್ವಿಜಯಗಳು ನಡೆದುದರ ಫಲವಾಗಿ ಜನತೆ ತಮಗೆ ಬೇಕೆನಿಸಿದಲ್ಲೆ ವಲಸೆ ಹೋಗಿ ನೆಲೆಸಿದ್ದಾರೆ. ಇವರು ತಮ್ಮ ಮೂಲ ಸಂಸ್ಕೃತಿಯ ಆಚಾರ ವಿಚಾರಗಳನ್ನು ಕೊಂಡೊಯ್ದುದರ ಫಲವಾಗಿ ದಕ್ಷಿಣ ಭಾರತದಲ್ಲಿ ನೆಲೆಸಿದ್ದ ಉತ್ತರ ಭಾಗದ ಜನರ ಜೀವನಕ್ರಮ, ಉತ್ತರದಲ್ಲಿ ನೆಲೆಸಿ ರೂಢಿಸಿದ ದಕ್ಷಿಣದವರ ಸಂಪ್ರದಾಯ. ನಂಬಿಕೆಗಳು ಮೂಲಜನರ ಜೀವನ ಕ್ರಮಕ್ಕಿಂತ ಭಿನ್ನವಾಗಿದ್ದು, ಗಮನ ಸೆಳೆಯುತ್ತವೆ. ಕರ್ನಾಟಕದಲ್ಲಿ ಸುಮಾರು ಕ್ರಿ.ಶ. ೯ನೇ ಶತಮಾನದ ನಂತರದಲ್ಲಿ ಹಲವು ಭಾಗಗಳಲ್ಲಿ ಕಾಶ್ಮೀರ ದೇಶದಿಂದ ಬಂದು ನೆಲೆಸಿದ ಜನರ ವಿವರಗಳು ದೊರೆಯುತ್ತವೆ. ಇದರ ವಿಶೇಷ ಗುಣಗಳನ್ನು ದಾಖಲಿಸುವಾಗ ವಂಶದ ಬಗೆಗೂ ಮೂಲ ಸ್ಥಾನದ ಬಗೆಗೂ ಶಾಸನಗಳು ಉಲ್ಲೇಖಿಸಿವೆ. ಹಾಸನ ಜಿಲ್ಲೆ, ಬಿಜಾಪುರ ಜಿಲ್ಲೆಯ ಶಾಸನಗಳಲ್ಲಿ ಕಾಶ್ಮೀರ ಸಂತತಿಯ ಒಂದು ಗುಂಪಿನ ಕಾಳಾಮುಖಯತಿಗಳ ಹಾಗು ಕಾಶ್ಮೀರದ ಬ್ರಾಹ್ಮಣರ ಉಲ್ಲೇಖಗಳೂ ಇವೆ. ಕಲ್ಯಾಣ ಚಾಲುಕ್ಯರ ದೊರೆ ವಿಕ್ರಮಾದಿತ್ಯನ ಆಸ್ಥಾನ ಕವಿ ಬಿಲ್ಹಣನು ಕಾಶ್ಮೀರದವನೆಂಬುದು ತಿಳಿದ ವಿಷಯವಾಗಿದೆ. ಇದರಂತೆ ಬಳ್ಳಾರಿ ಜಿಲ್ಲೆಯ ಪರಿಸರದಲ್ಲಿ ನೆಲೆಸಿದ್ದ ಕಾಶ್ಮೀರಿ ಬ್ರಾಹ್ಮಣರ ಬಗೆಗೆ ಶಾಸನಗಳನ್ನಾಧರಿಸಿ ಬೆಳಕು ಬೀರಲು ಇಲ್ಲಿ ಯತ್ನಿಸಲಾಗಿದೆ.

ಕಾಶ್ಮೀರದಿಂದ ಬಂದು ನೆಲೆಸಿದ ತಮ್ಮನ್ನು 'ಶಾರದಾದೇವೀ ವರಲಬ್ಧ ಪ್ರಸಾದ'ವೆಂದು ಉಲ್ಲೇಖಿಸಿಕೊಂಡಿದ್ದಾರೆ. ವಿಶೇಷವಾಗಿ ಇವರು ಉನ್ನತ ಅಧಿಕಾರಿಗಳಾಗಿದ್ದು ಮಾನ್ಯರಾಗಿದ್ದಾರೆ. ತಂತ್ರಪಾಲಕ, ಸರ್ವಾಧಿಷ್ಠಾಯಕ, ಮಹಾಪ್ರಧಾನಿ ಸಂಧಿ ವಿಗ್ರಹಿ ಮೊದಲಾದ ಗಣ್ಯಸ್ಥಾನದಲ್ಲಿ ನೇಮಕರಾದ ಈ ಬ್ರಾಹ್ಮಣರು ಹಲವೆಡೆ ಊರಿನ ಮಹಾಜನರಲ್ಲಿ ಮುಖ್ಯರಾದವರೂ ಆಗಿದ್ದಾರೆ. ಹೀಗಾಗಿ ಇವರ ಹೆಸರುಗಳೊಂದಿಗೆ ಅರಸ, ನಾಯಕ, ಪ್ರಭು ಮೊದಲಾದ ಉಪನಾಮಗಳು ಸೇರಿಹೋಗಿವೆ. ಹಲವರ ಹೆಸರುಗಳೊಂದಿಗೆ ಅವರ ವಂಶನಾಮಗಳಾದ 'ಪಟ್ಟವರ್ಧನ', 'ಕ್ರಮಿತ', 'ಭಟ್ಟ' ಮೊದಲಾದ ಪದಗಳು ಕೆಲವರಿಗೆ ಅವರ ವಿದ್ವತ್ಸೂಚಕ ಪದಗಳಾದ 'ದ್ವಿವೇದಿ', 'ಚತುರ್ವೇದಿ', 'ಷಣಂಗಿ', 'ಘೈಸಾಸ' ಮೊದಲಾದ ಪದಗಳು ಹೊಂದಿಕೊಂಡಿವೆ. ಸಾಮಾನ್ಯವಾಗಿ ಇವರೆಲ್ಲ ಲಾಕುಳಮುನಿಗಳ ಶಿವಾಲಯದ ಸಂದರ್ಭದಲ್ಲಿ ಉಲ್ಲೇಖಗೊಂಡಿದ್ದಾರೆ. ಆದರೆ ವಿಷ್ಣುವಿನ ಆರಾಧಕರೂ ಇವರಲ್ಲಿದ್ದಾರೆ. ಶುದ್ಧಶೈವ ಸಂಪ್ರದಾಯಕ್ಕೆ ಸೇರಿದ ಈ ಬ್ರಾಹ್ಮಣರು-ದ್ವಿಜರಿಗೆ ಯುಕ್ತವಾದ ಷಟ್ಕರ್ಮನಿರತರು, ಸಂಸ್ಕಾರ ಕ್ರಿಯೆಯಲ್ಲಿ ಪಾಲ್ಗೊಂಡಿರುವ ಉಲ್ಲೇಖವಿದೆ. ಇಂಥ ಕಾಶ್ಮೀರೀ ಬ್ರಾಹ್ಮಣರನ್ನು ಬಳ್ಳಾರಿ ಜಿಲ್ಲೆಯ ಶಾಸನಗಳು ಪರಿಚಯಿಸಿವೆ.

ಹರಪನಹಳ್ಳಿ ತಾಲೂಕಿನ ರಾಗಿಮುಸಲವಾಡ ಗ್ರಾಮದ ಈಶ್ವರ ದೇವಾಲಯದ ಶಾಸನವು. (ಹ. ಹಳ್ಳಿ ೩೪-ಕ್ರಿ.ಶ. ೧೧೨೭) ಚಾಲುಕ್ಯರ ದೊರೆ ಭೂಲೋಕಮಲ್ಲನ ಮಹಾಸಾಮನ್ತಾಧಿಪತಿಯ ಬಗೆಗೆ ತಿಳಿಸಿದೆ. ಮಹಾಸಾಮನ್ತಾಧಿಪತಿಯೂ, ಪರಬಳಸಾಧಕನೂ ಆದ..."ಶ್ರೀ ಮನ್ಮಹಾಪ್ರಧಾನಂ ಸಾವಾಸಿಗಳ ಧಿಷ್ಠಾಯಕಂ ಕನ್ನಡ ಸ(ಂ)ನ್ಧಿ ವಿಗ್ರಹಿ ಸೇನಾಧಿಪತಿ ಮನೆವೆಗ್ಗಡೆ ದಂಡನಾಯಕಂ ಭೋಗಭಟ್ಟಯ್ಯಂಗಳೆರಡಟುನೂಱುಮಂ ಬನವಸೆಪನ್ನಿಚಾಸಿರಮಂ ಸಪ್ತಾರ್ದ್ಧಲಕ್ಷೆಯ ವಡ್ಡಲಾವುಳದ ಸುಂಕಮಂ ಪಡೆದು....ರಾಜ್ಯಂಗೆಯ್ಯುತ್ತಮಿರೆ, ತತ್ಪಾದಸೇವಾನಿರತ 'ಶ್ರೀಮದ್ವಿಪ್ರಕುಳವ್ಯೋಮಾಮೃತ ಕಿರಣ'...ನೆಗಳ್ದಿಂದ್ರರಾಣ ದಣ್ಣಾಧೀಶ"- ಈ ಇಂದ್ರರಾಣನನ್ನು ಶಾಸನವು ಮಹಾಸಾಮನ್ತಾಧಿಪತಿ ಮಹಾಪ್ರಚಂಡ ದಂಡನಾಯಕನೆಂದಿದೆ. ಇವನು- "ಭವಾನೀವಲ್ಲಭ ಚರಣ ಸರಸೀರುಹಷಟ್ಚರಣಂ । ಕಾಶ್ಮೀರವಿಷಯಾಂಭೋಜಿನೀ ಸಹಶ್ರಕಿರಣಂ ಸಾರದಾ ದೇವಿಲಬ್ಧವರ ಪ್ರಸಾದಂ।....। ಸಹವಾಸಿ ಜನನಿಚಯ ಶುಕರಸಫಳ ಸಹಕಾರಂ।" ಎಂದಿದೆ. ಇವನು ನೊಳಂಬವಾಡಿ ಮೂವತ್ತಿ ರ್ಛಾಸಿರದ ವಡ್ಡರಾವುಳದ ಕೀಳ್ಪಟ್ಟೆಯಚ್ಚುಪನ್ನಾಯದ ದಂಡನಾಯಕನಾದ 'ಯಿನ್ದರಾಶಿ ಭಟ್ಟಯ್ಯ'ನಾಗಿದ್ದನು. ಇವನ ಪತ್ನಿಯಾದ ರತ್ನದೇವಿಯ ತಂದೆ ಪೆರ್ಗ್ಗಡೆ ವುಜ್ಜಭಟ್ಟಯ್ಯನು 'ರತ್ನವಿನಾಯಕ' ದೇವರ ಪ್ರತಿಷ್ಠೆಯನ್ನು ಸಭಾಮಠವನ್ನು ಭಾವಿ ಯನ್ನು ಮಾಡಿಸಿದ್ದನ್ನು ಶಾಸನ ತಿಳಿಸುತ್ತಿದೆ. ಈ ದೇವರಿಗೆ ಹೆಗ್ಗಡೆ ಜೋಗದೇವಯ್ಯನು ದಾನ ಬಿಟ್ಟಿರುತ್ತಾನೆ. ಈ ಶಾಸನದಿಂದ ಯಿನ್ದರಾಣಿಭಟ್ಟಯ್ಯನು 'ಸಹವಾಸಿಗಳ ನಾಯಕ'ವೆಂದು ತಿಳಿಯುತ್ತಿದ್ದು, ಕಾಶ್ಮೀರಿ ಬ್ರಾಹ್ಮಣರನ್ನು 'ಸವಾಸಿ' 'ಸಹವಾಸಿ'ಗಳೆಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.

* ನಂ. ೩೫೬, ೧೧ನೇ ಮುಖ್ಯರಸ್ತೆ, ಶ್ರೀನಿವಾಸನಗರ, ೨ನೇ ಹಂತ, ಬೆಂಗಳೂರು-೫೦.

ಹರಪನಹಳ್ಳಿ ತಾಲೂಕಿನ ಮುತ್ತಗಿ ಗ್ರಾಮದ ಶಾಸನವು (ಹ.ಹಳ್ಳಿ ೧೮೭. ಕ್ರಿ.ಶ. ೧೨೧೪) ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಮಹಾ ಪಸಾಯಿತನಾದ, ಸಾವಾಸಿ ರಂಗಯ್ಯನು, ಹೆಗ್ಗಡೆಯಂಮಳೆಯ ಊರೊಡೆಯ ಹರಿಯಣ್ಣನು ಅರವಂಟಿಗೆಯನಿಡಿಸಿದ್ದನ್ನು ತಿಳಿಸುತ್ತಿದೆ. ವಿಷ್ಣುನಾಯಕರ ಹರಿಯಣ್ಣನನ್ನು ಶಾಸನವು 'ವಿಪ್ರಾನ್ವಯ ತಿಳಕ'ನೆಂದಿದೆ.

ಬಾಗಳಿಯ ಕಲ್ಲೇಶ್ವರ ದೇವಾಲಯದ ಶಾಸನವು (ಹ. ಹಳ್ಳಿ ೧೧೮ ಸು. ಕ್ರಿ.ಶ. ೧೧ನೇ ಶ) ಚಾಳುಕ್ಯ ದೊರೆ ಜಗದೇಕಮಲ್ಲನ ಸಾಮಂತ ವೀರಪಾಂಡ್ಯನ ಸೋದರ ವಿಜಯಪಾಂಡ್ಯನನ್ನೂ ಪಾಂಡ್ಯರ ವಂಶಾವಳಿಯನ್ನು ತಿಳಿಸಿದೆ. ಈ ವಿಜಯಪಾಂಡ್ಯನ ಅಧಿಕಾರಿಯಾಗಿದ್ದ ಶ್ರೀಧರಮಾತ್ಯನ ಮಗನಾದ ದೇವಾರ್ಯನನ್ನು 'ಕಶ್ಮೀರೋರ್ವೀವಳಯ ತಿಳಕ'ನೆಂದು ಕರೆದಿದೆ.

ಬಾಗಳಿಯ ಮತ್ತೊಂದು ಶಾಸನವು (ಹ. ಹಳ್ಳಿ ೧೭೯-ಕ್ರಿ.ಶ. ೧೧೧೯) ತ್ರಿಭುವನ ಮಲ್ಲಪಾಂಡ್ಯದೇವರು ನೊಳಂಬವಾಡಿಯನ್ನು ಆಳುತ್ತಿದ್ದಾಗ, ಶ್ರೀಮನ್ಮಹಾಪ್ರಧಾನನಚ್ಚು ಪನ್ನಾಯದಧಿಷ್ಠಾಯಕನಾದ, ದಂಡನಾಯಕನಾದ ಮಹದೇವರಸರ ಅಪ್ಪಣೆಯಂತೆ, ದಂಡನಾಯಕ ರಿಷಿಯಣಭಟ್ಟರು ನೀಲೇಶ್ವರ ದೇವರ ನೈವೇದ್ಯ ಮತ್ತು ನಂದಾದೀವಿಗೆಗೆಂದು ಬಿಟ್ಟ ದಾನವನ್ನು ಉಲ್ಲೇಖಿಸಿದೆ. ಈ ಶಾಸನೋಕ್ತರಾದ ಮಹಾದೇವರಸ ಮತ್ತು ರಿಷಿಯಣ್ಣಭಟ್ಟರು ಕಾಶ್ಮೀರ ದೇಶದವರೆಂದು ತಿಳಿಯುತ್ತದೆ.

ಬಾಗಳಿಯ ಮಳೆ ಮಲ್ಲಪ್ಪನ ದೇವಾಲಯದ ಶಾಸನವೊಂದು (ಹ.ಹಳ್ಳಿ ೧೮೦. ಕ್ರಿ.ಶ. ೧೧೦೮) ವಿಜಯಪಾಂಡ್ಯದೇವರು ನೊಳಂಬವಾಡಿಯನ್ನು ಆಳುತ್ತಿದ್ದಾಗ, ಅವರ ಶ್ರೀಮನ್ಮಹಾಪ್ರಧಾನಂ, ಶ್ರೀಕರಣಂ ಸರ್ವಾಧ್ಯಕ್ಷನೂ, ಮನೆವೆರ್ಗ್ಗಡೆ, ತಂತ್ರಾಧಿಷ್ಠಾಯಕನೂ ಮಹಾಪಸಾಯಿತನೂ ಆದ ವಿಜಯಹೆಮ್ಮಾಡಿ ದಂಡನಾಯಕರು ಸಂಕ್ರಾಂತಿಯಂದು ನೀಲೇಶ್ವರ ದೇವರಿಗೆ ಬಿಟ್ಟ ದಾನವನ್ನು ಉಲ್ಲೇಖಿಸಿದೆ. ಈ ಸಂದರ್ಭದಲ್ಲಿ ಅನೇಕರು ದಾನ ನೀಡಿದ್ದು ಆ ದಾನಿಗಳಲ್ಲಿ ಅರ್ಣ್ನಮಾಳೆಯ ಷಣಂಗಿಯರ ಶರ್ವ್ವದೇವ ನಾಯಕನು ೧೦೦ ಕಮ್ಮ ಭೂಮಿಯನ್ನು ದಾನ ಬಿಟ್ಟಿರುತ್ತಾರೆ. ಶಾಸನವು ಬಡಗಿ ರೆಬ್ಬೋಜನಿಗೆ ೫೦ ಕಮ್ಮ ಗದ್ದೆ ಕೊಟ್ಟದ್ದನ್ನು ದಾಖಲಿಸಿದೆ. ಈ ವ್ಯಕ್ತಿಗಳೆಲ್ಲ ಕನ್ನಡಿಗರಲ್ಲವೆಂಬುದು ಹೆಸರಿನಿಂದಲೇ ತಿಳಿಯುತ್ತದೆ.

ಬಾಗಳಿಯ ಸೂರ್ಯನಾರಾಯಣ ದೇವಾಲಯದ ಶಾಸನವು (ಹ. ಹಳ್ಳಿ ೧೮೪-ಕ್ರಿ.ಶ. ೧೧೬೦) ಬಾಗಳಿಯಲ್ಲಿ ೫೦ ಮಹಾಜನರ ಮಹಿಮೆಯನ್ನು ತಿಳಿಸುತ್ತಿದೆ. ಇವರನ್ನು "ಭರತ ವ್ಯಾಕರಣಾಗಮ ಸ್ಮೃತಿಪುರಾಣ ಸೋಮಷಟ್ಕರ್ಕ್ಕ ವಿಸ್ತರರುಗ್ರ ಪ್ರತಿವಾದಿದರ್ಪ್ಪ ಧನಲಕ್ಷ್ಮೀಶ್ವರ ಬ್ರ್ಭನುತಾಧ್ವರ ದೀಕ್ಷಾಯಜ್ಞ ಮಾನ್ಯರೆಂದು ಪೊಗಳ್ಗುಂ ಸರ್ವ್ವೋರ್ವ್ವಿ ಕೂರ್ತ್ತಯ್ವದಿಂಬರನುದ್ಧಾಮ ವಿಡಂಬರಂ" ಎಂದಿದೆ. ಇವರಲ್ಲಿ ಅನೇಕರನ್ನು ತಿಳಿಸುವ ಈ ಶಾಸನವು ಭಾರದ್ವಾಜಗೋತ್ರಾಬ್ಧಿವರ್ಧನದ ಚಂದ್ರನಂತಿದ್ದ ವಿದ್ವಜ್ಜನ ವಿಶ್ವಭೂವಿನೂತನನಾದ ಬೆಣ್ಣೆಯ ಮಾಳಪ್ಪಯ್ಯನನ್ನು, ಅವನ ಪತ್ನಿ ರಾಮಿಯಕ್ಕನನ್ನು ಉಲ್ಲೇಖಿಸಿದ್ದು, ಇವರ ಮಗ ಬುಧಶಿಖಾಮಣಿ ಚಿದ್ದರಾಜನನ್ನು ಹೆಸರಿಸಿದೆ. ಚಿದ್ಧರಾಜನ ಸತಿ ಧರ್ಮವ್ವೆಯ ವಂಶದ ಬಗೆಗೆ ತಿಳಿಸುತ್ತಾ ಶಾಸನವು ಅನುಪಮದಾನಿ, ಕಾಶ್ಯಪಾನ್ವಯ ಶಿರೋಮಣಿ ದ್ವಿಜವಂಶದೀಪನೆನಿಸಿದ ಧರ್ಮ್ಮಯ ಷಡಂಗಿಯನ್ನು, ತಾಯಿ ಮಾದವೆಯನ್ನು ಹೆಸರಿಸಿದೆ. ಧರ್ಮ್ಮಯ ಷಡಂಗಿಯರ ಮಗ ಪದ್ಮನಾಭನೂ, ಸತಿ ಗಂಗಾದೇವಿ, ಇವಳು ವಶಿಷ್ಠಾನ್ವಯದವಳು ಇವರ ಮಗಳೇ ಧಮ್ಮವ್ವೆಚಿದ್ಧರಾಜನ ಸತಿಯಾದಳು ಇವಳು ಶ್ರೀ ಲಕ್ಷ್ಮೀನರಾಯಣದೇವರ ಅಂಗಭೋಗ, ನೇವೇದ್ಯ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಬಿಟ್ಟ ದಾನವನ್ನು ತಿಳಿಸುತ್ತಿದೆ.

ಬೆಣ್ಣೆಹಳ್ಳಿಯ ಪಂಪಾಪತಿ ದೇವಾಲಯದ ಶಾಸನವು (ಹ. ಹಳ್ಳಿ ೧೯೯-ಕ್ರಿ.ಶ. ೧೧೪೯) ನದೀ ತೀರದ ಸ್ವಯಂಭೂ ದೇವರ ತೀರ್ಥದ ೧೨ ಜನ ಬ್ರಾಹ್ಮಣರ ಬಗೆಗೆ ತಿಳಿಸಿದ್ದು ಅವರೆಂದರೆ ಕಾಶ್ಯಪಗೋತ್ರದ ಶಿವದೇವರು, ಭಾರದ್ವಾಜ ಗೋತ್ರದ ಗೋವಿನ್ದಭಟ್ಟರು, ಶ್ರೀವತ್ಸ ಗೋತ್ರದ ಬಸವಣಭಟ್ಟರು, ಭಾರದ್ವಾಜಗೋತ್ರದ ದೇವಣಭಟ್ಟರು, ಭಾರದ್ವಾಜ ಗೋತ್ರದ ನಾಚ್ಯಣಭಟ್ಟರು, ಕಾಶ್ಯಪಗೋತ್ರದ ಪಟ್ಟವರ್ಧನ ಕೇಶವ ಘೈಸರು, ವಿಶ್ವಾಮಿತ್ರಗೋತ್ರದ ಶ್ರೀಧರಭಟ್ಟರು, ಮೋನಭಾರ್ಗ್ಗವ ಗೋತ್ರದ ಈಶ್ವರಘೈಸ್ಸರು, ಭಾರದ್ವಾಜ ಗೋತ್ರದ ಪದ್ಮನಾಘೈಸ್ಯರು, ದಾಶ್ಯಣ ಭಟ್ಟರು ಮೊದಲಾದವರು. ಈ ಶಾಸನದಲ್ಲಿ ಕಮ್ಮೆಕುಲದ ಸಬ್ಬ್ಯದೇವನನ್ನು, ನಾಚಿದೇವರಸನನ್ನು, ವತ್ಸದಂಡೇಶನ ಪತ್ನಿ ವೆಣ್ಣಲದೇವಿಯನ್ನು ಹೆಸರಿಸಿದೆ. ಈ ದೇವಾಲಯದ ಮತ್ತೊಂದು ಶಾಸನವು (ಹ. ಹಳ್ಳಿ ೨೦; ಕ್ರಿ.ಶ. ೧೧೪೯) ಅಭಿನವ ಪಾಶುಪತ ಸಮಯ ವರ್ದ್ಧನ ಸುಧಾಕರರಾದ ಕೋಗುಳಿ ೫೦೦ರ ಏಳುಕೋಟಿ ಸಮಯ ಚಕ್ರವರ್ತಿ ಮಹಾಮಂಡಳಾಚಾರ್ಯ ರಾಜಗುರು ಖಳೇಶ್ವರ ದೇವರನ್ನು ಸ್ತುತಿಸಿದೆ.

ನೀಲಗುಂದದ ತಾಮ್ರಶಾಸನವೊಂದು (ಹ. ಹಳ್ಳಿ ೮೯) ಕ್ರಿ.ಶ. ೧೧೨೩ರದಾಗಿದ್ದು, ಚಾಳುಕ್ಯ ದೊರೆ ತ್ರಿಭುವನಮಲ್ಲನ ಮಹಾಮಂಡಳೇಶ್ವರನಾಗಿದ್ದ ಪಲಿತಪಾಂಡ್ಯನು ಪಲಿತಪಾಂಡ್ಯ ಮತ್ತು ಅವನ ಮಗ ರಾಯಪಾಂಡ್ಯನೂ ಬ್ರಾಹ್ಮಣರಿಗೆ ಬಿಟ್ಟ ದಾನವನ್ನು ದಾಖಲಿಸಿದೆ. ಶಾಸನಾಂತ್ಯದಲ್ಲಿ ಈ ಶಾಸನವನ್ನು ಕವಿ ಆರ್ಯಮಸ್ವಾಮಿಯ ಮಗನಾದ 'ಕಾಶ್ಮೀರಭಟ್ಟ ಮಲ್ಲಯ್ಯ ಪಂಡಿತ'ನೂ ಬರೆದನೆಂದೂ, ಇದನ್ನು 'ದಂಡನಾಯಕ ಕಾಲಿದಾಸನ' ಮಗ ವಿಕ್ರಮಾದಿತ್ಯನೂ ಅನುಮೋದಿಸಿದನೆಂಬ ಉಲ್ಲೇಖವಿದೆ. ಶಾಸನವು ಆರ್ಯಮಸ್ವಾಮಿಯು ಶ್ರೀವತ್ಸಗೋತ್ರದ ಸಾಮವೇದಿ ಭಟ್ಟನಾಗಿದ್ದನೆಂದೂ ಮಲ್ಲಯಪಂಡಿತನು ದಾನಾಧಿಕಾರಿಯಾಗಿದ್ದನೆಂದೂ ತಿಳಿಸಿದೆ. ಮಹಾಪ್ರಚಂಡ ದಂಡನಾಯಕ ಕಾಲಿದಾಸನೂ ಶಾಸನಾಧಿಕಾರಿಯ ಅಕ್ಷಪಟಲಿಕನೂ ಆಗಿದ್ದನೂ. ಈ ಅಧಿಕಾರಿಗಳೆಲ್ಲರೂ ಕಾಶ್ಮೀರದ ಬ್ರಾಹ್ಮಣರೆಂದು ತಿಳಿಯುತ್ತದೆ. ಶಾಸನಾಂತ್ಯದಲ್ಲಿ 'ಶ್ರೀ ಶಾರದಾಯೈನಮಃ' ಉಲ್ಲೇಖವೂ ಇದೆ.

ದುಗ್ಗವತಿ ಗ್ರಾಮದ ಈಶ್ವರ ದೇವಾಲಯದ ಶಾಸನವು (ಹ. ಹಳ್ಳಿ ೩೬ಕ್ರಿ.ಶ. ೧೧೨೬) ತ್ರಿಭುವನಮಲ್ಲ ಪಾಂಡ್ಯದೇವರು ನೊಳಂಬವಾಡಿಯನ್ನು ಆಳುತ್ತಿದ್ದಾಗ, 'ಶ್ರೀ ಸಾರದಾದೇವಿ ವರಲಬ್ಧ ಪ್ರಸಾದಾ'ನಾದ ಶ್ರೀಮಂನಾನಾದೇಸಿ ಮಲೆಯಾಳ ವಡ್ಡವ್ಯವಹಾರಿ ನಂಬಿಗಣ್ಣ ಸೆಟ್ಟಿಯವರು 'ದುಗ್ಗತಿ' ಗ್ರಾಮದ ಮೇಲಾಳ್ಕೆಯನ್ನು ನಡೆಸುತ್ತಿದ್ದರು. ದುಗ್ಗತಿ ಗ್ರಾಮದಲ್ಲಿ 'ಸಾರದಾದೇವಿ ವರಲಬ್ಧ ಪ್ರಸಾದರಾದ ಚೇರಿಸೆಟ್ಟಿಯರೂ ಇದ್ದರು. ಬ್ರಹ್ಮವಂಶೋದ್ಭವರೂ, ವಾಜಿಕುಳಾಂಬರ ರಾಜನಾರ, ದುಗ್ಗತಿಯೂರೊಡೆಯ ಬ್ರಹ್ಮ ದೇವಯ್ಯ ನಾಯಕರೂ, ನಂಬಿಗಣ್ಣಸೆಟ್ಟಿಯರೂ ಯಿಂದಿರಾಣ ಭಟ್ಟಯ್ಯಂಗಳೂ ಸೇರಿ ಮಹಾದೇವ ದೇವರಿಗೆ ದಾನ ಬಿಟ್ಟಿದ್ದಾರೆ. ಈ ಶಾಸನವನ್ನು ಶ್ರೀ ಸರಸ್ವತಿಗಣ ಛಾತ್ರನಾದ ಮಲ್ಲಿಯಣ್ಣನು ಬರೆದನೆಂದು ತಿಳಿಸುತ್ತಿದೆ. ಹೀಗೆ ಹರಪನಹಳ್ಳಿ ತಾಲೂಕಿನ ಪರಿಸರದಲ್ಲಿ ಅನೇಕ ಜನ ಕಾಶ್ಮೀರಿ ಬ್ರಾಹ್ಮಣರು ನೆಲೆಸಿದ್ದನ್ನು ಶಾಸನಗಳು ತಿಳಿಸಿವೆ. ಮೊಕ್ಕೆಯ್ಯಷಣಂಗಿ (ಹ. ಹಳ್ಳಿ ೯೨) ವಿಶ್ವಾಮಿತ್ರ ಗೋತ್ರ ಪವಿತ್ರರಾದ ಲಾಳಬ್ಬೆಯ ಮಗ ದಾಸೆಯ ನಾಯಕ (ಹ. ಹಳ್ಳಿ-೧೦೮) ವಸಿಷ್ಠ ಗೋತ್ರದ ಮಾರ್ತಾಂಡಯ್ಯನ ಮಗ ದಾಸೇಯನಾಯಕ (ಹ. ಹಳ್ಳಿ-೧೧೦) ನಾದೇವ ಪೈಸನ ಹೆಂಡತಿ ಮಹಾದೇವಿ ಕಲ್ಯೆ (ಹ. ಹಳ್ಳಿ ೧೦೪) ಭಾರದ್ವಾಜಗೋತ್ರದ ಬೆಣ್ಣೆಯ ನಾರಾಯಣ ಷಣಂಗಿಯರ ಮಗ ಪಟ್ಟವರ್ಧನ ದೀಕ್ಷಿತ ಸೋಮಯಾಜಿ (ಹ. ಹಳ್ಳಿ ೧೭೯) ಮೊದಲಾದವರಿದ್ದು ತಿಳಿಯುತ್ತದೆ. ಶಿವಬ್ರಾಹ್ಮಣರಾದ ಉಯ್ಯುಕೊಣ್ಣಭಟ್ಟರೂ (ಹ. ಹಳ್ಳಿ ೧) ಆರ್ಯಕ್ಷತ್ರಿಯರಾದ ವಿಸಣರಾಉತರೂ (ಹ. ಹಳ್ಳಿ ೩) ಇಲ್ಲಿದ್ದುದ್ದು ತಿಳಿದುಬರುತ್ತದೆ.

ಹಡಗಲಿ ತಾಲೂಕಿನ ಕುರುವತ್ತಿ ಗ್ರಾಮದ ಕಲ್ಲೇಶ್ವರ ದೇವಾಲಯದ ಶಾಸನವು (ಹಡ ೧-ಕ್ರಿ.ಶ. ೧೦೮೯) ಚಾಳುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯಲ್ಲಿ ಸುರೇಶ್ವರ ಪಂಡಿತ ದೇವರು ಬೆಣ್ಣೆವೂರು-೧೨ನ್ನು ಆಳುತ್ತಿದ್ದರು. ಇವರನ್ನು ಶಾಸನವು 'ಪಂಡಿತ ಚೂಡಾಮಣಿ', 'ಶ್ರೀವಾದಿದೇವ ಪಣ್ಡಿತದೇವ ಪಾದಾರಾಧನ ವರಲಬ್ಧ ಪ್ರಸಾದ'ನೆಂದಿದೆ. ಇವರಾಳುತ್ತಿದ್ದ ಕುರುವತ್ತಿ ಗ್ರಾಮದಲ್ಲಿ ೨೦೦ ಜನ ಮಹಾಜನರಿದ್ದರು. ಅವರ ಅಗ್ರೇಸರನಾದ ಕಾಳಿದಾಸ ದಂಡಾಧೀಶ ವಿಶ್ವಾಮಿತ್ರಾನ್ವಯ ವಾರ್ದ್ಧಿಚಂದ್ರನಾಗಿದ್ದನು. ಇವನ ಮಗ ಸೋಮನಾಥ, ಊರೊಡೆಯರೆಲ್ಲ ಸೇರಿ ಅಲ್ಲಿಯ ಸೋಮೇಶ್ವರಾಶ್ರಮದ ಮುನಿಗಳಾದ 'ಕಶ್ಮೀರದೇವ ಸನ್ತಾನವಾರ್ದ್ಧಿವಾರ್ಧನ ಸುಧಾಕರನೆನಿಸಿರ ಕುಳೀಶ್ವರ ಪಂಡಿತರ ಸನ್ತಾನದುವರಾಗಿದ್ದರು. ಈ ಮಠದ ಪರಂಪರೆಯಲ್ಲಿ ಸೋಮೇಶ್ವರ ಪಂಡಿತರು, ಜ್ಞಾನೇಶ್ವರ ಪಂಡಿತರು, ಲಕುಳೀಶ್ವರ ಪಂಡಿತರಾಗಿದ್ದರೆಂದು ಶಾಸನ ತಿಳಿಸಿದೆ. ಲಕುಳೀಶ್ವರ ಪಂಡಿತರಿಗೆ ಬ್ರಾಹ್ಮಣ ಧರ್ಮ ಸಮುದ್ಧರಣರೆನಿಸಿದ್ದ ಕುರುವತ್ತಿ ಪ್ರಮುಖ ಮಹಾಜನಮಿನ್ನೂರ್ವ್ವರು ದಾನ ನೀಡಿದ್ದನ್ನು ತಿಳಿಸುವ ಶಾಸನವು ದಾನಿಗಳಾಗಿ ಗೋವಿಂದರಸ, ಮಾಕಳಯ್ಯನ ದಾಸಿಯಣ್ಣ, ಚವುಂಡಯ ಷಣಂಗಿಯ ಮಗ ಮಾರಯ್ಯ, ಮುದ್ದಯ್ಯ ಷಣಂಗಿಯ ತಮ್ಮ ಚಾಕಯ್ಯ, ತಿಕ್ಕಣ, ಮರ್ಕ್ಕಿಕಮ್ಮ, ಕಾಳಿದಾಸಕ್ರಮಿತ, ದೇಕಣ್ಣ, ಹಂಚಿಕಬ್ಬೆ, ಮೋಸರ ದಾಸೇಯಷಣಂಗಿ, ಹೆಬ್ಬಣ, ಬಿಡಿವಾಳಯ್ಯ ಮೊದಲಾದವರನ್ನು ಉಲ್ಲೇಖಿಸಿದೆ.

ಹಿರೇಹಡಗಲಿಯ ಶಾಸನವೊಂದು (ಹಡ ೫೩-ಕ್ರಿ. ಶ. ೧೨೧೨) ಅಲ್ಲಿ ನೆಲೆಸಿದ್ದ ಶ್ರೀಮದಮರನಂದ ಯೋಗೀಂದ್ರರ ಶಿಷ್ಯರಾದ ಶ್ರೀಮದ್ ಅನುಪಮ ಸುಖರೂಪ ಸ್ವಾಮಿಗಳನ್ನು ಹೆಸರಿಸಿದೆ. ಇವರ ಶಿಷ್ಯನಾದ ಮಹಾಪ್ರಧಾನಿ ದಾವಣ್ಣಗಳ -ಗೌತಮ ಗೋತ್ರದ ವಾಜಿಕುಳ ದಿನೇಶನಂತಿದ್ದನು; ದಾವಣ್ಣನೂ ಗಂಗಿಮಯ್ಯ ನಾಯಕನೂ ಬಿಟ್ಟದಾನವನ್ನು ಉಲ್ಲೇಖಿಸಿದೆ.

ಮಾಗಳದ ಸೂರ್ಯನಾರಾಯಣಸ್ವಾಮಿ ದೇವಾಲಯದ ಶಾಸನವು (ಹಡ. ೬೭ ಕ್ರಿ.ಶ. ೧೨೦೮) ಮಾಗಳ ದ್ವಿಶತಕ ದ್ವಿಜೋತ್ತಮರನ್ನು ಉಲ್ಲೇಖಿಸಿದೆ. ಅವರಲ್ಲಿ ಭಾರದ್ವಾಜ ಗೋತ್ರದ ಕಾಳಿಮಯ್ಯನನ್ನು ಅವನ ಪತ್ನಿ ದೇವಕಿದೇವಿಗೆ ಪದ್ಮನಾಭ, ಬಸವಯ್ಯರೆಂಬ ಮಕ್ಕಳಾದರು. ಪದ್ಮನಾಭ ಚೌಡಿಯಕ್ಕನ ಮಗನಾದ ಹರಿಭಕ್ತ ಮರ್ಮರಸನು ಮಾಗೋಳದಲ್ಲಿ ತ್ರೈಮೂರ್ತಿ ದೇವರನ್ನು ಪ್ರತಿಷ್ಠಾಪಿಸಿ ದಾನ ಬಿಟ್ಟದ್ದನ್ನು ಶಾಸನ ತಿಳಿಸುತ್ತಿದೆ. ಈ ಶಾಸನವು ಮರ್ಮರಸನನ್ನು 'ಸಮಯದ ಗರುಡ'ನೆಂದಿದೆ. ಮತ್ತು ಗುಂಡದೇವ ಪೆದ್ದಿಗಳನ್ನು ಉಲ್ಲೇಖಿಸುತ್ತಿದೆ.

ಹೂವಿನ ಹಡಗಲಿಯ ಕೇಶವ ದೇವಾಲಯದ ಶಾಸನವು (ಹಡ-೮೩ ಕ್ರಿ.ಶ. ೧೦೯೦-೧೧೨೮) ಅನೇಕ ಯಜ್ಞಕೃತಾವಭೃತನಾದ ಶಂಕರಭಟ್ಟನು, ಕಾಶ್ಯಪ ಗೋತ್ರೋದ್ಭವನಾಗಿದ್ದು, ಅವನ ಮಗ ಕೊಪ್ಪಧೀಶ ಮತ್ತು ಪಂಪಕಬ್ಬೆಯರ ಮಗ ವಾವಣಯ್ಯನನ್ನು ಹೆಸರಿಸಿದೆ. ಮಾಚಿಯಭಟ್ಟನ ಮಗರವಿದೇವನು ಸಂಧಿವಿಗ್ರಹಿ ಶಿರೋಮಣಿ, ಪ್ರಚಂಡ ದಂಡನಾಥನಾಗಿದ್ದು, ಪತ್ನಿ ರೆಬ್ಬಣಬ್ಬೆಯ ವಂಶವನ್ನು ಸ್ತುತಿಸಿರೆ- ಶ್ರೀವತ್ಸ ಗೋತ್ರದವನಾದ, ಚತುರ್ವೇದ ವಿದನಾದ ರುದ್ರಭಟ್ಟನಿಗೆ ದ್ವಿವೇದಿಕುಮಾರಸ್ವಾಮಿ, ಶಂಕರ ಭಟ್ಟನೆಂಬ ಮಕ್ಕಳೊಂದಿಗೆ, ರೆಬ್ಬಾಂಬಿಕೆ ಜನಿಸಿದಳು. ರೆಬ್ಬಲಾದೇವಿ ಹೂವಿನ ಹಡಗಲಿಯಲ್ಲಿ ಕೇಶವ ದೇವಾಲಯವನ್ನೆತ್ತಿಸಿ, ದೇವರ ಪೂಜೆಗೆ, ನಾನಾ ದೇಶ ದ್ವಿಜಸನ್ತಾನದ ಸತ್ರಕ್ಕೆಂದು ದಾನ ಬಿಡುತ್ತಾಳೆ. ಈ ದೇವಾಲಯಕ್ಕೆ ದಾನ ಬಿಟ್ಟಿರುವ ಬೇರೆ ದಾನಿಗಳನ್ನು ಹೆಸರಿಸುವಲ್ಲಿ ಈ ದಾನಿಗಳು ಗಮನಾರ್ಹರಾಗಿದ್ದಾರೆ. ಹುಲಿಮಯ್ಯಂಗಳ ಅಳಿಯಂದಿರು ಕುಕ್ಕನೂರ ವಸಿಷ್ಠ ಗೋತ್ರದ ರಯ್ಕೆಯ ಷಣಂಗಿಯರು, ಕಾಶ್ಯಪ ಗೋತ್ರದ ಈಚಮಯ್ಯಗಳ ಮಗ ಹಿರಿಯ ನಾಣಿಮಯ್ಯ, ನಾಣಿಮಯ್ಯಂಗಳ ಬ್ರಾಹ್ಮಣಿ. ಚಾಕಿಯಕ್ಕ ರವಿಯಂಣಗಳ ಬ್ರಾಹ್ಮಂಣಿ ಸೋರಿಕಯ್ಯೆ, ಲೋಕೆಯಶಣಂಗಿಯರ ಮಗ ಸಯಣ್ಣ: ಲುಕ್ಕಿಗೊಂಡಿಯ ಚಾವುಂಡಯ್ಯ ಕ್ರವಿನ್ತರ ಮಗಳು ಅರಸಿಯಕ್ಕ ಮೊದಲಾದವರು ಕನ್ನಡಿಗರಾಗಿಲ್ಲವೆಂದು ತಿಳಿಯುತ್ತದೆ. ಕೊಟ್ನಕಲ್ಲು ಗ್ರಾಮದ ಕೋಟೇಶ್ವರ ದೇವಾಲಯದ ಶಾಸನವೊಂದು (ಹಡಗಲಿ ೮೨ ಕ್ರಿ.ಶ. ೧೨೬೨) ಮದವಯ್ಯನು ಬಿಟ್ಟ ದಾನವನ್ನು ತಿಳಿಸುತ್ತಿದ್ದು, ಅಂತ್ಯದಲ್ಲಿ ನೂರಿಪ್ಪತ್ತು ಮಹಾಜನರ ತೊತ್ತಾದ

ಚಾವೋಜನು ಕಂಡಿಸಿದನೆಂದಿದೆ. 'ಸರಸ್ವತಿ ದೇವಿಯ ವರಪ್ರಸಾದ ಮಂಗಳ"ವೆಂದು ದಾಖಲಿಸಿದೆ.

ಗೋಗೀ ಗ್ರಾಮದ ಶಾಸನವು (ಹಡಗಲಿ-೧೦೩-ಕ್ರಿ.ಶ. ೧೧೨೧) ಶ್ರೀವತ್ಸಗೋತ್ರ ಪ್ರಭವರೂ, ವಿಪ್ರಕುಲ ಪ್ರಧಾನರೂ ಆದ ನಾಗಿಮಯ್ಯ ನಾಯಕರನ್ನೂ ಅವರ ತಮ್ಮ ಕಾಳಿಮಯ್ಯ ನಾಯಕರನ್ನು ದಾಖಲಿಸಿದೆ. ನಾಗವಮ್ಮ ನಾಯಕನು ಕೇಶವ ದೇವರಿಗೆ ದಾನ ನೀಡಿದ್ದಾನೆ.

ಬೆಣ್ಣಕಲ್ಲು ಗ್ರಾಮದ ಶಾಸನವು (ಹಗರಿ ಬೊಮ್ಮನಹಳ್ಳಿ ೨ ಕ್ರಿ.ಶ. ೧೨೨೬) ವಾಜಿ ವಂಶ ಚೂಡಾಮಣಿ, ವಾಮರಾಜ ತನೂಜನಾದ ಅಮಿತ ಚಮೂಪನನ್ನು ಬಣ್ಣಿಸಿದೆ. ಶಾಸನವು ವಾಮರಸ, ಲಕುಮರಸ, ಅಮರದಂಡಾಧಿಪರನ್ನು ಉಲ್ಲೇಖಿಸಿದೆ. ಅಮಿತ ದಂಡನಾಥನು ದೇವರ ಶ್ರೀ ಕಾರ್ಯಕ್ಕಾಗಿ ಬಿಟ್ಟ ದಾನವನ್ನು ಕೋಗುಳಿ-೫೦೦ರ ತಪಚಕ್ರವರ್ತಿ, ರಾಜಗುರು ಕಳೇಶ್ವರ ಮುನಿಗಳಿಗೆ ಧಾರಾಪೂರ್ವಕವಾಗಿ ಬಿಟ್ಟನು ಎಂದು ತಿಳಿಸಿದೆ.

ಹಂಪನದೇವನಹಳ್ಳಿಯ ಶಾಸನವು (ಹೊಸಪೇಟೆ ೩೯, ಕ್ರಿ.ಶ. ೧೫೧೧) ಕೃಷ್ಣದೇವ ಮಹಾರಾಯರು ಕೃಷ್ಣರಾಯಪುರವಾಗಿ ಮಾಡಿ ದಾನ ಬಿಟ್ಟರು. ದಾನ ಸ್ವೀಕರಿಸಿದ ಬ್ರಾಹ್ಮಣರಲ್ಲಿ ಕೆಲವರ ಹೆಸರುಗಳಿವು. ಕಾಶ್ಯಪ ಗೋತ್ರದ ಇಂಮಡಿ ಭಟ್ಟರ ಮಕ್ಕಳು ಶಿವಾದೀಕ್ಷಿತರು, ಕಾಶ್ಯಪಗೋತ್ರದ ಯಜುಶಾಖೆಯ ನಲ್ಲಚಿಲುಮೆಯ ಪೆದ್ದಿಭಟ್ಟರ ಮಕ್ಕಳು ವಿಶ್ವನಾಥಭಟ್ಟರು, ಕೌಶಿಪಗೋತ್ರದ ಯಜುಶಾಖೆಯ ಪೆರುಮತಿ ಅಉಭಳಭಟರ ಮಕ್ಕಳು ಜ್ಞಾನದೇವ ಭಟ್ಟರು, ರುಕ್‌ಶಾಖೆಯ ಮಲ್ಲಭಟ್ಟರ ಮಕ್ಕಳು ದೇಮಾಭಟರು, ಭಾರದ್ವಾಜ ಗೋತ್ರದ ಯಜುಶಾಖೆಯ ಬಾಚಣಭಟ್ಟರು ಮೊದಲಾದವರು.

ಅಚ್ಚುಪನ್ನಾಯದ ಅಧಿಷ್ಠಾಯಕರಾದ ಘಟ್ಟಿಯರಸರು ಪೂವಿನ ಪಡಗಲಿ ಅಗ್ರಹಾರವನ್ನು ೧೨೦೦ ಮಹಾಜನರೊಂದಿಗೆ ಆಳುತ್ತಿದ್ದನು. ಇಲ್ಲಿಯ ಕಲಿದೇವರ ಸ್ಥಾನದಲ್ಲಿ ಖಳೇಶ್ವರಚಾರ್ಯರು ನೆಲೆಸಿದ್ದರು ಶಾಸನವು ಮಲ್ಲರಸನನ್ನು ಹೆಸರಿಸಿದೆ (ಹಡಗಲಿ ೮೫-ಕ್ರಿ.ಶ. ೧೧೧೧)

ಓರುವಾಯಿ ಗ್ರಾಮದ ರಾಮಲಿಂಗೇಶ್ವರ ದೇವಾಲಯದ ಶಾಸನವು (ಬಳ್ಳಾರಿ ೪೩. ಕ್ರಿ.ಶ. ೧೦೩೬) ಚಾಳುಕ್ಯದೊರೆ ಇಮ್ಮಡಿ ಜಯಸಿಂಹನ ಕಾಲದಾಗಿದ್ದು ನೊಳಂಬಾದೇವಿಯ ಅಂಗ (ಭಸ್ಮ)ವನ್ನು ಗಂಗೆಯಲ್ಲಿ ಹಾಕಿಬಂದ ಬ್ರಾಹ್ಮಣರು ಮಾಧವ ಷಡಂಗಿ ಮತ್ತು ಕ್ರಿಷ್ಣಯ್ಯ, ದೇವಯ್ಯ ಎಂಬುವರಿಗೆ ಬಿಟ್ಟ ದಾನವನ್ನು ಉಲ್ಲೇಖಿಸಿದೆ. ಈ ಶಾಸನವನ್ನು ಜೋಯಿಸ ಚೂಡಾಮಣಿ, ಚಾವುಂಡಯ್ಯ ಬರೆದಿದ್ದಾನೆ. ಈ ದ್ವಿಜೋತ್ತಮರ ಉಲ್ಲೇಖ ಗಮನಾರ್ಹವಾದುದ್ದು.

ಕುಡಿತಿನಿಯ ಶಾಸನವೊಂದು (ಬಳ್ಳಾರಿ ೩೬, ಕ್ರಿ.ಶ. ೧೧೧೯) ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲನ ಕಾಲವಾಗಿದ್ದು, ಮಾರ್ತಾಂಡನಾಯಕನು ಕುಡುತಿನಿಯಲ್ಲಿ 'ಮಾರ್ತಾಂಡೇಶ್ವರ ದೇವಾಲಯ' ನಿರ್ಮಿಸಿದ್ದನ್ನು ದಾಖಲಿಸಿದೆ. ಮಾರ್ತಾಂಡನಾಯಕನ ಬಗೆಗೆ ತಿಳಿಸುವಲ್ಲಿ ಶಾಸನವು ವಾಜಿಕುಲದೊಳನಘ ಚರಿತ್ರನಾ... ಕೇಸಿರಾಜನನ್ನು ದೇವರಾಜನನ್ನು ಉಲ್ಲೇಖಿಸಿದೆ. ಶ್ರೀ ವತ್ಸಗೋತ್ರ... ತಿಳಕನಾದ ಕೇಸಿರಾಜ ಇವನ ಮಗ ಮಾಳಪ್ಪ ಮತ್ತು ಅರಸಿಕಬ್ಬೆಯ... ಮಗ ಮಾರ್ತ್ತಾಂಡದೇವ. ಈ ಶಾಸನವು ಬೋವಿಮಯ್ಯಂಗಳ... ಮಗ ಸೋವಿಮಯ್ಯ ಬಿಟ್ಟ ದಾನವನ್ನು ದಾಖಲಿಸಿದೆ.

ಇದೇ ಗ್ರಾಮದ ಮತ್ತೊಂದು ಶಾಸನವು (ಬಳ್ಳಾರಿ ೨೦-ಕ್ರಿ.ಶ... ೧೦೯೫) ರಿಗ್ವೇದರತ್ನಾಕರ, ಮೌನಗೋತ್ರ ಪವಿತ್ರರೂ, ಪಂಡಿತ... ಪಾರಿಜಾತ ಮಹಾಪ್ರಧಾನ ದಂಡನಾಯಕ ಶ್ರೀಮದಯ್ಯಂಗಳನ್ನು... ಸೋಮೇಶ್ವರ ಭಟ್ಟೋಪಧ್ಯಾಯರನ್ನು, ಅವರ ಮೈಯ್ದುನ... ದಂಡನಾಯಕ ಮಹಾವಿಷ್ಣು ಅರಸರನ್ನು ದಾಖಲಿಸಿದೆ.

ನಾರಿಹಳ್ಳ (ತಾರನಗರ)ದ ಶಾಸನವು (ಸೊಂಡೂರು ೧೭-ಕ್ರಿ.ಶ. ೧೦೪೭) ವೇಹೂರು ಎಂಬ ಅಗ್ರಹಾರವನ್ನು ವಸಿಷ್ಠ ಗೋತ್ರದ ಮುದ್ದಮಾರ್ಯನಿಗೆ ನೀಡಿದ್ದನ್ನು ದಾಖಲಿಸಿದೆ. ಸಾಯಮಾರ್ಯನ ಮೊಮ್ಮಗ, ಮತ್ತು ಕೇಸಿಮಾರ್ಯನ ಮಗನಾದ ಮುಕಿಮಾರ್ಯನು ತ್ರೈಪುರುಷ ದೇವಾಲಯವನ್ನೆತ್ತಿಸಿಬಿಟ್ಟ ದಾನವನ್ನು ತಿಳಿಸುತ್ತಿದೆ.

ಕೊಟ್ಟೂರಿನ ಶಾಸನವೊಂದು (ಕೂಡ್ಲಗಿ ೨೮-ಕ್ರಿ.ಶ. ೧೧೧೩) ಮಹಾಮಂಡಳೇಶ್ವರನಾದ ನಾಚಿದೇವರಸನ ಮತ್ತು ಪತ್ನಿ ಶ್ರೀಯಾದೇವಿಯ ಮಗ ಜಗದಳ ಘಟ್ಟಿದೇವರಸರು ಬಿಟ್ಟದಾನವನ್ನು ತಿಳಿಸುತ್ತಿದೆ. ಇದೇ ಶಾಸನವು ಕನ್ನಮಜ್ಜಾಪುರ ವರಾಧೀಶ್ವರನಾದ 'ಗಂಡ ಮಾತ್ತಾಂಡ ವಂಶ'ದ ದಶಬ್ರಂಹ್ಮ ರಾಯರ ಪಿರಿಯರಸಿ ನಾಗಲದೇವಿಯರ ಮಗ ಪ್ರಿಥ್ವೀದೇವನೆಂಬುವನು ಕೇದಾರಮಹಾಮುನಿಗಳ ಶ್ರೀಪಾದವನ್ನು ಕಂಡು ಅವರ ಶಿಷ್ಯನಾಗಿ 'ನಿಬ್ರ್ಬಾಣದೇವ'ನೆಂಬ ಹೆಸರು ಪಡೆದು ಡಕ್ಕೇಸ್ವರ ದೇವರ ಮಲ್ಲಿಕಾರ್ಜುನದೇವರ ಸ್ಥಾನಕ್ಕೊಡೆಯರಾದರೆಂದು ತಿಳಿಸಿದೆ. ಸಿಂದಿಗೆರೆಯು ಮಲ್ಲೇಶ್ವರ ದೇವಾಲಯದ ಶಾಸನವು (ಬಳ್ಳಾರಿ ೬೧-ಕ್ರಿ.ಶ. ೧೧೪೧) ರಕ್ಷಾಪಾಲಕನಾಗಿದ್ದ ಕೇಮನ ಕೇಸಿಯಣ್ಣ ನಾಯಕನು ಸತ್ರಕ್ಕೆ ಬಿಟ್ಟ ದಾನವನ್ನು ನಿರ್ವಾಣದೇವರು ಸ್ವೀಕರಿಸಿದ್ದನ್ನು ತಿಳಿಸಿದೆ. ಇಲ್ಲಿ ನಿರ್ವಾಣ ದೇವರನ್ನು ಕಾಳಾಮುಖ ಸಮಯ ಸಮುದ್ಧರಣರೆಂದೂ, ಎಕ್ಕೋಟಿ ಚಕ್ರವರ್ತಿ ವಾಮ ದೇವರ ಸನ್ತತಿಯವರೆಂದೂ ತಿಳಿಸಿದೆ. ಶಾಸನಾಂತ್ಯದಲ್ಲಿ ಇದು ಎಕ್ಕೋಟಿ ಚಕ್ರವರ್ತಿಮಠ, ಅಲ್ಲೆಂದವನ ಬಾಯಿ ಕೋಷ್ಠ ಮೂಡಗು,...ಅವಾರಿ ಛತ್ರ ಈಲ್ಲೆಂದದ ಬಾಯಿ ಕೋಷ್ಠ ಮೂಡಗು-ಎಂದಿದೆ. ಇದೇ ದೇವಾಲಯದ ಇನ್ನೊಂದು ಶಾಸನವು ನಿರ್ವಾಣ ದೇವರಿಗೆ ಸೇರಿದ್ದು-ಇದರ ಅಂತ್ಯದಲ್ಲಿ ಕಾಶ್ಮೀರ ಭುವಿಯಲ್ಲವೆಂದುವ ನರಕದಲಿಳಿವ ಇದರ್ಗೊಲ್ಲೆಂದುವ ಕುಂಭೀಪಾಕ ಬಿಳದಿ" ಎಂದಿದೆ.

ಬೈಲೂರಿನ ಬಸವೇಶ್ವರ ದೇವಾಲಯದ ಶಾಸನವು (ಬಳ್ಳಾರಿ ೫೯ ಕ್ರಿ.ಶ. ೧೧೩೧) ಮಹಾಮಂಡಳೇಶ್ವರ ಬಳ್ಳಾರೆಯ ಬೀವರಸರು ಆಳುತ್ತಿದ್ದಾಗ, ಹಟ್ಟಣದ ಬೀರಗವುಡ ದೇವರಾಸಿ ಪಂಡಿತರಿಗೆ ಬಿಟ್ಟ ದಾನ-ಕಾಸ್ಮೀರ ಭೂಮಿ ೨ ಮತ್ತರ್ ಈ

ದನಾವೆನೋರ್ಬ್ಬನಿಲ್ಲೆಂದನ ಬಾಯಲು ಕೋಷ್ಠಂ ಮೂಡುಗು ಎಂದಿರೆ ಈ ವಿವರಗಳನ್ನು ಗಮನಿಸಿದಾಗ ನಿರ್ವಾಣಿ ದೇವರು, ಬೀವರಸರು, ಕಾಶ್ಮೀರ ದೇಶದ ಮೂಲಿಗರಾಗಿದ್ದರೆನ್ನಬಹುದು. ಕಾಶ್ಮೀರ ಭೂಮಿಯ ಬಗೆಗೆ ಗಮನಿಸಿದರೆ ಸಂಸ್ಕೃತ-ಕನ್ನಡ ಶಬ್ದಕೋಶವು[೧] ಶಾರದಾಮಠಮಾರಾಭ್ಯಂ ಕುಂಕುಮಾದ್ರಿ ತಟಾಂತಕಂ । ತಾವತ್ ಕಾಶ್ಮೀರ ದೇಶ ಸ್ಸಾತ್ ಪಂಚದ್ಯೋಜ ನಾತ್ಮಕಃ ॥ ಎಂದು ತಿಳಿಸಿದೆ. ಇದರಿಂದ ದಾನಿಗಳು ತಾವು ನೆಲೆಸಿದ್ದ ಭೂಮಿಯನ್ನು ಕಾಶ್ಮೀರ ಭೂಮಿ ಎಂದೇ ಭಾವಿಸಿದ್ದರೆಂದು ತಿಳಿಯುತ್ತದೆ. ನಿರ್ವಾಣಿ ದೇವರ ಮಠವನ್ನು ಶಾಸನವು-'ಏಕ್ಕೋಟಿ ಚಕ್ರವರ್ತಿಗಳ ಮಠ'ವೆಂದು ಕರೆದಿದ್ದು ಇವರು ಕಾಶ್ಮೀರದ ಕಾಳಾಮುಖ ಸನ್ತತಿಯ ಮುನಿಗಳೆಂದು ತಿಳಿಯಬಹುದು.

ಮೊರಿಗೇರಿ ಬಸವಣ್ಣನ ದೇವಾಲಯದ ಶಾಸನವು (ಹಗರಿ ಬೊಮ್ಮನಹಳ್ಳಿ-೨೪-ಕ್ರಿ.ಶ. ೧೦೪೫) ಘಟ್ಟಿಯರಸರು ಬಿಟ್ಟದಾನವನ್ನು ಉಲ್ಲೇಖಿಸುತ್ತಾ ಅಲ್ಲಿದ್ದ 'ಸಿಂಹಪರ್ಷೆಯ ಶ್ರೀ ಮನ್ಮಲೆಯಾಳ ಪಂಡಿತರ ಪ್ರಶ್ಶಿಷ್ಯರಾದ ಸೋಮೇಶ್ವರ ಪಂಡಿತರನ್ನು ಶಾಸನ ಉಲ್ಲೇಖಿಸಿದೆ.

ಉಚ್ಚಂಗಿ ದುರ್ಗದ ಶಾಸನವೊಂದು (ಹ. ಹಳ್ಳಿ ೪. ಕ್ರಿ.ಶ. ೧೦೭೦) ಕಾಳಾಮುಖ ತಪೋಧನರಾದ ಆತ್ರೇಯಗೋತ್ರ ಪವಿತ್ರರಾದ ಸೋಮೇಶ್ವರ ಪಂಡಿತರನ್ನು ಸ್ತುತಿಸಿದೆ. ಇದರಲ್ಲಿ ಏಕ್ಕೋಟಿಗರ-೬೨ ಜನರನ್ನು ಉಲ್ಲೇಖಿಸಿದೆ.

ಮಾಗಳದ ಶಾಸನವೊಂದು (ಹಡಗಲಿ ೭೫ ಕ್ರಿ.ಶ. ೧೨೨೫) ವೀರನರಸಿಂಹನ ದಂಡನಾಥ-ಪೋಲಾಳವರಂಡ ನಾಥನು ಬಿಟ್ಟ ದಾನವನ್ನು ತಿಳಿಸುತ್ತಾ ಅಲ್ಲಿಯೂರೊಡೆಯ ಪ್ರಮುಖಾವಶೇಷ ಮಹಾಜನ ೨೦೦ ಮುಖ್ಯವಾಗಿದ್ದ 'ಘೈಸ್ಸಗೇರಿ'ಯನ್ನು ದಾಖಲಿಸಿದೆ.

ಬಳ್ಳಾರಿ ಜಿಲ್ಲೆಯ ಪರಿಸರದಲ್ಲಿ ಸಿಂಹಪರ್ಷೆಯ ಮಳೆಯಾಳ ಪಂಡಿತ ದೇವರ ಸನ್ತತಿ, ವಾಮಶಕ್ತಿ, ದೇವಶಕ್ತಿ ಮೊದಲಾದ ಲಕುಳಿತ ಮುನಿಗಳ ಪರಂಪರೆ ಇದ್ದದ್ದು ತಿಳಿದು ಬರುತ್ತದೆ. ಕಾಳಾಮುಖ ಮುನಿಗಳು ಕಾಶ್ಮೀರದ ಮೂಲನಿವಾಸಿಗಳಾಗಿ ರಬೇಕೆಂದು ವಿ. ಸುಬ್ಬಯ್ಯರವರು ಅಭಿಪ್ರಾಯಪಡುತ್ತಾರೆ.[೨] ಕೇದಾರ ಮುನಿಗಳಿಗೆ ಸಂಬಂಧಿಸಿದಂತೆ ಕೇದಾರವು ಕಾಶ್ಮೀರದ ಸಮೀಪವಿದ್ದು ಈ ಎರಡೂ ಸಂಪ್ರದಾಯಗಳನ್ನು ಕಾಶ್ಮೀರದ ಶೈವವೆಂದೆ ಪರಿಗಣಿಸಬಹುದು. ಆದರೆ ಕಾಳಮುಖ ಯತಿಗಳೆಲ್ಲ ಕಾಶ್ಮೀರದಿಂದ ಬಂದವರಲ್ಲವೆಂದು ಕಪಟರಾಳ ಕೃಷ್ಣರಾಯರು ತಿಳಿಸಿರುತ್ತಾರೆ.[೩] ಈ ಹಿನ್ನೆಲೆಯಲ್ಲಿ ಆಯಾ ಸಂದರ್ಭದಲ್ಲಿದ್ದ ದಾನಿಗಳನ್ನು ಗಮನಿಸಿ ಮುನಿಗಳ ಮಹತ್ವದಲ್ಲಿ ಸೂಚನೆಗಳಿದ್ದಲ್ಲಿ ಕಾಶ್ಮೀರದ ಮುನಿಗಳಿರಬೇಕೆಂದು ಗ್ರಹಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಪರಿಸರದ ಶಾಸನಗಳಲ್ಲಿ ಅನೇಕ ಜನರು ಉಕ್ತರಾಗಿದ್ದು ಈ ಪ್ರಬಂಧದಲ್ಲಿ ಸಾಂಕೇತಿಕವಾಗಿ ಕೆಲವನ್ನು ಮಾತ್ರ ಉದಾಹರಿಸಲಾಗಿದೆ. ಕೆಲವು ವ್ಯಕ್ತಿ ನಾಮಗಳನ್ನು ಇಲ್ಲಿ ಅಗತ್ಯವಾಗಿ ಗಮನಿಸಬೇಕಾಗಿದೆ. ಅಲ್ಲಾಳಭಟ್ಟರು (ಹೊಸಪೇಟೆ-೩೨), ಕೆಂಚವಿಷ್ಣು ದೀಕ್ಷಿತರು, ಸಾವಯ ಅಣ್ಣಗಳು (ಅದೇ), ಧರ್ಮಪಾಳದಂತನಾಯಕ ಮೇಕಿಮಯ್ಯ ನಾಯಕ, ಗೊಯ್ದಣ, ಬಿದ್ದಣ-(ಕೂಡ್ಲಗಿ ೧೬-ಕೊಟ್ಟೂರು) ವೀರ ಗೋಮದೇವ, ಚಂಡುಗೀದೇವ (ಹಡಲಗಿ ೧೬) ಘಳಿಯಾರ ಹೆಗ್ಗರಸರು, ಘಳಿಯಾರ ಬೆನಕರಸ (ಸೊಂಡೂರು-೨೦) ಗುಂಡದೇವಪೆದ್ದಿ ಪಾಲಪೆದ್ದಿ (ಹಡಲಗಿ ೬೭), ಬಲದೇವ ಘೈಸ (ಗಡಲಗಿ ೭೧), ರಿಷಿಯಾಭಟ್ಟ, ಸಾಯಿಮಾರ್ಯ, ಮೂಕಿಮಾರ್ಯ, ಮುದ್ದಿಮಾರ್ಯ (ಸೊಂಡೂರು-೧೭) ಮೊದಲಾದವರನ್ನು ಗಮನಿಸಬಹುದು.

ಬಳ್ಳಾರಿ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಬ್ರಾಹ್ಮಣರು ವಿಶೇಷವಾಗಿ ನೆಲೆಸಿದ್ದಂತೆ ಇದೆ. ಬಾಗುಳಿಯ ಕಲ್ಲೇಶ್ವರ ದೇವಾಲ ಯದ ಶಾಸನವು ಹ.ಹಳ್ಳಿ ೧೦೭, ಕ್ರಿ.ಶ. ೧೧೧೫) ದಂಡನಾಯಕ ತಿಕ್ಕಭಟ್ಟರು ಕಲಿದೇವರಿಗೆ ಬಿಟ್ಟ ದಾನವನ್ನು, ವೀರಕೇಶವ ದೇವರಿಗೆ ಬಿಟ್ಟ ದಾನವನ್ನು ಶಿವಶಕ್ತಿ ಪಂಡಿತರ ಸನ್ನಿಧಿಯಲ್ಲಿ ಬಿಟ್ಟಿದ್ದಾರೆ. ಆದರೆ ಮಹಾಜನರೇ ದಾನವನ್ನು ಸ್ವೀಕರಿಸಿದ್ದು, ಶ್ರೀ ಕಲಿದೇವರ ಬ್ರಹ್ಮಪುರಿಗಳ ಶ್ರೀಮಾನ್ಯವಾಗಿ ಸಲ್ಲಿಸುವರೆಂದು ಶಾಸನ ತಿಳಿಸಿದೆ. ಈ ದೇವಾಲಯದ ಮತ್ತೊಂದು ಶಾಸನವು (ಹ.ಹಳ್ಳಿ ೧೧೦-ಕ್ರಿ.ಶ. ೧೧೨೨) ವಸಿಷ್ಟ ಗೋತ್ರದ ಮಾರ್ತ್ತಾಂಡಯ್ಯನ ಮಗ ದಾಸನಾಯಕನು ಖಂಡಿಕವನ್ನು ಹೇಳುವವರಿಗೆ ಬಿಟ್ಟ ದಾನವನ್ನು, ಸ್ಥಾನಿಕರೇ ಹೇಳಬೇಕೆಂದು ನಿಗದಿಪಡಿಸಿದೆ. ಪರಸ್ಥಾನದವರಿಗೆಲ್ಲ ವೆಂದು ತಿಳಿಸಿದೆ. ಈ ಉಲ್ಲೇಖನಗಳಿಂದ ಆಗ ತಮ್ಮ ಗುಂಪಿನ ಬ್ರಾಹ್ಮಣರಿಗಿದ್ದ ಪ್ರಾಶಸ್ತ್ಯವನ್ನರಿಯಬಹುದಾಗಿದೆ.

ಬಳ್ಳಾರಿ ಜಿಲ್ಲೆಯ ಪರಿಸರದಲ್ಲಿ ನಾನಾಗೋತ್ರದ, ಕಾಶ್ಮೀರ ದಿಂದ ಬಂದು ನೆಲೆಸಿದ್ದ ವಿಪ್ರರು ವಿಶೇಷವಾಗಿ ಗಮನ ಸೆಳೆಯು ವಂತಿದ್ದರು.

***

ಅಡಿಟಿಪ್ಪಣಿಗಳು

೧. **ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ., ಸಂಸ್ಕೃತ ಕನ್ನಡ ಶಬ್ದ ಕೋಶ-ಭಾಗ-II.**

೨. *David N. Lorenzen ., The Kapalikas & Kalamukhas* - New Delhi.

೩. ಕಪಟರಾಳ ಕೃಷ್ಣರಾಯರು., **ಕರ್ನಾಟಕ ಲಾಕುಳಶೈವರ ಇತಿಹಾಸ** - ಪುಟ ಸಂ : ೧೧೫.

ಡಾ||ಡಿ.ಎಸ್. ಯೋಗೀಶ್ವರಪ್ಪ*

ಮರುಗರೆ ನಾಡಿನ - "ಸಾಮಂತ ಗೂಳಿಬಾಚಿದೇವ" - ಮರುಪರಿಶೀಲನೆ

ತುಮಕೂರು ಜಿಲ್ಲೆಯ ಅದೇ ತಾಲ್ಲೂಕಿನ ಗೂಳೂರು ಹೋಬಳಿಯ ಕೈದಾಳವು ಪ್ರಸಿದ್ಧ ಐತಿಹಾಸಿಕ ಕೇಂದ್ರವಾಗಿದೆ. ತುಮಕೂರು ನಗರದ ವಾಯುವ್ಯಕ್ಕೆ ಏಳು ಕಿ.ಮೀ ಅಂತರದಲ್ಲಿರುವ ಈ ಊರು ೧೨ನೇ ಶತಮಾನದಲ್ಲಿ ಮನ್‌ಮಹಾಸಾಮಂತ ಗೂಳಿಬಾಚಿದೇವನಿಂದ ಪ್ರಸಿದ್ಧಿಯಾಗಿತ್ತು. ಸಾಂಮತ ಎಂದರೆ ಒಬ್ಬ ರಾಜನಿಗೆ ಅಧೀನವಾಗಿರುವ ರಾಜ, ಮಾಂಡಲಿಕ[೧] ಇದು ಹುದ್ದೆಯನ್ನು ಸೂಚಿಸುವ ಪದವಾಗಿದ್ದು ನಾಡುಗಳ ಆಡಳಿತವನ್ನು ನೋಡಿಕೊಳ್ಳುವುದಾಗಿದೆ. ಉದಾಹರಣೆಗೆ ಮರುಗಲ ನಾಡಾಳುವ ತೆಲುಗು ಮಾಂಡಲಿಕರ ಗಂಡ ಕಯಿದಾಳ್ದ ಮಲ್ಲಿದೇವನ ಮಗ ಗಂಗದೇವ[೨]. ಹೀಗೆ ನಾಡಿನ ಆಡಳಿತವನ್ನು ಸಾಮಂತರಾಗಿ ಆಳುತ್ತಾ ಪ್ರಬಲರಾದವರು ಮುಂದೆ ಮಹಾಮಂಡಲೇಶ್ವರ ರಾಗಿದ್ದಾರೆ. ನಂತರ ಇನ್ನೂ ಬಲಿಷ್ಠರಾದವರು ಚಕ್ರವರ್ತಿಸ್ಥಾನಕ್ಕೆ ಏರಿದ್ದಾರೆ. ಇಂದಿಗೂ ಕೂಡಾ ರಾಜಕೀಯದಲ್ಲಿ ಇದೇ ಸ್ಥಿತಿಯನ್ನು ಕಾಣಬಹುದು. ಇಂತಹ ಪ್ರಸಿದ್ಧನಾದ ಹೊಯ್ಸಳರ ಮನ್‌ಮಹಾ ಸಾಮಂತನೊಬ್ಬನ ಸಾಧನೆಯ ಚರಿತ್ರೆಯನ್ನು ರಚಿಸುವ ಪ್ರಯತ್ನ ಮಾಡಲಾಗಿದೆ.

ಆಕರಗಳು

ಗೂಳಿಬಾಚಿದೇವನ ಚರಿತ್ರೆಯನ್ನು ರಚಿಸಲು ಇರುವ ಪ್ರಾಥಮಿಕ ಆಧಾರಗಳೆಂದರೆ ಮೊದಲನೆಯದಾಗಿ, ಕೈದಾಳದ ಗಂಗಾಧರೇಶ್ವರನ ಗುಡಿಯಲ್ಲಿನ ಕ್ರಿ.ಶ ೧೧೫೦ರ ಕಾಲದ ಶಾಸನ, ಎರಡನೆಯದಾಗಿ, ಪ್ರೊ ಬಿ. ರಾಜಶೇಖರಪ್ಪನವರು ಇತ್ತೀಚೆಗೆ ಸಂಶೋಧಿಸಿರುವ ಕೊಂಡಾಪುರದಲ್ಲಿನ ಶಾಸನ, ಮೂರನೆಯದಾಗಿ ಡಾ|| ಹೆಚ್.ಎಸ್. ಗೋಪಾಲ್‌ರಾವ್ ಸಂಶೋಧಿಸಿರುವ ಕೈದಾಳದ ಪಶ್ಚಿಮ ದಿಕ್ಕಿನ ಕೆಂಪಯ್ಯನ ಪಾಳ್ಯದಲ್ಲಿರುವ ಹುಲಿಬೇಟೆ ವೀರಗಲ್ಲು ಶಾಸನ ಹಾಗೂ ಗೂಳಿಬಾಚಿದೇವ ನಿರ್ಮಿಸಿರುವ ದೇವಾಲಯಗಳು. ಇಷ್ಟನ್ನು ಹೊರತು ಪಡಿಸಿದರೆ ನಮಗೆ ಸದ್ಯಕ್ಕೆ ಬೇರೆ ಯಾವ ಆಧಾರಗಳೂ ದೊರೆಯುವುದಿಲ್ಲ.

ಅಧ್ಯಯನ

ಈ ಬಾಚಿದೇವನ ಬಗೆಗೆ ಮೊದಲ ಸಂಕ್ಷಿಪ್ತ ಲೇಖನವು ಪ್ರೊ. ಹಂ.ಪ. ನಾಗರಾಜಯ್ಯನವರಿಂದ ರಚಿಸಲ್ಪಟ್ಟಿದೆ[೩].ನಂತರ ಪ್ರೊ|| ಬಿ. ರಾಜಶೇಖರಪ್ಪನವರು ಕೊಂಡಾಪುರದ ಶಾಸನವನ್ನು ಸಂಶೋಧಿಸಿದಾಗ ಅವನ ಬಗೆಗೆ ಕೆಲವು ವಿವರಣೆ ನೀಡಿದ್ದಾರೆ[೪]. ಪ್ರಸ್ತುತ ಲೇಖನದಲ್ಲಿ ಇವುಗಳ ಜೊತೆಗೆ ಕ್ಷೇತ್ರಕಾರ್ಯದ ಮೂಲಕ ಮತ್ತಷ್ಟು ವಿವರಗಳನ್ನು ಸಂಗ್ರಹಿಸಿ ಹೊಸ ವಿಚಾರಗಳನ್ನು ಮಂಡಿಸಲಾಗಿದೆ.

ಗೂಳಿಬಾಚಿದೇವನಿಗೆ - ಗೂಳಿಬಾಚಿ, ಸಾಮನ್ತಬಾಚಿ, ಕಲಿಬಾಚಿದೇವ, ಶೂರಬಾಚಿ, ಶ್ರೀಮನ್ಮಹಾಸಾಮಂತ ಗೂಳಿಬಾಚಿದೇವ ಎಂದು ಶಾಸನದಲ್ಲಿ ಹಲವು ಕಡೆ ಹೇಳಲಾಗಿದೆ[೫]. ಇವನು ಹೊಯ್ಸಳ ಚಕ್ರವರ್ತಿ ವೀರಗಂಗ ವಿಷ್ಣುವರ್ಧನ ನಾರಸಿಂಘದೇವನ ಅಂದರೆ ಒಂದನೇ ನರಸಿಂಹನ ಮಹಾಸಾಮಂತನಾಗಿ "ಮರುಗರೆ ನಾಡಿನಲ್ಲಿ" ಆಳ್ವಿಕೆ ಮಾಡುತ್ತಿದ್ದನು. ಈ ನಾಡು ಪ್ರಸ್ತುತ ತುಮಕೂರು ತಾಲ್ಲೂಕು, ಕುಣಿಗಲ್ ತಾಲ್ಲೂಕಿನ ಉತ್ತರದ ಕೆಲಭಾಗಗಳು, ಗುಬ್ಬಿ ತಾಲ್ಲೂಕಿನ ಪೂರ್ವದ ಕೆಲ ಭಾಗಗಳನ್ನೊಳಗೊಂಡಿತ್ತು. ಈ ನಾಡಿನ ಉಲ್ಲೇಖ ತುಮಕೂರು ಜಿಲ್ಲೆಯ ೧೪ಶಾಸನಗಳಲ್ಲಿ ಬಂದಿದ್ದು ಮೊದಲ ಉಲ್ಲೇಖ ಗಂಗರ ದೊರೆ ಶ್ರೀಪುರುಷನ ಶಾಸನದಲ್ಲಿದೆ. ಆಗ ಅವನ ಸಾಮಂತ ಸಿಯಗೆಲ್ಲರ ಮರುಗರೆ ನಾಡನ್ನು ಕ್ರಿ.ಶ ೭೮೮ರಲ್ಲಿ ಆಳ್ವಿಕೆ ಮಾಡುತ್ತಿದ್ದನು[೬]. ಆದುದರಿಂದ ಇದೊಂದು ಅತಿ ಪ್ರಾಚೀನ ನಾಡಾಗಿತ್ತು. ಇಂತಹ ಐತಿಹಾಸಿಕ ನಾಡಿಗೆ ಕೈದಾಳ ಪಟ್ಟಣವನ್ನು ನೆಲೆವೀಡನ್ನಾಗಿ ಮಾಡಿಕೊಂಡು ಮಹಾಸಾಮಂತನೂ, ಸಾಹಸಿಯೂ ಆದ ಗೂಳಿಬಾಚಿದೇವನು ಕ್ರಿ. ಶ ೧೧೫೦ರಲ್ಲಿ ಆಳ್ವಿಕೆ ನಡೆಸುತ್ತಿದ್ದನು.

ಮೂಲ

ಯಾವುದೇ ರಾಜವಂಶದ ಅಥವಾ ವ್ಯಕ್ತಿಯ ಮೂಲವನ್ನು ಹುಡುಕುವುದು ಇತಿಹಾಸಕಾರರಿಗೆ ಕುತೂಹಲಕಾರಿ. ದಕ್ಷಿಣ ಭಾರತದ ಪ್ರಸಿದ್ಧ ರಾಜ ಮನೆತನಗಳ ಮೂಲವನ್ನು ಕೆದಕಿದಾಗ ನಮಗೆ ಕೆಲವು ಸಮಾನ ಅಂಶಗಳು ದೊರಕುತ್ತವೆ. ಅವರು ಪುರಾಣ ಪುರುಷ ಸಂತತಿಗೆ ಸೇರಿದವರಾಗಿರಬಹುದು, ಇಲ್ಲವೆ ಅಯೋನಿಜರಾಗಿರಬಹುದು. ಹೀಗೆ ದೊಡ್ಡ ಮನೆತಗಳ ಬಗ್ಗೆ ಇಷ್ಟೊಂದು ವಿವಾದಗಳಿರುವಾಗ ಒಂದು ಚಿಕ್ಕನಾಡನ್ನಾಳಿದ ಮಹಾಸಾಮಂತ ಗೂಳಿಬಾಚಿದೇವನ ಮೂಲದ ಬಗೆಗೆ ಹೇಳುವುದೇನಿದೆ? ಆದರೂ ಕೂಡಾನಮಗೆ ದೊರೆತಿರುವ ಮಾಹಿತಿಗಳನ್ನು ವಿಶ್ಲೇಷಿಸಿ ನೋಡಿದಾಗ ಕೆಲವು ಹೊಸ ಅಂಶಗಳು ತಿಳಿಯುತ್ತವೆ. ಅವನೇ ಹಾಕಿಸಿದ ಶಾಸನವೂ ಕೂಡಾ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿದೆ. ಆದರ ಪ್ರಕಾರ[೭]

ಅದಳ ಕುಳಾಂಬರ ದ್ಯುಮಣಿದಾಯಿಗರಂಗಲೆಗೆಲ್

* ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು

ಲೀಲೆಯಿಂದೊಡವಿದ ಮಾನ್ಯಖೇಡ ಪುರಾದೀಶ ಮದರಾಸಿಸಾರ

ಪೌರುಷರಿಕ ದನಂಜಯಾನ....ಸಾಹಸಗಂಗನುರ್ಬಿಯೊಲ್

-ಎಂದಿದೆ. ಮೇಲೆ ತಿಳಿಸಿದಂತೆ ಆತನ ತಂದೆ ಗಂಗ, ಅವನು ಮಾನ್ಯಖೇಡ ಪುರಾಧೀಶನಾಗಿದ್ದನು. ಮಾನ್ಯಖೇಡ ಪುರವನ್ನು ಎಲ್ಲಿ ಗುರ್ತಿಸಬೇಕು ಎಂಬ ಪ್ರಶ್ನೆಗೆ ನಮ್ಮೆದುರಿಗೆ ಎರಡು ಮಾನ್ಯಖೇಡ ಪುರಗಳು ಗೋಚರಿಸುತ್ತವೆ. ಒಂದು ರಾಷ್ಟ್ರಕೂಟರ ರಾಜಧಾನಿ ಇಂದಿನ ಗುಲ್ಬರ್ಗಾ ಜಿಲ್ಲೆಯಲ್ಲಿನ ಮಾನ್ಯಖೇಡಪುರ. ಎರಡನೆಯದಾಗಿ ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಮಾನ್ಯಪುರ ಅರ್ಥಾತ್ ಮಣ್ಣೆ-ಇದೂ ಕೂಡಾ ಗಂಗ ಮನೆತನದವರ ಹಾಗೂ ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತ್ತು. ಪ್ರಾಯಶಃ ಇವನ ಪೂರ್ವಜರು ಕೈದಾಳಕ್ಕೆ ಸನಿಹದಲ್ಲೇ ಇರುವ ನೆಲಮಂಗಲ ತಾಲ್ಲೂಕಿನ ಮಾನ್ಯಪುರದವರೇ ಆಗಿರಬೇಕು. ರಾಷ್ಟ್ರಕೂಟರು ಮಣ್ಣೆಯನ್ನು ಗೆದ್ದುಕೊಂಡು ಹಿಂತಿರುಗುವಾಗಿ ಮಣ್ಣೆಗೆ ಇವನ ಪೂರ್ವಜರನ್ನೇ ಅಧಿಕಾರಿಗಳನ್ನಾಗಿ ನೇಮಿಸಿರ ಬಹುದು. ರಾಷ್ಟ್ರ ಕೂಟರು ಪತನ ಹೊಂದಿದ ಮೇಲೆ ದಕ್ಷಿಣ ಕರ್ನಾಟಕದಲ್ಲಿ ಹೊಯ್ಸಳರು ಪ್ರಬಲರಾದಾಗ ಗೂಳಿಬಾಚಿಯ ವಂಶಸ್ಥರು ಅವರ ಆಶ್ರಯ ಪಡೆದಿರಬಹುದು. ಆದುದರಿಂದಲೇ ಅವನು ತನ್ನ ಶಾಸನದಲ್ಲಿ ತನ್ನಪೂರ್ವಜರ ಒಡೆತನವನ್ನು ನೆನಪಿಸುವ ಮೂಲಸ್ಥಳದ ಹೆಸರನ್ನು ಮಾನ್ಯಖೇಡ ಪುರಾಧೀಶ ಎಂದು ಹೇಳುವುದರ ಮುಖಾಂತರ ವ್ಯಕ್ತಪಡಿಸಿದ್ದಾನೆ.

ಏಳಿಗೆ

ಗೂಳಿಬಾಚಿದೇವನ ಪೂರ್ವಜರು ಮಾನ್ಯಪುರದ ಒಡೆಯ ರಾಗಿದ್ದು ; ಕ್ರಮೇಣಹೊಯ್ಸಳರ ಕಾಲದಲ್ಲಿ ಕೋಲಾರ ಮತ್ತು ಮುಳಬಾಗಿಲಿನ ಪ್ರಾಂತ್ಯಕ್ಕೆ ಸಾಮಂತರಾಗಿ ವರ್ಗಾವಣೆಯಾದರು. ಈ ವರ್ಗಾವಣೆ ಗೂಳಿಬಾಚಿದೇವನ ಕಾಲದಲ್ಲಿ ಸಂಭವಿಸಿತು[೮]. ನಂತರ ಅವನನ್ನು ಅಲ್ಲಿಂದ ಹೊಯ್ಸಳ ವಿಷ್ಣುವರ್ಧನನು ಮರುಗರೆ ನಾಡಿಗೆ ಮನ್ಮಹಾಸಾಮಂತನನ್ನಾಗಿ ಮಾಡಿ ವರ್ಗಾವಣೆ ಮಾಡಿರಬಹುದು ಎಂದು ಹೇಳಬಹುದು. ಹೀಗೆ ಮರುಗರೆ ನಾಡಿನ ಅಧಿಕಾರವನ್ನು ಕೈದಾಳದ ನೆಲೆವೀಡಿನಿಂದ ಗೂಳಿಬಾಚಿದೇವನು ಆರಂಭಿಸಿದನು.

ಗೂಳಿಬಾಚಿದೇವನ ಆರಂಭಿಕ ಜೀವನ

ಈತನನ್ನು ಶಾಸನವು ಅದಳಕುಲ ಕಮಲಹಂಸ, ಅದಳಕುಳಾಂಭರದ್ಯುಮಣಿ ಅದಳಕುಳಾಂಬರಭಾನು[೯]ಎಂದು ಬಣ್ಣಿಸುತ್ತದೆ. ಆದುದರಿಂದ ಇವನು ಅದಳ ವಂಶಕ್ಕೆ ಸೇರಿದವನು ಎಂದು ಹೇಳಬಹುದು. ಇವನಿಗೆ ಅನೇಕ ಬಿರುದುಗಳಿದ್ದವು[೧೦] ಉದಾ : ತೊಡರ್ದರ ಗಂಡ, ವೈರಿಗಳ ಗಂಡ, ಮಚ್ಚದರ ಗಂಡ,ನಾಲ್ವತ್ತನಾಲ್ವರಗಂಡ, ಸಾಮಂತಸಂಕ್ರಂದನಂ, ಮಾನ್ಯಖೇಡಪುರಾಧೀಶ, ಗೂಳಿಬಾಚಿದೇವನು ಸುಂದರ, ಮಹಾಪರಾಕ್ರಮಿ, ಸ್ವಾಮಿಭಕ್ತ,ತ್ಯಾಗಿ, ಶೌಚ ಮೊದಲಾದ ಗುಣ ಗಳನ್ನು ಹೊಂದಿದ್ದನು ಎಂದು ಶಾಸನದಲ್ಲಿ ಕಾವ್ಯಮಯವಾಗಿ ವರ್ಣಿಸಲಾಗಿದೆ. ಈ ಗುಣಗಳು ಅವನಿಗೆ ತನ್ನ ವಂಶ ಪಾರಂ ಪರ್ಯದಿಂದ ಬಂದವುಗಳಾಗಿವೆ. ಅವನ ಪೂರ್ವಜರು ವೀರ ಪುರುಷರೂ ದಾನಿಗಳೂ ಆಗಿದ್ದು ಶಾಸನ ಅತನ ವಂಶದವರ ಹೆಸರುಗಳನ್ನು ಸಹ ತಿಳಿಸುತ್ತದೆ[೧೧] :

ಬಾಸೆಯ- ಗಡ್ಡದಗಂಗ- ನಾಯಕಬಸವ- ಗಂಗಬಸವಯ- ಕಲಿಬಸವಗಂಗ- ಚಲವರಿವ- ಸಾಮನ್ತಗೂಳಿಬಾಚಿದೇವ

ಶ್ರೀಮನ್ಮಹಾಸಾಮಂತ ಗೂಳಿಬಾಚಿದೇವನು ಗಂಗ ಮತ್ತು ಬೆನವಾಂಬಿಕೆಯ ಪುತ್ರನಾಗಿ ಜನಿಸಿದನು, ಇವನು ಕ್ರಿ.ಶ ೧೧೩೮ಕ್ಕಿಂತ ಮೊದಲೇ ಕೈದಾಳಕ್ಕೆ ಸಾಮಂತವಾಗಿ ಆಗಮಿಸಿದನೆಂದು ಇತ್ತೀಚೆಗೆ ಸಂಶೋಧಿಸಿದ ಶಾಸನದ ಆಧಾರದಿಂದ ಹೇಳಬಹುದು[೧೨]. ಈ ಶಾಸನವು ಹುಲಿಬೇಟೆ ವೀರಗಲ್ಲು ಶಾಸನವಾಗಿದ್ದು ಹುಲಿಯನ್ನು ಇರಿದುಕೊಂದ ವೀರ ಚುದನಿಗಾಗಿ ಅವನ ಅಣ್ಣ ಹಾಕಿಸಿದ್ದಾಗಿದೆ. ಆ ಚುದನು ಸಾಮಂತ ಗೂಳಿಬಾಚಿಯ ಬಂಟನಾಗಿದ್ದನು. ಈ ಶಾಸನದಲ್ಲಿ ಕೇವಲ ಪಿಂಗಳ ಸಂವತ್ಸರವನ್ನು ನಮೂದಿಸಲಾಗಿದ್ದು ಕಾಲವನ್ನು ತಿಳಿಸಿಲ್ಲ. ಆದುದರಿಂದ ಈಗಾಗಲೇ ಕೈದಾಳದ ಗಂಗಾಧರೇಶ್ವರನ ಗುಡಿಯಲ್ಲಿನ ಶಾಸನದಲ್ಲಿ ಗೂಳಿಬಾಚಿಯ ಕಾಲವನ್ನು ಸ್ಪಷ್ಟವಾಗಿ ನಮೂದಿಸ ಲಾಗಿದೆ. ಈ ಕಾಲದ ನೆರವಿನಿಂದ[೧೩] ಹೇಳುವುದಾದರೆ ಸಾಮನ್ತ ಗೂಳಿಬಾಚಿಯು ಕೈದಾಳದಲ್ಲಿ ಕ್ರಿ.ಸ ೧೧೩೮ರಲ್ಲಿ ಅಥವಾ ಅದಕ್ಕಿಂತ ಕೆಲವು ವರ್ಷಗಳ ಮೊದಲೇ ಆಳ್ವಿಕೆ ಮಾಡುತ್ತಿದ್ದನೆಂದು ಸ್ಪಷ್ಟಪಡಿಸಬಹುದು. ಹೀಗೆ ಮರುಗೆರೆ ನಾಡಿಗೆ ಹೊಯ್ಸಳ ದೊರೆ ಶ್ರೀಮನ್ಮಹಾಮಂಡಲೇಶ್ವರ ವಿಷ್ಣುವರ್ಧನನ ಕಾಲದಲ್ಲೇ ಮಹಾಸಾಮಂತನಾಗಿ ಆಗಮಿಸಿ ಅವನ ಮಗನಾದ ಒಂದನೆ ನರಸಿಂಹನ ಆಳ್ವಿಕೆಯ ಕಾಲದಲ್ಲಿಯೂ ಮುಂದುವರೆದು ಕೈದಾಳವನ್ನು ನೆಲೆವೀಡನ್ನಾಗಿ ಮಾಡಿಕೊಂಡು ಅಲ್ಲಿ ಜನಮುಖೀ ಚಿಂತನೆಯಿಂದ ಆಡಳಿತವನ್ನು ನಡೆಸತೊಡಗಿದನು. ಕೃಷಿಗೆ, ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ ಈತನ ಕೆಲಸಗಳು ಮರುಗರೆ ನಾಡಿನಲ್ಲಿ ಅವನು ಹೆಚ್ಚು ಜನಪ್ರಿಯನಾಗಲು ಕಾರಣವಾದವು, ಇಂತಹ ವ್ಯಕ್ತಿಯ ಸಾಧನೆಗಳನ್ನು ನಾವು ಈ ಕೆಳಕಂಡಂತೆ ವಿವರಿಸಬಹುದು.

ಸಾಧನೆಗಳು

ಈತನ ರಾಜಕೀಯ ಸಾಧನೆಗಳ ಬಗ್ಗೆ ಲಭ್ಯವಿಲ್ಲವಾದರೂ, ೧೨ನೇ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಗೂಳಿಬಾಚಿದೇವನ ಕಾಲಾವಧಿ ಕರ್ನಾಟಕದಲ್ಲಿ ಬೌದ್ಧಿಕ ಕ್ಷೋಭೆಯ ಕಾಲವಾಗಿತ್ತು. ಸಮಾಜದಲ್ಲಿ ಸುಧಾರಣೆಯ ಮತ್ತು ಕ್ರಾಂತಿಯ ಅಗಾಧವಾದ ಅಲೆಯು ಬೀಸುತ್ತಿದ್ದಿತು. ಹೊಯ್ಸಳರು ತಮ್ಮ ರಾಜ್ಯದಲ್ಲಿ ವೈವಿಧ್ಯಪೂರ್ಣವೂ, ಪರಸ್ಪರ ವಿರುದ್ಧವೂ ಅನೇಕ ವೇಳೆ ಘರ್ಷಣೆಯಿಂದ ಕೂಡಿದುದೂ ಆದ ಸಮಾಜದ ವರ್ಗಗಳನ್ನು ಎದುರಿಸಬೇಕಾಯಿತು. ಅವರು ಬೇರೆ ಬೇರೆ ಧರ್ಮಗಳಿಗೆ ಮತ್ತು



ಸಾಮಂತ ಗೂಳಿಬಾಚಿದೇವನ ಕ್ರಿ.ಶ ೧೧೫೦ರ ಶಾಸನದ ಶಿರೋಭಾಗದ ಶಿಲ್ಪಗಳಲ್ಲಿ ಸರ್ವಧರ್ಮ ಸಹಿಷ್ಣುತೆಯ ಸಂಕೇತ

ಜಾತಿಗಳಿಗೆ ಸೇರಿದ್ದರು. ಅರಸರಾಗಿ ಹೊಯ್ಸಳರು ಈ ವೈವಿಧ್ಯತೆಯಲ್ಲಿ ಏಕತೆಯನ್ನು ತರಬೇಕಾಗಿತ್ತು. ದಿಗ್ವಿಜಯದಿಂದ ದೊರೆತ ರಾಜಕೀಯ ಲಾಭಗಳನ್ನು ಸಂಘಟನೆ ಮತ್ತು ಸಾಮಾಜಿಕ ಹತೋಟಿಗಳ ಸೂಕ್ತವಾದ ನೀತಿಯನ್ನು ಅನುಸರಿಸುವುದರ ಮೂಲಕ ಉಳಿಸಿಕೊಳ್ಳಬೇಕಾಗಿತ್ತು. ಇದನ್ನು ಹೊಯ್ಸಳರಾಜರು ತಾವು ಅನುಸರಿಸುವುದರ ಮುಖಾಂತರ ತಮ್ಮ ಸಾಮಂತರೂ ಅನುಸರಿಸುವಂತೆ ಮಾಡಿದರು. ಅವರು ಜನರ ಸಾರ್ವತ್ರಿಕ ಕಲ್ಯಾಣವನ್ನು ಬಯಸಿದರು. ರಾಜ ಯಾವುದೇ ಧರ್ಮದ ಪಕ್ಷಪಾತಿಯಾದರೆ ಸಮಾಜದಲ್ಲಿ ಅನಿಷ್ಟ ಪರಿಣಾಮಗಳು ಉಂಟಾಗುತ್ತವೆ ಎಂಬುದನ್ನು ಅರಿತಿದ್ದರು. ಆದ್ದರಿಂದ ಸಾರ್ವನಿಕ ಹಿತಾಸಕ್ತಿಯಿಂದ ಮತ್ತು ಸಾರ್ವಜನಿಕ ಆಡಳಿತದ ದೃಷ್ಟಿಯಿಂದ ಅವರು ತಮ್ಮ ಬಲವು ಯಾವ ಕಡೆಗಿದೆಯೋ ಆ ಕಡೆಗಾಗಲೀ ಯಾವ ವರ್ಗವು ಪ್ರಧಾನವಾಗಿದೆಯೋ ಆ ಕಡೆಗಾಗಲೀ ನಿಲ್ಲಲಿಲ್ಲ. ಇದರ ಫಲವಾಗಿ ವಿಶೇಷವಾದ ಒಂದು ಧಾರ್ಮಿಕ ಸಹಿಷ್ಣುತೆಯ ನೀತಿ ರೂಪುಗೊಂಡಿತ್ತು. ಅವರು ಧರಿಸಿದ "ಚತುಸ್ಸಮಯ ಸಮುದ್ಧರಣ" "ಸಕಲ ಸಮಯ ರಕ್ಷಾಮಣಿ" ಎಂಬ ಬಿರುದುಗಳು ಮೇಲೆ ಹೇಳಿದ ಪ್ರವೃತ್ತಿಯನ್ನು ಸ್ಪಷ್ಟವಾಗಿ ತೋರಿಸುತ್ತವೆ. ಇದು ಅವರ ಆಡಳಿತಕ್ಕೆ ಜಾತ್ಯಾತೀತ ಛಾಯೆಯನ್ನು ಕೊಟ್ಟಿತು. ಈ ಜಾತ್ಯಾತೀತ ಛಾಯೆಯನ್ನು ಹೊಯ್ಸಳರ ಸಾಮಂತನಾಗಿ ನಿಷ್ಠೆಯಿಂದ ಪಾಲಿಸಿದವನು ಕೈದಾಳದ ಸಾಮಂತಗೂಳಿಬಾಚಿದೇವ. ಈತನು ಎಲ್ಲ ಮತಧರ್ಮಗಳನ್ನು ಸ್ವಧರ್ಮ ನಿಷ್ಠೆಯಿಂದ ಸಮಭಾವದಿಂದ ಗೌರವಿಸಿದ ವ್ಯಕ್ತಿ. ಶಾಸನದಲ್ಲಿ ತಿಳಿಸಿರುವಂತೆ[೧೪]

ಧರೆಗೆಸೆವ ನಾಲ್ಕು ಸಮೆಯದ
ಸಿರಿಕಲ್ಪಾವ ನಿರುಹಂ ಬುಧಜನಕೇ
ದೊರೆವೆತ್ತ ಪೆಂಪಿನಿಂದಂ
ಪಿರಿಯಂ ಧರ್ಮಾವತಾರ ಗಂಗನ ಪುತ್ರಂ

ಇಲ್ಲದವರ ಪಾಲಿಗೆ ಬೇಡಿದುದನ್ನು ನೀಡುವ ಕಲ್ಪವೃಕ್ಷವಾಗಿದ್ದ ಈ ಬಾಚೀದೇವನು ನಾಲ್ಕು ಧರ್ಮಗಳಿಗೆ ಲಕ್ಷ್ಮಿಯಾಗಿದ್ದನು. ತನ್ನ ಹಿರಿಮೆಯಿಂದಾಗಿ ಧರ್ಮವೇ ಮನುಷ್ಯರೂಪಿನಿಂದ ಬಂದಂತಿದ್ದನು. ನಾಲ್ಕು ಸಮಯವೆಂದರೆ ಮತಧರ್ಮಕುಲ ಸಮಾಜಗಳು ಆಯಾ ಕುಲದವರ ಮತಧರ್ಮ ಆಚರಣೆಗೆ ದೇವಾಲಯಗಳನ್ನು ನಿರ್ಮಿಸಿಕೊಟ್ಟನು.

ಗೂಳಿಬಾಚಿದೇವನು ತನ್ನ ನೆಲೆವೀಡಾಗಿದ್ದ ಕೈದಾಳ ಮತ್ತು ಅದರ ಸುತ್ತಮುತ್ತ ಅನೇಕ ಕಾರ್ಯಗಳನ್ನು ಕೈಗೊಂಡನು. ಮಾವಿನಮರದ ತೋಪು ಬೆಳೆದು ಒಣಗಿದ ಸುವಾಸನೆಯುಳ್ಳ ಬತ್ತದ ಗದ್ದೆಗಳು, ಹೂತುಂಬಿದ ಕೊಳ, ಕೆರೆಗಳು, ನಾನಾ ಅಲಂಕಾರದ ದೇವಾಲಯಗಳು, ಚತುರ ಕವಿಗಳು, ಕುಶಲ ಸಂಗೀತಗಾರರು, ವಿಲಾಸದ ವೇಶ್ಯಾಂಗನೆಯರ ಬೀದಿಗಳಿಂದ ಅವನ ರಾಜಧಾನಿ ವೈಭವದಿಂದ ಮೆರೆಯುತ್ತಿತ್ತು[೧೫]. ಧರ್ಮಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದ ಈ ನಾಡಿನಲ್ಲಿ ಅವನು ಚತುಸಮಯಗಳ ಪಾಲಕನಾಗಿದ್ದನು.

ಇನ್ನು ಚತುಸ್ಸಮಯ ಧರ್ಮೋದ್ಧಾರ ಧೌರೇಯಂ ಶ್ರೀಮನ್ಮಹಾಸಾಮಂತ ಗೂಳಿಬಾಚಿ[೧೬] ಎಂಬ ಶಾಸನದ ಸಾಲುಗಳಿಂದ ಅವನು ನಾಲ್ಕು ಮತಧರ್ಮಗಳ ಪಾಲಕನಾಗಿದ್ದ ನೆಂದು ತಿಳಿಯುತ್ತದೆ. ಆದುದರಿಂದ ತನ್ನ ನಾಡಿನಲ್ಲಿ ಕೈದಾಳದ ಸುತ್ತಮುತ್ತಲ ಊರುಗಳಲ್ಲಿ ಶಿವ, ವಿಷ್ಣು, ಜೈನ ಬಸದಿಗಳನ್ನು ನಿರ್ಮಾಣ ಮಾಡುವುದರ ಮೂಲಕ ಎಲ್ಲ ಮತ ಧರ್ಮಗಳ ಬೆಂಬಲವನ್ನು ಪಡೆದುಕೊಂಡು ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡು ರಾಜಕೀಯ

ಐಕ್ಯತೆ ಸಾಧಿಸಿದನು. ತಾನು ನಿರ್ಮಿಸಿದ ದೇವಾಲ ಯಗಳಿಗೆ ತನ್ನ ಪೂರ್ವಜರ ಹೆಸರನ್ನೇ ಇಡುವುದರ ಮೂಲಕ ಅವರ ಹೆಸರು ದೇವರ ಜೊತೆ ಶಾಶ್ವತವಾಗುವಂತೆ ಮಾಡಿ ಅವರಿಗ ಕೃತಜ್ಞತೆ ಅರ್ಪಿಸಿದನು.

ದೇವಾಲಯಗಳ ನಿರ್ಮಾಣ

೧) ಕೈದಾಳದಲ್ಲಿನ ಗಂಗಾಧರೇಶ್ವರ ದೇವಾಲಯವನ್ನು ತನ್ನ ತಂದೆ ಗಂಗಯ್ಯನ ಹೆಸರಿನಲ್ಲಿ ನಿರ್ಮಿಸಿದನು. ಆ ದೇವರ ಅಂಗ, ರಂಗಭೋಗಕ್ಕೆ, ತಪೋಧನರ ಆಹಾರಕ್ಕೆ, ದೇಗುಲದ ಖಂಡಸ್ಫುಟ ಜೀರ್ಣೋದ್ಧಾರಕ್ಕೆ ಹಿರಿಯ ಕೆರೆಯ ಕೆಳಗೆ ೩ ಸಲಗೆ ಗದ್ದೆ, ೩ ಸಲಗೆ ಬೆದ್ದಲು ಭೂಮಿಯನ್ನು ದಾನ ಮಾಡಿದನು[೧೭]; ಕೈದಾಳದಲ್ಲಿನ ಚನ್ನಕೇಶವ ದೇವಾಲಯವನ್ನು ಕಟ್ಟಿಸಿ, ಆ ದೇವರ ಅಂಗರಂಗಭೋಗ, ಅಷ್ಟವಿಧಾರ್ಚನೆ ಬ್ರಾಹ್ಮಣರ ಆಹಾರ ಧಾನ್ಯಕ್ಕೆ ದೇವಾಲಯದ ಜೀರ್ಣೋದ್ಧಾರಕ್ಕೆ ಕೈದಾಳದ ಸಮೀಪದಲ್ಲೇ ಇರುವ ದಿಬ್ಬೂರ ಕೆರೆಯ ಹಿಂದೆ ೧೦ ಸಲಗೆ ಗದ್ದೆ, ತೋಟ, ಬೆದ್ದಲು ಭೂಮಿಯನ್ನು ದಾನ ಮಾಡಿದನು[೧೮]; ಕೈದಾಳದ ಪೂರ್ವಕ್ಕೆ ಆರು ಕಿ.ಮೀ. ಅಂತರದಲ್ಲಿರುವ ಕಿತ್ತಗಳೆ ಎಂಬ ಊರಿನಲ್ಲಿ ತನ್ನ ತಾತ ಸಾಮಂತ ಚಲವರಿವನ ಹೆಸರಿವಲ್ಲಿ ಚಲವರೀಶ್ವರ ದೇವಾಲಯ ವನ್ನು ಕಟ್ಟಿಸಿ ಅದರ ನಿರ್ವಹಣೆಗೆ ಕಿತ್ತಗಳಿ ಕೆರೆಯ ಹಿಂದೆ ೩ ಸಲಗೆ ಗದ್ದೆ, ಬೆದ್ದಲು ಜಮೀನನ್ನು ನೀಡಿದನು[೧೯]; ತನ್ನ ಮಗಳಾದ ಕುಮಾರಿ ಚೆಂಸವೆ ನಾಯಕಿತಿಗೆ ಪರೋಕ್ಷ ವಿನಯವಾಗಿ, ಕೈದಾಳ ದಲ್ಲಿ ಶ್ರೀರಾಮೇಶ್ವರ ದೇವಾಲಯವನ್ನು ಕಟ್ಟಿಸಿದನು. ಆ ದೇವರ ಅಂಗರಂಗ ಭೋಗಕ್ಕೆ ದುರಸ್ತಿಕಾರ್ಯಕ್ಕೆ, ತಪೋಧನರ ಆಹಾರ ಧಾನ್ಯಕ್ಕೆ ಕೈದಾಳದ ಹಿರಿಯ ಕೆರೆಯ ಹಿಂದೆ ೩ಸಲಗೆ ಗದ್ದೆ ಬೆದ್ದಲು, ನಂದಾದೀಪದ ಸೇವೆಗೆ ೧ ಎತ್ತು ಗಾಣವನ್ನು ದಾನವಾಗಿ ನೀಡಿದನು[೨೦]. ಶ್ರೀ ಮನ್ಮಹಾ ಸಾಮಂತ ಗೂಳಿಬಾಚಿ ದೇವನಿಗೆ ಸೌಂದರ್ಯ ಗುಣಗಳಿಗೆ ಹೆಸರಾದ ಭೀಮಲೆ ಎಂಬ ಮಡದಿಯೊಬ್ಬ ಳಿದ್ದಳು. ಅವಳನ್ನು ಶಾಸನವು ಈ ರೀತಿ ವರ್ಣಿಸುತ್ತದೆ.

> ಜಿನಪತಿದೆಯ್ವಂ ತಂದೆ ಕಲಿಯಾದ್ದರೆ ನಾಕನೊಳ್ತನಾಂತ ತ
> ಜ್ಜನನಿ ವಿನೂತೆ ಚೆಂಬಲೆ ಮಹಾಸತಿ ಗೂಳಿಯ ಬಾಚಿದೇವ
> ಸಜ್ಜನ ಮತವಿಹ ತನ್ನ ಪತಿಯಂದೊಡೆ ಪೋಲ್ವರಾರ್
> ಧಾತ್ರಿಯೊಳ್
> ವನಿತೆಯಣ ಭೀಮಲೆಯೊಳೊರ್ಜಿತ ಪುಣ್ಯಗುಣಾಭಿ
> ರಾಮೆಯೊಳ್ [೨೧]

ಭೀಮಲೆಯು ಪೂಜಿಸುವ ದೇವರು ಜಿನಪತಿ (ಅರ್ಹಂತ-ತೀರ್ಥಂಕರ) ಅವಳು ಜೈನ ಧರ್ಮೀಯಳಾಗಿದ್ದು ಇವಳ ತಂದೆ ಕಲಿಯಾದ ನಾಕ (ನಾಗದೇವ-ನಾಗಮಯ್ಯ). ತಾಯಿ ಚೆಂಬಲೆ ಯೆಂಬ ಮಹಾಸತಿ. ಈಕೆಯ ಗಂಡ ಸಜ್ಜನನೆಂದೇ ಖ್ಯಾತಿಯಾದ ವೀರ ಬಾಚಿದೇವ, ಭೀಮಲೆಯ ಜೊತೆ ಹಲವು ವರ್ಷಗಳ ಕಾಲ ಸುಖ ಸಂಸಾರ ನಡೆಸಿದ ಬಾಚಿದೇವನಿಗೆ ತನ್ನ ಪ್ರೀತಿಯ ಮಡದಿ ಭೀಮಲೆಯ ಮರಣ ಸಂಭವಿಸುತ್ತದೆ. ಈ ಮರಣ ಸಲ್ಲೇಖನ ಆಚರಣೆಯಿಂದ ಪ್ರಾಪ್ತವಾಯಿತೋ ಅಥವಾ ಅನಿರೀಕ್ಷಿತವೋ ಎಂಬುದು ತಿಳಿಯದು. ಹೀಗೆ ಜೀವನದ ಆನಂದ ವನ್ನೇ ಅನುಭವಿಸದ ಮಗಳ ಮರಣ, ಜೊತೆಗೆ ಜೀವನ ಸಂಘಾತಿ ಭೀಮಲೆಯ ಮರಣ, ತನ್ನ ತಂದೆ ಗಂಗೈಯ್ಯ,ತಾತ ಚಲವರಿವನ ಮರಣ ಎಲ್ಲವೂ ತನ್ನ ಕಣ್ಣೆದುರಿಗೇ ಸಂಭವಿಸಿದವು, ಈ ದುರಂತಗಳು ಅವನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ವನ್ನು ಬೀರಿರಬೇಕು. ಇಂತಹ ಕೌಂಟುಂಬಿಕ ದುರಂತಗಳಿಂದ ನೊಂದ ಅವನು ಜನಮುಖಿ ಕಾರ್ಯಗಳತ್ತ ಚಿಂತನೆ ಮಾಡಲು ಆರಂಭಿಸಿರಬೇಕು. ಈ ಚಿಂತನೆಗಳು ಹೊಯ್ಸಳ ಸಾಮ್ರಾಜ್ಯದ ಆಡಳಿತ ಲಕ್ಷಣಗಳಿಗೆ ಹತ್ತಿರವಾಗಿದ್ದುದರಿಂದಲೇ ಅವನು ಧರ್ಮ ಮತ್ತು ಕೃಷಿಗೆ ತನ್ನ ನಾಡಿನಲ್ಲಿ ಹೆಚ್ಚು ಪ್ರೋತ್ಸಾಹ ನೀಡಿದನು. ತನ್ನ ಮಡದಿಯು ಜೈನಧರ್ಮದವಳಾದುದರಿಂದ ಪರೋಕ್ಷವಿನಯವಾಗಿ ಅವಳಿಗೆ ಭೀಮಜಿನಾಲಯ ಎಂಬ ಹೆಸರಿನ ಚನ್ನಪಾರೀಶ್ವರ (ಪಾರ್ಶ್ವನಾಥ) ಬಸದಿಯನ್ನು ಈಗಿನ ಭೀಮಸಂದ್ರದ ಬಳಿ ನಿರ್ಮಿಸಿ ಅವಳ ಹೆಸರು ಶಾಶ್ವತವಾಗಿರುವಂತೆ ಮಾಡಿದನು. ಪಾರ್ಶ್ವನಾಥನ ಪೂಜೆಗೆ ಜೈನ ಮುನಿಗಳ ಆಹಾರ ದಾನಕ್ಕಾಗಿ ಮತ್ತು ಬಸದಿಯ ದುರಸ್ತಿಗೆ ಭೀಮಸಂದ್ರದ ಕೆರೆಯ ಕೆಳಗೆ ೮ ಸಲಗೆ ಗದ್ದೆ ಅಲ್ಲಿನ ಹೊಲದಲ್ಲಿ ೨ ಸಲಗೆ ಬೆದ್ದಲು ಭೂಮಿಯನ್ನು ದಾನ ಮಾಡಿದನು. ಗೂಳಿಬಾಚಿಯು ಈ ಜಿನಾಲಯವನ್ನು ಹೆಚ್ಚು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸಮ್ಯಕ್ತ ಚೂಡಾಮಣಿ ಎನಿಸಿದ ತನ್ನ ಸೇನಬೋವ ಮಾರಮಯ್ಯನಿಂದ ಮುದುಗೆರೆಯ ಬಳಿ ಈ ಜಿನಾಲಯಕ್ಕೆ ಭೂ ದತ್ತಿಯನ್ನು ಕೊಡಿಸಿದನು. ಈ ವಿಚಾರವನ್ನು ಕೊಂಡಾಪುರ ಬಳಿ ದೊರೆತಿರುವ ಶಾಸನವು ಪ್ರಸ್ತಾಪಿಸುತ್ತದೆ.[೨೨] ಈ ದಾಖಲೆಯು ಶಖ ವರ್ಷ ೧೦೭೨ನೇ ಪ್ರಮೋದ ಸಂವತ್ಸರದ ಪಾಲ್ಗುಣ ಮಾಸದ ಅಮವಾಸ್ಯೆಯ ದಿನ ಆದಿತ್ಯವಾರ ಸೂರ್ಯ ಗ್ರಹಣದ ಕಾಲದಲ್ಲಿ ಮೂಲಸಂಘ ಸೂರಸ್ಥಗಣ ಚಿತ್ರಕೂಟ ನಯದ ವಾಸುಪೂಜ್ಯ ಎಂಬ ಹೆಸರಿನ ಜೈನ ಮುನಿಗೆ ಮುದುಗೆರೆಯ ಕೆಳಗಿನ ಗದ್ದೆಯನ್ನು ದಾನವಾಗಿ ಅರ್ಪಿಸಿದನು ಎಂದು ತಿಳಿಸುತ್ತದೆ. ಈ ಮಾರಮಯ್ಯನು ಗೂಳಿಬಾಚಿದೇವನಿಗೆ ಆಡಳಿತದಲ್ಲಿ ಸಹಾಯಕನಾಗಿದ್ದನು, ಜೈನ ಧರ್ಮೀಯನಾದ ಈತನು ಕೊಂಡಾ ಪುರದ ಬಳಿ ಶಾಸನ ಹಾಕಿಸಿದ್ದಾನೆ. ಇವನಿಗೆ ಬಾಚಿಯಕ್ಕ ಎಂಬ ಹೆಂಡತಿ ಇದ್ದು ಅವಳು ತನ್ನ ಸೌಂದರ್ಯ, ದಾನಗುಣ ಮೊದಲಾದ ವುಗಳಲ್ಲಿ ಲಕ್ಷ್ಮಿದೇವಿಗೆ, ಸೀತಾದೇವಿಗೆ, ಕಲ್ಪವೃಕ್ಷಕ್ಕೆ ಮಿಗಿಲೆನಿಸಿ ಸ್ತ್ರೀ ಜಾತಿಗೆ ರತ್ನಪ್ರಿಯಳೆನಿಸಿದಾಳೆ. ಅವನ ಮತ್ತೊಬ್ಬ ಹೆಂಡತಿ ದುಗ್ಗಿಯಕ್ಕಳೂ ಸಹಾ ತನ್ನ ಉತ್ತಮಿಕೆಯಲ್ಲಿ ಮಹಾಸತಿ ಅರುಂಧತಿ,

ಲಕ್ಷ್ಮಿ ಮುಂತಾದವರಿಗೆ ಮಿಗಿಲೆನಿಸಿ ಅವಳೂ ಸ್ತ್ರೀ ಜಾತಿಗೆ ರತ್ನಪ್ರಾಯಳಾಗಿದ್ದಳು ಎಂದು ಶಾಸನದಲ್ಲಿ ವರ್ಣಿಸ ಲಾಗಿದೆ.

ಗೂಳಿಬಾಚಿದೇವನು ಅನುಸರಿಸಿದ ಧಾರ್ಮಿಕ ಸಹಿಷ್ಣುತೆ ಬಹುದೂರದರ್ಶಿಯದಾಗಿತ್ತು. ಅದು ಅವನ ಆಡಳಿತಕ್ಕೆ ಜಾತ್ಯಾತೀತ ರಂಗನ್ನು ಕೊಟ್ಟಿದ್ದು ಮಾತ್ರವಲ್ಲ ಧರ್ಮಪೂರ್ವಾಗ್ರಹ ಪಕ್ಷಪಾತ, ಹಿಂಸೆಗಳು ತಲೆ ಎತ್ತದಂತೆ ಮಾಡುವುದು ಅವನ ಸಾಮಾಜಿಕ ಲಕ್ಷ್ಯವಾಗಿದ್ದುದರಿಂದ ಅದು ಅವನು ಅನುಸರಿದ ಕಾರ್ಯತಂತ್ರ ವಾಗಿತ್ತು. ಹೀಗಾಗಿ ಅವನ ವೈಯಕ್ತಿಕ ಧರ್ಮ ಯಾವುದಿದ್ದರೂ ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣಲೇ ಬೇಕಾಗಿತ್ತು. ಈ ಕಾರ್ಯವನ್ನು ಗೂಳಿಬಾಚಿದೇವನು ಯಶಸ್ವಿಯಾಗಿ ಪೂರೈಸಿದನು.

ವೈಯಕ್ತಿಕ ಧರ್ಮ

ಈ ಹಿಂದಿನ ಅಧ್ಯಯನಗಳಿಂದ ನಮಗೆ ತಿಳಿದು ಬರುವಂತೆ ಗೂಳಿಬಾಚಿದೇವನು ಅನುಸರಿಸಿದ ವೈಯಕ್ತಿಕ ಧರ್ಮದ ಬಗ್ಗೆ ಭಿನ್ನಾಭಿಪ್ರಾಯಗಳನ್ನು ನಾವು ಕಾಣುತ್ತೇವೆ. ಪ್ರೊ. ಹಂ.ಪ. ನಾಗರಾಜಯ್ಯನವರು[೨೩] ಈ ಮರುಗರೆ ನಾಡನ್ನು ಅದಕ್ಕೆ ನೆಲೆವೀಡಾದ ಕೈದಾಳದಿಂದ ಮಹಾಸಾಮಂತನೂ ಜಿನಭಕ್ತನೂ ಆದ ಗೂಳಿಯ ಬಾಚಿದೇವ ಎಂಬಾತನು ಆಳುತ್ತಿದ್ದನು ಎಂದಿದ್ದಾರೆ. ಪ್ರೊ. ಬಿ. ರಾಜಶೇಖರಪ್ಪನವರು[೨೪] ಬಾಚಿದೇವನು ಶೈವನಿದ್ದಂತೆ ಕಾಣುತ್ತದೆ ಎಂದು ಹೇಳಿದ್ದಾರೆ. ಈ ವಿಭಿನ್ನ ಹೇಳಿಕೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ನೋಡಿದಾಗ ಗೂಳಿಬಾಚಿ ದೇವನು ಶೈವಧರ್ಮಿಯನಾಗಿದ್ದನು ಎಂದು ನಿಸ್ಸಂದೇಹವಾಗಿ ಈ ಕೆಳಗಿನ ದಾಖಲೆಗಳಿಂದ ಸಮರ್ಥಿಸಬಹುದು.

ಗೂಳಿಬಾಚಿದೇವನು ನಿರ್ಮಿಸಿರುವ ದೇವಾಲಯಗಳಲ್ಲಿ ಹೆಚ್ಚಿನವು ಶಿವ ದೇವಾಲಯಗಳೇ. ಆ ದೇವಾಲಯಗಳನ್ನು ಅವನು ತನ್ನ ತಾತ, ತಂದೆ ಮತ್ತು ಮಗಳ ಹೆಸರಿನಲ್ಲಿ ನಿರ್ಮಿಸಿ ಅವುಗಳ ನಿರ್ವಹಣೆಗೆ ದತ್ತಿ ನೀಡಿರುವುದು; ಅವನು ಕೈದಾಳದಲ್ಲಿ ಕೇಶವ ದೇವಾಲಯ ನಿರ್ಮಿಸಿದರೂ ಅವನು ಆ ದೇವರಿಗೆ ತನ್ನ ಕುಂಟುಂ ಬದ ವ್ಯಕ್ತಿಗಳ ಹೆಸರನ್ನೇನು ಇಟ್ಟಿಲ್ಲ; ಅವನು ಹಾಕಿಸಿದ ಶಾಸನಗಳ ಶಿರೋಭಾಗದಲ್ಲಿ ಶಿವಲಿಂಗದ ಶಿಲ್ಪವನ್ನು ಕಾಣಬಹುದು. ಉದಾಹರಣೆಗೆ ಕೈದಾಳದ ಗಂಗಾಧರೇಶ್ವರ ಗುಡಿಯಲ್ಲಿ ಶಾಸನದ ಎರಡು ಕಲ್ಲುಗಳಿವೆ. ಅದರಲ್ಲಿ ಮೊದಲನೇ ಕಲ್ಲಿನ ಮೇಲ್ಭಾಗದಲ್ಲಿ ಶಿವಲಿಂಗುವಿನ ಶಿಲ್ಪವನ್ನು ಎರಡನೇ ಕಲ್ಲಿನ ಮೇಲ್ಭಾಗವು ಜಿನ, ವಿಷ್ಣು ಮತ್ತು ನಂದಿಯ ಶಿಲ್ಪವನ್ನೊಳಗೊಂಡಿದೆ. ಮೊದಲನೇ ಶಾಸನದ ಕಲ್ಲಿನಲ್ಲಿ ಲಿಂಗಕ್ಕೆ ಅಭಿಷೇಕ ಮಾಡುತ್ತಿರುವ ವ್ಯಕ್ತಿಯ ಶಿಲ್ಪವಿದೆ. ಆ ಊರಿನಲ್ಲೇ ದೊರಕಿರುವ ಹುಲಿಬೇಟೆ ವೀರಗಲ್ಲು ಶಾಸನವು ಶಿರೋಭಾಗದಲ್ಲಿ ಲಿಂಗುವಿನ ಶಿಲ್ಪವನ್ನೇ ಹೊಂದಿದೆ. ಆದರೆ ಕೊಂಡಾಪುರದಲ್ಲಿ ದೊರೆತಿರುವ ಗೂಳಿಬಾಚಿಯ ಸೇನಬೋವ ಮಾರಮಯ್ಯನ ಶಾಸನದಲ್ಲಿನ ಶಿಲ್ಪವು ಶಿರೋಭಾ ದಲ್ಲಿ ಜಿನಮೂರ್ತಿಯನ್ನು ಹೊಂದಿದೆ. ಆದುದರಿಂದ ಇವೆಲ್ಲವ ಗಳನ್ನು ಹೋಲಿಕೆ ಮಾಡಿ ನೋಡಿದಾಗ ಗೂಳಿಬಾಚಿದೇವ ಶೈವ ಧರ್ಮೀಯನೆಂದು ಸ್ಪಷ್ಟವಾಗಿ ಹೇಳಬಹುದು; ಗೂಳಿಬಾಚಿದೇವನ ಪತ್ನಿ ಭೀಮಲೆ ಜೈನಳಾಗಿದ್ದಳು ಎಂದು ಶಾಸನದಲ್ಲಿ ಸ್ಪಷ್ಟವಾಗಿ ದಾಖಲಾಗಿರುವುದರಿಂದ ಅದನ್ನು ಆಧಾರವಾಗಿಟ್ಟುಕೊಂಡು ಗೂಳಿಬಾಚಿಯೂ ಕೂಡಾ ಜೈನನಾಗಿದ್ದನೆಂದು ಹೇಳಲು ಸಾಧ್ಯವಾಗದು. ಇದು ಹೊಯ್ಸಳರ ಇತಿಹಾಸದಲ್ಲಿ ಈಗಾಗಲೇ ಪ್ರಖ್ಯಾತವಾಗಿರುವ ವಿಷ್ಣುವರ್ಧನ ದೊರೆ ವೈಷ್ಣವನಾಗಿದ್ದನು. ಅವನ ಮಡದಿ ಶಾಂತಲಾದೇವಿ ಮತ್ತು ಅವಳತಾಯಿ ಜೈನರಾಗಿ ದ್ದರು. ಆದರೆ ಶಾಂತಲೆಯ ತಂದೆ ಶೈವನಾಗಿದ್ದನು. ಹೀಗೆ ಪರಸ್ಪರ ಭಿನ್ನಧರ್ಮಗಳಿಗೆ ಸೇರಿದ್ದರೂ, ಕೌಟುಂಬಿಕವಾಗಿ ಸಮರಸದಿಂದಿದ್ದು ಸರ್ವಧರ್ಮ ಸಾಮರಸ್ಯದ ಆದರ್ಶವನ್ನು ಗೂಳಿಬಾಚಿದೇವನ ಕುಟುಂಬವು ಸಹ ನೆನಪಿಗೆ ತರುತ್ತದೆ.

ಕೃಷಿ ವಿಸ್ತರಣೆ

ಮರುಗರೆನಾಡಿನ ಪ್ರಾಂತ್ಯದಲ್ಲಿ ಕೃಷಿಯೇ ಮುಖ್ಯ ಕಸು ಬಾಗಿತ್ತು. ಹೆಚ್ಚಿನ ಜನ ಮಳೆಯನ್ನಾಶ್ರಯಿಸಿ ವ್ಯವಸಾಯ ಮಾಡುತ್ತಿದ್ದರು. ಕೃಷಿಯನ್ನು ಮುಖ್ಯ ಉದ್ಯೋಗ ಮಾಡಿ ಕೊಂಡಿರುವ ಜನರನ್ನು ರಕ್ಷಿಸುವುದೇ ಅಲ್ಲದೆ, ಕೃಷಿಯನ್ನು ವಿಸ್ತರಿಸುವುದು ಮುಖಂಡನ ಕರ್ತವ್ಯವಾಗಿತ್ತು. ಕೃಷಿ ವಿಸ್ತರಣೆಯಾಗ ಬೇಕಾದರೆ ಆದಷ್ಟು ಭೂಮಿಯನ್ನು ನೀರಾವರಿ ವ್ಯಾಪ್ತಿಗೊಳಪಡಿ ಸಬೇಕು. ಕೃಷಿಯಿಂದಲೆ ರಾಜ್ಯಕ್ಕೆ ಹೆಚ್ಚಿನ ಆದಾಯ ಬರುತ್ತಿದ್ದುದರಿಂದ ರಾಜರು ನೀರಾರಂಭಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಟ್ಟರು. ಗೂಳಿಬಾಚಿ ದೇವನ ಕಾಲಕ್ಕಾಗಲೇ ಮರುಗರೆನಾಡಿನಲ್ಲಿ ನೀರಾವರಿಯ ಮೂಲಕ ಕೃಷಿ ವಿಸ್ತರಣೆಗೆ ಪ್ರೋತ್ಸಾಹವನ್ನು ನೀಡುತ್ತಿದ್ದದ್ದು ಆ ವೇಳೆಗಾಗಲೇ ಅಸ್ತಿತ್ವದಲ್ಲಿದ್ದ ಕೈದಾಳದ ಹಿರಿಯ ಕೆರೆ, ದಿಬ್ಬೂರು ಕೆರೆ, ಮುದುಗೆರೆ, ಕಿತ್ತಗಳಿಕೆರೆ, ಮುಂತಾದವುಗಳಿಂದ ಗುರುತಿಸ ಬಹುದು. ಗೂಳಿಬಾಚಿದೇವನು ಅದನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶದಿಂದ ತನ್ನ ಕರ್ತವ್ಯವೆಂಬಂತೆ ತನ್ನ ಪ್ರೀತಿಯ ಮಡದಿ ಯಾದ ಭೀಮಲೆಯ ಹೆಸರಿನಲ್ಲಿ ತನ್ನ ಪ್ರಾಂತ್ಯದಲ್ಲಿನ ಎಲ್ಲಾ ಕೆರೆಗಳಿಗಿಂತ ವಿಸ್ತಾರವಾದ ಭೀಮಸಮುದ್ರ[೨೫] ಎಂಬ ಕೆರೆಯನ್ನು ನಿರ್ಮಿಸಿದನು. ತನ್ನ ಸೇನಬೋವನಾದ ಮಾರಮಯ್ಯ ನಿಂದ ಮುದುಗೆರೆಯ ಬಳಿ ಮಾರಸಮುದ್ರ ಎಂಬ ಹೊಸ ಕೆರೆಯನ್ನು ಕಟ್ಟಿಸಿದನು[೨೬].

ಹೀಗೆ ಈ ಎರಡೂ ಕೆರೆಗಳು ತನ್ನ ನಾಡಿನಲ್ಲೇ ವಿಸ್ತಾರ ವಾಗಿದ್ದು ಹೆಚ್ಚಿನ ಭೂಮಿಗೆ ನೀರುಣಿಸುವುದರ ಮುಖಾಂತರ ಭಂಡಾರಕ್ಕೆ ಅತಿ ಹೆಚ್ಚು ಆದಾಯ ತಂದುಕೊಡುತ್ತಿದ್ದವು ಎಂದು ಹೇಳಬಹುದು. ಕೆರೆ ನಿರ್ಮಾಣದ ಜೊತೆಗೆ ಅವುಗಳ ಪಕ್ಕದಲ್ಲೇ

ಹೇಳಬಹುದು. ಕೆರೆ ನಿರ್ಮಾಣದ ಜೊತೆಗೆ ಅವುಗಳ ಪಕ್ಕದಲ್ಲೇ ಹೊಸ ಗ್ರಾಮಗಳೂ ಕೂಡಾ ಉದಯವಾದವು ಅವುಗಳನ್ನು ನಾವು ಇಂದಿಗೂ ಕಾಣಬಹುದು.

ಸಮಾರೋಪ

೧) ಈ ನಾಡಿನಲ್ಲಿ ಪ್ರಮುಖ ಸಾಮಾಜಿಕ ವರ್ಗಗಳಾಗಿದ್ದ ಶೈವ, ವೈಷ್ಣವ, ಜೈನ ಸಮುದಾಯಗಳಿಗೆ ಸಂಪನ್ಮೂಲವನ್ನು ನಿಗದಿಪಡಿಸುವುದರ ಮೂಲಕ ಆ ಧರ್ಮಗಳಿಗೆ ರಾಜಾಶ್ರಯ ವನ್ನು ಸಮಾನವಾಗಿ ಗೂಳಿಬಾಚಿದೇವನು ನೀಡಿದನು. ಆದುದರಿಂದಲೇ ಅವನು ಈ ಸಮುದಾಯಗಳ ಜನರಿಗೆ ಪೂಜಾಸ್ಥಳಗಳನ್ನು ನಿರ್ಮಾಣ ಮಾಡಿದ್ದು ಮತ್ತು ಅವುಗಳ ಪಾಲನೆಗಾಗಿ ವಿವಿಧ ಕಡೆ ದತ್ತಿ ನೀಡಿದುದಾಗಿದೆ. ಇದು ಪ್ರತಿಯೊಂದು ಸಮುದಾಯದ ಆಧ್ಯಾತ್ಮಿಕ ಅಂಶಗಳನ್ನು ತೃಪ್ತಿಪಡಿಸುವ ವಿದಾನವಾಗಿತ್ತು.

೨) ಗೂಳಿಬಾಚಿದೇವನು ವೈಯಕ್ತಿಕವಾಗಿ ಶೈವ ಧರ್ಮವನ್ನು ಅನುಸರಿಸಿದರೂ ತನ್ನ ಪತ್ನಿ ಭೀಮಲೆ ಹಾಗೂ ಸೇನಬೋವ ಮಾರಮ್ಮಯ್ಯನ ಜೈನಧರ್ಮಾಚರಣೆಗೆ ಕುಂದುಬಾರದಂತೆ ನೋಡಿಕೊಂಡು ತನ್ನ ಕುಟುಂಬದಿಂದಲೇ ಮೊದಲು ಜಾತ್ಯಾತೀತ ಮನೋಭಾವವನ್ನು ಆರಂಭಿಸಿದನು.

೩) ಗೂಳಿಬಾಚಿದೇವನು ಈ ಪ್ರಾಂತ್ಯದಲ್ಲಿ ಹೆಚ್ಚು ಕಡಿಮೆ ಸ್ವಯ ಮಾಧಿಕಾರ ನಡೆಸಿದನು. ದೋರಸಮುದ್ರದ ದೊರೆಗಳು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ ತಾನೂ ತನ್ನ ಆಡಳಿತ ವ್ಯಾಪ್ತಿಯಲ್ಲಿ ಜಾತ್ಯತೀತ ಮನೋಧರ್ಮದಿಂದ ನಡೆದು ಕೊಂಡುದುದರಿಂದಲೇ ಇವನನ್ನು "**ಮರುಗರೆ ನಾಡಿನ ವಿಷ್ಣುವರ್ಧನ**" ಎಂದು ಕರೆಯಬಹುದು.

೪) ತನ್ನ ನಾಡಿನಿಂದ ಸಂಗ್ರಹವಾಗುತ್ತಿದ್ದ ಸೀಮಿತ ಆದಾಯ ದಿಂದಲೇ ನೀರಾವರಿ ಕೃಷಿಗೆ ಪ್ರೋತ್ಸಾಹ ನೀಡಲು ಹೊಸ ಕೆರೆಗಳನ್ನು ನಿರ್ಮಿಸಿದನು. ಅದರ ಮುಖಾಂತರ ರೈತ ಸಮು ದಾಯವನ್ನು ತೃಪ್ತಿಪಡಿಸುತ್ತಾ ತನ್ನ ಆದಾಯವನ್ನು ಹೆಚ್ಚಿಸಿ ಕೊಳ್ಳುವ ಪ್ರಯತ್ನ ಮಾಡಿದನು. ಕಾಡನ್ನು ಕೃಷಿ ಯೋಗ್ಯವಾದ ಭೂಮಿಯನ್ನಾಗಿ ಪರಿವರ್ತಿಸಿ ಕೃಷಿಕರ ಪ್ರೀತಿ ಗಳಿಸಿಕೊಂಡು ಹೊಯ್ಸಳ ಸಾಮ್ರಾಜ್ಯದ ಆರ್ಥಿಕ ಪ್ರಗತಿಗೆ ತನ್ನದೆ ಆದ ಕೊಡುಗೆ ನೀಡಿದನು.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) **ಕನ್ನಡ ನಿಘಂಟು - ಕನ್ನಡ ಕನ್ನಡ**., ಪು. ೮೬೪., ಕ.ಸಾ.ಪ. ಬೆಂಗಳೂರು ೧೯೭೫
೨) ಎ. ಕ. ೧೨., ತಿಪಟೂರು ೨೮, ಕ್ರಿ.ಶ. ೧೫೨೯
೩) ಹಂಪ ನಾಗರಾಜಯ್ಯ., **ಚಂದ್ರಕೊಡೆ**, ಪ್ರಸಾರಾಂಗ, ಕನ್ನಡ ವಿವಿ, ಹಂಪೆ ೧೯೯೭
೪) ಬಿ. ರಾಜಶೇಖರಪ್ಪ., 'ಕೊಂಡಾಪುರ ಶಾಸನ', ***ಚೆನ್ನುಡಿ***, - ತುಮಕೂರು ಜಿಲ್ಲಾ ೫ನೇ ಕನ್ನಡ ಸಾಹಿತ್ಯಯ ಸಮ್ಮೇಳನ ೧೯೯೭ - ಗುಬ್ಬಿ
೫) ಎ. ಕ. ೧೨., ತುಮಕೂರು ೯ ಕ್ರಿ.ಶ ೧೧೫೦
೬) ಎ. ಕ. ೧೬., ತುಮಕೂರು ೮೬, ೯೮ ಕ್ರಿ.ಶ ೭೮೮
೭) ಎ. ಕ. ೧೨., ತುಮಕೂರು ೯, ಕ್ರಿ.ಶ. ೧೧೫೦
೮) ಎಸ್. ಶೆಟ್ಟರ್ - ದಿ. ಹೊಯ್ಸಳಾ ಟೆಂಪಲ್ಸ್, ಕರ್ನಾಟಕ ವಿ.ವಿ. ಧಾರವಾಡ, ಪು -೧೬
೯) ಎ. ಕ. ೧೨., ತುಮಕೂರು ೯, ಕ್ರಿ.ಶ ೧೧೫೦ ಸಾಲು ೧೩,೧೫, ೧೬, ೪೨
೧೦) ಅದೇ.,
೧೧ ಅದೇ.,
೧೨) ಹೆಚ್. ಎಸ್. ಗೋಪಾಲರಾವ್., 'ಹುಲಿಬೇಟೆ ವೀರಗಲ್ಲು ಶಾಸನ', - **ಇತಿಹಾಸದರ್ಶನ**, ಸಂ ೪/೧೯೮೯
೧೩) ಕೈದಾಳದ ಶಾಸನದ ಕಾಲ ಕ್ರಿ.ಶ ೧೧೫೦ ಪ್ರಮಾದಿ ಸಂವತ್ಸರ ಅದಕ್ಕೆ ಪಿಂಗಳ ಸಂವತ್ಸರವನ್ನು ಲೆಕ್ಕಹಾಕಿ ನೋಡಿದಾಗ ಆ ಸಂವತ್ಸರವು ಕ್ರಿ.ಶ ೧೧೩೮ಕ್ಕೆ ಬರುತ್ತದೆ.
೧೪) ಎ. ಕ. ೧೨., ತುಮಕೂರು ೯ - ಸಾಲು ೬೬,೬೭ ಕ್ರಿ.ಶ ೧೧೫೦
೧೫) ಎ. ಕ. ೧೨., ತುಮಕೂರು ೯ -ಸಾಲು ೫೭,೫೮,೫೯
೧೬) ಅದೇ., ಸಾಲು ೮೦, ೮೧

೧೭) ಎ. ಕ. ೧೨., ತುಮಕೂರು-೯ ಕ್ರಿ.ಶ ೧೧೫೦ ಗಂಗೇಶ್ವರ ದೇಗುಲವನ್ನು ಈಗ ಗಂಗಾಧರೇಶ್ವರ ಎಂದು ಕರೆಯುವರು, ಇದು ಅಲ್ಲಿನ ಚನ್ನಕೇಶ
ದೇಗುಲದ ಎಡಭಾಗದಲ್ಲಿದ್ದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು ಕ್ರಿ.ಶ ೨೦೦೨ರಲ್ಲಿ ದೇವಾಲಯದ ಮೂ
ಸ್ವರೂಪಕ್ಕೆ ಧಕ್ಕೆಯಾಗದಂತೆ ಅಚ್ಚುಕಟ್ಟಾಗಿ ಜೀರ್ಣೋದ್ಧಾರ ಮಾಡಿದ್ದಾರೆ. ಇದರ ಒಳಗಡೆ ಗೂಳಿಬಾಚಿದೇವನ ಶಾಸನವನ್ನು ಉತ್ತಮ ರೀತಿಯ
ಸಂರಕ್ಷಿಸಿ ಇಡಲಾಗಿದೆ.

೧೮) ಎ. ಕ. ೧೨., ತುಮಕೂರು ೯ ಕ್ರಿ.ಶ ೧೧೫೦

೧೯) ಅದೇ.,
ಕಿತ್ತಗಳಿಯನ್ನು ಈಗ ಕಿತ್ತಗಾನಹಳ್ಳಿ ಎಂದು ಕರೆಯಲಾಗುತ್ತಿದೆ. ಈ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದ್ದು ಈಗ ಅದ
ಕೆರೆಯ ತೀರದಲ್ಲಿದ್ದು ಪೂರ್ಣ ನಾಶವಾಗಿದೆ. ಈ ದೇಗುಲದ ಅವಶೇಷಗಳನ್ನು ಸಮೀಪದಲ್ಲೇ ನಿರ್ಮಿಸಿರುವ ಕೇಶವ ದೇಗುಲಕ್ಕೆ ಉಪಯೋಗಿಸಲಾಗಿದ
ಈ ದೇವಾಲಯದ ಲಿಂಗುವನ್ನು ಗ್ರಾನೈಟ್ ಶಿಲೆಯಿಂದ ಮಾಡಲಾಗಿದ್ದು ಅದೂ ಕೂಡಾ ಹಾಳಾಗಿ ಅನಾಥವಾಗಿ ಬಿದ್ದಿದೆ.

೨೦) ಎ. ಕ.-೧೨., ತುಮಕೂರು ೯ ಕ್ರಿ.ಶ ೧೧೫೦
ಈ ದೇವಾಲಯ ಈಗ ಊರಿನ ಪಶ್ಚಿಮಕ್ಕೆ ೧ ಕಿ.ಮೀ ಅಂತರದಲ್ಲಿದ್ದು ಅದರ ಪಕ್ಕದಲ್ಲೇ ಗೌರೀಶ್ವರ ದೇವಾಲಯವಿದೆ. ಇದನ್ನು ಈಗ ಕೋಡಿರಾಮೇಶ್ವ
ದೇಗುಲ ಎಂದು ಕರೆಯುವರು. ಆ ಕಾಲದಲ್ಲಿ ಅತ್ಯಂತ ವೈಭವಯುತವಾಗಿ ಪೂಜೆಗೊಳ್ಳುತ್ತಿದ್ದ ಈ ದೇವರಿಗೆ ಈಗ ಪ್ರತಿ ಸೋಮವಾರ ಮಾತ್ರ
ಪೂಜೆ ಮಾಡಲಾಗುತ್ತಿದೆ. ಬೃಹತ್ ಲಿಂಗುವನ್ನು ಹೊಂದಿರುವ ಈ ದೇಗುಲದ ಅರ್ಚಕರು ತುಮಕೂರಿನಲ್ಲಿ ವಾಸಿಸುತ್ತಿದ್ದು ದೇವಾಲಯದ ಬಗ್
ಹೆಚ್ಚಿನ ಗಮನ ಹರಿಸಿಲ್ಲದಿರುವುದು ವಿಷಾದಕರ ಸಂಗತಿಯಾಗಿದೆ.

೨೧) ಅದೇ ಸಾಲು ೯೮,೯೯,೧೦೦.

೨೨) ಪ್ರೊ. ಬಿ. ರಾಜಶೇಖರಪ್ಪ., 'ಗೂಳೂರು ಕೊಂಡಾಪುರ ೧೨ನೇ ಶತಮಾನದ ಹೊಸ ಜೈನ ಶಾಸನ', **ಚಿನ್ನುಡಿ.**

೨೩) ಪ್ರೊ.ಹಂ,ಪ. ನಾಗರಾಜಯ್ಯ., **ಚಂದ್ರಕೊಡೆ**, ಪ್ರಸಾರಾಂಗ, ಕನ್ನಡ ವಿ.ವಿ ಹಂಪಿ.

೨೪) ಪ್ರೊ. ಬಿ. ರಾಜಶೇಖರಪ್ಪ., 'ಗೂಳೂರು ಕೊಂಡಾಪುರ ಹೊಸ ಜೈನ ಶಾಸನ', **ಚಿನ್ನುಡಿ**, ೧೯೯೭.

೨೫) ಎ. ಕ. ೧೨., ತುಮಕೂರು ೯ಕ್ರಿ.ಶ ೧೧೫೦: ಭೀಮಸಮುದ್ರದ ಕೆರೆ ಬಹಳ ವಿಶಾಲವಾಗಿದ್ದು ಮಧ್ಯದಲ್ಲಿ ದೊಡ್ಡದಾದ ಏರಿಯನ್ನುಕಟ್ಟಿ
ಮೆಳೆಕೋಟೆ ಎಂಬ ಊರಿಗೆ ಕೆರೆ ನಿರ್ಮಿಸಲಾಗಿದೆ. ಪ್ರಾಯಶಃ ಈ ಕೆರೆ ಮೊದಲು ಒಂದೇ ಆಗಿದ್ದು ಕಾಲಾನುಕ್ರಮದಲ್ಲಿ ಅದನ್ನು ವಿಭಜಿಸಲಾಗಿದೆ.
ಇದರ ವೈಶಿಷ್ಟ್ಯವೆಂದರೆ ಎರಡೂ ಕೆರೆಗಳು ಭರ್ತಿಯಾದಾಗ ಮಾತ್ರ ಏಕಕಾಲದಲ್ಲಿ ನೀರು ಕೋಡಿಯ ಮುಖೇನ ಹೊರ ಹೋಗುತ್ತದೆ. ಇಂತಹ
ಕೆರೆ ಸಮೀಪದಲ್ಲೇ ಭೀಮಸಮುದ್ರ ಎಂಬ ಊರು ಆ ಕಾಲದಲ್ಲೇ ನಿರ್ಮಾಣಗೊಂಡಿತು. ಆದರೆ ಅಲ್ಲಿ ನಿರ್ಮಿಸಿರುವ ಭೀಮಲೆಯ ಜಿನಾಲಯ
ನಾಶವಾಗಿರುವ ಕುರುಹುಗಳನ್ನು ಕೂಡಾ ನೋಡಲು ಸಾಧ್ಯವಿಲ್ಲ. ಅಲ್ಲಿನ ಹಿರಿಯರು ಈಗಿನ ಭೀಮೇಶ್ವರ ದೇವಾಲಯದ ಸನಿಹದಲ್ಲೇ ಜಿನಾಲಯ
ಇತ್ತು ಎಂದು ಹೇಳುತ್ತಾರೆ. ಕ್ರಮೇಣ ಅದು ನಾಶವಾಗಿರಬಹುದು.

೨೬) ಎ. ಕ. ೧೨., ತುಮಕೂರು ೯ ಕ್ರಿ.ಶ ೧೧೫೦.

ಡಾ. ಮಹೇಶಕುಮಾರ ಹ. ಪಾಟೀಲ*

ಸೇಂದ್ರಕರು ಒಂದು ಸಾಂಸ್ಕೃತಿಕ ಅವಲೋಕನ

ಕರ್ನಾಟಕದ ಪ್ರಾಚೀನ ಅರಸುಮನೆತನಗಳಲ್ಲಿ ಸೇಂದ್ರಕರೂ ಒಬ್ಬರಾಗಿದ್ದಾರೆ. ಇವರು ಕ್ರಿ. ಶ. ೪ನೆಯ ಶತಮಾನದಿಂದ ಕರ್ನಾಟಕದ ರಾಜಕೀಯದಲ್ಲಿ ಕಾಣಿಸಿಕೊಂಡು ಬಾದಾಮಿ ಚಾಲುಕ್ಯರ ಕಾಲದವರೆಗೂ ಆಳ್ವಿಕೆಯನ್ನು ಮಾಡಿದ್ದು ಕಂಡುಬರುತ್ತದೆ.

ಮೂಲ ಮತ್ತು ಉದಯ

ಇವರು ಭುಜಗೇಂದ್ರದಾನ್ವಯದವರು, ನಾಗವಂಶೀಯರೂ ಆಗಿದ್ದರೆಂದು ಲಕ್ಷ್ಮೇಶ್ವರ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದ್ದಾರೆ.[೧] ಈ ಮನೆತನವು ಪ್ರಪ್ರಥಮವಾಗಿ ಕದಂಬ ಮಯೂರಶರ್ಮನ ಚಂದ್ರವಳ್ಳಿ ಶಾಸನದಲ್ಲಿ ನಮಗೆ ಕಂಡುಬರುತ್ತದೆ. ಅಲ್ಲಿ ಕದಂಬ ಮಯೂರಶರ್ಮನು ಉಳಿದ ರಾಜರುಗಳ ಜೊತೆ ಸೈಂದಕ (ಸೇಂದ್ರಕ)ರನ್ನು ಕೂಡಾ ಸೋಲಿಸಿದ ವಿಷಯವಿದೆ.[೨] ಆ ಶಾಸನದ ಕಾಲ ಕ್ರಿ. ಶ. ೪ನೆಯ ಶತಮಾನವಾದ್ದರಿಂದ ಅದಕ್ಕೂ ಸ್ವಲ್ಪ ಮುಂಚೆ ಅಂದರೆ ಕ್ರಿ. ಶ. ೩ನೆಯ ಶತಮಾನದಲ್ಲಿ ಸೇಂದ್ರಕ ಮನೆತನ ಉದಯವಾಗಿದ್ದಿರಬಹುದು. ಕಾರಣವೆಂದರೆ ಸೇಂದ್ರಕರು ಆ ವೇಳೆಗಾಗಲೇ ಒಂದು ದೊಡ್ಡ ಶಕ್ತಿಯಾಗಿ ಬೆಳೆದಿದ್ದಂತೆ ತೋರುತ್ತದೆ. ಅಲ್ಲದೇ ಅಶೋಕನ ಹಾಗೂ ಶಾತವಾಹನರ ಶಾಸನಗಳಲ್ಲಿ ಈ ಮನೆತನದ ಉಲ್ಲೇಖ ನಮಗೆ ಕಂಡು ಬರುವದಿಲ್ಲ. ಚಂದ್ರವಳ್ಳಿಯ ಶಾಸನವನ್ನು ಮೊದಲಿಗೆ ಗುರುತಿಸಿದ ಡಾ. ಎಮ್. ಎಚ್. ಕೃಷ್ಣರವರು ಈ ಸೇಂದ್ರಕರು ಖಾನ ದೇಶದ ಪ್ರದೇಶದವರು ಎಂದಿದ್ದಾರೆ. ಆದರೆ ಕ್ರಿ. ಶ. ೫ ನೆಯ ಶತಮಾನಕ್ಕೆ ಸೇರಿದ ಪಲ್ಲವ ಸಿಂಹವರ್ಮನ ಸಕ್ಕರೆಪಟ್ಟಣದ ತಾಮ್ರಶಾಸನವೊಂದು ಸೇಂದ್ರಕ ರಾಜ್ಯವನ್ನು ಉಲ್ಲೇಖಿಸುವದರ ಜೊತೆಗೆ ಶಿವಮೊಗ್ಗ ಪ್ರದೇಶದಲ್ಲಿ ಅದು ಇದ್ದುದ್ದನ್ನು ಖಚಿತ ಪಡಿಸುತ್ತದೆ.[೩] ಮತ್ತು ಕದಂಬ ಎರಡನೆಯ ಕೃಷ್ಣವರ್ಮನ ಬೆಣ್ಣೂರು ಶಾಸನವು ಪಲ್ಮಿಡಿ (ಹಲ್ಮಿಡಿ) ಗ್ರಾಮವನ್ನು ಉಲ್ಲೇಖಿಸುತ್ತಿದ್ದು , ಅದು ಸೇಂದ್ರಕ ವಿಷಯದಲ್ಲಿತ್ತು ಎಂದಿದೆ.[೪] ಅಂದರೆ ಸೇಂದ್ರಕ ವಿಷಯವು ದಕ್ಷಿಣ ಕರ್ನಾಟಕದ ಅದರಲ್ಲಿಯೂ ಶಿವಮೊಗ್ಗ ಜಿಲ್ಲೆ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶವಾಗಿತ್ತೆಂಬುದು ತಿಳಿದುಬರುತ್ತದೆ.

ಭಾನುಶಕ್ತಿ

ಸೇಂದ್ರಕ ಮನೆತನದ ಮೊದಲ ಐತಿಹಾಸಿಕ ವ್ಯಕ್ತಿಯಾಗಿ ಭಾನುಶಕ್ತಿಯು ಕಾಣಿಸಿಕೊಳ್ಳುತ್ತಾನೆ. ಕದಂಬ ಹರಿವರ್ಮನ ಆರನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದ ಹಲಸಿ ಶಾಸನ ಇವನನ್ನು ಉಲ್ಲೇಖಿಸುತ್ತದೆ.[೫] ಆದರೆ ಇವನು ಯಾವ ಪ್ರದೇಶವನ್ನಾಳುತ್ತಿದ್ದನೆಂದು ತಿಳಿದುಬರುವುದಿಲ್ಲ. ಈತನು ಕದಂಬರ ಸಾಮಂತನಾಗಿ ಬೆಳಗಾವಿಯ ಪ್ರದೇಶದಲ್ಲಿ ಆಳುತ್ತಿದಿರ್ದಬೇಕೆಂದು ಶಾಸನಧಾರದ ಮೇಲೆ ಊಹಿಸಬಹುದು.

ಸಮಿಯರ

ಭಾನುಶಕಿಯ ನಂತರ ಸಮಿಯರನು ನಮಗೆ ಕಂಡುಬರುವ ಸೇಂದ್ರಕರ ದೊರೆಯಾಗಿದ್ದಾನೆ. ಒಂದನೆಯ ಪುಲಕೇಶಿಯ ಶಾಸನವೊಂದು ತಿಳಿಸುವಂತೆ ಈತನು ಬಾದಾಮಿ ಚಾಲುಕ್ಯರ ಸಾಮಂತನಾಗಿ ಕೂಹುಂಡಿ -೨೦೦ ಪ್ರದೇಶ ಮತ್ತು ಅದಕ್ಕೆ ಹೊಂದಿಕೊಂಡಿದ್ದ ಮಹಾರಾಷ್ಟ್ರದ ಪ್ರದೇಶಗಳನ್ನಾಳುತ್ತಿದ್ದಂತೆ ತೋರುತ್ತದೆ.[೬] ಶಾಸನದಿಂದ ತಿಳಿದುಬರುವ ವಂಶಾವಳಿಯ ಪ್ರಕಾರ ಇವನ ಅಜ್ಜ : ಗೊಂಡ, ತಂದೆ : ಶಿವರರಾಗಿದ್ದರು. ಸೇಂದ್ರಕ ವಂಶದವರ ಹೆಸರುಗಳ ಹಿಂದೆ ಶಕ್ತಿಯೆಂಬುವದನ್ನು ಕಂಡಾಗ, ಈ ಗೊಂಡ, ಶಿವರ ಮತ್ತು ಸಮಿಯರರು ಸೇಂದ್ರಕ ವಂಶದ ಮತ್ತೊಂದು ಶಾಖೆಯವರಿರಬಹುದು ಎಂದು ವಿದ್ವಾಂಸರ ಅಭಿಮತವಾಗಿದೆ.[೭]

ವಿಜಯಶಕ್ತಿ ಮತ್ತು ಕುಂದಶಕ್ತಿ

ವಿಜಯಶಕ್ತಿ ಮತ್ತು ಕುಂದಶಕ್ತಿ ಎಂಬ ಸೇಂದ್ರಕ ಮನೆತನದ ಅರಸರುಗಳಿಬ್ಬರೂ ಪರಾಕ್ರಮಿಗಳೂ, ಶ್ರೇಷ್ಠ ಸೇನಾನಿಗಳೆಂದು ಶಾಸನದಲ್ಲಿ ಬಣ್ಣಿಸಲಾಗಿದ್ದು, ಇವರು ಒಂದನೆಯ ಕೀರ್ತಿವರ್ಮ ಮತ್ತು ಒಂದನೆಯ ಪುಲಕೇಶಿಯ ಅಧೀನರಾಜರಾಗಿದ್ದರೆಂದು ಕಂಡುಬರುತ್ತದೆ.[೮]

ಕಣ್ಣಶಕ್ತಿ ಮತ್ತು ರವಿಶಕ್ತಿ

ನಂತರ ಕಂಡುಬರುವ ಸೇಂದ್ರಕ ಅರಸರುಗಳು ಕಣ್ಣಶಕ್ತಿ ಮತ್ತು ರವಿಶಕ್ತಿಯರಾಗಿದ್ದಾರೆ. ಮಂಗಳೇಶನ ಹೂಲಿ ತಾಮ್ರ ಶಾಸನದ ಪ್ರಕಾರ ಈ ರವಿಶಕ್ತಿಯು ಮಂಗಲರಸನ ಆಧೀನರಾಜನಾಗಿದ್ದನೆಂದು ತಿಳಿಯುತ್ತದೆಯಲ್ಲದೇ ಇವನ ತಂದೆ ಕಣ್ಣಶಕ್ತಿಯನ್ನು ಶಾಸನ ಉಲ್ಲೇಖಿಸಿದೆ.[೯]

* ಗೌರವ ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಚ್ಯವಸ್ತು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶ್ರೀವಲ್ಲಭ ಸೇನಾನಂದ

ಎರಡನೆಯ ಪುಲಕೇಶಿಯ ಚಿಪ್ಲೂನ್ ತಾಮ್ರಪಟಗಳ ಪ್ರಕಾರ ಸೇಂದ್ರಕ ಶ್ರೀವಲ್ಲಭ ಸೇನಾನಂದನ ಸಹೋದರಿಯನ್ನು ಕೀರ್ತಿವರ್ಮನು ಮದುವೆಯಾಗಿದ್ದ ವಿಷಯ ತಿಳಿದಿಬರುತ್ತದೆ.[೧೦]

ದುರ್ಗಶಕ್ತಿ

ಎರಡನೆಯ ಪುಲಕೇಶಿಯ ಶಾಸನವೊಂದು ತಿಳಿಸುವಂತೆ ಸೇಂದ್ರಕ ವಂಶದ ದುರ್ಗಶಕ್ತಿಯು ಅವನ ಸಾಮಂತನಾಗಿದ್ದನೆಂದು ತಿಳಿದುಬರುತ್ತದೆ.[೧೧]

ಭೀಮಶಕ್ತಿ

ಬಾದಾಮಿ ಗುಹಾಲಯದ ಬಂಡೆಗಲ್ಲಿನ ಮೇಲೆ ಕೊರೆಯಲಾದ ಒಂದು ಸಾಲಿನ ಶಾಸನವೊಂದರಲ್ಲಿ ಸತ್ಯಾಶ್ರಯ (ಎರಡನೆಯ ಪುಲಕೇಶಿ) ನ ಪಾದಪದ್ಮೋಪಜೀವಿಯಾದ ಭೀಮಶಕ್ತಿ ಸೇಂದ್ರಕನ್ ಎಂಬುವವನ ಉಲ್ಲೇಖವಿದೆ.[೧೨] ಆದರೆ ಈತನ ಬಗೆಗೆ ಹೆಚ್ಚಿನ ವಿವರಗಳನ್ನು ತಿಳಿಯಲು ಯಾವುದೇ ಆಧಾರಗಳಿಲ್ಲ.

ಇಂದ್ರಾನಂದ ಮತ್ತು ವಿಜಯಾನಂದ

ಕ್ರಿ.ಶ. ೫೩೨-೩೩ರ ಗೋಕಾಕ ತಾಮ್ರಪಟಗಳಿಂದ ತಿಳಿಯುವಂತೆ ಬಾದಾಮಿ ಚಾಲುಕ್ಯರ ಸಾಮಂತ ಮನೆತನವಾದ ರಾಷ್ಟ್ರಕೂಟರ ದೆಜ್ಜ ಮಹಾರಾಜನ ಕಾಲದಲ್ಲಿ ಅವನ ಆಧೀನರಾಗಿ ಸೇಂದ್ರಕ ಮನೆತನದ ಅಧಿರಾಜರಾದ ಇಂದ್ರಾನಂದ ಮತ್ತು ಅವನ ಮಗ ವಿಜಯಾನಂದರು ಕಾಣಿಸಿಕೊಳ್ಳುತ್ತಾರೆ.[೧೩] ಹೀಗೆ ಆನಂದ ಎಂಬ ಶಬ್ದದೊಂದಿಗೆ ಕೊನೆಗೊಳ್ಳುವ ಹೆಸರಿನ ಸೇಂದ್ರಕ ಅರಸರುಗಳು ಸೇಂದ್ರಕ ಮನೆತನದ ಮತ್ತೊಂದು ಶಾಖೆಯ ವರಿರಬಹುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.[೧೪]

ಪೂಗಿಲ್ಲಿ

ಮುಂದೆ ನಮಗೆ ಕಂಡುಬರುವ ಸೇಂದ್ರಕ ಅರಸನೆಂದರೆ ಪೂಗಿಲ್ಲಿ ಸೇಂದ್ರಕನಾಗಿದ್ದಾನೆ. ಇವನು ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಕ್ರಿ. ಶ. ೭ನೆಯ ಶತಮಾನದ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾಮೆ ಶಾಸನದಲ್ಲಿ ಉಲ್ಲೇಖಗೊಂಡಿದ್ದು, ಬನವಾಸಿಯ ಸುತ್ತಲಿನ ಪ್ರದೇಶಗಳಾದ ನಾಗರಖಂಡ ಮತ್ತು ಜಿಡುಗೂರುಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದುದಾಗಿ ತಿಳಿಯುತ್ತದೆ.[೧೫]

ನಾಗಶಕ್ತಿ ಮತ್ತು ಮಧವತ್ತಿಯರಸ

ಬಾದಾಮಿ ಚಾಲುಕ್ಯರ ಎರಡನೆಯ ಕೀರ್ತಿವರ್ಮನ ಕಾಲದ ಕ್ರಿ.ಶ.೮ನೆಯ ಶತಮಾನದ ಕಾಲದ ಶಾಸನಗಳಾದ ಹಾನಗಲ್ ತಾಲೂಕಿನ ಐನೂಲೆ[೧೬] ಮತ್ತು ಆಡೂರು[೧೭] ಶಾಸನಗಳಲ್ಲಿ ಕೀರ್ತಿವರ್ಮನ ಸಾಮಂತರುಗಳಾದ ಸೇಂದ್ರಕ ಮನೆತನದ ನಾಗಶಕ್ತಿ ಮತ್ತು ಮಧವತ್ತಿಯರಸರುಗಳು ಕಂಡುಬರುತ್ತಾರೆ. ಅಲ್ಲಿ ಇವರ ಬಗ್ಗೆ ಹೆಚ್ಚಿನ ವಿವರ ತಿಳಿದುಬರುವದಿಲ್ಲ.

ಈ ಮೇಲೆ ಹೇಳಿದ ಅರಸರುಗಳಲ್ಲದೇ ಕರ್ನಾಟಕ ಹೊರಗೆ ಕೂಡಾ ಚಾಲುಕ್ಯರ ಕಾಲದಲ್ಲಿ ಇನ್ನು ಎರಡ ಮನೆತನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.[೧೮] ಅವುಗಳೆಂದ ಸೇಂದ್ರಕರ ಎರಡು ನಿಕುಂಭ ಮನೆತನದ ಶಾಖೆಗಳು.

ಆಡಳಿತ

ಇವರು ಸೇಂದ್ರಕ (ವಿಷಯ) ರಾಜ್ಯ,[೧೯] ನಾಗರಖಂ -೭೦, ಜಿಡ್ಡುಳಿಗೆ-೭೦,[೨೦] ಕುಹುಂಡಿ-೭೦೦ ಮತ್ತು ಅದಕ ಹೊಂದಿಕೊಂಡಿದ್ದ ಮಹಾರಾಷ್ಟ್ರದ ಪ್ರದೇಶಗಳನ್ನಾಳುತ್ತಿದ್ದರು ಎಂದ ತಿಳಿಯುತ್ತದೆ.

ಶಿಕ್ಷಣ

ಸೇಂದ್ರಕ ರಾಜ್ಯದಲ್ಲಿ ವಾಲಿವಿಳ್ಳಿ ಗ್ರಾಮದಲ್ಲಿ ಅಗ್ರಹಾರ ವೊಂದಿತ್ತು ಅಲ್ಲಿ ಶಿಕ್ಷಣ ನೀಡುವ ಬ್ರಾಹ್ಮಣರಿಗೆ ದಾನ ನೀಡಿದ ವಿಷಯ ಶಾಸನವೊಂದು ಉಲ್ಲೇಖಿಸುತ್ತದೆ.[೨೧] ಸೇಂದ್ರಕ ಅರಸ ಇಂದ್ರಾನಂದನು ಶಿಕ್ಷಣಕ್ಕಾಗಿಯೇ ಆರ್ಯನಂದಾಚಾರ್ಯ ರಿಗೆ ರಾಜಮಾನದಲ್ಲಿ ೫೦-ನಿವರ್ತನ ಭೂಮಿಯನ್ನು ನೀಡಿದ್ದು ತಿಳಿದುಬರುತ್ತದೆ.[೨೨] ಅಲ್ಲದೇ ಸೇನಾನಂದ ಕೂಡ ಬ್ರಾಹ್ಮಣ ನೊಬ್ಬನಿಗೆ ಆಮ್ರವಾಟಿಕಾ ಗ್ರಾಮವನ್ನು ದಾನ ನೀಡಿದ್ದ ವಿಷಯ ಕೂಡ ಶಾಸನವೊಂದರಲ್ಲಿದೆ.[೨೩] ಹೀಗೆ ಸೇಂದ್ರಕ ಅರಸರು ಶಿಕ್ಷಣದ ಪ್ರೋತ್ಸಾಹಕ್ಕಾಗಿ ದಾನ ದತ್ತಿಗಳನ್ನು ನೀಡಿದ್ದಾರೆ.

ದಾನ ದತ್ತಿ

ಪಲ್ಲವ ಸಿಂಹವರ್ಮನೊಡನೆ ಸೇಂದ್ರಕ ಅರಸು ವಾಲವಿಳ್ಳಿ ಅಗ್ರಹಾರದ ಬ್ರಾಹ್ಮಣರಿಗೆ ಆ ಗ್ರಾಮವನ್ನು ತೆರಿಗೆ ಮುಕ್ತವನ್ನಾಗಿ ಮಾಡಿ ದಾನ ನೀಡಿದ್ದನ್ನು ಸಕ್ಕರೆಪಟ್ಟಣದ (ಚಿಕ್ಕಮಗಳೂರು ಜಿಲ್ಲೆ) ಕ್ರಿ. ಶ. ೫ ನೆಯ ಶತಮಾನದ ಶಾಸನ ತಿಳಿಸುತ್ತದೆ.[೨೪] ಕ್ರಿ. ಶ.೬ನೆಯ ಶತಮಾನದ ಕೊನೆಯ ಕಾಲದ ಹೂಲಿಯ ಮಂಗಳೇಶನ ಶಾಸನದಲ್ಲಿ ಸೇಂದ್ರಕ ಮನೆತನದ ರವಿಶಕ್ತಿಯು ಕಿಸುವತ್ತಿಕೆರೆ ಗ್ರಾಮದ ಶಾಂತಿನಾಥ ಜಿನಾಲಯಕ್ಕೆ ಅಲ್ಲಿನ ೫೦ - ನಿವರ್ತನ ಫಲವತ್ತಾದ ಭೂಮಿಯನ್ನು ದಾನಮಾಡಿದ ವಿವರಗಳಿವೆ.[೨೫] ಕ್ರಿ. ಶ.೬ -೭ನೆಯ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ದೆಜ್ಜಮಹಾರಾಜನ ಗೋಕಾಕ ತಾಮ್ರಪಟಗಳು ಉಲ್ಲೇಖಿಸುವಂತೆ ಜಲರ ಗ್ರಾಮದಲ್ಲಿನ ೫೦ ನಿವರ್ತನ ಭೂಮಿಯನ್ನು ಅರ್ಹತ್ ದೇಗುಲದ ಪೂಜಾ ಮತ್ತಿತರ ವಿಧಾನಗಳಿಗೆ ಅಲ್ಲಿನ ಆಚಾರ್ಯರಾದ ಆರ್ಯನಂದಿಯರ ಕೈಯಲ್ಲಿ ಸೇಂದ್ರಕ ಇಂದ್ರನಂದ ರಾಜನು ನೀಡಿದನು.[೨೬] ಕ್ರಿ. ಶ. ೬೮೦-೯೬ರ ಶಾಸನವೊಂದು ಹೇಳುವಂತೆ. ವಿನಯಾದಿತ್ಯನ ಸಾಮಂತನಾದ ಪೋಗಿಲ್ಲಿ ಸೇಂದ್ರಕನು ಕೆಲವು ತೆರಿಗೆಗಳನ್ನು ಅಮಲಿ, ವೇದವಳ್ಳಿ, ರವಿಚಂದದ ದೇವಾಲಯಗಳ ಪೂಜೆ ಪುನಸ್ಕಾರ ಮುಂತಾದ

ವಿಧಿವಿಧಾನಗಳನ್ನು ನೆಡೆಸಲು ಮನ್ನಾಮಾಡಿದನು.[೨೭] ಕ್ರಿ. ಶ. ೭ ನೆಯ ಶತಮಾನದ ಚಿಪ್ಲೂನ್ ತಾಮ್ರ ಶಾಸನದಲ್ಲಿ ಸೇಂದ್ರಕ ಸೇನಾನಂದ ರಾಜನು ಕೃಷ್ಣಸ್ವಾಮಿ ಎಂಬ ಆತ್ರೇಯಗೋತ್ರದ ಬ್ರಾಹ್ಮಣನಿಗೆ ಆಮ್ರವಟವಕ ಗ್ರಾಮವನ್ನು ದಾನ ನೀಡಿದ ವಿವರಗಳಿವೆ.[೨೮] ಕ್ರಿ. ಶ. ೭ ನೆಯ ಶತಮಾನದ ಲಕ್ಷ್ಮೇಶ್ವರದ ಶಾಸನವು ದುರ್ಗಶಕ್ತಿಯು ಪುಲಿಗೆರೆಯಲ್ಲಿನ ಭೂಮಿಯನ್ನು ಶಂಕರ ಜಿನೇಂದ್ರ ಚೈತ್ಯಕ್ಕೆ ದಾನ ನೀಡಿದನ್ನು ಉಲ್ಲೇಖಿಸಿದೆ.[೨೯] ಅಲ್ಲದೇ ಕ್ರಿ. ಶ. ೮ ನೆಯ ಶತಮಾನದ ಆಡೂರು ಶಾಸನವು ಸೇಂದ್ರಕ ಮಾಧವಶಕ್ತಿಯರಸನು ಕರ್ಮಗಾಲೂರು ಗ್ರಾಮದಲ್ಲಿರುವ ಜಿನೇಂದ್ರ ದೇಗುಲಕ್ಕೆ ಅಲ್ಲಿನ ಪೂಜೆ ಮುಂತಾದ ಕಾರ್ಯಗಳಿಗಾಗಿ ರಾಜಮಾನದಲ್ಲಿ ಅಳೆದು ಎಂಟು-ಮತ್ತರು ಗದ್ದೆಯನ್ನು ದಾನವಾಗಿ ಬಿಟ್ಟಿದ್ದನ್ನು ದಾಖಲಿಸಿದೆ.[೩೦]

ಧರ್ಮ

ಈ ಮೇಲಿನ ಅನೇಕ ದಾನ-ದತ್ತಿಗಳನ್ನು ವೀಕ್ಷಿಸಿದಾಗ, ಸೇಂದ್ರಕರು ಅಂದು ಜೈನಧರ್ಮಕ್ಕೆ ತಮ್ಮ ಹೆಚ್ಚಿನ ಪ್ರೋತ್ಸಾಹವನ್ನು ನೀಡಿರುವದು ಕಂಡುಬರುತ್ತದೆ. ಅದರಿಂದಾಗಿ ಅವರು ಜೈನ ಧರ್ಮೀಯರಾಗಿದ್ದಿರಬಹುದೆಂದು ಊಹಿಸಬಹುದು. ಅದರೂ ಕೂಡ ಅವರು ಇತರೆ ಕೆಲವು ಧರ್ಮಗಳನ್ನೂ ಪೋಷಿಸಿದ್ದು ಅವರ ಶಾಸನಗಳನ್ನು ಅಧ್ಯಯನ ಮಾಡಿದಾಗ ತಿಳಿದುಬರುತ್ತದೆ.

ದೇಗುಲ ನಿರ್ಮಾಣ

ಕ್ರಿ.ಶ. ೬೮೦-೯೬ ರ ಅವಧಿಯ ಬಳ್ಳಿಗಾಮೆ (ಶಿವಮೊಗ್ಗ ಜಿಲ್ಲೆ)ಯ ಶಾಸನವೊಂದು ತಿಳಿಸುವಂತೆ ವಿನಯಾದಿತ್ಯನ ಸಾಮಂತ ನಾದ ಸೇಂದ್ರಕ ಪೋಗಿಲ್ಲಿಯು ವಡೆವಳ್ಳಿ, ಅಮ್ಮಳ್ಳಿಯಲ್ಲಿ ಮೂರು ದೇಗುಲಗಳನ್ನು ನಿರ್ಮಿಸಿದನೆಂಬ ವಿಷಯ ತಿಳಿಯುತ್ತದೆ.[೩೧]

ಹೀಗೆ ಸೇಂದ್ರಕ ಮನೆತನವು ಬಾದಾಮಿ ಚಾಲುಕ್ಯರ ಕಾಲದಲ್ಲಿ ಅವರ ಅತ್ಯಂತ ನಿಷ್ಠಾವಂತ ಸಾಮಂತರಾಗಿದ್ದು, ಅವರ ನಂತರ ಅದು ಕೂಡಾ ಕಣ್ಮರೆಯಾಯಿತು. ಆದರೆ ಅವರೂ ಕೂಡ ಪ್ರಧಾನ ಅರಸು ಮನೆತನಗಳಂತೆ ಆಡಳಿತ, ಶಿಕ್ಷಣ, ದಾನ-ದತ್ತಿ , ಧರ್ಮ ಮತ್ತು ದೇಗುಲಗಳ ನಿರ್ಮಾಣಗಳಂತಹ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿ, ತಮ್ಮ ಗಮನಾರ್ಹವಾದಂತಹ ಸಾಧನೆಗಳಿಂದ ಇತಿಹಾಸದ ಪುಟಗಳಲ್ಲಿ ಉಳಿದಿದ್ದಾರೆ.

***

ಆಧಾರಸೂಚಿ

೧. Ind.Ant. VII , p. 101-12.
೨. M.A.R,1929, p.50
೩. ARIE,1966-67, No. A.11; Ep.Ind., XXXVIII, p. 99ff.
೪. E.C., V, p.594.
೫. Ind.Ant.,VI p. 31.
೬. Ibid., VII.
೭. Pathan, Z.M., Some Feudatory Families (Minor Dynaslies) of Medieval Karnataka -A Study , 1983, p.65.
೮. Ind.Ant.,VII, p.106
೯. J.K.U. Social sciences, Vol-V,p.180.
೧೦. Ep.Ind., III, p.50-53.
೧೧. Ind.Ant.,VII, p.106
೧೨. SII.,XV, No.417 & 441-43.
೧೩. EP.Ind., XXI, p.289-92.
೧೪. Pathan, Z.M., op.cit., p.66.
೧೫. Ind.Ant., XIX, p.142 ff.
೧೬. M.A.R.,1909,p.12-14.
೧೭. KI., I,No. 3, p. 48.
೧೮. Pathan, Z.M., op. cit., p.75.
೧೯. Ep. Ind., XXXVIII, p, 99 ff
೨೦. Ind. Ant., XIX, p.14 2ff.
೨೧. Ep. Ind., XXXVIII,p,99ff.
೨೨. Ibid., XXI, p.289-92.
೨೩. Ibid., III, p.50-53.
೨೪. Ibid.,XXXVIII,p.99ff.
೨೫. J.K.U.,Social Science,Vol-V,p-180.
೨೬. Ep.Ind., XXI,p289-92.
೨೭. Ind Ant., XIX, p. 142-46.
೨೮. Ep.Ind III, P.50-53.
೨೯. Ind.Ant., VII, P. 101-12.
೩೦. KI., I, No-3, P. 48
೩೧. Ind. Ant., XIX, P. 142-46.

ಕೆ.ನಾರಾಯಣ ನಾಯಕ್*

ತುಳುನಾಡಿನ ಚಿಟ್ಟುಪಾಡಿ ಬೀಡು

ಕರಾವಳಿ ಕರ್ನಾಟಕದ ತುಳುನಾಡಿನ ಇತಿಹಾಸದಲ್ಲಿ ಆಡಳಿತ ನಡೆಸಿ, ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ ರಾಜಕೀಯ ವ್ಯವಸ್ಥೆಯಲ್ಲಿ ಸಾಮಂತ ಅರಸರಷ್ಟೇ ಪ್ರಾಧಾನ್ಯತೆಯನ್ನು ಅವರ ಕೈಕೆಳಗಣ ಬಲ್ಲಾಳರೂ ಪಡೆದಿರುತ್ತಾರೆ ಎಂಬುವುದು ಅಧ್ಯಯನದಿಂದ ವ್ಯಕ್ತವಾಗುವುದಾದರೂ, ಈ ಬಗ್ಗೆ ಹೆಚ್ಚಿನ ಪರಾಮರ್ಶೆಯ ಅವ್ಯಕತೆಯಿದೆ. "ಆಡಳಿತ ಕ್ರಮಬದ್ಧ ಶ್ರೇಣಿಯಲ್ಲಿ ರಾಜ್ಯ-ಸೀಮೆ-ಮಾಗಣೆ, ಗ್ರಾಮ, ಗುತ್ತು- ಇವು ಒಳ ಆಡಳಿತದ ಪ್ರಮುಖ ಘಟಕಗಳಾಗಿದ್ದು ವಂಶಪಾರಂಪರ್ಯ ವಾಗಿ ಆಡಳಿತ ನಡೆಸುತ್ತಾ, ಸಾಮಾಜಿಕ ಕ್ರಮಕಟ್ಟಳೆ, ಐಕ್ಯ, ಧರ್ಮರಕ್ಷಣೆ ಮತ್ತು ಪ್ರಜಾಕ್ಷೇಮವನ್ನು ನೋಡಿಕೊಳ್ಳುತ್ತಿದ್ದವು."[೧] ಸುಮಾರು ಒಂದು ಸಾವಿರ ವರ್ಷಗಳ ಸುದೀರ್ಘ ಆಡಳಿತವನ್ನು ನೀಡಿದ ಅಳುಪ ಅರಸರು ತುಳುನಾಡಿನಲ್ಲಿಯ ಭವ್ಯ ಸಂಸ್ಕೃತಿ ಮತ್ತು ವಿಶಿಷ್ಟ ರೀತಿಯ ಧರ್ಮ ಸಾಮರಸ್ಯಕ್ಕೆ ಹಾಕಿದ ಭದ್ರ ಬುನಾದಿಯ ಮೇಲೆ ಬಂಗರಸರು, ಚೌಟರಸರು, ಭೈರವರಸರು .... ಇವರೇ ಮೊದಲಾದ ಸಾಮಂತರಸರು ಅಧಿಕಾರ ಸೂತ್ರವನ್ನು ಹಿಡಿದು ಮುನ್ನಡೆದರು. ಇವರ ಕೈಕೆಳಗೆ ಸೀಮೆ, ಮಾಗಣೆ, ನಾಡು ಎಂಬ ನಾಮಧೇಯದ ಕೆಲವು ಗ್ರಾಮಗಳ ಕೂಟಕ್ಕೆ ಅಧಿಕಾರಿಗಳಾಗಿ ಬಲ್ಲಾಳ, ಹೆಗಡೆ ಎಂಬ ಹೆಸರಿನ "ಪುಟ್ಟ ಅರಸರು" ವಂಶಪಾರಂ ಪರ್ಯವಾಗಿ ಆಡಳಿತವನ್ನು ನಡೆಸಿದರು. ಇವರಿಗೆ ಆಡಳಿತಕಾರ್ಯ ಭಾರದಲ್ಲಿ ಗ್ರಾಮದ ಗುತ್ತಿನ ಗುರಿಕಾರರು ನೆರವಾಗುತ್ತಿದ್ದರು, ಸಾಮಂತರಸರಿಗೆ ಅರಮನೆಯಲ್ಲಿ ಪಟ್ಟಾಭಿಷೇಕ ನಡೆಯುವಂತೆ, ಬಲ್ಲಾಳರಿಗೂ ಅವರ ಬೀಡಿನಲ್ಲಿ ಸಾಂಪ್ರದಾಯಿಕ ವಿಧಿವಿಧಾನದಲ್ಲಿ ಪಟ್ಟಬಂಧ ಮಹೋತ್ಸವವು ಜರಗುತ್ತಿತ್ತು.[೨] ತುಳುನಾಡಿನ ವಿಶಿಷ್ಟ ಸಂಸ್ಕೃತಿಗೆ ಪೋಷಣೆ-ರಕ್ಷಣೆ ನೀಡಿದ ಬಲ್ಲಾಳಬೀಡುಗಳು ಕಾಲಗತಿಯಲ್ಲಿ ಕಣ್ಮರೆ ಯಾಗುವ ಮೊದಲೇ ಅವುಗಳ ಚಾರಿತ್ರಿಕ ಅಧ್ಯಯನವನ್ನು ಸೂಕ್ತರೀತಿಯಲ್ಲಿ ಕೈಗೊಳ್ಳುವುದು ಅವಶ್ಯವಾಗಿದೆ.

ದಿ|| ಗಣಪತಿರಾಮ್ ಐಗಳ್‌ರವರ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" (೧೯೨೩) ಗ್ರಂಥದಲ್ಲಿ ತುಳು ನಾಡಿನ ಅರಸರು ಹಾಗೂ ಬಲ್ಲಾಳ ಬೀಡುಗಳ ಕೆಲವೊಂದು ಮಾಹಿತಿ ದೊರೆಯುತ್ತಿರುವುದು ಸ್ಥಳೀಯ ಇತಿಹಾಸ ಅಧ್ಯಯನಕ್ಕೆ ಸಹಾಯಕವಾಗಿದೆ. ಪಡುಬಿದರೆ ಕಿನ್ಯಕ್ಕ ಬಲ್ಲಾಳ, ಎರ್ಮಾಳ ಮಾರಂ ಹೆಗ್ಗಡೆ, ಕಾಪು ಮರ್ದಹೆಗ್ಗಡೆ, ಕಟಪಾಡಿ ದೊರೆಬಲ್ಲಾಳ ವಿದ್ಯಾವರದ ಮುನ್ನೂರಾಳ್ವರು, ನಿಡಂಬೂರು ಬಲ್ಲಾಳರು ಚಿಟ್ಟುಪಾಡಿ ಬಲ್ಲಾಳರು ಉಡುಪಿಯ ಪರಿಸರದಲ್ಲಿ ಕಂಡುಬರುವ ಮಾಗಣೆಯ ಮಟ್ಟದಲ್ಲಿ ಅಧಿಕಾರವನ್ನು ನಡೆಸುತ್ತಿದ್ದ ಪ್ರಾಚೀನ ಬಲ್ಲಾಳ ಬೀಡು ಮನೆತನದವರಾಗಿರುತ್ತಾರೆ.

"ಚಿಟ್ಟುಪಾಡಿ ಬಲ್ಲಾಳರ ಕೈಕೆಳಗೆ ೧) ಹೆರಗ ೨) ಬಡಗಬೆಟ್ಟು ೩) ಹಿರೆಬೆಟ್ಟು ೪) ಕುಡಿ ೫) ಪೆರ್ಣಂಕಿಲ ೬)ಮರಣೆ ಗ್ರಾಮಗಳು ಇದ್ದುವು. ಬೀಡು, ಬಡಗುಬೆಟ್ಟಿನಲ್ಲಿ ಚಿಟ್ಟುಪಾಡಿ ಎಂಬಲ್ಲಿತ್ತು".[೩] ಶ್ರೀ ಅನಂತೇಶ್ವರ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಕೃಷ್ಣದೇಗುಲಗಳಿರುವ ಪುಣ್ಯಕ್ಷೇತ್ರವೆನಿಸಿರುವ 'ರಜತಪೀಠ' ಶಿವಳ್ಳಿಯನ್ನೊಳಗೊಂಡಿರುವ ಉಡುಪಿನಗರದ ಆಗ್ನೇಯ ದಿಕ್ಕಿನಲ್ಲಿರುವ ಚಿಟ್ಟುಪಾಡಿ[೪] ೭೬ ಬಡಗುಬೆಟ್ಟು ಗ್ರಾಮದಲ್ಲಿದ್ದು ಇದೀಗ ನಗರ ಪ್ರದೇಶದಲ್ಲಿಯೇ ಇರುತ್ತದೆ. ಉಡುಪಿಯ ಪಶ್ಚಿಮ ದಲ್ಲಿರುವ ಅಂಬಲಪಾಡಿಬೀಡಿಗೆ ಮೂಡಿಲ್ಲಾಯ ಬಲ್ಲಾಳ ಬೀಡು ಎಂದೂ ಹೆಸರಿದೆ. ಮಧ್ವಾಚಾರ್ಯರು ಚಿಟ್ಟುಪಾಡಿ ಬೀಡನ್ನು 'ಪೂರ್ವಾಲಯ' (ಮೂಡಿಲಮನೆ) ಎಂಬುವುದಾಗಿ ಕರೆಯುತ್ತಿದ್ದರೆಂಬ ಐತಿಹ್ಯವಿದೆ. ಅಳುಪರ ರಾಜಧಾನಿ ಉದಿಯಾ ವರವು (ಉದಯಪುರ) ಚಿಟ್ಟುಪಾಡಿಯ ಸಮಿಪದಲ್ಲಿಯೇ ನೈರುತ್ಯ ದಿಶೆಯಲ್ಲಿದೆ. ಐಗಳ್‌ರವರು ತಮ್ಮ ಗ್ರಂಥದಲ್ಲಿ "ಚಿಟ್ಟುಪಾಡಿ ಒಂದು ಪಟ್ಟಣವಾಗಿತ್ತು" ಮತ್ತು"ಇಲ್ಲಿ ಅನೇಕ ಬಸದಿಗಳಿದ್ದುವು" ಎಂದು ಉಲ್ಲೇಖಿಸಿರುವರು. ಆದರೆ ಈಗ ಹಿಂದಿನ ಪಟ್ಟಣ ಹಾಗೂ ಬಸದಿಗಳ ಅವಶೇಷಗಳು ಕಣ್ಮರೆಯಾಗಿವೆ. ನಗರೀಕರಣ ದ ತೀವ್ರ ಚಟುವಟಿಕೆಯ ಭರದಲ್ಲಿ ಪ್ರಾಚೀನ ಅವಶೇಷಗಳಲ್ಲಿ ಹಲವಾರು ಇಲ್ಲವಾದರೂ,ಬಲ್ಲಾಳ ಬೀಡು, ಬೀಡಿಗೆ ಸಂಬಂಧಿಸಿರುವ ದೇವರ ಮೂರ್ತಿಗಳು, ಬೀಡಿನ ಬಳಿಯಲ್ಲಿರುವ ಶ್ರೀನಿವಾಸ ದೇವಾಲಯ ಇವೆಲ್ಲಾ ಸುಸ್ಥಿತಿಯಲ್ಲಿದ್ದು, ಇತಿಹಾಸ ಅಧ್ಯಯನಕ್ಕೆ ನೆರವನ್ನುನೀಡಿವೆ.

ನಗರದ ಮಧ್ಯೆ ಚಿಟ್ಟುಪಾಡಿ ಬೀಡಿನ ಭೌಗೋಳಿಕ ಪರಿಸರವು ಅತೀ ಸುಂದರವಾಗಿದೆ ಹಾಗೂ ಪ್ರಶಾಂತವಾಗಿದೆ ಚೇತೋಹಾರಿಯಾಗಿದೆ. ಎತ್ತರದ ನೆಲೆಯಲ್ಲಿ ಇದರ ಮುಂದುಗಡೆ ವಿಶಾಲವಾದ ಬಾಕಿದೂರು ಗದ್ದೆ ಹಾಗೂ ಅದರ ಮುಂದುಗಡೆಯೂ ಹೊಲಗದ್ದೆಗಳಿವೆ. ಈಶಾನ್ಯ ದಿಕ್ಕಿನಲ್ಲಿ ಆಯತಾಕಾರದ

* ನಿಸರ್ಗ, ಜಯದುರ್ಗಾ ನಗರ, ಕನ್ನರಪಾಡಿ, ಉಡುಪಿ - ೫೭೬ ೧೦೩.



ದಕ್ಷಿಣದ ಬದಿಯಲ್ಲಿ ಸುಂದರ ವನವೂ, ಅದರ ಸನಿಹದಲ್ಲಿಯೇ ಹಿಂದೆ ಕೋಟೆಯು ಇದ್ದಿರಬಹುದಾದ ಕುರುಹನ್ನು ತೋರಿಸುವ ಕೊತ್ತಳ, ನಾಗಬನ[೭] ಇವೆ. ಈ ದಕ್ಷಿಣದಲ್ಲಿ ಉತ್ತರ ಪ್ರದೇಶ ಮತ್ತು ಈಶಾನ್ಯದಲ್ಲಿ ನೀರಿನ ನೆಲೆ ವಾಸ್ತುಶಾಸ್ತ್ರ ಪರಂಪರೆಯನ್ನು ನೆನಪಿಗೆ ತರುತ್ತದೆ.

ತುಳುನಾಡಿನ ಬೀಡಿನ ಬಲ್ಲಾಳರಲ್ಲಿ ಚಿಟ್ಟುಪಾಡಿ ಮತ್ತು ನಿಡಂಬೂರು ಬಲ್ಲಾಳರನ್ನು ಬಿಟ್ಟರೆ ಉಳಿದವರೆಲ್ಲರೂ ಜೈನರು. ಈ ಎರಡು ಬಲ್ಲಾಳರು ಮಾತ್ರ ಶಿವಳ್ಳಿ ಬ್ರಾಹ್ಮಣರು. ಆದರೆ ಮೊದಲು ಈ ಬೀಡುಗಳಲ್ಲಿಯೂ ಜೈನ ಬಲ್ಲಾಳರಿದ್ದರು. ಕಾರಣಾಂತರದಿಂದ ಜೈನ ಬಲ್ಲಾಳರಿಂದ ಬೀಡಿನ ಅಧಿಕಾರವು ಬ್ರಾಹ್ಮಣರಿಗೆ ಬಂದಿದೆ. ಐಗಳ್ ರವರು ಉಲ್ಲೇಖಿಸಿರುವ ಹಲ್ಲರ ಬಸದಿಗೆ ಶಾ.ಶ. ವರುಷ ೧೪೧೨ ಮತ್ತು ೧೪೧೬ರಲ್ಲಿ ವಿಜಯ ನಗರದ ೨ನೇ ನರಸಿಂಹನು ಭೂಮಿ ಉಂಬಳಿಬಿಟ್ಟ ಎರಡು ಶಿಲಾ ಶಾಸನಗಳು ಈಗಲೂ ಚಿಟ್ಪಾಡಿ ಬಲ್ಲಾಳರ ಬೀಡಿನಲ್ಲಿವೆ[೮]. ಮಧ್ವಾಚಾರ್ಯರಿಗೆ ಚಿಟ್ಪಾಡಿಬ್ರಾಹ್ಮಣ ಬಲ್ಲಾಳ ಬೀಡಿನ ಸಂಬಂಧ ವಿರುವುದರಿಂದ ೧೩ನೆಯ ಶತಮಾನದ ಪೂರ್ವದಲ್ಲಿಯೇ ಜೈನರಿಂದ ಬ್ರಾಹ್ಮಣರಿಗೆ ಬೀಡಿನ ಅಧಿಕಾರವು ಬಂದಿರಬೇಕೆಂದು ಊಹಿಸಬಹುದಾಗದೆ. ಮೊದಲು ಇದ್ದ ಜೈನ ಬಲ್ಲಾಳರ ಕುರಿತಾದ ವಿವರಗಳು ಲಭ್ಯವಿಲ್ಲ. ಚೌಟಮನೆತನದ ಜೈನಬಲ್ಲಾಳರೆಂಬ ಐತಿಹ್ಯವನ್ನು ಇಲ್ಲಿ ಹೇಳುತ್ತಿರುವುದಾದರೂ ಸೂಕ್ತ ಆಧಾರವಿಲ್ಲ. ಈ ಜೈನ ಬಲ್ಲಾಳರೊಬ್ಬರಿಗೆ ಸಂತತಿಯಿಲ್ಲದ ಕಾರಣ, ಹೆರ್ಗ(ಹೆರಗ) ಗ್ರಾಮದ ಮೂಡಿಲ್ಲಾಯ (ಮೂಡಿತ್ತಾಯ) ವಂಶದ ಬ್ರಾಹ್ಮಣ ರೊಬ್ಬರನ್ನು ಕರೆಯಿಸಿ ಈ ಬೀಡನ್ನು ದಾನಮಾಡಿದರು ಎಂಬ ಪ್ರತೀತಿಯಿದೆ. ಜೈನಬಲ್ಲಾಳರ ಉಪಕಾರ ಸ್ಮರಣೆಯ ಸಂಕೇತವಾಗಿ ಬಲ್ಲಾಳ ಹೆಸರಿನಲ್ಲಿ ಬೀಡಿನ ಅಧಿಕಾರವನ್ನು ಬ್ರಾಹ್ಮಣರು ಹೊಂದಿದ್ದರು. ಆದರೆ, ಇವರಿಗೆ ಜೈನಬಲ್ಲಾಳರಂತೆ ಪಟ್ಟಬಂಧ ಮಹೋತ್ಸವ ಇರುವುದಿಲ್ಲ. ಅಲ್ಲದೆ, ಪಟ್ಟದ ಉಂಗುರ ಧಾರಣೆಯೂ ಇರುವುದಿಲ್ಲ.

ಚಿಟ್ಟುಪಾಡಿ ಮತ್ತು ನಿಡಂಬೂರೂ ಬಲ್ಲಾಳರು ಬೇರೆಲ್ಲಾ ಬಲ್ಲಾಳರಿಗಿಂತ ಗಣ್ಯರು ಎನ್ನಲಾಗಿದೆ[೯] ಇವರಿಗೆ ಪಕ್ಷನಾಥ ರೆಂಬ ನಾಮಧೇಯವು, ಅಧಿಕಾರವ್ಯಾಪ್ತಿಯೂ ಇತ್ತೆಂಬುದು ಸ್ಕಂದ ಪುರಾಣಾಂತರ್ಗತ ಸಹ್ಯಾದ್ರಿಖಂಡದಲ್ಲಿರುವ ಗ್ರಾಮಪದ್ಧತಿಯಿಂದ ತಿಳಿದುಬರುತ್ತದೆ. ಮಯೂರವರ್ಮನು ಅಹಿಛತ್ರದಿಂದ ಬ್ರಾಹ್ಮಣ ರನ್ನು ಕರೆಯಿಸಿ, ಅವರನ್ನು ತುಳುನಾಡಿನ ೩೨ ಗ್ರಾಮಗಳಲ್ಲಿ ನೆಲೆಗೊಳಿಸಿದನು. ಪೂರ್ವದಿಕ್ಕಿನ ೧೯ಗ್ರಾಮಗಳಿಗೆ ಚಿಟ್ಟುಪಾಡಿ ಬೀಡಿನ ಬಲ್ಲಾಳರೂ ಪಕ್ಷನಾಥರಾಗಿದ್ದರು. ಅಂತೆಯೇ ಪಶ್ಚಿಮದ ೧೯ ಗ್ರಾಮಗಳಿಗೆ ಪಕ್ಷನಾಥರಾಗಿ ನಿಡಂಬೂರು ಬಲ್ಲಾಳರನ್ನು ನೇಮಿಸಲಾಗಿತ್ತು [೧೦]. ಪಕ್ಷನಾಥರು ಚಾತುರ್ವರ್ಣ ಪದ್ಧತಿಯ ಕಟ್ಟಳೆಗಳ ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು. ಧರ್ಮಾಧರ್ಮ ನಿರ್ಣಯ ಅಧಿಕಾರವು ಇವರದಾಗಿತ್ತು. ಬ್ರಾಹ್ಮಣ ವಿದ್ವತ್ ಮಹಾಜನ ಸಭೆಯಲ್ಲಿ ವಿಷಯ ಮಂಡಿಸಿ ವಿವರಿಸಿ ಹೇಳುವ ಹೊಣೆಗಾರಿಕೆ ಇವರದಾಗಿತ್ತು. ಆದರೆ ಅಂತಿಮ ನಿರ್ಣಯ ನೀಡುವ ಅಧಿಕಾರವು ರಾಜನದಾಗಿತ್ತು.[೧೧] ಶಿಕ್ಷೆ-ರಕ್ಷೆಯ ಅಧಿಕಾರ ಪಕ್ಷನಾಥ ರಾಗಿತ್ತು. ಹೀಗೆ ಪಕ್ಷನಾಥ ಎಂಬ ಸ್ಥಾನಮಾನದ ಹೊಣೆಗಾರಿಕೆ ಪಡೆದಿರಬೇಕಾದರೆ ಇವರು ವೇದಶಾಸ್ತ್ರ ಪಾರಂಗ ತರೂ, ಪಾಂಡಿತ್ಯ ಹೊಂದಿದ ಮನೆತನದವರೂ ಆಗಿದ್ದರು ಎಂದು ಊಹಿಸ ಬಹುದಾಗಿದೆ.

ಇಲ್ಲಿನ ಪ್ರತೀತಿಯಂತೆ ನಾರಾಯಣ ಮೂಡಿಲ್ಲಾಯರು ಚಿಟ್ಟುಪಾಡಿನ ಬ್ರಾಹ್ಮಣ ಮನೆತನದ ಬಲ್ಲಾಳರಲ್ಲಿ ಮೊದಲನೆ ಯವರು ಈಗಿರುವ ಬೀಡಿನ ಮನೆಯನ್ನು ಕ್ರಿ. ಶ. ೧೯೦೪ರಲ್ಲಿ ರಾಮಕೃಷ್ಣ ಬಲ್ಲಾಳರು ನಿರ್ಮಿಸಿದರು. ನಾಲ್ಕು ಬದಿಗಳಲ್ಲಿ ದ್ವಾರಗಳಿರುವ, ವಿಶಾಲವಾದ ಪಡಶಾಲೆ, ಜಗಲಿ, ಪ್ರತ್ಯೇಕ ವಾಗಿರುವ ಇರುವ ಸುಂದರವಾದ ಬೀಡು ಇದಾಗಿದೆ. ಮಠಗಳಲ್ಲಿ ಇರುವಂತೆ ಪ್ರತ್ಯೇಕವಾಗಿರುವ "ದೇವರ ಗುಂಡ"[೧೨]ಈ ಬೀಡಿ ನಲ್ಲಿದೆ. ದಕ್ಷಿಣದಲ್ಲಿ 'ಆನೆಬಾಗಿಲು' ಇದೆ. ಬೀಡಿನ ಕೆಲವೊಂದು ಭಾಗವನ್ನು ನವೀಕರಿಸಿರುವುದಾದರೂ, ಪರಂಪ ರಾಗತ ವಾಸ್ತು ವೈಶಿಷ್ಟ್ಯಗಳನ್ನು ಹೊಂದಿರುವ ಚಿಟ್ಪಾಡಿ ಬೀಡು ಚಾರಿತ್ರಿಕ ಅಧ್ಯಯನ ಯೋಗ್ಯವಾಗಿದೆ. ರಾಮಕೃಷ್ಣ ಬಲ್ಲಾಳರ ನಂತರ ಬೀಡಿನ ಒಡೆಯರಾಗಿದ್ದವ ರಾಯಬಲ್ಲಾಳರು ಮತ್ತು ಲಕ್ಷ್ಮೀ ನಾರಾಯಣ ಬಲ್ಲಾಳರು ೧೯೯೩ರಿಂದ ಬೀಡಿನ ಒಡೆಯ ರಾಗಿರುವ ಡಾ॥ ಸಿ.ಗೋಪಾಲಕೃಷ್ಣ ಬಲ್ಲಾಳರು ಈಗಿನ ಬಲ್ಲಾಳರು ಆಗಿರುತ್ತಾರೆ. ಬೀಡಿನ ಆಡಳಿತ ನಿರ್ವಹಣೆಯ ಪಾರಂಪರಿಕ ಹೊಣೆಗಾರಿಕೆ ಯೊಂದಿಗೆ ವೈದ್ಯವೃತ್ತಿಯನ್ನು ನಡೆಸುತ್ತಿದ್ದಾರೆ. ೧೯೫೦ರ ವರೆಗೂ ಬಲ್ಲಾಳರು ಬೀಡಿನ ಚಾವಡಿಯಲ್ಲಿ ತಮ್ಮ ಸೀಮೆಯ ಪರಿಧಿಯಲ್ಲಿ ನ್ಯಾಯತೀರ್ಮಾನ ವನ್ನು ನೀಡುತ್ತಿದ್ದರೆನ್ನಲಾಗಿದೆ. ಇಲ್ಲಿನ ಕಂಬಳಗದ್ದೆ[೧೩]ಯಲ್ಲಿ ನಡೆಯುವ ಕಂಬಳದಲ್ಲಿ ಮತ್ತು ಊರಿನ ಪಿಲಿಚಂಡಿ ಕೋಲದ ಸಂದರ್ಭದಲ್ಲಿ ಜನರಿಂದ ವಿಶೇಷ ಗೌರವ ವನ್ನು[೧೪] ಪರಂಪರೆ ಯಂತೆ ಬಲ್ಲಾಳರು ಪಡೆಯುತ್ತಾರೆ.

ಚಿಟ್ಟುಪಾಡಿ ಬಲ್ಲಾಳರು ಧರ್ಮದ ತಳಹದಿಯಲ್ಲಿ

ನ್ಯಾಯನೀತಿಗೆ ಒತ್ತುಕೊಟ್ಟು ಆಡಳಿತವನ್ನು ನಿರ್ವಹಿಸಿದರು ಎಂದು ತಿಳಿಯಬಹುದಾಗಿದೆ. ಸುದೀರ್ಘಕಾಲದಿಂದಲೂ ಈ ಪರಿಸರದ ಜನರ ಪ್ರೀತಿಗೌರವಗಳಿಗೆ ಬೀಡಿನ ಬಲ್ಲಾಳರು ಪಾತ್ರರಾಗಿದ್ದರು ಎಂಬುವದು ಇಲ್ಲಿನ ಹಳೆಯ ತಲೆಮಾರಿನ ಹಿರಿಯರ ಮಾತಿನಿಂದ ವ್ಯಕ್ತವಾಗುತ್ತದೆ.

ಚಿಟ್ಟುಪಾಡಿನ ಮೂಡಿಲ್ಲಾಯ ಬಳ್ಳಾಲ ಬೀಡಿಗೂ ದ್ವೈತಮತ ಸ್ಥಾಪಕರಾದ ಶ್ರೀಮಧ್ವಾಚಾರ್ಯರಿಗೂ ನಿಕಟ ಸಂಬಂಧವನ್ನು ಮಧ್ವವಿಜಯದ ೧೫ನೆಯ ಸರ್ಗದಲ್ಲಿ ಉಲ್ಲೇಖಿಸಿ ರುವುದು ಈ ಬೀಡಿನ ಪ್ರಾಚೀನತೆಯನ್ನು ಸಾರುತ್ತದೆ. ಶ್ರೀ ಮಧ್ವಾಚಾರ್ಯರು (ಪೂರ್ವಾಶ್ರಮದಲ್ಲಿ ವಾಸುದೇವ) ತಮ್ಮ ಊರು ಬೆಳ್ಳೆಗ್ರಾಮದ ಪಾಜಕಕ್ಷೇತ್ರದಿಂದ ಕಾಲ್ನಡೆಯಲ್ಲಿ ಚಿಟ್ಪಾಡಿ ಬೀಡಿನ ಮಾರ್ಗವಾಗಿಯೇ ಉಡುಪಿಗೆ ಪ್ರಯಾಣ ಮಾಡುತ್ತಿದ್ದರು. ಬೀಡಿನ ಮನೆಯಲ್ಲಿ ವಿಶ್ರಮಿಸಿ, ಹಾಲನ್ನು ಕುಡಿದು ಹೊರಡುತ್ತಿದ್ದರು. ಬದರಿಕಾಶ್ರಮದಿಂದ ತಂದ ಅಷ್ಟ ವ್ಯಾಸಮೂರ್ತಿಗಳಲ್ಲಿ ದಶಾವ ತಾರಯುಕ್ತವಾದ ಶ್ರೀಲಕ್ಷ್ಮೀನಾರಾಯಣ ಪ್ರತಿಮೆಯನ್ನು[೧೫] ಮಧ್ವಾಚಾರ್ಯರು ಈ ಬೀಡಿನ ಹಿರಿಯರಿಗೆ ಕೊಟ್ಟಿರುತ್ತಾರೆ. "ನಾಲ್ಕುಕಮಲಗಳ ಒಳಗೆ ನಾರಾಯಣ ದೇವರನ್ನು ಹೊತ್ತು ಕೊಂಡಿರುವ ಗರುಡ ಹಾಗೂ ದೇವರ ಎಡತೊಡೆಯ ಮೇಲೆ ಕುಳಿತಿರುವ ಶ್ರೀಲಕ್ಷ್ಮೀ" ಅಪೂರ್ವವಾಗಿರುವ ಪ್ರತಿಮೆಯಾಗಿದೆ. ಇದು ಇಂದಿಗೂ ಈ ಬೀಡಿನಲ್ಲಿ ಪೂಜೆಗೊಳ್ಳುತ್ತಿದೆ. ಆಚಾರ್ಯ ಮಧ್ವರು ತಾವು ಹಾಲು ಕುಡಿದ ಈ ಬೀಡಿಗೆ ಒಂದು ಹಸುವನ್ನು ನೀಡಿದ್ದರು ಎಂಬ ಐತಿಹ್ಯವಿದೆ[೧೬].

ಶಿವಳ್ಳಿ ಕ್ಷೇತ್ರದಲ್ಲಿ ಶ್ರೀಕೃಷ್ಣ ಪ್ರತಿಮೆ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಬಂದೊದಗಿದ ಅಡ್ಡಿ ಆತಂಕಗಳನ್ನು ನಿವಾರಿಸಿ, ದೇವಾಲಯ ನಿರ್ಮಾಣಕ್ಕೆ ಚಿಟ್ಟುಪಾಡಿ ಬೀಡಿನ ಆಗಿನ ಬಲ್ಲಾಳರು ಹೆಚ್ಚಿನ ಆಸಕ್ತಿವಹಿಸಿ ನೆರವಾಗಿದ್ದರು ಎಂಬುದು ಇಲ್ಲಿನ ಹಿರಿಯ ರಿಂದ ತಿಳಿದುಬರುತ್ತದೆ. ಶ್ರೀ ಕೃಷ್ಣಮಠದಲ್ಲಿ ಕೃಷ್ಣಾಷ್ಟಮಿ, ಅನಂತನ ವ್ರತ ನಡೆಯುವಂತೆ ಈ ಬೀಡಿನಲ್ಲಿಯೂ ಆಚರಣೆ ಇದೆ. ಈಗಲೂ ಅಂಬಲಪಾಡಿ (ಪಶ್ಚಿಮಾಲಯ) ಮತ್ತು ಚಿಟಾಡಿ (ಪೂರ್ವಾಲಯ) ಬೀಡುಗಳಿಗೆ ಭಾವೀ ಪರ್ಯಾಯ ಶ್ರೀಪಾದರು ಭೇಟಿ ನೀಡಿ, ಪರ್ಯಾಯ ಮಠದಿಂದ ರಾಯಸವನ್ನು ಕೊಡುವುದು ಪರಂಪರಾಗತವಾಗಿ ನಡೆದು ಬಂದಿದೆ.[೧೭] ಮಠದ ಪ್ರತಿಯೊಂದು ಕಾರ್ಯಕ್ರಮದಲ್ಲಿ ಈ ಎರಡೂ ಬೀಡುಗಳ ಬಲ್ಲಾಳರಿಗೆ ಗೌರವ ಸ್ಥಾನ ಇರುವದು. ಮಾಧ್ವಮತ ಪ್ರಚಾರಕ್ಕೆ ಈ ಬೀಡುಗಳು ಮಹತ್ತರ ಕೊಡುಗೆಯನ್ನು ನೀಡಿವೆ ಎಂದು ಹೇಳಬಹುದು.

ಬೀಡಿನ ಪೂಜಾಗ್ರಹದಲ್ಲಿ ಪೂಜೆಗೊಳ್ಳುವ ಇನ್ನೊಂದು ಮೂರ್ತಿಯು ದಶಭುಜೆ ಮಹಿಷಮರ್ದಿನಿಯದು. ಇದು "ಜೈನರ ಕಾಲದ್ದು" ಎಂಬುದಾಗಿ ಬಲ್ಲಾಳರು ಹೇಳುತ್ತಾರೆ. ಸು ೪೧/೨" ಎತ್ತರದ ಈ ಪಂಚಲೋಹದ ಪ್ರಾಚೀನವಾಗಿರುವ ಪ್ರತಿಮೆ ಅತೀ ಭವ್ಯ ಹಾಗೂ ಅಪೂರ್ವದ್ದಾಗಿದೆ. "ಮೇರು ಪರ್ವತ ಶ್ರೀಚಕ್ರದಲ್ಲಿ ಕೂರ್ಮದ ಮೇಲೆ ಶ್ರೀ ದೇವಿಯ ಪ್ರತಿಮೆ" ವೈಶಿಷ್ಟ್ಯ ಪೂರ್ಣವೆನಿಸಿದೆ.

ಚಿಟ್ಟುಪಾಡಿ ಬೀಡಿನ ಬಳಿಯಿರುವ ಶ್ರೀ ಶ್ರೀನಿವಾಸ ದೇವಾಲಯವು ಬೀಡಿನ ದೇವಾಲಯವಾಗಿದೆ. ಇದು ಸು. ೧೫-೧೬ನೇ ಶತಮಾನಕ್ಕೆ ಸೇರಿದುದಾಗಿದೆ[೧೮]. ಈ ದೇವಾಲಯ



ಸ್ಥಾಪನೆಯ ಕುರಿತಾದ ಐತಿಹ್ಯ ಹೀಗಿದೆ. ವೃದ್ಧಾಪ್ಯದ ದೆಸೆಯಿಂದ ತಿರುಪತಿ ಶ್ರೀನಿವಾಸ ದೇವರ ದರ್ಶನ ಮಾಡುವ ಆಸೆ ನೆರವೇರದ ಬಗ್ಗೆ ಬಲ್ಲಾಳರ ಪೂರ್ವಿಕರೊಬ್ಬರು ಚಿಂತಿತರಾಗಿ ಶ್ರೀನಿವಾಸ ದೇವರನ್ನು ಸ್ಮರಿಸಿದರು. ಸ್ವಪ್ನದಲ್ಲಿ ದೇವರು ದರ್ಶನವಿತ್ತು "ನೀನು ತಿರುಪತಿಗೆ ಹೋಗಲಾಗಲಿಲ್ಲ ಎಂದು ದುಃಖಿಸಬೇಡ, ನಾನು ಇಲ್ಲಿಯೇ ಬೀಡಿನ ಬಳಿ ಬಿದಿರು ಮೆಳೆಯ ಹುತ್ತದಲ್ಲಿ ವಾಸವಾಗಿ ದ್ದೇನೆ" ಎಂದು ಹೇಳಿ ದೇವಾಲಯ ನಿರ್ಮಾಣಕ್ಕೆ ಆಜ್ಞಾಪಿಸಿದರು. ಹುತ್ತದಲ್ಲಿ ದೊರಕಿದ ದೇವರ ಮೂರ್ತಿಯನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಯಿತು[೧೯]. ಸು. ೮೦ ಅಡಿ ಎತ್ತರದ ಧ್ವಜಸ್ತಂಭ, ಬಲಿಪೀಠ, ದೇಗುಲದೊಳಗೆ ತೀರ್ಥ ಮಂಟಪ, ಗರ್ಭಗುಡಿ, ಪ್ರದಕ್ಷಿಣಾಪಥ ಇವು ಈ ದೇಗುಲದಲ್ಲಿ ಕಂಡು ಬರುತ್ತವೆ. ತೀರ್ಥಮಂಟಪದ ಎದುರುಗಡೆಯ ಶಿಲಾಸ್ತಂಭದಲ್ಲಿ ಹನು ಮಾನ್ ಮತ್ತು ಗರುಡರ ಕೆತ್ತನೆಯಿದೆ. ಗರ್ಭಗುಡಿಯು ಚತುರಸ್ರ ವಾಗಿದ್ದು ಕಗ್ಗಲ್ಲಿನ ಎರಡು ನೆಲೆಯ ರಚನೆಯಾಗಿದೆ. ಇಂತಹದೇ ರೀತಿಯ ಗರ್ಭಗುಡಿಗಳು ಪರಿಸರದ ದೇವಾಲಯದಲ್ಲೂ ಇವೆ. (ಉದಾ: ಕನ್ನರಪಾಡಿಯ ಜಯ ದುರ್ಗಾ ಮತ್ತು ಕಡಿಯಾಳಿಯ ಮಹಿಷಮರ್ದಿನಿ ದೇವಾಲಯಗಳು) ಶ್ರೀದೇವಿ ಮತ್ತು ಭೂದೇವಿ ಸಹಿತವಾಗಿರುವ ಶ್ರೀನಿವಾಸ ಮೂರ್ತಿಯು ಏಕಶಿಲಾ ವಿಗ್ರಹ ವಾಗಿರುತ್ತದೆ. ಸು.೩೧/೨ ಎತ್ತರವಾಗಿರುವ ಈ ಮೂರ್ತಿಯು ಅತ್ಯಂತ ಸುಂದರವೂ, ಭವ್ಯವೂ ಆಗಿರುತ್ತದೆ. ಆಕರ್ಷಕವಾದ ಸೂಕ್ಷ್ಮ ಕೆತ್ತನೆ ಕೆಲಸದಿಂದ ಕೂಡಿರುವ ಪ್ರಭಾವಳಿಯು ನಯನ-ಮನೋಹರವಾಗಿದೆ. "ಮೂಲ ದೇವತೆ ಶ್ರೀನಿವಾಸ ಬಿಂಬವು ವಿಜಯನಗರ ಕಾಲದ ಮೊದಲ ಹಂತದ ಉತ್ತಮ ಶಿಲ್ಪ". ಭೂದೇವಿ ಮತ್ತು ಶ್ರೀದೇವಿಯರನ್ನು ಎರಡೂ ಪಾರ್ಶ್ವದಲ್ಲಿ

ಸೇರಿಸಿಕೊಂಡು ಸಮಭಂಗದಲ್ಲಿ ಶಂಖ, ಚಕ್ರ, ಅಭಯ, ಮತ್ತು ಕಟ್ಯವಲಂಬಿತವಾಗಿ ನಿಂತಿರುವ ಮೂರ್ತಿಯು ಲಾವಣ್ಯಮಯವಾಗಿದೆ[೨೦]. ದೇವರ ಮೂರ್ತಿಯ ಬಲಭಾಗದಲ್ಲಿ ಇರುವ ಐದು ಹೆಡೆಯ ನಾಗನ ಶಿಲಾವಿಗ್ರಹವು ಇಲ್ಲಿನ ಒಂದು ವೈಶಿಷ್ಟ್ಯವಾಗಿದೆ[೨೧].



ಅಕ್ಷಯ ತದಿಗೆಯ ದಿನ ಧ್ವಜಾರೋಹಣ ಪ್ರಾರಂಭವಾಗಿ ಒಟ್ಟು ೯ ದಿನಗಳವರೆಗಿನ ಜಾತ್ರೆಯು ಇಲ್ಲಿ ಜರಗುತ್ತದೆ. ಷಷ್ಠಿಯ ದಿನ ಅನ್ನ ಸಂತರ್ಪಣೆ ಇರುತ್ತದೆ. ಶ್ರಾವಣ ಮಾಸದಲ್ಲಿ 'ಸೋಣಾರತಿ' ಮತ್ತು ಕಾರ್ತಿಕ ಮಾಸದಲ್ಲಿ ದೀಪೋತ್ಸವ ನೆಡೆಯುತ್ತದೆ, ಶ್ರಾವಣ ಮಾಸದಲ್ಲಿ ಎಳನೀರಿನ ಅಭಿಷೇಕ ಮತ್ತು ಸಿಂಹ ಮಾಸದಲ್ಲಿ (ಸೋಣತಿಂಗಳು) 'ಅಪ್ಪದಪೂಜೆ' ಈ ದೇವರಿಗೆ ಪ್ರಿಯವಾದ ವಿಶೇಷ ಸೇವೆಗಳು. ಶನಿವಾರದ ದಿನದಂದು "ಸಂಕಟಹರಣ ಶ್ರೀನಿವಾಸ' ಎಂಬ ನಂಬಿಕೆಯಿಂದ ಆಸ್ತಿಕ ಭಕ್ತಜನರನೇಕರು ಶ್ರೀ ದೇವರ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದನ್ನು ಕಾಣಬಹುದಾಗಿದೆ.

ತುಳುನಾಡಿನಲ್ಲಿ ಇಂದಿಗೂ ಕಂಡುಬರುತ್ತಿರುವ ಮತೀಯ ಸೌಹಾರ್ದತೆ ಹಾಗೂ ವಿವಿಧ ಆರಾಧನಾ ಸಂಪ್ರದಾಯಗಳ ಸಮನ್ವಯಕ್ಕೆ ಪರಂಪರೆಯಂತೆ ಚಿಟ್ಟುಪಾಡಿ ಬೀಡಿನ ಬಲ್ಲಾಳರು ಮಹತ್ತರ ಕೊಡುಗೆಯನ್ನು ನೀಡಿರುವುದು ಇಲ್ಲಿನ ನೆಲದ ಗುಣವೆನ್ನಬಹುದು. ೭-೮ನೆಯ ಶತಮಾನದಲ್ಲಿ ಶಿವಳ್ಳಿ ಕ್ಷೇತ್ರದಲ್ಲಿ ಬ್ರಾಹ್ಮಣ್ಯವು ನೆಲೆವೂರಿದ್ದು ಉತ್ತರದ ಕಾಶಿನಗರದಷ್ಟೇ ಪವಿತ್ರವಾಗಿ ಈ ಕ್ಷೇತ್ರ ಬೆಳೆದಿತ್ತು. ಶಿವನೊಂದಿಗೆ ಶಕ್ತಿ. ವಿನಾಯಕ, ಸುಬ್ರಹ್ಮಣ್ಯ ಹಾಗೂ ಸೂರ್ಯಾರಾಧನೆ ಇಲ್ಲೆಲ್ಲಾ ನೆಲೆವೂರಿತ್ತು"[೨೨] ಶಂಕರಾಚಾರ್ಯರ ಪ್ರಭಾವದೊಂದಿಗೆ ಶೈವ ಪಂಥ ಇಲ್ಲೆಲ್ಲಾ ನೆಲೆವೂರಿತು. ಮಧ್ವಾಚಾರ್ಯರ ವೈಷ್ಣವ ಪಂಥದ ಪ್ರಚಾರದ ಪ್ರಭಾವದಿಂದ ಶಿವಳ್ಳಿಯ ಬ್ರಾಹ್ಮಣರನೇಕರು ವೈಷ್ಣವರಾದರು. ಉಡುಪಿಯಲ್ಲಿ ಶ್ರೀಕೃಷ್ಣದೇವಾಲಯ ಸ್ಥಾಪನೆಗೆ ಮೂಡಲ ಚಿಟ್ಟುಪಾಡಿನ ಬಲ್ಲಾಳರು ಪ್ರಮುಖಪಾತ್ರವನ್ನು ವಹಿಸಿದರು. ಶ್ರೀಕೃಷ್ಣ, ವಿಷ್ಣುಮೂರ್ತಿ, ಮತ್ತು ಶ್ರೀನಿವಾಸ ದೇವರ ಆರಾಧನೆಯೂ ಇಲ್ಲಿ ನೆಲೆಗೊಂಡಿತ್ತು.ತುಳುನಾಡಿನ ಜನರು ಶೈವ-ವೈಷ್ಣವ ಭೇದವನ್ನೆಸಗದೆ ದೇವ ದರ್ಶನ ಮಾಡುವುದನ್ನು ಈಗಲೂ ಕಾಣಬಹುದು. ತುಳುನಾಡಿನ ಜನಪದ ಪರಂಪರೆಯ ಭೂತ ಕೋಲ, ನೇಮ[೨೩] ನಾಗಾರಾಧನೆ, ಹಾಗೂ ಕಂಬಳ ಇತ್ಯಾದಿ ಕ್ರೀಡೆಗ ಬಲ್ಲಾಳರು ಪ್ರಾಶಸ್ತ್ಯ ನೀಡಿ ಸಂಪ್ರದಾಯ ಪರಂಪರೆಯ ಮುಂದುವರಿಕೆಗೆ ಪ್ರೋತ್ಸಾಹವನ್ನು ನೀಡಿರುತ್ತಾರೆ. ಬೀಡಿನ ಪರಿಸರದಲ್ಲಿ ನಾಗಬ್ರಹ್ಮ ಮತ್ತು ರಕ್ತೇಶ್ವರಿ, ವಾರಾಹಿ, ಮೈಸಂದಾಯ, ಧೂಮಾವತಿ ಕಲ್ಕುಡ ದೈವಗಳು ನೆಲೆಸಿವೆ[೨೪]. ಸಂಕ್ರಮಣ ದಿನ ತೆಂಗಿನಕಾಯಿ - ಅವಲಕ್ಕಿ ಹಾಗೂ ಭೂತಗಳಿಗೆ ರಕ್ತಾಹಾರದ ಬದಲು ಸಾತ್ವಿಕರೀತಿಯಲ್ಲಿ ಮಾಷಭಕ್ಷ್ಯದ ಭೋಗ[೨೫] ಆಚರಣೆಯನ್ನು ಮಾಡುತ್ತಾರೆ. ಜೈನರಿಂದ ಅಧಿಕಾರ ಪಡೆದ ಬ್ರಾಹ್ಮಣರು ಬಲ್ಲಾಳ ಪಟ್ಟಬಂಧವನ್ನು ಅನುಸರಿಸದಿದ್ದರೂ, ಇತರ ಸಂಪ್ರದಾಯ ಪರಂಪರೆಗಳನ್ನು ನಿರ್ಲಕ್ಷಿಸದಿರುವುದು ಕಂಡು ಬರುತ್ತದೆ.

ಸು.೮ ಶತಮಾನ ಕಾಲದ ಹಿಂದಿನಿಂದಲೂ ಈ ಬಳ್ಳಾಲ ಬೀಡಿನ ನಿರ್ವಹಣೆಮಾಡಿಕೊಂಡು ಬಂದಿರುವ ಮೂಡಿಲ್ಲಾಯ ಬ್ರಾಹ್ಮಣ ಮನೆತನದವರು ಇಲ್ಲಿನ ಜನರ ಗೌರವ-ಪ್ರೀತ್ಯಾದರಗಳಿಗೆ ಪಾತ್ರರಾಗಿರುವುದು ಬೀಡಿನ ಹಿರಿಮೆಗೆ ಸಾಕ್ಷಿಯೆನ್ನಬಹುದು. ಭೂಮಸೂದೆಯಿಂದಾಗಿ ಹೆಚ್ಚಿನ ಭೂಮಿಯು ವಕ್ಕಲುಗಳ ಪಾಲಾದರೂ, ಬೀಡಿಗೆ ಸಂಬಂಧಿಸಿದ ಪರಂಪರಾಗತ ಉತ್ಸವ-ಆಚರಣೆಗಳನ್ನು ಮನೆತನದ ಕುಲಬಾಂಧವರು ಹಾಗೂ ಊರ ಜನರ ಸಹಕಾರ-ನೆರವಿನಿಂದ ಶ್ರದ್ಧೆವಹಿಸಿ ಈ ಐತಿಹಾಸಿಕ ಬೀಡಿನ ಬಲ್ಲಾಳರು ನಡೆಸಿಕೊಂಡು ಬರುತ್ತಿದ್ದಾರೆ.

(ಈ ಸಂಪ್ರಬಂಧ ಬರೆಯಲು ಮಾರ್ಗದರ್ಶನ ನೀಡಿದ ಡಾ||ಪಿ.ಎನ್. ನರಸಿಂಹಮೂರ್ತಿಯವರಿಗೂ ಮಾಹಿತಿ ನೆರವು ನೀಡಿದ ಬೀಡಿನ ಬಳ್ಳಾಲರಾಗಿರುವ ಡಾ||ಸಿ. ಗೋಪಾಲಕೃಷ್ಣ ಬಳ್ಳಾಲರಿಗೂ, ಇತರ ಮಾಹಿತಿದಾರರಿಗೂ ನನ್ನ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ತುಳು ಕರ್ನಾಟಕ ಅರಸು ಮನೆತನಗಳು.**, (೨೦೦೦) (ಸಂ) ಹೆರಂಜೆ ಕೃಷ್ಣಭಟ್ ಮತ್ತು ಡಾ|| ಎಸ್.ಡಿ. ಶೆಟ್ಟಿ, ಪು. VII.
೨. ಡಾ|| ಪಿ. ಎನ್. ನರಸಿಂಹಮೂರ್ತಿ., 'ಅಳುಪರು ಒಂದು ಸಂಕ್ಷಿಪ್ತ ಅವಲೋಕನ' - **ತುಳು ಕರ್ನಾಟಕ ಅರಸು ಮನೆತನಗಳು** ಪು.೮.
೩. ಕೆ. ನಾರಾಯಣ ನಾಯಕ್, 'ಕುಳೂರು ಮಾಗಣೆಯ ಇತಿಹಾಸ - ಒಂದು ಅವಲೋಕನ', ಇತಿಹಾಸದರ್ಶನ, ಸಂ. ೧೬/೨೦೦೧. ಪು. ೨೧೯. ಮಾಗಣೆ ಬಲ್ಲಾಳರ ಪಟ್ಟಬಂಧ ಮಹೋತ್ಸವ, ಸಂಪ್ರದಾಯ ವಿವರಗಳಿಗೆ ನೋಡಿ.

೪. ಗಣಪತಿರಾವ್ ಐಗಳ್., (೧೯೨೩), **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ**, ಪು. ೪೧೯.

೫. ಚಿಟ್ಪುಪಾಡಿ- ಸಣ್ಣ ಊರು, (ಚಿಟ್ಟು - ಸಣ್ಣ, ಪಾಡಿ-ಮರ,ಗಿಡ,ಪೊದೆಗಳಿಂದ ಕೂಡಿದ ಸಮತಟ್ಟಾದ ಪ್ರದೇಶ, ಸ್ಥಳನಾಮಘಟಕ) -ಕನ್ನರಪಾಡಿ, ಅಂಬಲಪಾಡಿ,ಕಟ್ಪಪಾಡಿ-ಇಲ್ಲಿ ಸನಿಹದ ಊರುಗಳು.

೬. ಲಕ್ಷ್ಮೀತೀರ್ಥ - ಶ್ರೀನಿವಾಸ ದೇವಾಲಯಕ್ಕೆ ಸಂಬಂಧಿಸಿದ ಕೆರೆ.

೭. ನಾಗಬನ - ತುಳುನಾಡಿನಲ್ಲಿ ಬೀಡು, ಗುತ್ತು ಮನೆಗಳಲ್ಲಿ ನಾಗಬನಗಳು ಸರ್ವಸಾಮಾನ್ಯವಾಗಿವೆ. ಅಂತೆಯೇ ಕುಟುಂಬದ ಒರಿಯರ ಮನೆಯ ಪರಿಸರದಲ್ಲೂ ಇವೆ. ಚಿಟ್ಪುಪಾಡಿ ಬೀಡಿನ ನಾಗಬನ ಮತ್ತು ಇತರ ಕಡೆಗಳಲ್ಲೂ ೫-೬ ಅಡಿ ಉದ್ದದ ನಾಗರ ಸರ್ಪಗಳು ಹರಿದಾಡಿಕೊಂಡಿರುವುದನ್ನು ಕಾಣಬಹುದಾಗಿದೆ. (ನಾಗತಂಬಿಲ, ಆಶ್ಲೇಷಾಬಲಿ, ನಾಗಮಂಡಲ ಇತ್ಯಾದಿ ನಾಗಸಂಬಂಧ ಧಾರ್ಮಿಕ ಆಚರಣೆಗಳು ತುಳುನಾಡಿನಲ್ಲಿ ಸರ್ವಸಾಮಾನ್ಯವಾಗಿವೆ.)

೮. ಶಾಸನಗಳು ತ್ರುಟಿತವಾಗಿದ್ದು, ದಾನ ಶಾಸನಗಳಾಗಿರಬಹುದೆಂಬ ಅಭಿಪ್ರಾಯ ಮಾಡಲಾಗಿದೆ.

೯. Bhaskara Ananda Saletore., (1936), *History of Tuluva* p.8 &p 306-7...Citupadi and Nidamburu were the pakshanathas.....The pakshanathas were to stand up and address themselves To the Vidvat Mahajanas (ie, the General Assembly of the wise)....And the General Assembly To say "so be it "....to give opinion on the case under discussion. The King has to give final decision.

೧೦. ಅದೇ., ಪು. ೩೦೭.

೧೧. ಅದೇ., ಪು. ೩೩೮.

೧೨. ದೇವರ ಗುಂಡ ಮಠ ಮತ್ತು ಹಳೆಯ ಮನೆಗಳಲ್ಲಿ ಕಂಡು ಬರುವ ಪ್ರತ್ಯೇಕ ಪೂಜಾಗ್ರಹಗಳು, (ಬಹುಶಃ ಪಾವಿತ್ರ್ಯದ ಕಲ್ಪನೆಯಿಂದ ಇಂತಹ ಪ್ರತ್ಯೇಕವಾದ ಪೂಜಾಗ್ರಹ ನಿರ್ಮಾಣ ಇದ್ದಿರಬಹುದು.)

೧೩. ಕಂಬಳ-ತುಳುನಾಡಿನಲ್ಲಿರುವ ಐತಿಹಾಸಿಕ ಜಾನಪದ ಕ್ರೀಡೆ. ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವ ಸಂಭ್ರಮದ ಕ್ರೀಡೆ. ಅರಸರು, ಬೀಡಿನ ಬಳ್ಳಾಲರು ಕಂಬಳಕ್ಕೆ ಪ್ರೋತ್ಸಾಹ ನೀಡುತ್ತಿದ್ದರು.

೧೪. ಊರಿನ ಜನ ಪ್ರಮುಖರು ಬೀಡಿಗೆ ಬಂದು ಕಂಬಳ ಕೋಲ ನಡೆಯುವ ಸ್ಥಳಕ್ಕೆ ಬಳ್ಳಾಲರನ್ನು ಕರೆದುಕೊಂಡು ಹೋಗುತ್ತಾರೆ. (ಹಿಂದೆ ಪಲ್ಲಕ್ಕಿಯಲ್ಲಿ ಕೂರಿಸಿ ಕರೆದೊಯ್ಯುತ್ತಿದ್ದರು) ಬಳ್ಳಾಲರಿಗೆ ಕೂತುಕೊಳ್ಳಲು ಪ್ರತ್ಯೇಕ ಆಸನ ವ್ಯವಸ್ಥೆಯಿತ್ತು. (ಉದಾ- ಬಳ್ಳಾಲಕಟ್ಟೆ) ನೋಡಿ. 'ಕುಳೂರು ಮಾಗಣೆಯ ಇತಿಹಾಸ' -ಒಂದು ಅವಲೋಕನ, (ಪೂರ್ವೋಕ್ತ ಕ್ರ.ಸಂ. ೩).

೧೫. ಇಂದಿಗೂ ಪರ್ಯಾಯ ಪೀಠವನ್ನೇರುವ ಶ್ರೀಪಾದರು ಬೀಡಿಗೆ ಭೇಟಿಯನ್ನು ನೀಡಿ ಶ್ರೀಲಕ್ಷ್ಮೀನಾರಾಯಣ ದೇವರಿಗೆ ಪೂಜೆ ಸಲ್ಲಿಸುವ ಪರಿಪಾಠ ಇರುತ್ತದೆ.

೧೬. ಈ ಬೀಡಿನಲ್ಲಿ ಅತಿಥಿಗಳಿಗೆ "ಹಾಲನ್ನು ನೀಡುವ" ಸತ್ಸಂಪ್ರದಾಯ ಇದ್ದು, ಇದು ಹಿಂದಿನಿಂದಲೂ ಈ ಮನೆತನದಲ್ಲಿದೆ. "ಹಾಲಿಗೆ ಇಲ್ಲಿಕೊರತೆ ಬಂದಿಲ್ಲ" ಎಂಬ ಪ್ರತೀತಿಯಿದೆ.

೧೭. 'ಮಟಪಾಡಿ ಕುಮಾರಸ್ವಾಮಿ - ಪರ್ಯಾಯ ಉತ್ಸವದ ವಿಧಿವಿಧಾನ' - **ಉದಯವಾಣಿ**, ಉಡುಪಿ ಪರ್ಯಾಯೋತ್ಸವದ ವಿಶೇಷ ಪುರವಣಿ (ದಿನಾಂಕ ೧೮-೦೧-೨೦೦೪.)

೧೮. ಡಾ।। ಪಿ. ಗುರುರಾಜ ಭಟ್ಟ., (೧೯೩೧), **ಉಡುಪಿ ಇತಿಹಾಸ**, ಪು. ೮೬.

೧೯. ಶ್ರೀಮತಿ ಕೃತಿಲತಾ ಎಂ.ಕಲ್ಲೂರಾಯ ಚಿಟ್ಪಾಡಿ - ಚಿಟ್ಪಾಡಿಯ ಶ್ರೀ ಶ್ರೀನಿವಾಸ ದೇವಸ್ಥಾನ.

೨೦. ಡಾ।। ಪಿ. ಗುರುರಾಜಭಟ್ಟ - ಪೂರ್ವೋಕ್ತ - ಪು.೮೭.

೨೧. ತುಳುನಾಡಿನ ದೇವಾಲಯಗಳ ಹೊರಗಡೆ ಪ್ರತ್ಯೇಕವಾಗಿ ನಾಗನ ಶಿಲೆಗಳು ಕಂಡುಬರುತ್ತವೆ. ದೇವರ ಮೂರ್ತಿಯ ಬಳಿ, ಗರ್ಭಗುಡಿಯಲ್ಲಿ ಕಂಡುಬರುವುದು ಅಪರೂಪದ ವಿಚಾರ.

೨೨. ಡಾ।। ಪಿ. ಎನ್. ನರಸಿಂಹಮೂರ್ತಿ, **ದಕ್ಷಿಣ ಕನ್ನಡದ ದೇವಾಲಯಗಳು** (ಪೀಠಿಕೆ)

೨೩. ಭೂತದ ಕೋಲ - ತುಳುನಾಡಿನಲ್ಲಿ ಭೂತಗಳಿಗೆ ವರ್ಷಾವಧಿ ಆರಾಧನೆಯ ಅಥವಾ ಹರಕೆಯ ರೂಪದಲ್ಲಿ ನಡೆಯುವ ವೈಭವೋಪೇತ ಉತ್ಸವದ ಆಚರಣೆ. ಮೊದಲು ಭೂತಪಾತ್ರಿಯ ಮೇಲೆ ಆವೇಶ - ಭೂತ ಪಾತ್ರಿ ಮತ್ತು ಭಕ್ತರ ನಡುವೆ ಸಂಭಾಷಣೆ. ನಂತರ ಭೂತಕ್ಕೆ ನಿಗದಿಯಾದ ಮುಖ ಅವತರಣಿಕೆ, ಶಿರೋಭೂಷಣ, ಪ್ರಭಾವಳಿ ರೂಪದ ಅಣಿ ಧರಿಸಿ ಭೂತದ ಕಲಾವಿದನ ನರ್ತನ, ನರ್ತಕನು ಕೊನೆಗೆ ಮೈಮೇಲೆ ಭೂತವನ್ನು ಆವಾಹಿಸಿಕೊಂಡು ದೈವ ಮಾನವ ಸಂಭಾಷಣೆ -ಭಕ್ತರ ಶಾರೀರಿಕ, ಮಾನಸಿಕ ಮತ್ತು ಸಾಮಾಜಿಕ ಅಹವಾಲುಗಳನ್ನು ವಿಚಾರಿಸಿ ಪರಿಹಾರ ಹೇಳುತ್ತಾನೆ. (ತುಳು ನಿಘಂಟು)

೨೪. ತುಳುನಾಡಿನಲ್ಲಿ ಸಾವಿರಾರು ಭೂತದೈವಗಳ ಸ್ಥಾನಗಳಿವೆ. ಭೂತ (ಬೂತ) ಎಂದರೆ ದೈವ, ತುಳುನಾಡಿನಲ್ಲಿ ಆರಾಧನೆಗೊಳ್ಳುತ್ತಿರುವ ಶಕ್ತಿ, ರಕ್ಷಕದೈವ, ಅಲೌಕಿಕಶಕ್ತಿ, ಪ್ರಾಣಿ, ಪ್ರತಿಮೂರ್ತಿಶಕ್ತಿ, ಮೃತಾತ್ಮರಾದ ಸಾಂಸ್ಕೃತಿಕ ವೀರರು, ಪುರಾಣದ ಕೆಲವು ಅಲೌಕಿಕ ಶಕ್ತಿಗಳು ಭೂತವಾಗಿ ಪರಿಣಮಿಸುತ್ತವೆ. (ತುಳು ನಿಘಂಟು ೧೯೯೭) ಹೆಚ್ಚಿನ ವಿವರಗಳಿಗೆ ಡಾ।। ಬಿ.ಎ. ವಿವೇಕ ರೈ ಇವರ **ತುಳು ಜನಪದ ಸಾಹಿತ್ಯ** (೧೯೮೬); ಅಮೃತ ಸೋಮೇಶ್ವರ ಇವರ **ತುಳುಪಾಡ್ದನ ಸಂಪುಟ**., (೧೯೯೭), ಮತ್ತು ಡಾ।। ಕೆ. ಚಿನ್ನಪ್ಪಗೌಡ, **ಭೂತಾರಾಧನೆ - ಜಾನಪದೀಯ ಅಧ್ಯಯನ**., (೧೯೯೦), ಭೂತಾರಾಧನೆ ತುಳುನಾಡಿನ ಅರಸರು, ಬಲ್ಲಾಳರ ಕಾಲದಿಂದಲೂ ಪರಂಪರಾಗತವಾಗಿ ಆಚರಣೆಯಲ್ಲಿದೆ.

೨೫. ಮಾಷಭಕ್ಷ್ಯ - ಉದ್ದಿನ ದೋಸೆ ಇತ್ಯಾದಿ. ಹೆಚ್ಚಿನ ಭೂತಗಳಿಗೆ ರಕ್ತಾಹಾರವೇ ಬೇಕಾಗುತ್ತದೆ. ಆದರೆ ಬ್ರಾಹ್ಮಣರು ಸಸ್ಯಾಹಾರಿಗಳಾಗಿಯೂ, ಅಹಿಂಸಾವಾದಿಗಳೂ ಆಗಿರುವುದರಿಂದ ಸಾತ್ವಿಕ ಆಹಾರವನ್ನು ಸಲ್ಲಿಸುತ್ತಾರೆ (ಹೆಚ್ಚಿನ ಮಾಹಿತಿಗೆ ಪೂರ್ವೋಕ್ತ ಸಂ. ೨೪ರಲ್ಲಿ ಸೂಚಿಸಿದ (ಗ್ರಂಥಗಳಲ್ಲಿ ನೋಡಬಹುದು)

(**ಮಾಹಿತಿ ನೀಡಿದವರು** : ಡಾ. ಸಿ. ಗೋಪಾಲಕೃಷ್ಣಬಲ್ಲಾಳರು, ಚಿಟ್ಪಾಡಿ ಬೀಡು, ಶ್ರೀ ಕೃಷ್ಣರಾಜ ಬಲ್ಲಳರು "ನೇತ್ರ" ಚಿಟ್ಪಾಡಿ, ಶ್ರೀ ಗುರುರಾಜ ಭಟ್ಟರು, ಅರ್ಚಕರು ಶ್ರೀ ಶ್ರೀನಿವಾಸ ದೇವಾಲಯ ಚಿಟ್ಪಾಡಿ, ಶ್ರೀ ಸದಾಶಿವ - ಚಿಟ್ಪಾಡಿ, ೭೬ ಬಡಗಬೆಟ್ಟು ಗ್ರಾಮ.)

ಡಾ. ವಿ.ಕೆ. ದ್ಯಾಮನಗೌಡ*

ದಂಬಳದ ಜಪದ ಬಾವಿ

ಚ‘ತುಸಮಯ’ಗಳ ನೆಲೆವೀಡೆಂದು ಕರೆಯಿಸಿಕೊಳ್ಳುವ ‘ಡಂಬಳ’ ಗದಗ ಜಿಲ್ಲೆಯ ಮುಂಡಗರಿ ತಾಲೂಕಿನ ಚಿಕ್ಕ ಗ್ರಾಮ. ಇದು ಶಾಸನಗಳಲ್ಲಿ ಧರ್ಮಪೊಳಲೆಂಬ ಮಹಾಪಟ್ಟಣಂ[೧], ಮಹಾನಗರ ಧರ್ಮಪುರ[೨], ಧರ್ಮೋಳ್[೩], ಧಮವೊಳಲ್[೪] ಎಂಬ ರೂಪಗಳಲ್ಲಿ ಕಾಣಿಸಿಕೊಂಡಿದ್ದು, ಉಚ್ಚರಣಾ ಸೌಲಭ್ಯ ದಿಂದಾಗಿ ‘ಡಂಬಳ’ವಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದು ಮಹಾನಗರವಾಗಿತ್ತು[೫]. ಮಹಾಪಟ್ಟಣ ವಾಗಿತ್ತು[೬], ಮಾಸವಾಡಿ-೧೪೦ಕ್ಕೆ ರಾಜಧಾನಿಯಾಗಿತ್ತು[೭] ಎಂಬುದು, ಕ್ರಿ.ಶ. ೧೧೮೪ರ ಶಾಸನ ‘ಮಾಸವಾಡಿನಾಡೊಳು ಧರ್ಮಪುರ ತಾ ವಸುಮತಿ ತೊಟ್ಟ ಹಾರದೊಲಿರುವದು’ ಎಂದು ಉಲ್ಲೇಖಿಸುತ್ತದೆ[೮]. ಇಲ್ಲಿ ಚತುಸಮಯಗಳಲ್ಲೊಂದಾದ ಬೌದ್ಧ ಧರ್ಮದ ಅಸ್ತಿತ್ವ ಇತ್ತೆಂದು ಡಾ. ಎಚ್. ಆರ್. ರಘುನಾಥ ಭಟ್ಟ ಅವರು ಇತ್ತೀಚೆಗೆ ಶೋಧಿಸಿದ್ದಾರೆ[೯].

ಈ ಗ್ರಾಮವನ್ನು ಅನ್ವೇಷಣೆಗೆ ಒಳಪಡಿಸಿದಾಗ ಚಾಲುಕ್ಯರ ಕಾಲದ ಗತವೈಭವ ಸಾರುವ ದೊಡ್ಡಬಸಪ್ಪ (ಸ್ವಯಂಭೂ ಶಿವಾಲಯ), ಸೋಮೇಶ್ವರ (ಮೈಳಬೇಶ್ವರ), ಕಲ್ಮೇಶ್ವರ (ಸಿದ್ದೇಶ್ವರ), ಮುಂತಾದ ದೇವಾಲಯಗಳು, ತೋಂಟದಮಠ, ಕೇವಲ ಪಳೆಯುಳಿಕೆಯಾಗಿ ಉಳಿದಿರುವ ಬೌದ್ಧ ವಿಹಾರ, ತಾರಾಭಗವತಿ ಮಂದಿರ, ಇವೆಲ್ಲಕ್ಕೂ ಮುಖ್ಯವಾಗಿ ಅವಸಾನ ದತ್ತ ಸಾಗಿರುವ ಸುಂದರ **ಜಪದ ಬಾವಿ**, ಅಂದಿನ ಭವ್ಯ ಇತಿಹಾಸಕ್ಕೆ ಮುಖ್ಯ ಸಾಕ್ಷಿಗಳಾಗಿವೆ. ಕರ್ನಾಟಕ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನವು ತಕ್ಕಮಟ್ಟಿಗೆ ನಡೆದಿದೆ[೧೦]ಯಾದರೂ, ಇಂತಹ ಅವಶೇಷಗಳ ಸಮಗ್ರ ಅಧ್ಯಯನ, ರಕ್ಷಣೆ ಮತ್ತು ಶೋಧನೆಗಳಾಗಬೇಕಾಗಿದೆ.

ಡಂಬಳ ಕೆರೆಗೆ (ಗೋಣ ಸಮುದ್ರಕ್ಕೆ) ಹೋಗುವ ಮಾರ್ಗದಲ್ಲಿ ಎಸ್.ಬಿ. ಪಟ್ಟಣಶೆಟ್ಟಿಯವರ ತೋಟದಲ್ಲಿ ಚಾಲುಕ್ಯ ಶೈಲಿಯ, ಸರಳ ಕೆತ್ತನೆಯ ಶಿಥಿಲಾವಸ್ಥೆಯ ಸಿದ್ದೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ನವರಂಗ ಗಳಿದ್ದು, ದೇವಾಲಯದ ಬಹುತೇಕ ಭಾಗಗಳು ಬಿದ್ದು ಹೋಗಿವೆ. ಇದರ ಪಕ್ಕದಲ್ಲಿರುವುದೇ ಚಾಲುಕ್ಯ ಶೈಲಿಯಲ್ಲಿ ನಿರ್ಮಿತವಾಗಿರುವ ಜಪದ ಬಾವಿ. ವಿಶಾಲವಾದ ನಿವೇಶನ ದಲ್ಲಿರುವ ಇದು ೭೬ ಅಡಿ ಉದ್ದ, ೩೨ ಅಡಿ ಅಗಲ, ೨೪ ಅಡಿ ಆಳವಾಗಿದೆ. ರಚನೆಯಲ್ಲಿ ಲಕ್ಕುಂಡಿಯ ಚಾಲುಕ್ಯ ಕಾಲದ ಚಪ್ಪರದ (ಮುಸುಕಿನ) ಬಾವಿಯನ್ನು ಮತ್ತು ಬಂಕಾಪುರದ ಸೋಪಾನದ (ಕಳ್ಳರ) ಬಾವಿಯನ್ನು ಹೋಲುತ್ತದೆ[೧೧]. ಇದೊಂದು ಪರಿಪೂರ್ಣವಾದ ಕಲ್ಲಿನ ಕಟ್ಟಡವಾಗಿದ್ದು, ಅಚ್ಚುಕಟ್ಟಾಗಿ ನಿಯೋಜಿಸಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಕಪ್ಪು ಮಿಶ್ರಿತ ನೀಲಿಛಾಯೆಯ ಮೃದುಶಿಲೆಯನ್ನು (Chloritic Schirt)ನ್ನು ಬಳಸಲಾಗಿದೆ. ದೀರ್ಘ ಚತುರಸ್ರಾಕಾರ ದಲ್ಲಿ ರಚಿಸಲ್ಪಟ್ಟಿರುವ ಬಾವಿಯ ಒಳ ಪ್ರವೇಶಿಸಲು ಪೂರ್ವ ದಿಕ್ಕಿನಲ್ಲಿ, ನೀರಿನ ಮಟ್ಟಕ್ಕೆ ಇಳಿದು ಹೋಗಲು ಪಾವಟಿಗೆಗಳನ್ನು ನಿರ್ಮಿಸಲಾಗಿದೆ. ಬಾವಿಯ ಒಳಭಾಗದಲ್ಲಿ ೪ ಅಡಿ ಅಗಲ, ೪ ಅಡಿ ಉದ್ದ ಮತ್ತು ೪ ಅಡಿ ಎತ್ತರದಾಕೃತಿಯಲ್ಲಿ ೧೯ ಜಪಮಂಟಪ (ಗೂಡು)ಗಳನ್ನು ರಚಿಸಲಾಗಿದೆ. ಇವುಗಳ ಆಧಾರದ ಮೇಲಿಂದ ಇದು ೧೨ನೆಯ ಶತಮಾನದ ರಚನೆಯೆಂಬುದು ಸ್ಪಷ್ಟವಾಗುತ್ತದೆ. ಈ ಬಾವಿಯಲ್ಲಿ ಶಾಸನವೊಂದು ದೊರೆತಿದ್ದು, ಅದರ ಪೂರ್ಣಪಾಠ ಈ ರೀತಿ ಇದೆ.

> “ಶ್ರೀ ಈ ಗ್ರಾಮದ ತಳರನಾ
> ಮನೋರ್ವಂ ಇ ತೋಂಟದ ಬಾ
> ಡು ಕಾಯಿ ಎಲೆ ಅಡಿಕೆಯಂ.
> ಕೊಂಡನಪ್ಪಡೆ ಸಾಸಿರ ಕ
> ವಿಲೆಯ ಕೊಂದ ಮಹಾಪಾ
> ತಕನಕು ಇದಂ ತಳಾರ ರ
> ಕ್ಷಿಸುವುದು.[೧೨]”

ಅಂದರೆ ‘ಈ ತೋಟದ ಎಲೆ-ಅಡಿಕೆ-ಬಾಡು-ಕಾಯಿಗಳ ಉತ್ಪನ್ನವನ್ನು ಯಾವ ತಳವಾರನೂ ಸ್ವೀಕರಿಸಕೂಡದು. ಸ್ವೀಕರಿಸಿದ್ದಾದರೆ, ಸಾವಿರ ಗೋವುಗಳನ್ನು ಕೊಂದ ಮಹಾಪಾಪ ಬರುವುದು, ಇದನ್ನು ತಳವಾರನು ರಕ್ಷಿಸುವುದು” ಎಂದು ಉಲ್ಲೇಖಿಸುತ್ತದೆ. ಇದು ೧೨ನೆಯ ಶತಮಾನದ ಲಿಪಿಯೆಂದು ಗುರುತಿಸಲಾಗಿದೆ[೧೩].

ಈ ಬಾವಿಯ ರಚನೆಯು ಸ್ನಾನ ಮಾಡಲು ತುಂಬಾ ಅನುಕೂಲಕರವಾಗಿದೆ. ಇಲ್ಲಿ ಸ್ನಾನ ಮುಗಿಸಿದ ಶೈವಯತಿಗಳು, ಇಲ್ಲಿಯ ಜಪ ಮಂಟಪಗಳಲ್ಲಿ ಕುಳಿತು ಜಪ ಮಾಡುತ್ತಿದ್ದರೆಂದು, ಆದ್ದರಿಂದಲೇ ಇದಕ್ಕೆ ‘ಜಪದ ಬಾವಿ’ ಎಂದು ಹೆಸರು ಬರಲು ಕಾರಣವಾಯಿತೆಂದು ತಿಳಿಯುತ್ತದೆ. “ಇಲ್ಲಿಯ ಜಪ ಮಂಟಪಗಳಲ್ಲಿ ಬೌದ್ಧ ಸನ್ಯಾಸಿಗಳು ಜಪ ಮಾಡುತ್ತಿದ್ದರೆಂದು,

* ಇತಿಹಾಸ ಉಪನ್ಯಾಸಕರು, ಬಸವೇಶ್ವರ ಕಾಲೇಜು, ಗದಗ.



ಅವರು ಇಲ್ಲಿ ನೆಲೆಸಿದ್ದರೆಂದು, ಅವರ ದರ್ಶನ ಪಡೆಯಲು ಸಾಮ್ರಾಟ ಅಶೋಕನು ಬರುತ್ತಿದ್ದನೆಂದು" ಮಹಾಲಿಂಗ ಯಾಳಗಿಯವರು ಉಲ್ಲೇಖಿಸುತ್ತಾರೆ[೧೪]. ಆದರೆ ಇದು ಅಸಾಧ್ಯ, ಕಾರಣ ಈ ಬಾವಿಯ ವಾಸ್ತು ರಚನೆ ಕ್ರಿ.ಶ. ೧೨ನೆಯ ಶತಮಾನವಾಗಿದ್ದರಿಂದ ಶೈವಯತಿಗಳ ಜಪಮಂಟಪಗಳಾಗಿರುವ ಸಾಧ್ಯತೆ ಹೆಚ್ಚು. ಈಗ ಈ ಜಪಮಂಟಪಗಳು ಮಣ್ಣು, ಮುಳ್ಳು-ಕಂಟಿಗಳಿಂದ ತುಂಬಿಕೊಂಡಿದ್ದು ಶಿಥಿಲಾವಸ್ಥೆಯಲ್ಲಿವೆ.

ಈ ಗ್ರಾಮದ ಜನರು ೧೨ನೆಯ ಶತಮಾನದಲ್ಲಿಯೇ ಅಂತರ್ಜಲವನ್ನು ಬಳಸುತ್ತಿದ್ದರೆಂಬುದಕ್ಕೆ ಈ ಜಪದ ಬಾವಿಯೇ ಸಾಕ್ಷಿಯಾಗಿ ನಿಲ್ಲುತ್ತದೆ. ಏತ ಇಲ್ಲವೆ ಘಟಿಯಂತ್ರಗಳಿಂದ ನೀರು ಹಾಯಿಸಿ ಉತ್ಪನ್ನಗಳನ್ನು ಬೆಳೆಯುತ್ತಿದ್ದರು[೧೫]. ಶಾಸನ ಕವಿ ನಾಗದೇವ ಭಟ್ಟನು ಮಾತುಗಳಲ್ಲಿ ಹೇಳುವುದಾದರೆ 'ಮಹಾನಗರ ಧರ್ಮಪುರ ತೆಂಗು, ಕಂಗು, ನೇರಳೆ, ಲವಂಗ, ಮಾವು, ಎಲೆ, ಅಡಿಕೆ, ಬಾಡು, ಕಾಯಿ ಮುಂತಾದ ವನಗಳಿಂದ ಕಂಗೊಳಿಸುತ್ತಿತ್ತೆಂದು ಚಿತ್ರವತ್ತಾಗಿ ಬಣ್ಣಿಸಿದ್ದಾನೆ[೧೬]. ಇತ್ತೀಚೆಗೆ ಬಾವಿಯ ಒಳಭಾಗದಿಂದ ಏತ ನೀರಾವರಿಗಾಗಿ ಕಚ್ಚಾತುಂಡು ಕಲ್ಲಿನ ಕಟ್ಟಡವನ್ನು ಕಟ್ಟಲಾಗಿದೆ.

ಇಂತಹ ಅಮೂಲ್ಯ ಕಲಾವಶೇಷವು ೧೯೫೯ರ ಶಾಸನ ದಡಿಯಲ್ಲಿ ಸಂರಕ್ಷಿಸಲ್ಪಟ್ಟು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟು ರಕ್ಷಿಸುವಂತಾಗಲಿ ಎಂದು ಗ್ರಾಮದ ಜನತೆ ಅಪೇಕ್ಷಿಪಡುತ್ತಾರೆ. ಇತ್ತೀಚೆಗೆ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರು ಅದರ, ಸಂರಕ್ಷಣೆಗೆ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಇದು ಇಲಾಖೆಯಿಂದಾಗಲಿ ಇಲ್ಲವೇ ಜನರಿಂದಾಗಲಿ ಅಥವಾ ಎನ್‌ಎಸ್‌ಎಸ್ ಘಟಕಗಳ ವತಿಯಿಂದಾಗಲಿ ಈ ಸ್ಮಾರಕವು ಸಂರಕ್ಷಿಸಲ್ಪಟ್ಟು ಮುಂದಿನ ಜನಾಂಗಕ್ಕೆ ಅಧ್ಯಯನ ಮಾಡಲು ಉಳಿದು ಬರಲಿ.

***


ಆಧಾರಸೂಚಿ ಮತ್ತು ಟಿಪ್ಪಣಿಗಳು

೧. S.I.I. Vol-XI-II, ೧೭೫, ೧೧೨೪, ಡಂಬಳ
೨. S.I.I. Vol-XI ೫೭, ೧೧೮೪, ಡಂಬಳ
೩. K.R.I. Vol-V, ೪೬, ೧೨೮೮, ಡಂಬಳ
೪. S.I.I. Vol-XI-I, ೯೪, ೧೦೫೯, ಡಂಬಳ
೫. S.I.I. Vol-XI-I, ೯೪, ೧೦೫೯, ಡಂಬಳ
೬. S.I.I. Vol-XI, II, ೧೭೫, ೧೧೨೪, ಡಂಬಳ
೭. I.A. X, ಪು ೧೮೫, ೧೦೫೮, ಡಂಬಳ
೮. S.I.I. Vol-XV, ೫೭, ೧೧೮೪, ಡಂಬಳ
೯. ರಘುನಾಥ. ಭಟ್. ಎಚ್.ಆರ್, ಡುಂಬಳದಲ್ಲಿ ಬೌದ್ಧಾವಶೇಷಗಳ ಶೋಧನೆ, **ಇತಿಹಾಸದರ್ಶನ**, ಸಂ-೭, ೧೯೯೨
೧೦. Ismail. K., *Karnataka Temples : The role in socio-Economic Life*, New Delhi ೧೯೮೪.
೧೧. ದ್ಯಾಮನಗೌಡ್ರ. ವಿ.ಕೆ., 'ಡಂಬಳ ಮತ್ತು ಅದರ ಪರಿಸರ; ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ-೨೦೦೦
೧೨. S.I.I. Vol-XV, ೫೭೧ ೧೨ನೆಯ ಶತಮಾನ; ಕಲಬುರ್ಗಿ. ಎಂ.ಎಂ., **ಧಾರವಾಡ ಜಿಲ್ಲಾ ಶಾಸನಸೂಚಿ**, ೧೯೭೫, ಪ್ರತಿ-೪೦
೧೩. ನನ್ನೊಂದಿಗೆ ಕ್ಷೇತ್ರ ಕಾರ್ಯದಲ್ಲಿ ತೊಡಗಿದ್ದ ಪ್ರೊ. ಬಿ.ಎಸ್. ಗೊರವರ - ಕನ್ನಡ ಪ್ರಾಧ್ಯಾಪಕರು, ಜೆ.ಟಿ. ಕಾಲೇಜು, ಗದಗ ಅವರು ಶಾಸನವನ್ನು ಪರಿಶೀಲಿಸಿ ೧೨ನೆಯ ಶತಮಾನದ ಲಿಪಿ ಎಂದಿದ್ದಾರೆ.
೧೪. **ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ**, ೧೯೯೯., (ಸಂ), ಚುರ್ಚಿಹಾಳಮಠ. ಸಿ. ಎಂ., ಗದಗ
೧೫. ಚಿದಾನಂದಮೂರ್ತಿ. ಎಂ., , ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು.
೧೬. ಚಂದ್ರಶೇಖರ ಎಚ್., 'ಕಲೆ ಮತ್ತು ಧರ್ಮಗಳ ಅಡೊಂಬಲ ಡಂಬಳ', **ಪ್ರಜಾವಾಣಿ ದೀಪಾವಳಿ** ವಿಶೇಷಾಂಕ-೧೯೯೭.


ಕುಂ.ಬಾ. ಸದಾಶಿವಪ್ಪ*

ಚಿಕ್ಕರಾಜ್ಯದ ಮುಖ್ಯಪಟ್ಟಣ ಬೇಚ್‌ರಾಖ್ ಗರ್ಭಗುಡಿ

ಹರಪನಹಳ್ಳಿ ತಾಲೂಕು ಭೂ ಪ್ರದೇಶ ಈ ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿದ್ದು ಈಗ ನೂತನ ಜಿಲ್ಲೆ ದಾವಣಗೆರೆಗೆ ಸೇರಿದೆ. ಹರಪನಹಳ್ಳಿ ಪಟ್ಟಣದಿಂದ ಪಶ್ಚಿಮ ದಿಕ್ಕಿಗೆ ಕುಲುಮರ ಕಲ್ಲಹಳ್ಳಿಯಿಂದ ಪಶ್ಚಿಮಕ್ಕೆ ಪರ್ವತ ಸಾಲು ಹಬ್ಬಿದೆ. ಕಣಿವೆ ಬಳಿ ಈ ಸಾಲು ಉತ್ತರದಿಂದ ದಕ್ಷಿಣಕ್ಕೆ ಸ್ವಲ್ಪ ಭಾಗ ಮುಂದು ವರಿದಿದೆ. ಹರಿಹರದಿಂದ ತುಂಗಭದ್ರಾ ನದಿ ದಕ್ಷಿಣದಿಂದ



ಉತ್ತರದಿಂದ ಉತ್ತರ ದಿಕ್ಕಿನಲ್ಲಿ ಚಲಿಸಿ ಈ ಪರ್ವತ , ಸಾಲಿನ ಬಳಿ ಬಂದು ಪಶ್ಚಿಮ ದಿಕ್ಕಿಗೆ ಹಿರೇ ಕುರುವತ್ತಿ, ಮೈಲಾರ ಗ್ರಾಮಗಳ ಮುಂದೆ ಹರಿದಿದೆ. ಹಲುವಾಗಲು ಮುಂದೆ ಹಬ್ಬಿದ ಪರ್ವತ ಸಾಲಿಗೆ ಗರ್ಭಗಡಿ ಪರ್ವತ ಎಂದು ಕರೆಯುವರು. ಈ ಪರ್ವತದ



ಪಶ್ಚಿಮ ದಿಕ್ಕಿಗೆ ಪ್ರಾಚೀನ ಕಾಲದ ಒಂದು ಕೋಟೆ ಕಾಣುತ್ತದೆ. ಇದು ಸುಮಂಗಲೆಯ ಕೊರಳಿಗೆ ಹಾರ ತೊಡಿಸಿದಂತೆ ಇದೆ. ಕೋಟೆ ಗೋಡೆಯ ಮಧ್ಯೆ ಕಾಲು ಕಿಲೋ ಮೀಟರ್ ಅಂತರದಲ್ಲಿ ಹುಡೇವುಗಳು ಇರುತ್ತವೆ. ಕೋಟೆಯ ಮಧ್ಯೆ ೬೦ ಅಡಿ ಉದ್ದ ೬೦ ಅಡಿ ಅಗಲ ಒಂದು ಸ್ಥಳವಿದೆ. ಇಲ್ಲಿ ಅರಮನೆ ಇದ್ದಿತೆಂದು ಜನ ಹೇಳುವರು. ಈ ಪರ್ವತ ಸಾಲಿನ ಇಳಿ ಜಾರಿಗೆ ಎರಡು ದೇವಾಲಯಗಳಿರುತ್ತವೆ. ಒಂದು ಅಂತರಲಿಂಗು, ಎರಡನೆಯದು ತಿಮ್ಮಪ್ಪ ದೇವರು. ಇದರ ಪಕ್ಕದಲ್ಲಿ ರೈತರು ತಾವು ಹೊಲಗಳಲ್ಲಿ ಬೆಳೆದು ಧಾನ್ಯ ಸಂಗ್ರಹಿಸುವ ಹಗೇವುಗಳು ಇರುತ್ತವೆ. ಇದರ ಬಳಿ ಈಗ ಹೊಸದಾಗಿ ಮಾಜಿ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಹೆಸರಿನಲ್ಲಿ ಒಂದು ಕಲ್ಯಾಣ ಮಂಟಪ ರಚಿಸಲಾಗಿದೆ. ಇದರ ಪಕ್ಕದಲ್ಲಿ ಒಂದು ರಸ್ತೆ ಅದರ ಕೆಳಗೆ ತುಂಗಭದ್ರಾ ನದಿ ಹರಿದಿದೆ . ಗರ್ಭಗಡಿ ಪರ್ವತ ಪ್ರದೇಶದಲ್ಲಿ ದೊಡ್ಡ ಕೋಟೆ, ಅರಮನೆ ಕಂಡುಬಂದರೆ, ಕೆಳಗಿನ ಚಿಕ್ಕ ಕೋಟೆ ಪ್ರದೇಶದಲ್ಲಿ ನಾಗರೀಕರು ವಾಸಿಸುವ ಸುಮಾರು ಎರಡುನೂರು ಮನೆಗಳು, ಕಲ್ಲೇಶ್ವರ, ಸೋಮೇಶ್ವರ, ಊರಮ್ಮ, ಆಂಜನೇಯ ದೇವಾಲಯಗಳು, ಮಹಾಸತಿ ಕಲ್ಲು, ಚಾಲುಕ್ಯರ ಕಾಲದ ಗಜಲಕ್ಷ್ಮಿ, ಕೋಣನ ತಲೆ, ಶಿಲ್ಪ ಕಾಣುತ್ತವೆ.

ಕ್ರಿ.ಶ. ೧೫೬೫ರಲ್ಲಿ ರಕ್ಕಸತಂಗಡಿ ಕಾಳಗ ಸಂಭವಿಸಿ ವಿಜಯನಗರ ಸಾಮ್ರಾಜ್ಯ ಹಾಳಾದ ಬಳಿಕ ಆ ಸೈನ್ಯದಲ್ಲಿದ್ದ ಸರದಾರರು, ಸೇನಾಪತಿಗಳು ದಕ್ಷಿಣ ಭಾರತದಲ್ಲಿ ಚಿಕ್ಕ ಮತ್ತು ದೊಡ್ಡ ರಾಜ್ಯಗಳನ್ನು ಸ್ಥಾಪಿಸಿ ಆಳಿದರು. ಇವರಿಗೆ ಪಾಳೆಯಗಾರ ಅರಸರೆಂದು ಕರೆದರು. ಹರಪನಹಳ್ಳಿ ಪಾಳೆಯಗಾರರು ಬೇಡ ಕೋಮಿಗೂ, ಗರ್ಭಗುಡಿ ಪಾಳೆಯಗಾರರು ಯಾದವ (ಗೊಲ್ಲ) ಕೋಮಿಗೆ ಸೇರಿದವರು. ಹರಪನಹಳ್ಳಿ ಪಾಳೆಯಗಾರರ ಆಳ್ವಿಕೆ ಅವಧಿಯಲ್ಲಿಯೇ ಗರ್ಭಗುಡಿ ರಾಜ್ಯ ಮೈದಳೆದರೂ, ಹರಪನಹಳ್ಳಿ ಪಾಳೆಯಗಾರರ ಇತಿಹಾಸದಲ್ಲಿ ಗರ್ಭಗುಡಿ ಪಾಳೆಯಗಾರರ ಪ್ರಸ್ತಾಪ ಎಲ್ಲೂ ಕಂಡು ಬರುವುದಿಲ್ಲ. ಆದ್ದರಿಂದ ಗರ್ಭಗುಡಿ ರಾಜ್ಯ ಒಂದು ಸ್ವತಂತ್ರ ರಾಜ್ಯವಿದ್ದಿರಬೇಕು.

ಮೊದಲ ಶಾಸನ : ಅರಸನಾಳು ಗ್ರಾಮದಲ್ಲಿ ಈಶ್ವರ ಗುಡಿಯ ಜೀರ್ಣೋದ್ಧಾರ ಕಾರ್ಯದಲ್ಲಿ ತೊಡಗಿದಾಗ ಅದರ ನೆಲದ ಅಡಿಯಲ್ಲಿ ಒಂದು ಶಾಸನ ದೊರೆಯಿತು- 'ಶಾಲಿವಾಹನ ಶಕ ೧೫೧೦ ಗರ್ಭಗುಡಿ ಹಿರಿಯಣ್ಣನ ಆಳ್ವಿಕೆಯಲ್ಲಿ ಅಜ್ಜಯ್ಯನ ಮಗಳಿಗೆ ಪುಣ್ಯ ಆಗಲಿ ಎಂದು ಒಂದು ಗುಡಿ ನಿರ್ಮಿಸಿದೆ'.

ಎರಡನೆಯ ಶಾಸನ : ತುಂಗಭದ್ರಾ ನದಿಯ ಬಳಿ ಶಿವಸಿದ್ಧಾಪುರ ಗ್ರಾಮಕ್ಕೆ ಸಮೀಪ ಗಡ್ಡಿ ಹೊಲಗಳೆಂದು ಕರೆಯುವರು. ಅಲ್ಲಿ ಒಂದು ಹೊಲ. ಇದು ಶೃಂಗೇರಿ ಮಠಕ್ಕೆ ಸೇರಿದ್ದು ಎಂದು ಕೆಲವರು, ಕೊಲ್ಹಾಪುರದ ಕುರುಬರ ಲಕ್ಕಪ್ಪನ ಹೊಲ ಎಂದು ಕೆಲವರು ಹೇಳುವರು. ಇಲ್ಲಿ ಒಂದು ಶಾಸನ ದೊರಕಿದೆ. ಅದರಲ್ಲಿ ಹೀಗಿದೆ-

'ಸ್ವಸ್ತಿ ಶಕ ವರ್ಷ ೧೬೨೪ಳ ಚಿತ್ರಭಾನು ಸಂವತ್ಸರ ಆಶ್ವೀಜ

* ಲೋಕೋಪಯೋಗಿ ಇಲಾಖೆ ಕಛೇರಿ ಹಿಂಭಾಗ, ಗೋಸಾಯಿ ಗುಡ್ಡ, ಹೊಸಪೇಟೆರಸ್ತೆ, ಹರಪನಹಳ್ಳಿ, - ೫೮೩ ೧೩೧

ಶುದ್ಧ ೧೦ ರಾಜಮಾನ್ಯ ಅಚ್ಚಪ್ಪ ನಾಯಕರ ಮಕ್ಕಳು ಯಾನುಂ ಇವರು ಸಕರಾರ್ಜನೆಗೆ ಸರ್ವಮಾನ್ಯ ನಿಮಿತ್ಯ ಹರಿಯಪ್ಪ ನಾಯಕರು ಅವರ ಮಗ ರಾಮಣ್ಣ ನಾಯಕನಿಗೆ **ಸರ್ವಮಾನ್ಯ** ನಿಮಿತ್ಯ ಗರ್ಭಗಡಿ ಗ್ರಾಮದ ಪಟ್ಟೇವು'.

ಹಲುವಾಗಲು ಗ್ರಾಮದಲ್ಲಿ ಪೂಜೆ ನಡತೆಗಳು : ಹಲವಾಗಲು ಗ್ರಾಮದ ಶ್ರೀ ಗಾಳೆಪ್ಪ ತಂದೆ ಹನುಮಂತಪ್ಪ ಕಲ್ಲಮ್ಮನವರ ಕಣ (ಹಿತ್ತಲು)-ಈ ಪ್ರದೇಶಕ್ಕೆ ನಾಗರಕಲ್ಲು ಎಂದು ಕರೆಯುವರು. ಈ ಕಣದಲ್ಲಿ ಆರು ಶಿಲ್ಪಗಳನ್ನು ಪೂರ್ವಾಭಿಮುಖ ನಿಲ್ಲಿಸಿದೆ. ಇವು ಚಾಲುಕ್ಯರ ಕಾಲದ ವೀರಗಲ್ಲುಗಳು. ಅವುಗಳ ಮುಂದೆ ಒಂದು ಕಾಲು ಅಡಿ ಉದ್ದ ಒಂದು ಕಾಲು ಅಡಿ ಅಗಲದ ಒಂದು ಶಿಲ್ಪ ಇದೆ. ಅದರ ಒಳಭಾಗ ಗೋಲಾಕಾರವಿದ್ದು ಅದರಲ್ಲಿ ಎರಡು ಪಾದಗಳು ಕಾಣುತ್ತವೆ. ಇದು ಭೈರವ ಶಿಲ್ಪ. ಒಟ್ಟಾರೆ ಈ ಶಿಲ್ಪ ಸಮೂಹಕ್ಕೆ ಸ್ಥಳೀಕರು ಗಿರಿಯಣ್ಣ ದೇವರೆಂದು ಕರೆಯುವರು.

ಗ್ರಾಮದ ಚಿಕ್ಕ ಮಕ್ಕಳು, ಎಮ್ಮೆ, ಆಕಳು, ಆಡು ಈ ಶಿಲ್ಪ ಸಮೂಹದ ಬಳಿ ಸುಳಿದರೆ, ಮಕ್ಕಳು ಸದಾ ಅಳುವರು. ಪಶುಗಳು ಹಾಲು ಕರೆಯುವುದನ್ನು ನಿಲ್ಲಿಸುತ್ತವೆ. ಆಗ ಗ್ರಾಮದ ಹಿರಿಯರು ಅವುಗಳಿಗೆ ಗಿರಿಯಣ್ಣನ ಕಾಟ, (ಕಿರಿ-ಕಿರಿ) ಅದಕ್ಕೆ ರಾಗಿ ರೊಟ್ಟಿ ಬಸಳೆ ಪಲ್ಯ ತಯಾರಿಸಿ ನೈವೇದ್ಯದೊಂದಿಗೆ ಶಿಲ್ಪಗಳಿಗೆ ಪೂಜೆ ಸಲ್ಲಿಸಲು ಸಲಹೆ ಕೊಡುವರು. ತೊಂದರೆಗೆ ಒಳಗಾದವರು ಅವರ ಸಲಹೆ ಪ್ರಕಾರ ಗಿರಿಯಣ್ಣ ದೇವರಿಗೆ ಆರಾಧಿಸಿದರೆ, ಮಕ್ಕಳು ಅಳು ನಿಲ್ಲುವುದು. ಎಮ್ಮೆ, ಆಕಳು, ಆಡುಗಳು ಮೊದಲಿನ ಹಾಗೆ ಹಾಲು ಕರೆಯುತ್ತವೆ ಎಂದೆಲ್ಲ ಪ್ರತೀತಿ ಇದೆ.

ಮಲ್ಲಾಪುರದ ಶ್ರೀ ಹನುಮಂತಪ್ಪನವರ ಮನೆಯವರು ಕಳೆದ ೫೦ ವರ್ಷಗಳಿಂದ ತಮ್ಮ ಹಿರಿಯರು ಈ ದೇವರಿಗೆ ಪೂಜೆ ಸಲ್ಲಿಸುತ್ತ ಬಂದಿರುವುದು ತಮಗೆ ಹಿರಿಯರು ಹೀಗೆಲ್ಲ ತಿಳಿಸಿರುವುದನ್ನು ನೆನಪಿಸಿಕೊಳ್ಳುವರು. ಗಿರಿಯಣ್ಣ ದೇವರಿಗೆ ಪೂಜೆ ಸಲ್ಲಿಸುವ ವಾರಗಳು ಆದಿತ್ಯವಾರ ಮತ್ತು ಗುರುವಾರ ಶ್ರೇಷ್ಠವೆಂದು ತಿಳಿಸುವರು. ಪ್ರತಿವರ್ಷ ನವೆಂಬರ ತಿಂಗಳ ಕೊನೇ ವಾರದಲ್ಲಿ ಗಿರಿಯಣ್ಣ ದೇವರಿಗೆ ಕಾರ್ತೀಕ ಮುಡಿಸಿ ವಿಶೇಷ ಹಬ್ಬ ಆಚರಿಸುವರು.

ಹಲವಾಗಲು ಗ್ರಾಮದ ಮತ್ತೊಂದು ಭಾಗ ಅಂಪರೆ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಒಂದು ಹೊಂಡವಿದೆ. ಹೊಂಡಕ್ಕೆ ಉತ್ತರ ದಿಕ್ಕಿನಲ್ಲಿ ಸುಮಾರು ಅರ್ಧ ಕಿಲೋ ಮೀಟರ್ ಅಂತರದಲ್ಲಿ ಒಂದು ಹಳ್ಳ ಹರಿದಿದೆ. ಇದರ ಪಕ್ಕದಲ್ಲಿ ಗ್ರಾಮದ ಅಧಿಕಾರಿ ಶೇಕಪ್ಪನ ಹೊಲವಿದೆ. ಅದರಲ್ಲಿ ಒಂದು ಅಡಿ ಗಾತ್ರ ಮೂರು-ನಾಲ್ಕು ಅಡಿಗಳಷ್ಟು ಉದ್ದವಿರುವ ಮೂರು ಶಿಲ್ಪಗಳು ನೆಟ್ಟಗೆ ನೆಲದಲ್ಲಿ ಹೂತಿವೆ. ಅವುಗಳಿಗೆ ಆಕಾರವಿಲ್ಲ. ಕಟ್ಟೆ-ಗುಡಿಗಳಿಲ್ಲ, ಅವುಗಳ ಮೇಲೆ ಬರಹಗಳಿಲ್ಲ.

ಪ್ರತಿ ವರ್ಷ ನಾಗರ ಪಂಚಮಿ ಹಬ್ಬವನ್ನು ನಾಡಿನ ಇತರ ಗ್ರಾಮೀಣರು ಆಚರಿಸುವಂತೆ ಹಲುವಾಗಲು ಗ್ರಾಮದವರು ಆಚರಿಸುವರು. ಇದು ಮೂರು ದಿನಗಳ ಹಬ್ಬ. ಮೊದಲ ದಿನ ನಾಗ ದೇವರಿಗೆ ಹಾಲು ಎರೆದು ಪೂಜೆ ಸಲ್ಲಿಸುವರು. ಮರುದಿವಸ ಗ್ರಾಮದ ಪ್ರಮುಖ ದೇವರಿಗೆ ಪೂಜೆ ಸಲ್ಲಿಸುವರು. ಕೊನೆಯ ದಿನ ಮಕ್ಕಳು ಮತ್ತು ಸ್ತ್ರೀ ಪುರುಷರು ಜೋಕಾಲಿ ಆಡುವರು. ಯುವಕರು ಭಾರವಾದ ದುಂಡಿ-ಶಿಲ್ಪ ಎತ್ತುವರು, ತೆಂಗಿನಕಾಯಿ ನೆಲಕ್ಕೆ ಹೊಡೆಯುವ ಜೂಜು ಕಟ್ಟುವರು, ಎರಡನೆಯ ದಿನ ಹಲುವಾಗಲು ಗ್ರಾಮದ ಸ್ತ್ರೀ-ಪುರುಷರು-ಮಕ್ಕಳು ಈ ಶಿಲ್ಪವಿರುವ ಸ್ಥಳಕ್ಕೆ ಆಗಮಿಸಿ, ಗೆಜ್ಜೆವಸ್ತ್ರ (ಹತ್ತಿಯಿಂದ ರಚಿಸಿದ್ದು ಕೊಕ್ಕಾಬತ್ತಿ-ಕೋಡಾಬತ್ತಿ) ಹೂ, ಕಾಯಿ, ಕರ್ಪೂರ, ಹೋಳಿಗೆ ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುವರು. ತಮಗೆ ಮುಂದಿನ ದಿನಗಳಲ್ಲಿ ಒಳ್ಳೇದಾಗಲಿ ಎಂದು ಪ್ರಾರ್ಥಿಸುವರು. ಈ ದೇವರಿಗೆ 'ನಗ-ನಗತೆವ್ವ' ಎಂದು ಕೆಲವರು ಕರೆದರೆ, ಇನ್ನೂ ಕೆಲವರು 'ನಗ-ನಾಗತೆವ್ವ' ದೇವಿ ಎಂದು ಕರೆಯುವರು. ಪಕ್ಕದ ಹೊಲದ ಓರ್ವ ರೈತ ತಾನು ಹರಕೆ ಮಾಡಿಕೊಂಡಂತೆ ತೆಂಗಿನ ಗರಿ, ಬಾಳೆ ಕಂಬ ಹಂದರ, ವಿದ್ಯುತ್ ದೀಪ, ಮೈಕ್ ಒದಗಿಸಿದ್ದೇನೆ. ಪ್ರತಿವರ್ಷ ಬೇರೆ-ಬೇರೆ ರೈತರು ಹೀಗೆ ಹರಕೆ ಹೊತ್ತು ಈ ಏರ್ಪಾಡು ಮಾಡುವರು ಎಂದು ತಿಳಿಸಿದನು.

ಗ್ರಾಮದ ಬಹುಜನ ವೃದ್ಧರನ್ನು ವಿಚಾರಿಸಿ ಅವರಿಂದ ಪಡೆದ ಮಾಹಿತಿ ಪ್ರಕಾರ : 'ಗಿರಿಯಣ್ಣ ಮತ್ತು ನಗ-ನಗತೆವ್ವ ಆರಾಧನೆಯನ್ನು ಪ್ರಾಚೀನ ಕಾಲದಿಂದ ತಮ್ಮ ಹಿರಿಯರು ನಡೆಸಿರುವರು. ಕಾಲ ಮಾತ್ರ ಗೊತ್ತಿಲ್ಲ'.

ಗರ್ಭಗಡಿ ಕೋಟೆ ಹಾಳಾದ ಬಳಿಕ ಕೋಟೆಯ ಜನರು ಅನ್ಯ ಗ್ರಾಮಗಳಿಗೆ ತೆರಳಿ ಅಲ್ಲಿ ನೆಲೆಸಿರುವರು. ಒಂದು ಗುಂಪು



ಪಕ್ಕದಲ್ಲಿಯೇ ಉಳಿದಿದೆ. ಅದಕ್ಕೆ ಈಗ ಗರ್ಭಗಡಿ ಗ್ರಾಮ ಎಂದು ಕರೆಯುವರು.


ಇನ್ನೊಂದು ಗುಂಪು ಪರ್ವತದ ಇನ್ನೊಂದು ಭಾಗದಲ್ಲಿದೆ. ಅದಕ್ಕೆ ಕಣವೆ ಎಂದು ಕರೆಯುವರು. ಅಲ್ಲಿ ಸುಮಾರು ಅರವತ್ತು ಮನೆಗಳಿರುತ್ತವೆ. ಮೂರನೆಯ ದೊಡ್ಡ ಗುಂಪು ಹಲುವಾಗಲು ಕೋಟೆಯಲ್ಲಿ ನೆಲೆಸಿದೆ.

ಪ್ರಾಯಕ್ಕೆ ಬಂದ ವಧು-ವರರನ್ನು ಆಯ್ಕೆ ಮಾಡಿ ಅವರ ಸಂಬಂಧ ಬೆಳೆಸುವಾಗ ಆಯಾ-ಜಾತಿಗಳಿಗೆ ಸೇರಿದ ಮನೆತನಗಳಿಗೆ ಒಂದೊಂದು ಹೆಸರಿನ ವರ್ಗವೆಂದು ಕರೆಯುವರು. ಬ್ರಾಹ್ಮಣರು ಗೋತ್ರ, ವೀರಶೈವರು ಸೂತ್ರ, ಇತರರು ಬೆಡಗು ಎಂದು ಕರೆದುಕೊಳ್ಳುವರು. ಇದರ ಪ್ರಕಾರ ಕೆಲವರಿಗೆ ಗರ್ಭಗುಡಿ ಬೆಡಗು ಇದೆ. ಈ ರೀತಿ ಗ್ರಾಮದ ಹೆಸರು ಬೆಡಗು ಇರುವುದು ವಿಶಿಷ್ಟವಾಗಿದೆ.

ಹಲುವಾಗಲು ಗ್ರಾಮದ ಯಾದವ ಕೋಮಿನ ಗೌಡರು, ಹರಿಜನರು, ಕುರುಬರು, ವಾಲ್ಮೀಕಿ ಜನಾಂಗ, ಗಂಗಾ ಜನಾಂಗ, ಬಹುತೇಕ ಜನರು ಗರ್ಭಗುಡಿ ಬೆಡಗಿನವರು. ಗರ್ಭಗುಡಿ ಬೆಡಗಿನವರು ಕುಂಚೂರು, ಅರಸನಾಳು, ನಿಟ್ಟೂರು, ಯರಬಾಳು, ಹಡಗಲಿ ತಾಲೂಕು ಹ್ಯಾರ್ಡ್, ರಾಣೆಬೆನ್ನೂರು ತಾಲೂಕು ಮೈದೂರು, ಹಾವೇರಿ ತಾಲೂಕು ಅಳಲಗೇರಿ, ಮೋಟೆಬೆನ್ನೂರು ಗ್ರಾಮಗಳಲ್ಲಿ ಕಂಡುಬರುವವರು. ಇವರೆಲ್ಲ ಗರ್ಭಗುಡಿಯಿಂದ ವಲಸೆ ಹೋದವರು.

ಗರ್ಭಗುಡಿ ರಾಜ್ಯಕ್ಕೆ ಸೇರಿದ ಗ್ರಾಮಗಳು

೧) ಮಾಗಾನಹಳ್ಳಿ ೨) ಹೊನ್ನೂರು ೩) ಎಲೆಬೇತೂರು ೪) ಹೆಮ್ಮನಬೇತೂರು ೫) ಅಮರಾವತಿ ೬) ಹರಗನಹಳ್ಳಿ ೭) ಹಲಸುಬಾಳು ೮) ನಾಗೇನಹಳ್ಳಿ ೯) ಬನ್ನಿಕೋಡು ೧೦) ರಾಜನಹಳ್ಳಿ ೧೧) ಹರಿಹರ ಕೋಟೆ ೧೨) ಹಲುವಾಗಲು ಕೋಟೆ. ಕಂದಾಯದ ಪ್ರಮುಖ ಗ್ರಾಮಗಳಿಗೆ ಸೇರಿದವುಗಳನ್ನು ಕೂಡಿಸಿದರೆ ಒಟ್ಟು ಅರವತ್ತು ನಾಲ್ಕು ಗ್ರಾಮಗಳು. ಗಿರಿಯಣ್ಣ ನಾಯಕನ ಮಡದಿ ನಾಗಮ್ಮಾಜಿ ನಾಗತಿ ಜನಸಾಮಾನ್ಯರ ಆಡುನುಡಿಯಲ್ಲಿ 'ನಗ-ನಗತೆವ್ವ', 'ನಗ-ನಾಗತೆವ್ವ' ಎಂದು ಆಗಿರಬೇಕು. ಕ್ರಿ.ಶ. ೧೫೮೮ ರಿಂದ ೧೭೦೨ರವರೆಗೆ ಈ ರಾಜ್ಯ ಅಸ್ತಿತ್ವದಲ್ಲಿದಂತೆ



ಕಂಡುಬರುವುದು. ಗರ್ಭಗುಡಿ ರಾಜ್ಯವನ್ನು ಆಳಿದ ಪಾಳೆಯಗಾರ ಅರಸ-ಅರಸಿಯರ ಹೆಸರುಗಳು ಕೆಳಗಿನಂತೆ ಇರುತ್ತದೆ.

೧) ಗಿರಿಯಣ್ಣ ನಾಯಕ ೨) ಅಚ್ಚಪ್ಪನಾಯಕ ೩) ಹರಿಯಪ್ಪ ನಾಯಕ ೪) ರಾಮಣ್ಣ ನಾಯಕ ೫) ತಿಮ್ಮಪ್ಪನಾಯಕ ೬) ನಾಗಮ್ಮಾಜಿ ನಾಗತಿ. ನಾಲ್ಕು ಜನ ನಾಯಕರ ಹೆಸರುಗಳು ಶಿಲಾಶಾಸನಗಳಲ್ಲಿ ದೊರೆತರೆ, ತಿಮ್ಮಪ್ಪ ನಾಯಕ ಹಾಗೂ ನಾಗಮ್ಮಾಜಿ ನಾಗತಿ ಇಬ್ಬರ ಹೆಸರುಗಳು ಜನರ ಬಾಯಿ ಮಾತುಗಳಲ್ಲಿ ದೊರಕುತ್ತವೆ.

ವಿಮರ್ಶೆ

೧. ಗರ್ಭಗಡಿ ಕೋಟೆ ಪ್ರದೇಶ ಮತ್ತು ಹಲುವಾಗಲು ಕೋಟೆ ಹರಪನಹಳ್ಳಿ ತಾಲೂಕು ವ್ಯಾಪ್ತಿಯಲ್ಲಿದ್ದು, ಉಳಿದ ಗ್ರಾಮಗಳು ಹರಿಹರ, ದಾವಣಗೆರೆ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವುವು.

೨. ಗರ್ಭಗಡಿ ರಾಜ್ಯಕ್ಕೆ ಗಿರಿಯಣ್ಣನೇ ಮೊದಲ ಪಾಳೆಯಗಾರ ಎಂಬುದಕ್ಕೆ ಆಧಾರಗಳಿಲ್ಲ.

೩. ಗರ್ಭಗಡಿ ಪಟ್ಟಣದ ಹೆಸರಿನ ಬೆಡಗು ಬೇರೆ ಪಟ್ಟಣಗಳ, ಗ್ರಾಮಗಳ ಜನರಿಗೆ ಇರುವುದಿಲ್ಲ.

೪. ಗಿರಿಯಣ್ಣ ದೇವರಿಗೆ ಗುರುವಾರ, ಆದಿತ್ಯವಾರಗಳು ಶ್ರೇಷ್ಠವೆಂದು ಹೇಳುವರು, ಜೈನ ಯಕ್ಷಿಣೆ ಬ್ರಹ್ಮದೇವರ ಪೂಜೆಯ ನೆನಪಾಗುತ್ತದೆ.

೫. ಸುಮಾರು ಮೂರು ಶತಮಾನ ಗತಿಸಿದರೂ ಗಿರಿಯಣ್ಣ ಅವರ ಮಡದಿ ನಾಗಮ್ಮಾಜಿ ಇಬ್ಬರನ್ನು ಹಲುವಾಗಲು ಜನ ಮರೆತಿಲ್ಲ. ಪೂಜಿಸುತ್ತಲಿರುವರು. ಇವರು ಜನಪ್ರಿಯ ರಾಗಿರಬೇಕು.

೬. ಆನೆಗೊಂದಿಯಿಂದ ಬಂದ ತಿಮ್ಮಪ್ಪ ನಾಯಕ ಎಂಬು ವವನು ಈ ಕೋಟೆಗೆ ಆಗಮಿಸಿದ. ಇವನೂ ಒಬ್ಬ ಪಾಳೆಯಗಾರ. ಅವನು ಮಡಿದ ಬಳಿಕ ಒಂದು ದೇವಾ ಲಯ ನಿರ್ಮಿಸಿದರು. ಈಗ ತಿಮ್ಮಪ್ಪ ದೇವರಗುಡಿ ಎಂದು ಕರೆಯುವರು.

೭. ಕೋಟೆಯ ಪರ್ವತದ ಕೆಳಗೆ ಹಲುವಾಗಲು ರೈತರು ಹೊಲ ಉಳುತ್ತಿರುವರು. ಇತ್ತೀಚೆಗೆ ಗಡ್ಡಿಗಾಲು ಭರ್ಮಪ್ಪ ತನ್ನ ಹೊಲ ಸಮತಟ್ಟ ಮಾಡುವುದಕ್ಕಾಗಿ ಭೂಮಿ ಅಗೆಸಿದಾಗ ಅಲ್ಲಿ ಕೆಲ ಬೆಳ್ಳಿ ನಾಣ್ಯಗಳು ದೊರೆತವು. ಅವರು ಅವು ಗಳನ್ನು ಪುರಾತತ್ವ ಇಲಾಖೆಗೆ ಒಪ್ಪಿಸಿದ್ದಾಗಿ ಹೇಳಿದರು.

೮. ಗರ್ಭಗಡಿ ಚಿಕ್ಕ ರಾಜ್ಯದ ಬಗ್ಗೆ ಶೋಧ ಮಾಡಿ ಕೆಲ ಮಾಹಿತಿ ಸಂಗ್ರಹಿಸಿದೆ. ಇನ್ನೂ ಹೆಚ್ಚಿನ ಶೋಧಕ್ಕೆ ಅವಕಾಶವಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

- ೧) ಕೋಟೆ ಗೋಡೆ-ಹುಡೇವು ೨) ಅರಸನಾಳು ಶಾಸನ ೩) ಗಡ್ಡಿ ಶಾಸನ ೪) ಗಿರಿಯಣ್ಣ ಪೂಜಾ ನಡತೆ ೫) ನಗ-ನಗತೆವ್ವ ಪೂಜಾ ನಡತೆ ೬) ತಿಮ್ಮಪ್ಪನ ಗುಡಿ ಹಗೇವುಗಳು ೭) ಊರಮ್ಮ ಪುರಾಣ ೮) ನದಿಯಲ್ಲಿ ತೇಲಿಬಂದ ದೇವತೆಗಳು ೯) ವೃದ್ಧರ ಹೇಳಿಕೆಗಳು.

ಡಾ. ಹನುಮ ನಾಯಕ*

ಮಧ್ಯಯುಗೀನ ಕರ್ನಾಟಕದ ಗುಡಿ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಕೃಷಿ ಪಾತ್ರ

ಗುಡಿ ಕೈಗಾರಿಕೆಗಳು ಮಧ್ಯಯುಗೀನ ಕರ್ನಾಟಕದ ಆರ್ಥಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದವು. ಇವುಗಳ ಬೆಳವಣಿಗೆಯೊಂದಿಗೆ ಅಂದಿನ ಕಾಲದ ಆರ್ಥಿಕ ಸ್ವರೂಪವೇ ಬದಲಾವಣೆ ಹೊಂದಿತು. ಇದಕ್ಕೆ ಮುಂಚೆ ಅಂದರೆ ಪೂರ್ವ ಮಧ್ಯಯುಗೀನ ಕರ್ನಾಟಕದಲ್ಲಿ ಕೃಷಿಯೇತರ ಚಟುವಟಿಕೆಗಳು ಅಷ್ಟೊಂದು ಪ್ರಮಾಣದಲ್ಲಿ ಇರಲಿಲ್ಲ. ಬಹುಶಃ ಇರಲಿಲ್ಲವೆಂದರೂ ತಪ್ಪಾಗಲಾರದು. ಏಕೆಂದರೆ ಅಂದಿನ ಕಾಲದ ಶಾಸನಗಳು ಮುಖ್ಯವಾಗಿ ಕೃಷಿಗೆ ಸಂಬಂಧಪಟ್ಟ ಆರ್ಥಿಕ ಜೀವನವನ್ನು ಬಿಂಬಿಸುತ್ತವೆ. ಆದರೆ ಈ ಚಟುವಟಿಕೆಗಳು (ಗುಡಿ ಕೈಗಾರಿಕೆಗಳು) ಮಧ್ಯಯುಗೀನ ಕಾಲದಲ್ಲಿ ಗಣನೀಯ ಪ್ರಮಾಣದಲ್ಲಿ ಬೆಳೆದಿರುವುದನ್ನು ಶಾಸನಗಳು ಒತ್ತಿ ಹೇಳುತ್ತವೆ.

ಮಧ್ಯಯುಗೀನ ಕರ್ನಾಟಕದ ಪ್ರಮುಖ ಗುಡಿ ಕೈಗಾರಿಕೆಗಳೆಂದರೆ ಬಟ್ಟೆ ತಯಾರಿಕೆ, ಎಣ್ಣೆ ಉತ್ಪಾದನೆ, ಬೆಲ್ಲ ಉತ್ಪಾದನೆ, ಲೋಹದ (ಚಿನ್ನ, ಬೆಳ್ಳಿ, ತಾಮ್ರ, ಕಂಚು ಮತ್ತು ಕಬ್ಬಿಣ) ಕೆಲಸ, ಮಡಿಕೆ ತಯಾರಿಕೆ, ಮರಗೆಲಸ, ಚರ್ಮ ಹದಮಾಡುವುದು, ಉಪ್ಪು ತಯಾರಿಕೆ ಮುಂತಾದವು. ಈ ಚಟುವಟಿಕೆಗಳ ಬಗ್ಗೆ ಶಾಸನಗಳು ಹೆಚ್ಚು ಮಾಹಿತಿ ನೀಡುತ್ತವೆ. ಈ ಲೇಖನದಲ್ಲಿ ಇಂತಹ ಚಟುವಟಿಕೆಗಳ ಬಗ್ಗೆ ಹೆಚ್ಚು ವಿವರ ನೀಡದೆ, ಇವುಗಳ ಬೆಳವಣಿಗೆಗೆ ಕೃಷಿ ಚಟುವಟಿಕೆಗಳು ಹೇಗೆ ನೆರವಾದವು ಎಂಬುದನ್ನು ಚರ್ಚಿಸಲಾಗುವುದು. ಈ ಲೇಖನವನ್ನು ಪ್ರಮುಖವಾಗಿ ದಕ್ಷಿಣ ಕರ್ನಾಟಕದ ೧೧ ರಿಂದ ೧೪ನೇ ಶತಮಾನದ ಕನ್ನಡ ಶಾಸನಗಳನ್ನು ಆಧರಿಸಿ ಬರೆಯಲಾಗಿದೆ.

ಇಲ್ಲಿಯವರೆಗೂ ಲಭ್ಯವಿರುವ ಕೃತಿಗಳು ಮಧ್ಯಯುಗೀನ ಕರ್ನಾಟಕದ ಆರ್ಥಿಕ ಸ್ಥಿತಿಗಳನ್ನು ತಿಳಿಸುವಾಗ ಕೃಷಿ ಹಾಗೂ ಕೃಷಿಗೆ ಸಂಬಂಧಪಟ್ಟ ಚಟುವಟಿಕೆಗಳು ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಚರ್ಚಿಸಿವೆ. ಬಿ.ಎಲ್. ರೈಸ್‌ರವರು ತಮ್ಮ ಕೃತಿಯಲ್ಲಿ ಒಣ ಭೂಮಿಯ ಬೆಳೆಗಳು ಮತ್ತು ಕೆರೆಯ ಹಿಂದೆ ಬೆಳೆಯುತ್ತಿದ್ದ ಭತ್ತದ ಬೆಳೆಗಳನ್ನು ಉಲ್ಲೇಖಿಸಿದ್ದಾರೆ.[೧] ವಿಲಿಯಮ್ ಕೊಯ್ಬಿಲೊರವರು[೨] ಕೃಷಿಗೆ ಸಂಬಂಧಪಟ್ಟ ಚಟುವಟಿಕೆಗಳಾಗಲಿ ಅಥವಾ ಕರಕುಶಲ ಚಟುವಟಿಕೆಗಳಾಗಲಿ ಉಲ್ಲೇಖಿಸಿಲ್ಲ. ದಿನಕರ ದೇಸಾಯಿಯವರು[೩] ಕೃಷಿಯು ಜನರ ಪ್ರಧಾನ ಕಸುಬಾಗಿದ್ದು, ಅದು ಉತ್ತಮ ಸ್ಥಿತಿಯಲ್ಲಿತ್ತು ಎಂದು ತಿಳಿಸಿದ್ದಾರೆ. ಕೃಷಿಯು ನೀರಾವರಿ ವ್ಯವಸ್ಥೆಯಿಂದ ಕೂಡಿದ್ದು, ಬಾವಿಯಿಂದ ನೀರೆತ್ತಲು ರಾತಾಳ ಎಂಬ ಚಕ್ರವನ್ನು ಉಪಯೋಗಿಸಲಾಗುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಸ್. ಗುರುರಾಜಚಾರ್‌ರವರು[೪] ತಮ್ಮ ಲೇಖನದಲ್ಲಿ ಭೂಮಿಯು ಉತ್ಪಾದನೆಯ ಕ್ಷೇತ್ರದಲ್ಲಿ ಪ್ರಮುಖ ಅಂಗವಾಗಿದ್ದು, ಅದು ವ್ಯಾಪಾರ ಮತ್ತು ಕೈಗಾರಿಕೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಅವರು ಭೂಮಿ ಹೇಗೆ ಈ ಚಟುವಟಿಕೆಗಳಿಗೆ ಆಧಾರವಾಗಿತ್ತು ಎಂಬುದನ್ನು ನಿಖರವಾಗಿ ತಿಳಿಸುವುದಿಲ್ಲ. ತಮ್ಮ ಸಂಶೋಧನ ಗ್ರಂಥದಲ್ಲಿ[೫] ಇವರು ಮಣ್ಣಿನ ವೈವಿಧ್ಯತೆ, ಭೂಮಿಯ ವರ್ಗೀಕರಣ, ವಿವಿಧ ರೀತಿಯ ಬೆಳೆಗಳು, ಗೊಬ್ಬರ ತಯಾರಿಕೆ, ನೀರಾವರಿ ಸೌಕರ್ಯಗಳು, ಕೃಷಿಯೇತರ ಚಟುವಟಿಕೆಗಳಾದ ನೇಯ್ಗೆ, ಎಣ್ಣೆ ಉತ್ಪಾದನೆ, ಬೆಲ್ಲ ತಯಾರಿಕೆ, ಇತ್ಯಾದಿ ಚರ್ಚಿಸಿದ್ದರೂ, ಈ ಚಟುವಟಿಕೆಗಳು ಏತಕ್ಕಾಗಿ ಈ ಅವಧಿಯಲ್ಲಿ ಅಧಿಕಗೊಂಡವು ಮತ್ತು ಈ ಅಧಿಕಗೊಂಡ ಕೃಷಿ ಚಟುವಟಿಕೆಗಳು ಹೇಗೆ ಕೃಷಿಯೇತರ ಚಟುವಟಿಕೆಗಳು ಹುಟ್ಟಿಕೊಳ್ಳಲು ಕಾರಣವಾದವು ಎಂಬುದನ್ನು ಎಲ್ಲಿಯೂ ಸ್ಪಷ್ಟವಾಗಿ ತಿಳಿಸಿಲ್ಲ. ಅನಂತಕುಮಾರ್ ಬೋಸ್[೬] ತಮ್ಮ ಲೇಖನದಲ್ಲಿ ಕೃಷಿಯ ಬಗ್ಗೆ ಚರ್ಚಿಸಿದ್ದರೂ, ಅವರು ತೀವ್ರಗೊಂಡ ಕೃಷಿಯು ಹೇಗೆ ಕೃಷಿಯೇತರ ಚಟುವಟಿಕೆಗಳಿಗೆ ನೆರವಾಯಿತೆಂಬುದನ್ನು ತಿಳಿಸುವುದಿಲ್ಲ. ಅದೇ ರೀತಿ ಆರ್. ಗಂಗೂಲಿಯವರ[೭] ಲೇಖನವು ಸಹ ಕೃಷಿ ಬೆಳವಣಿಗೆಯಿಂದಾದ ಪರಿಣಾಮಗಳಾಗಲಿ ಅಥವಾ ಅದರಿಂದುಟಾದ ಕೃಷಿಯೇತರ ಚಟುವಟಿಕೆಗಳ ಬಗ್ಗೆ ಚರ್ಚಿಸಿಲ್ಲ. ಕೆ.ಎಸ್. ಶಿವಣ್ಣನವರ[೮] ಲೇಖನದಲ್ಲಿ ಕೃಷಿಗೆ ಸಂಬಂಧಪಟ್ಟ ತೆರಿಗೆ ಪದ್ಧತಿ, ತೆರಿಗೆ ನಿರ್ಧಾರ, ತೆರಿಗೆ ವಸೂಲು, ನೀರಾವರಿ ಸೌಕರ್ಯ, ಭೂ ಒಡೆತನಕ್ಕೆ ಚರ್ಚಿಸಿದ್ದರೂ, ಇವುಗಳು ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಏನು ಪರಿಣಾಮ ಮಾಡಿದವು ಎಂಬುವರ ಬಗ್ಗೆ ಚರ್ಚಿಸಿಲ್ಲ. ಜಿ.ಆರ್. ರಂಗಸ್ವಾಮಯ್ಯರವರ ಲೇಖನ[೯] ಕೃಷಿಗೆ ಸಂಬಂಧಪಟ್ಟ ವಿಷಯಗಳಾದ ವಿವಿಧ ಬೆಳೆಗಳು, ಭೂಮಿಯ ವರ್ಗೀಕರಣ, ನೀರಾವರಿ ಸೌಕರ್ಯಗಳ ಬಗ್ಗೆ ಚರ್ಚಿಸಿದರೂ, ಅವರು ಈ ಚಟುವಟಿಕೆಗಳು ಹೇಗೆ ಕೃಷಿಯೇತರ ಚಟುವಟಿಕೆಗಳ ಉಗಮಕ್ಕೆ ನೆರವಾದವು ಎಂಬುದನ್ನು ತಿಳಿಸಿಲ್ಲ.

* ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

ಜ.ಆರ್. ಕುಪ್ಪುಸ್ವಾಮಿಯವರು ತಮ್ಮ ಸಂಶೋಧನ ಗ್ರಂಥದಲ್ಲಿ[೧೦] ಎಲ್ಲಿಯೂ ಸಹ ಹೇಗೆ ಕೃಷಿ ಚಟುವಟಿಕೆಗಳು ಗುಡಿ ಕೈಗಾರಿಕೆಗಳು ನೆರವಾಯಿತೆಂಬುದನ್ನು ತಿಳಿಸಿಲ್ಲ. ಇದೇ ರೀತಿ ಇವರು ತಮ್ಮ ಎರಡು ಲೇಖನಗಳಲ್ಲಿ[೧೧] ನೀರಾವರಿ ಸೌಕರ್ಯಗಳನ್ನು ಒದಗಿಸಿದವರ ಮತ್ತು ಪ್ರೋತ್ಸಾಹಿಸಿದವರ ಬಗ್ಗೆ ಹಾಗೂ ವಿವಿಧ ರೀತಿಯ ನೀರಾವರಿ ವ್ಯವಸ್ಥೆಗಳನ್ನು ವಿವರವಾಗಿ ಚರ್ಚಿಸಿದ್ದರೂ, ಎಲ್ಲಿಯೂ ಸಹ ಈ ಚಟುವಟಿಕೆಗಳು ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಮೇಲೆ ಯಾವ ಪರಿಣಾಮಗಳನ್ನು ಮಾಡಿದವು ಎಂಬುದನ್ನು ಸಮರ್ಪಕವಾಗಿ ಹೇಳಿಲ್ಲವೆನಿಸುತ್ತದೆ. ಹೆಚ್. ಎಸ್. ಉಷಾರಾಣಿಯವರ ಅಪ್ರಕಟಿತ ಸಂಶೋಧನ ಪ್ರಬಂಧದಲ್ಲಿ[೧೨] ಕೃಷಿಗೆ ಸಂಬಂಧಪಟ್ಟಂತೆ ಅನೇಕ ವಿವರಗಳಿದ್ದರೂ ಸಹ ಹೇಗೆ ಈ ಬೆಳವಣಿಗೆಗಳು ಆರ್ಥಿಕ ಮತ್ತು ಸಾಮಾಜಿಕ ಜೀವನದ ಮೇಲೆ ಪರಿಣಾಮ ಬೀರಿತು ಎಂಬುದನ್ನು ಹೊರತಂದಿಲ್ಲ. ರಮೇಂದ್ರನಾಥ್ ನಂದಿಯವರು ತಮ್ಮ ಗ್ರಂಥದಲ್ಲಿ[೧೩] ಕ್ರಿ.ಶ. ೬೦೦ ರಿಂದ ೧೨೦೦ರ ಅವಧಿಯಲ್ಲಿ ಕರ್ನಾಟಕದಲ್ಲಿ ನೀರಾವರಿ ತಂತ್ರಜ್ಞಾನ ಮತ್ತು ಅಧಿಕ ಕೃಷಿ ಉತ್ಪಾದನೆಯನ್ನು ಚರ್ಚಿಸಿದ್ದಾರೆ. ಆದರೆ ಅವರು ಕ್ರಿ.ಶ. ೧೨೦೦ರ ನಂತರ ಆದ ಬೆಳವಣಿಗೆಯ ಬಗ್ಗೆ ಗಮನಹರಿಸಿಲ್ಲ. ಅವರು ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ಅಡಿಕೆಗಳ ಕಾರಣ ಹೇಗೆ ಕೆಲವು ವೃತ್ತಿಗಳು ಹುಟ್ಟಿಕೊಂಡವು ಎಂಬುದನ್ನು ತಿಳಿಸಿದ್ದಾರೆ. ಮೇಲೆ ತಿಳಿಸಿದ ಕೃತಿಗಳಲ್ಲಿ ಎಲ್ಲಿಯೂ ಕೃಷಿ ಕ್ಷೇತ್ರದಲ್ಲುಂಟಾದ ಬದಲಾವಣೆ ಹಾಗೂ ಅಧಿಕ ಕೃಷಿ ಉತ್ಪಾದನೆ ಹೇಗೆ ಕೃಷಿಯೇತರ ಚಟುವಟಿಕೆಗಳು (ಗುಡಿ ಕೈಗಾರಿಕೆಗಳು ವಾಣಿಜ್ಯ) ಉಗಮವಾಗಲು ನೆರವಾದವು ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ.

ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಕ್ಯಾಥ್ಲೀನ್ ಡಿ ಮಾರಿಸನ್[೧೪] ರವರು ತಮ್ಮ ಲೇಖನದಲ್ಲಿ ಹೇಗೆ ತೀವ್ರ ಬೆಳವಣಿಗೆಗೊಂಡ ಮತ್ತು ವಿಸ್ತಾರಗೊಂಡ ಕೃಷಿ ಚಟುವಟಿಕೆಗಳು ನಗರ ಸಮಾಜದ ಉಗಮಕ್ಕೆ ನೆರವಾಯಿತೆಂಬುದನ್ನು ಚರ್ಚಿಸಿದ್ದಾರೆ. ಇವರ ಪ್ರಕಾರ ೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆ ಮತ್ತು ೧೬ನೇ ಶತಮಾನದಲ್ಲಿ ಅದರ ವಿಸ್ತರಣೆಯು ಕೃಷಿ ಚಟುವಟಿಕೆಗಳು ತೀವ್ರಗೊಂಡು ಅಧಿಕ ಕೃಷಿ ಉತ್ಪಾದನೆಯನ್ನು ಕಾಣುವಂತಾಯಿತು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಕೃಷಿ ಬೆಳವಣಿಗೆಗೂ ಮತ್ತು ಕೃಷಿಯೇತರ ಚಟುವಟಿಕೆಗಳ ಉಗಮಕ್ಕೂ ಇರುವ ಸಂಬಂಧ. ಇವರ ಪ್ರಕಾರ ನಗರಗಳ ಹುಟ್ಟು ಮತ್ತು ಬೆಳವಣಿಗೆಗೆ ಕೃಷಿಯಲ್ಲುಂಟಾದ ಬದಲಾವಣೆಯೇ ಮೂಲ ಕಾರಣ. ಇಂತಹ ಬೆಳವಣಿಗೆಯನ್ನು ನಾವು ಕ್ರಿ.ಶ. ೧೧ನೇ ಶತಮಾನದಲ್ಲಿಯೇ ಗುರುತಿಸಬಹುದು. ನಗರ ಸಮಾಜವೆಂದರೆ ಗ್ರಾಮೀಣ ಸಮಾಜಕ್ಕಿಂತ ಭಿನ್ನವಾದದ್ದು. ಗ್ರಾಮೀಣ ಸಮಾಜದ ಆರ್ಥಿಕ ಬದುಕು ಕೃಷಿಯನ್ನಾಧರಿಸಿರುತ್ತದೆ. ಇಲ್ಲಿ ಭೂಮಿಯೇ ಪ್ರಮುಖ ವಸ್ತು. ಆದರೆ ನಗರ ಸಮಾಜದ ಆರ್ಥಿಕ ಬದುಕು ಕೃಷಿಯೇತರ ಚಟುವಟಿಕೆಗಳಾದ ಗುಡಿ ಕೈಗಾರಿಕೆಗಳು ಮತ್ತು ವಾಣಿಜ್ಯವಾಗಿರುತ್ತವೆ. ಈ ಕೃಷಿಯೇತರ ಚಟುವಟಿಕೆಗಳ ಬೆಳವಣಿಗೆಗೆ ಪ್ರಮುಖವಾದ ಕಾರಣಗಳೆಂದರೆ, ಭೌಗೋಳಿಕ ವೈವಿಧ್ಯತೆ, ಹೆಚ್ಚುವರಿ ಕೃಷಿ ಉತ್ಪಾದನೆ, ವಿಶಿಷ್ಟ ಸಾಮಾಜಿಕ ವರ್ಗದ ಉಗಮ ಮುಂತಾದವು. ಇವುಗಳಲ್ಲಿ ಒಂದಾದ ಕೃಷಿಯು ಯಾವ ರೀತಿ ಗುಡಿ ಕೈಗಾರಿಕೆಗಳ ಬೆಳವಣಿಗೆಗೆ ನೆರವಾಯಿತು ಎಂಬುದನ್ನು ಈ ಲೇಖನದಲ್ಲಿ ವಿಶೇಷವಾಗಿ ಚರ್ಚಿಸಲಾಗುವುದು.

ಕರ್ನಾಟಕದಲ್ಲಿ ಕೃಷಿಯ ಚಟುವಟಿಕೆಗಳನ್ನು ಹೊಸ ಶಿಲಾಯುಗದ ಕಾಲದಿಂದಲೂ ಕಾಣಬಹುದು. ಆದರೆ ಇದು ತೀವ್ರಗೊಂಡಿದ್ದು ಬೃಹತ್ ಶಿಲಾಯುಗದಲ್ಲಿ. ಕೃಷಿಯು ಬೃಹತ್ ಶಿಲಾಯುಗದಿಂದ ಕ್ರಿ.ಶ. ಸುಮಾರು ೧೦ನೇ ಶತಮಾನದವರೆಗೂ ಮಾನವನ ಆರ್ಥಿಕ ಜೀವನದ ಪ್ರಮುಖ ಅಂಗವಾಗಿದ್ದರೂ, ಅದು ಬೇರಾವುದೆ ಚಟುವಟಿಕೆಗಳ ಬೆಳವಣಿಗೆಗೆ ನೆರವಾದಂತೆ ಕಂಡುಬಂದಿಲ್ಲ. ದಕ್ಷಿಣ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಕದಂಬರ ಮತ್ತು ಗಂಗರ ಕಾಲದಲ್ಲಿ ಕೃಷಿಯೇತರ ಚಟುವಟಿಕೆಗಳು ಅಷ್ಟಾಗಿ ಕಂಡುಬರುವುದಿಲ್ಲ. ಶಾಸನಗಳು ಹೆಚ್ಚಾಗಿ ಬ್ರಾಹ್ಮಣರಿಗೆ ಜಮೀನನ್ನು ದಾನ ಕೊಟ್ಟಿದ್ದು ಹಾಗೂ ಕೊಟ್ಟಂತಹ ಜಮೀನಿನ ಎಲ್ಲೆಯನ್ನು ತಿಳಿಸುವಾಗ ಕೆರೆ, ನದಿ ಮತ್ತು ಕಾಲುವೆಗಳನ್ನು ಉಲ್ಲೇಖಿಸುತ್ತದೆ. ಆದರೆ ಈ ಕೆರೆ ಮತ್ತು ಕಾಲುವೆಗಳನ್ನು ಯಾರು, ಯಾವಾಗ ಮತ್ತು ಏತಕ್ಕಾಗಿ ಕಟ್ಟಿಸಿದರೆಂಬುದನ್ನು ಸ್ಪಷ್ಟವಾಗಿ ತಿಳಿಸುವುದಿಲ್ಲ. ಆದರೆ ಕ್ರಿ.ಶ. ೧೦ನೇ ಶತಮಾನದ ನಂತರ ಕೆರೆಗಳ, ಕಾಲುವೆಗಳ, ಬಾವಿಗಳ ಮತ್ತು ನದಿಗಳ ಉಲ್ಲೇಖ ಮತ್ತು ಅವುಗಳ ನಿರ್ಮಾಣಕಾರರ ಮತ್ತು ಕಾಲದ ಬಗ್ಗೆ ಶಾಸನಗಳು ಹೆಚ್ಚು ಮಾಹಿತಿಯನ್ನು ನಿಖರವಾಗಿ ತಿಳಿಸುತ್ತವೆ. ಈ ಅವಧಿಯಲ್ಲಿ ಹೆಚ್ಚು ಭೂಮಿಯನ್ನು ಕೃಷಿಗೆ ಒಳಪಡಿಸಿರುವುದು, ನೀರಾವರಿ ಸೌಕರ್ಯಗಳನ್ನು ಒದಗಿಸುವುದು ಮತ್ತು ಹೊಸ ನೆಲೆಗಳನ್ನು (agrarian settlements) ಸ್ಥಾಪಿಸುವುದು ಹಾಗೂ ವಿವಿಧ ರೀತಿಯ ಬೆಳೆಗಳನ್ನು ಉತ್ಪಾದಿಸಿರುವುದನ್ನು ಶಾಸನಗಳು ಒತ್ತಿ ಹೇಳುತ್ತವೆ. ಇಂತಹ ಕೆಲಸಗಳನ್ನು ಆಳರಸರು ಪ್ರಾರಂಭಿಸಿದರೂ, ಇವುಗಳನ್ನು ಹೆಚ್ಚಾಗಿ ಆಳರಸರ ಅಧಿಕಾರಿಗಳಾದ ದಂಡನಾಯಕರು, ಸಾಮಂತರು, ಪೆರ್ಗ್ಗಡೆಗಳು, ಗಾಮುಂಡರು, ಸೇನಬೋವರು ಹಾಗೂ ಶ್ರೀಮಂತ ವರ್ತಕರು ಮತ್ತು ಕುಶಲಕರ್ಮಿಗಳು ಹೆಚ್ಚಾಗಿ ಕಾರ್ಯಗತಗೊಳಿಸಿದರು.

ಈ ನಿಟ್ಟಿನಲ್ಲಿ ಶಾಸನಗಳು ಹೆಚ್ಚು ಮಾಹಿತಿ ನೀಡುತ್ತವೆ. ಉದಾಹರಣೆಗೆ, ಕ್ರಿ.ಶ. ೧೦೬೨-೬೩ರ ಹಳೇಬೀಡು ಶಾಸನವು ಹೊಯ್ಸಳ ದೊರೆ ವಿನಯಾದಿತ್ಯನು ದೋರಸಮುದ್ರದಲ್ಲಿ ಕೆರೆಯನ್ನು ಕಟ್ಟಿಸಿ ಅದಕ್ಕೆ ತೂಬನ್ನು ಇಕ್ಕಿಸಿದ್ದನ್ನು ತಿಳಿಸುತ್ತದೆ.[೧೫] ಒಂದನೇ

ನರಸಿಂಹನು ವಿಷ್ಣುಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ಕೆರೆಯ ಹಿಂಭಾಗದ ಗದ್ದೆಯನ್ನು ಶ್ರೀ ವಿಷ್ಣು ಮತ್ತು ಶ್ರೀ ಗೋವಿಂದ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.[೧೬] ಇಂತಹ ಕೆಲಸವನ್ನು ದೊರೆಯ ಸಾಮಂತರು ಮತ್ತು ಅಧಿಕಾರಿಗಳು ಸಹ ಮುಂದುವರಿಸಿದರು. ಉದಾಹರಣೆಗೆ, ಕ್ರಿ. ಶ. ೧೧೦೬ರ ದೊಡ್ಡ ಗಾಮಿನಿ ಶಾಸನವು ಸಾಮಂತ ಬಾಚರಸನು ಕೆರೆಯೊಂದನ್ನು ಕಟ್ಟಿಸಿ ಅದನ್ನು ಕೊಡುಗೆಯಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ [೧೭].ಕ್ರಿ. ಶ. ೧೧೧೮ರ ವಿಷ್ಣುವರ್ಧನನ ದಣ್ಣಾಯಕ ಗಂಗರಾಜನು ಪರಮ ಎಂಬಲ್ಲಿ ಗಂಗಸಮುದ್ರವೆಂಬ ಕೆರೆಯನ್ನು ಕಟ್ಟಿದ್ದನ್ನು ಹೇಳುತ್ತದೆ[೧೮]. ತುರುನಾಡಿನ ದೊರೆ ಮಹಾಸಾಮಂತ ಮಾಚೇಯನಾಯಕನು ಕೆರೆಯೊಂದನ್ನು ಕಟ್ಟಿಸಿ ಅದನ್ನು ದಾನ ಮಾಡಿದ್ದನ್ನು ಮತ್ತೊಂದು ಶಾಸನವು[೧೯] ತಿಳಿಸುತ್ತದೆ. ಶ್ರೀಕರಣ ವೀರಯ್ಯ ದಣ್ಣಾಯಕನು ವೀರಬಲ್ಲಾಳಪುರದಲ್ಲಿ ರಾಮಸಮುದ್ರ, ಗಂಗಸಮುದ್ರ, ಅಚ್ಯುತಸಮುದ್ರ ಮತ್ತು ವೀರಸಮುದ್ರ ಎಂಬ ನಾಲ್ಕು ಕೆರೆಗಳನ್ನು ಕಟ್ಟಿಸಿ ಅವುಗಳನ್ನು ೩೨ ಬ್ರಾಹ್ಮಣರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ[೨೦]. ಕ್ರಿ. ಶ. ೧೦೭೪ ರ ಬಸವನಹಳ್ಳಿ ಶಾಸನವು ಕನ್ನೆಗೆರೆ ಎಂಬ ಕೆರೆಯನ್ನು ಕಟ್ಟಿ ಅದರ ಕಾಲುವೆಯಿಂದ ಒಣ ಭೂಮಿಯನ್ನು ನೀರಾವರಿಗೆ ಪರಿವರ್ತಿಸಿದ್ದನ್ನು ತಿಳಿಸುತ್ತದೆ[೨೧]. ಹನ್ನೊಂದನೆ ಶತಮಾನದ ಹಿರೇಮಗಳೂರಿನ ಶಾಸನವು ಗಾಮುಂಡ ಸಣ್ದೆರೆಯಣ್ಣ ಪೆರ್ಮಾಡಿಯು ಕೆರೆಯನ್ನು ಕಟ್ಟಿಸಿ ಅದಕ್ಕೆ ಕಲ್ಲಿನ ತೂಬನ್ನು ಇಕ್ಕಿಸಿದನ್ನು ತಿಳಿಸುತ್ತದೆ[೨೨]. ಕ್ರಿ.ಶ. ೧೧೬೪ರ ಬೇಲೂರಿನ ಶಾಸನವು ಸಾಮಂತ ಬಿಟ್ಟಿದೇವನು ಹೊಯ್ಸಳ ಸಮುದ್ರವೆಂಬ ಕೆರೆಗೆ ತೂಬನ್ನು ಇಕ್ಕಿಸಿ, ಕೆರೆಯ ಹಿಂಭಾಗದ ಭೂಮಿಯನ್ನು ಬಿಟ್ಟೇಶ್ವರ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ[೨೩]. ಕ್ರಿ. ಶ.೧೨೧೫ರ ಬಾಗೆವಾಳು ಶಾಸನವು ಬೊಮ್ಮಯ್ಯನು ಕೆರೆಯ ದಕ್ಷಿಣ ಭಾಗದ ತೂಬನ್ನು ಇಕ್ಕಿಸಿದುದನ್ನು ತಿಳಿಸುತ್ತದೆ [೨೪].ಹದಿನಾಲ್ಕನೆ ಶತಮಾನದ ಕಲ್ಕುಣಿ ಶಾಸನವು, ಕಲ್ಕುಣಿ ನಾಡಿನ ಪ್ರಭುಗಾಮುಂಡ ಮತ್ತು ಅರಸು ಬಲ್ಲಾಳಸಮುದ್ರವೆಂಬ ಕೆರೆನ್ನು ಕಟ್ಟಿಸಿ, ಅದರ ಹಿಂಭಾಗದಲ್ಲಿ ಬೆಳೆದ ಭತ್ತ ಮತ್ತು ಸಿದ್ದಾಯವನ್ನು ನಾಗೇಶ್ವರ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ[೨೫].

ಈ ಕಾರ್ಯದಲ್ಲಿ ಶ್ರೀಮಂತ ವರ್ತಕರು ಸಹ ತುಂಬ ಆಸಕ್ತಿ ವಹಿಸಿದ್ದನ್ನು ಶಾಸನಗಳಿಂದ ತಿಳಿಯಬಹುದು. ಉದಾ: ದುಗ್ಗಲಾಪುರದ ಕ್ರಿ.ಶ. ೧೧೮೪ರ ಶಾಸನವು ಹತ್ತಿಯ ವ್ಯಾಪಾರಿ ಬಮ್ಮಿಶೆಟ್ಟಿಯು ಕೆರೆಯನ್ನು ಕಟ್ಟಿಸಿ, ಕೆರೆಯ ಹಿಂಭಾಗದಲ್ಲಿ ೪೦ ಕಂಭ ಗದ್ದೆಯನ್ನು ಮಲ್ಲಿಕಾರ್ಜುನ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ[೨೬]. ಕ್ರಿ.ಶ. ೧೧೮೮ರ ಬಾಣಾವರ ಶಾಸನವು ಹೊಯ್ಸಳ ನಾಡಿನ ಪ್ರಸಿದ್ಧ ವರ್ತಕ ದಾಸಿಶೆಟ್ಟಿಯು ೨ ಕೆರೆಗಳನ್ನು ವಿಸ್ತರಿಸಿ ಸುಭದ್ರಗೊಳಿಸಿದ್ದಲ್ಲದೆ, ಅವನ ಮಗನ ಹೆಸರಲ್ಲಿ ಕತ್ತನಕೆರೆ ಮತ್ತು ಮಾವಿನಕೆರೆ ಎಂಬ ೨ ಹೊಸ ಕೆರೆಗಳನ್ನು ಕಟ್ಟಿಸಿ ಅವುಗಳಿಗೆ ತೂಬನ್ನು ಇಕ್ಕಿಸಿದ್ದನ್ನು ತಿಳಿಸುತ್ತದೆ[೨೭]. ಇದಲ್ಲದೆ ಇವನು ದೋರಸಮುದ್ರದ ಆಗ್ನೇಯ ಭಾಗದಲ್ಲಿ ಒಂದು ದೊಡ್ಡ ಕೆರೆಯನ್ನು ಸಹ ಕಟ್ಟಿಸಿದ್ದನ್ನು ತಿಳಿಸುತ್ತದೆ. ಘಟನಕೆರೆಯ ಕ್ರಿ. ಶ. ೧೨೦೧ ರ ಶಾಸನವು ಹೊಯ್ಸಳನಾಡಿನ ಮತ್ತೊಬ್ಬ ಪ್ರಸಿದ್ಧ ವರ್ತಕ ಮಹಾದೇವ ಶೆಟ್ಟಿಯು ಕೆರೆಯೊಂದನ್ನು ಕಟ್ಟಿಸಿ ಅಲ್ಲಿಯ ಚೌಡೇಶ್ವರ ದೇವಾಲಯಕ್ಕೆ ದಾನ ಮಾಡಿದ್ದನ್ನು ತಿಳಿಸುತ್ತದೆ[೨೮].ಇದಲ್ಲದೆ ಈ ಕಾಲದ ಶಾಸನಗಳು ಕೆರೆಯನ್ನು ಕಟ್ಟಲು ತಗುಲಿದ ವೆಚ್ಚವನ್ನು ಸಹ ಬಹಳ ಸ್ಪಷ್ಟವಾಗಿ ತಿಳಿಸುತ್ತವೆ[೨೯]. ಸಾಮಾನ್ಯವಾಗಿ ನೀರಾವರಿ ಕಾರ್ಯಗಳನ್ನು ಸ್ಥಳೀಯ ಮುಖಂಡರು ಗಣನೀಯ ಪ್ರಮಾಣದಲ್ಲಿ ಮಾಡಿಸುತ್ತಿದ್ದರು[೩೦].

ಈ ಅವಧಿಯಲ್ಲಿ ಹೊಸ ಕೆರೆಗಳ ಕಟ್ಟಿಸುವುದರ ಜೊತೆಗೆ ಹಳೆಯ ಕೆರೆಗಳನ್ನು ದುರಸ್ತಿಗೊಳಿಸುವುದು ಮತ್ತು ವಿಸ್ತರಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗುತ್ತಿತ್ತು. ಉದಾ: ಕ್ರಿ.ಶ.೧೦೮೦ರ ಹಳೆಬನ್ನೂರು ಶಾಸನವು ಜಕ್ಕಗೋಸಿಯೆಂಬುವನು ತಂಬರಸ ಅಧಿಕಾರಿ ಮತ್ತು ಪೆರ್ಗ್ಗಡೆ ಲೋಕನಾಥಯ್ಯ ಹಾಗೂ ಮಹಾಜನರ ಸೂಚನೆಯಂತೆ ಒಡೆದು ಹೋಗಿದ್ದ ಬನ್ನೂರಿನ ಕೆರೆಯನ್ನು ಮತ್ತೆ ಕಟ್ಟಿಸಿದುದರಿಂದ ಆ ಕೆರೆಗೆ ತಂಬಸಮುದ್ರವೆಂದು ಕರೆಯಲಾಯಿತು[೩೧].ಈ ಕೆಲಸ ಮಾಡಿದ್ದಕ್ಕಾಗಿ ಅವನಿಗೆ ಭೂಮಿಯನ್ನು ದಾನ ಮಾಡಿದ್ದನ್ನು ಇದೇ ಶಾಸನವು ತಿಳಿಸುತ್ತದೆ. ಕ್ರಿ.ಶ.೧೧೫೫ರ ಬೇತಮಂಗಲದ ಮತ್ತೊಂದು ಶಾಸನವು ವಿಷ್ಣುವರ್ಧನನ ಗರುಡನಾದ ಸೊಕ್ಕಿಮಯ್ಯನು ವಿಜಯಾದಿತ್ಯ ಮಂಗಲದಲ್ಲಿ ಬಿರುಕುಗೊಂಡಿದ್ದ ಕೆರೆಯನ್ನು ಮತ್ತೆ ಸದೃಢಗೊಳಿಸಿ, ಅದಕ್ಕೆ ದೊಡ್ಡ ತೂಬನ್ನು ಇಕ್ಕಿಸಿದುದನ್ನು ತಿಳಿಸುತ್ತದೆ [೩೨]. ಬ್ರಹ್ಮಸಮುದ್ರದ ೧೩ ನೇ ಶತಮಾನದ ಮೂರು ಶಾಸನಗಳು ಕೆರೆಯ ಏರಿಯನ್ನು (ಮೇಲಂಕಣ) ಎತ್ತರಿಸಿದುದನ್ನು ಮತ್ತು ಭದ್ರಪಡಿಸಿದುದನ್ನು ತಿಳಿಸುತ್ತದೆ[೩೩].

ಈ ಸಮಯದಲ್ಲಿ ಆಳರಸರು ಮತ್ತು ಅವರ ಅಧೀನರು ಕೆರೆಗಳನ್ನು ಸಂರಕ್ಷಿಸುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು. ಕೆರೆಗಳ ಸೂಕ್ತ ನಿರ್ವಹಣೆಗಾಗಿ ತಕ್ಕ ವ್ಯವಸ್ಥೆಗಳನ್ನು ಹೊಂದಿದ್ದರು. ರಾಜ್ಯವು ಸಾರ್ವಜನಿಕರನ್ನು ಈ ಕ್ಷೇತ್ರಕ್ಕೆ ಸೆಳೆಯುವುದಕ್ಕೋಸ್ಕರ ಹಲವು ಆಕರ್ಷಕ ರಿಯಾಯತಿಗಳನ್ನು ನೀಡುತ್ತಿತ್ತು. ಅವುಗಳೆಂದರೆ ಭೂದಾನ (ಬಿತ್ತುವಟ್ಟ) ಮತ್ತು ಕಂದಾಯದಿಂದ ಮುಕ್ತಗೊಳಿಸುವುದು. ಉದಾ: ಕ್ರಿ.ಶ. ೧೦೦೦ದ ತುಮಕೂರು ಜಿಲ್ಲೆಯ ಎಳಪಿ ಶಾಸನವು ಭೂಪ ಎಂಬುವನಿಗೆ ಕೆರೆಯನ್ನು ಕಟ್ಟಿಸಿದುದಕ್ಕಾಗಿ ಬಿತ್ತುವಟ್ಟ ಎಂಬ ಭೂದಾನ ಮಾಡಿದುದನ್ನು ತಿಳಿಸುತ್ತದೆ[೩೪]. ಹನ್ನೊಂದನೆ ಶತಮಾನದ ಕೊಡಗಿನ ಜಿಲ್ಲೆಯ ಮೋರಿಕಲ್ಲು ಶಾಸನವು ಬೀಚಬ್ಬೆ ಎಂಬುವವಳು ನೆಜಿಲುಗವಿನಿ (ನೆರಿಲುಗಳನಿ) ಎಂಬಲ್ಲಿ ಕೆರೆಯನ್ನು ಕಟ್ಟಿಸಿ ಅದನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೋಸ್ಕರ ಅವಳ

ಸ್ವರ್ಗಸ್ಥನಾದ ಅಣ್ಣ ನಿಂಗಪ್ಪನ ಸ್ಮರಣೆಯಲ್ಲಿ ಭೂದಾನ (ಬಿತ್ತುವಟ್ಟ) ಮಾಡಿದ್ದನ್ನು ತಿಳಿಸುತ್ತದೆ[೩೫]. ಕ್ರಿ.ಶ.೧೧೮೬ರ ವೀರದೇವನಹಳ್ಳಿ ಶಾಸನವು ಕೆರೆಯುನ್ನು ಕಟ್ಟಿಸಿದವರಿಗೆ ಭೂಮಿಯನ್ನು ಬಿತ್ತುವಟ್ಟ ಅಥವಾ ಕೆರೆಗೊಡುಗೆ ರೂಪದಲ್ಲಿ ೧೨ ವರ್ಷಗಳವರೆಗೆ ಕಂದಾಯ ರಹಿತವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ[೩೬].

ಪಟ್ಟಿ - ೧

ಕೆರೆಗಳ ನಿರ್ಮಾಣ

ಕಾಲ	ದೊರೆಗಳು	ಸಾಮಂತರು	ಪೆರ್ಗ್ಗಡೆಗಳು	ಗಾಮುಂಡರು	ವರ್ತಕರು	ಇತರರು
ಕ್ರಿ.ಶ. ೧೧	೦೧	೦೫	೦೨	೦೭	೦೫	೦೪
ಕ್ರಿ.ಶ. ೧೨	೦೨	೧೯	೦೭	೦೮	೦೩	೧೧
ಕ್ರಿ.ಶ. ೧೩	--	೦೬	--	೦೫	೦೩	೦೮
ಕ್ರಿ.ಶ. ೧೪	೦೧	೦೫	--	--	--	೦೪
ಒಟ್ಟು	೦೪	೩೫	೦೯	೨೦	೧೧	೨೭

ಮೇಲಿನ ಪಟ್ಟಿಯು ನೀರಾವರಿ ಸೌಕರ್ಯಗಳನ್ನು ಆಳರಸರು ಪ್ರಾರಂಭಿದರೂ ಸಹ ಅವು ಹೆಚ್ಚಾಗಿ ಕಾರ್ಯಗತಗೊಂಡಿದ್ದು ಸ್ಥಳೀಯ ಮುಖಂಡರುಗಳಾದ ಗಾಮುಂಡರು, ಸಾಮಂತರು ಮತ್ತಿತರರಿಂದ ಎಂಬುದು ತಿಳಿದುಬರುತ್ತದೆ. ಇದಲ್ಲದೆ ಈ ಚಟುವಟಿಕೆಗಳು ೧೧ ನೇ ಶತಮಾನದಲ್ಲಿ ಪ್ರಾರಂಭಗೊಂಡು ೧೨ ನೇ ಶತಮಾನದಲ್ಲಿ ಹೆಚ್ಚು ಪ್ರಮಾಣದಲ್ಲಿ ಕಂಡು ಬಂದು ನಂತರ ೧೩ ಮತ್ತು ೧೪ ನೇ ಶತಮಾನದಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಮುಖಗೊಂಡಿರುವುದು ತಿಳಿದುಬರುತ್ತದೆ.

ಪಟ್ಟಿ - ೨

ಕಾಲ	ಕೆರೆ	ತೂಬ	ಕಾಲುವೆ	ಬಾವಿ	ಕೊಳ	ದುರಸ್ತಿ	ಬಿತ್ತುವಟ್ಟ	ಕೆರೆಯಬಂಡಿ	ನೀರೆತ್ತುವ ಚಕ್ರ
ಕ್ರಿ.ಶ. ೧೧.	೨೩	೦೮	೦೪	-	-	೦೧	೦೫	೦೧	--
ಕ್ರಿ.ಶ. ೧೨.	೫೦	೦೩	೦೧	೦೧	೦೧	೦೧	೦೩	೦೧	--
ಕ್ರಿ.ಶ. ೧೩.	೨೬	೦೩	೦೪	೦೧	೦೧	೦೬	೦೬	೦೩	೦೧
ಕ್ರಿ.ಶ. ೧೪.	೧೧	೦೩	೦೨	೦೧	೦೨	೦೩	೦೧	೦೧	೦೧
ಒಟ್ಟು	೧೧೦	೧೭	೧೧	೦೩	೦೪	೧೧	೧೫	೦೬	೦೨

ಮೇಲಿನ ಪಟ್ಟಿಯಿಂದ ತಿಳಿದು ಬರುವುದೇನೆಂದರೆ ಕೃಷಿಯನ್ನು ಅಭಿವೃದ್ಧಿಪಡಿಸಲು ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವುದು. ನೀರಾವರಿಯನ್ನು ಬಲಪಡಿಸಲು ಕೆರೆಗಳಿಗೆ ತೂಬು ಇಡುವುದು, ಕೆರೆಯ ಹೂಳೆತ್ತಲು ಬಂಡಿಗಳನ್ನು ನಿಯೋಜಿಸುವುದು, ಕೆರೆಗಳಿಗೆ ಕಾಲುವೆಗಳನ್ನು ತೋಡಿ ಕೆರೆಯ ನೀರನ್ನು ದೂರದ ಪ್ರದೇಶಕ್ಕೆ ಒದಗಿಸುವುದು, ಕೊಳಗಳನ್ನು ಕೆರೆಗಳಾಗಿ ಪರಿವರ್ತಿಸುವುದು, ಹಾಗೂ ಕೆರೆಯನ್ನು ಕಟ್ಟಲಾಗದ ಪ್ರದೇಶಗಳಲ್ಲಿ ಬಾವಿಯನ್ನು ತೋಡಿ, ನೀರೆತ್ತಲು ನೀರೆತ್ತುವ ಚಕ್ರವನ್ನು ಅಳವಡಿಸುವ ಚಟುವಟಿಕೆಗಳು ಹೆಚ್ಚಾಗಿ ಕಂಡುಬರುತ್ತವೆ. ಇದರಿಂದ ನೀರಾವರಿಯ ತಂತ್ರಜ್ಞಾನವು ತೀವ್ರಗೊಂಡಿರುವುದು ತಿಳಿದುಬರುತ್ತದೆ.

ನೀರಾವರಿ ಸೌಕರ್ಯಗಳನ್ನು ಹಲವಾರು ವಿಧಾನಗಳಿಂದ ಬಲಪಡಿಸಲಾಗುತ್ತಿತ್ತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕೆರೆಯಲ್ಲಿ ಶೇಖರಗೊಳ್ಳುತ್ತಿದ್ದ ಮಣ್ಣನ್ನು ತೆಗೆದು ನೀರಿನ ಶೇಖರಣೆಯನ್ನು ಹೆಚ್ಚಿಸಲಾಗುತ್ತಿತ್ತು. ಕೆರೆಯ ಹೂಳೆತ್ತಲು ಎತ್ತಿನ ಗಾಡಿ ಮತ್ತು ಗಾಡಿಯನ್ನು ನೆಡೆಸಲು ಓರ್ವ ಚಾಲಕನನ್ನು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಹೊಂದಿರುತ್ತಿದ್ದರು. ಇವುಗಳ ಸಹಾಯದಿಂದ ಕೆರೆ ಕಟ್ಟುವುದು, ಕೆರೆಗಳನ್ನು ಸುಭದ್ರಗೊಳಿಸುವುದು ಹಾಗೂ ಕೆರೆಯ ಹೂಳೆತ್ತಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಶಾಸನಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ. ಉದಾ: ಕ್ರಿ. ಶ. ೧೦೬೪-೬೫ರ ಬಾಡದಗ್ರಾಮದ ಶಾಸನವು, ಅಗ್ರಹಾರ ಬಾಡದ ಮಹಾಜನರು ಪಿರಿಯಕೆರೆಯ ಸಂರಕ್ಷಣೆಗಾಗಿ ತಿಪ್ಪೆ ಸುಂಕದಿಂದ ಬಂದಂತ ಆದಾಯ ಹಾಗೂ ದಂಡದ (ಪ್ರಾಯಶ್ಚಿತ್ತ, ತಪ್ಪು, ತವುದು) ರೂಪದಲ್ಲಿ ಬಂದ ಆದಾಯವನ್ನು ಕೆರೆಯ ಬಂಡಿಯನ್ನು ಹೊಂದಲು ಕೊಟ್ಟಿರುವುದನ್ನು ತಿಳಿಸುತ್ತದೆ[೩೭]. ಕ್ರಿ. ಶ. ೧೨೦೮ರ ಹಿರೇನಲ್ಲೂರಿನ ಶಾಸನವು ಇಮ್ಮಡಿ ಬಲ್ಲಾಳನ

ಮಹಾಪ್ರಧಾನರು ಒಂದು ಎತ್ತಿನಗಾಡಿಯನ್ನು ಹಾಗೂ ಗದ್ದೆ ಮತ್ತು ಹೊಲವನ್ನು ಕ್ರಯಕ್ಕೆ ನಲ್ಲೂರಿನ ಹಿರಿಯಕೆರೆಯ ಸಂರಕ್ಷಣೆಗಾಗಿ ದಾನ ಮಾಡಿರುವುದನ್ನು ತಿಳಿಸುತ್ತದೆ[೩೮].

ನೀರಾವರಿ ಸೌಕರ್ಯಗಳನ್ನು ದೊಡ್ಡ ಕೆರೆಗಳಿಗೆ ಕಾಲುವೆ ತೆಗೆಯುವುದರಿಂದ ಮತ್ತು ಬಾವಿಗಳನ್ನು ತೋಡುವುದರಿಂದಲೂ ಸರ್ಕಾರವು ಅಭಿವೃದ್ಧಿಗೊಳಿಸುತ್ತಿತ್ತು .ಉದಾ: ಕ್ರಿ.ಶ. ೧೧೨೫ರ ತಿರುಮಲಸಾಗರ ಛತ್ರದ ಶಾಸನವೊಂದು ಧರ್ಮರಾಶಿಪಂಡಿತನ ಮಗ ಸೋಮಭಟ್ಟನು ನೀರಾವರಿಗೋಸ್ಕರ ಕಾಲುವೆ ತೋಡಿಸಿದ್ದನ್ನು ತಿಳಿಸುತ್ತದೆ[೩೯]. ಎರಡನೆ ನರಸಿಂಹನ ಕಾಲದ ತೊಣ್ಣೂರು ಶಾಸನವು ದೊರೆ ನರಸಿಂಹನು ಕುರುವಂಕನಾಡಿನ ಹೊಳೆಯ ಸುಂಕದಿಂದ ಬಂದ ಆದಾಯದಲ್ಲಿ ೬೪ ಗದ್ಯಾಣಗಳನ್ನು ತೊಂಡನೂರಿನ ಮಹಾಜನರಿಗೆ ಕಾಲುವೆಯ ವಾರ್ಷಿಕ ದುರಸ್ತಿ ಕಾರ್ಯಕ್ಕೆ ಕೊಟ್ಟಿರುವುದನ್ನು ತಿಳಿಸುತ್ತದೆ[೪೦]. ಇದಲ್ಲದೆ ಕೊಳಗಳನ್ನು ಕೆರೆಗಳಾಗಿ ಪರಿವರ್ತಿಸಿ ನೀರಾವರಿ ಸೌಕರ್ಯಗಳನ್ನು ಒದಗಿಸಲಾಗಿತ್ತು . ಈ ನಿಟ್ಟಿನಲ್ಲಿ ಕೆಲವು ಶಾಸನಗಳು ಮಹತ್ವದ ಮಾಹಿತಿ ನೀಡುತ್ತವೆ. ಉದಾ : ಕ್ರಿ.ಶ. ೧೧೨೩ರ ಶ್ರವಣ ಬೆಳಗೊಳದ ಶಾಸನವು ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯು ಒಂದು ಕೊಳವನ್ನು ಕೆರೆಯನ್ನಾಗಿ ಪರಿವರ್ತಿಸಿ, ಅದನ್ನು ಸವತಿ ಗಂಧವಾರಣ ಬಸದಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ[೪೧]. ಕ್ರಿ.ಶ.೧೧೪೫ರ ಓಬೇನಹಳ್ಳಿ ಶಾಸನವು ದೇವೇಶ ಭಟ್ಟಾರ ಎಂಬುವವರು ಸಿಂಘನಕಟ್ಟ ಎಂಬ ಕೊಳವನ್ನು ಕರುಣಾಕರ ಸಮುದ್ರವೆಂಬ ಕೆರೆಯನ್ನಾಗಿ ಮಾರ್ಪಡಿಸಿದುದನ್ನು ತಿಳಿಸುತ್ತದೆ[೪೨].

ಕೃಷಿ ಅಭಿವೃದ್ಧಿಯಲ್ಲಿ ಬಾವಿಗಳು ಸಹ ಮಹತ್ತರ ಪಾತ್ರ ವಹಿಸಿವೆ. ಕೆರೆಗಳನ್ನು ಕಟ್ಟಲು ಎಲ್ಲಿ ಸಾಧ್ಯವಾಗಿರಲಿಲ್ಲವೋ ಅಲ್ಲಿ ಬಾವಿಗಳನ್ನು ತೋಡಿ ಕೃಷಿಯನ್ನು ಅಭಿವೃದ್ಧಿಪಡಿಸಲಾಗುತ್ತಿತ್ತು. ಬಾವಿ ತೋಡಿಸುವುದಕ್ಕೆ ಸಂಬಂಧಿಸಿದಂತೆ ಕೆಲವೇ ಕೆಲವು ಶಾಸನಗಳು ದೊರಕುತ್ತವೆ. ಅವುಗಳೆಂದರೆ, ಕ್ರಿ.ಶ. ೧೧೬೩ರ ಮಾನವಕೋಟೆ ಶಾಸನವು ದೇಶಿಯ ದಣ್ಣಾಯಕ ದೇವಪ್ಪನು ಕೊಲ್ಲಿಗನಘಟ್ಟದಲ್ಲಿ ಒಂದು ಬಾವಿಯನ್ನು ತೋಡಿಸಿ, ಅದರೊಟ್ಟಿಗೆ ಸ್ವಲ್ಪ ಜಮೀನನ್ನು ಸಹ ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.[೪೩] ಇಮ್ಮಡಿ ಬಲ್ಲಾಳನ ಮತ್ತಿಘಟ್ಟದ ಶಾಸನವೊಂದು ಬಾವಿಯನ್ನು ತೋಡಿ ನಂತರ ಸ್ವಲ್ಪ ಗದ್ದೆಯನ್ನು ತುರುಗಾಳಗದಲ್ಲಿ ಸತ್ತಂತಹ ಮಾರಗಾಮುಂಡನಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.[೪೪] ರಾಮಚಂದ್ರ ಚರಿತಪುರಾಣದ ಪ್ರಕಾರ ಬಾವಿಯಿಂದ ನೀರೆತ್ತಲು ರಾತಾಳ ಎಂಬ ಬಾವಿಚಕ್ರವನ್ನು ಬಳಸಲಾಗುತ್ತಿತ್ತು.[೪೫]

ನೀರಾವರಿ ಸೌಕರ್ಯವನ್ನು ಕಪಿಲೆಗಳನ್ನು ಬಳಸುವುದರಿಂದಲೂ ಸಹ ಹೆಚ್ಚಿಸಲಾಗುತ್ತಿತ್ತು. ಇದು ಸಾಮಾನ್ಯವಾಗಿ ಎತ್ತರವಾದ ಒಣ ಪ್ರದೇಶದಲ್ಲಿ ಕಾಣಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಶಾಸನಗಳು ಮಾಹಿತಿ ನೀಡುತ್ತವೆ. ಉದಾ: ಕ್ರಿ.ಶ. ೧೨೧೫ರ ರಾಮನಾಥಪುರದ ಶಾಸನವು ದೇವಾಲಯದ ತೋಟಕ್ಕೆ ನೀರನ್ನು ಕಪಿಲೆಯ ಮುಖಾಂತರ ಒದಗಿಸುತ್ತಿದ್ದುದನ್ನು ತಿಳಿಸುತ್ತದೆ.[೪೬] ಈ ಕಪಿಲೆಯನ್ನು ಎತ್ತುಗಳ ಸಹಾಯದಿಂದ ನಡೆಸಲಾಗುತ್ತಿತ್ತು. ಇದನ್ನು ನೋಡಿಕೊಳ್ಳಲು ಶ್ರೀಕರಣ ವಿಜಯಣ್ಣನ ಮಗ ಸೋವಣ್ಣನು ಸಿದ್ದಾಯದಿಂದ ಬಂದ ಆದಾಯವನ್ನು ನೀಡಿದ್ದನು. ಈ ಕಪಿಲೆಯ ವಿಧಾನವು ಪಶ್ಚಿಮ ಏಷ್ಯಾದಿಂದ ತುರ್ಕರ ಆಗಮನದೊಂದಿಗೆ ಭಾರತಕ್ಕೆ ಬಂದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೪೭] ನೀರಾವರಿ ಸೌಕರ್ಯವು ಅಂದಿನ ಸಮಾಜದ ಅಭಿವೃದ್ಧಿಗೆ ಪ್ರಮುಖ ಅಂಶವಾಗಿತ್ತೆಂದು ಕಾಣುತ್ತದೆ. ನೀರಾವರಿ ಸೌಕರ್ಯಗಳನ್ನು ಒದಗಿಸುವುದು, ಕಾಪಾಡುವುದು ಒಂದು ಪುಣ್ಯದ ಕೆಲಸವೆಂದು ಪರಿಗಣಿಸಲ್ಪಟ್ಟಿತ್ತು. ಇದಕ್ಕೆ ಸಂಬಂಧಿಸಿದಂತೆ ವಿಜ್ಞಾನೇಶ್ವರನು ಈ ರೀತಿ ಅಭಿಪ್ರಾಯಪಟ್ಟಿದ್ದಾನೆ: 'ನೀರಿನ ಹರಿವಿಗೆ ಸೇತುವೆ ಕಟ್ಟುವುದನ್ನು ಜಮೀನಿನ ಮಾಲೀಕ ತನ್ನ ಜಮೀನಿಗೆ ಅಲ್ಪಸ್ವಲ್ಪ ತೊಂದರೆಯಾದರೂ ತಡೆಯಬಾರದು. ಇದರಿಂದ ಸ್ವಲ್ಪ ಜನರಿಗೆ ತೊಂದರೆಯಾದರೂ ಹೆಚ್ಚು ಜನರಿಗೆ ಪ್ರಯೋಜನವಾಗುತ್ತದೆ'.[೪೮]

ಈ ಮೇಲಿನ ಎಲ್ಲಾ ಕ್ರಮಗಳು ಅಂದರೆ ಕೆರೆ ಕಟ್ಟಿಸುವುದು, ಕೆರೆಗಳಿಗೆ ವಿವಿಧ ರೀತಿಯ ತೂಬುಗಳನ್ನು (ಕಲ್ಲಿನ, ಕಬ್ಬಿಣದ) ಅಳವಡಿಸುವುದು, ಹೂಳೆತ್ತುವುದು, ಕೋಡಿಯನ್ನು ಭದ್ರಪಡಿಸುವುದು, ಕಾಲುವೆ ಮತ್ತು ಬಾವಿ ತೋಡಿಸುವುದು ಮುಂತಾದವುಗಳಿಂದ ಈ ಅವಧಿಯಲ್ಲಿ ಹೆಚ್ಚು ಬಂಜರು ಮತ್ತು ಅರಣ್ಯ ಭೂಮಿಯ ಕೃಷಿ ಚಟುವಟಿಕೆಗಳಿಗೆ ಒಳಪಟ್ಟಿತು. ಇದಕ್ಕೆ ಸಂಬಂಧಿಸಿದಂತೆ ಒಂದನೇ ನರಸಿಂಹನ ಕಾಲದ ಬೊಮ್ಮನಹಳ್ಳಿಯ ಶಾಸನವು ಒಣ ಭೂಮಿಯನ್ನು ೨೦ ಹೊನ್ನುಗಳನ್ನು ಖರ್ಚುಮಾಡಿ ನೀರಾವರಿಗೆ ಪರಿವರ್ತಿಸಿದ್ದನ್ನು ತಿಳಿಸುತ್ತದೆ[೪೯]. ಇದರಿಂದಾಗಿ ಇದುವರೆಗೆ ಹಳ್ಳಿಗಳಲ್ಲಿದ್ದ ಹೆಚ್ಚಿನ ಜನಸಂಖ್ಯೆಯನ್ನು ಹೊಸದಾಗಿ ತೆರೆಯಲ್ಪಟ್ಟ ಹಳ್ಳಿಗಳಿಗೆ (agrarian settlements) ಸ್ಥಳಾಂತರಿಸಲಾಯಿತು. ಇದಲ್ಲದೆ ರಾಜ್ಯದ ಕಂದಾಯ ವ್ಯಾಪ್ತಿಯು (revenue base) ವಿಸ್ತಾರಗೊಂಡು ಬೊಕ್ಕಸಕ್ಕೆ ಅಧಿಕ ಆದಾಯ ಬರುವಂತಾಯಿತು. ಹೀಗಾಗಿ ಈ ಸಮಯದಲ್ಲಿ ಹೆಚ್ಚಾಗಿ ಹೊಸ ಕೃಷಿ ಪ್ರಧಾನವಾದ ಊರುಗಳು (agrarian settlements) ಅಸ್ತಿತ್ವಕ್ಕೆ ಬಂದಿದ್ದನ್ನು ಶಾಸನಗಳು ತಿಳಿಸುತ್ತವೆ. ಉದಾ: ಕ್ರಿ.ಶ. ೧೦೯೬ರ ರನ್ನಘಟ್ಟ ಶಾಸನವು ರಣಕಿಘಟ್ಟ ಎಂಬ ಹಳ್ಳಿಯನ್ನು ಸ್ಥಾಪಿಸಿದುದನ್ನು, ಭೂಚೇಶ್ವರ ಎಂಬ ದೇವಾಲಯವನ್ನು ಹಾಗೂ ಬಳ್ಳಿಗೆರೆ ಎಂಬ ಕೆರೆಯನ್ನು ಕಟ್ಟಿಸಿದುದನ್ನು ತಿಳಿಸುತ್ತದೆ.[೫೦] ಕ್ರಿ.ಶ. ೧೧೦೧ರ ಮಣಕತ್ತೂರು ಶಾಸನವು ಮಹಾಪ್ರಭು ತಂತ್ರಪಾಲ ಪೆರುಮಾಡಿದೇವನು ಮಣಗತ್ತೂರು ಎಂಬ ಹಳ್ಳಿಯನ್ನು ಸ್ಥಾಪಿಸಿದುದನ್ನು ತಿಳಿಸುತ್ತದೆ.[೫೧] ಕ್ರಿ.ಶ. ೧೧೭೭-೭೮ರ

ಕೂಡಲೂರು ಶಾಸನವು ಮಹಾಪ್ರಧಾನ ತಂತ್ರಪಾಲ ಪೆರುಮಾಡಿ ದೇವನು ಕಾಡನ್ನು ಕಡಿದು ಹೊಸ ಊರನ್ನು ಕಟ್ಟಿದುದನ್ನು ತಿಳಿಸುತ್ತದೆ.[೫೨] ಈ ಎಲ್ಲಾ ಕೆಲಸಗಳು ಹೆಚ್ಚು ಕಡಿಮೆ ರಾಜ್ಯದ ಆಡಳಿತಾಧಿಕಾರಿಗಳು ರಾಜ್ಯದ ಆದಾಯವನ್ನು ಅಧಿಕಗೊಳಿಸುವುದಕ್ಕೂ ಮತ್ತು ಪುಣ್ಯವನ್ನು ಪಡೆಯಲು ಮಾಡತ್ತಿದ್ದರು.

ಹೊಸ ಹಳ್ಳಿಗಳನ್ನು (agrarian settlements) ಸ್ಥಾಪಿಸುವುದರೊಂದಿಗೆ ಕೃಷಿಯನ್ನು ಹೆಚ್ಚು ವಿಸ್ತಾರಗೊಳಿಸಲಾಯಿತು. ಹೊಸ ಪ್ರದೇಶವನ್ನು (ಹಳ್ಳಿ ಮತ್ತು ಭೂಮಿಯನ್ನು) ಬ್ರಾಹ್ಮಣರಿಗೆ ದಾನ ಮಾಡಿದ್ದರಿಂದ ಅಂತಹ ಪ್ರದೇಶಗಳಲ್ಲಿ ಬ್ರಾಹ್ಮಣರು ಹೊಸ ಕೃಷಿ ಪದ್ಧತಿಯನ್ನು ರೂಢಿಗೆ ತಂದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪಂಚಾಂಗ, ಔಷಧ ಮತ್ತು ಪಶು ಸಂಪತ್ತನ್ನು ಸಂರಕ್ಷಿಸುವುದು. ಪಂಚಾಂಗವು ರೈತರಿಗೆ ಮಳೆಯ ನಕ್ಷತ್ರ, ಬೀಜ ಬಿತ್ತುವುದು, ಉಳುಮೆ ಮಾಡುವುದು, ಕಟಾವು ಮಾಡುವ ಸಮಯದ ಬಗ್ಗೆ ಹೆಚ್ಚು ಅರಿವು ಮಾಡಿ ಕೊಟ್ಟಿತು. ಈ ಜ್ಞಾನವು ಹಿಂದುಳಿದ ಪ್ರದೇಶಗಳಲ್ಲಿ ಪ್ರಸರಗೊಂಡು ಅಧಿಕ ಕೃಷಿ ಉತ್ಪಾದನೆ ಮಾಡಲು ಸಹಕಾರಿ ಯಾಯಿತು. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ಅಧಿಕ ಆದಾಯ ಬರುವುದರ ಜೊತೆಗೆ ಹಲವಾರು ಕರಕುಶಲ ಕಸುಬುಗಳು (ವೃತ್ತಿಗಳು) ಹುಟ್ಟಿಕೊಳ್ಳಲು ದಾರಿ ಮಾಡಿಕೊಟ್ಟಿತು.[೫೩]

ಈ ಅವಧಿಯಲ್ಲಿ ಕೃಷಿ ಚಟುವಟಿಕೆಗಳು ಕಬ್ಬಿಣ ಮತ್ತು ನೀರಾವರಿ ತಂತ್ರಜ್ಞಾನಗಳಿಂದ ಒಡಗೂಡಿದ್ದರಿಂದ ಹಲವಾರು ರೀತಿಯ ಆರ್ಥಿಕ ಬೆಳೆಗಳನ್ನು ಬೆಳೆಯಲು ಅನುವಾಯಿತು.[೫೪] ಈ ಹೊಸ ತಂತ್ರಜ್ಞಾನದಿಂದಾಗಿ ಕೆರೆಯಲ್ಲಿ ನೀರನ್ನು ಸಂಗ್ರಹಿಸಲು ಸಂಗ್ರಹಿಸಿದಂಥ ನೀರನ್ನು ಕಾಲುವೆಗಳ ಮತ್ತು ತೂಬುಗಳ ಮೂಲಕ ದೂರದ ಪ್ರದೇಶಕ್ಕೆ ಒಯ್ದು ಹೆಚ್ಚು ಭೂಮಿಯನ್ನು ನೀರಾವರಿಗೊಳಪಡಿಸಲಾಯಿತು. ಇದುವರೆಗೂ ಮಳೆಯನ್ನೇ ಆಧರಿಸಿದ್ದ ರೈತ ಕೇವಲ ಒಂದು ಬೆಳೆ ಬೆಳೆಯುತ್ತಿದ್ದು, ಈಗ ನೀರಿನ ಸೌಲಭ್ಯ ದೃಢಪಟ್ಟಿದ್ದರಿಂದ ೨ ರಿಂದ ೩ ಬೆಳೆಗಳನ್ನು ಬೆಳೆಯಲು ನೆರವಾಯಿತು[೫೫]. ಆಹಾರ ಧಾನ್ಯಗಳ ಜೊತೆಗೆ ಆಹಾರೇತರ ಬೆಳೆಗಳಾದ ಹತ್ತಿ, ಕಬ್ಬು, ಅಡಿಕೆ, ತೆಂಗು ಹಾಗೂ ವಿವಿಧ ರೀತಿಯ ಎಣ್ಣೆಕಾಳು (ಸಾಸಿವೆ, ಶೇಂಗ, ಎಳ್ಳು)ಗಳನ್ನು ಬೆಳೆಯಲಾರಂಭಿಸಿದರು.[೫೬] ಈ ನಿಟ್ಟಿನಲ್ಲಿ ಶಾಸನಗಳು ಮಹತ್ವದ ಮಾಹಿತಿ ನೀಡುತ್ತವೆ. ಉದಾ : ಕ್ರಿ.ಶ. ೧೨೧೬ರ ದೊಡ್ಡಗದ್ದವಳ್ಳಿ ಶಾಸನವು ೧೨೦೦ ಅಡಿಕೆ ಮರದ ತೋಟವನ್ನು ಉಲ್ಲೇಖಿಸುತ್ತದೆ.[೫೭] ಕ್ರಿ.ಶ. ೧೧೮೦ರ ಬೇಲೂರು ಶಾಸನವು ಇಮ್ಮಡಿ ಬಲ್ಲಾಳನು ೧೨ ರೀತಿಯ ಧಾನ್ಯಗಳನ್ನು ಶೇಖರಿಸಿಡಲು ಒಂದು ಕೊಟ್ಟಾರವನ್ನು ಕಟ್ಟಿಸಿದುದನ್ನು ತಿಳಿಸುತ್ತದೆ.[೫೮] ಕ್ರಿ.ಶ. ೧೦೪೮-೪೯ರ ತೊಣಚಿ ಶಾಸನವು ಹೊಯ್ಸಳ ದೊರೆ ವಿನಯಾದಿತ್ಯನು ಧಾನ್ಯಗಳ ಮಾರಾಟದಿಂದ ಬಂದ ಆದಾಯವನ್ನು ದೇವರಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.[೫೯] ಕ್ರಿ.ಶ. ೧೦೮೭ರ ಒಬಳಾಪುರ ಶಾಸನವು ವೀರನೊಳಂಬ ಜಗದೇಕಮಲ್ಲನು ಅಡಿಕೆ, ವಿಳ್ಳೇದೆಲೆ, ಮೆಣಸು, ಶುಂಟಿ, ಅರಿಶಿನ, ಹತ್ತಿ, ಸೀರೆಗಳು, ಭತ್ತ ಮತ್ತು ಅಂಗಡಿ ಸುಂಕದಿಂದ ಬಂದ ಆದಾಯವನ್ನು ಶ್ರೀ ರಾಮದೇವರ ನಂದಾದೀವಿಗೆಗೆ ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೬೦] ಕ್ರಿ.ಶ. ೧೧೦೦-೦೧ರ ದಬ್ಬೆ ಅಗ್ರಹಾರದ ಶಾಸನವು ಇಮ್ಮಡಿ ಬಲ್ಲಾಳನು ತೋಟದ ಸುಂಕದಿಂದ ಬಂದ ಆದಾಯವನ್ನು ಕೋಟೇಶ್ವರ ದೇವರ ಅರ್ಚನೆಗೋಸ್ಕರ ದಾನ ಮಾಡಿದ್ದನ್ನು ತಿಳಿಸುತ್ತದೆ.[೬೧] ಕ್ರಿ.ಶ. ೧೧೮೫ ರ ತರೀಕೆರೆ ಶಾಸನವು ಇಮ್ಮಡಿ ಬಲ್ಲಾಳನು ನಲ್ಲಾವು, ಎಳ್ಳು, ಹತ್ತಿ, ಜೋಳ, ಅಡಿಕೆ, ಬೆಳ್ಳಿ ಮತ್ತು ಎಣ್ಣೆಯಿಂದ ಬಂದ ಆದಾಯವನ್ನು ೧೦೦ ಗದ್ಯಾಣಗಳಿಗೆ ಮಹಾಜನರಿಗೆ ಕಟ್ಟುಗುತ್ತುಗೆಯಾಗಿ ಕೊಟ್ಟಿರುವುದನ್ನು ತಿಳಿಸುತ್ತದೆ.[೬೨] ಹತ್ತಿಯನ್ನು ಅತ್ಯಂತ ಪ್ರಮುಖ ವಾಣಿಜ್ಯ ಬೆಳೆಯನ್ನಾಗಿ ಬೆಳೆಯುತ್ತಿದ್ದರು.[೬೩] ಕಬ್ಬಿನ ಬೆಳೆಯನ್ನು ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಅದಿಗಮಾನ್ ನೆಡುಮಾನ್ ಅಂಜಿಯುನ ಪೂರ್ವಿಕರು ಪರಿಚಯಿಸಿದರೆಂದು ಕೆ.ಕೆ. ಪಿಳ್ಳೆಯವರು ಅಭಿಪ್ರಾಯಪಟ್ಟಿದ್ದಾರೆ.[೬೪]

ಈ ಮೇಲಿನ ವಿವರಣೆಯಿಂದ ತಿಳಿದುಬರುವುದೇನೆಂದರೆ, ಕ್ರಿ.ಶ. ೧೦ ರಿಂದ ೧೪ನೇ ಶತಮಾನದಲ್ಲಿ ಕೃಷಿಯಲ್ಲುಂಟಾದ ಬದಲಾವಣೆಯಿಂದಾಗಿ ಅಹಾರ ಧಾನ್ಯಗಳ ಜೊತೆಗೆ ಆಹಾರೇತರ ಬೆಳೆಗಳು ಹೆಚ್ಚು ಪ್ರಮಾಣದಲ್ಲಿ ಬೆಳೆಯಲ್ಪಟ್ಟವು. ಆಹಾರೇತರ ಬೆಳೆಗಳಾದ ಹತ್ತಿ, ಕಬ್ಬು, ಎಣ್ಣೆ ಬೀಜಗಳು (ಸಾಸಿವೆ, ಶೇಂಗಾ, ಎಳ್ಳು), ಹಲವಾರು ಕಸುಬುಗಳು ಹುಟ್ಟಿಕೊಳ್ಳಲು ಸಹಕಾರಿ ಯಾದವು. ಉದಾಹರಣೆಗೆ ಹತ್ತಿಯ ಬೆಳೆಯು ನೇಯ್ಗೆ ವೃತ್ತಿಯನ್ನು, ಕಬ್ಬಿನ ಬೆಳೆಯು ಬೆಲ್ಲ, ಸಕ್ಕರೆ ಮತ್ತಿತರ ವಸ್ತುಗಳನ್ನು ಉತ್ಪಾದಿಸುವುದಕ್ಕೂ ಹಾಗೂ ಎಣ್ಣೆ ಬೀಜಗಳ ಬೆಳೆಯ ಎಣ್ಣೆ ಉತ್ಪಾದನೆಗೂ ಮತ್ತು ಅಡಿಕೆ ಬೆಳೆಯು ಕೊಯ್ಲಾಳಿಗಳ ಮತ್ತು ಮೊತ್ತಕಾರರ ಉಗಮಕ್ಕೆ ಕಾರಣವಾಯಿತು.[೬೫] ಶಾಸನಗಳು ಈ ಚಟುವಟಿಕೆಗಳ ಬಗ್ಗೆ ಹೆಚ್ಚು ವಿವರ ನೀಡುವುದಿಲ್ಲ. ಆದರೆ ಸರ್ಕಾರವು ಈ ವೃತ್ತಿಗಳ ಮೇಲೆ ಸುಂಕ ವಿಧಿಸಿರುವುದನ್ನು ಸುಂಕದ ಪದಗಳಾದ ಮಗ್ಗದೆರೆ, ನೂಲುದೆರೆ, ಗಾಣದೆರೆ, ಆಲೆದೆರೆ ಇತ್ಯಾದಿಗಳನ್ನು ಶಾಸನಗಳಲ್ಲಿ ಕಾಣಬಹುದು. ಸರ್ಕಾರ ಸುಂಕ ವಿಧಿಸುವುದು ಅಥವಾ ಉತ್ಪಾದಕರು ಸುಂಕ ತೆರುವುದು ಅಧಿಕ ಉತ್ಪಾದನೆಯ ಸಂಕೇತ. ಇಂತಹ ಕೃಷಿಯೇತರ ಚಟುವಟಿಕೆಗಳು ಮತ್ತು ಸುಂಕದ ಪದಗಳು ಪೂರ್ವ ಮಧ್ಯಯುಗೀನ ಕಾಲದಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಹೆಚ್ಚುವರಿ ಕೃಷಿ ಉತ್ಪಾದನೆಯು ಕೃಷಿಯೇತರ ಸಮಾಜದ (ಕಸುಬುದಾರರು) ಉಗಮಕ್ಕೂ ಮತ್ತು ವೃತ್ತಿ ಆಧಾರಿತ ಜಾತಿ ವ್ಯವಸ್ಥೆಯು ಹುಟ್ಟಿಕೊಳ್ಳಲು ಅನುವು

ಮಾಡಿಕೊಟ್ಟಿತು. ಹೀಗಾಗಿ ಕೃಷಿ ಆಧಾರಿತ ಗುಡಿ ಕೈಗಾರಿಕೆಗಳು ಈ ಅವಧಿಯಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಲು ಕೃಷಿಯಲ್ಲುಂಟಾದ ಒಂದು ರೀತಿಯ ಕ್ರಾಂತಿ ಹಾಗೂ ಅದರ ಫಲವಾದ ಉತ್ಪಾದನೆ ಎಂದು ದೃಢವಾಗಿ ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ರೈಸ್, ಬಿ.ಎಲ್., ೧೯೮೬, *ಮೈಸೂರ್ ಅಂಡ್ ಕೂರ್ಗ್ ಫ್ರಮ್ ದಿ ಇನ್‌ಸ್ಕ್ರಿಪ್ಷನ್ಸ್*, ಮರುಮುದ್ರಣ, (ನವದೆಹಲಿ), ಪುಟ ೧೭೪

೨. ವಿಲಿಯಮ್ ಕೊಯ್ಲ್ಹೊ., ದಿ ಹೊಯ್ಸಳ ವಂಶ (ಬಾಂಬೆ, ೧೯೫೦)

೩. ದಿನಕರ ದೇಸಾಯಿ., ೧೯೫೧, *ಮಹಾಮಂಡಲೇಶ್ವರಾಸ್ ಅಂಡರ್ ದಿ ಚಾಲುಕ್ಯಾಸ್ ಆಫ್ ಕಲ್ಯಾಣ್*, (ಪೂನಾ), ಪುಟ ೩೮೭

೪. ಗುರುರಾಜಾಚಾರ್, ಎಸ್., ೧೯೬೬, 'ಲ್ಯಾಂಡ್-ಇಟ್ಸ್ ಇಂಪಾರ್ಟೆನ್ಸ್ ಅಂಡ್ ಕ್ಲಾಸಿಫಿಕೇಷನ್ಸ್ ಇನ್ ಮೆಡಿವಲ್ ಕರ್ನಾಟಕ (೧೦೦೦-೧೩೦೦)', ಡಿ. ಜವರೇಗೌಡ ಮತ್ತಿತರರು ಸಂಪಾದಿಸಿದ *ಕನ್ನಡ ಸ್ಟಡೀಸ್*, ಸಂಪುಟ.೨, ಸಂಖ್ಯೆ.೨, (ಮೈಸೂರು), ಪುಟಗಳು.೭೯-೮೬.

೫. ಗುರುರಾಜಚಾರ್ ಎಸ್., ೧೯೭೪, *ಸಮ್ ಆಸ್ಪೆಕ್ಟ್ಸ್ ಆಫ್ ಎಕಾನಮಿಕ್ ಅಂಡ್ ಸೋಷಿಯಲ್ ಲೈಫ್ ಇನ್ ಮೆಡಿವಲ್ ಕರ್ನಾಟಕ.* ಮೈಸೂರು.

೬. ಅನಂತಕುಮಾರ್ ಬೋಸ್., ೧೯೮೫ 'ಅಗ್ರಿಕಲ್ಚರ್', ನರೇಂದ್ರನಾಥ್ ಲಾ ಸಂಪಾದಿಸಿದ *ದಿ ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ*, ಸಂಪುಟ ೧೦, ಮರುಮುದ್ರಣ, (ದೆಹಲಿ), ಪುಟಗಳು ೨೮೮-೩೦೦.

೭. ಗಂಗೂಲಿ. ಆರ್., ೧೯೮೫, 'ಕಲ್ಟಿವೇಶನ್ ಇನ್ ಏನ್ಶಿಯೆಂಟ್ ಇಂಡಿಯಾ'., ನರೇಂದ್ರನಾಥ್ ಲಾ ಸಂಪಾದಿಸಿದ ದಿ *ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ*, ಸಂಪುಟ ೬, (ದೆಹಲಿ) ಪುಟಗಳು ೨೯೨-೯೮.

೮. ಶಿವಣ್ಣ. ಕೆ. ಎಸ್., 'ಸಮ್ ಆಸ್ಪೆಕ್ಟ್ಸ್ ಆಫ್ ದಿ ಅಗ್ರೇರಿಯನ್ ಸಿಸ್ಟಮ್ ಡುರಿಂಗ್ ದಿ ಹೊಯ್ಸಳ ಪೀರಿಯಡ್', ಕೆ.ವಿ. ರಮೇಶ್ ಸಂಪಾದಿಸಿದ *ಶ್ರೀ ಕಂಠಿಕಾ*, (ಮೈಸೂರು), ೧೯೭೩, ಪುಟಗಳು ೨೯೨-೯೮.

೯. ರಂಗಸ್ವಾಮಯ್ಯ. ಜಿ. ಆರ್., 'ಅಗ್ರಿಕಲ್ಚರ್ ಡುರಿಂಗ್ ದಿ ಗಂಗ ಪೀರಿಯಡ್, ಕೆ.ವಿ. ರಮೇಶ್ ಸಂಪಾದಿಸಿದ ***ಶ್ರೀಕಂಠಿಕಾ*** (ಮೈಸೂರು, ೧೯೭೩), ಪುಟ ೨೯೯.

೧೦. ಕುಪ್ಪುಸ್ವಾಮಿ. ಜಿ. ಆರ್., ೧೯೭೫, *ಎಕಾನಮಿಕ್ ಕಂಡೀಷನ್ ಇನ್ ಕರ್ನಾಟಕ*, (ಧಾರವಾಡ)

೧೧. ಅದೇ., 'ಸಮ್ ಆಸ್ಪೆಕ್ಟ್ಸ್ ಆಫ್ ಇರಿಗೇಷನ್ ಸಿಸ್ಟಮ್ ಇನ್ ಕರ್ನಾಟಕ' ಮತ್ತು 'ಸಮ್ ಆಸ್ಪೆಕ್ಟ್ಸ್ ಆಫ್ ಇರಿಗೇಷನ್ ಫೆಸಿಲಿಟೀಸ್ ಪ್ರೊವೈಡೆಡ್ ಬೈ ಫ್ಯೂಡಟರಿ ಫ್ಯಾಮಿಲೀಸ್ ಇನ್ ಸೌಥ್ ಕರ್ನಾಟಕ', ಸೂರ್ಯನಾಥ ಯು. ಕಾಮತ್ ಸಂಪಾದಿಸಿದ *ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ*, ಸಂಪುಟ ೭೪, ಸಂಖ್ಯೆ ೪, (ಬೆಂಗಳೂರು, ೧೯೮೩), ಪುಟಗಳು ೧-೯ ಮತ್ತು ೪೦೪-೪೨೦.

೧೨. ಉಷಾರಾಣಿ, ಎಚ್‌ಸ್., ಅಗ್ರೇರಿಯನ್ ಸಿಸ್ಟಮ್ ಅಂಡರ್ ದಿ ಹೊಯ್ಸಳಾಸ್ ಅಪ್ರಕಟಿತ ಸಂಶೋಧನ ಪ್ರಬಂಧ (ಮೈಸೂರು, ೧೯೯೨).

೧೩. ರಮೇಂದ್ರನಾಥ್ ನಂದಿ., ೨೦೦೦, ಸ್ಟೇಟ್ ಫಾರ್ಮೇಶನ್, ಅಗ್ರೇರಿಯನ್ ಗ್ರೋಥ್ ಅಂಡ್ ಸೋಷಿಯಲ್ ಛೇಂಜ್ ಇನ್ ಫ್ಯೂಡಲ್ ಸೌಥ್ ಇಂಡಿಯಾ, ಎ.ಡಿ. ೬೦೦-೧೨೦೦, (ದೆಹಲಿ), ಪುಟಗಳು ೯೩-೧೦೨.

೧೪. ಕ್ಯಾತ್ಲೀನ್ ಡಿ ಮಾರಿಸನ್, 'ಅಗಿಕಲ್ಚರಲ್ ಇಂಟೆನ್ಸಿಫಿಕೇಷನ್ ಅಂಡ್ ವಿಜಯನಗರ: ಅನ್ ಒವರ್ ವ್ಯೂ,' ಶ್ರೀನಿವಾಸನ್ ಮತ್ತಿತರರು ಸಂಪಾದಿಸಿದ ***ಶ್ರೀ ನಾಗಾಭಿನಂದನ,*** (ಬೆಂಗಳೂರು), ಪುಟಗಳು ೧೪೫-೫೬.

೧೫. ***ಎಪಿಗ್ರಾಫಿಯಾ ಕರ್ನಾಟಿಕಾ,*** ಸಂಪುಟ ೯., ಬೇಲೂರು ೩೩೮ (ಹೊ) (ಇನ್ನುಮುಂದೆ ಎ.ಕ.)

೧೬. ಅದೇ., ಸಂಪುಟ ೧೨, ತಿಪಟೂರು ೩೮ (ಹ)

೧೭. ಅದೇ., ಸಂಪುಟ ೫, ಚಾಮರಾಜನಗರ ೧೭೯ (ಹೊ)

೧೮. ಅದೇ., ಸಂಪುಟ ೨, ಶ್ರವಣಬೆಳಗೊಳ ೫೫೮ (ಹೊ)

೧೯. ಅದೇ., ಸಂಪುಟ ೬, ಕೊಪ್ಪ ೬೨ (ಹ)

೨೦. ಅದೇ., ಸಂಪುಟ ೯, ಬೇಲೂರು ೪೩೮ (ಹೊ)

೨೧. ಅದೇ., ಸಂಪುಟ ೬, ಚಿಕ್ಕಮಗಳೂರು ೧೫ (ಹ)

೨೨. ಅದೇ., ಸಂಪುಟ ೯.

೨೩. ಅದೇ., ಸಂಪುಟ ೯, ಬೇಲೂರು, ೧೩೬ (ಹೊ)

೨೪. ಅದೇ., ಸಂಪುಟ ೫, ಅರಸೀಕೆರೆ ೧೮೦ (ಹ)

೨೫. ಅದೇ., ಸಂಪುಟ ೭.

೨೬. ಅದೇ, ಸಂಪುಟ ೬, ತರೀಕೆರೆ ೧೦ (ಹ)
೨೭. ಅದೇ, ಸಂಪುಟ ೫, ಅರಸೀಕೆರೆ ೨೨ (ಹ)
೨೮. ಅದೇ, ಸಂಪುಟ ೧೨, ತಿಪಟೂರು ೧೨೩, ಎ (ಹ)
೨೯. ಕ್ರಿಶ. ೧೨೧೦ರ ಹೊಳೆನರಸೀಪುರದ ಶಾಸನವು ಮಹಾಪ್ರಧಾನ ಮಾದಿಗದೇವ ದಣ್ಣಾಯಕನು ಒಂದು ಕೆರಯನ್ನು ೨೩೦೦ ಗದ್ಯಾಣ ಮತ್ತು ೩ ಪಣಗಳನ್ನು ಖರ್ಚು ಮಾಡಿ ಅವನ ಹೆಂಡತಿಯ ಹೆಸರಿನಲ್ಲಿ ಕಟ್ಟಿಸಿದುದನ್ನು ತಿಳಿಸುತ್ತದ. (ಎ.ಕ ಆ. ಹೊ.ನ.ಪುರ, ೪೨) ಕ್ರಿ.ಶ. ೧೩೧೪ರ ಬೇಡರಹಳ್ಳಿಯ ಶಾಸನವು ಮಾಚೆಯ ದಣ್ಣಾಯಕನ ತಾಯಿ ಮಾಯಕ್ಕ ಎಂಬುವವಳು ೩೫೦೦ ಗದ್ಯಾಣ ಖರ್ಚು ಮಾಡಿ ಮಾಚಸಮುದ್ರವೆಂಬ ಕೆರೆಯನ್ನು ಕಟ್ಟಿಸಿದುದನ್ನು ತಿಳಿಸುತ್ತದೆ (ಎ.ಕ. ಆ. ಹಾಸನ, ೨೦೬) ಇದೇ ಸಮಯದ ಅವ್ವೇರಹಳ್ಳಿಯ ಶಾಸನವು ಮಹಾಪ್ರಧಾನ ಮಾಚೆಯ ದಣ್ಣಾಯಕನು ತನ್ನ ತಾಯಿ ಮಾಯಕ್ಕನ ಸ್ಮರಣೆಯಲ್ಲಿ ಸುಮಾರು ೩೦೦೦-೪೦೦೦ ಹೊನ್ನಿನ ಖರ್ಚಿನಲ್ಲಿ ದೇವಿರಹಳ್ಳಿಯಲ್ಲಿ ಕಟ್ಟಿಸಿದುದನ್ನು ತಿಳಿಸುತ್ತದೆ. (ಎ.ಕ. ಆ. ಹಾಸನ, ೧೮೭).
೩೦. ಡೇವಿಡ್ ಲಡ್ಡನ್., ೧೯೮೯, *ಪೆಸೆಂಟ್ ಹಿಸ್ಟರಿ ಇನ್ ಸೌಥ್ ಇಂಡಿಯಾ*, (ದೆಹಲಿ), ಪುಟ ೩೦
೩೧. ಎ.ಕ. ಸಂಪುಟ ೭, ಶಿಕಾರಿಪುರ ೭೬ (ಹ)
೩೨. ಅದೇ, ಸಂಪುಟ ೧೦, ಬೌರಿಂಗ್‌ಪೇಟೆ ೯ (ಹ)
೩೩. ಅದೇ, ಸಂಪುಟ ೬, ೫೯, ೬೦, ೬೪. ಇವುಗಳಲ್ಲಿ ಕ್ರಿ.ಶ. ೧೨೨೧ ರ ಶಾಸನವು ಕೆರೆಯ ಏರಿಯನ್ನು ಮಾತಗಾವುಂಡನು ಎತ್ತರಿಸಿದುದನ್ನು ತಿಳಿಸುತ್ತದೆ. ಕ್ರಿ.ಶ. ೧೨೩೨ರ ಶಾಸನವು ಕೆರೆಯ ಮೇಲಂಕಣ ಕೆಲಸ ಮಾಡಿಸಿದ್ದಕ್ಕೆ ಬುರುಡಮಲ್ಲನೆಂಬುವವನು ೨೦೦ ಕಂಭ ಗದ್ದೆಯನ್ನು ಬ್ರಹ್ಮಸಮುದ್ರದ ಮಹಾಜನಗಳಿಗೆ ಕೊಟ್ಟಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೨೩೯ ರ ಮತ್ತೊಂದು ಶಾಸನವು ಕೆರೆಯ ಏರಿಯನ್ನು ಭದ್ರಪಡಿಸಿದುದಕ್ಕಾಗಿ ನಾರಣದೇವ ಎಂಬುವವನು ಅಲ್ಲಿಯ ಮಹಾಜನರಿಗೆ ಗದ್ದೆ ಮತ್ತು ಹೊಲವನ್ನು ಕೊಟ್ಟಿದ್ದನ್ನು ತಿಳಿಸುತ್ತದೆ.
೩೪. ಅದೇ, ಸಂಪುಟ ೧೨, ಗುಬ್ಬಿ ೧೩ (ಹ)
೩೫. ಅದೇ, ಸಂಪುಟ ೧, ಸೋಮವಾರಪೇಟೆ ೪೭ (ಹೊ)
೩೬. ಅದೇ ಸಂಪುಟ ೯, ಬೇಲೂರು, ೪೩೮ (ಹೊ)
೩೭. ಅದೇ ಸಂಪುಟ ೧೧, ದಾವಣಗೆರೆ ೧೪೨ (ಹ)
೩೮. ಅದೇ, ಸಂಪುಟ ೬, ಕಡೂರು ೧೩೪ (ಹ)
೩೯. ಅದೇ, ಸಂಪುಟ ೬, ಪಾಂಡವಪುರ ೨೫೨ (ಹೊ)
೪೦. ಅದೇ ೫೬.
೪೧. ಅದೇ, ಸಂಪುಟ ೨, ಶ್ರವಣಬೆಳಗೊಳ ೧೬೨ (ಹೊ)
೪೨. ಅದೇ, ಸಂಪುಟ ೯, ಹೊಸಕೋಟೆ. ೪೦, (ಹ)
೪೩. ಅದೇ, ಸಂಪುಟ ೭, ಹೊಳಲ್ಕೆರೆ ೮೭ (ಹ)
೪೪. ಅದೇ, ಸಂಪುಟ ೭, ತಿಪಟೂರು ೩೯ (ಹ)
೪೫. ದಿನಕರ ದೇಸಾಯಿ., ಪೂರ್ವೋಕ್ತ, ಪುಟ ೩೮೭
೪೬. ಅದೇ, ಸಂಪುಟ ೮, ಅರಕಲಗೂಡು ೪೬ (ಹೊ)
೪೭. ಹರ್ಬನ್ಸ್ ಮುಖಿಯಾ., 'ಅಗ್ರಿಕಲ್ಚರಲ್ ಟೆಕ್ನಾಲಜಿ ಇನ್ ಮೆಡಿವಲ್ ಇಂಡಿಯಾ' ಅನಿರುದ್ದ ರೇ ಮತ್ತು ಎಸ್.ಕೆ. ಬಾಗ್ಚಿ (ಸಂಪಾದಿಸಿದ), *ಟೆಕ್ನಾಲಜಿ ಇನ್ ಏನ್ಷಿಯಂಟ್ ಅಂಡ್ ಮೆಡಿವಲ್ ಇಂಡಿಯಾ*, (ದೆಹಲಿ, ೧೯೮೬), ಪುಟ ೧೧೬.
೪೮. ಗರ್ಪೂರೆ, ಜೆ. ಆರ್. ಸಂಪಾದಿಸಿದ ವಿಜ್ಞಾನೇಶ್ವರನ ಮಿತಾಕ್ಷರಸಂಹಿತೆ, ಸಂಪುಟ, ೨, (ಬಾಂಬೆ, ೧೯೩೯).
೪೯. ಎ. ಕ. ಸಂಪುಟ ೬., ಮೂಡಿಗೆರೆ, ೭ (ಹ)
೫೦. ಅದೇ., ಸಂಪುಟ ೯., ಬೇಲೂರು ೪೮೪, (ಹೊ)
೫೧. ಅದೇ., ಸಂಪುಟ ೫., ಅರಸೀಕೆರೆ ೩೪ (ಹ)
೫೨. ಅದೇ., ಸಂಪುಟ ೯., ಬೇಲೂರು, ೨೨೫ (ಹೊ)
೫೩. ಶರ್ಮಾ., ಆರ್. ಎಸ್., ೧೯೮೭, ಅರ್ಬನ್ ಡೀಕೆ ಇನ್ ಇಂಡಿಯಾ, ೩೦೦-೧೦೦೦, ಎ.ಡಿ (ಹೊಸದೆಹಲಿ), ಪುಟಗಳು ೧೬೯-೭೫.
೫೪. ಹರ್ಬನ್ಸ್ ಮುಖಿಯಾ., ಪೂರ್ವೋಕ್ತ, ಪುಟ ೧೧೯.
೫೫. ನಂದಿಯವರು ಕ್ರಿ.ಶ. ೬೦೦-೧೨೦೦ರ ಅವಧಿಯಲ್ಲಿ ಕೆರೆಗಳಿಗೆ ತೂಬುಗಳನ್ನು ಅಳವಡಿಸುವುದು ಹಾಗೂ ಕಾಲುವೆಗಳನ್ನು ತೋಡುವುದು ನೀರಾವರಿ ತಂತ್ರಜ್ಞಾನದ ಅತ್ಯಂತ ಪ್ರಮುಖ ಬೆಳವಣಿಗೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಕೆರೆಗಳಿಗೆ ಕಾಲುವೆಯ ಮುಖಾಂತರ ನದಿಯ ನೀರನ್ನು ತುಂಬಿಸಲಾಗುತ್ತಿತ್ತು. ಇದರಿಂದಾಗಿ ರೈತರ ಕೆರೆ ತುಂಬಲು ಮಳೆಯನ್ನು ಕಾಯುವ ಅವಶ್ಯಕತೆ ಇರಲಿಲ್ಲ. ಕೆರೆಯಲ್ಲಿ ನೀರು ಯಾವಾಗಲೂ ತುಂಬಿರುತ್ತಿದ್ದರಿಂದ ತೂಬಿನ ಮುಖಾಂತರ ನೀರಿನ ಪೂರೈಕೆಯು ನಿರಂತರವಾಗಿದು, ಉತ್ತಮ ಮತ್ತು ಅಧಿಕ ಬೆಳೆಯನ್ನು ಬೆಳೆಯಲು ಅನುಕೂಲವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ಪೂರ್ವೋಕ್ತ ಪುಟಗಳು ೯೩-೯೪.

೫೬. ನೀಲಕಂಠ ಶಾಸ್ತ್ರಿ ಕೆ.ಎ., 'ದಿ ಚಾಲುಕ್ಯಾಸ್ ಆಫ್ ಕಲ್ಯಾಣ್'; ಜಿ. ಯಾಜ್ದಾನಿ (ಸಂ.) *ದಿ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್*, ಸಂಪುಟ ೧, (ಡೆಹಲಿ, ೧೯೮೨), ಪುಟ ೪೩೨.

೫೭. ಎ. ಕ. ಸಂಪುಟ ೮., ಹಾಸನ ೩೮ (ಹೊ)

೫೮. ಅದೇ.; ಸಂಪುಟ ೯., ಬೇಲೂರು, ೧೪೦ (ಹೊ)

೫೯. ಅದೇ., ಸಂಪುಟ ೬., (ಕೆ.ಆರ್. ಪೇಟೆ), ೫೦

೬೦. ಅದೇ., ಸಂಪುಟ ೧೧., ಚಳ್ಳಕೆರೆ ೨೧ (ಹ)

೬೧. ಅದೇ., ಸಂಪುಟ ೬., ಬೇಲೂರು, ೧೯೦ (ಹೊ)

೬೨. ಅದೇ., ಸಂಪುಟ ೬., ತರೀಕೆರೆ ೨೦ (ಹ)

೬೩. ಗುರುರಾಜಚಾರ್. ಎಸ್., ಪೂರ್ವೋಕ್ತ, ಪುಟ. ೭೦

೬೪. ಪಿಳ್ಳೈ. ಕೆ. ಕೆ., ೧೯೭೫, ಸೋಷಿಯಲ್ ಹಿಸ್ಟರಿ ಆಫ್ ೦ದಿ ತಮಿಳ್ಸ್, ಸಂಪುಟ ೧, (ಮದ್ರಾಸ್), ನಂದಿ, ಆರ್ ಎನ್., ಪೂರ್ವೋಕ್ತ, ಪುಟ ೧೦೦

೬೫. ನಂದಿಯವರು ಹನ್ನೊಂದನೆ ಶತಮಾನದ ಅರಸೀಕೆರೆಯ ಶಾಸನಗಳನ್ನು ಆಧರಿಸಿ, ಅಡಿಕೆ ಬೆಳೆಯು ಸಹ ಕೆಲವು ಗುಡಿ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದು, ಅದು ಎರಡು ಕೃಷಿಯೇತರ ಸಮಾಜಗಳಾದ ಕೊಯ್ಲಾಳಿಗಳು ಮತ್ತು ಮೊತ್ತಕಾರರ ಹುಟ್ಟಿಗೆ ಕಾರಣವಾಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ಪೂರ್ವೋಕ್ತ, ಪುಟ, ೧೦೨).

ಡಾ. ಕೆ. ಜಿ. ವಸಂತ ಮಾಧವ*

ಕರಾವಳಿ ಕರ್ನಾಟಕದ ನೌಕಾ ಯುದ್ಧಗಳ ಸಮೀಕ್ಷೆ- ೧೭೨೦

ಪೀಠಿಕೆ

ಹೆಚ್ಚು ಕಡಿಮೆ ೩೦೦ ಕಿ.ಮೀ. ಉದ್ದವಿರುವ ಕರ್ನಾಟಕ ಕರಾವಳಿಯು ಸಾಗರೋತ್ತರ[೧] ವ್ಯಾಪಾರ ನಡೆಸುವುದರೊಂದಿಗೆ ಕೆಲವು ಸಲ ನೌಕಾ ಸಮರಗಳನ್ನು ಕಂಡಿತ್ತೆಂಬ ಸಂಗತಿಗಳು ಕೆಲವು ವೈವಿಧ್ಯಮಯ ಐತಿಹಾಸಿಕ ದಾಖಲೆಗಳಿಂದ ತಿಳಿದು ಬಂದಿದೆ. ಇಂತಹ ಅಕ್ಷರಗಳಲ್ಲಿ ಸ್ಥಳೀಯ ಮತ್ತು ವಿದೇಶಿ ದಾಖಲೆಗಳು ಇವೆ. ಸ್ಥಳೀಯ ದಾಖಲೆಗಳಲ್ಲಿ ಸಾಹಿತ್ಯ ಕೃತಿ ಮತ್ತು ಶಾಸನಗಳು ಮುಖ್ಯವಾಗಿ ಇವುಗಳ ಶಿಲಾ ಫಲಕದಲ್ಲಿ ಮೂಡಿಬಂದ ಶಿಲ್ಪಗಳು ಗಮನಾರ್ಹ. ವಿದೇಶಿ ದಾಖಲೆಗಳಲ್ಲಿ ಪ್ರವಾಸಿಗಳ ವರದಿಗಳು ಮತ್ತು ಇವರ ದಾಖಲೆ ಪತ್ರಗಳು ಗಮನಾರ್ಹ. ಈ ವಿದೇಶಿ ದಾಖಲೆ ಪತ್ರಗಳು ಪೋರ್ಚುಗೀಜ, ಡಚ್ಚ, ಫ್ರೆಂಚ ಮತ್ತು ಇಂಗ್ಲೀಷ ಭಾಷೆಗಳಲ್ಲಿವೆ. ಈ ದಾಖಲೆಗಳ ಹಿನ್ನಲೆಯಲ್ಲಿ ಕರಾವಳಿ ಕರ್ನಾಟಕದಲ್ಲಿ ನಡೆದ ನೌಕಾಯುದ್ಧಗಳು ಅವುಗಳು ನಡೆದ ಸ್ಥಳ ಮತ್ತು ಯುದ್ಧ ನೌಕೆಗಳ ಮಾಹಿತಿಗಳನ್ನು ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ.

ನೌಕಾಯುದ್ಧ


ಕ್ರಿ.ಶಕ ಒಂದನೆ ಶತಮಾನದಲ್ಲಿ ಪಶ್ಚಿಮ ಕರಾವಳಿಯಲ್ಲಿ ರೇವುಗಳಿದ್ದು ಅಲ್ಲಿ ನೌಕೆಗಳು ಇದ್ದುದ್ದನ್ನು ವಿದೇಶಿ ಪ್ರವಾಸಿಗಳ ವರದಿಗಳಲ್ಲಿ ವ್ಯಕ್ತವಾಗಿವೆ. ಇದಲ್ಲದೆ ಸ್ಥಳೀಯರು ತಮ್ಮ ನೌಕೆಯ ಸಾಮರ್ಥ್ಯದಿಂದ ವಿದೇಶಿ ನೌಕೆಗಳ ಚಲನ ವಲನಗಳ ಮೇಲೆ ಕಣ್ಣಿಟ್ಟಿದ್ದರೆಂಬುದನ್ನು ಇದೇ ವಿದೇಶಿ ದಾಖಲೆಗಳು ತಿಳಿಸುತ್ತದೆ. ಶಾತವಾಹನರು ತಮ್ಮ ನೌಕಾಬಲದಿಂದ ಪಶ್ಚಿಮ ಮತ್ತು ಪೂರ್ವಸಮುದ್ರಗಳ ಮೇಲೆ ಹಿಡಿತವನ್ನು ಸಾಧಿಸಿದ್ದರು. ಇವರ ನಂತರ 'ನೀರ್ಗಳ್ಳ' ರೆಂಬ ಕರಾವಳಿ ಜನಾಂಗದವರು ಸಮುದ್ರ ವ್ಯಾಪಾರಗಳನ್ನು ನಿಯಂತ್ರಿಸುತ್ತಿದ್ದರು. ಇವರು ನೌಕೆಗಳನ್ನು ಹೊಂದಿ ವಿದೇಶಿ ವ್ಯಾಪಾರಸ್ಥರೊಡನೆ ನೌಕಾಯುದ್ಧ ಮಾಡುತ್ತಿದ್ದರೆಂಬ ಸಂಗತಿಗಳು ವಿದೇಶೀಯ ಬರಹಗಾರರಿಂದ ತಿಳಿದುಬರುತ್ತದೆ[೧೨].

ಕ್ರಿ.ಶಕ ೪ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಕದಂಬರು ನೌಕಾ ಬಲ ಹೊಂದಿ ಕರಾವಳಿಯಲ್ಲಿದ್ದ 'ನೀರ್ಗಳ್ಳ' ರ ನೌಕೆಗಳನ್ನು ಧ್ವಂಸಗೊಳಿಸಿ, ಇಲ್ಲಿ ತಮ್ಮ ಪ್ರಭುತ್ವವನ್ನು ಭದ್ರಪಡಿಸಿದರು. ಈ ಕದಂಬರು ಕೇರಳವನ್ನು ಆಳಿಕೊಂಡಿದ್ದ **ನೆಡುಚೇರ್ಲ**ರೊಡನೆ ನೌಕಾ ಯುದ್ಧ ಮಾಡಿದರು. ಈ ನೌಕಾಯುದ್ಧದ ಕ್ಷೇತ್ರಗಳು ಮಂಗಳೂರಿನಿಂದ ಗೋಕರ್ಣದವರೆಗೆ ಈ ಯುದ್ಧದಲ್ಲಿ ಚೇರ ಅರಸ ಕದಂಬರ ನೌಕೆಗಳನ್ನು ಚದುರಿಸಿದನೆಂದು ಸಂಗಮ ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಆದರೆ ಇದು ಯಾವ ಸ್ಥಳದಲ್ಲಿ ನಡೆಯಿತೆಂದು ಸ್ಪಷ್ಟವಾಗಿ ತಿಳಿಸುವಲ್ಲಿ ಈ ದಾಖಲೆ ಅಸಮರ್ಪಕವಾಗಿದೆ. ಹೀಗಿದ್ದರೂ, ಈ ನೌಕಾ ಸಮರದಿಂದ ಕೇರಳ ಮತ್ತು ಕರಾವಳಿ ಕರ್ನಾಟಕದ ಸಮುದ್ರ ಮುಖಾಂತರ ನಿಕಟ ಸಂಪರ್ಕ ಬರಲು ದಾರಿಯನ್ನುಂಟುಮಾಡಿತ್ತು ಎಂದು ಕೆಲವು ಐತಿಹಾಸಿಕ ದಾಖಲೆಗಳ ಅಧ್ಯಯನವು ದೃಢೀಕರಿಸುತ್ತದೆ. ಕದಂಬರ ನಂತರ ಕರ್ನಾಟಕದಲ್ಲಿ ಬೆಳಕಿಗೆ ಬಂದ ಚಾಳುಕ್ಯರು ಕರಾವಳಿ ಕರ್ನಾಟಕ ಮತ್ತು ಗೋವಾ ಪ್ರದೇಶಗಳನ್ನು ಗೆದ್ದರಲ್ಲದೆ ಇಲ್ಲಿ ತಮ್ಮ ಪ್ರಬಲ ನೌಕಾ ಠಾಣ್ಯಗಳನ್ನು ಸ್ಥಾಪಿಸಿದ್ದರು. ಇವರ ನೌಕಾ ಯುದ್ಧಗಳ ವಿವರಗಳನ್ನು ಮಹಾಕೂಟ ಸ್ತಂಭಶಾಸನ ಮತ್ತು ಐಹೊಳೆ ಶಾಸನಗಳಲ್ಲಿ ಸವಿಸ್ತಾರವಾಗಿ ತಿಳಿಸಿದೆಯಾದರೂ, ಈ ಯುದ್ಧ ನೌಕೆಗಳು ಗೋವೆಯ ದಕ್ಷಿಣಕ್ಕೆ ಮುಖ್ಯವಾಗಿ ಕರ್ನಾಟಕದಲ್ಲಿ ನಡೆಸಿದ ವಿಚಾರ ಈ ದಾಖಲೆಗಳಲ್ಲಿ ಸ್ಪಷ್ಟವಾಗಿ ಹೇಳಿಲ್ಲ.

ಚಾಲುಕ್ಯರ ನಂತರ ಕರಾವಳಿ ಕರ್ನಾಟಕದಲ್ಲಿ ಪ್ರಬಲರಾದ ಗೋವೆ ಮತ್ತು ಚಂದಾವರ ಕದಂಬರು ನೌಕೆಗಳನ್ನು ಹೊಂದಿ ನೌಕಾಯುದ್ಧ ಮಾಡಿದ ವಿಚಾರ ಕೆಲವು ವೀರಗಲ್ಲು ಶಾಸನಗಳಲ್ಲಿವೆ. ಇಂತಹ ವೀರಗಲ್ಲುಗಳು ವಿಕಸರಹಳ್ಳಿ (ಮುಂಬಯಿ ಬೋರಿವಿಲ್ಲಿ ನಿಲ್ದಾಣದ ಸಮಿಪ ಒಂದು ಕಿ.ಮೀ. ಮೈಲು ದೂರು) ಯಲ್ಲಿವೆ. ಈ ವೀರಗಲ್ಲುಗಳ ಕೆಳಗಿನ ಸಾಲಿನಲ್ಲಿ ಪದಸ್ತಂಭದೊಡನೆ ಮೂಲೆ ಮೂಲೆಯ ಐದು ಹಡಗುಗಳಿವೆ. ಈ ಹಡಗು ಕಾಳಗಕ್ಕೆ ನಡೆಸಲು ಮುಂದೆ ಹೋಗುವಂತಹ ಕೆತ್ತನೆ ಇದ್ದು ಅವುಗಳ ಎರಡನೆ ಅಂತಸ್ತಿನಲ್ಲಿ ಧನುರ್ಧಾರಿಯಾದ ಯೋಧನು ನಿಂತಿದ್ದಾನೆ. ಈ ವೀರಗಲ್ಲಿನಲ್ಲಿ ವೀರನ ಹಡಗು ಇದೆ. ಇದೇ ವೀರಗಲ್ಲಿನ ಎರಡನೆ ಮನೆಯಲ್ಲಿ ನಾಲ್ಕು ಹಡಗುಗಳು ಇದ್ದು ಅವು ಒಂದು ದೊಡ್ಡ ಹಡಗಿನ ಮೇಲೆ ದಾಳಿಯನ್ನು ಮಾಡುವ ಚಿತ್ರ ಕೆತ್ತಿಸಿದ್ದು ಗಮನಾರ್ಹ ಆರು ನಾವಿಕರು ದೊಡ್ಡ ಹಡಗಿನಿಂದ ಕಡಲಿಗೆ ಬೀಳುತ್ತಿದ್ದಾರೆ.

ಇದೇ ಸ್ಥಳದಲ್ಲಿ ಇನ್ನೊಂದು ವೀರಗಲ್ಲಿನಲ್ಲಿ ಕೆಳಗಿನ ಭಾಗದಲ್ಲಿ ಹನ್ನೊಂದು ಹಡಗುಗಳಿರುತ್ತವೆ. ಇವುಗಳನ್ನು ಅಸ್ತ

* ಆರಾಧನಾ, ಪಾವಂಜೆ, ಹಳೆಯಂಗಡಿ, ದಕ್ಷಿಣಕನ್ನಡ.



Velha Goa. A Naval Battle.
(One of the panels of the Viragal of Biravarma)
(Courtesy : Heras S. J.)

ಗೋವಾ ಕದಂಬರ ನೌಕಾಯುದ್ಧ

ತುಂಬಿದ ಒಂದು ಹಡಗು ಮುತ್ತಿಗೆ ಹಾಕುತ್ತದೆ. ಈ ವೀರಗಲ್ಲಿನ ಎರಡನೆಯ ಮನೆಯಲ್ಲಿ ಎಡಗಡೆಗೆ ಐದು ಹಡಗುಗಳು ಬಲಗಡೆಯಿಂದ ಬರುತ್ತಲಿವೆ. ಮತ್ತು ಒಂದು ನಾವೆಯೊಡನೆ ಕಾದುತ್ತಿವೆ. ನಾವೆಯಲ್ಲಿ ಗಾಯಗೊಂಡ ಸೈನಿಕರು ನೀರಿನಲ್ಲಿ ಬೀಳುತ್ತಿದ್ದಾರೆ. ಈ ವೀರಗಲ್ಲಿನ ಮೂರನೆಯ ಸಾಲಿನಲ್ಲಿ ಗೆದ್ದ ಸೈನಿಕರು ನೌಕೆಗಳೊಂದಿಗೆ ಹೋಗುತ್ತಿರುವುದನ್ನು ತೋರಿಸಲಾಗಿದೆ. ನಾಲ್ಕನೆ ಅಂಕಣದಲ್ಲಿ ಸೈನಿಕರು ಹಡಗಿನಿಂದ ಇಳಿಯುತ್ತಿರರುವುದನ್ನು ಚಿತ್ರಿಸಿದೆ.

ಇಲ್ಲಿರುವ ಇನ್ನೊಂದು ವೀರಗಲ್ಲು ಯುದ್ಧನೌಕೆಯನ್ನು ಚಿತ್ರಿಸಿದೆ. ಇದರ ಕೆಳ ಅಂಕಣದಲ್ಲಿ ಆರು ಹಡಗುಗಳು ಪಟಸ್ತಂಭ (ಕೂವೆಮರ) ಮತ್ತು ಹುಟ್ಟುಗಳು ಚಿತ್ರಿಸಲ್ಪಟ್ಟಿವೆ. ವಿಶಿಷ್ಟವಾದ ಒಂದು ಹಡಗಿನಲ್ಲಿ ಕೊಡೆಯ ಕೆಳಗಡೆ ಒಬ್ಬ ಅರಸನು ಕುಳಿತು ಕೊಂಡಿದ್ದಾನೆ. ನಂತರದ ಅಂಕಣದಲ್ಲಿ ಎಡಗಡೆಯಿಂದ ಆರು ಹಡಗುಗಳು ಮತ್ತು ಬಲಗಡೆಯಿಂದ ಮೂರು ಹಡಗುಗಳು ನಡುವೆ ಸೇರುವುದರ ಚಿತ್ರದ ಕೆತ್ತನೆ ಇದೆ. ಇವುಗಳೊಳಗೆ ಕಾಳಗ ನಡೆದು ಸೋತ ಸೈನಿಕರು ನೀರಿನಲ್ಲಿ ಬೀಳುತ್ತಿದ್ದಾರೆ. ನಡುವಿನ ಹಡಗಿನಲ್ಲಿ ಅಪ್ಸರೆಯರು ಸತ್ತ ವೀರನ ಮೇಲೆ ಹೂಮಾಲೆಗಳನ್ನು ಹಾರಿಸುತ್ತಾರೆ. ಇದೇ ಸ್ಥಳದಲ್ಲಿ ಮತ್ತೊಂದು ವೀರಗಲ್ಲಿನ ಕೆಳ ಅಂಕಣದಲ್ಲಿ ಹಡಗು ಕಾಳಗ ನಡೆಯುವುದು ಕೆತ್ತಲ್ಪಟ್ಟಿದೆ[೩].

ಈ ವೀರಗಲ್ಲುಗಳು, ನೌಕಾಯುದ್ಧಗಳು ಯಾರೊಡನೆ ನಡೆಯಿತ್ತೆಂದು ತಿಳಿಸಲು ಅಸಮರ್ಥವಾದರೂ ಆಗಿನ ಕಾಲದ ನೌಕಾಯುದ್ಧದ ಚಿತ್ರಣ ನೀಡುವಲ್ಲಿ ಇವುಗಳು ಯಶಸ್ವಿಯಾಗಿವೆ.

ಕರಾವಳಿ ಕರ್ನಾಟಕದಲ್ಲಿ ನೌಕಾಯುದ್ಧದ ಚಿತ್ರಣವು ನಮಗೆ ತಿಳಿದು ಬರುವುದು ಹಳದಿಪುರದ ಚಂದ್ರೇಶರ ದೇವಾಲಯದ ಎದುರು ಇರುವ ಸ್ತಂಭಶಾಸನದಲ್ಲಿ. ಇಲ್ಲಿರುವ ಶಾಸನದ ಕಾಲ ಶಕ ೧೦೦೨: ಕ್ರಿ. ಶ. ೧೦೭೯. ಈ ಸ್ತಂಭದ ದೇವಾಲಯಕ್ಕೆ ಮುಖವಾಗಿಕೊಂಡಿರುವ ದಿಕ್ಕಿನಲ್ಲಿ ಕೆಳ ಅಂಕಣದಲ್ಲಿ ನೌಕೆಯ ಪಟಸ್ತಂಭ ಮತ್ತು ಸೈನಿಕರು ನೌಕೆಯಲ್ಲಿದ್ದು ಯುದ್ಧ ನಿರತರಾಗಿದ್ದ ಚಿತ್ರಣವು ನಮ್ಮ ಅಧ್ಯಯನದಲ್ಲಿ ಗಮನಿಸಬೇಕಾದ್ದೆ. ಈ ಸ್ತಂಭದಲ್ಲಿರುವ ಶಾಸನದಂತೆ (ಪಶ್ಚಿಮ ಮುಖ) ಇಲ್ಲಿರುವ ಕೋಟೆಯನ್ನು (ಹೊನ್ನಾವರ) ಕದಂಬ ಜಯಕೇಸಿ ಕಟ್ಟಿದನೆಂದೂ, ಇದನ್ನು ಪೊನ್ನಾವರಾಧೀಶ್ವರ ಇತ್ಯಾದಿ ಪ್ರಶಸ್ತಿ ಹೊಂದಿದ ಕಾಮದೈವರಸನು ಗೆದ್ದನು. ಇವನನ್ನು ಎದುರಿಸಿದವ ಗೋಕರ್ಣ ಪುರಾವರಾಧೀಶ್ವರ ನಾಗವರ್ಮ. ಈ ಕಾಳಗದಲ್ಲಿ ಹೋರಾಡಿ ಸತ್ತವ ಮದ್ದುಗಹಳಿತ[೪]. ಇಲ್ಲಿನ ಕೋಟೆ ಕಟ್ಟುವಲ್ಲಿ ಮತ್ತು ಈ ಕೋಟೆಯನ್ನು ಲಗ್ಗೆ ಗೈಯಲು ನೌಕೆಯು ಬಳಕೆಯಾಗಿತ್ತೆಂದು ಈ ವೀರಗಲ್ಲಿನ ನೌಕೆ ಚಿತ್ರ ಸಾಕ್ಷಿಯಾಗಿದೆ.

ಗೋವೆಯ ಕದಂಬರ ಅರಸರು ನೌಕೆ ಹೊಂದಿದ್ದರೆಂದೂ, ಈ ನೌಕೆಯನ್ನು ತಾವು ನಡೆಸಿದ ಹೋರಾಟದಲ್ಲಿ ಮುಖ್ಯವಾಗಿ ಆಳುಪರು ತಮಿಳುನಾಡಿನ ಚೋಳರ ವಿರುದ್ಧ ಉಪಯೋಗಿಸಿದ್ದರೆಂದೂ ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ಆಳುಪರೊಡನೆ ನಡೆದ ಯುದ್ಧ ಕ್ರಿ. ಶ. ೧೦೭೬ರಲ್ಲಿ ನಡೆಯಿತ್ತೆಂದು ತಿಳಿದುಬರುತ್ತದೆ[೫]. ದಕ್ಷಿಣದಲ್ಲಿದ್ದ ಗೋಕರ್ಣವನ್ನು ಕೇಂದ್ರವನ್ನಾಗಿ ಆಳುತ್ತಿದ್ದ ಇದೇ ಕದಂಬ ಕಾಮದೇವರಸವನ್ನು ಮೂಲೋತ್ಪಾಟನ ಮಾಡಿದ. ಇದರಲ್ಲಿ ಇವನ ನೌಕೆಯು ಮುಖ್ಯ ಪಾತ್ರವನ್ನು ವಹಿಸಿತ್ತೆಂದು ಗೋವಾದ ವೀರಗಲ್ಲಿನ ಶಾಸನದಿಂದ ತಿಳಿದು ಬರುತ್ತದೆ[೬]. ಬೆಳಗಾಂನಲ್ಲಿ ಸಿಕ್ಕಿದ ಅಪ್ರಕಟಿತ ಶಾಸನದಂತೆ[೭] ಕೊಂಕಣ ಚಕ್ರವರ್ತಿ ಪಶ್ಚಿಮ ಸಮುದ್ರಾದೇಶ್ವರ ಗೋವೆಯ ಚಟ್ಟಲದೇವನ (ಸಹಸ್ಯ ದೇವ ೧೦೦೫ -೫೦) ನೌಕಾಬಲದಿಂದ ಸಮುದ್ರದಲ್ಲಿರುವ ಲಂಕೆಯವರೆಗಿನ ದ್ವೀಪಗಳನ್ನು ಗೆದ್ದು ಲಂಕೆಯಿಂದ ಅಪಾರ ಸಂಪತ್ತನ್ನು ಪಡೆದನು. ಆದರೆ ಈ ಶಾಸನವನ್ನು ನಿರ್ಧರಿಸುವ ಕಾಲ ಇದರಲ್ಲಿ ಇಲ್ಲ. ಹೀಗಿದ್ದರೂ ಗೋವೆ ಕದಂಬರ ಶಾಸನಗಳನ್ನು ವೀಕ್ಷಿಸಿದಾಗ ಇವರ ನೌಕಾ ಪ್ರಾಬಲ್ಯ ಗೋವೆಯ ದಕ್ಷಿಣಕ್ಕೂ (ಮುಖ್ಯವಾಗಿ ಕರಾವಳಿ ಕರ್ನಾಟಕದಲ್ಲಿ) ಇದ್ದಿತ್ತೆಂದೂ ತಿಳಿಸುವುದಲ್ಲದೆ ಈ ಪ್ರದೇಶದಲ್ಲಿ ಇವರು ನೌಕಾಯುದ್ಧ ಮಾಡಿದ್ದರೆಂದು ಅಭಿಪ್ರಾಯ ಪಡಲು ಅವಕಾಶವಿದೆ.

'ಶಿಸುಗಳ' ನಂತರ ಚಂದಾವರವನ್ನು ಆಳಿದ ಪಾಂಡ್ಯ ಕದಂಬರರು ನೌಕಾಬಲವನ್ನು ಹೊಂದಿ ಪಶ್ಚಿಮ ಕರಾವಳಿಯಲ್ಲಿದ್ದ ದ್ವೀಪಗಳನ್ನು ಗೆದ್ದು ಅಲ್ಲಿಂದ ರತ್ನ ಮತ್ತು ಇನ್ನಿತರ ಸಂಪತ್ತನ್ನು ಪಡೆದರೆಂದು ಇವರು ಕೆತ್ತಿಸಿದ ಶಾಸನಗಳಿಂದ ತಿಳಿದುಬರುತ್ತದೆ.

ಉದಾ : ಜಾನ್ಸಾಲಿ (ಧರ್ಮಶಾಲಾ) ಸುಬ್ರಹ್ಮಣ್ಯ ದೇವಾಲಯದ ಶಕ ೯೦೮ ಶಕ ೧೧೮೬ರ ಶಾಸನದಂತೆ ಶಿಶುಗಳ ನೆಲೆವೀಡಿನಲ್ಲಿದ್ದ ಕಾವದೇವರಸನು ಪಶ್ಚಿಮ ಸಮುದ್ರಾಧೀಶ್ವರ, ಸಮುದ್ರಾಧೀವರ ಲಕ್ಷ್ಮೀ ರತ್ನ ಭಂಡಾರ ಲಬ್ಧಿತನೆಂದೂ ತಿಳಿಸಿದೆ ಯಲ್ಲದೆ ದ್ವೀಪಾದಿಗಳ ಒಡೆತನವನ್ನು ಇವುಗಳು ಸಾರಿದವು[೮].

ಕರಾವಳಿ ಕರ್ನಾಟಕದ ನೌಕಾಯುದ್ಧ ಎರಡನೆ ಹಂತವು ಹದಿನಾಲ್ಕನೆ ಶತಮಾನದಿಂದ ಆರಂಭವಾಗಿ ಹದಿನೇಳನೆ ಶತಮಾನದವರೆಗೆ ಇದ್ದಿತು. ಈ ಕಾಲದಲ್ಲಿ ವಿಜಯನಗರ ಚಕ್ರವರ್ತಿಗಳು ವಿಜಯನಗರವನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕವನ್ನು ಆಳುತ್ತಿದ್ದರು. ಇವರು ಯುದ್ಧ ನೌಕೆಯನ್ನು ಹೊಂದಿದ್ದಲ್ಲದೆ, ಸಿಂಹಳವನ್ನು ಲಕ್ಕಣ ದಂಡೇಶನ ನಾಯಕತ್ವದಲ್ಲಿ ಗೆದ್ದಿದ್ದರು. ಇವರ ನೌಕಾ ಠಾಣೆ ಮಂಗಳೂರಿನಲ್ಲಿದ್ದುದ್ದಲ್ಲದೆ ಈ ನೌಕಾಠಾಣ್ಯದ ಮುಖ್ಯಸ್ಥ 'ನಾವಿಕ ಪ್ರಭು' ಎಂದು ಶಾಸನದಲ್ಲಿ[೯] ಉಲ್ಲೇಖಿತವಾಗಿದೆ : 'ತಿಮ್ಮೋಜಿ' ಎಂಬ ನೌಕಾ ದಂಡನಾಯಕ ಹೊನ್ನಾವರದಲ್ಲಿದ್ದು ಸಾಗರೋತ್ತರ ವ್ಯಾಪಾರವನ್ನು ಹಿಡಿತದಲ್ಲಿಟ್ಟು ಕೊಂಡು ವಿದೇಶಿ ವರ್ತಕರೊಡನೆ ನೌಕಾಯುದ್ಧಗಳನ್ನು ಹೊನ್ನಾವರ ಸಮೀಪದಲ್ಲಿ ನಡೆಸುತ್ತಿದ್ದನೆಂದು ಪೋರ್ಚುಗೀಜರಿಗೆ ಗೋವೆ ಗೆಲ್ಲಲು ಈ ತಿಮ್ಮೋಜಿ ಸಹಾಯ ಮಾಡಿದ್ದನೆಂದೂ ಇವರದೇ ಆದ ದಾಖಲೆ ತಿಳಿಸುತ್ತದೆ. ಹೀಗಿದ್ದರೂ ಇವನ ನೌಕೆ ತ್ವರಿತವಾಗಿ ಚಲಾವಣೆ ಇಲ್ಲದ್ದುದರಿಂದಲೂ ಮತ್ತು ಅಸ್ತ್ರ ಸುಸಜ್ಜಿತವಾಗಲು ಅಸಮರ್ಥವಾದುದ್ದರಿಂದ ಪೋರ್ಚುಗೀಜರು ಇವನ ನೌಕೆಯನ್ನು ಸುಲಭದಲ್ಲಿ ಸೋಲಿಸಿದರು.[೧೦] ವಿಜಯನಗರದ ಅರಸ ಚಕ್ರವರ್ತಿ ಕೃಷ್ಣದೇವರಾಯನು ಕರಾವಳಿ ಕರ್ನಾಟಕದಲ್ಲಿ ನೌಕಾಬಲವನ್ನು ವರ್ಧಿಸುವ ಪ್ರಯತ್ನ ಮಾಡಿದ. ತನ್ನ ರಾಜ್ಯದ ದಕ್ಷಿಣಕ್ಕಿರುವ ಮಲೆಯಾಳ (ಕೇರಳ) ರಾಯರುಗಳನ್ನು ತನ್ನ ಅಂಕಿತಕ್ಕೆ ತರುವ ಉದ್ದೇಶದಿಂದ ಕಾಸರಗೋಡಿನಲ್ಲಿದ್ದ ಕಾಂಜ್ಞಗಾಡ ರೇವನ್ನು ಕೊಲತ್ತೇರಿ ಅರಸರಿಂದ ರಾಜಕೀಯ ಚಾಣಾಕ್ಷತೆಯಿಂದ ಪಡೆದನೆಂದು ಮಲೆಯಾಳಿ ಐತಿಹಾಸಿಕ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ[೧೧]. ಆದರೆ ಇದನ್ನು ಸಮರ್ಥಿಸುವ ಸಮಕಾಲೀನ ದಾಖಲೆಗಳು ಇನ್ನೂ ನಮ್ಮ ಗಮನಕ್ಕೆ ಬಂದಿಲ್ಲ. ಹೀಗಿದ್ದರೂ ತನ್ನ ನೌಕಾಬಲದಿಂದ ಸಾಮಂತ ಅರಸರನ್ನು ತನ್ನ ಸಾರ್ವಭೌಮತ್ವಕ್ಕೆ ಒಳಪಡಿಸಿದನು.

ಹದಿನಾರನೆ ಶತಮಾನದ ಆರಂಭದಿಂದ ಕನ್ನಡ ಕರಾವಳಿಯಲ್ಲಿ ವಿದೇಶಿಯ ವ್ಯಾಪಾರಸ್ಥರ ಚಟುವಟಿಕಗಳು ಆರಂಭವಾದವು. ಈ ಯುರೋಪಿನ ವಿದೇಶಿಯರಲ್ಲಿ ಪೋರ್ಚುಗೀಜರು ಮೊದಲಿಗರಾಗಿದ್ದರೆ ಇಂಗ್ಲೀಷರು ಕೊನೆಯವರು. ಹೀಗೆ ಬಂದ ಈ ಯುರೋಪಿನ ವ್ಯಾಪಾರಸ್ಥರು ಅಸ್ತ್ರ ಧಾರಿಗಳು. ಇವರ ಉದ್ದೇಶ ಈ ಕರಾವಳಿಯ ವ್ಯಾಪಾರದ 'ಏಕಸ್ವಾಮ್ಯವನ್ನು' ಪಡೆಯುವುದು. ಇದನ್ನು ಸಾಧಿಸಿಲು ಕೈಗೊಂಡ ಕ್ರಮ ಭಂಡಶಾಲೆಕೋಟೆ (ಫ್ಯಾಕ್ಟರಿ - ಪೋರ್ಟ್‌ನೆಸ್). ಇದನ್ನು ಸಾಧಿಸಲು ಪೋರ್ಚುಗೀಜರು ಕರಾವಳಿ ಕರ್ನಾಟಕದಲ್ಲಿ ನೌಕಾಯುದ್ಧವನ್ನು ಮಾಡಿದ್ದರು. ಈ ಘಟನೆ ಕರಾವಳಿ ಕರ್ನಾಟಕದ ಇತಿಹಾಸದಲ್ಲಿ ಒಂದು ಗೊಂದಲ (complication) ವನ್ನು ತಂದಿತು. ಪೋರ್ಚುಗೀಜರು ಉತ್ತಮ ಮಟ್ಟದ ಯುದ್ಧ ನೌಕೆಗಳನ್ನು ಹೊಂದಿದ್ದುದರಿಂದ ಕರಾವಳಿ ಕರ್ನಾಟಕದ ಸಾರ್ವಭೌಮತೆಯನ್ನು ಹೊಂದಿದ ವಿಜಯನಗರ ಅರಸರಿಗೆ ಈ ಪ್ರದೇಶದಲ್ಲಿ ಪೋರ್ತುಗೀಜರ ನೌಕಾಬಲವನ್ನು ಎದುರಿಸುವಲ್ಲಿ ಸಮರ್ಥ ಕಾರ್ಯಕ್ರಮ ಕೈಗೊಳ್ಳಲು ಆಗದೇ ಹೋಯಿತು. ಇದರಿಂದಾಗಿ ಸ್ಥಳೀಯ ಸಾಮಂತ ಅರಸು ಮನೆತನದವರು ಅಗಿಂದಾಗ್ಗೆ ದಕ್ಷಿಣಕ್ಕಿರುವ "ಮಲೆಯಾಳಿ ನಾವಿಕರ" ಸಂಪರ್ಕ ಪಡೆದರು. ಇದರಿಂದಾಗಿ ಕರಾವಳಿ ಕರ್ನಾಟಕದಲ್ಲಿ ಮಲೆಯಾಳಿ ನಾವಿಕರ ವರ್ಚಸ್ಸು ಬೆಳೆಯಿತು. ಕರಾವಳಿಯ ತುಳುವರು ಮತ್ತು ಮಲಬಾರಿನ ಮಲೆಯಾಳಿ ನಾವಿಕರು ಒಂದಾಗಿ ದುಂಡಾವರ್ತಿ ವ್ಯಾಪಾರ ನಡೆಸುತ್ತಿದ್ದ ಪೋರ್ಚುಗೀಸರೊಡನೆ ನೌಕಾಸಮರಗಳನ್ನು ನಡೆಸಿದರು. ಈ ನೌಕಾ ಯುದ್ಧಗಳು ಮಂಗಳೂರು, ಬಾರಕೂರು ಬಸ್ರೂರು, ಭಟ್ಕಳ, ಹೊನ್ನಾವರಗಳಲ್ಲಿ ನಡೆದ ಬಗ್ಗೆ ಪೋರ್ತುಗೀಸ ದಾಖಲೆಗಳು ಉಲ್ಲೇಖಿಸುತ್ತವೆ. ಇಂತಹ ಒಂದು ನೌಕಾಯುದ್ಧ ಕ್ರಿ.ಶ. ೧೫೨೫-೨೬ ರಲ್ಲಿ ಬಾರಕೂರಿನಲ್ಲಿ ನಡೆಯಿತು. ಕಲ್ಲಿಕೋಟೆ ಝಾಮೋರಿನ ನೌಕಾದಳಪತಿ "ಕುಟ್ಟಿಅಲಿ" ಬಾರಕೂರು ಕರಾವಳಿಗೆ ಎಂದು ಸ್ಥಳೀಯ ನಾವಿಕರ ಸಹಾಯ ಪಡೆದು ಪೋರ್ತುಗೀಸರ ನೌಕೆಗಳನ್ನು ಚದುರಿಸಲು ಸಮರ್ಥನಾದುದಲ್ಲದೆ, ಕೊಚ್ಚಿಯಿಂದ ಗೋವಾದವರೆಗಿನ ಕರಾವಳಿ ಪ್ರದೇಶದಲ್ಲಿ ತನ್ನ ನೌಕಾಬಲದ ಸಾಮರ್ಥ್ಯವನ್ನು ಸ್ಥಾಪಿಸಿದರು. ಆದರೆ ಮರುವರ್ಷ ಪೋರ್ತುಗೀಜರ ಶಸ್ತ್ರಸಜ್ಜಿತ ನಾವೆಗಳು ಬಾರಕೂರಿಗೆ ಬಂದು ನೌಕಾಯುದ್ಧ ಮಾಡಿ ಕುಟ್ಟಿ ಅಲಿಯ ನೌಕಾಬಲವನ್ನು ಮುರಿಯಿತು[೧೨]. ಇದೇ ರೀತಿ ೧೫೬೯-೭೦ ರಂದು ಬಸ್ರೂರಿನಲ್ಲಿ ನಡೆದ ನೌಕಾಯುದ್ಧವು ಪೋರ್ತುಗೀಜರನ್ನು ದಿಗಿಲುಗೊಳಿಸಿತು. ಇಲ್ಲಿ ಆಳಿಕೊಂಡಿದ್ದ ಸುಲಾಲಿನ ತೋಳಹರು, ಹೊನ್ನೆ, ಕಂಬಳಿಯವರು ಪೋರ್ತುಗೀಜರೊಡನೆ ನೌಕಾ ಸಮರ ನಡೆಸುವಲ್ಲಿ ಗೇರಸೊಪ್ಪೆ ರಾಣಿಯ ನೌಕಾದಳವು ಇವರೊಂದಿಗೆ ಸೇರಿಕೊಂಡಿತು. ಇದರಿಂದಾಗಿ ಪೋರ್ತುಗೀಜರಿಗೆ ಸಮುದ್ರದಲ್ಲಿ ಬಹಳ ಸಂಕಟ ಸ್ಥಿತಿ ಬಂದಿತು. ಇದೇವರ್ಷ ಬಿಜಾಪುರ ಸುಲ್ತಾನ ಝುಮೋರಿಸ್ ಮತ್ತು ಗೇರಸೊಪ್ಪೆರಾಣಿಯರು ಒಂದಾಗಿ ಪೋರ್ತುಗೀಜ ನೌಕಾಬಲವನ್ನು ಪ್ರಶ್ನಿಸಿದರು. ಇದು ಪೋರ್ತುಗೀಜರನ್ನು ಅಪಾಯಕರ ಸಂದಿಗ್ಧ ಸ್ಥಿತಿಗೆ ತಂದು ಒಡ್ಡಿತು. ಕೊನೆಗೆ ಪೋರ್ತುಗೀಜರು ವಿಜಯಿಯಾದರೂ, ಅವರಿಗೆ ಸ್ಥಳೀಯರ ನೌಕಾಬಲದ ಅರಿವು ಉಂಟಾ

ಯಿತು. ತಮ್ಮ ಮನಬಂದಂತೆ ವ್ಯಾಪಾರ ನಡಸಲು ಪೋರ್ಚು ಗೀಜರು ಅಂಜುತ್ತಿದ್ದರು ಎಂದು ಇವರ ೧೫೭೫ರ ದಾಖಲೆಯು ತಿಳಿಸುತ್ತದೆ[೧೩].

ಕರಾವಳಿ ಕರ್ನಾಟಕದ ನೌಕಾ ಸಮರದ ಮೂರನೆ ಹಂತ ಕ್ರಿ. ಶ ೧೭ನೇ ಶತಮಾನದ ನಂತರ ಆರಂಭವಾಗಿ ಮುಂದಿನ ಶತಮಾನದ ಮಧ್ಯಾವಧಿಯವರೆಗೆ ನಡೆಯಿತು. ಪೋರ್ತುರ್ಗೀಜರ ನೌಕಾಬಲವನ್ನು ಸ್ಥಳೀಯರು ತಮ್ಮ ನೌಕಾಬಲದಿಂದ ಸಮರ್ಥವಾಗಿ ಎದುರಿಸಿದ್ದಲ್ಲದೆ, ಪೋರ್ತುರ್ಗೀಜರ ನೌಕಾಬಲವನ್ನು ನಿಷ್ಕ್ರಿಯಗೊಳಿಸಿದ್ದು ಗಮನಿಸಬೇಕಾದ ಸಂಗತಿ. ಈ ಕಾಲದಲ್ಲಿ ನಡೆದ ನೌಕಾ ಸಮರಗಳಲ್ಲಿ ಉಳ್ಳಾಲದ ರಾಣಿ ಎರಡನೆ ಅಬ್ಬಕ್ಕ, ಕೆಳದಿ ಮತ್ತು ಸ್ವಾದಿ ಇಮ್ಮಡಿ ಬಸವಲಿಂಗನಾಯಕರು ಪ್ರಮುಖ ಪಾತ್ರಗಳನ್ನು ವಹಿಸಿದ್ದರು. ಕ್ರಿ.ಶ. ೧೬೧೨ ರಲ್ಲಿ ನಡೆದ ನೌಕಾ ಸಮರದಲ್ಲಿ ಅಬ್ಬಕ್ಕ ರಾಣಿ ಝಾಮೋರಿನ ನೌಕಾ ಬಲವನ್ನು ತರಿಸಿ ಪೋರ್ಚುಗೀಸರನ್ನು ಸಮರ್ಥವಾಗಿ ಉಳ್ಳಾಲದಲ್ಲಿ ಎದುರಿಸಿದಳು. ಇಲ್ಲಿ ನಡೆದ ನೌಕಾ ಯುದ್ಧದಲ್ಲಿ ವೈರಿಯ ಬಲವನ್ನು ನಿಷ್ಪ್ರಯೋಜನಗೊಳಿಸಿದಳು. ನಂತರ ಕೆಳದಿ ವೆಂಕಟಪ್ಪನಾಯಕನು ಪೋರ್ಚುಗೀಸರನ್ನು ಮಂಗಳೂರಿನಲ್ಲಿ ಹೀನಾಯವಾಗಿ ಸೋಲಿಸಿದನು. ಈ ಕೆಲಸದಲ್ಲಿ ಸ್ಥಳೀಯರ ಮತ್ತು ಕೆಳದಿ ನಾಯಕರ ನೌಕೆಗಳು ಪ್ರಮುಖ ಪಾತ್ರವಹಿಸಿದ್ದವು. ಇಷ್ಟಲ್ಲದೆ ಪೋರ್ಚುಗೀಸರಿಗೆ ಇಲ್ಲಿಯ ನೌಕಾಬಲವೂ ತಿಳಿಯಿತು. ಕ್ರಿ. ಶ. ೧೬೧೨ ನವೆಂಬರ ೨೪ ರ ಪತ್ರದಂತೆ ಕೆಳದಿ ವೆಂಕಟಪ್ಪನಾಯಕನ ದಂಡನಾಯಕನು ನೆಲ ಮತ್ತು ಸಮುದ್ರದಿಂದ ಬರುವ ಅಹಾರ ಸಾಮಗ್ರಿಗಳ ಪೂರೈಕೆಯನ್ನು ತಡೆಹಿಡಿದಿದ್ದರಿಂದ ಸೈನಿಕರು ಅಹಾರವಿಲ್ಲದೆ ಸಾಯುವ ಸ್ಥಿತಿಯಲ್ಲಿದ್ದಾರೆ; ಇಷ್ಟಲ್ಲದೆ ನಮ್ಮ ನೌಕಾದಳವು ಹತಾಶವಾಗಿದೆ[೧೪]. ಕೆಳದಿ ವೆಂಕಟಪ್ಪನಾಯಕ ನೌಕಾ ದಳಪತಿ ಮುಜಾದಿ ಇವನು ನೌಕಾ ಯುದ್ಧದಲ್ಲಿ ಅತ್ಯಂತ ಪಳಗಿದವನೆಂದು ಆ ಕಾಲದಲ್ಲಿ ಇವೇಲಿಯಿಂದ ಬಂದ ಪ್ರವಾಸಿ ಡೆಲ್ಲಾವೆಲ್ಲಿ ತನ್ನ ವರದಿಯಲ್ಲಿ ತಿಳಿಸಿದ್ದಾನೆ [೧೫]. ಕೆಳದಿ ಶಿವಪ್ಪನಾಯಕನ ಕಾಲದಲ್ಲಿ ನೌಕಾಬಲವು ಎಷ್ಟು ಸಮರ್ಥವಾಗಿತ್ತೆಂದರೆ ಪೋರ್ಚುಗೀಸರ ನೌಕಾಬಲವನ್ನು ನಿರ್ಬಲಗೊಳಿಸಿ ಮಂಗಳೂರು ಹೊನ್ನಾವರ ಮತ್ತು ಗಂಗೊಳ್ಳಿಯಿಂದ ಅವರನ್ನು ಓಡಿಸಿ ಮಲೆಯಾಳಿಗರ ಸಮುದ್ರಶಕ್ತಿಯನ್ನು ಕುಗ್ಗಿಸಿ ಸಮುದ್ರ ದಡದಲ್ಲಿರುವ ಅವರ ಕೋಠಿಗಳನ್ನು ಗೆದ್ದುಕೊಂಡದ್ದು ಕೆಲವು ಸಮಕಾಲೀನ ದಾಖಲೆಗಳಲ್ಲಿವೆ. ಕ್ರಿ.ಶ. ೧೬೫೪ರ ಪೋರ್ಚುಗೀಜ ದಾಖಲೆಯಂತೆ ಪೋರ್ತುರ್ಗೀಜರ ಸಮುದ್ರ ವ್ಯಾಪಾರವನ್ನು ಶಿವಪ್ಪನಾಯಕನು ತನ್ನ ಹತೋಟಿಯಲ್ಲಿ ತರುವಲ್ಲಿ ಯಶಸ್ವಿಯಾದನು. ಪೋರ್ತುರ್ಗೀಜರು ಗೋವಾ ಕರಾವಳಿ ಬಿಟ್ಟು ಹೋಗುವಂತೆ ಕೆಳದಿ ನೌಕಾಬಲ ಯಶಸ್ವಿಯಾಯಿತು[೧೬].

ಕ್ರಿ.ಶ. ೧೬೬೪ರಲ್ಲಿ 'ಬಸ್ರೂರು' ಪೋರ್ತುರ್ಗೀಜ ಮತ್ತು



(Courtesy : Haikluyat Society , London)

(ಕೆಳದಿ ಅರಸರ ನೌಕೆ : ಕ್ರಿ. ಶ. ೧೬೪೫)

ಡಚ್ಚರ ನೌಕಾ ಸ್ಪರ್ಧೆಯನ್ನು ಕಂಡಿತು. ಇದರಲ್ಲಿ ಸ್ಥಳೀಯ ಅರಸು ಮನೆತನದವರಾದ ಬರಗರು ಉಳ್ಳಾಲ ಚೌಟರು ಇದ್ದರು. ಇವರನ್ನು ಮಲಬಾರಿನ ನಾಯಕರು ಪ್ರೋತ್ಸಾಹಿಸಿದ್ದರು. ಇವರೆಲ್ಲಾ ಸೇರಿಕೊಂಡು ಪೋರ್ತುರ್ಗೀಜ ನೌಕಾದಳವನ್ನು ಎದುರಿಸಿದರು. ಇದರಲ್ಲಿ ಈ ಕೂಟದವರು ಯಶಸ್ವಿಯಾದರು.

ಪೋರ್ಚುಗೀಜರ ಬೆಂಬಲಿಗರಾಗಿದ್ದ ನಾರಾಯಣ ಮಲ್ಯನು ಡಚ್ಚರೊಡನೆ ಸೇರಿಕೊಂಡು ಪೋರ್ತುರ್ಗೀಜರ ನೌಕಾಬಲವನ್ನು ಸಂದಿಗ್ಧ ಸ್ಥಿತಿಗೆ ತಂದನು[೧೭]. ಒಟ್ಟಿನಲ್ಲಿ ಸ್ಥಳೀಯ ರಾಜಕೀಯ ಶಕ್ತಿಗಳು ತಮ್ಮ ನೌಕಾಶಕ್ತಿಯನ್ನು ಸಮರ್ಥವಾಗಿ ಪ್ರದರ್ಶಿಸಿದ್ದು, ಕರಾವಳಿ ಕರ್ನಾಟಕದ ನೌಕಾ ಇತಿಹಾಸದಲ್ಲಿ ಗಮನಾರ್ಹ ಸಂಗತಿ.

೧೬೯೯ರಲ್ಲಿ ಹೊನ್ನಾವರ ಸಮೀಪದ ದ್ವೀಪ "ನವಿಲ ಗಡದಲ್ಲಿ" ನಡೆದ ನೌಕಾ ಸಮರದಲ್ಲಿ ಕೆಳದಿ ನಾಯಕ ನೌಕಾ ಬಲದ ಸಮರ್ಥತೆ ಉನ್ನತ ಮಟ್ಟವನ್ನುತೋರಿಸಿತು. ಈ ನೌಕಾ ಸಮರವು ಕೆಳದಿನಾಯಕರಿಗೂ ಮರಾಠರೊಳಗೆ ನಡೆಯಿತು. ಈ ಮರಾಠರು ತಮ್ಮ ನೌಕಾ ಬಲದಿಂದ ಕೆಳದಿ ಕಾಜ್ಯಕ್ಕೆ ಸೇರಿದ "ನವಿಲುಗಡವನ್ನು" ಮುತ್ತಿಗೆ ಹಾಕಿತು. ಇದನ್ನು ಪುನಃ ವಶಪಡಿಸಿಕೊಳ್ಳಲು ಕೆಳದಿ ನಾಯಕರು ತಮ್ಮ ಸುಸಜ್ಜಿತ ನೌಕಾ ಕಾರ್ಯ ನಡೆಸಿದರು. ಅಪ್ರಕಟಿತ ಇಂಗ್ಲೀಷ್ ದಾಖಲೆಯಂತೆ ಐದು ಹದಿನೆಂಟು 'ಮಚುವಾ' ಮತ್ತು ಐದು ಸಾವಿರ ನೌಕಾದಳದೊಂದಿಗೆ ಮರಾಠರ ಆಕ್ರಮಣವನ್ನು ವಿಮುಕ್ತಗೊಳಿಸಲು ಕಾರ್ಯ ನಡೆಯಿತು. ಕ್ರಮೇಣ ಐದು ಹೊಸ ಹಡಗು ಮತ್ತು ಹದಿನಾಲ್ಕು "ಎತ್ತರ ಮಚುವಾಗಳು' ಸೇರಿಕೊಂಡು ಮರಾಠರ ವಿರುದ್ಧ ಸೈನಿಕ ಕಾರ್ಯಾಚರಣೆ ನಡೆಸಿತು. ಇದರ ತೀಕ್ಷ್ಣತೆ ಹೆಚ್ಚಾದಂತೆ ಮರಾಠರು ದ್ವೀಪವನ್ನು ತೆರುವು ಮಾಡಬೇಕಾಯಿತು. ವೈರಿಗಳ ಹಲವಾರು ನಾವಿಕರು ಕೆಳದಿಯ ನೌಕಾದಾಳಿಯನ್ನು ಎದುರಿಸಿ ಅಸುನೀಗಿದ್ದರು. ನಂತರ ನವಿಲಗಡ ದ್ವೀಪವು ಕೆಳದಿ ನಾಯಕರ ವಶಕ್ಕೆ ಬಂದಿತು. ಈ ದ್ವೀಪಕ್ಕೆ ಕೆಳದಿ ನಾಯಕರು 'ಬಸವರಾಜು ' ದುರ್ಗವೆಂದು ಕರೆದರು[೧೮].

೧೭೦೦ ರ ನಂತರ ಕೆಳದಿ ನಾಯಕರಿಗೆ ನೌಕಾಬಲವನ್ನು ಹೊಂದುವ ಆಕಾಂಕ್ಷೆ ಇದ್ದರೂ ಇದನ್ನು ಕಾರ್ಯಗತಗೊಳಿಸಲು ನಾಯಕರು ವಿಫಲರಾಗಿದ್ದರೆಂದು ಪೋರ್ತುಗೀಜ ದಾಖಲೆಗಳಲ್ಲಿ ವ್ಯಕ್ತವಾಗಿವೆ[೧೯].

೧೭೨೦ರಲ್ಲಿ ಕಡವಾಡದಲ್ಲಿ ಕೋಟೆಕಟ್ಟಿ ವ್ಯಾಪಾರ ಮಾಡುತ್ತಿದ್ದ ಇಂಗ್ಲೀಷರು ಸ್ವಾದಿ ರಾಜ್ಯದ ನೌಕಾಶಕ್ತಿಯನ್ನು ಎದುರಿಸಬೇಕಾಗಿ ಬಂತು. ಸ್ವಾದಿ ಬಸವಲಿಂಗಪ್ಪ ನಾಯಕನು ಕಡವಾಡದಲ್ಲಿದ್ದ ಇಂಗ್ಲೀಷ್ ಭಂಡಶಾಲೆಯನ್ನು ಸಮರ್ಪಕವಾಗಿ ಮುತ್ತಿಗೆ ಹಾಕಿ, ಅಲ್ಲಿರುವ ಇಂಗ್ಲೀಷರ ನೌಕೆಗಳನ್ನು ನಿಷ್ಕ್ರಿಯಗೊಳಿಸಿದಲ್ಲದೆ, ಇವನ ವೈರಿಗಳು ಕಾರವಾರ ತೀರದಲ್ಲಿ ಸ್ವಾದಿಯ ಅರಸರ ಕೈಸೆರೆಯಾಳಾಗಿ ಮಾಡಿದ್ದು ಅತ್ಯಂತ ರೋಚಕ ಸಂಗತಿ. ಕೊನೆಗೆ ಇಂಗ್ಲೀಷರು ಕಾರಾವಾರ ಬಿಟ್ಟು ಹೋಗು ವಂತಾಯಿತು[೨೦].

೧೭೨೦ರ ನಂತರ ಕರಾವಳಿ ಕರ್ನಾಟಕದಲ್ಲಿ ಸ್ಥಳೀಯ ನೌಕಾಬಲವು ವಿದೇಶಿಯರನ್ನು ಅವಲಂಬಿಸುವ ಸ್ಥಿತಿ ಬಂತು. ಇದರಿಂದಾಗಿ ಇಲ್ಲಿನ ನೌಕಾ ಇತಿಹಾಸದ ಪ್ರಗತಿ ತಾತ್ಕಾಲಿಕ ಕ್ಷೀಣಗತಿ ಕಂಡಿತು. ಇದರ ಪುನರುಜ್ಜೀವನವನ್ನು ಹೈದರಾಲಿ ನಡೆಸಿದ. ಇದರ ವಿವರ ಈ ಲೇಖನದ ಪರಿಮಿತಿಗೆ ಮೀರಿದಾಗಿದೆ.

ನೌಕೆಗಳು ಮತ್ತು ನೌಕಾ ದಳಪತಿ

ಕರಾವಳಿ ಕರ್ನಾಟಕದ ನೌಕಾ ಸಮರದಲ್ಲಿ "ಹಾಯಿ ಹಡಗು" 'ಪಟ್ಟಮಾರ್' "ಕಲ್ಲಹಡಗು" 'ಮಚುವಾ' ಕೇರಳದಿಂದ ಎರವಲು ಪಡೆದು ಬಂದ 'ಷೇರು' ಅನ್ನು ಬಳಸಿದ್ದನ್ನು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ. ತಿಮ್ಮೋಜಿ,ಮುಜಾರಿ, ಬಸವಲಿಂಗ, ಪೊಕಟುಬ್ಯಾರಿ, ಚೆನ್ನಬಸವಪ್ಪ ಮತ್ತು ಇಕ್ಕೇರಿ ಮರಿಯಪ್ಪರಂತಹ ನೌಕಾ ದಳಪತಿಗಳು ಇದ್ದರು.ಇವರ ನೌಕಾ ಯುದ್ಧದ ಸಾಮರ್ಥ್ಯತೆಯನ್ನು ವಿದೇಶಿ ತಜ್ಞರು ಮೆಚ್ಚಿದ್ದಾರೆ.

ಉಪಸಂಹಾರ

ಕರಾವಳಿ ನೌಕಾ ಯುದ್ಧದ ಇತಿಹಾಸದ ವಿವರ ಸಿಗುವುದು ಕ್ರಿ.ಶ. ನಾಲ್ಕನೇ ಶತಮಾನದ ನಂತರದಲ್ಲಿ ಹತ್ತು ಹನ್ನೊಂದನೆ ಶತಮಾನಗಳಲ್ಲಿ ಕರಾವಳಿಯ ನೌಕಾ ಯುದ್ಧದ ಸ್ಪಷ್ಟಚಿತ್ರಗಳು ಆಗಿನ ಕಾಲದ ವೀರಗಲ್ಲುಗಳ ಚಿತ್ರಣದಿಂದ ವ್ಯಕ್ತವಾಗುತ್ತದೆ. ಇವುಗಳ ಕೆಲವೇ ವಿವರಗಳು ಶಾಸನಗಳಲ್ಲಿವೆ.

ಹದಿನಾಲ್ಕನೆ ಶತಮಾನದ ಅವಧಿಯಲ್ಲಿ ವಿಜಯನಗರದವರು ನೌಕಾ ಯುದ್ಧಗಳನ್ನು ನಡೆಸಿ ಸಾಗರೋತ್ತರದಲ್ಲಿ ತಮ್ಮ ಪರಾಕ್ರಮ ತಿಳಿಯುವಂತೆ ಮಾಡಿದರು. ಆದರೆ ಇವರ ನೌಕೆಯು ಮುಖ್ಯವಾಗಿ ಪಾಶ್ಚಿಮಾತ್ಯ ನೌಕಾಬಲವನ್ನು ಎದುರಿಸಲು ವಿಫಲವಾಯಿತು. ಕಾರಣ ಇವರ ಯುದ್ಧ ನೌಕೆಗಳು ಶಸ್ತ್ರ ತುಂಬಿಕೊಂಡು ಆಳವಾದ ಸಮುದ್ರದಲ್ಲಿ ಯುದ್ಧ ಮಾಡುವುದರಲ್ಲಿ ಪರಿಣಿತವಾಗಿರಲಿಲ್ಲ.

ಪೋರ್ತುಗೀಜರ ಆಗಮನ ಇಲ್ಲಿನ ನೌಕಾ ಯುದ್ಧದಲ್ಲಿ ಒಂದು ಹೊಸ ತಿರುವು ತಂದಿತು. ಕನ್ನಡೇತರರು ಕರಾವಳಿ ಕರ್ನಾಟಕದಲ್ಲಿ ತಮ್ಮ ಪ್ರಾಬಲ್ಯವನ್ನು ಸಾಧಿಸಿದರು. ಪೋರ್ತು-

ಕಾರವಾರದ ಕಡಲತೀರದಲ್ಲಿ ಆಂಗ್ಲೇಯರು ಎದುರಿಸಿದ ಸ್ಥಳೀಯರ ಯುದ್ಧನೌಕೆಗಳು ೧೭೨೦. ದಾಖಲೆಗಾರರು ಈ ದಾಖಲೆಯನ್ನು ಮರಾಠರದ್ದೆಂದು ತಪ್ಪಾಗಿ ಹೇಳಿದ್ದಾರೆ. ಈ ನೌಕೆಗಳು ಸ್ವಾದಿರಾಜನದ್ದು ಆಗಿವೆ.



(Courtesy : Jhon Biddulph., The *Pirates of Malabar*, London)

ಗೀಜರ ಕರಾವಳಿ ಕರ್ನಾಟಕದಲ್ಲಿ ನೌಕಾ ಸಮರ ನಡೆಸಿದರು. ಇದು ಸ್ಥಳೀಯರಲ್ಲಿ ಪ್ರತಿಕ್ರಿಯೆ ನಡೆದು ಇದರ ಪರಿಣಾಮವಾಗಿ ಪೋರ್ತುಗೀಜರ ನೌಕಾ ಬಲ ತಗ್ಗಿತು. ಕೆಳದಿ ನಾಯಕರಿಗೆ ತಮ್ಮ ನೌಕಾಬಲವನ್ನು ವರ್ಧಿಸಿಕೊಳ್ಳಬೇಕೆಂಬ ಆಕಾಂಕ್ಷೆಯು ಆಕಾಂಕ್ಷೆಯಾಗಿಯೇ ಉಳಿಯಿತು.

ಕರಾವಳಿ ಕರ್ನಾಟಕದ ರೇವುಗಳ ನೌಕಾ ಯುದ್ಧದ ಸಾಮರ್ಥ್ಯ ಮತ್ತು ಅವುಗಳ ಬಾಧಕಗಳನ್ನು ವಿದೇಶಿ ಶಸ್ತ್ರ ವ್ಯಾಪಾರಸ್ಥರು ತಿಳಿದುಕೊಂಡರು. ಇದನ್ನು ಸ್ಥಳೀಯ ಅರಸರಿಗೆ ತಿಳಿಸಿದರು ಆದರೆ ಈ ರೇವುಗಳ ಒಡೆಯರು ಇವುಗಳನ್ನು ನಿವಾರಿಸುವ ಪ್ರಯತ್ನ ಮಾಡದೆ ಇದ್ದದ್ದು ಆಶ್ಚರ್ಯಕರ ಸಂಗತಿ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಈ ಕ್ಷೇತ್ರದಲ್ಲಿ ಗೋವಾ ಮತ್ತು ಕೇರಳದ ಕಾಸರಗೋಡು ಕೂಡಾ ಒಳಗೊಂಡಿದೆ. ಈ ಪ್ರದೇಶಗಳು ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸಹಭಾಗಿಗಳಾಗಿವೆ.

೧ಅ. ಶ್ರೀಕಂಠಶಾಸ್ತ್ರಿ., "ಕರ್ನಾಟಕದ ವೀರ ನೌಕಾ ಚರಿತ್ರೆ", **ಪ್ರಜಾವಾಣಿ** ೮-೪-೧೯೬೨; ಇದೇ ಶ್ರೀಕಂಠಶಾಸ್ತ್ರಿಗಳ ಸಂಶೋಧನಾ ಲೇಖನಗಳು (ಸಂ.ಆರ್.ಗೋಪಾಲ, ಟಿ.ವಿ.ವೆಂಕಟಾಚಲ ಶಾಸ್ತ್ರಿ) ಮೈಸೂರು ೧೯೭೫ p.೧೫೨

೨. ಇದೇ ಎ. ಶ್ರೀಧರ ಮೆನನ್ *A survey of Kerala History* (Kottayam 1971) ಪ್ರ ಪ್ರ. ೬೬ ಕೆ.ಎ. ನೀಲಕಂಠ ಶಾಸ್ತ್ರಿ., *A History of south India,* (oxford 1965), page ೧೧೮/೧೯.

೩. ಮೋತೀಚಂದ್ರ ಸಾರ್ಥವಾಹ (**ಪ್ರಾಚೀನ ಭಾರತದ ಪಥಪದ್ಧತಿ**, ಅನು : ಎಚ್.ಎಸ್. ಪಾಟೀಲ ಹೊಸದೆಹಲಿ ೧೨೯೭೨) ಪ ಪ್ರ ೩೧೮-೩೨೧.

೪. **ಕರ್ನಾಟಕ ಭಾರತಿ** (ಧಾರವಾಡ ನವೆಂಬರ್ ೧೯೯೦) ೧-೧೩

೫. *Journal of Bombay Branch of Royal Asiatic Society* IX p278-82, Ramesh K.V., *A History of Dakshina Kannada (Dharwad 1970) p 107*

೬. ಮೊರೈಸ್ ಜೆ.ಎಮ್. Kadambakula, A History of Ancient Medieval Karnataka Bombay 1931 AES 1990 P. ೧೭೯, ೧೮೧ ಕದಂಬರ ನೌಕಾ ವಿಚಾರ - ನೋಡಿ ಮೊರೈಸ್ ಜೆ.ಎಮ್ ಅದೇ ಪ್ರ ೨೬೫,೨೮೧,೨೮೮ ಗುರವ ಆರ್. ಎಸ್ -Kadambas of Goa and their Inscriptions. (ಅಪ್ರಕಟಿತ ಪಿ ಎಚ್. ಡಿ ಪ್ರಬಂಧ ಧಾರವಾಡ ೧೯೯೬) P. ೪೪೨.

೭. ಈ ಶಾಸನವು ಬೆಳಗಾಂ ಜಿಲ್ಲೆಯ ಗುಢಿಹಳ್ಳಿ ಗ್ರಾಮದಲ್ಲಿ ಸಿಕ್ಕಿದೆ ಎಂದು ಡಾ: ಎಸ್. ಎಲ್. ಶಾಂತಕುಮಾರಿ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. Sea Voyage and Naval Activities of as known from Goa kadamba Inscriptions proceedings of third conference on marine Archaeology third conference (೧೯೯೪), ಪುಟ ೩ ಗೋವೆ ಕದಂಬರ ಶಾಸನದಲ್ಲಿ ಉಲ್ಲೇಖಿತವಾದ 'ಲಂಕಾ' ಗೋವೆಯೇ ಎಂಬ ಅಭಿಪ್ರಾಯವಿದೆ.

೮. ಅಣ್ಣಿಗೇರಿ ಮತ್ತು ಜೋಯಿಸ್., Description list of stone and copper plate examined by kannada Research Institute Dharwad (೧೯೬೧) ೧೯೪೧-೪೨ No. ೨೩ ಈ ಶಾಸನವನ್ನು ಈ ಲೇಖಕರು ಓದಿದ್ದಾರೆ.

೯. ಇಸಿಲಾ (ಡ)ಸೊರಬ ೪೯೭ ಈ ನೌಕೆ ಯಾವ ರೀತಿಯಲ್ಲಿದ್ದಿತ್ತು ಮತ್ತು ಇವುಗಳ ಲಕ್ಷಣ ತಿಳಿಸುವಲ್ಲಿ ಈ ಶಾಸನವು ಸಹಾಯಕವಾಗುವುದಿಲ್ಲ.

೧೦. ಶಾಸ್ತ್ರಿ ಬಿ. ಎಸ್., Studies in Indo -Portugeuse History (Bangalore 1981) PP. ೯೨-೧೩೦, ತಿಮ್ಮೋಜಿಯ ವಿವರ ನೋಡಿ., ಇದೇ ಗ್ರಂಥಕರ್ತರ ಇನ್ನೊಂದು ಗ್ರಂಥ GOA-KANARA portugues Relations (new Delhi 2000), pp. ೨೧, ೨೯, ೩೦, ೩೨, ೩೩, ೩೬, ೩೭, ೪೦, ೪೫.

೧೧. ಶಿವಾನಂದ ಬೇಕಲ., **ಬೇಕಲ ಕೋಟೆ ಒಂದು ಚಾರಿತ್ರಿಕ ಅಧ್ಯಯನ**, ಕಾಸರಗೋಡು, ೧೯೯೯, ಪು. ೯೦-೯೧: ಕೊಲಂತ (ಕೊಲಸ್ತೇರಿ) ಅರಸರು ಪಯಸ್ವಿನಿ ನದಿಯಿಂದ ಒಳಪಟ್ಟಣದವರೆಗಿನ ಪ್ರದೇಶವನ್ನು ಆಳಿಕೊಂಡಿದ್ದರು. ಇವರ ರಾಜ್ಯದಲ್ಲಿ ಕರಿಮೆಣಸು ಹೆಚ್ಚಿಗೆ ಬೆಳೆಯುತ್ತಿದ್ದುದರಿಂದ ಈ ರಾಜ್ಯವು ಡಚ್ಚ ಇಂಗ್ಲೀಷ್ ಮತ್ತು ಕೆಳದಿ ನಾಯಕರ ಗಮನವನ್ನು ಸೆಳೆಯಿತು. ಹೆಚ್ಚಿನ ವಿವರಕ್ಕೆ, ನೋಡಿ ಕೆ.ಕೆ.ಎಸ್. ಕುರೂಪ. **History of the Tellichestry factory** (calicat 1985) 12, 13.

೧೨. K.K.N.Kurup & K.M. Mathew., *Native resistance against the portugues the saga of kunjali marakala* (calicat university 2000) P. 64.

೧೩. M.N. pearson., *Coastal Western India* (Studies from the portuguese records Concept New Delhi 1981) PP 32.

೧೪. ಬಿ.ಎಸ್. ಶಾಸ್ತ್ರಿ., ಕೆಳದಿಯ ಅರಸರೂ ಹಾಗೂ ಪೋರ್ತುಗೀಜರೂ, ೧೯೭೨, ಧಾರವಾಡ (ಪು೩೧-೩೨) ಇದಕ್ಕೆ ಅಹಾಪೋ ಎಂದು ಪರಿಷ್ಕರಿಸಿದೆ

೧೫. Pietro Dello Vally., *The Travels in India* Vol II AES, 1991,p225.

೧೬. ಲಿಂಗಣ್ಣ ಕವಿ ಕೆಳದಿ ನೃಪವಿಜಯಂ., (ಸಂ.) ಶ್ಯಾಮಶಾಸ್ತ್ರಿ ಮೈಸೂರು, ೧೯೭೨ ಈ ಕಾವ್ಯ ಕೆನ್ರವಿ ಎಂದು ಪರಿಷ್ಕರಿಸಲಾಗಿದೆ. ಪದ್ಯ ಸಂಖ್ಯೆ ೫೯೭ ಪುಟ ೬೯. ೧೯೭೨ ಎಳನೆ ಸಂಧಿ ಪದ್ಯ ಸಂಖ್ಯೆಗಳು ಶಾಸ್ತ್ರಿ ಬಿ.ಎಸ್.ಕೆ., **ಅಹಾಪು**, ೯೩.೯೫,೯೯,೧೦೧,೧೦೮,೧೦೯,೧೧೦.

೧೭. ಶಾಸ್ತ್ರಿ ಬಿ.ಎಸ್.ಕೆ., **ಅಹಾಪು**, ಪು. ೧೨೦-೨೧ ಗೋವಾ ಪತ್ರಾಗಾರದಲ್ಲಿರುವ ಅಪ್ರಕಟಿತ ಕನ್ನಡ ದಾಖಲೆ, ಇಸವಿ ೧೯೯೪; ನೋಡಿ ಕೆ.ಜಿ. ವಸಂತ ಮಾಧವ. "A note on Kannada document preserved in Goa Arcliment purablilekle purotetvo Journal of the Directorate Archiman and museum Goa july, Dec. 1990/PP 27, 31

೧೮. *Bombay Factory Records* ೨೯, P ೧೮, ೧೯ (ಅಪ್ರಕಟಿತ) ಈ ದಾಖಲೆ ಎಂ. ಎ. ದೇಸಾಯಿಯವರಿಂದ ಸಿಕ್ಕಿದೆ. ಕೆನ್ರವಿ ಅಶ್ವಾಸ ಹತ್ತು ಪದ್ಯ ೨, ಪು. ೧೫೦.

೧೯. ಶಾಸ್ತ್ರಿ ಬಿ. ಎಸ್. ಕೆ., **ಅಹಾಪು**, ೧೬೦, ೧೬೮, ೧೬೫

೨೦. Hamelton - Alexander., New account of the East India, London 1930 I p 150,151 M A Desai Chittakula, Karwara (Bombay) History, P 73, 76, 77, 078, 82,

ಡಾ. ಸ್ಮಿತಾ ಸುರೇಬಾನಕರ*

ಬೆಳಗಾವಿ ಪರಿಸರದಲ್ಲಿ ನಗರ ಯೋಜನೆ

ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ತನ್ನದೇ ಆದ ವಿಶಿಷ್ಟ ಪ್ರಭಾವ ಬೀರಿದ ಪ್ರದೇಶ ಬೆಳಗಾವಿ. ಶಾತವಾಹನ, ಭೋಜ, ಆದಿಕದಂಬರಿಂದ ಒಳಗೊಂಡು ರಟ್ಟ, ಗೋವೆ, ಕದಂಬ, ಶೀಲಾಹಾರ ಮತ್ತು ವಿಜಯನಗರ - ಹೀಗೆ ಇತಿಹಾಸದುದ್ದಕ್ಕೂ ಈ ಪ್ರದೇಶ ಸಕ್ರಿಯವಾದ ಪಾತ್ರವನ್ನು ವಹಿಸಿದೆ.

ಪ್ರಸ್ತುತ ಪ್ರಬಂಧದಲ್ಲಿ ಬೆಳಗಾವಿ ಪರಿಸರದಲ್ಲಿ - ಉಚಗಾವೆ, ಮುತ್ತಗ ಹಲಸಿ, ಸೌದತ್ತಿ ಮತ್ತು ಬೆಳಗಾವಿ ಈ ಭಾಗಗಳಲ್ಲಿ ಕಂಡು ಬರುವ ನಗರ ಯೋಜನೆಯನ್ನು ಪ್ರಾಚ್ಯಾವ ಶೇಷಗಳು ಮತ್ತು ಶಾಸನಗಳ ಆಧಾರದಿಂದ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ವೇಣುಗ್ರಾಮ - ಎಪ್ಪತ್ತು ಎಂಬ ಹೆಸರಿನಿಂದ ಮೊಳಗಿದ ಬೆಳಗಾವಿ ಪರಿಸರ ಎಪ್ಪತ್ತು ಗ್ರಾಮಗಳನ್ನು ಒಳಗೊಂಡ ಆಡಳಿತ ವಿಭಾಗದ ಕೇಂದ್ರ ಸ್ಥಾನವಾಗಿತ್ತು. ರಟ್ಟರ ಆಳ್ವಿಕಾವಧಿಯಲ್ಲಿ ಎರಡನೆಯ ರಾಜಧಾನಿಯೂ ಆಗಿ ಮುಂದೆ ವಿಜಯನಗರ ಸಾಮ್ರಾಜ್ಯದ ನೆಲೆವೀಡಾಗಿ ಇಂದು ಒಂದು ಸುವ್ಯವಸ್ಥಿತ ನಗರವಾಗಿ ಬೆಳೆದು ಮಹಾರಾಷ್ಟ್ರ, ಗೋವ ಮತ್ತು ಕರ್ನಾಟಕ ಸಂಸ್ಕೃತಿಗಳ ತ್ರಿವೇಣಿಸಂಗಮವಾಗಿದೆ. ಈ ವೇಣುಗ್ರಾಮದ ಬೀಡು ಬೆಳಗಾವಿ ನಾಡಾಗಿ ಬೆಳೆದುಬಂದ ಬಗೆಯಲ್ಲಿ ಇಲ್ಲಿ ಪ್ರಚಲಿತವಿದ್ದ ಶಿಸ್ತುಬದ್ಧ ಆಡಳಿತ, ನಗರ ರಚನೆ ಮತ್ತು ನಗರ ಯೋಜನೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಬೆಳಗಾವಿ ಪರಿಸರದ ನಗರಯೋಜನೆ ಮತ್ತು ನಗರಾಡಳಿತ ಕುರಿತಾದ ನೀಲನಕ್ಷೆ ದೊರೆಯದೇ ಹೋದರೂ, ಈ ಪರಿಸರದ ಪ್ರಾಚ್ಯಾವಶೇಷಗಳ ಮತ್ತು ಶಾಸನಗಳ ಕೂಲಂಕಷ ಅಧ್ಯಯನ ಈ ಪರಿಸರದ ನಗರಯೋಜನೆಯ ಮೇಲೆ ಬೆಳಕು ಚೆಲ್ಲುತ್ತದೆ.

ಬೆಳಗಾವಿ ನಗರ ಇತಿಹಾಸದ ಕಾಯಕಲ್ಪದಲ್ಲಿ ವಿವಿಧ ಹಂತಗಳಲ್ಲಿ ಬೆಳವಣಿಗೆಯನ್ನು ಹೊಂದಿತು. ಈಗಿನ ರೈಲ್ವೆ ನಿಲ್ದಾಣದ ಉತ್ತರ ಬದಿಯಲ್ಲಿ (Contonment) ದಂಡಿನ ಶಿಬಿರದ ಪೂರ್ವ ನೆಲೆಯಲ್ಲಿ ಪುರಾತನ ಬಾವಿಯ ಅವಶೇಷಗಳು ಇವೆ. ಅಲ್ಲದೆ 'ನಾಗರಕೆರೆ' ಎಂಬ ಹೆಸರಿನ ಭಾರಿ ಗಾತ್ರದ ಕೆರೆ ಮತ್ತು ಅದಕ್ಕೆ ಹೊಂದಿಕೊಂಡು ಪೂರ್ವಕ್ಕಿರುವ ಪ್ರಾಚೀನ ವಸತಿಸ್ಥಾನ-ಇವು ಬಹುಶಃ ಶಾತವಾಹನ ಕಾಲದ ಪೂರ್ವದ್ದಿರಬಹುದು. ಬಹುಶಃ ಇದು ನಾಗರಸಂಸ್ಕೃತಿಗೆ ಸಂಬಂಧಪಟ್ಟದ್ದಿರಬೇಕು. ಆದ್ದರಿಂದ ಇದನ್ನು ನಾಗರ ಬೆಳಗಾವಿ ಎಂದು ಕರೆಯಬಹುದೆಂದು ನೇಗಿನಹಾಳ ಅಭಿಪ್ರಾಯಪಟ್ಟಿದ್ದಾರೆ.

ಸುಂದರ ಅವರ ವಡಗಾವ-ಮಾಧವಾಪುರ ಉತ್ಖನನವು (೧೯೭೪-೮೦) ಪ್ರಥಮಬಾರಿಗೆ ಬೆಳಗಾವಿ ಪರಿಸರದ ನಗರಯೋಜನೆ ಮೇಲೆ ಬೆಳಕು ಚೆಲ್ಲುತ್ತವೆ. ಈ ತಾಣವು ಈಗಿನ ಬೆಳಗಾವಿ ನಗರದ ದಕ್ಷಿಣಕ್ಕೆ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿದೆ. ಅಗಲವಾದ ಬೀದಿ, ಎರಡೂ ಬದಿಗೆ ಸಾಲಾಗಿ, ಸುವ್ಯವಸ್ಥಿತವಾಗಿ ನಿರ್ಮಿಸಿದ ಮನೆಗಳ ಬುನಾದಿ ಗೋಡೆಗಳು, ನೀರಿನ ಬಾವಿಗಳು ಹಾಗೂ ನೀರು ಸರಬರಾಜು ವ್ಯವಸ್ಥೆ, ನಾಲೆಗಳು, ಉಗ್ರಾಣಗಳು- ಇವುಗಳನ್ನೆಲ್ಲ ಸುತ್ತುವರಿದ ರಕ್ಷಣಾ ಗೋಡೆ ಅಧುನಿಕ ನಗರಗಳನ್ನು ನಾಚಿಸುವಂತಿದೆ. ಸುಟ್ಟ ಇಟ್ಟಿಗೆ ಹಾಗೂ ಮೃತ್ತಿಕಾ ಪದಾರ್ಥದಿಂದ ರಚಿಸಲ್ಪಟ್ಟಿದ್ದ ಶಾತವಾಹನ ಕಾಲದ ಈ ನಗರಾವಶೇಷಗಳು ಆ ಕಾಲದ ಜನರ ರಚನಾಕೌಶಲ್ಯ ಮತ್ತು ತಂತ್ರಜ್ಞಾನದ ಬಗ್ಗೆ ಅಚ್ಚರಿ ಮೂಡಿಸು ವುದಲ್ಲದೇ ಸುವ್ಯವಸ್ಥಿತವಾದ ನಗರಯೋಜನೆಯ ಮೇಲೆ ಬೆಳಕು ಚೆಲ್ಲುತ್ತವೆ. ಬೆಳಗಾವಿ ಪರಿಸರದ, ಈ ಶಾತವಾಹನ ನಗರವಸತಿ ಮತ್ತು ಅದನ್ನು ಸುತ್ತುವರೆದ ಕೋಟೆ, ಕರ್ನಾಟಕದ ನಗರಯೋಜನೆ ಮತ್ತು ನಗರಾಡಳಿತದ ಪ್ರಾಚೀನತೆಯನ್ನು ಎರಡು ಸಾವಿರ ವರ್ಷದಷ್ಟು ಹಿಂದೆ ಕೊಂಡೊಯ್ಯುತ್ತದೆ. ಅಧುನಿಕ ನಗರಗಳ ಬಹುತೇಕ ಲಕ್ಷಣಗಳನ್ನು ಎರಡು ಸಾವಿರವರ್ಷಗಳಷ್ಟು ಹಿಂದೆಯೇ ಈ ಪ್ರದೇಶದಲ್ಲಿ ಕಾಣಬಹುದು.

ಬೆಳಗಾವಿಯ ವಡಗಾವ - ಮಾಧವಪುರ ಪ್ರದೇಶದ ಕೋಟೆಯಿಂದಾವೃತವಾದ ವಸತಿಯ ನೆಲೆ ಸಂಪೂರ್ಣ ನಿರುಪಯೋಗ ಹೊಂದಿ, ಹೊಸ ವಸತಿನೆಲೆಯು ಈಗಿನ ಮುಖ್ಯ ಕೋಟೆಯ ತಾಣಕ್ಕೆ ಬದಲಾಗಿರಲಿಕ್ಕೆ ಸಾಕು, ಏಕೆಂದರೆ ಈಗಿನ ಬೆಳಗಾವಿಯ ಕಲ್ಲಿನ ಕೋಟೆ ಮೂರುಸ್ತರಗಳಲ್ಲಿ ರಚಿತವಾಗಿದ್ದು ಕದಂಬ, ರಟ್ಟ ಮತ್ತು ಆದಿಲ್‌ಶಾಹಿಶೈಲಿಯ ರಕ್ಷಣಾವಾಸ್ತುಶಿಲ್ಪವನ್ನು ಪ್ರತಿಬಿಂಬಿಸುತ್ತವೆ.

* ಪ್ರವಾಚಕರು, ಆರ್.ಪಿ.ಡಿ. ಕಾಲೇಜು, ಬೆಳಗಾವಿ.

ಅವಶ್ಯಕತೆ, ಅನುಕೂಲತೆ ಮತ್ತು ಉಪಯೋಗಕ್ಕನು ಗುಣವಾಗುವಂತ ನಗರಗಳನ್ನು ಯೋಜಿಸುತ್ತಿದ್ದರು. ಈ ಪರಿಸರದ ಪ್ರಮುಖ ಪ್ರದೇಶಗಳಲ್ಲಿ ರಕ್ಷಣಾದೃಷ್ಟಿಯಿಂದ ಸುತ್ತುವರಿದ ಗೋಡೆಗಳಿದ್ದವೆಂಬ ಅಂಶ ಶಾಸನದಲ್ಲಿ ಉಲ್ಲೇಖಿತವಾದ 'ಬಳಸಿದ ಕೋಟೆಯಿಂದ ಒಳಗೆ' ಎಂಬ ಉಲ್ಲೇಖದಿಂದ ವಿದಿತವಾಗುತ್ತದೆ. ಸಮಾಜದ ವಿವಿಧವೃತ್ತಿಯಲ್ಲಿ ನಿರತರಾದವರಿಗೆ ಪ್ರತ್ಯೇಕವಾದ ಓಣಿಗಳಿದ್ದವು, ಉದಾಹರಣೆಗೆ ಬ್ರಾಹ್ಮಣಗೇರಿ, ಬ್ರಹ್ಮಪುರಿ, ತೆಲ್ಲಿಗಗೇರಿ, ಚಂದಗೇರಿ, ಪಟ್ಟ ಸಾಲೆಗಾರಗೇರಿ, ಮೇದಾರ ಓಣಿ, ಮಡಿವಾಳಗೇರಿ, ಬೇಡರಓಣಿ, ಸೂಳೆಗೆರೆ, ಒಕ್ಕಲಗೆರೆ, ಮಾದಿಗಗೆರೆ, ಹೊಲಗೇರಿ ಅಥವಾ ಕೊಳಚೆಗೇರಿ, ಮುಂತಾದವುಗಳು. ಮಾರುಕಟ್ಟೆ ನಗರದ ಕೇಂದ್ರ ಸ್ಥಾನದಲ್ಲಿದ್ದು ಆಯಾ ವ್ಯಾಪಾರಿಗಳು ಮಾರುತ್ತಿದ್ದ ವಸ್ತುಗಳ ಪ್ರಕಾರ ವಿಶಾಲವಾದ ಮಳಿಗೆಗಳನ್ನು ಹೊಂದಿದ್ದವು, ಸೌಂದರ್ಯಸಾಧನಗಳು, ಬಟ್ಟೆ, ದವಸಧಾನ್ಯಗಳು ಸಾಂಬಾರಜಿನಸುಗಳು, ಸುಗಂಧದೆಣ್ಣೆ, ಹೂವು ಮುಂತಾದವುಗಳಿಗೆಂದೇ ಮಿಸಲಾದ ಪ್ರತ್ಯೇಕ ಅಂಗಡಿಗಳಿದ್ದವು.

ವೇಣುಗ್ರಾಮದಲ್ಲಿ ದೇಶದ ವಿವಿಧ ಪ್ರದೇಶಗಳಿಂದ ಬಂದ ವರ್ತಕರಿಗಾಗಿಯೇ ಪ್ರತ್ಯೇಕವಾದ ಬಡಾವಣೆಗಳಿದ್ದು ಅಲ್ಲಿ ತಿಗುಳ, ಲಾಟ, ಗುಜರಾತ್ ಮತ್ತು ಮಲೆಯಾಳ ದೇಶದ ವರ್ತಕರು ವಾಸವಾಗಿದ್ದರೆಂದು ಕ್ರಿ.ಶ. ೧೨೦೪ರ ರಟ್ಟರ ಬೆಳಗಾವಿ ಶಾಸನ ತಿಳಿಸುತ್ತದೆ. ಇದೇ ರೀತಿ ಸ್ಥಳೀಯ ವರ್ತಕರಿಗೆಂದೇ ಮಿಸಲಾದ ಬಡಾವಣೆಯಿದ್ದು, ಅಲ್ಲಿ ಆಭರಣ, ಸುಗಂಧದ್ರವ್ಯ, ಎಣ್ಣೆ, ಬೇಳೆಕಾಳುಗಳು ಮುಂತಾದವುಗಳನ್ನು ಮಾರುವ ವರ್ತಕರು ವಾಸವಾಗಿದ್ದರು. ಈ ಎಲ್ಲ ಬಗೆಯ ನಿವಾಸಿಗಳು, ವ್ಯಾಪಾರಸ್ಥರು, ಅವರ ಮಳಿಗೆಗಳು ಮತ್ತು ಮಾರುಕಟ್ಟೆ ನಗರದ ಕೇಂದ್ರಸ್ಥಾನದಲ್ಲಿ ವಿಶಾಲವಾದ ಪ್ರದೇಶವನ್ನಾವರಿಸಿಕೊಂಡಿದ್ದವು. ಕಾಳುಮೆಣಸು, ಬತ್ತಿ, ಇಂಗು, ಹಸಿಶುಂಠಿ, ಅರಿಷಿಣ , ಅಡಿಕೆ, ವಿಳೆಯದೆಲೆ, ತೆಂಗಿನಕಾಯಿ, ಜಾನಿ ಸಕ್ಕರೆ, ಬಾಳೆಹಣ್ಣು, ಕಬ್ಬು ಮತ್ತು ಇನ್ನಿತರ ಪದಾರ್ಥಗಳನ್ನು ಹೊರಪ್ರದೇಶದಿಂದ ತರಿಸಿ ಸಂಗ್ರಹಿಸಿಡಲಾಗುತ್ತಿದ್ದು, ಅವುಗಳನ್ನು ನಿರ್ದಿಷ್ಟ ಪ್ರದೇಶದಲ್ಲಿ ಮಾರಲಾಗುತ್ತಿತ್ತು. ಈಡೀ ನಗರವನ್ನು ಪೂರ್ವ ಮತ್ತು ಪಶ್ಚಿಮ - ಎಂದು ಎರಡು ಭಾಗಗಳನ್ನುಗಿ ವಿಂಗಡಿಸಿಲಾಗಿತ್ತು . ಇವೆರಡು ಭಾಗಳನ್ನು ಉಪಭಾಗಗಳನ್ನಾಗಿ ವಿಂಗಡಿಸಿ, ಅಲ್ಲಿ ಪ್ರತ್ಯೇಕ ಬೀದಿಗಳು, ಓಣಿಗಳು, ಮಾರುಕಟ್ಟೆಗಳು ಮತ್ತು ಉದ್ಯಾನವನ ಹಾಗೂ ಕಾರಂಜಿಗಳ ಒಪ್ಪವಾದ ವಿಂಗಡನೆಯಿತ್ತು. ಒಂದು ಓಣಿಯ ತುದಿಯ ಬೀದಿ ಆನೆಕೆರೆಗೆ ಹೋಗಿ ಸೇರುತ್ತಿತ್ತು . ನಗರದ ಒಳಗೆ ವಿವಿಧ ಬಡಾವಣೆಗಳನ್ನು ಸೇರಿಸುವ ಬೀದಿಗಳು ಜೊತೆಗೆ ಸುತ್ತಮುತ್ತಲಿನ ಪ್ರದೇಶವನ್ನು ಜೋಡಿಸುವ ರಸ್ತೆಗಳಿದ್ದವು. ಉದಾಹರಣೆಗೆ ಬೆಳಗಾವಿ ಕಣಬರಗಿ ರಸ್ತೆಯ ಉಲ್ಲೇಖ ಶಾಸನದಲ್ಲಿದೆ.

ಮಹಾಮಾರ್ಗ, ಹೆಬ್ಬಟ್ಟೆ, ಹೆದ್ದಾರಿ, ಹಿರಿಯ ಹೆದ್ದಾರಿ, ದಾರಿ, ಪಥ, ಮಾರ್ಗ ಬಂಡಿಯದಾರಿ, ಅಂಗಡಿಬೀದಿ, ರಾಜಬೀದಿ ಜೈನಮುನಿಗಳ ಬೀದಿ ಶೆಟ್ಟಿಬೀದಿಮುಂತಾದ ಉಲ್ಲೇಖಗಳು ಈ ಪರಿಸರದ ಶಾಸನದಲ್ಲಿ ದೊರೆಯುತ್ತವೆ.

ಊರಿನ ಹೊರವಲಯದಲ್ಲಿ ವಿಶಾಲವಾದ ಕೆರೆಯಿದ್ದು ಅದನ್ನು ಈಗಿನ ಬೆಳಗಾವಿಕೋಟೆಯ ಉತ್ತರವಲಯದಲ್ಲಿರುವ ಕೆರೆಯೆಂದು ಗುರುತಿಸಬಹುದು ಸಾಲಬಸದಿ ಮತ್ತು ಈಶ್ವರ ದೇವಾಲಯಗಳು ಬೆಳಗಾವಿಯ ಮಧ್ಯಭಾಗದಲ್ಲಿದ್ದವು .ಮತ್ತಗಿ ಪ್ರದೇಶದಲ್ಲಿ ರಾಜಬೀದಿ, ಇಂಧನ ಮಳಿಗೆ, ಅಸೆಂಬ್ಲಿಹಾಲ್, ಗೌಳಿಗರ ಓಣಿ ಊರೊಡೆಯನ ಅರಮನೆಯಿದ್ದ ಉಲ್ಲೇಖ ಶಾಸನಗಳಿಂದ ವಿದಿತವಾಗುತ್ತ ಇಲ್ಲಿಯ ಮಾರುಕಟ್ಟೆ ಪ್ರದೇಶದಲ್ಲಿ ಸುವ್ಯವಸ್ಥಿತವಾದ ಮಳಿಗೆಗಳಿದ್ದು ಅಲ್ಲಿ ತರಕಾರಿ, ಎಣ್ಣೆ , ಉಪ್ಪು, ಆಭರಣಗಳು, ಬಟ್ಟೆ ಮತ್ತು ಬೀದಿ ಬದಿಗೆ ಮಾರುವ ವಸ್ತುಗಳಿಗಾಗಿಯೇ ಪ್ರತ್ಯೇಕ ವ್ಯವಸ್ಥೆಯಿತ್ತು .

ನಗರಾಲಂಕರಣ ದೃಷ್ಠಿಯಿಂದ ಅಲ್ಲಲ್ಲಿ ಹೂದೋಟಗಳನ್ನು ನಿರ್ಮಿಸಲಾಗಿತ್ತು. ಪುಷ್ಪನಂದನ, ಬಳಸಿದ ಪೂವನ , ಹೂದೋಟ ಮುಂತಾದವುಗಳ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಇದು ಇಲ್ಲಿಯ ನಗರಯೋಜನೆಯ ಜೊತೆಗೆ ಅವರ ಸೌಂದರ್ಯ ಪ್ರಜ್ಞೆ ಮತ್ತು ನಿಸರ್ಗಪ್ರೇಮವನ್ನು ಪ್ರತಿಬಿಂಬಿಸುತ್ತದೆ. ಹಲಸಿ ಶಾಸನಗಳಲ್ಲಿ ಅರಮನೆ, ರಾಜಬೀದಿ, ನಾಟ್ಯಶಾಲೆ, ತೋರಣಗಳು , ಕೋಟೆಯಿಂದಾವೃತವಾದ ನಗರ ಇವುಗಳ ಬಣ್ಣನೆಯಿದೆ, ಮನೆಯ ಮುಂಭಾಗದಲ್ಲಿ ಎತ್ತರವಾದ ಗೃಹತೋರಣಗಳೆಂದು ಶಾಸನೋಲ್ಲೇಖಿತವಾದ ಕಮಾನುಗಳಿದ್ದವು ಹಾಗು ಎತ್ತರವಾದ ಮತ್ತು ಬೃಹದಾಕಾರದ ಕಟ್ಟಡಗಳಿದ್ದ ಅಂಶ 'ಉನ್ನತಸೌಧ ಶಾಲೆಯಿಂ' ಎಂಬ ಶಾಸನೋಕ್ತಿಯಿಂದ ವಿದಿತವಾಗುತ್ತದೆ. ಸಭಾಂಗಣಗಳು, ನಾಟ್ಯಗೃಹಗಳು ಮತ್ತು ನಾಟಕಶಾಲೆಗಳು ಮನೋರಂಜನೆ ಮತ್ತು ಸಾರ್ವಜನಿಕ ಕಟ್ಟಗಳು; ಇದಲ್ಲದೆ ಸಭಾಮಂಟಪ, ಸಭಾಗೃಹ ಮತ್ತು ಸವಿತಾಣ ಎಂಬ ಉಲ್ಲೇಖವನ್ನು ಹಲಸಿ ಶಾಸನಗಳಲ್ಲಿ ಕಾಣಬಹುದು. ಅಸಂಖ್ಯಾತ ಕೆರೆ, ಬಾವಿ, ಕಾಲುವೆ , ಸರೋವರ ಮತ್ತು ಪುಷ್ಕರಣಿಗಳ ವಿವರಗಳನ್ನು ಈ ಪರಿಸರದ ಶಾಸನಗಳಲ್ಲಿ ಕಾಣಬಹುದು.

ಈ ಮೇಲಿನ ವಿವರಗಳಿಂದ ಬೆಳಗಾವಿ ಪರಿಸರದಲ್ಲಿ ಇತಿಹಾಸದ ಆರಂಭಕಾಲದಿಂದಲೂ ಈ ಪ್ರದೇಶದಲ್ಲಿ ಸುವ್ಯವಸ್ಥಿತವಾದ ನಗರಾಡಳಿತ ಮತ್ತು ನಗರಯೋಜನೆಯಿದ್ದ ಅಂಶ ವಿದಿತವಾಗುತ್ತದೆ. ಸಮುದಾಯ ಜೀವನ , ಸಹಕಾರತತ್ವ, ಸಂಘಟನಾಶಕ್ತಿ

ಮತ್ತು ಸಹಬಾಳ್ವೆಗಳು ಈ ಪರಿಸರದ ನಗರಜೀವನದ ಪ್ರಮುಖ ಲಕ್ಷಣಗಳಾಗಿದ್ದವು. ಈ ಪರಿಸರದಲ್ಲಿ ನಗರಗಳು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಿದ ಸೃಷ್ಟಿಯಾಗಿದೆ. ಇವುಗಳ ಸೃಷ್ಟಿಕಾರರು ನುರಿತ ನಗರವಿನ್ಯಾಸಕರಾಗಿದ್ದರು . ಆದರೆ ವಾಸ್ತುಶೈಲಿಯು ನಿರಾಡಂಬರದ ಸಾದಾಶೈಲಿಯಾಗಿತ್ತು. ನಗರವನ್ನು ಚಚ್ಚೌಕ ಮತ್ತು ಆಯತಾಕಾರದ ಘಟಕಗಳನ್ನಾಗಿ ವಿಭಜಿಸಲಾಗಿತ್ತು. ಯೋಜಿತವಾದ ಓಣಿಗಳಿದ್ದವು, ನಗರದ ಹೊರವಲಯದಲ್ಲಿ ಭಾರಿಕೋಟೆ; ಇದರ ಸುತ್ತಲೂ ಸಾರ್ವಜನಿಕ ಬಳಕೆಯ ಕಟ್ಟಡಗಳ ಸಮೂಹವಿತ್ತು . ಆಳುವ ವರ್ಗದವರು ಕೋಟೆಯ ಒಳಗಡೆ ವಾಸವಾಗಿರುತ್ತಿದ್ದಿರ ಬಹುದು. ಸಾಮಾನ್ಯಜನರ ವಾಸಸ್ಥಾನ ಮತ್ತು ಬೀದಿಗಳಲ್ಲದೆ ವಿಶಿಷ್ಟ ಮತ್ತು ಪ್ರತಿಷ್ಠಿತ ವರ್ಗದವರಿಗೆಂದೆ ಮೀಸಲಾದ ಪ್ರತ್ಯೇಕ ಬಡಾವಣೆಗಳಿದ್ದವು. ಒಟ್ಟಿನಲ್ಲಿ ಬೆಳಗಾವಿ ಪರಿಸರದಲ್ಲಿ ನಗರಯೋಜನೆಯ ವೈಶಿಷ್ಟ್ಯವೆಂದರೆ ಉತ್ತಮವಾದ ನಗರವಿನ್ಯಾಸ, ಸುವ್ಯವಸ್ಥಿತ ವಾಸದ ಬಡಾವಣೆಗಳು ನಿಯೋಜಿತ ಬೀದಿಗಳು, ಓಣಿಗಳು ಮತ್ತು ಸುತ್ತುವರಿತ ಕೋಟೆ, ಈ ರೀತಿ ಕ್ರಿ. ಶ. ಪೂರ್ವಕಾಲದಿಂದಲೂ ತನ್ನ ಅಸ್ತಿತ್ವವನ್ನುಳಿಸಿಕೊಂಡು, ನಗರ ಲಕ್ಷಣಗಳನ್ನೆಲ್ಲ ಅಳವಡಿಸಿಕೊಂಡು ಬೆಳೆಯುತ್ತಲೇ ಬಂದ ಮಹಾನಗರ ಬೆಳಗಾವಿ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. J B B R A S Vol IX

೨. *Karnataka Inscriptions* Vol I to V

೩. I N K K

೪. E I XIII

೫. **ಕರ್ನಾಟಕ ದರ್ಶನ.,** Vol 11 & 12 , Bangalore

೬. Indian Antiquary Volumes.

೭. A Historical Account of Belgaum Dist : Stokes

೮. **ಕರ್ನಾಟಕ ಚರಿತ್ರೆ.,** ಸಂಪುಟ ೧ Hampi .

ಹರಿಹರ ಶ್ರೀನಿವಾಸರಾವ್*

'ಮಾನಸೋಲ್ಲಾಸ' - ಕೆಲವು ವೈಜ್ಞಾನಿಕ ಅಶಂಗಳು

ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರನಿಂದ ರಚಿತವಾದ ಸಂಸ್ಕೃತ ಗ್ರಂಥ 'ಮಾನಸೋಲ್ಲಾಸ'. ಇದು ಕೇವಲ ತಾತ್ವಿಕ ಶಾಸ್ತ್ರ ಗ್ರಂಥವಾಗಿರದೇ (Theoritical), ಅನ್ವಯಿಕವೂ (Applied) ಆಗಿರುವ ಭಾರತದ ವಿಶ್ವಕೋಶಕ್ಕೆ ಸಮಾನವಾದ ಗ್ರಂಥ. ಇದರ ಕರ್ತೃವೇ ಹೇಳುವಂತೆ ಜ್ಞಾನದಾಹಿಗಳಿಗೆ ಜ್ಞಾನವನ್ನೂ, ವೃತ್ತಿಪರರಿಗೆ ಉತ್ತಮ ವೃತ್ತಿಯನ್ನೂ, ರಾಜ್ಯ, ಐಶ್ವರ್ಯಗಳನ್ನು ಕೊಡುವ 'ವಿಶ್ವೋಪಕಾರಕಂ' 'ಜಗದಾಚಾರ್ಯ ಪುಸ್ತಕಂ'. ಅನೇಕ ಇಂದಿಗೂ ಉಪಯುಕ್ತವಿರುವ ಮತ್ತು ನನಗೆ ಕೌತುಕಮಯವೆನಿಸಿದ ವೈದ್ಯಕೀಯ, ಗಜವನ ವಿಭಾಗ ಲಕ್ಷಣ, ವಾಸ್ತುವಿದ್ಯೆ, ಚಿತ್ರಕಲೆ, ಜಲಗುಣಕ್ಕೆ ಸಂಬಂಧಿಸಿದ ಕೆಲವು ವಿವರಣೆಗಳು, ಕುಸ್ತಿಪಟ್ಟುಗಳಂಥಹ ವಿಷಯಗಳನ್ನು ಆಯ್ದುಕೊಂಡು ಇಂದಿನ ವಿಜ್ಞಾನ ಗಣಿತ ಇತ್ಯಾದಿಗಳ ದೃಷ್ಟಿಯಿಂದ ನೋಡುವುದು ಈ ಪ್ರಬಂಧದ ಉದ್ದೇಶವಾಗಿದೆ.

ವೈದ್ಯಕೀಯ

ಪ್ರಥಮ ವಿಂಶತಿಶ್ಲೋಕ ೧೩೯, ೧೪೦ರಲ್ಲಿ ವೈದ್ಯನಿಗೂ ಮತ್ತು ಅವನ ಸಹಾಯಕರಿಗೆ ಇರಬೇಕಾದ ಮುಖ್ಯ ಅರ್ಹತೆಗಳನ್ನು ವರ್ಣಿಸುತ್ತವೆ.

'ಶಸ್ತ್ರಕರ್ಮದಲ್ಲಿ ಮತ್ತು ವೈದ್ಯ ಶಾಸ್ತ್ರಗಳಲ್ಲಿ ಪರಿಣಿತರಾದ ಹಾಗೂ ಪ್ರಯೋಗಗಳಲ್ಲಿ ನಿಪುಣರಾದ, ಊಹಾಪೋಹಗಳಲ್ಲಿ (Diagnosis and imagination) ಒಳ್ಳೆಯ ವಿವೇಕವನ್ನು ಹೊಂದಿರುವ ಅಮೃತಹಸ್ತರಾಗಿರುವ, ಪ್ರಿಯವಾಗಿ ಮಾತನಾಡುವ ವೈದ್ಯರನ್ನು ನೇಮಿಸಬೇಕು' (ಶ್ಲೋ. ೧೩೯); ಅವರಿಗೆ ವಿಚಿತ್ರವಾದ ಬಗೆಬಗೆಯ ಔಷಧಿಗಳನ್ನು (ಶ್ಲೋ. ೧೪೦) ಒದಗಿಸಬೇಕು; ನಿರಾಲಸಿಗಳಾದ, ಧರ್ಮಜ್ಞರಾದ, ಪರಿಚಾರಕರನ್ನು ಒದಗಿಸಬೇಕು.

ಮುಖ್ಯವಾಗಿ ೨೨ ರೋಗಗಳನ್ನು ವಿವರಿಸುತ್ತಾನೆ: ೧) ಜ್ವರ ೨) ರಕ್ತಪಿತ್ಥ ೩) ಕಾಸ ೪) ಶ್ವಾಸ ೫) ರಾಜಯಕ್ಷ್ಮ ೬) ಛರ್ಧಿ ೭) ಮಥಾತ್ಯಯ ೮) ಅರ್ಶಸ್ ೯) ಅತಿಸಾರ ೧೦) ಗ್ರಹಣಿ ೧೧) ಮೂತ್ರಕೃಚ್ಛ ೧೨) ಪ್ರಮೇಹ ೧೩) ವಿದ್ರಧಿ ೧೪) ಗುಲ್ಮರೋಗ ೧೫) ಉದರರೋಗ ೧೬) ಪಾಂಡುರೋಗ ೧೭) ಶೋಫ ೧೫) ವಿಸರ್ಪ ೧೯) ಕೃಷ್ಣರೋಗ ೨೦) ಶ್ವಿತ, ೨೧) ಬಲಾಮಯ ೨೨) ವಾತರಕ್ತ.

ವಾತ, ಪಿತ್ತ, ಮತ್ತು ಕಫ ಪ್ರಕೋಪದ ಲಕ್ಷಣಗಳನ್ನು ತಿಳಿದು, ಅವುಗಳನ್ನು ಶಮನಮಾಡುವ ಔಷಧಿಗಳಿಂದ ಪೇಯಾ (ಗಂಜಿ) ಯನ್ನು ತಯಾರಿಸಿ, ಆಯಾದೋಷ ಪ್ರಕೋಪವುಳ್ಳ ರೋಗಿಗೆ ಆಯಾದೋಷ ನಿವಾರಣ ಪೇಯವನ್ನು ಕೊಡಬೇಕು. ಲಕ್ಷಣ : ನೋವು ಹೆಚ್ಚಾಗಿದ್ದರೆ ವಾತದೋಷ. ಅಧಿಕವಾಗಿದೆಯೆಂದೂ, ಶರೀರದ ಉಷ್ಣತೆಯು ಹೆಚ್ಚಾಗಿದ್ದರೆ ಪಿತ್ತ ಅಧಿಕವಾಗಿದೆಯೆಂದೂ, ಆಲಸ್ಯವೂ ಹೆಚ್ಚಾಗಿದ್ದರೆ ಕಫ ಅಧಿಕವಾಗಿದೆಯೆಂದೂ, ಈ ಲಕ್ಷಣಗಳು ಮಿಶ್ರವಾಗಿದ್ದರೆ ಎರಡು ಅಥವಾ ಮೂರು ದೋಷಗಳು ಮಿಶ್ರವಾಗಿವೆ ಎಂದೂ ತಿಳಿಯಬೇಕು.

ಬಿಲ್ವಪತ್ರೆ, ಬೇರು, ಕಳ್ಳಂಗಡಲೆಬೇರು,ಒಂದೆಲೆ ಹೊನ್ನೆ, ಶುಂಠಿ, ಧನಿಯ (ಕೊತ್ತುಂಬರಿ ಬೀಜ), ಕನ್ನೈದಿಲೆಗೆಡ್ಡೆ - ಇವುಗಳಿಂದ ಸಿದ್ಧವಾದ ಪೇಯವು ವಾತ-ಪಿತ್ತ ಸಂಸರ್ಗದಿಂದ ಉಂಟಾದ ಜ್ವರವನ್ನು ಹೋಗಲಾಡಿಸುತ್ತದೆ.

ಹುರಿದ ಅಕ್ಕಿಯಿಂದ ಸಿದ್ಧವಾದ ಹಿಪ್ಲಿ ಮತ್ತು ನೆಲ್ಲಿಕಾಯಿಗಳಿಂದ ಕೂಡಿದ 'ಯಾವಾಗೂ' (ಒಂದು ವಿಶಿಷ್ಟರೂಪದ ಗಂಜಿ)ವನ್ನು ತುಪ್ಪದೊಡನೆ ಕುಡಿದರೆ ಕಟ್ಟಿಕೊಂಡ ಮಲವು ಭೇದಿಯಾಗಿ ಹೋಗುವುದು. ಹೆಸರು ಮುಂತಾದ ಧ್ಯಾನ್ಯಗಳೊಡನೆ ಕುದಿಸಲ್ಪಟ್ಟ ನೀರಿಗೆ 'ಯೂಷ್' ಅತವಾ 'ತೊಟ್ಟೆ' ಎಂದು ಹೆಸರು. ಸ್ನೇಹ ಎಂದರೆ ಜಿಡ್ಡು. ಜಿಡ್ಡು ಮತ್ತು ಉಪ್ಪು ಇವುಗಳನ್ನು ಬೆರೆಸದೆ ಮಾಡಿರುವ ಯೂಷಕ್ಕೆ "ದಕ" ಎಂದು ಹೆಸರು. ಅಗಿಲು, ಸುಂಠಿ, ಕಹಿಪಡುವಲ, ಕಟಕರೋಹಿಣೀ, ಸೊಗದೇಬೇರು ಮತ್ತು ಕೊನ್ನಾರಿಗೆಡ್ಡೆ ಇವುಗಳಿಂದ ಸಿದ್ಧವಾದ ಕಷಾಯವೂ ಸಂತತ ಜ್ವರವನ್ನು ನಾಶಪಡಿಸುತ್ತದೆ. ರೋಗಿಗೆ ಮತ್ತು ರೋಗದ ಅವಸ್ಥೆಗೆ ಒಗ್ಗುವಂಥ ದೋಷನಾಶಕವಾದ ಕಷಾಯಗಳನ್ನು ಪ್ರಯೋಗಿಸಿದರೆ ಅವು ಅರುಚಿ, ಜ್ವರ, ಬಾಯಾರಿಕೆ, ಬಾಯಿಯ ರುಚಿ ಕೆಡುವುದು ಮತ್ತು ಅಜೀರ್ಣಗಳನ್ನು ನಾಶಮಾಡುತ್ತವೆ. ಈ ಸಂದರ್ಭದಲ್ಲಿ ನನ್ನದೊಂದು ಅನುಭವ ಹೀಗಿದೆ. ಸಾಮಾನ್ಯವಾಗಿ ಪರೀಕ್ಷೆಗಾಗಿ ಓದುವಾಗ ಆಗಲೀ, ವಿಶೇಷ ಉಪನ್ಯಾಸ ಅಥವಾ ಉಪವಾಸ ಇತ್ಯಾದಿಗಳನ್ನು ಕಾಲಮಿತಿಯಲ್ಲಿ ಮಾಡುವಾಗ ಮನಸ್ಸಿನಲ್ಲಿಯ ಒತ್ತಡ, ದೇಹದಲ್ಲಿ ಹೆಚ್ಚಿನ ಉಷ್ಣತೆ ಉಂಟಾಗುವುದು ಸಹಜ. ಇಂತಹ ಸಂದರ್ಭಗಳಲ್ಲಿ ಮಾನಸೋಲ್ಲಾಸದ ಈ ಶ್ಲೋಕಗಳಲ್ಲಿ

* ೭೫/೧೫, 'ಸಮರ್ಥ', ೫ನೇ ಬ್ಲಾಕ್, ೩ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫..

ಹೇಳಿರುವಂತೆ ಅರುಚಿ, ಬಾಯಾರಿಕೆ, ಅಜೀರ್ಣ ಇತ್ಯಾದಿಗಳನ್ನು ಪೇಟೆಯ ಗ್ರಂಥಿಗೆ ಅಂಗಡಿಯಲ್ಲಿ ಸಿಗುವ ಸೊಗದೇ ಬೇರಿನ ಕಷಾಯ, ಬಿ.ವಿ. ಪಂಡಿತರ ಸದ್ವೈದ್ಯಶಾಲಾದಿಂದ ತಯಾರಿಸ ಲಾಗುವ ನೇರಳೇ ಹಣ್ಣಿನ ಶರಬತ್ತು ಇವು ತಕ್ಷಣ ಪರಿಹಾರಕ್ಕಾಗಿ ಬಾಯಾರಿಕೆ ಹೆಚ್ಚಿನ ಉಷ್ಣಾಂಶವನ್ನು ಹೊರಗೆ ಹಾಕುವಲ್ಲಿ ಯಶಸ್ವಿಯಾಗಿವೆ.

ರಕ್ತಮೋಕ್ಷಣ

ಸನ್ನಿಪಾತರೋಗಕ್ಕೆ ಪಭೇದಶೋಫ ಮಾಡುವಾಗ ಅದರ ನಿವಾರಣೆಯಾಗುವ ಕೆಲವು ಸಂದರ್ಭಗಳಲ್ಲಿ ಕಿವಿಯ ಬುಡದಲ್ಲಿ ದಾರುಣವಾದ ಶೋಫ (ನೋವು) ಉಂಟಾಗುತ್ತದೆ ಇದರಿಂದ ಕೆಲವರು ಮಾತ್ರ ಗುಣ ಹೊಂದುತ್ತಾರೆ. ಇದಕ್ಕೆ ಚಿಕಿತ್ಸೆಗಾಗಿ, ಶೋಫ ಉಂಟಾದಾಗ ಜಿಗಣೆಗಳಿಂದ ಆ ಜಾಗದಲ್ಲಿ ಕಚ್ಚಿಸಿ, ಅನೇಕ ಬಾರಿ ರಕ್ತ ಮೋಕ್ಷಣ (ಕೆಟ್ಟರಕ್ತವನ್ನು ಹೊರಗೆಡುವುದು) ಮಾಡಿಸ ಬೇಕು. ಈ ಶೋಫವು ಪಾಕವಾಗದಂತೆ (ಎಂದರೆ ರಕ್ತದಲ್ಲಿ ಇತರ ಭಾಗಗಳಿಗೆ ಕರಗಿ ಹರಡದಂತೆ ಎಚ್ಚರಿಕೆ ವಹಿಸಬೇಕು ಎಂದು ಎಚ್ಚರಿಕೆಯನ್ನೂ ಉಲ್ಲೇಖಿಸಿದ್ದಾರೆ. ಇದು ಆಗಿನ ಕಾಲಕ್ಕೆ ಪ್ರಾಣಾಂತಿಕ ಚಿಕಿತ್ಸೆಯಾಗಿತ್ತು ಎನ್ನುವ ದಾಖಲೆ ಇಲ್ಲಿ ಬಹಳ ಮುಖ್ಯವಾಗುತ್ತದೆ. ಆದರೆ ಇಂದು ಚಿತ್ರದುರ್ಗದಲ್ಲಿ 'ಶ್ರೀ ಸುದರ್ಶನ' ಎನ್ನುವ ಸ್ಟೇಟ್‌ಬ್ಯಾಂಕ್‌ಆಪ್ ಮೈಸೂರಿನ ಮ್ಯಾನೇಜರ್ ಒಬ್ಬರು ಇದೇ ರಕ್ತವೇಕ್ಷಣ ಚಿಕಿತ್ಸೆಯನ್ನು ಉಪಯೋಗಿಸಿ ಸಕ್ಕರೆ ಕಾಯಿಲೆ ಉಲ್ಬಣಗೊಂಡು ಕಾಲುಗಳನ್ನು ಕತ್ತರಿಸುವಂಥ ಸಂದರ್ಭಗಳಲ್ಲೂ 'ಗ್ಯಾಂಗ್ರಿನ್‌ನ್ನು ಗುಣಪಡಿಸುತ್ತಿದ್ದಾರೆನ್ನುವ ಸಂಗತಿಯೂ ಬಹಳ ಮಹತ್ವದ್ದು.

ಕಾಸರ ರೋಗ

ವಾತಕರವಾದ ಆಹಾರ (Gastric trouble Eatables) ವನ್ನು ಸೇವಿಸುವುದರಿಂದ ಕುಪಿತವಾದ ವಾತದೋಷವು ಎದೆಯಲ್ಲಿ ಕಫದೋಷದಿಂದ ಆವರಿಸಲ್ಪಟ್ಟು, ಹೃದಯ ಮತ್ತು ಪಕ್ಕೆಗಳಲ್ಲಿ ನೋವನ್ನುಂಟುಮಾಡುವ ರೋಗಕ್ಕೆ 'ಆಕಾಸ'ರೋಗವೆನ್ನುವರು. (ಶ್ಲೋಕ ೨೦೬)

ನಿವಾರಣೆ

ಅಮೃತಬಳ್ಳಿ ಮತ್ತು ನೆಲಗುಳ್ಳಗಳ ಸ್ವರಸವನ್ನು (ಹಸಿಯಾದ ಮೂಲಿಕೆಯನ್ನು ಜಜ್ಜಿ ಬಟ್ಟೆಯೊಳಗೆ ಹಿಂಡಿ ತೆಗೆಯುವ ರಸಕ್ಕೆ 'ಸ್ವರಸ'ವೆಂದು ಹೆಸರು) ೬೦ ಪಲ (೪ ತೊಲ) ತೆಗೆದು ಕೊಂಡು ಅದರಲ್ಲಿ ಕಾಲುಭಾಗ ಎಂದರೆ ೧೫ ಪಲ (ತೊಲ) ತುಪ್ಪವನ್ನು ಬೆರೆಸಿ, ಘೃತಪಾಕ (ತುಪ್ಪದಪಾಕ) ಮಾಡಬೇಕು. ಇದರಿಂದ ಸಿದ್ಧವಾದ ತುಪ್ಪವು 'ಕಾಸರೋಗ'ವನ್ನು ಗುಣಪಡಿಸುತ್ತದೆ. ಇಲ್ಲಿ ಬಂದಿರುವ ಅಮೃತಬಳ್ಳಿ ಮತ್ತು ನೆಲಗುಳ್ಳಗಳು ಕರ್ನಾಟಕ ಬಯಲುಸೀಮೆಯಿಂದ ಹಿಡಿದು ಮಲೆನಾಡಿನವರೆಗೂ ಹೊಲ ಗದ್ದೆಗಳು, ಕೆರೆಕಾಲುವೆಗಳು ದಂಡೆಗಳಲ್ಲಿ ಬೆಳೆಯುತ್ತವೆ. ಔಷಧಿ ಯನ್ನು ತಯಾರಿಸುವ ಕ್ರಮವೂ ಇರುವುದು ವಿಶೇಷವಲ್ಲವೆ?

ನೆಲಗುಳ್ಳ ಅಥವಾ ಹುಚ್ಚು ಬದನೆಗಿಡ ಚಿಕ್ಕದಾಗಿದ್ದು ಚಿಕ್ಕದಾಗಿದುಂಡಾದ ಬದನೇಕಾಯಿಯನ್ನೇ ಹೋಲುತ್ತದೆ. ಇದರ ಬೀಜವನ್ನು ಬೆಣ್ಣೆಯೊಂದಿಗೆ ಬೆರೆಸಿ ಕೆಂಡದ ಮೇಲಿರಿಸಿ, ಅದರ ಹೊಗೆಯನ್ನು ತೆಗೆದುಕೊಂಡರೆ ಹಲ್ಲಿನಲ್ಲಿಯ ಹುಳುಗಳು ಸತ್ತು ಕೇವಲ ೩೦ ನಿಮಿಷಗಳಲ್ಲಿ ಹಲ್ಲುನೋವು ಕಡಿಮೆಯಾಗುತ್ತದೆ. ವಿಶೇಷರೀತಿಯಲ್ಲಿ ಹೊಗೆಯನ್ನು ತೆಗೆದುಕೊಳ್ಳುವ ಒಂದು ಸರಳ ವಿಧಾನದ ಮೂಲಕ ಹಲ್ಲಿನಲ್ಲಿಯ ಹುಳುಗಳು ಸತ್ತು ಬೀಳುತ್ತವೆ. ಈ ಕ್ರಮಗಳಲ್ಲಿ ಯಾವುದೇ ಪಾರ್ಶ್ವ ಪ್ರತಿಕ್ರಿಯೆ (Side effect) ಗಳೂ ಇಲ್ಲವೆನ್ನುವುದು ಉಲ್ಲೇಖಾರ್ಹವಾದುದು.

ಮದ್ಯ ನಿದಾನ


ಇಂದು ಹೆಚ್ಚಿರುವ ಮದ್ಯಸೇವನೆಯ ದುಷ್ಪರಿಣಾಮಗಳ ಕಾರಣ ಅದನ್ನು ಬಿಡಬೇಕೆನ್ನುವ ಸಮಸ್ತರಿಗೂ ಮಾನಸೋಲ್ಲಾಸ ದಲ್ಲೊಂದು ಸುಲಭ ಪರಿಹಾರವಿದೆ. ಮದ್ಯದಿಂದುಂಟಾದ (ಶ್ಲೋಕ ೨೨೨) ಬಾಯಾರಿಕೆಯನ್ನು ಹುಣಿಸೇ ಹಣ್ಣು, ದಾಳಿಂಬೆ ಚಿಕ್ಕೆ, ವಾಟಿಹುಳಿ, ಎಲಚಿಹಣ್ಣು, ಪುಳ್ಳಂಪೋಚಿ ಸೊಪ್ಪು - ಇವುಗಳನ್ನು ಅರೆದು ಬಾಯಿಗೆ ಲೇಪನ ಮಾಡುವುದರಿಂದ ನಿವಾರಿಸಬಹುದು. ಇಂದು ಮದ್ಯನಿರೋಧ ಸಂಘ ಸಂಸ್ಥೆಗಳೂ ಇಂತಹ ಸುಲಭ ಪರಿಹಾರಗಳ ಬಗ್ಗೆ ಯೋಚಿಸಿದರೆ ಮತ್ತು ಹೆಚ್ಚು ಪ್ರಚಾರಗೊಳಿಸಿದರೆ ಈ ಕೃತಿಯ ಕರ್ತೃವಿನ 'ವಿಶ್ವೋಪಕಾರಕಂ' ಎನ್ನುವ ಉಕ್ತಿಗೂ ಮಹತ್ವ ಬರುವುದರಲ್ಲಿ ಸಂಶಯವಿಲ್ಲ.

ಹೇಗೆ 'ಅರ್ಶಸ್ಸು' ಎಂದರೆ ಪೈಲ್ಸ್ (piles), ಅತಿಸಾರ (ಭೇದಿ), ಮೂತ್ರಕೃಚ್ಛ (kidney stones) ಮುಂತಾದ ರೋಗಗಳ ಲಕ್ಷಣ ಹಾಗೂ ನಿದಾನದ ವಿಧಾನಗಳನ್ನು ವಿವರಿಸಿದ್ದಾನೆ. ಇಂತಹ ರೋಗಗಳು ೧೨-೧೩ನೇ ಶತಮಾನಗಳಿಂದಲೂ ಇರುವುದನ್ನು ಗುರ್ತಿಸಿ, ದಾಖಲಿಸಿ, ವಿಶ್ಲೇಷಿಸುವುದರಿಂದ ವೈದ್ಯಕೀಯ ಕ್ಷೇತ್ರಕ್ಕೆ ಹೊಸ ಆಯಾಮಗಳು ದೊರಕುತ್ತವೆ.

ಗಜವನವಿಭಾಗ ಲಕ್ಷಣ°

(Elepahnt-Breeding Centres)

ಆನೆಗಳ ಜನ್ಮಸ್ಥಾನ ಮತ್ತು ಅವುಗಳ ಬೆಳವಣಿಗೆ ಹಾಗೂ ವಂಶಾಭಿವೃದ್ಧಿಗೆ ತಕ್ಕ ಪರಿಸರವಿರುವ ವನಗಳನ್ನು ರಾಜನು ರಕ್ಷಿಸಬೇಕು ಎನ್ನುತ್ತಾನೆ ಸೋಮೇಶ್ವರ. ೨ನೇ ಪುಲಿಕೇಶಿಯು ಮಳೆಗಾಲದಲ್ಲಿ ಭೋರ್ಗರೆವ ನರ್ಮದೆಯನ್ನು ತೆಪ್ಪಗಳ ಮೇಲೆ ಆನೆಗಳನ್ನೇ ಕೊಂಡೊಯ್ದು ಹರ್ಷವರ್ಧನನ್ನು ಜಯಿಸಿದ್ದು, ಅವನ ಚಿಕ್ಕಪ್ಪನಾದ ಮಂಗಳೀಶನು ಇಂದಿನ ಮಹಾರಾಷ್ಟ್ರದ ರೇವತಿ


ಮಾನಸೋಲ್ಲಾಸದಲ್ಲಿ ಉಕ್ತವಾಗಿರುವ
ಆನೆವನಗಳು
ನರ್ಮದಾ ನದಿ
1. ಪ್ರಾಚ್ಯ ವನ
2. ವೇದಿಕಾ ವೃಕ್ಷ ವನ
3. ಆಂಗಿರೇಯ ವನ
4. ಕಾಳಿಂಗಕ ವನ
5. ದಾರಾರ್ಣಕ ವನ
6. ಅಪರಾಂತ ವನ
7. ಸೌರಾಷ್ಟ್ರ ವನ
8. ಪಾಂಚನದ ವನ

ದ್ವೀಪದ ಕೋಟೆಯನ್ನು ಹೀಗೆಯೇ ಆನೆಗಳ ಮೂಲಕ ವಶಪಡಿಸಿ ಕೊಂಡಿದ್ದೂ, ಕರುನಾಡು ಶಬ್ದೋತ್ಪತ್ತಿ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಇಂದಿಗೂ ಕರ್ನಾಟಕದ ದಂತಕ್ಕಿರುವ ಮೊದಲ ದರ್ಜೆಯ ಬೆಲೆಯ ಐತಿಹಾಸಿಕ ಹಿನ್ನೆಲೆಯಿರುವುದರಿಂದ ಇದನ್ನು ಪ್ರಸ್ತಾಪಿಸಲಾಗಿದೆ. ಆನೆಗಳ ಅಭಯಾರಣ್ಯಗಳನ್ನು ಸ್ಥಾಪಿಸಬೇಕೆನ್ನುವ ಸರ್ಕಾರಗಳ ಅಪೇಕ್ಷೆಗೆ ಭಾರತದಲ್ಲಿಯ ಅತ್ಯಂತ ಪ್ರಶಸ್ತವಾದ ಎಂಟು ತಾಣಗಳನ್ನು ಗುರುತಿಸಿ ಅದರಲ್ಲಿಯೂ ಉತ್ತಮ ಮಧ್ಯಮ ಹಾಗೂ ಅಧಮ ಸ್ಥಾನಗಳನ್ನು ವಿಂಗಡಿಸಿದ್ದಾನೆ.

೧. ಗಂಗಾನದಿ, ಹಿಮಾಲಯ ಹಾಗೂ ಪ್ರಯಾಗಗಳ ಮಧ್ಯದಲ್ಲಿ ಹರಡಿರುವುದು 'ಪ್ರಾಚ್ಯವನ'.

೨. ಕೋಸಲ (ಇಂದಿನ ಬಿಹಾರ)ದಿಂದ 'ತ್ರಿಪುರ್' ವರೆಗೆ ಇರುವುದು 'ವೇದಿಕಾ ರೂಕ್ಷವನ'

೩. ಶ್ರೀಕ್ಷೇತ್ರ (ಶ್ರೀಶೈಲವಿರಬಹುದೆ?) ಗೌಡಬಂಗಾಲ ಪ್ರದೇಶವನ್ನು 'ಆಂಗೀರೇಯವನ'ವೆನ್ನುವರು.

೪. ವಿಂಧ್ಯಾದಿ, ಚಿತ್ರಕೂಟಾದ್ರಿ (ಈಗಿನ ಜಾರ್ಖಂಡ ಪ್ರದೇಶ) ಕಲಿಂಗ (ಒರಿಸ್ಸಾ) ಹಾಗೂ ದ್ರಾವಿಡ ದೇಶಗಳಲ್ಲಿರುವ ವನಕ್ಕೆ 'ಕಾಲಿಂಗಕವನ' ಎನ್ನುತ್ತಾರೆ.

೫. ಶ್ರೀಶೈಲದಲ್ಲಿ, ವೇದಶೈಲದಲ್ಲಿ ಹಾಗೂ ಮಲಯಾದ್ರಿ (ಕೇರಳ)ದಲ್ಲಿರುವ ಆನೆಗಳ ಜನ್ಮ ಕಾರಣವಾಗಿರುವ ವನ 'ದಾಶಾರ್ಣಕವನ'

೬. ಸಹ್ಯಾದ್ರಿಯಿಂದ ಭೃಗುಕಚ್ಛ (ಇಂದಿನಗುಜರಾತ್-ಪಾಕಿಸ್ಥಾನದಬಾರ್ಡರ್)ದ ಸೀಮೆಯಲ್ಲಿರುವ ವನಕ್ಕೆ 'ಅಪರಾಂತವನ'ವೆಂದುಹೆಸರು.

೭. ದ್ವಾರಾವತಿ ಹಾಗೂ 'ಆವಂತಿ'ಯಲ್ಲಿರುವವನ "ಸೌರಾಷ್ಟ್ರವನ" ಇದನ್ನೇ ಈಗಿನ Geerforest ಎಂದರೆ ಗೀರ್ ಸಿಂಹಗಳ ಅಭಯಾರಣ್ಯವನ್ನಾಗಿ ಆನೆಗಳ ಬದಲಾಗಿ ಸಿಂಹಗಳ ಅರಣ್ಯವೆಂದು ಘೋಷಿಸಲಾಗಿದೆ.

೮. ಕಾಲಂಜರ, ಕುರುಕ್ಷೇತ್ರ ಹಾಗೂ ಸಿಂಧೂನದಿ ಸಂಗಮ ದಲ್ಲಿರುವ ವನಕ್ಕೆ 'ಪಂಚನದ' ವನ ವೆನ್ನುವರು.

ವಿಂಗಡನೆ : ಇವುಗಳಲ್ಲಿ ಕಾಲಿಂಗವನ (೪), ವೇದಿಕಾ ರೂಕ್ಷವನ (೨) ಹಾಗೂ ದಾಶಾರ್ಣಕವನ (೫) ಗಳು ಶ್ರೇಷ್ಠವಾದವು. ಮಧ್ಯಮ ವನಗಳು: ಆಂಗೀರೇಯ (೩) ಮತ್ತು ಪ್ರಾಚ್ಯವನ(೧)ಗಳು

ಅಧಮವನಗಳು : ಅಪರಾಂತ (೬) ಪಾಂಚನ (೮) ಹಾಗೂ ಸೌರಾಷ್ಟ್ರ (೭) ಇದರೊಂದಿಗೆ ಆನೆಗಳ ಲಕ್ಷಣ,ಅವುಗಳನ್ನು ಹಿಡಿಯುವ ವಿಶಿಷ್ಟ ಕ್ರಮಗಳು, ಕೂಡಬೇಕಾದ ಆಹಾರ ಅನಾರೋಗ್ಯಕ್ಕೆ ತಕ್ಕ ಉಪಚಾರ ಚಿಕಿತ್ಸೆ, ಇವುಗಳ ಬಗ್ಗೆ ವಿಸ್ತಾರವಾಗಿ ಬಣ್ಣಿಸಿದ್ದಾರೆ. ಹೀಗೆಯೇ ಕುದುರೆಗಳ ಬಗ್ಗೆಯೂ ಮಾಹಿತಿ ನೀಡುತ್ತಾರೆ.

ದಶಮಾಂಶ ಗಣಿತ ಪದ್ಧತಿ

ಒಂದರಿಂದ ಒಂಭತ್ತರವರೆಗೆ, ಸ್ವರೂಪದಿಂದ ಒಂದಂಕಿಯ ಅಂಕಗಳು, "ಬಿಂದು" ಎಂದರೆ "ಸೊನ್ನೆ" ಸಹಿತವಾದ ಈ ಅಂಕಿಗಳು ಕ್ರಮವಾಗಿ ಹತ್ತರಷ್ಟು ಹೆಚ್ಚಾಗುತ್ತವೆ. ಕಂಪ್ಯೂಟರಿನಲ್ಲಿ ಈಗ ೧೮ ಸ್ಥಾನಗಳನ್ನು ಗುರುತಿಸಿದ್ದು ಈಚಿನ ಹನ್ನೆರಡು ಸ್ಥಾನಗಳೂ ಮತ್ತು ಮಾನಸೋಲ್ಲಾಸದ ೧೮ ಸ್ಥಾನಗಳನ್ನು ವಿವರಿಸುವ ಅವುಗಳ ಹೆಸರುಗಳನ್ನೂ ಸೂಚಿಸುವ ಪಟ್ಟಿ ಹೀಗಿದೆ.

ಮಾನಸೋಲ್ಲಾಸ	ಇಂದಿನ ಸಂಖ್ಯೆಯ ಹೆಸರುಗಳು
೧೦ ದಶಕ (೧ ಅಂಕಿಯಮುಂದೆ ೧ ಸೊನ್ನೆ)	ಮಿಲಿ ೧೦$^{-೩}$
೧೦೦ ಶತಕ (೧ " ೨ ಸೊನ್ನೆ)	ಮೈಕ್ರೋ ೧೦$^{-೬}$
೧೦೦೦ ಸಾವಿರ (೧ " ೩ ಸೊನ್ನೆ)	ನ್ಯಾನೋ ೧೦$^{-೯}$
೧೦,೦೦೦ ಹತ್ತುಸಾವಿರ (೧ " ೩ ")	ಪೀಕಾ ೧೦$^{-೧೨}$
೧೦,೦೦೦ ಲಕ್ಷ (೧ " ೫ ")	ಕಿಲೋ ೧೦^{೩}
ಹೀಗೆಯೇ ಕೋಟಿ (ಒಂದರ ಮುಂದೆ ೩ ಸೊನ್ನೆ)	ಮೆಗಾ ೧೦^{೬}
ದಶಕೋಟಿ (" ೮ ")	ಟೆರಾ ೧೦^{೧೨}
ಪದ್ಮ (" ೯ ")	ಗೈನಾ ೧೦^{೧೮}
ಖರ್ವ (" ೧೦ ")	
ನಿಖರ್ವ (" ೧೧ ")	
ಮಹಾಪದ್ಮ (" ೧೨ ")	
ಶಂಖ ಸ್ಥಾನ (" ೧೩ ")	
ಸಮುದ್ರಸ್ಥಾನ (" ೧೪ ")	
ಅಂತ್ಯ ಸಂಜ್ಞಸ್ಥಾನ (" ೧೫ ")	
ಮಧ್ಯಸ್ಥಾನ (" ೧೬ ")	
ಪರಾರ್ಧಸ್ಥಾನ (" ೧೭ ")	


ಹೀಗೆ ಗಣಿತ ವ್ಯವಹಾರದಲ್ಲಿ ೧೮ ಸ್ಥಾನಗಳಿವೆ. ಪ್ರಮಾಣ, ಫಲ, ಇಚ್ಛಾ- ಎನ್ನುವ ತ್ರೈರಾಶಿಗಳನ್ನೂ, ಭಿನ್ನರಾಶಿ, ಗುಣಕ, ಭಾಗಹಾರ ಕ್ರಮಗಳನ್ನೂ ತಿಳಿಸುತ್ತವೆ. ಈ ದಶಮಾಂಶ ಪದ್ಧತಿಗಳ ಮೂಲಕವೇ ವ್ಯಾಪಾರ, ವ್ಯವಹಾರಗಳಿಂದ ಮೊದಲಾಗಿ ವಾಸ್ತು, ವಾಸ್ತುಶಿಲ್ಪ, ನಗರನಿರ್ಮಾಣ, ಕೋಟೆಕೊತ್ತಲಗಳ ನಿರ್ಮಾಣ ವಾಗಿರುವುದನ್ನು ಕಾಣುವುದಷ್ಟೇ ಅಲ್ಲ, ಅಳೆದೂ ಅರಿತು ಕೊಳ್ಳಬೇಕಾಗಿದೆ.

ವಾಸ್ತುವಿದ್ಯೆ

ಮನೆ/ಅರಮನೆ ಇತ್ಯಾದಿ ಕಟ್ಟಡಗಳನ್ನು ನಿರ್ಮಿಸುವಾಗ

ಯಾವ ಯಾವ ಕ್ರಮಗಳನ್ನೂ ಅನುಸರಿಸಬೇಕೆನ್ನುವುದನ್ನು ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಪ್ರಾಯಶಃ 'ವಾಸ್ತು' ವೆಂದರೆ ಭಯಹುಟ್ಟಿಸುವಂಥ ಇಂದಿನ ಅನೇಕ ಸಲಹೆಗಳು ಎಷ್ಟರಮಟ್ಟಿಗೆ ನಿಜ? ಅಥವಾ ಸುಳ್ಳೆಂಬುದನ್ನು ಇಲ್ಲಿಯ ವಿವರ ಗಳೊಂದಿಗೆ ತಾಳೆಮಾಡಿ ನೋಡಿದಾಗ ನಮಗೆ ಅರಿವಾಗುತ್ತದೆ. ಅನವಶ್ಯಕ ಆತಂಕಗಳೂ, ಅನುಪಯುಕ್ತ ಖರ್ಚು ಗಳನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ. ಇಂದಿನ ವಿಜ್ಞಾನ ತಂತ್ರಜ್ಞಾನ ಯುಗದಲ್ಲಿಯೂ ಕೆಲವು ಹಿಂದಿನಿಂದ ಬಂದ ಶಾಸ್ತ್ರಗಳನ್ನು ಅನು ಸರಿಸಿ ಕಟ್ಟಿದ ಕಟ್ಟಡಗಳು, ಅವುಗಳ ರಚನಾವಿಧಾನಗಳು, ಸ್ಥಳದಲ್ಲಿಯೇ ದೊರೆಯುವ ವಿಪುಲ ಕಟ್ಟಡಸಾಮಗ್ರಿಗಳ ಉಪಯೋಗದಿಂದಾಗಿ ಹಲವು ಶತಮಾನಗಳ ನಂತರವೂ ಉಳಿದುಬಂದಿವೆ ಎನ್ನುವುದು ಅನುಭವವೇದ್ಯ. ಆದರೆ ಅಂದಿನ ಎಲ್ಲ ಪದ್ಧತಿಗಳೂ ಇಂದಿಗೆ ಅನುಸರಿಸಲು ಎಷ್ಟರಮಟ್ಟಿಗೆ ಯೋಗ್ಯ? ಎನ್ನುವುದನ್ನು ಇಂದಿನ ಬದಲಾದ ಪರಿಸ್ಥಿತಿ, ಸ್ಥಳಾ ವಕಾಶ, ಪರಿಸರ ಇತ್ಯಾದಿಗಳನ್ನು ಗಮನಿಸಿ ಅಲ್ಲಿಯ ಕೆಲವು ಉತ್ಕೃಷ್ಟ ಅಂಶಗಳಲ್ಲಿ ಉಪಯುಕ್ತವೆಂದೆನಿಸಿದವುಗಳನ್ನು ಅಳವಡಿ ಸಲು ಅಡ್ಡಿಯಿಲ್ಲ.

ವೈಶಾಖ (ಮಾರ್ಚ್-ಏಪ್ರಿಲ್)[೪] ಫಾಲ್ಗುಣ, ಮಾರ್ಗ ಶೀರ್ಷ (ಡಿಸೆಂಬರ್, ಜನವರಿ), ಪುಷ್ಯಮಾಸಗಳಲ್ಲಿ ಕಟ್ಟಡ ಪ್ರಾರಂಭಮಾಡಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಕಾಲವು ಮಳೆಗಾಲ ಮುಗಿದ ನಂತರದ್ದಾಗಿದ್ದು ಹೆಚ್ಚಿನ ಹಬ್ಬ ಹರಿದಿನಗಳಿಲ್ಲದ್ದರಿಂದ ಕೂಲಿ ಆಳುಗಳಿಂದ ಮೊದಲುಗೊಂಡು ಮನೆಕಟ್ಟುವ ಸಾಮಗ್ರಿಗಳು ಹೆಚ್ಚಿನ ತೊಂದರೆ ಇಲ್ಲದೆ ದೊರೆಯು ತ್ತವೆ. ಒಂದು ಹೆಜ್ಜೆಮುಂದೆ ಹೋಗಿ ಆಲೋಚಿಸುವುದಾದರೆ ವರ್ಷದ 'ಬಡ್‌ಜೆಟ್' ಮುಗಿದಿರುತ್ತಾದ್ದರಿಂದ ಕೆಲವು ಸಾಮಗ್ರಿಗಳ ಬೆಲೆಗಳೂ ತಕ್ಕಮಟ್ಟಿಗೆ ಸ್ಥಿರವಾಗಿರುತ್ತವೆ. ಮಳೆಗಾಲವಲ್ಲವಾದ್ದರಿಂದ ಮರಮಟ್ಟು, ಕಬ್ಬಿಣ, ಸಿಮೆಂಟ್ ಇತ್ಯಾದಿಗಳನ್ನು ಸಂಗ್ರಹಿಸಲು ಪ್ರತ್ಯೇಕ ಸ್ಥಳಹೊಂದಿಸಬೇಕೆಂಬ ಆತಂಕವಿರುವುದಿಲ್ಲ (ಅಕಾಲಿಕ ಮಳೆಯನ್ನು ಬಿಟ್ಟು). ಬೇರೆ ಬೇರೆ ಜನಾಂಗದವರಿಗೆ ಬೇರೆ ಬೇರೆ ಬಣ್ಣದ ಭೂಮಿ ವಾಸಿಸಲು ಯೋಗ್ಯವೆಂದು ಸೂಚಿಸಲಾಗಿದೆ. ಇದು ಇಂದು ಹೆಚ್ಚು ಸರಿ ಎನಿಸದು. ಏಕೆಂದರೆ ಸ್ಥಳ ದೊರಕಿಸಿ ಕೊಳ್ಳುವುದೇ ದುಸ್ತರವೆನಿಸಿರುವುದು ಸಹಜ. ಆದರೆ ಭೂಲಕ್ಷಣ ಗಳನ್ನು ಗಮನಿಸುವುದರಿಂದ ತಳಪಾಯಕ್ಕೆ ಹಾಕುವ ಖರ್ಚು, ಕಟ್ಟಡದ ಭದ್ರತೆಗಳಿಗೆ ಈ ಅಂಶಗಳು ಸಹಕಾರಿ ಎನ್ನುವುದನ್ನು ತಿಳಿಯಬಹುದು. ಬೈನಿ, ತಾರೆ, ಬೇವು, ಚಳ್ಳೆಮರ ಅದೇ ರೀತಿ ಸತ್ವಹೀನವಾದ ಎಲ್ಲ ಬಗೆಯ ಮರಗಳನ್ನು ಮನೆಕಟ್ಟುವ ವಿಚಾರದಲ್ಲಿ ವರ್ಜಿಸಬೇಕು (ಕೈಬಿಡಬೇಕು). ಒಂದೇ ಜಾತಿಯ ಅಥವಾ ಎರಡು ಹೆಚ್ಚೆಂದರೆ ಮೂರು ಜಾತಿಯ ಮರಗಳಿಂದ ಮಾತ್ರಾ ಮನೆನಿರ್ಮಾಣ ಮಾಡಬೇಕೆನ್ನುವುದು ಒಳ್ಳೆಯ ಸಲಹೆಯಾಗಿದೆ. ಏಕೆಂದರೆ ಮರಗಳು ಹೆಚ್ಚುಕಾಲ ಪರಿಸರಕ್ಕೆ ಒಡ್ಡಿದಾಗ ಅವುಗಳಲ್ಲಿಯ ತೈಲಾಂಶ ಮತ್ತು ಸಾರಿನ ಅಂಶ ಇತ್ಯಾದಿಗಳ ಅಕುಂಚನ ಶಕ್ತಿ ಕಡಿಮೆಯಾಗುವುದರಿಂದ ಕಿಟಕಿ ಬಾಗಿಲುಗಳನ್ನು ಆಗಾಗ್ಗೆ ರಿಪೇರಿ ಮಾಡಬೇಕಾಗುತ್ತದೆ ಯಲ್ಲವೆ? ಇಂತಹ ಖರ್ಚುಗಳನ್ನು ಕಡಿಮೆಮಾಡಲು ಸಹಾಯ ವಾಗುತ್ತದೆ.



ಆಯಗಳ ಲೆಕ್ಕಾಚಾರ

ಕಟ್ಟಡದ ಸ್ಥಳದ ಉದ್ದವನ್ನು[೫] ಅದರ ವ್ಯಾಸ (ಅಗಲ ಎನ್ನುವುದನ್ನು ಇಲ್ಲಿ ವ್ಯಾಸವೆಂದು ಹೇಳಲಾಗಿದೆ.) ದಿಂದ ಗುಣಿಸಿ ಎಂಟರಿಂದ ಭಾಗಿಸಿದಾಗ ಉಳಿದ ಶೇಷವನ್ನು 'ಆಯ' ಎಂದು ಕರೆಯಲಾಗಿದೆ.

ಉ.ದಾ: ಉದ್ದ x ವ್ಯಾಸ ÷ ೮ = ಶೇಷ

೧೦' x ೧೦' = ೧೦೦÷೮ = ೪

ಈ 'ಆಯ'ಗಳನ್ನು '೮' ವಿಧದ ಹೆಸರುಗಳಿಂದ ಕರೆಯಲಾಗಿದೆ.

'೧' ಶೇಷ ಬಂದರೆ 'ಧ್ವಜಾಯ'
'೨' ಶೇಷ ಬಂದರೆ 'ಧೂಮಾಯ'
'೩' ಶೇಷ ಬಂದರೆ 'ಸಿಂಹಾಯ' (ನಾಯಿ)
'೫' ಶೇಷ ಬಂದರೆ 'ವೃಷಾಯ' (ಎತ್ತು)
'೭' ಶೇಷ ಬಂದರೆ 'ಗಜಾಯ' (ಆನೆ)
'೮' ಶೇಷ ಬಂದರೆ 'ವಾಯಸ' (ಕಾಗೆ)

ಮಂದಿರಮುಖ ನಿರ್ಣಯ

(ಮುಖ್ಯದ್ವಾರ = ಬಾಗಿಲು ಇರಬೇಕಾದ ಸ್ಥಾನ)

ಪೂರ್ವದಿಕ್ಕಿನಿಂದ ಪ್ರಾರಂಭವಾಗಿ ಪ್ರದಕ್ಷಿಣ ಕ್ರಮದಲ್ಲಿ ಎಂಟು ದಿಕ್ಕುಗಳಲ್ಲಿ ತಿರುಗಿದಾಗ ಕ್ರಮವಾಗಿ 'ಧ್ವಜ' ಮುಂತಾದ ಆಯಗಳು ಉಂಟಾಗುತ್ತವೆ.


'ಧ್ವಜಾ'ಯವು ಪಶ್ಚಿಮ ಮುಖವಾಗಿದ್ದರೂ ಅಥವಾ ಯಾವುದೇ ಮುಖವಾಗಿದ್ದರೂ 'ಶುಭ'; ಸಿಂಹಾಯವು ಉತ್ತರಮುಖವಾಗಿದ್ದರೆ; ವೃಷಾಯವು ಪೂರ್ವಮುಖವಾಗಿದ್ದರೆ; ಗಜಾಯವು ದಕ್ಷಿಣ ಮುಖವಾಗಿದ್ದರೆ; ಸಾರಮೇಯವು ಉತ್ತರ ಮುಖಾವಾಗಿದ್ದರೆ : 'ಶುಭ'

ಮೇಲೆ ತಿಳಿಸಿರುವಂತೆ ಒಂದು ಚೌಕವನ್ನು ೧೦'x೧೦' ಎಂದು ಇಟ್ಟುಕೊಂಡರೆ '೪' ಎಂಬ ಶೇಷವು ಬರುವುದು 'ಸಾರವೇಯ (ನಾಯಿ)' ಆಯಕ್ಕೆ. ಆದರೆ ಇದನ್ನೇ ೧೧'x೧೧' ಎಂದು ತೆಗೆದುಕೊಂಡರೆ (೧೧'x೧೧')/೮=೧೨೧÷೮=೧ ಶೇಷವಾಗುತ್ತದೆ ಎಂದರೆ, ಧ್ವಜಾಯವಾಗುತ್ತದೆ. ಮೇಲೆ ತಿಳಿಸಿದ ಸೂತ್ರದಂತೆ ಧ್ವಜಾಯ ಬಂದಾಗ ಮುಖ್ಯದ್ವಾರವನ್ನು ಯಾವದಿಕ್ಕಿಗೆ ಬೇಕಾದರೂ ಇಡಬಹುದು. ಹೀಗೆ ಅಲ್ಪಸ್ವಲ್ಪ ಉದ್ದ ಅಗಲಗಳ ವ್ಯತ್ಯಾಸದಿಂದ ನಮಗೆ ಬೇಕಾದ ರೀತಿಯಲ್ಲಿ ಆಯಗಳ ನಕ್ಷೆಯನ್ನು ಪಡೆಯಬಹುದೆನ್ನುವುದು ಬಹು ಉಪಯುಕ್ತ ಅಂಶವಾಗಿದೆ. ಈ ಸೂತ್ರದಲ್ಲಿ ಹೇಳಿರುವ 'ಎಂಟು' ಎಂಬ ಅಂಕೆ ಬೇರೆ ಯಾವುದೂ ಆಗಿರದೆ ಅಷ್ಟದಿಕ್ಕುಗಳನ್ನು ಸೂಚಿಸುತ್ತದೆ. ಅಲ್ಲದೇ ಎಲ್ಲ ದಿಕ್ಕುಗಳೂ ಸಮ ಎನ್ನುವುದನ್ನೂ ಮನಗಾಣಬಹುದಾಗಿದೆ. ಹೇಗೆಂದರೆ ಒಂದು ರೇಖೆಯಿಂದ ಪ್ರಾರಂಭವಾಗಿ ರೇಖಾಮಾರ್ಗವು ಪ್ರದಕ್ಷಿಣೆ (ಒಂದು ಸುತ್ತು ಪಥದಲ್ಲಿ ತಿರುಗಿದಾಗ ಅದು ಒಂದು ಪೂರ್ಣವೃತ್ತವಾಗಿ ೩೬೦°(ಚಿತ್ರ ೩) ಪರಿವರ್ತಿತವಾಗುತ್ತದೆನ್ನುವ ಸೂಕ್ಷ್ಮ, ಸಾಮಾನ್ಯ ಖಚಿತತೆ ಇಲ್ಲಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಸಂಖ್ಯಾಶಾಸ್ತ್ರ, ಗಣಿತಶಾಸ್ತ್ರದ ಸರಳ ಸೂತ್ರಗಳ ಮೂಲಕ ವೃತ್ತಗಳನ್ನು ಚೌಕಗಳನ್ನಾಗಿಯೂ, ಚೌಕಗಳನ್ನು ವೃತ್ತಗಳನ್ನಾಗಿಯೂ ಮಾರ್ಪಡಿಸಬಹುದು. ಇಂತಹ ಮೂಲಮಾನ (ಅಳತೆ)ಗಳನ್ನು ಅನುಸರಿಸಿಯೇ, ಬೌದ್ಧವಿಹಾರ, ಬಾದಾಮಿಯ ಗುಹೆಗಳು, ಸೋಮೇಶ್ವರನೇ ಮರಣ ಹೊಂದಿದ ಕುರುವತ್ತಿ, ಮೈಲಾರ (ಬಳ್ಳಾರಿ ಜಿಲ್ಲೆ) ಹರಳಹಳ್ಳಿ (ಹಾವೇರಿ ಜಿಲ್ಲೆ) ದೇವಸ್ಥಾನಗಳು ನಿರ್ಮಿತವಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ಸ್ಥಳಗಳು ನಮಗೆ ಇಂದಿಗೂ ಪವಿತ್ರ, ನೋಡಲು ಮನೋಹರ. ಖಚಿತ ಗಣಿತಶಾಸ್ತ್ರ, ಶಿಲ್ಪಶಾಸ್ತ್ರ, ನಿರ್ಮಿತ ದೇಗುಲಗಳಾಗಿದ್ದು ಮುಂದೆ ಹಳೇಬೀಡು ಬೇಲೂರುಗಳಂತಹ ಸರ್ವೋತ್ಕೃಷ್ಟ ವಿನ್ಯಾಸಗಳಿಗೆ ಕಲ್ಯಾಣದ ಚಾಲುಕ್ಯರ ಈ ಶಾಸ್ತ್ರದ ಕೊಡುಗೆ ಬುನಾದಿಯಾಗಿವೆ.

ಹೀಗೆಯೇ ರಾಜರುಗಳಿಗೆ ಶುಭದಾಯಕ, ವಿಜಯ ಹಾಗೂ ಆರೋಗ್ಯ ವೃದ್ಧಿಯನ್ನು ಉಂಟುಮಾಡುವ ಸರ್ವತೋಭದ್ರ, ನಂದ್ಯಾವತ್, ವರ್ಧಮಾನ, ಸ್ವಸ್ತಿಕ, 'ರುಚಿಕ' ಎನ್ನುವ ವಿನ್ಯಾಸಗಳನ್ನು ಸೋಮೇಶ್ವರನು ಉಲ್ಲೇಖಿಸುತ್ತಾನೆ. ರಾಜರ ಕಾಲ ಮುಗಿದು ಇಂದು ಶ್ರೀಸಾಮಾನ್ಯನಿಗೆ, ಧನಾತ್ಮಕ ಚಿಂತನೆ, ಅದರಿಂದಾಗಿ ಮನಶ್ಯಾಂತಿ ಕೆಲಸಕಾರ್ಯಗಳಲ್ಲಿ ವಿಜಯ ಹಾಗೂ

ಸ್ವಸ್ತಿಕ ಆಕಾರದ ಭೂನಕ್ಷೆ

(Swastic Type Site Plan)



ಇದರಲ್ಲಿಯ ನೈಸರ್ಗಿಕ ಶಕ್ತಿ ಸಂಚಯನದ ಅಂಶ ಒಂದು ದಶ ಲಕ್ಷ (೧೦,೦೦,೦೦೦) ಬೋವಿಸ್‌ಗಳು ಒಬ್ಬ ಸಾಮಾನ್ಯ ಮನುಷ್ಯನ ನೈಸರ್ಗಿಕ ಚಕ್ರಗಳ (Energy Points/Sources)ಮೂಲಾಧಾರದಿಂದ ಆಜ್ಞಾಚಕ್ರಗಳವರೆಗಿನ ಶಕ್ತಿಯು ಕೇವಲ ೬,೫೦೦ ಬೋವಿಸ್‌ಗಳು

ಆರೋಗ್ಯ, ಅಭಿವೃದ್ಧಿ ಮುಖ್ಯವಾಗಿರುವುದರಿಂದ ಇಂತಹ ವಿನ್ಯಾಸಗಳು (Site plans) ಏಕೆ ಬೇಕು ಎಂದು ಹೇಳುವುದಾದರೆ ಈ ವಿಶಿಷ್ಟ[೬] ರಚನೆಗಳಲ್ಲಿ "ನೈಸರ್ಗಿಕ ಶಕ್ತಿ" ಹೆಚ್ಚಿನ ರೀತಿಯಲ್ಲಿ ಇದೆ ಎನ್ನುವುದನ್ನು ಇತ್ತೀಚೆಗಷ್ಟೇ ವೈಜ್ಞಾನಿಕವಾಗಿ ಗುರುತಿಸಲಾಗುತ್ತಿದೆ. ಉದಾಹರಣೆಗೆ "ಸ್ವಸ್ತಿಕ" ಅಥವಾ" "ಸತ್ಯ"ದ ರಚನೆಯಲ್ಲಿ ಅತ್ಯಂತ ಹೆಚ್ಚಿನ ಶಕ್ತಿ ಸಂಚಯನ ೧೦,೦೦,೦೦೦ (ಒಂದು ದಶಲಕ್ಷ) ಬೋವಿಸ್ ಎಂದು ಪರಿಗಣಿಸಲಾಗಿದೆ. ಒಬ್ಬ ಸಾಮಾನ್ಯ ಮನುಷ್ಯನ ನೈಸರ್ಗಿಕ ಚಕ್ರಗಳ (ಮೂಲಾಧಾರ ಚಕ್ರದಿಂದ ಮೊದಲಾಗಿ ಆಜ್ಞಾಚಕ್ರ i.e, six important energy points of Human dody)ಶಕ್ತಿಯು ಕೇವಲ ೬, ೫೦೦ ಬೋವಿಸ್‌ಗಳು ಮಾತ್ರ. ಮೇಲೆ ತಿಳಿಸಿದಂತಹ ಸ್ವಸ್ತಿಕಾಕಾರದ ವಿನ್ಯಾಸದ ಕಟ್ಟಡಗಳಲ್ಲಿ ವಾಸಿಸುವುದರಿಂದ ಹೆಚ್ಚು ಶಕ್ತಿ ಸಂಚಯವಾಗುತ್ತದೆಂದು ಈ ಮೂಲಕ ತಿಳಿದು ಬರುತ್ತದೆ.

ಚಿತ್ರಕಲೆ[೭]

ಈ ಅಧ್ಯಾಯದಲ್ಲಿ ಚಿತ್ರಕಾರನ ಸ್ವರೂಪ, ಚಿತ್ರಭಿತ್ತಿ ತಯಾರಿಸುವ ರೀತಿ, ಲೇಖನೀ ಲೇಖನ, ಶುದ್ಧವರ್ಣ, ಮಿಶ್ರವರ್ಣ ಗಳನ್ನು ಚಿತ್ರಕ್ಕೆ ತುಂಬುವ ವಿಧಾನಗಳ ವರ್ಣನೆ ಇದೆ. ವರ್ಣನೆಗಳನ್ನು ನೈಸರ್ಗಿಕವಾಗಿ ತಯಾರಿಸುವ ರೀತಿಯೂ

ಇದೆ.[೮] ಮನುಷ್ಯ ಚಿತ್ರರಚನೆಯಲ್ಲಿಯ ಶಾಸ್ತ್ರಬದ್ಧ ಪ್ರಮಾಣಗಳನ್ನು ಸೂಚಿಸುತ್ತಾ, ಬ್ರಹ್ಮಸೂತ್ರ 'ಹಣೆಯಮಧ್ಯದಿಂದ ಮೂಗಿನ ತುದಿಯ ಮೂಲಕ ಇಳಿಯುವ ರೇಖೆಗಳು, ಪಕ್ಷಸೂತ್ರ (ಶಿರೋಭಾಗದಿಂದ ಎಡ ಮತ್ತು ಬಲಗಳಲ್ಲಿ ಇಳಿಯುವ ರೇಖೆ ಗಳು) ಲಂಬಸೂತ್ರ, ಪಾದ ಪ್ರಾದೇಶಿನಿಗಳಂತಹ ಸೂಕ್ಷ್ಮ ಪ್ರಮಾಣಗಳನ್ನು ಒಳಗೊಂಡಿರಬೇಕೆಂದು ತಿಳಿಸುತ್ತದೆ.

ಒಂದೊಂದು ಅಂಗಕ್ಕೂ ಇರುವ ತಲಾ ಪ್ರಮಾಣವನ್ನು ಉಪಯೋಗಿಸಿ, ಶರೀರದಲ್ಲಿ ನವತಾಲ ರೂಪವಾಗಿರುವುದನ್ನು ಪರಮಾಣುವಿನಿಂದ ಪ್ರಾರಂಭಿಸಿ, ಅಂಗುಲ ಪ್ರಮಾಣದವರೆಗೆ ಅಚ್ಚುಕಟ್ಟಾಗಿ ಬಿಡಿಸಿ, ಬಿಡಿಸಿ ಹೇಳಿದ್ದಾನೆ. ಇಲ್ಲಿ ಉಕ್ತವಾಗಿರುವ ಪ್ರಮಾಣಗಳು(Measurments) ಚಿತ್ರಕಲೆಗೆ ಮಾತ್ರ ಸೀಮಿತವಾಗಿರದೆ ಶಿಲ್ಪಕಲೆ, ವಾಸ್ತುಶಿಲ್ಪ, ಮಾನವ ಶರೀರಶಾಸ್ತ್ರ, ಪ್ರಾಣಿ ಶರೀರಶಾಸ್ತ್ರಕ್ಕೂ ಸಂಬಂಧಿಸಿರುವಂತಹವುಗಳಾಗಿವೆ. ಈ ಅಳತೆಗಳನ್ನು ಬಳಸಿ ರಚಿಸಿರುವ ಸಾಕಷ್ಟು ದೇಗುಲಗಳೂ, ಬಸದಿಗಳೂ, ಭಿತ್ತಿಚಿತ್ರಗಳೂ ನಂತರದ ಕಾಲದವುಗಳಾಗಿದ್ದರೂ ಇನ್ನೂ ಉಳಿದಿವೆ. ಇಂತಹ ಅಧ್ಯಯನ ನಡೆಸಲು ಇಂದಿನ ಕಂಪ್ಯೂಟರ್ ಯುಗದಲ್ಲಿ (ಇಲ್ಲಿ ಗಣಕಯಂತ್ರದ ನಿಖರತೆ, ಡಿಸ್‌ಪ್ಲೆಗಳನ್ನು ಗಮನದಲ್ಲಿಟ್ಟು ಹಾಗೆ ಹೇಳಿದೆ.) ಹೊಸ ಹೊಸ ಆವಿಷ್ಕಾರಗಳಿಗೆ ನಿತ್ಯ ನೂತನ ಆಯಾಮಗಳ ಸೃಷ್ಟಿಗೆ ಅವಕಾಶ ಮಾಡಿಕೊಡುತ್ತದೆ, ಮಾನಸೋಲ್ಲಾಸ.

ಜಲ-ವಿಭೇದಗಳು; ಶುದ್ಧೀಕರಣ ಇತ್ಯಾದಿ: 'ಜಲಪ್ರಕರಣ'.

ಶುದ್ಧ ಕುಡಿವ ನೀರಿನ ಪ್ರಭೇದಗಳು, ಅವುಗಳ ಲಕ್ಷಣಗಳು, ಯಾವ ಕಾಲದಲ್ಲಿ ಯಾವ ನೀರು ಕುಡಿಯಲು ಯೋಗ್ಯ, ಶುದ್ಧ ಕುಡಿವ ನೀರನ್ನು ತಯಾರಿಸುವ ರೀತಿ, ಸಂಗ್ರಹಿಸಬೇಕಾದ ವಿಧಿ ವಿಧಾನಗಳ ಬಗೆಗಳು, ಅಶುದ್ಧ ಜಲದ ಲಕ್ಷಣಗಳನ್ನು ತಿಳಿಸುತ್ತದೆ. ಮೋಡ ಬಿತ್ತನೆಯ ಬದಲು ಮಳೆಕೊಯ್ಲಿನಿಂದಲೇ ದೊರಕುವ ನೀರನ್ನು ಸ್ಥಳೀಯ ರೀತಿಯಲ್ಲೇ ಹೇಗೆ ಶುದ್ಧೀಕರಿಸಬಹುದೆಂದೂ, ನಮ್ಮ ಪರಿಸರದಲ್ಲೇ ಇನ್ನೂ ಸುಲಭ ಬೆಲೆಗೆ ದೊರಕುತ್ತಿರುವ ಗಿಡಮೂಲಿಕೆಗಳಿಂದಲೇ ನೀರನ್ನು ಶುದ್ಧೀಕರಿಸುವ ಕೆಲವು ವಿಧಾನಗಳು ಇಂತಿವೆ :

ನೀರು ಪ್ರಾಣಿಗಳ ಪ್ರಾಣವಾಗಿದೆ. ಈ ಶಬ್ದಗಳೇ ಮುಂದೆ ವಿಜಯನಗರದ ಶಾಸನ ಒಂದಕ್ಕೆ ಪ್ರೇರಣೆಯಾಗಿ 'ಸಕಲಜೀವಂ ಗಳಿಗೆ ಜಲವೇ ಪ್ರಾಣವಾಗಿ' ಎಂದು ಉಲ್ಲೇಖಿತವಾಗಿದೆ.[೯] ಒಂದು ನೇರವಾದ ಉದಾಹರಣೆಯನ್ನು ಕೊಡುತ್ತಾ ನೀರು ಸಿಂಪಡಿಸುವುದರಿಂದ ಮೂರ್ಛಿತರಾದವರು ಎಚ್ಚರ ಗೊಳ್ಳುತ್ತಾನೆ ಎಂದು ಉಲ್ಲೇಖವಿದೆ.

'೯' ರೀತಿಯ ಜಲ ಭೇದಗಳು ಹೀಗಿವೆ:

ದಿವ್ಯ, ಅಂತರಿಕ್ಷ, ನಾದೇಯ, ನೈರ್ಝರ, ಸಾರಸ, ಭೌಮ, ಚಾಂಡ, ತಡಾಗ ಮತ್ತು ಔದ್ಭಿದ.

ದಿವ್ಯಜಲ

ಸ್ವಾತಿ ನಕ್ಷತ್ರದಲ್ಲಿ ಸೂರ್ಯನ ಕಿರಣಗಳಿಂದ ಮಿಶ್ರಿತವಾದ, ಸರ್ವದೋಷಗಳನ್ನೂ ದೂರಮಾಡುವ ಮೋಡದ ಮಧುರವಾದ ನೀರಿಗೆ ದಿವ್ಯಜಲ ಎನ್ನುವರು.

ಅಂತರಿಕ್ಷಜಲ

ಮಳೆಗಾಲದಲ್ಲಿ ಮೋಡಗಳಿಂದ ಸುರಿದ, ಸ್ಫಟಿಕದಂತೆ ಶುಭ್ರವಾದ ನೀರಿಗೆ 'ಅಂತರಿಕ್ಷಜಲ'ವೆನ್ನುವರು. ತೀರ ಇತ್ತೀಚಿನ ಎಂದರೆ ೭೦ ದಶಕದವರೆಗೂ ಮೋಡಗಳಿಂದ ಸುರಿದ ನೀರು ಶುದ್ಧವೆಂದೇ ಭಾವಿಸಿದ್ದರು. ಈಗ ಅನೇಕ ಬಗೆಯ ಕಾರ್ಖಾನೆ ಗಳಿಂದ, ವಾಹನ ಇತ್ಯಾದಿಗಳ ಹೊಗೆಯಿಂದ ಪ್ರದರಾರ್ಷಣ ಹೊಂದಿರುವ ವಾಯುಮಂಡಲದಲ್ಲಿ ಗಂಧಕ, ನೈಟ್ರೇಟು, ಇಂಗಾಲದ ಮಾನಾಕ್ಸೈಡ್ ಇತ್ಯಾದಿ ರಾಸಾಯನಿಕ ವಸ್ತುಗಳಿಂದಾಗಿ ಉಂಟಾದ ಆಮ್ಲ, ಕ್ಷಾರೀಯ ಮಳೆಗಳ ಪರಿಣಾಮವನ್ನು ತಾಜಮಹಲ್, ಶ್ರವಣಬೆಳಗೋಳದ ಗೊಮ್ಮಟೇಶ್ವರ, ಭಾರತದ ೧೦ ಪ್ರಮುಖ ಪಟ್ಟಣಗಳಲ್ಲಿ ಅತಿ ಶೀಘ್ರವಾಗಿ ಬೆಳೆಯುತ್ತಿರುವ ಬೆಂಗಳೂರು ಇತ್ಯಾದಿ ಸ್ಥಳಗಳಿಂದ ತಿಳಿಯಬಹುದಾಗಿದೆ. ಆದರೆ ಮಲೆನಾಡಿನ ಕೆಲವು ಪ್ರದೇಶಗಳು, ಜನ-ಕಾರ್ಖಾನೆಗಳ ನಿಬಿಡತೆ ಹೆಚ್ಚಾಗಿಲ್ಲದ ಪ್ರದೇಶಗಳಿಗೆ ಈ ನಿಯಮವಿಲ್ಲವೆನ್ನುವುದು ಬಹುಮುಖ್ಯ ಸಂಗತಿ. ಏಕೆಂದರೆ ವಾಯುಮಂಡಲದಲ್ಲಿಯ ಸೂರ್ಯ ಕಿರಣಗಳಿಂದ ಅವಿರತವಾಗಿ ನಡೆಯುವ ಅನಂತ ಭೌತಿಕ, ರಾಸಾ ಯನಿಕ ಬದಲಾವಣೆಗಳು ಇಂತಹ ಕೊರತೆಗಳನ್ನು ಸರಿದೂಗಿ ಸುತ್ತವೆ. ಉದಾಹರಣೆಗೆ ವಾಯುಭಾರದಲ್ಲಿ ಉಂಟಾಗುವ ವ್ಯತ್ಯಾಸಗಳು, ಸೂರ್ಯಕಿರಣ ಗಳಿಂದ ಉಂಟಾಗುವ ಉಷ್ಣತೆ ಯಲ್ಲಿನ ಬದಲಾವಣೆ ಬೆಳಕಿನ ಪ್ರಖರತೆಯ ವ್ಯತ್ಯಯಗಳಿಂದ ಉಂಟಾಗುವ ಅಯಾನೀಕರಣ, ಸಸ್ಯಗಳ ದ್ಯುತಿಸಂಶ್ಲೇಷಣ ಕ್ರಿಯೆಯಿಂದ ಬಿಡುಗಡೆಯಾದ ಆಮ್ಲಜನಕ, ಇತ್ಯಾದಿ.

ನಾದೇಯ ಜನ

ಪರ್ವತದಿಂದ ಹರಿಯುವ ನದಿಯಲ್ಲಿ ಇಂದ್ರನೀಲದಂತೆ ಪ್ರಕಾಶಿಸುವ ಮತ್ತು ಪ್ರಶಸ್ತ ಭೂಮಿಯಲ್ಲಿರುವ ನೀರಿಗೆ 'ನಾದೇಯ ಜಲ' ವೆಂದು ಹೆಸರು.

ನಿಷ್ಪಂದಜಲ

ಉಸುಕಿನಲ್ಲಿ ಕೈಗಳಿಂದ ತೋಡಿ ಪಡೆಯುವ ನೀರು ಮೇಲೆ ಬರುವಾಗ ಸ್ವಚ್ಛವಾಗಿದ್ದು ಅದಕ್ಕೆ ನಿಷ್ಪಂದ (ಒರತೆ)ಜಲ ವೆನ್ನುವರು. ಊರಿನ ತ್ಯಾಜ್ಯವನ್ನೆಲ್ಲ ನದಿ ನೀರಿಗೆ ಬಿಡುಗಡೆಗೊಳಿಸುವ ಇಂದಿನ ದಿನಗಳಲ್ಲಿ, ಹರಿವು ಬಹಳ ಕಡಿಮೆಯಿರುವ ಕಾಲದಲ್ಲಿ ಎಂದರೆ ನವೆಂಬರ್‌ನಿಂದ ಮೇ ವರೆಗೆ ಇಂತಹ ನೀರಿನ ಬರವಿದ್ದರೂ ಇಂತಹ ನೀರು ಕುಡಿಯುವುದು ಯೋಗ್ಯವೇ ಅಲ್ಲ.ಆಮಶಂಕೆ ಇತ್ಯಾದಿ ರೋಗಗಳಿಗೆ ಈ ನೀರು ಎಡೆಮಾಡಿ ಕೊಡುತ್ತದೆ. ಆದರೆ ಶುದ್ಧ ಜಾಗಗಳಲ್ಲಿ ದೊರೆಯುವ ನೀರು ಮಾತ್ರ ದೇಹಕ್ಕೆ

ಬೇಕಾದ ಲವಣಗಳಿಂದ ಕೂಡಿದ್ದು ಕೇವಲ ನೀರಡಿಕೆಯನ್ನು ಮಾತ್ರಾ ನೀಗದೇ ಕೆಲವು ಪೌಷ್ಠಿಕಾಂಶಗಳನ್ನು ನೀಡುತ್ತದಾದ್ದರಿಂದ ಈ ನೀರು ಬಿಸ್ಲರಿ ನೀರಿಗಿಂತ ಉತ್ತಮವಾಗಿಯೇ ಇರುತ್ತದೆ. ಕೇವಲ ಬಟ್ಟೆಯಿಂದ ಶೋಧಿಸಿ ತೇಲುವ ಕಲ್ಮಶಗಳೇನಾದರೂ ಇದ್ದರೆ ದೂರವಾಗಿ ದೇಹ ಮನಸ್ಸುಗಳಿಗೆ ಆಹ್ಲಾದತೆ ಆರೋಗ್ಯಗಳ ವರದಾನವಾಗಿರುತ್ತದೆ.[೧೦] ಮಹಾಕೂಟದ ನೀರನ್ನು ಈಗ ೩ವರ್ಷದ ಹಿಂದೆ ಸಂಗ್ರಹಿಸಿ ಆಗಾಗ್ಗೆ ಈಗಿನ ಜಲವಿಜ್ಞಾನದ ಪ್ರಕಾರವೇ ಪರೀಕ್ಷಿಸಿದಾಗ ಕೆಲವು ಮಹತ್ವದ ಸಂಗತಿಗಳು ಬೆಳಕಿಗೆ ಬಂದವು.

ಭೌಮಜಲ

ಬಾವಿಯಲ್ಲಿ ದೊರೆಯುವುದೂ ನೀಲೋತ್ಪಲದಂತೆ ಕಾಂತಿಯುಕ್ತವೂ, ಸ್ವಚ್ಛವೂ, ಮಧುರವೂ ಆದ ಜಲಕ್ಕೆ 'ಭೌಮಜಲ' ವೆಂದು ಹೆಸರು.

ಚೌಂಡಜಲ

ದೀರ್ಘವಾದ ಶಿಲಾ ಮಧ್ಯಭಾಗದಲ್ಲಿ ಹೊರಬರುವ, ಅಗಸೆ ಹೂವಿನ ಕಾಂತಿಯಿಂದ ಕೂಡಿದ ನಿರ್ಮಲವೂ, ಮಧುರವೂ, ಪಥ್ಯಕರವೂ ಆದ ನೀರಗೆ 'ಚೌಂಡಜಲ'ವೆನ್ನುವರು.

ತಾಡಾಗಜಲ

ಒಡ್ಡು ಕಟ್ಟುವುದರಿಂದ ಕಾಲುವೆಯಿಂದ ಹರಿದು ಸಂಗ್ರಹ ವಾದ ಮತ್ತು ಪ್ರತಿವರ್ಷವೂ ಹೊಸ ನೀರು ಕೂಡಿಕೊಳ್ಳುವ ಜಲವು 'ತಾಡಾಗಜಲ' (ಕೆರೆಯಜಲ)ವೆನಿಸುತ್ತದೆ.

ನಿರ್ಝರ

ಸ್ವಚ್ಛವೂ, ಹಗುರಾದುದೂ, ಶೀತಲವೂ ಆಗಿದ್ದು ಶೈಲ ಶಿಖರವನ್ನು ಭೇದಿಸಿ ಹರಿವ ನೀರಿಗೆ 'ನಿರ್ಜರ'ವೆನ್ನುತ್ತಾರೆ.

ಮೇಲೆ ತಿಳಿಸಿದ ೯ಜಲಪ್ರಭೇದಗಳಲ್ಲದೆ ಸಸ್ಯಜನ್ಯ ಗುಣ ಲಕ್ಷಣಗಳನ್ನೂ ತಿಳಿಸುವ ರೀತಿ ಹೇಗಿದೆ

ಉತ್ತಮವಾದ ಜೀರ್ಣ ಶಕ್ತಿಯುಳ್ಳ, ತೆಂಗಿನಕಾಯಿಯಲ್ಲಿ ದೊರೆವ ಮಧುರವಾದ ಜಲಕ್ಕೆ "ವಾರ್ಷ"(ಎಳೆನೀರು) ಎನ್ನುತ್ತಾರೆ.

ಜಲಶುದ್ಧೀಕರಣ ವಿಧಾನಗಳು

ಕ್ರಿಯಾ ಸಂಸ್ಕಾರಗಳಿಂದ ಶುದ್ಧವಾದ ಮತ್ತೊಂದು ವಿಧವಾದ ನೀರೇ 'ಹಂಸೋದಕ' ಹಗಲಿನಲ್ಲಿ ಸೂರ್ಯಕಿರಣಗಳಿಂದ ಕಾಯಿಸಲ್ಪಟ್ಟು, ರಾತ್ರಿ ಚಂದ್ರ ಕಿರಣಗಳಿಂದ ಶೀತಲವಾಗಿಸುವ ನೀರೇ ಹಂಸೋದಕ.

ಹಿಪ್ಪಲಿ, ಕೊನ್ನಾರೆಬೇರು,ಏಲಕ್ಕಿ ಲಾವಂಚದ ಬೇರು, ಚಂದನದ ಚಕ್ಕೆಗಳನ್ನು ಮರ್ದಿಸಿ ನೀರನ್ನು ಮಣ್ಣಿನ ಮಡಕೆಯಲ್ಲಿ ಹಾಕಿ, ಮಂದವಾದ ಉರಿಯಲ್ಲಿ ಕಾಯಿಸಬೇಕು. ಅದನ್ನು ಸ್ವಚ್ಛವಾದ ನೀರಿನಲ್ಲಿ ಹಾಕಬೇಕು. ಎಲ್ಲ ದೋಷಗಳನ್ನು ದೂರಮಾಡುವ ಇದಕ್ಕೆ ಜಲ ಶ್ರೇಷ್ಠವಾದ 'ಪಿಂಡವಾಸ'ವೆನ್ನುತ್ತಾರ. ಹವಳದ ಕಾಂತಿಯಿಂದ ಕೂಡಿದ, ಸೂಕ್ಷ್ಮವಾದ ಮಣ್ಣಿನ (ಜೇಡಿಮಣ್ಣಿನ ಪಾತ್ರೆಗಳು) ಪಾತ್ರೆಗಳಲ್ಲಿ ಅಥವಾ ಚರ್ಮದ ಪಾತ್ರೆಗಳಲ್ಲಿ ತ್ರಿಫಲ (ನೆಲ್ಲಿಕಾಯಿ, ತಾರೀಕಾಯಿ, ಅಳಲೇ ಕಾಯಿ)ಗಳನ್ನು ಹಾಕಿ ನೀರನ್ನು ಶುದ್ಧಿಗೊಳಿಸಬೇಕು.

ಅಶುದ್ಧ ಜಲವೆಂದರೇನು?

ಕೆಸರಿನಿಂದ ಕೂಡಿದ, ಪಾಚಿಯಿಂದ ತುಂಬಿದ, ಕೆರೆಯಲ್ಲಿ ಹುಟ್ಟಿದ ಪಲ್ಲವಗಳಿಂದ ಆವರಿಸಲ್ಪಟ್ಟ ಸವುಳು ಭೂಮಿಯಲ್ಲಿ ದೊರೆಯುವ ಹಾಗೂ ಗಂಧವರ್ಣಗಳಿಂದ ದೂಷಿತ ನೀರನ್ನು ತ್ಯಜಿಸಬೇಕು.

'ಗಂಧವಾಸ' (Arromatic treatment)

ಲವಂಗ, ಲಾವಂಚ, ಕರ್ಪೂರ, ನಂದಿ, ಚಂದನ, ಕಕ್ಕೋಲ, ಖರ್ಜೂರ ಮುಂತಾದವುಗಳನ್ನು ಪುಡಿಮಾಡಿ ಶೀತಲವಾದ ಜಲದಲ್ಲಿ ಸಮವಾಗಿ ಬೆರೆಸಿದ ಸುಗಂಧಿತವಾದ ನೀರನ್ನು 'ಗಂಧವಾಸ' ವೆಂದು ಕರೆಯಲಾಗಿದೆ.

ಜಲಸಂಗ್ರಹಣೆ

ಇಂತಹ ಸ್ವಚ್ಛ, ಶುದ್ಧ ನೀರನ್ನು ರಕ್ಷಿಸಲು, ಬಹು ಛಿದ್ರಗಳಿಂದ ಕೂಡಿದ, ಬೆಳ್ಳಿ, ಸ್ಫಟಿಕ ಅಥವಾ ಬಂಗಾರದಿಂದ ಮಾಡಿದ ಹಿತಕರ ಪಾತ್ರೆಗಳಲ್ಲಿ ಶುಭ್ರವಸ್ತ್ರದಿಂದ ಮುಚ್ಚಿ, ನೀರನ್ನು ಸಂರಕ್ಷಿಸಬೇಕು. ಇಂತಹ ಜಲವನ್ನು ಬಂಗಾರದ ಬಟ್ಟಲಿನಲ್ಲಿ ಕುಡಿಯಬೇಕು.

ಮಲ್ಲಯುದ್ಧ[೧೧]

ರಾಜರಿಗೆ ಮಲ್ಲಯುದ್ಧವೆಂದರೆ (ಕುಸ್ತಿ) ಬಹಳ ಪ್ರೀತಿ. ಆದ್ದರಿಂದಲೇ ಆಹವ ಮಲ್ಲ, ತ್ರೈಲೋಕಮಲ್ಲ, ತ್ರಿಭುವನ ಮಲ್ಲ ಇತ್ಯಾದಿ ಬಿರುದುಗಳಿಂದಲೂ ತಮ್ಮ ಹೆಸರಿನೊಂದಿಗೂ ಆಳವಡಿಸಿಕೊಂಡಿದ್ದಾರೆ. ಇದು ಅವರ ದೈಹಿಕ ಸಾಮರ್ಥ್ಯ ಅಂಗ ಸೌಷ್ಠವ, ಶಕ್ತಿಶಾಲಿ ಹಾಗೂ ಪ್ರತಿಷ್ಠೆಯ ಸಂಕೇತವೂ ಆಗಿತ್ತೆನ್ನು ವುದನ್ನು ಸೂಚಿಸುತ್ತದೆ. ಶರೀರದ ಶಕ್ತಿಗೆ ಅನುಗುಣವಾಗಿ 'ಜೇಷ್ಠಕ' (ಉತ್ತಮ) ಮಧ್ಯಮ, 'ಅಂತರಜೇಷ್ಠಕ' ಮತ್ತು 'ಕನಿಷ್ಠಿಕ' ಎಂದು ವಿಭಾಗಿಸಿದ್ದಾನೆ.ಇಷ್ಟೇ ಅಲ್ಲದೇ ಕುಸ್ತಿಯ ಅಖಾಡಗಳನ್ನು ತಯಾರಿಸುವ ರೀತಿಯನ್ನು, ವ್ಯಾಯಾಮ, ಮಲ್ಲರನ್ನು ತಯಾರಿಸುವ ರೀತಿ, ಅವರ ವಯಸ್ಸುಗಳನ್ನು ಸಹಾ ತಿಳಿಸಲಾಗಿದೆ.

ಪಟ್ಟುಗಳು (ಸ್ಥಾನಕ)

೧. **ಅರ್ಧಾಂಗಕ** : ಕೆಳ ಮುಖವಾಗಿಬಿದ್ದಿರುವ ಮಲ್ಲನ ಎರಡು ಕಂಕುಳಗಳನ್ನು ಹಿಡಿದು ಎತ್ತಿ ಅವನ ಕಪೋಲವು ತನ್ನ ಪಕ್ಕಕ್ಕೆ ಉಜ್ಜುವಂತೆ ಒತ್ತಿ ಹಿಡಿಯುವಪಟ್ಟು 'ಅರ್ಧಾಂಗಕ"


೨. ಏಕಪಾದ ; ಬಿದ್ದ ಮಲ್ಲನನ್ನು ಕಂಕುಳದಿಂದ ಮೇಲೆತ್ತಿ, ತಲೆಯಲ್ಲಿ ಕೂರ್ಮಾಸನ ಹಾಕಿ ನಿಂತು ಕೊಂಡರೆ ಅದು ಏಕ ಪಾದಾಸನ.

ಅನುಬಂಧ -೧ **ಸೂಚನೆ :** ಇಲ್ಲಿಯ ಚಿತ್ರಗಳ ಭಂಗಿಗಳಲ್ಲಿ ತೋರಿಸಿರುವ ಹೆಸರುಗಳು ಕಾಲಾನಂತರದಲ್ಲಿ ಈಗಿನಂತೆ ಬದಲಾಗಿದ್ದರೂ ಶರೀರದ ಯಾವ ಭಾಗಗಳ್ಲಿ ಪಟ್ಟುಗಳನ್ನು ಹಾಕುತ್ತಾರೆ ಎನ್ನುವುದನ್ನು ತೋರಿಸುತ್ತವೆ. ಕರ್ನಾಟಕದ (ಬೆಂಗಳೂರಿನ) ಗರಡಿಗಳಲ್ಲಿ ಇನ್ನೂ ಪಟ್ಟುಗಳನ್ನು ಉಪಯೋಗಿಸುತ್ತಿದ್ದಾರೆ. ಹೆಚ್ಚಿನ ವಿವರಗಳಿಗೆ 'ಬೆಂಗಳೂರಿನ ಹಳೆಯಪೇಟೆ ಗರಡಿಗಳು' ಈ ಲೇಖನ ನೋಡಿ: (**ಇತಿಹಾಸ ದರ್ಶನ., ದಶಮಾನೋತ್ಸವ ಸಂಪುಟ, ಪುಟ ೩.೨೦**)

ಕುಸ್ತಿಕೆಲಸ - ೧ ಸುಪ್ರತೀಕ-ಟಾಂಗ್-ಜನಿವಾರ




ಪ್ರತಿಕೆಲಸಗಳು-ತೋಡುಗಳು



ಪ್ರತಿಕೆಲಸ - ೩, ಸುಪ್ರತೀಕದ ೧ನೇ ಪ್ರತಿಕೆಲಸ



ಕುಸ್ತಿಕೆಲಸ - ೨ ಆರಿರುದ್ರ-ಕರವಲಯ-ಬಾಹರ್‌ಟಾಂಗ್




ಮಲ್ಲಯುದ್ಧ

ಕುಸ್ತಿ

ಪಟ್ಟುಗಳು

ಕುಸ್ತಿಕೆಲಸ - ೩, ಹಸ್ತಿಮಲ್ಲ-ಖೋಪ್ಪರ-ದೋಬಚಟ್



ಮಲ್ಲಯುದ್ಧ



ಮಲ್ಲಯುದ್ಧ



ಕುಸ್ತಿಕೆಲಸ-೪, ಮಣಿಗ್ರೀವ-ನಿಲವು ತಿರುಗಡೆ



ಕುಸ್ತಿಕೆಲಸ-೪, ಮಣಿಗ್ರೀವ-ನಿಲವು ತಿರುಗಡೆ



ಕುಸ್ತಿಕೆಲಸ-ವಜ್ರಸೂರ್ಯಕುಹರ



ಕುಸ್ತಿಕೆಲಸ-೫, ಯಕ್ಷಬಂಧ-ಕೊಕ್ಕರೆ



೩. ಕರವಲ; ಮೇಲ್ಮುಖನಾಗಿರುವ ಪ್ರತಿಸ್ಪರ್ಧಿ, ಮಲ್ಲನ ಎರಡುಕಾಲುಗಳನ್ನು ತಪ್ಪಿಸಿಕೊಂಡು ಅವನ ಹೊಟ್ಟೆಯ ಮೇಲೆ ಕುಳಿತುಕೊಳ್ಳುವ ಪಟ್ಟು "ಕರವಲ" ಹೀಗೆ ೪. ಜಠರಸ್ಥಾನಕ ೫. ಪೃಷ್ಠಸ್ಥಾನಕ ೬. ಮುಖರೇಶ ವಿಜ್ಞಾನ ೭. ಪಾದಮೋಟನ ೮. ಬಾಹುಮೋಟನ ೯. ಬಾಹುಸೀ ೧೦. ಗುಣಾಲ ೧೧. ಉತ್ತರಥೋಂಕನ ೧೨. ಪಟ್ಟೀಶ ೧೩. ಛುಡುಕೀ ೧೪. ಅಂತರ್ ಛುಡಿಕೀ ೧೫. ಥೋಂಕರ ೧೬. ತುರ್ಯಷ್ಟೆ ೧೭. ಉದ್ದವಡ ೧೮. ಮುಖಪಟ್ಟಕ ೧೯. ಮಸ್ತಿಕಾ ೨೦. ಲೋಲಪಾದಕ ೨೧. ಕುಟ್ಟಾನ ೨೨. ಚರಣಪಟ್ಟೀಶ ೨೩. ಸಂದಂಶ ೨೪ ಥೋಂಕಾರ (ಥೊಕ್ಕರಕೊಕ್ಕರೆ) ೨೫. ಜವಲ ಶಂಖರ ೨೬. ರಕ್ಷವಡ ಇತ್ಯಾದಿ.

ಹೀಗೆ 'ಮಾನಸೋಲ್ಲಾಸವು' ಜೀವನ, ಕಲೆ, ಜ್ಞಾನ, ವಿಜ್ಞಾನ, ಗಣಿತ, ವಿನೋದಗಳು ಇತ್ಯಾದಿ ಬದುಕಿನ ಹತ್ತುಹಲವು ಮುಖಗಳ ಶಾಸ್ತ್ರ ಮತ್ತು ಅನ್ವಯಿಕ ಗ್ರಂಥವಾಗಿ 'ವಿಶ್ವೋಪಕಾರಿ' ಯಾಗಿದ್ದು ಕರ್ನಾಟಕದ ಬೇರೆಬೇರೆ ರಾಜವಂಶಗಳಿಗೆ ಕೈದೀವಿಗೆ ಯಾಗಿ, ಇಂದು ಜನಸಾಮಾನ್ಯರಿಗೂ ದಾರಿ ದೀಪವಾಗಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

(ವಿಶೇಷ ಸೂಚನೆ : ಇಲ್ಲಿಯ ವಿವರಣೆಗಳನ್ನು 'ಮಾನಸೋಲ್ಲಾಸ' ಕನ್ನಡ ಅನುವಾದ ಪ್ರಸಾರಾಂದ ಕರ್ನಾಟಕ ವಿಶ್ವವಿದ್ಯಾಲಯ, ದಾರವಾಡ ಇವುಗಳಿಂದ ಆಯ್ದುಕೊಳ್ಳಲಾಗಿದೆ.)

೧. ದ್ವಿತೀಯ ವಿಂಶತಿ ಶ್ಲೋಕ ೧೭೨-೧೭೯.

೨. ಸ್ವಾಮ್ಯಾಧ್ಯಾಯ-೧ ಶ್ಲೋಕ;೯೭ರಿಂದ ೧೨೩ ಗಣಿತಕ್ರಮ.

೩. ತೃತೀಯ ವಿಂಶತಿ.

೪. ಇಂಗ್ಲೀಷ್ ಕ್ಯಾಲೆಂಡರಿಗೂ ಭಾರತೀಯ ಕ್ಯಾಲೆಂಡರ್ ಮತ್ತು ಅಧಿಕಮಾಸ ಇತ್ಯಾದಿಗಳನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಸಾಮಾನ್ಯವಾದ ತಿಂಗಳುಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಇತ್ತೀಚೆಗೆ ಮದುವೆ ಇತ್ಯಾದಿಗಳ ಬಗ್ಗೆ ಕೆಲವು ವಿನಾಯತಿಗಳನ್ನು ತೋರಿಸುತ್ತಿದ್ದರೂ ಮನೆಕಟ್ಟುವಾಗ ಮಾತ್ರ ಸಮಯ ಅಥವಾ ಮಹೂರ್ತನಿರ್ಣಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ ಎನ್ನುವುದು ಗಮನಾರ್ಹ.

೫. ತೃತೀಯ ವಿಂಶತಿ ಶ್ಲೋಕ : ೨೨ ರಿಂದ ೨೪

೬. ಚಿತ್ರ : ೩ Pyramids -Their Secrets and mysterious powers -by Dr.Jagadesh,chennai)

೭. ತೃತೀಯ ವಿಂಶತಿ.

೮. ಬಾದಾಮಿಯವರೇ ಆದ ಶ್ರೀಯುತ ಆರ್. ಎಂ. ಹಡಪದ್ ವಿಶ್ವವಿಖ್ಯಾತ ಚಿತ್ರಕಾರರು; ಇಲ್ಲಿಯ ನೈಸರ್ಗಿಕ ಬಣ್ಣಗಳ ಬಳಕೆಯನ್ನು ಮಾಡಿ ಚಿತ್ರಗಳನ್ನುತಯಾರಿಸಿದ್ದರು.

೯. ದ್ವಿತೀಯ ವಿಂಶತಿ, ಶ್ಲೋಕ ೬೦೪.

೧೦. ಪಿ. ಹೆಚ್. ೭.೨ರಿಂದ ೭.೩೩ಗಡಿದಾಟಲಿಲ್ಲ. ಬೇರೆ ನೀರಿನಲ್ಲಿ ಕೇವಲ ಕೆಲವು ದಿನಗಳಲ್ಲೇ ಹೆಚ್ಚಿನ ಬದಲಾವಣೆ ಕಂಡು ಬಂದಿತು. **ವಿದ್ಯುತ್ ನಿರೋಧಕ ಶಕ್ತಿ** ೩೩೦ ರಿಂದ ೩೪೦ಮೈಕೋ ಮೋಹ್ಹ ಪ್ರತಿ ಸೆಂಟಿಮೀಟರ್‌ಗೆ ಗಡಸುತನ : ೧೦೦ರಿಂದ ೧೬೦, **ಲವಣಾಂಶಗಳು : ಸೋಡಿಯಂ** ೧೨ ಪಿ.ಪಿ.ಎಂ. ಪೊಟ್ಯಾಷಿಯಂ : ೬.೫ ಪಿ,ಪಿ.ಎಂ. ಕಾರ್ಬೋನೇಟ್ : ಇಲ್ಲ; ಬೈಕಾರ್ಬೋನೇಟ್ :೨೦ರಿಂದ೨೪ಪಿ.ಪಿ.ಎಂ.

೧೧. ಅನುಬಂಧ ೧ ನೋಡಿ.

ಡಾ. ಎ. ಸೋಮಶೇಖರ್*

ಕನ್ನಡ ಕೈಫಿಯತ್ತುಗಳಲ್ಲಿ ಪಟ್ಟಣಗಳ ಉಗಮ ಮತ್ತು ಬೆಳವಣಿಗೆ

ಕರ್ನಾಟಕದಲ್ಲಿ ಹಲವಾರು ಪಟ್ಟಣಗಳು ಹುಟ್ಟಿ ಬೆಳೆದು ಬಂದಿವೆ. ಸಾಮಾನ್ಯವಾಗಿ ನಾವು ಈ ಪಟ್ಟಣಗಳ ಇತಿಹಾಸವನ್ನು ಪುನಃ ರಚಿಸಲು ಐತಿಹಾಸಿಕ ಆಧಾರಗಳಾದ ಶಾಸನಗಳು, ನಾಣ್ಯಗಳು, ಸ್ಮಾರಕಗಳು ಮತ್ತು ಸಾಹಿತ್ಯಾಧಾರಗಳನ್ನು ಉಪಯೋಗಿಸಿಕೊಂಡು ಅವುಗಳು ನೀಡುವ ಮಾಹಿತಿಗಳಿಂದ ಪಟ್ಟಣಗಳು, ಅಗ್ರಹಾರ ಮುಂತಾದವುಗಳ ಉಗಮ ಮತ್ತು ಬೆಳವಣಿಗೆಯ ಬಗ್ಗೆ ಇತಿಹಾಸವನ್ನು ರಚಿಸಿದ್ದೇವೆ. ಈ ಪಟ್ಟಣಗಳು ಅಗ್ರಹಾರಗಳ ಬಗ್ಗೆ ಬೆಳಕು ಚೆಲ್ಲಲು ಇನ್ನು ಹಲವಾರು ಆಧಾರಗಳಾದ ಕೈಫಿಯತ್ತುಗಳು, ಕಡತಗಳು ಮತ್ತು ಜಾನಪದ ಕತೆಗಳಿದ್ದು ಇವುಗಳು ಶಾಸನಗಳು, ನಾಣ್ಯಗಳು, ಸ್ಮಾರಕಗಳು ಹಾಗೂ ಸಾಹಿತ್ಯಾಧಾರಗಳೂ ನೀಡದೇ ಇರುವ ಹಲವು ಮಾಹಿತಿ ಗಳನ್ನು ನೀಡುತ್ತವೆ. ಈ ಪಟ್ಟಣಗಳ ಬೆಳವಣಿಗೆಯಲ್ಲಿ ವಿಶೇಷವಾಗಿ ಕೈಫಿಯತ್ತುಗಳು ನೀಡುವ ಮಾಹಿತಿಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನು ಸಂಶೋಧನಾತ್ಮಕವಾಗಿ ಮಾಡುವ ಬಗ್ಗೆ ಹಾಗು ಕೈಫಿಯತ್ತುಗಳು ಯಾವ ರೀತಿಯ ವಿಶ್ಲೇಷಣೆ ನೀಡುತ್ತವೆ, ಎಂಬುದರ ಬಗ್ಗೆ ಈ ಲೇಖನದಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ.

'ಕೈಫಿಯತ್ತು' ಎಂಬುದು ಅರೇಬಿಕ್ ಪದವಾಗಿದ್ದು ಇದರ ಅರ್ಥ : ಸ್ಥಳೀಯ ಐತಿಹಾಸಿಕ ವಿವರಣೆ ಎಂಬುದಾಗಿದೆ. ೧೮೦೦ರ ದಶಕದಲ್ಲಿ ಇಂಗ್ಲಿಷ್ ಅಧಿಕಾರಿಯಾದ ಕರ್ನಲ್ ಕಾಲಿನ್ ಮೆಕೆಂಝಿಯವರು ದಕ್ಷಿಣ ಭಾರತದಾದ್ಯಂತ ಸಂಚರಿಸಿ ಸ್ಥಳೀಯ ವಿದ್ವಾಂಸರು ಮತ್ತು ಅಧಿಕಾರಿಗಳಿಂದ ಕೈಫಿಯತ್ತುಗಳನ್ನು ಸಂಗ್ರಹಿಸಿದ್ದು, ಕನ್ನಡದಲ್ಲಿನ ಕೆಲವು ಕೈಫಿಯತ್ತುಗಳನ್ನು ಎಂ. ಎಂ. ಕಲಬುರ್ಗಿಯವರು ಸಂಪಾದಿಸಿ 'ಕರ್ನಾಟಕದ ಕೈಫಿಯತ್ತುಗಳು' ಎಂಬ ಶಿರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. ಇವುಗಳು ಎಲ್ಲಾ ವಿಷಯಗಳ ಬಗ್ಗೆಯೂ ಐತಿಹಾಸಿಕ ವಿವರಣೆಗಳನ್ನು ನೀಡಿವೆ. ಆದರೆ ಸದ್ಯದ ಈ ಲೇಖನದಲ್ಲಿ ಕೆಲವು ಪಟ್ಟಣಗಳ ಉಗಮ ಮತ್ತು ಬೆಳವಣಿಗೆಯ ಬಗ್ಗೆ ಇವುಗಳು ನೀಡುವ ಮಾಹಿತಿಯ ಬಗ್ಗೆ ಸ್ಪಷ್ಟವಾದ ವಿಮರ್ಶೆ ಮಾಡಿ ಅಂತರ್ಶಿಸ್ತಿಗೆ ಒಳಪಡಿಸಿ ಸಂಶೋಧನೆ ನಡೆಸಲಾಗಿದೆ. ಇಲ್ಲಿ ಹಲವು ಮೂಲ ಕೈಫಿಯತ್ತುಗಳನ್ನು ಆಧಾರವಾಗಿ ಬಳಸಿಕೊಳ್ಳಲಾಗಿದೆ.

ಮೊದನೆಯದಾಗಿ 'ಅರಿಕುಟಾರ' ಅಥವಾ 'ಚಾಮರಾಜನಗರ'ದ ಉಗಮವನ್ನು ಕುರಿತಂತೆ "ಅರಿಕುಟಾರದ ಕೈಫಿಯತ್ತಿ"ನಲ್ಲಿ ಕೆಲವು ವಿವರಣೆಗಳು ದೊರೆಯುತ್ತವೆ. ಅರಿಕುಟಾರ ಎಂಬುದು ಒಡೆಯರ ಕಾಲದಲ್ಲಿ ಚಾಮರಾಜನಗರವಾಯಿತು. ಈ ಕೈಫಿಯತ್ತಿನ ಪ್ರಕಾರ ವಿಜಯನಗರದಿಂದ ದೊಡ್ಡ ವೀರಭದ್ರ ನಾಯಕ, ವೀರಭದ್ರನಾಯಕ, ಚಂದ್ರಶೇಖರ ಒಡೆಯ ಇವರು ಐವತ್ತು ಜನರ ಒಂದು ಗುಂಪನ್ನು ಕಟ್ಟಿಕೊಂಡು ಇಂದಿನ ಚಾಮರಾಜನಗರ ಅಥವಾ ಅಂದಿನ ಅರಿಕುಟಾರದ ಬಳಿಗೆ ಬಂದು ಗುಡಿಸಲುಗಳನ್ನು ಕಟ್ಟಿಗೊಂಡರು೧. ಕೃಷಿ ಮಾಡಲು ಭೂಮಿಯ ಅವಶ್ಯಕತೆಯುಂಟಾದ್ದರಿಂದ ಪ್ರಾಯಶಃ ಅಂದಿನ ಪ್ರಭುಗಳ ಬಳಿ ಕೌಲು ಮಾಡಿಕೊಂಡು ಭೂಮಿಯನ್ನು ಪಡೆದುಕೊಂಡರು. ಈ ಕೃಷಿ ಪ್ರಧಾನವಾದ ವಸತಿ ಪ್ರದೇಶ ವೈರಿಯನ್ನು ಸಂಹಾರ ಮಾಡುವ "ಅರಿಕುಟಾರ" ಎಂಬ ಹೆಸರನ್ನು ಪಡೆಯಿತು. ಮುಂದೆ ಅರಿಕುಟಾರ ಬೆಳೆದು ಮೂರು ಸಾವಿರ ಸೀಮೆಯಾಗಿ ಸುತ್ತಲಿನ ಹಳ್ಳಿಗಳಿಗೆ ಕೇಂದ್ರವಾಗಿ ನಗರವೆನಿಸಿತು. ಈ ಕೈಫಿಯತ್ತಿನ ಪ್ರಕಾರ ಅರಿಕುಟಾರದ ಒಡೆತನಕ್ಕೆ ಸೇರಿದ ೨೪ ಗ್ರಾಮಗಳಿದ್ದವು. ಅವುಗಳು :

ಉತ್ತಾವಳ್ಳಿಗ್ರಾಮ	*ಮೂರಳ್ಳಿಗ್ರಾಮ*
ಮೂಡಲ ಊರಗ್ರಾಮ	*ಕುಟ್ಟಪುರಗ್ರಾಮ*
ಮಟ್ಟಿನಪುರಗ್ರಾಮ	*ಸೋಉಸಮುದ್ರ ಗ್ರಾಮ*
ಯಡಪುರಗ್ರಾಮ	*ಬೇಡರಪುರಗ್ರಾಮ*
ಸಣ್ಣಹಳ್ಳಿಗ್ರಾಮ	*ಹಂಚಿಪುರಗ್ರಾಮ*
ಮಣಗನಹಳ್ಳಿಗ್ರಾಮ	*ಪುರಿಯಲಗ್ರಾಮ*
ಮುದ್ದನಹಳ್ಳಿಗ್ರಾಮ	*ಕರಿಯನಪುರಗ್ರಾಮ*
ಸತ್ತೇಗಾಲಗ್ರಾಮ	*ಕಾಡಹಳ್ಳಿಗ್ರಾಮ*
ಮುದ್ದನಹಳ್ಳಿಗ್ರಾಮ	*ಲಿಂಗ(ನ) ಪುರಗ್ರಾಮ*
ಶಿವಪುರಗ್ರಾಮ	*ಮುಣಬಹಳ್ಳಿ*
ಮಸಗಾರ (ಬುಸಗಾರ) ಗ್ರಾಮ	*ಮಣುಪುರಗ್ರಾಮ*
ಹೊಸರುಗ್ರಾಮ	*ಭೋಗಾಪುರಗ್ರಾಮ*೨
ಕಿರುಗನೂರುಗ್ರಾಮ	

* ಮುಖ್ಯಸ್ಥರು, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು

ಮತ್ತೊಂದು ಸ್ವಾರಸ್ಯಕರ ಸಂಗತಿ ಎಂದರೆ ಕೋಟೆಯನ್ನುಕಟ್ಟಿ ಅದನ್ನು ಪ್ರಸಿದ್ಧ ಪಟ್ಟಣವನ್ನಾಗಿಸಿದ್ದು, ಅಲ್ಲದೇ ಸ್ಥಳೀಯ ಪ್ರಭುಗಳು ಉಮ್ಮತ್ತೂರು ಕೃಷ್ಣರಾಯರಿಗೆ ಕಪ್ಪ ಕಾಣಿಕೆ ಕೊಟ್ಟು ಅವರ ಆಶ್ರಯದಲ್ಲಿ ಅರಿಕುಟಾರದಿಂದ ಉಮ್ಮತ್ತೂರು ಪ್ರಭುಗಳಿಗೆ "ಚೌತಾಯ" ನಿಗದಿತವಾಗಿ ಕೊಡಲ್ಪಡುತ್ತಿತ್ತು.[೩]

ಮತ್ತೊಂದು ಪ್ರಮುಖವಾದ ಅಂಶವೆಂದರೆ ಅಷ್ಟಗ್ರಾಮಗಳನ್ನು ಕಟ್ಟಿಸಿದ ಬಗ್ಗೆ 'ಅಷ್ಟಗ್ರಾಮ ಕೈಫಿಯತ್ತು' ಮಾಹಿತಿ ತಿಳಿಸುತ್ತದೆ. ಹೊಯ್ಸಳ ವಿಷ್ಣುವರ್ಧನನ ಆಜ್ಞೆಯ ಮೇರೆಗೆ ಕಾವೇರಿ ನದಿಯ ಇಕ್ಕೆಲಗಳಲ್ಲಿ ಅಷ್ಟಗ್ರಾಮಗಳನ್ನು ನಿರ್ಮಿಸಲಾಯಿತು. ಆ ಗ್ರಾಮಗಳೆಂದರೆ

೧. ಕನ್ನಂಬಾಡಿ ಸ್ಥಳ
೨. ಮಾಧವನಹಳ್ಳಿ ಸ್ಥಳ
೩. ಹರವನ ಸ್ಥಳ
೪. ರಂಗಸಮುದ್ರದ ಸ್ಥಳ
೫. ಕಿರುವಂಗೂರು ಸ್ಥಳ
೬. ಬ್ರಹ್ಮಪುರದ ಸ್ಥಳ
೭. ಅರಕೆರೆ ಸ್ಥಳ
೮. ಮೇಳಾಪುರದ ಸ್ಥಳ[೪]

ಈ ಕೈಫಿಯತ್ತು ಮುಂದುವರಿದು ರಾಮಾನುಜಾಚಾರ್ಯರು ಮತ್ತು ಅವರ ಅನುಯಾಯಿಗಳು ಬಂದು ಶ್ರೀವೈಷ್ಣವ ಬ್ರಾಹ್ಮಣರಿಗೆಲ್ಲ ಹೊಯ್ಸಳ ವಿಷ್ಣುವರ್ಧನನು ಈ ಕಾವೇರಿಯ ಬಲ ಪಾರ್ಶ್ವದಲ್ಲಿದ್ದ ಗಿಡ ಮರಗಳನ್ನು ತರಿದು ಕಟ್ಟೆ ಕಾಲುವೆಗಳನ್ನು ತೋಡಿಸಿ ಗ್ರಾಮಗಳನ್ನು ಕಟ್ಟಿಕೊಂಡು ಸುಖದಲ್ಲಿಯಿರು(ರಿತ್ತಿಗೇ) (?) (ಹಾಗೆ) ಏರ್ಪಾಡು ಮಾಡಿದನು. ಅಲ್ಲದೇ ಈ ಅಷ್ಟ ಗ್ರಾಮಗಳು ರಾಜ್ಯದ ರಾಜಧಾನಿಯಾದ ಶ್ರೀರಂಗಪಟ್ಟಣದ ಜನತೆಗೆ ಆಹಾರ ವಸ್ತುಗಳನ್ನು ಪೂರೈಸುವ ಅನುಕೂಲಕರವಾದ ನೆಲ-ಜಲ ಸಂಪತ್ತನ್ನು ಹೊಂದಿದ್ದ ಸ್ಥಳವಾಗಿದ್ದುದು ಕೈಫಿಯತ್ತಿನಿಂದ ತಿಳಿಯುತ್ತದೆ[೫].

ಹೊಯ್ಸಳ ವಿಷ್ಣುವರ್ಧನನು 'ಬಗ್ಗವಳ್ಳಿ' ಎಂಬ ಗ್ರಾಮವನ್ನು ಪುನರ್ ಪ್ರತಿಷ್ಠಾನ ಮಾಡಿದುದರ ಬಗ್ಗೆ ಅಜ್ಜಂಪುರ ಕೈಫಿಯತ್ತಿನಲ್ಲಿ ಉಲ್ಲೇಖವಿದೆ. ಈ ಗ್ರಾಮ ಹಾಳಾಗಿ ಗಿಡ ಬೆಳೆದು ಅರಣ್ಯವಾಗಿ ಅಲ್ಲಿ ಹುಲಿ ಸಿಂಹಗಳು ಸೇರಿಕೊಂಡಿದ್ದವು. ಅವುಗಳನ್ನು ಬೇಟೆಯಾಡಲು ವಿಷ್ಣುವರ್ಧನ ದೇಶ ಸಂಚಾರಿಯಾಗಿ ಬಂದಾಗ ಆಕಸ್ಮಿಕವಾಗಿ ನರಸಿಂಹ ದೇವರ ವಿಗ್ರಹವನ್ನು ನೋಡಿ ಆ ವಿಗ್ರಹವು ಅಲ್ಲಿರುವುದಕ್ಕೆ ಕಾರಣವನ್ನು ಸ್ಥಳೀಯರೊಂದಿಗೆ ವಿಚಾರಿಸಲಾಗಿ ಅವರ ಆ ಸ್ಥಳ ಬಹಳ ಹಿಂದೆ ಭಾರ್ಗವ ಋಷಿಗಳ ಆಶ್ರಮವಾಗಿದ್ದು, ಋಷಿಗಳು ನರಸಿಂಹ ದೇವರ ಅರ್ಚನೆ ಮಾಡುತ್ತಿದ್ದರೆಂದು ತಿಳಿಸಿದರು. ವಿಷ್ಣುವರ್ಧನನು ಶ್ರೀವೈಷ್ಣವನಾಗಿದ್ದು ಇದರಿಂದ ಸಂತೋಷಪಟ್ಟು ಪಾಳು ಬಿದ್ದ ಈ ಗ್ರಾಮವನ್ನು ಪುನರ್ ನಿರ್ಮಾಣ ಮಾಡಿದನು. ದೇವಸ್ಥಾನ ಹಾಗೂ ಪಟ್ಟಣವನ್ನು ನಿರ್ಮಿಸಿದನು. 'ಬಗ್ಗವಳ್ಳಿ' ಎಂಬ ಹೆಸರಿಗೆ ಬದಲಾಗಿ "ಭಾರ್ಗವಪುರಿ" ಎಂಬ ಹೆಸರಿಟ್ಟನು[೬]. ಯೋಗಾ ನರಸಿಂಹಸ್ವಾಮಿ ದೇವರಿಗೆ 'ನಿತ್ಯೋತ್ಸವ' 'ಪರೋತ್ಸವ' 'ಮಹೋತ್ಸವ' 'ಸಂವತ್ಸರೋತ್ಸವ' ಮುಂತಾದ ಆರಾಧನೆಯನ್ನು ನಡೆಸುವುದಕ್ಕೋಸ್ಕರ ವಿಷ್ಣುವರ್ಧನನು ಸುತ್ತಮುತ್ತಲಿನ ಗ್ರಾಮಗಳನ್ನು ಬಿಟ್ಟುಕೊಟ್ಟನೆಂದೂ ಕೂಡಾ ಕೈಫಿಯತ್ತು ತಿಳಿಸುತ್ತದೆ. ಸ್ವಾರಸ್ಯದ ಸಂಗತಿಯೆಂದರೆ ವೈಷ್ಣವನಾದ ವಿಷ್ಣುವರ್ಧನನು ಗ್ರಾಮದ ಪಶ್ಚಿಮದಲ್ಲಿ 'ಭಾರ್ಗವೇಶ್ವರ' ಲಿಂಗವನ್ನು ಪ್ರತಿಷ್ಠಾಪಿಸಿರುವುದು. ಕೆರೆಯೊಂದನ್ನು ಕಟ್ಟಿಸಿರುವುದು ಮತ್ತು ಅರಣ್ಯದಿಂದ ಆವೃತವಾದ ಪ್ರದೇಶವನ್ನು ಕೋಟೆಕಟ್ಟಿ, ಕೃಷಿ ಮತ್ತು ಕ್ಷೇತ್ರಗಳೆರಡರಲ್ಲೂ ಬೆಳೆಯುವಂತೆ ಅನುಕೂಲ ಮಾಡಿಕೊಟ್ಟಿರುವುದಲ್ಲದೇ ಇದನ್ನು "ಪಟ್ಟಣವೆಂದು" ಕರೆದಿರುವುದು ಕೈಫಿಯತ್ತಿನಲ್ಲಿ ಉಲ್ಲೇಖವಾಗಿದೆ[೭].

ಈ ಮೇಲ್ಕಂಡ ನಗರಗಳಲ್ಲಿ ಸಾಗಿಸುತ್ತಿದ್ದ ಅನೇಕ ವಸ್ತುಗಳ ಮೇಲೆ ಹಾಕುತ್ತಿದ್ದ ತೆರಿಗೆಗಳ ಬಗ್ಗೆ ಉಲ್ಲೇಖಗಳು ದೊರೆತಿವೆ.

೧. ಪಟ್ಟಣಗಳ ಒಳಗೆ ಬರದೇ ಪಕ್ಕದ ಹೆದ್ದಾರಿಗಳಲ್ಲಿ ಸಾಗಿಸುತ್ತಿದ್ದ ವಸ್ತುಗಳ ಮೇಲೆ ಹಾಕುತ್ತಿದ್ದ ಸುಂಕ
೨. ಪಟ್ಟಣದಿಂದ ಹೊರ ಸಾಗಿಸಲ್ಪಡುತ್ತಿದ್ದ ವಸ್ತುಗಳ ಮೇಲೆ ಹಾಕುವ ಮಾರ್ಗಸುಂಕ
೩. ಪಟ್ಟಣದಲ್ಲಿ ಉಪಯೋಗಿಸುತ್ತಿದ್ದ ವಸ್ತುಗಳ ಮೇಲೆ ಹಾಕುತ್ತಿದ್ದ ಅನುಭೋಗಿಕ ಸುಂಕ ಮುಂತಾದವುಗಳು ಕಾಣಿಸಿಕೊಂಡಿವೆ[೮].

ಇದಲ್ಲದೇ ಈ ಪಟ್ಟಣಗಳಲ್ಲಿ ಬಟ್ಟೆ ಕೈಗಾರಿಕೆ, ಲೋಹದ ವಸ್ತುಗಳ ತಯಾರಿಕೆ, ಆಭರಣಗಳ ತಯಾರಿಕೆಯ ಬಗ್ಗೆ ಮಾಹಿತಿಯಿದೆ.[೯] ದೀಪದಕಂಬ, ವಾದ್ಯ, ದೇವರ ವಿಗ್ರಹ, ಜಾಗಟೆ, ಗಂಟೆ ಮತ್ತು ಕಂಚಿನ ಪಾತ್ರೆಗಳನ್ನು ತಯಾರಿಸುತ್ತಿದ್ದರಲ್ಲದೆ ಪೀಠೋಪಕರಣಗಳು, ಕೃಷಿ ಉಪಕರಣಗಳು, ಮನೆ ಕಟ್ಟಲು ಬೇಕಾದ ಸಾಮಗ್ರಿಗಳು ಮುಂತಾದವನ್ನು ತಯಾರಿಸುತ್ತಿದ್ದ ತಜ್ಞರಿದ್ದರಲ್ಲದೆ ಇಲ್ಲಿ ಈ ವಸ್ತುಗಳ ಉತ್ಪಾದನೆಯ ಘಟಕಗಳಿದ್ದವೆಂಬುದು ಸ್ಪಷ್ಟವಾಗುತ್ತದೆ.[೧೦] ಅಲ್ಲದೇ ಗಾಜಿನ ವಸ್ತುಗಳ ಉತ್ಪಾದನೆ, ಮಡಿಕೆಗಳ ತಯಾರಿಕೆ, ಚರ್ಮದ ವಸ್ತುಗಳ ಉತ್ಪಾದನೆ, ಬಿದಿರಿನ ವಸ್ತುಗಳನ್ನು ತಯಾರಿಸುವುದು, ಅರಗಿನ ವಸ್ತುಗಳನ್ನು ಸಹ ನಿರ್ಮಿಸುತ್ತಿದ್ದರೆಂಬುದು ಆಧಾರಗಳಿಂದ ತಿಳಿಯುತ್ತದೆ[೧೧].

ಮೇಲಿನ ವಿವರಣೆಯಿಂದ ಕೆಲವು ತೀರ್ಮಾನಕ್ಕೆ ಬರಬಹುದು. ಮೊದನೆಯದಾಗಿ ಕರ್ನಾಟಕದ ರಾಜರು ಪಾಳುಬಿದ್ದ ಗ್ರಾಮವನ್ನು ವ್ಯವಸಾಯಕ್ಕೆ ಯೋಗ್ಯವನ್ನಾಗಿ ಮಾಡಿ ನೀರಾವರಿ ಅನುಕೂಲ ಮಾಡಿ, ಹಲವು ಬೆಳೆ ಬೆಳೆದು, ವಾಣಿಜ್ಯ ಬೆಳೆಗಳನ್ನು ಬೆಳೆದು ಈ ಪ್ರದೇಶಗಳನ್ನು ವ್ಯಾಪಾರ, ವಾಣಿಜ್ಯೋದ್ಯಮಕ್ಕೆ ಅನುಗುಣವಾಗಿ ಕೊಡುತ್ತಿದ್ದುದರಲ್ಲಿ ಹಲವು ಕಸುಬುದಾರರುಗಳು ವಲಸೆ ಬಂದು, ನೆಲೆಸುವುದಾಗುತ್ತಿತ್ತು. ಮತ್ತು ಅವರ ವಸ್ತುಗಳ ಉತ್ಪಾದನೆಯಾಗುತ್ತಿತ್ತಲ್ಲದೇ ಹಲವು ದೇವಾಲಯಗಳ ನಿರ್ಮಾಣ, ವಿವಿಧ ಧರ್ಮಗಳ ಪೋಷಣೆ ಮತ್ತು ಗ್ರಾಮಗಳನ್ನು ಮುಖ್ಯವಾಗಿ

ಪಟ್ಟಣಗಳ ನಿರ್ಮಾಣವನ್ನು ಮಾಡುತ್ತಿದ್ದ ಬಗ್ಗೆ ಹಲವು ದಾಖಲೆಗಳು ಒದಗಿಸದ ಅಂಶಗಳ ಉಲ್ಲೇಖವನ್ನು ಕೈಫಿಯತ್ತುಗಳು ನೀಡುತ್ತಿದ್ದುದನ್ನು ಈ ಲೇಖನದಲ್ಲಿ ಕಾಣುತ್ತೇವೆ. ಇದಲ್ಲದೇ ಈ ಕಾಲದಲ್ಲಿ ಪೇಟೆ ಮತ್ತು ದೇವಾಲಯಗಳ ನಿರ್ಮಾಣ, ಕೃಷಿಯೇತರ ಚಟುವಟಿಕೆ ಮತ್ತು ವರ್ಗ ವಲಸೆಗಳಿಗೆ ಪ್ರಚೋದನೆ ನೀಡಿದ್ದು ವಲ್ಲದೇ ಒಂದು ಸ್ಥಳಕ್ಕೆ ಖ್ಯಾತಿ ಬರುವುದಕ್ಕೋಸ್ಕರ ಪುರಾಣದ ವ್ಯಕ್ತಿಗಳಿಗೆ ಥಳಕು ಹಾಕುವ ಪ್ರಯತ್ನ ಎಲ್ಲಾ ಕೈಫಿಯತ್ತಿನಲ್ಲೂ ಕಂಡು ಬಂದಿದೆ.

ಇದಲ್ಲದೇ ಗ್ರಾಮ-ಪಟ್ಟಣಗಳ ಉಗಮ, ಅದಕ್ಕೆ ಬೇಕಾದ ಹಿನ್ನೆಲೆ ಆವರಣ ಮುಂತಾದ ವಿಷಯಗಳು ಕೈಫಿಯತ್ತುಗಳಲ್ಲಿ ಬಹಳ ಸ್ವಾರಸ್ಯಕರವಾಗಿ ನಿರೂಪಿತವಾಗಿವೆ. ಈ ತೆರವಾದ ಮಾಹಿತಿ : ಶಾಸನಗಳು, ಸಾಹಿತ್ಯಕ ಕೃತಿಗಳು ಮತ್ತು ವಿದೇಶೀ ಬರಹಗಾರರ ಗ್ರಂಥಗಳಲ್ಲೂ ದೊರೆಯುವುದಿಲ್ಲ. ಪಟ್ಟಣಗಳ ಒಳನೋಟ ಜನಜೀವನದ ಸಮನ್ವಯ, ಸೌಕರ್ಯಗಳು, ಆತ್ಮ ವಿಕಾಸಕ್ಕೆ ಸಹಾಯಕವಾಗುವ ದೇವಾಲಯಗಳ ನಿರ್ಮಾಣ ಮತ್ತು ಪಟ್ಟಣಗಳ ಭದ್ರತೆಗಾಗಿ ಕೋಟೆಗಳ ನಿರ್ಮಾಣ ಮುಂತಾದ ಅಂಶಗಳು ಈ ಕೈಫಿಯತ್ತುಗಳಲ್ಲಿ ಕಂಡುಬಂದಿವೆಯೆಂದರೆ ಅತಿಶಯೋಕ್ತಿಯಾಗಲಾರದು.

ಕೊನೆಯದಾಗಿ ತಿಳಿಸುವುದೇನೆಂದರೆ ಕರ್ನಾಟಕದ ಹಲವು ಗ್ರಾಮ ಮತ್ತು ಪಟ್ಟಣಗಳ ಉಗಮ ಮತ್ತು ಅಭಿವೃದ್ಧಿಯ ಬಗ್ಗೆ ಇನ್ನೂ ಹಚ್ಚಿನ ಅಧ್ಯಯನ ಮಾಡಬೇಕಾದರೆ ಇತರೇ ಕೈಫಿಯತ್ತುಗಳು ಸಹಾ ಸಂಶೋಧಕರ ಸಹಾಯಕ್ಕೆ ಬರಬಹುದೆಂದು ಒಂದು ಸ್ಪಷ್ಟವಾದ ಅಭಿಪ್ರಾಯ ಮೂಡುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಅರಿಕುಟಾರದ ಕೈಫಿಯತ್ತು -ಪು೬-೭

೨. ಅದೇ., ಪುಟ ೬-೭

೩. ಅದೇ., ಪುಟ ೬-೭

೪. ಅಪ್ಪಗ್ರಾಮ ಕೈಫಿಯತ್ತು., ಪುಟ ೧೦

೫. ಅದೇ., ಪುಟ ೧೦-೧೧

೬. ಕೈಫಿಯತ್ತು, ತಾಲ್ಲೂಕು ಅಬ್ಯಂಪುರ, ಪುಟ ೩೬-೩೭

೭. ಅದೇ., ಪುಟ ೩೭

೮. ಹಯವದನರಾವ್.ಸಿ., (ಬೆಂಗಳೂರು -೧೯೨೭) ಸಂಪುಟ ೩, ಪುಟ ೨೪೫.

೯. ಹಯವದವರಾವ್.ಸಿ., ಪುಟ ೨೪೬.

೧೦. ಲೂಯಿಸ್‌ರೈಸ್.ಬಿ., ಮೈಸೂರು (ಲಂಡನ್ ೧೯೦೭) ಸಂ ೧, ಪುಟ ೫೨೯,೫೪೭

೧೧. ಬುಖ್ಯಾನನ್ ಫ್ರಾನ್ಸಿಸ್., ಸಂಪುಟ ೧, ಪುಟ ೧೫೯-೬೨.

ಪ್ರೊ. ಜಿ. ಎಸ್. ದೀಕ್ಷಿತ್*

ಅಯ್ಯಾವೊಳೆ ಐನೂರ್ವ ವರ್ತಕ ಸಂಘದ ಇತಿಹಾಸದಲ್ಲಿಯ ಕೆಲವು ಸಮಸ್ಯೆಗಳು

ಅಯ್ಯಾವೊಳೆ ಐನೂರ್ವರು - ಈ ಸಂಘದ ಪ್ರಶಸ್ತಿಗಳಲ್ಲಿ ಸಂಘವು ಅಯ್ಯಾವೊಳೆಯಲ್ಲಿ ಜನಿಸಿತ್ತೆಂದು ಹೇಳಿದೆ. ಆದರೆ ಇದರ ಜನ್ಮದಾತರು ಅಲ್ಲಿಯ ಮಹಾಜನರೇ ಅಥವಾ ಅಲ್ಲಿಯ ನಗರ ಸಂಸ್ಥೆಯೇ? ಮಹಾಜನರು ಅಥವಾ ಅವರ ಇನ್ನೊಂದು ಹೆಸರಾದ ಚತುರ್ವಿದ್ಯಾ ಸಮುದಾಯದವರು ಬ್ರಾಹ್ಮಣರು. ನಗರ ಸಂಸ್ಥೆಯವರು ಬ್ರಾಹ್ಮಣರಲ್ಲ. ಅವರು ಜೈನರು, ವೈಶ್ಯರು, ಶೈವರು ಅಥವಾ ವೀರಶೈವರು. ಬಾದಾಮಿ ಚಾಳುಕ್ಯರ ಕಾಲದಲ್ಲಿಯ ಎರಡು ಶಾಸನಗಳಲ್ಲಿ ಅಯ್ಯಾವೊಳೆಯ ಐನೂರ್ವ ವರ್ತಕರ ಸಂಘದ ಅತಿ ಪ್ರಾಚೀನ ಉಲ್ಲೇಖ ಬರುತ್ತದೆ. ಮೊದಲನೆಯ ಶಾಸನ[೧] "ಐಹೊಳೆಯ ಲಾಡಖಾನ್ ದೇವಸ್ಥಾನದಲ್ಲಿದೆ. ಅದರಲ್ಲಿ ನಮಗೆ ಬೇಕಾದ ವಿಷಯ ಹೀಗಿದೆ : "ಶ್ರೀ ಮಹಾ ಚತುರ್ವ್ವಿದ್ಯಾ ಸಮುದಾಯಂ ಐನೂರ್ವರಕ್ಕಂ" ಬೆಣ್ಣಮ್ಮ ಸೋಮಯಾಜಿಗಳು ಕೊಟ್ಟ ದಾನ. ಅದೇ ಶಾಸನದಲ್ಲಿ "ರಾಜ ಶ್ರಾವಿತಂ ಮಹಾಜನಮುಂ ನಕರ ಶ್ರಾವಿತು" ಎಂದಿರುವುದರಿಂದ ಮಹಾಜನರ ಜತೆಗೆ ನಕರ ಅಥವಾ ನಗರ ಅಥವಾ ವರ್ತಕರು ದಾನವನ್ನು ಘೋಷಿಸಿದರು. ರಾಜರು, ಮಹಾಜನರು ಮತ್ತು ವರ್ತಕರು ಈ ದಾನವನ್ನು ಊರಿನವರಿಗೆ ಸಾರಿದರು. ಅಥವಾ ತಿಳಿಯಪಡಿಸಿದರು. ಎರಡನೇ ಶಾಸನ, ಐಹೊಳೆಯಲ್ಲಿ ಮೊದಲಿನ ಶಾಸನದ ಪಕ್ಕದಲ್ಲಿರುವ ಗೌಡರ ಗುಡಿಯಲ್ಲಿದೆ. ಇದರಲ್ಲಿ "ಶ್ರೀ ಮದಾರ್ಯವುರಂ ಶ್ರೀಮಹಾಚತುರ್ವಿದ್ಯಾ ಸಮುದಾಯ ಮಯ್ಯೆನೂರು ಮಹಾಜನಮುಂ ಎಂಟು ನಗರಮುಂ ದುರ್ಗ್ಗಾ ಭಗವತಿ"ಯರಿಗೆ ದಾನ ಕೊಟ್ಟರೆಂದಿದೆ. ಹೀಗೆ ಅತಿಪ್ರಾಚೀನ ಶಾಸನಗಳಲ್ಲಿ ಐನೂರು ಮಹಾಜನರು ಮತ್ತು ನಗರ ಸಂಸ್ಥೆಯವರ ಉಲ್ಲೇಖ ಜತೆಜತೆಯಲ್ಲಿ ಬಂದಿದೆ. ಎರಡನೇ ಶಾಸನದ ತೇದಿಯು ಮೊದಲಿನ ಶಾಸನದ ಕಾಲಕ್ಕೇ ಅಂದರೆ ೮ನೇ ಶತಮಾನದ ಮಧ್ಯಭಾಗ: ಇದರಲ್ಲಿ ಶ್ರೀಮದಾರ್ಯವುರದ ಶ್ರೀ ಮಹಾ ಚತುರ್ ವಿದ್ಯಾ ಸಮುದಾಯ ಮೈನೂರಂ ಮಹಾಜನಮುಂ ಎಂಟುಂ ನಗರಮುಂ......ದುರ್ಗ್ಗಾ ಭಗವತಿಯರ್ಕೆ" ದಾನವನ್ನು ಕೊಟ್ಟರು ಎಂದಿದೆ.

ಹೀಗೆ ಎರಡೂ ಶಾಸನಗಳಲ್ಲಿ ೫೦೦ ಮಹಾಜನರ ಮತ್ತು ನಗರ ಸಂಸ್ಥೆಯವರ ಉಲ್ಲೇಖವಿದೆ. ಐಹೊಳೆಯಲ್ಲಿ ಇನ್ನೂ ಎರಡು ಶಾಸನಗಳಲ್ಲಿ[೩] ಐನೂರು ಮಹಾಜನರ ಉಲ್ಲೇಖವಿದೆ. ಈ ಎರಡೂ ಶಾಸನಗಳು ೧೨ನೇ ಶತಮಾನದವು ಅಂದರೆ ಐಹೊಳೆ ೧೧ ಶತಮಾನದಿಂದ ೧೨ನೇ ಶತಮಾನದವರೆಗೂ ಐನೂರು ಮಹಾಜನಗಳುಳ್ಳ ಅಗ್ರಹಾರವಾಗಿದ್ದಿತು ಮತ್ತು ಮೊದಲಿನ ಎರಡು ಶಾಸನಗಳಲ್ಲಿ ಮಹಾಜನರೂ ಮತ್ತು ನಗರಗಳು ಸೇರಿ ದಾನ ಕೊಟ್ಟರು. ಇವುಗಳಲ್ಲಿ ಈ ಮೊದಲನೆಯದು ಲಾಡ್‌ಖಾನ್ ಎನ್ನುವ ಕಟ್ಟಡದಲ್ಲಿ ಎರಡನೇದು ಅದರ ಪಕ್ಕದಲ್ಲಿರುವ ಗೌಡರ ಗುಡಿಯಲ್ಲಿದೆ. ಬಾದಾಮಿಯಲ್ಲಾದ ಇತಿಹಾಸ ಅಕಾದೆಮಿ ವಾರ್ಷಿಕೋತ್ಸವ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ. ಎಸ್. ರಾಜಶೇಖರ್ ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಬಹಳ ಮಹತ್ವದ ಶೋಧನೆಯನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ನಮಗೆ ಪ್ರಸ್ತುತವಾದದ್ದು:

ಲಾಡಖಾನ್ ದೇವಸ್ಥಾನವು ಐಹೊಳೆಯ ನಗರ ವರ್ತಕ ಸಂಘದ ಸಭಾಗೃಹವಾಗಿತ್ತು ಮತ್ತು ಈಗ ಕರೆಯಲಾಗಿರುವ ಗೌಡರಗುಡಿಯು ದುರ್ಗ್ಗಾಭಗವತಿಯ ಗುಡಿಯಾಗಿತ್ತು.

- ಈ ಊಹೆಗಳು ನಂಬಲರ್ಹವಾಗಿವೆ. ಎಲ್ಲರೂ ಲಾಡ್‌ಖಾನ್ ದೇವಸ್ಥಾನ ಆಗಿರಲಿಕ್ಕಿಲ್ಲ, ಅದು ಲೌಕಿಕ ಕಾರ್ಯಗಳಿಗೆ ಉಪಯೋಗಿಸುತ್ತಿದ್ದಿರಬೇಕೆನ್ನುವ ಅನುಮಾನವನ್ನು ವ್ಯಕ್ತಪಡಿಸಿದ್ದರು. ಡಾ. ರಾಜಶೇಖರರ ಊಹೆ ಈ ದೃಷ್ಟಿಯಿಂದ ಬಹಳ ಮಹತ್ವದ್ದು. ಅಷ್ಟೇ ಮಹತ್ವದ್ದು ಅದರ ಪಕ್ಕದ ಗುಡಿ ದುರ್ಗ್ಗಾಭಗವತಿಯದೆನ್ನುವುದು. ಈ ಊಹೆಗಳು ನಿಜವಾದರೆ ಐಹೊಳೆ ಐನೂರರ ವರ್ತಕಸಂಘ ಐಹೊಳೆಯಲ್ಲಿ ಯಾವ ಸ್ಮಾರಕವನ್ನು ಹೊಂದಿಲ್ಲವೆಂದು ಹೇಳಲು ಬರುವುದಿಲ್ಲ.

ಹಾಗಿದ್ದರೆ ಈ ವರ್ತಕ ಸಂಘದವರಿಗೂ ಮತ್ತು ಅಲ್ಲಿಯ ೪೦೦ ವರ್ಷಗಳಿಂದ್ದ ಮಹಾಜನಸಂಸ್ಥೆಗು ಯಾವ ರೀತಿಯ ಸಂಬಂಧವಿತ್ತೆನ್ನುವುದನ್ನು ತಿಳಿದುಕೊಳ್ಳಬೇಕು. ವರ್ತಕ ಸಂಘದ ಹೆಸರು ಅಯ್ಯಾವೊಳೆ ಐನೂರು ಮತ್ತು ಮಹಾಜನರ ಹೆಸರು ಅಯ್ಯಾವೊಳೆಐನೂರು ಎಂದಿರುವುದರಿಂದ, ಮಹಾಜನರೇ ವರ್ತಕ ಸಂಘದ ಸ್ಥಾಪಕರೆಂದು ಫ್ಲೀಟ್[೪] ಮೊದಲುಮಾಡಿ ಅನೇಕ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚೆಗೆ ವೀರಾ ಅಬ್ರಹಾಂ[೫] ಮತ್ತು ಚಂಪಕ ಲಕ್ಷ್ಮಿಯವರು[೬] ಈ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ. ಕರಷಿಮಾ ಮತ್ತು ಸುಬ್ಬರಾಯಲು[೭] ಅವರು ಇವೆರಡರ ಸಂಬಂಧ ನಿಗೂಢವಾಗಿದೆ ಅಂದರೆ ಅಷ್ಟು

* 'ಸ್ವಸ್ತಿ' ನಂ. ೧, ೧೫ನೇ ಕ್ರಾಸ್, ನವೋದಯನಗರ, ಧಾರವಾಡ-೫೮೦ ೦೦೭.

ಸ್ಪಷ್ಟವಾಗಿಲ್ಲವೆಂದಿದ್ದಾರೆ. ಆದರೆ ಅದರಲ್ಲಿ ನಿಗೂಢತೆ ಏನೂ ಇಲ್ಲ. ಮಹಾಜನರು ಅಥವಾ ಬ್ರಾಹ್ಮಣರು ಬ್ರಾಹ್ಮಣರಲ್ಲದ ವರ್ತಕ ಸಂಘದ ಸ್ಥಾಪಕರು ಹೇಗೆ ಆಗುತ್ತಾರೆ? ನಗರ ಎನ್ನುವ ವರ್ತಕರ ಸಂಘದವರು ಅಯ್ಯಾವೊಳೆ ಎನ್ನುವ ವರ್ತಕ ಸಂಘದ ಸ್ಥಾಪಕರು. ಇವರು ಮೊದಲಿನಿಂದಲೂ ಅಂದರೆ ಬಾದಾಮಿ ಚಾಳುಕ್ಯರ ಕಾಲದಿಂದಲೂ ಮಹಾಜನರ ಜತೆಗಿರುವುದನ್ನು ಲಾಡ್‌ಖಾನ್ ಮತ್ತು ಗೌಡರಗುಡಿ ಶಾಸನಗಳಿಂದ ನೋಡಿದ್ದೇವೆ. ಅವರಲ್ಲಿ ಯಾರು ವರ್ತಕ ಸಂಘದ ಸ್ಥಾಪಕರೆನ್ನುವ ಪ್ರಶ್ನೆಯನ್ನೂ ಕೇಳುವುದೇ ಸರಿಯಲ್ಲ.

ವರ್ತಕಸಂಘದ ಸ್ಥಾಪಕರು ವರ್ತಕರೇ ಹೊರತು, ವರ್ತಕರಲ್ಲದವರು ಆಗುವುದಿಲ್ಲ. ಆದರೆ ಈ ವರ್ತಕ ಸಂಘದವರಿಗೆ ಮಹಾಜನರ ಬೆಂಬಲವಿತ್ತು. ಹೇಗೆಂದರೆ ಮಹಾಜನರು ಅಯ್ಯಾವೊಳೆಯ ಪುರವರಾಧೀಶ್ವರ ಅಂದರೆ ಅದರ ಆಡಳಿತಗಾರರು. ವ್ಯಾಪಾರಸಂಘವನ್ನೂ ಸ್ಥಾಪಿಸಲಿಕ್ಕೆ ಮತ್ತು ವ್ಯಾಪಾರ ಮಾಡಲಿಕ್ಕೆ ಅವರಿಗೆ ಶಾಸನಗಳನ್ನು ಕೊಟ್ಟರು. ಅದಕ್ಕೆ ವರ್ತಕರು ತಮ್ಮ ಶಾಸನಗಳಲ್ಲಿ ಮಹಾಜನರಿಗೆ ಕೃತಜ್ಞರಾಗಿ ಪಂಚಶತವೀರ ಶಾಸನ ಲಬ್ಧರೆಂದು ಹೇಳಿಕೊಂಡಿದ್ದಾರೆ.

ಅದೇ ಪ್ರಶಸ್ತಿಗಳಲ್ಲಿ ವರ್ತಕರು ತಮ್ಮ ಬಗ್ಗೆ ಹೀಗೆ ಹೇಳಿಕೊಳ್ಳುತ್ತಾರೆ.[೮] "ರುಜಶತವೀರಶಾಸನ ಲಬ್ದಾನೇಕಗುಣ ಗಣಾಲಂಕಿತ ಸತ್ಯಾ ಶೌಚಾಚಾರ ನಯವಿನಯ ಸಂಪನ್ನರಪ್ಪ ಶ್ರೀ ವೀರಬಣಂಜು ಧರ್ಮಪ್ರತಿಪಾಲನ ವಿಶುದ್ಧಗುಡ್ಡಧ್ವಜ ವಿರಾಜಿತ ಲಕ್ಷ್ಮೀ ವಕ್ಷಸ್ಥಳಂ ವಾಸುದೇವ ಕಂಡಲಿ ಮೂಲ ಭದ್ರೋದ್ಭವಂ ಭಾಗವತೀ ವರಪ್ರಸಾದಂ.......ನಡೆಗುಂ ನುಡಿಗಂ." ಇವು ಅವರ ಗುಣಗಾನ ಮತ್ತು ಮೂಲ ದೇವತೆಗಳು

ಇವರು ಅನೇಕ ರಾಷ್ಟ್ರಗಳಲ್ಲಿ ವ್ಯವಹರಿಸುತ್ತಿದ್ದರು. ಎಲ್ಲಾ ತರಹ ವಾಹನಗಳನ್ನು ಉಪಯೋಗಿಸುತ್ತಿದ್ದರು ಮತ್ತು ಎಲ್ಲಿ ಲಾಭವಿದೆಯೊ ಅಲ್ಲಿಗೆ ಹೋಗಿ, ಹೋದಲ್ಲೆಲ್ಲಾ ದಾನಧರ್ಮ ಮಾಡಿ ಸ್ಥಳೀಯ ವ್ಯಾಪಾರಿಗಳಿಗೆ ಮಾದರಿಯಾದರು ಮತ್ತು ಸ್ಥಳೀಯ ವ್ಯಾಪಾರಿಗಳು ತಮ್ಮ ಹೆಸರು ಅಯ್ಯಾವೊಳೆ ಐನೂರು ಅಥವಾ ನಾನಾದೇಶಿ ಇತ್ಯಾದಿಗಳೆಂದು ಹೇಳಿಕೊಳ್ಳಹತ್ತಿದ್ದನ್ನು ನಾವು ಮುಂದೆ ನೋಡುತ್ತೇವೆ. ಇವರು ಹೋದಲ್ಲೆಲ್ಲಾ ದಾನ ಧರ್ಮ ಮಾಡಿ, ಸ್ಥಳೀಯ ವ್ಯಾಪಾರಿಗಳಿಗೆ ಮಾದರಿಯಾದರು. ಮತ್ತು ಅಲ್ಲಿಯ ಜನರಿಗೆ ಬೇಕಾದವರಾದರು.

ಹೀಗೆ ಮಾಡಿದ್ದರಿಂದ ಅಯ್ಯಾವೊಳೆ ದೊಡ್ಡ ವ್ಯಾಪಾರ ಕೇಂದ್ರವಾಯಿತು. ಇದೇ ಸಮಯದಲ್ಲಿ ಅಯ್ಯಾವೊಳೆಯಲ್ಲಿ ಆಳಿದ ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಳುಕ್ಯ ರಾಜರುಗಳ ಪ್ರೋತ್ಸಾಹದಿಂದ, ಅಯ್ಯಾವೊಳೆಯಲ್ಲಿ ಅನೇಕ ದೇವಸ್ಥಾನಗಳು ಜನ್ಮ ತಾಳಿದವು. ಹೀಗೆ ಆಗುವುದರಲ್ಲಿ ವರ್ತಕರು ದೊಡ್ಡ ಪಾತ್ರವು ಇತ್ತೆಂದು ನಾವು ಊಹಿಸಬಹುದು. ಈ ಅಸಂಖ್ಯದೇವಸ್ಥಾನಗಳಿಂದ, ಅಯ್ಯಾವೊಳೆ ದೊಡ್ಡ ಯಾತ್ರಾ ಸ್ಥಳವಾಯಿತು. ಒಂದು ಶಾಸನದಲ್ಲಿ ಅದನ್ನು ಮಹಾಕಾಶಿಯೆಂದು ಕರೆಯಲಾಗಿದೆ.[೯] ಇಂಥವರು ರಾಷ್ಟ್ರಕೂಟ ಮೂರನೆ ಕೃಷ್ಣನ ಜತೆಗೆ ತಮಿಳುನಾಡಿಗೆ ಹೋದಾಗ ಅಲ್ಲಿಯ ವರ್ತಕರು ಇವರ ದೇವರನ್ನು ಇವರ ಪದ್ಧತಿಗಳನ್ನು ಇವರ ಶಾಸನಗಳಲ್ಲಿಯ ಇವರ ಪ್ರಶಂಸೆಯನ್ನು ಇವರ ಬೇರೆ ಬೇರೆ ಹೆಸರುಗಳನ್ನು ತಮ್ಮದನ್ನಾಗಿಸಿದರು. ಹೋದ ಸ್ವಲ್ಪ ದಿನಗಳಲ್ಲಿಯೇ ತಮಿಳುನಾಡಿನ ಕೆಲವು ಊರುಗಳಿಗೆ ಕೇರಿಗಳಿಗೆ ದೇವರುಗಳಿಗೆ ಅಯ್ಯಾವೊಳೆಯ ಅಥವಾ ಐನೂರ್ವರ ಅಥವಾ ಅವಕ್ಕೆ ಸಮನಾದ ದೇಶಿ ನಾನಾದೇಶಿ - ಈ ಹೆಸರುಗಳನ್ನಿಟ್ಟರು. ಉದಾಹರಣೆಗೆ ಕರ್ನಾಟಕದ ವರ್ತಕರಂತೆ ತಮಿಳರು ಭಗವತೀ ಆರಾಧಕರೆಂದೂ ವಾಸುದೇವ ಖಂಡಲಿ ಮೂಲಭದ್ರರಿಂದ ಉದ್ಭವವಾದವರೆಂದು ತಮ್ಮ ಪ್ರಶಸ್ತಿಗಳಲ್ಲಿ ಹೇಳಿಕೊಂಡರು[೧೦]

ತಮಿಳುನಾಡಿನ ನಾಟುಕೋಟಿ ಚೆಟ್ಟಿಯವರು ಇವತ್ತಿಗೂ ಅಯ್ಯಾವೊಳೆಯ ಈಶ್ವರನನ್ನು ಆರಾಧಿಸುತ್ತಾರೆ. ಯಾವುದಾದರೂ ಶುಭಕಾರ್ಯ ಆರಂಭಿಸುವ ಮುಂಚೆ ಈ ಈಶ್ವರನಿಗೆ ನಡೆದುಕೊಳ್ಳುವುದು, ತಮ್ಮೆಲ್ಲ ಯಾವ ವರ್ತಕನು ದಿವಾಳಿ ಯಾದಾಗ ಅವನಿಗೆ ಸಹಾಯ ಮಾಡುವುದು, ದಾನ ಧರ್ಮಗಳನ್ನು ಮಾಡುವುದು ಈ ಎಲ್ಲಾ ಕೆಲಸಗಳನ್ನು ಒಗ್ಗಟ್ಟಿನಿಂದ ಮಾಡುವುದು, ಈ ಪದ್ಧತಿಗಳಿಂದ ಇವತ್ತು ಅಯ್ಯಾವೊಳೆಯ ಹೆಸರು ಉಳಿದಿದ್ದರೆ, ಅದು ನಾಟುಕೋಟಿ ಚೆಟ್ಟಿಯರಲ್ಲಿ[೧೧]. ಅವರೇ ಈ ಹೆಸರನ್ನು ಶ್ರೀಲಂಕಾ ಮತ್ತು ಸುಮಾತ್ರ [೧೨]ಗಳಿಗೆ ಕೊಂಡೊಯ್ದರು. ಕರ್ನಾಟಕದಲ್ಲಿ ಇವರ ಹೆಸರು ಹೇಳಹೆಸರಿಲ್ಲದೆ ಹಾಗೆ ಮಾಯವಾಗಿದೆ. ಕರ್ನಾಟಕದಲ್ಲಿ ಇವರ ಹೆಸರು ಅಯ್ಯಪ್ಪ ಶೆಟ್ಟಿಯಾಗಿ ಉಳಿದಿದೆ ಎಂದು ಡಾ. ಎಂ. ಎಂ. ಕಲಬುರ್ಗಿ ಮತ್ತು ಡಾ. ಬಿ. ಆರ್. ಹಿರೇಮಠರು ಹೇಳುತ್ತಾರೆ.[೧೪]

ಈಗ ಅಯ್ಯಾವೊಳೆ ಅಥವಾ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಐಹೊಳೆ ಅಲ್ಲಿಯ ಅಸಂಖ್ಯ ದೇವಸ್ಥಾನಗಳಿಗೆ ಪ್ರಸಿದ್ಧಿಯಾಗಿದೆ. ಆದರೆ ಬಾದಾಮಿ ಚಾಳುಕ್ಯರ ಕಾಲದಿಂದ ವಿಜಯನಗರ ಕಾಲದವರೆಗೂ ಅಯ್ಯಾವೊಳೆ ಐನೂರ್ವರೆಂದು ಪ್ರಸಿದ್ಧ ವರ್ತಕಸಂಘದ ಜನ್ಮಸ್ಥಾನವಾಗಿ ಅಲ್ಲಿಂದ ದಕ್ಷಿಣ ಭಾರತ, ಶ್ರೀಲಂಕಾ, ಸುಮಾತ್ರಗಳಿಗೆ ತಮಿಳುನಾಡಿನ ನಾಟುಕೋಟಿ ಚೆಟ್ಟಿಯವರ ಮುಖಾಂತರ ತನ್ನ ಹೆಸರನ್ನು ಹರಡಿತೆನ್ನುವುದು ಒಂದು ರೋಚಕ ಕಥೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಇ. ಎ. ೮., ೧೮೭೬, ಪು ೨೮೭, ಸು. ೭೪೦ ಕ್ರಿ.ಶ.

೨. S.I.I. XV ನಂ. ೪೬೨.

೩. ಅದೇ., ನಂ. ೮೫, ೧೧೩೬ ಮತ್ತು ನಂ. ೮೯, ೧೧೫೬

೪. ಮೊದಲನೇ ಟಿಪ್ಪಣಿ ನೋಡಿ.

೫. ಮೀರಾ ಅಬ್ರಾಹಂ., 1988, *Two Mediaeval Guilds South India* New Delhi, ಪು. ೧೫೧ ಮತ್ತು ನಂತರದ ಪುಟಗಳು

೬. ಚಂಪಕ ಲಕ್ಷ್ಮಿ. ಆರ್., *Urbanisation in South India; The role of ideology and polity.* ಪು. ೨೪

೭. *Noboru Karashima., (Ed.) Ancient and Medievel Commercial Activities in South India,* ಪು ೭೨ ಮತ್ತು ನಂತರದವು

೮. ಬಳ್ಳಿಗಾವೆ ಪ್ರಶಸ್ತಿ, E.C VII., SK 118.

೯. SII XV., No. 85

೧೦. K. R. Venkataraman. "*Mediaevel Trade, Craft* and Merchant guilds in South India", *Journal of Indian History* XXV 1948 p. 278

೧೧. Pudukottai District Gazetteer., P. 219-24.

೧೨. *(Ed.) Noboru Karashima., op.cit, P-27.*

೧೩. ಅದೇ., ಪು. ೧೯.

೧೪. ಬಿ. ಆರ್. ಹಿರೇಮಠ., **ಶಾಸನಗಳಲ್ಲಿ ಕರ್ನಾಟಕದ ವರ್ತಕರು**. ನೋಡಿ.

ಡಾ.ಬಿ. ಜಗದೀಶ ಶೆಟ್ಟಿ*

ತುಳುಕರ್ನಾಟಕ ಮತ್ತು ಘಟ್ಟದ ಮೇಲಿನ ಪ್ರದೇಶಗಳ ನಡುವಿನ ವ್ಯಾಪಾರ ಚಟುವಟಿಕೆಗಳು

ತುಳು ಕರ್ನಾಟಕದ ಭಾಗವನ್ನು ಆಳಿದ ಆಳುಪ ಹೊಯ್ಸಳ ಮತ್ತು ವಿಜಯನಗರ ಅರಸರ ಆಡಳಿತ ಕಾಲದಲ್ಲಿ ಘಟ್ಟದ ಪ್ರದೇಶಗಳೊಂದಿಗೆ ವ್ಯಾಪಾರ ಸಂಬಂಧ ಯಾವ ರೀತಿಯಲ್ಲಿತ್ತು ಎಂಬುದನ್ನು ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶ. ಈ ಪ್ರಬಂಧವನ್ನು ಮುಖ್ಯವಾಗಿ ತುಳುಕರ್ನಾಟಕ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಬರೆಯಲಾಗಿದೆ.

ತುಳುಕರ್ನಾಟಕದ ಪ್ರದೇಶ ಭೌಗೋಳಿಕವಾಗಿ ಕರ್ನಾಟಕದ ಬೇರೆ ಪ್ರದೇಶಗಳಿಂದ ಬೇರೆಯಾಗಿರತಕ್ಕ ಪ್ರದೇಶ. ಪಶ್ಚಿಮ ಘಟ್ಟದ ಸಾಲುಗಳು ಈ ತುಳುಕರ್ನಾಟಕದ ಮಟ್ಟಿಗೆ ಒಂದು ಭೌಗೋಳಿಕವಾದ ತಡೆಯಾಗಿದ್ದು, ಮನುಷ್ಯ ಈ ಎಲ್ಲಾ ಸಮಸ್ಯೆಗಳನ್ನು ಎದುರಿಸಲು ಸಮರ್ಥನಾಗಿರದಿದ್ದ ಕಾಲದಲ್ಲಿ ತೀರ ಕ್ಲಿಷ್ಟಕರವಾದ ಪರಿಸ್ಥಿತಿಯನ್ನು ತಂದೊಡ್ಡಿತ್ತು ಎಂಬುದು ತಿಳಿದ ವಿಷಯ. ಆದರೆ ಕಾಲ ಕಳೆದಂತೆ, ಮನುಷ್ಯ ತನ್ನ ಸೀಮಿತ ಸಾರಿಗೆ ಸೌಲಭ್ಯದೊಂದಿಗೆ ಭೌಗೋಳಿಕವಾದ ತಡೆಯನ್ನು ಮೀರಿ ಘಟ್ಟದ ಮೇಲಣ ಪ್ರದೇಶಗಳೊಂದಿಗೆ ತನ್ನ ವ್ಯವಹಾರವನ್ನು ಕುದುರಿಸಿದ. ಇದಕ್ಕೆ ಅವನ ಮುನ್ನುಗ್ಗಿ ಕೆಲಸ ಮಾಡುವ ರೀತಿ, ಉತ್ಸಾಹ ಹಾಗೂ ರಾಜಕೀಯ ಹಂಬಲವೂ ಕಾರಣವಾಯಿತು.[೧]

ಇಷ್ಟೆಲ್ಲಾ ಅಡೆತಡೆಗಳಿದ್ದರೂ ತುಳುಕರ್ನಾಟಕ ಹಾಗೂ ಘಟ್ಟದ ಮೇಲಣ ಸಂಬಂಧ ಬಹಳ ಹಿಂದಿನಿಂದಲೂ ಇತ್ತು. ಅದು ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಕಾಲದಿಂದಲೂ ಇತ್ತೆಂಬುದು ವಿದ್ವಾಂಸರ ಅಭಿಪ್ರಾಯ.[೨] ಇತಿಹಾಸ ಕಾಲದ ಆರಂಭದಲ್ಲಿಯೇ ತುಳುಕರ್ನಾಟಕ ಮತ್ತು ಘಟ್ಟದ ಮೇಲಿನ ಪ್ರದೇಶಗಳ ಮಧ್ಯೆ ವ್ಯವಹಾರವಿದ್ದ ಬಗ್ಗೆ ಊಹಿಸಬಹುದಾದರೂ ಅದಕ್ಕೆ ಸಾಕಷ್ಟು ಪುರಾವೆಗಳಿಲ್ಲ ಅಥವಾ ಲಭ್ಯವಿಲ್ಲ. ಆದರೆ ಆಗ ರಾಜಕೀಯ ಸಂಬಂಧ ಇತ್ತೆಂಬುದು ನಿಸ್ಸಂಶಯ. ಈ ರಾಜಕೀಯ ಸಂಬಂಧ ಮುಂದೆ ವ್ಯಾಪಾರ ಸಂಬಂಧ ಬೆಳೆಯಲು ಹೆಚ್ಚು ಒತ್ತು ನೀಡಿರಬೇಕು. ಶಿವಮೊಗ್ಗ ಜಿಲ್ಲೆಯ ಪೊಂಬುಚ್ಚ ಅಥವಾ ಹೊಂಬುಜದ ಮೇಲೆ ಆಳುಪರ ಹಿಡಿತ ಆರಂಭವಾದಾಗ ಅದು ಎರಡು ಪ್ರದೇಶಗಳ ಮಧ್ಯೆ (ತುಳುಕರ್ನಾಟಕ ಮತ್ತು ಘಟ್ಟ) ವ್ಯಾಪಾರಿ ಸಂಬಂಧಕ್ಕೂ ಕಾರಣವಾಗಿರಬೇಕು. ಕ್ರಿ.ಶ. ೮ನೇ ಶತಮಾನದ ನಂತರ ಸಂಘಟಿತವಾದ ವ್ಯಾಪಾರ ಚಟುವಟಿಕೆ ಈ ಪ್ರದೇಶದಲ್ಲಿ ಇದ್ದ ಬಗ್ಗೆ ನಮಗೆ ಅನೇಕ ಶಾಸನಿಕ ಆಧಾರಗಳು ದೊರೆಯುತ್ತವೆ. ಅದು ತುಳುಕರ್ನಾಟಕ ಮತ್ತು ಘಟ್ಟದ ಮೇಲಣ ಪ್ರದೇಶಗಳ ಮಧ್ಯೆ ಒಂದು ಉತ್ತಮ ವ್ಯಾಪಾರ ಸಂಬಂಧ ಬೆಳೆಯಲು ಕಾರಣವಾಗಿರಬೇಕು.[೩] ಕ್ರಿ.ಶ. ೯ನೇ ಶತಮಾನದ ಶಾಸನವೊಂದು ಹೊಂಬುಜ ಮತ್ತು ಉದ್ಯಾವರದ ನಗರಗಳನ್ನು ಒಟ್ಟಿಗೆ ಉಲ್ಲೇಖಿಸುತ್ತಾ ಜಲ ಮತ್ತು ನೆಲ ವ್ಯಾಪಾರದಿಂದ ಬರತಕ್ಕ ಅರ್ಧಾಂಶ ತೆರಿಗೆಯನ್ನು ಮನ್ನಾ ಮಾಡಿದ ಬಗ್ಗೆ ತಿಳಿಸುತ್ತದೆ.[೪] ಈ ಶಾಸನ ತಿಳಿಸುವ ನಗರ ಒಂದು ವ್ಯಾಪಾರಿ ಸಂಘ ಮತ್ತು ಅದು ಎರಡೂ ರಾಜಧಾನಿಗಳಾದ ಉದ್ಯಾವರ ಮತ್ತು ಹೊಂಬುಜದಲ್ಲಿ ಇತ್ತೆಂಬುದು ಗಮನಾರ್ಹ.

ಅಧ್ಯಯನಕ್ಕೆ ಆರಿಸಿಕೊಂಡಿರುವ ಎರಡು ಪ್ರದೇಶಗಳ ಮಧ್ಯೆ ಸುಮಾರು ಕ್ರಿ.ಶ ೯ನೇ ಶತಮಾನದ ಸುಮಾರಿಗೆ ಉತ್ತಮ ವ್ಯಾಪಾರಿ ಬಾಂಧವ್ಯ ಏರ್ಪಟ್ಟಿತ್ತು ಎಂಬುದು ಆಕಾಲಕ್ಕೆ ನಿಗದಿ ಮಾಡಬಹುದಾದ ಕುಂದಾಪುರ ತಾಲೂಕು ಹಟ್ಟಿಯಂಗಡಿಯ ಶಾಸನದಿಂದ ವ್ಯಕ್ತವಾಗುತ್ತದೆ.[೫] ಅದರ ಪ್ರಕಾರ ಪುರಿಗೆರೆಯ(ಲಕ್ಷ್ಮೇಶ್ವರ ಧಾರವಾಡ ಜಿಲ್ಲೆ) ನಖರದವರಿಂದ ಸರಕಾರಕ್ಕೆ ಬರಬೇಕಾದ ತೆರಿಗೆಯಲ್ಲಿ ಅರ್ಧದಷ್ಟನ್ನು ಮನ್ನಾ ಮಾಡಲಾಯಿತು. ಅಂದರೆ ಪುರಿಗೆರೆಯ ವ್ಯಾಪಾರಿ ಸಂಘ, ತುಳುಕರ್ನಾಟಕದ ಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿದ್ದ ಹಟ್ಟಿಯಂಗಡಿಯೊಂದಿಗೆ ನಿಕಟವಾದ ಸಂಬಂಧ ಹೊಂದಿತ್ತು. ಆಗ ಆಳುಪರು ಕಂದಬ ಮಂಡಲಕ್ಕೆ ತಮ್ಮ ಅಧಿಕಾರವನ್ನು ವಿಸ್ತರಿಸಿಕೊಂಡಿದ್ದು ಪುರಿಗೆರೆ ಅದರ ಭಾಗವಾಗಿತ್ತು. ಡಾ.ಪಿ. ಗುರುರಾಜಭಟ್ಟರು ತಮ್ಮ ಗ್ರಂಥದಲ್ಲಿ ಈ ಎರಡು ಪ್ರದೇಶಗಳ ನಡುವಿನ ವ್ಯಾಪಾರಿ ಸಂಬಂಧವನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ.[೬] ಮೇಲೆ ಉಲ್ಲೇಖಿಸಿರುವ ಶಾಸನಗಳು ಆಳುಪರ ಕಾಲದಲ್ಲಿ, ಈ ರೀತಿಯ ವ್ಯಾಪಾರಿ ಸಂಪರ್ಕಕ್ಕೆ ಸರಕಾರದ ಪ್ರೋತ್ಸಾಹವನ್ನು ಸಹ ತಿಳಿಸುತ್ತವೆ. ಘಟ್ಟದ ಮೇಲಿನ ಆಳುಪರ ಪ್ರಭಾವ 'ಲ್ಲಿದ್ದ ವ್ಯಾಪಾರಿ ಸಂಘಗಳು ತುಳುಕರ್ನಾಟಕದಲ್ಲಿ ತಮ್ಮ ವ್ಯಾಪಾರಿ ಚಟುವಟಿಕೆಗಳಿಗೆ ಹೆಚ್ಚಿನ ಆಸಕ್ತಿ ತೋರಿದವು.

ಈ ರೀತಿಯ ಎರಡು ಪ್ರದೇಶಗಳ ನಡುವಿನ ವ್ಯಾಪಾರಿ ಸಂಬಂಧಕ್ಕೆ ಆಳುಪರು ಮಾತ್ರವಲ್ಲದೆ, ಘಟ್ಟದ ಮೇಲಿನ

* ಪ್ರಾಧ್ಯಾಪಕರು ಮತ್ತು ಮುಖಸ್ಥರು, ಇತಿಹಾಸ ವಿಭಾಗ, ಪೂರ್ಣಪ್ರಜ್ಞ ಕಾಲೇಜು, ಉಡುಪಿ-೫೭೬ ೧೦೧.

ರಾಜಕೀಯ ಶಕ್ತಿಗಳೂ ಸಹ ಶ್ರಮಿಸಿದ್ದವು. ಅಂತಹ ರಾಜ ಮನೆತನದಲ್ಲಿ ಶಾಂತರರು ಮುಖ್ಯವಾಗಿ ಕಂಡು ಬರುತ್ತಾರೆ. ಅವರು ತುಳು ಕರ್ನಾಟಕದ ಹಟ್ಟಿಯಂಗಡಿ ಮತ್ತು ಬಾರಕೂರಿನಲ್ಲಿ ತಮ್ಮ ರಾಜಕೀಯ ಪ್ರಭಾವವನ್ನು ಬೆಳಸಿಕೊಂಡಿದ್ದರು. ಇದು ಘಟ್ಟದ ಮೇಲಿನ ಪ್ರದೇಶಗಳೊಂದಿಗೆ ತುಳುಕರ್ನಾಟಕದ ವ್ಯಾಪಾರಿ ಸಂಬಂಧಕ್ಕೆ ಕಾರಣವಾಯಿತು. ಅದರೊಂದಿಗೆ ಘಟ್ಟದ ಮೇಲಿನ ಸಂಪರ್ಕವಿದ್ದ ಸ್ಥಳೀಯ ರಾಜ ಮನೆತನವಾದ ಸೂರಾಲಿನ ತೊಳಹರ ಕಾಲದಲ್ಲೂ ಮುಂದುವರಿಯಿತು. ಅವರು ೧೨ನೇ ಶತಮಾನದ ಸುಮಾರಿಗೆ ಈ ಪ್ರದೇಶದಲ್ಲಿ ಪ್ರಬಲರಾದರು. ಅವರು ತುಳುಕರ್ನಾಟಕದ ಉತ್ತರಭಾಗದ ವ್ಯಾಪಾರಿ ಕೇಂದ್ರಗಳಾದ ಕೊಕ್ಕರ್ಣೆ, ಬಾರಕೂರು ಮತ್ತು ಬಸ್ರೂರುಗಳ ಮೇಲೆ ಹಿಡಿತವನ್ನೂ ಹೊಂದಿದ್ದರು. ಬಸ್ರೂರಿನ ಮೇಲೆ ತೊಳಹರಿಗಿದ್ದ ಹಿಡಿತ ಬಸ್ರೂರಿನ ಅಕ್ಕಿಯ ವ್ಯಾಪಾರದಲ್ಲಿ ಅವರು ಪ್ರಮುಖ ಪಾತ್ರ ವಹಿಸುವಂತಾಯಿತು. ಅವರು ಘಟ್ಟದ ಮೇಲಿನ ಪ್ರದೇಶಗಳಿಂದ ಅಕ್ಕಿಯ ಸಾಗಾಟಕ್ಕೂ ಪ್ರಯತ್ನಿಸಿದರು. ಆ ಸಮಯಕ್ಕೆ ತುಳುಕರ್ನಾಟಕದ ವ್ಯಾಪಾರದಲ್ಲಿ ನಿರ್ಣಾಯಕ ಪಾತ್ರ ವಹಿಸುವಷ್ಟು ಮಟ್ಟಿಗೆ ಪ್ರಬಲರಾಗಿದ್ದ ಪೋರ್ಚುಗೀಸರು ಬಸ್ರೂರಿನ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಲು ಪ್ರಯತ್ನಪಟ್ಟಾಗ ತೊಳಹರು ಅವರ ವಿರುದ್ಧ ಹೋರಾಟವನ್ನು ನಡೆಸಿದರು.[೭]

ಹೊಯ್ಸಳರು ಈ ಭಾಗದಲ್ಲಿ ತಮ್ಮ ರಾಜಕೀಯ ಪ್ರಭಾವವನ್ನು ವಿಸ್ತರಿಸಿಕೊಂಡಾಗ ತುಳುಕರ್ನಾಟಕ ಮತ್ತು ಘಟ್ಟದ ಮೇಲಣ ಸಂಬಂಧ ಇನ್ನೂ ಗಾಢವಾಯಿತು. ಇದಕ್ಕೆ ಶಾಸನಿಕ ಆಧಾರಗಳ ಕೊರತೆ ಇದ್ದರೂ, ವಿದೇಶಿ ಆಕರಗಳಲ್ಲಿ ಕ್ರಿ. ಶ. ೧೦ನೇ ಶತಮಾನದಿಂದ ಕರಾವಳಿಯ ಬಂದರುಗಳ ಮೂಲಕ ಹೆಚ್ಚಿನ ವ್ಯಾಪಾರ ನಡೆದಿದ್ದರ ಉಲ್ಲೇಖ ಕಂಡು ಬರುವುದರಿಂದ, ಅದು ತುಳುಕರ್ನಾಟಕ ಮತ್ತು ಘಟ್ಟದ ಮೇಲಿನ ವ್ಯಾಪಾರಿ ಸಂಬಂಧದ ಬಗ್ಗೆ ಇರುವ ಪರೋಕ್ಷ ಉಲ್ಲೇಖವಾಗಿದೆ.[೮]

ಕ್ರಿ. ಶ. ೧೩೩೬ರ ನಂತರ ತುಳುಕರ್ನಾಟಕ ಮತ್ತು ಘಟ್ಟದ ಮೇಲಣ ಪ್ರದೇಶಗಳ ವ್ಯಾಪಾರ ವಹಿವಾಟು ಇನ್ನೂ ಹೆಚ್ಚಿನ ನಿಕಟತೆಯನ್ನು ಪಡೆಯಿತು. ಕಾರಣ ಎರಡೂ ಪ್ರದೇಶಗಳು ಒಂದೇ ಸಾಮ್ರಾಜ್ಯದ ಆಡಳಿತಕ್ಕೆ ಸೇರಿದವು. ಇದರಿಂದಾಗಿ ತುಳುಕರ್ನಾಟಕಕ್ಕೆ ವಸ್ತುಗಳು ಧಾರಾಳವಾಗಿ ಹರಿದು ಬರತೊಡಗಿದವು. ಈ ವ್ಯಾಪಾರ ವಹಿವಾಟುಗಳನ್ನು ತುಳು ಕರ್ನಾಟಕದಲ್ಲಿ ಪ್ರಭಾವಶಾಲಿಯಾಗಿದ್ದ ಅನೇಕ ವ್ಯಾಪಾರಿ ಸಂಘಗಳು ನಡೆಸುತ್ತಿದ್ದವು. ಅವುಗಳು ಮುಖ್ಯ ವ್ಯಾಪಾರದ ಕೇಂದ್ರಗಳಾದ ಬಾರಕೂರು, ಬಸ್ರೂರು, ಮಂಗಳೂರು ಮತ್ತು ಮೂಡು ಬಿದರೆಯಲ್ಲಿ ಇದ್ದುವು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ.[೯] ಬಾರಕೂರು ಹಾಗೂ ಮಂಗಳೂರಿನಲ್ಲಿ ಇದ್ದ ವಿಜಯನಗರದ ರಾಜ್ಯಪಾಲರುಗಳು ವ್ಯಾಪಾರಕ್ಕೆ ಸಂಬಂಧಿಸಿದ ಕಾನೂನು ಕಟ್ಟಳೆಗಳ ನ್ಯಾಯಬದ್ಧವಾದ ನಿರ್ವಹಣೆಗೆ ಮಹತ್ವ ನೀಡಿದ್ದನ್ನು ಶಾಸನಗಳಿಂದ ತಿಳಿಯಬಹುದು.

ಕೃಷಿ ತುಳುಕರ್ನಾಟಕದ ಪ್ರಮುಖ ವೃತ್ತಿ ಕೃಷಿ ಕೆಲಸಗಳಿಗೆ ಬೇಕಾದ ವಸ್ತುಗಳು ಸಹ ಘಟ್ಟದ ಮೇಲಿನಿಂದ ಇಲ್ಲಿಗೆ ಬರುತ್ತಿದ್ದವು. ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಶಾಸನಗಳಲ್ಲಿ ಕಂಡುಬರುವ "ಏಲು ಘಟ್ಟದಲ್ಲಿಳಿಯುವ ಗೋವುಗಳು "[೧೦] ಎಂಬ ಉಲ್ಲೇಖ ಎರಡು ಪ್ರದೇಶಗಳ ನಡುವಿನ ವ್ಯಾಪಾರಿ ಸಂಬಂಧದಲ್ಲಿನ ವೈವಿಧ್ಯತೆಯ ಬಗ್ಗೆ ಬೆಳಕು ಚೆಲ್ಲುತ್ತದೆ. ಎತ್ತುಗಳು ತುಳುಕರ್ನಾಟಕಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದುದನ್ನು ಶಾಸನಗಳಲ್ಲಿನ ಇನ್ನೊಂದು ಉದಾಹರಣೆಯೂ ಸಮರ್ಥಿಸುತ್ತದೆ. ಉದಾ : ಶಾಸನಗಳಲ್ಲಿನ ಶಾಪವಾಕ್ಯದಲ್ಲಿ " ಘಟ್ಟದಲ್ಲಿ ಇಳಿಯುವ ಎತ್ತುಗಳ ಕೊಂದ ದೋಷ" ಎಂದಿದೆ.[೧೧] ಎತ್ತುಗಳು ಹೆಚ್ಚಿನ ಸಂಖ್ಯೆಯಲ್ಲಿ ಬರದೇ ಇರುತ್ತಿದ್ದರೆ ಶಾಪ ವಾಕ್ಯದಲ್ಲಿ ಅಂತಹ ಉಲ್ಲೇಖ ಕಂಡು ಬರುತ್ತಿರಲಿಲ್ಲ. ಈ ರೀತಿಯಲ್ಲಿ ಘಟ್ಟದ ಮೇಲಿನಿಂದ ತುಳುಕರ್ನಾಟಕದ ಬಾರಕೂರಿಗೆ ಬಂದಂತಹ ಎತ್ತುಗಳು ಅಲ್ಲಿಂದ ಬೇರೆ ಪ್ರದೇಶಗಳಿಗೆ ರವಾನೆಯಾಗುತ್ತಿದ್ದವು.

ಬಾರಕೂರಿನ ಎರಡು ಶಾಸನಗಳು[೧೨] ಘಟ್ಟದ ಮೇಲಿನಿಂದ ತಂದು ಬಾರಕೂರಿನಲ್ಲಿ ಮಾರಲಾಗುತ್ತಿದ್ದ ವಸ್ತುಗಳನ್ನು ತಿಳಿಸುತ್ತವೆ. ಈ ಶಾಸನಗಳು ತರುತ್ತಿದ್ದ ವಸ್ತುಗಳ ಬಗ್ಗೆ ಮಾತ್ರವಲ್ಲ , ಅವುಗಳನ್ನು ಯಾವ ರೀತಿಯಲ್ಲಿ ಸಾಗಾಟ ಮಾಡುತ್ತಿದ್ದರು; ಅವುಗಳನ್ನು ವಿತರಿಸುವ ಬಗೆ ಹೇಗೆ ಮತ್ತು ವ್ಯಾಪಾರಕ್ಕೆ ಸಂಬಂಧ ಪಟ್ಟ ಕಾನೂನುಗಳ ನಿರ್ವಹಣೆ ಹೇಗಿತ್ತು ಎಂಬ ಬಗ್ಗೆಯೂ ತಿಳಿಸುತ್ತವೆ. ಬಾರಕೂರು ಆಡಳಿತದ ಅನುಕೂಲಕ್ಕಾಗಿ ಹತ್ತು ಕೇರಿಗಳಾಗಿ ವಿಭಜಿಸಲ್ಪಟ್ಟಿತ್ತು. ಈ ಶಾಸನಗಳ ಪ್ರಕಾರ ಕ್ರಿ. ಶ. ೧೪೩೦ ರಲ್ಲಿ ಬಾರಕೂರಿನ ಎರಡು ಕೇರಿಗಳಾದ ಮೂಡುಕೇರಿ ಮತ್ತು ಜೌಳಿಕೇರಿಗಳ ಮಧ್ಯೆ ಘಟ್ಟದ ಮೇಲಿನಿಂದ ತಂದ ವಸ್ತುಗಳ ವಿತರಣೆಯಲ್ಲಿ ಜಗಳವಾಗಿತ್ತು. ಜಗಳಕ್ಕೆ ಕಾರಣವಾದ ಮುಖ್ಯ ವಸ್ತುವೆಂದರೆ ಸಕ್ಕರೆ (ಜೌಳಿಕೇರಿ ಮೂಡುಕೇರಿಗೂ ಸಕ್ಕರೆಯ ಬಿವಹಾರದಿಂದ ಸಂವಾಜವಾಗಿ) ಇದರಿಂದ ಎರಡು ಕೇರಿಗಳ ವ್ಯವಹಾರ ಕೆಟ್ಟು ಹೋಯಿತು. (ಎರಡು ಕೇರಿಯವರು ಕಾಟೆಕಟ್ಟೆ ವ್ಯವಹಾರವು ಕೆಟ್ಟು ಇದ್ದಲ್ಲಿ) ಆಗ ಬಾರಕೂರಿನ ರಾಜ್ಯಪಾಲನಾಗಿದ್ದ ಚಂಡರಸ ಒಡೆಯ ಅದನ್ನು ತೀರ್ಮಾನ ಮಾಡಿದನ್ನು ಈ ಶಾಸನಗಳಲ್ಲಿ ಕಾಣಬಹುದು.

ಮೇಲೆ ಹೇಳಿದ ಶಾಸನಗಳು ಘಟ್ಟದ ಮೇಲಿನಿಂದ ತಂದಂತಹ ಸಕ್ಕರೆಯನ್ನು ದಾಸ್ತಾನು ಮಾಡಲು ಮಾಡಿದ ವ್ಯವಸ್ಥೆಯ ಬಗ್ಗೆಯೂ, ಅದರ ವಿತರಣೆ ಬಗ್ಗೆಯೂ ತಿಳಿಸುತ್ತವೆ. ಎರಡು ಕೇರಿಗಳ ಮಧ್ಯ ವ್ಯಾಪಾರದಲ್ಲಿ ಹೊಂದಾಣಿಕೆಯನ್ನು ಮಾಡುವುದಕ್ಕಾಗಿ ಎರಡೂ ಕೇರಿಯವರು ಒಟ್ಟಿಗೆ ಸಕ್ಕರೆಯನ್ನು ತೂಕ ಮಾಡಿ

ದಾಸ್ತಾನು ಮಾಡಬೇಕೆಂದು ಶಾಸನಗಳು ತಿಳಿಸುತ್ತವೆ. ವ್ಯಾಪಾರ ಆಗದೆ ಉಳಿದ ಸಕ್ಕರೆಯನ್ನು ಮೂಡುಕೇರಿಯ ವ್ಯಾಪಾರಿಗಳು ತಮ್ಮ ಕೇರಿಗೆ ಕೊಂಡುಹೋಗದೆ, ದಾಸ್ತಾನು ಮಳಿಗೆಯಲ್ಲಿ ಇಟ್ಟು ಅಗತ್ಯ ಇದ್ದಾಗ ವ್ಯಾಪಾರ ಮಾಡಬೇಕೆಂದು ಶಾಸನಗಳಲ್ಲಿ ತಿಳಿಸಲಾಗಿದೆ.

ಮೇಲೆ ಹೇಳಿದ ಶಾಸನಗಳು ಘಟ್ಟದ ಮೇಲಿನಿಂದ ತಂದಂತಹ ಸಕ್ಕರೆಯನ್ನು ದಾಸ್ತಾನು ಮಾಡಲು ವ್ಯವಸ್ಥೆಯ ಬಗ್ಗೆಯೂ, ಅದರ ವಿತರಣೆಯ ಬಗ್ಗೆಯೂ ತಿಳಿಸುತ್ತವೆ. ಎರಡು ಕೇರಿಗಳ ಮಧ್ಯೆ ವ್ಯಾಪಾರದಲ್ಲಿ ಹೊಂದಾಣಿಕೆಯನ್ನು ಮಾಡುವುದಕ್ಕಾಗಿ ಎರಡೂ ಕೇರಿಯವರು ಒಟ್ಟಿಗೆ ಸಕ್ಕರೆಯನ್ನು ತೂಕ ಮಾಡಿ ದಾಸ್ತಾನು ಮಾಡಬೇಕೆಂದು ಶಾಸನಗಳು ತಿಳಿಸುತ್ತವೆ. ವ್ಯಾಪಾರ ಆಗದೆ ಉಳಿದ ಸಕ್ಕರೆಯನ್ನು ಮೂಡುಕೇರಿಯ ವ್ಯಾಪಾರಿಗಳು ತಮ್ಮ ಕೇರಿಗೆ ಕೊಂಡುಹೋಗದೆ, ದಾಸ್ತಾನು ಮಳಿಗೆಯಲ್ಲಿ ಇಟ್ಟು ಅಗತ್ಯ ಇದ್ದಾಗ ವ್ಯಾಪಾರ ಮಾಡಬೇಕೆಂದು ಶಾಸನಗಳಲ್ಲಿ ತಿಳಿಸಲಾಗಿದೆ.

ಸಕ್ಕರೆಯಲ್ಲದೆ ಘಟ್ಟದ ಮೇಲಿನಿಂದ ತರುತ್ತಿದ್ದ ಬೇರೆ ವಸ್ತುಗಳೆಂದರೆ ಅಕ್ಕಿ, ಗೋಧಿ, ಕಡಲೆ, ಉದ್ದು, ಹೆಸರು, ಎಳ್ಳು, ಕಬ್ಬು , ನಜಬಲಿಯ ಮೆಂತೆ, ತುಪ್ಪ, ಬೆಲ್ಲ ಹಾಗೂ ಸಾಂಬಾರ ಪದಾರ್ಥಗಳು. ಇವಲ್ಲದೆ ಶಾಸನಗಳಲ್ಲಿ ಆಗಿನ ಕಾಲದಲ್ಲಿ ಉತ್ತಮ ವ್ಯಾಪಾರ ಸಂಪರ್ಕಕ್ಕಾಗಿ ಇದ್ದ ರಸ್ತೆಗಳ ಉಲ್ಲೇಖವು ಕಂಡು ಬರುತ್ತದೆ.[೧೩]

ಒಟ್ಟಿನಲ್ಲಿ ಇತಿಹಾಸ ಕಾಲದ ಆರಂಭದಿಂದ, ತುಳು ಕರ್ನಾಟಕದ ಭಾಗ ಕರಾವಳಿಯ ಅಂಚಿನಲ್ಲಿದ್ದುದರಿಂದ ನಿರಂತರವಾಗಿ ವ್ಯಾಪಾರ ಚಟುವಟಿಕೆಗಳ ಕೇಂದ್ರವಾಗಿತ್ತು. ಆರಂಭದಲ್ಲಿ ರಾಜಕೀಯವಾಗಿ ಪ್ರತ್ಯೇಕತೆಯನ್ನು ಹೊಂದಿದ್ದರೂ ವಿದೇಶ ಹಾಗೂ ಘಟ್ಟದ ಮೇಲಿನ ಪ್ರದೇಶಗಳೊಂದಿಗೆ ವ್ಯಾಪಾರಿ ಸಂಪರ್ಕ ಹೊಂದಿತ್ತು. ಅನಂತರ ಹೊಯ್ಸಳ ಹಾಗೂ ವಿಜಯ ನಗರದ ರಾಜವಂಶಗಳ ರಾಜಕೀಯ ಹಿಡಿತ ಇಲ್ಲಿ ಬಿಗಿಗೊಂಡಾಗ ಈ ವ್ಯಾಪಾರಿ ಸಂಪರ್ಕ ಹೊಸ ಆಯಾಮವನ್ನು ಪಡೆಯಿತು. ವಿಜಯ ನಗರದ ಕಾಲದಲ್ಲಂತೂ ತುಳುಕರ್ನಾಟಕ ಆಗಿನ ಬೆಳವಣಿಗೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸಿತ್ತು.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) ರಮೇಶ ಕೆ. ವಿ., - ಜಿಯಾಗ್ರಫಿಕಲ್ ಫ್ಯಾಕ್ಟರ್ಸ್ ಇನ್ ತುಳುವ ಹಿಸ್ಟರಿ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಸಿಲ್ವರ್ ಜ್ಯುಬಿಲಿ ಭಾಷಣ (ಮಣಿಪಾಲ ೧೯೮೧) ಪುಟಗಳು ೧ ಮತ್ತು ಎಫ್. ಎಫ್.

೨) ವಸಂತ ಶೆಟ್ಟಿ. ಬಿ., - ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನ ಶಿಲಾಯುಗ
ರಮೇಶ ಕೆ. ವಿ., - ಪೂರ್ವೋಕ್ತ, ಪು. ೫
ಗುರುರಾಜ ಭಟ್., - *ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ ಕಲ್ಚರ್* (ಮಣಿಪಾಲ ೧೯೭೫) ಪ್ರಿವಿವ್. ಪು. ೬ ರಿಂದ ೧೦

೩) SII Vol .VII - ಸಂಖ್ಯೆ-೨೮೪

೪) ರಮೇಶ ಕೆ.ವಿ. ಶರ್ಮ ಎಂ.ಜೆ., - **ತುಳುನಾಡಿನ ಶಾಸನಗಳು** (ಮೈಸೂರು ೧೯೭೮) - ಪುಟಗಳು ೩೩೩-೩೪

೫) ARSIE 1929 - 30 - No. 557

೬) ಗುರುರಾಜ ಭಟ್. ಪಿ., - ಪೂರ್ವೋಕ್ತ, ಪು. ೨೨೪

೭) ಜಗದೀಶ ಶೆಟ್ಟಿ. ಬಿ., - **ಸೂರಾಲಿನ ತೊಳಹರು.**
ತುಳುಕರ್ನಾಟಕದ ಅರಸು ಮನೆತನಗಳು, ಹಂಪಿ ವಿ.ವಿ., ಪುಟಗಳು : ೯ - ೧೯.

೮) ನೈನಾರ ಮಹಮ್ಮದ್., - *ಅರಬ್ ಜಿಯಾಗ್ರಫರ್ಸ್ ನೋಲೆಜ್ ಆಫ್ ಸದರ್ನ್ ಇಂಡಿಯಾ*
ಹುಸೈನ್ ಎನ್., (ಮದ್ರಾಸ್ ೧೯೪೨) ಪುಟಗಳು : ೩೩-೩೪

೯) SII Vol . IX A1 - ಸಂಖ್ಯೆ-೪೨೩, ೪೪೯, ೬೫೫, ೪೪೪, ೬೨೦
SII Vol .VII - ಸಂಖ್ಯೆ-೩೫೨, ೩೦೯, ೩೪೦

೧೦) SII Vol .VII - ಸಂಖ್ಯೆ-೨೪೮

೧೧) Ibid - ಸಂಖ್ಯೆ-೨೭೩

೧೨) SII Vol .VII - ಸಂಖ್ಯೆ-೩೦೯, ೩೪೦

೧೩) SII Vol .VII - ಸಂಖ್ಯೆ-೩೩೬, ೩೪೩, ೩೪೯, ೩೬೧ ಮತ್ತು ಇತರ ಶಾಸನಗಳು.

ವ. ರಮೇಶ ಕಾರಂತ*

ಕಂಪನಿ ಆಳ್ವಿಕೆಯಲ್ಲಿನ ಕುಂದಾಪುರ ಬಂದರಿನ ಭಂಡಸಾಲೆಗಳು

ಯಾವುದೇ ಒಂದು ಪ್ರದೇಶದಲ್ಲಿನ ಆರ್ಥಿಕ ಅಭಿವೃದ್ಧಿಗೆ ಸಮರ್ಪಕ ಸಾರಿಗೆ ವ್ಯವಸ್ಥೆಯ ಪ್ರಮುಖ ಪಾತ್ರ ವಹಿಸುತ್ತದೆ. ಕಳೆದ ನೂರಿನ್ನೂರು ವರ್ಷಗಳ ಹಿಂದೆ ಭಾರತದಲ್ಲಿ ಅದರಲ್ಲೂ ಕರ್ನಾಟಕದ ಭೂಸಾರಿಗೆ ಈಗಿನಷ್ಟು ಮುಂದುವರಿದಿದ್ದಿಲ್ಲ. ಆಗಿನ ಜನತೆ ಕಾಲ್ನಡಿಗೆಯಿಂದಲೊ ಚಕ್ಕಡಿಗಳ ಮೂಲಕವೊ ಇಲ್ಲವೆ ಹೊಳೆ ನದಿಗಳ ಸಂಪರ್ಕವಿದ್ದಲ್ಲಿ ದೋಣಿಗಳ ಮೂಲಕವೊ ಪ್ರಮುಖ ನಗರಗಳಿಗೆ, ವಾಣಿಜ್ಯ ಕೇಂದ್ರಗಳಿಗೆ ಸಂಪರ್ಕ ಹೊಂದುತ್ತಿದ್ದರು. ಜಲಸಾರಿಗೆಯ ಕೇಂದ್ರಗಳು ಕರ್ನಾಟಕದ ಕರಾವಳಿಯುದ್ದಕ್ಕೂ ಸಾಕಷ್ಟು ಮುಂದುವರೆದಿದ್ದವು. ಆಗಿನ ಮಂಗಳೂರಿನ ಉತ್ತರದ ಕಾರವಾರ ಬಂದರಿನ ನಡುವೆ ಸಣ್ಣ-ದೊಡ್ಡ ಬಂದರಗಳಿದ್ದವು - ಇವು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದುದಾದರೆ ೧) ಭಟ್ಕಳ, ೨) ಮಲ್ಪೆ, ೩) ಹಂಗಾರಕಟ್ಟೆ, ೪) ಮಂಕಿ, ೫) ಹೊನ್ನಾವರ, ೬) ಕುಮಟಾ, ೭) ತದಡಿ, ೮) ಗಂಗವಳ್ಳಿ, ೯) ಅಂಕೋಲಾ, ೧೦) ಬೇಲಿಕೇರಿ, ೧೧) ಚಂಡಿಯಾ, ೧೨) ಬಿಣಗಾ, ೧೩) ಕಾರವಾರ, ೧೪) ಮಜಲಿ - ಇವೆಲ್ಲ ಈಗಿನ ಉತ್ತರಕನ್ನಡ ಜಿಲ್ಲೆಯಲ್ಲಿದ್ದು, ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ ಪ್ರದೇಶಗಳಲ್ಲಿದ್ದುವು. ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶವು ಸರಿಯಾದ ಭೂಸಾರಿಗೆ ವ್ಯವಸ್ಥೆ ಹೊಂದಿದೆ. ಅಲ್ಲಿನ ಜನ ಜಲಸಾರಿಗೆಯನ್ನೇ ಅವಲಂಬಿಸಬೇಕಿತ್ತು. ಹೀಗಾಗಿ ಈ ಕರಾವಳಿಯುದ್ದಕ್ಕೂ ಸಣ್ಣಸಣ್ಣ ಬಂದರುಗಳು ಕಡವುಗಳು ತಲೆಎತ್ತಿದ್ದು ಅವುಗಳ ಮೂಲಕವೇ ಜನ-ಜಾನುವಾರು, ಸರಕು-ಸರಂಜಾಮುಗಳ ಸಾಗಾಟ ನಡೆಯುತ್ತಿದ್ದವು. ಇಂತಹ ಬಂದರುಗಳಲ್ಲಿ ಈಗಿನ ಉಡುಪಿ ಜಿಲ್ಲೆಯ ಕುಂದಾಪುರ ಬಂದರು ಅತ್ಯಂತ ಬಿರುಸಿನ ಚಟುವಟಿಕೆಯ ತಾಣವಾಗಿತ್ತು ಈ ಬಂದರಿಗೆ ಹೊಂದಿಕೊಂಡಂತೆ ಬೆಳೆದ ಗಂಗೊಳ್ಳಿ ಪೇಟೆ ಹಾಗೂ ಅಲ್ಲಿನ ಭಂಡಸಾಲೆಗಳ (ವಣಿಕ ಕೇಂದ್ರಗಳ) ಮೇಲೆ ಬೆಳಕು ಚೆಲ್ಲುವುದೇ ಈ ಸಂಪ್ರಬಂಧದ ಉದ್ದೇಶ.

ಕುಂದಾಪುರ ಬಂದರು ಪೋರ್ಚುಗೀಸರ ಕಾಲದಿಂದಲೇ 'ಕೆಳಗಿನ ಬಾರ್ಸಿಲೋರ್' (Lower Barcelore) ಎಂದು ಕರೆಯಲ್ಪಟ್ಟಿತ್ತು. ಈ ಬಂದರು ಪಂಚನದಿಗಳ (ಪಂಚಗಂಗಾವಳಿ) ಕೂಡು ಸ್ಥಳದಲ್ಲಿದ್ದು, ಮಂಗಳೂರಿನಿಂದ ೯೬ ಕಿ.ಮೀ. ಉತ್ತರದಲ್ಲಿದೆ. ಗಂಗೊಳ್ಳಿ ಹೊಳೆಯ ಉತ್ತರ ದಂಡೆಯಲ್ಲಿ ಆಳವಿದ್ದು



ಕುಂದಾಪುರ, ವ. ಗಂಗೊಳ್ಳಿ ಬಂದರಿನ ಈಗಿನ ನೋಟ

ನದಿ ಪಾತ್ರ ಸಾಕಷ್ಟು ಅಗಲವಿದ್ದು, ಬಂದರು ವಹಿವಾಟಿಗೆ ಸಾಕಷ್ಟು ಪ್ರಶಸ್ತವಾಗಿದೆ. ಅಲ್ಲಿಯೇ ಗಂಗೊಳ್ಳಿ ಪೇಟೆ ಇದೆ. ಪೋರ್ಚುಗೀಸರು ಈ ಪಟ್ಟಣವನ್ನು 'ಕಂಬೋಲಿಮ್' ಎಂದು ಕರೆದರು. ಈ ನದಿಯ ದಕ್ಷಿಣ ದಂಡೆಯಲ್ಲಿ ಕುಂದಾಪುರ ಪಟ್ಟಣವಿದೆ. ಉತ್ತರ ದಂಡೆಯಲ್ಲಿ ಆಳವಿದ್ದು, ನದಿಯಲ್ಲಿ ಕಲ್ಲು-ಬಂಡೆಗಳಿಂದ ಕೂಡಿದ್ದರೆ ದಕ್ಷಿಣ ದಂಡೆ ಸುರಕ್ಷಿತ ತಾಣವಾಗಿದೆ. ಇಲ್ಲಿನ ದೀಪಸ್ತಂಭದಿಂದ ೮೦೦ ಮೀ.ನಿಂದ ೪ ಕಿ.ಮೀ ದೂರದವರೆಗಿನ ಸಮುದ್ರತಾಣ ಭಾರಿ ಹಡಗುಗಳಿಗೆ ನಿಲುದಾಣವನ್ನು ಕಲ್ಪಿಸಿದೆ. ಆ ಕಾಲದ ಕುಂದಾಪುರ ತಾಲೂಕಿನ ಜನರಿಗೆ ಜಲಸಾರಿಗೆಯೆ ಮುಖ್ಯವಾಗಿದ್ದು, ಅಲ್ಲಿ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿದು ಐದು ಅಳವೆಗಳಲ್ಲಿ ಸಮುದ್ರ ಸೇರುವ ಆರು ನದಿಗಳು ಅರಬ್ಬಿಸಮುದ್ರದ ಹಿನ್ನೀರುಗಳು ಅಲ್ಲಿನ ನೆಲವನ್ನು ಸಂಪದ್ಭರಿತಗೊಳಿಸಿವೆ. ಗಂಗೊಳ್ಳಿ ನದಿಯೆಂದು ಕರೆಯಲ್ಪಡುವ ಪಂಚ ಗಂಗಾವಳಿ ನದಿಗಳು ವಾಸ್ತವವಾಗಿ ನಾಲ್ಕು ನದಿಗಳು ಹಾಗೂ ಒಂದು ಹಿನ್ನೀರಿನ ಪ್ರವಾಹ. ಈ ನದಿಗಳಲ್ಲಿ ಹಾಲಾಡಿ ನದಿಯು ೨೪ ಕಿ.ಮೀ. ನಷ್ಟು, ಕುಬ್ಜ ೧೮ ಕಿ.ಮೀ.ನಷ್ಟು, ಚಕ್ರಾ ೧೫ ಕಿ.ಮೀ ನಷ್ಟು, ಕೊಲ್ಲೂರು ೧೬ ಕಿ.ಮೀ ನಷ್ಟು ಹಾಗೂ ಕೋಡಿ ಹಿನ್ನೀರು ೪ ಕಿ.ಮೀ ನಷ್ಟು ದೂರದ ಜಲಸಾರಿಗೆ ಸೌಕರ್ಯವನ್ನು ಒದಗಿಸುತ್ತವೆ. ಇದರಿಂದಾಗಿ ಕುಂದಾಪುರ ತಾಲೂಕಿನ ಹೆಚ್ಚಿನ ಒಳಪ್ರದೇಶಗಳಿಗೂ, ಮುಖ್ಯಪಟ್ಟಣ ಕುಂದಾಪುರಕ್ಕೂ ಈ ನದಿಗಳು ಸಂಪರ್ಕ ಕೊಂಡಿಯಾಗಿವೆ.

ಇಂತಹ ಪ್ರಾಕೃತಿಕ ಸನ್ನಿವೇಶದಲ್ಲಿ ಕುಂದಾಪುರ ಅರ್ಥಾತ್

* ಉಳವಿ-೫೭೭ ೪೩೪, ಸೊರಬ, ಶಿವಮೊಗ್ಗ ಜಿಲ್ಲೆ

ಗಂಗೊಳ್ಳಿ ಬಂದರು, ಅದಕ್ಕೆ ಹೊಂದಿಕೊಂಡಂತಿರುವ ಗಂಗೊಳ್ಳಿ ಪಟ್ಟಣ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಬೆಳೆದುದರಲ್ಲಿ ಆಶ್ಚರ್ಯವಿಲ್ಲ. ಗಂಗೊಳ್ಳಿ ಬಂದರು ಕ್ರಿ. ಶ. ೧೯೦೦ರ ತನಕವೂ ದಕ್ಷಿಣ ಕನ್ನಡ ಜಿಲ್ಲೆಯ ಸಾಗರೋತ್ತರ ಬಂದರಾಗಿದ್ದು, ಗಂಗೊಳ್ಳಿ ಪಟ್ಟಣದ ಭಂಡಸಾಲೆಗಳು ದಕ್ಷಿಣದ ಕಲ್ಲಿಕೋಟೆಯಿಂದ ಹಿಡಿದು ಉತ್ತರದ ಗೋವೆ, ಮುಂಬೈ, ಗುಜರಾತಿನ ತನಕವೂ ವಾಣಿಜ್ಯ ವಹಿವಾಟು ನಡೆಸಿದ್ದುವು.

ಗಂಗೊಳ್ಳಿಯ (ಕುಂದಾಪುರ) ಬಂದರಿನ ಬಂಡಸಾಲೆಗಳ ಅಧ್ಯಯನಕ್ಕೆ ನಾನು ಬಳಸಿಕೊಂಡ ಆಕರ ಸಾಮಗ್ರಿಗಳು- ಬೈಲೂರು ನಾಗಪ್ಪ ಶಾನುಭಾಗರ (ಬೈಲೂರುರಾಮರಾವ್) ಭಂಡಸಾಲೆಯ, ಹಲಸನಾಡ ಸುಬ್ರಾಯರ ಹಾಗೂ ಹಲಸನಾಡ ವಂಕಟರಮಣ ಕಾರಂತರ ಭಂಡಸಾಲೆಗಳ ೧೮೫೦ ಕ್ಕೂ ಹಿಂದಿನ ದಾಖಲೆಗಳು ಹಾಗೂ ಕಡತಗಳು ಈ ದಾಖಲೆಗಳು ಆ ಕಾಲದಲ್ಲಿ ಗಂಗೊಳ್ಳಿ ಬಂದರಿನ ಮೂಲಕ ನಡೆಯುತ್ತಿದ್ದ ವಹಿವಾಟಿನ ಭಂಡಸಾಲೆಗಳ ವ್ಯವಹಾರಗಳ ವಿಸ್ತೃತ ಚಿತ್ರಣ, ಅಲ್ಲಿನ ಖರ್ಚು-ವೆಚ್ಚಗಳು, ಊಳಿಗದವರು ಕುಳವಾರಿಗಳ ವಿವರಗಳನ್ನು ತಿಳಿಸುವುದಲ್ಲದೆ ಈ ಹಿನ್ನೆಲೆಯಲ್ಲಿ ಅಲ್ಲಿನ ಆರ್ಥಿಕ ಚಟುವಟಿಕೆಗಳು ಆ ಪ್ರದೇಶದ ಜನರ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳ ಮೇಲೆ ಬೀರುವ ಪರಿಣಾಮಗಳನ್ನು ವಿಶ್ಲೇಷಿಸಬಹುದಾದೆ.

'ಭಂಡಸಾಲೆ' ಎನ್ನುವ ಶಬ್ದ ಸದ್ಯ 'ಗೋದಾಮು' ಉಗ್ರಾಣವೆಂಬ ಅರ್ಥಕ್ಕಷ್ಟೆ ಸೀಮಿತಗೊಂಡಿದ್ದು, ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಲ್ಲದೆ ಉತ್ತರ ಕರ್ನಾಟಕದ ಹಲವೆಡೆ ಇದೇ ಅರ್ಥದಲ್ಲಿ ಬಳಕೆಯಲ್ಲಿದೆ. ಅಲ್ಲದೆ ಗೋವೆಯ ಉತ್ತರಕ್ಕೆ ಸಾವಂತವಾಡಿಯ ಬಳಿ 'ಮಾಲವಾಣ ಭಂಡಸಾಲೆ' ಇದ್ದ ಉಲ್ಲೇಖವೂ ಲಭ್ಯವಿದೆ. ವಾಸ್ತವವಾಗಿ ಭಂಡಸಾಲೆಯೆಂದರೆ 'ಭಂಡಾರ ಶಾಲೆ', 'ವಾಣಿಜ್ಯ ಕೇಂದ್ರ', 'ಮಂಡಿ', 'ವಕಾರಿ' ಎಂಬ ಅರ್ಥದಲ್ಲಿ ಬಳಕೆಯಲ್ಲಿದ್ದು, ಕೃಷಿ ಉತ್ಪನ್ನಗಳ ಸಗಟು ವ್ಯಾಪಾರ ಕೇಂದ್ರವಾಗಿ ಪರರಾಜ್ಯಗಳಿಗೆ ಇಲ್ಲಿನ ಸರಕನ್ನು ರಫ್ತು ಮಾಡಿ ಅಲ್ಲಿಂದ ಈ ಪ್ರದೇಶದಲ್ಲಿ ಬೆಳೆಯದ ದೊರಕದ ವಸ್ತುವನ್ನು ಖರೀದಿಸಿ ಬಿಕರಿ ಮಾಡುವ ತಾಣವೂ ಆಗಿದ್ದವು. ಒಂದು ರೀತಿಯಲ್ಲಿ ಇವು ಆ ಕಾಲದ ಬ್ಯಾಂಕುಗಳಂತೆ ಕಾರ್ಯನಿರ್ವಹಿ ಸುತ್ತಿದ್ದವು. ಸಾಮಾನು ಸರಂಜಾಮುಗಳ ವ್ಯವಹಾರದೊಂದಿಗೆ ಲೇವಾದೇವಿಯನ್ನೂ ನಡೆಸುತ್ತಿದ್ದವು. ಸಾಮಾನ್ಯವಾಗಿ ವ್ಯವಹಾರಗಳು ಆ ಕಾಲದಲ್ಲಿ ಬಳಕೆಯಲ್ಲಿದ್ದ ವರಹ ಹಾಗೂ ಇಂಗ್ಲೀಷ ರೂಪಾಯಿಗಳೊಂದಿಗೆ 'ಹುಂಡಿ', 'ಪ್ರೊನೋಟು'ಗಳ ಬಳಕೆಯೂ ಚಾಲ್ತಿಯಲ್ಲಿದ್ದುವು. ಈ ಭಂಡಸಾಲೆಗಳಲ್ಲಿ ನಿಗದಿಯಾಗುವ ಸರಕುಗಳ ಧಾರಣೆ ಜಿಲ್ಲಾ ಗೆಝೆಟಿಯರ್ ನಂತಹ ಪತ್ರಿಕೆಗಳಲ್ಲಿ ಜಾಹೀರಾಗುತ್ತಿದ್ದವು.

ಮೇಲಿನ ಎಲ್ಲಾ ಅರ್ಥ, ವ್ಯಾಖ್ಯೆಗಳಿಗೂ ಅನ್ವಯಿಸುವ ಕುಂದಾಪುರ ವ ಗಂಗೊಳ್ಳಿ ಬಂದರಿನ ಭಂಡಸಾಲೆಗಳ ಪರಿಚಯ ಇಲ್ಲಿದೆ. ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಕರಾವಳಿ ಜಿಲ್ಲೆಯಲ್ಲಿ ರಸ್ತೆಸಾರಿಗೆ ಅಭಿವೃದ್ಧಿಗೊಂಡು ಮಂಗಳೂರಿನಿಂದ ಕಾರವಾರದ ವರೆಗೆ ಅಲ್ಲಲ್ಲಿ ಅಡ್ಡಬರುವ ಚಿಕ್ಕ ದೊಡ್ಡ ನದಿಗಳಿಗೆ ಸೇತು ನಿರ್ಮಾಣಗೊಂಡು ರಾಷ್ಟ್ರೀಯ ಹೆದ್ದಾರಿ-೧೭ ಆಗಿ ಪರಿವರ್ತನೆಗೊಳ್ಳುವತನಕ ಕಾರವಾರ ಬಂದರನ್ನು ಹೊರತುಪಡಿಸಿದರೆ ಕುಂದಾಪುರ ಬಂದರವೇ ಅತ್ಯಂತ ಹೆಚ್ಚು ಜನದಟ್ಟಣೆಯ, ಸಾರಿಗೆ ಸಂಪರ್ಕ ನಡೆಯುತ್ತಿದ್ದ ಬಂದರಾಗಿತ್ತು. ೧೮೦೦ರಿಂದ ೧೯೦೦ರ ಕಾಲಘಟ್ಟದಲ್ಲಿ ಗಂಗೊಳ್ಳಿ ಬಂದರಿನಲ್ಲಿ ೧) ನಗರ ಕೃಷ್ಣರಾಯ ನಾಯಕರ ಭಂಡಸಾಲೆ, ೨) ಸುರೇಂದ್ರ ನಾಯಕ ಗುಜ್ಜಾಡಿಕರರ ಭಂಡಸಾಲೆ, ೩) ಹಲಸನಾಡ ಸುಬ್ರಾಯರ ಭಂಡಸಾಲೆ, ೪) ಹಲಸನಾಡ ವೆಂಕಟರಮಣ ಕಾರಂತರ ಭಂಡಸಾಲೆ ೫) ಬೈಲೂರ ಅನಂತ ಶಾನುಭಾಗರ ಭಂಡಸಾಲೆ, ೬) ನಗರ ಗೋವಿಂದರಾಯ ನಾಯಕರ ಭಂಡಸಾಲೆ, ೭) ನಗರ ಮಧುಸೂದನ ನಾಯಕರ ಭಂಡಸಾಲೆ, ೮) ಲೀಲಾಧರ ಶೆಟ್ಟಿ, ಕಲ್ಯಾಣಜಿ ಶೆಟ್ಟರ ಭಂಡಶಾಲೆ, ೯) ವಾಲಜಿ ರಾಮಶೆಟ್ಟರ ಭಂಡಶಾಲೆ, ೧೦) ಅಬಿಸಾಹೇಬರ ಭಂಡಸಾಲೆ, ೧೧) ಭಾವಾಸಾಹೇಬರ ಭಂಡಸಾಲೆ ಮುಂತಾಗಿ ಹನ್ನೊಂದಕ್ಕೂ ಹೆಚ್ಚು ಭಂಡಸಾಲೆಗಳಿದ್ದವು. ಇದಲ್ಲದೆ ಬೈಲೂರ ಅನಂತ ಶಾನುಭಾಗರ ಭಂಡಸಾಲೆ ಆ ಕಾಲದ ಅಂದಿನ ರೀತಿಯ ವ್ಯಾಪಾರ-ವಹಿವಾಟು ನಡೆಸುತ್ತಿಲ್ಲವಾದರೂ ಆ ಭಂಡಸಾಲೆಯ ಮೂಲ ಕಟ್ಟಡ ಆದಿನ ಕಾಲದ 'ಚಿಂತಾಲು' (ದೊಡ್ಡ ತಕ್ಕಡಿ) ಗ್ರಾಹಕರೊಂದಿಗೆ ವ್ಯವಹರಿಸುವ ಸ್ಥಳ, ಬಂಡಸಾಲೆಗೆ ಹೊಂದಿಕೊಂಡು ಇರುವಂತಹ ಗೋದಾಮು ಎಲ್ಲವೂ ಮೂಲಸ್ವರೂಪದಂತೆ ಈಗಲೂ ಉಳಿದುಕೊಂಡು ಬಂದಿದೆ. ಅವರ ಆ ಕಾಲದ ಮುದ್ರಿತ ಲೆಟರ್‌ಹೆಡ್ಡುಗಳನ್ನು ಕನ್ನಡ ಇಂಗ್ಲೀಷಿನೊಂದಿಗೆ ಗುಜರಾತಿ ಭಾಷೆಯಲ್ಲೂ ಮುದ್ರಿಸಿದ್ದಾರೆ.

ಇಲ್ಲಿನ ಪ್ರಮುಖ ವಹಿವಾಟುದಾರರು ಹಾಗೂ ದಲಾಲಿಗಳಲ್ಲಿ ಸ್ಥಳೀಯರಾದ ಗಂಗವಳ್ಳಿ ಬಾವಾಸಾಹೇಬ, ನನ್ನೆಸಾಹೇಬ, ಕೃಷ್ಣಪ್ಪನಾಯಕ, ನಾರಾಯಣನಾಯಕ, ಮೊಯಿದ್ದೀನ್‌ಸಾಬ, ಶೇಕಮೀರುಸಾಬ, ಯುಸೂಫ್‌ಸಾಬ್, ಅಪ್ಪಿಕೇಶ ವಕಮ್ತಿ, ಕೆರೆಕೋಲುರಾಮಚಂದ್ರಕಮ್ತಿ,ಬಸ್ರೂರ ಕರಿಯಣ್ಣ ಶೆಟ್ಟಿ, ಯಳೂರು ದೊಂಬಶೆಟ್ಟಿ, ಧಾರೇಶ್ವರ ಮಹಾಬಲ ಭಟ್ಟ, ಭಟ್ಕಳದ ದಿವಾಕರ ಶೆಟ್ಟಿ ಮುಂತಾದವರಲ್ಲದೆ ರಾಜಾಪುರದ ಜೀಉಪಂತ, ಮಕರಚಂದ ಹೇಮರಾಜ ಶೆಟ್ಟಿ, ಗುಜ್ಜರ ತುಳಸಿಶೇಟ್, ಗಂಧದ ಸಾಹುಕಾರ ದಾರಾಶಿ ನಾನಜಿ ಶೇಟ್, ಉಮರಚಂದ ಕೇಮಜಿ, ಮಂಗಳೂರಿನ ಮುರಾರ್ಜೀ ವೊದಚಿ, ವಾಗಜಿ ಗೋಕುಲದಾಸ್, ಪೋರಬಂದರದ ಕತ್ರಿ, ಸುಂದರಜಿ ಶೆಟ್ಟಿ, ಮುಂಬೈ ಗುಜ್ಜರ ನಾಣಜಿ ಸುಂದರ ಶೆಟ್ಟಿ, ಗೋವೆ ಪಣಜಿಯ ನೂನಾ ಶಾನುಭಾಗ, ಗಣೇಶ ಪೈ, ಕವಲೇದುರ್ಗದ ಕಂಚುಗಾರ ಭೈರಪ್ಪ ಸೋಮಪ್ಪ, ಕಬ್ಬನಾಡ ಬೊಮ್ಮರಸ ಶಂಭು ಬಾಣಸವಾಡಿ ಮುಂತಾದವರಿದ್ದಾರೆ.

ಗಂಗೊಳ್ಳಿ ಬಂದರಿನ ಭಂಡಸಾಲೆಗಳಲ್ಲಿ ಕುಂದಾಪುರ ತಾಲೂಕಿನ ಹಾಗೂ ನೆರೆಯ ಭಟ್ಕಳ, ಹೊನ್ನಾವರಗಳಲ್ಲಿನ ಕೃಷಿ ಉತ್ಪನ್ನಗಳಾದ ಭತ್ತ, ಸಣ್ಣಕ್ಕಿ, ಕೊಚ್ಚಿಗೆ ಅಕ್ಕಿ, ಒಡಕಲು ಅಕ್ಕಿ, ಮಸಕತಿ ಅಕ್ಕಿ, ಅವಡೆ, ಹೆಸರು, ಬಿಳಿಹೆಸರು, ಕರಿಹೆಸರು, ಉದ್ದು, ಹುರುಳಿ, ತೆಂಗಿನಕಾಯಿ ಹಾಗೂ ಎಣ್ಣೆ, ಬೆಲ್ಲ, ಉಪ್ಪು, ಸುಣ್ಣ, ಒಣಹುಲ್ಲು, ಮಡಲು, ಅಡಿಕೆ, ಚೊಗರು, ಕಾಚು, ಕಾಳುಮೆಣಸು ಮುಂತಾದವುಗಳನ್ನು ಹೊರರಾಜ್ಯಗಳಿಗೆ ಮಾರಾಟ ಮಾಡುತ್ತಿದ್ದರು. ಹೊರರಾಜ್ಯಗಳಿಂದ ಜವಳಿ (ಧೋತರ, ರುಮಾಲು, ದುಪ್ಪಟೆ, ಕವಡೆ ಅಂಚಿನ ದುಪ್ಪಟೆ, ಕೆಂಗೊರೆ ರುಮಾಲು, ಸೂರ್ತಿರುಮಾಲು, ಸಿಮ್ಲಾ ಶಾಟಿ, ಲಂಬಾಣಿ ವಸ್ತ್ರ) ಸೆಣಬು, ಸಕ್ಕರೆ, ಜೀರಿಗೆ, ಮೆಣಸು, ಇಂಗು, ದಾಲ್ಚಿನ್ನಿಎಣ್ಣೆ, ಮುಖಕಟ್ಟಿದ ಕೋವಿ, ಅಂಕರಾಜು, ಪಟಾಕಿ, ಖರ್ಜೂರ, ಉತ್ತುತ್ತಿ, ಕಲ್ಲುಸಕ್ಕರೆ, ಕಡಲೆ, ಕುತ್ತುಂಬರಿ, ಬೆಳ್ಳುಳ್ಳಿ, ಚಿನ್ನ, ಬೆಳ್ಳಿ, ಉಕ್ಕು ಮುಂತಾದವುಗಳು ಹಡಗುಗಳ ಮುಖಾಂತರ ಗಂಗೊಳ್ಳಿ ಬಂದರನ್ನು ತಲುಪಿ ಅಲ್ಲಿನ ಭಂಡಸಾಲೆಗಳಿಗೆ ತಲುಪುತ್ತಿದ್ದವು. ಇಲ್ಲಿನ ಭಂಡಸಾಲೆಗಳಿಗೆ ಕೃಷಿ ಉತ್ಪನ್ನಗಳು ಗಂಗೊಳ್ಳಿಯ ಆಸುಪಾಸಿನ ಹಳ್ಳಿಗಳಾದ ಗುಜ್ಜಾಡಿ, ಸೇನಾಪುರ, ಅರಾಟೆ, ನಾವುಂದ, ಪಡುಕೋಣೆ ಕೊಡೇರಿ, ಮುಗುವು, ಮುಂತಾದ ಕಡೆಗಳಿದಲ್ಲದೆ ಕುಂದಾಪುರ ತಾಲೂಕಿನ ಒಳಭಾಗದ ಹಳ್ಳಿಗಳಾದ ಬಸ್ರೂರು, ಕಂಡ್ಲೂರು,ಕಾವರಾಡಿ, ಮಚ್ಚಟ್ಟು, ಕಮಲಶಿಲೆ, ಸಿದ್ಧಾಪುರ, ಕಾಮೇಶ್ವರ, ಹೊಸಂಗಡಿ, ಹಾಲಡಿ, ಸವಡ, ಹರವರಿ, ಬ್ರಹ್ಮೇರಿ, ಮುಂತಾದ ಎಪ್ಪತ್ತೈದಕ್ಕೂ ಹೆಚ್ಚು ಹಳ್ಳಿಗಳಿಂದ ರೈತರು ನೇರವಾಗಿ ಸರಬರಾಜು ಮಾಡುತ್ತಿದ್ದರು. ಅಲ್ಲದೆ ನಗರದ ಕಡಗಳಿಂದ ಮಲೆನಾಡಿನ ಶ್ರೀಗಂಧದ ತುಂಡುಗಳು ತುಂಬಿದ ಥೈಲಿಗಳು ಹೊಸಂಗಡಿಮಾರ್ಗವಾಗಿ ಘಟ್ಟವಿಳಿದು ಅಲ್ಲಿಂದ ದೋಣಿಗಳ ಮೂಲಕ ಕುಂದಾಪುರ ಬಂದರವನ್ನು ತಲುಪುತ್ತಿದ್ದವು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಭಟ್ಕಳ ಹಾಗೂ ಅದರ ನೆರೆಯ ಹಳ್ಳಿಗಳಿಂದ ಅಡಿಕೆ, ಕಾಳುಮೆಣಸು ಮತ್ತಿತರ ಸಾಂಬಾರು ಜೀನಸುಗಳು, ಬೈಂದೂರು ಮಾರ್ಗವಾಗಿ ಗಂಗೊಳ್ಳಿ ಬಂದರವನ್ನು ತಲುಪುತ್ತಿದ್ದವು.


ಕುಂದಾಪುರ ತಾಲೂಕಿನ ಒಳಪ್ರದೇಶಗಳಲ್ಲಿ ರಸ್ತೆಸಾರಿಗೆ ಕಡಿಮೆಯಿದ್ದು ಜನರು ಜಲಸಾರಿಗೆಯನ್ನೇ ಅವಲಂಬಿಸಬೇಕಿತ್ತು. ಅದಕ್ಕಾಗಿ ನಾಡದೋಣಿಗಳನ್ನು ಜಂಗಲ್‌ಗಳನ್ನು ಬಳಸುತ್ತಿದ್ದರು. ಸಾಗರೋತ್ತರ ಸಾರಿಗೆಗಾಗಿ ಮಚುವೆ, ಫತ್ತೆಮಾರಿಗಳನ್ನು ಬಳಸುತ್ತಿದ್ದರು. ಕುಂದಾಪುರ ಬಂದರಿನಲ್ಲಿ ಸರಕು ಸಾಗಣೆ ನಡೆಸುವ ಫತ್ತೆಮಾರಿಗಳಲ್ಲಿ


(೧) ರಾಘೋಬ ತಾಂಡೇಲನ ರಾಮ್‌ಬಾಣ ಫತ್ತೆಮಾರಿ
(೨) ನಾನಾ ತಾಂಡೇಲನ ಕೋಕಲಿ ಫತ್ತೆಮಾರಿ
(೩) ಜನಕ ತಾಂಡೇಲನ ಸಾಂಬಶಿವ ಫತ್ತೆಮಾರಿ
(೪) ಆದಮ ತಾಂಡೇಲನ ಬರಕತಿ ಫತ್ತೆಮಾರಿ
(೫) ಯಾಕೂಬ ತಾಂಡೇಲನ ಸಲಾಮತಿ ಫತ್ತೆಮಾರಿ
(೬) ನಾನಾ ತಾಂಡೇಲಿನ ಖುದಾಭಕ್ಷ ಫತ್ತೆಮಾರಿ.
(೭) ವೆಂಕು ತಾಂಡೇಲನ ಸಾಕ್ರಿಸಲಾಮತಿ ಫತ್ತೆಮಾರಿ
(೮) ಸೋನಾ ತಾಂಡೇಲನ ಭವಾನಿ ಫತ್ತೆಮಾರಿ.


ಪದುಮ ತಾಂಡೇಲ ಹಾಗೂ ಬಾಣಜಿ ತಾಂಡೇಲನ ಫತ್ತೆಮಾರಿಗಳು ಮುಖ್ಯವಾದುವುಗಳು ಇವುಗಳಲ್ಲದೆ ಇಲ್ಲಿನ ಕೆಲವು ಬಂಡಸಾಲೆಗಳು ತಮ್ಮದೆ ಫತ್ತೆಮಾರಿಗಳನ್ನು ಹಾಗೂ ದೊಡ್ಡ ದೋಣಿಗಳನ್ನು ಹೊಂದಿದ್ದವು. ಅವುಗಳನ್ನು ಸ್ವಂತ ವ್ಯವಹಾರಕ್ಕಾಗಿ ಹಾಗೂ ಬಾಡಿಗೆ ಕೊಡುವುದಕ್ಕಾಗಿಯೂ ಬಳಸಲ್ಪಡುತ್ತಿದ್ದವು. ಪ್ರತಿ ಫತ್ತೆಮಾರಿಯಲ್ಲಿಯೂ ಆಕಾಲದ ಬೆಲೆಯಲ್ಲಿ ರೂ. ೧೦೦೦ ದಿಂದ ರೂ. ೧೫೦೦ ಬೆಲೆಯ ಸರಕುಗಳನ್ನು ತುಂಬಿಕೊಂಡು ಪಯಣಿಸುತ್ತಿದ್ದುವು.

ಕುಂದಾಪುರ ಬಂದರಿನ ಭಂಡಸಾಲೆಗಳು ಈ ಪ್ರದೇಶದ ಕೃಷಿಉತ್ಪನ್ನಗಳ ಮಾರಾಟ ಕೇಂದ್ರವಾಗಿ ಜನರ ಆರ್ಥಿಕ ಸ್ಥಿತಿ-ಗತಿಗಳ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಇಲ್ಲಿನ ಭಂಡಸಾಲೆಗಳು ಇದೇ ಬಂದರಿನ ಮೂಲಕ ಸಾಗರೋತ್ತರ ವಾಣಿಜ್ಯ ವ್ಯವಹಾರ ನಡೆಸುತ್ತಿದ್ದ ಕಾರಣ ನೂರಾರು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದುವು. ಇದಲ್ಲಿ ಸಮಾಜದ ಎಲ್ಲ ವರ್ಗದವರಿಗೂ ಅವಕಾಶವಿದ್ದಿತ್ತು. ಭಂಡಸಾಲೆಯಲ್ಲಿ ಸರಕು ಹೇರುವ ಇಳಿಸುವ ಹಮಾಲಿಗಳು, ದೋಣಿ, ಫತ್ತೆಮಾರಿ ನಡೆಸುವ

ಭಂಡಸಾಲೆ ಪತ್ರಗಳು







ಕೋಲುಕಾರರು ತಾಂಡೇಲರು, ಖಾರ್ವಿಗಳು, ಭಂಡಸಾಲೆಯ, ಕರಣಿಕರು, ಕಾರಕೂನರು, ಗುಮಾಸ್ತರು, ಊಳಿಗದವರು, ವ್ಯಾಪಾರ ವಹಿವಾಟಿನಲ್ಲಿ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುವ ದಲಾಲರು, ಕಮಾಯಿಶಿದಾರರು, ಸಾಹುಕಾರರು, ಚಿಲ್ಲರೆ ವ್ಯಾಪಾರಸ್ತರು ಬಡಗಿಗಳು, ಕರ-ಕುಶಲ ಕಸಬುದಾರರಿಗೂ ಇಲ್ಲಿನ ಭಂಡಸಾಲೆಗಳು ಉದ್ಯೋಗಾವಕಾಶ ಕಲ್ಪಿಸಿವೆ.

ಇಲ್ಲಿನ ವರ್ತಕರು ಆರ್ಥಿಕ ವ್ಯವಹಾರ ನಡೆಸುವುದರೊಂದಿಗೆ ಧರ್ಮ ಕಾರ್ಯಗಳಿಗೂ ತಮ್ಮ ಗಳಿಕೆಯ ಒಂದು ಭಾಗವನ್ನು ವಿನಿಯೋಗಿಸುತ್ತಿದ್ದುದು ಕಂಡುಬರುತ್ತದೆ. ಆ ಕಾಲದಲ್ಲಿ ಕುಂದಾಪುರ ತಾಲೂಕಿನಲ್ಲಿದ್ದ ದಶಾವತಾರ ಮೇಳಗಳಿಗೆ, ದೇಶಾವರಿ ಬ್ರಾಹ್ಮಣರಿಗೆ, ಧರ್ಮಸ್ಥಳ, ಆಣೆಗುಡ್ಡೆಯ ಗಣಪತಿ ದೇವಸ್ಥಾನ, ಸಾಲಿಗ್ರಾಮದ ಗುರುನರಸಿಂಹ ದೇವಸ್ಥಾನ ಕೊಲ್ಲೂರು ಮೂಕಾಂಬಿಕೆ, ಕೋಟೇಶ್ವರ ದೇವಸ್ಥಾನಕ್ಕೆ ಆರ್ಥಿಕ ಸಹಾಯ ಮಾಡುತ್ತಿದ್ದರು. ಶಂಕರನಾರಾಯಣ ದೇವಸ್ಥಾನ, ಕಮಲಶಿಲೆಯ ದುರ್ಗಾಪರಮೇಶ್ವರಿಯ ದೇವಸ್ಥಾನ, ಅರೆಹೊಳೆಯ ದೇವಸ್ಥಾನ, ಬ್ರಹ್ಮಾವರದ ಮಹಾಲಿಂಗೇಶ್ವರ ದೇವಸ್ಥಾನಗಳ ದೈನಂದಿನ, ವಾರ್ಷಿಕ, ಪೂಜೆ, ಉತ್ಸವಗಳ ಕಾಲದಲ್ಲಿ ಬೇಕಾದ ಅಕ್ಕಿ, ಕಾಯಿ, ಜಿನಸಿ ಸಾಮಾನುಗಳನ್ನು ಇಲ್ಲಿನ ಭಂಡಸಾಲೆಗಳೇ ಪೂರೈಸುತ್ತಿದ್ದವು. ಆಯಾ ದೇವಸ್ಥಾನಗಳ ಈ ಬಾಬತ್ತಿನ ಲೆಕ್ಕವನ್ನು ಕೂಡ ಪ್ರತ್ಯೇಕವಾಗಿ ಇಡುತ್ತಿದ್ದರು. ಇಲ್ಲಿನ ಭಂಡಸಾಲೆಯ ವರ್ತಕರು ಸಪ್ತಶತಿ ಪಾರಾಯಣ ಮುಂತಾದ ಧಾರ್ಮಿಕ ಕಾರ್ಯಗಳನ್ನು ಅದ್ದೂರಿಯಾಗಿಯೇ ನಡೆಸುತ್ತಿದ್ದರು. ಅಗ್ರಹಾರ, ಅರವಟ್ಟಿಗೆಗಳಿಗೆ ಪಣ, ಅಕ್ಕಿ, ದವಸ-ಧಾನ್ಯಗಳನ್ನು ಉಚಿತವಾಗಿ ನೀಡುತ್ತಿದ್ದರು, ತಮ್ಮ ಜಲಸಾರಿಗೆ ವ್ಯವಸ್ಥೆಯ ಪ್ರಮುಖರಾದ ತಾಂಡೇಲರು, ಕೋಲುಕಾರರು, ಖಾರ್ವೇರರು ಮುಂತಾದ ನೌಕರ ವರ್ಗದವರು ನಡೆಸುವ ಹೋಳಿ ಹಬ್ಬದ ಸಂದರ್ಭದಲ್ಲಿ ಅವರಿಗೆ ಉಚಿತ ಉಡುಗೊರೆಗಳನ್ನು ನೀಡುತ್ತಿದ್ದರು. ಉಡುಪಿಯ ಕೃಷ್ಣಾಪುರ ಮಠದ ಕಿರಿಯ ಸ್ವಾಮಿಗಳು ಗಂಗೊಳ್ಳಿಗೆ ಬಂದಾಗ ಅಲ್ಲಿನ ಭಂಡಸಾಲೆಯವರು ತಮ್ಮಲ್ಲಿಗೆ ಕರೆಸಿ ಪಾದಪೂಜೆ ಮಾಡಿ ಗುರುಕಾಣಿಕೆ ನೀಡಿದ ದಾಖಲೆ ಇದೆ. ಈ ಎಲ್ಲಾ ಖರ್ಚು- ವೆಚ್ಚಗಳನ್ನು ತಮ್ಮ ಲೆಕ್ಕ-ಪುಸ್ತಕಗಳಲ್ಲಿ 'ಧರ್ಮಲೆಖ್ಖ' ಎಂಬ ತಲೆಬರಹದಡಿಯಲ್ಲಿ ದಾಖಲಿಸಿ ಲೆಕ್ಕವಿಡುತ್ತಿದ್ದರು.

ಹೋಳಿ ಹಬ್ಬದ ಆಚರಣೆಯು ಕುಂದಾಪುರ ಬಂದರಿನಲ್ಲಿ ಭಂಡಸಾಲೆಗಳನ್ನಿಟ್ಟು ವ್ಯವಹಾರ ನಡೆಸುವ ಗುಜರಾತಿ ಹಾಗೂ ಫಾರಸಿ ವರ್ತಕರ, ದಲಾಲರ ಕೂಡುವಿಕೆಯ ಭಾರಿ ಸಂಭ್ರಮದ ಹಬ್ಬವಾಗಿತ್ತು ಈ ಸಂದರ್ಭದಲ್ಲಿ ಬಸರೂರಿನಿಂದ ವೇಶ್ಯೆಯರನ್ನು ಕರೆಸಿ ನೃತ್ಯ-ಗಾಯನ-ಗೋಷ್ಠಿ ನಡೆಸುವ ಪರಿಪಾಠವು ಇಲ್ಲಿನ ದಾಖಲೆಯಲ್ಲಿ ದಾಖಲಾಗಿದೆ[೩].

ಇಲ್ಲಿನ ಭಂಡಸಾಲೆಯ ವರ್ತಕರು ರೈತರಿಗೆ ಮಧ್ಯವರ್ತಿಯಿಂದಾಗುವ ಕಿರುಕುಳವನ್ನು ತಪ್ಪಿಸುವ ಸಲುವಾಗಿ ವರ್ತಕರು ದಲಾಲರು ಸೇರಿ ಒಂದು ಲಿಖಿತ ನಿಬಂಧನೆಯನ್ನು ೧೮೨೧ರಲ್ಲಿ ಮಾಡಿಕೊಂಡಿದ್ದರು. ಈ ಒಪ್ಪಂದದಂತೆ 'ಯಾವ ದಲಾಲರು ಯಾವುದೇ ರೈತನ ಕೈಹಿಡಿದು ಇಂತಹುದೇ ಭಂಡಸಾಲೆಗೆಂದು ಕರೆದೊಯ್ಯಕೂಡದು. ರೈತನಿಗೆ ವಿಶ್ವಾಸವಿದ್ದಡೆ ವ್ಯವಹರಿಸಲು ಅನುವು ಮಾಡಿಕೊಡಬೇಕು' ಎಂಬುದು ಆ ಒಪ್ಪಂದದ ಸಾರಾಂಶ.[೪]

ಕುಂದಾಪುರ ಬಂದರದ ಭಂಡಸಾಲೆಗಳ ವ್ಯವಹಾರಗಳ ಬಗೆಗೆ ಲಭಿಸಿದ ದಾಖಲೆಗಳನ್ನು ಗಮನಿಸಿದಾಗ ಎರಡು ಮುಖ್ಯ ಅಂಶಗಳು ಗಮನ ಸೆಳೆಯುತ್ತವೆ. ಮೊದಲನೆಯದಾಗಿ ಇಲ್ಲಿನ ಭಂಡಸಾಲೆಗಳೊಂದಿಗೆ ವ್ಯವಹಾರವಿರಿಸಿಕೊಂಡ ನೂರಾರು ವ್ಯಕ್ತಿಗಳು ಅವರಲ್ಲಿ ಬ್ರಾಹ್ಮಣರು, ಗೌಡ-ಸಾರಸ್ವತರು, ಮುಸ್ಲೀಮರು, ಗುಜರಾತಿಗಳು, ಫಾರಸಿಗಳು, ಸ್ಥಳೀಯ ನಾಡವರು, ಹಳೆಪೈಕದವರು, ಸರಕಾರಿ ಉದ್ಯೋಗಸ್ಥರು, ದೇವಾಲಯಗಳು ಹೀಗೆ ಸಮಾಜದ ಎಲ್ಲಾ ಸ್ತರದ ಜನರ ಭಾಗವಹಿಸುವಿಕೆ ಕಂಡುಬರುತ್ತದೆ. ಉದಾಹರಣೆಗೆ, ಹಾಲಾಡಿ-ಸುಬ್ರಾಯ ಹಾಲಂಬಿ, ಉಪ್ಪಿನಕುದುರ-ವೆಂಕಪ್ಪಯ್ಯ, ಮಚ್ಚಟ್ಟು-ವೆಂಕಪ್ಪ ಕೊಡಗಿ, ಹೊರನಾಡು - ಗಂಗಾಧರಯ್ಯ, ಕೋಡಿ-ವೆಂಕಪ್ಪ ಕಿಣಿ, ಬೈಲೂರು ಕೃಷ್ಣಯ್ಯ ಶಾನುಭಾಗ, ಲಕ್ಷಣ ಶಾನುಭಾಗ, ಕುಂದಾಪುರದ ನಾರಾಯಣ ನಾಯಕ, ರಾಮಚುಂದ್ರ ಕಮ್ತಿ, ಗೋವೆ ನಾಗೇಂದ್ರ ಕಮ್ತಿ, ಗಂಗವಳ್ಳಿ ಮೊಯಿದ್ದೀನ್ ಸಾಹೇಬ, ಅಬಿಸಾಹೇಬ, ಶೇಕ್‌ಮೀರುಸಾಹೇಬ್, ಮಕರಚುಂದ ಹೇಮರಾಜ ಶೆಟ್ಟಿ, ಗಂಗವಳ್ಳಿ ಭಿಮಾಶೆಟ್ಟಿ, ಲೀಲಾಧರ ಶೆಟ್ಟರ ಕಲ್ಯಾಣಜಿ ಶೆಟ್ಟಿ, ಗುಜ್ಜರ ಕೃಷ್ಣದಾಸ ಪುರುಷೋತ್ತಮ ಶಟ್ಟಿ, ಗಂಧದ ಸಾಹುಕಾರ ಧಾರಶಿನಾನಾಜಿಶೆಟ್ಟಿ, ಮಂಗಳೂರಿನ ಗೋಕುಲದಾಸ ಲಕ್ಷ್ಮೀದಾಸ ದೇಉಜಿ ಶೆಟ್ಟಿ, ಫಾರಸಿ ನಾನಾಭಾಯಿಸಾಹೇಬ್, ಯದಲಚಿ ರುಸ್ತುಮಜಿ ಶೇಟ್, ಪೋರಬಂದರಿನ ಸುಂದರಜಿ ಶೆಟ್ಟಿ, ಮುಂಬೈನ ನಾಣಜಿ ಸುಂದರಜಿ, ಎಳ್ಳೂರಿನ ದೊಂಬುಶೆಟ್ಟಿ, ಬಸರೂರ ಕರಿಯಣ್ಣ ಶೆಟ್ಟಿ-ಹೀಗೆ ನೂರಾರು ಹೆಸರುಗಳು ಕಂಡುಬರುತ್ತವೆ ಇವರಲ್ಲಿ ಎಷ್ಟೋ ಮಂದಿ ಗುಜರಾತಿ ವ್ಯಾಪಾರಿಗಳು ಗಂಗೊಳ್ಳಿ, ಕುಂದಾಪುರಗಳಲ್ಲಿ ಖಾಯಂ ಆಗಿ ನೆಲೆಸಿ ಸ್ಥಳೀಕರೇ ಆಗಿಹೋಗಿದ್ದರು.

ಎರಡನೆಯದಾಗಿ ಈ ಬಂದರಿನ ಮೂಲಕ ಇಲ್ಲಿನ ಭಂಡಸಾಲೆಗಳು ಕರ್ನಾಟಕದ ಕರಾವಳಿಯ ಪ್ರಮುಖ ರೇವು-ಪಟ್ಟಣಗಳಾದ ಮಂಗಳೂರು, ಭಟ್ಕಳ, ಹೊನ್ನಾವರ, ಕುಮಟಾ, ಕಾರವಾರ, ಸದಾಶಿವಗಡಗಳಲ್ಲಿನ ವ್ಯಾಪಾರಸ್ಥರೊಂದಿಗೆ ಸಂಬಂಧ ಹೊಂದಿದ್ದವಲ್ಲದೆ ದಕ್ಷಿಣದ ಕಲ್ಲಿಕೋಟೆ ಹಾಗೂ ಉತ್ತರದ ಗೋವಾ, ಖಾಸಾ ಮಾಲವಾಣ ಬಂದರು, ಮುಂಬೈ, ಪೋರಬಂದರ, ಗುಜರಾತಗಳ ವರ್ತಕರೊಂದಿಗೆ ವ್ಯವಹಾರವಿರಿಸಿಕೊಂಡಿದ್ದವು. ಇಲ್ಲಿ ನಮೂದಿಸಿದ ಖಾಸಾ ಮಾಲವಾಣ ಬಂದರು ಗೋವೆಯ ಬಳಿಯ ಸಾದಶಿವಗಡದ ಉತ್ತರಕ್ಕಿದೆ ಎನ್ನುತ್ತಾರೆ ಪ್ರೊ. ಜಿ.ಎಸ್. ದೀಕ್ಷಿತರು. ಇಲ್ಲಿನ ಪ್ರತಿಯೊಬ್ಬ ವರ್ತಕನ ವಾರ್ಷಿಕ ವಹಿವಾಟು ಹತ್ತಿರ ಹತ್ತಿರ

ಆ ಕಾಲದ ಲಕ್ಷ ರೂಪಾಯಿಗಳನ್ನು ಮೀರಿದ್ದು ಈ ಬಂದರಿನ ವಾಣಿಜ್ಯ ವಹಿವಾಟಿನ ಅಗಾಧತೆಯ ಅರಿವಾಗುತ್ತದೆ.


ಇದರಿಂದಾಗಿ ಭೂ ಜಲಸಾರಿಗೆಯ ಮೇಲೆ ಏಕಸ್ವಾಮ್ಯ ಹೊಂದಿದ್ದ ಕಂಪನಿ-ಸರಕಾರ ಬಂದರುಗಳಲ್ಲಿ ಇಳಿಯುವ ದೋಣಿ ನೌಕೆಗಳಿಗೆ ಪರವಾನಗಿ ನೀಡುವ ಪದ್ಧತಿ ಇಟ್ಟುಕೊಂಡಿತ್ತು, ಅಲ್ಲದೆ ಸುಂಕವಸೂಲಿಗಾಗಿ ಅಳಿವೆ-ಸಾಯರ್. ಕಚೇರಿ ಹಾಗೂ ಮುಖ್ಯ ಆಯಕಟ್ಟಿನ ಸ್ಥಳಗಳಲ್ಲಿ ರಸ್ತೆ-ಸಾಯರ್ ಕಚೇರಿಗಳನ್ನು ತೆರೆದಿದ್ದು ಆ ಮೂಲಕ ಬಂದರು -ವಹಿವಾಟುಗಳ ಮೇಲೆ ವಿಧಿಸಿದ ಸುಂಕ ವಸೂಲಿ ಮಾಡುತ್ತಿತ್ತು. ಇದರಿಂದಾಗಿ ಸರಕಾರಕ್ಕೆ ಹೇರಳ ವರಮಾನ ಬರುತ್ತಿತ್ತು.

ಕುಂದಾಪುರ ಬಂದರಿನ ಭಂಡಾಸಾಲೆಯ ವರ್ತಕರು ನಗ. ಆಭರಣಗಳ ಅಡವಿನ ಮೇಲೆ, ಹಾಗೂ ಭೂಮಿ, ಮನೆ, ಭೋಗ್ಯಾದಿ ಸಾಧನಗಳ ಆಧಾರದ ಮೇಲೆ ರೈತರಿಗೆ ಸಾಲ ನೀಡುತ್ತಿದ್ದರು. ಅಂತರ-ರಾಜ್ಯ ವಹಿವಾಟು, ನಗದು ಹಣ, ಮತ್ತು ಹುಂಡಿ-ಪತ್ರಗಳ ಮುಖಾಂತರ ನಡೆಯುತ್ತಿತ್ತು. ವರ್ತಕರು ಬಾಕಿ ಇರಿಸಿಕೊಂಡ ಹಣಕ್ಕೆ ಬಡ್ಡಿ ವಸೂಲಿ ಮಾಡುತ್ತಿದ್ದರು. ಈ ಬಂದರುಗಳ ವ್ಯವಹಾರಗಳಲ್ಲಿ ಫತ್ತೆಮಾರಿಗಳ ಮಾಲೀಕರಾದ ತಾಂಡೇಲರ ಹಾಗೂ ಕೋಲುಕಾರರ ಪಾತ್ರ ಮಹತ್ವಪೂರ್ಣವಾದುದು. ಏಕೆಂದರೆ ಅವರ ಫತ್ತೆಮಾರಿಗಳ ಮೂಲಕ ಆಮದು - ರಫ್ತಾಗುವ ಸರಕುಗಳೊಂದಿಗೆ ನಗದು ಹಣ ಹಾಗೂ ಹುಂಡ ಪತ್ರಗಳು ಸೇರುತ್ತಿದ್ದವು. ಇದ್ದಕ್ಕಾಗಿ ಪ್ರಾಮಾಣಿಕ ಹಾಗೂ ಧೈರ್ಯವಂತ ತಾಂಡೇಲರೇ ಇಲ್ಲಿನ ವ್ಯವಹಾರದ ಕೀಲಿಕೈ ಇದ್ದಂತೆ ಎನ್ನಬಹುದು.

ಒಟ್ಟಿನಲ್ಲಿ ಕುಂದಾಪುರ ಬಂದರಿನ ಭಂಡಸಾಲೆಗಳ ಅಧ್ಯಯನ ಆ ಕಾಲದ ಜನರ ಸ್ಥಿತಿ-ಗತಿಗಳ ಬಗೆಗೆ ಸಮಗ್ರವಿವರ ನೀಡುತ್ತದೆ. ಕುಂದಾಪುರ ಬಂದರಿನ ಭಂಡಸಾಲೆಗಳ ಮೇಲೆ ಅಧ್ಯಯನ ನಡೆಸುವವರಿಗೆ ಈ ಲೇಖನ ಪ್ರೇರಣೆ ನೀಡಿದರೆ ನನ್ನ ಶ್ರಮ ಸಾರ್ಥಕವೆಂದು ತಿಳಿಯತ್ತೇನೆ. ನನ್ನಬಳಿಯಿರುವ ಆಕರಗಳು ನನ್ನ ಪೂರ್ವಿಕರಾದ ಹಲಸನಾಡು ವೆಂಕಟರಮಣ ಕಾರಂತರ ಹಾಗೂ ಹಲಸನಾಡು ಸುಬ್ರಾಯರ ಗಂಗೊಳ್ಳಿ ಭಂಡಸಾಲೆಯ ಲೆಕ್ಕ-ಪತ್ರಗಳು; ಕ್ರಿ.ಶ ೧೮೦೦- ೧೯೦೦ರ ನಡುವಿನ ಕಾಲಘಟ್ಟದಲ್ಲಿ ಕುಂದಾಪುರ ಬಂದರಿನ ವಾಣಿಜ್ಯ ವಹಿವಾಟು ಉಚ್ಛ್ರಾಯ ಕಾಲದಲ್ಲಿದ್ದಂತಹ ಕೆಲವೊಂದು ಭಂಡಸಾಲೆಗಳ ಮಾಲಿಕರ ಮನೆತನಗಳು ಈಗಲೂ ಈ ತಾಲೂಕಿನಲ್ಲಿ ಇವೆ. ಅವುಗಳ ಸಂಗ್ರಹಣ ಹಾಗೂ ಅಧ್ಯಯನ ಈ ತಾಲೂಕಿನ ಹಾಗೂ ಜಿಲ್ಲೆಯ ಆರ್ಥಿಕ ಸಮೀಕ್ಷೆಯ ಅಧ್ಯಯನಕ್ಕೆ ನೆರವಾಗಬಲ್ಲದು.*

* (ಈ ಸಂಪ್ರಂಬಧಕ್ಕೆ ಪ್ರೇರಣೆ ನೀಡಿದ ಕೆಳದಿಯ ಗುಂಡಾಜೋಯಿಸರಿಗೂ ಅಮೂಲ್ಯ ಮಾಹಿತಿ ನೀಡಿದ ಗಂಗೊಳ್ಳಿ ಬಂದರಿನ ಭಂಡಸಾಲೆಯ ಬೈಲೂರು ಮಂಜುನಾಥ ಶ್ಯಾನುಭಾಗ ಇವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.)

ಭಂಡಸಾಲೆ ಪತ್ರ



ಆಧಾರಸೂಚಿ ಮತ್ತು ಟಿಪ್ಪಣಿಗಳು

(೧) ೧೮೯೪ರಲ್ಲಿ ಒಂದು ಇಕ್ಕೇರಿ ವರಹದ ಬೆಲೆ ೫ ರೂ. ಗಳು (ಕಿಟ್ಟೆಲ್ ಶಬ್ದಕೋಶ)

(೨) ಮುಂಬೈ ತುಳಸೀದಾಸ್ ಖೇಮಜಿಹಸ್ತೆ ಸದಾಶಿವಗಡದ ಭಂಡಸಾಲೆ

ನಾರ್ಣಜಿ ಸುಂದರಜಿ ಲೆಕ್ಕ ಬಂದಿದ್ದು

ಕಾರ್ತಿಕ ಶು.೮ ಲು ಕಾನಾ ತಾಂಡೇಲನ ಖುದಾಭಕ್ಷ ಫತ್ತೆಮಾರಿಲು

			ದರ
೧	ಸೂರ್ತಿರವೆ, ೬೦ ಮಣ,		೭೭೮-೦೮-೦೦
೨)	ಮಲ್ ಶರ್ಟು	ದರ	೬೦-೦೦-೦೦
೩)	ಪಟಾಕಿಪಟ್ಟಿಗೆ ೬ಕ್ಕೆ	ದರ	೦೦-೧೨-೦೦
೪)	ಆಭರಣಗಳು	ದರ	೧೧೬-೧೨-೦೬
೫)	ಬಾದಾಮು		೧೨-೦೬-೦೦
೬)	ವಿಲಾಯತಿಜೋಡು		೪-೧೨-೦೦
	ನಗದು ಹಣ		೨೧೮-೦೩-೦೩
		ಜುಮ್ಲಾ	೧,೧೮೭-೧೨-೦೦

ಸಂದದ್ದು

ವಿಕ್ರಮ ಸಂ । ಕಾರ್ತಿಕ ಶು. ೧೦ ಲು ಕಾನಾ ತಾಂಡೇಲನ ಖುದಾಭಕ್ಷ ಫತ್ತೆಮಾರಿಗೆ ಭರ್ತಿ

		ದರ
೧)	ಬೆಳ್ತಿಗೆ ಮುಡ ೪೧	೮೫-೦೮-೦೦
೨)	ಹಳ್ತು ಕೊಚ್ಚಿಗೆ ೨ ೧/೨ ಕೋರ್ಜಿ	೧೭೬-೦೦-೦೦
೩)	ಹೊಸ್ತು ಕೊಚ್ಚಿಗೆ ೩೯ ಮಾನಿಗೆ	೬೮-೦೮-೦೦
೪)	ಭತ್ತ ಕೋರ್ಜಿ ೮ಕ್ಕೆ	೧೪೨-೦೦-೦೦
೫)	ತೆಂಗಿನಕಾಯಿ ೬೦೦೦ಕ್ಕೆ	೮೧-೦೦-೦೦
೬)	ಅಂತರಾಜು	೧ -೦೦-೦೦
೭)	ಕರಾಣಿ ತುಪ	೧ -೦೦-೦೦
೮)	ಮಡಲು ೧೧೫ಕೆ	೦೦-೧೨-೦೦
೯)	ಗಳು ೬ಕ್ಕೆ	೦೦-೦೬-೦೦
೧೦)	ಮನಿಫೆಸ್ತಾ	೦೦-೦೦-೧೦
೧೧)	ಕಲ್ಲಿಕೋಟೆ ಚಾಪೆ ೨೪	೦೦-೧೨-೦೦
೧೨)	ಹುಣಿಸೆ	೦೦-೦೬-೦೦
೧೩)	ನಗದು	೨೮೦-೦೦-೦೦
	ಜುಮ್ಲಾ	೮೩೯-೧೨-೦೦

೩) (೧) ಹೋಳಿಯವರಿಗೆ, ಖಾರವೇರಿಗೆ ಪೈಸೆ ೨ಕ್ಕೆ

(೨) ಗಂಧದಸಾಹುಕಾರ ಕಡೆ ಹೋಳಿಯವರಿಗೆ ಪೈ ೬ಕ್ಕೆ

(೩) "ಹೋಳಿಹಬ್ಬದ ಸಂಬಂಧ ನೀಲಾಧರ ಶೆಟ್ರು ದಲಾಲರು ಸಹ ಬಂದಲ್ಲಿ ಅವರ ಸಂಗಡ ಬಂದ ಬಸರೂರು ಸೂಳೆಯರಿಗೆ ರೂ. ೧ಕ್ಕೆ ವಿಳೆದೆಲೆ ಅಡಿಕೆ ಬಗ್ಗೆ ಪೈ ೨ಕ್ಕೆ" - ಎಂದು ೧೮೨೨ ನೇ ಇಸ್ವಿಯ ದಾಖಲೆ ತಿಳಿಸುತ್ತದೆ.

(೪) ...... ತ್ಸರ ಮಾರ್ಗಶಿರ ಶು, ಶುಕ್ರವಾರ ಗಂಗವಳ್ಳಿಯಲ್ಲು ಇರುವ ಸಾವಕಾರ್‍ರು, ದಲಾಲರು ಸಹಾ ಬರ್‍ಸದರ್ತಹಾನಾಮೆ, ಪ್ರಾಕು ವಿಕ್ರಮ ಸಂವತ್ಸರದಲ್ಲೂ ಬರದರ್ತಹಾನಾಮೆ ಪಕ್ರಾರ ನಡುವಲ್ಲಿ ತಕರಾರು ಮಾಡಿ ತಪ್ಪಿ ನಡಿದದ್ರಿಂದಾ ನಡದಂತವರಿಗೆ ಶ್ರೀದೇವರಿಗೆ ಅಪರಾದ ಯತಾನುಶಕ್ತಿ ಕಟ್ಟಿದ್ದು ಯಿನ್ನು ಮೇಲೆ ದೋಣಿ ಮೇಲೆ ತುಂಬಿ ಬಂದಂತಹ ಅಕ್ಕಿಯನ್ನು ಪರಭಾರೆ ವಫಾದರಿಗೆ ಕೊಡ್ಸು.....ತು ಕೆಲ್ಸವಿಲ್ಲಾ. ಅಥವಾ ಸಾವಕಾರ್‍ರ ಮುಖಾಂತ್ರ ಭಂಡಸಾಲೆಯವರ ಕೈಯಿಂದ ಸಾಟೆ ಪರಭಾರಿ ವಫಾದಾರರಿಗೆ ಕೊಡಬೇಕು ಹೊರತು ಪ್ರತ್ಯೇಕ ದೋಣಿ ಮೇಲೆ ತಂದಂತಹ ಹಳ್ಳಿ ಮ್ಯೇಲೆ ಅಕ್ಕಿಯಾಗಲಿ ಯಾವದೊಂದು ಪ್ರಾಕು ಬರದ ಪ್ರಕಾರ ಪರ : ಪರ ಕೊಟ್ಟರೆ ಮತ್ತು ಪರ ಬಂದರದಿಂದ ಬಂದ ವಫಾದಾರರಿಗೆ ಅವರು ಯಾವ ದಲಾಲರ ಹ್ಯೊರು (ಹೆಸರು) ತೆಗೆದುಕೊಳ್ಳುತ್ತಾರೆ. ಅವರು ತೆಗೆದುಕೊಂಡು ಹೊಗಬೆಕ್ಕು. ಮುಂದಾಗಿ ಅವರ ಕೈಹಿಡಿದು ಕರಕೊಂಡು ಹೋಗಲಿಕ್ಕೆ ಕೂಡದು. ಅಥವಾ ನಡತೆ ಉಂಟಾದರೆ ಮತ್ತು ಮೇಲೆ ಬರದ ಪ್ರಕಾರ ತಪ್ಪಿ ನಡತೆ ಉಂಟಾದರೆ ತನ್ನ ಗುರು ಹಿರಿಯವರಿಗೆ ಶ್ರೀದೇವರಿಗೆ ಮತ್ತು ನಾಲ್ಕು ಮಂದಿ ಗ್ರಹಸ್ಥರಿಗೆ ಹೊರತಾಗಿ ಯಿಧೆನು ಯಂತ ಬರ್‍ಸದರ್ತಹಾ,-

ಡಾ. ಮಾಲತಿ ಕೆ. ಮೂರ್ತಿ*

ಹತ್ತೊಂಬತ್ತನೇ ಶತಮಾನದ ಕರಾವಳಿ ಸಮುದ್ರ ವ್ಯಾಪಾರದಲ್ಲಿ ಮಂಗಳೂರು ಬಂದರಿನ ಪಾತ್ರ

ಪಶ್ಚಿಮ ಕರಾವಳಿಯ ಸಮುದ್ರ ವ್ಯಾಪಾರ ವಹಿವಾಟಿನಲ್ಲಿ ಬಹಳ ಹಿಂದಿನಿಂದಲೂ ಮಂಗಳೂರು ಬಂದರು ಮಹತ್ವದ ಸ್ಥಾನವನ್ನು ಪಡೆದಿತ್ತು. ವಿಜಯನಗರ ಕಾಲದಲ್ಲಿ ಮಂಗಳೂರು ಮತ್ತು ಬಾರಕೂರು ರಾಜ್ಯಗಳೆಂಬ ಎರಡು ಆಡಳಿತ ವಿಭಾಗ ಗಳಿದ್ದು, ಮಂಗಳೂರು ಆಡಳಿತಾತ್ಮಕ ಮಹತ್ವವನ್ನು ಪಡೆದದ್ದಲ್ಲದೆ, ಇಲ್ಲಿನ ಬಂದರು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರಿಂದ, ವಿಜಯನಗರ ಸಾಮ್ರಾಜ್ಯದ ಆರ್ಥಿಕ ಪ್ರಾಬಲ್ಯಕ್ಕೆ ತನ್ನ ದೇಣಿಗೆಯನ್ನು ನೀಡಿತ್ತು. ಐರೋಪ್ಯರ ಆಗಮನದ ಮೊದಲು ಈ ಬಂದರದಲ್ಲಿ ಚೀನಾದ ಮತ್ತು ಅರಬ್‌ನ ವ್ಯಾಪಾರಿಗಳು ವಹಿವಾಟು ನಡೆಸುತ್ತಿದ್ದರು. ಇಬನ್‌ಬತೂತ, ವಾರ್ಥೇಮ, ಬರ್ಬೋಸ, ಸೀಸರ್ ಫೆಡ್ರಿಕ್ ಮತ್ತು ಲಿನ್ಸ್ ಚೊಟೆನ್‌ರ ಬರವಣಿಗೆಗಳಲ್ಲಿ ಇಲ್ಲಿನ ವ್ಯಾಪಾರದ ಮಹತ್ವದ ಮತ್ತು ಇಲ್ಲಿನ ವ್ಯಾಪಾರದ ಏಕಸ್ವಾಮ್ಯ ಗಳಿಸುವಲ್ಲಿ ಪೋರ್ಚುಗೀಸರು ನಡೆಸಿದ ಪ್ರಯತ್ನಗಳ ಬಗೆಗೆ ಉಲ್ಲೇಖಗಳಿವೆ.[೧] ಉಳ್ಳಾಲದ ರಾಣಿ ಅಬ್ಬಕ್ಕ ೧೬೧೯ರಲ್ಲಿ ಪೋರ್ಚುಗೀಸರನ್ನು ಸೋಲಿಸಿದ ಘಟನೆ ಇಲ್ಲಿನ ರಾಜಕೀಯ ಇತಿಹಾಸದ ಜೊತೆಗೆ ಕರಾವಳಿಯ ಆರ್ಥಿಕ ಚರಿತ್ರೆಯಲ್ಲೂ ಬಹುಮುಖ್ಯವೆನಿಸಿದೆ. ೧೭ನೇ ಶತಮಾನದ ಅಂತ್ಯದಲ್ಲಿ ಕೆಳದಿಯ ಇಮ್ಮಡಿ ಸೋಮಶೇಖರ ನಾಯಕರ ಆಳ್ವಿಕೆಯ ಕಾಲದಲ್ಲಿ ಮತ್ತೆ ಮಂಗಳೂರಿನಲ್ಲಿ ಪೋರ್ಚುಗೀಸರ ವ್ಯಾಪಾರ ಚಟುವಟಿಕೆಗಳು ಚಿಗುರಿದವು. ಮೈಸೂರಿನ ಸುಲ್ತಾನರ ಆಳ್ವಿಕೆಯಲ್ಲಿ ಅವರ ರಾಜಧಾನಿಗೆ ಸಮೀಪವಾಗಿದ್ದ ಬಂದರಾಗಿದ್ದುದರಿಂದ, ಮಂಗಳೂರು ಬಂದರು ಬಹಳ ಮಹತ್ವವನ್ನು ಪಡೆದಿತ್ತು. ಟಿಪ್ಪುವಿನ ವ್ಯಾಪಾರ ನಿರ್ಬಂಧ ಕ್ರಮಗಳ ಅನುಷ್ಠಾನಕ್ಕೆ ಇದು ಪ್ರಮುಖ ಕೇಂದ್ರವಾದ ಕಾರಣ, ಆತನ ಆಳ್ವಿಕೆಯ ದ್ವಿತೀಯ ಭಾಗದಲ್ಲಿ ಇಲ್ಲಿ ವ್ಯಾಪಾರ ಚಟುವಟಿಕೆಗಳು ಕುಂಠಿತವಾದುವು.

೧೯ನೇ ಶತಮಾನದ ಆದಿಭಾಗದಲ್ಲಿ ಅಂದರೆ ಸು. ೧೮೦೦ರಲ್ಲಿ ಕರ್ನಾಟಕದ ಕರಾವಳಿಯಲ್ಲಿ ಒಟ್ಟು ೨೨ ನಿಲ್ದಾಣಗಳಿದ್ದು ಅವುಗಳಲ್ಲಿ ೧೭ ಬಂದರುಗಳು ಮತ್ತು ೫ ನಿಲುಗಡೆಗಳಿದ್ದವು. ದಕ್ಷಿಣ ಕನ್ನಡದ ಕರಾವಳಿಯಲ್ಲೇ ಸುಮಾರು ೧೩ ನಿಲ್ದಾಣಗಳಿದ್ದು, ಅವುಗಳಲ್ಲಿ ಎಂಟನ್ನು ಬಂದರುಗಳೆಂದು ಕರೆಯುತ್ತಿದ್ದರು.

ಈ ಬಂದರುಗಳಲ್ಲಿ ಪತ್ತೆಮಾರುಗಳೆಂಬ ದೊಡ್ಡ ನಾವೆಗಳು ಲಂಗರು ಹಾಕಲು ಅನುಕೂಲತೆಯಿತ್ತು. ಇನ್ನುಳಿದಂತೆ ೫ ನಿಲ್ದಾಣಗಳಲ್ಲಿ ದೋಣಿಗಳಷ್ಟೇ ಪ್ರವೇಶಿಸುವ ಹೊಳೆಬದಿಯ ನಿಲುಗಡೆಗಳಾಗಿದ್ದುವು.[೨]

ಕುಂಬಳೆ, ಮಂಜೇಶ್ವರ, ಮಂಗಳೂರು, ಮೂಲ್ಕಿ, ಉದ್ಯಾವರ, ಐರೋಡಿ (ಹಂಗಾರಕಟ್ಟೆ), ಕುಂದಾಪುರ ಮತ್ತು ಶಿರೂರು - ಬಂದರುಗಳಾಗಿದ್ದು, ಬೇಕಲ, ಪಡುಬಿದ್ರಿ, ಕಾಪು, ನ್ಯಾಕನಕಟ್ಟೆ, ಬೈಂದೂರು ಬರೇ ನಿಲುಗಡೆಗಳಾಗಿದ್ದುವು. ೧೮೬೩ರ ಆಕ್ಟ್ VI ಸೆಕ್ಷನ್ ೧೦ರ ಅಧೀನ ಹೊರಡಿಸಿದ ೭-೮-೧೮೬೫ರ ಫೋರ್ಟ್ ಸೈಂಟ್ ಜಾರ್ಜನ ನೋಟಿಫಿಕೇಷನ್ ಕಾಸರಗೋಡು, ಕುಂಬಳೆ, ಬೇಕಲ, ಮಂಜೇಶ್ವರ, ಮಂಗಳೂರು, ಮೂಲ್ಕಿ, ಬಾರ್ಕೂರು (ಹಂಗಾರಕಟ್ಟೆ), ಕುಂದಾಪುರ (ಗಂಗೊಳ್ಳಿ), ನೈಕನಕಟ್ಟೆ ಬೈಂದೂರು ಮತ್ತು ಶಿರೂರು ಪ್ರಮುಖ ಬಂದರುಗಳೆಂದೂ, ಪಡುಬಿದ್ರಿ, ಎರ್ಮಾಳು, ಉಚ್ಚಿಲ, ಕಾಪು, ಉದ್ಯಾವರ ಮತ್ತು ಮಲ್ಪೆ ಅಧೀನ ಬಂದರುಗಳೆಂದು ಘೋಷಿಸಲಾಗಿತ್ತು.[೩] ೧೯೦೦ರ ಆದಿಭಾಗದಲ್ಲಿ ಮಂಗಳೂರು, ಹಂಗಾರಕಟ್ಟೆ. ಕುಂದಾಪುರ (ಗಂಗೊಳ್ಳಿ), ಕಾಸರಗೋಡು, ಮೂಲ್ಕಿ, ಮಲ್ಪೆ ಮತ್ತು ಬೈಂದೂರುಗಳಷ್ಟೇ ಬಂದರುಗಳೆಂದು ಪರಿಗಣಿಸಲ್ಪಟ್ಟಿದ್ದು, ಇವುಗಳಲ್ಲಿ ಬೈಂದೂರು ಮತ್ತು ಮೂಲ್ಕಿ ಬರೇ ದೋಣಿಗಳಿಗಷ್ಟೇ ಸೀಮಿತಗೊಂಡಿದ್ದುವು. ಉಳಿದ ೫ ಬಂದರುಗಳಲ್ಲಿ ಮಳೆಗಾಲದ ಹೊರತುಪಡಿಸಿ ಉಗಿ ಹಡಗುಗಳ ಸಂಚಾರವಿತ್ತು ಎನ್ನಲಾಗಿದೆ.[೪] ಇವುಗಳ ಪೈಕಿ ಮಂಗಳೂರು ಬಂದರದಲ್ಲಿ ರಫ್ತು-ಆಮದು ವ್ಯವಹಾರ ಚಟುವಟಿಕೆಗಳು ಅತ್ಯಧಿಕ ಪ್ರಮಾಣದಲ್ಲಿದ್ದು, ಇದು ಅವಿಭಜಿತ ದ.ಕ. ಜಿಲ್ಲೆಯ ಅತ್ಯಂತ ದೊಡ್ಡ ಬಂದರಾಗಿ ರೂಪುಗೊಂಡಾಗಿತ್ತು.

'ಕೊಡಿಯಾಲ ಬಂದರು' ಎಂದು ಕರೆಯಲಾಗುತ್ತಿದ್ದ ಮಂಗಳೂರು ಬಂದರು ಸಾಕಷ್ಟು ವ್ಯಾಪಾರ ಚಟುವಟಿಕೆಗಳ ಕೇಂದ್ರವಾಗಿದ್ದರೂ, ಭೌಗೋಳಿಕವಾಗಿ ಅಗತ್ಯವಾದ ಅನುಕೂಲತೆ ಗಳನ್ನು ಸದಾಕಾಲವೂ ಹೊಂದಿರಲಿಲ್ಲ. ಕರಾವಳಿಯ ಹವಾಮಾನದ ವೈಪರೀತ್ಯಗಳಿಂದಾಗಿ ಅದರ ಅಳಿವೆ ಪ್ರದೇಶದಲ್ಲಿ ಆಗಾಗ್ಗೆ ಬಹಳಷ್ಟು ಬದಲಾವಣೆಗಳಾಗುತ್ತಿದ್ದವು. ಗುರುಪುರ ಹಾಗೂ ನೇತ್ರಾವತಿ ನದಿಗಳು ಸಂಗಮವಾಗಿ ಅರಬ್ಬೀ ಸಮುದ್ರ ಸೇರುವಲ್ಲೇ ಬಂದರಿನ ಉಗಮವಾಗಿತ್ತು. ಈ ಬಂದರಿಗೆ ಒಂದೇ ಪ್ರವೇಶವಿದ್ದು,

* ಮುಖ್ಯಸ್ಥರು, ಇತಿಹಾಸ ವಿಭಾಗ, ಎಂ.ಜಿ.ಎಂ. ಕಾಲೇಜು, ಉಡುಪಿ-೫೭೬ ೧೦೨

ಸರಳು ಇಳಿಸಿದ ಬಳಿಕವೇ ಹಡಗುಗಳು ಇಲ್ಲಿ ಪ್ರವೇಶಿಸುವಷ್ಟು ಆಳವನ್ನು ಇದು ಹೊಂದಿತ್ತು. "ಕಳೆದ ವರ್ಷವಷ್ಟೇ ಇದರ ಸಮೀಪದಲ್ಲಿ ಹೊಸದೊಂದು ಪ್ರವೇಶ ಉಂಟಾಗಿದ್ದು, ಇದು ಬಂದರಿಗೆ ಹಾನಿಕಾರಕವಾಗಿದೆ. ಹಳೆಯ ಪ್ರವೇಶದ ಆಳ ಕಡಿಮೆಯಾಗಿದ್ದು, ಭರತದ ಸಮಯದಲ್ಲೂ ನಾವೆಗಳು ಪ್ರವೇಶಿಸುವುದು ಕಷ್ಟವಾಗಿದೆ" ಎಂದು ೧೮೦೦ರಲ್ಲಿ ಬುಖಾನನ್ ಅಭಿಪ್ರಾಯಪಟ್ಟಿದ್ದಾನೆ.[೫] ಸಪ್ಟೆಂಬರ ೧೮೩೭ ಮತ್ತು ಜನವರಿ ೧೮೪೪ರ ಮಲಬಾರ್ ಮತ್ತು ಕೆನರಾದ ಸಿವಿಲ್ ಇಂಜಿನಿಯರ್‌ಗಳ ಡೈರಿಗಳಿಂದ ಲಭ್ಯವಾಗುವ ಮಾಹಿತಿಯಂತೆ, ೧೮೦೧ರ ಮೊದಲು ಇಲ್ಲಿ ಗುರುಪುರ ಮತ್ತು ನೇತ್ರಾವತಿ ನದಿಗಳು ಜತೆಯಾಗಿ ಸಮುದ್ರವನ್ನು ಸೇರುತ್ತಿದ್ದಲ್ಲೇ ಸಾಕಷ್ಟು ಆಳವಿದ್ದುದರಿಂದ, ದೊಡ್ಡ ಹಡಗುಗಳು ಪ್ರವೇಶಿಸುವುದು ಸಾಧ್ಯವಾಗಿತ್ತು. ಆದರೆ ೧೮೦೧ ರ ಅತಿವೃಷ್ಟಿಯಿಂದಾಗಿ ಹಿನ್ನೀರುಗಳಲ್ಲಿ ಪ್ರವಾಹವುಕ್ಕಿ ಅನೇಕ ಮುಖಗಳಾಗಿ ಹರಿದು ಮೊದಲಿನ ಅಳಿವೆಯಲ್ಲಿ ಉಸುಕು ತುಂಬಿ ಹಡಗುಗಳ ಪ್ರವೇಶಕ್ಕೆ ಧಕ್ಕೆ ಉಂಟಾಯಿತು.

ಆದರೆ ಮುಂದಿನ ಬೇಸಿಗೆಯಲ್ಲಿ ಎಲ್ಲ ಎಡೆಗಳೂ ಮುಚ್ಚಿ, ಮೊದಲಿನ ಪ್ರವೇಶವಷ್ಟೇ ಉಳಿದುಕೊಂಡಿತು. ಮುಂದೆ ಕೆಲವು ವರ್ಷಗಳವರೆಗೂ ಹಾಗೇ ಉಳಿದುಕೊಂಡಿದ್ದ ಆ ಪ್ರವೇಶದಲ್ಲಿ ಆಳ ಕಡಿಮೆಯಾದದ್ದಲ್ಲದೆ. ಕ್ರಮೇಣ ಅದು ಹಿಂದಕ್ಕೆ ಸರಿಯತೊಡಗಿತು. ೧೮೨೭ರಲ್ಲಿ ಅತಿವೃಷ್ಟಿಯಾಗಿ, ಗುರುಪುರ ನದಿ ದಂಡೆಯಲ್ಲಿನ ಹೊಲ ಹಾಗೂ ಮನೆಗಳಿಗೆ ಹಾನಿಯಾಗುವುದನ್ನು ತಪ್ಪಿಸಲು ಪ್ರವಾಹದ ನೀರು ವೇಗವಾಗಿ ಹರಿದುಹೋಗುವಂತೆ ಮಾಡಲು ಸರಕಾರವು ಗುರುಪುರ ನದಿಯು ಸಮುದ್ರವನ್ನು ಸೇರುವ ಉತ್ತರ ಬದಿಯಲ್ಲಿ ಹೊಸ ಪ್ರವೇಶವನ್ನು ತೆರೆಯಿತು. ಆದರೆ ಇದರಿಂದ ತೊಂದರೆಗಳು ಹೆಚ್ಚಿದವು. ಗುರುಪುರ ನದಿ ಹಾಗೂ ನೇತ್ರಾವತಿಯ ಸಂಗಮ ಪ್ರದೇಶದಲ್ಲಿ ನೀರು ಹರಿಯದೆ ಉಸುಕು ತುಂಬಿ ಸಣ್ಣದೊಂದು ದ್ವೀಪವುಂಟಾಗಿ, ಪತ್ತೆಮಾರುಗಳಿಗೆ (ದೊಡ್ಡದೋಣಿಗಳು) ಬಂದರಿನ ಒಳಬರಲು ಅಸಾಧ್ಯವಾಯಿತು. ಪರಿಣಾಮವಾಗಿ ವ್ಯಾಪಾರವು ಕುಂಠಿತವಾಯಿತು. ಹೊಸದಾಗಿ ತೆರೆದ ಪ್ರವೇಶವನ್ನು ಮುಚ್ಚುವುದು, ಅಳಿವೆಯಲ್ಲಿ ಹೂಳೆತ್ತುವುದು ಮೊದಲಾದ ಪರಿಹಾರಗಳನ್ನು ಸೂಚಿಸಲಾದರೂ, ಅವು ಯಾವುವೂ ಅನುಷ್ಠಾನಗೊಳ್ಳಲಿಲ್ಲ.[೬] ೧೮೪೫ ರಲ್ಲೊಮ್ಮೆ ಕೈದಿಗಳ ನೆರವಿನಿಂದ ಸಣ್ಣಮಟ್ಟದಲ್ಲಿ ಹೂಳೆತ್ತುವ ಕೆಲಸ ನಡೆದರೂ ಅದು ವಿಶೇಷ ಪರಿಣಾಮಕಾರಿಯಾಗಲಿಲ್ಲ.[೭] ೧೮೫೫ರಲ್ಲಿ ಪ್ರವೇಶದ ವಿಸ್ತರಣೆಗೆ ಆಜ್ಞೆ ನೀಡಿದ್ದಾಗಿ ಮದ್ರಾಸ್ ಸರಕಾರದ ಕಾರ್ಯದರ್ಶಿಯ ವರದಿ ತಿಳಿಸುತ್ತದೆ.[೮] ಆದರೆ ಅದರ ಅನುಷ್ಠಾನದಿಂದಲೂ ವ್ಯಾಪಾರಿಗಳ ಸಮಸ್ಯೆಗಳು ಪರಿಹಾರಗೊಳ್ಳಲಿಲ್ಲ. ೧೮೮೩ರಲ್ಲಿ ನೇತ್ರಾವತಿ ನದಿಯ ದಕ್ಷಿಣದ ಅಂಚಿನ ಉತ್ತರಕ್ಕೆ ಹೊಸದೊಂದು ಪ್ರವೇಶ ಉಂಟಾದಾಗ ಮೊದಲಿದ್ದ ಪ್ರವೇಶದಲ್ಲಿ ಹೂಳು ತುಂಬಿತು. ಹೊಸತರಲ್ಲಿ ಆಳವೂ ಇರದೆ ಯಾವುದೇ ಪ್ರಯೋಜನವಾಗಲಿಲ್ಲ.[೯] ಹೀಗೆ ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಈ ಬಂದರಿನ ಇತಿಹಾಸದಲ್ಲಿ ನಿಸರ್ಗ ತಂದ ಅನಿಶ್ಚಿತತೆಯ ಸವಾಲು ಮತ್ತು ಸರಕಾರದ ಅರೆಮನಸ್ಸಿನ ಸುಧಾರಣಾ ಯತ್ನಗಳನ್ನಷ್ಟೇ ಕಾಣಬಹುದು. ಹೀಗಾಗಿ ಮಂಗಳೂರು ಬಂದರಿನ ಸ್ವರೂಪದಲ್ಲಿ ಯಾವುದೇ ಮಹತ್ತರ ಬದಲಾ ವಣೆಗಳಾಗಲಿಲ್ಲ.

ಬಂದರು ಆಡಳಿತ ವ್ಯವಸ್ಥೆ

೧೮೨೪ರ ತನಕ ಕೆನರಾ ಕರಾವಳಿಯು ಅಂದರೆ ಉತ್ತರದ ಸದಾಶಿವಘಡದಿಂದ ದಕ್ಷಿಣದ ಕೊಚ್ಚಿನ್ ತನಕ, ಮಲಬಾರ್ ಮತ್ತು ಕೆನರಾದ ಸಮುದ್ರ ಸುಂಕಾಧಿಕಾರಿಯ ಮೇಲ್ವಿಚಾರಣೆಗೆ ಒಳಪಟ್ಟಿತ್ತು. ಇದನ್ನು ೧೬ ತಾಲೂಕುಗಳಾಗಿ ವಿಂಗಡಿಸಲಾಗಿತ್ತು.[೧೦] ೧೮೨೪ ರಲ್ಲಿ ಮಲಬಾರ್ ಮತ್ತು ಕೆನರಾದ ಸಮುದ್ರ ಸುಂಕ ವಿಭಾಗಗಳು ಪ್ರತ್ಯೇಕಗೊಂಡು, ಕೆನರಾದ ಸಮುದ್ರ ಸುಂಕ ವಿಭಾಗವು ಕೆನರಾದ ಪ್ರಮುಖ ಕಲೆಕ್ಟರನ ಅಧೀನಕ್ಕೊಳಪಟ್ಟಿತು. ಪ್ರತಿಯೊಂದು ಪ್ರಮುಖ ಬಂದರದಲ್ಲಿ ಒಬ್ಬ ನಿರ್ವಹಣಾಧಿಕಾರಿ,ಸ್ಥಳೀಯ ಗುಮಾಸ್ತರ (ರೈಟರ್ಸ್) ನೆರವಿನಿಂದ ಕಾರ್ಯವೆಸಗುತ್ತಿದ್ದನು. ಚಿಕ್ಕ ಬಂದರುಗಳ ವ್ಯವಹಾರಗಳನ್ನು ಆತನ ಅಧೀನ ಅದಿಕಾರಿಗಳು ನಿರ್ವಹಿಸುತ್ತಿದ್ದರು. ಪ್ರತಿಯೊಂದು ತಾಲೂಕಿನ ಕರಾವಳಿಯ ಹಾಗೂ ಸ್ಥಳೀಯ ಅವಶ್ಯಕತೆಗನುಗುಣವಾಗಿ ಹಲವು ಕೋಲ್ಕರ್ ಅಥವಾ ಗುಮಾಸ್ತರಿ ದ್ದರು. ಇವರಲ್ಲಿ ಕೆಲವರು ಸುಂಕದ ವಸ್ತುಗಳನ್ನು ಪರೀಕ್ಷಿಸಲು, ಇನ್ನು ಕೆಲವರು ಸಮುದ್ರ ತೀರದಾದ್ಯಂತ ಕಳ್ಳ ಸಾಗಾಣಿಕೆಯ ಮೇಲೆ ನಿಗಾ ಇಡಲು ಹಗಲು ರಾತ್ರಿಯ ಕಾವಲು ಮತ್ತು ನಿಲುಗಡೆಗಳಲ್ಲಿ ಕಾವಲು ಮುಂತಾದ ಕರ್ತವ್ಯಗಳನ್ನು ನಿರ್ವಹಿಸು ತ್ತಿದ್ದರು. ೧೮೨೩ರಲ್ಲೇ ಮಲಬಾರ್ ಮತ್ತು ಕೆನರಾ ಪ್ರದೇಶದಲ್ಲಿ ಒಟ್ಟು ೧೯೭ ಜನ ಕೋಲ್ಕರರಿದ್ದರೆಂಗು ತಿಳಿಯುತ್ತದೆ.[೧೧] ಕೆಲವೊಂದು ಬಂದರುಗಳಲ್ಲಿ ಕಾನೂನುಬಾಹಿರ ಸರಕು ಸಾಗಾಣಿಕೆ ನಡೆಯುತ್ತಿದ್ದು, ಅಲ್ಲಿ ಕೋಲ್ಕರರಿಗೆ ದೋಣಿಗಳನ್ನು ನೀಡಲಾಗಿದ್ದು, ಅವರು ನಿಗಾ ವಹಿಸಬೇಕಿತ್ತು. ಪ್ರಮುಖ ಬಂದರಗಳಲ್ಲಿ ಮುಖ್ಯ ಅಧಿಕಾರಿಗಳು ಪ್ರಯಾಣಿಕ ಸಾರಿಗೆ ಹಾಗೂ ಸರಕು ಸಾರಿಗೆಗಳಿಗೆ ಸಂಬಂಧಪಟ್ಟ ಬಂದರು ಕಾನೂನುಗಳ ಅನುಷ್ಠಾನದ ನಿಗಾವಹಿಸಬೇಕಿತ್ತು.[೧೨] ಫಾಕೊನರ್ ಎಂಬಾತ ೧೮೦೧ರಲ್ಲಿ ಮಂಗಳೂರು ಬಂದರದ ಪ್ರಮುಖ ಅಧಿಕಾರಿಯಾಗಿದ್ದ.[೧೩] ಬಂದರುಗಳ ವ್ಯಾಪಾರಕ್ಕೆ ಅನುಗುಣವಾಗಿ ಕೆಲವು ನೋಂದಾಯಿಸಿದ ದೋಣಿಗಳಿದ್ದು, ಅವುಗಳಷ್ಟೆ ಸರಕು ಸಾಗಾಟಕ್ಕೆ ಹಾಗೂ ನಿಲುಗಡೆಗೆ ಅನುಮತಿ ಪಡೆದಿದ್ದವು. ಉಳಿದಂತೆ ಬೇರಾವುದೇ ಹಡಗುಗಳು ಸರಕು ತರುವಂತಿರಲಿಲ್ಲ. ತಂದಲ್ಲಿ ದಂಡ ಅಥವಾ ಮಟ್ಟುಗೋಲು ಹಾಕಲಾಗುತ್ತಿತ್ತು.

ಕಾರ್ಯನಿರ್ವಹಣೆ

ಹಡಗೊಂದು ಮುಖ್ಯಬಂದರಿಗೆ ಬಂದಾಗ,ಮುಖ್ಯಸ್ಥ (ತೆಂಡಲ್- ಅದುವೇ ತಂಡೇಲನಾಗಿರಬಹುದೇ?) ಸುಂಕದ ಮನೆಗೆ ತೆರಳಿ, ಹಡಗಿನ ಸರಕುಗಳ ಪಟ್ಟಿಯನ್ನು ನೀಡಬೇಕಾಗಿತ್ತು. ಆಗ ಕೋಲ್ಕರನು ಆ ಪಟ್ಟಿಗನುಸಾರ ಸರಕುಗಳನ್ನು ಪಟ್ಟಿಯಲ್ಲಿ ಸೇರಿರದ ಸರಕನ್ನು ವಶಪಡಿಸಿಕೊಳ್ಳಲಾಗುತ್ತಿತ್ತು. ಇಲ್ಲವೇ, ಅದಕ್ಕೆ ದುಪ್ಪಟ್ಟು ಸುಂಕ ವಿಧಿಸಲಾಗುತ್ತಿತ್ತು. ಅದರ ಹಿಂದಿನ ಬಂದರಿನಿಂದ ನೀಡಿದ ಕ್ಲಿಯರೆನ್ಸನ್ನು ಪರೀಕ್ಷಿಸಲಾಗುತ್ತಿತ್ತು. ರಫ್ತು ಅಥವಾ ಆಮದಿನ ಸರಕುಗಳನ್ನು ನೋಂದಾಯಿಸಿದ ದೋಣಿಗಳಲ್ಲೇ ಇಳಿಸಿಕೊಂಡು ಸುಂಕದ ಮನೆಯ ಸಮೀಪ ಅವುಗಳಿಗೆ ನಿಗದಿಪಡಿಸಿದ ಜಾಗದಲ್ಲೇ ಪೇರಿಸಿ ಇಡಬೇಕಿತ್ತು. ನಿಗದಿತ ಸುಂಕ ವಸೂಲಿಯ ಬಳಿಕ ಪುನಃ ಕೋಲ್ಕರನಿಗೆ ಸರಕಿನ ವಿವರ ಪಟ್ಟಿಯನ್ನು ನಿರ್ವಹಣಾ ಅಧಿಕಾರಿಯು ನೀಡಿ, ಕೋಲ್ಕರನು ಅದನ್ನು ಪುನಃ ಪರೀಕ್ಷಿಸುತ್ತಿದ್ದನು.[೧೪] ಆ ಬಳಿಕವಷ್ಟೇ ಕ್ಲಿಯರೆನ್ಸನ್ನು ನೀಡಲಾಗುತ್ತಿತ್ತು. ಸರಕುಗಳ ರಫ್ತು - ಆಮದು ಸಂಬಂಧಿತ ಪ್ರಕ್ರಿಯೆ, ಬಂದರುಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿತ್ತು. ಪ್ರತಿಯೊಂದು ಬಂದರದ ಲೆಕ್ಕ ಪತ್ರಗಳು ಒಂದೇ ಮಾದರಿಯದಾಗಿದ್ದು, ಪ್ರತಿನಿತ್ಯವೂ ಇವುಗಳಲ್ಲಿ ದಾಖಲಿಸು ವುದಲ್ಲದೆ, ಪ್ರತಿ ಪುಟಕ್ಕೂ ಕಲೆಕ್ಟರನ ಅಥವಾ ಅವನ ಡೆಪ್ಯುಟಿಯ ಸಹಿ ಇರುತ್ತಿತ್ತು. ಪ್ರತಿ ದಿನದ ಲೆಕ್ಕಪತ್ರಗಳು ಕೇಂದ್ರ ಕಛೇರಿಯನ್ನು ತಲುಪಬೇಕಾಗಿತ್ತು. ಮ್ಯಾನೇಜರ್, ಶಿರಸ್ತೇದಾರ ಹಾಗೂ ಗುಮಾಸ್ತರು ಲೆಕ್ಕಪತ್ರ ವಿಭಾಗದ ಹೊಣೆ ಹೊತ್ತಿದ್ದರು. ತಾಲೂಕಿಗೊಬ್ಬ ಮ್ಯಾನೇಜರ್ ನಿದ್ದು ಆತನ ಉಸ್ತುವಾರಿಯಲ್ಲಿ, ಶಿರಸ್ತೇದಾರ ಹಾಗೂ ಗುಮಾಸ್ತರು ಲೆಕ್ಕ ಪತ್ರಗಳನ್ನಿಡುತ್ತಿದ್ದರು. ಸಮುದ್ರ ವ್ಯಾಪಾರದ ಸೀಜನ್ ಮುಗಿದ ಬಳಿಕ ನಿತ್ಯ ರವಾನೆಯಾದ ಲೆಕ್ಕಪತ್ರಗಳನ್ನು ಹಾಗೂ ಒಟ್ಟು ವ್ಯವಹಾರದ ಲೆಕ್ಕವನ್ನು ತಾಳೆ ನೋಡಲಾಗುತ್ತಿತ್ತು. ೧೮೬೦ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ೪ ಮುಖ್ಯ ಬಂದರುಗಳ ಆಗಿನ ಆಡಳಿತ ಖರ್ಚು ಹಾಗೂ ಮಾಡಬೇಕಾದ ಮಿತವ್ಯಯದ ಬಗ್ಗೆ ಸರಕಾರ ನೀಡಿದ ಮಾಹಿತಿ ಹೀಗಿದೆ.[೧೫]

ಕ್ರಮಸಂಖ್ಯೆ	ಬಂದರು	ಆಗಿನ ಆಡಳಿತ ಖರ್ಚು	ಸೂಚಿಸಲಾದ ಖರ್ಚು
		ರೂ.	ರೂ.
೧	ಮಂಗಳೂರು	೩೨೨	೨೭೪
೨	ಬೇಕಲ	೧೨೧	೫೫
೩	ಉಡುಪಿ	೫೨	೫೫
೪	ಬಾರ್ಕೂರು	೫೮	೧೭೦
	ಒಟ್ಟು	೫೫೩	೫೫೪

ಮಂಗಳೂರು ಬಂದರದಲ್ಲಿ ಕಾಫಿಯ ರಫ್ತಿನಲ್ಲಿ ಉಂಟಾದ ಗಣನೀಯ ಹೆಚ್ಚಳವನ್ನು ಗಮನಿಸಿಯೂ ಸರಕಾರ ನೀಡಿದ ಮಿತವ್ಯಯ ಸಲಹೆಗಳು ವಿಚಿತ್ರವೆನಿಸುತ್ತದೆ. ಲೋಕೋಪಯೋಗಿ ಇಲಾಖೆಯ ೧೮೬೫ರ ವರದಿಯೊಂದು ನಗರ ಮತ್ತು ಕೊಡಗುಗಳಲ್ಲಿ ಕಾಫಿ ಎಸ್ಟೇಟುಗಳು ಹೆಚ್ಚುತ್ತಿರುವ ಹಾಗೂ ಮಂಜರಾಬಾದ್ ಮತ್ತು ಸಂಪಾಜೆ ಘಾಟಿಗಳ ಮೂಲಕ ರಫ್ತಿಗೆಂದು ಮಂಗಳೂರು ಬಂದರಿಗೆ ಸಾಗಿಸಲ್ಪಡುತ್ತಿರುವ ಕಾಫಿಯ ಪ್ರಮಾಣದಲ್ಲಿನ ಹೆಚ್ಚಳದ ಕುರಿತು ಹಾಗೂ ಮಂಗಳೂರು ಬಂದರು ಕರಾವಳಿಯಲ್ಲೇ ಕಾಫಿ ರಫ್ತು ಮಾಡುವ ಅತಿದೊಡ್ಡ ಬಂದರಾಗುತ್ತಿರುವ ಬಗ್ಗೆ ಸರಕಾರದ ಗಮನ ಸೆಳೆದಿತ್ತು.[೧೬] ಸಮುದ್ರ ವ್ಯಾಪಾರ ಸುಂಕವೇ ಸರಕಾರಕ್ಕೆ ಅತಿದೊಡ್ಡ ಆದಾಯ ಮೂಲ ವಾಗುತ್ತಿರುವ ಸಂದರ್ಭದಲ್ಲೂ ವ್ಯಾಪಾರಿಗಳ ಸಮಸ್ಯೆಗಳಿಗೆ ಕಿವಿಗೊಡದೆ, ಬಂದರು ಸುಧಾರಣೆಯತ್ತ ದಿವ್ಯ ನಿರ್ಲಕ್ಷ್ಯ ತೋರುತ್ತಾ, ಆಡಳಿತ ವ್ಯವಸ್ಥೆಯ ಖರ್ಚನ್ನು ಮಿತಗೊಳಿಸಲು ಸರಕಾರ ನೀಡಿದ ಸೂಚನೆಗಳನ್ನು ಗಮನಿಸಿದಾಗ ವಸಾಹತುಶಾಹಿ ಸರಕಾರದ ಸಾಮಾನ್ಯ ಧೋರಣೆಯನ್ನೇ ಇದು ಪ್ರತಿಬಿಂಬಿಸುತ್ತದೆ ಎನ್ನಬಹುದೇನೋ !

ಮಂಗಳೂರು ಬಂದರು ಮತ್ತು ವ್ಯಾಪಾರ

೧೯ನೇ ಶತಮಾನದ ಆದಿಯಲ್ಲಿ ಅಕ್ಕಿ ಇಲ್ಲಿನ ಪ್ರಮುಖ ರಫ್ತಿನ ಸರಕಾಗಿದ್ದು ಕರ್ನಾಟಕ ಕರಾವಳಿಯಿಂದ ಮಸ್ಕತ್, ಗೋವಾ, ಮುಂಬೈ ಮತ್ತು ಮಲಬಾರ್‌ಗಳಿಗೆ ರಫ್ತಾಗುತ್ತಿದ್ದ ಒಟ್ಟು ಪ್ರಮಾಣದ $^{3}/_{4}$ ಅಂಶದಷ್ಟು ಇಲ್ಲಿಂದಲೇ ರಫ್ತಾಗುತ್ತಿತ್ತು. ಅಡಿಕೆ, ಕಾಳುಮೆಣಸು, ಶ್ರೀಗಂಧ, ಗೇರುಬೀಜ, ಅರಿಶಿನ, ಮರಮಟ್ಟು ಸಂಬಾರಜೀನಸು, ತೆಂಗಿನಕಾಯಿ, ತೆಂಗಿನಕಾಯಿ ನಾರು, ಹೊಗೆಸೊಪ್ಪು, ಚರ್ಮ ಮತ್ತು ಕೊಂಬುಗಳು ಇನ್ನಿತರ ರಫ್ತಿನ ವಸ್ತುಗಳಾಗಿದ್ದುವು. ೧೮೪೦ರ ಬಳಿಕ ಇಲ್ಲಿಂದ ಕಾಫಿಯ ರಫ್ತು ಹಚ್ಚಿ, ಅಕ್ಕಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮುಂಬೈಗೆ ಮತ್ತು ಅಲ್ಲಿಂದ ಇಂಗ್ಲೆಂಡಿಗೆ ರಫ್ತಾಗುತ್ತಿತ್ತು.

ಚೀನಾ ಮತ್ತು ಬಂಗಾಳದಿಂದ ಆಮದು ಮಾಡಿಕೊಳ್ಳುತ್ತಿದ್ದ ಕಚ್ಚಾ ರೇಷ್ಮೆಯು ಘಟ್ಟದ ಮೇಲಿನ ರೇಷ್ಮೆ ತಯಾರಕರಿಗೆ, ಗೋವಾ ಮತ್ತು ಮುಂಬೈಯಿಂದ ಸ್ಥಳೀಯ ಅವಶ್ಯಕತೆಗಳಿಗೆಂದು ಉಪ್ಪು, ಬಂಗಾಳದಿಂದ ಸಕ್ಕರೆ, ಸೂರತ್‌ನಿಂದ ಎಣ್ಣೆ ಮತ್ತು ತುಪ್ಪ, ಕೃಷಿ ಉಪಕರಣಗಳು, ಧಾನ್ಯಗಳು, ಹತ್ತಿ ಮತ್ತು ಉಣ್ಣೆಯ ಬಟ್ಟೆಗಳು, ಮಸ್ಕತ್‌ನಿಂದ ಕೆಂಪು ಬಣ್ಣ, ಅರೇಬಿಯಾದಿಂದ ಒಣ ಖರ್ಜೂರ ಮುಂತಾದುವುಗಳು ಪ್ರಮುಖ ಆಮದಿನ ಸರಕುಗಳಾಗಿದ್ದುವು. ಇವಲ್ಲದೆ, ಯುರೋಪಿನಿಂದ ಕೆಲವು ಸರಕುಗಳನ್ನು ಮುಖ್ಯವಾಗಿ ಯುರೋಪಿಯನ್ ಅಧಿಕಾರಿಗಳ ಹಾಗೂ ಸೈನಿಕರ ಬಳಕೆಗಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು.[೧೭]

ಟಿಪ್ಪೂನ ಆಳ್ವಿಕೆಯಲ್ಲಿ ಮಂಗಳೂರು ಬಂದರದಲ್ಲಿ ವ್ಯಾಪಾರ ಚಟುವಟಿಕೆಗಳು ಕುಂಠಿತಗೊಂಡಿದ್ದು, ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿ ಸರಕಾರವು ಟಿಪ್ಪೂನ ಪತನಾನಂತರ ಈ ಪ್ರದೇಶವನ್ನು ವಶಪಡಿಸಿಕೊಂಡ ಬಳಿಕ, ಈ ಬಂದರದಲ್ಲಿ ವ್ಯಾಪಾರ ವಹಿವಾಟು ಗಣನೀಯವಾಗಿ ಚೇತರಿಸಿಕೊಂಡಿತೆನ್ನುವುದನ್ನು ಮಿಲ್ಬರ್ನನು ಈ ಕೆಳಗಿನಂತೆ ದಾಖಲಿಸಿದ್ದಾನೆ.[೧೮]

ವರ್ಷ	ಆಮದು (ಪಗೋಡಾಗಳಲ್ಲಿ)	ರಫ್ತು (ಪಗೋಡಾಗಳಲ್ಲಿ)
೧೭೯೭-೯೮	೮೯,೮೪೨	೬,೪೫,೮೯೯
೧೭೯೮-೯೯	೬೦,೫೦೮	೬,೭೬,೩೪೨
೧೭೯೯-೧೮೦೦	೪,೨೪,೪೩೦	೮,೮೫,೦೫೭
೧೮೦೦-೧೮೦೧	೩,೬೧,೦೪೦	೧೨,೬೭,೪೫೪

(ಇದು ಕರಾವಳಿಯ ಬಂದರುಗಳೊಳಗಿನ ಹಾಗೂ ಸಮುದ್ರ ವ್ಯಾಪಾರವನ್ನು ಒಳಗೊಂಡಿತ್ತು. ೧ ಪಗೋಡ=೩ ೧/೨ ರೂಪ್ಯಾ)

೧೯ನೇ ಶತಮಾನದ ಪೂರ್ವಾರ್ಧದಲ್ಲಿ ದ.ಕನ್ನಡ ಕರಾವಳಿಯಲ್ಲಿನ ಕೆಲವು ಬಂದರುಗಳಲ್ಲಿನ ವ್ಯಾಪಾರ ಗಣನೀಯ ಪ್ರಮಾಣದಲ್ಲಿದ್ದು, ಉಳಿದವುಗಳು ನಿಧಾನವಾಗಿ ತಮ್ಮ ಮಹತ್ವವನ್ನು ಕಳೆದುಕೊಂಡವು. ಕಾಪು, ಪಡುಬಿದ್ರಿ ಮತ್ತು ನ್ಯಾಕನಕಟ್ಟೆ ೧೮೬೨-೬೩ರೊಳಗೆ ತಮ್ಮ ಮಹತ್ವವನ್ನು ಕಳೆದುಕೊಂಡವು. ಮಲ್ಪೆ, ಮುಲ್ಕಿ, ಹಂಗಾರಕಟ್ಟೆ ಮತ್ತು ಗಂಗೊಳ್ಳಿ ಚೇತರಿಕೆಯ ಲಕ್ಷಣಗಳನ್ನು ತೋರಿಸಿದವು. ಆದರೆ ಮಂಗಳೂರು ಬಂದರು ತನ್ನೆಲ್ಲ ಕೊರತೆಗಳ ಹೊರತಾಗಿಯೂ ಆಮದು ಮತ್ತು ರಫ್ತು ವಹಿವಾಟಿನಲ್ಲಿ ಬಹಳಷ್ಟು ಹೆಚ್ಚಳವನ್ನು ತೋರಿಸಿತು. ೧೯ನೇ ಶತಮಾನದ ಕೊನೆಗೆ ದ.ಕನ್ನಡ ಕರಾವಳಿಯ ಬಂದರುಗಳಲ್ಲಿ ಒಟ್ಟು ಸುಮಾರು ೧೫೦ ಲಕ್ಷಗಳಷ್ಟು ಮೌಲ್ಯದ ಸಮುದ್ರ ವ್ಯಾಪಾರ ನಡೆಯುತ್ತಿದ್ದು, ಅದರಲ್ಲಿ ೩/೪ ರಫ್ತು ವ್ಯಾಪಾರ ಮಂಗಳೂರು ಬಂದರದಲ್ಲೇ ನಡೆಯುತ್ತಿತ್ತು. ಉಳಿದಂತೆ ಕುಂದಾಪುರ (ಗಂಗೊಳ್ಳಿ), ಬಾರ್ಕೂರು (ಹಂಗಾರಕಟ್ಟೆ) ಮತ್ತು ಉಡುಪಿ (ಮಲ್ಪೆ)ಯಲ್ಲಿ ಮಂಗಳೂರು ಬಂದರದ ವಹಿವಾಟಿನ ಸುಮಾರು ೧/೧೦ ರಷ್ಟು, ಕಾಸರಗೋಡು, ಕುಂಬಳೆ ಮತ್ತು ಮಂಜೇಶ್ವರಗಳಲ್ಲಿ ಸುಮಾರು ೧ ರಿಂದ ೨ ಲಕ್ಷದಷ್ಟು ಮೌಲ್ಯದ ಮತ್ತು ಬೈಂದೂರಿನಲ್ಲಿ ಸುಮಾರು ೧ ಲಕ್ಷಕ್ಕಿಂತಲೂ ಕಮ್ಮಿ ವ್ಯಾಪಾರ ನಡೆಯುತ್ತಿತ್ತು.[೧೯]

೧೮೨೦-೨೧ ರಿಂದ ೧೯೨೧-೨೨ ರ (ಕೊನೆಯ ೫ ವರ್ಷಗಳ ಸರಾಸರಿ) ಅವಧಿಯಲ್ಲಿ ಮಂಗಳೂರು ಬಂದರದಲ್ಲಿನ ರಫ್ತು ಮತ್ತು ಆಮದು ವಹಿವಾಟಿನ ಮೌಲ್ಯ ಇಂತಿದೆ. [೨೦]

	ರಫ್ತು (ರೂಪಾಯಿಗಳಲ್ಲಿ)	ಆಮದು (ರೂಪಾಯಿಗಳಲ್ಲಿ)
೧೮೨೦-೨೧	೮,೭೨,೬೦೯	೨,೦೬,೬೦೩
೧೮೫೧-೫೨	೧೪,೩೨,೬೨೨	೧೦,೬೫,೦೩೧
೧೮೬೨-೬೩	೪೨,೭೫,೧೮೦	೮,೧೫,೬೦೯
೧೯೨೧-೨೨	೧,೮೬,೬೪,೨೪೮	೧,೦೨,೪೯,೭೨೨

೨೦ನೇ ಶತಮಾನದ ಆದಿಭಾಗದಲ್ಲಿ ಇಲ್ಲಿನ ರಫ್ತಿನಲ್ಲಿ ಕಾಫಿ ಮುಖ್ಯವಾಗಿದ್ದು ಸಮಾರು ೧ ಕೋಟಿ ರೂ. ಮೌಲ್ಯದಷ್ಟು ಇಲ್ಲಿಂದ ರಫ್ತಾಗುತ್ತಿದ್ದು, ತೆಂಗಿನಕಾಯಿ, ಕೊಬ್ಬರಿ, ಅಕ್ಕಿ, ಅಡಿಕೆ, ಎಣ್ಣೆ, ಏಲಕ್ಕಿ, ಕಾಳುಮೆಣಸು, ಹೊಗೆಸೊಪ್ಪು, ಹತ್ತಿ, ಬಟ್ಟೆ, ಹೆಂಚು, ಮರ ಮಟ್ಟು, ಮೀನು ಇತ್ಯಾದಿ ರಫ್ತಿನ ಸರಕುಗಳಾಗಿದ್ದುವು. ನೇಯ್ದ ಬಣ್ಣದ ಬಟ್ಟೆಗಳು, ಹಣ್ಣು, ಮೀನು, ಧಾನ್ಯಕಾಳುಗಳು, ಗೋಧಿ, ಕಾಗದ , ಉಪ್ಪು, ಸಂಬಾರ ಜೀನಸು, ಸಕ್ಕರೆ, ನಾರು, ಮರಮಟ್ಟು, ಗಾಜು, ಇತ್ಯಾದಿ ಆಮದಿನ ಮುಖ್ಯ ವಸ್ತುಗಳಾಗಿದ್ದವು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಅಂತರ್ ಬಂದರು ಸಾಗಾಟವೂ ಆಮದು-ರಫ್ತು ತಖ್ತೆಗಳಲ್ಲಿ ಸೇರಿಸಲ್ಪಟ್ಟಿರುವುದು. ಹಾಗಾಗಿ ಮಂಗಳೂರು ಬಂದರದ ವ್ಯಾಪಾರ ವಹಿವಾಟಿನಲ್ಲಿ ಕರಾವಳಿಯ ಅಂತರ್ ಬಂದರು, ಅಂತರ್ ಜಿಲ್ಲೆ ಅಂತರ್ ಪ್ರಾಂತ್ಯ ಹಾಗೂ ಅಂತರ್ ದೇಶೀಯ ಆಯಾಮಗಳನ್ನು ಕಾಣಬಹುದು. ೧೯ನೇ ಶತಮಾನದ ಕೊನೆಯ ೨ ದಶಕಗಳಲ್ಲಿ ಯುರೋಪಿನ ಜತೆ ನೇರ ಆಮದು ವಹಿವಾಟು ಇಲ್ಲಿ ಆರಂಭಗೊಂಡಿತ್ತು.[೨೧] ಸಮುದ್ರ ವ್ಯಾಪಾರದ ಸಮಯದಲ್ಲಿ ಅಂದರೆ, ಸೆಪ್ಟೆಂಬರ್ ನಿಂದ ಮೇ ತನಕ ವಾರಕ್ಕೊಮ್ಮೆ ಬ್ರಿಟಿಷ್ ಸ್ಟೀಮ್ ನೇವಿಗೇಶನ್ನಿನ ಉಗಿ ಹಡಗುಗಳು ಈ ಬಂದರಕ್ಕೆ ಬರುತ್ತಿದ್ದವೆನ್ನುವುದು ಈ ಬಂದರದ ವಹಿವಾಟಿನ ಹೆಚ್ಚಳಕ್ಕೆ ಹಾಗೂ ನೇರ ಅಂತರ್ದೇಶೀಯ ವ್ಯಾಪಾರದ ಆಯಾಮವನ್ನು ಪಡೆದಿರುವುದಕ್ಕೂ ಸಾಕ್ಷಿಯಾಗಿದೆ. [೨೨]

ಸುಮಾರು ೧೮೪೦ರ ತನಕವೂ ಮಂಗಳೂರು ಬಂದರದ ರಫ್ತಿನ ಸರಕುಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದ ಅಕ್ಕಿ, ಆ ಬಳಿಕ ಕಾಫಿಗೆ ಈ ಸ್ಥಾನವನ್ನು ಬಿಟ್ಟುಕೊಟ್ಟಿದ್ದು ಐತಿಹಾಸಿಕ ಬದಲಾವಣೆ. ಬಂಗಾಳದ ಕಡಿಮೆ ಬೆಲೆಯ ಅಕ್ಕಿ, ಅರಬ್ ವ್ಯಾಪಾರಿಗಳು ಇಲ್ಲಿಂದ ಬಂಗಾಳದ ಕಡೆಗೆ ಧಾವಿಸುವಂತೆ ಮಾಡಿತ್ತು. ೧೮೩೫ ರಲ್ಲಿ ಭಾರತದ ಕಾಫಿಯ ಮೇಲಿನ ಸುಂಕವು ವೆಸ್ಟ್ ಇಂಡೀಸಿನ ಕಾಫಿಯ ಮೇಲಿನ ಸುಂಕಕ್ಕೆ ಸಮನಾದ ಬಳಿಕ ಇಂಗ್ಲೆಂಡಿನಲ್ಲಿ ಭಾರತದ ಕಾಫಿಯ ಸೇವನೆ ಹೆಚ್ಚಾಯಿತು.[೨೩] ೧೮೬೦ ರಲ್ಲಿ ಕಾಫಿಯ ರಫ್ತು ಸುಂಕರಹಿತವಾದ ಮೇಲಂತೂ ಕಾಫಿಯ ರಫ್ತು ಬಹಳಷ್ಟು ಹೆಚ್ಚಿತು. ಈ ಕೆಳಗೆ ನೀಡಿರುವ ಪಟ್ಟಿಯಿಂದ ಕಾಫಿಯ ರಫ್ತಿನಲ್ಲಾದ ಹೆಚ್ಚಳವನ್ನು ಕಾಣಬಹುದು.

ಮಂಗಳೂರು ಬಂದರದಲ್ಲಿ ಕಾಫಿಯ ರಫ್ತು [೨೪]

೧೮೪೭-೪೮	೧೮೬೪-೬೫	೧೯೨೫-೨೬ (ಹಿಂದಿನ ೫ ವರ್ಷಗಳ ಸರಾಸರಿ)
ರೂ.೮೫,೩೨೪	ರೂ.೧೭,೧೬,೨೩೯	ರೂ.೧,೦೯,೫೫,೦೨೨

ಕೊಡಗಿನಿಂದ ಮಂಗಳೂರಿಗೆ ಬಂದ ಕಾಫಿ, ಮುಂಬೈ ಮುಖಾಂತರ ಇಂಗ್ಲೆಂಡ್ ಮತ್ತು ಫ್ರಾನ್ಸಿಗೂ, ಪರ್ಶಿಯ, ಅರೇಬಿಯಾ ಮತ್ತು ಭಾರತದ ಬೇರೆ ಬೇರೆ ಪ್ರದೇಶಗಳಿಗೂ ರಫ್ತಾಗುತ್ತಿತ್ತು.

ಅಕ್ಕಿಯ ರಫ್ತಿನಲ್ಲಿ ಅರ್ಧಕ್ಕಿಂತೂ ಹೆಚ್ಚು ಮಲಬಾರಿಗೆ ಹಾಗೂ ಉಳಿದಂತೆ ಪರ್ಶಿಯಾ, ಅರೇಬಿಯಾ ಹಾಗೂ ಝೂಂಝಿಬಾರಿಗೆ ರವಾನೆಯಾಗುತ್ತಿತ್ತು.

೧೮೨೦ರ ಸುಮಾರಿಗೆ ದ.ಕ. ಜಿಲ್ಲೆಯಲ್ಲಿ ಆಹಾರ ಬೆಳೆಗಳಿಗಿಂತ ವಾಣಿಜ್ಯ ಬೆಳೆಗಳ ಕೃಷಿಯತ್ತ ಹೆಚ್ಚು ಒಲವು ಮೂಡಿದ್ದನ್ನು ಕಾಣಬಹುದು. ದ.ಕ. ಜಿಲ್ಲೆಯ ಉತ್ತರಭಾಗದಲ್ಲಿ ತೆಂಗು ಹಾಗೂ ದಕ್ಷಿಣದಲ್ಲಿ ಅಡಿಕೆ ಹಾಗೂ ಕಾಳು ಮೆಣಸು ಕೃಷಿ ಹೆಚ್ಚಲಾರಂಭಿಸಿತ್ತು. ಈ ಕರಾವಳಿಯ ತೆಂಗಿನಕಾಯಿ ಹಾಗೂ ಕೊಬ್ಬರಿಗೆ ಯುರೋಪಿನ ಮಾರುಕಟ್ಟೆಯಲ್ಲಿ ಬೇಡಿಕೆ ಏರುತ್ತಿದ್ದುದು ತೆಂಗಿನ ಕೃಷಿ ಹೆಚ್ಚಳಕ್ಕೆ ಪೂರಕವಾಯಿತು. [೨೫]

ಕಾಥೇವಾಡ್, ಕಛ್ ಮತ್ತು ಮುಂಬೈಗೆ ಅಡಿಕೆ ಪ್ರಮಣದಲ್ಲಿ ರಫ್ತಾಗುತ್ತಿತ್ತು. ಗಣನೀಯ ಪ್ರಮಾಣದಲ್ಲಿ ಮೈಸೂರಿನ ಶ್ರೀಗಂಧವೂ ಮಂಗಳೂರು ಬಂದರದಿಂದ ಮುಂಬೈಗೆ ರಫ್ತಾಗುತ್ತಿತ್ತು. ಅಮೀನ್ ದೀವಿ ದ್ವೀಪಗಳಿಂದ ತೆಂಗಿನನಾರು ಆಮದಾಗುತ್ತಿದ್ದು, ಇಲ್ಲಿಂದ ಮುಂಬೈ ಹಾಗೂ ಕಲ್ಕತ್ತಾಕ್ಕೆ ರಫ್ತಾಗುತ್ತಿತ್ತು. ಇಲ್ಲಿಂದ ಅಕ್ಕಿ ಅಮೀನ್ ದೀವಿಗೆ ರಫ್ತಾಗುತ್ತಿತ್ತು. ವಿದೇಶಗಳಿಂದ ಆಮದಾಗುತ್ತಿದ್ದ ಸರಕುಗಳಲ್ಲಿ ಇಂಗ್ಲೆಂಡಿನಿಂದ ಕಲ್ಲಿದ್ದಲು, ಉಣ್ಣೆಬಟ್ಟೆ, ಬಣ್ಣದ ಬತ್ತಿ, ಜವುಳಿ, ನೇಯ್ದ ನೂಲು ಹಾಗೂ ಯಂತ್ರೋಪಕರಣಗಳು, ಅಮೇರಿಕದಿಂದ ಸೀಮೆಎಣ್ಣೆ, ಪರ್ಶಿಯಾ ಹಾಗೂ ಅರೇಬಿಯಾದಿಂದ ಖರ್ಜೂರ, ಪೇಪರು, ಗಾಜು ಮುಂತಾದವುಗಳು ಮುಖ್ಯವಾಗಿದ್ದುವು. ಒಟ್ಟಿನಲ್ಲಿ, ದ.ಕ. ಜಿಲ್ಲೆಯ ಸಮುದ್ರವ್ಯಾಪಾರದ $^3/_4$ ಅಂಶದಷ್ಟು ಮಂಗಳೂರು ಬಂದರದಲ್ಲೇ ನಡೆಯುತ್ತಿದ್ದು, ವಿದೇಶೀ ಆಮದು ಪ್ರಮಾಣ ಒಂದೇ ತೆರನಾಗಿದ್ದು, ಕರಾವಳಿಯ ಅಂತರ್ ಬಂದರು ಆಮದು - ರಫ್ತು ವ್ಯಾಪಾರ ಹೆಚ್ಚುತ್ತಲೇ ಇತ್ತು. ಮಂಗಳೂರು ಬಂದರದಲ್ಲಿ ೧೯೨೫ - ೨೬ ರ ಹಿಂದಿನ ೫ ವರ್ಷಗಳ ಸರಾಸರಿ ಆಮದು ರೂ. ೯೮,೨೫,೫೪೬ ರಫ್ತಿದ್ದು, ರಫ್ತು ವ್ಯವಹಾರ ರೂ. ೨,೧೪,೩೬,೫೨೭ ಮೌಲ್ಯದ್ದಾಗಿತ್ತು.[೨೬]

ಉಪಸಂಹಾರ

ನೂರು ವರ್ಷಗಳ ಅವಧಿಯಲ್ಲಿ ಶೇ ೨೧ ರಷ್ಟು ಹೆಚ್ಚಿದ ರಫ್ತು ವ್ಯವಹಾರ ವಸಾಹತುಶಾಹಿ ಸರಕಾರಕ್ಕೆ ಲಾಭದಾಯಕವೇ ಆಗಿದ್ದರೂ, ಬಂದರನ್ನು ಸುಸ್ಥಿತಿಯಲ್ಲಿಡುವ, ಒಟ್ಟು ನಿರ್ವಹಣೆಯ ಹೆಚ್ಚುವರಿ ಖರ್ಚಿನ ಪ್ರಸ್ತಾವಗಳು ಅದಕ್ಕೆ ರುಚಿಸುತ್ತಿರಲಿಲ್ಲ. ಮುಂಬೈ - ಮಂಗಳೂರು ಬಂದರುಗಳಿಗೆ ನೇರ ಸಮುದ್ರ ಸಂಪರ್ಕವಿದ್ದು, ಲಾಭದಾಯಕ ವ್ಯವಹಾರವಿದ್ದರೂ, ಮಂಗಳೂರು ಬಂದರು ಸರಕಾರಕ್ಕೆ ಆದಾಯ ದೃಷ್ಟಿಯಿಂದ ಅನುಕೂಲವೆನಿಸಿತ್ತೇ ಹೊರತು ಅಭಿವೃದ್ಧಿಯ ದೂರಗಾಮೀ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯ ತಾಣವೆನ್ನಿಸಲಿಲ್ಲ. ರಸ್ತೆ, ಬಂದರು, ಹಡಗುಕಟ್ಟೆಗಳು ಸರಕಾರಕ್ಕೆ ಆರ್ಥಿಕ ಅನುಕೂಲಗಳೇ ಹೊರತು ಹೂಡಿಕೆಯ ಅನಿವಾರ್ಯಗಳಾಗಿರಲಿಲ್ಲ. ಈ ಜಿಲ್ಲೆಯಲ್ಲಿ ಕಂಪೆನಿ ಸರಕಾರ ಎದುರಿಸಿದ **ಕೂಟ ದಂಗೆ** (೧೮೩೦) ಮತ್ತು **ಕಲ್ಯಾಣಪ್ಪನ ದಂಗೆಯ** (೧೮೩೭) ಬಳಿಕ, ಅಧಿಕಾರದ ಸುರಕ್ಷತೆಗಾಗಿ, ಸೈನ್ಯದ ತುಕಡಿಗಳ ಕ್ಷಿಪ್ರ ಸಂಚಾರಕ್ಕಾಗಿ ಸರಕಾರ ರಸ್ತೆಗಳ ಅಭಿವೃದ್ಧಿಯನ್ನು ಅನಿವಾರ್ಯವಾಗಿ ಕೈಗೊಂಡಿತು. ಕಂಪೆನಿಯಿಂದ ಅಧಿಕಾರ ವರ್ಗಾವಣೆಯಾಗಿ ಬ್ರಿಟಿಷ್ ಸರಕಾರವೇ ಆಳ್ವಿಕೆಯನ್ನು ವಹಿಸಿಕೊಂಡಾಗಲೂ ಪರಿಸ್ಥಿತಿ ಬದಲಾಗಲಿಲ್ಲ. ಪೂರ್ವ ಸಮುದ್ರದ ಪ್ರಕ್ಷುಬ್ಧತೆಗೆ ಹೋಲಿಸಿದರೆ ಪಶ್ಚಿಮ ಸಮುದ್ರ ಪ್ರಯಾಣ ಹೆಚ್ಚು ಸುರಕ್ಷಿತವಿತ್ತು. ನೈಋತ್ಯ ಮಾರುತಗಳಿಗಷ್ಟೇ ಹೆದರುತಿದ್ದ ವ್ಯಾಪಾರಿಗಳು ಸೆಪ್ಟಂಬರ್‌ನಿಂದ ಮೇ ತನಕವೂ ಇಲ್ಲಿ ಸಮುದ್ರ ವ್ಯಾಪಾರ ಕೈಗೊಳ್ಳುತ್ತಿದ್ದರು. ಮದ್ರಾಸಿನಲ್ಲಿರುವಂತಹ ಕೃತಕ ಬಂದರಿನಂತೆ ಮಂಗಳೂರಿನಲ್ಲಿ ಸರ್ವ ಬಂದರನ್ನು ನಿರ್ಮಿಸುವ ಸಲಹೆ ಸೂಚನೆಗಳಿದ್ದರೂ, ಸರಕಾರ ಅದಕ್ಕೆ ಮನಸ್ಸು ಮಾಡದೆ, ಬಂದರದ ಗರಿಷ್ಠ ಉಪಯೋಗ ಪಡೆಯಲು ಸಾಧ್ಯವಾಗುವಂತೆ ಒಳಭಾಗ ಹಾಗೂ ಪ್ರವೇಶವನ್ನು ವಿಸ್ತರಿಸುವಷ್ಟಕ್ಕೇ ಗಮನ ನೀಡಿತು.

ಒಂದು ವೇಳೆ ಇದು ಸರ್ವಋತು ಬಂದರಾಗಿ ಬ್ರಿಟಿಷ್ ಸರಕಾರದ ಆಡಳಿತಕಾಲದಲ್ಲಿ ರೂಪುಗೊಂಡಿದ್ದಲ್ಲಿ ಈ ಪ್ರದೇಶ ವಿಡೀ ಹೆಚ್ಚಿನ ಆರ್ಥಿಕ ಬೆಳವಣಿಗೆಯನ್ನು ಕಾಣುತ್ತಿತ್ತು. "ಕೆನರಾ ಎಂದೂ ಕೈಗಾರಿಕಾ ಪ್ರದೇಶವಾಗುವುದಿಲ್ಲ, ಏಕೆಂದರೆ ಅವುಗಳಿಗೆ ಬೇಕಾದ ಕಚ್ಚಾ ವಸ್ತುಗಳೂ ಇಲ್ಲಿ ತಯಾರಾಗುವುದಿಲ್ಲ" ಎಂದು ೧೮೦೦ರಲ್ಲಿ ಅಂದಿನ ಜಿಲ್ಲಾಧಿಕಾರಿ ಥಾಮಸ್ ಮನ್ರೋ ಆಡಿದ ಮಾತು ಆಗಿನ ಸರಕಾರಕ್ಕೆ ಸರಿ ಎನ್ನಿಸಿ, ಬಂದರದ ಅವಜ್ಞೆಗೆ ಕಾರಣವಾಗಿರಬಹುದು. ೧೯ನೇ ಶತಮಾನದ ಅಂತ್ಯದಲ್ಲೂ ಅಭಿವೃದ್ಧಿಯನ್ನು ಕಾಣದ್ದರಿಂದ ಮಂಗಳೂರು ಆರ್ಥಿಕ ಅಭಿವೃದ್ಧಿಯಲ್ಲಿ ಒಂದು ಶತಮಾನದಷ್ಟು ಹಿಂದುಳಿದು ಕರಾವಳಿಯ ಇನ್ನೊಂದು ಮುಂಬಯಿಯಾಗುವ ಅವಕಾಶದಿಂದ ವಂಚಿತವಾಯಿತು ಎನ್ನಬಹುದೇನೋ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧) ಸೂರ್ಯನಾಥ ಕಾಮತ್., "ಟ್ರೇಡ್ ಎಟ್ ದ ಕನ್ನಡ ಪೋರ್ಟ್ಸ್, ೧೫೦೦-೧೮೦೦", ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಸಂ. LXXI, ಸಂ. ೩೪, ಜುಲೈ-ಡಿಸೆಂಬರ್, ೧೯೮೦, ಪು. ೧೭೫-೧೭೬., ಬಿ.ಎಸ್. ಶಾಸ್ತ್ರಿ ಕೆಳದಿಯ ಅರಸರು ಹಾಗೂ ಪೋರ್ಚುಗೀಸರು, ಪು. ೬೩, ೭೪.

೨. ಪ್ರೊಸೀಡಿಂಗ್ಸ್ ಆಫ್ ದಿ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ, ೨೮-೮-೧೮೦೦, ಸಂ. ೨೬೧, ಪು. ೭೫೦೪-೭೫೦೫.

೩. ದ. ಸ್ಟಾಂಡಿಂಗ್ ಆರ್ಡರ್ಸ್ ಆಫ್ ದ ಬೋರ್ಡ್ ಆಫ್ ರೆವಿನ್ಯೂ ಫ್ರಮ್ ೧೮೨೦ ಟು ೧೮೬೫, ಪು ೨೬೦-೨೬೪.

೪. ಕೆ.ಎನ್. ಕೃಷ್ಣಸ್ವಾಮಿ ಅಯ್ಯರ್ ಮತ್ತು ಜೆ.ಎಫ್. ಹಾಲ್, "ಸ್ಟಾಟಿಸ್ಟಿಕಲ್ ಎಪೆಂಡಿಕ್ಸ್ ಟುಗೆದರ್ ವಿದ್ ಎ ಸಪ್ಲಿಮೆಂಟ್ ಟು ದ ಟು ಡಿಸ್ಟ್ರಿಕ್ಟ್ಸ್ ಮ್ಯಾನ್ಯುಯೆಲ್ಸ್ ಫಾರ್ ಸೌತ್ ಕೆನರಾ ಡಿಸ್ಟ್ರಿಕ್ಟ್ ೧೯೩೩", ಪು. ೨೯೭

೫. ಬುಖಾನನ್, ಫ್ರಾನ್ಸಿಸ್. ಎಚ್., ಎ. ಜರ್ನಿ ಫ್ರಮ್ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು, ಕೆನರಾ ಎಂಡ್ ಮಲಬಾರ್, ಸಂ. ೩, ಪು. ೫೮.

೬. ಮಲಬಾರ್ ಮತ್ತು ಕೆನರಾದ ಸಿವಿಲ್ ಇಂಜಿನಿಯರ್ ಡೈರಿ, ಸೆಪ್ಟೆಂಬರ್ ೧೮೩೭, ೭ನೇ ವಿಭಾಗದ ಸಿವಿಲ್ ಇಂಜಿನಿಯರ್‌ರ ವರದಿ ತಾ. ೯-೧-೧೮೪೪, ಕಲೆಕ್ಟೋರೇಟ್ ರೆಕಾರ್ಡ್ಸ್, ಸೌತ್ ಕೆನರಾ, ಕ್ರಮಸಂಖ್ಯೆ ೫೨೧೮

೭. ಅದೇ

೮. ಅದೇ

೯. ಮಾರ್ಷಲ್ ಟಿ.ಇ. (ಸಂ), ಎ ಹ್ಯಾಂಡ್ ಬುಕ್ ಆಫ್ ಡೈರೆಕ್ಷನ್ಸ್ ಟು ದ ಪೋರ್ಟ್ಸ್ ಇನ್ ದ ಪ್ರೆಸಿಡೆನ್ಸಿ ಆಫ್ ಮದ್ರಾಸ್ ಎಂಡ್ ಸಿಲೋನ್, ಮದ್ರಾಸ್, ೧೮೮೩ ಪು. ೨೨೦.

೧೦. ಸೀ ಕಸ್ಟಂಸ್ ಪ್ರೊಸೀಡಿಂಗ್ಸ್ ಆಫ್ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ ೨೦-೧೦-೧೮೨೦, ಸಂ. ೪೯, ಪು. ೫೯೯.

೧೧. ಅದೇ, ಪು. ೫೯೯-೬೦೦

೧೨. ಮೆಕ್ಲೀನ್, ಸಿ.ಡಿ. (ಸಂ), ಮ್ಯಾನ್ಯುಯೆಲ್ ಆಫ್ ದ ಎಡ್ಮಿಸ್ಟ್ರೇಶನ್ ಆಫ್ ದ ಮದ್ರಾಸ್ ಪ್ರೆಸಿಡೆನ್ಸಿ, ೧೮೯೩, ಮದ್ರಾಸ್, ಪು. ೨೦೦.

೧೩. ಪ್ರೊಸೀಂಡಿಂಗ್ಸ್ ಆಫ್ ದ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ ೧೧-೧೧-೧೮೦೧ ಸಂ. ೩೦೨, ಪು. ೧೩, ೩೪೫

೧೪. ಪ್ರೊಸೀಂಡಿಂಗ್ಸ್ ಆಫ್ ದ ಮದ್ರಾಸ್ ಬೊರ್ಡ್ ಆಫ್ ರೆವಿನ್ಯೂ ೨೨-೧೦-೧೮೨೩ ಸಂ. ೪೯, ಪು. ೬೦೨-೬೦೩.

೧೫. ಪ್ರೊಸೀಂಡಿಂಗ್ಸ್ ಆಫ್ ದ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ ೭-೫-೧೮೬೦ ಸಂ. ೨೬೯.

೧೬. ರಿಪೋರ್ಟ್ ಆಫ್ ದ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಫಾರ್ ದ ಅಫೀಶಿಯಲ್ ಇಯರ್ ೧೮೬೪-೬೫, ಪ್ರೊಸೀಂಡಿಂಗ್ಸ್ ಆಫ್ ದ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ ಸಂ. ೬೩೯೦, ೧೦-೧೦-೧೮೬೫, ಪು. ೨೬.

೧೭. ಸ್ಟರಕ್ ಜಾನ್ (ಸಂ), ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುಯೆಲ್ಸ್, ಸೌತ್ ಕೆನರಾ, ಸಂ. ೧, ಮದ್ರಾಸ್, ೧೮೯೪, ಪು. ೨೨೦.

೧೮. ಮಿಲ್ಬರ್ನ್, ಓರಿಯಂಟಲ್ ಕಾಮರ್ಸ್, ಸಂ. ೧, ಲಂಡನ್, ೧೮೧೭, ಪು. ೩೧೮.

೧೯. ಸ್ಟರಕ್ ಜಾನ್ (ಸಂ), ಮೇಲೆ ಉಲ್ಲೇಖಿಸಿದೆ, ಪು. ೨೨೦

೨೦. ರಿಪೋರ್ಟ್ ಆನ್ ಎಕ್ಸ್‌ಟರ್ನಲ್ ಕಾಮರ್ಸ್, ಬೋರ್ಡ್ ಮಿಸಲೇನಿಯಸ್, ಸಂ. ೨೬೭, ರಿಪೋರ್ಟ್ಸ್ ಆನ್ ಇಂಪಾರ್ಟೆಂಟ್ ಪಬ್ಲಿಕ್ ವರ್ಕ್ಸ್ ಫಾರ್ ೧೮೫೧, ಮದ್ರಾಸ್, ಫೋರ್ಟ್ ಸೈಂಟ್ ಜಾರ್ಜ್ ಗೆಜೆಟ್ ಪ್ರೆಸ್, ೧೮೫೪, ಪು. ೨೦-೩೦, ಎಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಆಫ್ ದಿ ಮದ್ರಾಸ್ ಪ್ರೆಸಿಡೆನ್ಸಿ ಫಾರ್ ದ ಅಫೀಶಿಯಲ್ ಇಯರ್ ೧೮೬೨-೬೩. ಅಪೆಂಡಿಕ್ಸ್, ನಂ. XB ಮತ್ತು ಅಯ್ಯರ್ ಕೆ.ಎನ್.ಕೆ. ಮತ್ತು ಹಾಲ್. ಜೆ. ಎಫ್, ಮೇಲೆ ಉಲ್ಲೇಖಿಸಿದೆ, ಪು. ೫೮, ೭೪

೨೧. ಕೃಷ್ಣಾಸ್ವಾಮಿ ಅಯ್ಯರ್ ಮತ್ತು ಜೆ.ಎಫ್. ಹಾಲ್, ಮೇಲೆ ಉಲ್ಲೇಖಿಸಿದೆ. ಪು. ೨೯೮.

೨೨. ಅದೇ ಪು. ೩೪೯

೨೩. ರೊಮೇಶ್ ದತ್., ದ ಇಕಾನಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ. ೨, ಪು. ೭೨.

೨೪. ಸಿಲೆಕ್ಷನ್ಸ್ ಫ್ರಮ್ ದ ರೆಕಾಡ್ಸ್ ಆಫ್ ಮದ್ರಾಸ್ ಗವರ್ನಮೆಂಟ್ ರಿಪೋರ್ಟ್ಸ್ ಆನ್ ಡಿಸ್ಟ್ರಿಕ್ಟ್ ಫಾರ್ ೧೮೫೩, ರಿಪೋರ್ಟ್ಸ್ ಆನ್ ಆಪರೇಶನ್ಸ್ ಆಫ್ ಪಿ.ಡಬ್ಲ್ಯು.ಡಿ. ಫಾರ್ ದ ಅಫೀಶಿಯಲ್ ಇಯರ್ ೧೮೬೪-೬೫, ಸಂ. ೬೩೯೦ ಮತ್ತು ಅಯ್ಯರ್ ಕೆ.ಎನ್.ಕೆ. ಮತ್ತು ಹಾಲ್ ಜೆ.ಎಫ್. ಮೇಲೆ ಉಲ್ಲೇಖಿಸಿದೆ, ಪು. ೫೮-೭೪.

೨೫. ರಿಪೋರ್ಟ್ ಆಫ್ ಇ. ಮಾಲ್ಟಬ ಆನ್ ದ ಜಮಾಬಂದಿ ಆಫ್ ಸೌತ್ ಕೆನರಾ ಫಾರ್ ಫಸ್ಲಿ ೧೨೪೮, ಪು. ೪, ಪಾರಾ ೧೦.

೨೬. ಅಯ್ಯರ್ ಕೆ.ಎನ್.ಕೆ. ಮತ್ತು ಹಾಲ್ ಜೆ.ಎಫ್., ಮೇಲೆ ಉಲ್ಲೇಖಿಸಿದೆ, ಪು. ೭೩.

ಶ್ರೀಮತಿ ಇಂದಿರಾ ಹೆಗ್ಗಡೆ *

ಕೋಲ ಬಳಿಯ ಮುಂದಾಲರು

ಶಾಸನಗಳಲ್ಲಿ ಕೋಲಬಳಿಯ ಉಲ್ಲೇಖಗಳು ಆಗಾಗ್ಗೆ ಕಂಡು ಬರುತ್ತವೆ. ಆದರೆ ಕೋಲಬಳಿಯ ಬಗ್ಗೆ ವಿವರ ನೀಡುವಲ್ಲಿ ಇತಿಹಾಸದಲ್ಲಿ ಸ್ಪಷ್ಟತೆ ಇಲ್ಲ. ಅಂತಹ ವಿವರಗಳ ಬಗ್ಗೆ ಶಾಸನಗಳೂ ಬೆಳಕು ಚೆಲ್ಲುವುದಿಲ್ಲ. ಕ್ರಿ.ಶ. ೧೩೨೪-೨೫ರ ಸೋಯಿದೇವ ಆಳುಪೇಂದ್ರನ ಉಡುಪಿ ತಾಲೂಕಿನ ಪಡುಬೆಟ್ಟು ಶಾಸನದಲ್ಲಿ "ಹತ್ತುಕೋಲಬಳಿ"ಯ ಉಲ್ಲೇಖ ದೊರಕುತ್ತದೆ. ಭಟ್ಕಳದ ಕಾಯ್ಕಿಣಿಶಾಸನದಲ್ಲಿ "ಎರಡುಕೋಲಬಳಿ"ಯ ಉಲ್ಲೇಖ ಇದೆ.... the most plausilble inference that the kolabali represented the defence force and that the term kola could reasonably mean the mame of a degraded warrior tribe. Eradu kola - bali means two defence forces and hattu kola bali would mean ten defence forces. The fact for charters and grants, these two division of balis were included and their concent obtanied, reveals their signinficance (Gururaja Bhatt : Studies in Tuluva History and culture P. 248)

ಇಲ್ಲಿ ಉಲ್ಲೇಖವಾಗಿರುವ ಕೋಲಬಳಿಯ ಗುಂಪುಗಳು ಸೈನಿಕ ಗುಂಪುಗಳು ಎಂಬ ಬಗ್ಗೆ ಇತಿಹಾಸಕಾರರಲ್ಲಿ ಅಭಿಪ್ರಾಯ ಭೇದ ಇಲ್ಲ. ಆದರೆ ಭಟ್ಟರು ಕೋಲ ಎಂಬುದಕ್ಕೆ ಸಂಸ್ಕೃತದಲ್ಲಿ ಬೋಟು (ದೋಣಿ) ಎಂಬ ಅರ್ಥವೂ ಇದೆ ಎನ್ನುತ್ತಾ ಮೊಗವೀರ ಸಮುದಾಯವೂ ಇರಬಹುದು ಎಂಬ ಸಂದೇಹವನ್ನೂ ವ್ಯಕ್ತಪಡಿಸುತ್ತಾರೆ. ತುಳುವಿನ ಸಂದರ್ಭದಲ್ಲಿ ಕೋಲ ಎಂಬುದು ದೋಣಿಯ ಅರ್ಥನೀಡುವುದಿಲ್ಲ. ತುಳುವಿನಲ್ಲಿ ಕೋಲ ಪದದ ಅರ್ಥಗಳನ್ನು ಮುಂದೆ ನೀಡಲಾಗಿದೆ.

ಶ್ರೀ ವೀರಭೈರರಸರ ಕಾಲದ ಶಾಸನವೊಂದು ಹೀಗೆ ಉಲ್ಲೇಖಿಸುತ್ತದೆ: '....ಕೋಲಬಳಿಯ ಐದು ಸಾವಿರಾಲು ಮಲಹ ಐದುಸಾವಿರಾಳು ಪಾಲಸ್ತ ಕಟ್ಟಿನ ನಿರೂಪದ ಕ್ರಮವೆಂತೆಡೆ-ಕಾವ ಹೆಗ್ಗಡೆಗೆ ಕೊಟ್ಟ ನಂಬಿಕೆ ಮನುಷ್ಯ ದೋಷದಿಂದ ಕಾವ ಹೆಗ್ಗಡೆಯು ವೊನಿವೊಗಲಾಗಿ ಕೋಲಬಳಿಯ ಐದುಸಾವಿರಾಳು ಭೀತಿ ಯಸ್ತರಾಗಿ ತೊಲಗಳಾಗಿ ಪಟ್ಟದ ಗುರುಗಳು, ಚೌಟರು ಅಜಿಲರು, ನಾಡು ಬಳಿಯ ಐದುಸಾವಿರಾಳು ದೇಸಿಂಗರಸರು ಶಿಶಿಲದರಸರು, ಹಲರು ಮಾಡಿದ ಮಧ್ಯಸ್ಥದ ವಿವರ..." ಇದೇ ಶಾಸನದಲ್ಲಿ ಮುಂದೆ 'ಕೋಲಬಳಿಯ ಐದು ಸಾವಿರಾಳು ಪೂರ್ವ ಕಟ್ಟಲೆ ಪೂರ್ವ ಮರ್ಯಾದೆಯಲ್ಲಿ ಪಾಲಿಸಿಕೊಳಾಣ ಪೂರ್ವ ಕಟ್ಟಳೆ ಪೂರ್ವ ಮರ್ಯಾದೆಗೆ ಕೋಲಬಳಿಯ(ವ)ರು ತಪ್ಪಿದರೆ ವಿತ್ತಾಘಾರವನು(?) ತಕ್ಕೊಂಡು ರಾಜ್ಯದಿಂದ ಹೊರಡಿಸಾಣ ಅರಸುಗಳಿಂದ ತಪ್ಪುವಾ(ಗ) ಒಡೆಯ ಬಂಟರ(ಲ್ಲ) ಮುಂದಕ್ಕೆ ಮನುಷ್ಯತನವ ನೋಡುವವರು ದ್ರೋಹವ ಮಾಡಿದರೆ ಕೂಣತೆಗೆ ಸಲ್ಲದು...ಶ್ರೀ ನಗದಿ ಕೊಡುವಾಗಿ ನೂರಕ್ಕೆ ಕಾಣಿಕೆ ಮೂರು (೯) ಹೊಂನಿನಲ್ಕೆ ಪೂರ್ವ ಮರ್ಯಾದೆ ನೀವು ಸಲ್ಲಿ ಬ್ರಾಹ್ಮರ ಹೊಯಿದಿ ಕೊಲ್ಲ ಸಲ್ಲದು ಯಿದಕ್ಕೆ ಕಟ್ಟುವಾಗ ನಾಡುಬಳಿ ಐದುಸಾವಿರಾಳು, ಕೋಲ ಬಳಿಯ ಐದುಸಾವಿರಾಳು ವೊಂದೇ ಬುದ್ಧಿಯಿದಂ ...(SII.VOL.VII. 245); ಕೋಲಬಳಿಯರು ತುಳುನಾಡಿನ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದನ್ನು ನಾವು ಈ ಸಾಸನಗಳಿಂದ ತಿಳಿಯಬಹುದು.

'ಮಧ್ಯಯುಗೀನ ಆಳುಪರ ಕೆಲವು ಶಾಸನಗಳಲ್ಲಿ ಕೋಲಬಳಿ ಎಂಬ ಸಂಘನಾಮವು ಉಕ್ತವಾಗಿರುತ್ತದೆ. 'ಕೋಲು' ಎಂಬ ಕನ್ನಡ (ತುಳು) ಶಬ್ದಕ್ಕೆ 'ಬಾಣ' ಮತ್ತು 'ಯೋಧರು ಅನುಸರಿಸುವ ಒಂದು ರೀತಿಯ ವ್ಯಾಯಾಮ' ಎಂಬೀ ಅರ್ಥಗಳೂ ಉಂಟು. ಆದ ಕಾರಣ **ಕೋಲಬಳಿ** ಎಂಬ ಪ್ರಯೋಗವು ಸೇನಾನಿಗಳ ಸಂಘದ ಹೆಸರಿದ್ದಿರಬಹುದು. ಮುಂದೆ ವಿಜಯನಗರ ಕಾಲದಲ್ಲಿ ಹಾಡುವಲ್ಲಿ ಮತ್ತು ನಗಿರೆಯ ಅರಸುಗಳ ಶಾಸನಗಳಲ್ಲಿ 'ಕೋಲಬಳಿ ವೀರ ಪರಿವಾರ' ಎಂದು ಮುಂತಾದ ಪ್ರಯೋಗಗಳು ಕಂಡು ಬರುವುದು ನನ್ನ ಊಹೆಗೆ ಸಮರ್ಥನೆಯಾಗುತ್ತದೆ. (ರಮೇಶ ಕೆ. ವಿ. ತುಳುನಾಡಿನ ಇತಿಹಾಸ, ಪುಟ ೭೦)

ಶಾಸನಗಳಲ್ಲಿ ಉಲ್ಲೇಖವಾಗಿರುವ ಎರಡು ಕೋಲುಬಳಿ, ಏಳುಕೋಲ ಬಳಿ ಅಥವಾ ಹತ್ತುಕೋಲ ಬಳಿಯವರು ಕೋಲು ಹಿಡಿದು ಹೋರಾಡುವ ಗುಂಪು ಎಂಬುದರಲ್ಲಿ ಸಂದೇಹವಿಲ್ಲ. ಮೇಲೆ ತಿಳಿಸಿದ ಶಾಸನಗಳಲ್ಲಿ 'ಕೋಲಬಳಿಯವರು ಭೀತಿಗೊಂಡು ತೊಲಗುವದು, ಶಿಸಿಲದರಸರು, ಪಟ್ಟದಗುರು, ಚೌಟರು ಮುಂತಾದವರು ಸೇರಿದ ಸಭೆಯಲ್ಲಿ ಪೂರ್ವ ಕಟ್ಟಲೆ ಪೂರ್ವ

* ೮೨೬, ಕರಾವಳಿ, ಟ್ರೇಡರ್ಸ್, ವಿಜಯನಗರ, ಬೆಂಗಳೂರು-೫೬೦ ೦೪೦

ಮರ್ಯಾದೆಗೆ ಕೋಲಬಳಿಯವರು ತಪ್ಪಿದರೆ ವಿತ್ತಾಧಾರವನು(?) ತಕ್ಕೊಂಡು ರಾಜ್ಯದಿಂದ ಹೊರಡಿಸಬಹದು' ಎಂಬ ತೀರ್ಪು ಬರುತ್ತದೆ. ಹೀಗಾಗಿ ಗುರುರಾಜ ಭಟ್ಟರು ಭಾವಿಸಿದಂತೆ ಕೋಲ ಬಳಿಯವರು ಕೆಳವರ್ಗ ಎಂಬುದಕ್ಕೆ ಮೇಲೆ ಉಪಯೋಗಿ ಸಲಾದ ಪದಗಳು ಪುಷ್ಟಿ ನೀಡುತ್ತವೆ. ವಾಸ್ತವವಾಗಿ ಕೋಲಬಳಿಯವರು ಈಗಲೂ ಇದ್ದಾರೆ ಎಂಬುದನ್ನು ನಾನು ಇಲ್ಲಿ ಪ್ರಸ್ತುತಪಡಿಸ ಹೋಗುವುದೆಂದರೆ, ಇವರು ಯುದ್ಧಾಳುಗಳಾಗಿ ಇದ್ದವರ ಮುಂದುವರಿದ ಪರಂಪರೆ ಎಂಬುದು. ಆ ವಿಷಯಕ್ಕೆ ಬರುವ ಮೊದಲು ಕೋಲಬಳಿಯ ವಿವರವನ್ನು ಶಾಸನಗಳ ಮಾಹಿತಿ ಯಿಂದಿನ್ನಷ್ಟು ಅರಿಯುವ ಪ್ರಯತ್ನ ಮಾಡುವ ಆಶಯವಿಲ್ಲಿದೆ.

'ನಾಡ್ರ ಬಳಿಯ ಐದುಸಾವಿರಾಳು ಕೋಲಬಳಿಯ ಐದು ಸಾವಿರಾಳು ಒಂದೇ ಬುದ್ಧಿಯಿಂದ ಇರುವುದು' ಎಂಬ ಮೇಲಿನ ಶಾಸನ ಅವರೊಳಗೆ ಐಕ್ಯ ಇರಬೇಕೆಂದು ತಿಳಿಹೇಳುತ್ತದೆ.

'ಮಂಗಳಾಪುರದ ಭುವನಾಶ್ರಯದ ಮೊಗಸಾಲೆಯೊಳು ಸಮಸ್ತ ಪ್ರಧಾನರು ಎರಡು ಕೋಲ ಬಳಿಯುಂವೆರಸು ವೊಡ್ಡೋಲಗಂಗೊಟ್ಟಿರಲು ಪ್ರಸ್ತಾವದೊಳು' (SII.VOI.VII. No.185).

ಮೇಲಿನ ಶಾಸನದಲ್ಲಿ 'ಕೋಲಬಳಿಯುಂ', 'ಅರಸು ವೊಡ್ಡೋಲಗ ಗೊಟ್ಟಿರಲು' ಎಂಬ ಉಲ್ಲೇಖ ಇದೆ. ಈ ಪ್ರಕಾರ ಆಸ್ಥಾನದ ಒಡ್ಡೋಲಗದಲ್ಲಿ ಎರಡು ಕೋಲಬಳಿಯವರು ಹಾಜರಿದ್ದರು ಎಂದಾಗುತ್ತದೆ.

ಮುಲ್ಕಿಯ ಅರಸರ ಆಸ್ಥಾನದಲ್ಲಿ ಮುಂಡಾಲರ ಮುಖಾರಿ ತಲೆಗೆ ಮುಂಡಾಸು ಕಟ್ಟಬಹುದು. ಬಂಟರನ್ನು (ಜೈನರನ್ನು) ಉಳಿದು ಉಳಿದವರಿಗೆ ಮುಂಡಾಸು ಕಟ್ಟಲು ನಿಷೇಧವಿದೆ. ಆದರೆ ಆಸ್ಥಾನದಲ್ಲಿ ಅಂದರೆ ಚಾವಡಿ ಸಭೆಯಲ್ಲಿ ಕೆಳವರ್ಗದ ಅಜಲಿನ ಮುಖಾರಿ ಮುಂಡಾಸು ಕಟ್ಟಬಹುದು. ಮುಲ್ಕಿಯ ೯ ಮಾಗಣೆಗಳ ಮುಂಡಾಲ ಗುರಿಕಾರನಾದ 'ತುಕ್ರಮುಖಾರಿ'ಯು ಮುಂಡಾಲರ ಸೇನಾಧಿಪತಿ. ಇವನಿಗೆ ತುಕ್ರ ಮುಖಾರಿ ಎಂದು ಅರಸರೇ ಕರೆಯ ಬೇಕು. (ಗಣಪತಿ ರಾವ್ ಐಗಳು., ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಪುಟ ೩೪೫)

> 'ಮುಲ್ಕಿ, ಪಡುಬಿದ್ರಿ, ಎರ್ಮಾಲ್, ಕಟ್ಪಾಡಿ ಮುಂತಾದ ಅರಸರ ಕೈಕೆಳಗೆ ಬಾಕುಡರ ಸೇನಾಪತಿಗಳು ಹಾಗೂ ಮುಂಡಾಲರ ಸೈನ್ಯವೂ ಇತ್ತೆಂದು ತಿಳಿದು ಬರುತ್ತದೆ. ಈಗಲೂ ಮುಖಾರಿಯನ್ನು ನೇಮಿಸುವ ಕೆಲಸವು ಅರಮನೆಯ ಮುಂದೆ ಇರುವ ಬಾಕಿಮಾರು ಗದ್ದೆಯಲ್ಲಿಯೇ ಆಗುತ್ತದೆ. 'ಮಂಜೇಶ್ವರದ ಹತ್ತಿರ ಪಟ್ಟದ ಮೊಗರಿನಲ್ಲಿ ಆಳುತ್ತಿದ್ದ ಮೊಗರಾಜನು ಬಡಾಜೆಯಲ್ಲಿದ್ದ. ಬಡಾಜರು ಬಾಕುಡ ಹೊಲೆಯರಾಗಿದ್ದರು. ಮುಲ್ಕಿ, ಪಡುಬಿದ್ರೆ, ಎರ್ಮಾಲು, ಕಾಪು, ಕಟ್‌ಪಾಡಿ ಮುಂತಾದ ಜೈನ ಅರಸರ ಸೈನ್ಯದಲ್ಲಿ ಬಾಕುಡರ ಸೇನಾಧಿಪತಿಗಳ ಕೈಕೆಳಗೆ ಮುಂಡಾಲರ ಸೈನ್ಯವೂ ಇತ್ತೆಂದು ತಿಳಿದು ಬಂದಿದೆ. ಈಗಲೂ ಅವರ ಮುಖಾರಿ (ಯಜಮಾನ)ಯನ್ನು ನೇಮಿಸುವ ಕೆಲಸ ಅರಮನೆಯ ಮುಂದೆ ಇರುವ ಬಾಕಿ ಮಾರು ಗದ್ದೆಯಲ್ಲಿಯೇ ಆಗುತ್ತದೆ.
>
> ಅವನಿಗೆ ಹೆಸರನ್ನು ಆಯಾ ಅರಸರೇ ಇಡಬೇಕು. (ಗಣಪತಿರಾವ್ ಐಗಳು. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಪು. ೪)

"ಮುಂಡಾಲರು ಅಸ್ಪೃಶ್ಯರಾದರೂ ಪೂರ್ವದಲ್ಲಿ ಹಳ್ಳಿಯ ಬಂಟರ ಬಲ್ಲಾಳರ ಜೈನ ಅರಸರ ನಿಷ್ಠಾವಂತ ಸ್ವಾಮಿಭಕ್ತರು, ಮಾತ್ರವಲ್ಲ ಬಂಟ ಬಲ್ಲಾಳರ ಕೈಕೆಳಗೆ ಇವರು ದುಡಿಯುತ್ತಿದ್ದರು. ನಂಬಿದ ಸ್ವಾಮಿಗೆ ಕೇಡು ಬಗೆಯುವವರಲ್ಲ. ಜೈನ ಅರಸರ ಕಾಲದಲ್ಲಿ ಮುಂಡಾಲರು ಸೇನಾಪತಿಗಳಾಗಿದ್ದರೆಂದು ತಿಳಿದು ಬಂದಿದೆ. ಮತ್ತೆ ಜಿಲ್ಲೆಯಲ್ಲಿ ಈ ಪಂಗಡದವರಿಗೆ ಆದಿಯಲ್ಲಿ ಸೈನಿಕ ದಳವೊಂದು ಇತ್ತು. ಅದಕ್ಕೆ ಇವರಲ್ಲಿ ಒಬ್ಬ ಸೇನಾನಿ ಮುಖಂಡ ಇದ್ದನೆಂದು ತಿಳಿದು ಬಂದಿದೆ." (ಕಮಲಾಕ್ಷ ಪಿ., ದಕ್ಷಿಣ ಕನ್ನಡ ಜಿಲ್ಲೆಯ ಹರಿಜನರ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ, ಪು. ೮೦.)

'೨ ಕೋಲ ಬಳಿಯ ಒಪ್ಪ ಹೆಗ್ಗಡೆಗಳು, ಕಂಬಳಿಗಳು, ಬಂಕಿ ಅರಸರು ಇವರೆಲ್ಲರ ಸಮ್ಮುಖದಲ್ಲಿ ಮಾಡಿದ ದಾನ ಶಾಸನ' (SII VOl. IX P II No. 470): ಈ ಶಾಸನ ಪಾಠದಲ್ಲಿ 'ಕೋಲ ಬಳಿಯ ಒಪ್ಪ ಹೆಗ್ಗಡೆಗಳು' ಎಂಬ ಉಲ್ಲೇಖ ಇದೆ. ತುಳುನಾಡಿನಲ್ಲಿ ಕೆಳವರ್ಗದಲ್ಲಿ ಹೆಗ್ಗಡೆ ಎಂಬ ಜಾತಿ ಇದೆ. ಇವರ ಮದುವೆಯಲ್ಲಿ ಹೆಣ್ಣನ್ನು ಗಂಡು ಹುಡುಕಿ ತೆಗೆಯುವ ಸಂಪ್ರದಾಯ ಇದೆ. ಕೆಲವು ಪರಿಶಿಷ್ಟರು ನೀಡಿದ ಹೇಳಿಕೆಯಂತೆ ಈ ಹೆಗ್ಗಡೆಗಳು ಜಾತಿಯಲ್ಲಿ ಅವರಿಗಿಂತಲೂ ಕೆಳಗಿನವರು. ಅವರು ಹೆಗ್ಗಡೆಗಳ ಮನೆಯಲ್ಲಿ ನೀರು ಕುಡಿಯುತ್ತಿರಲಿಲ್ಲವಂತೆ. ಅರಸರ ಆಸ್ಥಾನದಲ್ಲಿ ಇದ್ದ (ಅಜಲಿನ) ಈ ಹೆಗ್ಗಡೆಗಳು ಭೂ ಹಿಡುವಳಿದಾರರೂ ಅಗಿರುವುದರಿಂದ ಕ್ರಮೇಣ ಸಾಮಾಜಿಕ ಮೇಲ್ ಅಂತಸ್ತನ್ನು ಇವರು ಪಡೆಯಲು ಸಾಧ್ಯವಿದೆ. ಥರ್ಸ್ಟನ್ ಇವರ ಬಗ್ಗೆ ಅಲ್ಪಮಾಹಿತಿಯನ್ನು ದಾಖಲಿಸಿದ್ದಾನೆ (ಬಂಟರಲ್ಲಿ ಇರುವ ಕೆಲವು ಬಳಿಗಳು ಬಿಲ್ಲವರಲ್ಲಿ ಮತ್ತು ಮೊಗವೀರರಲ್ಲಿ ಹಾಗೂ ಕೊರಗರಲ್ಲಿ ಇವೆ.) ಆದುದರಿಂದ ಕೆಳಗೆ ನೀಡಿದ ಶಾಸನದಲ್ಲಿ ಉಲ್ಲೇಖವಾಗಿರುವ ಎರಡು ಕೋಲಬಳಿಗಳು ಅಂದಿನ ಕಾಲದ ಅರಸರ ಆಸ್ಥಾನ ಒಡ್ಡೋಲಗದಲ್ಲಿ ಇದ್ದ ಯುದ್ಧಾಳು ವರ್ಗ. ಆಸ್ಥಾನದಲ್ಲಿ ಇವರ ಮುಂದಾಳು ಅರ್ಥಾತ್ ನಾಯಕನು ಇವರ ಪಡೆದ (ಮುಖ ಅರಿಯ ಬದಲಿಗೆ) ಮುಂದೆ ಜಾತಿಯ ಹೆಸರಾಗಿ ಬೇರೆಯಾಗಿ

ಗುರುತಿಸಿರಬೇಕು. ಕುಂದಾಪುರ ಕಡೆ ಭೂಹಿಡುವಳಿದಾರರಾಗಿರುವ ಬಂಟರೆಲ್ಲ ಹೆಗ್ಗಡೆಗಳೆಂದು ಗುರುತಿಸಿಕೊಂಡಿದ್ದಾರೆ. ಹಾಗೆಯೇ ರಾಜಕೀಯ ಸ್ಥಾನಮಾನ ಪಡೆದ ಕೋಲಬಳಿಯ ಹೆಗ್ಗಡೆ ವರ್ಗ ಮುಂದೆ ಹೆಗ್ಗಡೆ ಎಂಬ ಜಾತಿ ಹೆಸರಲ್ಲಿ ಗುರುತಿಸಿರಬೇಕು.

ಕೋಲ ಬಳಿಯ ಮುಂಡಾಲರು

ಮುಂಡಾಲರಲ್ಲಿ ಕೋಲಬಳಿಯ ಕೆಲವು ಕುಟುಂಬಗಳು ಈಗಲೂ ಇವೆ. ರೂಢಿಯಲ್ಲಿ ಈ ಬಳಿಯನ್ನು 'ಕೋಲದನ್ನಾಯ' ಎಂದು ಕರೆಯುತ್ತಾರೆ. ಕೋಟೆದ ಬಬ್ಬು ಎಂಬವನು ಮುಂಡಾಲರ ಜಾತಿಯ ಅತಿ ಮಾನುಷವ್ಯಕ್ತಿ. ಇವನ ತಂದೆಯನ್ನು ಕೋಲದನ್ನ ಬಳಿಯವ ಎನ್ನುತ್ತಾರೆ. ವಾಸ್ತವವಾಗಿ ಪಾಡ್ದನದ ಪ್ರಕಾರ ಈತ ಕನ್ಯಾ ಪುತ್ರ (ಕಾನೀನ). ತಂದೆಯ ಬಗ್ಗೆ ಉಲ್ಲೇಖವಿಲ್ಲ.

ತುಳುನಾಡಿನ ಪ್ರಸಿದ್ಧ ದೈವ ಕೋಟೆದ ಬಬ್ಬು ರಾಜನ್ ದೈವ ಜಾರಾಂದಾಯ ದೈವದ ಬಂಟ ದೈವ. ಈತ ಇರುವುದು ರಾಜನ್ ದೈವದ ಪರಿಸರದಿಂದ ದೂರ ಇರುವ ಕೊಟ್ಟದಲ್ಲಿ (ಸೇವಕ ವರ್ಗದ ದೈವದ ಗುಡುಯ ಹೆಸರು). ಪಾಡ್ದನದ ಜಾರಂದಾಯನ ರಕ್ಷಣೆಗೆ ನಿಂತ ದೈವ. ಇವನು ಪಾಡ್ದನದ ಉದ್ದಕ್ಕೂ ಹೋರಾಟವನ್ನು ಪ್ರದರ್ಶಿಸುತ್ತಾನೆ. ಆದರೆ ಇಂದಿಗೂ ನಡೆಯುವ ಸಾಂಕೇತಿಕ ಯುದ್ಧಾಚರಣೆಯಲ್ಲಿ ಬಬ್ಬುವು ದೈವ ಮಾಧ್ಯಮನ ಮೂಲಕ ಬಂದು ವೀಕ್ಷಿಸುವ ಸಂಪ್ರದಾಯ ಮುಂದುವರಿದಿದೆ. ಈ ಯುದ್ಧ ಕ್ಷೇತ್ರ, (ತು.ಕಲ) ಇರುವುದು ಆಲದ ಬೆರ್ಮೆರ ತಾಣಗಳಲ್ಲಿ ಹೆಚ್ಚು. ಇಲ್ಲಿ ನಡೆಯುವ ಆಚರಣೆಯನ್ನು ಅಂಬೊಡಿ ಎಂದೂ ಈ ಆಚರಣೆಯ ಕ್ಷೇತ್ರವನ್ನು ಅಂಬೊಡಿ ಕಲ ಎಂದೂ ಕರೆಯಲಾಗುತ್ತದೆ. ಇಂದಿಗೂ ಕೋಟೆದ ಬಬ್ಬು ಬಾರದೆ ಅಂಬೊಡಿ ಯುದ್ಧ ನಡೆಯುವುದಿಲ್ಲ. ಈಗಲೂ ಕೆಲವು ಆಲದ ಬೆರ್ಮೆರ ತಾಣಗಳಲ್ಲಿ ರಣ ಕೂಡಾ ಇದೆ. (ಈ ಬಗ್ಗೆ ಹೆಚ್ಚಿನ ಅಧ್ಯಯನದ ಆಗತ್ಯ ಇದೆ.)

ತುಳುಭಾಷೆಯ ಕೊಲ(ಳ)ಲ ಪದಗಳನ್ನು ಗಮನಿಸಿ.

ಕೊಲಲ = ಕೊತ್ತಾಲ ಯುದ್ಧ, ಕೋಲ =ಕಾಳಗ, ಕೊಲಲದ ಕಲ = ಯುದ್ಧಭೂಮಿ

ಕೋಲಾರ್ ಅಂದರೆ ಯುದ್ಧವೀರ, 'ಕೊಳಲ ಜೀರ' ಅಂದರೆ ಯುದ್ಧ ಪ್ರಿಯ (ತು. ನಿಘಂಟು) ಕೋಲು ಪತ್ಯೆರ್ ಕೋಲಾರ್ ರಾಯೆರ್

ಕೋಲಬಾರಿ = ಸೈನಿಕರ ಸಂಘಟನೆ, ಸೈನಿಕ ಮುಖಂಡ, ಯುದ್ಧ ಪರಿಣತ

ಕೋಲಾರ್ = ದಂಡದಾರಿ, ಕೋಲು ಹಿಡಿಯುವ ವೀರ, ಬಾಣವನ್ನೂ ಕೋಲು ಎಂದು ಕರೆಯುವ ವಾಡಿಕೆ ತುಳುನಾಡಿನಲ್ಲಿ ಇದೆ.

ಕೊಲಲ ಕಾದುವುದು = ಯುದ್ಧ ಕಾದುವುದು

ಜೋಕುಲು ಕೋಲ ಕೊರ್ತ್ = ಮಕ್ಕಳು ಅಸ್ತವ್ಯಸ್ತಗೊಳಿಸಿದ್ದಾರೆ.

ಉಂದೊಂಜಿ ಕೋಲ = ಇದೊಂದು (ದ್ವೇಷ ವಿಲ್ಲದ) ಕಾಳಗ 'ದೇವರಗ್‌ಲಾ ಅರಸುಗ್‌ಲಾ ಕೊಲ್ತುಂಡು ಕೊಳಲ' (ದೇವದಾನ ವರಿಗೆ ಯುದ್ಧ ಹತ್ತಿತು.)

ಮಲ್ಲೊಂಜಿ ಕೊಳಲ ಕೊಳ್ಬನಿ = ಮಲ್ಲೊಂಜಿ ಕೋಳ ನೊನೆ ಕೊಳ್ವಂದೆ ಕುಲ್ಲಂದೆ, ಕೋಡಿ ದೀವುದ ನೂದು ಜವ್ವನೆರ್ ... ಕುತ್ತುದು ಬೆತ್ತ್‌ದ್ ಕೆರ್ಡುವೆರ್ (ದೊಡ್ಡ ಒಂದು ಯುದ್ಧವೇ ಆಗದೆ ಇರದು ಕೊನೆಯ ದ್ವೀಪದ ನೂರು ತರುಣರು...ಚುಚ್ಚಿ ಕಡಿದು ಕೊಂದು ಬಿಟ್ಟಾರು.)

'ಕೊಳ ಲೊಡು ಗೆಂದ್‌ದ್ ಪಡೆಯಿನ ಪಣವವು ಕರಜನದುಲಯಿ ಕತ್ತಲೆಡ್ ಉಂಡು' (ಕೊಲಲದಲ್ಲಿ ಗೆದ್ದು ಪಡೆದ ಪಣವು ಕರಜನದ ಒಳಗೆ ಕತ್ತಲೆಯಲ್ಲಿ ಇದೆ.)

ತುಳುನಾಡಿನ ಪಾಡ್ದನಗಳು ಕೋಲಬಳಿಯ ಪ್ರಸ್ತಾಪವನ್ನು ಮಾಡುತ್ತವೆ. ಕೋಟಿ ಚೆನ್ನಯರ ಪಾಡ್ದನದಲ್ಲಿ ಕೋಟಿ ಚೆನ್ನಯರು ಗರಡಿಯಲ್ಲಿ ಯುದ್ಧ ತರಬೇತಿ ಪಡೆಯಬೇಕೆಂಬ ಆಕಾಂಕ್ಷೆ ತೋರಿಸುತ್ತಾರೆ. ಆಗ ಅವರ ಸೋದರಮಾವ ಗರಡಿ ಸಾಧನೆಗೆ ಸಲಕರಣೆಗಳನ್ನು ಜೋಡಿಸಿ ಕೊಡುತ್ತಾರೆ. ಮೊದಲು ಚಿಪ್ಪರ(ದರ್ಜಿ)ಯ ಕೇರಿಗೆ ಹೋಗಿ ಜಟ್ಟಿಯ ಚಲ್ಲಣಕ್ಕೆ ಮುಂಗಡ ನೀಡುತ್ತಾರೆ. ಅಲ್ಲಿಂದ ಕೋಲರ ಕೇರಿಗೆ ಹೋಗಿ ಕೋಲಿಗೆ ಮುಂಗಡ ನೀಡುತ್ತಾನೆ.

ಇಲ್ಲಿ ಕೋಲು ಅಂದರೆ ತಂದೆಲ್, ಬಡಿಗೆ. ಬಡಿಗೆಗೆ ಗೆಜ್ಜೆ ಕಟ್ಟಿಅಲಂಕಾರ ಮಾಡುತ್ತಿದ್ದರು ಎಂದು ಇದೇ ಪಾಡ್ದನವು ತಿಳಿಸುತ್ತದೆ. ಆಗಿನ ಕಾಲದ ಯುದ್ಧಗಳಲ್ಲಿ ಬಡಿಗೆಯ ಹೊಡೆದಾಟವೂ ಮುಖ್ಯವಾಗಿತ್ತು. ಕೋಲರ ಕೇರಿ ಅಂದರೆ ಯುದ್ಧಾಳುಗಳು (ಇವರು ಕೃಷಿಯಾಳುಗಳೂ ಆಗಿದ್ದರು) ನೆಲೆಸುತ್ತಿದ್ದ ಕೇರಿ. ಕೋಲು ಎಂಬುದು ಬಡಿಗೆ ಎಂಬ ಅರ್ಥದಲ್ಲಿ ಈ ಪಾಡ್ದನದಲ್ಲಿ ಎರಡು ಮೂರು ಕಡೆ ಪ್ರಯೋಗವಾಗಿದೆ.

ಮುಂಡಾಲರ ವರ್ಗದವರು ಬಡಿಗೆಯಿಂದ ಮಾತ್ರ ಯುದ್ಧ ಮಾಡುತ್ತಿದ್ದರು. ಬಡಿಗೆಯನ್ನು ಅಲಂಕಾರ ಮಾಡಿ ಅದಕ್ಕೆ ಒಂದು ದಾರ ಕಟ್ಟಿ ತೋಳಿಗೆ ಜೋತು ಹಾಕುತ್ತಿದ್ದರು ಎಂದು ಕಿನ್ನಿಕೋಳಿಯ ಮೋನಪ್ಪ ಮುಂಡಾಲ ಹೇಳುತ್ತಾರೆ. ಕೆಲವು ಅಂಬೊಡಿಯ ಕಲಗಳಲ್ಲಿ ಈಗಲೂ ಸಾಂಕೇತಿಕವಾಗಿ ಎರಡು ಪಂಗಡಗಳೊಳಗೆ ಬಡಿಗೆಯ ಹೊಡೆದಾಟ ಇದೆ.

ಪಾಡ್ದನ ಮುಂದುವರಿಯುತ್ತಾ, "ಬುದ್ಯಂತ ಉಲ್ಲಾಯ (ಒಡೆಯ) ಕೋಲ ಬಳಿಯಡೆಗೆ ಕೃಷಿಯಾಳು ಹೇಳಲು ಹೋಗುತ್ತಾನೆ" ಎನ್ನುತ್ತದೆ. ತುಳುನಾಡಿನ ಸಾಂಪ್ರದಾಯಿಕ

ವ್ಯವಸ್ಥೆಯಲ್ಲಿ ಯುದ್ಧವಿಲ್ಲದ ಸಮಯದಲ್ಲಿ ಯುದ್ಧಾಳುಗಳು ಕೃಷಿಯಾಳುಗಳಾಗಿ ದುಡಿಯುತ್ತಿದ್ದರು. ಈ ಕ್ರಮ ಇತರೆಡೆಯೂ ಇದ್ದಿತ್ತು. ಈ ಭಾಗದಲ್ಲಿ ಕೋಲಬಳಿಯಲ್ಲಿಗೆ ಹೋದರು ಎಂಬ ವಾಕ್ಯ ಪುನರಾವರ್ತನೆ ಆಗುತ್ತದೆ. (ದಾಮೋದರ ಕಲ್ಮಾಡಿ, ಕೋಟಿ ಚೆನ್ನಯರ ಪಾಡ್ದನ ಸಂಪುಟ, ಪು.೨೨೫.೨೨೬) ಕೋಲ ಬಳಿಯವರು ಇರುವಲ್ಲಿಗೆ ಬುದ್ಯಂತ ಹೋಗಿ ಕಂಬಳಕ್ಕೆ ಆಳು ಕರೆಯುತ್ತಾನೆ.

ಮುಂದೆ ಪಂಜದ ಬಲ್ಲಾಳರು ಯುದ್ಧಕ್ಕೆ ಬರಲು ಎಣ್ಮೂರು ಬೀಡಿಗೆ ಓಲೆ ಕಳುಹಿಸುತ್ತಾರೆ. ಹಂದಿಯ ತಲೆ ಹಂದಿಯ ದಯೆ(?) ಕೊಡದೆ ಇರುವದರಿಂದ "ಏಳು ಗದ್ದೆಯ ಕೊಲಲಕ್ಕೆ ಬರಬೇಕು" ಎಂಬ ಸಂದೇಶ ಕಳುಹಿಸುತ್ತಾರೆ. ಇಲ್ಲಿ ಕೋಲ ಅಥವಾ ಕೊಲಲ ಅಂದರೆ ಯುದ್ಧ.

ಗರಡಿ ಮನೆಯಿಂದ ಮುನಿಸಿ ಹೋಗುವ ಕೋಟಿ ಚೆನ್ನಯರು "ಚಾವಡಿ ಕತ್ತಲಾದರೆ ಬುದ್ಯಂತರನ್ನು ನೋಡೋಣ, ಅರಮನೆ ಕತ್ತಲಾದರೆ ಅರಸರನ್ನು ನೋಡೋಣ, ಕೊಲಲ ಕತ್ತಲಾದರೆ ಕೋಲ ಬಳಿಯ ಮುಡಂದಾಲರನ್ನು ನೋಡೋಣ", ಎನ್ನುತ್ತಾರೆ. "ಕೊಲಲ ಕತ್ತಲಾಂಡ ಅಂದರೆ ಸಾದಗದ ಕಲ ಕತ್ತಲಾದರೆ " ಎಂದು ಇದರ ಅರ್ಥವನ್ನು ಈ ಪಾಡ್ದನ ಸಂಪುಟದಲ್ಲಿ ನೀಡಲಾಗಿದೆ. (ಕೋಟಿ ಚೆನ್ನಯರ ಪಾಡ್ದನ ಸಂಪುಟ, ಪು. ೧೮೨)

ಚಾವಡಿ ವ್ಯವಹಾರಗಳು ಮಂತ್ರಿಗೆ (ಬುದ್ಯಂತ ಸಂಬಂಧಿಸಿದ ವಿಚಾರ. ಹೀಗಾಗಿ ಚಾವಡಿ ಕತ್ತಲಾದರೆ ಬುದ್ಯಂತರನ್ನು ನೋಡೋಣ ಎಂಬುದು ಪಾಡ್ದದನದ ಅಭಿಪ್ರಾಯ. ಅದೇ ರೀತಿ ಅರಮನೆಯ ವ್ಯವಹಾರ ಅರಸರಿಗೆ ಸಂಬಂಧಿಸಿದ ವಿಚಾರ, ಸಾದಗದ ಅಂದರೆ ರಣರಂಗ ಕತ್ತಲಾದರೆ ರಣರಂಗದ ವೀರ ಆಳುಗಳಾದ ಮುಂಡಾಲರನ್ನು ನೋಡೋಣ ಎಂಬುದಾಗಿ ಕೋಟಿ ಚೆನ್ನಯುರು ನುಡಿಯುತ್ತಾರೆ. ಈ ಪಾಡ್ದನದ ಪ್ರಕಾರ ಮುಡಂದಾಲರಲ್ಲಿ (ಮುಂಡಾಲರಲ್ಲಿ) ಕೋಲ ಬಳಿಯವರು ಯುದ್ಧ ಪ್ರವೀಣರು.

ಕೋಟಿ ಚೆನ್ನಯರು ಎಣ್ಮೂರಿನ ತನ್ನ ಹೊಸ ಉಲ್ಲಾಯ ನೊಂದಿಗೆ " ಕರ್ಬೊಗು ಕರ್ಬ ಪತ್ತುಂಡಾ ಎಂಕ್ಲೆಗ್ ಕೊಳಲ ಪತ್ತುಂಡು..." (ಕಬ್ಬಿಣಕ್ಕೆ ಕಬ್ಬಿಣ ಅಂಟುವಂತೆ ನಮಗೆ ಯುದ್ಧವು ಸಹಜ) ಎನ್ನುತ್ತಾರೆ. ಅದನ್ನು ಕೇಳಿ ಉಲ್ಲಯಾರು ಯುದ್ಧದಲ್ಲಿ ಹೋರಾಡಲು ಮೊನಚಾದ ಪಗರಿ (ಬಾಣ) ಮಾಡಿಸಿ ಕೊಡುತ್ತಾರೆ.

ಅದನ್ನು ಪಡೆದು "ಕೊಲಲಕ್ಕೆ ಹೋಗುತ್ತೇವೆ ಉಲ್ಲಾಯ" ಎಂದು ಹೊರಡುತ್ತಾರೆ. (ಕೊಲೊಲೊಗು ಪೋಪ ಉಲ್ಲಯಾ ಪೋಪ ಇಂದ್ ಪಂಡೆರ್) (ದಾಮೋದರ ಕಲ್ಮಾಡಿ, ಕೋಟಿ ಚೆನ್ನಯರ ಪಾಡ್ದನ ಸಂಪುಟ, ಪು. ೨೯೮)

ಏಳು ಗದ್ದೆಯ ಕೊಲಲದಲ್ಲಿ ಎದುರಾಳಿ ಬಟ್ಟ ಅಸ್ತ್ರ ತಮ್ಮನ ಕಾಲಿಗೆ ನಾಟಿ ಬಿಟ್ಟಿತು. (ದಾಮೋದರ ಕಲ್ಮಾಡಿ, ಕೋಟಿ ಚೆನ್ನಯರ ಪಾಡ್ದನ ಸಂಪುಟ, ಪು೨೯೯) ಅಲ್ಲಿಂದ ಮುಂದೆ ಯುದ್ಧರಂಗದ ಗೊಂದಲದ ವರ್ಣನೆ ಬರುತ್ತದೆ. "ಕೊಲಲ ಗದ್ದೆ ಎಣ್ಮೂರಿನ ಬಾಕಿಮಾರಿನಲ್ಲಿ ಕೊಲಲವೇನು! ಒಂದು ಸಾಧಿಸಿದರೆ(?) ಏಳು ಇರುಳು ಏಳು ರಾತ್ರಿ ಯುದ್ಧ ನಡೆಯುತ್ತದೆ'. ಮುಂದೆ ಅಣ್ಣನ ಕಿಬ್ಬೊಟ್ಟೆಗೆ ಪಗರಿ ನಾಟುತ್ತದೆ. ಅಣ್ಣನ ಕೊಲಲ ಗದ್ದೆಗೆ ತಮ್ಮ ಓಡಿ ಬರುತ್ತಾನೆ. ಮತ್ತೊಂದು ಪಾಡ್ದನದಲ್ಲಿ 'ಕೊಲ್ತುಂಡ್ ಕೊಲಲ ನಡತ್ಂಡ್ ರಣಾಗ್ರ ಆಲಿಕಲ್ಲ್‌ದ್ ಬರ್ಸ ಬೂರುಂಡು' ಎಂಬ ವಿವರಣೆ ಯುದ್ಧಕ್ಕೆ ಸಂಬಂಧಿಸಿತ್ತು. (ಹತ್ತಿತ್ತು ಯುದ್ಧ, ನಡೆಯಿತು ರಣಯುದ್ಧ ಆಲಿಕಲ್ಲಿನ ಮಳೆ ಬಿತ್ತು (?)

ಇನ್ನೊಂದೆಡೆ 'ಕೊಳ್ತಂಡು ಕೊಳಲ, ನಡತ್ಂಡ್ ರಣಾಗ್ರ ....ಭೂಮಿ ಅದರ್ ಬೂರುಂಡು ಅಕ್ಕಸ ಪರಿಂಡ್' ಎನ್ನುತ್ತದೆ. (ಕಾಳಗ ಹತ್ತಿತು, ಅತಿ ಘೋರವಾದ ಯುದ್ಧ ನಡೆಯಿತು ಭೂಮಿ ನಡುಗಿತು. ಆಕಾಶ ಹರಿಯಿತು.)

ಈಗಲೂ ದಲಿತವರ್ಗದವರು ಅಂದಿನ ಯುದ್ಧಾಚರಣೆಯನ್ನು ಸಾಂಕೇತಿಕವಾಗಿ ಆಚರಿಸುತ್ತಾರೆ. ಈ ಆಚರಣೆಯನ್ನು ಅಂಬೊಡಿ ಎನ್ನುತ್ತಾರೆ.

ಅಂಬೊಡಿ ಯುದ್ಧ

ಅಂಬು ಅಂದರೆ ಬಾಣ. ಇಡಿ ಅಂದರೆ ಚುಚ್ಚು. ಆದರೆ ಅಂಬೊಡಿ ಕಲದಲ್ಲಿ ನಡೆಯುವ ಹೋರಾಟ ಬಡಿಗೆಯದ್ದು. ಪಾಡ್ದನವೊಂದಲ್ಲಿ 'ಕೋಲುಪತ್ತಿ ಕೋಲುಕಾರೆ, ಬೆಡಿ ಪತ್ತಿ ಬೆಡಿಕಾರ, ಬಿರು ಪತ್ತಿ ಮುಗರೆ.' (ಕೋಲು ಹಿಡಿದ ಕೋಲುಕಾರ, ಬೆಡಿ ಹಿಡಿದ ಬೆಡಿಕಾರ, ಬಿಲ್ಲು ಬಾಣ ಹಿಡಿದ ಮುಗೆರ) ಹೇಳಲಾಗಿದೆ. ಇಲ್ಲಿ ಕೋಲುಕಾರ ಅಂದರೆ ಮುಂಡಾಲರು ಆಗಿರಬೇಕು. ಮುಗೆರ‍್ಲು ಮುಂಡಾಲರ ತತ್ಸಮಾನ ಜಾತಿ.

ಅಂಬೊಡಿ ಕಲದಲ್ಲಿ ಸಾಮಾನ್ಯವಾಗಿ ಮುಂಡಾಲ ವರ್ಗದವರು (ಅಥವಾ ತತ್ಸಮಾನ ವರ್ಗ) ಎರಡು ಗುಂಪುಗಳಾಗಿ ಬಡಿಗೆಯಲ್ಲಿ ಅಣುಕು ಹೋರಾಟ ಮಾಡುತ್ತಾರೆ. ಇದನ್ನು ಆ ಊರಿನ ಪಾಳೆಯಗಾರ ತನ್ನ ನಿಗದಿತ ಸ್ಥಳದ ನಿಗದಿತ ಆಸನದಲ್ಲಿ ಕುಳಿತು ವೀಕ್ಷಿಸುತ್ತಾನೆ. ನಿಗದಿತ ಮನೆಯವರು (ಬೇರೆ ಬೇರೆ ಕಡೆ ಬೇರೆ ಬೇರೆ ವರ್ಗದವರು ಇದ್ದಾರೆ) ಈ ಕಲಹವನ್ನು (ಯುದ್ಧ) ನಿಯಂತ್ರಿಸುತ್ತಾರೆ. ಮುಂಡಾಲರ ವರ್ಗದ ದೈವ ಕೋಟೆದ ಬಬ್ಬು ದೈ ಮಾಧ್ಯಮನ ಮೂಲಕ ತನ್ನ ಗುಡಿಯಿಂದ ಬಂದು ಇಲ್ಲಿಗೆ ಬಂದು ಅಂಬೊಡಿಯನ್ನು ವೀಕ್ಷಿಸುತ್ತಾನೆ. ಕವತಾರಿನಲ್ಲಿ ಅಂಬೊಡಿ ನಡೆಯುವ ಗದ್ದೆಗೆ ಈ ಗದ್ದೆಗೆ 'ಅಂಬೋಡಿ ಮಾರ್' ಎಂದು ಕರೆಯುತ್ತಾರೆ. ೧೯೫೦-೬೦ರವರೆಗೆ ಇಂತಹ ಅಂಬೊಡಿ ಕಲದ ಹೋರಾಟ ವಿಷಮಾವಸ್ಥೆಗೆ ತಲುಪುತ್ತಿದ್ದುದು ಉಂಟು ಎನ್ನುತ್ತಾರೆ. ಹಿರಿಯರು. "ನಿನ್ನನ್ನು ಅಂಬೊಡಿ ಕಲದಲ್ಲಿ ನೋಡುತ್ತೇನೆ" ಎಂಬುದಾಗಿ ಮುಂಡಾಲರ ವರ್ಗದವರು ಎದುರಾಳಿ ವರ್ಗದ ಮುಂಡಾಲರಿಗೆ ಬೆದರಿಕೆ ಒಡ್ಡುತ್ತಿದ್ದರು. ಹೀಗಾಗಿ ಕಲಹವಾಗುವುದನ್ನು ಬಿಡಿಸಲು ಅಲ್ಲಿ ಗುತ್ತು ಬರ್ಕೆಗಳ ಜನರ ಉಪಸ್ಥಿತಿ ಅಗತ್ಯ ಇತ್ತು.

ಕವತಾರಿನಲ್ಲಿ ಜಾತ್ರೆಯ ಮುಕ್ತಾಯ ಆಗುವುದು ಅಂಬೊಡಿಯ ನಂತರ. ಜಾತ್ರೆ ಮುಗಿದು ಮಾರನೆಯ ಮುಂಜಾವ ಮೂರು ಗಂಟೆಯ ಸುಮಾರಿಗೆ ಅಂಬೊಡಿಯು ಪ್ರಾರಂಭವಾಗುತ್ತದೆ. ಮುಂಡಾಲ ಜಾತಿಯವರು ಎರಡು ಪಂಗಡಗಳಾಗಿ ಬೆತ್ತ ಬಡಿಗೆಗಳನ್ನು ಹಿಡಕೊಂಡು, ಅಣುಕು ಯುದ್ಧ ಮಾಡುತ್ತಾರೆ. ಅಜಿಲರು ಹಾಗೂ ಇತರ ಗಣ್ಯರು ಈ ಅಣುಕು ಯುದ್ಧ ಮಿತಿಮೀರದ ಹಾಗೆ ಮೇಲ್ವಿಚಾರಣೆ ನಡೆಸಿಕೊಂಡು ಅದನ್ನು ಮುಗಿಸಿ ಇತ್ತಂಡದವರಿಗೂ ಬದ್ಧಿ ಹೇಳಿ ಅಂಬೊಡಿಯನ್ನು ಮುಗಿಸುತ್ತಾರೆ.

ಕವತಾರಿನಲ್ಲಿ 'ಜಲ್ಲಪಾಡುನಿ' ಎಂಬ ಆಚರಣೆಯನ್ನೂ ಮಾಡುತ್ತಿದ್ದರು.

ಗದ್ದೆಯ ಮಧ್ಯಭಾಗದ ಬದುವಿನ ಮೇಲೆ ಒಂದು ಉದ್ದದ ಕಂಬ ನೆಟ್ಟಿರುತ್ತಾರೆ. ಅದರ ಮೇಲೆ ಹಗ್ಗ ಜೋತು ಬಿಟ್ಟಿರುತ್ತಾರೆ. ಅದನ್ನು ಎರಡೂ ಬಣಗಳವರು ಎಳೆದಾಡುತ್ತಾರೆ. ಯಾರು ಎಳೆದಾಡಿ ತಮ್ಮ ದಿಕ್ಕಿಗೆ ಬೀಳಿಸುತ್ತಾರೆ. ಅವರು ಗೆದ್ದಂತೆ. ಬಲ್ಲವರು ಇಲ್ಲಿ ನಿಯಂತ್ರಣಕಾರರು. ಇದಕ್ಕೆ 'ಜಲ್ಲ ಪಾಡುನಿ' ಎಂದು ತುಳು ಭಾಷೆಯಲ್ಲಿ ಹೇಳುತ್ತಾರೆ. ಈ ತಾಣಗಳಲ್ಲಿ ಆರಾಧನಾ ಸ್ಥಳ ಇರುವುದರಿಂದ ಕೆಲವೊಂದು ಕಡೆ ಈ ಸಂಪ್ರದಾಯದ ಸಂಕೇತಿಕತೆ ಈಗಲೂ ಉಳಿದು ಬಂದಿದೆ.

ಜಾತ್ರೆಯ ಸಂದರ್ಭದಲ್ಲಿ ನಡೆಯುವ ಅಂಬೊಡಿ ಎಂಬ ಅಣಕು ಯುದ್ಧ ಆಡುವವರು ಬಾಕುಡರು, ಮುಂಡಲರು, (ಮಾನರ್) ಮಾನ್ಯರು. ಮನ್ಸರು, ಮೇರರು, ಮುಂತಾದವರು. ಆಯಾ ಊರಿನ ಸಂಪ್ರದಾಯದಂತೆ ಆಯಾ ಜಾತಿ ಇರುತ್ತದೆ.

ಹೆಬ್ರೀ ಬೀಡಿನ ತಾಣದಲ್ಲಿ ಅಂಬೊಡಿ

ಹೆಬ್ರಿ ಬೀಡೀನ ಅಂಬೊಡಿಯಲ್ಲಿ ಮನ್ಸರು ಎಂಬವರು ಎರಡು ವರ್ಗ ಆಗುತ್ತಾರೆ. ಒಂದುವರ್ಗ ಬೀಡಿನ ಮನೆಯಿಂದ ಯುದ್ಧದ ಉತ್ಸಾಹದಿಂದ ಹೊರಟರೆ ಮತ್ತೊಂದು ವರ್ಗವು ಓಕುಡರ (ಓಕುಡರ ಮನೆ ಬ್ರಾಹ್ಮಣಮನೆ. ಬಾಕುಡರು ಅಂದರೆ ಕೆಳವರ್ಗದವರು) ಮನೆಯಿಂದ ಹೊರಡುತ್ತದೆ.

ಎರಡೂ ವರ್ಗದವರು ಕೈಯಲ್ಲಿ ಕಾಸರಕ ಮರದ ಬಡಿಗೆ ಹಿಡಿದು ಬೆರ್ಮರತಾಣದಲ್ಲಿ ಎದುರಾಗುತ್ತಾರೆ. ಓಕುಡಮನೆಯವರು ಒಂದು ಕಟ್ಟೆಯ ಮೇಲೆ, ಬಲ್ಲಾಳರು ಮತ್ತೊಂದು ಕಟ್ಟೆಯ ಮೇಲೆ ಅಂಬೊಡಿಗದ್ದೆಯ ಎದುರಿಗೆ ಕುಲುತು ಕೊಳ್ಳುತ್ತಾರೆ. ಅಂಬೊಡಿ ಗದ್ದೆಯಲ್ಲಿ ಇತ್ತಂಡದವರು ನೆರೆಯುತ್ತಾರೆ. ತೀರ್ಪುಗಾರರಾಗಿ ಬಲ್ಲಾಳರು ಮತ್ತು ಬೆಂಬಲ ಗುತ್ತುಗಳ ಪಾಲವರು ಆಸನ ಸ್ವೀಕರಿಸುತ್ತಾರೆ. ಕಾಸರಕನ ಮರದ ಬಡಿಗೆಗಳಿಂದ ಇತ್ತಂಡದವರು ಪರಸ್ಪರ ಹೊಡೆದಾಡುತ್ತಾರೆ. ಈ ಸಮಯದಲ್ಲಿ ಆಗುವ ಕಲಹಗಳನ್ನು 'ಕೋತಾರಿ' ನಿಯಂತ್ರಿಸುತ್ತಾನೆ. ಈಗಲೂ ಈ ಆಚರಣೆ ಇದೆ.

ಎರ್ಮಾಲಿನಲ್ಲಿ ಅಂಬೊಡಿಕಲ ಎಂಬುದು ಈಗ ಬಂಟರ ಮನೆಯ ಹೆಸರು. ಇದರ ಪಕ್ಕ ಕಂಬೆರ್ಲ ಕೊಟ್ಯ ಇದೆ. ಕೋಟೆದ ಬಬ್ಬುವಿನ ತಾಯಿ ಕಚ್ಚುರ ಮಾಲ್ದಿ ಗುಡಿಯೂ ಇದೆ. ಅಂಬೊಡಿ ಕಲದ ಮನೆಯಲ್ಲಿ ಯಜಮಾನನು ಅಂಬೊಡಿಯನ್ನು ವೀಕ್ಷಿಸಲು ಕುಳಿತುಕೊಳ್ಳುವ ಚಾವಡಿ ಇದೆ. ಈ ಚಾವಡಿ ಕಂಬೆರ್ಲ ಕೊಟ್ಯಕ್ಕೆ ಮುಖಮಾಡಿ ಇದೆ. ಹಿಂದೆ ಇಲ್ಲಿ 'ಅಂಬೊಡಿ' ಯುದ್ಧ ನಡೆಯುತ್ತಿತ್ತು. ಅಂಬೊಡಿ ಆಡುವವರೊಳಗೆ ಜಗಳ ಆಗಿ ಕೆಲವು ವರ್ಷಗಳಿಂದೀಚೆಗೆ ಅಂಬೊಡಿ ನಿಂತಿದೆ. ಈ ಅಂಬೊಡಿ ಕಲಕ್ಕೆ ೧೬ ಮಾಗಣೆಯಿಂದ ಕೋರ್ದಬ್ಬು ದೈವ ಬರಬೇಕು.

'ಕಲ ಮಿ ತರನು ಕಂಬರ್ಲು' ಅಂದರೆ 'ಕಲ ಹತ್ತುವವು ಕಂಬೆರ್ಲು' ಎಂಬ ಆಚರಣೆಯೂ ಯುದ್ಧಕ್ಕೆ ಸಂಬಂಧಪಟ್ಟ ಆಚರಣೆ.

ಪೊಳಲಿಯ ರಾಜರಾಜೇಶ್ವರಿ (ಶಾಸನಗಳಲ್ಲಿ ಹೊಳಲ ಭಟ್ಟಾರಕಿ) ದೇವಾಲಯದಲ್ಲಿ ಮುವ್ವತ್ತು ದಿನದ ಅಡಿಕೆಯ ಅಂಬೊಡಿ ಇರುತ್ತಿತ್ತು ಎಂದು ಬರ್ನಲ್ ಪಾಡ್ದನ ಸಂಗ್ರಹದ ಜುಮಾದಿ ಪ್ರಸರಣ ಪಾಡ್ದನದಲ್ಲಿ ಬರುತ್ತದೆ.

ಅಂಬೊಡಿಯ ಅಣುಕು ಯುದ್ಧವನ್ನು ಮೂಲದವರು ಆಡುತ್ತಾರೆ. ಮೂಲದವರೇ ಪಾಳೆಯಗಾರರನ್ನು (ಬಂಟರನ್ನು) ಊರ್ಜಿತ ಗೊಳಿಸಿದರು ಎಂಬ ಬಂಟರ ಹೇಳಿಕೆಯನ್ನು ಮೇಲಿನ ಆಚರಣೆ ಪುಷ್ಟೀಕರಿಸುತ್ತದೆ.

ಬೇರೊಂದು ರೀತಿಯ ಮುಗೇರ್ಲ ಅಂಬೊಡಿಯನ್ನು ಡಾ. ಅಭಯಕುಮಾರರು ದಾಖಲಿಸಿದ್ದಾರೆ:

'ಅಂಬೋಡಿ ಕುಣಿತ ಮುಗೇರ್ಲ ಕೋಲದಲ್ಲಿಯೂ ಇದೆ. ಆದರೆ ಸಾರ್ವತ್ರಿಕವಾಗಿ ಇಲ್ಲ. ಪುತ್ತೂರು ಬೆಳ್ತಂಗಡಿ ಹಾಗೂ ಬಂಟ್ವಾಳ ಕಡೆಗಳಲ್ಲಿ ಅಂಬೊಡಿ ಅಂದರೆ ಯುದ್ಧ ಎಂಬರ್ಥವೂ ಇದೆ. ಯುದ್ಧದ ಕುಣಿತಕ್ಕಿಂತಲೂ ಸಂತೋಷದ ಕುಣಿತದಂತೆ ಪ್ರದರ್ಶನ ಸಂದಂರ್ಭದಲ್ಲಿ ಕಂಡು ಬರುತ್ತದೆ. ಭೂತಗಳು ಪಾತ್ರಿಗಳು ಮತ್ತು ಮುಗೇರ ವ್ಯಕ್ತಿಗಳು ದುಡಿ ನುಡಿಸುಕೊಂಡು ಪಣೆಯಾರದ ಸುತ್ತ ಕುಣಿಯುವುದೇ ಅಂಬೊಡಿಯ ಕುಣಿತ. ಇದನ್ನು 'ಒಡ್ಡುನಲಿಕೆ' ಎಂದೂ ಕರೆಯುತ್ತಾರೆ. (ಅಭಯಕುಮಾರ ಕಕ್ರಾಡಿ, ಪುಟ ೫೩)

ಬಿಲ್ಲುಬಾಣ (ಬಿರು ಪಗರಿ)ವು ಮಗೆರ್ಲು ಜನರ ಕುಲ ಆಯುಧ. ಹಿಂದಿನ ಪುಟಗಳಲ್ಲಿ ತಿಳಿಸಿದಂತೆ 'ಕೋಲು ಹಿಡಿದ ಕೋಲುಕಾರ, ಬೆಡಿ (ಕೋವಿ) ಹಿಡಿದ ಬೆಡಿಕಾರ, ಬಲ್ಲು ಬಾಣ ಹಿಡಿದ ಮುಗೆರೆ' ಎಂಬ ಪಾಡ್ದನ ಮಾಹಿತಿಯು ಮುಗೆರ್ಲು ಎಂಬ ವರ್ಗದವರು ಯುದ್ಧಾಳುಗಳು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಮುಂಡಾಲರು ಮತ್ತು ತತ್ಸಮಾನ ವರ್ಗದರೂ ಆಳುವ ಪಾಳೆಯಗಾರರ ಮೂಲದಾಳುಗಳಾಗಿ ಇದ್ದವರು, ಯುದ್ಧ ಇಲ್ಲದ ದಿನಗಳಲ್ಲಿ ಕೃಷಿಯಾಳುಗಳಾಗಿ ಒಡೆಯನ ಮನೆ ಮಗನಂತೆ ಬಾಳುತ್ತಿದ್ದರು. ಒಬ್ಬ ಪಾಳೆಯಗಾರನಿಗೂ ಮತ್ತೊಬ್ಬ ಪಾಳೆಯಗಾರನಿಗೂ ಆಗುವ ಕಲಹಗಳಲ್ಲಿ ಮೂಲದಾಳುಗಳಾದ ಮುಂಡಾಲರ ಪಾತ್ರವೇ ಮಹತ್ವದಾಗುತ್ತದೆ. ಸೋಲು ಗೆಲುವುಗಳು ಪಾಳೆಯಗಾರರ ಮಧ್ಯೆ ನಿರ್ಣಯವಾಗದೆ ಈ ಮೂಲದಾಳುಗಳ ಮಧ್ಯೆ ನಿರ್ಣಯವಾಗುತ್ತಿತ್ತು, ಪಾಳೆಯಗಾರರ ನಡುವಿನ ಸೋಲು ಮೂಲದಾಳುಗಳ ಸೋಲು ಆಗುತ್ತಿತ್ತು. ಅವಮಾನ ಗೌರವಗಳು

ಮೂಲದಾಳುಗಳಿಗೆ ಹೆಚ್ಚು ಅನ್ವಯವಾಗುತ್ತಿತ್ತು. ಸೋಲನ್ನು ಮೂಲದಾಳುಗಳು ಗಂಭೀರವಾಗಿ ಪರಿಗಣಿಸುತ್ತಿದ್ದರು.

ಮುಂಡಾಲರ ಸಾಂಪ್ರದಾಯಿಕ ಉಡುಗೆ

ಇವರ ಪುರುಷರು ಮೊಣಕಾಲಿನ ಮೇಲಿನ ತುಂಡು ಕಚ್ಚೆಯನ್ನು ತೊಡುತ್ತಿದ್ದರು. ಮೇಲೆ ತೋಳಿಲ್ಲದ ಕೋಟು. ಮದುಮಗನಿಗೆ ತಲೆಯ ಮೇಲೆ ತುರ್ಬಾಯಿ ಎಂಬ ಟೊಪ್ಪಿಗೆಯನ್ನು ಧರಿಸುತ್ತಿದ್ದರು. ಇಂತಹ ತುರ್ಬಾಯಿಯನ್ನು ಉಡುಪಿ ತಾಲೂಕಿನ ಯೆಡ್ತಾಡಿಯ ಹೆಗ್ಗಡೆ ಪಟ್ಟದ ಮನೆಯ ಹೆಗ್ಗಡೆಯ ಪಟ್ಟಾಭಿಷೇಕದಲ್ಲಿ ಕೂಡಾ ಕಟ್ಟುತ್ತಾರೆ. ಮುಂಡಾಲರ ಹೋರಾಟದ ಆಯುಧ ತಂದೆಲ್. ತಂದೆಲ್ ಎಂಬ ಪದವು ತುಳುವಿನ ಸಂದರ್ಭದಲ್ಲಿ ಹೋರಾಟದಲ್ಲಿ ಅನುರಣಿಸುತ್ತದೆ. ಇದನ್ನು 'ಗುದಿಗೆ' ಎಂದೂ ಕರೆಯುತ್ತಾರೆ. ಗುದಿಗೆಯ ಒಂದು ತುದಿಗೆ ತೂತು ಮಾಡಿ ಅದಕ್ಕೊಂದು ಹಗ್ಗವನ್ನು ಕುಣಿಕೆಯಂತೆ ಕಟ್ಟುತ್ತಾರೆ. ಆ ಹಗ್ಗದ ಕುಣಿಕೆಯನ್ನು ತೋಳಿನ ಒಳಗೆ ತೂರಿ ಹೆಗಲ ಮೇಲೆ ಹಾಕುತ್ತಾರೆ. ತಂದೆಲ್‌ಗೆ ಗೆಜ್ಜೆಕಟ್ಟಿ ಅಲಂಕಾರ ಮಾಡುತ್ತಿದ್ದರು ಎಂದು ಕೋಟಿ ಚೆನ್ನಯರ ಪಾಡ್ದನ ಕೂಡಾ ತಿಳಿಸುತ್ತದೆ.

ಕೋಲ

ತುಳುನಾಡಿನ ದೈವಾರಾಧನೆಗೆ ಸಂಬಂಧಿಸಿದಂತೆ 'ಕೋಲ' ಎಂಬ ವಿಶಿಷ್ಟ ಆಚರಣೆ ರಾತ್ರಿಯಿಡೀ ನಡೆಯುತ್ತದೆ. ತುಳುನಾಡಿನ ಆಡಳಿತಕ್ಕೂ ಆರಾಧನೆಗೂ ನೇರವಾದ ಸಂಬಂಧ ಇದೆ. ಆ ಕಾಲದ ಎಲ್ಲ ಯುದ್ಧಾಸ್ತ್ರಗಳು ಗ್ರಾಮದೈವ, ದೈವ ಮತ್ತು ಸೀಮೆ ದೈವಗಳ ಭಂಡಾರದಲ್ಲಿ ಇವೆ. ಈ ಕೋಲ ಕೂಡಾ ಕೆಲವರ್ಗದ ದೈವಗಳಿಗೆ ನೀಡುವ ಸೇವೆ; ಮುಂಡಾಲರು ಹಾಗೂ ಅವರ ಸಮಾನ ವರ್ಗವಾದ ನಲ್ಕೆಯವರು ಭಾವಹಿಸುವ ಆಚರಣೆ. ಮೇಲ್ವರ್ಗದ ದೈವಗಳಿಗೆ ಇವರ ಮೇಲ್ವರ್ಗವಾದ ಪಂಬದರು ಮಾಡುವ ಸೇವೆ ನೇಮ ಎಂದು ಕರೆಯಲ್ಪಡುತ್ತದೆ. ಇಂತಹ ಒಂದು ಕೋಲ ಗುಳಿಗ ಕೋಲ.ಗುಳಿಗವು ರಾಜನ್ ದೈವದ ದೂತ, ಸೇವಕ. ಗುಳಿಗನ ಕೋಲದಲ್ಲಿ ಬರುವ ಪಾಡ್ದನದಲ್ಲಿ ದೇವಾಸುರರ ಯುದ್ಧದ ವಿವರ ಇದೆ. ಯುದ್ಧ ಆರಂಭವಾಗುವ ಮುನ್ನ ಅರಸು ಮಗನಿಗೆ ಓಲೆ ಹೋಗುತ್ತದೆ. ಸಾವಿರಾಳುಗಳ ನಡುವೆ ನಿಂತ ಅರಸು ಮಗ 'ಎದುರುಗೆ ನಿಂತು ಹೋರಾಡುತ್ತೀರಾ' ಎಂದು ಕೇಳುತ್ತಾನೆ. ಅದಕ್ಕೆ ಸಾವಿರಾಳುಗಳು ಇಲ್ಲ ಮಾನ್ಯೆ ಹೋಗುತ್ತಾನೆ' ಎನ್ನುತ್ತಾರೆ. 'ಮಾನೆರ್' ಎಂಬ ವರ್ಗದವರೂ ಅಂಬೊಡಿ ಕಲದಲ್ಲಿ ಇಂದಿಗೂ ಸಾಂಕೇತಿಕ ಹೋರಾಟ ಮಾಡುತ್ತಾರೆ.

ಪಾಡ್ದನದ ಪಾಠ

೧	ಸಾರಗೊಂಡ ಅಸ್ಪೇರ್। ಸಾರಗೊಂಡೇರ್	ಸಾವಿರ ಕೂಡಿದರು ಅಸುರರು ಸಾವಿರ ಕೂಡಿದರು
	ಅಸುರೇರ್ ದೇವರ್‌ಲಾ ಕೂಡ್ಯೆರ್‌ಯೇ	ಅಸುರರು ದೇವರೂ ಕೂಡಿದರು
	ಕೂಡ್ಯಕ್ ಬತ್ತೆರ್ ಅಸುರೇರ್ ದೇಬೆರ್	ಕೂಡಿದರು ಬಂದರು, ಅಸುರರು ದೇವರು
	ಕೂಡ್ಯೆರ್ ಮದಿತ್ತೆರ್ ಬೂಮಿಟ್ ರಾಮಗಾಳಗ ಒಡ್ಡುಂಡುಯೇ	ಕೂಡಿದರು ಹೋರಾಡಿದರು ಭೂಮಿಯಲ್ಲಿ ರಾಮಕಾಳಗ ಆರಾಂಭವಾಯಿತು
೨	ಅರಸು ಮಗಗ್ ಬಿನ್ನಂತ ಓಲೆ ಬರೆಯೆರ್	ಅರಸು ಮಗ ಬಿನ್ನಹದ ಓಲೆ ಕಳಿಸಿದರು
	ಅರಸು ಮಗಗ್ ಬಿನ್ನಂತ ಓಲೆ ಬರೆಯಿನೊವು ನಾಣಾ	ಅರಸು ಮಗ ಬಿನ್ನಹದ ಓಲೆ ಬರೆದವರು ನಾಣಾ
	ಸಾರಾಲೆ ನಡುಟ್ ಬೂರೊಂಡುಯೇ (ಡಂಗ್ಗಗ್)	ಸಾವಿರಾಲ ಮಧ್ಯೆ ಸೇರಿದರು
	ಕೂಡ್ಯೆರ್ ದಂಡಗ್ ಎದ್ರ್ ನಿಕ್ಲುlಉಂತ್ಯಾರೋಯೋ	ಕೂಡಿದರು ಸೇನೆಗೆ ಎದುರಾಗಿ ನೀವು ನಿಲ್ಲುವಿರಾ
	ಎಂಕ್ಲಲತ್ತ್ ಬರೆಯೊ। ಮಾನ್ಯನ್ ಕಡುಪುಯೋ	ನಾವಲ್ಲ, ಬರಲಾರೆವು, ಮಾನೆರನ್ನು ಕಳಿಸಿ.......
	....	
	ಕೋಳಳೆಂದ್‌ಲಾ। ಪಣ್ಬರಾ ಕುಮಾರಾ	ಯುದ್ದೆ ವೆನ್ನುತ್ತಾರೆ, ಕುಮಾರ ಯುದ್ಧ
	ಕೋಳಬಿರಣೊಂತಾ । ಕೋಳಾಲೇ	ಯುದ್ಧ ವೀರನೇ, ಯುದ್ಧ
	ಕೋಳ ಬಿರಣೋಂತ ಕೋಟೆ ಕೋಲಲೇ	ಯುದ್ಧ ವೀರನೇ, ಕೋಟೆ ಯುದ್ಧ

ಮೇಲಿನ ಗುಳಿಗ ಪಾಡ್ದನವು ದೈವಾಸುರ ಯುದ್ಧದಲ್ಲಿ ಮುಂದೆ ನಿಂತು ಹೋರಾಡಲು ಸಾವಿರಾಳುಗಳು ಒಲ್ಲೆ ಎಂದಿದ್ದನ್ನು ಮುಂದೆ ನಿಂತು ಹೋರಾಡಲು 'ಮಾನೆರ್'ನ್ನು ಕಳುಹಿಸುವುದಾಗಿ ಹೇಳಿದ್ದನ್ನು ಗಮನಿಸಬಹುದು.

ತುಳುನಾಡಿನ ಶಾಸನಗಳಲ್ಲಿ ನಾಡ್ರ ಬಳಿಯ ಆಳುಗಳ ಪ್ರಸ್ತಾಪವೂ ಬರುತ್ತದೆ. ಶಾಸನಗಳ ಪ್ರಕಾರ ಅಂದಿನ ಎರ್ಮಾಲ್ ಹೆಗ್ಗಡೆಯವರ ಬಳಿ ನಾಡ್ರ ಬಳಿಯ ಐದುಸಾವಿರಾಳು ಇದ್ದರು. ಕುಂದಾಪುರದ ಕಡೆಯ ನಾಡ್ರಬಳಿಯರು ಹೆಚ್ಚಾಗಿ ಇದ್ದಾರೆ. ಸೆಟ್ಟಿ ಬಳಿಯರು ಎಂದೂ ಇವರನ್ನು ಗುರುತಿಸುತ್ತಾರೆ. ಇವರು ನಾಡವರು.

ಡಾ. ಹೆಚ್.ಎಸ್. ಉಷಾರಾಣಿ*

ಕಂಕರಿ - ಒಂದು ಸಾಂಸ್ಕೃತಿಕ ನೋಟ

ವಾದ್ಯಗಳನ್ನು ದೇವತಾರಾಧನೆ ಹಾಗು ಯುದ್ಧ ಪ್ರಾರಂಭಿಸುವಲ್ಲಿ, ಸತಿ, ಮಂಗಳಕಾರ್ಯ ಹಾಗೂ ಉತ್ಸವಗಳಲ್ಲಿ ಬಳಸುವುದು ವಾಡಿಕೆ. ಆಯಾ ಸನ್ನಿವೇಶಕ್ಕನುಗುಣವಾಗಿ ವಿವಿಧ ಸ್ವರೂಪದ ರಾಗ, ಧ್ವನಿಯನ್ನು ಹೊರಹೊಮ್ಮಿಸಲಾಗುತ್ತದೆ.

ವಾದ್ಯಗಳಲ್ಲಿ ನಾಲ್ಕು ವಿಧ : ತತ, ವಿತತ, ಶುಷಿರ ಮತ್ತು ಘನ. ಮೊದಲ ಮೂರು ವಾದ್ಯಗಳು ಶೃತಿಗೆ ಸಿಲುಕುವಂತದ್ದು, ಉದಾಹರಣೆಗೆ ತತ-ತಂತಿವಾದ್ಯ, ವಿತತ-ಚರ್ಮವಾದ್ಯ, ಶುಷಿರ -ಗಾಳಿ ಊದಿ ನಾದ ಹೊರಡಿಸುವಂತದ್ದು, ಘನವಾದ್ಯ- ಗಟ್ಟಿ ವಾದ್ಯ, ಎರಡು ಘನವಸ್ತುಗಳನ್ನು ಒಂದಕ್ಕೊಂದು ಹೊಡೆದು ಧ್ವನಿ ವ್ಯುತ್ಪತ್ತಿ ಮಾಡುವುದು, ಪ್ರಸ್ತುತ ಲೇಖನ ಘನ ವಾದ್ಯ ಗುಂಪಿಗೆ ಸೇರುವ ಕಂಕರಿಗೆ ಸಂಬಂಧಪಟ್ಟದ್ದಾಗಿದೆ. ಶಾಸನ ಸಾಹಿತ್ಯದಲ್ಲಿ ವಾದ್ಯಗಳ ಉಲ್ಲೇಖವಿದೆ. ಅವು ಪರೋಕ್ಷವಾಗಿ ವ್ಯಕ್ತಪಟ್ಟಿದೆ. ಉದಾಹರಣೆಗೆ, ಅರಸೀಕೆರೆ ತಾಲೂಕಿನ ಕಣಕಟ್ಟೆ ಗ್ರಾಮದ ಸಂಕೋಲೆ ಬಸವಣ್ಣ ದೇವಸ್ಥಾನದ ದಕ್ಷಿಣದ ಕಡೆನೆಟ್ಟಿರುವ ಶಿಲಾಸಾಸನದಲ್ಲಿ[೧] "ತತ ವಿತತ ಘನ.....ವಾದ್ಯ ವಾದನ" ಎಂಬ ಪ್ರಸ್ತಾಪವಿದ್ದು ಪರೋಕ್ಷವಾಗಿ ಬಹುತೇಕ ವಾದ್ಯಗಳ ಬಳಕೆಯಿದ್ದುದು ಸ್ಪಷ್ಟವಾಗುತ್ತದೆ. ಅದೇ ರೀತಿ ಶ್ರವಣಬೆಳಗೊಳದ ಗೊಮ್ಮಟೇಶ್ವರ ಸುತ್ತ ಹೊರಕೋಟೆಯ ಬಾಗಿಲಿನ ಬಲಗಡೆ ಬಂಡೆಯ ಮೇಲೆ ಪಾದಗಳ ಮೇಲ್ಭಾಗದಲ್ಲಿ ಉಕ್ತವಾಗಿರುವ ಸಂಕ್ಷಿಪ್ರ ಶಾಸನ ಪಾಠ[೨] ಹೀಗಿದೆ:

ಕೊಳಿಪಾಕೆ	**ಪಾದಗಳ ಕೆಳಗೆ**
ಮಾಣಿಕ್ಯದೇ	ಜಿನವರ್ಮನ ಕಂಕರಿಯ ಧ್ವನಿ
ವನ ಗುಡ್ಡ ಜಿನವ	ಕಿವಿವುಗೆ ದುರ್ಜ್ಜನಂಗೆ
ರ್ಮ ಜೋಗಿ ಕಂಕರಿ	ಭಯಮುಂ ಸುಜನಂಗನುರಾ
ಜಗದಾಳ ಮೊರಮೂ	ಗ ಮುಮದ ಈಸುಗುಂ ಘನವಾ
ರ ಆದಿನಾಥ ನಮೋಸ್ತು	ದದಿನೆನ್ನು ಹಂಸೆಗುಂ ನವಿಲಿಗುಂ

ಮೇಲಿನ ಶಾಸನ ಪಾಠದಿಂದ ಕೊಳ್ಳಿಪಾಕೆಯ ಮಾಣಿಕ್ಯ ದೇವರ ಶಿಷ್ಯ ಅಥವಾ ಭಕ್ತ ಜಿನವರ್ಮ ಜೋಗಿ ಕಂಕರಿ ನುಡಿಸುವಲ್ಲಿ ನಿಷ್ಣಾತನಾಗಿದ್ದ. ಜಗದಾಳ ಮೊರಮೂರ ಆದಿನಾಥನಿಗೆ ಕಂಕರಿ ಸೇವೆ ಸಲ್ಲಿಸುತ್ತಿದ್ದ. ಆತನ ಕಂಕರಿಯ ಧ್ವನಿ ದುರ್ಜನರಿಗೆ ಭೀತಿಯನ್ನು ಸಜ್ಜನರಿಗೆ ಅನುರಾಗವನ್ನು ಉಂಟು ಮಾಡುತ್ತಿತ್ತೆಂಬುದು ವೇದ್ಯವಾಗುತ್ತದೆ. ಅಲ್ಲದೆ ಜಿನವರ್ಮನ ಕಿರುಪರಿಚಯ ಸಿಗುತ್ತದೆ. ಅರ್ಥಾತ್ ಆತನ ಕೈಚಳಕದಿಂದ ಹೊರಡುತ್ತಿದ್ದ ಧ್ವನಿ ಆತ್ಮಾವಲೋಕನಕ್ಕೂ, ಆತ್ಮನಿವೇದನೆಗೂ ಪ್ರೇರಣೆ ನೀಡುತ್ತಿತ್ತು. ಇಂದಿಗೂ ಈ ದಿಸೆಯಲ್ಲಿ ಸಂಗೀತ ವಾದ್ಯಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಉಲ್ಲೇಖಿತ ಶಾಸನದಲ್ಲಿ ಕಂಕರಿಯ ರಚನಾ ವರ್ಣನೆ ಅಪೂರ್ಣವಾಗಿದೆ. ಕಂಕರಿ ಜನಪದ ಸಂಗೀತ ವಾದ್ಯ ಕಲೆಗಳಲ್ಲಿ ಒಂದು. ಪ್ರಸ್ತುತ ದಿನಗಳಲ್ಲಿ ಇದರ ಬಳಕೆ ಇದೆಯೇ ಅಥವಾ ಅಳಿದು ಹೋಗಿದೆಯೇ? ಅಥವಾ ವಾದ್ಯ ಮಾರ್ಪಾಟಾಗಿ ಬೇರೆ ಹೆಸರಿನಲ್ಲಿದೆಯೇ! ಎಂಬಿತ್ಯಾದಿ ಪ್ರಶ್ನೆಗಳಿಗೆ ಸೂಕ್ತ ಉತ್ತರ ಲಭ್ಯವಿಲ್ಲ. ಗ್ರಾಮ್ಯ ಸಂಸ್ಕೃತಿಯಡಿಯಲ್ಲಿ ಬಳಸಲ್ಪಡುತ್ತಿರುವ ಕಂಸಾಳೆ, ತಮ್ಮಟೆ, ಚಂಡೆಮದ್ದಳೆ, ಜಾನಪದ ಲೋಕದ ಜನಜೀವನವನ್ನು ಜೀವಂತವಾಗಿರಿಸಿದೆ. ಕಂಕರಿಯು ಅಂತಹ ಒಂದು ಜನಪದ ವಾದ್ಯ ಎಂಬುದು ಖಚಿತ.

ಡಾ. ಚಂದ್ರಶೇಖರ ಕಂಬಾರ[೩], ಡಾ. ಪುರಂದರ[೪] ಅವರು ತಮ್ಮ ಅಧ್ಯಯನದಲ್ಲಿ ಜನತೆಯ ಕಲೆಯ ವಿವಿಧ ಪ್ರಕಾರಗಳಿಗೆ ಹೆಚ್ಚು ಒತ್ತು ನೀಡಿದ್ದಾರೆ. ಆದರೆ ಕಂಕರಿ ಅವರ ಗಮನ ಸೆಳೆದಿಲ್ಲ. ಇತ್ತೀಚೆಗೆ ಡಾ. ಮಳಲಿ ವಸಂತಕುಮಾರ್[೫] ತಮ್ಮ 'ಹೊಯ್ಸಳ ಸಂಪದ' ಕೃತಿಯಲ್ಲಿ ಜೋಗಿ ಜನಾಂಗವನ್ನು ಪ್ರಸ್ತಾಪಿಸಿದ್ದರೂ, ಕಂಕರಿಯತ್ತ ಅಧ್ಯಯನ ನಡೆಸಿಲ್ಲ. ಇಂದಿಗೂ ಹಾಸನ ಜಿಲ್ಲೆಯಲ್ಲಿ ಜೋಗಿ ಪರಂಪರೆ ಮುಂದುವರೆದಿದೆ. ಅರ್ಜುನ ಜೋಗಿ, ಭೈರವಜೋಗಿ ಕಿನ್ನರಿ ಹಿಡಿದು ಬೀದಿಗೆ ಬಂದರೆಂದರೆ ಎಲ್ಲರ ಕಿವಿಗಳು ಅತ್ತ ವಾಲುತ್ತವೆ. ಅಲೆಮಾರಿಗಳಾದ ಇವರು ಒಂದು ನಿರ್ದಿಷ್ಟ ಪ್ರದೇಶದಲ್ಲಿದ್ದುಕೊಂಡು ಗುಂಪುಗುಂಪಾಗಿ ಇತರ ಭಾಗಗಳಿಗೆ ಸಂಚರಿಸುತ್ತಾರೆ. ಆದರೆ ಇವರು ನುಡಿಸುವ ಕಿನ್ನರಿ ಕಂಕರಿಯಲ್ಲ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ** (ಹತ್ತು) ೧೦. ಅರಸೀಕೆರೆ೮೪, ೧೨ನೇ ಶತಮಾನ

೨. ಅದೇ, ಸಂಪುಟ ೩, ಶ್ರವಣಬೆಳಗೊಳ ೪೩೨, ದೊಡ್ಡ ಬೆಟ್ಟ, ೧೨ನೇ ಶತಮಾನ

೩. ಡಾ. ಚಂದ್ರಶೇಖರ ಕಂಬಾರ., ೧೯೮೫, **ಕನ್ನಡ ಜಾನಪದ ವಿಶ್ವಕೋಶ**, ಸಂಪುಟ ೧-೨, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೪. ಎ.ಎಂ. ಪುರಂದರೆ., ೧೯೭೪, **ಭಾರತೀಯ ವಾದ್ಯಗಳು**, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೫. **ಹೊಯ್ಸಳ ಸಂಪದ**., ೧೯೯೬; (ಸಂ.) ಡಾ. ಮಳಲಿ ವಸಂತಕುಮಾರ್; ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಹಾಸನ.

* ೪೩೩, 'ಇ' ಬ್ಲಾಕ್, ಜೆ.ಸಿ. ನಗರ, ಮೈಸೂರು - ೫೭೦ ೦೦೮

ಡಾ. ಗುರುಪಾದ ಮರಿಗುದ್ದಿ*

ಗೋರಿವೇಂಟೆ - ಕೆಲವು ಟಿಪ್ಪಣಿಗಳು

ಮಾನವ ಚರಿತ್ರೆಯಲ್ಲಿ ಬೇಟೆಯು ಮಹತ್ವದ ಪಾತ್ರ ವಹಿಸುತ್ತದೆ. ಹಸಿವೆ ಹಿಂಗಿಸಲೆಂದು ಮನುಷ್ಯ ನಡೆಸಿರುವ ಪ್ರಯತ್ನಗಳನ್ನು ಮಾನವ ಶಾಸ್ತ್ರಜ್ಞರು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. ಅವು ಹೀಗಿವೆ:

೧. ಆಹಾರ ಸಂಗ್ರಹಣಾ ಗುಂಪುಗಳು ; ೨. ಬೇಟೆಗಾರಿಕೆಯ ಗುಂಪುಗಳು; ೩. ಒಕ್ಕಲುತನದ ಗುಂಪುಗಳು[೧]

ಬೇಟೆಯು ತೀರ ಪ್ರಾಚೀನ ಕಾಲದಿಂದಲೂ, ಮನುಷ್ಯನ ಆಹಾರ ಸಂಪಾದನೆಯ ಪ್ರಧಾನ ವೃತ್ತಿಯಾಗಿ, ಆತನ ಕೂಡು ಬದುಕಿಗೆ ಭದ್ರ ಬುನಾದಿ ಹಾಕಿದೆ. ನಂತರ ಆತ ಕೃಷಿಗೆ ತೊಡಗಿದ ಮೇಲೆ ಬೇಟೆಯು ಸಾಹಸದ ಕ್ರೀಡೆಯಾಗಿ, ಉಪವೃತ್ತಿಯಾಗಿ, ಮೋಜಿನ - ಹವ್ಯಾಸದ ಸಂಗತಿಯಾಗಿ ಉಳಿದುಬಂದಿದೆ. ಬೇಟೆಗಾರರು ಬೇಟೆಯಾಡಲು ಭಿನ್ನ ಭಿನ್ನ ವಿಧಾನಗಳನ್ನು ಅನುಸರಿಸುತ್ತಾರೆ. ಅಂತಹ ವಿಧಾನಗಳಲ್ಲಿ 'ಗೋರಿ' ಎಂಬ ಬೇಟೆಯು ಒಂದಾಗಿದ್ದು, ಕರ್ನಾಟಕದಲ್ಲಿ ಈ ಬಗೆಯ ಬೇಟೆ ಹಿಂದಿನಿಂದಲೂ ಪ್ರಚಲಿತದಲ್ಲಿತ್ತು. ಇದಕ್ಕೆ ಕೆಲವು ಆಧಾರಗಳು ಕನ್ನಡ ಕಾವ್ಯ ಕೃತಿಗಳಲ್ಲಿ ಕಾಣಸಿಗುತ್ತವೆ.

'ಗೋರಿ' ಪದಕ್ಕೆ ಹಲವು ಅರ್ಥಗಳಿವೆ. ಕಿಟಲ್‌ರು ತಮ್ಮ ಶಬ್ದಕೋಶದಲ್ಲಿ , ಗೋರು = to catch fish , ಕೋರು - ವಲೆ = a fish net , ಗೋರಿ = ಗೋರೆ, drawing, drawing in, ಅರ್ಥ ನೀಡುತ್ತಾರೆ.[೨] ಕೆಲವು ವಿದ್ವಾಂಸರು 'ಗೋರೆ' ಎಂದರೆ ಅದೊಂದು ಪ್ರಾಣಿಬೇಟೆಯ ವಿಧಾನವೆಂದೂ, ಪ್ರಾಣಿಗಳನ್ನು ಆಕರ್ಷಿಸುವ ಹಾಡು, ಮೋಸದ ಆಕರ್ಷಣೆ, ಸಮಾಧಿ, ಹಿಂಸೆ ಎಂಬುದಾಗಿ ಅಭಿಮತ ಪಡುತ್ತಾರೆ. ಶಿವರಾಮ ಕಾರಂತರೂ ಇದೇ ವಿಚಾರವನ್ನು ಅನುಮೋದಿಸುತ್ತಾರೆ.[೩] 'ಗೋರ್' ಎಂಬ ಮೂಲಪದದಿಂದ ಗೋರು, ಗೋರಿ ಪದಗಳು ಬೆಳೆದುಬಂದಿದ್ದು, ಅವುಗಳು ಸೆಳೆ, ಆಕರ್ಷಿಸು, ಸಮಾಧಿ, ಹಿಂಸೆ, ಬರುವಂತೆ ಮಾಡು, ಎಂದು ಸಂದರ್ಭಾನುಸಾರ ಅರ್ಥ ನೀಡುತ್ತವೆ.

ಪಂಪಕವಿಯ 'ಆದಿಪುರಾಣ ' ಕಾವ್ಯದಲ್ಲಿ ಬರುವ ಒಂದು ಪದ್ಯ ಹೀಗಿದೆ :

ದೊರೆಯಲ್ಲದಂಗ್ ನುಡಿವುದು
ಪುರುಳಿಲ್ಲದ ಮಾತನೆಮ್ಮೊಳಂ ನುಡಿವುದೆ? ಪೇ
ಯಿರಳಿಗೆ ಪಾಡುವ ಗೋರಿಯ
ನರಣ್ಯದೊಳ್ ಮೃಗವಿರೋಧಿಗಂ ಪಾಡುವುದ? [೪]

ಭರತನು ಚಕ್ರವರ್ತಿಯಾಗುವ ಮಹತ್ವಾಕಾಂಕ್ಷೆಯಿಂದ ಅನೇಕ ರಾಜರುಗಳನ್ನು ಗೆಲ್ಲುತ್ತಾನೆ. ಕೊನೆಗೆ ತನ್ನ ತಮ್ಮಂದಿರಿಗೆಲ್ಲ ಓಲೆ ಕಳಿಸಿ, ರಾಜ್ಯವನ್ನೊಪ್ಪಿಸಿ ಶರಣಾಗಲು ಕೇಳುತ್ತಾನೆ. ಬಾಹುಬಲಿಗೆ ಇದರಿಂದ ತುಂಬ ಕೋಪ ಬರುತ್ತದೆ. ಆಗ ಆತ ತನ್ನ ಕೋಪದಲ್ಲಿ " ಏನು, ಕಾಡಿನಲ್ಲಿ ಜಿಂಕೆಗಾಗಿ ಹಾಡಬಹುದಾದ 'ಗೋರಿ ' ಯನ್ನು ಸಿಂಹಕ್ಕೆ ಹಾಡಬಹುದೆ? ಇತರರಿಗೆ ಹೇಳುವಂತೆ ಭರತ ನನ್ನಲ್ಲಿ ಈ ಮಾತು ಹೇಳಬಹುದೇ?" ಎನ್ನುತ್ತಾನೆ. ಇಲ್ಲಿಯ 'ಗೋರಿ' ಪದದ ಬಳಕೆಯ ಸಂದರ್ಭ ಗಮನಿಸಿದರೆ ಎರಡು ವಿಚಾರಗಳು ಸ್ಪಷ್ಟವಾಗುತ್ತವೆ.

೧. ಬೇಟೆಗಾಗಿ ಜಿಂಕೆಗೆ 'ಗೋರಿ' ಹಾಡುತ್ತಿದ್ದರು. ಜಿಂಕೆಗಳನ್ನು ಬೇಟೆಯಾಡುವ ಒಂದು ಬಗೆಯ ಹಾಡು ಹಾಡುವುದು ಅಂದಿನ ಕಾಲಕ್ಕೆ ಪ್ರಚಲಿತದಲ್ಲಿತ್ತು.

೨. ಜಿಂಕೆಗಳ ಬೇಟೆಗಾಗಿ ಗೋರಿಯ ಹಾಡು ಭಿನ್ನವಾಗಿತ್ತು. ಅದರಂತೆ ಸಿಂಹದಂತಹ ಪ್ರಾಣಿಗಳಿಗೆ ಬೇರೆ ಬಗೆಯ ಗೋರಿಯ ಹಾಡು ರೂಢಿಯಲ್ಲಿತ್ತು. ಒಂದೊಂದು ಜಾತಿಯ ಪ್ರಾಣಿಗಳಿಗೆ ಈ ಹಾಡು ಬೇರೆ ಬೇರೆ ಆಗಿರಬಹುದು.

ಗೋರಿಬೇಟೆಯ ಅರ್ಥಪೂರ್ಣ ಬಣ್ಣನೆಯ ಜನ್ನಕವಿಯ 'ಯಶೋಧರಚರಿತೆ'ಯಲ್ಲಿ ಬಂದಿದೆ. ಅಮೃತಮತಿ ಮತ್ತು ಯಶೋಧರ, ಈ ಇಬ್ಬರು ರಾಜದಂಪತಿಗಳ ದಾಂಪತ್ಯದ ಬಗೆಗೆ ಹೇಳುತ್ತ ಕವಿ ಹೇಳುವುದಿಂತು ;

ಅಮೃತಮತಿ ಗಡ ಯಶೋಧರ
ನ ಮನಃಪ್ರಿಯೆ ಆಕೆ ದೀವಮಾಗೆ ಪುಳಿಂದಂ
ಸುಮನೋಬಾಣಂ ತದ್ ಭೂ
ರಮಣನನೊಲಿದಂತೆ ಗೋರಿಗೊಳಿಸುತ್ತಿರ್ಕುಂ.[೫]

ಯಶೋಧರನ ಮನಸೆಳೆದ (ಮನಃಪ್ರಿಯೆ) ಅಮೃತಮತಿಯು ಒಂದು 'ದೀವ' (ಆಕರ್ಷಣೆ) ಆಗಿದ್ದಳು. ಅಲ್ಲಿ ಮನ್ಮಥನಾದ

* ಕವಿಶೈಲ, ನಮಾಜಮಾಳ, ಮಹಾದೇವ ಗುಡಿ ಹತ್ತಿರ, ಸಂಕೇಶ್ವರ - ೫೯೧ ೩೧೩.

ಬೇಟೆಗಾರ, ಆಕೆ ರಾಜನನ್ನು ಒಲಿದಂತೆ ಗೋರಿಗೊಳಿಸುತ್ತಿದ್ದನು. ದಾಂಪತ್ಯದ ಸೂಕ್ಷ್ಮ ವಿಷಮತೆಯನ್ನು, ಮುಂಬರುವ ಅಪಾಯ ವನ್ನು ಬೇಟೆಯ ಸಂಕೇತದ ಮೂಲಕ ಕವಿ ಇಲ್ಲಿ ಅತ್ಯಂತ ಧ್ವನಿಪೂರ್ಣವಾಗಿ ಹೇಳಿದ್ದಾನೆ. 'ಗೋರಿಗೊಳಿಸು' ಎಂಬ ಪದದ ಬಳಕೆ, ಅದರ ಹಿಂದಿರುವ ಬೇಟೆಯ ಕಲ್ಪನೆಯನ್ನು ರೂಪಕಕ್ಕೆ ಸೂಕ್ತವಾಗಿ ಬಳಸಲಾಗಿದೆ.

ಕನ್ನಡದ ಅನೇಕ ಕಾವ್ಯಗಳಲ್ಲಿ ಗೋರಿ ಬೇಟೆಯ ಉಲ್ಲೇಖ ಕಾಣಿಸಿಕೊಂಡಿದೆ. ಬಸವಣ್ಣನವರ ವಚನವೊಂದರಲ್ಲಿ ಮೃಗ 'ಗೋರಿಗೊಳಗಾಗದಯ್ಯ' ಎಂಬ ಪ್ರಯೋಗವಿದೆ. ರಾಘವಾಂಕನ ಹರಿಶ್ಚಂದ್ರ ಕಾವ್ಯ, ಮಲ್ಲಿಕಾರ್ಜುನ ಕವಿಯ ಸೂಕ್ತಿಸುಧಾರ್ಣವಂ, ಚೆಂಡರಸನ ನಳಚಂಪು, ಷಣ್ಮುಖ ಶಿವಯೋಗಿಯ ಅಖಂಡೇಶ್ವರ ವಚನಗಳಲ್ಲಿ 'ಗೋರಿವೇಂಟೆ ' ಕಾಣಿಸಿಕೊಂಡಿದೆ. ಇದರಿಂದಾಗಿ ಕ್ರಿ.ಶ ಹತ್ತನೆಯ ಶತಮಾನದಿಂದ ಹದಿನೆಂಟನೆಯ ಶತಮಾನದ ವರಿಗೆ ಈ ಬೇಟೆ ಅಸ್ತಿತ್ವದಲ್ಲಿತ್ತೆಂದು ಕಾವ್ಯಕೃತಿಗಳು ಸಾಕ್ಷಿ ನೀಡುತ್ತವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ, ಗೋರಿಬೇಟೆಯ ಅಪ ರೂಪದ ಚಿತ್ರಣವು ಕುವೆಂಪು ಅವರ 'ಕಾನೂರು ಹೆಗ್ಗಡತಿ'ಯ ಮೂಲಕ ಕಾಣಿಸಿಕೊಂಡಿದೆ. ಕಾನೂರು ಸೇರೆಗಾರರಾದ ರಂಗಪ್ಪ ಸೆಟ್ಟರು ವಿಭಿನ್ನ ತೆರನಲ್ಲಿ ಕಾಡುಹುಂಜವನ್ನು ಬೇಟೆಯಾಡುತ್ತಾರೆ. ಮುಂಜಾನೆಯ ಹೊತ್ತಿನಲ್ಲಿ ಕಾಡುಹುಂಜವು ಬೆಟ್ಟದಿಳಿಜಾರಿನಲ್ಲಿ ಹುಳು-ಹುಪ್ಪಟೆ ತಿನ್ನುತ್ತಾ ನಡುನಡುವೆ 'ಜೊತೆ'ಗಾಗಿ ಕೂಗುತ್ತಾ ಅಲೆಯುತ್ತಿತ್ತು. ದೂರದಿಂದ ಕಾಡುಕೋಳಿಯ ಮಾರುತ್ತರ ಕೇಳಿಸುತ್ತದೆ. ಆ ಧ್ವನಿಗೆ ಮೋಹಗೊಂಡ ಕಾಡುಹುಂಜ ಓಡಿ ಬರುತ್ತದೆ . ಕೋಳಿಯ ಧ್ವನಿ ಬರುತ್ತಿದ್ದ, ಪೊದೆಯ ಹತ್ತಿರ ಅದು ಕಾತರದಿಂದ ಸುಳಿಯುತ್ತದೆ. ತಕ್ಷಣ ಪೊದೆಯಲ್ಲಿ ಅಡಗಿ ಕೂತು ಕಾಡುಕೋಳಿಯಂತೆ ಕೂಗುತ್ತಿದ್ದ ರಂಗಪ್ಪಸೆಟ್ಟರು ಕಾಡುಹುಂಜವನ್ನು ಕೇಪಿನ ಕೋವಿಯಿಂದ ಹೊಡೆದುಹಾಕಿಬಿಡುತ್ತಾರೆ. ಇದು ಗೋರಿಯ ವಿಧಾನದಿಂದ ಕಾಡುಹುಂಜ ಬೇಟೆಮಾಡಿದ್ದಕ್ಕೆ ಒಂದು ನಿದರ್ಶನ.[೬]

ಕರ್ನಾಟಕದ ಮಲೆನಾಡಿನಲ್ಲಿ ಈ ಬೇಟೆ ಮೊನ್ನೆ ಮೊನ್ನೆಯ ವರೆಗೂ ಪ್ರಚಲಿತದಲ್ಲಿತ್ತು. "ಬೇಟೆಯ ಪ್ರಾಣಿಗಳಂತೆ ಕೂಗುತ್ತಾ ಅವುಗಳನ್ನು ಹತ್ತಿರಕ್ಕೆ ಸೆಳೆದು, ಮರುಳು ಮಾಡಿ ಕೊಲ್ಲುವ ತಂತ್ರವೂ ಇವರಿಗೆ ತಿಳಿದಿದೆ"[೭] -ಈ ವಿದ್ವಾಂಸರ ಹೇಳಿಕೆ ಗೋರಿ ಬೇಟೆಯನ್ನು ಕುರಿತಾಗಿ ಹೇಳಿದಂತಿದೆ.

ಈ ಎಲ್ಲಾ ವಿವೇಚನೆಯಿಂದ ತಿಳಿದು ಬರುವ ವಿಚಾರವೆಂದರೆ 'ಗೋರಿ' ಬೇಟೆಯ ಪ್ರಾಚೀನಕಾಲದಿಂದ ಆಧುನಿಕ ಕಾಲದವರೆಗೆ ಬೇಟೆಗಾರರಲ್ಲಿ ಪ್ರಚಲಿತದಲ್ಲಿತ್ತು ಎಂಬುದು. ಕಾಡಿನ ಪ್ರಾಣಿಗಳನ್ನು ಬೆನ್ನಟ್ಟಿ, ಅಲೆದು, ಶೋಧಿಸಿ, ಅಟ್ಟಿಸಿಕೊಂಡು ಹೋಗಿ ಆಡುವ ಬೇಟೆಗೆ ವಿರೋಧವಾಗಿ ಈ ಬೇಟೆ ಕಂಡುಬರುತ್ತದೆ. ಬೇಟೆಗಾರ ತಾನಿರುವಲ್ಲಿ ಪ್ರಾಣಿ ಬರುವಂತೆ ಮಾಡಿ ಕಿರಿದಂತರದಿಂದ ಬೇಟೆಯಾಡುವ ವಿಧಾನವೇ 'ಗೋರಿವೇಂಟೆ'. ಕಾಡು ಪ್ರಾಣಿಗಳನ್ನು ಕರೆಯಲು ಅವುಗಳ ಧ್ವನಿ ಅನುಕರಿಸಬೇಕಾಗುತ್ತದೆ.

ಇಲ್ಲಿ ಬೇಟೆಗಾರನಿಗೆ ಪ್ರಾಣಿಗಳ ಧ್ವನಿಯ ಅಣಕು ಸಾಮರ್ಥ್ಯ, ಪ್ರಾಣಿಗಳ ಸ್ವಭಾವ ಜ್ಞಾನ, ಅವುಗಳ ಕಾಮೋತ್ತೇಜನೆಯ ಸಮಯ-ಸಂದರ್ಭಗಳ ಪರಿಚಯ ಅಗತ್ಯವಾಗಿವೆ. ಗೋರಿಬೇಟೆಯು ವಿಶೇಷವಾಗಿ ಜಿಂಕೆ, ಕಡವೆ, ಸಂಬಾರದಂತಹ ಸಾಧು ಪ್ರಾಣಿಗಳಿಗೆ ಸೂಕ್ತವಾಗಿದೆ. ಹೆಚ್ಚಿನ ನಿದರ್ಶನಗಳು ಜಿಂಕೆ ಬೇಟೆಯ ಬಗೆಗೆ ವರ್ಣಿತಗೊಂಡಿವೆ. ಜಿಂಕೆಗಳು ಜೊತೆಗಾಗಿ ಕಾತರಿಸುವ ಸಂದರ್ಭದಲ್ಲಿ, ಬೇಟೆಗಾರ ಹೊಂಚಿನಿಂದ ಕಾದುಕೂತು ಗೋರಿ ಬೇಟೆಯನ್ನು ಆಡುವುದು ಸಾಮಾನ್ಯವೆನಿಸಿತ್ತು.

ಗೋರಿಬೇಟೆ ಇಲ್ಲವೆ ಗೋರಿವೇಂಟೆ ಎಂದು ಕರೆಯುವ ಈ ಬೇಟೆಗೆ ಕೆಲವೆಡೆಗಳಲ್ಲಿ 'ಕರಬೇಟೆ ' ಎಂದೂ ಹೆಸರಿತ್ತು. ಕೂಗಿ ಕರೆದು ಬೇಟೆಯಾಡುವುದರಿಂದ ಅಂಥ ಹೆಸರು ಇದಕ್ಕೆ ಬಂದಿರಬೇಕು.

ಹಲವು ಕಾವ್ಯಗಳಲ್ಲಿ ಈ ಬೇಟೆಯು 'ಬೇಟ' ದ ಸಂಕೇತ ಪಡೆದಿದೆ. ಯಶೋಧರ ಚರಿತೆಯಲ್ಲಿ ಅದು ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ.

ಗೋರಿ ಬೇಟೆಯು ಕೆಲವು ಸಂದೇಹ, ಸಮಸ್ಯೆಗಳನ್ನೂ ಎತ್ತುತ್ತದೆ. ಈ ಬೇಟೆಯಲ್ಲಿ ಬೇಟೆಗಾರ ಧ್ವನಿ ಅನುಕರಿಸಿ ಬೇಟೆ ಆಡುತ್ತಿದ್ದನೇ ? ಅಥವಾ ಕಾಡುಪ್ರಾಣಿ ಸೆಳೆಯಲು ಒಂದು ಪಳಗಿದ 'ದೀಹ' ಇಲ್ಲವೆ 'ದೀವ' ಪ್ರಾಣಿಯೊಂದು ಬಳಕೆಯಾಗುತ್ತಿತ್ತೆ? 'ಗೋರಿಬಲೆ'ಯ ಪ್ರಸ್ತಾಪ ಹರಿಹರ- ರಾಘವಾಂಕರ ಕಾವ್ಯಗಳಲ್ಲಿ ಕಂಡುಬರುತ್ತದೆ. ಇಂತಹ ಬಲೆ ಹೇಗಿತ್ತು, ಇದರ ಬಳಕೆಯನ್ನು ಎಲ್ಲಿ ಮಾಡುತ್ತಿದ್ದರು? ದೀಹದ ಬೇಟೆ, ಸನ್ನೆಬೇಟೆಗಳಿಗೂ, ಗೋರಿಬೇಟೆಗೂ ಇರುವ ಸಾಮ್ಯ-ವ್ಯತ್ಯಾಸಗಳಾವವು? ಇಂತಹ ಪ್ರಶ್ನೆಗಳಿಗೆ ಪರಿಹಾರ ಕಾಣಲು ಹೆಚ್ಚಿನ ಆಧಾರಗಳ, ಅಧ್ಯಯನದ ಅಗತ್ಯವಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Paul Radin., 1953, *The world of primitive man* : P. 112
2. Kittels *Kannada - English Dictionary.*, Vol.1969, P. 160
೩. **ಸಿರಿಗನ್ನಡ ಅರ್ಥಕೋಶ.**, ೧೯೬೨, ಶಿವರಾಮ ಕಾರಂತ (ಸಂ.) : ಪು. ೧೭೦
೪. **ಪಂಪ ಕವಿಯ ಆದಿಪುರಾಣ.**, (ಸಂ.) ಎಲ್. ಬಸವರಾಜು : ಆ-೧, ಪ ೭೯ (೧೯೭೬)
೫. **ಜನ್ನನ ಯಶೋಧರ ಚರಿತೆ.**, (ಸಂ.) ಕ.ವೆಂ. ರಾಘವಾಚಾರ್ : ಆ - ೧ ಪ. ೭ (೧೯೬೧)
೬. **ಕುವೆಂಪು.**, (೧೯೩೮), **ಕಾನೂರು ಸುಬ್ಬಮ್ಮ ಹೆಗ್ಗಡತಿ** : ಪು. ೪೭
೭. ಅಂಬಳಿಕೆ ಹಿರಿಯಣ್ಣ., (೧೯೭೮), **ಮಲೆನಾಡ ಜನಪದ ಸಂಪ್ರದಾಯಗಳು** : ಪು. ೯೧

ಪ್ರೊ. ಎಲ್.ವಿ. ಪಾಟೀಲ*

ಹುಕ್ಕೇರಿ ತಾಲೂಕಿನ ಜನಪದ ಸಾಹಿತ್ಯ ಮತ್ತು ಕಲೆಗಳ ಕೊಡುಗೆ

ಜನಪದ ಸಾಹಿತ್ಯ ಎಲ್ಲ ಪ್ರಾಂತಗಳಲ್ಲಿಯೂ ದೊರೆಯುವಂತಹುದು. ಇದು ಯಾವುದೇ ಪ್ರಾಂತಪ್ರದೇಶಗಳಿಗೆ ಮೀಸಲಾದುದಲ್ಲ. ಅದರೆ ಪ್ರಾದೇಶಿಕವಾಗಿ ಕೆಲವು ಭಿನ್ನ ಭಿನ್ನ ಸಾಹಿತ್ಯಿಕ ಪ್ರಯೋಗ ಹಾಗೂ ವಿವಿಧ ಕಲೆಗಳ ಪ್ರಕಾರಗಳಿಂದ ಸ್ವಂತಿಕೆಯನ್ನು ಹೊಂದಿ ವೈಶಿಷ್ಟ್ಯಪೂರ್ಣವಾಗಿರುವುದು ಕಂಡುಬರುತ್ತದೆ.

'ಲಾವಣಿ' ಜನಪದ ಸಾಹಿತ್ಯದ ಜೀವನಾಡಿ ಎಂದು ಹೆಗ್ಗಳಿಕೆ ಪಡೆದಿದೆ. ಗಂಡು ಇಲ್ಲವೆ ಹೆಣ್ಣು ಹೆಚ್ಚುಮಾಡಿ ಹಾಡುವ ಕಲ್ಲಿ-ತುರಾಯಿ, ಹರದೇಶಿ-ನಾಗೇಶಿ, ಸವಾಲು-ಜವಾಬ್ ಹಾಡುಗಳು, ಪುರುಷ-ಪ್ರಕೃತಿ, ಶಿವ-ಶಕ್ತಿ, ಗಂಡು-ಹೆಣ್ಣುಗಳ ಹೆಚ್ಚುಗಾರಿಕೆಯನ್ನು ವ್ಯಕ್ತಗೊಳಿಸುವುದರ ಮೂಲಕ ಅಧ್ಯಾತ್ಮದ ಅರಿವನ್ನು ಉಂಟುಮಾಡುವ ನೀತಿಪರ ಹಾಡುಗಳು ಗಮನಾರ್ಹವಾಗಿದೆ.

ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯ ಬಾಳಗೋಪಾಳ ಲಾವಣಿ ಪದಗಳ ರಚನೆ ಮತ್ತು ಹಾಡುಗಾರಿಕೆಯಲ್ಲಿ ಹೆಸರು ಗಳಿಸಿದ್ದಾತ.

ಬೆಲ್ಲದ ಬಾಗೇವಾಡಿಯ ಕವಿ ಬಾಳಗೋಪಾಳ ಸುಪ್ರಸಿದ್ಧ ಲಾವಣಿಕಾರನಾಗಿದ್ದಾನೆ. ಕ್ರಿ. ಶ. ೧೮೩೦ ರಿಂದ ೧೯೧೦, ಈತ ಬದುಕಿದ ಕಾಲ. ನೂರಾರು ಲಾವಣಿಗಳನ್ನು ಬರೆದಿದ್ದನೆಂದು ಪ್ರತೀತಿ. ಕನ್ನಡವಲ್ಲದೇ ಮರಾಠಿಯಲ್ಲಿಯೂ ಲಾವಣಿಗಳನ್ನು ಬರೆದಿದ್ದಾನೆ. ಪಾರಿಜಾತ ನಾಟಕವನ್ನು ರಚಿಸಿದ್ದನೆಂದು ಗೊತ್ತಾಗಿದೆ. ಅದರೆ ಹಸ್ತಪ್ರತಿ ದೊರೆತಿಲ್ಲ ಎಂದು ಡಾ. ನಿಂಗಣ್ಣ ಸಣ್ಣಕ್ಕಿಯವರು ಬಾಳಗೋಪಾಳನ ಲಾವಣಿಗಳೆಂಬ ಸಂಗ್ರಹದ ಗ್ರಂಥದಲ್ಲಿ ಹೇಳಿದ್ದಾರೆ. ಕುದುರೆ ಮೇಲೆ ಕುಳಿತು ಲಾವಣಿ ಹಾಡುವುದಕ್ಕೂ. ನಾಟಕ ಆಡುವುದಕ್ಕೂ ಅನೇಕ ದಿನಗಳವರೆಗೆ ದೂರದ ಆಮಂತ್ರಣ ಸ್ವೀಕರಿಸಿ ಹೋಗಿ ಬರುತ್ತಿದ್ದನು. ಉತ್ತರ ಕರ್ನಾಟಕ ಪ್ರದೇಶವಲ್ಲದೆ ಕೊಲ್ಹಾಪೂರ, ಪುಣೆ, ಮುಂಬೈಗಳಲ್ಲಿಯೂ ಲಾವಣಿ ಗೋಷ್ಠಿಗಳನ್ನು ನಡೆಸಿ ಹೆಸರು ಮಾಡಿದ್ದಾನೆ. ಅಧ್ಯಾತ್ಮಿಕ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಈ ಮೊದಲಾದ ಕುರಿತು ಲಾವಣಿ ರಚಿಸಿದ್ದಾನೆ . ಈಗಲೂ ಈತನ ಲಾವಣಿಗಳನ್ನು ಬೆಲ್ಲದ ಬಾಗೇವಾಡಿ, ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರ, ಕುಡಚಿ, ಮದರಖಂಡಿ, ಜಮಖಂಡಿ, ಬೆಳೆಗಾಂವ ಮೊದಲಾದ ಭಾಗದ ಲಾವಣಿ ಹಾಡುಗಾರರು ಹಾಡುತ್ತಿರುತ್ತಾರೆ.

ಪ್ರೊ. ಕೆ. ಜಿ. ಕುಂದಣಗಾರರ ಮೇಲೆ ಬಾಳಗೋಪಾಳನ ಲಾವಣಿಗಳು ಅಗಾಧ ಪ್ರಭಾವವನ್ನು ಬೀರಿವೆ. ಹೀಗೆ ಸಾಹಿತ್ಯ ತಜ್ಞರಿಗೆ ಮತ್ತು ಜನಸಾಮಾನ್ಯರಿಗೆ ತನ್ನ ಲಾವಣಿ ಸಾಹಿತ್ಯದ ಮೂಲಕ ಬಾಳಗೋಪಾಳ ಮೆಚ್ಚುಗೆಯ ಮತ್ತು ಮರೆಯಲಾಗದ ಜಾನಪದ ಕವಿಯಾಗಿದ್ದಾನೆ; ಹುಕ್ಕೇರಿ ತಾಲೂಕಿನ ಶಿಷ್ಟ ಸಾಹಿತ್ಯ ಪ್ರಾರಂಭವಾಗುವ ಮೊದಲು ಜಾನಪದ ಸಾಹಿತ್ಯ ಸೃಷ್ಟಿ ಮಾಡಿ ತಾಲೂಕಿನ ಪ್ರಥಮ ಜನಪದ ಕವಿಯಾಗಿದ್ದಾನೆ.

ಹುಕ್ಕೇರಿ ತಾಲೂಕಿನಲ್ಲಿ ಲಾವಣಿಕಾರರ ಅನೇಕ ತಂಡಗಳು ಸ್ತ್ರೀ ನೀತಿಬೋಧೆ, ದೇಶಭಕ್ತಿ, ಸಾಮಾಜಿಕ, ಐತಿಹಾಸಿಕ ಸಂಗತಿಗಳ ಹಾಡುಗಳನ್ನು ಈಗಲೂ ತಾಲೂಕಿನ ತುಂಬ ಹಾಡುತ್ತಲಿದ್ದಾರೆ. ಅಮ್ಮಣಗಿಯ ಹನೀಪ ಜಕಾತಿ, ಶಿವಚಂದ್ರ ದೇಸಾಯಿ, ಭೀಮಪ್ಪ ಮಾದರ ಈ ಮೇಳಗಳು ಹೆಚ್ಚು ಪ್ರಸಿದ್ಧಿಯಲ್ಲಿವೆ. ಯಾದಗೂಡದ ಶಿವಪ್ಪ, ಅರ್ಜನವಾಡದ ಎಲ್ಲಪ್ಪ ದಾಸರ, ನೇರ್ಲಿಯ ರಾಜು, ನಿಡಸೋಸಿಯ ತಳವಾರ ಲಗಮಪ್ಪ, ಗುಡಸದ ಶಿವುಬಾಯೀ ಮೊದಲಾದವರು ಗಂಡು ಹೆಚ್ಚೆಂದು ಹೇಳುವ ಸಂಪ್ರದಾಯದವರಾಗಿದ್ದಾರೆ. ಅರ್ಜುನವಾಡದ ಪದವ್ವಾ, ಮುಗಳಿ ಕಾಶವ್ವಾ ಮೊದಲಾದವರು ನಾಗೇಶಿ ಸಂಪ್ರದಾಯದವರಾಗಿದ್ದಾರೆ. ಲಾವಣಿಕಾರರಲ್ಲಿ ಹಂದಿಗೂಡದ ಬಾಳಕು ಥೋರಾತ್, ಸ್ವರ ಮಾಧುರ್ಯತೆಯಿಂದ ಜನಮನ ರಂಜಿಸಿ ಹೆಸರು ಗಳಿಸಿದ್ದಾನೆ.

ರಾಧಾನಾಟ : ಹುಕ್ಕೇರಿ ತಾಲೂಕಿನ ಅಮ್ಮಣಗಿಯ ಸುಬ್ಬರಾವ್ ಅವರ ನಟನಾ ಕೌಶಲ್ಯದಿಂದ ಈ ಆಟವು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಒಂದುಕಾಲದಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿತ್ತು. ಮೂಲತಃ ಯಡೂರದವರಾದ ಅಮ್ಮಣಗಿಯ ಇನಾಮದಾರ್ ಮನೆತನದ ಕಾರುಭಾರಿಗಳಾಗಿ ಸೇವೆ ಸಲ್ಲಿಸಿದ ಮೋತದಾರ ಅಜ್ಜಾ ಎಂಬುವರೇ ರಾಧಾನಾಟದ ಕರ್ತೃಗಳಾಗಿದ್ದು, ಸುಬ್ಬರಾವ್ ಅವರಿಗೆ ಆಡಲು ಬರೆದು ಕೊಟ್ಟರೆಂದು ಅಮ್ಮಣಗಿಯ 'ಸ್ಟೇಜ್ ಟೈಗರ್' ಬಿರುದಿನ ಬಾಬುರಾವ್ ದೇಸಾಯಿಯವರು ಲೇಖನವೊಂದರಲ್ಲಿ ಹೇಳಿದ್ದಾರೆ. ರಾಧಾನಾಟ ಆಡುವುದರಲ್ಲಿ ಅಮ್ಮಣಗಿಯ ಅಭಿಜಾತ ನಟ ಸುಖೀರಾಮನು ಪ್ರಸಿದ್ಧಿ ಪಡೆದಿದ್ದನು. ಈಗಲೂ ಈ

* ಸಂಕೇಶ್ವರ-೫೯೧ ೩೧೩.

ಭಾಗದಲ್ಲಿ ಈ ಆಟ ಆಡುತ್ತಿರುವ ಮೇಳಗಳಲ್ಲಿ ಬಸ್ಸಾಪೂರದ ರಾಯಗೌಡ ಪಾಟೀಲ, ಹುಕ್ಕೇರಿಯ ಕಾಡಪ್ಪ ಉಪ್ಪಾರ ಇವರು ಪ್ರಸಿದ್ಧರು. ಅಲ್ಲದೇ ನಿಡಸೋಸಿಯ ದುಂಡಪ್ಪ ಬಂತಿ, ನಿಂಗಪ್ಪ ಮಾಳಿ, ನಿಂಗಪ್ಪ ಕಂಕಣವಾಡಿ ಇವರು ಹೆಸರುಗಳಿಸಿದ್ದಾರೆ. ಬೆಂಡಿಗೇರಿ ಗೌಡಪ್ಪ ಧರ್ಮದೇವತೆ, ಕುಡಚಿ ಮಲ್ಲಪ್ಪ ಚಿಲ್ಲಾಳ, ಮುತನಾಳದ ಮಲ್ಲಪ್ಪ ಗುರುಭಕ್ತ ಎಂಬ ದಪ್ಪಿನಾಟ ರಚಿಸಿ ಹೆಸರು ಮಾಡಿದ್ದಾರೆ.

ಪಾರಿಜಾತ : ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣ ಬರೆದಿದ್ದ ಶ್ರೀಕೃಷ್ಣ ಪಾರಿಜಾತದ ಹಾಡುಗಳನ್ನಾಧರಿಸಿ ನಮ್ಮ ಜಿಲ್ಲೆಯ ಕುಲಗೋಡ ತಮ್ಮಣ್ಣನು ಕೆಲವು ಬದಲಾಣೆಗಳನ್ನು ಮಾಡಿಕೊಂಡು ರಂಗಭೂಮಿಗೆ ತಂದಿದ್ದಾನೆ. ಕೌಜಲಗಿ ನಿಂಗವ್ವ ಕೃಷ್ಣ ಪಾರಿಜಾತ ಮೇಳವನ್ನು ಕಟ್ಟಿ ನೂರಾರು ಪ್ರದರ್ಶನಗಳನ್ನು ನೀಡಿ ಹೆಸರು ಗಳಿಸಿದ್ದಾಳೆ. ಕೌಜಲಗಿ ನಿಂಗವ್ವನ ತಂಡದಲ್ಲಿ ನಟಿಸಿದ ಅನೇಕ ಕಲಾವಿದರು ಹುಕ್ಕೇರಿ ತಾಲೂಕಿನವರಾಗಿದ್ದಾರೆ. ಬಡಕುಂದ್ರಿ ಬಸಪ್ಪ, ಹುಕ್ಕೇರಿ ಸಿದ್ರಾಮಪ್ಪ, ಬಸ್ಸಾಪೂರ ಬಸವಣ್ಣೆಪ್ಪ ಮೊದಲಾದವರು ಪ್ರಮುಖರಾಗಿದ್ದಾರೆ. ಕೌಜಲಗಿಯ ನಿಂಗವ್ವ ಅಮ್ಮಣಗಿಯ ಶಿವಲಿಂಗಯ್ಯ ಹಿರೇಮಠ ಅವರ ಮನೆಯಲ್ಲಿ ತರಬೇತಿ ಪಡೆದು ರೂಪಗೊಂಡ ಪಾರಿಜಾತದ ಶ್ರೀಕಾಶಿ ಹಾಕಿ ಕೊಂಡ ಕಲಾವಿದರಲ್ಲಿ ಒಬ್ಬರು. ಬೆಳವಿಯ ಶಂಕರ ಪಾಟೀಲ, ಸತ್ಯಪ್ಪ ಬಡಿಗೇರ ಉಬಮಾರು ಮಾದ್ಯಾಳದ ಗುರುವಯ್ಯ, ಸುಲ್ತಾನಪುರದ ಶಿವಪ್ಪ, ಚಂದ್ರಪ್ಪ ಮಗದುಮ್ಮ, ಬಸವರಾಜ ಮಗದುಮ್ಮ, ಬೆಲ್ಲದ ಬಾಗೇವಾಡಿಯ ರಾಮಪ್ಪನಾದಿ ಹಾಗೂ ದೇಶಪಾಂಡೆ ಅಲ್ಲದೇ ಪರಪ್ಪ ಇಸ್ಲಾಂಪೂರ, ಹತ್ತರಗಿಯ ಗೋಪಾಲ ಜಿಪಣ ಮೊದಲಾವರು ಪಾರಿಜಾತ ಪಟುಗಳಾಗಿ ಪ್ರಸಿದ್ಧಿ ಪಡೆದಿದ್ದಾರೆ. ಈಗಲೂ ಬಡಕುಂದ್ರಿ, ಬಸ್ಸಾಪೂರ, ಸುಲ್ತಾನಪೂರ, ಹತ್ತರಗಿ ಮೊದಲಾದ ಗ್ರಾಮಗಳಲ್ಲಿ ಕೃಷ್ಣಪಾರಿ ಜಾತದ ಮೇಳಗಳಿವೆ.

ಚಿಕ್ಕೋಡಿ ತಾಲೂಕಿನ ಕಾಡಾಪೂರದ ಬಸವಂತಪ್ಪ ಸಾಲಿ 'ಶಿವಪಾರಿಜಾತ' ಕೃತಿ ರಚಿಸಿ ಪ್ರಯೋಗಿಸಿದ್ದಾರೆ. ಬೈಲಹೊಂಗಲದ ದರದುಂಡೀಶ ಕವಿ (ಚಿವಟಗೂಡಿ) ಪ್ರಭುದೇವರ, ಕೃಷ್ಣಹರಣ, ಮತ್ತು ಚೋಳಾಂಗನಾ ಎಂಬ ಯಕ್ಷಗಾನ ಕೃತಿಗಳನ್ನು ರಚಿಸಿ ಪ್ರಯೋಗಿಸಿದ್ದಾರೆ.

ದಾಸರಾಟ : ರಾಧಾನಾಟಕ್ಕೆ ಮೂಲ ಪ್ರೇರಣೆಯನ್ನು ನೀಡಿದ್ದು ಈ ದಾಸರಾಟ. ಒಂದು ಕಾಲದಲ್ಲಿ ಒಳ್ಳೆಯ ಮನರಂಜನೆಯನ್ನು ಒದಗಿಸಿದ ಅಟ . ನಮ್ಮ ತಾಲೂಕಿನ ಕೊಟಬಾಗಿ ಅರ್ಜುನವಾಡಿ, ಕರಣ, ಮೊದಲಾದ ಗ್ರಾಮಗಳಲ್ಲಿ ಈ ಕಲೆ ಇನ್ನೂ ಜೀವಂತವಾಗಿದೆ.

ಗೊಂದಳಿಗರ ಆಟ : *ದೇವಿಯ ಹೆಸರಿನಲ್ಲಿ ಹಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು, ಶಕ್ತಿ ಆರಾಧಕರಾಗಿ ದೇವಿ ಸ್ತುತಿಪರ ಹಾಡು ಹೇಳುತ್ತಾ ಗೋಂದಳ ಹಾಕುವವರನ್ನು 'ಗೋಂದಳಿಗ' ರೆಂದು ಕರೆಯಲಾಗುತ್ತದೆ. ಲಗ್ನಪೂರ್ವದಲ್ಲಿ ಗೊಂದಳ ಹಾಕುವ ಪರಿಪಾಠ ಈಗಲೂ ಕೆಲವರಲ್ಲಿ ಇದೆ. ಸಣ್ಣಾಟಗಳ ಪೂರ್ವದಲ್ಲಿ ಗೊಂದಲಿಗರು ಆಡುವ ಆಟಗಳು ನಡೆಯುತ್ತಿದ್ದವು. ನಮ್ಮ ಜಿಲ್ಲೆಯಲ್ಲಿ ಸಂಕೇಶ್ವರದಲ್ಲಿ ಮಾತ್ರ ಗೊಂದಳಿಗರಿದ್ದಾರೆ. ಇವರು ಹಾಡುತ್ತಲಿರುವ ಕವಿ ಬಾಳ ಗೋಪಾಳನ ಅನೇಕ ಲಾವಣಿಗಳನ್ನು ಡಾ:ನಿಂಗಣ್ಣ ಸಣ್ಣಕ್ಕಿಯವರು ಸಂಗ್ರಹಿಸಿದ್ದಾರೆ.*

ಕಾದ್ರೊಳ್ಳಿಯ ನೀಲಕಂಠ ಕವಿ ಅನೇಕ ಸಣ್ಣಾಟಗಳನ್ನು ರಚಿಸಿ ಕೀರ್ತಿಶೇಷರಾಗಿದ್ದಾರೆ. ತಿರುನೀಲಕಂಠ, ಶ್ವೇತರಾಜ, ಮೌನೇಶ್ವರ, ಮಹಾದೇವಿಯಕ್ಕ, ನಿಜಗುಣ ಶಿವಯೋಗಿ ಮೊದಲಾದವು ಇವರ ಪ್ರಮುಖ ಕೃತಿಗಳು. ಅರ್ಜುನವಾಡದ ಶಂಕರ ಕುಂಬಾರ ಹಾಗೂ ಮೇಳದವರು 'ನಿಜಗುಣ ಶಿವಯೋಗಿ' ಸಣ್ಣಾಟವನ್ನು ಪ್ರದರ್ಶಿತ್ತಾರೆ. ತಿರುನೀಲಕಂಠ ಅಟವನ್ನು ಡಾ : ಎಂ. ಎಸ್. ಸುಂಕಾಪುರ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಬೈಲವಾಡದ ರಾಯಪ್ಪ ಪತ್ತಾರ ಮೂಲತಃ ಶಹಪೂರ (ಗದಗ)ದವನು. ಸಂಗ್ಯಾ-ಬಾಳ್ಯಾ ಸುಂದರ ಸಾಮಾಜಿಕ ಸಣ್ಣಾಟ ರಚಿಸಿದ್ದಾನೆ. ಡಾ. ಚಂದ್ರಶೇಖರ ಕಂಬಾರ ಮತ್ತು ಡಾ. ಕೀರ್ತಿನಾಥ ಕುರ್ತಕೋಟಿ ಈ ಕೃತಿಯನ್ನು ಸಂಪಾದಿಸಿದ್ದಾರೆ. ಸಂಗ್ಯಾ-ಬಾಳ್ಯಾ ಸಣ್ಣಾಟ ಜನಪದ ರಂಗಭೂಮಿಗೆ ವಿಶೇಷ ಕಳೆಯನ್ನು ತಂದುಕೊಟ್ಟು ಈಗಲೂ ಉತ್ತರ ಕರ್ನಾಟಕ, ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಪ್ರದರ್ಶನಗೊಳ್ಳುತ್ತಲಿದೆ. ನಿಜಗುಣ, ಕಬೀರದಾಸ, ಬಲವಂತ ಬಸಂತ ರಾಮ ಮೊದಲಾದ ಕೃತಿಗಳನ್ನು ಹನ್ನೀಕೇರಿ ಶಿವಾನಂದ ಸಣ್ಣಾಟಗಳನ್ನು ರಚಿಸಿ ಪ್ರಸಿದ್ಧಿ ಪಡೆದಿದ್ದನು.

ಗಂದಿಗವಾಡದ ಬಾಳಂಭಟ್ಟನು ಮೂವತ್ತಕ್ಕೂ ಹೆಚ್ಚು ಬಯಲಾಟಗಳನ್ನು ರಚಿಸಿರುವನು. ಕರ್ಣಾರ್ಜುನರ ಕಾಳಗ, ಲವ-ಕುಶರ ಕಾಳಗ, ಐರಾವಣ-ಮೈರಾವಣ, ಮೊದಲಾದವು ಪ್ರಸಿದ್ಧಿ ಪಡಿದಿವೆ. ಮುತನಾಳದ ಜಾಡರ ಮಲ್ಲೇಶಿ, ಗುರು ಭಕ್ತಾಂಡಾರಿ ಮತ್ತು ಚಿತ್ರಕೇತು ಎಂಬ ಎರಡು ಬಯ ಲಾಟಗಳನ್ನು ರಚಿಸಿರುವನು. ಕಣವಿ ಕರವಿನಕೊಪ್ಪದ ಬಸಪ್ಪಯ ಯಾತಿರಾಜ, ಭಕ್ತ ಪುಂಡಲೀಕ, ರುಕ್ಮಿಣಿ ಸ್ವಯಂವರ ಹಾಗೂ ಕವಿರಾಚಯ್ಯ ಹರಿಶ್ಚಂದ್ರ, ಜಯದ್ರಥ, ಗುರುಭಕ್ತ ಬಯಲಾಟಗಳನ್ನು ರಚಿಸಿದ್ದಾರೆ. ಇದಲ್ಲದೇ ಅಮ್ಮಣಗಿಯ ಮಲ್ಲಿನಾಥ ಶಾಸ್ತ್ರಿಗಳು, ಶನಿ ಪ್ರಭಾವ, ಭಕ್ತ ಮಾರ್ಕಂಡೇಯ, ಸೋಮಶೇಖರ ಸುಶೀಲಾ ಮತ್ತು ವಂಟಮುರಿಯ ಚೆನ್ನಮಲ್ಲಪ್ಪ ಬಸ್ಸಾಪೂರಿಯವರು ಇಂದ್ರಜಿತು, ಬಯಲಾಟ ರಚಿಸಿ ಪ್ರಯೋಗಿಸಿದ್ದಾರೆ. ಈ ಬಯಲಾಟಗಳು ಜಿಲ್ಲೆಯ ಉತ್ತರ ಭಾಗ ಹಾಗೂ ನೆರೆಯ ಮಹಾರಾಷ್ಟ್ರದ ಗಡಿ ಭಾಗದಲ್ಲಿಯೂ ಬಹು ಪ್ರಸಿದ್ಧಿ ಪಡೆದಿವೆ. ನಮ್ಮ ತಾಲೂಕಿ

ನವರಾದ ಬಸ್ತವಾಡದ ಹಸನಸಾಬ್ ಮಲ್ಲಾಪೂರಿ, ಹುಕ್ಕೇರಿಯ ಕಾಡಪ್ಪ, ಉಪ್ಪಾರ, ಅರ್ಜುನವಾಡದ ಕಲ್ಲಪ್ಪ ದಾಸರ, ಯಮಕನಮರ್ಡಿಯ ಅಪ್ಪಣ್ಣ ಕಟ್ಟೀಮನಿ, ಮಣಗುತ್ತಿಯ ಲಗಮಾ ಚಿಕ್ಕಾಳೆ, ಕುರಣಿವಾಡಿಯ ರಾಜೇಸಾಬ್ ಮಾಸ್ತರ, ಶಿರಗಾಂವಿಯ ಲಗಮಣ್ಣ ಶಿರಗಾವಿ, ಹುಕ್ಕೇರಿ ಬೀರಪ್ಪ ಹುಚ್ಚವಗೋಳ ಹಾಗೂ ರಾಮಪ್ಪ ಅಲಗರಾಹುತ, ಮಾಸ್ತಿಹೊಳಿಯ ಅರ್ಜುನ ಕುರುಬರ, ಕನಮಟ್ಟಿ ಶ್ರೀಮತಿ ಲಗಮವ್ವಾ ಮಾದರ ಮತ್ತು ಶ್ರೀಮತಿ ಶಾಲಾ ಲಗಮವ್ವ ಮಾದರ ಈ ಮೊದಲಾದ ಬಯಲಾಟ ಕಲಾವಿದರು ತಮ್ಮ ನಟನಾ ಕೌಶಲ್ಯದಿಂದ ಹೆಸರು ಗಳಿಸಿದ್ದಾರೆ. ಲಾವಣಿ ಹಾಡುಗಾರಿಕೆಯಲ್ಲಿ ನಮ್ಮ ತಾಲೂಕಿನವರಾದ ಹಿರಿಯ ತಲೆಮಾರಿನ ನೇರ್ಲಿ ಗ್ರಾಮದ ಚನಬಸಪ್ಪ, ಅಮ್ಮಣಗಿಯ ಶಿವಪ್ಪ ಹೂಗಾರ, ಮಲ್ಲಪ್ಪ ರಿಜಿಕನವರ, ಹೊಸ ಪೀಳಿಗೆಯಲ್ಲಿ ಸಿದ್ದಪ್ಪ ಮಗದುಮ್ಮ ಮೊದಲಾದವರು ಹೆಸರು ಮಾಡಿದ್ದಾರೆ.

ಜನಪದ ವಿವಿಧ ವಾದ್ಯ-ವಾಹನ ಕಲೆಗಳಲ್ಲಿ ಕೆಲವರು ಕಲಾನೈಪುಣ್ಯತೆಯನ್ನು ಮೆರೆದಿದ್ದಾರೆ. ಯಾದಗೂಡದ ಚಿನ್ನಪ್ಪ (ಪರಿಜಾತಕ್ಕೆ ಸಾತ್) ಇವರ ಮಗನಾದ ಶ್ರೀಶೈಲಪ್ಪ ವಾದನ ಕಲೆಯಲ್ಲಿ ನಿಷ್ಣಾತ. ಅಮ್ಮಣಗಿಯ ನಿಜಲಿಂಗಪ್ಪ ಹೂಗಾರ: (ಚರ್ಮ) ವಾದ್ಯಗಳನ್ನು ನುಡಿಸುವವರಲ್ಲಿ ನಿಷ್ಣಾತ. ಹೆಬ್ಬಾಳದ ರಾಮಣ್ಣ ಹೂಗಾರ (ತಬಲಾ) ಅಮ್ಮಣಗಿಯ ರಾವಸಾಹೇಬ ದೇಸಾಯಿ (ತಬಲಾ) ಹಾರ್ಮೋನಿಯಂ, ವಿವಿಧ ವಾದ್ಯಗಳು. ಅಮ್ಮಣಗಿಯ ಭೀಮಪ್ಪ ಮಾದರ, ಲಕ್ಷ ಣ ಕರಬಸ್ಸು ಮಾದರ, ಸಾರಾಪುರದ ಮಲ್ಲಪ್ಪ, ಹಿಟ್ಟಣಗಿಯ ಯಶವಂತ, ಅಮ್ಮಣಗಿ ಯಲ್ಲಪ್ಪ, ಮೋದಿನೆಸುತ್ತುಸಾಬ್ ಖಲೀಫ, ಹೆಬ್ಬಾಳದ ಈರಯ್ಯ ಸ್ವಾಮಿ ಇವರೆಲ್ಲರೂ ಕಣವಾದನದಲ್ಲಿ ಹೆಸರುಗಳಿಸಿದ್ದಾರೆ. ಸದ್ಯ ಹಂದಿಗೂಡ ಹಾಗೂ ಅಮ್ಮಣಗಿ ಗ್ರಾಮದ ಕರಡಿಮೇಳಗಳು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಲ್ಲದೇ ಆಕಾಶವಾಣಿ ಯಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಅಲ್ಲದೇ ಮದಿಹಳ್ಳಿ ಮಾರುತಿ ಮಾದರ, ದಾದಬಾನಹಟ್ಟಿಯ ಹೊನ್ನಪ್ಪ ಪೂಜೇರಿ ಹಾಗೂ ನರಸಿಂಗಪೂರದ ನಿಂಗಪ್ಪ ಪಾಟೀಲ ಇವರೆಲ್ಲರೂ ಹಾರ್ಮೋನಿ ಯಂ ವಾದನ ಕಲೆಯಲ್ಲಿ ಹೆಸರು ಮಾಡಿದ್ದಾರೆ. ಕೋಚರಿಯ ಹನಮಂತ ಭಜಂತ್ರಿ (ಶಹನಾಯಿ), ಕುರಣಿಯ ನಿಂಗಪ್ಪ ಮಾದರ, ಬಡಕುಂದ್ರಿಯ ಕಾಳಪ್ಪ ಬಡಿಗೇರ (ಕಣಿವಾದನ), ಹತ್ತರಗಿಯ ಭೀಮಪ್ಪ ಗೊರವ (ಸಂಬಾಳವಾದನ) ಇವರೆಲ್ಲರೂ ಹೆಸರು ಗಳಿಸಿದ್ದಾರೆ.

ಹುಲಕುಂದದ ಭೀಮಕವಿ, ಹೊಸೂರಿನ ಬಡಿಗೇರ ಮೊದಲಾದವರು ಡೊಳ್ಳಿನ ಪದಗಳನ್ನು ರಚಿಸಿದ್ದಾರೆ. ಹುನ್ನೂರ ದಲ್ಲಿಯ ಡೊಳ್ಳಿನ ಪದ ಹಾಡುಗಾರರ ತಂಡ, ಹುಕ್ಕೇರಿಯ ಗೈಬಣ್ಣ ಉದ್ದವ್ವಗೋಳ ತಂಡ, ಕೇಸ್ತಿಯ ರಾಯಪ್ಪ ಮೆಕ್ಕಳಕಿ ತಂಡ, ಹೆಬ್ಬಾಳದ ವಿಠ್ಠಲ ಕುರುಬರ ತಂಡ, ಮೊದಲಾದ ತಂಡಗಳು ಈ ರಂಗದಲ್ಲಿ ಪ್ರಸಿದ್ಧವಾಗಿವೆ.

ದೇವರನ್ನು ಸ್ತುತಿಸುವ, ಪ್ರಾರ್ಥಿಸುವ ಭಜನೆ ಹಾಡುಗಳನ್ನು ರಚಿಸಿರುವ ನಮ್ಮ ಜಿಲ್ಲೆಯ ಜನಪದ ಕವಿಗಳಲ್ಲಿ ಸಿರಿಗುರ ಕಲ್ಮೇಶ್ವರ, ಕುಕಡೊಳ್ಳಿ ಚೆನ್ನಮಲ್ಲಯ್ಯ, ಯಡ್ರಾಳ ಚೆನ್ನಪ್ಪ, ಹುಲಕುಂದ ಶಿವಲಿಂಗ, ಹಾಗೂ ಭೀಮಕವಿ. ಚೆನ್ನಹೊಸೂರಿನ ಮಲ್ಲೇಶಿ, ಬೆಳಗಾವಿ ದ್ವಾರಪಾಲ, ನೇಸರಗಿ ಬಸವಣ್ಣೆಪ್ಪ, ಅಡಿವೆಪ್ಪ ಚೌಬಾರಿ, ಯಾದವಾಡ ಹುಸೇನಿ, ಪರಮಾನಂದವಾಡಿಯ ಮೀರಾ, ತಿಗಡೊಳ್ಳಿ ಭೀಮಪ್ಪ ಪ್ರಸಿದ್ಧರು. ನಮ್ಮ ತಾಲೂಕಿನ ಪ್ರತಿ ಊರುಗಳಲ್ಲಿಯೂ ಭಜನ ಮೇಳಗಳಿವೆ. ಕುರುಣಿಯ ಶಂಕರಪ್ಪಾ ಬಣವನ್ನವರ ಮೇಳ, ಕೋಚರಿಯ ಕಲ್ಲಪ್ಪಾ ಶರಣರ ಮೇಳ, ಹುಲ್ಲೋಳಿಯ ಅಜೀತ ಹುಲ್ಲೋಳಿ ಮೇಳ, ಯರಗಟ್ಟಿ ಸಿದ್ಧಯ್ಯನ ಮೇಳ, ಹತ್ತರಗಿಯ ಕೆಂಪಣ್ಣ ಕುಡಚಿ ಮೇಳ, ಗಾಡವಾಡದ ಕಾಡಪ್ಪ ಮಾಳಗಿ ಮೇಳ, ಅರ್ಜುನವಾಡದ ವೆಂಕಪ್ಪ ಮರೆನ್ನವರ ಮೇಳ, ಬೆಳವಿ ಬಸವೇಶ್ವರ ವೇಳ, ಕಮತನೂರ ಕಲ್ಮೇಶ್ವರ ಮೇಳ, ಬೋರಗಲ್ಲದ ಶ್ರೀ ದುರದುಂಡೀಶ್ವರ ಭಜನಾ ಮೇಳ, ಮೊದಲಾದವುಗಳು ಪ್ರಸಿದ್ಧ ಮೇಳಗಳಾಗಿವೆ. ಅಮ್ಮಣಗಿಯ ಆತ್ಮಾರಾಮ್ ಹರಿಜನ ಶಾಸ್ತ್ರಿಯ ಭಜನೆಯಲ್ಲಿ ಹೆಸರು ಮಾಡಿದ್ದಾನೆ.

ಕುಣಿತದ ಕಲೆಗಳಲ್ಲಿ ದಡ್ಡೀ ಕುಣಿತ, ಡೊಳ್ಳು ಕುಣಿತ, ಕೊಡದ ಕುಣಿತ, ಗೌರವ್ವರ ಕುಣಿತ, ನಂದಿಕೋಲ ಕುಣಿತ, ಪುರವಂತಿಕೆಯ ಕುಣಿತ, ಎಲ್ಲಮ್ಮನ ಕುಣಿತ, ಚೌಡಮ್ಮನ ಕುಣಿತ, ಸಂಗ್ರಾಮದ ಕುಣಿತ, ಹೀಗೆ ಅನೇಕ ಕುಣಿತಗಳ ವೈವಿಧ್ಯತೆ ಇದೆ. ಅಲ್ಲದೇ ಕುದುರೆ ಸೋಗು, ಮದುವೆ ಸೋಗು, ಸಿದಿ(ಹೆಣ)ಸೋಗು, ಮಾಯವ್ವನ ಸೋಗು, ಎಲ್ಲವ್ವನ ಸೋಗು, ರಾಯಣ್ಣನ ಸೋಗು, ಹೀಗೆ ಸೋಗಿನ ಪ್ರಕಾರಗಳು ಬೆಳಗಾವಿ ಜಿಲ್ಲೆಯಾದ್ಯಂತ ಪ್ರಸಿದ್ಧಿ ಪಡೆದಿವೆ. ಹತ್ತರಗಿಯ ಮಹಾರುದ್ರ ಕೇದಸೂರಿ, ಯಮಕನಮರಡಿ ಪಮ್ಮಯ್ಯ ಮಲ್ಲೋಳಿ, ಮಾಸ್ತಿಹೊಳಿಯ ರುದ್ರಯ್ಯ ಓಝಿ, ಈ ಮೊದಲಾದವರು ವೀರಭದ್ರ ದೇವರ ಒಡಪುಗಳನ್ನು ಹೇಳುವಲ್ಲಿ ಹಾಗೂ ಪುರುವಂತಿಕೆಯ ಕುಣಿತದಲ್ಲಿ ಹೆಸರು ಮಾಡಿದ್ದಾರೆ.

ಜನಪದ ಹಾಡುಗಳಲ್ಲಿ ಗೀಗೀ, ಸೋಬಾನ, ಚೌಡಕಿ, ಭಲೇರಿ, (ಚಕ್ಕಡಿ ಹೊಡೆಯುವಾಗ ಹೇಳುವ ಹಾಡುಗಳು) ಹಂತಿ, ಮೊದಲಾದ ಪ್ರಕಾರಗಳು ಪ್ರಮುಖವಾಗಿವೆ. ಹುಲಕುಂದ ಶಿವಲಿಂಗ ಕವಿ ಅನೇಕ ಸ್ವಾತಂತ್ರ್ಯ ಸಂಗ್ರಾಮದ ವಿಷಯಗಳನ್ನೊಳ ಗೊಂಡ ಗೀಗೀ ಪದಗಳನ್ನು ರಚಿಸಿದ್ದಾನೆ ಹಾಗೂ ಎಲ್ಲಮ್ಮನ ಹಾಡುಗಳನ್ನು ರಚಿಸಿ ಪ್ರಸಿದ್ಧಿ ಪಡೆದಿದ್ದಾನೆ. ಮತ್ತು ಇದೇ ಊರಿನ ಭೀಮಕವಿ ಗೀಗೀಪದಗಳ ರಚನೆಯಲ್ಲಿ ಹೆಸರುಮಾಡಿದ್ದಾನೆ.

"ಎಂಥಾ ಶ್ಯಾಣ್ಯಾ ಮಹಾತ್ಮಾ ಗಾಂಧಿ", ಇದು ಈತನ ಜನಪ್ರಿಯ ಗೀಗೀ ಪದಗಳಲ್ಲಿ ಒಂದಾಗಿದೆ. ಹೆಬ್ಬಾಳದ ಸ್ವಾತಂತ್ರ್ಯಯೋಧ ಚೆನ್ನಯ್ಯ ಮಠಪತಿ ದೇಶಭಕ್ತಿ ಹಾಗೂ ಸ್ವಾತಂತ್ರ್ಯಯೋಧರ ಅಪ್ರತಿಮ ಹೋರಾಟ ಕುರಿತು ಅನೇಕ ಗೀಗೀ ಪದಗಳನ್ನು ಬರೆದು ಪ್ರಸಿದ್ಧಿ ಪಡೆದಿದ್ದಾರೆ. ಇವರ ನೂರಾರು ಗೀಗೀ ಪದಗಳು ಅಪ್ರಕಟಿತವಾಗಿ ಉಳಿದಿವೆ. ಹೊಸೂರಿನ ಸೋಮಲಿಂಗಪ್ಪ ಗೀಗೀ ಪದ ಹಾಡುಗಾರಿಕೆಯಲ್ಲಿ ರಾಜ್ಯ ಜಾನಪದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಯಮಕನಮರ್ಡಿಯ ಬಸವ್ವಾ ಅಪ್ಪಣ್ಣ ಕಟ್ಟೀಮನಿ, ಅಮ್ಮಣಗಿಯ ಗಾರವ್ವಾ ರಾಮಪ್ಪಾ ಢಂಗಿ, ಶೋಭಾ ಕಾಡಯ್ಯ ವಿಭೂತಿ, ದ್ರೌಪದಿ ಚಂದ್ರಪ್ಪ ಬಡಿಗೇರ, ನಿಡಸೋಸಿಯ ಭಾರತಿ ಭಜಂತ್ರಿ, ಶೋಭಾ ಹಿರೇಮಠ ಮೊದಲಾದವರು ಸೋಬಾನ ಪದ ಹಾಡುಗಾರಿಕೆಯಲ್ಲಿ ಹೆಸರು ಮಾಡಿದ್ದಾರೆ. ಯಮಕನಮರ್ಡಿಯ ವತ್ಸಲಾ ಗುಡಿಕಡಿ ಚೌಡಕಿ ಪದಗಳ ಹಾಡುಗಾರಿಕೆಯಲ್ಲಿ ನಿಷ್ಣಾತೆ. ಅಮ್ಮಣಗಿಯ ತಿಪ್ಪವ್ವಾ, ಮುಗಳಿಯ ಕಾಶವ್ವಾ, ಜೋಗುಳ ಪದಗಳ ಹಾಡುಗಾರಿಕೆಯಲ್ಲಿ ಪ್ರಸಿದ್ಧಿ ಪಡೆದಿರುವರು. ಲಾವಣಿಗಳ ಕವಿ ಜಿ. ಬಾಗೇವಾಡಿಯ ಬಾಳ ಗೋಪಾಳ್, ರಾಧಾನಾಟದ ಕರ್ತೃ ಅಮ್ಮಣಗಿಯ ಪೋತದಾರ, ಬಯಲಾಟದ ರಚನಾಕಾರರಾದ ಅಮ್ಮಣಗಿಯ ಮಲ್ಲಿನಾಥ ಶಾಸ್ತ್ರಿಗಳು, ಮತ್ತು ವಂಟ ಮುರಿಯ, ಚೆನ್ನಮಲ್ಲಪ್ಪ ಬಸ್ಸಾಪೂರಿ ಇವರೆಲ್ಲರ ಸಾಹಿತ್ಯಕ ಕೊಡುಗೆ ಗಮನಾರ್ಹವಾಗಿದೆ. ಹೆಬ್ಬಾಳದ ಚೆನ್ನಯ್ಯಾ ಮಠಪತಿಯವರ ಅಪ್ರಕಟಿತ ಗೀಗೀ ಪದಗಳಿವೆ.

ರಾಧಾನಾಟ ನಟನೆಯಲ್ಲಿ ಅಮ್ಮಣಗಿಯ ಸುಬ್ಬರಾವ್ ಮತ್ತು ಸಖೀರಾಮ್, ಬಸ್ಸಾಪೂರದ ರಾಯಗೌಡಾ ಪಾಟೀಲ, ಹುಕ್ಕೇರಿಯ ಕಾಡಪ್ಪ ಉಪ್ಪಾರ, ಕೃಷ್ಣಪಾರಿಜಾತ ನಟನೆಯಲ್ಲಿ ಬಡಕುಂದ್ರಿಯ ಬಸಪ್ಪ, ಹುಕ್ಕೇರಿ ಸಿದ್ರಾಮಪ್ಪ, ಬಸ್ಸಾಪೂರ ಬಸವಣ್ಣೆಪ್ಪ ಈ ಮೊದಲಾದವರು ತಮ್ಮ ನಟನಾ ಕೌಶಲ್ಯದಿಂದ ಚಿರಸ್ಮರಣೀಯರಾಗಿದ್ದಾರೆ.

ಯಾದಗೂಡದ ಚೆನ್ನಪ್ಪ ಮತ್ತು ಶ್ರೀಶೈಲಪ್ಪ, ಅಮ್ಮಣಗಿಯ ನಿಜಲಿಂಗಪ್ಪ ಹೂಗಾರ ಮತ್ತು ರಾವಸಾಹೇಬ ದೇಸಾಯಿ, ಹೆಬ್ಬಾಳದ ರಾಮಣ್ಣ ಹೂಗಾರ ಮತ್ತು ಈರಯ್ಯಸ್ವಾಮಿ ಮೊದಲಾದವರು ವಿವಿಧ ವಾದ್ಯ-ವಾದನ ಕಲೆಗಳಲ್ಲಿ ಹೆಸರುಮಾಡಿ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ನೇರ್ಲಿ ಚೆನ್ನಬಸಪ್ಪ ಮತ್ತು ಮಹಮ್ಮದ ನದಾಫ್, ಅಮ್ಮಣಗಿಯ ಶಿವಪ್ಪ ಹೂಗಾರ ಮತ್ತು ಮಲ್ಲಪ್ಪ ರಚಿಕನವರ ಮೊದಲಾದವರು ಲಾವಣಿ ಹಾಡುಗಾರಿಕೆಯಲ್ಲಿ ಹಾಗೂ ಹೊಸೂರಿನ ಸೋಮಲಿಂಗಪ್ಪ ಮೊದಲಾದವರು ಗೀಗೀ ಪದಗಳ ಹಾಡುಗಾರಿಕೆಯಲ್ಲಿ ಪ್ರಸಿದ್ಧಿ ಪಡೆದು ತಾಲೂಕಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಬಸ್ಸಾಪೂರದ ಡಾ. ಬಸವರಾಜ ಜಗಜಂಪಿಯವರು ಜನಪದದ ವಿವಿಧ ಮಟ್ಟುಗಳ ಹಾಡುಗಾರಿಕೆಯಲ್ಲಿ ಹಾಗೂ ಜನಪದ ವಿಷಯದ ಮಾತುಗಾರಿಕೆಯಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಇವರಲ್ಲದೇ ಇನ್ನೂ ಅನೇಕ ಜನಪದ ಕಲಾವಿದರು ಈ ತಾಲೂಕಿನ ಜನಪದ ಸಾಹಿತ್ಯ ಮತ್ತು ಕಲೆಗಳನ್ನು ಶ್ರೀಮಂತಗೊಳಿಸಿದ್ದಾರೆ.

ಈ ದಿಸೆಯಲ್ಲಿ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ತಾಲೂಕಿನ ಘೋಡಗೇರಿಯ ಚಂದ್ರಶೇಖರ ಕಂಬಾರರು ಹೆಸರು ಮಾಡಿರುವುದು ಅಭಿಮಾನದ ವಿಷಯ.

ಸಿನೇಮಾ, ದೂರದರ್ಶನ ಮೊದಲಾದ ಸಮೂಹ ಮಾಧ್ಯಮಗಳ ಚಿತ್ತಾಕರ್ಷಣೆಯಿಂದ ಯುವ ಪೀಳಿಗೆಯು ಜನಪದ ಸಾಹಿತ್ಯ ಮತ್ತು ಕಲೆಗಳ ಮಹತ್ವವನ್ನು ತಿಳಿಯುವಲ್ಲಿ ವಿಫಲ ರಾಗಿದ್ದಾರೆ. ಸಮಾಜ ಹಾಗೂ ಸರಕಾರಗಳು ಯುವ ಪೀಳಿಗೆಯಲ್ಲಿ ಜನಪದದ ಸತ್ವದ ಮಹತ್ವವನ್ನು ಜಾಗೃತಗೊಳಿಸುವಲ್ಲಿ ಇನ್ನೂ ಹೆಚ್ಚಿನ ಜನಪದ ಸಾಹಿತ್ಯದ ಸಂಗ್ರಹ, ಪ್ರಕಟಣೆ, ಪ್ರಚಾರದ ಕಾರ್ಯಗಳನ್ನು ಮಾಡುವಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯನ್ನು ತೋರು ವುದು ಅಗತ್ಯವಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಬೆಳಗಾಮ್ ಡಿಸ್ಟ್ರಿಕ್ಟ ಗೆಝೇಟಿಯರ್.**, (ಸಂ.) ಡಾ. ಸೂರ್ಯನಾಥ ಕಾಮತ್.

೨. **ತಿರುಳ್ಗನ್ನಡ ಸಿರಿ.**, ಬೆಳಗಾವಿ ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆಯಲ್ಲಿಯ ಡಾ. ಎಂ.ಎಸ್. ಲಠ್ಠೆ ಅವರ ಬೆಳಗಾವಿ ಜಿಲ್ಲಾ ಜನಪದ ಸಾಹಿತ್ಯ ಲೇಖನ.

೩. **ಅಡವಿಸಿರಿ**-ಹುಕ್ಕೇರಿ ಶ್ರೀ ಶಿವಾನಂದ ದೇವರ ಪಟ್ಟಾಧಿಕಾರ ಮಹೋತ್ಸವದ ಸ್ಮರಣ ಸಂಚಿಕೆಯಲ್ಲಿಯ ಬಾಬುರಾವ ದೇಸಾಯಿಯವರ ಲೇಖನ (ಹೂಕೆರೆಯ ನಾಡಿನ ಸಂಗೀತ ಸೌರಭ)

೪. **ಬಾಳಗೋಪಾಳನ ಲಾವಣಿಗಳು.**, (ಸಂ:) ಡಾ. ನಿಂಗಣ್ಣ ಸಣ್ಣಕ್ಕಿ.

(ಈ ಲೇಖನ ಸಂಬಂಧದಲ್ಲಿ ಪ್ರೋ. ಪಿ. ಬಿ. ಅವಲಕ್ಕಿ ಅವರು ಮಾಹಿತಿ ನೀಡಿ ಸಹಕರಿಸಿದ್ದಾರೆ.)

ಕು|| ಅಶ್ವಿನಿ ಚ. ಕುಲಕುರ್ಣಿ ; ಅಶೋಕ್ ಕೆ. ಕಂದಗಲ್ಲ*

ಆದಿಲ್‌ಶಾಹಿ ಕಾಲದಲ್ಲಿಯ ಸಾಹಿತ್ಯದ ಪ್ರಚಲಿತ ಭಾಷೆಗಳು (೧೪೯೦ -೧೬೮೬)

ಬಿಜಾಪುರದ ಆದಿಲ್‌ಶಾಹಿಗಳ ನಿರಂತರವಾಗಿ ನಡೆದ ಒಂಬತ್ತು ಅರಸರ ಆಳ್ವಿಕೆಯಲ್ಲಿ ಉತ್ತಮ ಆಶ್ರಯವನ್ನು ನೀಡುವುದರ ಜೊತೆಗೆ ಬೇರೆ ಸಾಹಿತ್ಯಕ ಸಾಧನೆ ಹಾಗೂ ಆಶ್ರಯವೂ ಬೆಳೆದು ಬಂದಿತು.

ದಕ್ಷಿಣ ಭಾರತಕ್ಕೆ ಮುಸ್ಲಿಂರ ಆಗಮನದ ನಂತರ ಅಲ್ಲಿ ಈ ಮೊದಲೇ ಇದ್ದ ಭಾಷೆಗಳ ಜೊತೆಗೆ ಉತ್ತರದ ಭಾಷೆಯಾದ ಪರ್ಶಿಯಾವು ದಕ್ಷಿಣ ಭಾರತಕ್ಕೆ ಹರಿದು ಬಂದಿತ್ತು. ಆದರೆ ಈ ಭಾಷೆಯು ಜನಸಾಮಾನ್ಯರಿಗೆ ನಿಲುಕುವ ಭಾಷೆಯಾಗಿರಲಿಲ್ಲ. ಆಗ ಪರ್ಶಿಯಾ, ಅರೇಬಿಕ್ ಭಾಷೆಗಳು ಸಮ್ಮಿಲನಗೊಂಡು ಒಂದು ಹೊಸ ಭಾಷೆಯು ಆವಿರ್ಭಾವಗೊಂಡಿತ್ತು. ಅದನ್ನೇ ಕೆಲವರು ದಖಣಿ ಭಾಷೆ ಎಂದು ಹೇಳಿದರೆ ಮತ್ತೇ ಕೆಲವರು 'ಉರ್ದು-ಜಬಾನ' ಎಂದು ಹೇಳಿದ್ದಾರೆ. ಇದರ ಅರ್ಥ 'ಉರ್ದು' ಎಂದರೆ 'ಸೈನ್ಯ' ಅಥವಾ 'ದಂಡು', 'ಜಬಾನ' ಎಂದರೆ ಭಾಷೆ ಅಂದರೆ 'ದಂಡಿನಲ್ಲಿ ಮಾತನಾಡುವ ಭಾಷೆಯೇ 'ಉರ್ದು' ಎಂಬರ್ಥವನ್ನು ನೀಡಿದರು[೧].

೧ನೇ ಇಬ್ರಾಹಿಮ್‌ನು ಮೊದಲಿಗೆ ತನ್ನ ರಾಜ್ಯದಲ್ಲಿ ದಖಣೀ ಭಾಷೆಯ ಬಳಕೆಗೆ ಅವಕಾಶ ಕಲ್ಪಿಸಿಕೊಟ್ಟನು. ನಂತರ ಬಂದ ಇವನ ಮಗ ೨ನೇ ಇಬ್ರಾಹಿಮ್ ಆದಿಲ್ ಶಾಹಿಯು ಪುನಃ ದಖಣೀ ಭಾಷೆಗೆ ರಾಜಾಶ್ರಯವನ್ನು ನೀಡಿದನು. ಇತನು ಪಾರ್ಶಿಯೊಂದಿಗೆ ದಖಣೀ ಭಾಷೆಯ ಪ್ರಗತಿಗಾಗಿಯೂ ಶ್ರಮಿಸಿದನು. ದಖಣೀ ಭಾಷೆಯನ್ನು ಅಧ್ಯಯನ ಮಾಡಿ ದಖಣೀ ಭಾಷೆಯಲ್ಲಿಯೇ 'ಕಿತಾಬೆ-ಎ-ನವರಸ' ಎನ್ನುವಂತಹ ಗ್ರಂಥವನ್ನು ರಚಿಸಿದ್ದಾನೆ. ದಖಣೀಯಲ್ಲಿಯೇ ಅನೇಕ ರಾಗಬದ್ಧ ಕಾವ್ಯಗಳನ್ನು ರಚಿಸಿದ್ದಾನೆ. ಈ ಗ್ರಂಥವನ್ನು ಪಾರ್ಶಿ ಭಾಷೆಯಲ್ಲಿಯೂ ಸಹ ಪ್ರಕಟಿಸಲಾಗಿದೆ[೨]. ಈ ಗ್ರಂಥವು ೫೯ ಸ್ತೋತ್ರಗಳು ೧೭ದ್ವಿಪದಿ (ಕಪಲೆಟ್) ಹಾಗೂ ೫ ಭಾಗಗಳನ್ನು ಒಳಗೊಂಡಿದೆ. ಈ ಗ್ರಂಥದಲ್ಲಿ ಮೊದಲಿಗೆ ಈ ರೀತಿಯಾಗಿದೆ.

"ನೌರಸ ಸೂರ ಜುಗಜ್ಯೋತಿ ಅಣುಸರೋಗುನಿ
ಯಾ ಸತ್ ಸರಸುತೀ ಮಾತಾ ಇಬ್ರಾಹಿಮ್
ಪರಸಾದ ಭಈ ದೋನಿ"

ಅರ್ಥ: ಹೇ ತಾಯಿ ಸರಸ್ವತಿ ಇಬ್ರಾಹಿಮ್‌ನ ಮೇಲೆ ನಿನ್ನ ಕೃಪೆ ಇರಲಿ; ನಿನ್ನ ಕೃಪೆಯಿಂದ ಆತನ ನವರಸ ಕಾವ್ಯವು ಜಗತ್ತಿನಲ್ಲಿ ಬಹುಕಾಲ ಇರುತ್ತದೆ.

ಇಬ್ರಾಹಿಮ್‌ನು ತನ್ನ ಗ್ರಂಥದ ಹಾಡುಗಳನ್ನು ಹಿಂದೂಸ್ತಾನಿ ರಾಗದಲ್ಲಿ ಹಾಡುತ್ತಿದ್ದನು ಎಂದು ಹೇಳಲಾಗಿದೆ[೩]. ಈ ಸ್ತೋತ್ರದಿಂದ ಇಬ್ರಾಹಿಮ್‌ನು ಪರಧರ್ಮಸಹಿಷ್ಣು ಆಗಿದ್ದನೆಂದು ಇಲ್ಲಿ ವ್ಯಕ್ತವಾಗುತ್ತದೆ. ಇವನು ತನ್ನ ನಿತ್ಯ ವ್ಯವಹಾರದಲ್ಲಿ ಮರಾಠಿ ಭಾಷೆಯನ್ನು ಬಳಸುತ್ತಿದ್ದನೆಂದು ಅಸದ್‌ಬೇಗ ತಜವಿನಿಯು ತನ್ನ ಬರಹದಲ್ಲಿ ಹೇಳಿದ್ದಾನೆ. ೨ನೇ ಇಬ್ರಾಹಿಮ್‌ನ ಕಾಲದಲ್ಲಿ ಫೆರಿಶ್ತಾನು ಪಾರ್ಶಿ ಇತಿಹಾಸಕಾರ ಹಾಗೂ ಲೇಖಕನು ಆಗಿದ್ದನು. ಕಾಶಿಂ-ಫೆರಿಶ್ತಾನು ಗದ್ಯ ಶೈಲಿಯಲ್ಲಿ ಪ್ರವೀಣನಾಗಿದ್ದನು. ದಖಣೀ ಭಾಷೆಯಲ್ಲಿ ಅನೇಕ ಲೇಖಕರಿದ್ದರು. ಮಾಲಿಕ್, ಖುಸುದ್, ರುಷತೌನಿ, ಮೀನರ, ಹಸೀಮ್ ಇವರು ದಖಣೀ ಭಾಷೆಯನ್ನು 'ಹಿಂದೂಯಿ' ಅಥವಾ 'ಉರ್ದು' ಎಂದು ಹೇಳುತ್ತಿದ್ದರು[೪]. ೨ನೇ ಇಬ್ರಾಹಿಮ್‌ನು 'ನವರಸ' ಶಬ್ದದಿಂದ ಪ್ರಭಾವಿತನಾಗಿ ಒಂದು ಹೊಸ ನಗರವನ್ನು ನಿರ್ಮಿಸಿದನು. ಅದಕ್ಕೆ 'ನವರಸಪುರ' ಎಂದು ಹೆಸರಿಟ್ಟನು ಈ ನಗರದಿಂದ ಪ್ರಭಾವಿತನಾಗಿ ತನ್ನ ಮೊದಲಿದ್ದ ಖಾಸಾ ಮೊಹರನ್ನು ಬದಲಿಸಿ 'ನವರಸ ಇಬ್ರಾಹಿಂ' ಎಂದುದಾಗಿ ಕೆತ್ತಿಸಿದನು. ಗ್ರಂಥಾಲಯದ ಪ್ರತಿಯೊಂದು ಪುಸ್ತಕದ ಮೇಲೆ 'ನವರಸ-ಇಬ್ರಾಹಿಮ್' ಎಂದು ಬರೆಯಲಾಯಿತು. ಧ್ವಜ ಹಾಗೂ ನಿಶಾನೆಗಳನ್ನು 'ನಿಶಾನೆ-ನವರಸ' ಹಾಗೂ 'ಆಲಮೆ-ನವರಸ' ಎಂಬುದಾಗಿ ಕರೆದನು. ತಿಂಗಳಿದ ಬರುವ ಮೊದಲ ಗುರುವಾರದಂದು ಹಬ್ಬದ ಆಚರಣೆ ಆ ಹಬ್ಬಕ್ಕೆ 'ಈದ್-ನವರಸ' ಎಂದು ಹೆಸರಿಟ್ಟನು[೫].

ಮೊಹಮ್ಮದ್ ಆದಿಲ್‌ಶಾಹಿಯು ಆಡಳಿತವನ್ನು ನಡೆಸುವಲ್ಲಿ ಅಸಮರ್ಥನಾಗಿದ್ದರೂ ಸಹ ಅವನು ದಖಣೀ ಹಿಂದಿಯ ಪ್ರಗತಿಗಾಗಿ ತೊರಿಸಿದ ಆಸಕ್ತಿ ಪರಿಶ್ರಮದಿಂದಾಗಿ ಅದು ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಯಿತು. ಅವನ ದರಬಾರಿನಲ್ಲಿ ಅನೇಕ ಕಲಾವಿದರು ಪಂಡಿತರು. ಹಾಗೂ ಇತಿಹಾಸಕಾರರು ಇದ್ದರು[೬].

೨ನೇ ಅಲಿ ಆದಿಲ್‌ಶಾಹಿಯು ಒಬ್ಬ ಸ್ವತಃ ಕವಿ ಆಗಿದ್ದನು. ಅವನು 'ಶಾಹಿ' ಎಂಬ ಕಾವ್ಯನಾಮದಲ್ಲಿ ಬರೆದನು ಗಜಲ್, ಕಸೀದಾ, ಮರ್ಶಿಯಾ, ಗೀತ್ ಹೀಗೆ ಉರ್ದು ಕಾವ್ಯದ ಎಲ್ಲಾ ರೂಪಗಳನ್ನು ಅವನು ಉಪಯೋಗಿಸಿದನು. ನಸ್ರತಿಯು ಇವನ

* ಇತಿಹಾಸ ಉಪನ್ಯಾಸಕರು, ಶಂಕ್ರಪ್ಪ ಸಕ್ರಿ ಪ.ಪೂ. ಮಹಾವಿದ್ಯಾಲಯ, ಬಾಗಲಕೋಟೆ.

ಆಸ್ಥಾನದ ಕವಿಯಷ್ಟೇ ಅಲ್ಲ, ದಖಣೀ ಭಾಷೆಯ ಕವಿಗಳಲೆಲ್ಲಾ ಸರ್ವಶ್ರೇಷ್ಠನಾಗಿದ್ದನೆಂದು ಭಾವಿಸಲಾಗಿದೆ[೭]. ನಸ್ರತಿಯಿಂದ ರಚಿತವಾದ ಅಲೀನಾಮಾದಲ್ಲಿ ಸುಮಾರು ೬೦೦೦ ಬೈಕ್ (ದ್ವಿಪದಿ)ಗಳು ಹಾಗೂ ಕಾಲಕಾಲಕ್ಕೆ ಆತನು ಬರೆದ ಕಶಿದೆ(ಕಸೂತಿ)ಗಳು ಅಂತರ್ಭಾವಗೊಂಡಿವೆ. ಪಾರ್ಸಿ ಭಾಷೆಯನ್ನು ಹೆಚ್ಚಾಗಿ ಬಳಸಿದ್ದರು ಸಹ ಅವನ ಭಾಷೆಯಾದ ಹಿಂದಿಯ ಜೊತೆಗೆ ಅವನು ೧೦೦೦ ಮರಾಠಿ ಶಬ್ದಗಳ ಪ್ರಯೋಗವನ್ನು ಮಾಡಿದ್ದಾನೆ[೮]. ನಸ್ರತಿಯು ದಖಣೀ-ಉರ್ದುವಿಗೊಂದು ಹೊಸ ತಿರುವನ್ನು ಕೊಟ್ಟನು. ಬಿಜಾಪುರ ಪಂಥದ ಸಂಪ್ರದಾಯವನ್ನು ಬದಲಾಯಿಸಿ ಅದಕ್ಕೆ ಪಾರ್ಸಿ-ಅರಾಬಿಕ್ ಶಬ್ದಾವಳಿಯನ್ನು ತಂದುಕೊಂಡು ಸಂಸ್ಕೃತ ಭಾಷೆಯೊಂದಿಗೆ ಸಂಯೋಜಿಸಿ ಹೊಸ ರೂಪವನ್ನು ಕೊಟ್ಟನು[೯].

೨ನೇ ಅಲಿ ಆದಿಲ್‌ಶಹನ ಆಸ್ಥಾನದ ಜ್ಯೋತಿಷಿಯಾಗಿದ್ದ ತಮ್ಮಣ್ಣ ಭಟ್ಟ ದೈವಜ್ಞನು ಸಂಸ್ಕೃತದಲ್ಲಿ ಸಂಕ್ಷಿಪ್ತವಾಗಿ ದಖಣೀ ಬಾದಶಹರ ಚರಿತ್ರೆಯನ್ನು ಬರೆಯುವುದಾಗಿ ಹೇಳಿಕೊಳುತ್ತಾ ಬಿಜಾಪುರದ ಆದಿಲ್ ಶಾಹಿಗಳ ಎಲ್ಲ ೯ ಬಾದಶಹರ ರಾಜ್ಯಾರೋಹಣ ಮರಣದ ಕಾಲ ಹಾಗೂ ಅವರ ಕಾಲದಲ್ಲಿ ಕಟ್ಟಿದ ಕಟ್ಟಡಗಳ ವಿವರಗಳನ್ನು ಹಿಂದೂ ಕಾಲಮಾನದ ಪದ್ಧತಿಯಲ್ಲಿ ಬರೆದಿದ್ದಾನೆ[೧೦].

'ಖುಷನದೀಸ್' ಎಂದರೆ ಸುಂದರ ಅಕ್ಷರಗಳನ್ನು ಬರೆಯುವ ಅರವತ್ತು ಲೇಖಕರು ಇದ್ದರು. ಮೊಹಮ್ಮದ್-ಆದಿಲ್‌ಶಹನು ತನ್ನ ಶಾಸನದಲ್ಲಿ ಹೀಗೆ ಹೇಳಿದ್ದಾನೆ: ಆಸಾರ ಶರೀಫದ ಮಹಲಿನಲ್ಲಿ ಎರಡು ಬರವಣಿಗೆಯ ವಿದ್ಯಾಶಾಲೆಗಳನ್ನು ಪ್ರಾರಂಭಿಸಬೇಕು; ಹದಿಸ್ ಪೈಗಂಬರ ಹೇಳಿದ ವಾಕ್ಯವನ್ನು ವಿದ್ಯೆಯನ್ನು ಮತ್ತು ಕುರಾನ ಶರೀಫದ ಪಾಠ ಹೇಳುವುದನ್ನು ಪ್ರಾರಂಭಿಸಬೇಕು. ಜಾಮಾ ಮಸೀದಿಯಲ್ಲಿ ಮಕ್ಕಳಿಗೆ ಧೂಳಾಕ್ಷರಗಳನ್ನು ಕಲಿಸುವ ಶಾಲೆಯಲ್ಲಿ ಇಬ್ಬರು ಪಂತೋಜಿಗಳನ್ನು ಅರಬ್ಬಿ ವಿದ್ಯೆ ಮತ್ತು ಮುಸಲ್ಮಾನ ಧರ್ಮದ ಕುರಾನ ಶರೀಫ ಮಜಾನಿ ಮತ್ತು ಮಂತಿಕೆ ಇತ್ಯಾದಿ ವಿದ್ಯೆಗಳನ್ನು ಕಲಿಸುವ ಇಬ್ಬರು ಉಸ್ತಾದರನ್ನು ನಿಯಮಿಸಿ ವಿದ್ಯಾಭ್ಯಾಸ ಮಾಡಬೇಕು ಎಂದು ಹೇಳಿದ್ದಾನೆ. ಧೂಳಾಕ್ಷರಗಳು ಎಂದರೆ ಇಂದಿನ ವರ್ಣಾಕ್ಷರಗಳು ಆಗಿರಬಹುದು. ೧ನೇ ಅಲಿ-ಆದಿಲ್‌ಶಹನು ಸುಲಸ್, ನಕ್ಷ್, ಹಾಗೂ ರುಕಾಅ ಪ್ರಕಾರದ ಬರವಣಿಗೆಯನ್ನು ಬರೆಯುತ್ತಾ ಇದ್ದನು ಎಂದು ಹೇಳಲಾಗುತ್ತದೆ[೧೧].

ಬಿಜಾಪುರದ ಸ್ಥಳೀಯ ವಾತಾವರಣದಲ್ಲಿ ಬಹುತೇಕ ಹಿಂದು ಪಂಡಿತ ಮಾನ್ಯರು ಬಹುಭಾಷಾ ವಿಶಾರದಾಗಿದ್ದರು. ಪರ್ಶಿಯನ್, ದಖಣೀ, ಮರಾಠಿ, ಕನ್ನಡ ಹಾಗೂ ತೆಲಗು ಭಾಷೆಗಳಲ್ಲಿ ಪರಿಣಿತರಾಗಿದ್ದರು. ರುಕ್ಮಾಂಗದ ಪಂಡಿತರು, ಮಹಿಪತಿರಾಯರು, ಸಿಂದಗಿ ಜಕ್ಕಪ್ಪಯ್ಯ ಇನ್ನೂ ಮುಂತಾದವರು ಒಂದೇ ಭಾಷೆಯಲ್ಲಿ ಪಂಡಿತರಾಗದೆ ಸಂಸ್ಕೃತ, ಮರಾಠಿ, ಹಿಂದಿ, ಕನ್ನಡ, ಪ್ರಾಕೃತ, ಭಾಷೆಗಳ ಜ್ಞಾನ ಇವರುಗಳಿಗೆ ಇತ್ತು. ಈ ಭಾಷೆಗಳಲ್ಲಿಯೇ ಅನೇಕ ಕೃತಿಗಳನ್ನು ರಚಿಸಿದ್ದಾರೆ[೧೨]. ಯೂಸುಫನ ಹೆಂಡತಿ ಮರಾಠಿ ಸರದಾರ ಮುಕುಂದರಾಯನ ತಂಗಿಯಾಗಿದ್ದರಿಂದ ಅಂತಃಪುರದಲ್ಲಿ ಮರಾಠಿ ಭಾಷೆಯ ಪ್ರವೇಶ ಆಗಿತ್ತು. ತಿಮ್ಮಣ್ಣ ಕವಿಯು (೧೫೧೦)ರಲ್ಲಿ ಕುಮಾರ ವ್ಯಾಸನ ಕೆಲಸವನ್ನು ಮುಂದುವರೆಸಿದನು. ಇನ್ನೊಬ್ಬ ಕವಿ ಕುಮಾರ ವಾಲ್ಮೀಕಿಯು (೧೫೦೦) ವಾಲ್ಮೀಕಿ ಮಹಾಕಾವ್ಯವನ್ನು ಕನ್ನಡದಲ್ಲಿ ರಚಿಸಿದನು. ಬಿಜಾಪುರದ ಬಳಿ ಇರುವ ತೊರವೆಯ ನರಸಿಂಹನ ಭಕ್ತನಾಗಿದ್ದ ಇವನು ತನ್ನ ಕೃತಿಯನ್ನು ತೊರವೆ ರಾಮಾಯಣ ಎಂದೇ ಕರೆದನು. ಕನ್ನಡದಲ್ಲಿ ಭಾರತವನ್ನು ಭಾಗವತವನ್ನೂ ಚಾಟು ವಿಠಲನಾಥನು (೧೫೩೦) ರಲ್ಲಿ ಬರೆದನು[೧೩].

ಮುಸ್ಲಿಂರು ಮರಾಠಿಯಲ್ಲಿ ಬರೆಯ ತೊಡಗಿದರು. ಅವರು ನಾಲ್ಕು ಕೃತಿಗಳನ್ನು ರಚಿಸಿದರು. ಸೂಫಿಶಹಾ, ಮುಂತೋಜಿ, ಬ್ರಾಹ್ಮನಿ (೧೫೭೫-೧೬೫೦) ಹುಸೇನ್ ಅಂಬರ್ ಖಾನ್, ಅಂಬರ್ ಹುಸೇಲಿ ಎಂಬ ಹೆಸರಿನ ಭಗವದ್ಗೀತೆಯ ಮೇಲಿನ ವ್ಯಾಖ್ಯಾನವನ್ನು ರಚಿಸಿದನು (೧೬೫೩). ಶೇಖ ಮೊಹಮ್ಮದ್ ಯೋಗ ಸಂಗ್ರಾಮ (೧೬೪೫)ವನ್ನು ರಚಿಸಿದನು. ಇನ್ನೊಬ್ಬ ಕವಿ ೨ನೇ ಅಲಿ ಆದಿಲ್‌ಶಹನ ಸಮಕಾಲೀನ. ಲತೀಫಶಹವಾಮನ ಪಂಡಿತನು ಪರ್ಶಿಯನ್ ಭಾಷೆಯನ್ನು ಚನ್ನಾಗಿ ಬಲ್ಲ, ಸಂಸ್ಕೃತ ವಿದ್ವಾಂಸನಾಗಿದ್ದನು. ಇವನು ಅನೇಕ ಕೃತಿಗಳನ್ನು ರಚನೆ ಮಾಡಿದ್ದಾನೆ. ಅವು ಸಂಸ್ಕೃತ ಶ್ಲೋಕಗಳನ್ನು ಮರಾಠಿಯಲ್ಲಿ ರಚಿಸಿ ಭಾಷೆಗೆ ನೂತನ ಆಯಾಮವೊಂದನ್ನು ಅವನು ನೀಡಿದನು[೧೪]. ಬಿಜಾಪುರ ದಲ್ಲಿ ಅಧಿಕ ಸೂಫಿ ಸಂತರು ಇದ್ದರು.ಇವರು ಸಹ ಸಾಹಿತ್ಯ ಕೃತಿಗಳನ್ನು ಉರ್ದು ಭಾಷೆಯಲ್ಲಿಯೇ ರಚಿಸಿದ್ದಾರೆ.

ಆದಿಲ್ ಶಾಹಿಗಳ ಫರ್ಮಾನುಗಳನ್ನು ನೋಡಿದಾಗ ಅವು ಪರ್ಶಿಯನ್, ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲಿ ಇವೆ. ಇದರ ಜೊತೆಗೆ ಅವರ ಫರ್ಮಾನ್‌ಗಳು ಪರ್ಶಿಯನ್, ಮಹಾರಾಷ್ಟ್ರ ಭಾಷೆಯಲ್ಲಿ ಇವೆ. ಈ ರೀತಿಯಾದಂತಹ ಪತ್ರ ವ್ಯವಹಾರಗಳು ನಡೆಯುತ್ತಾ ಇದ್ದವು.

ಸ್ತ್ರೀಯರಿಗೆ ಉನ್ನತ ಮಟ್ಟದ ಶಿಕ್ಷಣವನ್ನು ನೀಡುತ್ತಾ ಇರಲಿಲ್ಲ. ಅಲ್ಲದೆ ಕೇವಲ ಅವರು ತಮ್ಮ ಪವಿತ್ರ ಗ್ರಂಥವಾದ ಕುರಾನನ್ನು ಪಠಣ ಮಾಡಬಹುದಾಗಿತ್ತು. ಬಹುಮನಿ ರಾಜ್ಯದಲ್ಲಿ 'ಮದರಸಾ' ಇರುವ ಹಾಗೆ ಬಿಜಾಪುರ ಆದಿಲ್‌ಶಾಹಿ ರಾಜ್ಯಗಳಲ್ಲಿ ಮದರಸಾಗಳ ಬಗ್ಗೆ ಉಲ್ಲೇಖವಿಲ್ಲ. ಇವರ ಶಾಲೆಗಳು 'ಮುಕ್ತಬ್' ಮತ್ತು ಮಸೀದೆಗಳಿಗೆ ಸೇರಿದ ಶಾಲೆಗಳಿದ್ದವು. ಪ್ರಾಥಮಿಕ ಹಂತದಲ್ಲಿ ಅಕ್ಷರ, ಜ್ಞಾನ, ಕುರಾನ., ಪರಿಫದ್ ಪಠಣ ಮತ್ತು ಸಂಖ್ಯಾ

ನಾಲ್ಕನೆಯ ಭಾಗ—ಮಹಮ್ಮದೀಯ ಚಕ್ರಾಧಿಪತ್ಯಗಳು ಮತ್ತು ಸಂಸ್ಥಾನಗಳು

A. ವಿಜಾಪುರದ ಬಾದಶಹರು.

*೧೬೦.—ಫರ್ಮಾನ್. ಶಾ. ಶ. ೧೫೪೪. ಕ್ರಿ. ಶ. 1622.

الملک اعظم
خان

از رحمان خداوند خان عالم
خان اعظم حمید خان خلد ایام دولتہ
تا کارکنان حال و استقبال و دیسایان و دیس کلکریان و نازکوندان
سیان و چاکران مقدم ... در سال ثلاث
والف را زشری شرنکرو ڈیر سرنہاد – وربد را موضع هناري کو په زکات
در سواد قصبۂ مذکور وسیوا.

١٠٣٢

تاریخ ماہ ربیع الاول

[illegible] रहमाने खुदाये वर्द थान अलीशान सा ॥ हमीदखान खुली दयान दौलत हू ॥ कारकुनानी [illegible] याल व देसाईयानी व देसकुलकर्नी यानी व नाडगौडा व पटणसेटी व गणाचारी व [illegible] व ॥ हानगल बीदानंदकी अज सूर सन सलास अशरीन अलफ राजेश्री सिंगर वेंटर नरसिंह [illegible] वंडरसी मो । होनावरी कोपा व जमीन ठिकाण दर सवाद कर मजकूर यीस्वा तालूक जकाती [illegible] बिमोजीब खुर्दखत रहरयाने मलीकशेखमुलहुसेन थाली दमली करे अन हवालदार अज [illegible] नवले वंकापूर दर साल सन सित अशार अलफ व तेरीख छ २३ जमा दिलावल मुर्तज खा [illegible] मा दस्तूर आसन तल मजकूरासी सालायाद चालीले प्रमाणे भोगवटा व तसरूफात . .

मौजे होनावरीकोपाव जमीन ठिकाण दर सवाद मो कसब . . . . . स्वा तालूक [illegible] दर सवाद व॥ मजकूर कुलबाब व जकाती इनाम मौ ॥ मजकूर कुंबाला कीजे तालीक लिहून [illegible] नपनी परतोन दीजे दरसाला खुर्दखताचे उजूर न कीजे मोर्तबा

तेरीख १७ माहे रबीलावल

---

* ಮಹಮ್ಮದೀಯ ಬಾದಶಹರ ಮತ್ತು ಅವರ ಕಡೆಯವರ ಫರ್ಮಾನುಗಳು ಕೆಲವು ಪರ್ಷಿಯನ್ ಭಾಷೆಯಲ್ಲಿವೆ. ಕೆಲವು [illegible] ಭಾಷೆಯಲ್ಲಿವೆ. ಕೆಲವು ಕನ್ನಡ ಭಾಷೆಯಲ್ಲಿವೆ. ಕೆಲವು ಪರ್ಷಿಯನ್ ಮಹಾರಾಷ್ಟ್ರ ಎರಡು ಭಾಷೆ[illegible]. ಕೆಲವು ಕನ್ನಡ ಪರ್ಷಿಯನ್ ಎರಡು ಭಾಷೆಯಲ್ಲಿಯೂ ಇವೆ. ಕೆಲವು ಪರ್ಷಿಯನ್, ಮಹಾರಾಷ್ಟ್ರ, ಕನ್ನಡ, [illegible] ಭಾಷೆಗಳಲ್ಲಿಯೂ ಇವೆ. ಅವುಗಳನ್ನು ಇದ್ದುದಿದ್ದಂತೆಯೇ ಆಯಾ ಭಾಷೆಗಳಲ್ಲಿ ಮುದ್ರಿಸಿದೆ. [illegible] ಕೆಲವು [illegible] (ಅರಬ್ಬೀ ಶಕ) ದಂತೆ ಅರಬ್ಬಿ ಭಾಷೆಯಲ್ಲಿ ಅಕ್ಷರಗಳಿಂದ ಆಯಾ ವರ್ಷಗಳನ್ನು ಉಲ್ಲೇಖಿಸುತ್ತಾರೆ. ಪತ್ರದ [illegible] ಕೆಳಗೆ ಗೆರೆ ಹಾಕಲಾಗಿದೆ. ಆ ಶಕೆಯ ಸಂವತ್ಸರಗಳಿಗೂ ಶಾಲಿವಾಹನ ಶಕೆಯ ಸಂವತ್ಸರಗಳಿಗೂ [illegible] ವ್ಯತ್ಯಾಸ ಬರುತ್ತದೆ. ಕ್ರಿಸ್ತಶಕ ವರ್ಷಗಳಿಗೆ ೫೭೯ ವರ್ಷ ವ್ಯತ್ಯಾಸ ಬರುತ್ತದೆ. ಕೆಲವು ಪತ್ರಗಳಲ್ಲಿ ಹಿಜರಿ [illegible]. ಹಿಜರಿಯು ಕ್ರಿಸ್ತಶಕ ೬೨೨ರಲ್ಲಿ ಉಪಕ್ರಮವಾಗಿದೆ. ಕ್ರಿಸ್ತ ವರ್ಷ ಸುಮಾರು ೩೦ಕ್ಕೆ ಒಂದು ಹಿಜರಿ ವರ್ಷ [illegible]. ಫಸಲಿಯು ಕ್ರಿ. ಶ. ೫೯೧ ರಲ್ಲಿ ಉಪಕ್ರಮವಾಗಿ ನಡೆಯುತ್ತಲಿದೆ. ಇದರಂತೆ ಕ್ರಿಸ್ತಶಕ ಶಾಲಿವಾಹನ [illegible] ಪತ್ರದ ಮೇಲ್ಭಾಗದಲ್ಲಿ ನಿರ್ದೇಶಮಾಡಲಾಗಿದೆ.

೧೬೧. ಫರ್ಮಾನ್.—ಶಾ. ಶ. ೧೫೪೮, ಕ್ರಿ. ಶ. 1626.

هو الجليل

الملک الله

* با الله محمد نا علينا وجيه
المظهر الحق الذي وشاهدونا
عما توفيق با الله تعالی علي
توكل يا علي يا علی يا علي

فرمان همايون شرف صد و ريافت بجانب ملک اعظم اکرم اسمعيل
نشير الملک حوالدار و كاركنان معامله تور گل آنكه زمين دو قطعه تهكن در سواد
بزمين معامله مذكور دو تهكن عم لكنورد روجه انعام بدل صدقه حضرت جلالت
خداوند خلافت به اسم باين نسبت من هوندست زنار داران بعد او به اولاد و احفاد
او بموجب فرمان همايون متعين وجاري است.

موضع تلواي يک قطعه

موضع ماڑدگي يک قطعه

مي بايد كه زمين تهكنان مذكور به نوعي كه روان شده به همان طريق دروجه
ننگر بهاركي مهرچي طهور سال عشر الف بهو کو ... داده روان داركد - وهر سال
فرمان مجدد نه طلبند - و بعد او به اولاد احفاد او جاري سازند - و تعليق گرفته
اصل فرمان باز دهند و بر حكم فرمان همايون روند - تحريراً في التاريخ
مذكور مطابق الثاني عشر شهر رجب سنه ۱۰۲۷ پروانگر حضور اشرف اقدس همايون
رفيع اعلي.

با علام سعادت نشان رفيع القدر و المكان اخلاص نشان امر جمله
तेरीख १७ माहे रजब सन सबा अशरीन व अलफ।

———

* ವಿಜಾಪುರದ ಬಾದಶಹರು ಮುಸಲ್ಮಾನರಲ್ಲಿರುವ ಶಿಯಾ, ಸುನ್ನಿ ಎಂಬ ಎರಡು ಪಂಗಡಗಳಲ್ಲಿ ಶಿಯಾ ಪಂಗಡಕ್ಕೆ ಸೇರಿದವರಾದ್ದರಿಂದ ಆ ಸಂಪ್ರದಾಯದಂತೆ ಈ ಮುದ್ರೆಯಲ್ಲಿ ಕೊನೆಯ ಖಲೀಫನಾದ ಅಲಿಯನ್ನೇ ಸನ್ಮಾನಿಸಿ ಪ್ರಾರ್ಥಿಸಿಕೊಂಡಿದ್ದಾರೆ

ಶಾಸ್ತ್ರಗಳನ್ನು ಕಲಿತ ಮೇಲೆ ಮುಂದೆ ಅವರಿಗೆ ಆಸಕ್ತಿ ಇದ್ದ ವಿಷಯಗಳನ್ನು ಪಂತೋಜಿಗಳು ಬೋಧಿಸುತ್ತಾ ಇದ್ದರು. ಇವರ ಬರವಣಿಗೆಯು ಪಾರ್ಸಿ ಆಗಿದ್ದು, ಇದು ಬಲದಿಂದ ಎಡಕ್ಕೆ ಬರೆದುಕೊಂಡು ಹೋಗುವದಾಗಿತ್ತು. ಕೆಲವು ಮಠಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುವ ಶಾಲೆಗಳು ಇದ್ದವು. ಆದಿಲ್ ಶಾಹಿಗಳು ಗ್ರಂಥಾಲಯದ ಮೇಲ್ವಿಚಾರಣೆಗಾಗಿ ಅಧಿಕಾರಿಗಳನ್ನು ನೇಮಿಸಲಾಗುತಿತ್ತು. ಅವರಲ್ಲಿ ವಾಮನ ಪಂಡಿತ ಹಾಗೂ ಹುಸ್ಸೇನ ಎಂಬವರು[೧೫]ಇದ್ದರು.*

* (ಈ ಪ್ರಬಂಧವನ್ನು ಮಂಡಿಸುವಲ್ಲಿ ಸಹಕರಿಸಿದ ಶ್ರೀ ರಾಜಕುಮಾರ ಅವರಿಗೆ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಕೃಷ್ಣಕೋಲ್ಹಾರ ಕುಲಕರ್ಣಿ., **ಆದಿಲ್‌ಶಾಹಿ ಆಸ್ಥಾನ ಸಾಹಿತ್ಯ** ಪು. ೧೦.

೨. **ಕರ್ನಾಟಕ ಚರಿತ್ರೆ** (ಸಂ.) ೪ ಪ್ರೊ. ಬಿ. ಷೇಕ್‌ಅಲಿ ಪು. ೨೮೫

೩. ಡಾ. ಕೃಷ್ಣಕೋಲ್ಹಾರ ಕುಲಕರ್ಣಿ., **ಬಿಜಾಪುರ ಆದಿಲ್‌ಶಾಹಿ**, ಪು. ೨೪೯.

೪. Dr. K.R. Basvaraj., *History and Culture of Karanataka*, ಪು. 544.

೫. ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ., **ಬುಸಾಲೆನ ಸಲಾತೀನ** (ಕನ್ನಡ), ಪು. ೨೦೯.

೬. ಡಾ. ಗಾಯಕವಾಡ್., **ತಾರೀಖೆ- ಇಸ್ಕಂದರಿ** (ಕನ್ನಡ), ಪು ೪.

೭. **ಕರ್ನಾಟಕ ಚರಿತ್ರೆ**., (ಸಂ.) ೪ ಷೇಕ್ ಅಲಿ, ಪು ೨೯೪.

೮. ಡಾ. ಗಾಯಕವಾಡ್., ಅದೇ, ಪು. ೫.

೯. **ಕರ್ನಾಟಕ ಚರಿತ್ರೆ**, ಅದೇ, ಪು ೨೯೪.

೧೦. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ., **ಬಿಜಾಪುರ ಆದಿಲ್ ಶಾಹಿ**, ಪು. ೩೪೭.

೧೧. ಡಾ. ಕೃ. ಕುಲಕರ್ಣಿ., **ಬುಸಾಲೆನ ಸಲಾತೀನ** (ಕನ್ನಡ), ಪು ೩೧೭.

೧೨. ಡಾ. ಕೃ. ಕುಲಕರ್ಣಿ., **ಬಿಜಾಪುರ ಆದಿಲ್, ಶಾಹಿ**, ಪು ೨೬೭.

೧೩. **ಕರ್ನಾಟಕ ಚರಿತ್ರೆ**., ಅದೇ, ಪು ೨೯೭.

೧೪. **ಕರ್ನಾಟಕ ಚರಿತ್ರೆ**., ಅದೇ, ಪು ೩೦೦.

೧೫. ಡಾ. ಕೃ. ಕುಲಕರ್ಣಿ., **ಬಿಜಾಪುರ ಆದಿಲ್ ಶಾಹಿ**, ಪು. ೨೭೬.

ವ್ಹಿ. ಎಮ್. ಬಾಗಾಯತ*

ಆದಿಲ್‌ಶಾಹಿ ಅರಸರ ಕಾಲದ ಆರೋಗ್ಯ ವ್ಯವಸ್ಥೆ

ಮಧ್ಯಕಾಲೀನ ಸಮಾಜದಲ್ಲಿ ಕರ್ನಾಟಕವನ್ನಾಳಿದ ಅರಸರು ಸಾರ್ವಜನಿಕ ವೈದ್ಯಕೀಯ ವ್ಯವಸ್ಥೆಯನ್ನು ಮಾಡಿದ್ದರು. ಅರಸರು, ಸಾಮಂತರು, ಸರದಾರರು ಆರೋಗ್ಯದ ವ್ಯವಸ್ಥೆಗಾಗಿ ಕೆಲವು ವಿಶಿಷ್ಟ ವೈದ್ಯಕೀಯ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದರು. ಬಹಮನಿ ಅರಸರು ಮತ್ತು ಅವರ ನಂತರ ಬಂದ ಆದಿಲಶಾಹಿ ಅರಸರು ತಮ್ಮದೇ ಆದ ವಿವಿಧ ದರುಶ್‌ಹಫಾಜ್ ಅಥವಾ ದವಾಖಾನೆಗಳ ವ್ಯವಸ್ಥೆ ಮಾಡಿದ್ದರೆಂದು ತಿಳಿದುಬರುತ್ತದೆ.

ಆದಿಲ್‌ಶಾಹಿ ಕಾಲದಲ್ಲಿ ಯುನಾನಿ ಚಿಕಿತ್ಸಾ ಪದ್ಧತಿಯೊಂದಿಗೆ, ಆಯುರ್ವೇದ ಹಾಗೂ ಆಲೋಪತಿ ಚಿಕಿತ್ಸಾ ಮಾದರಿಯ ವೈದ್ಯಕೀಯ ಶಿಕ್ಷಣವೂ ಪ್ರಚಲಿತದಲ್ಲಿತ್ತು. ವಿಜಾಪುರದ ರುಕ್ಮಣೀ ಪಂಡಿತರು ಸಂತಕವಿ, ಆಯುರ್ವೇದ ವಿದ್ಯೆಯಲ್ಲಿ ಪರಿಣಿತರಾಗಿದ್ದರಲ್ಲದೇ, ಆಯುರ್ವೇದ ವಿದ್ಯೆಯನ್ನು ಕಲಿಸಲು ಒಂದು ವಿಶ್ವವಿದ್ಯಾಲಯವನ್ನು ಕಟ್ಟಿಸಿದರು. ಉತ್ತರ ಕರ್ನಾಟಕದಲ್ಲಿ ವಂಶಪಾರಂಪರ್ಯವಾಗಿ ವೈದ್ಯ ವಿದ್ಯೆಯನ್ನು ಉಳಿಸಿಕೊಂಡು ಬಂದ ಹಲವಾರು ಮನೆತನಗಳು ಮೂಲದಲ್ಲಿ ಈ ವಿಶ್ವ ವಿದ್ಯಾಲಯದಿಂದ ಬಂದವರಾಗಿದ್ದರೆಂದು ಹೇಳಲಾಗುತ್ತದೆ.

ದೊಡ್ಡ ದೊಡ್ಡ ಮಂದಿರಗಳು-ಮಸೀದಿಗಳಲ್ಲಿ ರೋಗಿಗಳನ್ನು ಉಪಚರಿಸಲು ಆಸ್ಪತ್ರೆಗಳನ್ನು ಸಹ ಪ್ರಾರಂಭಿಸಿದ್ದರು. ರೋಗಿಗಳನ್ನು ಉಪಚರಿಸಲು ವೈದ್ಯರನ್ನು ನೇಮಿಸಿಕೊಳ್ಳಲಾಗುತ್ತಿತ್ತು.

ಆದಿಲ್‌ಶಾಹಿ ರಾಜ್ಯದಲ್ಲಿ ವಿವಿಧ ಪ್ರಕಾರದ ವೈದ್ಯಕೀಯ ಸಹಾಯ ದೊರೆಯುತಿತ್ತು. ಬೇರೆ ಬೇರೆ ಪ್ರಕಾರದ ರೋಗಿಗಳನ್ನು ಉಪಚರಿಸಲು ವೈದ್ಯಕೀಯ ಕೇಂದ್ರದಲ್ಲಿ "ಸುಭಾ" ಎಂಬ ಭಾಗಗಳಿದ್ದವು. ಬೇರೆ ಬೇರೆ ಪ್ರಕಾರದ ಜ್ವರಗಳು, ಕಣ್ಣುಬೇನೆ, ಅಸ್ತಮಾ, ಚರ್ಮರೋಗದಂತಹ ಅನೇಕರೋಗಿಗಳನ್ನು ಉಪಚರಿಸುತ್ತಿದ್ದರು. ವಿಜಾಪುರದ ಆದಿಲ್‌ಶಾಹಿ ಅರಸರ ಧರುಶ್‌ಹಫಾಜದಲ್ಲಿ (ದವಾಖಾನೆಯಲ್ಲಿ)ಯುರೋಪಿಯನ್ ವೈದ್ಯನು ಎರಡನೆಯ ಇಬ್ರಾಹಿಮ್‌ನ ಆಸ್ಥಾನಕ್ಕೆ ಬಂದಿದ್ದನು.

ಬುಮರಾತ್ ಹಾಗೂ ಫರ್ನಾಲಿಬ್ ಎಂಬ ಯುರೋಪಿನ ವೈದ್ಯರು ಆದಿಲ್‌ಶಾಹಿ ಆಸ್ಥಾನದಲ್ಲಿದ್ದರು. ಫರ್ನಾಲಿಬ್‌ನು ಔಷಧಶಾಸ್ತ್ರ ಹಾಗೂ ಶಸ್ತ್ರ ಚಿಕಿತ್ಸೆಯಲ್ಲಿ ಪ್ರಸಿದ್ಧನಾಗಿದ್ದನು. ಒಮ್ಮೆ ಎರಡನೆಯ ಇಬ್ರಾಹಿಮ್ ಅರಸನಿಗೆ ಈತನು ಕೊಟ್ಟ ಚಿಕಿತ್ಸೆಯಿಂದ ರೋಗ ಗುಣವಾಗದೇ ಉಲ್ಬಣವಾಗಿ ರಾಜ ಸತ್ತನಂತರ ಖವಾಸ ಕಾನನು ವೈದ್ಯನು ರಾಜನಿಗೆ ಸರಿಯಾಗಿ ಚಿಕಿತ್ಸೆ ಕೊಡಲಿಲ್ಲವೆಂದು ಅವನ ಮೂಗು ಹಾಗೂ ಮೇಲಿನ ತುಟಿಗಳನ್ನು ಕತ್ತರಿಸಿ ಶಿಕ್ಷೆ ಕೊಟ್ಟಾಗ, ಫರ್ನಾಲಿಬನು ತನ್ನ ಮನೆಗೆ ಬಂದನಂತರ ತನ್ನ ನೌಕರನ ಮೂಗು ಮತ್ತು ತುಟಿಯನ್ನು ಕತ್ತರಿಸಿ ತನ್ನ ಮೂಗಿನ ಸ್ಥಳದಲ್ಲಿ ನೌಕರನ ಮೂಗನ್ನು ಮತ್ತು ತುಟಿಯನ್ನು ಜೋಡಿಸಿ ಹೊಲಿದು ಔಷಧೋಪಚಾರವನ್ನು ಮಾಡಿಕೊಂಡನು. ನಂತರ ಮತ್ತೆ ಮೊದಲಿನಂತೆಯೇ ಬಿಜಾಪುರದಲ್ಲಿಯೇ ಇದ್ದು ಎಲ್ಲರಿಗೂ ಔಷಧೋಪಚಾರ ಮಾಡುತ್ತಿದ್ದನು. ಔಷಧ ಹಾಗೂ ಶಸ್ತ್ರ ಚಿಕಿತ್ಸೆಯಲ್ಲಿ ಅದ್ವಿತಿಯನಾಗಿದ್ದನೆಂದು "ಬುಸಾತಿನೆಸಲಾತಿನ" ಗ್ರಂಥದಲ್ಲಿ ಮಹಮದ್ ಜುಬೇರಿ ಹೇಳಿದ್ದಾನೆ.

ಒಂದನೆಯ ಅಲಿ ಆದಿಲ್‌ಶಾಹ ಕಾಲದ ವಿಜಯನಗರದ ಯುದ್ಧದಲ್ಲಿ ಆಶಿಕ್‌ಅಬದಾಲ್ ಎಂಬ ಫಕೀರನು ಬಿಜಾಪುರದ ಹತ್ತಿರದ ತರೆಯಾ (ತೊರವಿ)ದ ಧನಿ, ದೊಡ್ಡ ಸಾಧು ಪುರುಷ ಕೀರ್ತಿವಂತ ಪುರುಷನಾಗಿದ್ದನು ಮತ್ತು ಸೂಫಿಸಂತನಾಗಿದ್ದನು. ಒಮ್ಮೆ ಯುದ್ಧದಲ್ಲಿ ಬೆನ್ನ ಹಿಂದೆ ತಲವಾರಿನ ಗಾಯವಾಗಿತ್ತು ಫಕೀರನ ಬೆನ್ನನಲ್ಲಿ ಕೆಳಗಿನಿಂದ ಕುತ್ತಿಗೆಯಲ್ಲಿ ಗಂಟಲಿನವರೆಗೂ ಕತ್ತರಿಸಿತ್ತು. ಆದರೆ ಗಂಟಲಿನ ಮುಖ್ಯ ನರ ಮಾತ್ರ ಕತ್ತರಿಸಲಿಲ್ಲ. ಆದ್ದರಿಂದ ಆತನ ಗಾಯವನ್ನು ಹೊಲಿದು ಮಲಾಮು ಪಟ್ಟಿಯನ್ನು ಹಚ್ಚಲಾಯಿತು. ಆತನ ಕುತ್ತಿಗೆ ಪೂರ್ತಿ ಕತ್ತರಿಸಿದ್ದರೂ ಶಸ್ತ್ರ ಚಿಕಿತ್ಸೆಯಿಂದ ಹತ್ತು ವರ್ಷ ಜೀವಂತನಾಗಿದ್ದನೆಂದು ಜುಬೇರಿಯು "ಬುಸಾತಿನೆ ಸಲಾತೀನ್" ಗ್ರಂಥದಲ್ಲಿ ಉಲ್ಲೆಖಿಸುತ್ತಾನೆ.

ಬುಮರಾತ್ ಎಂಬ ಇನ್ನೊಬ್ಬ ಅಲೊಪತಿ ಪದ್ಧತಿಯ ಯುರೋಪಿಯನ್ ವೈದ್ಯನು ಅನೇಕ ವರ್ಷಗಳ ವರೆಗೆ ಆದಿಲ್ ಶಾಹಿ ಆಸ್ಥಾನದಲ್ಲಿದ್ದನು.

ಯುನಾನಿ : ರೋಗಿಯ ರೋಗಗಳನ್ನು ಗುಣಪಡಿಸಲು ಪ್ರತಿಯೊಬ್ಬ ವೈದ್ಯನು ತನ್ನದೇ ಆದ ಸ್ವತಂತ್ರ ಮಾದರಿಯ ಉಪಚಾರವನ್ನು ಅನುಸರಿಸುತ್ತಿದ್ದನು. ಅನೇಕ ವೈದ್ಯರು ಇರಾನದಿಂದ ಬಂದು ಬಿಜಾಪುರದ ಆಸ್ಥಾನದಲ್ಲಿ ನೆಲಸಿ ಜನರನ್ನು ಆರೋಗ್ಯ

* ಇತಿಹಾಸ ಉಪನ್ಯಾಸಕರು, ಎಸ್.ಆರ್.ಪಿ.ಯು ಕಾಲೇಜು, ಹೋರ್ತಿ, ತಾ. ಇಂಡಿ, ಜಿ. ಬಿಜಾಪುರ.

ಸೇವೆಯನ್ನು ಮಾಡಿದ ಬಗ್ಗೆ ಇತಿಹಾಸ ಗ್ರಂಥಗಳಿಂದ ತಿಳಿಯುತ್ತೇವೆ. ಇರಾನಿ ವೈದ್ಯರು ಒಳ್ಳೆಯ ಗೌರವ ಹಾಗೂ ಅಭಿಮಾನದಿಂದ ರೋಗಿಗಳ ಸೇವೆಯನ್ನು ಮಾಡುತ್ತಿದ್ದರು. "ಹಕೀಮ ಅಹಮದ ಗಿಲಾನಿ" ಎಂಬ ಇರಾನಿ ವೈದ್ಯನನ್ನು ಒಂದನೆಯ "ಅಲಿ ಆದಿಲ್‌ಶಾಹಿನು" ತನ್ನ ಆಸ್ಥಾನಕ್ಕೆ ಸಂಭ್ರಮದಿಂದ ಸ್ವಾಗತಿಸಿದನು.

ಮೂರನೆಯ ಹಕಿಮ್ ಆತಶಿ : ಈತನು ಒಬ್ಬ ಕವಿ ಗ್ರಂಥಕಾರ ಹಾಗೂ ಯುನಾನಿ ವೈದ್ಯನಾಗಿದ್ದನು. ತಪವೊಹರೆಲ ಎಂಬ ಪಿತ್ತಜ್ವರ ಬಂದರೆ ಉಳಿಯುವುದೇ ಕಷ್ಟವಾಗುತ್ತದೆ. ರೋಗಿಗೆ ತುಂಬಾ ನೀರಡಿಕೆಯಾಗುತ್ತದೆ. ಆ ನೀರಡಿಕೆಯಿಂದಲೇ ಮನುಷ್ಯ ಸತ್ತು ಹೋಗುತ್ತಾನೆ. ಮನುಷ್ಯ ನೀರಿನ ದಾಹವನ್ನು ಶಾಂತಮಾಡಿ ಆತನನ್ನು ತಿರುಗಿ ಸಜೀವನನ್ನಾಗಿ ಮಾಡುವುದು ಅತೀಸುಲಭದ ಕೆಲಸವೆಂದು ಹೇಳುತ್ತಾನೆ.

ಬಅಲಿ : ಈತ ವೈದ್ಯರ ವೈದ್ಯನಾಗಿದ್ದನು. ಯುನಾನಿ ಪದ್ಧತಿಯ ಚಿಕಿತ್ಸೆಯನ್ನು ನೀಡುತ್ತಿದ್ದನು.

ಮಿರಜಾ ಹಕೀಮ್ : ಈತನು ಸಹ ಕವಿ ಹಾಗೂ ವೈದ್ಯನಾಗಿದ್ದನು. ಮೊದಲನೆಯ ಅಲಿಆದಿಲ್‌ಶಾಹನ ಆಸ್ಥಾನದಲ್ಲಿ ವಿವಿಧ ರೋಗಗಳ ವಿಶೇಷ ವೈದಕೀಯ ತಜ್ಞರ ಹೆಸರನ್ನು ನಾವು ಇಲ್ಲಿ ನೋಡಬಹುದು. "ತಬಿಬ-ಎ-ಶೇರಸ್ಥಾಬಂದ" (ಎಲವು ಕೀಲು ತಜ್ಞ), ಬಹಾಲ್ (ಕಣ್ಣಿನ ರೋಗ ತಜ್ಞ), ಅತ್ತಾರ (ಔಷಧ ತಜ್ಞ) ಎಂಬ ವೈದ್ಯರಿದ್ದರೆಂದು ತಿಳಿದುಬರುತ್ತದೆ. ಈ ಎಲ್ಲ ಹೆಸರುಗಳು ಇರಾನಿ ಭಾಷೆಯ ಪದಗಳೆ ಆಗಿವೆ. ಅದೇ ರೀತಿ ಕೆಲವು ರೋಗಗಳ ಹೆಸರುಗಳು ನಮಗೆ ಸಿಗುತ್ತವೆ.ಅವು ಯಾವವೆಂದರೆ ತಬ-ಈ-ನುಬಾ, ತಬ-ಇ-ಮುತರ್ಕಾ, ಸಫಾರ, ಬಲಗಮ, ಸಫೇದದಾಗ, ಸುಜಾತ್, ಅತರಕ್, ಝುರ್ಧಿ, ಜಕುಮ್, ಸಸ್ ಬಂದ ಎಂಬ ರೋಗಗಳನ್ನು ಇರಾನಿ ವೈದ್ಯರು ಗುಣಪಡಿಸುತ್ತಿದರು. ಹೀಗೆ ಇವರ ಕಾಲದಲ್ಲಿ ಇರಾನಿ ವೈದ್ಯಕೀಯ ಪದ್ಧತಿ ವಿಪುಲವಾಗಿ ಬಳಕೆಯಲ್ಲಿತ್ತು. ದಖ್ಖನ್ ರಾಜ್ಯಗಳು ನಾಶವಾದ ಮೇಲೆ ಹಲವು ಶತಮಾನಗಳ ನಂತರವೂ ಸಹ ಪರ್ಷಿಯನ್ ಅಥವಾ ಇರಾನಿ ಮಾದರಿಯ ವೈದ್ಯಕೀಯ ಉಪಚಾರವನ್ನು ಅನೇಕ ಸೂಫಿ-ಸಂತರ ದರ್ಗಾಗಳಲ್ಲಿ, ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದರು. ಈಗಲೂ ಸಹ ಅನೇಕ ಹಕೀಮರು ಯುನಾನಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ಇರಾನಿ ವೈದ್ಯಕೀಯ ಪದ್ಧತಿಯನ್ನು ದಖ್ಖನ್ ಭಾಗದಲ್ಲಿ ಇರಾನ್ ಪದದ ಬದಲಾಗಿ ಯುನಾನಿ ಎಂದೂ ಮತ್ತು ಇರಾನದ ವೈದ್ಯಕೀಯ ಪದ್ಧತಿಯನ್ನು ತಬ-ಇ-ಯುನಾನ ಅಥವಾ ಯುನಾನಿ ವೈದ್ಯಕೀಯ ಪದ್ಧತಿಯೆಂದು ತಪ್ಪಾಗಿ ಉಚ್ಚರಿಸುತ್ತಾರೆ. ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ಪ್ಲಾಷ್ಪರ ಶಸ್ತ್ರಚಿಕಿತ್ಸೆ ಮಾಡುತ್ತಿದ್ದ ರೆಂಬುದನ್ನು ಈ ಮೊದಲೇ ತಿಳಿದುಕೊಂಡಿದ್ದೇವೆ. "ಅತ್ತಾರ" ಎನ್ನುವರು ಔಷಧಿ ವ್ಯಾಪಾರ ಮಾಡುತ್ತಿದ್ದರು.

ಪವಾಡ ಚಿಕಿತ್ಸೆ : *ಈ ಅರಸರ ಕಾಲದಲ್ಲಿ ಹಿಂದು ಹಾಗೂ ಮುಸ್ಲಿಮ್ ಸಂತರಿಂದ ಅರಸು ಮನೆತನದರೆಗೆ ಪವಾಡ ಚಿಕಿತ್ಸೆಯಿಂದ ಮರುಜೀವ ಪಡೆದ ಒಂದೆರಡು ಘಟನೆಗಳುಇಲ್ಲಿ ವಿವರಿಸುತ್ತೇನೆ.*

ಹಜರತ್‌ಶಾಹ ಹಷಮ್ ಆಲಮೀಯ *ಇವರು ಸಿಕಂದರ್ ಆದಿಲ್‌ಶಾಹನ ಗುರುವಾಗಿದ್ದರು. "ಗುಂಜಲ್ ಅಸ್ರಾರ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ಸುಲ್ತಾನ ಮಹಮದ ಆದಿಲ್‌ಶಾಹನು ಅನಾರೋಗ್ಯದಿಂದ ಬಳಲುತ್ತಿದ್ದಾಗ ಅನೇಕ ವೈದ್ಯರು ನಾನಾ ಪ್ರಕಾರದ ಚಿಕಿತ್ಸೆಯನ್ನು ನೀಡಿದರೂ ಗುಣವಾಗದಿದ್ದಾಗ ಅರಸನು ಹಜರತ್ ಶಾಹ ಹಷಮ್ ಆಲಮೀಯ ಹತ್ತಿರ ಹೋದರು. ಮಂತ್ರ ಚಿಕಿತ್ಸೆ ಯಿಂದ ತಮ್ಮ ಹೊರತು ನನಗೆ ರೋಗ ಗುಣವಾಗುವದಿಲ್ಲ. ತಾವು ಕೃಪೆ ಮಾಡಿ ನನ್ನನ್ನು ಗುಣಮುಖನನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದಾಗ, ಬಾದಶಾಹನ ವಿನಂತಿಯನ್ನು ಮನ್ನಿಸಿ ಬಾದಷಾನ ಆಯುಷ್ಯದ ಕೊಡ ಪೂರ್ತಿಯಾಗಿ ತುಂಬಿದೆ. ಅವನಿಗೆ ಈ ಸಮಯದಲ್ಲಿ ಬೇರೆಯವರು ಜೀವಕೊಡದೆ ಹೊರತು ಬಾದಶಾಹನು ಬದುಕುವುದೇ ಸಾಧ್ಯವಿಲ್ಲ. ನನ್ನ ಆಯುಷ್ಯ ಇನ್ನೂ ಹತ್ತು ವರುಷ ಉಳಿದಿದೆ, ನಾನು ನನ್ನ ಆಯುಷ್ಯವನ್ನು ಈ ಬಾದಸಾಹನಿಗೆ ಬಕ್ಷೀಸಾಗಿ ಕೊಟ್ಟು, ಅವನ ರೋಗವನ್ನು ತೆಗೆದುಕೊಂಡೆ ಎಂದು ಹೇಳಿದನು. ಹೀಗೆ ಅವರು ಹೇಳುತ್ತಿದ್ದಂತೆಯೇ ಬಾದಶಾಹನ ಆರೋಗ್ಯ ಗುಣವಾಗಿ ಅವನು ಗುಣಮುಖನಾದನು. ಮರುದಿನ ಬಾದಶಾಹ ಹಜರತ ತಹ-ಹಾಷಿಮಿಯವರ ದರ್ಶನಕ್ಕಾಗೀ ಬಂದನು. ಅಲ್ಲಿ ನೋಡಿದರೆ ಬಾದಶಾಹನ ರೋಗದಿಂದಲೇ ಬಳಲುತ್ತ ಬಿದ್ದಿರುವ ತನ್ನ ಪ್ರತಿಬಿಂಬವನ್ನು ಹಜರತದಲ್ಲಿ ಕಂಡನೆಂದು ಹೇಳುತ್ತಾನೆ. ಹೀಗೆ ರಾಜನಿಗೆ ತಮ್ಮ ಆಯುಷ್ಯವನ್ನು ಕೊಟ್ಟ ರಕ್ಷಿಸಿದ್ದು ಇತಿಹಾಸದಲ್ಲಿ ಉಲ್ಲೇಖಿಸಿದ್ದಾರೆ.*

ರುಕ್ಮಾಂಗದ ಪಂಡಿತ ಪವಾಡ : *ರುಕ್ಮಣೀ ಪಂಡಿತರು ಎರಡನೆಯ ಇಬ್ರಾಹಿಮ್‌ನ ಮಗಳ ರೋಗವನ್ನು ವೈದ್ಯರಿಂದ ಗುಣಪಡಿಸದೇ ಸತ್ತಾಗ,ಬಾದಶಾಹನ ಅರಮನೆಗೆ ಬಂದು ಸರಸ್ವತಿ ಪೂಜೆ ಮಾಡಿಸಿ ಸರಸ್ವತಿ ವಿಗ್ರಹದ ಮುಂದೆ ಇಬ್ರಾಹಿಮ್‌ನ ಮಗಳನ್ನು ಮಲಗಿಸಿ ಪಂಡಿತರು ಸಂಗೀತ ಪೂಜೆಯನ್ನು ಪ್ರಾರಂಭಿಸು ತ್ತಾರೆ. ಸ್ವತಃ ಖ್ಯಾತ ಗಾಯಕರಾದ ಪಂಡಿತರು. ರಾಗದ ಆಲಾಪವನ್ನು ತಾನಾ ಪುರಾದೊಂದಿಗೆ ಪ್ರಾರಂಭಿಸುತ್ತಾರೆ. ಅವರು ರಾಗವಿಸ್ತಾರ ಮಾಡು ತ್ತಿದ್ದಾಗ ನಿಶ್ಚೇಷ್ಠಿತಳಾಗಿದ್ದ ಬಾದಶಹನ*

ಮಗಳು ಅಲುಗಾಡಲು ಆರಂಭಿಸುತ್ತಾಳೆ. ರಾಗ ಸಮಾಪ್ತಿಯ ಹೊತ್ತಿಗೆ ಬೇನೆ ಕಳೆದು ಆರೋಗ್ಯ ವಂತಳಾಗಿ ಎದ್ದು ಕುಳಿತುಕೊಳ್ಳುತ್ತಾಳೆ. ಇದರಿಂದ ಬಾದಶಾಹನು ಪಂಡಿತರ ಮೋಡಿಯಿಂದ ಆಕರ್ಷಿತವಾಗಿ ಸರಸ್ವತಿಯ ಭಕ್ತನಾಗುತ್ತಾನೆ.

ಅಬ್ದುಲ್‌ಹಸನ್ ಕಾದರಿ ಹಾಗೂ ಹಜರತ್‌ಶಾಹಾ ಸಬಗದುಲ್‌ಹಾರು : ಸಹ ಇಂತಹ ಪವಾಡಗಳನ್ನು ಮಾಡಿದ್ದು ಇಬ್ರಾಹಿಮ್ ಜುಬೇದಿಯ ಬರೆದ ಚರಿತ್ರೆಯಿಂದ ತಿಳಿದು ಬರುತ್ತದೆ.

ಈ ರೀತಿಯಾಗಿ ಆಯುರ್ವೇದ, ಯುನಾನಿ, ಅಲೋಪತಿ, ಮಂತ್ರ, ತಂತ್ರ, ಆಕ್ಯುಪ್ರೆಶರ್, ಸಂಗೀತ ಹಾಗೂ ಪವಾಡ ಚಿಕಿತ್ಸೆಯಿಂದ ಜನರ ಆರೋಗ್ಯವನ್ನು ಪಂಡಿತರು, ವೈದ್ಯರು, ಸೂಫಿಸಂತರು ರಕ್ಷಿಸುತ್ತಿದ್ದರು. ಈ ಅರಸರ ಕಾಲದ ವೈದ್ಯಕೀಯ ಪದ್ಧತಿಯ ಕುರಿತು ಇನ್ನೂ ಸಂಶೋಧನೆಯಾಗಬೇಕಾಗಿದೆ. ವಿದ್ವಾಂಸರು ತಮಗೆ ಹೆಚ್ಚಿನ ಮಾಹಿತಿ ಇದ್ದರೆ ತಿಳಿಸಿ ಉಪಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ., **ಬಿಜಾಪುರದ ಆದಿಲ್‌ಶಾ.**

೨. **ಬುಸಾತಿನೇ-ಸಾಲಾತಿನ** - ಮ. ಇ. ಜುಬೇರಿ.,

೩. ಮಹಮ್ಮದ ಕಾಶೀಮ, ಇಬ್ರಾಹಿಮ್, ತಾರೀಖೆ ಫರಿಸ್ತಾ,

೪. ಅಹವಾಲೆ, ನಾಲಾತಾನೆ-ಬಿಜಾಪುರ

5. Persian Elements in the culture, Art, And Architecture of Porjupur. (XI. Zaman Khodey.)

ಜಯಪ್ರಕಾಶ ದ. ಕಬ್ಬೂರ*

ಗುಪ್ತ ಕನ್ನಡ ಭಾಷೆ

ಅಕೇ ಖಗೇ ಘಜ ಶೈವಾ
ಚಟೇ ತಪೇ ನಮಾಜಡೆ
ಯಶೇ ರಸೇ ಲಸಕ್ಷೈವಾ
ಹವಾಳಾಕ್ಷಾ ಬರಾಯಣೇ ॥

ಇದು ಒಂದು ಪ್ರಾರ್ಥನೆ ಅಥವಾ ಸುಭಾಷಿತ ಶ್ಲೋಕವಲ್ಲ, ಇದೊಂದು ಕುತೂಹಲಕಾರಕ ಕನ್ನಡ ಪದ್ಯವಾಗಿದ್ದು, ಗುಪ್ತ ಕನ್ನಡ ಭಾಷೆಯನ್ನು ತನ್ನಲ್ಲಿ ಇಟ್ಟುಕೊಂಡಿದೆ.

ಬ್ರಿಟಿಶರು ಭಾರತವನ್ನು ಆಳುತ್ತಿರುವ ಕಾಲದಲ್ಲಿ ಕರ್ನಾಟಕದ ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ಈ ಭಾಷೆಯನ್ನು ಗುಪ್ತಭಾಷೆ, ಗೂಢಚರ್ಯ ಭಾಷೆಯಾಗಿ ಬಳಸಲಾಗುತ್ತಿತ್ತು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅನೇಕ ಕಡೆಗೆ ಹಿಂಸಾಚಾರ ನಡೆಯುತ್ತಿತ್ತು. ಸರಕಾರದ ಕಾಗದ ಪತ್ರಗಳನ್ನು ವಶಪಡಿಸಿಕೊಳ್ಳುವುದು, ಸುಡುವದು ಇತ್ಯಾದಿ ಕೃತಿಗಳು ಸಾಮಾನ್ಯವಾಗಿದ್ದವು.

ಆ ಕಾಲದಲ್ಲಿ ಸಾರಿಗೆ, ಸಂಪರ್ಕದ ಸಾಧನಗಳು ಮಿತವಾಗಿದ್ದವು, ಸರಕಾರದ ಸಂದೇಶಗಳನ್ನು ಅಂಚೆಯ ಮೂಲಕ ಅಥವ ಸಂದೇಶವಾಹಕರ ಮೂಲಕ ಕಳಿಸಲಾಗುತ್ತಿತ್ತು. ಗ್ರಾಮಾಂತರ ಪ್ರದೇಶಗಳಿಗೆ ಕುದುರೆಸವಾರರು ಈ ಸಂದೇಶಗಳನ್ನು ತೆಗೆದುಕೊಂಡು ಹೋಗುತ್ತಿದ್ದರು; ಸ್ವಾತಂತ್ರ್ಯ ಹೋರಾಟಗಾರರು ಈ ಸಂದೇಶ ವಾಹಕರ ಮೇಲೆ ದಾಳಿಮಾಡಿ ಕಾಗದಪತ್ರಗಳನ್ನು ಕಸಿದುಕೊಂಡು ಓದಿ ತಿಳಿಯುತ್ತಿದ್ದರು. ಬಂಧನದ ಆದೇಶವಿದ್ದರೆ ಬಂಧಿಸಬೇಕಾದ ವ್ಯಕ್ತಿ ಅಥವ ಗುಂಪಿಗೆ ಈ ವಿಷಯ ತಿಳಿದು ತಪ್ಪಿಸಿಕೊಳ್ಳುವ ಅಥವಾ ಬೇರೆ ಯೋಜನೆ ಮಾಡುವ ಸಾಧ್ಯತೆಗಳಿದ್ದವು. ಕಾರಣ ಮಹತ್ವದ ಗುಪ್ತ ಸಂದೇಶಗಳನ್ನು ಕಳಿಸುವಾಗ ಈ ಗುಪ್ತ ಭಾಷೆಯನ್ನು ಬಳಸಲಾಗುತಿತ್ತು. ಸರಕಾರದ ಆದೇಶಗಳು ಬೇರೆಯವರಿಗೆ ಅರ್ಥವಾಗಬಾರದು ಎಂಬುದೇ ಮುಖ್ಯ ಉದ್ದೇಶವಾಗಿತ್ತು.

ಈ ಗುಪ್ತಭಾಷೆಯು ಜಿಲ್ಲಾ ಮತ್ತು ತಾಲೂಕು ಸ್ಥಳಗಳಲ್ಲಿಯ ಹಾಗೂ ಪ್ರಮುಖ ಗ್ರಾಮಗಳಲ್ಲಿರುವ ಸರಕಾರಿ ಅಧಿಕಾರಿಗಳಿಗೆ ಮಾತ್ರ ಗೊತ್ತಿರುತ್ತಿತ್ತು. ಈ ಗುಪ್ತಚರ ಇಲಾಖೆಯಲ್ಲಿರುವ ಎಲ್ಲರಿಗೂ ಈ ಭಾಷೆ ಗೊತ್ತಿರಲಿಲ್ಲ. 'ಇಂದ' ಮತ್ತು 'ಗೆ ' (From and To) ಇಬ್ಬರಿಗೆ ಮಾತ್ರ ಅರ್ಥವಾಗುತ್ತಿತ್ತು. ಇಂತಹ ಒಂದು ಗೋಪ್ಯತೆಯನ್ನು ಆಗಿನ ಸರಕಾರಿ ಅಧಿಕಾರಿಗಳು ಕಾಯ್ದುಕೊಂಡು ಬಂದಿದ್ದರು.

ಬ್ರಿಟಿಶರ ಭಾಷೆಯು ಇಂಗ್ಲೀಷ್. ಕನ್ನಡವು ಅವರಿಗೆ ಪರಭಾಷೆಯಾಗಿದೆ. ಈ ಗುಪ್ತ ಕನ್ನಡ ಭಾಷೆ ಅವರಿಗೆ ಭಾರತಕ್ಕೆ ಬಂದ ನಂತರ ದೊರಕಿರಬಹುದು. ಬ್ರಿಟಿಶರ ಆಗಮನಕ್ಕಿಂತ ಮೊದಲು ಕರ್ನಾಟಕದಲ್ಲಿ ಈ ಭಾಷೆಯ ಅಸ್ತಿತ್ವ ಇರಲಿಕ್ಕೆ ಸಾಧ್ಯವಿದೆ. ಕರ್ನಾಟಕದ ಯಾವದೋ ರಾಜಮನೆತದಲ್ಲಿ ಗುಪ್ತಚರ ವಿಭಾಗದಲ್ಲಿ ಇದನ್ನು ಬಳಸುತ್ತಿರಬಹುದು, ಓರ್ವ ಕನ್ನಡ ಭಾಷಾ ಪಂಡಿತನು ಇದನ್ನು ರಚಿಸಿರಬಹುದು.

ಈ ಗುಪ್ತ ಕನ್ನಡ ಭಾಷೆಯು ರಚನೆಯಾದ ಕಾಲ, ಪ್ರದೇಶ, ಇತ್ಯಾದಿಗಳ ಸ್ಪಷ್ಟ ಮಾಹಿತಿ ದೊರಕುವುದಿಲ್ಲ. ಈ ಕುರಿತು ಯಾವುದೇ ಶಾಸನ, ಕಡತಗಳು ಇದುವರೆಗೆ ನಮಗೆ ದೊರಕಿರುವುದಿಲ್ಲ. ಜಿಲ್ಲಾಮಟ್ಟದ ಸಂಬಂಧಿಸಿದ ಇಲಾಖೆಗಳಲ್ಲಿ ಈ ಕುರಿತು ಯಾವುದೇ ಹಳೆಯ ದಾಖಲೆಗಳು ಇಂದು ಲಭ್ಯವಿಲ್ಲ. ಬ್ರಿಟಿಶ್ ಆಡಳಿತ ಕಾಲದಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿದ್ದ ಓರ್ವ ಪೋಲೀಸ್ ಅಧಿಕಾರಿಗಳು ಒಂದು ಸಂದರ್ಭದಲ್ಲಿ ಈ ಭಾಷೆಯ ಕುರಿತು ವಿವರಿಸಿದ್ದರು.

ಈ ಮೇಲಿನ ಶ್ಲೋಕದ ಪ್ರಕಾರ ಒಂದು ಅಕ್ಷರದ ಬದಲಿಗೆ ಬೇರೆ ಅಕ್ಷರ ಉಪಯೋಗಿಸುವದೇ ಇದರ ಮರ್ಮವಾಗಿದೆ.

ಒಂದು ಅಕ್ಷರದ ಬದಲಿಗೆ ಉಪಯೋಗಿಸಬೇಕಾದ ಅಕ್ಷರ			
ಅ= ಕ	ಖ=ಗ	ಘ= ಇ	ಚ=ಟ
ತ= ಪ	ನ=ಮ	ಜ=ಡ	ಯ=ಶ
ರ=ಸ	ಲ=ಷ	ಹ=ವ	ಳ=ಕ್ಷ
ಬ= ದ	ಯ=ಣ.		

ಸ್ವರಗಳನ್ನು ಉಪಯೋಗಿಸುವಾಗ-

ಅ=ಕ, ಆ=ಕಾ, ಇ=ಕಿ, ಈ=ಕೀ ಇದರಂತೆ ಉಳಿದ ಅಕ್ಷರಗಳನ್ನು ಉಪಯೋಗಿಸಬೇಕು. ಅದರಂತೆ ಕ=ಅ, ಕಾ=ಆ, ಕಿ=ಇ, ಇದರಂತೆ ಉಪಯೋಗಿಸಬೇಕು.

ಇನ್ನು ವ್ಯಂಜನಾಕ್ಷರಗಳನ್ನು ಉಪಯೋಗಿಸುವಾಗ-

ಖ=ಗ, ಖಾ=ಗಾ, ಖಿ=ಗಿ ಇದರಂತೆ ಮುಂದುವರೆಯುವದು.

* ಮುಖ್ಯಾಧ್ಯಾಪಕರು, ಪಿ.ಎಜೆ.ಎನ್. ಹೈಸ್ಕೂಲ್, ಕಲ್ಲೋಳಿ, ತಾ. ಗೋಕಾಕ, ಜಿ. ಬೆಳಗಾವಿ-೫೯೧ ೨೨೪.

ಈ ಮೇಲಿನ ಚೌಕದಲ್ಲಿ ಕೊಟ್ಟಂತೆ ಒಂದು ಅಕ್ಷರದ ಬದಲಿಗೆ ಅದರ ಎದುರಿಗೆ ಬರೆದ ಅಕ್ಷರವನ್ನು ಉಪಯೋಗಿಸ ಬೇಕು. ೦ (ಶೂನ್ಯ)ದಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ. ಒತ್ತಕ್ಷರಗಳನ್ನು ಬರೆಯುವಾಗ ಆಯಾ ಅಕ್ಷರಗಳ ಒತ್ತಕ್ಷರಗಳನ್ನೇ ಉಪಯೋಗಿಸಬೇಕು.

ಕೆಲವು ಉದಾಹರಣೆಗಳು-

ಕರ್ನಾಟಕ ಇತಿಹಾಸ ಅಕಾಡಮಿ = ಅರ್ಮಾಚಕ ಕಿಪಿವಾರ ಕಎಜನಿ.

ಡಾ. ಸೂರ್ಯನಾಥ ಕಾಮತ = ಜಾ. ರೂಣ್ಯಮಾಫ ಆನಪ

ಎಮ್. ಜಿ. ನಾಗರಾಜ = ಜಾ. ಕೆನ್. ಡಿ. ಮಾಖಸಾಡ

ಡಾ. ಪಿ. ವಿ. ಕೃಷ್ಣ ಮೂರ್ತಿ = ಜಾ. ತಿ. ಹಿ. ಲೃಲ್ಯನೂರ್ಪಿ

ಡಾ. ಎ. ಕೆ. ಶಾಸ್ತ್ರಿ = ಜಾ. ಕೆ. ಎ. ಯರ್ರಿ

ಡಾ. ಸ್ಮಿತಾ ಸುರೇಬಾನಕರ = ಜಾ. ರ್‍ನಿಪಾ ರುಸೇರಾಮಅಸ

ಎಚ್. ಎಸ್. ಗೋಪಾಲರಾವ್ = ಕೆಟ್. ಕೇರ್. ಖೋತಾಷಸಾಹ್

ಡಾ. ಕೆ. ವಸಂತಲಕ್ಷ್ಮಿ = ಜಾ. ಎ. ಹರಂಪಷಳ್ಮಿ

ಡಾ. ದೇವರಕೊಂಡಾರೆಡ್ಡಿ = ಜಾ. ಬೇಹಸಞಂಜಾ ಸೆಜ್ಜಿ

ಪ್ರೊ. ಲಕ್ಷ್ಮಣ್ ತೆಲಗಾವಿ = ತ್ರೋ . ಷಳ್ಮಯ ಪೆಷಂಖಾಹಿ.

ಡಾ. ಸಿಂದಗಿ ರಾಜಶೇಖರ = ಜಾ. ರಿಂಬಖಿ ಸಾಡಯೇಗಸ

ಇಂತಹ ಭಾಷೆ ಇರುವದು ಹೊಸದೇನಲ್ಲ, ಅಂತಾ ಕೆಲವರ ಅಭಿಪ್ರಾಯ ಇರಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕಮಕ್ಕಳು ಶಬ್ದಗಳನ್ನು ತಿರುವು ಮುರುವಾಗಿ ಅಥವ 'ಕ'ಕಾರವನ್ನು ಪ್ರತಿಯೊಂದು ಶಬ್ದಕ್ಕೆ ಜೋಡಿಸಿ ಮಾತನಾಡುವದು ಸಾಮಾನ್ಯ ವಾಗಿದೆ, ಎಂದು ಹೇಳುವದು ಸ್ವಾಭಾವಿಕವಾಗಿದೆ. ಆದರೆ ಮಕ್ಕಳು ಉಪಯೋಗಿಸುವ ಇಂತಹ ಭಾಷೆ ಎಲ್ಲರಿಗೂ ಬೇಗನೇ ಅರ್ಥ ವಾಗುತ್ತದೆ. ನಾಡಿನ ಅನೇಕ ಭಾಗಗಳಲ್ಲಿ ಇಂತಹ ವಿಚಿತ್ರ ಭಾಷೆ ಗಳು ಇದ್ದದ್ದು ಕಂಡುಬರುತ್ತದೆ.

ಆದರೆ ಇಲ್ಲಿ ನಮೂದಿಸಿರುವ ಭಾಷೆಯನ್ನು ಇಡೀ ಸರಕಾರವೇ ಸ್ವೀಕರಿಸಿ, ಗುಪ್ತಸಮಾಚಾರ ಹಾಗೂ ರಹಸ್ಯ ಸುತ್ತೋಲೆಗಳನ್ನು ರವಾನಿಸುವಾಗ ಪರಿಣಾಮಕಾರಿಯಾಗಿ ಉಪಯೋಗಿಸುತ್ತಿದ್ದ ಈ ಭಾಷೆಯನ್ನು ಲಘುವಾಗಿ ಭಾವಿಸಲು ಬರುವುದಿಲ್ಲ.

ಇನ್ನೊಂದು ವಿಷಯವೆಂದರೆ ಈ ಭಾಷೆಯನ್ನು ಕೇವಲ ಕನ್ನಡದಲ್ಲಿ ಮಾತ್ರವಲ್ಲ ಇತರ ಯಾವದೇ ಭಾರತೀಯ ಭಾಷೆಯಲ್ಲಿಯೂ ಬಳಸಬಹುದಾಗಿದೆ.

ಉತ್ತರ ಕರ್ನಾಟಕದ ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿಯೂ ಈ ಭಾಷೆಯನ್ನು ಮರಾಠಿಯಲ್ಲಿ ಬ್ರಿಟಿಶರು ಬಳಸುತ್ತಿದ್ದರೆಂದು ಹೇಳಲಾಗಿದೆ.

"ಯಾವುದೇ ಐತಿಹಾಸಿಕ ಸಂಗತಿಗಳನ್ನು ದೃಢೀಕರಿಸಲು ಅವಶ್ಯಕವಾದ ಮೂಲಗಳು, ದಾಖಲೆಗಳು ದೊರಕದೇ ಇದ್ದಾಗ ಪರಂಪರಾಗತವಾಗಿ ಬಂದ ಹೇಳಿಕೆಗಳೂ ಸಹ ದಾಖಲೆಗಳಾಗ ಬಹುದು", ಎಂಬ ಹೇಳಿಕೆಯಂತೆ ಈ ಭಾಷೆಯ ಅಸ್ತಿತ್ವವನ್ನು ಒಪ್ಪಿಕೊಳ್ಳಬಹುದಾಗಿದೆ.

ಈ ಕುರಿತು ಯಾರಾದರೂ ಸಂಶೋಧಕರು ಈ ಗುಪ್ತಕನ್ನಡ ಭಾಷೆಯ ಕುರಿತು, ಶಾಸನ, ಗ್ರಂಥ ಉಲ್ಲೇಖ, ತಾಳೆಓಲೆ, ಸರಕಾರ ದಾಖಲೆಗಳು ಇತ್ಯಾದಿಗಳನ್ನು ಹುಡುಕಿ ತೆಗೆದರೆ ಇಂತಹ ಐತಿಹಾಸಿಕ ಸಾಹಿತ್ಯದ ಕುರಿತು ಇನ್ನೂ ಹೆಚ್ಚಿನ ಅಂಶಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ. ಸಂಶೋಧಕರಿಗೆ ಇದು ಗ್ರಾಸವಾಗಿರುತ್ತದೆ. ಬ್ರಿಟಿಶ ಅಧಿಕಾರಿಗಳು ಈ ಭಾಷೆಯನ್ನು ಗುಪ್ತಚರ ವಿಭಾಗದಲ್ಲಿ ಮಾತ್ರ ಬಳಸುತ್ತಿದ್ದರು ಎನ್ನುವ ಕಾರಣದಿಂದ ಸಾಮಾನ್ಯವಾಗಿ ಎಲ್ಲರಿಗೂ ಈ ಭಾಷೆಯ ಪರಿಚಯವಾಗಿಲ್ಲ. ಮತ್ತು ಉಪಯೋಗಕ್ಕೆ ಬಂದಿರುವದಿಲ್ಲ. ಬ್ರಿಟಿಶರು ನಿರ್ಗಮಿಸಿದ ನಂತರ ಅವರ ಆಡಳಿತದ ಅನೇಕ ಪದ್ಧತಿಗಳೂ ನಿರ್ಗಮಿಸಿದವು. ನಂತರ ಬಂದ ನಮ್ಮ ಸರಕಾರಕ್ಕೆ ಇದರ ಅವಶ್ಯಕತೆಯೂ ಉಂಟಾಗಿರಲಿಕ್ಕಿಲ್ಲ.

ಆಧುನಿಕ ವೈಜ್ಞಾನಿಕ ಪ್ರಗತಿಯ ಈ ಕಾಲದಲ್ಲಿ ಆಧುನಿಕ ಸಂಪರ್ಕ ಸಾಧನಗಳ ಸಂಖ್ಯೆಯೂ ಹೆಚ್ಚಾಗಿ ಹಳೆಯ ವಿಧಾನಗಳನ್ನು ಕೈಬಿಟ್ಟಿರಲುಸಾಕು.

ಹಿಂದಿನ ಕಾಲದಲ್ಲಿ ಕರ್ನಾಟಕದ ದೊರೆಗಳು ಈ ಭಾಷೆಯನ್ನು ಬಳಸುತ್ತಿದ್ದ ವಿಷಯದ ಸಾಧ್ಯತೆಯನ್ನು ಕಂಡು ಹಿಡಿಯಬೇಕಾಗಿದೆ. ಇಂತಹ ಭಾಷೆಯನ್ನು ರಚಿಸಿದ ವಿದ್ವಾಂಸನ ಸಾಹಿತ್ಯ ಜ್ಞಾನ ಶ್ಲಾಘನೀಯವಾಗಿದೆ. ಸಂಶೋಧಕರು ಈ ಕುರಿತು ಗಮನ ಹರಿಸಿ ಶ್ರಮಿಸಿದರೆ ಖಂಡಿತ ಈ ಭಾಷೆಯ ಮೂಲ ತಿಳಿಯುವದರಲ್ಲಿ ಸಂಶಯವಿಲ್ಲ.* ಇಂತಹ ಇನ್ನೂ ಅನೇಕ ಸಂಗತಿಗಳು ಹೊರಬರಲು ಆಸಕ್ತ ಸಂಶೋಧಕರು ಪ್ರಯತ್ನಿಸಲಿ ಎಂದು ಆಶಿಸುವೆನು.

* (ಈ ಪ್ರಬಂಧದ ಸಂದರ್ಭದಲ್ಲಿ ದಿ . ದಶರಥ., ನರಸಿಂಹ. ಕಾಂಬಳೆ, ನಿವೃತ್ತ ಪೋಲಿಸ್ ಅಧಿಕಾರಿಗಳು ಅವರಿಂದ ಪಡೆದ ಮಾಹಿತಿಯನ್ನು ಇಲ್ಲಿ ಬಳಸಿಕೊಂಡಿದ್ದೇನೆ.)

ಡಾ.ಎಫ್.ಟಿ. ಹಳ್ಳಿಕೇರಿ*

ಕೋಳೂರು ಶಂಕರ ಕವಿ : ಹೊಸ ಶೋಧಗಳು

ಕೋಳೂರು ಶಂಕರಕವಿ, ಹದಿನೇಳನೆಯ ಶತಮಾನದ ಕೊನೆಯ ಅವಧಿಯಲ್ಲಿದ್ದ ಒಬ್ಬ ವಿಶಿಷ್ಟ ಕವಿ. ಕುಪ್ಪಸಕಂಥೆ ಗುರುವರ್ಯರ ಅಮಳಕರ ಸರಸಿರುಭವನಾದ ಈತ ಗುರುಬಸವನಿಂದ ಲಿಂಗದೀಕ್ಷೆ ಪಡೆದವನು. "ಪರಮ ಶಂಕರನ ಚಿತ್ಕಳೆವೊಂದು ಪಾದಿಯಿಂ ಧರೆ ಪವಿತ್ರಾರ್ಥಕದಿ ಗುರುರೂಪಮಂ ಧರಿಸಿ ಚರಚಕ್ರವರ್ತಿಯೆಂದೆನಿಸಿ ಷಟ್‌ಸ್ಥಳವನಂಗೀಕರಸಿ ಚೆಲ್ಲಂಗಮಂ ಕರದೊಳಿಂಬಿಟ್ಟು ತಲ್ಲಿಂಗಮುಮನುವೊಡವರೆದು ನಿಜಲೀಲಾಮೃತವನುಂಡು ಸುಖಿಪ" (ಚೋ.ಬ. ಕಾವ್ಯ ಸಂ. ೧೩-ಪ.೨೭); ಹೀಗೆ ಕೊಂಡಕುಂದೆ ಕರಿಬಸವರಾಜಯೋಗೀಂದ್ರರನ್ನು ಭಕ್ತಿಪೂರ್ವಕವಾಗಿ ತನ್ನ ಕಾವ್ಯಗಳಲ್ಲಿ ಸ್ತುತಿಸಿದ್ದಾನೆ. ಈ ಕರಿಬಸವರಾಜಯೋಗೀಂದ್ರರು ಉರವಕೊಂಡದ ಜಗದ್ಗುರುಗಳು. ಶಂಕರಕವಿಯ ಸ್ಥಳ, ಕೃತಿಗಳ ಸಂಖ್ಯಾನಿರ್ಣಯ ಹಾಗೂ ಅವುಗಳ ವೈಶಿಷ್ಟ್ಯವನ್ನು ಕುರಿತಂತೆ ನಾನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಹೊಸ ಶೋಧ ಗಳನ್ನು ತಿಳಿಸುವುದು ಈ ಸಂಪ್ರಬಂಧದ ಉದ್ದೇಶವಾಗಿದೆ.

ಸ್ಥಳ ವಿವೇಚನೆ

ಶಂಕರಕವಿಯ ಊರು ಕೋಳೂರು. ಈ ವಿಷಯವಾಗಿ ಡಾ. ಎಂ.ಎಸ್. ಸುಂಕಾಪುರ ಅವರು ಎರಡು ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ೧. ಈ ಹೆಸರಿನ ಗ್ರಾಮಗಳು ಕನ್ನಡ ನಾಡಿನಲ್ಲಿ ಅನೇಕ ಇವೆ. ಹಂಪೆಯ ವಿರೂಪಾಕ್ಷನನ್ನು, ತುಂಗಭದ್ರಾನದಿಯನ್ನೂ ಈತ ಉತ್ಕಟ ಅಭಿಮಾನದಿಂದ ತನ್ನ ಕಾವ್ಯದಲ್ಲಿ ಬಣ್ಣಿಸಿರುವುದರಿಂದ ಹಂಪೆಯ ಸಮೀಪದವನೆಂಬುದು ಕಂಡುಬರುತ್ತದೆ. ೨. ಯಾದಗಿರಿ ತಾಲೂಕಿನಲ್ಲಿರುವ ಕೋಳೂರು ಆತನ ಸ್ಥಳವಿದ್ದರೂ ಇರಬಹುದು ಎಂದಿದ್ದಾರೆ.[೧] ಮೊದಲ ಅಭಿಪ್ರಾಯಕ್ಕೆ ಪೂರಕವೆಂಬಂತೆ ಹಂಪೆಯ ವಿರೂಪಾಕ್ಷನನ್ನು, ತುಂಗಭದ್ರಾ ನದಿಯನ್ನು ಕವಿ ತನ್ನ ಕಾವ್ಯದಲ್ಲಿ ಮನದುಂಬಿ ವರ್ಣಿಸಿದ್ದಾನೆ.

ವರಕೃತಿಯಮಿದರ ಪ್ರಾರಂಭಮೆಂತೆನೆ ಸಪ್ತ
ಶರಧಿಮಧ್ಯದೊಳಿಹುದು ಜಂಬುದ್ವೀಪದ ಮಧ್ಯ
ದುರೆ ಕನಕಚಲಮಿಹುದುಮದರ ದಕ್ಷಿಣದಿ
ಭರತಾಖ್ಯಖಾಂಡಮದಿರ್ಪುದು
ಮೆರೆವುತರದೊಳಗೆ ಛಪ್ಪನ್ನ ದೇಶಂಗಳಂ
ಪರತರಂತರದರೊಳಂ ಕುಂತಾಳಾಹ್ವಯದೇಶ

ಕರಮೆಸೆಗುಮತ್ತಲ್ಲಿ ದಕ್ಷಿಣಸುಕಾಶಿ ಶಿವವಾಸಿ ಮುಕ್ತಿಯ ನಿವಾಸಿ (ಚೋ.ಬ.ಕಾವ್ಯ ಸಂ.೧-ಪ.೧೫)- ಎಂದು ಹೇಳುವುದರ ಜೊತೆಗೆ, ಸಕಲ ಕ್ಷೇತ್ರಗಳಿಗೆ ಗುರುನೆಲೆ, ಭೂಮಿಯೊಳಗಿರುವ ಎಲ್ಲ ಕ್ಷೇತ್ರಗಳು ಪಂಪಾಕ್ಷೇತ್ರಕ್ಕೆ ಗುಂಜೀ ತೂಕ, ತುಂಗಭದ್ರೆಯನ್ನು ಕಂಡರೆ, ಸ್ಪರ್ಶಿಸಿದರೆ ಮಹಾಪುಣ್ಯ: ಅದರಲ್ಲಿ ಸ್ನಾನ ಮಾಡಿ ಪಾನಗೈದವರಿಗೆ ಪಾವನತೆ ಪ್ರಾಪ್ತಿ, ಪಾಪಿಗಳ ಪಾಪವನ್ನು ತೊಳೆಯುವ ಶಕ್ತಿ ಇದಕ್ಕಿದೆ ಎಂದು ಹೇಳುವ ರೀತಿಯನ್ನು ಗಮನಿಸಿದರೆ ಹಂಪೆಯನ್ನು ತುಂಬ ಹತ್ತಿರದಿಂದ ಕವಿ ನೋಡಿರಬೇಕೆನಿಸುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾನು ಹಂಪೆಯ ಪ್ರದೇಶದಲ್ಲಿ ಈ ಹೆಸರಿನ ಗ್ರಾಮವಿದೆಯೇ ಎಂಬುದನ್ನು ಶೋಧಿಸತೊಡಗಿದೆ.

ಬಳ್ಳಾರಿಯಿಂದ ಸಿರಗುಪ್ಪ ರಸ್ತೆಗುಂಟ ೨೦ ಕಿ.ಮೀ. ಕ್ರಮಿಸಿದರೆ ಎಡಭಾಗದಲ್ಲಿ ಕೋಳೂರು ಎಂಬ ಚಿಕ್ಕ ಗ್ರಾಮವೊಂದು ಬರುತ್ತದೆ. ಅದೇ ಶಂಕರ ಕವಿಯ ಮೂಲಸ್ಥಳವಾಗಿರಬಹುದೆಂದು ಊಹಿಸಿ ಸ್ಥಳ ಪರಿಶೀಲನೆಗಾಗಿ ಆ ಊರಿಗೆ ಹೋದಾಗ ನನ್ನ ಊಹೆ ನಿಜವಾಯಿತು. ಗ್ರಾಮದ ಮೇಲ್ಭಾಗದಲ್ಲಿ ರಾಮಲಿಂಗೇಶ್ವರ



ಹೆಸರಿನ ದೇವಸ್ಥಾನವೊಂದು ಕಾಣುತ್ತದೆ (ಚಿತ್ರ-೧ ನೋಡಿ). ಅದರ ಶಿಲ್ಪರಚನೆಯನ್ನು ನೋಡಿದರೆ ಅದು ೪೦೦ ವರ್ಷಗಳಷ್ಟು ಪ್ರಾಚೀನವೆಂಬುದು ಸ್ಪಷ್ಟವಾಗುತ್ತದೆ. ಸಮಗ್ರವಾಗಿ ಆ ದೇವಸ್ಥಾನದ ಗರ್ಭಗುಡಿ, ಪ್ರಾಂಗಣ, ಗೋಪುರಗಳನ್ನೆಲ್ಲ ಪರಿಶೀಲಿಸಿದಾಗ ಇನ್ನೂ ಒಂದು ಅಚ್ಚರಿ ಕಾದಿತ್ತು. ಅದೇನೆಂದರೆ, ದೇವಸ್ಥಾನದ ಬಲಭಾಗಕ್ಕೆ ಹೊಂದಿಕೊಂಡು ಒಂದು ಕೋಣೆಯಿದೆ. ಆದರ ಬಾಗಿಲ ಮೇಲೆ 'ಹರಿಶಂಕರ ದೇವಸ್ಥಾನ' ಎಂಬ ಬೋರ್ಡನ್ನು

* ರೀಡರ್, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬.

ತೂಗು ಹಾಕಲಾಗಿದೆ (ಚಿತ್ರ-೨ ನೋಡಿ). ಅಲ್ಲಿನ ಜನರನ್ನು ಕೇಳಿ ವಿಚಾರಿಸಲಾಗಿ "ಬಹಳ ಹಿಂದಿನಿಂದಲೇ ಈ ಬೋರ್ಡನ್ನು ಬರೆಸಿ ಹಾಕಲಾಗಿದೆ. ಅದರಂತೆ ನಾವು ಪ್ರತಿವರ್ಷ ಜಾತ್ರೆಯ ಸಮಯದಲ್ಲಿ ಹೊಸದೊಂದು ಬೋರ್ಡನ್ನು ಬರೆಸಿ ಹಾಕುತ್ತೇವೆ" ಎಂದು ಹೇಳಿದರು. ಕೋಣೆಯ ಒಳಗಡೆ ಒಂದು ಗದ್ದುಗೆಯಿದೆ. ಇದು ನಿಜಸಮಾಧಿಯೋ ಅಥವಾ ಜ್ಞಾಪಕ ಸಮಾಧಿಯೋ ಎಂಬುದರ ಬಗೆಗೆ ಯವುದೇ ಮಾಹಿತಿ ಸಿಗಲಿಲ್ಲ. ಮತ್ತು ಅಲ್ಲಿನ ಜನರಿಗೂ ಗೊತ್ತಿಲ್ಲ. ಬಹುಶಃ ಇದು ಶಂಕರ ಕವಿಯ ವಾಸಸ್ಥಳವೆಂದು ತೋರುತ್ತದೆ. ಈ ಕೋಣೆಯಲ್ಲಿಯೇ ಕುಳಿತುಕೊಂಡು



ಕವಿ ಕಾವ್ಯವನ್ನು ರಚಿಸುತ್ತಿರಬಹುದು.

ಅಲ್ಲದೇ ರಾಮಲಿಂಗೇಶ್ವರ ಈತನ ಆರಾಧ್ಯ ದೈವ. ತನ್ನ ಪ್ರತಿಯೊಂದು ಕೃತಿಯಲ್ಲಿಯೂ ಶ್ರೀ ಕೋಳೂರು ರಾಮೇಶ ನುಡಿಸಿದೊಡೆ ಪೇಳ್ದ ಶಂಕರನು ಒಲಿದು, ಈ ಧರೆಯೊಳಧಿಕ ಶ್ರೀ ಕೋಳೂರ ವಾಸ ಶ್ರೀ ರಾಮೇಶನಾ ಸಾರಿದೇ, ರಾಮೇಶನೆನಗೆ ವರವಿತ್ತಿಹನು ಬಾಲ್ಯದೊಳು, ಭವವಿಮೋಚ ರಾಮೇಶ ಎಂದು ವಿಧವಿಧವಾಗಿ ಅತ್ಯಂತ ಭಕ್ತಿಭಾವದಿಂದ ಪ್ರಾರ್ಥಿಸಿದ್ದಾನೆ. ಶಂಕರ ಕವಿಯು ಸ್ಮರಿಸಿದ ಕರಿಬಸವ ರಾಜೇಂದ್ರರು ಉರವಕೊಂಡದವರು. ಒಂದು ಕಾಲಕ್ಕೆ ಇದು ಕರ್ನಾಟಕಕ್ಕೆ ಸೇರಿದುದಾಗಿತ್ತು. ಈ ಎಲ್ಲ ಆಧಾರಗಳಿಂದ ಬಳ್ಳಾರಿ ಜಿಲ್ಲೆಯ ಕೋಳೂರು ಶಂಕರಕವಿಯ ಸ್ಥಳವೆಂಬುದು ಖಚಿತವಾಗಿ ಹೇಳಬಹುದು.

ಕೃತಿಗಳ ಸಂಖ್ಯಾನಿರ್ಣಯ

ಇಲ್ಲಿಯವರಿಗೂ ಈತ ಚೋರಬಸವೇಶ್ವರ ಕಾವ್ಯವೊಂದನ್ನು ಮಾತ್ರ ರಚಿಸಿದ್ದಾನೆಂಬುದಾಗಿ ಕವಿಚರಿತೆಕಾರ ಆರ್. ನರಸಿಂಹಾಚಾರ್, ೧೯೭೯ರಲ್ಲಿ ಈ ಕಾವ್ಯವನ್ನು ಪರಿಷ್ಕರಿಸಿದ ಎಂ. ಎಸ್. ಸುಂಕಾಪುರ, ಇನ್ನೂ ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದರು. ಆದರೆ ನಾನು ಶೋಧಿಸಿದ ತಾಳೆಗರಿ ಪ್ರತಿ, ಕಲ್ಲಚ್ಚಿನ ಪ್ರತಿಯಿಂದ ಶಂಕರಕವಿಯು ಒಟ್ಟು ಆರು ಕೃತಿಗಳನ್ನು ರಚಿಸಿದ್ದಾನೆಂಬುದು ತಿಳಿಯುತ್ತದೆ. ಅವುಗಳೆಂದರೆ ೧. ಶರಣ ಮೋನಪ್ಪಯ್ಯನ ಚರಿತ್ರೆ ೨. ಚೋರಬಸವೇಶ್ವರ ಕಾವ್ಯ ೩. ನವಮೋಹನ ತರಂಗಿಣಿ ೪. ಮಾಧವಾಂಕ ಕಾವ್ಯ ೫. ಸುಜ್ಞಾನ ಸುಧಾಕರ ಪಂಚವಿಂಶತಿ ೬. ಸ್ವರವಚನಗಳು. ಇವುಗಳಲ್ಲಿ ಕೆಲವು ಕೃತಿಗಳ ವಸ್ತು ವೈವಿಧ್ಯ, ಗುಣ ವಿಶೇಷತತೆಯನ್ನು ಕುರಿತು ಈಗ ವಿವೇಚಿಸಲಾಗುವುದು.

ಶರಣ ಮೋನಪ್ಪಯ್ಯನ ಚರಿತೆ

ಧರ್ಮಸಮನ್ವಯಕಾರನಾದ ತಿಂಥಿಣೆ ಮೋನಪ್ಪಯ್ಯನನ್ನು ಕುರಿತು ರಚನೆಗೊಂಡ ಮೊದಲ ಮತ್ತು ಅಪ್ರಕಟಿತ ಕಾವ್ಯ ಇದಾಗಿದೆ. ೧೧ ಸಂಧಿ, ೧೧೧೦ ಸಾಂಗತ್ಯ ಪದ್ಯಗಳನ್ನೊಳಗೊಂಡ ಈ ಕೃತಿಯು ಪೂರ್ಣಗೊಂಡದ್ದು "ಶಾಲಿವಾಹನ ಶಖ ಸಾವಿರ ದರ್ರೈನೂರ ಮೇಲೆ ಎಪ್ಪತ್ತಾರನೆಯ ಸಾಲು ಸದ್ಭಾವ ಸಂವತ್ಸರದ ಮಾಘದೊಳು ಶುದ್ಧ ವೈಶಾಖ ತಿಥಿಯೊಳು ಸುಧಾಕರವಾಸರೆ ಅಶ್ವೀನಿ ನಕ್ಷತ್ರ" (ಸಂ.೧೧-ಪ.೧೨೮)ದಲ್ಲಿ. ಆದ್ದರಿಂದ ಶರಣ ಮೋನಪ್ಪಯ್ಯನ ಚರಿತೆಯು ಕ್ರಿ.ಶ. ೧೭೫೪ರಲ್ಲಿ ರಚನೆಯಾಗಿದೆ. ಪ್ರತಿ ಅಧ್ಯಾಯದ ಆರಂಭದಲ್ಲಿ ಕಥೆಗೆ ಪೂರಕವಾಗುವಂತೆ ಬಸವಣ್ಣ, ಅಲ್ಲಮಪ್ರಭುದೇವ, ಚೆನ್ನಬಸವಣ್ಣ ಇತ್ಯಾದಿ ಶಿವಶರಣರ ವಚನಗಳನ್ನು ಕವಿ ಉಲ್ಲೇಖಿಸಿದ್ದಾನೆ. ಚಾಮರಸನು ಚಿತ್ರಿಸಿದ ಪ್ರಭುದೇವನ ವ್ಯಕ್ತಿತ್ವದ ನಿರೂಪಣಾ ಮಾದರಿಯಲ್ಲಿಯೇ ಮೋನಪ್ಪಯ್ಯನ ವ್ಯಕ್ತಿತ್ವ ಮತ್ತು ಸಾಧನೆಯನ್ನು ಈ ಕೃತಿಯಲ್ಲಿ ಚಿತ್ರಸಲಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ಈ ಕೃತಿಯ ಕಾಗದದ ಹಸ್ತಪ್ರತಿಯೊಂದು ಕೊಪ್ಪಳ ಜಿಲ್ಲೆಯ ಮುದ್ದಾಬಳ್ಳಿಯ ಶ್ರೀ ಗುರುನಾಥಸ್ವಾಮಿಯವರ ಮನೆಯಲ್ಲಿ ನಮಗೆ ದೊರಕಿತು. ಈಗ ಇದು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ (ಕ್ರಮಸಂಖ್ಯೆ.೮೬೨)ದಲ್ಲಿ ಸಂಗ್ರಹಗೊಂಡಿದೆ. ಈ ಪ್ರತಿಯು ತುಂಬಾ ಜೀರ್ಣಗೊಂಡಿದ್ದು, ಅಕ್ಷರಗಳು ಸುಂದರವಾಗಿವೆ. ಆರಂಭದ ಮತ್ತು ಕೊನೆಯ ಪುಟಗಳಲ್ಲಿ ತಿಂಥಿಣೆ ಮೋನಪ್ಪಯ್ಯ ಹಾಗೂ ಶಂಕರಕವಿಯ ವರ್ಣನಾತ್ಮಕ ರೇಖಾಚಿತ್ರಗಳಿರುವುದು ಈ ಪ್ರತಿಯ ವೈಶಿಷ್ಟ್ಯವೆನಿಸುತ್ತದೆ. ಜೊತೆಗೆ ಲಿಪಿಕಾರ ಕೊನೆಯ ಭಾಗದಲ್ಲಿ ಹೀಗೆ ಹೇಳಿಕೊಂಡಿದ್ದಾನೆ.

"ಶ್ರೀಮನ್ಮಹಾ ಮೌನೇಶ್ವರದೇವರ ಪಾದಪೂಜಿತರಾದ ಲಿಂಗನಬಂಡಿಮಠದ ಲಿಂಗಯ್ಯನವರ ಗರ್ಭಸಂಜಾತರಾದ ಮೌನಯ್ಯನವರು ಸ್ವಹಸ್ತದಿಂದ ಹಳೆಪ್ರತಿಯಿದ್ದಂತೆ। ಬರದುಯಿದ್ದು ಹೊಸಪ್ರತಿಯನ್ನು ನೋಡಿ ಮತ್ತೊಮ್ಮೆ ಪ್ರತಿಮಾಡಿರುತ್ತದೆ। ಸದರಿ ಮೌನಯ್ಯನವರು ಬರದ ಪ್ರತಿಯು ಮುಗಿದ ಮಿತಿ ಶ್ರೀಮನ್ನೃಪ ಶಾಲಿವಾಹನ ಶಖದಾ ೧೭೮೬ನೆಯ ರಕ್ತಾಕ್ಷಿ ನಾಮ ಸಂವತ್ಸರದ ಜೇಷ್ಠ ಬಹುಳ ೨ ಬಿದ್ಗಿ ಮಂಗಳವಾರ ಉತ್ರಾಷಾಢ ನಕ್ಷತ್ರ ಹಗಲು ಏಳನೇ ತಾಸಿನಲ್ಲಿ ಗುರುಹಾರೆಯಲ್ಲಿ ಮುಗಿದ ಶ್ರೀಮೌನೇಶ್ವರ ಪುರಾಣವನ್ನು। ಮತ್ತೂ। ಹಂಪಸಾಗರದಲ್ಲಿರುವ

ಯಾತಗಿರಿಮಠದ ಶ್ರೀಗುರೇಂದ್ರಸ್ವಾಮಿಗಳವರು ಶಾಲಿವಾಹನ ಶಖ ೧೮೨೫ ಶೋಭನಕೃತು ನಾಮ ಸಂವತ್ಸರದ ಆಶ್ವೀಜ ಶು। ೬ ಸ್ಥಿರವಾರದಲ್ಲಿ ಪೂರ್ಣಮಾಡಿದ್ದು। ಈ ಪುರಾಣವನ್ನು ಬರಿಯುವುದಕ್ಕೆ ಪೂರ್ವದಲ್ಲಿ ನಿಜಾಂ ಇಲಾಖಾ ಕಿಲ್ಲೆ ಕೊಪ್ಪಳದಲ್ಲಿ ಯಿರುವ ವೇದಮೂರ್ತಿ ಧರ್ಮಾಚಾರಿಯವರ ಮನೆಯಲ್ಲಿಯಿರುವಂಥ ಹಳೆಪುರಾಣವನ್ನು ನೋಡಿ ಸದರಿ ಪುರಾಣವನ್ನು ಸ್ವಹಸ್ತದಿಂದ ಬರದು ಇದ್ದಂಥ ನೆನಪು।"-ಈ ಮಾತುಗಳಿಂದ ಹಸ್ತಪ್ರತಿಯ ಪ್ರಸರಣ, ಲಿಪಿಕಾರನ ಇತಿವೃತ್ತ ವಿಚಾರ ಮತ್ತು ಆತನ ಮನೋಧರ್ಮವನ್ನು ನಾವು ಅರಿತುಕೊಳ್ಳಬಹುದು.

ನವಮೋಹನ ತರಂಗಿಣಿ

೨೪ ಸಂಧಿ,೨೦೧೧ ವಾರ್ಧಕ ಷಟ್ಪದಿಯನ್ನೊಳಗೊಂಡ ಬೃಹತ್ ಕೃತಿಯಾಗಿದೆ, ನವಮೋಹನ ತರಂಗಿಣಿ. ಕೃಷ್ಣ ರುಕ್ಮಿಣಿ, ಪ್ರದ್ಯುಮ್ನ ರತಿ, ಅನಿರುದ್ಧ ಉಷೆ ಇವರ ಶೃಂಗಾರಮಯ ಜೀವನವೇ ಈ ಕಾವ್ಯದ ಮುಖ್ಯವಸ್ತುವಾಗಿದೆ. ಆರಂಭದಲ್ಲಿ ದೇವತೆಗಳ ಸ್ತುತಿ, ಕಾಳಿದಾಸ, ಬಾಣ, ಮಯೂರ, ಪಾಲ್ಕುರಿಕೆ ಸೋಮನಾಥ, ಮೊಗ್ಗೆಯ ಮಾಯಿದೇವ, ಹರಿಹರ, ಚಾಮರಸ, ಲಕ್ಕಣ್ಣ ದಂಡೇಶ, ಭೀಮರಸ ಮೊದಲಾದ ಪೂರ್ವ ಕವಿಗಳನ್ನು ಶಂಕರಕವಿಯು ಸ್ಮರಿಸಿದ್ದಾನೆ. ಶೋಣಿತಪುರದ ವರ್ಣನೆ, ಬಾಣಾಸುರನ, ಪ್ರತಾಪ, ಮನ್ಮಥನು ಶಿವನನ್ನು ಕೆಣಕಿದುದು, ರತಿಯನ್ನು ಶಂಬರನು ಕರೆದೊಯ್ದದ್ದು, ರುಕ್ಮಿಣಿದೇವಿಯ ಗರ್ಭದಲ್ಲಿ ಮನ್ಮಥನು ಜನಿಸಿದ್ದು, ರತಿಕಾಮರ ಕ್ರೀಡಾಕಲಾಪ, ಶಿವನಿಗೂ ಕೃಷ್ಣನಿಗೂ ನಡೆದ ಯುದ್ಧ, ಈಶ್ವರನು ಬಂದು ಅಭಯಹಸ್ತ ನೀಡಿ ತನ್ನಾಶ್ರಮಕ್ಕೆ ಕರೆದೊಯ್ದದ್ದು ಹೀಗೆ ಹಲವಾರು ಕಥೆಗಳು ತುಂಬ ವರ್ಣನಾತ್ಮಕವಾಗಿ ಇಲ್ಲಿ ಎಡೆಪಡೆದಿವೆ. ಕನಕದಾಸರ ಮೋಹನ ತರಂಗಿಣಿ, ಈ ಕೃತಿಗೆ ಮೂಲ ಆಕರವಾಗಿದೆ. "ಬರದೋದಿದವನಲ್ಲ ಕನಕದಾಸನ ವಡನೆ ಹರಿಮುನ್ನ ಪೇಳಿಸಿದ....." ಎಂಬ ಮಾತುಗಳಲ್ಲಿ ಕವಿಯ ವಿನಮ್ರ ಭಾವನೆಯನ್ನು ಕಾಣಬಹುದು. ಎರಡೂ ಕೃತಿಗಳ ವಸ್ತು ಒಂದೇ ಆಗಿದ್ದರೂ ಇವು ತಮ್ಮದೇ ಆದ ವಿಶಿಷ್ಟತೆಯನ್ನು ಹೊಂದಿವೆ. ಕನಕದಾಸರು ಸಾಂಗತ್ಯ ಛಂದಸ್ಸನ್ನು ಬಳಸಿದರೆ, ಶಂಕರ ಕವಿಯು ವಾರ್ಧಕ ಷಟ್ಪದಿಯಲ್ಲಿ ಕಾವ್ಯ ರಚಿಸಿದ್ದಾನೆ. **ಮೋಹನ ತರಂಗಿಣಿಯು** ವೈಷ್ಣವ ಧರ್ಮದ ಮಹತ್ವವನ್ನು ಹೇಳಿದರೆ, **ನವಮೋಹನ ತರಂಗಿಣಿಯು** ವೀರಶೈವ ಧರ್ಮದ ತತ್ವಗಳನ್ನು ಪ್ರತಿಪಾದಿಸುತ್ತದೆ. ಶಾಲಿವಾಹನ ಶಕ ಸಾವಿರದ ಆರುನೂರರ ಮೇಲೆ ತೊಂಭತ್ತಾರನೆಯ ಸ್ಮರನ ಸಂವತ್ಸರದ ಫಾಲ್ಗುಣ ಶುದ್ಧದೀಮೆರೆವ ತದಿಗಿಯಲಿ ರೇವತಿ ನಕ್ಷತ್ರದೊಳು ಪರಿಪೂರ್ಣಮಾದುದು (ಸಂ.೩೪-ಪ.೪೫) ಎಂದು ಕವಿಯೇ ಕಾವ್ಯದ ರಚನಾ ಕಾಲವನ್ನು ಹೇಳಿಕೊಂಡಿದ್ದಾನೆ.

೧೯೯೯ರಲ್ಲಿ ನಾವು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಹೊಸಪೇಟೆ ತಾಲೂಕು ಕಂಪ್ಲಿಯ ಆರ್. ದೊಡ್ಡನಗೌಡ ಅವರ ಮನೆಯಲ್ಲಿ ಈ ಕೃತಿಯ ಕಲ್ಲಚ್ಚಿನ ಪ್ರತಿಯೊಂದು ನಮಗೆ ಸಿಕ್ಕಿತು. ಬಳ್ಳಾರಿಯ ಮಾಣಿಕ್ಯ ಮಂದರಿ ಬುಕ್‌ಡಿಪೋ ಪ್ರೊಪ್ರೈಟರ್ ಆಗಿದ್ದ ಟಿ.ಎ. ಮಾಣಿಕ್ಯಂ ಶೆಟ್ಟಿ ಅವರು ೧೯೧೩ರಲ್ಲಿಯೇ ಇದನ್ನು ಮುದ್ರಿಸಿದ್ದಾರೆ.[೩] ಹೀಗೆ ೧೯೧೩ರಲ್ಲಿಯೇ ಈ ಕೃತಿ ಬೆಳಕುಕಂಡಿದ್ದರೂ ಆರ್. ನರಸಿಂಹಾಚಾರ್ ಅವರ ಕವಿಚರಿತೆಯಲ್ಲಿ ಇದು ದಾಖಲುಗೊಂಡಿಲ್ಲ. ಬಹುಶಃ ಅವರ ಗಮನಕ್ಕೆ ಈ ಕೃತಿ ಬಂದಂತಿಲ್ಲ. ಅಲ್ಲದೇ ಎನ್. ಅನಂತರಂಗಾಚಾರ್ ಅವರು ಮೈಸೂರು ಪ್ರಾಚ್ಯ ಕೋಶಗಾರದಲ್ಲಿದ್ದ ನವಮೋಹನ ತರಂಗಿಣಿಯ ಹಸ್ತಪ್ರತಿಯೊಂದನ್ನು ಪರಿಶೀಲಿಸಿ ೧೯೪೦ರ ಪ್ರಬುದ್ಧ ಕರ್ನಾಟಕ (೨೧-೪) ಪತ್ರಿಕೆಯಲ್ಲಿ ಪರಿಚಯಾತ್ಮಕ ಲೇಖನವನ್ನು ಪ್ರಕಟಿಸಿದ್ದಾರೆ. ಆದರೆ ಅವರೂ ಸಹಿತ ಚೋರಬಸವೇಶ್ವರ ಕಾವ್ಯವನ್ನು ರಚಿಸಿದ ಕೋಳೂರು ಶಂಕರಕವಿಯೇ ಈ ಕಾವ್ಯದ ಕರ್ತೃ ಎಂಬುದನ್ನು ಹೇಳಿಲ್ಲ. ಹಾಗಾಗಿ ಇಲ್ಲಿಯವರೆಗೂ ಈತ ಚೋರಬಸವೇಶ್ವರ ಕಾವ್ಯವೊಂದನ್ನೇ ಮಾತ್ರ ರಚಿಸಿದ್ದನೆಂದು ತಿಳಿಯಲಾಗಿತ್ತು.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ನವಮೋಹನ ತರಂಗಿಣಿಯ ಎರಡು ಪ್ರತಿಗಳಿವೆ. ಕೆ.ಎ. ೩೦೫ನೆಯ ಕ್ರಮಾಂಕದ ಒಂದು ಪ್ರತಿಯು ಬಳ್ಳಾರಿಯ ಮರಿಸ್ವಾಮಿಗಳ ಮಠದಿಂದ ಸಂಗ್ರಹವಾಗಿರುವ ತಾಳೆಗರಿ ಪ್ರತಿಯಿಂದ ಕಾಪಿ ಮಾಡಿಸಿರುವಂತಹುದು. ೫೮೮ ಪುಟಗಳನ್ನೊಳಗೊಂಡ ಇದು "ಶಾಲಿವಾಹನಶಕ ೧೭೦೧ನೆಯ ಪ್ಲವ ಸಂ । ದ ಶ್ರಾವಣ ಬ ।೫। ಭಾರ್ಗವಾರದಂದು" ಲಿಪಿಕಾರ್ಯ ಪೂರ್ಣಗೊಂಡಿದೆ. ಕವಿಯ ಪ್ರದೇಶವಾದ ಬಳ್ಳಾರಿಯಲ್ಲಿ ದೊರೆತಿರುವುದು ಈ ಪ್ರತಿಯ ವಿಶೇಷತೆಯಾಗಿದೆ. ಕೆ. ೯೩೩ನೆಯ ಕ್ರಮಾಂಕದ ಇನ್ನೊಂದು ತಾಳೆಗರಿ ಪ್ರತಿಯು "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೭೫೦ನೆಯ ಸರ್ವಧಾರಿ ನಾಮ ಸಂವತ್ಸರದ ಅಷ್ಪ। ಶು। ೧೧ ಭಾನುವಾರ ದಿವಸ" ಪ್ರತಿಕಾರ್ಯ ಪೂರ್ಣಗೊಂಡಿರುವುದು. ಅಲ್ಲದೇ ಬೆಳಗಾವಿಯ ನಾಗನೂರು ಶ್ರೀ ರುದ್ರಾಕ್ಷಿ ಮಠದ ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯದಲ್ಲಿ ಈ ಕೃತಿಯ ಒಂದು ತಾಳೆಗರಿ ಪ್ರತಿಯಿರುವುದನ್ನು ನಾನು ಗಮನಿಸಿದ್ದೇನೆ. ಈ ಎಲ್ಲ ಪ್ರತಿಗಳ ಜೊತೆಗೆ ಕಲ್ಲಚ್ಚಿನ ಪ್ರತಿಯನ್ನಿಟ್ಟುಕೊಂಡು ನವಮೋಹನ ತರಂಗಿಣಿಯನ್ನು ಮತ್ತೊಮ್ಮೆ ಶಾಸ್ತ್ರಶುದ್ಧವಾಗಿ ಪರಿಷ್ಕರಿಸಿ ಪ್ರಕಟಿಸುವುದು ಅವಶ್ಯವಾಗಿದೆ.

ಸುಜ್ಞಾನ ಸುಧಾಕರ ಪಂಚವಿಂಶತಿ

೨೫ ಪದ್ಯಗಳನ್ನೊಳಗೊಂಡ ಒಂದು ಕಿರುಕೃತಿ[೪]. ಶಂಕರಕವಿಯೇ ಇದನ್ನು ರಚಿಸಿದ ಬಗೆಗೆ ಇಲ್ಲಿ ಸ್ಪಷ್ಟವಾದ ಉಲ್ಲೇಖವಿಲ್ಲ. ಕೋಳೂರೇಶ ಎಂಬ ಅಂಕಿತದಿಂದ ಕಾವ್ಯವನ್ನು

ಪೂರ್ಣಗೊಳಿಸಿದ್ದರಿಂದ ಬಹುಶಃ ಶಂಕರಕವಿ ಇದರ ಕರ್ತೃವೆಂದು ಊಹಿಸಬಹುದೇ ಹೊರತು ಇದಕ್ಕೆ ಇನ್ನೂ ಆಧಾರ ಸಾಲದು. ಅಂತಃಕರಣ ಚತುಷ್ಟಯ, ಪಂಚಪ್ರಾಣವಾಯುಗಳು, ಪಂಚ ಭೂತಗಳು, ಪಂಚಜ್ಞಾನೇಂದ್ರಿಯಗಳು ಮತ್ತು ಜೀವ ಈ ಇಪ್ಪತ್ತೈದು ತತ್ವಗಳ ಸಂಕ್ಷಿಪ್ತ ನಿರೂಪಣೆ ಕೃತಿಯ ಮುಖ್ಯವಸ್ತು. 'ಶ್ರೀಗುರುವಿನ ಪಾದವ ರಾಗದಿ ನೆರೆನಂಬು ಚಂದಮಾಮ। ಭವಸಾಗರ ದಾಂಟಿಸಿ ನಿಜಪದವಿತ್ತನು ಚಂದಮಾಮ' ಎಂಬ ಪಲ್ಲವಿಯೊಂದಿಗೆ ಆರಂಭ ವಾಗುವ ಈ ಕೃತಿಯಲ್ಲಿ ಕೆಲವು ನೀತಿ ಮಾತುಗಳನ್ನೂ ಕವಿ ತುಂಬ ಮಾರ್ಮಿಕವಾಗಿ ಹೇಳಿದ್ದಾನೆ. ಉದಾಹರಣೆಗೆ ಒಂದು ಪದ್ಯವನ್ನು ಇಲ್ಲಿ ಉಲ್ಲೇಖಿಸಹುದು.

ನಿನ್ನೊಳಗಿಹ ನಿಜವಸ್ತುವ ನೀ ತಿಳಿ ಚಂದಮಾಮ
ನಿನ್ನ ನೀ ತಿಳಿದರೆ ನೀನೆ ನಿರ್ಮಯನು ಚಂದಮಾಮ
ನಿನ್ನ ಮರೆವೆ ಮಾಯತಮ ನಿನ್ನ ಮುಸುಕಿದೆ ಚಂದಮಾಮ
ನಿನ್ನ ನೀನರಿವಡೆ ಮಾಯಾತಮವೇ ಜ್ಯೋತಿ ಚಂದಮಾಮ
(ಪ.೩)

ಸ್ವರವಚನಗಳು

ಕೋಳೂರೇಶ ಅಂಕಿತವನ್ನೊಳಗೊಂಡ ಸ್ವರವಚನಗಳು ಮೌಖಿಕ ಪರಂಪರೆಯಲ್ಲಿ ಬಳ್ಳಾರಿ ಪ್ರದೇಶದ ಸುತ್ತಮುತ್ತ ಸಿಗುತ್ತವೆ. ಶಿವನ ನಿಜವು ಸಿಕ್ಕುವುದಿಲ್ಲಲ್ಲ ಎಂದು ಆರಂಭವಾಗುವ ಸ್ವರವಚನವೊಂದು ಮಾತ್ರ ಇತ್ತೀಚೆಗೆ ಪ್ರಕಟಗೊಂಡಿದೆ.[೫] ಹೊತ್ತಿಸಿ ಹೋಮವ ಮಾಡಿದರೇನು ಹಲವು ಮಂತ್ರವ ಜಪಿಸಿದರೇನು, ಸತ್ಯಶರಣನ ನೆನಸಿದರೇನು ಶೀಲವನು ತಿರುಗಿ ಮಾಡಿದರೇನು, ಗುರುವಿನ ಪಾದವನು ಪರಮೇಶ್ವರನೆಂದು ನಂಬು ಎಂದು ಹೇಳುವಲ್ಲಿ ಕವಿ ಗುರುವಿನ ಮಹತ್ವವನ್ನು ಲೋಕಕ್ಕೆ ಸಾರಿದ್ದಾನೆ.

ಒಟ್ಟಿನಲ್ಲಿ ಶಂಕರಕವಿಯ ವಿಶೇಷತೆಯನ್ನು ಹೀಗೆ ಕ್ರೋಡೀಕರಿಸಿ ಹೇಳಬಹುದು. ೧) ಪ್ರತಿಯೊಂದು ಕಾವ್ಯದ ರಚನಾ ಕಾಲವನ್ನು ತಪ್ಪದೇ ಸೂಚಿಸಿದ್ದಾನೆ. ಆದ್ದರಿಂದ ಈತನ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿಗೆ ಅವಕಾಶವೇ ಇಲ್ಲ. ಶರಣ ಮೋನಪ್ಪಯ್ಯನ ಚರಿತೆಯನ್ನು ೧೬೭೬, ಚೋರಬಸವೇಶ್ವರ ಕಾವ್ಯವನ್ನು ೧೬೮೫, ನವಮೋಹನ ತರಂಗಿಣಿಯನ್ನು ೧೬೯೬ ಹೀಗೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಇವುಗಳನ್ನು ರಚಿಸಿದ್ದಾನೆ. ೨) ಸಾಂಗತ್ಯ, ವಾರ್ಧಕಷಟ್ಪದಿ, ಸ್ವರವಚನ, ವೃತ್ತ ಮುಂತಾದ ಪ್ರಕಾರಗಳಲ್ಲಿ ಕೃತಿ ರಚನೆ ಮಾಡುವುದರ ಮೂಲಕ ಶಂಕರಕವಿ ತನ್ನ ಕಾವ್ಯಪ್ರೌಢಿಮೆಯನ್ನು ತೋರ್ಪಡಿಸಿದ್ದಾನೆ. ೩) ಬಸವ, ಕೃಷ್ಣ, ಮೋನಪ್ಪಯ್ಯ, ಮಾಧವ ಹೀಗೆ ತನ್ನ ಕಾವ್ಯಕ್ಕೆ ವಸ್ತುವನ್ನಾಯ್ದು ಕೊಳ್ಳುವಲ್ಲಿ ವೈವಿಧ್ಯತೆಯನ್ನು ಸಾಧಿಸಿದ್ದಾನೆ. ೪) "ಸತ್ತವರ ಕಥೆಯಲ್ಲ ಸಾಯದೇ ಬದುಕಿರ್ದ ವ್ಯರ್ಥಜೀವಿಗಳ ಕಥೆಯಲ್ಲ ಇದು ಸಾಯದೇ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ನಿಜ ಪ್ರತ್ಯಕ್ಷ ಮೋಕ್ಷ ಪದವ ಸತ್ಯದಿಂ ಸಾಧಿಸುವ ಪುಣ್ಯಪುರುಷರ ಚರಿತೆ" (ಚೋ.ಬ. ಕಾವ್ಯ ಸಂ. ೧೩-ಪ.೨೩) ಎಂದು ತನ್ನ ಕಾವ್ಯವನ್ನು ಕುರಿತಂತೆ ಹೇಳಿದ ಮಾತುಗಳು ರಾಘವಾಂಕನನ್ನು ನೆನಪಿಸುತ್ತವೆ. ಹೀಗೆ ಇನ್ನೂ ಹಲವು ವೈಶಿಷ್ಟ್ಯವನ್ನು ಒಳಗೊಂಡ ಶಂಕರಕವಿಯ ಇತಿವೃತ್ತ ವಿಚಾರ, ಕೃತಿಗಳ ಪರಿಷ್ಕರಣ ಹಾಗೂ ಸಮಗ್ರ ಅಧ್ಯಯನವನ್ನು ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಕೈಗೊಳ್ಳಬೇಕಾದ ಅಗತ್ಯವಿದೆ.*

* (ಸುಜ್ಞಾನ ಸುಧಾಕರ ಪಂಚವಿಂಶತಿ ಕೃತಿಯ ಜೆರಾಕ್ಸ್ ಪ್ರತಿಯನ್ನು ನೀಡುವುದರ ಜೊತೆಗೆ ಕೆಲವು ಮಹತ್ವದ ವಿಷಯಗಳನ್ನು ತಿಳಿಸಿದ ಹಸ್ತಪ್ರತಿ ತಜ್ಞ ಶ್ರೀ ಎಸ್. ಶಿವಣ್ಣನವರಿಗೆ, ಕ್ಷೇತ್ರಕಾರ್ಯದಲ್ಲಿ ನನ್ನೊಂದಿಗೆ ಪಾಲ್ಗೊಂಡು ಸಹಕರಿಸಿದ ಬಳ್ಳಾರಿಯ ಸರಕಾರಿ ಪ್ರಥಮದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಶ್ರೀ ಜೆ. ಕರಿಯಪ್ಪನವರಿಗೆ ನಾನು ಕೃತಜ್ಞನಾಗಿದ್ದೇನೆ.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಚೋರಬಸವೇಶ್ವರ ಕಾವ್ಯ** ಪ್ರಸ್ತಾವನೆ ಪು.೧
೨. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿ ಈ ಕೃತಿಯ ಕಾಗದಪ್ರತಿಯೊಂದು ಇದೆಯೆಂದು ಎಸ್. ಶಿವಣ್ಣನವರು ಹೇಳಿದ್ದಾರೆ.
೩. ಇಂಥ ಹಲವಾರು ಪ್ರಾಚೀನ ಕೃತಿಗಳನ್ನು ಮಾಣಿಕ್ಯಂ ಶೆಟ್ಟಿ ಅವರಂಥ ಬಳ್ಳಾರಿ, ಬೆಂಗಳೂರು ಶೆಟ್ಟರು ಪ್ರಕಟಿಸಿದ್ದು ಆ ಕಾಲಕ್ಕೆ ಸಾಹಸದ ಕಾರ್ಯವಾಗಿದೆ.
೪. ಇದು ಕಾಗದ ಪ್ರತಿಯಲ್ಲಿದ್ದು, ಹಾಸನ ಜಿಲ್ಲೆಯ ಚಿಲುವನಹಳ್ಳಿಯ ರಾಜಶೇಖರ ಎಂಬುವವರ ಒಡೆತನಕ್ಕೆ ಸೇರಿದುದಾಗಿದೆ.
೫. **ಸ್ವರವಚನ ವಿಚಾರ ಸಂಕಿರಣ ಸಂಪುಟ.**, (ಸಂ.) ಎಂ. ಎಂ. ಕಲಬುರ್ಗಿ., ಪುಟ ೧೯೭

ಡಾ. ಕೆ. ರವೀಂದ್ರನಾಥ*

ಅಪ್ರಕಟಿತಕಾವ್ಯ : ಕರಿಬಸವಪುರಾಣ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪುರಾಣ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. ಜೈನಕವಿಗಳಿಂದ ಆರಂಭಗೊಂಡ ಪುರಾಣಸಾಹಿತ್ಯ ವೀರಶೈವ, ವೈದಿಕ ಕವಿಗಳಿಂದ ವಿಸ್ತಾರಗೊಳ್ಳುತ್ತಾ ಬಂದಿದೆ. ಚಾರಿತ್ರಿಕ ಅಂಕಗಳು ಗೌಣವಾಗಿ ಸ್ತುತಿ, ಪವಾಡ, ವದಂತಿ, ಐತಿಹ್ಯ, ದಂತಕಥೆಗಳಿಂದ ಪುರಾಣಗಳು ಪರಿಪೂರ್ಣಗೊಂಡಿರುತ್ತವೆ. ವಿಶೇಷವೆಂದರೆ ಸುಂದರವಾದ ವರ್ಣನಾ ಪ್ರಧಾನವಾಗಿರುವುದರಿಂದ ಪುರಾಣಗಳಲ್ಲಿ ಕಾವ್ಯಾಂಶ ಹೇರಳ ವಾಗಿ, ಕಥಾಂಶ ವಿರಳವಾಗಿ ಕಂಡುಬರುತ್ತದೆ. ಇಲ್ಲಿಯ ಕಥಾ ಮೊಳಕೆ ಬಿದಿರಿನ ಕಳಿಲೆಯಂತೆ. ಇದರ ಸುತ್ತ ಬಣ್ಣಬಣ್ಣದ ವರ್ಣನೆಗಳಿಂದ ಕೂಡಿದ ಕಮನೀಯ ಹೂಪೊದೆಗಳೇ ಹಬ್ಬಿನಿಂತಿರುತ್ತವೆ. ಅಂದರೆ ಪುರಾಣದ ವಸ್ತುವನ್ನು ಬೇಕಾದ ಆಕಾರಕ್ಕೆ ತಿರಿಗಿಸಿಕೊಂಡು ಬಳಸಿಕೊಳ್ಳಬಹುದು. ಇಲ್ಲಿ ಸಂಭಾವ್ಯಕಲೆ ಎದ್ದು ತೋರುತ್ತದೆ. ಈ ಕಾರಣವಾಗಿ ಪುರಾಣಗಳನ್ನು ಚರಿತ್ರೆಗಳಿಂದ ಭಿನ್ನವಾಗಿ ನೋಡುವ ಪರಿಪಾಠವಿದೆ. ಇತಿಹಾಸ ಪ್ರಮುಖವಾಗಿ ಚಾರಿತ್ರಿಕ ವ್ಯಕ್ತಿಗಳ ವೀರರ ಚರಿತ್ರೆಗಳಾಗಿದ್ದಂತೆ; ಪುರಾಣಗಳೂ ಕೂಡ ವೈವಿಧ್ಯತೆಯಿಂದ ಕೂಡಿದ ಕಲ್ಪನಾಕಥೆಗಳ ಸಂಪ್ರದಾಯಗಳನ್ನೊಳಗೊಂಡ ಪುರಾಣ ಪ್ರಸಿದ್ಧ ಸ್ಥಳ, ವ್ಯಕ್ತಿ ಹಾಗೂ ತತ್ವ-ಸಿದ್ಧಾಂತಗಳ ಸರಿಯಾದ ಚರಿತ್ರೆಗಳೇ ಆಗಿದೆ. ಸ್ಥೂಲವಾಗಿ ಪುರಾಣಗಳನ್ನು ವ್ಯಕ್ತಿಕೇಂದ್ರಿತ, ತತ್ವಕೇಂದ್ರಿತ ಹಾಗೂ ಸ್ಥಳಕೇಂದ್ರಿತ ಪುರಾಣಗಳೆಂದು ವರ್ಗೀಕರಿಸಬಹುದು.

ಸಮಾಜದಲ್ಲಿ ವ್ಯಕ್ತಿಯಾಗಿ ಬದುಕಿ ತಮ್ಮ ಆಚಾರ ವಿಚಾರಗಳಿಂದ ಗೌರವಕ್ಕೆ ಪಾತ್ರವಾಗಿ ಆ ಮೂಲಕ ಜನರ ಮನಸ್ಸಿನಲ್ಲಿ ಪೂಜ್ಯರಾಗಿ ಉಳಿದುಕೊಂಡ ಅನೇಕ ವ್ಯಕ್ತಿಗಳ ಸುತ್ತ ಪುರಾಣಗಳ ಸೃಷ್ಟಿಯಾಗುವುದು ವ್ಯಕ್ತಿಕೇಂದ್ರಿತ ಪುರಾಣಗಳು. ಹಾಗೆಯೇ, ಪ್ರತಿಯೊಂದು ಧರ್ಮದ ಉದ್ದೇಶ ತನ್ನ ತತ್ವವನ್ನು ಪ್ರಸಾರ ಮಾಡುವುದಾಗಿರುತ್ತದೆ. ಹೀಗಾಗಿ ಧಾರ್ಮಿಕ ಮಹಾಪುರುಷರಷ್ಟೇ ಅವರು ಸಾರಿದ ತತ್ವಗಳು ಜನರ ಮನಸ್ಸಿನಲ್ಲಿ ಪ್ರಮಾಣವಾಗಿರುತ್ತವೆ. ಅವುಗಳಲ್ಲಿ ವೀರಶೈವರ ಅಷ್ಟಾವರಣ, ವೈದಿಕರ ಉಪಾಸನೆ, ಜೈನರ ಪಂಚವ್ರತ, ಮುಂತಾದವುಗಳನ್ನು ಕೀರ್ತಿಸುವ ಸಲುವಾಗಿ ರಚನೆಯಾದವುಗಳು ತತ್ವಕೇಂದ್ರಿತ ಪುರಾಣಗಳು. ನದಿ, ವನ, ಸ್ಥಳ ಮುಂತಾದವು ಜನಮನದಲ್ಲಿ ಪುಣ್ಯಕ್ಷೇತ್ರಗಳಾಗಿ ಪ್ರಧಾನ್ಯತೆ ಪಡೆದಿರುತ್ತವೆ. ಇವುಗಳ ಉಗಮ, ಮಹಿಮೆ ಕುರಿತು ಪುರಾಣಗಳನ್ನು ಕಟ್ಟಿ ಕೀರ್ತಿಸುವುದು ಸ್ಥಳಕೇಂದ್ರಿತ ಪುರಾಣಗಳಾಗಿರುತ್ತವೆ. ಪ್ರಸ್ತುತ ಕರಿಬಸವ ಪುರಾಣ ಎಂಬುದು ಕರಿಬಸವನೆಂಬ ವ್ಯಕ್ತಿಯ ಸುತ್ತ ವೀರಶೈವ ತತ್ವಾಚರಣೆಗಳನ್ನು ಪ್ರತಿಪಾದಿಸುವ ಅಪ್ರಕಟಿತ ಪುರಾಣಕಾವ್ಯವಾಗಿದೆ.

ಹಸ್ತಪ್ರತಿಯ ವಿವರ

ಕರಿಬಸವ ಪುರಾಣದ ಹಸ್ತಪ್ರತಿ ಗದಗ ಜಿಲ್ಲೆ, ಅಣ್ಣಿಗೇರಿಯ ಎ. ಎಸ್. ದೇಶಮುಖ ಅವರ ಮನೆಯಲ್ಲಿ ದೊರೆತಿದೆ. ೧೧" ಉದ್ದ ೫" ಅಗಲ ಅಳತೆಯುಳ್ಳ ಕೋರಿಕಾಗದದಲ್ಲಿ ಬರೆಯಲಾಗಿದೆ. ೧೫ ಸಂಧಿ ೯೫೫ ವಾರ್ಧಕ ಷಟ್ಪದಿಗಳಲ್ಲಿ ರಚನೆಯಾಗಿದೆ. ಲಿಪಿ, ಭಾಷೆ ಹಾಗೂ ಹಸ್ತಪ್ರತಿಯ ಸ್ಥಿತಿ ಉತ್ತಮದರ್ಜೆಯಲ್ಲಿದ್ದು ಪ್ರಾಯಶಃ ಇದು ಕವಿಯ ಸ್ವಹಸ್ತ ಪ್ರತಿಯಾಗಿರಬಹುದೆಂದು ತೋರುತ್ತದೆ ಯಾಕೆಂದರೆ ಇದರ ರಚನಾ ಕಾಲ ಕ್ರಿ. ಶ. ೧೯೨೮ ಆಗಿರುತ್ತದೆ. ಮೇಲಾಗಿ ಲಿಪಿಕಾರರ ಉಲ್ಲೇಖ ಕಂಡುಬರುವುದಿಲ್ಲ.

ಕವಿಯ ಇತಿವೃತ್ತ


ಕೃತಿಯ ಪ್ರತೀ ಸಂಧಿಯ ಮುಕ್ತಾಯದಲ್ಲಿ ಕವಿ ತನ್ನ ಗುರುಪರಂಪರೆ ಹಾಗೂ ತನ್ನ ವಿಚಾರವನ್ನೊಳಗೊಂಡ ಒಂದು ಪದ್ಯವನ್ನು ಹೀಗೆ ಸಂಯೋಜನೆ ಗೊಳಿಸಿದ್ದಾನೆ.

ಮರುಳಸಿದ್ಧಾಚಾರ್ಯ ರಾಮಿದೇವಾಚಾರ್ಯ
ವರಪಂಡಿತಾಚಾರ್ಯ ಗುರುವು ವಿಶ್ವಾಚಾರ್ಯ
ರುರೆ ಮಧ್ಯವದನ ಸಂಜಾತ ರೇಣುಕದೇವನುಧರಭವ
ಘುನಲಿಂಗನೂ॥
ಹರರೂಪ ರುದ್ರಮುನಿ ಕರಜಾ ಮಹಾಂತಮುನಿ
ಚರಣಸಂಭವ ಗುರುಪರಂಪರೆಯೊಳುದ್ಭವಿಸಿ
ಧರರೆ ವಲದಿಪುರದ ಹಿರೇಮಠಾಧಿಪ ಪಟ್ಟಚರವರ್ಯ
ಮಹಂತನುಸಿರ್ದಂ॥

ಕವಿಮಹಂತನು ಗುರುವರ್ಗ ಪರಂಪರೆಗೆ ಸೇರಿದವನಾಗಿದ್ದು; ಮರುಳಸಿದ್ಧ ಏಕೋರಾಮ, ಪಂಡಿತಾರಾಧ್ಯ, ಹಾಗೂ ರೇವಣಸಿದ್ಧರೆಂಬ ಪಂಚಪೀಠಾಚಾರ್ಯರಲ್ಲಿ ರೇವಣಸಿದ್ಧರ ಮಗನೆಂದು ಹೇಳುವ ಘುನಲಿಂಗರುದ್ರಮುನಿಯ ಮಗ ಇಲ್ಲವೇ ಶಿಷ್ಯನಾದ ಮಹಾಂತಮುನಿಗಳ ಗುರುಪರಂಪರೆಯಲ್ಲಿ ಬೆಳೆದ ಮದಿಪುರದ ಹಿರೇಮಠದ ಚರಪಟ್ಟಾಧಿಕಾರಿಯಾಗಿದ್ದಾನೆ. ಈ ವಲದಿಪುರ ಯಾವುದು? ಎಲ್ಲಿದೆ ಎಂಬುದು ತಿಳಿದು ಬರುವುದಿಲ್ಲವಾದರೂ

* ಹಿರಿಯಶ್ರೇಣಿ ಅಧ್ಯಾಪಕ, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ-೫೮೩೨೭೬

ಕರಿಬಸವ ಪುರಾಣದ ಹಸ್ತಪ್ರತಿ



ಕಾವ್ಯದಲ್ಲಿ

ಜಗದೊಳಗೆ ಮಿಗಿಲೆನಿಸಿ ತೋರುವ ಸುಕಲ್ಯಾಣದೊಳು
ಮಿಗೆಯ ಪ್ರಾಂತದೊಳೆಸೆವ ವಲದಿಪುರದ
ಸೊಗಯಿಸುವ ವಿರೇಮಠದ ಗಣಾಚಾರ್ಯ ಪಟ್ಟಾಚರ್ಯವರ್ಯ
(ಗುರುಮಹಂತಾ)" ಎಂಬುದರಿಂದ ಹಾಗೂ
ಮೆರೆವ ಅರವತ್ತಾರು ದೇಶದೊಳಧಿಕವಹ
ತುರುಷ್ಕ ವಿಷಯ ಪ್ರವೀರರ ಫಣಿಯ ತಿಲಕವನೆ
ವರವಲದಿ ತಾಲೂಖ ತತ್ತಾರ ಸಲಗರ ವೆನಿಪ್ಪ
ಕಿರೆವಳ್ಳಿಯದರೊಳ್

ಎಂದಿರುವುದರಿಂದ ಕಲ್ಯಾಣ ಕರ್ನಾಟಕ ಭಾಗವಾಗಿರುವ ಬೀದರ ಗುಲಬರ್ಗಾ ಪ್ರಾಂತ್ಯದಲ್ಲಿಯ ಇಂದಿನ ಅಳಂದ ತಾಲೂಕು ಸಲಗರದ ಸುತ್ತಮುತ್ತ ವಲದಿಪುರ ಇದ್ದಿರಬಹುದೆಂದು ಊಹಿಸಬಹುದಾಗಿದೆ.,

ಕೃತಿಯಕಾಲ

ಕೃತಿಯ ೧೫ನೇ ಸಂಧಿ ೪೦ನೇ ಪದ್ಯದಲ್ಲಿ ಕಾವ್ಯದ ಮುಕ್ತಾಯದ ದಿನವನ್ನು ಕವಿ ಹೀಗೆ ತಿಳಿಸುತ್ತಾನೆ.

ಶ್ರೀಮನ್ನೃಪಶಾಲಿವಾಹನಶಕದೊಳಷ್ಟದಶ
ನೇಮದಿಂ ಪಂಚದಶವರ್ಷದೋಳಿದರ
ನಾಮ ವಿಜಯ ಸಂವತ್ಸರಂ ಶುದ್ಧಶ್ರಾವಣ ತೃತೀಯ
ಸೋಮವಾರವೂ॥
ರಮಣೀಯಕ ಪೂರ್ವನಕ್ಷತ್ರ ಶಿವಯೋಗ
ರಾಮ ವಹತೈತುಲ ಕರಣದೊಳಗೆ ಕೃತಿರಚನೆ
ಸೋಮಧರನಾಜ್ಞೆಯಿಂ ಮುಗಿದಿರುವದೆಂದು ತಿಳಿವುದು
ಸಕಲಸದ್ಭಕ್ತರೂ॥

ನಾಮವಿಜಯ ಸಂವತ್ಸರ ಶ್ರಾವಣಶುದ್ಧ ಮೂರನೇ ಸೋಮವಾರ, ಪೂರ್ವನಕ್ಷತ್ರ ಶಿವಯೋಗ ಕರಣದಲ್ಲಿ ಶಾ.ಶ ೧೮೫೦ರಲ್ಲಿ ಎಂದಿರುವುದರಿಂದ ಕ್ರಿ.ಶ. ೧೯೨೮ರಲ್ಲಿ ಕೃತಿಯನ್ನು ಮುಗಿಸಿರುವುದು ತಿಳಿದುಬರುತ್ತದೆ.

ಕಥಾವಸ್ತು

ಕರಿಬಸವ ಪುರಾಣ ಎಂಬುದು ಕೃತಿಯ ಹೆಸರಿದ್ದರೂ ಆ ವ್ಯಕ್ತಿಯು ಹಲವು ಜನರನ್ನು ಸಂದರ್ಶಿಸಿ ನೀಡಿದ ಬೋಧೆ, ಮಾಡಿದ ಪವಾಡಗಳ ಕಥೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಕುಷ್ಟಿಗಿ ಕರಿಬಸವೇಶ್ವರ (ವಚನಕಾರ), ಐನೂಲಿ ಕರಿಬಸವಾರ್ಯ (ಸ್ವರವಚನಕಾರ) ಹಾಗೂ ಚೋರಬಸವ ಚಾರಿತ್ರ್ಯ ಬರೆದ ಕೊಳೂರು ಶಂಕರಕವಿ ಸ್ತುತಿಸುವ ಕೊಂಡಕುಂದೆಯ ಕರಿಬಸವ ಯೋಗಿ ರಾಜೇಂದ್ರರಲ್ಲದೆ ಚಿತ್ರದುರ್ಗ ಮುರುಘಾಮಠದ ಪೀಠಪರಂಪರೆಯಲ್ಲಿ ಬರುವ ೧ನೇ ಮುರಿಗೆಯ ಶ್ರೀಗಳನ್ನು ಕರಿ ವೃಷಭದೇವರೆಂದು ಸಂಬೋಧಿಸಲಾಗಿದೆ. ಹಾಗೂ ಉಕ್ಕಡಗಾತ್ರಿ ಕರಿಬಸವೇಶ್ವರರು ಹೀಗೆ ೫ ಜನ ಕರಿಬಸವರು ಕಂಡುಬರುತ್ತಾರೆ. ಪ್ರಸ್ತುತ ಪುರಾಣದ ಕಥಾನಾಯಕ ಯಾರಿರಬಹುದೆಂಬುದು ಇಲ್ಲಿಯ ಪ್ರಶ್ನೆ. ಪ್ರಸ್ತುತ ಕೃತಿಯ ಕರಿಬಸವರು ಕುಷ್ಟಿಗಿ ಕರಿಬಸವೇಶ್ವರ ವಚನಕಾರನಿಗೆ ಅನ್ವಯವೆಂಬುದು ನನ್ನ ಅಭಿಪ್ರಾಯ. ಇದಕ್ಕೆ ಕಾರಣವೇನೆಂದರೆ ಕೃತಿಯ ೩ನೇ ಸಂಧಿಯಲ್ಲಿ ಶ್ರೀ ಕನಕಗಿರಿಯ ಕೆಂಪಿನ ಸಮಯದ ಚರಮೂರ್ತಿ ಕೆಂಡಗಣ್ಣೆನ (ಕಿಡಿಗಣ್ಣೊಡೆಯ) ಸ್ವಾಮಿಗಳು ಸಮೀಪದ ಬಸವನಗರದ ಮಠಾಧ್ಯಕ್ಷ ಬಸವೇಶ್ವರ-ಬಸವಮ್ಮನವರ ಉದರದಲ್ಲಿ ಜನಿಸಿದ ಕರಿಬಸವರನ್ನು ತಮ್ಮ ಮಠಕ್ಕೆ ಕಳಿಸಿಕೊಡಲು ಊರಿನ ಸಮಸ್ತರನ್ನು ಕೇಳಿಕೊಳ್ಳುತ್ತಾರೆ. ಹೀಗಾಗಿ ಕನಕಗಿರಿ. ಕುಷ್ಟಿಗಿ, ಬಸವನಗರಗಳು ಸದ್ಯ ಕೊಪ್ಪಳ ಜಿಲ್ಲೆಯಲ್ಲಿವೆ.

ನಿಡುಮಾಮಿಡಿ ಪೀಠಪರಂಪರೆಗೆ ಸೇರಿದುದೆಂದು ಹೇಳಲಾದ ಕುಷ್ಟಿಗಿಮಠದ ಶಾಖಾಮಠಗಳು ಕುಷ್ಟಿಗಿ ತಾಲೂಕು ನಿಡಸೇಸೆ, ದೇವದುರ್ಗಾ ತಾಲೂಕು ಗೆಜ್ಜೆಬಾವಿಗಳಲ್ಲಿವೆ. ೨೧ ಪೀಠಾಧಿಪತಿಗಳು ಇಲ್ಲಿ ಆಗಿಹೋಗಿದ್ದು ಪ್ರಾಯಶಃ ೧೭೦೦ರಲ್ಲಿ ಜೀವಿಸಿದ್ದ ಕರಿಬಸವ ಸ್ವಾಮಿಗಳನ್ನು ಕಥಾನಾಯಕ ನನ್ನಾಗಿರಿಸಿ ಕೊಂಡು ಈ ಪುರಾಣ ರಚನೆಯಾಗಿರಬೇಕು; ಬಸವಣ್ಣನವರನ್ನು ಕುರಿತು ಬಸವಪುರಾಣ ರಚನೆಯಾದಂತೆ. ಅದೇನೇ ಇರಲಿ ೧೫ ಸಂಧಿಗಳಲ್ಲಿ ವ್ಯಾಪಿಸಿರುವ ಕಥಾಹಂದರ ಇತಿಹಾಸ ಹಾಗೂ ಪುರಾಣಗಳ ಸಂಗಮವಾಗಿದೆ.

ಬಸವನಗರದ ಮಠಾಧ್ಯಕ್ಷ ಬಸವೇಶ್ವರನಿಗೆ ಹಾಗೂ ಬಸವಮ್ಮನವರಿಗೆ ಸಿದ್ಧಿಯ ಮಗನಾಗಿ ಜನಿಸಿದ ಕರಿಬಸವರು ವ್ಯಾಕರಣ, ಜ್ಯೋತಿಷ್ಯ, ಇತಿಹಾಸ, ಪುರಾಣ ಇತ್ಯಾದಿ ಸಕಲವಿದ್ಯಾ ಪಾರಂಗತರಾಗಿ ಶ್ರೀಕನಕಗಿರಿಯ ಕಿಡಿಗಣ್ಣೊಡೆಯ ಸ್ವಾಮಿಗಳ ಮಠಕ್ಕೆ ಆಗಮಿಸುತ್ತಾರೆ. ಒಳ್ಳೆಯ ಮುಹೂರ್ತದಲ್ಲಿ ಅಯ್ಯಾಚಾರ ಮಾಡಿಸಿ ವೀರಶೈವ ಜ್ಞಾನಪೀಳಿಗೆಗಳೆನಿಸಿದ ಮಂತ್ರಗೋಪ್ಯ, ಏಕೋತ್ತರಶತಸ್ಥಲ ಮುಂತಾದವುಗಳನ್ನು ಪಠಣಮಾಡಿ ಪಾರ ಮಾರ್ಥಿಕ ಜ್ಞಾನವನ್ನು ಪಡೆದುಕೊಳ್ಳುತ್ತಾರೆ.

ಗುರುಭಕ್ತಿಗೆ ಅಮರಗುಂಡ ಮಲ್ಲೇಶ್ವರನ ಕಥೆಯನ್ನು, ಲಿಂಗಸಂಗಕ್ಕೆ ಮಲುಹಣ ಮಲುಹಣೆಯರ ಕಥೆಯನ್ನು, ಜಂಗಮ ಮಹಿಮೆಗೆ ಬಸವಣ್ಣನವರ ಸಮಗ್ರ ಜೀವಿತದ ಘಟನೆಗಳನ್ನು, ಕಲ್ಯಾಣಕ್ಕೆ ಪ್ರಭುದೇವರ ಆಗಮನ, ಸಿದ್ಧರಾಮನಿಗೆ ಲಿಂಗದೀಕ್ಷೆ, ಅಕ್ಕಮಹಾದೇವಿ ಕದಳಿಗೆ ನಿರ್ಗಮನ, ಹರಳಯ್ಯ- ಮಧುವ ರಸಯ್ಯಗಳ ಎಳೆಹೂಟೆ ಪ್ರಸಂಗ, ಜಗದೇವ, - ಮಲ್ಲಬೊಮ್ಮ ರಿಂದ ಬಿಜ್ಜಳನ ಕೊಲೆ ಮುಂತಾದ ಶಿವಶರಣರ ಪ್ರಸಂಗಗಳನ್ನು ಪುರಾಣದಲ್ಲಿ ಬಿಚ್ಚಿಡಲಾಗಿದೆ.

ಭಸಿತ ರುದ್ರಾಕ್ಷಿ ಮಹಿಮೆಯನ್ನು ಸಾರುವ ಪಾಂಚಾಲ ದೇಶದರಸ ಸಿಂಹಕೇತು ದಂಪತಿಗಳ ಹಾಗೂ ಕಾಶ್ಮೀರ ದೇಶದರಸ ಭದ್ರಸೇನರ ಕಥೆಯನ್ನು ತಿಳಿಸುತ್ತದೆ. ಪರಮಪಂಚಾಕ್ಷರಿ ಮಂತ್ರದ ಮಹಾತ್ಮೆಯನ್ನು ಸಾರಲು ಸತ್ಯೇಂದ್ರ ಭೂಪಾಲನ ಕಥೆಯನ್ನು ಕರಿಬಸವನಿಗೆ ಕೆಂಗಣ್ಣಸ್ವಾಮಿಗಳು ವಿವರಿಸುತ್ತಾರೆ. ಹಾಗೆಯೇ ಪಾದೋದಕ ಮಹತ್ವವನ್ನಲ್ಲದೆ ಗಬ್ಬೂರ ಬಿಬ್ಬಿಬಾಚಯ್ಯ ಶರಣನ ಪ್ರಸಾದ ಮಹಿಮೆಯನ್ನು ವಿವರಿಸುತ್ತಾರೆ. ಷಟ್‌ಸ್ಥಲ, ಯೋಗ ಮುಂತಾದ ತತ್ವಗಳನ್ನರಿತು ಕರಿಬಸವರು ದೇಶ ಸಂಚಾರ ಕೈಗೊಂಡು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಹಲವು ಜನರಿಗೆ ಧರ್ಮದ ನಿಜದ ನೆಲೆಯನ್ನು ಅರುಹಿ ಸಲಗರದ ಹಿರೇಮಠದ ಶಿವಲಿಂಗದೇವರನ್ನು ಅರಸುತ್ತಾ ಬರುತ್ತಾರೆ.

ಕರಿಬಸವರು ಶಾಲಿವಾಹನ ಶಕೆ ೧೮೦೩ (ಕ್ರಿ.ಶ ೧೮೮೧) ಬುಧವಾರ ಹಿರೇಹಳ್ಳಿ ಹೊಸ ಶರಣರ ಮಠದಲ್ಲಿ ಐಕ್ಯವನ್ನು ಹೊಂದಿದರೆಂದು ಪುರಾಣ ಸಮಾಪ್ತಿಯಾಗುತ್ತದೆ. ಸ್ಥಳನಾಮ, ಶರಣರ ಸಂಗತಿಗಳನ್ನು ತುಂಬಾ ಉತ್ಸಾಹದಿಂದ ಪ್ರತಿಪಾದಿಸುವ ಪ್ರಸ್ತುತ ಕರಿಬಸವ ಪುರಾಣವು ೧೯ನೇ ಶತಮಾನದ ಕನ್ನಡ ವೀರಶೈವ ಪುರಾಣಕಾವ್ಯ ಸಾಹಿತ್ಯದ ಹೊಸ ಸೇರ್ಪಡೆಯೆಂಬುದನ್ನು ಸಾಹಿತ್ಯ ಚರಿತ್ರೆಕಾರರು ಹಾಗೂ ಇತಿಹಾಸ ಪ್ರಿಯರು ತಿಳಿಯುವುದು.

ಡಾ. ಎ. ಕೆ. ಶಾಸ್ತ್ರಿ*

ಶೃಂಗೇರಿ ಮಠದ ಕಡತದಲ್ಲಿ ಬಾದಾಮಿ ಬನಶಂಕರೀ ಅಮ್ಮ

ಸುಮಾರು ಹನ್ನೆರಡುನೂರು ವರ್ಷಗಳ ಹಿಂದೆ ಶ್ರೀ ಆದಿಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೃಂಗೇರಿ ಮಠವು, ಹದಿನಾಲ್ಕನೇ ಶತಮಾನದಲ್ಲಿ ಧರ್ಮಸಂಸ್ಥಾನವಾಗಿ ರೂಪುಗೊಂಡಿತು. ವಿಜಯನಗರದ ಸಾಮ್ರಾಟರು, ಕೆಳದಿ ನಾಯಕರು, ಮೈಸೂರಿನ ಒಡೆಯರು, ಹೈದರಲಿ, ಟಿಪ್ಪುಸುಲ್ತಾನ್, ಹೈದರಾಬಾದಿನ ನಿಜಾಮರು, ಮಹಾರಾಷ್ಟ್ರದ ಮರಾಠರು, ಮೈಸೂರಿನ ಕಮೀಷನರರು, ಸಂಸ್ಥಾನಿಕರು ಮತ್ತು ದೇಶದ ನಾನಾಭಾಗಗಳಲ್ಲಿಯ ಜನರು, ಶೃಂಗೇರಿ ಮಠಕ್ಕೆ ದಾನ ಧರ್ಮಾದಿಗಳನ್ನು ಮಾಡಿ, ಶ್ರೀ ಮಠವನ್ನು ರಕ್ಷಿಸಿ, ಪೋಷಿಸಿ ಕೊಂಡು ಬಂದಿರುವ ಸಂಗತಿ, ಶೃಂಗೇರಿ ಮಠದ ಚಾರಿತ್ರಿಕ ದಾಖಲೆಗಳ ಅಧ್ಯಯನದಿಂದ ವಿದಿತವಾಗುತ್ತದೆ.[೧] ಪೂರ್ವ ದಿಂದಲೂ ಬಹುದೊಡ್ಡ ಧಾರ್ಮಿಕ ಕೇಂದ್ರವಾಗಿ ಬೆಳೆದುಕೊಂಡು ಬಂದ ಶೃಂಗೇರಿ ಮಠದೊಂದಿಗೆ ಅನೇಕ ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳು ನಿಕಟ ಸಂಪರ್ಕವನ್ನಿರಿಸಿಕೊಂಡು ಬಂದಿದ್ದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಶೃಂಗೇರಿಯ ಜಗದ್ಗುರು ಪರಂಪರೆ ಅವಿಚ್ಛಿನ್ನವಾಗಿ ಇಂದಿಗೂ ಸಾಗಿ ಬಂದಿದ್ದು ಒಂದು ವಿಶೇಷ. ಬೇರೆ ಬೇರೆ ಕಾಲದಲ್ಲಿ, ಶ್ರೀ ಮಠದ ಯತಿವರ್ಯರು ತಾವು ಕೈಗೊಂಡ ಯಾತ್ರಾ ಸಂದರ್ಭದಲ್ಲಿ ಅನೇಕ ದೇವಾಲಯಗಳನ್ನು ಸಂದರ್ಶಿಸಿ, ದೇವರಿಗೆ ಪೂಜೆ ಅರ್ಪಿಸಿ, ನಂತರವೂ ಆ ಸ್ಥಳಗಳಲ್ಲಿ ಪೂಜೆ ಪುನಸ್ಕಾರಗಳು ಸದಾ ನಡೆಯುವಂತೆ ವ್ಯವಸ್ಥೆ ಮಾಡಿದರು. ಬಾದಾಮಿ ಶ್ರೀಬನಶಂಕರೀ ಅಮ್ಮನವರ ದೇವಸ್ಥಾನವನ್ನು[೨] ಶೃಂಗೇರಿ ಜಗದ್ಗುರುಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಸಂದರ್ಶಿಸಿ, ಪೂಜೆ ಸಲ್ಲಿಸಿದರೆಂಬುದು ಶೃಂಗೇರಿ ಮಠದ ಕಡತವೊಂದರ ದಾಖಲೆಗಳಿಂದ ತಿಳಿದು ಬರುತ್ತದೆ. ದಾಖಲೆಗಳಲ್ಲಿ ನಮೂದಿ ಸಲಾದ ಕೆಲವು ಮುಖ್ಯಾಂಶಗಳನ್ನು ಪ್ರಸ್ತುತದಲ್ಲಿ ಅರಿಯಬಹುದಾಗಿದೆ.

ಬಾದಾಮಿ ಬನಶಂಕರೀ ಅಮ್ಮನವರಿಗೆ ಕಾಲಂಪ್ರತಿ ಯಲ್ಲೂ ಶೃಂಗೇರಿ ಮಠಕ್ಕೆ ವರ್ಷಾಸನವಾಗಿ ಕೊಪ್ಪಳ ತಾಲೂಕಿ ನಲ್ಲಿ ಬರೆಸಿಕೊಟ್ಟಿರುವ ಸಾಧನ ಪ್ರಕಾರ, ಶಾ.ಶ. (ಶಾಲಿವಾಹನ ಶಕ) ೧೭೬೬ ನೇ (ಕ್ರಿ.ಶ. ೧೮೪೪) ಕ್ರೋಧಿ ಸಂವತ್ಸರದ ಚೈತ್ರ ಶು. ೧ ಮಂಗಳವಾರ, ಶ್ರೀಮತ್‌ಪರಮಹಂಸ ಪರಿವ್ರಾಜಕಾ ಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮನಿಯಮಾದ್ಯಷ್ಟಾಂಗ ಯೋಗ ನಿರತರಾದ ಶೃಂಗೇರಿ ಶ್ರೀ ನರಸಿಂಹ ಭಾರತೀಸ್ವಾಮಿಗಳವರು[೩] ಶ್ರೀವತ್ಸಗೋತ್ರದ, ಕಾತ್ಯಾಯನ ಸೂತ್ರದ, ಶುಕ್ಲ ಶಾಖೆಯ, ತೊಳಚಗೊಡ[೪] ಬಾಳಂಭಟ್ಟನ ಪೌತ್ರನಾದ ಚೌಡಂಭಟ್ಟನ ಪುತ್ರನಾದ ಬಾಳಂ ಭಟ್ಟಗೆ ಪಾಲಿಸಿದ ನಿರೂಪದ ನಕಲೊಂದು ಕಡತದಲ್ಲಿ ಉಲ್ಲೇಖ ಗೊಂಡಿದೆ. ಶೃಂಗೇರಿ ಸ್ವಾಮಿಗಳು, ಬಾದಾಮಿ ಬನ ಶಂಕರೀ ಅಮ್ಮನವರ ದೇವಸ್ಥಾನಕ್ಕೆ ಶುಭಕೃತು ಸಂವತ್ಸರದ (ಕ್ರಿ. ಶ. ೧೮೪೨) ಮಾರ್ಗಶಿರ ಶು. ದಶಮಿಯಂದು ಬನಶಂಕರೀ ಅಮ್ಮನವರ ಪೂಜೆಮಾಡಿ, ಪುನಃ ಅಲ್ಲಿಂದ ತೆರಳುವಾಗ, ಪ್ರತಿವರ್ಷ ಅಮ್ಮನವರ ಪೂಜೆ, ನೈವೇದ್ಯ, ತುಪ್ಪದ ನಂದಾದೀಪ್ತಿ, ಕರ್ಪೂರದ ಆರತಿ, ಹಣ್ಣು, ಎಲೆ, ಅಡಿಕೆ, ಕೊಬ್ಬಕ್ಕಿ ಮುಂತಾದವು ಗಳಿಗಾಗಿ ಕಂಪನಿ ರೂಪಾಯಿ ಅರವತ್ತು ಮೂರುವರೆ ಮತ್ತು ಹೂವು, ಗಂಗೆ, ಗಂಧಾಕ್ಷತೆ ಮಾಡಿಕೊಂಡು ಪೂಜೆ ಮಾಡುವದಕ್ಕೆ, ಸಂಬಳ ತಿಂಗಳವೊಂದಕ್ಕೆ ಎರಡು ರೂಪಾಯಿ, ವರ್ಷವೊಂದಕ್ಕೆ ಇಪ್ಪತ್ನಾಕು ರೂಪಾಯಿಗಳು, ಉಭಯಂ ವರ್ಷವೊಂದಕ್ಕೆ ಕಟ್ಲೆ ಕಂದಾಚಾರ ಸಹ ಎಂಬತ್ತೇಳುವರೆ ಕಂಪನಿ ರೂಪಾಯಿಗಳು ದೊರೆಯುವಂತೆ ವ್ಯವಸ್ಥೆ ಮಾಡಿದರು. ಕೊಪ್ಪಳ ತಾಲೂಕಿನಲ್ಲಿ ಬರೆಸಿಕೊಟ್ಟ ಈ ಸಾಧನದಲ್ಲಿ, ಹೈದರಾಬಾದಿನ ದಪ್ತರದಾರ್ ರಾಮರಾಯನು ಶೃಂಗೇರಿ ಮಠಕ್ಕೆ ವರ್ಷಾಸನವಾಗಿ ಬರತಕ್ಕ ೩೦೦ ರೂಪಾಯಿಯೊಳಗೆ, ೧೦೦ ರೂಪಾಯಿಗಳನ್ನು ತೆಗೆದುಕೊಂಡು ಶ್ರೀ ಬನಶಂಕರೀ ಅಮ್ಮನವರ ಪೂಜೆಯನ್ನು ನ್ಯೂನತೆ ಇಲ್ಲದಂತೆ, ಶಾಶ್ವತವಾಗಿ ನಡೆಸಿಕೊಂಡು ಬರುವಂತೆ, ಶ್ರೀ ನರಸಿಂಹ ಭಾರತಿಗಳು ಬಾಳಂಭಟ್ಟಗೆ ನಿರೂಪಿಸಿದ್ದನ್ನೂ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ.[೫]

ತಾವು ಇನ್ನು ಮುಂದೆ, ಶೃಂಗೇರಿಯಿಂದ ಬಂದ ಅಪ್ಪಣೆಯ ಮೇರೆಗೆ, ಪ್ರತಿವರ್ಷ ಶೃಂಗೇರಿಗೆ ಹೋಗಿ, ೩೦ ರೂಪಾಯಿಗಳನ್ನು ಪಡೆದುಕೊಂಡು, ಈ ಹಣದಲ್ಲಿ ಶ್ರೀ ಬನಶಂಕರೀ ಅಮ್ಮನವರ ಸನ್ನಿಧಿಯಲ್ಲಿ ನಂದಾದೀಪ ಇಡುವ ಬಗ್ಗೆ ೧೨ ರೂಪಾಯಿಗಳು ಮತ್ತು ಪರಮಾನ್ನ ನೈವೇದ್ಯದ ಬಗ್ಗೆ ೧೮ ರೂಪಾಯಿಗಳು, ಉಭಯಂ ೩೦ ರೂಪಾಯಿಗಳನ್ನು ವಿನಿಯೋಗಿಸುವದಾಗಿ, ಬನಶಂಕರೀ ಅಮ್ಮನವರ ಅರ್ಚಕರಾದ ಶಂಕರಭಟ್ಟ, ದಿಗಂಬರ ಭಟ್ಟ, ಅಣ್ಣಭಟ್ಟ, ಸಾಂಭಟ್ಟ, ಶಂಕರಭಟ್ಟ ಮತ್ತು ನೀಲಕಂಠ

* 'ಭವಾನಿ' ವಿ.ಎಸ್.ಎಸ್. ರೈಸ್‌ಮಿಲ್ ಹತ್ತಿರ, ಶಿರಸಿ, - ೫೮೧ ೪೦೨

ಭಟ್ಟರು, ಶಾ.ಶ. ೧೭೭೯ (ಕ್ರಿ.ಶ. ೧೮೫೭), ಪಿಂಗಳ ಸಂವತ್ಸರದ ಆಶ್ವಿಜ ಶು. ಚತುರ್ದಶಿ, ಶುಕ್ರವಾರದಂದು, ಶೃಂಗೇರಿ ಮಠದ ಬಂಡಾರಕ್ಕೆ ಬಿನ್ನವತ್ತಳೆಯನ್ನು ಸಮರ್ಪಿಸಿದರು. ಶ್ರೀ ಅಮ್ಮನವರ ಸೇವೆಯನ್ನು ಮಾಡಿಕೊಂಡು ಬರುವಲ್ಲಿ ತಪಾವತ್ತು ಏನಾದರೂ ಬಂದದ್ದಾದರೆ, ನಾವು ತೆಗೆದುಕೊಂಡ ಹಣಕ್ಕೆ ಬೇಜವಾಬ ಮಾಡುವದರ ಜೊತೆಗೆ, ಶ್ರೀ ಮಠಕ್ಕೆ ಅಪರಾಧ ಕೊಟ್ಟು, ಅಪ್ಪಣೆ ಪ್ರಕಾರ ನಡೆದುಕೊಳ್ಳುವೆವು ಎಂದು ಅರ್ಚಕರು ಬಿನ್ನವತ್ತಳೆಯಲ್ಲಿ ಬರೆದುಕೊಟ್ಟರು. ಕೊಡನಾಡ ಮಾಗಣಿ, ಕುಂಚೂರ ಮಂಜಪ್ಪ, ಲಕುವಳ್ಳಿ ನಾಗಪ್ಪ, ಬೊಂಬಲಾ ಪುರದ ದೇವರು ಭಟ್ಟರು. ರಾಮಪ್ಪ ಇವರೆಲ್ಲ ಬಿನ್ನವತ್ತಳೆಗೆ ಸಾಕ್ಷಿಗಳು. 'ಮಹಾರಾಷ್ಟ್ರ ಬಿಳಗಿ, ತಾಲೂಕು ಬಾಗಲಕೋಟ' ಎಂದು ದಾಖಲೆಯ ಅಂತ್ಯದಲ್ಲಿ ನಮೂದಿಸಲಾಗಿದೆ.[೬]

ಬಾದಾಮಿ ಶ್ರೀ ಬನಶಂಕರೀ ಅಮ್ಮನವರ ಸನ್ನಿಧಿಯಲ್ಲಿ, ಶೃಂಗೇರಿ ಸಂಸ್ಥಾನದಿಂದ ವರ್ಷವೊಂದಕ್ಕೆ ೩೦ ರೂಪಾಯಿಗಳು ಸಂದಾಯವಾದದ್ದಕ್ಕೆ, ಬಾದಾಮಿ ತಾಲೂಕಿನ, ತೊಳಚಗೋಡು ಶ್ರೀ ಬನಶಂಕರೀ ಅಮ್ಮನವರ ಅರ್ಚಕರಾದ ಬಾಳಂಭಟ್ಟರು, ಸಾಂಭಟ್ಟರು, ಶಂಕರಭಟ್ಟರು, ನೀಲಕಂಠ ಭಟ್ಟರು, ಶಂಕರಭಟ್ಟರು ಮತ್ತು ದಿಗಂಬರ ಭಟ್ಟರು ಶೃಂಗೇರಿ ಮಠದ ಬಂಡಾರಕ್ಕೆ, ಶಾ.ಶ. ೧೭೭೯ (ಕ್ರಿ.ಶ. ೧೮೫೮) ಪಿಂಗಳ ಸಂವತ್ಸರದ, ಆಶ್ವಿಜ ಬ. ೧, ಭಾನುವಾರ, ಹಣ ಸಂದಿದ್ದಕ್ಕೆ ರಶೀದಿಯನ್ನು ಸಮರ್ಪಿಸಿದರು.[೭]

ಶೃಂಗೇರಿ ಮಠದಲ್ಲಿಯ ಮೇಲ್ಕಾಣಿಸಿದ ಮೂರು ದಾಖಲೆಗಳು ಕರ್ನಾಟಕದ ಇತಿಹಾಸವನ್ನು ಬರೆಯುವಲ್ಲಿ ಬಹಳಷ್ಟು ಪ್ರಯೋಜನಕಾರಿ ಎಂದು ಹೇಳಲಾಗದಿದ್ದರೂ, ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಬಾದಾಮಿ, ಭಾರತದಲ್ಲಿಯೇ ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದ್ದರಿಂದ, ಇತಿಹಾಸ ಸಂಶೋಧಕರಿಗೆ ಅದೊಂದು ಪವಿತ್ರ ತಾಣ. ಹೀಗಾಗಿ, ಈ ಸ್ಥಳಕ್ಕೆ ಸಂಬಂಧಿಸಿ ಕೆಲವೇ ಚಾರಿತ್ರಿಕ ದಾಖಲೆಗಳು ಲಭ್ಯವಿದ್ದರೂ ಕೂಡ, ಬಾದಾಮಿಯ ಚರಿತ್ರೆಯ ದೃಷ್ಟಿಯಿಂದ ಈ ದಾಖಲೆಗಳು ಮಹತ್ವವೆಂದೇ ಹೇಳಬೇಕಾಗುತ್ತದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಹೆಚ್ಚಿನ ಮಾಹಿತಿಗಾಗಿ ಲೇಖಕರ ಈ ಕೆಳಗಿನ ಪುಸ್ತಕಗಳನ್ನು ಓದಿರಿ.
   i) A History of Sringeri, ಪ್ರಾಸಾರಾಂಗ, ಕ.ವಿ.ವಿ. ಧಾರವಾಡ, ದ್ವಿತೀಯ ಆವೃತ್ತಿ ೧೯೯೮.
   ii) **ಶೃಂಗೇರಿ ಧರ್ಮಸಂಸ್ಥಾನ**, ಶೃಂಗೇರಿಮಠ, ೧೯೮೩.
   iii) ಶೃ.ಕ. (ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು), ಕರ್ನಾಟಕ ರಾಜ್ಯಪತ್ರಾಗಾರ ಇಲಾಖೆ, ಬೆಂಗಳೂರು, ೨೦೦೩.

೨ ಶ್ರೀ ಬನಶಂಕರೀ ಅಮ್ಮನವರ ಮೂಲದೇವಸ್ಥಾನ ಕ್ರಿ.ಶ. ೭ನೇ ಶತಮಾನದ ಅಂತ್ಯದಲ್ಲಿ ನಿರ್ಮಾಣಗೊಂಡಿದ್ದು, ಇಂದು ಗೋಚರಿಸುವ ಹೊಸ ದೇವಸ್ಥಾನ ೧೭ನೇ ಶತಮಾನದ ಅಂತ್ಯದಲ್ಲಿ ನಿರ್ಮಾಣಗೊಂಡಿದೆ. ದೇವಸ್ಥಾನದ ಪೂಜಾರಿಗಳ ಮೂಲಪುರುಷ 'ಚೌಡಂಭಟ್ಟ' ಎಂಬುದಾಗಿ ಅಲ್ಲಿ ದೊರೆತ ಪೂಜಾರಿಗಳ ವಂಶವೃಕ್ಷವನ್ನು ತೋರಿಸುವ ಕ್ರಿ.ಶ. ೧೮೬೦ರ ಮರಾಠಿ ಭಾಷೆಯಲ್ಲಿರುವ ದಾಖಲೆಯಿಂದ ಸ್ಪಷ್ಟವಾಗುತ್ತದೆ. ಇಂದಿಗೂ ಅದೇ ವಂಶಸ್ಥರು ಬನಶಂಕರೀ ಅಮ್ಮನವರ ದೇವಸ್ಥಾನದಲ್ಲಿ ಪ್ರಧಾನ ಅರ್ಚಕರಾಗಿದ್ದಾರೆ.

೩. ಪೀಠದಲ್ಲಿ ೩೨ನೆಯವರಾದ ಅಷ್ಟಮ ಶ್ರೀ ನರಸಿಂಹಭಾರತೀ (ಕ್ರಿ.ಶ. ೧೮೧೭-೧೮೭೯).

೪. ಶೃಂಗೇರಿಯ ದಾಖಲೆಯಲ್ಲಿ ಮತ್ತು ಬನಶಂಕರೀ ಅಮ್ಮನವರ ದೇವಸ್ಥಾನದಲ್ಲಿ ಕ್ರಿ.ಶ. ೧೮೦೪ರ ದಾಖಲೆಯಲ್ಲಿ 'ತೊಳಚಗೋಡು' ಎಂದು ನಮೂದಿಸಲಾಗಿದ್ದು, ಈಗ ಅದನ್ನು 'ಚೊಳಚಗುಡ್ಡ' ಎಂದು ಕರೆಯಲಾಗುತ್ತಿದೆ.

೫. ಶೃ.ಕ. ೩೬೩, ಕ.೩೪, ದಾ. (ದಾಖಲೆ) ೨೮

೬. ಅದೇ., ೩೬೪, ಕ.೩೪, ದಾ.೬೬

೭ ಅದೇ., ೩೬೫, ಕ.೩೪, ದಾ.೬೭

ಗುರುಮೂರ್ತಿ ಪೆಂಡಕೂರು*

ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಕ್ರೈಸ್ತ ಮಿಷನರಿಗಳು

ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿಯೇ ಏಸುವಿನ ಶಿಷ್ಯರು ಭಾರತಕ್ಕೆ ಬಂದರೆಂದು ಹೇಳಲಾಗಿದೆ. ಎರಡನೆಯ ಶತಮಾನದಲ್ಲಿ ಅಲೆಕ್ಸ್ಯಾಂಡ್ರಿಯಾದಿಂದ ಕ್ರೈಸ್ತ ಪಾದ್ರಿಗಳು ಬ್ರಾಹ್ಮಣರೊಂದಿಗೆ ವಾದ ಮಾಡಲು ಭಾರತಕ್ಕೆ ಬಂದರಂತೆ.[೧] ಆರನೆಯ ಶತಮಾನದಲ್ಲಿ ಕಲ್ಯಾಣ ವೆಂದರೆ ಈಗಿನ ಆನೆಗೊಂದಿಯಲ್ಲಿ ಇಗರ್ಜಿಯೇ ಇತ್ತೆಂದು ರೆವರೆಂಡ್ ಕಿಟ್ಟೆಲ್ ಹೇಳುತ್ತಾರೆ.[೨] ಈ ರೀತಿಯಲ್ಲಿ ಹದಿನಾಲ್ಕನೇ ಶತಮಾನದವರೆಗೆ ಕ್ರೈಸ್ತ ಮಿಷನರಿಗಳು ಪಾಲಸ್ತೈನ್, ಪರ್ಶಿಯಾ, ಬ್ಯಾಬಿಲೋನ್, ಸಿರಿಯಾ, ಅರಮೇನಿಯಾ ಅಲೆಕ್ಸ್ಯಾಂಡ್ರಿಯಾದಿಂದ ತಂಡ ತಂಡವಾಗಿ ಭಾರತಕ್ಕೆ ಬಂದರು. ಕರ್ನಾಟಕಕ್ಕೆ ಯುರೋಪಿಯನ್ ಮಿಷಿನರಿಗಳು ಹದಿಮೂರನೇ ಶತಮಾನದಲ್ಲಿ ಆಗಮಿಸಿದರು. ಅವರು ಕೆನರಾ, ಮೈಸೂರು ಮತ್ತು ತಿರುವನಂತಪುರದ ಕಡೆ ಮತಾಂತರದ ಕೆಲಸ ನಡೆಸಿದರು. ವಾಸ್ಕೋಡಗಾಮಾ ಕಲ್ಲಿಕೋಟೆ ತಲುಪಿದ ಮೇಲೆ ಮಿಷಿನರಿಗಳು ಬಲಗೊಂಡರು. ಕ್ರಿ.ಶ. ೧೫೧೦ರಲ್ಲಿ ಅಲ್ಬುಕರ್ಕನು ಗೋವೆಯ ಗವರ್ನರ್ ಆಗಿ ನಿಯುಕ್ತಗೊಂಡನು.

ಕ್ರಿ.ಶ ೧೫೦೦-೧೫೧೧ರ ಅವಧಿಯಲ್ಲಿ ಲೂಯಿಸ್ ಎಂಬ ಪಾದ್ರಿಯು ಅನೇಕ ಸಲ ವಿಜಯನಗರಕ್ಕೆ ಬಂದಿದ್ದನು[೩]. ಕೃಷ್ಣದೇವರಾಯರಿಗೆ ಇವನೇ ಕ್ರಿಸ್ತ ಧರ್ಮದ ಪರಿಚಯ ಮಾಡಿದನು. ರಾಯರ ಸೈನ್ಯದಲ್ಲಿ ಸಾಕಷ್ಟು ಕ್ರಿಸ್ತೀಯ ಯೋಧರೂ ಇದ್ದರು. ಕೃಷ್ಣದೇವರಾಯರಿಗೆ ಅಲ್ಬುಕರ್ಕನ ಸ್ನೇಹ ಮತ್ತು ಅವನು ತರಿಸುತ್ತಿದ್ದ ಕುದುರೆಗಳು ಬೇಕಾಗಿದ್ದವು. ಯುರೋಪಿನಿಂದ ಬರುತ್ತಿದ್ದ ಎಲ್ಲಾ ಕುದುರೆಗಳನ್ನು ಖರೀದಿಸುವ ಅವಶ್ಯಕತೆಯೂ ಇತ್ತು. ಹೀಗಾಗಿ ರಾಯರು ಲೂಯಿಸ್ ಪಾದ್ರಿಗೆ ಕ್ರಿಸ್ತ ಧರ್ಮವನ್ನು ಪ್ರಚಾರ ಮಾಡಲೂ ಇಗರ್ಜಿಗಳನ್ನು ಕಟ್ಟಲೂ ಅನುಮತಿ ನೀಡಿದರಂತೆ. ಆದರೆ ಅವನು ಮತಾಂತರ ಮಾಡಲು ಯತ್ನಿಸಲಿಲ್ಲ. ಫ್ರಾನ್ಸಿಸ್ಕನ್ ಮಿಷನರಿಗಳ ಚರಿತ್ರೆಯಲ್ಲಿ ಹೇಳಿದಂತೆ - ಲೂಯಿಸ್ ಪಾದ್ರಿಯು ವಿಜಯನಗರದಲ್ಲಿ ಕ್ರಿಸ್ತ ಧರ್ಮ ಪ್ರವಚನ ನಡೆಸುತ್ತಿರುವಾಗ ಬ್ರಾಹ್ಮಣರು ಅವನ ಸಭೆಗೆ ನುಗ್ಗಿ ಅವನನ್ನು ಹೊಡೆದರಂತೆ. ಆಗ ರಾಯರು ಪಾದ್ರಿಯನ್ನು ಕರೆಸಿ ವಿಚಾರಿಸಿ, ಸಾಂತ್ವನಮಾಡಿ, ಪೂರ್ತುಗಾಲಕ್ಕೆ ವಾಪಸಾಗಲು ಧನಸಹಾಯ ಮಾಡಿದರಂತೆ[೪]. ಇನ್ನೊಂದು ದಾಖಲೆಯ ಪ್ರಕಾರ ಈ ಪಾದ್ರಿಯನ್ನು ವಿಜಯನಗರದಲ್ಲಿ ಕೊಲೆ ಮಾಡಿದರೆಂದೂ, ಅದರ ಹಿಂದೆ ಆದಿಲ್‌ಷಾಹನ ಕೈವಾಡವಿತ್ತೆಂದೂ ಹೇಳಲಾಗಿದೆ. ಆದರೆ ರಾಜಗುರುಗಳಾದ ತಾತಾಚಾರ್ಯರ ವಿರೋಧದಿಂದ ಮಿಷನರಿಗಳು ತತ್ಕಾಲಕ್ಕೆ ಗೋವೆಗೆ ಮರಳಿದರಂತೆ[೫].




೧೫೪೨ರಲ್ಲಿ ಅಂಟೋನಿಯೋ ಪತ್ರಾ ವೋ ಎಂಬ ಫ್ರಾನ್ಸಿಸ್ಕನ್ ಪಾದ್ರಿಯು ವಿಜಯ ನಗರದಲ್ಲಿ ೧೩೦೦ ಜನ ಹಿಂದೂಗಳನ್ನು ಕ್ರೈಸ್ತರನ್ನಾಗಿ ಮತಾಂತರಿಸಿದ್ದಲ್ಲದೇ ರಾಜಧಾನಿ ಯಲ್ಲಿಯೇ ಸಂತ ಅಂತೋನಿಯರ ಇಗರ್ಜಿಯನ್ನು ಕಟ್ಟಿಸಿದ್ದನೆಂದು ಫಾದರ್ ಹೆರಾಸ್ ಬರೆದಿದ್ದಾರೆ[೬]. ಆದರೆ ಕ್ರಿ.ಶ. ೧೫೯೮ರಲ್ಲಿ ಚಂದ್ರಗಿರಿಯಲ್ಲಿ ಪರಿಪಾಲನೆ ಮಾಡುತ್ತಿದ್ದ ಅರವೀಡು ವಂಶದ ವೆಂಕಟಪತಿರಾಯನ ಆಹ್ವಾನದ ಮೇರೆಗೆ ಜೆಸುಟ್ ಮಿಷನ್ ಆರಂಭವಾಯಿತು. ವೆಂಕಟಪತಿರಾಯನ ಮಾವನು ಜೆಸುಟ್‌ರಿಗೆ ಇಗರ್ಜಿಯನ್ನು ಕಟ್ಟಲು ಭೂಮಿಯನ್ನು ನೀಡಿದನಲ್ಲದೇ, ಅವರ ಖರ್ಚಿಗೆಂದು ರಾಜ್ಯ ಕೋಶದಿಂದ ವರ್ಷಕ್ಕೆ ಸಾವಿರ ಪಗೋಡಾ ಸಿಗುವಂತೆ ವ್ಯವಸ್ಥೆ ಮಾಡಿದನು. ಈ ಮಿಷನರಿಗಳ ಮೂಲಕ ವೆಂಕಟಪತಿರಾಯ ಗೋವೆಯ ಪೋರ್ಚುಗೀಜ್ ರಾಜ್ಯಪಾಲನ ಮತ್ತು ಸ್ಪೇನ್ ದೇಶದ ಅರಸನಾಗಿದ್ದ ಫಿಲಿಪ್ಪನ ಗೆಳೆತನವನ್ನು ಸಂಪಾದಿಸಿದನು.

ಕ್ರಿ.ಶ. ೧೬೦೦ರಲ್ಲಿ ಶ್ರೀರಂಗಪಟ್ಟಣದಲ್ಲಿ ನೆಲೆಸಿದ್ದ ವಿಜಯನಗರದ ರಾಜ ಪ್ರತಿನಿಧಿ ತಿರುಮಲರಾಯನು ಜೆಸುಟ್ ಗುರುಗಳಿಗೆ ಪತ್ರ ಬರೆದು ಆಹ್ವಾನಿಸುತ್ತಾನೆ. ಶ್ರೀರಂಗಪಟ್ಟಣದಲ್ಲಿ ಇಗರ್ಜಿ ಕಟ್ಟಲು ಸ್ಥಳ ನೀಡುವ ಮತ್ತು ವಾರ್ಷಿಕ ೫೦೦ ಪಗೋಡಾ ಜೀವನಾಂಶ ನೀಡುವ ಭರವಸೆ ನೀಡುತ್ತಾನೆ. ಆದರೆ ಅವರು ಬರಲಾಗಲಿಲ್ಲ. ಕ್ರಿ.ಶ.೧೬೧೪ರಲ್ಲಿ ಫಾದರ್ ಅಲ್‌ಫಾನ್ಸೊ ಡಿಕೊಸ್ಟಾ ಪತ್ರೇವು - ಶ್ರೀರಂಗರಾಯನು ತನ್ನ ಪತ್ನೀ ಸಮೇತ ಕ್ರಿಸ್ತ ಮತಾವಲಂಬಿಯಾದ - ಎಂದು ಹೇಳುತ್ತಾನೆ.

ಈ ಎಲ್ಲಾ ಆಧಾರಗಳ ಮೇಲೆ ಮಿಷನರಿ ದಾಖಲೆಗಳು

* ನೇತಾಜಿ ರಸ್ತೆ, ರಾಮನಗರ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ-೫೮೩ ೨೧೨







ಹೀಗೆ ಸಾರುತ್ತವೆ. King of vijayanagara was definitely a friend of Christians In 1443 AD at one time the chief minister of vijayanagara was a Christian (ಯಾರೋ ?)

ಬಿಜಾಪುರದ ಆದಿಲ್‌ಷಾಹಿ ಸುಲ್ತಾನರೂ ಕ್ರಿಶ್ಚಿಯನ್ನರ ಬಗ್ಗೆ ಉದಾರವಾಗಿದ್ದರು. ರಾಯಚೂರು, ಮುದುಗಲ್‌ಗಳಲ್ಲಿ ಫ್ರಾನ್ಸಿಸ್ಕನ್ ಮಿಷನರಿಗಳು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದರಂತೆ. ಇಬ್ರಾಹಿಂ ಆದಿಲ್‌ಷಾಹನ ಕಾಲಕ್ಕೆ (೧೫೦೨ ಕ್ರಿ.ಶ) ಮುದುಗಲ್‌ನಲ್ಲಿ ಸಾಕಷ್ಟು ಹಿಂದೂಗಳು ಕ್ರಿಸ್ತ ಧರ್ಮವನ್ನು ಸೇರಿದರಂತೆ. ಅವರಲ್ಲಿ ಕುರುಬರೂ, ನೇಕಾರರೂ ಮತ್ತು ಕುಂಬಾರರೇ ಅಧಿಕವಾಗಿದ್ದರಂತೆ. ಮುದುಗಲ್ಲಿಗೆ ನಾಲ್ಕು ಮೈಲು ದೂರದಲ್ಲಿರುವ 'ಬುದ್ದಿನಿ' ಎಂಬ ಗ್ರಾಮವನ್ನು ಆದಿಲ್‌ಷಾಹಿಗಳು ಮಿಷನರಿಗಳಿಗೆ ಉಂಬಳಿಯಾಗಿ ನೀಡಿದ್ದರಂತೆ[2]. ಅಲ್ಲದೇ ಅನೇಕ ತೆರಿಗೆ ಮತ್ತು ಸುಂಕಗಳ ವಿನಾಯತಿಯನ್ನೂ ನೀಡಿದ್ದರು. ಚಿತ್ತಾಪುರ ಭಾಗದಲ್ಲಿ ವಿಶೇಷವಾಗಿ ಕುಂಬಾರರು ಮತ್ತು ಈಡಿಗರು ಮತಾಂತರವಾದರು. ಸುರಪುರದಲ್ಲಿ ಆಂಗ್ಲರ ರಾಜಪ್ರತಿ ನಿಧಿಯಾಗಿದ್ದ ಕ್ಯಾಪ್ಟನ್ ಮೆಡೋಸ್ ಟೇಲರ ತನ್ನ ವರದಿಯಲ್ಲಿ ಈ ವಿಷಯಗಳನ್ನು ಪುಷ್ಟೀಕರಿಸುತ್ತಾನೆ[೮].

ಬಿಜಾಪುರದ ಸೇನೆಯಲ್ಲಿ ಜಾರ್ಜಿಯನ್, ಸರ್ಕಾಶಿಯನ್ ಮತ್ತು ಅಬಿಸೇನಿಯನ್ ಯೋಧರು ಅದರಲ್ಲಿ ಪ್ರಮುಖವಾಗಿ ಕ್ರಿಸ್ತೀಯರು ಇದ್ದರು. ಅವರೆಲ್ಲಾ ಸೇನಾಪತಿ ಅಸದ್‌ಖಾನನ ಕೆಳಗೆ ಕೆಲಸ ಮಾಡುತ್ತಿದ್ದರು. ಗೋಲ್ಕೋಂಡದ ಕುತುಬ್‌ಷಾಹಿ ನವಾಬರ ಮಂತ್ರಿಯೊಬ್ಬನು ಕ್ರಿಸ್ತೀಯನಾಗಿದ್ದನಂತೆ.

ಹೀಗೆ ಕ್ರಿಸ್ತಶಕೆಯ ಆರಂಭದಿಂದಲೂ ದಕ್ಷಿಣ ಭಾರತದಲ್ಲಿ ಕ್ರೈಸ್ತ ಮಿಷನರಿಗಳು ಕೆಲಸ ನಡೆಸಿರುವುದು ಖಚಿತ. ವಿಜಯನಗರದ ರಾಯರ ಸರ್ವಧರ್ಮ ಸಮನ್ವಯದ ನೀತಿಯನ್ನು ಬಳಸಿ ಅವರು ನೆಲೆಯೂರಲು ಪ್ರಯತ್ನಿಸಿದರು. ಗೋವೆಯ ರಾಜ್ಯಪಾಲರನ್ನು ತಮ್ಮ ಸ್ನೇಹದಲ್ಲಿ ಬಂಧಿಸಿ ಕುದುರೆಗಳನ್ನು ತಾವೇ ಖರೀದಿಸಬೇಕೆಂಬ ಯುದ್ಧನೀತಿಯಿಂದ ರಾಯರು ಮಿಷನರಿಗಳಿಗೆ ಅವಕಾಶ ನೀಡಿದರು.

ಆದರೆ ಬ್ರಾಹ್ಮಣರ ಮತ್ತು ಮುಖ್ಯವಾಗಿ ರಾಜಗುರುಗಳಾದ ತಾತಾಚಾರ್ಯರ ಕಡುವಿರೋಧದಿಂದ ಅವರು ಕೃಷ್ಣದೇವರಾಯರ ಕಾಲದಲ್ಲಿ ಭದ್ರವಾಗಿ ವಿಜಯನಗರದಲ್ಲಿ ನೆಲೆ ಊರಲು ಸಾಧ್ಯವಾಗಲಿಲ್ಲ. ಆದರೆ ಅರವೀಡು ವಂಶದವರ ಪರಿಪಾಲನೆಯಲ್ಲಿ ಅವರು ಆಹ್ವಾನಿತರಾದರು. ಅನೇಕಮುಖವಾಗಿ ತಮ್ಮ ಕೆಲಸ ಮಾಡಿದರು.

ರಾಜಕೀಯ ತಂತ್ರದ ಫಲವಾಗಿ ಆದಿಲ್‌ಷಾಹಿ ಮತ್ತು ಗೋಲ್ಕೊಂಡದ ಕುತುಬ್‌ಷಾಹಿ ಅರಸರು ನೀಡಿದ ಸವಲತ್ತುಗಳಿಂದ ಮಿಷನರಿಗಳು ರಾಯಚೂರು, ಮುದುಗಲ್, ಚಿತ್ತಾಪುರ, ಆದವಾನಿ, ರಾಮದುರ್ಗ ಮತ್ತು ಮುದ್ದನಗೆರೆಗಳಲ್ಲಿ ತೀವ್ರವಾಗಿ ಮತಾಂತರದ ಕೆಲಸ ನಡೆಸಿದರು. ಹಂಪೆಯ ಪತನದ ನಂತರ ಅವರು ಬಳ್ಳಾರಿಯಲ್ಲಿ ತಳ ಊರಿದರು. ಕ್ರಿ.ಶ. ೧೫೪೨ರಲ್ಲಿ ಗೋವೆಗೆ ಆಗಮಿಸಿದ ಸಂತ ಫ್ರಾನಿಸ್ಸಸ್ ಕ್ಸೇವಿಯರನು ಗೋವಾ, ಕಾರವಾರ ಮತ್ತು ತಿರುವನಂತಪುರದಲ್ಲಿ ಸಾವಿರಾರು ಜನರನ್ನು ಮತಾಂತರ ಮಾಡಿದನು. ಅವನ ಕಾರ್ಯವನ್ನು ಜೆಸುಟ್ ಮತ್ತು ಫ್ರಾನ್ಸಿಸ್ಕನ್ ಮಿಷನರಿಗಳು ಮುಂದುವರಿಸಿದರೆಂದು ಭಾರತದ ಗೆಝೆಟಿಯರ್ ಉಲ್ಲೇಖ. ಆದರೆ ಜೆಸುಟ್ ಮತ ಪ್ರಚಾರಕನಾದ ಪಾದ್ರಿ ಫಾದರ್ ಡಿನೊಬಲಿಯಾ ಅತ್ಯಂತ ಬುದ್ಧಿವಂತಿಕೆಯಿಂದ ಹೊಂದಿಕೊಂಡು ಹೋಗುವ ಪದ್ಧತಿಯನ್ನು ಪ್ರಾರಂಭಿಸಿದನು. ಅವನು ತಮಿಳುನಾಡಿನ ಮಧುರೆ ನಗರದಲ್ಲಿ ನೆಲೆಸಿದನು. ಹಿಂದೂಗಳನ್ನು ತೆಗಳುವುದಾಗಲೀ, ಅವರ ಆಚಾರ-ವಿಚಾರಗಳನ್ನು ಅವಹೇಳನ ಮಾಡುವುದಾಗಲೀ-ಮಾಡಲಿಲ್ಲ. ಆದರ ಬದಲು

ಅವನು ಸಂಸ್ಕೃತ ಮತ್ತು ತಮಿಳಿನ ಪ್ರಭುತ್ವ ಪಡೆದು, ಹಿಂದೂ ಧರ್ಮಗ್ರಂಥಗಳನ್ನು ಅಭ್ಯಾಸ ಮಾಡಿ, ಹಿಂದೂ ಪಂಡಿತರೊಂದಿಗೆ ವಾದ-ವಿವಾದ, ಖಂಡನೆ - ಮಂಡನೆಯಲ್ಲಿ ತೊಡಗಿದನು. ಅವನ ವೇಷವೂ ಹಿಂದೂ ಸನ್ಯಾಸಿಯಂತಿತ್ತು. ಅವನ ವಿಧಾನಕ್ಕೆ ಮರುಳಾಗಿ ಅನೇಕ ಮೇಲು ಜಾತಿಯ ಜನರು ಕ್ರೈಸ್ತರಾದರು. ಅದರಂತೆ 'ವೀರಮುನಿವರ' ಎಂದು ಪ್ರಸಿದ್ಧನಾದ ಬ್ರೆಸ್ಚಿಯು ತಮಿಳಿನಲ್ಲಿ ಪ್ರಸಿದ್ದವಾದ 'ತೆಂಬುವಾಣಿ' ಎಂಬ ಕಾವ್ಯವನ್ನು ರಚಿಸಿದನು. ಥಾಮಸ್ ಸ್ಟೀಫನ್ಸ್ ಅದೇ ಕಾಲದಲ್ಲಿ ಮರಾಠಿಯಲ್ಲಿ ಕ್ರಿಸ್ತ ಪುರಾಣವನ್ನು ರಚಿಸಿದನು. ಮೊಘಲ್ ಚಕ್ರವರ್ತಿ ಅಕಬರನೂ ಜೆಸುಟ್‌ರಿಗೆ ತನ್ನ ಆಸ್ಥಾನದಲ್ಲಿ ಅವಕಾಶ ನೀಡಿದನು.

ವಿಜಯನಗರ ಕಾಲದಲ್ಲಿ ಹಿಂದೂ ಸಮಾಜವು ಅತ್ಯಂತ ಸಂಘಟಿತವಾಗಿತ್ತು. ರಾಜ ಮತ್ತು ರಾಷ್ಟ್ರ ಧರ್ಮವಾಗಿತ್ತು. ಆದರೆ ಕ್ರಿಸ್ತ ಮಿಷನರಿಗಳು ದೂರದ ಯುರೋಪಿನಿಂದ ಬಂದು ನಾನಾ ರೀತಿಯ ಬುದ್ಧಿವಂತಿಕೆಯಿಂದ ಸ್ಥಳೀಯ ರಾಜಕಾರಣದ ಉಪಯೋಗ ಪಡೆದು, ಹಿಂದೂ-ಮುಸ್ಲಿಮರ ದ್ವೇಷದ ಅವಕಾಶದ ಲಾಭ ಪಡೆದು ಕೆಲಸ ಮಾಡಿದರು. ರಾಜಾಶ್ರಯ ಪಡೆಯಲು, ಅಧಿಕಾರಿಗಳ ಬೆಂಬಲ ಗಳಿಸಲು ಪ್ರಯತ್ನಿಸಿದರು. ಕೆಳಜಾತಿಯ ಮುಗ್ಧರನ್ನು ಮತಾಂತರ ಮಾಡಿದರು. ದೇಶ ಭಾಷೆಗಳನ್ನು ಕಲಿತ ಕಾವ್ಯ ರಚಿಸಿ, ಸಾಹಿತ್ಯದ ನಾನಾ ಪ್ರಾಕಾರಗಳಲ್ಲಿ ಕೆಲಸಮಾಡಿ ಗೌರವಾನ್ವಿತರೆನಿಸಿದರು. ಆಗ ಮೇಲು ಜಾತಿಯವರನ್ನೂ, ವಿಚಾರವಾದಿಗಳನ್ನು ಮತಾಂತರಗೊಳಿಸಿದರು. ತಮ್ಮ ಬುದ್ಧಿವಂತಿಕೆಯಿಂದ ಆ ಕಾಲದ ಹಿಂದೂ ಮತ್ತು ಮುಸಲ್ಮಾನ ದೊರೆಗಳ ಅನುಮತಿ ಮತ್ತು ಸದ್ಭಾವನೆಗಳನ್ನು ಸಂಪಾದಿಸಿ ದಕ್ಷಿಣ ಭಾರತದಲ್ಲಿ ಕ್ರಮವಾಗಿ ತಮ್ಮ ಮಿಷನರಿ ಕೆಲಸವನ್ನು ವಿಸ್ತರಿಸಿ ಗಟ್ಟಿಯಾದದ್ದು ಇತಿಹಾಸ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Quoted in *The Apostles in india* by A.C. Perumalil S.J., P.102; See also *History of Christianity in India*, p.45 - by C.M. Moraes

೨. **ಕಾವ್ಯಮಾಲೆ.**, Rev Kittel, ಪುಟ-೬

೩. *Fransicans in india.*, p11-12 by MEERSMAN

೪. Bellary Mission., Fr . Sylvester Megoldrick, OFM the Fransscan Missionary union, London, UK, P.189 by Fr. Megoldrick

೫. **ಉತ್ತರ ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಉಗಮ** (೧೮೦೦ಕ್ಕೂ ಹಿಂದೆ - ಸ್ವಾಮಿ ಡಾ. ಐ ಅಂತಪ್ಪ, ಕಥೋಲಿಕ ಕ್ರೈಸ್ತ ಸಾಹಿತ್ಯ ಸಂಘ, ಜಯನಗರ, ಬೆಂಗಜಟಿರು ೧೧೨೦೦೧)., ಪು ೨೫

೬. ಅದೇ., ಪುಟ. ೭೬

೭. ಅದೇ., ಪುಟ. ೧೯೯

೮. ಅದೇ., ಪುಟ. ೧೯೧

ಆಧಾರ ಗ್ರಂಥಗಳು

೧. **ಭಾರತದ ಗ್ಯಾಝೆಟಿಯರ್ ಸಂಪುಟ ೧** (ಭಾರತದ ದೇಶ ಕೋಶ)., ೧೯೮೬, ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೨. **ಚರ್ಚ್ ಇತಿಹಾಸ.**, ೧೯೯೯, ನಿರ್ದೇಶಕರು - ಕಥೋಲಿಕಾ ಕೇಂದ್ರ, ಮೈಸೂರು

೩. **ಕರ್ನಾಟಕದ ಧರ್ಮಸಭೆ.**, ೧೯೮೮, ವಂ. ಫಾ. ಕೆ ಮ್ಯಾಥ್ಯೂರೆಗೋ ಅಂಡ್ ಸನ್ಸ್, ಬೆಂಗಳೂರು.

೪. *The Aravidu Dynastry.*, Fr. Heras.

ಎಂ. ಜಿ. ನಾಗರಾಜ್* ಡಾ. ಎಂ. ಜಿ. ಚಂದ್ರಕಾಂತ್*

ಕೊಡಗಿನ ಕಲ್ಯಾಟಜ್ಜಪ್ಪ

ಹಾಲೇರಿವಂಶದ ಮೊದಲರಸ ವೀರರಾಜ ಕೊಡಗಿಗೆ ಕ್ರಿ.ಶ. ಸು. ೧೫೮೬ರಲ್ಲಿ ಬಂದ. ಆಗ ಭಾಗಮಂಡಲದ ಪ್ರದೇಶದ ತಾವುನಾಡಿನಲ್ಲಿ ಮಲೆಯಾಳ ಮೂಲದ ಕರ್ಣಂಬಾಹು ನಾಯಕನಾಗಿದ್ದ. ಬಹುಶಃ ಇವನು ಭಾಗಮಂಡಲ-ಪಾಲೂರು ಶಾಸನೋಕ್ತ ಕ್ರಿ.ಶ ೧೩೭೧ರ ಮೇಲ್ಪುಂಡಿ ಕುಂಞ ಅರಸು ವಂಶಿಕನಿದ್ದಂತೆ ತೋರುತ್ತದೆ. ಇವನು ಕಳ್ಳಪಡೆಯ ನಾಯಕನೂ ಆಗಿದ್ದ. ಕೊಡಗಿನ ಒಂದು ಭಾಗದಲ್ಲಿ ಕೇರಳದ ಅರಸು-ನಾಯಕರ ಪ್ರಭಾವ ೧೬ನೇ ಶತಮಾನದಲ್ಲಿಯೂ ಮುಂದುವರಿದಿದ್ದು ಈ ಕರ್ಣಂಬಾಹುವಿನ ಅಸ್ತಿತ್ವದಿಂದಲೂ ಸೂಚಿತವಾಗುತ್ತದೆ. ಕೊಡಗಿನ ಗಡಿಗ್ರಾಮವೊಂದರ ಮಹಾವಿಷ್ಣು ದೇಗುಲದ ಸ್ತ್ರೀ ದೇವತೆ; ನಿರ್ವಹಣೆಗೆ ಅರಸುಬಾಹು ಎಂಬುವನೊಬ್ಬ ದಾನಾದಿಗಳನ್ನು ಕೊಟ್ಟ ಬಗ್ಗೆ ಆ ದೇಗುಲದ ಇತಿಹಾಸ ಹೇಳುವ ಕಾರಣ, ಕರ್ಣಂಬಾಹುವಿನ ವಂಶಿಕರು ಹಾಲೇರಿ ಕೊನೆ ಅರಸರ ಕಾಲದಲ್ಲಿಯೂ ಅಧೀನ ಊರನಾಯಕರಾಗಿ ಉಳಿದಿದ್ದ ಸಾಕ್ಷಿಯಂತಿದೆ.

ಹಾಲೇರಿ ಆದಿವೀರರಾಜೇಂದ್ರ ಒಡೆಯ, ಹಾಗು ಕರ್ಣಂ ಬಾಹು ಇವರಿಗೆ ಸಮಕಾಲೀನನಾಗಿದ್ದವ ಕಲ್ಯಾಟಜ್ಜಪ್ಪ. ಇದು ೧೬ನೇ ಶತಮಾನದ ಉತ್ತರಾರ್ಧ ಕಾಲ. ಕೊಡಗಿನಲ್ಲಿ ಫೆರಿಸ್ತನ ರೀತ್ಯಾ ೮ಜನ ನಾಯಕರು, 'ಕೊಂಬು' ಎಂಬ ಗಡಿಗಳನ್ನಿಟ್ಟು ಕೊಂಡು ಆ ಪ್ರದೇಶಗಳಲ್ಲಿ ಇರುತ್ತಿದ್ದರು. ಇವರಲ್ಲಿ ಬಾಳುಕಾರರು ಬಾಚಿಕಾರರು ಎಂಬ ತುಂಡುನಾಯಕರೂ ಇದ್ದು ಪರಸ್ಪರ ಕಚ್ಚಾಡುತ್ತಿದ್ದರು. ಇವರಲ್ಲಿ ಕೈಬಿಲಿರ ದೇವಯ್ಯನಾಯಕ (ಹುದಿಕೇರಿ ಬಳಿಯ) ನಂಥವರಿಗೆ ಕೇರಳದ ನಾಯಕರ ಸಂಪರ್ಕವೂ ಇತ್ತು. ಅಂತಾಗಿ ಕೇರಳದ ನಾಯಕರು ಸನ್ನಿವೇಶದ ದುರ್ಬಲ ಕೊಂಡಿಗಳನ್ನೂ ಬಳಸಿಕೊಂಡು ಕೊಡಗಿನ ವ್ಯವಹಾರ ಗಳಲ್ಲಿ ಮೂಗುತೂರಿಸುವುದಿತ್ತು. ಕಳ್ಳಪಡೆಗಳನ್ನು ನುಗ್ಗಿಸಿ ದೋಚುವುದಿತ್ತು.

ಇಂಥ ಪರಿಸ್ಥಿತಿಯಲ್ಲಿ ಕೇರಳದಿಂದ ಬಂದ ಮನೆ ತನವೊಂದರಲ್ಲಿ ಹುಟ್ಟಿದ ಕೊಡವರ ಕಲ್ಯಾಟಜ್ಜಪ್ಪ ೧೬ನೇ ಶತಮಾನದಲ್ಲಿ ಕೇಳಿಬರುವ ಪ್ರಸಿದ್ಧ ವೀರನೇ ಆಗಿದ್ದ. ಇದಕ್ಕೆ ಮನೆತನದ ಚರಿತ್ರೆ, ಪಟ್ಟೋಲೆ ಪಳಮೆಯ ಕಲ್ಯಾಟಜ್ಜಪ್ಪನ ವೀರಗಾಥೆ, ವರ್ತಮಾನದವರೆಗೂ ಹರಿದು ಬಂದಿರುವ ಕಲ್ಯಾಟಜ್ಜಪ್ಪನ ಆರಾಧನಾ ಹಿನ್ನೆಲೆಗಳು ಪೋಷಕ ಪುರಾವೆ ಯನ್ನೊದಗಿಸುತ್ತದೆ.

ಇಡೀ ಕೊಡಗಿನಲ್ಲಿ 'ವೀರ ಕಲ್ಯಾಟಜ್ಜಪ್ಪ'ನೆಂದು ಪ್ರಸಿದ್ಧನಾದ ಕೊಡವ ಮನೆತನದ ಕಲಿಯಾಟಂಡ (ಕಲ್ಯಾಟಂಡ) ಪೊನ್ನಪ್ಪ ಕುಂಜಿಲ ಗ್ರಾಮದ ಕುಟ್ಟಯ್ಯ ಮತ್ತು ಮಾದಂಡ್ರ ಚೀಯವ್ವ ಅವರ ಪುತ್ರನಾಗಿದ್ದಾನೆ. ಕೊಡಗಿನ ಪ್ರಸಿದ್ಧ ವ್ಯವಸಾಯದ ದೇವತೆ ಶ್ರೀ ಇಗ್ಗುತಪ್ಪನ ಆಶೀರ್ವಾದದಿಂದ ಆ ದಂಪತಿಗಳಿಗೆ ಜನಿಸಿದ ಎಂದು ಕಲ್ಯಾಟಂಡ ಮನೆತನದ ಹಿರಿಯರಾದ ಕುಂಜಿಲಗ್ರಾಮದ



ಪಾಡಿ ಶ್ರೀ ಇಗ್ಗುತಪ್ಪದೇವರು

ಕಲ್ಯಾಟಂಡ ಬಿ. ಅಚ್ಚಮ್ಮ ಹೇಳುತ್ತಾರೆ[೧]. ಇವನಿಗೆ ಕೆಂಗುದುರೆ ಪೊನ್ನಪ್ಪ ಎಂಬ ಹೆಸರೂ ಇದೆ. ಅಂತೇ ಇವನ ಶಿಲ್ಪವನ್ನೂ ಅಶ್ವಾರೋಹಿ ಶಿಲ್ಪವಾಗಿಯೇ ಪ್ರತಿನಿಧಿಸ ಲಾಗುತ್ತದೆ. ಈ ಕೆಂಗುದರೆ ಪೊನ್ನಪ್ಪ ಕಲಿಯಾಟಂಡ ಪೊನ್ನಪ್ಪ ಹುಟ್ಟಿದ ಕತೆಯನ್ನು ಪಟ್ಟೋಲೆ ಪಳಮೆಯು ಹೇಳಿರುವುದಿಂತಿದೆ: ಕುಟ್ಟಂಜೆಟ್ಟಿರ ಒಕ್ಕದ ಚೀಯಮ್ಮ ಹಾಗು ಕುಟ್ಟಯ್ಯ ದಂಪತಿಗಳಿಗೆ ಇಗ್ಗುತಪ್ಪ ದೇವರಿಗೆ ಹರಸಿಕೊಳ್ಳಲಾಗಿ ಹುಟ್ಟಿದವ (ದುಃಖ ಬೋಂಡ ಪೊಂಗಳೇ ಆಂಗುಞ ಫಲತಂದ-ದುಃಖಿಸದಿರಿ, ಗಂಡು ಮಗ ನಿಮಗೆ ಹುಟ್ಟುವನೆಂದು ಇಗ್ಗುತಪ್ಪ ಆಶೀರ್ವದಿಸಿದನಂತೆ.

ಅನರ್ಘ್ಯ ಶ್ರೀ ಜಚನಿಕೃಪ' ೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು - ೫೬೦ ೦೧೦

ಬಾಲ್ಯದಿಂದಲೂ ಇವನದು ವೀರ ಚಟುವಟಿಕೆ. ಮಲೆಯಾಳದಲ್ಲಿ ಮಂತ್ರ-ತಂತ್ರ ಕಲಿತು ಜನರಲ್ಲಿ ಅದನ್ನು ಅನ್ವಯ ಮಾಡಿ ಜನಪ್ರಿಯನಾಗಿದ್ದ. ಅವನ ಶಿಲ್ಪಕ್ಕೇ ಇರುವ ಕುದುರೆ ಮೇಲಿನ ಕೊಡೆಯನ್ನೂ ಗಮನಿಸಿದರೆ ಅವನೊಬ್ಬ ವೀರನಾಯಕ ನಾಯಕನೂ ಆಗಿದ್ದ ಎಂಬುದು ಗಮನಕ್ಕೆ ಬರುತ್ತದೆ. ಇವನ ಜನಪ್ರಿಯತೆ ಹಾಗು ವೀರತನವನ್ನು ತಿಳಿದಿದ್ದ ತಾವುನಾಡಿನ ನಾಯಕ ಕರ್ಣೆಂ



ಕುಂಜಿಲ ಗ್ರಾಮದ ಕಲ್ಯಾಟಜ್ಜಪ್ಪನ ವಿಗ್ರಹಗಳು ಮತ್ತು ವಂಶಿಕರಾದ ಕಲ್ಯಾಟಂಡ ಅಚ್ಚಮ್ಮ ಪಟ್ಟೇದಾರರು

ಬಾಹು, ಹಾಲೇರಿ ಅರಸನಿಗೆದುರಾಗಿ ನಿಲ್ಲಲು, ಇವನನ್ನು ಒಲಿಸಿ ಕೊಳ್ಳಲು ನೋಡಿದ. ಅದಕ್ಕಾಗಿ ನಾಲ್ಕು ಚಿನ್ನದ ಬಳೆಗಳನ್ನು ಉಡುಗೊರೆ ಎಂದು ಕಲ್ಯಾಟಜ್ಜಪ್ಪನಿಗೆ ಕಳುಹಿಸಿದ. ಆದರೆ ಇದು ಸಹಜವಾಗಿ ಪೊನ್ನಪ್ಪನನ್ನು ಕೆರಳಿಸಿತು. ಆಗ ಬಳೆತಂದವರಿಗೆ ಹೇಳಿದಃ

ಕೇಳಿಕೇಳಿ ಬೆಂದುವೇ। ನಾಕೀ ಬಳೆ ಬೋಂಡಲ। ಪಟ್ಟಚತ್ತ್ ಮುಂಡೆಕ್। ಮೆಚ್ಚಿತ್ ಕೊಡಕಡ್। ಎಂದೆಣ್ಣೆ ಪರಂದತ್ತ್।[2] ಅಂದರೆ ಗಂಡ ಸತ್ತುಹೋದ ಶಾಂತಿಕಾರನ ವಿಧವೆಗೆ ಕೊಡಬೇಕಾದ್ದು ಈ ಬಳೆಗಳು; ನನಗಲ್ಲ ಎಂದು ಹಿಂದಿರುಗಿಸಿದ. ಇದಕ್ಕೆ ಕಾರಣವೂ ಇದ್ದಂತೆ ತೋರುತ್ತದೆ. ಒಂದನೆಯದು, ಕರ್ಣೆಂಬಾಹುವಿನಂಥ ಕಳ್ಳಪಡೆಯ ನಾಯಕನ ಸಂಪರ್ಕವನ್ನೂ ಒಲ್ಲದಿದ್ದುದು; ಎರಡನೆಯದು ಹಾಲೇರಿ ಅರಸನ ಎದುರು ಕಾಳಗಕ್ಕೆ ಕರ್ಣೆಂಬಾಹು ಹೋಗುವುದು ಕಲ್ಯಾಟಜ್ಜಪ್ಪನಿಗೆ ಇಷ್ಟವಿಲ್ಲದಿದ್ದುದು. ಇದರಿಂದ ಕಲ್ಯಾಟಜ್ಜಪ್ಪನಿಗೆ ಹಾಲೇರಿ ಮೊದಲರಸನೊಡನೆ ಸುಮಧುರ ಬಾಂಧವ್ಯವಿತ್ತೆಂದಾಗುತ್ತದೆ. ಕಾರಣ ಹಾಲೇರಿ ಅರಸನು ಚಿನ್ನದ ಬಳೆಗಳನ್ನೂ ಉಡುಗೊರೆಯಾಗಿ ಕಳುಹಿಸಿದಾಗ ಈ ಕಲ್ಯಾಟಜಪ್ಪನೇ ಸ್ವೀಕರಿಸಿದ.



ಕಲ್ಯಾಟಜ್ಜಪ್ಪ ಮತ್ತು ಕೈಮಡದಲ್ಲಿ ಕಾಟಾಳಬೊಳ್ತು



ಕೊಡಗು ರಾಜರ ಕಾಲದ ಕಾಟಾಳುಬೊಳ್ತುವಿನ ಕೈಮಡ (ನಾಲ್ನಾಡು ಅರಮನೆಯ ಉತ್ತರಪಾರ್ಶ್ವದಲ್ಲಿ)

ಪೊನ್ನಪ್ಪ ಬಳೆಗಳನ್ನು ತಿರಸ್ಕರಿಸಿದ ವಿಷಯ ತಿಳಿದ ಕರ್ಣೆಂಬಾಹು ಅವನನ್ನು ಸೆರೆ ಹಿಡಿಯಲು ಹೊರಟ. ಆದರೆ ಪೊನ್ನಪ್ಪ ತನ್ನ ಮಂತ್ರ-ತಂತ್ರದ ಜೊತೆಗಾರ ಕಾಪಳರ ಪೈಕಿಯ ನಾಯಕ ಕಾಟಾಳುಬೊಳ್ತುವಿನೊಡನೆ, ಹಾಲೇರಿ ಅರಸನಲ್ಲಿಗೆ ಹೋಗಿ ದಂಡಿನ ನೆರವು ಕೇಳಿದ. ಆಗ ದೊರೆ, ಕುಟ್ಟಪಾಲೆ ಮಾಯಿಲ ಎಂಬುವನ ನೇತೃತ್ವದಲ್ಲಿ ೫೦೦೦ ಜನ ಪಾಲೆಯರು, ವಡಿಕತ್ತಿ ಮತ್ತು ಕೋವಿಗಳನ್ನು ಪೊನ್ನಪ್ಪನಿಗೆ ನೀಡಿದ. ಕಾಳಗಕ್ಕೆ ಇವನಿಗೆ ಜೊತೆಯಾದವ ಕಾಟಾಳಬೊಳ್ತು. ಇಬ್ಬರೂ ತಮ್ಮ ವಿದ್ಯೆಗಳಿಂದ ನಾಡಿನಲ್ಲಿ ಹೆಸರುಮಾಡಿದ್ದರು. ಈ ಕಾರಣವೆ ಕರ್ಣೆಂಬಾಹುವು ಹಾಲೇರಿ ಮೊದಲರಸನ ಎದುರು ಇವನ ನೆರವನ್ನು ಬಯಸಿದ. ಆದರೆ ಈ ಮೊದಲೇ ಹೇಳಿದಂತೆ ಅವನು ಬಯಸಿದ ರೀತಿ ಹಾಗು ಮೋಸದ ಚರ್ಯೆಗಳು, ಕಳ್ಳಪಡೆಯ

ನಿರ್ವಹಣೆ ಕಲ್ಯಾಟಜ್ಜಪ್ಪನಿಗೆ ಹಿಡಿಸಿರಲಿಲ್ಲ. ಅಂತಾಗಿ ಹಾಲೇರಿ ಅರಸನನ್ನೇ ಒಲಿದು, ನೆರವಿಗೆ ಅವನಲ್ಲಿಗೆ ಹೋದ. ಆ ಸಂದರ್ಭವು ಪಟ್ಟೋಲೆ ಪಳಮೆಯಲ್ಲಿ ಹೀಗಿದೆ :

ಕೊಡವ ಭಾಷಿಕ ಹಾಡು

ಪೊನ್ನಪ್ಪ ಬಯಿಂಬನೂ । ಪೊನ್ನಪ್ಪಂಡ ಸಂಜಾದಿ
ಕಾಟಾಳ ಬೊಳುತುವೂ । ಚೋಕಂಡಾಣೆ ಮಂದ್‌ಂಜಿ
ವೈಯ್ಯನೆ ಪೊರಟಿತ್ । ಪಾಂಬ್ ಕಣ್ಣ್ ಪಾಲೇರಿ
ಅಂದ್ ಬಾವೊಡೆವೋಂಡ । ಚಿತ್ತಿರ ತರಮನೆ
ಪೊಂದೇವಡಿ ಪಟ್ಟಿಲ್ । ಅಲ್ಲಿ ಬಂದ್ ನಿಂದಿತ್
ಪಾಲೇರಿ ಒಡೆಯಂಗ್ । ಅಡ್ಡ ಬುದ್ದಿತೆದ್ದಿತ್
ಈ ಬಾಕ್ ಪರಂದತ್ । "ಉಯಿ ! ಎನ್ನಡೊಡೆವೋನೆ
ಪುಂಡತ್ತ ಪೆರತಿತ್ । ತೊಂಡತ್ತಕ್ ಬಾಳಿಲ್ಲೆ
ಶತ್ತುರು ಪೆರತಿತ್ ಅವದಿಲ್ಲ ತಾಚಿಲ" । ಎಂದೆಣ್ಣೆ ತರಪಿತ್
ಕರ್ನೆಬಾವು ಕೆಜ್ಜೋರ್ । ಕಳ್ಳಪಡೆ ನೆಣ್ಣ್‌ನ
ಆ ಬಾಕ್‌ನ ಕೇಟಿತ್ । ಪಾಲೇರಿ ಒಡೆವೋನ್
ಅರಮನೆ ಪಾಲೆಯಡ । ಅಞೂರಾಳ್ ಪಡೆಯಾಳ
ಆಳಯಚಿ ಕಾಕಿತ್ । ಕೂಟ್‌ಲ್ ತಲೆಯಾಳ್
ಕುಟ್ಟಪಾಲೆ ಮಾಯಿಲ । ಮಾಯಿಲ ಬಯಿಂಬಂಗ್
ಈ ಬಾಕ್ ಪರಂದತ್ । "ಕೇಳ್ ಕೇಳ್ ಮಾಯಿಲ
ಪೊನ್ನಪ್ಪಂಡ ಕೂಟಾಯಿ । ಶತ್ತುರು ನಡಕುವಕ್
ದಂಡ್ ಕೆಟ್ಟಿ ಪೋಂಡುಲ" । ಎಂದಪ್ಪಣೆ ಮಾಡಿತ್
ಅಞೂರಾಳ್ ಪಾಲೆಯಕ್ । ಅಂಬ್ ಬಿಲ್ಲ್ ಕೊಡತಿತ್
ಪೊನ್ನಪ್ಪ ಬಯಿಂಬಂಗ್ । ಪೊಂಬುಡಿರೊಡಿಕತ್ತಿ
ಕಾಸ ತೋಕ್ ತಾನಾಯಿ । ಆಯುಧ ಕೊಡ್‌ತತ್
ಅದ್ ಕಂಡ್ ಪೊನ್ನಪ್ಪ । ಚಂದೋಳ್ ಪೆರ್‌ಜಾಯಿ
ಪಾಲೇರಿ ಒಡೆವೋಂಗ್ । ಅಡ್ಡ ಬುದ್ದಿತೆದ್ದಿತ್
ಅಲ್ಲಿಂಜಿ ಪೊರಟಿತ್ । ಪಾಲೇರಿ ಒಡೆವೋಂಗ್
ಅಡ್ಡಬುದ್ದಿತೆದ್ದಿತ್ । ಅಲ್ಲಿಂಜಿ ಪೊರಟಿತ್

ಕನ್ನಡ ಭಾವಾನುವಾದ :

ಪೊನ್ನಪ್ಪನೆಂಬ ಶೂರನು । ಅವನ ಜೊತೆಯ ಗೆಳೆಯನು
ಕಾಟಾಳಬೊಳ್ಳು ವೀರನು । ಚೋಕಂಡಾಣೆ ಮಂದಿನಿಂದ
ಬಿರನೆ ಹೊರಟು ಬಂದರು । ನಾಗಹೆಡೆಯ ಕಣ್ಣ ಮಿಂಚು ಬೆಳಕ ಹಾಗೆ
ಕಣಿವೆ ಹೆಡೆಗೆ ಇದ್ದ ಹಾಲೇರಿ । (ತಲೆಬೀಡು ನೆಲೆಬೀಡು ಹಾಲೇರಿ)
ಹಾವ ಹೆಡೆಯ ಕಣ್ಣ ಮಣಿಯ । ಕಾಂತಿಯಂತೆ ಹಾಲೇರಿಯೆ
ಅಂದು ಬಾಳಿ ಹೆಸರುಗೊಂಡು । ಅಲ್ಲಿ ಚಿತ್ತಾರದರಮನೆ
ನ್ಯಾಯ ಸಭೆಯ ಹಟ್ಟಿಯಲ್ಲಿ । ಮಹಾದೇವನ ಹಟ್ಟಿಯಲ್ಲಿ
ಬಂದು ಬಾಗಿ ನಿಂತರು । ಹಾಲೇರಿ ಒಡೆಯನವಗೆ
ಅಡ್ಡ ಬಿದ್ದು ಎದ್ದರು । ಮುಂದೆ ಈ ಮಾತೆಂದರು
"ಓ! ಎಮ್ಮನಾಳ್ವ ಒಡೆಯನೆ । ಪುಂಡುದನಗಳ್ಚೆಚ್ಚಿರೆ
ವಯಸು ಸಂದ ದನಕೆ ಪೀಡನೆ । (ಹಳೆಯ ದನಕೆ ಬದುಕು ಕಷ್ಟ)
ವೈರಿ ಜನವು ಹೆಚ್ಚುತ್ತಿರೆ । ಆಗದು, ಬದುಕು, ಬಾಳಲಾಗದು"
ಎಂದು ಹೇಳಿ ತಿಳಿಯಲೆಂದು । ಕರ್ಣಂಬಾವು ಕಟ್ಟಿದಂತ
ಕಳ್ಳಪಡೆಯ ಕುರಿತು ನುಡಿದ । ಈರ್ವರವರ ಮಾತು ಕೇಳಿ
ಹಾಲೇರಿ ಒಡೆಯನವನು । ಅರಮನೆಯ ಪಾಲೆಯರ
ಐನೂರು ಪಡೆಯಾಳುಗಳು । ವೀರರವರ ಕರೆಯ ಕಳುಹಿದ
ತಂಡದಾ ತಲೆಯಾಳು ಅವನೆ । ಕುಟ್ಟಪಾಲೆ ಮಾಯಿಲ ಅವಗೆ
ಒಡೆಯ ಮಾತು ನುಡಿದ ಹೀಗೆ : । 'ಕೇಳು ಕೇಳು ಮಾಯಿಲ
ಶೂರ ಪೊನ್ನಪ್ಪನವನ ಕೂಡಿ । ಶತ್ರುವಿನೆದುರು ಕಾಯಲು
ನೀನು ದಂಡು ಕಟ್ಟಿ ಹೋಗ್ವುದು' । ಹೀಗೆ ಒಡೆಯ ಆಜ್ಞೆ ಮಾಡಿದ
ಐನೂರು ವೀರ ಪಾಲೆಯರೆಲ್ಲಕು । ಅಂಬು ಬಿಲ್ಲು ಒಟ್ಟು



ಬೇತುಗ್ರಾಮದ ಕುಟ್ಟಂಜಟ್ಟಿರ ಮನೆಯಲ್ಲಿ ಕಲ್ಯಾಟಜ್ಜಪ್ಪನ ಮಂಚ

ನೀಡಿದ.
ಪೊನ್ನಪ್ಪ ಶೂರನವಗೆ ಎಂದು । ಹೊನ್ನ ಹಿಡಿಯ ವಡಿಯ - ಕತ್ತಿ
ತನ್ನ ಕೋವಿ ತಾನೆ ಇತ್ತು । ಶಸ್ತ್ರ ಅಸ್ತ್ರ ಹೀಗೆ ನೀಡಿದ.
ಇದನೆ ಕಂಡ ಆ ಪೊನ್ನಪ್ಪ । ತೃಪ್ತಿಗೊಂಡು ಖುಷಿಯೊಳೆದ್ದ
ಹಾಲೇರಿ ಒಡೆಯನೆದುರು ಮುಂದೆ । ಅಡ್ಡ ಬಿದ್ದು
ಕದನಕೆಂದು ಅಲ್ಲಿ ನೆಲೆಯ ಬಿಟ್ಟು ಹೊರಟನು.

ಪೊನ್ನಪ್ಪ ಅರಸನೆಡೆಯಿಂದ ಹಿಂದಿರುಗಿ ಬರುವಲ್ಲಿ ಬೇತುಗ್ರಾಮದ ಕುಟ್ಟಂಜೆಟ್ಟಿರ ಮನೆಯಲ್ಲಿ ರಾತ್ರಿ ವಿಶ್ರಮಿಸಲು ಉಳಿದುಕೊಂಡ. ವಿಷಯ ತಿಳಿದ ಕರ್ಣಂಬಾಹು ಸಂಚು ಮಾಡಿದ. ಉಮ್ಮತ್ತರಸ ಮಿಶ್ರಿತ ಸಾರಾಯಿಯನ್ನು ಅವನಿಗೆ ಕುಡಿಸುವ ಸಂಚಾಗಿತ್ತು ಅದು.

ಅದನ್ನು ಕುಡಿದು ಪ್ರಜ್ಞೆ ತಪ್ಪಿ ಬಿದ್ದಿದ್ದ ಪೊನ್ನಪ್ಪ. ಆ ಹೊತ್ತಿಗೆ ಕರ್ಣಂಬಾಹುವಿನ ಕಳ್ಳಪಡೆಯ ಸೈನಿಕರು ಕುಟ್ಟಂಜೆಟ್ಟಿರ ಮನೆಯನ್ನು ಸುತ್ತುವರಿದರು. ಪೊನ್ನಪ್ಪನ ಪಚ್ಚಡಿಕೆ ಹೆಣ್ಣು-ಉಮ್ಮಕ್ಕಳು ಅದನ್ನು ಕಂಡು ಎಬ್ಬಿಸಿದಳು. ಅವನು ವಡಿಕತ್ತಿ ಹಿಡಿದು ಎದುರು ಬಂದವರನ್ನೂ ಕೊಚ್ಚಿಹಾಕಿದ. 'ಪೊಂಬುಡಿರೊಡಿಕತ್ತಿ । ಉಳ್ಳ್ ಕೈಲೆಡ್‌ತಿತ್ । ಬೀಜಿಬೀಜಿ ಕೆತ್ತಿತ್ । ಪೊತ್ತತ್ ಪಡೆಯೊಂದ್'।

ಎಂದೇ ಅವನ ವೀರ ಹೋರಾಟದ ವರ್ಣನೆ ಇದೆ.[೨] ಹೀಗೆ ಹೋರಾಡುವಲ್ಲಿ, ಹಟ್ಟಿಯಿಂದ ಹಾರಿ ಬಂದ. ಆಗ ಬಲುಗಾಲು ನೆರೆಯ ಕಲ್ಲುಪಾತಿಗೆ ತಗುಲಿ ಆಯತಪ್ಪಿ ಬಿದ್ದ. ಕಾಲು ಊನವಾಯಿತು. ಆದರೂ ಹೋರಾಡುತ್ತಲೇ ವೀರಮರಣ ವನ್ನಪ್ಪಿದ. ಅವನ ಪಾರ್ಥಿವ ಶರೀರಕ್ಕೆ ವೀರಸೇಸೆ ಹಾಕಿ ಕುಟ್ಟಂಜೆಟ್ಟಿರ ಮನೆ ಮುಂಭಾಗದಲ್ಲಿ ಓಣಿಯಲ್ಲಿ ಹೂಳಿದರು. ವೀರ ಸಮಾಧಿ ಕೈಮಡ ಕಟ್ಟಿದರು. ಹೀಗೆ ಮನೆತನದವರಲ್ಲಿ ಹಾಗೂ ಕೊಡಗಿನ ೧೨ ನೆಲೆಗಳಲ್ಲಿ ಈ ವೀರನಿಗೆ ನೆಲೆ ಕೊಟ್ಟು, ಬೆಳ್ಳಿ, ಕಂಚಿನ ವಿಗ್ರಹಗಳನ್ನಿಟ್ಟು ಕೈಮಠ/ ಕೈಮಡಗಳಲ್ಲಿ ಆರಾಧಿಸುತ್ತಾರೆ. ಪೊನ್ನಪ್ಪನ ಸಾವು ತಿಳಿದು ಕಾಟಾಳುಬೊಳ್ಳು ಆತ್ಮಬಲಿದಾನವಿತ್ತ. ಹೀಗಾಗಿ ಪೊನ್ನಪ್ಪನ ಜೊತೆಗೆ ಅವನಿಗೂ ನೆಲೆಕೊಡಲಾಯಿತು. ಈ ಕಾಟಾಳುಬೊಳ್ಳುವಿಗೂ ಅವನ ವಂಶಿಕರಾದ ಕಾಪಳರು, ನಾಲ್ನಾಡು ಅರಮನೆ ಬದಿಯಲ್ಲಿ ಆರಾಧಿಸುತ್ತಾರೆ. ತೆರೆಯನ್ನು ಪಾಲೆಯರಿಂದ ಕಟ್ಟಿಸುತ್ತಾರೆ.



ಕುಂಜಿಲ ಗ್ರಾಮದ ಕಲ್ಯಾಟಜ್ಜಪ್ಪನ ಕೈಮಡ ಸನ್ನಿಧಿಯಲ್ಲಿ ಕಲ್ಯಾಟಂಡ ಮನೆತನದ ವಂಶಿಕರು

ಕಲ್ಯಾಟಜ್ಜಪ್ಪನಿಗೆ ಕುಂಜಿಲ ಗ್ರಾಮದಲ್ಲಿ ವಂಶೀಕರು 'ಬೀರಕೋಟ' (ವೀರಸ್ಮಾರಕ ಕೋಣೆ) ಕಟ್ಟಿ, ಅವನು ಮಾಡಿದ ಬೇಟೆಯ ಕುರುಹಾಗಿ ಕಡವೆ, ಸಾರಂಗದ ಶಿರಗಳನ್ನೂ ಕೊಂಬುಗಳನ್ನೂ ಇಟ್ಟಿದ್ದಾರೆ. ಹೋರಾಟದಲ್ಲಿ ಕಾಲು ಕುಂಟಾದ ಸಂಗತಿಯ ನೆನಪಿಗಾಗಿ ಮಂಡಿ ಮಡಿಸಿದ ಬಲ ಗಾಲನ್ನು, ಕುದುರೆಮೇಲಿದ್ದರೂ. ವಿಗ್ರಹದಲ್ಲಿ ತೋರಿಸಿಟ್ಟಿದ್ದಾರೆ.

ಕುಂಜಿಲದ ಈ 'ಬೀರಕೋಟ'ವು ಕಲ್ಯಾಜ್ಜಪ್ಪನ ಸಾಕ್ಷಿ ಕೈಮಡವೆನಿಸಿದ್ದು (ಸಾಂಕೇತಿಕ ಸ್ಮಾರಕನೆಲೆ) ಅಲ್ಲಿಯ ಅವನ ಕಾಳಗದ ವಸ್ತುಗಳಾದ (ಅಂಶಾವತಾರ) ವಡಿಕತ್ತಿ, ಬಿಲ್ಲು, ತೂರಬೆತ್ತ, ತಂಡುದರಿ ಬೆಳ್ಳಿ ವಿಗ್ರಹವಿಟ್ಟು ವಂಶಿಕರು ವಾರ್ಷಿಕ ಆರಾಧನೆ ನಡೆಸುತ್ತಾರೆ. ಕಲ್ಯಾಟಂಡ ಮನೆತನದವರು ಇವನ ಬೀರಕೋಟದ ಬಳಿ ತೆರೆ, ಚಾವುಂಡಿ ಮೇಲೇರಿ (ರಾಶಿ ಅಗ್ನಿಕೊಂಡ) ಕೊಂಡ ಹಾಗೂ ಹಬ್ಬದ ವ್ಯವಸ್ಥೆ ಮಾಡುವರು. ಆಗ ಕಲ್ಯಾಟಜ್ಜಪ್ಪನ ಆವೇಶ ಬರುವವರು ಯಾರೇ ಆದರೂ ಕುಂಟಕಾಲಿನ ಭಂಗಿಯಲ್ಲಿ ನಡೆಯುತ್ತಾರೆ.

ಕೊಡಗಿನಲ್ಲಿ, ಕಲ್ಯಾಟಂಡ ಮನೆತನವಲ್ಲದೆ, ಪರದಂಡ, ಪಾಂಡಿರ ಮನೆತನಗಳವರು, ಅಲ್ಲದೆ ಯುವಕಪಾಡಿ, ನಾಲಡಿ, ನೆಲಜಿ, ನಾಪೋಕ್ಲು, ಕರವಲೆಬಾಡಗ, ಕೋತೂರು ಇತ್ಯಾದಿ ಕಡೆಯ ಜನರು ನೆಲೆಕೊಟ್ಟು ಆರಾಧಿಸುತ್ತಾರೆ. ಹೆಬ್ಬೆಟ್ಟಗೇರಿ ಮಹಿಷ ಮರ್ದಿನಿ ದೇಗುಲದ ಬಳಿ, ಭಗವತಿ ದೇಗುಲದ ಬಳಿ. ಕಲ್ಯಾಟಜ್ಜಪ್ಪನಿಗೆ ಆರಾಧನೆ ಇದೆ. ಕೆಂಬಟ್ಟಿ ದಲಿತ ಜನಾಂಗದವ ರಲ್ಲಿಯೂ ಇವನ ಆರಾಧನೆ ಇದೆ. ಮರಂದೋಡ ಗ್ರಾಮ ಹಾಗು ಚಿಕ್ಕಮಂಡೂರು ಗ್ರಾಮದಲ್ಲಿ ಮಾತ್ರ ಇವನಿಗೆ ಪ್ರವೇಶ ಕಾಣಬರದು. ಬಹುಶಃ ಅಲ್ಲಿಯ ಅವನ ಸಮಕಾಲೀನ ನಾಯಕ ರೊಡನಾದ ಘರ್ಷಣೆ ಕಾರಣವಿರಬಹುದು.

ಹೀಗೆ ಮನೆತನದ ಚರಿತ್ರೆ, ವಾರ್ಷಿಕಾಚರಣೆ, ವಾರ್ಷಿಕಾ ಚರಣೆಗಿರುವ, ಜನಪದ ಕಳಿವೇಷಗಳು, ಹಾಗು ಕಾರೋಣ ಪಾಟ್‌ಗಳಿಂದ ಒಬ್ಬವೀರನ ಚರಿತ್ರೆ ಜನಜೀವನದಲ್ಲಿ ಬೀರಿರುವ ಪ್ರಭಾವ. ಪರಿಣಾಮವನ್ನು ಗಮನಿಸಬಹುದು. ಕೊಡಗಿನ ಒಬ್ಬ ಪ್ರಸಿದ್ಧ ವೀರನಾಯಕನ ಪರಿಚಯವೂ ಅವುಗಳಿಂದಾಗುತ್ತದೆ.

ನಾಪೋಕ್ಲುಬಳಿ ಮಕ್ಕಿಸಾರ್ಥಾವು ದೇವರ ಬಳಿ, ಕಲ್ಯಾಟಜ್ಜಪ್ಪ, ಕಾಟಾಳುಬೊಳ್ಳುವಿಗೆ ನೆಲೆಕೊಟ್ಟಿದೆ. ಅಜ್ಜಪ್ಪನ ಆವೇಶ ಮಾರ ಮೇಲಾದರೂ ಅಲ್ಲಿ ಬಂದರೆ ಮಕ್ಕಿಸಾರ್ಥಾವು, 'ಕುಟ್ಟಪಾಲೆ ಮಾಯಿಲ ಬೊಳ್ತು ' ಎನ್ನುವುದುಂಟು. ನಾಯ ಮ್ಮಾರ್ ಮೂಲದವರೆನ್ನಲಾದ ಕಾಪಳರು, ಹಾಲೇರಿ ಅರಸರಲ್ಲಿ ಸೇವೆಗೆ ನಿಂತವರು ಎಂದಿದೆ. ಆದರೆ ಈ ಉಗ್ಗಡಣೆ, ಉದ್ಘೋಷ ಕೇಳಿದರೆ, ಈ ಕಾಪಳರು ಹಾಲೇರಿ ಅರಸರ ಸೈನ್ಯದ 'ಕುಟ್ಟಪಾಲೆ ಮಾಯಿಲ' ವಂಶಿಕರೆಂದು ಸೂಚನೆ ಒದಗುತ್ತದೆ. ಅವರ ನಾಯಕರಲ್ಲಿ ಕಾಟಾಳುಬೊಳ್ಳುವೊ ಒಬ್ಬನಾಗಿರುವಂತಿದೆ. ಅಂತೇ

ಹಾಲೇರಿ ಅರಸ, ಹಾಗು ಪೊನ್ನಪ್ಪನ ಸ್ನೇಹ ಬೆಳೆಸಲು ಕಾಟಾಳು ಬೊಳ್ತು ಕಾರಣನಾಗಿರಬೇಕು.

A.A.D. LUIZ[೪] ನ ರೀತ್ಯಾ ವೈನಾಡಿನ ಆಗ್ನೇಯದ ಕಾಪ್ಪಾಳ ಗ್ರಾಮದಿಂದ (ಚೇರಂಗಾಡು - ಬಹುಶಃ ಬೇಡುಮಲೆ ಬಳಿಯಗ್ರಾಮ) ಸಿರಿಬಾಯಿ ದೊಡ್ಡ ವೀರಪ್ಪನ ಕಾಲದಲ್ಲಿ ನಾಲ್ವಾಡು ಅರಮನೆ ಕಾವಲಿಗೆ ೧೭ನೇ ಶತಮಾನಾಂತ್ಯದಲ್ಲಿ ಕಾಪಳರನ್ನು ಕರೆದು ತರಲಾಯಿತು ಎನ್ನಲಾಗಿದೆ.

ಆದರೆ ನಾಲ್ನಾಡು ಅರಮನೆಯನ್ನು ನಿರ್ಮಿಸಿದವನು ದೊಡ್ಡ ವೀರರಾಜೇಂದ್ರ ಒಡೆಯನಾಗಿದ್ದಾನೆ. ಅಂತಾಗಿ ಕಾಪಳರು ಕೊಡಗಿಗೆ ೧೭ನೆ ಶತಮಾನಾಂತ್ಯದಲ್ಲಿ ಕರೆತರಲ್ಪಟ್ಟಿದು,. ಮುಂದೆ ದೊಡ್ಡವೀರರಾಜೇಂದ್ರ ಒಡೆಯನ ಕಾಲದಲ್ಲಿ ಕಾವಲಿಗೆ ನಿಂತಿರಬೇಕು. ನಾಯಮ್ಮಾರ್ ಮೂಲದವರೆಂದುಕೊಳ್ಳುವ ಕಾಪಳರು, ಹಾಲೇರಿ ಮೊದಲರಸನ ಕಾಲದ ಕುಟ್ಟಪಾಲೆ ಮಾಯಿಲಬೊಳ್ತು (ಕೂಟಾಳು ಬೊಳ್ತು- ಕಾಟಾಳು ಬೊಳ್ತು) ವಿನ ಕೈಮಡ (ಸ್ಮಾರಕಕಟ್ಟಡ)ದಲ್ಲಿ ಅವನನ್ನು ಹಿರಿಯನೆಂದು, ಪೂರ್ವಜನೆಂದು ಪೂಜಿಸುತ್ತಾರೆ. ಅಂತೇ ಆ ಬೊಳ್ತುವಿನ ವಂಶಿಕರು, ಕಾಪಳರು ಎನ್ನಬೇಕಾಗುತ್ತದೆ. ಕೊಡಗಿನ ಕೈಮಡಗಳ ಪರಂಪರೆಯ ದೃಷ್ಟಿಯಿಂದ ಇದು ಮಹತ್ವದ್ದಾಗಿದೆ. ಕಾರಣ ಕಾಪಳರು ತಾವು ಕಾಟಾಳು ಬೊಳ್ತುವಿನ ವಂಶಿಕರೆಂದು ಹೇಳಿಕೊಳ್ಳುತ್ತಾರೆ. ಹಾಲೇರಿ ಅರಸರ ಕಾಲದಲ್ಲಿ ಕೇರಳದಿಂದ ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ಅರಸರಲ್ಲಿ ಸೇವೆಗೆ ನಿಂತರವರೆನ್ನುತ್ತಾರೆ. ಬೊಳ್ತಜ್ಜಪ್ಪನ ಕೈಮಡವನ್ನೂ ಕಟ್ಟಿಕೊಂಡು 'ಬೊಳ್ತ'ಜ್ಜಪ್ಪನ 'ದೇವಾಲಯ' ಎಂದು ಅವನ ನೀಳವಿಗ್ರಹವಿಟ್ಟು ಪೂಜಿಸುತ್ತಾರೆ. ಜೊತೆಗೆ ತೂರಬೆತ್ತ, ಕತ್ತಿ, ಬಿಲ್ಲು ಇಟ್ಟು ಅವನ ಹೆಸರಿನಲ್ಲಿ ವಾರ್ಷಿಕ ಆಚಾರಗಳಿವೆ. 'ತೆರೆ'ಯನ್ನು ಪಾಲೆಯರಿಂದ ಕಟ್ಟಿಸುತ್ತಾರೆ. ಈ ಕೈಮಡದ ಮುಂದೆ ಕಲ್ಯಾಟಜ್ಜಪ್ಪನ ಸಾಂಕೇತಿಕ ನೆಲೆಯನ್ನು ಚೌಕಟ್ಟು ಹಾಕಿ ಗುರುತಿಸಿಟ್ಟಿದ್ದಾರೆ. ವೈನಾಡು ಒಂದು ಕಾಲಕ್ಕೆ ಕೊಡಗಿನ ಭಾಗವೇ ಆಗಿತ್ತು. ಈ ಕಾಪಳರು ಅಲ್ಲಿನವರು, ಹಾಲೇರಿ ವಂಶದ ಮೊದಲರಸ ವೀರರಾಜೇಂದ್ರ ಒಡೆಯನು ಹಾಲೇರಿ ವಂಶ ಸ್ಥಾಪಿಸಿದಾಗ ಕುಟ್ಟಪಾಲೆ ಮಾಯಿಲನಲ್ಲಿ, ಬಂದು ಹಾಲೇರಿ ಅರಸರ ಪಡೆಯಾಳುಗಳಾಗಿ ಸೇರಿರಬೇಕು. ಕಾಲಾನಂತರ ನಾಲ್ನಾಡು ಅರಮನೆ ಪ್ರದೇಶ (ತಡಿಯಂಡಮೋಳು ಬೆಟ್ಟದ ಬುಡದ ಅರಣ್ಯದಲ್ಲಿ) ವಾಸ್ತವ್ಯ ನಿಂತಿರುವಂತಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಂ. ಜಿ. ನಾಗರಾಜ್., 'ಕೊಡಗಿನ ಕೊಲೆಕಲ್ಲುಗಳು,' **ಹರತಿಸಿರಿ**, ೧೯೮೭, (ಸಂ) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ, ಪು. ೭೫೧

೨. **ಪಟ್ಟೋಲೆ ಪಳಮೆ**., 'ಕಲಿಯಾಟಂಡ ಪೊನ್ನಪ್ಪ ಪಾಟ್', ೧೯೭೫, (ಸಂ) ನಡಿಕೇರಿಯಂಡ ಚಿಣ್ಣಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮೈ. ವಿ. ವಿ.

೩. ಅದೇ., ಪು. ೪೨೪

೪. A.A.D. LUIZ., 1963, *Tribes of Mysore*, Bangalore, PP. 96-97

ಕಲ್ಲನಗೌಡ ತಿ. ಪಾಟೀಲ್*

ಸೊರಟೂರ ದೇಸಾಯರು

ಸೊರಟೂರು ಇದು ಗದಗ ಜಿಲ್ಲೆಯ ದೊಡ್ಡದಾದ ಗ್ರಾಮ. ಗದಗದಿಂದ ದಕ್ಷಿಣಕ್ಕೆ ೨೨ ಕಿಲೋ ಮಿಟರ್ ದೂರದಲ್ಲಿ ಇದೆ. ಹಿಂದೆ ಅರಸರು ಹಾಗೂ ದಣಿ ಧೇಸಾಯರು ಆಳ್ವಿಕೆಗೆ ಈ ಸೊರಟೂರು ಒಳಗಾಗಿತ್ತು. ಇಲ್ಲಿ ೧೭ನೇ ಶತಮಾನದಲ್ಲಿ ದೇಶಗತಿ ಮನೆತನವೆಂದು ಹೆಸರುವಾಸಿಯಾದ ಶ್ರೀದಾನ ವೀರ ವೆಂಕಟಾದ್ರಿ ಶ್ರೀನಿವಾಸ ಬಹುದ್ದೂರ ದೇಸಾಯಿ ಸೊರಟೂರ ಹಾಗೂ ಡಂಬಳವನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರು. (ಇವರ ಮಕ್ಕಳಾದ ರಮೇಶಪ್ಪಯ್ಯ ದೇಸಾಯಿ, ನಾಗಪ್ಪಯ್ಯ ದೇಸಾಯಿ ಬೆಂಗಳೂರಲ್ಲಿ ಇದ್ದಾರೆ) ಈ ಎರಡು ಗ್ರಾಮಗಳ ಆಡಳಿತವನ್ನು ದೇಸಾಯರು ಮಾಡಿಕೊಂಡು ಹೋಗುತ್ತಿರಲಾಗಿ ಅಂದರೆ ೧೭ನೇ ಶತಮಾನದಲ್ಲಿ ಸೊರಟೂರ ಹತ್ತಿರ ೨ ಕಿಲೋ ಮಿಟರ್‌ದ ತಮ್ಮ ಜಮೀನಿನಲ್ಲಿ



ಉಳುವಲ್ಲಿ ಕಂಡ ತಮ್ಮ ಕುಲದೇವರಾದ ಲಕ್ಷ್ಮಿವೆಂಕಟೇಶ ಮೂರ್ತಿಗಳನ್ನು ಉದ್ಭವಮೂರ್ತಿಗಳೆನ್ನುತ್ತಿದ್ದರು. ಅದೇ ಜಾಗದಲ್ಲಿ ವೆಂಕಟಾಪುರ ದೇವಸ್ಥಾನ ಎಂಬ ಹೆಸರಿನ ಗುಡಿಯನ್ನು ಕಟ್ಟಿಸಿದರು. ದೇವರ ಸೇವೆಗೆಂದು ೪೦ ಕೂರಿಗೆ ಭೂಮಿಯನ್ನು ಬಿಟ್ಟು ಉಳಿದ ಭೂಮಿಯನ್ನು ತಮ್ಮ ರಾಜಕಾರ್ಯಬಾರಕ್ಕೆ ಎಂದು ಸೊರಟೂರದಲ್ಲಿ ಒಂದು ವಾಡೆಯನ್ನು, ಡಂಬಳದಲ್ಲಿ ಒಂದು ವಾಡೆಯನ್ನು ಕಟ್ಟಿಸಿ ಎರಡು ಕಡೆ ತಾವೇ ನೋಡಿಕೊಂಡು ಹೋಗುತ್ತಿದ್ದರು. ಊರಲ್ಲಿ ಸೇವಕರು ವಾಲಿಕಾರ ಗೌಡರನ್ನು ನೇಮಿಸಿ ಊರ ರೈತರಿಂದ ಕಂದಾಯ ವಸೂಲಿ ಮಾಡಿಸಿ ತಮ್ಮ ರಾಜಕಾರ್ಯಭಾರ ನಡೆಸುತ್ತಿದ್ದರು. ವೆಂಕಾಟಾಪುರ ದೇವಸ್ತಾನಕ್ಕೆಂದು ಭೂಮಿಯನ್ನು ಕೊಟ್ಟು ಅದರ ವ್ಯವಸಾಯಕ್ಕೆ ರೈತರನ್ನು ಗುಡಿಯ ಸೇವೆಗೆಂದು ಸೇವಕರನ್ನು ದೇವರ ಪೂಜೆಗೆ ಅರ್ಚಕರನ್ನು ಹಾಗು ಪೂಜೆ ವೇಲೆ ಬಾಜಂತ್ರಿ ಮೇಳದವರನ್ನು ನೇಮಿಸಿದರು. ಇಂದಿಗೂ ಒಳ್ಳೆಯ ಕ್ಷೇತ್ರವಾಗಿ ವೆಂಕಟೇಶನ ದೇವಸ್ಥಾನ ಪ್ರಖ್ಯಾತಿ ಪಡೆದಿದೆ.

ಹಿಂದೆ ಅಂದರೆ ಕ್ರಿಶಕ ೧೧೬೯ರಲ್ಲಿ ಹೊಯ್ಸಳ ಬಿಲ್ಲಮರಿಗೂ ಯಾದವರಿಗೂ ಇಲ್ಲಿ ದೊಡ್ಡ ಕಾಳಗವಾಯಿತು. ಅಂತೆಯೇ ಕಾಳಗವಾದ ಜಾಗವನ್ನು ಇಂದಿಗೂ 'ರಕ್ತಮಾಣೆವು' ಎಂದು ಕರೆಯುವುದುಂಟು. ಇಂಥ ಹೊಯ್ಸಳ ರಾಜರ ಸ್ಥಾನವಾಗಿದ್ದು, ಇಂದು ಬಿದ್ದುಹೋದ ಎರಡು ಸುತ್ತಿನಕೋಟೆಯ ಅವಶೇಷ ಮಾತ್ರ ಕಾಣಬಹುದು. ಆದರೆ ೧೭ನೆಯ ಶತಮಾನದ ದೇಶಾಯರ ಅರಮನೆ ಮಾತ್ರ ಇಂದಿಗೂ ಉಳಿದಿದೆ. ಅದು ಈಗ ಗ್ರಾಮ ಪಂಚಾಯಿತಿ ಆಫೀಸ್ ಮಾಡಿದ್ದಾರೆ. ಊರಲ್ಲಿ ಇನ್ನೂ ಅನೇಕ ರಾಜರು ಮಾಡಿಸಿದ ಕಲ್ಲು ಕೆತ್ತನೆ ಕೆಲಸವನ್ನು ಕಾಣಬಹುದು. ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ಶಿಲಾಶಾಸನಗಳು, ಕಲ್ಲುಮಂಟಪಗಳು, ಚಿತ್ರವಿಚಿತ್ರವಾದ ಶಿಲ್ಪಗಳು, ಕೊತ್ಲಮ್ಮ, ಭೈರೇಶ್ವರ ಸೂರ್ಯನಾರಾಯಣ ವೀರ ಭದ್ರೇಶ್ವರ, ಕಲ್ಮೇಶ್ವರ ದೇವಾಲಯಗಳು, ಇನ್ನು ಅನೇಕ ದೇವಾಲಯಗಳು, ಜೈನ ಬಸ್ತಿಗಳು ಇವೆ.



* ಸಾ॥ ಬೆಳಧಡಿ, ಗದಗ ಜಿಲ್ಲಾ



ಊರ ಸುತ್ತ ಬುರುಜಗಳನ್ನು ಕಾಣಬಹುದು. ಊರಲ್ಲಿ ಅಲ್ಲಲ್ಲಿ ಬಾವಿಯನ್ನು ಕರೆಬಣ್ಣಕಲ್ಲುಗಳಲ್ಲಿ ಶಿಲ್ಪ ಶಾಸನಗಳನ್ನು ಕೆತ್ತಿ ಬಾವಿಯನ್ನು ಕಟ್ಟಿದ್ದಾರೆ. ಸೊರಟೂರ ಉತ್ತರ ಭಾಗಕ್ಕೆ ವೆಂಕಟಪುರ ಕ್ಷೇತ್ರವಿದ್ದು, ಇಲ್ಲಿ ಕೂಡಾ ಶಿಲಾಶಾಸನಗಳು ಹಿಂದಿನ ಹೊಯ್ಸಳ ಲಾಂಛವನ್ನು ತೋರಿಸಬಲಂಥವು ಇರುತ್ತವೆ. ಇಲ್ಲಿ ಒಡೆದು ಹಾಕಿದ ಅವಶೇಷವಾಗಿ ಶಿಲ್ಪಗಳು ಇವೆ. ಈಗಿರುವ ಲಕ್ಷ್ಮಿವೆಂಕಟೇಶ್ವರ, ಗೋವಿಂದರಾಜ, ಮಾರುತಿ ದೇವಾಲಯ ಗಳಲ್ಲಿ ಪೂಜಾದಿಗಳು ನಡೆಯುತ್ತಿವೆ. ಡಂಬಳ ಹಾಗೂ ಸೊರಟೂರ ದೇಶಾಯರ ಆಡಳಿತದಲ್ಲಿ ದೇವಾಲಯ ಜೀರ್ಣೋದ್ಧಾರವಾಯಿತು ಎನ್ನಬಹುದು. ಇದೇ ಸೊರಟೂರ ದೇಶಾಯರ ಡಂಬಳ ಸಂಸ್ಥಾನವು ಕೂಡಾ ಈಗ ಬಿದ್ದು, ಕೋಟೆ ಅರಮನೆ ಹಾಳಾದ ಊರಿನ ಆಕಾರವಾಗಿ ಕಾಣಿಸುತ್ತವೆ. ಡಂಬಳ ಕೂಡ ಜೈನ ಸಂಪ್ರದಾಯದ ಊರಾಗಿದ್ದು, ಧರ್ಮಪುರವೆಂದು ಹೆಸರು ಪಡೆದಿತ್ತು ಎಂಬುದು ಇತಿಹಾಸ ವಿದ್ವಾಂಸರಿಂದ ತಿಳಿದು ಬಂದಿದೆ. ಇಲ್ಲಿ ಬಸವಣ್ಣನ ಗುಡಿ ಬಲು ಎತ್ತರದ ಗೋಪುರಗಳಿಂದ ಕಟ್ಟಲ್ಪಟ್ಟಿದೆ. ಇಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಗುಡಿಗಳು ಹಾಗೂ ಶಾಸನಗಳನ್ನು ಕಾಣ ಬಹುದು. ಇಂಥ ಕಡೆ ನಮ್ಮ ಇತಿಹಾಸ ತಜ್ಞರು ಸಾಗಿ ಶೋಧನೆ ನಡೆಸಬೇಕಾಗಿದೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕರ್ನಾಟಕ ಇತಿಹಾಸ ಪರಿಚಯ.,** ಪುಟ ೧೧೨ರಲ್ಲಿ ನೋಡಿ

೨. **ವೆಂಕಟಪುರ ಕ್ಷೇತ್ರ..** ಪುಟ ೧೫ರಲ್ಲಿ ನೋಡಿರಿ. ಎಮ್.ಎಮ್. ಕಲಬುರ್ಗಿ, ಅವರ ಧಾರವಾಡ ಜಿಲ್ಲೆಯ ಶಾಸನ ಸೂಚಿ.

ಡಾ. ಎಸ್. ಮಾಲತಿ*

ಮೈಸೂರು ಸಂಸ್ಥಾನದ (೧೮೮೧-೧೯೪೭) ಮಹಿಳೆಯರು ಶಕ್ತಿಪರರಾಗುವುದರಲ್ಲಿ ಶಿಕ್ಷಣದ ಪಾತ್ರ

ಹತ್ತೊಂಭತ್ತನೆಯ ಶತಮಾನದ ಮೈಸೂರು ಸಂಸ್ಥಾನದಲ್ಲಿ ದೇಶದ ಅನ್ಯಭಾಗಗಳಂತೆಯೇ, 'ಮಹಿಳೆಯರಸಮಸ್ಯೆ' ಪ್ರಮುಖ ಚರ್ಚಾ ವಿಷಯವಾಗಿತ್ತು. ಏಕೆಂದರೆ 'ಮಹಿಳೆಯರ ನೆಲೆ' ದೇಶದ ನಾಗರೀಕತೆಯ ಮಟ್ಟದ ಸಂಕೇತ ಹಾಗೂ ಹಿಂದೂ ದೇಶದ ಆಚಾರಗಳು ಮಹಿಳೆಯರ ನೆಲೆಯನ್ನು ಕೆಳದರ್ಜೆಗೆ ಇಳಿಸಿದೆ ಎಂಬುದು ಆ ಶತಮಾನದ ವಿದೇಶೀಯರ ಒಮ್ಮತ ಅಭಿಪ್ರಾಯವಾಗಿತ್ತು. ವಾಸ್ತವವೂ ಆಗಿತ್ತು. ಇದರಿಂದ ಅರಿವು ಮೂಡಿದ ಕೆಲವು ದೇಶೀಯರಿಗೆ, ಸಮಾಜ ಸುಧಾರಣೆ, ಅದರಲ್ಲೂ ಮಹಿಳೆಯರ ಶಿಕ್ಷಣ ಮೊಟ್ಟಮೊದಲ ಅಗತ್ಯವೆನಿಸಿತು. ಕೆಲವು ಕ್ರೈಸ್ತಧರ್ಮಬೋಧಕರು, ಮಾನವಕುಲಹಿತಕಾರಿಗಳು ಹಾಗೂ ಮೈಸೂರು ಸರ್ಕಾರವು ಈ ದಿಕ್ಕಿನಲ್ಲಿ ಆಸಕ್ತಿ ವಹಿಸಿದರು. ಹೀಗೆ ಮಹಿಳೆಯರ ಶಿಕ್ಷಣದ ನಿವೇದನೆ ಆರಂಭವಾಯಿತು.

ಸ್ತ್ರೀ ಶಿಕ್ಷಣವು ಅಜ್ಞಾನವನ್ನು ದೂರ ಮಾಡಿ ಕಾಲ ಕ್ರಮೇಣ ಅವರಿಗೆ ವಿವೇಚನಾ ಸಮ್ಮತವಾದ ಆಲೋಚನಾ ಶಕ್ತಿ ನೀಡಿತು. ಅವರು ಶಕ್ತಿಪರರಾಗುವ ಸಂಘಟನೆಯಲ್ಲಿ ವಿದ್ಯೆಯೇ ಮೊಟ್ಟ ಮೊದಲ ಉಪಕರಣವಾಯಿತು. ೧೮೮೧-೧೯೪೭ರ ಅವಧಿಯಲ್ಲಿ ಲಭಿಸಿದ ಜ್ಞಾನಾರ್ಜನೆ ಅವರಿಗೆ ಧೈರ್ಯ, ಮನೋಸ್ಥೈರ್ಯ ನೀಡಿ ತಮ್ಮ ಸ್ಥಾನಮಾನದ ಅರಿವು ಮೂಡಿಸುವುದರಲ್ಲಿ ಸಹಾಯಕವಾಯಿತು. ಹೀಗಾಗಿ ಮಹಿಳೆಯರು ಬರಹಗಾರ್ತಿಯರಾಗಿ, ರಾಜಕಾರಣಿಯರಾಗಿ, ಬೋಧಕಿಯರಾಗಿ, ವಿದ್ಯಾ ಸಂಸ್ಥೆಗಳ ಮುಖ್ಯಸ್ಥೆಯರಾಗಿ, ಆಡಳಿತ ನಡೆಸುವ ಸೂತ್ರಧಾರಿಣಿಯರಾಗಿ, ವೈದ್ಯೆಯರಾಗಿ, ದಾದಿಯರಾಗಿ, ಸೂಲಗಿತ್ತಿಯರಾಗಿ, ಹೀಗೆ ವಿವಿಧ ವೃತ್ತಿ ನೈಪುಣ್ಯತೆಯಿಂದ ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ಗಮನಾರ್ಹ ಕೊಡುಗೆಯನ್ನು ನೀಡಿದರು.

ಉತ್ತಮ ಸ್ಥಾನಮಾನವಿದ್ದ ಹಲವಾರು ಕ್ರಿಯಾತ್ಮಕ ಮಹಿಳೆಯರು ಮೈಸೂರು ಸಂಸ್ಥಾನದಲ್ಲಿ ಸ್ತ್ರೀಶಕ್ತಿ ಪರತೆಗೆ ಆಸಕ್ತಿವಹಿಸಿ ಅನೇಕ ಮಹಿಳಾ ಸಂಘಗಳನ್ನು ಸ್ಥಾಪಿಸಿದರು. ಅವುಗಳಲ್ಲಿ 'ಮಹಿಳಾ ಸೇವಾ ಸಮಾಜ' ಪ್ರಾಚೀನ ಮತ್ತು ಮುಖ್ಯವಾದ ಸಂಘ. ಇದು ಹುಡುಗಿಯರಿಗಾಗಿ ಶಾಲೆ, ವಾಚನಾಲಯ, ಗ್ರಂಥಾಲಯ ಹಾಗೂ ಪ್ರಪಂಚದಲ್ಲಿ ಪ್ರಚಲಿತವಿರುವ ಮುಖ್ಯ ಘಟನೆಗಳನ್ನು ಕುರಿತು ಸಾರಾಂಶ ಹೇಳುವ ವಾರದ ತರಗತಿಗಳನ್ನು ಏರ್ಪಡಿಸಿತ್ತು.[೧] ವೃತ್ತಿಪರ ಶಿಕ್ಷಣಕ್ಕೆ 'ಹಿರಿಯ ಪ್ರಾಥಮಿಕ ಶಿಕ್ಷಣ' ಕನಿಷ್ಠ ವಿದ್ಯಾರ್ಹತೆಯಾದ್ದರಿಂದ, ದಿಕ್ಕಿಲ್ಲದ ಮಹಿಳೆಯರಿಗೆ ಈ ಪರೀಕ್ಷೆಗಾಗಿ ತರಬೇತಿ ನೀಡುತ್ತಿದ್ದುದು ಈ ಸಮಾಜದ ಇನ್ನೊಂದು ವೈಶಿಷ್ಟ್ಯ. ಅಲ್ಲದೆ ತೇರ್ಗಡೆ ಹೊಂದಿದ ಮಹಿಳೆಯರಿಗೆ ಉಪಾಧ್ಯಾಯಿನಿ, ಸೂಲಗಿತ್ತಿ, ದಾದಿ ಹಾಗೂ ಅನೇಕ ವೃತ್ತಿಪರ ತರಬೇತಿಯನ್ನು ಕೊಡಲಾಗುತ್ತಿತ್ತು. ಸಮಾಜದ ಅಧ್ಯಕ್ಷಿಣಿ ಶ್ರೀಮತಿ ಪಾರ್ವತಮ್ಮನವರು, ಗೌರವ ಕಾರ್ಯದರ್ಶಿನಿ ಶ್ರೀಮತಿ ಕಮಲಮ್ಮ ದಾಸಪ್ಪನವರು ಮತ್ತು ಇತರ ಸದಸ್ಯರು, ಹತ್ತಿರದ ಶಂಕರಪುರ, ಚಾಮರಾಜಪೇಟೆ, ಬಸವನಗುಡಿ ಮತ್ತು ವಿಶ್ವೇಶ್ವರಪುರಗಳಲ್ಲಿಯ ಸಂಸಾರದ ಹಿರಿಯ ವ್ಯಕ್ತಿಗಳನ್ನು ಭೇಟಿ ಮಾಡಿ ಕಿರಿಯ ಬಾಲಕಿಯರನ್ನು ಶಾಲೆಗೆ ಕಳುಹಿಸಲು ಪ್ರೇರೇಪಿಸುತ್ತಿದ್ದರು.[೨] "ದಿ ಮೈಸೂರು ಸ್ಟೇಟ್ ವಿಮೆನ್ಸ್ ಕಾನ್ಫರೆನ್ಸ್" ಮತ್ತೊಂದು ಮುಖ್ಯವಾದ ಮಹಿಳಾ ಸಂಘವಾಗಿತ್ತು. ಈ ಸಂಘದ ಗಮನಾರ್ಹ ಕೊಡುಗೆ 'ವಯಸ್ಕರ ಶಾಲೆ'[೩] ಹಾಗೂ ಬೆಂಗಳೂರು ನಗರದ ಬೆಳ್ಳಿಮಠ ರಸ್ತೆಯಲ್ಲಿ ಸ್ಥಾಪಿಸಿದ 'ಬಾಲರ ಪಾಲನಾಲಯ'. ಇದರಲ್ಲಿ ೧೯೩೩ರಲ್ಲಿ ೧೯೬ ಶಿಶುಗಳ ಪಾಲನೆ ಸೂಕ್ತ ಕ್ರಮದಲ್ಲಿ ನಡೆದಿತ್ತು.[೪]

ನಂಜನಗೂಡಿನ ತಿರಮಲಾಂಬಾ, ಮೈಸೂರು ಸಂಸ್ಥಾನದ ಮಹಿಳೆಯರಲ್ಲಿ ಮೊಟ್ಟಮೊದಲ ಪತ್ರಿಕೋದ್ಯಮಿ, ಸಂಪಾದಕಿ ಹಾಗೂ ಬರಹಗಾರ್ತಿ. ಸಂಪ್ರದಾಯಸ್ಥ ಬ್ರಾಹ್ಮಣಕುಟುಂಬದ ಬಾಲವಿಧವೆಯಾಗಿದ್ದ ಇವರಿಗೆ ಮನೆಯಲ್ಲೆ ಅಧ್ಯಯನಕ್ಕೆ ಇವರ ತಂದೆ ವ್ಯವಸ್ಥೆ ಮಾಡಿದ್ದರು. ಇವರು ಸಂಪಾದಕಿಯಾದ ಉದ್ದೇಶ ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ಸಮಾಜದ ಗಮನಕ್ಕೆ ತರುವುದು. ಹಿಂದೂ ಆಚಾರಗಳನ್ನು ಮತ್ತು ವಿದೇಶೀ ನಾಗರೀಕತೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದಿದ್ದ ಅವರು, ಹಿಂದೂ ಆಚಾರಗಳ ಸಮರ್ಪಕ ಸುಧಾರಣೆಗಳನ್ನು[೫] ಬಯಸಿದ್ದರು. ಮೈಸೂರು ಸಂಸ್ಥಾನವು ಇವರ ಅನೇಕ ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನಾಗಿ ಮಾಡಿತು.[೬] ಕೆಲವು ಪುಸ್ತಕಗಳು ಮದರಾಸು ವಿಶ್ವವಿದ್ಯಾಲಯದಲ್ಲೂ ಪಠ್ಯಪುಸ್ತಕವಾಗಿತ್ತು ಎಂಬುದು ಸುದ್ದಿ.[೭]

ಕಲ್ಯಾಣಮ್ಮನವರು ಮಹಿಳೆಯರಲ್ಲಿ ಎರಡನೆ ಪತ್ರಿಕೋದ್ಯಮಿ ಸಂಪಾದಕಿ, ಗ್ರಂಥಪ್ರಕಾಶಕಿ ಹಾಗೂ ಬರಹಗಾರ್ತಿ.[೮]

* ಉಪಪ್ರಾಂಶುಪಾಲರು, ಆರ್.ಬಿ.ಎ.ಎನ್.ಎಂ. ಪ್ರಥಮದರ್ಜೆ ಕಾಲೇಜು, ಬೆಂಗಳೂರು-೫೬೦ ೦೪೨

ಇವರೂ ಬಾಲವಿಧವೆ. ಶಿಕ್ಷಣ ಇವರಲ್ಲಿದ್ದ ಸಾಮರ್ಥ್ಯವನ್ನು ಬೆಳಕಿಗೆ ತಂದಿತು. ಕ್ರಾಂತಿಕಾರಕವಾಗಿ ಅಲ್ಲದಿದ್ದರೂ[೧೦] ಇವರ ಅನೇಕ ಕೃತಿಗಳು ಮಹಿಳೆಯರ ಅಗತ್ಯವನ್ನು ಎತ್ತಿಹಿಡಿದು, ಸಮಾಜದ ಅನೇಕ ರೀತಿನೀತಿಗಳನ್ನು ಸ್ಪಷ್ಟವಾಗಿ ಆಕ್ಷೇಪಿಸಿತ್ತು. ವೈಧವ್ಯದ ಅಪಮಾನ, ಕಷ್ಟಗಳ ಬಿಗಿಹಿಡಿತದಿಂದ ತಪ್ಪಿಸಿಕೊಂಡದ್ದಲ್ಲದೆ ಅನೇಕ ವಿಧವೆಯರು ಶಕ್ತಿಪರರಾಗಲು ಇವರು ಸಹಾಯ ಮಾಡಿದರು. ೧೯೧೯ ರಲ್ಲಿ 'ಬಂಗಾಳ ಆರ್ಯ ಸಾಹಿತ್ಯ ಪರಿಷತ್' ಇವರಿಗೆ "ವಿದ್ಯಾವಿನೋದಿನಿ" ಎಂಬ ಬಿರುದು ನೀಡಿತು.[೧೧] ೧೯೩೨ರಲ್ಲಿ ಮೈಸೂರು ಸರಕಾರವು ಇವರನ್ನು ಪಠ್ಯಪುಸ್ತಕದ ಸದಸ್ಯೆಯನ್ನಾಗಿ ನೇಮಿಸಿತು.[೧೨] ೧೯೩೩ ರಿಂದ ಇವರು ಮೈಸೂರು ಬೆಂಚ್ ಮ್ಯಾಜಿಸ್ಟ್ರೇಟ್ ಆಗಿ ಹದಿನೈದು ವರ್ಷ ಸಮರ್ಥವಾಗಿ ಸೇವೆ ಸಲ್ಲಿಸಿದರು.[೧೩] ೧೯೨೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಮಿತಿಯ ಸದಸ್ಯೆಯಾಗಿ ಆಯ್ಕೆಯಾದರು.[೧೪] ಇವರ ಸಮಾಜಸೇವೆಯನ್ನು ಗುರುತಿಸಿ ಸರ್ಕಾರವು ಪ್ರಜಾಪ್ರತಿನಿಧಿ ಸಭೆಯ ಸದಸ್ಯೆಯನ್ನಾಗಿ ನೇಮಿಸಿತು.[೧೫] ೧೯೩೮ರಲ್ಲಿ ಬೆಂಗಳೂರು ಪುರಸಭಾ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು.[೧೬] ಮುಂದೆ ಮೈಸೂರು ರಾಜ್ಯದ ಜೀವ ವಿಮಾ ಸಂಸ್ಥೆಯ ನಿರ್ದೇಶಕಿಯಾಗಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯೆಯಾಗಿ, ಹೀಗೆ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಕ್ರಿಯಾತ್ಮಕ ಸೇವೆ ಸಲ್ಲಿಸಿದರು.[೧೭] ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಮರ್ಪಕವಾಗಿ ಕೆಲಸ ಮಾಡಬಲ್ಲರು ಎಂದು ಸಮಾಜಕ್ಕೆ ತೋರಿಸುವುದು ಮತ್ತು ಇತರ ಮಹಿಳೆಯರಿಗೆ ಧೈರ್ಯ, ಪ್ರೋತ್ಸಾಹವನ್ನು ನೀಡುವುದು ಇವರ ಅಭಿಲಾಷೆಯಾಗಿತ್ತು.[೧೮] ಶಿಕ್ಷಣ ಪಡೆದುಕೊಂಡದ್ದೇ ಇವರ ಸಾಧನೆಯ ಬಲವಾಗಿತ್ತು.

ಇಪ್ಪತ್ತನೇ ಶತಮಾನದ ಆರಂಭದಲ್ಲೂ ಮೈಸೂರಿನಲ್ಲಿ ಸ್ತ್ರೀಯರಿಗೆ ರಾಜಕೀಯದಲ್ಲಿ ಯಾವುದೇ ಪಾತ್ರವಿರಲಿಲ್ಲ. ಸುಸಂಸ್ಕೃತ, ಹಣವಂತ ಹಾಗೂ ಸ್ಥಾನಮಾನಗಳನ್ನುಳ್ಳ ಮಹಿಳೆಯರು ಸಮಾಜಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ತಮ್ಮದೇ ಆದ ಸಂಘಗಳನ್ನು ಸ್ಥಾಪಿಸಿದರು. ಇವರಲ್ಲಿ ಇದು ಕಾಲಕ್ರಮೇಣ ರಾಜಕೀಯ ಅರಿವನ್ನು ಮೂಡಿಸಿತು. ಶಿಕ್ಷಣ ಹೆಚ್ಚಿದಂತೆ ಸ್ತ್ರೀಯರಲ್ಲಿ ರಾಜಕೀಯ ಪ್ರಜ್ಞೆಯೂ ಹೆಚ್ಚಿತು.

ಮಹಾತ್ಮಗಾಂಧಿಯವರು ನಡೆಸಿದ ಸ್ವಾತಂತ್ರ್ಯ ಚಳುವಳಿಯಲ್ಲಿ ಮೈಸೂರು ಸಂಸ್ಥಾನದ ವಿದ್ಯಾವಂತ ಹಾಗೂ ಸಾಮಾನ್ಯ ಮಹಿಳೆಯರು ಪಾಲ್ಗೊಂಡಿದ್ದರು. ಅವರ ನಾಯಕಿಯರು ವಿದ್ಯಾವಂತ ಮಹಿಳೆಯರಾಗಿದ್ದರು. ಶಿಕ್ಷಣವು ಈ ನಾಯಕಿಯರಿಗೆ ಧೈರ್ಯ, ಮನೋಸ್ಥೈರ್ಯ, ದೃಢಮನಸ್ಸು ಹಾಗೂ ದೊಡ್ಡ ಸಭೆಗಳನ್ನುದ್ದೇಶಿಸಿ ಮಾತನಾಡುವ ಶಕ್ತಿ ನೀಡಿತು. ಕಮಲಾದೇವಿ ಚಟ್ಟೋಪಾಧ್ಯಾಯ ಹಾಗೂ ಉಮಾದೇವಿ ಕುಂದಾಪುರವರು ದೊಡ್ಡ ದೊಡ್ಡ ಸಭೆಗಳನ್ನುದ್ದೇಶಿಸಿ ಮಾತನಾಡಿದ್ದಲ್ಲದೆ, ಸ್ಥಳೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರಿಗೆ ಸಮರ್ಥ ದಾರಿ ತೋರಿಸಿದರು.[೧೯] ೧೯೩೮ರಲ್ಲಿ ಶಿವಪುರ ಧ್ವಜಸತ್ಯಾಗ್ರಹದಲ್ಲಿ ನಾಯಕರು ದಸ್ತಗಿರಿಯಾದಾಗ, ಯಶೋಧರ ದಾಸಪ್ಪ, ಬಳ್ಳಾರಿ ಸಿದ್ದಮ್ಮ ಮತ್ತು ಸುಬ್ಬಮ್ಮ ಜೋಯಿಸ್ ಅವರುಗಳು ಚಟುವಟಿಕೆಗಳನ್ನು ಯಶಸ್ವಿಯಾಗಿ ಮುಂದುವರಿಸಿ ಜೈಲನ್ನು ಸೇರಿದರು.[೨೦]

ಇನ್ನೂ ಕೆಲವು ವಿದ್ಯಾವಂತ ನಾಯಕಿಯರು ಅವರ ಸಾಮರ್ಥ್ಯ ಮತ್ತು ಸಮಯವನ್ನು ಮಹಿಳೆಯರ ಸಮಸ್ಯೆಗಳನ್ನು ನಿವಾರಿಸುವುದಕ್ಕಾಗಿ ಉಪಯೋಗಿಸಿದರು. ಶ್ರೀಮತಿ ಪಾರ್ವತಮ್ಮ ಚಂದ್ರಶೇಖರ್ ಮತ್ತು ಕೆಲವು ಮಹಿಳೆಯರು ಮತ ನೀಡುವ ಹಕ್ಕನ್ನು ಪಡೆಯುವುದರಲ್ಲಿ ಸಫಲರಾದರು. ೧೯೩೦ರಲ್ಲಿ ಶ್ರೀಮತಿ ರುಕ್ಮಿಣಿಯಮ್ಮ ಮತ್ತು ಶ್ರೀಮತಿ ಸಾಕಮ್ಮನವರು ಪ್ರಜಾಪ್ರತಿನಿಧಿ ಸಭೆಗೆ ಮಹಿಳೆಯರ ಪ್ರಪ್ರಥಮ ಸದಸ್ಯೆಯರಾಗಿ ನೇಮಕಗೊಂಡರು.[೨೧] ಯಶೋಧರ ದಾಸಪ್ಪ ಅವರು "ಕಾಂಗ್ರೆಸ್ ವರ್ಕಿಂಗ್ ಕಮಿಟಿ", ಹಾಗೂ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯೆಯರಾದರು.

ಮಹಿಳೆಯರು ಆರ್ಥಿಕವಾಗಿ ತಮ್ಮ ಕುಟುಂಬದ ಪುರುಷರನ್ನವಲಂಬಿಸಿದ್ದರು. ಆದ್ದರಿಂದ ಅವರ ನೆಲೆ, ಅದರಲ್ಲೂ ವಿಧವೆ ಮತ್ತು ದಿಕ್ಕಿಲ್ಲದ ಸ್ತ್ರೀಯರ ಪಾಡು ಶೋಕಭರಿತವಾಗಿತ್ತು. ಶಿಕ್ಷಣದಿಂದಾಗಿ ದಾದಿ, ವೈದ್ಯೆ, ಬೋಧಕಿ ಹಾಗೂ ಅನೇಕ ವಿದ್ಯಾವಂತ ವೃತ್ತಿಪರರಾದರು. ಇದಕ್ಕೆ ಜೀವಂತ ನಿದರ್ಶನ ಶ್ರೀಮತಿ ನರಸಮ್ಮನವರು.[೨೨] ಇವರು ಸರ್ಕಾರದ ಶಾಲೆಯಿಂದ ನಿವೃತ್ತಿಹೊಂದಿರುವ ಒಬ್ಬ ಬೋಧಕಿ. ೧೯೧೫ರಲ್ಲಿ ಬ್ರಾಹ್ಮಣರ ಮನೆಯಲ್ಲಿ ಜನಿಸಿದ ಬಾಲವಿಧವೆ. ತವರಿನಲ್ಲಿ ಎಲ್ಲಾ ಗುಲಾಮ ಕೆಲಸಗಳನ್ನು ಮಾಡುತ್ತಿದ್ದರು. ಅಮಂಗಳೆ, ನತದೃಷ್ಟೆ ಎಂದು ಹೀಯಾಳಿಸಲ್ಪಡುತ್ತಿದ್ದರು. ಶ್ರೀಮತಿ ಭಾಗೀರಥಮ್ಮ ಒಂದು ಶಾಲೆಯ ಮುಖ್ಯೋಪಾಧ್ಯಾಯಿನಿ ಹಾಗೂ ವಿಧವೆ. ಇವರು ನರಸಮ್ಮನವರಿಗೆ ಶಾಲೆಗೆ ಸೇರಲು ಸಲಹೆ ನೀಡಿದರು. ಆದರೆ ಮನೆಯಲ್ಲಿ ಇದಕ್ಕೆ ವಿರೋಧ ವ್ಯಕ್ತವಾಗಿ, ಮನೆಯಿಂದ ಹೊರಗೆ ಹಾಕುವುದಾಗಿ ಬೆದರಿಸಿದರು. ಶ್ರೀಮತಿ ಭಾಗೀರಥಮ್ಮನವರ ಬೆಂಬಲದಿಂದ ನರಸಮ್ಮನವರು ಶಾಲೆಗೆ ಸೇರಿ ವಿ.ಟಿ.ಸಿ., ಎಸ್.ಎಸ್.ಎಲ್.ಸಿ. ಮತ್ತು ಟಿ.ಸಿ.ಎಚ್. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಬೋಧಕಿಯಾದರು. ವಿಧವೆ ಭಾಗೀರಥಮ್ಮನವರು ಶಿಕ್ಷಣದಿಂದ ತಾವು ಶಕ್ತಿಪರರಾದುದ್ದಲ್ಲದೆ, ಇನ್ನೊಬ್ಬ ಬಾಲವಿಧವೆಯನ್ನೂ ಉದ್ಧಾರ ಮಾಡಿದರು.

ಹೀಗೆ ಮಹಿಳೆಯರಿಗೆ ಶಿಕ್ಷಣವು, ಅದರಲ್ಲೂ ಅಗತ್ಯವಿದ್ದವರಿಗೆ ಬಹುಮುಖ್ಯ ಹಾಗೂ ಬಹುಮುಖ ಬಲ ನೀಡಿತು. ಅಮಂಗಲೆ, ನತದೃಷ್ಟೆ ಎಂಬ ಮೂದಲಿಕೆಗೆ ಒಳಗಾಗಿದ್ದ ಮಹಿಳೆಯರು ಮುಂದೆ ಸಮಾಜದ ಅಮೂಲ್ಯ ಸೇವಾರತ್ನಗಳಾದರು.

ಶಿಕ್ಷಣವು ಮಹಿಳೆಯರಿಗೆ ಪ್ರತ್ಯಕ್ಷ ರಕ್ಷಣೆ ಮತ್ತು ಪರೋಕ್ಷ ಭದ್ರತೆ ನೀಡಿತ್ತು. ಶ್ರೀಮತಿ ಜಯಮ್ಮನವರು ಮೈಸೂರು ಶಾರದ ವಿಲಾಸ ಕಾಲೇಜಿನ ರಸಾಯನ ಶಾಸ್ತ್ರದಲ್ಲಿ ರೀಡರ್ ಆಗಿ ನಿವೃತ್ತಿ ಹೊಂದಿದ್ದಾರೆ.[೨೩] ೧೯೨೨ರಲ್ಲಿ ಸಂಪ್ರದಾಯಸ್ಥ ಶ್ರೀಮಂತ ಬ್ರಾಹ್ಮಣರ ಮನೆಯಲ್ಲಿ ಜನಿಸಿದ ಬಾಲವಿಧವೆಯಾದ ಇವರಿಗೆ ಶಿಕ್ಷಣ ಮತ್ತು ಉದ್ಯೋಗ, ಅರ್ಥಪೂರ್ಣ ಹಾಗೂ ಅಮೂಲ್ಯ ಜೀವನ ನಡಸಲು ಸಹಾಯಕವಾಯಿತು. ಅನೇಕ ವಿದ್ಯಾವಂತ ಮಹಿಳೆಯರಿಗೆ ತಾವು ಉದ್ಯೋಗಕ್ಕೆ ಹೋಗದಿದ್ದರೂ, ಅಗತ್ಯ ಬಿದ್ದಾಗ ದುಡಿಯಬಲ್ಲೆ, ಎಂಬ ಭರವಸೆಯನ್ನು ಶಿಕ್ಷಣ ನೀಡಿತು. ಇದು ಅವರ ಘನತೆಗೆ ಅತಿದೊಡ್ಡ ಕೊಡುಗೆಯಾಯಿತು.

ಒಟ್ಟಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಮಹಿಳೆಯರ ಶಿಕ್ಷಣದ ಬಗ್ಗೆ ಇದ್ದ ಪೂರ್ವ ಕಲ್ಪಿತ ಅಭಿಪ್ರಾಯಗಳು ನಿಧಾನವಾಗಿ ಕ್ಷೀಣಿಸುತ್ತಾ ಬಂದಿತು. ಕೆಲವು ಮಹಿಳೆಯರು ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ, ರಾಜಕೀಯವಾಗಿ ಮಾನಸಿಕವಾಗಿಯೂ ಶಕ್ತಿಪರರಾಗಿದ್ದರು. ಬಹುತೇಕ ಮಹಿಳೆಯರು ಅವಿದ್ಯಾವಂತರಾಗಿಯೂ, ಅಶಕ್ತರಾಗಿಯೂ ಉಳಿದುಕೊಂಡರು. ವಿದ್ಯಾವಂತ ಮಹಿಳೆಯರು ಕೇವಲ ವೈದ್ಯಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಮಾತ್ರ ನೇಮಕಗೊಂಡಿದ್ದರು. ಸರ್ಕಾರದ ಇತರ ಇಲಾಖೆಗಳಲ್ಲಿ ಅವರಿಗೆ ಪ್ರವೇಶವಿರಲಿಲ್ಲ.[೨೪] ಮತ್ತೊಂದು ಮುಖ್ಯಾಂಶವೆಂದರೆ ಮಹಿಳೆಯ ಶಕ್ತಿಪರತೆಯ ಸುಳಿವು ನಗರಗಳಲ್ಲಿ ಕಾಣಿಸಿಕೊಂಡಿತೇ ಹೊರತು, ಗ್ರಾಮಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಇಷ್ಟಾದರೂ ಮಹಿಳೆಯರು ಹೊಸ ಅಧ್ಯಾಯದತ್ತ ಸಾಗುತ್ತಿದ್ದರು ಎನ್ನುವುದರ ಬಗ್ಗೆ ಮಾತ್ರ ಯಾವುದೇ ಅನುಮಾನವಿಲ್ಲ. ಈ ನಿಟ್ಟಿನಲ್ಲಿ ಸಾಧಿಸಬೇಕಾಗಿದ್ದ ಪ್ರಮಾಣ ಹಾಗೂ ಗುಣಮಟ್ಟ ಬಹಳವಿದ್ದರೂ ಕಾರ್ಯಾರಂಭಗೊಂಡಿದ್ದು ಮಹತ್ತರ ಹಾಗೂ ಗಮನಾರ್ಹವಾದ ಸಂಗತಿ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

1. *Progress of Education in the Mysore State* 1932-44, p.10.
೨. ಅದೇ.,
3. Rajeshwari Chatarjee, *Two women Pioneers of Karnataka in the Emancipation of Women*, (Lecture in the Mythic Society, July 2001), P.6.
4. *Review of the Progress of Education in the Mysore State for the Decennium* 1922-23 to 1931-31, pp. 79-80.
೫. ಅದೇ ಪು.೮೦
೬. **ಸುಚಿತ್ರ ಭಾರತ**, ಸಂಪುಟ ೩, ಸಂಚಿಕೆ ೬,ಪು.೪೪
೭. ಅದೇ.,
೮. ಅದೇ.,
೯. ಬಿ. ಎಸ್. ಸುಮಿತ್ರಬಾಯಿ., (ಸಂ.) (೧೯೯೨), **ಕಲ್ಯಾಣ ಸರಸ್ವತಿ**, ಬೆಂಗಳೂರು, ಪು. ೮ ಮತ್ತು ಪು. ೧೯.
೧೦. ಎಚ್. ಎಸ್. ಪಾರ್ವತಮ್ಮ., (೧೯೭೪), **ಆರ್. ಕಲ್ಯಾಣಮ್ಮ - ಜೀವನ ಮತ್ತು ಕಾರ್ಯ** - ಬೆಂಗಳೂರು
೧೧. ಬಿ. ಎಸ್. ಸುಮಿತ್ರ ಬಾಯಿ., ಅದೇ, ಪು. ೩೭
೧೨. ಅದೇ., ಪು. ೨೬
೧೩. ಅದೇ., ಪು. ೨೮
೧೪. ಅದೇ., ಪು. ೪೧
೧೫. ಅದೇ.,
೧೬. ಅದೇ. ,
೧೭. ಅದೇ., ಪು. ೪೩
೧೮. ಎಸ್.ಎಸ್. ಪಾರ್ವತಮ್ಮ., ಅದೇ, ಪು.೫೬
೧೯. ಸೂರ್ಯನಾಥ್ ಯು. ಕಾಮತ್., (೧೯೭೭), **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**, ಸಂಪುಟ ೩, ಮೈಸೂರು, ಪು. ೧೮೬.
೨೦. ಬಿ. ಆರ್. ಪ್ರಾಣೇಶರಾವ್., (೧೯೯೭), **ಯಶೋಧರ ದಾಸಪ್ಪ, ಜೀವನ ಸಾಧನೆ**, ಪು. ೩೫.
21. Proceedings of the Mysore Representative Assembly, June 1930,p.1.
೨೨. ಶ್ರೀಮತಿ ನರಸಮ್ಮ, ಸಂದರ್ಶನ, ಡಿಸೆಂಬರ್ ೨೦೦೧.
೨೩. ಶ್ರೀಮತಿ ಜಯಮ್ಮ, ಸಂದರ್ಶನ, ಡಿಸೆಂಬರ್೨೦೦೧
24. *Proceedings of the Mysore Representative Assembly*, Oct 1938, P.163.

ಡಾ. ಕೆಳದಿ ವೆಂಕಟೇಶ ಜೋಯಿಸ್*

ಬ್ರಿಟಿಷರ ಆಡಳಿತದಲ್ಲಿದ್ದ ಸರಸಾಯರು - ಹಾಗೂ ಇತರ ದಾಖಲೆಗಳು

ಕ್ರಿ.ಶ. ೧೭೬೩ರಲ್ಲಿ ನವಾಬ ಹೈದರಾಲಿಯು ಕೆಳದಿ ರಾಜ್ಯದ ಮೇಲೆ ಧಾಳಿ ನಡೆಸದೆ ಇದ್ದಿದ್ದರೆ ಕರ್ನಾಟಕದ ಇತಿಹಾಸವೇ ವಿಭಿನ್ನವಾಗಿರುತ್ತಿತ್ತೆಂಬುದನ್ನು ಯಾವ ಇತಿಹಾಸಕಾರರೂ ಅಲ್ಲಗಳೆಯುವಂತಿಲ್ಲ. ಕೆಳದಿ ಅರಸರ ಆಸ್ಥಾನ ಕವಿ ಪರಂಪರೆಯ ಸಾಗರದ ಕವಿ ಕೃಷ್ಣಪ್ಪನರವರು 'ಮಲೆನಾಡು ವಾರ್ತಾ' ಪತ್ರಿಕೆಯಲ್ಲಿ ಇದನ್ನು ವಿಶದೀಕರಿಸಿರುವುದನ್ನು ದಿ|| ಎ. ಆರ್. ಕೃಷ್ಣಶಾಸ್ತ್ರಿಗಳು ತಿಳಿಸಿ, ಇಂತಹ ಅಪೂರ್ವಕೃತಿಯೊಂದನ್ನು ದಿವಾನ್ ಪೂರ್ಣಯ್ಯನು ಬೆಂಗಾಲಿ ಸರಕಾರಕ್ಕೆ ಕಳುಹಿಸಿದ ದಾಖಲೆಯೊಂದು ಈ ಕೆಳಗಿನಂತಿದೆ.

" I here found a Brahman named Bayluru Deweuppa (ಬೇಲೂರು ದೇವಪ್ಪ?) Whose ancestors have been the hereditary writers of the chronicles of the kilidi (ಕೆಳದಿ) family. He engaged to give me to the family book, called kilidi Raya padditti (ಕೆಳದಿ ರಾಯ ಪದ್ಧತಿ?) It is in the old dialect and character of karnata and contains 400 slokas of districhs for like all other works of any note among the Hindus it is poetical. He afterwards forwarded a copy of the work to Purnea (ಪೂರ್ಣಯ್ಯ) who was so good as to add a translation into the modern language and character and both of them have been delivered to the Bengal Government. The family of the historiograher enjoyed an Inam or free land to the amount of sixty pagodas a year"

ಬ್ರಿಟಿಷರು ಭಾರತದಲ್ಲಿ ತಳವೂರಲು ತಮಗೆ ಕೆಳದಿ ರಾಜ್ಯಧಾನಿ ನಗರ (ಬಿದನೂರು) ಕೋಟೆಯು ಭದ್ರಕೋಟೆಯೆಂದು ತಿಳಿದು ಅದನ್ನು ಜೀರ್ಣೋದ್ಧರಿಸಿದ ಕುರಿತಂತೆ ನಮಗೆ ಡ್ಯೂಕ್ ಆಫ್ ವೆಲ್ಲಿಂಗಟನ್ ಪತ್ರಾಗಾರದಲ್ಲಿರುವ ಪತ್ರಗಳು ಮಾಹಿತಿ ನೀಡುತ್ತವೆ.

No 180

Seringapatam, november 30th 1801

Sir,

I enclose an extract of a letter which I have received from the Chief Secretary of Government relative to the repairs of the Fort of Nuggar, respecting which I had conversation with the Dewan in your presence some time ago.

I shall be obliged to you if you will procure from the Dewan the estimate of the expense to be incurred in the proposed repairs, as mentioned kin the first paragraph of the inclosed extract.

I imagine that the repair which the Dewan proposes to give to the Fort of Nuggur will not be greater than that alluded to in the second paragraph of the inclosed extract, and if that should be the case I will use the discretion given to me to authorize expense on that account.

I have the honour to be sir.

your most obedient humble servant

Arthur Wellesley.

ಟಿಪ್ಪುವಿನ ನಂತರ ಬ್ರಿಟಿಷರು ಮೈಸೂರನ್ನು ಈ ಕೆಳಕಂಡಂತೆ ವಿಭಾಗಿಸಿ ಆಡಳಿತ ನಡೆಸಿದರು.

೧. ಅಗ್ರಹಾರ ಡಿವಿಜನ್

೨. ನಗರ ಡಿವಿಜನ್

೩. ಚಿತ್ರದುರ್ಗ ಡಿವಿಜನ್.

ಕೆಳದಿ ಸಂಸ್ಥಾನದ ಮೂರನೆಯ ರಾಜಧಾನಿ ನಗರ. ಇದು ಹೈದರನ ದಾಳಿಗೂ ಮೊದಲು ಬಿದನೂರು ಎಂದು ಕರೆಯಲ್ಪಡುತ್ತಿತ್ತು. ಇದನ್ನು ಹೈದರನು ಪಿತೂರಿಯಿಂದ ಆಕ್ರಮಿಸಿ ಅನಂತರ

* ಕೆಳದಿ - ೫೭೭ ४೦೧, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.

ತನ್ನ ಹೆಸರಿನಲ್ಲಿ 'ಹೈದರನಗರ' ವೆಂದು ನಾಮಾಂಕಿ ತವಿಟ್ಟನು. ಕಾಲಕ್ರಮದಲ್ಲಿ ಅದು ನಗರ ಎಂದು ಕರೆಯಲ್ಪಟ್ಟಿತು. ಇಲ್ಲಿರುವ ಕೆಳದಿ ಶಿವಪ್ಪನಾಯಕನ ಭದ್ರ ಕೋಟೆಯನ್ನೇ ಬ್ರಿಟೀಷರು ಭಾರತದಲ್ಲಿ ತಮ್ಮ ಆಡಳಿತವನ್ನು ವಿಸ್ತಾರಗೊಳಿಸಲು ಯೋಚಿಸಿದ್ದರು. ಇದರಿಂದ ನಗರ ಡಿವಿಜನ್‌ನಲ್ಲಿ ಮುಖ್ಯಾಧಿಕಾರಿಯಾಗಿ ಬೆಂಗಾಲ್ ರಾಜ್ಯಪಾಲ (ಗೌರ್‍ನರೆ) ಹಾಗೂ ಬ್ರಿಟಿಷ್ ಸಿವಿಲ್ ಸರ್ವಿಸ್ ಅಧಿಕಾರಿ ಹೆಚ್. ಬಿ. ಡೆವರೋಕ್ಸೆನು (H.B. Devereux) ಆಡಳಿತ ನಡೆಸಿದನು. ಕಾಲಕ್ರಮೇಣ ಸ್ಟೋಕ್ಸನ ಕಾಲದಲ್ಲಿ ನಗರ ಡಿವಿಜನ್‌ನಲ್ಲಿ ಇಕ್ಕೇರಿ, ಸಾಗರ ತಾಲ್ಲೂಕು ಆಡಳಿತಾತ್ಮಕವಾಗಿ ಅಧಿಕಾರ ನಡೆಸಿತು. ಇದಕ್ಕೆ 'ಸರಸಾಯರ್' ಎಂಬ ಅಧಿಕಾರಿಯಿದ್ದು ಈ ಕುರಿತು ದಾಖಲೆಗಳು ಸಾಕಷ್ಟು ದೊರೆಯುತ್ತಿವೆ. ಅದರಲ್ಲಿ ಒಂದನ್ನು ಸಾಗರದ ದಿ ಸೂರ್ಯನಾರಾಯಣ ಜೋಯ್ಸರು ಕೆಳದಿ ಗುಂಡಾಜೋಯಿಸರಿಗೆ ನೀಡಿದ್ದು ಅದನ್ನು ಕೆಳದಿ ವಸ್ತು ಸಂಗ್ರಹಾಲಯ ರಕ್ಷಿಸುತ್ತಿದೆ.

ಜನರಲ್ ಮೆಮೊರೆಂಡಮ್ ಆನ್ ಮೈಸೂರ್ ಮಾಹಿತಿಗಳ ಪ್ರಕಾರ ಬ್ರಿಟಿಷ್ ಸರಕಾರದಲ್ಲಿ ನಗರ ಡಿವಿಜನ್ ಸರ್‌ಸಾಯರ ಪದ್ಧತಿಯು ಈ ಕೆಳಕಂಡಂತೆ ಆಡಳಿತ ನಡೆಸಿರುವುದು ಕಂಡು ಬರುತ್ತದೆ.

Nuggur Division

17. Under the Raja's administration, the Sayar Department in Nuggur was divided into three I lakhas or branches.

I[st] : The Cowledroog sursayar, including the Chickmagaloor, Coppa, Cowledroog, Holihonur, Luckwally, shemooga Talooks, and the Cusbah Town of Chennagiry.

II[nd] : The Ikairy sursayar, comprising The Honnally, Sagar, Shikaripur and Soraba Talooks, togerher with the Cusbah of Bellavendoor in the Nuggur Talook.

III[rd] : The Phoot Talooks Izarah, Comprehending the Cuddoor, Hurryhur, lerrikerry and Chennagiry Talooks, with the exception of the Cusbah of the last, which was included in the cowlideoog Sursayar.*

೨ನೇ ಭಾಗದಲ್ಲಿ ಕಂಡುಬರುವ ಇಕ್ಕೇರಿ ಸರಸಾಯರನ ಲೇಖನ ಮತ್ತು ರೆವಿನ್ಯೂ ಆಡಳಿತಲೆಕ್ಕ ಪತ್ರಗಳ ಮಾಹಿತಿಗಳು ಚಾರಿತ್ರಿಕ ದಾಖಲೆಯಲ್ಲಿ ಒಳಗೊಂಡಿದ್ದುಇಲ್ಲಿ ಅದನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ. ಇದೇ ಕಾಲದಲ್ಲಿ ಆಳಿವೆ ಸಾಯರ, ರಸ್ತೆಯರ ಎಂಬ ಎರಡು ಇಲಾಖೆ ಅಥವಾ ಹುದ್ದೆ ಇದ್ದು, ಅವುಗಳ ಅಧಿಕಾರಿಗಳನ್ನು ಪ್ರಕಟಿಸುತ್ತಿತ್ತು. ಸರ್ ಸಾಯರ ಎಂಬುವರು ರೆವಿನ್ಯೂ, ಮುಜರಾಯಿ ಇಲಾಖಾ ಅಧಿಕಾರಿಗಳಾಗಿರುತ್ತಿದ್ದರು.

ಮೊದಲ ದಾಖಲೆ : ಇದು ಶಿವಮೊಗ್ಗ ಜಿಲ್ಲೆ ಸಾಗರದಲ್ಲಿದ್ದ ದಿ. ಶ್ರೀ ಸೂರ್ಯನಾರಾಯಣ ಜೋಯಿಸ್‌ರವರ ಮನೆಯಲ್ಲಿ ದೊರೆತದ್ದು. ಇದರಲ್ಲಿ ೧೭ ಸಾಲುಗಳಿವೆ. ಇದರ ಕಾಲನಮೂದಿಲ್ಲ. ಪಾರ್ಥಿವ ಸಂವತ್ಸರದ ಮಾಘ ಶು ೫ ಎಂದು ಬರೆಯಲಾಗಿದೆ. ಇದರ ಜತೆಯಲ್ಲಿಯೇ ಸಿಕ್ಕಿರುವ ಇನ್ನೊಂದು ಪತ್ರ ಸನ್ ೧೮೪೮ ಆಗಿದೆ. ಶ್ರೀ ಮಹಾಸ್ವಾಮಿಗಳ ಶ್ರೇಯ ಪ್ರಾರ್ಥನೆ ನವಗ್ರಹ ಜಪ ನೈವೇದ್ಯಕ್ಕೆ ದಿನವೊಂದಕ್ಕೆ ಒಂದು ರೂಪಾಯಿಯಂತೆ ಚರಾದಾಯದ ಸುಂಕದಿಂದ ಕೊಡಿಸಿ ಕೊಡುತ್ತ ಬರುವಂತೆ ಮಂಜೂರಾತಿ ಮಾಡಿರುವ ಪತ್ರ ಇದಾಗಿದೆ. ಎರಡನೆಯ ಪತ್ರವು ಅದನ್ನು ಪ್ರತಿಪಾದಿಸುತ್ತದೆ.

ದೇವನಾಗರಿ ಅಕ್ಷರಗಳು, ಮುದ್ರೆ ಸಹಿತವಾದ ದಾಖಲೆಯ ಯಥಾ ಪಾಠ:

ಮೊದಲ ಪತ್ರ

೧ ರಾಜ ಶ್ರೀ ಸಾಗರದ ಚರಾದಾಯದ ಕಟ್ಟೆ ಮ
೨ ಣೆಗಾರ ಕುಕೆ ಸುಬ್ಬೆಯನವರಿಗೆ ಶ್ಯಾನ್ನು ಭಾಗರ್‍ರ್ರಿಗೆ
೩ ಸಹಾ
೪ ಯಿಕೆರ್‍ರಿ ಸರಸಾಯರ್‍ರು ಸುಬೆದಾರ್‍ರು ಕುಪ್ಪೂರಾಯರ್‍ರು
೫ ನಮಸ್ಕಾರ ಅದಾಗಿ ಸಾಗರದ ಕಸಬೆ ಗ್ರಾಮದಲ್ಲಿ ಶಿದ್ಧಾಂ
೬ ತ್ತ ಗಣಿತಾ ಕಾಲಕ್ಷೆಪ ಮಾಡಿಕೊಂಡು ಆಳಿದ ಮಹಾಸ್ವಾ
೭ ಮಯವರಶ್ರಯ ಸಂಪಾದನೆ ಆಗುವಂತ್ತೆ ನವಗ್ರಹ
೮ ಜಪಾರ್‍ರಾದನೆ ಮಾಡುತ್ತಾಯಿದೆವೆ ನೈವೆದ್ಯದ ಬಗ್ಗೆ
೯ ದಿನವಂದಕೆ ವಂದ್ದು ೧ ರು ಪ್ರಕಾರ ನಡೆಸಿಕೊಡಬೆಕೂ ಯ
೧೦ ಬದಾಗಿ ವೇದಮೂರ್ತಿಗಳಾದ ಅಪ್ಪಜೊಯಿಸರ್‍ರು ಸರ
೧೧ ಸಾಯರ್‍ರು ಕಛೇರ್‍ರಿಯಲ್ಲಿ ಬಂದು ಹೆಳಿಕೊಂಡದರ್‍ರಿಂದಾಮ
೧೨ ಹಾ ಸ್ವಾಮಿಯವರ ಶ್ರೆಯ ಪ್ರಾರ್ಥನೆ ನವಗ್ರಹ ಜಪದ ನೈವೆ
೧೩ ದ್ಯದ ಬಗ್ಗೆ ದಿನವಂದಕೆ ವಂದ್ದು ರು ಪ್ರಕಾರ ಚರಾದಾಯ
೧೪ ದ ಸುಂಕದ ಯಿಂದ್ದಾ ಕೊಡಿಸಿಕೊಡುತ್ತಾ ಬರ್‍ರುವದ್ದು ಯಿ ಉತ್ರ

೧೫ ದ ನಕಲು ಶ್ಯಾನುಬಾಗರ ಲೆಕಕೆ ಬರಶಿ ವಾಪ್ಪಸು ಅಪ್ಪಜೊಯಿಸ
೧೬ ರ ವಶಕೆ ಕೊಡುವದ್ದು ಪಾರ್ಥಿವ ಸಂ ೧೧ಮಾಘ ಶು ೫ಲು (ಅಕ್ಷರ ತಿಳಿಯುವದಿಲ್ಲ)
೧೭ (ಅಕ್ಷರ ತಿಳಿಯುವುದಿಲ್ಲ) ಮರಾಠಿ ಸಹಿ ಇದೆ.

ಎರಡನೆಯ ಪತ್ರ :

೧	ಗ್ರಾಮ ನಂಬ್ರ			ಮೊಹರಿದೆ		ಕ್ರಮನಂಬ್ರ
೨	೮			-		೧೩
೩	ರೈಹಿತ್ತ ಸಮಜಾಯ್ಸಿರಿ ಬುಕ್ಕು					
೪	ಬನಾಮೆ ಮಲುಜೆ ಮಾಗಣೆ ತಾಲ್ಲು ಯಿಕ್ಕೆರ್‍ರಿ ಸಾಗ್ರ					
೫	ಶ್ಯಾಮಜೊಯ್ಸರ್‍ರು ಕಂಬಳಿಕೊಪ್ಪ ಯಲಗಳಲ್ಲಿ					
೬	ಪ್ಲವಂಗ ಸಂ। ೧ರಕ್ಕೆ ನಗದಿಯಸ್ತುಬೆರ್‍ರಿಜೂ ೧೯|||≡					
೭	(ರಾನಮ) ಶಿಸ್ತು	ಶಿಂದಿ	ಶಿಸ್ತು	ಪಟಿ	ಜುಂಲಾ	ಜಮಾಬಂದಿ
೮		||| ೪	||೨||| =	೯೩--	೧೯೦||| =	೧೯೦|||
೯	ಬತ್ತರ್‍ರಿಖು ೨ ನೆ ಮಾಹೆ ಮಾರ್ಚಿ ಸಂ ೧೮೪೮ ನೆಯ್ಸಿವಿ ಮೆ					
೧೦	ಶ್ಯಾ॥ ಮರ್‍ರಿಯನ ರುಜು		ರ್‍ರು	ಅ	ಪೈ	
೧೧	ಸಹಿ ಇದೆ.		೪	೨	೩	

ಆಂಗ್ಲ ಮೊಹರು: W.C. Onslow

ಮೊಹರು ಅಡ್ಡಲಾಗಿ ಸಹಿ ಇದೆ.

ದಾಖಲೆ ಮೂರು ಮತ್ತು ನಾಲ್ಕು : ಈಗ ದೊರೆತಿರುವ ಉಳಿದೆರೆಡು ದಾಖಲೆಗಳು ಆ ಕಾಲದ ಸಾಮಾಜಿಕ ವ್ಯವಸ್ಥೆಯ ಕುರಿತಂತೆ ಅಭ್ಯಾಸ ನಡೆಸಲು ಪ್ರಮುಖ ಆಕರಗಳಾಗಿವೆ. ಇವು ಸೊರಬ ತಾಲೂಕು ದೊಡ್ಡೇರಿ ಗ್ರಾಮದಲ್ಲಿ ದೊರೆತದ್ದಾಗಿದೆ. ಒಂದು ಪತ್ರವು ೨೨ ಸಾಲುಗಳು ಮತ್ತು ಇನ್ನೊಂದು ಪತ್ರವು ೨೮ ಸಾಲುಗಳನ್ನು ಒಳಗೊಂಡಿದೆ. ಎರಡು ಪತ್ರಗಳು ಕನ್ನಡ ಮೋಡಿ ಲಿಪಿಯಲ್ಲಿದೆ.

ಮೂರನೇ ಪತ್ರದ ಸಾರಾಂಶ

ಮಾರ್ಚಿ ೨,೧೮೪೧ರಲ್ಲಿ ಬರೆದ ಪತ್ರ ಇದಾಗಿದೆ. ಕ್ಯಾಸನೂರು ಮಾಗಣೆ ಬ್ರಾಹ್ಮಣವಾಡೆ ದೊಡ್ಡೇರಿ ಗ್ರಾಮದಲ್ಲಿರುವ ಅಪ್ಪಯ್ಯ ಎಂಬುವನ ಪತ್ನಿ ಗಲುರಮ್ಮ ಎಂಬುವಳು ನಗರ ಶೀಮೆ ತುಕಡಿಯ ಸೂಪರೆಂಟೆಂಡೆಂಟ್ ಸಾಹೇಬರಾದ ಡೆವರೆಕ್ಸ್ ಸಾಹೇಬರಿಗೆ ಬರೆದಿರುವ ಪತ್ರ ಇದಾಗಿದೆ. (ಕ್ಯಾಸನೂರು, ದೊಡ್ಡೇರಿ-ಈಗ ಸೊರಬ ತಾಲೂಕಿನಲ್ಲಿವೆ) ತನಗೆ ಗಂಡು ಸಂತಾನ ಇಲ್ಲದ ಕಾರಣ ಪುಟ್ಟಯ್ಯ ಎಂಬುವನ ಮಗನನ್ನು ದತ್ತು ತೆಗೆದುಕೊಂಡು ಅವನ ಜೊತೆಗೆ ತನಗೆ ಬಂದಿರುವ ಭೂಮಿಯನ್ನು ನೋಡಿಕೊಂಡು ಮನೆತನವನ್ನು ನಡೆಸುವ ಬಗ್ಗೆ ಮತ್ತು ಜೀವನ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ, ಇದಕ್ಕೆ ಬೇರೊಬ್ಬರು ಅಡ್ಡಿಬಾರದಂತೆ ರಕ್ಷಣೆಯ ಬಗ್ಗೆ ಅಪ್ಪಣೆ ದಯಪಾಲಿಸಬೇಕೆಂದು ಕೇಳಿಕೊಂಡಿರುವ ಪತ್ರ ಇದಾಗಿದೆ.

ನಾಲ್ಕನೆಯ ಪತ್ರ

ಸೆಪ್ಟೆಂಬರ್ ೪, ೧೮೩೫ರಲ್ಲಿ ಯಿಕ್ಕೇರಿ ಸಾಗರ ಚಂದ್ರಗುತ್ತಿ ತಾಲೂಕು ಶುಬೆದಾರ ತಿಮ್ಮಪ್ಪರವರಿಗೆ ಕ್ಯಾಸನೂರು ಮಾಗಣೆ ದೊಡ್ಡೇರಿ ಪುಟ್ಟಯನು ಬರೆದಿರುವ ಪತ್ರ ಇದಾಗಿದೆ. ತಾನು ಮನೆಯಲ್ಲಿ ಆಳೊಬ್ಬಳನ್ನು ಇಟ್ಟುಕೊಂಡು ಮದುವೆ ಮಾಡಿ ಕೆಲಸ ಮಾಡಿಸಿಕೊಂಡಿರುವಾಗ ಆ ಆಳನ್ನು ಹೊರಬಯಲು ಬಾವಿ ವೆಂಕೈಯ ದುಗ್ಗಾಭಟ್ಟ ಇವರುಗಳು ವೈಯಿಶಾಮೆ ವೀರಯ ಗವುಡರಿಗೆ ಕಾಗದ ಬರೆದು ಈ ಆಳು ಸೇರಿ ಒಟ್ಟು ಆರು ಆಳುಗಳನ್ನು ಬಿಡಿಸಿಕೊಂಡು ಹೋಗಿ ಇಟ್ಟುಕೊಂಡಿದ್ದಾರೆ. ಇದರಿಂದ ನನಗೆ ತೋಟ, ಸೊಪ್ಪು ಇತರ ಕೆಲಸಕ್ಕೆ ಅನಾನುಕೂಲವಾಗಿದೆ. ಹಾಗಾಗಿ ಆ ಹಣ, ಲುಕ್ಸಾನು ಕೊಡಿಸಿಕೊಡುವಂತೆ ಅಪ್ಪಣೆ ಆಗಬೇಕೆಂದು ಕೇಳಿಕೊಂಡ ಮೇರೆಗೆ ಆ ಬಗ್ಗೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವಂತೆ ಬರೆದ ಪತ್ರ ಇದಾಗಿದೆ. ಇದರಲ್ಲಿ ಸಹಿ ಇದೆ. ಮೇಲೆ ಮರಾಠಿ ಲಿಪಿ ಇದೆ. ಪತ್ರದ ಯಥಾ ಪಾಠ ಈ ರೀತಿ ಇದೆ.

ನಕಲ್ಲು

ರರಾಬಂದನಿ ಹಜರತ್ತ ॥ ಮೈಸೂರ್‍ರು ದೊರ್‍ರೆಗಳ
ಶಿಮೆ ನಗ್ರ ತ್ತುಕಡಿ ಸೂಪ್ರೆಂಟೆಂಡೆಂಟ ಡೆವರ್‍ರೆಕ್ಸೆ
ಸಾಹೆಬ ಬಹರರ್‍ರವರ್‍ರ ಸಂನ್ನಿಧಾನಕ್ಕೆ

೧ ಸಂನ್ ೧೮೪೧ನೆ ಯಿಸವಿ ಮಾಹೆ ಮಾರ್ಚಿ ತಾರ್‍ರಿಖ
೨ನೆಯಲ್ಲು

೨ ಯಿೂಕೆರ್‍ರಿ ಸಾಗರ ತಾಲ್ಲು ಕ್ಷೆನ್ನೂರ್‍ರು ಮಾಗಣೆ ಪೈಕಿ ಬ್ರಾಂಮಣವಾ

೩ ಡ ದೊಡೆರ್‍ರಿ ಗ್ರಾಮದಲು ಯಿರುವ ಅಪ್ಪಯ ಯಂಬವನ ಹೆಂಡ್ತಿ

೪ ಗಉರಂಮನು ಬರಕೊಂಡ ಅರ್ಜಿಯೆನೆಂದ್ರೆ ಯಿೂ ಗ್ರಾಮದಲ್ಲು

೫ ಲಿಪಿ ಕಾಟು ಹೊಡೆದಿದೆ.

೬ ಲಿಪಿ ಕಾಟು ಹೊಡೆದಿದೆ.

೭ ಪ್ರಾಕು ಸುಬ್ಬಯಯಂಬ ವರ್ಗ ೧ ಶೆಷಯನಲ್ಲಿಂಗ್ಯ ಯಾಯಂಬ ವರ್ಗ್ಗ ೧

೮ ಯಿೂವರ್ಗವು ವಂದೆ ಪ್ರಕಾರ್‍ರ ಹಿಸೆಮೆರ್‍ರಗೆ* ಪ್ರತ್ತತಿ ಪ್ರತ್ಯೇಕ ನಡಿಯುತ್ತಾ ಬರುತ್ತಿತ್ತು

೯ ಆಶ್ರಿಸಂದ ೧ ಪಾಲಿನ ಶೆಷಯನಲ್ಲಿಂಗ್ಯಯಾಯಂಬವನ್ನು ಮ್ರುತ್ತವಾದಮೆಲ್ಲೆಯಿಾ

ಹಿಂಭಾಗ :

೧೦ (ಇಲ್ಲಿ ಲಿಪಿ ಕಾಟು ಹೊಡೆದಿದೆ.) ನನಗೆ ಗಂಡು ಸಂತ್ತಾನಯಿಲ್ಲದ್ಯೆ ಯಿರುವದರ್‍ರಿಂದ

೧೧ ಸದರ್‍ರಿ೨ ಜನರ ಪೈಕಿ ಪುಟಯನ ಮಗನಂನ್ನು (ಲಿಪಿಕಾಟು ಹೊಡೆದಿದೆ) ತೆಗದುಕೊಂಡು

೧೨ ನಾನ್ನು ಮಗನ ಮಾಡಿಕೊಳಬೆಂಕೆಂತ್ತ ಮಾಡಿದೆನೆ (ಲಿಪಿ ಕಾಟು ಹೊಡೆದಿದೆ) ಸದರ್‍ರಿ

೧೩ ಜನರ್‍ರು ಆಲೊಚನೆ ಮಾಡ್ಡಿದ ಪ್ರಕಾರ್‍ರ ೩ (ಇಲ್ಲಿ ಲಿಪಿ ಕಾಟು ಹೊಡೆದಿದೆ) ಪಾಲ್ಲು ಮಾಡದ್ದೆ

೧೪ ಸದ್ರಮೆರ್‍ರಿಗೇ ೧ ಪಾಲಿಗೆ ನಾನೆ ಬಾಧ್ಯಳಾಗಿರ್‍ರುವ ಮೆರ್‍ರಿರ್ಗೆನಾನೇ

೧೫ ಅನುಭವಿಶಿ ಬರ್‍ತಕ್ಕ ಬಗ್ಯೆ ಸದರ್‍ರಿ ಜನರ್‍ರು ಹರಕತ್ತು ಮಾಡದಂತ್ತೆ

೧೬ ತ್ತಾಕಿತ್ತು ಮಾಡ್ಸುವ ಹಾಗೆ ತ್ತಾಲ್ಲು ಮಜ್ಕೂರ್‍ರು ಮಾಮಲೆದಾರ್‍ರಿಗೆ ಹ್ಕುಂ

೧೭ ದಯಪಾಲ್ಸಿದಲ್ಲಿ ನಂನ ಪಾಲ್ಲು ಭೂಮಿ ನಾನೆ ನೊಡ್ಡಿಕೊಂಡು ಭೂಮಿಯನ್ನು

೧೮ ಸಾಗುವಳಿ ಮಾಡಿಕೊಂಡು ಸರಕಾರದಲ್ಲು ಮೊಕರ್‍ರುರ್‍ರು ಆದ ಜಮಾಬಂದಿ

೧೯ ಹಣಹರಕತ್ತು ಶಿವ್ವಾ ಕೊಟ್ಟುಕೊಡುವ ಮುಂದೆ ಮನ್ತಾನ ನಡಿಯು

೨೦ ವ ಬಗ್ಯೆ ಮಗನಂನು ಮಾಡಿಕೊಂಡು ನಂನ ಜಿವನ ಮಾಡಿಕೊಂಡು

೨೧ ಬರುತ್ತೆರ್ನೆ ಯಿಾಬಗ್ಯೆ ಬೆರ್‍ರೆ ಜನರ್‍ರು ಅಡಿ ಮಾಡದಂತೆ ಅಪ್ಪಣೆ ದಯ

೨೨ ಪಾಲ್ಸಿಬೆಕುದೆವು.

* ಹಂಸಪಾದ ಹಾಕಿ ಮೇಲೆ ಬರೆದಿದೆ.

ಮರಾಠಿಯಲ್ಲಿ ಶ್ರೀ ಮರಾಠಿ ಅಕ್ಷರಗಳಿವೆ ಮೂರು ಸಾಲು ಗಳಿವೆ.

ಮಹಾರಾಜೆ ಶ್ರೀ ಯಿಕ್ಕರ್‍ರಿ ಸಾಗರ ಚಂ
ದ್ರಗುತ್ತಿ ತಾಲೂಕು । ಶುಬೆದಾರ್‍ರರ್‍ರು
ತ್ರಿಂಮಪ್ಪನವರ ಸಂನ್ನಿಧಾನಕ್ಕೆ

೧ ಸಂನ್ ೧೮೨೪ನೆ ಯಿಸವಿ ತ್ತಾರ್‍ರಿಕ್ಕು ಸಕಟಂಬರ* ನಾಲ್ಕರಲ್ಲು ಕೆಸನೂ

೨ ರ ಮಾಗಣೆ ಪೈಕಿ ದೊಡ್ಡರ್‍ರಿ ಪುಟ್ಟಯನು ಬರಕೊಂಡ ಅ

೩ ರ್ಜಿ ಯೆನುಯಂದರ್‍ರೆ । ದೆವರು । ಪ್ರಾಕು ವಿರೊಧಿ ಸಂವತ್ಸ

೪ ರದಲ್ಲು। ಕೆಳದಿ ಮಾಗಣೆ ಬಳೂರ ಹಳೆಮನೆ ತ್ರಿಂಮ

೫ ಯನಲ್ಲು । ವಂದು ಹೊಲೆಯಾಳು ಗುಡಿಸರಕನ್ನು ಕ್ರ

೬ ಯಕ್ಕೆ ತೆಗದುಕೊಡು ಮಧುವೆ ಮಾಡಿಸಿಯಿದ್ದೆ ಆ

೭ [ಸಂ] ವ್ಯಂಧ ನಂಮಲ್ಲಿ ಚಾಕರ್‍ರಿ ಮಾಡಿಕೊಂಡು ಯಿರುತ್ತಾಯಿ

೮ ದ್ದಲ್ಲಿ ವಿಜಯ ಸಂವತ್ಸರದ ಮಾರ್ಗಿಶ್ವರದಲ್ಲು

೯ ಮ ಮಾಗಣೆ । ಹೊರಬಯಲ ಗ್ರಾಮದ ಬಾವಿ ವೆಂಕ್ಯ

೧೦ ಯ ದುಗ್ಗಾಭಟ್ಟ ಸಹಾ। ಅದಂನ್ನು ಚಿತ್ತಾಯಿಶಿ ಮಾಡಿ

೧೧ ಶಿಕೊಂಡು ಹೊಗಿ ಮೈಯಿಶಾಮೆ ವೀರಯಗಉಡ

೧೨ ರ್‍ರಿಗೆ ಕಾಗದ ಬರದು ಯೀ ಆಳು ಗುಡಿಸರಕು ಗಂ

೧೩ ಡು ಆಳು ೪ ಹೆಂಣು ಆಳು ೨ ಉಭಯಂ ಆರು ಆ

೧೪ ಳಂನ್ನು ವೊಡಿಶಿಕೊಂಡು ಹೊಗಿಯಿಟ್ಟುಯಿಧಾರ್‍ರೆ

೧೫ ಸದರ್‍ರಿ ಆಳು ಹೊದ್ದರ್‍ರಿಂದ ನಂನ ಬದುಕು ಬಹಳ

೧೬ ಲುಕ್ಸಾನು ಆಯಿತ್ತು ತ್ತೊಟಕ್ಕೆ ಗೊಬ್ಬರ ಸಪ್ಪುಹಾಕು

೧೭ ವ ಹಂಗಾಮಿನ ದಿವಸದಲ್ಲು ಅದು ಯಾಹೊತ್ತಂ

೧೮ ನ್ನು ಚಿತಾಯಿಶಿ ಮಾಡಿಶಿಕೊಂಡು ಹೊದ್ದರ್‍ರಿಂದ ಹತ್ತು

ಹಿಂಭಾಗ

೧೯ ವರಹಾ ಲುಕ್ಸಾನು ಆಯಿತ್ತು ದೆವರು।ನಂನ ಲುಕ್ಸಾನು ಹ

೨೦ ಣ ಅದು ಸಹಾ ಕೂಡಿಶಿಕೊಡುವಂತ್ತೆ ಅಪ್ಪಣೆ ಆಗಬೇಕು.

೨೧ ದೇವರ್‍ರು । ಪುಟ್ಟಯನ ರುಜು

೨೨ ಕೆಳದಿ ಮಾಗಣೆ ಶೆಕದಾರ್‍ರಿಗೆ ದರ್‍ರಿಲಿಖಿ ಅರ್ಜಿಯಲ್ಲಿನ**

೨೩ ಮೂದಿರುವ ಆಳುಗಳು ಯಿಾತ್ತನದೆ ಆಗಿದಿದ್ರ ಹರಕತ್ತ ಯಿ

೨೪ ಲ್ಲದಿದ್ರೆ ಯಿತ್ತನ ಸ್ವಾಧಿನಾ ಮಾಡಿ ಆ ಬಗ್ಯೆ ಶಿಗ್ರ ಹರಕತ್ತುಯಿದ್ರೆ

೨೫ ಆ ಆಳುಗಳಿಗೆ ಯಿರಕ್ಕೆ ಆಶ್ರಯ ಕೊಟ್ಟು ಯಿಟ್ಟು ಕೊಂ

೨೬ ಡಂತ್ತ ಮನುಶ್ಯಗೆ ಸಹಾಯಿಲ್ಲಿ ಗೆದವಾರ್ನೆ ವಯಿದರ ಕೆಳರ್ಗೆ

೨೭ ರ್‍ರಿ ಪೊರಟ ಮಾಡಿಕೊಳುವದುಬ ತ್ತಾ ೫ನೆ ಸಪಟಂಬರ್‍ರ ಸನ್ ೧೮೩೫

೨೮ ನೆ ಯ್ಸಿವಿ ಮೊಖಂ ಸಾಗರ್ರ.*

(* ಸಾಲು ೨೧ರ ವರೆಗೆ ಇರುವ ಅಕ್ಷರಗಳು ಅನಂತರ ೨೨-೨೮ ರವರೆಗಿನ ಅಕ್ಷರಗಳಲ್ಲಿ ವ್ಯತ್ಯಾಸವಿದೆ.)

ಸಹಿ ಇದೆ **ಸಹಿ ಇದೆ**

ಉಪಸಂಹಾರ

ಕೆಳದಿ ಇತಿಹಾಸೋತ್ತರ ಕಾಲದಲ್ಲಿ ಟಿಪ್ಪುವಿನ ನಂತರ ನಗರವನ್ನು ಕೇಂದ್ರವಾಗಿಟ್ಟು ಕೊಂಡು ಬಂಗಾಲದ ಸಿವಿಲ್ ಸರ್ವೀಸ್ ಅಧಿಕಾರಿ ಡೆವರೋಕ್ಸ್, ಸ್ಟೋಕ್ಸ್ ಮೊದಲಾದವರು ಆಡಳಿತ ನಡೆಸಿದರು. ನಗರ ಡಿವಿಜನ್ ಕಾಲದ ಇಕ್ಕೇರಿ, ಸಾಗರ ತಾಲೂಕು ಚಂದ್ರಗುತ್ತಿ ತಾಲೂಕು ಮಾಮಲೆದಾರರು, ಫೌಜುದಾರರು ಮೊದಲಾದವರ ವಿವರಗಳನ್ನು ಒಳಗೊಂಡ ಐತ್ಹಾಸಿಕ ದಾಖಲೆಗಳು ಈ ಪ್ರಾಂತದಲ್ಲಿ ಈಗಲೂ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದೆ. ಸ್ಟೋಕ್ಸ್, ಶೇಕ್ ಅಯಾಜ್ ಮೊದಲಾದವರ ಚಾರಿತ್ರಿಕ ದಾಖಲೆಗಳು ಅಲ್ಲಲ್ಲಿ ದೊರೆಯುತ್ತದೆ. ಕೆಳದಿ ವಸ್ತು ಸಂಗ್ರಹಾಲಯ ಇವುಗಳನ್ನು ಸಂಗ್ರಹಿಸುವ, ಸಂರಕ್ಷಿಸುವ ಪ್ರಯತ್ನ ಮಾಡುತ್ತಿದೆ. ಈ ಪತ್ರಗಳು ಕೆಳದಿ ಇತಿಹಾಸೋತ್ತರ ಕಾಲದ ಸಾಮಾಜಿಕ, ಧಾರ್ಮಿಕ ಆಡಳಿತ ವ್ಯವಸ್ಥೆಯನ್ನು ಅಭ್ಯಾಸ ಮಾಡುವುದಕ್ಕೆ ಖಚಿತವಾಗಿ ಗ್ರಹಿಸುವುದಕ್ಕೆ ಪ್ರಮುಖ ಆಕರವಾಗಿದೆ.*

* (ಈ ಲೇಖನ ಸಿದ್ಧಪಡಿಸಲು ಸಹಾಯ ಮಾಡಿದ ಶ್ರೀ ಕೆಳದಿ ಗುಂಡಾಜೋಯಿಸ್‌ರವರಿಗೂ, ಮೂಲ ದಾಖಲೆಗಳನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಟ್ಟ ಸಾಗರದ ದಿ. ಶ್ರೀ ಸೂರ್ಯನಾರಾಯಣ ಜೋಯಿಸ್ ಕುಟುಂಬದವರಿಗೂ, ದೊಡ್ಡೇರಿಯ ಶ್ರೀರವರಿಗೂ ಕೃತಜ್ಞತೆಗಳು.)

ಅನುಬಂಧ : ೧

ನವಾಬರು ಹೈದರಲ್ಲಿ ಖಾನರು ಅಖ್ಯೆರುವರಿಗೆಯಿವರಿಗೆ ಯಿದ್ದ ಶೀಮೆ ವಿವರ. ಸಾಬಕು ದೊರೆಗಳ ದಿವಸದಲ್ಲಿ ಯಿದ್ದ ಶೀಮೆ ಪಟ್ಣದ ಕಸಬೆಯಲ್ಲಿ ನಗರ ಶೀಮೆ ವಿವರ.[೬]

ಹಾವೇರಿ ಬಿದಲೂರು	ತರಿಕೆರೆ	ಚಂನಗಿರಿ	ಮಂಗಲೂರು ಕೊಡಿಯಾಲೂ
ಬೆಂಕಿಪುರ	ಲಕವಳಿ	ಮಾವಿನಹೊಳೆ	ಸದಾಶಿವಗಡಾ
ಕುಂಮುಶಿ	ಚಂದ್ರಗುತ್ತಿ	ಕೊಪ್ಪ	ಕೊಲ್ಲೂರು
ಅಂಗ	ಅನಂತಪುರ	ಯಡಹಳಿ	ಉಡುಪು
ಆನವಟ್ಟಿ	ಯಿಕ್ಕೇರಿಸಾಗರ	ಸಂತೆಬೆನ್ನೂರು	ಗೋಕರ್ನಾ
ಯಿಕ್ಕೇರಿಸಾಗರ	ಆಯನೂರು	ಸೊರಬ	
		ತವನಂದಿ	ಚಿಕ್ಕಾಲಾ
ಶಿವಮಗೆ	ತುರುಕರು	ಬಳಾಳಿರಾಯನ ದುರ್ಗ	ಶ್ರ್ಯಂಗೇರಿ
	ಹೊಂನಾಳಿ		
ಹೊಳಿಹೊನ್ನೂರು	ಅಂಜಂಪುರ	ಅಣಜಿ	ಕುಂದಾಪುರ ಕುಶಾಂಪುರ
ಉಡುಗಣಿ	ಮಂಡಗದ್ದೆ	ಫಾಯಮಪಾಟಿ	ಹೊನ್ನಾವರಾ
ಕವಲೆದುರ್ಗಾ	ದಾನಿವಾಸ	ಬಾರಕೂರು	ಮೂಡಬಿದರೆ
ಮಹದೇವಪುರ	ಚಡಯಾ	ಕಾರಕಳಾ	ಬಸವರಾಜದುರ್ಗ
ಶಿಖಾರಿಪುರ			
ದರಿಯ ಬಹದರಿಗಡಾ	ಶಂಕರನಾರಾಯಣ	-	ಕೂಡಿಸಿ
ಕೋಟೇಶ್ವರ	ಸುಬ್ರಹ್ಮಣ್ಯ	-	ಕಂಗೊಂದಿ

ಅನುಬಂಧ : ೨


Selections from the Records of the Mysore Commissioner's office, H. Stokes, Nuggur Division, Madras Civil Service.

N. 8


Taluks in the Nuggur Division and Maganays included formerly in the Taluk of Ikkery Sagur.


1. Ikkery	These are called ayshime or five districts. They were given by the Vijayanagara kings in Jagheer to Choudappa Naik, Keladi.
2. IkkeryDevastan	
3. Yalagulalai	
4. Atwadai	
5. Tadakodi	
6. Kalasi	
7. Muntsali	

ಪತ್ರ - ೧




ಪತ್ರ-೨೮ ಮುಂಬದಿ






ಪತ್ರ-೨೮ ಹಿಂಬದಿ


ಪತ್ರ-೩೮ ಮುಂಬದಿ



ಪತ್ರ-೩೮ ಹಿಂಬದಿ



ಪತ್ರ-೪



8. Karrur Nadwad
9. Karrur Brahmanawad
10. Soulnad
11. Siravanti
12. Malali
13. Morabadi Nadwad
14. Morabadi Nadwad
15. Savantan cuttai
16. Serahellay
17. Iduvani
18. Tolguppa
19. Keladi
20. Kyesanur
21. Tadagalala
22. Chendranum coppula[2]

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಕೆನ್ನವಿ., ೧೯೨೧, (ಸಂ.) ಶಾಮಾಶಾಸ್ತ್ರಿ ಆರ್. ಪುಟ iv
A Journey from Madras through the Countries of Mysore Canara and Malabar by Francis Buchanan Vol II p.378

೨. ಕೆಳದಿ ಗುಂಡಾಜೋಯಿಸ್., 'ಡ್ಯೂಕ್ ಆಪ್ ವೆಲ್ಲಿಂಗಟನ್ ಪತ್ರಾಗಾರದಲ್ಲಿರುವ ಕಳದಿ ಇತಿಹಾಸೋತ್ತರ ಆಕರಗಳು', **ಇತಿಹಾಸ ದರ್ಶನ**, ಸಂ. ೧೫/೨೦೦೦, ಪುಟ ೧೩೩ ರಿಂದ ೧೩೭.

೩. ಹೆಚ್. ಬಿ. ಡೆವರೋಕ್ಸ್‌ನ ಕುರಿತ ಅಮೂಲ್ಯ ದಾಖಲೆ ಬಗ್ಗೆ ಶ್ರೀ ರಾಮಚಂದ್ರಪುರ ಮಠದ ರಾಜಮಾನ್ಯ ಇತಿಹಾಸ ವೈಭವ ಸಂ. ೨ ನಿರೂಪಗಳು (ಅಪ್ರಕಟಿತ) ಮತ್ತು ವಸ್ತು ಸಂಗ್ರಹಾಲಯದಲ್ಲಿ ಗಮನಿಸಬಹುದು.

೪. General Memorandum on Mysore etc.,p.6,7.

೫. ಸಾಲು ೨೧ರವರೆಗೆ ಇರುವ ಅಕ್ಷರಗಳನ್ನು ಅನಂತರ ೨೨ರಿಂದ ೨೮ರವರೆಗಿನ ಅಕ್ಷರಗಳಲ್ಲಿ ವ್ಯತ್ಯಾಸವಿದೆ.

೬. ಸಂ: ತಿ. ತಾ ಶರ್ಮ., ೧೯೬೯, **ಚಾರಿತ್ರಿಕ ದಾಖಲೆಗಳು**, ಕಸಾಪ, ಬೆಂಗಳೂರು. ೧೯೯೯ ಪುಟ ೯೭ ರಿಂದ ೧೦೪

೭. From 17to 24 - Maganayas Included in the chendragutty Taluk ಎಂಬ ಉಲ್ಲೇಖ ಇದೆ ಈ ಬಗ್ಗೆ ಹಾಗೂ ಸ್ಟೋಕ್ಸನ ಚಾರಿತ್ರಿಕ ದಾಖಲೆ ಬಗ್ಗೆ ಜರಾಕ್ಸ್ ಪ್ರತಿ ನೋಡಬಹುದು.

ಡಾ.ಬಿ. ಲೀಲಾ*

ದಿವಾನ್ ಆನಂದರಾಯರ ಕಾಲದ ಮಹತ್ವದ ಐತಿಹಾಸಿಕ ಘಟನೆಗಳು (೧೯೦೯-೧೯೧೨)

ಮೈಸೂರು ಸಂಸ್ಥಾನದಲ್ಲಿ ಹಲವಾರು ದಿವಾನರು ತಮ್ಮ ವರ್ಚಸ್ಸು, ಪ್ರಭಾವದಿಂದ ಮೈಸೂರು ಪ್ರಗತಿಗೆ ಮತ್ತು ಏಳ್ಗೆಗೆ ಕಾರಣರಾಗಿದ್ದಾರೆ. ಮತ್ತು ಹಲವರು ತಮ್ಮ ಹಕ್ಕು ಕಾಯ್ದುಕೊಳ್ಳಲು ಬ್ರಿಟಿಷ್ ಸಾರ್ವಭೌಮತ್ವಕ್ಕೆ ಮೊರೆ ಹೋಗಿದ್ದುಂಟು. ಹೀಗೆ ಪ್ರಗತಿಪರ[1] ಎಂದು ಬಿರುದು ಹೊಂದಿದ್ದ ಮೈಸೂರು ಹಲಮೊಮ್ಮೆ ಎಡವಿದ್ದುಂಟು.

ಟಿ. ಆನಂದರಾಯರು, ವಿ. ಪಿ. ಮಾಧವರಾಯರ ನಂತರ ಬಂದ ದಿವಾನರು ತಮ್ಮ ವಿದ್ಯಾಭ್ಯಾಸವನ್ನು ಉನ್ನತ ದರ್ಜೆಯಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಮುಗಿಸಿ (೧೮೭೧) ಮೈಸೂರು ಸರ್ಕಾರವನ್ನು (೧೮೭೩) ಸೇರಿದರು. ಮೊದಲು ಮ್ಯಾಜಿಸ್ಟ್ರೇಟ್ ಪದವಿಯಲ್ಲಿ ಹಲವಾರು ಊರನ್ನು ಸಂದರ್ಶಿಸುವ ಸಂದರ್ಭ ದೊರಕಿದಾಗ ತಮ್ಮ ದಕ್ಷತೆ ಮತ್ತು ಸಂಯಮದಿಂದ[2] ಮೇಲಧಿಕಾರಿಗಳ ಮೆಚ್ಚುಗೆ ಪಡೆದು, ಉನ್ನತ ಪದವಿಗೇರಿ, ಮಹಾರಾಜರ ಸಲಹೆಗಾರರಾಗಿ, ೧೯೦೯ರಲ್ಲಿ ಮೈಸೂರಿನ ದಿವಾನರಾದರು.

ಟಿ. ಆನಂದರಾಯರ ಕಾಲದಲ್ಲಿ ಹಿಂದೆ ನಡೆದುಬಂದ ಯೋಜನೆಗಳ ಮುಂದುವರಿಕೆಯನ್ನೇ ಕಾಣುತ್ತೇವೆ. ಮುಖ್ಯವಾದ ಎರಡು ಪ್ರಗತಿಪರ ಯೋಜನೆಗಳನ್ನು ಹೆಸರಿಸುವುದಾದರೆ; ಒಂದು ಆರ್ಥಿಕ ಸಮ್ಮೇಳನ (೧೯೧೧) ಮತ್ತು ಮೈಸೂರು ಸಿವಿಲ್ ಪರೀಕ್ಷೆಯನ್ನು ಮೈಸೂರಿನಲ್ಲಿ ಹುಟ್ಟಿದ ಅಥವಾ ಅಲ್ಲಿ ವಸತಿ ಹೊಂದಿದ ಅಥವಾ ಅಲ್ಲಿಯ ಕಾಲೇಜಿನಲ್ಲಿ ಪಾಸುಮಾಡಿದ ವಿದ್ಯಾರ್ಥಿಗೆ ಆದ್ಯತೆ ಕಾಯ್ದೆ. ಇದು ಮೈಸೂರಿನವರಿಗೆ ಉಪಯುಕ್ತವಾಗಿ ಕಂಡಿತು. ಆರ್ಥಿಕ ಮುನ್ನಡೆ ಯೋಜನೆಗಳನ್ನು ನೋಡುವುದಾದರೆ, ಕಾವೇರಿ ಜಲಾಶಯದ ತೊಟ್ಟಿಯ ನೀರಿನಿಂದ ಶಿವನಸಮುದ್ರಕ್ಕೆ ವಿದ್ಯುತ್ ಸರಬರಾಜು, ಮೈಸೂರು - ಹಾಸನ ರೈಲು ಸಂಪರ್ಕಕೈಗಾರಿಕಾ ಉದ್ಯಮಕ್ಕೆ ಸಹಾಯವಾಗುವಂಥ ಸ್ಕೂಲುಗಳ ಆರಂಭ ಇವುಗಳನ್ನು ಹೆಸರಿಸಬಹುದು.

ಮತ್ತೊಂದು ಐತಿಹಾಸಿಕ ರೋಮಾಂಚಕ ಘಟನೆ : ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳ ಭಾಷಣದ ರದ್ದು ಕಾಯ್ದೆ; 'ಮಾದರಿ ಮೈಸೂರು ಮಾದರಿಯಾಗಿತ್ತೇ'? ಈ ಬಗೆಗೆಲ್ಲ ಈ ಪ್ರಬಂಧದಲ್ಲಿ ಹೆಚ್ಚು ಒತ್ತು ಕೊಟ್ಟಿದೆ. ದಿವಾನ್ ಟಿ. ಆನಂದರಾಯರ ಆಡಳಿತದ ವೈಖರಿಯನ್ನು ನೋಡುವಾಗ ಮೂರು ವಿಶಿಷ್ಟ ಗುಣಗಳನ್ನು ಕಾಣುತ್ತೇವೆ.

(೧) ಸದಾಕಾಲದಲ್ಲಿಯೂ ಅರಸನಿಗೆ ವಿಧೇಯತೆ (೨) ಹೊರಗಿನವರೆಗೆ ಮಣಿಯತಕ್ಕದ್ದಲ್ಲ. (೩) ದೈನಂದಿಕ ಕಾರ್ಯದ ಮಹತ್ವ (೪) ಸಾರ್ವಜನಿಕ ಅಭಿಪ್ರಾಯ ಹೇಗೆ ಇರಲಿ ಅದನ್ನು ಉದಾಸೀನವಾಗಿ[3] ಕಾಣುವದು. ಮೊದಲನೆ ಮತ್ತು ಕೊನೆಯ ಗುಣವನ್ನು ಅವರ ಕಾಲದಲ್ಲಿ ನಡೆದ ಹಲವಾರು ಘಟನೆಗಳಿಂದ ಶ್ರುತಪಡಿಸಬಹುದು.

ಮೈಸೂರು ಆರ್ಥಿಕ ಸಮ್ಮೇಳನ

ಮೈಸೂರಿನ ಮೊದಲನೆ ಆರ್ಥಿಕ ಸಮ್ಮೇಳನ 'ಜನರ ಯೋಗಕ್ಷೇಮಕ್ಕೋಸ್ಕರ' ಕರೆದ ಸಮ್ಮೇಳನ ಎಂದು ಜನರ ಮೆಚ್ಚುಗೆ ಪಡೆಯಿತು. ಈ ಸಮ್ಮೇಳನವನ್ನು ಮಹಾರಾಜರು ಖುದ್ದು ಪರಿಶೀಲಿಸುವ ಆಶ್ವಾಸನೆ ಕೊಟ್ಟಿದ್ದರಿಂದ ಇದು ಇಡೀ ಭಾರತದ ಗಮನವನ್ನು ಸೆಳೆಯಿತು. ಇದರಲ್ಲಿ ಮಂಡಿಸಿದ ಮುಖ್ಯವಾದ ವಿಷಯ; ಬಡತನ ರೋಗ ಮತ್ತು ಅಕಾಲಿಕ ಮರಣ ಮೂಲ ಕಾರಣವನ್ನು ಸಂಶೋಧಿಸಿ ಪ್ರಯತ್ನಿಸಿ ಕಡಿಮೆ ಮಾಡುವುದು. ಅಜ್ಞಾನವನ್ನು ಹೋಗಲಾಡಿಸಿ ದೃಢತೆಯನ್ನು ಮತ್ತು ಸಮಾಜದ ನಾಗರೀಕತೆಗೆ ಕಾರಣವಾದ ಹಲವು ಉದ್ಯೋಗ ವ್ಯವಹಾರದಲ್ಲಿ ಆಧುನಿಕ ಸಲಕರಣೆಗಳನ್ನು ಉಪಯೋಗಿಸಿ ಆಚಾರ, ವ್ಯವಹಾರದಲ್ಲಿ ನವೀಕರಣ ಅಳವಡಿಸುವುದು. ಸಮಾಜದ ಎಲ್ಲಾ ಓರೆಕೋರೆಗೆ ವಿದ್ಯಾಭ್ಯಾಸ ಮುಖ್ಯವೆಂದರೂ ಇದರರ್ಥ ಕೇವಲ ವಿಶ್ವವಿದ್ಯಾನಿಲಯದ ಡಿಗ್ರಿ ಅಲ್ಲ; ಅಗತ್ಯವಿರುವ ಕೈಗಾರಿಕಾ ಉದ್ಯಮಕ್ಕೂ ಸಹಾಯವಾಗುವಂಥ ಸ್ವಾವಲಂಬನ ಸ್ಕೂಲುಗಳು. ಮಕ್ಕಳನ್ನು ಇಂಥ ಸ್ಕೂಲಿನಲ್ಲಿ ನೋಂದಾಯಿಸಿದರೆ ಅವರು ಸ್ವಾವಲಂಬಿಗಳಾಗಿ ಉದ್ಯೋಗ ಮಾಡಬಹುದು. ನಾಗರೀಕ ಸಮಾಜ ಇದನ್ನು ಬೆಂಬಲಿಸಬೇಕು. ಹೀಗೆ ದೇಶದ ಆರ್ಥಿಕ ಮುನ್ನಡೆಗೆ ಅಡಚಣೆಗಳಾದ ನಿರಕ್ಷತೆ, ರೈತರ ಬಡತನ, ಸಾಲಕ್ಕೆ ಋಣಿಯಾದ ರೈತನ ಅಸಹಾಯಕತೆ ಸರ್ಕಾರದಲ್ಲೇ ಕೆಲಸ ಬೇಡುವ ವಿದ್ಯಾವಂತರ ತಂಡ,ಇವು ಸುಧಾರಣೆಗಿರುವ ಅಡಚಣೆ.

ಮೈಸೂರಿನ ಉದ್ಯೋಗ ಪತಿಗಳು ಮೈಸೂರಿನಲ್ಲಿ ಬಂಡವಾಳ ಹೂಡಿ ಕೈಗಾರಿಕಾ ಕಾರ್ಖಾನೆಗಳನ್ನು ಸ್ಥಾಪಿಸಬಹುದು.

* ಫ್ಲಾಟ್ ನಂ.೪೬, ೧ನೇ ಮಹಡಿ, 'ಶ್ಯಾಮಲ', ಡಾನ್‌ಬಾಸ್ಕೋ ಶಾಲೆಯ ಹಿಂಬದಿ, ಮಾತಂಗಿ, ಮುಂಬಯಿ-೧೯

ಆದರೆ ಅವರ ಬಂಡವಾಳ ಬಹಳ ಕಡಿಮೆ. ಮನುಷ್ಯ ತನ್ನ ದೈನಂದಿಕ ಅವಶ್ಯಕತೆಗಳನ್ನು ಪೂರೈಕೆ ಮಾಡಿದರೆ ಸಾಲದು, ಆರ್ಥಿಕ ಮಟ್ಟ ಏರಬೇಕು. ಚಿಕ್ಕ ಪುಟ್ಟ ಕೈಗಾರಿಕೆಗೆ ಸ್ವಾವಲಂಬನ-ಇವುಗಳಿಗೆ ಹೆಚ್ಚು ಒತ್ತು ಕೊಟ್ಟು ಕೆಳವರ್ಗದ ಜನರ ಆರ್ಥಿಕ ಮಟ್ಟವನ್ನು ಏರಿಸಲು ಶ್ರಮಿಸಬೇಕೆಂದು ಸಮ್ಮೇಳನದಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಇದರ ಮೇಲ್ವಿಚಾರಣೆಗೆ ಉತ್ತಮ ಮಟ್ಟದ ಅಧಿಕಾರಿಗಳನ್ನು ಮತ್ತಿತರನ್ನು ಒಳಗೊಂಡ ಒಂದು ಕಾರ್ಯಕಾರಿ ಸಮಿತಿಯನ್ನು ಸರ್ಕಾರ ರಚಿಸಿತು.

ಸರ್ಕಾರವು ಕೃಷಿ ವ್ಯವಸಾಯದ ಬಗ್ಗೆ ಹೆಚ್ಚು ಆಶ್ವಾಸನೆ ನೀಡಿತು. ವ್ಯವಸಾಯದ ರೀತಿಯ ಬಗ್ಗೆ ದೀರ್ಘಕಾಲ ಯೋಚನೆ ಮಾಡಿ ಒಂದು ನಿಲುವನ್ನು ತಾಳಿತು. ಖಾಲಿ ನಿವೇಶನದಲ್ಲಿ ವ್ಯವಸಾಯ ಆದ್ಯತೆ, ಸಭೆಗಳಲ್ಲಿ ನಡೆದ ಎಲ್ಲದರ ಬಗ್ಗೆ ಹೊತ್ತಿಗೆ ತಯಾರಿಸಿ ಹಂಚುವಿಕೆ, ರೈತರಿಗೆ ಸಕಾಲದಲ್ಲಿ ಬಿತ್ತನೆ ಹಂಚಿಕೆ ಮತ್ತು ರೈತರ ಮಕ್ಕಳ ವಿದ್ಯಾರ್ಥಿ ವಿಶೇಷ ತರಬೇತು ನೀಡಲು; ಮೈಸೂರಿನ ರೇಷ್ಮೆಗೆ ಹೊರದೇಶದಲ್ಲಿ ಬೇಡಿಕೆ ಇದ್ದಿದ್ದರಿಂದ, ೧೪ ರೈತ ಮಕ್ಕಳಿಗೆ (ರೇಷ್ಮೆ ಹುಳು ಸಾಗಾಣಿಕೆ) ಟಾಟಾ ಭೂಮಿ ಗೊತ್ತುವಳಿಯಲ್ಲಿ ಕೆಲಸ ಕಲಿಯಲು ಕಳುಹಿಸಿತು. ಬೂತರಕ್ಕರ್ ಅವರು ಬರೆದ ರೇಷ್ಮೆ ಬಗ್ಗೆಯ ಹೊತ್ತಗೆಯನ್ನು ಹಂಚಲಾಯಿತು. ತೋಟಗಾರಿಕೆ ಯಲ್ಲಿ ವಿಶೇಷ ಆನುಭವ ಪಡೆಯಲು ಹನ್ನೆರಡು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಟ್ಟು ಲಾಲ್‌ಬಾಗ್ ನಲ್ಲಿ ತರಬೇತಿಗೆ ಕಳುಹಿಸಿತು'.[೫]

ಸಾಮಾನ್ಯ ರೈತನಲ್ಲಿ ಮತ್ತು ಪ್ರಜೆಗಳಲ್ಲಿ ಉತ್ತಮ ಬಾಂಧವ್ಯ ಏರ್ಪಡಿಸಲು ಸರ್ಕಾರ ಶ್ರಮಿಸಿ ಮೂರು ಅಧಿಕಾರಿಗಳು, ಏಳುಸಾಮಾನ್ಯರು, ಅಂದರೆ ಅನುಭವ ಮತ್ತು ಅಧಿಕಾರ ಯುಕ್ತವಾಗಿ ಮಾತಾಡಬಲ್ಲವರು ಕೂಡಿದಂಥ ಸಮಿತಿ ರಚಿಸಿದೆ. ಪ್ರಜೆಗಳಿಗೆ ಉತ್ತಮ ವಾತಾವರಣ ಕಲ್ಪಿಸಬಹುದೆಂದು ಸರ್ಕಾರವು ಆಶಿಸಿತು. ನಿರಂತರ ಆರ್ಥಿಕ ಚರ್ಚೆಯ ನಂತರ, ಮಂಗಳೂರಿನಲ್ಲಿ ಹೆಂಚಿನ ಕಾರ್ಖಾನೆ ಸ್ಥಾಪಿಸಲು ಸರ್ಕಾರ ಒಪ್ಪಿ ಇಂಡಸ್ಟ್ರಿಯಲ್ ಸ್ಕೂಲ್ ಪ್ರಿನ್ಸಿಪಾಲ್ ಜಿ. ಸುಬ್ಬಸ್ವಾಮಿ ಐಯರ್‌ರವರನ್ನು ಮಂಗಳೂರಿಗೆ ವಿಶೇಷ ತರಬೇತಿಗೆ ಕಳುಹಿಸಿತು. ಇದಲ್ಲದೆ ಸರ್ಕಾರದ, ಬ್ಯಾಂಕ್ ಸಹಕಾರಿ ಯೋಜನೆ ಜನರ ಗಮನ ಸೆಳೆಯಿತು. ಜನತೆಯ ಸ್ವಸ್ಥತೆ ಬಗ್ಗೆ ಹೆಚ್ಚಿನ ಒತ್ತು ಕೊಟ್ಟು (Public Health) ಮೈಸೂರಿನಲ್ಲಿ ಸದಾ ಪೀಡಿಸುತ್ತಿದ್ದ ಕಾಲರ, ಪ್ಲೇಗ್, ಸಿಡುಬು ರೋಗ ನಿವಾರಣೆಗೆ ಆದ್ಯತೆ ಕೊಡುವುದು ಸರ್ಕಾರದ ಕರ್ತವ್ಯವಾದ್ದರಿಂದ ಪ್ಲೇಗ್ ಬಂದಾಗ ಊರ ಹೊರಗೆ ಶಾಶ್ವತವಾದ ಜೋಪಡಿಗಳಿಗೆ ವ್ಯವಸ್ಥೆ ಮಾಡುವಂತೆ ಸರ್ಕಾರ ಆಣತಿ ಮಾಡಿತು. ಸೋಂಕು ತಗಲಿದ ಜಾಗಗಳಲ್ಲಿ ಪೆಟ್ರೋಲ್ ಮತ್ತು ಸೋಪಿನಿಂದ ಸಿಂಪಡಿಸುವುದು ಮತ್ತು ಕಡ್ಡಾಯ ವ್ಯಾಕ್ಸಿನೇಷ್‌ ಮತ್ತು ಇದಕ್ಕೆ ತರಬೇತಿ ಹೊಂದಿದ ಡಾಕ್ಟರ್ ಸಹಾಯ "ಇದು ವ್ಯಾಕ್ಸಿನೇಷ್‌ ಮಾಡಲು, ಮಾಡುವವರು ಹಾಗು ಮಾಡಿಸಿಕೊಳ್ಳುವವರಲ್ಲಿ ಧೈರ್ಯತುಂಬಿತು". ಡಿವಿಷನ್‌ನಲ್ಲಿ ಸ್ಯಾನಿಟರಿ Officer ಬದಲಾಗಿ ಡಿಸ್ಟ್ರಿಕ್ಟ್ ಸ್ಯಾನಿಟರ್ ಅನ್ನು ನೇಮಿಸಿ ಸದಾ ಕಾರ್ಯ ನಿರ್ವಾಹಕ ಮಂಡಲಿಯ ಮುಖ್ಯಸ್ಥರ ಕೆಳಗೆ ಇರುವಂತೆ ಸರ್ಕಾರ ಏರ್ಪಡಿಸಿತು.

ವಿದ್ಯಾಭ್ಯಾಸದ ವಿಣಯದಲ್ಲಿ ಹಳ್ಳಿಯ ಮೇಷ್ಟರ ಸಂಬಳ ಹೆಚ್ಚಿಸಿ, ಅವರಿಗೆ ಹೆಚ್ಚು ಜವಾಬ್ದಾರಿ ವಹಿಸಿತು. ಸ್ಕೂಲ್ ಬಿಟ್ಟಮೇಲೆ ವಿದ್ಯಾರ್ಥಿ, ಸ್ವಾವಲಂಬಿಯಾಗುವುದಕ್ಕೆ ಕೈಗಾರಿಕಾ ಸ್ಕೂಲುಗಳನ್ನು ತೆರೆದು ಸಹಾಯ ಮಾಡಿತು. ಸರ್ಕಾರ ೧೭ ಜನರನ್ನು ಹೊರದೇಶಕ್ಕೆ ತರಬೇತಿಗಾಗಿ ಕಳುಹಿಸಿತು ಮತ್ತು ಹೊರದೇಶದಲ್ಲಿ ತರಬೇತಿ ಹೊಂದಿದವರು ಸಾಕಷ್ಟು ಜನ, ಇರುವದನ್ನು ಸರಕಾರ ಗಮನಕ್ಕೆ ತಂದುಕೊಂಡಿತು.

ಇವೆಲ್ಲಾ ಪ್ರಗತಿಪರ ಯೋಜನೆಗಳಾದರೆ, ಪ್ರಗತಿಪರ ಮೈಸೂರು ರಾಜ್ಯ ಒಂದೆಡೆ ಎಡವಿತು. ಪ್ರಗತಿಪರ ಮೈಸೂರು ಹೀಗೆ ವರ್ತಿಸಬಹುದೆಂಬ ಊಹೆಗೂ ನಿಲುಕುವುದಿಲ್ಲವೆಂದು ಜನ ಅಭಿಪ್ರಾಯಪಟ್ಟಿತು.

ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಮತ್ತು ಮೈಸೂರಿನ ಸಂಬಂಧ

ಮೈಸೂರಿನ ರಾಜಕೀಯ ಚರಿತ್ರೆಯಲ್ಲಿ ವಿರೋಧಾಭಾಸ ವೆಂದು ಗಣಿಸುವ ಘಟನೆಯೆಂದರೆ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳ ಭಾಷಣದ ಮೇಲೆ ಹೇರಿದ ನಿಷೇಧಾಜ್ಞೆ. (೧೯೧೦-೧೧) ಅಮೇರಿಕಾದ ಸಮಾಜ ಸುಧಾರಕಳಾದ ಮಿಸ್ ಟೆನ್ನೆಂಟ್[೫೮] ಇಂಡಿಯಾಕ್ಕೆ ಬಂದು, ಬೆಂಗಳೂರಿನಲ್ಲಿ ಹಲವು ಮುಖ್ಯವಾದ ವಿಷಯದ ಮೇಲೆ ಭಾಷಣವನ್ನು ಕೊಡಲು ಇಚ್ಚಿಸಿದಳು. ಅವಳಿಗಿದ್ದ ಮುಖ್ಯ ಆಸಕ್ತಿ ವಿಷಯ; ಬಾಲ್ಯವಿವಾಹದ ರದ್ದು ಮತ್ತು ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ. ಅವರ ಭಾಷಣ ಶಂಕರಮಠದಲ್ಲಿ ಏರ್ಪಾಡಾಗಿ, ವಿ. ಪಿ. ಮಾಧವರಾಯರು ಅಧ್ಯಕ್ಷತೆ ವಹಿಸ ಬೇಕಾಗಿತ್ತು. ಆದರೆ ಉಪನ್ಯಾಸಕ್ಕೆ ಜನ ಸಂಜೆ ಸೇರಿದಾಗ ಪೋಲಿಸ್‌ರವರ ಹುಕುಂನಿಂದ ರದ್ದಾಯಿತು. ಮೈಸೂರಿನಲ್ಲಿ ಸಾರ್ವಜನಿಕರ ಸಭೆಯನ್ನು ರದ್ದುಗೊಳಿಸಿದ್ದು ಇದೇ ಮೊದಲು. ಇದಕ್ಕೆ ಕಾರಣ ಕೊಡದ ಸರ್ಕಾರದಲ್ಲಿ ಗೊಂದಲ ಏರ್ಪಟ್ಟಿತು.

೧೯೦೬ ರಲ್ಲಿ ವಿ.ಎಸ್. ಶ್ರೀನಿವಾಸಶಾಸ್ತ್ರಿಗಳನ್ನು ಮೈಸೂರು ಅತ್ಯಂತ ಪ್ರೀತಿಯಿಂದ ಬರಮಾಡಿಕೊಂಡಿತು. ಆದರೆ ಅದೇ ಶಾಸ್ತ್ರಿಗಳ ಭಾಷಣವನ್ನು ೧೯೧೧ರಲ್ಲಿ ನಿಷೇಧಾಜ್ಞೆಯ ಕಾಯ್ದೆ ಹೊರಡಿಸಿ ತಪ್ಪಿಸಿತು. "ಮೈಸೂರು ಶಾಸ್ತ್ರಿಗಳು ಅತ್ಯಂತ ಪ್ರೀತಿಸಿದ ಊರು".[೬] ಶಾಸ್ತ್ರಿಗಳು ಗೋಪಾಲ ಕೃಷ್ಣ ಗೋಖಲೆ ಯವರ ಸಂಸ್ಥೆಯಾದ ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಸದಸ್ಯರು. ಗೋಖಲೆಯವರು ದೇಶ ಚಿಂತನೆಯನ್ನು ಮಾನವ ಕುಲದ ಸೇವೆಯೆಂದು ಎಣಿಸಿದವರು. ವಿದ್ಯಾವಂತರು ಹಲವು

ಮಂದಿಯಾದರೂ ದೇಶಸೇವೆಗೆ ಸಿದ್ಧರಾದ ಹೊರತು ದೇಶದ ಏಳಿಗೆ ಸಾಧ್ಯವಿಲ್ಲ ಎಂಬ ಭಾವನೆ ಅವರಿಗಿತ್ತು. ಅದಕ್ಕಾಗಿ ಅವರು ಉದ್ದೇಶಿಸಿದ ಸಂಸ್ಥೆ 'Servents of India Society' (ಭಾರತ ದೇಶ ಸೇವಿಕಾ ಸಂಘ) ಎಂಬ ಹೆಸರಿನಿಂದ ೧೯೦೫ ಜೂನ್ ೧೯ನೇ ತಾರೀಖು ಪೂನಾದಲ್ಲಿ ಸ್ಥಾಪಿತವಾಯ್ತು. ವಿ.ಎಸ್. ಶ್ರೀನಿವಾಸಶಾಸ್ತ್ರಿಗಳು ಗೋಖಲೆಯವರ ಸಿದ್ಧಾಂತವನ್ನು ಮೆಚ್ಚಿ ಆದಕ್ಕೆ ಸದಸ್ಯರಾದರು. ೧೯೦೬ರಲ್ಲಿ ಕಲ್ಕತಾದಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಪಾಲ್ಗೊಂಡಿದ್ದರು. ಶ್ರೀನಿವಾಸಶಾಸ್ತ್ರಿಗಳ ಸಾರ್ವಜನಿಕ ಕೆಲಸ, ಸಂಘಕ್ಕೆ ಸೇರಿದ ಕೂಡಲೆ ಶುರುವಾಯ್ತು. ಸಂಘದ ಸದಸ್ಯರು ಪೂನಾ, ಮುಂಬೈ, ಮದ್ರಾಸ, ಅಲಹಾಬಾದ್ ಊರಿನಲ್ಲಿ ಶಾಖೆಗಳನ್ನು ಏರ್ಪಡಿಸಿ, ಸ್ತ್ರೀ ವಿದ್ಯಾಭ್ಯಾಸ, ನಿಮ್ನಜನರ ಉದ್ದಾರವನ್ನು ಕೈಗೊಂಡಿದ್ದರು. "ದೇಶಸೇವೆ ಯೋಗ್ಯತೆಯನ್ನು ಸಂಪಾದಿಸಬೇಕೆನ್ನುವವರಿಗೆ ಈ ಸಂಘವು ಉತ್ತಮ ನಿದರ್ಶನವಾಗಿತ್ತು". ಸಂಘವು **ಜ್ಞಾನಪ್ರಕಾಶ** (ಮರಾಠಿ ದೈನಂದಿನ ಪತ್ರಿಕೆ) ಮತ್ತು **ಹಿತವಾದ** ಎಂಬ ಇಂಗ್ಲಿಷ್ ಪತ್ರಿಕೆಯನ್ನು ಪ್ರಚಾರಗೊಳಿಸಿ ಜನರಲ್ಲಿ ರಾಜಕೀಯ ಚಿಂತನೆಗೆ ಅವಕಾಶ ಕಲ್ಪಿಸಿತ್ತು.

೧೯೦೭ ರಲ್ಲಿ ಶ್ರೀನಿವಾಸಶಾಸ್ತ್ರಿಗಳು ಬೆಂಗಳೂರಿಗೆ ಬಂದಿದ್ದಾಗ ಬೆಂಗಳೂರಿನ ನಾಗರೀಕರು ವಿಶ್ವಾಸ ಪೂರ್ವಕವಾಗಿ, ಶಾಸ್ತ್ರಿಗಳನ್ನು ಬರಮಾಡಿಕೊಂಡಿದ್ದರು.[೭] ಶಾಸ್ತ್ರಿಗಳು ಪೂನಾದಲ್ಲಿ ದಿ|| ರಾನಡೆ ಅವರ ಸ್ಮಾರಕಕ್ಕೆ ವಂತಿಗೆ ಸೇರಿಸಲು ಮೈಸೂರಿಗೆ ಬಂದಿದ್ದರು. ಶಾಸ್ತ್ರಿಗಳು ಆ ಸಮಯದಲ್ಲಿ ಕೊಟ್ಟ ಭಾಷಣ ಜನರ ಮನಸ್ಸನ್ನು ಗೆದ್ದಿತು. ಹೀಗಾಗಿ ಶ್ರೀನಿವಾಸಶಾಸ್ತ್ರಿಗಳು ಮೈಸೂರಿನ ವರಿಗೆ ಅಪರಿಚಿತರಲ್ಲ. ದಿವಾನ್ ಮಾಧವರಾಯರು ತಮ್ಮ ಅತಿಥಿಗಳಾದ ಶಾಸ್ತ್ರಿಗಳನ್ನು ಖುದ್ದಾಗಿ ಮಹಾರಾಜರಿಗೆ ಪರಿಚಯಿಸಿದ್ದರು.[೮]

ಆದರೆ ಇದೇ ಮೈಸೂರು ೧೯೧೧ ರಲ್ಲಿ ಶಾಸ್ತ್ರಿಗಳ ಭಾಷಣವನ್ನು ನಿಬಂಧ ಕಾಯ್ದೆಯಿಂದ ರದ್ದುಮಾಡಿತು. ಇದಕ್ಕೆ ಮೊದಲು ಮಿಸ್. ಎ. ಟೆನಂಟ್ ಕ್ಯಾರಿಯವರ ಭಾಷಣ ರದ್ದುಮಾಡಿದ್ದು ತಿಳಿಸಿದೆ. ದಿವಾನ್ ಆನಂದರಾಯರು ನಿರ್ಧರಿಸಿದ ಈ ಅಪ್ರಿಯವಾದ ಘಟನೆ ತೀವ್ರ ಪ್ರತಿಭಟನೆಗೆ ಅವಕಾಶ ಮಾಡಿಕೊಟ್ಟಿತು.

ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳಿಗೆ ೨೩/ ಆಗಸ್ಟ್/೧೯೧೧ ಪ್ರೋಗ್ರೆಸ್ಸಿವ್ ಯೂನಿಯನ್ (ರಾಜಕೀಯ ಸಂಘ) ಭಾಷಣದ ಆಹ್ವಾನ ಹೋಗಿತ್ತು. ಪ್ರೋಗ್ರೆಸ್ಸಿವ್ ಯೂನಿಯನ್ ಸದಸ್ಯರು ಹಲವಾರು ಮುಖ್ಯವಾದ ಸರಕಾರಿ ಸದಸ್ಯರು. ಶ್ರೀನಿವಾಸ ಶಾಸ್ತ್ರಿಗಳಾದರೋ ವಿದ್ಯಾವಂತರೂ ಮತ್ತು ಮದ್ರಾಸ್ ಶಾಖೆಯ ದೇಶ ಸೇವಿಕಾ ಸಂಘದ ಮುಖ್ಯಸ್ಥರು. ಬೆಂಗಳೂರಿನ ನಾಗರಿಕರು ಉತ್ಸುಕತೆ ಸಹಜವಾದದ್ದು. ದಿವಾನ್ ವಿ.ಪಿ ಮಾಧವರಾಯರು ಶಾಸ್ತ್ರಿಗಳನ್ನು ಖುದ್ದು ಬಲ್ಲವರಾದ್ದರಿಂದ ಅವರ ಹಲವಾರು ಭಾಷಣಗಳನ್ನು ಏರ್ಪಡಿಸಿ ನಾಗರೀಕರಲ್ಲಿ ಜನಜಾಗೃತಿ ಉಂಟು ಮಾಡಬೇಕೆಂದಿದ್ದರು. ತಾವೇ ಅಧ್ಯಕ್ಷ ಸ್ಥಾನ ವಹಿಸುವವರಿದ್ದರು. ಆದರೆ ಮೈಸೂರು ಸರ್ಕಾರದ Inspector General ದಿವಾನರ ಅಪ್ಪಣೆಯಂತೆ ವರ್ತಿಸಿ ಶಾಸ್ತ್ರಿಗಳ ಭಾಷಣಕ್ಕೆ ಅವಕಾಶ ಕೊಡಲಿಲ್ಲ.

ಮೈಸೂರಿನವರಿಗೆ ಇಂಥ ಬಹಿರಂಗ ಭಾಷಣ ಹೊಸತಲ್ಲ. ಆದರೆ ಕಾರಣ ಕೊಡದೆ ಅದನ್ನು ನಿಲ್ಲಿಸಿದ ರೀತಿ ಅತ್ಯಂತ ಸೋಜಿಗ ಮತ್ತು ಆಶ್ಚರ್ಯಕರ. ಈ ಅಚಾತುರ್ಯ ಗೋಖಲೆ ಸಂಸ್ಥೆಗೆ ಸೇರಿದ್ದ ಶಾಸ್ತ್ರಿಗಳ ಮೇಲಾದ್ದು, ಅದರ ಮುಖ್ಯಸ್ಥರಾದ ಗೋಖಲೆ ಅವರಿಗೆ ಸಂಸ್ಥೆಗಾದ ಅವಮಾನವೆನ್ನಿಸಿತು.[೯]

ಜಿ. ಕೆ. ಗೋಖಲೆ, ದಿವಾನರಿಗೆ ಕಾರಣವನ್ನು ಸ್ಪಷ್ಟೀಕರಿಸಲು ಕೇಳಿದರು. ಆದರೆ 'Reasons of Policy' ಎಂದು ದಿವಾನರು ಗೋಖಲೆ ಪತ್ರವನ್ನು ತಳ್ಳಿಹಾಕಿದರು ದಿವಾನ್ ಆನಂದರಾಯರು ಗೋಖಲೆ ಅವರಿಗೆ ಬರೆದ ಪತ್ರ ನಿಂದಾಪತ್ರಕ್ಕೆ ಕ್ಷಮಾಪಣೆಯಂತಿತ್ತು.

ಇಂದು ಪ್ರಕಾಶವೆಂಬ[೯] ಮುಂಬೈ ಪತ್ರಿಕೆ ಈ ರೀತಿ ಪ್ರತಿಕ್ರಿಯಿಸಿತು. "ಸರ್ಕಾರವು ತನ್ನ ನಿಬಂಧನೆಯ ಮೂಲಕ ಸಮಾಜದ ಮೂಲಭೂತ ಹಕ್ಕಾದ ವಾಕ್ ಸ್ವಾತಂತ್ರ್ಯವನ್ನು ನಿರೋಧಿಸಿ ತನ್ನ ಛಲ ಪ್ರದರ್ಶನದಲ್ಲಿ ಗೆದ್ದಿರಬಹುದು. ಆದರೆ ಸಮಾಜವು ದೇಶೀಯ ಸರ್ಕಾರದ ಚೇಷ್ಟೆಯನ್ನು ಆಶ್ಚರ್ಯದಿಂದ, ದಿಗ್ಭ್ರಮೆಯಿಂದ ನೋಡುತ್ತದೆ. ಮತ್ತು ಇದರಲ್ಲಿ ತಪ್ಪಿತಸ್ತಗಾರ ಮೈಸೂರು ಸಂಸ್ಥಾನ ".

ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳ ಭಾಷಣದ ಮೇಲೆ ಹೇರಿದ ಪ್ರತಿಬಂಧ ಭಾರತದ ಎಲ್ಲಾ ಪತ್ರಿಕೆಗಳಲ್ಲೂ ಚರ್ಚಾಸ್ಪದವಾಯಿತು. ಇಂಡಿಯನ್ ಸೋಷಿಯಲ್ ರಿಫಾರ್ಮರ್[೧೦] ಮುಂಬೈ ಪತ್ರಿಕೆ ಈ ರೀತಿ ಪ್ರತಿಕ್ರಿಯಿಸಿತು. ಶ್ರೀನಿವಾಸಶಾಸ್ತ್ರಿಗಳಿಗಿಂತ ವಿದ್ಯಾರ್ಥಿ ಗಳಿಗೆ ಸಲಹೆ ಕೊಡಲು ಯಾರಿಗೆ ಸಾಧ್ಯ? ಶಾಸ್ತ್ರಿಗಳು ಆ ದಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಬೇಕಿತ್ತು. ಶಾಸ್ತ್ರಿಗಳ ಎರಡನೇ ಭಾಷಣ ಬಾಲ್ಯವಿವಾಹ. ಈ ವಿಚಾರದಲ್ಲಿ ಅವರ ಜ್ಞಾನ ಅಪಾರವಾಗಿತ್ತು. ಇದರಲ್ಲಿ ಯಾರಿಗೂ ಅಪಾಯವಾಗು ತ್ತಿರಲಿಲ್ಲ. "ಇಪ್ಪತ್ತನೇ ಶತಮಾನದ ಪ್ರಗತಿಪರ ಎಂದು ಕರೆಸಿಕೊಂಡ ಮೈಸೂರಿನ ವರ್ತನೆ ಆಶ್ಚರ್ಯಕರವಾಗಿದೆ".[೧೧] ಅದಲ್ಲದೆ Mysore Star[೧೨] ಎಂಬ ಪತ್ರಿಕೆ ಹೀಗೆ ಬರೆಯುತ್ತಾ, ಮದ್ರಾಸ್ ಪ್ರಾಂತದ ಕಾಂಗ್ರೆಸ್ ಸಭೆಯು ಮಹಾಜನ ಸಭೆಯ ಭವನದಲ್ಲಿ ಸಭೆ ಕರೆದು ಮೈಸೂರು ಸರ್ಕಾರದ ವರ್ತನೆಯನ್ನು ಖಂಡಿಸಿತು. ದಿವಾನ ಮಾಧವರಾಯರ ಪತ್ರಿಕಾ ಕಾನೂನು ನಿಬಂಧನೆಯಿಂದ ಸಾಕಷ್ಟು ಹಾನಿಯಾಗಿದೆ ಮತ್ತು ದಿವಾನ್

ಆನಂದರಾಯರ ಕಾಲದಲ್ಲಿ ಶಾಸ್ತ್ರಿಗಳು ಭಾಷಣದ ಮೇಲೆ ಪ್ರತಿಬಂಧಕ ಹೇರಿ 'ಕಪ್ಪುಚುಕ್ಕೆ' ಭರಿಸಿದೆ ಎಂದು ವಾದಿಸಿ, ಈಗಲಾದರೂ ದಿವಾನರು ಕಾರಣ ಕೊಡುವರೆ! ಎಂದು ವಾದಿಸಿತು. ಮೈಸೂರಿನ ವೃತ್ತಾಂತ ಪತ್ರಿಕೆ[೧೩] ಮೈಸೂರಿನವರಿಗೆ ದಿಗ್ಭ್ರಮೆ ಉಂಟಾಗಿದೆಯೆಂದೂ, ಆದ್ದರಿಂದ ಸರ್ಕಾರ ಕೂಡಲೇ ತನ್ನ ವರ್ತನೆಗೆ ಕಾರಣಕೊಡಬೇಕೆಂದಿತು.

Indian Spectacular, (Bombay) ಬರೆಯುತ್ತಾ, ಶಾಸ್ತ್ರಿಗಳ ಭಾಷಣದಲ್ಲಿ ಕೆಚ್ಚಿದೆ ಮತ್ತು ಕೊನೆಯಲ್ಲಿ 'ವಂದೇ ಮಾತರಂ' ಹಾಡಬೇಕೆಂದಿದುದನ್ನು ನಿಲ್ಲಿಸಬಹುದಾಗಿತ್ತು, ಇದಕ್ಕಾಗಿ ಪೂರ್ತಿಯಾಗಿ ಭಾಷಣವನ್ನು ರದ್ದುಮಾಡುವದು ಉಚಿತವೆ? ಎಂದು ಪ್ರಶ್ನಿಸಿತು. ಶಾಸ್ತ್ರಿಗಳ ಮೇಲೆ ವೈಯುಕ್ತಿಕ ದ್ವೇಷ ಇಲ್ಲದಿರಬಹುದು ಆದರೆ ದಿವಾನರು ಸುಮ್ಮನಿರುವರೇಕೆ ಎಂದು ಕೇಸರಿ[೧೫] ಪತ್ರಿಕೆ ಪ್ರತಿಧ್ವನಿಸಿತು. ಇದೆಲ್ಲದರಿಂದ ಶ್ರುತಪಟ್ಟಿದ್ದೇನೆಂದರೆ ದಿವಾನ್ ಟಿ. ಆನಂದರಾಯರು, ತಾವು ಪ್ರತಿಬಂಧಕ ಹೇರಿದ್ದೇಕೆ ಎಂಬುದಕ್ಕೆ ಸ್ಪಷ್ಟವಾಗಿ ಕಾರಣವನ್ನು ಕೊಡಲು ನಿರಾಕರಿಸಿದ್ದು ಮತ್ತು Reasons of Policy ಎಂಬುದರಲ್ಲಿ ಅವಿತುಕೊಂಡಿದ್ದು.

ಆಧುನಿಕ ಮೈಸೂರಿನ ಚರಿತ್ರೆಯನ್ನು ಅಭ್ಯಸಮಾಡುವ ವಿದ್ಯಾರ್ಥಿಗಳಿಗೆ ಸ್ಪಷ್ಟೀಕರಣ ಕೊಡದ ಈ ರಾಜಕೀಯ ಒಂದು ಪ್ರಶ್ನೆಯಾಗಿ ಉಳಿದಿದೆ. ದಿವಾನ್ ಆನುಂದರಾಯರು ಸ್ವತಃ ಉದಾರ ಮತದವರಾದ್ದರಿಂದ ಅವರ ವರ್ತನೆ ಚರ್ಚಾಸ್ಪದವಾಗಿದೆ. ಪುನರವಿವಾಹ (ಶಾಸ್ತ್ರಿಗಳ ಭಾಷಣದ ಒಂದು ವಿಷಯ) ಮೈಸೂರಿನ ಸಾಮಾಜಿಕ ಸುಧಾರಣೆಯಲ್ಲಿ ಅತ್ಯಂತ ಮುಖ್ಯಪಾತ್ರ ವಹಿಸಿತ್ತು. (೧೮೯೪) Infant Marriage Regulation ಜಾರಿಗೆ ತಂದು ಮೈಸೂರು ಎಲ್ಲರ ಮೆಚ್ಚಿಗೆ ಪಡೆಯಿತು. [೧೬]ಇದೆಲ್ಲದರಿಂದ ಶಾಸ್ತ್ರಿಗಳು ತಮಗೆ ಉತ್ತಮವಾದ ಸ್ವಾಗತ ದೊರಕುವದರಲ್ಲಿ ಸಂಶಯಪಟ್ಟಿರಲಿಕ್ಕಿಲ್ಲ. ಶಾಸ್ತ್ರಿಗಳು ೧೯೦೬ರಲ್ಲಿ ಮದ್ರಾಸ್ ಹಿಂದೂ ಅಸೋಸಿಯೇಷನ್ ವತಿಯಿಂದ Marriage After puberty according to Hindu Sastras ಎಂಬ ಹೊತ್ತಿಗೆಯನ್ನು ತಂದಿದ್ದರು. ಹಾಗಾಗಿ ಶಾಸ್ತ್ರಿಗಳ ವಿದ್ವತ್ತಿಗೆ ಕೊರತೆ ಇರಲಿಲ್ಲ. ಆದರೆ ದಿವಾನ್ ಆನಂದರಾಯರು ಸಾರ್ವಭೌಮತ್ವಕ್ಕೆ ಮಣಿದು ತಾವು ಎಂಥ ತಪ್ಪನ್ನು ಸಾರ್ವಜನಿಕರಿಗೆ ಮತ್ತು ದೇಶೀಯ ಸಂಸ್ಥಾನಕ್ಕೆ ಮಾಡುತ್ತಿದ್ದೇನೆಂದು ತಿಳಿಯಲಿಲ್ಲ. ಸಾರ್ವಜನಿಕರ ಪರವಾಗಿ ತಾವು ಯೋಚನೆ ಮಾಡಬಹುದೆಂದುಕೊಂಡರು. ಹೊರಗಿನಿಂದ ಒಳನಾಡಿಗೆ ಬರುವವರ ಮೇಲೂ ಒಳ್ಳೆಯ ಅಭಿಪ್ರಾಯ ಅವರಿಗೆ ಇರಲಿಲ್ಲ.[೧೭]

Madras Standard[೧೮]ಪತ್ರಿಕೆಯ ಪ್ರಕಾರ ದಿವಾನರು ಖುದ್ದಾಗಿ ಫೋರ್ಟ್ ಗೌರ್ನಮೆಂಟ್ ಸ್ಕೂಲಿಗೆ ಭೇಟಿಕೊಟ್ಟು ಅಲ್ಲಿರತಕ್ಕಂತ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಕೆ. ರಾಮಚಂದ್ರರಾಯರು ಲಂಡನ್ ಮಿಷನ್ ಸಂಸ್ಥೆಯ ಮುಖ್ಯೋಪಾಧ್ಯಾಯರು ಮತ್ತು ಪ್ರೋಗ್ರೆಸ್ಸಿವ್ ಯೂನಿಯನ್ ಸಂಸ್ಥೆಯ ಅಧ್ಯಕ್ಷರು. (ಶಾಸ್ತ್ರಿಗಳು ಈ ಸಂಸ್ಥೆಯ ಅಂಗವಾಗಿ ಭಾಷಣ ಕೊಡಲು ಬಂದಿದ್ದು). ಇದಕ್ಕೆ ರಾಜೀನಾಮೆ ಕೊಡಲು ಆಗ್ರಹಿಸಿದ್ದರಿಂದ ರಾಜೀನಾಮೆ ಕೊಟ್ಟರು ಮತ್ತು ಡೈಪುಟಿ ಚೀಫ್ ಇಂಜನಿಯರ್ (P.W.D.) ಕೆ. ಶ್ರೀನಿವಾಸ್‌ರಾವ್, ಪದವೀಧರ ಸಮಾರಂಭದಲ್ಲಿ ಅಧಕ್ಷತೆ ವಹಿಸಬೇಕಾಗಿತ್ತು. ಆದರೆ ಅವರಿಗೂ ಸರ್ಕಾರ ಎಚ್ಚರ ನೀಡಿತು.

ದಿವಾನ್ ಆನಂದರಾಯರು ತಮ್ಮ ವರ್ತನೆಯಿಂದ ಸಾರ್ವಜನಿಕರ ಮನಸ್ಸಿನಲ್ಲಿ ಶಂಕೆಗೆ ಆಸ್ಪದಕೊಟ್ಟರು.[೧೮ಅ] ದಿವಾನ್ ಅನುಂದರಾಯರು ತಮ್ಮ ಕೆಲಸದಿಂದ ನಿವೃತ್ತಿ ಹೊಂದಿದ ನಂತರ ಅಣ್ಣಯ್ಯ ಪಂಡಿತರು, ಮತ್ತಿತರು ದಿವಾನರಿಗೆ ಬಿನ್ನವತ್ತಳೆ ಅರ್ಪಿಸಲು ಹಲವರನ್ನು ತಮ್ಮ ಹಸ್ತಾಕ್ಷರದ ಸಹಿ ಹಾಕಲು ನಿವೇದಿಸಿದರು. ಹಲವಾರು ಮಂದಿ ನಿರಾಕರಿಸಿದರು. ಹಲವಾರು ಒಪ್ಪಿದವರು ಕೂಡ ತಮ್ಮ ಹಸ್ತಾಕ್ಷರವನ್ನು ಹಿಂತೆಗೆದುಕೊಂಡರು ಮತ್ತು ಬಿನ್ನವತ್ತಳೆಯನ್ನು ದಿವಾನರಿಗೆ ಅರ್ಪಿಸುವ ದಿವಸ ಬಹಳಷ್ಟು ಮಂದಿ ಬಂದಿರಲಿಲ್ಲ. ಮತ್ತು ಹಳ್ಳಿಗಳಿಂದ ಪ್ರಜಾಪ್ರತಿನಿಧಿಸಭೆಗೆ ಬಂದಿದ್ದ ಹಲವಾರು ಸದಸ್ಯರು ದಿನವೀಡೀ ಕಲಾಪಕ್ಕೆ ಇರಬೇಕೆಂದು ಬಂದವರು ಬಿನ್ನವತ್ತಳೆ ಕಾರ್ಯಕ್ರಮಕ್ಕಿರದೆ ಅರ್ಧ ದಿವಸವಿದ್ದು ಹೊರಟುಹೋದರು.[೧೯]

ಉಪಸಂಹಾರ

ಶಾಸ್ತ್ರಿಗಳು ದಿವಾನ್ ಮಾಧವರಾಯರ ಸ್ನೇಹಿತರು ಮಾಧವ ರಾಯರ ಬಗ್ಗೆ ದಿವಾನರಿಗೆ ಸದಭಿಪ್ರಾಯವಿರಲಿಲ್ಲ. ಮತ್ತು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ತಲೆ ಹಾಕುವದು ಇಷ್ಟವಿರಲಿಲ್ಲ. ಮತ್ತು ಮಹಾರಾಜರಿಗೂ ದಿವಾನರ ಒಳಸಂಚು ಹಿಡಿಸುತ್ತಿರಲಿಲ್ಲ. ದಿವಾನ್ ಆನಂದರಾಯರ ಮರ್ತನೆಯಿಂದ ಬೇಸರಪಟ್ಟ ಮಹಾರಾಜರು ತಮ್ಮ ಕಾರ್ಯದರ್ಶಿ Campbell ಮೂಲಕ, ಕೃಷ್ಣಸ್ವಾಮಿಯವರು (ಗೋಖಲೆಯವರ ಅತ್ಯಂತ ಆಪ್ತರು) ಕೂಡ ಮಾತನಾಡಿ ತಮ್ಮ ಸರ್ಕಾರಕ್ಕೆ ಯಾವ ಗುಮಾನಿ ಇಲ್ಲವೆಂದೂ, ದಿವಾನರು ಈ ವಿಚಾರದಲ್ಲಿ ತಪ್ಪು ಮಾಡಿದರೆಂದೂ, ಗೋಖಲೆಯವರು ಇದನ್ನು ಮನಸ್ಸಿಗೆ ತಾರದೆ ಮೊದಲಿನಂ ತಿರಬೇಕೆಂದು ವಿನಂತಿಸಿದರು. ಮತ್ತು ಗೋಖಲೆಯವರು ದಿವಾನರಿಗೆ ಬರೆಯಬೇಕೆಂದು ಸೂಚಿಸಿದರು. ಗೋಖಲೆಯವರ Telegram ದಿವಾನರಿಗೆ ತಲಪಿತು.[೨೦] ಮಹಾರಾಜರ ಸೆಕ್ರೆಟರಿ ಕ್ಯಾಂಪ್‌ಬೆಲ್ ಮತ್ತು ವಿ. ಕೃಷ್ಣಸ್ವಾಮಿಯವರ ಸಂಧಾನದಿಂದ, ವಿ. ಕೆ. ಗೋಖಲೆ. ಅವರು ದಿವಾನರಿಗೆ ಪತ್ರ ಬರೆದರು, ಅದಕ್ಕೆ ಉತ್ತರವಾಗಿ ದಿವಾನರು, ತಮಗೆ ಗೋಖಲೆ ಅವರ ಮೇಲಾಗಲಿ ಅಥವಾ ಶಾಸ್ತ್ರಿಗಳ ಮೇಲಾಗಲಿ ಅಥವಾ ಅವರು ನಡೆಸುತ್ತಿರುವ ದೇಶ ಸೇವಕ ಸಂಘದ ಮೇಲೆ ಅಸಮಾಧಾನವಿಲ್ಲವೆಂದು ತಿಳಿಸಿದರು.[೨೧]

ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು

ಮತ್ತೆ ೧೯೧೩ ರಲ್ಲಿ ಯುವರಾಜರ ಅಣತಿಯ ಮೇಲೆ ಮೈಸೂರಿಗೆ ಭೇಟಿಕೊಟ್ಟರು ಮತ್ತು Civic and Progress Association ಏರ್ಪಡಿಸಿದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಮೈಸೂರು ಮತ್ತೆ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳ ಸ್ನೇಹ ಸಂಪಾದಿಸಿತು. ಆದಾಗ್ಯೂ ೧೯೧೧ ರಲ್ಲಿ ತಪ್ಪನ್ನು ಮಾಡಿತು.

ಶಾಸ್ತ್ರಿಗಳ ಹಲವಾರು ಜನಪ್ರಿಯ ಭಾಷಣವನ್ನು ಸ್ಮರಿಸುವುದಾದರೆ[೨೨]. ಅವು ಎಲ್ಲಾ ಕಾಲಕ್ಕೂ ಮಾದರಿಯಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಸಾಮಾಜಿಕ ಸುಧಾರಣೆ ಚರಿತ್ರೆಯಲ್ಲಿ ಮುನ್ನಡೆಯಲ್ಲಿದ್ದ ಮೈಸೂರು ಸಂಸ್ಥಾನಕ್ಕೆ ಚಾಲನೆ ಕೊಟ್ಟವರು ಮೈಸೂರಿನ ದಿವಾನರು. ಮಿಸ್. ಟೆನ್ನೆಂಟ್‌ಕ್ಯಾರಿ ಮತ್ತು ವಿ.ಎಸ್. ಶ್ರೀನಿವಾಸಶಾಸ್ತ್ರಿಗಳ ಭಾಷಣ ಮೈಸೂರಿನವರೆಲ್ಲಾ ಆದರಿಸಿ ಕೇಳತಕ್ಕಂತಹದ್ದು. ಅದರಲ್ಲಿ ಕ್ರಾಂತಿಕಾರಿ ಮನೋಭಾವವಾಗಲಿ ಅಥವಾ ಗುಲ್ಲೆಬ್ಬಿಸುವ ಸಂದರ್ಭವಾಗಲಿ ಬಂದಿರಲಿಕ್ಕಿಲ್ಲ. ಆದ್ದರಿಂದ ದಿವಾನರಿಗೆ ಶಾಸ್ತ್ರಿಗಳ ಮೇಲಿದ್ದ ಅಸಮಾಧಾನವೇ ಕಾರಣವೆಂದು ಹೇಳಬಹುದು. ಇದಕ್ಕೆ ಒಂದು ನಿದರ್ಶನ ಕೊಡುವುದಾದರೆ ೧೯೩೧ ರಲ್ಲಿ ಸೌತ್‌ಆಫ್ರಿಕಾದ ನಿರ್ಗತಿಕ ಮಕ್ಕಳಿಗೋಸ್ಕರ ಚಂದಾ ಹಣ ಎತ್ತಲು ಡಿ.ವಿ. ಗುಂಡಪ್ಪನವರು ಮತ್ತಿತರರು ದಿವಾನ್ ಟಿ. ಆನಂದರಾಯರ ಮನೆಗೆ ಹೋಗಿದ್ದರು. ಆಗತಾನೆ ವಿ.ಎಸ್. ಶ್ರೀನಿವಾಸಶಾಸ್ತ್ರಿಗಳು ಬರೆದಿದ್ದ ಲೇಖನ 'Indian Review' ೨೩ ರಲ್ಲಿ ಪ್ರಕಟವಾಗಿತ್ತು. ದಿವಾನ್ ಆನಂದರಾಯರು , ಶಾಸ್ತ್ರಿಗಳ ಹೆಸರನ್ನು ಕೂಡ ಹೇಳಲು ಇಷ್ಟಪಡದೆ 'This gentleman' ಎಂದು ಸಂಬೋಧಿಸಿದನ್ನು ಡಿ.ವಿ. ಗುಂಡಪ್ಪನವರು ತಮ್ಮ ಜ್ಞಾಪಕಚಿತ್ರ ಶಾಲೆಯಲ್ಲಿ ಚಿತ್ರಿಸಿರುತ್ತಾರೆ. ಮತ್ತೊಂದು ಅಂಶ ವಿವರಿಸುವದಾದರೆ, ಅಧಿಕಾರ ವರ್ಗಕ್ಕೆ ಗೋಖಲೆ ಮತ್ತು ಲಿಬರಲ್ ಪಂಗಡದ ಮೇಲಿದ್ದ ಗುಮಾನಿ, ಪೊಲೀಸರ ಕಣ್ಣು ಇವರ ಮತ್ತು ಇವರು ನಡೆಸುವ ಸಂಸ್ಥೆಗಳ ಮೇಲಿತ್ತು.[೨೪] ಆದ್ದರಿಂದ ದಿವಾನರು ಆದಷ್ಟು ದೂರ ಇರಲು ಯತ್ನಿಸುತ್ತಿದ್ದರು. ಮತ್ತೊಂದು ಕಾರಣ, ದಿವಾನರಿಗೆ ಸಾಮಾಜಿಕ ಸುಧಾರಣೆಯಲ್ಲಿದ್ದ ನಿರಾಸಕ್ತಿ ಮತ್ತು ಶಾಸ್ತ್ರಿಗಳ ಮೇಲಿದ್ದ ವೈಯುಕ್ತಿಕ ಅಸಮಾಧಾನ, ಮತ್ತು ಶ್ರೀನಿವಾಸಶಾಸ್ತ್ರಿಗಳ ಡೈರಿಯಿಂದ (ದಿನಚರಿ ಸಂಗತಿ) ಇನ್ನೊಂದು ಅಂಶ ವ್ಯಕ್ತವಾಗುತ್ತದೆ.

ಗೋಖಲೆಯವರ ಮನಸ್ಸಿಗಾದ ಗಾಯವನ್ನು ಶ್ರೀನಿವಾಸ ಶಾಸ್ತ್ರಿಗಳ ದಿನಚರಿ ಡೈರಿಯಿಂದ ಗುರುತಿಸಬಹುದು [೨೫]

Coimbotore.
10 / 6 /41

Dear S. Raghavan.

The Bangalore Ban made me and Gokhale disconsolate. He was furious with Ananda Rao and these is a story that he was unwilling to recognise him. When they met at a gathering later on at the Government house. I do not know much for the truth of the story . But Gokhale was like that. He had some what of the Mahratha Brahmans Combativeness. Our Tamil saying goes not ready to fasten a quarrel on others but eager for the fray when drawn into it.

VSS

ಸ್ವತಃ ಮಹಾರಾಜರು ಇದು ವಿಷಾದದ ಸಂಗತಿ ಮತ್ತು ದಿವಾನರು ಶಾಸ್ತ್ರಿಗಳ ವಿಷಯದಲ್ಲಿ ತಪ್ಪುಮಾಡಿದರೆಂದು ಒಪ್ಪಿಕೊಂಡಮೇಲೆ, ಮೈಸೂರಿಗೂ, ಶಾಸ್ತ್ರಿಗಳಿಗೂ ಅತ್ಯಂತ ನಿಕಟವಾದ ಆತ್ಮೀಯತೆ ಏರ್ಪಟ್ಟಿತು. ಮತ್ತು ಶಾಸ್ತ್ರಿಗಳು ನಡೆಸುತ್ತಿದ್ದ ಪೂನಾದ ದೇಶಸೇವಿಕಾ ಸಂಘ (Servants of India Society, poona) Arya Bhushana press) ಅಗ್ನಿನಾಶಕ್ಕೆ ಗುರಿಯಾದಾಗ ಮಹಾರಾಜರು ಕೊಡುಗೈ ನೆರವು ನೀಡಿದ್ದನ್ನು ಶ್ರೀನಿವಾಸ ಶಾಸ್ತ್ರಿಗಳು ಸ್ಮರಿಸಿದ್ದಾರೆ.

Letter from His Highness
Maharaja of Mysore.
palace of Mysore 15th July 26

My dear Srinivasa Sastri,

Write to acknowledge the receipt of your letter of the 5th Courtall. I was very grieved to read of the fire accident which destroyed the press belonging to your Society. and I deeply sympathise with you in the enormous loss that you have sustained . I trust and appeal that you are making to the public, will bring in Satisfactory response . I am very thankful to you for the generous references you have made in your letter.

ಹೀಗೆ ಮಾದರಿ ಮೈಸೂರು ದಿವಾನರ ದೌರ್ಬಲ್ಯದಿಂದ ಹಲಮೊಮ್ಮೆ ಸಂಘರ್ಷಗಳಿಗೆಡೆ ಕೊಟ್ಟದ್ದು ಕಾಣುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Roper Lethbridge, The Mysore state; "A model of British Administration (in) *Asiatic quarterly Review* no 45 and 56, Jan.April. 1907 P. 31-32 and Gustaf son, Rudo *Mysore a model State* 1881-1902. Lord Hardinge, *My Indian years* 1910-1916. The Reminscences of Lord Hardinge of penhurs, London, John Marray,1948 .

೨. ಮೈಸೂರಿನಲ್ಲಿ ಅಸಿಸ್ಟೆಂಟ್ ಕಮೀಷನರ್ ಆದಾಗ "ಮಂಡಿಪೇಟ್ ಬಂದ್" ವರ್ತಕರ ಮುಷ್ಕರದಲ್ಲಿ ಟಿ. ಆನಂದರಾಯರು ಜನರ ಹಿತಕ್ಕಾಗಿ ಮುಖ್ಯಪಾತ್ರವಹಿಸಿದ್ದನ್ನು. ಡಿ. ವಿ. ಗುಂಡಪ್ಪನವರು ತಮ್ಮ **ಜ್ಞಾಪಕ ಚಿತ್ರಶಾಲೆ** Vol-4 , P. 94 ತಿಳಿಸಿರುತ್ತಾರೆ.

೩. K. Subba Rao., Revived memories. pp.413-417

೪. Proccedings of the Governmment of Mysore. No 108, July-1911 See also *Daily post* 12, June 1911.

೫. *Indian Review.* June 1912 p. 513, *Mysore Administration Report* 1909-10 *Indian Review* oct. 1910. p. 756-756, ಹನ್ನೆರಡು ಹುಡುಗರನ್ನು ತೋಟಗಾರಿಕೆ ಕಲಿಯಲು ಜಿ.ಹೆಚ್. ಕೃಂಬಗಲ್ ಹತ್ತಿರ ಸರ್ಕಾರ ಕಳುಹಿಸಿತು.

೫ಅ. ಟೆನ್ನಂಟ್ ಕ್ಯಾರಿ ಪುಸ್ತಕ *'Hindu marriage Reform league'* ಪುಸ್ತಕ ಸಿಕಿಲ್ಲ. ಆದರೆ ಮೊದಲು ನಿಷೇಧಿಸಿದ ಅವಳ ಭಾಷಣ, ಮತ್ತೆ ಸ್ವಲ್ಪಕಾಲದ ನಂತರ ನಡೆಯಿತೆಂದು ತಿಳಿದಿದೆ.

೬. V. S. Srinivasa Sastri papers. (National Archives, NewDelhi) Letters from the Dairy. V.S.S. to essar 14 / june / 1941. See also V. S. Srinivasa Sastri, *Life of Gopalakrishna Gokhale,* p. 50.

೭. *V. S. Srinivasa Sastri Papers,* 1906-1909. Sl. No 9. Dated 21-7-1907 & 22-7-1907; Two letters addresses to G. K.Gokhale (National Archives New Delhi).

೮. G. K. Gokhale congratulating V.S. Sastri on his successful trip to Mysore. 13th August 1907. (N.A.D); Letter from Srinivasa Sastri to Sundara Raghavan, Bangalore 10/6/41

೯. *Indu Prakash* (MNP). 14 September 1911 . See also Mahratta. 10. September 1911. (National Archives, NewDelhi)

೧೦. *Indian Social Reformer,* (Bambay) (NNP) (National Archies), New Delhi, 3/ September/ 1911

೧೧. *Indu prakash,* 16/5/1911 (NNP)

೧೨. *Mysore star,* 18/September/ 1911 NNP.

೧೩. *Vrittanta Patrike,* 7/September/1011 NNP.

೧೪. *Indian Spectator,* 16/september/1911 NNP.

೧೫. *Kesari* 10/oct/1911, Dyanaprakash 5/sept/1911, *Sudhara. k.* 15/oct/1911 and Orental Review Maharashtra State. Archives (NNP)

೧೬. S. Natarajan, Century of Social reform in India. See alno p.10, Heinsath Charles, Indian Nalionatism and hindu Social reform 1954.

೧೭. P. Kodanda Rao; V.S. Srinivasa Sastri P. 14. and D.V. Gundappa, *Gnapaka Chitrashale* Vol. 4. p.101.

೧೮. Madras Standard. 30/August/1911. (Native News papers) National Delhi Archives. 20. Strictly Confidential. Sastri papers. Sl. No 485. 15/6/1927.

೧೮ಅ. ಶಾಸ್ತ್ರಿಗಳು ವಿ.ಪಿ. ಮಾಧವರಾಯರ ಅತಿಥಿಗಳು. ವಿ.ಪಿ. ಮಾಧವರಾಯರೇನೂ ಪರ್ತ್ರಕರ್ತರ ಸ್ನೇಹಿತರಲ್ಲ. ದಿವಾನ್ ಮಾಧವರಾಯರ ಪತ್ರಿಕಾ ನಿಬಂಧನೆ ಪರ್ತಕರ್ತರಲ್ಲಿ ಅಸಮಾಧಾನ ಉಂಟುಮಾಡಿತ್ತು. ಮೈಸೂರು ಸರ್ಕಾರ ಶಾಸ್ತ್ರಿಗಳ ಭಾಷಣದ ಮೇಲೆ ನಿಬಂಧನೆಯನ್ನು ಹೇರಿದ್ದೇ ಅಲ್ಲದೆ ಬ್ರಿಟೀಷ್ ರೆಸಿಡೆಂಟ್ ತನ್ನ ಎಲ್ಲೆಯಾದ ಕಂಟೋನ್ಮೆಂಟಿನಲ್ಲಿಯೂ ಪ್ರತಿಬಂಧವನ್ನು ಹೇರಿದ್ದನು. ದಿವಾನರಿಂದ ಹಾರಿಕೆ ಉತ್ತರ ದೊರೆತಿತ್ತು. *Resident* ಮತ್ತು *Assistant Resident* ಸರ್ಕಾರದ ಆಣತಿ ಪಾಲಿಸಿದ್ದರು. ಗೋಪಾಲಕೃಷ್ಣ ಗೋಖಲೆ ಅವರಿಗೆ ಇದು ಬೇಸರ ತರಿಸಿತ್ತು. ಶಾಸ್ತ್ರಿಗಳಂತೆ ಘನತೆವೆತ್ತ ಮುತ್ಸದ್ದಿಗೆ ರೆಸಿಡೆಂಟ್ ಗೂಢ ಕಾರಣ ಕೊಟ್ಟು ಭೇಟಿ ನಿರಾಕರಿಸಿದ್ದನು. (Hon. S.M. Fraser laid down the office of Resident on 25/Aug/1910, Hugh Daly was the Resident when the incident happened)

೧೯. *United India and Native States* 16 November 1912.

೨೦. *Strictly Confindential* : Sastri papers, Sl. 485, 15-6-1927

೨೧. Letter from G.K. Gokhale First member, Servants of India Society 2nd oct. 1911 to the Dewan of Mysore.

೨೨. Mysore University:
   (a) Abhayamba memorial lectures on "Status of women", 1940.
   (b) Mysore university Extension lectures "Life of Gopala Krishna Gokhale"
   (c) Silver jubilee of National School, Basavanagudi 'on teachers' 1937 -1944
   (d) Tippu Sultan palace "Rovers leaders traning" : sept. 1927

೨೩. V. S. Srinivasa Sastri "The passive Resistance" *in Indian Review* Vol. XIV, Novermber 1913, p. 867-867

೨೪. B. R. Nanda, Gokhale, The Indian moderates and the British Raj, London, oxford university press 1977. p. 465

೨೫. V. S. Srinivasa Sastri Dairy Kept at the *Nehru Memorial museum and Library New Delhi* in Microfilm. Letter of V.S. Srinivasa Sashi to S.Raghavan. 10-4-1941.

ಡಾ|| ನಿರ್ಮಲ್ ರಾಜ್*

ಕರ್ನಾಟಕದಲ್ಲಿ ಗಾಂಧಿ - ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧಿ ವಹಿಸಿದ ಪಾತ್ರ ಇಡೀ ಪ್ರಪಂಚದ ಇತಿಹಾಸದಲ್ಲಿಯೇ ಅವಿಸ್ಮರಣೀಯ. ಅವರ ನಾಯಕತ್ವದಡಿಯಲ್ಲಿ ಶಾಂತಿ, ಅಹಿಂಸೆ, ಸತ್ಯಾಗ್ರಹಗಳ ಮೂಲಕ ಭಾರತವು ಬ್ರಿಟೀಷರ ದಾಸ್ಯತ್ವದಿಂದ ವಿಮೋಚನೆ ಪಡೆಯಿತು. ಭಾರತದ ಸ್ವಾತಂತ್ರ್ಯದ ಜೊತೆಜೊತೆಗೆ ಹಿಂದು-ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಖಾದಿಪ್ರಚಾರ, ಗ್ರಾಮಾಭ್ಯುದಯ ಮೊದಲಾದವುಗಳು ಗಾಂಧೀಜಿಯವರ ಮೂಲಮಂತ್ರಗಳಾಗಿದ್ದವು. ಆದುದರಿಂದಲೇ ಗಾಂಧೀಜಿಯವರ ನೇತೃತ್ವದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯು ಜನತಾ ಚಳುವಳಿಯಾಗಿ ಮಾರ್ಪಟ್ಟು ಇಡೀ ದೇಶದಾದ್ಯಂತ ಹೊಸ ಹುರುಪು, ಉತ್ಸಾಹ, ಕಾವುಗಳೊಂದಿಗೆ ಜನರು ಚಳುವಳಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಸಹ ಗಾಂಧೀಜಿಯವರ ಪ್ರೇರಣೆ, ಮಾರ್ಗದರ್ಶನ ಮತ್ತು ಪ್ರಭಾವ ದಿಂದ ಸ್ವಾತಂತ್ರ್ಯ ಹೋರಾಟದ ಸ್ವರೂಪದಲ್ಲಿ ಹೊಸತನ ಕಾಣಿಸಿ ಕೊಂಡಿತ್ತಲ್ಲದೆ, ಅದರ ಚಲನಗತಿಯು ವೇಗೋತ್ಕರ್ಷವನ್ನು ಪಡೆದು ಕೊಂಡಿತು. ಇವುಗಳಿಗೆಲ್ಲಾ ಕಿರೀಟೋಪಾದಿಯಂತೆ ಸಂಭವಿಸಿದ್ದು ೧೯೨೪ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಮಹಾಅಧಿವೇಶನ. ಇದು ಕರ್ನಾಟಕದಲ್ಲಿ ಗಾಂಧೀಜಿಯವರ ತತ್ವಾದರ್ಶಗಳು, ರೀತಿನೀತಿಗಳು ಸಿದ್ಧಾಂತಗಳು ಮತ್ತಷ್ಟು ಬಿರುಸಾಗಿ ಸಾಗಲು ಕಾರಣವಾಯಿತು. ಇದರಿಂದ ಸ್ಫೂರ್ತಿಗೊಂಡ ಕನ್ನಡಿಗರು ಮಾತ್ರವಲ್ಲದೇ, ಅಂದಿನ ಮಹಾರಾಜರಾಗಿದ್ದ ಮತ್ತು ಗಾಂಧೀಜಿಯವರಿಂದ 'ರಾಜರ್ಷಿ' ಎಂದು ಕರೆಯಲ್ಪಟ್ಟ ನಾಲ್ವಡಿ ಕೃಷ್ಣರಾಜ ಒಡೆಯರು ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ಹಲವಾರು ಸಮಾಜೋ- ಆರ್ಥಿಕ ಸುಧಾರಣೆಗಳಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮಹಾರಾಜರಂತೆ ಅಂದಿನ ಮೈಸೂರು ಸಂಸ್ಥಾನದ ದಿವಾನರು ಗಳಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಮೊದಲಾದವರು ಸಹ ಪ್ರೇರಣೆಗೊಂಡು ಮಹಾರಾಜರ ಆಶಯ ಗಳಿಗೆ ಸ್ಪಂದಿಸಿದರು. ಇದಕ್ಕೆ ನಿದರ್ಶನವಾಗಿ ಬದನವಾಳುವಿನಲ್ಲಿ ಆರಂಭಗೊಂಡ ಖಾದಿ ಗ್ರಾಮೋದ್ಯೋಗ ಕೇಂದ್ರದ ಸ್ಥಾಪನೆ, ಬೆಳವಣಿಗೆ ಮತ್ತು ಅದರ ಪ್ರಭಾವದಿಂದ ವಿಶೇಷವಾಗಿ ಕೆಳಸ್ತರದಲ್ಲಿದ್ದ ಹರಿಜನರಲ್ಲುಂಟಾದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಮತ್ತು ಪ್ರಗತಿಯನ್ನು ಕುರಿತು ಚಿಂತನೆ ಮಾಡುವುದು ಸದ್ಯದ ಪ್ರಬಂಧದ ಪ್ರಧಾನ ಉದ್ದೇಶವಾಗಿದೆ.

ಬದನವಾಳು ಗ್ರಾಮವು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಕಂಡುಬರುವ ಒಂದು ಸಣ್ಣ ಹಳ್ಳಿ. ಕಡುಬಡವರಾದ ಹರಿಜನರು ಇಲ್ಲಿ ಹೆಚ್ಚಾಗಿ ವಾಸಿಸುವುದರ ಜೊತೆಗೆ ಸಹಕಾರ, ಸ್ವಾವಲಂಬನೆಗಳಂತಹ ಆದರ್ಶ ಗುಣಗಳನ್ನು ಹೊಂದಿದ್ದುದೇ ಈ ಗ್ರಾಮದ ವೈಶಿಷ್ಟ್ಯ. ಮುಖ್ಯವಾಗಿ ರೈಲು ಸಂಪರ್ಕವನ್ನು ಹೊಂದಿರುವ ಈ ಹಳ್ಳಿಗೆ ಗಾಂಧಿಯವರು ಭೇಟಿ ನೀಡಿದ ಘಟನೆಯು ಐತಿಹಾಸಿಕವಾಗಿ ಪ್ರಸಿದ್ಧವಾಗಿರುವುದೇ ಅಲ್ಲದೆ, ಈ ಹಳ್ಳಿಯ ಸಮಗ್ರ ಚಿತ್ರಣವೇ ಮಾರ್ಪಾಡುಹೊಂದಿತು. ಗಾಂಧೀಜಿ ಯವರ ಕರೆಗೆ ಓಗೊಟ್ಟ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಬದನವಾಳುವಿನಲ್ಲಿ ಖಾದಿ ಗ್ರಾಮೋದ್ಯೋಗ ಕೇಂದ್ರವನ್ನು ಸ್ಥಾಪಿಸುವುದರ ಮೂಲಕ ತಮ್ಮ ದೂರದೃಷ್ಟಿ ಹಾಗೂ ಉದಾರತೆಯ ನೀತಿಗಳನ್ನು ಮತ್ತೊಮ್ಮೆ ಪ್ರದರ್ಶಿಸಿದರು. ಇದರಿಂದ ಬದನವಾಳು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಹರಿಜನರ ಭಾಗ್ಯದ ಬಾಗಿಲು ತೆರೆಯಿತು. ಇದು ಮೈಸೂರು ಸಂಸ್ಥಾನದಾದ್ಯಂತ ಖಾದಿ ಉತ್ಪಾದನೆ, ಗ್ರಾಮಾಭಿವೃದ್ಧಿ, ಹರಿಜನರ ಉದ್ಧಾರ, ಅಸ್ಪೃಶ್ಯತಾ ನಿವಾರಣೆಗಳಂತಹ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆ ಹಾಗೂ ಅಭಿವೃದ್ಧಿ ಚಟುವಟಿಕೆಗಳು ತೀವ್ರಗೊಳ್ಳಲು ಸಾಧ್ಯವಾಯಿತು. ಪ್ರಾಯಶಃ ಕರ್ನಾಟಕಕ್ಕೆ ಗಾಂಧೀಜಿಯವರ ಆಗಮನ ಮತ್ತು ಅವರ ತತ್ವಾದರ್ಶಗಳ ಪ್ರಭಾವದ ಹಿನ್ನೆಲೆಯಿಂದ ಸ್ಫೂರ್ತಿಗೊಂಡ ಆಳುವ ಮಹಾಸ್ವಾಮಿಯವರಾಗಿದ್ದ ನಾಲ್ವಡಿ ಯವರು ಮತ್ತು ಅವರ ದಿವಾನರುಗಳು ಮೈಸೂರು ಸಂಸ್ಥಾನದ ಸಮಗ್ರ ಪ್ರಗತಿಗೆ ಮತ್ತು ಮೈಸೂರು ಸಂಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಲ್ಲಿಯೇ ಒಂದು "ಮಾದರಿ ಸಂಸ್ಥಾನವಾಗಿ" ರೂಪು ಗೊಳ್ಳಲು ಸಾಧ್ಯವಾಯಿತ್ತೆಂದರೆ ತಪ್ಪಾಗಲಾರದು. ಒಟ್ಟಾರೆ ಬದನವಾಳು ಗ್ರಾಮವು ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ಒಂದು ಸಂಕೇತವಾಗಿ ಮತ್ತು ಪ್ರಮುಖ ಕೇಂದ್ರವಾಗಿ ಹೇಗೆ ತನ್ನ ಪಾತ್ರ ವಹಿಸಿತ್ತೆಂಬುದರ ಸ್ಥೂಲ ಪರಿಶೀಲನೆ ಇದು.

* ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಡಾ. ಎಚ್. ಇ. ಬಸವರಾಜಪ್ಪ*

ಶಿಲ್ಪ ಕಲಾವಿದ ರಂಜಾಳ ಗೋಪಾಲಕೃಷ್ಣಶೆಣೈ

ದಕ್ಷಿಣ ಭಾರತದಲ್ಲಿ ಶಾತವಾಹನರ ಕಾಲದಲ್ಲಿ ಶಿಲ್ಪಕಲೆ ವಿಶೇಷವಾಗಿ ಬೆಳೆಯಿತು. ಅನಂತರ ವಾಕಾಟಕರು, ಪಲ್ಲವರು, ಶಿಲ್ಪಕಲೆಗೆ ಆಶ್ರಯದಾತರಾದರು. ಅಮರಾವತಿಯಲ್ಲಿ ಬೆಳೆದು ಬಂದ ಕಲಾಸಂಪತ್ತು ದಕ್ಷಿಣದ ಶಿಲ್ಪ ಮತ್ತು ಚಿತ್ರಕಲೆಗೆ ವಿಶೇಷವಾದ ಬೆಳವಣಿಗೆಗೆ ಕಂಡಿತ್ತು. ಮುಂದೆ ಕರ್ನಾಟಕ ಶಿಲ್ಪ ಕಲೆಯಲ್ಲಿ ವಹಿಸಿದ ಪಾತ್ರ ಮಹತ್ತರವಾದುದು. ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಶಿಲ್ಪಕಲೆಗೆ ಕೊಟ್ಟ ಕೊಡುಗೆ ವಿಶಿಷ್ಟವಾದುದು. ಇದಕ್ಕೆ ಶಿಲ್ಪ ರಚನೆ ನಿರ್ಮಾಣ ಕ್ರಮವನ್ನು ವಿಕಾಸದ ಹಾದಿಯಲ್ಲಿ ರೂಪಿಸಿಕೊಂಡು ಬರಲು ಶಾಸ್ತ್ರಗಳ ಹಿನ್ನೆಲೆ ಬಹುಮಟ್ಟಿಗೆ ಸಹಾಯಕವಾಯಿತು. ಶಿಲ್ಪ ಶಾಸ್ತ್ರಗಳು ವಿಗ್ರಹಗಳ ನಿರ್ಮಾಣ ಕ್ರಮಗಳನ್ನು ವಿಧಿವತ್ತಾಗಿ ವರ್ಣಿಸಿದವು. ವಿಜಯನಗರದ ನಂತರ ಕೆಳದಿ ಮತ್ತು ಮೈಸೂರು ಅರಸರ ಪೋಷಣೆಯಲ್ಲಿ ವಾಸ್ತುಶಿಲ್ಪದಂತೆ, ಶಿಲ್ಪವೂ ಉಳಿದು - ಬೆಳೆದುಕೊಂಡು ಬಂದಿತ್ತು.

ಹತ್ತೊಂಬತ್ತನೇ ಶತಮಾನದಲ್ಲಿ ಕಟ್ಟಿದ ಅನೇಕ ದೇವಾಲಯಗಳು ಸೂಕ್ಷ್ಮವಾಗಿ ಕೆತ್ತಿದ ದೇವ ದೇವಿಯರ ವಿಗ್ರಹಗಳು ಮತ್ತು ಹಲವು ವಸ್ತುಗಳು ವಿನ್ಯಾಸಪೂರ್ಣವಾಗಿವೆ. ಈ ದೇವಾಲಯಗಳಲ್ಲಿರುವ ಮೂರ್ತಿಗಳನ್ನು ಶಿಲ್ಪಿಗಳು ಸಾಂಪ್ರದಾಯಿಕ ಶೈಲಿಯಲ್ಲಿ ಕೆತ್ತಿದರು. ಮೈಸೂರಿನ ಸಿಂಗಣ್ಣಾಚಾರ್ಯ, ಸಿಂಗಣ್ಣ ಹೆಸರಾಂತ ಶಿಲ್ಪಿಯಾಗಿದ್ದರು. ಕರ್ನಾಟಕದ ಶಿಲ್ಪಿಗಳು ವಿಗ್ರಹಗಳನ್ನು ಹಾಗೂ ಇತರ ವಸ್ತುಗಳನ್ನು ಕೆತ್ತುವುದರಲ್ಲಿ ಹಿಂದಿನ ಭವ್ಯ ಪರಂಪರೆಯನ್ನು ಮುಂದುವರೆಸಿ ಕೊಂಡು ಬಂದರು. ಶಿಲೆ, ಲೋಹ, ಮರ, ದಂತ ಈ ಕೆತ್ತನೆಗಳಲ್ಲವೂ ಇದರಲ್ಲಿ ಸೇರುತ್ತವೆ. ಸ್ವಾತಂತ್ರ್ಯೋತ್ತರ ಕಾಲವು ಭಾರತೀಯ ಕಲಾಪ್ರಪಂಚದಲ್ಲಿ ಒಂದು ಮಹತ್ವದ ಅವಧಿಯಾಗಿರುತ್ತದೆ. ರಾಜಕೀಯವಾಗಿ ದೊರೆತ ಸ್ವಾತಂತ್ರ್ಯ ಸಾಮಾಜಿಕ ಬದುಕಿನ ಆಳ, ಸ್ತರಗಳಿಗೂ ಇಳಿದ ಕಾರಣ ಸ್ವತಂತ್ರವಾಗಿ ಆಲೋಚಿಸಲು ಬದುಕಿಗೆ ಹತ್ತಿರವಾಗಲು ಗತಕಾಲದ ಬಗ್ಗೆ ಚಿಂತಿಸಲು ಹೊಸ ಹೊಸ ಪ್ರಯೋಗ ನಡೆಸಲು, ಧಾರ್ಮಿಕ ಆಳರಸರ ಆಶ್ರಯದಿಂದ ಮುಕ್ತವಾಗಿ ನಿರ್ಭೀತಿಯಿಂದ ಪ್ರಕ್ಷುಬ್ಧ ಅನಿಸಿಕೆಗಳನ್ನು, ಅನುಭವಗಳನ್ನು, ಸಂವೇದನೆಗಳನ್ನು ವ್ಯಕ್ತಪಡಿಸಲು ಒಂದು ವೇದಿಕೆ ದೊರೆತಂತಾಯಿತು.

ಎಚ್. ಎ. ಅನಿಲ್‌ಕುಮಾರ್ ಹೇಳುವಂತೆ "ಶಿಲ್ಪಕಲೆಯನ್ನು ಪರಿಗ್ರಹಿಸುವ ಈ ಹಲವು ರೀತಿಗಳು ೨೦ನೇ ಶತಮಾನದಾದ್ಯಂತ ಶಿಲ್ಪಕಲೆ ರೂಪಾಂತರ ಹೊಂದಿದ ಹಲವು ಸ್ತರಗಳನ್ನು ಗುರ್ತಿಸುತ್ತವೆ. ಆದರೆ ಇಲ್ಲಿಯವರೆಗೂ ಚರ್ಚಿಸಿರುವ ಶಿಲ್ಪ ಪೆಡೆಸ್ಟಲ್ ರೂಪವಾಗಲಿ ಅದರ ನಂತರದ ಸ್ಥಿತ್ಯಂತರಗಳಾಗಲಿ ಒಂದರಿಂದೊಂದು ಮಾರ್ಪಾಟು ಹೊಂದಿದ ರೂಪಗಳೆಂದೇ (ಐತಿಹಾಸಿಕ ಮುಂದುವರಿಕೆ) ಪರಿಗಣಿಸುತ್ತೇವೆ. ಈ ಮುಂದುವರಿಕೆಯ ಸತ್ಯದಲ್ಲಿ ನಂಬಿಕೆ ಇರಿಸುವುದಾದರೆ ಇಂದಿನ ಅಕಾಡೆಮಿಕ್ ಶಿಲ್ಪಗಳು, ದೇವಾಲಯ ಶಿಲ್ಪಗಳು, ಇನ್‌ಸ್ಟಲೇಷನ್, ಅಸಂಬ್ಲೇಜ್‌ಗಳು ಇತ್ಯಾದಿಯಾಗಿ ಗುರುತಿಸುವ ಪ್ರಯತ್ನವಿದೆ" ಎನ್ನುತ್ತಾರೆ. ಶಿಲ್ಪಕಲೆಯನ್ನು ಇತರ ಕಲಾ ಪ್ರಕಾರಗಳಿಂದ ಬೇರ್ಪಡಿಸಿ ನೋಡುವುದು ಒಂದು ಕಾಲ ದೇಶದ ಚೌಕಟ್ಟಿಗೊಳಪಟ್ಟ ಕ್ರಮ. ಈ ಚೌಕಟ್ಟು ಒಬ್ಬ ಮನುಷ್ಯನ ಜೀವಿತಾವಧಿಯ ಪರಿಧಿಯೊಳಗಿಂದ ವಿಸ್ತರವಾದುದೆನಿಸುತ್ತದೆ. ಆದರೆ ಕಲೆಯ ಆಯುಷ್ಯದ ಭಾಗದಲ್ಲಿ ಅಷ್ಟೇನೂ ದೀರ್ಘವಲ್ಲದ ಕಾಲಪರಿಮಿತಿ ಯಲ್ಲಿ ಶಿಲ್ಪಕಲೆಯನ್ನು ಒಂದು ಸ್ವಯಂ-ಪೂರ್ಣ ಪ್ರಕಾರವಾಗಿ ಪರಿಗಣಿಸುತ್ತೇವೆ. ಆದುದರಿಂದ ಭಾರತೀಯ ಸಮಕಾಲೀನ ಶಿಲ್ಪದ ಶೈಲಿಗಳು ನಮ್ಮ ಶಿಲ್ಪಕಾರರ ವೈಯಕ್ತಿಕ ಅಭಿವ್ಯಕ್ತಿಯ ಮೇಲೆ ಹಾಗೂ ಅವರ ವೈಯಕ್ತಿಕ ಭಾವನೆಗಳು ಮತ್ತು ಪರಿಸರದ ವೈಯಕ್ತಿಕತೆಯ ಜಾಗೃತಿಯು ಸುಧಾರಣೆಗೊಂಡಿದೆ. ಆಧುನಿಕ ಕಲಾವಿದರು ರೂಪಗೊಂಡು ಕನ್ನಡನಾಡಿಗೂ, ಶಿಲ್ಪಕಲಾ ಕ್ಷೇತ್ರಕ್ಕೂ ಕೀರ್ತಿ ತಂದ ಮಹಾನ್ ಕಲಾದವಿದರಾಗಿ ಬೆಳೆದು ಬಂದರು. ನಮ್ಮ ಕಲಾವಿದರು ಕೆತ್ತಿ ನಿರ್ಮಿಸಿದ ಭವ್ಯವೂ, ಸುಂದರವೂ, ಕಲಾತ್ಮಕವೂ ಆದ ಕರ್ನಾಟಕದ ಮೂರ್ತಿಶಿಲ್ಪಗಳು ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಪ್ರತಿಷ್ಠಾಪನೆಗೊಂಡಿವೆ. ಇವು ಕನ್ನಡನಾಡಿಗೆ ವಿಶ್ವಮಾನ್ಯತೆ ತಂದುಕೊಟ್ಟಿವೆ. ಅಂತಹ ಶ್ರೇಷ್ಠ ಪ್ರತಿಭಾವಂತ ರೂವಾರಿಗಳ ಸಾಲಿಗೆ ಸೇರಿದವರು ರಂಜಾಳ ಗೋಪಾಲಕೃಷ್ಣ ಶೆಣೈಯವರು. ಒಬ್ಬ ಶಿಲ್ಪ ಕಲಾವಿದರಾಗಿ ಮಾಡಿದ ಸಾಧನೆ ಮತ್ತು ಶಿಲ್ಪ ಜಗತ್ತಿನ ಕಲಾವಿದರ ವೈಯಕ್ತಿಕ ಸಂಸ್ಕೃತಿ ರಾಷ್ಟ್ರ ಸಂಸ್ಕೃತಿಯಾಗಿ ಮಾರ್ಪಾಟುಗೊಂಡಾಗ ಅವರ ಅಂತರಾತ್ಮ ರಾಷ್ಟ್ರದ ಆತ್ಮದೊಂದಿಗೆ ಪ್ರತಿಸ್ಪರ್ಧಿಸಲು ಆರಂಭಿಸಿ ದಾಗ ಸಹಜವಾದ ರಾಷ್ಟ್ರೀಯಕಲೆ ಉತ್ಪನ್ನವಾಗಿತ್ತದೆ. ಪ್ರಸ್ತುತ

* ಇತಿಹಾಸ ಉಪನ್ಯಾಸಕರು, ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ, ಬಾದಾಮಿ-ಬನಶಂಕರಿ, ಜಿ. ಬಾಗಲಕೋಟೆ

ಲೇಖನದಲ್ಲಿ ಶೆಣೈಯವರ ಕಲಾಜೀವನದ ಬೆಳವಣಿಗೆಯನ್ನು ಪರಿಶೀಲಿಸಲು ಪ್ರಯತ್ನಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ೫೩ ಕಿ. ಮೀ. ದೂರದಲ್ಲಿರುವ ಕಾರ್ಕಳವು ಚತುರ್ಮುಖ ಬಸದಿ, ಗೊಮ್ಮಟ, ಅನಂತಶಯನ ಹಾಗೂ ವೆಂಕಟ್ರಮಣ ದೇವಾಲಯಗಳ ಹತ್ತಿರದಲ್ಲಿ ಹಿರಿಯಂಗಡಿ ಮಾನಸ್ತಂಭ ಮುಂತಾದ ವಾಸ್ತುಶಿಲ್ಪಗಳಿಂದ ಪ್ರಸಿದ್ಧವಾದ ನಿಸರ್ಗ ಸುಂದರ ಪಟ್ಟಣ ಕಾರ್ಕಳ. ಅದರ ಹತ್ತಿರದಲ್ಲಿರುವ ರಂಜಾಳದಲ್ಲಿ ಜನಾರ್ಧನ ಶೆಣೈ ಅವರಿಗೆ ಮೂವರು ಪುತ್ರಿಯರು ಮತ್ತು ಏಕಮಾತ್ರ ಪುತ್ರ ಗೋಪಾಲಕೃಷ್ಣಾಶೆಣೈ ೧೯೯೭ ಜನವರಿ ೬ರಂದು ಜನಿಸಿದರು. ಸ್ಥಳೀಯ ವೆಂಕಟ್ರಮಣ ದೇವಳದ ಸಂಸ್ಕೃತ ಪಾಠ ಶಾಲೆಯಲ್ಲಿ ೭ನೇ ತರಗತಿಯವರೆಗೆ ಅಧ್ಯಯನ ಮಾಡಿದರು. ನಂತರ ಚಿತ್ರಕಲೆಯಲ್ಲಿ ಮದ್ರಾಸ್ ಸರಕಾರದ ಇಂಟರ್‌ಮೀಡಿಯಾ ಪರೀಕ್ಷೆಗೆ ಕುಳಿತು ಉತ್ತೀರ್ಣರಾದರು. ಅವರ ವಿದ್ಯಾಭ್ಯಾಸದ ನಂತರ ಶ್ರೀ ವೆಂಕಟ್ರಮಣ ದೇವಳದ ಸಂಸ್ಕೃತ ಪಾಠಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಎಂಟು ವರ್ಷ ಕೆಲಸ ನಿರ್ವಹಿಸಿದರು. ಜೊತೆಯಲ್ಲಿಯೇ ಜೈನ ಶಾಸ್ತ್ರ, ಸಂಸ್ಕೃತ ಮಹಾಕಾವ್ಯ, ಧರ್ಮ ಗ್ರಂಥಗಳ ಕುರಿತು ಅಧ್ಯಯನ ಮಾಡಿದರು. ಶಿಕ್ಷಕರಾಗಿದ್ದಾಗಲೇ ಉಂಗುರದ ನೀಲ ಪಚ್ಚೆ, ಕೆಂಪು ಕಲ್ಲುಗಳಲ್ಲಿ ಮೋನೋಗ್ರಾಮ್ಸ್ ಕೆತ್ತಿಕೊಡುತ್ತಿದ್ದರು. ಅವರ ತಂದೆ ಜನಾರ್ಧನ ಶೆಣೈ ೧೯೨೦ರಲ್ಲಿ ನಿಧನರಾದರು. ತಂದೆಯಿಂದ ಶಿಲ್ಪಕಲೆಯನ್ನು ಬಳುವಳಿಯಾಗಿ ಪಡೆದು ತಮ್ಮ ಚಿತ್ರಕಲಾ ಶಿಕ್ಷಕ ವೃತ್ತಿಯನ್ನು ಬಿಟ್ಟು ಸಾಂಪ್ರದಾಯಿಕ ಶಿಲ್ಪಕಲೆಯನ್ನು ತಮ್ಮ ಬದುಕಿನ ವೃತ್ತಿಯಾಗಿ ಮುಂದುವರೆಸಿದರು.

ಕುಶಲಕಲೆಯ ಎಲ್ಲಾ ಪ್ರಕಾರಗಳಲ್ಲೂ ಅದ್ವಿತೀಯ ಪ್ರೌಢಿಮೆ ಪಡೆದಿದ್ದರು. ನಮ್ಮ ಸಾಂಪ್ರದಾಯಿಕ ಶಿಲ್ಪಕಲೆ ನಿಂತ ನೀರಾದಂಥ ಸಂದರ್ಭದಲ್ಲಿ ಸಾಂಪ್ರದಾಯ ಶಿಲ್ಪಗಳಿಗೆ ಅಷ್ಟೇನೂ ಪ್ರೋತ್ಸಾಹಕರ ವಾತಾವರಣವಿಲ್ಲದ ಕಾಲಾವಧಿಯಲ್ಲಿಯು ಸಾಂಪ್ರದಾಯಿಕ ಶಿಲ್ಪಕಲೆಗೆ ಜೀವತುಂಬಿ ಇತರರಿಗೂ ಸ್ಫೂರ್ತಿ ನೀಡಿದರು. ವರ್ಣಚಿತ್ರ, ರೇಖಾಚಿತ್ರ, ತೈಲ ಅಥವಾ ಜಲವರ್ಣದಲ್ಲಿಯೇ ಅದ್ಭುತವಾದ ಸಾಧನೆ ಮಾಡಿದ್ದರು. ಯಾವುದೇ ವರ್ಣಗಳನ್ನು ಕಣ್ಣಿಗೆ ಕಟ್ಟುವಂತಹ ಸಹಜ ಸುಂದರವಾಗಿ ಕೃತಿಗಳಲ್ಲಿ ಮೂಡಿಸುವ ಕಲಾ ಸೃಜನ ಶಕ್ತಿಯನ್ನು ಅವರು ಪಡೆದಿದ್ದರು. ಚಿತ್ರಗಳನ್ನು ಬಿಳಿಯ ಹಾಳೆಯ ಮೇಲೆ ನೈಜವಾಗಿ ಚಿತ್ರಿಸುವಂತಹ ಸಾಮರ್ಥ್ಯವಿತ್ತು. ಅವರು ಚಿತ್ರಿಸಿದ ಜಲವರ್ಣ ಚಿತ್ರಗಳಲ್ಲಿ ಆದಿವಾಸಿಗಳ ಮದುವೆ, ಸಿದ್ಧಾರ್ಥನ ಗೃಹತ್ಯಾಗ ಸಹಜವಾಗಿ ಕಾಣುವ ಪ್ರಕೃತಿಯನ್ನು, ಗದ್ದೆಗಳನ್ನು, ಮರಗಳನ್ನು ಚಿತ್ರಿಸಿದ್ದಾರೆ. ಅವರು ಚಿತ್ರಿಸಿದ ಸಂಯೋಜನೆಗಳಲ್ಲಿ ದೂರದಲ್ಲಿ ಒಂದು ಬಾವಿ, ಮದುಮಕ್ಕಳು, ಗುಡಿಸಲ ಶೃಂಗರಿಸುವುದರಲ್ಲಿ ಮಗ್ನರಾಗಿದ್ದಾರೆ, ಗುರಿಕಾರರು ವೀಳ್ಯ ಜಗಿಯುತ್ತಾ ಅಡಿಕೆಯನ್ನು ಚೂರು ಮಾಡುತ್ತಿರುವ, ಕೆಲವರು ದುಡಿವಾದ್ಯ ಬಾರಿಸುತ್ತಿದ್ದಾರೆ, ಕೆಲವರು ಕುಣಿಯುತ್ತಿದ್ದಾರೆ. ಇನ್ನೂ ಕೆಲವರು ಅಡಿಗೆ, ಊಟಗಳಿಗಾಗಿ ಸಿದ್ಧತೆ ಮಾಡುತ್ತಿದ್ದಾರೆ. ಇತರರು ಹರಟೆಯಲ್ಲಿ ನಿರತರು, ಮಕ್ಕಳು ನಾಯಿಗಳನ್ನು ಎತ್ತಿ, ಬಾಲ ಎಳೆದು ಆಡುತ್ತಿದ್ದಾರೆ. ದೂರದಲ್ಲೊಂದು ಬಡಕಲು ದನ ಮೇಯುತ್ತಿದೆ, ಸುತ್ತಮುತ್ತ ಕೆಲವು ಕೋಳಿಗಳು ಕಾಳುಗಳನ್ನು ಹೆಕ್ಕಿ ತಿನ್ನುತ್ತಿವೆ. ಉನ್ನತ ಮಟ್ಟದ ಕಲಾಭಿರುಚಿ, ತದೇಕ ನಿಷ್ಠೆಯಿಂದ ಪ್ರಕೃತಿಯ ಮಡಿಲಲ್ಲೇ ಅದರ ಚೆಲುವನ್ನು ಗ್ರಹಿಸಿ, ಯಥಾರ್ಥ ಪ್ರಕೃತಿಯನ್ನು ರಚಿಸುತ್ತಿದ್ದ ಸಿದ್ಧಹಸ್ತ ಅವರದು. ಸಾಂಪ್ರದಾಯಿಕ ಕಲಾ ಶೈಲಿಯ ಪ್ರಭಾವಕ್ಕೆ ಒಳಪಟ್ಟು ನಮ್ಮ ನಾಡಿನ ನಿಸರ್ಗದ ಜಾಯಮಾನವನ್ನೇ ಹಿಡಿದು ಕಲಾಕೃತಿಯನ್ನು ರಚಿಸಿದ್ದರು. ವರ್ಣ ಚಿತ್ರ ಸಂಯೋಜನೆಯಲ್ಲಿ ಸಾಮಾನ್ಯ ಮಾನವನ ಬದುಕಿನ ಬೇರೆ ಬೇರೆ ಸ್ಥಿತ್ಯಂತರಗಳ ಕಲ್ಪನೆಯಿಂದಾಗಿ ಅವರು ಆರಿಸಿಕೊಳ್ಳುತ್ತಿದ್ದ ವಸ್ತುವಿನ ಸಾಮಾಜಿಕ ಪ್ರಸ್ತುತೆಯಂತೆಯೇ ಅವರ ವರ್ಣ ಸಂಯೋಜನೆಯು ಅದ್ಭುತ ಪರಿಣಾಮ ಮಾಡುವಷ್ಟು ಸತ್ವಯುತವಾಗಿದೆ. "ಶಿಲ್ಪಿ ಶೆಣೈಯವರು ಕುಂಚ ಬ್ರಹ್ಮರು ಹೌದು, ಅದರಲ್ಲೇ ಮುಂದುವರೆದಿದ್ದರೆ ಅಸಾಮಾನ್ಯ ವರ್ಣ ಚಿತ್ರಗಳನ್ನು ರಚಿಸುತ್ತಿದ್ದರೆಂದು" ಬಿ. ಪಿ. ಬಾಯಿರಿ ಅಭಿಪ್ರಾಯಪಟ್ಟಿದ್ದಾರೆ. ಶೆಣೈಯವರು ರೇಖಾಚಿತ್ರ ರಚನೆಯಲ್ಲಿ ಜೀವಕಳೆ ತುಂಬಬಲ್ಲವರಾಗಿದ್ದರು. ಹಿಂದಿನ ಭವ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಶಿಲೆ, ಲೋಹ, ಮರ, ದಂತಗಳಲ್ಲಿ ಕಲಾಕೃತಿಗಳನ್ನು ರಚಿಸುವದೇ ವೃತ್ತಿಯಾಗಿ ಉಳ್ಳ ಶೆಣೈಯವರು ದಕ್ಷಿಣ ಕನ್ನಡದ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಮಾಡಿದ್ದಾರೆ. ಅಲ್ಲದೇ ನೂರಾರು ಪೂಜಾ ವಿಗ್ರಹಗಳನ್ನೂ ಸೃಷ್ಟಿಸಿದ್ದಾರೆ. ಕಾರ್ಕಳದ ಶ್ರೀ ವೆಂಕಟ್ರಮಣಸ್ವಾಮಿ ದೇವಾಲಯ, ಪುತ್ತೂರಿನ ಶ್ರೀ ವೆಂಕಟ ರಮಣ ದೇಗುಲ ಪ್ರಯಾಗ, ಹೃಷಿಕೇಶ, ಮುಂಬೈ, ದೆಹಲಿ ಮೊದಲಾದ ಕಡೆಗಳಲ್ಲಿ ಶೆಣೈಯವರು ಕೆತ್ತಿರುವ ಸುಂದರ ಹಾಗೂ ಸಪ್ರಮಾಣಬದ್ಧ ಶಿಲ್ಪ ಕೃತಿಗಳು ಬಹುಜನರನ್ನು ಆಕರ್ಷಿಸುತ್ತವೆ. ಸೂಕ್ಷ್ಮಾನುಸೂಕ್ಷ್ಮವಾದ ರೀತಿಯಲ್ಲಿ ಅತಿ ದೊಡ್ಡ ಪ್ರಮಾಣದ ವಿಗ್ರಹಗಳನ್ನು ನಿರ್ಮಿಸಬಲ್ಲ ಶೆಣೈಯವರ ಸಾಮರ್ಥ್ಯಕ್ಕೆ ಅವರು ಸೃಷ್ಟಿಸಿರುವ ೫೦೦ ಕ್ಕೂ ಹೆಚ್ಚಿನ ಕಲಾಕೃತಿಗಳೇ ಸಾಕ್ಷಿಯಾಗಿವೆ.

ಶೆಣೈಯವರು ಮೊದಲು ನಿರ್ಮಿಸಿದ ಕಾರ್ಕಳದ ವೆಂಕಟ್ರಮಣ ದೇವಾಲಯದ ಗರುಡ ಮಂಟಪದ ಕಂಭಗಳು ಅಲ್ಲಿನ ಸೂಕ್ಷ್ಮ ಕೆಲಸಗಳಿಂದ ಕೂಡಿವೆ. ಅವುಗಳಲ್ಲಿ ವಿಶೇಷ ಅಲಂಕಾರಿಕ ನಕ್ಷೆಗಳನ್ನು ರಚಿಸಿದ್ದಾರೆ. ಈ ಮಂಟಪದ ಪ್ರತಿಯೊಂದು ಕಂಭದಲ್ಲೂ ಮಧ್ಯದಲ್ಲಿ ಒಂದು ಪ್ರಧಾನ ಸ್ತಂಭ ಅದಕ್ಕೆ ಸುತ್ತುವರಿದು ನಾಲ್ಕು ಉಪ ಸ್ತಂಭಗಳಿವೆ. ಪ್ರತಿಯೊಂದರಲ್ಲಿ ಐದು ಕಂಭಗಳು ಒಂದೇ ಶಿಲೆಯಲ್ಲಿ ಬರುವಂತೆ ಕೆತ್ತಲಾಗಿದೆ. ಕಂಬಗಳ ಮೇಲ್ಭಾಗದಲ್ಲಿ ಕಲ್ಲಿನ ಸರಪಳಿಗಳಿವೆ. ಅವು ಉಯ್ಯಾಲೆಯಂತೆ ತೂಗಾಡುತ್ತವೆ. ನಾಲ್ಕು ಕಂಬಗಳೂ ಕಲಾತ್ಮಕವಾಗಿವೆ. ನಾಲ್ಕು ಉಪ ಸ್ತಂಭಗಳ ಮಧ್ಯದಲ್ಲಿರುವ ಮುಖ್ಯ ಸ್ತಂಭದಲ್ಲೂ ಸುಂದರವಾದ

ಕೀರ್ತಿಮುಖಗಳು ಮಂಟಪದ ಇದಿರಿನ ಎರಡು ಕಂಭಗಳಲ್ಲಿ ಚಾಮರ ಸೇವಕರು, ಗಂಡಭೇರುಂಡಗಳಿವೆ. ಪಕ್ಕದ ಸ್ತಂಭಗಳಲ್ಲಿ ಗರುಡ, ಆಂಜನೇಯರು ಮತ್ತು ಧ್ರುವ ಪ್ರಹ್ಲಾದರು ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ. ಈ ದೇವಾಲಯ ಶೆಣೈಯವರ ಹೆಸರನ್ನು ಚಿರಾಸ್ಥಾಯಿಗೊಳಿಸಿತು.

ಧರ್ಮಸ್ಥಳದ ಬಾಹುಬಲಿ

ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ಬಾಹುಬಲಿ ಮೂರ್ತಿಯನ್ನು ಕೆತ್ತಿಕೊಡಲು ಶೆಣೈಯವರಿಗೆ ತಿಳಿಸಿದರು. ಕಾರ್ಕಳದ ಮಂಗಲ ಪಾದೆಯಲ್ಲಿ ಬಾಹುಬಲಿ ವಿಗ್ರಹಕ್ಕೆ ಸರಿಹೋಗುವ ಶಿಲ್ಪ ಗುರುತಿಸಿದರು. ನಂತರ ಈ ವಿಗ್ರಹ ಕೆತ್ತನೆಯ ಕಾರ್ಯ ೧೯೬೮ ಜೂನ್ ತಿಂಗಳಲ್ಲಿ ಪ್ರಾರಂಭಿಸಿದರು. ಈ ಬೃಹತ್ ಬಂಡೆಯನ್ನು ಕೆತ್ತಿ ಶಿಲ್ಪ ತಯಾರಿಸುವ ಕೆಲಸಕ್ಕೆ ನುರಿತ ಕಲ್ಲು ಕುಟಿಗರನ್ನು ಸಹಾಯಕ್ಕೆ ನೇಮಿಸಿಕೊಂಡರು. ಈ ಶಿಲ್ಪ ತಯಾರಿಕೆಯ ಸ್ಥಳವನ್ನು ನೀರು, ವಸತಿ, ನಿವೇಶನದ ಇನ್ನುಳಿದ ಅನುಕೂಲತೆಗಳಿಂದ ಕೂಡಿದ ಶಿಲ್ಪ ಗ್ರಾಮದ ರೂಪದಲ್ಲಿ ನಿರ್ಮಿಸಿದರು. ಸ್ವಲ್ಪ ದಿನಗಳಲ್ಲಿಯೇ ಆಕೃತಿ ರಹಿತವಾದ ಶಿಲಾ ಬಂಡೆಯ ಒಂದು ಮೈಯು ಶಿಲ್ಪಿಯ ಕೈಯಲ್ಲಿ ವಿಗ್ರಹದ ಸ್ಥೂಲವಾದ ರೂಪ ಪಡೆಯಿತು. ನೂರಾರು ಸಹಾಯಕ ಶಿಲ್ಪಿಗಳಿಂದ ಕೂಡಿದ ಶಿಲ್ಪಗಳ ಪ್ರಯತ್ನದಿಂದಾಗಿ ಬಾಹುಬಲಿಯ ಮೂರ್ತಿಯು ಜೈನ ಶಿಲ್ಪಶಾಸ್ತ್ರಕ್ಕೆ ಅನುಸಾರವಾಗಿ ತಾಳ, ಮಾನ, ಪ್ರಮಾಣಬದ್ಧವಾಗಿ ತಯಾರಾಯಿತು. ಈ ವೇಳೆಗಾಗಲೇ ಶ್ರೀ ರತ್ನವರ್ಮ ಹೆಗ್ಗಡೆ ಕಾಲವಾದರು. ಅವರ ಮಗ ಡಾ. ವೀರೇಂದ್ರ ಹೆಗ್ಗಡೆಯವರು ಈ ವಿಗ್ರಹದ ಮುಂದಾಳತ್ವ ವಹಿಸಿಕೊಂಡರು. ಈ ಬಾಹುಬಲಿ ವಿಗ್ರಹವನ್ನು ಕಾರ್ಕಳದಿಂದ ೭೫ ಕಿ.ಮೀ. ದೂರದ ಧರ್ಮಸ್ಥಳಕ್ಕೆ ಮುಂಬಯಿಯ ಮಂಗತ್ರಾಮ್ ಸಂಸ್ಥೆಯವರು ೧೯೭೩ರಲ್ಲಿ ಆರುವತ್ನಾಲ್ಕು ಗಾಲಿಗಳ ನಲವತ್ತೈದು ಅಡಿ ಉದ್ದದ ವಿಶೇಷ ಟ್ರಾಲಿಯ ಮೂಲಕ ಸಾಗಿಸಿದರು. ಧರ್ಮಸ್ಥಳದ ಬೆಟ್ಟದಮೇಲೆ ೧೯೮೨ ರಲ್ಲಿ ಪ್ರತಿಷ್ಠಾಪನಾ ಸಮಾರಂಭವು ನಡೆಯಿತು.

ಶೆಣೈಯವರು ನಿರ್ಮಿಸಿದ ಈ ವಿಗ್ರಹವು ಕರ್ನಾಟಕದ ಇತರ ಪ್ರಾಚೀನ ಬಾಹುಬಲಿ ವಿಗ್ರಹಗಳ ವಿಶೇಷವಾದ ಲಕ್ಷಣಗಳನ್ನೇ ಹೊಂದಿದೆ. ಬಾಹುಬಲಿಯು ವಿರಕ್ತ ರಾಜ್ಯವನ್ನೇ ತೊರೆದವ, ಆತನ ಮೂರ್ತಿಯು ನಗ್ನ ರೂಪದಲ್ಲಿ ನೇರವಾಗಿ ನಿಂತಿದೆ. ಪ್ರಶಾಂತ ಭಾವದ ಮುಖ ತುಟಿಗಳಲ್ಲಿ ದಿವ್ಯವಾದ ನಸುನಗು, ದಯಾಪೂರ್ಣವಾದ ಧ್ಯಾನಮಗ್ನದ ಅರೆ ಮುಚ್ಚಿದ ನೇತ್ರಗಳು, ನೆತ್ತಿಯ ತುಂಬಾ ಹರಡಿರುವ ಗುಂಗುರ ಕೂದಲಿನ ಉಂಗುರಗಳು ತಲೆಯನ್ನು ಅಲಂಕರಿಸಿ ಸಹಜ ಸೌಂದರ್ಯವನ್ನು ಹೆಚ್ಚಿಸಿವೆ. ಉದ್ದವಾದ ಕಿವಿಗಳು, ಅಗಲವಾದ ವಕ್ಷಸ್ಥಲ, ಅಜಾನುಬಾಹುಗಳು, ಮಹಾಪುರುಷ ಲಕ್ಷಣವನ್ನು ಎತ್ತಿ ತೋರಿಸುವಂತಿವೆ. ಹೆಬ್ಬೆರಳನ್ನು ಹೊರಗೆ ತಿರುಗಿಸುವ ಸಹಜವಾದ ಭಂಗಿಯಲ್ಲಿ ಕೈಗಳನ್ನು ಇಳಿಯಬಿಟ್ಟದ್ದಾನೆ ಪ್ರಮಾಣಬದ್ಧವಾಗಿ ಕಿರಿದಾದ ಕಟಿ ಪ್ರದೇಶ, ಮೊಣಕಾಲುಗಳಿಂದ ಕೆಳಗೆ, ಕಾಲುಗಳ ಉದ್ದ ಸ್ವಲ್ಪ ಕುಳ್ಳಾಗಿರುವಂತೆ ತೋರುತ್ತದೆ. ಆದರೆ ಒಟ್ಟು ಮೂರ್ತಿ ಗಂಭೀರ ಆಕಾರಕ್ಕೆ ಆದರಿಂದ ಕುಂದೇನೂ ಕಾಣುವಂತಿಲ್ಲ. ಕಾಲುಗಳ ಬಳಿ ಸ್ವಲ್ಪ ಎತ್ತರದವರೆಗೆ ಹುತ್ತ ಬೆಳೆದಂತೆ ಕಂಡರಿಸಲಾಗಿದ್ದು, ಅಲ್ಲಿಂದ ಮೇಲೆ ಮೂರ್ತಿ ಯಾವ ಅವಲಂಬನೆಯೂ ಇಲ್ಲದೇ ನೇರವಾಗಿ ನಿಂತಿದೆ. ಭುಜಗಳ ತುದಿಯಲ್ಲಿ ಕೊನೆಗೊಳ್ಳುವಂತೆ, ಮಾಧವಿಲತೆಯ ಬಳ್ಳಿಗಳು ಎರಡೂ ಕಡೆಯಿಂದಲೂ ಹಬ್ಬಿ ಮೇಲೆ ಹೋಗಿವೆ. ದೃಢ ನಿಷ್ಠೆಯಿಂದ ಬಾಹುಬಲಿ ತಪಸ್ಸನ್ನು ಕೈಗೊಂಡನೆಂಬುದನ್ನು ಈ ಸಾಂಕೇತಿಕ ನಿರೂಪಣೆಯಿಂದ ಶಿಲ್ಪಿ ಸಾಧಿಸಿದ್ದಾನೆ. ಅರಳಿದ ಕಮಲದ ದಳದ ವೇದಿಕೆಯ ಮೇಲೆ ನಿಂತಂತೆ ನಿರ್ಮಿಸಿರುವುದು ಇನ್ನೂ ಅರ್ಥಗರ್ಭಿತವಾಗಿದೆ.

ಬಾಹುಬಲಿಯ ಧ್ಯಾನಸ್ಥ ಮನೋಧರ್ಮವನ್ನು ಹೊರಸೂಸುತ್ತಿರುವ ದಿವ್ಯ ದೃಷ್ಟಿ ಸೂಚಕವಾದ ಕಣ್ಣುಗಳು, ಮಂದಹಾಸ ಮಿನುಗುತ್ತಿರುವ ಮುಖ ಇವುಗಳನ್ನು ಇಷ್ಟು ದೊಡ್ಡ ಆಕಾರದ ವಿಗ್ರಹದಲ್ಲಿಯೂ ನೋಡಬಹುದು, ವಿಗ್ರಹದ ಮುಖದಲ್ಲಿ ಅತಿನವುರಾದ ಭಾವ ವಿನ್ಯಾಸವನ್ನು ಮೂಡಿಸಿರುವ ಶಿಲ್ಪಿಯ ಕೌಶಲ್ಯವನ್ನು ಕಂಡಾಗ ಮೆಚ್ಚುಗೆಗೂ ಮೀರಿದ ಗೌರವ-ಭಾವ ಮೂಡುತ್ತದೆ. ಈಗ ಎತ್ತರವಾದ ಆ ಬೆಟ್ಟದ ಮೇಲೆ ನಿಂತ ಗೊಮ್ಮಟ, ಕೆಳ ಜಗತ್ತಿನ ಲೌಕಿಕ ಹೋರಾಟದ ವ್ಯರ್ಥ ಸಾಹಸವನ್ನು ಕಂಡು ಮುಗಳು ನಗುತ್ತಾ ಅನುಕಂಪದಿಂದ ಮಾನವನನ್ನು ಉದಾತ್ತತೆಯೆಡೆಗೆ ಆಹ್ವಾನಿಸುವಂತಿದೆ. ಆ ಮುಖಭಾವ, ಅದರ ಎದುರಿನಲ್ಲಿರುವವರೆಗಾದರೂ ನಮ್ಮ ಅಹಂಕಾರದ ಹೆಡೆ ಮುಚ್ಚಿ ವಿಶ್ವ ಶಕ್ತಿಯ ಅವಿರ್ಭಾವವು ಅನುಭವವಾಗುವಂತಹ ದಿವ್ಯ ತೇಜಸ್ಸು ಈ ಮೂರ್ತಿಯಲ್ಲಿದೆ. ಈ ಮೂರ್ತಿ, ಕಲ್ಲುತನವನ್ನು ಕಳೆದುಕೊಂಡು ಚೇತನದ ಸಂಕೇತವಾಗಿ ಉಳಿದಿದೆ.

ಶೆಣೈಯವರು ಕೆತ್ತಿರುವ ಶಿಲ್ಪಗಳು ಭಾರತದ, ವಿದೇಶದ ಉದ್ದ-ಅಗಲಕ್ಕೂ ಕಾಣಸಿಗುತ್ತದೆ. ಅವುಗಳಲ್ಲಿ ಪ್ರಮುಖವಾದವು. ಶೆಣೈಯವರು ಉತ್ತರ ಪ್ರದೇಶದ ಫಿರೋಜಾಬಾದ್‌ನ ಜೈನ ನಗರದಲ್ಲಿ ಛದಾಮಿಲಾಲ್ ಜೈನ ಟ್ರಸ್ಟ್ ಸಂಸ್ಥೆಯು ಮಹಾವೀರನ ೨೫೦೦ನೇ ನಿರ್ವಾಣ ವರ್ಷದ ನೆನಪಿಗಾಗಿ ಬಾಹುಬಲಿಯ ಶಿಲ್ಪವನ್ನು ಕೆತ್ತಿದರು. ಅದರ ಗಾತ್ರ ಮೂವತ್ತೈದು ಅಡಿ ಎತ್ತರ, ಹದಿಮೂರು ಅಡಿ ಅಗಲ, ಐದೂವರೆ ಅಡದಪ್ಪ, ಪೀಠ ಭಾಗ ಸೇರಿ ನಲ್ವತ್ತೆರಡು ಅಡಿ ಎತ್ತರವಾಗಿತ್ತು. ಈ ವಿಗ್ರಹ ಕೆತ್ತನೆಯ ಕಾರ್ಯ ೧೯೭೩ ಸೆಪ್ಟೆಂಬರ್ ತಿಂಗಳಲ್ಲಿ ಆರಂಭಿಸಿ ೧೯೭೫ ರಲ್ಲಿ ಮುಕ್ತವಾಯಿತು. ನಂತರ ಅದನ್ನು ಆಗ್ರಾ ಜಿಲ್ಲೆಯ ಜೈನ ನಗರದಲ್ಲಿ ಪ್ರತಿಷ್ಠಾಪಿಸಲಾಯಿತು.

ಜಪಾನ್ ದೇಶದ ತ್ಸುಬೊಸಾಕಾದಾರಾ ಎಂಬ ಪ್ರಸಿದ್ಧ

ವಾದ ಬೌದ್ಧದೇವಾಲಯದಲ್ಲಿರುವ ಮುಖ್ಯ ಅರ್ಚಕರಾದ ಶೋಕೇನ್ ಟೋಕಿವರು ತಮ್ಮ ದೇವಾಲಯಕ್ಕಾಗಿ ೧೯೭೭ ರಲ್ಲಿ ಅವಲೋಕಿತೇಶ್ವರನ ಮೂರ್ತಿಯನ್ನು ಕೆತ್ತಿ ಕೊಡಲು ಶೆಣೈಯವರಿಗೆ ತಿಳಿಸಿದರು. ಅದರ ಕೆತ್ತನೆಯ ಕೆಲಸವು ೧೯೮೧ ರಲ್ಲಿ ಪೂರ್ಣವಾಯಿತು. ಇದೊಂದು ಅಪರೂಪವಾದ ವಿಗ್ರಹವಾಗಿದೆ. ಇದರ ಎತ್ತರ ೬೭ ಅಡಿ ಈ ಶಿಲ್ಪವನ್ನು ಐದು ವರ್ಷಕಾಲ ನಿರ್ಮಿಸಿದರು. ಈ ಶಿಲ್ಪವು ಅರವತ್ತಾಲ್ಕು ಶಿಲಾಖಂಡ ಗಳನ್ನು ಜೋಡಿಸಿ ನಿರ್ಮಿಸಿದರು. ಪ್ರತಿಯೊಂದು ಶಿಲಾಖಂಡದ ಭಾರ ಹತ್ತುಟನ್‌ಗಳಷ್ಟೆ ಇತ್ತು. ಇದರ ಮುಖ ಭಾವ ಶಿಲ್ಪ ಮಾತ್ರ ಒಂದೇ ಶಿಲೆಯಿಂದ ನಿರ್ಮಿತವಾಗಿತ್ತು. ದೇಹದ ಒಂದೊಂದು ಭಾಗವೂ ಅರು ಶಿಲಾಭಾಗಗಳಿಂದ ಜೋಡಿಸ ಲಾಗಿತ್ತು. ವಿಗ್ರಹದ ಬಿಡಿಭಾಗಗಳನ್ನು ನವ ಮಂಗಳೂರು ಬಂದರಿ ನಿಂದ ಸಾಗಿಸಿ ಜಪಾನ್ ದೇಶದ ತ್ಸುಬೋಸಾಕಾದಾರಾ ದೇವಾಲ ಯದಲ್ಲಿ ಪತ್ರಿಷ್ಠಾಪಿಸಲಾಯಿತು. ಜಪಾನ್ ದೇಶದ ನಾರಾ ಎಂಬುದು ಮತ್ತೊಂದು ಯಾತ್ರಾ ಸ್ಥಳ. ಅಲ್ಲಿನ ಬೌದ್ಧಧರ್ಮಾನು ಯಾಯಿಗಳಿಗೆ ಅದು ಪವಿತ್ರ ಸ್ಥಳವಾಗಿದೆ. ಈ ಸ್ಥಳದಲ್ಲಿ ಮಲಗಿರುವ ಒಂದು ಬೃಹದಾಕಾರದ ಬುದ್ಧನ ವಿಗ್ರಹವಿದೆ. ಅದರ ಸಮೀಪದಲ್ಲಿರುವ ಮೂರು ಸಾವಿರ ಚಿಕ್ಕ ಚಿಕ್ಕ ಬುದ್ಧನ ವಿಗ್ರಹ ಗಳನ್ನು ಶೆಣೈಯವರು ಕೆತ್ತಿದ್ದಾರೆ. ಪ್ರತಿಯೊಂದರ ಎತ್ತರ ಮೂರು ಅಡಿ, ಅಗಲ ಒಂದು ಅಡಿ ದಪ್ಪ ಒಂಭತ್ತು ಅಂಗುಲ ಅಳತೆ ಯಲ್ಲಿವೆ.

ಕಾರ್ಕಳ ಮತ್ತು ಪುತ್ತೂರಿನಲ್ಲಿರುವ ಶ್ರೀ ವೆಂಕಟ್ರಮಣ ದೇಗುಲಗಳಲ್ಲಿರುವ ವಿಗ್ರಹಗಳು, ಗೋಕರ್ಣದ ಪಟ್ಟಾಭಿರಾಮ ಮೂರ್ತಿ, ಕೆನರಾ ಹೈಸ್ಕೂಲಿನಲ್ಲಿರುವ ಮೂರು ಅಡಿ ಎತ್ತರದ ಕ್ರೈಸ್ತ ವಿಗ್ರಹ, ಕಾಶೀ ಮಠದ ಗುರುಗಳ ಬೆಳ್ಳಿ ಸಿಂಹಾಸನ, ಮುಂಬಯಿಯ ವಡಾಲದ ಗೋಕರ್ಣ ಮಠದಲ್ಲಿರುವ ರಾಮ-ಲಕ್ಷ್ಮಣ, ಸೀತೆ, ಆಂಜನೇಯ ವಿಗ್ರಹಗಳು ಗೋವಾದ ಪರ್ತ ಗಾಳಿಮಠದಲ್ಲಿ ಪ್ರತಿಷ್ಠಾಪಿತವಾದ ಪಟ್ಟಾಭಿರಾಮಮೂರ್ತಿ, ಮುಂಬಯಿಯ ವಾಲುಕೇಶ್ವರ ಮಠಕ್ಕಾಗಿ ಸುಕೃತೀಂದ್ರರ ಪ್ರತಿಮೆ, ಲಂಡನ್‌ನಲ್ಲಿರುವ ಷೇಕ್ಸ್‌ಪೀಯರ್‌ನ ಪ್ರತಿಮೆ, ಗೋವಾದ ಜಾಂಬವಲ್ಲಿ ದೇವಾಸ್ಥಾನದಲ್ಲಿರುವ ನಂದಿ ಮತ್ತು ದ್ವಾರಪಾಲಕರು, ಹೃಷಿಕೇಶದ ಶಿವಾನಂದಸ್ವಾಮಿ ಆಶ್ರಮವಾದ ಡಿವೈನ್- ಲೈಫ್ ಸೊಸೈಟಿಯಲ್ಲಿ ಮುರಲೀಧರ ಕೃಷ್ಣವಿಗ್ರಹ ಇನ್ನೂ ಮುಂತಾದ ನೂರಾರು ವಿಗ್ರಹಗಳನ್ನು ತಾಳ, ಮಾನಬದ್ಧವಾಗಿ ಶಿಲ್ಪಶಾಸ್ತ್ರಕ್ಕೆ ಅನುಗುಣವಾಗಿ ನಿರ್ಮಿಸಿದ್ದಾರೆ. ತೆಂಗಿನ ಕಾಯಿಯ ಚಿಪ್ಪಿನ ಹೊರ ಮೈಮೇಲೆ ಮೈಸೂರು ಅರಮನೆ, ಕ್ಲಾಕ್ ಟವರ್, ಚಾಮುಂಡಿ ಬೆಟ್ಟ ಮುಂತಾದ ದೃಶ್ಯಗಳನ್ನು ಬಿಡಿಸಿದ್ದರು. ಪಚ್ಚೆಕಲ್ಲಿನಲ್ಲಿ ಚಾಮುಂಡೇಶ್ವರಿ ಮೂರ್ತಿಯನ್ನು ಕೆತ್ತಿ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರಿಗೆ ಅರ್ಪಿಸಿದ್ದರು. ಅವರಿಂದ ಪಾರಿತೋಷಕವನ್ನು ಪಡೆದಿದ್ದರು. ಬೃಹತ್ ಗಾತ್ರದ ಶಿಲ್ಪ ಗಳಿಂದ ಹಿಡಿದು ಒಂದು ಅಕ್ಕಿ ಕಾಳಿನಷ್ಟು ದಪ್ಪದ ಸೂಕ್ಷ್ಮ ವಾದ ಶಿಲ್ಪಗಳನ್ನು ಕೆತ್ತಿದ್ದಾರೆ.

ಶೆಣೈಯವರು ೧೯೩೭ ರಲ್ಲಿ "ಶ್ರೀ ಮಧ್ಭುವನೇಂದ್ರ ಶಿಲ್ಪ ಶಾಲೆ" ಯನ್ನು ಸ್ಥಾಪಿಸಿದರು. ಈ ಸಂಸ್ಥೆ ಸಾಂಪ್ರದಾಯಿಕ ಶಿಲ್ಪಕಲೆಯ ಶಿಕ್ಷಣವನ್ನು ಆಸಕ್ತಿ ಹೊಂದಿದ ವಿದ್ಯಾರ್ಥಿಗಳಿಗೆ ಕಲಿಸುವ ಶಿಲ್ಪಕಲಾ ಶಾಲೆಯಾಯಿತು. ಇಂದಿಗೂ ಎಲೆಮರೆಯ ಕಾಯಿಯಂತೆ ತನ್ನ ಶಿಕ್ಷಣಕ್ರಮ ಹಾಗೂ ಕಲಾಕೃತಿಗಳ ನಿರ್ಮಾಣ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿದೆ. ಈ ಶಾಲೆಯಲ್ಲಿ ಹಿಂದೆ ಎರಕ, ಕಂಚು, ಚಿನ್ನ, ಬೆಳ್ಳಿ ಇತರ ಲೋಹಗಳ ಶಿಲ್ಪಗಳೂ ತಯಾರಾಗುತ್ತಿದ್ದವು. ಗಣೇಶ, ನಾಗಗಳು, ಆಂಜನೇಯ ವೇಣು ಗೋಪಾಲ, ಮಹಿಷಮರ್ದಿನಿ, ಲಕ್ಷ್ಮೀ, ವೀರಭದ್ರ, ಜಯ ವಿಜಯರ ದ್ವಾರಪಾಲಕರು, ನಂದಿ ಮುಂತಾದ ಶಿಲ್ಪಗಳನ್ನು ನಿರಂತರ ಕೆತ್ತುತ್ತಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಒಂದು ಅಡಿಯಿಂದ ಆರು ಅಡಿ ಎತ್ತರದ ಪ್ರತಿಮೆಗಳನ್ನು ಕೆತ್ತಲಾಗಿದೆ. ಶಿಲೆಯ ಮೇಲೆ ಶಿಲ್ಪದ ಸ್ಥೂಲ ರೂಪವನ್ನು ಚಿತ್ರಿಸುತ್ತಾರೆ. ಹಂತ-ಹಂತವಾಗಿ ವಿವರಗಳನ್ನು ಗುರುತಿಸುತ್ತಾರೆ. ಅದಕ್ಕಾಗಿ ರೇಖೆ ಎಳೆಯಲು ಕಾವಿಬಣ್ಣ ಅಂದರೆ ರೆಡ್ ಆಕ್ಸೈಡ್‌ನ್ನು ಬಳಸುತ್ತಾರೆ. ಸ್ಥೂಲದಿಂದ ಸೂಕ್ಷ್ಮಕ್ಕೆ ಹಂತಹಂತವಾಗಿ ನಿರ್ಮಾಣದ ಕಾರ್ಯ ಸಾಗುತ್ತದೆ. ಮುಖದಲ್ಲಿ ಗಾಂಭೀರ್ಯ, ದೈವಿಕವಾದ ಅರೆತೆರೆದ ಕಣ್ಣುಗಳು ಲಾಲಿತ್ಯ ಪೂರ್ಣರೆಪ್ಪೆಗಳು, ಹುಬ್ಬುಗಳು, ದಯಾಪೂರ್ಣ ವಾದ ನಸುನಗು, ಉದ್ದವಾದ ಕಿವಿ, ಅಜಾನುಬಾಹು ಅಗಲವಾದ ಎದೆ, ಸುಲಕ್ಷಣವಾದ ಮೂಗು ಮತ್ತು ಅಂಗಾಂಗಗಳು ಮೂಡಿ ಬರುವಂತೆ ಆರಂಭದಿಂದಲೂ ಎಚ್ಚರಿಕೆ ವಹಿಸಿರುವುದು ಕಂಡು ಬರುತ್ತದೆ. ಸರಕಾರದಿಂದ ಯಾವುದೇ ರೂಪದ ಧನಸಹಾಯ ಪಡೆಯದಿದ್ದರೂ ಅಂತ್ಯಂತ ಶಿಸ್ತು ಬದ್ಧವಾಗಿ ಶಿಲ್ಪಕಲಾ ಶಾಲೆಯನ್ನು ನಡೆಸಿಕೊಂಡು ಬಂದಿರುವುದು ಎಂಥವರು ಮೆಚ್ಚುವುದಾಗಿದೆ. ಭುವನೇಂದ್ರ ಶಿಲ್ಪಕಲಾ ಶಾಲೆಯಲ್ಲಿ ಶಿಕ್ಷಣ ಪಡೆದ ಶಿಲ್ಪಿ ಶ್ಯಾಮರಾಯಚಾರಿಯಂಥವರು ಕರ್ನಾಟಕದಲ್ಲಿ ನೂರಾರು ಮಂದಿ ಕಾಣಸಿಗುತ್ತಾರೆ.

ಅವರ ಕಾರ್ಯಚಟುವಟಿಕೆಗಳನ್ನು ಗಮನಿಸಿ ಶೆಣೈಯವರಿಗೆ ೧೯೭೯ ರಲ್ಲಿ ಕೇಂದ್ರ ಸರಕಾರ ರಾಷ್ಟ್ರಪ್ರಶಸ್ತಿಯನ್ನು, ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು ನೀಡಿವೆ. ಧರ್ಮ ಸ್ಥಳದಲ್ಲಿ ೧೯೮೨ ರಲ್ಲಿ 'ಶಿಲ್ಪ ವಿಶಾರದ' ಎಂಬ ಬಿರುದು, ಕಾಶಿ ಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮಿಯವರು ಶಿಲ್ಪ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದು ನೀಡಿದರು. ಮೈಸೂರು ವಿಶ್ವವಿದ್ಯಾಲಯ ೧೯೭೬, ಮಂಗಳೂರು ವಿಶ್ವವಿದ್ಯಾಲಯ ೧೯೮೩ ರಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿವೆ. ರಾಜೇಂದ್ರ

ಪ್ರಸಾದ್ ಜವಾಹರ್‌ಲಾಲ್ ನೆಹರು, ಶ್ರೀಮತಿ ಇಂದಿರಾಗಾಂಧೀ ಮುಂತಾದ ರಾಷ್ಟ್ರ ನಾಯಕರುಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಹಲವು ಮಠಗಳ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದರು. ಅವರ ಕಲಾಕೃತಿಗಳು ರಾಷ್ಟ್ರಪತಿಭವನ, ಕೇಂದ್ರ ಲಲಿತಕಲಾ ಅಕಾಡೆಮಿ ಗ್ಯಾಲರಿ, ವಿದೇಶಿ ವಸ್ತು ಸಂಗ್ರಹಾಲಯದಲ್ಲಿವೆ. ಶೆಣೈಯವರು ೧೯೮೫ ಡಿಸೆಂಬರ್ ಒಂದರಂದು ಕೊನೆಯುಸಿರೆಳೆದರು. ಶಿಲ್ಪಕಲಾ ತಪಸ್ವಿ, ಸಾತ್ವಿಕರು, ಗಿಡ್ಡ ಹಾಗೂ ಕೃಶ ಶರೀರ, ಮಾತಿನ ದನಿ ಸಣ್ಣದು, ಸೌಜನ್ಯಶೀಲರು, ಯಾರೇ ಬರಲಿ, ಅವರನ್ನು ಸತ್ಕರಿಸಿ, ಪ್ರೀತಿ-ವಾತ್ಸಲ್ಯಮಯಿಯಾಗಿ ಮಾತನಾಡಿಸುತ್ತಿದ್ದರು. ತಾವೊಬ್ಬ ಶಿಲ್ಪಿಯಾಗಿ ಬೌದ್ಧ, ಜೈನ್ಯ, ಕ್ರೈಸ್ತ ಮತ್ತು ಹಿಂದೂ ಧರ್ಮಕ್ಕೆ ಸಂಬಂಧಸಿದ ಎಲ್ಲ ಧರ್ಮದ ದೇವ-ದೇವತೆಯ ಶಿಲ್ಪಕ್ಕೆ ರೂಪ ನೀಡಿದರು. ತಮ್ಮ ದೀರ್ಘ ಜೀವನವನ್ನು ಶಿಲ್ಪಕಲೆಗಾಗಿ ಸವೆಯಿಸಿದರು.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ತಿಪ್ಪೇರುದ್ರಸ್ವಾಮಿ ಎಚ್., ೧೯೬೮, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ** ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

೨. ತಿಪ್ಪೇಸ್ವಾಮಿ ಪಿ. ಆರ್., (ಪ್ರಧಾನ ಸಂಪಾದಕರು), ಅ. ಲ. ನರಸಿಂಹನ್, ಮರಿಶಾಮಾಚಾರ್ ಎನ್. (ಸಂಪಾದಕರು), **ಚಿತ್ರಕಲಾ ಪ್ರಪಂಚ** ೧೯೯೩, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೩. ತಿಪ್ಪೇಸ್ವಾಮಿ ಪಿ. ಆರ್., (ಪ್ರಧಾನ ಸಂಪಾದಕರು), (ನರಸಿಂಹನ್ ಅ.ಲ.) ಮರಿಶಾಮಾಚಾರ್ ಎನ್. ಸಂಪಾದಕರು, **ಶಿಲ್ಪಕಲಾ ಪ್ರಪಂಚ** ೧೯೯೪, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೪. ಬಾಯಿರಿ ಬಿ. ಪಿ., ೧೯೯೮, **ರಂಜಾಳಗೋಪಾಲ ಶೆಣೈ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೫. ಸುಬ್ರಹ್ಮಣ್ಯಂ ಕೆ. ವಿ., ೧೯೯೪, **ಕರ್ನಾಟಕದ ಆಧುನಿಕ, ಶಿಲ್ಪಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೬. **ಕರ್ನಾಟಕ ಚರಿತ್ರೆ, ಸಂಪುಟ ೬.**, ೧೯೯೭, ಷೇಕ್ ಅಲಿ ಬಿ., ಪ್ರಧಾನ ಸಂಪಾದಕರು, ಸೆಬಾಸ್ಟಿಯನ್ ಜೋಸೆಫ್, ಸಂಪುಟ ಸಂಪಾದಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಣಿಶ್ರೀ ಶಿವಶರಣ ಬಾರಕೇರ*

ಮೀಸಲಾತಿ - ವರ ಮತ್ತು ಶಾಪ*

ಪುರಾತನ ಕಾಲದಿಂದಲೂ ಧಾರ್ಮಿಕ, ಸಾಮಾಜಿಕ ಕಾರಣಗಳಿಂದಾಗಿ ಅಸ್ಪೃಶ್ಯರು ಸಮಾಜದ ಉತ್ತಮರ ತಿರಸ್ಕಾರ ಉಪೇಕ್ಷೆಗೆ ಕಾರಣರಾದರೆ, ಇಂದು ರಾಜಕೀಯ ಧೋರಣೆಯಿಂದಾಗಿ ಅವರು ಉಳಿದವರ ಟೀಕೆ, ಉಪೇಕ್ಷೆಗೆ ಗುರಿಯಾಗುತ್ತಿದ್ದಾರೆ.

ಸಂವಿಧಾನ ಅಸ್ಪೃಶ್ಯರಿಗೆ ಕೊಡಮಾಡಿರುವ ಮೀಸಲಾತಿಯ ಬಗ್ಗೆ ಅಸ್ಪೃಶ್ಯರನ್ನು ಬಿಟ್ಟರೆ ಉಳಿದವರಾರು ತೃಪ್ತರಾಗಿಲ್ಲ. ಕೇಂದ್ರದಲ್ಲಿ ಸರ್ಕಾರಿ, ಅರೆ ಸರ್ಕಾರಿ ಇಲಾಖೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಪರಿಶಿಷ್ಟ ಜಾತಿಯವರಿಗೆ ಶೇ. ೧೫ರಷ್ಟು, ಪರಿಶಿಷ್ಟ ವರ್ಗದವರಿಗೆ ಶೇ. ೮ ಮೀಸಲಾತಿಯು ಈಗ ಇದೆ. ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಬಿಸಿ ಚರ್ಚೆಗೆ, ಸಂವಾದಕ್ಕೆ ಕಾರಣವಾದ ಹಿಂದುಳಿದ ವರ್ಗದ ಮಂಡಲ್ ನಿಯೋಗವನ್ನು ನೇಮಿಸಿದ್ದು ೧೯೭೭ರಲ್ಲಿ. ಅಂದು ಅಧಿಕಾರದಲ್ಲಿದ್ದ ಜನತಾ ಸರ್ಕಾರ ಹಿಂದುಳಿದವರ ಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ನೀಡುವಂತೆ ಕೇಳಿಕೊಂಡಿತ್ತು. ಅಂತಾಗಿ ಸಂವಿಧಾನದ ೩೪೦ನೇ ವಿಧಿಯ ಪ್ರಕಾರ ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳನ್ನು ಗುರುತಿಸುವದು, ಹಾಗೂ ಈ ವರ್ಗಗಳ ಏಳಿಗೆಗಾಗಿ ತಕ್ಕ ಸಲಹೆಗಳನ್ನು ನೀಡುವುದೇ ಈ ನಿಯೋಗದ ಕಾರ್ಯವಾಗಿತ್ತು. ಮಂಡಲ್ ನಿಯೋಗವು ೨ ವರ್ಷಗಳ ಅವಧಿಯಲ್ಲಿ ತನಗೆ ವಹಿಸಿದ ಕಾರ್ಯವನ್ನು ಮುಗಿಸಿ ೧೯೮೦ರಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಆಯೋಗವು ಹಿಂದುಳಿದಿರುವಿಕೆಯನ್ನು ಅಳೆಯುವ ಅಳತೆಗೋಲನ್ನಾಗಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿಯೇ ಒಂದು ನಿರ್ಧಾರಕ್ಕೆ ಬಂದಿದೆ. ೧೯೯೦ರಲ್ಲಿ ಆಗಸ್ಟ್ ೭ರಂದು ವಿ. ಪಿ. ಸಿಂಗ್ ಅವರು ಮಂಡಲ್ ವರದಿ ಶಿಫಾರಸ್ಸಿನಂತೆ ಇತರ ಹಿಂದುಳಿದ ವರ್ಗ ಎಂದು ಕರೆಯಲಾಗುವ ೩೭೪೩ ಜಾತಿಗಳು ಮತ್ತು ಸಮುದಾಯಗಳಿಗೆ ಶೇ. ೨೭ರಷ್ಟು ಮೀಸಲಾತಿ ಘೋಷಿಸಿದಂದಿನಿಂದಲೇ ದೇಶಾದ್ಯಂತ ಪ್ರತಿಭಟನೆಯ ಬಹುದೊಡ್ಡ ಅಲೆ ಎದ್ದಿತು. ಈ ಮೀಸಲಾತಿ ಅಲ್ಲದೇ ಆರ್ಥಿಕ ಮಾನದಂಡದ ಆಧಾರದಲ್ಲಿ ಆ ವರ್ಗಗಳಿಗೆ ಪುನಃ ೫% ರಿಂದ ೧೦% ರವರೆಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಲಾಗುವುದೆಂದು ಘೋಷಿಸಿದ್ದಂತೂ ಮೀಸಲಾತಿ ವಿರೋಧಿಗಳನ್ನು ಮತ್ತಷ್ಟು ಕೆರಳಿಸಿತು. ಬಹುದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇದನ್ನು ವಿರೋಧಿಸಿದರು. ಸಾರ್ವಜನಿಕವಾಗಿ ಆತ್ಮಬಲಿದಾನ ಮಾಡಲು ಯತ್ನಿಸಿದರು. ಈ ಪ್ರಕರಣಗಳು ದೇಶವನ್ನೇ ತಲ್ಲಣಗೊಳಿಸಿದವು. ಈ ವರದಿಯ ಅನುಷ್ಠಾನದಿಂದ ಇಡೀ ಸಮಾಜವೇ ಜಾತಿಯ ಹೆಸರಿನಲ್ಲಿ ಸಿಡಿದು ಹೋಳಾಗ ಬಹುದು ಎಂದು ಕೆಲವು ಪತ್ರಿಕೆಗಳು ಬರೆದವು. ಜಾತಿ ಸಾಮರಸ್ಯ ಮತ್ತಷ್ಟು ಹದಗೆಟ್ಟಿತು.

ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಲ್ಲಿ ನೌಕರರಿಗೆ ಹೀಗೆ ಮೀಸಲಾತಿಯ ಮೂಲಕ ಅವಕಾಶಗಳನ್ನು ನೀಡತ್ತ ಹೋದರೆ ಉಳಿದವರ ಪಾಡೇನು ಎಂಬುದು ಹಲವರ ಪ್ರಶ್ನೆ. ವಿದ್ಯಾಸಂಸ್ಥೆಗಳಲ್ಲಿ ಬಹುಪಾಲು ಸೀಟುಗಳು ಹೆಚ್ಚು ಹಣ ನೀಡುವವರಿಗೆ ಮೀಸಲು, ಉಳಿದವು ಮೀಸಲಾತಿ ಜನರಿಗೆ. ಅತ್ತ ಹಣ ಮತ್ತು ಮೀಸಲಾತಿಯಿಲ್ಲದವರು ಏನು ಮಾಡಬೇಕು? ಉದ್ಯೋಗದ ವಿಷಯದಲ್ಲೂ ಹೀಗೆಯೇ ಲಂಚಕೊಟ್ಟು ಪ್ರಭಾವ ಬೀರಿಯೇ ಕೆಲವರು ಕೆಲಸ ಗಿಟ್ಟಿಸಿಕೊಳ್ಳುತ್ತಾರೆ. ತಾವು ಹಿಂದುಳಿದವರೆಂದು ಹೇಳಿ, ಇನ್ನು ಕೆಲವರು ಕೆಲಸಕ್ಕೆ ಸೇರಿಕೊಳ್ಳುತ್ತಾರೆ? ಆದರೆ ಹಣ, ವಶೀಲಿ, ಜಾತಿ ಬೆಂಬಲವಿಲ್ಲದವರ ಗತಿ? ಮುಂದುವರಿದ ಜಾತಿಯಲ್ಲಿ ಹುಟ್ಟಿದ್ದೇ ಒಂದು ಶಾಪವಾಗಬೇಕೆ? ಇದು ಹಲವರ ಪ್ರಶ್ನೆ. ಹಣ, ಜಾತಿ, ಪ್ರಭಾವ ಈ ಮೂರನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ನೀಡುವುದು, ನೌಕರಿ ಕೊಡುವುದು ಮಾಡಿದರೆ ದೇಶದ ಗತಿ ಏನು? ಬುದ್ಧಿವಂತರು ಎನಿಸಿಕೊಂಡವರು ಎಲ್ಲಿಗೆ ಹೋಗಬೇಕು? ಶಿಕ್ಷಣ ನೌಕರಿಗೆ ಅತ್ಯವಶ್ಯವಾಗಿ ಬೇಕಾದ ಪ್ರತಿಭೆ, ಪಾಂಡಿತ್ಯ, ನಿಷ್ಠೆ ಇತ್ಯಾದಿಗಳಿಗೆ ಬೆಲೆ ಬರುವುದು ಯಾವಾಗ? ಇದು ಕೂಡ ಕೇಳಿಬರುತ್ತಿರುವ ಪ್ರಶ್ನೆಯೇ.

ಎಲ್ಲ ಕ್ಷೇತ್ರದಲ್ಲಿರುವ ಪ್ರತಿಭಾನ್ವಿತರು, ಬುದ್ಧಿವಂತರು ಆಗಿರಬೇಕಾದ್ದು ಅಪೇಕ್ಷಣೀಯ. ಇವರನ್ನು ಆರಿಸುವಾಗ ಇವರ ಪ್ರತಿಭೆಯೊಂದೇ ಅಳತೆಗೋಲಾಗಿರಬೇಕಲ್ಲದೇ ಬೇರಾವುದು ಅಲ್ಲ. ಇಂಜಿನೀಯರ್‌ಗಳು, ತಂತ್ರಜ್ಞರು, ಹಣಕಾಸು ವ್ಯವಹಾರ ಮಾಡುವವರು ಲೆಕ್ಕಪತ್ರಗಳನ್ನಿಡುವರು ಈ ಕ್ಷೇತ್ರದಲ್ಲಿ ತೋರಿಸಿದ ಪಾಂಡಿತ್ಯದಿಂದಷ್ಟೇ ಕೆಲಸಕ್ಕೆ ಅರ್ಹರಾಗಬೇಕು. ಹುದ್ದೆಯಲ್ಲಿ ಬಡ್ತಿಗೆ ಆಯ್ಕೆಯಾಗಬೇಕು. ಆದರೆ ಇಲ್ಲಿ ಅರ್ಹತೆ ಹಿಂದಾಗಿ ಬೇರೊಂದು ಮುಂದಾದಾಗ ಏನಾಗುತ್ತದೆ? ದೇಶದ ಹಣೆಬರಹವನ್ನು

* ಶಿವಗಿರಿ, ಪಿ.ಬಿ. ರೋಡ್, ಉಣಕಲ್ಲ, ಹುಬ್ಬಳ್ಳಿ.

ಬದಲಾಯಿಸಬಹುದಾದ ರಂಗಗಳಲ್ಲಿ ದಡ್ಡರು, ಮೂರ್ಖರು ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗಿ ದೇಶ ಬೌದ್ಧಿಕವಾಗಿ ದಿವಾಳಿಯಾಗುತ್ತದೆ ಎಂದೆಲ್ಲ ವಾದಗಳನ್ನಿಡಲಾಯಿತು. ಅಂದರೆ ಮೀಸಲಾತಿಯನ್ನು ವಿರೋಧಿಸುವವರು ಈ ವಿಷಯವನ್ನು ಮುಂದೆ ಮಾಡುವದರಿಂದ ಇದನ್ನು ತೆರೆದ ಮನಸ್ಸಿನಿಂದ ಚರ್ಚಿಸಬೇಕಾದ್ದು ಕೂಡ ಮುಖ್ಯವೇ.

ಹಲವಾರು ಹಿಂದುಳಿದವರಿಗೆ ಕೊಡಲಾಗುತ್ತಿರುವ ಸೌಲಭ್ಯಗಳ ಬಗ್ಗೆ ಪ್ರಶ್ನಿಸುವುದಿಲ್ಲ. ಅವರ ಪ್ರಶ್ನೆ ಒಂದೇ ಜಾತಿಯನ್ನು ಒಂದೇ ತಕ್ಕಡಿಯಿಂದ ತೂಗುತ್ತೀರಾ ? ಇದಕ್ಕೆ ಉತ್ತರ ಕ್ಲಿಷ್ಟವಾದದ್ದು. ಮೀಸಲಾತಿ ಎನ್ನುವುದು ಕೇವಲ ೧೦ ವರ್ಷಗಳ ವರೆಗೆ ಅಷ್ಟೇ ಇರಬೇಕೆಂದು ಅಂಬೇಡ್ಕರ್ ಒಪ್ಪಿಕೊಂಡಿದ್ದರು. ಆದರೆ ೧೦ ವರ್ಷಗಳು ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಗಾದ ಜನರನ್ನು ಮೇಲೆ ಎತ್ತಲು ಏನೇನೂ ಸಾಲದ್ದರಿಂದ ಮೀಸಲಾತಿ ಮುಂದುವರೆದಿದೆ. ಇದು ಇನ್ನು ಎಷ್ಟು ವರ್ಷಗಳವರೆಗೆ ಮುಂದುವರೆಯಬೇಕು? ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವವರು ಈ ಮೂರರಲ್ಲಿ ಮುಂದುವರೆದವರ ಸರಿಸಮಕ್ಕೆ ಬಂದು ಮುಟ್ಟಿದ ಕೂಡಲೇ ಈ ಮೀಸಲಾತಿಯನ್ನು ರದ್ದು ಪಡಿಸಬೇಕೆಂಬುದು ಎಲ್ಲರ ಅಭಿಪ್ರಯ. ಆದರೆ ಈ ಕಾರ್ಯ ಆಗುವುದು ಯಾವಾಗ? ಮೀಸಲಾತಿಯಿಂದ ಉಪಯೋಗವಿದೆ. ಸಮಾಜದ ಕೆಳಸ್ತರದಲ್ಲಿ ಬದುಕಿದ್ದವರು, ಸಾಮಾಜಿಕ ವ್ಯವಸ್ಥೆಯಲ್ಲಿ ದೊಡ್ಡ ಸೊನ್ನೆಯಾಗಿದ್ದವರು ಇದೀಗ ಎಚ್ಚೆತ್ತಿದ್ದಾರೆ. ಕೆಳಹಂತದಿಂದ ಮೇಲಿನ ಹಂತಕ್ಕೆ ಬಂದು ತಲುಪಿ, ಗೌರವಗಳನ್ನು ಪಡೆಯುತ್ತಿದ್ದಾರೆ. ಸರ್ಕಾರ ಕೂಡ ಹಲವಾರು ಯೋಜನೆಗಳ ಮೂಲಕ ಈ ಜನರ ಏಳಿಗೆಯನ್ನು ಸಾಧಿಸುತ್ತಿದೆ. ಆದರೆ ಈ ಕಾರ್ಯ ಅಷ್ಟೇ ನಿಧಾನವಾಗಿ ನಡೆಯುತ್ತಿರುವುದು ಅಷ್ಟೇ ನಿಜ. ಸರ್ಕಾರಿ ಯಂತ್ರದ ನಿಧಾನಗತಿ ಅದರ ಕೇಂದ್ರ ಪಟ್ಟಿಯ ಕಾರ್ಯ ವಿಧಾನ, ಯೋಜನೆಗಳನ್ನು ರೂಪಿಸುವುದರ ಅಸಾಮರ್ಥ್ಯ, ಯೋಜನೆಗಳ ಫಲ ತಲುಪಬೇಕಾದವರಿಗೆ ನೇರವಾಗಿ ಸಂಪೂರ್ಣವಾಗಿ ತಲುಪದಿರುವುದು, ನಡುವೆ ಲಾಭ ಮಾಡಿಕೊಳ್ಳುವ ಮೂರನೆಯವರ ಕುತಂತ್ರ, ಸರ್ಕಾರಿ ನೌಕರರ ಅಪ್ರಮಾಣಿಕತೆ ಈ ಹಲವು ಕಾರ್ಯಗಳಿಂದ ಈ ಕಾರ್ಯ ಕುಂಟುತ್ತಿದೆ.

ಮೀಸಲಾತಿಯ ಪ್ರಯೋಜನ ಪಡೆದು ತಾವು ಅಭಿವೃದ್ಧಿ ಹೊಂದಬೇಕೆಂಬ ಮನೋಭಿಲಾಷೆಗೆ ಹಿಂದುಳಿದವರಲ್ಲಿ ಅರಿವು ಕಡಿಮೆ. ಆದರೂ ಸರ್ಕಾರ ಕೊಡುವ ಎಲ್ಲ ಸೌಲಭ್ಯಗಳನ್ನು ತಂದೆಯಾದವನು ತಾನು ಅನುಭವಿಸಿ ಅದು ತನ್ನ ಮಗ, ಮೊಮ್ಮಗನಿಗೂ ಏಕೆ? ಮುಂದಿನ ತಲೆಮಾರಿಗಳಿಗೂ ಮುಂದುವರಿಯಬೇಕೆಂದು ಬಯಸುವುದು ಕಂಡುಬರುತ್ತದೆ. ಮೀಸಲಾತಿ ಅನ್ನುವುದು ತಾತ್ಕಾಲಿಕ ನೆರವು ಅನ್ನುವುದಕ್ಕಿಂತ ಆಜನ್ಮಸಿದ್ಧ ಹಕ್ಕು ಎಂಬ ಧೋರಣೆ ಕಂಡುಬರುತ್ತಿದೆ. ಜನರಲ್ಲಿಯ ಕ್ರಿಯಾಶೀಲತೆಯನ್ನು ಈ ಮೀಸಲಾತಿ ನಾಶಪಡಿಸಿ ಪ್ರತಿಯೊಂದನ್ನು ಸರ್ಕಾರ ಕೊಡಲಿ ತಾವು ಭೋಗಿಸೋಣ ಎಂಬಂತಹ ದೃಷ್ಟಿ ಬೆಳೆಯುತ್ತಿದೆ. ಮೀಸಲಾತಿ ಆಕರ್ಷಣೆಗೆ ಒಳಗಾದ ಉಳಿದೆಲ್ಲ ಜಾತಿ ಪಂಗಡದವರು ಹೋರಾಟ ಮಾಡುತ್ತಿರುವುದೊಂದು ವಿಪರ್ಯಾಸ. ಒಂದು ಕಾಲದಲ್ಲಿ ತಮ್ಮ ಜಾತಿಯನ್ನು ಹೇಳಿಕೊಳ್ಳಲು ನಾಚುತ್ತಿದ್ದವರು, ಇಂದು ಮೀಸಲಾತಿ ದೊರೆಯುತ್ತದೆಂದರೆ ಎಂತಹ ಕೀಳು ಜಾತಿಗೂ ಸೇರಲು ಸಿದ್ಧ ಎಂದು ಜನ ಹೇಳಿಕೊಂಡು ತಿರುಗಾಡುತ್ತಾರೆ. ಸುಳ್ಳುಜಾತಿ ಪತ್ರಗಳನ್ನು ಮಾಡಿಸುವುದು, ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ತಮ್ಮ ಜಾತಿಯ ಹೆಸರನ್ನು ಸೇರಿಸಿಕೊಳ್ಳಲು ಪರದಾಡುವುದು. ಹೀಗೆ ಮೀಸಲಾತಿಯು ಜನರಲ್ಲಿ ಜಾತಿಯ ಜಂಜಾಟವನ್ನುಂಟುಮಾಡಿದೆ.

ಇನ್ನು ಮೇಲು-ಕೀಳು ಎಂಬ ತಾರತಮ್ಯ ಅಳಿದರೆ ಈ ಮೀಸಲಾತಿ ತಾನಾಗಿ ಹೊರಟು ಹೋಗುತ್ತದೆ ಎಂಬ ಅಭಿಪ್ರಾಯವೂ ಇದೆ. ಆದರೆ ಇದು ಕೂಡ ಇಂದು ಅಸಂಭವ. ಏಕೆಂದರೆ ದಿನಗಳು ಉರುಳಿದ ಹಾಗೆ ಜನರು ಜಾತಿ, ಧರ್ಮಗಳ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ. ಜಾತಿ - ಪಂಗಡಗಳನ್ನು ಮರೆತು ನಾವೆಲ್ಲ ಮಾನವರು ಎಂದು ಬದುಕಬೇಕಾದವರು ರಾಜಕೀಯ ಲಾಭ ಪಡೆಯಲು ಪ್ರತ್ಯೇಕವಾಗಿ ಜಾತಿ, ಗುಂಪು, ಸಂಘಗಳನ್ನು ಕಟ್ಟಿಕೊಂಡು ಸಮ್ಮೇಳನಗಳನ್ನು ನಡೆಸುವುದು ಹೆಚ್ಚುತ್ತಿದೆ. ನಾವೆಲ್ಲ ಒಂದು ಎಂಬ ಫಲಕವನ್ನು ಹಾಕಿಕೊಂಡು ಸಮಾಜೋತ್ಸವಗಳಲ್ಲಿ ಭಾಗವಹಿಸುವ ಜನ ಭಾವುಕರಾಗಿರುತ್ತಾರಲ್ಲದೇ ಈ ಸಮಾಜೋತ್ಸವ ಮುಗಿದ ಕೂಡಲೇ ಅವರು ಮತ್ತೆ ಎಂದಿನಂತೆ ಪಂಗಡ, ಒಳಜಾತಿಗಳಿಗೇನೆ ಹಿಂದಿರುಗುವುದು ಕಂಡುಬಂದಿದೆ.

ಬಹುಮುಖ್ಯವಾಗಿ ಅಸ್ಪೃಶ್ಯರು ದೇವರ ಮಕ್ಕಳು, ಸರ್ಕಾರಿ ಒಕ್ಕಲು ಎಂಬ ಹೆಸರಿನಲ್ಲಿ ಉಳಿದವರ ಟೀಕೆ ತಿವಿತಕ್ಕೆ ಗುರಿಯಾಗುತ್ತಿರುವುದು ಮುಂದುವರೆದಿದೆ. ಶೂದ್ರರ ಮನಸ್ಸು ಮಾತ್ರ ಬದಲಾದರೆ ಸಾಲದು, ಶೂದ್ರರನ್ನು ಕಾಣುವವರ ಮನಸ್ಸು ಕೂಡ ಬದಲಾಗಬೇಕು. ಆದರೆ ಈ ಬದಲಾವಣೆ ಮಾತ್ರ ಅಪರೂಪದ್ದಾಗಿದೆ. ದಲಿತರ ಮೇಲಿನ ದಬ್ಬಾಳಿಕೆ, ಅವರನ್ನು ಜೀವಂತ ಸುಡುವುದು, ಕೊಲ್ಲುವುದು, ಹಿಂಸಿಸುವುದು, ದಲಿತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಮೀಸಲಾತಿ ಪಡೆಯುತ್ತೀರೆಂದು ಬಹಿಷ್ಕರಿಸುವುದು ಇತ್ಯಾದಿ ನಡೆದೇ ಇದೆ.

ವಸ್ತು ಸ್ಥಿತಿ ಹೀಗಿರುವಾಗ ಅಸ್ಪೃಶ್ಯರು ಉಳಿದವರಂತೆ ಸರಿಸಮಾನರಾಗುವುದು ಹೇಗೆ? ಈ ಮೀಸಲಾತಿ ಮಾಯವಾಗುವುದು ಯಾವಾಗ ಎಂದು? ಮೀಸಲಾತಿಯನ್ನು ಅದರ ಉದ್ದೇಶ ನೆರವೇರದೇನೆ ತೆಗೆದುಹಾಕುವುದು ಅಪಾಯ. ಜಾತಿ, ಧರ್ಮ ಸಂಪ್ರದಾಯದ ಹೆಸರಿನಲ್ಲಿ ಯಾರನ್ನೇ ಆಗಲಿ ಗುಲಾಮ

ಗಿರಿಯಲ್ಲಿಡುವುದು ಅಮಾನವೀಯ. ಈ ದೇಶದ ಪ್ರತಿಯೊಬ್ಬನೂ ಗೌರವದಿಂದ, ಅಭಿಮಾನದಿಂದ ತನಗೆ ಬೇಕಾದ ವಿದ್ಯೆ ಕಲಿತು ತನಗೆ ಬೇಕಾದ ವೃತ್ತಿಯನ್ನು ಆರಿಸಿಕೊಂಡು ಬದುಕುವಂತಹ ವಾತಾವರಣವನ್ನು ಕಲ್ಪಿಸಿಕೊಟ್ಟರೇನೆ ಇದು ಪ್ರಜಾಪ್ರಭುತ್ವ ಅನಿಸಿಕೊಂಡೀತು. ಸಾಮಾಜಿಕ, ಆರ್ಥಿಕವಾಗಿ ದುರ್ಬಲ ರಾದವರು ಶಕ್ತರಾಗುವ ತನಕ ಅವರಿಗೆ ನೆರವು ನೀಡಬೇಕಾದದ್ದು ಸಶಕ್ತರ ಕರ್ತವ್ಯ. ಅಸ್ಪೃಶ್ಯತೆ ತಾನಾಗಿ ಈ ದೇಶದಲ್ಲಿ ಕಾಣಿಸಿಕೊಳ್ಳಲು ಮುಂದುವರೆದವರ ದುಷ್ಟತನ, ಬೇಜವಾಬ್ದಾರಿತನ, ರಾಕ್ಷಸಿಪ್ರವೃತ್ತಿ, ಧಾರ್ಮಿಕ ದೃಷ್ಟಿ, ಸಂಪ್ರದಾಯಶರಣತೆಯಿಂದಾಗಿ ನಮ್ಮ ಸಹ ಜೀವಿಗಳು ಕೀಳು ಬದುಕನ್ನು ಬಾಳುವಂತಾಯಿತು. ಅಂದು ಯಾರೋ ಮಾಡಿದ ತಪ್ಪಿಗೆ ಇಂದು ನಾವು ಶಿಕ್ಷೆಯನ್ನು ಅನುಭವಿಸಬೇಕು. ತಪ್ಪನ್ನು ಸರಿ ಮಾಡದೇ ಬೇರೆ ದಾರಿಯೇ ಇಲ್ಲ.

ಸಮಾನತೆಗಾಗಿ ಇರುವ ಈ ಮೀಸಲಾತಿ ಹಸಿದವನಿಗೆ ಊಟವಾಗಿರದೇ ಉಪ್ಪಿನಕಾಯಿ ಮಾತ್ರ ಆಗಿದೆ. ಜನ ಸಮೂಹದ ಪ್ರತಿಶತ ೨ ರ ಸಂಖ್ಯೆಯಷ್ಟಿರುವ ನೌಕರರ ಹುದ್ದೆಗಳಲ್ಲಿ ಮೀಸಲಾತಿ ಇದ್ದವರಿಗೆ ಅವಕಾಶ ತೀರ ಕನಿಷ್ಠ. ಇವರಿಗೆ ಸಾಮಾಜಿಕ ಅಂತಸ್ತು ಅಥವಾ ಆರ್ಥಿಕ ಬಲ ಕನಸಾಗೆ ಉಳಿದಿದೆ. ನೌಕರಿಗೆ ಸೇರಿದವರು ವಿಶಿಷ್ಟ ವರ್ಗವಾಗಿ ಬೇರ್ಪಡುತ್ತಿದ್ದಾರೆ. ಕೀಳು ಕುಲಕಸಬುಗಳು, ಕೀಳರಿಮೆ ಹಾಗೂ ದಾಸ್ಯ ಮನೋಭಾವನೆಗೆ ಕಾರಣವಾಗಿವೆ. ಸಾಮಾಜಿಕವಾಗಿ ಇನ್ನೂ ಇವರನ್ನು ಪಾಪ-ಪುಣ್ಯ, ಶಾಪ, ಕರ್ಮಸಿದ್ಧಾಂತಗಳಿಂದಲೇ ಗುರುತಿಸಲಾಗುತ್ತಿದೆ. ಕಲಹ, ಅಸೂಯೆಗೆ ಕಾರಣವಾಗಿರುವ ಈ ಮೀಸಲಾತಿ ಪದ್ಧತಿಯ ರೂಪ ವನ್ನು ಪರಿಷ್ಕರಿಸಬೇಕು. ಕೈ ನಿಲುಕುವ ಸೃಷ್ಟಿಯ ಸಂಪತ್ತು ಉಚ್ಚ ಜಾತಿಗಳ ಪಾಲಾಗಿದ್ದು ಜಾತಿ ಮೀಸಲಾತಿ ಸರಿ ಅಲ್ಲ ಎನ್ನುವದ ಕಿಂತ ಕೆಟ್ಟದ್ದಾಗಿರುವ ಡೊನೇಷನ್ ಅಥವಾ ಪೇಮೆಂಟ್ ದಡ್ಡರ ಬಗ್ಗೆ ಚಕಾರ ಎತ್ತದೇ ಇರುವುದು ಸಮಾಜದಲ್ಲಿ ಒಳಸಂಚಿನ ಒಪ್ಪಂದವಾಗಿದೆ. ಅಲ್ಲದೇ ಮೀಸಲಾತಿಯಿಂದಾಗಿಯೇ ಇವರಲ್ಲಿ ಒಡಕಿದೆ, ಸಂಘಟನೆಯ ಕೊರತೆ ಇದೆ. ಇವರು ವಿದ್ಯೆಬಲ, ಧನಬಲಗಳಿಂದ ಸಬಲರಾದಾಗಲೇ ತಮಗಾದ ಅನ್ಯಾಯ ಎದುರಿಸಲು ಸಾಧ್ಯ.

ಮುಂದುವರಿದ ಜನ ಈ ಸತ್ಯವನ್ನರಿತರೆ ಮೀಸಲಾತಿ ಎಂಬ ತಾರತಮ್ಯ ತಾನೇ ಮಾಯವಾಗುತ್ತದೆ. ಜೊತೆಗೆ ನಾವೆಲ್ಲಾ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಇದು ಸೂಕ್ಷ್ಮವಾದ ವಿಚಾರ: ಹಿಂದುಳಿದವರನ್ನು ಮುಂದೆ ತರುವ ಭರದಲ್ಲಿ ಮುಂದುವರೆದವರನ್ನು ಹಿಂದೆ ತಳ್ಳುವ ಅನುಚಿತ ಕಾರ್ಯ ಇಲ್ಲಿ ಆಗಬಾರದು. ಕಡಿಮೆ ಅಂಕ ಪಡೆದವರು ಹಿಂದುಳಿದವರೆಂಬ ಒಂದೇ ಕಾರಣದಿಂದಾಗಿ ಜವಾಬ್ದಾರಿ ಸ್ಥಾನಗಳಿಗೆ ಹೋಗಿ ಕುಳಿತು ಈ ದೇಶದ ಅಧೋಗತಿಗೆ ಕಾರಣವಾಗಬಾರದು. ಹಾಗೆಂದು ಈಗಾಗಲೇ ಜವಾಬ್ದಾರಿ ಸ್ಥಾನಗಳನ್ನಾಕ್ರಮಿಸಿಕೊಂಡು ವಿಜೃಂಭಿಸು ತ್ತಿರುವ ರಾಜಕಾರಣಿಗಳು ಹಾಗೂ ಅಧಿಕಾರಿ ಗಳಾಗಿರುವ ಉತ್ತಮರು ಹಿಂದುಳಿದವರ ಪ್ರಗತಿಗೆ ಅಡ್ಡಗಾಲು ಹಾಕಬಾರದು. ತಾವು ಮುಂದುವರೆಯುವದರ ಜೊತೆಗೆ ಅವರನ್ನು ತಮ್ಮ ಜತೆ ಕರೆದೊಯ್ಯುವ ನಿಟ್ಟಿನಲ್ಲಿ ದೇಶದ ಶಾಂತಿ, ಸುವ್ಯವಸ್ಥೆ ಸರ್ವಾಂ ಗೀಣ ಪ್ರಗತಿಗೆ ಯಾವ ರೀತಿಯಲ್ಲೂ ಧಕ್ಕೆಯುಂಟಾಗದ ಒಂದು ಪರಿಸ್ಥಿತಿ ಈ ದೇಶದಲ್ಲಿ ಮೂಡಲೇ ಬೇಕಾಗಿದೆ. ಈ ಬಗ್ಗೆ ನಿರ್ಮಲ ಮನಸ್ಸಿನಿಂದ ನಮ್ಮ ಜನ ನಾಯಕರು ಪತ್ರಿಕೆಗಳವರು, ಸಮಾಜ ಸೇವಕರು, ಸಮಾಜಶಾಸ್ತ್ರಜ್ಞರು ಪ್ರತಿಯೊಬ್ಬರು ವಿಚಾರ ಮಾಡ ಬೇಕು.

ಪ್ರೊ. ವಸಂತ ಕುಷ್ಟಗಿ*

ಕಲಬುರಗಿಯಲ್ಲಿಯ ವಿಜಯ ವಿದ್ಯಾಲಯ ಸಂಸ್ಥೆಯ ಸಾಧನಾ ಪಥ (೧೮೯೦-೨೦೦೩)

ರಾಷ್ಟ್ರಕೂಟರ ನೃಪತುಂಗನ (ಅಮೋಘವರ್ಷ) ಕಾಲದಲ್ಲಿ, ಈಗ ಹೈದರಾಬಾದ ಕರ್ನಾಟಕವೆಂದು ಕರೆಸಿಕೊಳ್ಳುವ ಬೀದರ, ಕಲಬುರಗಿ, ರಾಯಚೂರು ಜಿಲ್ಲೆಗಳ ಬಹು ಪಾಲು ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಸಾಮಾಜಿಕವಾಗಿ ದೇಶಕ್ಕೆ ಮಾದರಿಯಾಗಿ ಮುಂದುವರೆದ ಭಾಗವಾಗಿಯೇ ಹೆಸರಾಗಿತ್ತು. ಮುಂದಿನ ಕಾಲಗಳಲ್ಲಿ ವಿಜಯನಗರದ ಪತನದವರೆಗೂ ಈ ದಿಸೆಗಳಲ್ಲಿ ತನ್ನ ಸಮತೋಲನವನ್ನು ಕಾಪಾಡಿಕೊಂಡು ಬರುವಲ್ಲಿ ತನ್ನ ಪ್ರಯತ್ನವನ್ನು ಕಡೆಕಾಣಿಸಲಿಲ್ಲ. ಈ ಭಾಗವು ಸಂಪೂರ್ಣವಾಗಿ ಅಸಫಜಾಹಿ ನಿಜಾಂರ ಅಡಳಿತಕ್ಕೆ ಸೇರಿದ ಮೇಲೆ ವಿಶೇಷತಃ ಶೈಕ್ಷಣಿಕವಾಗಿ ನಿರ್ಲಕ್ಷಿತವಾಯಿತು. ಅದರ ಪರಿಣಾಮವು ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆರ್ಥಿಕ ನೆಲೆಗಳ ಮೇಲೆ ಆಗಿ ಆ ದಿಸೆಗಳಲ್ಲಿ ಪ್ರಗತಿಯು ಕುಂಠಿತವಾಯಿತು.

ಶಿಕ್ಷಣವು ಹಳ್ಳಿಗಳಲ್ಲಂತೂ ಎಲ್ಲಿಯೋ ಕೆಲವರಿಗೆ, ಕೆಲವು ಕುಟುಂಬಗಳಿಗೆ ಮೀಸಲಾಗತೊಡಗಿದಾಗ ಶಿಕ್ಷಣವು ಸಾರ್ವಜನಿಕರ ಸೊತ್ತಾಗಿ ಉಳಿಯಲಿಲ್ಲ. ಆ ಮೀಸಲು ಶಿಕ್ಷಣದಲ್ಲಿ ನೆಲದ ಭಾಷೆಗೆ ತೀರ ಗೌಣವಾದ ಸ್ಥಾನವಿದ್ದಿತು. ಹೀಗಾಗಿ ಮೌಢ್ಯ ಬೆಳೆದು ಶ್ರೀಸಾಮಾನ್ಯನು ತತ್ತರಿಸಿದ. ಅದರಲ್ಲಿಯೂ ಹಿಂದುಳಿದ ಸಮಾಜಗಳ ಮಕ್ಕಳು, ಸ್ತ್ರೀಯರು, ಅಕ್ಷರಜ್ಞಾನವು ಇಲ್ಲದಿದ್ದುದಕ್ಕಾಗಿ ಬದುಕಿನಲ್ಲಿಯ ವಿಕಾಸವನ್ನು ಕಾಣಲು ವಂಚಿತರಾದರು. ಹೀಗಾಗಿ ಬಡತನ ವಕ್ಕರಿಸಿತು. ಬಾಲಕರನ್ನೊಳಗೊಂಡು, ದುಡಿತಕ್ಕೆ ಸಮಾನ ಪ್ರತಿಫಲವಿಲ್ಲದ ಗತಿಯನ್ನು ಸಾರಾಸಗಟಾಗಿಯೇ ಅನೇಕರು ಅನುಭವಿಸತೊಡಗಿದಾಗ ಶೋಷಣೆಯು ಬಹು ಜನರನ್ನು ಹಿಂಡಿ ಹಿಪ್ಪಿಮಾಡಿತು. ಹೀಗೆ ಶಿಕ್ಷಣದಿಂದ ವಂಚಿತವಾದ ಸಮಾಜಗಳಲ್ಲಿ ಅನೇಕ ಚಟಗಳು ಧುಮ್ಮಿಕ್ಕಿ ಆರೋಗ್ಯ ಹದ ತಪ್ಪಿತು. ಇನ್ನೊಬ್ಬರ ಸೇವೆ ಮಾಡುವುದರಲ್ಲಿಯೇ ತಮ್ಮ ವಿಕಾಸವನ್ನು ಮರೆಯಬೇಕಾಯಿತು. ಈ ಸ್ಥಿತಿಗೆ ಕಲಬುರಗಿ ಪಟ್ಟಣವು ಅಪವಾದವಾಗಿ ಉಳಿಯಲಿಲ್ಲ.

ಒಟ್ಟಾರೆ ವಿಶೇಷವಾಗಿ ಶಿಕ್ಷಣ ಪ್ರಸಾರಕ್ಕೆ ೧೯ ನೆಯ ಶತಮಾನದಲ್ಲಿ ಅವಕಾಶವನ್ನು ಅವಸರವನ್ನು ಕಳೆದುಕೊಂಡಾಗ ಹೈದರಾಬಾದ್ ನಿಜಾಂ ಕರ್ನಾಟಕದ ಕಲಬುರಗಿಯಲ್ಲಿ ಕ್ರಿ.ಶ. ೧೮೯೦ ರಲ್ಲಿ ವಿಜಯ ವಿದ್ಯಾಲಯವು ಸ್ಥಾಪನೆಯಾಗಿ ಅದುವರೆಗೆ ಹಿಂದುಳಿದ ಕುಟುಂಬಗಳಿಗೆ ಎರವಾಗಿದ್ದ ಶಿಕ್ಷಣವು ಸಾಮಾನ್ಯನ ಅಂಚನ್ನು ಮುಟ್ಟಲು ಆರಂಭವಾಗಿ ಅದೆಷ್ಟೋ ಸಾಮಾನ್ಯ ಕುಟುಂಬಗಳು ನೆಮ್ಮದಿಯ ಬದುಕನ್ನು ತಮ್ಮದನ್ನಾಗಿಸಿಕೊಳ್ಳ ತೊಡಗಿದುವು. ಅದುವರೆಗೆ ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದೆಂದರೆ ಮಹಾಪಾಪದ ಕೆಲಸವೆಂಬ ಮೌಢ್ಯವು ಆವರಿಸಿತ್ತು. ಅದೇರೀತಿ ಅನೇಕ ಎಡೆಗಳಲ್ಲಿ ಹಿಂದುಳಿದವರೂ ಶಿಕ್ಷಣವನ್ನು ಪಡೆದರೆ ಅದೂ ಮಹಾಪಾಪದ ಕೆಲಸವೆಂದು ಭಾವಿಸಲಾಗುತಿತ್ತು. ಇಂಥ ಈ ಮೌಢ್ಯವನ್ನು ನಿವಾರಿಸುವ ದೃಷ್ಟಿಯಿಂದಲೂ ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಪ್ರಾಥಮಿಕ ಮಟ್ಟದಿಂದಲೇ ಮಾತೃಭಾಷೆಯಲ್ಲಿಯೇ ಶಿಕ್ಷಣ ಪ್ರದಾನ ಮಾಡಲು ಈ ಸಂಸ್ಥೆಯು ತನ್ನ ಯೋಗದಾನವನ್ನು ಮಾಡಲು ಮುಂದಾದುದು ವಿಶೇಷತಃ ಕಲಬುರಗಿಯ ಮುಖಾಂತರ. ಹೈದರಾಬಾದ ಕರ್ನಾಟಕದ ಭಾಗದಲ್ಲಿ ಒಂದಿಷ್ಟು ಶೈಕ್ಷಣಿಕ ವಾತಾವರಣವನ್ನು ಮತ್ತೆ ಕಸಿಗೊಳಿಸಿದಂತಾಯಿತೆಂದು ಹೇಳಲಡ್ಡಿಯಿಲ್ಲ.

ಈ ಹಿನ್ನೆಲೆಯಲ್ಲಿ ೧೮೯೦ ರಲ್ಲಿ ಆರಂಭವಾದ ಕಲಬುರಗಿಯ ವಿಜಯ ವಿದ್ಯಾಲಯ ಶಿಕ್ಷಣ ಸಂಸ್ಥೆಯು ಈಗ (೨೦೦೩) ತನ್ನ ೧೧೩ ವರ್ಷಗಳ ನಡೆಯಿಂದ ತನ್ನದೇ ಆದ ರೀತಿಯಲ್ಲಿ ವಿಕಾಸವಾಗುತ್ತ ಸಾಗಿದೆ. ಈ ಸಂಸ್ಥೆಯು ಮೆಥೊಡಿಸ್ಟ್ ಚರ್ಚ್ ಆಶ್ರಯದಲ್ಲಿ ಬೆಳೆದುಬಂದುದೆಂಬುದನ್ನು ಮರೆಯುವಂತಿಲ್ಲ. ಈ ಇತಿಹಾಸದ ಪುಟಗಳಲ್ಲಿ ರೆವರೆಂಡ್ ಡಿ. ಓ. ಅರ್ನ್ಸ್‌ಬರ್ಗರ್ (Rev. D.O. Earnsburger) ಅವರ ಹೆಸರು ಪ್ರಪ್ರಥಮವಾಗಿ ಬಂದಿದೆ. ಅವರು ಕ್ರಿಶ್ಚಿಯನ್ ಮಿಷ್ನರಿಯ ಮುಖ್ಯಸ್ಥರಾಗಿ ಬಂದಾಗ, ಯಾರಿಗೆ ಸಹಾಯ ಸಹಕಾರಗಳ ಅವಶ್ಯಕತೆಯಿದೆಯೋ ಅಂಥವರನ್ನು ಗುರುತಿಸಿ ಅವರ ಸೇವೆಯನ್ನು ಮಾಡಲು ಉದ್ದೇಶವನ್ನೇ ಹೊಂದಿದವರಾಗಿದ್ದರು. ರೋಗಿಗಳಿಗೆ ಮಾತ್ರ ವೈದ್ಯರ ಅವಶ್ಯಕತೆ; ನಿರೋಗಿಗಳಿಗೆ ಅರ್ಥಾತ್ ಆರೋಗ್ಯವಂತರಿಗೆ ವೈದ್ಯರ ಅವಶ್ಯಕತೆಯೇ ಇಲ್ಲ; ಎಂಬಂತಹ ನಿಷ್ಠುರ ತತ್ತ್ವವನ್ನು ಗಮನಿಸಿ, ನಿರ್ಲಕ್ಷಿತ ಜನಾಂಗದಲ್ಲಿ ಸಂಪರ್ಕ ಸಾಧನಗಳೇ ಇಲ್ಲದಾಗ ಅನೇಕ ಸಲ ಚಕ್ಕಡಿಗಳಲ್ಲಿಯೇ ಕುದುರೆಗಳ ಮೇಲೋ, ಕಾಲ್ನಡಿಗೆಯಲ್ಲಿಯೋ ಸಾಕ್ಷರತೆ ವಿಕಾಸವಾಗಲು ಬೋಧನೆಯನ್ನು, ಆತ್ಮಬಲ ಬೆಳೆಯಲು ಪ್ರಾರ್ಥನೆಯನ್ನು ಮತ್ತು ಆರೋಗ್ಯ ರಕ್ಷಣೆಗಾಗಿ,

* ಎಂ.ಐ.ಜಿ-೨೬, ಆದರ್ಶನಗರ ಮೊದಲ ಹಂತ, ಗುಲಬರ್ಗಾ-೫೮೫ ೧೦೫.

ಕಲಬುರಗಿ ಮಿಷ್ನರಿಯ ಜಿಲ್ಲೆಯ ಪ್ರದೇಶಗಳಾದ ಯಾದಗಿರಿ, ಸುರಪೂರ (ಷೋರಾಪೂರ), ರಾಯಚೂರು ಮತ್ತು ಕೊಪ್ಪಳ ಭಾಗಗಳಲ್ಲಿ ಆ ಉದ್ದಕ್ಕೂ ಈ ಉದ್ದಕ್ಕೂ ತಿರುಗಾಡಿ ಕಲಬುರಗಿಯಲ್ಲಿ ವಿಜಯ ವಿದ್ಯಾಲಯ ಶಾಲೆಯನ್ನು ತಾವು ಕಲಬುರಗಿಗೆ ಬಂದ ತಕ್ಷಣ ೧೮೯೦ ರಲ್ಲಿಯೇ ಆರಂಭಿಸಿ, ಶಿಕ್ಷಣ ಪ್ರಸಾರಕ್ಕಾಗಿ ತಮ್ಮ ಧ್ಯೇಯ ಸಾಧನೆಯನ್ನು ಆರಂಭಿಸಿದರು.

ಈ ವಿಜಯ ವಿದ್ಯಾಲಯವು, ಮಕ್ಕಳ ಉಜ್ವಲ ಭವಿಷ್ಯ ವನ್ನು ನಿರ್ಮಿಸುವ ಹಿನ್ನೆಲೆಯಲ್ಲಿ ಅಂದಿನ ವಿನಮ್ರ ಸ್ಥಿತಿಗನು ಗುಣವಾಗಿ ವಸತಿ ಶಾಲೆಯ ಮಾದರಿಯಲ್ಲಿಯೇ ೧೨'x೧೨' ವಿಸ್ತೀರ್ಣದ ಮೂರು ಗುಡಿಸಲುಗಳಲ್ಲಿ ಆರಂಭವಾಯಿತು. ಆ ಗುಡಿಸಲುಗಳು ವಿದ್ಯಾರ್ಥಿಗಳ ಪಾಠ ಪ್ರವಚನ ಊಟ ವಸತಿ ಗ್ರಂಥಾಲಯಕ್ಕೂ ಬಳಕೆಯಾಗುತ್ತಿದ್ದುವು. ಮಿಸ್ಟರ್ ಡಬ್ಲ್ಯುಪಾಲ್ ಎಂಬುವರು ಈ ವಸತಿ ಶಾಲೆಯ ಪ್ರಪ್ರಥಮ ಹೌಸ್‌ಫಾದರ್ ಆಗಿ ನೇಮಕರಾದರೆ, ಸರ್ವಶ್ರೀ ಚಿನ್ನಪ್ಪ ಮತ್ತು ಗುರುಮೂರ್ತಿ ಅವರು ಅಧ್ಯಾಪಕರಾಗಿ ನೇಮಕಗೊಂಡರು. ಜೋಸೆಫ್ ಬುಚ್ಚಯ್ಯನ ಮಕ್ಕಳಿಬ್ಬರು - ಕುಮಾರ ಶ್ಯಾಮ್ಯುಲ್, ಕುಮಾರಿ ನವೋಮಿ, (ಸೋದರ, ಸೋದರಿಯರು) ಪ್ರಪ್ರಥಮವಾಗಿ ಈ ಶಾಲೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು. ಅನಂತರ ಹುಮನಾ ಬಾದ ತಾಲೂಕಿನ ಕಲ್ಲೂರ ಗ್ರಾಮದ ಮಿತ್ರಪ್ಪ, ರುದ್ರಪ್ಪ, ಜಾಕಬ್ ಜೋತಪ್ಪ, ಬಿ. ಎನ್. ರಾಜಪ್ಪ ಮೊದಲಾದ ವಿದ್ಯಾರ್ಥಿಗಳು ಈ ಶಾಲೆಗೆ ಬಂದು ಸೇರಿದರು. ಈ ಸಂಖ್ಯೆ ೧೩ಕ್ಕೇರಿತು. ಇದರಲ್ಲಿ ಆರು ಜನ ಹುಡುಗರು ಮತ್ತು ಏಳು ಜನ ಹುಡುಗಿಯರು. ಹೀಗಾಗಿ ಮತ್ತೊಂದು ಗುಡಿಸಲಿನ ಅವಶ್ಯಕತೆಯೆನ್ನಿಸಿದಾಗ ಅದನ್ನು ಕಟ್ಟಲಾಯಿತು.

ಕ್ರಮೇಣ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗ್ಗೆ ವಿಜಯ ವಿದ್ಯಾಲಯವು ಮೂಡಿಸಿದ ಅರಿವಿನಿಂದಾಗಿ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗತೊಡಗಿದಾಗ ಈ ಸಂಸ್ಥೆಯವರು, ಸ್ತ್ರೀ ಶಿಕ್ಷಣದಿಂದ ಹಿಂದುಳಿಯುವಿಕೆ ದೂರವಾಗಿ, ದಾರಿದ್ರ್ಯ ನಿವಾರಣೆಯಾಗುವುದು ಎಂಬುದನ್ನು ಗೌರವಿಸಿ, ಕ್ರಿ.ಶ. ೧೮೯೮ರಲ್ಲಿ, ಅದುವರೆಗೆ ಸಹಶಿಕ್ಷಣ ನೀಡುತ್ತಿದ್ದ, ವಿಜಯ ವಿದ್ಯಾಲಯವು ಕೇವಲ ಹೆಣ್ಣುಮಕ್ಕಳ ಶಾಲೆಯಾಗಿ ಪರಿವರ್ತಿತವಾಯಿತು. ಅದುವರೆಗೆ ವಿದ್ಯಾರ್ಥಿಗಳೆಂದು ಅಲ್ಲಿ ಪ್ರವೇಶ ಪಡೆದಿದ್ದ ೨೦ ಗಂಡು ಮಕ್ಕಳನ್ನು ರಾಯಚೂರಿನ ವಸತಿ ಶಾಲೆಗೆ ವರ್ಗಾಯಿಸಿ, ಪ್ರವೇಶ ಪಡೆದ ವಿದ್ಯಾರ್ಥಿಗಳಾದ ಉಳಿದ ೨೫ ಹೆಣ್ಣುಮಕ್ಕಳನ್ನು ಕಲಬುರಗಿಯ ಅದೇ ಪರಿವರ್ತಿತಗೊಂಡ ವಿಜಯ ವಿದ್ಯಾಲಯದಲ್ಲಿ ಉಳಿಸಿಕೊಳ್ಳಲಾಯಿತು. ಹೀಗಾಗಿ ಕಲಬುರಗಿಯಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಪ್ರದಾನ ಮಾಡಿ ಕಟ್ಟಿದ ಸಂಸ್ಥೆಗಳಲ್ಲಿ ಈ ಸಂಸ್ಥೆಯು ಅಗ್ರಸ್ಥಾನವನ್ನು ಪಡೆದು ಇತಿಹಾಸದಲ್ಲಿ ಖ್ಯಾತಿ ಪಡೆಯಿತು.

ಕ್ರಿ.ಶ. ೧೯೦೨ ರಲ್ಲಿ ಈ ಸಂಸ್ಥೆಗೆ ರೆವೆರೆಂಡ್ ಎಚ್.ಜಿ. ಓರ್ಬುನೇ ಅವರು ಮಿಷ್ನರಿ ಮುಖ್ಯಸ್ಥರಾಗಿ ಬಂದಾಗ, ರಾಯಚೂರಿನಲ್ಲಿ ವಿದ್ಯಾರ್ಥಿಗಳಾಗಿ ಪ್ರವೇಶಿಸಿ ಪಡೆದಿದ್ದ ಎಲ್ಲ ಗಂಡು ಮಕ್ಕಳನ್ನು ಕಲಬುರಗಿಗೆ ವರ್ಗಯಿಸಲಾಯಿತು. ಹಾಗೂ ರಾಯಚೂರಿನಲ್ಲಿ ಆಗ ಪ್ರವೇಶ ಪಡೆದಿದ್ದ ಎಲ್ಲ ವಿದ್ಯಾರ್ಥಿನಿಯರನ್ನು ಅಲ್ಲಿಯೇ ಉಳಿಸಿ, ಅಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲಾಯಿತು. ಇತ್ತ ಕಲಬುರಗಿಯಲ್ಲಿ ಸಹ ಶಿಕ್ಷಣದ ಪ್ರಾಥಮಿಕ ಶಾಲೆಯನ್ನು ಪುನಃ ಅರಂಭಿಸಲಾಯಿತು. ಮಿಸ್ಟರ್ ಮೈಗೂರ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಜನಭಾಷೆಯಲ್ಲಿ ಶಿಕ್ಷಣ ಪ್ರದಾನ ಮಾಡುವುದರ ಮಹತಿಯನ್ನು ಅರಿತಿದ್ದ ಮಿಷ್ನರಿಗಳ ಧ್ಯೇಯೋದ್ದೇಶಗಳಿಗನುಸಾರವಾಗಿ ಅಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ರೆವೆರೆಂಡ್ ಎಚ್.ಜಿ. ಓರ್ಬುನೇ ಅವರು ಅನುಷ್ಠಾನಬದ್ಧರಾದರು. ಹೀಗಾಗಿ ೧೯೦೨ರಲ್ಲಿಯೇ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಯನ್ನು ಆರಂಭಿಸಿದ ಕೀರ್ತಿ ವಿಜಯ ವಿದ್ಯಾಲಯದ್ದಾಯಿತು. ಈ ಸಮಯದಲ್ಲಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ, ೩೫ ಹುಡುಗಿಯರದ್ದು, ೩೦ ಹುಡುಗರದ್ದು. ಹೀಗಾಗಿ ಒಟ್ಟು ೬೫ ವಿದ್ಯಾರ್ಥಿಗಳಿದ್ದರು. ಆದ್ದರಿಂದ ಇವರೆಲ್ಲರಿಗೂ ಪಾಠಕ್ಕೂ, ಪ್ರಾರ್ಥನೆಗೂ ಅನುಕೂಲವಾಗುವಂತೆ ದೊಡ್ಡ ಗುಡಿಸಲನ್ನು ಕಟ್ಟಿಸಿಕೊಡಲಾಯಿತು. ಮುಂದೆ ರೆವೆರೆಂಡ್ ಈಲ್ಲಿಸ್ ರಾಬರ್ಟಸ್ ಅವರು ತಮ್ಮ ಕಾಲದಲ್ಲಿ ಎಂದರೆ ಕ್ರಿ.ಶ. ೧೯೦೪ ರಲ್ಲಿ ಶಾಲೆಗಾಗಿ ಸುಂದರವಾದ ಕಟ್ಟಡವನ್ನು ಕಟ್ಟಿಸಿದರು. ಈ ಅವಧಿಯಲ್ಲಿ ಮಿಸ್ಟರ್ ಮೈಗೂರ ಅವರೇ ಮುಖ್ಯೋಪಾ ಧ್ಯಾಯರಾಗಿ ಆಡಳಿತ ನಡೆಸಿದರು.

ಆದರೆ ೧೯೦೬ರಲ್ಲಿ ಇದ್ದಕ್ಕಿದ್ದಂತೆ ಕಲಬುರಗಿಯಲ್ಲಿಯ ವಿಜಯ ವಿದ್ಯಾಲಯ ಪ್ರಾಥಮಿಕ ಶಾಲೆಯನ್ನು ಮುಚ್ಚಲಾಯಿತು. ಆಗ ಅಲ್ಲಿಯ ವಿದ್ಯಾರ್ಥಿಗಳನ್ನು ಸುರಪುರದ ಆನಂದಪುರಕ್ಕೂ, ಬೆಳಗಾಂವಿಯ ವಸತಿ ಶಾಲೆಗಳಿಗೂ ಸ್ಥಳಾಂತರಿಸಲಾಯಿತು.

ಕ್ರಿ. ಶ. ೧೯೧೪ರಲ್ಲಿ ಶಿಕ್ಷಣದ ಮಹತ್ವವನ್ನು ಅರಿತ ರೆವೆರೆಂಡ್ ಜಿ.ಬಿ. ಬ್ಯೂಟ್ರಿಕ್ ಅವರು ವಿಜಯ ವಿದ್ಯಾಲಯ ಗ್ರಾಮಾಂತರ ಶಿಕ್ಷಕರ ತರಬೇತಿ ಶಾಲೆಯನ್ನು ಆರಂಭಿಸಿದರು. ಇದರಿಂದಾಗಿ ಪ್ರಾಥಮಿಕ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹಿಗ್ಗಲಿಸಲು ಸಾಧ್ಯವಾಯಿತು. ಮುಂದೆ ಇದು ಬಹುದಿವಸಗಳವರೆಗೆ ನಡೆಯಲಿಲ್ಲ. ಆದರೆ ರೆವೆರೆಂಡ್ ಬ್ಯೂಟ್ರಿಕ್ ಅವರು ಕ್ರಿ.ಶ. ೧೯೧೭ ರಲ್ಲಿ ಪುನಃ ವಿಜಯ ವಿದ್ಯಾಲಯ ವಸತಿ ಶಾಲೆಯನ್ನು ಆರಂಭಿಸಿದ ಕೀರ್ತಿಗೆ ಭಾಜನರಾದರು.

ವಿಜಯ ವಿದ್ಯಾಲಯ ಸಂಸ್ಥೆಯು ಶಿಕ್ಷಣ ಪ್ರಸಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವುದರ ಜೊತೆಗೆ ಅದು ವಿಶೇಷತಃ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಹು ಕಾಳಜಿ ವಹಿಸುತ್ತದೆ ಎಂಬುದನ್ನು ಆ ಸಂಸ್ಥೆಯು ನಡೆಸುತ್ತಿರುವ ಶಾಂತಿ ಸದನ ಹೆಣ್ಣುಮಕ್ಕಳ ವಸತಿ ಗೃಹದಿಂದ ಗೊತ್ತಾಗುತ್ತದೆ. ಈ ಶಾಂತಿ ಸದನ ಸಂಸ್ಥೆಯು ೧೯೩೬-೩೭

ರಿಂದ ಈ ಸಂಸ್ಥೆಯ ಒಂದು ಭಾಗವಾಗಿ ಕಾರ್ಯನಿರ್ವಹಿಸಿತೇನೊ ನಿಜ. ಆದರೆ ಇದು ಈ ಮುನ್ನ ಕ್ರಿ.ಶ. ೧೯೧೩ರಲ್ಲಿ ಶ್ರೀಮತಿ ಪಂಡಿತ ರಮಾಬಾಯಿ ಅವರ ಮಗಳು ಶ್ರೀಮತಿ ಮನೋರಮಾ ಬಾಯಿ ಅವರು ಮುಕ್ತಿ ಮಿಷನ್ (Faith ಫೇಥ್ ಮಿಷನ್) ಮೂಲಕ ಮರಾಠಿ ಶಾಲೆಯನ್ನು ಬ್ರಾಹ್ಮಣರ ಹುಡುಗಿಯರಿಗಾಗಿ ಆರಂಭಿಸಿದ ಮೂಲದಲ್ಲಿ ಬಂದದ್ದು. ಈ ಮರಾಠಿ ಶಾಲೆಯು ಮೊದಲು ಶ್ರೀ ಶರಣಬಸವೇಶ್ವರ ಸಂಸ್ಥಾನದ ಹಿಂದೆ ಐದು ವಿದ್ಯಾರ್ಥಿಗಳಿಂದ ಖಾಸಗಿ ಮನೆಯೊಂದರಲ್ಲಿ ಆರಂಭವಾಗಿ ಕ್ರಿ.ಶ. ೧೯೧೫ರಲ್ಲಿ ಸದ್ಯದ ಶಾಂತಿಸದನಕ್ಕೆ ಸ್ಥಳಾಂತರವಾಗಿ ಎಲ್ಲ ಬಾಲಕಿಯರಿಗಾಗಿ ಶಿಕ್ಷಣವನ್ನು ನೀಡತೊಡಗಿತು. ಕ್ರಿ.ಶ. ೧೯೨೩ರಲ್ಲಿ ಶ್ರೀಮತಿ ಮನೋರಮಾ ಬಾಯಿಯವರ ನಿಧನದಿಂದಾಗಿ, ಆಗ ಹೊಣೆಗಾರಿಕೆ ಯನ್ನು ಹೊತ್ತುಕೊಳ್ಳುವವರು ಯಾರೂ ಇಲ್ಲದೆ ಈ ಶಾಲೆಯು ಮೆಥೊಡಿಸ್ಟ್ ಚರ್ಚ್ ಆಶ್ರಯಕ್ಕೆ ಬಂದುದಾಗಿ ತಿಳಿಯುತ್ತದೆ. ಆಗ ಮಿಸ್ ರೆಕ್ಸ್ರೋಥಾ ಈ ಬಾಲಕಿಯರ ವಸತಿ ಶಾಲೆಯ ಹೊಣೆಗಾರಿಕೆಯನ್ನು ಹೊತ್ತುಕೊಂಡು ಮುಂದೆ ಕ್ರಿ.ಶ. ೧೯೪೦ರಲ್ಲಿ ಈ ಮರಾಠಿ ಶಾಲೆಯನ್ನು ಮುಚ್ಚಲಾಯಿತು. ಹೀಗಾಗಿ ಎಲ್ಲ ಮರಾಠಿ ಅಧ್ಯಾಪಕ, ಅಧ್ಯಾಪಕಿಯರು ನೂತನ ವಿದ್ಯಾಲಯ ಸಂಸ್ಥೆಯಲ್ಲಿ ಕೆಲಸ ಮಾಡಲು ಸೇರಿಕೊಂಡರು. ಹೀಗೆ ಶಾಂತಿಸದನದ ನಂಟು ಬ್ರಹ್ಮಪುರ ಹಾಗೂ ನೂತನ ವಿದ್ಯಾಲಯ ಸಂಸ್ಥೆಯ ಜೊತೆಗೆ ಇದ್ದುದನ್ನು ನೆನಪಿನಲ್ಲಿಟ್ಟುಕೊಳ್ಳ ಬೇಕಾದ ಸಂಗತಿ.

ಕನ್ನಡ ಮಾಧ್ಯಮದ ಪ್ರಾಥಮಿಕ ಮಟ್ಟದ ವಿದ್ಯಾ ಪ್ರಸಾರದ ಸ್ಥಿತಿಗತಿಯು ಬಲಗೊಂಡ ಮೇಲೆ ಕ್ರಿ.ಶ. ೧೯೩೪ರಲ್ಲಿ ರೆವರೆಂಡ್ ಸಿ.ಎಫ್. ಲಿಫ್ ಅವರು ಕಲಬುರಗಿಯ ಮಿಷನ್ನರಿಯ ಮುಖ್ಯಸ್ಥರಾಗಿ ಬಂದಾಗ ಮಾಧ್ಯಮಿಕ ಶಾಲೆಯನ್ನು ಆರಂಭಿಸುವಲ್ಲಿ ಆಸಕ್ತಿ ವಹಿಸಿದರು. ಆ ಸಂದರ್ಭದಲ್ಲಿ ಹೈದರಾಬಾದ್ ನಿಜಾಂ ಸಂಸ್ಥಾನದ ಪಠ್ಯಕ್ರಮವನ್ನು ಅಳವಡಿಸಿಕೊಂಡು ಕನ್ನಡ ಮಾಧ್ಯಮವನ್ನೇ ಅನುಷ್ಠಾನದಲ್ಲಿ ತಂದುದು ಈ ಸಂಸ್ಥೆಯ ಕನ್ನಡ ಪ್ರೀತಿಗೆ ಸಾಕ್ಷಿ. ಮುಂದೆ ೧೯೩೪-೩೫ರಲ್ಲಿ ಕನ್ನಡದ ಜೊತೆಗೆ ಇಂಗ್ಲಿಷ್ ಮಾಧ್ಯಮಕ್ಕೂ ಅಲ್ಲಿ ಅನುಕೂಲ ಮಾಡಿಕೊಡಲಾಯಿತು. ಕ್ರಿ.ಶ. ೧೯೪೦ರವರೆಗೆ ಈ ಸಂಸ್ಥೆಯಿಂದ ಪಾಸಾದ ಮಾಧ್ಯಮಿಕ ಶಾಲೆ (ಮಿಡ್ಲಿಸ್ಕೂಲ್)ಯ ಬಾಲಕರು ಮುಂದಿನ ಅಭ್ಯಾಸಕ್ಕಾಗಿ ಸ್ಥಳೀಯ ಸರಕಾರಿ ಪ್ರೌಢಶಾಲೆ ಹಾಗೂ ನೂತನ ವಿದ್ಯಾಲಯ ಪ್ರೌಢಶಾಲೆಯಲ್ಲಿ ಪ್ರವೇಶ ಪಡೆಯುವ ಸಂಬಂಧವು ವಾಡಿಕೆಯಲ್ಲಿದ್ದಿತು. ಅದೇ ರೀತಿ. ಪಾಸಾದ ವಿದ್ಯಾರ್ಥಿನಿಯರು ಹೈದರಾಬಾದಿನ ಸ್ಟೇನಲಿ ಬಾಲಕಿಯರ ಪ್ರೌಢಶಾಲೆಯಲ್ಲಿ ಪ್ರವೇಶ ಪಡೆಯುತ್ತಿದ್ದರು. ಹೀಗೆ ಈ ಮಾಧ್ಯಮಿಕ ಮಟ್ಟದಲ್ಲಿಯ ಶಿಕ್ಷಣ ಪ್ರಗತಿಗಾಗಿ, ಈ ಸಂಸ್ಥೆಯ ಘನತೆಯನ್ನು ಹೆಚ್ಚಿಸಲು ರೆವೆರೆಂಡ್ ಎಚ್.ಜಿ. ಮಿತ್ರ, ಶಾಂತಮಿತ್ರ, ಎಚ್. ಡೆವಿಡ್, ಎಂ. ಆನಂದ್, ಮಿಸ್ ಮೂರ್‍ರೋ, ಮಿಸ್ ಈಥಲ್. ವಿ. ಲಾಕ್ (Miss Eithal V. Lock), ಮಿಸ್ ರೆಕ್ಸ್ರೋಥೊ (Miss Rexroth), ಮಿಸ್ ಬುಗ್‌ಬೈ (Miss Bugby) ಬಹಳ ನಿಷ್ಠೆಯಿಂದ ಕಾರ್ಯನಿರ್ವಹಿಸಿದರು. ಅದರ ಫಲವಾಗಿ ಕ್ರಿ.ಶ. ೧೯೩೮ ರಿಂದ ನಿಜಾಂ ಸರಕಾರವು ಈ ಶಾಲೆಯನ್ನು ಅನುದಾನದಲ್ಲಿ ತಂದು ಪ್ರೋತ್ಸಾಹಿಸಿತು. ವಿದ್ಯಾರ್ಥಿಗಳ ಉತ್ತಮ ಸಾಧನೆಯಿಂದಾಗಿ ಶಾಲೆಗೆ ಪಾಲಕರು ಆಕರ್ಷಿತರಾಗಿ ಮಕ್ಕಳನ್ನು ಈ ಶಾಲೆಗೆ ಕಳಿಸತೊಡಗಿದರು. ತತ್‌ಪ್ರಯುಕ್ತವಾಗಿ ಜೂನ್ ೧೯೪೦ರ ದಿನಗಳಲ್ಲಿ ಈ ಸಂಸ್ಥೆಯ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ದಾಖಲಿಸಬೇಕಾದುದು ಅವಶ್ಯ. ಏಕೆಂದರೆ ವಿಜಯ ವಿದ್ಯಾಲಯ ಪ್ರೌಢಶಾಲೆಯು ಆಗ ಕನ್ನಡ ಮಾಧ್ಯಮಕ್ಕೆ ನಾಂದಿ ಹಾಡಿತೆಂಬುದೇ ಮಹತ್ವದ ಸಂಗತಿ.

ಕಲಬುರಗಿಯ ಕ್ರಿಶ್ಚಿಯನ್ ಮಿಷ್ನರಿಯ ಮುಖ್ಯಸ್ಥರಾಗಿದ್ದ ರೆವರೆಂಡ್. ಸಿ.ಎಫ್. ಲಿಪ್ಸ್ ಅವರು ಪ್ರೌಢಶಾಲೆಯ ಆರಂಭಕ್ಕಷ್ಟೇ ಪ್ರೋತ್ಸಾಹಿಸದೆ, ಆರ್ಥಿಕ ಬಲವನ್ನು ತಂದುಕೊಟ್ಟು, ಆ ಶಾಲೆಗೆ ಬೇಕಾಗುವ ಸುಂದರ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಮಿಸ್. ಆರ್. ಅಯ್. ವಿಲ್ಸನ್ ಅವರ ಬೆನ್ನಿಗೆ ರಕ್ಷೆಯಾಗಿ ನಿಂತು ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಮೈಲುಗಲ್ಲನ್ನು ಸ್ಥಾಪಿಸಿದರು. ರೆವರೆಂಡ್ ಸಿ.ಪಿ. ಹೇಯನ್ಸ್ (Rev, C.P. Hein's), ರೆವೆರೆಂಡ್ ವಾಯ್. ಇ. ಡೌಗಲ್ಸ್ (Rev. Y. E. Dougles), ಶ್ರೀಮತಿ. ಟೌನ್ಸಲೇ (Smt.Twonsley) ಮಿಸ್ ಎಸ್. ಇಡವಾರ್ಡ್ಸ್ ಮೊದಲಾದವರು ಈ ಶಾಲೆಯ ಸರ್ವತೋಮುಖ ಬೆಳವಣಿಗೆಗಾಗಿ ತಮ್ಮ ಶ್ರಮವನ್ನು ಸಾರ್ಥಕಪಡಿಸಿದವರ ಮಾಲಿಕೆಯಲ್ಲಿ ಬರುತ್ತಾರೆ.

ಕ್ರಿ. ಶ. ೧೯೬೨ ರಲ್ಲಿ ರೆವೆರೆಂಡ್ ಈ.ಎ. ಸೀಮಂಡ್ಸ್ (Rev. E.A.Seamandes) ಅವರ ಸ್ಮರಣಾರ್ಥ ಹೈಸ್ಕೂಲಿಗಾಗಿ ಕಟ್ಟಡ ನಿರ್ಮಾಣವಾಯಿತಷ್ಟೇ ಅಲ್ಲ, ಅದೇ ವರ್ಷ ಜನಾಪೇಕ್ಷೆಯ ಮೇರೆಗೆ ಹೈಸ್ಕೂಲಿನಲ್ಲಿ ಇಂಗ್ಲಿಷ್ ಮಾಧ್ಯಮವೂ ಆರಂಭವಾಯಿತು. ದಕ್ಷ ಆಡಳಿತ ಮತ್ತು ಒಳ್ಳೆಯ ಶಿಕ್ಷಣ ಪ್ರಧಾನ ಮಾಡಿದುದಕ್ಕೆ ಶ್ರೀ ಬಿ. ಜೇಮ್ಸ್ ಮಧು ಅವರಿಗೆ ರಾಜ್ಯದ ಪ್ರತಿಷ್ಠಿತ ಉತ್ತಮ ಮುಖ್ಯೋಪಾಧ್ಯಾಯ ಪ್ರಶಸ್ತಿ ದೊರೆಯಿತು. ಮುಂದೆ ಕ್ರಿ. ಶ. ೧೯೭೯ ರಲ್ಲಿ ಹೈಸ್ಕೂಲು ಸಂಯುಕ್ತ ಪದವಿಪೂರ್ವ ಕಾಲೇಜಿನ ಮಟ್ಟಕ್ಕೇರಿತು. ರೆವೆರೆಂಡ್ ಶಾಂತಮಿತ್ರ, ಶ್ರೀ ಸದಾನಂದ ಜೇಮ್ಸ್, ಶ್ರೀ ಎಂ. ಜಾರ್ಜ್, ಶ್ರೀ ಜೆ.ಎಸ್. ವಿಲಿಯಮ್ಸ್ ಅವರ ಸತತ ಪರಿಶ್ರಮದಿಂದಾಗಿ ಹೈಸ್ಕೂಲ್ ಶಿಕ್ಷಣದ ಜೊತೆಗೆ ಪದವಿಪೂರ್ವ ಮಟ್ಟದಲ್ಲಿ ಆರ್ಟ್ಸ್, ಸಾಯನ್ಸ್, ಕಾಮರ್ಸ್ ವಿಭಾಗಗಳಲ್ಲಿ ಶಿಕ್ಷಣ ಪ್ರಧಾನ ಮಾಡುವ

ಸೌಕರ್ಯವನ್ನು ಪಡೆಯಿತು. ವಿಶೇಷತಃ ಕನ್ನಡವನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ಷಡಕ್ಷರಯ್ಯ ಪುಲ್ಲಾಪುರ ಮಠ, ರಮಾಕಾಂತ ಕಟ್ಟಿ, ನರಸಿಂಹಾಚಾರ್ಯ ಬಂಡಿ, ಮೊದಲಾದ ಶಿಕ್ಷಕರ ಬೋಧನಾ ಸೇವೆಯು ಗಮನಾರ್ಹವಾದ ಸಂಗತಿ.

ಹೀಗೆ ದೂರದೃಷ್ಟಿಯನ್ನು ಇಟ್ಟುಕೊಂಡ ವಿಜಯ ವಿದ್ಯಾಲಯ ಸಂಸ್ಥೆಯು ಉತ್ತಮ ಮಟ್ಟದ ಸಾಮಾನ್ಯ ಶಿಕ್ಷಣದತ್ತ ಮನಸ್ಸು ಮಾಡಿತು. ಅಷ್ಟರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ತನ್ನ ಪ್ರಭಾವವನ್ನು ಶಿಕ್ಷಣ ಕ್ಷೇತ್ರದಲ್ಲಿ ಬೀರತೊಡಗಿತು. ಅದರಿಂದ ಪ್ರಭಾವಿತವಾಗಿ, ಅತ್ಯಂತ ಹಳೆಯದಾದ ಈ ಸಂಸ್ಥೆ ತಾನು ಪದವಿ ಶಿಕ್ಷಣ ನೀಡಲು ಮುಂದಾಯಿತು. ಆ ಸ್ಪಂದನೆಯಲ್ಲಿ ಕ್ರಿ.ಶ. ೧೯೮೯ ರಿಂದ ಬಿ. ಎ. ತರಗತಿಗಳು ಆರಂಭವಾದುವು. ರೆವೆರೆಂಡ್ ಶ್ಯಾಮ್ಯುಲ್ ಆಗ ಪ್ರಿನ್ಸಿಪಾಲರಾಗಿದ್ದರು. ೧೯೯೩-೯೪ ರಲ್ಲಿ ಈ ಪದವಿ ಕಾಲೇಜು ಶ್ರೀ ಬಿ. ಸುನಂದ ಅವರ ಪ್ರಾಚಾರ್ಯತ್ವದಲ್ಲಿ ತನ್ನ ಆಲಿಂಗನಕ್ಕೆ ಕಾಮರ್ಸ್ ನಿಕಾಯವನ್ನು ಪಡೆಯಿತು. ಮುಂದೆ ಕ್ರಿ.ಶ. ೧೯೯೪-೯೫ ರಲ್ಲಿ ಈ ವಿಜಯ ವಿದ್ಯಾಲಯ ಆರ್ಟ್ಸ್ ಮತ್ತು ಕಾಮರ್ಸ್ ಪದವಿ ಮಹಾ ವಿದ್ಯಾಲಯವು "ವಿಜಯ ವಿದ್ಯಾಲಯ ಮೆಥೊಡಿಸ್ಟ್ ಪದವಿ ಮಹಾ ವಿದ್ಯಾಲಯ" ಎಂಬ ಹೆಸರನ್ನು ಪಡೆಯಿತು. ಈ ಪದವಿ ಮಹಾ ವಿದ್ಯಾಲಯವು ಅಸ್ತಿತ್ವಕ್ಕೆ ಬರುವ ದಿಸೆಯಲ್ಲಿ ವಿಧಾನ ಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ ಡೆವಿಡ್ ಸಿಮಿಯೋನ ಹಾಗೂ ಪ್ರೊ. ವಸಂತ ಕುಷ್ಟಗಿಯವರು ಸಲಹೆ, ಸಹಕಾರ ನೀಡಿದ್ದಾರೆಂಬುದನ್ನು ಸ್ಮರಿಸಲಾಗುತ್ತದೆ.

ವಿಜಯ ವಿದ್ಯಾಲಯ ಸಂಸ್ಥೆಯು ತನ್ನ ಶಿಕ್ಷಣ ಪ್ರಸಾರ ಕಾರ್ಯವನ್ನು ಕಲಬುರಗಿಗಷ್ಟೇ ಮೀಸಲುಗೊಳಿಸದೆ ಕ್ರಿ.ಶ. ೧೯೯೧-೯೨ ರಲ್ಲಿ ಜೇವರಗಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳ ಪ್ರಾಥಮಿಕ ಶಾಲೆಯನ್ನು ಆರಂಭಿಸಿದೆ. ಜೊತೆಗೆ ಸೋಲಾಪುರದ ಕಿರಿಯ ಪ್ರಾಥಮಿಕ ಶಾಲೆಯನ್ನು ಈ ಸಂಸ್ಥೆಯು ತನ್ನ ಆಧೀನಕ್ಕೆ ತೆಗೆದುಕೊಂಡು ಶಿಕ್ಷಣ ಪ್ರಸಾರದಲ್ಲಿ ಕಳಕಳಿಯನ್ನು ತೋರಿಸುತ್ತಿದೆ.

ಹೀಗೆ ನಿಜಾಂ ರಾಜ್ಯದ ಆಡಳಿತದ ಒತ್ತಡ ಹಾಗೂ ಉರ್ದು ಭಾಷೆಯ ಪ್ರಭಾವವು ಇದ್ದ ಶತಮಾನಗಳಲ್ಲಿ ವಿಶೇಷತಃ ೧೯ನೆಯ ಹಾಗೂ ೨೦ ನೆಯ ಶತಮಾನಗಳಲ್ಲಿ ಕನ್ನಡ ಬದುಕಿಗೆ, ಕನ್ನಡ ಸಾಹಿತ್ಯ ಸಂಸ್ಕೃತಿ ಭಾಷಾ ಇತಿಹಾಸಗಳ ಅಧ್ಯಯನಕ್ಕೆ ವ್ಯಕ್ತಿತ್ವ ವಿಕಾಸಕ್ಕೆ ಈ ಸಂಸ್ಥೆ ಮಾಡಿದ ಸೇವೆಯು, ನೀಡಿದ ಪ್ರೇರಣೆಯು ಬಹುಮಹತ್ವದ ಅಂಶಗಳಿಂದ ಕೂಡಿದ್ದುದಾಗಿದೆ. ಏಕೆಂದರೆ ಈ ಶಿಕ್ಷಣ ಸಂಸ್ಥೆಯು ಮೆಥೊಡಿಸ್ಟ್ ಚರ್ಚಿನ ಆಶ್ರಯದಲ್ಲಿ ಸಂಪೂರ್ಣವಾಗಿ ಬಂದಿರುವುದರಿಂದ, ಏಸು ಭಕ್ತಿಪರ ಅಧ್ಯಾತ್ಮದ ಚಟುವಟಿಕೆಗಳಿಂದ ಪ್ರಭಾವಿತವಾಗಿ ಕನ್ನಡ ಬದುಕನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕರಿಗೆ ಏಸು ಭಕ್ತಿಪರ ಗೀತೆಗಳನ್ನು ಕನ್ನಡದಲ್ಲಿ ರಚನೆ ಮಾಡಲು ಸ್ಫೂರ್ತಿಕೊಟ್ಟಿದೆ. ಆ ಗೀತೆಗಳ ಶ್ರವಣ, ಮನನ, ಆಲಾಪನ, ಕೀರ್ತನಗಳಿಂದಾಗಿ ವ್ರತಬದ್ಧ ಜೀವನಕ್ಕೆ ಅನೇಕರನ್ನು ತಂದು ಅನೇಕ ನಿರಕ್ಷರರನ್ನು ಸಾಕ್ಷರರನ್ನಾಗಿ ಮಾಡಿ ಸಮೃದ್ಧಿ ಜೀವನಕ್ಕೆ ಆಸ್ಪದ ಮಾಡಿಕೊಟ್ಟಿದೆ. ವಿಶೇಷತಃ ಸಾಮಾನ್ಯ ಸ್ತರದ ಹೆಣ್ಣುಮಕ್ಕಳೂ ವಿದ್ಯಾವಂತರಾಗುವಂತೆ ಅಷ್ಟೇ ಅಲ್ಲ, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿದೆ. ಇಂಥ ಸುಮಾರ್ಗಕ್ಕೆ ಹಚ್ಚುವ ದಿಸೆಯಲ್ಲಿ ಈ ಸಂಸ್ಥೆಯ ನೆಲೆಯಲ್ಲಿ ಏಸುಪರ ರಚನೆಯಾಗಿರಬಹುದಾದ ಕನ್ನಡ ಭಕ್ತಿಗೀತೆಗಳ ಹಸ್ತಪ್ರತಿಗಳನ್ನು ಈ ನಿಟ್ಟಿನ ಬೇರೆ ಬೇರೆ ಕಡೆಗಳಿಂದ ಇಲ್ಲಿ ಸಂಗ್ರಹಿಸಿರಬಹುದೆಂಬ ಸುಳಿವು ದೊರೆಯುತ್ತದೆ. ಅಂತಹ ಹೊತ್ತಿಗೆಗಳನ್ನು ಪ್ರಯತ್ನಪಟ್ಟರೆ ಹುಡುಕಿ ತೆಗೆಯಬಹುದಾಗಿದೆ. ಈ ಕಾರ್ಯದಿಂದ ಕನ್ನಡ ಭಕ್ತಿ ಸಾಹಿತ್ಯದ ವಿಶಿಷ್ಟ ಮಾದರಿಯ ಕೊಡುಗೆಯನ್ನು ಪ್ರಕಾಶನಗೊಳಿಸಿದಂತಾಗುತ್ತದೆ. ಈ ಬಗೆಗೆ ತಿಳಿದುಕೊಂಡ, ಹಿರಿಯರಾದ ಶ್ರೀ ರಂಗಪ್ಪ ಧಲಮಂಜನ, ದೇವಸಾಹಾಯ್ಯ, ಎಸ್. ಬೆಂಜೆಮಿನ್, ನರಸಿಂಹಾಚಾರ್ಯ ಬಂಡಿ ಮಾಸ್ತರ್ ಮೊದಲಾದವರು ಹಂಚಿಕೊಳ್ಳುವ ನೆನಪುಗಳು ಏಸು ಭಕ್ತಿ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವಲ್ಲಿ ಸಹಾಯ ಮಾಡಲು ಸಿದ್ಧ ಇವೆ. ಈ ಕಾರ್ಯವು ತುರ್ತಾಗಿ ನಡೆಯಬೇಕಿದೆ.

ಸದ್ಯ ಕಣ್ಣಿಗೆ ಬಿದ್ದ ಹಸ್ತಪ್ರತಿಗಳಿಂದ ಏಸು ಭಕ್ತಿಗೀತೆಗಳನ್ನು ರಚನೆ ಮಾಡಿದವರಲ್ಲಿ ಡಾ।। ಜೆ.ಟಿ. ಸೀಮೆಂಡ್ಸ್, ಕೆ. ಸಿಮಿಯೋನ, ಏಸುನಾಥರೆಡ್ಡಿ, ಮಿಸ್ ರೀಟಾ ಐರನ್, ರೆವೆರೆಂಡ್ ದೇವಸಾಹಾಯ್ಯಾ, ಎಸ್. ಬೆಂಜಮಿನ್, ಜಯವಂತ ಮುಲ್ತಾನಿ, ಶ್ರೀನಿವಾಸ ನಾಗನೂರ, ಲೂಕ ಸುಲಧಳ, ಜಿ. ಅಪ್ಪಯ್ಯಾ, ಎಲಿಯಾ ಮಮದಾಪುರ, ಬಿ.ಎಸ್. ಕಡೇಹಟ್ಟಿ, ಆಲಿಸ ನಿಲಜಗಿ, ಜಕ್ಕಯ್ಯಾ ಕೊಣ್ಣೂರು, ಜಯವಂತ ಅಂಕಲಗಿ, ಮೊದಲಾದ ಇನ್ನೂ ಅನೇಕರ ಹೆಸರುಗಳನ್ನು ಪಟ್ಟಿ ಮಾಡಬಹುದು.

ಇವರಲ್ಲಿ ಡಾ।। ಜೆ. ಟಿ. ಸೀಮಂಡ್ಸ್ ಅವರ ರಚನಾ ಸೇವೆ ಅಪರೂಪವಾದುದು. ಅವರು ತಾವಷ್ಟೇ ಭಕ್ತಿಗೀತಾ ರಚನಾ ಕೌಶಲ್ಯವನ್ನು ತೋರದೆ, ಅನೇಕರಲ್ಲಿ ಪ್ರತಿಭೆಯನ್ನು ಗುರುತಿಸಿ ಅವರಿಗೆ ಪ್ರೇರಣೆ ನೀಡಿ ಬೆಳೆಸಿದರು. ಅವರೆಲ್ಲರಲ್ಲಿ ಕನ್ನಡ ಮಾಧ್ಯಮದ ಪ್ರೀತಿಯನ್ನು ಅರಳಿಸಿದರು. ಮೂಲ ನೆಲೆಯಲ್ಲಿಯ ಕನ್ನಡದ ಗಟ್ಟಿತನವನ್ನು ಸಾಹಿತ್ಯ ರಚನೆಯಲ್ಲಿ ಪ್ರಕಟಿಸಲು ಪ್ರಯತ್ನಿಸಿದರು. ಜನಪದದಲ್ಲಿರುವ ಅರ್ಥಪೂರ್ಣ ಶಬ್ದಗಳು ನುಡಿಗಟ್ಟುಗಳು ಗ್ರಂಥಸ್ಥವಾಗುವುದಷ್ಟೆ ಅಲ್ಲ, ಆಡುಭಾಷೆಯ ಪ್ರಸಾರದಲ್ಲಿ ಅವು ಮರುಚಾಲನೆಗೊಂಡವು. ನುಡಿಗಟ್ಟು, ಲೋಕೋಕ್ತಿಗಳು ಬದುಕಿನ ನೆಲೆಯಲ್ಲಿಯ ಸಾಮರ್ಥ್ಯವನ್ನು ತೋರಿ ಸಂಸ್ಕೃತಿಯ ಇತಿಹಾಸಕ್ಕೆ ಆಕಾರವಾದುವು.

ಈ ದಿಸೆಯಲ್ಲಿ ಆ ಸಂಗ್ರಹದಲ್ಲಿರುವ ಒಂದು ಗಾದೆಯ ಮಾತು ಇಂತಿದೆ.

"ಸುಕಾಲಕ್ಕೆ ಉಣಚಿಕಾಯಿ, ಬರಗಾಲಕ್ಕೆ ಬಾರಿಕಾಯಿ"

ಎಂಬುದು. ಈ ಮಾತಿನಲ್ಲಿಯ ಅರ್ಥ ವಿಶೇಷ ಕಂಡಾಗ ಮನಸ್ಸಿನ ತುಂಬ ಬೆಳಕು ಆವರಿಸುತ್ತದೆ. ಒಕ್ಕಲಿಗರ ಬದುಕಿನ ಅನುಭವವೇ ಇಲ್ಲಿ ಅನುಭವದ ಮಾತಾಗಿ ಬೆಳಕು ನೀಡಿದೆಯೆಂದು ಮನದಟ್ಟಾಗುತ್ತದೆ. ಇಲ್ಲಿ ಬಳಕೆಯಾದ ಉಣಚಿಗೆ ಮೇವು ಎಂಬ ಅರ್ಥವಿದೆ. ಸುಕಾಲದಲ್ಲಿ ಇದನ್ನು ಕಾದರೆ ಬರಗಾಲದಲ್ಲಿ ದನಗಳಿಗೆ ಕಷ್ಟವಾಗುವುದಿಲ್ಲ. ಅದೇ ರೀತಿ ಬರಗಾಲದಲ್ಲಿ ಬಾವಿಗಳ ಬಾರಿಕಾಯಿ ಬೇಕು. ನೀರು ಪೋಲಾಗದಂತೆ ನೀರನ್ನು ಬಾವಿಯಲ್ಲಿ ಬಚಾವು ಮಾಡಿಕೊಂಡರೆ, ಬರಗಾಲದಲ್ಲಿ ನೀರಿನ ಕೊರತೆಯನ್ನು ತಾಳಬಹುದು. ಈ ಭಾವಾರ್ಥ ವಿದಿತವಾದಾಗ ನಮ್ಮ ಬದುಕಿನ ಸಂಸ್ಕೃತಿಯ ಸಂಪತ್ತಿನ ಮೌಲ್ಯ ಕಂಡು ಹಿಗ್ಗು ಬರುತ್ತದೆ. ಅಲ್ಲದೆ ಕನ್ನಡ ನಾಡಿನ ಭಕ್ತಿ ಸಾಹಿತ್ಯದ ಪ್ರಮುಖ ಶಕ್ತಿಗಳಾದ ಶರಣರ ವಚನ ಹಾಗೂ ದಾಸರ ಕೀರ್ತನ ಪ್ರಾಕಾರಗಳಲ್ಲಿ ಅಭಿವ್ಯಕ್ತಿಯ ಪ್ರಭಾವವನ್ನು ಏಸು ಭಕ್ತಿಯ ಗೀತಾ ಸಾಹಿತ್ಯ ರಚನೆಯಲ್ಲಿಯೂ ತನಗರಿಯದಂತೆ ಜನಪದ ಶಕ್ತಿಯನ್ನು ಬೀರಿದೆಯೆಂಬುದನ್ನು ಗಮನಿಸಬಹುದಾಗಿದೆ. ಅದೇ ರೀತಿ ಆಯಾ ನೆಲದ ಜನಪದರನ್ನು ಸದಾಚಾರಿಗಳನ್ನಾಗಿ ಮಾಡಲು ಆಯಾಜನಪದರ ಭಾಷೆಯೇ ಮಾಧ್ಯಮವಾಗಬೇಕೆಂದು ಭಕ್ತಿ ಸಾಹಿತ್ಯದ ಹರಿಕಾರರೆಲ್ಲ ಬರೆದಂತೆ ಏಸು ಭಕ್ತಿಯ ಸಾಹಿತ್ಯ ರಚನಾಕಾರರೂ ನಿರುಂಬಳವಾಗಿ ಸ್ವೀಕರಿಸಿದ್ದಾರೆ. ಅಂತೆಯೇ ವಚನಕಾರರಂತೆ, ಹರಿದಾಸರಂತೆ ಏಸು ಭಕ್ತಿ ಸಾಹಿತ್ಯ ರಚನಾಕಾರರಲ್ಲಿಯೂ ಆ ಕನ್ನಡ ಪ್ರೀತಿ ಆ ಕನ್ನಡ ಶಕ್ತಿಗಳನ್ನು ನಿಚ್ಚಳವಾಗಿ ಕಾಣಬಹುದಾಗಿದೆ. ಇದಕ್ಕೆ ಶ್ರೇಷ್ಠ ಮಾದರಿಯೆಂದರೆ ಡಾ : ಜೆ. ಟಿ. ಸೀಮಂಡ್ಸ್ ಪಡೆದ ಕನ್ನಡ ಸಂಸ್ಕಾರ. ಅದು ಅವರ ತಂದೆಯಿಂದ ಪಡೆದದ್ದು.

ಡಾ|| ಜೆ.ಟಿ. ಸೀಮಂಡ್ಸ್ ಅವರ ತಂದೆ ಇ.ಎ. ಸೀಮಂಡ್ಸ್ ಕನ್ನಡ ಪ್ರೀತಿಗೆ ಒಂದು ಆದರ್ಶ. ಅವರ ಮನೋಗತವು "ನನ್ನ ಸಾವು ಭಾರತದಲ್ಲಿ ಕನ್ನಡ ಪ್ರದೇಶದ ಭಾಗವಾಗಿರುವ ಕಲಬುರಗಿಯಲ್ಲಿಯೇ ಆಗಬೇಕು" ಎಂಬುದಾಗಿತ್ತಂತೆ. ಅವರ ಬಯಕೆ ಸಾವಿಗಷ್ಟೇ ಉಳಿಯದೆ, ಪುನಃ ಆ ಕನ್ನಡ ಪ್ರೀತಿಯ ಬಳ್ಳಿ ತಮ್ಮ ಮಗ ಡಾ|| ಜೆ.ಟಿ. ಸೀಮಂಡ್ಸ್ ಅವರಿಂದ ದಾಂಗುಡಿಯಾಯಿತು. ಈಗ ಅದು ಏಸು ಕನ್ನಡ ಭಕ್ತಿ ಸಾಹಿತ್ಯ ಸಂಜೀವಿನಿಯೇ ಆಗಿ ಅವರ ಬದುಕಾಗಿ ಉಳಿದಿದೆ.

ಹಸ್ತಪ್ರತಿ ಸಂಗ್ರಹದಲ್ಲಿಯ ಡಾ. ಜೆ.ಟಿ. ಸೀಮಂಡ್ಸ್ ಅವರ ಕೆಲವು ರಚನೆಗಳ ಮಾದರಿ

ವಂದನೆಯ ಮಾಡುವೆವು ಶ್ರೀ ಯೇಸುವೇ । ವಂದನೆಯ
ಮಾಡುವೆವು - ನಿರಂತರ || ವಂದನೆ || (ಪಲ್ಲವಿ)
ಎಂದಿಗೂ ನಿನ್ನ ನಾಮಪರಿಶುದ್ಧವಾಗಲಿ । ಸುಂದರ ರಕ್ಷಕನೆ ||
ಧರಣಿಯೊಳಗೆ ನಿನ್ನ ರಾಜ್ಯವುಬರಲಿ । ಕರುಣೆಯ ರಕ್ಷಕನೆ ||
ನಿನ್ನ ಚಿತ್ತವು ನಮ್ಮ ಮೇವ (ದ) ನಿಯೆಳಗೆ । ಎಂದಿಗೂ ನೆರವೇರಲಿ||

"ತಂದೆಯಾದ ದೇವರಿಗೆ ನಮೋ ನಮೋ ....
ಅತಿದಯವುಳ್ಳ ಕರ್ತನಿಗೆ ನಮೋ ನಮೋ ....
"ಪಾಪಿಗಳನ್ನು ಪ್ರೇಮದಿ ನೋಡಿ । ಪಾಪವ ಬಿಡಿಸಿ
ಪಾವನ ಮಾಡಿ । ತಾಪ ವರಿಸಿದ-ಶಾಪಹರಿಸಿದ ।
ದೇವಪುತ್ರನೇ, ಜೀವಕರ್ತನೇ ।
ರಕ್ಷಕನೇ । ಉದ್ಧಾರಕನೇ || ||ಜೈ ಜೈ||
"ನೀತಿಯಸೂರ್ಯ ಪ್ರೀತಿ ಸ್ವರೂಪ ।
ಭೀತಿಯೆಲ್ಲವ ಹರಿಸಲು - ಹರಿಸಲು ಯೇಸು
ಧರಣಿಗೆ ಬಂದ ||
ಬನ್ನಿ ಬನ್ನಿ ಯೇಸುವಿನ ಬಳಿಗೆ । ಇಂದು ಕರೆಯುತ್ತಾನೆ
ಪಾಪವ ಹರಿಸಿ ಶಾಪತೀರಿಸುವ
ಕೂಪದಿ ಬಿಡಿಸಿ ಕೋಪನೀಗಿಸುವ || ಬನ್ನಿ ||
ಸಾವನ್ನು ಬಿಡಿಸಿ ಜೀವಕೊಡುವನು
ಭಾವವ ಶೋಧಿಸಿ ಪಾವನ ಮಾಡುವನು || ಬನ್ನಿ ||
ಭಕ್ತಿಯ ಹುಟ್ಟಿಸಿ ಶಕ್ತಿಕೊಡುವನು
ಭಕ್ತರೊಳಸೇರಿಸಿ ಮುಕ್ತಿಕೊಡುವನು || ಬನ್ನಿ ||
ಭ್ರಾಂತಿ ಲೋಕದೊಳ್ ಶಾಂತಿಕೊಡುವನು
ಚಿಂತೆಯ ಕಾಲದೊಳ್ ಶಾಂತಿ ಕೊಡುವನು || ಬನ್ನಿ ||
"ನನಗಾಗಿ ಬಲಿಯಾದ ರಕ್ಷಕ ಯೇಸುವೇ ||

ಇದೇ ರೀತಿ ರೆವೆಂಡ್. ಕೆ. ಸೀಮಿಯೋನ ದಂಪತಿಗಳು ನೂರಾರು ಏಸು ಕನ್ನಡ ಭಕ್ತಿ ಗೀತೆಗಳನ್ನು ರಚನೆ ಮಾಡಿರುವರೆಂದು ತಿಳಿದು ಬಂದಿದೆ. ಕೆ. ಸಿಮಿಯೋನ ಅವರ ರಘುಪತಿ ರಾಘವ ಧಾಟಿಯ "ಕ್ರೈಸ್ತ ಸ್ತ್ರೀ ಸಾಕ್ಷಿ।" ಎಂಬ ಗೀತೆ, ಸ್ತ್ರೀಧರ್ಮದಲ್ಲಿಯ ಸದಾಚಾರಗಳಿಗೆ ಹಿಡಿದ ಕನ್ನಡಿಯಾಗಿದೆ, ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಗಳಲ್ಲಿಯ ಪವಿತ್ರ ಕಳಕಳಿಯ ಪಾಡಾಗಿದೆ. ಅವರ ಮತ್ತೊಂದು ಹೆಸರಿಸಬಹುದಾದ ಗೀತೆ "ಒಳ್ಳೆಯ ಸಮಯಾರ್ದವ" ಹಾಗೂ "ಯೇಸು ಸ್ವಾಮಿಯ ಶೋಧನೆ" ಎಂಬುವು ಕರ್ನಾಟಕ ರಾಜ್ಯದ ಮಾಜಿ ವಿಧಾನ ಪರಿಷತ್ತಿನ ಅಧ್ಯಕ್ಷ ಡೆವಿಡ್ ಸಿಮಿಯೋನ ಇದೇ ಕಟುಂಬಕ್ಕೆ ಸಂಬಂಧಪಟ್ಟವರು.

ಈ ಪಟ್ಟಿಯಲ್ಲಿರುವ ಜಯಂತ ಮುಲ್ತಾನಿಯವರ "ಅದ್ಭುತ ಮಾಡಿದ ಕ್ರಿಸ್ತಬೋಧ". ಶ್ರೀ ನಿವಾಸನಾಗನೂರ ಅವರ "ಯೇಸು ಸ್ವಾಮಿ ಬಂದ। ನಮಗೆ ಪರಮಾನಂದ ತಂದ" ಜಯವಂತ ಅಂಕಲಗಿ, ಅವರ "ಭಜನೆಯ ಕೇಳುವನು ನಮ್ಮ ಯೇಸು । ಪಾಪನ ಮಾಡುವನು ನಮ್ಮ ಯೇಸು" ಲೂಕ ಸುಲಧಾಳ ಅದರ "ಕ್ರಿಸ್ತೇಸು ಪರಿಪಾಲನೆ ಮಾಡೋ ಪರ ತಂದೆಯೆ ।" ಜೆ. ಅಪ್ಪಯ್ಯನವರ 'ಯೆಶಾಯ' ಮೊದಲಾದುವುಗಳು ಭಜನೆಯಲ್ಲಿ ವಿಶೇಷ ಸ್ಥಾನವನ್ನು ಪಡೆದುವುಗಳಾಗಿವೆ. ಇವೆಲ್ಲ ಭಕ್ತಿಯ ಪರಿಗಳು ಆರ್ತತೆಯಲ್ಲಿ ಧುಮ್ಮಿಕ್ಕಿ ಪರತಂದೆಯ ಕರುಣೆಯನ್ನು ಒದಗಿಸುವ

ಭಾವುಕತೆಯನ್ನು ಪಡೆದಿವೆ. ಅದರಿಂದಾಗಿ ನಿರ್ಮಲಾಂತಃ ಕರುಣೆಯ ಸಂಸ್ಕಾರವನ್ನು ಭಕ್ತ ಸಮುದಾಯ ಪಡೆಯಬಹುದಾಗಿದೆ.

ಹೀಗೆ ವಿಜಯ ವಿದ್ಯಾಲಯ ಸಂಸ್ಥೆಯು ಸಾಮಾಜಿಕ ಕಳಕಳಿಯಿಂದ ಶಿಕ್ಷಣ ಪ್ರಸಾರದ ಜೊತೆಗೆ ಯೇಸು ಕನ್ನಡ ಭಕ್ತಿ ಸಾಹಿತ್ಯ ಹಾಗೂ ಸಂಸ್ಕೃತಿಗಳ ಪ್ರಸಾರ ಕಾರ್ಯವನ್ನು ಮನಸ್ಸುಕೊಟ್ಟು ಮಾಡಿರುವುದಕ್ಕೆ ಸಾಧ್ಯವಾದಷ್ಟನ್ನು ಮಾತ್ರ ಇಲ್ಲಿ ದಾಖಲಿಸಲು ಪ್ರಯತ್ನಿಸಲಾಗಿದೆ.

ಈಗ ಈ ಸಂಸ್ಥೆಯ ವಿವಿಧ ಭಾಗಗಳ ಶಾಲೆ ಕಾಲೇಜುಗಳಲ್ಲಿ (ಶಿಶುವಿಹಾರದಿಂದ ಪದವೀಯ ಕೊನೆಯ ಮಟ್ಟದ ವರೆಗೆ) ಒಟ್ಟು ನಾಲ್ಕು ಸಾವಿರಕ್ಕೂ ಮೀರಿ ವಿದ್ಯಾರ್ಥಿಗಳು ಸಹ-ಶಿಕ್ಷಣ ಪಡೆಯುತ್ತಿದ್ದಾರೆ. ಈ ಸಂಸ್ಥೆಯ ಆವರಣದಲ್ಲಿ ಶಾಲಾ ಕಾಲೇಜುಗಳ ಕಟ್ಟಡಗಳ ಜೊತೆಗೆ ವಸತಿ ಗೃಹ, ಆಟದ ಮೈದಾನ, ಪ್ರಾರ್ಥನಾ ಮಂದಿರ, ಮೆಥೊಡಿಸ್ಟ್ ಚರ್ಚ್, ಗ್ರಂಥಾಲಯ ಇತ್ಯಾದಿಗಳು ಬೆಳೆದು ನಿಂತಿವೆ.

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಜಿಲ್ಲಾ ಗೆಜಟಿಯರ್
೨. ಸಂಸ್ಥೆಯಲ್ಲಿಯ ಕಡತಗಳು
೩. ಮೌಖಿಕ ಸಂದರ್ಶನಗಳು
೪. ಭಕ್ತಿ ಭಜನೆಯ ಹಸ್ತ ಪ್ರತಿಗಳು
೫. ಭಕ್ತಿ ಭಜನೆಯ ಹಳೆಯ ಪುಸ್ತಕಗಳು

ನಿನ್ನೆಯ ಸತ್ತ ಕತೆಗಳೆಂದು ದೂರುವ ಪ್ರತಿಮಾ ಸಂಪುಟ 'ಇತಿಹಾಸ'ವಲ್ಲ
ನಿನ್ನೆಯ ನಿಷ್ಕ್ರಿಯ ಇಡುಗಂಟು, ಎಂಬುದು ಅದರ ನಿಜ ಜಾಯಮಾನವಲ್ಲ
ವರ್ತಮಾನದ ಸಕ್ರಿಯ ಹೂಡಿಕೆಗೆ ಬೆಳೆದು ಬರುವುದೆ ಇತಿಹಾಸದ ಬಲ
ಮುಂದಿನಾ ಬಳಕೆಗದನೆ ಮಾದರಿಯ ಮೊತ್ತವಾಗಿಸುವುದೆ ನಮ್ಮ ಕೃತುಶೀಲ ಛಲ.



ಅಮರೇಶ್ ಯತಗಲ್*

ಗುಂತಗೋಳ ಸಂಸ್ಥಾನದ ಐತಿಹಾಸಿಕ ಪದರುಗಳು

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿಯ ಬೇಡ ಜನಾಂಗದವರು, ಪಾಳೆಯಗಾರರಾಗಿ, ಸಂಸ್ಥಾನಿಕರಾಗಿ, ದೊರೆಗಳಾಗಿ, ಸಮರ್ಥವಾಗಿ ರಾಜ್ಯಭಾರ ಮಾಡಿದ್ದಾರೆ. ಅಂಥವರಲ್ಲಿ ಸುರಪುರದ ನಾಯಕರು, ಗುಡಗುಂಟಿ ನಾಯಕರು, ದೇವದುರ್ಗದ ನಾಯಕರು, ಕನಕಗಿರಿ (ಹುಲಿಹೈದರ್) ನಾಯಕರು, ಹಾಗೂ ಗುಂತಗೋಳದ ನಾಯಕರು ಪ್ರಮುಖರಾದವರು.

ಗುಂತಗೋಳ ರಾಯಚೂರು ಜಲ್ಲೆಯ ಲಿಂಗಸುಗೂರು ತಾಲೂಕಿನಿಂದ ಸುಮಾರು ೩೦ ಕಿ.ಮೀ. ಅಂತರದಲ್ಲಿದೆ.ಗುಂತ ಎಂದರೆ ತಗ್ಗಾದ ಪ್ರದೇಶ, ಗುಳೆ ಎಂದರೆ ವಿಪ್ಲವ ಕಾಲದಲ್ಲಿ ಹೋಗಿ ನೆಲೆಸಿರುವುದು, ತಗ್ಗಾದ ಪ್ರದೇಶದಲ್ಲಿ ಯಾವುದೇ ವಿಪ್ಲವ ಕಾಲದಲ್ಲಿ ಹೋಗಿ ಅಲ್ಲಿ ನೆಲೆಯೂರಿರುವುದರಿಂದ ಈ ಹೆಸರು ಬಂದಿದೆ. ಮೊದ ಮೊದಲು 'ಗುಂತಗುಳೆ' ಎಂದು ಕರೆಯುತ್ತಿದ್ದರು. ಇದೊಂದು ಆಯಕಟ್ಟಿನ ಸ್ಥಳವಾಗಿದೆ. ಹಾಗೂ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಂದು ಕಾಲಕ್ಕೆ ಇದೊಂದು ಪೇಟೆಯಾಗಿತ್ತು. ಇಲ್ಲಿ ಅನೇಕ ಕೈಮಗ್ಗಗಳಿದ್ದವಂತೆ. ಇದರ ಕುರಿತಾದ ಸಂಶೋಧನೆಯ ಅಗತ್ಯವಿದೆ.

ಗುಂತಗೋಳದ ಸಂಸ್ಥಾನಿಕರು ಕ್ರಿ.ಶ. ೧೪೯೧ರಿಂದ ೧೯೪೮ ರವರೆಗೆ ಆಳ್ವಿಕೆ-ಮಾಡಿದ್ದಾರೆ. ಇವರು ಮೂಲತಃ ಕಂಚಿಯಿಂದ ಬಂದವರು. ಬಿಜಾಪುದ ಆದಿಲಶಾಹಿಗಳ ಆಡಳಿತಾವಧಿಯಲ್ಲಿ (ಕ್ರಿ.ಶ. ೧೪೮೯-೧೬೮೬) ನಿರ್ಲಕ್ಷಿಸಲ್ಪಟ್ಟ ಪ್ರದೇಶದಲ್ಲಿ ಒಂದು ಸಂಸ್ಥಾನವನ್ನು ಸ್ಥಾಪಿಸಿ ಬ್ರಿಟಿಷ್ ಮತ್ತು ಹೈದ್ರಾಬಾದ್ ನಿಜಾಮರ (೧೭೨೪-೧೯೪೮) ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳ್ವಿಕೆ ನಡೆಸಿದುದು ವಿಶೇಷವಾಗಿದೆ.

ಗುಂತಗೋಳದ ಸಂಸ್ಥಾನಿಕರು ಬಿಜಾಪುರದ ಆದಿಲ್ ಶಾಹಿಗಳ ಅಧೀನರಾಗಿದ್ದರು. ಔರಂಗಜೇಬನು ಬಿಜಾಪುರವನ್ನು ಮುತ್ತಿ ಸಿಕಂದರನನ್ನು ಸೆರೆ ಹಿಡಿದು ಆದಿಲ್‌ಶಾಹಿಗಳ ಆಳ್ವಿಕೆಯನ್ನು ಸಮಾಪ್ತಿಗೊಳಿಸಿದ ಮೇಲೆ ಇವರು ಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ಮೊದಲು ಇವರು ಜಲದುರ್ಗದಲ್ಲಿ ಆಳ್ವಿಕೆ ಪ್ರಾರಂಭಿಸಿದರು. ಕೆಲವು ಕಾಲಗಳ ನಂತರ ಗುಂತಗೋಳಕ್ಕೆ ಬಂದು ನೆಲೆಸಿದರು.

ಗುಂತಗೋಳ ಸಂಸ್ಥಾನದ ಮೂಲ ಪುರುಷ ಕಾಳಭೈರವ



ನಾಯಕ-ಈತನ ಸಮಾಧಿ ಗುಂತಗೋಳದಲ್ಲಿದೆ. ಅದನ್ನು ಈಗ ಕಾಳಭೈರವ ನಾಯಕನ ಗಚ್ಚಿನಕಟ್ಟೆ ಎಂದು ಕರೆಯುತ್ತಾರೆ. ನಂತರ ರಾಜಾ ಅಮರಪ್ಪ ನಾಯಕರು, ರಾಜಾ ಬಸಪ್ಪ ನಾಯಕರು, ರಾಜಾ ಶ್ರೀನಿವಾಸ ನಾಯಕರು, ರಾಜಾ ರಾಯಪ್ಪ ನಾಯಕರು, ರಾಜಾ ನರಸಿಂಹನಾಯಕರು ಪ್ರಮುಖರಾದವರು. ಈ ಸಂಸ್ಥಾನದ ರಾಜರಿಗೆ 'ಬಹರಿ ಬಹದ್ದೂರ್', 'ನಾಯಕಾಚಾರ್ಯ', 'ಮಹಾ ನಾಯಕ' ಎಂಬ ಬಿರುದುಗಳಿವೆ. 'ಬಹರಿ ಬಹದ್ದೂರ್' ಎಂಬ ಬಿರುದನ್ನು ಆದಿಲ್‌ಶಾಹಿಗಳು ನೀಡಿದ್ದಾರೆ. ಈ ಭಾಗದ ನಾಯಕ (ವಾಲ್ಮೀಕಿ/ಬೇಡ) ಜನಾಂಗಕ್ಕೆ ಗುರುಗಳಾದ ಇವರನ್ನು 'ನಾಯಕಾಚಾರ್ಯರು' ಎಂದು ಕರೆಯುವರು. ಇವರ ಬಿರುದಿನ ದ್ಯೋತಕವಾಗಿ 'ಮಾಹಾನಾಯಕನದೊಡ್ಡಿ' ಎನ್ನುವುದು ಗುಂತಗೋಳದ ಒಂದು ಭಾಗವಾಗಿತ್ತು. ಈಗಲೂ ಈ ಮನೆತನವನ್ನು ಗುರು ಮತ್ತು ದೊರೆ ಮನೆತನ ಎಂದು ಕರೆಯುತ್ತಾರೆ.

ಈ ಸಂಸ್ಥಾನದ ರಾಜಲಾಂಛನ ಆನೆ. ಇವರಿಗೆ ಹಸಿರು ಬಣ್ಣದ ಧ್ವಜವಿದೆ, ಬೆಳ್ಳಿಯ ಮೊಹರಿದೆ. ಶೈವ ಪಂಥದವರಾದ ಇವರು ಭಾರಧ್ವಾಜ ಗೋತ್ರದವರಾಗಿದ್ದಾರೆ. ಇವರ ಆಡಳಿತಕ್ಕೆ ಸುಮಾರು ೧೩೦ ಹಳ್ಳಿಗಳು ಸೇರಿದ್ದವು. ಇವರ ಗಡಿಯನ್ನು ಸೂಚಿಸುವ ಜನಪದ ನುಡಿಯೊಂದು ಇಂತಿದೆ.

ಮಾಮಲೆ ಮುದಗಲ್, ಕಿಲ್ಲೆ ಜಲದುರ್ಗ,
ಸಮತ್ ಗೋನವಾಟ್ಲ / ಸಂಸ್ಥಾನ ಗುಂತಗೋಳ
ನಮ್ಮ ರಾಜರದು.

ಇವರ ಆಡಳಿತದ ವ್ಯವಸ್ಥೆಯಲ್ಲಿ ಪಾಟೀಲ, ಕುಲಕರ್ಣಿ,

* ಅಧ್ಯಾಪಕ, ಸ.ಪ.ಪೂ. ಕಾಲೇಜು, ಲಿಂಗಸುಗೂರು. ಸಾ. ಕಸಬಾ-ಲಿಂಗಸುಗೂರು, ತಾ. ಲಿಂಗಸುಗೂರು.

ನಾಡಗೌಡ, ದೇಸಾಯಿ ಎಂಬ ಅಧಿಕಾರಿಗಳನ್ನು ನೇಮಿಸಿದ್ದರು. ಇವರೆಲ್ಲಾ ತಮ್ಮ ಭಾಗದ ಕಂದಾಯವನ್ನು ವಸೂಲಿ ಮಾಡಿ, ರಾಜರಿಗೆ ಸಲ್ಲಿಸುತ್ತಿದ್ದರು. ಇವರಲ್ಲಿ ಕಾಳಾಪುರದ ದಣಿಗಳು ನೀರಲಕೇರಿಯ ನಾಡಗೌಡರು, ಬೆಲ್ಲದಮರಡಿಯ ದೇಸಾಯಿಗಳು ಪ್ರಮುಖರಾದವರು. ಇಂದಿಗೂ ಈ ಮನೆತನದವರು ಇದ್ದಾರೆ.

ಕುಲಾಚಾರಿಕೆ-ಪದ್ಧತಿ ಇವರ ಕಾಲದಲ್ಲಿತ್ತು. ಈ ಪದ್ಧತಿಯನ್ನು ನೋಡಿಕೊಂಡು ಹೋಗುವ ಅಂದಿನ ಕಟ್ಟಿಮನಿ, ವಂಶಸ್ಥರು, ಬೆಲ್ಲದಮರಡಿ, ರಾಂಪುರ, ಅಡವಿಬಾವಿ, ಚಿತ್ತಾಪುರ, ಕಾಚಾಪುರ, ಖೈರವಾಡಗಿ, ಬುದ್ದಿನ್ನಿ ಮುಂತಾದ ಹಳ್ಳಿಗಳಲ್ಲಿದ್ದಾರೆ. ಹಾಗೂ ಇವರ ಕಾಲದ ಗುರಿಕಾರರು, ಗುಮ್ಮೇದಾರರು, ಸುಬೇದಾರರು, ದಳವಾಯಿಗಳು, ತಳವಾರರು, ಪೂಗಾರರು, ಭಜಂತಿಗಳು, ಅವರ ವಂಶಸ್ಥರು ಇಂದಿಗೂ ಇದ್ದಾರೆ. ಇವರಿಗೆ ಸಂಸ್ಥಾನಿಕರು ನೀಡಿದ ಇನಾಮುಗಳಿವೆ.



ಗುಂತಗೋಳ ಸಂಸ್ಥಾನಿಕರ ಕುಲದೇವರು ಕಂಚಿಯ ಏಕಅಮರೇಶ್ವರ. ಈ ಕುಲದೇವರ ಹೆಸರಿನಲ್ಲಿ ಗುಂತಗೋಳದಲ್ಲಿ ಅಮರೇಶ್ವರ ಗುಡಿಯನ್ನು ಕಟ್ಟಿಸಿದರು. ನಂತರ ಇವರ ಬಂಧುಗಳಾದ ಗುಡಗುಂಟಿ ಸಂಸ್ಥಾನಿಕರ ಆರಾಧ್ಯದೇವರು, ಶ್ರೀ ಅಮರೇಶ್ವರನಿಗೆ ದೇವರ ಭೂಪೂರದ ಸಮೀಪ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಇದನ್ನು ಇಂದು ಗುಡಗುಂಟಿ ಅಮರೇಶ್ವರ ಎಂದು ಕರೆಯುತ್ತಾರೆ.

ಪ್ರತಿವರ್ಷ ಫಾಲ್ಗುಣ ಶುದ್ಧ ತ್ರಯೋದಶಿಯಂದು ಈ ದೇವರ ಜಾತ್ರೆ ನಡೆಯುತ್ತದೆ. ಈ ಜಾತ್ರೆಯು ರಾಯಚೂರು ಜಿಲ್ಲೆಯಲ್ಲಿಯೇ ಅತಿದೊಡ್ಡ ಜಾತ್ರೆಯಾಗಿದೆ. ಇಂದಿಗೂ ಈ ಜಾತ್ರೆಯ ಸಂದರ್ಭದಲ್ಲಿ ಅಮರೇಶ್ವರನ ತೇರಿಗೆ ಕಳಸವು ಗುಂತಗೋಳ ಸಂಸ್ಥಾನದಿಂದ ಹೋಗುತ್ತದೆ. ಆದರೆ ಜಾತ್ರೆಯ ಉಸ್ತುವಾರಿಯನ್ನು ಇವರು ಗುಡಗುಂಟಿ ಸಂಸ್ಥಾನಿಕರಿಗೆ ಬಿಟ್ಟುಕೊಟ್ಟಿದ್ದಾರೆ.

ಅಮರೇಶ್ವರರ ಗುರುಗಳಾದ ಶ್ರೀ ಗಜದಂಡ ಸ್ವಾಮಿಗಳು ದೇವರ ಭೂಪೂರ ಇವರು ಜಾತ್ರೆಯ ಸಂದರ್ಭದಲ್ಲಿ ಕಳಸದೊಂದಿಗೆ ಗುಂತಗೋಳಕ್ಕೆ ಬರುತ್ತಾರೆ. ಸ್ವತಃ ರಾಜವಂಶಸ್ಥರು ದರಬಾರದ ಕಟ್ಟೆಯ ಮೇಲೆ ನಡೆಯುವ ಪೂಜೆಯನ್ನು ಮಾಡುವಾಗ ತುಪ್ಪದ ದೀವಟಿಗೆಯನ್ನು ಹಿಡಿಯುವ ಪದ್ಧತಿ ಇದೆ. ರಾಜರು ಅಮರೇಶ್ವರನ ಕಳಸದೊಂದಿಗೆ ಸಾಗುವಾಗ ಕೊಡೆಪಾಲಕರು ರಾಜರಿಗೆ ಹಸಿರು ಛತ್ರಿಯನ್ನು ಹಿಡಿದಿರುತ್ತಾರೆ. ಚಾಮರವನ್ನು ಬೀಸುತ್ತಿರುತ್ತಾರೆ. ಮೆರವಣಿಗೆ ವಿಜೃಂಭಣೆಯಿಂದ ನಡೆಯುತ್ತದೆ.

ಈ ಸಂಸ್ಥಾನಿಕರ ಆರಾಧ್ಯ ದೇವರುಗಳು ಗೋನವಾಟ್ಲದ ವೇಣುಗೋಪಾಲಸ್ವಾಮಿ, ಭುವನೇಶ್ವರಿ, ಕಕ್ಕೇರಿಯ ಸೋಮ ನಾಥ, ಶ್ರೀ ಹನುಮಾನ ಮುಂತಾದವು. ಗೋನವಾಟ್ಲದಲ್ಲಿ ಶ್ರೀ ವೇಣುಗೋಪಾಲಸ್ವಾಮಿಯ ಜಾತ್ರೆ ಪ್ರತಿವರ್ಷ ದವನದ ಹುಣ್ಣಿಮೆಯಲ್ಲಿ ನಡೆಯುತ್ತದೆ. ಗುಂತಗೋಳ ಸಂಸ್ಥಾನದ ರಾಜರು ಹೋದಾಗಲೇ ತೇರು ಎಳೆಯುವ ಸಂಪ್ರದಾಯವಿದೆ. ಸುಮಾರು ೪೦೦ ವರ್ಷಗಳಿಂದ ಈ ಜಾತ್ರೆ ನಡೆಯುತ್ತಾ ಬಂದಿದೆ. ಇಂದಿಗೂ ಈ ಮನೆತನದರು ಈ ಜಾತ್ರೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.



ಗುಂತಗೋಳ ಸಂಸ್ಥಾನಿಕರ ರಾಜಗುರುಗಳು, ದೇವರ ಭೂಪೂರದ ಶ್ರೀ ಗಜದಂಡ ಮಹಾಸ್ವಾಮಿಗಳು, ಅಲ್ಲದೇ ಶ್ರೀ ಚಿತ್ತರಗಿ ಇಲಕಲ್ ಮಹಾಂತ ಸ್ವಾಮಿಗಳ ಮಠ, ಶ್ರೀ ಪಂಚಾಕ್ಷರಿ ಮಠ, ಶ್ರೀ ಹಿರೇಮಠ, ಶ್ರೀ ಕಿದ್‌ಮತಿ ಮಠಗಳಿಗೆ ಭಕ್ತರಾಗಿದ್ದರು. ಈ ಮಠಗಳೆಲ್ಲ ಒಂದೊಂದು ಜನಪರ ಕಾರ್ಯವನ್ನು ಮಾಡುತ್ತಿದ್ದವು. ಶ್ರೀ ಕಿದ್‌ಮತಿ ಪ್ರಸಾದದ ಮಠವಾಗಿತ್ತು. ಶ್ರೀ ಗಜದಂಡ ಸ್ವಾಮಿಗಳ ಮಠ ದೇವರಭೂಪೂರ ರಾಜರ ಗುರುಮಠವಾಗಿತ್ತು. ಇವುಗಳಿಗೆಲ್ಲಾ ರಾಜರು ಇನಾಮು (ಭೂಮಿ)ಗಳನ್ನು ನೀಡಿದ್ದಾರೆ. ಅಮರೇಶ್ವರ ದೇವಸ್ಥಾನಕ್ಕೆ ೫೦೦ ಎಕರೆ ಭೂಮಿಯನ್ನು ನೀಡಿದ್ದಾರೆ. ಈಗ ಗುಂತಗೋಳದಲ್ಲಿ ಮಠಪತಿಯವರ ಮನೆತನದವರು ಈ ವಂಶಜರ ಪೂಜೆಯ ಪುನಸ್ಕಾರಗಳನ್ನೆಲ್ಲಾ ನೋಡಿಕೊಂಡು ಹೋಗುತ್ತಿದ್ದಾರೆ. ಅಂದು ಇವರು ಸಂಸ್ಥಾನದಲ್ಲಿ ದೇವರ ಪೂಜೆ ಮತ್ತು ದೇವಿಯ ಪೂಜೆಯನ್ನು ಮಾಡುತ್ತಾ, ಸಂಸ್ಥಾನದ ಎಲ್ಲಾ ಸಮಾರಂಭಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ರಾಜಾ ರಾಯಪ್ಪ ನಾಯಕರು ಆಧ್ಯಾತ್ಮಿಕ ಒಲವಿನ ಪುರುಷರಾಗಿದ್ದರು. ದರಬಾರಿನಲ್ಲಿ ಪ್ರತಿವರ್ಷ ನವರಾತ್ರಿಯ

ಸಮಯದಲ್ಲಿ ದೇವಿ ಪುರಾಣವನ್ನು ಸ್ವತಃ ತಾವೇ ಪಾರಾಯಣ ಮಾಡುತ್ತಿದ್ದರು. ಅದು ಇಂದಿಗೂ ಮುಂದುವರೆದಿದೆ. ಹಾಗೆಯೇ ರಾಜಾನರಸಿಂಹ ನಾಯಕರು ಕಲಾಪ್ರೇಮಿಗಳಾಗಿದ್ದು, ನಾಟಕ ಕಂಪನಿಯೊಂದನ್ನು ತಮ್ಮ ಸಂಸ್ಥಾನದಲ್ಲಿ ಹುಟ್ಟುಹಾಕಿ ಕಲಾಕಾರರಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದ್ದರು. ಅನೇಕ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿದ ಇವರು ಅತ್ಯುತ್ತಮ ಸಂಗೀತಗಾರರಿದ್ದರು. ಇವರ ಆಸ್ಥಾನದಲ್ಲಿ ಶ್ರೀ ಬಸವಣ್ಣ ಜಾಮಾರ ರೆಂಬ ಪ್ರಸಿದ್ಧ ರಂಗಕಲಾವಿದರಿದ್ದರು. ಈ ಮನೆತನದವರು ತಿರುಪತಿ, ಶ್ರೀಶೈಲ, ಮಧುರೆ, ಮೀನಾಕ್ಷಿ, ಕನ್ಯಾಕುಮಾರಿ, ರಾಮೇಶ್ವರಕ್ಕೆ ಪರಿವಾರ ಸಮೇತ ತೀರ್ಥಯಾತ್ರೆಗೆ ಹೋಗುತ್ತಿದ್ದರು. ತೀರ್ಥಯಾತ್ರೆಗೆ ಹೋಗಿ ಬಂದ ಮೇಲೆ ಆ ದೇವರನ್ನು ಮನೆಗೆ ಕರೆದುಕೊಂಡು ಬಂದಿದ್ದೇವೆಂಬ ಭಾವನೆ ಇರುತ್ತಿತ್ತು. ಹನ್ನೊಂದನೆಯ ದಿನಕ್ಕೆ ಆ ದೇವರನ್ನು ಕಳುಹಿಸಿಕೊಡುವ ಸಂಪ್ರದಾಯವಿತ್ತು.



ಆಗ ಊಟೋಪಚಾರ ಮತ್ತು ಪೂಜೆಯ ಕ್ರಮ ಜರುಗುತ್ತಿತ್ತು. ಅದನ್ನು ಈಗಲೂ ಮುಂದುವರೆಸುತ್ತಾ ಬಂದಿದ್ದಾರೆ.

ಇವರು ಅಮರೇಶ್ವರ ದೇವಾಲಯ, ಗೋನವಾಟ್ಲದ ಗೋಪಾಲಸ್ವಾಮಿಯ ದೇವಾಲಯ, ಮಾಳಗುಂಡಮ್ಮ ದೇವಾಲಯ, ವೀರಯೋಧನ ದೇವಾಲಯ, ಕಾಳಭೈರವನಾಯಕನ ಗಚ್ಚಿನಕಟ್ಟೆಗಳನ್ನು ಕಟ್ಟಿಸಿದ್ದಾರೆ. ತಿಂಥಣಿ ಮೌನೇಶ್ವರರ ಪ್ರಥಮ ಶಿಷ್ಯರಾದ ಶರಣ ಗಂಗಪ್ಪಯ್ಯನವರ ಜನ್ಮಸ್ಥಳ ಜಲದುರ್ಗ, ಅವರ ನೆನಪಿಗಾಗಿ ಅಲ್ಲಿಯೂ ಗಂಗಪ್ಪಯ್ಯನವರ ಗುಡಿ ಇದೆ. ಕೆಲವು ದಿನಗಳಾದ ನಂತರ ಈ ಸಂಸ್ಥಾನದಲ್ಲಿ ಬಂದು ತಂಗಿದ್ದರು. ಹೀಗಾಗಿ ಇವರ ಹೆಸರಿನಲ್ಲಿ ಗಂಗಪ್ಪಯ್ಯನ ಗುಡಿಯನ್ನು ಕಟ್ಟಿಸಿದ್ದಾರೆ. ಇಂದಿಗೂ ಈ ಮನೆತನದವರು ಗಂಗಪ್ಪಯ್ಯನಿಗೆ ಅಭಿಷೇಕ ಮಾಡುವ ಪದ್ಧತಿ ಇದೆ. ಗಂಗಪ್ಪಯ್ಯನ ಹಳೆಯ ಗುಡಿ ಊರ ಹೊರಗಿನ ದಿಬ್ಬದ ಮೇಲೆ ಇದೆ. ಈ ದಿಬ್ಬವು ಕಾವಲುಗಾರನ ತಾಣವಾಗಿತ್ತಂತೆ. ಈ ದಿಬ್ಬದ ಮೇಲೆ ನಿಂತು ಸುತ್ತಲೂ ವೀಕ್ಷಿಸಿದರೆ ವೈರಿಗಳ ಬರುವಿಕೆ ಕಾಣುತಿತ್ತು. ಇದನ್ನು ಮಹಾನವಮಿ ದಿಬ್ಬವೆಂತಲೂ ಕರೆಯುವರು. ಕಾರಣ ಮಾಹಾನವಮಿ ಹಬ್ಬವನ್ನು ಗಂಗಪ್ಪಯ್ಯನ ಸಮ್ಮುಖದಲ್ಲಿ ಆ ದಿಬ್ಬದ ಮೇಲೆ ಸಮಾರಂಭವಾಗಿ ನಡೆಸುತ್ತಿದ್ದರು.



ಈ ಸಂಸ್ಥಾನದ ಕಾವಲುಗಾರನ ಹೆಂಡತಿ ಮಾಳ ಗುಂಡಮ್ಮಳೆಂಬ ಮಹಿಳೆ ಸಂಸ್ಥಾನದ ರಕ್ಷಣೆಗಾಗಿ ಹೋರಾಡಿ ಮಡಿದ ಕತೆ ಜನಜನಿತವಾಗಿದೆ. ಈಕೆಯನ್ನೂ ಚಿತ್ರದುರ್ಗದ ಒನಕೆ ಓಬವ್ವನಿಗೆ ಹೋಲಿಸುತ್ತಾರೆ. ಒಂದು ಸಲ ೨೦ ಜನ ವೈರಿ ಸೈನಿಕರು (ಆದಿಲ್‌ಶಾಹಿಗಳೋ? ಸುರಪುರದ ನಾಯಕರೋ ?) ಗುಂತಗೋಳಕ್ಕೆ ರಾತ್ರೋರಾತ್ರಿ ಮುತ್ತಿಗೆ ಹಾಕಲು ಪ್ರಯತ್ನಿಸಿ, ಕಾವಲುಗಾರನನ್ನು ಕೊಲೆಗೈದರು. ಮಡದಿ ಮಾಳಗುಂಡಮ್ಮ ಸುದ್ದಿ ತಿಳಿದು ವೀರಾವೇಶದಿಂದ ಕೈಯ್ಯಲ್ಲಿ ಖಡ್ಗ ಹಿಡಿದು ಅವರನ್ನು ಕೊಚ್ಚಿಹಾಕಿ ಮಡಿದಳು. ಹೀಗಾಗಿ ಊರನ್ನು ರಕ್ಷಿಸಿದ ಈಕೆಯ ಹೆಸರಿನಲ್ಲಿ ಜನ ದೇವಾಲಯವನ್ನು ಕಟ್ಟಿ ಪೂಜಿಸುತ್ತಿದ್ದಾರೆ.

ಲಿಂಗಸುಗೂರು ತಾಲುಕಿನಲ್ಲಿಯೇ ಗುಂತಗೋಳ ಭಾಗದಲ್ಲಿ ಮಾತ್ರ ನಮಗೆ ಅತೀ ಹೆಚ್ಚು ವೀರಗಲ್ಲುಗಳು ಸಿಗುತ್ತವೆ. ಇವುಗಳಿಗೆ ಅಗಸೀಕಟ್ಟೆಯ ವೀರಗಲ್ಲುಗಳು, ತಿಮ್ಮಣ್ಣನ ಹೊಲದ ವೀರಗಲ್ಲುಗಳು, ಗೋನವಾಟ್ಲದ ವೀರಗಲ್ಲುಗಳೆಂದೇ ಜನ ಸಾಮಾನ್ಯರು ಕರೆಯುತ್ತಾರೆ. ಬಹುಶಃ ಇವುಗಳು ಈ ಭಾಗದ ವೀರಬೇಡರ ಸೈನಿಕರು ಹೋರಾಟದಲ್ಲಿ ಮಡಿದ ಸವಿನೆನಪಿಗಾಗಿ ಕೆತ್ತಿಸಿರಬಹುದಾಗಿದೆ. ಇವೆಲ್ಲವುಗಳ ಕುರಿತಾಗಿ ಇನ್ನೂ ಸಂಶೋಧನೆ ಯಾಗಬೇಕಾಗಿದೆ.

ಗುಂತಗೋಳಕ್ಕೆ ಒಂದುಸುತ್ತಿನ ಸುಸಜ್ಜಿತ ಕೋಟೆ ಇದೆ. ಇವರ ಕಾಲದ ಅಮರೇಶ್ವರ ಬಾವಿ, ದರಬಾರ ಬಾವಿ ಊರಿನಿಂದ ೨ ಕಿ.ಮೀ. ದೂರದಲ್ಲಿರುವ 'ರಾಜರ ಕೆರೆ' ನೀರಾವರಿಯ ಅನುಕೂಲಕ್ಕಾಗಿ ಬಳಸುತ್ತಿದ್ದರು. ರಾಜರ ಕೆರೆಯನ್ನು ಗಿರಿಸೀಮೆಯ ಕೆರೆ ಎಂದು ಕರೆಯುತ್ತಿದ್ದರು. ಇದು ಈಗ ರಾಜಾನರಸಿಂಹ ನಾಯಕರ ನಗರದಲ್ಲಿದೆ.

ಈ ಸಂಸ್ಥಾನಕರು ಸುರಪುರ, ದೇವದುರ್ಗ, ಗುಡಗುಂಟಿ, ಕನಕಗಿರಿ, ಚಿತ್ರದುರ್ಗ ಗುಡೇಕೋಟೆ ಮನೆತನಗಳೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿರುವರು ಹಾಗೂ ಕೆಲವು ಸಲ ಸುರಪುರ ಸಂಸ್ಥಾನ, ಗುಡಗುಂಟಿ ಸಂಸ್ಥಾನ, ದೇವದುರ್ಗ ಸಂಸ್ಥಾನಿಕರ ವಿರುದ್ಧ ಹೋರಾಡಿದ್ದುಂಟು.

ಇಂದಿಗೂ ಈ ಸಂಸ್ಥಾನದಲ್ಲಿ ಮಹಾನವಮಿ, ದೀಪಾವಳಿ, ಯುಗಾದಿ, ಮೊಹರಂ, ಶಿವರಾತ್ರಿ, ಮುಂತಾದ ಹಬ್ಬ-ಹರಿದಿನಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಮನೆತನದವರು ಇದರಲ್ಲಿ ಭಾಗವಹಿಸಿ ಸಾರ್ವಜನಿಕರಿಗಾಗಿ ಸ್ಪರ್ಧೆಗಳನ್ನು ಏರ್ಪಡಿಸಿ, ಬಹುಮಾನ ವಿತರಿಸುವ ಸತ್‌ಸಂಪ್ರದಾಯ ಇಂದಿಗೂ ಮುಂದುವರೆದಿದೆ.

ಇಂದು ಈ ಮನೆತನ ತನ್ನ ರಾಜಕೀಯ ಪರಂಪರೆಯನ್ನು ಇನ್ನೊಂದು ನಿಟ್ಟಿನಲ್ಲಿ ಮುಂದುವರೆಸಿಕೊಂಡು ನಡೆದಿದೆ. ಶ್ರೀ ರಾಜಾ ಅಮರೇಶ್ವರ ನಾಯಕರು, ಕರ್ನಾಟಕ ಸರ್ಕಾರದ ಕಾರಾಗೃಹ, ಗೃಹರಕ್ಷಕದಳ ಮತ್ತು ಕಾನೂನುಮಾಪನ ಶಾಸ್ತ್ರದ ಸಂಪುಟ ದರ್ಜೆಯ ಸಚಿವರಾಗಿದ್ದರು. ಶ್ರೀ ರಾಜಾರಾಯಪ್ಪ ನಾಯಕರು ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಜನಸೇವೆಯಲ್ಲಿ ನಿರತರಾಗಿದ್ದಾರೆ. ಶ್ರೀ ರಾಜಾ ಶ್ರೀನಿವಾಸ ನಾಯಕರು ಗುಂತಗೋಳ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ, ಜನರ ಸೇವೆ ಮಾಡುತ್ತಿದ್ದಾರೆ.

ಈ ರೀತಿ ತನ್ನದೇ ಆದ ಚರಿತ್ರೆಯನ್ನು ಗರ್ಭೀಕರಿಸಿ ಕೊಂಡಿರುವ ಈ ಸಂಸ್ಥಾನ ಇತಿಹಾಸದ ಪುಟವನ್ನು ಸೇರಿರದಿರುವುದು ಶೋಚನೀಯ ಸಂಗತಿಯಾಗಿದೆ.

* (ಈ ಪ್ರಬಂಧವನ್ನು ತಯಾರಿಸಲು ಕ್ಷೇತ್ರಕಾರ್ಯ ಕೈಗೊಂಡಾಗ ಮಾಹಿತಿ ಒದಗಿಸಿದ ಡಾ।। ಅಮರೇಶ ಕುಂಬಾರ, ಶ್ರೀ ಬಸಣ್ಣ ಜಾವೂರ, ಶ್ರೀ ಬಸವರಾಜಪ್ಪ ಜಾಗಟಕಲ್, ಹಾಗೂ ಈ ಪ್ರಬಂಧವನ್ನು ತಿದ್ದಿತೀಡಿ, ಬಾದಾಮಿ ಕರ್ನಾಟಕ ಇತಿಹಾಸ ಅಕಾದೆಮಿಯ ಸಮ್ಮೇಳನದಲ್ಲಿ ಮಂಡಿಸುವಂತೆ ಪ್ರೋತ್ಸಾಹಿಸಿ, ಮಾರ್ಗದರ್ಶನ ನೀಡಿದ ಗುರುಗಳಾದ ಪ್ರೊ. ಲಕ್ಷ್ಮಣ್ ತೆಲಗಾವಿಯವರಿಗೆ ಕೃತಜ್ಞತೆಗಳನ್ನರ್ಪಿಸುವೆ.)

ಡಾ. ವಿರೂಪಾಕ್ಷಿ ಪೂಜಾರಹಳ್ಳಿ*

ಕರೆ ಪೂಜಾರಹಳ್ಳಿ, ಕಟ್ಟಿಂಗನಹಳ್ಳಿ-ಚಾರಿತ್ರಿಕ ಅಧ್ಯಯನ

ಪ್ರಸ್ತುತ ಪ್ರಬಂಧದಲ್ಲಿ ಕರೆಪೂಜಾರಹಳ್ಳಿ (ನಲು) ಮತ್ತು ಕಟ್ಟಿಂಗನಹಳ್ಳಿ ಎಂಬ ಹಾಳೂರು ಗ್ರಾಮಗಳು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಖಾನಹೊಸಹಳ್ಳಿ ಹೋಬಳಿ ವ್ಯಾಪ್ತಿಗೆ ಸೇರಿವೆ. ಈ ಎರಡು ಗ್ರಾಮಗಳ ಪೂರ್ವಕ್ಕೆ ಹೂಡೇಂ(ವು), ತಾಯಕನಹಳ್ಳಿ; ಈಶಾನ್ಯಕ್ಕೆ ತಮ್ಮಯ್ಯನಗುಡ್ಡ ಮತ್ತು ಕುಮತಿ; ಉತ್ತರಕ್ಕೆ ಜುಮ್ಮೋಬನಹಳ್ಳಿ; ಪಶ್ಚಿಮಕ್ಕೆ ಲೋಕಿಕೆರೆ; ದಕ್ಷಿಣಕ್ಕೆ ಕಲ್ಲಹಳ್ಳಿ, ಮಾಳೀನಹಳ್ಳಿ ಮತ್ತು ತಿಪ್ಪೇಹಳ್ಳಿ; ಆಗ್ನೇಯಕ್ಕೆ ಹೊಸೂರು ಮತ್ತು ಕಾತ್ರಿಕೇಯ್ಯನಹಟ್ಟಿ ಗ್ರಾಮಗಳಿವೆ. ಚಿನ್ನಹಗರಿ ನದಿಗೆ ಸಮೀಪವಿರುವ ಪೂಜಾರಹಳ್ಳಿ ಗ್ರಾಮಕ್ಕೆ ಈ ನಿವೇಶನಗಳು ಈಶಾನ್ಯ ಮತ್ತು ವಾಯುವ್ಯ ದಿಕ್ಕಿಗಿವೆ. ಒಂದು ಕಾಲದಲ್ಲಿ ಜನಜೀವನ ನಡೆಸಿದ್ದು, ಕಾಲಾಂತರದಲ್ಲಿ ಇಲ್ಲಿಂದ ಜನರು ವಲಸೆ ಹೋದಾಗ ಇವು ಬೇಚರಾಕು ಗ್ರಾಮಗಳಾಗಿವೆ. ಈ ಪರಿಸರದಲ್ಲಿ ಶಿಲಾಯುಗದ ನಿವೇಶನ ಮತ್ತು ಚಾರಿತ್ರಿಕ ಕಾಲಘಟ್ಟಗಳ ಅವಶೇಷಗಳು ಕಂಡುಬರುತ್ತವೆ.

ಪೂಜಾರಹಳ್ಳಿ ಗ್ರಾಮವು (ಪರಿಸರದಲ್ಲಿ) ಕೆ. ಬಿ. ಹಟ್ಟಿ ಮತ್ತು ತಾಂಡಹಟ್ಟಿಗಳಿಂದ ಕೂಡಿದ ಗ್ರಾಮಪಂಚಾಯ್ತಿ ಕೇಂದ್ರ ವಾಗಿದೆ. ಇಲ್ಲಿ ಹಟ್ಟಿಗಳು ಸೇರಿ ಒಂದೇ ಹೆಸರಿನ ಗ್ರಾಮವೆಂದು ಕರೆದರೂ ಆಯಾ ಹಟ್ಟಿಗಳಿಗೂ ಪ್ರತ್ಯೇಕ ಹೆಸರುಗಳಿರುವುದು ವಿಶೇಷ. ಇವಲ್ಲದೆ. ಚನ್ನಪಟ್ಟಣವೆಂಬ ಮಧ್ಯಕಾಲೀನ ಪಟ್ಟಣದ ನಿವೇಶನ ಪಾಮುಡ್ಡಾರು ಬೆಡಗಿಗೆ ಸೇರಿದ ವೀರಗಲ್ಲು, ದೇವಾಲಯಗಳು ಇಲ್ಲಿ ಕಂಡುಬರುತ್ತವೆ. 'ರಕ್ಕರಾಯಿ' ಎಂಬ ಹೆಸರಿನ ಚಿಕ್ಕ ದಿನ್ನೆ-ಗುಡ್ಡ ಪೂಜಾರಹಳ್ಳಿಯ ದೊಡ್ಡ ಅರಣ್ಯದಲ್ಲಿದೆ. ಇದಕ್ಕೆ ಸ್ಥಳೀಯರು ರಕ್ಕರಾಯಿ ಎಂದು, ರಾಕ್ಷಸಿಗುಡ್ಡವೆಂದು ಕರೆಯುವರು. ಇದರ ಇಕ್ಕೆಲಗಳಲ್ಲಿ ಕೌಳಿ, ಕುರುಚಲು, ಪಾಪಸು, ದೊಂಬಗಳ್ಳಿ, ಕಾರೆ, ತುಗ್ಲಿ, ಆಸೀನ, ಬೇವಿನ, ಗಿಡ-ಮರಗಳಿವೆ. ನೋಟಕ್ಕೆ ಇದು ಪೊಟರೆಯಂತೆ ಕಂಡರೂ ಇಲ್ಲಿನ ಹೆಬ್ಬಂಡೆಗಳ ಆಸುಪಾಸಿನಲ್ಲಿ ಪ್ರಾಚೀನ ಮಾನವನು ಜೀವನ ನಡೆಸಿದ ಶಕ್ಯತೆಗಳಿವೆ.

ಇದೇ ಪರಿಸರದಲ್ಲಿ 'ನೇಂಬಂಡೆ' ಎಂಬ ಕಿರಿದಾದ ಏಕಶಿಲಾ (ಕಲ್ಲಿನ ಗುಡ್ಡ)ಬಂಡೆ ಇದೆ. ಇದು 'ರಕ್ಕರಾಯಿ'ಗೆ ಸಮೀಪದಲ್ಲಿದೆ. ದಕ್ಷಿಣಕ್ಕೆ ಈಚಲುಹಳ್ಳ, ಮಾರಮ್ಮನಹಳ್ಳಗಳಿವೆ. ಇಲ್ಲಿಯೂ ಸಹಾ ದೊಡ್ಡ ದೊಡ್ಡ ಪೊದೆಗಳು ಕಲ್ಲಿನ ರಾಶಿಗಳನ್ನು ಕಾಣಬಹುದು. ನೇಂಬಂಡೆಯ ಕೆಳಗಡೆ ಕಿರಿದಾದ ಗವಿಯಿದೆ. ಗವಿಯ ಬಟ್ಟಬಯಲಿನಲ್ಲಿ, ಎತ್ತರವಾದ ಪ್ರದೇಶದ ಕಲ್ಲಿನ ಬದಿಯಲ್ಲಿರುವುದರಿಂದ ಮಳೆ-ಗಾಳಿಗೆ ತುತ್ತಾಗಿ ಇಲ್ಲಿರುವ ರೇಖಾಚಿತ್ರಗಳು ಮಾಸಿ ಹೋಗಿವೆ. ಗವಿಯ ಇಕ್ಕೆಲಗಳಲ್ಲಿ ಶಿಲಾಯುಧಗಳು, ಮಡಕೆ ಚೂರುಗಳು ಕಂಡುಬರುತ್ತವೆ. ಹಳ್ಳದ ಪಕ್ಕದಲ್ಲಿ ಗವಿ ಇರುವುದರಿಂದ ಹಿಂದೆ ಮಾನವನ ಆವಾಸ ಸ್ಥಾನವಾಗಿದ್ದು, ಇಂದು ಕಾಡು ಪ್ರಾಣಿಗಳ ನೆಲಸುತಾಣ ವಾಗಿರುವುದುಂಟು. ಈಚಲುಹಳ್ಳ, ನೇಂಬಂಡೆ, ರಕ್ಕಕಾಯಿ, ಕೊಟದಗುಡ್ಡ ಮಾರಮ್ಮನಕಟ್ಟೆ, ಕತ್ತಿಗೆ ಮಲ್ಡಿ(ಮೊರಡಿ)ಗಳ ಆಸುಪಾಸಿನಲ್ಲಿ 'ಕರೆಪೂಜಾರಹಳ್ಳಿ' ಎಂಬ ಹಾಳೂರು ಕಂಡುಬರುತ್ತದೆ.

ಕರೆಪೂಜಾರಹಳ್ಳಿ (ಪಾಡೂರು > ಹಾಳೂರು)

ಹೆಸರೇ ಸೂಚಿಸುವಂತೆ ಇದು ಹಾಳೂರು. ತೆಲುಗಿನಲ್ಲಿ ಇದಕ್ಕೆ 'ನಲಪೂಜಾರ್ಲುಪೆಲ್ಲಿ' ಎಂದು ಮ್ಯಾಸಬೇಡರ ಬುಡಕಟ್ಟು ಜನ ತಮ್ಮ ವಾಸದ ನೆಲೆಯ ಬಗ್ಗೆ ಹೇಳುತ್ತಾರೆ. ಹಾಳೂರು ಎಂದು ಹೇಳಿದರೂ ಅದು ಒಂದು ಶತಮಾನದಿಂದೀಚೆಗೆ ಎಂದು ಹೇಳಬಹುದು. ಈಗಿರುವ ಪೂಜಾರಹಳ್ಳಿ ಎಂಬ ಗ್ರಾಮದ ಮೊದಲ ಹೆಸರು ಮತ್ತು ವಾಸದ ನೆಲೆ ಇದಾಗಿತ್ತು. 'ಹಾಳೂರು' ಎಂದು ಕರೆಯುವ ಕರೆಪೂಜಾರಳ್ಳಿ ಅಕ್ಕಪಕ್ಕದಲ್ಲಿ ರಕ್ಕರಾಯಿ, ನೇಂಬಂಡೆ, ಕತ್ತೆ ಮೊರಡಿ ಮತ್ತು ಕೊಟದಗುಡ್ಡದ ಮಾರಮ್ಮನ ನೆಲೆಗಳು ಅಡವಿಯಲ್ಲಿದ್ದು, ಈ ನಿವೇಶನಕ್ಕೆ ಸಮೀಪದಲ್ಲಿವೆ. ಇಲ್ಲಿರುವ ಸ.ನಂ. ೧೪ ಮತ್ತು ೧೬ರಲ್ಲಿ ಈ ಪ್ರಾಚೀನ ನಿವೇಶನವಿದೆ. ತೋಟದ ಪೆದ್ದ ಓಬಯ್ಯ, ತೋಟದ ಬೋರಯ್ಯನ ಅಣ್ಣ-ತಮ್ಮಂದಿರ ಹೊಲದಲ್ಲಿದೆ ಈ ಹಾಳೂರು. ಕೋಟೆ-ಕಂದಕ,



ಬುರುಜು ಇತರ ಭಗ್ನಾವಶೇಷಗಳು ಪ್ರಾಚೀನತೆಯನ್ನು ಸಾಕ್ಷೀಕರಿಸುತ್ತವೆ. ಮನೆ, ಬಾವಿ, ಬೀದಿ ಇತರ ಲಕ್ಷಣಗಳಿವೆ ಕೋಟೆ

* ಅಧ್ಯಾಪಕ (ಹಿ.ಶ್ರೇ), ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೨೬.

ಪಕ್ಕದಲ್ಲಿ. ಕ್ರಿ.ಶ. ೧೯೫೪ರ ಪೂರ್ವದಲ್ಲಿ ಇದು ಅರಣ್ಯ ಇಲಾಖೆಗೆ ಸೇರಿದರೂ ಗ್ರಾಮದ ನಿವೇಶನ(ಅನಾಧೀನ ಶಿವ ಜಮೀನು)ವೆಂದೇ ಕರೆಯುತ್ತಿದ್ದರು. ಅನಂತರ ಈ ಜಮೀನನ್ನು ತೋಟದ ಪೆದ್ದೊಬವ್ವ, ಬೋರಯ್ಯ ಅಣ್ಣ-ತಮ್ಮಂದಿರಿಗೆ ಸರ್ಕಾರ ಪಟ್ಟಾ ನೀಡಿತು. ಕೋಟೆ, ಅವಶೇಷಗಳಿರುವ ನಿವೇಶವನ್ನು ಹೊರತುಪಡಿಸಿ ಉಳಿದ ಎಲ್ಲ ಪ್ರದೇಶವನ್ನು ಉಳುಮೆ ಮಾಡುತ್ತಾರೆ. ಸು. ೧೬ ಎಕರೆ ಜಮೀನಿದ್ದರೂ, ಕೆಲವು ಭಾಗಗಳಲ್ಲಷ್ಟೇ ಜನವಸತಿಯಿದ್ದಂತಿದೆ. ಇಲ್ಲಿರುವ ಕೋಟೆ- ಬುರುಜು ಕಲ್ಲು-ಮಣ್ಣಿನಿಂದ ನಿರ್ಮಾಣಗೊಂಡಿದೆ. ಒಬ್ಬ ಮನುಷ್ಯನ ಆಳಕ್ಕೂ ಹೆಚ್ಚು ಕಂದಕವಿದ್ದು, ನಡುವೆ ಎತ್ತರವಾದ ಬುರುಜು ಇದೆ. ಇದನ್ನೇ ಕೋಟೆ ಎಂದು ಕರೆಯುತ್ತಾರೆ. ಇಲ್ಲಿರುವ ಅವಶೇಷಗಳ ಪೈಕಿ ಮನೆಗಳ ಅಂತರ ಸು. ೫ ಅಡಿ. ೯x೧೧x೭ ರಂತೆ ಉದ್ದ, ಅಗಲ ಮತ್ತು ಎತ್ತರವನ್ನು ಇಟ್ಟುಕೊಳ್ಳಲಾಗಿದೆ. ಎರಡು ಬೀದಿಗಳಿದ್ದು, ಪ್ರತ್ಯೇಕ ರಸ್ತೆಗಳು ಎರಡು ದಿಕ್ಕಿನಲ್ಲಿವೆ. ವೃತ್ತಾಕಾರದ ನೀರಿನ ಬಾವಿ, ಚಿಲುಮೆ ಇದರ ಪಕ್ಕದಲ್ಲಿವೆ.

ಕ್ರಿ.ಶ. (೧೫೫೦-೧೬೦೦) ರ ಸುಮಾರಿಗೆ ನಾಯಕ ಜನಾಂಗದ ಜಗದ್ಗುರು ಮತ್ತು ಪಶುಪಾಲಕ ಸಮುದಾಯಕ್ಕೆ ದೊರೆಯಾಗಿದ್ದ ಯರಮಂಚಿನಾಯಕ ತನ್ನ ಕಾಪು-ಕಂಪಳದೊಡನೆ ಇಲ್ಲಿ ವಾಸವ್ಯ ಹೊಡಿದ್ದನೆಂದು ತಿಳಿದುಬರುತ್ತದೆ. ಗುಡೇಕೋಟೆ, ಜರಿಮಲೆ ಪಾಳೆಯಗಾರರ ಆಳ್ವಿಕೆಯ ಕಾಲಕ್ಕೆ ಈ ಪ್ರದೇಶ ಅವರಿಗೆ ಒಳಪಟ್ಟಿದ್ದಿತು. ಹಂಪೆ, ಆನೆಗೊಂದಿ, ಗೆದ್ದಲುಗಟ್ಟೆ, ಜರಿಮಲೆ ಮೊದಲಾದ ಚಾರಿತ್ರಿಕ ಮತ್ತು ಧಾರ್ಮಿಕ ಸ್ಥಳಗಳಿಗೆ ನಡೆದುಕೊಳ್ಳುವ ಜನರು ಇಲ್ಲಿದ್ದರು. ಕ್ರಮೇಣ ಈ ಗ್ರಾಮ ಹಾಳಾಯಿತು. ಇದಕ್ಕೆ ಕಾರಣಗಳು ನಿಖರವಾಗಿ ತಿಳಿದುಬಂದಿಲ್ಲ. ಆದರೂ ಸ್ವಾಭಾವಿಕವಾಗಿ ಹೇಳುವುದಾದರೆ, ಪ್ರಕೃತಿ ವಿಕೋಪವೆಂದು (ಭೂಕಂಪ ಇನ್‌ಫ್ಲೂಯೆಂಜಾ, ಕಾಲರಾ ಇತ್ಯಾದಿ) ಅತಿವೃಷ್ಟಿ- ಅನಾವೃಷ್ಟಿಗಳು ಕಾರಣವೆಂದು ನಂಬಲಾಗಿತ್ತು. ಬ್ರಿಟಿಷರ (ಮದ್ರಾಸ್ ಅಧಿಪತ್ಯ) ಅವಧಿಯಲ್ಲಿ ಅಂದರೆ ಕ್ರಿ.ಶ. ೧೮೯೯ರ ಸುಮಾರಿಗೆ ಈ ಪ್ರದೇಶದಲ್ಲಿ ವ್ಯಾಪಕವಾಗಿ ಪ್ಲೇಗ್ ರೋಗ ಹಬ್ಬಿತು. ಇದರಿಂದ ಸಹಸ್ರಾರು ಜನ ತೀರಿದರು. ಈ ಕರೆಪೂಜಾರಹಳ್ಳಿ ಗ್ರಾಮದಲ್ಲಿ ಕೆಲವರು ತೀರಿಕೊಂಡಿದ್ದರಿಂದ, ತಮ್ಮ ವಾಸದ ನೆಲೆಗಳನ್ನು ಬದಲಿಸಿ ೩ ಕಿ.ಮೀ. ದೂರದಲ್ಲಿ ಹಟ್ಟಿಯನ್ನು ನಿರ್ಮಿಸಿಕೊಂಡರು. ಅಲ್ಲೊಂದು ಕೆರೆಯನ್ನು ಕಟ್ಟಿ, ಆಲದಮರದ ಕೆಳಗೆ ಕುರಿ-ದನಗಳನ್ನು ತರುಬಿ ಜೀವನ ಸಾಗಿಸಿದರು. ಕ್ರಮೇಣ ಅಲ್ಲಿ ಕನ್ನಿಬೋರಯ್ಯನ ಹಟ್ಟಿ, ಪೂಜಾರಹಳ್ಳಿ ಎಂಬ ನೂತನ ಗ್ರಾಮಗಳು ಉದಯವಾದವು. ಈಗ್ಗೆ ಸು. ೧೦೫ ವರ್ಷಗಳ ಇತಿಹಾಸ ಈ ಗ್ರಾಮಗಳಿಗಿದೆ. ಇವೆರಡು ಗ್ರಾಮಗಳಲ್ಲಿ ವಾಸಿಸಿರುವ ಕುಟುಂಬಗಳ ಸಂಖ್ಯೆ ಒಂದುನೂರ ಐವತ್ತು ಮತ್ತು ಎರಡುನೂರು. ಇವರು ಹಾಳೂರಿ ನಿಂದಲೇ ಬಂದಿರುತ್ತೇವೆಂದು ತಿಳಿಸುತ್ತಾರೆ. ಇಂದಿಗೂ ಸುಸ್ಥಿತಿಯಲ್ಲಿ ರುವ ಕೋಟೆ, ಕಂದಕಗಳು ಪ್ರಾಚೀನ ಚರಿತ್ರೆಯನ್ನು ನೆನಪಿಸುತ್ತವೆ. ಕರೆಪೂಜಾರಹಳ್ಳಿ (ಕಾಮಗೇತ ಊರು ದೇವರ ಪೂಜಾರಿಗಳು ನೆಲಸಿದ ಸ್ಥಳ) ಇಂದಿನ ಪೂಜಾರಹಳ್ಳಿಯಾಗಿದೆ.

ಕಟ್ಟಿಂಗನ ಹಳ್ಳಿ


ಕೂಡ್ಲಿಗಿ ತಾ|| ಪೂಜಾರಹಳ್ಳಿ ಗ್ರಾಮದ ವ್ಯಾಪ್ತಿಗೆ (ವಾಯುವ್ಯ ದಿಕ್ಕಿಗೆ) ಈ ಹಾಳೂರಿನ ನಿವೇಶನವಿದೆ. 'ಕಟ್ಟಿಂಗ' (ಕಟ್ಟಿಗ)ನೆಂಬ (ಜಟ್ಟಿಗ-ಜಟಿಂಗ) ಮೂಲಕ ಈ ಹೆಸರು ಬಂದಂತಿದೆ. ಶಾಸನಗಳಲ್ಲಿ ಕೆಲ ಜನಾಂಗ ಬಗ್ಗೆ ಉಲ್ಲೇಖವಿರುವುದನ್ನು ಡಾ. ಎಂ. ಬಿ. ನೇಗಿನಹಾಳರು ಪತ್ತೆ ಹಚ್ಚಿದ್ದಾರೆ. ಅದೇ ಪ್ರಭೇದಕ್ಕೆ ಸೇರಿದ ಕಟ್ಟಿಗರು ತಾವು ನೆಲೆಸಿರುವ ಸ್ಥಳಕ್ಕೆ ಆ ಹೆಸರನ್ನು ಇಟ್ಟುಕೊಂಡಿರಬೇಕು. ಕಟ್ಟಿಂಗನಹಳ್ಳಿ ಪ್ರಾಚೀನ ಕಾಲದ ಮಾನವರು ನೆಲೆಸಿದ ಸ್ಥಳ. ಇಲ್ಲಿ ಸುತ್ತಲೂ ಮಣ್ಣಿನಿಂದ ಮಾಡಿದ ಏರಿ, ದಿಬ್ಬ ಅಥವಾ ರಕ್ಷಣಾಕೋಟೆ, ಬತೇರಿಗಳಿವೆ. ಇವುಗಳ ನಡುವೆ ಬೃಹದಾಕಾರದ ಮನೆ, ನಿವೇಶನಗಳು, ಬೀದಿ, ಬಾವಿಗಳು, ಕಾರ ರುಬ್ಬುವಕಲ್ಲು (ಕಾರದುಗುಂಡು), ಬೀಸುವಕಲ್ಲು ಇತರ ಅವಶೇಷಗಳು ಮತ್ತು ಉಪಕರಣಗಳು ಕಂಡುಬಂದಿವೆ. ಈ ನಿವೇಶಕ್ಕೆ ದಕ್ಷಿಣಾಭಿಮುಖವಾಗಿ ದ್ವಾರಗಳಿದ್ದು, ಪೂರ್ವಾಭಿಮುಖವಾಗಿ ಮನೆ ಬಾಗಿಲುಗಳಿವೆ. ಇಲ್ಲಿ ಕಂಡುಬರುವ ಪ್ರತಿಯೊಂದು ಕಟ್ಟಡವು ಭಗ್ನಗೊಂಡರೂ ಗತಕಾಲದ ಚರಿತ್ರೆಯನ್ನು ನೆನಪಿಸುತ್ತವೆ. ಆಯತಕಾರವಾಗಿ ಕಂಡುಬರುವ ನಿವೇಶನದಲ್ಲಿ ಮಡಕೆ ಚೂರುಗಳು, ಗೃಹಜೀವನಕ್ಕೆ ಬಳಸಿದ ಇತರ ಪರಿಕರಗಳು ಹೆಚ್ಚಾಗಿವೆ. ಇಂಥಾ ಸುಸ್ಥಿತಿಯ ಗ್ರಾಮ ವಿನಾಶ ಆಗಲಿಕ್ಕೆ



ಕಾರಣಗಳೇ ನೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ಸ್ಥಳೀಯರು ಹೇಳುವಂತೆ, ಭಯಂಕರವಾದ ರೋಗಗಳಾದ ಇನ್‌ಫ್ಲೂಯೆಂಜಾ, ಕಾಲರಾ, ಪ್ಲೇಗು ಬಂದು ಸಾವು-ನೋವು ಸಂಭವಿಸಿದಾಗ ಇದನ್ನು ತೊರೆದು ಕೆರೆದಂಡೆಯ ಹೊಲದಲ್ಲಿ ಹೋಗಿ ನೆಲಸಿದರಂತೆ. ಸು. ೨-೩ ಕಿ. ಮೀ. ಅಂತರವಿರುವ ಕಟಿಂಗನಹಳ್ಳಿಯು ಇಂದು ಲಂಬಾಣಿಹಟ್ಟಿ (ತಾಂಡಾ) ಎಂಬ ಹೆಸರಿನಿಂದ ಉದಯವಾಗಿದೆ. ಕ್ರಿ.ಶ. ೧೮೯೯ರಲ್ಲಿ ಪ್ಲೇಗು ಸಂಭವಿಸಿದಾಗ ಅನೇಕರು ಮೃತಪಟ್ಟರಂತೆ, ಒಬ್ಬರನ್ನು ಶವಸಂಸ್ಕಾರ ಮಾಡಿಬರುವಷ್ಟರಲ್ಲಿ ಮತ್ತೊಬ್ಬರ ಶವವನ್ನು ಸಂಸ್ಕಾರ ಮಾಡಲು ಸಿದ್ಧಪಡಿಸಲಾಗುತ್ತಿತ್ತಂತೆ. ಆಗಿನಿಂದ ಕಟ್ಟಿಂಗನಹಳ್ಳಿ ಹಾಳಾಯಿತೆಂದು ಹೇಳುತ್ತಾರೆ. ಈ ಕಟ್ಟಿಂಗನಹಳ್ಳಿ ನಿವೇಶನವು ತೋಟದ ಬೋರಯ್ಯನವರ ಅಣ್ಣ-ತಮ್ಮಂದಿರಿಗೆ ಸೇರಿದೆ. ಇಂದು ಇದನ್ನು ಲಂಬಾಣಿ ಜನಾಂಗದ ಟಾಕ್ರನಾಯ್ಕ ಎಂಬುವರು ಉಳುಮೆ ಮಾಡುತ್ತಾರೆ.

ಸರಿಸುಮಾರು ಒಂದುನೂರು ವರ್ಷಗಳಿಂದ ಈ

ಹಾಳೂರು ಭಗ್ನಾವಶೇಷಗಳಿಂದ ಕೂಡಿದೆ. ಕಟ್ಟಿಂಗನ ಹಳ್ಳಿ ಎತ್ತರವಾದ ಪ್ರದೇಶದಲ್ಲಿದೆ. ಇಕ್ಕೆಲಗಳಲ್ಲಿ ಮತ್ತು ನಿವೇಶನದಲ್ಲಿ ಮಡಿಕೆ ಚೂರುಗಳು ಹೆಚ್ಚಾಗಿ ಬಿದ್ದಿವೆ. ಈ ನಿವೇಶನದಿಂದ ಪಶ್ಚಿಮಕ್ಕೆ ಲೋಕಿಕೆರೆ, ಉತ್ತರಕ್ಕೆ ಜಮ್ಮೋಬನಹಳ್ಳಿಗೆ ಹೋಗಲು ಮಾರ್ಗಗಳಿವೆ. ಪ್ರಸ್ತುತ ನಿವೇಶನವು ಆಯಾತಾಕಾರವಾಗಿದೆ. ಮಣ್ಣಿನ ಏರಿಯನ್ನು ನಾಲ್ಕು ಭಾಗಗಳಲ್ಲಿ ಹಾಕಲಾಗಿದೆ. ಒಂದು ಮೂಲೆಯಲ್ಲಿ ಬುರುಜನ್ನು ನಿರ್ಮಿಸಲಾಗಿದೆ. ಕಂದಕವಿಲ್ಲದ ಸುತ್ತುಗೋಡೆಗೆ ಎರಡು ಕಡೆ ಪ್ರವೇಶ ದ್ವಾರಗಳಿವೆ. ದೊಡ್ಡಗಾತ್ರದ ಮನೆಗಳಿಗೆ ಬುನಾದಿ ಹಾಕದೆ, ದೊಡ್ಡದೊಡ್ಡ ಕಲ್ಲುಗಳನ್ನು ಬಳಸಲಾಗಿದೆ. ಹೆಚ್ಚಾಗಿ ಕಲ್ಲಿನಿಂದಲೇ ಎಲ್ಲ ಕಟ್ಟಡಗಳ ನಿರ್ಮಾಣ ನಡೆದಿದೆ. ಕಟ್ಟಡಗಳ ಮಧ್ಯೆ ಅಂತರವಿದೆ. ಬೀದಿಯಲ್ಲಿ ಜನರು ಓಡಾಡಲು, ಮಳೆ ನೀರು ಹೋಗಲು ಇಳಿಜಾರು ಮಾಡಿದ್ದಾರೆ. ಕುಡಿಯಲು ನೀರಿಗಾಗಿ ವೃತ್ತಾಕಾರದ ಬಾವಿಯನ್ನು ತೋಡಲಾಗಿದೆ. ಸದ್ಯ ಈ ನಿವೇಶನದ ತುಂಬಾ ಗಿಡ-ಮರಗಳು ಬೆಳೆದು ಪ್ರವೇಶ ಮಾಡುವುದು ದುಸ್ಸಾಧ್ಯವಾಗಿದೆ. ಇಲ್ಲಿಗೆ ೧ ಕಿ.ಮೀ. ದಕ್ಷಿಣಕ್ಕೆ ಕಲ್ಯಾಣ ಚಾಲುಕ್ಯರು ನಿರ್ಮಿಸಿದ ಕಲ್ಲೇಶ್ವರ ದೇವಾಲಯವಿದೆ. ಶಿವಲಿಂಗ, ನಂದಿ ವಿಗ್ರಹಗಳು ಭಗ್ನಗೊಂಡಿದ್ದು,



ಇಂದು 'ಕಲ್ಲಪ್ಪನ ಬೀಳು' ಎಂದು ಕರೆಯುತ್ತಾರೆ. ಇದರ ಈಶಾನ್ಯಕ್ಕೆ ಇದೇ ಕಾಲಕ್ಕೆ ಸೇರಿದ ಬಸವಣ್ಣನ ಗುಡಿಯಿದೆ. 'ದೊಡ್ಡಮೊರಡಿ ಬಸಣ್ಣ' ಎಂದು ಕರೆಯುತ್ತಾರೆ ಸ್ಥಳೀಯರು. ಇಲ್ಲಿ ಭಗ್ನಗೊಂಡ ವಿಗ್ರಹಗಳೂ ಪೂಜೆಗೊಳ್ಳುತ್ತಿವೆ.

ಎರಡು ಪ್ರಾಚೀನ ಗ್ರಾಮಗಳು ಒಂದೇ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾಗಿದ್ದು, ೩-೪ ಕಿ.ಮೀ. ಅಂತರದಲ್ಲಿವೆ. ಕರಪೂಜಾರಹಳ್ಳಿ ಎಂಬ ಗ್ರಾಮದಲ್ಲಿ ಬುಡಕಟ್ಟು ಜನರಾದ ಮ್ಯಾಸಬೇಡರು ನೆಲೆಸಿದ್ದರೆ, ಕಟ್ಟಿಂಗನಹಳ್ಳಿಯಲ್ಲಿ ಲಂಬಾಣಿ ಜನರು ವಾಸಿಸಿದ್ದಾರೆ. ಇವೆರಡೂ ಬುಡಕಟ್ಟು ಲಕ್ಷಣಗಳಿಂದ ಕೂಡಿದ ಸಮುದಾಯಗಳಾಗಿದ್ದು, ಇವರದು ಕಾಡಿನಿಂದ ನಾಡಿಗೆ ಬಂದವರ ಕಥೆಯಾಗಿದೆ. ಬದುಕಿನ ಭರಾಟೆಗೆ ತಕ್ಕಂತೆ ಮಾನವ ತನ್ನ ಅನುಕೂಲತೆಗಳನ್ನು ಸೃಷ್ಟಿಸಿ ತೋರ್ಪಡಿಸಿಕೊಂಡಿರುವುದು ಗಮನಾರ್ಹ. ಮೇಲಿನ ಎರಡು ನಿವೇಶನಗಳಲ್ಲಿ ಬೇಟೆ, ಪಶು ಪಾಲನೆ ಮತ್ತು ಕೃಷಿ ಚಟುವಟಿಕೆಗಳನ್ನು ಗುರುತಿಸಬಹುದು. ಸಾಂಸ್ಕೃತಿಕವಾಗಿ ವಿವಿಧ ಜಾತಿ, ಧರ್ಮದ ಜನರು ನೆಲೆಸಿದ್ದು, ತಮ್ಮತಮ್ಮ ವೃತ್ತಿಗನುಗುಣವಾಗಿ ಜೀವನ ನಡೆಸಿದ್ದಾರೆ. ವೈಷ್ಣವ, ಶೈವ ಪಂಥಗಳನ್ನು ಎರಡೂ ನಿವೇಶನದ ಜನರು ಅನುಸರಿಸಿರುವುದು ಸ್ಪಷ್ಟ. ಕಲಹ, ಸಂಘರ್ಷಗಳಿಂದ ದೂರವಿದ್ದು, ಸಾಮರಸ್ಯದ ಜೀವನಕ್ಕೆ ಇಲ್ಲಿ ಆದ್ಯತೆ ಇತ್ತು. ಯಾವುದೇ ಯುದ್ಧ, ಕಾಳಗಗಳಾದರೂ ಅಂಥ ಅನಾಹುತವಾಗಿರಲಿಕ್ಕಿಲ್ಲ; ಆದರೆ ಪ್ಲೇಗಿನಂತೆ ಹೆಮ್ಮಾರಿಯ ಕೆನ್ನಾಲಿಗೆಗೆ ನೂರಾರು ಜನ ಸತ್ತು ಹೋಗಿದ್ದು ದುರಂತದ, ದುಃಖದ ಕಥೆಯಾಗಿದೆ. ವಿವಿಧ ರಾಜವಂಶಗಳ ಆಳ್ವಿಕೆಯ ತೆಕ್ಕೆಗೆ ಸೇರಿದರೂ ಅಂಥ ವೈಭವ, ಪ್ರಗತಿಯನ್ನು ಈ ನೆಲೆ ಎಲ್ಲೂ ಕಂಡಂತಿಲ್ಲ. ಆದರೆ ಬ್ರಿಟಿಷರ ಕಾಲದ ಅಷ್ಟಿಷ್ಟು ಪ್ರಗತಿ ಕಾರ್ಯಗಳ ಬಗ್ಗೆ ವರದಿಗಳಿವೆ.

*ಒಟ್ಟಾರೆ ಹೇಳುವುದಾರೆ, ಕಟ್ಟಿಂಗನಹಳ್ಳಿ ಮತ್ತು ಕರಪೂಜಾರಹಳ್ಳಿ ಎಂಬ ಬೇಚರಾಕು ಗ್ರಾಮಗಳು ಮೂಲತಃ ಬುಡಕಟ್ಟು ಅಥವಾ ಆದಿವಾಸಿಗಳ ನೆಲೆಗಳಾಗಿವೆ. ಆಧುನಿಕತೆ ಬೆಳೆದಂತೆ ಕಾಡಿನ ಜೀವನದಿಂದ ನಾಡಿನ ಜೀವನಕ್ಕೆ ಹಾತೊರೆದು ಬಂದವ ರಾಗಿದ್ದಾರೆ. ವಿವಿಧ ಚಾರಿತ್ರಿಕ ಕಾಲಘಟ್ಟಗಳಲ್ಲಿ ಗ್ರಾಮಗಳ ಪಾಲು ದಾಖಲಾರ್ಹವಾದದ್ದು. ಕಲ್ಯಾಣ ಚಾಲುಕ್ಯರು, ಕುಮ್ಮಟ ಅರಸರು ಮತ್ತು ವಿಜಯನಗರ ಕಾಲದ ವೀರಗಲ್ಲು, ದೇವಾಲಯಗಳು ಕಂಡುಬಂದಿರುವುದರಿಂದ ಅವರ ಆಳ್ವಿಕೆ, ನೇರವಾದ ಪ್ರಭಾವ ಇಲ್ಲಿದ್ದಿತು. ಹೀಗಾಗಿ ಕ್ರಮೇಣ ಸ್ಥಳೀಯ ಪಾಳೆಯಗಾರರ ಏಳಿಗೆ ಆರಂಭವಾದಾಗ ಇಲ್ಲಿ ಆಮೂಲಾಗ್ರ ಬದಲಾವಣೆಯಾಯಿತು.**

* (ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಬಿ. ಬೋರಯ್ಯ ಗ್ರಾ.ಪಂ. ಸದಸ್ಯರು, ಸೀಟಿ ಪಾಲಯ್ಯ, ವಾಲ್ಯಾನಾಯ್ಕ ಮೊದಲಾದವರಿಗೆ ತುಂಬು ಹೃದಯದ ಕೃತಜ್ಞತೆಗಳು.)

***

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಇತಿಹಾಸ ದರ್ಶನ** ಸಂ. ೧೨, ೧೯೯೭, ಪು. ೨೦-೨೭
೨. ಹರತಿಸಿರಿ., ೧೯೮೭, (ಸಂ.) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ.
೩. ವೆಂಕಟಸ್ವಾಮಿ. ಕೆ., ೧೯೮೧, **ನನ್ನ ಹಳ್ಳಿ**, ಈಡಿಗರ ಸೇವಾ ಸಮಿತಿ, ಚಿಕ್ಕಜೋಗಿಹಳ್ಳಿ.
೪. ಕುಂ. ಬಾ ಸದಾಶಿವಪ್ಪ, ೧೯೯೦, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ** ಮಾಲತೇಶ ಪ್ರಕಾಶನ, ಕುಂಚೂರು.
೫. **ಬಳ್ಳಾರಿ ಜಿಲ್ಲಾ ದೇವಾಲಯ ಕೋಶ.**, ೨೦೦೪, (ಸಂ.) ಡಾ. ಕೆ. ಎಂ. ಸುರೇಶ್ ಮತ್ತು ಇತರರು, ಪ್ರಸಾರಾಂಗ, ಕ. ವಿ. ವಿ, ಹಂಪಿ.
೬. ವಿರೂಪಾಕ್ಷಿ ಪೂಜಾರಹಳ್ಳಿ., ೧೯೯೯, **ಗಾದರಿಪಾಲನಾಯಕ**, ಪ್ರಸಾರಾಂಗ, ಕನ್ನಡ ವಿ. ವಿ, ಹಂಪಿ.
೭. ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೩, **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು.**
8. Kelshall John,1872, Madras district Gazetteer, Bellary, Vol-V. Madras.
9. Francis. W., (ed.), 1904, Madras district Gazetteer, Bellary district, Madras.

ಡಾ. ಬಿ. ನಂಜುಂಡಸ್ವಾಮಿ*

"ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪೂ" ರಥೋತ್ಸಾಹ ಕಾಂದದ ಉಕ್ತ ಪ್ರಸಿದ್ಧ ವಂಶದ ಪ್ರಭುಗಳು

"ವಿರೂಪಾಕ್ಷ ವಸಂತೋತ್ಸವ ಚಂಪೂ" ಕೃತಿಯ ಕರ್ತೃ ಅಹೋಬಲ. ಕೃತಿಯ ವಸ್ತು ಹಂಪೆಯಲ್ಲಿ ನಡೆದ ವಸಂತೋತ್ಸವ ವರ್ಣನೆ. ಆರಂಭದ ಬಹುಭಾಗವು ಲುಪ್ತವಾಗಿರುವುದು. ನಮಗೆ ದೊರೆತಿರುವುದು ಮೂರನೆಯ ಹಾಗೂ ನಾಲ್ಕನೆಯ ಕಾಂಡಗಳು ಮಾತ್ರ. ಮೂರನೆಯ ಕಾಂಡವು ಸಹ ಪೂರ್ತಿಯಾಗಿ ದೊರೆತಿಲ್ಲ. ಆರಂಭದ ಎಷ್ಟೋ ಭಾಗ ತ್ರುಟಿತವಾಗಿದೆ. ವಿರೂಪಾಕ್ಷದೇವನ ಮಧುಮಾಸದ ಅರ್ಥಾತ್ ವಸಂತದ ಒಂಭತ್ತು ದಿನಗಳ 'ಮಾಧವನವರಾತ್ರ'ವೆಂಬ ಉತ್ಸವವು ಇದರ ವಸ್ತು. ಕವಿಯು ಹೇಳುವಂತೆ 'ಶ್ರೀಪಂಪಾನಗರ-ಪ್ರವರ್ತಿತ- ಮಹಾದೇವೋತ್ಸವೀಯಾಂ ಕಥಾಮ್' ಎನ್ನಿಸುವ ಈ ಕೃತಿ ೧೪ನೆಯ ಶತಮಾನದ ದ್ವಿತೀಯಾರ್ಧವು ಕವಿಯ ಕಾಲವಿರಬಹುದು ಎಂದು ಡಾ. ವಿ. ರಾಘವನ್‌ರವರೂ ವಿದ್ಯಾರತ್ನ ಪಂಚಮುಖಿಯವರೂ ನಿರ್ಧರಿಸಿದ್ದಾರೆ.

ಕನ್ನಡ ಸಂಶೋಧನಾ ಸಂಸ್ಥೆಯಿಂದ ೧೯೫೩ ರಲ್ಲಿ ಹಿರಿಯ ಸಂಸ್ಕೃತ ವಿದ್ವಾಂಸರಾದ ಆರ್. ಎಸ್. ಪಂಚಮುಖಿ ಅವರಿಂದ ಸಂಪಾದಿತವಾಗಿ Sanskrit Classical Works Series ಮಾಲೆಯಿಂದ ಪ್ರಥಮ ಪುಷ್ಪವಾಗಿ ಪ್ರಕಟವಾಗಿದೆ. ಡಾ. ವಿ. ರಾಘವನ್‌ರವರು ಈ ಕೃತಿಯನ್ನು ಕುರಿತು Virupaksa Vasantostava Campu ಎಂಬ ಲೇಖನವನ್ನು ಬರೆದಿದ್ದು Jor, Madras XIV (೧೭-೪೦) ಸಂಚಿಕೆಯಲ್ಲಿ ಪ್ರಕಟವಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರೊ. ಕೆ. ಎಸ್. ಕಣ್ಣನ್ ರವರಿಂದ ಸಂಸ್ಕೃತ ಮೂಲ, ಪೀಠಿಕೆ, ಅನುವಾದ ವಿಸ್ತೃತ ಟಿಪ್ಪಣಿ ಮತ್ತು ಅನುಬಂಧಗಳು ಸಹಿತ ೨೦೦೧ರಲ್ಲಿ ಆ ಕೃತಿ ಪ್ರಕಟಗೊಂಡಿದೆ. ಪುಟ ೫೫ರಲ್ಲಿ ಪ್ರೊ. ಕೆ. ಎಸ್. ಕಣ್ಣರವರಿಂದ ಸಂಸ್ಕೃತ ಮೂಲ, ಪೀಠಿಕೆ, ಅನುವಾದ ವಿಸ್ತೃತ ಟಿಪ್ಪಣಿ ಮತ್ತು ಅನುಬಂಧಗಳು ಸಹಿತ ಪ್ರೊ. ಕೆ. ಎಸ್. ಕಣ್ಣನ್ ಈ ಮಾತುಗಳನ್ನು ಹೇಳಿದ್ದಾರೆ. "ಕೊನೆಯ, ಆದರೆ ಮುಖ್ಯವೇ ಆದ, ಅಂಶವೆಂದರೆ, ಇಲ್ಲಿಯ ಬಹುತೇಕ ಸ್ಥಳಗಳನ್ನು ಗುರುತಿಸಿರುವವರು ಡಾ. ವಿ. ರಾಘವನ್. ಆದರೆ ಅವರೇ ಹೇಳಿಕೊಂಡಿರುವಂತೆ, ಬಹುತೇಕ ಸ್ಥಳಗಳನ್ನು ಅಭಿಜ್ಞಾನವನ್ನು ಮಾಡಲು ಪ್ರೇರೆಪಿಸಿದ, ಡಾ. ಎನ್. ವೆಂಕಟರಮಣಯ್ಯನವರು, ವೆಂಕಟರಮಣಯ್ಯ ನವರಿಗೆ ಹಸ್ತಪ್ರತಿಯಿತ್ತವರು ಶ್ರೀ ಎಂ. ರಾಮಕೃಷ್ಣ ಕವಿಗಳು, ಇದೀಗ ನಮ್ಮ ಕೈಂಕರ್ಯವೂ ಒಂದಿಷ್ಟು ಸೇರಿದೆಯಷ್ಟೆ." ಅಂದಿದ್ದಾರೆ.

ವಿರೂಪಾಕ್ಷನ ರಥೋತ್ಸವವನ್ನು ನೋಡಲು ಬಂದ ಪ್ರಸಿದ್ಧ ವಂಶದ ಪ್ರಭುಗಳು :

೧. ವಿದ್ಯಾರಣ್ಯ ಯತೀಂದ್ರ - ನಿರ್ಮಿತಪುರ - ಶ್ರೀ ಚಕ್ರವರ್ತಿ ನೃಪಃ =

೨. ಮಹೀಸುರಪುರೇಶತ್ವಂ = ಮೈಸೂರು ದೊರೆ (೮೬ ಪುಟ ೮೭) ವಿದ್ಯಾನಗರ ನರಪತಿರಾಜ (೮೦, ಪುಟ ೮೬)

೩. ಚಂದ್ರಶೈಲ = ಚಂದ್ರಗುತ್ತಿ ಅಥವಾ ಚಂದ್ರಗಿರಿ (೮೬ ಪುಟ ೮೭)

೪. ಕಾಶ್ಮೀರ - ಭೂಪಾಲಃ = ಕಾಶ್ಮೀರದ ಪ್ರಭು (೮೯ ಪುಟ ೮೯)

೫. ಶ್ರೀ ರಾಶಿದೇಶಾಧಿಪತಿಃ = ಸಿರಸಿಯ ಒಡೆಯ (೯೧ ಪುಟ ೯೧)

೬. ಮೋಕ್ಷ ಪುರದೇವರಾಡ್ = ಮೋಕ್ಷಪುರದ ರಾಜ ಇಂದಿನ ಕರ್ನೂಲ್ ಡಿಸ್ಟ್ರಿಕ್ಟಿನ್ ಮೋಕ್ಷಗುಂಡಂ ಎಂಬ ನಗರದಲ್ಲಿ ಮಲ್ಲೇಶ್ವರನ ದೇವಾಲಯವು ಇಂದಿಗೂ ಇದೆ (೯೫, ೯೬ ಪುಟ ೯೩)

೭. ಬಲಾರಿ ನಗರಾಧೀಶ್ವರಃ = ಬಳ್ಳಾರಿಯ ರಾಜ, ಶ್ರೀ ಸಿದ್ಧರಾಮೇಶ್ವರನ ಪ್ರಸಾದವನ್ನು ಹೊಂದಿದ್ದಾನೆ (೯೭ ಪುಟ ೯೩)

೮. ಸೇನಾಪತಿತ್ವ - ಬಿರುದಾಂಕಿತ ಏಷ ಭೂಪಃ ಶ್ರೀರಾಜದುರ್ಗ - ನಗರಾಧಿಪತಿ = ಸೇನಾಪತಿ ರಾಯದುರ್ಗದ ಪ್ರಭು (೯೯ ಪುಟ)

೯. ಚಿತ್ರಶಿಲಾ ನಗರಾಧೀಶ್ವರೋ = ಚಿತ್ರದುರ್ಗದ ಪ್ರಭು (೯೯ ಪುಟ ೯೪, ೯೫)

೧೦. ಹರಪುರಾಧಿಪೊ = ಹರಿಹರದ ಒಡೆಯ ೧೦೦ ಪುಟ ೯೬.

೧೧. ಭುಜಂಗನರಾಧಿಪೋ = ಭುಜಂಗ ನಗರೇಶ = ಹಾವನೂರು (೧೦೧ ಪುಟ ೯೬)

೧೨. ಲಕ್ಷ್ಮಣೇಶ್ವರಪುರೀ = ಲಕ್ಷ್ಮಣೇಶ್ವರಪುರಿ = ಲಕ್ಷ್ಮೇಶ್ವರ (೧೦೨ ಪುಟ ೯೭)

೧೩. ದಂಬಲಪುರ - ದೇಶಾಧಿಪತಿ = ದಂಬಲಪುರ

* ಪಂಡಿತ ತಾರಾನಾಥ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು-೫೭೨ ೧೦೨

ವಿದ್ವತ್‌ಪ್ರಭು = ಡಂಬಳ, ಕಪತ್‌ಗಿರಿ ಕಪೋತಗುಡ್ಡ (೧೦೩ ಪುಟ ೯೭, ೯೮)

೧೪. ವಂಶನಾಮ - ನಗರೀನಾಥ = ವಂಶನಗರೇಶ = ಬೆಳಗಾವಿಯ ಅಥವಾ ಬಳ್ಳಿಗಾವಿ (೧೦೪ ಪುಟ ೯೯)

ಈ ಮೇಲಿನ ರಾಜವಂಶಗಳನ್ನು ಇಂತವರು ಎಂದು ಗುರುತಿಸಿದವರು ಡಾ. ವಿ. ರಾಘವನ್‌ರವರು ಆದರೆ ಅಂದಿಗಿಂತ ಇಂದು ಸಣ್ಣಸಣ್ಣ ರಾಜಮನೆತನಗಳ ಅಧ್ಯಯನ ಸಾಕಷ್ಟು ನಡೆದಿದೆ. ಹೊಸ ಮಾಹಿತಿ ಲಭ್ಯವಿರುವ ಇನ್ನಷ್ಟು ನಿಖರವಾಗಿ ರಾಜಮನೆತನಗಳನ್ನು ಗುರುತಿಸಬಹುದಾಗಿದೆ.

ಮೋಕ್ಷಪುರ : ಹಂಪೆ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿತವಾದ ಪುಸ್ತಕದ ಪೀಠಿಕೆ ಪುಟ ೨೫ರಲ್ಲಿ ಈ ಮಾತುಗಳು ಲಿಖಿತವಾಗಿವೆ.

"೪.೯೬, ಮೋಕ್ಷಪುರದ ಅರಸನ ಉಲ್ಲೇಖ ಮುಂದಿನದು. ಮಲ್ಲೇಶ್ವರನ ಪ್ರಸಾದ ಅಥವಾ ಪ್ರಸನ್ನತೆಯು ಈತನ ಮೇಲುಂಟು. ಇಂದಿನ ಕರ್ನೂಲ್ ಡಿಸ್ಟ್ರಿಕ್ಟಿನ ಮೋಕ್ಷಗುಂಡಂ ಎಂಬ ನಗರದಲ್ಲಿ ಮಲ್ಲೇಶ್ವರನ ದೇವಾಲಯವು ಇಂದಿಗೂ ಇದೆ. 'ಸ ಮೋಕ್ಷಪುರ ದೇವರಾಡ್ ವಿಜಯತೇ ಸಮಲ್ಲೇಶ್ವರಪ್ರಸಾದ- ಮಾಹಿ ಮಾನುಗ-ಅವನಿಸುರೋತ್ತಮ...' ಈತನ ಹೆಸರಿನಲ್ಲಿ ಉಳಿದ ವಿವರಗಳೂ ಅಲಭ್ಯ. ಕವಿಗಳಿಗೆ ಆಶ್ರಯದಾತನೀತ. 'ಕವೀಂದ್ರ ಪರಿವೇಷ್ಟಿತಃ' ಎಂದು ಆತನನ್ನು ಚಿತ್ರಿಸಿದೆ." ಎಂದಿದ್ದಾರೆ. ಇಲ್ಲಿವರೆಗೆ ಅಧ್ಯಯನ ಮಾಡಿದ ವಿದ್ವಾಂಸರೆಲ್ಲ ಮೋಕ್ಷಪುರ ಅಂದರೆ ಆಂಧ್ರಪ್ರದೇಶದಲ್ಲಿರುವ ಮೋಕ್ಷಗುಂಡಂ ಕಡೆಯೆ ಗಮನಹರಿಸಿದರು. ಆದರೆ, ಕವಿ ಉಲ್ಲೇಖಿಸಿರುವ ಮೋಕ್ಷಪುರ: ಮೈಸೂರು ಜಿಲ್ಲೆಯ ತಿರುಮಕೊಡಲು ನರಸೀಪುರದ ಹತ್ತಿರ ಇರುವ ಮೂಗೂರುವಿಗೆ ಇನ್ನೊಂದು ಹೆಸರು ಮೋಕ್ಷಪುರ.

ಮದ್ರಾಸಿನಿಂದ ೧೯೫೪ರಲ್ಲಿ ಪ್ರಕಟವಾಗಿರುವ `Government Oriental Manuscripts Library' ಸಂಪುಟ XIII ಪುಟ ಹಸ್ತಪ್ರತಿ ಸೂಚಿಯಲ್ಲಿ ಪ್ರಕಟವಾಗಿದೆ.

ಮೂಗೂರು ನಗರದಲ್ಲಿ ಇರುವ ಜೈನಬಸ್ತಿಯು ವಿಜಯನಾಥನ ಮೇಲೆ ಹಾಡು ಪ್ರಕಟವಾಗಿದೆ.

ಶ್ರೀಮದತಿಶಯ ದೇವದುಂದುಭಿರಾಜ
ಸ್ವಾಮಿ ಜಯಜಯ ವಿಜಯನಾಥ ಜಿನರಾಜ ॥ಪಲ್ಲವಿ॥
ಮನಸಿಜಮಹಾರಣ್ಯ ಪಾವಕಮದೀಶ ॥
ಜಿನನಾಥ ಮೋಹಮಲ್ಲಾಸುರವಿನಾಶ ॥
ಘನಮಹಿಮ ಸುಜ್ಞಾನನಿಧಿ ಕೃಪಾಕೋಶ ॥
ಅನವರತ **ಮೋಕ್ಷಪುರ ವಿಜಯನಾಥೇಶ** ॥ ॥ ೩ ॥

ಮೂಗೂರಿನ ಅಧಿದೇವತೆ ತಿಬ್ಬಾದೇವಿಯ ಮೇಲಿನ ಹಾಡು :

ತ್ರಿಮಕೂಟ ದಕ್ಷಿಣದಿಶಾಭಾಗದಲ್ಲಿ
ಪ್ರಮಥ ತಿಬ್ಬಾದೇವಿ ಮೆಟ್ಟಿದ ತೇಜದಲಿ ॥
ಧರೆಯೊಳಗೆ ಮಿಗಿಲೆನಿಪ **ಮೋಕ್ಷಪುರದಲಿ** ।
ಗರುವೆ ನೀನಹುದು ದೆಸೆದೆಸೆ ಕೀರ್ತಿಯಲಿ ॥
ಅರಸುಲಿಂಗೇಂದ್ರಗೊರವಿತ್ತು ಬೇಗದಲಿ ।
ಕರುಣದಿಂ ತಿಬ್ಬಮ್ಮ ಸಲಹು ಹರುಷದಲಿ ॥ ॥ ೩ ॥
ಮೂಗೂರಿನ ಬನ್ನಿಮಹಾಂಕಾಳಿ
ಈಶನರ್ಧಾಂಗಿಯಸುರರ ವಜ್ರಕೆ ಧಾಳಿ ।
ಲೇಸಿತ್ತು ರಕ್ಷಿಪುದು ಬನ್ನಿಮಹಂಕಾಳಿ ॥ ॥ ಪಲ್ಲವಿ ॥
ವಸುಧೆಗುನ್ನತವಾದ **ಮೋಕ್ಷಪುರವೆಂದು**
ಪೆಸರ್ವಡೆದ ಗ್ರಾಮದುತ್ತರದಲ್ಲಿ ನಿಂದು ॥
ರಸಿಕಲಿಂಗೇಂದ್ರನಿಗೆ ವರನೀವೆನೆಂದು
ಒಸೆದು ಮಹಾಂಕಾಳಿ ನಿಂದಳು ಕೃಪಾಸಿಂಧು ॥ ॥ ೩ ॥

ವಿಶೇಷ ವಿಷಯ : ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಚೌಪದದ ಒಗಟೆ-ಗಣಿತ, ಛಂದೋವಿಷಯ ಇವೂ ಇವೆ. **ತಿಬ್ಬಾದೇವಿ-ಮೂಗೂರು** : ಇದಕ್ಕೆ ಮೋಕ್ಷಪುರವೆಂಬ ಹೆಸರೂ ಉಂಟು. ಮೈಸೂರು ದೇಶದ ತಿರುಮಕೂಡ್ಲು ನರಸೀಪುರದ ತಾಲ್ಲೂಕಿಗೆ ಸೇರಿದೆ. ಈ ಮೇಲಿನ ಉದಾಹರಣೆಯಿಂದ **ಮೋಕ್ಷಪುರ ಅಂದರೆ ಮೂಗೂರು** ಎಂದು ಸ್ಪಷ್ಟವಾಗುತ್ತದೆ. ಮೂಗೂರು ದೊರೆಗಳನ್ನು ಕುರಿತು ಇತಿಹಾಸ ದರ್ಶನ ಸಂಪುಟ ೧೭ (ಪುಟ ೨೪೨-೨೪೭), ೨೦೦೨ರಲ್ಲಿ "ಮೂಗೂರು ಪ್ರಭುಗಳು" ಲೇಖನ ಪ್ರಕಟವಾಗಿದೆ. ದಯಮಾಡಿ ಗಮನಿಸಬೇಕಾಗಿ ವಿನಂತಿ.

ಈ ರಾಜರು ಮಲ್ಲೇಶ್ವರನ ಭಕ್ತರಾಗಿದ್ದರು ಎಂದು ವಿರೂಪಾಕ್ಷ ವಸಂತೋತ್ಸವ ಚಂಪುವಿನಲ್ಲಿ ಉಲ್ಲೇಖವಾಗಿರುವುದರಿಂದ ಮೋಕ್ಷಗುಂಡಂನಲ್ಲಿ ಇರುವ ಮಲ್ಲೇಶ್ವರನ ದೇವಸ್ಥಾನ ಬಹಳ ಪ್ರಸಿದ್ಧ ಎಂದು ವಿ. ರಾಘವನ್ ರವರ ಅಭಿಪ್ರಾಯ. ಮೂಗೂರು ಪಕ್ಕ ಬಹಳ ಪ್ರಸಿದ್ಧವಾದ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯವಿದೆ. ಇಲ್ಲಿ ಉಲ್ಲೇಖ ಗೊಂಡಿರುವ ಮಲ್ಲೇಶ್ವರ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯವಿದೆ. ಇಲ್ಲಿ ಉಲ್ಲೇಖಗೊಂಡಿರುವ ಮಲ್ಲೇಶ್ವರ, ಮುಡುಕುತೊರೆ ಮಲ್ಲಿಕಾರ್ಜುನನೆ ಆಗಿರುವ ಸಾಧ್ಯತೆ ಇದೆ.

ಹರಪುರಾಧಿಪೋ ಪೀಠಿಕೆಯಲ್ಲಿ ಈ ಅರಸುಮನೆತನದ ಬಗ್ಗೆ ಪುಟ ೨೬ ರಲ್ಲಿ ಈ ವಾಕ್ಯಗಳು ಲಿಖಿಸಲ್ಪಟ್ಟಿವೆ. "ಮುಂದಿನವನು "ಹರಪುರಾಧಿಪಃ" ಹರಿಹರದ ಒಡೆಯ. ಈತನೂ ಲಿಂಗಾಯತನಿರಬಹುದು. ಬಸವೇಶ್ವರಾದಿಗಳು ಈತನ ಸ್ವಾಮಿಗಳು ಶಿವಶರಣ್ಯಗಣ್ಯಾಧಿಕ ಪ್ರಭಾವ - ವೃಷಭೇಶ್ವರಾಧಿಕ ಮಹಾಪ್ರಭು ಸ್ವಾಮಿಃ.

ಕೆಳದಿನೃಪ ವಿಜಯ ದಶಮಾಶ್ವಾಸಂನಲ್ಲಿ (ಕ.ಸಾ.ಪ. ಪ್ರಕಟಣೆ, ಗದ್ಯಾನುವಾದ ಕೆಳದಿ ಗುಂಡಾಜೋಯಿಸ್ ೧೯೭೬ ಪುಟ ೨೫೯), ಈ ರೀತಿ ಉಲ್ಲೇಖವಿದೆ. "ಹರಪುರ (ಪ್ರತಿನಾಮ ಹರಪನಹಳ್ಳಿ) ಯೆಂಬ ಕೋಟೆಯಂ ಬಲಿಸಿ ಆ ಕೋಂಟೆಯೊಳಿರ್ದ

ರಾಜ್ಯಂಗೆಯ್ದ ದಾಜಿನಾಯಕ ರಂಗರಾಜಯ್ಯ ಹಿರಿಯ ಬಸಂತ ರಾಯ ಇಮ್ಮಡಿ ಬಸವಪ್ಪನಾಯಕ ಕೊಟ್ಟೂರಪ್ಪನಾಯಕ ಹಿರಿಯ ಬಸವಪ್ಪ ನಾಯಕ ಕೊಟ್ಟೂರಪ್ಪ ನಾಯಕರಂ ಬಿವರಾಳ್ದನಂತರಂ ಬಸವಪ್ಪನಾಯಕನಾಳ್ದು. ಬರುತ್ತಿರಲ್ (ಮುಂಪೇಳ್ದ ಚಿಂತನಕಲ್ಲು ಬರಮಣ್ಣ ನಾಯಕಂ) ಆ ಹರಪನಹಳ್ಳಿ ಬಸವಪ್ಪನಾಯಕನ ಪರಿಸ್ತರಣಂಗಳಂ ಕೊಂಡು ರಾಜ್ಯಂಗಳ ನಾಕ್ರಮಿಸುತ್ತಂ ಮಿಕ್ಕು ಮೀರಿ ಕೈಗೆಯ್ಯುತ್ತುಂ ಬರಲಾ ಬರಮ ನಾಯಕನದಟನಾಂ ಪೊಡಶಕ್ಯಮಾಗಿ ಹರಪನಹಳ್ಳಿಯ ಬಾಗಳಿಬಸವಪ್ಪ ನಾಯಕಂ ದೈನೋಕ್ತಿಯಿಂ ರಾಯಸಮಂ ಬರೆದು ಕಳುಸಿ ತಮ್ಮ ಸಂಸ್ಥಾನ ಮನುದ್ಧರಿಸಪೇಳ್ದೇಂದು ಪೇಳಿಸಲಾಂ ತಾಗಲೆಂದು''....

ಈ ಮೇಲಿನ ಗದ್ಯದಲ್ಲಿ ಉಲ್ಲೇಖಗೊಂಡಿರುವ ನಾಯಕರೆಲ್ಲ ಹರಪನಹಳ್ಳಿ ನಾಯಕರೆ. ಈ ಗದ್ಯದಿಂದ ಹರಪುರ ಅಂದರೆ ಹರಪನಹಳ್ಳಿ ಎಂದು ಸ್ಪಷ್ಟವಾಗುತ್ತದೆ. ಮೈಲಾರ ಬಸವಲಿಂಗ ಶರಣರು ಹರಪನಹಳ್ಳಿ ಪಕ್ಕದ ಮೈಲಾರದವರು ತಮ್ಮ ಚೌಪದದಲ್ಲಿ

ಎರಡನೆಯ ಕೈಲಾಸವೆನಿಸ ಹರಪುರದ
ದೊರೆ ಸೋಮಶೇಖರ ನರೇಂದ್ರನಕ್ಕೆರದ
ಅರಸಿ ಬಸವಮ್ಮಾಜಿ ಭಕ್ತಿಯೊಳು ಮೆರೆದ
ಶರಣ ಸಂತತಿಗಳಿಗೆ ಸತಿಮೋಕ್ಷ ವರದ ॥ ೩ ॥
ಮೈಲಾರ ಬಸವಲಿಂಗ ಶರಣರ ಕೃತಿಗಳು

ಸಂ.ಶಿ.ಶಿ. ಬಸವನಾಳ ತೃತೀಯ ಮುದ್ರಣ ೧೯೬೨ ಪುಟ ೧೦೮)

ಈ ಮೇಲಿನ ಅಧ್ಯಯನದಿಂದ ಹರಪುರ ಅಂದರೆ ಹರಪನಹಳ್ಳಿ ಹೊರತು ಹರಿಹರ ಅಲ್ಲ. ಪಂಪಾ ವಿರೂಪಾಕ್ಷನ ರಥೋತ್ಸವದಲ್ಲಿ ಭಾಗಿಯಾದವನು ಹರಪನಹಳ್ಳಿ ಅರಸ ಎಂದು ಸ್ಪಷ್ಟವಾಗುತ್ತದೆ.

'ವಂಶನಾಮನಗರೀನಾಥ ಪ್ರಮುಖ್ಯಾ ನೃಪಾಃ' ಬೆಳಗಾವಿ ಒಡೆಯ ಅಥವಾ ಬಳ್ಳಿಗಾವೆ ಇರಬಹುದು ಎಂದು ನಿರ್ಧರಿಸಿದ್ದರು. ವಂಶಿ ಅಂದರೆ ಬದಿರು ಎಂದರ್ಥ. ಸಂಸ್ಕೃತದಲ್ಲಿ ವೇಣು ಎಂದು ಕರೆಯುತ್ತಾರೆ. ಇಲ್ಲಿ ಕವಿ 'ಕಳತಿ' ಅರಸರನ್ನು ಹೇಳಲು ಈ ಪದಪ್ರಂಯೋಗ ಮಾಡಿದ್ದಾನೆ ಎಂದು ನನ್ನ ಊಹೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 'ವೇಣುಪುರದ ಕ್ಷತಿಯರ ವಂಶಾವಳಿ' ಕೆ. ಬಿ. ೪೨೪ರ ಹಸ್ತಪ್ರತಿ ಕಳಲೆ ಅರಸು ಮನೆತನದ ವಿವರವನ್ನು ತಿಳಿಸುವ ಹಸ್ತಪ್ರತಿಯಾಗಿದೆ. ವಿರೂಪಾಕ್ಷ ರಥೋತ್ಸವದಲ್ಲಿ ಭಾಗವಹಿಸಿದ ವಂಶನಾಮ ನಗರೀನಾಥ ಕಳಲೆ ಪ್ರಭು ಎಂದು ಊಹಿಸಬಹುದು.

ಶ್ರೀರಾಶಿದೇಶಾಧಿಪತಿ ಈತನ ಬಗ್ಗೆ ಪೀಠಿಕೆಯಲ್ಲಿ "ಮೂರನೆಯ ಅರಸು ಸಿರಸಿಯ ಒಡೆಯ. 'ಶ್ರೀರಾಶಿ ದೇಶಾಧಿಪತಿಃ' ಪಂಪಾಪತಿಯಲ್ಲಿ ಭಕ್ತಿ ಅಪಾರ ಈತನಿಗೆ. ಅದಕ್ಕಾಗಿಯೇ ಎಂಬಂತೆ ರಥಬೀದಿಯ ಎದುರಿನ ಬಂಗಲೆಯಲ್ಲೇ ವಾಸ. 'ಆತ್ಮೀಯ-ಪಂಪಾಪತಿ ಭಕ್ತಾಗ್ರೇಸರತ್ತು-ಸೂಚನಾಯೇವ ಅತ್ರ ರಥ್ಯಾಯಾಮ್ ಅಗ್ರಿಮಪ್ರಾಸಾದನಿವಾಸೋ ಭವತಿ.'

ಈತ ಲಿಂಗಾಯತನೆಂದು ಪಂಚಮುಖಿಯವರ ತೀರ್ಮಾನ. ಈತನು ಸಮಸ್ತದ್ವಿಜರನ್ನೂ ವಂದಿಸುತ್ತಾನೆ ಹಾಗೂ ಶಿವಲಿಂಗವನ್ನು ಧರಿಸಿದ್ದಾನೆ. 'ದ್ವಿಜ ರಾಜಶೇಖರ ಲಿಂಗಧರೋಽಪಿ ಸಕಲದ್ವಿಜ ಚರಣಾರವಿಂದ ನಂದನ-ಆಮೋದಭರಭರತಿ-ಹೃದಕಮಲಃ'

ಈ ಉತ್ಸವ ಸಂದರ್ಭದಲ್ಲಿನ ಜನಾಶ್ರಯ (ಛತ್ರ)ದ ಅನ್ನಸತ್ರದ ವ್ಯವಸ್ಥೆಯ ಜವಾಬ್ದಾರಿ ಈತನದ್ದೇ....ಎಂದಿದೆ.

ಶ್ರೀರಾಶಿದೇಶಾಧಿಪತಿಃ "ದ್ವಿಜರಾಜಶೇಖರಲಿಂಗ ಧರೋಪಿ" ಈ ಪದವಾಕ್ಯ ಪ್ರಯೋಗದಿಂದ ಲಿಂಗವನ್ನು ಧರಿಸಿದ ಸೋದೆ ಅರಸು ಇವನಾಗಿರಬಹುದೆ? ಶಿರಸಿ ಪಕ್ಕ ಸೋದೆ ಇರುವಂತಹದು. ಸೋದೆ ಅರಸು ಮನೆತನದವರು ಮಹಾಶಿವಭಕ್ತರು ಎಂಬುದು ನಮಗೆ ತಿಳಿದಿರುವಂತಹುದು.

ಬಳ್ಳಾರಿಯ ಒಡೆಯ ಈ ಮನೆತನದ ಬಗ್ಗೆ ಪೀಠಿಕೆಯಲ್ಲಿ 'ಬಲಾರಿನಗರಾಧೀಶ್ವರಃ ಶಿವರಥೋತ್ಸವೋತ್ಸುಕೋ ವರ್ತತೇ- ಈತನು ಶ್ರೀ ಸಿದ್ಧರಾಮೇಶ್ವರನ ಪ್ರಸಾದವನ್ನು ಹೊಂದಿದ್ದಾನೆ. ಶ್ರೀ ಸಿದ್ಧರಾಮೇಶ್ವರ ಪ್ರಸಾದಾನುಗುಣ ಮಹೀಸುರಮಹಾನುಗ್ರಹ ವಜ್ರಕವಚ ಃ'- ಈತ ಸಚಿವಾಯತ್ತಸಿದ್ಧಿಃ ಮಂತ್ರಿಗಳೇ ರಾಜ್ಯವನ್ನು ನೋಡಿಕೊಳ್ಳುವರು. ಈತನು ವಿದ್ಯಾಲೋಲ ಎಂದೇ (ಬಾಣ ಕಾದಂಬರಿಯ) ಶೂದ್ರಕನಂತೆ ಈತನೂ : 'ಸಮಾನ ವಿದ್ಯಾವಯೋ ವಿನಯಸಂಪನ್ನೈಃ ಅತಿನಿಪುಣೈಃ ಕವಿಭಿಃ ಆಖ್ಯಾತ-ಆಖ್ಯಾಯಿಕಾ ಖ್ಯಾನೇತಿಹಾಸಪುರಾಣ-ವಿದಗ್ಧಮಂಡಲ ಮಂಡನ-ಸತ್ಕಾವ್ಯ ಪರಮಾರ್ಥಸಾಧಕ-ಶಾಸ್ತ್ರ ವಿಚಾರ ಸಮುಪಜಾತ- ಪರಮಾನಂದ ಭರಾಮೃತ- ಆಸ್ವಾದ ಸಂತೃಪ್ತ ಮಾನಸಃ...ಎಂದಿದೆ.

ಬಳ್ಳಾರಿ ನಗರಾಧೀಶ್ವರ ಸಿದ್ಧರಾಮೇಶ್ವರನ ಭಕ್ತರು ಎಂದು ಅರ್ಥವಾಗುತ್ತದೆ. ಹಂಡೆನಾಯಕರು ಸಿದ್ಧರಾಮೇಶ್ವರನ ಪರಮ ಭಕ್ತರು. ಬಳ್ಳಾರಿ ಜಿಲ್ಲೆ ಶಾಸನ ಸಂಪುಟದಲ್ಲಿ ಪ್ರಕಟವಾಗಿರುವ, ಹೊಸಪೇಟೆ ಕೊಟ್ಟೂರುಸ್ವಾಮಿ ಮಠದ ಸನ್ನದು ಶಾ. ಶಕ ೧೬೫೫ರ ಕಾಲಮಾನದ್ದು. ಈ ಸನ್ನದಿನ ಶಿರೋಭಾಗದಲ್ಲಿ ಸಿದ್ಧರಾಮ ಎಂದಿದೆ. ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿಗಳಿಂದ ಸಂಪಾದಿತವಾಗಿ ಹೊಸಪೇಟೆ ಕೊಟ್ಟೂರುಸ್ವಾಮಿ ಮಠದಿಂದ ೧೯೮೩ರಲ್ಲಿ ಪ್ರಕಟವಾಗಿರುವ ಮಠದ ಕಾಗದ ಪತ್ರಗಳ ಲಘು ಕೃತಿಯ ಮುನ್ನುಡಿಯಲ್ಲಿ 'ಬಳ್ಳಾರಿಯ ಪಾಳೆಯಗಾರರು' ವಿಜಯನಗರ ಸಾಮ್ರಾಜ್ಯದ ರಕ್ಷಕರೆಂದು ಕೀರ್ತಿತರು. ಶ್ರೀ ಸಿದ್ಧರಾಮದೇವರನ್ನು ತಮ್ಮ ಆರಾಧ್ಯ ದೇವತೆ ಎಂದು ಬಗೆದು ಭಕ್ತಿಯಿಂದ ಮಣಿದವರು. ದಾನಶಾಸನಗಳಲ್ಲಿ "ಶ್ರೀ ಸಿದ್ಧರಾಮ ದೇವರ ವರಪ್ರಸನ್ನ"ರೆಂದು ಅಂಕಿತಗೊಂಡವರು ಎಂದಿದ್ದಾರೆ.

ಪುಟ ೧೪ರಲ್ಲಿ ಶಾ. ಶ. ೧೬೪೪ರ "ಸಂಗನಕಲ್ಲು ಜಹಗೀರ ದಾನಪತ್ರ" ಪ್ರಕಟವಾಗಿದೆ. . . ಶ್ರೀ ಮನ್ಮಹಾರಾಜಾಧಿರಾಜ ಖಂಡೆಯಶವಂತ ಪರದಳ ವಿಭಾಡ ಹರಿರಾಯ ಮಾನಮರ್ದನ ಸದಾ ಶ್ರೀ ಸಿದ್ಧರಾಮೇಶ್ವರ ದೇವರ ವರಪ್ರಸನ್ನರಾದ ರಾಜಶ್ರೀ ಹಂಡೆ ಹಿರೇರಾಮಪ್ಪ ನಾಯ್ಕರವರು ಬರೆಸಿಕೊಟ್ಟ ದಾಸೋಹ ದಾನ ಪತ್ರ ಎಂದಿದೆ.

ಪುಟ ೨೧ರಲ್ಲಿ ಶಾ.ಶ. ೧೬೭೦ರ ಕಾಲಮಾನದ "ಹಂಡೆರಾಮಪ್ಪನಾಯಕರ ಭೂದಾನಪತ್ರ ಪ್ರಕಟವಾಗಿದೆ". ಆ ಪತ್ರದ ಶಿರೋಭಾಗದಲ್ಲಿ "ಶ್ರೀ ಸಿದ್ಧರಾಮೇಶ್ವರ" ಪ್ರಸಾದಾನುಗುಣ ವಿಶೇಷಣ ಹಂಡೆ ಪಾಳೆಯಗಾರರಿಗೆ ಹೊಂದಿಕೊಳ್ಳುವಂತಹದು. ಹೀಗೆ ಕೆಲವು ಪ್ರಮುಖ ತಿದ್ದುಪಡಿಗಳನ್ನು ಗಮನಿಸಬಹುದಾಗಿದೆ.

ವಾಲ್ಮೀಕಿ ಬಂಧು ಸಂಪುಟ ೭ ಸಂಚಿಕೆ ೫ ಜುಲೈ ೨೦೦೨ರಲ್ಲಿ ಪ್ರೊ. ಲಕ್ಷ್ಮಣ್ ತೆಲಗಾವಿ ಅವರು "ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪೂ ಕೆಲವು ಜಿಜ್ಞಾಸೆಗಳು" ಲೇಖನ ಪ್ರಕಟವಾಗಿದೆ. ಕೃತಿಯ ಕಾಲವನ್ನು ಕುರಿತು ಈ ರೀತಿ ಲಿಖಿಸಿದ್ದಾರೆ. "ಇಲ್ಲಿ ವಿಚಾರ ಮಾಡತಕ್ಕ ಒಂದೆರಡು ಅಂಶಗಳಿವೆ. ವಿದ್ವಾಂಸರು ವ್ಯಕ್ತಪಡಿಸಿರುವಂತೆ ಈ ಚಂಪೂ ಕೃತಿಯ ಕರ್ತೃ ಅಹೋಬಲನೆಂಬುದಾಗಲಿ, ಈತನ ಕಾಲ ೧೪ನೇ ಶತಮಾನವೆಂಬುದಾಗಲಿ ನಿರ್ದಿಷ್ಟವಾದುದಲ್ಲ. ಈ ಮೇಲಿನ ಅರಸರಲ್ಲಿ ಒಬ್ಬಿಬ್ಬರು ಸಂಸ್ಥಾನಿಕರ ಹಿನ್ನೆಲೆಯಲ್ಲಿ ವಿಚಾರ ಮಾಡುವುದಾದರೆ, ಚಿತ್ರದುರ್ಗ, ಹರಪುರ ಮುಂತಾದವು ನಾಯಕ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟುದು ೧೬ನೇ ಶತಮಾನದ ಮಧ್ಯಕಾಲದಿಂದೀಚೆಗೆ. ಅದಕ್ಕೆ ಮೊದಲು ಇವು ಈ ಪಾಳೆಯ ಗಾರರ ಮೇಲ್ವಿಚಾರಣೆಗೆ ಒಳಪಡದೆ ವಿಜಯನಗರ ಸಾಮಂತರ ನೇರ ಆಳ್ವಿಕೆಯ ವ್ಯಾಪ್ತಿಗೊಳಪಟ್ಟಿದ್ದವು. ಚಿತ್ರದುರ್ಗದ ಮಟ್ಟಿಗಂತೂ ಇದು ವಾಸ್ತವ. ಬೇರೆ ಸಮಕಾಲೀನ ಸಂಸ್ಥಾನಗಳ ಮಟ್ಟಿಗೂ ಇದು ನಿಜವಿರಬೇಕು. ಹೀಗಿರುವಾಗ, ವಿಜಯನಗರದ ಆರಂಭ ಕಾಲದಲ್ಲಿ (ಕ್ರಿ.ಶ. ೧೩೩೬) ಈ ಅರಸರಲ್ಲಿ ಕೆಲವರು ಸಂಭವನೀಯವಲ್ಲವೆನ್ನದೆ ಬೇರೆ ಮಾರ್ಗವಿಲ್ಲ. ಆಗ ಈ ಕೃತಿ ೧೪ನೇ ಶತಮಾನದ್ದೆಂಬ ಊಹೆ ನಿಲ್ಲದೆ, ೧೬ನೇ ಶತಮಾನದ್ದೆಂದೇ ದೃಢಪಡುತ್ತದೆ" ಎಂದಿದ್ದಾರೆ. ತಮ್ಮ ಲೇಖನದಲ್ಲಿ ವಿದ್ಯಾರಣ್ಯರ ಹೆಸರಿನ ಉಲ್ಲೇಖನದ ಬಗ್ಗೆಯೂ ಪ್ರೊ. ಲಕ್ಷ್ಮಣ ತೆಲಗಾವಿ ಅವರು ಚರ್ಚಿಸಿದ್ದಾರೆ.

ಕೃತಿಯಲ್ಲಿ ವಿದ್ಯಾರಣ್ಯರ ಉಲ್ಲೇಖ ಬಂದಿದ್ದು, ರಥೋತ್ಸಾಹ ಕಾಂಡದಲ್ಲಿ ವಿದ್ಯಾರಣ್ಯರ ಬಗ್ಗೆ ಈ ರೀತಿ ಲಿಖಿಸಲ್ಪಟ್ಟಿದೆ:

೧೧೨) 'ತತೊ ವಿದ್ಯಾರಣ್ಯಾಭಿಧ-ಯತಿವರೇ ಭೂಸುರಗುತಾ
ಸಮಾರೂಢೇ ಶಿಷ್ಯೈಸ್ಸಹ ರಥಮಿಮಂ ಹರ್ಮ್ಯಸದೃಶಮ್।
ವಿಧಾಯಾಟಿಸೌ ಪೂಜಾಂ ಪರಮೇಶಿವಮೂರ್ತ್ಯೋಃ ಪುನರಪಿ,
ದ್ವಿಜೋಟಿಧಸ್ತಾತ್ ತತ್ರ ವ್ಯಜನಕರ ಆಸ್ತಾಟಿತಿಮತಿಮಾನ್॥

೧೧೨) ಆಗ ಹರ್ಮ್ಯಸದೃಶವಾದ ಈ ರಥವನ್ನು ಬ್ರಾಹ್ಮಣರ ಗುರುವಾದ ವಿದ್ಯಾರಣ್ಯ ಎಂಬ ಹೆಸರಿನ ಶ್ರೇಷ್ಠ ಸನ್ಯಾಸಿಯು ಶಿಷ್ಯರೊಂದಿಗೆ ಹತ್ತಲಾಗಿ, ಅತಿ ಬುದ್ಧಿಶಾಲಿಯಾದ ಈ ಬ್ರಾಹ್ಮಣನು, ಮತ್ತೊಮ್ಮೆ ಪರಶಿವಮೂರ್ತಿಗಳಿಗೆ ಪೂಜೆಯನ್ನು ಮಾಡಿ, ಕೈಯಲ್ಲಿ ಬೀಸಣಿಗೆ ಹಿಡಿದವನಾಗಿ, ಕೆಳಗೆ ಕುಳಿತನು ಎಂದಿದೆ. ಈ ಉಲ್ಲೇಖದ ಬಗ್ಗೆ ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಈ ರೀತಿ ಅಭಿಪ್ರಾಯಪಡುತ್ತಾರೆ:

ಪ್ರಥಮ ಹರಿಹರನ ಆಳ್ವಿಕೆ ಆರಂಭಗೊಂಡದ್ದು ಕ್ರಿ.ಶ. ೧೩೩೬ರಲ್ಲಿ; ಆದ್ದರಿಂದ ಈ ಕೃತಿ ಅವನ ಕಾಲದಲ್ಲೆ ರಚನೆಯಾಗಿರಬೇಕೆನ್ನುತ್ತಾರೆ ವಿದ್ವಾಂಸರು. ಇದರಲ್ಲಿ ವಿದ್ಯಾರಣ್ಯ ಯತಿಗಳು ರಥೋತ್ಸವದಲ್ಲಿ ಪಾಲ್ಗೊಳ್ಳುವ ಉಲ್ಲೇಖವಿರುವುದನ್ನು ಆಧಾರವಾಗಿ ತೋರಿಸುತ್ತಾರೆ. ವರಾಹ ಮುದ್ರೆಯ ನಾಣ್ಯಗಳ ಆಧಾರವಿಡಿದು, ೧೪ನೇ ಶತಮಾನದ ದ್ವಿತೀಯಾರ್ಧವು ಅಹೋಬಲ ಕವಿಯ ಕಾಲವೆಂದು ಕೆಲವು ವಿದ್ವಾಂಸರು ಭಾವಿಸಿರುವುದುಂಟು. ಆದರೆ 'ವಿದ್ಯಾನಗರ'ವೆಂಬ ಹೆಸರು ಪ್ರಚಾರ ಪಡೆದುದೇ ೧೬ನೇ ಶತಮಾನದಲ್ಲಿ, ಹಾಗೂ 'ವಿದ್ಯಾರಣ್ಯ' ವೆಂಬುದು ವಿಜಯನಗರ ಅದ್ವೈತಮಠದ ಅಧೀಶರೆಲ್ಲರಿಗೂ ಸಲ್ಲುವ ಬಿರುದಾದುದರಿಂದ, ಇದು ವ್ಯಕ್ತಿಯೊಬ್ಬರ ಹೆಸರಲ್ಲವೆಂಬ ಚರಿತ್ರಕಾರರ ಅಭಿಪ್ರಾಯವನ್ನು (ಅನಿಲಾ ವರ್ಘೀಸ್ : ೧೯೯೫ : ರಿಲಿಜಿಯಸ್ ಟ್ರೆಡೀಷನ್ಸ್ ಆಟ್ ವಿಜಯನಗರ ಆ್ಯಸ್ ರಿವೀಲ್ಡ್ ಥ್ರೂ ಇಟ್ಸ್ ಮಾನ್ಯುಮೆಂಟ್ಸ್: ೯, ೪೫,೫-ಅಡಿಟಿಪ್ಪಣಿ ३೧) ಲಕ್ಷಿಸಿರುವುದು ಮೆಚ್ಚತಕ್ಕ ಸಂಗತಿ. ಇದಕ್ಕೆ ಇತರ ವಿದ್ವಾಂಸರ ಸಮರ್ಥನೆಯೂ ದೊರೆತಿರುವುದು ಗಮನಾರ್ಹ. ಈ ವಾದದಲ್ಲಿ ತಥ್ಯವಿರುವಂತೆ ತೋರುತ್ತದೆ ಎಂದಿದ್ದಾರೆ.

ಸತತವಾದ ಅಧ್ಯಯನದಿಂದ ಪ್ರಾಚೀನ ಕೃತಿಗಳ ಅನೇಕ ಗೊಂದಲಗಳನ್ನು ಪರಿಹರಿಸಬಹುದು.

(ಕಿರಿಯ ವಿದ್ವಾಂಸರ ಸಂಶೋಧನೆಯನ್ನು ಮೆಚ್ಚುವ ಹಿರಿಯ ಇತಿಹಾಸಜ್ಞರಾದ ಪ್ರೊ॥ ಲಕ್ಷ್ಮಣ್ ತೆಲಗಾವಿ ಅವರು ತಮ್ಮ ಲೇಖನದ ನೆರಳಚ್ಚು ಪ್ರತಿ ಕಳುಹಿಸಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ಲೇಖಕನ ಗೌರವಪೂರ್ವಕ ಪ್ರಣಾಮಗಳು.)

ಡಾ. ಬಿ. ರಾಜಶೇಖರಪ್ಪ*

ಮರೆವಿಗೆ ತುತ್ತಾಗಿರುವ ಹೈದರಾಲಿಯ ದಳಪತಿ ಬರ್ಕಿ ಶ್ರೀನಿವಾಸರಾವ್

ಕ್ರಿ.ಶ. ೧೮ನೆಯ ಶತಮಾನದಲ್ಲಿ ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಪ್ರಮುಖರಾಗಿ ಕಾಣುವವರು ಹೈದರ್ ಅಲೀಖಾನ್ ಮತ್ತು ಟಿಪ್ಪೂ ಸುಲ್ತಾನ್ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಅವರ ರಾಜಕೀಯ ಜೀವನ ಎಲ್ಲ ಆಗುಹೋಗುಗಳಲ್ಲಿ ಮಹತ್ತರ ಪಾತ್ರವಹಿಸಿದ ಪ್ರಮುಖ ಅಥವಾ ಏಕೈಕ ವ್ಯಕ್ತಿ ದಿವಾನನಾಗಿದ್ದ ಪೂರ್ಣಯ್ಯ ಎಂಬಂತೆ ಈಚಿನ ಕಾಲದ ಕೆಲವರು ಲೇಖಕರು ಬರೆದಿದ್ದಾರೆ. ಅಂಥ ಬರಹಗಳಿಂದ ಅದೇ ಐತಿಹಾಸಿಕ ಸಂಗತಿ ಎಂಬಂತೆ ಪ್ರಚಾರವಾಗಿದೆ, ಆಗುತ್ತಲೂ ಇದೆ. ಪೂರ್ಣಯ್ಯ ಹೈದರ್ ಮತ್ತು ಟಿಪ್ಪೂ ಈ ಇಬ್ಬರ ಕಾಲದಲ್ಲೂ ಸಾಂದರ್ಭಿಕವಾಗಿ ಮಹತ್ತರ ಪಾತ್ರ ವಹಿಸಿದ್ದು ನಿಜವಾದರೂ ಹಾಗೆ ಪಾತ್ರವಹಿಸಿದ ಪ್ರಮುಖ ಅಥವಾ ಏಕೈಕ ವ್ಯಕ್ತಿ ಅವನಾಗಿರಲಿಲ್ಲ ; ಅಷ್ಟೇ ಅಲ್ಲ, ಆಗ ಅವನು ದಿವಾನನೂ ಆಗಿರಲಿಲ್ಲ. ಆದರೂ ಈ ಮೇಲಿನಂತೆ ಪ್ರಚಾರವಾಗಿರುವುದು ಆಶ್ಚರ್ಯವಾಗಿದೆ.

ಪೂರ್ಣಯ್ಯ ಹೈದರನ ಸಂಪರ್ಕಕ್ಕೆ ಬಂದದ್ದು, ೧೭೬೪ರಲ್ಲಿ ಅಥವಾ ಆ ತರುವಾಯದಲ್ಲಿ, ಶ್ರೀರಂಗಪಟ್ಟಣದ ವರ್ತಕನೊಬ್ಬನಲ್ಲಿ ಕೆಲಸ ಮಾಡಿಕೊಂಡಿದ್ದಾಗ. ಲೆಕ್ಕಾಚಾರದ ನಿಖರತೆ ಮತ್ತು ಪ್ರಾಮಾಣಿಕತೆಯಿಂದ ಹೈದರನ ಮನಸ್ಸಿಗೆ ಹಿಡಿಸಿದ ಪೂರ್ಣಯ್ಯ, ಅರಮನೆಯ ಸೇವೆಗೆ ಸೇರಿಕೊಂಡದ್ದು ೧೭೭೦ರಲ್ಲಿ. ಕನ್ನಡ ದಫ್ತರದ ಕೆಲಸದ ಗುಮಾಸ್ತನಾಗಿ, ತೋಷೀಖಾನೆಯ ಗುಮಾಸ್ತನಾಗಿ, ಮುಲಕೀ ಫೌಜು ಕಾರ್ಖಾನೆ ಕೆಲಸದ ಮೊಖ್ತೇಸರನಾಗಿ, ಆ ತರುವಾಯ ಖಜಾನೆಯ ಮುಖ್ಯಾಧಿ ಕಾರಿಯಾಗಿ ಮಂತ್ರಿಸ್ಥಾನಕ್ಕೆ ಸಮಾನವಾದ ಗೌರವ ಪಡೆದದ್ದಲ್ಲದೆ, ಹೆಗ್ಗಡದೇವನ ಕೋಟೆಯ ಬಳಿಯ ಮರಹಳ್ಳಿಯನ್ನು ಜಹಗೀರಾಗಿ ಪಡೆದ. ಹೈದರನ ಜೊತೆ ಅವನ ದಂಡಯಾತ್ರೆಗಳಲ್ಲಿ ಸರಬರಾಜು ಇಲಾಖೆಯ ಅಧಿಕಾರಿಯಾಗಿ ೧೭೮೦ರಿಂದ ೧೭೮೨ರಲ್ಲಿ ಹೈದರ್ ಮರಣಿಸುವವರೆಗೆ ಸೇವೆ ಸಲ್ಲಿಸಿದ. ತರುವಾಯ ಟಿಪ್ಪೂ ಕಾಲದಲ್ಲಿ ಹಣಕಾಸು ಮಂತ್ರಿಯಾಗಿದ್ದು, ೧೭೯೯ರಲ್ಲಿ ಟಿಪ್ಪೂ ನಿಧನಾನಂತರ ಬ್ರಿಟಿಷರ ಸಲಹೆಯ ಮೇರೆಗೆ ದಿವಾನನಾಗಿ ನೇಮಿಸಲ್ಪಟ್ಟ. ೧೮೦೭ರಲ್ಲಿ ಯಳಂದೂರು ತಾಲ್ಲೂಕನ್ನು ಜಹಗೀರಾಗಿ ಪಡೆದು, ೧೮೧೧ರಲ್ಲಿ ದಿವಾನ್ ಪದವಿಯಿಂದ ನಿವೃತ್ತನಾಗಿ, ೧೮೧೨ ರಲ್ಲಿ ಶ್ರೀರಂಗಪಟ್ಟಣದ ತನ್ನ ಮನೆಯಲ್ಲಿ ನಿಧನನಾದ. ಈ ಎಲ್ಲ ಸಂಗತಿಗಳು ಇತಿಹಾಸದಲ್ಲಿ ಸುವ್ಯಕ್ತ. ಹಾಗೆಯೇ ಹೈದರ್ ಮತ್ತು ಟಿಪ್ಪೂ ಅವರ ಕಾಲದಲ್ಲಿ ಬಿಕ್ಕಟ್ಟಿನ ಕೆಲವು ಸಂದರ್ಭಗಳಲ್ಲಿ ಪೂರ್ಣಯ್ಯ ಎಂತಹ ಮನಃಸ್ಥೈರ್ಯ, ಸಮಯಪ್ರಜ್ಞೆ, ಮುತ್ಸದ್ದಿತನ ಮತ್ತು ಸ್ವಾಮಿನಿಷ್ಠೆಯನ್ನು ಮೆರೆದ ಎನ್ನುವುದೂ ಇತಿಹಾಸದಲ್ಲಿ ಸ್ಪಷ್ಟ.

ಇದರಿಂದ ಪೂರ್ಣಯ್ಯ ದಿವಾನನಾಗಿದ್ದದ್ದು ಹೈದರ್ ಮತ್ತು ಟಿಪ್ಪೂ ಅವರ ಕಾಲದಲ್ಲಲ್ಲ, ಟಿಪ್ಪೂ ನಿಧನಾನಂತರ ಎನ್ನುವುದು ಸ್ಪಷ್ಟ. ವಸ್ತು-ಸಂಗತಿ ಹೀಗಿದ್ದೂ ಇತಿಹಾಸದ ಬಗ್ಗೆ ತಲೆಕೆಡಿಸಿಕೊಳ್ಳದ ಕೆಲವರು ಲೇಖಕರು ಪೂರ್ಣಯ್ಯ ಹೈದರ್ ಮತ್ತು ಟಿಪ್ಪೂ ಇಬ್ಬರ ಕಾಲದಲ್ಲೂ ದಿವಾನನಾಗಿದ್ದನೆಂಬಂತೆ ಭಾವಿಸಿದ್ದಲ್ಲದೆ, ಅವರಿಬ್ಬರ ರಾಜಕೀಯ ಬದುಕಿನಲ್ಲೂ ಮಹತ್ತರ ಪಾತ್ರವಹಿಸಿದವನು ಅವನೊಬ್ಬನೇ ಎಂಬಂತೆ ತಮ್ಮ ಬರಹಗಳಲ್ಲಿ ಬಿಂಬಿಸುತ್ತ ಹೋಗಿದ್ದಾರೆ. ಲೇಖಕರಷ್ಟೇ ಅಲ್ಲದೆ, ಈಗ್ಗೆ ಒಂದು ಶತಮಾನದ ಹಿಂದಿನ ಕೆಲವು ಚಾರಿತ್ರಿಕ ದಾಖಲೆಗಳನ್ನು ಪ್ರತಿ ಮಾಡಿದವರು ಕೂಡಾ ಪೂರ್ಣಯ್ಯನ ಹೆಸರು ಬರುವಲ್ಲೆಲ್ಲ ದಿವಾನ್ ಎಂಬ ವಿಶೇಷಣವನ್ನು ಸೇರಿಸಿ ಪ್ರತಿ ಮಾಡಿರುವ ಉದಾಹರಣೆಗಳೂ ಇವೆ. ಪೂರ್ಣಯ್ಯ ದಿವಾನನಾಗಿದ್ದ ಅವಧಿ ಜನರ ಮನಸ್ಸಲ್ಲಿ ಅಚ್ಚೊತ್ತಿಸಿದ ಪ್ರಭಾವವೋ ಏನೋ ಹೈದರ್ ಮತ್ತು ಟಿಪ್ಪೂ ಕಾಲದಲ್ಲೂ ಅವನೇ ದಿವಾನನಾಗಿದ್ದನಾಗಿದ್ದನೆಂದು ತಿಳಿದುಕೊಳ್ಳಲು ಕಾರಣವಾಗಿರಬೇಕೆಂದು ಕಾಣುತ್ತದೆ. ಹೈದರಾಲಿ ಕಾಲದ ಚಾರಿತ್ರಿಕ ದಾಖಲೆಗಳನ್ನು ಪರಿಶೀಲಿಸಿದಾಗ, ಅವನ ಸೈನಿಕ ಶಕ್ತಿಯಾಗಿ ಮತ್ತು ಬೌದ್ಧಿಕ ಶಕ್ತಿಯಾಗಿ ಮಹತ್ತರ ಪಾತ್ರವಹಿಸಿದ ಕೆಲವರು ಪ್ರಮುಖರು ಕಾಣಸಿಗುತ್ತಾರೆ. ಅವರಲ್ಲಿ ಬರ್ಕಿ ಎಂಬ ಹೆಸರಿನ ಮನೆತನಕ್ಕೆ ಸೇರಿದ ಶ್ರೀನಿವಾಸರಾವ್ ಅತ್ಯಂತ ಪ್ರಮುಖನಾಗಿ ಕಾಣುತ್ತಾನೆ.

ಬರ್ಕಿ ಶ್ರೀನಿವಾಸರಾವ್ ಮತ್ತು ಪೂರ್ಣಯ್ಯ ಅವರಿಗೆ ಸಂಬಂಧಿಸಿದ ಎರಡು ಸಂಗತಿಗಳನ್ನು ಹೇಳಿದರೆ ಅವರವರ ಸ್ಥಾನ ಮಹತ್ತ್ವ ಹೇಗಿತ್ತೆಂಬುದು ಸುಲಭವಾಗಿ ಗ್ರಹಿಕೆಗೆ ಬರುತ್ತದೆ. ಬರ್ಕಿ ಶ್ರೀನಿವಾಸರಾವ್ ಒಮ್ಮೆ ದೂರದಲ್ಲೆಲ್ಲೋ ಸೈನಿಕ ಕಾರ್ಯಾಚರಣೆಗೆ ಹೋಗಿದ್ದ ಸಮಯ. ಇತ್ತ ಶ್ರೀರಂಗಪಟ್ಟಣದಲ್ಲಿ ಪೂರ್ಣಯ್ಯನಿಗೆ ಆಗದ ಅಧಿಕಾರಿಯೊಬ್ಬ ಅವನ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ೧,೧೧,೦೦೦ ವರಹ ದಂಡ ಗೊತ್ತುಮಾಡಿ,

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು, ೨ನೇ ಅಡ್ಡರಸ್ತೆ (ಪಶ್ಚಿಮ), ಜೆಸಿಆರ್ ಬಡಾವಣೆ, ಚಿತ್ರದುರ್ಗ-೫೭೭ ೫೦೧



ಬರ್ಕಿ ಶ್ರೀನಿವಾಸರಾವ್, ಮೈಸೂರು ಸೈನ್ಯದ ದಳಪತಿ,
(೧೭೫೮-೧೭೮೦)
(ಚಿತ್ರಕಲಾವಿದ : ಚಿತ್ರದುರ್ಗದ ಕೆ. ಗುರುಸಿದ್ಧಪ್ಪ)

ದಸ್ತಗಿರಿಯಲ್ಲಿಟ್ಟ ಈ ಸುದ್ದಿ ಆಪ್ತರೊಬ್ಬರ ಮೂಲಕ ಶ್ರೀನಿವಾಸ ರಾವ್‌ಗೆ ತಿಳಿದಾಗ, ಅವನು ಹೈದರಾಲಿಗೆ ಈ ಬಗ್ಗೆ ತಿಳಿಸಿ ಪೂರ್ಣಯ್ಯನನ್ನು ಆ ಅವಘಡದಿಂದ ಪಾರು ಮಾಡಿದ. ಇದರಿಂದ ಪೂರ್ಣಯ್ಯನಿಗಿಂತ ಶ್ರೀನಿವಾಸರಾವ್ ಎಷ್ಟು ಪ್ರಭಾವಶಾಲಿಯಾಗಿದ್ದ ಎಂಬುದು ತಿಳಿಯುತ್ತದೆ. ಇದಲ್ಲದೆ ಹೈದರನ ಸೇವೆಯಲ್ಲಿದ್ದ ಪೂರ್ಣಯ್ಯನಿಗೆ ಮಾಸಿಕ ವೇತನ ೧,೦೦೦ ವರಹ ಇದ್ದರೆ, ಶ್ರೀನಿವಾಸರಾವ್‌ಗೆ ೨,೦೦೦ ವರಹ ಇತ್ತು. ಈ ಅಂಶಗಳಿಂದ ಪೂರ್ಣಯ್ಯ ಮತ್ತು ಶ್ರೀನಿವಾಸರಾವ್ ಅವರ ಪರಸ್ಪರ ಸ್ಥಾನ ಮಾನ ಪ್ರಭಾವಗಳು ಮನಸ್ಸಿಗೆ ಬರುತ್ತವೆ.

ಚರಿತ್ರೆಯ ಮತ್ತಿತರ ಬರಹಗಳಲ್ಲಿ ಶ್ರೀನಿವಾಸರಾವ್‌ಗೆ ಎಷ್ಟು ಪ್ರಾಮುಖ್ಯ ಸಿಕ್ಕಬೇಕಿತ್ತೋ ಅಷ್ಟು ಸಿಕ್ಕದೆ ಹೋದದ್ದು ಹಾಗೆಯೇ ಪೂರ್ಣಯ್ಯನಿಗೆ ಎಷ್ಟು ಪ್ರಾಶಸ್ತ್ಯ ಸಿಕ್ಕಬೇಕಿತ್ತೋ ಅದಕ್ಕಿಂತ ಹೆಚ್ಚು ಸಿಕ್ಕಿರುವುದು ಆಶ್ಚರ್ಯಕರವಾಗಿ ಕಾಣುತ್ತದೆ. ಈ ಹಿಂದೆ ಎಂ. ಶ್ಯಾಮರಾವ್ ಎಂಬುವರಿಂದ ಸಂಪಾದಿಸಲ್ಪಟ್ಟು, ೧೯೨೨ರಲ್ಲಿ ಬೆಂಗಳೂರಿನಲ್ಲಿ ಪ್ರಕಟವಾದ 'The Indian Heroes' ಎಂಬ ಪುಸ್ತಕದಲ್ಲಿ ಬಿ. ರಾಮಕೃಷ್ಣರಾವ್ ಎಂಬುವರು ಬರೆದ 'Barki Venkata Rao and Barki Srinivasa Rao' ಎಂಬ ಚಿಕ್ಕ ಲೇಖನವೊಂದೇ ನನಗೆ ತಿಳಿದಂತೆ, ಶ್ರೀನಿವಾಸರಾವ್ ಕುರಿತಂತೆ ಈವರೆಗೆ ಬಂದಿರುವ ಲೇಖನ. ಈ ಲೇಖನವನ್ನು ಅವರು ಕರ್ನಲ್ ವಿಲ್ಕ್ಸ್ ಬರೆದ 'The History of Mysore' ನ್ನೂ ತುಮಕೂರಿನಲ್ಲಿ ಅವರಿಗೆ ದೊರೆತ ಹೈದರನ ಜೀವಿತ ಕಥನವೊಂದರ ಹಸ್ತಪ್ರತಿಯನ್ನೂ ಆಧರಿಸಿ ಬರೆದಂತೆ ಕಾಣುತ್ತದೆ. ಆ ಜೀವಿತಕಥನದ ಹಸ್ತಪ್ರತಿ ಬಹುಶಃ 'ಹೈದರ್ ನಾಮಾ' ಇದ್ದಿರಬೇಕು. (ಇದುವರೆಗೆ ಅದನ್ನು ಬರೆದದ್ದು ಹೈದರನಲ್ಲಿ ಅಧಿಕಾರಿಯಾಗಿದ್ದ ನಲ್ಲಪ್ಪ ಎಂದು ತಿಳಿಯಲಾಗಿತ್ತು. ಆದರೆ ಈಚೆಗೆ ಡಾ. ಬಿ. ನಂಜುಂಡಸ್ವಾಮಿ ಅವರು ಅದನ್ನು ಬರೆದದ್ದು ನಲ್ಲಪ್ಪ ಅಲ್ಲ, ಅವನ ತಂದೆ ಕಛೇರಿ ಕೃಷ್ಣಪ್ಪ ಎಂದು ತೋರಿಸಿಕೊಟ್ಟಿದ್ದಾರೆ.) 'ಹೈದರ್ ನಾಮಾ'ದ ವಿವರವನ್ನು ಡಾ. ಎಂ.ಎಚ್. ಕೃಷ್ಣ ಅವರು ೧೯೩೦ರ ಎಂಎಆರ್‌ನಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಅದರ ಪೂರ್ಣ ಪಾಠವನ್ನು ತಿ. ತಾ. ಶರ್ಮಾ ಅವರು ಸಂಪಾದಿಸಿ ೧೯೭೧ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಬರ್ಕಿ ಶ್ರೀನಿವಾಸರಾವ್, ಅವನ ತಂದೆ ಬರ್ಕಿ ವೆಂಕಟರಾವ್ ಮತ್ತು ಅವನ ತಮ್ಮ ಬರ್ಕಿ ಚಂದ್ರರಾವ್ ಇವರ ವಿವರಗಳಿವೆ. ಚಿತ್ರದುರ್ಗದ ಹಿರಿಯ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು ಹಿಂದೆ 'ತಾಯಿನಾಡು' ಪತ್ರಿಕೆಯಲ್ಲಿ ಸಂಪಾದಿಸಿ ಪ್ರಕಟಿಸಿದ್ದ (ಪೇಷ್ವೆಗಳ ರಾಯಭಾರಿಯಾಗಿ ಚಿತ್ರದುರ್ಗದಲ್ಲಿದ್ದ ಭೀಮಾಜಿಪಂತ್ ಬರೆದ) 'ಚಿತ್ರದುರ್ಗ ಬಖೈರು' ೧೯೬೮ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆಯಷ್ಟೆ. ಅದರಲ್ಲೂ ಬರ್ಕಿ ಶ್ರೀನಿವಾಸರಾವ್ ಬಗ್ಗೆ ಸ್ವಲ್ಪ ಮಾಹಿತಿ ಇದೆ. ೧೯೧೬ರಲ್ಲಿ ಪ್ರಕಟವಾಗಿರುವ 'ಶ್ರೀಮನ್ಮಹಾರಾಜರವರ ವಂಶಾವಳಿ-ಭಾಗ ೧' ರಲ್ಲಿ ಕೆಲವು ವಿವರಗಳು ದೊರೆಯುತ್ತವೆ. Eloy Joze Correa Peixoto ಪೋರ್ಚುಗೀಸ್ ಭಾಷೆಯಲ್ಲಿ ಬರೆದ ಹೈದರ್ ಕುರಿತ ವೃತ್ತಾಂತದ ಇಂಗ್ಲಿಷ್ ಭಾಷಾಂತರ 'Memories of Hyder Ally from the year 1758 to 1770' ಎಂಬುದು ಎಂಎಆರ್‌ನಲ್ಲಿ ಪ್ರಕಟವಾಗಿದೆ. ಇದರಲ್ಲಿ ಬರ್ಕಿ ವೆಂಕಟರಾವ್ ಬಗೆಗೆ ಅತ್ಯಲ್ಪ ವಿವರವಿದೆ. ಕರ್ನಲ್ ಮೈಲ್ಸ್‌ರು ಮಾಡಿರುವ ಕಿರ್ಮಾನಿ ಅವರ 'ನಿಶಾನ್ ಎ ಹೈದರಿ'ಯ ಇಂಗ್ಲಿಷ್ ಭಾಷಾಂತರ ('History of Hyder Naik') ದಲ್ಲೂ ಕೆಲವು ಪೂರಕ ಅಂಶಗಳನ್ನು ಕಾಣಬಹುದು. ಇವೆಲ್ಲವನ್ನು ಪರಿಶೀಲಿಸಿ, ಬರ್ಕಿ ಮನೆತನದ ಕೆಲವರು ನೀಡಿರುವ ವಿವರವನ್ನು ಸೇರಿಸಿ ಈ ಲೇಖನವನ್ನು ಇಲ್ಲಿ ಸಾದರಪಡಿಸಲಾಗುತ್ತಿದೆ. ಹೈದರ್ ಅಲಿಯ ಉತ್ತರಾರ್ಧ ಜೀವನದ ಉದ್ದಕ್ಕೂ ಅವನ ನಿಷ್ಠಾವಂತ ಬೆಂಬಲಿಗನಾಗಿ, ಮಹಾಯೋಧನಾಗಿ, ಮುತ್ಸದ್ದಿಯಾಗಿ ಇದ್ದ ಬರ್ಕಿ ಶ್ರೀನಿವಾಸ ರಾವ್‌ನ ಚಾರಿತ್ರಿಕ ಮಹತ್ವ ಕುರಿತು ಪುನರಾಲೋಚಿಸುವ ಒಂದು ಪ್ರಯತ್ನ ಈ ಲೇಖನದಿಂದ ಆರಂಭವಾಗಲಿ ಎಂಬುದು ನನ್ನ ಆಶಯ.

ಇಲ್ಲಿ ವಂಶನಾಮವಾಗಿ ಬರುವ 'ಬರ್ಕಿ' ಎಂಬುದಕ್ಕೆ 'ಬರಕಿ', 'ಬರಕ್ಕಿ' ಎಂಬ ರೂಪಗಳೂ ಸಿಗುತ್ತವೆ. ಇಲ್ಲಿ 'ಬರ್ಕಿ' ಎಂಬ ರೂಪವನ್ನಷ್ಟೆ ಇಟ್ಟುಕೊಳ್ಳಲಾಗಿದೆ. ಇದರ ನಿರ್ದಿಷ್ಟ ಅರ್ಥ ಏನೆಂಬುದು ಮೇಲೆ ತಿಳಿಸಿದ ಆಕರಗಳಲ್ಲಿ ಸಿಕ್ಕುವುದಿಲ್ಲ. ಮೇಲೆ ಹೇಳಿದ ಬಿ. ರಾಮಚಂದ್ರರಾಯರ ಲೇಖನದಲ್ಲಿ-'ಬರ್ಕಿ' ಶಬ್ದಕ್ಕೆ ನಾನಾ ರೀತಿಯಾಗಿ ನಿಷ್ಪತ್ತಿ ಹೇಳಲಾಗುತ್ತಿದೆ. ಅದರಲ್ಲಿ ಒಂದು ವ್ಯಾಖ್ಯಾನದಂತೆ ಈ ಮನೆತನದವರು ಸಂಕಷ್ಟ ಕಾಲದಲ್ಲಿ ಬರಿ ಅಕ್ಕಿಯ ಮೇಲೆ ಜೀವ ಕಾಪಾಡಿಕೊಂಡರಂತೆ. 'ಬರಿ ಅಕ್ಕಿ' ಎಂಬುದೇ 'ಬರ್ಕಿ' ಎಂದು ಸಂಕ್ಷೇಪಗೊಂಡಿದೆ" ಹೀಗೊಂದು ವಿವರಣೆ ಇದೆ. ಮತ್ತೊಂದು ವಿವರಣೆ ಇದು ಪರ್ಷಿಯನ್ ಮೂಲದಿಂದ ಬಂದ ಶಬ್ದವೆಂದೂ ಅದರ ಅರ್ಥ ಮಿಂಚು ಎಂದೂ ಈ ಮನೆತನದವರು ಪ್ರಾಯಶಃ ಮಿಂಚಿನ ವೇಗದಲ್ಲಿ ಶತ್ರುಗಳ ಮೇಲೆ ದಾಳಿ ಮಾಡುತ್ತಿದ್ದುದರಿಂದ ಬರ್ಕಿ ಎಂದು ಅವರಿಗೆ ಅಡ್ಡ ಹೆಸರು ಬಂದಿರಬಹುದೆಂದೂ ಹೇಳುವುದುಂಟು. ಇದಲ್ಲದೆ ತಮಿಳುನಾಡಿನ ಸೇಲಂ ಜಿಲ್ಲೆಯಲ್ಲಿ ಬರ್ಕಿ ಎಂಬ ಹೆಸರಿನ ಒಂದು ಊರು ಇದೆಯೆಂದೂ ಇವರು ಮೂಲತಃ ಆ ಊರಿಗೆ ಸೇರಿದವರಾದ್ದರಿಂದ ಆದರ ಹೆಸರು ಇವರ ಮನೆತನದ ಹೆಸರಾಗಿರಬೇಕೆಂದೂ ಮತ್ತೊಂದು ವಿವರಣೆ ಇದೆ. ಬಹುಶಃ ಮೇಲಿನ ಎರಡು ವಿವರಣೆಗಳಿಗಿಂತ ಮೂರನೆಯ ವಿವರಣೆ ಹೆಚ್ಚು ಸಂಭವನೀಯ ಎಂದು ಕಾಣುತ್ತದೆ.

೧೮ನೆಯ ಶತಮಾನದ ಮಧ್ಯಭಾಗದಲ್ಲಿ ಅಂದರೆ ೧೭೫೪ ರಿಂದ ೧೭೬೦ ರವರೆಗೆ ಮೈಸೂರು ಸಂಸ್ಥಾನದ ದಳಪತಿಗಳ ಲ್ಲೊಬ್ಬನಾಗಿದ್ದವನು ಬರ್ಕಿ ಶ್ರೀನಿವಾಸರಾವ್. ಇವನು, ಇವನ ತಂದೆ ಮತ್ತು ಇವನ ತಮ್ಮ ಇವರ ಇತಿಹಾಸ ಮೈಸೂರು ಒಡೆಯರ ಹಾಗೂ ಹೈದರಾಲಿಯ ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಬೆರೆತುಹೋಗಿದೆ. ಹೈದರ್ ಪ್ರಾಬಲ್ಯಕ್ಕೆ ಬರುವ ಮುನ್ನಿನ ಕಾಲದಲ್ಲಿ ಮೈಸೂರು ಒಡೆಯರಲ್ಲಿ ಸೈನಿಕ ಸೇವೆಯಲ್ಲಿದ್ದವನು ಬರ್ಕಿ ಶ್ರೀನಿವಾಸರಾವ್‌ನ ತಂದೆ ಬರ್ಕಿ ವೆಂಕಟರಾವ್. ಆಗ ಹೈದರ್ ಮತ್ತು ಅವನ ಸೋದರ ಶಾಹ್‌ಬಾಜ್‌ಖಾನ್‌ರು ಬರ್ಕಿ ವೆಂಕಟರಾಯನ ನೇತೃತ್ವದ ಒಂದು ಮೈಸೂರು ದಳದಲ್ಲಿ ಸೈನಿಕ ಸೇವೆಯಲ್ಲಿದ್ದರು. ಮುಂದೆ ಕಾಲಚಕ್ರ ಮೇಲೆತ್ತಿದಂತೆ, ಹೈದರ್ ಮೈಸೂರಿನ 'ನವಾಬ' ಎನಿಸಿದ. ಆಗ ಅವನಲ್ಲಿ ದಳಪತಿಯಾಗಿ ಶ್ರೀನಿವಾಸರಾವ್ ಇದ್ದ. ಹುದ್ದೆಯಲ್ಲಿ ಮೇಲೇರಿದ್ದರೂ ಹೈದರನಿಗೆ ವೆಂಕಟರಾಯನಲ್ಲಿ ಗೌರವಾದರಗಳಿದ್ದುವು, ಶ್ರೀನಿವಾಸರಾಯನಲ್ಲಿ ಸ್ನೇಹ ವಿಶ್ವಾಸಗಳಿದ್ದುವು. ತನ್ನ ತಂದೆಯ ಕೈಕೆಳಗೆ ಒಂದು ಕಾಲಕ್ಕೆ ಸೇವೆಯಲ್ಲಿದ್ದವನೆಂಬ ಕಾರಣಕ್ಕೆ ಶ್ರೀನಿವಾಸರಾಯನಿಗೆ ಹೈದರನಲ್ಲಿ ಸಲುಗೆ, ಆಪ್ತತೆ, ಸ್ವತಂತ್ರ ಮನೋಭಾವಗಳಿದ್ದವು.

ಸರದಾರನಾಗಿದ್ದ ಹೈದರಾಲಿ ಆಗಿನ್ನೂ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲ. ೧೭೫೪ರಲ್ಲಿ ಬರ್ಕಿ ಶ್ರೀನಿವಾಸರಾಯ ಅಸೀಮ ಸಾಹಸ ತೋರುವ ಸಂದರ್ಭವೊಂದು ಘಟಿಸಿತು. ಆ ವರ್ಷ ಮರಾಠರ ಮುಕುಂದರಾಯ ಎಂಬುವನೊಬ್ಬ ಬೆಂಗಳೂರು ಬಳಿಯ ಹೊಸಕೋಟೆಯಲ್ಲಿದ್ದ. ಅವನ ಬಳಿ ೫೦೦ ಕುದುರೆಗಳ ಸೈನ್ಯವಿತ್ತು. ಅವನು ಎರಡು ಮೂರು ದಿನಕ್ಕೊಮ್ಮೆ ಬೆಂಗಳೂರು ಪೇಟೆಗೆ ನುಗ್ಗಿ ಲೂಟಿ ಮಾಡುತ್ತಿದ್ದ. ಆಗ ಅವನಿಗೆ ಬುದ್ಧಿ ಕಲಿಸಲು ಬರ್ಕಿ ಶ್ರೀನಿವಾಸರಾಯನಿಗೆ ಅರಸರ ಅಪ್ಪಣೆಯಾಯಿತು. ಅದರಂತೆ ಅವನು ಬೆಂಗಳೂರಿನತ್ತ ಹೊರಟರೂ, ಊರಿನ ಒಳಗೆ ಹೋಗದೆ, ಹೊರಗೇ ಇದ್ದು ಹೊಸಕೋಟೆಯ ಮಾರ್ಗಮಧ್ಯೆ ೪೦೦ ಕುದುರೆ ಸೈನಿಕರನ್ನು ಅಡಗಿಸಿಟ್ಟು ಕಾಯುತ್ತ ಕುಳಿತ. ಬೆಳಗಾಗುತ್ತಿದ್ದಂತೆ ಹೊಸಕೋಟೆಯಿಂದ ಮುಕುಂದರಾಯ ೫೦೦ ಕುದುರೆ ಸಹಿತ ಆ ದಾರಿಯಿಂದ ಬೆಂಗಳೂರಿನ ಲೂಟಿಗೆಂದು ಬರುತ್ತಿದ್ದಂತೆ ಮಾರ್ಗಮಧ್ಯೆ ಹಠಾತ್ತನೆ ಬರ್ಕಿ ಶ್ರೀನಿವಾಸರಾಯನ ಸೈನ್ಯ ಅವನ ಮೇಲೆ ಬಿದ್ದಿತು. ಭೀಕರ ಕದನವಾಗಿ ಮುಕುಂದರಾಯನನ್ನು ಶ್ರೀನಿವಾಸರಾವ್ ಬೆನ್ನಟ್ಟಿದ್ದಾಗ ಅವನು ಹೊಸಕೋಟೆಗೆ ಓಡಿಹೋಗಿ ಅವಿತಿಟ್ಟುಕೊಂಡನು.

ಬೆಂಗಳೂರಿಗೆ ಮರಳಿದ ಶ್ರೀನಿವಾಸರಾವ್ ಅಲ್ಲೇ ಇದ್ದು ಆಗಾಗ ಹೊಸಕೋಟೆಗೆ ದಾಳಿ ಮಾಡುತ್ತ ಲೂಟಿಯನ್ನೂ ಮಾಡುತ್ತ ಮುಕುಂದರಾಯನಿಗೆ ಉಬ್ಬಸವನ್ನುಂಟು ಮಾಡುತ್ತ ಬಂದನು. ಗೋಪಾಲ ಹರಿ ಎಂಬ ಮರಾಠರ ಸೇನಾಪತಿ ಮೀರಜನಿಂದ ಭಾರೀ ಸೈನ್ಯದೊಂದಿಗೆ ಬಂದು ಬೆಂಗಳೂರನ್ನು ಮುತ್ತಿದನು. ಚನ್ನಪಟ್ಟಣ ಮದ್ದೂರುಗಳೂ ಅವರ ವಶವಾದುವು. ಆಗ ಶ್ರೀನಿವಾಸರಾವ್ ಬಹಳ ಧೈರ್ಯದಿಂದ ಹೋರಾಟವನ್ನು ನಡೆಸಿದ. ಸೈನ್ಯಕ್ಕೆ ಆಹಾರಸಾಮಗ್ರಿ ಮುಗಿಯುತ್ತ ಬಂದು, ಹೊರಗಿನಿಂದ ಸರಬರಾಜೂ ಇಲ್ಲದೆ ಬಿಕ್ಕಟ್ಟಿನ ಪರಿಸ್ಥಿತಿ ಯುಂಟಾಯಿತು. ಆಹಾರ ಸಾಮಗ್ರಿ ಬೇಗ ಆಗದಿದ್ದರೆ ಬೆಂಗಳೂರು ಕೋಟೆ ಅದರೊಂದಿಗೆ ತಾವೂ ಇಲ್ಲವಾಗುತ್ತೇವೆಂದು ಅರಸರಿಗೆ ಕರಾಚೂರಿ ನಂಜರಾಜಯ್ಯನವರಿಗೆ ತನ್ನ ತಂದೆ ವೆಂಕಟರಾಯರಿಗೆ ಮೂರು ಪತ್ರಗಳನ್ನು ಬರೆದು ಅದನ್ನು ಲಕೋಟೆಯಲ್ಲಿಟ್ಟು ಅವಕ್ಕೆ ಗುಟ್ಟು ಕಡ್ಡಿ ಕಟ್ಟಿ ಕಳಿಸಿಕೊಟ್ಟನು.

ಆಗ ಬರ್ಕಿ ವೆಂಕಟರಾಯ ಹೈದರಾಲಿ ಇದ್ದೆಡೆಗೆ ಹೋದಾಗ, ಅವನು ಅವನನ್ನು ತುಂಬು ಗೌರವದಿಂದ ಕಂಡು 'ನಮ್ಮ ಅಣ್ಣ ಶ್ರೀನಿವಾಸರಾಯನ ಕ್ಷೇಮ ನನ್ನದೇ ವಿನಾ ಬೇರೆ ಯಾರದೂ ಅಲ್ಲ. ಬದುಕಿದರೆ ಅವರು ನಾನು ಇಬ್ಬರೂ ನಿಮಗೆ ಮಕ್ಕಳು' ಎಂದು ಹೇಳಿ ಆಹಾರ ಸಾಮಗ್ರಿ ಸಮೇತ ಸೈನ್ಯದೊಂದಿಗೆ ಶ್ರೀನಿವಾಸರಾವ್‌ನ ನೆರವಿಗೆ ಹೊರಟನು. ಮೊದಲಿಗೆ ಮದ್ದೂರು ಚನ್ನಪಟ್ಟಣಗಳನ್ನು ವಶಪಡಿಸಿಕೊಂಡು ಬೆಂಗಳೂರಿಗೆ ಬಂದು ಶತ್ರುಗಳು ಮುತ್ತಿಗೆ ಬಿಟ್ಟು ಕಾಲ್ತೆಗೆಯುವಂತೆ ಮಾಡುವಲ್ಲಿ ಯಶಸ್ವಿಯಾದನು. ಮಹಾರಾಜರು ಹೈದರಾಲಿಯ ಈ ಸಾಹಸಕ್ಕೆ ಮೆಚ್ಚಿ 'ನವಾಬ' ಎಂಬ ಬಿರುದು ಕೊಟ್ಟದ್ದು ಆಗಲೇ. ಕರಾಚೂರಿ ನಂಜರಾಜಯ್ಯನವರು ಸಹ ಹೈದರಾಲಿಗೆ ಸನ್ಮಾನ ಮಾಡಿದರು.

೧೭೫೯ರಲ್ಲಿ ಕರಾಚೂರಿ ಅರಸಿನವರಿಗೂ ಮತ್ತು ಆಳುವ ಅರಸಿನವರಿಗೂ ಮನಸ್ತಾಪ ಉಂಟಾಗಿ ಕರಾಚೂರಿ ಅರಸಿನವರು ತಮ್ಮ ಕಡೆಯ ಫೌಜು, ಅದರ ದಳಪತಿ ಬರ್ಕಿ ಶ್ರೀನಿವಾಸರಾವ್

ತಮ್ಮ ಪರಿವಾರ ಎಲ್ಲವನ್ನೂ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರಿಸಿದರು. ಆದರೆ ತಂದೆ ಬರ್ಕಿ ವೆಂಕಟರಾವ್ ಮಾತ್ರ ಮಹಾರಾಜರ ಸೇವೆಯಲ್ಲೇ ಮುಂದುವರಿದನು. ಅವರ ಜೊತೆಯಲ್ಲಿ ಆಗ ಹೈದರಾಲಿ ಕೂಡಾ ಇದ್ದನು. ಮುಂದೆ ಕರಾಚೂರಿ ನಂಜರಾಜಯ್ಯನವರು ಮೈಸೂರನ್ನು ಬಿಟ್ಟು ಕೊಣನೂರಿಗೆ ಶ್ರೀನಿವಾಸರಾವ್‌ನನ್ನು ತಮ್ಮೊಂದಿಗೆ ಕರೆದೊಯ್ದು ಅಲ್ಲೇ ನಿಂತರು.

ಮುಂದೊಮ್ಮೆ ಹೈದರ್ ಕೊಣನೂರಿಗೆ ಬಂದು ಕರಾಚೂರಿ ನಂಜರಾಜಯ್ಯನವರಲ್ಲಿ ಆಶ್ರಯ ಕೋರಿ ಬಂದಾಗ, ಬರ್ಕಿ ಶ್ರೀನಿವಾಸರಾವ್ ಕರಾಚೂರಿ ಅರಸಿನವರಿಗೆ ಖಾಸಗಿಯಾಗಿ ಹೈದರಾಲಿಯನ್ನು ಅವರು ತಮ್ಮಲ್ಲಿ ಸೇರಿಸಿಕೊಳ್ಳುವುದು ಬೇಡ ಎಂದು ತಿಳಿಸಿದರಾದರೂ ಅವರು ಅದಕ್ಕೊಪ್ಪದೆ ಅವನನ್ನು ತಮ್ಮಲ್ಲಿ ಸೇರಿಸಿಕೊಂಡುದಲ್ಲದೆ, ಅವನಿಗೆ ಒಂದಷ್ಟು ಫೌಜನ್ನೂ ಕೊಟ್ಟು ಕೆಲವು ಠಾಣೆಗಳನ್ನು ಕೈವಶ ಮಾಡಿಕೊಳ್ಳಲು ತಿಳಿಸಿದರು. ಹೈದರ್ ಅವರಿಗೆ ನಿಷ್ಠನಾಗಿ ನಡೆದುಕೊಂಡ ಕರಾಚೂರಿ ಅರಸಿನವರು ತನ್ನ ಸಹೆಯನ್ನು ಕಡೆಗಣಿಸಿದರೆಂಬ ಅಸಮಾಧಾನದಿಂದ ಬರ್ಕಿ ಶ್ರೀನಿವಾಸರಾವ್ ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿ ಆಳುವ ಅರಸರ ಸೇವೆಗೆ ಸೇರಿಕೊಂಡನು. ಅಲ್ಲಿಂದ ಮುಂದೆ ಅನೇಕ ವಿದ್ಯಾಮಾನಗಳೊಂದಿಗೆ ಕಾಲ ಸರಿಯಿತು.

೧೭೬೧ರಲ್ಲಿ ಹೈದರ್ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡಾಗ ಬರ್ಕಿ ಶ್ರೀನಿವಾಸರಾವ್ ಮೈಸೂರನ್ನು ತೊರೆದು ಪುಣೆಯ ಪೇಷ್ವೆಯವರಲ್ಲಿ ಉದ್ಯೋಗ ಸಂಪಾದಿಸಲು ನಿಶ್ಚಯಿಸಿ ೫೦೦ ಕುದುರೆಗಳ ತನ್ನ ಖಾಸಾ ಸೈನ್ಯದೊಂದಿಗೆ ಹೊರಟು ಕರೀಘಟ್ಟದ ಬಳಿ ಬೀಡು ಬಿಟ್ಟಿದ್ದಾಗ, ಈ ಬಗ್ಗೆ ತಿಳಿದ ಹೈದರ್ ಅಂಥ ದಕ್ಷ ಸೇನಾಧಿಕಾರಿಯನ್ನು ಕಳೆದುಕೊಳ್ಳಲು ಮನಸ್ಸಾಗದೆ ಅವನ ತಂದೆ ವೆಂಕಟರಾವ್ ಮೂಲಕ ಶ್ರೀನಿವಾಸರಾವ್‌ನ ಮನವೊಲಿಕೆಗೆ ಪ್ರಯತ್ನಿಸಿ ಯಶಸ್ವಿಯಾದನು. ಆಗ ಹೈದರ್ ಶ್ರೀನವಾಸರಾವ್‌ನನ್ನು ತನ್ನ ಅಣ್ಣ ತಮ್ಮಂದಿರ ಮರ್ಯಾದೆಯಲ್ಲಿ ನಡೆಸಿಕೊಳ್ಳುವುದಾಗಿ ಆಯುಧ ಮುಟ್ಟಿ ಪ್ರಮಾಣ ಮಾಡಿ ಒಪ್ಪಿಸಿ ತನ್ನ ಜೊತೆಗಿರಿಸಿಕೊಂಡನು. ಆಗ ಬೆಸೆದುಕೊಂಡ ಹೈದರ್ ಮತ್ತು ಶ್ರೀನಿವಾಸರಾವ್‌ರ ವಿಶ್ವಾಸ ಅವರ ಬದುಕಿನ ಕೊನೆಯವರೆಗೂ ಸಾಗಿಬಂದಿತು. ಆ ತರುವಾಯ ೧೭೬೭ರಿಂದ ೧೭೬೯ರವರೆಗೆ ನಡೆದ ಮೊದಲ ಮೈಸೂರು ಯುದ್ಧದಲ್ಲಿ ಬ್ರಿಟಿಷರೊಂದಿಗೆ ಹೈದರ್ ನಡೆಸಿದ ಹೋರಾಟದಲ್ಲಿ ಹೈದರ್ ಪರವಾಗಿ ಶ್ರೀನಿವಾಸರಾವ್ ಗಣನೀಯ ಪಾತ್ರವನ್ನು ನಿರ್ವಹಿಸಿ, ಹೈದರ್‌ನ ಗೆಲುವಿಗೆ ಕಾರಣನಾದನು.

೧೭೬೮ರಲ್ಲಿ ಮಹಿಮಾಜಿ ಸಿಂಧ್ಯ ಎಂಬ ದಳಪತಿ ಪುಣೆಯಿಂದ ಹೊರಟು ಗುರ್‍ರಂಕೊಂಡ ಪ್ರಾಂತಕ್ಕೆ ಬಂದನು. ಅವನ ಸಂಗಡ ೮೦೦೦ ಕುದುರೆ ಸವಾರರಿದ್ದರು. ತಮ್ಮ ಸಹಾಯಕ್ಕೆ ಬರಲು ಅವನು ಕಡಪದ ನವಾಬನಿಗೆ ಹೇಳಿ ಕಳುಹಿಸಿ ಗುರ್‍ರಂಕೊಂಡ ಸಾಧಿಸುವ ಹವಣಿಕೆಯಲ್ಲಿದ್ದಾಗ, ಹೈದರ್ ಸೂಚನೆಯಂತೆ ಬರ್ಕಿ ಶ್ರೀನಿವಾಸರಾವ್, ಮೀರ್ ಅಲೀ ರಜಾಖಾನ್ ಜೊತೆಗೆ ಭಾರೀ ಸೈನ್ಯದೊಂದಿಗೆ ಹೋಗಿ ಮಹಿಮಾಜಿ ಸಿಂಧ್ಯನ ಮೇಲೆ ಬಿದ್ದನು. ಸೋತ ಮಹಿಮಾಜಿ ಸಿಂಧ್ಯ ಕಡಪದ ಹಲೀಂಖಾನ್ ನೆರವಿನಿಂದ ತಪ್ಪಿಸಿಕೊಂಡು ಪುಣೆಗೆ ಓಡಿಹೋದನು. ಇದಾದ ಕೆಲ ಕಾಲದ ಮೇಲೆ ತ್ರಿಯಂಬಕಮಾಮ ಎಂಬ ದಳಪತಿಯ ನೇತೃತ್ವದಲ್ಲಿ ಮರಾಠರು ಮೈಸೂರಿನ ಮೇಲೆ ಮತ್ತೆ ದಾಳಿ ಮಾಡಿದರು. ಆಗ ಹೈದರ್ ತನ್ನನ್ನು ರಕ್ಷಿಸಿಕೊಳ್ಳಲು ಹರಸಾಹಸ ಮಾಡಬೇಕಾಯಿತು. ಚಿನಕುರಳಿ ಹತ್ತಿರ ನಡೆದ ಕದನ ಅತ್ಯಂತ ಭೀಕರವಾಗಿತ್ತಲ್ಲದೆ ಹಾನಿಕರವೂ ಆಗಿತ್ತು. ಮೈಸೂರಿನ ಸೈನ್ಯ ಶ್ರೀನಿವಾಸರಾವ್ ಮತ್ತು ಅವನ ತಮ್ಮ ಚಂದ್ರರಾವ್ ಇವರ ಸಹಿತ ಶ್ರೀರಂಗಪಟ್ಟಣಕ್ಕೆ ಸುರಕ್ಷಿತವಾಗಿ ಮರಳಿತು. ಇದಾದ ಮೇಲೆ ಶ್ರೀರಂಗಪಟ್ಟಣ ಮುತ್ತಿಗೆಗೆ ಒಳಗಾದಾಗ ಹೈದರ್, ಟಿಪ್ಪೂ ಮತ್ತು ಬರ್ಕಿ ಶ್ರೀನಿವಾಸರಾವ್‌ರನ್ನು ೩೦೦೦ ಕುದುರೆ ಮತ್ತು ಕಾಲಾಳುಗಳ ಭಾರೀ ಸೈನ್ಯವನ್ನು ಬಿದನೂರಿನತ್ತ ಕಳಿಸಿಕೊಟ್ಟಾಗ, ಇವರ ಪ್ರಯತ್ನದಿಂದ ಶತ್ರುಗಳಿಗೆ ಪುಣೆಯಿಂದ ಬರುತ್ತಿದ್ದ ಸಾಮಗ್ರಿ ಸರಬರಾಜು ನಿಂತುಹೋಯಿತು. ಆಗ ಟಿಪ್ಪೂ, ಶ್ರೀನಿವಾಸರಾವ್ ಸೈನ್ಯದಲ್ಲಿ ಇನ್ನೂ ತರಬೇತಿ ಪಡೆಯುವ ಸ್ಥಾನದಲ್ಲಿದ್ದ ಎನ್ನುವುದನ್ನು ಗಮನಿಸಬೇಕು.

೧೭೭೩-೭೪ರಲ್ಲಿ ಪುಣೆಯ ಪೇಷ್ವೆ ಮಾಧವರಾಯನು ಹೈದರ್ ತನ್ನ ವಿರುದ್ಧ ಉತ್ತರದ ಕಡೆ ನಡೆಸಲಿದ್ದ ಆಕ್ರಮಣಗಳನ್ನು ತಡೆಯಲು ತಾನೇ ಮುಂದಾಗಿ ಬಂದನು. ಆಗ ಚಿತ್ರದುರ್ಗದ ಕೊನೆಯ ಮದಕರಿನಾಯಕನು ಹೈದರ್‌ಗೆ ನೆರವಾಗಲು ತನ್ನ ಸೈನ್ಯದೊಂದಿಗೆ ಬಂದಿದ್ದನು. ಆಗ ನಡೆದ ಆನವಟ್ಟಿ ಬಳಿಯ ಕದನದಲ್ಲಿ ಹೈದರನ ಪಕ್ಷಕ್ಕೆ ಅಪಾರ ಹಾನಿಯುಂಟಾಯಿತು. ವೆಂಕಟರಾವ್ ಎಂಬ ಹೆಸರಿನ ಅವನ ದಿವಾನ ಮತ್ತೆ ಕೆಲವರು ದಕ್ಷ ಸರದಾರರು ಹತರಾದರು. ಮತ್ತೆ ಕೆಲವರು ಸೆರೆ ಸಿಕ್ಕರು. ಹಾಗೆ ಸೆರೆ ಸಿಕ್ಕವರ ಪೈಕಿ ಶ್ರೀನಿವಾಸರಾವ್‌ನ ತಂದೆ ಬರ್ಕಿ ವೆಂಕಟರಾವ್ ಕೂಡಾ ಒಬ್ಬ. ಆಗ ಶ್ರೀನಿವಾಸರಾವ್ ಮತ್ತು ಚಂದ್ರರಾವ್ ಅವರ ಕಡೆಯ ಸೇನೆ ಸಹಿತ ಶತ್ರುಗಳೊಂದಿಗೆ ಭೀಕರವಾಗಿ ಹೋರಾಡಿ ತಂದೆಯನ್ನು ಬಿಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಮದಕೇರಿ ನಾಯಕನ ನೆರವಿನಿಂದ ಹೈದರನ ಸೈನ್ಯ ಹೆಚ್ಚು ಹಾಳಾಗುವುದು ತಪ್ಪಿತು.

ಮುಂದೆ ೧೭೭೫ರಲ್ಲಿ ಮಲಬಾರ್‌ನಲ್ಲಿ ನಾಯರ್ ಮತ್ತು ಮಾಪಿಳ್ಳೆಯರ ದಂಗೆಯಾದಾಗ ಹೈದರ್ ಮೊದಲಿಗೆ ಹರಕೆರೆ (ಹರಿಕಾರ್ ?) ರಂಗಪ್ಪನಾಯಕ ಮತ್ತು ರಾಮಗಿರಿ ಚಾಮರಾಜಯ್ಯ ಇವರನ್ನು ಕಳಿಸಿಕೊಟ್ಟನು. ಆದರೆ ಅವರು ಅಲ್ಲಿ ಕೊಲೆಯಾದರು. ತರುವಾಯ ಬರ್ಕಿ ಶ್ರೀನಿವಾಸರಾವ್‌ನನ್ನು ಒಂದು ಸೈನ್ಯದೊಂದಿಗೆ ಅಲ್ಲಿಗೆ ಕಳಿಸಿಕೊಟ್ಟಾಗ, ಆ ಜನರ ದಂಗೆಯನ್ನು ಅಡಗಿಸಿ ತಕ್ಕ ಬಂದೋಬಸ್ತು ಮಾಡಿದನು. ಅವನ ಈ ಸಾಹಸಕ್ಕೆ ಮೆಚ್ಚಿದ ಹೈದರ್ ಅವನಿಗೆ ಆ ಪ್ರಾಂತದ ಫೌಜುದಾರನನ್ನಾಗಿ ಮಾಡಿದನು. ಮುಂದೆ ಹೈದರಾಲಿ ೧೭೭೬ರಲ್ಲಿ ಶ್ರೀನಿವಾಸರಾವ್‌ನನ್ನು ಅಲ್ಲಿಂದ ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡು ಸನ್ಮಾನಿಸಿ ತನ್ನ ಜೊತೆಯಲ್ಲೇ ಇರಿಸಿಕೊಂಡನು.

ಮುಂದೆ ಹೈದರಾಲಿ ೧೭೭೮ರಲ್ಲಿ ಚಿತ್ರದುರ್ಗಕ್ಕೆ ಮುತ್ತಿಗೆ ಹಾಕುವ ಉದ್ದೇಶದಲ್ಲಿದ್ದಾಗ ಮದಕೇರಿನಾಯಕನ ಮತ್ತು ಅವನ ಸೈನ್ಯದ ಸಾಮರ್ಥ್ಯದ ಬಗ್ಗೆ ತಿಳಿದಿದ್ದ ಹಲವರು "ನಾವು ಏಕಾಏಕಿ ಮುತ್ತಿಗೆ ಹಾಕಿ ದುರ್ಗವನ್ನು ಸಾಧಿಸಲು ಆಗುವುದಿಲ್ಲ. ಇದಕ್ಕೆ ಭೇದೋಪಾಯದ ವಿನಾ ಬೇರೆಯ ಎರಡನೆಯ ಉಪಾಯ ಸಾಗುವುದಿಲ್ಲ" ಎಂದು ಸಲಹೆ ನೀಡಿದರು. ಹಾಗೆ ಸಲಹೆ ನೀಡಿದ ಪ್ರಮುಖರಲ್ಲಿ ಬರ್ಕಿ ಶ್ರೀನಿವಾಸರಾವ್ ಕೂಡಾ ಒಬ್ಬ. ಅದರಂತೆ ಮುಂದೆ ೧೭೭೯ರಲ್ಲಿ ಚಿತ್ರದುರ್ಗವು ಹೈದರಾಲಿಯ ವಶವಾಯಿತು. ಹೈದರ್ ಚಿತ್ರದುರ್ಗವನ್ನು ಜಯಿಸಿದ ಅನಂತರ, ಗುರ್‍ರಂ ಕೊಂಡದ ಮೀರ್ ಅಲ್ಲೀ ರಜಾಖಾನ್‌ನೊಂದಿಗೆ ಸಂಘರ್ಷ ನಡೆಸುತ್ತಿದ್ದ ಕಡಪದ ನವಾಬ್ ಹಲೀಂಖಾನ್‌ನನ್ನು ಮುರಿಯಲು ಸೈನ್ಯದೊಂದಿಗೆ ಅಲ್ಲಿಗೆ ಬಂದನು. ಆಗ ಬರ್ಕಿ ಶ್ರೀನಿವಾಸರಾವ್ ತೋರಿದ ಸಾಹಸ ಶ್ಲಾಘ್ಯವಾಗಿತ್ತು. ಅವನು ಸಿದ್ಧವಟ್ಟದ ಕೋಟೆಯನ್ನು ಗೆದ್ದುದಲ್ಲದೆ, ನವಾಬ್ ಹಲೀಂ ಖಾನನನ್ನು ಸೆರೆಹಿಡಿದು ತಂದು ಹೈದರನಿಗೆ ಒಪ್ಪಿಸಿದನು. ಆಮೇಲೆ ಅವನು ಹೈದರಾಲಿಯ ಸೂಚನೆಯಂತೆ ಕೆಂಗೇರಿಯತ್ತ ಸೈನ್ಯವನ್ನು ಮುನ್ನಡೆಯಿಸಿ, ಅದನ್ನು ವಶಪಡಿಸಿಕೊಂಡು ಅದು ಮೈಸೂರಿನ ಅಧಿಕಾರಕ್ಕೊಳಪಡುವಂತೆ ಮಾಡಿದನು. ಅವನು ಕೈಕೊಂಡ ಕಟ್ಟಕಡೆಯ ಸೈನಿಕ ಕಾರ್ಯಾಚಾರಣೆ ಎಂದರೆ ಇದೇ. ಇದಾದ ಮೇಲೆ, ಹೈದರ್ ನಿಧನನಾಗುವ ಸುಮಾರು ಎರಡು ವರ್ಷ ಮೊದಲೇ ೧೭೮೦ರಲ್ಲಿ ಬರ್ಕಿ ಶ್ರೀನಿವಾಸರಾವ್ ನಿಧನನಾದನು.

ಹೀಗೆ ೧೮ನೆಯ ಶತಮಾನದ ದಕ್ಷಿಣ ಭಾರತದ ಚರಿತ್ರೆಯಲ್ಲಿ ಹೈದರಾಲಿ ಒಬ್ಬ ಮಹಾನಾಯಕನಾಗಿ ಬೆಳೆಯಲು ಪೂರಕವಾಗಿ ದುಡಿದವರಲ್ಲಿ ತುಂಬ ಪ್ರಮುಖನಾಗಿ ಕಾಣುವುದು ಪೂರ್ಣಯ್ಯ ಅಲ್ಲ, ಬರ್ಕಿ ಶ್ರೀನಿವಾಸರಾವ್ ಎಂಬುದನ್ನು (ನಮ್ಮ ಲೇಖಕರು) ಗಮನಿಸಬೇಕಾಗಿದೆ.

ಅನುಬಂಧ : ಬರ್ಕಿ ಶ್ರೀನಿವಾಸರಾವ್‌ನ ಒಂದು ವರ್ಣಚಿತ್ರ *: ಮೈಸೂರಿನ ಜಗನ್ಮೋಹನ ಆರ್ಟ್‌ಗ್ಯಾಲರಿಯ ಮೇಲು ಮಹಡಿಯಲ್ಲಿ ಒಂದು ಶತಮಾನದ ಹಿಂದೆ ಬರೆಯಲಾದ ಮೈಸೂರಿನ ಅನೇಕ ಐತಿಹಾಸಿಕ ವ್ಯಕ್ತಿಗಳ ಚಿತ್ರಗಳ ಸಾಲಿನಲ್ಲಿ ಬರ್ಕಿ ಶ್ರೀನಿವಾಸರಾವ್‌ನ ಒಂದು ವರ್ಣಚಿತ್ರವಿದೆ. ಈ ಚಿತ್ರವನ್ನು ಆಧರಿಸಿ ೧೯೩೧ರಲ್ಲಿ ಶ್ರೀ ಕೆ. ಗುರುಸಿದ್ಧಪ್ಪ ಎಂಬ ಚಿತ್ರದುರ್ಗದ ಚಿತ್ರಕಾರರೊಬ್ಬರು ಮೈಸೂರಿನಲ್ಲಿ ರಚಿಸಿದ ಒಂದು ವರ್ಣಚಿತ್ರವನ್ನು ಈ ಲೇಖನದ ಜೊತೆಯಲ್ಲಿ ಕೊಡಲಾಗಿದೆ.*

ಪ್ರಸ್ತುತ ವರ್ಣಚಿತ್ರದಲ್ಲಿ ಬರ್ಕಿ ಶ್ರೀನಿವಾಸರಾವ್‌ನ ವ್ಯಕ್ತಿತ್ವ ಕಣ್ಣಿಗೆ ಕಟ್ಟುವಂತಿದೆ. ಬಲಗೈಯಲ್ಲಿ ಹೂ ಹಿಡಿದು, ಎಡಗೈಯನ್ನು ಸೊಂಟದ ಭಾಗದಲ್ಲಿರಿಸಿ, ತಲೆಯ ಮೇಲೆ ಪಾಗು ಕಸೂತಿ ಕಲೆಯಿಂದ ಅಲಂಕೃತವಾದ ಬಿಳಿಯ ನಿಲುವಂಗಿ ಧರಿಸಿ, ಗಾದಿಗೆ ಒರಗಿಕೊಂಡು ತನ್ನ ಮುಂದೆ ಕತ್ತಿ ಗುರಾಣಿಗಳನ್ನು ಇರಿಸಿಕೊಂಡು, ವೀರಾಸನದಲ್ಲಿ ಭಂಗಿಯಲ್ಲಿ ಕುಳಿತಿರುವ ಬರ್ಕಿ ಶ್ರೀನಿವಾಸರಾವ್ ಗುಂಡನೆಯ ಮುಖ, ಹೊಳೆಯುವ ಅಗಲವಾದ ಕಣ್ಣು, ಕತ್ತಿಯನ್ನು ಹೋಲುವ ಹುರಿಮೀಸೆ, ತುಂಬಿದ ಗಲ್ಲ ಮತ್ತು ಕುತ್ತಿಗೆ, ಹಣೆಯಲ್ಲಿ ಸಿಂಧೂರತಿಲಕ, ಕಿವಿಯಲ್ಲಿ ಮಣಿಮುತ್ತುಗಳ ಕರ್ಣಾಭರಣ, ಸೊಂಟದಲ್ಲಿ ಒಂದು ಸಣ್ಣ ಬಾಕು-ಹೀಗೆ ವರ್ಚಸ್ವಿಯಾಗಿ ಚಿತ್ರಿತನಾಗಿದ್ದಾನೆ. ಮೂಲದ ಚಿತ್ರಕ್ಕಿಂತ ಗುರುಸಿದ್ಧಪ್ಪನವರ ಈ ಚಿತ್ರ ಹೆಚ್ಚು ಕಲಾತ್ಮಕವಾಗಿದೆ.

ಪ್ರಸ್ತುತ ಚಿತ್ರ ಬರ್ಕಿ ಮನೆತನಕ್ಕೆ ಸೇರಿದ ಶ್ರೀ ಬಿ. ರಾಘವೇಂದ್ರರಾವ್ ಎಂಬುವರ ಮನೆಯಲ್ಲಿ, ಮೈಸೂರಿನಲ್ಲಿದೆ. ಹಿಂದೆ ಚಿತ್ರದುರ್ಗದಲ್ಲಿ ಡೆಪ್ಯುಟಿ ತಹಸೀಲ್ದಾರರಾಗಿ ನಿವೃತ್ತ ಜೀವನ ನಡೆಸುತ್ತಿದ್ದ ಇವರು ಈಚೆಗೆ ಕೆಲವು ವರ್ಷಗಳ ಹಿಂದೆ ಚಿತ್ರದುರ್ಗದಿಂದ ಮೈಸೂರಿಗೆ ಹೋಗಿ ಅಲ್ಲಿ ನೆಲೆಸಿರುತ್ತಾರೆ. ಶ್ರೀ ಬಿ. ರಾಘವೇಂದ್ರ ರಾಯರ ಅಜ್ಜ ಶ್ರೀ ಬರ್ಕಿ ವೆಂಕಟರಾವ್ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರಾಗಿ ಚಿತ್ರದುರ್ಗದಲ್ಲಿದ್ದರಂತೆ. ಹೀಗೆ ಈ ಮನೆತನದವರು ಬಹು ಹಿಂದಿನಿಂದ ಚಿತ್ರದುರ್ಗ ದೊಂದಿಗೆ ವಿಶೇಷವಾದ ನಂಟನ್ನು ಹೊಂದಿರುವುದು ತಿಳಿದು ಬರುತ್ತದೆ. ಈ ನಂಟಿಗೆ ಮೂಲ ಕಾರಣ ಏನು ಎಂಬುದು ನಿರ್ದಿಷ್ಟವಾಗಿ ತಿಳಿಯದು.

ಮೇಲೆ ತಿಳಿಸಿದ ವರ್ಣಚಿತ್ರವನ್ನು ರಚಿಸಿದ ಕಲಾವಿದ ಶ್ರೀ ಗುರುಸಿದ್ಧಪ್ಪನವರು ಮೂಲತಃ ಚಿತ್ರದುರ್ಗದವರು. ಇವರ ಒಂದು ಕಾಲು ಊನವಾಗಿ ಕುಂಟುತ್ತಿದ್ದರೆಂದೂ, ಖ್ಯಾತ ಚಿತ್ರಕಲಾ ಶಿಕ್ಷಕರಾದ ಇವರನ್ನು ತಾವು ಚಿತ್ರರಂಗದಲ್ಲಿ ಶಾಲಾವಿದ್ಯಾರ್ಥಿ ಯಾಗಿದ್ದಾಗ ಗುರುಗಳನ್ನಾಗಿ ಪಡೆಯುವ ಭಾಗ್ಯ ತಮ್ಮದಾಗಿತ್ತೆಂದೂ ಖ್ಯಾತ ಚಿತ್ರಕಲಾವಿದರಾದ ಚಿತ್ರದುರ್ಗದ ಹರ್ತಿಕೋಟೆಯ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಹೇಳುತ್ತಿದ್ದರು. ಶ್ರೀ ಗುರುಸಿದ್ಧಪ್ಪನವರು ತುಂಬ ಸರಳರೂ ಸಾತ್ವಿಕರೂ ವಿದ್ಯಾರ್ಥಿ ವತ್ಸಲರೂ ಆಗಿದ್ದರೆಂದು ಶ್ರೀ ತಿಪ್ಪೇಸ್ವಾಮಿಯವರು ಎದೆದುಂಬಿ ನೆನೆಯುತ್ತಿದ್ದರು. "ಅವರನ್ನು ಕುರಿತು ಒಂದು ಲೇಖನ ಬರೆಯಿರಿ; ಹಾಗೆ ಮಾಡಿದರೆ ಅವರ ನೆನಪನ್ನು ಚಿರಗೊಳಿಸಿ ದಂತಾಗುತ್ತದೆ. ಗುರುವಾಗಿ ಅವರನ್ನು ನೋಡಿದ್ದ ನೀವೇ ಆ ಕೆಲಸವನ್ನು ಮಾಡಬೇಕು" ಎಂಬ ನನ್ನ ಪ್ರೀತಿ ಪೂರ್ವಕ ಒತ್ತಾಯಕ್ಕೆ ಶ್ರೀ ಪಿ.ಆರ್. ತಿಪ್ಪೇಸ್ವಾಮಿಯವರದು ಒಪ್ಪಿಕೊಂಡಿದ್ದರು. ಆದರೆ ಅದನ್ನು ಕಾರ್ಯಗತ ಮಾಡುವ ಮುನ್ನ ಅವರು ನಮ್ಮನ್ನು ಅಗಲಿದರು. ಆ ಕಲಾವಿದ ಶ್ರೀ ಗುರುಸಿದ್ಧಪ್ಪನವರ ನೆನಪಿಗೆ ಈ ಅಮೂಲ್ಯ ಚಿತ್ರವೊಂದು ಮಾತ್ರ ನಮ್ಮ ಪಾಲಿಗೆ ಉಳಿದಿದೆ. ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಇಲಾಖೆ ಆ ಚಿತ್ರವನ್ನು ಸಂಬಂಧಪಟ್ಟವರಿಂದ ಪಡೆದುಕೊಂಡು, ವಸ್ತುಸಂಗ್ರಹಾಲಯದಲ್ಲಿ ಇರಿಸಿದರೆ, ಜನರ ನೆನಪಿನಿಂದ ದೂರವಾಗಿರುವ ಬರ್ಕಿ ಶ್ರೀನಿವಾಸರಾವ್ ಮತ್ತು ಚಿತ್ರದುರ್ಗದ ಚಿತ್ರಕಲಾವಿದ ಗುರುಸಿದ್ಧಪ್ಪನವರನ್ನು ಜನರ ಸ್ಮರಣೆಗೆ ಮತ್ತೆ ತಂದಂತಾಗುತ್ತದೆ.

ಡಾ. ಶೀಲಾಕಾಂತ ಪತ್ತಾರ*

ಮೂಲತಃ ವರ್ಣರಂಜಿತ ಪಟ್ಟದಕಲ್ಲು ವಿರೂಪಾಕ್ಷ ದೇವಾಲಯವು

ಸುಮಾರು ಎರಡು ದಶಕಗಳ ಹಿಂದೆ ಡಾ. ಸುಂದರ ಅವರು ಬಾದಾಮಿ ಪ್ರದೇಶವು ವಿಶಿಷ್ಟ ವರ್ಣಕಲೆಯ ಆಗರ ಎಂದು ಅಭಿಪ್ರಾಯ ನೀಡಿದರು.[೧] ಹಾಗೆಯೇ ಡಾ. ಯಶೋಧರ ಮಠಪಾಲ ಅವರು ಬಾದಾಮಿಯನ್ನು 'ಮಿನಿ ಭೀಂಬೇಟ್ಕಾ' ಎಂದು ಕರೆದರು. ಹಿರಿಯ ವಿದ್ವಾಂಸರು ಹೀಗೆ ಬರೆದ ನಂತರ ಬಾದಾಮಿ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು, ಇತಿಹಾಸ ಕಾಲದ ವರ್ಣಚಿತ್ರಗಳು ಒಂದೊಂದಾಗಿ ಬೆಳಕಿಗೆ ಬರುತ್ತಿರುವುದ ಗಮನಾರ್ಹವಾಗಿದೆ. ಈ ಪ್ರದೇಶದಲ್ಲಿ ಅಜ್ಞಾತವಾಸವನ್ನು ಅನುಭವಿಸುತ್ತಿರುವ ಇನ್ನೂ ಕೆಲವು ವರ್ಣಚಿತ್ರಗಳಿರಬಹುದಾಗಿದೆ.

ಆರನೆಯ ಶತಮಾನದಷ್ಟು ಪ್ರಾಚೀನ ವರ್ಣಚಿತ್ರಗಳನ್ನು ಬಾದಾಮಿಯ ಉತ್ತರ ಗುಡ್ಡದ ಕಲ್ಲಾಸರೆಗಳಲ್ಲಿ, ಎರಡು ಹಾಗೂ ಮೂರನೆಯ ಗುಹಾಲಯಗಳಲ್ಲಿ ಮತ್ತು ಐಹೊಳೆಯ ರಾವಣ ಫಡಿಯಲ್ಲಿ ಗುರುತಿಸಲಾಗಿದೆ. ಚಾಲುಕ್ಯ ಅರಸರು ಚಿತ್ರಕಲೆಯನ್ನು ಪೋಷಿಸಿದ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ. ಗುಹಾಲಯಗಳನ್ನು ನಿರ್ಮಿಸಿದ ಬಳಿಕ ಅವನ್ನು ವರ್ಣರಂಜಿತ ಚಿತ್ರಗಳಿಂದ ಅಲಂಕರಿಸುವುದು ವಾಡಿಕೆಯಾಗಿತ್ತು. ಆದರೆ ರಾಚನಿಕ ಮಂದಿರಗಳನ್ನು ಕೂಡ ಚಾಲುಕ್ಯ ಕಲಾವಿದರು ವರ್ಣಚಿತ್ರಗಳ ಮೂಲಕ ಅಂದಗೊಳಿಸುತ್ತಿದ್ದರೆಂಬುದು ಇದುವರೆಗೆ ಗಮನಕ್ಕೆ ಬಂದಂತಿಲ್ಲ.

ಪಲ್ಲವರಿಂದ ಚಿತ್ರಕಲೆ, ಚಿತ್ರಕಾರರು ಪೋಷಣೆಗೊಂಡದ್ದು ಇತಿಹಾಸದ ಭಾಗವಾಗಿದೆ. ಮೊದಲನೆಯ ಮಹೇಂದ್ರವರ್ಮನು ವಿಚಿತ್ರಚಿತ್ತನೆಂದೂ, ಚಿತ್ರಕಾರ ಪುಲಿ ಎಂದೂ ಖ್ಯಾತನಾಗಿದ್ದಾನೆ. ಪಲ್ಲವ ಗುಹಾದೇವಾಲಯಗಳು, ರಾಚನಿಕ ಮಂದಿರಗಳು ಬಣ್ಣಗಳಿಂದ ಅಲಂಕೃತವಾಗಿವೆ. ಕಾಂಚಿಯಲ್ಲಿ ಇಮ್ಮಡಿ ನರಸಿಂಹ ವರ್ಮ ರಾಜಸಿಂಹನು (ಕ್ರಿ.ಶ. ೭೦೦-೭೨೮) ನಿರ್ಮಿಸಿದ ಕೈಲಾಸ ನಾಥ ದೇವಾಲಯವು ಚಾಲುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯನ ಗಮನ ಸೆಳೆದ ಸಂಗತಿ ಸರ್ವವಿದಿತ. ಈ ದೇವಾಲಯದ ಅರ್ಧ ಮಂಟಪವನ್ನು ಬಣ್ಣದಿಂದ ಅಂದಗೊಳಿಸಲಾಗಿತ್ತು.[೨]

ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ನಂದಿ ಮಂಟಪ ಹಾಗೂ ಅರ್ಧಮಂಟಪಗಳು ಮೂಲತಃ ವರ್ಣರಂಜಿತವಾಗಿದ್ದ ಬಗ್ಗೆ ಕುರುಹುಗಳು ಗೋಚರಿಸಿವೆ. ದೇವಾಲಯವನ್ನು ಹೀಗೆ ಬಣ್ಣಗಳಿಂದ ಹೆಚ್ಚು ಸುಂದರವಾಗಿ ಮಾಡುವ ಬಗೆ ಪಲ್ಲವರ ಅನುಕರಣೆಯಲ್ಲಿ ಎಂಬುದನ್ನು ಲಕ್ಷಿಸಬೇಕು. ಏಕೆಂದರೆ ಮಂಗಲೇಶಪೂರ್ವ ಕಾಲದಿಂದಲೂ ಇದು ಪ್ರಚಲಿತ ಪರಂಪರೆಯಾಗಿತ್ತು.

ವಿರೂಪಾಕ್ಷ ದೇವಾಲಯ ಪ್ರತ್ಯೇಕ ನಂದಿ ಮಂಟಪದ ಮೇಲ್ಗಂಡು ವರ್ಣಗಳಿಂದ ಅಲಂಕೃತವಾಗಿದ್ದುದು ಅಲ್ಲಿನ ಕೆಲವು ಪುಷ್ಪ ಚಿತ್ರಣಗಳಿಂದ ಮನಗಾಣಬಹುದು. ಮೇಲ್ಗಂಡಿನ ಮೇಲೆ ಹೀರು ಪದರನ್ನು (Absorbent ground) ಲೇಪಿಸಿ, ಸಮತಲಗೊಳಿಸಿ ಮೇಲೆ ಪುಷ್ಪ ವಿನ್ಯಾಸಗಳನ್ನು ಬಣ್ಣಗಳಲ್ಲಿ ಬಿಂಬಿಸಿದ್ದಾರೆ. ಅವು ಕಾಲನ ಸವೆತಕ್ಕೆ, ವಾತಾವರಣದ ಹೊಡೆತಕ್ಕೆ, ಹಾಗೂ ಮಾನವನ ನಿರ್ಲಕ್ಷ್ಯಕ್ಕೆ, ಸಿಲುಕಿ ಈಗ ನಶಿಸಿಹೋಗಿವೆ. ಮೇಲ್ಗಂಡಿನ ವರ್ಣಚಿತ್ರಗಳನ್ನು ಹಾಳುಮಾಡುವಲ್ಲಿ ಬಾವಲಿಗಳ ಪಾತ್ರ ಪ್ರಧಾನವಾದದ್ದು. ಅವುಗಳಿಂದಾದ ಮಾಲಿನ್ಯವನ್ನು ತೆಗೆದು ಹಾಕಲು ಬಳಸಿದ ರಾಸಾಯನಿಕ ದ್ರವಗಳು ಬಣ್ಣಗಳನ್ನು ವಿವರ್ಣವಾಗಿಸಿರುವ ಸಂಭಾವ್ಯವನ್ನು ತಳ್ಳಿ ಹಾಕುವಂತಿಲ್ಲ. ಇಷ್ಟೆಲ್ಲ ಹೊಡೆತಗಳಿಗೆ ಸಿಲುಕಿಯೂ ಕೆಲಭಾಗದಲ್ಲಿ ವರ್ಣಗಳ ಅವಶೇಷಗಳು ಉಳಿದುಕೊಂಡಿರುವುದು ಕಂಡುಬರುತ್ತದೆ.



ಛತ್ತಿನ ಕೆಳಮುಖಕ್ಕಿರುವ ವರ್ಣಮಯ ಪುಷ್ಪ

ನಂದಿ ಮಂಟಪದ ಉತ್ತರ ತೊಲೆಯ ಮೇಲ್ಭಾಗದಲ್ಲಿಯ ಪುಷ್ಪವೊಂದರ ಚಿತ್ರವನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ. ಹೀಗೆಯೆ ಇಡಿ ಮೇಲ್ಗಂಡು ಪುಷ್ಪ ಹಾಗೂ ಜ್ಯಾಮಿತಿ ನಕ್ಷೆಗಳಿಂದ ಅಲಂಕೃತವಾಗಿರುವ ಬಗ್ಗೆ ನಿಚ್ಚಳ ಸೂಚನೆಗಳಿವೆ. ಆಗ ತಾನೆ ಸಿದ್ಧಗೊಂಡಾಗ ಈ ವರ್ಣಚಿತ್ರಗಳ ಗುಣಮಟ್ಟ ಹೇಗಿತ್ತೆಂಬುದನ್ನು ಗುರುತಿಸಲು ಈ ಉಳಿಕೆಗಳು ಸಹಾಯ ಮಾಡಲಾರವು. ಕೆಂಪು ಹಾಗೂ ಕಂದು ಬಣ್ಣಗಳು ಸದ್ಯ ಗೋಚರಿಸುತ್ತವೆ. ಹೆಚ್ಚಿನ ಭಾಗವು ಹೀರು ಪದರಿನ ಬಿಳಿಯ ಬಣ್ಣದಿಂದ ಕೂಡುದ್ದು,, ಹಿಂದೊಮ್ಮೆ ಸುಣ್ಣ ಸಾರಿಸಿರಬೇಕೆಂಬ ಕಲ್ಪನೆ ಮೂಡುತ್ತದೆ.

* 'ಈಶ್ವರ ಶಿಲ್ಪ' ವಿದ್ಯಾನಗರ, ಬಾದಾಮಿ ಜಿಲ್ಲೆ : ಬಾಗಲಕೋಟೆ-೫೮೭ ೨೦೧.

ಚಾಲುಕ್ಯರ ವರ್ಣಚಿತ್ರಕಲೆಯ ತಂತ್ರ ಹಾಗೂ ಕೌಶಲ್ಯಗಳ ಬಗ್ಗೆ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಈ ವರ್ಣಚಿತ್ರಕಲೆಗಾಗಿ ಮೊದಲು ಜಿನುಗಾದ ಮರಳು, ಸಸ್ಯಗಳ ನಾರು, ಭತ್ತದ ಹೊಟ್ಟು ಹಾಗೂ ಸುಣ್ಣ-ಇವೆಲ್ಲವುಗಳ ಹದವಾದ ಮಿಶ್ರಣ ಮಾಡಿ ಅದನ್ನು ಕಲ್ಲಿನ ಮೇಲೆ ಲೇಪಿಸಿ ಹೀರು ಪದರನ್ನು (Absorbent ground) ನಿರ್ಮಿಸುತ್ತಿದ್ದರೆಂದು ಗುರುತಿಸಲಾಗಿದೆ.[೩] ಈ ಪದರು ಒಣಗಿದ ಬಳಿಕ ಅದರ ಮೇಲೆ ವರ್ಣಚಿತ್ರಗಳನ್ನು ಬಿಡಿಸಲಾಗುತ್ತಿದ್ದು ಇದನ್ನು 'ಟೆಂಪೋರಾ' ವಿಧಾನವೆಂದು ಹೇಳಲಾಗಿದೆ.

ಹಿನ್ನೆಲೆಯ ಪದರಿನ ಪ್ರಧಾನ ಘಟಕವು ಸುಣ್ಣವಾಗಿತ್ತೆಂಬುದು ಗಮನಾರ್ಹ. ಸುಣ್ಣ ಅಂಟುವಸ್ತುವೆಂಬುದು ಸರ್ವವಿದಿತ. ಚಾಲುಕ್ಯ ವರ್ಣಶಿಲ್ಪಿಗಳಿಗೆ ವಜ್ರಲೇಪದ ಬಳಕೆ ಗೊತ್ತಿತ್ತು. ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಒಂದು ಕಂಬದ ಮೇಲಿರುವ ಶಾಸನದ ಪಠ್ಯದ ಭಾಗ ಹೀಗಿದೆ. "ಪುಣ್ಯಸ್ತಾನೇ ಕ್ರಿತಂ ಪಾಪಂ ವಜ್ರಲೇಪೇನ ತಿಷ್ಟತಿ"[೪] - ಪುಣ್ಯಸ್ಥಾನದಲ್ಲಿ ಗೈದ ಪಾಪವು ವಜ್ರಲೇಪನದಂತೆ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ.

ವರ್ಣ ತಯಾರಿಕೆಯಲ್ಲಿ ಬಂಧಕ ವಸ್ತುವಾಗಿ 'ಸುಧಾ' ಬಳಕೆಯಾಗುತ್ತಿದ್ದುದನ್ನು ಅತ್ರಿಸಂಹಿತೆ, ಕಾಶ್ಯಪ ಶಿಲ್ಪ, ಶಿಲ್ಪರತ್ನ, ಮಯಮತ ಮೊದಲಾದ ಪ್ರಾಚೀನ ಗ್ರಂಥಗಳು ತಿಳಿಸುತ್ತವೆ.[೫] ಈ ಆಕರಗಳ ಮೇರೆಗೆ ಸುಧಾ ಪ್ರಮುಖವಾಗಿ ಸುಣ್ಣವನ್ನು ಒಳಗೊಂಡಿದೆ. ಅದರೊಂದಿಗೆ ಹಣ್ಣಿನ ರಸ ಮತ್ತು ಗಿಡಗಳ ತೊಗಟೆಯ ಗೋಂದು ಇವನ್ನು ಸೇರಿಸಿರಬಹುದಿತ್ತು. ಸುಧಾ ಇನ್ನೂ ಹೆಚ್ಚು ಗಟ್ಟಿಯಾಗಲೆಂದು ವಜ್ರಲೇಪ (ಬಂಧೋದಕ) ರಸವನ್ನು ಬೆರೆಸಲಾಗುತ್ತಿತ್ತು.[೬]

ಸುಣ್ಣದಿಂದ ಬಳೆಯಲಾದ ಗೋಡೆಯನ್ನು ಚಿತ್ರರಚನೆಗಾಗಿ ಬಳಸಬೇಕೆಂದು ಮಾನಸೋಲ್ಲಾಸ ತಿಳಿಸುತ್ತದೆ. ಮತ್ತು ವಜ್ರಲೇಪ ದ್ರವದ ತಯಾರಿಕೆಯ ವಿಧಾನವನ್ನು ವಿವರಿಸುತ್ತದೆ. ಸುಧಾದೊಂದಿಗೆ ಅದನ್ನು ಬೆರೆಸಿ ಗೋಡೆಯ ಮೇಲೆ ಮೂರು ಬಾರಿ ಲೇಪಿಸ ಬೇಕೆಂದು ನಿರ್ದೇಶಿಸಲಾಗಿದೆ.[೭]

ಒಟ್ಟಾರೆ ಹೀರು ಪದರು ಸುಣ್ಣದಿಂದ ಕೂಡಿದ್ದೆಂಬುದು ಸ್ಪಷ್ಟ. ಕಾಲಾನುಕ್ರಮದಲ್ಲಿ ವರ್ಣಚಿತ್ರಗಳ ಮೇಲ್ಪೈ ಪದರು ನಶಿಸಿರಲು ಕೆಳಪದರಿನ ಸುಣ್ಣದ ಅಂಶ ಉಳಿದಿರುವುದು ಕಂಡು ಬರುತ್ತದೆ. ನಂದಿ ಮಂಟಪದ ಮೇಲ್ಗಂಡು, ತೊಲೆಗಳಲ್ಲಿ ತೀರ ಹಾಳಾದ ಸ್ಥಿತಿಯಲ್ಲಿ ಬಣ್ಣದ ಅಸ್ತಿತ್ವ ಕಾಣುವುದರ ಜೊತೆಗೆ ಸುಣ್ಣದ ಅಂಶ ವಿರುವುದನ್ನು ಕಾಣಬಹುದಾಗಿದೆ.

ಇದರಂತೆ, ವಿರೂಪಾಕ್ಷ ದೇವಾಲಯದ ಮುಖಮಂಟಪದ ಮೇಲ್ಗಂಡಿನ ಸೂರ್ಯ ಶಿಲ್ಪವು ಉಷೆ, ಪ್ರತ್ಯುಷೆ, ರಥ, ಕುದುರೆಗಳು ಅರುಣ, ಮುಗಿಲುಗಳು ಹೀಗೆ ಅನೇಕ ವಿವರಗಳಿಂದ ಕೂಡಿದ್ದು ಬಿಳಿ ಬಣ್ಣದಿಂದ ಲೇಪಿತವಾಗಿರುವಂತೆ ಭಾಸವಾಗುತ್ತದೆ. ವಾಸ್ತವದಲ್ಲಿ ಇದೆಲ್ಲ ಹೀರು ಪದರಿನ ಅವಶೇಷವಾಗಿದ್ದು, ಹಿಂದೊಮ್ಮೆ ಇಡೀ ಮೇಲ್ಗಂಡು ವರ್ಣಮಯವಾಗಿತ್ತೆಂದು ತೀರ್ಮಾನಿಸಬಹುದು, ಐಹೊಳೆಯ ಹುಚ್ಚಿಮಲ್ಲಿಗುಡಿಯ ಮುಖಮಂಟಪದ ಚತ್ತುಕೂಡ ಹೀಗೆ ಹೀರು ಪದರಿಂದ ಲೇಪಿತವಾಗಿರುವ ಸೂಚನೆಗಳಿವೆ. ಹೀಗಾಗಿ ಅಲ್ಲಿಯ ಕಾರ್ತಿಕೇಯ ಶಿಲ್ಪವೂ ಮೂಲತಃ ವರ್ಣರಂಜಿತವಾಗಿರಬಹುದು.

ಗಣಪತಿ ವಿಗ್ರಹವನ್ನು ರೂಪಿಸಿದ ಕಲಾವಿದನೇ ಅದಕ್ಕೆ ಬಣ್ಣವನ್ನು ಹಚ್ಚುವುದು ಸಹಜ. ಹಾಗೆಯೆ ಶಿಲ್ಪರಚನೆ ಮಾಡಿದ ಶಿಲ್ಪಿಯೇ ಈ ವರ್ಣಕಲೆಯ ಕಲಾವಿದನಾಗಿರಬಹುದು. ಸರ್ವಸಿದ್ಧಿ ಆಚಾರಿಯು ಪ್ರಧಾನವಾಗಿ ಸ್ಥಪತಿಯಾಗಿದ್ದರೂ ಅನೇಕ ಕಲಾ ಪ್ರಕಾರಗಳಲ್ಲಿ ಪರಿಣತನಾಗಿದ್ದುದನ್ನು ಶಾಸನವೊಂದು ಸಾರುತ್ತದೆ.[೮] ಪಟ್ಟದಕಲ್ಲಿನ ಸೂರ್ಯಶಿಲ್ಪದ ರೂವಾರಿಯಾದ ಆದಿತ್ಯನೇ ಅದನ್ನು ಬಣ್ಣದಿಂದ ಸಿಂಗರಿಸಿದನೆಂದು ತಿಳಿಯಬಹುದು. ಓಜರು ಎಲ್ಲ ಮಾಧ್ಯಮಗಳಲ್ಲಿ ತಮ್ಮ ಸೃಜನಶೀಲತೆಯನ್ನು ಮೆರೆಯುವ ಸಾಮರ್ಥ್ಯವುಳ್ಳವರು.

ಬಾದಾಮಿ ಪಲ್ಲವರ ವಶವಾಗಿರುವಾಗ ಅಲ್ಲಿಯ ಮಹಾಜನರು ನೈಸರ್ಗಿಕ ಗುಹೆಯೊಂದನ್ನು ಇಮ್ಮಡಿ ಪುಲಿಕೇಶಿಯ ಸ್ಮಾರಕವಾಗಿ ಮಾಡಿ ತಮ್ಮ ಗೌರವವನ್ನು ತೋರಿದ್ದಾರೆ.[೯] ಈ ನೈಸರ್ಗಿಕ ಗುಹೆಯ ಚತ್ತಿನಲ್ಲಿ ಕೆಂಪುಬಣ್ಣದಿಂದ ರೂಪಿಸಲಾದ ಹೂವಿನ ಚಿತ್ರವೊಂದಿದ್ದುದು ಕಂಡು ಬರುತ್ತದೆ. ಚಾಲುಕ್ಯರ ಕಾಲದಲ್ಲಿ ಜನ ಸಾಮಾನ್ಯರೂ ತಮ್ಮ ಮನೆಯ ಚತ್ತು, ಗೋಡೆಗಳನ್ನು ಚಿತ್ರಗಳಿಂದ ಅಂದಗೊಳಿಸುತ್ತಿದ್ದರೆಂದು ತಿಳಿಯ ಬಹುದು. ಒಟ್ಟಿನಲ್ಲಿ ಚಿತ್ರಕಲೆ ಪ್ರಭುಗಳಿಗೂ-ಪ್ರಜೆಗಳಿಗೂ ಆಕರ್ಷಕವಾಗಿತ್ತು, ಆನಂದದಾಯಕವಾಗಿತ್ತು.

ಡಾ॥ ಕೆ.ಬಿ. ಸುದರ್ಶನ್*

ಬಾದಾಮಿ ಚಾಲುಕ್ಯರ ಸೂರ್ಯ ದೇವಾಲಯಗಳು


ಬಾದಾಮಿ ಚಾಲುಕ್ಯರ ಕಾಲದಲ್ಲಿ ಸೂರ್ಯಾರಾಧನೆ ಜನಪ್ರಿಯವಾಗಿತ್ತು. ಅವರ ಕಾಲದ ಸೂರ್ಯದೇವಾಲಯಗಳಲ್ಲಿ ಮುಖ್ಯವಾಗಿ, ಐಹೊಳೆ, ಬಾದಾಮಿ ಮತ್ತು ಪಟ್ಟದ ಕಲ್ಲುಗಳಲ್ಲಿ ಇರುವ, ಕೆಲವು ಸೂರ್ಯ ದೇವಾಲಯಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಬಾದಾಮಿ ಚಾಲುಕ್ಯರು, ಸೂರ್ಯಾರಾಧನೆಯ ಪ್ರೋತ್ಸಾಹಕರು ಎಂದು ಹೇಳುವುದಕ್ಕೆ ಕುಲಕುಮಟಗಿರಿ ಮತ್ತು ಮಾಲ್ಗನ್ ಶಾಸನಗಳು ಹಾಗೂ ಈ ಅರಸರುಗಳು ಸೂರ್ಯ ದೇವಾಲಯಗಳಿಗೆ, ನೀಡಿದ ದಾನ ಶಾಸನಗಳಾದ, (ಅಮರಾವತಿಯ ಬಳಿ ಇರುವ, ಉಮರಾವತಿಯ ಸೂರ್ಯ ದೇವಾಲಯಕ್ಕೆ ಮಂಗಲೇಶನು ದತ್ತಿ ನೀಡಿದ್ದುದನ್ನು) ಬಾಂಡಕ್ ಶಾಸನಗಳು ಸೂಚಿಸುತ್ತವೆ.[೧] ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, ಚಂದ್ರಾದಿತ್ಯ, ಅಭಿನವಾದಿತ್ಯ, ಆದಿತ್ಯವರ್ಮ, ಹೀಗೆ ತಮ್ಮ ಹೆಸರುಗಳನ್ನು ಆದಿತ್ಯನ ಜೊತೆಗೆ ಸಂಬೋಧಿಸಿಕೊಳ್ಳುತ್ತಿರುವುದನ್ನು ಗಮನಿಸಿದರೆ, ಚಾಲುಕ್ಯರು ಸೂರ್ಯರಾಧನೆಯ ಭಕ್ತರು ಎಂದು ಗುರುತಿಸಿಕೊಳ್ಳುವ ಪ್ರಯತ್ನ ಕಾಣಬರುವುದು. ಸೂರ್ಯನಿಗೆ, ಪ್ರತ್ಯೇಕ ದೇವಾಲಯಗಳು ನಿರ್ಮಾಣವಾಗುವುದು, ಬಾದಾಮಿ ಚಾಲುಕ್ಯರ ಕಾಲದಿಂದ ಹೆಚ್ಚಾಗಿ ಕಂಡುಬರುತ್ತವೆ.

ಸೂರ್ಯನ ದೇವಾಲಯಗಳ ಬಗ್ಗೆ ಗಮನ ಹರಿಸಿದಾಗ, ಐಹೊಳೆಯಲ್ಲಿ ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದ ಆರು ದೇವಾಲಯಗಳನ್ನು ಗುರುತಿಸಬಹುದು. ಅವುಗಳು, ದುರ್ಗೀಗುಡಿ, ಕೊಂತೀಗುಡಿ, ಅಂಬಿಗೇರ ಗುಡಿ, ಲಾಡಖಾನ ಮತ್ತು ಸಿದ್ದನ ಕೊಳ್ಳದ ದೇವಾಲಯಗಳು ಮುಖ್ಯ.

ಅ. ಐಹೊಳೆಯ, ದುರ್ಗಾದೇವಾಲಯದ ಒಂದು ಶಾಸನದಲ್ಲಿ ಎರಡನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕೋಮಾರ ಸಿಂಹ ಎಂಬುವನು, ಆದಿತ್ಯಭಟ್ಟಾರನಿಗೆ ದಾನವಾಗಿ ಕೊಟ್ಟದ್ದು ಎಂದು ನಿರೂಪಿತವಾಗಿದೆ.[೨] ಇದರ ಹಿನ್ನೆಲೆಯನ್ನು ಕುರಿತು, ಅನೇಕ ವಿದ್ವಾಂಸರು, ಈ ದುರ್ಗದೇವಾಲಯನ್ನು ಸೂರ್ಯ ದೇವಾಲಯವೆಂದೇ ಗುರುತಿಸುತ್ತಾರೆ. ಕಾರಣ ಮುಖ್ಯ ಪ್ರವೇಶ ದ್ವಾರದಲ್ಲಿರುವ ತೋರಣಗಳ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಶಿರಶ್ಚಕ್ರದ Oval ಮಾದರಿಯಲ್ಲಿ ಉಪವೀತವಿಲ್ಲದೆ ಎರಡೂ ಹಸ್ತಗಳಲ್ಲಿ ಕಮಲಧಾರಿಯಾಗಿರುವ, ಸೂರ್ಯನನ್ನು ನೋಡಬಹುದು. ಡಾ॥ ಎಸ್. ರಾಜಶೇಖರ್‌ರವರು, ಇಲ್ಲಿರುವ ಶಾಸನಗಳನ್ನು ಮತ್ತು ವಿನ್ಯಾಸ ಶೈಲಿಯನ್ನು ಆಳವಾಗಿ ಅಧ್ಯಯನ ಮಾಡಿ, ಇದು ೮ನೆಯ ಶತಮಾನದ ಮಧ್ಯ ಭಾಗವೆಂದು, ತಮ್ಮ ವಾದವನ್ನು ಮಂಡಿಸುತ್ತಾರೆ.[೩]

ಐಹೊಳೆಯ ಲಾಡಖಾನ ದೇಗುಲ ಸೂರ್ಯನ ಒಂದು ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿದ್ದು, ಶಿಖರದ ಪಶ್ಚಿಮದ ಗೋಡೆಗಳ ಮೇಲೆ ಸೂರ್ಯನು ಪ್ರಾಮುಖ್ಯ ಸ್ಥಾನವನ್ನು ಪಡೆದಿರುತ್ತಾನೆ. ಕಸಿನ್ಸ್ ಮತ್ತು ಸೌಂದರ ರಾಜನ್ ರವರು, ಕ್ರಮವಾಗಿ ಈ ದೇವಾಲಯವು ಕ್ರಿ.ಶ. ಐದು ಮತ್ತು ಆರನೆಯ ಶತಮಾನದೆಂದು ಹೇಳಿದರೆ, ಡಾ॥ ರಾಜಶೇಖರ್‌ರವರು[೪], ಏಳನೆಯ ಶತಮಾನದ ಕೊನೆ ಅಥವಾ ಎಂಟನೆಯ ಶತಮಾನದ ಆದಿ ಎಂದು ಸಮರ್ಥಿಸಿದ್ದಾರೆ. ಆದರೆ ಇದು ಮೂಲತಃ ದೇವಾಲಯವಾಗಿರದೆ, ಒಂದು ಸಭಾಭವನವಾಗಿರಬೇಕು. ಉಪನಯನಾದಿ, ಧಾರ್ಮಿಕ ಶಾಸ್ತ್ರಗಳಿಗೆ ಇದನ್ನು ಬಳಸುತ್ತಿದ್ದರೆಂದು ಶಾಸನವೊಂದು ಹೇಳಿದೆ. ಇದು ಮೊದಲು ಒಂದು ಯಜ್ಞಸ್ಥಳ ಅಥವಾ ಯಜ್ಞಾಶಾಲೆಯಾಗಿದ್ದಿರಬಹುದೆನಿಸುತ್ತದೆ. ಈ ಭವನದ ಮಧ್ಯೆ ಯಜ್ಞಕುಂಡವಿರುವಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿದೆ. ಹೊಗೆ ಹೋಗಲು, ಬಿಡಿ ಖಿಂಡಿಯ ನಿರ್ಮಾಣವಾಗಿದೆ ಎಂಬುದಾಗಿ ಡಾ॥ ಸೂರ್ಯನಾಥ ಕಾಮತ್ ರವರು ವಿಶ್ಲೇಷಣಾತ್ಮಕವಾದ ವಿವರಣೆಯನ್ನು ನೀಡುತ್ತಾರೆ. ಈ ಸ್ಥಳದಲ್ಲಿಯೇ ಮೊದಲನೆಯ ಪುಲಿಕೇಶಿ ಅಶ್ವಮೇಧಯಾಗವನ್ನು ಮಾಡಿರಬಹುದೆಂದು ನಂತರ ಸೂರ್ಯದೇವಾಲಯವಾಗಿ, ಈಗ ಶಿವಾಲಯವಾಗಿ ಪರಿವರ್ತನೆಯಾಗಿರಬಹುದೆಂದು, ಡಾ॥ ಸೂರ್ಯನಾಥ ಕಾಮತ್ ಸೂಚಿಸಿದ್ದಾರೆ. ಈ ಭವನಕ್ಕೆ ಗರ್ಭಗೃಹ ಆಮೇಲೆ ಸೇರ್ಪಡೆಯಾಗಿದೆ.



* ಸಂಖ್ಯೆ ೧೮೪, 'ಸತ್ಯ ನಿಲಯ', ೫ನೇ ಮುಖ್ಯರಸ್ತೆ, ಅವ್ವಲಹಳ್ಳಿ ಬಿಡಿಎ ಲೇಔಟ್, ಬನಶಂಕರಿ ಮೂರನೇ ಹಂತ, ಬೆಂಗಳೂರು - ೫೬೦ ೦೮೫.

ಇದೇ ಲಾಡಖಾನ ಸಮೀಪದಲ್ಲೇ ಪೂರ್ವಾಭಿಮುಖ ವಾಗಿ, ರೇಖಾನಗರ ಶಿಖರವನ್ನು ಹೊಂದಿರುವ ಸೂರ್ಯ ನಾರಾಯಣ ಇಲ್ಲಿಯೂ ಸಹ, ಕುಳಿತಿರುವ ಸೂರ್ಯನನ್ನು ಕಾಣ ಬಹುದು. ಗರ್ಭಗೃಹದಲ್ಲಿ ಚೌಕಾಕಾರವಾದ ಪೀಠವಿದ್ದು, ಅದರಲ್ಲಿ ಏಳು ಕುದುರೆಗಳಿವೆ. ಈಗಿರುವ ಸೂರ್ಯಮೂರ್ತಿಯು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದು ಎಂದು ಅಭಿಪ್ರಾಯಪಡುತ್ತಾರೆ.[೫] ೯ನೆಯ ಶತಮಾನದ ಶಾಸನದ ಪ್ರಕಾರ, ಐಹೊಳೆ, ವರ್ತಕ ಸಮುದಾಯವು ಈ ಸೂರ್ಯ ದೇವಾಲಯಕ್ಕೆ ಅನೇಕ ದಾನಗಳನ್ನು ನೀಡಿತು ಎಂದು ಹೇಳಿದೆ.[೬]

ರಥಾರೂಢನಾದ ಸೂರ್ಯನನ್ನು, ಚಕ್ರಗುಡಿ ಸಮೀಪ ದಲ್ಲಿರುವ ಬಡಿಗೇರಗುಡಿಯಲ್ಲಿ ಕಾಣಬಹುದು. ಇದನ್ನು ೯ನೆಯ ಶತಮಾನದ್ದೆಂದು ಗುರುತಿಸುತ್ತಾರೆ. ಚಕ್ರಗುಡಿ ಎಂಬುದರ ಅರ್ಥ ವಿಶ್ಲೇಷಣೆಯಲ್ಲಿಯೇ ಸೂರ್ಯನ ಹಿನ್ನೆಲೆಯನ್ನು ಗಮನಿಸಬಹುದು. ಡಾ॥ ರಾಜಶೇಖರ್ ಅವರ ಅಭಿಪ್ರಾಯದಂತೆ, ಕೊಂತೀಗುಡಿಯ ಸ್ತಂಭದಲ್ಲಿರುವ ಸೂರ್ಯನ ಉಬ್ಬುಶಿಲ್ಪವು, ಎರಡನೆಯ ವಿಕ್ರಮಾ ದಿತ್ಯ ಅಥವಾ ಎರಡನೆಯ ಕೀರ್ತಿವರ್ಮನ ಕಾಲದ್ದಾಗಿರಬೇಕು ಎನ್ನುವುದಾಗಿದೆ. ಐಹೊಳೆಯ ಪರಿಸರದಲ್ಲಿಯೇ ಬರುವ, ಸಿದ್ದನಕೊಳ್ಳದಲ್ಲಿ ಸೂರ್ಯನ ಶಿಲ್ಪವನ್ನು ಕಾಣಬಹುದು.

ಆ. ಬಾದಾಮೀ, ಮಾಲಗಿತ್ತಿ ಶಿವಾಲಯವು, ಮೂಲತಃ ಸೂರ್ಯನ ದೇವಾಲಯವೆಂದು ಡಾ॥ ಆ. ಸುಂದರರವರು ಗುರುತಿಸಿದ್ದಾರೆ.[೮] ಸಭಾಮಂಟಪದ ಹೊರ ಗೋಡೆಗಳ ಮೇಲೆ ಶಿವ ಮತ್ತು ವಿಷ್ಣುವಿನ ಶಿಲ್ಪಗಳಿದ್ದು, ಗರ್ಭಗೃಹದ ಒಳಭಾಗದ ಬಲತುದಿಯ ಗೋಡೆಯಮೇಲೆ ಅಪರೂಪ ಶಿಲ್ಪಗಳಿವೆ. ಕುದುರೆಯ ಮೇಲೆ ಕುಳಿತ ಒಂದು ಶಿಲ್ಪವು, ಹೆಣ್ಣು ಶಿಲ್ಪದ ತಲೆಕೂದಲನ್ನು ಎಳೆದು, ಶಿಕ್ಷಿಸುತ್ತಿರುವಂತೆ ಚಿತ್ರಿತವಾಗಿದೆ. ಇದನ್ನು ಡಾ॥ ಅ. ಸುಂದರರವರು ಪೌರಾಣಿಕ ಹಿನ್ನೆಲೆಯಿಂದ ವಿವರಿಸುತ್ತಾರೆ. ಛಾಯೆಯು ಮಾಡಿದ್ದ ತಪ್ಪಿಗಾಗಿ, ಸೂರ್ಯನು ಅವಳನ್ನು ಶಿಕ್ಷಿಸುತ್ತಿರುವುದು ಈ ಪ್ರಸಂಗವೆಂದಿದ್ದಾರೆ. ಇದು ಮೂಲತಃ ಸೂರ್ಯದೇವಾಲಯವಾಗಿದ್ದು, ಹೊರ ದ್ವಾರದಲ್ಲಿರುವ ಇಬ್ಬರು ದ್ವಾರಪಾಲಕರು, ದಂಡ ಮತ್ತು ಪಿಂಗಳರು.

ಬಾದಾಮೀ ಅರಳೀತೀರ್ಥದಲ್ಲಿರುವ ಶಿಲ್ಪಗಳ ಬಗ್ಗೆ ಡಾ॥ ಶ್ರೀನಿವಾಸ್ ಪಾಡಿಗಾರ್‌ರವರು ಬಹಳ ಚೆನ್ನಾಗಿ ವಿಶ್ಲೇಷಿಸಿ ದ್ದಾರೆ.[೯] ನಮ್ಮ ಕುತೂಲಹಲವನ್ನು ಕೆರಳಿಸುವುದು ಈ ಸೂರ್ಯ ಶಿಲ್ಪಗಳು ಅಥವಾ ಸೂರ್ಯಮೂರ್ತಿಗಳು. ಒಂದು ಸೂರ್ಯ ಶಿಲ್ಪವು ಸಮಭಂಗದಲ್ಲಿದ್ದು, ಅಶ್ವಾರೂಢನಾಗಿ ಅರುಣನು ಈ ರಥವನ್ನು ಚಲಿಸುತ್ತಿದ್ದಾನೆ. ಈ ಮೂರ್ತಿಯು ಹತ್ತು ಹಸ್ತಗಳನ್ನು ಹೊಂದಿರುವುದು ಒಂದು ವಿಶೇಷ. ಮೊದನೆಯ ಎರಡು ಹಸ್ತಗಳು ಭಗ್ನವಾಗಿದ್ದರೂ, ಕಮಲವನ್ನು ಹಿಡಿದಿರುವುದು ಸ್ಪಷ್ಟವಾಗಿದೆ. ಉಳಿದ ಹಸ್ತಗಳಲ್ಲಿ ಕತ್ತಿ-ಗುರಾಣಿ, ಬಿಲ್ಲು-ಬಾಣ, ತ್ರಿಶೂಲ-ಡಮರು, ಸೂರ್ಯನು ಜಟಾಮಕುಟವನ್ನು ಹೊಂದಿದ್ದು, ಅರ್ಧಚಂದ್ರನನ್ನು ಶಿರಸ್ಸಿನ ಮೇಲೆ ಧರಿಸಿದ್ದು, ಕರ್ಣಕುಂಡಲ, ಕಂಠಹಾರ, ಕೇಯೂರ, ಯಜ್ಞೋಪವೀತ, ತೋಳುಬಂದಿ, ಕಾಲ್ಕಡಗ ಮುಂತಾದ ಆಭರಣಗಳನ್ನು ಹೊಂದಿದ್ದಾನೆ. ಇದರ ವೈಶಿಷ್ಟ್ಯವೇನೆಂದರೆ, ಸೂರ್ಯ, ವಿಷ್ಣು ಮತ್ತು ಶಿವರ ತ್ರೈಪುರುಷನ ಪ್ರತ್ಯೇಕ ಕಲ್ಪನೆಗಳನ್ನು ಒಂದೇ ಶಿಲ್ಪದಲ್ಲಿ ಕ್ರೋಡೀಕರಿಸಲಾಗಿದೆ. ಇದೇ ಸ್ಥಳದಲ್ಲಿ ಆಸೀನನಾಗಿರುವ, ಸೂರ್ಯಮೂರ್ತಿಗೆ ನಾಲ್ಕು ಹಸ್ತಗಳಿರುವುದು ವಿಶೇಷ. ಮೊದಲ ಎರಡು ಹಸ್ತಗಳು, ಕಮಲಧಾರಿಯಾಗಿದ್ದರೆ, ಉಳಿದ ಎರಡು ಹಸ್ತಗಳು ಧ್ಯಾನ ಮುದ್ರೆ ಯಲ್ಲಿದೆ. (ಇದೇ ಶೈಲಿಯನ್ನು ಹೊಯ್ಸಳರ ಕಾಲಕ್ಕೆ ಎನ್ನಲಾದ, ತುಮಕೂರು ಜಿಲ್ಲೆಯ ನಾಗಲಾಪುರ (ಮಾಯಸಂದ್ರಕ್ಕೆ ೮ ಕಿ.ಮೀ.)ದಲ್ಲಿ ಇಂತಹ ಲಕ್ಷಣವಿರುವ, ಸ್ವಲ್ಪ ವ್ಯತ್ಯಾಸದೊಂದಿಗೆ ಕಾಣಬಹುದು. ಅಲ್ಲಿ ಸೂರ್ಯನು ಸಮಭಂಗದಲ್ಲಿದ್ದು, ನಾಲ್ಕು ಹಸ್ತಗಳನ್ನು ಹೊಂದಿದ್ದು, ಮೊದಲ ಎರಡು ಹಸ್ತಗಳಲ್ಲಿ ಕಮಲವನ್ನು ಉಳಿದ ಎರಡು ಹಸ್ತಗಳಲ್ಲಿ ಅಭಯ ಮತ್ತು ವರದ ಮುದ್ರೆಯನ್ನು ಕಾಣುತ್ತೇವೆ.

ಅರಳೀ ತೀರ್ಥದ ಸೂರ್ಯನಾರಾಯಣ ಶಿರಸ್ಸಿನ ಮೇಲೆ ಏಳುಹೆಡೆಯ ಆದಿಶೇಷನನ್ನು ಕಾಣಬಹುದು. ಇದೇ ಶೈಲಿಯನ್ನೇ ಕಲ್ಯಾಣಿ ಚಾಲುಕ್ಯರು ತಮ್ಮ ಸೂರ್ಯಶಿಲ್ಪಗಳಲ್ಲಿ ಅತ್ಯಂತ ಕ್ರಮ ಬದ್ಧವಾಗಿ ಅಳವಡಿಸಿಕೊಂಡರು (ಕುರುವತ್ತಿ, ಬೈಂದೂರು, ಗೌಜ, ಕಲ್ಲೇರಿ ಇನ್ನೂ ಮುಂತಾದವು).

ಇ. ಪಟ್ಟದ ಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯವು ಸರ್ವೋತ್ತಮವಾದುದು. ಇದನ್ನು ಲೋಕೇಶ್ವರ ದೇವಾಲಯವೆಂದೂ ಸಹ ಕರೆಯುತ್ತಾರೆ. ಎರಡನೆಯ ಚಾಲುಕ್ಯ ವಿಕ್ರಮಾದಿತ್ಯನ ರಾಣಿಯಾದ, ಲೋಕಮಹಾದೇವಿಯು, ವಿಕ್ರ ಮಾದಿತ್ಯನು ಕಂಚಿಯನ್ನು ವಶಪಡಿಸಿಕೊಂಡ ಸ್ಮರಣಾರ್ಥವಾಗಿ, ಈ ಪಟ್ಟದಕಲ್ಲು ದೇವಾಲಯವನ್ನು ಎಂಟನೆಯ ಶತಮಾನದಲ್ಲಿ ನಿರ್ಮಿಸಿದಳು.[೧೦]

ಈ ನಂದೀ ಮಂಟಪದ, ಪೂರ್ವಕ್ಕಿರುವ, ಒಳಭಾವಣಿ ಯಲ್ಲಿರುವ ಸೂರ್ಯನು, ದೀರ್ಘ ವೃತ್ತಾಕಾರದ ಶಿರಶ್ಚಕ್ರ, ರತ್ನಮಕುಟ, ಕಟೀಬಂಧ, ಉದರಬಂಧ, ಉಪವೀತ ಹಾಗೂ ಕೈಗಳಲ್ಲಿ ಎರಡು ಕಮಲಗಳನ್ನು ಧರಿಸಿರುವ, ಬಲ ಮತ್ತು ಎಡಭಾಗಗಳಲ್ಲಿ ಮೂರು ಮೂರು ಕುದುರೆಗಳು, ಮಧ್ಯೆ ಒಂದು ಕುದುರೆ ಮೋಡದ ಮಧ್ಯೆ ಚಿಮ್ಮುತ್ತಾ, ನೆಗೆಯುತ್ತಾ ಹೋಗು ತ್ತಿರುವಂತಿದೆ. ಬಾಣಧಾರಿಣಿಯರಾದ ಉಷೆ ಮತ್ತು ಪ್ರತ್ಯುಷೆಯರು, ಚಾಮರಧಾರಿ ಹಾಗೂ ಮಾಲಾಧಾರಿಣಿಯರು, ಗಂಧರ್ವರೂ, ಇವರೆಲ್ಲರೂ ಸಹ ಮೋಡದಲ್ಲಿ ತೇಲಿಕೊಂಡು ಹೋಗುತ್ತಿರುವಂತೆ ಕಾಣುತ್ತಾರೆ. ಇಂತಹ ಎಲ್ಲಾ ಪರಿವಾರದವರನ್ನು ಒಳಗೊಂಡ,

ಸೂರ್ಯ ಮೂರ್ತಿಯು, ಕರ್ನಾಟಕದಲ್ಲಿ ಅಪರೂಪವಾದರೂ, ಇದರ ಅನುಕರಣೆಯನ್ನು ಹಳೇಬೀಡಿನ ಹೋಯ್ಸಳೇಶ್ವರ ದೇವಾಲಯದ, ಪೂರ್ವಾಭಿಮುಖವಾಗಿರುವ, ಹೊರಗೋಡೆಯ ಮೇಲೆ ಕಾಣುವ, ಸೂರ್ಯ, ಅವನ ಕುದುರೆಗಳು, ಬಾಣ ಧಾರಿಣಿಗಳಾದ ಉಷೆ ಮತ್ತು ಪ್ರತ್ಯುಷೆಯರಲ್ಲಿ ಕಂಡುಬರುತ್ತದೆ. ಏನೇ ಆದರೂ, ಶಿಲ್ಪಕಲಾದೃಷ್ಟಿಯಿಂದ ಇದು ಅತ್ಯಂತ ಕುತೂಹಲ ಕಾರಿಯಾಗಿದೆ.

ಸಾಮಾನ್ಯವಾಗಿ, ಪಟ್ಟದ ಕಲ್ಲಿನಲ್ಲಿ ಶೈವ ಹಾಗೂ ಜೈನ ಸ್ಮಾರಕಗಳನ್ನು ಮತ್ರ ನಾವು ಗಮನಿಸುತ್ತೇವೆ. ಡಾ॥ ಶ್ರೀನಿವಾಸ ಪಾಡಿಗಾರ್‌ರವರು,[೧೧] ವಿರೂಪಾಕ್ಷದೇವಾಲಯದ ದಾಖಲೆ ಗಳನ್ನು ಪರೀಕ್ಷಿಸಿದಾಗ ಈ ದೇವಾಲಯದ ಪೂರ್ವ ಮುಖ ಮುಂಟಪದ ಛಾವಣಿಯಲ್ಲಿರುವ, ಈ ಸೂರ್ಯಶಿಲ್ಪವು, ದೇವಾಲಯದ ಹಿಂಬದಿ ಗೋಡೆಗಳ ಮೇಲೆ, ಸೂರ್ಯ ನಾರಾಯಣನ ಶಿಲ್ಪವು ಇರುವುದರಿಂದ, ವಾಸ್ತವವಾಗಿ ಇದು, ಸೂರ್ಯನಾರಾಯಣ ದೇವಾಲಯವೇ ಆಗಿತ್ತೆಂದು ಅಭಿಪ್ರಾಯ ಪಡುತ್ತಾರೆ.

Percy Brown, Henry Cousins ಹಾಗೂ ಇತರರ ಪ್ರಕಾರ, ವಿರೂಪಾಕ್ಷ ದೇವಾಲಯದ ಸಮೀಪದಲ್ಲಿಯೇ, ಕ್ರಿ. ಶ. ೬೮೦ರಲ್ಲಿ ನಿರ್ಮಿತವಾದ, ಪಾಪನಾಥ ಅಥವಾ ಪಾಪನಾಶ ದೇವಾಲಯವು, ವಿಷ್ಣು ಅಥವಾ ಸೂರ್ಯನಿಗೆ ಸಂಬಂಧಿಸಿದ್ದೆಂದು ಹೇಳುತ್ತಾರೆ. ಏಕೆಂದರೆ, ಈ ದೇವಾಲಯದ ಹೊರಗೋಡೆಯ, ಪಶ್ಚಿಮ ಭಾಗದಲ್ಲಿ ಸೂರ್ಯಮೂರ್ತಿ ಇದೆ. ನಂದೀ ಮಂಟಪದ ಛಾವಣಿಯಲ್ಲಿ ಅನಂತಶಾಯಿ ಹಾಗೂ ವಿಷ್ಣುವಿನ ಶಿಲ್ಪಗಳೂ, ಗರ್ಭಗೃಹದ, ಹೊರಗೋಡೆಗಳಲ್ಲಿ ದಕ್ಷಿಣ, ಪಶ್ಚಿಮಕ್ಕೆ ಪ್ರಧಾನ ಸ್ಥಾನವನ್ನು ಪಡೆದುಕೊಂಡಿರುವುದು, ಈ ಕಾರಣಗಳಿಂದ ಇದು ಸೂರ್ಯ ದೇವಾಲವೆಂದೇ ಹೇಳಬಹುದು ಮತ್ತು ಈ ದೇವಾಲಯವು ಎಂಟನೆಯ ಶತಮಾನದ ಕೊನೆಯಲ್ಲಿ ಪ್ರಾರಂಭವಾಗಿರಬಹುದೆಂದು ಡಾ॥ ಎ. ಎಂ. ಅಣ್ಣಿಗೇರಿ[೧೩] ಅಭಿಪ್ರಾಯಪಡುತ್ತಾರೆ.

ಒಟ್ಟಿನಲ್ಲಿ ಬಾದಾಮೀ ಚಾಲುಕ್ಯರ ಕಾಲದಲ್ಲಿ ಶಿವ, ವಿಷ್ಣುವಿನಂತೆ ಸೂರ್ಯ ಮಂದಿರಗಳು ರಚನೆಯಾಗಿದ್ದು, ಸೌರಪಂಥವು ಬಲವಾಗಿತ್ತೆನ್ನಬಹುದು.

***

ಆಧಾರಸೂಚಿ ಮತ್ತು ಟಿಪ್ಪಣಿಗಳು


೧. R. S. Panchamukhi., 1947, *Pattadakal and its Sculpturs, A Brief outline, B.D.R.I., Vol VIII*, Poona, pp.60-65.
೨. I. A., VII, p.p. 285-287.
೩. Rajashekhar S., *1985, Early Chalukyan Art at Aihole,* New Dehli, p.97.
೪. Appendix-1
೫. *Opt., Cit.*, p.131.
೬. Annigeri A.M., 1974, Aiholė, Samuskruthi Matter kala (Kan) Dharwad, p. 29.
೭. Badami Clss Recora dated 543 A.D., S.I.I., Vol, XI part I, No 35, p. 21.
೮. *Vishaya Viswakosha Karnataka* (Kannada)., 1974, Mysore University, Mysore, p.999.
೯. Sculpture in Arali Thirtha *Q.J.M.S.*, vol. 67, 1975, pp. 225-28.
೧೦. Some Early Chalukyan Temples, *Q.J.M.S.*, 70, 1979, pp. 100-101
೧೧. Notes on pattadakal inscriptions Q.J.M.S. 1985.
೧೨. Pattadakal and etc., Sculpture, *BDRI, vol.* VIII, poona, 1943, pp. 623.
೧೩. *Opt., Cit.,* pp. 41-44.

ಎಸ್. ವಿ. ವೆಂಕಟೇಶಯ್ಯ*, ಜೆ.ವಿ.ಪಿ. ರಾವ್, ಎಂ.ವಿ. ವಿಶ್ವೇಶ್ವರ

ಚಾಲುಕ್ಯ ಸಾಮ್ರಾಜ್ಯದ ಪರಿಸರದಲ್ಲಿನ ಇತ್ತೀಚಿನ ಶೋಧಗಳು

ಭಾರತೀಯ ಪುರಾತತ್ವ ಸರ್ವೇಕ್ಷಣದ ಧಾರವಾಡ ವಲಯವು ಕಳೆದೆರಡು ವರುಷಗಳಿಂದ ಚಾಲುಕ್ಯ ಸಾಮ್ರಾಜ್ಯದ ಪ್ರಮುಖ ಕಲಾಕೇಂದ್ರವೆನಿಸಿರುವ ಐಹೊಳೆ, ಬಾದಾಮಿ ಪಟ್ಟದಕಲ್ಲುಗಳಲ್ಲಿ ಕೇಂದ್ರೀಕೃತ ಕಾರ್ಯಾಚರಣೆಯನ್ನು ಕೈಗೊಂಡಿದೆ. ಈ ಕಾರ್ಯಾಚರಣೆಯ ಅಂಗವಾಗಿ ಸ್ಥಳಸಂಶೋಧನೆ, ಉತ್ಖನನ; ಸ್ಮಾರಕ ಸಂರಕ್ಷಣೆ, ಪರಿಸರಾಭಿವೃದ್ಧಿ, ಮುಂತಾದ ಕೆಲಸಗಳನ್ನು ಈ ಇಲಾಖೆ ಕೈಗೊಂಡಿದೆ. ಈ ಕಾರ್ಯಗಳಿಂದ ಬಾದಾಮಿ ಚಾಲುಕ್ಯ ಪೂರ್ವ ಕಾಲದ ಇತಿಹಾಸ, ಕಟ್ಟಡ ನಿರ್ಮಾಣ ಕಾರ್ಯ, ದೇವಾಲಯ ನಿರ್ಮಾಣ ಪ್ರಕ್ರಿಯೆಯ ಅಂಗವಾಗಿ ಆಚರಣೆಯಲ್ಲಿದ್ದ ವಾಸ್ತುಪೂಜಾ ವಿಧಾನ ಮುಂತಾದವುಗಳ ಬಗೆಗೆ ಇದುವರೆವಿಗೂ ವಿದ್ವಾಂಸರ ಗಮನಕ್ಕೆ ಬರದೆ ಇದ್ದ ಅನೇಕ ಹೊಸ ಮಾಹಿತಿ ಬೆಳಕಿಗೆ ಬಂದಿದೆ. ಹೀಗೆ ಬೆಳಕಿಗೆ ಬಂದಿರುವ ಮಾಹಿತಿಗಳಲ್ಲಿ ಮುಖ್ಯವಾದುವನ್ನು ಸಂಗ್ರಹವಾಗಿ ಇಲ್ಲಿ ನಿರೂಪಿಸಿದೆ.

೧. ಬಾದಾಮಿಯಿಂದ ಕೇವಲ ೪ ಕಿ.ಮೀ ದೂರದಲ್ಲಿರುವ ಬನಶಂಕರಿ ದೇವಾಲಯದ ಮುಂದೆ ಇರುವ ಚೌಕಾಕಾರದ ಹರಿಶ್ಚಂದ್ರ ಪುಷ್ಕರಿಣಿ ಕೆಲವು ವರ್ಷಗಳಿಂದ ಒಣಗಿ ಹೋಗಿರುವುದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೆ ಕಾರಣ ಕಳೆದ ನಾಲ್ಕಾರು ವರುಷಗಳಿಂದ ಮಳೆಯ ಪ್ರಮಾಣ ಕಡಿಮೆಯಾಗಿರುವುದು. ಅದಕ್ಕಿಂತ ಮುಖ್ಯವಾಗಿ ಈ ಪುಷ್ಕರಣಿಯ ಪರಿಸರದಲ್ಲಿ ಆಳವಾಗಿ ಕೊರೆದಿರುವ ಕೊಳವೆಬಾವಿಗಳ ಸಂಖ್ಯೆ ಅಗಾಧ ಪ್ರಮಾಣದಲ್ಲಿ ಹೆಚ್ಚಾಗಿರುವುದರಿಂದ ಅಂತರ್ಜಲ ಬಹಳಷ್ಟು ಕುಸಿದಿರುವುದು ಭಾ.ಪು.ಸ. ಇಲಾಖೆಯ ವತಿಯಿಂದ ಪುಷ್ಕರಣಿಯ ಹೂಳೆತ್ತುವಿಕೆಯಿಂದ ಜಲದ ಒರತೆಗಳನ್ನು ಶುದ್ಧೀಕರಿಸುವ ಕಾರ್ಯ ಕೈಗೊಳ್ಳಲಾಯಿತು. ಇದರ ಅಂಗವಾಗಿ ಕಡೆಯ ಮೆಟ್ಟಿಲಿನವರೆಗೂ ಹೂಳೆತ್ತಿದರೂ ನೀರಿನ ಸಂಗ್ರಹವಾಗುವಂತೆ ಕಾಣದಿದ್ದುದರಿಂದ ಕಪ್ಪು ಮಣ್ಣಿನ ಕೆಳಗೆ ಇದ್ದಿರಬಹುದಾದ ಸ್ವಾಭಾವಿಕ ಒರತೆಗಳನ್ನು ಸ್ವಚ್ಛಗೊಳಿಸುವ ಉದ್ದೇಶದಿಂದ ಕೆರೆಯ ಅಂಗಳದ ಮಧ್ಯದಲ್ಲಿ ಚೌಕಾಕಾರದ (೧೨.೫೦x೧೨.೫೦ಮೀ) ಕುಳಿಯನ್ನು ೨.೧೦ಮೀ ಆಳದವರೆಗೆ ತೊಡಲಾಯಿತು. ಈ ಕುಳಿಯಲ್ಲಿ ಸು. ೬೦ ಸೆಂ.ಮೀ ಆಳದವರೆಗೆ ಕಪ್ಪು ಮಣ್ಣಿನಸ್ತರ ಅದರ ಕೆಳಗೆ ಸಮಾನಾಂತರವಾಗಿ ಹರಡಿದೆ. ೧೫೦ ಸೆ.ಮೀ. ದಪ್ಪದ ಕಿರು ಹಾಗೂ ಮಧ್ಯಮ ಗಾತ್ರದ ಉಂಡೆಗಳಲ್ಲುಗಳಿಂದ ಕೂಡಿದ ಹಳದಿ ಬಣ್ಣದ ಗರಸಿನ ಸ್ತರವಿದೆ ಈ ಸ್ತರದಲ್ಲಿ ಕ್ವಾರ್ಟಜೈಟ್ ಕಲ್ಲಿನಿಂದ ರೂಪಿಸಿ ಮಚ್ಚುಗತ್ತಿ (Chopper) ಕಡುಗತ್ತಿ (Cleaver) ಅಶೂಲಿಯನ್ ಮಾದರಿಯ ಕೈಗೊಡಲಿ (Acheulian) ಮತ್ತು ಹೆರೆಗತ್ತಿ (Scraper) ಮುಂತಾದ ಆದಿ ಹಳೆಯ ಶಿಲಾಯುಗದ ಶಿಲೋಪಕರಣಗಳು ಬೆಳಕಿಗೆ ಬಂದಿವೆ (ಚಿತ್ರ ೧) ಮಲಪ್ರಭಾ





ನದಿದಡದಿಂದ ಬಹುದೂರದವರೆಗೂ ಹರಡಿದ್ದ ಪ್ರಾಚೀನ ಶಿಲಾಯುಗದ ಆಯುಧವುಳ್ಳ ಪ್ರಾಥಮಿಕ ನೆಲೆ/ನಿವೇಶನ/ (Primary Location)ದ ಹರಿವು ವಿಸ್ತಾರಗಳನ್ನು ಸೂಚಿಸುವ ದೃಷ್ಟಿಯಿಂದ ಈ ಶೋಧ ಗಮನಾರ್ಹವಾಗುತ್ತದೆ.

೨. ಬಾದಾಮಿಯ ಅಗಸ್ತ್ಯತೀರ್ಥ ಸರೋವರವೂ ಅನೇಕ ವರ್ಷಗಳಿಂದ ಈ ಪ್ರದೇಶದಲ್ಲಿ ಸರಿಯಾಗಿ ಮಳೆಯಾಗದ ಕಾರಣ ಒಣಗುತ್ತ ಬಂದಿತ್ತು. ಇದರಿಂದ ಭೂತನಾಥ ದೇವಾಲಯಗಳ ಗುಂಪಿನಿಂದ (ಉತ್ತರ ಹಾಗೂ ಪೂರ್ವ) ಕೆರೆಯೊಳಗೆ ಇಳಿಯಲು. ಇರುವ ಸೋಪಾನಗಳು, ಪೂರ್ತಿಯಾಗಿ ಕಾಣುತ್ತಿದ್ದು ಅನೇಕ ಕಡೆ ಶಿಥಿಲವಾಗಿ ಆಧಾರರಹಿತವಾಗಿ ಅಂಕುಡೊಂಕಾಗಿದ್ದವು. ಕೆಲವು ಕಲ್ಲುಗಳು ಸ್ಥಾನಾಂತರಗೊಂಡಿದ್ದವು. ಇವುಗಳನ್ನು ಬಟ್ಟಿ ಕಟ್ಟುವ ಸಲುವಾಗಿ ಕೆಳಗುಣ ಹೂಳನ್ನು ಸರಿಸಿದಾಗ ಸಾಕಷ್ಟು ಸುಸ್ಥಿತಿಯಲ್ಲಿದ್ದ ಇನ್ನೂ ಅನೇಕ ಮೆಟ್ಟಿಲುಗಳ ಕಂಡುಬಂದುವು. ಇದೇ ಅವಕಾಶವನ್ನು ಉಪಯೋಗಿಸಿಕೊಂಡು ಕೆರೆಯ ಒಳಾಂಗಣದ ಒಣಗಿದ ಭಾಗದಲ್ಲಿ ಸೋಪಾನಗಳ ಸಮಿಪದಲ್ಲಿ ಹೂಳೆತ್ತಿಸುವ ಮೂಲಕ ಕೆರೆಯ ಜಲಸಂಗ್ರಹಣ ಕ್ಷಮತೆಯನ್ನು ಹೆಚ್ಚಿಸುವ ಕಾರ್ಯವನ್ನು ಕೈಗೊಳ್ಳಲಾಯಿತು. ಇದರ

* ಸೂಪರಿಂಟೆಂಡಂಟ್ ಆರ್ಕಿಯಾಲಾಜಿಸ್ಟ್, ಎ.ಎಸ್.ಐ, ಲನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೭.

ಪರಿಣಾಮವಾಗಿ ಕೆರೆಯ ಆಳವು ಸರಾಸರಿ ೮ ಅಡಿಗಳಷ್ಟು ಹೆಚ್ಚಾಗಿ ಸುಮಾರು ೧೨ ಮೆಟ್ಟಿಲುಗಳು ಹೊಸದಾಗಿ ಗೋಚರಿಸಿದವು. (ಚಿತ್ರ ೨) ಈ ಮೆಟ್ಟಿಲುಗಳಿಗೆ ಬಳಸಿರುವ





ಕಲ್ಲುಗಳಗಾತ್ರ, ವಿನ್ಯಾಸಗಳು ಬಾದಾಮಿ ಚಾಲುಕ್ಯರ ಕಾಲದ ಕೋಟೆಗೋಡೆಗಳಲ್ಲಿ ಬಳಸಿರುವ ಶಿಲಾಖಂಡಗಳ ಗಾತ್ರ ವಿನ್ಯಾಸಗಳಿಗೆ ಸರಿಸಮಾನವಾಗಿವೆ. ಇದರಿಂದ ಅಗಸ್ತ್ಯತೀರ್ಥಕೆರೆಯ ಸೋಪಾನಪಂಕ್ತಿಗಳನ್ನು ಬಹುಶಃ ಕಾಲಕಾಲಕ್ಕೆ ಎತ್ತರಿಸಿದಂತೆ ಕಾಣುತ್ತಿದ್ದು ಅಂತಹ ಕನಿಷ್ಠ ಮೂರು ಹಂತಗಳನ್ನು ಗುರುತಿಸುವ ಪ್ರಯತ್ನ ಮಾಡಬಹುದು. ಈಗ ಈ ಎಲ್ಲ ಸೋಪಾನಗಳನ್ನು ಬಿಚ್ಚಿ ವ್ಯವಸ್ಥಿತವಾಗಿ ಪುನಃ ಜೋಡಿಸಿ ಸುಭದ್ರವಾಗಿಸಲಾಗಿದೆ.

೩. ಮೂರನೆಯ ಹಾಗೂ ನಾಲ್ಕನೆಯ ಗುಹೆಗಳ ನಡುವಣ ತಡೆಗೋಡೆ (ಮೂಲಪ್ರಾಕಾರ) (ಚಿತ್ರ ೩-೪)







ಬಾದಾಮಿಯ ದಕ್ಷಿಣದ ಗುಡ್ಡದಲ್ಲಿ ಗುಹೆಗಳಲ್ಲಿ ಮೂರನೆಯದಾದ ವಿಷ್ಣುಗೃಹ ಅನೇಕ ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾಗಿ ಅವುಗಳಲ್ಲಿ ಗುಹೆಗೆ ಹೊಂದಿಕೊಂಡಂತೆ ಅದರ ಉತ್ತರಕ್ಕಿರುವ ಪ್ರಾಕಾರದಂತಹ ಕೋಟೆಗೋಡೆಯಿಂದ ಕೂಡಿದ ಹಜಾರ ಅಥವ ಅಂಗಳವು ಒಂದು. ಇಂತಹ ಮೂರು ಕಡೆ ಗೋಡೆಯಿಂದಾವೃತವಾದ ಅಂಗಳ ಇನ್ನಾವ ಗುಹೆಯ ಮುಂದೆಯೂ ಇಲ್ಲ. ಈ ಸ್ಥಳದಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಮೇಲ್ಭಾಗದ ಕೋಟೆಯ ಕಲ್ಲುಗಳನ್ನು ತೆಗೆಯಲಾಯಿತು. ಹೀಗೆ ತೆಗೆದಾಗ ಅದರ ಕೆಳಗೆ ಪ್ರಾಕಾರದ ಪಶ್ಚಿಮ ಹಾಗೂ ಉತ್ತರಭಾಗದಲ್ಲಿರುವ ಚಾಲುಕ್ಯರ ಕಾಲದ ಮೂಲ ಗೋಡೆಗಳಂತಹ ಗೋಡೆಯು ಪೂರ್ವದಲ್ಲಿಯೂ ಇರುವುದು ಕಂಡು ಬಂದಿತು. ದಕ್ಷಿಣೋತ್ತರವಾಗಿ ಈ ಗೋಡೆಯ ಸು.೧೨.೫೦ ಮೀ ಉದ್ದವಿದ್ದು ೧.೫ಮೀ ಅಗಲವಾಗಿದೆ. ಈ ಪ್ರಾಕಾರದ ನಿರ್ಮಾಣಕ್ಕೆ ಬಳಸಲಾದ ಕಲ್ಲುಗಳ ಗಾತ್ರ, ವಿನ್ಯಾಸ ಹಾಗೂ ಜೋಡಣಾ ವಿಧಾನವು ಉಳಿದೆರಡು ಕಡೆಯಂತೆಯೆ ಇರುವುದು ಗಮನಾರ್ಹ. ಈ ಪ್ರಾಕಾರದ ಎತ್ತರವನ್ನು ಮೊದಲಿಗೆ ವಿಜಯನಗರ ಕಾಲದಲ್ಲಿ ಎತ್ತರಿಸಿದಂತೆ ಕಂಡುಬಂದಿದೆ. ರಕ್ಷಣಾ ವ್ಯವಸ್ಥೆ ಇಲ್ಲವೇ ಧಾರ್ಮಿಕ ಕಾರಣಗಳಿಂದಾಗಿ ಈ ಕೆಲಸ ಆಗಿರಬಹುದು. ಕಾಲಕ್ರಮದಲ್ಲಿ ಜೀರ್ಣವಾಗಿದ್ದ ಈ ಪ್ರಾಕಾರದ ಭಾಗವನ್ನು ಪುನರ್ನಿರ್ಮಿಸುವಾಗ ಅಂಗಳದ ಒಳಗಡೆಯ ನೆಲಮಟ್ಟದಿಂದಲೇ ಕಟ್ಟಿದುದರಿಂದ ಚಾಲುಕ್ಯಕಾಲದ ಮೂಲಪ್ರಾಕಾರದ ಭಾಗ ಪೂರ್ಣವಾಗಿ ಮರೆಯಾಗಿ ಹೋಗಿದ್ದುದು ಈಗ ಪುನಃ ಬೆಳಕಿಗೆ ಬಂದಂತಾಗಿದೆ. ಪ್ರಸ್ತುತ ಚಾಲುಕ್ಯ ಕಾಲದ ಮೂಲಪ್ರಾಕಾರ ಭಾಗವನ್ನು ಹಾಗೆಯೇ ಉಳಿಸಿಕೊಂಡು ಮೇಲಣ ವಿಜಯನಗರ ಕಾಲದಲ್ಲಿ ಎತ್ತರಿಸಲಾಗಿದ್ದ ಭಾಗವನ್ನು ಮೊದಲಿನಂತೆಯೇ ಅದೇ ಗಾತ್ರ ವಿನ್ಯಾಸದ ಕಲ್ಲುಗಳು ಮತ್ತು ಗಚ್ಚುಗಾರೆಯಿಂದ ಪುನಃ ನಿರ್ಮಿಸಲಾಗಿದೆ.

೪. ಪಟ್ಟದ ಕಲ್ಲಿನ ಪರಿಸರದಲ್ಲಿ ಪ್ರಾಚೀನ ಕಲ್ಗಣಿಯ ಶೋಧ : ಇತ್ತೀಚೆಗೆ ಭಾ.ಪು.ಸ. ಧಾರವಾಡ ವಲಯದ ಸಂಶೋಧನಾ ತಂಡ ಪಟ್ಟದ ಕಲ್ಲಿನ ದೇವಾಲಯ ಪರಿಸರದಲ್ಲಿ ಆ ದೇವಾಲಯಗಳ ನಿರ್ಮಾಣಕ್ಕೆ ಅತ್ಯುತ್ತಮ ಮಟ್ಟದ ಶಿಲಾಸಾಮಾಗ್ರಿಯನ್ನು ಒದಗಿಸಿದ ಪ್ರಾಚೀನ ಕಲ್ಗಣಿ ನಿವೇಶನವನ್ನು ಪ್ರಪ್ರಥಮವಾಗಿ ಸಂಶೋಧಿಸಿದೆ.

೫. ಗಣಿಯಿರುವ ಸ್ಥಳ ಮತ್ತು ಅದರ ಮಹತ್ವ : ಈ ನಿವೇಶನಗಳು ವಿಶ್ವಪರಂಪರೆ ಸ್ಮಾರಕಗಳೆಂದು ಪ್ರಸಿದ್ಧವಾಗಿರುವ ವಿರೂಪಾಕ್ಷ ದೇವಾಲಯ ಗುಂಪಿನಿಂದ ನೇರ ಉತ್ತರಕ್ಕೆ ೫ ಕಿ.ಮೀ ದೂರದಲ್ಲಿ ಜೈನ ದೇವಾಲಯದ ಉತ್ತರಕ್ಕೆ ೩.೫ ಕಿ.ಮೀ ದೂರದಲ್ಲಿದೆ. ಸುಮಾರು ೨ ೧/೨ ದೂರದವರೆಗೆ ಹರಡಿರುವ ಮರಳುಗಲ್ಲಿನ ಬೆಟ್ಟ ಸಾಲುಗಳಲ್ಲಿ ರಾಜ್ಯ ಸರ್ಕಾರದಿಂದ ರಕ್ಷಿತವಾದ


ಅರಣ್ಯಪ್ರದೇಶದಲ್ಲಿದೆ. ಸ್ಥಳೀಯವಾಗಿ ಮೊಲರ ಮೊ (ಮ) ರಡಿ ಶಂಕರಲಿಂಗನಗುಂಡು ಎಂದು ಗುರುತಿಸಲಾಗುವ, ಪರಸ್ಪರ ೧ ಕಿ.ಮೀ. ದೂರದಲ್ಲಿರುವ ಅಕ್ಕರಗಲ್ಲು ಗ್ರಾಮದ ವ್ಯಾಪ್ತಿಯಲ್ಲಿರುವ, ನೆಲಮಟ್ಟದಿಂದ ಸು. ೩೦೦ ರಿಂದ ೩೮೦ ಅಡಿ ಎತ್ತರದ ಗುಡ್ಡಗಳಲ್ಲಿ ಈ ನಿವೇಶನಗಳಿವೆ (ಚಿತ್ರ ೫)



ಸ್ಥಳೀಯ ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶಿಗಳಾದ ಸರ್ವಶ್ರೀ, ಸೋಮಶೇಖರ, ಎಸ್. ಕುಡಚಿ, ರಮೇಶ್, ಬಿ. ತಲವಾರ, ಈರಣ್ಣ ಬಿ. ಅಕ್ಕಿ, ಹಾಗೂ ಸ್ಥಳೀಯ ಗಣಿ ಕಾರ್ಮಿಕರ ನೆರವಿನಿಂದ ಈ ಗಣಿ ನಿವೇಶನವನ್ನು ಎರಡು ದಿನಗಳ ಪರಿಶ್ರಮದಿಂದ ಕಂಡುಹಿಡಿಯಲಾಯಿತು.

ದೇವಾಲಯ ಸಮೂಹ ಕಟ್ಟುವ ಸ್ಥಳಕ್ಕೆ ಅತ್ಯಂತ ಸಮೀಪದಲ್ಲಿ ಉತ್ತಮ ಶಿಲಾಸಾಮಗ್ರಿ ಅಖಂಡವಾಗಿ ದೊರೆಯುವ ಗಣಿಪ್ರದೇಶವನ್ನು ಆಯ್ಕೆ ಮಾಡುವಲ್ಲಿ ಅಂದಿನ ಸ್ಥಪತಿ, ಶಿಲ್ಪಿಗಳು ತೋರಿರುವ ತಾಂತ್ರಿಕ ಕೌಶಲ, ಉತ್ತಮ ನಿರ್ಮಾಣ ಸಾಮಗ್ರಿಯಾದ ಕಲ್ಲಿನ ವಿಶಿಷ್ಟ ಗುಣಲಕ್ಷಣಗಳ ಅರಿವು; ಮೂಲಬಂಡೆಗಳಿಂದ ಬೇರ್ಪಡಿಸಿದ ಪ್ರತಿ ಶಿಲಾ ಖಂಡದ ಗುಣಾವಗುಣಗಳನ್ನು ಆಧರಿಸಿ ಅವುಗಳಿಂದ ರೂಪಿಸಬಹುದಾದ ವಾಸ್ತುಭಾಗಗಳನ್ನು ಗುರುತಿಸಲು ವಿಶಿಷ್ಟ ಚಿಹ್ನೆಗಳ ಮೂಲಕ ನೀಡಿರುವ ಸೂಚನೆಗಳು, ಶಿಲ್ಪಕಲಾಭ್ಯಾಸಿಗಳಿಗೆ ತರಬೇತಿ ನೀಡಲು ವಾಸ್ತುಭಾಗ, ದೇವತೆ ಹಾಗೂ ಪ್ರಾಣಿಗಳ ರೇಖಾ ಚಿತ್ರಗಳನ್ನು ಬಿಡಿಸಿರುವುದು, ಸ್ಥಪತಿ, ಶಿಲ್ಪಿ, ಕಾರ್ಮಿಕರ ಹೆಸರಿರುವ ಕಿರುಶಾಸನಗಳು, ಹಾಜರಾತಿ ಚಿಹ್ನೆಗಳು ಮುಂತಾದವು ಈ ನಿವೇಶನದ ವಿಶಿಷ್ಟ ಅಂಶಗಳಾಗಿವೆ.

ಗಣಿಕೈಗಾರಿಕೆ ಮತ್ತು ಬಳಸಿದ ವಿಧಾನಗಳನ್ನು ಕುರಿತ ಕುರುಹುಗಳು : ಶಂಕರಲಿಂಗನಗುಂಡು ಮತ್ತು ಮೋಲರ ಮರಡಿ ಈ ಎರಡೂ ನಿವೇಶನಗಳಲ್ಲಿ ಉತ್ತಮಮಟ್ಟದ ಶಿಲಾಖಂಡಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಲು ನಿರಂತರ ಗಣಿಗಾರಿಕೆ ನಡೆದಿದ್ದ ಕುರುಹುಗಳು ಕಂಡು ಬಂದಿವೆ. ನಿವೇಶನವಿರುವ ಸ್ಥಳವು ರಾಜ್ಯಸರ್ಕಾರದಿಂದ ರಕ್ಷಿತ ಅರಣ್ಯದ ಮಿತಿಯೊಳಗಿರುವುದರಿಂದ ಈ ಕುರುಹುಗಳು ಸಾಕಷ್ಟು ಉತ್ತಮವಾಗಿಯೇ ಉಳಿದಿವೆ. ಸ್ಥೂಲಸ್ಥಳ ಪರಿಶೋಧನೆಯಿಂದ, ಹಂತ ಹಂತವಾಗಿ ಅಚ್ಚುಕಟ್ಟಾಗಿ ಬಹುಕಾಲ ಗಣಿಗಾರಿಕೆ ನಡೆಸಿರುವುದರಿಂದ ವಿವಿಧ ಎತ್ತರಗಳಲ್ಲಿ ಉಂಟಾಗಿರುವ ಸಮತಟ್ಟಾದ ಮಜಲುಗಳು (ಚಿತ್ರ ೬) ಮೂಲ



ಶಿಲೆಯ ಸವೆದ ಹೊರಪದರದಿಂದ ಕೂಡಿದ್ದು ನಿರ್ಮಾಣ ಕಾರ್ಯಕ್ಕೆ ಅನುಪಯುಕ್ತವೆನಿಸಿ, ಸ್ಥಳದಲ್ಲಿಯೇ ತಿರಸ್ಕೃತವಾದ ಶಿಲಾ ಖಂಡಗಳು, ಕಲ್ಲೆಬ್ಬಿಸಲು ಮಾಡಿರುವ ಉಳಿಗುರುತುಗಳು. ನಿರ್ದಿಷ್ಟ ವಾಸ್ತುಭಾಗಕ್ಕಾಗಿ ಅವಶ್ಯಕಗಾತ್ರಗಳಿಗನುಗುಣವಾಗಿ ಕತ್ತರಿಸಿ, ನಿರ್ಮಾಣ ಸ್ಥಾನಕ್ಕೆ ಸಾಗಣಿಕೆಯ ವಿವಿಧ ಹಂತಗಳಲ್ಲಿ ಜೋಡಿ ಸಿರುವ ಆಯ್ದ ಕಲ್ಲುಗಳು, ಸ್ಥಪತಿ, ಶಿಲ್ಪಿ ಕಾರ್ಮಿಕರ ಹೆಸರಿರುವ ಕಿರುಶಾಸನಗಳು, ಹಾಜರಾತಿ, ಚಿಹ್ನೆಗಳು, ಪ್ರಾಣಿ, ದೇವತೆಗಳ ಚಿತ್ರಣಗಳು, ಗತಿಕಾರ್ಯಕ್ಕೆ ಬಳಸಿದ ಉಪಕರಣಗಳು-ಇಂತಹಕುರುಹುಗಳಲ್ಲಿ ಮುಖ್ಯವಾದವು.

ಬಹುಪಾಲು ತಿರಸ್ಕೃತ ಶಿಲಾಖಂಡಗಳನ್ನು ಸಾಗಾಣಿಕೆಗೆ ಅನುವಾಗುವಂತೆ ದಾರಿಯಲ್ಲಿ ಹಳ್ಳಿ ತಗ್ಗುಗಳನ್ನು ಮುಚ್ಚಲು, ಸಮತತಟ್ಟಾಗಿಸಲು, ನಂತರದ ಕೆಲಸಗಳಿಗೆ ಅಟ್ಟಣೆಗೆಯಾಗಿ-ಹೀಗೆ ನಾನಾ ರೀತಿಯಲ್ಲಿ ಉಪಯೋಗಿಸಲಾಗಿದೆ. ೨.೯೦x ೦.೯೦ ಮೀ; ೨.೮೫x೦.೮೦x೦.೩೦ ಮೀ, ೨x೧.೨೦ ೧.೨೦ ಮೀ, ೧.೮೦x೧.೦೦x೧.೦೦ ಮೀ ಮುಂತಾದ ಅಳತೆಗೆ ಸರಿಯಾದ, ಭಾರವಾಹಕ ವಾಸ್ತು ಭಾಗಗಳಾದ ಕಂಬ, ತೊಲೆ, ಬೋವಿಗೆ, ಕಂಬಪೀಠ, ಛಾವಣಿ ಫಲಕ ಮುಂತಾದವನ್ನು ರೂಪಿಸಲು ಸೂಕ್ತವಾದ ಶಿಲಾಖಂಡಗಳನ್ನು ಇನ್ನೇನು ನಿರ್ಮಾಣ ಸ್ಥಾನಕ್ಕೆ ಸಾಗಿಸಲು ಸಿದ್ಧಮಾಡಿಟ್ಟಂತೆ ಕ್ರಮವಾಗಿ ಜೋಡಿಸಿಟ್ಟಿದೆ. (ಚಿತ್ರ ೭) ಕತ್ತರಿಸಿದ ಕಲ್ಲುಗಳು ,



ಮೂಲಶಿಲೆಯ ಮೇಲೆ ೧೦×೬ ಸೆಂ.ಮೀ. ಅಳತೆಯ ೮-೧೦ ಸೆಂ.ಮೀ. ಆಳದ, ಇದೇ ಸ್ಥಳದಲ್ಲಿ ದೊರೆತಿರುವ ಉಳಿಯ ಅಳತೆಗೆ ಸರಿಹೊಂದುವ ಉಳಿಗಳ ಸಾಲು ಗಮನಾರ್ಹವಾದುದು. ಉಳಿ ಮತ್ತು ಭಾರವಾದ ಸುತ್ತಿಗೆಯಿಂದ ಇಂತಹ ಆಳವಾದ ಗುರುತುಗಳನ್ನು ಸಮಾನಾಂತರದಲ್ಲಿ (೧೦-೧೫ ಸೆಂ.ಮಿ) ಸಾಲಾಗಿ ಮೂಡಿಸಿ ನಂತರ ಅದೇ ಅಳತೆಯ ಮರದ ಬೆಣೆಗಳನ್ನು ಸಿಗಿಸಿ ತೋಯಿಸಿದ ಬೆಣೆ ವಿಧಾನದಿಂದ ಉದ್ದೇಶಿತ ಗಾತ್ರದ ಕಲ್ಲುಗಳನ್ನು ಎಬ್ಬಿಸಿರುವುದು, ಕಂಡುಬರುತ್ತದೆ.

ಕಿರುಶಾಸನಗಳು

ಚಾಲುಕ್ಯ ಕಾಲದ ಕಲಾಕುಸುಮಗಳನ್ನು ಅರಳಿಸಿದ ಶಿಲ್ಪಿ ಶ್ರೇಷ್ಠರು. ಸ್ಥಪತಿಗಳನ್ನು ಕುರಿತ ವಿವರಗಳನ್ನು ನೀಡುವ ಅನೇಕ ಶಾಸನಗಳು ಐಹೊಳೆ, ಬಾದಾಮಿ, ಪಟ್ಟದಕಲ್ಲು ಮತ್ತಿತರ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ಈಗ ಗಣಿಪ್ರದೇಶದಲ್ಲಿ ದೊರೆತಿರುವ ಎಂಟು ಕಿರು ಶಾಸನಗಳು ಬಹುಶಃ ಗಣಿಯ ಒಡೆಯ, ಸ್ಥಪತಿ, ಕಾರ್ಮಿಕರನ್ನು ದಾಖಲಿಸಿವೆ. ಬಂಡೆಗಳನ್ನು ಕಡಿದು ಕಲ್ಲೆಬ್ಬಿಸಿರುವ ಎತ್ತರವಾದ ಗೋಡೆಯಂತಹ ಸ್ಥಳದಲ್ಲಿ; ಶಿಲ್ಪಿ ಸಮತಟ್ಟಾಗಿ ದುಡಿದು ದಣಿದು ವಿಶ್ರಾಂತಿಗಾಗಿ ಕುಳಿತುಕೊಳ್ಳಲು ಅನುವಾಗಿ ಸಮತಟ್ಟಾಗಿ ನರಳಿರುವ ಸ್ಥಳಗಳಲ್ಲಿ ಈ ಶಾಸನಗಳನ್ನು ಬರೆದಿದೆ. ಲಿಪಿ ಲಕ್ಷಣದ ಆಧಾರದ ಮೇಲೆ ಇವನ್ನೂ ಕ್ರಿ.ಶ. ೮ನೆಯ ಶತಮಾನದ ಮಧ್ಯಭಾಗಕ್ಕೆ ಸೇರಿಸಬಹುದು.

ದೊರೆತಿರುವ ೮ ಶಾಸನಗಳಲ್ಲಿ ಕೆಳಗಣ ೫ ಶಾಸನಗಳು ಶಂಕರಲಿಂಗನ ಗುಡ್ಡದಲ್ಲಿವೆ.



೧. ಮೂರು ಸಾಲಿನ ಶಾಸನ : ಪೀಠದ ಮೇಲೆ ಕುಳಿತಗಣೇಶ, ಎಡಬಲಕ್ಕೆ ಒಂಟೆ ಮತ್ತು ನವಿಲಿನ ಚಿತ್ರಗಳ ಮಧ್ಯ ಈ ಶಾಸನವಿದೆ. (ಚಿತ್ರ ೮) ಗಣೇಶ ಚಿತ್ರದ ನೇರ ಕೆಳಗೆ 'ಸಿದ್ಧ' ಎಂದು ಮುಂಗಡ ಸೂಚಕ ಚಿನ್ಹೆಯಿಂದಾರಂಭವಾಗುವ ಶಾಸನಪಾಠ (ಚಿತ್ರ ೯)



೧. ಶ್ರೀ ಧರ್ಮ ಸಂಗಾತನಾ ಕಣೆ

೨. ಪಪಾಕೋ ಆಜ್ಞಾರ್ವೋ ಪರಮ ಮಾ

೩. ಹೇಶ್ವರ (ಎರಡು ಸುರುಳಿಗಳು)

ಅರ್ಥ ಸ್ಪಷ್ಟವಾಗಿಲ್ಲ. ಬಹುಶಃ ಶ್ರೀ ಧರ್ಮನೆಂಬುವನ ಸಂಘಕ್ಕೆ ಸಂಬಂಧಿಸಿದ ಅಥವ ಒಡೆತನದ ಕ (ಗ) ಣೆ. ಪಪಾಕ ಅಂಬುವರು ಈ ಸಂಘದ ಇತರ ಸದಸ್ಯರು. ಇವರೆಲ್ಲ ಪರಮಮಾಹೇಶ್ವರರು, ಎಂದು ಅರ್ಥಮಾಡಬಹುದು.

೨, ೩ ಮತ್ತು ೪ನೆಯ ಶಾಸನಗಳನ್ನು ದೊಡ್ಡ ಬಂಡೆಯ ಕೆಳಭಾಗದಲ್ಲಿ ಬರೆದಿದೆ.

೨. ಭೂಭೃಗು - ಕಾರ್ಮಿಕನ ಹೆಸರಿರಬಹುದು.


೩. ಸ್ವಸ್ತಿ ಶ್ರೀ ನಿಧಿಪುರುಷನ್ - ಶ್ರೀನಿಧಿಪುರುಷ ಎನ್ನುವವನ ಹೆಸರು

೪. ಶ್ರೀ ಬವಜ ರ (ರ) ಸನ್ - ಶಿಲ್ಪಿ ಕಾರ್ಮಿಕನ ಹೆಸರು.

೩-೪ ಈ ಎರಡು ಶಾಸನಗಳನ್ನು ಒಂದೇ ಎಂದು ಭಾವಿಸಿದರೆ ಬವಜರರಸ ಶ್ರೀ ನಿಧಿಪರುಷ - ಉಪಾಧ್ಯಾಯ ಅಥವ ಶಿಲ್ಪಿಗಳ ದೊರೆಯಾದ ನಿಧಿಪುರುಷ ಎಂದು ಅರ್ಥ ಮಾಡಬಹುದು.


೫. ಹೆಚ್ಚು ಪ್ರಾಕೃತಿಕ ಸವೆತಕ್ಕೊಳಗಾದ ಕಲ್ಲಿನ ಮೇಲೆ ಬರೆದಿರುವ ವೀರವಿದ್ಯಾಧರನೆಂಬ ವ್ಯಕ್ತಿಯ ಹೆಸರಿದೆ.

ಶ್ರೀ ಬಿ (ವಿ)ೀರ ವಿದ್ಯಾಧರನೆ. (ಚಿತ್ರ ೧೦)



ಗಣೇಶ, ಚೈತ್ಯ, ತ್ರಿಶೂಲ, ಶಂಖಗಳ ಜೊತೆ ಇವಲ್ಲದೆ ಈ ಜಗೆಯ ಬಂಡೆಗಳ ಮೇಲೆ ಅಲ್ಲಿಲ್ಲಿ ವಿವಿಧಾಕಾರ ಗಾತ್ರಗಳಲ್ಲಿರುವ 'ಶ್ರೀ' ಅಕ್ಷರ ಪದೇ ಪದೇ ಕಾಣಿಸುತ್ತದೆ.

ಉಳಿದ ಮೂರು ಕಿರು ಶಾಸನಗಳು ಮೋಟಕ ಮರಡಿ ಗುಡ್ಡದ ತುದಿಯನ್ನು ಸು. ೧೮ ಅಡಿ ಎತ್ತರವಾದ ಬಂಡೆಯ ಸಮತಟ್ಟಾದ ಗೋಡೆಯಂತಹ ಭಾಗದ ಮೇಲೆ ಬರೆಯಲ್ಪಟ್ಟಿವೆ. (ಚಿತ್ರ ೧೧) ತೀರಸವೆದು ಹಾಳಾಗಿರುವುದರಿಂದ ಅಕ್ಷರಗಳು ಸ್ಪಷ್ಟವಾಗಿಲ್ಲ.



೬. ಶ್ರೀ

೭. ಶ್ರೀ ಮರುಳನ್ (?)

೮. ಶ್ರೀ ಗುಣ ವಿಕ್ರ (ಮನ್)

ಈ ಕಿರು ಶಾಸನಗಳ ಜೊತೆ ತ್ರಿಶೂಲ, ಅಂಕುಶ, ಪರಶುಗಳ ಚಿತ್ರಣಗಳೂ ಇವೆ.

ಲಿಪಿಯ ದೃಷ್ಟಿಯಿಂದ ಇವು ೮ನೆಯ ಶತಮಾನಕ್ಕೆ ಸೇರಿದವಾದರೂ ಅಷ್ಟು ಉತ್ತಮವಾಗಿಲ್ಲ. ಇದಕ್ಕೆ ಬಹುಶಃ ಇವು ನುರಿತ ಕಲಾವಿದರಾದರೂ ಅಷ್ಟೇನು ಶಿಕ್ಷಿತರಲ್ಲದ ಗ್ರಾಮೀಣ ಜನರು ಬರೆದುದಾಗಿರುವುದು. ಆದರೂ ಇಲ್ಲಿ ದೊರೆಯುವ ಹೆಸರುಗಳು ಬಾದಾಮಿ ಮತ್ತಿತರ ಕಡೆಯಲ್ಲಿ ದೊರೆತಿರುವ ಹೆಸರುಗಳೊಂದಿಗೆ ಹೋಲಿಕೆ ಹೊಂದಿರುವುದು ಗಮನಾರ್ಹ.

ಸ್ಥಪತಿ ಮತ್ತು ಹಾಜರಾತಿ ಚಿಹ್ನೆಗಳು

ಗಣಿಯ ಬಂಡೆಗಳ ಮೇಲೆ ಮತ್ತು ಕತ್ತರಿಸಿಟ್ಟ ಕಲ್ಲುಗಳ ಮೇಲೆ ವಿಚಿತ್ರವೆನಿಸಬಹುದಾದ ಜ್ಯಾಮಿತೀಯ ಚಿಹ್ನೆಗಳು, ವಿವಿಧ ಶೈಲಿಯ ಶಂಖ, ತ್ರಿಶೂಲ, ಮುಂತಾದ ಸ್ಥಪತಿ ಚಿನ್ಹೆಗಳೂ ದೊರೆತಿವೆ. ಇವುಗಳಲ್ಲಿ ಕನಿಷ್ಠ ಮೂರು ರೀತಿಯ ತ್ರಿಶೂಲ (ಚಿತ್ರ. ೧೨-೧೩) ಗಳು ಮುಖ್ಯವಾದವು. ಇವು ಮತ್ತು ಶಂಖದ





ಗುರುತುಗಳು ಬಹುಶಃ ಅಧಿಕೃತ ಮಾಲೀಕತ್ವದ ಗಣಿಯ ಪ್ರದೇಶವನ್ನು, ಅಲ್ಲಿಂದ ತೆಗೆದ ಕಲ್ಲುಗಳನ್ನು ಗುರುತಿಸಲು ಉಪಯೋಗಿಸಿರಬೇಕು. ಅಲ್ಲದೆ ಸಂಕಲನ, ವ್ಯವಕಲನ ಚಿಹ್ನೆಗಳು ಬಿಡಿಯಾಗಿ, ವೃತ್ತವೊಂದಕ್ಕೆ ಹೊಂದಿಸಿ ಅದರೊಳಗೆ, ಹೊರಗೆ ಹೀಗೆ ಸಂಯುಕ್ತವಾಗಿ ಸಹ (೦,೦,) ಮುಂತಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಇವುಗಳನ್ನು ಶಿಲೆಯ ಗುಣಮಟ್ಟ, ಗಾತ್ರ ಮುಂತಾದವುಗಳನ್ನು ಆಧರಿಸಿ, ಭಾರವಾಹಕ ವಾಸ್ತು ಅಂಗಗಳಾದ ಕಂಬ, ತೊಲೆ, ಬೋದಿಗೆ, ವಿತಾನಫಲಕ ಮೊದಲಾದವನ್ನು ರೂಪಿಸಲೆಂದು ಗಣಿಯಲ್ಲಿಯೇ ವರ್ಗೀಕರಣ ಸೂಚನೆ ನೀಡಿ ನಿರ್ಮಾಣ ಸ್ಥಾನಕ್ಕೆ ಸಾಗಿಸಿದರೆ ಅಥವ ಇನ್ನಾವುದೇ ವಿಶಿಷ್ಟ ಬಳಕೆಗಾಗಿ ನೀಡಿರುವ ಸೂಚನೆಗಳೆಂದು ಭಾವಿಸಬಹುದು. ಇಂತಹ ವಿಶಿಷ್ಟ ಉಪಯೋಗಕ್ಕಾಗಿ ಅನುಕೂಲತೆ ಹೆಚ್ಚಾಗುವುದು ಸಹಜ. ಕಲ್ಬಂಡೆಗಳು, ಬೇರ್ಪಡಿಸಿದ ಕಲ್ಲುಗಳ ಮೇಲ್ ಕಂಡುಬರುವ ಇವೇ ಗುರುತುಗಳು ವಿರೂಪಾಕ್ಷ, ಮಲ್ಲಿಕಾರ್ಜುನ, ಜೈನ ಮತ್ತು ಭದ್ರನಾಯಕನ ಜಾಲಿಹಾಳದ ಕೆಲವು ಗುಡಿಗಳ ನಿರ್ದಿಷ್ಟ ವಾಸ್ತುಭಾಗಗಳ ಮೇಲೂ ಕಾಣುವುದು ಈ ಊಹೆಯನ್ನು ಸಮರ್ಥಿಸುತ್ತದೆ.

ನಿವೇಶನದ ಹಲವೆಡೆ ೨.೫ರಿಂದ ೩.೫ ಸೆಂ.ಮೀ ಉದ್ದದ ಉದ್ದ ಹಾಗೂ ಅಡ್ಡ ಗೆರೆಗಳ ಸಮಾನಾಂತರ ಸಾಲುಗಳನ್ನು ಕೊರೆದಿರುವುದು ಒಂದು ಗಮನಾರ್ಹ ಅಂಶ (ಚಿತ್ರ ೧೪) ಇತಹ




ಗೆರೆ ಸಾಲುಗಳು ಬಾದಾಮಿ, ಐಹೊಳೆ, ಜಾಲಿಹಾಳ ಮುಂತಾದ ಗಣಿ ಹಾಗೂ ನಿರ್ಮಾಣ ಪ್ರದೇಶಗಳೆರಡರಲ್ಲಿಯೂ ಇವೆ. ಪ್ರತಿಸಾಲಿನ ಕೊನೆಯಲ್ಲಿ ಉದ್ದನೆಯ ಒಂದು ಗೆರೆ ಎಳೆಯ ಸಾಲಿನಲ್ಲಿನ ಒಟ್ಟು ಗೆರೆಗಳ ಮೊತ್ತ ಅಥವಾ ಕಾರ್ಮಿಕ ಅಥವ ಸಾಗಿಸಿದ ಕಲ್ಲುಗಳ ಮೊತ್ತವನ್ನು ಸೂಚಿಸುವ ಚಿಹ್ನೆಯೂ ಇದೆ. ಕೆಲವು ಗೆರೆಗಳು ಉದ್ದದಷ್ಟರ ಅರ್ಧಮಾತ್ರ ಇವೆ. ಇವು ಬಹುಶಃ ಗಣಿ ಕೆಲಸಕ್ಕೆ ಬಂದಿದ್ದ ಕಾರ್ಮಿಕರ ಹಾಜರಾತಿಯನ್ನು ಸೂಚಿಸುತ್ತವೆ. ಈ ಗೆರೆಗಳ ಮೊತ್ತ ಏಳು ಅಥವ ಅದರ ಗುಣಕಗಳಲ್ಲಿದ್ದು, ಇಂದಿಗೂ ಇಂತಹ ವೇತನ ಪಾವತಿಯು ವಾರ ಅಥವ ಅದರ ಗುಣಕಗಳಲ್ಲಿಯೇ ನಡೆಯುವುದನ್ನು ನೆನಪಿಸುತ್ತದೆ. ಚಾಲುಕ್ಯ ಕಾಲದ ವಿವಿಧ ವಾಸ್ತುಕೇಂದ್ರ ಗಣಿಪ್ರದೇಶಗಳಲ್ಲಿ ಕಂಡುಬರುವ ಇಂತಹ ಚಿಹ್ನೆಗಳ ವಿಶೇಷ ಅಧ್ಯಯನದಿಂದ ಪ್ರಾಚೀನ ಗಣಿಗಾರಿಕೆ ಪದ್ಧತಿಯ ವ್ಯವಹಾರದ ಒಂದು ಉತ್ತಮ ಒಳನೋಟ ದೊರೆಯಬಹುದು.

ಚಿತ್ರಣಗಳು : ಗಣಿಯಲ್ಲಿ ಉಳಿದಿರುವ ಬಂಡೆಗಲ್ಲುಗಳ ಮೇಲೆ ಒರಟಾಗಿ ಮೂಡಿಸಿರುವ ಗಣೇಶ (ಚಿತ್ರ ೧೫) ಮಹಿಷ



ಮರ್ದಿನಿ ಶಿವಲಿಂಗ ಮುಂತಾದ ದೇವತೆಗಳ ಕೊರೆದ ಚಿತ್ರಣಗಳಿವೆ. ಕನಿಷ್ಠ ನಾಲ್ಕು ಬಗೆಯ ಗಣೇಶ ಚಿತ್ರಗಳಿವೆ. ಈ ಚಿತ್ರದ ಜೊತೆಗೆ ಕಿರುಶಾಸನ, ಗಣಿ ಕಾರ್ಮಿಕರ ಚಿಹ್ನೆಗಳು ಹಾಗೂ ಪ್ರಾಣಿಗಳ ಚಿತ್ರಣಗಳೂ ಇವೆ. ಗಾತ್ರದಲ್ಲಿ ಇವು ಕಿರು ಮತ್ತು ಮಧ್ಯಮ ಶ್ರೇಣಿಯವು. ಶೈಲೀಯವಾಗಿ ಹೆಚ್ಚಿನವು ದ್ವಿಭುಜ ರೀತಿಯವು. ಅವಯವಗಳನ್ನು ಸ್ಪಷ್ಟವಾಗಿ ಮೂಡಿಸಿದ್ದರೂ ಮುಖ ಅಷ್ಟ ಸ್ಪಷ್ಟವಾಗಿಲ್ಲ. ಒಂಟಿ, ಸ್ವಸ್ತಿಕ, ಶಂಖ, ಪಾಶ ಮುಂತಾದವುಗಳ ಜೊತೆ ಕೆತ್ತಿರುವ ಗಣಪತಿಯು ಮಾತ್ರ ಚೆಲುವಾಗಿದೆ. ಈ ಗಣೇಶ ಚಿತ್ರಗಳಲ್ಲಿ ಒಂದು ಕರಂಡ ಮಕುಟಧಾರಿಯಾಗಿದ್ದರೆ, ಇನ್ನೊಂದರಲ್ಲಿ ಕಮಲಾಕಾರದ ಅಲಂಕಾರವಿದ್ದು ಮೂರನೆಯದರಲ್ಲಿ ಯಾವ ಆಭರಣವೂ ಇಲ್ಲ.

ಇಲ್ಲಿನ ಅಷ್ಟಬಾಹು ಮಹಿಷಮರ್ದಿನಿ ಇನ್ನೊಂದು ಗಮನಾರ್ಹ ಚಿತ್ರಣ (ಚಿತ್ರ ೧೬) ವಿವಿಧ ಆಯುಧಗಳನ್ನು




ಹಿಡಿದಿರುವ ಈ ದೇವಿಯ ಚಿತ್ರಣ ಪ್ರತಿಮಾ ಲಕ್ಷಣದ ದೃಷ್ಟಿಯಿಂದ ವಿರೂಪಾಕ್ಷ ದೇವಾಲಯದಲ್ಲಿರುವ ದೇವಕೋಷ್ಠದಲ್ಲಿರುವ ಮಹಿಷಮರ್ದಿನಿ ಶಿಲ್ಪವನ್ನು ಹೋಲುತ್ತದೆ.

ಶೈಲೀಕೃತವಾದ ಒಂಟೆ (?), ವಿವಿಧ ಭಂಗಿಯ ಸಿಂಹ, ನವಿಲು ಮುಂತಾದ ಪ್ರಾಣಿಗಳನ್ನೂ ಗಣಪತಿ ಚಿತ್ರದ ಜೊತೆಗೇ ಬಿಡಿಸಿದೆ. ಇಲ್ಲಿನ ನವಿಲು ಚಿತ್ರ (ಚಿತ್ರ ೧೭) ಚಾಲುಕ್ಯ ಶೈಲಿಯ ಕಾರ್ತಿಕೇಯ ಶಿಲ್ಪದ ನವಿಲಿಗೆ ಹೋಲಿಸಬಹುದಾದರೆ, ಸಿಂಹ ಶಿಲ್ಪಗಳ (ಚಿತ್ರ ೧೮) ಹೋಲಿಕೆಯನ್ನು ವಿರೂಪಾಕ್ಷ,






ಮಲ್ಲಿಕಾರ್ಜುನ ದೇವಾಲಯದ ಅಧಿಷ್ಠಾನದ ಮೇಲಿರುವ ಇಂತಹುದೇ ಸಿಂಹಗಳಲ್ಲಿ ಕಾಣಬಹುದು. ಒಂಟೆಯ ಚಿತ್ರವು ಒರಟಾಗಿದ್ದು ಇದುವರೆಗೆ ಚಾಲುಕ್ಯ ಶಿಲ್ಪಗಳಲ್ಲಿ ಕಂಡುಬಂದಿಲ್ಲ.



ಮೇಲೆ ಹೇಳಿದವಲ್ಲದೆ ಚೈತ್ಯ (ಚಿತ್ರ ೧೯) ಕಂಬದ ವಿವಿಧ ಭಾಗಗಳು, ಬೋದಿಗೆ, ವಿಜಯ/ಕೀರ್ತಿಸ್ತಂಭ, ಶಂಖ, ಸ್ವಸ್ತಿಕ, ಪೂರ್ಣಘಟ, ಮಂಡಲಗಳು, ಪರಶು, ಪಾಶ, ತ್ರಿಶೂಲ ಮುಂತಾದ ಕೆತ್ತನೆಗಳೂ ಅನೇಕ ಕಡೆ ದೊರೆತಿವೆ.

ಕಬ್ಬಿಣದ ಉಪಕರಣಗಳು : ಚಾಲುಕ್ಯರ ಕಾಲದಲ್ಲಿ ಗಣಿಗಾರಿಕೆಗೆ ಉಪಯೋಗಿಸದ ಉಳಿ, ಸುತ್ತಿಗೆ ಮುಂತಾದ ಉಪಕರಣಗಳು ನಿವೇಶನದಲ್ಲಿ ದೊರೆತಿರುವುದು ಈ ಸಂಶೋಧನೆಯ ಒಂದು ಗಮನಾರ್ಹ ಅಂಶ. ಇಲ್ಲಿ ದೊರೆತ ಕಬ್ಬಿಣದ ಆಯತಾಕಾರದ (೧೦ ಸೆ.ಮೀ. ಉದ್ದ ಮತ್ತು ೬ ಸೆಂ.ಮೀ. ಗರಿಷ್ಠ ಅಗಲ) ಉಳಿಯು ಸುಮಾರು ೧.೨೫ ಕಿ.ಗ್ರಾಂ. ತೂಕವಿದೆ. ಮೊಂಡಾದ ಇದರ ತುದಿ ೧.೨. ಸೆಂ.ಮೀ. ದಪ್ಪವಿದೆ



ಮತ್ತು ಬಡಿಯುವ ತುದಿಯಲ್ಲಿ ೪.೫ ಸೆ. ಮೀ. ದಪ್ಪನಾಗಿದೆ. ನಿರಂತರ ಬಳಕೆಯಿಂದ ಎರಡೂ ತುದಿಗಳು ಮೊಂಡಾಗಿವೆ. ಈ ಮೊದಲು ಹೇಳಿರುವಂತೆ ಗಣೆಯು ಕಲ್ಬಂಡೆಗಳು ಮತ್ತು ಶಿಲಾಖಂಡಗಳ ಮೇಲಿರುವ ಉಳಿ ಗುರುತುಗಳ ಅಳತೆ ಮತ್ತು ಈ ಉಳಿಯ ಗಾತ್ರಕ್ಕೆ ಹೊಂದಿಕೆ ಇರುವುದು ಸಹಜವೇ ಆಗಿದೆ. ಅದರಂತೆಯೇ ೨.೫ ಕಿ.ಗ್ರಾಂ. ತೂಕ, ೧೨ ಸೆಂ.ಮೀ. ಉದ್ದ, ಗರಿಷ್ಠ ೭ ಸೆಂ.ಮೀ. ವ್ಯಾಸವಿರುವ ಸಿಲಿಂಡರಿನಾಕಾರದ ಭಾರ ಸುತ್ತಿಗೆಯೂ ಇಲ್ಲಿ ದೊರಕಿದೆ. ಇದು ಮೊದಲಿಗೆ ಆಯ ಘನಾಕಾರದಲ್ಲಿದ್ದು ಕ್ರಮೇಣ ಬಳಕೆಯಿಂದಾಗಿ ದುಂಡಾದಂತೆ ಕಾಣುತ್ತದೆ. ಇದರ ಒಂದು ತುದಿಯಲ್ಲಿ ೪ ಸೆಂ.ಮೀ. ವ್ಯಾಸ, ಒಂದು ಸೆಂ.ಮೀ. ಆಳವಿರುವ ಕುಳಿಯಿದ್ದು ಇನ್ನೊಂದು ತುದಿ ಬಳಕೆಯಿಂದ ಚಕ್ಕೆ ಏಳುವಷ್ಟು ಸವೆದಿದೆ. ಸುತ್ತಿಗೆಯ ಮಧ್ಯೆ ಹಿಡಿಯನ್ನು ಜೋಡಿಸಲು ರಂಧ್ರವೂ ಇದೆ.

ಈ ಎರಡು ಉಪಕರಣಗಳ ಜೊತೆಯಲ್ಲಿ ಉಳಿಯನ್ನು ಕೆಂಪಾಗಿ ಕಾಯಿಸಿ ನೀರಿನಲ್ಲಿ ತೋಯಿಸಿ ಹದ ಮಾಡಲು ಬಳಸಿರಬಹುದಾದ ಕಲ್ಲಿನ ಸಣ್ಣ (೨೦ ಸೆ.ಮೀ. ಚೌಕ, ೨೨ ಸೆಂ.ಮೀ. ಎತ್ತರ) ಬೋಗುಣಿಯಂತಹ ವಸ್ತುಗಳೂ ಇಲ್ಲಿ ದೊರಕಿವೆ. ಈ ಬೋಗುಣಿಯ ಒಂದು ಬದಿಗೆ ೧೫ ಸೆಂ.ಮೀ. ವ್ಯಾಸ ಮತ್ತು ಅಷ್ಟೇ ಆಳವಿರುವ ದುಂಡನೆಯ ಕುಳಿಯೂ ಇದೆ.

೫. ಜೈನ ದೇವಾಲಯದ ಸಂರಕ್ಷಣೆಯ ಸಂದರ್ಭದಲ್ಲಿ ದೊರೆತ ವಾಸ್ತು ಪೂಜಾದಿ ವಿವರಗಳು : ಇಟ್ಟಿಗೆ, ಕಲ್ಲು ಮುಂತಾದ ಸಾಮಗ್ರಿಗಳನ್ನುಪಯೋಗಿಸಿ ಚೆನ್ನಾಗಿ ಕಟ್ಟಿದ ಕಟ್ಟಡಗಳೂ ಸಹ ನೈಸರ್ಗಿಕ ಪ್ರಕೋಪ, ನಿರ್ಮಾಣ ಸಾಮಗ್ರಿಯ ಗುಣಮಟ್ಟ, ತಳಹದಿಯಲ್ಲಾಗುವ ಏರುಪೇರು, ಅಭದ್ರ ಅಡಿಪಾಯ, ಆಶ್ರಯವಿಲ್ಲದೆ ಕಾಲಕಾಲಕ್ಕೆ ಆಗಬೇಕಾದ ದುರಸ್ತಿ ನಡೆಸದಿರುವುದು, ಜನರ ನಿರ್ಲಕ್ಷ್ಯ ಮುಂತಾದ ಕಾರಣಗಳಿಂದ ಕ್ರಮೇಣ ಹಾಳಾಗುತ್ತವೆ. ಹೀಗೆ ಹಾಳಾಗುವುದರ ಕಾರಣಗಳನ್ನು ಹುಡುಕಿ ವಿಶ್ಲೇಷಿಸಿ, ಸೂಕ್ತ ಕಾಲದಲ್ಲಿ ಮಾಡಬೇಕಾದ ಸಂರಕ್ಷಣಾ ಕಾರ್ಯ ಕೈಗೊಂಡರೆ ಸ್ಮಾರಕಗಳು ನಾಶವಾಗುವುದನ್ನು ತಪ್ಪಿಸಿ ಅವುಗಳ ಸುಸ್ಥಿತಿ ಕಾಲಾವಧಿಯನ್ನು ಹೆಚ್ಚಿಸಬಹುದು. ಸಂರಕ್ಷಣೆಗಾಗಿ ಬುನಾದಿ ಸಹಿತ ಇಡೀ ದೇವಾಲಯವನ್ನು ಬಿಚ್ಚಿ ಕಟ್ಟಬೇಕಾದಾಗ ಅದನ್ನು ಮೊದಲು ಕಟ್ಟುವಾಗ ಅನುಸರಿಸಿದ್ದ ತಾಂತ್ರಿಕ ನೈಪುಣ್ಯ, ವಿಧಾನ, ವಾಸ್ತುಪೂಜೆಯ ಅಂಗವಾಗಿ ನಡೆಸಿದ್ದ ಧಾರ್ಮಿಕ ಪ್ರಕ್ರಿಯೆಗಳು, ಉಪಯೋಗಿಸಿದ್ದ ವಸ್ತುಗಳು, ಅವುಗಳ ಪ್ರಾಮುಖ್ಯ ಮುಂತಾದ ಅಮೂಲ್ಯ ವಿವರಗಳನ್ನು ಕಲೆ ಹಾಕುವ, ಪರಿಶೀಲಿಸುವ ಅಪೂರ್ವ ಸಂದರ್ಭ ಒದಗಿಬರುತ್ತದೆ. ಜಾಗರೂಕತೆಯಿಂದ ಕೆಲಸ ಮಾಡಿದಷ್ಟೂ ಮಾಹಿತಿ ಸಂಗ್ರಹಣೆ ನಿಖರವಾಗುತ್ತದೆ.

ಆಂಧ್ರಪ್ರದೇಶದ ನಾಗಾರ್ಜುನ ಸಾಗರ ಮತ್ತು ಶ್ರೀಶೈಲಂ ಜಲವಿದ್ಯುತ್ ಯೋಜನೆಗಳ ಅಂಗವಾಗಿ ಮುಳುಗಡೆ ಪ್ರದೇಶದಲ್ಲಿ ನಡೆದ ಸ್ಥಳ ಪರಿಶೋಧನೆ, ಉತ್ಖನನ, ಸ್ಮಾರಕಗಳ ಸ್ಥಾನಾಂತರಣ ಮತ್ತಿತರ ಕಾರ್ಯಗಳಲ್ಲಿ ಇಂತಹ ಅನೇಕ ಅಮೂಲ್ಯ ಮಾಹಿತಿ ಬೆಳಕಿಗೆ ಬಂದಿವೆ. ಆಂಧ್ರಪ್ರದೇಶದ ಮೆಹಬೂಬ್‌ನಗರ ಜಿಲ್ಲೆ, ಆಲಂಪುರ ತಾಲೂಕಿನ ಪಾಪನಾಶಿ ಹಾಗೂ ಕೂಡವೆಲ್ಲಿರುವ ಚಾಲುಕ್ಯ ಕಾಲದ ದೇವಾಲಯಗಳ ಸ್ಥಾನಾಂತರಣ ನಡೆಯುವಾಗ ದೊರೆತ ವಾಸ್ತುಪೂಜೆಯ ವಿವರಗಳನ್ನು ಕುರಿತ ಡಾ. ಐ.ಕೆ. ಶರ್ಮ[೧] ಅವರ ಅಧ್ಯಯನ ಈ ದೃಷ್ಟಿಯಿಂದ ಮಹತ್ವದ್ದು.

ಈ ಹಿನ್ನೆಲೆಯಲ್ಲಿ ಪಟ್ಟದ ಕಲ್ಲಿನ ಕ್ರಿ.ಶ. ೯-೧೦ನೆಯ ಶತಮಾನದ ರಾಷ್ಟ್ರಕೂಟ ಶೈಲಿಯ ಜೈನದೇವಾಲಯದ ಸಂರಕ್ಷಣಾ ಕಾರ್ಯ ಮುಖ್ಯವಾದುದು. ಅನೇಕ ಕಾರಣಗಳಿಂದಾಗಿ ಬಹು ಜೀರ್ಣಾವಸ್ಥೆಯಲ್ಲಿದ್ದ ಈ ಗುಡಿಯನ್ನು ಬುನಾದಿ ಸಹಿತ ಬಿಚ್ಚಿ ಕಟ್ಟುವ ಅನಿವಾರ್ಯ ಅವಶ್ಯಕತೆ ಎದುರಾಯಿತು. ಆಗ ಉತ್ಖನನ ಕೈಗೊಂಡು ಈ ದೇವಾಲಯ ಕಟ್ಟಲು ನಿವೇಶನದ ಆಯ್ಕೆ, ಬಳಸಿದ ಕಲ್ಲಿನ ಗುಣ, ಬಂಧಕ ಸಾಮಗ್ರಿ, ಬಳಸಿರುವ ನಿರ್ಮಾಣ ತಂತ್ರ, ವಾಸ್ತುಪೂಜೆಯ ವಿವರಗಳು ಮುಂತಾದವುಗಳ ಬಗೆಗೆ ಮುಖ್ಯವಾದ ವಿವರಗಳನ್ನು ಸಂಗ್ರಹಿಸಲಾಯಿತು. ಇವುಗಳಲ್ಲಿ ಗಮನಾರ್ಹವಾದ ಪ್ರತಿಷ್ಠಾಪನೆ ಮತ್ತು ಗರ್ಭಾದಾನ ಕ್ರಿಯೆಗಳಿಗೆ ಸಂಬಂಧಿಸಿದ ವಿವರಗಳನ್ನು ಇಲ್ಲಿ ವಿಶ್ಲೇಷಿಸಿದೆ.

ದೇವಾಲಯವನ್ನು ಕಟ್ಟುವ ಮೊದಲು, ಕಟ್ಟುವಾಗ ಮತ್ತು ಅನಂತರ ಮಾಡಲೇಬೇಕಾದ ವಿವಿಧ ವಾಸ್ತು ಪೂಜಾಕ್ರಿಯೆಗಳನ್ನು, ಬಲಿ, ನೈವೇದ್ಯಗಳನ್ನು ಕುರಿತು ವಾಸ್ತುಗ್ರಂಥಗಳಲ್ಲಿ ಅನೇಕ ಉಲ್ಲೇಖಗಳಿವೆ. 'ಈಶಾನ ಶಿವಗುರು ದೇವಪದ್ಧತಿ'[೨]ಯಲ್ಲಿ ಹೊಸ ದೇವಾಲಯ ಕಟ್ಟುವಾಗ, ಜೀರ್ಣೋದ್ಧಾರ ಮಾಡುವಾಗ, ಹೊಸ ಹೊಸ ಭಾಗಗಳನ್ನು ಸೇರಿಸಬೇಕಾದಾಗಲೆಲ್ಲ ವಾಸ್ತುಪುರುಷನ ಸ್ಥಾಪನೆ, ಆವಾಹನೆ, ಆರಾಧನೆ, ತೃಪ್ತಿಪಡಿಸುವ ಸಲುವಾಗಿ ವಾಸ್ತುಶಾಂತಿ, ಹೋಮಗಳನ್ನು ಮಾಡುವ ರೀತಿ, ಬಳಸುವ ವಸ್ತುಗಳನ್ನು ಕುರಿತು ವಿವರಿಸುತ್ತದೆ. ಸ್ಥಾಪಕ (ಅರ್ಚಕ), ಸ್ಥಪತಿ ಮತ್ತು ಕಾರಕ (ದೇವಾಲಯದ ನಿರ್ಮಾತೃ) ಈ ಮೂವರೂ ಒಟ್ಟುಗೂಡಿಯೇ ಈ ವಿಧಿಗಳನ್ನು ಆಚರಿಸಬೇಕೆಂದು ತಿಳಿಸಿದೆ.


ದೇವಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅಡಿಪಾಯದ


ಕೇಂದ್ರದಲ್ಲಿ 'ಆಧಾರ ಶಿಲಾನ್ಯಾಸ' ಮತ್ತು ಗರ್ಭಾಧಾನದ ಅನಂತರ ಮೊದಲ ಕಲ್ಲು ಇಟ್ಟಿಗೆಯ ಜೋಡಣೆ (ಪ್ರಥಮೇಷ್ಟಿ ಕಾನ್ಯಾಸ) ಈ ಎರಡು ಅತ್ಯಂತ ಮುಖ್ಯವಾದವು. 'ಮೃತ್ಯು ಪುರಾಣ[೩]ದಲ್ಲಿ ಒಟ್ಟು ದೇವಾಲಯಕ್ಕೆ ಆಧಾರವಾದ 'ಬ್ರಹ್ಮ' ಮತ್ತು ಅದರ ಪ್ರತಿಷ್ಠಾಪನೆಯ ಬಗೆಗೆ ವಿವರಗಳಿವೆ. 'ವಿಷ್ಣು ಧರ್ಮೋತ್ತರ[೪]ವು ಶಿಲಾನ್ಯಾಸದ ಬಗೆಗೆ ಉಲ್ಲೇಖಿಸುತ್ತದೆ. 'ಬೃಹತ್ ಸಂಹಿತೆ[೫]ಯಲ್ಲಿ ಶಿಲಾನ್ಯಾಸದ ಅನಂತರ ಗರ್ಭಾದಾನ ಮಾಡಬೇಕೆಂದೂ, ಗರ್ಭಪಾತ್ರದಲ್ಲಿ ಬೀಜವನ್ನಿರಿಸಿ, ಪ್ರಾಸಾದದಲ್ಲಿ ಉಪಾನದ ಕೆಳಗೆ ಅಥವ ಅಧಿಷ್ಠಾನದ ಮೇಲೆ ಇಡಬೇಕೆಂದೂ ಹೇಳಿದೆ.

ಪಟ್ಟದಕಲ್ಲಿನ ಜೈನದೇವಾಲಯದಲ್ಲಿ ವಾಸ್ತುಪೂಜೆಯ ಭಾಗವಾಗಿ ಕಲ್ಲಿನ ಗರ್ಭಪಾತ್ರವನ್ನು ಗರ್ಭಗೃಹದ ಬಾಗಿಲಿನ ಸ್ವಲ್ಪ ಬಲಕ್ಕೆ, ನೇರವಾಗಿ ಅಡಿಪಾಯದ ಕೊನೆಯ ಕಲ್ಲಿನಲ್ಲಿ ಇಟ್ಟಿದ್ದುದು ಕಂಡುಬಂದಿದೆ (ನಕ್ಷೆ ೧, ಚಿತ್ರ ೨೧) 'ಕಾಶ್ಯಪ ಶಿಲ್ಪ[೬]ದ ಪ್ರಕಾರ ಮೊದಲ ಕಲ್ಲು / ಇಟ್ಟಿಗೆಯನ್ನು ಪ್ರಾಸಾದದ ಬಾಗಿಲಿನ ಬಲಕ್ಕೆ ಸ್ಥಾಪಿಸಬೇಕು. 'ಈಶಾನ ಪದ್ಧತಿ[೭] ಮತ್ತು 'ಈಶಾನ ಶಿವ ಗುರುದೇವ ಪದ್ಧತಿ[೮]ಯ ಪ್ರಕಾರ ದೇವಾಲಯ ನಿರ್ಮಾಣದ ಮೊದಲು ಅದರ ಬೀಜವನ್ನು ಗರ್ಭಪಾತ್ರದಲ್ಲಿರಿಸಿ, ಬಾಗಿಲಿನ ಬಲಗೋಡೆಯ ಒಳಗೆ ಮೊದಲ ಇಟ್ಟಿಗೆಯ ಮಟ್ಟದಿಂದ ಮೇಲೆ ಸ್ಥಾಪಿಸಬೇಕು.

ಇದೇ ವಾಸ್ತು ಪೂಜಾತತ್ವಗಳನ್ನು ಜೈನದೇವಾಲಯ ದಲ್ಲಿಯೂ ಪಾಲಿಸಿದೆ. ಉಪಾನದ ಅತ್ಯಂತ ಕೆಳಗಿನ ಹಂತದಲ್ಲಿ ಗರ್ಭಗೃಹದ ಪ್ರವೇಶ ದ್ವಾರದ ಬಲಗಡೆಗೆ ಪ್ರಥಮ ಶಿಲೆ/ ಇಟ್ಟಿಗೆಯನ್ನು ಸ್ಥಾಪಿಸಬೇಕಾದ ಜಾಗದಲ್ಲಿಯೇ ಗರ್ಭಪಾತ್ರವನ್ನಿಟ್ಟಿದೆ. ವರ್ಣಾಶ್ರಮದಲ್ಲಿ ದೇವಾಲಯವನ್ನು ನಿರ್ಮಿಸುವ ದಾನಿಯ ಸ್ಥಾನವನ್ನು ಅನುಸರಿಸಿ ಗರ್ಭಪಾತ್ರವನ್ನು ಅನುಸರಿಸಿ ಗರ್ಭ ಪಾತ್ರವನ್ನು ದೇವಾಲಯದ ಕೆಳಗೆ, ಅಧಿಷ್ಠಾನದ ಮೇಲೆ ಅಥವ ಶಿಖರದಲ್ಲಿ ಇರಿಸಲಾಗುತ್ತದೆ[೯]. ಪ್ರಸ್ತುತ ಸಂದರ್ಭದಲ್ಲಿ ದೇವಾಲ ಯದ ಅತ್ಯಂತ ಕೆಳಗಣ ಮಟ್ಟದಲ್ಲಿ ಗರ್ಭಾದಾನ ಕ್ರಿಯೆಯನ್ನು ಮಾಡಿರುವುದರಿಂದ ಈ ದೇವಾಲಯವನ್ನು ನಿರ್ಮಿಸಿದ ದಾನಿ ವೈಶ್ಯ ಅಥವ ಶೂದ್ರನಾಗಿರಬೇಕು. ಪಾಪನಾಶಿಯ ದೇವಾಲಯ ಗಳಲ್ಲಿ ಗರ್ಭಪಾತ್ರವನ್ನು ಛತ್ತಿನಲ್ಲಿರಿಸಲಾಗಿದ್ದು ಅದರೊಳಗೆ ತಾಮ್ರದ ಕಮಂಡಲಿನಂತಹ ಕಲಶಗಳಲ್ಲಿ ಅರೆಪ್ರಶಸ್ತಿ ಶಿಲೆಯ ಚೂರುಗಳನ್ನು ಮತ್ತು ಚಿನ್ನದ ತೆಳು ತಗಡನ್ನೂ ಇಡಲಾಗಿತ್ತು.

ಪ್ರಸ್ತುತ ಜೈನ ದೇವಾಲಯದಲ್ಲಿಡಲಾದ ಗರ್ಭಪಾತ್ರ





ಕಲ್ಲಿನದು[೧೦]. ಚೌಕಾಕಾರದ (೬೫x೬೫ ಸೆಂ.ಮೀ.) ಸುಮಾರು ೬೦ ಸೆಂ.ಮೀ. ದಪ್ಪನೆಯ ಕಲ್ಲಿನ ಮಧ್ಯದಲ್ಲಿ ೨೦x೨೦ ಸೆಂ.ಮೀ. ಚೌಕಾಕೃತಿಯ ೧೧ ಸೆಂ.ಮೀ. ಆಳವಾದ ಕುಳಿಯನ್ನು ಕತ್ತಿ, ಅದರಲ್ಲಿ ೨.೫ ರಿಂದ ೩ ಸೆಂ.ಮೀ. ಗಾತ್ರದ, ೧.೫ ರಿಂದ ೨ ಸೆಂ.ಮೀ. ಆಳದ ಒಂಬತ್ತು[೧೧] ಸಣ್ಣ ಸಣ್ಣ ಕುಳಿಗಳನ್ನು, ಸಾಲಿಗೆ ಮೂರರಂತೆ ಮೂರು ಸಾಲುಗಳಲ್ಲಿ ಕೊರೆಯಲಾಗಿದೆ. (ನಕ್ಷೆ ೨. ಚಿತ್ರ ೨೨) ಇವುಗಳಲ್ಲಿ ಮಧ್ಯದ ಸಣ್ಣ ಕುಳಿಯಲ್ಲಿ ಚಿನ್ನದ ಕಿರುಗಾತ್ರದ ಮೂರು ತೆಳು ತಗಡುಗಳು, ತಾಮ್ರ ಮಿಶ್ರಿತ ಮಿಶ್ರ ಲೋಹದ ತೀರ ಸವೆದ ಒಂದು ಸಣ್ಣ ನಾಣ್ಯ, ಕಬ್ಬಿಣದ ಸಣ್ಣ ತಗಡಿನ ಚೂರುಗಳನ್ನು ಗರ್ಭಾದಾನ ಕ್ರಿಯೆಯ ಅಂಗವಾಗಿ ಇಡಲಾಗಿತ್ತು.[೧೨] ಮೇಲ್ನೋಟಕ್ಕೆ ಉಳಿದ ಕುಳಿಗಳಲ್ಲಿ ಯಾವುದೇ ಕಂಡುಬರಲಿಲ್ಲ. ಬಹುಶಃ ಈ ಕುಳಿಗಳಲ್ಲಿ ಸುಲಭವಾಗಿ ನಾಶವಾಗುವ ನವನಿಧಿಗಳನ್ನು ಅಥವ ಗ್ರಹಗಳನ್ನು ಸಂಕೇತಿಸುವ ನವಧಾನ್ಯಗಳನ್ನು ಇಟ್ಟಿರಬಹುದೆಂದು ಊಹಿಸಬಹುದು. ಆದರೆ ಸುತ್ತಲಿನ ಕುಳಿಗಳ ಮೇಲಿದ್ದ ಮಣ್ಣನ್ನು ಸಣ್ಣ ತೂತಿನ ಜರಡಿಯಲ್ಲಿ ಸೋಸಿದಾಗ ಕೆಂಪು ಬಣ್ಣದ ಹರಳಿನ (ಪದ್ಮರಾಗ?) ಚೂರು, ಎರಡು ತುಂಡಾಗಿದ್ದ ಸಣ್ಣ ಚಿನ್ನದ ತಗಡಿನ ಸಿಲಿಂಡರಿನಾಕಾರದ ಲಾಳಿಕೆಯ ಸುರುಳಿಗಳು, ಹೆಡೆಯೆತ್ತಿದ ಹಾವಿನಂತಹ ಕೊಂಡಿ, ತೀರ ತುಕ್ಕು ಹಿಡಿದ ಸಣ್ಣ ಗಾತ್ರದ ಮೂರು ತಾಮ್ರದ ನಾಣ್ಯಗಳು ದೊರೆತವು. ಈ ನಾಣ್ಯಗಳಲ್ಲಿ ಒಂದಕ್ಕೆ ಒಂದು ತುದಿಯಲ್ಲಿ ಎರಡು ಸಣ್ಣ ರಂಧ್ರಗಳನ್ನು ಕೊರೆದಿದ್ದು ಅದನ್ನು ಪದಕದಂತೆ ಉಪಯೋಗಿಸಿದ್ದಂತೆ ಕಂಡುಬರುತ್ತದೆ. ಗರ್ಭಪಾತ್ರದೊಳಗಿನ ಈ ಒಂಬತ್ತು ಕುಳಿಗಳಲ್ಲದೆ, ಗರ್ಭಪಾತ್ರದ ಮಟ್ಟದಲ್ಲಿರುವ ಕಲ್ಲುಗಳ ಮೇಲೆಲ್ಲ ಸಮಾನಾಂತರದಲ್ಲಿ ದೀರ್ಘ ವೃತ್ತಾಕಾರದ ಅಷ್ಟೇನು ಆಳವಿಲ್ಲದ ಅನೇಕ ಕುಳಿಗಳಿರುವುದು ಕಂಡುಬಂದಿತು. ಇವುಗಳ ಸಂಖ್ಯೆ, ವಿನ್ಯಾಸ, ಅದರೊಳಗಿರಿಸಿದ್ದ ವಸ್ತುಗಳ ಬಗೆಗೆ ಹೆಚ್ಚು ವಿವರಗಳು ದೊರೆಯಲಿಲ್ಲ.[೧೩] (ಚಿತ್ರ ೨೩).

ಗರ್ಭಪಾತ್ರದ ಮಧ್ಯದ ಕುಳಿಯಲ್ಲಿ ಕಂಡುಬಂದಿರುವ ಮೂರು ಚಿನ್ನದ ಸುರುಳಿಗಳನ್ನು ಜಾಗರೂಕತೆಯಿಂದ ಬಿಡಿಸಿ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅವುಗಳಲ್ಲಿ ಕ್ರಮವಾಗಿ ೧) ಕಡಿಮೆ ಎತ್ತರದ ಪೀಠದ ಮೇಲೆ ಕುಳಿತ ಮನುಷ್ಯ. ೨) ಆಡು (ಛಾಗ) ಮತ್ತು ೩) ವರಾಹದಂತಹ ಪ್ರಾಣಿಯ ಚಿತ್ರಣಗಳನ್ನು ರೂಪಿಸಿರುವುದು ಕಂಡುಬಂದಿತು (ಚಿತ್ರ ೨೪). ಮನುಷ್ಯ ಪ್ರಾಣಿಗಳ ಮೂರ್ತರೂಪವನ್ನೂ ತೆಳುವಾದ ಚಿನ್ನದ ತಗಡಿನಲ್ಲಿ ಸ್ಥೂಲವಾಗಿ ಕತ್ತರಿಸಿ, ತಲೆ, ಕಣ್ಣು, ಅಂಗಾಂಗಗಳನ್ನು ಗೀರಿ/ ಕೊರೆದು ತೆಳು ಉಬ್ಬುರೂಪದಲ್ಲಿ ಮೂಡಿಸಿದೆ.

ಪಶ್ಚಿಮ ಬಂಗಾಳದ ಬೋಗ್ರ-ಮಹಾಸ್ಥಾನದ ಬಳಿಯಲ್ಲಿರುವ ಗೋಕುಲದ ದೇವಾಲಯ ಒಂದರ ಮಧ್ಯದಲ್ಲಿ ಕಲ್ಲಿನ ಆಧಾರ





ಶಿಲೆಯನ್ನು ಇಟ್ಟಿದ್ದುದು ವರದಿಯಾಗಿದೆ.[೧೪] ಇದರ ಮಧ್ಯಭಾಗದಲ್ಲಿ ಹನ್ನೆರಡು ಕುಳಿಗಳಿದ್ದು ಅವುಗಳಲ್ಲಿ ಮಧ್ಯದ ಸ್ವಲ್ಪ ದೊಡ್ಡದಾದ ಕುಳಿಯಲ್ಲಿ ಚಿನ್ನದ ತಗಡಿನಲ್ಲಿ ಒತ್ತಿ ಮೂಡಿಸಿದ ನಂದಿಯ ಚಿತ್ರಣವಿದ್ದುದು ಕಂಡುಬಂದಿದೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಗುಡ್ನಾಪುರದಲ್ಲಿ ಕದಂಬ ರವಿವರ್ಮನ ಸ್ತಂಭ ಶಾಸನವನ್ನು ಆಧರಿಸಿದ ಉತ್ಖನನದಲ್ಲಿ ಕಾಮಜಿನಾಲಯದ ಇಟ್ಟಿಗೆಯಲ್ಲಿ ಕಟ್ಟಿದ್ದ ದೇವಾಲಯದ ಅಡಿಪಾಯದಲ್ಲಿ ತಾಮ್ರದಿಂದ ರೂಪಿಸಿದ ಆಮೆಯಾಕಾರದ ಮುಚ್ಚಳದಿಂದ ಕೂಡಿದ ಪುಟ್ಟ ಡಬ್ಬಿಯು ದೊರಕಿದ್ದು ಅದರೊಳಗೆ ಅರೆಪ್ರಶಸ್ತಿ ಶಿಲೆಗಳ ಚೂರನ್ನು ಇಟ್ಟಿದ್ದುದು ಕಂಡುಬಂದಿದೆ.[೧೫]

ಆಲಂಪುರದ ಪಾಪನಾಶಿ ದೇವಾಲಯ ಸಮೂಹದಲ್ಲಿ ಒಟ್ಟು ಎಂಟು ತಾಮ್ರದ ಕಮಂಡಲುವಿನಂತಹ ಕಲಶಗಳು ದೊರಕಿದ್ದು ಮುಖ್ಯ ದೇವಾಲಯುದ ಆಧಾರಶಿಲೆಯ ಗರ್ಭಪಾತ್ರ-ಕಲಶದಲ್ಲಿ ಚಿನ್ನದ ಕಮಲ ಮತ್ತು ವಿವಿಧ ಗಾತ್ರ ವಿನ್ಯಾಸದ ಐದು ಅರೆಪ್ರಶಸ್ತಿ ಶಿಲೆಯ ಹರಳುಗಳು ಬೆಳಕಿಗೆ ಬಂದಿವೆ.[೧೬]

ಜೈನ ದೇವಾಲಯದಲ್ಲಿ ದೊರಕಿದ ಚಿನ್ನದ ತಗಡಿನಲ್ಲಿ ರೂಪಿಸಿರುವ ಕಿರು ಪೀಠದ ಮೇಲೆ ಕುಳಿತಿರುವಂತೆ ಚಿತ್ರಿಸಿದ ಪುರುಷ ವಾಸ್ತುಪುರುಷ. ಬಲಗಾಲನ್ನು ಪೂರ್ತಿಯಾಗಿ ಮಡಿಸಿ ಪೀಠದ ಮೇಲಿರಿಸಿಕೊಂಡು, ಎಡಗಾಲನ್ನು ಮಡಿಸಿ ಸುಖಾಸನದಲ್ಲಿ ಕುಳಿತಿರುವಂತೆ ಈ ಅಸುರನ ಚಿತ್ರಣವಿದೆ. ಕೈಗಳನ್ನು ಅಂಜಲಿಮುದ್ರೆಯಲ್ಲಿ ಮಡಿಸಿ ಎದೆಯ ಸ್ವಲ್ಪ ಎಡಭಾಗಕ್ಕೆ ತೋರಿಸಿದೆ.[೧೭] ಆಲಂಪುರದ ದೇವಾಲಯ ಸಮೂಹದಲ್ಲಿ ಬೆಳಕಿಗೆ ಬಂದಿರುವ ಒಂದು ತಾಮ್ರ ಕಲಶದಲ್ಲಿ ಈ ಚಿನ್ನದ ತಗಡನ್ನೇ ಹೋಲುವ ಕ್ವಾರ್ಟ್‌ಜೈಟ್ ಶಿಲೆಯ ಚಕ್ಕೆಯೊಂದು ದೊರೆತಿದೆ. ಈ ಚಕ್ಕೆಯು ಮಾನವಾಕೃತಿಯನ್ನು ಸಂಕೇತಿಸುತ್ತದೆಂದು ಡಾ. ಐ.ಕೆ. ಶರ್ಮ ಅಭಿಪ್ರಾಯಪಡುತ್ತಾರೆ.[೧೮] ಹಾಗೆ ನೋಡಿದರೆ ಬಣ್ಣಗಳಿಂದ ಅಲಂಕರಿಸಿ, ಪೂಜಿಸಲಾದ ಈ ಶಿಲೆಯನ್ನು ವಾಸ್ತು ಪುರುಷನೆಂದೇ ಭಾವಿಸಬಹುದು.

ಆಡಿನಾಕಾರದಲ್ಲಿ ಕತ್ತರಿಸಿದ ಎರಡನೆಯ ತಗಡು ವಾಸ್ತು ಪೂಜಾ ಸಂದರ್ಭದಲ್ಲಿ ಮುಖ್ಯವಾದುದು[೧೯] ಆಡು ಅಥವ ಛಾಗಾಸುರ ಭಾರ್ಗವ ಋಷಿಯು ಅಗ್ನಿಯಿಂದ ಹುಟ್ಟಿ ಪ್ರಪಂಚವನ್ನೆಲ್ಲ ವ್ಯಾಪಿಸಿದವನು. ಆಡು ಮನುಷ್ಯನ ಬದಲಿಗೆ ಯಾಗಪಶುವಾಗಿ ಬಳಕೆಯಾಗುವ ಪ್ರಾಣಿ. ವಾಸ್ತು ಗ್ರಂಥಗಳ ಪ್ರಕಾರ ಅಸುರಗುರು ಭೃಗುಮುನಿ ಶುಭ ಚಿನ್ಹೆಗಳಿರುವ ಆಡನ್ನು ಯಾಗಪಶುವಾಗಿ ಆಹುತಿ ನೀಡಿದಾಗ, ಅದು ಆಡಿನ ತಲೆಯ ರಾಕ್ಷಸನಾಗಿ ಬೃಹದಾಕಾರವಾಗಿ ಬೆಳೆದು ತನ್ನ ಭೀಕರಾಕಾರದಿಂದ ಸ್ವರ್ಗದ ದೇವತೆಗಳನ್ನೂ ಭಯಪಡಿಸುತ್ತಾನೆ. ದೇವತೆಗಳನ್ನು ಈ ರಕ್ಕಸನಿಂದ ಕಾಪಾಡಲು ಶಿವ ಒಂದು ಭೂತವನ್ನು ಸೃಜಿಸಿ ಅದರ ಮೂಲಕ ಆಡಿನ ತಲೆಯ ರಾಕ್ಷಸ (ಛಾಗಾಸುರ) ನನ್ನು ಅವನ ಗುರು ಭೃಗುವನ್ನು ನಿಯಂತ್ರಿಸಿದ. ಹೀಗೆ ನಿಯಂತ್ರಿತನಾದ ಛಾಗಾಸುರ ಈಶ್ವರನನ್ನು ಬೇಡಿಕೊಂಡು ಅವನಿಂದ ಹೀಗೆ ವರ ಪಡೆಯುತ್ತಾನೆ. "ನನ್ನಿಂದ ವಸತಿಯನ್ನು ಬಯಸಿದೆಯಾಗಿ ನೀನು 'ವಾಸ್ತುಪ' ಎಲ್ಲ ರೀತಿಯ ವಾಸ್ತುಗಳನ್ನು ಕಾಪಾಡುವವನಾಗು'. 'ವಸ್' ಧಾತುವಿನಿಂದ ನಿಷ್ಪನ್ನನಾಗಿ 'ವಾಸ್ತುಪತಿ'ಯಾಗಿ ಭೂಮಿಯ ಮೇಲೆ ವಾಸಿಸು. ಇಂದಿನಿಂದ ನಿನ್ನ ಹೆಸರು 'ವಾಸ್ತು ಪುರುಷ', 'ವಾಸ್ತುಪತಿ' ಎಂದಾಗಲಿ. ವಸುಂಧರೆ, ಬ್ರಹ್ಮನೇ ಮೊದಲಾದ ಎಲ್ಲ ದೇವತೆಗಳು, ಭೂಮಿಯ ಮೇಲೆ ವಾಸಿಸುವವರೆಲ್ಲರೂ ನಿನ್ನಲ್ಲಿ ವಾಸ ಮಾಡಲಿ. ಇನ್ನು ಮುಂದೆ ಯಾರಾದರೂ ದೇವಾಲಯ, ವಾಸಗೃಹಾದಿಗಳನ್ನು ಭೂಮಿಯ ಮೇಲೆ ನಿರ್ಮಿಸಿ ಅದರಲ್ಲಿ ವಾಸಿಸಬಯಸಿದರೆ ಅವರು ಮೊದಲಿಗೆ ಹೂವು, ಗಂಧ, ಧೂಪ, ದೀಪಾದಿಗಳಿಂದ ನಿನ್ನನ್ನು ಪೂಜಿಸಿ, ಬಲಿ ನೀಡಲಿ. ನಿನ್ನನ್ನು ಮತ್ತು ನಿನ್ನೊಳಗೆ ವಾಸಿಸುವ ದೇವತೆಗಳನ್ನು ಸೂಕ್ತ ರೀತಿಯಲ್ಲಿ ಪೂಜಿಸಲಿ. ಛಾಗಾಸುರನು ಶಿವನಿಂದ ಹೀಗೆ ತನಗೆ ಬೇಕಾದ ವರವನ್ನು ಬೇಡಿ ಪಡೆದುದರಿಂದ ದೇವತೆಗಳ ಮತ್ತು ಮನುಷ್ಯರ ನಿವಾಸಗಳನ್ನು ಕಟ್ಟುವಾಗ ಮೊದಲಿಗೆ ಅವನನ್ನೇ ಪೂಜಿಸಬೇಕಾದ ಅವಶ್ಯಕತೆ ಉಂಟಾಯಿತು.

ಅಲ್ಲದೆ ಯಾಗದಲ್ಲಿ ಬಲಿಯಾದ ಆಡು ಯಾಗ ಮಾಡಿ ದವರನ್ನು, ದೇವತೆಗಳನ್ನೂ ಸ್ವರ್ಗಕ್ಕೆ, ಬೆಳಕಿನೆಡೆಗೆ ಒಯ್ಯುತ್ತದೆ. ಅವನ ಮೇಲೆ ದೇವಾಲಯಗಳನ್ನು ಕಟ್ಟಲಾಗುತ್ತದೆ. ತಲವಿನ್ಯಾಸದಲ್ಲಿ ಕೇಂದ್ರವಿದ್ದು ಊರ್ಧ್ವವಿನ್ಯಾಸದಲ್ಲಿ ದೇವಲೋಕವಿರುವಂತೆ, ದೇವತೆಗಳು ಅದರಲ್ಲಿ ನೆಲೆಗೊಳ್ಳುತ್ತಾರೆ.

ಗರ್ಭಪಾತ್ರದಲ್ಲಿನ ಇನ್ನೊಂದು ತಗಡಿನಲ್ಲಿರುವ ವರಾಹ ವಾಸ್ತುಪೂಜೆಯಲ್ಲಿ ನೇರ ಸಂಪರ್ಕ ಹಿನ್ನಲೆ ಹೊಂದಿಲ್ಲ. ಆದರೆ ವಾಸ್ತುಗ್ರಂಥಗಳಲ್ಲಿ ಇಡೀ ವಿಶ್ವದ ಧಾರಕನಾದ ವಿಷ್ಣುವನ್ನು ಅನಂತನೆಂದು ಕರೆದಿದೆ. ಅನಂತ ತನ್ನ ಹೆಡೆಯ ಮೇಲೆ ಇಡೀ ಭೂಮಿಯನ್ನು ಎತ್ತಿ ಹಿಡಿದಿದ್ದು, ಅದರ ಮೇಲೆಯೇ ಎಲ್ಲ ಕಟ್ಟಡಗಳೂ ಮೇಲೇಳುವುದು. ಈ ಅರ್ಥದಲ್ಲಿಯೇ ಯಜ್ಞ ಮೂರ್ತಿ, ಯಜ್ಞಪುರುಷನಾದ ವಿಷ್ಣುವಿನ ಜೊತೆ ವಾಸ್ತುಪುರುಷನು

ಸಾದೃಶ್ಯ ಪಡೆದು ಏಕೀಭವಿಸುವುದು.[೨೦] ಬಹುಶಃ ವಿಷ್ಣುವಿನ ದಶಾವತಾರಗಳಲ್ಲಿ ಒಂದಾದ ವರಾಹದ ಚಿತ್ರಣ ಈ ರೀತಿ ಅರ್ಥವತ್ತಾಗುತ್ತದೆ. ಇದೇ ವರಾಹಾವತಾ ರದಲ್ಲಿಯೇ ವಿಷ್ಣುವು ಹಿರಣ್ಯಾಕ್ಷನಿಂದ ಅಗಾಧ ಸಮುದ್ರ ತಲದಲ್ಲಿ ಹುದುಗಿಸಿಟ್ಟಿದ್ದ ಭೂದೇವಿಯನ್ನು ಉದ್ಧರಿಸಿದುದು. ಹೀಗೆ ವರಾಹ ಭೂಮಿಯ ಮೇಲೆ ಮನುಷ್ಯರು, ದೇವತೆಗಳು ಪುನಃ ನೆಲೆಗೊಳ್ಳಲು ಸಾಧ್ಯವಾಗುವಂತೆ ಮಾಡಿದ್ದು. ಜೊತೆಗೆ ಬಾದಾಮಿ ಚಾಲುಕ್ಯರನ್ನೊಳಗೊಂಡಂತೆ ಅನೇಕ ರಾಜವಂಶಗಳಿಗೆ ವರಾಹವೇ ರಾಜಲಾಂಛನ. ಈ ಹಿನ್ನೆಲೆಯಲ್ಲಿ ಚಾಲುಕ್ಯ ರಾಜಧಾನಿಯಿಂದ ಅನತಿ ದೂರದಲ್ಲಿ ಕಟ್ಟಿದ ದೇವಾಲಯದ ವಾಸ್ತುಪೂಜೆಯ ಸಂದರ್ಭದಲ್ಲಿ ವರಾಹ ಚಿತ್ರವಿರುವುದನ್ನು ಅರ್ಥಯಿಸಬಹುದು.

ಗರ್ಭಪಾತ್ರದಲ್ಲಿನ ಇನ್ನಿತರ ಪ್ರಾಚ್ಯವಸ್ತುಗಳಲ್ಲಿ ಚಿನ್ನದ ಲಾಳಿಕೆ ಮತ್ತು ಹೆಡೆಯೆತ್ತಿದ ಹಾವಿನ ನಳಿಕೆಗಳು ಮುಖ್ಯವಾದವು. ಎರಡು ತುಂಡಾಗಿರುವ ಲಾಳಿಕೆಯು ಒಟ್ಟು ೨೯ ಮಿ.ಮೀ. ಉದ್ದವಿದ್ದು ಅದರ ಒಂದು ಮೂತಿಯ ಗರಿಷ್ಠ ವ್ಯಾಸ ೩ ಮಿ.ಮೀ. ಇದೆ. ವಾಸ್ತುಪೂಜೆಯ ವೇಳೆ ವಿಶ್ವಚೈತನ್ಯ (Cosmic energy) ವನ್ನು ಆಕಾಶದಿಂದ ಗ್ರಹಿಸಿ, ಮೊದಲು ಗರ್ಭಗೃಹದಲ್ಲಿನ ಬಿಂಬ ಮತ್ತು ನಂತರ ಗರ್ಭಪಾತ್ರದಲ್ಲಿನ ಬೀಜಕ್ಕೆ ಆವಾಹಿಸುವುದಕ್ಕಾಗಿ ಇಡುವ ಯೋಗನಾಲದ[೨೧] ಪ್ರತೀಕವಾದ ಈ ಲಾಳಿಕೆಯ ಶೋಧ ಗಮನಾರ್ಹವಾಗುತ್ತದೆ.

ಅದರಂತೆಯೇ ೧೬ ಮಿ.ಮೀ. ಉದ್ದವಾದ ಹೆಡೆಯೆತ್ತಿದ ಹಾವಿನಂತಹ ವಸ್ತು ಸೂಕ್ಷ್ಮವಾದ ಚಿನ್ನದ ತಂತಿಯಿಂದ ರೂಪಿತವಾಗಿದೆ. ತನ್ನ ಹೆಡೆಯ ಮೇಲೆ ವಿಶ್ವವನ್ನೆಲ್ಲ ಎತ್ತಿ ಹಿಡಿದ ಅನಂತನನ್ನು ಪ್ರತೀಕಿಸುವುದರಿಂದ ಇದು ಮುಖ್ಯವಾದ್ದು. ಎಲ್ಲ ವಾಸ್ತುಗಳನ್ನು ನಿರ್ಮಿಸಿ ಮೇಲೆತ್ತಲು ಅನುವಾಗುವಂತೆ ಅನಂತ ತನ್ನ ಹೆಡೆಯ ಮೇಲೆ ಭೂಮಿಯನ್ನು ಹೊತ್ತಿದ್ದಾನೆ.[೨೨] ಅಲ್ಲದೆ ಅನಂತ ಅಥವ ಶೇಷ ಭೂಮಿಯ ಮೇಲಣ ಎಲ್ಲ ವಾಸ್ತು ನಿರ್ಮಿತಿಗಳಿಗೆ ಆಧಾರವಾಗಿದ್ದು ಅವುಗಳನ್ನೆಲ್ಲ ಕಾಪಾಡುವ ವಾಸ್ತುನಾಗ. ವಾಸ್ತುಪೂಜೆಯ ಅಂಗವಾಗಿ ಚಿನ್ನದ ವಾಸ್ತುನಾಗನನ್ನು ಸ್ಥಾಪಿಸಿ ಪೂಜಿಸಬೇಕೆಂದು 'ವಾಸ್ತು ಮುಕ್ತಾವಳಿ'[೨೩]ಯಲ್ಲಿ ಹೇಳಿದೆ.

ಮೇಲೆ ಹೇಳಿದ ಆಧಾರಗಳಿಂದ ಪ್ರಾಚೀನ ಕಾಲದಲ್ಲಿ ದೇವಾಲಯ ಕಟ್ಟುವಾಗ ವಾಸ್ತು ಶಾಸ್ತ್ರಗಳಲ್ಲಿ ವಿಧಿಸಿದ ಎಲ್ಲ ವಾಸ್ತು ಪೂಜಾಕ್ರಿಯೆಗಳನ್ನು ಅನೂಚಾನವಾಗಿ ಪಾಲಿಸಿರುವುದು ಕಾಣುತ್ತದೆ. ಹೀಗೆ ಪ್ರಾಚೀನ ಕಾಲದಲ್ಲಿ ಆಗಮೋಕ್ತ ವಿಧಾನದಿಂದ ವಾಸ್ತುಪೂಜೆ, ಪ್ರತಿಷ್ಠಾವಿಧಿಗಳ ಅನುಷ್ಠಾನದ ಬಗೆಗೆ ಅಧ್ಯಯನ ಮಾಡಬಹುದಾದ ಅವಕಾಶ ತೀರ ವಿರಳವಾಗಿ ದೊರೆಯುತ್ತದೆ. ಸ್ಮಾರಕಗಳ ಸಂರಕ್ಷಣೆಯ ಸಮಯದಲ್ಲಿ ದೊರೆಯುವ ಸದವಕಾಶಗಳನ್ನು ಸಾರ್ಥಕವಾಗಿ ಉಪಯೋಗಿಸಿಕೊಳ್ಳಬೇಕು. ತಾಳ್ಮೆ, ಸೂಕ್ಷ್ಮ ಪರಿಶೀಲನೆ, ದೊರೆಯುವ ಸಾಕ್ಷ್ಯಾಧಾರಗಳ ಪೂರ್ಣ ದಾಖಲಾತಿ, ವಿಶ್ಲೇಷಣಾತ್ಮಕ ಅಧ್ಯಯನದಿಂದ ವಾಸ್ತು ಪೂಜಾ ವಿಧಿನಿಯಮಗಳ ಅನುಷ್ಠಾನದಲ್ಲಿನ ಪ್ರಾದೇಶಿಕ ವ್ಯತ್ಯಾಸ, ವೈಶಿಷ್ಟ್ಯಗಳನ್ನು ಗುರುತಿಸಬಹುದು. ಇಡೀ ಸಮಾಜದ ಒಳಿತಿಗಾಗಿ ನಿರ್ಮಾಣವಾಗುವ ಧಾರ್ಮಿಕ ವಾಸ್ತುಗಳಲ್ಲಿ ಇಂತಹ ಪ್ರಕ್ರಿಯೆಗಳ ಅಧ್ಯಯನದಿಂದ ನಮ್ಮ ಪ್ರಾಚೀನ ಸಂಸ್ಕೃತಿಯ ಇನ್ನೊಂದು ಅಪರಿಚಿತ ಮುಖವನ್ನು ಅರ್ಥ ಮಾಡಿಕೊಳ್ಳಲು ಸಹಾಯ ವಾಗುತ್ತದೆ.


(ಈ ಪ್ರಬಂಧ ಪ್ರಕಟಣೆಗೆ ಅನುಮತಿ ನೀಡಿದುದಕ್ಕಾಗಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣದ ಮಹಾನಿರ್ದೇಶಕರಾದ ಶ್ರೀಮತಿ ಗೌರಿಚಟರ್ಜಿ, ಭಾ.ಅ.ಸೇ. ಅವರಿಗೆ ಲೇಖಕರು ಕೃತಜ್ಞರಾಗಿದ್ದಾರೆ. ಇದರ ರಚನೆಯಲ್ಲಿ ಸಹಕರಿಸಿದ ಸರ್ವಶ್ರೀ ಸಿ. ರಂಗಪ್ಪ, ಉಪಾಧೀಕ್ಷಕ ಪುರಾತತ್ವ ಅಭಿಯಂತ; ಕೆ.ಜಿ.ಎಸ್. ಜೋಯಿಸಂ, ವರಿಷ್ಠ ಸಹಾಯಕ ಸಂರಕ್ಷಕ; ಆರ್.ಎಸ್. ಅಥಣಿ, ಡ್ರಾಫ್ಟ್ಸ್‌ಮನ್ ಮತ್ತು ಛಾಯಾಗ್ರಾಹಕ ಎಸ್. ಲಿಂಗರಾಜು ಅವರಿಗೆ ಕೃತಜ್ಞತೆಗಳು. ಸೂಕ್ತ ಸಲಹೆ, ಸಹಕಾರ ನೀಡಿದ ಡಾ. ಕಸ್ತೂರಿ ಬಾಯಿ ಅವರಿಗೂ ವಂದನೆಗಳು.)

ಅನುಬಂಧ *(ಛಾಯಾಚಿತ್ರಗಳ ವಿವರ)*


೧. ಪ್ರಾಚೀನ ಶಿಲಾಯುಗದ ಕಲ್ಲಿನ ಆಯುಧಗಳು, ಪುಷ್ಕರಿಣಿ, ಬನಶಂಕರಿ.
೨. ಹೊಸದಾಗಿ ಬೆಳಕಿಗೆ ಬಂದ ಸೋಪಾನಗಳು.
೩. ಚಾಲುಕ್ಯ ಹಾಗೂ ವಿಜಯನಗರ ಕಾಲದ ಪ್ರಾಕಾರಗಳು-ಸಂರಕ್ಷಣೆಗೆ ಮೊದಲು.
೪. ಚಾಲುಕ್ಯ ಹಾಗೂ ವಿಜಯನಗರ ಕಾಲದ ಪ್ರಾಕಾರಗಳು-ಸಂರಕ್ಷಣೆಯ ನಂತರ.
೫. ಗಣಿ ನಿವೇಶನವಿರುವ ಬೆಟ್ಟಸಾಲು.
೬. ಗಣಿಗಾರಿಕೆಯಿಂದ ಸಮತಟ್ಟಾದ ಗುಡ್ಡದ ಭಾಗ.
೭. ಆಯ್ದು ಜೋಡಿಸಿದ ಶಿಲಾಖಂಡಗಳು.
೮. ಶಾಸನ ಸಹಿತ ಗಣಪತಿಯ ಚಿತ್ರ.
೯. ಶಾಸನದ ಹತ್ತಿರದ ನೋಟ.
೧೦. ಶ್ರೀ ಬಿ(ವಿ)ೀರ ವಿದ್ಯಾಧರನ್.
೧೧. ಕಿರುಶಾಸನಗಳು.
೧೨-೧೩. ಶೈಲೀಕೃತ ತ್ರಿಶೂಲ.
೧೪. ಹಾಜರಾತಿ ಚಿನ್ನೆಗಳು.
೧೫. ಗಣೇಶ, ತ್ರಿಶೂಲ.
೧೬. ಮಹಿಷ ಮರ್ದಿನಿ.
೧೭. ನವಿಲು.
೧೮. ಕೂಡು ಮತ್ತಿತರ ವಿನ್ಯಾಸಗಳು.
೧೯. ಆನೆ, ಸಿಂಹಗಳ ಚಿತ್ರಣ.
೨೦. ಉಳಿ, ಸುತ್ತಿಗೆ.
ನಕ್ಷೆ ೧. ಗರ್ಭಪಾತದ ಸ್ಥಳ ಸೂಚಿಸುವ ದೇವಾಲಯ ತಲವಿನ್ಯಾಸ.
೨. ಗರ್ಭಪಾತ್ರದ ಊರ್ಧ್ವ ಮತ್ತು ತಲವಿನ್ಯಾಸ.
೨೧. ಗರ್ಭಪಾತ್ರವಿರುವ ಸ್ಥಳ (ಅಡಿಪಾಯದ ಕೊನೆಯ ಸ್ತರ).
೨೨. ಗರ್ಭಪಾತ್ರದ ಕುಳಿಗಳು.
೨೩. ಗರ್ಭಪಾತ್ರದಲ್ಲಿ ದೊರೆತ ಪ್ರಾಚ್ಯವಸ್ತುಗಳು.
೨೪. ವರಾಹ, ವಾಸ್ತುಪುರುಷ ಮತ್ತು ಭಾಗ (ಅಡು.)

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Sarma, I.K. 1993. Alampur Temples : Rare Evidences on Constructlutional Modes and Consecrational Rites in Sri *Ramachandrika* by A.V.N. Murthy and I.K. Sarma. (eds). Delhi 1993, p. 351-368.
೨. ಈಶಾನ ಶಿವಗುರುದೇವ ಪದ್ಧತಿ (ಈ.ಶಿ.ಗು.ಪ). III. 6 XXVII-40-41. J.I.O.S.A. Vol. IX pp. 162 ff.
೩. ಮತ್ಸ್ಯ ಪುರಾಣ ಅ. CCLXVI-5.18.
೪. ವಿಷ್ಣು ಧರ್ಮೋತ್ತರ ಪುರಾಣ p1. II. ಅ. XXIX ಪು : 78.
೫. ಬೃಹತ್ಸಂಹಿತಾ ಅ. LII, 112.
೬. ಕಾಶ್ಯಪ ಶಿಲ್ಪ ಅ. IV. 46.
೭. ಈಶಾನಪದ್ಧತಿ ಅ. IC ಶ್ಲೋಕ 63.
೮. ಈ.ಶಿ.ಗು.ಪ. III 6 XXVII, 72 H.
9. Kramrison, Stella, 1976, *The Hindu Temple*. Vol. I. Delhi 1976. p. 105, 106. f.n. 31 & p. 127.
೧೦. ಸಾಧಾರಣವಾಗಿ ಗರ್ಭಪಾತ್ರವು ತಾಮ್ರದ್ದಾಗಿರುತ್ತದೆ. ಕೆಲವೊಮ್ಮೆ ಚಿನ್ನ, ಬೆಳ್ಳಿ, ತಾಮ್ರದ್ದಾಗಿರಬೇಕೆಂದೂ ಉಲ್ಲೇಖಗಳಿವೆ. ನಿಧಿಕಲಶ ಮತ್ತು ಗರ್ಭಪಾತ್ರಗಳೆರಡೂ ಒಂದೇ ತತ್ವದ ರೂಪಗಳಾಗಿದ್ದು ಒಂದೇ ರೀತಿಯ ಪ್ರಾಮುಖ್ಯವನ್ನು ಪಡೆದಿವೆ. ಪ್ರಸ್ತುತ ಜೈನದೇವಾಲಯದಲ್ಲಿ ಈ ಎರಡನ್ನೂ ಚೌಕಾಕಾರದ ಒಂದೇ ಕಲ್ಲಿನ ಸಂಗ್ರಾಹಕ ಅಥವಾ ಕರಂಡದಲ್ಲಿಡಲಾಗಿದೆ.
೧೧. ವಾಸ್ತು ಮಂಡಲದೊಳಗೆ ಇರಬೇಕಾದ ಕುಳಿ ಅಥವ ಚೌಕಗಳ ಬಗೆಗೆ ಶಾಸ್ತ್ರಗ್ರಂಥಗಳಲ್ಲಿ ಒಮ್ಮತವಿಲ್ಲ. ಈಶಾನ ಪದ್ಧತಿಯಲ್ಲಿ (III. ಅ. XXVII, 81) ೩, ೪ ಮತ್ತು ೫ರ ವರ್ಗಗಳಾದ ೯, ೧೬ ಮತ್ತು ೨೫ ಕುಳಿಗಳಿರಬೇಕೆಂದು ಹೇಳಿದೆ.
೧೨. ಈ ಕುಳಿಗಳಲ್ಲಿ ಇಡಬೇಕಾದ ಪದಾರ್ಥಗಳಿಗೂ ಭೂಮಿಯಲ್ಲಿ ವಿವಿಧ ಐಶ್ವರ್ಯಗಳ ವಿತರಣೆಗೂ ನೇರ ಸಂಬಂಧವಿದ್ದಂತೆ ಕಾಣುತ್ತದೆ. ಇವುಗಳ ಬಗೆಗೆ ಈಶಾನಪದ್ಧತಿ IV ಅ. XXVII, 81-106 ಮತ್ತು ಮಯಮತ, XII, 88 ಗಳಲ್ಲಿ ವಿವರಗಳಿವೆ.
೧೩. Kramrisch, stella, ಪೂರ್ವೋಕ್ತ, p. 127, fn. 94.
೧೪. ಅದೇ ಪು. 110 fn. 47 ಮತ್ತು A.S.J.A.R, 1935-36, p. 67.
೧೫. Indian Archaeology A Review 1990-91, p. 32, p1. XXIX, C.
೧೬. Sarma, I.K. ಪೂರ್ವೋಕ್ತ. p. 358, ಚಿತ್ರ 26, ಛಾಯಾಚಿತ್ರ 68-69.
೧೭. Kramrisch, ಪೂರ್ವೋಕ್ತ p. 85.
೧೮. Sarma, I.K. ಪೂರ್ವೋಕ್ತ ಚಿತ್ರ 26 F ಮತ್ತು ಛಾಯಾಚಿತ್ರ 69.
೧೯. Kramrisch, ಪೂರ್ವೋಕ್ತ ಪುಟ. ೬೯-೭೦, ೭೪-೭೯, ಈ.ಶಿ.ಗು.ಪ. III. XXVI, ಪು. ೯೩.
೨೦. ಅದೇ ಪು. ೯೦.
೨೧. ಅದೇ ಪು. ೧೧೦-೧೧೧.
೨೨. ಅದೇ ಪು. ೮೫, ೮೭-೯೦.
೨೩. ವಾಸ್ತುಮುಕ್ತಾವಳೀ ಪು. ೧೪೬-೧೪೭.



ಬಾದಾಮಿಯ ದಟ್ಟಬಂಡೆಗಳ ಮೈಬಿರುಸಿನ ಕೆಂಪುವರ್ಣದೋಕುಳಿ
ಚಾಣಗಳು, ಉಳಿಗಳು, ಕರಕೌಶಲ್ಯದೊಳು ಓಲಾಡಿ ಆಡಿದುವಲ್ಲಿ ಶಿಲ್ಪದ ಹೋಳಿ
ಮಹಾನಟನ ನೃತ್ಯವಿರಲಿ, ದಾನಗಾಂಭೀರ್ಯದ ಶಾಸನವಲ್ಲರಳಿರಲಿ, ವೀರಮಾಧುರ್ಯಗಳಿರಲಿ
ಚಲುಕ್ಯ ಕರ್ನಾಟಕೀ ಶೈಲಿಯ ದ್ರಾವಿಡವರಳಿ, ಅನ್ಯರಿಗೆ ದಾರಿದೀಪದ ನೆಲೆಯಾಗಿರಲಿ
ಎಲ್ಲವೂ ನಮ್ಮ ಕನ್ನಡದ ಇತಿಹಾಸ, ಕರ್ನಾಟಕದ ಅಜೇಂಕ್ಯಬಲದಿತಿಹಾಸ
ಶಿಲ್ಪ, ವಾಸ್ತು, ಪರಿಸರದೌನ್ನತ್ಯವನು ಕಲ್ಲಮೈಯಲ್ಲಿ ನೃತ್ಯವಾಡಿಸಿದ ತಲೆಬೀಡು
ಆಯ್ಯಾವೊಳೆ ಐನೂರ್ವರ ಬೀಡು, ಬಾದಾಮಿಗೆ ಕಲೆಯ ಗದ್ದುಗೆ ಪಟ್ಟದಕಲ್ಲು ಇಟ್ಟ ಈ ಹಾಡು
ಹೊಸಶೋಧಗಳಿಗಂತು ನವರಸದ ಬೀಡು ಶೋಧಕರ, ನಿರಂತರ ಹುಡುಕಾಟದ ಬೀಡು



ಡಿ. ಸ್ಮಿತಾರೆಡ್ಡಿ*

ಆನೇಕಲ್ ತಾಲೂಕಿನ ಹೆಬ್ಬಗೋದಿಯಲ್ಲಿ ದೊರೆತ ಗಂಗರ ಅಪ್ರಕಟಿತ ಶಾಸನ

ಹೆ ಹೆಬ್ಬಗೋಡಿ ಗ್ರಾಮವು ಬೆಂಗಳೂರಿನಿಂದ ಸುಮಾರು ೧೯ ಕಿ.ಮೀ.ಗಳ ದೂರದಲ್ಲಿದೆ. ಗ್ರಾಮದ ಹಿಂದೆ ಕೃಷ್ಣಾರೆಡ್ಡಿ ಎಂಬುವರ ಹೊಲದಲ್ಲಿ ಈ ವೀರಗಲ್ಲು ಬಿದ್ದಿದ್ದು, ಆಂಜನೇಯ ಎಂಬ ಹೆಸರಿನಿಂದ ಪೂಜಿತವಾಗುತ್ತಿದೆ. ಈ ವೀರಗಲ್ಲಿನಿಂದ ಸುಮಾರು ೧೫೦ ಅಡಿಗಳ ಅಂತರದಲ್ಲಿ ಮತ್ತೊಂದು ವೀರಗಲ್ಲು ಬಿದ್ದಿದೆ. ಶಿಲ್ಪ ಸಾಮ್ಯತೆಯಿಂದಾಗಿ ಎರಡೂ ವೀರಗಲ್ಲುಗಳೂ ಗಂಗರ ಕಾಲದ್ದೆಂದೇ ಹೇಳಬಹುದು. ಆದರೆ ಈ ವೀರಗಲ್ಲಿನಲ್ಲಿ ಶಿಲ್ಪ ಮಾತ್ರ ಇದೆ. ವೀರಗಲ್ಲಿನ ಒಂದು ಭಾಗ ಮುರಿದಿದೆ. ವೀರನ ಕೈಯಲ್ಲಿ ಗುರಾಣಿ ಇದೆ ಹಾಗೂ ಮೇಲ್ಭಾಗದಲ್ಲಿ ಅಪ್ಸರೆಯನ್ನು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ.

ಶಾಸನದ ವೀರಗಲ್ಲು ೮ ಅಡಿ ಉದ್ದ ಹಾಗೂ ೪ ಅಡಿ ಅಗಲವಿದೆ. ವೀರ ಒಂದು ಕೈಯಲ್ಲಿ ಬಿಲ್ಲನ್ನು ಹಾಗೂ ಮತ್ತೊಂದು ಕೈಯಲ್ಲಿ ಕಠಾರಿಯನ್ನು ಹಿಡಿದಿದ್ದಾನೆ. ವೀರನ ಬಲಭಾಗದಲ್ಲಿ ಕಾಲುಗಳ ಬಳಿ ಎರಡು ಹಸುಗಳನ್ನು ಚಿತ್ರಿಸಲಾಗಿದೆ. ವೀರನ ತಲೆಯ ಬಳಿ ಬಲಭಾಗದಲ್ಲಿ ವೀರನನ್ನು ಅಪ್ಸರೆಯರು ಕರೆದೊಯ್ಯುತ್ತಿರುವ ಶಿಲ್ಪವಿದೆ.

ಶಾಸನ ಪಾಠ

ಶಾಸನದಲ್ಲಿ ಒಟ್ಟು ಹನ್ನೊಂದು ಅಸಮ ವಾಕ್ಯಗಳಿವೆ. ಅವುಗಳಲ್ಲಿ ಆರು ವಾಕ್ಯಗಳು ನಾಲ್ಕು, ಐದು ಪದ ಪುಂಜಗಳಿಂದ ಕೂಡಿದ್ದರೆ, ಉಳಿದ ಐದು ವಾಕ್ಯಗಳು ಮೂರು, ನಾಲ್ಕು ಅಥವಾ ಐದು ಅಕ್ಷರಗಳಿಂದ ಕೂಡಿವೆ.

೧. ಶ್ರೀ ಎಱೆಯಪ್ಪರಸಂ ರಾ
೨. ಜ್ಯೆಜಗ್ಗಿಯೆ ನಾಗತ್ತರ ನಡು
೩. ನಾಳೆ ನೆರಾರ [ಬಂದು ಪೆಣ್ಡಿಱ
೪. ಉಡೆಯಂ][೧] ಸೆಳೆದು ತುಱುಗೊ
೫. ಳೊಳ್ಸತ್ತಂ ಪೆಪ್ಪರ ವಾ
೬. ಯೊಳ್ ಅಯ್ಗಳ ಕ
೭. ಱನಿ ಇ
೮. ದನ ಱೆ
೯. ದೋಂ ಮಹಾ
೧೦. ಪಾತಕ
೧೧. ನಕುಂ



ಶಾಸನ ವ್ಯಾಕರಣ ಬದ್ಧವಾಗಿಲ್ಲ ಮತ್ತು ಕೆಲವು ಕಡೆ ಅಸ್ಪಷ್ಟವಾಗಿದೆ. ಗಂಗ ಎಱೆಯಪ್ಪನ ಆಳ್ವಿಕೆಯಲ್ಲಿ ನಾಗತ್ತರ ನಾಡನ್ನು ಆಳುತ್ತಿದ್ದಾಗ ಒಬ್ಬ ವ್ಯಕ್ತಿ (ಬಹುಶಃ ನೆರಾರ ?) ತುಱುಗೋಳ ಕಾಳಗದಲ್ಲಿ ಮರಣ ಹೊಂದುತ್ತಾನೆ. ಅದಕ್ಕಾಗಿ ಪೆಪ್ಪರವಾಯ್ ಎಂಬ ಸ್ಥಳದಲ್ಲಿ ಕೊಳಗ ಗದ್ದೆಯನ್ನು ದಾನ ಮಾಡಲಾಗಿದೆ. ನಂತರ ಕೊನೆಯದಾಗಿ ಶಾಪಾಶಯ ಬರುತ್ತದೆ.

ಶಾಸನದಲ್ಲಿ ಉಲ್ಲೇಖಗೊಂಡಿರುವ ಎಱೆಯಪ್ಪ ಕ್ರಿ.ಶ. ೯೦೭ ರಿಂದ ೯೩೦ರವರೆಗೆ ರಾಜ್ಯವಾಳಿದ ಗಂಗ ವಂಶದ ೨ನೇ ನೀತಿಮಾರ್ಗ. ಈತ ಗಂಗವಾಡಿ ತೊಂಬತ್ತಾರು ಸಾವಿರವನ್ನು ಏಕಛತ್ರಛಾಯೆಯಲ್ಲಿ ಆಳುತ್ತಿದ್ದನೆಂದು ಪ್ರಸಿದ್ಧ ಬೇಗೂರು ಶಾಸನ ತಿಳಿಸುತ್ತದೆ.[೨]

ಈ ಶಾಸನದ ನಾಗತ್ತರ ಪ್ರಸಿದ್ಧ ಬೇಗೂರು ಶಾಸನದ ನಾಗತ್ತರನೇ. ಬೇಗೂರನಲ್ಲಿ ಈತನಿಗೆ ಸಂಬಂಧಿಸಿದಂತೆ ದೊರೆತಿರುವ ಸುಮಾರು ೬ ಶಾಸನಗಳಿಂದ ಈತ ಬೆಂಪೂರು (ಈಗಿನ ಬೇಗೂರು) ಒಡೆಯನಾಗಿದ್ದನೆಂಬ ವಿಷಯ ತಿಳಿಯುತ್ತದೆ. ಪ್ರಸ್ತುತ ಈ ಶಾಸನದಲ್ಲಿ ನಾಗತ್ತರ ನಾಡನ್ನಾಳುತ್ತಿರೆ ಎಂದು ಹೇಳಿದ್ದರೂ, ಯಾವ ನಾಡು ಎಂಬುದನ್ನು ತಿಳಿಸಿಲ್ಲ. ಬಹುಶಃ ಬೇಗೂರಿನ ಶಾಸನದಲ್ಲಿ ಇರುಗನಿಗೆ ನೀಡಿದುದಾಗಿ ತಿಳಿಸಿರುವ ಹನ್ನೆರಡು ಗ್ರಾಮಗಳನ್ನೊಳಗೊಂಡ ಬೆಂಪೂರನ್ನು (ಬೆಂಪೂರು

* ಭಾಷಾಂತರಕಾರರು, ಭಾಷಾಂತರ ನಿರ್ದೇಶನಾಲಯ, ೪ನೇ ಮಹಡಿ, 'ಎಫ್' ಬ್ಲಾಕ್, ಸಿಬಿಎಬಿ ಸಂಕೀರ್ಣ, ಕಾವೇರಿಭವನ, ಬೆಂಗಳೂರು-೫೬೦ ೦೦೯

ಪನ್ನೆರಡು) ಆಳುತ್ತಿದ್ದಿರಬಹುದು. ನಾಗತ್ತರನು, ಎಜೆಯಪ್ಪನಿಗಿಂತ ಮೊದಲು ರಾಚಮಲ್ಲನ ಕಾಲದಲ್ಲಿ ಕಲಿಯುಗದ ಅಣುವ ನಂತಿದ್ದನೆಂದು ಶಾಸನ ತಿಳಿಸುತ್ತದೆ.

ಬೇಗೂರು ಶಾಸನ ನಾಗತ್ತರನು ತುಂಬೆಪಾಡಿ ಯುದ್ಧದಲ್ಲಿ ಮೃತನಾದ ಸಂಗತಿಯನ್ನು ತಿಳಿಸುತ್ತದೆ. ಈ ಶಾಸನದ ಕಾಲವನ್ನು ಡಾ। ದೇವರಕೊಂಡಾರೆಡ್ಡಿಯವರು ಕ್ರಿ.ಶ. ಸುಮಾರು ೯೦೮ ಎಂದು ನಿರೂಪಿಸಿರುವುದರಿಂದ ಬೇಗೂರು ಶಾಸನಕ್ಕೂ ಮೊದಲು ಈ ಶಾಸನವನ್ನು ಹಾಕಿಸಲಾಗಿದೆ.

ತುಱುಗೋಳಲ್ಲಿ ಸತ್ತ ವ್ಯಕ್ತಿಯ ಹೆಸರು ಅಸ್ಪಷ್ಟವಾಗಿದೆ ಶಾಸನದಲ್ಲಿ ಹೇಳಿರುವ ಪೆಪ್ಪರ ವಾಯ್ ಸ್ಥಳವು ಶಾಸನ ದೊರೆತ ಹೆಬ್ಬಗೋಡಿ. ಪೆಪ್ಪರವಾಯ್ > ಹಿರಿಯ ವಾಯ್ ಹಿರಿಯ ಕೋಡಿ > ಹೆಬ್ಬಗೋಡಿ ಆಗಿದೆ.

ಶಾಸನದ ಲಿಪಿ ಬಹುತೇಕ ಬೇಗೂರು ಶಾಸನದ ಲಿಪಿಯನ್ನೇ ಹೋಲುತ್ತದೆ. ಒತ್ತಕ್ಷರಗಳು ಮೂಲ ಅಕ್ಷರಗಳಿಗೆ ಅಂಟಿಕೊಂಡೇ ಇವೆ.

ಈ ಶಾಸನದ ಶೋಧದಿಂದ ನಾಗತ್ತರನಿಗೆ ಸಂಬಂಧಿಸಿದಂತೆ ಈವರೆಗೆ ಪ್ರಕಟವಾದ ಶಾಸನಗಳ ಸಂಖ್ಯೆ ಸುಮಾರು ಏಳು ಆಗುತ್ತದೆ. ಅಲ್ಲದೆ, ಹೆಬ್ಬಗೋಡಿ ಪ್ರದೇಶವು ಈತನ ಆಳ್ವಿಕೆಗೆ ಸೇರಿತ್ತು ಎಂಬುದೂ ಸಹ ಇದರಿಂದ ಸ್ಪಷ್ಟವಾಗುತ್ತದೆ.[೩]

* (ಕ್ಷೇತ್ರ ಕಾರ್ಯಕ್ಕೆ ಬಂದು ನನಗೆ ನೆರವು ನೀಡಿದ ಸಹೋದರ ಡಿ. ಸನತ್‌ಕುಮಾರನಿಗೆ ಹಾಗೂ ಶಾಸನದ ಬಗ್ಗೆ ಮಾಹಿತಿ ನೀಡಿ ಕ್ಷೇತ್ರ ಕಾರ್ಯದಲ್ಲೂ ನೆರವಾದ ಶ್ರೀ ಅಂಬರೀಶ್‌ರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.)

***

ಅಡಿಟಿಪ್ಪಣಿಗಳು

೧. ಶಾಸನದ ಈ ಭಾಗದಲ್ಲಿ ಅಕ್ಷರಗಳು ಸ್ಪಷ್ಟವಾಗಿಲ್ಲದಿದ್ದರೂ, ಲಿಪಿಯು ಈ ರೀತಿ ಓದಬಹುದಾದಂತಹ ರೀತಿಯಲ್ಲಿದೆ.

೨. ಎ.ಕ. IX., ಬೆಂ. ೮೩.

೩. ಎ.ಕ. IX., ಬೆಂ. ೭೯.

HIGHLIGHTS

1. **The rockline figures of Eddalu Bande in Belagatta village area.**

Pro. Lakshman Telagavi

Prof. Telagavi draws our attention to rock line figures of Eddalu Bande in Belagatta village of Chitradurga District, belonging to the megalithic period. It is interesting to note that the foot shaped line figures are also drawn which seems to have a religio- cultural attribution. The author opines that probably the ancestors of Mysabedas, being the residents of this area, might have drawn the megalithic figures on Eddalu Bande. This enunciation seems to be worth noting in view of the population of Mysabedas in the surrounding areas.

2. **An Analytical study of the History of RajaGhatta and its unknown temple.**

Sasalu J. Vishwanath

Tracing the megalithic culture, Buddist Sculpture, Shiva temple, of Ganga period and other unknown people of Hindu Cult, Sri Vishwanath has Put forth his findings.

3. **A note on the discovery of Pre-Historic sites in Dakshina Kannada & Udupi Districts.**

Dr. P.N. Narasimha Murthy.

Dr. Narasimha Murthy draws our attention towards the old and new discoveries made and thus shows the existence of passage burials in puttur taluk at a place called sutta padavu; And a huge Megalithic site called paridavara Kallu in Buntwal tq. was discovered previously by Gururajabhat. Now Rock shelters have been found in the hills around karkala. 80 Badagabettu Megalithic site has yeilded painted potter picecs. Also Neolithic axes have been discovered in karkala and udupi tqs.

Atradi and 80 Badagabettu village of Udupi Taluk have yeilded tools of the Mesolithic period. This very well takes back the human history of this region to a much anterior pre-historic period.

4. **The Prehistoric relics in Dashamapura of Hagaribommanahalli Tq.**

Dr. M.K. Durugappa

The author has furnished the characteristic features of some prehistoric relics found at Dashamapura and has named the varieties available.

5. **The regional antics of Bailuhongala.**

Dr. Channakka Pavate

Dr. Channakka has very well furnished the details of the antics found in Bailahongala area and the special characteristics of the same. The study has been corroborated with an analytical comparision and photographs. Many unknown facts about shivasharanas have also been made known.

6. **The antiquities in Hogarehalli.**

Dr. H. Sundara

Jayadevappa Jainkeri

The authors have explained the antiquities found at Hogarehalli and their special features.

7. **The antiquities of Devaragonala.**

Shivappa N. Niralagi

Sri Niralagi has described the features of antiquities available in the area of Devaragonala: The Personality of Mouneshwara has also been depicted.

8. **Buddha Vihara referred in Melekote inscriptions**

Dr. M.G. Manjunath

The author has traced the location of Buddha Vihara referred in the Melekote inscription: The relics of the vihara has been said to be found in Haralukunte of Srinivaspura Tq. and the author has given a brief sketch of the same with due referential works already done by the scholars and has putforth his conclusons in this regard.

9. **The Buddist Religion and culture in Gulbarga**

Jayasri B. Rajamanye

This Paper draws our attention towards the studies made w.r.t. Buddhist religion and culture in Gulbarga and delineates the characteristic features of the same.

10. **The unpublished copper plates of Krishnavarma-I of the Kadamba dynasty.**

Dr. S.G. Samac

Dr. Jagadisha, M.V. Ramesh Jois

This essay throws a light on the Kings: Priyavratavarma, Krishnavarma, Shanti Varma, Ravi Varma, Hari Varma, Pulinda Varma of the Kadamba dynasty by discovering the new copper plates pertaining to them with due explanations.

11. **Maralukunte inscription of Shivamara and war field of Manne.**

Dr. H.S. Gopal Rao

Dr. Rao has deciphered herostone inscription of shivamara near Manne and purports to the details of the hero fought near Manne fort. The ground sketch of Durga temple and the sculptural details of Durga temple and Duggalamma temple have also been furnished.

12. **Hero Stones and unpublished inscriptions of Medahalli.**

Adappa Pasodi

Sri. Pasodi has analytically explained the characteristic features of hero stones and some unpublished inscriptions found at Medahalli.

13. **Kunigal tank Inscription of Rashtra kuta Akalavarsha**

Dr. P.V. Krishnamurthy

Dr. Murthy has discovered an interesting inscription pertaining to a tank at kunigal which belongs to the period of Ganga Sripurasha was renovated during the time of Rastrakutas. He has also furnished the related historical background w.r.t Ganga, Rashtrakuta and chola. The incorporated folk evidences have also been Presented.

14. **An unpublished hero stone Inscription of Malur.**

S. L. Srinivasa Murthy

This Paper explains the sculptural and historical facts pertaining to the hero stone inscription of Malur under the authors study.

15. **Some unpublished inscriptions of Duggasandra**

K. R. Narasimhan

Sri. Narasimhan has discovered the inscriptions of the period which indicates the characteristics feature of let ters of the inscriptions of Bana-Ganga-Nolamba period in this area. He has also given some details of the hero stones of the period.

16. **Upublished inscription of Dimbal village in Kolar Dt.**

Dr. K.G. gopalakrishna,

Dr. M.G. Manjunath

The authors using the keyname Vittapaiah and comparing with other unpublished and

published inscriptions have derived that Ganga Sripurusha was a live till 799 AD, Which has improved the hither to believed date by scholars.

17. Gudlanur Insription.

B.C. Patil

This Paper discusses the historical significances of the Gadlanur inscription with due explanations.

18. The inscription of Veera Kavadeva and Shivachittu Veera Kavadeva of Chandavara Kadambas

Dr. S. Ganapathi Gowda

The author has traced in the two inscriptions of Chandavara Kadamba's mainly the Political history of Chandavara Kadamba's.

19. An unpublished inscription of Chalukya Jagadeka Malla in Heggur

V.B.Ugalata

The new inscription discovered by the author furnishes the details of endowments rendered to Rebaleshwara, Sumbale shwara, Holeshwara and lokeshwara of Heggur. Donation given by Maha samanta Ayathamarasa has been received by Vadiganth Pandita in favour of the temple Gods.

20. An unpublished inscription of Hoysala period in Channagiri

Sumatindra Nadig

Sri Nadig has given out the general summary of the new inscription found at Basapura in Channagiri Tq. Also some account of the God Balleshwara, and feudaturies like Machagavunda, Ballala vunda, Ballala, have been mentioned.

21. The Nature's description in Inscriptions

Dr. S.K. Melakara

The author has given a comparitive description of Nature depicted in Literature & the inscriptions dealt by him are limited to Koppal District.

22. Temples, Hero Stones-inscriptions and antiquity sites in the village of old Dharwada Dt.

Dr. R.M. Shadaksharaiah

B. Jayamma.

This Paper deals with the Characteristic features of the sculpture, and architecture of the temples, hero stones. Especially the speciality of the hero stones has been explained furnishing the inscriptional details since Rastrakutas up to 12th Century.

23. The hero stones of Arakeri village of Devadurga Tq of raichur.

Dr. H. Chandrashekar

Dr. Chandrashekar has presented the special features of hero stones in a new dimension in his detailed study of the hero stones of Arakeri village.

24. Coins of a Bhimadeva of Rastra Kuta dynasty and Harihara-II of vijayanagara.

Mandarke Nityananda Pai

This Paper explains the special characteristics of a coin of Bhimadeva bearing his title and special feature of a coin pertaining to the period of Harihara-II.

25. Ambaji Durga and Rehamanghad of Chintamani Tq.

Dr. B.S. Shamala Ratnakumari

Dr. Shamala Ratnakumari has furnished a brief Sketch of the Ambaji Durga and Rehamanghad along with the structure of

the above fort and sculptures, she has indentitied on the spot.

26. The Fort of Badami Challukyas

Dr. S. K. Joshi

Dr. Joshi has placed before us the evolution of the forts since the period of Badami Chalukyas and their traditional significance.

27. The Higway pala Badami Road

A.V. Kattimani

Sri Kattimani has enumerated the physical and cultural significance of the pala Badami.

28. The Sun in West Coast

K.V. Rajagopal

The author has recognised the Centre of Sun-Worship in West-Coast and furnished the details of the same.

29. Mahanata of Badami and karanas

Dr. Karuna Vijayendra

The author has described the characteristic features of the dancing postures of Mahanata along with specific explanations of 'karana'in consultation with different authorities and sources.

30. The Bhoota sculpture of Mekkekatte

B.R. Geethanjali

This Paper describes the features of wooden sculpture of the dieties and spirits and the history of these sculptures, with due illustrations.

31. Lakuleesha Sculptures in 'Badami' area

M.N. Kadapatti

Sri Kadapatti has iconographically characterised the features of Lakuleesha and his historical Evolution.

32. The Beda heros in an inscription at Shirola

Devendra Madhavanavara

A relief sculpture on an inscription found at Tontadarya mutt of Shirola has been explained in this paper.

33. The Wooden Sculpture in Paravati temple at Keladi.

Dr. G.V. Kallapur

Dr. Kallapur has described the characteristic features of the wooden sculptures particularly of Agoreshwara Murthy, Gajasura Samhara Murthy, Kankala Murthy, Veerahhadra and Bhadrakali Etc., found in Parvathi temple at Keladi.

34. Stone Chariots and their Sculpture.

Dr. K. Mahesh

Comparitive explanation of the structure and sculpture of stone chariots that Dr. Mahesh has observed at Tadaparti & Hampi has been furnished.

35. A special type of idol found in the Hoysala Temple

Dr. B. Pandukumar

The author in background of the Sculpture found in Hoysala temple draws are attention to its speciality which was wrongly identified as Dakshina Murthy.

36. Kurugodu Dodda Basaveshwara - Facet front Nandi idol of Hampi Virupaksha Linga

Y. hanumantha Reddy

The author delineating the posture features of Dodda Basaveshwara and the respective temples lying on the same Latitude draws our attention with illustrations.

37. The temples in the kalahlli area a megalilhic locale.

Keshava Umarji

Sri Umarji says about the practices in vouge in kalahalli, w.r.t. a megaliltic site and furnished the characteristic temple sculptures found around.

38. Siri Alade - a historical study.

Arun Kumar S.R.

Sri Arunkumar places before us the Special features of Alade in comparision with the word 'Temple Bramhastana' and dieties worshipped there in. It is interesting to note the explanation of the historical Evolution of the same along with the touch of the folk.

39. A Study on incriptionally mentioned Temples of Muddebihal area.

Ashok Kandagal

Dr. Maheshakumara. H. patila

The authors have viewed the temples of Muddebihal area from social and cultural point of view based on inscriptions.

40. Kalleshwara temple of Bennekallu.

Smt. H. Padma Vittal

The author has presented a study made w.r.t. Kalleshwara temple of Bennekallu regarding its architecure and scultpure.

41. Keshava temple of Goa Kadamba period.

Hanumantha S. Melinamani

This paper has described the features of Keshava temple and the sculptures found therein with a historical background with reference to Goa Kadambas.

42. The Shambulingeshwara temple of Bentur.

Pro. K.C. Malligavada

Pro. Malligavawad has put fourth the vivid features of Shambhulinge shwara temple of Bentur and Narayana temple of Antur along with their minor dieties.

43. Somanatha Temple of sompur.

Dr. S.M.Nagabhushana

Dr. Nagahnushana has explained the architechture and Sculpture of somanatha temple found at Sompur.

44. The Make up art among Kannadigas.

Dr. Jotsna Kamat

The author has given out the different aspects of make-up art vogue among Kannadigas w.r.t. to the hair style, eyebrow colouring, face powdering, vermilion, lipstick and ornament usage etc., The respective materiels used and their preparation have also been furnished along with literary evidences.

45. The Agraharas of Raichur district in the inscriptions.

Channabasappa . B.

This paper has explained the charact eristic features of Agraharas and the cause of their formation based on inscriptions in particular of the Raichur district.

46. Kashmiri Brahmins of Bellari District.

Dr. K. Vasanthalakshmi

Dr. Vasanthalakshmi has given a detailed history of Kashmiri Bramins residing in Bellary District, mainly based on inscriptions.

47. Samanta GooliBachideva of Marugarenadu.

Dr. D.N. Yogishworappa.

The author has given a historical sketch of Gooli Bachideva of Marugarenad viewing in a new dimenson and put forth his views.

48. Sendrakas - A Purview

Dr. Mahesha Kumara H. Patil

This paper gives a brief sketch of Sendraka

Dynasty and their achievements during their reign.

49. Chittupadi Beedu in Tulunadu.

K. Narayana Naik

Sri Nayak has given a historical account of Chittupadi and its cultural attriutions. Especially the details of Ballala Bidu are Quite interesting.

50. The 'Japada Bhavi' of Dambala

Dr. V.K. Dyamanagowda

The 'Japada Bhavi' being a historical tank. The author has given a detailed account of the same. The description as depicted in poems with inscriptional evidences has also been furnished.

51. Ancient Garbhagudi City-now a non residential village.

Kum. Ba. Sadashivappa

Sri Sadashiappa has presented the historical and cultural aspects of the regime of the Garbhagudi chieftains.

52. The Role of Agriculture in the Growth of Crafts during middle ages

Dr. Hanuma Naik.

This paper seeks to examine the role of intensive agricultural activities in the growth of agro-based artisanal activities in early medieval and medieval Karnataka what we now call it as cottage industries.

The author purports to say: With the growth of non-agrarian activities there came into existence the new phenomenon like trade and urban centres in early medieval and medieval Karnataka. With that the very nature of economy of this period underwent significant changes.

53. A purview of Sea-Warfare in Karavali Karnataka History and lgtical view.

DR. K.G. Vasantha Madhava

This essay describes the Sea-warfare in the coastal Karnataka deducing since first century. The scupture on Hero -stones has been well interpreted and the role of Goa Kadamba, Keladi Kings has also been well delineated. It is interesting to note the explanation that how the local Kings and chieftains have been able to fight againist the foreign domination in sea-warfare during 10-11thcentury.

54. The town planning in Belagavi & its history.

Dr. Smitha surebanakara

Dr. Smitha has given an account of constituents of townplanning of Belagavi & their historical Developments in her essay.

55. Manasollasa-some scientific facts.

Harihara SrinivasaRao

The author in his essay draws our attention to the scientific aspects depicted in the 'Manasollasa' on Medicine, Animal breeding, Mathematics, Architecture, Paintings, water resources, wrestling etc., with due illustrations.

56. The origin and developement of cities depicted in Kaifieth

Dr. A. Somashekhar

This paper shows how the relative facts in Kaifiets help us to understand the historical development of the cities in relation to the concomitant evidences.

57. **Ayyavole Inoor varthaka Sangha - Some Problems about them in history**

Prof. G.S. Dikshit

Prof. Dikshit has rightly pointed out the importance of Ayyavole Inoor Varthaka Sangha and its existence in Ihole. Also he points out how these merchants of the sangh were grateful to mahajanas who encouraged them. Further he brings to our attention that, the God Ayyavole Ishwara is being worshipped by the Natukoti chettiyars of Tamilnadu, even today, which is quite interesting. These Chettiyar are responsible to the spread of the word 'Ayyavole Inoor' not only in south India, but also in Srilanka, Sumatra Etc., and made it still famous.

58. **Trade Activities between Tulu Karnataka and Upghat region.**

- Dr. B. Jagadeesh shetty

Tulu Karnataka region is geographically separated from other regions of karnataka. Inspite of several obstacles, Tulu karnataka had brisk trade relations with upghat region. This paper seeks to analyse the trade contacts between these two regions during the kings, of the Alupas, the Hoysalas and Vijayanagara kings. The political contacts that had been in existence mainly led to trade connection too.

59. **The Bhandasale (Gowdowns) of kundapur harbour under the British Company administration**

V. Ramesh Karanth

This essay has explained the meaning of Bhandasale and its importance and the infrastruture developed for its growth. Also the economic activities enshrined in the process has also been furnished. The records available pertaining to Bhandasale have also been noted.

60. **The role of Mangalore Port in 19th Century sea trade.**

Dr. Malati. K. Murti

The importance of Mangalore port and trade implications and the negligence of the Company Administration regarding the development of the above port has been explained in this paper.

61. **Mundalars of Kola-Bali.**

Indira Heggade

This paper has explained the meaning of Kola-bali viewing from diffrent angles. Especially the cultural aspects of the community has been highlighted.

62. **Kankari-A cultural aspeet**

Dr. H.S. Usha Rani

Dr. Usharani draws our attention towards folk-art instrument kankari and has shown the historical background found in inscriptions, for the same.

63. **Gori vente (Gori- Hunting) -some Notes**

Dr. Gurupada Mariguddi

The paper draws our attention to a special variety of hunting Vogue in karnataka. The Literary references pertaining to it, has also been furnished.

64. **The contribution of Hukkeri tq to Folk Literature and art**

Prof . L.V. PATIL

The author has emumerated the contributions made by the Folk literary figures and Artisits of Belagam District and in particu-

lar from Hukkeri tq. Especially the Contributions of Balagopal kavi has been much highlighted since his achievements in the Lavani aspect.

65. The languages of Literary woks of Bijapur Adilshahis peried

Aswini Cha. Kulakarui
Ashok K. Kandagal

This paper deals about the language vogue in the Literary workes of Bijapur Adilshahi period and authors of that time.

66. The health care system during Adilshahis.

V.M. Bagayat

Sri Bagayat has presented the different medical systems vogue during Adilshahi regime and given out the historical practices attached to it.

67. Some secret codes in kannada language.

Jaya Prakash D. Kabbur

Sri kabbur has explained why & where the secret code were used and how they were advantageous to the usage in the intelligence department. Any how he traces the history of their usage from the British period.

68. Koluru Shankara Kavi : new findings.

Dr. F.T. Hallikeri

This essay gives the additional details of the life sketch of Shankara Kavi of Koluru and his Literary works hither to unknown.

69. Kari Basava purana - an unpublished poetical Work.

Dr. K. Ravindranath

Dr. Ravindranath, has detailed the historical connotatians depicted in this work and brought out the special features and implications of this poetical work in a quite compact way.

70. Reference to Sri Banasankari Amma of Badami in a Kadata of Sringeri Matha

Dr. A.K. Shastry

Dr. Sri Sasthry Writes that Banashankari temple at Badami was originally founded in 7th century A.D. However, the Present temple was erected in the 17th century.

The Three records Viz., the nirupa to Balam bhatta of Tolacha godu w.r.t. the worship of Banashankari in 1844 A.D. from Sringerimatha; binnavattale from Sankara Bhatta Batta, Sambhatta etc., to Sringeri math in 1857 A.D; a record regarding the financial receipt to sringeri matha helps in establishing a link between Sringeri and Badami, have been dealt here.

71. Christian missioneries since the period of Krishnadevaraya of Vijayanagara.

Gurumurthy Pendakur

Sri Pendkur has traced the history of Christian missionary activities in later vijayanagara period using different authorised sources.

72. Kalyatazzappa of Kodagu.

M.G. Nagaraj, Dr. M.G. Chandrakanth

This essay presents that Kalyatazzappa was a historical hero of the Kodagu during the period of Virarajendra odeya the first king of Haleri dynasty; Katal Boltu a tribal hero was his intimate friend. Both fought againist, Karnembahu of Tavunadu in favour of Haleri King in 16th Century; The folk song on them is also in vogue in the Coorg.

73. **Desayees of Soratur.**

Kallana Gowda T. patil

Sri patil has brought out the history of the (reign) of soratur Desai and the historical relics found at soratur.

74. **The role of Education in educating the women of Mysore.**

Dr. S. Malati

This paper has explained the conditions, the plight and pains of women of Mysore in the pre and early decades of 20th Century. The paper has also indicated with due illustrations how the education made these women self sufficient and wise.

75. **Sarasayars during the British Regime and the records.**

Dr. Keladi Venkatesh Jois

Dr. Venkatah has explained the histroy of Sarasayars and furnished other records regarding the fort of Nuggur.

76. **Some important events under the Dewanship of Ananda Raya (1909-1912)**

Dr. B. Leela

This essay narrates some important events occured during the period of Ananda Rao as Dewan of Mysore and some conflicts that took place in the same period with reference to the public Life.

77. **Gandhiji in Karnataka - Badanavalu rural industrial cenre.**

Dr. NirmalRaj

The developemental aspect of Badanavalu village since the visit of Gandhiji to this village has been furnished with a historical note in this paper.

78. **Ranjala Gopala Krishna Shenoy The great Sculpturist.**

Dr. H.E. Basavarajappa

Dr. H.E. Basavarajappa has not only furnished the life sketch of Ranjala Gopala Krishna Shenoy but also the achievements of the Sri Shenoy in the field of Sculpture. The Contributions of Sri Shenoy have been well explained and the sculptural intution of Shenoy has been highlighted.

79. **Reservation - a boon and curse**

Vani shri Shivasharana Barakera

The author has depicted the historic wrong put upon the 'untouchable' class and consequential aspects of the same. Further the hinderences that is being encountered in the present situation while correcting the historic wrong, has also been discussed.

80. **Vijaya Vidyalaya at kalaburgi and its achievements.**

Prof. Vasantha Kushtagi

Prof. Kushtagi has explained the contributions of Vijaya Vidyalaya for the development of female education and Christ Kannada devotional literature in the kalaburgi area.

81. **The historical aspects of Guntagola Samsthana.**

Amaresh Yathgal

This paper depicts the evolution of Guntagola Samsthan and its cultural Contributions.

82. **A study on Karepoojarahalli & Kattinganahalli**

Dr. Virupaksha Poojarahalli

Dr. Poojarahalli has traced the history of

the two becharak villages cited above and the tribal location existed therein.

83. The Lords of famous dynasty referred in 'Virupaksha champu' of Ahobala.

Dr. B. Nanjundaswamy

This paper refers to the spring festival at Hampi. The famous lords from Mysore, Chundragutti, Sirisi, Mokshapura, Bellary, Chitradurga, Harihara, Havanur, Dambala have attended the chariot of festival and in consequence the grandeur of the festival has attracted naturally the people, and the poets. And this poet has given literary expression for the grandeur of the festival in this form.

84. Berki Srinivasarao the genaral of Hydarali.

Dr. B. Rajashekarappa

The author has explained the role of Berki Srinivasarao as a general and an officer, with his vivid personalty, in the scrvices of Mysore Government.

85. The art paintings of virupaksha temple at pattadakal.

Dr. Shila Kantha patthar

The author in his paper describes the intrinsic beauty of the art paintings in the virupaksha temple; And the interest exhibited by the common people in this regard during Chaulkyan period has also been noted.

86. The surya Temples during Chalukyas of Badaami

Dr. K.B. Sudarshan

Dr. Sudarshna has Explained the Sculpture and architecture of sun temples of Badami during Chalukyan period, from an analytical angle.

87. The recent discoveris in Chalukyan Area.

S. V. Venkateshaiah, J.V.P. Rao, M.V. Vishwewara

The authors have presented an analytical and descriptive aspect of the sculpture, Inscriptions, architecture, cultural attributions vogue in the chalukyan period at Badami and Aihole.

88. An unpublished inscription of Ganga period at Hebbagodi.

D. Smitha Reddi

Smt. Smitha has discovered an inscription of Ganga period pertaining to Nagattara, where in Ereyappa's reign is also mentioned.

-Editors

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ,
ನರಸಿಂಹರಾಜಾ ಕಾಲೋನಿ, ಬೆಂಗಳೂರು-೫೬೦ ೦೧೯

೨೦೦೩ನೇ ಸಾಲಿನ ವಾರ್ಷಿಕ ವರದಿ

ಸದಸ್ಯ ಬಂಧುಗಳೇ,

ಅಕಾದೆಮಿಗೆ ಈಗ ೧೮ ವರ್ಷಗಳು ತುಂಬಿದೆ. ಈಗ ನಾವೆಲ್ಲಾ ಅಕಾದೆಮಿಯ ೧೯ನೆಯ ವರ್ಷದಲ್ಲಿ ಸಮಾವೇಶಗೊಂಡಿದ್ದೇವೆ. ಅಕಾದೆಮಿಯ ೧೭ನೆಯ ವಾರ್ಷಿಕ ಸಮ್ಮೇಳನವು ಕಳೆದ ವರ್ಷ ಬಾಗಲಕೋಟೆ ಜಿಲ್ಲೆಯ ಇತಿಹಾಸ ಪ್ರಸಿದ್ಧ ಬಾದಾಮಿಯಲ್ಲಿ ಅಲ್ಲಿನ ತರುಣರ ಸಂಘಟನೆಯಾದ **'ವಿಶ್ವಚೇತನ'** ಸಂಸ್ಥೆಯ ಆಶ್ರಯದಲ್ಲಿ ನಡೆದಿತ್ತು. ನಾವೆಲ್ಲಾ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ರಾಮಚಂದ್ರಾಪುರದ ಶ್ರೀಮಠದಲ್ಲಿ ೧೬ನೆಯ ವಾರ್ಷಿಕ ಸಮ್ಮೇಳನವನ್ನು ಆಚರಿಸಿದ್ದೆವು. ಈಗ ದಾವಣಗೆರೆ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರವಾದ ಹೊನ್ನಾಳಿಯಲ್ಲಿ, ಸ್ಥಳೀಯ ಹಿರೇಕಲ್ಮಠದ ಆಶ್ರಯದಲ್ಲಿ ೧೮ನೆಯ ವಾರ್ಷಿಕ ಸಮ್ಮೇಳನವನ್ನು ಆಚರಿಸಲು ಸಮಾವೇಶಗೊಂಡಿದ್ದೇವೆ.

ಐತಿಹಾಸಿಕ ಪರಂಪರೆ ಉಳಿಸಿ-೨೦೦೩

೨೦೦೩ನೆಯ ಸಾಲಿನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಕರ್ನಾಟಕ ಇತಿಹಾಸ ಅಕಾದೆಮಿಯು ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯ ಮತ್ತು ಶೇಷಾದ್ರಿಪುರ ಶಿಕ್ಷಣ ದತ್ತಿಗಳ ಸಹಯೋಗದೊಂದಿಗೆ ಹಮ್ಮಿಕೊಂಡಿತ್ತು. ಬೆಂಗಳೂರು ನಗರದ ಶೇಷಾದ್ರಿಪುರದಲ್ಲಿರುವ ಶೇಷಾದ್ರಿಪುರಂ ಕಾಲೇಜು ಸಂಕೀರ್ಣದ ಸಭಾಂಗಣದಲ್ಲಿ ೧೬-೦೮-೨೦೦೩ ರಂದು ಸಂಜೆ ೬ ಗಂಟೆಗೆ ನಡೆದ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹದ ಉದ್ಘಾಟನಾ ಕಾರ್ಯಕ್ರಮದಲ್ಲಿ ದೀಪ ಹಚ್ಚುವ ಮೂಲಕ ಸಪ್ತಾಹದ ಕಾರ್ಯಕ್ರಮವವನ್ನು ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಡಾ. ಟಿ. ಎನ್. ಚತುರ್ವೇದಿ ಅವರು ಉದ್ಘಾಟನೆ ಮಾಡಿದರು. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್ ಅವರು ಈ ವರ್ಷದ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹಕ್ಕೆಂದೇ ಸಿದ್ಧಪಡಿಸಲಾಗಿದ್ದ ಭಿತ್ತಿಪತ್ರವನ್ನು ಅನಾವರಣ ಮಾಡಿ ಬಿಡುಗಡೆ ಮಾಡಿದರು ಮತ್ತು ಸಭೆಯ ಅಧ್ಯಕ್ಷತೆಯನ್ನೂ ನಿರ್ವಹಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಮಾನ್ಯಶ್ರೀ ಕೆ. ಎಂ. ನಂಜಪ್ಪ ಅವರು ಬಹುಮಾನಗಳನ್ನು ವಿತರಣೆ ಮಾಡಿದರು.

ಇದೇ ಸಂದರ್ಭದಲ್ಲಿ ಅಕಾದೆಮಿಯ ಬೆಂಗಳೂರು ಘಟಕವು ಈ ವರ್ಷ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ನಡೆಸಿದ್ದ ಭಾಷಣ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನೂ, ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನೂ ನೀಡಿ ಗೌರವಿಸಲಾಯಿತು.

ಈ ವರ್ಷ ರಾಜ್ಯದ ವಿವಿಧ ಭಾಗಗಳಲ್ಲಿ ಅಕಾದೆಮಿಯ ಸದಸ್ಯರು, ಸ್ಥಳೀಯ ಸಂಘ-ಸಂಸ್ಥೆಗಳ ನೆರವಿನೊಂದಿಗೆ ನಡೆಸಿರುವ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ.

'ಐತಿಹಾಸಿಕ ಪರಂಪರೆ ಉಳಿಸಿ'-೨೦೦೩-೦೪ರ ಕಾರ್ಯಕ್ರಮಗಳ ವರದಿ: ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
೧.	೧೬-೮-೨೦೦೩	ಶೇಷಾದ್ರಿಪುರಂ ಕಾಲೇಜು ಸಂಕೀರ್ಣ ಬೆಂಗಳೂರು.	ಸರ್ವಶ್ರೀ ಉದ್ಘಾಟಕರು: ಡಾ|| ಟಿ.ಎನ್. ಚತುರ್ವೇದಿ (ಮಾನ್ಯ ರಾಜ್ಯಪಾಲರು) ಅಧ್ಯಕ್ಷತೆ, ಭಿತ್ತಿಪತ್ರ, ಅನಾವರಣ ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.	ಸರ್ವಶ್ರೀ ಕೆ. ಎಂ. ನಂಜಪ್ಪ ಅಧ್ಯಕ್ಷರು: (ಶೇಷಾದ್ರಿಪುರಂ ಶಿಕ್ಷಣ ದತ್ತಿ) ಶ್ರೀಮತಿ ರಾಣಿ ಸತೀಶ್ ಮಾನ್ಯ ಸಚಿವೆಯರು		ಈ ಕಾರ್ಯಕ್ರಮದ ಅಂಗವಾಗಿ ನಡೆಸಿರುವ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.
೨.	೧೭-೮-೦೩	ವೆಂಕಟೇಶ್ ಹಿಂದಿ ಪ್ರೌಢಶಾಲೆ ಗುಳೇದಗುಡ್ಡ	ಶ್ರೀನಿವಾಸ ಪಂಚಾರಿ	ನಂದಲಾಲ್ ಆರ್. ರಾಠಿ ಮಹದೇವ ಮಾಜಗತಾಪ್	ಹಳೇ ಮಹಾಕೂಟಕ್ಕೆ ವಿದ್ಯಾರ್ಥಿಗಳೊಂದಿಗೆ ಭೇಟಿ ಕೊಟ್ಟರು. ಪ್ರಹಸನ ಮತ್ತು ಮುಕ್ತ ಚರ್ಚೆ ನಡೆಯಿತು.	
೩.	೧೬-೮-೦೩	ಜಿ.ವಿ.ಪಿ.ಪಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು ಹಗರಿಬೊಮ್ಮನಹಳ್ಳಿ	ಶ್ರೀ. ಬಸವರಾಜ್ (ಪ್ರಾಚಾರ್ಯರು) ಡಾ. ಕೆ.ಎಂ. ಸುರೇಶ್ (ಮುಖ್ಯಸ್ಥರು, ವಸ್ತುಸಂಗ್ರಹಾಲಯ ವಿಭಾಗ, ಕನ್ನಡ ವಿ.ವಿ.)	ಡಾ|| ಕೆ. ರವೀಂದ್ರನಾಥ್ (ಉಪನ್ಯಾಸಕರು, ಕವಿವಿ)	ಗುರುಮೂರ್ತಿ ಪೆಂಡಕೂರು ಕೆ. ಸತೀಶ್	
೪.	೧೬-೮-೦೩	ಸರಕಾರಿ ಪ್ರೌಢಶಾಲೆ, ನೂಜಿಬೈಲು, ಮಂಚಿ	ನೂಜಿಬೈಲು ಈಶ್ವರಭಟ್, ಪ್ರೊ. ವಿ.ಬಿ. ಅರ್ತಿಕಜೆ, ಡಾ|| ಕೆ.ಜಿ. ವಸಂತಮಾಧವ	ಡಾ|| ಅನಂತರಾಜ ಇಂದ್ರ	ಡಾ|| ಅನಂತರಾಜ ಇಂದ್ರ	ಡಾ. ಬಿ.ವಿ. ಸಾಲೆತ್ತೂರ್‌ಅವರ ಸಂಸ್ಮರಣೆ- ನಡೆಸಲಾಯಿತು.
೫.	೧೬-೮-೦೩	ಶ್ರೀ ಅನಂತನಾಥ ಬಸದಿ, ಪೆರ್ಮಾಣು		ಡಾ|| ವೈ. ಉಮಾನಾಥ ಶೆಣೈ	ಭೋಜರಾಜ ಕಡಂಬ	
೫ಅ.	೧೬-೮-೦೩	ಶ್ರೀ ಭವಾನಿ ಮಂದಿರ, ಶಿವಾಜಿ ಚೌಕ, ಬಾಗಲಕೋಟೆ.	ವಿ. ಜಿ. ನಾಡಗೇರ (ಪ್ರಾಚಾರ್ಯರು)	ಡಾ. ಜಿ. ಬಿ. ಕುಲಕರ್ಣಿ		
೬.	೧೬-೮-೦೩	ಕಿಟೆಲ್ ಆರ್ಟ್ಸ್ ಕಾಲೇಜು, ಧಾರವಾಡ.	ಪ್ರೊ. ಎಂ.ಜೆ. ಪುನೀತ್ (ಪ್ರಾಚಾರ್ಯರು) ಡಾ|| ಆರ್. ಎಂ. ಷಡಕ್ಷರಯ್ಯ	ಡಾ|| ಎಂ.ವೈ. ಸಾವಂತ	ಕು. ಸುಪ್ರಿಯಾ ಇವರಿಂದ ನಾಣ್ಯ ಪ್ರದರ್ಶನ ಏರ್ಪಡಿಸಲಾಗಿತ್ತು.	
೭.	೧೮-೮-೦೩	ದಾಮರ್ಸ್; ದೇವಾಳ ವಠಾರ ಮೊಗರ್ನಾಡ್	ವಾಮನ ನಂದಾವರ (ಅಧ್ಯಕ್ಷರು, ತುಳು ಸಾಹಿತ್ಯ ಅಕಾದೆಮಿ)	ಡಾ. ಶಿವರಾಮಶೆಟ್ಟಿ (ಜಾನಪದ ಸಂಶೋಧಕರು) ಎಸ್.ಎಚ್. ಶಿವರುದ್ರಪ್ಪ (ರಿಜಿಸ್ಟ್ರಾರ್)	ಅನಂತರಾಜ ಇಂದ್ರ	

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೮.	೧೭-೮-೦೩	ಅನಂತನಾಥ ಬಸದಿ ಪೆರ್ಮಾಣು	-	ಉಮಾನಾಥ ಶೆಣೈ	ಬಸದಿಯ ಶಾಸನಗಳನ್ನು ಓದಿ ವಿವರಿಸಿದ್ದಾರೆ. ಪರಿಸರದಲ್ಲಿ 'ಶ್ರಮದಾನ' ನಡೆಸಿದರು.	
೯.	೧೮-೮-೦೩	ಕ್ಷೇತ್ರ ಸಂಪನ್ಮೂಲ ಕೇಂದ್ರ ಬಂಟ್ವಾಳ	ಎಚ್.ಆರ್. ಈಶ್ವರ್ (ಕ್ಷೇತ್ರ ಸಮನ್ವಯಾಧಿಕಾರಿ)	ತುಕಾರಾಂ ಪೂಜಾರಿ (ಅಧ್ಯಕ್ಷರು, ತುಳು ಅಧ್ಯಯನ ಕೇಂದ್ರ) ಉದಯಶಂಕರ್ ನಿರ್ಪಾಜೆ (ಅಧ್ಯಕ್ಷರು, ಬಂಟ್ವಾಲ ಕ.ಸಾ.ಪ.)		
೧೦.	೧೮-೮-೦೩	ಶ್ರೀ ರೇಣುಕಾ ಸಂಯುಕ್ತ ಪದವಿಪೂರ್ವ ಕಾಲೇಜು	ಕೆ.ಎಂ. ತಿಪ್ಪೇಸ್ವಾಮಿ	ಡಾ. ಡಿ.ವಿ. ಪರಮಶಿವಮೂರ್ತಿ (ಕನ್ನಡ ವಿ.ವಿ. ಹಂಪಿ)	-	-
೧೧.	೧೯-೮-೦೩	ಸರಕಾರಿ ಪ.ಪೂ. ಕಾಲೇಜು ಪುಂಜಾಲಕಟ್ಟೆ.	ಕೆ.ಎಂ. ಸೋಮಶೇಖರ್ (ಪ್ರಾಂಶುಪಾಲರು)	ಬಿ. ಪ್ರಮೋದಕುಮಾರ್ (ಇತಿಹಾಸ ಪ್ರಾಧ್ಯಾಪಕರು, ಉಜ್ರೆ)	ಶ್ರೀ ಕೃಷ್ಣಭಟ್ (ಉಪನ್ಯಾಸಕರು)	ವಿದ್ಯಾರ್ಥಿಗಳಿಗೆ 'ರಸಪ್ರಶ್ನೆ' ನಡೆಸಲಾಯಿತು.
೧೨.	೧೯-೮-೦೩	ರಾಷ್ಟ್ರೋತ್ಥಾನ ಪ್ರೌಢಶಾಲೆ	ಕೆ.ಎನ್. ಕೃಷ್ಣಮೂರ್ತಿ (ಮುಖ್ಯೋಪಾಧ್ಯಾಯರು)	ಡಾ. ಬಸವರಾಜ್ ಮಲಶೆಟ್ಟಿ (ಪ್ರಾಧ್ಯಾಪಕರು, ಹೊಸಪೇಟೆ)	-	-
೧೩.	೨೦-೮-೦೩	ಶಾರದಾ ವಿದ್ಯಾಮಂದಿರ	ಕೆ. ಪ್ರಕಾಶ್	ಕುಂಬಾ ಸದಾಶಿವಪ್ಪ	-	-
೧೪.	೨೦-೮-೦೩	ಕಾರ್ಮಲ್ ಪಿಯು ಕಾಲೇಜ್ ಮೊಡಂಕಾಪು	ಸಿ|| ಜ್ಯೂಲಿಯೆಟ್ ಮಥಾಯಸ್ (ಪ್ರಾಂಶುಪಾಲರು)	ಎಸ್. ಗೋಪಾಲಕೃಷ್ಣ ಭಟ್ (ಹಿರಿಯ ಉಪನ್ಯಾಸಕರು, ಪುತ್ತೂರು)	ಶ್ರೀಮತಿ ತೆರೆಸಾ ಡಿಸೋಜಾ	ಬಹುಮಾನ ವಿಜೇತ ವಿದ್ಯಾರ್ಥಿಗಳಿಂದ ಭಾಷಣ.
೧೫.	೨೦-೮-೦೩	ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಳಧತಿ	ಪ್ರಧಾನ ಗುರುಗಳು	ಶ್ರೀ ಕಲ್ಲನಗೌಡ ಪಾಟೀಲ್		
೧೬.	೨೧-೮-೦೩	ಶ್ರೀ ಗಂ.ಭೀ. ಸ.ಪ.ಪೂ. ಕಾಲೇಜು, ಹರಪನಹಳ್ಳಿ	ಪಿ.ಸಿ. ರೇವಣಪ್ಪ (ಪ್ರಾಚಾರ್ಯರು)	ಡಾ|| ಮುದೇನೂರು ನಿಂಗಪ್ಪ (ಉಪನ್ಯಾಸಕರು)	ಗುರುಮೂರ್ತಿ ಪೆಂಡಕೂರು ಕೆ. ಸತೀಶ್	
೧೭.	೨೧-೮-೦೩	ಬಸವೇಶ್ವರ ಪ.ಪೂ. ಕಾಲೇಜು ಬಾಗಲಕೋಟೆ.	ಬಿ.ಬಿ. ಹೊದ್ಲೂರು (ಪ್ರಾಚಾರ್ಯರು)	ಎನ್.ಆರ್. ಮುಲ್ಲಾ ವಿ.ಎಂ. ವಸ್ತ್ರದ		
೧೮.	೨೧-೮-೦೩	ಯು. ಕಮಲಾಬಾಯಿ ಪ್ರೌಢಶಾಲೆ, ಕಡಿಯಾಳಿ, ಉಡುಪಿ	ಕೆ. ಶ್ರೀಧರಭಟ್	ಡಾ|| ಪಿ.ಎನ್.ನರಸಿಂಹಮೂರ್ತಿ	ವಿದ್ಯಾರ್ಥಿಗಳನ್ನು ರಾಷ್ಟ್ರಕವಿ ಎಂ. ಗೋವಿಂದ ಪೈ ಸಂಶೋಧನ ಕೇಂದ್ರಕ್ಕೆ ಕರೆದೊಯ್ದಿದ್ದರು.	
೧೯.	೨೧-೮-೦೩	ಸರಕಾರಿ ಪದವಿಪೂರ್ವ ಕಾಲೇಜು, ಉಪ್ಪಿನಂಗಡಿ	ಡಾ. ಕೆ.ಆರ್. ಯೋಗಾನಂದನ್ (ಪ್ರಾಂಶುಪಾಲರು)	ನೋರ್ಬರ್ಟ್ ಮಸ್ಕರೇನ್ಹಾಸ್ ಪ್ರಾಧ್ಯಾಪಕರು, (ಸಂತ ಫಿಲೋಮಿನಾ ಕಾಲೇಜು ಪುತ್ತೂರು.)		
೨೦.	೨೧-೮-೦೩	ಶ್ರೀ ಉಜನಿ ಜಗದ್ಗುರು ಪ.ಪೂ. ಕಾಲೇಜು, ಹರಪನಹಳ್ಳಿ	ಡಾ. ದೇವರಕೊಂಡಾರೆಡ್ಡಿ (ಶಾಸನತಜ್ಞರು, ಕವಿವಿ) ಎಸ್. ಬಸವರಾಜ್, (ಪ್ರಾಚಾರ್ಯರು)	ಶ್ರೀ ಎಂ.ಪಿ.ಎಂ.ಶಾಂತವೀರಯ್ಯ ಶ್ರೀ ಮಧುಬಗರೆ	ಕುಂಬಾ ಸದಾಶಿವಪ್ಪ	

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೧೧.	೧೨-೮-೦೨	ವ್ಯವಸಾಯಿಕ ಬೇರಿಕ್ ನಿ. ಪಾಂಡವರಕಲ್ಲು.	ಶ್ರೀಮತಿ ಚಂದ್ರಾವತಿ (ಅಧ್ಯಕ್ಷರು, ಕಜೆಕಾರು ಪಂಚಾಯತ್)	ಶ್ರೀ ಕೆ. ಸತೀಶ್‌ಚಂದ್ರ (ನಿಕಟಪೂರ್ವ ಅಧ್ಯಕ್ಷರು, ಬಂಟ್ವಾಳ ತಾಲ್ಲೂಕು ಪಂಚಾಯತ್)		
		„ „		ಶ್ರೀ ಕೆ. ಜಯಬಂಗೇರಾ (ಅಧ್ಯಕ್ಷರು, ಸಹಕಾರಿ ವ್ಯ. ಬೆಂಕ್.) ಸಮಾರೋಪ ಸಮಾರಂಭ	ಅನಂತರಾಜ್ ಇಂದ್ರ	
೧೨.	೧೨-೮-೦೨	ಉತ್ಸವಾಂಬ ಪ್ರೌಢಶಾಲೆ, ರೇಣುಕಾ ಸ್ವತಂತ್ರ ಪ.ಪೂ. ಕಾಲೇಜು, ಉಚ್ಚಂಗಿದುರ್ಗ	ವಿ.ಕೆ. ಪಾಟೀಲ್ (ಮುಖ್ಯಗುರುಗಳು)	ಸಿ.ಮಹದೇವು (ಮುಖ್ಯಸ್ಥರು, ಪುರಾತತ್ವ ವಿಭಾಗ, ಕವಿವಿ) ಶ್ರೀ ಬಿ. ಚೆನ್ನಪ್ಪ (ಪ್ರಾಚಾರ್ಯರು)		
೧೩.	೧೨-೮-೦೨	ಶ್ರೀ ಕೌದಿ ಮಹಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ	ಕೆ. ಕೊಟ್ಟರಗೌಡರು ಅಧ್ಯಕ್ಷರು, (ಸ್ಥಳೀಯ ಆಡಳಿತ ಮಂಡಳಿ)	ಡಾ. ಮೃತ್ಯುಂಜಯ ರುಮಾಲೆ, (ಉಪನ್ಯಾಸಕರು, ಹೊಸಪೇಟೆ.)		
೧೪.	೧೨-೮-೦೨	ನ್ಯಾಷನಲ್ ಸಂಯುಕ್ತ ಪ.ಪೂ. ಮಹಾವಿದ್ಯಾಲಯ, ಹೊಸಪೇಟೆ.	ಡಾ. ಸಿ. ಮಹದೇವ (ಪ್ರವಾಚಕರು, ಕವಿವಿ) ಜಾಲಿ ವಾಮದೇವಪ್ಪ,	ಡಾ. ಕೆ.ಎಂ. ಸುರೇಶ್ (ನಿರ್ದೇಶಕರು, ವಸ್ತು ಸಂಗ್ರಹಾಲಯ, ಕವಿ.ವಿ.)	ಹೊಸಪೇಟೆ ಕ.ಇ.ಅ. ಘಟಕ	
೧೫.	೧೩-೮-೦೨	ಶ್ರೀ ಗುರು ಶಿವಶಾಂತವೀರ ಪ್ರೌಢಶಾಲೆ, ಕಡ್ಲಬಾಳು.	ಟಿ.ಜಿ. ಮಂಜುನಾಥ (ಮುಖ್ಯೋಪಾಧ್ಯಾಯರು)	ಡಾ. ಎಂ. ಕೊಟ್ರೇಶ್ (ಕನ್ನಡ ವಿ.ವಿ.)	ಗುರುಮೂರ್ತಿ ಪೆಂಡಕೂರು	
೧೬.	೧೩-೮-೦೨	ಥಿಯೋಸಾಫಿಕಲ್ ಮಹಿಳಾ ವಿದ್ಯಾಲಯ, ಹೊಸಪೇಟೆ	ಶ್ರೀಮತಿ ಉಷಾರಾಣಿಶರ್ಮ ಪ್ರಾಂಶುಪಾಲರು	ಡಾ. ಎಸ್. ಶಿವಾನಂದ, (ಪ್ರಾಧ್ಯಾಪಕರು, ಹೊಸಪೇಟೆ)	ಹೊಸಪೇಟೆ ಕ.ಇ.ಅ. ಘಟಕ	
೧೭.	೧೩-೮-೦೨	ಪಂಚಾಯತಿ ಕಚೇರಿ, ಬೆಳಧಕಿ.	-	ಕಲ್ಲನಗೌಡ ಪಾಟೀಲ್	ಕಲ್ಲನಗೌಡ ಪಾಟೀಲ್	
೧೮.	೧೩-೮-೦೨	ಉದಯ ಸಂಯುಕ್ತ ಪ.ಪೂ. ಕಾಲೇಜ್, ಬೆಂಗಳೂರು.	ಕೆ.ಎ. ಸೋಮಯ್ಯ (ಸಂಸ್ಥಾಪಕ ಪ್ರಾಂಶುಪಾಲರು)	ಎಂ.ಬಿ. ಪಾಟೀಲ್ ನಿವೃತ್ತ ಪ್ರಧಾನ ಸಂಪಾದಕರು (ಕರ್ನಾಟಕ ಗ್ಯಾಸಿಟಿಯರ್)	ಎಸ್. ರಾಮಸ್ವಾಮಿ	
೧೯.	೧೪-೮-೦೨	ಬಿ.ಸಿ.ಎಂ. ಕಾಲೇಜು ಹಾಸ್ಟಲ್ ಹೊಸಪೇಟೆ.	ಶಿವಾನಂದ, (ತನಿಖಾಧಿಕಾರಿಗಳು, ಬಿಸಿಎಂ ಇಲಾಖೆ)	ಡಾ. ಕೆ. ರವೀಂದ್ರನಾಥ ಡಾ. ಮೃತ್ಯುಂಜಯ ರುಮಾಲೆ	-	-
೨೦.	೧೫-೮-೦೨	ಜೇಸಿಸ್ ಶಾಲೆ, ಹೊಸಪೇಟೆ	ಅನಂತರಮೇಶ್ (ಅಧ್ಯಕ್ಷರು, ಜೇಸಿಸ್ ವಿದ್ಯಾಸಂಸ್ಥೆ)	ಉಪನ್ಯಾಸಕರು, ಹೊಸಪೇಟೆ.	ಹೊಸಪೇಟೆ ಘಟಕ	-
೨೧.	೧೫-೦೮-೦೨	ಸರಕಾರಿ ಶಿಕ್ಷಣ ಮಹಾವಿದ್ಯಾಲಯ, ಜಮಖಂಡಿ.	ಮು.ಪ್ರ. ಡಾ. ಅಭಿನವಕುಮಾರ ಚೆನ್ನಬಸವ ಸ್ವಾಮಿಗಳು, ಯು.ಪಿ.ಖಲೀಲ್ ಅಹಮದ ಷರೀಫ್	ಪ್ರೊ. ವಿ.ವಿ. ನಾವಡ ಬಸವರಾಜ್ ಯಡಳ್ಳಿ		

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೩೨.	೧೬-೮-೦೩	ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ, ಪ್ರೌಢಶಾಲೆ-ಹೊಸಪೇಟೆ.	ಡಾ. ಎಂ. ಕೊಟ್ರೇಶ್	ಉಮೇಶ್ ಕೇರಿಯವರ (ಉಪಪ್ರಾಂಶುಪಾಲರು)	ಹೊಸಪೇಟೆ ಕ.ಇ.ಅ. ಘಟಕ	
೩೩.	೧೬-೮-೦೩	ಎಸ್.ಎಂ. ಪ.ಪೂ. ಮಹಾ ವಿದ್ಯಾಲಯ, ತೊದಲವಾಗಿ	ಎಂ.ಬಿ. ಆನದಿನ್ನಿ ಎಸ್.ಜಿ. ಕೋಟಿ (ಶಿಕ್ಷಣಾಧಿಕಾರಿಗಳು, ಹುನಗುಂದ.)	ಎ.ಎನ್. ತಿರಕಪಡಿ		
೩೪.	೧೬-೮-೦೩	ವಾಚನಾಲಯ ರೂರಲ್ ಕಾಲೇಜ್, ಕನಕಪುರ.	ಬಿ.ಆರ್.ಆರ್. ಪ್ರಸಾದ್ (ಪ್ರಾಂಶುಪಾಲರು)	ಪ್ರೊ. ಎಂ.ಜಿ. ನಾಗರಾಜ್ (ಉಪಾಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾದೆಮಿ)		-
೩೫.	೧೭-೮-೦೩	ಶ್ರೀ ಮಹಾವೀರ ಪ್ರೌಢಶಾಲೆ ಹೊಸಪೇಟೆ.	ಷಾ. ರತನ್‌ಚಂದ್ (ಜಂಟಿ ಕಾರ್ಯದರ್ಶಿಗಳು ಶ್ರೀ ಆದಿನಾಥ ಶಿಕ್ಷಣ ಸಂಸ್ಥೆ.)	ಡಾ. ಎಸ್.ವೈ. ಸೋಮಶೇಖರ್ (ವಸ್ತು ಸಂಗ್ರಹಾಲಯ ವಿಭಾಗ ಕ.ವಿ.ವಿ.)	ಹೊಸಪೇಟೆ ಕ.ಇ.ಅ. ಘಟಕ	
೩೬.	೧೭-೮-೦೩	ಸರಕಾರಿ ಪ.ಪೂ. ಮಹಾ ವಿದ್ಯಾಲಯ, ಹುನ್ನೂರು.	ಎಸ್.ಎಂ. ಕೊಲ್ಲೂರು (ಪ್ರಾಚಾರ್ಯರು.)	ಶಶಿಧರ ಪೂಜಾರಿ ಪ್ರೊ. ಎಂ.ಜಿ. ದಾಸದ	ಡಾ. ಎಸ್.ಎನ್. ಅಂಗಡಿ (ಕ.ವಿ.ವಿ. ಹಂಪಿ.)	
೩೭.	೧೭-೮-೦೩	ಗ್ರಾಮಾಂತರ ಪ್ರೌಢಶಾಲೆ, ಸಾತನೂರು	ಶ್ರೀಮತಿ ಹೇಮಲತಾಮೂರ್ತಿ (ಮುಖ್ಯೋಪಾಧ್ಯಾಯಿನಿ)	ಎಚ್.ಜಿ. ಪಾರ್ಥಸಾರಥಿ (ಇತಿಹಾಸ ಉಪನ್ಯಾಸಕರು)	ಎಲ್ಲೇಗೌಡ ಬೆಸಗರಹಳ್ಳಿ (ಇತಿಹಾಸ ದರ್ಶನ ವೇದಿಕೆ ಕನಕಪುರ.)	
೩೮.	೧೭-೮-೦೩	ವಿಶ್ವೋದಯ ಪ್ರೌಢಶಾಲೆ ಕೃಷ್ಣಯ್ಯದೊಡ್ಡಿ	ಚಾಮರಾಜ (ಮುಖ್ಯೋಪಾಧ್ಯಾಯರು)	ಡಾ. ಮುನಿರಾಜಪ್ಪ, ಮುಖ್ಯಸ್ಥರು (ಇತಿಹಾಸ ವಿಭಾಗ)	ಎಲ್ಲೇಗೌಡ ಬೆಸಗರಹಳ್ಳಿ.	
೩೯.	೧೭-೮-೦೩	ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆ, ಶ್ರೀ ದೇಗುಲ ಮಠ, ಕನಕಪುರ.	ಡಿ. ನಂಜುಂಡಯ್ಯ (ಮುಖ್ಯೋಪಾಧ್ಯಾಯರು)	ಡಾ. ಎಂ. ಗೋವಿಂದಪ್ಪ (ಇತಿಹಾಸ ಉಪನ್ಯಾಸಕರು)	” ”	
೪೦.	೧೭-೮-೦೩	ತೆಗ್ಗಿನಮಠದ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರ, ಹರಪನಹಳ್ಳಿ.	ಜಿ. ಬಸವಂತಪ್ಪ	ಚಿಲುವರಾಜು, (ಉಪನ್ಯಾಸಕರು, ಕ.ವಿ.ವಿ.)	ಕುಂಬಾ ಸದಾಶಿವಪ್ಪ	
೪೧.	೧೭-೮-೦೩	ಶ್ರೀ ಸಿದ್ದೇಶ್ವರ ಗ್ರಾಮಾಂತರ ವಸತಿ ಪ್ರೌಢಶಾಲೆ, ರಾಣೆಬೆನ್ನೂರು, ಹಾವೇರಿ ತಾ.	ಎಚ್. ಚಂದ್ರಪ್ಪ (ಪ್ರಭಾರ ಮುಖ್ಯಗುರುಗಳು)	ಎಚ್. ಬಿ. ಚಂದ್ರಪ್ಪ (ಉಪನ್ಯಾಸಕರು)	ಲಿಂಗಾರೆಡ್ಡಿ ಶೇರಿ	
೪೨.	೧೮-೮-೦೩	ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜು, ಹೊಸಪೇಟೆ.	ಡಿ. ರಾಜಗೋಪಾಲರಾವ್ (ಪ್ರಾಚಾರ್ಯರು)	ಡಾ. ಬಸವರಾಜ್ ಮಲಶೆಟ್ಟಿ (ಪ್ರಾಧ್ಯಾಪಕರು, ಹೊಸಪೇಟೆ.)	ಹೊಸಪೇಟೆ ಕ.ಇ.ಅ. ಘಟನಕ	
೪೩.	೧೮-೮-೦೩	ಸರಕಾರಿ ಪ.ಪೂ. ಕಾಲೇಜು ಹರಪನಹಳ್ಳಿ.	ಬಿ. ಮರುಳಸಿದ್ದಪ್ಪ (ಪ್ರಭಾರ ಪ್ರಾಚಾರ್ಯರು)	ಶ್ರೀ ಚಿಲುವರಾಜು (ಕನ್ನಡ ವಿ.ವಿ.)	ಕುಂಬಾ ಸದಾಶಿವಪ್ಪ	
೪೪.	೧೮-೮-೦೩	ಭಾರತಮಾತಾ ಪ್ರೌಢಶಾಲೆ, ಸಿಂಗರಾಜಪುರ, ಚನ್ನಪಟ್ಟಣ ತಾ.	ಶ್ರೀಮತಿ ಅನಿತಾಶಂಕರ್ (ಅಧ್ಯಕ್ಷರು, ಗ್ರಾಮ ಪಂಚಾಯಿತಿ)	ಶ್ರೀ ಎಲ್ಲೇಗೌಡ ಬೆಸಗರಹಳ್ಳಿ (ಅಧ್ಯಕ್ಷರು, ವಚನ ಸಾಹಿತ್ಯ ಅಕಾದೆಮಿ, ಕನಕಪುರ.)	ಎಲ್ಲೇಗೌಡ ಬೆಸಗರಹಳ್ಳಿ	

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೪೫.	೨೮-೮-೦೩	ಎಸ್.ಪಿ. ಪ.ಪೂ. ಮಹಾ ವಿದ್ಯಾಲಯ, ತೇರದಾಳ.	ಡಾ.ಎಸ್.ಬಿ. ತಾಳಿಕೋಟಿ (ಪ್ರಾಚಾರ್ಯರು)	ಜಿ.ಆರ್. ಕುಲಕರ್ಣಿ ಎನ್.ಬಿ. ಇಂಗಳಗಿ	ಡಾ. ಎಸ್. ಎಸ್. ಅಂಗಡಿ (ಕ.ವಿ.ವಿ.)	
೪೬.	೨೯-೮-೦೩	ಗ್ರಾಮಾಂತರ ಬಾಲಕರ ಪ್ರೌಢಶಾಲೆ, ಕನಕಪುರ.	ಶಾಂತಕುಮಾರಯ್ಯ (ಮುಖ್ಯೋಪಾಧ್ಯಾಯರು.)	ಡಾ. ಎಂ. ಗೋವಿಂದಪ್ಪ (ಇತಿಹಾಸ ಉಪನ್ಯಾಸಕರು.)	ಎಲ್ಲೇಗೌಡ ಬೆಸಗರಹಳ್ಳಿ	
೪೭.	೨೯-೮-೦೩	ಬ್ಲಾಸಮ್ ಬಾಲಕಿಯರ ಪ್ರೌಢಶಾಲೆ, ಕನಕಪುರ.	ಶ್ರೀಮತಿ ಗಂಗಾಂಬಿಕಾ (ಪ್ರಾಂಶುಪಾಲರು)	ಎಚ್.ಜಿ. ಪಾರ್ಥಸಾರಥಿ (ಇತಿಹಾಸ ಉಪನ್ಯಾಸಕರು.)	" "	
೪೮.	೨೯-೮-೦೩	ಸರ್ಕಾರಿ ಪ್ರೌಢಶಾಲೆ, ತುಂಗಣಿ.	ಶ್ರೀಮತಿ ಜಯಲಕ್ಷ್ಮಿ ಮುಖ್ಯೋಪಾಧ್ಯಾಯಿನಿ.	ಕೂಗಿ ಗಿರಿಯಪ್ಪ	" "	
೪೯.	೨೯-೮-೦೩	ಶ್ರೀ ಶಿವಯೋಗಿ ಮುನೀಶ್ವರ ಸ್ವಾಮಿ ವಸತಿ ಪ್ರೌಢಶಾಲೆ, ಶ್ರೀ ಮರಳೇಗವಿಮಠ, ಕನಕಪುರ ತಾ.	ಶ್ರೀ ಮ.ನಿ.ಪ್ರ. ಮುಮ್ಮಡಿ ಶಿವರುದ್ರ ಸ್ವಾಮಿಗಳ ಸಾನ್ನಿಧ್ಯ ರಾಮಚಂದ್ರ. ಡಿ. (ಮುಖ್ಯೋಪಾಧ್ಯಾಯರು)	ಅರವಿಂದ ಬಿ. ಜತ್ತಿ ಡಾ. ಮುನಿರಾಜಪ್ಪ	" "	
೫೦.	೨೯-೮-೦೩	ಸರಕಾರಿ ಪ.ಪೂ. ಕಾಲೇಜು ಮಾದಿಹಳ್ಳಿ.	ಶಂಕರ ನಾಯಕರು (ಪ್ರಾಚಾರ್ಯರು.)	ಪ್ರೊ. ಬಿ.ಎಂ. ಶಿವಮೂರ್ತಿ		
೫೧.	೨೯-೮-೦೩	ಎಂ.ವಿ. ಪಟ್ಟಣ ಪದವಿಪೂರ್ವ ಕಾಲೇಜು, ರಬಕವಿ	ಡಿ.ಕೆ. ಅರವಳ್ಳಿ (ಪ್ರಾಚಾರ್ಯರು)	ಎಸ್. ಎಂ. ಬಿದರಿ		
೫೨.	೨೯-೮-೦೩	ಸ.ಸಂ.ಪ.ಪೂ. ಕಾಲೇಜು ಹೊನ್ನಾಳಿ.	ಎ.ಜಿ.ಕೃಷ್ಣಪ್ಪ, (ಅಧ್ಯಕ್ಷರು, ಹೊಸಸಂಪದ ಬಿದರಹಳ್ಳಿ ನರಸಿಂಹಮೂರ್ತಿ, (ಪ್ರಾಂಶುಪಾಲರು)	ಶಿವಶಂಕರಯ್ಯ ಜಯದೇವಪ್ಪ ಜೈನಕೇರಿ ಸಿದ್ಧಯ್ಯ ಹಿರೇಮಠ		ಶ್ರೀ ಎಸ್.ರಾಮಚಂದ್ರ ಕಾರಂತ ಅವರಿಂದ 'ಪ್ರಾಚ್ಯವಸ್ತು ಮತ್ತು ನಾಣ್ಯ' ಪ್ರದರ್ಶನ ನಡೆಯಿತು. 'ನನ್ನೂರಿನ ಐತಿಹಾಸಿಕ ಮಹತ್ವ'- ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆ ನಡೆಸಿ, ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗಿದೆ.
೫೩.	೨೯-೮-೦೩	ಗ್ರಾಮ ಪಂಚಾಯಿತಿ ಕಚೇರಿ ಸೊರಟೂರು.	ಕಾರ್ಯದರ್ಶಿಗಳು ಗ್ರಾಮ ಪಂಚಾಯಿತಿ.	ಕಲ್ಲನಗೌಡ ಪಾಟೀಲ		
೫೪.	೩೦-೮-೦೩	ಸರಕಾರಿ ಪ್ರೌಢಶಾಲೆ, ಕುಂಚೂರು.	ಎಚ್. ಹೆಗ್ಗಪ್ಪ (ಪ್ರಭಾರಿ ಮುಖ್ಯಗುರುಗಳು)	ಜಿನದತ್ತಪ್ಪ (ನಿವೃತ್ತ ಹಿರಿಯ ಉಪನ್ಯಾಸಕ) ಅಜ್ಜಾಳ ಕೋಟಪ್ಪ (ಅಧ್ಯಕ್ಷರು, ಗ್ರಾಮ ಪಂಚಾಯಿತಿ)	ಕುಂಬಾ ಸದಾಶಿವಪ್ಪ	
೫೫.	೩೦-೮-೦೩	ಸರಕಾರಿ ಪದವಿಪೂರ್ವ ಕಾಲೇಜು, ಬನಹಟ್ಟಿ.	ಜಿ.ಎಂ. ಬಿರಾದಾರ್ (ಪ್ರಾಚಾರ್ಯರು.)	ಎಸ್.ಆರ್. ಮನಹಳ್ಳಿ ಎಸ್. ಎಂ. ಶೇಖ್		
೫೬.	೧-೯-೦೩	ಸರಕಾರಿ ಪದವಿಪೂರ್ವ ಕಾಲೇಜು, ತೆಲಗಿ	ಬಿ. ಪಿ. ಮಾಲತೇಶ್ (ಪ್ರಾಚಾರ್ಯರು)	ಎಸ್. ಎಸ್. ಹಿರೇಮಠ	ಕುಂಬಾ ಸದಾಶಿವಪ್ಪ	
೫೬.ಅ.	೧-೯-೦೩	ಶ್ರೀ ಧ.ಮಂ. ಕಾಲೇಜು, ಉಜಿರೆ.	ಕರ್ನಾಟಕದ ಒಂದು ಸ್ಮಾರಕ ಕುರಿತು ಚಿತ್ರಕಲೆ ಸ್ಪರ್ಧೆ ನಡೆಸಲಾಗಿದೆ.			

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೫೭.	೦೧-೯-೦೩	ಎಸ್.ಪಿ.ಟಿ. ಪದವಿಪೂರ್ವ ಕಾಲೇಜ್, ಮಹಾಲಿಂಗಪುರ.	ಡಾ. ಬಿ.ಎಂ. ಪಾಟೀಲ್ (ಪ್ರಾಚಾರ್ಯರು)	ವೀರೇಶ್ ಬಡಿಗೇರಾ, (ಕ.ವಿ.ವಿ.) ಡಾ. ಎಸ್. ಎಂ. ಘಟ್ನಟ್ಟಿ ಡಾ. ಬಿ.ಬಿ. ಹುದ್ದಾರ್		
೫೮.	೨-೯-೦೩	ಶ್ರೀ ವೀರಭದ್ರೇಶ್ವರ ದೇವಸ್ಥಾನ ಗೋಗೀಪೇಠ (ಶಹಪುರ ತಾ.)	ಡಾ. ಭೀಮರಾವ್ ದರ್ಶನಾಳ್	ಭಾಸ್ಕರರಾವ್ ಮುಡಬಾಳ್ ಚಿತ್ರಶೇಖರ ಗಿಂಡಿ.	ವೀರಶೈವ ಯುವವೇದಿಕೆ, ಗೋಗಿಪೇಠ -	
೫೯.	೨-೯-೦೩	ನರಸಾಪುರ ಕಲಾ ಮತ್ತು ಶಿರೂರ ವಾಣಿಜ್ಯ ಮಹಾ ವಿದ್ಯಾಲಯ, ಬಾಗಲಕೊಟೆ,	ಡಾ. ಬಿ.ಜಿ. ಕುಲಕರ್ಣಿ (ಮುಖ್ಯಸ್ಥರು, ಇತಿಹಾಸ ವಿಭಾಗ)	ಪ್ರೊ. ಬಿ.ಎನ್. ಪಾಟೀಲ್	-	-
೫೯ಅ.	೨-೯-೦೩	ಶ್ರೀ ಧರ್ಮಸ್ಥಳ ಮಂಜುನಾಥ ಕಾಲೇಜ್, ಉಜಿರೆ.	ಪ್ರಮೋದಕುಮಾರ್	"ಕರ್ನಾಟಕ ಕಲೆ, ಶಿಲ್ಪಕಲೆ ಮತ್ತು ಸಾಹಿತ್ಯ" ಕುರಿತಂತೆ ರಸಪ್ರಶ್ನೆ ಸ್ಪರ್ಧೆ ನಡೆಸಲಾಗಿದೆ.		
೬೦.	೩-೯-೦೩	ಶ್ರೀ ಧರ್ಮಸ್ಥಳ ಮಂಜುನಾಥ ಕಾಲೇಜ್, ಉಜಿರೆ.		'ನಮ್ಮೂರ ಪ್ರಾಚೀನ ಮಂದಿರ'ದ ಬಗೆಗೆ ಪ್ರಬಂಧ ಸ್ಪರ್ಧೆ ನಡೆಸಲಾಗಿದೆ.		
೬೦ಅ.	೪-೯-೦೩	ಶ್ರೀ ಧರ್ಮಸ್ಥಳ ಮಂಜುನಾಥ ಕಾಲೇಜ್, ಉಜಿರೆ.		ಪ್ರೊ. ತುಕಾರಾಮ ಪೂಜಾರಿ (ಎಸ್.ವಿ.ಎಸ್. ಕಾಲೇಜ್)		
೬೧.	೫-೯-೦೩	ಶ್ರೀ ಧರ್ಮಸ್ಥಳ ಮಂಜುನಾಥ ಕಾಲೇಜ್, ಉಜಿರೆ.	ಪ್ರೊ॥ ನಾಗರಾಜ ಪೂವಣಿ	ಬಹುಮಾನ ವಿತರಣೆ ನಡೆಸಲಾಗಿದೆ.		
೬೨.	೧೨-೯-೦೩	ನ್ಯೂ ಹಾಯ್‌ಸ್ಕೂಲ್ ಧಾರವಾಡ.	ಎಂ.ಎಫ್. ಬಸರಕೋಡ್ (ಸಂಸ್ಥೆ ಅಧ್ಯಕ್ಷರು)	ಪ್ರೊ. ವಿ.ಜಿ. ದೀಕ್ಷಿತ	ಶ್ರೀ ಎಸ್.ವಿ. ದಾನಪ್ಪನವರ (ಮುಖ್ಯ ಅಧ್ಯಾಪಕರು)	
೬೩.	೧೨-೨-೦೪	ಸ.ಪ.ಪೂ. ಕಾಲೇಜು ಕುಣಿಮೆಹಳ್ಳಿ.	ಶ್ರೀ ಎಂ.ಬಿ. ನಾಶಪುಡಿ ಪ್ರಾಚಾರ್ಯರು	ನಾಗಪ್ಪ ಕರ್ಜಗಿ (ಅಧ್ಯಕ್ಷರು)	ಎಸ್.ಸಿ. ಪಾಟೀಲ್ ಮಲ್ಲಿಕಾರ್ಜುನ ಪ. ಕುಂಬಾರ	
೬೪.	೧೬-೯-೦೩	ಸರಕಾರಿ ಬಾಲಕಿಯರ ಪ್ರೌಢಶಾಲೆ, ಸಾಲಹಳ್ಳಿ (ರಾಮದುರ್ಗ ತಾ.)	ಪಾವಲಿ (ಮುಖ್ಯ ಗುರುಗಳು)	ಡಾ. ಸೂರ್ಯನಾಥ ಕಾಮತ್ (ಅಧ್ಯಕ್ಷರು, ಕ. ಇ. ಅ.)		
೬೫.	೧೮-೯-೦೩	ಶ್ರೀ ವೀರ ಪುಲಕೇಶಿ ಪದವಿ ಕಾಲೇಜ್, ಬಾದಾಮಿ	ಡಾ. ಅ. ಸುಂದರ (ಹಿರಿಯ ಇತಿಹಾಸ ಪುರಾತತ್ವ ತಜ್ಞ)	ಡಾ. ಎಚ್.ಆರ್. ರಘುನಾಥಭಟ್		
೬೬.	೨೪-೧-೦೪	ಕೂಡಲಸಂಗಮನಾಥ ವಸತಿ ಶಾಲೆ, ಕುಣಿಕೇರಿ.	ಶ್ರೀ ಎಸ್. ಎಸ್. ಬಿರಾದಾರ್ ಪ್ರಾಚಾರ್ಯರು	ಎಸ್.ಎಂ. ಪವಡಿಗೌಡರ್ ವಿ.ಎಸ್. ಹಿರೇಮಠ ಬಿ.ಜಿ. ಕರಿಗಾರ್	ವಾರ್ತಾ ಇಲಾಖೆ, ಗದಗ	ವಿಚಾರ ಸಂಕಿರಣ ನಡೆಸಿದರು, ಗಂಗಾಧರೇಶ್ವರ ದೇವಾಲಯ ಆವರಣ ಸ್ವಚ್ಛಗೊಳಿಸಿದರು.

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೬೭.	೨೬-೧೨-೦೩	ಎಸ್.ಆರ್. ಕಂಠಿ ಶಿಕ್ಷಣ ಮಹಾವಿದ್ಯಾಲಯ, ಇಳಕಲ್	ಉದ್ಘಾಟಕರು: ಶ್ರೀ ಸಿ.ಜಿ. ದೊಡ್ಡಮನಿ, ಪ್ರಾಚಾರ್ಯರು ಅಧ್ಯಕ್ಷತೆ: ಶ್ರೀ ಬಿ.ಎಂ. ತೆಳಗಡಿ ಪ್ರಾಚಾರ್ಯರು	ನಟರಾಜ ಹೊನ್ನವಳ್ಳಿ (ರಂಗನಿರ್ದೇಶಕ) ಶ್ರೀಮತಿ ರಾಜಶ್ರೀ-ಕುಳಿ.	ವಾರ್ತಾ ಇಲಾಖೆ	
೬೮.	೨೬-೯-೦೩	ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ	ಡಾ. ಅಚಲಾ ದೇಸಾಯಿ (ಪ್ರಾಚಾರ್ಯರು)	ಡಾ. ಬಸವರಾಜ ಜಗಜಂಪಿ ಮುಖ್ಯಸ್ಥರು, ಕನ್ನಡ ವಿಭಾಗ	ಡಾ. ಶ್ರೀನಿವಾಸ ಕುಲಕರ್ಣಿ ವ್ಹಿ.ಸಿ. ಮಾಲಗತ್ತಿ	
೬೯.	೨೬-೯-೦೩	ಸದ್ಗುರು ಶಿವಾನಂದ ಸಂ.ಪ.ಪೂ. ಕಾಲೇಜು, ಸುಣಕಲ್‌ಬಿದರಿ (ರಾಣೆಬೆನ್ನೂರು ತಾ.)	ಡಿ.ಬಿ. ಜೀರಲಭಾವಿ (ಪ್ರಾಚಾರ್ಯರು)	ಕೆ.ಎಂ. ಹಳ್ಳೇರ ಶ್ರೀಮತಿ ಆರ್.ಎಸ್. ಅಪ್ಪಾಜಿ		
೭೦.	೨೬-೯-೦೩	ಗೋಗಟೆ ವಾಣಿಜ್ಯ ಮಹಾ ವಿದ್ಯಾಲಯ, ಬೆಳಗಾವಿ.	ಪ್ರೊ. ವಿ.ಕೆ. ಜೋಶಿ (ಪ್ರಾಚಾರ್ಯರು)	ಪ್ರೊ. ಚಿದಾನಂದ ಕಾಮತ್ (ಇತಿಹಾಸ ಪ್ರಾಧ್ಯಾಪಕರು)	ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಭವನ ವಿಶ್ವಸ್ಥ ಮಂಡಳಿ	
೭೧.	೨೯-೯-೦೩	ಜಿ.ಆಯ್. ಬಾಗೇವಾಡಿ ಕಾಲೇಜು	ಪ್ರೊ. ಎಂ.ಎಸ್. ಇಂಚಲ (ಪ್ರಾಚಾರ್ಯರು)	ಡಾ. ಸ್ಮಿತಾ ಸುರೇಬಾನಕರ್ (ಮುಖ್ಯಸ್ಥರು, ಇತಿಹಾಸ ವಿಭಾಗ)	" "	
೭೨.	೩೦-೧೨-೦೩	ಚಾಮರಸ ಯುವಕ ಮಂಡಳಿ ನಾರಾಯಣಪುರ.	ಶ್ರೀ ಪ್ರಭಣ್ಣ ಹುಣಸೀಕಟ್ಟಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು.	ಕೆ.ಎನ್. ಗಾವರವಾಡಮಠ	ವಾರ್ತಾ ಇಲಾಖೆ ಬಸವರಾಜ್ ಕುಕನೂರು	
೭೩.	೨೯-೯-೦೩	ಗಾಂಧಿ ಗ್ರಾಮೀಣ ಗುರುಕುಲ ವಸತಿ ಶಾಲೆ, ಹೊಸರಿತ್ತಿ ಹಾವೇರಿ ತಾ.	ಬಿ.ಎಚ್. ಪೂಜಾರ್, (ಕೆ.ಎ.ಎಸ್. ಉಪವಿಭಾಗಾಧಿಕಾರಿಗಳು, ಹಾವೇರಿ.) ಶ್ರೀಮತಿ ಪದ್ಮಾ ಫ. ಸಣ್ಣಪ್ಪನವರ, (ಜಿಲ್ಲಾ ಪಂಚಾಯತ್ ಸದಸ್ಯರು.)	ಶ್ರೀಮತಿ ಸುಲೋಚನಾ ಪೊತ್ನೀಸ್ (ಸಹಾಯಕ ನಿರ್ದೇಶಕರು, ಪುರಾತತ್ವ ವಸ್ತುಸಂಗ್ರಹಾಲಯ) ಗದಗ.) ಡಿ. ಫಾಲಾಕ್ಷ ಜಿ.ಆರ್. ಕುಲಕರ್ಣಿ		ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.
೭೪.	೨೯-೯-೦೩	ಗ್ರಾಮೀಣ ಗುರುಕುಲ ವಸತಿ ಶಾಲೆ, ಹೊಸರಿತ್ತಿ	ಶ್ರೀಮತಿ ಪದ್ಮಾ ಸಣ್ಣಪ್ಪನವರ ಜಿಲ್ಲಾ ಪಂಚಾಯತ್ ಸದಸ್ಯೆ.	ಶ್ರೀಮತಿ ಸುಲೋಚನಾ ಪೊತ್ನಿಸ್ ಸಹಾಯಕ ನಿರ್ದೇಶಕಿ ಪುರಾತತ್ವ ವಸ್ತುಸಂಗ್ರಹಾಲಯ	ವಾರ್ತಾ ಇಲಾಖೆ	
೭೫.	೦೯-೧೦-೦೩	ಶ್ರೀ ಶಾಂತಿನಾಥ ಬಸದಿ	ಯು. ಬಿ. ಮುಳ್ಳೂರು (ಪ್ರಾಚಾರ್ಯರು, ಕಲ್ಲೋಳಿ.)	ಜಯಪ್ರಕಾಶ್ ದಲಕಬ್ಬೂರು ಕಲ್ಲೋಳಿ	ಶ್ರೀ ಎಸ್.ಕೆ. ಪಾಟೀಲ್ (ಎನ್.ಎಸ್.ಎಸ್. ಘಟಕ)	
೭೬.	೧೧-೧೧-೦೩	ಸರಸಂಗಂಗ ದೊಡ್ಡಬಾಡ ಹಾಯ್‌ಸ್ಕೂಲ್, ಧಾರವಾಡ.	ಶ್ರೀಮತಿ ಎಲ್.ಬಿ. ಪಾಟೀಲ್ ಮುಖ್ಯೋಪಾಧ್ಯಾಯರು.	ಪ್ರೊ. ವಿ.ಜಿ. ದೀಕ್ಷಿತ್	ಪ್ರೊ. ವಿ.ಜಿ. ದೀಕ್ಷಿತ್	ವಿದ್ಯಾರ್ಥಿಗಳಿಂದ ಪ್ರಾಚೀನ ದೇವಾಲಯಗಳ ಆವರಣವನ್ನು ಸ್ವಚ್ಛ ಮಾಡಿಸಲಾಯಿತು.
೭೭.	೨೮-೧೧-೦೩	ಹಜರತ್ ನಿಜಾಮುದ್ದೀನ್ ಉರ್ದು ಹಾಯ್‌ಸ್ಕೂಲ್ ಧಾರವಾಡ.	ಬಿ.ಎಂ. ಜಾಗೀರ್‌ದಾರ್ (ಮುಖ್ಯಾಧ್ಯಾಪಕರು)	ಪ್ರೊ. ವಿ.ಜಿ. ದೀಕ್ಷಿತ	" "	

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ		
೭೮.	೨೮-೧೧-೦೩	ಸರಕಾರಿ ಪ.ಪೂ. ಕಾಲೇಜ್ ಕುಣಿಮಹಳ್ಳಿ, ಸವಣೂರು ತಾ.	ಎಸ್.ಬಿ. ಚವ್ಹಾಣ್ (ಪ್ರಾಚಾರ್ಯರು)	ಸೋಬಳಪಾಲ್ ಉಪ ನಿರ್ದೇಶಕರು	ಎಂ.ಪಿ. ಕುಂಬಾರ	
೭೯.	೫-೧೨-೦೩ರಿಂದ ೭-೧೨-೦೩ ರವರೆಗೆ	ಬಸವೇಶ್ವರ ಪ್ರಥಮದರ್ಜೆ ಮಹಾವಿದ್ಯಾಲಯ, ಬೆಂಗಳೂರು.	ಎಚ್. ಎಸ್. ರೇಣುಕಾ ಪ್ರಸಾದ್, ಅಧ್ಯಕ್ಷರು, (ಶ್ರೀ ಜಬಸಸಂ)	ಡಾ.ಎಸ್.ನಾಗರಾಜು (ನಿರ್ದೇಶಕರು, ಎಂ. ಎಚ್. ಕೃಷ್ಣ ಇನ್ಸ್‌ಟಿಟ್ಯೂಟ್ ಆಫ್ ಇಂಡಾಲಜಿ, ಬೆಂಗಳೂರು.)	ಡಾ. ಶ್ಯಾಮಲರತ್ನಕುಮಾರಿ	ಇತಿಹಾಸದ ಆಕರ ವಸ್ತುಗಳ ಪ್ರದರ್ಶನ ನಡೆಸಲಾಯಿತು.
೮೦.	೧೨-೧೨-೦೩	ಶ್ರೀ ರಾಘವೇಂದ್ರ ಮಠ ಕೆಂಚನಗುಡ್ಡು, ಸಿರಗುಪ್ಪ ತಾ.	ಶ್ರೀಮತಿ ಈರಮ್ಮ (ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷೆ)	"ಐತಿಹಾಸಿಕ ಸ್ಮಾರಕಗಳು ಮತ್ತು ಪರಿಸರ ಸಂರಕ್ಷಣೆ" ಕುರಿತ ವಿಚಾರ ಸಂಕಿರಣ ನಡೆಸಲಾಗಿದೆ.	ವಾರ್ತಾ ಇಲಾಖೆ	
೮೧.	೫-೧-೦೪	ಸರ್ಕಾರಿ ಪ.ಪೂ. ಕಾಲೇಜು ಕುಣಿಮಹಳ್ಳಿ	ಎಂ.ಬಿ. ನಾಶಿಪುಡಿ (ಪ್ರಾಚಾರ್ಯರು)	ನಾಗಪ್ಪ ಕರ್ಜಗಿ	ಎಂ. ಪಿ. ಕುಂಬಾರ	ರಸಪ್ರಶ್ನೆ ಕಾರ್ಯಕ್ರಮವನ್ನು ನಿಯೋಜಿಸಿದ್ದರು.
೮೨.	೨೦-೧-೦೪	ವನಿತಾ ಶಿಕ್ಷಕಿಯರ ತರಬೇತಿ ಸಂಸ್ಥೆ, ಧಾರವಾಡ.	ಎಲ್. ಐ. ತೊಗ್ಗಿ (ಪ್ರಾಂಶುಪಾಲರು)	ಪ್ರೊ. ವಿ.ಜಿ. ದೀಕ್ಷಿತ್	-	-
೮೩.	೧೭-೧೦-೦೩	ಶ್ರೀ ಬಸವೇಶ್ವರ ಪ್ರಥಮ ದರ್ಜೆ ಕಾಲೇಜು, ಸಂತೇಬೆನ್ನೂರು	ಜೆ. ಮಂಜುನಾಥ್ (ಉಪನ್ಯಾಸಕರು) ಎಂ.ಎಸ್. ಶಿವಮೂರ್ತಿ (ಪ್ರಾಚಾರ್ಯರು)	ಸುಮತೀಂದ್ರ ನಾಡಿಗ್	(ಉಪನ್ಯಾಸ : ಸಂತೇಬೆನ್ನೂರು ನಾಯಕರು)	
೮೪.	೧೫-೧೧-೦೩	ಐತಿಹಾಸಿಕ ಪುಷ್ಕರಣಿ ಸಂತೇಬೆನ್ನೂರು	ಸಾನಿಧ್ಯ : ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಸಾಣೆಹಳ್ಳಿ ಶ್ರೀ ಗುರುಬಸವ ಸ್ವಾಮೀಜಿ ಪಾಂಡೋಮಟ್ಟಿ ಶ್ರೀ ಬಸವಶಾಂತ ವೀರ ಸ್ವಾಮೀಜಿ ಹೊಸದುರ್ಗ ವಡ್ನಾಳ್ ರಾಜಣ್ಣ (ಶಾಸಕರು, ಚನ್ನಗಿರಿ)	ಸಂತೇಬೆನ್ನೂರು ಉತ್ಸವ ಪ್ರೊ॥ ಎಸ್.ಬಿ. ರಂಗನಾಥ್ (ಜಿಲ್ಲಾ ಕಸಾಪ ಅಧ್ಯಕ್ಷರು) ದಾವಣಗೆರೆ ಮಹಿಮಾ ಜೆ. ಪಟೇಲ್ (ಚನ್ನಗಿರಿ) ಪೊನ್ನಚ್ಚಿ ಮಹಾದೇವಸ್ವಾಮಿ (ಕೊಳ್ಳೇಗಾಲ) ಸಿರಾಜ್ ಅಹ್ಮದ್ (ಜೇಸೀ ಅಧ್ಯಕ್ಷರು, ಸಂತೇಬೆನ್ನೂರು)	ಸುಮತೀಂದ್ರ ನಾಡಿಗ್	
೮೫.	೧೬-೮-೦೩	ಬಿ.ಎಂ. ಪಾಟೀಲ ಪ್ರೌಢಶಾಲೆ, ಶಿರೋಳ, ನರಗುಂದ (ತಾ).	ಎಸ್.ಬಿ. ತೋಟದ (ಮುಖ್ಯಾಧ್ಯಾಪಕರು) ದೇವೇಂದ್ರ ಮಾಧವನವರ, ನಿವೃತ್ತ ಉಪನ್ಯಾಸಕರು, ಆರ್.ಡಿ. ಮಾದರ, ಇತಿಹಾಸ ಶಿಕ್ಷಕರು			

ಕ್ರ.ಸಂ.	ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ	ಮುಖ್ಯ ಅತಿಥಿಗಳು/ಉಪನ್ಯಾಸಕರು	ಸಂಘಟಕರು	ಇತರ ವಿಷಯಗಳು
			ಸರ್ವಶ್ರೀ	ಸರ್ವಶ್ರೀ	ಸರ್ವಶ್ರೀ	
೮೬.	೫-೯-೦೩	ಗುರುಬಸವ ಪ್ರೌಢಶಾಲೆ, ಶಿರೋಳ, ನರಗುಂದ (ತಾ).	ಎಸ್.ಎಸ್. ದೊಡ್ಡಮನಿ (ಸಹಾಯಕ ಶಿಕ್ಷಕರು) ಬಿ.ಎಸ್. ಸಾಲಿಮಠ, ಐಟಿಐ ಪ್ರಾಚಾರ್ಯರು		ದೇವೇಂದ್ರ ಮಾಧವನವರ, ನಿವೃತ್ತ ಉಪನ್ಯಾಸಕರು,	
೮೭.	೫-೯-೦೩	ವೇದಾವತಿ ಸರ್ಕಾರಿ ವಿಜ್ಞಾನ ಕಾಲೇಜು	ಪ್ರೊ|| ಬಿ. ರಾಜಶೇಖರಪ್ಪ (ಪ್ರಾಂಶುಪಾಲರು)	ಜಿ. ಎಲ್. ಏಕನಾಥ್	ಶ್ರೀಮತಿ ಕೆ. ಉಮಾ ಎಸ್. ಎಚ್. ಜಗನ್ನಾಥ್ ಎಂ. ಬಸವರಾಜಪ್ಪ ಎಸ್. ಜಗನ್ನಾಥ	ಶಿಕ್ಷಕರ ದಿನಾಚರಣೆ ಮತ್ತು 'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮದಲ್ಲಿ ವಿಶ್ವ ಸಾಂಸ್ಕೃತಿಕ ಪರಂಪರೆಯ ತಾಣಗಳಲ್ಲಿ ಸೇರ್ಪಡೆಯಾಗಿರುವ ಭಾರತದ ತಾಣಗಳ ವರ್ಣಪಾರದರ್ಶಿಕೆ ಪ್ರದರ್ಶನ

ಈ ಮೇಲ್ಕಂಡ ಒಟ್ಟು ೮೮ ಕಾರ್ಯಕ್ರಮಗಳು ನಿಶ್ಚಿತ ರೂಪದಲ್ಲಿ ನಡೆದಿರುತ್ತವೆ. ನಮ್ಮ ಮಾತೃಸಂಸ್ಥೆ ಈ ವರ್ಷದ ಸಪ್ತಾಹ ಆರಂಭಿಸುವ ಮೊದಲೇ ದಿ. ೮-೮-೦೩ ರಿಂದ ೧೫-೮-೦೩ ವರೆಗೆ ನೂ.ವಿ. ಕಲಾ ವಿಜ್ಞಾನ ಮತ್ತು ವಾಣಿಜ್ಯ ವಿದ್ಯಾಲಯ ಗುಲಬರ್ಗಾದಲ್ಲಿ ಕಾರ್ಯಕ್ರಮ ನಡೆದಿದೆ. ಇದರಂತೆ ಖಚಿತ ವಿವರವಿರದಿದ್ದರೂ ಇತಿಹಾಸ ಪ್ರೇಮಿ ಶ್ರೀ ಎಸ್.ಕೆ. ಜೋಶಿಯವರು ಹುಬ್ಬಳ್ಳಿ-ಧಾರವಾಡದ ೮ ಸ್ಥಳಗಳಲ್ಲಿ ಭಿತ್ತಿಪತ್ರಗಳನ್ನು ಲಗತ್ತಿಸಿ ಪರಂಪರೆ ಉಳಿಸಿ ಸಪ್ತಾಹ ನಡೆಸಿದ್ದಾರೆ. ಸ್ವಾಮಿ ರಮಾನಂದತೀರ್ಥ ಸಾಮಾಜಿಕ ಆರ್ಥಿಕ ಸಂಶೋಧನೆ ಹಾಗೂ ರಾಷ್ಟ್ರೀಯ ಭಾವೈಕ್ಯ ಸಂಸ್ಥೆ ನಿರ್ದೇಶಕರಾದ ಪ್ರೊ. ವಸಂತ ಕುಷ್ಟಗಿಯವರು ೩೩ ಪ್ರೌಢಶಾಲೆ ಮತ್ತು ಇತರೆಡೆ ನಡೆಸಿದ ಕಾರ್ಯಕ್ರಮಗಳ ವರದಿ ಕಳಿಸಿರುತ್ತಾರೆ. ಇದು ಮುಂದಿನ ಪುಟದಲ್ಲಿದೆ. ಇವರೆಲ್ಲರಿಗೂ ಅಭಾರಿಯಾಗಿದ್ದೇವೆ. ಒಟ್ಟು ಕಾರ್ಯಕ್ರಮಗಳು ೧೨೯ ನಡೆದಿವೆ.

ಕ್ರ.ಸಂ.	ದಿನಾಂಕ	ಸ್ಥಳ	ಕ್ರ.ಸಂ.	ದಿನಾಂಕ	ಸ್ಥಳ
೦೧.	೧೧-೮-೦೩	ಸರಕಾರಿ ಪ್ರೌಢಶಾಲೆ ಕೋರವಾರ (ಚಿತ್ತಾಪುರ ತಾ.)	೧೬.	೨೮-೧೦-೦೩	ಸರಕಾರಿ ಪ್ರೌಢಶಾಲೆ, ಫರಹತಬಾಡ.
೦೨.	೦೨-೮-೦೩	ಸರಕಾರಿ ಪದವಿಪೂರ್ವ ಕಾಲೇಜ್ ಕಾಳಗಿ, ಚಿತ್ತಾಪುರ ತಾ.	೧೭.	೨೯-೧೦-೦೩	ಸರಕಾರಿ ಪ್ರೌಢಶಾಲೆ, ಹಾಗರಗುಂಡಗಿ.
೦೩.	೨೧-೮-೦೩	ಕೊಡದೂರ, ಚಿತ್ತಾಪುರ ತಾ.	೧೮.	೦೯-೧೨-೦೩	ಸರಕಾರಿ ಪ್ರೌಢಶಾಲೆ, ಮಣ್ಣೂರು.
೦೪.	೨೨-೮-೦೩	ಕೊಡದೂರ ಸ. ಪ್ರೌಢಶಾಲೆ	೧೯.	೧೦-೧೨-೦೩	ಶ್ರೀ ಮಾತಾ ಮಾಣಿಕೇಶ್ವರಿ ಪ್ರೌಢಶಾಲೆ, ಸಣ್ಣೂರು.
೦೫	೨೨-೮-೦೩	ಕೊಡದೂರ, ಚಿತ್ತಾಪುರ ತಾ.	೨೦.	೧೨-೧೨-೦೩	ಶ್ರೀ ಶಿವಲಿಂಗೇಶ್ವರ ಪ್ರೌಢಶಾಲೆ, ಅಫಜಲಪುರ.
೦೬.	೨೬-೮-೦೩	ಮಹಾಣಸಳು, ಅಫಜಲಪುರ ತಾ.			
೦೭.	೨೭-೮-೦೩	ನೂತನ ಪ್ರೌಢಶಾಲೆ, ಮುಲ್ಲಾಬಾದ್, ಅಫಜಲಪುರ ತಾ.	೨೧.	೧೬-೧೨-೦೩	ಸರಕಾರಿ ಪ್ರೌಢಶಾಲೆ, ಘತ್ತುಂಗ
೦೮.	೨೮-೮-೦೩	ಸ. ಪ್ರೌಢಶಾಲೆ, ಚಿಂಚೋಳಿ	೨೨.	೧೭-೧೨-೦೩	ಸರಕಾರಿ ಪ್ರೌಢಶಾಲೆ, ನಾಗನೂರು.
೦೯	೨೯-೮-೦೩	ಶ್ರೀ ತಿಪ್ಪಣ್ಣ ಕಂಟೆಪ್ಪಾ ಹೇರೂರ ಪ್ರೌಢಶಾಲೆ, ದೇವಲಾಗಾಣಗಾಪುರ.	೨೩.	೧೯-೧೨-೦೩	ಸರಕಾರಿ ಪ್ರೌಢಶಾಲೆ, ಗುಡಗರ್ತಿ.
			೨೪.	೨೨-೧೨-೦೩	ಪಟ್ಟಣ ಪ್ರೌಢಶಾಲೆ, ಪಟ್ಟಣ.
೧೦.	೦೭-೯-೦೩	ಬಸವ ಸಮಿತಿ ಪ್ರೌಢಶಾಲೆ, ಭಂಕೂರು, ಚಿತ್ತಾಪುರ ತಾ.	೨೫.	೨೪-೧೨-೦೩	ಸರಕಾರಿ ಪ್ರೌಢಶಾಲೆ, ಗುಲ್ಬರ್ಗ.
			೨೬.	೨೬-೧೨-೦೩	ಶ್ರೀ ಲಕ್ಷ್ಮಣರಾವ್ ಬೋರೆ ಸ್ಮಾರಕ ಪ್ರೌಢಶಾಲೆ
೧೧.	೧೨-೯-೦೩	ಸರಕಾರಿ ಪ್ರೌಢಶಾಲೆ, ಕೊಡಲ ಹಂಗರಗಾ, ಆಳಂದ ತಾಲೂಕು.	೨೭.	೦೧-೧-೦೩	ಸರಕಾರಿ ಪ್ರೌಢಶಾಲೆ, ನರಿಬೋಳ.
೧೨.	೧೮-೯-೦೩	ಗೌತಮ ವೇಲ್‌ಫೇರ್ ಸೊಸೈಟಿ ಕನ್ನಡ ಮಾಧ್ಯಮ ಪ್ರೌಢಶಾಲೆ.	೨೮.	೦೨-೧-೦೪	ಸರಕಾರಿ ಪ್ರೌಢಶಾಲಾ, ಹಿಪ್ಪರಗಾ.
			೨೯.	೦೮-೧-೦೪	ಸ.ಪ್ರೌ.ಶಾ. ಶ್ರೀಕ್ಷೇತ್ರ ರೇವಗಿ.
೧೩.	೨೦-೧೦-೦೩	ಕ.ಸ.ಇ.ಡಿ.ಟಿ. ಬಾಲಕಿಯರ ಪ್ರೌಢಶಾಲೆ, ಗುಲಬರ್ಗಾ.	೩೦.	೨೮-೧-೦೪	ಸರಕಾರಿ ಪ್ರೌಢಶಾಲಾ, ಜನವಾಡ.
			೩೧.	೨೮-೨-೦೪	ಜ್ಞಾನದೇವ ಶಿಕ್ಷಣ ಸಂಸ್ಥೆ
೧೪.	೨೧-೧೦-೦೩	ಮಾಯಾ ಬಾಲ ವಿದ್ಯಾಮಂದಿರ ಗುಲ್ಬರ್ಗ.	೩೨.	೦೧-೩-೦೪	ಸರಕಾರಿ ಪ್ರೌಢಶಾಲೆ, ಆಲಿಯಂಟ್, ಜೇವರ್ಗಿ ತಾ.
೧೫.	೨೨-೧೦-೦೩	ಶ್ರೀ ನಗರ ಬಸವೇಶ್ವರ ಪ್ರೌಢಶಾಲೆ, ಗುಲ್ಬರ್ಗ.	೩೩.	೦೪-೩-೦೪	ಸರಕಾರಿ ಪ್ರೌಢಶಾಲಾ, ಕಪಲಾಪೂರ.

ಈ ಮೇಲಿನ ಎಲ್ಲಾ ಕಾರ್ಯಕ್ರಮಗಳು ಪ್ರೊ. ವಸಂತ ಕುಷ್ಟಗಿಯವರ ನೇತೃತ್ವದಲ್ಲಿ ಸ್ವಾಮಿ ರಾಮಾನಂದತೀರ್ಥ ಸಂಶೋಧನ ಸಂಸ್ಥೆಯ ಸಹಯೋಗದಲ್ಲಿ ನಡೆದಿದ್ದು, ಆಯಾ ಸಂಸ್ಥೆಗಳ ಮುಖ್ಯಸ್ಥರ ಸಹಿ ಮತ್ತು ಮುದ್ರೆಯುಳ್ಳ ವರದಿಯ ಪಟ್ಟಿಕೆಯನ್ನು ಕಚೇರಿಗೆ ಒದಗಿಸಿದ್ದಾರೆ. ಗುಲ್ಬರ್ಗಾದಿಂದ ಕಳುಹಿಸಿದ ಈ ವರದಿ ಮಾರ್ಚ್ ೨೦೦೪ ರಲ್ಲಿ ನಮಗೆ ತಲುಪಿದೆ.

ಇನ್ನೂ ಹಲವು ಕಾರ್ಯಕ್ರಮಗಳು ನಡೆದಿವೆ ಎಂದು ತಿಳಿದಿದೆ. ಆದರೆ ಈ ಬಗ್ಗೆ ವಿವರವಾದ ವರದಿಗಳು ಬಂದಿಲ್ಲ.

ಹದಿನೇಳನೆಯ ವಾರ್ಷಿಕ ಸಮ್ಮೇಳನ

ಅಕಾದೆಮಿಯ ಹದಿನೇಳನೆಯ ವಾರ್ಷಿಕ ಸಮ್ಮೇಳನವು ಬಾಗಲಕೋಟೆ ಜಿಲ್ಲೆಯ ಇತಿಹಾಸ ಪ್ರಸಿದ್ಧ ಬಾದಾಮಿಯಲ್ಲಿ, ಸ್ಥಳೀಯ ಸ್ವಯಂ ಸೇವಾ ಸಂಸ್ಥೆಯಾದ ವಿಶ್ವಚೇತನದ ಆಶ್ರಯದಲ್ಲಿ ೨೦೦೩ರ ಸೆಪ್ಟೆಂಬರ್ ೧೩, ೧೪ ಮತ್ತು ೧೫ನೆಯ ತಾರೀಕುಗಳಂದು ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ಪ್ರೊ|| ಎಂ.ಜಿ. ನಾಗರಾಜ್ ಮತ್ತು ಡಾ. ಪಿ. ವಿ. ಕೃಷ್ಣಮೂರ್ತಿ ಸಂಪಾದಿತ **'ಇತಿಹಾಸ ದರ್ಶನ'**ದ ೧೮ನೆಯ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಖ್ಯಾತ ಇತಿಹಾಸ ತಜ್ಞ ಡಾ|| ಬಾ.ರಾ. ಗೋಪಾಲ್ ಅವರ ಹೆಸರಿನಲ್ಲಿ ನೀಡ ಲಾಗುತ್ತಿರುವ, ೩ನೆಯ ಡಾ|| ಬಾ.ರಾ. ಗೋಪಾಲ್ ಪ್ರಶಸ್ತಿಯನ್ನು ಶಾಸನ ತಜ್ಞ ಡಾ|| ದೇವರಕೊಂಡಾರೆಡ್ಡಿ ಅವರಿಗೆ ನೀಡಿ ಗೌರವಿಸಲಾಯಿತು. ಸಮ್ಮೇಳನಾಧ್ಯಕ್ಷರಾಗಿ ಗೌರವ ಸ್ವೀಕರಿಸಿದ ಡಾ|| ಸಿಂದಗಿ ರಾಜಶೇಖರ ಅವರು ಇತಿಹಾಸದ ಅಧ್ಯಯನದಲ್ಲಿ ಇನ್ನೂ ಆಗಬೇಕಾದ ಸಂಶೋಧನೆಗಳನ್ನು ಕುರಿತು ಪ್ರಸ್ತಾಪಿಸಿದರು. ವಿಜಾಪುರ-ಗದಗ ಶ್ರೀ ರಾಮಕೃಷ್ಣ-ವಿವೇಕಾನಂದ

ಆಶ್ರಮದ ಅಧ್ಯಕ್ಷರಾದ ಪೂಜ್ಯಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿದ್ದರು. ಬಾದಾಮಿಯ ಶಾಸಕರಾದ ಶ್ರೀ ಬಿ.ಬಿ. ಚಿಮ್ಮನಕಟ್ಟಿ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಇತಿಹಾಸ ದರ್ಶನ ಸಂಚಿಕೆ ೧೮ನ್ನು ಬಾದಾಮಿಯ ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಚೇರಮನ್ ಶ್ರೀ ಎ.ಸಿ. ಪಟ್ಟಣದ ಅವರು ಬಿಡುಗಡೆ ಮಾಡಿದರು. ಪುಸ್ತಕ ಮಳಿಗೆಯನ್ನು ಉದ್ಘಾಟಿಸಿ, ಡಾ. ಎ. ಕೆ. ಶಾಸ್ತ್ರಿ ಅವರ ಕೃತಿಯನ್ನು ಬಿಡುಗಡೆ ಮಾಡಿದವರು, ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಎಸ್. ಪ್ರಭಾಕರ. ಅಕಾದೆಮಿಯ ಗೌರವಾಧ್ಯಕ್ಷರಾದ ಡಾ|| ಜಿ. ಎಸ್. ದೀಕ್ಷಿತ್ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ, ಕಳೆದ ಸಮ್ಮೇಳನದ ನಂತರ ಈವರೆಗೆ ಪಿಎಚ್.ಡಿ. ಪಡೆದಿರುವ ಈ ಕೆಳಕಂಡ ಅಕಾದೆಮಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಕ್ರ.ಸಂ.	ಪಿಎಚ್.ಡಿ../ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧	ಕುಲಕರ್ಣಿ ಆನಂದ ಜೀವನರಾವ್	ಡಾ|| ಎಂ.ಟಿ. ಕಾಂಬಳೆ	'ತಾಳಿಕೋಟೆ ಯುದ್ಧ': ಒಂದು ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨	ಎಸ್.ಎಂ. ನಾಗಭೂಷಣ	ಡಾ|| ಎಚ್.ಆರ್. ರಘುನಾಥ ಭಟ್	History and Antiquities of Belgaum	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೩.	ಹತ್ತಿಮತ್ತೂರ ಅನ್ನಪೂರ್ಣ ಫಕೀರಪ್ಪ	ಡಾ|| ಚೆನ್ನಕ್ಕ ಪಾವಟೆ	ಕಿತ್ತೂರ ಸಂಸ್ಥಾನದ ಸಾಹಿತ್ಯ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೪.	ಡಾ|| ಕೆ.ಬಿ. ಸುದರ್ಶನ್	ಡಾ||ಎಚ್.ಎಸ್. ನಾಗಭೂಷಣ ಭಟ್ಟ	The concept of Surya in Sanskrit Literature	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೫.	ಜಗದೀಶ್	ಡಾ|| ರಾಜರಾಮ ಹೆಗಡೆ	Measurement System in Karnataka A.D. 325 to 1700	ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
೬	ಸ್ಮಿತಾ ಪ್ರಮೋದ ಸರೇಬಾನಕರ	ಡಾ|| ಎಚ್.ಆರ್. ರಘುನಾಥ ಭಟ್ಟ	Halasi : A Study	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೭	ಎಂ. ಕೊಟ್ರೇಶ್	ಡಾ|| ರವಿ ಕೋರಿ ಶೆಟ್ಟರ್	ಕೋಟೆ-ಕೊತ್ತಲಗಳು: ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ)	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
೮	ಮಾಲತಿ ಎಸ್.	ಡಾ|| ಅಶ್ವತ್ಥನಾರಾಯಣ	The Legal Status of Women in Princely Mysore	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು
೯	ಜಯಮ್ಮ ಕರಿಯಣ್ಣ	ಡಾ|| ದೇವರಕೊಂಡಾರೆಡ್ಡಿ	ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
೧೦	ಕೆ. ಮಹೇಶ	ಡಾ|| ಕೆ.ಎಂ. ಸುರೇಶ್	ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
೧೧	ಮುನಿರಾಜಪ್ಪ	ಡಾ|| ಷಡಕ್ಷರ ಆರಾಧ್ಯ ಎಂ. ಡಾ|| ಷಡಕ್ಷರಯ್ಯ	ಮಾಗಡಿ ಸೀಮೆಯ ಇತಿಹಾಸ ಮತ್ತು ಸಂಸ್ಕೃತಿ (ಕ್ರಿ.ಶ. ೧೭೨೮ರವರೆಗೆ)	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕ್ರ.ಸಂ.	ಪಿಎಚ್.ಡಿ.,/ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧೨	ತಮಿಳ್ ಸೆಲ್ವಿ	ಡಾ|| ಹಂಪ. ನಾಗರಾಜಯ್ಯ	ಗಂಗರ ಶಾಸನಗಳು-ಒಂದು ಸಾಂಸ್ಕೃತಿಕ ಅಧ್ಯಯನ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೧೩	ಜೆ. ದೇವೇಂದ್ರಪ್ಪ	ಡಾ. ಡಿ. ಪಾಂಡುರಂಗ ಬಾಬು	ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
೧೪	ಎಂ. ನಾಗರಾಜ	ಡಾ|| ಎ. ಸುಬ್ಬಣ್ಣ ರೈ	ಕರ್ನಾಟಕ ಮಡಿವಾಳರು	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
೧೫	ಬಿ.ಆರ್. ಭಾರತಿ	ಡಾ|| ದೇವರಕೊಂಡಾರೆಡ್ಡಿ	ರಾಷ್ಟ್ರಕೂಟರ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
೧೬	ಎಚ್.ಆರ್. ಚಂದ್ರಶೇಖರ ಶಾಸ್ತ್ರಿ	ಡಾ. ಕೆ.ಆರ್. ಬಸವರಾಜ್	The Vijayanagar Urbanity	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೭	ಎಸ್.ವಿ. ಸುಜಾತ	ಡಾ|| ಎಂ.ಎ. ಜಯಚಂದ್ರ	ಕನ್ನಡ ನಾಗಕುಮಾರ ಕಥಾ ಕಾವ್ಯಗಳು-ಒಂದು ಸಾಂಸ್ಕೃತಿಕ ಅಧ್ಯಯನ	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
೧೮	ಸರೋಜನಿ ಚಿನ್ನಯ್ಯ ಹಿರೇಮಠ	ಡಾ. ಚೆನ್ನಕ್ಕ ಪಾವಟೆ	ಡಾ|| ಗುರುಲಿಂಗ ಕಾಪಸೆ: ಒಂದು ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯	ರಾಜಶೇಖರ ಜಮದಂಡಿ	ಡಾ|| ಅರ್ಕಸಾಲಿ	ಸರ್ವಜ್ಞನ ವಚನಗಳು: ಒಂದು ಜನಪದೀಯ ಅಧ್ಯಯನ	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೩-೯-೨೦೦೩ರಂದು ಎರಡು, ೧೪-೯-೨೦೦೩ ರಂದು ನಾಲ್ಕು ಮತ್ತು ೧೫-೯-೨೦೦೩ ರಂದು ನಾಲ್ಕು, ಹೀಗೆ ಹತ್ತು ವಿಚಾರ ಗೋಷ್ಠಿಗಳು ನಡೆದು, ಅಕಾದೆಮಿಯ ಸದಸ್ಯರು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತು ತಾವು ಶೋಧಿಸಿದ ಹೊಸ ವಿಚಾರಗಳ ವಿನಿಮಯ ಮಾಡಿಕೊಂಡರು. ಡಾ|| ಅ. ಸುಂದರ, ಡಾ|| ರು.ಮ. ಷಡಕ್ಷರಯ್ಯ, ಡಾ|| ಎಚ್. ಆರ್. ರಘುನಾಥ ಭಟ್, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ|| ಎಸ್.ವಿ. ಪಾಡಿಗಾರ್, ಡಾ|| ಸೂರ್ಯನಾಥ ಕಾಮತ್, ಪ್ರೊ. ಎಂ. ಜಿ. ನಾಗರಾಜ್, ಡಾ. ಎಸ್.ಕೆ. ಜೋಶಿ, ಡಾ|| ಕೆ.ಆರ್. ಗಣೇಶ್ ಮತ್ತು ಡಾ|| ಬಿ. ರಾಜಶೇಖರಪ್ಪ ಅವರುಗಳ ಅಧ್ಯಕ್ಷತೆಯಲ್ಲಿ ನಡೆದ ಹತ್ತು ವಿಚಾರಗೋಷ್ಠಿಗಳಲ್ಲಿ ೧೦೯ ಸಂಶೋಧನಾ ಪ್ರಬಂಧಗಳು ಮಂಡನೆ ಆದುವು.

೨೦೦೩ರ ಡಾ|| ಬಾ.ರಾ. ಗೋಪಾಲ್ ಪ್ರಶಸ್ತಿ ಪಡೆದ ಡಾ|| ದೇವರಕೊಂಡಾರೆಡ್ಡಿ ಅವರು ಸಮ್ಮೇಳನದ ಮೊದಲ ದಿನ ಅಂದರೆ ೧೩-೯-೨೦೦೩ರಂದು ಮಧ್ಯಾಹ್ನ ೩-೪೫ಕ್ಕೆ ಉತ್ತರ ಕರ್ನಾಟಕದ ಶಾಸನಗಳ ಸಂಶೋಧನೆ ಕುರಿತು ವಿಶೇಷ ಉಪನ್ಯಾಸ ಮಾಡಿದರು. ಸಮ್ಮೇಳನದ ಯಶಸ್ಸಿಗೆ ಶ್ರಮಿಸಿದ ಎಲ್ಲ ಗಣ್ಯರಿಗೂ ಅಕಾದೆಮಿಯು ಧನ್ಯವಾದಗಳೊಡನೆ ಕೃತಜ್ಞತೆಗಳನ್ನು ಸಮರ್ಪಿಸಿತು.

ಸರ್ವಸದಸ್ಯರ ಸಭೆಯ ವರದಿ-೨೦೦೨

ದಿನಾಂಕ ೧೪-೯-೨೦೦೩, ಭಾನುವಾರ ಸಂಜೆ ೬-೩೦ ಗಂಟೆಗೆ, ಅಕಾದೆಮಿಯ ೧೭ನೆಯ ಸಮ್ಮೇಳನದ ಸಭಾಸ್ಥಾನವಾದ ಬಾದಾಮಿಯ ಶ್ರೀ ವೀರಪುಲಿಕೇಶೀ ವಿದ್ಯಾವರ್ಧಕ ವಿದ್ಯಾಸಂಸ್ಥೆಯ ಒಳಾಂಗಣ ಕ್ರೀಡಾಂಗಣದಲ್ಲಿ, ಆ ಮೊದಲೇ ಸರ್ವಸದಸ್ಯರಿಗೂ ಪತ್ರಮುಖೇನ ತಿಳಿಸಿದ್ದ ಪ್ರಕಾರ, ಅಕಾದೆಮಿಯ ಅಧ್ಯಕ್ಷರಾದ ಡಾ|| ಸೂರ್ಯನಾಥ ಕಾಮತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡವಳಿಕೆಗಳು ಈ ಕೆಳಕಂಡಂತಿವೆ.

ಸಭೆಯಲ್ಲಿ ೧೪೯ ಸದಸ್ಯರು ಹಾಜರಿದ್ದರು.

ಸರ್ವ ಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ಅಂಚೆಯ ಮೂಲಕ ಎಲ್ಲ ಸದಸ್ಯರಿಗೂ ಮೊದಲೇ ಕಳುಹಿಸಲಾಗಿತ್ತು; ಆದರೂ, ಪ್ರಧಾನ ಕಾರ್ಯದರ್ಶಿ ಡಾ|| ಎಚ್. ಎಸ್. ಗೋಪಾಲರಾವ್ ಅವರು ಸಭೆಯನ್ನು ಆರಂಭಿಸಲು, ಹಾಜರಿದ್ದ ಸದಸ್ಯರ

ಅನುಮತಿ ಕೇಳಿದರು. ಸರ್ವಸದಸ್ಯರೂ ಸಭೆಯ ಆರಂಭಕ್ಕೆ ಅನುಮೋದನೆ ನೀಡಿದರು. ಸರ್ವಸದಸ್ಯರ ಸಭೆಯ ಆರಂಭಕ್ಕೆ ಅನುಮೋದನೆ ನೀಡಬಹುದೆಂಬ ಸೂಚನೆಯನ್ನು ಪ್ರೊ. ಲಕ್ಷ್ಮಣ್ ತೆಲಗಾವಿ ನೀಡಿದರು. ಆ ಸೂಚನೆಯನ್ನು ಡಾ॥ ಎಸ್.ಕೆ. ಜೋಶಿ ಅನುಮೋದಿಸಿದರು. ನಂತರ, ಸರ್ವಸದಸ್ಯರ ಸಭೆಯು ಡಾ॥ ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಿಧನರಾಗಿರುವ ಅಕಾದೆಮಿಯ ಸದಸ್ಯರು ಮತ್ತು ಭಾರತದ ಗಣ್ಯ ವ್ಯಕ್ತಿಗಳ ನಿಧನಕ್ಕಾಗಿ ಸಭೆಯು ಒಂದು ನಿಮಿಷಗಳ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿತು. ಶ್ರದ್ಧಾಂಜಲಿಗೆ ಪಾತ್ರರಾದವರ ಹೆಸರುಗಳು ಈ ಕೆಳಕಂಡಂತಿವೆ.

ಅಕಾದೆಮಿಯ ಸದಸ್ಯರು

೧. ಶ್ರೀಮತಿ ಬಿ.ಎಸ್. ಇಂದಿರಮ್ಮ, ೨. ಶ್ರೀ ಆನಂದಮೂರ್ತಿ, ೩. ಶ್ರೀ. ಸಿ.ಆರ್. ಗಾಡಗೋಳಿ ಮತ್ತು ೪. ಪ್ರೊ॥ ಸುಂಕದ

ಇತರ ಗಣ್ಯರು

೧. ಶ್ರೀ ಬಿ.ಡಿ. ಜತ್ತಿ, ೨. ಪ್ರೊ॥ ಕೀರ್ತಿನಾಥ ಕುರ್ತಕೋಟಿ, ೩. ಪ್ರೊ॥ ಎ.ಎನ್. ಮೂರ್ತಿರಾವ್

ಶ್ರದ್ಧಾಂಜಲಿ ಸಲ್ಲಿಕೆಯಾದ ನಂತರ, ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನು ಅಕಾದೆಮಿಯ ಉಪಾಧ್ಯಕ್ಷರಲ್ಲಿ ಒಬ್ಬರಾದ ಡಾ॥ ಎಚ್.ಆರ್. ರಘುನಾಥ ಭಟ್ ಸ್ವಾಗತಿಸಿದರು.

೨೦೦೨ನೆಯ ಸಾಲಿನ ವರದಿ

೨೦೦೨ನೆಯ ಸಾಲಿನ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಡಾ. ಎಚ್. ಎಸ್. ಗೋಪಾಲ ರಾವ್ ಮಂಡಿಸಿದರು. ವಾರ್ಷಿಕ ವರದಿಯ ಮುದ್ರಿತ ಪ್ರತಿಗಳನ್ನು ಸಭೆಯ ಆರಂಭದಲ್ಲೇ ಹಾಜರಿದ್ದ ಎಲ್ಲ ಸದಸ್ಯರಿಗೂ ವಿತರಿಸಲಾಗಿತ್ತು. ಅದರ ವಾಚನದ ಅವಶ್ಯಕತೆ ಇದೆಯೇ ಎಂದು ಅಕಾದೆಮಿಯ ಅಧ್ಯಕ್ಷರಾದ ಡಾ॥ ಸೂರ್ಯನಾಥ ಕಾಮತ್ ಪ್ರಶ್ನಿಸಿದಾಗ, ಅದರ ಅವಶ್ಯಕತೆ ಇಲ್ಲವೆಂದು ಸದಸ್ಯರೆಲ್ಲ ಘೋಷಿಸಿದರು. ವರದಿಯನ್ನು ಸ್ವೀಕರಿಸಬಹುದೆಂದು ಡಾ. ಎ.ಕೆ. ಶಾಸ್ತ್ರಿ ಸೂಚಿಸಿದರು. ಆ ಸೂಚನೆಯನ್ನು ಶ್ರೀ ವ್ಹಿ. ಸಿ. ಮಾಲಗಿತ್ತಿ ಅನುಮೋದಿಸಿದರು.

೨೦೦೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರ ಮಂಡನೆ

೨೦೦೨ನೆ ಸಾಲಿನ ವರದಿಯ ಜೊತೆಗೇ ೨೦೦೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮುದ್ರಿತ ಪ್ರತಿಯನ್ನೂ ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲ್ ಮಂಡಿಸಿದರು. ಅಕಾದೆಮಿಯು ಸಹಕಾರಿ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದೆ ಎಂಬ ವಿಚಾರವಾಗಿ ಪ್ರಸ್ತಾಪಿಸಿದ ಶ್ರೀ ವಿಶ್ವನಾಥ ಚೌಶೆಟ್ಟಿ ಅವರು, ಸಹಕಾರೀ ಬ್ಯಾಂಕುಗಳು ಈಗ ಕಷ್ಟದಲ್ಲಿವೆಯಾದ್ದರಿಂದ ಅಕಾದೆಮಿಯು ಎಚ್ಚರ ವಹಿಸಬೇಕು ಎಂಬ ಸೂಚನೆ ನೀಡಿದರು. ಅದಕ್ಕೆ ಉತ್ತರಿಸಿದ ಶ್ರೀ ಎಂ.ಬಿ. ಪಾಟೀಲ್ ಬೆಂಗಳೂರಿನಲ್ಲಿರುವ ಸಹಕಾರಿ ಬ್ಯಾಂಕುಗಳು ತೊಂದರೆಯಲ್ಲಿಲ್ಲ; ಆದರೂ ಅಕಾದೆಮಿಯು ಸದಸ್ಯರ ಸೂಚನೆಯನ್ನು ಸ್ವೀಕರಿಸಿ ಎಚ್ಚರ ವಹಿಸುತ್ತದೆ ಎಂದು ತಿಳಿಸಿದರು. ಬ್ಯಾಂಕಿನಿಂದ ಠೇವಣಿಗಳ ಮೇಲೆ ಬರುತ್ತಿರುವ ಬಡ್ಡಿ ದರದ ಬಗ್ಗೆ ಶ್ರೀ ವ್ಹಿ.ಸಿ. ಮಾಲಗಿತ್ತಿ ಸ್ಪಷ್ಟನೆ ಕೇಳಿದರು. ಅದಕ್ಕೆ ಉತ್ತರಿಸಿದ ಶ್ರೀ ಎಂ.ಬಿ. ಪಾಟೀಲ್, ಬೇರೆ ಬೇರೆ ಸಂದರ್ಭಗಳಲ್ಲಿ ಇಡಲಾಗಿರುವ ಠೇವಣಿಗಳಿಗೆ ಬೇರೆ ಬೇರೆ ಬಡ್ಡಿದರ ಇದೆಯೆಂದೂ, ಕಳೆದ ವರ್ಷದಲ್ಲಿ ಇಡಲಾದ ಠೇವಣಿಗಳಿಗೆ ಶೇ. ೯ ಬಡ್ಡಿ ದರ ಇದೆ ಎಂದು ಸ್ಪಷ್ಟೀಕರಿಸಿದರು.

ಅಕಾದೆಮಿಯ ಹಣಕಾಸಿನ ವಿಚಾರವಾಗಿ ಮಾತನಾಡಿದ ಡಾ॥ ಸೂರ್ಯನಾಥ ಕಾಮತ್, ಬೆಂಗಳೂರು ನಗರ ಘಟಕವು ತನ್ನ ಮಾಸಿಕ ಉಪನ್ಯಾಸ ಮತ್ತು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಂಗವಾಗಿ ಪ್ರೌಢ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ ವಿವಿಧ ಸ್ಪರ್ಧೆಗಳಿಗೆ ಪರ್ಯಾಯ ಪಾರಿತೋಷಕ ಮತ್ತು ಬಹುಮಾನಗಳಿಗೆ ತಾನೇ ಪ್ರಾಯೋಜಕರನ್ನು ಗುರುತಿಸಿಕೊಂಡಿದೆಯೆಂದೂ, ಆ ಸಂದರ್ಭದಲ್ಲಿ ಅವಶ್ಯಕವಾದ ಮುದ್ರಣದ ವೆಚ್ಚವನ್ನು ಮಾತ್ರ ಅಕಾದೆಮಿ ಭರಿಸುತ್ತಿದೆ ಎಂದೂ ತಿಳಿಸಿ, ಅಕಾದೆಮಿಗೆ ಸರ್ಕಾರದಿಂದ ಈ ವರ್ಷ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಮತ್ತು ಇತಿಹಾಸ ದರ್ಶನದ ಮುದ್ರಣಕ್ಕಾಗಿ ಒಟ್ಟು ೪೦,೦೦೦ (ನಲವತ್ತು ಸಾವಿರ) ಮಾತ್ರ ನೆರವು ಬಂದಿದೆ ಎಂದೂ, ಎಲ್ಲ ಕೆಲಸಗಳಿಗೂ ಸರ್ಕಾರದ ನೆರವಿಗೇ ಕಾಯದೆ, ಸರ್ಕಾರದ ವಿಶ್ವಾಸವನ್ನು ಉಳಿಸಿಕೊಂಡು ಅಕಾದೆಮಿಯು ಕಾರ್ಯತತ್ಪರವಾಗುತ್ತದೆಂದೂ ತಿಳಿಸಿದರು.

೨೦೦೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಸ್ವೀಕರಿಸಬಹುದೆಂಬ ಸೂಚನೆಯನ್ನು ಶ್ರೀ ಟಿ.ಎಚ್.ಎಂ. ಬಸವರಾಜು ನೀಡಿದರು. ಆ ಸೂಚನೆಯನ್ನು ಶ್ರೀ ಕೇಶವ ಉಮರ್ಜಿ ಅನುಮೋದಿಸಿದರು.

೨೦೦೩ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳು

೨೦೦೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಜೊತೆಗೇ ೨೦೦೩ನೆಯ ಸಾಲಿನ ಮುಂಗಡ ಪ್ರತಿಗಳನ್ನೂ ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಶ್ರೀ ಎಂ.ಬಿ. ಪಾಟೀಲ್ ವಿವರವಾಗಿಯೇ ಮಂಡಿಸಿದರು.

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಕ್ಕೆ ರೂ. ೨೫,೦೦೦ (ಇಪ್ಪತ್ತೈದು ಸಾವಿರ) ನೆರವನ್ನು ಯಾರಿಂದ ನಿರೀಕ್ಷಿಸಲಾಗಿದೆ ಎಂಬ ಶ್ರೀ ವ್ಹಿ.ಸಿ. ಮಾಲಗಿತ್ತಿ ಅವರ ಪ್ರಶ್ನೆಗೆ, ಆ ನೆರವನ್ನು ಸರ್ಕಾರದಿಂದ ನಿರೀಕ್ಷಿಸಲಾಗಿದೆ ಎಂದು ಡಾ॥ ಕಾಮತ್ ಉತ್ತರಿಸಿದರು. ಶ್ರೀ ವ್ಹಿ.ಸಿ. ಮಾಲಗಿತ್ತಿ ಅವರ ಪ್ರವಾಸಿ ಗೆಸೆಟಿಯರ್ ಕುರಿತ ಪ್ರಶ್ನೆಗೂ ಡಾ॥ ಕಾಮತ್ ವಿವರಣೆ ನೀಡಿದರು.

ಎಸ್.ಬಿ.ಎಂ., ಎಸ್.ಬಿ.ಐ., ಸಿಂಡಿಕೇಟ್ ಬ್ಯಾಂಕ್ ಇತ್ಯಾದಿ ಬ್ಯಾಂಕ್‌ಗಳಲ್ಲಿ ಕುರ್ಚಿ, ಮೇಜು ಇತ್ಯಾದಿಗಳನ್ನು ಉಚಿತವಾಗಿ ನೀಡುವ ಒಂದು ಪದ್ಧತಿ ಇದೆ ಎಂದು ತಿಳಿಸಿದ ಶ್ರೀ ಕೇಶವ ಉಮರ್ಜಿ ಅವರು, ಆ ಬ್ಯಾಂಕುಗಳಿಂದ ನೆರವು ಪಡೆದು ಅಕಾದೆಮಿಯ ಕಚೇರಿಗೆ ಬೇಕಾದ ಕುರ್ಚಿ, ಮೇಜು ಇತ್ಯಾದಿಗಳನ್ನು ಪಡೆಯಬಹುದು ಎಂದು ಸಲಹೆ ನೀಡಿದರು. ಅದಕ್ಕೆ ಉತ್ತರಿಸಿದ ಡಾ॥ ಸೂರ್ಯನಾಥ ಕಾಮತ್, ಕೇವಲ ರೂ. ೪೦೦೦/- ಅಥವಾ ರೂ. ೫೦೦೦/- ಮೌಲ್ಯದ ವಿಷಯಗಳಿಗೆಲ್ಲಾ ನೆರವಿಗಾಗಿ ಕಾಯುತ್ತಾ, ಅದನ್ನು ಪಡೆಯಲು ಕಾಲ ಮತ್ತು ಶ್ರಮವನ್ನು ವ್ಯರ್ಥ ಮಾಡುವುದು ಸರಿಯಲ್ಲವಾದ್ದರಿಂದ, ಅಂತಹ ಪ್ರಯತ್ನಗಳನ್ನು ಮಾಡುವುದು ಬೇಡ ಎಂದು ತಿಳಿಸಿ, ತನ್ನಷ್ಟಕ್ಕೆ ತಾನೇ, ಸುಲಭವಾಗಿ ಒದಗಿ ಬರುವ ಸಹಾಯವನ್ನು ನಿರಾಕರಿಸುವುದಿಲ್ಲ ಎಂದು ಮನವರಿಕೆ ಮಾಡಿದರು.

ಹೆಸರನ್ನು ಬಹಿರಂಗಪಡಿಸಲು ಇಚ್ಚಿಸದ ಸದಸ್ಯರೊಬ್ಬರು ಇತಿಹಾಸ ದರ್ಶನದ ಮುದ್ರಣಕ್ಕಾಗಿ ರೂ. ೨೦೦೦/- (ಎರಡು ಸಾವಿರ) ನೆರವು ನೀಡಿರುವುದನ್ನು ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲ್ ತಿಳಿಸಿದರು.

ಸದಸ್ಯತ್ವ ಶುಲ್ಕವನ್ನು ಬಾಕಿ ಇರಿಸಿಕೊಂಡಿರುವ ಸದಸ್ಯರಿಗೆ ಪತ್ರ ಬರೆದು, ನಿಗದಿತ ಸಮಯಕ್ಕೆ ಸರಿಯಾಗಿ ಬಾಕಿ ಪಾವತಿ ಆಗದಿದ್ದರೆ ಅಂತಹವರ ಸದಸ್ಯತ್ವವನ್ನು ರದ್ದು ಮಾಡಬೇಕೆಂಬ ಡಾ॥ ಕಾಮತ್ ಅವರ ಸಲಹೆಯನ್ನು ಎಲ್ಲ ಸದಸ್ಯರೂ ಅನುಮೋದಿಸಿದರು.

ಅಕಾದೆಮಿಯ ಸದಸ್ಯರಾಗಿರುವ ಸಂಸ್ಥೆಗಳಿಗೆ, ಈಗಿನಂತೆ ಇತಿಹಾಸ ದರ್ಶನದ ಎರಡು ಪ್ರತಿಗಳ ಬದಲು ಒಂದು ಪ್ರತಿಯನ್ನು ಅಂಚೆಯ ಮೂಲಕ ಕಳುಹಿಸಬಹುದೆಂಬ ಡಾ॥ ಕಾಮತ್ ಅವರ ಸಲಹೆಯನ್ನು ಸರ್ವಸದಸ್ಯರೂ ಅನುಮೋದಿಸಿದರು. ಅಕಾದೆಮಿಯ ಸದಸ್ಯ ಬಲವನ್ನು ಹೆಚ್ಚಿಸಬೇಕು ಎಂಬ ಸದಸ್ಯರೊಬ್ಬರ ಸಲಹೆಗೆ ಡಾ॥ ಕಾಮತ್, ಸಂಖ್ಯಾ ಬಲಕ್ಕಿಂತ, ಒಳ್ಳೆಯ ಸದಸ್ಯರ ಬಲವೇ ಮುಖ್ಯ ಎಂದು ತಿಳಿಸಿದರು. ಅದನ್ನು ಎಲ್ಲ ಸದಸ್ಯರೂ ಒಪ್ಪಿದರು.

ಇತಿಹಾಸ ಪ್ರಶಸ್ತಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ, ಪ್ರಶ್ನೆಗಳು ಪಿ.ಯು. ಮಟ್ಟಕ್ಕಿಂತ ಹೆಚ್ಚಿರುತ್ತವೆ ಎಂದು ಕೆಲವು ಸದಸ್ಯರು ಆಕ್ಷೇಪಿಸಿದರು, ಮತ್ತು ಪರೀಕ್ಷಾ ಕೇಂದ್ರಗಳನ್ನು ಸೂಕ್ತವಾಗಿ ಹೆಚ್ಚಿಸಬೇಕು ಎಂದು ಮನವಿ ಮಾಡಿದರು. ಈ ಎರಡೂ ವಿಷಯಗಳ ಬಗ್ಗೆ ಉತ್ತರಿಸಿದ ಡಾ॥ ಸೂರ್ಯನಾಥ ಕಾಮತ್, ಇತಿಹಾಸದ ಬಗ್ಗೆ ತಿಳುವಳಿಕೆ ಹೆಚ್ಚಲಿ ಮತ್ತು ವಿದ್ಯಾರ್ಥಿಗಳಿಗೆ ಸಮರ್ಥ ಉತ್ತರ ನೀಡುವ ಶಕ್ತಿ ಬರಲಿ ಎಂಬ ಉದ್ದೇಶದಿಂದ ಇತಿಹಾಸ ಪ್ರಶಸ್ತಿ ಪರೀಕ್ಷೆಗಳನ್ನು ನಡೆಸುತ್ತಿರುವುದಾಗಿ ತಿಳಿಸಿ, ಹೊಸ ಶೋಧಗಳ ಬಗ್ಗೆ ಕೇಳುವ ಒಂದು ಅಂಕೆಯ ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ ಎಲ್ಲ ಪ್ರಶ್ನೆಗಳೂ ಪಿ.ಯು. ಪಠ್ಯದ ಪ್ರಕಾರವೇ ಇರುತ್ತವೆ ಎಂದು ಸ್ಪಷ್ಟಪಡಿಸಿ, ಒಂದು ಅಂಕೆಯ ಪ್ರಶ್ನೆಗಳ ಬಗ್ಗೆ ಗೊಂದಲ ಬೇಡ ಎಂದು ಮನವರಿಕೆ ಮಾಡಿ, ಹೊಸ ಶೋಧಗಳ ಬಗ್ಗೆ ಇತಿಹಾಸ ಉಪನ್ಯಾಸಕರು ತಿಳಿದು, ಅದನ್ನು ವಿದ್ಯಾರ್ಥಿಗಳ ಗಮನಕ್ಕೆ ತರಬೇಕಾದ್ದು ಅವಶ್ಯಕ ಎಂದು ಸೂಚಿಸಿದರು. ಪರೀಕ್ಷಾ ಕೇಂದ್ರಗಳನ್ನು ಹೆಚ್ಚಿಸುವ ಬಗ್ಗೆ ಉತ್ತರಿಸಿದ ಡಾ॥ ಕಾಮತ್, ಆಯಾ ಕೇಂದ್ರಗಳಲ್ಲಿ ಜವಾಬ್ದಾರಿಯನ್ನು ಒಪ್ಪಿಕೊಂಡು, ಅದನ್ನು ಸಮರ್ಥವಾಗಿ ನಿರ್ವಹಿಸುವ ಸದಸ್ಯರ ಅವಶ್ಯಕತೆ ಇದೆ ಎಂದು ತಿಳಿಸಿದರು. ಸಮರ್ಥ ಸದಸ್ಯರು ದೊರೆತರೆ, ಶಿವಮೊಗ್ಗ ಅಥವಾ ದಾವಣಗೆರೆಯಲ್ಲಿ ಒಂದು ಕೇಂದ್ರವನ್ನು ಆರಂಭಿಸುವ ಸೂಚನೆ ನೀಡಿದರು.

ಅಕಾದೆಮಿಯ ಹೆಚ್ಚಿನ ವೆಚ್ಚಗಳನ್ನು ಭರಿಸಲು ಸದಸ್ಯರು ನೆರವಿಗೆ ಬರಬೇಕು ಎಂದು ಶ್ರೀ ವ.ರ. ಕಾರಂತ ಸಲಹೆ ಮಾಡಿದರು. 'ಇತಿಹಾಸ ದರ್ಶನ'ದ ಸಂಚಿಕೆಗಳನ್ನು ಅಂಚೆಯ ಮೂಲಕ ಅಪೇಕ್ಷಿಸುವ ಸದಸ್ಯರು ಅದರ ಬೆಲೆಯಾದ ರೂ. ೫೦/- (ಐವತ್ತು)ರ ಜೊತೆಗೆ ಅಂಚೆ ವೆಚ್ಚವಾಗಿ ರೂ. ೫೦/- (ಐವತ್ತು) ಕಳುಹಿಸಿದರೆ, 'ಇತಿಹಾಸ ದರ್ಶನ'ದ ರವಾನೆಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಡಾ॥ ಕಾಮತ್ ತಿಳಿಸಿದರು. ವಿವರವಾದ ಚರ್ಚೆಗಳ ನಂತರ, ಮಂಡಿತವಾದ ೨೦೦೩ನೆ ಸಾಲಿನ ಮುಂಗಡ ಲೆಕ್ಕಪತ್ರಗಳನ್ನು ಒಪ್ಪಿಕೊಳ್ಳಲು ಡಾ॥ ಬಿ. ಲೀಲಾ ಸೂಚಿಸಿದರು. ಸೂಚನೆಯನ್ನು ಡಾ. ಕೆ.ಜಿ. ವಸಂತಮಾಧವ ಅನುಮೋದಿಸಿದರು. ಸರ್ವಸದಸ್ಯರ ಅನುಮೋದನೆಯೂ ದೊರೆಯಿತು.

೨೦೦೩ನೆ ಸಾಲಿಗೆ ಆಡಿಟರ್ ನೇಮಕ

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸಿ ಕೊಟ್ಟಿರುವ ಶ್ರೀ ಕೆ.ವಿ. ಆಚಾರ್ಯ (ಆಚಾರ್ಯ ಅಂಡ್ ಕಂಪೆನಿ), ಬೆಂಗಳೂರು ಅವರನ್ನೇ ೨೦೦೩ನೆಯ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗೂ ನೇಮಿಸಿಕೊಳ್ಳಬಹುದೆಂದು ಶ್ರೀ ಶಿವಶಂಕರಯ್ಯ ಹಿರೇಮಠ ಸೂಚಿಸಿದರು. ಆ ಸೂಚನೆಯನ್ನು ಶ್ರೀ ಕುಂ.ಬಾ. ಸದಾಶಿವಪ್ಪ ಅನುಮೋದಿಸಿದರು. ಆಡಿಟರ್ ಅವರೇ ಕೋರಿದರೆ, ರೂ. ೫,೦೦೦/- (ಐದು ಸಾವಿರ) ಇಲ್ಲವಾದರೆ, ಈಗಿನಂತೆಯೇ ರೂ. ೪,೦೦೦/- (ನಾಲ್ಕು ಸಾವಿರ) ಗೌರವ ಸಂಭಾವನೆ ನೀಡಬಹುದೆಂದು ಡಾ॥ ಎಸ್.ಕೆ. ಜೋಶಿ ಸೂಚಿಸಿದರು. ಅದನ್ನು ಶ್ರೀ ಸಿದ್ದಯ್ಯ ಹಿರೇಮಠ ಅನುಮೋದಿಸಿದರು.

ಠರಾವುಗಳ ಮಂಡನೆ

ಶ್ರೀ ವೈ. ಹನುಮಂತ ರೆಡ್ಡಿ ಅವರು ಠರಾವು ಎಂದು ಮಂಡಿಸಿದ ಈ ಕೆಳಕಂಡ ವಿಷಯವನ್ನು ಸೂಚನೆ ಎಂದು ಪರಿಗಣಿಸಲಾಯಿತು. 'ಎಲ್ಲ ಐತಿಹಾಸಿಕ ಸ್ಥಳಗಳಲ್ಲೂ, ಅಲ್ಲಿಯ ಸ್ಮಾರಕಗಳ ವಿಶೇಷ ಮಾಹಿತಿ ಇರುವ ಫಲಕಗಳನ್ನು ಹಾಕಿ, ಪ್ರವಾಸಿಗರಿಗೆ ಅನುಕೂಲ ಕಲ್ಪಿಸಬೇಕು.' ಈ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಡಾ॥ ಅ. ಸುಂದರ ಅವರು ಈಗಾಗಲೇ ಭಾರತೀಯ ಸರ್ವೇಕ್ಷಣ ಇಲಾಖೆಯು ಹಲವು ಸ್ಥಳಗಳಲ್ಲಿ ಇಂತಹ ಮಾಹಿತಿ ಫಲಕಗಳನ್ನು ಹಾಕಿಸಿರುವುದಾಗಿ ತಿಳಿಸಿದರು. ಮಾಹಿತಿಗಳು ಜನರ

ಭಾವನೆಗಳನ್ನು ಕೆರಳಿಸುವಂತಿರಬಾರದು ಎಂದು ಪ್ರೊ|| ಲಕ್ಷ್ಮಣ್ ತೆಲಗಾವಿ ಸೂಚಿಸಿದರು. ಚರ್ಚೆಯಲ್ಲಿ ಶ್ರೀ ಸುಮತೀಂದ್ರ ನಾಡಿಗ್, ಡಾ|| ಪಿ.ಎನ್. ನರಸಿಂಹಮೂರ್ತಿ ಭಾಗವಹಿಸಿದ್ದರು. ಅಂತಿಮವಾಗಿ ಚರ್ಚೆಯ ಎಲ್ಲ ಅಂಶಗಳನ್ನು ಗಮನಿಸಿ, ಡಾ|| ಕಾಮತ್ ಅವರು ಕನಿಷ್ಠ ಮಾಹಿತಿಗಳಾದರೂ ಇರುವ ಮಾಹಿತಿ ಫಲಕಗಳನ್ನು ಸಂಬಂಧಿಸಿದ ಇಲಾಖೆಗಳು ಐತಿಹಾಸಿಕ ಸ್ಮಾರಕಗಳ ಬಳಿ ಹಾಕಿಸಬೇಕೆಂದು ಸೂಚನೆಯನ್ನು ಪರಿಷ್ಕರಿಸಿ, ಸೂಚನೆಯನ್ನು ಸಂಬಂಧಿಸಿದ ಇಲಾಖೆಯಗಳು ಮತ್ತು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಠರಾವು : ೧

ವಿಶಾಲ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಬಿಜಾಪುರದಲ್ಲಿನ ಸ್ಮಾರಕಗಳ ರಕ್ಷಣೆಗೆ ವಿಶೇಷ ಗಮನ ನೀಡಲು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಈ ಸರ್ವಸದಸ್ಯರ ಸಭೆಯು ಒತ್ತಾಯಿಸುತ್ತದೆ. ವಿಶೇಷವಾಗಿ ಅಸಾರ್ ಮಹಲಿನ ರಕ್ಷಣೆಗೆ ಗಮನ ಕೊಡಬೇಕೆಂದು ವಿನಂತಿಸುತ್ತದೆ.

ಸೂಚನೆ : **ಡಾ|| ಸೂರ್ಯನಾಥ ಕಾಮತ್** ಅನುಮೋದನೆ : **ಟಿ.ಎಚ್.ಎಂ. ಬಸವರಾಜು**

ಠರಾವು : ೨

ಐಹೊಳೆ, ಪಟ್ಟದಕಲ್ಲು, ಬಾದಾಮಿಯ ಅಭಿವೃದ್ಧಿಗಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಕೈಗೊಂಡಿರುವ ಕ್ರಮಗಳಿಗಾಗಿ ಮತ್ತು ಹೊಸ ಶೋಧಗಳಿಗಾಗಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಭಿನಂದಿಸುತ್ತಾ, ವಿಶ್ವಪರಂಪರೆಯಲ್ಲಿ ಸೇರಿರುವ ಪಟ್ಟದಕಲ್ಲಿನ ಅಭಿವೃದ್ಧಿಗಾಗಿ ವಿಶೇಷ ಗಮನಹರಿಸಲು ಒತ್ತಾಯಿಸುತ್ತಾ, ಮಹಾಕೂಟವನ್ನೂ ರಕ್ಷಿತ ಸ್ಮಾರಕವನ್ನಾಗಿ ಮಾಡಬೇಕೆಂದು ಕೋರುತ್ತದೆ. ಅಲ್ಲದೆ, ರಾಜ್ಯ ಪ್ರವಾಸೋದ್ಯಮ ಇಲಾಖೆಯು ಚಾಲುಕ್ಯ ಕೇಂದ್ರಗಳಾದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಅನುಕೂಲಗಳ ವಿಸ್ತರಣೆಗೆ ವಿಶೇಷ ಗಮನ ಕೊಡಬೇಕೆಂದು ಅಕಾದೆಮಿಯ ಈ ಸರ್ವಸದಸ್ಯರ ಸಭೆಯು ಒತ್ತಾಯಿಸುತ್ತದೆ.

ಸೂಚನೆ : **ಡಾ|| ಎಚ್.ಆರ್. ರಘುನಾಥ ಭಟ್** ಅನುಮೋದನೆ : **ಡಾ|| ಸೂರ್ಯನಾಥ ಕಾಮತ್**

ಇತರ ವಿಷಯಗಳು

ಶ್ರೀ ಎಸ್.ಎಲ್. ಶ್ರೀನಿವಾಸಮೂರ್ತಿ ಅವರು ಮಂಡಿಸಿದ 'ವಿಧಾನ ಸೌಧದ ನೆಲಮಹಡಿಯಲ್ಲಿರುವ ರಾಜ್ಯ ಪತ್ರಾಗಾರಕ್ಕೆ ಪ್ರವೇಶ ಪಡೆಯುವುದೇ ಕಷ್ಟವಾಗಿರುವುದರಿಂದ, ಅದನ್ನು ಬೇರೆ ಸೂಕ್ತ ಸ್ಥಳಕ್ಕೆ ವರ್ಗಾಯಿಸಿ, ಆಸಕ್ತ ಸಂಶೋಧಕರಿಗೆ ಸಹಾಯ ಮಾಡಬೇಕೆಂದು ಈ ಸಭೆಯು ಕರ್ನಾಟಕ ಸರ್ಕಾರಕ್ಕೆ ಮನವಿ ಮಾಡುತ್ತದೆ' ವಿಷಯವನ್ನು ಠರಾವಿನ ಬದಲು ಸೂಚನೆ ಎಂದು ಪರಿಗಣಿಸಿ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

ಕರ್ನಾಟಕ ಇತಿಹಾಸ ಅಕಾದೆಮಿಯು ಕರ್ನಾಟಕ.ಕಾಮ್ (karnataka.com) ಎಂಬ ವೆಬ್‌ಸೈಟ್ ಮಾಡಿ ಪ್ರವಾಸಿ ಮಾಹಿತಿಯನ್ನು ಒದಗಿಸಬೇಕೆಂದು ಹಲವು ಸದಸ್ಯರು ಮನವಿ ಮಾಡಿದರು. ಆ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಲಾಯಿತು.

ಮೂರನೆಯ ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯನ್ನು ಸ್ವೀಕರಿಸಿದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಪ್ರವಾಚಕರಾದ ಡಾ|| ದೇವರಕೊಂಡಾರೆಡ್ಡಿ ಅವರು, ಅವರಿಗೆ ನೀಡಲಾಗಿದ್ದ ರೂ. ೧೦,೦೦೦/- (ಹತ್ತು ಸಾವಿರ)ವನ್ನು ಅಕಾದೆಮಿಗೇ ಕೃತಜ್ಞತೆಗಳೊಂದಿಗೆ ಹಿಂದಿರುಗಿಸಿದರು. ಹಾಜರಿದ್ದ ಎಲ್ಲ ಸದಸ್ಯರೂ ಡಾ|| ದೇವರಕೊಂಡಾರೆಡ್ಡಿ ಅವರನ್ನು ಅಭಿನಂದಿಸಿದರು. ಡಾ|| ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿಯು ಒಂದು ಪ್ರಶಸ್ತಿಯನ್ನು ಸ್ಥಾಪಿಸಿದರೆ, ಅದಕ್ಕೆ ಅಕಾದೆಮಿಯ ಎಲ್ಲ ಸದಸ್ಯರೂ ತಲಾ ರೂ. ೫೦೦/- (ಐದು ನೂರು) ನೀಡುವಂತೆ ಮನವಿ ಮಾಡಿದ ಡಾ|| ಎಸ್.ಕೆ. ಜೋಶಿ ತಾವೇ ಮೊದಲಿಗೆ ೧,೦೦೦/- (ಒಂದು ಸಾವಿರ)ವನ್ನು ಚೆಕ್ ಮೂಲಕ ಪಾವತಿ ಮಾಡಿದರು.

ಅಕಾದೆಮಿಯ ೧೮ನೆಯ ವಾರ್ಷಿಕ ಸಮ್ಮೇಳನ

ಶೃಂಗೇರಿಯ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠ, ಹಗರಿಬೊಮ್ಮನಹಳ್ಳಿಯ ಶ್ರೀ ರಾಮ ಯುವಕ ಸಂಘ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯಗಳು ಅಕಾದೆಮಿಯ ೧೮ನೆಯ ಸಮ್ಮೇಳನವನ್ನು ನಡೆಸಲು ಮುಂದೆ ಬಂದಿವೆಯಾದರೂ, ಈ ಬಗ್ಗೆ ಪರ್ಯಾಲೋಚಿಸಿ, ಕಾರ್ಯಕಾರೀ ಸಮಿತಿಯು ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ಸದಸ್ಯರಿಗೆ ತಿಳಿಸಲಾಯಿತು.

ಅಧ್ಯಕ್ಷ ಭಾಷಣ

ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ|| ಸೂರ್ಯನಾಥ ಕಾಮತ್ ಅವರು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಎಲ್ಲ ಸದಸ್ಯರೂ ಕ್ರಿಯಾಶೀಲವಾಗಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಜೊತೆಗೆ ಸಮ್ಮೇಳನಕ್ಕೆ ಮೊದಲು ಸಕಾಲಕ್ಕೆ ಸಂಪ್ರಬಂಧಗಳ ಸಾರಾಂಶವನ್ನು ಕಳಿಸಿ, ಸಹಕರಿಸಬೇಕೆಂದು ವಿನಂತಿ ಮಾಡಿದರು.

ಕೃತಜ್ಞತೆಗಳು

ಅಕಾದೆಮಿಯ ೧೭ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲ ಸದಸ್ಯರಿಗೂ ಸಂತೋಷವಾಗುವಂತೆ ಸಮರ್ಥವಾಗಿ

ಸಮ್ಮೇಳನವನ್ನು ನಡೆಸಿಕೊಟ್ಟ, ಬಾದಾಮಿಯ ವಿಶ್ವಚೇತನ ಸಂಸ್ಥೆ, ಆ ಸಂಸ್ಥೆಗೆ ಒತ್ತಾಸೆಯಾಗಿ ನಿಂತ ವೀರಪುಲಿಕೇಶಿ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ, ಸ್ಥಳೀಯ ಶಾಸಕರು, ಬಾಗಲಕೋಟೆ ಜಿಲ್ಲಾ ಪಂಚಾಯಿತಿ, ಸಮ್ಮೇಳನದ ಯಶಸ್ಸಿಗೆ ಕಾರಣರಾದ ಬಾದಾಮಿಯ ಎಲ್ಲಾ ಗಣ್ಯರಿಗೆ ಅಕಾದೆಮಿ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಡಾ|| ಕೆ. ವಸಂತಲಕ್ಷ್ಮಿ ವಂದನೆ ಸಲ್ಲಿಸಿದರು.

ಇತಿಹಾಸ ಪ್ರಶಸ್ತಿ ಪರೀಕ್ಷೆಗಳು-೨೦೦೩

೨೦೦೩ನೇ ಸಾಲಿನಲ್ಲಿ ೯-೩-೨೦೦೩, ಭಾನುವಾರದಂದು ಮಧ್ಯಾಹ್ನ ೧ ಗಂಟೆಯಿಂದ ೪ ಗಂಟೆಯವರೆಗೆ, ಎರಡನೆಯ ಪಿ.ಯು.ಸಿ. ಇತಿಹಾಸ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಏಳು ಕೇಂದ್ರಗಳಲ್ಲಿ ನಡೆಸಿದ 'ಇತಿಹಾಸ ಪ್ರಶಸ್ತಿ' ಪರೀಕ್ಷೆಗಳಿಗೆ ಒಟ್ಟು ೩೫೬೮ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಶೇಕಡಾ ೮೦ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಿದ್ದಾರೆ. ತೇರ್ಗಡೆಯಾದವರ ಪೈಕಿ ಕೆಳಕಂಡ ವಿದ್ಯಾರ್ಥಿಗಳು ಬಹುಮಾನಗಳನ್ನು ಗಳಿಸಿದ್ದಾರೆ.

ಒಂದನೇ ಬಹುಮಾನ (ರೂ. ೧,೦೦೦) : ಕು|| ಶ್ವೇತಾ ಕುಮಾರಿ, ಸರಕಾರಿ ಪ.ಪೂ. ಕಾಲೇಜು, ನರಸಿಂಹರಾಜಪುರ

ಎರಡನೇ ಬಹುಮಾನ (ರೂ. ೬೦೦) : ಶ್ರೀ ಡಿ.ಟಿ. ನಿಂಗರಾಜ, ಶ್ರೀ ಹಕ್ಕುಚ್ಚಲಿಗಸ್ವಾಮಿ ಪ.ಪೂ. ಕಾಲೇಜು, ಮುಷ್ಟೂರು, ಜಗಳೂರು ತಾಲ್ಲೂಕು.

ಮೂರನೇ ಬಹುಮಾನ (ರೂ. ೪೦೦) : ಕು|| ಶ್ವೇತಾ ರಾವ್, ಪೂರ್ಣಪ್ರಜ್ಞ ಕಾಲೇಜು, ಉಡುಪಿ

ಸಮಾಧಾನ ಮತ್ತು ಕೇಂದ್ರದಲ್ಲಿ ಅತ್ಯಂತ ಹೆಚ್ಚಿನ ಅಂಕ ಪಡೆದ ಬಹುಮಾನಗಳು (ರೂ. ೨೦೦) :

೧. ಕು|| ಎಸ್. ಸುಮತಿ, ಸಂಘಮಿತ್ರ ಮಹಿಳಾ ಕಾಲೇಜು, ಬೆಂಗಳೂರು
೨. ಶ್ರೀ ಶ್ರೀಶೈಲ ಹಳಗುಣಕಿ, ಯೋಗೀಶ್ವರ ಪ.ಪೂ. ಕಾಲೇಜು, ಸಾಲೊಟಗಿ, ಇಂಡಿ ತಾಲ್ಲೂಕು
೩. ಕು|| ಎಸ್. ಎಂ. ಕವಿತಾ, ಸರಕಾರಿ ಪದವಿಪೂರ್ವ, ಕೃಷ್ಣರಾಜನಗರ
೪. ಶ್ರೀ ಸಿದ್ದಪ್ಪ ಹುಡೇದಾರ, ಎಸ್.ವಿ.ಎಸ್. ಕಾಲೇಜು, ಹಾರೂಗೇರಿ, ರಾಯಭಾಗ ತಾಲ್ಲೂಕು
೫. ಕು|| ಪ್ರಮೀಳಾ ಕುರಿ, ಸಂಗೊಳ್ಳಿ ರಾಯಣ್ಣ ಪ.ಪೂ. ಕಾಲೇಜು, ಗದಗ

ಪರೀಕ್ಷೆಗಳ ಯಶಸ್ಸಿಗೆ ಕಾರಣರಾದ ಬೆಂಗಳೂರಿನ ಶ್ರೀ ಸಿ.ಆರ್. ಗಾಡಗೋಳಿ, ಶೇಷಾದ್ರಿಪುರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ|| ಜಿ.ಎಸ್. ವೆಂಕಟರಾಜು ಮತ್ತಿ ಇತಿಹಾಸ ವಿಭಾಗದ ಪ್ರೊ|| ರಾಧಾಕೃಷ್ಣ, ಎಸ್.ಜೆ.ಆರ್.ಸಿ. ಮಹಿಳಾ ಕಾಲೇಜಿನ ಇತಿಹಾಸ ವಿಭಾಗದ ಡಾ|| ಪಂಪಾದೇವಿ ಮತ್ತು ಕನ್ನಡ ವಿಭಾಗದ ಶ್ರೀ ಸಾಸಲು ವಿಶ್ವನಾಥ್, ತುಮಕೂರಿನ ಸಿದ್ಧಗಂಗಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಊರ್ಮಿಳಾ ದೇವಿ, ಇತಿಹಾಸದ ಪ್ರಾಧ್ಯಾಪಕರಾದ ಡಾ|| ಡಿ.ಎನ್. ಯೋಗೀಶ್ ಹಾಗೂ ನೆಲಮಂಗಲದ ಮುರಳಿ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಪ್ರೊ|| ಹಾಲೇಶಪ್ಪ ಮತ್ತು ಇತರ ಸ್ನೇಹಿತರು, ಮೈಸೂರಿನ ಡಾ|| ಮೈ. ನಾಗರಾಜ ಶರ್ಮ, ಧಾರವಾಡದ ಡಾ|| ಅಜಿತ್ ಪ್ರಸಾದ್ ಜೈನ್ ಹಾಗೂ ಡಾ|| ಎಚ್.ಆರ್. ರಘುನಾಥ ಭಟ್, ಗುಲಬರ್ಗಾದ ಪ್ರೊ|| ವಸಂತ ಕುಷ್ಟಗಿ ಹಾಗೂ ಮಂಗಳೂರಿನ ಪ್ರೊ|| ರಾಘವೇಮದ್ರ ಪ್ರಭು ಅವರಿಗೆ ಅಕಾದೆಮಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅಂತೆಯೇ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಪರೀಕ್ಷಾ ಸಂದರ್ಭದಲ್ಲಿ ಸಹಕರಿಸಿದ ಆಯಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ಅಧಿಕಾರ ವರ್ಗ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ ಇತಿಹಾಸ ಉಪನ್ಯಾಸಕರು ಹಾಗೂ ಸ್ಥಳಾವಕಾಶ ನೀಡಿದ ಬಸವೇಶ್ವರ ಶಿಕ್ಷಣ ಸಂಸ್ಥೆಗಳ ಅಧಿಕಾರ ವರ್ಗಕ್ಕೆ ಅಕಾದೆಮಿಯು ಧನ್ಯವಾದನ್ನು ಸಲ್ಲಿಸುತ್ತದೆ.

ಕಾರ್ಯಕಾರಿ ಸಮಿತಿ ಸಭೆಗಳು

೨೦೦೨ನೆಯ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರೀ ಸಮಿತಿಯು ಮೂರು ಬಾರಿ (೨-೬-೨೦೦೩, ೧೪-೭-೨೦೦೩ ಮತ್ತು ೨೦-೮-೨೦೦೩) ಸಭೆ ಸೇರಿ, ಅಕಾದೆಮಿಯ ಚಟುವಟಿಕೆಗಳು ಉತ್ತಮವಾಗಿ ನಡೆಯಲು ಕಾರಣವಾಗಿದೆ. ತಮ್ಮ ಎಲ್ಲಾ ಕಾರ್ಯಕ್ರಮಗಳ ನಡುವೆಯೂ ಬಿಡುವು ಮಾಡಿಕೊಂಡು, ಖುದ್ದಾಗಿ ಪಾಲ್ಗೊಂಡು ಅಥವಾ ಪತ್ರಮುಖೇನ ಸಲಹೆಗಳನ್ನು ನೀಡುತ್ತಾ ಅಕಾದೆಮಿಯ ಕಾರ್ಯಕಾರೀ ಸಮಿತಿಯ ಸದಸ್ಯರೆಲ್ಲರೂ ಸಹಕರಿಸಿದ್ದಾರೆ.

ಸದಸ್ಯ ಬಲ

೨೦೦೩ರ ಅಂತ್ಯಕ್ಕೆ ಅಕಾದೆಮಿಯ ಸದಸ್ಯ ಬಲವು ಈ ಕೆಳಕಂಡಂತಿದೆ.

ಅಜೀವ	ಸಾಮಾನ್ಯ	ಸಂಸ್ಥೆ	ಒಟ್ಟು
೮೯೬	೫	೧೭	೯೧೮

ಅಕಾಡೆಮಿಯ ಘಟಕಗಳು

ಡಾ|| ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅವರ ಅಧ್ಯಕ್ಷತೆ ಮತ್ತು ಡಾ|| ಕೆ.ಬಿ. ಸುದರ್ಶನ್ ಅವರ ಪ್ರಧಾನ ಕಾರ್ಯದರ್ಶಿತ್ವದಲ್ಲಿ ಬೆಂಗಳೂರು ಜಿಲ್ಲಾ ಘಟಕವು ಕಾರ್ಯನಿರ್ವಹಿಸುತ್ತಿದೆ. ಈ ಮೊದಲು ೫೦ ತಿಂಗಳುಗಳ ಕಾಲ ಪ್ರತಿ ತಿಂಗಳೂ ಬಸವೇಶ್ವರ ಕಾಲೇಜು ಮತ್ತು ಶ್ರೀ ಬಿ. ಎಂ. ಶ್ರೀ ಪ್ರತಿಷ್ಠಾನಗಳ ಸಹಯೋಗದಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿದ ಘಟಕವು, ಈ ವರ್ಷ

ಎಲ್ಲಾ ಉಪನ್ಯಾಸಕರನ್ನೂ ಸನ್ಮಾನಿಸಿತು. ಪ್ರತಿ ವರ್ಷದಂತೆ ಈ ವರ್ಷವೂ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ನಿಮಿತ್ತ ಬೆಂಗಳೂರು ನಗರದ ಪ್ರೌಢಶಾಲೆಗಳು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಹಲವು ಸ್ಪರ್ಧೆಗಳನ್ನು ಘಟಕವು ಹಮ್ಮಿಕೊಂಡಿತ್ತು. ಸುಮಾರು ೨೦೦ ಸ್ಪರ್ಧಿಗಳು ಈ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

ದಿನಾಂಕ ೧೨-೭-೨೦೦೩ ರಂದು, ಚಾಮರಾಜಪೇಟೆಯ ಸರ್ವೋತ್ತಮ ಪದವಿಪೂರ್ವ ಕಾಲೇಜಿನಲ್ಲಿ ಡಾ|| ಸೂರ್ಯನಾಥ ಕಾಮತ್ ಪರ್ಯಾಯ ಪಾರಿತೋಷಕ ಅಂತರ ಪ್ರೌಢಶಾಲಾ ಭಾಷಣ ಸ್ಪರ್ಧೆಯನ್ನು ನಡೆಸಲಾಯಿತು. ಆ ಸ್ಪರ್ಧೆಯಲ್ಲಿ ಬಸವನಗುಡಿಯ ನ್ಯಾಷನಲ್ ಪ್ರೌಢಶಾಲೆಯ ಕು|| ಎಂ. ತೇಜಸ್ಮಿತಾ ಪರ್ಯಾಯ ಪಾರಿತೋಷಕವನ್ನು ಪಡೆದರು.

ರಾಜಾಜಿ ನಗರದ ಬಸವೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ೧೯-೭-೨೦೦೩ ರಂದು ನಡೆದ ಡಾ|| ಜಿ.ಎಸ್. ದೀಕ್ಷಿತ ಪರ್ಯಾಯ ಪಾರಿತೋಷಕ ಅಂತರ ಕಾಲೇಜು ಭಾಷಣ ಸ್ಪರ್ಧೆಯಲ್ಲಿ ಶೇಷಾದ್ರಿಪುರಂ ಸಂಜೆ ಕಾಲೇಜಿನ ಕು|| ಎಂ. ಸವಿತಾ ಪಾರಿತೋಷಕವನ್ನು ಪಡೆದರು.

ದಿನಾಂಕ ೨೬-೭-೨೦೦೩ ರಂದು ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಅಂಗದ್ ಸ್ಮಾರಕ ಅಂತರ ಕಾಲೇಜು ಕೆಂಪೇಗೌಡ ಪರ್ಯಾಯ ಪಾರಿತೋಷಕ ಅಂತರ ಕಾಲೇಜು ಭಾಷಣ ಸ್ಪರ್ಧೆಯಲ್ಲಿ ಎಸ್.ಜೆ.ಆರ್. ಮಹಿಳಾ ಕಾಲೇಜಿನ ಕು|| ರೂಪಾ ಸಿ.ಎನ್. ಪಾರಿತೋಷಕವನ್ನು ಪಡೆದಿದ್ದಾರೆ. ಈ ಮೇಲ್ಕಂಡ ಪಾರಿತೋಷಕಗಳಲ್ಲದೆ, ಅಂತರ ಪ್ರೌಢಶಾಲೆ ಮತ್ತು ಅಂತರ ಕಾಲೇಜು (ಪದವಿ ಪೂರ್ವ ಮತ್ತು ಪದವಿ ಕಾಲೇಜು) ಸ್ಪರ್ಧೆಗಳಲ್ಲಿ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ (ಒಟ್ಟು ಹದಿನೈದು) ಬಹುಮಾನಗಳನ್ನು ನೀಡಲಾಯಿತು.

೧೬-೮-೨೦೦೩ರಂದು ಸಂಜೆ ೭ ಘಂಟೆಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಬಹುಮಾನಗಳನ್ನು ಕರ್ನಾಟಕದ ಘನವೆತ್ತ ರಾಜ್ಯಪಾಲರು ಮತ್ತು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರುಗಳ ಮೂಲಕ ವಿತರಿಸಲಾಯಿತು. ಪರ್ಯಾಯ ಪಾರಿತೋಷಕಗಳು ಮತ್ತು ಬಹುಮಾನಗಳ ಪ್ರಾಯೋಜಕರನ್ನು ಕೃತಜ್ಞತೆಯಿಂದ ಸ್ಮರಿಸಲಾಗುತ್ತದೆ.

ಹೊಸಪೇಟೆ ತಾಲ್ಲೂಕು ಘಟಕವು ಡಾ|| ಕೆ.ಎಂ. ಸುರೇಶ್ ಅವರ ಗೌರವಾಧ್ಯಕ್ಷತೆ ಮತ್ತು ಡಾ. ಎಂ. ಕೊಟ್ರೇಶ್ ಅವರ ಪ್ರಧಾನ ಕಾರ್ಯದರ್ಶಿತ್ವದಲ್ಲಿ ಕಾರ್ಯನಿರ್ವಹಿಸುತ್ತದೆ. ಪ್ರಮುಖವಾಗಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ಆಯೋಜನೆಯಲ್ಲಿ ಈ ಘಟಕವು ವಿಶೇಷ ಮುತುವರ್ಜಿ ವಹಿಸುತ್ತಿದೆ; ದಾವಣಗೆರೆ ಜಿಲ್ಲೆ, ನರಗುಂದ ತಾಲ್ಲೂಕು ಶಿರೋಳ, ಹಿರಿಯೂರಿನಲ್ಲಿ ನಡೆದ ಕಾರ್ಯಕ್ರಮಗಳನ್ನೂ ವರದಿಯಲ್ಲಿ ತಿಳಿಸಿದೆ.

ಉಳಿದಂತೆ ಯಾವ ಘಟಕಗಳ ವರದಿಯೂ ಲಭ್ಯವಾಗಿಲ್ಲ. ಕೆಲವು ಘಟಕಗಳು ಪ್ರಚಾರಗೊಳ್ಳದಿದ್ದರೂ ಕಾರ್ಯಕ್ರಮಗಳನ್ನು ನಡೆಸುತ್ತಿವೆ ಎಂದು ತಿಳಿಯಲಾಗಿದೆ.

ಕೃತಜ್ಞತೆಗಳು

ಅಕಾದೆಮಿಯ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಕ್ಕೆ ನೆರವು ನೀಡುತ್ತಿರುವ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಅಕಾದೆಮಿಯ ಹಲವಾರು ಕಾರ್ಯಗಳಿಗೆ ಸಹಯೋಗ ನೀಡಿ ಸಹಕರಿಸುತ್ತಿರುವ ಬೆಂಗಳೂರಿನ ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬಿ.ಆರ್.ಆರ್. ಫ್ಯಾಮಿಲಿ ಟ್ರಸ್ಟ್ ಮತ್ತು ಲಕ್ಷ್ಮಿ ಮುದ್ರಣಾಲಯಗಳ ಶ್ರೀ ಅಶೋಕ ಕುಮಾರ್, ವಾಗ್ದೇವಿ ಮುದ್ರಣಾಲಯ, ಶ್ರೀ ಗಾಳಿ ಸ್ವಾಮಿ, ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ, ಪ್ರಗತಿ ಸಹಕಾರ ಬ್ಯಾಂಕ್, ಬಸವೇಶ್ವರ ಕಾಲೇಜಿನ ಅಧಿಕಾರ ವರ್ಗ ಮತ್ತು ಸಿಬ್ಬಂದಿ, ೧೭ನೆಯ ಸಮ್ಮೇಳನಕ್ಕೆ ಆಶ್ರಯ ನೀಡಿದ್ದ ಬಾದಾಮಿಯ 'ವಿಶ್ವಚೇತನ' ಸಂಸ್ಥೆ ಮತ್ತು ೧೮ನೆಯ ಸಮ್ಮೇಳನಕ್ಕೆ ಆಶ್ರಯ ನೀಡಿರುವ ಹೊನ್ನಾಳಿಯ ಹಿರೇಕಲ್ಮಠದ ಪೂಜ್ಯ ಶ್ರೀ ಷ|| ಬ್ರ|| ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀ ಮಠದ ಪರಿವಾರ ಹಾಗೂ ಅಕಾದೆಮಿಯ ಇತಿಹಾಸ ಪ್ರಶಸ್ತಿ ಪರೀಕ್ಷೆಗಳ ಸಂದರ್ಭ ಸಹಕರಿಸುವ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಮತ್ತು ಇನ್ನೂ ಅನೇಕ ವಿಶ್ವಾಸಿಗಳಿಗೆ ಅಕಾದೆಮಿಯು ಕೃತಜ್ಞವಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿಯ ಮೇರೆಗೆ,

ಡಾ|| ಸೂರ್ಯನಾಥ ಕಾಮತ್
ಅಧ್ಯಕ್ಷರು

ಎಂ. ಜಿ. ನಾಗರಾಜ್
ಉಪಾಧ್ಯಕ್ಷರು

ಡಾ|| ಎಚ್. ಎಸ್. ಗೋಪಾಲರಾವ್
ಪ್ರಧಾನ ಕಾರ್ಯದರ್ಶಿ

ಎಂ.ಬಿ. ಪಾಟೀಲ್
ಕೋಶಾಧಿಕಾರಿ

ಡಾ|| ಕೆ. ವಸಂತಲಕ್ಷ್ಮಿ, ಡಾ|| ಚೆನ್ನಕ್ಕ ಪಾವಟೆ
ಕಾರ್ಯದರ್ಶಿಗಳು

AUDITOR'S REPORT

The Members of Karnataka Ithihasa Academy (R).

We have audited the Balance of Karnataka Ithihasa academy as at 31st December 2003 and Income and Expenditure Account on that annexed and report that :

1. We have obtained all the information and explanations which to the best our knowledge and belief were necessary for the purpose of our audit.
2. The Balance Sheet and the Income and Expenditure Account dealt with by this report are in agreement with the Books of Account.
3. In our opinion and to the best of our information and according to the explanations given to us, the accounts give a true and fair view:
   i) in the case of Balance Sheet of the state of affairs of the Academy as at 31st December 2003 and
   ii) in the case of Income and Expenditure Account of the Income for the year ended on that date.

For ACHARYA & CO.,
Chartered Accountants

(Sd)/-

(K.V. ACHARYA)
Partner
M.No. 13020

BANGALORE
23rd August 2004.

KARNATAKA ITHIHASA ACADEMY (REGD.): BANGALORE-560 019.

RECEIPTS AND PAYMENTS ACCOUNT FOR THE YEAR ENDED 31ST DECEMBER 2003

RECEIPTS		AMOUNT	PAYMENTS		AMOUNT
To Balance B/f			By F.D. with Pragathi co.op bank ltd.		88,050.00
cash in hand	2,086.44		Tourist Gazetteer compilation Expenses		26,500.00
cash at syndicate Bank SB A/C No. 12467	12,952.70		Save Historical week celebrations Expenses		43,587.00
cash at PRAGATHI Co. op bank	750.00	15,789.14	Printing of Ithihasa Darshan vol XVII		88,920.00
			17th Annual conference Expenses		32,882.00
Life Membership Fees	39,150.00		Furniture Purchese		3,200.00
Annual Membership Fees	100.00	39,250.00	Legal Fees		5,000.00
Donations received		23,450.00	K.H. Exam Expenditure		118,182.50
			Rent for the year		11,250.00
Save Historical week celebrations		40,000.00	Rent paid in advance		3,750.00
Financial Assistance from state government			Printing & Stationery		5,905.00
			Postage & Telegram		11,180.00
			Conveyance		3,040.00
Financial Assistance from state Government					
travel Gazetteer		50,000.00	Audit fees paid		3,320.00
Endowrment Received		3,050.00	Certification Fees		1,000.00
K.H. Exam Fees		178,460.00	Bank charges		275.00
Fixed Deposit with Pragathi co.op. bank		60,000.00	**Miscellaneous Expenses**		
(Encashment of Expenses)			display board	1,650.00	
			Fillng of return	500.00	
sale of publications		2,470.00	Office expenses.	1,580.00	3,740.00
Interest on Bank F.D. A/c	51,760.00		Balance c/d.		
on Bank S.B. A/c	1,111.49	52,871.49	cash in hand	776.94	
			cash at syndicate Bank SB		
			A/c No. 12467	15,965.10	
			cash at Pragathi co.op. bank	750.00	17,492.13

RECEPITS		AMOUNT	PAYMENTS	AMOUNT
Miscellaneous Receipts Entry fees for competitions Sale of old answer books	 1,215.00 718.00	 1,933.00		
		467,273.63		467,273.63

Bangalore
23rd August 2004

Suryanatha Kamath
President

H.S. Gopalarao
Gen Secretary

M.B. Patil
Treasurer

For Achary & co
Chartered Accountants

(K.V. ACHARYA)
Partner

KARNATAKA ITHIHASA ACADEMY (REGD.): BANGALORE-560 019.

RECEIPTS AND PAYMENTS ACCOUNT FOR THE YEAR ENDED 31ST DECEMBER 2003

EXPENDITURE		AMOUNT	INCOME		AMOUNT
To 'save Historical Heritage week'			By Annual membership fees.		100.00
celebration expenses.		43,587.44	Donation received		23,450.00
Printing of Ithihasa Darshana Vo.XVII		88,920.00	Save Historical Heritage week		
Tourist Gazetteer Compilation Expenses		26,500.00	Celebration Financial Assistance		40,000.00
17th Annual conference Expenses		32,882.00	Financial Assistance for Tourist		
K.H. Exam Expenditure		118,182.50	Gazetteer compilation	5,000.00	
Rent		14,250.00	Lees:Grant received but not spent	23,500 .00	26,500.00
Printing and staionery		5,905.00			
			K.H. Exam Fees		17,8460.00
Postage and telegram		11,180.00	Sale of Publications		2,470.00
Conveyance		3,040.00	Interest on F.D. A/c. (P.S)	51760.00	
Audit Fees		3,320.00	Interest on S.B. A/c.	1,111,49.00	52,871.49
Certification charges		1,000.00	**Miscellaneous receipts**		
Legal fees		5,000.00	Entry fees for competitions	1215.00	
Bank charges		275.00	Sale of old answer books	718.00	1,933.00
Miscellaneous expenses			Excess of expenditure income		32,523.00
display board	1,650.00				
Filing of return	500.00				
Office expenses.	1,590.00	3,740.00			
Depreciation		526.00			
		358,307.50			358,307.50

Suryanatha Kamath
President

H.S. Gopalarao
Gen Secretary

M.B. Patil
Treasurer

Bangalore
23rd August 2004

For Acharya & co
Chartered Accountants

(K.V. ACHARYA)
Partner

KARNATAKA ITHIHASA ACADEMY (REGD.): BANGALORE-560 019.

RECEIPTS AND PAYMENTS ACCOUNT FOR THE YEAR ENDED 31ST DECEMBER 2003

LIABILMES		AMOUNT	ASSETS		AMOUNT
Endowment fund		98,050.00	Furniture and fixtures	2,062.47	
			Add:Addition (P.S)	3,200.00	
Grant received towards Tourist Gazetteer			Less:Depreciation@10%	526.00	4,736.47
Complilation but not spent		23,500.00			
			Invetment in Pragathi Co-op Bank Ltd.,		1,000.00
			(10 shares of Rs. 100/- each)		
Life Membership Fees					
As per Last Balance sheet	336,658.00		Fixed Deposit With The Pragathi		
			co-op Bank ltd., (P.S)		523,050.00
Add:Collected during the year	39,150.00	375,808.00			
			Stock of Publications		25,110.00
Excess of Income over Expernditure					
As per Last Balance sheet	120,378.61		Rent paid in advance		3,750.00
Less:Excess of Expenditure over Income	32,523.01	87,855.60			
			Tax Deducted@Source (P.S)		13,075.00
Outstanding Liabilities for Expenses			Cash and bank Balances		
Audit fees		3,000,00			
			Cash on hand		
			Cash at Syndicate Bank		
			S.B. A/c. 12467	776.94	
			Cash at Pragathi Co-op Bank Ltd.,	15,965.19	
			S.B. A/c No. 6609	750.00	17,492.13
		588,213.60			588,213.60

Bangalore
23rd August 2004

Suryanatha Kamath
President

H.S. Gopalarao
Gen Secretary

M.B. Patil
Treasurer

For Acharya & co
Chartered Accountants

(K.V. ACHARYA)
Partner


ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ,
ನರಸಿಂಹರಾಜಾ ಕಾಲೋನಿ, ಬೆಂಗಳೂರು-೫೬೦ ೦೧೯

ಅಂದಾಜು ಆಯ-ವ್ಯಯಪಟ್ಟಿ - ೨೦೦೪

ಕ್ರ.ಸಂ.	ನಿರೀಕ್ಷಿತ ಆದಾಯ	ರೂ.	ಅಂದಾಜು ಖರ್ಚು	ರೂ.
೧.	ಆಜೀವ ಸದಸ್ಯತ್ವದ ಶುಲ್ಕ	೨೦,೦೦೦	ಪ್ರಶಸ್ತಿ ಪರೀಕ್ಷೆ (೨೦೦೪)	೧,೧೯,೮೭೮
೨.	ಸದಸ್ಯತ್ವದ ಬಾಕಿ	೧,೦೦೦	ಸರ್ವಸದಸ್ಯರ ಸಭೆ ಮತ್ತು ವಾರ್ಷಿಕ	
೩.	ಪ್ರಶಸ್ತಿ ಪರೀಕ್ಷೆ (೨೦೦೩)	೧,೫೫,೮೦೦	ಸಮ್ಮೇಳನದ ಖರ್ಚು	೩೫,೦೦೦
೪.	ದೇಣಿಗೆ : i. (ಸಾಮಾನ್ಯ)	೧೫,೦೦೦	ಇತಿಹಾಸ ದರ್ಶನ (೧೮) ಮುದ್ರಣ	೭೦,೦೦೦
	ii. ವಿಶೇಷ (ಇ.ದ. ೧೮)	೧೦,೦೦೦	ಇತರೇ ಮುದ್ರಣವೆಚ್ಚ	೮,೦೦೦
೫.	**ಆರ್ಥಿಕ ನೆರವು**		(ಉಪನ್ಯಾಸಗಳಿಗೆ)	
	i. ಪರಂಪರೆ ಉಳಿಸಿ ಸಪ್ತಾಹ	೨೫,೦೦೦	ಲೇಖನ ಸಾಮಗ್ರಿ	೨,೦೦೦
	ii. ಇ.ದ ೧೮ರ ಮುದ್ರಣ	೧೫,೦೦೦	ಫರ್ನಿಚರ್ (ಕಛೇರಿಗೆ)	೩,೦೦೦
೬.	ಠೇವಣಿಗಳ ಮೇಲಿನ ಬಡ್ಡಿ	೩೫,೦೦೦	ಬೆರಳಚ್ಚು, ಜೆರಾಕ್ಸ್	೨,೦೦೦
೭.	ಪ್ರವಾಸಿ ಗ್ಯಾಸೆಟಿಯರ್ ಸಂಕಲನಕ್ಕೆ	೪೮,೦೦೦	ಅಂಚೆ ಮಚ್ಚು ಕೋರಿಯರ್	
			ಸರ್ವೀಸ್	೫,೦೦೦
	ಅನುದಾನ ಸರ್ಕಾರದಿಂದ		ಪರಂಪರೆ ಉಳಿಸಿ, ಸಪ್ತಾಹ	೫೦,೦೦೦
ಬಾಕಿ	(ರೂ. ೪೮,೦೦೦ ಬಿಡುಗಡೆಯಾಗಿದೆ)		ಪುದುವಟ್ಟು ನಿರ್ವಹಣಾ ವೆಚ್ಚ	೧೫,೦೦೦
೮.	ಇತರೇ	೩,೦೦೦	ಕಛೇರಿ ಬಾಡಿಗೆ (ಮುಂಗಡ)	೧೫,೮೪೦
		೩೨,೭೮೦೦	(ಮಾರ್ಚ್ ೨೦೦೪ರವರೆಗೆ)	
ಆದಾಯಕ್ಕಿಂತ ಹೆಚ್ಚುವರಿ ಖರ್ಚು		೮೬,೬೧೮	ಸಂಚಾರ ವೆಚ್ಚ (Conveyance)	೫,೦೦೦
			ಪ್ರವಾಸ ವೆಚ್ಚ	೨,೦೦೦
			ಲೆಖ್ಖ ತಪಾಸಣಾ ಖರ್ಚು	೪೮,೦೦೦
			ಇತರೇ ಖರ್ಚುಗಳು	
			(ಕೋರ್ಟ್ ಖರ್ಚು ಸೇರಿ)	೨೫,೦೦೦
			ಸ್ಥಳೀಯ ಘಟಕಗಳಿಗೆ ನೆರವು	೫,೦೦೦
		೪,೧೪,೪೧೮		೪,೧೪,೪೧೮

(ಎಚ್.ಎಸ್. ಗೋಪಾಲರಾವ್)
ಪ್ರಧಾನ ಕಾರ್ಯದರ್ಶಿ


ಐತಿಹಾಸಿಕ ಪರಂಪರೆ ಉಳಿಸಿ
ಸಪ್ತಾಹ
ಕೋಟೆ ಕೊತ್ತಲದ ಕಲ್ಲು ಕಿತ್ತರೆ
ಪ್ರಾಚೀನ ಪರಂಪರೆಯ ಪಂಚಾಂಗ ಕಿತ್ತಂತೆ
ಇತಿಹಾಸ ಸಂಶೋಧನೆ
ನಮ್ಮ ತಿಳಿವಿನ ವರ್ಧನೆ
ಪ್ರಾಚೀನ ಇಗರ್ಜಿ ಮಸೀದಿ ಗುಡಿ
ನಮ್ಮ ಪರಂಪರೆಯ ಭವ್ಯ ಮುಡಿ
ಕರ್ನಾಟಕ ಇತಿಹಾಸ ಅಕಾದೆಮಿ(ರಿ)
ನೆರವು: ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ
೨೦೦೩-೦೪